REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 5—1—1956

ಸಂಚಿಕೆ ೧೮
NO. 18

ಗೇಣಿ ನಿರ್ಣಯ ಮಸೂದೆ

ನಮ್ಮ ಜಿಲ್ಲೆಯ ಹಾಗು ರಾಜ್ಯದ ಇತರ ಹಲವು ಜಿಲ್ಲೆಯ ಸಾಗುವಳಿದಾರ ಒಕ್ಕಲುಗಳು ಬಹಳ ಸಮಯದಿಂದ ನಿರೀಕ್ಷಿಸುತ್ತಿದ್ದ ನ್ಯಾಯವಾದ ಗೇಣಿ ನಿರ್ಣಯವನ್ನು ಕುರಿತಾದ ಶಾಸನದ ಕರಡು ಇದೀಗ ಮದ್ರಾಸು ಸರಕಾರದಿಂದ ಪ್ರಕಟಿತವಾಗಿದೆ. (ಅದರ ಮುಖ್ಯಾಂಶಗಳು ಈ ಸಂಚಿಕೆಯಲ್ಲಿ ಬೇರೆಡೆಯಲ್ಲಿ ಪ್ರಕಟವಾಗಿವೆ) ನಮ್ಮ ಮಂತ್ರಿಗಳೂ ಶಾಸನಾಂಗದ ಸದಸ್ಯರೂ ಬರುತ್ತದೆ, ತರುತ್ತೇವೆ ಎನ್ನುತ್ತಾ ಇಷ್ಟುದಿನಗಳನ್ನು ಕೇವಲ ಪರಿಶೀಲನೆಯಲ್ಲಿ ಕಳೆದರು. ಗಾಢವಾದ ಪರ್ಯಾಲೋಚನೆಯ ಬಳಿಕ ಬೆಳಕನ್ನು ಕಂಡ ಕರಡು ಇದಾಗಿದೆ.

ಈಗ ನಾವು ೧೯೫೬ನೇ ವರ್ಷದಲ್ಲಿ ಕಾಲಿಟ್ಟಿದ್ದೇವೆ; ಈ ವರ್ಷಾರಂಭದಲ್ಲಿ ಇನ್ನೊಮ್ಮೆ ಮಹಾ ಚುನಾವಣೆಯು ನಡೆಯಲಿಕ್ಕಿದೆ. ಆ ಕಾಲಕ್ಕೆ ನಮ್ಮ ಸಾಗುವಳಿದಾರ ಒಕ್ಕಲುಗಳು ಸರಕಾರವು ತಮ್ಮ ಹಿತರಕ್ಷಣೆಗಾಗಿ ಏನು ಕ್ರಮವನ್ನು ಕೈಗೊಂಡಿದೆ ಎಂದು ವಿಚಾರಿಸಿ, ತಮ್ಮ ಮತವನ್ನು ಹೇಗೆ ವಿನಿಯೋಗಿಸಬೇಕೆಂದು ತೀರ್ಮಾನಿಸಲು ಹೋಗುತ್ತಾರೆ. ಆದುದರಿಂದ ಚುನಾವಣೆಯ ಬಳಿಕದ ಈ ನಾಲ್ಕು ವರ್ಷಗಳನ್ನು ಪರಿಶೀಲನೆಗಾಗಿ ಕಳೆದು ಬಿಟ್ಟರೂ ಕೊನೆಯ ವರ್ಷದಲ್ಲಾದರೂ ಮೂಗಿಗೆ ತುಪ್ಪ ಹಚ್ಚುವ ಕೆಲಸ ನಡೆಯಬೇಕಾಗಿದೆ; ಒಕ್ಕಲುಗಳ ಪ್ರೀತಿ ಸಂಪಾದನೆಯ ಮಾರ್ಗವನ್ನು ಕಂಡು ಹಿಡಿಯಲೇಬೇಕಾಗಿದೆ; ಫಲಿತಾಂಶವಾಗಿ ಈ ಮಸೂದೆ ಪ್ರಕಟವಾಯಿತು—ಎಂದೆನ್ನುವವರು ಅನೇಕ.

ಅದೇನೇ ಇರಲಿ—ಮದ್ರಾಸು ಸರಕಾರದ ಈ ಮಸೂದೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸಾಗುವಳಿದಾರ ಒಕ್ಕಲುಗಳು ಸ್ವಾಗತಿಸುವುದು ಖಂಡಿತ. ಈ ಜಿಲ್ಲೆಯ ಮಟ್ಟಿಗೆ ಮಾನ್ಯ ಶ್ರೀ ರಾಜಗೋಪಾಲಾಚಾರಿಯವರು ಮುಖ್ಯ ಮಂತ್ರಿಯಾಗಿದ್ದಾಗ ಒಕ್ಕಲುಗಳನ್ನು ಎಬ್ಬಿಸದಂತೆ ರಕ್ಷಣೆ ಕೊಡುವ ಶಾಸನವು ಜ್ಯಾರಿಗೆ ಬಂದಿತು; ನ್ಯಾಯವಾದ ಗೇಣಿ ನಿರ್ಣಯದ ಪ್ರಸ್ತುತ ಶಾಸನವು ಭೂ ಸುಧಾರಣೆಯ ದೆಸೆಯಲ್ಲಿ ಸರಕಾರವಿಟ್ಟ ಎರಡನೆಯ ಹೆಜ್ಜೆಯಾಗಿದೆ. ಭೂ ಹಿಡುವಳಿಯ ಪರಮಮಿತಿ ನಿರ್ಣಯಿಸಿ ಯೋಗ್ಯ ಹಂಚುವಿಕೆಯ ತತ್ವಗಳನ್ನು ರೂಪಿಸುವುದು ಕೊನೆಯ ಹಂತವೆನಿಸುತ್ತದೆ; ಯೋಜನಾ ಆಯೋಗ ಇದನ್ನು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಬೇಕೆಂದು ಹವಣಿಸಿದ್ದರೂ ಭೂಮಿಯ ಗಣನೆ ನಡೆಯುವ ಕೆಲಸ ಏನೇನೂ ತೃಪ್ತಿಕರವಾಗಿ ನಡೆದಿಲ್ಲ. ಮುಂದಿನ ಯೋಜನೆಯ ಕಾಲದಲ್ಲಿ ಪ್ರಗತಿಯಾದೀತೆಂದು ಭಾವಿಸೋಣ.

ಸೂಚಿತ ಮಸೂದೆಯು ೧ನೇ ಎಪ್ರಿಲಿನಿಂದ, ಅಥವಾ ಕಲೆಕ್ಟರರು ಸೂಚಿಸಬಹುದಾದ ದಿನ (ಪ್ರಾಯಶಃ ನಮ್ಮ ಜಿಲ್ಲೆಯ ಮಟ್ಟಿಗೆ ಬರುವ ಚೈತ್ರ ಮಾಸದಿಂದ) ಶಾಸನವಾಗುತ್ತದೆ. ಸಾಗುವಳಿಯ ಈ ಹೊಸ ವರ್ಷದಲ್ಲಿ ನಾವು ಮತ್ತಿತರೆಡೆಯ ಕನ್ನಡ ಬಾಂಧವರೊಡನೆ ಸೇರಿ ಹೋಗುವ ಮತ್ತು ಕರ್ನಾಟಕ ರಾಜ್ಯದ ರಚನೆಯಾಗುವ ಸಂಭವ ಬಹಳ ಬಲವಾಗಿದೆ. ಮೈಸೂರು, ಮುಂಬಯಿ ಮತ್ತು ಹೈದರಾಬಾದುಗಳಲ್ಲಿ ಗೇಣಿ ನಿರ್ಣಯ ಮುಂತಾದ ಮಟ್ಟಿಗೆ ಈಗಾಗಲೇ ಶಾಸನಗಳಿವೆ; ಹಾಗಿರುವಾಗ ದಕ್ಷಿಣ ಕನ್ನಡಕ್ಕೆ ಇಂಥ ಶಾಸನವಿಲ್ಲದಿದ್ದರೆ ನೂತನ ಕರ್ನಾಟಕ ರಾಜ್ಯದ ಶಾಸನಾಂಗವು ಹಾಗೆ ಶಾಸನವನ್ನು ರಚಿಸುವಂತೆ ಒತ್ತಾಯಿಸಲು ಕೆಲವು ವರ್ಷದ ಅವಧಿ ಬೇಕಾದೀತು. ನಮ್ಮೊಡನೆ ಕಳೆದ ನೂರಾರು ವರ್ಷಗಳಿಂದ ನಿಕಟ ಸಂಪರ್ಕವಿರಿಸಿಕೊಂಡು, ಸಮಿತಿಯ ಮೇಲೆ ಸಮಿತಿಯನ್ನು ರಚಿಸಿ, ಜಿಲ್ಲೆಯ ಒಳ–ಹೊರಗೆಲ್ಲವನ್ನೂ ಸಂಪೂರ್ಣವಾಗಿ ತಿಳಿದುಕೊಂಡಿರುವ ಮದ್ರಾಸು ರಾಜ್ಯಕ್ಕೆ ನ್ಯಾಯವಾದ ಗೇಣಿಯ ಕ್ರಮವನ್ನು ತೆಗೆದುಕೊಳ್ಳಲು ಇಷ್ಟು ಕಾಲ ಬೇಕಾಗಿರುವಾಗ, ಕರ್ನಾಟಕ ರಾಜ್ಯದ ಶಾಸನಾಂಗದ ಮೇಲೆ ನಮ್ಮ ವರ್ಚಸ್ಸು ಬೀಳಲು ಎಷ್ಟು ಕಾಲ ಬೇಕಾಗಿ ಬರಬಹುದೆಂದು ಹೇಳುವಂತಿಲ್ಲ. ಹಾಗೆ ಒದ್ದಾಡುವ ಅಗತ್ಯವಿಲ್ಲದಂತೆ ಮದ್ರಾಸು ಸರಕಾರದ ಪ್ರಸ್ತುತ ಕ್ರಮ ಮಾಡಿರುವುದನ್ನು ಕಂಡು ನಾವು ಸಂತೋಷಿಸಲೇ ಬೇಕು.

ಮಸೂದೆಯ ಗುಣದೋಷಗಳ ವಿಮರ್ಶೆಯನ್ನೀಗ ಮಾಡೋಣ! ಒಕ್ಕಲಿನ ಹಿತ ದೃಷ್ಟಿಯನ್ನು ಪ್ರಧಾನವಾಗಿಟ್ಟುಕೊಂಡರೆ, "ಮುಖ್ಯಬೆಳೆಯ ಒಟ್ಟುಉತ್ಪನ್ನದ ೪೦% ಗೇಣಿ" ಎಂಬ ಕ್ರಮವು ಅಷ್ಟು ತೃಪ್ತಿಕರವಿಲ್ಲವೆಂದೆನಿಸುತ್ತದೆ. ಬೈಹುಲ್ಲು ಇತ್ಯಾದಿಗಳ ಮೇಲೆ ಒಕ್ಕಲಿಗೆ ಸಂಪೂರ್ಣ ಅನುಭೋಗದ ಅಧಿಕಾರವಿತ್ತಿದ್ದರೂ ಮತ್ತು ನಡು ಬೆಳೆಯಲ್ಲಿ ಧನಿಗೇನು ಪಾಲನ್ನು ಕೊಡಬೇಕಾಗಿರದಿದ್ದರೂ ಮುಂಬಯಿ, ಹೈದರಾಬಾದುಗಳಲ್ಲಿನ ಗೇಣಿ ನಿರ್ಣಯ ಸೂತ್ರದೊಡನೆ ಹೋಲಿಸಿದರೆ ಈ ಗೇಣಿಯು ಹೆಚ್ಚೆನ್ನಬೇಕಾಗುತ್ತದೆ. ಉತ್ಪಾದನೆಯ ಮೂರರಲ್ಲಿ ಒಂದಂಶ ಅಥವಾ ಕಾಲಂಶವನ್ನು ಮಾತ್ರ ಗೇಣಿಯಾಗಿ ನಿರ್ಧರಿಸುವುದು ಯೋಗ್ಯ; ಇದಕ್ಕೂ ಕಡಿಮೆ ಮಾಡುವಂತಿದ್ದರೆ (ಉದಾ: ಆರರಲ್ಲಿ ಒಂದಂಶ) ಮತ್ತೂ ಹಿತಕರ.

ಬಾಗಾಯತು ಭೂಮಿಯ ಉತ್ಪನ್ನದಲ್ಲಿ ಸಹ ೪೦% ಗೇಣಿ ಎಂದು ನಿರ್ಣಯವಾಗಿರುವುದು ಒಕ್ಕಲುಗಳಿಗೆ ಹಿತಕರವಾದುದಲ್ಲ. ಇಲ್ಲಿ ಗೇಣಿಯು ಕಡಿಮೆಯಾಗಲೇ ಬೇಕು. ಕಬ್ಬು ಮುಂತಾದ ಬೆಳೆಯನ್ನು ಬೆಳೆಸುವಾಗ ಸಾಗುವಳಿ ಖರ್ಚು ಉತ್ಪನ್ನದ ೬೦%–೭೦% ಆಗುತ್ತದೆ. ಆಗ ಧನಿಗೆ ಕೊಟ್ಟ ಬಳಿಕ ಒಕ್ಕಲಿಗೆ ಉಳಿಯುವುದೇನು? ಅಡಿಕೆ, ತೆಂಗು, ಬಾಳೆ ಇತ್ಯಾದಿ ತೋಟಗಳಿರುವ ನಮ್ಮ ಜಿಲ್ಲೆಯ ಒಕ್ಕಲುಗಳಿಗೆ ಈಗಿನ ಗೇಣಿ ನಿರ್ಣಯ ಕ್ರಮದಿಂದ ಹೆಚ್ಚಿನ ಪ್ರಯೋಜನವಾದೀತೋ ಎನ್ನುವುದು ಸಂಶಯ.

ವಿವಾದದ ಪ್ರಸಂಗಗಳಲ್ಲಿ ಕೋರ್ಟಿಗೆ ಹೋಗಲು ಅಧಿಕಾರವನ್ನು ಒಕ್ಕಲಿಗೂ ಧನಿಗೂ ಸಮನಾಗಿಯೇ ಮಸೂದೆಯು ನೀಡುತ್ತದೆ; ಅಲ್ಲದೆ ಭೂಮಿಯ ಯೋಗ್ಯತೆಯ ಮಟ್ಟಿಗೆ ಸರಕಾರದ ಪುಸ್ತಕದಲ್ಲಿ ದಾಖಲಾಗಿರುವ ವಿವರವೇ ಆಧಾರವೆಂದದು ಹೇಳುತ್ತದೆ. ಇದು ಒಳ್ಳೆಯದಾಗಿದ್ದರೂ ಒಕ್ಕಲುಗಳಿಗೆ ಕೋರ್ಟುಗಳ ಮೆಟ್ಟಲೇರುವಷ್ಟು ಶಕ್ತಿ ಇದೆಯೆ ಎಂಬುದು ವಿಚಾರಣೀಯವಾಗಿದೆ. ಹಲವು ತಲೆಮಾರುಗಳಿಂದ ವರ್ಚಸ್ಸನ್ನು ಗಳಿಸಿಕೊಂಡು ಬಂದಿರುವ ಧನಿಗಳ ಮುಂದೆ ನ್ಯಾಯಸ್ಥಾನದಲ್ಲಿಯಾದರೂ ಒಕ್ಕಲು ನ್ಯಾಯದಾನ ಪಡೆಯುವುದಕ್ಕೆ ಸಾಧ್ಯವಾಗುವುದು ಕಷ್ಟ. ಅಷ್ಟು ಹಣದ ಅನುಕೂಲತೆಯಾಗಲಿ, ಬುದ್ಧಿವಂತಿಕೆಯಾಗಲಿ, ಇತರ ಸೌಕರ್ಯಗಳಾಗಲಿ ಸಾಮಾನ್ಯ ಒಕ್ಕಲಿಗಿರುವುದು ಅಪರೂಪ. ತಮ್ಮ ಹಕ್ಕು ಬಾಧ್ಯತೆಗಳ ಕಲ್ಪನೆಯನ್ನು ಚೆನ್ನಾಗಿ ತಿಳಿದುಕೊಂಡು, ಹೆಚ್ಚು ಧೈರ್ಯ ತೋರಿಸುವುದಕ್ಕೆ ಒಕ್ಕಲುಗಳು ಸಿದ್ಧರಾದರೆ ಮಾತ್ರ ಮಸೂದೆಯ ನಿಜವಾದ ಪ್ರಯೋಜನ ಅವರಿಗೆ ಆದೀತು.

ಇನ್ನು ಧನಿಗಳ ದೃಷ್ಟಿಕೋಣದಿಂದ ಮಸೂದೆಯನ್ನು ಪರಿಶೀಲಿಸೋಣ! ಮಸೂದೆಯು ಎಷ್ಟು ಮಾತ್ರಕ್ಕೂ ಧನಿಗಳ ಪಕ್ಷಪಾತಿಯಾಗಿಲ್ಲವೆಂಬುದು ಸ್ಪಷ್ಟ. ಎಷ್ಟೋ ಮಂದಿ ಧನಿಗಳಿಗೆ ಮಸೂದೆಯು ನ್ಯಾಯವಾಗಿ ಕಾರ್ಯಾಚರಣೆಗೆ ಬಂದರೆ, ಈಗಿನ ಆದಾಯದ ಅರೆವಾಸಿಯಷ್ಟೆ ಇನ್ನು ಮುಂದೆ ಸಿಗುವಂತಾಗುತ್ತದೆ. ಇದರ ಅರ್ಥ ಇಷ್ಟರವರೆಗೆ ಈ ಧನಿಗಳು ಉತ್ಪನ್ನದಲ್ಲಿ ೮೦% ಪಾಲು ತಿನ್ನುತ್ತಿದ್ದರೆಂದೇ ಆಗುತ್ತದೆ. ಒಕ್ಕಲೊಬ್ಬನು ೨೦% ಪಾಲಿನಲ್ಲಿ ತೃಪ್ತಿಪಟ್ಟುಕೊಂಡು ಇಷ್ಟು ಸಮಯ ಕಳೆದಿದ್ದರೆ, ಈಗ ಧನಿಗಳು ೪೦% ಪಾಲಿನಲ್ಲಿ ಸಂತೋಷದಿಂದಿರಬೇಕಾಗಿದೆ. ಯುಗ ಧರ್ಮ ಎಂದಿದನ್ನು ಸ್ವೀಕರಿಸದೆ ಅವರಿಗೆ ಬೇರೆ ಉಪಾಯವಿಲ್ಲ. ಸಾಮಾಜಿಕ ನ್ಯಾಯವು ಕ್ರೂರವಾಗಿದೆಯೆಂದು ಈಗಿನ ಧನಿಗಳ ತಲೆಮಾರಿಗೆ ಕಂಡುಬಂದರೂ ಮುಂದಿನ ಜನಾಂಗದ ಪಾಲಿಗೆ ಸಮತೆಯ ಸಂದೇಶವನ್ನು ಅದು ತರುತ್ತದೆ.

ಆದರೆ ಒಕ್ಕಲು ಗೇಣಿಯನ್ನು ಕ್ರಮಪ್ರಕಾರ ಸಂದಾಯ ಮಾಡದಿದ್ದರೆ ಏನು? ಎಂಬ ಪ್ರಶ್ನೆಗೆ ಸಮಾಧಾನಕರವಾದ ಉತ್ತರವು ಮಸೂದೆಯಲ್ಲಿ ಸಿಗುತ್ತಿಲ್ಲ. ಕೋರ್ಟುಗಳಲ್ಲಿ ವ್ಯಾಜ್ಯ ದಾಖಲು ಮಾಡಿ ಧನಿಯು ಗೇಣಿ ವಸೂಲು ಮಾಡಬಹುದೆಂದು

(೧೨ನೇ ಪುಟ ನೋಡಿರಿ)

ನೂತನ ವರ್ಷದ ಶುಭಾಶಯಗಳು!

ನಾವು ನಮ್ಮ ಸಕಲ ಆಶ್ರಯದಾತರಿಗೆ, ಮಿತ್ರರಿಗೆ, ಮತ್ತು ಗ್ರಾಹಕರಿಗೆ ಅವರು ನಮಗಿತ್ತ ಸರ್ವ ಪ್ರೋತ್ಸಾಹ ಸಹಕಾರಗಳಿಗಾಗಿ ನಮ್ಮ ಅಭಿವಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಮುಂದೆಯೂ ಅವರ ನಿರಂತರ ಆಶ್ರಯಕ್ಕೆ ನಾವು ಸರ್ವ ವಿಧದಲ್ಲೂ ಪಾತ್ರರಾಗುವಂತೆ ಪ್ರಯತ್ನಿಸುವೆನೆಂಬ ಭರವಸೆಯನ್ನೀಯುವೆವು.

ಅವರೆಲ್ಲರಿಗೂ

ನೂತನ ವರ್ಷವು ಹರ್ಷ ಮತ್ತು ಪ್ರಗತಿದಾಯಕವಾಗಲಿ

ಎಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

The Canara Industrial & Banking Syndicate, Ltd.

ದಕ್ಷಿಣ ಕನ್ನಡ ಜಿಲ್ಲೆಯ ವಾಣಿಜ್ಯಾಭಿವೃದ್ಧಿ

ಸಮುದ್ರ ಮತ್ತು ಅರಣ್ಯ ನಮ್ಮ ನೈಸರ್ಗಿಕ ಸಂಪತ್ತು

ಉಡುಪಿಗೆ ಸಮೀಪದ ಮಣಿಪಾಳದಲ್ಲಿ ಮೊನ್ನೆ ದಶಂಬರ ೨೫ನೇ ದಿನಾಂಕ ಜರಗಿದ ಅಖಿಲ ಭಾರತ ಉತ್ಪಾದಕರ ಮಹಾಮಂಡಳದ ಅಧಿವೇಶನವು "ಕೆನರಾ ವಲಯ" ಎಂದು ಅದು ಕರೆದಿರುವ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಕೊಡಗುಗಳ ಅಭಿವೃದ್ಧಿಯನ್ನು ಔದ್ಯಮಿಕ ದೃಷ್ಟಿಯಿಂದ ಸಾಧಿಸಬೇಕಾದ ವಿಧಾನವನ್ನು ಒಂದು ಗೊತ್ತುವಳಿಯ ಮೂಲಕ ಸ್ಪಷ್ಟಪಡಿಸಿದೆ; ಮತ್ತು ಭಾರತ ಸರಕಾರದ ಹಾಗು ಯೋಜನಾ ಆಯೋಗದ ಗಮನ ಇತ್ತ ಹರಿಯಬೇಕೆಂದು ಕೇಳಿಕೊಂಡಿದೆ.

ಗೊತ್ತುವಳಿಗನುಸಾರವಾಗಿ, (೧) ಮೀನುಗಾರಿಕೆ, (೨) ಪ್ಲೈವುಡ್, ರೇಯಾನ್, ಕಾಗದ ಇತ್ಯಾದಿ ಅರಣ್ಯಾವಲಂಬಿತ ಉದ್ಯಮ, (೩) ಹಡಗು ಕಟ್ಟುವಿಕೆ, (೪) ರೊಕ್ಕದ ಪೈರಿನ ತೋಟಗಾರಿಕೆ, (೫) ಗೃಹೋದ್ಯಮಗಳು, ಮತ್ತು (೬) ಪ್ರವಾಸ ವ್ಯಾಪಾರ ಇಷ್ಟು ಬಗೆಗಳಲ್ಲಿ ವಾಣಿಜ್ಯಾಭಿವೃದ್ಧಿಯನ್ನು ಸಾಧಿಸಬಹುದು; ಉತ್ತರ ಕನ್ನಡದ ಕಾಳಿ ನದಿ, ದಕ್ಷಿಣ ಕನ್ನಡದ ಪಂಪಾಹೊಳೆ, ಮತ್ತು ಕೊಡಗಿನ ಬರೆಪೊಳೆ ಯೋಜನೆಗಳಂತೆ ವಿದ್ಯುಚ್ಛಕ್ತಿ ಬೆಳಸಿ ಶಕ್ತಿಯನ್ನು ಪೂರೈಸಬಹುದು; ಮಲ್ಪೆಯಲ್ಲಿ ಮೀನುಗಾರಿಕೆಯ ತಂತ್ರವಿಜ್ಞಾನ ಶಾಲೆಯನ್ನೂ ಮಂಗಳೂರಿನಲ್ಲಿ ಗೇರುಬೀಜ ಮತ್ತು ಹಂಚಿನ ಕೈಗಾರಿಕೆಯ ಸಂಶೋಧನಾಲಯಗಳನ್ನೂ ಸ್ಥಾಪಿಸಬಹುದು ಅಲ್ಲದೆ ಸಣ್ಣ ಬಂದರಗಳ ಅಭಿವೃದ್ಧಿಯೊಡನೆ ಒಂದು ಪ್ರಬುದ್ಧ ಬಂದರವನ್ನು ಸಹ ಈ ವಲಯದಲ್ಲಿ ನೆಲೆಗೊಳಿಸಿ ವ್ಯಾಪಾರಕ್ಕೆ ಉತ್ತೇಜನೆಯನ್ನು ಕೊಡಬಹುದು.

ಜಿಲ್ಲೆಯ ಭೂಸ್ವರೂಪ

ಉಪರೋಕ್ತ ಗೊತ್ತುವಳಿಯನ್ನು ಮಂಡಿಸಿದ ಶ್ರೀ ಟಿ. ಎ. ಪೈ, ಮತ್ತು ಸಮರ್ಥಿಸಿದ ಶ್ರೀ ಟಿ. ರಮೇಶ ಪೈ, ಶ್ರೀ ಬಿ. ವೈಕುಂಠ ಬಾಳಿಗ ಇವರೇ ಮುಂತಾದವರ ನಿಲುವೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದಕ್ಕೆ ಡಾ. ಟಿ. ಮಾಧವ ಪೈಗಳು ಈ ಸಂದರ್ಭದಲ್ಲಿ ಮಾಡಿದ ಸ್ವಾಗತ ಭಾಷಣದಲ್ಲಿನ ಅಂಶಗಳು ತುಂಬ ನೆರವಾಗುತ್ತವೆ. ಉತ್ಪಾದಕರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಮುರಾರ್ಜಿ ವೈದ್ಯರು ಸ್ಥೂಲವಾಗಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಅಂಶಗಳ, ಹಾಗೂ ಮೇಲೆ ನಿರೂಪಿಸಿದ ಪ್ರಾಮುಖ್ಯ ವಿಷಯಗಳ, ವಿವರವಾದ ಮಾಹಿತಿಯನ್ನು ಮಾಧವ ಪೈಗಳ ಭಾಷಣವು ಒದಗಿಸಿಕೊಡುತ್ತದೆ.

ಈ ಹಿನ್ನೆಲೆಯಿಂದ ನಾವು ವೀಕ್ಷಿಸುವಾಗ ಮೊದಲಾಗಿ ಕಣ್ಣಿಗೆ ಬೀಳುವುದು ದಕ್ಷಿಣ ಕನ್ನಡ ಜಿಲ್ಲೆಯ — ಮಾತಿಗೆ ಬೇಕಾದರೆ "ಕೆನರಾ" ವಲಯದ—ಭೂಸ್ವರೂಪ. ಪಶ್ಚಿಮ ಘಟ್ಟದಲ್ಲಿ ಹುಟ್ಟಿ, ತೀರಾ ಕಡಿದಾದ ಪರಶುರಾಮ ಸೃಷ್ಟಿಯಲ್ಲಿ ಪ್ರವಹಿಸಿ ಅರಬಿ ಸಮುದ್ರಕ್ಕೆ ಸೇರುವ ಹಲವು ಸಣ್ಣ ನದಿಗಳು ಇಲ್ಲಿವೆ. ನಮ್ಮ ಜಿಲ್ಲೆಗೆ ೧೫೦ ಮೈಲುಗಳ ಸಮುದ್ರ ಕರಾವಳಿಯಿದೆ; ನೈಋತ್ಯ ಮಾರುತಗಳಿಂದ ಸುಮಾರು ೧೩೦ ಅಂಗುಲಗಳಷ್ಟು ಹಾಗು ಈಶಾನ್ಯ ಮಾರುತಗಳಿಂದ ೨೦ ಅಂಗುಲಗಳಷ್ಟು ಮಳೆಯನ್ನು ನಮ್ಮ ಜಿಲ್ಲೆ ಪಡೆದಿದೆ. ಕರಾವಳಿಯಿಂದ ೫-೨೫ ಮೈಲುಗಳ ವರೆಗೆ ಜನನಿಬಿಡತೆ ಹೆಚ್ಚಿದೆ; ವಿಪುಲ ಮಳೆಯ ದೆಸೆಯಿಂದ ಹಸುರಾದ ಕಾಡುಗಳಿಗೂ ಇಲ್ಲಿ ಕೊರತೆಯಿಲ್ಲ. ಸದ್ಯಕ್ಕೆ ನಮ್ಮ ಜಿಲ್ಲೆಯ ಜನ ಸಂಖ್ಯೆ ಹದಿನೇಳೂವರೆ ಲಕ್ಷ.

ಇಲ್ಲಿಯ ಮುಖ್ಯ ಆಹಾರದ ಬೆಳೆ ಭತ್ತ.—ಸುಮಾರು ೫೪೧೨೦೦ ಎಕ್ರೆ ಪ್ರದೇಶದಲ್ಲಿ ಇದು ಬೆಳೆಸಲ್ಪಡುತ್ತದೆ; ಅಲ್ಪ ಪ್ರಮಾಣದಲ್ಲಿ, ಎಂದರೆ ೪೮೦೦೦ ಎಕ್ರೆ ಪ್ರದೇಶದಲ್ಲಿ, ರಾಗಿಯನ್ನೂ ಬೆಳೆಸಲಾಗುತ್ತದೆ. ಹುರುಳಿ (೨೧೭೦೦ ಎಕ್ರೆ), ಉದ್ದು (೧೧೫೦೦ ಎಕ್ರೆ) ಮತ್ತು ಹೆಸರು (೮೧೦೦ ಎಕ್ರೆ) ಇತ್ಯಾದಿ ಧಾನ್ಯಗಳನ್ನೂ ರೈತರು ಬೆಳೆಸುತ್ತಾರೆ. ಕಬ್ಬು, ತೆಂಗು ಮತ್ತು ಅಡಿಕೆಗಳೂ ಇಲ್ಲಿ ಚೆನ್ನಾಗಿ ಬೆಳೆಯುತ್ತವೆ. ಕಾಳು ಮೆಣಸಿನ ತೋಟಗಳೂ ಜಿಲ್ಲೆಯ ದಕ್ಷಿಣ ಭಾಗದಲ್ಲಿ ನೋಡ ಸಿಗುತ್ತವೆ. ಮೆಣಸು (೮೩೦೦ ಎಕ್ರೆ), ಶುಂಠಿ (೨೫೦೦ ಎಕ್ರೆ), ಹೊಗೆಸೊಪ್ಪು (೧೩೦೦ ಎಕ್ರೆ) ಮತ್ತು ಹತ್ತಿ (೨೦೦ ಎಕ್ರೆ)—ಇವೂ ನಮ್ಮ ಜಿಲ್ಲೆಯಲ್ಲಿ ಸ್ವಲ್ಪ ಮಟ್ಟಿಗೆ ಬೆಳೆಯುತ್ತವೆ.

ನೀರಾವರಿ ಕಾರ್ಯ

ವ್ಯವಸಾಯಕ್ಕೆ ಉಪಯುಕ್ತವಾದ ಎಲ್ಲ ಫಲವತ್ತಾದ ಪ್ರದೇಶವನ್ನೂ ನಮ್ಮಲ್ಲಿ ಉಪಯೋಗಿಸಿಕೊಂಡಾಗಿದೆ ಎನ್ನಬಹುದು. ಬಂಜರು ಭೂಮಿ ಎಲ್ಲಿಯಾದರೂ ಕಂಡುಬಂದರೆ ಅದು ಫಲವತ್ತಾಗಿಲ್ಲವೆಂಬುದೇ ಅದರ ಕಾರಣ. ಆದುದರಿಂದ ಹೊಸತಾಗಿ ಉಳುಮೆಗೆ ಭೂಮಿಯನ್ನು ಒಳವಡಿಸುವ ಪ್ರಶ್ನೆ ನಮ್ಮ ಜಿಲ್ಲೆಯ ಮಟ್ಟಿಗೆ ಮುಖ್ಯವಾಗಿಲ್ಲ. "ಒಂದು ತೆನೆ ಬರುವಲ್ಲಿ ಎರಡು ತೆನೆ ತೆಗೆಯುವುದು ಹೇಗೆ?" ಎಂಬುದೇ ಇಲ್ಲಿ ವಿಚಾರಣೀಯವಾದ ವಿಷಯ.

ಕಡಿದಾದ ಪ್ರದೇಶವಾಗಿ ಜಿಲ್ಲೆಯ ನೈಸರ್ಗಿಕ ಸ್ವರೂಪವಿರುವುದರಿಂದ ನದಿಗಳಿಗೆ ನಾಲೆಗಳನ್ನು ರಚಿಸಿ ನೀರನ್ನು ಪೂರೈಸುವ ದೊಡ್ಡ ನೀರಾವರಿ ಯೋಜನೆಗಳಿಗೆ ಇಲ್ಲಿರುವ ಅವಕಾಶ ತೀರ ಕಡಿಮೆ. ಮದ್ರಾಸು ಸರಕಾರದವರು ಇತ್ತೀಚೆಗೆ ಈ ವಿರಳ ಅವಕಾಶಗಳ ಸದುಪಯೋಗವನ್ನು ಪಡೆಯಲು ಕೆಲವು ಯೋಜನೆಗಳನ್ನು ಕೈಗೊಂಡಿದ್ದಾರೆ. ಹಳೆಯ ಕೆರೆಗಳನ್ನು ದುರಸ್ತಿಪಡಿಸಿ ಹಾಗು ೩೦೦ ಹೊಸ ಬಾವಿಗಳನ್ನು ತೋಡಿಸಿ ಜಲಾಶ್ರಯದ ಸೌಲಭ್ಯವನ್ನು ಸರಕಾರ ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒದಗಿಸಿದೆಯಲ್ಲದೆ ಮುಂದಿನ ಯೋಜನೆಯಲ್ಲಿ ಎರಡು ಮುಖ್ಯ ನೀರಾವರಿ ಅಣೆಕಟ್ಟುಗಳ ರಚನೆಗೆ ಸಂಕಲ್ಪಿಸಿದೆ.

ಕುಂದಾಪುರ ತಾಲೂಕಿನ ಹಾಲಾಡಿ ಜಲಾಶಯ ಯೋಜನೆ ಇವುಗಳಲ್ಲಿ ಒಂದು. ೧೮೮ ಲಕ್ಷ ರೂಪಾಯಿ ವೆಚ್ಚದ ಈ ಅಣೆಕಟ್ಟಿನಿಂದ ೧೨೦೦೦ ಎಕ್ರೆ ಜಮೀನಿನಲ್ಲಿ ಎರಡು ಬೆಳೆಯೂ ೮೦೦೦ ಎಕ್ರೆ ಭೂಮಿಯಲ್ಲಿ ಮೂರು ಬೆಳೆಯೂ ಬೆಳೆಯಬಲ್ಲುವು; ಹೀಗೆ ಒಟ್ಟಿಗೆ ೮೦೦೦ ಟನ್ನು ಅಕ್ಕಿ ಅಧಿಕ ಉತ್ಪಾದನೆಯಾಗಬಲ್ಲುದು. ಬೊಂಬ್ರಾಣ ಅಣೆಕಟ್ಟೆಂಬ ಇನ್ನೊಂದು ಯೋಜನೆಯಿಂದ ಉಪ್ಪುನೀರಿನ ಬದಲು ಸಿಹಿ ನೀರಿನ ಆಸರೆ ದೊರೆಯುವುದಲ್ಲದೆ ೧೫೦೦ ಎಕ್ರೆ ಪ್ರದೇಶದಲ್ಲಿ ಉತ್ಪಾದನೆ ಹೆಚ್ಚುತ್ತದೆ. ಬೇರೆ ಹಲವು ಸಣ್ಣ ನೀರಾವರಿ ಯೋಜನೆಗಳೂ ನೆರವೇರುವ ಸೂಚನೆಯುಂಟು.

ಜಾನುವಾರುಗಳ ಸಾಕಣೆಯ ದೃಷ್ಟಿಯಿಂದ ನಮ್ಮ ಜಿಲ್ಲೆಯ ಹವಾಮಾನ ಅಷ್ಟು ಉತ್ತಮವಾಗಿಲ್ಲ ಮೈಸೂರು ಮತ್ತಿತರ ಘಟ್ಟದ ಮೇಲಿನ ಪ್ರದೇಶಗಳಿಂದ ಉತ್ತಮ ಜಾತಿಗೆ ಸೇರಿದ ಜಾನುವಾರುಗಳನ್ನು ತರಿಸಿಕೊಂಡು ಉಪಯೋಗಿಸುವುದು ಇಲ್ಲಿಯ ವಾಡಿಕೆ. ಉತ್ತರದಲ್ಲಿ ಸೀತಾನದಿ ಮತ್ತು ದಕ್ಷಿಣದಲ್ಲಿ ಕುಕ್ಕುಂದದ ಜಾನುವಾರು ಜಾತ್ರೆಗಳು ಇದಕ್ಕೆ ಪ್ರಸಿದ್ಧವಾಗಿವೆ. ನಮ್ಮ ರೈತರು ಜಾನುವಾರುಗಳ ಆಹಾರವಾಗಿ ಬಳಸಬಲ್ಲ ಒಳ್ಳೆಯ ಹುಲ್ಲನ್ನು ಕೃಷಿಯ ಮಟ್ಟದಲ್ಲಿ ಬೆಳೆಸುವುದನ್ನು ಕಲಿತುಕೊಂಡರೆ ಈ ಪರಾವಲಂಬನೆಯನ್ನು ಸ್ವಲ್ಪ ಮಟ್ಟಿಗಾದರೂ ತಗ್ಗಿಸಬಹುದು.

ಅರಣ್ಯೋತ್ಪನ್ನ

ಘಟ್ಟದ ಬುಡದಲ್ಲಿ ಜಾನುವಾರುಗಳಿಗೆ ಒಳ್ಳೆಯ ಮೇವಿದೆ; ನಮ್ಮ ಜಿಲ್ಲೆಗೆ ಘಟ್ಟದಿಂದ ದೊರೆಯುವ ಲಾಭದಲ್ಲಿ ಮಳೆ ನೀರಿನೊಡನೆ ಇದೂ ಬರುತ್ತದೆ. ಆದರೆ ಇಷ್ಟಕ್ಕೆ ನಮಗಾಗುವ ಲಾಭ ಮುಗಿಯಲಿಲ್ಲ. ಸುಮಾರು ಒಂದು ಸಾವಿರ ಚದರ ಮೈಲುಗಳಷ್ಟು ವಿಸ್ತೀರ್ಣಕ್ಕೆ ವ್ಯಾಪಿಸಿರುವ ಉತ್ತಮ ಅರಣ್ಯಗಳನ್ನೂ ನಾವು ಘಟ್ಟದ ಅನುಗ್ರಹ ರೂಪದಲ್ಲಿ ಪಡೆದಿದ್ದೇವೆ.

ಅರಣ್ಯಗಳು ಮೇವನ್ನು ಧಾರಾಳವಾಗಿ ಒದಗಿಸಿ ಕೊಡುತ್ತವೆ; ಕಟ್ಟಿಗೆಯನ್ನೂ ಅವು ನೀಡುತ್ತವೆ. ಇದರ ಹೊರತಾಗಿ ಬಿದಿರು, ಅಂಟು, ಬೆತ್ತ, ಬೀಳಲು, ಔಷಧ ದ್ರವ್ಯ, ಏಲಕ್ಕಿ, ದಾಲಚೀನಿ ಮತ್ತಿತರ ನೂರಾರು ಬಗೆಯ ಕಾಡುತ್ಪತ್ತಿಗಳು ಸಿಗುತ್ತವೆ. ವ್ಯವಸ್ಥಿತ ರೀತಿಯಲ್ಲಿ ಇವುಗಳ ಸಂಗ್ರಹ ಕಾರ್ಯ ನಡೆದರೆ ಲಕ್ಷಾಂತರ ರೂಪಾಯಿಯ ಪ್ರಯೋಜನವಾಗಬಲ್ಲುದು. ಗಟ್ಟಿ ಯೋಗ್ಯತೆಯ ಮರಗಳನ್ನು ರೈಲ್ವೆಯಲ್ಲಿ ಸ್ಲೀಪರುಗಳಾಗಿಯೂ ಕಟ್ಟಡ, ಸಂಕಗಳ ರಚನೆಯಲ್ಲಿಯೂ ಕೈಗಾರಿಕೆಗಳಲ್ಲೂ ಬಳಸುತ್ತಾರೆ. ದೂಪ ಇತ್ಯಾದಿ ಮಿದು ಜಾತಿಯ ಮರಗಳನ್ನು ಸಹ ಯೋಗ್ಯ ಕುಲುಮೆಗಳನ್ನು ಉಪಯೋಗಿಸಿ ಅನೇಕ ಕೈಗಾರಿಕೆಗಳಲ್ಲಿ ಬಳಕೆಗೆ ಯೋಗ್ಯವಾಗುವಂತೆ ಮಾಡಬಹುದು.

ಈಗ ೨-೩ ಲಕ್ಷ ಘನ ಅಡಿಯಷ್ಟು ಮಿದು ಮರವನ್ನು "ವಿಮ್ಕೊ" ಬೆಂಕಿ ಪೆಟ್ಟಿಗೆ ಕಾರ್ಖಾನೆಗೆ ಮಾರಲಾಗುತ್ತದೆ. ಈ ಕಾರ್ಖಾನೆಯು ಭಾರತದ ಬೆಂಕಿ ಪೆಟ್ಟಿಗೆ ಉತ್ಪಾದನೆಯಲ್ಲಿ ೩೦% ಪಾಲನ್ನು ಪಡೆದಿದೆ! ಬೆಂಕಿ ಪೆಟ್ಟಿಗೆ ತಯಾರಿಕೆಯನ್ನು ಗೃಹೋದ್ಯಮವಾಗಿ ವಿಕೇಂದ್ರೀಕರಣದ ತತ್ವದ ಮೇಲೆ ಬೆಳೆಸುವ ಯೋಜನೆ ಸರಕಾರಕ್ಕಿದೆ. ಆದುದರಿಂದ ಸರಕಾರವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ಕೇಂದ್ರವೊಂದನ್ನು ಸ್ಥಾಪಿಸುವುದು ಹಿತವಾದೀತು.

ಬೀಳಲು ಮತ್ತು ಬಿದಿರು

ಸುಮಾರು ಎರಡು ಲಕ್ಷ ರೂಪಾಯಿ ಬೆಲೆಯ ಉತ್ತಮ ಜಾತಿಯ ನಾಗಬೆತ್ತವನ್ನು ಈಗ ಜಿಲ್ಲೆಯ ಹೊರಗೆ ಮದ್ರಾಸು, ಬೆಂಗಳೂರು, ಕೊಯಮುತ್ತೂರು, ಮುಂಬಯಿ ಇತ್ಯಾದಿ ಸ್ಥಳಗಳಿಗೆ ರವಾ

(೧೧ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ.
ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.
ಮೈಸೂರು ಗಂಧದ ಎಣ್ಣೆ
ಅಪ್ಪಟವಾದ ಗಂಧದ ಎಣ್ಣೆ.
ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.
ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

ಒಕ್ಕಲುಗಳ ರಕ್ಷಣೆಯ ದ್ವಿತೀಯ ಘಟ್ಟ

ನ್ಯಾಯವಾದ ಗೇಣಿ ನಿಶ್ಚಯಿಸುವುದಕ್ಕೆ ಸರಕಾರದ ಕ್ರಮ

ಮದ್ರಾಸು ಸರಕಾರದವರು ನ್ಯಾಯವಾದ ಗೇಣಿಯನ್ನು ನಿಶ್ಚಯಿಸುವುದಕ್ಕೆ ಉದ್ದೇಶಿಸಿದ ಮಸೂದೆಯ ಕರಡೊಂದನ್ನು ಜನರ ಅವಗಾಹನೆಗಾಗಿ ಪ್ರಕಟಿಸಿದ್ದಾರೆ. ಮಸೂದೆಯು ಶಾಸನಾಂಗದ ಮುಂಬರುವ ಅಧಿವೇಶನದಲ್ಲಿ ಚರ್ಚಿಸಲ್ಪಡುವುದೆಂದು ತಿಳಿದು ಬರುತ್ತದೆ.

ಮಂತ್ರಿಗಳು ಮಸೂದೆಯ ಉದ್ದೇಶವನ್ನು ಹೀಗೆ ವಿವರಿಸಿದ್ದಾರೆ—"೧೯೨೯ನೇ ಇಸವಿಯ ಮಲಬಾರು ಸಾಗುವಳಿದಾರ ಒಕ್ಕಲುತನ ಶಾಸನ ಮತ್ತು ೧೯೫೨ನೇ ಇಸವಿಯ ತಂಜಾವೂರು ಸಾಗುವಳಿದಾರ ಒಕ್ಕಲುಗಳ ರಕ್ಷಣೆಯ ಶಾಸನ- ಇವನ್ನು ಬಿಟ್ಟರೆ ರಾಜ್ಯದಲ್ಲಿ ಸಾಗುವಳಿದಾರ ಒಕ್ಕಲು ತನ್ನ ಬೇಸಾಯದ ಭೂಮಿಯ ಬಗ್ಗೆ ಧನಿಗೆ ಕೊಡಬೇಕಾದ ಗೇಣಿಯನ್ನು ಕ್ರಮಪಡಿಸುವ ಶಾಸನ ವಿರುವುದಿಲ್ಲ.

ನಿರ್ದೇಶಕ ತತ್ತ್ವ

"ಘಟನೆಯಲ್ಲಿ ಹೇಳಿರುವಂತೆ ರಾಜ್ಯದ ಧೋರಣೆಯ ನಿರ್ದೇಶಕ ತತ್ತ್ವಗಳಲ್ಲಿ ಎಷ್ಟು ಪರಿಣಾಮಕಾರಿಯಾಗಿ ಸಾಧ್ಯವೊ ಅಷ್ಟು ಮಟ್ಟಿಗೆ ರಾಜ್ಯವು ಸಾಮಾಜಿಕ ಹಾಗು ಆರ್ಥಿಕ ನ್ಯಾಯವನ್ನು ಜನರಿಗೆ ಒದಗಿಸಿಕೊಟ್ಟು ಮತ್ತು ಅದನ್ನು ರಕ್ಷಿಸಿ ಕಲ್ಯಾಣವನ್ನು ಸಾಧಿಸುವುದು ಒಂದಾಗಿದೆ. ಯೋಜನಾ ಆಯೋಗವು ಸಹ ಸಾಗುವಳಿದಾರ ಒಕ್ಕಲುಗಳ ಹಕ್ಕುಗಳನ್ನು ನಿಶ್ಚಿತಪಡಿಸಬೇಕೆಂದೂ ಸಾಗುವಳಿದಾರರ ತೊಂದರೆ ಮತ್ತು ಸಾಗುವಳಿಯ ವೆಚ್ಚ ಇವುಗಳನ್ನು ಗಣನೆಗೆ ತೆಗೆದುಕೊಂಡು ಗೇಣಿಯನ್ನು ನಿಗದಿಮಾಡಬೇಕೆಂದೂ ಶಿಫಾರಸು ಮಾಡಿರುತ್ತದೆ."—

"ಆದುದರಿಂದ ಕಳೆದ ಕೆಲವು ಸಮಯದಿಂದೀಚೆಗೆ ನ್ಯಾಯವಾದ ಗೇಣಿಯನ್ನು ನಿರ್ಧರಿಸುವ ತತ್ತ್ವಗಳನ್ನು ರೂಪಿಸುವ ಪ್ರಶ್ನೆಯು ಸರಕಾರದ ಗಮನವನ್ನು ಸೆಳೆದಿತ್ತು. ೧೯೫೫ನೇ ಎಪ್ರೀಲಿನಲ್ಲಿ ಸಚಿವ ಸಂಪುಟದ ಉಪ ಮಂಡಳವೊಂದು ಈ ಪ್ರಶ್ನೆಯನ್ನು ಭೂಸುಧಾರಣೆಯ ಇತರ ಮುಖಗಳೊಡನೆ ಚೆನ್ನಾಗಿ ಪರಾಮರ್ಶಿಸಲು ನೇಮಕವಾಯಿತು. ಈಗ ಪ್ರಕಟವಾಗುತ್ತಿರುವ ಮಸೂದೆಯು ಈ ಸಮಿತಿಯ ಕಾರ್ಯಕಲಾಪಗಳ ಪರಿಣಾಮವಾಗಿದೆ.

ಜಾರಿಗೆ ಬರುವ ದಿನ

ಕರಡು ಮಸೂದೆಯಲ್ಲಿ ಒಟ್ಟಿಗೆ ೧೭ ಸೂತ್ರಗಳಿವೆ. ೧ನೇ ಸೂತ್ರವು ಮಲಬಾರು ಸಾಗುವಳಿದಾರ ಒಕ್ಕಲುತನ ಶಾಸನವು ಅನ್ವಯವಾಗುವ ಪ್ರದೇಶವನ್ನು ಬಿಟ್ಟು ಉಳಿದ ಮದ್ರಾಸುರಾಜ್ಯಕ್ಕೆ ಮಸೂದೆ ಅನ್ವಯಿಸುವುದೆಂದು ಹೇಳುತ್ತದೆ; ಅಲ್ಲದೆ ಸೂಚಿತ ಶಾಸನವು ೧ನೇ ಎಪ್ರಿಲ್ ೧೯೫೬ನೇ ದಿನ ಜ್ಯಾರಿಗೆ ಬರುವುದೆಂದೂ ವಿಧಿಸುತ್ತದೆ.

ಮಸೂದೆಯ ೨ನೇ ಸೂತ್ರವು ಅನೇಕ ಶಬ್ದಗಳ ವ್ಯಾಖ್ಯೆಯನ್ನು ಕೊಡುತ್ತದೆ. ಇವರಂತೆ "ಬೇಸಾಯದ ವರ್ಷ" ಎಂದರೆ ಎಪ್ರಿಲಿನ ೧ನೇ ತಾರೀಕಿನಿಂದ ಅಥವಾ ಕಲೆಕ್ಟರರು ಜಿಲ್ಲೆಯ ಗೆಝೆಟಿನಲ್ಲಿ ಪ್ರಕಟಮಾಡಬಹುದಾದ ತಾರೀಕಿನಿಂದ ಪ್ರಾರಂಭವಾಗುವ ವರ್ಷ. "ನಡು ಬೆಳೆ" ಎಂದರೆ ಎರಡು ಮುಖ್ಯ ಬೆಳೆ ಬರುವ ಭೂಮಿಯ ಸಂಗತಿಯಲ್ಲಿ ಅವನ್ನು ಬಿಟ್ಟು ಉಳಿದ ಬೆಳೆ. ಉಳಿದ ಬಗೆಯ ಭೂಮಿಯ ಸಂದರ್ಭದಲ್ಲಿ ಮುಖ್ಯ ಬೆಳೆಯನ್ನು ಬಿಟ್ಟುಳಿದ ಬೇರೆ ಬೆಳೆ.

"ಸಾಗುವಳಿದಾರ ಒಕ್ಕಲು" ಎಂದರೆ ಉದ್ದೇಶ ಪೂರ್ವಕವಾದ ದಾಖಲೆಯಿರಲಿ, ಅಥವಾ ಸೂಚಿತ ರೀತಿಯಿಂದಾಗಲಿ, ಒಕ್ಕಲುತನದ ಒಪ್ಪಂದ ಮಾಡಿಕೊಂಡು ಸ್ವತಃ, ಅಥವಾ ಕುಟುಂಬದ ಸದಸ್ಯರ, ಅಥವಾ ಕೂಲಿಯಾಳುಗಳಪರಿಶ್ರಮದಿಂದ ಸ್ವತಃ ಅಥವಾ ಕುಟುಂಬದ ಸದಸ್ಯನೊಬ್ಬನ ಮೇಲ್ನಿಗೆಯಂತೆ ಇನ್ನೊಬ್ಬನಿಗೆ ಸೇರಿರುವ ಭೂಮಿಯನ್ನು ಸಾಗುವಳಿ ಮಾಡುವಾತನೆಂದು ಅರ್ಥ. ಹೀಗೆ ಭೂಮಿಯನ್ನು ಸಾಗುವಳಿಗೆ ವಹಿಸಿಕೊಡುವಾತನೆ "ಧನಿ".

ಭೂಮಿಯ ವರ್ಗೀಕರಣ

ಮಳೆ ಮತ್ತಿತರ ಹವಾಮಾನವು ಅತ್ಯುತ್ತಮವಾದುದಾಗಲಿ ಅತಿ ಕೆಡುಕಾದುದಾಗಲಿ ಇರದೆ ಸಾಮಾನ್ಯ ಪರಿಸ್ಥಿತಿಗೊಳಪಟ್ಟು ಮತ್ತು ಆ ಜಾತಿಯ ಭೂಮಿ ಮತ್ತು ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡಾಗ ಗೇಣಿ ನಿರ್ಣಯ ಕೋರ್ಟುಗಳಿಗೆ ಸಾಧುವೆಂದು ತೋರುವ ಭೂಮಿಯಲ್ಲಿ ಬರಬಹುದಾದ ಉತ್ಪನ್ನವೇ "ಸಾಮಾನ್ಯ ಒಟ್ಟು ಉತ್ಪನ್ನ". "ಮುಖ್ಯಬೆಳೆ" ಎಂದರೆ ಸಾಗುವಳಿ ವರ್ಷದಲ್ಲಿ ಬೆಳೆಸಿದ ಬೇರೆಬೇರೆ ಪೈರುಗಳಲ್ಲಿ ಹೆಚ್ಚು ಉತ್ಪಾದನೆಯನ್ನು ಕೊಟ್ಟ ಬೆಳೆ; "ಎರಡು ಮುಖ್ಯ ಬೆಳೆ" ಎಂದಿರುವಲ್ಲಿ ೧ನೇ ಮತ್ತು ೨ನೇ ಸ್ಥಾನವನ್ನು ಉತ್ಪನ್ನದ ದೃಷ್ಟಿಯಿಂದ ಪಡೆಯುವ ಬೆಳೆ ಎಂದರ್ಥ. ಯಾವುದಾದರೊಂದು ಸಾಗುವಳಿ ವರ್ಷದಲ್ಲಿ ಒಂದೇ ಬೆಳೆಯಾಗುತ್ತಿದ್ದರೆ ಅದೇ ಮುಖ್ಯ ಬೆಳೆ ಎನ್ನಿಸುತ್ತದೆ.

ಇದೇ ಸೂತ್ರದ ೨ನೇ ಉಪನಿಯಮವು ಭೂಮಿಯನ್ನು ವರ್ಗೀಕರಿಸುವ ವಿಧಾನದಲ್ಲಿ ಯಾವ ಆಧಾರವನ್ನು ಅವಲಂಬಿಸಬೇಕೆಂದು ತಿಳಿಸುತ್ತದೆ. ಅದರ ಪ್ರಕಾರ ಎರಡು ಬೆಳೆಯಾಗುವ, ಅಥವಾ ಒಂದು ಬೆಳೆಯಾಗುವ ನಂಜ, ಅಥವಾ ಪುಂಜ ಅಥವಾ ಬಾಗಾಯತು ಭೂಮಿ ಎಂದು ಈಗಾಗಲೇ ಸರಕಾರದ ದಾಖಲೆಯಲ್ಲಿ ಏನು ಬರೆದಾಗಿದೆಯೋ ಅದೇ ಮಾನ್ಯವಾಗುತ್ತದೆ. ಇದನು ಅವಲಂಬಿಸಿಯೇ ವಿವಾದ ಪ್ರಶ್ನೆಗಳನ್ನು ತೀರ್ಮಾನಿಸತಕ್ಕದು.

ಸಂಬಂಧದ ರೂಪ

ಸಾಗುವಳಿದಾರ ಒಕ್ಕಲು ಧನಿಗೆ ಕೊಡಬೇಕಾದುದೇನೆಂಬುದನ್ನು ೩ನೇ ಸೂತ್ರ ವಿವರಿಸುತ್ತದೆ. ಪ್ರತಿಯೊಬ್ಬ ಸಾಗುವಳಿದಾರ ಒಕ್ಕಲು ತನ್ನ ಧನಿಗೆ ಈ ಶಾಸನದಂತೆ ನಿಗದಿಯಾದ ನ್ಯಾಯ ಗೇಣಿಯನ್ನು ಕೊಡಲು ಬದ್ಧನಾಗಿದ್ದಾನೆ. ಯಾವುದಾದರೊಂದು ಬೆಳೆಯನ್ನು ಎತ್ತಲು ಒಕ್ಕಲು ಉದಾಸೀನ ಮಾಡಿದರೆ ಧನಿಯು ಗೇಣಿ ವಸೂಲು ಮಾಡಕೂಡದೆನ್ನುವುದಕ್ಕೆ ಅದು ಯೋಗ್ಯ ಕಾರಣವಾಗಲಾರದು. ಶಾಸನದಲ್ಲಿ ಬೇರೆಡೆ ಸೂಚಿಸಿದುದನ್ನು ಹೊರತು ಪಡಿಸಿ, ಉಳುವ, ಗೊಬ್ಬರ ಹಾಕುವ, ಕೊಯ್ಯುವ, ಬಡಿಯುವ ಇತ್ಯಾದಿ ಎಲ್ಲ ಬಗೆಯ ಸಾಗುವಳಿ ವೆಚ್ಚವನ್ನು ಒಕ್ಕಲು ನೋಡಿಕೊಳ್ಳಬೇಕು. ಸರಕಾರಕ್ಕೂ ಸ್ಥಳೀಯ ಸಂಸ್ಥೆಗಳಿಗೂ ತನ್ನ ವಶದಲ್ಲಿರುವ ಭೂಮಿಯ ಸಂಬಂಧದಲ್ಲಿ ತೆರಬೇಕಾದ ಕೀರ್ವೆ ಮುಂತಾದ ಹಣವನ್ನು ಧನಿಯೇ ಕಟ್ಟಬೇಕು.

ಶಾಸನವು ಜ್ಯಾರಿಗೆ ಬಂದ ಬಳಿಕ ಯಾವುದೇ ಧನಿಯು ನ್ಯಾಯವಾದ ಗೇಣಿ ಮತ್ತು ಶಾಸನದಲ್ಲಿ ಬೇರೆಡೆ ಸೂಚಿತವಾದ ನಿಯಮಗಳಿಗೊಳಪಟ್ಟಂತೆ ಪ್ರಕಟ ವೆಚ್ಚ ಇವರ ಹೊರತು ಹೆಚ್ಚಿಗೆ ಏನನ್ನೇ ಆಗಲಿ ಮತ್ತು ಸಾಗುವಳಿದಾರ ಒಕ್ಕಲಿನಿಂದ ಯಾವುದೇ ಹೆಚ್ಚಿಗೆ ವಸ್ತು ಅಥವಾ ಪದಾರ್ಥವನ್ನಾಗಲಿ, ಅನ್ನ ಬಿಟ್ಟಿ ಕೆಲಸ ಅಥವಾ ಜಾನುವಾರುಗಳ ಧರ್ಮಾರ್ಥ ಉಪಯೋಗವನ್ನಾಗಲಿ, ಕೇಳಲು, ಪಡೆಯಲು ಅಥವಾ ಇದಕ್ಕೆ ಅವಕಾಶ ನೀಯಲು ಅಧಿಕಾರ ಹೊಂದಿಲ್ಲ. ಅಂತೆ, ಭೂಮಿಗೆ ಗೇಣಿಯನ್ನು ವಹಿಸಿಕೊಡುವ ಹೊತ್ತಿಗೆ ಇದ್ದ ಯಾವುದೇ ಪದಾರ್ಥಕ್ಕೆ ಅಥವಾ ಭೂಮಿಗೆ ಸಾಗುವಳಿದಾರ ಒಕ್ಕಲು ನಷ್ಟವನ್ನುಂಟು ಮಾಡಿದರೆ ಅದಕ್ಕೆ ಧನಿಯು ಪರಿಹಾರವನ್ನು ಕೇಳಬಲ್ಲನು.

ಗೇಣಿ ನಿರ್ಣಯ

ನ್ಯಾಯವಾದ ಗೇಣಿ ಮತ್ತಿತರ ಪ್ರಕಟ ವೆಚ್ಚಗಳೇನೆಂಬುದನ್ನು ೭ನೇ ಸೂತ್ರದ ಕೆಲವು ಉಪನಿಯಮಗಳೂ ೪ನೇ ಸೂತ್ರವೂ ವಿಧಿಸುತ್ತವೆ. ಸಾಮಾನ್ಯವಾಗಿ ಎರಡು ಬೆಳೆ ಬರುವ ನಂಜದ ಮಟ್ಟಿಗೆ ಪ್ರತಿಯೊಂದು ಮುಖ್ಯ ಬೆಳೆಯ ಸಾಮಾನ್ಯ ಉತ್ಪನ್ನದ ೪೦%; ಅಥವಾ ಅದಕ್ಕೆ ಸಮನಾದ ಹಣ- ನ್ಯಾಯವಾದ ಗೇಣಿ.

ಒಂದು ಬೆಳೆ ಬರುವ ನಂಜ ಭೂಮಿಯ ಮಟ್ಟಿಗೆ ಈ ಮುಖ್ಯ ಬೆಳೆಯ ಸಾಮಾನ್ಯ ಉತ್ಪನ್ನದ ೪೦% ಅಥವಾ ಅದಕ್ಕೆ ಸಮನಾದ ಹಣ. ಪುಂಜ ಅಥವಾ ಬಾಗಾಯತು ಭೂಮಿಯ ಮುಖ್ಯ ಬೆಳೆಯ ಸಾಮಾನ್ಯ ಉತ್ಪನ್ನದ ೪೦% ಅಥವಾ ಅದಕ್ಕೆ ಸಮನಾದ ಹಣ ಗೇಣಿ.

ಸರಕಾರದ ಪುಸ್ತಕದಲ್ಲಿ ಒಂದು ಬೆಳೆ ಬರುವ ನಂಜ, ಪುಂಜ ಅಥವಾ ಬಾಗಾಯತು ಎಂದು ಬರೆದಿರಬಹುದಾದ ಯಾವುದಾದರೊಂದು ಪ್ರದೇಶದಲ್ಲಿ ಕಳೆದ ಐದು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳಲ್ಲಿ ಬಿಡದೆ ಎರಡು ಅಥವಾ ಹೆಚ್ಚು ಬೆಳೆಗಳನ್ನು ನೀರಾವರಿಯ ಸಹಾಯದಿಂದ ಎತ್ತುತ್ತಿದ್ದರೆ ಅಂಥ ಭೂಮಿಯ

(೧೦ನೇ ಪುಟ ನೋಡಿರಿ)

THE
CANARA MUTUAL
ASSURANCE COMPANY, LTD.

Managing Director: T. R. A. Pai

Head Office: **UDIPI**, S. India] [Estd: 1935.

ನೂತನ ವರ್ಷಾಗಮನದ ಸುಸಂದರ್ಭದಲ್ಲಿ ನಾವು ನಮ್ಮೆಲ್ಲ ವಿಮಾದಾರರನ್ನೂ ಪ್ರೋತ್ಸಾಹಕರನ್ನೂ ಅವರ ನಿರಂತರನಾದ ಬೆಂಬಲಕ್ಕಾಗಿ ಅಭಿನಂದಿಸುತ್ತಾ ಹೃತ್ಪೂರ್ವಕ ಶುಭಾಶಯಗಳನ್ನು ಅರ್ಪಿಸುತ್ತೇವೆ.

ಅಲ್ಲದೆ, ಈ ಹೊಸ ವರ್ಷವು (1956) ನಮ್ಮ ಕಂಪೆನಿಯ ವಿಮಾಗಣನೆಯ ವರ್ಷವಾಗಿದೆ; ಮತ್ತು ಕಂಪೆನಿಯು ಸ್ಥಾಪನೆಯಾದಂದಿನಿಂದ ಇಷ್ಟರವರೆಗಿನ ಎಲ್ಲ ವರ್ಷಗಳಿಗೂ ಬಿಡದೆ ಘೋಷಿಸಿರುವ ಬೋನಸಿನ ದಾಖಲೆಯು ಬಹಳ ಉತ್ತಮವಾಗಿದೆ, ಎಂಬುದನ್ನು ಅಭಿಮಾನ ಪೂರ್ವಕವಾಗಿ ತಿಳಿಸಲು ಬಯಸುತ್ತೇವೆ.

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: **ಉಡುಪಿ**, ದ. ಭಾ.] [ಸ್ಥಾಪನೆ: ೧೯೩೫.

Chief Agents:
The Commercial Corporation of India, Ltd.,
Udipi, S. India.



ಪ್ರಧಾನ ಮಂತ್ರಿಗಳ ದಕ್ಷಿಣ ಪ್ರವಾಸ

ಭಾರತದಲ್ಲಿ ರೂಪುಗೊಳ್ಳುತ್ತಿರುವ ರಕ್ತರಹಿತ ಕ್ರಾಂತಿಯ ದಿಗ್ದರ್ಶನ

ಮಲಬಾರು ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ನೆಹರುಗಳು ಕಳೆದ ವಾರ ಪ್ರವಾಸವನ್ನು ಕೈಗೊಂಡಿದ್ದರು; ಹೊಸ ದೆಹಲಿಗೆ ಮರಳುವ ದಾರಿಯಲ್ಲಿ ಅವರು ಮಂಗಳೂರಿಗೆ ಸಹ ಬಂದಿದ್ದರು ಮತ್ತು ಕೇಂದ್ರ ಮೈದಾನಿನಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಸ್ಫೂರ್ತಿದಾಯಕ ಭಾಷಣವನ್ನಿತ್ತಿದ್ದರು. ನೆಹರುಗಳ ಭಾಷಣಗಳು ಅವರು ಭಾರತದ ಪ್ರಗತಿಗೆ ಯಾವುದು ಸಾಧಕವಾದುದೆಂದು ಭಾವಿಸುತ್ತಾರೆ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತದ ಸ್ಥಾನವನ್ನು ಅವರು ಹೇಗಿಡಲು ಬಯಸುತ್ತಾರೆ ಎಂಬಿತ್ಯಾದಿ ಮಹತ್ವದ ವಿಷಯಗಳನ್ನು ಜನರಿಗೆ ಮಂದಟ್ಟುಪಡಿಸುತ್ತವೆ.

ರಕ್ತರಹಿತ ಕ್ರಾಂತಿ

ನೆಹರುಗಳು ಹೋದಲ್ಲೆಲ್ಲ ಜನರಿಗೆ ಮುಖ್ಯವಾದೊಂದು ವಿಷಯವನ್ನು ಎತ್ತಿ ಹೇಳಿದರು. "ಭಾರತದಲ್ಲೀಗ ಒಂದು ಬಗೆಯ ಕ್ರಾಂತಿಕಾರಿ ಚಳವಳವು ನಡೆಯುತ್ತಿದೆ; ಜೀವನದ ಪ್ರತಿಯೊಂದು ರಂಗದಲ್ಲಿ ಸಾಮಾಜಿಕ ಹಾಗು ಆರ್ಥಿಕ ಬದಲಾವಣೆಗಳನ್ನು ಶಾಂತ ರೀತಿಯಿಂದ ಸಾಧಿಸುವ ಕ್ರಾಂತಿಯೀಗ ನಡೆದಿದೆ" ಎಂದವರು ವಿದಿತ ಪಡಿಸಿದರು. "ಕೆಲವರು ಎಲ್ಲಿ ಧಾರಾಳವಾಗಿ ತಲೆಯನ್ನೊಡೆಯುವ ಹಾಗು ಗುಂಡು ಹಾರಿಸಿ ವಿಧ್ವಂಸಕ ಕೃತ್ಯಗಳನ್ನು ನಡೆಸುವ ಚಟುವಟಿಕೆ ಕಂಡು ಬರುತ್ತಿಲ್ಲವೊ ಅಲ್ಲಿ ಕ್ರಾಂತಿ ನಡೆಯುವುದೇ ಸಾಧ್ಯವಿಲ್ಲ ಎನ್ನುತ್ತಾರೆ. ಆದರೆ ಕ್ರಾಂತಿಗೆ ಇದರ ಆವಶ್ಯಕತೆ ಎಳ್ಳಷ್ಟೂ ಇಲ್ಲ. ರಾಷ್ಟ್ರ ಜೀವನದ ಪ್ರತಿಯೊಂದು ರಂಗದಲ್ಲಿ ಪ್ರಗತಿಯ ಕುರಿತು ತೀವ್ರ ಆಸಕ್ತಿ ಹುಟ್ಟಿ ಕಾರ್ಯನಿರತರಾಗುವ ಲವಲವಿಕೆಯೇ ಕ್ರಾಂತಿಯ ನಿಜ ಲಕ್ಷಣ" ಎಂದು ನೆಹರು ಸಾರಿದರು.

ಒಳಗೂ ಹೊರಗೂ ಒಂದೇ!

ತಮ್ಮ ಇನ್ನೊಂದು ಭಾಷಣದಲ್ಲಿ ನೆಹರುಗಳು ಭಾರತ ಸರಕಾರವು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಒಂದು ಬಗೆಯ ನೀತಿಯನ್ನು ಅನುಸರಿಸಿದರೆ ದೇಶದೊಳಗೆ ಅದಕ್ಕಿಂತ ಭಿನ್ನವಾದ ಧೋರಣೆಗೆ ಅಂಟಿಕುಳಿತಿದೆ ಎಂಬ ಆಕ್ಷೇಪವನ್ನು ಅಲ್ಲಗಳೆದರು. "ಹಾಗೆ ಹೇಳುವವರು ಸತ್ಯವನ್ನಾಡುತ್ತಿಲ್ಲ. ನಮ್ಮ ಧೋರಣೆಗಳು—ರಾಷ್ಟ್ರೀಯವಿರಲಿ, ಅಂತಾರಾಷ್ಟ್ರೀಯವಿರಲಿ—ಒಂದೇ ಮೂಲದಿಂದ ಹುಟ್ಟುತ್ತವೆ; ಮತ್ತು ಒಂದೇ ಉದ್ದೇಶವನ್ನು ಇಟ್ಟುಕೊಂಡಿರುತ್ತವೆ. ಮೂಲಭೂತವಾಗಿ ಎರಡೂ ರಂಗದ ನಮ್ಮ ಧೋರಣೆಗಳು ಶಾಂತಿಯನ್ನು ಧ್ಯೇಯವಾಗಿಟ್ಟುಕೊಂಡಿವೆ. ಅವು ಚಲನಶೀಲವಲ್ಲದ ಧೋರಣೆಗಳಲ್ಲ; ಬದಲಾವಣೆಗಳನ್ನು ಅವು ಉದ್ದೇಶಿಸಿವೆ; ಆದರೆ ಶಾಂತ ವಿಧಾನಕ್ಕೆ ಅವು ಅಂಟಿಕೊಂಡಿವೆ. ಕೆಲವೊಮ್ಮೆ ಸ್ವಲ್ಪ ಒತ್ತಾಯವನ್ನು ನಮ್ಮ ಧೋರಣೆ ಹೇರಬಹುದು—ಆದರೆ ಈ ಒತ್ತಾಯ ಸಹ ಶಾಂತ ವಿಧಾನದಿಂದಲೇ ಹಾಕಲ್ಪಡುತ್ತದೆ" ಎಂದು ನೆಹರು ಸ್ಪಷ್ಟಪಡಿಸಿದರು. ಗೋವೆಯ ಪ್ರಶ್ನೆಯನ್ನು ರಾಷ್ಟ್ರೀಯ—ಹಾಗು ಅಂತಾರಾಷ್ಟ್ರೀಯ ಪ್ರಶ್ನೆಯಲ್ಲಿ ಭಾರತ ವ್ಯವಹರಿಸುವ ವಿಧಾನದ ಪರೀಕ್ಷೆ ನಡೆಸುವ ಒರೆಗಲ್ಲೆಂದು ಹೇಳುತ್ತಾ "ಸೈನ್ಯಶಕ್ತಿಯನ್ನುಪಯೋಗಿಸಿ ಆ ಪ್ರದೇಶವನ್ನು ವಶಪಡಿಸಿಕೊಳ್ಳಬಹುದಾಗಿದ್ದರೂ ಯುದ್ಧವನ್ನು ಪ್ರಚೋದನೆಯ ನಡುವೆ ಸಹ ಪ್ರೋತ್ಸಾಹಿಸದೆ ನಾವು ಕುಳಿತಿದ್ದೇವೆ; ಏಕೆಂದರೆ ನಮ್ಮ ಸಿದ್ಧಾಂತಕ್ಕೆ ವ್ಯತಿರಿಕ್ತವಾಗಿ ನಡೆಯಲು ನಾವು ಸಿದ್ಧರಿಲ್ಲ" ಎಂದು ನೆಹರು ನುಡಿದರು.

ಕಮ್ಯುನಿಸ್ಟರ ಭರ್ತ್ಸನೆ

ರಾಜಕೀಯ ಪಕ್ಷಗಳ ನಿಲುಮೆಯನ್ನು ನೆಹರೂಗಳೊಂದೆಡೆ ಟೀಕಿಸಿದರು. ಮುಖ್ಯವಾಗಿ ಕಮ್ಯುನಿಸ್ಟರ ನಿಲುಮೆಯನ್ನು ಅವರು ಖಂಡಿಸಿ ಮಾತನಾಡಿದರು. ಹೀಗೆ ಮಾಡುವಾಗ "ನಮಗೆ ದೇಶದಲ್ಲಿ ಎಲ್ಲ ಪಕ್ಷಗಳೂ ಬೇಕು; ಅವರೇನು ಹೇಳುತ್ತಾರೆಂಬುದನ್ನು ನಾವು ಕೇಳಲು ಇಚ್ಛಿಸುತ್ತೇವೆ; ಏಕೆಂದರೆ ಆ ಪಕ್ಷಗಳ ಅಭಿಪ್ರಾಯವನ್ನು ತಿಳಿದುಕೊಂಡರೆ ಸತ್ಯ ಸಂಗತಿಯ ಗ್ರಹಣ ಸುಲಭವಾದೀತು" ಎಂದೂ ನೆಹರು ಹೇಳಿದರು. ಕಮ್ಯುನಿಸ್ಟರನ್ನು ಅವರು "ಧೀರ ಕ್ರಾಂತಿಕಾರಿಗಳು" ಎಂದು ಕರೆದರಾದರೂ ಬುದ್ಧಿವಂತಿಕೆಯ ಪ್ರಯೋಗದಲ್ಲಿಯಲ್ಲ, ಐದು ಸಾವಿರ ಮೈಲುಗಳಾಚೆ (ಇದು ರಶ್ಯದ ಹೆಸರನ್ನು ಸೂಚಿಸುವ ವಾಕ್ಯವೆಂಬುದು ಸ್ಪಷ್ಟ) ಏನು ನಡೆಯುತ್ತಿದೆ ಎಂಬುದನ್ನು ನೋಡಿ ಇಲ್ಲಿ ಅದನ್ನು ನಕಲು ತೆಗೆಯುವುದರಲ್ಲಿ ಅವರಿಗೆ ಆಸಕ್ತಿ ಎಂದು ತೆಗಳಿದರು. ಹಾಗೆ ಮಾಡುವಾಗ ಇಲ್ಲಿಯ ವಿಶಿಷ್ಟ ಪರಿಸ್ಥಿತಿಗಳಿಗೆ ಅದು ಹೊಂದಿಕೊಳ್ಳುವುದೇ ಅಥವಾ ಈಗಿನ ವಿಶಿಷ್ಟ ಸಮಸ್ಯೆಗಳ ಪರಿಹಾರಕ್ಕೆ ಅದು ಸಹಾಯಕವೇ ಎಂದು ಕಮ್ಯುನಿಸ್ಟರು ವಿಚಾರಿಸುತ್ತಿಲ್ಲವಾಗಿ ನೆಹರು ನುಡಿದರು. "ಕಮ್ಯುನಿಸಂ ತತ್ತ್ವಕ್ಕೆ ನಾನು ವಿರುದ್ಧವಿಲ್ಲ; ಆದರೆ ಭಾರತದ ಪರವಾಗಿ ನಾನಿದ್ದೇನೆ." ಎಂದರು ನೆಹರು.

ನಮ್ಮ ನಿಲುಮೆಯ ವೈಶಿಷ್ಟ್ಯ

"ಮೊನ್ನೆ ರಶ್ಯದ ಧುರೀಣರು ನಮ್ಮಲ್ಲಿಗೆ ಬಂದರು. ನಾವು ಅವರಿಗೆ ಸ್ವಾಗತವನ್ನು ಕೊಟ್ಟೆವು ಇದನ್ನು ಅವರೂ ಜಗತ್ತೂ ಬಹುಕಾಲದ ವರೆಗೆ ನೆನಪಿಡುವುದು ನಿಶ್ಚಯ. ಅದು ಸೌಹಾರ್ದಪೂರ್ಣವಾದ ಸ್ವಾಗತವಾಗಿದ್ದಿತು— ಏಕೆಂದರೆ ನಾವು ಅವರ ವಿರೋಧಿಗಳಲ್ಲ ಅವರಿಗೆ ನಾವು ಕ್ಷೇಮವನ್ನೆ ಬಯಸುತ್ತೇವೆ. ಆದರೆ ಅವರಿಗೆ ಕ್ಷೇಮ ಬಯಸಿದ ಮಾತ್ರಕ್ಕೆ ನಮ್ಮ ಮನಸ್ಸಿಗೆ ಮತ್ತು ಬುದ್ಧಿಗೆ ಬೀಗಮುದ್ರೆಯನ್ನು ಹಾಕಿ ನಮ್ಮ ಸ್ವಂತ ಅನುಭವಗಳನ್ನೂ ನಮ್ಮ ಸ್ವಂತ ದೇಶವನ್ನೂ ಮರೆಯಬೇಕೆಂದು ಅರ್ಥವಾಗಲಾರದು. ಭಾರತದ ಮನಸ್ಸಿಗೆ ಬೀಗ ಹಾಕಲಾಗಿದೆಯೆಂದೂ ಭಾರತದ ಬಹುಜನರು ಬೇರೆಡೆಯ ಧೋರಣೆಯೊಂದನ್ನು ಅನುಸರಿಸಲು ಸಿದ್ಧರಾಗಬಹುದೆಂದೂ ಹೇಳುವವರ ವಾದ ನನಗೆ ಹಿಡಿಸುವುದಿಲ್ಲ. ಕಳೆದ ಕೆಲವು ಸಾವಿರ ವರ್ಷಗಳ ವರೆಗೆ ವಿಶಿಷ್ಟ ಅಸ್ತಿತ್ವವನ್ನು ಹೊಂದಿದ ರಾಷ್ಟ್ರ ಭಾರತವಾಗಿದೆ; ಬೇರೆಡೆಯಿಂದ ನಿರ್ದೇಶಿಸಲ್ಪಟ್ಟ ಕೆಲವು ತತ್ತ್ವಗಳನ್ನು ಭಾರತವು ಎಂದಿಗೂ ಮಾನ್ಯ ಮಾಡದು. ನಾವು ಬಯಸಿದ ಸ್ವಾತಂತ್ರ್ಯ ಆ ಮಾದರಿಯದಲ್ಲವೇ ಅಲ್ಲ" ಎಂದು ನೆಹರು ಈ ಸಂದರ್ಭದಲ್ಲಿ ಘೋಷಿಸಿದರು. "ನಾವು ರಶ್ಯದಿಂದ ಅನೇಕ ಸಂಗತಿಗಳನ್ನು ಕಲಿಯಬಹುದು; ಕೆಂಪು ಚೀನದಿಂದ ಸಹಕಾರ ವಿಧಾನದಲ್ಲಿ ಯಶಸ್ಸನ್ನು ಗಳಿಸುವ ಗುಟ್ಟನ್ನು ತಿಳಿಯಬಹುದು; ಅಮೇರಿಕದಿಂದ ಔದ್ಯಮಿಕ ಪ್ರಗತಿಯ ರಹಸ್ಯವನ್ನು ಕರಗತ ಮಾಡಿಕೊಳ್ಳಬಹುದು. ನಾವು ಪ್ರತಿಯೊಂದು ರಾಷ್ಟ್ರದಿಂದಲೂ ನಮಗೆ ಉಪಯುಕ್ತವಾಗಬಹುದಾದುದನ್ನು ಕಲಿಯಲು ಇಚ್ಛಿಸುತ್ತೇವೆ; ಪ್ರತಿಯೊಂದು ರಾಷ್ಟ್ರದೊಡನೆಯೂ ಸ್ನೇಹಶೀಲರಾಗಿರಲು ಬಯಸುತ್ತೇವೆ. ಆದರೆ ನಮ್ಮಲ್ಲಿಯ ಕಮ್ಯುನಿಸ್ಟರು ಒಂದು ದೇಶದೊಡನೆ ಸ್ನೇಹವೆಂದೊಡನೆಯೆ ಇನ್ನೊಂದು ರಾಷ್ಟ್ರದೊಡನೆ ವೈರತ್ವ ಅತ್ಯವಶ್ಯವೆಂದು ಭಾವಿಸುತ್ತಾರೆ; ನನ್ನೊಡನೆ ಸ್ನೇಹವನ್ನು ನೀವು ಬಯಸುವಿರಾದರೆ ನನ್ನ ಶತ್ರುವಿನೊಡನೆ ದ್ವೇಷ ಸಾಧಿಸಲು ನೀವು ಸಿದ್ಧರಿರಬೇಕೆಂದು ಹೇಳುತ್ತಾರೆ. ಅದು ಸ್ವತಂತ್ರ ರಾಷ್ಟ್ರವಾದ ಭಾರತದ ಮೂಲಭೂತಧೋರಣೆಗೆ ವಿರುದ್ಧವಾದ ಅಭಿಪ್ರಾಯ" ಎಂದು ನೆಹರು ತಿಳಿಸಿ ಹೇಳಿದರು.

ವರ್ಗರಹಿತ ಸಮಾಜ

ಭಾರತದ ಕಮ್ಯುನಿಸ್ಟರು ವರ್ಗರಹಿತ ಸಮಾಜದ ರಚನೆಗಾಗಿ ಯುದ್ಧತೆಗಳನ್ನು ನಡೆಸಲು ಹೇಳುತ್ತಾರೆ ಎನ್ನುತ್ತಾ ನೆಹರುಗಳು "ನಾವಾದರೂ ಆ ಧ್ಯೇಯವನ್ನೇ ಇಟ್ಟುಕೊಂಡಿದ್ದೇವೆ" ಎಂದರು. "ಬೇರೆ ಬೇರೆ ವರ್ಗಗಳ ಹಿತಾಸಕ್ತಿಗಳಲ್ಲಿ ಘರ್ಷಣೆ ಇದೆ ಎಂಬುದನ್ನೂ ನಾವು ಮನಗಂಡಿದ್ದೇವೆ. ಇದನ್ನು ಹೇಗೆ ನಿವಾರಿಸಬಹುದೆಂಬುದೇ ವಿಚಾರಣೀಯವಾದ ಅಂಶ. ಇಂಥ ಘರ್ಷಣೆಗಳನ್ನು ನಿಜವಾಗಿ ಪರಿಹರಿಸುವುದು ಶಾಂತ ವಿಧಾನದಿಂದ ಮಾತ್ರ ಸಾಧ್ಯ. ಆದುದರಿಂದ ೧೬೦ ವರ್ಷಗಳ ಹಿಂದೆ ಫ್ರಾನ್ಸಿನಲ್ಲಿ ನಡೆದ ರಕ್ತ ಕ್ರಾಂತಿಯ ಕುರಿತಾಗಲೀ ೩೫ ವರ್ಷಗಳ ಹಿಂದೆ ನಡೆದ ರಶ್ಯದ ರಕ್ತ ಕ್ರಾಂತಿಯ ವಿಷಯದಲ್ಲಾಗಲೀ ಉಪದೇಶ ಮಾಡುವುದು ಯೋಗ್ಯವಲ್ಲ. ರಶ್ಯದಲ್ಲಿಯ ಪರಿಸ್ಥಿತಿಗಳು ಭಾರತದಲ್ಲಿಲ್ಲ. ನಮ್ಮ ಮಟ್ಟಿಗೆ ಯಾವುದು ಯೋಗ್ಯ ಮಾರ್ಗವೆಂಬುದನ್ನು ನಾವೇ ಆಲೋಚಿಸಿಕೊಳ್ಳಬೇಕಾಗಿದೆ ಭಾರತದ

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಆಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.



Drama Materials at cheap rates

Drama Hair, Topans, Jari Boarders, Gangawans, Jari Cloths, Jari Crowns, Swords, Turbans, & Gondas, Hair Net, Pearl Cuda, Make up Goods and other kind of Drama Meterials, at cheap and attractive rates.

Write to:

Dharamshi Mulji Dresswalla,

132, C, Bhagat Wadi
Buleshwar Road BOMBAY 2.

ಜಾತೀಯತೆಗೆ ಕೊನೆಯ ವರೆಗೆ ವಿರೋಧ

ಕಮ್ಯುನಿಸ್ಟರ ಹಳೆಯ ಪಲ್ಲವಿ ಭಾರತಕ್ಕೆ ಹೇಳಿಸಿದುದಲ್ಲ

ಕಮ್ಯುನಿಸ್ಟರು ಹಳೆಯ ಕಾಲದ ಕೆಲವು ಪಲ್ಲವಿಗಳಿಂದ ಆವೇಶಭರಿತರಾಗಿ ತಮ್ಮ ಕಾಲಡಿಯಲ್ಲಿರುವ ಭಾರತ ಭೂಮಿಯಲ್ಲಿ ಶಾಂತ ವಿಧಾನದಿಂದಲೇ ನಡೆಯುತ್ತಿರುವ ತೀವ್ರ ಬದಲಾವಣೆಗಳನ್ನು ಮೆಚ್ಚಲು ಅಸಮರ್ಥರಾಗಿ ತೋರುತ್ತಾರೆ. ಹೀಗೆ ಭಾರತದ ಧೀರ ಕ್ರಾಂತಿಕಾರಿಗಳು ಮಹಾ ಪ್ರತಿಗಾಮಿಗಳಾಗಿ ನಿಂತಿದ್ದಾರೆ” ಎಂದು ನೆಹರು ಜನರನ್ನು ಎಚ್ಚರಿಸಿದರು.

ನೂತನ ಉಪಾಯ

ಕಾಂಗ್ರೆಸು ಪಕ್ಷ ಮತ್ತು ಸಂಸತ್ತು ಸಮಾಜವಾದಿ ಮಾದರಿಯ ಸಮಾಜದ ರಚನೆಯನ್ನು ಉದ್ದೇಶವಾಗಿಟ್ಟುಕೊಂಡಿರುವುದನ್ನು ನೆಹರುಗಳು ತಮ್ಮ ಮಂಗಳೂರಿನ ಭಾಷಣದಲ್ಲಿ ನೆನಪಿಗೆ ತಂದುಕೊಟ್ಟರು. “ಬಡತನವನ್ನು ರಾಷ್ಟ್ರದಾದ್ಯಂತ ಹಟ್ಟುವಂತೆ ಹಂಚುವುದು ನಮ್ಮ ಸಮಾಜವಾದಿ ಮಾದರಿಯ ಸಮಾಜ ರಚನೆಯ ಉದ್ದೇಶವಲ್ಲ. ಭಾರತವು ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು, ಮತ್ತು ಉತ್ಪಾದನೆಯ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು; ಮತ್ತದನ್ನು ಸಮಾನವಾಗಿ ವಿತರಿಸಬೇಕು— ಎಂಬುದೇ ನಮ್ಮ ಧ್ಯೇಯ” ಎಂದು ನೆಹರು ವಿವರಿಸಿದರು “ನಾವು ದೊಡ್ಡ ಸಮಸ್ಯೆಗಳನ್ನು ಸಹ ಶಾಂತ ವಿಧಾನದಿಂದ ಬಗೆಹರಿಸುವುದು ಸಾಧ್ಯವೆಂದು ಮನಗಂಡಿರುವಾಗ ಆರ್ಥಿಕ ಕ್ರಾಂತಿಗಾಗಿಯೂ ಈ ಮಾರ್ಗವನ್ನು ಅವಲಂಬಿಸಬಾರದೇಕೆ” ಎಂದು ನೆಹರು ಪ್ರಶ್ನಿಸಿದರು. ಹೃದಯದಲ್ಲಿ ದ್ವೇಷವಿಟ್ಟುಕೊಂಡು ಹೊರಗೆ ಮಾತ್ರ ಪ್ರೀತಿ ಪ್ರದರ್ಶಿಸುವುದರಿಂದ ಹಿತವಾಗದು. “ನಿಮ್ಮ ಹೃದಯದಲ್ಲಿ ಖಡ್ಗವೊಂದಿದ್ದರೆ ಅದನ್ನು ಮುಚ್ಚಿಡುವುದಕ್ಕಿಂತ ಹೊರಗೆ ತೆಗೆದು ತೋರಿಸುವುದೇ ಲೇಸು” ಎಂದು ಗಾಂಧೀಜಿ ಹೇಳಿದ್ದರು. ಆದುದರಿಂದ ನಮ್ಮ ವಿಧಾನವು ಶಾಂತವೆಂದಾದರೆ ಅದು ತ್ರಿಕರಣ ಪೂರ್ವಕವಾದುದಾಗಿರಬೇಕು. ಕಾರಣ ರಷ್ಯ ಅಥವಾ ಫ್ರಾನ್ಸಿನ ರಕ್ತ ಕ್ರಾಂತಿಯನ್ನು ನಾವು ಪರಮಾದರ್ಶವಾಗಿಟ್ಟುಕೊಳ್ಳಕೂಡದು. ಇವತ್ತಿನ ದಿವಸ ಅಣು ಮತ್ತು ಜಲಜನಕ ಬಾಂಬುಗಳು ಹಿಂಸೆಯ ಪರಮಾವಧಿಯಾಗಿ ಪರಿಣಮಿಸಿವೆ. ಬದಲಾವಣೆಯನ್ನು ಸಾಧಿಸಲು ಹಿಂಸೆಯನ್ನು ಅವಲಂಬಿಸುವುದು ಗತಕಾಲದ ತಂತ್ರವಾಯಿತು. ಶಾಂತ ವಿಧಾನದ ಅನುಸರಣೆಯನ್ನೀಗ ಮಾಡದೆ ಹೋದರೆ ಪ್ರಜಾಪ್ರಭುತ್ವದ ಅವಸಾನ ನಿಶ್ಚಯ ಎಂದು ನೆಹರು ಸಾರಿದರು.

ಪರಿಶ್ರಮದ ಅಗತ್ಯ

“ಹಳೆಯ ತತ್ತ್ವಗಳಲ್ಲಿ ಒಳ್ಳೆಯದಿದ್ದರೆ ನಾವು ಅವುಗಳನ್ನು ಈಗಲೂ ಇಟ್ಟುಕೊಳ್ಳಬಹುದು-ಆದರೆ ವಿಶಿಷ್ಟ ಸಮಯಕ್ಕೆ ಉಪಯುಕ್ತವೆನಿಸಿದ ಪಲ್ಲವಿಯೊಂದು ಬದಲಾವಣೆ ಹೊಂದುತ್ತಿರುವ ಜಗತ್ತಿಗೆ ಮಾದರಿಯಾಗುವಷ್ಟು ಸಾರ್ವಕಾಲಿಕ ವೈಶಿಷ್ಟ್ಯವನ್ನು ಹೊಂದಿರುವುದು ವಿರಳ” ಎನ್ನುತ್ತಾ ನೆಹರುಗಳು “ಅಣು ಬಾಂಬು ಮತ್ತು ಅಶೋಕನ ಅಹಿಂಸೆಯ ಸಂದೇಶಗಳಲ್ಲಿ ಒಂದನ್ನು ಜಗತ್ತು ಇಂದು ಆರಿಸಬೇಕಾಗಿ ಬಂದಿದೆ” ಎಂದರು. ಈ ಆಯ್ಕೆಯನ್ನು ವಿಶ್ಲೇಷಿಸಿದರೆ ಅಣು ಬಾಂಬನ್ನು ಮೆಚ್ಚುವವರು ಪ್ರತಿಗಾಮಿಗಳಾಗಿ ತೋರುತ್ತಾರೆ ಎಂದು ನೆಹರು ಅಭಿಪ್ರಾಯಪಟ್ಟರು. ಭಾರತವು ಅಶೋಕನ ಹೆಜ್ಜೆಯನ್ನನುಸರಿಸಿ ಪಂಚಶೀಲಗಳ ತಳಹದಿಯ ಮೇಲೆ ರೂಪುಗೊಂಡ ಸಹಜೀವನವನ್ನು ಎತ್ತಿ ಹಿಡಿಯುತ್ತದೆ ಎಂದು ಘೋಷಿಸಿದರು. ಆದುದರಿಂದ ಈ ಚೌಕಟ್ಟಿಗೊಳಪಟ್ಟು ಪ್ರಗತಿ ಮತ್ತು ಕ್ರಾಂತಿಕಾರಿಯಾದ ಬದಲಾವಣೆಗಳನ್ನು ಬಯಸುವ ನಾವು ಬಹಳ ಕಠಿಣವಾಗಿ ಪರಿಶ್ರಮ ಪೂರ್ವಕ ಕೆಲಸ ಮಾಡಬೇಕಾಗಿದೆ ಎಂದು ನೆಹರು ಉಪದೇಶಿಸಿದರು. “ಕ್ರಾಂತಿಯು ನಮ್ಮ ಕೆಲಸಕ್ಕೆ ದಾರಿಯನ್ನು ಸ್ಪಷ್ಟ ಮಾಡಿ ಕೊಡುತ್ತದೆ; ನಿಜವಾದ ಕೆಲಸವು ಪರಿಶ್ರಮದಿಂದಲೇ ನಡೆಯಬೇಕಾಗಿದೆ. ರಷ್ಯದಲ್ಲಿ, ಚೀನದಲ್ಲಿ ಸಾಧಿಸಿದ ಪ್ರಗತಿಗೆ ಜನರ ಅಪಾರ ದುಡಿಮೆಯೇ ಕಾರಣ. ಜರ್ಮನಿ ಮತ್ತು ಜಪಾನುಗಳಂಥ ರಣವೀರ ರಾಷ್ಟ್ರಗಳು ಸಹ ಧೂಳೀಪಟವಾದ ತಮ್ಮ ಮಹಾ ನಗರಗಳನ್ನೂ ಔದ್ಯಮಿಕ ಕೇಂದ್ರಗಳನ್ನೂ ಕಠಿಣ ಪರಿಶ್ರಮದಿಂದ ಈಗ ಮರಳಿ ಕಟ್ಟಿವೆ. ಆದುದರಿಂದ ಪಲ್ಲವಿಗಳಲ್ಲ — ಸಂಯುಕ್ತ ಪ್ರಯತ್ನ ಮತ್ತು ಪರಿಶ್ರಮಗಳು ಮಾತ್ರ ಒಳ್ಳೆಯದನ್ನು ತರುತ್ತವೆ; ಮತ್ತು ನಮ್ಮ ಧ್ಯೇಯವನ್ನು ಸಾಧಿಸಿಕೊಡುತ್ತವೆ” ಎಂದು ನೆಹರು ಮನಮುಟ್ಟುವಂತೆ ವಿವರಿಸಿದರು.

ಜಾತೀಯತೆಯ ವಿಷ

ಮಲಬಾರಿನ ತಮ್ಮದೊಂದು ಭಾಷಣದಲ್ಲಿ ನೆಹರುಗಳು ಜಾತೀಯತೆಯನ್ನು ಬಲವಾಗಿ ಖಂಡಿಸಿದರು; ಮತ್ತು ಜಾತೀಯ ಸಂಸ್ಥೆಗಳ ಅಸ್ತಿತ್ವಕ್ಕೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದರು. “ಜಾತೀಯ ಸಂಸ್ಥೆಗಳನ್ನು ಸ್ಥಾಪಿಸುವ ವಿಚಾರವನ್ನು ಮಾಡುವುದೆಂದರೆ ಇನ್ನೊಬ್ಬರ ನಡುವೆ ಗೋಡೆ ಕಟ್ಟುವುದೆಂದೇ ಅರ್ಥ. ಭಾರತದ ಘಟನೆಯು ಪ್ರತಿಯೊಬ್ಬ ನಾಗರಿಕನಿಗೂ ತನ್ನ ಮತದಲ್ಲಿ ವಿಶ್ವಾಸವಿಡುವ ಅಧಿಕಾರವನ್ನಿತ್ತಿದೆ. ಸರಕಾರ ಇವರಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲವೆಂದು ಜಗತ್ತಿಗೆ ಗೊತ್ತಿದೆ. ಮೊನ್ನೆಯಷ್ಟೇ ಸಾವುದಿ ಅರೇಬಿಯದ ರಾಜರು ಭಾರತಕ್ಕೆ ಬಂದರು; ಮತ್ತು ತಮ್ಮ ವಿದಾಯ ಸಂದೇಶದಲ್ಲಿ ಅವರು ಇಲ್ಲಿಯ ಅಲ್ಪ ಸಂಖ್ಯಾಕರನ್ನೂ—ಮುಸ್ಲಿಮರನ್ನೂ ಇತರರನ್ನೂ— ಭಾರತ ಸರಕಾರ ಹೇಗೆ ನಡೆಸಿಕೊಳ್ಳುತ್ತಿದೆ ಎಂಬ ಬಗ್ಗೆ ಪ್ರಶಂಸೆಯ ಮತ್ತು ತೃಪ್ತಿಯ ಮಾತುಗಳನ್ನಾಡಿದರು. ಇದರಿಂದಲೇ ಭಾರತದ ನಡವಳಿಕೆ ಹೇಗಿದೆ ಎಂದು ಸ್ಪಷ್ಟವಾಗುತ್ತದೆ” ಎಂದು ನೆಹರು ಹೇಳಿದರು. “ನಮ್ಮ ದೇಶದಲ್ಲಿ ಹಿಂದು, ಮುಸ್ಲಿಂ ಮತ್ತಿತರ ಜಾತೀಯ ಸಂಸ್ಥೆಗಳಿವೆ. ಅವುಗಳು ಕಾನೂನಿಗೆ ವಿರೋಧವಾಗಿ ಹೋಗದಿರುವ ವರೆಗೆ ಉಳಿಯುವುದು ನಿಜ. ಆದರೆ ಅವುಗಳ ಅಸ್ತಿತ್ವಕ್ಕೆ ಅವಕಾಶವಿದೆ ಎನ್ನುವುದಕ್ಕೂ ಅವುಗಳನ್ನು ಪ್ರೋತ್ಸಾಹಿಸಬೇಕೆನ್ನುವುದಕ್ಕೂ ತುಂಬ ಅಂತರವಿದೆ. ಈ ಜಾತೀಯ ಸಂಸ್ಥೆಗಳು ಉಳಿಯುತ್ತವಾದರೆ ಅವುಗಳನ್ನು ಸದಾಕಾಲ ಪ್ರತಿಭಟಿಸಿ ತೀರುವುದೇ ನಮ್ಮ ನಿಶ್ಚಯ. ಈ ದೇಶದ ಯಾವುದೇ ಭಾಗದಲ್ಲಿಯಾದರೂ ಜಾತೀಯತೆಗೆ ಆಶ್ರಯ ಸಿಗಬಾರದು” ಎಂದು ನೆಹರು ಕಟು ಮಾತುಗಳಿಂದ ಎಚ್ಚರವಿತ್ತರು.

ಪ್ರತ್ಯೇಕತೆಯ ಅಡ್ಡಗೋಡೆ

“ನಮ್ಮದು ಹಿಂದೂ ರಾಷ್ಟ್ರವಲ್ಲ, ಮುಸ್ಲಿಂ ಅಥವಾ ಕ್ರೈಸ್ತ ರಾಷ್ಟ್ರವೂ ಅಲ್ಲ—ನಮ್ಮದು ಹಿಂದೀ ರಾಷ್ಟ್ರ; ಜನತಾ ರಾಷ್ಟ್ರ. ಆದುದರಿಂದ ನಾವೆಲ್ಲರೂ ಒಟ್ಟಿಗೆ ಬಾಳಬೇಕು. ಬಹು ಸಂಖ್ಯಾಕರಾದವರು ಅಲ್ಪ ಸಂಖ್ಯಾಕರನ್ನು ಚೆನ್ನಾಗಿ ನಡೆಸಿಕೊಳ್ಳಬೇಕು. ಪ್ರತ್ಯೇಕತೆಯ ಭಾವನೆಯನ್ನು ಬಿಟ್ಟುಕೊಟ್ಟು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಜಾತೀಯತೆಯ ಅಡ್ಡ ಗೋಡೆಯನ್ನು ಏಳಗೊಡಬಾರದು. ಅದರಂತೆ ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನೆತ್ತಿಕೊಂಡು ಉದ್ವೇಗಪರವಶರಾಗಲೂ ಕೂಡದು. ಮೂವತ್ತಾರು ಕೋಟಿ ಭಾರತೀಯರೆಲ್ಲರೂ ಒಟ್ಟಿಗೆ ಮುಂದರಿಯಬೇಕೆಂಬ ಮನೋಭಾವನೆಯನ್ನು ಹೊಂದಬೇಕು. ಯಾರು ಯಾವ ರಾಜ್ಯದಲ್ಲಿಯೇ ಇರಲಿ, ಯಾವ ಹಳ್ಳಿಯಲ್ಲಿಯೇ ಇರಲಿ, ಯಾವದೇ ಮತಾನುಯಾಯಿಗಳಾಗಿರಲಿ, ಯಾವುದೇ ಭಾಷೆಯನ್ನಾಡುತ್ತಿರಲಿ, ಎಲ್ಲರೂ ಒಂದೇ ಸಾಮಾನ್ಯ ಬಾಂಧವ್ಯ ಸೂತ್ರದಲ್ಲಿ ಒಟ್ಟು ಸೇರಿ ಈ ಮಹಾ ಭೂಮಿಯಲ್ಲಿ ಕೆಲಸ ಮಾಡಬೇಕು. ವೈವಿಧ್ಯದಲ್ಲಿಯ ಈ ಏಕತ್ವವೇ ನಮ್ಮನ್ನು ಪರಸ್ಪರ ಕ್ಷುದ್ರ ಜಗಳಗಳಲ್ಲಿ ಸಮಯ ಕಳೆಯದಂತೆ ನೋಡಬಲ್ಲುದು; ಭಾರತದ ಭವ್ಯ ಭವಿಷ್ಯವನ್ನು ಹಾಸುಹೊಕ್ಕಾಗಿ ಬೆರೆದು ಜನತೆ ರೂಪಿಸುವಂತೆ ಮಾಡಬಲ್ಲುದು” ಎಂದು ನೆಹರು ಸಂದೇಶ ರೂಪದ ಭರತ ವಾಕ್ಯವನ್ನಾಡಿದರು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ “ಆನಂದ ಸುಧ” ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ “ಮನೆ ಮದ್ದು” ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
“Ably written—Quite up-to-date valuable service”
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).
ಸಿಗುವ ಸ್ಥಳ:— ನವಭಾರತ ಪುಸ್ತಕ ಭಂಡಾರ ಉಡುಪಿ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health, Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೫-೧-'೫೬	೧೮

ವಲಯ ಮಂಡಳಗಳು

ಸಂಸತ್ತಿನಲ್ಲಿ ರಾಜ್ಯಗಳ ಪುನರ್ಘಟನೆಯ ಕುರಿತು ಬಿಸಿ ಬಿಸಿ ಚರ್ಚೆ ನಡೆಯುತ್ತಿದ್ದಾಗ ಮತ್ತು ಹೆಚ್ಚಿನ ಸದಸ್ಯರು ತಂತಮ್ಮ ಹಿತಾಸಕ್ತಿಯ ರಕ್ಷಣೆಗಾಗಿ ಹೋರಾಡಿ ಭಾಷಾ ಪ್ರಶ್ನೆಯನ್ನು ಮುಂದಿಟ್ಟು ಕೆಲವು ಪ್ರದೇಶಗಳ ಮೇಲೆ ಹಕ್ಕು ಸ್ಥಾಪಿಸುತ್ತಿದ್ದಾಗ ಚರ್ಚೆಯಲ್ಲಿ ನಡುವೆ ಎದ್ದು ಭಾಗ ವಹಿಸಿದ ಪ್ರಧಾನಿ ನೆಹರುಗಳು ಎಲ್ಲರನ್ನೂ ಚಕಿತರಾಗಿಸುವ ಮಹತ್ವದ ಸಲಹೆಯೊಂದನ್ನು ತಮ್ಮ ಸುದೀರ್ಘ ಭಾಷಣದ ಕೊನೆಯಲ್ಲಿ ಮುಂದಿಟ್ಟರು—ಅದೇ ಪ್ರಾದೇಶಿಕ ಮಂಡಳಗಳ ರಚನೆ. "ರಾಜ್ಯಗಳ ಪುನರ್ಘಟನೆಯ ಸಂಬಂಧದಲ್ಲಿ ಸಂಸತ್ತಿನ ನಿರ್ಣಯವು ಏನೇ ಆಗಲಿ— ಮೂರೊ ನಾಲ್ಕೊ ಐದೋ ರಾಜ್ಯಗಳ ಗುಂಪಿಗೆ ಒಂದರಂತೆ ಸಾಮಾನ್ಯ ಪ್ರಾದೇಶಿಕ ಮಂಡಳಗಳನು ರಚಿಸಬೇಕೆಂದು ನಾನು ಸೂಚಿಸುತ್ತೇನೆ. ಮೊದಲಿಗೆ ಅವುಗಳು ಕೇವಲ ಸಲಹೆ ಕೊಡುವ ರೂಪದಲ್ಲಿರಲಿ; ರಾಜ್ಯಗಳ ನಡುವೆ ಆರ್ಥಿಕ ಪ್ರಶ್ನೆಗಳನ್ನು ವಿಚಾರಿಸುವ, ಗಡಿ ಪ್ರಶ್ನೆಗಳ ಪರಿಹಾರವನ್ನು ಸುಗಮಗೊಳಿಸುವ, ನದಿ ಯೋಜನೆ ಮತ್ತಿತರ ಅಭಿವೃದ್ಧಿ ಪ್ರಯತ್ನಗಳ ಆತಂಕವನ್ನು ನಿವಾರಿಸುವ ಕೆಲಸವನ್ನು ಅದು ಮಾಡಲು ನೆರವಾಗಲಿ. ಕೆಲವು ಸಮಯದ ಬಳಿಕ ಈ ಮಂಡಳವು ಕೇವಲ ಸಲಹೆ ಕೊಡುವ ಮಟ್ಟದಿಂದ ತಾನಾಗಿಯೇ ಹೆಚ್ಚು ಪ್ರಾಮುಖ್ಯ ಸ್ಥಾನವನ್ನು ಹೊಂದುವುದೂ ಸಾಧ್ಯ. ಈಗಿನ ಮಟ್ಟಿಗೆ ನಾವು ಜನರು ಸಂಶಯಿತರಾಗದಂತೆ ಜಾಗರೂಕತೆಯಿಂದಲೂ ನಿಧಾನವಾಗಿಯೂ ಮುಂದರಿಯೋಣ" ಎಂದು ನೆಹರುಗಳು ತಮ್ಮ ಸೂಚನೆಯ ಕುರಿತು ಹೇಳಿದ್ದಾರೆ. ಸಾಮಾನ್ಯವಾಗಿ ಹೊಸ ರಾಜ್ಯಗಳು ಭಾಷೆಯ ತಳಹದಿಯ ಮೇಲೆಯೇ ರೂಪುಗೊಳ್ಳುತ್ತವೆ; ಮತ್ತು ಭಿನ್ನ ಭಾಷೆಗಳನ್ನಾಡುವವರಲ್ಲಿ ಸಹೋದರ ವಾತ್ಸಲ್ಯವು ಪಾಲು ಕೇಳುವ ಜಗಳ ರೂಪದಲ್ಲಿಯೇ ವ್ಯಕ್ತವಾಗುವ ಸೂಚನೆಗಳು ಈಗಲೇ ಕಾಣಿಸಿಕೊಂಡಿವೆ. ಇಡಿಯಾಗಿ ಭಾರತದ ಅಭ್ಯುದಯವಾಗಬೇಕೆಂಬ ಭಾವನೆಯ ಬದಲು ತಂತಮ್ಮ ಭಾಷಾ ಘಟಕಗಳ ಶ್ರೇಯಸ್ಸನ್ನು ಹಾರೈಸುವುದೇ ಪ್ರಥಮ ಕರ್ತವ್ಯವೆಂದು ಜನರೂ ಅವರ ಪ್ರತಿನಿಧಿಗಳೂ ಹಾರೈಸಿದಂತಿದೆ. ಇದರಿಂದ ಹೊಸ ರಾಜ್ಯಗಳಲ್ಲಿ ಸ್ಪರ್ಧೆ, ಈರ್ಷ್ಯೆ ಮತ್ತು ವೈಮನಸ್ಯಗಳು ತಲೆದೋರಿ ದೇಶದ ವಾತಾವರಣವು ಕೆಡಬಹುದು; ರಾಷ್ಟ್ರದ ಪ್ರಗತಿಗೆ ಅವಶ್ಯಕವಾದ ಒಗ್ಗಟ್ಟಿನ ಮನೋಭಾವದ ಬೆಳವಣಿಗೆಗೆ ಅಡ್ಡಿಯಾಗಬಹುದು. ಇವುಗಳಿಗೆ ಎಡೆಯಿರದಂತೆ ಪರಸ್ಪರ ಹತ್ತಿರಕ್ಕೆ ವಿವಿಧ ಭಾಷೆಯ ಗುಂಪುಗಳವರನ್ನು ತರಬೇಕು; ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಸಾಮಾನ್ಯ ರಂಗವನ್ನು ಏರ್ಪಡಿಸುವುದೇ ಇದಕ್ಕೆ ಯೋಗ್ಯ ಉಪಾಯವಾಗಬಲ್ಲುದು ಎಂಬ ಹಿನ್ನೆಲೆಯ ಕಾರಣಗಳಿಗಾಗಿ ಪ್ರಾದೇಶಿಕ ಮಂಡಳಗಳ ರಚನೆಗೆ ಹೆಚ್ಚಿನ ಪುಷ್ಟಿಯು ದೊರೆತಿದೆ. ಸಂಸತ್ತಿನ ಸದಸ್ಯರಲ್ಲಿ ನೆಹರುಗಳ ಹೊಸ ಸೂಚನೆಯ ಕುರಿತು ಅತ್ಯಧಿಕ ಕುತೂಹಲ ಉಂಟಾಗಿದೆ. ಅದನ್ನು ವ್ಯಾವಹಾರಿಕ ತೊಂದರೆಗಳು ಏಳದಂತೆ ಹೇಗೆ ಕಾರ್ಯಾಚರಣೆಗೆ ತರಬಹುದು ಎಂದು ಕೇಂದ್ರದ ಮಂತ್ರಿ ಶಾಖೆಗಳು ತೀವ್ರವಾಗಿ ವಿಚಾರಿಸುತ್ತಿವೆ. ರಾಷ್ಟ್ರದ ಬೇರೆ ಬೇರೆ ಧುರೀಣರೂ ರಾಜ್ಯಗಳ ಮುಖ್ಯ ಮಂತ್ರಿಗಳಲ್ಲಿ ಹೆಚ್ಚಿನವರೂ ಸೂಚನೆಗೆ ಸಾಮಾನ್ಯ ಸ್ವಾಗತವನ್ನು ಕೊಟ್ಟಿದ್ದಾರೆ; ಅದರೊಡನೆ ಪ್ರಾದೇಶಿಕ ಮಂಡಳಗಳ ರಚನೆಯಲ್ಲಿ ಉಪಯುಕ್ತವಾಗಬಹುದಾದ ತಮ್ಮದೇ ಸಲಹೆಗಳನ್ನೂ ಮುಂದಿಟ್ಟಿದ್ದಾರೆ. ಅವುಗಳಲ್ಲಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೀಡಿದ ಸಲಹೆ ಉಲ್ಲೇಖನೀಯವಾಗಿದೆ— ಪ್ರಾದೇಶಿಕ ಮಂಡಳವು ಕೇವಲ ಸಲಹೆ ಕೊಡುವ ಕೆಲಸವನ್ನಷ್ಟೆ ಮಾಡಬಾರದು; ಅದಕ್ಕೆ ಕಾರ್ಯಾಧಿಕಾರ ಸಹ ಸ್ವಲ್ಪ ಮಟ್ಟಿಗೆ ಇರಬೇಕು ಎಂದವರ ಅಭಿಪ್ರಾಯ. ವಿವಿಧ ರಾಜ್ಯಗಳು ತಮಗೆ ಸಾಮಾನ್ಯವಾದ ಸಮಸ್ಯೆಗಳನ್ನು ಪರಸ್ಪರ ಚರ್ಚಿಸಿ ತೀರ್ಮಾನಕ್ಕೆ ಬರಲು ಈ ಸಮಿತಿಗಳನ್ನು ಈಗಲೂ ರಚಿಸಿಕೊಳ್ಳುತ್ತವೆ; ಕೇಂದ್ರವೂ ಈ ಸಮಿತಿಗಳಲ್ಲಿ ಸ್ಥಾನ ಪಡೆಯುತ್ತದೆ. ಆದರೆ ಇಷ್ಟರವರೆಗಿನ ಇವುಗಳ ಅನುಭವವು ಆಶಾಜನಕವಾಗಿಲ್ಲ. ಹೊಸ ಮಂಡಳಗಳ ರಚನೆಯು ಈಗಿನ ನಿರಾಶೆಯನ್ನೇ ಮುಂದರಿಯಗೊಡಬಾರದು ಎಂಬ ಶ್ರೀ ಹನುಮಂತಯ್ಯನವರ ಅಭಿಪ್ರಾಯವನ್ನು ಒಪ್ಪಬಹುದು. ಕೇಂದ್ರಕ್ಕೂ ರಾಜ್ಯ ಸರಕಾರಗಳಿಗೂ ನಡುವಿನ ಮತ್ತು ಹತ್ತಿರದ ಗೊಣಸಾಗಿ ಈ ಮಂಡಳ ಕೆಲಸ ಮಾಡಲು ಅನುಕೂಲಿಸುವಂತೆ ಕಾರ್ಯಾಧಿಕಾರವನ್ನಿತ್ತರೆ ಮಾತ್ರ ಮಂಡಳದ ರಚನೆ ಸಾರ್ಥಕವಾದೀತು ಎನ್ನುವ ಅವರ ಸೂಚನೆಗೂ ಒಪ್ಪಿಗೆ ಕೊಡಬಹುದು. ಈಗಲಾದರೆ ರಾಜ್ಯ ಸರಕಾರಗಳು ಕೇಂದ್ರದೊಡನೆ ಕೇಳಿದ ಸಲಹೆಗಳಿಗೆ ಕೆಲವು ತಿಂಗಳುಗಳ ವರೆಗೆ ಉತ್ತರವೇ ಸಿಗುತ್ತಿಲ್ಲ! ಹೀಗಾಗಿ ಅನೇಕ ಕೆಲಸಗಳನ್ನು ಕೈಗೊಳ್ಳುವಲ್ಲಿ ವ್ಯರ್ಥವಾಗಿ ಕಾಲ ವಿಳಂಬವಾಗುತ್ತದೆ. ಕೇಂದ್ರ ಸರಕಾರವು ಧೋರಣೆಗಳನ್ನು ರೂಪಿಸಬೇಕು; ಅವುಗಳ ಮಿತಿಗೊಳಪಟ್ಟು ಪ್ರಾದೇಶಿಕ ಮಂಡಳಗಳು ಆಯಾ ರಾಜ್ಯಗಳಿಗೆ ನಿರ್ದೇಶವನ್ನೀಯುವಷ್ಟು ಸಮರ್ಥವಿರಬೇಕು; ಪ್ರತಿ ಪ್ರಾದೇಶಿಕ ಮಂಡಳದಲ್ಲಿ ಕೇಂದ್ರದ ಪ್ರತಿನಿಧಿಯೊಬ್ಬನಿದ್ದರೆ ಇದು ಸುಗಮವಾಗುತ್ತದೆ ಎನ್ನುವ ಮಾತಿನಲ್ಲಿ ವಿಚಾರಣೀಯವಾದ ಅಂಶ ಅಧಿಕವಿದೆ. ಸಾಮಾನ್ಯ ಹೈಕೋರ್ಟು, ಸಾಮಾನ್ಯ ಗವರ್ನರ ಇತ್ಯಾದಿ ಅಧಿಕಾರ ಕೇಂದ್ರಗಳನ್ನು ರಾಜ್ಯಕ್ಕೊಂದರಂತಿಲ್ಲ, ಪ್ರದೇಶಕ್ಕೊಂದರಂತೆ ರಚಿಸಬೇಕೆಂಬ ಮೂಲ ಸಲಹೆಗಳಿಗಿಂತಲೂ ಶ್ರೀ ಹನುಮಂತಯ್ಯನವರ ಸೂಚನೆ ಹೆಚ್ಚು ಶಕ್ತಿಯಿಂದ ಕೂಡಿದೆ. ರಾಜಕೀಯ ಕಾರಣಗಳಿಗಾಗಿ ಸಾಮಾನ್ಯ ಗವರ್ನರ ಸ್ಥಾನವನ್ನು ರೂಪಿಸಲು ರಾಜ್ಯಗಳು ಸಮ್ಮತಿಸಲಿಕ್ಕಿಲ್ಲ; ಶೀಘ್ರ ಹಾಗು ಸುಗಮ ನ್ಯಾಯದಾನದ ದೃಷ್ಟಿಯಿಂದ ಸಾಮಾನ್ಯ ಹೈಕೋರ್ಟು ರಚಿಸುವ ಸೂಚನೆಯನ್ನು ಜನರು ಮೆಚ್ಚಲಿಕ್ಕಿಲ್ಲ. ಆದರೆ ಕೇಂದ್ರದ ಪ್ರತಿನಿಧಿಯಾಗಿ, ರಾಷ್ಟ್ರದ ಸಮಗ್ರ ಹಿತ ದೃಷ್ಟಿಯನ್ನಿಟ್ಟು ಕೊಂಡು ಕೆಲಸ ಮಾಡಬಹುದಾದ ಮಂಡಳಕ್ಕೆ ಯಾರೂ ಆಕ್ಷೇಪವೆತ್ತಲಿಕ್ಕಿಲ್ಲ. ನಮ್ಮ ದೇಶವು ಬಹಳ ವಿಶಾಲವಾದ ಭೂಭಾಗವಾಗಿರುವುದರಿಂದ ಒಂದೇ ಕೇಂದ್ರವಿದ್ದರೂ ಬೇರೆ ಅನೇಕ ವಿಷಯಗಳ ಮಟ್ಟಿಗೆ ವಲಯ ಸಂಬಂಧಗಳನ್ನು ಜೋಡಿಸುವ ಆವಶ್ಯಕತೆ ಬೀಳುತ್ತದೆ. ನಮ್ಮ ರಾಜ್ಯ ಘಟನೆಯ ೨೬೩ನೇ ಸೂತ್ರದಲ್ಲಿ ಇದನ್ನು ಈಗಾಗಲೇ ಮನಗಾಣಿಸಲಾಗಿದೆ ಮತ್ತು ರಾಷ್ಟ್ರಾಧ್ಯಕ್ಷರಿಗೆ "ರಾಜ್ಯಗಳ ನಡುವೆ ಏಳಬಹುದಾದ ವಿವಾದಗಳ ಪರಿಹಾರ, ಸಾಮಾನ್ಯ ಹಿತಾಸಕ್ತಿಯುಳ್ಳ ವಿಷಯಗಳ ಮೇಲೆ ರಾಜ್ಯಗಳ ಗುಂಪುಗಳಲ್ಲಿ ಪರಾಮರ್ಶೆ, ಧೋರಣೆಯ ಸುಗಮ ಕಾರ್ಯಾಚರಣೆಗಾಗಿ ರಾಜ್ಯಗಳಲ್ಲಿ ಪರಸ್ಪರ ಸಹಕಾರ ಸಂಪಾದನೆ—ಇವುಗಳಿಗಾಗಿ ಮಂಡಳಗಳನ್ನು ನೇಮಿಸಲು ಅಧಿಕಾರವನ್ನು ಈ ಸೂತ್ರ ನೀಡುತ್ತದೆ. ಫಜಲಾಲಿ ಆಯೋಗದ ವರದಿಯಲ್ಲಿ ಸಹ ರಾಜ್ಯಗಳ ನಡುವೆ ಸಹಕಾರ ಹೆಚ್ಚಬೇಕೆಂದು ಪದೇ ಪದೇ ಹೇಳಲಾಗಿದೆ; ಬೇರೆ ಬೇರೆ ಉದ್ದೇಶಗಳಿಗೆ ಸಾಮಾನ್ಯ ಮಂಡಳಗಳನ್ನು ರಚಿಸುವ ಸೂಚನೆಯೂ ಈ ವರದಿಯಲ್ಲಿದೆ. ಆದರೆ ರಾಜ್ಯ ಸರಕಾರಗಳು ತಮ್ಮ ಅಧಿಕಾರವನ್ನು ಸುಲಭದಲ್ಲಿ ಬಿಟ್ಟುಕೊಡಲು ಸಮ್ಮತಿಯನ್ನು ಇನ್ನೂ ವ್ಯಕ್ತಪಡಿಸಿಲ್ಲವಾದುದರಿಂದ ಫಜಲಾಲಿ ಆಯೋಗದ ಸೂಚನೆಗಳಲ್ಲಿ ಹಲವು ಕಾರ್ಯಗತವಾಗದೆ ಹೋಗುವ ಭಯವಿದೆ. ಆಯೋಗದ ಸಲಹೆಗಳು ಬೇರು ಸಹಿತ ಕಿತ್ತೊಗೆಯಲ್ಪಡದೆ ತುಸು ಭಿನ್ನ ರೀತಿಯಲ್ಲಿ—ಆಯೋಗದ ಉದ್ದೇಶಗಳಿಗೆ ಭಂಗ ಬಾರದಂತೆ—ಕಾರ್ಯಾಚರಣೆಗಿಳಿದರೆ ಅದು ಈಗಿನ ಸಂದರ್ಭದಲ್ಲಿ ಬಹಳ ಪ್ರಯೋಜನವನ್ನುಂಟು ಮಾಡಬಹುದು. ಪ್ರಾದೇಶಿಕ ಮಂಡಳಗಳ ರಚನೆಯ ವಿವರವನ್ನು ಗೊತ್ತುಪಡಿಸುವಾಗ ಇತ್ತ ಗಮನವಿತ್ತರೆ ಲಾಭವಾದೀತೆಂದು ನಮಗೆ ತೋರುತ್ತದೆ.

"ಕರ್ನಾಟಕ" ಎಂಬ ಹೆಸರೇ ಇರಲಿ!

ಕನ್ನಡ ಸಾಹಿತ್ಯ ಸಮ್ಮೇಳನದ ಗೊತ್ತುವಳಿ

ಇಪ್ಪತ್ತೊಂದು ವರ್ಷಗಳ ಹಿಂದೆ ದಿವಂಗತ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನೆರೆದಿದ್ದ ರಾಯಚೂರಿನಲ್ಲಿ ೨೫ನೇ ದಶಂಬರದಿಂದ ಮೂರು ದಿನಗಳ ವರೆಗೆ ಶ್ರೀ ಆದ್ಯ ರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ೩೮ನೇ ಸಮ್ಮೇಳನವು ಜರಗಿತು. ಇಷ್ಟರಲ್ಲಿಯೇ ರೂಪುಗೊಳ್ಳಲಿರುವ ಕನ್ನಡ ಪ್ರದೇಶಗಳನ್ನೆಲ್ಲ ಒಳಗೊಂಡ ಹೊಸ ರಾಜ್ಯಕ್ಕೆ "ಕರ್ನಾಟಕ" ಎಂಬ ಹೆಸರೇ ಇರಬೇಕೆಂದು ಸಮ್ಮೇಳನವು ಸರ್ವಾನುಮತದಿಂದ ನಿರ್ಧರಿಸಿರುತ್ತದೆ; ಅಲ್ಲದೆ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳನ್ನು ಕರ್ನಾಟಕದಲ್ಲಿ ಸೇರಿಸಲು ಕೇಂದ್ರ ಸರಕಾರವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ ಒತ್ತಾಯ ಪಡಿಸಿರುತ್ತದೆ.

ಉತ್ತರದವರ ಅಭಿಪ್ರಾಯ

ದೇಹ ಎಂಬುದನ್ನು ಕಣ್ಣು ಅಥವಾ ಬೇರೆ ಯಾವುದೇ ಅಂಗದ ಹೆಸರಿನಿಂದ ಹೇಗೆ ಕರೆಯುವುದು ಸಾಧ್ಯವಿಲ್ಲವೊ, ಅವರಂತೆ ಸೂಚಿತ ಕನ್ನಡ ಪ್ರಾಂತ್ಯದಲ್ಲಿ ಸೇರಿ ಹೋಗುವ ಮೈಸೂರು ರಾಜ್ಯದ ಹೆಸರನ್ನು ಹೊಸ ರಾಜ್ಯಕ್ಕೆ ಇಡುವಂತಿಲ್ಲ ಎಂದು ಉತ್ತರ ಕರ್ನಾಟಕದ ಧುರೀಣರು ಅಭಿಪ್ರಾಯ ಪಡುತ್ತಾರೆ. (ದಕ್ಷಿಣ ಕನ್ನಡವನ್ನು ಮಂಗಳೂರು ಜಿಲ್ಲೆಯೆಂದೂ ಉತ್ತರ ಕನ್ನಡವನ್ನು ಕಾರವಾರ ಜಿಲ್ಲೆಯೆಂದೂ ಯಾವಾಗಲೂ ಕರೆಯುತ್ತಿರುವ ಉತ್ತರ ಕರ್ನಾಟಕದವರು ಮೈಸೂರು ಎಂಬ ಹೆಸರಿಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಆಶ್ಚರ್ಯಕರವಾಗಿ ತೋರುತ್ತದೆ—ಇರಲಿ!) "ಕರ್ನಾಟಕ" ಎಂಬ ಹೆಸರು ಸೂಚಿತ ಪ್ರಾಂತ್ಯದಲ್ಲಿ ಉಳಿಯುವ ಕನ್ನಡೇತರ ಭಾಷೆಯವರ ಮನ ನೋಯಿಸಬಹುದೆಂಬ ಶ್ರೀ ಹನುಮಂತಯ್ಯನವರ ನಿಲುವು ಅವರ ಮೇಲೇನೂ ಪ್ರಭಾವ ಮಾಡಿಲ್ಲ.

ಹೆದರುವುದೇಕೆ?

ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರಿಸಿದರೆ ಹಿಂದಿನ ಎಲ್ಲ ಮೌಲ್ಯಗಳೂ ಸಂಪ್ರದಾಯಗಳೂ ಬದಲಾಗುವ ಈ ಕಾಲದಲ್ಲಿ "ಕರ್ನಾಟಕ" ಎಂಬ ಹೆಸರನ್ನು ಹೊಸ ರಾಜ್ಯಕ್ಕಿಡುವುದೇ ಹಿತಕರವೆಂದು ತೋರುತ್ತದೆ. ಭಾರತ ಎಂಬ ಹೆಸರನ್ನೆತ್ತಿ ಪಾಕಿಸ್ತಾನವು ಭಾರತದಲ್ಲಿರುವ ಮುಸ್ಲಿಮರಲ್ಲಿ ದಿಗಿಲು ಹುಟ್ಟಿಸಲು ಕಳೆದ ಎಂಟು ವರ್ಷಗಳಿಂದ ನೋಡುತ್ತಿದ್ದರೂ ನಮ್ಮ ಮುಸ್ಲಿಂ ಬಂಧುಗಳು ಏಕೆ ಹೆದರುವ ಆವಶ್ಯಕತೆ ಬಂದಿಲ್ಲವೊ— ಅದರಂತೆ "ಕರ್ನಾಟಕ" ಎಂಬ ಹೆಸರಿನಿಂದ ತೆಲುಗರಾಗಲೀ ತಮಿಳರಾಗಲೀ ಮರಾಠರಾಗಲೀ ಬೇರೆ ಯಾವುದೇ ಭಾಷೆಯವರಾಗಲೀ ಹೆದರಬೇಕಾದ ಆವಶ್ಯಕತೆಯಿಲ್ಲ.

WANTED immediately—A Senior Instructor, A Junior Mechanic and an attender, for Engineering Course and a Typewriting Instructor (Higher Grade) with T. T. C. Apply stating qualification and experience, to the Correspondent, Christian High School, Udipi, S. Kanara. Copy to be sent to the District Educational Officer, S. Kanara.

ಸಂಸ್ಕೃತಿಯ ಪ್ರತಿಬಿಂಬ

ಮೈಸೂರಿನ ಕೆಲವು ಪ್ರತ್ಯೇಕ ರಾಜ್ಯ ರಚನೆಯ ಕನಸನ್ನು ನೋಡಿ ಸೋತರು; ಆವರ ಪ್ರೀತ್ಯರ್ಥವಾಗಿ—ಮುಖ್ಯ ಮಂತ್ರಿ ಶ್ರೀ. ಹನುಮಂತಯ್ಯನವರು ಏನೇ ಹೇಳಲಿ—"ಮೈಸೂರು" ಎಂಬ ಹೆಸರನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆದಿದೆ ಎಂಬುದರಲ್ಲಿ ನಮಗೆ ಸಂಶಯ ತೋರುತ್ತಿಲ್ಲ. ಆಡಳಿತದ ವಿಶಿಷ್ಟ ಪರಂಪರೆಯನ್ನು ಮೈಸೂರು ಎಂಬ ಹೆಸರು ಸೂಚಿಸುತ್ತದೆ ಎನ್ನುವುದು ತರ್ಕಶುದ್ಧವಲ್ಲದ ವ್ಯಾಖ್ಯಾನ ಮಾತ್ರ. (ಮೈಸೂರು ಎಂಬ ಹೆಸರು ದೇಶೀಯ ಸಂಸ್ಥಾನದ ನೆನಪನ್ನೂ ತಂದುಕೊಡಬಹುದು!) ಮೈಸೂರಿನೊಳಗಿನ ಜನರ ಮನನೋಯುತ್ತದೆ ಎಂಬುದಕ್ಕಾಗಿ ಮೈಸೂರು ಎಂಬ ಹೆಸರು ಬೇಕಾದರೆ, ಮೈಸೂರಿನ ಹೊರಗಿರುವ, ಮೈಸೂರಿನಷ್ಟೇ ಪ್ರಜಾಬಾಹುಳ್ಯವಿರುವ ಕನ್ನಡ ಪ್ರದೇಶಗಳ ಜನರ ಮನಸ್ಸನ್ನು ಮೈಸೂರು ಎಂಬ ಹೆಸರು ಕೆಡಿಸುತ್ತದಲ್ಲ! ಈ ದ್ವಂದ್ವ ನಿವಾರಣೆಗೆ ನಗರ, ಅಥವಾ ಮಾಜಿ ರಾಜ್ಯದ ನೆನಪನ್ನು ತಂದು ಕೊಡದ ರೀತಿಯಲ್ಲಿ ಮತ್ತು ಜನತೆ ಇಷ್ಟರವರೆಗೆ ಯಾವ ಸಂಸ್ಕೃತಿಯ ರಕ್ಷಣೆಗಾಗಿ ಹೋರಾಟವಿತ್ತೊ ಅದನ್ನು ಪ್ರತಿಬಿಂಬಿಸುವ—ಮಾದರಿಯಲ್ಲಿ ಹೆಸರಿಡುವುದೇ ಕ್ಷೇಮ.

ನರವಣೆಯವರ ರಾಜೀನಾಮೆ

ಮುಂಬಯಿ ನಗರವನ್ನು ಮಹಾರಾಷ್ಟ್ರದ ರಾಜಧಾನಿಯಾಗಿ ಮಾಡಬೇಕೆಂದು ಚಳವಳ ನಡೆಸಿದ ಮತ್ತು ಇದಕ್ಕಾಗಿ ಕಾಂಗ್ರೆಸಿಗೆ ಪ್ರತಿಸ್ಪರ್ಧೆಕೊಡುವ ಪ್ರತ್ಯೇಕ ಗುಂಪೊಂದನ್ನು ಸಂಸ್ಥೆಯೊಳಗೆ ಕಟ್ಟಿಕೊಂಡ ಆರೋಪದ ಮೇಲೆ ಮುಂಬಯಿ ಸರಕಾರದ ಮಂತ್ರಿ ಡಾ| ನರವಣೆಯವರು ರಾಜೀನಾಮೆಯನ್ನು ಕೊಡಬೇಕಾಗಿ ಬಂತು. ಮಂತ್ರಿ ಮಂಡಳದ ಸಂಯುಕ್ತ ಹೊಣೆಗಾರಿಕೆಗೆ ಮತ್ತು ಕಾಂಗ್ರೆಸಿನ ಆದೇಶಕ್ಕೆ ವಿರುದ್ಧ ಹೋದುದಕ್ಕೆ ಮುಖ್ಯ ಮಂತ್ರಿಗಳು ಅವರನ್ನು ಆಕ್ಷೇಪಿಸಿ, ಈಗಿನ ಚಳವಳದಿಂದ ವಿಮುಖರಾಗದಿದ್ದರೆ ತಾನಾಗಿ ಮಂತ್ರಿ ಮಂಡಳದಿಂದ ಕಿತ್ತುಹಾಕುವೆನೆಂದು ಅವರನ್ನು ಎಚ್ಚರಿಸಿದ್ದರು.

ಕಾಂಗ್ರೆಸಿನ ಆಕ್ಷೇಪ

ಡಾ| ನರವಣೆಯವರು ಈ ಆರೋಪವನ್ನು ಅಲ್ಲಗಳೆದಿದ್ದಾರೆ. ರಾಜ್ಯಗಳ ಪುನರ್ಘಟನೆಯ ಬಗ್ಗೆ ಕೊನೆಯ ನಿರ್ಣಯ ಸ್ವೀಕಾರಗೊಳ್ಳುವ ವರೆಗೆ ಪ್ರತಿಯೊಬ್ಬ ಕಾಂಗ್ರೆಸಿಗನಿಗೂ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ತನ್ನ ನಂಬಿಕೆಯಂತೆ ಕೆಲಸಮಾಡುವ ಅಧಿಕಾರವಿದೆ ಎಂದವರ ವಾದ. ಆದರೆ ಇದನ್ನು ಕಾಂಗ್ರೆಸಿನ ಪ್ರಭೃತಿಗಳು ಮೆಚ್ಚಿಕೊಂಡಂತಿಲ್ಲ. ಡಾ. ನರವಣೆಯವರ ಮೇಲೆ ಮುಂಬಯಿ ಪ್ರದೇಶ ಕಾಂಗ್ರೆಸು ಶಿಸ್ತು ಜ್ಯಾರಿಯ ಕ್ರಮ ಕೈಗೊಳ್ಳಲು ಅಖಿಲ ಭಾರತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡಿದೆ; ಮತ್ತು ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ. ಎಮಾಥವನ್ ನಾಯರ್ ಈ ಮಾಜಿ ಮಂತ್ರಿಗಳ ಮೇಲೆ ನೋಟೀಸು ಜ್ಯಾರಿ ಮಾಡಿ ಅವರ ನಡವಳಿಕೆಯ ಬಗ್ಗೆ ಸ್ಪಷ್ಟೀಕರಣ ಕೇಳಿದ್ದಾರೆ.

ನೆಹರುಗಳ ಸಮಾಲೋಚನೆ

ಮಂಗಳೂರಿನಿಂದ ಹೊಸ ದೆಹಲಿಗೆ ಮರಳುವ ದಾರಿಯಲ್ಲಿ ಪ್ರಧಾನಿ ನೆಹರುಗಳು ಮೊನ್ನೆ ಮುಂಬಯಿಯ ಮುಖ್ಯ ಮಂತ್ರಿಗಳ ನಿವಾಸದಲ್ಲಿ ಇಳಿದು, ಶ್ರೀ. ಮುರಾರ್ಜಿ ದೇಸಾಯಿಯವರೊಡನೆ ಆ ನಗರದ ಭವಿಷ್ಯದ ಕುರಿತು ದೀರ್ಘಪರ್ಯಾಲೋಚನೆ ನಡೆಸಿದರು. ಇದರ ವಿವರ ತಿಳಿದಿಲ್ಲ. ಮುಂಬಯಿಯನ್ನು "ವಾಣಿಜ್ಯ ಕೇಂದ್ರ"ವಾಗಿ ರೂಪಿಸುವ ಸಲಹೆ ಬಂತೆಂದು ಕೆಲವು ಅನಧಿಕೃತ ವರದಿಗಳು ಹೇಳಿದವಾದರೂ ಹಿಂದಿನಿಂದ ಇದು ಸತ್ಯವಲ್ಲವೆಂದು ಧ್ವನಿಸುವ ಬೇರೆ ವರದಿಗಳು ಬಂದಿವೆ. ಕೇಂದ್ರ ಸರಕಾರದ ಅಧೀನದಲ್ಲಿ ವಾಣಿಜ್ಯ ಕೇಂದ್ರವಾಗಿಯಾಗಲೀ ಸ್ವಂತ ಸರಕಾರವನ್ನು ಪಡೆದ ಚಿಕ್ಕ ರಾಜ್ಯವಾಗಿಯಾಗಲೀ ಮುಂಬಯಿ ನಗರವಿರುವುದಕ್ಕೆ ಅವಕಾಶ ಕೊಡುವುದಕ್ಕಿಂತ ಆ ನಗರವೇ ರಾಜಧಾನಿಯಾಗುಳ್ಳ ದೊಡ್ಡ ಉಭಯ ಭಾಷಾ ರಾಜ್ಯವನ್ನು ರಚಿಸುವುದೇ ಸೂಕ್ತವೆಂದು ಈಗ ಮಹಾರಾಷ್ಟ್ರೀಯರು ಮರಳಿ ಒತ್ತಾಯಿಸತೊಡಗಿದ್ದಾರೆಂದು ಸುದ್ದಿ.

ಪ್ರತ್ಯೇಕ ನಗರ ಹಿತನಲ್ಲ

ಮಹಾರಾಷ್ಟ್ರದ ಪ್ರದೇಶ ಕಾಂಗ್ರೆಸು ಆಕ್ಟೋಬರ ತಿಂಗಳಲ್ಲಿ ಇಂಥ ಸೂಚನೆಯನ್ನು ಮುಂದಿಟ್ಟಿತ್ತು. ಮುಂಬಯಿ ಸಹಿತ ಮಹಾರಾಷ್ಟ್ರ ರಚನೆ ಸಾಧ್ಯವಿಲ್ಲದಲ್ಲಿ ಅದು ನಿಜವಾಗಿ ವ್ಯಾವಹಾರಿಕ ಮಹತ್ವದಿಂದ ಕೂಡಿದ ಸೂಚನೆಯಾಗಿದ್ದಿತು. ಆದರೂ ಕಾಂಗ್ರೆಸಿನ ವರಿಷ್ಠರು ಅದನ್ನು ಮೆಚ್ಚದೆ ಹೋದರು. ಈಗಿನ ಮುಂಬಯಿ ರಾಜ್ಯಕ್ಕೆ ಸೌರಾಷ್ಟ್ರ ಮತ್ತು ಕಚ್ಛವನ್ನೂ (ಗುಜರಾಥು ಪ್ರದೇಶ ಅದು) ಹೈದರಾಬಾದಿನ ಮರಾಠವಾಡ ಮತ್ತು ಸೂಚಿತ ವಿದರ್ಭ ರಾಜ್ಯದ ಪ್ರದೇಶವನ್ನೂ (ಇದು ಮಹಾರಾಷ್ಟ್ರದ ಪ್ರದೇಶ) ಸೇರಿಸಿ ದೊಡ್ಡ ನೂತನ ಮುಂಬಯಿ ರಾಜ್ಯ ಮಾಡಬಹುದು ಎಂದು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸು ಹೇಳಿದ್ದಿತು. ಅದನ್ನು ಕೇಳದ ಕೇಂದ್ರದ ಧುರೀಣರು ನಿಜವಾಗಿ ತಪ್ಪು ಮಾಡಿದರೆನ್ನಬೇಕಾಗುತ್ತದೆ. ಮುಂಬಯಿಯನ್ನು ಅದರ ವಿಶ್ವ ಪ್ರಜಾಲಕ್ಷಣ ಮತ್ತು ವಾಣಿಜ್ಯ ಮಹತ್ವಕ್ಕಾಗಿ ಕೇಂದ್ರ ಸರಕಾರದ ಕೈಯಲ್ಲಿ ಅಥವಾ ಪ್ರತ್ಯೇಕ ರಾಜ್ಯವಾಗಿ ಇಡುವ ಸೂಚನೆಯು ಆ ನಗರದ ಬೆಳವಣಿಗೆಯ ದೃಷ್ಟಿಯಿಂದ ತೀರ ಘಾತುಕವಾದುದಾಗಿದೆ. ಜೆ.ವಿ.ಪಿ. ವರದಿಯಲ್ಲಿ ಮಾಡಿದ ತಪ್ಪಿಗೆ ಈಗಲೂ ಅಂಟಿ ಕುಳಿತಿರುವುದು ಶ್ರೇಯಸ್ಕರವಲ್ಲ.

ನಿರಾಧಾರ ಭಯ

ಮುಂಬಯಿ ನಗರವನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡಲು ಶ್ರೀ. ಸದೋಬಾ ಪಾಟೀಲರೂ ಶ್ರೀ. ಮುರಾರ್ಜಿ ದೇಸಾಯಿಯರೂ ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ಪ್ರೇರಿತವಾದ ಆಗ್ರಹವನ್ನು ವ್ಯಕ್ತಪಡಿಸುತ್ತಿರುವುದೇ ಕಾರಣವೆಂದು ತಾರ್ಕಿಕವ ಅಭಿಮತವಾಗಿದೆ. ಮುಂಬಯಿ ನಗರದ ಕಾರ್ಪೋರೇಶನಿನಲ್ಲಿ ಕಾಂಗ್ರೆಸಿಗಾದ ಪ್ರಚಂಡ ಪರಾಭವದ ಆಘಾತದಿಂದಲೂ ಕಣ್ಣು ತೆರೆಯಲಾರದಷ್ಟು ಅವರು ಕಪಟ ನಿದ್ರೆಯನ್ನು ತೋರಿಸುತ್ತಿದ್ದಾರೆಂದು ಮಹಾರಾಷ್ಟ್ರದ ಅಭಿಪ್ರಾಯವಾಗಿದೆ. ಮುಂಬಯಿ ನಗರವನ್ನು ಬಿಟ್ಟುಗೊಟ್ಟು, ಸಂಯುಕ್ತ ಮಹಾರಾಷ್ಟ್ರ ಸ್ಥಾಪಿಸುವ ಪಕ್ಷದಲ್ಲಿ ವಿದರ್ಭವನ್ನು ಹೊಸ ರಾಜ್ಯದಲ್ಲಿ (ಮಹಾರಾಷ್ಟ್ರದಲ್ಲಿ) ಸೇರಿಸಲು ಒತ್ತಾಯಿಸುತ್ತೇವೆ ಎಂದು ಕಾಂಗ್ರೆಸಿನ ಕೇಂದ್ರ ಧುರೀಣರು ಹೇಳುತಿದ್ದಾರೆ! ಹಾಗೆ ಮಾಡಲು ಶಕ್ತಿಯಿದ್ದವರು ಮುಂಬಯಿಯು ರಾಜಧಾನಿಯಾಗುಳ್ಳ ಮತ್ತು ವಿದರ್ಭವೂ ಸೇರಿರುವ ದೊಡ್ಡ ಉಭಯ ಭಾಷಾ ವಲಯವೆನಿಸುವ ನೂತನ ಮುಂಬಯಿಯ ರಾಜ್ಯದಲ್ಲಿರಲು ಗುಜರಾಥಿಗಳ ಮನಸ್ಸನ್ನೇಕೆ ಒಲಿಸಿಕೊಳ್ಳಲಿಲ್ಲ? ಗುಜರಾಥಿಗಳಿಗೆ ಭಾಷೆಯ ಮೇಲೆ ಅಥವಾ ಪ್ರತ್ಯೇಕ ರಾಜ್ಯದ ಮೇಲೆ ಏನೇನೂ ಆಸಕ್ತಿಯಿಲ್ಲವೆಂದು ಹೇಳುತ್ತಾ ಬಂದಿರುವಾಗ ಹೊಸ ರಾಜ್ಯದವು ಮರಾಠರ ಸಂಖ್ಯಾ ಬಲವು ಹೆಚ್ಚಿಕೊಳ್ಳುತ್ತದೆ ಎಂಬುದು ದೊಡ್ಡ ಆತಂಕವಾಗಲಾರದು; ಆಗ ಕೂಡಾ ಮಹಾರಾಷ್ಟ್ರೀಯರ ಅಭಿಮಾನವನ್ನು ವ್ಯರ್ಥವಾಗಿ ಕೆಣಕುವುದುಸಲ್ಲದು.

ಉಡುಪಿ.

ಷಷ್ಟ್ಯಬ್ದಿ ಪೂರ್ತಿ ಸಮಾರಂಭ— ಉಡುಪಿಯ ಹಲವಾರು ಸಂಘ ಸಂಸ್ಥೆಗಳ ಹಾಗೂ ಉನ್ನತಿಗಳ ಜನ್ಮದಾತರಾದ ಶ್ರೀ ಉಪೇಂದ್ರ ಅನಂತ ಪೈಗಳ ಷಷ್ಟ್ಯಬ್ದಿ ಪೂರ್ತಿ ನಿಮಿತ್ತ ಅವರನ್ನು ಹನ್ನೆರಡು ಸಂಸ್ಥೆಗಳವರು ತಾ. 21ರಲ್ಲಿ ಮುಕುಂದ ನಿವಾಸದಲ್ಲಿ ಗೌರವಿಸುವ ಸಮಾರಂಭವನ್ನು ಜರಗಿಸಿದರು. ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಸ್ವಾಮಿಗಳವರು ಸಮಾರಂಭದ ಅಧ್ಯಕ್ಷತೆವಹಿಸಿ ಶ್ರೀ ಪೈಗಳವರಿಗೆ ಶುಭಾಶೀರ್ವಾದವನ್ನಿತ್ತರು. ಡಾ. ಟಿ. ಮಾಧವ ಪೈಗಳು ಸ್ವಾಗತಭಾಷಣ ಮಾಡಿ ಹನ್ನೆರಡು ಸಂಸ್ಥೆಗಳ ಪರವಾಗಿ ಶ್ರೀ ಪೈಗಳಿಗೆ ಮಾನಪತ್ರವನ್ನರ್ಪಿಸಿದರು. ಶ್ರೀಗಳಾದ ಬಿ. ವಿ. ಬಾಳಿಗ, ಎಮ್. ಎಲ್. ಎ. ಎ. ಜೆ. ಆಳ್ವ ಮೊದಲಾದವರು ಶ್ರೀ ಪೈಗಳ ಗುಣಗಾನಮಾಡಿದರು. ಶ್ರೀ ಎಚ್. ಎಸ್. ರಾಯರು ಧನ್ಯವಾದಗಳನ್ನಿತ್ತರು. ಆರಂಭದಲ್ಲಿ ಉಪಾಹಾರವಿತ್ತು.

ವಿವಾಹ ಸಮಾರಂಭ— ಉಡುಪಿ ಕೆನರಾ ಬೇಂಕಿಂಗ್ ಕೊರ್ಪೊರೇಶನಿನ ಚೆರ್ಮೆನ್ ಡಾ. ಯು. ಸುಂದರರಾಮ ಪೈಗಳ ಪುತ್ರಿ ಕುಮಾರಿ ಕಮಲ ಮತ್ತು ಶ್ರೀ ಕೆ. ಪಿ. ನಾಯ್ಕರ ಪುತ್ರ ಶ್ರೀ ಮಂಜುನಾಥ ನಾಯ್ಕರ ವಿವಾಹವು ತಾ. 28ರಲ್ಲಿ ವಧುವಿನ ನಿವಾಸದಲ್ಲಿ ಜರಗಿತು. ಈ ವಿವಾಹೋತ್ಸವದ ನಿಮಿತ್ತ ತಾ. 31ರಲ್ಲಿ ಉಪಾಹಾರ ಸತ್ಕಾರಕೂಟ ಜರಗಿತು.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ವಕೀಲ್ ಶ್ರೀ ಬಿ. ನಾರಾಯಣ ಸೆಟ್ಟರ ಪುತ್ರಿ ಕುಮಾರಿ ಶಭಿತಾ ಮತ್ತು ಬೆಳ್ಳಂಪಳ್ಳಿ ಪಟೇಲ್ ಶ್ರೀ ಬಿ. ನಾರಾಯಣ ಹೆಗ್ಡೆಯವರ ಪುತ್ರ ಶ್ರೀ ಬಿ. ರವೀಂದ್ರನಾಥ ಹೆಗ್ಡೆಯವರ ವಿವಾಹವು ತಾ. 27ರಲ್ಲಿ ಸ್ಥಳೀಯ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿತು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮೈಸೂರು ಮಂತ್ರಿಗಳು— ಮೈಸೂರಿನ ಕೈಗಾರಿಕಾ ಮಂತ್ರಿ ಶ್ರೀ ಎಚ್. ಎಮ್. ಚನ್ನಬಸಪ್ಪನವರಿಗೆ ತಾ. 24ರಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಮತ್ತು ಯುತ್ ಕಾಂಗ್ರೆಸ್ ವತಿಯಿಂದ ಮುಕುಂದನಿವಾಸದಲ್ಲಿ ಸ್ವಾಗತವೀಯಲಾಯಿತು. ಮೈಸೂರಿ ಎಸೆಂಬ್ಲಿಯ ಸದಸ್ಯ ಶ್ರೀ ಮಾಧವಾಚಾರ್ಯರೂ ಉಪಸ್ಥಿತರಿದ್ದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಸ್ವಾಗತಭಾಷಣ ಮಾಡಿದರು. ಮಾನ್ಯ ಮಂತ್ರಿಗಳು ಸೂಚಿತಕರ್ನಾಟಕಪ್ರಾಂತ್ಯದಲ್ಲಿರುವ ಪ್ರಾಕೃತಿಕ ಸಂಪತ್ತನ್ನು ಅಭಿವೃದ್ಧಿಗೊಳಿಸಲು ತಕ್ಕ ಯೋಜನೆಗಳನ್ನು ಪರಿಶೀಲಿಸಲು ಈಗಾಗಲೇ ಕಾರ್ಯ ಪ್ರಾರಂಭಿಸಿದೆ ಎಂದೂ, ದಕ್ಷಿಣ ಕನ್ನಡಕ್ಕೆ ಜೋಗ್ ವಿದ್ಯುತ್ತನ್ನು ಶಕ್ಯವಿದ್ದಷ್ಟು ಬೇಗನೇ ಒದಗಿಸಲಾಗುವುದೆಂದೂ ಹೇಳಿದರು. ಶ್ರೀ ಎ. ಜೆ. ಆಳ್ವೆಯವರು ಧನ್ಯವಾದಗಳನ್ನಿತ್ತರು.

ಹೊಸವರ್ಷಾರಂಭ ದಿನಾಚರಣೆ- ಉಡುಪಿಯ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪರೇಶನಿನವರು ಎಂದಿನಂತೆ ಇವೇ ತಾ. 1ರಲ್ಲಿ ಹೊಸವರ್ಷಾರಂಭ ದಿನವನ್ನು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಅಗ್ರಗಣ್ಯ ಕೈಗಾರಿಕೋದ್ಯಮಿಗಳೂ ನವಭಾರತದ ಸಂಪಾದಕರೂ ಆದ ಶ್ರೀ ವಿ. ಎಸ್. ಕುಡ್ವರನ್ನು ಗೌರವಿಸಿ ಆಚರಿಸಿದರು. ಜಿ. ಐ. ಎಂಡ್ ಸಿ. ಸಿ. ಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ರಮೇಶ. ಯು. ಪೈಗಳು ಸ್ವಾಗತಭಾಷಣಮಾಡಿ 1940ರಿಂದ ತೊಡಗಿದ ನೂತನ ಉಪಕ್ರಮವನ್ನು ವಿವರಿಸಿ ಮುಖ್ಯ ಅತಿಥಿಯ ಗೌರವಾದರಣೆಯ ಗುಣಗಳನ್ನು ವಿವರಿಸಿದರು. ಬಳಿಕ ಡಾ. ಎಸ್. ಆರ್. ಪೈ, ಡಾ. ಪಿ. ಆರ್. ನಾಯಕ್, ಡಾ. ಟಿ. ಎಮ್. ಎ. ಪೈ, ಶ್ರೀ ಎ. ಜೆ. ಆಳ್ವ, ಶ್ರೀ ಕೊಚ್ಚಿಕಾರ್ ಪದ್ಮನಾಭಪೈ, ಟಿ. ಎ. ಪೈ ಎಂಎಲ್. ಎ; ಮೊದಲಾದವರು ಶ್ರೀ ಕುಡ್ವರಲ್ಲಿರುವ ಉದ್ಯಮಶೀಲತೆ, ಮುನ್ನೋಟ ಕರ್ತೃತ್ವಶಕ್ತಿ, ದೃಢತೆ, ವಿಶಾಲ ಮನೋಭಾವ, ಲೇಖನ ಶಕ್ತಿ ಮೊದಲಾದ ಗುಣಗಳನ್ನು ವಿವರಿಸಿ ಭಾಷಣ ಮಾಡಿದರು. ಶ್ರೀ ಕುಡ್ವರು ಉತ್ತರವೀಯುತ್ತ ತನ್ನ ಉನ್ನತಿಗೆ ಸರ್ವರ ಸಹಕಾರ ಹಾಗೂ ನಿಸ್ವಾರ್ಥ ಸೇವೆಯೇ ಕಾರಣವೆಂದೂ ಜೀವನದ ಕೆಲಘಟನೆಗಳನ್ನು ವಿವರಿಸಿದರು. ಸಹನೆ ನಿಸ್ಪೃಹತೆ, ಸತತೋದ್ಯೋಗಗಳು ಜೀವನದಲ್ಲಿ ಅಗತ್ಯವೆಂದು ಇಂದಿನ ಗೌರವಕ್ಕೆ ಆಭಾರ ಸೂಚಿಸಿದರು. ಶ್ರೀ ಕುಡ್ವರ ಕಾರ್ಯದಕ್ಷತೆಯನ್ನು ಕೊಂಡಾಡಿ ಭಾಷಣಮಾಡಿದ ಮೇಲೆ ಶ್ರೀ ರಮೇಶ ಪೈಗಳ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಭಾರತೀಯ ಜನಸಂಘದ ಪ್ರಾದೇಶಿಕ ಪ್ರತಿನಿಧಿ ಸಭೆಯು— ತಾ. 31ರಲ್ಲಿ ಉಡುಪಿ ಹೆಡ್ ಪೋಸ್ಟಾಫೀಸಿನ ಬಳಿಯಲ್ಲಿ ರಚಿತವಾದ 'ಅಮಿರ್ ಚಂದ್ ಹುತಾತ್ಮನಗರ'ದಲ್ಲಿ ಡಾ. ಕೆ. ಎನ್. ದತ್ತಾತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜಾರೋಹಣವಾದ ಬಳಿಕ ಸ್ವಾಗತಾಧ್ಯಕ್ಷ ಶ್ರೀ ಶಿವಾಜಿ ಸೆಟ್ಟರು ಸ್ವಾಗತಭಾಷಣಮಾಡಿದರು. ಶ್ರೀ ಭಾಸ್ಕರ ರಾಯರು ಸಭೆಯನ್ನು ಉದ್ಘಾಟಿಸಿದರು. ಸಭಾಧ್ಯಕ್ಷರು ಭಾರತದ ಪುರಾತನ ಹಾಗೂ ಶ್ರೇಷ್ಠ ಸಂಸ್ಕೃತಿಯ ಭದ್ರ ತಳಹದಿಯ ಮೇಲೆ ಜನಸಂಘವು ಸ್ಥಾಪಿಸಲ್ಪಟ್ಟಿದೆ ಎಂದು ಅದು ಸಾಧಿಸಿದ ಕಾರ್ಯಗಳನ್ನು ವಿವರಿಸಿದರು. ನಂತರ ಗೊತ್ತುವಳಿಗಾಗಿ ಹೊಸವರ್ಷಕ್ಕೆ ಕಾರ್ಯಕಾರಿಸಮಿತಿಯ ರಚನೆಯಾಯಿತು.

ನಿಧನ ಉಡುಪಿಯ ಹಳೆ ಕಾಂಗ್ರೆಸಿಗರಾದ ಶ್ರೀ ಕಟಪಾಡಿ ಪರಿಯಪ್ಪ ಶೆಣೈಯವರು ತಾ. 23ರಲ್ಲಿ ತಮ್ಮ ನಿವಾಸದಲ್ಲಿ 90ನೇ ವಯಸ್ಸಿನಲ್ಲಿ ವಿಧಿವಶರಾದುದು ವಿಷಾದಕರವಿದೆ. ಕಟಪಾಡಿ ಹೈಸ್ಕೂಲಿನ ಉಪಾಧ್ಯಾಯ ಶ್ರೀ ಕೆ. ಆರ್. ಶೆಣೈ, ಕೆನರಾ ಬ್ಯಾಂಕಿಂಗ್ ಕೊರ್ಪರೇಶನಿನ ಡಿಪ್ಟಿ ಮೆನೇಜರ್ ಶ್ರೀ ಕೆ. ಶಂಕರನಾರಾಯಣ ಶೆಣೈ, ಮೂಲ್ಕಿ ಸರಕಾರಿ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಕೆ. ವಿ. ಶೆಣೈಯವರು ದಿವಂಗತರ ಮಕ್ಕಳಲ್ಲಿ ಗಣ್ಯರಿದ್ದಾರೆ.

ಉಡುಪಿ ತಾಲೂಕು ಬೋರ್ಡ್ ಎಲಿಮೆಂಟರಿ ಶಾಲಾಧ್ಯಾಪಕರ ಮಹಾ ಸಭೆಯು— ತಾ. 30ರಲ್ಲಿ ಬೋರ್ಡ್ ಹಾ. ಎ. ಶಾಲೆಯಲ್ಲಿ ಶಾಲಾ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಕೆಲವೊಂದು ಹಿತಸೂಚನೆಗಳನ್ನಿತ್ತು, ಅಧ್ಯಾಪಕರ ಸ್ಥಿತಿಗತಿಗಳನ್ನು ಸುಧಾರಿಸಲು ತನ್ನಿಂದಾದ ಪ್ರಯತ್ನ ಮಾಡುವುದಾಗಿ ಹೇಳಿದರು. ಗೊತ್ತುವಳಿಗಳಾದ ಮೇಲೆ ಹೊಸವರ್ಷಕ್ಕೆ ಶ್ರೀಗಳಾದ ಎಮ್. ಎಮ್. ಪ್ರಭು, ಅಧ್ಯಕ್ಷ; ಭೋಜರಾಜ ಸೆಟ್ಟಿ, ಕೋಶಾಧಿಕಾರಿ ಮತ್ತು ಎಚ್. ಎ. ಪಿ. ಕೆದ್ಲಾಯರು ಕಾರ್ಯದರ್ಶಿಗಳಾಗಿಯೂ ಇರುವ ಕಾರ್ಯನಿರ್ವಾಹಕ ಮಂಡಳಿಯನ್ನು ರಚಿಸಲಾಯಿತು.

ನವಯುಗ ಪ್ರಜಾರಾಜ ವಿಶೇಷಾಂಕ

ಎಂದಿನಂತೆ 26—1—1956ರಂದು ವಿಶಿಷ್ಟ ತರದಲ್ಲಿ ಪ್ರಕಟವಾಗುವುದು ಸಂದರ್ಭೋಚಿತ ಲೇಖನ, ಕವನಗಳಿಗೆ ಸ್ವಾಗತವಿದೆ.

ಜಾಹೀರಾತುದಾರರ ಪ್ರೋತ್ಸಾಹವನ್ನು ನಿರೀಕ್ಷಿಸಲಾಗಿದೆ.

ಮಣಿಪಾಲದಲ್ಲಿ ಅ. ಭಾ. ಉತ್ಪಾದಕರ ಸಂಘದ ಸಭೆಯು ಕಳೆದ ತಾ. 25ರಲ್ಲಿ ಸಂಘದ ಚೇರ್‌ಮೆನ್ ಶ್ರೀ ನುಂಬಾರ್ಜೀ ವೈದ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷ ಡಾ। ಟಿ. ಎಮ್. ಎ. ಪೈಗಳು ಸ್ವಾಗತ ಭಾಷಣ ಮಾಡುತ್ತಾ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಆದ ಪ್ರಗತಿಯನ್ನೂ ಜಿಲ್ಲೆಯ ನೈಸರ್ಗಿಕ ಸಂಪತ್ತು ಮತ್ತು ಕೃಷಿ, ವಾಣಿಜ್ಯ, ಅರಣ್ಯ ಉತ್ಪತ್ತಿಗಳ ಮತ್ತು ಮತ್ಸ್ಯ ವ್ಯವಸಾಯಾದಿಗಳ ವಿವರಗಳನ್ನಿತ್ತರು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅರಣ್ಯ ಸಂಪತ್ತು ಮತ್ತು ಬಿದಿರುಗಳನ್ನು ಸದುಪಯೋಗಗೊಳಿಸಲು ಈ ಪ್ರದೇಶದಲ್ಲಿ ಕಾಗದದ ಕಾರ್ಖಾನೆಯನ್ನು ಸ್ಥಾಪಿಸಬಹುದೆಂದೂ ಅದೇ ರೀತಿಯಲ್ಲಿ ಪಶ್ಚಿಮ ಕರಾವಳಿಯ ಸಮುದ್ರ ತೀರದಲ್ಲಿ ಮತ್ಸ್ಯ ವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸಬಹುದೆಂದೂ ಹೇಳಿದರು. ಹಂಚಿಗಿಯುವ, ಹಂಚಿನ, ಮೋಟಾರು ವಾಹನ ಸಾರಿಗೆ, ಬೀಡಿ ಇತ್ಯಾದಿ ಹಲವು ದೊಡ್ಡ ಉದ್ಯಮಗಳಿದ್ದು ಹೆಚ್ಚಿನವು ಮಂಗಳೂರಿನಲ್ಲಿ ಕೇಂದ್ರೀಕೃತವಾಗಿವೆ, ಕೆಲವು ಉಡುಪಿಯಲ್ಲೂ ಇವೆ ಎಂದರು. ವಾಣಿಜ್ಯ ವ್ಯವಹಾರದಲ್ಲೂ ಈ ಜಿಲ್ಲೆ ತುಂಬಾ ಮುಂದುವರಿದಿದ್ದು, ಜಿಲ್ಲೆಯಲ್ಲಿಯೇ ಮುಖ್ಯ ಕಚೇರಿಯಿರುವ ಮೂರು ಶೆಡ್ಯೂಲ್ಡ್ ಬೇಂಕುಗಳೂ, ಏಳು ನೋನ್ ಶೆಡ್ಯೂಲ್ಡ್ ಬೇಂಕುಗಳೂ ಒಂದು ಜಿಲ್ಲಾ ಸಹಕಾರಿ ಬೇಂಕೂ, ಮೂರು ವಿಮಾ ಸಂಸ್ಥೆಗಳೂ ಇವೆ ಎಂದರು. ಈ ಕರಾವಳಿಯಲ್ಲಿ ದೊಡ್ಡ ಬಂದರದ ಆವಶ್ಯಕತೆಯನ್ನು ಸೂಚಿಸಿ ಮಂಗಳೂರು ಬಂದರವನ್ನು ಸರ್ವಋತು ಬಂದರವಾಗಿ ಅಭಿವೃದ್ಧಿಗೊಳಿಸಲು ಭಾರತ ಸರಕಾರವು ನಿರ್ಣಯಿಸಿದುದಕ್ಕೆ ನಾವು ಸಂತೋಷಪಡಬೇಕಾಗಿದೆ ಎಂದೂ ಹೇಳಿದರು.

ಅಧ್ಯಕ್ಷ ಶ್ರೀ ವೈದ್ಯರು ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ಮತ್ತು ಕೇಂದ್ರ ಸರಕಾರಗಳ ತೆರಿಗೆ ಹೊರೆಯು ಕೈಗಾರಿಕೋದ್ಯಮಗಳ ಮೇಲೆ ಹೆಚ್ಚುತ್ತಾಗುತ್ತಲಿದೆ. ಈ ತೆರಿಗೆಗಳು ಹೊಸ ಉದ್ಯಮಗಳನ್ನು ಆರಂಭಿಸುವುದಕ್ಕೆ ತಡೆಯಂತಿದೆ. ಇದೇ ರೀತಿ ಕೈಗಾರಿಕೋದ್ಯಮದಲ್ಲಿ ದಿನದಿನಕ್ಕೆ ಹೆಚ್ಚುತ್ತಿರುವ ವೇತನ ಮಟ್ಟವು ಉದ್ಯಮಗಳ ಆರ್ಥಿಕ ವ್ಯವಸ್ಥೆಯ ಮೇಲೊಂದು ಹೊರೆಯಾಗಿದೆ. ಉತ್ಪತ್ತಿಯ ಪರಿಮಾಣವು ಹೆಚ್ಚದೆ ವೇತನ ಮಾತ್ರ ಏರಿದರೆ ಔದ್ಯೋಗಿಕ ಉತ್ಪತ್ತಿಗಳ ಬೆಲೆ ಏರುವ ಪ್ರಸಂಗ ಮಾತ್ರ ಬರುವುದು. ನಮ್ಮ ಮಜೂರ ಕಾನೂನುಗಳನ್ನು ಇಂದಿನ ಪರಿಸ್ಥಿತಿಗಳನ್ನು ಗಮನಿಸಿ ಸುಧಾರಿಸುವಂತಾಗಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಉದ್ಯಮಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಲಿರುವುದರಿಂದ ಮಧ್ಯಮ ತರದ ಉದ್ಯಮಗಳಿಗೆ ಆರ್ಥಿಕ ಸಹಾಯ ಮತ್ತು ಕಾರ್ಯಗತ ಭಂಡವಾಳ ಒದಗಿಸುವ ಕುರಿತು ರಿಜರ್ವ್ ಬೇಂಕಿನವರು ಒಂದು ವಿಶೇಷ ಸಮಿತಿ ನೇಮಿಸಿ ವಿಚಾರಿಸಬೇಕು ಎಂದು ಮೊದಲಾಗಿ ಹೇಳಿದರು.

ಮೈಸೂರಿನ ಕೈಗಾರಿಕಾ ಮಂತ್ರಿ ಶ್ರೀ ಎಚ್. ಎಮ್. ಚೆನ್ನಬಸಪ್ಪನವರು ಸಭೆಯನ್ನು ಉದ್ಘಾಟಿಸುತ್ತಾ, ಅಖಿಲ ಭಾರತ ಉತ್ಪಾದಕರ ಸಂಸ್ಥೆಯು 14 ವರ್ಷಗಳ ಅವಧಿಯಲ್ಲಿ ಸಾಧಿಸಿದ ಕಾರ್ಯಗಳನ್ನು ಪ್ರಶಂಸಿಸಿದರು. ನಮ್ಮ ದೇಶದ ಸಮಸ್ಯೆಗಳನ್ನು ಬಗೆಹರಿಸಲು, ರಷ್ಯಾ ಅಥವಾ ಅಮೇರಿಕದ ಯೋಜನೆಗಳನ್ನು ನಮ್ಮ ದೇಶಕ್ಕೆ ಹೊಂದಿಸಲು ಯತ್ನಿಸುವುದು ಅಪಾಯಕರ. ಮಾಲಕ, ಮಜೂರರೊಳಗಿನ ಸಂಬಂಧಗಳು ಸರಿಯಾಗಿರುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಅ. ಭಾ. ಉತ್ಪಾದಕರ ಸಂಸ್ಥೆಯು ದೇಶದ ಪ್ರಗತಿ ಸಾಧನೆಗಾಗಿ ಕಾರ್ಯ ಮುಂದೊತ್ತಬೇಕಾಗಿದೆ ಎಂದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ., ಅವರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭೆಯು ಕೊನೆಗೊಂಡಿತು.

ಇನ್ನ— ಮಂಗಳೂರು ಸರಕಾರಿ ಕಲಾಶಾಲೆಯ ಸಮಾಜ ಸೇವಾ ಸಂಘದವರು, ಇನ್ನ ಕೇಂದ್ರದಲ್ಲಿ ಶ್ರಮದಾನ ಶಿಬಿರವೊಂದನ್ನು ಆರಂಭಿಸಿ, ಇನ್ನ-ಮುಂಡ್ಕೂರು ರಸ್ತೆಯ ರಚನಾ ಕಾರ್ಯವನ್ನು ಕೈಕೊಂಡಿರುವರು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ತಾ. 21ರಲ್ಲಿ ಮೂಲ್ಕಿ ಸರಕಾರಿ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಕೆ. ವಿಠಲ ಶೆಟ್ಟಿಯವರು ನೆರವೇರಿಸಿದರು. ಶಿಬಿರದ ಕಾರ್ಯವು ಶ್ರೀಗಳಾದ ಎಮ್. ವಿಠಲ ಭಂಡಾರಿ ಮತ್ತು ಕೆ. ಕೃಷ್ಣಮೂರ್ತಿಯವರ ನೇತೃತ್ವದಲ್ಲಿ ನಡೆಯುತ್ತಲಿದ್ದು ಈ ಕಾರ್ಯದಲ್ಲಿ ಊರವರೂ ಸಹಕರಿಸುತ್ತಿರುವರು.

ಸುರತ್ಕಲ್—ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ವರ್ಧಂತಿ ಸಮಾರಂಭವು ಕಳೆದ ತಾ. 17ರಲ್ಲಿ ಶ್ರೀ ಕೆ. ಎಸ್. ಹೆಗ್ಡೆ, ಎಂ. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹಳೆ ವಿದ್ಯಾರ್ಥಿ ಶ್ರೀ ಎಚ್. ಭಾಸ್ಕರ ರಾಯರು ಸ್ವಸ್ತಿ ವಾಚನ ಮಾಡಿದರು. ಮರುದಿವಸ ಶಾಲಾ ಹಳೆ ವಿದ್ಯಾರ್ಥಿಗಳ ಮಹಾ ಸಭೆಯು ಸಮಾಜ ವಿಕಾಸ ಯೋಜನಾಧಿಕಾರಿಗಳಾದ ಶ್ರೀ ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಜರಗಿತು.

ಶಿರ್ವ—ಇಲ್ಲಿಯ ಪಂಚಾಯತ ಬೋರ್ಡಿನ ಸಭೆಯು ಕಳೆದ ತಾ 26ರಲ್ಲಿ ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶಿರ್ವ-ಪನ್ನಿಮಾರು-ಬೆಳ್ಳೆ ರಸ್ತೆಯಿಂದ ಕಟ್ಟಿಂಗೇರಿಗೆ ಒಂದು ಒಳ ರಸ್ತೆ ನಿರ್ಮಿಸುವ ಮೊದಲಾದ ನಿರ್ಣಯಗಳಾದುವು.

ಕುಕ್ಕೆಹಳ್ಳಿ— ಇಲ್ಲಿಯ ಪಂಚಾಯತ ಬೋರ್ಡಿನ ಚುನಾವಣೆಯು ಕಳೆದ ತಾ. 19ರಲ್ಲಿ ಜರಗಿ ಶ್ರೀ ಸುಬ್ಬಣ್ಣ ಹೆಗ್ಡೆಯವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀಗಳಾದ ಗೋಪಾಲ ಹೆಬ್ಬಾರ್, ಮಂಜುನಾಥ ಕಾರಂತ, ಶಿವರಾಮ ಹೆಗ್ಡೆ, ಸಂಜೀವ ಸೆಟ್ಟರು ಸದಸ್ಯರಾಗಿ ಆರಿಸಲ್ಪಟ್ಟರು.

ವಿಟ್ಲದಲ್ಲಿ ಪುತ್ತೂರು ತಾಲೂಕು ಅಧ್ಯಾಪಕರ ಪರಿಷತ್ತು—ತಾ. 30ರಲ್ಲಿ ಅಲ್ಲಿಯ ಬೋರ್ಡ್ ಹಾ। ಎ। ಶಾಲೆಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ನಿಜಲಿಂಗಪ್ಪನವರು ಪರಿಷತ್ತನ್ನು ಉದ್ಘಾಟಿಸುತ್ತಾ, ಹಳ್ಳಿಗಳಲ್ಲಿ ಇಂತಹ ಪರಿಷತ್ತುಗಳು ಜರಗುವುದು ಆವಶ್ಯವೆಂದು ಸೂಚಿಸಿ, ಉಪಾಧ್ಯಾಯರ ಸ್ಥಾನಮಾನ ಹೆಚ್ಚಬೇಕಾಗಿಯೂ, ವೇತನ ಮಟ್ಟವು ರೂ. 100 ಆದರೂ ಇರುವುದು ಆಗತ್ಯವೆಂದೂ ಹೇಳಿದರು. ಅಧ್ಯಾಪಕರು ತಮ್ಮ ಹಕ್ಕಿಗಾಗಿ ಹೋರಾಡುವುದರೊಡನೆ ನಮ್ಮ ಬಾಧ್ಯತೆಗಳನ್ನೂ ಅರಿತುಕೊಳ್ಳಬೇಕೆಂದರು.

ಶ್ರೀ ಎಸ್. ಮುಕುಂದರಾಯರು 'ಪ್ರಜಾಪ್ರಭುತ್ವಕ್ಕಾಗಿ ವಿದ್ಯಾಭ್ಯಾಸ' ಎಂಬ ವಿಷಯದಲ್ಲಿ ಭಾಷಣವಿತ್ತರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಉಪಾಧ್ಯಾಯರ ಸ್ಥಿತಿ ಉತ್ತಮಗೊಳ್ಳುವುದು ಅಗತ್ಯವೆಂದೂ, ಉಪಾಧ್ಯಾಯರು ಕೂಡಾ ತಮ್ಮ ಕರ್ತವ್ಯವನ್ನು ತಿಳಿದು ಕೆಲಸಮಾಡಬೇಕೆಂದೂ, ಶಾಲಾ ಪ್ರಾಯದ ಮಕ್ಕಳು ಶಾಲೆಗೆ ಬರುವಂತೆ ಅಧ್ಯಾಪಕರು ಪ್ರಯತ್ನಿಸ ತಕ್ಕದೆಂದೂ ಹೇಳಿದರು. ಗೊತ್ತುವಳಿಗಳಾದ ಬಳಿಕ ಶ್ರೀ ಎ. ಜಿ. ತಿರುಮಲೇಶ್ವರ ಭಟ್ಟರು ಧನ್ಯವಾದಗಳನ್ನಿತ್ತರು.

ನೀಲೇಶ್ವರದಲ್ಲಿ ತೆಂಗಿನ ಕೃಷಿಕರ ಸಹಕಾರಿ ಸಂಘ ಉದ್ಘಾಟನೆ— ಮದ್ರಾಸು ಸರಕಾರದ ಆರೋಗ್ಯ ಹಾಗೂ ಸಹಕಾರಿ ಮಂತ್ರಿ ಮಾನ್ಯ ಶ್ರೀ. ಎ. ಬಿ. ಸೆಟ್ಟರು ತಾ. 1ರಲ್ಲಿ ನೀಲೇಶ್ವರದಲ್ಲಿ ತೆಂಗಿನ ಕೃಷಿಕರ ಸಹಕಾರಿ ಸಂಘವನ್ನು ಉದ್ಘಾಟಿಸುತ್ತಾ, ಮದ್ರಾಸು ಪ್ರಾಂತದಲ್ಲಿ ಮುಖ್ಯವಾಗಿ ತೆಂಗಿನ ಬೆಳೆಯು ಪಶ್ಚಿಮ ಕರಾವಳಿಯಲ್ಲಿ ಬೆಳೆಯುತ್ತದೆಂದೂ, ಮಲಬಾರು ಜಿಲ್ಲೆಯಲ್ಲಿ 3,87,000 ಎಕ್ರೆ ಮತ್ತು ದ. ಕ. ಜಿಲ್ಲೆಯಲ್ಲಿ 5,40,000 ಎಕ್ರೆ ತೆಂಗಿನ ತೋಟವಿವೆಯೆಂದೂ ಅವರೆ ಬೇರೆ ಪ್ರದೇಶಗಳಲ್ಲಿ ಎಕ್ರೆ ಒಂದರ 3000ದಿಂದ 6000 ವರೆಗಿನ ಕಾಯಿ ಉತ್ಪತ್ತಿಯಾಗುವಾಗ ಪಶ್ಚಿಮ ಕರಾವಳಿಯಲ್ಲಿ ಎಕ್ರೆಗೆ ಬರೇ 2000 ತೆಂಗಿನ ಕಾಯಿ ಉತ್ಪತ್ತಿಯಾಗುತ್ತದೆಂದು ಹೇಳಿದರು. ತೆಂಗಿನ ಕಾಯಿ ಉತ್ಪತ್ತಿಯನ್ನು ಹೆಚ್ಚು ಮಾಡಲು ಕೃಷಿಕರಿಗೆ ಅಗತ್ಯವುಳ್ಳ ಅನುಕೂಲತೆ ಮತ್ತು ಸಲಹೆ, ಉಪಕರಣಗಳನ್ನು ಒದಗಿಸಲು, ಕೇಂದ್ರ ಸರಕಾರವು ಕಾಸರಗೋಡಿನಲ್ಲಿಯೂ, ಮದ್ರಾಸು ಸರಕಾರವು ನೀಲೇಶ್ವರ ಮತ್ತು ಪಟ್ಟಾಂಬಿಯಲ್ಲಿ ಸಂಶೋಧನಾ ಕೇಂದ್ರಗಳನ್ನು ತೆರೆದಿರುವುವೆಂದೂ ತಿಳಿಸಿ, ಈ ಕೇಂದ್ರಗಳ ಸಹಾಯವನ್ನು ಕೃಷಿಕರು ಸಂಪೂರ್ಣ ಪಡೆದು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದೂ ವಿನಂತಿಸಿದರು.

ಶ್ರೀ. ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಸಿ. ಎಮ್. ಪಿ. ನಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ. ಕೆ. ವಿ. ಕುಂಞಂಬು, ಅವರು ಧನ್ಯವಾದಗಳನ್ನಿತ್ತರು.

ಗುರುಪುರ, ಬಂಟ್ವಾಳ ಅಣೆಕಟ್ಟುಗಳ ಶಂಕುಸ್ಥಾಪನಾ ಸಮಾರಂಭಗಳು— ಕರ್ವೆಯಲ್ಲಿ ಗುರುಪುರ ನದಿ ಹರಿಯುವ ಕಡಿದಾದ ಕಣಿವೆಯ ಬಳಿಯಲ್ಲಿ ರಚಿಸಿದ ಸುಂದರ ಚಪ್ಪರದಲ್ಲಿ, ಗುರುಪುರ ಅಣೆಕಟ್ಟು—ಜಲಾಶ್ರಯ ಯೋಜನೆಯ ಶಂಕು ಸ್ಥಾಪನಾ ಸಮಾರಂಭವು ತಾ. 29ರಲ್ಲಿ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡರರಿಂದ ನೆರವೇರಿಸಲ್ಪಟ್ಟಿತು. ಲೋಕ ಸಭಾ ಸದಸ್ಯ ಶ್ರೀ ಯು. ಶ್ರೀನಿವಾಸ ಮಲ್ಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ನೀರಾವರಿ ಯೋಜನೆಗಳ ಚೀಫ್ ಇಂಜಿನಿಯರ್ ಶ್ರೀ ಯು. ಆನಂದ ರಾಯರು ಸ್ವಾಗತ ಭಾಷಣ ಮಾಡಿ ಗುರುಪುರ ಯೋಜನೆಯ ಸೂಕ್ಷ್ಮ ಪರಿಚಯ ಮಾಡಿಕೊಟ್ಟು ಇದರಿಂದ ಎರಡನೇ ಬೆಳೆಗೆ 1098 ಎಕ್ರೆ ಸ್ಥಳಕ್ಕೆ ನೀರು ಸಿಕ್ಕುವುದೆಂದರು. ಬಳಿಕ ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಮ್. ಪಿ. ಮತ್ತು ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರು ಮಾತನಾಡಿದರು. ಸರಕಾರವು ಗ್ರಾಮೀಣ ರೈತರ ಸಹಾಯಕ್ಕಾಗಿ ಕೋಟಿಗಟ್ಟಲೆ ಹಣ ವೆಚ್ಚ ಮಾಡಿ ದೇಶದ ಉದ್ಧಾರ ಸಾಧಿಸುವುದೆಂದು ಮಾನ್ಯ ಮಂತ್ರಿಗಳು ಹೇಳಿದರು.

ಸಂಜೆ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡರರು ಬಂಟ್ವಾಳಕ್ಕೆ ತೆರಳಿ, ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಮಾರಂಭದಲ್ಲಿ ಬಂಟ್ವಾಳ ಅಣೆಕಟ್ಟಿಗೆ ಶಂಕುಸ್ಥಾಪನೆಮಾಡಿದರು. ಚೀಫ್ ಇಂಜಿನಿಯರ್ ಶ್ರೀ ಯು. ಆನಂದ ರಾಯರು ಸ್ವಾಗತಭಾಷಣಮಾಡುತ್ತಾ ಈ ಯೋಜನೆಯಿಂದ ಪ್ರತಿವರ್ಷ 599 ಟನ್‌ಗಳಷ್ಟು ಆಹಾರೋತ್ಪಾದನೆ ಹೆಚ್ಚುವ ಸಂಭವವಿದೆ ಎಂದರು. ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಮ್. ಪಿ. ಮತ್ತು ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರು ಮಾತನಾಡಿದ ನಂತರ ಮುಖ್ಯಮಂತ್ರಿ ಶ್ರೀ ನಾಡರು, ಜನತೆ ಸಂಕುಚಿತ ಮನೋಭಾವನೆಯನ್ನು ತೊರೆದು ಎಲ್ಲರೂ ಒಂದೇ ದೇಶದ ಪ್ರಜೆಗಳೆಂಬ ಭಾವನೆಯುಳ್ಳವರಾಗಬೇಕೆಂದರು. ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರು ಈ ಜಿಲ್ಲೆಯ ಹಲವಾರು ನದಿಗಳಿಗೆ ಸೇತುವೆ ಕಟ್ಟಲಿಕ್ಕಾಗಿ ಕೇಂದ್ರ ಸರಕಾರವು ಸುಮಾರು ಎರಡು ಕೋಟಿ ರೂಪಾಯಿಯಷ್ಟು ಮಂಜೂರುಮಾಡಿ ಗ್ರಾಮಸ್ಥರ ಪರವಾಗಿ ಶ್ರೀ ವಾ. ಪಿ. ಭಂಡಾರಿಗಳು ಧನ್ಯವಾದವಿತ್ತರು.

ಮೂಲ್ಕಿ—ಸ್ಥಳೀಯ ಬೋರ್ಡ್ ಹಾ। ಎ। ಶಾಲಾ ವರ್ಧಂತ್ಯುತ್ಸವವು ಕಳೆದ ತಾ. 19ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ವೆಂಕಟಪ್ಪಯ್ಯ ಶೆಟ್ಟಿಯವರು ಶಾಲಾಭಿನಂದನೆಯನ್ನು ಮಾಡಿದರು. ಡಾ। ಎಮ್. ಆರ್. ಕಾಮತ್, ಶ್ರೀಗಳಾದ ಕೆ. ವಿಠಲ ಶೆಟ್ಟಿ, ಬಿ. ಭೋಜರಾವ್ ಮೊದಲಾದವರ ಭಾಷಣಗಳಾದುವು.

ಮಾಯಿಪಾಡಿ—ಪೆಡ್ರಲ ಸೇವಾ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಸಂಚಾರಿ ಆಸ್ಪತ್ರೆಯ ಒಂದು ಕೇಂದ್ರವನ್ನು ಮಾಯಿಪಾಡಿಯಲ್ಲಿ ತೆರೆಯುವ ಸಮಾರಂಭವು ತಾ. 31ರಲ್ಲಿ ಜರಗಿತು. ಅ. ಭಾ. ಮಹಿಳಾ ಸಂಘದ ಶ್ರೀಮತಿ ಧನ್ವಂತರಿರಾವ್, ಶ್ರೀಮತಿ ಲಕ್ಷ್ಮಿ ಮೆನೋನ್ ಮೊದಲಾದವರು ಈ ಸಮಾರಂಭಕ್ಕೆ ಬಂದಿದ್ದರು.

ಪ್ರಕಟಣೆ

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ಕ್ರಮನಂಬ್ರ 353/55ರಲ್ಲಿ ನೇಮಕಹೊಂದಿದ ರಿಸೀವರ್ ಎಡ್ವೋಕೇಟ್ K. ರಾಮಪ್ಪಯ್ಯನು ಸರ್ವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಸರ್ವೇನಂಬ್ರ 219/9, 220/3, 221/1 ಮತ್ತು 222ನೇ ಸ್ಥಳಗಳಲ್ಲಿ ಕಡಿದ ಸುಮಾರು ಅಂದಾಜು 18 ಚೌಕ ಕಿರಾಲು ಬೋಗಿಯ ಮತ್ತು ಇತರ ಜಾತಿಯ ಕಟ್ಟಿಗೆ ಮತ್ತು ಸುಮಾರು ಅಂದಾಜು 5 ಕೋಡಿ ಕಿರಾಲು ಬೋಗಿ ಮತ್ತು ಇತರ ಜಾತಿಯ ಮೋಪನ್ನು ಬಹಿರಂಗವಾಗಿ ತಾ. 21—1—1956ರ ಹಗಲು 2 ಗಂಟೆಗೆ ಏಲಂ ಮಾಡಲಾಗುವುದು. ಏಲಂನಲ್ಲಿ ಪಾಲು ಕರೆಯಲು ಅಪೇಕ್ಷೆಯುಳ್ಳ ಉಮೇದ್ವಾರರು ಸದ್ರಿ ಬಾಬಿನ ವಿವರವನ್ನು ಮತ್ತು ಏಲಂನ ಶರ್ತಗಳನ್ನು ಕೆಳಗೆ ದಸ್ಕತು ಮಾಡಿದವರಿಂದ ತಿಳಿಯಬಹುದು.

(Sd) K. Ramappayya.
B. A. B. L.
Advocate Receiver.

ಕುಂದಾಪುರ 2—1—1956.

THE BOMBAY LIFE ASSURANCE Co., Ltd.

Excellent Bonuses !

1954 VALUATION.

Whole Life .... Rs. 19/- per 1000/-per year

Endowment .... Rs. 15/- per 1000/- per year.

Record Business: Over Rs. 5 Crores.

It pays you to consult for Representation or Insurance:-

KOCHIKAR BROTHERS, LTD.,

CHIEF AGENTS, UDIPI.

or any of their offices at:-

Bangalore, Coimbatore, Kozhikode, Madura, Mangalore and Trivandrum.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ದಿನಾಂಕ 2-12—1955ರಲ್ಲಿ, ಬ್ಯಾಂಕಿನ ಹೊಸ ಶಾಖೆಯೊಂದು **ಮಧುರೆಯ** ಈಸ್ಟ್ ಅವನಿಮೂಲಾ ರಸ್ತೆಯಲ್ಲಿರುವ ನಂಬ್ರ 40ನೆ ಕಟ್ಟಡದಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED

Estd:- 1906] [H. O. UDIPI (S.India).

ಭವ್ಯ ಭಾರತದ ನಿರ್ಮಾಣಕ್ಕಾಗಿ ಕಷ್ಟಪಟ್ಟು ದುಡಿಯಿರಿ!

ಮಂಗಳೂರಲ್ಲಿ ಪ್ರಧಾನಿ ನೆಹರೂರವರ ಭಾಷಣ.

ಮಹಾ ಪ್ರಧಾನಿ ನೆಹರೂರವರು ಕಳೆದ ೨೮ರಂದು ಸಂಜೆ ಸ್ಪೆಶಲ್ ರೈಲಿನಲ್ಲಿ ಮಂಗಳೂರಿಗೆ ಪ್ರಸನ್ನವದನರಾಗಿ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟಿ, ಜಿಲ್ಲಾ ಕಲೆಕ್ಟರ್ ಶ್ರೀ. ಎಸ್. ಜಿ. ರಾಜಾರಾಮ್, ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ. ಬಿ. ... ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ. ವಿ. ಎಸ್. ರಾಜನ್, ಜಿಲ್ಲಾ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷ ಶ್ರೀ. ಕೆ. ಆರ್. ಆಚಾರ್, ಶ್ರೀ. ಎಸ್. ಸರ್ಪಯ್ಯ, ಎಮ್. ಎಲ್. ಸಿ., ಶಾಸನ ಸಭಾ ಸದಸ್ಯರುಗಳಾದ ಟಿ. ಎ. ಪೈ, ಬಿ. ವೈಕುಂಠ ಬಾಳಿಗ, ವೈ. ಮಂಜಯ್ಯ ಶೆಟ್ಟಿ, ಕೆ. ವೆಂಕಟ್ರಮಣ ಗೌಡ, ಕೆ. ಈಶ್ವರ, ಎಮ್. ಎಸ್. ... ಮೊದಲಾದವರು ಸುಸ್ವಾಗತವನ್ನು ಬಯಸಿದರು. ಮದ್ರಾಸಿನ ಮುಖ್ಯ ಮಂತ್ರಿ ಶ್ರೀ. ಕಾಮರಾಜ ನಾಡರರೂ ಮಹಾ ಪ್ರಧಾನಿಗಳ ಜತೆಯಲ್ಲಿ ಬಂದಿದ್ದರು. ಅಲ್ಲಿಂದ ಪಂಡಿತ ನೆಹರೂರವರು ತೆರೆದ ಕಾರಿನಲ್ಲಿ ನಿಂತುಕೊಂಡು ತಳಿರು ತೋರಣ ವಿದ್ಯುದ್ದೀಪ ... ಗಳಿಂದ ಅಲಂಕೃತವಾದ ರಸ್ತೆಯಿಂದಾಗಿ ಕೇಂದ್ರ ಮೈದಾನಿಗೆ ಆಗಮಿಸಿದರು. ದಾರಿಯುದ್ದಕ್ಕೂ ಕಿಕ್ಕಿರಿದ ಜನಸ್ತೋಮ "ಪಂಡಿತ ನೆಹರೂ ಕೀ ಜೈ" ಎಂದು ಜಯಘೋಷ ಮಾಡುತ್ತಿದ್ದುದನ್ನು ಮಹಾ ಪ್ರಧಾನಿಗಳು ಕೈ ಮುಗಿದು ಸ್ವೀಕರಿಸಿದರು.

ಕೇಂದ್ರ ಮೈದಾನಿನಲ್ಲಿ ಎಷ್ಟತ್ತರ ಎತ್ತರದ ಪೆವಿಲಿಯನ್ ಜೊತೆ ಕಟ್ಟಲಾದ ವೇದಿಗೆ ಶ್ರೀ ನೆಹರೂರವರು ಆಗಮಿಸಲು ಅವರನ್ನು ದ. ಕ. ಜಿಲ್ಲಾ ಪಾರ್ಲಿಮೆಂಟ್ ಸದಸ್ಯರಾದ ಶ್ರೀಯುತರು ಕೆ. ಸದಾನಂದ ಹೆಗ್ಡೆ ಮತ್ತು ಯು. ಶ್ರೀನಿವಾಸ ಮಲ್ಯರು ಸ್ವಾಗತಿಸಿದರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ. ಯು. ಪಿ. ಮಲ್ಯರು ನೂರ್ಸ್ವರೂರವರಿಗೆ ಹಾರವನ್ನರ್ಪಿಸಿ ಸ್ವಾಗತನಾಮಗಳನ್ನಾಡುತ್ತಾ ಈ ಜಿಲ್ಲೆಯು 'ನೆಹರೂ ಜಿಲ್ಲೆ' ಎಂದಾಗ ಜನಸ್ತೋಮವು ಜಯಕಾರವನ್ನು ಹಾಕಿತು. ಬಳಿಕ ನಗರಸಭೆಯ ಪರವಾಗಿ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ, ಜಿಲ್ಲಾಬೋರ್ಡಿನ ಪರವಾಗಿ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರೂ ಮಾನಪತ್ರಗಳನ್ನರ್ಪಿಸಿದರು.

ನಂತರ ಪಂಡಿತ ನೆಹರೂರವರು ತಮ್ಮ ಭಾಷಣದಲ್ಲಿ ಹಿಂದೆ ತಾನೊಮ್ಮೆ ಮಂಗಳೂರಿಗೆ ಬಂದ ಸಂದರ್ಭವನ್ನು ಸ್ಮರಿಸುತ್ತಾ ಅಗಿನ ಜನಾವಿಗಿಂತ ಈ ಸಮಯದಲ್ಲಿ ಮಂಗಳೂರಿಗೆ ಬಂದಿದ್ದೆನೆಂದೂ, ಬಿಸಿ ಸಮಯ ತನಗೆ ಏನೂ ಇಷ್ಟವಾದುದಲ್ಲವೆಂದೂ ಸೂಚಿಸಿದರು. ಇಂದು ಉರ್ಜಿಮೆಯ ಶಾಂತ ಅವರಣದಲ್ಲಿ ತಾನು ಮಾತನಾಡಲು ಸಂತೋಷಪಡುವುದಾಗಿ ತಿಳಿಸಿದರು. ಮಂಗಳೂರು ಒಂದು ಸುಂದರಪ್ರದೇಶ, ಆದರೆ, ನಾನು ಮಂಗಳೂರಿಗೆ ಬರುವಾಗ ಸಾಧಾರಣ ರಾತ್ರಿಯಾಗುತ್ತದೆ. ಆದರಿಂದಾಗಿ ನಿಮ್ಮನ್ನು ನೋಡಬೇಕೆಂಬ ನನ್ನ ಆಶೆ ಈಡೇರಲಿಲ್ಲ, ಎಂದು ತನ್ನ ಅಸಮಾಧಾನವನ್ನು ಸೂಚಿಸಿದರು.

ಪ್ರಾಂತ ಪುನರ್ರಚನೆಯ ವಿಷಯ ತಾನು ಮಾತಾಡಲು ಇಷ್ಟಪಡುವುದಿಲ್ಲವಾಗಿಯೂ, ಎಲ್ಲರೂ ಶಾಂತರೀತಿಯಿಂದ ಆ ಕುರಿತು ವರ್ತಿಸಬೇಕಾಗಿ ಕೇಳಿಕೊಂಡರಲ್ಲದೆ ಜನರ ಇಚ್ಛೆಯಂತೆ ನಾವು ವರ್ತಿಸುತ್ತೇವೆ, ಕೊನೆಯದಾಗಿ ಇದನ್ನು ಲೋಕಸಭೆಯು ನಿರ್ಧರಿಸುತ್ತದೆ. ಎಂದು ನುಡಿದರು. ನಾವು ಹಲವಾರು ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ಅದರಲ್ಲಿ ಸ್ವಾತಂತ್ರ್ಯವೊಂದು. ಅದನ್ನು ಎಂಟು ವರುಷಗಳ ಹಿಂದೆ ನಾವು ಗಳಿಸಿದೆವು. ಇನ್ನೂ ಹಲವಾರು ವಿಚಾರಗಳನ್ನು ನಾವು ಪಡೆಯಬೇಕಷ್ಟೇ. ಎಂದು ಎಚ್ಚರಿಸಿದರು.

ಮಂಗಳೂರು ನಗರಸಭೆ, ಜಿಲ್ಲಾಬೋರ್ಡು ಅರ್ಪಿಸಿದ ಮಾನಪತ್ರ, ಜನತೆಯ ಸ್ವಾಗತಕ್ಕೆ ಕೃತಜ್ಞತೆಯನ್ನರ್ಪಿಸಿ, ಇಲ್ಲಿ ಕುಳಿತ ನೀವೆಲ್ಲರೂ, ತಾನೂ ಯಾರು? ಎಂದು ಪ್ರಶ್ನಿಸಿದರು. ಪ್ರಶ್ನೆಗೆ ಅವರೇ ಉತ್ತರ ನೀಡುತ್ತಾ ನಾವೆಲ್ಲರೂ ಭಾರತದ ಚಿಕ್ಕ ಚಿಕ್ಕ ಅಣುಗಳು. ಈ ೩೬೦ ಮಿಲಿಯ ಚಿಕ್ಕ ಚಿಕ್ಕ ಅಣುಗಳು ಸೇರಿಯೇ ವಿಶಾಲ ಭಾರತ ದೇಶವಾಗಿದೆ ಎಂದು ಸೂಚಿಸಿದರು.

೪೦೦ ವರುಷಗಳ ಹಿಂದೆ ವಾಸ್ಕೋಡಿಗಾಮನು ಕಲ್ಲಿಕೋಟೆಗೆ ಬಂದ, ಅಲ್ಲಿಂದ ಆತ ತನ್ನ ರಾಜ್ಯವನ್ನು ವಿಸ್ತರಿಸಿದ. ಆದರೆ ಅವೆಲ್ಲವೂ ಇಂದು ಗತ ಇತಿಹಾಸದ ಅಡಿಯಲ್ಲಿ ಬಿದ್ದಿವೆ. ಅವೆಲ್ಲವೂ ಕೊನೆಗೊಂಡಿವೆ. ಇಂದು ನಾವು ಹೊಸ ಇತಿಹಾಸವನ್ನು ಪ್ರಾರಂಭಿಸಿದ್ದೇವೆ. ಅದು ಮುಂದಿನ ಚರಿತ್ರೆಯಲ್ಲಿ ಬರೆಯಲ್ಪಡಬೇಕು. ಜನರು ತಮ್ಮೊಳಗೆ ಕಚ್ಚಾಡದೆ, ಜಾತೀಯತೆಯನ್ನು ತೊರೆಯಬೇಕು. ಜಾತೀಯತೆ ದೇಶಕ್ಕೆ ಹಾನಿಕರ, ಅದು ದೇಶಕ್ಕೆ ಘಾತುಕಕರ. ಅವುಗಳಿಗೆಂದೂ ಭವಿಷ್ಯವಿಲ್ಲ. ನಾವು ಭಾರತದಲ್ಲಿ ಹಿಂದೂ, ಕ್ರೈಸ್ತ ಯಾ ಇನ್ನಿತರ ಯಾವ ಮತಗಳ ರಾಜ್ಯವನ್ನೂ ಕಟ್ಟಲು ಹೋಗುವುದಿಲ್ಲ. ನಾವು ಕಟ್ಟುವುದು ಭಾರತ ರಾಜ್ಯವನ್ನು. ಅಲ್ಪ ಸಂಖ್ಯಾಕರನ್ನು ಇತರ ಬಹು ಸಂಖ್ಯಾಕರು ಗೌರವಿಸುವುದು, ಅವರ ಕರ್ತವ್ಯ. ಜಾತೀಯತೆಯು ಭಾರತದ ಜನತೆಗೊಂದು ಶಾಪ! ಎಂದು ಪ್ರಧಾನಿಗಳು ಹೇಳಿದರು.

"ಇದು ಅಣುಬಾಂಬು ಯುಗ. ಈ ಶಕ್ತಿಯನ್ನು ನಾವು ಇದಿರಿಸಲೇ ಬೇಕಾಗಿದೆ. ಅದಕ್ಕಾಗಿ ನಾವು ಶಕ್ತಿವಂತರಾಗಬೇಕು. ಇದನ್ನು ಯೋಚಿಸುವಾಗ ನಾನು ಬಹಳ ಬೇದಗೊಳ್ಳುತ್ತೇನೆ. ನನ್ನ ಹೃದಯಕ್ಕೆ ಬೆಂಕಿ ಸುರಿದಂತಾಗುತ್ತದೆ" ಎಂದು ಪ್ರಧಾನಿಗಳು ಇಂದಿನ ಕಾಲದ ಕುರಿತು ಹೇಳಿದರು.

ನಮಗೆ ನಮ್ಮದೇ ಪರಂಪರೆ ಇದೆ. ಬೇರೊಬ್ಬರ ಮಾದರಿಯನ್ನು ನಾವು ಅನುಸರಿಸಿ ಮಾಡಬೇಕಾಗಿಲ್ಲ. ಆಟಂ, ಹೈಡ್ರೋಜನ್ ಬಾಂಬುಗಳು ಈ ಕಾಲಕ್ಕೆ ಸರಿಯಾಗಲಾರವು ಅವು ಜಗತ್ತಿಗೇ ಮಾರಕವಾಗಿವೆ. ನಾವು ಕ್ರಾಂತಿಯನ್ನು ಶಾಂತಿಯಿಂದಲೇ ಸಾಧಿಸಬೇಕು. ಒಳ್ಳೆಯ ಹಳೆಯ ತತ್ವಗಳೊಡನೆ ಹೊಸ ಘೋಷಣೆಗಳನ್ನು ಸೇರಿಸಬೇಕು. ನಮ್ಮಲ್ಲಿಯೂ ಕ್ರಾಂತಿಯಾಗಿದೆ. ಇತರ ದೇಶಗಳಂತೆ ನಾವು ಸಹ ಕ್ರಾಂತಿಯ ಬಳಿಕ ಭವ್ಯ ಭಾರತದ ನಿರ್ಮಾಣಕ್ಕೆ ಕಷ್ಟಪಟ್ಟು ದುಡಿಯಬೇಕೆಂದು ವಿನಂತಿ...

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ರೈತರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸ್ಥಿರಠೇವಣಾತಿ.

24 ತಿಂಗಳಿಗೆ	4%
12 ,,	3½%
6 ,,	3¼%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK LTD., MULKI.

ಮಂಗಳೂರು

ಜಿಲ್ಲಾ ಬೋರ್ಡು ಸಭೆ — ಜಿಲ್ಲಾ ಬೋರ್ಡು ಅಧ್ಯಕ್ಷರನ್ನು ಈಚೆಗಿನ ಸರಕಾರಿ ಹುಕುಮಿನ ಮೇರೆಗೆ, ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಗೆ ಬರೇ ಸಭಾ ಸದಸ್ಯರನ್ನಾಗಿ ಮಾತ್ರ ನೇಮಿಸಿರುದಕ್ಕೆ ತಾ. 28 ರಂದು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ದ. ಕ. ಜಿಲ್ಲಾ ಬೋರ್ಡಿನ ಸಭೆಯಲ್ಲಿ, ಸಭೆಯು ಅಸಮ್ಮತಿ ಸೂಚಿಸುವ ನಿರ್ಣಯ ಪಾಸಾಗಿ ಅದರ ಪ್ರತಿಯನ್ನು ಇತರ ಜಿಲ್ಲಾ ಬೋರ್ಡುಗಳಿಗೂ ಮತ್ತು ಜಿಲ್ಲಾಬೋರ್ಡು ಅಧ್ಯಕ್ಷರ ಪ್ರಾಂತೀಯ ಕನ್ವೆಂಟಿಗೂ, ಸರಕಾರಕ್ಕೂ ಕಳುಹಿಸುವ ನಿರ್ಧಾರವಾಯಿತು. ಸ್ಥಳೀಯ ಅಭಿವೃದ್ಧಿ ಯೋಜನೆಯಂತೆ ಕಟ್ಟಲಿರುವ ಸಂಗಾರಕಟ್ಟೆ ಹಾ. ಎ. ಶಾಲಾ ಕಟ್ಟಡದ ಪಿರಿದ ಎಸ್ಟಿಮೇಟು ಹಣವಾದ ರೂಪಾಯಿ 14,200ರಲ್ಲಿ ಸೇಕಡಾ 25ನ್ನು ಜಿಲ್ಲಾ ಬೋರ್ಡಿನ ವಂತಿಗೆಯಾಗಿ ಕೊಡಬೇಕೆಂಬ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ನಿರ್ಣಯವು ಪಾಸಾಯಿತು.

ಹೊಸ ನಿಯಮಗಳು ಪ್ರಕಟವಾಗುವವರೆಗೆ ಹೆಚ್ಚಿಸಿದ ಸರ್ಚಾರ್ಜು ಹಣವನ್ನು ಆಯವ್ಯಯದ ಅಂದಾಜಿನಲ್ಲಿ ಸೇರಿಸಬಾರದೆಂದು ಬಂದ ಸರಕಾರೀ ಹುಕುಮನ್ನು ಗಮನಿಸಿ, 1955-56ರ ಆಯವ್ಯಯ ಅಂದಾಜಿನಲ್ಲಿ ಹೆಚ್ಚಿಸಿದ ಸರ್ಚಾರ್ಜಿನ ಬಗ್ಗೆ ರೂ. 2,50,000 ನ್ನು ಸೇರಿಸಲಾಗಿದ್ದು, ಈಗ ಅದನ್ನು ವಜಾ ಮಾಡಿದರೆ 1955-56ರ ಆಯವ್ಯಯ ಅಂದಾಜಿನಲ್ಲಿ ರೂಪಾಯಿ 4,00,600 ಕೊರತೆ ಬೀಳುವುದು ಎಂಬುದರಿಂದಾಗಿ, ಮುಂದಿನ ತಿಂಗಳುಗಳಲ್ಲಿ ಆಡಳಿತ ಸುಗಮವಾಗಿ ನಡೆಯಬೇಕಾದರೆ ಮತ್ತು ಕೊರತೆಯನ್ನು ನೀಗಿಸಬೇಕಾದರೆ ಸರಕಾರವು ಕೂಡಲೇ ಬೋರ್ಡಿನ ಸಹಾಯಕ್ಕೆ ಬರಬೇಕೆಂದು ವಿನಂತಿಸುವ ಮತ್ತು ಕೊರತೆಯನ್ನು ಕಡಿಮೆ ಮಾಡುವ ಬಗ್ಗೆ ಎರಡು ಲಕ್ಷ ರೂಪಾಯಿಗಳನ್ನು ಮುಂಗಡ ಗ್ರಾಂಟಾಗಿ ಬೋರ್ಡಿಗೆ ಕೊಡಬೇಕೆಂದು ಸರಕಾರವನ್ನು ವಿನಂತಿಸುವ ಠರಾವುಗಳಾದುವು.

ಸಂತಾಪ ಸೂಚಕ ಸಭೆ— ದ. ಕ. ಜಿಲ್ಲಾ ಕಾಂಗ್ರೆಸ ಕಮಿಟಿ ಅಧ್ಯಕ್ಷ ಡಾ! ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ತಾ. 24 ರಲ್ಲು ಸಭೆ ಜರಗಿ ಶ್ರೀ ಎಚ್. ರಾಮರಾಯ ಮಲ್ಯರ ಆಕಸ್ಮಿಕ ನಿಧನಕ್ಕಾಗಿ ಸಂತಾಪ ಸೂಚಕವ ನಿರ್ಣಯವಾಯಿತು. ಬಳಿಕ ದಿವಂಗತರ ಕುಟುಂಬದ ಸಹಾಯಾರ್ಥವಾಗಿ ಒಂದು ಸಹಾಯ ನಿಧಿಯನ್ನು ಸಂಗ್ರಹಿಸಲು ಡಾ! ಯು. ಪಿ. ಮಲ್ಯರು ಅಧ್ಯಕ್ಷರಾಗಿಯೂ ...

... ನಿದರು. ನೂರು ಬಾರಿ "ಜೈ ಹಿಂದ್" ಘೋಷಣೆ ಯೊಡನೆ ಭಾಷಣ ಕೊನೆಗೊಳಿಸಿದರು. ಶ್ರೀ. ಕೆ. ಕೆ. ಶೆಟ್ಟಿಯವರು ನೆಹರೂರವರ ಭಾಷಣವನ್ನು ಕನ್ನಡಿಸಿದರು. ಪಂಡಿತಜೀಯವರು ಮೈದಾನಿನ ಕಾರ್ಯಕ್ರಮ ಮುಗಿಸಿಕೊಂಡು ತಳಿರು ತೋರಣ ವಿದ್ಯುದ್ದೀಪಗಳಿಂದಲಂಕೃತವಾದ ದಾರಿಯಿಂದ ಸರ್ಕ್ಯೂಟ್ ಹೌಸ್ ಬಂಗ್ಲೆಗೆ ಬಂದರು.

ರಾತ್ರಿ ಕೆನರಾ ಹೈಸ್ಕೂಲಿನ ಭವ್ಯ ಅಂಗಣದಲ್ಲಿ ಸ್ವಾಗತಸಮಿತಿ ಕಡೆಯಿಂದ ಏರ್ಪಡಿಸಲಾದ ಭೋಜನ ಸತ್ಕಾರ ಸಮಾರಂಭದಲ್ಲಿ ಭಾಗವಹಿಸಿದರು. ತಾ. 29ರಂದು ಬೆಳಿಗ್ಗೆ ಪಂಡಿತ ನೆಹರೂರವರು ಮಿಸ್ಟರ್ ಕಾರರ ಬಂಗ್ಲೆಯಿಂದ ಹೊರಟು ಬಜ್ಪೆ ವಿಮಾನ ನಿಲ್ದಾಣಕ್ಕೆ ಬಂದು ವಿಮಾನದಲ್ಲಿ ದಕೋಟಾ ವಿಮಾನದಲ್ಲಿ ಬೊಂಬಾಯಿಗೆ ತೆರಳಿದರು.

ಶ್ರೀ ಕೆ. ಆರ್. ಆಚಾರ್ಯರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಭೋಜರಾವ್ ಬೋಳಾರ್ ಮತ್ತು ಕುದ್ಮಿ ಶ್ರೀನಿವಾಸ ಶೆಣೈಯವರು ಕೋಶಾಧಿಕಾರಿಗಳಾಗಿಯೂ ಇರುವ ಸಮಿತಿಯೊಂದು ರಚಿಸಲಾಯಿತು.

ವಾರ್ಷಿಕೋತ್ಸವ— ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ವಾರ್ಷಿಕೋತ್ಸವವು ತಾ. 29ರಲ್ಲಿ ಜರಗಿತು. ಅಂದು ಬೆಳಗ್ಗೆ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ, ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಶ್ರೀಮತಿ ಕುಟ್ಟಿ ಅಮ್ಮಾಳ್, ಅವರು ಪ್ರಮಾಣ ಪತ್ರ ವಿತರಣೆಮಾಡಿದರು. ಸಂಜೆ ಶ್ರೀಮತಿ ಉಮಾ ಬಾಯಿ ಕುಂದಾಪುರ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಭಾಷಣಗಳಾದುವು.

ಮಂಗಳೂರಲ್ಲಿ ಮೈಸೂರು ಮಂತ್ರಿ ಶ್ರೀ ಚೆನ್ನಬಸಪ್ಪನವರು— ಮೈಸೂರಿನ ಕೈಗಾರಿಕಾ ಮತ್ತು ವಿದ್ಯುತ್ ಇಲಾಖಾ ಮಂತ್ರಿ ಶ್ರೀ ಎಚ್. ಎಮ್. ಚೆನ್ನಬಸಪ್ಪನವರಿಗೆ ತಾ. 26ರಲ್ಲು ಮಂಗಳೂರು ನಗರ ಸಭಾ ಕಡೆಯಿಂದ ಸ್ವಾಗತ ಮತ್ತು ಕೆನರಾ ಚೇಂಬರ್ ಅಫ್ ಕಾಮರ್ಸ್ ಪರವಾಗಿ ಸತ್ಕಾರ ಸಭೆಯೂ ಜರಗಿತು. ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ ಚೇಂಬರಿನ ಅಧ್ಯಕ್ಷ ಶ್ರೀ ಕುದ್ಮಿ ಶ್ರೀನಿವಾಸ ಶೆಣೈಯವರೂ ಮಂತ್ರಿಗಳಿಗೆ ಪುಷ್ಪಹಾರಗಳನ್ನರ್ಪಿಸಿ ಸ್ವಾಗತಿಸಿದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಮಂತ್ರಿಗಳ ಪರಿಚಯವನ್ನು ಮಾಡುತ್ತಾ, ಜಿಲ್ಲೆಗೆ ಬೇಗನೇ ಜೋಗ್ ವಿದ್ಯುತ್ ಸರಬರಾಯಿ ಒದಗಿಸುವಂತೆ ಮಾಡಬೇಕೆಂದು ಕೇಳಿಕೊಂಡರು.

ಮಂತ್ರಿಗಳು ಉತ್ತರಿಸುತ್ತಾ "ವಿದ್ಯುತ್ ವ್ಯವಸ್ಥೆಗೆ ಬೇಕಾದ ಸಾಮಗ್ರಿ ಸಲಕರಣೆಗಳು ಸಿಗದೆ ಮೈಸೂರು ಭಾಗದ ಕೆಲಸಕ್ಕೆ ತಡವಾಗಿದೆಯಲ್ಲದೆ, ಮೈಸೂರು ಸರಕಾರ ಅಸಡ್ಡೆಯಿಂದಲ್ಲವೆಂದೂ ಬೇಗನೇ ಸರ್ವ ಪ್ರಯತ್ನ ಮಾಡಲಾಗುವುದೆಂದೂ ಹೇಳಿದರು. ಡಾ! ಯು. ಪಿ. ಮಲ್ಯರು ಧನ್ಯವಾದಗಳನ್ನಿತ್ತರು.

ಜಿಲ್ಲಾ ಕಲೆಕ್ಟರರ ಪತ್ರಿಕಾ ಪರಿಷತ್ತು— ತಾ. 31ರಲ್ಲಿ ಸಂಜೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟೆಂಟ್ ಶ್ರೀ ಪಿ. ಜೆ. ಪ್ರಾನ್ಸಿಸ್ ರವರ ದ. ಕ. ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಪ್ರಗತಿಯನ್ನು ವಿವರಿಸುತ್ತಾ, 'ಮುಂಜೇಶ್ವರ ರಾಷ್ಟ್ರೀಯ ವಿಸ್ತರಣಾ ಯೋಜನಾಕೇಂದ್ರವು ಒಳ್ಳೆಯ ಕುಕ್ಕೆ ಹೆಜೆಯುವ ಮತ್ತು ಬೆತ್ತದ ಕೆಲಸದ ತರಬೇತಿ ಕೇಂದ್ರ, ಸುಳ್ಯ ಸಮಾಜವಿಕಾಸನಾ ಕೇಂದ್ರದಲ್ಲಿ ಕಟ್ಟಿಗೆಯ ಕೆಲಸಗಳಲ್ಲಿ ಸರಿಯಾದ ತರಬೇತಿಕೊಡುವ ಒಂದು ಕೇಂದ್ರ ಮತ್ತು ಬಾಣೆಮುಂಗಳೂರಲ್ಲಿ ಕೊಂಬಿನ ಬಾಚಣಿಗೆಯ ತಯಾರಿ ಇತ್ಯಾದಿಯಲ್ಲಿ ತರಬೇತಿಯನ್ನು ಕೊಡುವರೆ ಮತ್ತು ಆದರ ಕೆಲಸಗಾರರಿಗೆ ಇತರ ಸೌಕರ್ಯಗಳನ್ನೊದಗಿಸಲು ಸಹಕಾರಿ ಸಂಸ್ಥೆಯ ಸ್ಥಾಪನೆ- ಹೀಗೆ ನೂರು ತರಬೇತಿ ಕೇಂದ್ರಗಳನ್ನು ತೆರೆಯುವ ಯೋಜನೆಗಳು ಸರಕಾರದವರಿಂದ ಮಂಜೂರು ಮಾಡಲ್ಪಟ್ಟು ಬೇಗನೆ ಕಾರ್ಯಗತವಾಗಲಿವೆ' ಎಂದು ಹೇಳಿದರು. ಉಡುಪಿ ತಾಲೂಕಿನ ಹಿರಿಯಾರು ಹೊಳೆಗೆ ಸಕ್ಕಟ್ಟು ಮತ್ತು ತೆಂಗೋಡಿನಗಳ ನಡುವೆ ಅಣೆಕಟ್ಟು ಕಟ್ಟಲು ರೂಪಾಯಿ 38,700 ಮಂಜೂರಾಗಿದೆ ಎಂದು ತಿಳಿಸಿದರು.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಮರುಪಾವತಿ, ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O. Box No. 3219, BOMBAY 3-

ಗೀತೆಯ ಕೈಗನ್ನಡಿ

ನವಯುಗ ಪ್ರೆಸ್, ಉಡುಪಿ.

ಒಕ್ಕಲುಗಳ ರಕ್ಷಣೆಯ ದ್ವಿತೀಯ ಘಟ್ಟ

(೩ನೇ ಪುಟದಿಂದ)

ಮಟ್ಟಿಗೆ ನ್ಯಾಯವಾದ ಗೇಣಿಯು ಎರಡು ಮುಖ್ಯ ಬೆಳೆಗಳಲ್ಲಿ ಪ್ರತಿಯೊಂದರ ೪೦% ಆಗುತ್ತದೆ. ಆದರೆ ಇಂಥ ಪ್ರಸಂಗದಲ್ಲಿ ತೆರಬೇಕಾಗುವ ನೀರಾವರಿ ತೆರಿಗೆಯನ್ನು ಧನಿಯು ಕೊಡಬೇಕಾಗುತ್ತದೆ.

ಮೇಲಿನಂತೆ ಗೇಣಿ ನಿರ್ಣಯಿಸುವಾಗ ಯಾವುದೇ ನಡುವಿನ ಬೆಳೆಯನ್ನು ಲೆಕ್ಕಕ್ಕೆ ಹಿಡಿಯ ಕೂಡದು. ಪ್ರತಿಯೊಂದೂ ಪೈರಿನಲ್ಲಿ ಸಾಗುವಳಿದಾರ ಒಕ್ಕಲಿಗೆ ಬೈಹುಲ್ಲಿನ ಮೇಲೂ ಧಾನ್ಯಗಳ ಸಿಪ್ಪೆ, ಒಣದಂಟು ಇತ್ಯಾದಿಗಳ ಮೇಲೂ ಸಂಪೂರ್ಣ ಅಧಿಕಾರವಿರುತ್ತದೆ.

ಒಕ್ಕಲಿಗೆ ಪ್ರಯೋಜನ

ಒಂದು ಬೆಳೆ ಬರುವ ಭೂಮಿಯನ್ನು, ಗೇಣಿ ನಿರ್ಣಯದ ಸಂಬಂಧದಲ್ಲಿ ಮೇಲೆ ಹೇಳಿದ ವಿಷಯಗಳಿಗೆ ಭಿನ್ನವಾಗಿ, ಯಾವುದೇ ಒಕ್ಕಲು ಒಂದಕ್ಕಿಂತ ಹೆಚ್ಚು ಬೆಳೆಯನ್ನು ತೆಗೆಯಲು ಉಪಯೋಗಿಸಿದರೆ ಇಂಥ ಹೆಚ್ಚಿಗೆ ಬೆಳೆಗೆ ಉಪಯೋಗಿಸಿದ ನೀರಿನ ತೆರಿಗೆಯನ್ನು ಧನಿಗೆ ಕೊಡಬೇಕಾಗುತ್ತದೆ. (ಆದರೆ ಧನಿಗೆ ಈ ಹೆಚ್ಚಿಗೆ ಬೆಳೆಯಲ್ಲಿ ಪಾಲು ಸಿಗಲಾರದು.)

ಏತ, ನೀರಿನ ಪಂಪು ಇತ್ಯಾದಿ ಸಾಧನಗಳಿಂದ ಸಾಗುವಳಿದಾರ ಒಕ್ಕಲು ತನ್ನ ಸ್ವಂತ ಖರ್ಚಿನಲ್ಲಿ ನೀರಾವರಿ ಸೌಕರ್ಯಗಳನ್ನು ಒದಗಿಸಿಕೊಳ್ಳುತ್ತಾನಾದರೆ ಕಾಲಂಶಕ್ಕಿಂತ ಹೆಚ್ಚಾಗದಂತೆ ನ್ಯಾಯವಾದ ಗೇಣಿಯನ್ನು ಇಳಿಸಲಾಗುತ್ತದೆ. ನೀರಿನ ಪಂಪುಗಳ ಮಟ್ಟಿಗೆ ಅದನ್ನು ಒದಗಿಸಿದವನು ಧನಿಯಾಗಿದ್ದು ಒಕ್ಕಲು ಅದನ್ನು ನಡೆಸುವ ವೆಚ್ಚ ನೋಡಿಕೊಳ್ಳುತ್ತಾನಾದರೆ ವಿದ್ಯುದ್ಯಂತ್ರದ ಸಂಬಂಧದಲ್ಲಿ ಒಟ್ಟು ಉತ್ಪನ್ನದ ೫% ಮತ್ತು ಎಣ್ಣೆಯಿಂದ ನಡೆಯುವ ಯಂತ್ರದ ಸಂಬಂಧದಲ್ಲಿ ೭ ೧/೨% ಒಕ್ಕಲಿಗೆ ಪರಿಹಾರ ಸಿಗಬೇಕೆಂಬ ತಳಹದಿಯ ಮೇಲೆ ನ್ಯಾಯವಾದ ಗೇಣಿಯನ್ನು ನಿರ್ಣಯಿಸಬೇಕಾಗುತ್ತದೆ.

ಮೊದಲನೇ ಸಾಗುವಳಿ ವರ್ಷದಲ್ಲಿ ಫಲವೇನನ್ನೂ ಕೊಡದ ಬೆಳೆಯನ್ನು ಒಕ್ಕಲು ಬೆಳೆಸಿರುವ ಪಕ್ಷದಲ್ಲಿ ಆ ವರ್ಷದ ಮಟ್ಟಿಗೆ ಒಕ್ಕಲು ತನ್ನ ಧನಿಗೆ ಭೂಮಿಯ ಮೇಲೆ ಸರಕಾರಕ್ಕೂ ಸ್ಥಳೀಯ ಸಂಸ್ಥೆಗಳಿಗೂ ಕೊಡಬೇಕಾದ ತೀರ್ವೆ ಮತ್ತು ನೀರಿನ ತೆರಿಗೆ ಇಷ್ಟನ್ನು ಸಂದಾಯ ಮಾಡಿದರೆ ಸಾಕು; ಯಾವುದೇ ಗೇಣಿಯನ್ನು ಆ ವರ್ಷದ ಮಟ್ಟಿಗೆ ಕೊಡಬೇಕಾಗಿಲ್ಲ.

ಈಗಿನ ಗೇಣಿ ಕಡಿಮೆಯಾದರೆ—

ಪ್ರಕೃತ ರೂಢಿಯಲ್ಲಿರುವ ಕರಾರು ಮೇಲೆ ವಿವರಿಸಿದ ನ್ಯಾಯ ಸೂತ್ರಗಳಂತೆ ಕೊಡಬೇಕಾದ ಗೇಣಿಗಿಂತ ಕಡಿಮೆ ಗೇಣಿಯನ್ನು ಧನಿಗೆ ಕೊಡುವುದಕ್ಕೆ ಅವಕಾಶ ಕಲ್ಪಿಸುವಂತಿದ್ದರೆ, ಈಗಿನ ಕಡಿಮೆ ಗೇಣಿಯೇ ಈ ಶಾಸನವು ಜ್ಯಾರಿಗೆ ಬಂದ ಬಳಿಕ ಸಹ ಮುಂದರಿಯುತ್ತದೆ; ಹೊರತು ಶಾಸನದಲ್ಲಿ ಹೇಳಿದ ಮಟ್ಟಕ್ಕೆ ಅದನ್ನು ಧನಿಯು ಏರಿಸುವಂತಿಲ್ಲ.

ನ್ಯಾಯವಾದ ಗೇಣಿಯನ್ನು ಸಾಗುವಳಿದಾರ ಒಕ್ಕಲು ವಸ್ತುವಿನ ರೂಪದಲ್ಲಿ ಅಥವಾ ನಗದಿಯಾಗಿ ಅಥವಾ ಒಂದಂಶವನ್ನು ನಗದಿ ಹಾಗು ಉಳಿದಂಶವನ್ನು ವಸ್ತು ರೂಪದಲ್ಲಿ ಧನಿಗೂ ಅವನಿಗೂ ಇರುವ ಕರಾರಿನ ಪ್ರಕಾರ ಕೊಡಬಹುದು. ಅಂಥ ಕರಾರು ಇಲ್ಲದಿದ್ದರೆ ಆ ಪ್ರದೇಶದ ಪದ್ಧತಿಯಂತೆ ಕೊಡಬಹುದು. ಅದೂ ಇಲ್ಲದಿದ್ದರೆ ಒಕ್ಕಲು ತನಗೆ ಅನುಕೂಲವೆನಿಸಿದ ರೀತಿಯಲ್ಲಿ ಕೊಡಬಹುದು; ಆದರೆ ಒಮ್ಮೆ ಹೀಗೆ ಅನುಕೂಲತೆಯಾಗಿ ಸ್ವೀಕರಿಸಿದ ಕ್ರಮವನ್ನು ಆತನು (ಅಂದರೆ ಒಕ್ಕಲು) ಧನಿಯ ಸಮ್ಮತಿಯಿಲ್ಲದೆ ಬದಲಿಸುವಂತಿಲ್ಲ—ಎಂದು ೫ನೇ ಸೂತ್ರ ಹೇಳುತ್ತದೆ.

ಐದು ವರ್ಷಗಳ ಅವಧಿ

ಅಲ್ಲದೆ, ಸರಕಾರದವರು ಹವಾಮಾನದ ಪ್ರತಿಕೂಲ ಪರಿಸ್ಥಿತಿಯಿಂದಾಗಿ ಯಾವುದೇ ಭೂಮಿಯ ಮೇಲೆ ಯಾವುದೇ ಅವಧಿಗೆ ಸಂಬಂಧಿಸಿದ ತೆರಿಗೆಯನ್ನು ಪೂರ್ಣವಾಗಿಯಾಗಲಿ ಆಂಶಿಕವಾಗಿಯಾಗಲಿ ವಿನಾಯತಿ ಪಡಿಸಿದರೆ, ಧನಿಯು ಇದೇ ದಾಮಾಶಯಕ್ಕೆ ಅನುಸಾರವಾಗಿ ಸಾಗುವಳಿದಾರನಿಂದ ತನಗೆ ಆ ಭೂಮಿ ಮತ್ತು ಅವಧಿಗೆ ಸಲ್ಲತಕ್ಕ ನ್ಯಾಯವಾದ ಗೇಣಿಯನ್ನು ಮಾಫಿ ಬಿಡಬೇಕು ಎಂದೂ ಈ ಸೂತ್ರ ವಿಧಿಸುತ್ತದೆ.

ಒಮ್ಮೆ ನಿರ್ಧರಿಸಿದ ನ್ಯಾಯವಾದ ಗೇಣಿಯು ಐದು ವರ್ಷಗಳ ವರೆಗೆ ಮುಂದರಿಯುವುದೆಂದೂ ಈ ನಡುವೆ ಅದನ್ನು ಬದಲಿಸುವುದು ಸಾಧ್ಯವಿಲ್ಲವೆಂದೂ ೬ನೇ ಸೂತ್ರವು ನಿರ್ಬಂಧಿಸುತ್ತದೆ.

ಉತ್ಪನ್ನವನ್ನು ವಸ್ತು ರೂಪದಲ್ಲಿ ಪಾಲು ಮಾಡಿಕೊಳ್ಳುವಾಗ 'ಪಡಿ ಮಂಚ" ವನ್ನು ಇರಿಸಿದ ಅಂಗಳದಲ್ಲಿ ಈ ಕೆಲಸ ನಡೆಯಬೇಕು; ಪಡಿಮಂಚವನ್ನು ಉಪಯೋಗಿಸುವ ಅಗತ್ಯವಿಲ್ಲದ ಬೆಳೆಯ ಸಂಗತಿಯಲ್ಲಿ ಗದ್ದೆಯಲ್ಲಿಯೇ ಪಾಲಿನ ಸಂದಾಯ ನಡೆಯಬೇಕು ಎಂದು ೭ನೇ ಸೂತ್ರ ಸಾರುತ್ತದೆ.

ನ್ಯಾಯದಾನದ ಕ್ರಮ

ಮಸೂದೆಯ ೮, ೯, ೧೦ ಮತ್ತು ೧೧ನೇ ಸೂತ್ರಗಳು ಯಾವುದಾದರೊಬ್ಬ ಧನಿ ಅಥವಾ ಸಾಗುವಳಿದಾರ ಒಕ್ಕಲು ನ್ಯಾಯವಾದ ಗೇಣಿಯ ವಿಷಯದಲ್ಲಿ ಪರಸ್ಪರ ಒಪ್ಪಂದಕ್ಕೆ ಬರಲು ಅಸಾಧ್ಯವೆಂದು ಭಾವಿಸಿದ ಪಕ್ಷದಲ್ಲಿ ಅಥವಾ ಈ ಸಂಬಂಧದ ಬೇರಾವುದೇ ವಿವಾದವೆದ್ದರೆ ಗೇಣಿ ನಿರ್ಣಯ ಕೋರ್ಟಿಗೆ ಅರ್ಜಿ ಸಲ್ಲಿಸಬಹುದೆಂದೂ ಈ ಕೋರ್ಟಿಗೆ ತಹಸೀಲದಾರರಿಗಿಂತ ಕಡಿಮೆಯಲ್ಲದ ಅಂತಸ್ತಿನ ಅಧಿಕಾರಿ ಅಧ್ಯಕ್ಷನಾಗುವನೆಂದೂ ಹೇಳುತ್ತದೆ; ಅಲ್ಲದೆ ಈ ಕೋರ್ಟಿನ ತೀರ್ಮಾನದ ವಿರುದ್ಧ ಅಪೀಲು ಮಾಡಲು ರೆವಿನ್ಯೂ ಡಿವಿಜನಲ್ ಆಫೀಸರ್ ಅಂತಸ್ತಿಗೆ ಕಡಿಮೆಯಲ್ಲದ ಅಧಿಕಾರಿಯು ಅಧ್ಯಕ್ಷನಾಗಿರುವ ಟ್ರಿಬ್ಯುನಲ್ ಏರ್ಪಡುವುದೆಂದೂ ಕಾನೂನಿನ ವಿಷಯಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಸಂಗತಿಯಲ್ಲಿ ಈ ಅಧಿಕಾರಿಯ ತೀರ್ಮಾನವೇ ಕೊನೆಯದೆಂದೂ ಅದು ತಿಳಿಸುತ್ತದೆ. ಕಾನೂನಿನ ಅಂಶಗಳ ಮಟ್ಟಿಗೆ ಜಿಲ್ಲಾ ಕೋರ್ಟಿಗೆ ಅಪೀಲು ಮಾಡಬಹುದು. ಹೀಗೆ ಅಪೀಲು ಮಾಡುವ ಸಮಯ ನಿರ್ದಿಷ್ಟವಾಗಿರುತ್ತದೆ. ಮತ್ತು ಕೋರ್ಟಿನ ಖರ್ಚನ್ನು ಯಾರು ತೆರಬೇಕೆಂದು ತೀರ್ಮಾನಿಸುವುದು ಆಯಾ ನ್ಯಾಯಾಧಿಕಾರಿಗಳ ಕೈಯಲ್ಲಿದೆ.

ನಗದಿ ಬೆಳೆಯ ಬೆಲೆ ನಿಗದಿ

ಕಲೆಕ್ಟರರು ಪ್ರತಿ ವರ್ಷದ ಜನವರಿ, ಎಪ್ರಿಲ್, ಜುಲಾಯಿ ಮತ್ತು ಆಕ್ಟೋಬರ್ ತಿಂಗಳುಗಳಲ್ಲಿ ಅದಕ್ಕೆ ಹೊಂದಿಕೊಂಡು ಹಿಂದಿನ ಮೂರು ತಿಂಗಳುಗಳಿಗೆ ಅನ್ವಯಿಸಿ ಜಿಲ್ಲೆಯ ಮುಖ್ಯ ಬೆಳೆಗಳಿಗೆ ಆಯಾ ತಾಲೂಕಿನ ಮುಖ್ಯ ಪಟ್ಟಣಗಳಲ್ಲಿದ್ದ ಪೇಟೆಯ ಸರಾಸರಿ ಧಾರಣೆಯನ್ನು ಜಿಲ್ಲೆಯ ಗಜೇಟಿನಲ್ಲಿ ಪ್ರಕಟಿಸಬೇಕು. ನ್ಯಾಯವಾದ ಗೇಣಿಯನ್ನು ನಗದಿಯಾಗಿ ಕೊಡುವ ಸಂದರ್ಭದಲ್ಲಿ ಅಂಥ ಗೇಣಿಯು ಸಂದಾಯವಾಗಬೇಕಾದ ದಿನಕ್ಕೆ ತಾಗಿ ಮುಂಚಿದ ಸರಾಸರಿ ಪೇಟೆಯ ಧಾರಣೆಯಂತೆ ಹಣ ಸಂದಾಯವಾಗಬೇಕು. ಬೇರೆ ಬೆಳೆಗಳ ವಿಷಯದಲ್ಲಿ ನಗದು ಹಣದ ಮೊತ್ತವು ಧನಿ ಮತ್ತು ಒಕ್ಕಲುಗಳ ಪರಸ್ಪರ ಸಮ್ಮತಿಯಿಂದ ನಿರ್ಧರಿಸಲ್ಪಡುತ್ತದೆ. ಈ ಬಗ್ಗೆ ವಿವಾದವಿದ್ದರೆ ನ್ಯಾಯವಾದ ಗೇಣಿ ನಿರ್ಣಯದ ಕೋರ್ಟಿಗೆ ದೂರೊಯ್ಯಬಹುದು; ಮತ್ತು ಕೋರ್ಟು ತನಗೆ ಸರಿಕಂಡ ಮೊತ್ತವನ್ನು ಗೇಣಿಯಾಗಿ ವಿಧಿಸಬಹುದು ಎಂದು ೧೨ನೇ ಸೂತ್ರ ಹೇಳುತ್ತದೆ.

ಉಳಿದ ಸೂತ್ರಗಳಲ್ಲಿ ವೀಳ್ಯದೆಲೆಯನ್ನು ಬೆಳೆಸುವ ಮತ್ತು ಎರಡು ವರ್ಷಗಳ ವರೆಗೆ ಏನೂ ಫಲವನ್ನು ಕೊಡದ ಬೆಳೆಯನ್ನು ಬೆಳೆಸುವ ಭೂಮಿಗೆ ಈ ಶಾಸನದ ಕಕ್ಷೆಯಿಂದ ವಿನಾಯತಿ ಕೊಟ್ಟಿರುವುದು ಉಲ್ಲೇಖಾರ್ಹ. ಶಾಸನಕ್ಕೆ ಅನ್ವಯಿಸುವಂತೆ ಸರಕಾರಕ್ಕೆ ನಿಯಮಾವಳಿಗಳನ್ನು ರಚಿಸಲು ಅಧಿಕಾರ ಕೊಡುವ ಮತ್ತು ಶಾಸನವನ್ನು ಜ್ಯಾರಿಗೆತರುವಲ್ಲಿ ವ್ಯಕ್ತವಾಗಬಹುದಾದ ಆತಂಕಗಳನ್ನು ಸೂಕ್ತರೀತಿಯಲ್ಲಿ ಪರಿಹರಿಸಲು ಎಡೆಕೊಡುವ ಸೂತ್ರ ಮಸೂದೆಯಲ್ಲಿದೆ; ಸರಕಾರ ಈ ಮಟ್ಟಿಗೆ ತೆಗೆದುಕೊಳ್ಳುವ ಕ್ರಮ ಮತ್ತು ರಚಿಸಿದ ನಿಯಮಾವಳಿಗಳು ಮಾಮೂಲಿನಂತೆ ಶಾಸನಾಂಗದ ಮುಂದೆ ಮಂಡಿಸಲ್ಪಡುತ್ತವೆ.

ಬಾಲರೋಗ ಸಂಹಾರಿ
ಹರಳೆಣ್ಣೆ

ಅಪೂರ್ವಕವಾದ ಮೂಲಿಕೆ
ಭಸ್ಮಗಳೂ, ಬೇರು, ಮದ್ದುಗಳೂ
ಸೇರಿದ. ಉತ್ತಮ. ಮದ್ದಾಗಿದೆ
ಕ್ಯಾಟಲಾಗ್ ಇನಾಂ
MALAYALA MAUNTHREEKA VAIDYASALA
P.B.110 QUILON S.I.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಕುಮಾರಿ ಬಿಲ್ಲೆಗಳು (Govt. Regd.)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬ್ಯಾಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

(೨ನೇ ಪುಟದಿಂದ)

ನಿಸಲಾಗುತ್ತದೆ. ಇಷ್ಟಾಗಿಯೂ ಒಳ್ಳೆಯ ಸಂಪತ್ತು ಉಪಯೋಗವಾಗದೆ ಅರಣ್ಯದಲ್ಲಿ ಉಳಿದಿದೆ. ನಮ್ಮ ಜಿಲ್ಲೆಯ ಹರಿಜನರು ಬೆತ್ತ ಮತ್ತು ಬೀಳಲುಗಳ ಕೈಗಾರಿಕೆಯಲ್ಲಿ ನಿಪುಣರಾಗಿದ್ದಾರೆ. ಅವರಿಗೆ ಅತ್ಯಾಧುನಿಕ ಮಾದರಿಯ ಮಾಹಿತಿಯನ್ನು ಯೋಗ್ಯ ಶಿಕ್ಷಣದ ಮೂಲಕ ನೀಡಿ ತರಬೇತಿಗೊಳಿಸಿದರೆ ಅವರು ಬದಲಾವಣೆಗಳನ್ನು ಕ್ಷಿಪ್ರದಲ್ಲಿಯೇ ರೂಢಿಸಿಕೊಳ್ಳಬಲ್ಲರು. ಇದರಿಂದ ಜಿಲ್ಲೆಯ ಸಂಪದಭ್ಯುದಯ ಸಾಧಿಸುವುದಷ್ಟೆಯಲ್ಲ, ತೀರ ಹಿಂದುಳಿದ ಜನವರ್ಗವೊಂದರ ಉತ್ಕರ್ಷವನ್ನು ಸಹ ನಾವು ಸಾಧಿಸಿದಂತಾಗುತ್ತದೆ.

"ಸಬಾಯಿ" ಹುಲ್ಲಿಗಿಂತ ಕಾಗದದ ಕೈಗಾರಿಕೆಯಲ್ಲಿ ಬಿದಿರು ಹೆಚ್ಚು ಒಳ್ಳೆಯ ಕಚ್ಚಾ ವಸ್ತುವಾಗಿದೆ ಎಂದು ಈಗ ಒಪ್ಪಲಾಗುತ್ತದೆ. ಉತ್ತರ ಹಾಗು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ವರೆಗೆ ಕಾಗದ ತಯಾರಿಕೆಯ ಕಾರ್ಖಾನೆಯೊಂದು ಸ್ಥಾಪಿಸಲ್ಪಟ್ಟಿಲ್ಲದಿರುವುದು ಬಹು ದೊಡ್ಡ ಕೊರತೆ. ಉತ್ತರ ಕನ್ನಡದ ಅರಣ್ಯ ಸಂಪತ್ತು ಹಲವು ಕಾಗದದ ಕಾರ್ಖಾನೆಗಳನ್ನು ಪೋಷಿಸಬಲ್ಲುದು. ನಮ್ಮ ಜಿಲ್ಲೆಯಲ್ಲಿಯಾದರೂ ದಿನಕ್ಕೆ ೪೦ ಟನ್ನುಗಳಷ್ಟು ಪಲ್ಪನ್ನು ಉತ್ಪಾದಿಸಬಲ್ಲ ಕಾಗದ ತಯಾರಿಕೆಯ ಕಾರ್ಖಾನೆಯನ್ನು ನೆಲೆಗೊಳಿಸಬಹುದೆಂದು ತಜ್ಞರ ಅಭಿಪ್ರಾಯ. ಜೋಗಿನ ವಿದ್ಯುಚ್ಛಕ್ತಿಯ ಪ್ರಯೋಜನವನ್ನೂ ಹಲವಾರು ನದಿಗಳ ಕಿನಾರೆಯ ಲಾಭವನ್ನೂ ನಾವು ಈ ಮಟ್ಟಿಗೆ ಪಡೆಯಬಹುದು.

ಮೀನುಗಾರಿಕೆ

ದಕ್ಷಿಣ ಕನ್ನಡ ಜಿಲ್ಲೆಯು ಮೀನುಗಾರಿಕೆಯ ಮಟ್ಟಿಗೆ ಅಖಿಲ ಭಾರತದಲ್ಲಿಯೇ ಪ್ರಸಿದ್ಧವಾಗಿದೆ. ನಾವಿನ್ನೂ ಆಳ ಸಮುದ್ರದಲ್ಲಿ ಮೀನು ಹಿಡಿಯುವ ಅಭ್ಯಾಸವನ್ನು ಮಾಡಿಕೊಂಡಿಲ್ಲ. ಕಿನಾರೆಗೆ ಒತ್ತಿನ ಕೆಲವೇ ಮೈಲು ದೂರದ ವರೆಗೆ ಸಾಮಾನ್ಯ ಬಲೆಯನ್ನು ಉಪಯೋಗಿಸಿ ಮೀನು ಹಿಡಿಯಲಾಗುತ್ತದೆ. ಆದಾಗ್ಯೂ ಅಖಿಲ ಭಾರತದ ಉತ್ಪಾದನೆಯಲ್ಲಿ ೧೫% ನಮ್ಮ ಜಿಲ್ಲೆಯಿಂದ ಬರುತ್ತದೆ; ಇದರ ಬೆಲೆ ಎರಡು ಕೋಟಿ ರೂಪಾಯಿ—ಒಟ್ಟು ಭಾರತದ ಮೀನು ಉತ್ಪಾದನೆಯಲ್ಲಿ ಇದು ೨೫% ಆಗುವಷ್ಟು ದೊಡ್ಡ ಪಾಲು!

ವರ್ಷಕ್ಕೆ ಸುಮಾರು ೧೫ ಲಕ್ಷ ಮಣದಷ್ಟು ಮೀನು ನಮ್ಮ ಬಲೆಗಳಲ್ಲಿ ಬೀಳುತ್ತದೆ. ಇದರಲ್ಲಿ ಆಹಾರವಾಗಿ ಉಪಯೋಗಕ್ಕೆ ೫ ಲಕ್ಷ ಮಣ, ಉಪ್ಪು ಹಾಕಿ ಒಣಗಿಸಿ ಮಾರಾಟಕ್ಕೆ ಮತ್ತೆ ೫ ಲಕ್ಷ ಮಣ ಉಪಯೋಗವಾಗುತ್ತದೆ. ಬಾಕಿ ಉಳಿದ ೫ ಲಕ್ಷ ಮಣ ಮೀನು ಗೊಬ್ಬರವಾಗಿ ಉಪಯೋಗಿಸುವಷ್ಟು ಅವಕಾಶ ಮತ್ತು ಅನುಕೂಲತೆಗಳಿಲ್ಲದಿದ್ದರೆ ಹಾಳಾಗಿ ಹೋಗುತ್ತದೆ. ಜಿಲ್ಲೆಯಲ್ಲಿ ಒಂದು ಲಕ್ಷ ನಾಗರಿಕರು ಮೀನುಗಾರಿಕೆಯನ್ನು ವೃತ್ತಿಯಾಗಿ ಕೈಗೊಂಡಿದ್ದಾರೆಂದು ಅಂದಾಜು.

ಉತ್ತರ ಕನ್ನಡದಿಂದ ಗಂಗೊಳ್ಳಿ ಮತ್ತು ಮಲ್ಪೆಗಳಿಗೆ ಬರುವ ಕೆಲವರಲ್ಲದೆ ಬೇರೆ ಯಾರೂ ಆಳವಾದ ಸಮುದ್ರದಲ್ಲಿ ಮೀನು ಹಿಡಿಯುವ ಪ್ರಯೋಗವನ್ನು ಇಷ್ಟರ ವರೆಗೆ ನಮ್ಮ ಜಿಲ್ಲೆಯಲ್ಲಿ ಕೈಗೊಂಡಿಲ್ಲ. ಆದರೆ ಈ ನೂತನ ಸಾಹಸಕ್ಕೆ ಉದ್ಯುಕ್ತರಾಗುವುದು ನಮ್ಮ ಬೆಸ್ತರ ಪಾಲಿನ ಯೋಗ್ಯ ಕೆಲಸವೆನ್ನಬೇಕಾಗಿದೆ. ಕೇವಲ ೪೦ ವರ್ಷಗಳ ಕೆಳಗೆ ಗೋವೆಯ ಜನರಿಂದ ರಂಪಣಿ ಬಲೆಗಳ ರಚನೆಯ ಗುಟ್ಟನ್ನು ತಿಳಿದುಕೊಂಡು, ಸಹಕಾರ ತತ್ವದ ಮೇಲೆ ೨೦–೩೦ ಸಾವಿರ ರೂಪಾಯಿ ಬೆಲೆಯ ಬಲೆಗಳನ್ನು ಹೆಣೆದು, ಮೀನು ಹಿಡಿಯಲು ಹೊರಟ ನಮ್ಮೂರ ಸಾಹಸಿಗ ಬೆಸ್ತರು ಹೊಸ ಪ್ರಯೋಗಕ್ಕೆ ಅಂಜುವರೆಂದು ಹೇಳಲಿಕ್ಕಾಗದು.

ನೂತನ ವಿಧಾನ

ಸರಕಾರದವರಾಗಲೀ ಬೇರೆ ಯಾರೇ ಖಾಸಗಿ ಮಂಡಳಿವಾಗಲೀ ೧೫-೨೦ ಟನ್ನುಗಳಷ್ಟು ಭಾರದ ಮತ್ತು ತಾಸಿಗೆ ೬–೧೦ ಮೈಲು ದೂರ ಕ್ರಮಿಸಬಲ್ಲ ಯೋಗ್ಯ ಶಕ್ತಿಚಾಲಿತ ದೋಣಿಗಳನು ರಚಿಸಿ ಆಳ ಸಮುದ್ರದಲ್ಲಿ ಮೀನು ಹಿಡಿಯುವ ಕಲೆಯನ್ನು ಕಲಿಸಿ ಅದರ ಪ್ರಯೋಜನವನ್ನು ಮನಗಾಣಿಸಿ ಕೊಡುವುದು ಇಷ್ಟವಾಗಿದೆ. ಇದಕ್ಕಾಗಿ ಮಲ್ಪೆಯಂಥ ಕೇಂದ್ರದಲ್ಲಿ ತರಬೇತಿ ನಿಲಯವನ್ನು ಸ್ಥಾಪಿಸಬಹುದು.

ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಸಮುದ್ರಕ್ಕೆ ಇಳಿಯುವುದು ಅಸಾಧ್ಯವಾದಾಗ ನಮ್ಮ ಬೆಸ್ತರು ಒಳನಾಡಿನಲ್ಲಿ, ನದಿಗಳೊಳಗೆ, ಮೀನು ಹಿಡಿಯುವ ಸಾಹಸಕ್ಕೆ ಪ್ರವೃತ್ತರಾಗುವಂತೆ ಮಾಡುವುದು ಯೋಗ್ಯವಾಗಿದೆ. ಕುಂದಾಪುರ, ಹಂಗಾರಕಟ್ಟೆ, ಮಲ್ಪೆ, ಮೂಲ್ಕಿ, ಮಂಗಳೂರು, ಕಾಸರಗೋಡು, ನೀಲೇಶ್ವರ ಇಲ್ಲೆಲ್ಲ ಹಿನ್ನೀರಿನ ಸೌಲಭ್ಯವಿದ್ದು, ಈ ಪ್ರಯೋಗಕ್ಕೆ ತಕ್ಕ ಕ್ಷೇತ್ರಗಳಾಗಿ ಇವನ್ನು ಪರಿಗಣಿಸಬಹುದು.

ಕೇವಲ ಹಿಡಿಯುವ ಮೀನು ಹೆಚ್ಚಿದಷ್ಟಕ್ಕೆ ಮೀನುಗಾರಿಕೆ ಅಭಿವೃದ್ಧಿಯನ್ನು ಹೊಂದಲಾರದು. ಜಿಲ್ಲೆಯ ಹನ್ನೊಂದು ಅಳಿವೆಗಳ ಮೂಲಕ ಒಳ ನುಗ್ಗಿ ಮೀನು ಹಿಡಿಯುವಹಾಗು ಹೊರಗೆ ಸಾಗರದ ನಡುವೆ ಹೋಗಿ ಬಲೆ ಬೀಸುವ ನಮ್ಮ ಆಕಾಂಕ್ಷೆ ಸತ್ಫಲವನ್ನು ಕೊಡಬೇಕಾದರೆ ಹಿಡಿದ ಮೀನನ್ನು ಮಾರಾಟ ಕೇಂದ್ರಗಳಿಗೆ ಕ್ಷಿಪ್ರದಲ್ಲಿ ಮುಟ್ಟಿಸಬಲ್ಲ ಮಾರ್ಗಗಳ ರಚನೆ ಅತ್ಯಗತ್ಯವಾಗಿದೆ. ಕಲೆ ಹೊರೆಯಿಂದ ಸಾಗಿಸುವ ಮೀನು ಜಿಲ್ಲೆಯ ಎಲ್ಲ ಭಾಗವನ್ನು ಎಂದೂ ಮುಟ್ಟದ್ದಿಲ್ಲ. ಹೀಗಿರುವಾಗ ಮೈಸೂರು, ಹೈದರಾಬಾದುಗಳಂಥ ಹಿನ್ನಾಡಿಗೆ ಅಥವಾ ಭಾರತ ಸರಕಾರದ ಸೈನ್ಯ ಖಾತೆಗೆ ನಮ್ಮ ಮೀನನ್ನು ಒದಗಿಸುವುದಕ್ಕೆ ಹಳೆಯ ಪದ್ಧತಿ ಎಷ್ಟು ಮಾತ್ರಕ್ಕೂ ಪ್ರಯೋಜಕವಾಗಿಲ್ಲ ಎಂಬುದು ಸ್ಪಷ್ಟ.

ಮೀನನ್ನು ಕೆಡದಂತೆ ಸಂಗ್ರಹಿಸಿಡುವ ವ್ಯವಸ್ಥೆಯೂ ಪ್ರಮುಖ್ಯ ಸ್ಥಾನವನ್ನು ಇಲ್ಲಿ ಪಡೆಯುತ್ತದೆ. ಈಗ ಒಂದು ದಿನದಷ್ಟು ಅಲ್ಪಾವಧಿಯಲ್ಲಿ ಮಾರಿ ಹೋಗದೆ, ಅಥವಾ ಸಿಗಿದು ಉಪ್ಪು ಹಾಕಿಡಲ್ಪಡದೆ ಉಳಿಯುವ ಮೀನೆಲ್ಲ ವ್ಯರ್ಥವಾಗಿ ಕೊಳೆಯುತ್ತದೆ. ಶೀತಾಲಯಗಳನ್ನು ಪ್ರತಿಯೊಂದು ಮೀನು ವ್ಯವಸಾಯ ಕೇಂದ್ರದಲ್ಲಿ ತೆರೆಯಬೇಕು: ದೂರದ ಊರುಗಳಿಗೆ ಸಾಗಿಸುವ ಪ್ರಮುಖ ಕೇಂದ್ರಗಳಲ್ಲಿ ವಿಶಾಲವಾದ ಶೀತಾಲಯಗಳಿರಬೇಕು. ಇಲ್ಲಿಂದ ಮೀನನ್ನು ತುಂಬಿಸಿ ಓಡಿಸಲು ಶೀತ ಸೌಕರ್ಯದ ವಾಹನಗಳೂ ಬೇಕು!

ಕುಸಿಯುವ ಪೇಟೆ

ಸಿಂಹಳದ ಮೀನು ಪೇಟೆಯು ಈಗ ಖಿಲವಾಗುತ್ತಿದೆ; ತಿರು—ಕೊಚ್ಚಿಯಂಥ ಪ್ರದೇಶದಲ್ಲಿ ಸುಧಾರಿತ ರೀತಿ ಬಳಕೆಗೆ ಬಂದು ನಮ್ಮ ಮೀನು ಪೇಟೆಯ ವ್ಯಾಪ್ತಿ ಇನ್ನಷ್ಟು ತಗ್ಗಿದೆ. ಆದುದರಿಂದ ನಾವು ಮೈಸೂರು, ಹೈದರಾಬಾದುಗಳಂಥ ಹತ್ತಿರದ ಒಳನಾಡಿನ ಪ್ರದೇಶಗಳಲ್ಲಿ ಪೇಟೆಯನ್ನು ಸೃಷ್ಟಿಸಿ, ಮೀನುಗಾರಿಕೆಗೆ ಹೊಸ ಜೀವಕಳೆಯನ್ನು ತಂದುಕೊಡಬೇಕಾಗಿದೆ. ಹಾಗೆಯೇ ಮೀನಿನ ಎಣ್ಣೆ ಮತ್ತಿತರ ಉಪವೃತ್ತಿಗಳಿಂದ ವಿದೇಶಗಳ ಪೇಟೆಯನ್ನು ಸಹ ಆಕ್ರಮಿಸಲು ನೋಡಬೇಕಾಗಿದೆ.

ಆಧುನೀಕರಣದ ದೆಸೆಯಿಂದ ಹಲವು ಬೆಸ್ತ ಕುಟುಂಬಗಳಿಗೆ ತೊಂದರೆಯಾಗಬಹುದೆಂದು ನಿರೀಕ್ಷಿಸುವವರು ಇದ್ದಾರೆ- ಕುಂದಾಪುರ ಮತ್ತು ಉಡುಪಿ ತಾಲೂಕುಗಳಲ್ಲಿಯೇ ರಂಪಣಿ ಬಲೆಯ ಬದಲು ೫೦ ದೋಣಿಯು ಹೊಸ ಬಲೆಗೆ ಹೊಂದಿಕೊಳ್ಳುವಾಗ ಕನಿಷ್ಠ ೫೦ ಸಾವಿರ ಬೆಸ್ತರು ಕಿರುಕುಳಕ್ಕೀಡಾಗಬಹುದು. ಆದರೆ ಇದು ಭಯ ಹುಟ್ಟಿಸಬೇಕಾಗಿಲ್ಲ—ಏಕೆಂದರೆ ಮೇಲೆ ವಿವರಿಸಿದ ವಿಶಾಲ ಅನುಕೂಲತೆಗಳ ಹಿನ್ನೆಲೆಯಲ್ಲಿ ಇಷ್ಟು ಜನರು ಅಭ್ಯಾಸ ಬದಲಾಯಿಸಿಕೊಂಡು ಹೊಸ ವಿಧಾನಕ್ಕೆ ಹೊಂದಿಕೊಳ್ಳುವ ಕಷ್ಟ ಅಂತ್ಯದಲ್ಲಿ ಶ್ರೇಯಸ್ಸನ್ನೇ ತರುವುದು ನಿಶ್ಚಯ.

ಸ್ಥೂಲ ಯೋಜನೆಯ ಪ್ರಕಾರ ನಮ್ಮ ಜಿಲ್ಲೆಯ ಮೀನುಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಸುಮಾರು ೪೫ ಲಕ್ಷ ರೂಪಾಯಿಗಳ ಅಗತ್ಯವಿದೆ. ಆಳ ಸಮುದ್ರದಲ್ಲಿ ಮೀನು ಹಿಡಿಯುವುದು (ರೂ. ೪೪೫೦೦೦), ಯಂತ್ರ ಚಾಲಿತ ದೋಣಿಗಳು (ರೂ. ೧೭ ಲಕ್ಷ), ಮಲ್ಪೆಯಲ್ಲೊಂದು ಶೀತಾಲಯ (ರೂ. ೬೫೦೦೦), ಮೀನು ಬಂದರಗಳ ಅಭಿವೃದ್ಧಿ (ರೂ. ೫೫೦೦೦೦), ದೋಣಿ ಕಟ್ಟುವ ಕೇಂದ್ರಗಳು (ರೂ. ೧ ಲಕ್ಷ), ಶೀಘ್ರ ಸಾಗಾಟದ ವ್ಯವಸ್ಥೆ (ರೂ. ೪ ಲಕ್ಷ) ಇತ್ಯಾದಿಗಳನು ಈ ಯೋಜನೆ ಒಳಗೊಳ್ಳುತ್ತದೆ.

ಇದನ್ನು ಸರಕಾರದವರು ದಯವಿಟ್ಟು ಗಮನಿಸಬೇಕು. ಭಾರತದಲ್ಲಿ ೨೦೦೦ ಮೈಲು ಉದ್ದದ ಕರಾವಳಿಯಿದ್ದರೂ ಅದರ ಸದುಪಯೋಗವನ್ನಾವಿನ್ನೂ ಪಡೆದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಮರೆಯಲಾಗದು. ನಮ್ಮ ನೌಕಾ ಪಡೆಯು ಜಗತ್ತಿನಲ್ಲಿ ಶ್ರೇಷ್ಠವೆಂದು ಹೊಗಳಲ್ಪಡುತ್ತಿದ್ದರೂ ನೌಕಾ ವಿಜ್ಞಾನದಲ್ಲಿ ಭಾರತೀಯರಿಗಿರುವ ತರಬೇತಿ ತೀರ ಕಡಿಮೆ. ಕೇಂದ್ರ ಸರಕಾರದವರು ಮಲ್ಪೆಯಂಥ ಉತ್ತಮ ಕ್ಷೇತ್ರದಲ್ಲಿ ನೌಕಾಯಂತ್ರ ವಿಜ್ಞಾನ ಮತ್ತು ಸಾಗರಯಾನ ಶಾಸ್ತ್ರದ ಸಂಶೋಧನಾಲಯಗಳನ್ನು ತೆರೆಯಲು ಗಮನಿಸಬೇಕು.

ಇತರ ಉದ್ಯಮಗಳು

ಗೇರುಬೀಜದ ೭ ಕಾರ್ಖಾನೆಗಳೂ ೩ ಕಾಫಿ ತಯಾರಿಕೆಯ ಕಾರ್ಖಾನೆಗಳೂ ೫೫ ಹಂಚು ಹಾಗು ಇಟ್ಟಿಗೆ ತಯಾರಿಕೆಯ ಕಾರ್ಖಾನೆಗಳೂ ನಮ್ಮಲ್ಲಿವೆ; ಮರಸಿಗಿಯುವ ೪೧ ಕಾರ್ಖಾನೆಗಳಿವೆ; ವಾಹನಾದಿಗಳ ಬಂಡಿ ರಚಿಸುವ ೧೪ ಕಾರ್ಖಾನೆಗಳಲ್ಲದೆ ಸಾಮಾನ್ಯ ಯಂತ್ರ ವಿಜ್ಞಾನ ಶಾಲೆಗಳು ೨ ಇವೆ. ಗೇರುಬೀಜದ ಕಾರ್ಖಾನೆಗಳು ಪೂರ್ವ ಆಫ್ರಿಕದ ಆಮದನ್ನು ಹೆಚ್ಚಾಗಿ ಅವಲಂಬಿಸಿಕೊಂಡಿವೆ; ಇದನ್ನು ಕಡಿಮೆ ಮಾಡಲು ನಮ್ಮ ಜಿಲ್ಲೆಯಲ್ಲಿಯೇ ಗೇರುಬೀಜದ ತೋಟಗಳನ್ನು ಬೆಳೆಸಬಹುದು.

ಯುದ್ಧ ಸಮಯದಲ್ಲಿ ಹಂಚು ಮತ್ತು ಇಟ್ಟಿಗೆಗಳ ಕೈಗಾರಿಕೆ ಉಚ್ಛ್ರಾಯಾವಸ್ಥೆಯನ್ನು ಮುಟ್ಟಿತಾದರೂ ಈಗ ಜಪಾನಿನ ಸ್ಪರ್ಧೆ ಅದಕ್ಕೆ ಧಕ್ಕೆ ತಂದಿದೆ. ಪೇಟೆಯ ವಿಸ್ತರಣೆಯೇ ಈ ಉದ್ಯಮದ ಆವಶ್ಯಕತೆ; ಇದರೊಂದಿಗೆ ಹೊಸ ತಂತ್ರದ ಬಳಕೆಯೂ ಆಗಬೇಕಾಗಿದೆ. ಕಾಫಿತೋಟಗಳು ಪಶ್ಚಿಮ ಘಟ್ಟದ ಸೆರಗಿನಲ್ಲಿರುವುದರಿಂದ, ಮತ್ತು ಈಗ ಚಿಕ್ಕಮಗಳೂರಿನಲ್ಲಿ ಕಾಫಿ ಕಾರ್ಖಾನೆ ತೆರೆದಿರುವುದರಿಂದ ಮಂಗಳೂರಿನ ಕಾರ್ಖಾನೆಗಳಿಗೆ ಕೆಲಸ ಕಡಿಮೆಯಾಗಿದೆ ಸುಲಭ ಹಾಗು

(ಮುಂದಿನ ಪುಟಕ್ಕೆ)

(ಹಿಂದಿನ ಪುಟದಿಂದ)

ಅಗ್ಗದ ಸಾರಿಗೆಯ ಅನುಕೂಲತೆಯಾದರೆ ಪರಿಸ್ಥಿತಿ ಸುಧಾರಿಸಬಹುದು.

ವಾಣಿಜ್ಯಕ್ಷೇತ್ರದಲ್ಲಿಮೂರು ವಿಮಾ ಕಂಪೆನಿಗಳು ಎರಡು ಕೋಟಿಗಿಂತಲೂ ಹೆಚ್ಚು ಸೊತ್ತನ್ನು ಪಡೆದು ವ್ಯವಹಾರವನ್ನು ಸಾಗಿಸುತ್ತಿವೆ. ಸುಮಾರು ೨೮ ಕೋಟಿ ರೂಪಾಯಿಯಷ್ಟು ಸೊತ್ತುಳ್ಳ ಹನ್ನೊಂದು ಬ್ಯಾಂಕುಗಳು ಒಟ್ಟು ೧೭೭ ಕೇಂದ್ರಗಳ ಮೂಲಕ ವ್ಯವಹಾರವನ್ನು ನಡೆಸುತ್ತಿವೆ. ಉದ್ಯಮಗಳನ್ನು ಬೆಳೆಸುವ ಯೋಜನೆಯಲ್ಲಿ ಈ ವಾಣಿಜ್ಯ ಸಂಸ್ಥೆಗಳಿಗೆ ಸಹಜವಾಗಿಯೇ ಸ್ಥಾನವು ದೊರಕುತ್ತದೆ. ಇವುಗಳ ಬೆಂಬಲದ ಭರವಸೆಯನ್ನು ಅಭಿವೃದ್ಧಿ ಪ್ರಯತ್ನಗಳ ಯೋಜಕರು ಯಾವಾಗಲೂ ಅವಲಂಬಿಸಬಹುದು.

ಬಂದರದ ಅನುಕೂಲತೆ

ಮಾರ್ಗ ಸೌಕರ್ಯದ ದೃಷ್ಟಿಯಿಂದ ಈಗ ಹಲವು ಕೆಲಸ ನಡೆದಿವೆ. ಮಂಗಳೂರಿನಿಂದ ಕಾರ್ಕಳ-ಉಡುಪಿ ಹಾಗು ಪುತ್ತೂರು-ಮಡಿಕೇರಿ ಮಾರ್ಗವು ಶಾರಿನ ಆವರಣಕ್ಕೆ ಒಳಪಟ್ಟಿದೆ. ಮುಂಬಯಿಯಿಂದ ಕನ್ಯಾಕುಮಾರಿಗೆ ಭಾರತ ಸರಕಾರದವರು ಹಾಕಿಸುವ ರಾಷ್ಟ್ರೀಯ ಹೆದ್ದಾರಿಯು ಜಿಲ್ಲೆಯಲ್ಲಿ ಘಟ್ಟದ ಸೆರಗಿಗೆ ತಾಗಿಕೊಂಡು ಹೋಗುತ್ತದೆ; ಇದಕ್ಕೆ ತಗಲುವ ವೆಚ್ಚ ೧೫೦ ಲಕ್ಷ ರೂಪಾಯಿ. ಮಂಗಳೂರಿನಿಂದ ಉಡುಪಿಗೆ ಕರಾವಳಿಯ ೩೬ ಮೈಲು ದೂರದಲ್ಲಿರುವ ಮೂರೂ ಹೊಳೆಗಳಿಗೆ ಮತ್ತು ಕುಂದಾಪುರದ ವರೆಗಿನ ಬೇರೆ ಮೂರು ಹೊಳೆಗಳಿಗೆ ಸಹ ಸೇತುವೆ ರಚಿಸುವ ಸಿದ್ಧತೆಗಳಾಗುತ್ತಿವೆ. ಸಂಪಾಜೆ, ಶಿರಾಡಿ, ಚಾರ್ಮಾಡಿ, ಆಗುಂಬೆ, ಬಾರೆಬಳಿ ಘಾಟಿಗಳಿಂದ ಮೈಸೂರಿನೊಡನೆ ಈ ಜಿಲ್ಲೆ ಮಾರ್ಗ ಸಂಪರ್ಕ ಸಾಧಿಸಿಕೊಂಡಿದೆ. ಜಿಲ್ಲೆಯ ಮಾರ್ಗಗಳ ಒಟ್ಟು ಉದ್ದ ೧೫೩೭ ಮೈಲು. ಸ್ಥಳೀಯ ಅಭಿವೃದ್ಧಿ ಯೋಜನೆಯಂತೆ ಪ್ರತಿ ದಿನ ಹೆಚ್ಚ ಹೆಚ್ಚ ರಸ್ತೆಗಳಾಗುತ್ತಿವೆ.

ಇದೀಗ ಮಂಗಳೂರು—ಹಾಸನ ರೈಲು ಮಾರ್ಗದ ರಚನೆ ಆರಂಭವಾಗಲಿದೆ; ಮದ್ರಾಸು ಸರಕಾರದವರು ಮುಂದಿನ ಯೋಜನೆ ಕಾಲದಲ್ಲಿ ಮಂಗಳೂರಿನಿಂದ ಮಲ್ಪೆಗಾಗಿ ಶಾಳಗುಪ್ಪಕ್ಕೆ ರೈಲು ದಾರಿ ರೂಪಿಸುವ ಯೋಜನೆಗೆ ಶಿಫಾರಸು ಮಾಡಿದ್ದಾರೆ. ಮಂಗಳೂರು ಈಗ ಮುಂಬಯಿ – ಕೊಚ್ಚಿ ವಿಮಾನ ದಾರಿಯ ನಡುವಿನ ಕೇಂದ್ರವಾಗಿದೆ. ಕರ್ನಾಟಕ ರಾಜ್ಯ ರಚನೆಯ ಬಳಿಕ ಬೆಂಗಳೂರು-ಮಂಗಳೂರು ವಿಮಾನ ಹಾರಾಟ ನಡೆಯುವುದು ಕಷ್ಟವಲ್ಲ.

ಇಷ್ಟೆಲ್ಲ ಇರುವಾಗ, ಅಥವಾ ಆಗುವಾಗ, ನಮಗೆ ಬಂದರದ ಕೊರತೆಯೊಂದೆ ಎದ್ದು ತೋರುತ್ತದೆ. ಮಂಗಳೂರನ್ನು ಮುಂದಿನ ಯೋಜನೆಯ ಕಾಲದಲ್ಲಿ ಸರ್ವ ಋತು ಬಂದರವಾಗಿ ಮಾರ್ಪಡಿಸುವ ಸಿದ್ಧತೆಗಳಾಗುತ್ತಿವೆ; ಆದರೆ ಪ್ರಬುದ್ಧ ಬಂದರದ ರಚನೆ ಕರ್ನಾಟಕ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಹಾಗು ಮರ್ಮಗೋವೆಯ ಬಂದರದ ಉಪಯೋಗ ಈಗ ನಿಂತಿರುವುದರಿಂದ ಅತ್ಯಗತ್ಯದ್ದಾಗಿದೆ.

ಭಾರತ ಸರಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ಪಶ್ಚಿಮ ಕರಾವಳಿ ಪ್ರಬುದ್ಧ ಬಂದರ ಸಮಿತಿಯು ಸಬಲಕಾರಣಗಳಿಂದ ಮಲ್ಪೆಯನ್ನು ಈ ಉದ್ದೇಶಕ್ಕೆ ಬಳಸಲು ಶಿಫಾರಸು ಮಾಡಿದೆ; ಫಲಬಲಿ ಆಯೋಗವು ಕರ್ನಾಟಕದ ಅಭ್ಯುದಯಕ್ಕೆ ಮಲ್ಪೆಯಲ್ಲಿ ಪ್ರಬುದ್ಧ ಬಂದರಾಗುವುದರಿಂದ ಪ್ರಯೋಜನವಾಗುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ ಭಾರತ ಸರಕಾರ ಇನ್ನು ವಿಳಂಬಿಸದೆ ಕಾರ್ಯತತ್ಪರವಾಗುವುದನ್ನೆ ನಾವು ಬಯಸುತ್ತೇವೆ.

ವಿದ್ಯುಚ್ಛಕ್ತಿಯ ಉತ್ಪಾದನೆ

ಶಕ್ತಿಮೂಲಕ್ಕಾಗಿ ನಾವು ವಿದ್ಯುತ್ತನ್ನು ಧಾರಾಳವಾಗಿ ಬಳಸಬಹುದು. ನೀರಾವರಿ ಪಂಪು ನಡೆಸಲಿಕ್ಕಾಗಲೀ ಕೈಗಾರಿಕೆಗಳಲ್ಲಿ ಉಪಯೋಗಿಸಲಾಗಲೀ ವಿದ್ಯುಚ್ಛಕ್ತಿಯನ್ನು ಬಹಳ ಅಗ್ಗದಲ್ಲಿಯೂ ವಿಪುಲ ಪ್ರಮಾಣದಲ್ಲಿಯೂ ನಮ್ಮಲ್ಲಿ ಉತ್ಪಾದಿಸುವುದು ಸಾಧ್ಯ; ದಕ್ಷಿಣಕನ್ನಡ, ಉತ್ತರಕನ್ನಡ, ಮತ್ತು ಕೊಡಗುಗಳ ಘಟ್ಟದ ಅಂಚಿನಲ್ಲಿ ವಿದ್ಯುದುತ್ಪಾದನೆಗೆ (ಜೋಗವನ್ನು ಬಿಟ್ಟರೂ ಬೇರೆ) ಅನೇಕ ಅವಕಾಶಗಳಿವೆ. ಇವುಗಳಿಂದ ನೆರೆರಾಜ್ಯಗಳಿಗೆ ಸಹ ವಿದ್ಯುತ್ತನ್ನು ಪೂರೈಸುವ ಆತ್ಮವಿಶ್ವಾಸ ನಮ್ಮಲ್ಲಿ ಮೂಡಬಹುದಾಗಿದೆ.

ತೆಂಗಿನ ಸಂಶೋಧನೆ, ಅಡಿಕೆ ಸಂಶೋಧನೆ ಭತ್ತದ ಸಂಶೋಧನೆ, ಗೇರುಬೀಜದ ಸಂಶೋಧನೆ ಇತ್ಯಾದಿಕೆಲಸಗಳೀಗ ಜಿಲ್ಲೆಯ ಕೇಂದ್ರಗಳಲ್ಲಿ ನಡೆಯುತ್ತಿವೆ. ಹುರಿಹಗ್ಗದ ಕೈಗಾರಿಕೆ ಮತ್ತು ಕೈಮಗ್ಗದ ನೇಯ್ಗೆಯೂ ಈ ಜಿಲ್ಲೆಯಲ್ಲಿ ಉಲ್ಲೇಖನೀಯ ಕಸುಬಾಗಿದೆ. ಪ್ರಸಿದ್ಧ ತೀರ್ಥಕ್ಷೇತ್ರಗಳೂ ಚಾರಿತ್ರಿಕ ಅವಶೇಷಗಳೂ ಸೋಸ್ಟೆಪಾರಿನಂಥ ಆಕರ್ಷಕ ದ್ವೀಪಕೇಂದ್ರಗಳೂ ಇರುವ ಈ ಕರಾವಳಿ ಪ್ರವಾಸಿಗರ ಹೃದಯವನ್ನು ಗೆದ್ದುಕೊಳ್ಳುತ್ತಿದೆ. ಉತ್ಸಾಹಶೀಲರೂ ಕಾರ್ಯಪಟುಗಳೂ ಮೇಧಾವಿಗಳೂ ಆದ ವ್ಯಕ್ತಿಗಳ ನೆಲೆವೀಡಾಗಿಯೂ, ಜಿಲ್ಲೆ ಮೆರೆಯುತ್ತಿದೆ. ಹೀಗಿರುವಾಗ ಬೇಕಾದುದೇನು? ಸರಕಾರದ ಸಹಾಯಮಾತ್ರ! ಕಳೆದ ಕೆಲವೇ ವರ್ಷಗಳಲ್ಲಿ ನಾವು ಶೈಕ್ಷಣಿಕ ಕ್ಷೇತ್ರದಲ್ಲಿ ಹತ್ತರಿಂದ ಕೆಲಸಮಾಡಿ ಇವತ್ತಿಗೆ ೧೨೬೦ ಪ್ರಾಥಮಿಕ ಶಾಲೆಗಳನ್ನೂ, ೭೦ ಹೈಸ್ಕೂಲುಗಳನ್ನೂ ೭ ಕಾಲೇಜುಗಳನ್ನೂ ೩ ಸಂಸ್ಕೃತ ಕಾಲೇಜುಗಳನ್ನೂ ೨ ತರಬೇತಿ ಕಾಲೇಜುಗಳನ್ನೂ ಒಂದು ಯಂತ್ರವೃತ್ತಿ ಶಿಕ್ಷಣ ಕೇಂದ್ರವನ್ನೂ ಒಂದು ವೈದ್ಯಕೀಯ ಶಿಕ್ಷಣಾಲಯವನ್ನು ಸ್ಥಾಪಿಸಲು ಸಮರ್ಥರಾಗಿದ್ದೇವೆ. ಇದೇ ಹುಮ್ಮಸ್ಸು ಮುಂದೆಯೂ ಇದ್ದರೆ ಸರಕಾರದ ಸಹಕಾರ ಗಳಿಸುವುದು ಕಷ್ಟವಾಗಲಾರದು.

(೧ನೇ ಪುಟದಿಂದ)

ಮಸೂದೆ ಧ್ವನಿಸುತ್ತದೆ. ಆದರೆ ಪ್ರತಿ ವರ್ಷ ಗೇಣಿ ಕೊಡದೆ, ಅಥವಾ ಕಾಲಕ್ಕೆ ಸರಿಯಾಗಿ ಅದನ್ನು ಪಾವತಿ ಮಾಡದೆ, ಒಕ್ಕಲು ಧನಿಯನ್ನು ಕಾಡಿಸುತ್ತಿದ್ದರೆ, ಪ್ರತಿಸಲವೂ ಕೋರ್ಟಿಗೆ ಹೋಗಿ ವಾದಿಸುವುದೇ ಧನಿಯ ಪಾಲಿನ ಕರ್ತವ್ಯವೆಂದು ಹೇಳುವುದುಚಿತವಷ್ಟು ಸೂಕ್ತವಲ್ಲ. ಗೇಣಿಯನ್ನು ಇಂತಿಷ್ಟು ಅವಧಿಯೊಳಗೆ ಪಾವತಿ ಮಾಡಬೇಕು; ಇದಕ್ಕೆ ತಪ್ಪಿದರೆ, ಅಂಥ ಒಕ್ಕಲನ್ನು ಎಬ್ಬಿಸುವುದಕ್ಕೆ ಧನಿಗೆ ಅಧಿಕಾರವಿದೆ ಎನ್ನುವ ಕಠಿಣ ಸೂತ್ರ ಅಗತ್ಯವೆಂದು ಕಾಣುತ್ತದೆ. ಗೇಣಿಯು ಬಹಳ ಕಡಿಮೆ ಪ್ರಮಾಣದಲ್ಲಿ ನಿರ್ಧರಿಸಲ್ಪಟ್ಟಿರುವುದರಿಂದ ಅದನ್ನು ಸಂದಾಯ ಮಾಡಲು ಏನೂ ಕಷ್ಟವಾಗದು; ಹಾಗೆ ಸಲ್ಲಿಸದಿದ್ದರೆ ಧನಿಗೆ ಕಿರುಕುಳ ಕೊಡುವ ಉದ್ದೇಶ ಒಕ್ಕಲಿಗಿದೆ ಎಂದೇ ಅರ್ಥ. ಕಿರುಕುಳ ಕೊಡುವ ಒಕ್ಕಲನ್ನು ಎಬ್ಬಿಸಲು ಧನಿಗೆ ಅಧಿಕಾರವಿಲ್ಲದೆ ಹೋದರೆ ಆತನ ಕಷ್ಟ ತುಂಬ ಹೆಚ್ಚಿಕೊಳ್ಳುತ್ತದೆ.

ಧನಿಯಾದವನು ತನ್ನ ಪಟ್ಟೆಯಲ್ಲಿರುವ ಭೂಮಿಯನ್ನು ಇಡಿಯಾಗಿ ಅಥವಾ ಅದರ ಒಂದಂಶವನ್ನು ಮಾತ್ರ ಸ್ವತಃ ಸಾಗುವಳಿ ಮಾಡಲು ಇಚ್ಛಿಸುವನಾದರೆ ಅದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಮಸೂದೆಯಲ್ಲಿ ಇದರ ಪ್ರಸ್ತಾಪ ಬಾದಿಲ್ಲ. ತನಗೆ ಹೊಸ ಮಸೂದೆಯಂತೆ ಸಿಗುವ ಗೇಣಿಯು ಜೀವನನಿರ್ವಾಹಕ್ಕೆ ಸಾಲದಿರುವಷ್ಟು ಕಡಿಮೆಯಾಗುವುದೆಂದು ಭಯಪಟ್ಟ ಧನಿಗೆ ಸ್ವತಃ ಸಾಗುವಳಿಯ ಅಧಿಕಾರವನ್ನಿತ್ತು ಆತನು ಉದರ ನಿರ್ವಾಹ ಮಾಡಿಕೊಳ್ಳಲು ಬಿಡುವುದು ನ್ಯಾಯ. ಹೀಗೆ ಸ್ವತಃ ಬೇಸಾಯ ಮಾಡಿಕೊಳ್ಳುವ ಅಥವಾ ಬಿಡುವ ನಿರ್ಣಯವನ್ನು ಇಂತಿಷ್ಟು ಸಮಯದೊಳಗೆ ಮಾಡಬೇಕು; ಅದನ್ನು ಈಗಿನ ಒಕ್ಕಲಿಗೆ ಇಂತಿಷ್ಟು ಅವಧಿ ಮುಂಚಿತವಾಗಿ ತಿಳಿಸಬೇಕು ಎಂದು ನಿಯಮ ಮಾಡುವುದು ಅಪೇಕ್ಷಣೀಯ. ಸಾಮಾನ್ಯ ಹಿಡುವಳಿಗಿಂತ (ಉದಾ: ಐದು ಅಥವಾ ಆರು ಎಕ್ರೆ) ಹೆಚ್ಚಿಲ್ಲದ ಭೂಮಿಯನ್ನು ಮಾತ್ರ ಹೀಗೆ ಸ್ವಂತ ಸಾಗುವಳಿ ಮಾಡಬಹುದು ಎಂದು ಈ ಸೂತ್ರವನ್ನು ಸ್ವಲ್ಪ ಬಿಗಿಪಡಿಸುವುದೂ ಇಷ್ಟವಾಗಿದೆ. ಧನಿಗಳ ಪರವಾಗಿ ಮುಂದಿಡಬಹುದಾದ ದೂರುಗಳು ಬೇರೆ ಅನೇಕವಿದ್ದರೂ ಇಷ್ಟಕ್ಕಾದರೂ ಶಾಸನಾಂಗದ ಚರ್ಚೆಯಲ್ಲಿ ಮಹತ್ವ ಸಿಗಬೇಕು. ಸೂಕ್ತ ತಿದ್ದುಪಡಿ ಆಗಬೇಕು.

— ಕಾರ್ತಿಕೇಯ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ಸ.)

MEDICAL DIGEST

(Family Planning and Social Hygiene Special)—

Editor: Dr. U. B. Narayana Rao. Office: 1, NagindasMansions, Opera House Tram Terminus, Bombay 4.

ಮುಂಬಯಿಯಿಂದ ಡಾ. ಯು. ಬಿ. ನಾರಾಯಣ ರಾಯರ ಸಮರ್ಥ ಹಾಗು ದಕ್ಷ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ಮೆಡಿಕಲ್ ಡೈಜೆಸ್ಟ್" ಎಂಬ ಪ್ರಸಿದ್ಧ ಮಾಸಿಕವು ತನ್ನ ಅಕ್ಟೋಬರ ಮತ್ತು ನವಂಬರ ೧೯೫೫ನೇ ಸಂಚಿಕೆಗಳನ್ನು "ಕುಟುಂಬ ಯೋಜನೆ ಹಾಗು ಸಾಮಾಜಿಕ ಆರೋಗ್ಯ" ವಿಶೇಷ ಸಂಚಿಕೆಯಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದೆ. ಪ್ರತಿಯೊಂದು ಸಂಚಿಕೆಯ ಬೆಲೆ ಎರಡೂವರೆ ರೂಪಾಯಿ. ಇವರಲ್ಲಿ ದೇಶದೊಳಗಿನ ಅನೇಕ ಪ್ರಸಿದ್ಧ ವೈದ್ಯರ ಹಾಗು ಜಗದ್ವಿಖ್ಯಾತರಾದ ತಜ್ಞರ ಸೂಚನೆ ಹಾಗು ಅನುಭವಗಳನ್ನು ವಿವರಿಸುವ ಸುಮಾರು ೫೫ ವಿಶೇಷ ಲೇಖನಗಳಿವೆ; ಅಲ್ಲದೆ ಮುಖ್ಯ ವಿಷಯಗಳಿಗೆ ಪೂರಕವಾಗಿ ಅನೇಕ ಅನುಷಂಗಿಕ ಸಂಗತಿಗಳ ಮೇಲೆ ಶುಭ್ರ ಪ್ರಕಾಶವನ್ನು ಚೆಲ್ಲುವ ಚುಟುಕು ಬರೆಹಗಳೂ ಹೇರಳವಾಗಿವೆ. ಮುಖ್ಯ ವಿಷಯವನ್ನು ಹಲವಾರು ದೃಷ್ಟಿಕೋಣದಿಂದ ಲೇಖಕರು ವಿವೇಚಿಸಿದ್ದು, ಸಾಮಾನ್ಯ ಜ್ಞಾನದೊಡನೆ ಪ್ರಾಯೋಗಿಕ ಹಾಗು ಸಂಶೋಧನಾತ್ಮಕ ಮಹತ್ವದ ಅಂಶಗಳನ್ನೂ ಅವರು ಜೋಡಿಸಿದ್ದಾರೆ. ಇಂಗ್ಲೀಷು ಬಲ್ಲ ಸಾಮಾನ್ಯ ಕುಟುಂಬಿಕರಿಗಂತೂ ವೈದ್ಯವೃತ್ತಿಯಲ್ಲಿರುವ ನಿಪುಣರಿಗೂ ಈ ವಿಶೇಷ ಸಂಚಿಕೆಗಳು ನಿತ್ಯವ್ಯವಹಾರದಲ್ಲಿ ಸಹಾಯಕವೆನಿಸುತ್ತವೆ.

—S. K.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ — VOL. 35

ಉಡುಪಿ, 12—1—1956

ಸಂಚಿಕೆ ೧೯ — NO. 19

ಯೋಗ್ಯತೆಯ ಒರೆಗಲ್ಲು

ಮಂಗಳೂರಿನಲ್ಲಿ ಮೊನ್ನೆ ಆದಿತ್ಯವಾರ ನಡೆದ ಸಭೆಯೊಂದರಲ್ಲಿ ಮಾತನಾಡುವಾಗ ಪ್ರಜಾಸಮಾಜವಾದಿ ಪಕ್ಷದ ಪ್ರಮುಖರೂ ಲೋಕ ಸಭೆಯ ಸದಸ್ಯರೂ ಆಗಿರುವ ಶ್ರೀ ಹುಂಡಿ ವಿಷ್ಣು ಕಾಮತರು ಭಾರತದಲ್ಲಿ ಏಕ ಪಕ್ಷೀಯ ಪ್ರಭುತ್ವವು ನಡೆಯುತ್ತಿದೆ; ಪ್ರಜಾಪ್ರಭುತ್ವ ನಮ್ಮದೆನ್ನುವುದಕ್ಕೆ ಅರ್ಥವೇನೂ ಇಲ್ಲವೆಂದು ಧ್ವನಿಸುವ ಮಾತುಗಳನ್ನಾಡಿದರೆಂದು ತಿಳಿದು ಬರುತ್ತದೆ.

ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಕೆಲವು ದಿನಗಳ ಹಿಂದೆ ನಡೆದಿದ್ದೊಂದು ರಾಜಕೀಯ ವಿಚಾರ ಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಮದ್ರಾಸು ವಿಶ್ವವಿದ್ಯಾನಿಲಯದ ರಾಜನೀತಿ ಶಾಸ್ತ್ರದ ಪ್ರಾಧ್ಯಾಪಕರಾದ ಪ್ರೊ. ಭಾಸ್ಕರನ್ ಅವರು ಭಾರತದಲ್ಲಿ ಏಕ ಪಕ್ಷೀಯ ಪ್ರಭುತ್ವವೇ ನಡೆದಿರುವಂತೆ ತೋರಿದರೂ ಸೂಕ್ಷ್ಮವಾದ ನಿರೀಕ್ಷಣೆಯಲ್ಲಿ ಕಾಂಗ್ರೆಸು ಸರ್ವಗ್ರಾಹಿಯಾದ ಸಂಸ್ಥೆಯಾಗಿ ತೋರುತ್ತಿದೆ; ಅದು ಹೊರತೋರಿಕೆಗೆ ಒಂದು ಪಕ್ಷವಾಗಿ ಕಂಡರೂ ಅದು ದೇಶದೊಳಗಿನ ಎಲ್ಲ ಪ್ರಗತಿ ಪ್ರಿಯರ ಮನೋಭಾವವನ್ನು ಅಂತರ್ಯದಲ್ಲಿ ಪ್ರತಿಫಲಿಸಿಕೊಳ್ಳುತ್ತಿದೆ—ಎಂದಿದ್ದರು.

ಮೇಲಿನೆರಡು ಅಭಿಪ್ರಾಯ ಅಥವಾ ವಿಮರ್ಶೆಗಳಲ್ಲಿ ಯಾವುದು ಗ್ರಾಹ್ಯವೆಂಬುದನ್ನು ಜನರೀಗ ವಿಚಾರಿಸಬೇಕಾಗಿದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಪ್ರತಿಪಕ್ಷವು ಅಗತ್ಯವೆಂದು ಹೇಳಿಕೊಂಡಿದ್ದರೆ ಸಾಕೆ? ನಿಜವಾಗಿ ಪ್ರತಿಪಕ್ಷವೆಂಬ ಹೆಸರಿಗೊಪ್ಪುವ ಗುಂಪೊಂದು ರಚನೆಯಾಗಬೇಡವೆ? ಎಂಬುದೀಗ ನಾವು ಗಮನಿಸಬೇಕಾದ ವಿಷಯ. ಪ್ರತಿಪಕ್ಷ ಬೇಕೆಂಬುದಕ್ಕಾಗಿ ಮಾತ್ರ ಅಂಥದೊಂದು ಗುಂಪು ನಮ್ಮದೆಂದು ಕುಣಿಯುತ್ತಾ ಸಮಾಧಾನ ಪಟ್ಟುಕೊಳ್ಳುವಂತಿದೆಯೋ ಎಂಬುದಿಲ್ಲಿ ಆನುಷಂಗಿಕವಾಗಿ ವಿಶ್ಲೇಷಿಸಬೇಕಾದ ವಿಚಾರ.

ಪ್ರತಿಪಕ್ಷ ಬೇಕು ಎಂದು "ಪ್ರಜಾಪ್ರಭುತ್ವ"ದಲ್ಲಿ ವಿಶ್ವಾಸವುಳ್ಳ ಎಲ್ಲರೂ ಹೇಳುತ್ತಾರೆ. ಆದರೆ ಆ ಪ್ರತಿಪಕ್ಷವು ಸಮರ್ಥವಾದುದಾಗಿರಬೇಡವೆ? ಪ್ರತಿಪಕ್ಷವೆನ್ನುವ ಭಾವನೆಯನ್ನು ಹಾಗೆ ಹೇಳಿಕೊಳ್ಳುವ ಗುಂಪು ತನ್ನ ಧೋರಣೆಯಿಂದ ಮಾನವರಿಕೆಮಾಡಿ ಕೊಡಬೇಡವೆ? ಅಧಿಕಾರವನ್ನು ವಹಿಸಿಕೊಂಡಿರುವ ಕಾಂಗ್ರೆಸಿನ ನಿಲುವಿನೊಡನೆ "ಪ್ರತಿಪಕ್ಷ"ಗಳಾಗಿ ಈಗ ಮೆರೆದಾಡುತ್ತಿರುವ ಕೆಲವು ಗುಂಪುಗಳ ಧೋರಣೆಯನ್ನು ಈ ಒರೆಗಲ್ಲಿಗೆ ಹಚ್ಚಿ ವಿಮರ್ಶಿಸಿದರೆ ಕೇವಲ ನಿರಾಶೆಯಾಗುತ್ತದೆ.

ಮೊನ್ನೆಯಷ್ಟೆ ಪುಣ್ಯ ಭೂಮಿಯಾದ ಗಯೆಯಲ್ಲಿ ಪ್ರಜಾ ಸಮಾಜವಾದಿಗಳ ಪರಿಷತ್ತು ಜರಗಿತು. ಹೈದರಾಬಾದಿನಲ್ಲಿ ಡಾ. ಲೋಹಿಯರ ಹೊಸ ಸಮಾಜವಾದಿ ಪಕ್ಷವೊಂದು ತನ್ನ ಧೋರಣೆಯನ್ನು ಇದೇ ಹೊತ್ತಿಗೆ ಘೋಷಿಸಿತು. ಇಷ್ಟರಲ್ಲಿಯೇ ಸಾಮ್ಯವಾದಿ (ಕಮ್ಯುನಿಸ್ಟ್) ಪಕ್ಷದ ಅಧಿವೇಶನ ಸಹ ಜರಗಲಿದೆ. ಇವುಗಳ ಕುರಿತು ಬಂದಿರುವ ವರದಿಗಳನ್ನು ನೋಡಿದರೆ ನಮ್ಮ ದೇಶದಲ್ಲಿ "ಪ್ರತಿಪಕ್ಷ"ಗಳು ಮಾಡುತ್ತಿರುವ ಕೆಲಸದ ಕುರಿತು ತೃಪ್ತಿಯ ಮಾತನ್ನಾಡುವಂತಿದೆಯೆ?

ಜನಸಂಘ ಮತ್ತಿತರ "ಜಾತೀಯ" ಸಂಸ್ಥೆಗಳ (ಇವು ರಾಜಕೀಯ ಮುಖವಾಡ ಧರಿಸಿದಷ್ಟಕ್ಕೆ ಜಾತೀಯತೆಯ ಕಳಂಕದಿಂದ ದೂರವಾಗಿವೆ ಎಂದು ಭಾವಿಸಕೂಡದು) ಧೋರಣೆಯ ಕುರಿತು ಜನರು ಆಸಕ್ತಿಯನ್ನು ತೋರಿಸುವಂತೆಯೇ ಇಲ್ಲ. ಏಕೆಂದರೆ "ಹಿಂದು"ಗಳಿಗಾಗಿ ಹುಟ್ಟಿಕೊಂಡ ಸಂಸ್ಥೆಗಳವು! ಅವುಗಳ ವಿಚಾರ ಎಷ್ಟು ಸಂಕುಚಿತವಾಗಿದೆ ಎಂಬುದಕ್ಕೆ ಇದೊಂದೇ ನಿದರ್ಶನ ಸಾಕು. ಅವುಗಳ ಧೋರಣೆಯಲ್ಲಿ ವಿರೋಧಾಭಾಸಕರವಾದ ವಿಷಯಗಳಿಷ್ಟಿವೆ ಎಂಬುದನ್ನು ಭಾಷೆ ಮತ್ತು ಸಂಸ್ಕೃತಿಯ ಮೇಲಿನ ಪ್ರೀತಿಯು ರಾಷ್ಟ್ರದ ಒಗ್ಗಟ್ಟಿಗೆ ಘಾತಕ ಎಂದವು ಸಾರುವುದರಿಂದಲೇ ತಿಳಿಯಬಹುದು. ಆದರೆ ಹಿಂದುಗಳಿಗಾಗಿ ರಾಮರಾಜ್ಯ ಕಟ್ಟುವ ಕನಸನ್ನು ಇವರು ಕಾಣುವುದು ಮಾತ್ರ ಎಷ್ಟಕ್ಕೂ ಅಪಹಾಸ್ಯಕರವಲ್ಲ—ರಾಷ್ಟ್ರ ಘಾತುಕವೂ ಅಲ್ಲ!—ಹೇಗಿದೆ ಈ ಸಿದ್ಧಾಂತ?

ಆದುದರಿಂದ ನಾವು ಸಾಮ್ಯವಾದಿಗಳನ್ನೂ ಬಗೆ ಬಗೆಯ ಸಮಾಜವಾದಿಗಳನ್ನೂ ಮಾತ್ರ ರಾಜಕೀಯ ಕ್ಷೇತ್ರದಲ್ಲಿ ಕೈಯಾಡಿಸುತ್ತಿರುವ ಕಾಂಗ್ರೆಸ್ಸೇತರ ಗುಂಪುಗಳಾಗಿ ಭಾವಿಸೋಣ. ಆಗ ನಮಗೆ ಕಾಣಸಿಗುವ ಚಿತ್ರ ಹೇಗಿದೆ?

ಸಾಮ್ಯವಾದಿಗಳು ಈಗ ಸೌಮ್ಯವಾದಿಗಳಾಗಿ ಪರಿವರ್ತನೆ ಹೊಂದಿರುವಂತೆ ಕಾಣುತ್ತದೆ. ಅವರಿಗೆ ಪಂಚಶೀಲಗಳಲ್ಲಿ ತುಂಬ ಆದರ ಹುಟ್ಟಿಕೊಂಡಿದೆ! ಪ್ರಜಾಪ್ರಭುತ್ವ ಪದ್ಧತಿಯ ಪ್ರಕಾರ ನಡೆದ ಚುನಾವಣೆಗಳಲ್ಲಿ ಅವರು—ಪ್ರಜಾಪ್ರಭುತ್ವದಲ್ಲಿ ಅವರಿಗೆ ವಿಶ್ವಾಸ ಎಳ್ಳಷ್ಟೂ ಇಲ್ಲದಿದ್ದರೂ—ಭಾಗ ವಹಿಸುವ ಅವಕಾಶವನ್ನು ಕಳೆದುಕೊಂಡಿಲ್ಲ. ಜನತೆಯ ಹೆಸರನ್ನು ಉಪಯೋಗಿಸಿ 'ಜನತಾ ರಾಜ್ಯ' ಕಟ್ಟುತ್ತೇವೆ ಎನ್ನುವುದಕ್ಕೆ ಅವರು ಹಿಂಜರಿಯುವುದಿಲ್ಲ. ಆದರೆ ಕಮ್ಯುನಿಸ್ಟರ ಜನತಾ ರಾಜ್ಯದಲ್ಲಿರುವುದು ಕೇವಲ ಸರ್ವಾಧಿಕಾರಿ ಗುಂಪಿನ ಕೈವಾಡ ಎಂಬ ಸತ್ಯವನ್ನು ಅವರು ಉದ್ದೇಶಪೂರ್ವಕ ಮರೆಯಿಸಿಡುತ್ತಾರೆ.

ಈಗೀಗ ಅವರು ನೆಹರು ಸರಕಾರದ ಪ್ರಶಂಸಕರಾಗಿಯೂ ಕೆಲವು ಕ್ಷೇತ್ರಗಳಲ್ಲಿ ಪರಿಣಮಿಸಿದ್ದಾರೆ. ಶಾಂತಿಗಾಗಿ ನೆಹರು ದುಡಿಯುತ್ತಿರುವುದನ್ನು ಅವರು ಸ್ವಾಗತಿಸುತ್ತಾರೆ; ಅಣುಬಾಂಬಿನಂತಹ ಭೀಕರ ಅಸ್ತ್ರಗಳ ಪ್ರಯೋಗಕ್ಕೆ ಬಹಿಷ್ಕಾರ ಮತ್ತು ಯುದ್ಧ ಒಪ್ಪಂದಗಳ ಖಂಡನೆಗಳನ್ನು ನೆಹರು ಪ್ರತಿಪಾದಿಸಿದಾಗ ಅದಕ್ಕೆ ಬೆಂಬಲ ವ್ಯಕ್ತಪಡಿಸುತ್ತಾರೆ. ಇನ್ನೂ ಅನೇಕ ವಿಷಯಗಳಲ್ಲಿ ಅವರು ನೆಹರುಗಳ ನಿಲುವಿಗೆ ಸಂತೋಷ ಸೂಚಿಸಲು ತೊಡಗಿದ್ದಾರೆ. ಇತ್ತೀಚೆಗೆ ಪಂಚವಾರ್ಷಿಕ ಯೋಜನೆಯ ಕುರಿತಾಗಿಯೂ ಕಮ್ಯುನಿಸ್ಟರಿಂದ ತುಂಬ ಪ್ರೋತ್ಸಾಹಕರ ಮಾತುಗಳೇ ಬಂದಿವೆ. ಶ್ರೀ ಡಾಂಗೆಯವರು ದ್ವಿತೀಯ ಯೋಜನೆಯ ಚೌಕಟ್ಟಿಗೆ ಮೆಚ್ಚಿಕೆ ವ್ಯಕ್ತಪಡಿಸಿದ್ದರೆ, ಪಾಲಿಟ್‍ಬ್ಯುರೋದ ಸದಸ್ಯ ಶ್ರೀ ಚಂದ್ರ ರಾಜೇಶ್ವರ ರಾಯರು ಯೋಜನೆಯ ಕಾರ್ಯಾಚರಣೆಯಲ್ಲಿ ಹಾರ್ದಿಕ ಸಹಕಾರದ ಆಶ್ವಾಸನೆ ನೀಡಿದ್ದಾರೆ.

ಆದರೆ ಹೀಗೆ ಮಾಡುವಾಗ "ನೆಹರುಗಳೇ ಬದಲಾಯಿಸಿದ್ದಾರೆ" ಎಂದು ಕಮ್ಯುನಿಸ್ಟರು ಹೇಳಲು ತಪ್ಪುವುದಿಲ್ಲ. ತಮ್ಮ ಮುಖವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಅಪಪ್ರಚಾರಕ್ಕೆ ಅವರು ಕೈಹಾಕಿದ್ದಾರೆ. ಆದರೆ ಕಮ್ಯುನಿಸ್ಟರು ತಮ್ಮ ಸಮರ್ಥನೆಗಾಗಿ ಮುಂದಿಡುತ್ತಿರುವ ಈ ಕಾರಣದಲ್ಲಿ ಸ್ವಲ್ಪವೂ ಸತ್ಯವಿಲ್ಲವೆಂದು ನೆಹರುಗಳ ಭಾಷಣಗಳನ್ನು ಕಳೆದ ಎಂಟು ವರ್ಷಗಳಿಂದ ಓದುತ್ತಾ ಬಂದಿರುವ ಪ್ರಾಜ್ಞರು ಎದೆ ತಟ್ಟಿ ಹೇಳಬಲ್ಲರು. ಬದಲಾವಣೆ ನಡೆದಿರುವುದು ಕಮ್ಯುನಿಸ್ಟರಲ್ಲಿಯೇ ಹೊರತು ನೆಹರುಗಳ ವರ್ತನೆಯಲ್ಲಿ ಅಲ್ಲ.

—ಇರಲಿ, ನಾವಿದನ್ನು ಪ್ರತಿಪಕ್ಷದ ಕರ್ತವ್ಯಗಳ ಕಡೆಗೆ ದೃಷ್ಟಿಯಿಟ್ಟು ಈಗ ವಿಚಾರಿಸೋಣ. ಆಗ ಕಾಣುವುದೇನು? ಕಮ್ಯುನಿಸ್ಟರು ಸರಕಾರವನ್ನು ನಡೆಸುತ್ತಿರುವ ಪಕ್ಷಕ್ಕೆ ಬಹಳ ಹತ್ತಿರ ಸರಿಯುತ್ತಾ ಬರುತ್ತಿದ್ದಾರೆಂಬುದೇ ನಮಗೆ ಹೊಳೆಯುವ ಮೊದಲನೆಯ ಸಂಗತಿಯಾಗಿದೆ. ಸರಕಾರದ ಚಟುವಟಿಕೆಗಳ ಕುರಿತು ಇಷ್ಟು ಸಹಾನುಭೂತಿಯನ್ನು ತಾತ್ವಿಕ ಕ್ಷೇತ್ರದಲ್ಲಿ ವ್ಯಕ್ತಪಡಿಸಲು ಮುಂದಾಗುತ್ತಿರುವ ಕಮ್ಯುನಿಸ್ಟರು ಚುನಾವಣೆಯ ಕಾಲದಲ್ಲಿ ಸರಕಾರವನ್ನು ಟೀಕಿಸುವರಾದರೆ, ಅಥವಾ ಸಾರ್ವಜನಿಕ ಭಾಷಣಗಳಲ್ಲಿ ಬೈಗಳ ಸುರಿಮಳೆಗರೆದು ನೆಹರುಗಳ ಧೋರಣೆಯನ್ನು ನಿಂದಿಸುವರಾದರೆ ಜನರು ಈ ಪಕ್ಷದವರ ಪ್ರಾಮಾಣಿಕತೆಯ ಕುರಿತು ಸಂದೇಹ ಪಡಲೇಬೇಕಾಗಿದೆ. ಧುರೀಣತ್ವದ ಹೆಬ್ಬಯಕೆಯಿರುವ ಕೆಲವು ಮಂದಿ ಸ್ವಾರ್ಥಿಗಳ ಕುಹಕ ಕಿರುಚಾಟ ಎಂದೇ ಜನರಿದನ್ನು ಭಾವಿಸಬೇಕಾಗುತ್ತದೆ. ಪ್ರತಿಪಕ್ಷದ ಸಲ್ಲಕ್ಷಣಕ್ಕೆ ಹೇಳಿಸಿದ ವರ್ತನೆಯಂತೂ ಇದಾಗಲಾರದು.

ಸಮಾಜವಾದಿಗಳು ಪ್ರತಿಪಕ್ಷದ ರಚನೆಯ ಬಗ್ಗೆ ಬಹಳ ಆಗ್ರಹಪಡುತ್ತಾರೆ—ಅವರು ಕಟ್ಟಬೇಕೆಂದಿರುವ ಪ್ರತಿಪಕ್ಷವು ಆ ಪಕ್ಷದೊಳಗಡೆಯೇ ಈಗ ನಿರ್ಮಾಣಗೊಂಡಿರುವುದು ನಿಜಕ್ಕೂ ಚೋದ್ಯ!

([illegible]ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಮನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ಮನೆಯೇ ಅತ್ಯುತ್ತಮ ಸ್ಥಾನ. ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅದು ಅತ್ಯುತ್ತಮ ಸ್ಥಳವಾಗದು. ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ಆರಂಭಿಸುವುದು ಅದೆಷ್ಟು ಜಾಣ್ಮೆಯ ಕಾರ್ಯವಾಗದು! ಸ್ವಲ್ಪವೇ ಹಣದಿಂದ ನಮ್ಮಲ್ಲಿ ಲೆಕ್ಕ ಆರಂಭಿಸಬಹುದು. ನಮ್ಮ ನೌಕರರು, ನಾವು ನಿಮಗೆ ಸಹಕರಿಸಬಹುದಾದ ಅನೇಕ ರೀತಿಗಳನ್ನು ಸೂಚಿಸಲು ಸಿದ್ಧರಾಗಿರುವರು.

ಚಲಾವಣೆ ಭಂಡವಾಳ ರೂ. ೭,೫೦,೦೦,೦೦೦ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India.

ನಮಗೆ ಬೇಕಾದ ಯೋಜನೆಯ ರೂಪರೇಖೆ

ಮಧ್ಯಂತರದ ಆಶ್ರಯವಾಗಿ ಗೃಹೋದ್ಯಮ

ಭಾರತದಲ್ಲಿ ಯೋಜನೆಯ ಕರ್ತರನ್ನು ಎದುರಿಸುವ ಮೂಲ ಅಂಶಗಳೇನು? ಎಂಬುದನ್ನು ತಿಳಿದುಕೊಂಡರೆ ನಮಗೆ ಎಂಥ ಯೋಜನೆ ಬೇಕು? ಎಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕಂಡು ಹಿಡಿಯಬಹುದು.

ನಾಲ್ಕು ಮುಖ್ಯಾಂಶಗಳು

ದ್ವಿತೀಯ ಪಂಚವಾರ್ಷಿಕ ಯೋಜನೆಯ ಚೌಕಟ್ಟನ್ನು ಸಿದ್ಧಪಡಿಸಿದ ಪ್ರಸಿದ್ಧ ಅರ್ಥ ಶಾಸ್ತ್ರಜ್ಞ ಪ್ರೊ. ಪಿ. ಸಿ. ಮಹಾಲನೋಬಿಸರ ಹೇಳಿಕೆಯಂತೆ ಯೋಜನೆಯ ಕರ್ತರು ಕೆಳಗಿನ ನಾಲ್ಕು ಮುಖ್ಯಾಂಶಗಳನ್ನು ಗಣನೆಗೆ ತಂದು ಕೊಳ್ಳುವುದು ಅಗತ್ಯವಾಗಿದೆ.

(೧) ನಮ್ಮ ದೇಶದಲ್ಲಿ ಪ್ರತಿ ಪ್ರಜೆಯ ಸರಾಸರಿ ಉತ್ಪನ್ನವು ತಿಂಗಳಿಗೆ ೨೦ರಿಂದ ೨೨ ರೂಪಾಯಿಗಳಷ್ಟು ಕೆಳ ಮಟ್ಟದಲ್ಲಿದೆ; ಇದರಲ್ಲಿ ಸಹ ಒಂದು ಮೂರಾಂಶ ಪ್ರಜೆಗಳ ಸರಾಸರಿ ವಾರ್ಷಿಕ ಆದಾಯವು ೧೫೦ ರೂಪಾಯಿಗಳನ್ನು ಮೀರುತ್ತಿಲ್ಲ.

(೨) ನಮ್ಮ ಜನಸಂಖ್ಯೆಯು ಪ್ರತಿ ದಿನ ಅಗಾಧ ಪ್ರಮಾಣದಲ್ಲಿ ಹೆಚ್ಚಿಕೊಳ್ಳುತ್ತಿದೆ; ತಿನ್ನುವ ಬಾಯಿಗಳ ಹೆಚ್ಚಳವು ಜಗತ್ತಿನಲ್ಲಿ ಬೇರೆಲ್ಲೂ ಇಲ್ಲಿಯಷ್ಟು ಗಂಭೀರ ಸಮಸ್ಯೆಗೆ ಕಾರಣವಾಗಿಲ್ಲವೆಂಬ ಭಾವನೆಯನ್ನು ಹುಟ್ಟಿಸುತ್ತದೆ.

(೩) ಆದರೆ ಕೆಲಸ ಮಾಡುವ ಕೈಗಳು ನಮ್ಮಲ್ಲಿ ಬಹಳ ವಿರಳವಾಗಿವೆ; ನಿರುದ್ಯೋಗವು ತಾಂಡವವಾಡುತ್ತಿವೆ. ಪಾಶ್ಚಾತ್ಯ ದೇಶಗಳಲ್ಲಿ ಹಿಂದೆ ಕೆಲಸದಲ್ಲಿದ್ದು ಈಗ ಅದನ್ನು ಕಳೆದು ಕೊಂಡವನನ್ನು "ನಿರುದ್ಯೋಗಿ" ಎಂದು ಕರೆಯುವುದು ವಾಡಿಕೆಯಾಗಿದೆ; ನಮ್ಮಲ್ಲಿ ನಿರುದ್ಯೋಗಿಯ ವ್ಯಾಖ್ಯೆ ಇದಕ್ಕಿಂತಲೂ ಹೆಚ್ಚು ವ್ಯಾಪ್ತಿಯನ್ನು ಹೊಂದಿದೆ. ಸಂಪಾದನೆಯನ್ನು ಮಾಡುವ ದೈಹಿಕ ಶಕ್ತಿ ಮತ್ತು ಬುದ್ಧಿ ಸಂಪತ್ತು ಇದ್ದರೂ ಸಹ ಕೆಲಸದ ಅವಕಾಶವಿಲ್ಲದೆ, ಯಾವುದೇ ವೃತ್ತಿಯನ್ನು ಕೈಗೊಳ್ಳಲು ಸಾಧ್ಯವಾಗದ ನಿರುದ್ಯೋಗಿಗಳ ಪ್ರಮಾಣ ನಮ್ಮಲ್ಲಿ ಅತ್ಯಧಿಕ.

(೪) ಅದಾಗ್ಯೂ ನಮ್ಮ ದೇಶದಲ್ಲಿ ಧಾರಾಳವಾಗಿ ನೈಸರ್ಗಿಕ ಸಂಪತ್ತಿನ ಭಂಡಾರವಿದೆ. ಇದನ್ನು ಸದುಪಯೋಗಪಡಿಸುವ ಕಡೆಗೆ ಈಗಿಗಿಂತ ಎಷ್ಟೋ ಪಾಲು ಹೆಚ್ಚಿನ ಗಮನವನ್ನು ನಾವು ಹರಿಯಗೊಡಬೇಕಾಗಿದೆ.

"ಭೌತಿಕ ಯೋಜನೆ"

ಮೇಲಿನ ನಾಲ್ಕಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಯೋಜನೆಯ ವಿವರಗಳನ್ನು ಗೊತ್ತುಪಡಿಸಬೇಕು. ಎಲ್ಲರೂ ಅಡ್ಡಿಯಿಲ್ಲದೆ ಒಪ್ಪುವ ವಿಷಯವೊಂದಿದ್ದರೆ ಅದು ನಿರುದ್ಯೋಗದ ನಿರ್ಮೂಲನವೆಂದು ಹೇಳಬಹುದು. ನಮ್ಮಲ್ಲಿಯ ಎಲ್ಲ ಸಶಕ್ತರಿಗೂ ಕೆಲಸ ಸಿಗಬೇಕು; ಪ್ರಜೆಗಳ ದಾರಿದ್ರ್ಯ ದೂರವಾಗಬೇಕು; ಅವರ ಶೈಕ್ಷಣಿಕ ಯೋಗ್ಯತೆ ಹೆಚ್ಚಿಕೊಳ್ಳಬೇಕು; ಅವರ ಸಾಂಸ್ಕೃತಿಕ ವಿಕಾಸ ಸಾಧಿಸಲ್ಪಡಬೇಕು; ಸುಖ ಜೀವನದ ಇತರ ಆವಶ್ಯಕತೆಗಳು ಪೂರೈಸಲ್ಪಡಬೇಕು— ಇದೇ ನಮ್ಮ ಮುಖ್ಯ ಧ್ಯೇಯ.

ಹೊರ ತೋರಿಕೆಗೆ ಇದು ಕೇವಲ ಭೌತಿಕ ಸುಖಾನುಭವ ಸಾಧನೆಯ ಯೋಜನೆಯಾಗಿ ಕಂಡು ಬಂದೀತು. ಭಾರತದ ಪ್ರಾಚೀನ ಸಂಸ್ಕೃತಿಗೆ ಇದು ಹೇಳಿಸಿದುದಲ್ಲ ಎಂದು ಹೇಳುವವರು ಇರಬಹುದು. ಆದರೆ ಹೊಟ್ಟೆಯು ಬರಿದಾಗಿರುವಾಗ ಯಾರದೇ ಮನಸ್ಸು ದೇವರ ಚಿಂತನೆ ಮಾಡದು ಎಂಬುದನ್ನು ಉಪನಿಷತ್ತಿನ ಕತೆಯೊಂದು ಮೊದಲೇ ಸ್ಪಷ್ಟಪಡಿಸಿರುತ್ತದೆ. ಅನ್ನ ಮತ್ತು ಪ್ರಾಣಮಯವಾದ ಜಗತ್ತಿನಿಂದಲೇ ನಾವು ಆಧ್ಯಾತ್ಮಿಕ ಉತ್ಕರ್ಷದ ಕಡೆಗೆ ಮೇಲೇರಬೇಕಾಗಿದೆ. ಆನಂದಮಯ ಕೋಶದ ಕಲ್ಪನೆಗೆ ಅನ್ನಮಯ ಕೋಶದ ಕಲ್ಪನೆಯೇ ತಳಹದಿ ಎಂಬುದನ್ನು ನಾವು ಮರೆಯಬಾರದು.

ಯಂತ್ರ ಪ್ರಾಬಲ್ಯ

ಭೌತಿಕ ಪ್ರಯೋಜನಗಳನ್ನು ಪ್ರಜೆಗಳಿಗೆ ದೊರಕಿಸಿ ಕೊಡುವಲ್ಲಿ ಈಚೆಗೆ ಆವಿಷ್ಕಾರ ಹೊಂದಿದ ಯಂತ್ರಗಳು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ಮನುಷ್ಯ ಶಕ್ತಿ, ಸಾಧನ ಬಲ ಮತ್ತು ಸಂಪತ್ತಿನ ಸ್ರೋತಗಳನ್ನು ಆಧರಿಸಿ ರೂಪಿಸುವ ನಮ್ಮ ಯೋಜನೆಯಲ್ಲಿ ಯಂತ್ರಗಳಿಗೆ ವಿಶಿಷ್ಟ ಸ್ಥಾನವನ್ನು ಕೊಡಲೇಬೇಕು. ಆದರೆ ಈ ಯಂತ್ರಗಳನ್ನು ಹೊರಗಿನಿಂದ ತರಿಸಿಕೊಂಡು ನಾವು ಅಭ್ಯುದಯವನ್ನು ಸಾಧಿಸಬಲ್ಲೆವೆ? ಎಲ್ಲ ಕಾಲದಲ್ಲೂ ನಮಗೆ ಯಂತ್ರ ಸಾಮಗ್ರಿಗಳನ್ನು ಧಾರಾಳವಾಗಿ ಪರದೇಶಗಳಿಂದ ತರಿಸುವುದು ಸಾಧ್ಯವೆನಿಸಲಾರದು. ಆದುದರಿಂದ ದೇಶದೊಳಗೆ ಯಂತ್ರಗಳ ರಚನೆಗೆ ಅವಕಾಶ ನೀಡಬೇಕು; ಮತ್ತು ನಮ್ಮಲ್ಲಿ ಯಂತ್ರ ನಿರ್ಮಾಣ ಕ್ರಿಯೆಯು ವಿಶೇಷ ಬೆಳವಣಿಗೆಯನ್ನು ತೋರಿಸಬೇಕು.

ಭಾರವಾದ ಉದ್ದಿಮೆಗಳನ್ನು ದೇಶದೊಳಗೆ ನೆಲೆಗೊಳಿಸಬೇಕು ಎನ್ನುವವರು ಈ ದೃಷ್ಟಿಯನ್ನೇ ಇಟ್ಟುಕೊಂಡಿದ್ದಾರೆ. ಆದರೆ ನಮ್ಮ ಜನರೆಲ್ಲರನ್ನೂ ಕೈತುಂಬ ಕೆಲಸವಿತ್ತು ಉದ್ಯಮಶೀಲರಾಗಿ ಮಾಡುವ ನಮ್ಮ ಮೂಲೋದ್ದೇಶಕ್ಕೆ ಭಾರವಾದ ಉದ್ದಿಮೆಗಳು ಕೂಡಲೇ ಯಶಸ್ಸನ್ನು ತಂದು ಕೊಡಲಾರವು. ತಜ್ಞರ ಅಭಿಪ್ರಾಯದಂತೆ ಭಾರವಾದ ಉದ್ದಿಮೆಗಳಲ್ಲಿ ೨೫೦೦೦ ರೂಪಾಯಿ ಭಂಡವಾಳವನ್ನು ಸುರಿದರೆ ಮಾತ್ರ ಒಬ್ಬನಿಗೆ ಕೆಲಸ ಸಿಗಬಹುದು. ಇದಕ್ಕಿಂತ ಗ್ರಾಹಕರಿಗೆ ನಿತ್ಯ ಬಳಕೆಯ ವಸ್ತುಗಳನ್ನು ತಯಾರಿಸಿ ಕೊಡುವ ಸಾಮಾನ್ಯ ಕಾರ್ಖಾನೆಗಳ ಉದ್ಯೋಗ ಪೂರೈಕೆಯ ಮಟ್ಟ ಹೆಚ್ಚು ತೃಪ್ತಿಕರವಾಗಿದೆ— ಇಲ್ಲಿ ೧೦-೧೨ ಸಾವಿರ ರೂಪಾಯಿಗಳ ಭಂಡವಾಳ ಒಬ್ಬನಿಗೆ ಕೆಲಸವನ್ನು ದೊರಕಿಸಿ ಕೊಡಬಲ್ಲುದು.

ಗೃಹೋದ್ಯಮದ ಪ್ರಯೋಜನ

ಆದರೆ ಈಗ ಬಡತನದಿಂದ ತೀರ ಬಳಲುತ್ತಿರುವ ನಮ್ಮ ದೇಶವು ಈ ಮಟ್ಟದಲ್ಲಿಯಾದರೂ ಭಂಡವಾಳವನ್ನು ಒದಗಿಸಿ ಎಲ್ಲ ಪ್ರಜೆಗಳಿಗೆ ಕೈತುಂಬ ಕೆಲಸವನ್ನಿತ್ತು ಅವರ ಹೊಟ್ಟೆಯ ಬೆಂಕೆಯನ್ನು ಸ್ವಲ್ಪ ಮಟ್ಟಿಗಾದರೂ ತಗ್ಗಿಸುವ ಸ್ಥಿತಿಯಲ್ಲಿಲ್ಲ. ಆದುದರಿಂದ ನಾವು ಬೇರೆ ಉಪಾಯವನ್ನು ಕಂಡು ಹಿಡಿಯಬೇಕಾಗಿದೆ. ಆಗ ನಮಗೆ ಕಾಣಿಸುವುದೇ ಗೃಹೋದ್ಯಮದ ಕ್ಷೇತ್ರ. ಇಲ್ಲಿ ಐನೂರು ರೂಪಾಯಿಗಳ ಭಂಡವಾಳವು ಒಬ್ಬನಿಗೆ ಕೆಲಸವನ್ನು ದೊರಕಿಸಿ ಕೊಡುವಷ್ಟು ಚೈತನ್ಯವನ್ನು ಹೊಂದಿದೆ.

ಗೃಹೋದ್ಯಮಗಳು ಹೀಗೆ ಅತ್ಯಧಿಕ ಸಂಖ್ಯೆಯಲ್ಲಿ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಬಲ್ಲವು. ಆದರೆ ಗೃಹೋದ್ಯಮಗಳನ್ನೇ ಅವಲಂಬಿಸುವುದರಿಂದ ಜೀವನದ ಮಟ್ಟವು ಪಾಶ್ಚಾತ್ಯ ದೇಶಗಳ ಸಾಲಿಗೆ ಎಂದಿಗೂ ಏರಲಾರದು. ಎತ್ತಿನ ಬಂಡಿಯ ಬದಲು, ಮೋಟಾರು ಕಾರಿನ ಪ್ರವಾಸವನ್ನು ನಾವು ಬಯಸುವೆವಾದರೆ ಮಹೋದ್ಯಮಗಳನ್ನೇ ಆಶ್ರಯಿಸಬೇಕು. ನಮ್ಮ ಭೌತಿಕ ಯೋಜನೆಗೆ ಈ ಮಹತ್ವಾಕಾಂಕ್ಷೆಯಿರುವುದರಿಂದ ಗೃಹೋದ್ಯಮಗಳನ್ನು ನಾವು ಮಧ್ಯಂತರ ಕಾಲದ ಆಶ್ರಯ ಸ್ಥಾನವೆಂದು ಮಾತ್ರ ಅವಲಂಬಿಸಬಹುದು.

ಮಧ್ಯಂತರದ ಕ್ರಮ

ಮಹೋದ್ಯಮಗಳನ್ನು ಕಟ್ಟುವುದೇ ನಮ್ಮ ಧ್ಯೇಯವೆಂದು ಹೇಳಿದ ಮೇಲೆ ಅದಕ್ಕೆ ಪೋಷಕವಾಗುವಂತೆ ನಾವು ಗೃಹೋದ್ಯಮದ ಪಾತ್ರವನ್ನು ರೂಪಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಈಗ ಅನೇಕ ಕ್ಷೇತ್ರಗಳು ಬದಲಾವಣೆಯ ಅನುಭವವನ್ನು ತೀವ್ರವಾಗಿ ತಂದು ಕೊಡುತ್ತಿದ್ದರೂ ದೇಶದ ವಾತಾವರಣವೇ ಪರಿವರ್ತನೆಗೊಂಡಿದೆ ಎಂಬ ಅನುಭವವಾಗಲು ಇನ್ನೂ ಹಲವು ದಶಕಗಳು ಬೇಕಾಗಬಹುದು. ಸಾಮಾನ್ಯ ಉದಾಹರಣೆಯೊಂದನ್ನು ಕೊಡುವುದಾದರೆ, ನಮ್ಮ ಜನರು ಹುಟ್ಟೂರನ್ನು ಬಿಟ್ಟು ಕೆಲಸಕ್ಕಾಗಿ ಪರವೂರುಗಳಲ್ಲಿ ಅಲೆದಾಡಲು ತೊಡಗಿರುವದರೂ ಅದು ಇನ್ನೂ ಉಲ್ಲೇಖನೀಯವಾದಷ್ಟು ವೇಗವನ್ನು ಪಡೆದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಭಾಷೆ ಮತ್ತು ಜನಜೀವನದ ರೀತಿ ನೀತಿಗಳು ಭಿನ್ನವಾಗಿರುವ ವಲಯಗಳಿಗೆ ಹೋಗಿ ನೆಲಸುವಷ್ಟು ಉತ್ಸಾಹವನ್ನು ನಮ್ಮ ನಾಗರಿಕರಲ್ಲಿ ಹೆಚ್ಚಿನವರು ಹಲವು ವರ್ಷಗಳ ವರೆಗೆ ತೋರಿಸದೆ ಹೋಗಬಹುದು ಎಂಬ ಅನುಮಾನ ಹುಸಿಯಾಗದು.

ಆದುದರಿಂದ ಪರಿವರ್ತನೆಯ ಕ್ರಿಯೆಯು ಸಹಜವಾಗಿ ಕೈಗೂಡುವ ಕಾಲದ ವರೆಗಿನ ಮಧ್ಯಂತರ ಕ್ರಮವೆಂದು ನಾವು ವಿಕೇಂದ್ರೀಕರಣವನ್ನು ಔದ್ಯಮಿಕ ಕ್ಷೇತ್ರದಲ್ಲಿ ಸಾಧಿಸುವುದು ಹಿತಕರ. ಊರನ್ನು ಬಿಟ್ಟು ಪರವೂರಿಗೆ ಹೋಗಲು ಬಯಸದ ಸಾಮಾನ್ಯ ಪ್ರಜೆಗೆ ಅವನ ಊರಿನಲ್ಲಿಯೇ, ಅಥವಾ ಆತನ ಗುಡಿಸಲಿನಲ್ಲಿಯೇ, ಕೆಲಸವನ್ನು ಒದಗಿಸಿಕೊಡಲು ನಮ್ಮ ಯೋಜನೆ ಸಮರ್ಥವಾಗಬೇಕು. ಪ್ರಜೆಯು ಸ್ವಂತ ಸುಖಕ್ಕಾಗಿ ದುಡಿಮೆಯನ್ನು ಅವಲಂಬಿಸುವ ಪರಿಸ್ಥಿತಿ ಏರ್ಪಡಬೇಕು. ಆಗ ಮಾಲಿಕನಿಗಾಗಿ ಕಾರ್ಖಾನೆಯಲ್ಲಿ ಕೂಲಿಕಾರನು ಎಷ್ಟು ಕೆಲಸ ಮಾಡಬಲ್ಲನೋ ಅದರ ಇಮ್ಮಡಿಯಷ್ಟು ಕೆಲಸವನ್ನು ತನಗಾಗಿ ತನ್ನ ಮನೆಯಲ್ಲಿದ್ದುಕೊಂಡು ಮಾಡಬಲ್ಲನೆಂಬ ಸತ್ಯ ಗೋಚರವಾದೀತು.

ಹೊಸ ಬೆಳಕು

ವಿಕೇಂದ್ರೀಕರಣದ ತಳಹದಿಯ ಮೇಲೆ ರೂಪುಗೊಂಡ ಸಮಾಜದಲ್ಲಿ ವಸ್ತುಗಳು ಬಹಳ ತುಟ್ಟಿಯಾಗುತ್ತವೆ ಎಂದು ದೂರುವವರು ಅನೇಕ. ಗೃಹೋದ್ಯಮಗಳಲ್ಲಿ ಸೃಷ್ಟಿಯಾದ ಸಾಮಗ್ರಿಗಳು ಅಗ್ಗದರದಲ್ಲಿ ಗ್ರಾಹಕರನ್ನು ಮುಟ್ಟುತ್ತವೆ ಎಂದು ಅವರ ವಾದ. ಆದರೆ ಇದನ್ನು

(೧೨ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ್ಯ.
ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.
ಮೈಸೂರು ಗಂಧದ ಎಣ್ಣೆ
ಅಪ್ಪಟವಾದ ಗಂಧದ ಎಣ್ಣೆ.
ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.
ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

ಮಾನವೀಯ ವಿಜ್ಞಾನದ ತಿರುಳು

ಜಗತ್ತಿನ ನಾಶವಲ್ಲ, ಅಭ್ಯುದಯವೇ ಧ್ಯೇಯ

ಇಂದು ವಿಜ್ಞಾನವು ಜಗತ್ತಿನ ಹೊರ ಚಟುವಟಿಕೆಗಳಲ್ಲಿ ಹೇಗೋ, ಮನುಷ್ಯನ ವಿಚಾರ ಕ್ಷೇತ್ರದಲ್ಲಿ ಸಹ ತನ್ನ ಪ್ರಭುತ್ವವನ್ನು ಸ್ಥಾಪಿಸಿದೆ. ಹಿಂದಿನ ಕಾಲದಲ್ಲಿ ನಿಸರ್ಗದ ರಹಸ್ಯಗಳನ್ನು ತಿಳಿಯಲು ಪ್ರಯತ್ನಪಡುತ್ತಿದ್ದ ವಿದ್ವಾಂಸರಿಗೂ ಧಾರ್ಮಿಕ ಗುರುಗಳ ಉನ್ನತ ಸ್ಥಾನಮಾನವನ್ನು ಇಂದು ವಿಜ್ಞಾನಿಗಳು ಪಡೆದಿದ್ದಾರೆ. ವಿಜ್ಞಾನವು ಈಗ ರಹಸ್ಯ ಶಾಸ್ತ್ರವಾಗಿ ಉಳಿದಿಲ್ಲ; ಅದು ಗುಟ್ಟಾಗಿ ನಡೆಸಬೇಕಾದ ಕೆಲಸದ ಶಾಖೆಯಾಗಿಲ್ಲ. ಆದಾಗ್ಯೂ ಕೆಲವೇ ಜನರು ಮಾತ್ರ ವಿಜ್ಞಾನದ ಮೂಲ ಭಾವನೆಗಳನ್ನು ಚೆನ್ನಾಗಿ ತಿಳಿದುಕೊಳ್ಳಬಲ್ಲ ಶಕ್ತಿಯನ್ನು ಹೊಂದಿದ್ದಾರೆ. ಹೆಚ್ಚಿನ ವ್ಯಕ್ತಿಗಳ ಪಾಲಿಗೆ ವೈಜ್ಞಾನಿಕ ಸೂತ್ರಗಳು ಸುಲಭದಲ್ಲಿ ಮನವರಿಕೆಯಾಗದಷ್ಟು ಕಠಿಣವಾಗಿಯೇ ತೋರುತ್ತವೆ.

ಸತ್ಯ ಶೋಧಕ ವಿಜ್ಞಾನಿ

ನಮ್ಮ ಇಂದಿನ ನಿತ್ಯ ವ್ಯವಹಾರವೆಲ್ಲವೂ ವೈಜ್ಞಾನಿಕ ಆವಿಷ್ಕಾರಗಳೊಡನೆ ನಿಕಟ ಸಂಬಂಧವನ್ನು ಹೊಂದಿವೆ; ವಿಜ್ಞಾನವು ನಮ್ಮ ಮೇಲೆ ಈಗಾಗಲೇ ಸ್ಥಾಪಿಸಿರುವ ಪ್ರಭುತ್ವವು ಭವಿಷ್ಯದಲ್ಲಿಯೂ ಮುಂದುವರಿಯುವುದು ನಿಶ್ಚಯ. ಆದುದರಿಂದ ವಿಜ್ಞಾನಿಗಳು ಏನು ಮಾಡುತ್ತಾರೆ, ಅವರು ಯಾವ ವಾತಾವರಣದಲ್ಲಿ ಕೆಲಸ ನಡೆಸುತ್ತಾರೆ, ಯಾವ ಮನೋಭಾವವನ್ನಿಟ್ಟುಕೊಂಡು ದುಡಿಯುತ್ತಾರೆ, ಜಗತ್ತಿನ ಅಭಿವೃದ್ಧಿಗೆ ಅವರು ಎಷ್ಟರ ಮಟ್ಟಿಗೆ ನೆರವಾಗುತ್ತಾರೆ, ಜಗತ್ತಿಗೆ ಅವರು ಎಷ್ಟು ಮಟ್ಟಿಗೆ ತಪ್ಪು ದಾರಿಯನ್ನು ತೋರಿಸಿಕೊಡುತ್ತಾರೆ ಎಂಬಿತ್ಯಾದಿ ವಿಷಯಗಳೆಲ್ಲವನ್ನೂ ಮನನ ಮಾಡುವುದು ಅಗತ್ಯವಾಗಿದೆ.

ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ನಂಬಿಕೆಯಂತೆ ವಿಜ್ಞಾನಿಗಳು ಸತ್ಯ ಶೋಧಕರಾಗಿದ್ದಾರೆ — ಈ ಧ್ಯೇಯವನ್ನಿಟ್ಟುಕೊಳ್ಳುವುದೂ ಅದಕ್ಕಾಗಿ ಜೀವನ ಪರ್ಯಂತ ದುಡಿಯುವುದೂ ಸುಲಭ ಮಾತುದೇನಲ್ಲ. ಸತ್ಯ ಶೋಧಕರು ಪರಿಣಾಮಗಳ ಕಡೆಗೆ ಗಮನವಿತ್ತು ಭಯ ಪಡಲಾಗದು; ಅವರು ಕ್ರಿಯಾಶೀಲರಾಗಿ ಜಗತ್ತಿಗೆ ಹೊಸ ಚೇತನ ತಂದು ಕೊಡಬೇಕು; ಸತ್ಯಶೋಧನೆಯನ್ನು ಬಿಟ್ಟು ಗೊಟ್ಟು ಸುಮ್ಮನೆ ಇವರು ಗುಳಿಕರೆ ಕೇವಲ ಪ್ರೇಕ್ಷಕರೆನಿಸುತ್ತಾರೆ, ವಿಜ್ಞಾನಿಗಳೆಂದು ಕರೆಯಲ್ಪಡುವ ಅರ್ಹತೆಯಾಗ ಅವರಲ್ಲಿ ಉಳಿಯುವುದಿಲ್ಲ.

ಕಣ್ಣ ಮುಂದಿನ ಧ್ಯೇಯ

ಕ್ರಿಯಾಶೀಲನೂ ಸತ್ಯ ಶೋಧಕನೂ ಆಗಿರುವ ಭಾರತೀಯ ವಿಜ್ಞಾನಿಯು ಏನು ಧ್ಯೇಯವನ್ನು ಇಟ್ಟುಕೊಳ್ಳಬೇಕು? ತನ್ನ ಕಾರ್ಯ ಸಾಧನೆಯ ಫಲವಾಗಿ ಭಾರತೀಯ ನಾಗರಿಕರಿಗೆ ಯಾವ ಬಗೆಯ ಸೇವೆಯನ್ನು ಮುಟ್ಟಿಸಬೇಕು? ಜನರ ಜೀವನ ಮಟ್ಟವನ್ನು ಎತ್ತರಿಸುವ ಸುಲಭೋಪಾಯಗಳನ್ನು ಕಂಡು ಹಿಡಿಯುವುದು, ಆರ್ಥಿಕ ಅಸಮಾನತೆಯನ್ನು ನಿವಾರಿಸಲು ವೈಜ್ಞಾನಿಕ ಸಂಶೋಧನೆಗಳಿಂದ ನೆರವಾಗುವುದು, ಅಭಿವೃದ್ಧಿ ಪ್ರಯತ್ನಗಳ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸುವಂತೆ ಸಾಧನ ಸಲಕರಣೆಗಳ ಸೃಷ್ಟಿ ಮಾಡುವುದು ಇತ್ಯಾದಿ ವಿಧಾನಗಳನ್ನು ನಮ್ಮ ವಿಜ್ಞಾನಿಗಳು ದೇಶ ಸೇವೆಯ ಮನೋಭಾವದಿಂದ ಕಂಡುಕೊಳ್ಳಬಲ್ಲರು.

ಕಣ್ಣ ಮುಂದೆ, ಜೀವನದ ಮುಂದೆ ಇಟ್ಟುಕೊಳ್ಳಲಾದ ಧ್ಯೇಯವನ್ನು ಸಾಧಿಸಲು ವಿಜ್ಞಾನಿಯು ಅನುಸರಿಸಬೇಕಾದ ರೀತಿ ಹೇಗಿರಬೇಕು? ಎಲ್ಲ ಸಾಮಾನ್ಯ ಮನುಷ್ಯರಂತೆ ವಿಜ್ಞಾನಿಯೂ ಮೂಲಭೂತವಾದ ಸತ್ಯವನ್ನಿಷ್ಟು ತಿಳಿದುಕೊಂಡಿರಬೇಕಾಗಿದೆ. ಅದೆಂದರೆ ಧ್ಯೇಯದಷ್ಟೇ ಸಾಧನೆಯ ಮಾರ್ಗವೂ ಪವಿತ್ರವಾದುದಾಗಿರಬೇಕು. ವಿಜ್ಞಾನಿಯು ಸರಿಯಾದ ದಾರಿಯಲ್ಲಿ ಮುನ್ನಡೆಯದಿದ್ದರೆ ಆತನಿಗೆ ಧ್ಯೇಯವನ್ನು ಸಾಧಿಸಲು ಸಾಧ್ಯವಾಗಲಾರದು. ವಿಜ್ಞಾನಿಯು ಸದಾ ಕಾಲ ತನ್ನ ಹೆಜ್ಜೆಗಳು ತಪ್ಪಿ ಬೀಳುತ್ತಿಲ್ಲವಲ್ಲ ಎಂದು ಖಚಿತಪಡಿಸಿಕೊಂಡಿರಬೇಕು. ಏಕೆಂದರೆ ಮುಖ್ಯ ಕ್ಷೇತ್ರವೊಂದರಲ್ಲಿಟ್ಟ ತಪ್ಪು ಹೆಜ್ಜೆಯು ಭೀಕರವಾದ ಅನಾಹುತಕ್ಕೆ ಕಾರಣವಾಗಬಹುದು. ವಿಜ್ಞಾನಿಗಳು ಒಳ್ಳೆಯ ಪರಿಣಾಮಗಳೇ ತಮ್ಮ ಕೆಲಸದಿಂದಾಗಬೇಕೆಂದು ಹಾರೈಸಬೇಕು. ತಮ್ಮ ಕೆಲಸವು ಗಂಡಾಂತರದ ಗಳಿಗೆಯನ್ನು ಹತ್ತಿರ ತರಬಹುದು ಎಂಬ ಸಂಶಯ ತೋರಿದಾಗ, ಆ ದಿಸೆಯಲ್ಲಿ ಮುಂದೆ ಹೆಜ್ಜೆಯಿಡಲಾಗದು; ಹೆಜ್ಜೆಯಿಡಲು ಒತ್ತಾಯಿಸುವವರ ಸಂಸರ್ಗದಲ್ಲಿರುವುದೂ ಯೋಗ್ಯವಲ್ಲ.

ಧನ್ಯ ಪ್ರಯತ್ನ

ಹೀಗೆ ಎಚ್ಚರವನ್ನು ಕೊಡುವುದೇಕೆ? ವಿಜ್ಞಾನಿಗಳೀಗ ಅತುಲ ಸಾಹಸದ ಪರಿಣಾಮವಾಗಿ ಭೌತಿಕ ಜಗತ್ತಿನ ಮೇಲೆ ತಮ್ಮ ಪ್ರಭಾವವನ್ನು ಬೀರಿ, ಕೆಲವಟ್ಟಿಗೆ ನೈಸರ್ಗಿಕ ವ್ಯಾಪಾರಗಳನ್ನು ನಿಯಂತ್ರಣದಲ್ಲಿ ತರಲು ಸಮರ್ಥರಾಗಿದ್ದಾರೆ, ನಿಜ. ಆದರೆ ಮನುಷ್ಯನ ಆಂತರಿಕ ಪ್ರವೃತ್ತಿಗಳ ಮೇಲೆ ಅವರ ವರ್ಚಸ್ಸು ಇನ್ನೂ ಬಿದ್ದ ಹಾಗೆ ತೋರುತ್ತಿಲ್ಲ. ವಿಜ್ಞಾನಿಗಳ ಕಣ್ಣ ಮುಂದೆಯೇ ಮನುಷ್ಯನು ಅವರಿಗೆ ತಿಳಿಯಲಾರದ ರೀತಿಯಲ್ಲಿ ಅನೇಕ ವಿಚಿತ್ರ ಕೆಲಸಗಳನ್ನು ಮಾಡುತ್ತಾನೆ, ಅನೇಕ ಕಠಿಣರೀತಿಯಲ್ಲಿ ವ್ಯವಹರಿಸುತ್ತಾನೆ. ಅವನು ಹೇಗಿದ್ದಾನೆ ಎಂಬ ಮೂಲಭೂತವಾದ ರಹಸ್ಯವು ಇನ್ನೂ ವಿಜ್ಞಾನಿಗಳ ಕರಗತವಾಗಿರುವುದಿಲ್ಲ. ಆದುದರಿಂದ ಮನುಷ್ಯನು ಹೇಗಿದ್ದಾನೆ ಎಂಬುದನ್ನು ಆತನ ಕ್ರಿಯೆಗಳ ಮೇಲಿಂದ ಅನುಮಾನಿಸಿಯೇ ನಾವು ಮುನ್ನಡೆಯುವ ಸ್ಥಿತಿಯಲ್ಲಿ ಈಗ ಇದ್ದೇವೆ — ಎಂದ ಮೇಲೆ ನಮಗೆ ಒಳ್ಳೆಯದು ಬೇಕಾದರೆ, ಕೆಟ್ಟ ಪ್ರವೃತ್ತಿಗಳನ್ನು ಪ್ರೋತ್ಸಾಹಿಸದೆ ಒಳ್ಳೆಯ ಅಂಶಗಳನ್ನೆ ಪೋಷಿಸಬೇಕಲ್ಲವೆ? ಈ ಕೆಲಸಕ್ಕೆ ವಿಜ್ಞಾನಿಯು ಕೈ ಹಾಕಿ ಮನುಷ್ಯನ ವ್ಯಕ್ತಿತ್ವ ದರ್ಶನದ ಬೀಗದ ಕೈಯನ್ನು ದೊರಕಿಸಿಕೊಳ್ಳಬೇಕಾಗಿದೆ.

ಮೊದಲೇ ಹೇಳಿದಂತೆ, ಪ್ರತಿಯೊಂದು ಒಳ್ಳೆಯ ಕೆಲಸವು ಒಳ್ಳೆಯ ಪರಿಣಾಮವನ್ನು ತರಬಲ್ಲುದು; ಕೆಟ್ಟುದರಿಂದ ಪರಿಣಾಮವೂ ಕೆಟ್ಟದಾಗುತ್ತದೆ. ಒಬ್ಬ ವ್ಯಕ್ತಿಯೊಡನೆ ಎಷ್ಟೇ ಭಿನ್ನಾಭಿಪ್ರಾಯವಿರಲಿ, ಪ್ರೀತಿಯನ್ನು ನೀವು ತೋರಿಸಿದರೆ ಆತನಿಗೆ ದ್ವೇಷವನ್ನು ಸಾಧಿಸಲು ಅವಕಾಶವೇ ಸಿಗಲಾರದು. ನಿಮ್ಮ ಪಾಲಿಗೆ ಪ್ರೀತಿಯ ಭಂಡಾರವೇ ಸಿಗುತ್ತದೆ. ಹಿಂಸೆ ಮತ್ತು ಮನಸ್ತಾಪಗಳ ದಾರಿಯನ್ನು ಅನುಸರಿಸಿದರೆ, ಇದರಿಂದ ಇಬ್ಬರ ನಡುವಿನ ಅಂತರ ಹೆಚ್ಚುತ್ತಾ ಹೋಗುವುದಲ್ಲದೆ ವಾತಾವರಣ ಕಲುಷಿತಗೊಳ್ಳುವದು ಖಂಡಿತ. ವಿಜ್ಞಾನಿಯು ಮನುಷ್ಯನನ್ನು ತಪ್ಪು ಮಾರ್ಗಗಳಿಂದ ಪರಾವೃತ್ತನಾಗಿ ಮಾಡಲು ಪ್ರಯತ್ನ ಪಟ್ಟರೆ ಮಾತ್ರ ಧನ್ಯನಾಗುತ್ತಾನೆ.

ಮನಸ್ಸಿಗೆ ಪ್ರಶ್ನೆ

ವಿಜ್ಞಾನಿಗಳು ತಮ್ಮ ಮನಸ್ಸನ್ನೆ ತಾವು ಪ್ರಶ್ನಿಸಿ ಕೊಳ್ಳಬೇಕು. ತಮ್ಮ ಕ್ರಿಯೆಗಳ ಪರಿಣಾಮ ಏನಾಗುವುದೆಂಬ ಕುರಿತು ಅವರು ಮನಸ್ಸಿನಲ್ಲಿಯೇ ಲೆಕ್ಕ ಹಾಕಬೇಕು. ಇಂತು ಜಗತ್ತಿನ ಅನೇಕ ಶ್ರೇಷ್ಠ ವಿಜ್ಞಾನಿಗಳ ತಲೆಯಲ್ಲಿ ತಮ್ಮ ಕೆಲಸಗಳಿಂದ ಒಳ್ಳೆಯದಾಗುತ್ತದೆಯೇ ಎಂಬ ಕುರಿತು ಸಂಶಯದ ಭಾವನೆ ತುಂಬಿಕೊಂಡಿದೆ. ಜಗತ್ತಿನ ನಾಶ ಮತ್ತು ಮಾನವ ಕೋಟಿಯ ಪಾಲಿಗೆ ದುಃಖವನ್ನು ಮಾತ್ರ ತರಬಲ್ಲ ಧ್ಯೇಯಗಳನ್ನು ಮುಂದಿಟ್ಟುಕೊಂಡು ತಾವು ಕೆಲಸ ಮಾಡುತ್ತಿಲ್ಲವೆ ಎಂದವರು ಪ್ರಾಮಾಣಿಕತೆಯಿಂದ ತಮಗೆ ಪ್ರಶ್ನೆ ಹಾಕಿಕೊಳ್ಳಬೇಕು. ಸತ್ಯ ಶೋಧಕನಾದ ವಿಜ್ಞಾನಿಯು ಮಾನವತೆಯ ವೈರಿಯಾಗಿರಬೇಡವೆ? ಎಂಬ ಪ್ರಶ್ನೆಗೆ ಇಂತು ಉತ್ತರ ಸಿಗಬೇಕಾಗಿದೆ.

ಜನರ ಮನೋಭಾವವು ಇಂದು ಸಾಮಾನ್ಯವಾಗಿ ವೈಜ್ಞಾನಿಕ ಆವಿಷ್ಕಾರಗಳನ್ನು ಸ್ವಾಗತಿಸುವಷ್ಟು ಪಕ್ವವಾಗಿದೆ ಎಂಬುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯ. ಮಹಾ ಸತ್ಯಗಳನ್ನೆ ಒಬ್ಬ ಪ್ರವಾದಿ ಬೇಕಾದರೆ ಹೇಳಲಿ — ಜನರು ಅಸತ್ಯವನ್ನು ಗ್ರಹಿಸುವಷ್ಟು ಅದಕ್ಕೆ ಸ್ವಾಗತವನ್ನು ಕೊಡುವಷ್ಟು ಮಾನಸಿಕ ಸಿದ್ಧತೆಯನ್ನು ಹೊಂದಿರದಿದ್ದರೆ, ಆ ಸತ್ಯವು ವ್ಯವಹಾರದಲ್ಲಿ ಮನ್ನಣೆ ಗಳಿಸದು. ಹೀಗಿರುವಾಗ ವಿಜ್ಞಾನವು ಜನರ ಮನಸ್ಸಿನಲ್ಲಿ ಸಂಶಯದ ಭಾವನೆಗಳನ್ನು ಹುಟ್ಟಿಸಿ ವಿಜ್ಞಾನದ ಕುರಿತು ಹುಟ್ಟಿದ ಸ್ವಾಗತವನ್ನು ಕೋರುವ ಭಾವನೆಗಳನ್ನು ಹಾಳು ಗೆಡವುತ್ತಿದ್ದರೆ, ಅದು ದುರ್ದೈವದ ಸಂಗತಿಯೇ ನಿಜ. ವಿಜ್ಞಾನಿಗಳು ತಮ್ಮ ಕೆಲಸವು ಹೀಗೆ ಜನರಲ್ಲಿ ಸಂಶಯದ ಬೀಜ ಬಿತ್ತುವುದಕ್ಕೆ ಅವಕಾಶ ಕೊಡಲಾಗದು. ಮಾನವ ಕೋಟಿಯ ನಾಶವಲ್ಲ, ಉದ್ಧಾರವನ್ನು ವಿಜ್ಞಾನಿಯು ಧ್ಯೇಯವನ್ನಾಗಿಟ್ಟುಕೊಳ್ಳಬೇಕು.

ಮನದೊಳಗಿನ ಅಣುಬೋಂಬು

ಅಣುಬಾಂಬು, ಜಲಜನಕಬಾಂಬು, ಇತ್ಯಾದಿಗಳಿಂದ ಜಗತ್ತಿಗೆ ಕಳವಳ ಉಂಟಾಗಿದೆ. ಇದರಿಂದ ಜಗತ್ತಿನ ಅಸ್ತಿತ್ವಕ್ಕೆ ಅಪಾಯ ಬಹಳವಿದೆ ಎಂದು ಭಾವಿಸುವವರು ಅನೇಕ. ಆದರೆ ಮನಸ್ಸಿನೊಳಗೆ ಸಂಶಯ ರೂಪದಲ್ಲಿರುವ ಅಣುಬಾಂಬು ಇದಕ್ಕಿಂತಲೂ ಹೆಚ್ಚು ಗಂಡಾಂತರಕಾರಿಯಾಗಿದೆ. ಆದುದರಿಂದ ಮನಸ್ಸು ಮತ್ತು ಹೃದಯದಲ್ಲಿರುವ ಸಂಶಯ ಮತ್ತು ಭಯದ ಅಣುಬಾಂಬುಗಳ ಕಡೆಗೆ ಮೊದಲು ಗಮನ ಹರಿಯಬೇಕು. ವಿಜ್ಞಾನವು ತಪ್ಪುದಾರಿಯನ್ನು ತುಳಿದರೆ ನಮ್ಮ ಅಭ್ಯುದಯ ಸಾಧನೆಯಾಗುವ ಬದಲು, ಅಂತ್ಯವೇ ಸಮೀಪವಾಗುತ್ತದೆ. ಜನರನ್ನು ಈ ಭಯಕ್ಕೆ ಗುರಿಪಡಿಸದೆ, ವಿಜ್ಞಾನಿಗಳು ಕೆಲಸ ನಡೆಸಬೇಕು. ಗಗನ ಗೋಪುರಗಳಿಂದ ವಿಜ್ಞಾನಿಗಳು ಕೆಳಗಿಳಿದು ಬಂದು ಸಾಮಾನ್ಯ ಪ್ರಜೆಗಳ ಹೃದಯ ಪೀಠದಲ್ಲಿ ಸ್ಥಾನವನ್ನು ಪಡೆಯುವಂತೆ ತಮ್ಮ ಕೆಲಸವನ್ನು ನಡೆಸಬೇಕು.

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಎರಡನೇ ಯೋಜನೆಯ ಪರಾಮರ್ಶೆ

ಸಮಾಜವಾದಿ ಮಾದರಿಯ ಕಡೆಗೆ ವಿಶೇಷ ಒಲವು

ಎರಡನೇ ಪಂಚವಾರ್ಷಿಕ ಯೋಜನೆಯ ಕರಡಿನ ಕುರಿತು ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸ್ಥಾಯೀ ಸಮಿತಿಯು ಕಳೆದ ವಾರ ವಿಚಾರ ವಿನಿಮಯವನ್ನು ನಡೆಸಿತು. ಸಾಮಾನ್ಯವಾಗಿ ಕರಡಿನ ಮೇಲೆ ಒಪ್ಪಿಗೆಯು ವ್ಯಕ್ತವಾಯಿತು. ಜನವರಿ ೨ನೇ ದಿನಾಂಕ ಸೇರಲಿರುವ ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಪೂರ್ಣಾಧಿವೇಶನದ ಮುಂದೆ ಮಂಡಿಸಲ್ಪಟ್ಟ ತರುವಾಯ ಆವಶ್ಯಕ ಬದಲಾವಣೆಗಳೊಡನೆ ಯೋಜನೆಯು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟವಾಗಲಿದೆಯಾಗಿ ತಿಳಿದು ಬರುತ್ತದೆ.

ಆದಾಯದ ಅಂದಾಜು

ವರದಿಗಳಿಗನುಸಾರವಾಗಿ, ಎರಡನೆ ಯೋಜನೆಯು ಸಾರ್ವಜನಿಕ ರಂಗದಲ್ಲಿ (ಸರಕಾರದ ನೇರವಾದ ಬೆಂಬಲದಿಂದ) ೪೮೦೦ ಕೋಟಿ ರೂಪಾಯಿ ವೆಚ್ಚದ ಕಾರ್ಯಕ್ರಮಗಳು ನಡೆಯಲಿವೆ. ಆದರೆ ಯೋಜನೆಯ ಬಗ್ಗೆ ನಾವು ಕೂಡಿಸಬಹುದಾದ ಹಣವು ಇಷ್ಟು ಹೆಚ್ಚು ಪ್ರಮಾಣದಲ್ಲಿಲ್ಲ. ಆಯವ್ಯಯ ಪಟ್ಟಿಗಳ ಅಂದಾಜಿನ ಮೇಲೆ ೨೪೦೦ ಕೋಟಿ ರೂಪಾಯಿಗಳ ಆದಾಯವಷ್ಟೇ ಬಂದೀತು. ಈಗಿನ ತೆರಿಗೆಯ ಮಟ್ಟದಿಂದ ೩೫೦ ಕೋಟಿ ರೂಪಾಯಿಗಳೂ ಹೊಸ ತೆರಿಗೆಯಿಂದ ೪೫೦ ಕೋಟಿ ರೂಪಾಯಿಗಳೂ ಬರಬಹುದು. ಸಾರ್ವಜನಿಕರ ಚಿಕ್ಕ ಉಳಿತಾಯದ ಸಂಗ್ರಹವು ೫೦೦ ಕೋಟಿ ರೂಪಾಯಿಯಾದೀತು; ಮತ್ತು ಸಾರ್ವಜನಿಕ ಸಾಲವು ೭೦೦ ಕೋಟಿ ರೂಪಾಯಿಗಳನ್ನು ಸಂಪಾದಿಸಿ ಕೊಟ್ಟೀತು. ಹೀಗೆಲ್ಲ ಅಂದಾಜು.

ವಿದೇಶಗಳ ನೆರವು

ಪರದೇಶಗಳ ಸಹಾಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ನಮ್ಮ ಉದ್ದೇಶವಾಗಿದ್ದರೂ ಸುಮಾರು ೮೦೦ ಕೋಟಿ ರೂಪಾಯಿಗಳ ನೆರವು ದೊರಕಿಸಿ ಕೊಳ್ಳಬಹುದೆಂಬ ಆಧಾರದ ಮೇಲೆ ನಮ್ಮ ಎರಡನೇ ಯೋಜನೆ ನಿಂತಿದೆ. ಇಷ್ಟಾಗಿಯೂ ಸುಮಾರು ೪೦೦ ಕೋಟಿ ರೂಪಾಯಿಗಳ ಕೊರತೆ ಬೀಳುವ ಸಂಭವ ಕಾಣಿಸುತ್ತದೆ. ಇದರ ಅನುಭವವು ನಮಗೆ ಯೋಜನೆಯ ಕೊನೆಯ ವರ್ಷದಲ್ಲಿ ಆಗಬಹುದು. ಆದಕ್ಕಾಗಿ ಈಗ ಭಯ ಪಡುವ ಅಗತ್ಯವಿಲ್ಲವೆಂದು ಹೇಳಲಾಗುತ್ತದೆ. ಆದುದರಿಂದ ಯೋಜನೆಯ ಗಾತ್ರವನ್ನು ಚಿಕ್ಕದಾಗಿಸುವ ಪ್ರಮೇಯ ಸದ್ಯಕ್ಕೆ ಇಲ್ಲ. ಯೋಜನೆಯನ್ನು ಕಾರ್ಯಗತಗೊಳಿಸುವ ವಿವರಗಳನ್ನು ಪ್ರತಿ ವರ್ಷ ವಿಮರ್ಶಿಸಿ ಗೊತ್ತುಪಡಿಸಲಾಗುತ್ತದೆ.

ಸಾರ್ವಜನಿಕ ರಂಗ

ಉಪರೋಕ್ತ ಸಮಿತಿಯು ಸಮಾಜವಾದಿ ಮಾದರಿಯ ಸಮಾಜ ರಚನೆಗೆ ಎರಡನೇ ಯೋಜನೆಯು ಎಷ್ಟರ ಮಟ್ಟಿಗೆ ಸಹಾಯಕವೆನಿಸುವುದೆಂಬ ಕಡೆಗೆ ವಿಶೇಷ ಗಮನವನ್ನು ಹರಿಸಿತೆಂದು ವರದಿಗಳು ಹೇಳುತ್ತವೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಕರ್ನಾಟಕದ ಡಾ. ವಿ. ಕೆ. ಆರ್. ವಿ. ರಾವ್, ಪ್ರೊ. ಡಿ. ಆರ್. ಗಾಡ್ಗೀಳ್ ಮತ್ತಿತರ ಅನೇಕ ತಜ್ಞರು ಸಮಿತಿಯ ಮುಂದೆ ತಮ್ಮ ಅಭಿಪ್ರಾಯಗಳನ್ನು ನಿವೇದಿಸಿದರು. ಸಾರ್ವಜನಿಕ ರಂಗದ ಚಟುವಟಿಕೆಯನ್ನು ತೀವ್ರವಾಗಿಸಬೇಕೆಂಬುದೇ ಅವರ ಸಲಹೆಯ ಸಾರಾಂಶ. ರಾಷ್ಟ್ರಾಭಿವೃದ್ಧಿಯ ಉದ್ದೇಶಗಳಿಗೆ ಹಣವನ್ನು ಸಂಪಾದಿಸಲು ಈಗ ಖಾಸಗಿ ರಂಗದ ಕೈಯಲ್ಲಿರುವ ವಿದೇಶ ವ್ಯಾಪಾರ, ವಿಮಾ ವ್ಯವಹಾರ ಮತ್ತು ಬ್ಯಾಂಕಿಂಗುಗಳನ್ನು ವಶಪಡಿಸಿಕೊಳ್ಳಬೇಕು ಎಂದವರು ಹೇಳಿದರೆಂದು ತಿಳಿದು ಬರುತ್ತದೆ.

ಸಂಬಳದ ಮಿತಿ ನಿರ್ಣಯ

ತೆರಿಗೆಯ ರಚನೆಯನ್ನು ವಿಶ್ಲೇಷಿಸಿ ವರದಿಯೊಪ್ಪಿಸಿದ ಮಥಾಯಿ ಮಂಡಳದ ಕೆಲವು ಸೂಚನೆಗಳನ್ನೂ ಸಮಿತಿಯು ಪರಿಶೀಲಿಸಿತು. ಗರಿಷ್ಠ ಮತ್ತು ಕನಿಷ್ಠ ಸಂಬಳ ಪ್ರಮಾಣದಲ್ಲಿ ೩೦ ಪಾಲಿಗಿಂತ ಹೆಚ್ಚಿನ ಅಂತರವಿರಕೂಡದು ಎಂಬ ಸೂಚನೆಗೆ ಪರ ಹಾಗು ವಿರೋಧ ಅಭಿಪ್ರಾಯ ವ್ಯಕ್ತವಾಯಿತು. ಕೇವಲ ಸಾರ್ವಜನಿಕ ರಂಗಕ್ಕೆ ಮಾತ್ರ ಈ ಸೂಚನೆಯನ್ನು ಅನ್ವಯಿಸಿದರೆ ಯೋಗ್ಯತೆಯುಳ್ಳವರು ಖಾಸಗಿ ರಂಗವನ್ನೆ ಆಶ್ರಯಿಸಬಹುದು ಎಂದು ಕೆಲವರು ಭಯವನ್ನು ಸೂಚಿಸಿದರು. ಖಾಸಗಿ ರಂಗಕ್ಕೆ ಸಹ ಈ ನಿಯಮವನ್ನು ಅನ್ವಯಿಸಿದರೆ ತೊಂದರೆಯ ನಿವಾರಣೆಯಾದೀತೆಂದು ಬೇರೆ ಕೆಲವರು ಸಲಹೆ ನೀಡಿದರು. ಮತ್ತೆ ಕೆಲವರು ಹೀಗೆ ಮಾಡಿದರೆ ಜನರು ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುವ ವಿಚಾರವನ್ನೆ ಕೈ ಬಿಡಬಹುದೆಂದು ಸಂಶಯಪಟ್ಟರು. ಇದರಿಂದ ರಾಷ್ಟ್ರದ ಪ್ರಗತಿಗೆ ಅಪಾಯ ತಟ್ಟುವುದು ಖಂಡಿತ ಎಂದು ಈ ಗುಂಪು ಹೆದರಿಸಿತು.

ಹೊಸ ಬಗೆಯ ತೆರಿಗೆ

ವ್ಯಕ್ತಿಯ ಒಟ್ಟು ಸಂಪತ್ತಿನ ಮೇಲೆ ತೆರಿಗೆಯನ್ನು ಹೇರುವುದು ಮಥಾಯಿ ಮಂಡಳದ ಇನ್ನೊಂದು ಮುಖ್ಯ ಸಲಹೆಯಾಗಿದ್ದಿತು. ಇದನ್ನು ಸಾಮಾನ್ಯವಾಗಿ ಎಲ್ಲರೂ ಸ್ವಾಗತಿಸಿದರು. ದುಡಿದ ಆದಾಯ ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳುತ್ತಿರುವವರ ವಿಷಯದಲ್ಲಿ ಒಳ್ಳೆಯ ಪರಿಣಾಮ ಮಾಡಬಹುದೆಂದು ಅಭಿಪ್ರಾಯ ಪಡಲಾಯಿತು. ಕೇಂದ್ರದ ಅರ್ಥ ಸಚಿವ ಶ್ರೀ. ದೇಶಮುಖರು ಯೋಗ್ಯ ಕ್ರಮವನ್ನು ನಿರ್ಧರಿಸಿ ಈ ಸೂಚನೆಯನ್ನು ಕಾರ್ಯಗತಗೊಳಿಸುವುದಕ್ಕೆ ಸಮ್ಮತಿಯನ್ನಿತ್ತರು. ಅವರು ಮುಂದುವರಿದು ವಿಮಾ ವ್ಯವಹಾರದ ರಾಷ್ಟ್ರೀಕರಣವನ್ನು ಮಾಡುವ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದೂ ಇಷ್ಟರಲ್ಲಿಯೇ ಎಲ್ಲ ರಾಜ್ಯ ಸರಕಾರಗಳಿಗೆ ಪತ್ರವನ್ನು ಬರೆದು ಅವುಗಳ ಅಭಿಪ್ರಾಯವನ್ನು ಈ ವಿಷಯದಲ್ಲಿ ಕೇಂದ್ರ ಸರಕಾರವು ಪಡೆದು ಕೊಳ್ಳುವುದೆಂದೂ ತಿಳಿಸಿದರು.

ಖಾಸಗಿ ರಂಗದ ಕಾರ್ಯ

ಸಾರ್ವಜನಿಕ ರಂಗಕ್ಕೂ ಖಾಸಗಿ ರಂಗಕ್ಕೂ ನಡುವೆ ನಿರ್ದಿಷ್ಟಗೆರೆಯನ್ನೆಳೆಯುವ ಬಗ್ಗೆ ಅನೇಕರು ಆಗ್ರಹಪಟ್ಟರು. ಖಾಸಗಿ ರಂಗಕ್ಕಿಂತ ಸಾರ್ವಜನಿಕ ರಂಗದ ಚಟುವಟಿಕೆ ಹೆಚ್ಚು ತೀವ್ರವಾಗಿ ಬೆಳೆಯಬೇಕಾದುದು ತೀರ ಅವಶ್ಯವೆಂದು ಎಲ್ಲರೂ ಒಪ್ಪಿದರು. ಆದರೆ ಹೀಗೆ ಮಾಡುವಾಗ ಸಾರ್ವಜನಿಕ ರಂಗದಲ್ಲಿ ಚೆನ್ನಾಗಿ ಕೆಲಸ ಮಾಡಬಲ್ಲ ಸಿಬಂಧಿಯ ಅಭಾವವಿರುವುದರ ಕಡೆಗೆ ಕೆಲವರು ಗಮನವನ್ನು ಸೆಳೆದರು. ಆದುದರಿಂದ ಮುಂದಿನ ಹತ್ತು-ಹದಿನೈದು ವರ್ಷಗಳ ವರೆಗಾದರೂ ಖಾಸಗಿ ರಂಗದ ಕೈಯಲ್ಲಿ ಈಗಿರುವ ಕೈಗಾರಿಕೆಗಳಲ್ಲಿ ಬಹ್ವಂಶವನ್ನು ಉಳಿಯಗೊಡುವುದೇ ಕ್ಷೇಮ ಎನ್ನಲಾಯಿತು. ಆದರೆ ಮೂಲ ವಸ್ತುಗಳ ಕೈಗಾರಿಕೆಯಲ್ಲಿಯೂ ರಾಷ್ಟ್ರದ ವ್ಯಾಪಕ ಹಿತ ದೃಷ್ಟಿಯಿಂದ ನೆಲೆಗೊಳಿಸಲೇ ಬೇಕಾಗಿ ಬರುವ ಹೊಸ ಕೈಗಾರಿಕೆಗಳಲ್ಲಿಯೂ ಸರಕಾರದ ಪಾತ್ರವೇ ಇರಬೇಕೆಂದು ನಿರ್ಣಯವಾಯಿತು.

ವಿಶೇಷ ಸಲಹೆ

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಇದೇ ಹೊತ್ತಿಗೆ ಒಂದು ಸಮಾರಂಭದಲ್ಲಿ ಮಾತನಾಡುತ್ತಾ ಯೋಜನೆಯ ಪ್ರಯೋಜನಾಂಶಗಳ ಗಣನೆಯನ್ನು ನಡೆಸಬೇಕೆಂದು ಸಲಹೆ ನೀಡಿದ್ದಾರೆ. ಸ್ವತಂತ್ರ ಪ್ರಾದೇಶಿಕ ಸಂಸ್ಥೆಗಳನ್ನು ಸಂಘಟಿಸಿ, ಅವುಗಳ ಮೂಲಕ ಯೋಜನೆಯು ಎಷ್ಟರ ಮಟ್ಟಿಗೆ ಲಾಭದಾಯಕವಾಗಿ ಕಾರ್ಯಾಚರಣೆಗೊಂಡಿದೆ ಎಂಬ ವಿವರವಾದ ಮಾಹಿತಿಯನ್ನು ಸಂಗ್ರಹಿಸಿದರೆ, ಅದರಿಂದ ಪ್ರಜೆಗಳಲ್ಲಿ ಯೋಜನೆಯ ಬಗ್ಗೆ ವಿಶ್ವಾಸ ಹೆಚ್ಚಿಕೊಳ್ಳುವುದೆಂದು ಅವರ ಅಭಿಪ್ರಾಯ. ನಾಗರಿಕರಲ್ಲಿ ಯೋಜನೆಯ ಬಗ್ಗೆ ವಿಶ್ವಾಸ ಮೊಳೆತರೆ ಅಭಿವೃದ್ಧಿ ಪ್ರಯತ್ನಗಳಲ್ಲಿ ಅವರ ಉತ್ಸಾಹ ನಿಶ್ಚಯವಾಗಿಯೂ ಹೆಚ್ಚಿಕೊಳ್ಳುತ್ತದೆ. ಅಲ್ಲದೆ ಇಷ್ಟರ ವರೆಗಿನ ಕೆಲಸವು ನೀಡಿದ ಪರಿಣಾಮಗಳನ್ನು ಕುರಿತಾದ ಅನುಭವವು ಮುಂದಿನ ಹೆಜ್ಜೆಗಳನ್ನು ಕ್ರಮಪಡಿಸುವುದರಲ್ಲಿಯೂ ತಪ್ಪುಗಳನ್ನು ತಿದ್ದಿಕೊಳ್ಳುವುದರಲ್ಲಿಯೂ ಸಹಾಯಕವೆನಿಸುತ್ತದೆ ಎಂದು ರಾಷ್ಟ್ರಾಧ್ಯಕ್ಷರು ಹೇಳಿದ್ದಾರೆ. ಇದನ್ನು ನಾವಾದರೂ ಅನುಮೋದಿಸುತ್ತೇವೆ.

" ಸರಸ್ವತಿ "

(Estd. 1920)

ಕನ್ನಡ ಮಾಸಪತ್ರಿಕೆ.

ಕಳೆದ ಮೂವತ್ತೈದು ವರ್ಷಗಳಿಂದ ಮಹಿಳೆಯರ ಹಾಗೂ ಮಕ್ಕಳ ಸೇವೆಯನ್ನು ಸಲ್ಲಿಸಿ ಇಡೀ ಕರ್ನಾಟಕದಲ್ಲಿ ಹೆಸರಾಂತ ಮಾಸ ಪತ್ರಿಕೆ. ಜಾಹೀರಾತು ಕೊಡಲು ಉತ್ತಮ ಪತ್ರಿಕೆ. ಶಾಲಾ ಮಕ್ಕಳಿಗೆ ಅಗತ್ಯವಾದ ಪತ್ರಿಕೆ.

ಸಂಪಾದಕೆ:— ಆರ್. ಕಲ್ಯಾಣಮ್ಮ.

ವಾರ್ಷಿಕ ಚಂದಾ ರೂ. 3 ಮನಿಯಾರ್ಡರ್ ಮಾಡಿರಿ.

ಮ್ಯಾನೇಜರ್,
ಸರಸ್ವತಿ ಕಾರ್ಯಾಲಯ,
ಅರಳೆಪೇಟೆ, ಬೆಂಗಳೂರು 2.
ಫೋನ್ ನಂ. 3303.

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ, ನರ್ತನ ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೂನಲು, ತೋಫನ್, ಗಡ್ಡ, ಮುಂಡಾಸು, ಕಿರೀಟ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬೆಂಡೋಲೆ, ತುಟಿಗೆ ಹಚ್ಚುವ ಮಿರುಗಿನ ಅಂಟು, ತಲೆಸೂಡಿ ಸುತ್ತುವ ಬಲೆ ಇತ್ಯಾದಿ ಖಾತ್ರಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.



ಸವಿವರವಾದ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Dharamshi Mulji, Dresswala,

132 C, Bhagatwadi, Bhuleshwar Road, BOMBAY—2.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು $4\frac{1}{2}\%$ ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	$3\frac{3}{4}\%$
6	,,	$3\frac{1}{2}\%$
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		$\frac{1}{2}\%$

THE MOOLKY BANK LTD., MULKI.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. O. Box No. 3219, BOMBAY 3.

...ಮುಂದಿನ ಚುನಾವಣೆಗಳು

...ಹರುಗಳ ಮನನೀಯ ಸಲಹೆ

...ಇತ್ತೀಚೆಗೆ ಆಗ್ರದಲ್ಲಿ ಸಾರ್ವಜನಿಕ ...ಯೊಂದರಲ್ಲಿ ಮಾತನಾಡುತ್ತಿದ್ದ ಶ್ರೀ ...ರುಗಳು ಕಾಂಗ್ರೆಸಿನ ಸಮಾಜವಾದಿ ...ದರಿಯ ಸಮಾಜ ರಚನೆಯಲ್ಲಿ ವಿಶ್ವಾ...ಳ್ಳವರ ಉಮೇದ್ವಾರಿಕೆಯನ್ನು ಮಾ... ಮುಂದಿನ ಚುನಾವಣೆಯಲ್ಲಿ ಕಾಂಗ್ರೆ... ಮನ್ನಿಸುವುದು ಎಂದಿದ್ದಾರೆ.

...ಅನೇಕ ಮಂದಿ ಈ ಆದರ್ಶದಲ್ಲಿ ವಿ...ಸವಿಲ್ಲದಿದ್ದರೂ ಕೂಡ ಈಗ ಕಾಂ...ನಲ್ಲಿ ಸೇರಿಕೊಂಡಿದ್ದಾರೆ. ಈ ರೀತಿ...ನ್ನು ಇನ್ನು ಮುಂದುವರಿಸುವಂತಿಲ್ಲ ...ದವರು ಸ್ಪಷ್ಟಪಡಿಸಿದ್ದಾರೆ.

...ಕಾಂಗ್ರೆಸಿನ ಕೆಲಸಗಾರರು ಹಳೆಯ ...ೀಣರನ್ನು ಹೆಚ್ಚಾಗಿ ಅವಲಂಬಿಸದೆ ...ಸ ಮುಖಂಡರನ್ನು ಹುಡುಕಿ ತೆಗೆಯ...ಕು ಎಂದೂ ನೆಹರುಗಳು ಅಪೇಕ್ಷಿ...ಸಿದ್ದಾರೆ.

ಹಳೆಯ ಸಾಧನೆಗಳ ಬಲದಿಂದಲೇ ...ಂಗ್ರೆಸು ಜೀವ ಹಿಡಿದುಕೊಂಡಿರಬಾ...ು. ಜನರ ಬೇಡಿಕೆ ಮತ್ತು ಜೀವನ ...ಡನೆ ನಿಕಟ ಸಂಪರ್ಕವನ್ನಿರಿಸಿ ...ಂಡು ಸಚೇತನವಾಗಿ ಅವುಗಳ ಕರೆಗೆ ...ತ್ತರವಿತ್ತು ಕಾಂಗ್ರೆಸು ಬದುಕಬೇಕು. ...ತೆಯ ಆಶೋತ್ತರಗಳ ಪ್ರತೀಕವೆಂಬ ...ರವವನ್ನು ಕಾಂಗ್ರೆಸು ಕಳೆದುಕೊಂಡ...ದರೆ ಸಾವು ನಿಶ್ಚಿತ ಎಂದು ನೆಹರು ...ಚ್ಚರಿಕೆಯನ್ನಿತ್ತರು.

...ಚುನಾವಣೆಗಳು ಸಮೀಪಿಸಿರುವ ಈ ...ಲದಲ್ಲಿ ಪ್ರತಿಯೊಬ್ಬನೂ ಹುರಿಯಾಳು ... ಕುರಿತು ಈಗ ವಿಚಾರಿಸುತ್ತಿದ್ದಾನೆ. ...ನಾವಣೆಯು ಸಮೀಪಿಸಿರುವುದನ್ನು ನೆ...ಟ್ಟುಕೊಂಡಿರುವುದೂ ಹುರಿಯಾಳು ... ಅರ್ಹತೆಗಳ ಕುರಿತು ಪರ್ಯಾಲೋ...ಚನೆ ನಡೆಸುವುದೂ ಹಿತಕರವಾದ ವಿಷ... ನಾವು ಆರಿಸುವ ಹುರಿಯಾಳು ಆ...ಲಕ್ಕೆ ಅತ್ಯುತ್ತಮ ಯೋಗ್ಯತೆಯುಳ್ಳ...ವನಾಗಿರಬೇಕು. ಹಿಂದೆ ಪ್ರತಿನಿಧಿಯಾ...ನೆಂಬ ನೆಪದಿಂದ ಈ ಸಲವೂ ಆತ...ನ್ನು ಆರಿಸಬಾರದು. ಆತನು ಮಾಡಿ...ದ ಕೆಲಸವೇನು ಎಂಬುದೇ ಅಳತೆಗೋಲಾ...ಗಬೇಕು ಎಂದು ನೆಹರು ತಿಳಿಸಿದರು.

...ಹುರಿಯಾಳುವಿನ ಆಯ್ಕೆಯಲ್ಲಿ ಜಾ...ತಿ, ಮತೀಯ ಹಾಗು ವರ್ಗ ಸಂಬಂ...ಧ ಭಾವನೆಗಳಿಗೆ ಎಡೆಕೊಡ ಕೂಡದು. ... ಸಂಖ್ಯಾಕರಿಗೆ ಆದಷ್ಟು ಹೆಚ್ಚು ...ತಿನಿಧ್ಯ ಸಿಗುವಂತೆಯೂ ಮಹಿಳೆಯ...ರನ್ನು ಹೆಚ್ಚು ಆರಿಸಿಬರುವಂತೆಯೂ ...ಡಬೇಕು ಎಂದು ನೆಹರು ಸಲಹೆ ...ದರು.

ಬೇಕಾಗಿದ್ದಾರೆ.

...ಲೂರು ಸರಸ್ವತಿ ಯೈಡೆಡ್ ಎಲಿಮೆಂಟ... ...ಳೆಗೆ ಹಾಯರ್ ಗ್ರೇಡ್ ತರಬೇತು ...ದಿದ ಅಧ್ಯಾಪಕರೊಬ್ಬರು ಬೇಕಾಗಿ... ಹೆಚ್ಚಿನ ವಿವರಗಳಿಗೆ ಈ ಕೆಳಗಿನ ...ಸಕ್ಕೆ ಬರೆಯಿರಿ.

ಎಚ್. ಸಂಜೀವ ಸೆಟ್ಟಿ,
ಮೆನೇಜರ್, ಸರಸ್ವತಿ ಯೈಡೆಡ್
ಎಲಿಮೆಂಟರಿ ಶಾಲೆ, ಆಲೂರು.
ಪೋಸ್ಟ್ ಗಂಗೊಳ್ಳಿ, ದ. ಕ.

ಫ್ರಾನ್ಸಿನಲ್ಲಿ ರಾಜಕೀಯ ವಿಷಮ ಚಕ್ರ

ಅಮೇರಿಕದ ಕಾಂಗ್ರೆಸಿಗೆ ಅಧ್ಯಕ್ಷ ಐಕರ ಸಂದೇಶ

ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಆಸಕ್ತಿಯುಳ್ಳ ಎಲ್ಲರ ಗಮನವೂ ಈಗ ಫ್ರಾನ್ಸಿನತ್ತ ತಿರುಗಿದೆ. ಅಲ್ಲಿ ಎಡ್ಗರ್ ಫಾರೆಯವರ ಮೇಲೆ ಅವಿಶ್ವಾಸ ಸೂಚಿಸಲಾದ ಬಳಿಕ ಚುನಾವಣೆಯನ್ನು ನಡೆಸಲಾಯಿತು. ಆದರೆ ಇದರ ಫಲಿತಾಂಶಗಳು ಫ್ರಾನ್ಸಿಗೆ ಭದ್ರವಾದ ಸರಕಾರವನ್ನು ಕೊಡುವ ಮಾದರಿಯಲ್ಲಿ ಇಲ್ಲವೇ ಇಲ್ಲ; ಅಷ್ಟೇಯಲ್ಲ, ಫ್ರಾನ್ಸಿನ ಪ್ರಬಲ ರಾಜಕೀಯ ಪಕ್ಷಗಳ ವರ್ಚಸ್ಸು ಕುಗ್ಗಿ ಕೊಂಡು ಅಷ್ಟು ಒಳ್ಳೆಯ ಉದ್ದೇಶಗಳಿಲ್ಲದ ಬೇರೆ ಪಕ್ಷಗಳು ಅನಿಶ್ಚಿತ ಪರಿಸ್ಥಿತಿಯ ಗೊಂದಲದಲ್ಲಿ ಶಕ್ತಿ ಗಳಿಸಿಕೊಂಡಿರುವಂತೆ ಕಾಣುತ್ತದೆ

ಕಮ್ಯುನಿಸ್ಟರ ಪ್ರಾಬಲ್ಯ

ಅತ್ಯಧಿಕ ಸಂಖ್ಯಾಬಲವುಳ್ಳ ಪಕ್ಷವಾಗಿ ಕಮ್ಯುನಿಸ್ಟರು ಯಶಸ್ಸನ್ನು ಗಳಿಸಿರುವುದು ಇದಕ್ಕೆ ನಿದರ್ಶನ. ಸುಮಾರು ಆರು ನೂರರಷ್ಟು ಸಂಖ್ಯಾ ಬಲವುಳ್ಳ ಪಾರ್ಲಿಮೆಂಟಿನಲ್ಲಿ ನೂರೈವತ್ತು ಸ್ಥಾನಗಳನ್ನು ಕಮ್ಯುನಿಸ್ಟರು ಗಳಿಸಿದ್ದಾರೆ. ಅವರು ಸ್ವತಃ ಮಂತ್ರಿ ಮಂಡಳವನ್ನು ರಚಿಸುವಷ್ಟು ಶಕ್ತಿಯನ್ನು ಹೊಂದಿಲ್ಲ; ಆದರೆ ಇತರ ಪಕ್ಷಗಳ ಸಹಕಾರವನ್ನು ಸಂಪಾದಿಸಿ ಮಂತ್ರಿ ಮಂಡಳ ರಚಿಸಲು ಉತ್ಸುಕರಾಗಿದ್ದಾರೆ. ಇದಕ್ಕೆ ರಾಜಕೀಯ ಪಕ್ಷಗಳು ಒಪ್ಪುವುದು ಮಾತ್ರ ಸಂಭವನೀಯವಾಗಿ ಕಾಣುತ್ತಿಲ್ಲ. ಕಮ್ಯುನಿಸ್ಟರು ಪ್ರಬಲರಾಗುವುದು ರಾಜಕೀಯ ಮುತ್ಸದ್ದಿಗಳಿಗೆ ಸರಿಕಂಡಿಲ್ಲ. ಪಾಶ್ಚಾತ್ಯ ರಾಷ್ಟ್ರಗಳನ್ನು ಸದಾ ಅವಲಂಬಿಸಿಕೊಂಡಿರುವ ಫ್ರಾನ್ಸಿಗೆ ಕಮ್ಯುನಿಸ್ಟರ ಬೆಂಬಲದ ಸರಕಾರ ರಚನೆಯಾಯಿತೆಂದರೆ ಅದರ ಪಾಡಿ ಏನಾದೀತು? ಭವಿಷ್ಯವೇನಾದೀತು?

ನಿರಾಶೆಯೇ ಗತಿ!

ಹಾಗೆಂದು ಬೇರೆ ಯಾವ ಗುಂಪಿಗೂ ತಾನಾಗಿ ಮಂತ್ರಿ ಮಂಡಳ ರಚಿಸುವ ಶಕ್ತಿ ಬಂದಿಲ್ಲ. ಅವುಗಳಲ್ಲಿ ಸಹ ಪರಸ್ಪರ ಒಪ್ಪಂದವಾಗ ಬೇಕಾಗಿದೆ; ಹಾಗೆ ಒಪ್ಪಂದವಾಗುವಾಗ ಎಷ್ಟು ವಿಷಯಗಳ ಮಟ್ಟಿಗೆ ಸಾಮಾನ್ಯ ಧೋರಣೆಯನ್ನು ರೂಪಿಸಲು ಸಾಧ್ಯವಾದೀತೋ ತಿಳಿಯದು. ಎಷ್ಟು ಕಡಿಮೆ ವಿಷಯಗಳ ಮೇಲೆ ಅವಷ್ಟು ಕಡಿಮೆ ಸಹಮತವಾಗಿ ರಚನೆಯಾಗ ಬಹುದಾದ ಸರಕಾರವು ದೇಶಕ್ಕೆ ಏನು ಕ್ಷೇಮವನ್ನು ತರಬಹುದು? ಫ್ರಾನ್ಸಿನ ರಾಜ್ಯ ಘಟನೆಯಲ್ಲಿ ತೀವ್ರ ತರವಾದ ದೋಷಗಳಿರುವುದರಿಂದಲೇ ಯಾವ ಪಕ್ಷವೂ ಪ್ರಾಬಲ್ಯಕ್ಕೆ ಬರಲಾಗದೆ, ರಚನೆಗೊಂಡ ಯಾವ ಸರಕಾರವೂ ಹೆಚ್ಚು ಭದ್ರವಾದ ತಳಹದಿಯ ಮೇಲೆ ಕೆಲಸ ಮಾಡಲಾಗದೆ, ಕುಸಿಯುತ್ತಿವೆ ಎಂದು ನಿರೀಕ್ಷಕರ ಅಭಿಪ್ರಾಯ.

ಘಟನೆಯ ದೋಷ

ರಾಜ್ಯ ಘಟನೆಯನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಾದೀತೆ ಎನ್ನುವುದು ಇನ್ನೂ ಸ್ಪಷ್ಟವಾಗಿ ವ್ಯಕ್ತವಾಗಿಲ್ಲ. ಜನಮತವು ಇದಕ್ಕೆ ಅನುಕೂಲವಾಗಿರುವುದು ಸಂಶಯ. ಚುನಾವಣೆಯ ಅಪ್ರಿಯ ಫಲಿತಾಂಶಗಳನ್ನು ಘಟನೆಯಲ್ಲಿರುವುದೆನ್ನಲಾದ ದೋಷಕ್ಕೆ ಅನ್ವಯಿಸಲು ಫ್ರಾನ್ಸಿನ ಸಾಮಾನ್ಯ ಪ್ರಜೆ ಸಿದ್ಧನಾಗಿಲ್ಲ. ಎಲ್ಲರೂ ಎಲ್ಲರನ್ನೂ ಹೊಂದಿಕೊಂಡೋ ವಿರೋಧಿಸಿಯೋ ಕಾದ ಕಾವಲಿಯ ಮೇಲೆ ಕುಣಿದಾಡುವಂಥ ಸರಕಾರದ ಅಸ್ಥಿರತೆಯನ್ನು ಅನುಭವಿಸಿಯೇ ಜೀವನ ನಡೆಸುವುದು ಅಲ್ಲಿಯ ಜನರಿಗೆ ಪ್ರಿಯವಾಗಿರುವಂತೆ ತೋರುತ್ತದೆ. ತೆರಿಗೆ ಕೊಡುವುದಕ್ಕೆ ವಿರೋಧವನ್ನು ಸೂಚಿಸುತ್ತಿರುವ ಪೌಜೇಡಿಸ್ಟರೆಂಬ ಹೊಸ ಪಕ್ಷಕ್ಕೆ ಸಹ ೫೦ ಸ್ಥಾನಗಳನ್ನು ಗಳಿಸಿ ಕೊಟ್ಟಿರುವ ಫ್ರಾನ್ಸಿನ ಜನತೆಯು ತೆರಿಗೆಯ ಹಣವಿಲ್ಲದ ಕೆಲಸ ಮಾಡಬಹುದಾದ ಸರಕಾರವನ್ನೆ ಬಯಸುತ್ತಿದೆ ಎನ್ನಬೇಕೆ?

ಐಕರ ಸಂದೇಶ

ಅಧ್ಯಕ್ಷ ಐಸನ್ ಹಾವರರು ಅಮೇರಿಕದ ಕಾಂಗ್ರೆಸಿಗೆ (ಪ್ರತಿನಿಧಿ ಸಭೆಗೆ) ಸಲ್ಲಿಸಿದ ತಮ್ಮ ಸಂದೇಶದಲ್ಲಿ ಪಶ್ಚಿಮ ಏಶ್ಯಕ್ಕಾಗಿಯೂ ಏಶ್ಯದ ಕಮ್ಯುನಿಸ್ಟೇತರ ರಾಷ್ಟ್ರಗಳಿಗಾಗಿಯೂ ವಿಶೇಷ ಸಹಾಯವನ್ನು ದೀರ್ಘಕಾಲದ ವರೆಗೆ ಒದಗಿಸಲು ಅಮೇರಿಕವು ಮುಂದಾಗಬೇಕೆಂದು ಸೂಚಿಸಿದ್ದಾರೆ. ರಶ್ಯದ ಪ್ರಭೃತಿಗಳು ಈಚೆಗೆ ಭಾರತ ಮತ್ತಿತರ ಏಶ್ಯದ ರಾಷ್ಟ್ರಗಳಲ್ಲಿ ಸಂಚರಿಸಿ, ನಿರ್ಮಿಸಿದ ನೂತನ ವಾತಾವರಣವು ಅಮೇರಿಕದ ವರ್ಚಸ್ಸನ್ನು ಸ್ವಲ್ಪ ಮಟ್ಟಿಗೆ ಈ ಪ್ರದೇಶದಲ್ಲಿ ಕಡಿಮೆ ಮಾಡಿದೆ ಎಂಬ ಕಾಲ್ಪನಿಕ ಭಯವು ಅಧ್ಯಕ್ಷ ಐಕರನ್ನು ಆವರಿಸಿರುವಂತೆ ತೋರುತ್ತದೆ. ಅಮೇರಿಕವು ಭಾರತ ಮತ್ತಿತರ ರಾಷ್ಟ್ರಗಳಿಗೆ ಈಗ ಕೊಡುತ್ತಿರ ಸಹಾಯ ಇನ್ನೂ ಮುಂದರಿಯುತ್ತದೆ. ವಿಶೇಷ ಸಹಾಯ ಕೊಡಬೇಕೆಂದು ಅಮೇರಿಕದ ಕೆಲವು ಧುರೀಣರು ಹೇಳುತ್ತಿರುವರಾದರೂ ಅವಕ್ಕೆ ಹೆಚ್ಚಿನ ಬೆಂಬಲ ದೊರೆತಂತೆ ವರದಿಯಾಗಿಲ್ಲ

ಸೈನಿಕ ಶಕ್ತಿ

ಅಮೇರಿಕದ ಧೋರಣೆಯು ಸಹಾಯವನ್ನು ಹೆಚ್ಚಿಸುವುದಕ್ಕೆ ಅನುಕೂಲವಾಗಿದೆ ಎಂದೇ ಐಕರ ಸಂದೇಶದ ಮೇಲಿಂದ ಕಟ್ಟಿಕೊಂಡರೂ ಭಾರತವು ಸಂತೋಷಪಡಬೇಕಾದ ಪ್ರಮೇಯವಿಲ್ಲ. ಏಕೆಂದರೆ ಅಮೇರಿಕವು ಸೈನಿಕ ಒಪ್ಪಂದಗಳಿಂದ ಶಕ್ತಿ ಸಂಘಟಿಸುವ ತನ್ನ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ಕೊಡುವುದೆಂದು ಐಕರು ಹೇಳಿದ್ದಾರೆ. ಅಲ್ಲದೆ ಅಣುಶಸ್ತ್ರಗಳ ಉತ್ಪಾದನೆಯನ್ನು ತೀವ್ರಗೊಳಿಸುವ ಸುದ್ದಿಯೂ ಅಮೇರಿಕದಿಂದ ಬಂದಿದೆ. ಕಮ್ಯುನಿಸ್ಟರ ಪ್ರಭಾವವನ್ನು ಸೈನಿಕ ಶಕ್ತಿಯಿಂದ ಮಣಿಸುವ ಹವಣಿಕೆಯನ್ನು ಅಮೇರಿಕ ಸ್ವಲ್ಪವೂ ಬಿಟ್ಟುಕೊಟ್ಟಿಲ್ಲ. ಆದುದರಿಂದ ಏಶ್ಯದ ರಾಷ್ಟ್ರಗಳಿಗೆ ಕೊಡಲೆಂದು ಐಕರು ಕೇಳಿರುವ ವಿಶೇಷ ಹಣವು ಸೈನಿಕ ಶಕ್ತಿಗಾಗಿ ವಿನಿಯೋಗವಾಗುವ ಸಂಭವವೇ ಅಧಿಕ; ಅಭಿವೃದ್ಧಿ ಪ್ರಯತ್ನಗಳಿಗೆ ಅಮೇರಿಕದ ಸಹಾಯ ಹೆಚ್ಚಿಗೆ ಸಿಗಲಾರದು.

ಚುನಾವಣೆಯ ಬಿಸಿ

ಇನ್ನು ಕೆಲವೇ ತಿಂಗಳುಗಳಲ್ಲಿ ಅಮೇರಿಕವು ಅಧ್ಯಕ್ಷ ಚುನಾವಣೆಯ ವಾತಾವರಣದಿಂದ ಬಿಸಿಯೇರಲಿದೆ. ಚುನಾವಣೆಯಲ್ಲಿ ಗೆಲ್ಲಬೇಕಾದರೆ ಮತದಾರರಿಗೆ ಆಕರ್ಷಕವಾದ ರಿಯಾಯತಿಗಳನ್ನು ತೋರಿಸ ಬೇಕಾಗುತ್ತದೆ. ಹಾಗಿರುವಾಗ, ಐಕರು ವಿದೇಶ ಸಹಾಯದ ಮೊತ್ತವನ್ನು ಹೆಚ್ಚಿಸಲು ಕಾಂಗ್ರೆಸನ್ನು ಕೇಳಿಕೊಂಡರೆ ಅದನ್ನು ಜನರು ಮೆಚ್ಚುವಂತಿದೆಯೆ? ಕಾಂಗ್ರೆಸು ಐಕರ ಸೂಚನೆಯನ್ನು ತೀರ ನಿರಾಕರಿಸಲಾರದಾದರೂ ಎಚ್ಚರಿಕೆಯನ್ನು ಕೊಡಬಹುದು. ಅಮೇರಿಕದ ಒಳಗಡೆ ಈಗ ಇವೇ ಮಾತು ತುಂಬಿವೆ. ಆ ದೇಶದ ಹೊರಗಡೆ ಕೇಳಿಸುತ್ತಿರುವುದೆಂದರೆ ವಸಾಹತು ವಾದದ ಕುರಿತು ಐಕರು ಒಂದೂ ಮಾತನ್ನಾಡದೆ ಬಿಟ್ಟರು ಹೇಗೆ? ಎಂಬ ಪ್ರಶ್ನೆ. ಡಲ್ಲೇಸರು ಗೋವೆಯ ಕುರಿತು ಹೇಳಿದ ಮಾತುಗಳಿಂದ ಆಫ್ರೇಶ್ಯ ರಾಷ್ಟ್ರಗಳು ಬಹಳ ನೊಂದುಕೊಂಡಿವೆ. ಇದಕ್ಕೆ ತಕ್ಕ ಸಮಾಧಾನ ಕೊಡಬಲ್ಲ ಯಾವದೇ ಮಾತು ಅಧ್ಯಕ್ಷ ಐಕರ ಸಂದೇಶದಲ್ಲಿಲ್ಲ.

ಅವಿವೇಕದ ನಿಲುವು

ವಸಾಹತುವಾದದ ನಿರ್ಮೂಲನದ ಧ್ಯೇಯವನ್ನು ಅಮೇರಿಕ ಈಗ ಬಿಟ್ಟುಕೊಟ್ಟಿದೆಯೆ ಎಂಬ ಸಂಶಯ ತೀರ ಬಲವಾಗ ತೊಡಗಿದೆ ಭಾರತ ಸರಕಾರಕ್ಕೆ ಡಲ್ಲೇಸರು ಗೋವೆಯ ಕುರಿತು ಹೇಳಿದ ಮಾತುಗಳಿಗೆ ವಿವರಣೆ ಬಂದಿದೆಯೆಂದು ತಿಳಿದು ಬರುತ್ತದೆ; ಈ ವಿವರಣೆ ಹೇಳುವುದೇನೆಂದು ಪ್ರಕಟವಾಗಿಲ್ಲ; ಆದರೆ ಭಾರತ ಸರಕಾರಕ್ಕೆ ಇದು ಏನೇನೂ ಸಮಾಧಾನ ಮಾಡಿಲ್ಲ ಎಂದು ಅನಧಿಕೃತ ವಲಯಗಳ ಅಭಿಪ್ರಾಯ. ಈ ವಿಷಯ ಹೀಗಿರುವಾಗ, ಅಮೇರಿಕದ ಸಂರಕ್ಷಣ ಶಾಖೆಯ ಹೊಣೆಗಾರ ಮಂತ್ರಿಗಳೊಬ್ಬರು ಚೀನದ ಕರಾವಳಿತೀರದಲ್ಲಿರುವ ಮಾಕಾವೊ

(ಆನೇ ಪುಟ ನೋಡಿರಿ)

ಖಾತ್ರಿ ಚಿನ್ನದ ನೆಕ್ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
U. RAGHAVENDRA KRISHNA BHAT
Jeweller, Tenkapet, UDIPI, S. Kanara.
ಫೋನ್ ನಂಬ್ರ 60

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೨-೧-'೫೬	೧೯

ಇಸ್ಲಾಂ ಪ್ರಜಾರಾಜ್ಯ

ಇಪ್ಪತ್ತನೇ ಶತಮಾನದಲ್ಲಿಯೂ ಮಧ್ಯ ಯುಗೀನ ಆಡಳಿತ ತಂತ್ರವನ್ನು ಅನುಸರಿಸಲು ಉತ್ಸುಕತೆ ತೋರಿಸುವ ರಾಷ್ಟ್ರವೊಂದಿದೆ ಎಂದು ಹೇಳಿದರೆ ಭಾರತೀಯರಿಗೆ ನಿಜಕ್ಕೂ ಆಶ್ಚರ್ಯವಾದೀತು—ಪಾಕಿಸ್ತಾನದ ಘಟನಾ ಸಮಿತಿಯ ಮುಂದೆ ಮಂಡಿಸಲ್ಪಟ್ಟಿರುವ ಘಟನೆಯ ಕರಡನ್ನು ತಯಾರಿಸಿದ ಬುದ್ಧಿವಂತರು ಇಂಥ ಆಶ್ಚರ್ಯವನ್ನು ನಮ್ಮ ಪಾಲಿಗೆ ತಂದಿದ್ದಾರೆ. ಪಾಕಿಸ್ತಾನವು ಮುಸ್ಲಿಂ ಪ್ರಜಾರಾಜ್ಯವಾಗುವುದೆಂದು ಈ ಕರಡು ಹೇಳುತ್ತದೆ. ಜಾತೀಯ ತಳಹದಿಯ ಮೇಲೆ ರಾಜ್ಯ ಸೂತ್ರವನ್ನು ನಿಲ್ಲಿಸುವಷ್ಟು ಜಾರುವ ದಾರಿಯಲ್ಲಿ ಪಾಕಿಸ್ತಾನದ ಧುರೀಣರು ಮುಂದೆ ಸಾಗಿದ್ದಾರೆ. ಆ ಧುರೀಣರ ದೃಷ್ಟಿಯಲ್ಲಿ ಇದು ಪವಿತ್ರವಾದ ಕೆಲಸವೇ ಆಗಿರಬಹುದು—ಏಕೆಂದರೆ ಪಾಕಿಸ್ತಾನದ ಜನನವು ಮುಸ್ಲಿಂ ಬಾಂಧವ್ಯದ ವಿಚಿತ್ರ ಕಲ್ಪನೆಯಿಂದಲೇ ಸಾಧ್ಯವಾಯಿತು. ಭಾರತದ ವಿಭಜನೆಗೆ ಮುಸ್ಲಿಮರಿಗೊಂದು ಆಶ್ರಯಸ್ಥಾನಬೇಕೆಂಬವಾದವೇ ಕಾರಣವಾಗಿತ್ತೆಂಬುದನ್ನು ನಾವು ಮರೆತಿಲ್ಲ. ವಿಭಜನೆಯ ಬಳಿಕ ಭಾರತವು ಅತ್ಯಲ್ಪಾವಧಿಯಲ್ಲಿ ಘಟನೆಯನ್ನು ತಯಾರಿಸಿದೆ; ವರುಷಗಳ ಹಿಂದಿನಿಂದ ಈ ಘಟನೆಯಂತೆಯೇ ಆಡಳಿತವು ನಡೆದುಕೊಂಡು ಬಂದಿದೆ. ನಮ್ಮ ಘಟನೆಯು ಎಲ್ಲಾ ನಾಗರಿಕರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನಿತ್ತಿದೆ; ಉತ್ಕರ್ಷದ ಸಮಾನಾವಕಾಶಗಳ ಮೂಲಭೂತ ಅಧಿಕಾರವನ್ನು ನೀಡಿದೆ. ಅದು ಮತೀಯ ದ್ವೇಷಕ್ಕೆ ಎಂದಿಗೂ ಪ್ರೋತ್ಸಾಹವನ್ನು ಕೊಟ್ಟಿಲ್ಲ. ಹಿಂದು ರಾಷ್ಟ್ರವಾಗಿಯಲ್ಲ, ಹಿಂದೀ ರಾಷ್ಟ್ರವಾಗಿ ಭಾರತವು ಕೆಲಸಗಳನ್ನು ಇಷ್ಟರ ವರೆಗೆ ಚತುರತೆಯಿಂದ ನಡೆಸಿಕೊಂಡು ಬಂದಿದೆ. ಪಾಕಿಸ್ತಾನವು ರೂಪುಗೊಂಡ ಬಳಿಕ ಸಹ ಭಾರತದಲ್ಲಿ ನಾಲ್ಕು ಕೋಟಿಗಿಂತಲೂ ಹೆಚ್ಚು ಮುಸ್ಲಿಂ ಬಂಧುಗಳು ಉಳಿದಿದ್ದಾರೆ. ಇವರನ್ನು ಭಾರತ ಸರಕಾರವು ಎಷ್ಟು ಚೆನ್ನಾಗಿ ನಡೆಸಿಕೊಂಡಿದೆ ಎಂಬುದನ್ನು ಮುಸ್ಲಿಮರ ಪವಿತ್ರ ಕ್ಷೇತ್ರಗಳಾದ ಮಕ್ಕಾ ಮತ್ತು ಮದೀನಗಳ ರಕ್ಷಕನೆಂಬ ಹೊಣೆ ಹೊತ್ತಿರುವ ಸಾವೂದಿ ಅರೇಬಿಯದ ಅರಸರು ಭಾರತದಲ್ಲಿ ಮೊನ್ನೆ ಸಂಚಾರವನ್ನು ಕೈಗೊಂಡಿದ್ದಾಗ ವ್ಯಕ್ತಪಡಿಸಿದ ಅಭಿಪ್ರಾಯಗಳು ಸ್ಪಷ್ಟಗೊಳಿಸುತ್ತವೆ. ಶ್ರೀ. ಜವಾಹರಲಾಲ ನೆಹರುಗಳ ನೇತೃತ್ವದಲ್ಲಿ ಭಾರತೀಯ ಮುಸ್ಲಿಮರಿಗೆ ಸಮರ್ಥ ರಕ್ಷಣೆ ದೊರೆತಿದೆ, ಅವರನ್ನು ಅತ್ಯಂತ ಯೋಗ್ಯ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿದೆ, ಪಕ್ಷಪಾತತನ ಮುಂತಾದ ಯಾವುದೇ ಅಕ್ರಮವೂ ಕಂಡು ಬರುತ್ತಿಲ್ಲ ಎಂದು ಈ ಅರಸರು ಹೇಳಿದ್ದಾರೆ. ಮುಸ್ಲಿಂ ಬಂಧುಗಳು ಭಾರತದಲ್ಲಿರುವ ರಾಷ್ಟ್ರೀಯ ದೃಷ್ಟಿಕೋಣದ ನೆಹರು ಸರಕಾರದೊಡನೆ ಹೃತ್ಪೂರ್ವಕ ಸಹಕರಿಸಬೇಕೆಂದು ಅವರು ಕೇಳಿ ಕೊಂಡಿದ್ದಾರೆ. ಭಾರತದ ಮುಸ್ಲಿಮರು ಈ ವಿನಂತಿಯನ್ನು ಮನ್ನಿಸುವರೆಂಬಲ್ಲಿ ನಮಗೆ ಸಂದೇಹವಿಲ್ಲ. ಏಕೆಂದರೆ ಅರಸು ಸಾವೂದರು ವಾಸ್ತವವಾದುದನ್ನೆ ನುಡಿದಿದ್ದಾರೆ ಹೊರತು ಕತೆಯನ್ನು ಕಟ್ಟಲು ಹೋಗಿಲ್ಲ. ಆದರೆ ಪಾಕಿಸ್ತಾನದಲ್ಲಿ ಮಾತ್ರ ನಿತ್ಯವೂ ಭಾರತದಲ್ಲಿರುವ ಮುಸ್ಲಿಮರಿಗೆ ಏನೇನೂ ಭದ್ರತೆಯಿಲ್ಲವೆಂಬ ಅಸತ್ಯ ಪ್ರಚಾರವು ಆಕಾಶವಾಣಿಯ ಸುದ್ದಿ ಪ್ರಸಾರ, ಪತ್ರಿಕೆಗಳ ಅಗ್ರ ಲೇಖನ, ಸಾರ್ವಜನಿಕ ಸಭೆಗಳಲ್ಲಿನ ಉದ್ವೇಗಜನಕ ಭಾಷಣ ಇತ್ಯಾದಿ ಮಾಧ್ಯಮಗಳ ಮೂಲಕ ಬಿಡದೆ ನಡೆಯುತ್ತಾ ಬಂದಿದೆ. ಅಲ್ಲಿಯ ಸರಕಾರವು ಇದನ್ನು ತಡೆಗಟ್ಟುವ ಇಚ್ಛೆಯನ್ನು ತೋರಿಸಿಲ್ಲ; ಬದಲು ಪ್ರೋತ್ಸಾಹವನ್ನೆ ಕೊಡುತ್ತಾ ಬಂದಿದೆ. ಸ್ವದೇಶಕ್ಕೆ ಮರಳುವ ದಾರಿಯಲ್ಲಿ ಕರಾಚಿಗೆ ಬಂದಿಳಿದ ಅರಸು ಸಾವೂದರು ಭಾರತದಲ್ಲಿರುವ ಮುಸ್ಲಿಮರ ಕುರಿತು ತೃಪ್ತಿಯನ್ನು ಸೂಚಿಸಿದಾಗ ಅದಕ್ಕೆ ಪಾಕಿಸ್ತಾನದಲ್ಲಿ ಏನೇನೂ ಮಹತ್ವ ಸಿಗದೆ ಹೋಯಿತು. ಏಕೆಂದರೆ ಪಾಕಿಸ್ತಾನದ ರಾಜ್ಯ ಸೂತ್ರಚಾಲಕರಿಗೂ ಅಲ್ಲಿನ ಗೊಂದಲಮಯ ವಾತಾವರಣವನ್ನು ಊರ್ಜಿತದಲ್ಲಿಟ್ಟು ತಮ್ಮ ಸ್ವಾರ್ಥ ಸಾಧಿಸುವ ಗುಂಪುಗಳಿಗೂ ಭಾರತದಲ್ಲಿ ಎಲ್ಲವೂ ಒಳ್ಳೆಯದಾಗಿದೆ ಎಂಬ ಮಾತು ಸಹ್ಯವೆನಿಸುತ್ತಿಲ್ಲ. ಆಂತರಿಕ ಅಸಮಾಧಾನವನ್ನು ಜಾತೀಯ ಭಾವನೆಯನ್ನು ಪ್ರಚೋದಿಸಿ ಭಾರತದ ಕಡೆಗೂ ಕಾಶ್ಮೀರದ ದಿಕ್ಕಿಗೂ ಅಜ್ಞ ಪ್ರಜೆಗಳ ದೃಷ್ಟಿ ಹರಿಸುವಂತೆ ಮಾಡುವ ಮೂಲಕ ಎದುರಿಸುವುದೇ ಕಳೆದ ಎಂಟು ವರ್ಷಗಳಿಂದಲೂ ಪಾಕಿಸ್ತಾನದ ಧುರೀಣರು ಅನುಸರಿಸಿಕೊಂಡು ಬಂದಿರುವ ತಂತ್ರ. ಅಲ್ಲಿ ಸಮಗ್ರ ರಾಷ್ಟ್ರದ ವಿಶ್ವಾಸವನ್ನು ಗಳಿಸಿದ ಒಬ್ಬನೇ ಒಬ್ಬ ಧುರೀಣನೂ ಇಲ್ಲ! ಮುಸ್ಲಿಂ ಲೀಗಿನ ಅಭಿಮಾನಕ್ಕೆ ಸಂಪೂರ್ಣ ಪಾತ್ರನಾದ ನಾಯಕನೂ ಉಳಿದಿಲ್ಲ! ಅಲ್ಲಿ ಎಷ್ಟು ಪ್ರಧಾನ ಮಂತ್ರಿಗಳಾಗಿ ಹೋದರು, ಎಷ್ಟು ಗವರ್ನರ ಜನರಲರಾಗಿ ಹೋದರು, ಎಷ್ಟರ ಮಟ್ಟಿಗೆ ಅನಾಯಕ ಪರಿಸ್ಥಿತಿಯೂ ಆರ್ಥಿಕ ವಿಷಮತೆಯೂ ಅರಾಜಕೀಯತೆಯೂ ತಾಂಡವವಾಡಿತು—ಎಂಬುದನ್ನು ಭಾರತದ ಶಾಂತಿ, ಸುವ್ಯವಸ್ಥೆ ಮತ್ತು ಅಭಿವೃದ್ಧಿಯ ಮಟ್ಟದೊಡನೆಯೂ ಪ್ರಜಾಸತ್ತಾತ್ಮಕ ಆಡಳಿತದೊಡನೆಯೂ ತುಲನೆ ಮಾಡಿ ತಿಳಿದು ಕೊಳ್ಳಬಹುದು. ಹೀಗೆ ಮೊದಲಿನಿಂದಲೂ ಗೊಂದಲದ ನಡುವೆ ಉಸಿರಾಡುತ್ತಿರುವ ಪಾಕಿಸ್ತಾನದ ಪ್ರಭುತ್ವವು ದಿವ್ಯವಾದ ಹಾಗು ಆಡಳಿತೆಗೆ ಮೂಲಾಧಾರವಾದ ಘಟನೆಯಲ್ಲಿ ಮತೀಯ ತಳಹದಿಯ ಮೇಲೆ ಸಹಜವಾಗಿಯೇ ಭೇದಭಾವವನ್ನು ಮಾಡಿದೆ. ಮತೀಯ (ಅಥವಾ ಜಾತೀಯ) ತಳಹದಿಯಿಲ್ಲದ ಹೊರತು ಪಾಕಿಸ್ತಾನದ ಅಸ್ತಿತ್ವವು ತೀರ ಅಶಕ್ಯವೆಂಬುದನ್ನು ಈಗಿನ ಪ್ರಭುತ್ವ ಹೀಗೆ ಪುನಃ ತೋರಿಸಿ ಕೊಟ್ಟಿದೆ; ಅಥವಾ ಒಪ್ಪಿಕೊಂಡಿದೆ. ಭಾರತದಲ್ಲಿ ಮುಸ್ಲಿಮರಿಗೆ (ಅವರಿಲ್ಲಿ ಅಲ್ಪ ಸಂಖ್ಯಾಕರು) ಭದ್ರತೆಯಿಲ್ಲ ಎನ್ನುವ ಪಾಕಿಸ್ತಾನದ ಪ್ರಭುತ್ವವು ಆ ರಾಷ್ಟ್ರದ ಅಧ್ಯಕ್ಷ ಹಾಗು ಉಪಾಧ್ಯಕ್ಷ ಸ್ಥಾನಗಳಿಗೆ ಮುಸ್ಲಿಮನೇ ಅರ್ಹನು; ಹೊರತು ಬೇರೆ ಮತಾವಲಂಬಿಗಳಲ್ಲ ಎಂದು ಘಟನೆಯಲ್ಲಿ ನಿರೂಪಿಸಲು ಹೋಗಿದೆ! ಈ ವೈಪರೀತ್ಯವನ್ನು ಕಂಡು ನಗಬೇಕೆ, ಅಳಬೇಕೆ? ರಾಜ್ಯವು ಶಾಸನದ ಮುಂದೆ ಎಲ್ಲ ನಾಗರಿಕರನ್ನೂ ಸಮಾನವಾಗಿ ನಡೆಸಿಕೊಳ್ಳುವುದೆಂದು ಮೂಲಭೂತ ಅಧಿಕಾರದ ಸೂತ್ರವು ಸಾರುತ್ತಿರುವುದೇನೊ ನಿಜ—ಆದರೆ ಮುಸ್ಲಿಮೇತರ ನಾಗರಿಕರಿಗೆ ರಾಷ್ಟ್ರದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಏರುವ ಅರ್ಹತೆ ಸಿಗಲಾರದೆಂದು ಹೇಳಿದ ಮೇಲೆ ಈ ಸಮಾನತೆಗೆ ಏನು ಬೆಲೆಯುಳಿದೀತು? ಪಾಕಿಸ್ತಾನದ ಮಟ್ಟಿಗೆ ಈಗ ಅಲ್ಪ ಸಂಖ್ಯಾಕರಾಗಿರುವ ಹಿಂದು ಮತ್ತಿತರ ಮುಸ್ಲಿಮೇತರ ಮತೀಯರಿಗೆ ಮುಸ್ಲಿಮರಷ್ಟು ಯೋಗ್ಯತೆಯನ್ನು ಸರಕಾರವು ಕೊಡಲು ಸಿದ್ಧವಿಲ್ಲವೆಂದೇ ಇದರ ಅರ್ಥವಲ್ಲವೆ? ಈ ಬಗೆಯ ಭೇದಭಾವವು ಇಪ್ಪತ್ತನೇ ಶತಮಾನದಲ್ಲಿ ನಡೆಯುತ್ತಿರುವುದು ನಿಜಕ್ಕೂ ಶೋಚನೀಯ; ಅಷ್ಟೆಯಲ್ಲ, ಗರ್ಹಣೀಯ ಕೂಡ. ಪಾಕಿಸ್ತಾನದ ದುರ್ದೈವಿ ಘಟನೆಯು ಇಷ್ಟು ಅವಾಂತರವನ್ನು ಮಾತ್ರ ಮಾಡುತ್ತಿಲ್ಲ—ಅದು ಪವಿತ್ರವಾದ ಇಸ್ಲಾಂ ತತ್ವಗಳ ಅನುಷ್ಠಾನಕ್ಕೂ ಮುಂದಾಗಿದೆ. ಇಸ್ಲಾಂ ತತ್ವಗಳ ಸಂಶೋಧನೆ ಮತ್ತು ವಿಶೇಷಾಧ್ಯಯನಕ್ಕಾಗಿ ರಾಷ್ಟ್ರದ ಅಧ್ಯಕ್ಷನು ಒಂದು ಸಂಸ್ಥೆಯನ್ನು ನೇಮಿಸಬೇಕೆಂದು ಅದು ನಿರ್ದೇಶಿಸುತ್ತದೆ. ಮುಸ್ಲಿಂ ಸಮಾಜದ ಪುನರುಜ್ಜೀವನವು ಇದರ ಉದ್ದೇಶವೆಂದು ಹೇಳಲಾಗಿದ್ದರೂ ದ್ವಿಮುಖಿಯಾದ ನಾಗರಿಕತ್ವದ ಮೇಲೆ ಇದರ ಗಂಭೀರ ಪರಿಣಾಮವಾಗದಿರದು. ಹಿಂದೊಮ್ಮೆ ಪ್ರಕಟಗೊಳಿಸಿದ್ದ ಕರಡಿನಲ್ಲಿ ಮುಸ್ಲಿಮರಿಗೊಂದು ಬಗೆಯಲ್ಲಿ, ಮುಸ್ಲಿಮೇತರರಿಗಿನ್ನೊಂದು ಬಗೆಯಲ್ಲಿ—ಮತದಾರ ಕ್ಷೇತ್ರಗಳನ್ನು ಏರ್ಪಡಿಸುವ ಸೂಚನೆಯಿದ್ದಿತು. ಈಗಿನ ಕರಡು ಹೊಸ ಘಟನೆಯಂತೆ ಚುನಾಯಿಸಲ್ಪಡುವ ರಾಷ್ಟ್ರೀಯ ಶಾಸನಾಂಗವು ಮತದಾರ ಕ್ಷೇತ್ರಗಳ ಸ್ವರೂಪ ಹಾಗು ಮತದಾನದ ವಿವರಗಳನ್ನು ಗೊತ್ತುಪಡಿಸಬೇಕೆಂದು ಹೇಳುತ್ತದೆ. ಆದರೆ ಘಟನೆಯೇ ಮುಸ್ಲಿಂ ಹಾಗು ಮುಸ್ಲಿಮೇತರರಲ್ಲಿ ಜುಗುಪ್ಸಾವಹ ಭೇದಭಾವವನ್ನು ಮಾಡುತ್ತಿರುವಾಗ, ಚುನಾವಣೆಗಳಲ್ಲಿ ಮುಸ್ಲಿಮೇತರರಿಗೆ ನ್ಯಾಯ ದೊರಕುವ ಸಂಭವ ತೀರ ಕಡಿಮೆಯೆಂದು ಹೇಳದೆ ವಿಧಿಯಿಲ್ಲ. ಪಾಕಿಸ್ತಾನವು ಮುಸ್ಲಿಂ ರಾಷ್ಟ್ರಗಳ ಐಕ್ಯ ಸಂಬಂಧವನ್ನು ಜೋಡಿಸಲು ಹೆಣಗಬೇಕೆಂದೂ ಘಟನೆಯ ಕರಡು ಹೇಳುತ್ತದೆ. ಇದನ್ನು ನೋಡಿ ಬೇರೆ ಮುಸ್ಲಿಂ ರಾಷ್ಟ್ರಗಳಲ್ಲಿ ಹೆಚ್ಚಿನವು ನಕ್ಕು ಬಿಡಬಹುದು. ಮುಸ್ಲಿಂ ರಾಷ್ಟ್ರಗಳಲ್ಲಿ ಏಳು ವರ್ಷಗಳ ಹಿಂದಿದ್ದಿರಬಹುದಾದ ಮಧುರ ಬಾಂಧವ್ಯ ಈಗ ತೀರ ಬಿಕ್ಕಟ್ಟಿನ ಪರಿಸ್ಥಿತಿಗೆ ಬಂದು ಮುಟ್ಟಿದೆ. ಇದಕ್ಕೆ ಪಾಕಿಸ್ತಾನ, ಇರಾನ್, ಇರಾಕ್, ತುರ್ಕಿ ಇತ್ಯಾದಿಗಳು ಪಶ್ಚಿಮ ಜಗತ್ತಿನ ವರ್ಚಸ್ಸಿಗೆ ಗುರಿಯಾಗಿರುವುದೂ ಸೈನಿಕ ಒಪ್ಪಂದಗಳ ವ್ಯಾಮೋಹಕ್ಕೆ ಬಲಿ ಬಿದ್ದಿರುವುದೂ ಕಾರಣ. ಸಾವೂದಿ ಅರೇಬಿಯ, ಈಜಿಪ್ತ ಮುಂತಾದ ಪ್ರಬಲ ಶಕ್ತಿ ಸಂಪನ್ನ ಮುಸ್ಲಿಂ ರಾಷ್ಟ್ರಗಳೊಡನೆ ಪಾಕಿಸ್ತಾನಕ್ಕೆ ತೀವ್ರ ಭಿನ್ನಾಭಿಪ್ರಾಯವು ಈಗ ಹಿಂದಿಗಿಂತ ಇಂದು ಅನೇಕ ವಿಷಯಗಳಲ್ಲಿ ಹೆಚ್ಚಿಕೊಂಡಿದೆ. ಹೀಗಿರುವಾಗ ಘಟನೆಯ ಈ ನಿರ್ದೇಶದಂತೆ ಅದಕ್ಕೆ ನಡೆದುಕೊಳ್ಳುವ ಸಾಧ್ಯತೆ ಹೇಗೆ ಬಂದೀತೊ ತಿಳಿಯದು. ಅಂತೂ ಈ ಇಸ್ಲಾಂ ಪ್ರಜಾರಾಜ್ಯವು ನಾದಿರ್ ಶಾಹಿಯ ನೆನಪನ್ನು ಮುಸ್ಲಿಮೇತರರಿಗೆ ತಂದುಕೊಟ್ಟೀತು; ಮಧ್ಯ ಯುಗದ ಕಳಂಕಿತ ರಾಜ್ಯತಂತ್ರದ ಅವಶೇಷವಾಗಿ ಜಗತ್ತಿನ ದೃಷ್ಟಿಗೆ ಕಂಡೀತು-ಎನ್ನುವ ಭಯ ನಮ್ಮದು.

Read & advertise in

NAVAYUGA REPUBLIC DAY SPECIAL

ತಾ. 26—1—56ರಂದು

ನವಯುಗ ಪ್ರಜಾರಾಜ್ಯ ವಿಶೇಷಾಂಕವು

ಕರ್ನಾಟಕದ ಪ್ರಸಿದ್ಧರನೇಕರ ಸಂದರ್ಭೋಚಿತ ಲೇಖನ, ಕವನಗಳಿಂದ ವಿಶಿಷ್ಟ ತರದಲ್ಲಿ ಪ್ರಕಟವಾಗುವುದು.

ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಚಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು—

ಸಂತಾನ ಸಿಂದೂರ:— ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ನಿವಾರಿಸುತ್ತದೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**

628 "ಸಂತಾನ ಸಿಂದೂರ ಸದನ" (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು, (MYSORE) S. I.

ಸಚಿವ ಮಟ್ಟದಲ್ಲಿ ಉಚ್ಚ ಸಮಿತಿ

ಕನ್ನಡಿಗರ ಸಮಸ್ಯೆಯ ಪರಿಶೀಲನೆಯ ಉದ್ದೇಶ

ಹೈದರಾಬಾದಿನ ಕನ್ನಡ ಪ್ರದೇಶಗಳ ಕಾಂಗ್ರೆಸು ಧುರೀಣರ ಮತ್ತು ಶಾಸಕಾಂಗದ ಸದಸ್ಯರ ಸಭೆಯೊಂದರಲ್ಲಿ ಇದೇ ೯ನೇ ದಿನಾಂಕ ಮಾತನಾಡಿದ ಮೈಸೂರು ಮುಖ್ಯ ಮಂತ್ರಿ ಶ್ರೀ. ಹನುಮಂತಯ್ಯನವರು ಸೂಚಿತ ಕರ್ನಾಟಕ ರಾಜ್ಯ ನಿರ್ಮಾಣ ಕಾರ್ಯವನ್ನು ಸುಗಮಗೊಳಿಸುವ ಉದ್ದೇಶದಿಂದ ಮಂತ್ರಿ ಮಟ್ಟದಲ್ಲಿ ಉಚ್ಚ ಸಮಿತಿಯೊಂದನ್ನು ರಚಿಸಬೇಕೆಂಬ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ.

ಸಹಕಾರದ ಯೋಜನೆ

ಮೈಸೂರು ಪ್ರಧಾನ ಕೇಂದ್ರವಾಗಿ ಪರಿಣಮಿಸಿ, ಅದರೊಡನೆ ಸೇರುವ ಈಗಿನ ಹೈದರಾಬಾದು, ಮುಂಬಯಿ ಮತ್ತು ಮದ್ರಾಸು ರಾಜ್ಯಗಳ ಕನ್ನಡ ಪ್ರದೇಶ ಮತ್ತು ಕೊಡಗಿನ ಅವಶ್ಯಕತೆ, ಸ್ಥಿತಿಗತಿ ಮತ್ತು ಇತರ ಸಮಸ್ಯೆಗಳೊಡನೆ ನಿಕಟ ಪರಿಚಯವನ್ನು ಹೊಂದುವ ಆತುರವನ್ನು ಶ್ರೀ. ಹನುಮಂತಯ್ಯನವರು ವ್ಯಕ್ತಪಡಿಸಿದ್ದಾರೆ. ಉಚ್ಚ ಮಟ್ಟದ ಸಮಿತಿಯೊಡನೆ ಪ್ರಜಾಪ್ರತಿನಿಧಿಗಳೂ ಇತರ ಧುರೀಣರೂ ಸಾರ್ವಜನಿಕರೂ ಧಾರಾಳವಾಗಿ ಸಹಕರಿಸಬೇಕೆಂದು ಅವರು ಮನವಿಮಾಡಿಕೊಂಡಿದ್ದಾರೆ.

ಉಪಸಮಿತಿಯ ತೀರ್ಮಾನ

ಕಾಂಗ್ರೆಸಿನ ಚತುಷ್ಟಯ ಮಂಡಳವು ತೀರ್ಮಾನವಾಗದೆ ಬಾಕಿ ಉಳಿದಿರುವ ರಾಜ್ಯಗಳ ಪುನರ್ಘಟನೆಗೆ ಸಂಬಂಧಿಸಿದ ವಿಷಯಗಳ ಕುರಿತು ಇದೇ ೧೬ನೇ ದಿನಾಂಕ ಕೊನೆಯ ನಿರ್ಣಯ ಕೈಗೊಳ್ಳುವುದೆಂದು ವರದಿಯಾಗಿದೆ. ಕೇಂದ್ರ ಸರಕಾರವು ರಾಜ್ಯಗಳ ಪುನರ್ಘಟನೆಗೆ ಸಂಬಂಧಿಸಿದ ಮಸೂದೆಯ ಕರಡನ್ನು ಸಿದ್ಧಪಡಿಸಿರುವುದೆಂದೂ ರಾಜ್ಯಗಳ ಹೆಸರನ್ನು ಉಲ್ಲೇಖಿಸಿ ಕ್ಷೇತ್ರ ನಿರ್ಣಯಣೆ ಮಾಡುವ ಕೆಲಸವೊಂದೇ ಈ ಕರಡಿನಲ್ಲಿ ಈಗ ಬಾಕಿಯಾಗಿರುವ ವಿಷಯವೆಂದೂ ಹೇಳಲಾಗಿದೆ.

ಬಾಕಿಯುಳಿದ ವಿಷಯ

ಬೇರೆ ಬೇರೆ ರಾಜ್ಯ ಸರಕಾರಗಳ ಅವಗಾಹನೆಗೆ ಮಸೂದೆಯ ಕರಡನ್ನು ಇದೇ ೧೫ನೇ ದಿನಾಂಕದೊಳಗೆ ಕಳಿಸಬೇಕಾದುದರಿಂದ ಕಾಂಗ್ರೆಸಿನ ಉಚ್ಚ ಮಟ್ಟದ ಚತುಷ್ಟಯ ಮಂಡಳವು ಶೀಘ್ರ ನಿರ್ಣಯವನ್ನು ಕೈಗೊಳ್ಳಲೇಬೇಕಾಗಿದೆ. ಮುಂಬಯಿ ನಗರದ ಸ್ಥಾನಮಾನ ಮತ್ತು ಪಂಜಾಬಿಗಳ ಬೇಡಿಕೆ— ಇವು ತೀರ್ಮಾನದ ಬಗ್ಗೆ ಕಟಿಲವಾಗಿ ಕಂಡುಬಂದಿರುವ ವಿವಾದಗಳೆಂದು ತಿಳಿದುಬರುತ್ತದೆ. ಇವರೊಡನೆ ಅನೇಕ ಗಡಿ ತಂಟೆಗಳನ್ನು ಬಗೆಹರಿಸಬೇಕಾಗಿದೆ.

ಪಂತರ ಸಂಶಯ

ಗೃಹಮಂತ್ರಿ ಪಂಡಿತ ಪಂತರು ಹೊಸರಾಜ್ಯಗಳ ನಿರ್ಮಾಣವು ಹಿಂದೆ ವರದಿಯಾದಂತೆ ಅಕ್ಟೋಬರದಲ್ಲಿ ನಡೆಯದೆ ನವಂಬರ ತಿಂಗಳಿಗೆ ಮುಂದುವರಿಯಬಹುದೆಂಬ ವಿಷಯವನ್ನು ಹೊರಗೆಡವಿದ್ದಾರೆ. ಸಾಲಸೊತ್ತುಗಳಲ್ಲಿ ಪಾಲುನಿರ್ಧರಿಸುವುದೇ ಮುಂತಾದ ಕೆಲವು ಕೆಲಸಗಳಲ್ಲಿ ಸ್ವಲ್ಪ ವಿಳಂಬ ನಡೆಯಬಹುದೆಂಬುದೇ ಇದರ ಕಾರಣ. ಆದ್ದರಿಂದ, ಚುನಾವಣೆಗಳನ್ನು ಇದಕ್ಕಾಗಿ ಮುಂದುವರಿಸುವ ಪ್ರಮೇಯ ಬರಲಾರದೆಂದು ಅವರು ಹೇಳಿದ್ದಾರೆ. ಅದು ಈಗಿನ ನಿರ್ಧಾರದಂತೆ ೧೯೫೭ನೇ ಫೆಬ್ರುವರಿಯ ಸುಮಾರಿಗೆ ನಡೆಯುತ್ತದೆ.

ಬೊಂಬಾಯಿಯ ನ್ಯೂ ಕರ್ನಾಟಕ ಲೈಬ್ರರಿಯ ವಾರ್ಷಿಕ ಪಂದ್ಯಾಟವು ತಾ. ೪ರಲ್ಲಿ ಶ್ರೀ ಕಾಶಿನಾಥ ಶಿರ್ಗಾಂವ್‌ಕಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಯಕ್ಷಗಾನ ಪ್ರಸಂಗ— ತಾ. ೨೪ರಲ್ಲಿ ರಾತ್ರಿ ಬಿ. ಬಿ. ದಾದರಿನಲ್ಲಿ ಶ್ರೀ ಗಜಾನನ ಅಖಿಲ ಕರ್ನಾಟಕ ಯಕ್ಷಗಾನ ಮಂಡಳಿಯವರು 'ವಿಶ್ವಾಮಿತ್ರ ತಪೋಭಂಗ ಮತ್ತು ಪ್ರದ್ಯುಮ್ನ ವಿವಾಹ' ಎಂಬ ಎರಡು ಪ್ರಸಂಗಗಳನ್ನು ಡಾ. ಟಿ. ಆರ್. ನರೆನಡೆ, ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಆಡಿತೋರಿಸಿದರು. ಸಂಘದ ಅಧ್ಯಕ್ಷ ಶ್ರೀ. ಬಿ. ವಿಠಲ ಶೆಟ್ಟರು ಅಧ್ಯಕ್ಷರಿಗೆ ಹಾರತುರಾಯಿಗಳನ್ನರ್ಪಿಸಿದರು. ಶ್ರೀ. ಆರ್. ಆರ್. ಮೋಲ್ಪನೆಯವರು ಯಕ್ಷಗಾನದ ಕುರಿತು ಭಾಷಣವಿತ್ತರು.

ಕೊಡಗು— ಕೊಡಗಿನ ನಾಪೋಕ್ಲು ನಗರದಲ್ಲಿ ಅಖಿಲ ಕೊಡಗು ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ತಾ. ೨೪ರಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀ. ಶ್ರೀಪತಿ ರಾವ್ ಪಲಿಮಾರ್ಕರವರು ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಗಳ ದೈನಿಕ ವಾರ ಮತ್ತು ಮಾಸಿಕ ಪತ್ರಿಕೆಗಳನ್ನು ಪ್ರದರ್ಶಿಸಿದರು.

ಚಿಕ್ಕಮಂಗಳೂರು— ಸ್ಥಳೀಯ 'ಭಾರತಿ ಕಲಾವೃಂದ' ದ ಆಶ್ರಯದಲ್ಲಿ ಇದೇ ತಾ. ೨೬ರಲ್ಲಿ 'ಮಲೆನಾಡ ಜನಪದ ಪದ್ಯ (ಸಾಹಿತ್ಯ) ಸ್ಪರ್ಧೆಯು ನಡೆಯುವುದು. ಮಲೆನಾಡಿನ ತರುಣ ಬರಹಗಾರರು ಪ್ರವೇಶಧನ ನಾಲ್ಕಾಣೆಯೊಂದಿಗೆ ತಮ್ಮ ಕವನಗಳನ್ನು ತಾ. ೧೫ರೊಳಗೆ 'ಪಾಲಕ, ಕಾರ್ಯದರ್ಶಿ, ೧೧೩೨, ಮೋರ್ಟುಪೇಟೆ, ಚಿಕ್ಕಮಗಳೂರು' ವಿಳಾಸಕ್ಕೆ, ಕಳುಹಿಸಿಕೊಡಬೇಕು.

ಉಡುಪಿ

ಲೈಬ್ರರಿ ಕಟ್ಟಡ ಕೆಲಸಪ್ರಾರಂಭ

ಸ್ಥಳೀಕ ಅಭಿವೃದ್ಧಿ ಯೋಜನೆಗನುಗುಣವಾಗಿ ಅಜ್ಜರಕಾಡಿನಲ್ಲಿ ದಿ। ಎಮ್. ವಿಠಲ ಕಾಮತರ ಸ್ಮಾರಕಾರ್ಥವಾಗಿ ನಿರ್ಮಿಸಲಾಗುವ ಲೈಬ್ರರಿ ಕಟ್ಟಡ ಕೆಲಸದ ಪ್ರಾರಂಭವನ್ನು ತಾ. ೨ರಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪರಶುರಾಮ ನಾಯ್ಡುರು ನೆರವೇರಿಸಿದರು. ಡಾ. ಎಸ್. ಆರ್. ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುನಿಸಿಪಲ್ ಚೇರ್‌ಮನ್ ಶ್ರೀ ಕೆ. ಕೆ. ಪೈಗಳು ಸ್ವಾಗತಮಾತುಗಳನ್ನಾಡಿದರು. ಶ್ರೀ ಟಿ. ಎ. ಪೈ. ಎಮ್. ಎಲ್. ಎ. ಅವರು ಶುಭೋಚಿತಮಾತುಗಳನ್ನಾಡಿದರು.

ಬೀಡಿ ಲೇಬರ್ ಯೂನಿಯನಿನ— ಮಹಾಸಭೆಯು ತಾ. ೧ರಂದು ಶ್ರೀ ಕೆ. ದಾಮೋದರ ರವರ ಅಧ್ಯಕ್ಷತೆಯಲ್ಲಿ ಜರಗಿ, ಹೆಂಗಸರಿಗೂ ಗಂಡಸರಿಗೂ ೧೦೦೦ ಬೀಡಿಗಳಿಗೆ ರೂ. ೧—೧೨—೦ ಮಜೂರಿ ಸಿಗಬೇಕೆನ್ನುವ ಇತ್ಯಾದಿ ಕೇಳಿಕೆಗಳು ಮಂಜೂರಾದುವೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ವಿವಾಹ ಸಮಾರಂಭ— ಬೋರ್ಡು ಹೈಸ್ಕೂಲಿನ ನಿವೃತ್ತ ಹೆಡ್ಮಾಸ್ಟರ್ ಶ್ರೀ ರೋಕ್ಕಿ ಫೆರ್ನಾಂಡಿಸರ ಪುತ್ರಿ ಕು. ಜುಡಿತ್ ಲಿನೆಟ್ ಜೋಯ್ಸ್ ಫೆರ್ನಾಂಡಿಸರ ವಿವಾಹವು ಮಂಗಳೂರು ಮಿಸೆಸ್ ಲೂಸಿ ಶ್ರೀಷ್ಮರ ಪುತ್ರ ಇರಿಕ್ ಫ್ರಾನ್ಸಿಸ್ ರೆಂಜನ್ ಶ್ರೀಷ್ಮರೊಡನೆ ಮಂಗಳೂರಿನ ಲೇಡಿ ಆಫ್ ಮಿರೆಕಲ್ ಚರ್ಚಿನಲ್ಲಿ ತಾ. ೪ರಂದು ವಿಜೃಂಭಣೆಯಿಂದ ನೆರವೇರಿತು.

ಅಣು ಶಕ್ತಿ ಕೇಂದ್ರಕ್ಕೆ ಸಂದರ್ಶನ

ಅಮೇರಿಕವು ಇದೇ ಮಾರ್ಚ ತಿಂಗಳಲ್ಲಿ ಶಾಂತ ಸಾಗರದನ್ನು ಮರಳಿ ಅಲ್ಲೋಲಕಲ್ಲೋಲ ಗೊಳಿಸುವ ಯೋಜನೆಯನ್ನು ಸಿದ್ಧಗೊಳಿಸಿದೆ—ಅರ್ಥಾತ್ ಎರಡು ಪ್ರಬಲ ತರವಾದ ಜಲಜನಕ ಬಾಂಬುಗಳನ್ನದು ಸ್ಫೋಟಿಸಗೊಳಿಸಲಿದೆ. ಚಿತ್ರದಲ್ಲಿ ಕಾಣುತ್ತಿರುವುದು ಅಮೇರಿಕದ ಮಿತ್ರ ರಾಷ್ಟ್ರವಾದ ಬ್ರಿಟನಿನ ಅಣು ಸಂಶೋಧನಾ ಕೇಂದ್ರದ ಒಂದು ಭಾಗ. ಅಲ್ಲಿಗೆ ಸಂದರ್ಶನ ನೀಡಿದವರು ರಾಣಿಯ ಗಂಡ, ಡ್ಯೂಕ್ ಆಫ್ ಎಡಿನ್‌ಬರ್ಗ್!

ದೀಪಬೆಳಗುವ ಸಮಾರಂಭ— ಶ್ರೀ ಎಸ್. ವಿ. ದೇವಸ್ಥಾನದ ವರದೇಂದ್ರ ಕಲಾಮಂದಿರಕ್ಕೆ ಶ್ರೀ ಪಾಂಗಾಳ ಸತ್ಯೇಂದ್ರ ನಾಯ್ಕರು ದಾನವಾಗಿತ್ತ ವೇದಿಕಾ ದೀಪಗಳನ್ನು ಬೆಳಗುವ ಸಮಾರಂಭವು ತಾ. ೭ರಂದು ಶ್ರೀ ಪಿ. ಗೋಪಾಲ ನಾಯ್ಕರಿಂದ ನೆರವೇರಿಸಲ್ಪಟ್ಟಿತು. ಉಪಾಹಾರವಾದ ಮೇಲೆ ಶ್ರೀ ಪಿ. ಎಸ್ ನಾಯ್ಕರು ಸ್ವಾಗತಭಾಷಣಮಾಡಿದರು. ಡಾ. ಎಸ್. ಆರ್. ಪೈಗಳು ಆಡಳಿತ ಮಂಡಳಿಯ ವತಿಯಿಂದ ಉದಾರದಾನಕ್ಕಾಗಿ ಆಭಾರಸೂಚಿಸಿದರು. ಡಾ. ಟಿ. ಮಾಧವ ಪೈಗಳು ಸಂಘಟನೆಯಿಂದ ಮಹಾಕಾರ್ಯಗಳನ್ನು ಸಾಧಿಸಬಹುದೆಂದರು. ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರು ಧನ್ಯವಾದಗಳನ್ನಿತ್ತು ತರುಣರಲ್ಲಿ ಸೇವಾಬುದ್ಧಿ ಇರಬೇಕಾದ್ದು ಮುಖ್ಯವೆಂದೂ ಶ್ರೀ ಪಿ. ಎಸ್. ನಾಯ್ಕರು ತರುಣರಿಗೆ ಉತ್ತಮ ಮೇಲ್ಪಂಕ್ತಿ ಹಾಕಿರುವರೆಂದೂ ಹೇಳಿದರು. ವೇಣುಗೋಪಾಲನ ಎಸ್ಸೆಲ್ ಗೆಳೆಯರಿಂದ 'ಅಳಿಯ ದೇವರು' ನಾಟಕಪ್ರದರ್ಶನಾದಿ ಕಾರ್ಯಕ್ರಮಗಳಿಂದ ಸಮಾರಂಭ ಸಮಾಪ್ತಿಯಾಯಿತು.

ಪರ್ಯಾಯ ಶ್ರೀ ಪಾದಂಗಳವರ ಪುರಪ್ರವೇಶ— ಇದೇ ತಾ. ೧೮ರಂದು ಪರ್ಯಾಯ ಪೀಠವನ್ನೇರಲಿರುವ ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರು ಕ್ಷೇತ್ರ ಸಂದರ್ಶನಗೈದು ತಾ. ೪ರಂದು ಸಾವಿರಾರು ಜನರ ಸ್ವಾಗತ ಗೌರವದೊಂದಿಗೆ ಪುರಪ್ರವೇಶ ಮಾಡಿದರು. ನಗರದ ಅಗ್ರರನೇಕರು ಸ್ವಾಗತದಲ್ಲಿ ಸಹಭಾಗಿಗಳಾಗಿದ್ದರು.

ಪೌರ ಸಭೆಯ ಮಾನಪತ್ರ— ಪರ್ಯಾಯ ಪೀಠವೇರುವ ಅದಮಾರು ಮಠದ ಶ್ರೀಪಾದಂಗಳವರಿಗೆ ತಾ. ೯ರಂದು ಉಡುಪಿ ನಗರ ಸಭೆಯವರು ಮಹಾತ್ಮಾಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಮಾನಪತ್ರ ಕೊಟ್ಟು ಗೌರವಿಸಿದರು. ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಮಾನಪತ್ರವನ್ನೋದಿ ಅರ್ಪಿಸಿದರು. ಶ್ರೀಗಳವರು ಉತ್ತರಿಸಿ ನಗರಾಭಿವೃದ್ಧಿ ಕಾರ್ಯದಲ್ಲಿ ತಮ್ಮ ಸಹಕಾರವನ್ನು ನೀಡುವುದಾಗಿ ಸಾರಿದರು. ಡಾ. ಪಿ. ಜಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಉಚ್ಚಿಲ— ಸರಸ್ವತಿ ಮಂದಿರದಲ್ಲಿ ಉಡುಪಿ ಪರಿಯಾಳ ಸಮಾಜ ಸುಧಾರಕ ಸಂಘದ ಮಹಾ ಸಭೆಯು ತಾ. ೧೩ನೇ ಶುಕ್ರವಾರ ಶ್ರೀ. ಎ. ಜಿ. ಅಪ್ಪಿಯವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಅದಮಾರು— ಬೋರ್ಡುಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೬ರಂದು ಅದಮಾರು ಮಠಾಧೀಶರಾದ ಶ್ರೀ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಇಂದಿರಾ ಬಾಯಿ ಎಸ್ ರಾಯರು ವರದಿಯನ್ನೋದಿದರು. ಶ್ರೀ ಪೈ. ತಿಮ್ಮಪ್ಪ ಶೆಟ್ಟರು ಸ್ವಸ್ತಿವಾಚನಮಾಡಿದರು. ಶ್ರೀ ಪೈ. ಶಾಂತಿ ರಾಜಯ್ಯ ಅರಸು ಮಾರಪ್ಪ ಹೆಗ್ಗಡೆಯವರು ಪಾರಿತೋಷಕ ವಿತರಣೆಮಾಡಿದರು. ನಾಟಕಾದಿ ವಿವಿಧ ವಿನೋದಾವಳಿಗಳಿಂದ ಸಮಾರಂಭವು ಯಶಸ್ವಿಯಾಗಿ ನೆರವೇರಿತು.

ಶ್ರೀ ಎಚ್. ವಿ. ಕಾಮತರ ಭಾಷಣ

ತಾ. ೧೦ರಂದು ಸಂಚಿಉಪ್ಪಿ ರಥಬೀದಿಯಲ್ಲಿ ಶ್ರೀ ಬೈಲೂರು ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಪ್ರಜಾಸೋಶಲಿಸ್ಟ ಪಕ್ಷದ ನಾಯಕರಾದ ಶ್ರೀ ಎಚ್. ವಿ. ಕಾಮತರು ಕಾಂಗ್ರೆಸನ್ನು ಟೀಕಿಸಿ ಭಾಷಣಮಾಡಿದರು. ಶ್ರೀ ಬಿ ಮೋಹನ ರಾಯರು ಭಾಷಣವನ್ನು ಕನ್ನಡಿಸಿದರು. ಶ್ರೀ ಕೆ. ಆರ್. ಕಾರಂತರು ಪಕ್ಷಕ್ಕೆ ಬೆಂಬಲ ಕೋರಿ ಭಾಷಣವಿತ್ತರು. ಶ್ರೀ ಬಿ. ಎಸ್. ಲೂಯಿಸರು ಧನ್ಯವಾದಗಳನ್ನಿತ್ತರು.

ಚಂದಾದಾರರಲ್ಲಿ ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರಿಗೆಲ್ಲ ಈ ಮೊದಲೇ ಅವರವರ ಬಾಕಿಯನ್ನು ಕಾಣಿಸಿ ನೆನಪೋಲೆ ಕಳಿಸಿರುತ್ತವೆ. ಅವರೂ, ಒಂದು ವೇಳೆ ನೆನಪೋಲೆ ಸಿಗದಿದ್ದವರು ಕೂಡ, ತಮ್ಮ ತಮ್ಮ ಬಾಕಿಯನ್ನೂ ಚಾಲ್ತಿ ಚಂದಾಹಣವನ್ನೂ ಇದೇ ತಾ. ೨೦ ರೊಳಗಾದರೂ ನಮಗೆ ತಲಪುವಂತೆ ದಯಮಾಡಿ ಕಳುಹಿಸಿ ಕೊಡುವಂತೆ ಕೇಳಿಕೊಳ್ಳುತ್ತೇವೆ. ಸಕಾಲದಲ್ಲಿ ಚಂದಾಹಣವನ್ನು ಕಳುಹಿಸಿಕೊಡುವುದೇ ನಮ್ಮ ಚಂದಾದಾರರು ನಮಗೆ ಮಾಡತಕ್ಕ ದೊಡ್ಡ ಸಹಾಯವಾಗಿದೆ. ನಮ್ಮ ವಿನಂತಿಯನ್ನು ನಮ್ಮ ಚಂದಾದಾರರು ಸಹೃದಯತೆಯಿಂದ ಮನ್ನಿಸಿ, ಬಾಕಿಯನ್ನು ಒಡನೆ ಕಳುಹಿಸುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ

ಕೆ. ಹೊನ್ನಯ್ಯ ಶೆಟ್ಟಿ.
ಸಂಚಾಲಕ, ಸಂಪಾದಕ.

ಮಂಗಳೂರು

ದ. ಕ. ಜಿಲ್ಲೆಯ ಲೇಖಕರಿಗೆ ಸರಕಾರದ ಬಹುಮಾನಗಳು— ಕನ್ನಡದಲ್ಲಿ ಉತ್ತಮ ಪುಸ್ತಕಗಳಿಗೆ ಕೊಡಲಾಗುವ 1954-55ರ ಬಹುಮಾನಗಳನ್ನು ಶ್ರೀ ಕೆ. ಶಿವರಾಮ ಕಾರಂತರ 'ಒಡಹುಟ್ಟಿದವರು' (ಕಾದಂಬರಿ), ಶ್ರೀ ಕೆ. ಕೆ. ಶೆಟ್ಟರ 'ಗಾಂಧಿಜೀವನ ಕಿಡಿಗಳು' (ಆತ್ಮಕತೆ) ಮತ್ತು ಶ್ರೀ ವೆಂಕಟರಾಯ ಆಚಾರ್ಯರ 'ಲಿಖಿತ ಸಂಶೋಧನಾತ್ಮಕ ಲೇಖನಗಳು' ಇವುಗಳಿಗೆ ಕೊಡಬೇಕೆಂದು ಮದ್ರಾಸು ಕರ್ನಾಟಕ ಸಂಘವು ಮಾಡಿದ ಶಿಫಾರಸನ್ನು ಮದ್ರಾಸು ಸರಕಾರವು ಮಾನ್ಯಮಾಡಿದೆ. ಬಹುಮಾನದ ಮೌಲ್ಯವು ರೂಪಾಯಿ 500.

ರೋಟರಿ ಕ್ಲಬ್ಬಿನಲ್ಲಿ ವ್ಯಾಖ್ಯಾನ— ಸ್ಥಳೀಯ ರೋಟರಿ ಕ್ಲಬ್ಬಿನ ಸಭೆಯು ತಾ. 5ರಲ್ಲಿ ರಾತ್ರಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು 'ಸಮ್ಮಿಳಿತ ಕರ್ನಾಟಕ ರಾಜ್ಯ' ವೆಂಬ ವಿಷಯದ ಮೇಲೆ ವ್ಯಾಖ್ಯಾನ ಮಾಡುತ್ತಾ ಭಾರತದ 16 ನಿಯೋಜಿತ ರಾಜ್ಯಗಳಲ್ಲಿ, ಕರ್ನಾಟಕವು ಸಮೃದ್ಧ ರಾಜ್ಯವಾಗುವುದೆಂದು ಸಕಾರಣವಾಗಿ ಹೇಳಿದರು. ವಿದ್ಯುತ್ ಉತ್ಪಾದನೆ, ಔದ್ಯೋಗಿಕ ಅಭಿವೃದ್ಧಿ, ಖನಿಗಾರಿಕೆ ಮೊದಲಾದುವುಗಳ ಬೆಳವಣಿಗೆಗೆ ಕರ್ನಾಟಕದಲ್ಲಿದ್ದಷ್ಟು ಸೌಕರ್ಯಗಳು ಮತ್ತೆಲ್ಲಿಯೂ ಇರುವುದಿಲ್ಲವೆಂದರು. ಕಾರ್ಯದರ್ಶಿ ಶ್ರೀ ರತ್ನಾಕರ ಕಾಮತರು ಸಭಾಂತ್ಯದಲ್ಲಿ ಧನ್ಯವಾದವನ್ನಿತ್ತರು.

ಅಖಿಲಭಾರತ ಮಹಿಳಾ ಪರಿಷತ್ತು— ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ತಾ. 31ರಲ್ಲಿ, ಭಾರತ ಸರಕಾರದ ವಿದೇಶಾಂಗ ಖಾತೆಯ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಮೆನೋನ್. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷೆ ಶ್ರೀಮತಿ ಭಾನುಮತಿ ಎಸ್. ರಾಯರು ಸ್ವಾಗತಭಾಷಣ ಮಾಡಿದರು. ಶ್ರೀಮತಿ ರಾಜಲಕ್ಷ್ಮಿ ರಾಮರಾಯರು ಪರಿಷತ್ತನ್ನು ಉದ್ಘಾಟಿಸಿದರು. ಪರಿಷತ್ತಿಗೆ ಶುಭವನ್ನು ಕೋರಿ ಬಂದ ಸಂದೇಶಗಳನ್ನು ಶ್ರೀಮತಿ ಕಮಲಾ ದೇಸಿಯವರು ಓದಿದರು. ನಂತರ ಅ. ಭಾ. ಮಹಿಳಾ ಪರಿಷತ್ತಿನ ವರದಿ ಓದಲಾಯಿತು. ಸಭಾಧ್ಯಕ್ಷೆಯವರು ತಮ್ಮ ಭಾಷಣದಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಪ್ರಸ್ತಾಪಿಸಿ ಮಾತನಾಡಿದರು. "ನಮ್ಮ ರಾಷ್ಟ್ರವನ್ನು ಪ್ರದೇಶ ಮತ್ತು ಭಾಷೆಗಳ ಸಂಕುಚಿತ ದೃಷ್ಟಿಯಿಂದ ನೋಡುವುದು ತಿಳಿಗೇಡಿತನ. ಭಾರತದ ಐಕ್ಯತೆ ಮತ್ತು ಬಲವನ್ನು ವರ್ಧಿಸುವುದೇ ಇಂದಿನ ಅತೀ ಪ್ರಾಮುಖ್ಯ ವಿಚಾರವಾಗಿದೆ. ಪ್ರಾಂತ ಪುನರ್ರಚನಾ ಸಮಿತಿಯ ವರದಿಯಿಂದಾಗಿ ದೇಶದಾದ್ಯಂತ ಎದ್ದ ವಿವಾದಗಳಿಂದ ಮಹಿಳೆಯರು ದೂರವಿರಬೇಕೆಂದು ಅಖಿಲ ಭಾರತ ಮಹಿಳಾ ಪರಿಷತ್ತಿನ ನಾವು, ಹೋದಲ್ಲೆಲ್ಲ ಪ್ರಚಾರ ಮಾಡಿ ಸಫಲತೆ ಪಡೆದಿದ್ದೇವೆ. ಪ್ರಾಂತ ಪುನರ್ರಚನೆಯಲ್ಲಿ, ಆಡಳಿತೆಯ ಸೌಲಭ್ಯತೆಯೇ ಪ್ರಧಾನ ವಿಷಯವೆನ್ನಬೇಕಾಗಿದೆ. ನಾವು ದೇಶದ ಯಾವ ಪ್ರದೇಶಗಳಲ್ಲಿದ್ದರೂ ಭಾರತೀಯರೆಂಬ ವಿಶಾಲ ಭಾವನೆಯನ್ನು ಹೊಂದಿರಬೇಕು" ಎಂದು ಮೊದಲಾಗಿ ನುಡಿದರು. ಅಳಿಯ ಸಂತಾನ ಕಾನೂನು ರದ್ದಾಗಬೇಕು ಎಂಬಿತ್ಯಾದಿ ನಿರ್ಣಯಗಳು ಪಾಸಾದುವು. ಪರಿಷತ್ತಿನ ಅಂಗವಾಗಿ ಅಖಿಲ ಭಾರತ ಕಲಾಕೈಗಾರಿಕಾ ಪ್ರದರ್ಶನವನ್ನು ಶ್ರೀಮತಿ ಅನುಸೂಯಾ ಕಾಳೆಯವರು ಬಲ್ಮಠದ ಸರಕಾರಿ ಹುಡುಗಿಯರ ತರಬೇತಿ ಶಾಲೆಯಲ್ಲಿ ಉದ್ಘಾಟನೆ ಮಾಡಿದರು.

ಶ್ರೀ ಎಚ್. ವಿ. ಕಾಮತರ ಭಾಷಣ— ಪ್ರಜಾ ಸೋಶಲಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯಸಮಿತಿಯ ಸದಸ್ಯರೂ, ಲೋಕಸಭಾಸದಸ್ಯರೂ ಆದ ಶ್ರೀ ಹರಿ ವಿಷ್ಣು ಕಾಮತರು ತಾ. 8ರಲ್ಲಿ ಸಂಜೆ ಕೇಂದ್ರ ಮೈದಾನದಲ್ಲಿ ಸೇರಿದ ಸಭೆಯಲ್ಲಿ ಒಂದು ಪ್ರಬಲ ಪ್ರತಿಪಕ್ಷವನ್ನು ಕಟ್ಟಬೇಕಾದ ಆವಶ್ಯಕತೆಯನ್ನು ವಿವರಿಸಿದರು. ಸಭಾಧ್ಯಕ್ಷತೆಯನ್ನು ಶ್ರೀ ಡಿ. ಮೋಹನ ರಾಯರು ವಹಿಸಿದ್ದರು. ಶ್ರೀ ಜಿ. ಆರ್. ಕಾರಂತರು ಗಯಾ ಅಧಿವೇಶನವು ತೃಪ್ತಿಕರವಾಗಿತ್ತೆಂದರು.

ಅಲೆವೂರು— ಇಲ್ಲಿಯ ಪ್ರಸೂತಿ ಕಾಕೇಂದ್ರವನ್ನು ಬಲಪಡಿಸುವುದಕ್ಕಾಗಿ ತಾ. 1ರಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಭೆಯೊಂದು ಸೇರಿ ಮೆಟರ್ನಿಟಿ ಮತ್ತು ಮೆಡಿಕಲ್ ರಿಲೀಫ್ ಸಂಘವನ್ನು ಸ್ಥಾಪಿಸಿ ಅದನ್ನು ರಿಜಿಸ್ಟ್ರ ಮಾಡಬೇಕೆಂಬ ತೀರ್ಮಾನವಾಯಿತು.

ಪುತ್ತೂರು— ಸ್ಥಳೀಯ ಸರ್ಕಲ್ ಕಾಂಗ್ರೆಸ್ ಕಾರ್ಯಕಾರೀ ಕಮಿಟಿಗೆ ಶ್ರೀಗಳಾದ ಬಿ. ವಿಠಲದಾಸ ಶೆಟ್ಟಿ (ಅಧ್ಯಕ್ಷ), ಕೆ. ವೆಂಕಪ್ಪಯ್ಯ ಮತ್ತು ಕೆ. ವೆಂಕಟ್ರಮಣ ಗೌಡ (ಉಪಾಧ್ಯಕ್ಷರು), ಎ. ಭೀಮ ಭಟ್ ಮತ್ತು ವಿ. ಆನಂದ (ಜತೆಕಾರ್ಯದರ್ಶಿಗಳು), ಪೈ ಸಂಜೀವ ಶೆಣೈ (ಕೋಶಾಧಿಕಾರಿ) ಮತ್ತು ಇತರ ಎಂಟು ಮಂದಿ ಸದಸ್ಯರು ಆರಿಸಲ್ಪಟ್ಟರು.

ಪೆರಡಾಲ— ನವಜೀವನ ಹ್ಯಾಸ್ಕೂಲಿನ ವಾರ್ಷಿಕೋತ್ಸವವು ಉಡುಪಿ ಎಮ್. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರ್ ಶ್ರೀ ಪಿ. ಸುಬ್ರಾಯ ಭಟ್ಟರು ಸ್ವಾಗತಭಾಷಣವಾದ ವರದಿಯನ್ನೋದಿದರು. ಶ್ರೀ ಬಿ. ಎಮ್. ಕೃಷ್ಣ ಭಟ್ಟರು ಸ್ವಸ್ತಿವಾಚನಮಾಡಿದರು. ಶಾಲೆಯ ಅಭಿವೃದ್ಧಿಗಾಗಿ ತ್ಯಾಗ ಮತ್ತು ಸೇವೆಯನ್ನು ಸಲ್ಲಿಸಿದ ಊರವರನ್ನು ಶ್ಲಾಘಿಸಿ ಅಧ್ಯಕ್ಷರು ಮಾತನಾಡಿದರು. ಬಹುಮಾನ ವಿತರಣೆ, ವಿವಿಧ ವಿನೋದಾವಳಿ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಅಖಿಲ ಕರ್ನಾಟಕ ಯಕ್ಷಗಾನ ಸಾಹಿತ್ಯ ಪರಿಷತ್ತಿನ ಅಂಗವಾಗಿ ತಾ. 27ರಲ್ಲಿ ಪ್ರಾರಂಭವಾದ ಯಕ್ಷಗಾನ ಕಲೋತ್ಸವವನ್ನು ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರು ಉದ್ಘಾಟಿಸಿದರು. ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕುಂದೂರು ಗೋಪಾಲಕೃಷ್ಣ ಪುಣಿಚಿತ್ತಾಯರು ಸ್ವಾಗತ ಮಾತುಗಳನ್ನಾಡಿದರು. ಕೊನೆಗೆ ಯಕ್ಷಗಾನ ಕಾಲಕ್ಷೇಪ ನಡೆಯಿತು.

ಕಾಸರಗೋಡು— ಚೆಲೆಂಜರ್ ಕಪ್ ವ್ಹೋಲಿಬಾಲ್ ಪಂದ್ಯಾಟದ ಫ್ಯಾನಲ್ಸ್ ಸ್ಪರ್ಧೆಯಲ್ಲಿ ಗೆದ್ದ ಪಟ್ಟದವರಿಗೆ ರೋಲಿಂಗ್ ಕಪ್ಪನ್ನು ಇನ್ನಿತರ ವ್ಯಕ್ತಿಪರ ಪಾರಿತೋಷಗಳನ್ನು ವಿತರಣೆಮಾಡುವ ಸಮಾರಂಭವು ತಾ. 5ರಲ್ಲಿ ಡಿ. ಮುನ್ಸಿಫ್ ಶ್ರೀ ಎಮ್. ಗೋಪಾಲಕೃಷ್ಣ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಟೂರ್ನಮೆಂಟ್ ಕಮಿಟಿ ಅಧ್ಯಕ್ಷ ಶ್ರೀ ಕೆ. ಗಣೇಶ ರಾಯರು ಸ್ವಾಗತಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಕೆ. ಎಮ್. ಭಂಡಾರಿಗಳು ಆಟಗಾರರ ಪರಿಚಯಮಾಡಿಕೊಟ್ಟರು.

ಇನ್ನ— ಮಂಗಳೂರು ಸರಕಾರಿ ಕಲಾಶಾಲೆಯ ಸಮಾಜಸೇವಾ ಸಂಘದವರು ಜರಗಿಸಿದ ಶ್ರಮದಾನ ಶಿಬಿರದ ಮುಕ್ತಾಯ ಸಮಾರಂಭವು ತಾ. 3ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ವಿ. ಭಂಡಾರಿಯವರು ಸ್ವಾಗತಮಾತುಗಳನ್ನಾಡಿದರು. ವಿದ್ಯಾರ್ಥಿ ಮುಖಂಡ ಶ್ರೀ ಎ. ಮಹಾಬಲ ಶೆಟ್ಟರು ವರದಿವಾಚನಮಾಡಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಸಮಾರೋಪ ಭಾಷಣಮಾಡಿದರು. ಶಿಬಿರಾಧಿಕಾರಿಗಳಲ್ಲೊಬ್ಬರಾದ ಶ್ರೀ ಎ. ಕೃಷ್ಣಮೂರ್ತಿ ಆಚಾರ್ಯರು ಧನ್ಯವಾದಗಳನ್ನಿತ್ತರು. ಉಡುಪಿ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥಸ್ವಾಮಿಗಳವರು ಕೂಡಾ ಶಿಬಿರವನ್ನು ಸಂದರ್ಶಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಪಾಂಗಾಳ— ಸ್ಥಳೀಯ ಸರಸ್ವತಿ ಕಾಲನಿಯ ಶ್ರೀ ಸರಸ್ವತಿ ಭಜನಾಮಂಡಳಿಯ ವಾರ್ಷಿಕೋತ್ಸವವು ತಾ. 31ರಲ್ಲಿ ಶ್ರೀ ಪಿ. ರಾಮಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ತಾ. 25ರಲ್ಲಿ ಈ ಉತ್ಸವದ ಸಂಬಂಧ ಜರಗಿದ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಶ್ರೀಗಳಾದ ಕೆ. ದತ್ತ ಭಟ್, ಬಿ. ಬಾಲಕೃಷ್ಣ, ಕೆ. ವಾಮನ ಕಾಮತ್, ವಿ. ಶಿವಾನಂದ, ಕೆ. ಪ್ರಭಾಕರ ರಾವ್, ಬಿ. ಬಾಬು, ಬಿ. ಅಣ್ಣಪ್ಪ, ಬಿ. ಮಾಧವ, ಪಿ. ಅಚ್ಯುತ, ಯು. ಪಿ. ನರ್ಸ, ಅನಂತ ಸೇರಿಗಾರ, ಕೆ. ಬಾಬು ಸಾಮುಕಾರ್, ಪಿ. ರಾಮಕೃಷ್ಣ ಭಟ್, ಸಿ. ನಾರಣಪ್ಪ, ಕೆ. ಕೆ. ಶೆಣೈ, ಕೆ. ರಾಮ, ಕೆ. ಸಂಜೀವ, ಕೆ. ಸೂರಪ್ಪ, ಯು. ಕೆ. ರಾಜಗೋಪಾಲ್, ಪಿ. ಮೋಹನ, ಪಿ. ಶೀನಪ್ಪ, ಪಿ. ಗೋವಿಂದ ಮತ್ತು ಸದಾನಂದ ಸ್ಟೋರ್ಸ್ ಮೊದಲಾದವರು ಬಹುಮಾನಕೊಟ್ಟು ಸಹಕರಿಸಿದವರು. ಸಭಿಕರಲ್ಲಿ ಹಲವರು ಭಾಷಣಮಾಡಿದರು. ನಗರ ಸಂಕೀರ್ತನೆ ಮೊದಲಾದ ಕಾರ್ಯಕ್ರಮಗಳಾದಮೇಲೆ ಶ್ರೀ ಯು. ಪಿ. ನರ್ಸನವರು ಧನ್ಯವಾದಗಳನ್ನರ್ಪಿಸಿದರು.

ಸಾಹೇಬರ ಕಟ್ಟೆ— ತಾ. 9ರಂದು ಕುಂದಾಪುರ ಡಿ॥ ಪಂಚಾಯತ ಆಫೀಸರ್ ಶ್ರೀ. ಬಾಲಕೃಷ್ಣ ರೈಗಳು ಶಿರಿಯಾರ ಗ್ರಾಮ ಪಂಚಾಯತ ಚುನಾವಣೆ ನಡೆಸಿದಾಗ ಶ್ರೀ. ಕೊಳ್ಕೆಬೈಲು ಆನಂದ ಶೆಟ್ಟರು ಅಧ್ಯಕ್ಷರಾಗಿ ಅವಿರೋಧವಾಗಿ ಆರಿಸಲ್ಪಟ್ಟರು. ಅಂತೆಯೇ ಏಳು ಸದಸ್ಯರೂ ಆರಿಸಲ್ಪಟ್ಟರು.

(ಸನೇ ಪುಟದಿಂದ)

ಎಂಬ ಸೋಜಿಗವಾಗುವ ವಿಮಾನಪಡೆಯ ಸೈನಿಕರು; ಅಮೇರಿಕದ ಬೆಂಬಲವನ್ನು ಸಾರಿದ್ದಾರೆ. ಆ ಪಸಾಹತಿನ ವಿಮೋಚನೆಗೆ ಚೀನವು ಧಾಳಿ ನಡೆಸಿದರೆ, ಅಮೇರಿಕವು ಚೀನದ ವಿರುದ್ಧ ಹೋರಾಟ ಕೊಡುವುದೆಂದು ಅವರ ಘೋಷಣೆ ಹೇಳುತ್ತದೆ. ಇದು ಉರಿಯ ಮೇಲೆದ್ದ ಬೊಕ್ಕೆಯಾಗಿದೆ. ಇಂಥ ಪರಿಸ್ಥಿತಿಯಲ್ಲಿ ಡಲ್ಲೇಸರು ಇದೇ ಮಾರ್ಚಿಯ ಅಖೈರಿಗೆ ಹೊಸ ದೆಹಲಿಗೆ ಬರುವ ಆಲೋಚನೆಮಾಡಿದ್ದಾರೆಂಬ ಸುದ್ದಿಯನ್ನು ಕೇಳಿ ಸಂತೋಷಗೊಳ್ಳುವುದು ಸುಲಭವಲ್ಲ.

"ಸೀಟೋ" ಸೈನಿಕ ಒಪ್ಪಂದ ರಾಷ್ಟ್ರಗಳ ಅಧಿವೇಶನದಲ್ಲಿ ಭಾಗ ವಹಿಸಿ ಬರುವ ಡಲ್ಲೇಸರು ತಮ್ಮ ಭಾರತ ಯಾತ್ರೆಗೆ ಯೋಗ್ಯ ಹಿನ್ನೆಲೆಯನ್ನು ಹಾಗೆ ರೂಪಿಸಿರುವರೆಂದು ಹೇಳುವಂತಿಲ್ಲ.

ಭಾರತ-ರಶಿಯ ಸಂಬಂಧ

ಪಂಚಶೀಲಗಳ ತಳಹದಿಯ ಮೇಲೆ ತಮ್ಮೆರಡು ರಾಷ್ಟ್ರಗಳ ಸಂಬಂಧವನ್ನು ನೆಲೆಗೊಳಿಸುವ ಸಂಕಲ್ಪವನ್ನು ಭಾರತ ಮತ್ತು ರಶಿಯಗಳ ಪ್ರಧಾನಿಗಳು ಪುನರುಚ್ಚರಿಸಿದ್ದಾರೆ. ಈಚೆಗೆ ರಶಿಯದ ಧುರೀಣರು ಭಾರತ ಸಂಚಾರ ಕೈಗೊಂಡಾಗ ಈ ಬಗ್ಗೆ ಘೋಷಣೆಯೊಂದು ಹೊರಟದ್ದಿತು. ಅದಕ್ಕೆ ಸಹಿ ಹಾಕುವಾಗಿನ ದೃಶ್ಯವನ್ನು ಚಿತ್ರವು ತೋರಿಸುತ್ತದೆ.

(೧ನೇ ಪುಟದಿಂದ)

ಾ| ಲೋಹಿಯಾರಿಗೆ ಈ ಟೀಕೆ ಸಲ್ಲಬೇ. ಪಕ್ಷದೊಳಗೊಂದು ಪಕ್ಷವನ್ನು ಕಟ್ಟುವ ಅವರ ದೀರ್ಘಕಾಲದ ಪ್ರಯತ್ನ ನ್ನಾಗಿ ಬಲಿತು ಪಕ್ಷವಾಗಿ ಇದೀಗ ಪಾ: ಪಡೆಯಬೇಕೆಯಾದ ಮಗನೋಪಾದಿಯಲ್ಲಿ ಆಣಕ ನಡೆಸಿದೆ. ಶ್ರೀ· ಜಯಪ್ರಕಾಶ ನಾರಾಯಣರು ಹಿಂದಿನ ಅಭಿಮಾನದಿಂದ ತಾನೀಗ ಸರ್ವೋದಯ ಸಮಾಜ ರಚನೆಗಾಗಿ ಜೀವದಾನ ಮಾಡಿದರೂ ಸಮಯ ಅನುಕೂಲವಾಗಿರುವಾಗೆಗೆ ಸಾಮಾನ್ಯ ಸದಸ್ಯನಾಗಿದ್ದು ಪ್ರಜಾಸಮಾಜವಾದಿ ಪಕ್ಷದ ತಂತು ಮಾ, ಸಂಪರ್ಕವಿರಿಸಿಕೊಳ್ಳುವೆನೇ ಹೊರತು ಹೆಚ್ಚಿಲ್ಲ ಎಂದಿದ್ದಾರೆ. ವ್ಯಂಗ್ಯ ಚಿತ್ರಕಾರರ ದೃಷ್ಟಿಯಲ್ಲಿ ಪ್ರಜಾಸಮಾಜವಾದಿ ಪಕ್ಷದ ಮೋಟಾರು ಕಾರಿಗೆ ಇಂದು ಎಟಿನ ಎರಡು ಚಕ್ರಗಳೇ ಇಲ್ಲ!

ಪಕ್ಷವು ವ್ಯಕ್ತಿ ನಿಷ್ಠವಾಗಿದ್ದರೆ ಇಂಥ ದುರವಸ್ಥೆ ತಪ್ಪಿದ್ದಲ್ಲ ಎನ್ನೋಣ. ಪಕ್ಷಕ್ಕೆ ಆಧಾರ ಭೂತವಾದುದೇ ಆದರ ತತ್ತ್ವ ಎಂಬುದನ್ನು ಒಪ್ಪಿಕೊಳ್ಳೋಣ! ಾಗಲಾದರೂ ನಮಗೆ ಪ್ರಜಾ ಸಮಾಜವಾದಿ ಪಕ್ಷದಿಂದ ಸಮಾಧಾನವಾದೀತೆ? ಾಚಾರ್ಯ ನರೇಂದ್ರ ದೇವರು ತಮ್ಮ ಭಾಷಣದಲ್ಲಿ ಭಾರತದ ನಾಗರಿಕರಿಗೆ ಸ್ವಾತಂತ್ರ್ಯದ ಅನುಭವವನ್ನು ತಂದು ಕೊಡುವುದರಲ್ಲಿ ಸರಕಾರ ಸಂಪೂರ್ಣ ತಪ್ಪಿದೆ ಎಂದಿದ್ದಾರೆ. ರಾಷ್ಟ್ರದ ಪುನಾರಚನೆಯಲ್ಲಿ ನಾಗರಿಕರಿಗೆ ತಾವೂ ಸಹ ಭಾಗಿಗಳೆಂಬ ಭಾವನೆ ಬರುವಂತೆ ಸರಕಾರ ಮಾಡಿಲ್ಲವೆಂದು ಆರೋಪಿಸಿದ್ದಾರೆ. ಇವರನ್ನು ಕಣ್ಣಿದ್ದೂ ಕುರುಡರೆಂದು ನಾವು ಕರೆಯಬೇಕೆ? ಅವರ ಪಕ್ಷವನ್ನು ಹಾಗೆ ಟೀಕಿಸಬೇಕೆ?

ಜನತೆಯ ಉತ್ಸಾಹದ ನಿದರ್ಶನವಾಗಿ ಅನೇಕ ಸ್ಥಳೀಯ ಅಭಿವೃದ್ಧಿ ಯೋಜನೆಗಳು ನಮ್ಮ ಕಣ್ಣ ಮುಂದೆಯೇ ನೆರವೇರಿವೆ; ಸ್ವಾತಂತ್ರ್ಯದ ಸಂಪಾದನೆಯು ರಾಷ್ಟ್ರದ ಪುನಾರಚನೆಗೆ ದಾರಿಮಾಡಿಕೊಟ್ಟಿದೆ ಎಂಬುದನ್ನು ಪ್ರತಿಯೊಂದೂ ಸ್ಥಳದಲ್ಲಿ ನಡೆಯುತ್ತಿರುವ ಹೊಸ ಹೊಸ ಯೋಜನೆಗಳೂ ಸುಧಾರಣೆಯ ಕಾರ್ಯಕ್ರಮಗಳೂ ಮನಗಾಣಿಸಿ ಕೊಡುತ್ತಲಿವೆ. ಪ್ರಜಾಸಮಾಜವಾದಿಗಳಿಗೆ ಇನ್ನೂ ಇದು ಕಂಡುಬರುತ್ತಿಲ್ಲವಾದರೆ ತಪ್ಪು ಅವರದು – ದೂರದಿದ್ದರೆ ದಿನ ತಳ್ಳುವುದು ಕಷ್ಟವೆನಿಸುವ ಆ ಕೆಲವು ಮಂದಿ ಧುರೀಣರದು ಜನತೆಯು ಈ ಅಭಿಪ್ರಾಯದಲ್ಲಿ ಪಾಲುಗೊಳ್ಳುವಂತಿಲ್ಲ.

ಆಚಾರ್ಯ ನರೇಂದ್ರ ದೇವರ ಮತ್ತು ಡಾ. ಲೋಹಿಯರ ಸಮಾಜವಾದಿ ಗುಂಪುಗಳು ಬೇರೆ ವಿಷಯಗಳ ಬಗ್ಗೆ ಹೇಳುವುದೇನು? ಯುದ್ಧದಿಂದ ಸಮಸ್ಯೆಗಳೆಂದೂ ಇತ್ಯರ್ಥವಾಗುವುದಿಲ್ಲ; ಅಣ್ವಸ್ತ್ರಗಳ ಪ್ರತಿಬಂಧ ಅತ್ಯಗತ್ಯ, ವಸಾಹತುವಾದದ ನಿರ್ಮೂಲನವು ಯುಗಧರ್ಮ ಇತ್ಯಾದಿಯಾಗಿ ನೆಹರುಗಳು ಏನನ್ನೆಲ್ಲ ಹೇಳಿದ್ದಾರೋ ಅದಕ್ಕೆ ಭಿನ್ನವಾಗಿ ಅವರಿಬ್ಬರೂ ಏನನ್ನು ಹೇಳುತ್ತಿಲ್ಲ. ಪರದೇಶಗಳ ಸಹಾಯ, ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ಸಂಬಂಧ ಇತ್ಯಾದಿ ಕೆಲ ಕ್ಷುಲ್ಲಕ ವಿಷಯಗಳ ಬಗ್ಗೆ ಮತಭೇದವಿದ್ದರೂ ನೆಹರುಗಳು ತಮ್ಮ ಧೋರಣೆ ಬೇರೆ ವಿಷಯಗಳಲ್ಲಿ ಹೇಗೆ ಫಲಪ್ರದವಾಗಿರುವುದನ್ನು ತೋರಿಸಿ ಕೊಟ್ಟಿದ್ದಾರೊ ಅದೇ ಪ್ರಕಾರ ಇನ್ನು ಕೆಲವು ಸಮಯದಲ್ಲಿ ಈ ಆಕ್ಷೇಪಗಳತಳವೂ ಭದ್ರವಾಗಿಲ್ಲವೆಂದು ಮನಗಾಣಿಸುವುದು ಖಂಡಿತ.

ರಾಷ್ಟ್ರೀಯ ಧೋರಣೆಯಾದರೂ ನೆಹರುಗಳ ನಿಲುವಿಗಿಂತ ವಿಪರೀತವಾಗಿದೆಯೆ? ಉತ್ತಮವಿದೆಯೆ? ಕಾರ್ಮಿಕರಿಗೆ ಕಾರ್ಖಾನೆಗಳ ಲಾಭದಲ್ಲಿ ಪಾಲು ಬರುವಂತೆ, ಬೇಸಾಯ ಮಾಡುವವನಿಗೆಯೇ ಭೂಮಿಯ ಒಡೆತನ ಸಿಗುವಂತೆ ಹೋರಾಡುವ ಧ್ಯೇಯವನ್ನು ಈ ಪಕ್ಷಗಳವರು ಇಟ್ಟುಕೊಂಡಿದ್ದಾರೆ. ನೆಹರುಗಳ ಧುರೀಣತ್ವದಲ್ಲಿ ಕಾಂಗ್ರೆಸು ಪಕ್ಷವು ಈಗಾಗಲೇ ಇವೆಲ್ಲ ಉದ್ದೇಶಗಳನ್ನ ಕಾರ್ಯಾಚರಣೆಯಲ್ಲಿಳಿಸಲು ಕ್ರಮಗಳನ್ನು ಕೈಗೊಂಡಿದೆ ಎಂಬುದು ಎಲ್ಲರಿಗೂ ಗೊತ್ತು. ಪರಿಹಾರ ಧನದ ಪ್ರಶ್ನೆಯಾಗಲಿ ರಾಷ್ಟ್ರೀಕರಣದ ಸಮಸ್ಯೆಯಾಗಲಿ — ನೆಹರು ಸರಕಾರದಿಂದ ಅಲಕ್ಷಿಸಲ್ಪಟ್ಟಿಲ್ಲ — ಮಧ್ಯವರ್ತಿ ಧೋರಣೆಯನ್ನು ಅವರು ಈಗ ಹಿಡಿದಿರುವಂತೆ ಕಂಡುಬಂದರೂ ಕಾಲಾಂತರದಲ್ಲಿ ಅದು ನ್ಯಾಯ ಮಾರ್ಗವೆನಿಸುವುದು ನಿಶ್ಚಯ.

ಆದುದರಿಂದ ಧೋರಣೆಯಲ್ಲಿ ಪ್ರತಿಪಕ್ಷಗಳು ತಮ್ಮ ವೈಶಿಷ್ಟ್ಯವೆಂದು ಏನನ್ನು ತಾನೇ ಹೇಳಿಕೊಂಡು ತಿರುಗುತ್ತಿರಬಲ್ಲವು? ಪ್ರತಿಪಕ್ಷಗಳೆಂದು ಹೇಳಿಕೊಳ್ಳುತ್ತಿರುವ ಗುಂಪುಗಳು ಇನ್ನೂ ಗೊತ್ತುವಳಿಯನ್ನು ಸ್ವೀಕರಿಸುವ ಹಾಗು ಸ್ವಪ್ರಯೋಜನಾರ್ಥವಾಗಿ ಕಾಂಗ್ರೆಸನ್ನು ಲಘುವಾಗಿ ಟೀಕಿಸುವ ಕೆಲಸ ಮಾತ್ರದಿಂದಲೇ ತೃಪ್ತಿಯನ್ನು ಹೊಂದುತ್ತಿರುವಾಗ, ಕಾಂಗ್ರೆಸು ಪಕ್ಷವು ನಿಷ್ಠೆಯಿಂದಲೂ ಶ್ರದ್ಧೆಯಿಂದಲೂ ಜನತೆಯ ಸೇವೆಗೆ ಎಲ್ಲ ಸಂದರ್ಭಗಳನ್ನೂ ಉಪಯೋಗಿಸಿಕೊಂಡಿದೆ. ನತ್ತು ಸ್ಥಾನವೆಂಬುದಿದ್ದರೆ ಅದಕ್ಕೆ ಆರ್ಹರೆನಿಸುವ ಪ್ರತಿ ಪಕ್ಷದ ಪ್ರಭೃತಿಗಳು ಸಹ ತಲೆದೂಗಿ ಹತ್ತಿರ ಸರಿಯುವಂತೆ ಅದು ಧೀರೋದಾತ್ತವಾದ ನಿಲುವೆಯನ್ನು ತೋರಿಸಿದೆ. ಅನ್ನ ಕೊಡದ ಸರಕಾರ, ವಸ್ತ್ರ ಕೊಡದ ಸರಕಾರ ನಾಶವಾಗಲಿ— ಎನ್ನುವ ಘೋಷಣೆ ೧೯೪೮ರಲ್ಲಿ ಎಷ್ಟು ಭೀಕರವಾಗಿತ್ತೆಂದೂ ಈಗ ಜನರಲ್ಲಿ ಇಂಥ ಅತೃಪ್ತಿ ಉಳಿದಿದೆಯೆ ಎಂಬುದನ್ನೂ ನೋಡಿದರೆ ಕಾಂಗ್ರೆಸು ಕಳೆದ ಎಂಟು ವರ್ಷಗಳಲ್ಲಿ ಎಷ್ಟು ಕೆಲಸ ಮಾಡಿದೆ ಎಂದು ಗೊತ್ತಾಗುತ್ತದೆ.

ಕಾಂಗ್ರೆಸು ಅಗಾಧ ಸಮುದ್ರದಂತಿದೆ— ಅದರಲ್ಲಿ ಅನೇಕ ಅಭಿಪ್ರಾಯಗಳ ಜನರು ಸೇರಿದ್ದಾರೆ ಎನ್ನುವುದನ್ನು ಗಮನಿಸದೆ ಹೋಗುವಂತಿಲ್ಲ. ಆದರೆ ಇಷ್ಟೂ ಅಭಿಪ್ರಾಯಗಳ ಮಥನವು ಅಲ್ಲಿ ಉಚ್ಚ ಮಟ್ಟದಲ್ಲಿ ನಡೆದು ನಿರ್ಣಯಗಳು ರಾಷ್ಟ್ರ ಹಿತದ ದೃಷ್ಟಿ ಕೋಣದಿಂದ ಕೈಗೊಳ್ಳಲ್ಪಡುತ್ತವೆ. ಇವಕ್ಕೆ ಎಲ್ಲರೂ ಬದ್ಧರಾಗುತ್ತಾರೆ. ಪ್ರಜಾಪ್ರಭುತ್ವಕ್ಕೆ ಒಪ್ಪುವ ಮಾದರಿಯಲ್ಲಿ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಅಭಿಪ್ರಾಯಗಳ ಪ್ರಕಟಣೆಗೆ ಈ ಪಕ್ಷವು ಅದಷ್ಟು ಹೆಚ್ಚು ಅವಕಾಶಗಳನ್ನು ಒದಗಿಸುತ್ತದೆ ಧೋರಣೆಯನ್ನು ಒಮ್ಮೆ ಅಂಗೀಕರಿಸಿದ ಬಳಿಕ ಶಿಸ್ತಿನ ಪಾಲನೆಗೆ ಮಹತ್ವಕೊಡುತ್ತದೆ.

ಸತ್ಯ ಹೀಗಿರುವಾಗ ಮತ್ತು ಇತರ ಪಕ್ಷಗಳ ಧೋರಣೆಯು ಕಾಂಗ್ರೆಸಿನ ನಿಲುವಿಗೆ ತೀರ ಸಮೀಪಗತವಾಗುತ್ತಾ ಬರುತ್ತಿರುವಾಗ ಪ್ರತಿ ಪಕ್ಷಗಳ ರಚನೆಗೆ ನಾವು ಶ್ರಮಿಸುತ್ತಿದ್ದೇವೆವೆನ್ನುವವರು ಆತ್ಮವಂಚನೆಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಸತ್ಯ ಹೇಳುತ್ತಿಲ್ಲ. ಈ ಗುಂಪುಗಳು ದೂರಿಕೊಳ್ಳುವ ಕಾಂಗ್ರೆಸಿನ ಇತರ ಧೋರಣೆಗಳಾದರೂ ಮುಂದಿನ ಕೆಲವು ವರ್ಷಗಳಲ್ಲಿ ಯೋಗ್ಯವೆಂದು ಸಿದ್ಧಪಡುವ ಸಂಭವ ಇದೆ ಎಂಬುದರಿಂದ ಕಾಂಗ್ರೆಸಿನ ನಿಲುವೆಯೇ ನಿಜವಾಗಿ ರಾಷ್ಟ್ರದ ಭವಿಷ್ಯಕ್ಕೆ ಪೋಷಕವಾದುದೆಂದು ಜನತೆ ಭಾವಿಸಿದರೆ ತಪ್ಪಾಗಲಾರದು. ಆದರೆ ಅಂಶವು ಎಂದಿಗೂ ಪೂರ್ಣವೆನಿಸಲಾರದು ಎಂಬುದಕ್ಕಾಗಿ, ಅರ್ಥಾತ್ ಪ್ರತಿ ಪಕ್ಷಗಳ ನಿಲುವೆಯು ಕಾಂಗ್ರೆಸಿನಷ್ಟು ಸಮಗ್ರವಾದುದಲ್ಲವೆಂಬುದಕ್ಕಾಗಿ, ಆ ಪಕ್ಷಗಳ ಕಡೆಗೆ ಒಲವು ತೋರಿಸುವುದಕ್ಕಿಂತ ಕಾಂಗ್ರೆಸಿನ ಕಡೆಗೆಯೇ ಹೆಚ್ಚು ಶ್ರದ್ಧೆ ತೋರಿಸುವುದು ಅಪೇಕ್ಷಣೀಯ. ಪ್ರತಿಪಕ್ಷ ಬೇಕೆಂಬುದಕ್ಕಾಗಿ ಪಕ್ಷ ಕಟ್ಟುವ ಹವ್ಯಾಸಕ್ಕೆ ಹೋಗದೆ, ಸಮರ್ಥ ಆಡಳಿತಬೇಕು ಎನ್ನುವುದಕ್ಕಾಗಿ ನಾವೀಗ ದುಡಿಯೋಣ. ಕಾಂಗ್ರೆಸು ಪ್ರಮುಖ ರಾಜಕೀಯ ಗುಂಪುಗಳ ಉತ್ತಮ ವೈಶಿಷ್ಟ್ಯವನ್ನೊಳಗೊಂಡ ಪಂಚಕಜ್ಜಾಯದಂತಿದೆ ಎಂಬುದನ್ನು ಚುನಾವಣೆ ಸಮೀಪಿಸುತ್ತಿರುವ ಈ ದಿನಗಳಲ್ಲಿ ಮರೆಯದಿರೋಣ!

— ಕಾರ್ತಿಕೇಯ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O.S. 317/1954; R.I.A. 1164/1955.
ಪದ್ದಕ್ಕ ಶೆಡ್ತಿ— ವಾದಿ; ಅರ್ಜಿದಾರಳು.

ಮತ್ತು

ಸಂಜೀವ ಶೆಟ್ಟಿ, ಪದ್ದಕ್ಕ ಶೆಡ್ತಿ ಮಗ— ಉಡುಪಿ ತಾಲೂಕು ಬೆಳ್ಳಂಪಳ್ಳಿ ಗ್ರಾಮದ ಪುಣ್ಣ್ಯಾರು... 1ನೇ ಪ್ರತಿವಾದಿ; 1ನೇ ಎದ್ರಿ.

ಇವರೊಳಗೆ —

ಸದ್ರಿ 1ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಮೇಲ್ಕಂಡ ಪಾರ್ಟಿಶನ್ ಪ್ರಿಲಿಮಿನರಿ ಡಿಕ್ರಿಯ ಮೇಲೆ ಫೈನಲ್ ಡಿಕ್ರಿ ಅಪೇಕ್ಷಿಸಿ ಅರ್ಜಿದಾರಳು ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 16—1—1956ಕ್ಕೆ ಇಟ್ಟಿದೆ. ಆ ಕುರಿತು ನಿಮಗೇನಾದರೂ ಆಕ್ಷೇಪ ಇದ್ದರೆ ಆ ದಿವಸ ಪೂರ್ವಾಹ್ನ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

K. Ramakrishna Rao,
Vakil for Petitioner.
Udipi, Dated 23-12-1955.

ಕುಮಾರಿ ಬಿಲ್ಲೆಗಳು (Govt.Regd.)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

(ವಿ. ಪಿ. ಪಿ. ಪ್ರತ್ಯೇಕ)

Mrs. **P. DEVEE,** F. Ds. (N. J.)
CALCUTTA—40

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಮಂಗಳೂರು

ದ. ಕ. ಜಿಲ್ಲಾ ಪತ್ರಿಕೋದ್ಯಮಿಗಳ ಪರಿಷತ್ತು— ತಾ. ೮ರಲ್ಲಿ ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ತಾ. ೮ರಲ್ಲಿ ಜರಗಿತು. ಸ್ವೀಕೃತವಾದ ಪಲವು ನಿರ್ಣಯಗಳಲ್ಲಿ ಸೇವನಸಿರಾಜ ಮಲ್ಲಿ, ಕೆ. ಎಮ್. ಆಳ್ವ, ಡಾ. ಎಮ್. ಗೋಪಾಲಕೃಷ್ಣರಾವ್, ಬಿ. ಪಂಕಜ ಭಟ್, ಸಂ. ಶಿ. ಹರಿದಾಸ ಭಟ್, ಮನಮೋಹನ ಕಾಮತ್ ಮೊದಲಾದವರು ಭಾಗವಹಿಸಿದ್ದರು. ದ. ಕ. ಜಿಲ್ಲಾ ಪತ್ರಿಕೋದ್ಯೋಗಿ ಸಂಘದೊಡನೆ ವಿಚಾರವಿನಿಮಯ ನಡೆಸಿ, ಜಿಲ್ಲೆಯ ಎಲ್ಲಾ ತಾಲೂಕುಗಳ ಪ್ರತಿನಿಧಿಗಳನ್ನೊಳಗೊಂಡು ವ್ಯಾಪಕವಾಗಿರುವಂತೆ ಜಿಲ್ಲಾ ಸಂಘವನ್ನು ರೂಪಿಸುವ ಇತ್ಯಾದಿ ಕಾರ್ಯಗಳ ಕುರಿತು ಪರ್ಯಾಲೋಚಿಸಲು ಉಪಸಮಿತಿಯೊಂದು ರಚಿಸಲ್ಪಟ್ಟಿತು.

ಮಂಗಳೂರು ಪತ್ರಿಕೋದ್ಯಮಿ ಸಂಘದ ಪ್ರಥಮ ವಾರ್ಷಿಕೋತ್ಸವವು— ತಾ. ೭ರಂದು ಗಣಪತಿ ಹೈಸ್ಕೂಲ್ ಶಾರದಾ ಭವನದಲ್ಲಿ, ಬೆಂಗಳೂರಿನ ಪ್ರಜಾವಾಣಿ ದೈನಿಕ ಸಂಪಾದಕರಾದ ಶ್ರೀ ಟಿ. ಎಸ್. ರಾಮಚಂದ್ರ ರಾಯರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ವಿ. ಎಸ್. ಕುಡ್ವರು ಅಧ್ಯಕ್ಷತೆ ವಹಿಸಿದ್ದು, ದ. ಕ. ಜಿಲ್ಲೆಯ ಪತ್ರಿಕೋದ್ಯಮ ಬಹಳ ಹಿಂದಿನಿಂದ ಬೆಳೆದು ಬಂದಿರುವುದೆಂದರು. ಮುಂದುವರಿಯುತ್ತಾ ಪತ್ರಿಕಾ ಸ್ವಾತಂತ್ರ್ಯದೊಡನೆ ಪತ್ರಿಕೋದ್ಯಮಿಗಳಿಗೆ ಜವಾಬ್ದಾರಿ ಕೂಡಾ ಇದೆ ಎಂದರು. ಉದ್ಘಾಟಕರು ತಮ್ಮ ಭಾಷಣದಲ್ಲಿ, ನಿಯೋಜಿತ ಕರ್ನಾಟಕದ ಹೈದರಾಬಾದ್, ಧಾರವಾಡ, ಮಂಗಳೂರು, ಮೈಸೂರು ಈ ಕ್ಷೇತ್ರಗಳಲ್ಲಿ ಮಾತಾಡುವ ಕನ್ನಡ ಭಾಷೆಯನ್ನು ಅಭ್ಯಸಿಸಿ, ಅವು ಮಿಲನವಾಗುವಂತೆ ಮಾಡಿ, ಕನ್ನಡ ನುಡಿಗೆ ಹೊಸರೂಪ ಬರುವಂತೆ ಮಾಡಬೇಕಾಗಿದೆ ಎಂದು ಹೇಳಿದರು.

ಆರಂಭದಲ್ಲಿ ಪತ್ರಿಕೋದ್ಯಮಿ ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಆಚಾರ್ಯರು ಸ್ವಾಗತಭಾಷಣ ಮಾಡಿದರು. ಪ್ರಜಾವಾಣಿ ಪತ್ರಿಕೆಗೆ ಈ ವರ್ಷ ದೊರೆತ ರಾಷ್ಟ್ರಾಧ್ಯಕ್ಷರ ಪ್ರಶಸ್ತಿಗಾಗಿ, ಮಂಗಳೂರು ಪತ್ರಿಕೋದ್ಯಮಿ ಸಂಘದ ಪರವಾಗಿ ಶ್ರೀ ಟಿ. ಎಸ್. ರಾಮಚಂದ್ರ ರಾಯರಿಗೆ ಮಾನಪತ್ರವನ್ನು ಶ್ರೀ ಕೆ. ಎಸ್. ಉಪಾಧ್ಯರು ಅರ್ಪಿಸಿದರು.

ನಿಯೋಜಿತ ಕರ್ನಾಟಕವನ್ನು ಕರ್ನಾಟಕವೆಂದೇ ಕರೆಯಬೇಕೆನ್ನುವ, ಜಿಲ್ಲೆಯ ಎಲ್ಲಾ ಪತ್ರಿಕೆಗಳಿಗೂ ಯಾವ ಭೇದವೂ ಇಲ್ಲದೆ, ಜಿಲ್ಲಾಧಿಕಾರಿಗಳೂ, ಸರಕಾರಿ ಕಚೇರಿಗಳೂ, ಸ್ಥಳೀಯ ಸಂಸ್ಥೆಗಳೂ, ಸುದ್ದಿ ಸೌಕರ್ಯಗಳನ್ನೂ ಅವಕಾಶಗಳನ್ನೂ ಕಲ್ಪಿಸಿಕೊಡಬೇಕೆನ್ನುವ, ಸಾರ್ವಜನಿಕ ಮತ್ತು ಇತರ ಸಂಸ್ಥೆಗಳು ತಮ್ಮ ಕಾರ್ಯಕಲಾಪಗಳಿಗೆ ಮತ್ತು ಸಭೆ ಸಮಾರಂಭಗಳಿಗೆ ಹಾಜರಿರುವಂತೆ ಅನುಕೂಲಿಸಲು ಎಲ್ಲಾ ಪತ್ರಿಕೆಗಳ ಪ್ರತಿನಿಧಿಗಳಿಗೂ ಸಮಾನಾವಕಾಶ ನೀಡಬೇಕೆನ್ನುವ, ಸರಕಾರವೇ ನ್ಯೂಸ್ ಪ್ರಿಂಟ್ ಆಮದು ಮಾಡಿ ಸಣ್ಣ ಪತ್ರಿಕೆಗಳಿಗೆ ಬೇಕಾದ ಪ್ರಮಾಣದಲ್ಲಿ ವಿತರಣೆ ಮಾಡಬೇಕೆನ್ನುವ, ನಿಯೋಜಿತ ಕನ್ನಡ ರಾಜ್ಯದಲ್ಲಿ, ಗಡಿ ಪ್ರದೇಶದ ಇತರ ಪ್ರಾಂತಗಳಲ್ಲಿನ ಎಲ್ಲಾ ಕನ್ನಡ ಪ್ರದೇಶಗಳು ಸೇರಬೇಕೆನ್ನುವ, ಕಾಸರಗೋಡು ತಾಲೂಕಿನ ಚಂದ್ರಗಿರಿ ನದಿಯ ಉತ್ತರ ಭಾಗ ಕರ್ನಾಟಕ ಪ್ರಾಂತದಲ್ಲಿ ಸೇರುವಂತಾಗಬೇಕೆನ್ನುವ—ಇತ್ಯಾದಿ ನಿರ್ಣಯಗಳಾದುವು. ನಂತರ ಪತ್ರಿಕಾ ವರದಿ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ಪಡೆದ ಶ್ರೀಗಳಾದ ಬೈಕಾಡಿ ವೆಂಕಟಕೃಷ್ಣರಾವ್ ಮತ್ತು ಪಿ. ಕೆ. ನಾರಾಯಣನವರಿಗೆ ಬಹುಮಾನ ವಿತರಣೆ ಮಾಡಲಾಯಿತು. ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಲಾದ ಕನ್ನಡ ಪತ್ರಿಕೆಗಳ ಪ್ರದರ್ಶನದ ಉದ್ಘಾಟನೆಯನ್ನು ಉಡುಪಿ ಎಮ್. ಜಿ. ಎಮ್. ಕಾಲೇಜ್ ಪ್ರಿನ್ಸಿಪಾಲ್ ಶ್ರೀ. ಎಚ್. ಸುಂದರ ರಾಯರು ನೆರವೇರಿಸಿದರು. ಪ್ರಜಾವಾಣಿ ಪತ್ರಿಕೆಯ ಉಪಸಂಪಾದಕ ಶ್ರೀ. ಸೂರ್ಯನಾರಾಯಣರಾಯರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಾತ್ರಿ ವಿನೋದಾವಳಿಗಳ ಕಾರ್ಯಕ್ರಮ ನಡೆಯಿತು.

ನನಗೆ ನಿನ್ನೆ ರಾತ್ರಿ ಪುನಃ ಆ ಮಚ್ಚೆಯ ಕನಸಾಯಿತು.

ನನ್ನ ಕುತ್ತಿಗೆಗೆ ತಾಗಿ, ಕೆಳಗೆ, ಬೆನ್ನಿನ ಮೇಲೆ, ಬಲಬದಿಯಲ್ಲಿನ ಆ ಮಚ್ಚೆಯನ್ನು ಉದ್ದೇಶಿಸಿ, ನೀವೆಷ್ಟು ಸಲ ನನ್ನನ್ನು ಬೈದಿಲ್ಲ?

ಅದು ಸ್ವಲ್ಪ ದೊಡ್ಡದಾಗಿದೆ—ಎಳ್ಳಿಗಿಂತಲೂ ಚಿಕ್ಕದಿರಬೇಕಾಗಿದ್ದ ಆ ಮಚ್ಚೆ ಅವರೆಕಾಳಿನಷ್ಟು ದೊಡ್ಡದಿದೆ; ಸಾಲದುದಕ್ಕೆ ಅಷ್ಟು ಎತ್ತರಕ್ಕೆ ಅದು ಉಬ್ಬಿಕೊಂಡೂ ಇದೆ!

"ಅದರೊಡನೆ ಯಾವಾಗಲೂ ನೀನು ಆಡುತ್ತೀಯ! ಬಹಳ ಒಳ್ಳೆಯ ಅಭ್ಯಾಸವೊಂದು ನಿನಗೆ ಅಂಟಿಕೊಂಡಿದೆ!" ಎಂದು ನೀವು ನನ್ನನ್ನೆಷ್ಟು ಸಲ ಹಂಗಿಸಿಲ್ಲ?

ನನ್ನ ಬಾಲ್ಯ ಕಾಲದಿಂದ ಇದ್ದ ಆ ಉಬ್ಬಿದ ಮಚ್ಚೆಯ ಕುರಿತು ನಿಮಗೆ ತುಂಬ ತಿರಸ್ಕಾರ!

***

ನನ್ನ ತಾಯಿಯೂ ನನಗೆ ಬೈಯುತ್ತಿದ್ದಳು. "ಅದರೊಡನೆ ಆಟವಾಡಿದಷ್ಟೂ ಮಚ್ಚೆ ಉಬ್ಬಿಕೊಳ್ಳುತ್ತದೆ!" ಎಂದವಳು ನನ್ನನ್ನು ಹೆದರಿಸುತ್ತಿದ್ದಳು. ಆದರೆ ನನ್ನ ಅಭ್ಯಾಸ ಮಾತ್ರ ನಿಲ್ಲಲಿಲ್ಲ.

ಹದಿಮೂರನೇ ವರ್ಷದಲ್ಲಿ ನಿಮ್ಮ ಕೈಹಿಡಿದು, ಸೊಸೆಯಾಗಿ ನಿಮ್ಮ ಗೃಹ ಪ್ರವೇಶ ಮಾಡಿದ ಬಳಿಕ ಅದು ನಿಮ್ಮ ಕಣ್ಣನ್ನು ಸೆಳೆಯಿತು. ನಮ್ಮ ಅನ್ಯೋನ್ಯ ಪ್ರೀತಿಯೇ ಈ ಉಬ್ಬಿದ ಮಚ್ಚೆಯು ನಿಮ್ಮ ಕಣ್ಣನ್ನು ಕುಕ್ಕುವಂತೆ ಮಾಡಿತು.

ಕುತ್ತಿಗೆಗೆ ತಾಗಿ ಬೆನ್ನಿನ ಮೇಲ್ಗಡೆ ರವಿಕೆಯ ಹೊದಿಕೆಯಲ್ಲಿದ್ದ ಆ ಮಚ್ಚೆ ಬೇರೆಯಾರ ಕಣ್ಣಿಗಾದರೂ ಬೀಳುವುದು ಸಾಧ್ಯವೇನು? ನಿಮ್ಮ ಕಣ್ಣಿಗದು ಮೊದಲ ಬಾರಿಗೆ ಬಿದ್ದಾಗ ನನಗೆ ನಿಜಕ್ಕೂ ನಾಚಿಕೆಯಾಯಿತು. ನನ್ನ ರಹಸ್ಯವೊಂದು ಬಯಲಾದಂತೆ ಮನಸ್ಸು ತಲ್ಲಣಗೊಂಡಿತು.

ಅಂದು ರಾತ್ರಿ ನೀವೇನೂ ಅಪ್ರಿಯ ಮಾತನಾಡದೆ ಸಂತೋಷದಿಂದ ನಿದ್ದೆಯನ್ನು ಮಾಡಿದಾಗ, ನನ್ನ ನಾಚಿಕೆಗೆ ಇನ್ನೆಲ್ಲಿಯ ಆಶ್ರಯ ಸ್ಥಾನ? ಎಂದು ನನ್ನನ್ನು ಆವರಿಸಿದ್ದ ಭಯವು ತುಸು ದೂರವಾಯಿತು. ಆ ಭಯ ಮತ್ತೆ ಮರುಕಳಿಸುವುದೆಂದು ನಾನಾಗ ಎಣಿಸಿರಲಿಲ್ಲ.

***

"ಏನಿದು ನಿನ್ನ ಕೆಟ್ಟ ಅಭ್ಯಾಸ? ಅದನ್ನೇಕೆ ಅಷ್ಟು ವಿಚಾರಿಸಿಕೊಳ್ಳುವ ಪ್ರಯಾಸ?" ಎಂದು ನೀವೊಮ್ಮೆ ಕೇಳಿದಾಗ ನನ್ನ ಈ ಅಭ್ಯಾಸವನ್ನು ಸಹಿಸಿಕೊಳ್ಳಬೇಕೆಂದು ವಿನಂತಿಸುವ ಮನಸ್ಸಾಯಿತು, ನಿಜ. ಆದರೆ ನಿಮಗೇಕೆ ನನ್ನ ಈ ಆಟ ನೋಯಿಸುತ್ತದೆ? ಎಂಬುದನ್ನು ನನ್ನಲ್ಲಿಯೇ ಪ್ರಶ್ನಿಸಿ ತಿಳಿದುಕೊಳ್ಳುವ ಲವಲವಿಕೆ ಆಗ ಬಲವಾದುದರಿಂದ ನನ್ನ ವಿನಂತಿ ಪ್ರಕಟ ರೂಪದಲ್ಲಿ ವ್ಯಕ್ತವಾಗದೆ ಹೋಯಿತು''

"ಅದನ್ನು ಎಡಗೈಯಿಂದಲೇ ನೀನು ಆಡಿಸುತ್ತಿರಬೇಕೆ?" ಎಂದೂ ನೀವೊಮ್ಮೆ ಕೇಳಿದ್ದಿರಿ. "ನಿನ್ನ ಬಲ ಭುಜದ ಒತ್ತಿಗೆ ಆ ಮಚ್ಚೆ ಉಬ್ಬಿಕೊಂಡು ನಿಂತಿದೆ; ಬಲಗೈಯನ್ನು ಉಪಯೋಗಿಸಬಾರದೇಕೆ?" ಎಂದು ನೀವು ಸಲಹೆಯನ್ನು ಕೊಟ್ಟಿರಿ.

ಆದರೆ ನಾನು ಬಲ ಭುಜದ ಒತ್ತಿಗಿದ್ದ ಆ ಮಚ್ಚೆಯನ್ನು ನನ್ನ ಬಲಗೈಯಿಂದ ಹೇಗೆ ಮುಟ್ಟಲು ಸಾಧ್ಯ? ಅದು ಎಟಕುವುದೇ ಇಲ್ಲ! ಹೀಗಿದ್ದೂ ನೀವು ನೀಡಿದ ಸಲಹೆಯ ಅರ್ಥವೇನು?

ಬಹಳ ದೂರದ ವರೆಗೆ ನಾನು ಅದಕ್ಕಾಗಿ ಹುಡುಕ ಬೇಕಾಗಲಿಲ್ಲ. ನಾನು ನನ್ನ ಎಡಗೈಯನ್ನು ನನ್ನ ತುಂಬಿದ ಎದೆಗೆ ಆನಿಸಿಕೊಂಡು ತಂದು ಉಬ್ಬಿದ ಆ ಮಚ್ಚೆಯೆಡೆಗೆ ಕೊಂಡು ಹೋದಾಗ ನನ್ನನ್ನು ನಾನೇ ಆಲಂಗಿಸಿಕೊಂಡಂತೆ ನಿಮಗೆ ತೋರುತ್ತಿತ್ತಲ್ಲವೆ? ನೀವು ಎದುರಿಗೆ ನಿಂತಿದ್ದರೂ ನಿಮ್ಮನ್ನು ದೂಡಿಬಿಟ್ಟಂತೆ ನಿಮಗೆ ಭಾಸವಾಗುತ್ತಿತ್ತಲ್ಲವೆ?

***

"ಡಾಕ್ಟರರಲ್ಲಿಗೆ ಹೋಗಿ ಆ ಉಬ್ಬಿದ ಮಚ್ಚೆಯನ್ನು ಶಸ್ತ್ರಕ್ರಿಯೆಯಿಂದ ಕತ್ತರಿಸಿಕೊಂಡು ಬರಬಾರದೆ?" ಎಂದೂ ನೀವು ಸೂ-

ಜಪಾನಿ ಕತೆ—

ಉಬ್ಬಿದ ಮಚ್ಚೆ

ಚನೆಯನ್ನಿತ್ತಿರಿ. ಆವರೆ ನಾನು "ನನಗೆ ನಾಚಿಕೆಯಾಗುತ್ತದೆ" ಎಂದು ಹೇಳಿ ಸುಮ್ಮನೆ ಕುಳಿತೆ.

"ಅದೇನು ತೀರ ಸಾಮಾನ್ಯ ವಿಷಯ" ಎಂದು ನೀವು ಹೇಳಿದಾಗ "ಒಂದು ಮಚ್ಚೆಯನ್ನು ತೆಗೆಸಲು ಸಹ ಡಾಕ್ಟರರ ಬಳಿಗೆ ಹೋಗಬೇಕೆ?" ಎಂದು ಪ್ರತಿವಾದಿಸಿದೆ. "ಮುಖದ ಮೇಲಿನ ಮಚ್ಚೆಗಾದರೆ ಸರಿ... ಯಾರೂ ನೋಡಲಾಗದ ನನ್ನ ಈ ಮಚ್ಚೆಯನ್ನು ಕತ್ತರಿಸಲು ಡಾಕ್ಟರರಲ್ಲಿಗೆ ಹೋದರೆ ಅವರು ನನ್ನ ಗಂಡನು ಈ ಮಚ್ಚೆಗೆ ಹೇಸಿಕೊಂಡಿರುವನೆಂದೇ ಭಾವಿಸಬಹುದು. ನಾನೆಂದೂ ಹೀಗೆ ಮರ್ಯಾದೆ ಕಳೆದುಕೊಳ್ಳಲು ಬಯಸುವುದಿಲ್ಲ" ಎಂದು ಹಠದಿಂದ ಹೇಳಿದೆ.

"ನಿನಗೆ ಅದನ್ನು ಹಿಡಿದು ಆಟವಾಡುವ ಅಭ್ಯಾಸವಿದೆ; ಅದನ್ನು ನಿವಾರಿಸಲಿಕ್ಕಾಗಿ ಶಸ್ತ್ರಕ್ರಿಯೆ ಅಗತ್ಯವೆಂದು ಹೇಳಬಹುದು" ಎಂದು ನೀವು ಆ ಆಕ್ಷೇಪಕ್ಕೂ ಉತ್ತರವಿತ್ತಿರಿ.

"ಅಷ್ಟು ಕ್ಷುಲ್ಲಕವಾದ ಮಚ್ಚೆಗೆ ಮಹತ್ವ ಕೊಡಬೇಡಿ" ಎಂದು ನಾನು ಅಂಗಲಾಚಿದೆ. "ನೀನು ಅದರೊಡನೆ ಆಟವಾಡುವುದನ್ನು ನಿಲ್ಲಿಸಿ ಬಿಡು" ಎಂದು ನೀವು ಶರ್ತ ಹಾಕಿದಿರಿ.

"ಆಟವಾಡುವುದರಲ್ಲಿ ತಪ್ಪೇನು?" ಎಂಬ ಪ್ರಶ್ನೆಗೆ ನೀವು ಕೊಟ್ಟ ಆ ಉತ್ತರ—ಎಷ್ಟು ಮಾರ್ಮಿಕ!

"ತಪ್ಪು ಮತ್ತು ಸರಿಯ ಪ್ರಶ್ನೆ ಇಲ್ಲಿಲ್ಲ—ಆದರೆ ನೀನು ಹಾಗೆ ಎಡಗೈ ಎತ್ತಿಕೊಂಡು ಆಟವಾಡುವಾಗಿನ ನಿನ್ನ ಮುಖ ಭಾವ—ನನ್ನನ್ನೆ ನೀನು ಮರೆತು ಬಿಟ್ಟಂತೆ!"

***

ನನ್ನನ್ನೆ ನಾನು ಮರೆತು ಬಿಟ್ಟಂತೆ! —ಓ, ಆ ಮುಖಭಾವ ಎಷ್ಟು ಆಕರ್ಷಕವಾಗಿರಬಹುದು! ನನ್ನ ಹೃದಯದೊಳಗಿನ ಭಾವನೆಗಳೆಲ್ಲವೂ ನನ್ನ ಮುಖದಲ್ಲಿ ನಾನು ಆ ಉಬ್ಬಿದ ಮಚ್ಚೆಯನ್ನು ಎಡಗೈಯಿಂದ ಮುಟ್ಟಿದಾಗ ನರ್ತಿಸುತ್ತಿರುತ್ತವೆಯೆ?

—ನಿಮಗೆ ಅದು ಸ್ವಲ್ಪವೂ ಹಿಡಿಸುವುದಿಲ್ಲ ಎಂಬ ವಿಚಾರ ಮನಸ್ಸಿನಲ್ಲಿ ಸುಳಿದಾಗ ನಾನು ನಿಜಕ್ಕೂ ಭಯವಿಹ್ವಲಳಾದೆ. ಆದರೆ ಮರುಕ್ಷಣದಲ್ಲಿ ನನ್ನ ಆಗಿನ ಮುಖ ಭಾವವನ್ನು ಕಂಡು ಮನಸಾರೆ ಮೆಚ್ಚಬಹುದಾದ ಗಂಡಸರೂ ಇರಬಹುದು ಎಂದು ತೋರಿತು!

ಹಾಗಾದರೆ ಮೋಹಕವಾದ ನನ್ನ ವರ್ತನೆಯು ನಿಮಗೆ ಮಾತ್ರ ತಿರಸ್ಕಾರ ಯೋಗ್ಯವಾಗಿ ಕಾಣುತ್ತದೆ ಅಲ್ಲವೆ? ಆಶ್ಚರ್ಯ, ನಿಜಕ್ಕೂ ಪರಮಾಶ್ಚರ್ಯ!

ಇದೇ ಗುಂಗಿನಲ್ಲಿದ್ದಾಗ ನನ್ನ ಎಡಗೈ ಮೆಲ್ಲನೆ ಉಬ್ಬಿದ ಆ ಮಚ್ಚೆಯೊಡನೆ ಆಟವಾಡಲೆಂದು ಸರಿಯಿತು; ಆಗ ನೀವೇನು ಮಾಡಿದಿರಿ?

ಕೈಯನ್ನು ಪಟಕ್ಕನೆ ಹಿಂದೆಳೆದಿರಿ! ಸಿಟ್ಟಿನಿಂದ ತಪ್ತರಾಗಿ ಬೆನ್ನಿಗೆ ಹೊಡೆದಿರಿ! ಕಾಲಿನಿಂದ ತುಳಿಯುವುದಕ್ಕೂ ಹೇಸಲಿಲ್ಲ!

"ಈ ರೋಗವನ್ನು ಹೇಗೆ ನಾನು ಗುಣಪಡಿಸಲಿ?" ಎಂದು ನೀವು ಅರ್ಭಟಿಸಿದಿರಿ!

ನಿಮ್ಮ ಧ್ವನಿಯಲ್ಲಿದ್ದ ಸಿಡುಕ ನನ್ನನ್ನೆಚ್ಚರಿಸಿತು. ನನ್ನ ಭಾವ ಮುದ್ರೆ ದೂರವಾಯಿತು.

***

"ನನ್ನಿಂದ ಆ ಅಭ್ಯಾಸವನ್ನು ನಿಲ್ಲಿಸಲು ಸಾಧ್ಯವೇ ಆಗುತ್ತಿಲ್ಲ. ನೀವು ನನ್ನ ಕೈಗಳನ್ನು ಹಗ್ಗದಿಂದ ಕಟ್ಟಿ ಹಾಕುವುದೇ ವಿಹಿತ" ಎಂದು ಕೊನೆಗೊಮ್ಮೆ ನಾನು ಕೈಮುಂದೆ ಮಾಡುತ್ತಾ ಹೇಳಿದೆ.

ನಿಮಗೆ ಗಾಬರಿಯಾದ ಹಾಗೆ ತೋರಿತು. ನಿಮ್ಮ ಉದ್ವೇಗ, ಸಿಟ್ಟು ನಿಧಾನವಾಗಿ ಇಳಿದಂತೆ ಕಂಡಿತು. ವಿನೋದಕ್ಕಾಗಿಯೋ, ನನ್ನ ಆಗ್ರಹಕ್ಕಾಗಿಯೋ ನೀವೊಂದು ಹಗ್ಗ ತಂದು ನನ್ನ ಕೈಗಳನ್ನು ಕಟ್ಟಿದಿರಿ!

ಆಗಿನ ನಿಮ್ಮ ಕಣ್ಣುಗಳ ನೋಟವನ್ನು ನಾನೆಂದೂ ಮರೆಯಲಿಕ್ಕಿಲ್ಲ! ನಾನು ಕಟ್ಟಿದ್ದ ಕೈಗಳಿಂದಲೇ ನನ್ನ ಕೆದರಿದ ತಲೆಗೂದಲನ್ನು ಸರಿಪಡಿಸಿಕೊಳ್ಳಲು ಹೆಣಗುತ್ತಿದ್ದಾಗ ನೀವು ನನ್ನನ್ನು ನೋಡುತ್ತಿದ್ದ ರೀತಿಯೋ, ತೀರ ವಿಚಿತ್ರ!

ನಾನೆಣಿಸಿದೆ—ಈ ಸಲ ನನ್ನ ಆ ದುರಭ್ಯಾಸ ಸಂಪೂರ್ಣ ನಿಂತು ಹೋಗುತ್ತದೆ! ಆದರೆ ಕೈಗಳನ್ನು ಎಷ್ಟು ದಿನಗಳವರೆಗೆ ಕಟ್ಟಿಡಬಹುದು? ಆ ಅಭ್ಯಾಸ ಮರುಕಳಿಸಿಯೇ ಮರುಕಳಿಸಿತು. ನಾನು ನಿರಾತಂಕಳಾಗಿ ಆ ಉಬ್ಬಿದ ಮಚ್ಚೆಯನ್ನು ಆಡಿಸುವುದಕ್ಕೆ ಸಾಧ್ಯವಾಯಿತು. ಆದರೆ, ಈ ಆಟದೊಡನೆ ನನಗಾದ ನಷ್ಟವನ್ನು ಯಾರೊಡನೆ ಹೇಳಲಿ?

ನಿಮ್ಮ ಪ್ರೀತಿಗೆ ನಾನು ಮುಂದೆ ಬಾಧ್ಯಳಾಗಲಿಲ್ಲ!

***

ನಾನಾಗ ವಿಶೇಷ ಜಾಗರೂಕತೆಯಿಂದ ವರ್ತಿಸಲೇಬೇಕಾಯಿತು. ಹಗ್ಗದಿಂದ ಕಟ್ಟಲ್ಪಟ್ಟಾಗಲೂ ನಿಲ್ಲಿಸಲು ಕಷ್ಟವೆನಿಸಿದ್ದ ಅಭ್ಯಾಸವನ್ನು ಸ್ವಂತ ಬುದ್ಧಿಯ ನಿಯಂತ್ರಣ ಶಕ್ತಿಯಿಂದ ದೂರೀಕರಿಸುವ ಸಾಹಸಕ್ಕೆ ಅಣಿಯಾದೆ. ಆ ಅಭ್ಯಾಸ ತನ್ನಷ್ಟಕ್ಕೆ ಹೋಗಿ ಬಿಟ್ಟಿತೆಂದು ಹೇಳುವ ಮಟ್ಟಕ್ಕೆ ನಾನು ಬಂದೆ.

ಆದರೆ, ನೀವೇಕೆ ಮತ್ತೂ ಉದಾಸೀನರಂತೆ ತೋರಿದಿರಿ? ನಾನೊಮ್ಮೆ ಉತ್ಸಾಹದಿಂದ "ನಾನೀಗ ಆ ಉಬ್ಬಿದ ಮಚ್ಚೆಯೊಡನೆ ಆಟವಾಡುತ್ತಿಲ್ಲ ನೀವು ನೋಡಲಿಲ್ಲವೆ?" ಎಂದು ಪ್ರೀತಿಯಿಂದ ನುಡಿದಾಗ ಮುಖವನ್ನೇಕೆ ಹಾಗೆ ಅತ್ತ ತಿರುಗಿಸಿ ಬಿಟ್ಟಿರಿ?

ನಿಮಗೆ ನನ್ನ ಈ ಮಹಾ ಸಾಧನೆಯು ಸಣ್ಣ ಕೆಲಸವಾಗಿ ಕಂಡಿತೆ? ನಿಮ್ಮ ದೃಷ್ಟಿಯಲ್ಲಿ ನಾನು ಆ ಮಚ್ಚೆಯೊಡನೆ ಆಟವಾಡುತ್ತಿದ್ದರೂ ಬಿಟ್ಟರೂ ಒಂದೇ—ಎಂಬ ಉದಾಸೀನತೆಯನ್ನು ನಾನು ನೋಡಿದೆ. ನೀವು ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದನ್ನಾದರೂ ಹೇಳುತ್ತಿದ್ದರೆ ನನಗೆ ಸಮಾಧಾನವಾಗುತ್ತಿತ್ತು—ಆದರೆ ನೀವು ತುಟಿಪಿಟಿಕ್ಕೆನ್ನಲಿಲ್ಲ!

ನಾನೀಗ ಏಕಾಂತವಾಸಿಯಾದೆ! ನಿಮ್ಮ ಮೌನವನ್ನು ಭಂಗಪಡಿಸುವುದಕ್ಕಾದರೂ ನಾನು ಮೆಲ್ಲನೆ ಎಡಗೈಯನ್ನು ತುಂಬಿದ ಎದೆಯ ಮೇಲಿಂದ ಆ ಉಬ್ಬಿದ ಮಚ್ಚೆಯ ಕಡೆಗೆ ತೆಗೆದುಕೊಂಡು ಹೋಗಿ ಆಟವಾಡಬೇಕು ಎಂದುಕೊಂಡೆ. ಹೆದರಿಕೆ ನನ್ನನ್ನು ಆಗ ತಡೆಯಿತು.

ನಾನು ಅವನತ ಮುಖಿಳಾದೆ—ತುಟಿಗಳೆರಡನ್ನೂ ಕಚ್ಚಿಕೊಂಡು ಕುಳಿತೆ ನೀವಾಗಿಯೇ ಮಚ್ಚೆಯ ಕುರಿತು ಪ್ರಸ್ತಾಪವೆತ್ತುವ ದಿನ ಬಂದೀತೋ ಎಂದು ಕಾಯುವುದರಲ್ಲಿ ಹಲವು ದಿನ ಸಂದಿತು.

***

ತವರು ಮನೆಗೆ ಬಂದರೂ ನನಗೆ ಸುಖಾಸುಖವಾಗಲಿಲ್ಲ. ನಾನೊಬ್ಬಳು ಕೆಟ್ಟ ಹೆಂಡತಿ ಗಂಡನಿಂದ ಪರಿತ್ಯಕ್ತಳಾಗಲೂ ಬಹುದು!

ಈ ವಿಚಾರ ನನ್ನಲ್ಲಿ ರೋಮಾಂಚನವನ್ನುಂಟುಮಾಡಿತು, ಮೈ ಜುಮ್ಮೆಂದಿತು. ರಾತ್ರಿ ತಲೆದಿಂಬಿನಲ್ಲಿ ಮುಖವಿಟ್ಟು ಎಷ್ಟು ಹೊತ್ತು ಅಳುತ್ತಿದ್ದೆನೋ ತಿಳಿಯದು.

ಆ ರಾತ್ರಿ ಎಂಥಾ ಭೀಕರ ಕನಸು! ನೀವು ಇನ್ನೊಬ್ಬ ಹೆಂಗಸಿನೊಡನೆ ನನ್ನ ಮುಂದೆಯೇ ಸಲ್ಲಾಪದಲ್ಲಿ ತೊಡಗಿದ್ದಿರಿ. ನಾನಾಗ ಮದವೇರಿದವಳಂತೆ ಬಂದು ನಿಮ್ಮ ಮುಂದೆ ನಿಂತೆ—ಎಡಗೈಯ ಎರಡು ಬೆರಳುಗಳನ್ನು ಮುಂದೆ ಮಾಡಿ ನಿಮಗೆ ತೋರಿಸಿದೆ.

—ಅವುಗಳೆಡೆಯಲ್ಲಿತ್ತು ಆ ಉಬ್ಬಿದ ಮಚ್ಚೆ! ಯಾವ ಡಾಕ್ಟರನ ಬಳಿಗೂ ಹೋಗದೆ, ಏನೂ ನೋವನ್ನು ಅನುಭವಿಸದೆ, ನಾನೊಮ್ಮೆ ಅತ್ತ ಕೈಯಾಡಿಸಿ ಬೆರಳಿನಿಂದ ಒತ್ತಿದೊಡನೆಯೇ ಅದು ಕಿತ್ತು ಬಂದಿದ್ದಿತು!

ಈಗಲಾದರೂ ನಾನು ಕಳಂಕರಹಿತಳಾದೆನೆ? ಉಬ್ಬಿದ ಮಚ್ಚೆಯೊಂದಿರುವುದು ಎಂದಿಗೂ ದೈಹಿಕ ವೈಕಲ್ಯವಾಗಿ ಭಾವಿಸಲ್ಪಡುವುದಿಲ್ಲ. ಆದರೂ ನೀವು ಅದಕ್ಕಾಗಿ ಜುಗುಪ್ಸೆಪಟ್ಟಿರಿ. ಹೀಗೆ ತಿರಸ್ಕಾರ ತೋರಿಸುವ ನೀವು ಎಂದಾದರೂ ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಂಡಾಗ ಅಲ್ಲಿ, ಮೂಗಿನ ಪಾರ್ಶ್ವದಲ್ಲಿ, ಕೆಳಗೆ ಇಷ್ಟಗಲ ಹರಡಿರುವ ಆ ಮಚ್ಚೆಯನ್ನು ನೋಡಿದ್ದೀರಾ?—ಎಂದು ಕೇಳುವ ಮನಸ್ಸು ನನಗಾಯಿತು.

—ಹೌದು, ಇಷ್ಟು ದಿನ ನಾನು ನಿಮ್ಮ ಆ ಮಚ್ಚೆಯನ್ನು ನೋಡಿದರೂ ಮನಸ್ಸಿನಲ್ಲಿ ಅದರ ಪ್ರಭಾವ ಉಳಿದಂತಿರಲಿಲ್ಲ. ಕನಸು ಈ ಸತ್ಯ ವಿಷಯವು ಮನಸ್ಸಿನಲ್ಲಿ ಸದಾ ಜಾಗ್ರತವಾಗಿರುವಂತೆ ಮಾಡಿತು.

***

ನಾನು ಎಚ್ಚರಗೊಂಡಾಗ ತಲೆದಿಂಬು ಒದ್ದೆಯಾಗಿತ್ತು—ನಾನು ಅಳುತ್ತಲೇ ಇದ್ದೆನೋ ಏನೋ!

ಕನಸು ನೆನಪಿಗೆ ಬರಲು ಕುತೂಹಲ ಬೆರೆತ ಆಶ್ಚರ್ಯದ ಭಾವದೊಡನೆ ಎಡಗೈಯನ್ನು ಆ ಉಬ್ಬಿದ ಮಚ್ಚೆಯೆಡೆಗೆ ಹರಿಸಿದೆ—ಆದರೆ ಕನಸು ಕೇವಲ ಕನಸು! ಮಚ್ಚೆ ಮಾಯವಾಗಿರಲಿಲ್ಲ.

ತಾಯಿಯು ಅಂದು ಸಂಜೆ ನನ್ನನ್ನು ಕೇಳಿದಳು—"ಏನು, ನೀನು ವಯಸ್ಸನ್ನು ಪ್ರತಿಭಟಿಸಿ ದೇಹವನ್ನು ಕಾಪಾಡಿಕೊಳ್ಳುವಂತಿಲ್ಲವೆಂದು ಕಾಣುತ್ತದೆ!"

ನನ್ನ ತಾಯಿಯು ಸುಂದರಳಿದ್ದಳು. ಅವಳ ವಯಸ್ಸಿನಲ್ಲಿಯೂ ದೇಹ ಬಹಳ ಆಕರ್ಷಕವಿತ್ತೆಂಬುದು ನಿಜ.

"ಆ ಉಬ್ಬಿದ ಮಚ್ಚೆ ನಿನ್ನ ಚಿಕ್ಕಂದಿನಲ್ಲಿ ಎಷ್ಟು ಚೆನ್ನಾಗಿತ್ತು, ಗೊತ್ತೆ?" ಎಂದಳು ತಾಯಿ.

ಈಗ ನಾನು ತಾಯಿಗೆ ಏನು ಹೇಳಲಿ? ಆ ಮಚ್ಚೆಯೇ ನನ್ನನ್ನು ದುಃಖಕ್ಕೆ ಗುರಿಮಾಡಿ, ಅಕಾಲ ಮುಪ್ಪನ್ನು ತಂದಿತು ಎನ್ನಲೆ? ಹಾಗೆ ಹೇಳುವುದು ನನ್ನಿಂ

(೧೨ನೇ ಪುಟ ನೋಡಿರಿ)

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಪ್ರಾರ್ಥನೆಯ ಪ್ರಭಾವದ ಬಗ್ಗೆ ಪ್ರಯೋಗ

ವಿಚಾರ ತರಂಗಗಳ ಅಗಾಧ ಪರಿಣಾಮ

ಅಣ್ಣಾಮಲೈ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದಲ್ಲಿರುವ ಡಾ. ಟಿ. ಸಿ. ಎನ್. ಸಿಂಘ್ ಎಂಬ ಸಸ್ಯ ವಿಜ್ಞಾನಿಗಳು "ಸಸಿಗಳು ಮೌನ ಪ್ರಾರ್ಥನೆಗೆ ಉತ್ತರಿಸುತ್ತವೆಯೆ?" ಎಂಬ ಪ್ರಶ್ನೆಗೆ "ಹೌದು" ಎಂದು ಹೇಳುವ ಮನೋಜ್ಞ ಸಂಗತಿಯನ್ನು ಈಚೆಗೆ ವ್ಯಕ್ತಪಡಿಸಿದ್ದಾರೆ.

ಅವರು ತಮ್ಮ ಪ್ರಯೋಗ ಶಾಲೆಯಲ್ಲಿ ೧೯೫೩ನೇ ಇಸವಿಯಿಂದೀಚೆಗೆ ಚೆಂಡು ಮಲ್ಲಿಗೆ, ಕರ್ಣಕುಂಡಲ ಅಥವಾ ಬಸವ ಪಾದ, 'ಡೇಲಿಯ' ಜಾತಿಗೆ ಸೇರುವ ಒಂದು ಪಾಶ್ಚಾತ್ಯ ಪುಷ್ಪ (cosmos), ಸೀರುಳ್ಳಿ, ಬೆಳ್ಳುಳ್ಳಿ, ಮರ ಗೆಣಸು ಕಬ್ಬು ಇತ್ಯಾದಿ ಕೆಲವು ಬಗೆಯ ಸಸ್ಯಗಳ ಬೆಳವಣಿಗೆ ಮತ್ತು ಸಂತಾನೋತ್ಪಾದನೆಯ ಕ್ರಿಯೆಗಳ ಮೇಲೆ ಸಂಗೀತ ಧ್ವನಿಗಳ ಪರಿಣಾಮವೇನಾಗುವುದೆಂದು ಪ್ರಯೋಗಗಳ ಮೂಲಕ ಪರೀಕ್ಷಿಸುತ್ತಿದ್ದರು.

ಕುತೂಹಲಜನಕ ಫಲಿತಾಂಶ

ಇಷ್ಟರ ವರೆಗಿನ ಫಲಿತಾಂಶಗಳು ಸಾಮಾನ್ಯ ಸಸ್ಯಗಳಿಗಿಂತ ಸಂಗೀತ ಧ್ವನಿಗಳನ್ನು ಗ್ರಹಿಸಿದ ಸಸ್ಯಗಳ ಬೆಳವಣಿಗೆ ಮತ್ತು ಸಂತಾನೋತ್ಪಾದನೆಯ ಶಕ್ತಿಯು ಅತ್ಯುತ್ತಮವಾಗಿರುತ್ತದೆಂದು ತೋರಿಸಿಕೊಟ್ಟಿವೆ.

ಇದು ಭಾರತದಲ್ಲಿಯಷ್ಟೇಯಲ್ಲ, ವಿದೇಶಗಳಲ್ಲಿ ಸಹ ವಿಶೇಷವಾದ ಕುತೂಹಲವನ್ನು ಕೆರಳಿಸಿದೆ. ಪರಿಣಾಮವಾಗಿ, ಅನೇಕ ಮಂದಿ ಡಾ. ಸಿಂಘರ ಪ್ರಯೋಗ ಶಾಲೆಗೆ ಸಂದರ್ಶನವನ್ನಿತ್ತು ಈ ಪ್ರಯೋಗಗಳನ್ನು ಕಣ್ಣಾರೆ ಕಾಣುವಷ್ಟು ಉತ್ಸುಕತೆಯನ್ನು ತೋರಿಸಿದ್ದಾರೆ.

ಹೊಸ ದೆಹಲಿಯಲ್ಲಿರುವ ಅಮೇರಿಕದ ರಾಯಭಾರಿ ಕಚೇರಿಯ ಶ್ರೀಮತಿ ನೋರಿ ಕುಶಿಂಗ್ ನೈಲ್ಸ್ ಎಂಬ ಮಹಿಳೆಯು ಈ ಪ್ರಯೋಗಾಲಯಕ್ಕೆ ಹೀಗೆ ಸಂದರ್ಶನವನ್ನಿತ್ತಾಗ (೧೯೫೩) ಮಾತುಕತೆಯ ನಡುವೆ ಅಮೇರಿಕದ ಡ್ಯೂಕ್ ವಿಶ್ವವಿದ್ಯಾನಿಲಯದ ಪ್ರೊ. ಜೆ. ಬಿ. ರೈನ್ ಎಂಬ ಮಹನೀಯರು ಮನೋವಿಶ್ಲೇಷಣೆ, ಪ್ರಾರ್ಥನೆ ಇತ್ಯಾದಿ ದೃಷ್ಟಿಕೋಣದಿಂದ ಸಸ್ಯ ಹಾಗೂ ಪ್ರಾಣಿಗಳ ಮೇಲೆ ನಡೆಸುತ್ತಿರುವ ಅಗಾಧ ಕೆಲಸದ ಕಡೆಗೆ ಡಾ. ಸಿಂಘರ ಗಮನವನ್ನು ಸೆಳೆದರು.

ಶ್ರೀಮತಿ ನೈಲ್ಸರು ವ್ಯಕ್ತಪಡಿಸಿದ ಈ ವಿಷಯವು ಡಾ. ಸಿಂಘರನ್ನು ಕೆಲವು ಪ್ರಯೋಗಗಳನ್ನು ನಡೆಸಿ ಸಸ್ಯಗಳ ಬೆಳವಣಿಗೆ ಮತ್ತು ಸಂತಾನೋತ್ಪಾದನೆಯ ಶಕ್ತಿಯ ಮೇಲೆ ಮೌನ ಪ್ರಾರ್ಥನೆಯು ಮಾಡುವ ಪರಿಣಾಮವೇನು ಎಂಬುದನ್ನು ಕಂಡು ಹಿಡಿಯಬೇಕೆಂಬ ಅವಲಿಕೆಯನ್ನು ಹುಟ್ಟಿಸಿತು.

ನೂತನ ಪ್ರಯೋಗ

ಡಾ. ಸಿಂಘರು ಇದಕ್ಕಾಗಿ ಚೆಂಡು ಮಲ್ಲಿಗೆ ಹೂವಿನ ಗಿಡವನ್ನೂ 'ಡೇಲಿಯ' ಜಾತಿಗೆ ಸೇರಿದ 'ಕಾಸ್ಮಸ್' ಎಂಬ ಪಾಶ್ಚಾತ್ಯ ಪುಷ್ಪದ ಸಸಿಯನ್ನೂ ಆರಿಸಿದರು. ಅವರ ಪ್ರಯೋಗದ ಫಲಿತಾಂಶಗಳು ಈಗ ಹೊಸ ಸಂಶೋಧನೆಗೆ ದಾರಿಯನ್ನು ಸುಗಮಮಾಡಿಕೊಟ್ಟಿವೆ ಎಂದು ಹೇಳಬಹುದು.

ಹಿಂದಿನ ವರ್ಷದ ಬೀಜಗಳನ್ನು ಪ್ರಯೋಗಾಲಯದಲ್ಲಿ ಸಜ್ಜುಗೊಳಿಸಿದ ಮಡಿಗಳಲ್ಲಿ ಬಿತ್ತಿ ಮೇಲಿನೆರಡೂ ಜಾತಿಯ ಸಸ್ಯಗಳನ್ನು ಉತ್ಪಾದಿಸಲಾಯಿತು. ಮಡಿಯು ಯಾವುದೇ ಕಳೆಯಿಂದ ಕೂಡಿರದಂತೆ, ಮಣ್ಣಿನ ಸಾರವು ಏಕರೂಪವಾಗಿರುವಂತೆ ಮತ್ತು ನೀರನ್ನು ಚಿಮುಕಿಸುವ ಕ್ರಮವು ಸುವ್ಯವಸ್ಥಿತವೂ ಏಕರೂಪವೂ ಆಗಿರುವಂತೆ ಬಹಳ ಜಾಗರೂಕತೆಯನ್ನು ಬೀಜಬಿತ್ತುವ ಹೊತ್ತಿಗೆ ವಹಿಸಲಾಯಿತು.

ಬೀಜವು ಮೊಳಕೆಯೊಡೆದು ಸಸಿಗಳು ಮೂರು ಅಂಗುಲದಷ್ಟು ಎತ್ತರಕ್ಕೆ ಬೆಳೆದಾಗ ಅವುಗಳನ್ನು ಕಿತ್ತು ಒಂದೇ ರೀತಿಯ ರಚನೆಯುಳ್ಳ ಮತ್ತು ರಾಸಾಯನಿಕ ಗುಣಗಳುಳ್ಳ ಮಣ್ಣಿನಿಂದ ತುಂಬಿದ ಏಕರೂಪದ ಗಾತ್ರವಿರುವ ಪಾತ್ರೆಗಳಲ್ಲಿ ನೆಡಲಾಯಿತು. ಯೋಗ್ಯಕಾಲದಲ್ಲಿ ಇವೆಲ್ಲ ಪಾತ್ರೆಗಳ ಮಣ್ಣನ್ನು [illegible] ಮುಕಿಸುವಾಗಲೂ ರೀತಿಯಲ್ಲೇನೂ ವ್ಯತ್ಯಾಸವಿಲ್ಲದಂತೆ ಮತ್ತು ಕ್ರಮದಲ್ಲಿ ತಾರತಮ್ಯವಿಲ್ಲದಂತೆ ಜಾಗರೂಕತೆಯಿಂದ ಕೆಲಸ ನಡೆಯಿತು.

ಪ್ರಾರ್ಥನೆಯ ಪ್ರಭಾವ

ಸಸಿಗಳು ಪಾತ್ರೆಗಳಲ್ಲಿ ಚೆನ್ನಾಗಿ ನೆಲೆಯೂರಿದ ಬಳಿಕ ಅವುಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಲಾಯಿತು. ಒಂದು ಗುಂಪನ್ನು ತನ್ನಷ್ಟಕ್ಕೆ ಬೆಳೆಯಗೊಟ್ಟರು. ಇನ್ನೊಂದನ್ನು ಪ್ರಯೋಗಕ್ಕೆ ಸಜ್ಜುಗೊಳಿಸಿದರು. ಪ್ರತಿಯೊಂದು ಗುಂಪಿನಲ್ಲಿ ಆರು ಸಸಿಗಳಿದ್ದವು. ಕಳೆದ ಎರಡು ವರ್ಷಗಳಲ್ಲಿ ಎರಡು ಪ್ರಯೋಗ ಮಾಲೆಗಳನ್ನು ನಡೆಸಲಾಯಿತು.

ಪ್ರಯೋಗಕ್ಕೆ ಸಜ್ಜುಗೊಳಿಸಿದ ಸಸಿಗಳ ಗುಂಪನ್ನು ಈ ಕೆಳಗಿನಂತೆ ಪ್ರಾರ್ಥನೆಯ ಪ್ರಭಾವಕ್ಕೆ ಬಿಡಲಾಯಿತು: ಪ್ರಯೋಗಕ್ಕೆ ಸಜ್ಜುಗೊಳಿಸಿದ ಸಸ್ಯಗಳ ಮುಂದೆ ಬಹಳ ಹತ್ತಿರದಲ್ಲಿ ಪ್ರಾರ್ಥನೆಯನ್ನು ಮಾಡುವಾತನು ನಿಂತಿರುತ್ತಿದ್ದನು. ಆತನು ತನ್ನ ಕಣ್ಣುಗಳನ್ನು ಮುಚ್ಚಿ ಹೊರಗೆ ಕೇಳುವಂತೆ ಯಾವುದೇ ಮಂತ್ರವನ್ನು ಉಚ್ಚರಿಸದೆ ಮೌನವಾಗಿಯೇ ಈ ಸಸಿಗಳು ಒಳ್ಳೆಯ ರೀತಿಯಲ್ಲಿ ಬೆಳೆಯುವಂತೆಯೂ ಅವುಗಳ ಸಂತಾನೋತ್ಪಾದನೆಯ ಶಕ್ತಿಯು ಚೆನ್ನಾಗಿರುವಂತೆಯೂ ಪ್ರಾರ್ಥನೆ ಮಾಡುತ್ತಿದ್ದನು.

ಸೊಂಪಾದ ಬೆಳೆ

ಈ ಪ್ರಾರ್ಥನೆಯು ಸುಮಾರು ಐದು ನಿಮಿಷಗಳ ವರೆಗೆ ನಡೆಯುತ್ತಿದ್ದಿತು; ಈ ಅವಧಿಯಲ್ಲಿ ಅತಿ ಹೆಚ್ಚಿನ ಏಕಾಗ್ರತೆ ಮತ್ತು ಚಿತ್ತಸ್ವಾಸ್ಥ್ಯದ ಹಿನ್ನೆಲೆಯಲ್ಲಿ ಪ್ರಾರ್ಥನೆಯ ವಿಚಾರ ಪ್ರವಾಹವನ್ನು ಆತನು ಪ್ರಯೋಗಕ್ಕೆ ಸಜ್ಜುಗೊಳಿಸಿದ ಸಸಿಗಳ ಮೇಲೆ ಬೀರುತ್ತಿದ್ದನು. ಪ್ರತಿದಿನ ಈ ಕೆಲಸ ಮುಂದರಿಯುತ್ತಿದ್ದಿತು; ಮತ್ತು ವಾರಕ್ಕೊಮ್ಮೆ ಇವರ ಫಲಿತಾಂಶಗಳ ನಿರೀಕ್ಷಣೆಯನ್ನು ನಡೆಸುತ್ತಿದ್ದರು.

ನಿರೀಕ್ಷಣೆಯ ಫಲಿತಾಂಶಗಳು ವಿಶೇಷ ತೃಪ್ತಿಯನ್ನು ನೀಡುವಂತಿದ್ದವೆಂದು ಹೇಳಬಹುದು. ಸಸಿಗಳಲ್ಲಿರುವ ಎಲೆ ಮತ್ತು ಎತ್ತರದ ಪ್ರಮಾಣವನ್ನು ಮಾನದಂಡವಾಗಿಟ್ಟಾಗ ಸಾಮಾನ್ಯ ಸಸಿಗಳಿಗಿಂತ ಪ್ರಯೋಗಕ್ಕೆ ಒಳಪಟ್ಟ ಸಸಿಗಳು ಹೆಚ್ಚು ಪುಷ್ಟವಾಗಿಯೂ ಸೊಂಪಾಗಿಯೂ ಬೆಳೆದುದು ಗೋಚರಿಸಿತು. ಕಾಂಡದ ಎತ್ತರದಲ್ಲಿ ಪ್ರಯೋಗಕ್ಕೆ ಒಳಪಟ್ಟ ಸಸಿಗಳು ಸಾಮಾನ್ಯ ಸಸಿಗಳಿಗಿಂತ ೩೦—೪೦% ಹೆಚ್ಚು ಯೋಗ್ಯತೆಯನ್ನು ತೋರಿಸಿದರೆ ಎಲೆಗಳ ಪ್ರಮಾಣದಲ್ಲಿ ಈ ವಿಶೇಷ ಯೋಗ್ಯತೆ ೫೦% ಆಗಿದ್ದಿತು.

ಪ್ರಯೋಗಕ್ಕೆ ಒಳಪಟ್ಟ ಎರಡೂ ಜಾತಿಯ ಸಸಿಗಳು ಸಾಮಾನ್ಯ ಸಸಿಗಳಿಗಿಂತಲೂ ಹೆಚ್ಚು ಕಾಲವನ್ನು ಪೂರ್ಣ ಬೆಳವಣಿಗೆಗಾಗಿ ತೆಗೆದು ಕೊಂಡವು. ಪರಿಣಾಮವಾಗಿ ಅವುಗಳ ಸಂತಾನೋತ್ಪಾದನೆಯ ಕ್ರಿಯೆಯು ೩ರಿಂದ ೪ ವಾರಗಳಷ್ಟು ತಡವಾಗಿ ಪ್ರಾರಂಭವಾಯಿತು.

ರೋಗ ನಿವಾರಕ ಗುಣ

ಪ್ರಯೋಗ ಕಾಲದಲ್ಲಿ "ಕಾಸ್ಮಸ್" ಪುಷ್ಪ ಜಾತಿಯ ಒಂದು ಗುಂಪು ಉಲ್ಲೇಖನೀಯವಾದ ಹೊಸ ವೈಶಿಷ್ಟ್ಯವೊಂದನ್ನು ತೋರಿಸಿತು. ಪ್ರಯೋಗಕ್ಕೆಂದು ಸಜ್ಜುಗೊಳಿಸಿದ ಈ ಪುಷ್ಪ ಜಾತಿಯ ಆರು ಗಿಡಗಳ ಪೈಕಿ ಎರಡು ಸಸಿಗಳಿಗೆ ಪರೋಪಜೀವಿ ಸಸ್ಯಬಾಧೆಯಿಂದ ರೋಗ ಹಿಡಿಯಿತು. ಡಾ. ಸಿಂಘರು ಮೊದಲಿಗೆ ಈ ರೋಗ ಪೀಡಿತ ಸಸಿಗಳನ್ನು ಕಿತ್ತು ಹಾಕುವುದೇ ಲೇಸೆಂದು ಭಾವಿಸಿದರು; ಆದರೆ ಮರುಕ್ಷಣದಲ್ಲಿ ಅವರಿಗೆ ಹೊಸ ವಿಚಾರವೊಂದು ಹೊಳೆಯಿತು.

ಪ್ರಾರ್ಥನೆಯ ಪ್ರಭಾವವು ಸಸ್ಯಗಳ ಬೆಳವಣಿಗೆ ಮತ್ತು ಸಂತಾನೋತ್ಪಾದನೆಯ ಕ್ರಿಯೆಗಳ ಮೇಲೆ ಆಗುವುದು ನಿಜವಾದರೆ ರೋಗ ನಿವಾರಣೆಯ ಶಕ್ತಿಯನ್ನು ಸಹ ಪ್ರಾರ್ಥನೆಯು ಸಸ್ಯಗಳಿಗೆ ತಂದುಕೊಟ್ಟು ತನ್ಮೂಲಕ ರೋಗಗ್ರಸ್ತ ಸಸಿಗಳು ಸಾಮಾನ್ಯ ಬೆಳವಣಿಗೆಯನ್ನು ಹೊಂದಲು ಅವಕಾಶ ಮಾಡಿಕೊಡಲಾರದೆ—ಎಂದು ಅವರು ಕುತೂಹಲಗೊಂಡರು. ಆದುದರಿಂದ ಈ ರೋಗಗ್ರಸ್ತ ಗಿಡಗಳನ್ನು ಸಹ ಪ್ರಾರ್ಥನೆಯ ಪ್ರಯೋಗಕ್ಕೆ ಗುರಿಪಡಿಸಿದರು.

ಎಂದಿನಂತೆ ಪ್ರತಿ ದಿನವೂ ಐದು ನಿಮಿಷಗಳ ಪ್ರಾರ್ಥನೆಯ ಪ್ರಯೋಗ ಮುಂದುವರಿಯಿತು. ಮೂರು ವಾರಗಳ ಬಳಿಕ ನೋಡಿದಾಗ, ರೋಗಗ್ರಸ್ತ ಸಸಿಗಳು ರೋಗದ ಹಾವಳಿಯಿಂದ ಸಂಪೂರ್ಣ ಮುಕ್ತವಾಗಿರುವುದು ಕಂಡು ಬಂತು; ಅಲ್ಲದೆ ಮುಂದೆ ಈ ಗಿಡಗಳು ಸಾಮಾನ್ಯ ಸಸಿಗಳಿಗಿಂತ ಹೆಚ್ಚು ಶಕ್ತಿಯುತವಾಗಿ ಬೆಳೆದು ಚೆನ್ನಾಗಿ ಹೂ ಬಿಟ್ಟವು. ಯಾವುದೇ ಕ್ರಿಮಿನಾಶಕ ಅಥವಾ ರೋಗ ನಿವಾರಕ ಔಷಧವನ್ನು ಈ ಗಿಡಗಳಿಗೆ ಉಪಯೋಗಿಸಲಿಲ್ಲ. ಸಾಮಾನ್ಯ ಬೆಳವಣಿಗೆಗೆ ಬಿಟ್ಟ ಸಸ್ಯಗಳಿದ್ದ ವಾತಾವರಣವು ಪ್ರಾರ್ಥನೆಯೊಂದನ್ನು ಬಿಟ್ಟರೆ ಬೇರೆಲ್ಲ ರೀತಿಯಲ್ಲಿ ಪ್ರಯೋಗಕ್ಕೆ ಸಿದ್ಧಗೊಳಿಸಿದ ಸಸಿಗಳಿಗಿದ್ದ ಮಾದರಿಗೆ ವ್ಯತಿರಿಕ್ತವಾಗಿರಲಿಲ್ಲ.

ತಜ್ಞ ಅಭಿಪ್ರಾಯ

ಇವನ್ನು ನೋಡಿದರೆ ವಿಚಾರ ಪ್ರವಾಹದ ರೂಪದಲ್ಲಿ ಪ್ರಯೋಗಕ್ಕೆ ಸಜ್ಜುಗೊಳಿಸಿದ ಸಸಿಗಳ ಮೇಲೆ ಪ್ರಾರ್ಥನೆಯು ವಿಶೇಷ ತೃಪ್ತಿಕರವಾದ ಪರಿಣಾಮವನ್ನು ಮಾಡಿದೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಸಸ್ಯಗಳ ಮೇಲೆ ಈ ಪರಿಣಾಮವು ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ಈಗ ವಿಚಾರಿಸೋಣ.

ರೆಂಬೆ ಅಥವಾ ಕೊಂಬೆಗಳು ಕಾಂಡದಲ್ಲಿ ಕೂಡಿಕೊಳ್ಳುವ ಸ್ಥಳವು ವಿಶೇಷ ಸಂಖ್ಯೆಯ ಸಸ್ಯಾಣುಗಳ ಸೃಷ್ಟಿ ಕೇಂದ್ರವಾಗುತ್ತದೆಂದು ನಮಗೆಲ್ಲರಿಗೂ ಗೊತ್ತಿದೆ. ಈ ಸಸ್ಯಾಣುಗಳ ಆವರಣವು ಬಹಳ ತೆಳುವಾಗಿರುತ್ತದೆ ಮತ್ತು ಅದರೊಳಗೆ ದ್ರವರೂಪದಲ್ಲಿರುವ ಜೀವಧಾತುವು ಈ ಪ್ರದೇಶದಲ್ಲಿ ವಿಶೇಷ ಚಟುವಟಿಕೆಯಿಂದ ಕೂಡಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮೌನ ಪ್ರಾರ್ಥನೆಯು ವಿಚಾರ ರೂಪದಲ್ಲಿ ಪರಿವರ್ತನೆಯನ್ನು ಹೊಂದಿದ ಬಳಿಕ, ಸಸ್ಯಾಣು ಸೃಷ್ಟಿಯ ಕ್ರಿಯೆಯು ವಿಶೇಷ ತೀವ್ರವಾಗಿರುವ ಬೆಳವಣಿಗೆಯ ಕೇಂದ್ರದಲ್ಲಿನ ಸಂವೇದನಶೀಲ ಜೀವ ಧಾತುವಿನ ಮೇಲೆ ಪರಿಣಾಮ ಮಾಡಿತೆ? ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ.

ಸಾಮಾನ್ಯವಾಗಿ ಈ ಜೀವ ಧಾತುವು ಬೆಳಕು, ಉಷ್ಣತೆ, ತೇವ, ಗಾಳಿ ಇತ್ಯಾದಿ ಭೌತಿಕ ವಿಷಯಗಳ ಸಂಸರ್ಗಕ್ಕೆ ತೀಕ್ಷ್ಣ ಪ್ರತಿಕ್ರಿಯೆಯನ್ನು ತೋರಿಸುತ್ತದೆ ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಧ್ವನಿ ತರಂಗಗಳಿಗೆ ಸಹ ಈ ಜೀವಧಾತುವು ಸಂವೇದನೆಯನ್ನು ತೋರಿಸುವುದೆಂದು ಅಣ್ಣಾಮಲೈ ವಿಶ್ವವಿದ್ಯಾನಿಲಯದ ಸಸ್ಯ ವಿಜ್ಞಾನ ಪ್ರಯೋಗಾಲಯವೇ ತೋರಿಸಿಕೊಟ್ಟಿದೆ. ಆದುದರಿಂದ ವಿಚಾರ ತರಂಗದ ರೂಪದಲ್ಲಿ ಪರಿವರ್ತನೆಯನ್ನು ಹೊಂದಿದ ಮೌನ ಪ್ರಾರ್ಥನೆಯು ಜೀವ ಧಾತುವಿನ ಮೇಲೆ ಪರಿಣಾಮವನ್ನು ಮಾಡುವುದೆಂಬ ವಿಚಾರದಲ್ಲಿ ಸಂದೇಹಕ್ಕೆ ಎಡೆಯಿಲ್ಲ ಎನ್ನಬೇಕಾಗುತ್ತದೆ.

ಅರವಿಂದರ ಸಾಧನೆ

ಡಾ. ಸಿಂಘರು ೧೯೫೪ರಲ್ಲಿ ಪಾಂಡಿಚೇರಿಯಲ್ಲಿರುವ ಶ್ರೀ. ಅರವಿಂದ ಅಂತಾರಾಷ್ಟ್ರೀಯ ವಿಶ್ವವಿದ್ಯಾನಿಲಯಕ್ಕೆ ಸಸ್ಯ ಜೀವನದ ಮೇಲೆ ಸಂಗೀತ ಧ್ವನಿಗಳ ಪರಿಣಾಮವನ್ನು ಕುರಿತು ಭಾಷಣವೀಯಲು ಹೋಗಿದ್ದಾಗ ಶ್ರೀ ಅರವಿಂದರ ಜ್ಯೇಷ್ಠ ಶಿಷ್ಯರೊಬ್ಬರು ಕಾಗೆ ಮತ್ತಿತರ ಪಕ್ಷಿಗಳನ್ನು ಕೇವಲ ವಿಚಾರತರಂಗಗಳನ್ನು ಆ ಪಕ್ಷಿಗಳ ಕಡೆಗೆ ಹರಿಯಗೊಟ್ಟು-ಬೇರೆ ಯಾವುದೇ ಸಾಧನವನ್ನವಲಂಬಿಸದೆ-ಅರವಿಂದರು ಓಡಿಸಿ ಬಿಡುತ್ತಿದ್ದರೆಂದು ಅವರಿಗೆ ತಿಳಿಸಿದ್ದರು. ಈ ಅನುಭವದ ಬಲದಿಂದ ಡಾ. ಸಿಂಘರು ಪ್ರಾರ್ಥನೆಯು ವಿಚಾರತರಂಗವಾಗಿ ಪರಿವರ್ತನೆಯನ್ನು ಹೊಂದಿ ಸಸ್ಯಗಳ ಬೆಳವಣಿಗೆಯ ಮೇಲೆ ವಿಶೇಷ ಪರಿಣಾಮ ಮಾಡುವುದು ನಿಜವೆಂಬ ತಮ್ಮ ತೀರ್ಮಾನಕ್ಕೆ ದೃಢವಾಗಿ ಅಂಟಿಕೊಂಡಿದ್ದಾರೆ.

ಅವರ ನಂಬಿಕೆಯು ಇತ್ತೀಚೆ ಇನ್ನೊಂದು ಬಗೆಯ ಪ್ರಯೋಗದಿಂದಲೂ ಸಿದ್ಧಗೊಂಡಿದೆಯೆಂದು ತಿಳಿದುಬರುತ್ತದೆ. ಇನ್ನೊಂದೆಡೆ ಅಣುಜೀವಿಗಳ ಮೇಲೆ ಶಾಪದ ಸುರಿಮಳೆಯನ್ನು ಕರೆಯಲಾಯಿತು. ಪ್ರತಿನಿತ್ಯ "ಇವು ಬೆಳೆಯುವುದೇ ಇಲ್ಲ; ಇವು ಸತ್ತೇ ಹೋಗಿವೆ; ಹಾಳಾಗಿ ಹೋಗಿವೆ" ಎನ್ನುವ ಶಾಪಕ್ಕೆ ಅಣುಜೀವಿ-೪ ಜಾತಿಯೊಂದನ್ನು ಗುರಿಪಡಿಸಿದ ಪರಿಣಾಮವಾಗಿ ಅಣುಜೀವಿಗಳ ಸಂಖ್ಯಾವೃದ್ಧಿಯು ನಿಂತುಹೋದುದಲ್ಲದೆ, ಪ್ರಯೋಗದ ಕೊನೆಯಲ್ಲಿ ಎಲ್ಲ ಅಣುಜೀವಿಗಳೂ ಸತ್ತು ಹೋದವು!

ಮನೋವಿಜ್ಞಾನಿಗಳಿಗೆ ಈ ಫಲಿತಾಂಶಗಳು, ವಿಶೇಷ ಸಂಶೋಧನೆಯ ಸಾಮಗ್ರಿಯನ್ನೊದಗಿಸಿಕೊಡುತ್ತವೆ. ಮನೋವಿಶ್ಲೇಷಣೆಯ ವಿಶೇಷ ವೈಶಿಷ್ಟ್ಯಗಳನ್ನು ತಿಳಿಯಲು ಇವು ನೆರವಾಗುತ್ತವೆ. ಪ್ರಾಚೀನ ಯೋಗಶಾಸ್ತ್ರ ಮತ್ತು ಹಿಂದೂ ಕಲ್ಪನೆಯ 'ವರ' ಮತ್ತು 'ಶಾಪ'ದ ವೈಜ್ಞಾನಿಕ ಮುಖದ ಮೇಲೆಯೂ ಇದು ಬೆಳಕನ್ನು ಚೆಲ್ಲುತ್ತದೆ. ನಮ್ಮ ಹಿರಿಯರೂ ಈಚೆಗೆ ಗಾಂಧೀಜಿಯವರೂ ಪ್ರಾರ್ಥನೆಗೆ ಕೊಡುತ್ತಿದ್ದ ಮಹತ್ವದ ಕಾರಣವೂ ನಮಗೆ ಇದರಿಂದ ವ್ಯಕ್ತವಾಗುತ್ತದೆ.

—Kahaniya.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ
ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು
ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೇ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

(೨ನೇ ಪುಟದಿಂದ)

ಸರಿಯಾದ ಅಭಿಪ್ರಾಯವೆಂದು ಹೇಳುವಂತಿಲ್ಲ. ಕಾರ್ಖಾನೆಗಳಲ್ಲಿ ಸರಕುಗಳ ಉತ್ಪಾದನೆಗೆ ಹಿಡಿದ ವೆಚ್ಚವನ್ನು ಆ ಸಂಸ್ಥೆಯ ಆಯ-ವ್ಯಯ ಪಟ್ಟಿಯಲ್ಲಿ ಉಲ್ಲೇಖಗೊಂಡ ಹಣದ ಮೊತ್ತದಿಂದ ಮಾತ್ರ ನಾವು ಅಳೆದರೆ ಅದು ತಪ್ಪು ಕ್ರಮದ ಅವಲಂಬನೆಯಾಗುತ್ತದೆ.

ಆ ಸರಕನ್ನು ಕಾರ್ಖಾನೆಯಿಂದ ಹೊರಗೆ, ಗಿರಾಕಿಯಿದ್ದಲ್ಲಿಗೆ ಸಾಗಿಸಲು ಎಷ್ಟು ರೈಲ್ವೆಗಳನ್ನು ಓಡಾಡಿಸ ಬೇಕಾಯಿತು, ಅದಕ್ಕಾಗಿ ಎಷ್ಟು ವೆಚ್ಚದಿಂದ ರೈಲು ಮಾರ್ಗಗಳನ್ನು ರಚಿಸಬೇಕಾಯಿತು, ಎಷ್ಟು ಮೈಲು ದೂರದ ವರೆಗೆ ಲಾರಿಗಳೂ ಟ್ರಕ್ಕುಗಳೂ ಓಡಾಡಲು ತಾರು, ಸಿಮೆಂಟುಗಳಿಂದ ರಸ್ತೆಗಳನ್ನು ರಚಿಸ ಬೇಕಾಯಿತು, ದಾರಿಯಲ್ಲಿ ಎಷ್ಟು ಸಂಕಗಳ ನಿರ್ಮಾಣ ಅಗತ್ಯವಾಯಿತು, ಎಷ್ಟು ಪರ್ವತಗಳಿಗೆ ಸುರಂಗ ಕೊರೆಯ ಬೇಕಾಯಿತು—ಇವಕ್ಕೆಲ್ಲ ಸರಕಾರವು ಸಾರ್ವಜನಿಕರಿಂದ ಸಾಲ ಮತ್ತು ತೆರಿಗೆಯ ರೂಪದಲ್ಲಿ ಎಷ್ಟು ಹಣವನ್ನೆತ್ತಿ ಖರ್ಚು ಮಾಡಿತು ಎಂಬುದನ್ನು ಲೆಕ್ಕಕ್ಕೆ ಹಿಡಿದರೆ, ಹಳ್ಳಿಯ ಆವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಉತ್ಪಾದಿಸಿದ ವಿಕೇಂದ್ರೀಕೃತ ಗೃಹೋದ್ಯಮಗಳ ಸರಕಿಗೆ ಕೊಡುವ ಬೆಲೆ ಹೆಚ್ಚೆನಿಸದು.

ಬೇಸಾಯದ ಸುಧಾರಣೆ

ನಮ್ಮ ಅತುಲ ನೈಸರ್ಗಿಕ ಸಂಪತ್ತಿನ ಸದುಪಯೋಗವು ಕೈಗಾರಿಕೆಯಲ್ಲಿ ಹೇಗೊ ಕೃಷಿಯಲ್ಲಿ ಸಹ ಧಾರಾಳವಾಗಿ ನಡೆಯ ಬೇಕಾಗಿದೆ. ಸಾಮಾನ್ಯ ನೀರಾವರಿ ಯೋಜನೆಯಿಂದ ಅಣುಧೂಳಿನ ಗೊಬ್ಬರವನ್ನು ಹಾಕುವ ಅದ್ಭುತ ವೈಜ್ಞಾನಿಕ ಪದ್ಧತಿಯ ಕಡೆಗೆ ನಮ್ಮ ಸಾಗುವಳಿದಾರರ ಗಮನ ಹರಿಯುವಂತೆ ತಕ್ಕ ಪ್ರಗತಿ ಮತ್ತು ವ್ಯವಸ್ಥೆ ನಡೆಯಬೇಕು.

ಇದು ತೀರ ಮಹತ್ವಾಕಾಂಕ್ಷೆಯಾಗಿ ಕಂಡು ಬರಬಹುದೆಂಬುದು ನಿಜ. ಏಕೆಂದರೆ ಇನ್ನು ಹತ್ತಿಪ್ಪತ್ತು ವರ್ಷಗಳ ವರೆಗಾದರೂ ನಾವು ಭೂಸುಧಾರಣೆಯ ಮೊದಲ ಅನುಭವಗಳನ್ನು ಸಂಪಾದಿಸುವುದರಲ್ಲಿಯೇ ಕಳೆಯಬೇಕಾಗಿ ಬರಬಹುದು. ನಮ್ಮಲ್ಲಿ ಧನಿ—ಒಕ್ಕಲುಗಳ ಸಂಬಂಧವನ್ನು ಸುಗಮಗೊಳಿಸುವ ಶಾಸನವೇ ಇನ್ನೂ ಬಂದಿಲ್ಲ; ಕೃಷಿಕನನ್ನು ಗೌರವಿಸುವ ಬುದ್ಧಿಯೂ ಬಲಿತಿಲ್ಲ. ಸಹಕಾರದ ತಳಹದಿಯ ಮೇಲೆ ರೂಪುಗೊಂಡ ಬೇಸಾಯದ ಕ್ರಮವಾಗಲೀ ಚಿಕ್ಕ ಹಿಡುವಳಿಗಳನ್ನು ಒಟ್ಟು ಗೂಡಿಸುವ ಯೋಜನೆಯಾಗಲೀ ಏನೇನೂ ತೃಪ್ತಿಯನ್ನು ಇಷ್ಟರ ವರೆಗೆ ತಂದಿಲ್ಲ; ಪ್ರಯೋಗಾವಸ್ಥೆಗಿಂತ ಹೆಚ್ಚಿನ ಬೆಳವಣಿಗೆಯನ್ನು ಈ ದಿಸೆಯಲ್ಲಿ ನಡೆದ ಚಳವಳ ತೋರಿಸಿಲ್ಲ.

ಕೃಷಿಯಿಂದ ಕೈಗಾರಿಕೆಗೆ

ಬೇಸಾಯದ ಸುಧಾರಣೆಯನ್ನು ಎರಡು ದಶಕಗಳ ಬಳಿಕವಾದರೂ ನಾವು ಸಂಪೂರ್ಣವಾಗಿ ಸಾಧಿಸುವ ಉದ್ದೇಶವಿಟ್ಟುಕೊಂಡ ಪಕ್ಷದಲ್ಲಿ ಈ ನಡುವೆ ಅನೇಕ ಮುಂಜಾಗರೂಕತೆಯ ಕ್ರಮಗಳನ್ನು ಕೈಗೊಳುವ ಅಗತ್ಯ ಬೀಳುತ್ತದೆ; ಸುಧಾರಣೆಯನ್ನು ಸಾಧಿಸಿದ ಬಳಿಕ ಕೃಷಿ ಕೆಲಸದಲ್ಲಿ ನಿರತರಾಗುವ ಜನರು ಸ್ವಾಭಾವಿಕವಾಗಿ ಕಡಿಮೆಯಾಗುತ್ತಾರೆ—ಆದುದರಿಂದ ಇವರನ್ನು ನೆಲೆಗೊಳಿಸುವುದು ಎಲ್ಲಿ ಎಂಬ ಪ್ರಶ್ನೆಗೆ ಉತ್ತರವನ್ನು ಅಷ್ಟು ಹೊತ್ತಿಗೆ ಸಿದ್ಧಪಡಿಸಿಟ್ಟಿರಬೇಕಾಗುತ್ತದೆ. ಕೈಗಾರಿಕೆಗಳು ಈ ಕೃಷಿ ಕೆಲಸಗಾರರಿಗೆ ಆಶ್ರಯವನ್ನು ಕಲ್ಪಿಸಿ ಕೊಡುವಷ್ಟು ಪ್ರಬುದ್ಧವಾಗಿ ಅಷ್ಟು ಹೊತ್ತಿಗೆ ಬೆಳೆದಿರಬೇಕೆಂಬುದೇ ಇದರ ತಾತ್ಪರ್ಯ.

ಕೊನೆಯ ಈ ಹಂತವನ್ನು ಮುಟ್ಟುವ ವರೆಗಿನ ದಾರಿಯು ಬೇರೆಯೇ ಸ್ವರೂಪದ ಅನುಭವವನ್ನು ತಂದು ಕೊಡುವ ಸಂಶಯವಿದೆ. ಈಗಿನ ತಿಳುವಳಿಕೆಯ ಪ್ರಕಾರ, ಬೇಸಾಯದಲ್ಲಿ ನಡುವ ಸಮಯದಿಂದ ಕೊಯ್ಯುವ ವರೆಗಿನ ಕೆಲವು ತಿಂಗಳುಗಳ ಅವಧಿಯಲ್ಲಿ ಕೃಷಿ ಕೆಲಸಗಾರರನ್ನು ಶೇಕಡಾ ಐದರಷ್ಟು ಕಡಿಮೆ ಪ್ರಮಾಣದಲ್ಲಿಯೇ ಆಗಲಿ—ಬೇರೆ ಉದ್ಯಮಗಳ ಕಡೆಗೆ ತಿರುಗಿಸಿದರೆ, ಕೃಷಿ ಉತ್ಪಾದನೆಯು ಗಣನೀಯವಾಗಿ ತಗ್ಗಿಕೊಳ್ಳುತ್ತದೆ. ಇದರ ಅರ್ಥವೇನೆಂದರೆ ನಮ್ಮ ಈಗಿನ ಕೃಷಿ ಸಾಧನ-ಸಲಕರಣೆಗಳ ಉಪಯೋಗವು ಎಲ್ಲ ಕೃಷಿ ಕೆಲಸಗಾರರ ದುಡಿಮೆಯ ಹೊರತು ಆಗುವಂತೆಯೇ ಇಲ್ಲ! ಕೃಷಿಯಲ್ಲಿ ನಿರತವಾದ ಕುಟುಂಬಗಳು ಮಾತ್ರ ನಿರತವಾದರೆ ಉತ್ಪಾದನೆಯು ತಗ್ಗಿಕೊಳ್ಳದೆ ಹೆಚ್ಚಿಕೊಳ್ಳುವಂತೆ ಮಾಡುವುದಕ್ಕೋಸ್ಕರ ಕೃಷಿ ಕೆಲಸಗಾರನು ಈಗ ಮಾಡುವ ಕೆಲಸವನ್ನು ಯಂತ್ರಗಳಿಂದ ಮಾಡಿಸುವುದು ಆಗ ಅನಿವಾರ್ಯವಾಗುತ್ತದೆ. ಕೃಷಿ ಕೆಲಸವು ಯಂತ್ರಗಳಿಂದ ನಡೆದರೂ ಜನರು ಕೆಲಸಗೇಡಿಗಳಾಗದಂತೆ ನೋಡಿಕೊಳ್ಳಲು ಸಮರ್ಥರಾದರೆ ನಮ್ಮ ಯೋಜನೆ ಯಶಸ್ಸುಗಳಿಸಿತೆಂಬೇ ಲೆಕ್ಕ!

(೧ನೇ ಪುಟದಿಂದ)

ವಾಗಲಿಲ್ಲ. "ಈ ಮುಚ್ಚಿ ನನ್ನ ಪೇಟದ ಮೇಲೆ ಯಾವಾಗ ಕಾಣಸಿಕೊಂಡಿತು, ಅಮ್ಮಾ" ಎಂದಿಷ್ಟೇ ನಾನು ಕೇಳಿದೆ.

"ನಿನ್ನ ಬಾಲ್ಯದಲ್ಲಿ—ಅದನ್ನು ನೋಡಿ ನಾವೆಲ್ಲ ನಗುತ್ತಿದ್ದೆವು. ಮದುವೆಯಾಗುವ ವರೆಗೂ ನೀನು ಮಾಡುತ್ತಿದ್ದಂತೆ ಈಗಲೂ ಗಂಡನ ಮನೆಯಲ್ಲಿ ಅದರೊಡನೆ ಆಟವಾಡಿಕೊಂಡಿರಬಹುದು ಎಂದು ಆಗಾಗ ನಾವೀಗ ಮನೆಯಲ್ಲಿ ಆಡಿಕೊಳ್ಳುವುದುಂಟು...."

***

ತಾಯಿಯ ಮಾತು ನನ್ನಲ್ಲಿ ತೀರ ಹೊಸ ವಿಚಾರಗಳನ್ನು ಹುಟ್ಟಿಸಿತು.

ಹೌದು—ನನ್ನ ಬಾಲ್ಯದಲ್ಲಿ ನನ್ನ ಸೋದರಿಯರು ಆಗ ಇನ್ನೂ ಚಿಕ್ಕದಾಗಿದ್ದ ಆ ಉಬ್ಬಿದ ಮಚ್ಚೆಯನ್ನು ಹಿಡಿದೆಳೆದು ಆಡುತ್ತಿದ್ದರು; ನಕ್ಕು ಕೇಕೆ ಹಾಕುತ್ತಿದ್ದರು; ಅದನ್ನು ಮುಟ್ಟುವ ಸುಖಕ್ಕಾಗಿ ಎಷ್ಟೋ ಸಲ ನನ್ನನ್ನು ಮುದ್ದಿಸಿ ಒಲಿಸಿಕೊಳ್ಳುತ್ತಿದ್ದರು!

ಆಗ ಪ್ರಾಯಶಃ ನಾನು ಸಹ ಕುತೂಹಲವಶಳಾಗಿ ಅದನ್ನು ಮುಟ್ಟಲು ತೊಡಗಿದೆನೆಂದು ಕಾಣುತ್ತದೆ. ಅದೇ ಅಭ್ಯಾಸವಾಯಿತು. ಆದರೆ ಅದು ಮುಟ್ಟಿದಷ್ಟೂ ಸಲ ನನಗೆ ನನ್ನ ಬಂಧುಗಳ ನೆನಪನ್ನು ತಂದು ಕೊಡುತ್ತಿತ್ತಲ್ಲವೆ? ಇದನ್ನು ನೆನೆದು ನನ್ನ ಕಣ್ಣಿನಲ್ಲಿ ನೀರು ಒಸರಿತು.

"ನನ್ನನ್ನೇ ನಾನು ಮರೆಯುತ್ತಿದ್ದೆ—" ಎಂದು ನೀವು ಅಂದು ಹೇಳಿದ ಆ ಮಾತು! ನನ್ನ ಬಾಲ್ಯ ಸ್ಮೃತಿಯಲ್ಲಿ ಸಂತೋಷವನ್ನು ಹೊಂದುವ ಗಳಿಗೆ ಹಾಗಾಗುತ್ತಿತ್ತೆಂದು ತೋರುತ್ತದೆ.

ಆದರೆ ಇಷ್ಟರಿಂದಲೇ ನಾನು ನಿಮ್ಮನ್ನು ಕಡಿಮೆ ಪ್ರೀತಿಸುವೆನೆಂದು ನೀವು ಭಾವಿಸಿದಿರೆ? ನೀವು ಎದುರಿಗಿರುವಾಗ ನಾನು ಬೇರೆಯಾರನ್ನಾದರೂ ಪ್ರೀತಿಸಬಲ್ಲೆನೆ?

—ಅಥವಾ ನಿಮ್ಮ ಮೂಗಿನ ಬಳಿಯ ಆ ಮಚ್ಚೆಯ ನೆನಪು ನಿಮ್ಮನ್ನು ಬಾಧಿಸುವಂತೆ ನನ್ನ ವರ್ತನೆ ಮಾಡುತ್ತಿದ್ದಿತೆ?

...ಸ್ವಾಮಿ, ನನ್ನ ಮಟ್ಟಿಗೆ ದಯೆಮಾಡಿ ತಪ್ಪು ತಿಳಿದುಕೊಳ್ಳಬೇಡಿ. ನನ್ನ ಬಾಲ್ಯದ ಸ್ಮೃತಿ ಬಂದ ಮಾತ್ರಕ್ಕೆ ನಾನು ನಿಮಗೆ ಎರಡೆಣಿಸುವೆನೆ? ನಾವು ಜೀವನಸಂಗಾತಿಗಳೆಂಬುದನ್ನು ಮರೆಯುವೆನೆ, ಸ್ವಾಮಿ?

ಆ ಉಬ್ಬಿದ ಮಚ್ಚೆಯ ನೆಪದಲ್ಲಿ ಈ ಪ್ರಾಮಾಣಿಕಳಾದ ಪತ್ನಿಗೆ ದ್ರೋಹಮಾಡಬೇಡಿ, ಸ್ವಾಮಿ!

—ಸಾಧಾರೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 613/1955.

ಮಧ್ವರಾಯ ಭಟ್ಟ— ವಾದಿ.

ಮತ್ತು

ದೂಮಶೆಟ್ಟಿ ಕೂಡಾ— ಪ್ರತಿವಾದಿರು.

2ನೇ ಪ್ರತಿವಾದಿ-ನಾರಾಯಣ ಶೆಟ್ಟಿ, ಕಾಳು ಶೆಟ್ರ ಅಳಿಯ, ಮೋಟರ್ ಡ್ರೈವರ್, ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಗುಂಡಿಬೈಲಲ್ಲಿರುವವರು. ಇವರಿಗೆ ಈ ಮೂಲಕ ತಿಳಿಸುವದೇನೆಂದರೆ—

ತಾ. 11–3 1946ರಲ್ಲು ರೂ 2000/-ಕ್ಕೆ 1ನೇ ಪ್ರತಿವಾದಿಯು ವಾದಿಗೆ ಸ್ಥಿರಾಸ್ತಿ ಈಡು ದಸ್ತಾವೇಜು ಬರಕೊಟ್ಟು ನಂತರ ಸದ್ರಿ ಆಸ್ತಿಗಳನ್ನು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ವಿಕ್ರಯಿಸಿರುತ್ತಾರಾಗಿ ತಿಳಿದುಬಂದದೆ. ಸದ್ರಿ ಈಡು ದಸ್ತಾವೇಜು ಪ್ರಕಾರ ತನಗೆ ಬರಾ ಐವೇಜುಗಳನ್ನು ಕೇಳಿ ವಾದಿಯು ಮೇಲ್ಕಂಡ ದಾವೆಯನ್ನು ನೂಡಿರುತ್ತಾರೆ.

ಈ ಬಾಬಿನಲ್ಲಿ 2ನೇ ಪ್ರತಿವಾದಿಗೆ ಆಕ್ಷೇಪವಿದ್ದಲ್ಲಿ ತಾ, 18—1—1956ರಲ್ಲು ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ವಾದಿಯ ಅಪೇಕ್ಷೆ ಮೇರೆಗೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಯು. ಬಿ. ಕೃಷ್ಣರಾವ್.

ವಾದಿಯಕಡೆ ಎಡ್ವೋಕೇಟ್.

ಉಡುಪಿ ತಾ. 4—1—1956.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 135/55.

O. S. 429/52.

ಅಃ ರ—ವೆಂಕಟ.

ಎದ್ರಿರು— ಚಿಕ್ಕ ಕೂಡಾ.

1ನೇ ಎದ್ರಿ, ಚಿಕ್ಕ. ನಾಗಿ ಮಗ.

Room No 46 New Hanuman Building No 8/9. Kiln Lane Lamington Road. Bombay 4.

4ನೇ ಎದ್ರಿ ಪುಟ್ಟ. ಗೋವಿಂದು ಮಗ. ಕುಂದಾಪುರ ತಾಲೂಕು ಕೆಗಾಲ್ ಗ್ರಾಮ.

7ನೇ ಎದ್ರಿ ಮ್ಯಾನಾರ್ ನಾಗ. ಪರಮೇಶ್ವರಿ ಮಗ. ಗಾರ್ಡಿಯನ್ 1ನೇ ಎದ್ರಿ ಚಿಕ್ಕ.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನೀಲಾಮು ಅಮ್ಮಲ್ಜಾರಿಯಲ್ಲಿ ಅರ್ಜಿದಾರನ ಕಡೆಯಿಂದ ಹಾಜರುಪಡಿಸಿ ಸ್ಥಿರಾಸ್ತಿ ಯೇಲಂ ಮುಸ್ತಿಹಾರಿನ ಶರ್ತು ನಿರ್ಣಯಿಸುವ ಬಗ್ಗೆ ತಾರೀಕು 28-1-56ಕ್ಕೆ ನೀಲಾಮು ಅಮ್ಮಲ್ಜಾರಿಯನ್ನು ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿಯನ್ನು ಕೋರ್ಟು ಹುಕ್ಕುಂಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

(Sd) A. N. Rao.

Advocate for Plaintiff.

ಕುಂದಾಪುರ. 5—1 56.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 1076/1955.

ಮಾಸ್ತರ್ ರಾಮಣ್ಣ ಸೆಟ್ಟಿ—ವಾದಿ.

ಕೋರ್ಗ ಸೆಟ್ಟಿ—ಪ್ರತಿವಾದಿ.

ಕುಂದಾಪುರ ತಾಲೂಕು ಉಳ್ತೂರು ಗ್ರಾಮದ ಹಲ್ತೂರು ಕೆಳಾಬೆಟ್ಟಿನಲ್ಲಿರುವ ಸದಿಯ ಸೆಟ್ಟಿ ತಮ್ಮ ಪ್ರತಿವಾದಿ ಕೋರ್ಗ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ವಾದಿಗೆ ಪ್ರತಿವಾದಿಯಿಂದ ಬಾಲಗೇಣಿ ಬಾಬ್ತು ಬರ ಹಣ ಬಡ್ಡಿ ವಗೈರೆ ಬರಮಾಡಿಕೊಳ್ಳುವ ಬಗ್ಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 12-1-1956ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ತನ್ನಿಗೆ ಇಡೋಣಾಗಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

M. M. Hegde

Advocate for Plff.

ಕುಂದಾಪುರ, ತಾ. 6-1-1956.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?



ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

"Ably written—Quite up-to-date valuable service"

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್

ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.

ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಜೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty, at the Navayuga Press, Udipi S. India

REGD. NO. M. 3616

LICENCE NO. 31
Licensed to Post without Prepaymen

ನವಯುಗ

ಸಂಪುಟ ೩೫ | ಸಂಚಿಕೆ ೨೦
ಉಡುಪಿ, 19—1—1956
VOL. 35 | NO. 20

ಯೋಜಕರ ಭರವಸೆ

ರಡನೇ ಪಂಚ ವಾರ್ಷಿಕ ಯೋಜನೆ ಕರಡಿನ ಮೇಲೆ ವಿವಿಧ ಮಟ್ಟದಲ್ಲಿ ಸ್ತಾವಿಕ ಪರ್ಯಾಲೋಚನೆಗಳೂ ಚ ಗಳೂ ಈಗ ಮುಗಿದಿವೆ. ರಾಜ್ಯ ಸರ ಗಳೂ ರಾಷ್ಟ್ರೀಯ ಅಭಿವೃದ್ಧಿ ಮಂಡ ಮತ್ತೀಗ ಸಂಸತ್ತಿನ ಸಲಹಾ ಸಮಿ ಯೂ ಯೋಜನೆಯ ಕರಡನ್ನು ಪರಿ ಶಿವೆ.-ಇಷ್ಟರಲ್ಲಿಯೇ ಸಂಸತ್ತಿಗೂ ಡೊಡನೆ ಜನರಿಗೂ ಯೋಜನೆಯ ರವಾದ ಮಾಹಿತಿಯು ದೊರಕುವಂತೆ ಕರಡು ತನ್ನ ಅಂತಿಮ ರೂಪದಲ್ಲಿ ಟವಾಗುತ್ತದೆ.

ಸ್ತಾವಿಕ ಚರ್ಚೆಗಳಲ್ಲಿ ವ್ಯಕ್ತವಾದ ಕ್ರಿಯೆಗಳನ್ನು ವೀಕ್ಷಿಸಿದರೆ, ಯೋಜ ಉದ್ದೇಶದ ಬಗ್ಗೆ ಯಾರಲ್ಲೂ ಭಿ ಭಿಪ್ರಾಯವಿರುವಂತೆ ಕಂಡು ಬರು . ಕಾಂಗ್ರೆಸು ಸಮಾಜವಾದಿ ಮಾದ ಸಮಾಜ ರಚನೆಯ ಧ್ಯೇಯವನ್ನು ಮುಂದಿಟ್ಟುಕೊಂಡು ಈ ಉದ್ದೇಶ ನೆಗೆ ಯೋಜನೆಯು ಅನುಕೂಲವಿ ಕೆಂದು ಜಾಗರೂಕತೆಯಿಂದ ಕೆಲಸ ಡಿದೆ.

ಸಂಸತ್ತಿನ ಸಲಹಾ ಸಮಿತಿಯುದ್ದ ಕ್ಷದ ಸದಸ್ಯರಾದರೂ ಯೋಜನ ಉದ್ದೇಶದ ಬಗ್ಗೆ ಭಿನ್ನಾಭಿಪ್ರಾಯವ ಹೊಂದಿರದೆ ಕೆಲವು ವಿವರಗಳ ಬಗ್ಗೆ ತ್ರ ಆಕ್ಷೇಪವೆತ್ತಿದ್ದಾರೆ. ಕಮ್ಯುನಿಸ್ಟ ಸಾರ್ವಜನಿಕ ರಂಗದ ಚಟುವಟಿಕೆ ನ್ನು ವಿಸ್ತರಿಸದಿದ್ದರೆ ಸಮಾಜವಾದಿ ಸಂಯ ಸಮಾಜ ರಚನೆಯು ಈಡೇ ರದೆಂದು ಹೇಳುವಂತಾದರೆ, ಪ್ರಜಾ ಜವಾದಿಗಳು ಕೊರತೆಯ ಧನ ಯೋಗ ಪದ್ಧತಿಯು ಅತಿ ಪ್ರಸರಣ ಹಣ ನಿತ ಕೆಡುಕಿಗೂ ದಾರಿ ಮಾಡಿ ಬಹುದೆಂದು ಎಚ್ಚರಿಸುತ್ತಾರೆ. ಯೋಜನೆಯ ಗಾತ್ರವನ್ನು ತಗ್ಗಿಸ ಂದು ಯಾರೂ ಹೇಳುತ್ತಿಲ್ಲ.

ದ್ವಿತೀಯ ಯೋಜನೆಯು ಅನೇಕ ಯುಗಳಲ್ಲಿ ಪ್ರಥಮ ಯೋಜನೆಗಿಂತ ವಾಗಿದೆ. ಕೃಷಿ ಕ್ಷೇತ್ರದ ಉತ್ಪ ವನ್ನು ಗಣನೀಯವಾಗಿ ಹೆಚ್ಚಿಸು ಮೊದಲನೆಯ ಯೋಜನೆಯ ಶವಾಗಿದ್ದರೆ ಎರಡನೇ ಯೋಜ ಯ ಕೈಗಾರಿಕೆಗಳಿಗೆ ಪ್ರಾಧಾನ್ಯ ನೆ. ವಿದೇಶಗಳ ಅವಲಂಬನೆಯನ್ನು ಪುವುದಕ್ಕೆ ಸಾಧ್ಯವಾಗುವಂತೆ ದೇಶ ಗೆ ಮೂಲೋದ್ಯಮಗಳನ್ನು ನೆಲೆ ಸಲು ಎರಡನೇ ಯೋಜನೆಯು ಶಿಸಿದೆ. ತೆರೆಯಲಿರುವ ಉಕ್ಕು ಕಬ್ಬಿಣದ ಕಾರ್ಖಾನೆಗಳು ಈ ವನ್ನು ವಹಿಸುತ್ತವೆ.

ಅದರೊಡನೆ ಯಂತ್ರೋದ್ಯಮಗಳ ವಿಕಾಸಕ್ಕೂ ಎರಡನೇ ಯೋಜನೆಯು ಮಹತ್ವ ಕೊಟ್ಟಿದೆ— ದಿನ ಬಳಕೆಯ ಸರಕುಗಳನ್ನು ದೇಶದಲ್ಲಿ ಉತ್ಪಾದಿಸಿ ವಿತರಿಸಲು ಅದು ಹವಣಿಸಿದೆ. ಗೃಹೋದ್ಯಮಗಳೂ ಲಘು ಕೈಗಾರಿಕೆಗಳೂ ಈ ದೃಷ್ಟಿಯಿಂದ ಬೆಳೆದು ಬರುವಂತೆ ಯೋಜನಾ ಕರ್ತರು ಪ್ರಯತ್ನಶೀಲರಾಗಿದ್ದಾರೆ. ಹಳ್ಳಿಯಲ್ಲಿ ಸಹ ಕುಶಲ ಕೆಲಸಗಾರರ ಚಟುವಟಿಕೆಗಳಿಂದಾಗಿ ಕೈಗಾರಿಕೆಗಳು ನೆಲೆಗೊಳ್ಳುವಂತೆಯೂ ಹೀಗೆ ನಿರುದ್ಯೋಗದ ಸಮಸ್ಯೆಯು ಸ್ವಲ್ಪ ಮಟ್ಟಿಗಾದರೂ ಪರಿಹಾರಗೊಳ್ಳುವಂತೆಯೂ ಯೋಜನೆಯು ತಕ್ಕ ಕಾರ್ಯಕ್ರಮಗಳಿಂದ ಕೂಡಿದೆ.

ಭೂ ಸುಧಾರಣೆಯ ದಿಸೆಯಲ್ಲಿ ಯೋಜನೆಯು ಪ್ರಗತಿ ಪಥದಲ್ಲಿ ಹೆಜ್ಜೆಯಿಟ್ಟಿದೆ —ಒಕ್ಕಲುಗಳಿಗೆ ಭದ್ರತೆ ಕೊಡುವ ಪ್ರಾರಂಭಿಕಘಟ್ಟವನ್ನು ಪ್ರಥಮ ಯೋಜನೆಯ ಅವಧಿಯಲ್ಲಿ ಸಾಮಾನ್ಯವಾಗಿ ಕ್ರಮಿಸಲಾಗಿರುವುದರಿಂದ ಉಳುವವನನ್ನು ಹೊಲದೊಡೆಯನಾಗಿ ಮಾಡಲು ತಕ್ಕ ಉಪಾಯಗಳು ಈಗ ಯೋಜಿಸಲ್ಪಡುತ್ತಿವೆ. ಸರಕಾರದವರೇ ಭೂಮಾಲಿಕನಲ್ಲಿರಬಹುದಾದ ಹಿಡುವಳಿಯ ಪರಮಾವಧಿಯನ್ನು ಮಿಕ್ಕುವ ಭೂಮಿಯನ್ನು ಪಡೆದುಕೊಂಡು ವಿತರಿಸಬೇಕು ಎಂಬ ಸೂಚನೆ ಯೋಜನಾ ಕರ್ತರ ಗಮನ ಸೆಳೆದಿದೆ.

ಭೂಮಾಲಿಕರ ಹಿತಗಳು ಹೀಗೆ ನಿಧಾನವಾಗಿ ದೇಶದ ಸಮಷ್ಟಿಯ ಹಿತದೊಡನೆ ಹೊಂದಿಕೊಳ್ಳುವಂತೆ ಯೋಜನೆಯು ಉಚಿತ ವಿಧಾನವನ್ನು ಕೈಗೊಳ್ಳುತ್ತಿರುವಂತೆಯೇ ಭಂಡವಾಳವು ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕೃತವಾಗದೆ ಜನರಲ್ಲಿ ವಿತರಣೆ ಹೊಂದಲು ಉಪಾಯಗಳನ್ನೂ ಅದು ಹುಡುಕಿದೆ. ಆದಾಯಕರದ ಕೊರತೆಗಳ ನಿವಾರಣೆಗೆ ಒಟ್ಟು ಸಂಪತ್ತಿನ ಮೇಲೆ ತೆರಿಗೆ ಹೊರಿಸುವುದು, ವ್ಯಕ್ತಿಯ ಸಂಬಳ ಪ್ರಮಾಣದ ಪರಮಾವಧಿಯನ್ನು ನಿರ್ಧರಿಸುವುದು ಇತ್ಯಾದಿ ಕ್ರಮಗಳು ಆರ್ಥಿಕ ಸಮಾನತೆಯ ಮೊದಲ ಹಾರಗಳಾಗಿ ದ್ವಿತೀಯ ಯೋಜನೆಯ ಕಾಲಾವಧಿಯಲ್ಲಿ ಅನುಭವಕ್ಕೆ ಬರಬಹುದಾಗಿವೆ. ಕಾರ್ಖಾನೆಯ ಒಡೆತನದಲ್ಲಿ ಕಾರ್ಮಿಕರಿಗೂ ಅಧಿಕಾರ ಕೊಡುವ ವಿಶೇಷ ಸೌಕರ್ಯಗಳು ಸಹ ಈ ಯೋಜನೆಯಂತೆ ನೀಡಲ್ಪಡುತ್ತವೆಂದು ಹೇಳಬಹುದು.

ಯೋಜನೆಯು ಹೀಗೆ ರಾಷ್ಟ್ರದ ಧ್ಯೇಯ ಸಾಧನೆಗೆ ಅನುಕೂಲವಾದ ಧೋರಣೆಯನ್ನು ಹಿಡಿದಿರುವುದಾದರೂ ಅದು ಸಂಪೂರ್ಣವಾಗಿ ವಾಸ್ತವಾಂಶಗಳ ಹಿನ್ನೆಲೆಯನ್ನು ಹೊಂದಿದೆ ಎನ್ನುವುದು ಸ್ವಲ್ಪ ಕಷ್ಟ. ವಿಶಿಷ್ಟ ಹಿತಾಸಕ್ತಿಯುಳ್ಳ ಕ್ಷೇತ್ರಗಳು ಯೋಜನಾ ಕರ್ತರ ಬದ್ಧಿವಂತಿಕೆಯನ್ನು ಕೆಣಕಿ ಪ್ರಶ್ನಿಸುವ ಹವ್ಯಾಸಕ್ಕೆ ಇಳಿಯುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ—ಭೂಸುಧಾರಣೆಯ ಕ್ರಮಗಳಿಂದ ನೊಂದ ಭೂಮಾಲಿಕರು ಸಾಗುವಳಿದಾರನು ಭೂಮಿಗೆ ಗೊಬ್ಬರಹಾಕದೆ ಹಾಳುಮಾಡುವುದು ನಿಶ್ಚಯವೆನ್ನುತ್ತಾರೆ; ಕೈಗಾರಿಕೆಗಳ ರಾಷ್ಟ್ರೀಕರಣವನ್ನು ವಿರೋಧಿಸುವ ಭಂಡವಾಳಗಾರರು ಸರಕಾರಕ್ಕೆ ದಕ್ಷ ಸಿಬ್ಬಂದಿಯ ಅಭಾವವಿರುವದರಿಂದ ಪ್ರಗತಿಯ ಬದಲು ಹಿನ್ನಡೆಯೇ ಫಲವಾದೀತೆಂದು ಎಚ್ಚರಿಸುತ್ತಾರೆ.

ಈ ಭಯಗಳನ್ನು ಪೂರ್ಣವಾಗಿ ನಿರಾಕರಿಸುವಂತಿಲ್ಲ; ಆದರೆ ಇದಕ್ಕೆ ಹೆದರಿ ಸರಕಾರ ಸುಮ್ಮನೆ ಕುಳಿತಿರುವಂತೆಯೂ ಇಲ್ಲ.

ಸರಕಾರದವರು ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆಂಬುದನ್ನು ನಿರುದ್ಯೋಗ ಸಮಸ್ಯೆಗೆ ಅವರು ಕೊಟ್ಟಿರುವ ಗಮನದಿಂದಲೇ ಊಹಿಸಬಹುದು. ಆರ್ಥ ಸಚಿವರು ತಮ್ಮ ಹಿಂದಿನ ಭಾಷಣಗಳಲ್ಲಿ ೧೧೦ ಲಕ್ಷದಷ್ಟು ಹೊಸ ಉದ್ಯೋಗದ ಅವಕಾಶಗಳನ್ನು ಈ ಯೋಜನೆಯಲ್ಲಿ ಒದಗಿಸಿ ಕೊಡಲು ಸಂಕಲ್ಪಿಸಲಾಗಿದೆ ಎನ್ನುತ್ತಿದ್ದರು. ಆದರೆ ಈಗ ಈ ಅಂದಾಜು ೮೦ ಲಕ್ಷ ಉದ್ಯೋಗಗಳ ಮಟ್ಟಕ್ಕೆ ಬಂದು ನಿಂತಿದೆ. ವಾಸ್ತವಾಂಶಗಳು ಇದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಉದ್ಯೋಗದ ಅವಕಾಶಗಳನ್ನು ರಾಷ್ಟ್ರದ ಒಟ್ಟು ಹಿತವನ್ನು ಸಾಧಿಸುವ ಕಾರ್ಯಕ್ರಮಗಳ ಚೌಕಟ್ಟಿನಲ್ಲಿ ಸೃಷ್ಟಿಸುವುದಕ್ಕೆ ಅನುಕೂಲವಾಗಿಲ್ಲವೆಂಬುದೇ ಇದಕ್ಕೆ ಕಾರಣ.

ವಾಸ್ತವಾಂಶದ ಒರೆಗಲ್ಲಿಗೆ ಇನ್ನೂ ಕೆಲವು ವಿಷಯಗಳನ್ನು ಹಚ್ಚಿ ನೋಡಿದರೆ ಯೋಜನೆಯ ಬಗ್ಗೆ ನಾವು ಅತಿ ಆಶಾವಾದಿಗಳಾಗಿದ್ದೇವೆಯೆ ಎಂಬ ಪ್ರಶ್ನೆ ಎದುರಿಗೆ ಬಂದು ನಿಲ್ಲುತ್ತದೆ. ಉದಾಹರಣೆಗೆ ಜನತೆಯ ವಿಶೇಷವಾದ ಸಹಕಾರದ ಮೇಲೆ ಯೋಜನೆಯ ಕಾರ್ಯಾಚರಣೆಯು ನಿಂತಿದೆ. ಜನರು ಮೊದಲನೇ ಯೋಜನೆಯ ಬಗ್ಗೆ ತುಂಬ ಉತ್ಸಾಹವನ್ನು ವ್ಯಕ್ತಪಡಿಸಿ ಎಲ್ಲ ರೀತಿಯಿಂದಲೂ ತಮ್ಮ ಬೆಂಬಲವನ್ನು ನೀಡಲು ಮುಂಬರಿದಿರುವುದು ನಿಜ. ಆದರೆ ಸರಕಾರದ ಕಾರ್ಯಾಚರಣೆಯೇ ಇದಕ್ಕೆ ಬೆಂಗೋಲಾಗಿತ್ತೆಂಬುದನ್ನು ಮರೆಯ ತಕ್ಕದ್ದಲ್ಲ. ಆದುದರಿಂದ ಜನತೆಯು ಸ್ವಯಂ ಪ್ರೇರಣೆಯಿಂದ ಯೋಜನೆಯೊಡನೆ ಸಹಕರಿಸಿ ಯಶಸ್ಸನ್ನು ಗಳಿಸಬೇಕಾಗಿದೆ. ಈ ಮಟ್ಟಿಗೆ ಯೋಜನಾ ಕರ್ತರು ವಹಿಸಿಕೊಂಡಿರುವ ಆಶಾದಾಯಕ ನಿಲುಮೆಯು ಹುಸಿ ಹೋಗದಂತೆ ಮಾಡುವುದು ಜನರ ಕೈಯಲ್ಲಿದೆ.

ಕಾರ್ಯಕ್ರಮಗಳ ವಿಸ್ತಾರವನ್ನು ತಗ್ಗಿಸುವುದು ಯಾರಿಗೂ ಇಷ್ಟವಿಲ್ಲವಾದರೂ, ನಮ್ಮ ಆರ್ಥಿಕ ಸಂಪತ್ತು ೪೮೦೦ ಕೋಟಿ ರೂಪಾಯಿಗಳನ್ನು ಸರಕಾರದ ಕಡೆಯಿಂದ ಸಾರ್ವಜನಿಕ ರಂಗದಲ್ಲಿಯೂ ೨೩೦೦ ಕೋಟಿ ರೂಪಾಯಿಗಳನ್ನು ಖಾಸಗಿ ರಂಗದಲ್ಲಿಯೂ ವ್ಯಯಿಸುವುದಕ್ಕೆ ಅನುಕೂಲವಾಗದೆಯೆ, ಎಂಬುದು

(೧೦ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ.ಭಾರತ.

ಮನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ಮನೆಯೇ ಅತ್ಯುತ್ತಮ ಸ್ಥಾನ. ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅದು ಅತ್ಯುತ್ತಮ ಸ್ಥಳವಾಗದು. ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ಆರಂಭಿಸುವುದು ಆದೆಷ್ಟು ಜಾಣ್ಮೆಯ ಕಾರ್ಯವಾಗದು! ಸ್ವಲ್ಪವೇ ಹಣದಿಂದ ನಮ್ಮಲ್ಲಿ ಲೆಕ್ಕ ಆರಂಭಿಸಬಹುದು. ನಮ್ಮ ನೌಕರರು, ನಾವು ನಿಮಗೆ ಸಹಕರಿಸಬಹುದಾದ ಅನೇಕ ರೀತಿಗಳನ್ನು ಸೂಚಿಸಲು ಸಿದ್ಧರಾಗಿರುವರು.

ಚಲಾವಣೆ ಭಂಡವಾಳ ರೂ. 2,೫೦,೦೦,೦೦೦ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India.

ವಿಶಾಲ ಮುಂಬಯಿ ನಗರದ ಇತಿಹಾಸ

ಪ್ರಾಚೀನ ಕಾಲದಿಂದಲೂ ಅದು ವ್ಯಾಪಾರ ಕೇಂದ್ರ

ಕಳೆದ ಮೂರು ತಿಂಗಳುಗಳಿಗಿಂತಲೂ ಹೆಚ್ಚು ಸಮಯದಿಂದ ಪ್ರಬಲ ವಿವಾದವೊಂದರ ಕೇಂದ್ರವಾಗಿದ್ದು ಇದೀಗ ರಾಷ್ಟ್ರದ ಅಧಿನಾಯಕರಿಂದ ಭವಿಷ್ಯತ್ತಿನ ಚಿತ್ರದ ಕುರಿತು ಅಂತಿಮ ತೀರ್ಮಾನವನ್ನು ಪಡೆದಿರುವ ಮುಂಬಯಿ ನಗರದ ಇತಿಹಾಸವು ರೋಮಾಂಚಕವಾಗಿದೆ. ರಾಜ್ಯಕ್ಕಾಗಿ ಹಿಂದೆ ಅರಸರು ಹೊಡೆದಾಡಿಕೊಳ್ಳುತ್ತಿದ್ದರು; ಇಂದಿನ ನಾಗರಿಕರು ಮುಂಬಯಿಯಂಥ ನಗರಕ್ಕಾಗಿ ಹೊಡೆದಾಡಿಕೊಂಡಿದ್ದಾರೆ–ಮಾತಿನ ಮೂಲಕ! ಏಕೆಂದರೆ ಮುಂಬಯಿಯು ಆರ್ಥಿಕ ಚಟುವಟಿಕೆಯು ಪ್ರಧಾನವಾಗುಳ್ಳ ಸಾಮ್ರಾಜ್ಯದ ಹೆಬ್ಬಾಗಿಲು ಎಂಬುದಾಗಿ ಭಾವಿಸಲ್ಪಡುತ್ತದೆ.

ಗ್ರೀಕರ ಕಾಲದಲ್ಲಿ

ಆಂಗ್ಲ ಭಾಷೆಯಲ್ಲಿ "ರೋಂ ನಗರವನ್ನು ಒಂದೇ ದಿನದಲ್ಲಿ ಕಟ್ಟಿ ಮುಗಿಸಲಿಲ್ಲ" ಎನ್ನುವ ಗಾದೆ ಮಾತೊಂದಿದೆ. ಕ್ರಿಸ್ತ ಪೂರ್ವ ೭೫೦ರಿಂದ ಕ್ರಿಸ್ತಶಕ ೪೫೦ರ ವರೆಗೆ ಮೆರೆದ ರೋಂ ನಗರವು ಅಂದಿನ ಪಶ್ಚಿಮ ಜಗತ್ತಿನ ಕಣ್ಮಣಿಯಾಗಿತ್ತೆಂದು ಇತಿಹಾಸಕಾರರ ಅಭಿಪ್ರಾಯ. ಇಂದು ಮುಂಬಯಿಗೆ ಪೂರ್ವ ಜಗತ್ತಿನ ವಿಷಯದಲ್ಲಿ ಈ ಉಪಮೆ ಸಲ್ಲುತ್ತದೆ.

ಕನ್ನಡಿಗರ ವೀರ ಸಾಮ್ರಾಜ್ಯವಾದ ವಿಜಯ ನಗರದ ರಾಜಧಾನಿಯು ಹೇಗೆ ಏಳು ಬೆಟ್ಟಗಳ ಆವರಣದಲ್ಲಿ ಹಂಪೆಯಾಗಿ ಮೆರೆಯಿತೊ ರೋಂ ನಗರ ಸಹ ಸಪ್ತ ಶಿಖರಗಳಿಂದಆವೃತವಾಗಿ ಅಭೇದ್ಯವೆನಿಸಿದ್ದಿತು. ಮುಂಬಯಿಯನ್ನು ಗುಡ್ಡ ಬೆಟ್ಟಗಳು ಸುತ್ತುವರಿದಿರಲಿಲ್ಲ; ಆದರೆ ಅದು ಏಳು ತೀರ ಚಿಕ್ಕ ದ್ವೀಪಗಳ ಒಂದು ಸಮೂಹವಾಗಿ ತನ್ನ ಆಕರ್ಷಣೆಯನ್ನೂ ವೈಶಿಷ್ಟ್ಯವನ್ನೂ ಕಾಯ್ದುಕೊಂಡಿದೆ.

ಚಾರಿತ್ರಿಕ ದೃಷ್ಟಿಯಿಂದ ಮುಂಬಯಿಯ ಉಲ್ಲೇಖವನ್ನು ಮೊದಲು ಮಾಡಿದವನೆಂದರೆ ಗ್ರೀಕ್ ಇತಿಹಾಸಕಾರನಾದ ತೊಲೆಮಿ; ಅವನು ಮುಂಬಯಿಯನ್ನು "ಹೆಪ್ಟನೇಶಿಯ" ಎಂಬ ಅನ್ವರ್ಥ ನಾಮದಿಂದಲೇ ಕರೆದಿದ್ದನು.

ಸಾಮಾನ್ಯವಾದ ಊಹೆಯಂತೆ ಕ್ರಿಸ್ತ ಪೂರ್ವ ೧೦೦೦ನೇ ವರ್ಷದಿಂದಲೇ ಪಶ್ಚಿಮ ಭಾರತವು ಪೂರ್ವ ಆಫ್ರಿಕ ಮತ್ತು ಕೆಂಪು ಕಡಲ ತೀರದ ರಾಷ್ಟ್ರಗಳೊಡನೆ ವ್ಯಾಪಾರ ವ್ಯವಹಾರವನ್ನು ಕೈಗೊಂಡಿದ್ದಿತು. ಸುಮಾರು ೨೫೦ ವರ್ಷಗಳ ತರುವಾಯ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳಲ್ಲೊಂದಾಗಿ ಮೆರೆದ ಬೆಬಿಲೋನಿಯ ದೊಡನೆಯೂ ಪರ್ಶಿಯದ ಕೊಲ್ಲಿಯ ಮೂಲಕ ವ್ಯಾಪಾರ ಸಂಪರ್ಕವೇರ್ಪಟ್ಟಿತು. ಮುಂಬಯಿ ಬಂದರವು ಆಗ ಪಶ್ಚಿಮ ಭಾರತದ ವಾಣಿಜ್ಯ ಕೇಂದ್ರವಾಗಿತ್ತೆಂದು ನಾವು ಸುಲಭದಲ್ಲಿ ಊಹಿಸಬಹುದು

ಕೋಳಿಗಳ ನೆಲೆವೀಡು

ಮುಂಬಯಿ ನಗರದ ಪ್ರಾಚೀನ ನಿವಾಸಿಕರಲ್ಲಿ "ಕೋಳಿ" (ಬೆಸ್ತ) ಜಾತಿಯವರು ತಮ್ಮ ಪರಂಪರಾಗತವಾದ ವೃತ್ತಿಯನ್ನು ಕೈಗೊಂಡು ಜೀವನವನ್ನು ನಡೆಸುತ್ತಿದ್ದಾರೆ. ಒಳ್ಳೆಯ ಪರಿಶ್ರಮಿಗಳೂ ಸಾಹಸಿಗರೂ ಆದ ಇವರು ಪಾರ್ವತಿಯ ಅವತಾರವೆನಿಸಿದ ಮುಂಬಾದೇವಿಯ ಆರಾಧನೆ ಮಾಡುತ್ತಿದ್ದುದರಿಂದ ಮುಂಬಯಿ ನಗರಕ್ಕೆ ಈ ಹೆಸರು ಬಂತು. ಕೋಳೀವಾಡವು ಇಂದು ವಿಶಾಲ ಮುಂಬಯಿಯ ಒಂದು ಭಾಗವಾಗಿ ಮಾತ್ರ ಪರಿಗಣಿಸಲ್ಪಡುತ್ತಿದ್ದರೂ ಹಿಂದೊಮ್ಮೆ ಅದು ಸರ್ವ ಚಟುವಟಿಕೆಯ ಕೇಂದ್ರವಾಗಿತ್ತೆಂಬುದನ್ನು ಮರೆಯಲಾಗದು.

ಭಾರತೀಯ ಇತಿಹಾಸವು ಪ್ರಾರಂಭವಾದ ಬಳಿಕ ಮುಂಬಯಿ ನಗರವಾಗಿ ರೂಪುಗೊಂಡ ಸಪ್ತದ್ವೀಪಗಳು ಅನೇಕ ರಾಜವಂಶಜರ ಆಳ್ವಿಕೆಗೆ ಒಳಪಟ್ಟವು. ಮೌರ್ಯ ಅರಸನಾದ ಅಶೋಕನು ಮುಂಬಯಿ ನಗರದ ಮೇಲೆ ಪ್ರಭುತ್ವವನ್ನು ಪಡೆದಿದ್ದನು.

ಕ್ರಿಸ್ತ ಪೂರ್ವ ೨೩೧ರಲ್ಲಿ ಆತನು ಮರಣ ಹೊಂದಲು ಮುಂದೆ ಮೌರ್ಯ ಸಾಮ್ರಾಜ್ಯವು ಶಿಥಿಲವಾಗ ತೊಡಗಿತು. ಪಶ್ಚಿಮ ಕರಾವಳಿಯಲ್ಲಿ ಹಬ್ಬಿದ್ದ ಮೌರ್ಯ ಸಾಮ್ರಾಜ್ಯವು ಆಂಧ್ರ ರಾಜವಂಶಜರಾದ ಶಾತವಾಹನರ ಕೈಸೇರಿತು. ಗೋದಾವರಿ ನದಿಯ ದಂಡೆಯಲ್ಲಿದ್ದ ಪೈಠಣದಿಂದ ಶಾತವಾಹನರು ಮುಂಬಯಿಯನ್ನು ಒಂದು ಶತಮಾನದ ವರೆಗೆ ಮಾತ್ರ ಆಳಿದರು; ಮುಂದೆ ಅವರ ವರ್ಚಸ್ಸು ಈ ಪ್ರದೇಶದಲ್ಲಿ ಕುಗ್ಗಿಕೊಂಡು ಸೌರಾಷ್ಟ್ರ ಮತ್ತು ಕಚ್ಛದ ಶಕ ಸತ್ರಪರು ಮುಂಬಯಿಯ ಮೇಲೆ ಅಧಿಕಾರ ನಡೆಸಿದರು.

ಶಾತವಾಹನರ ಹಾಗು ಶಕಸತ್ರಪರ ಕಾಲದಲ್ಲಿ ಮುಂಬಯಿ ನಗರದೊಡನೆ ಪಶ್ಚಿಮ ಜಗತ್ತು ವಿಶೇಷ ಸಂಪರ್ಕವನ್ನು ಪಡೆಯಿತು. ರೋಮಿನೊಡನೆ ವ್ಯಾಪಾರವು ಅತ್ಯಧಿಕವಾಯಿತು. ಆದರೆ ಶಕಸತ್ರಪರ ಪ್ರಭಾವವೂ ಕಾಲಕ್ರಮೇಣ ನಶಿಸಲು ಮುಂಬಯಿಯು ಹಗಲನ್ನು ಕಳೆದು ರಾತ್ರಿಯಲ್ಲಿ ಕಾಲಿರಿಸಿತು. ಮುಂದೆ ಕ್ರಿಸ್ತ ಶಕ ಏಳನೇ ಶತಮಾನದ ವರೆಗೆ ಮುಂಬಯಿ ನಗರ ಸಾಮಾನ್ಯ ಚಟುವಟಿಕೆಯನ್ನಷ್ಟೆ ನಡೆಸಿತು. ಆಗ ಚಾಳುಕ್ಯರು ಇಲ್ಲಿ ರಾಜ್ಯಭಾರ ನಡೆಸಿದರು.

ಹೆಸರುವಾಸಿಯಾದ ರೇವು

ರಾಷ್ಟ್ರಕೂಟರೂ ಗುರ್ಜರರೂ ಪಶ್ಚಿಮ ಕರಾವಳಿಯ ಬಗ್ಗೆ ಸ್ಪರ್ಧೆಯಿಂದ ಹೊಡೆದಾಡಿಕೊಂಡು ಮುಂಬಯಿನಗರವನ್ನು ಕೈವಶಪಡಿಸಿಕೊಳ್ಳಲು ಸಾಹಸಪಟ್ಟರು. ಈ ಜಗಳದಲ್ಲಿ ರಾಷ್ಟ್ರಕೂಟರ ಕೈ ಮೇಲಾಗಿ ಅವರಿಗೆ ಕೊಂಕಣ ತೀರದ ಅಧಿಕಾರದೊರೆಯಿತು. ಸಹಜವಾಗಿ ಮುಂಬಯಿಯು ಅವರ ಅಧೀನವಾಯಿತು.

ಇವತ್ತು ಮುಂಬಯಿಯ ನಿವಾಸಿಗಳೂ ಅಲ್ಲಿಗೆ ತೆರಳಿದ ಸಂದರ್ಶಕರೂ ಕೇವಲ ವಿಹಾರಸ್ಥಾನವೆಂದು ಹತ್ತಿರದ ಎಲಿಫೆಂಟ ದ್ವೀಪಕ್ಕೆ ಹೋಗುತ್ತಾರೆ: ಅಲ್ಲೀಗ ಇಪ್ಪತ್ತು—ಮೂವತ್ತು ಮಂದಿ ಜನರಾದರೂ ಇದ್ದಾರೋ ಇಲ್ಲವೊ! ಆದರೆ ಒಂದುಕಾಲದಲ್ಲಿ ಮುಂಬಯಿ ಬಂದರವೆಂದರೆಯೇ ಎಲಿಫೆಂಟ! ಎರಡು ಬೆಟ್ಟಗಳು ತಲೆಯೆತ್ತಿ ನಿಂತಿರುವ ಈ ದ್ವೀಪವು ಮೌರ್ಯರಿಂದ ಚಾಳುಕ್ಯರ ವರೆಗಿನ ಅವಧಿಯಲ್ಲಿ ಪುರಿದ್ವೀಪವೆಂಬ ಹೆಸರಿನಿಂದ ಬಂದರವಾಗಿ ವ್ಯಾಪಾರ ನಡೆಸುತ್ತಿದ್ದಿತು.

ಈಗ ಮುಂಬಯಿ ನಗರವಾಗಿ ಕಂಗೊಳಿಸುವ ಭೂಪ್ರದೇಶದಲ್ಲಿ ಕಟ್ಟಿದ ಮೊದಲನೆಯ ನಗರವೇ ಮಾಹಿಕಾವತಿ–ಅಥವಾ ಇಂದಿನ ಮಾಹಿಂ! ಸಪ್ತದ್ವೀಪ ಸಮುದಾಯದ ಮಧ್ಯ ಪ್ರದೇಶದಲ್ಲಿದ್ದ ಈ ನಗರವು ಮೀನು ವ್ಯಾಪಾರವನ್ನು ಹೇರಳವಾಗಿ ನಡೆಸಿತು. ಈಗಲೂ ಮೀನುಗಾರಿಕೆಗೆ ಮಾಹಿಂ ಹೆಸರುವಾಸಿಯಾಗಿದೆ.

ಮಾಹಿಕಾವತಿಯನ್ನು ದೇವಗಿರಿಯ ಯಾದವ ಅರಸನಾದ ಭೀಮನು ಕಟ್ಟಿಸಿದನು. ಅಲ್ಲಾವುದ್ದೀನ ಖಿಲ್ಜಿಯು ೧೨೯೪ರಲ್ಲಿ ದಕ್ಷಿಣದ ಮೇಲೆ ದಾಳಿ ನಡೆಸಿದ ಬಳಿಕ ಭೀಮನಿಂದ ರಚಿಸಲಾದ ಈ ನಗರವು ಕ್ರಮೇಣ ವಿಶೇಷ ಪ್ರಾಮುಖ್ಯತೆಯನ್ನು ಪಡೆಯಿತು; ಆಸುಪಾಸಿನ ಪ್ರದೇಶಗಳಲ್ಲಿ ಚಟುವಟಿಕೆ ಹೆಚ್ಚಿಕೊಳ್ಳುವಷ್ಟು ಈ ನಗರವು ವೃದ್ಧಿಯನ್ನು ಹೊಂದಿತು.

ಗುಜರಾಥಿನಿಂದ ಮುಸ್ಲಿಂ ದಳಗಳು ದಕ್ಷಿಣಕ್ಕೆ ದಂಡೆತ್ತಿ ಬಂದು ೧೩೪೮ರಲ್ಲಿ ಮಾಹಿಕಾವತಿಯನ್ನು ದೇವಗಿರಿಯ ಯಾದವರ ಕೈಯಿಂದ ಸೆಳೆದುಕೊಂಡವು. ೧೫೩೪ನೇ ಇಸವಿಯಲ್ಲಿ ಸುಲ್ತಾನ ಬಹಾದುರನೆಂಬ ಅರಸನು ಪೋರ್ಚುಗೀಜರ ಬಲವಂತಿಕೆಯ ಪರಿಣಾಮವಾಗಿ ಸಪ್ತದ್ವೀಪ ಸಮುದಾಯವಾದ ಮುಂಬಯಿಯನ್ನು ಅವರಿಗೆ ಬಿಟ್ಟುಕೊಟ್ಟನು.

ಬ್ರಿಟಿಷರ ಕೈಯಲ್ಲಿ

ಪೋರ್ಚುಗೀಜರ ಬೆನ್ನಿಗೆ ಭಾರತದಲ್ಲಿ ವ್ಯಾಪಾರಕ್ಕಾಗಿ ಬಂದಿದ್ದ ಬ್ರಿಟಿಷರಿಗೆ ಮುಂಬಯಿ ನಗರದ ಮೇಲೆ ಕಣ್ಣುಬಿದ್ದು, ೧೬೨೬ರಲ್ಲಿ ಕಂಪೆನಿಯವರು ಕ್ರಾಮ್‌ವೆಲ್‌ಗೆ ಈ ದ್ವೀಪಗಳನ್ನು ಕ್ರಯಕ್ಕೆ ಕೊಂಡುಕೊಳ್ಳಬೇಕೆಂದು ಒತ್ತಾಯಿಸಿದರು. ಆದರೆ ಈ ಪ್ರಯತ್ನ ಸಫಲವಾಗಲಿಲ್ಲ. ಹನ್ನೊಂದು ವರ್ಷಗಳ ತರುವಾಯ ಮಾತ್ರ ಪೋರ್ಚುಗೀಜ ರಾಜಕುಮಾರಿ ಇನ್‌ಫಾಂಟಾ ಕೆಥರೀನಳನ್ನು ಬ್ರಿಟನಿನ ಅರಸನಾದ ಇಮ್ಮಡಿ ಚಾರ್ಲ್ಸ್ ಕೈ ಹಿಡಿದಾಗ ಅಳಿಯನಿಗೆ ವರದಕ್ಷಿಣೆಯ ರೂಪದಲ್ಲಿ ಪೋರ್ಚುಗೀಸ್ ಪ್ರಭುತ್ವವು ಮುಂಬಯಿಯನ್ನು ಬಿಟ್ಟುಕೊಟ್ಟಿತು.

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಇದುವೇ ಪಾಲಿಸಿದಾರರಲ್ಲಿ ವಿಶ್ವಾಸವನ್ನು ಹುಟ್ಟಿಸುವ ಹೆಸರು.
ಅಲ್ಲದೆ ಸ್ಥಾಪಿತವಾದಂದಿನಿಂದಲೂ ಬೋನಸು ಹಂಚಿದ ಕಂಪೆನಿ.

ವಿಮೆ ಇಳಿಸಲು ಅಥವಾ ಪ್ರತಿನಿಧಿಸಲು ಅಪೇಕ್ಷಿಸುವವರು ವಿವರಕ್ಕಾಗಿ ಬರೆಯಿರಿ.

T. R. A. PAI, Managing Director,
THE CANARA MUTUAL ASSURANCE COMPANY, LTD.
Head Office: UDIPI, S. India.] [Estd: 1935.

CHIEF AGENTS:
THE COMMERCIAL CORPORATION OF INDIA LTD.,
UDIPI, S. India.

ಅದಮಾರು ಮಠಾಧೀಶರ ಪರ್ಯಾಯ

ದ್ವೈತ ತತ್ತ್ವ ಜ್ಞಾನದ ಪೀಠದಲ್ಲಿ ವೈಭವಯುಕ್ತ ಉತ್ಸವ



ಪರ್ಯಾಯ ಪೀಠವೇರಿರುವ
ಶ್ರೀಮದದಮಾರು ಮಠಾಧೀಶರಾದ
ಶ್ರೀಮದ್ವಿಬುಧೇಶ ತೀರ್ಥ ಶ್ರೀಪಾದಂಗಳವರು

ಪರ್ಯಾಯ ಪೀಠದಿಂದ ಇಳಿದ
ಫಲಿಮಾರು ಮಠಾಧಿಪತಿಗಳಾದ
ಶ್ರೀಮದ್ರಘುವಲ್ಲಭ ತೀರ್ಥ ಶ್ರೀಪಾದಂಗಳವರು

ಇದೇ ೧೮ನೇ ಜನವರಿಯಂದು ಉಡುಪಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಪರ್ಯಾಯ ಮಹೋತ್ಸವವು ಪರಂಪರೆಯಂತೆ ನಡೆಯಿತು. ಫಲಿಮಾರು ಮಠದ ಶ್ರೀಮದ್ರಘುವಲ್ಲಭತೀರ್ಥ ಶ್ರೀಪಾದಂಗಳವರಿಂದ ಶ್ರೀಮದದಮಾರು ಮಠಾಧೀಶರಾದ ಶ್ರೀಮದ್ವಿಬುಧೇಶ ತೀರ್ಥ ಶ್ರೀಪಾದಂಗಳವರು ರುಕ್ಮಿಣೀಕರಾರ್ಚಿತ ಶ್ರೀಕೃಷ್ಣಪರಮಾತ್ಮನನ್ನು ಎರಡು ವರ್ಷಗಳ ತನಕ ಪೂಜಾವಿಧಿಗಳಿಂದ ಸೇವಿಸುವ ಅಧಿಕಾರವನ್ನು ವಹಿಸಿಕೊಂಡರು.

ಉಡುಪಿಯ ಕುರಿತು ಅನೇಕ ಮಹಾನುಭಾವರು ಅನೇಕ ರೀತಿಯ ಉದ್ಗಾರಗಳನ್ನು ಹೊರಡಿಸಿದ್ದಾರೆ. ಕರ್ನಾಟಕದ ಶ್ರೇಷ್ಠ ಬರೆಹಗಾರರಾದ ದಿವಂಗತ ಕೈಲಾಸಂ ಶ್ರೀನಿವಾಸರಾಯರು "ಉಡುಪಿ- ಎಷ್ಟು ಚಿಕ್ಕದಾದ ಹೆಸರು! ಆದರೂ ಎಷ್ಟು ಮುದ್ದು!" ಎಂದಿದ್ದರು.

ಮಾಧ್ವ ತತ್ತ್ವ ಜ್ಞಾನ

ಅಖಿಲ ಭಾರತ ಮಾಧ್ವಮಹಾಮಂಡಳದ ಅಧ್ಯಕ್ಷರಾದ ಪೇಜಾವರ ಮಠಾಧೀಶ ಶ್ರೀಮದ್ವಿಶ್ವೇಶ ತೀರ್ಥ ಶ್ರೀಪಾದಂಗಳವರು ಉಡುಪಿಯನ್ನು ಆರೋಗ್ಯಧಾಮದೊಡನೆ ಹೋಲಿಸಿದ್ದಾರೆ— "ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶ್ರೀ ಕೃಷ್ಣ ಮಂದಿರವು ಉಡುಪಿಯಲ್ಲಿರುವ ಆಸ್ಪತ್ರೆ. ದೈಹಿಕ ಆರೋಗ್ಯಕ್ಕಲ್ಲ— ಮಾನಸಿಕ ಹಾಗು ಆತ್ಮಿಕ ಆರೋಗ್ಯಲಾಭಕ್ಕಾಗಿ ಈ ಮಂದಿರವಿದೆ; ಶ್ರೀ ಮಧ್ವಾಚಾರ್ಯರೇ ಧನ್ವಂತರಿ ವೈದ್ಯನಾಗಿ ಯಾತ್ರಿಕರನ್ನು ಚಿಕಿತ್ಸೆಗೆ ಗುರಿಪಡಿಸುತ್ತಾರೆ. ತಮ್ಮ ತತ್ತ್ವಾಮೃತ ಧಾರೆಯಿಂದ ಆತ್ಮಜಾಡ್ಯವನ್ನು ಪರಿಹರಿಸಿ ಎಲ್ಲರನ್ನೂ ಪುನೀತರನ್ನಾಗಿ ಮಾಡುತ್ತಾರೆ!"

ಮಾಧ್ವತತ್ತ್ವ ಜ್ಞಾನದ ಕೇಂದ್ರವಾದ ಉಡುಪಿಯು ಬಂಗಾಳದಲ್ಲಿ ವೈಷ್ಣವ ಪಂಥವನ್ನು ಪ್ರವರ್ತಿಸಿದ ಶ್ರೀ ಚೈತನ್ಯ ಹಾಗು ಅವರ ಶಿಷ್ಯರ ಯಾತ್ರಾಸ್ಥಳವಾಗಿ ಹಿಂದೆ ಮೆರೆದಿತ್ತು; ಕನಕದಾಸ, ಪುರಂದರದಾಸರಂಥ ಕರ್ನಾಟಕದ ಅನುಭಾವಿಗಳು ಇಲ್ಲಿ ದೇವರ ದರ್ಶನಪಡೆದು ಭಕ್ತಿ ಪಂಥದ ಉತ್ಕರ್ಷಕ್ಕೆ ಕಾಣಿಕೆಯನ್ನಿತ್ತರು; ಮೈಸೂರಿನ ಮುಮ್ಮಡಿ ಕೃಷ್ಣರಾಜರೇ ಮುಂತಾದ ಅರಸರು ಶ್ರೀ ಕೃಷ್ಣ ಪರಮಾತ್ಮನ ಕೈಂಕರ್ಯವನ್ನು ಕೈಗೊಂಡು ದತ್ತಿ ಉತ್ತಾರಗಳನ್ನಿತ್ತರು.

ಅದ್ವೈತ ವಾದಿಗಳಾದ ಸ್ವಾಮಿ ವಿವೇಕಾನಂದರಂಥ ಮಹಾ ಮೇಧಾವಿಗಳು ಸಹ ನೋಡಿದ್ದರೆ ಆಕರ್ಷಿತರಾಗುವಷ್ಟು ಮೇಲ್ಮಟ್ಟದಲ್ಲಿ ಮಾಧ್ವ ತತ್ತ್ವಜ್ಞಾನವನ್ನು ವಿಸ್ತರಿಸಿ ಹೇಳಿದ ಜಯತೀರ್ಥ, ವ್ಯಾಸತೀರ್ಥ ಇವರು ವಿಜಯನಗರದ ಆಸ್ಥಾನದಲ್ಲಿ ವಿದ್ವತ್ಪ್ರತಿಭೆಯನ್ನು ಬೀರಿ ಬೆಳಗಿದ್ದರು. ಆಂಧ್ರದೇಶದಲ್ಲಿಯೂ ಬಂಗಾಳದಲ್ಲಿಯೂ ಸಾರ್ವತ್ರಿಕವಾಗಿ ದಕ್ಷಿಣ ಭಾರತದಲ್ಲಿಯೂ ಮಧ್ವಾಚಾರ್ಯರ ತತ್ತ್ವಜ್ಞಾನವೇ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ವಿಶೇಷ ಕಾರಣವಾಯಿತು.

ಪರ್ಯಾಯ ಪೀಠಾಧಿಪತಿಗಳು

ಉಡುಪಿಯು ಶ್ರೀ ಮಧ್ವಾಚಾರ್ಯರ ವಿದ್ವತ್ಪ್ರಕಾಶದ ಪಸೆಯಿಂದಲೇ ಹೆಸರುವಾಸಿಯಾಯಿತೆಂಬುದನ್ನು ಕೃತಜ್ಞತೆಯಿಂದ ನಾವೆಲ್ಲರೂ ನೆನೆಯಬಹುದು. ಶ್ರೀ ಮಧ್ವಾಚಾರ್ಯರ ಪರಂಪರೆಯಲ್ಲಿ ಸೋದೆ ಮಠದ ಶ್ರೀ ವಾದಿರಾಜ ಸ್ವಾಮಿಗಳಂಥ ಅನೇಕ ಪುಣ್ಯಾತ್ಮರು ಅವತರಿಸಿದ್ದಾರೆ. ಇಂದಿಗಾದರೂ ಅಷ್ಟ ಮಠಗಳನ್ನು ಅಲಂಕರಿಸಿರುವ ಯತಿವರ್ಯರಲ್ಲಿ ಪ್ರಾಜ್ಞರಿದ್ದಾರೆ; ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬಹಳ ದೂರ ಮುಂದುವರಿದ ಸಾಧಕರೂ ಇದ್ದಾರೆ. ಉಡುಪಿಯನ್ನು ಎಲ್ಲ ಆಸ್ತಿಕರ ದೃಷ್ಟಿಯಲ್ಲಿ ಅತ್ಯಂತ ಪವಿತ್ರ ಕ್ಷೇತ್ರವಾಗಿ ರೂಪಿಸುವುದಕ್ಕೆ ಶ್ರೀ ಕೃಷ್ಣ ಪರಮಾತ್ಮನ ದಿವ್ಯ ಸಾನ್ನಿಧ್ಯದಂತೆ ಧರ್ಮ ಪೀಠಾಧಿಪತಿಗಳ ತಪೋಮಹಿಮೆಯೂ ಕಾರಣವಾಗಿದೆ.

ಪರ್ಯಾಯ ಪೀಠವೇರಿರುವ ಅದಮಾರು ಮಠಾಧೀಶ ಶ್ರೀಮದ್ವಿಬುಧೇಶ ತೀರ್ಥ ಶ್ರೀಪಾದಂಗಳವರು ಉಡುಪಿಯ ಲೌಕಿಕ ವ್ಯವಹಾರದಲ್ಲಿಯೂ ವಿಶೇಷವಾದ ಆಸಕ್ತಿಯನ್ನು ವಹಿಸಿದವರಾಗಿದ್ದಾರೆ. ಅವರು ಪೂರ್ವಾಶ್ರಮದಲ್ಲಿಯೇ ಸಾಕಷ್ಟು ಆಂಗ್ಲ ಶಿಕ್ಷಣವನ್ನು ಸಂಪಾದಿಸಿದ್ದರು; ಸನ್ಯಾಸ ದೀಕ್ಷೆಯನ್ನು ವಹಿಸಿಕೊಂಡ ಬಳಿಕ ಸಂಸ್ಕೃತದಲ್ಲಿ ಸಹ ಪಾಂಡಿತ್ಯ ಸಂಪಾದಿಸಿದ್ದಾರೆ. ಧರ್ಮದ ಮರ್ಮವನ್ನು ಶ್ರೀ ಮಧ್ವಾಚಾರ್ಯರು ಸಾಮಾನ್ಯ ಜನರಿಗೆ ಸುಲಭದಲ್ಲಿ ತಿಳಿಯಪಡಿಸಲು ಸಮರ್ಥರಾದುದರಿಂದಲೇ ಬೌದ್ಧಿಕ ಮಟ್ಟದಲ್ಲಿ ತರ್ಕಕ್ಕೊಂದು ವಿಷಯವಾಗಿ ನಿಂತ ಧರ್ಮವು ಅನುಷ್ಠಾನ ವೇದಾಂತದ ರೂಪದಲ್ಲಿ ವ್ಯಕ್ತವಾಗಲು ಅವಕಾಶವಾಯಿತು. ಇಂದಿನ ಧರ್ಮ ಪೀಠಾಧಿಪತಿಗಳು ಆತ್ಮೋನ್ನತಿಗೆ ದೇಹ ಹಾಗು ಚಿತ್ತ ಸ್ವಾಸ್ಥ್ಯಗಳು ಹೇಗೆ ಅತ್ಯಾವಶ್ಯಕವೋ ತದ್ರೀತಿ ಆಧ್ಯಾತ್ಮಿಕ ಶ್ರೇಯಸ್ಸಿಗೆ ಲೌಕಿಕ ವ್ಯವಹಾರದಲ್ಲಿ ಸಮುಚಿತ ಆಸಕ್ತಿಯನ್ನು ಜನ ಸಾಮಾನ್ಯರ ನೆಲೆಯಲ್ಲಿಯಾದರೂ ವಹಿಸುವುದು ಅಗತ್ಯವೆಂದು ಮನಗಂಡಿರುವಂತೆ ಕಾಣುತ್ತದೆ.

ಮನನೀಯ ಕಾರ್ಯ

ಆದುದರಿಂದಲೇ ಸಂಪ್ರದಾಯದಂತೆ ನಡೆದ, ಬಂದಿರುವ ಬ್ರಾಹ್ಮಣ-ಸುವಾಸಿನಿ ಸಂತರ್ಪಣೆ, ಕಾಲೋಚಿತ ಉತ್ಸವಗಳು ಇತ್ಯಾದಿ ಚಟುವಟಿಕೆಗಳೊಡನೆ ಆಧುನಿಕ ವಿದ್ಯಮಾನಗಳಿಗೆ ಒಪ್ಪುವ ಇತರ ಸಾರ್ವಜನಿಕಹಿತದ ಕೆಲಸಗಳನ್ನೂ ನಡೆಸಿಕೊಂಡು ಬರಲು ಮಠಾಧಿಪತಿಗಳು ಮುಂದಾಗುತ್ತಿದ್ದಾರೆ. ಫಲಿಮಾರು ಮಠದ ವೃಂದಾವನಸ್ಥ ಶ್ರೀಮದ್ರಘುಮಾನ್ಯ ತೀರ್ಥ ಶ್ರೀಪಾದಂಗಳವರು ತಮ್ಮ ಮೂಲ ಮಠವಿರುವ ಫಲಿಮಾರಿನಲ್ಲಿ ಒಳ್ಳೆಯ ಶಾಲೆಯನ್ನು ಹಳ್ಳಿಯ ಜನಗಳಿಗೆ ಲೌಕಿಕ ಶಿಕ್ಷಣಕ್ಕೆಂದು ಕಟ್ಟಿಸಿಕೊಟ್ಟರು. ಸೋದೆ ಮಠಾಧೀಶರು ಇನ್ನಂಜೆಯಲ್ಲಿ ಹೈಸ್ಕೂಲನ್ನು ಸ್ಥಾಪಿಸಿದರು. ಅದಮಾರು ಶ್ರೀಗಳವರು ಅದಮಾರಿನಲ್ಲಿ ಹೈಸ್ಕೂಲನ್ನು ನೆಲೆಗೊಳಿಸಲು ನೆರವಿತ್ತರು. ಎಲ್ಲ ಶ್ರೀಗಳವರೂ ಉಡುಪಿಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿಯನ್ನೀಗ ತೋರಿಸುತ್ತಿರುವುದು ಜಾಗೃತ ಪ್ರಜ್ಞೆ ಎದ್ಯೋತಕವೆನ್ನಬಹುದು.

ರಜತ ಪೀಠವು ದ್ವೈತತತ್ತ್ವಜ್ಞಾನ ಕೇಂದ್ರವಾಗಿ ಇನ್ನಷ್ಟು ಮೆರೆಯಬೇಕಾಗಿರುವ ಆವಶ್ಯಕತೆಯನ್ನು ಪೂರೈಸುವ ದಿಸೆಯಲ್ಲಿ ಇಲ್ಲಿಯ ಸಂಸ್ಕೃತ ಮಹಾ ಪಾಠಶಾಲೆಯು ಪ್ರಾರಂಭದ ಹೆಜ್ಜೆ: ಇಲ್ಲೀಗ ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ಜ್ಞಾನ ಶಾಖೆಯ ಅಧ್ಯಯನಕ್ಕೆ ವಿಶೇಷ ಸೌಲಭ್ಯಗಳು ಸಿಗುತ್ತವೆ; ಅಲ್ಲದೆ ಹೈಸ್ಕೂಲು ವಿಭಾಗವು ಸಹ ಈಚೆಗೆ ತೆರೆಯಲ್ಪಟ್ಟಿದೆ. ಈ ಶಾಲೆಗೊಂದು ಭವ್ಯ ಕಟ್ಟಡವನ್ನು ಒದಗಿಸುವಲ್ಲಿ ತಮ್ಮಂತೆ ಧರ್ಮ ಪೀಠಾರೂಢರಾಗಿರುವ ಇತರ ಮಠಗಳ ಯತಿವರ್ಯರ ತುಂಬಿದ ಸಹಕಾರವನ್ನೂ ಸಾರ್ವಜನಿಕರ ವಿಶ್ವಾಸ ಮತ್ತು ಪ್ರೋತ್ಸಾಹಗಳನ್ನೂ ಸಂಪಾದಿಸಿ ತಮ್ಮ ಗುರುಗಳು ತೊಡಗಿದ್ದ ಪುಣ್ಯ ಕಾರ್ಯವನ್ನು ಪೂರೈಸಲು ಋಣಿಯಾದವರೂ, ಪೂರೈಸಿ ಕೃತಕೃತ್ಯರಾದವರೂ ಈಗಿನ ಪರ್ಯಾಯ ಶ್ರೀಗಳು! ಅವರು ಈ ಮಹಾ ಪಾಠಶಾಲೆಯ ಗೌರವ ಪ್ರಾಧ್ಯಾಪಕರಾಗಿ ನೇಮಕಗೊಂಡುದು ಅವರ ವಿದ್ವತ್ತಿಗೆ ಸಂದ ಗೌರವ! ಅವರಿಂದ ಅನೇಕ ಸಂಸ್ಥೆಗಳವರೂ ಬಡವರೂ ಉಪಕೃತರಾಗಿದ್ದಾರೆ; ಬೇಡಿ ಬಂದವರು ಸಂತುಷ್ಟರಾಗಿ ಹಿಂತಿ

(೧೦ನೇ ಪುಟ ನೋಡಿರಿ)

In the Court of the District Munsif of Karkala.

O. S. 526/1955

Between

Subraya Bhatta & others .. Plaintiffs.

Thammanna Bhatta and another.. Defendants.

To the 1st Defendant—

Thammanna Bhatta, Son of Appaya alias Krishna Bhatta, residing in Talipadi Village of Mangalore Taluk.

Please take notice that the Plaintiffs have instituted the above suit for recovery of Rs. 748—0—0 due towards mortgage interest and costs of suit etc. and the said suit stands posted to 23—1—1956 for your appearance and that you are at liberty to appear before the said Court at 10 A. M. on the said date and plead your defence, if any, failing which you will be declared exparte and the suit heard and decided in your absence

P. Ramachandra Rao,
Pleader for Plaintiffs.

Karkal, Dated 12-1-56.

ವಿಶಾಲ ಮುಂಬಯಿ ನಗರದ ಇತಿಹಾಸ

ಪ್ರಾಚೀನ ಕಾಲದಿಂದಲೂ ಅದು ವ್ಯಾಪಾರ ಕೇಂದ್ರ

ಕಳೆದ ಮೂರು ತಿಂಗಳುಗಳಿಗಿಂತಲೂ ಹೆಚ್ಚು ಸಮಯದಿಂದ ಪ್ರಬಲ ವಿವಾದವೊಂದರ ಕೇಂದ್ರವಾಗಿದ್ದು ಇದೀಗ ರಾಷ್ಟ್ರದ ಅಧಿನಾಯಕರಿಂದ ಭವಿಷ್ಯತ್ತಿನ ಚಿತ್ರದ ಕುರಿತು ಅಂತಿಮ ತೀರ್ಮಾನವನ್ನು ಪಡೆದಿರುವ ಮುಂಬಯಿ ನಗರದ ಇತಿಹಾಸವು ರೋಮಾಂಚಕವಾಗಿದೆ. ರಾಜ್ಯಕ್ಕಾಗಿ ಹಿಂದೆ ಅರಸರು ಹೊಡೆದಾಡಿಕೊಳ್ಳುತ್ತಿದ್ದರು; ಇಂದಿನ ನಾಗರಿಕರು ಮುಂಬಯಿಯಂಥ ನಗರಕ್ಕಾಗಿ ಹೊಡೆದಾಡಿಕೊಂಡಿದ್ದಾರೆ-ಮಾತಿನ ಮೂಲಕ! ಏಕೆಂದರೆ ಮುಂಬಯಿಯು ಆರ್ಥಿಕ ಚಟುವಟಿಕೆಯು ಪ್ರಧಾನವಾಗುಳ್ಳ ಸಾಮ್ರಾಜ್ಯದ ಹೆಬ್ಬಾಗಿಲು ಎಂಬುದಾಗಿ ಭಾವಿಸಲ್ಪಡುತ್ತದೆ.

ಗ್ರೀಕರ ಕಾಲದಲ್ಲಿ

ಆಂಗ್ಲ ಭಾಷೆಯಲ್ಲಿ "ರೋಂ ನಗರವನ್ನು ಒಂದೇ ದಿನದಲ್ಲಿ ಕಟ್ಟಿ ಮುಗಿಸಲಿಲ್ಲ" ಎನ್ನುವ ಗಾದೆ ಮಾತೊಂದಿದೆ. ಕ್ರಿಸ್ತಪೂರ್ವ ೭೫೩ರಿಂದ ಕ್ರಿಸ್ತಶಕ ೪೭೬ರ ವರೆಗೆ ಮೆರೆದ ರೋಂ ನಗರವು ಅಂದಿನ ಪಶ್ಚಿಮ ಜಗತ್ತಿನ ಕಣ್ಮಣಿಯಾಗಿತ್ತೆಂದು ಇತಿಹಾಸಕಾರರ ಅಭಿಪ್ರಾಯ. ಇಂದು ಮುಂಬಯಿಗೆ ಪೂರ್ವ ಜಗತ್ತಿನ ವಿಷಯದಲ್ಲಿ ಈ ಉಪಮೆ ಸಲ್ಲುತ್ತದೆ.

ಕನ್ನಡಿಗರ ವೀರ ಸಾಮ್ರಾಜ್ಯವಾದ ವಿಜಯ ನಗರದ ರಾಜಧಾನಿಯು ಹೇಗೆ ಏಳು ಬೆಟ್ಟಗಳ ಆವರಣದಲ್ಲಿ ಹಂಪೆಯಾಗಿ ಮೆರೆಯಿತೊ ರೋಂ ನಗರ ಸಹ ಸಪ್ತಶಿಖರಗಳಿಂದಾವೃತವಾಗಿ ಅಭೇದ್ಯವೆನಿಸಿದ್ದಿತು. ಮುಂಬಯಿಯನ್ನು ಗುಡ್ಡಬೆಟ್ಟಗಳು ಸುತ್ತುವರಿದಿರಲಿಲ್ಲ; ಆದರೆ ಅದು ಏಳು ತೀರ ಚಿಕ್ಕ ದ್ವೀಪಗಳ ಒಂದು ಸಮೂಹವಾಗಿ ತನ್ನ ಆಕರ್ಷಣೆಯನ್ನೂ ವೈಶಿಷ್ಟ್ಯವನ್ನೂ ಕಾಯ್ದುಕೊಂಡಿದೆ.

ಚಾರಿತ್ರಿಕ ದೃಷ್ಟಿಯಿಂದ ಮುಂಬಯಿಯ ಉಲ್ಲೇಖವನ್ನು ಮೊದಲು ಮಾಡಿದವನೆಂದರೆ ಗ್ರೀಕ್ ಇತಿಹಾಸಕಾರನಾದ ತೊಲೆಮಿ; ಆವನು ಮುಂಬಯಿಯನ್ನು "ಹೆಪ್ತನೇಶಿಯ" ಎಂಬ ಅನ್ವರ್ಥ ನಾಮದಿಂದಲೇ ಕರೆದಿದ್ದನು.

ಸಾಮಾನ್ಯವಾದ ಊಹೆಯಂತೆ ಕ್ರಿಸ್ತಪೂರ್ವ ೧೦೦೦ನೇ ವರ್ಷದಿಂದಲೇ ಪಶ್ಚಿಮ ಭಾರತವು ಪೂರ್ವ ಆಫ್ರಿಕ ಮತ್ತು ಕೆಂಪು ಕಡಲ ತೀರದ ರಾಷ್ಟ್ರಗಳೊಡನೆ ವ್ಯಾಪಾರ ವ್ಯವಹಾರವನ್ನು ಕೈಗೊಂಡಿದ್ದಿತು. ಸುಮಾರು ೨೫೦ ವರ್ಷಗಳ ತರುವಾಯ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳಲ್ಲೊಂದಾಗಿ ಮೆರೆದ ಬೆಬಿಲೋನಿಯ ದೊಡನೆಯೂ ಪರ್ಶಿಯದ ಕೊಲ್ಲಿಯ ಮೂಲಕ ವ್ಯಾಪಾರ ಸಂಪರ್ಕವೇರ್ಪಟ್ಟಿತು. ಮುಂಬಯಿ ಬಂದರವು ಆಗ ಪಶ್ಚಿಮ ಭಾರತದ ವಾಣಿಜ್ಯ ಕೇಂದ್ರವಾಗಿತ್ತೆಂದು ನಾವು ಸುಲಭದಲ್ಲಿ ಊಹಿಸಬಹುದು

ಕೋಳಿಗಳ ನೆಲೆವೀಡು

ಮುಂಬಯಿ ನಗರದ ಪ್ರಾಚೀನ ನಿವಾಸಿಕರಲ್ಲಿ "ಕೋಳಿ" (ಬೆಸ್ತ) ಜಾತಿಯವರು ಸೇರುತ್ತಾರೆ. ಇವತ್ತಿಗೂ ಈ ಜನರು ತಮ್ಮ ಪರಂಪರಾಗತವಾದ ವೃತ್ತಿಯನ್ನು ಕೈಗೊಂಡು ಜೀವನವನ್ನು ನಡೆಸುತ್ತಿದ್ದಾರೆ. ಒಳ್ಳೆಯ ಪರಿಶ್ರಮಿಗಳೂ ಸಾಹಸಿಗರೂ ಆದ ಇವರು ಪಾರ್ವತಿಯ ಅವತಾರವೆನಿಸಿದ ಮುಂಬಾದೇವಿಯ ಆರಾಧನೆ ಮಾಡುತ್ತಿದ್ದುದರಿಂದ ಮುಂಬಯಿ ನಗರಕ್ಕೆ ಈ ಹೆಸರು ಬಂತು. ಕೋಳೀವಾಡವು ಇಂದು ವಿಶಾಲ ಮುಂಬಯಿಯ ಒಂದು ಭಾಗವಾಗಿ ಮಾತ್ರ ಪರಿಗಣಿಸಲ್ಪಡುತ್ತಿದ್ದರೂ ಹಿಂದೊಮ್ಮೆ ಅದು ಸರ್ವ ಚಟುವಟಿಕೆಯ ಕೇಂದ್ರವಾಗಿತ್ತೆಂಬುದನ್ನು ಮರೆಯಲಾಗದು.

ಭಾರತೀಯ ಇತಿಹಾಸವು ಪ್ರಾರಂಭವಾದ ಬಳಿಕ ಮುಂಬಯಿ ನಗರವಾಗಿ ರೂಪುಗೊಂಡ ಸಪ್ತದ್ವೀಪಗಳು ಅನೇಕ ರಾಜವಂಶಜರ ಆಳ್ವಿಕೆಗೆ ಒಳಪಟ್ಟವು. ಮೌರ್ಯ ಅರಸನಾದ ಅಶೋಕನು ಮುಂಬಯಿ ನಗರದ ಮೇಲೆ ಪ್ರಭುತ್ವವನ್ನು ಪಡೆದಿದ್ದನು.

ಕ್ರಿಸ್ತ ಪೂರ್ವ ೨೩೧ರಲ್ಲಿ ಆತನು ಮರಣ ಹೊಂದಲು ಮುಂದೆ ಮೌರ್ಯ ಸಾಮ್ರಾಜ್ಯವು ಛಿಲವಾಗ ತೊಡಗಿತು. ಪಶ್ಚಿಮ ಕರಾವಳಿಯಲ್ಲಿ ಹಬ್ಬಿದ್ದ ಮೌರ್ಯ ಸಾಮ್ರಾಜ್ಯವು ಆಂಧ್ರ ರಾಜವಂಶಜರಾದ ಶಾತವಾಹನರ ಕೈಸೇರಿತು. ಗೋದಾವರಿ ನದಿಯ ದಂಡೆಯಲ್ಲಿದ್ದ ಪೈಠಣದಿಂದ ಶಾತವಾಹನರು ಮುಂಬಯಿಯನ್ನು ಒಂದು ಶತಮಾನದ ವರೆಗೆ ಮಾತ್ರ ಆಳಿದರು; ಮುಂದೆ ಅವರ ವರ್ಚಸ್ಸು ಈ ಪ್ರದೇಶದಲ್ಲಿ ಕುಗ್ಗಿಕೊಂಡು ಸೌರಾಷ್ಟ್ರ ಮತ್ತು ಕಚ್ಛದ ಶಕ ಕ್ಷತ್ರಪರು ಮುಂಬಯಿಯ ಮೇಲೆ ಅಧಿಕಾರ ನಡೆಸಿದರು.

ಶಾತವಾಹನರ ಹಾಗು ಶಕಕ್ಷತ್ರಪರ ಕಾಲದಲ್ಲಿ ಮುಂಬಯಿ ನಗರದೊಡನೆ ಪಶ್ಚಿಮ ಜಗತ್ತು ವಿಶೇಷ ಸಂಪರ್ಕವನ್ನು ಪಡೆಯಿತು. ರೋಮಿನೊಡನೆ ವ್ಯಾಪಾರವು ಅತ್ಯಧಿಕವಾಯಿತು. ಆದರೆ ಶಕಕ್ಷತ್ರಪರ ಪ್ರಭಾವವೂ ಕಾಲಕ್ರಮೇಣ ನಶಿಸಲು ಮುಂಬಯಿಯು ಹಗಲನ್ನು ಕಳೆದು ರಾತ್ರಿಯಲ್ಲಿ ಕಾಲಿರಿಸಿತು. ಮುಂದೆ ಕ್ರಿಸ್ತ ಶಕ ಏಳನೇ ಶತಮಾನದ ವರೆಗೆ ಮುಂಬಯಿ ನಗರ ಸಾಮಾನ್ಯ ಚಟುವಟಿಕೆಯನ್ನಷ್ಟೆ ನಡೆಸಿತು. ಆಗ ಚಾಳುಕ್ಯರು ಇಲ್ಲಿ ರಾಜ್ಯಭಾರ ನಡೆಸಿದರು.

ಹೆಸರುವಾಸಿಯಾದ ರೇವು

ರಾಷ್ಟ್ರಕೂಟರೂ ಗುರ್ಜರರೂ ಪಶ್ಚಿಮ ಕರಾವಳಿಯ ಬಗ್ಗೆ ಸ್ಪರ್ಧೆಯಿಂದ ಹೊಡೆದಾಡಿಕೊಂಡು ಮುಂಬಯಿನಗರವನ್ನು ಕೈವಶಪಡಿಸಿಕೊಳ್ಳಲು ಸಾಹಸಪಟ್ಟರು. ಈ ಜಗಳದಲ್ಲಿ ರಾಷ್ಟ್ರಕೂಟರ ಕೈ ಮೇಲಾಗಿ ಅವರಿಗೆ ಕೊಂಕಣ ತೀರದ ಅಧಿಕಾರದೊರೆಯಿತು. ಸಹಜವಾಗಿ ಮುಂಬಯಿಯು ಅವರ ಅಧೀನವಾಯಿತು.

ಇವತ್ತು ಮುಂಬಯಿಯ ನಿವಾಸಿಗಳೂ ಅಲ್ಲಿಗೆ ತೆರಳಿದ ಸಂದರ್ಶಕರೂ ಕೇವಲ ವಿಹಾರಸ್ಥಾನವೆಂದು ಹತ್ತಿರದ ಎಲಿಫೆಂಟ ದ್ವೀಪಕ್ಕೆ ಹೋಗುತ್ತಾರೆ: ಅಲ್ಲೀಗ ಇಪ್ಪತ್ತು—ಮೂವತ್ತು ಮಂದಿ ಜನರಾದರೂ ಇದ್ದಾರೋ ಇಲ್ಲವೊ! ಆದರೆ ಒಂದುಕಾಲದಲ್ಲಿ ಮುಂಬಯಿ ಬಂದರವೆಂದರೆಯೇ ಎಲಿಫೆಂಟ! ಎರಡು ಬೆಟ್ಟಗಳು ತಲೆಯೆತ್ತಿ ನಿಂತಿರುವ ಈ ದ್ವೀಪವು ಮೌರ್ಯರಿಂದ ಚಾಳುಕ್ಯರ ವರೆಗಿನ ಅವಧಿಯಲ್ಲಿ ಪುರಿದ್ವೀಪವೆಂಬ ಹೆಸರಿನಿಂದ ಬಂದರವಾಗಿ ವ್ಯಾಪಾರ ನಡೆಸುತ್ತಿದ್ದಿತು

ಈಗ ಮುಂಬಯಿ ನಗರವಾಗಿ ಕಂಗೊಳಿಸುವ ಭೂಪ್ರದೇಶದಲ್ಲಿ ಹುಟ್ಟಿದ ಮೊದಲನೆಯ ನಗರವೇ ಮಾಹಿಕಾವತಿ—ಅಥವಾ ಇಂದಿನ ಮಾಹಿಂ! ಸಪ್ತದ್ವೀಪ ಸಮುದಾಯದ ಮಧ್ಯ ಪ್ರದೇಶದಲ್ಲಿದ್ದು ಈ ನಗರವು ಮೀನು ವ್ಯಾಪಾರವನ್ನು ಹೇರಳವಾಗಿ ನಡೆಸಿತು. ಈಗಲೂ ಮೀನುಗಾರಿಕೆಗೆ ಮಾಹಿಂ ಹೆಸರುವಾಸಿಯಾಗಿದೆ.

ಮಾಹಿಕಾವತಿಯನ್ನು ದೇವಗಿರಿಯ ಯಾದವ ಅರಸನಾದ ಭೀಮನು ಕಟ್ಟಿಸಿದನು. ಅಲ್ಲಾವುದ್ದೀನ ಖಿಲ್ಜಿಯು ೧೨೯೪ರಲ್ಲಿ ದಕ್ಷಿಣದ ಮೇಲೆ ದಾಳಿ ನಡೆಸಿದ ಬಳಿಕ ಭೀಮನಿಂದ ರಚಿಸಲಾದ ಈ ನಗರವು ಕ್ರಮೇಣ ವಿಶೇಷ ಪ್ರಾಮುಖ್ಯತೆಯನ್ನು ಪಡೆಯಿತು; ಆಸುಪಾಸಿನ ಪ್ರದೇಶಗಳಲ್ಲಿ ಚಟುವಟಿಕೆ ಹೆಚ್ಚಿಕೊಳ್ಳುವಷ್ಟು ಈ ನಗರವು ವೃದ್ಧಿಯನ್ನು ಹೊಂದಿತು.

ಗುಜರಾಥಿನಿಂದ ಮುಸ್ಲಿಂ ದಳಗಳು ದಕ್ಷಿಣಕ್ಕೆ ದಂಡೆತ್ತಿ ಬಂದು ೧೩೪೮ರಲ್ಲಿ ಮಾಹಿಕಾವತಿಯನ್ನು ದೇವಗಿರಿಯ ಯಾದವರ ಕೈಯಿಂದ ಸೆಳೆದುಕೊಂಡವು. ೧೫೩೪ನೇ ಇಸವಿಯಲ್ಲಿ ಸುಲ್ತಾನ ಬಹಾದುರನೆಂಬ ಅರಸನು ಪೋರ್ಚುಗೀಜರ ಬಲವಂತಿಕೆಯ ಪರಿಣಾಮವಾಗಿ ಸಪ್ತದ್ವೀಪ ಸಮುದಾಯವಾದ ಮುಂಬಯಿಯನ್ನು ಅವರಿಗೆ ಬಿಟ್ಟು ಕೊಟ್ಟನು.

ಬ್ರಿಟಿಷರ ಕೈಯಲ್ಲಿ

ಪೋರ್ಚುಗೀಜರ ಬೆನ್ನಿಗೆ ಭಾರತದಲ್ಲಿ ವ್ಯಾಪಾರಕ್ಕಾಗಿ ಬಂದಿದ್ದ ಬ್ರಿಟಿಷರಿಗೆ ಮುಂಬಯಿ ನಗರದ ಮೇಲೆ ಕಣ್ಣು ಬಿದ್ದು, ೧೬೨೬ರಲ್ಲಿ ಕಂಪೆನಿಯವರು ಕ್ರಾಮ್ ವೆಲ್‌ಗೆ ಈ ದ್ವೀಪಗಳನ್ನು ಕ್ರಯಕ್ಕೆ ಕೊಂಡುಕೊಳ್ಳಬೇಕೆಂದು ಒತ್ತಾಯಿಸಿದರು. ಆದರೆ ಈ ಪ್ರಯತ್ನ ಸಫಲವಾಗಲಿಲ್ಲ. ಹನ್ನೊಂದು ವರ್ಷಗಳ ತರುವಾಯ ಮಾತ್ರ ಪೋರ್ಚುಗೀಜ ರಾಜಕುಮಾರಿ ಇನ್ ಫಾಂಟಾ ಕೆಥರೀನಳನ್ನು ಬ್ರಿಟನಿನ ಅರಸನಾದ ಇಮ್ಮಡಿ ಚಾರ್ಲ್ಸ್ ಕೈ ಹಿಡಿದಾಗ ಅಳಿಯನಿಗೆ ವರದಕ್ಷಿಣೆಯ ರೂಪದಲ್ಲಿ ಪೋರ್ಚುಗೀಜ್ ಪ್ರಭುತ್ವವು ಮುಂಬಯಿಯನ್ನು ಬಿಟ್ಟು ಕೊಟ್ಟಿತು.

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: **ಉಡುಪಿ**, ದ. ಭಾರತ.] [ಸ್ಥಾಪನೆ: ೧೯೩೫.

ಇದುವೇ ಪಾಲಿಸಿದಾರರಲ್ಲಿ ವಿಶ್ವಾಸವನ್ನು ಹುಟ್ಟಿಸುವ ಹೆಸರು.

ಅಲ್ಲದೆ ಸ್ಥಾಪಿತವಾದಂದಿನಿಂದಲೂ ಬೋನಸು ಹಂಚಿದ ಕಂಪೆನಿ.

ವಿಮೆ ಇಳಿಸಲು ಅಥವಾ ಪ್ರತಿನಿಧಿಸಲು ಅಪೇಕ್ಷಿಸುವವರು ವಿವರಕ್ಕಾಗಿ ಬರೆಯಿರಿ.

T. R. A. PAI, Managing Director,

THE CANARA MUTUAL ASSURANCE COMPANY, LTD.

Head Office: **UDIPI**, S. India.] [Estd: 1935.

CHIEF AGENTS:

THE COMMERCIAL CORPORATION OF INDIA LTD.,

UDIPI, S. India.



ಅದಮಾರು ಮಠಾಧೀಶರ ಪರ್ಯಾಯ

ದ್ವೈತ ತತ್ತ್ವ ಜ್ಞಾನದ ಪೀಠದಲ್ಲಿ ವೈಭವಯುಕ್ತ ಉತ್ಸವ



ಪರ್ಯಾಯ ಪೀಠವೇರಿರುವ
ಶ್ರೀಮದದಮಾರು ಮಠಾಧೀಶರಾದ
ಶ್ರೀಮದ್ವಿಬುಧೇಶ ತೀರ್ಥ ಶ್ರೀಪಾದಂಗಳವರು



ಪರ್ಯಾಯ ಪೀಠದಿಂದ ಇಳಿದ
ಫಲಿಮಾರು ಮಠಾಧಿಪತಿಗಳಾದ
ಶ್ರೀಮದ್ರಘುವಲ್ಲಭ ತೀರ್ಥ ಶ್ರೀಪಾದಂಗಳವರು

ಇದೇ ೧೮ನೇ ಜನವರಿಯಂದು ಉಡುಪಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಪರ್ಯಾಯ ಮಹೋತ್ಸವವು ಪರಂಪರೆಯಂತೆ ನಡೆಯಿತು. ಫಲಿಮಾರು ಮಠದ ಶ್ರೀಮದ್ರಘುವಲ್ಲಭತೀರ್ಥ ಶ್ರೀಪಾದಂಗಳವರಿಂದ ಶ್ರೀಮದದಮಾರು ಮಠಾಧೀಶರಾದ ಶ್ರೀಮದ್ವಿಬುಧೇಶ ತೀರ್ಥ ಶ್ರೀಪಾದಂಗಳವರು ರುಕ್ಮಿಣೀಕರಾರ್ಚಿತ ಶ್ರೀಕೃಷ್ಣಪರಮಾತ್ಮನನ್ನು ಎರಡು ವರ್ಷಗಳವರೆಗೆ ಪೂಜಾವಿಧಿಗಳಿಂದ ಸೇವಿಸುವ ಅಧಿಕಾರವನ್ನು ವಹಿಸಿಕೊಂಡರು.

ಉಡುಪಿಯ ಕುರಿತು ಅನೇಕ ಮಹಾನುಭಾವರು ಅನೇಕ ರೀತಿಯ ಉದ್ಗಾರಗಳನ್ನು ಹೊರಡಿಸಿದ್ದಾರೆ. ಕರ್ನಾಟಕದ ಶ್ರೇಷ್ಠ ಬರೆಹಗಾರರಾದ ದಿವಂಗತ ಕೊರಡ್ಕಲ್ ಶ್ರೀನಿವಾಸರಾಯರು "ಉಡುಪಿ-ಎಷ್ಟು ಚಿಕ್ಕದಾದ ಹೆಸರು! ಆದರೂ ಎಷ್ಟು ಮುದ್ದು!" ಎಂದಿದ್ದರು.

ಮಾಧ್ವ ತತ್ವ ಜ್ಞಾನ

ಅಖಿಲ ಭಾರತ ಮಾಧ್ವ ಮಹಾಮಂಡಳದ ಅಧ್ಯಕ್ಷರಾದ ಪೇಜಾವರ ಮಠಾಧೀಶ ಶ್ರೀಮದ್ವಿಶ್ವೇಶ ತೀರ್ಥ ಶ್ರೀಪಾದಂಗಳವರು ಉಡುಪಿಯನ್ನು ಆರೋಗ್ಯಧಾಮದೊಡನೆ ಹೋಲಿಸಿದ್ದಾರೆ— "ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶ್ರೀ ಕೃಷ್ಣ ಮಂದಿರವು ಉಡುಪಿಯಲ್ಲಿರುವ ಆಸ್ಪತ್ರೆ. ದೈಹಿಕ ಆರೋಗ್ಯಕ್ಕಲ್ಲ— ಮಾನಸಿಕ ಹಾಗು ಆತ್ಮಿಕ ಆರೋಗ್ಯಲಾಭಕ್ಕಾಗಿ ಈ ಮಂದಿರವಿದೆ; ಶ್ರೀ ಮಧ್ವಾಚಾರ್ಯರೇ ಧನ್ವಂತರಿ ವೈದ್ಯನಾಗಿ ಯಾತ್ರಿಕರನ್ನು ಚಿಕಿತ್ಸೆಗೆ ಗುರಿಪಡಿಸುತ್ತಾರೆ. ತಮ್ಮ ತತ್ತ್ವಾಮೃತ ಧಾರೆಯಿಂದ ಆತ್ಮಜಾಡ್ಯವನ್ನು ಪರಿಹರಿಸಿ ಎಲ್ಲರನ್ನೂ ಪುನೀತರನ್ನಾಗಿ ಮಾಡುತ್ತಾರೆ!"

ಮಾಧ್ವತತ್ತ್ವ ಜ್ಞಾನದ ಕೇಂದ್ರವಾದ ಉಡುಪಿಯು ಬಂಗಾಳದಲ್ಲಿ ವೈಷ್ಣವ ಪಂಥವನ್ನು ಪ್ರವರ್ತಿಸಿದ ಶ್ರೀ ಚೈತನ್ಯ ಹಾಗು ಅವರ ಶಿಷ್ಯರ ಯಾತ್ರಾಸ್ಥಳವಾಗಿ ಹಿಂದೆ ಮೆರೆದಿತು; ಕನಕದಾಸ, ಪುರಂದರದಾಸರಂಥ ಕರ್ನಾಟಕದ ಅನುಭಾವಿಗಳು ಇಲ್ಲಿ ದೇವರ ದರ್ಶನಪಡೆದು ಭಕ್ತಿಪಂಥದ ಉತ್ಕರ್ಷಕ್ಕೆ ಕಾಣಿಕೆಯನ್ನಿತ್ತರು; ಮೈಸೂರಿನ ಮುಮ್ಮಡಿ ಕೃಷ್ಣರಾಜರೇ ಮುಂತಾದ ಅರಸರು ಶ್ರೀ ಕೃಷ್ಣ ಪರಮಾತ್ಮನ ಕೈಂಕರ್ಯವನ್ನು ಕೈಗೊಂಡು ಪತ್ತಿ ಉತ್ತಾರಗಳಿತ್ತಿತ್ತರು.

ಅದ್ವೈತ ವಾದಿಗಳಾದ ಸ್ವಾಮಿ ವಿವೇಕಾನಂದರಂಥ ಮಹಾ ಮೇಧಾವಿಗಳು ಸಹ ನೋಡಿದ್ದರೆ ಆಕರ್ಷಿತರಾಗುವಷ್ಟು ಮೇಲ್ಮಟ್ಟದಲ್ಲಿ ಮಾಧ್ವ ತತ್ತ್ವಜ್ಞಾನವನ್ನು ವಿಸ್ತರಿಸಿ ಹೇಳಿದ ಜಯತೀರ್ಥ,ವ್ಯಾಸತೀರ್ಥ ಇವರು ವಿಜಯನಗರದ ಆಸ್ಥಾನದಲ್ಲಿ ವಿದ್ವತ್ಪ್ರತಿಭೆಯನ್ನು ಬೀರಿ ಬೆಳಗಿದ್ದರು. ಆಂಧ್ರದೇಶದಲ್ಲಿಯೂ ಬಂಗಾಳದಲ್ಲಿಯೂ ಸಾರ್ವತ್ರಿಕವಾಗಿ ದಕ್ಷಿಣ ಭಾರತದಲ್ಲಿಯೂ ಮಧ್ವಾಚಾರ್ಯರ ತತ್ತ್ವಜ್ಞಾನವೇ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ವಿಶೇಷ ಕಾರಣವಾಯಿತು.

ಪರ್ಯಾಯ ಪೀಠಾಧಿಪತಿಗಳು

ಉಡುಪಿಯು ಶ್ರೀ ಮಧ್ವಾಚಾರ್ಯರ ವಿಶ್ವಪ್ರಕಾಶದ ದೆಸೆಯಿಂದಲೇ ಹೆಸರುವಾಸಿಯಾಯಿತೆಂಬುದನ್ನು ಕೃತಜ್ಞತೆಯಿಂದ ನಾವೆಲ್ಲರೂ ನೆನೆಯಬಹುದು. ಶ್ರೀ ಮಧ್ವಾಚಾರ್ಯರ ಪರಂಪರೆಯಲ್ಲಿ ಸೋದೆ ಮಠದ ಶ್ರೀ ವಾದಿರಾಜ ಸ್ವಾಮಿಗಳಂಥ ಅನೇಕ ಪುಣ್ಯಾತ್ಮರು ಅವತರಿಸಿದ್ದಾರೆ. ಇಂದಿಗಾದರೂ ಅಷ್ಟ ಮಠಗಳನ್ನು ಅಲಂಕರಿಸಿರುವ ಯತಿವರ್ಯರಲ್ಲಿ ಪ್ರಾಜ್ಞರಿದ್ದಾರೆ; ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬಹಳ ದೂರ ಮುಂದುವರಿದ ಸಾಧಕರೂ ಇದ್ದಾರೆ. ಉಡುಪಿಯನ್ನು ಎಲ್ಲ ಆಸ್ತಿಕರ ದೃಷ್ಟಿಯಲ್ಲಿ ಅತ್ಯಂತ ಪವಿತ್ರ ಕ್ಷೇತ್ರವಾಗಿ ರೂಪಿಸುವುದಕ್ಕೆ ಶ್ರೀ ಕೃಷ್ಣ ಪರಮಾತ್ಮನ ದಿವ್ಯ ಸಾನ್ನಿಧ್ಯದಂತೆ ಧರ್ಮ ಪೀಠಾಧಿಪತಿಗಳ ತಪೋಮಹಿಮೆಯೂ ಕಾರಣವಾಗಿದೆ.

ಪರ್ಯಾಯ ಪೀಠವೇರಿರುವ ಅದಮಾರು ಮಠಾಧೀಶ ಶ್ರೀಮದ್ವಿಬುಧೇಶ ತೀರ್ಥ ಶ್ರೀಪಾದಂಗಳವರು ಉಡುಪಿಯ ಲೌಕಿಕ ವ್ಯವಹಾರದಲ್ಲಿಯೂ ವಿಶೇಷವಾದ ಆಸಕ್ತಿಯನ್ನು ವಹಿಸಿದವರಾಗಿದ್ದಾರೆ. ಅವರು ಪೂರ್ವಾಶ್ರಮದಲ್ಲಿಯೇ ಸಾಕಷ್ಟು ಆಂಗ್ಲ ಶಿಕ್ಷಣವನ್ನು ಸಂಪಾದಿಸಿದ್ದರು; ಸನ್ಯಾಸ ದೀಕ್ಷೆಯನ್ನು ವಹಿಸಿಕೊಂಡ ಬಳಿಕ ಸಂಸ್ಕೃತದಲ್ಲಿ ಸಹ ಪಾಂಡಿತ್ಯ ಸಂಪಾದಿಸಿದ್ದಾರೆ. ಧರ್ಮದ ಮರ್ಮವನ್ನು ಶ್ರೀ ಮಧ್ವಾಚಾರ್ಯರು ಸಾಮಾನ್ಯ ಜನರಿಗೆ ಸುಲಭದಲ್ಲಿ ತಿಳಿಯಪಡಿಸಲು ಸಮರ್ಥರಾದುದರಿಂದಲೇ ಬೌದ್ಧಿಕ ಮಟ್ಟದಲ್ಲಿ ತರ್ಕಕ್ಕೊಂದು ವಿಷಯವಾಗಿ ನಿಂತ ಧರ್ಮವು ಅನುಷ್ಠಾನ ವೇದಾಂತದ ರೂಪದಲ್ಲಿ ವ್ಯಕ್ತವಾಗಲು ಅವಕಾಶವಾಯಿತು. ಇಂದಿನ ಧರ್ಮ ಪೀಠಾಧಿಪತಿಗಳು ಆತ್ಮೋನ್ನತಿಗೆ ದೇಹ ಹಾಗು ಚಿತ್ತ ಸ್ವಾಸ್ಥ್ಯಗಳು ಹೇಗೆ ಆವಶ್ಯಕವೋ ತದ್ರೀತಿ ಆಧ್ಯಾತ್ಮಿಕ ಶ್ರೇಯಸ್ಸಿಗೆ ಲೌಕಿಕ ವ್ಯವಹಾರದಲ್ಲಿ ಸಮುಚಿತ ಆಸಕ್ತಿಯನ್ನು ಜನಸಾಮಾನ್ಯರ ನೆಲೆಯಲ್ಲಿಯಾದರೂ ವಹಿಸುವುದು ಅಗತ್ಯವೆಂದು ಮನಗಂಡಿರುವಂತೆ ಕಾಣುತ್ತದೆ.

ಮನನೀಯ ಕಾರ್ಯ

ಆದುದರಿಂದಲೇ ಸಂಪ್ರದಾಯದಂತೆ ನಡೆದ, ಬಂದಿರುವ ಬ್ರಾಹ್ಮಣ-ಸುವಾಸಿನಿ ಸಂತರ್ಪಣೆ, ಕಾಲೋಚಿತ ಉತ್ಸವಗಳು ಇತ್ಯಾದಿ ಚಟುವಟಿಕೆಗಳೊಡನೆ ಆಧುನಿಕ ವಿದ್ಯಮಾನಗಳಿಗೆ ಒಪ್ಪುವ ಇತರ ಸಾರ್ವಜನಿಕಹಿತದ ಕೆಲಸಗಳನ್ನೂ ನಡೆಸಿಕೊಂಡು ಬರಲು ಮಠಾಧಿಪತಿಗಳು ಮುಂದಾಗುತ್ತಿದ್ದಾರೆ. ಫಲಿಮಾರು ಮಠದ ವೃಂದಾವನಸ್ಥ ಶ್ರೀಮದ್ರಘುಮಾನ್ಯ ತೀರ್ಥ ಶ್ರೀಪಾದಂಗಳವರು ತಮ್ಮ ಮೂಲ ಮಠವಿರುವ ಫಲಿಮಾರಿನಲ್ಲಿ ಒಳ್ಳೆಯ ಶಾಲೆಯನ್ನು ಹಳ್ಳಿಯ ಜನಗಳಿಗೆ ಲೌಕಿಕ ಶಿಕ್ಷಣಕ್ಕೆಂದು ಕಟ್ಟಿಸಿಕೊಟ್ಟರು. ಸೋದೆ ಮಠಾಧೀಶರು ಇನ್ನಂಜೆಯಲ್ಲಿ ಹೈಸ್ಕೂಲನ್ನು ಸ್ಥಾಪಿಸಿದರು. ಅದಮಾರು ಶ್ರೀಗಳವರು ಅದಮಾರಿನಲ್ಲಿ ಹೈಸ್ಕೂಲನ್ನು ನೆಲೆಗೊಳಿಸಲು ನೆರವಿತ್ತರು. ಎಲ್ಲ ಶ್ರೀಗಳವರೂ ಉಡುಪಿಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿಯನ್ನೀಗ ತೋರಿಸುತ್ತಿರುವುದು ಜಾಗೃತ ಪ್ರಜ್ಞೆ ಉದ್ಯೋತಕವೆನ್ನಬಹುದು.

ರಜತ ಪೀಠವು ದ್ವೈತತತ್ತ್ವಜ್ಞಾನ ಕೇಂದ್ರವಾಗಿ ಇನ್ನಷ್ಟು ಮೆರೆಯಬೇಕಾಗಿರುವ ಆವಶ್ಯಕತೆಯನ್ನು ಪೂರೈಸುವ ದಿಸೆಯಲ್ಲಿ ಇಲ್ಲಿಯ ಸಂಸ್ಕೃತ ಮಹಾ ಪಾಠಶಾಲೆಯು ಪ್ರಾರಂಭದ ಹೆಜ್ಜೆ: ಇಲ್ಲೀಗ ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ಜ್ಞಾನ ಶಾಖೆಯ ಅಧ್ಯಯನಕ್ಕೆ ವಿಶೇಷ ಸೌಲಭ್ಯಗಳು ಸಿಗುತ್ತವೆ; ಅಲ್ಲದೆ ಹೈಸ್ಕೂಲು ವಿಭಾಗವು ಸಹ ಈಚೆಗೆ ತೆರೆಯಲ್ಪಟ್ಟಿದೆ. ಈ ಕಾಲೇಜಿಗೊಂದು ಭವ್ಯ ಕಟ್ಟಡವನ್ನು ಒದಗಿಸುವಲ್ಲಿ ತಮ್ಮಂತೆ ಧರ್ಮಪೀಠಾರೂಢರಾಗಿರುವ ಇತರ ಮಠಗಳ ಯತಿವರ್ಯರ ತುಂಬಿದ ಸಹಕಾರವನ್ನೂ ಸಾರ್ವಜನಿಕರ ವಿಶ್ವಾಸ ಮತ್ತು ಪ್ರೋತ್ಸಾಹಗಳನ್ನೂ ಸಂಪಾದಿಸಿ ತಮ್ಮ ಗುರುಗಳು ತೊಡಗಿದ್ದ ಪುಣ್ಯ ಕಾರ್ಯವನ್ನು ಪೂರೈಸಲು ಅಣಿಯಾದವರೂ, ಪೂರೈಸಿ ಕೃತಕೃತ್ಯರಾದವರೂ ಈಗಿನ ಪರ್ಯಾಯ ಶ್ರೀಗಳು! ಅವರು ಈ ಮಹಾ ಪಾಠಶಾಲೆಯ ಗೌರವ ಪ್ರಾಧ್ಯಾಪಕರಾಗಿ ನೇಮಕಗೊಂಡುದು ಅವರ ವಿದ್ವತ್ತಿಗೆ ಸಂದ ಗೌರವ! ಅವರಿಂದ ಅನೇಕ ಸಂಸ್ಥೆಗಳವರೂ ಬಡವರೂ ಉಪಕೃತರಾಗಿದ್ದಾರೆ; ಬೇಡಿ ಬಂದವರು ಸಂತುಷ್ಟರಾಗಿ ಹಿಂತಿ

(೧೦ನೇ ಪುಟ ನೋಡಿರಿ)

In the Court of the District Munsif of Karkala.

O. S. 526/1955

Between

Subraya Bhatta & others .. Plaintiffs.

Thammanna Bhatta and another.. Defendants.

To the 1st Defendant—

Thammanna Bhatta, Son of Appaya alias Krishna Bhatta, residing in Talipadi Village of Mangalore Taluk.

Please take notice that the Plaintiffs have instituted the above suit for recovery of Rs. 748—0—0 due towards mortgage interest and costs of suit etc. and the said suit stands posted to 23—1—1956 for your appearance and that you are at liberty to appear before the said Court at 10 A. M. on the said date and plead your defence, if any, failing which you will be declared exparte and the suit heard and decided in your absence.

P. Ramachandra Rao,
Pleader for Plaintiffs.

Karkal, Dated 12-1-56.

ಹಿಂದೀ ಭಾಷೆಯ ಬಳಕೆಗೆ ಏಕೆ ವಿರೋಧ?

ಇಂಗ್ಲೀಷಿನ ಕೈವಾರಿಗಳು ಸಾಮಾನ್ಯ ಜನರ ಗ್ರಹಣ ಶಕ್ತಿಯನ್ನು ಗಮನಿಸಿದಂತಿಲ್ಲ

ಕಳೆದ ವಾರ ಪುನಃ ನಮ್ಮೆಲ್ಲರ ಗಮನವು "ಕೇಂದ್ರ ಸರಕಾರದ ಅಧಿಕೃತ ಭಾಷೆ" ಯನ್ನು ಅಭಿವೃದ್ಧಿ ಪಡಿಸುವ ವಿಷಯದ ಕಡೆಗೆ ಹರಿಯುವಂತಾಯಿತು. ಮದ್ರಾಸು, ಬೆಂಗಳೂರು ಮುಂತಾದ ದಕ್ಷಿಣ ಭಾರತದ ಪ್ರಮುಖ ನಗರಗಳಿಗೆ ಶ್ರೀ ಬಿ. ಜಿ. ಖೇರರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿರುವ ಅಧಿಕೃತ ಭಾಷಾ ಸಮಿತಿಯು (ಸಾಮಾನ್ಯವಾಗಿ "ಹಿಂದೀ ಸಮಿತಿ" ಎಂದಿದನ್ನು ಕರೆಯಲಾಗುತ್ತದೆ.) ಭೇಟಿಕೊಟ್ಟು ಪ್ರಾಜ್ಞರ ಸಾಕ್ಷಿಗಳನ್ನು ತೆಗೆದು ಕೊಂಡಿತು.

ವಿಷಯದ ಮೇಲೆ ಬೆಳಕು

ಸಮಿತಿಯ ಮುಂದೆ ತನ್ನ ಅಭಿಪ್ರಾಯಗಳನ್ನು ಮಂಡಿಸಿದವರು ವಿಷಯದ ಎಲ್ಲ ಮುಖಗಳ ಮೇಲೂ ಬೆಳಕು ಬೀರುವಂತೆ ವರ್ತಿಸಿದರು. ಕೇಂದ್ರ ಸರಕಾರವು ತನ್ನೆಲ್ಲ ಕೆಲಸಗಳಿಗಾಗಿ ಬಳಸಬಹುದಾದ ಭಾಷೆ, ಸರಕಾರಗಳ ನಡುವೆ ವ್ಯವಹಾರದಲ್ಲಿರಬೇಕಾದ ಭಾಷೆ, ನ್ಯಾಯಾಲಯಗಳು ಅನುಸರಿಸಬೇಕಾದ ಭಾಷೆ, ಸಾರ್ವಜನಿಕ ಸೇವೆಯ ನೌಕರಿಸ್ಥಾನಗಳ ಉಮೇದ್ವಾರ ಪರೀಕ್ಷೆಗಳಲ್ಲಿ ಮಾಧ್ಯಮವಾಗಿ ಬಳಸಬೇಕಾದ ಭಾಷೆ, ಶೈಕ್ಷಣಿಕ ಸಂಸ್ಥೆಗಳಲ್ಲಿ ಮಾಧ್ಯಮವಾಗಿಯೂ ಕಲಿಯಲಿಕ್ಕೆಂದೂ ಬಳಸಬೇಕಾದ ಭಾಷೆ, ಶಬ್ದ ಸಂಪತ್ತಿಯನ್ನು ಹೆಚ್ಚಿಸುವುದಕ್ಕೆ ಕೈಗೊಳ್ಳಬೇಕಾದ ಉಪಾಯ, ಒಂದು ಭಾಷೆಯಿಂದ ಇನ್ನೊಂದಕ್ಕೆ ಹೋಗಲು ಸಮಯ ಮಿತಿ ಇರಬೇಕೇ ಬೇಡವೆ ಎಂಬಿತ್ಯಾದಿ ವಿಷಯ — ಎಲ್ಲವನ್ನೂ ಸ್ಪರ್ಶಿಸುವಂತೆ ಸಾಕ್ಷಿ ನುಡಿಯಲಾಯಿತು.

ಗಡುಚಾದ ಕಾರ್ಯ

ನಿಜವಾಗಿಯೂ ಮೇಲಿನೆಲ್ಲ ವಿಷಯಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಿ ಸರ್ವಸಮ್ಮತ ತೀರ್ಮಾನಕ್ಕೆ ಬರುವುದು ಬಹಳ ಗಡುಚಾದ, ಜಿಗುಟಾದ ಕೆಲಸ. ಸಾಮಾನ್ಯವಾಗಿ ಹಿಂದಿಯನ್ನು ಅಧಿಕೃತ ವ್ಯವಹಾರದ ಭಾಷೆಯಾಗಿ ಕೇಂದ್ರ ಸರಕಾರವು ೧೯೬೫ನೇ ಇಸವಿಯಿಂದಾಚೆಗೆ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬಹುದೆಂದೂ ರಾಜ್ಯ ಸರಕಾರಗಳು ಪರಸ್ಪರ ವ್ಯವಹಾರಕ್ಕಾಗಿ ಹಿಂದಿಯನ್ನೆ ಮಾಧ್ಯಮವಾಗಿ ಬಳಸಬಹುದೆಂದೂ ಹೆಚ್ಚಿನವರು ರಾಜ್ಯ ಘಟನೆಯ ಸೂತ್ರಗಳ ಮೇಲಿಂದ ತೀರ್ಮಾನಕ್ಕೆ ಬಂದಿದ್ದರು. ಆದರೆ ದಕ್ಷಿಣದಲ್ಲಿ ಹಿಂದಿಯನ್ನು ಇಷ್ಟು ತೀವ್ರವಾಗಿ ಬಳಸುವ ಬಗ್ಗೆ ಪ್ರಬಲ ವಿರೋಧವೆದ್ದಿದೆ. ಘಟನೆಯಲ್ಲಿ ಅವಧಿಮಿತಿಯನ್ನು ಹಾಕಲಾಗಿದೆ ಎನ್ನುವುದು ಸರಿಯಲ್ಲ ಎಂದು ಅಭಿಪ್ರಾಯ ಪಡುವವರಿಂದಹಿಡಿದು, ಹಾಗೆಲ್ಲಿಯಾದರೂ ಅವಧಿ ನಿರ್ಬಂಧ ಹಾಕಿರುವುದೇ ನಿಜವಾದರೆ ಘಟನೆಗೆ ತಿದ್ದುಪಡಿಮಾಡಿ ನಿರ್ಬಂಧವನ್ನು ತೆಗೆದು ಹಾಕಬೇಕೆನ್ನುವ ವರೆಗೆ ವಿರೋಧವುಹೆಚ್ಚಿದೆ.

ವಿರೋಧದ ಹೇತು

ಇಷ್ಟು ಹೆಚ್ಚಿನ ವಿರೋಧವು ಹುಟ್ಟುವುದಕ್ಕೆ ಕಾರಣಗಳೇನು? ಈ ಸಮಸ್ಯೆಗೆ ಅನೇಕ ಮುಖಗಳಿವೆ— ಒಂದು ರೀತಿಯಲ್ಲಿ ವಿಮರ್ಶಿಸಿದರೆ ಹಿಂದೀ ಭಾಷೆಯ ಪ್ರೇಮಿಗಳ ಅತಿರೇಕ ವರ್ತನೆಯು ದಾಕ್ಷಿಣಾತ್ಯರ ಮನನೋಯಿಸಿತೆಂದು ಹೇಳಬಹುದು. ಅವರು ಹಿಂದಿಯನ್ನು "ರಾಷ್ಟ್ರ ಭಾಷೆ"ಯಾಗಿ ಘಟಣೆಯು ಮನ್ನಿಸಿದೆಯೆಂದು ಸಾರಹತ್ತಿದರು. ಹಿಂದಿಯು ಸಾಮಾನ್ಯ ಪ್ರಾದೇಶಿಕ ಭಾಷೆ ಎಂಬ ವಾಸ್ತವಾಂಶವನ್ನು ಹೀಗೆ ಮರೆಯಲ್ಲಿಟ್ಟು ಬೇರೆ ಪ್ರಾದೇಶಿಕ ಭಾಷೆಗಳನ್ನು ಅಗೌರವಕ್ಕೆ ತಳ್ಳಲು ಹವಣಿಸಿದರು. ಹಿಂದಿಯು ಆರ್ಯ ಭಾಷೆ ಎಂಬ ಭಾವನೆಯೂ ಕೆಲವರಿಂದ ಪ್ರಚಾರಗೊಂಡು ದ್ರಾವಿಡ ಭಾಷೆಗಳ ಅಳಿವು ಹಿಂದಿಯ ದೆಸೆಯಿಂದ ಸಮೀಪವಾಗುತ್ತಿದೆ ಎಂಬ ಭಯವು ದಕ್ಷಿಣದಲ್ಲಿ ಹುಟ್ಟಲು ಇದೂ ಒಂದು ಕಾರಣವಾಯಿತು.

ನಿಜ ಸಂಗತಿಗಳು

ಭಾವನಾತ್ಮಕವಾದ ಮೇಲಿನ ಹಿನ್ನೆಲೆಯನ್ನು ಬಿಟ್ಟು ವಾಸ್ತವಾಂಶಗಳನ್ನು ಲೆಕ್ಕಕ್ಕೆ ತೆಗೆದು ಕೊಂಡರೆ—ನಾವು ಎಷ್ಟು ಭಾಷೆಗಳನ್ನು ಕಲಿಯೋಣ?— ಎಂಬುದೇ ಮುಖ್ಯ ಸಮಸ್ಯೆಯಾಗಿ ಪರಿಣಮಿಸುತ್ತದೆ. ಹಿಂದಿಯ ಪ್ರಚಾರಕ್ಕೆ ಅಥವಾ ಬಳಕೆಗೆ ವಿರೋಧ ದಕ್ಷಿಣದಲ್ಲಿದೆ ಎಂಬುದಕ್ಕೆ ವ್ಯಾವಹಾರಿಕ ಮಟ್ಟದಲ್ಲಿ ಎತ್ತಲ್ಪಡುವ ಈ ಪ್ರಶ್ನೆಯೂ ಒಂದು ಕಾರಣ. ನಾವು ಪ್ರಾದೇಶಿಕ (ಅಥವಾ ಮಾತೃ) ಭಾಷೆಗಳನ್ನು ಬಿಟ್ಟು ಬಾಳುವಂತಿವೆಯೆ? ಹಿಂದಿಯನ್ನು ಯಾರ ಮೇಲಾದರೂ ಹೇರುವುದಿಲ್ಲ ಎನ್ನುವವರೂ ರಾಜ್ಯ ಘಟನೆಯಲ್ಲಿ ನಮೂದಿಸಲಾದ ೧೪ ಭಾಷೆಗಳೂ ಭಾರತದ "ರಾಷ್ಟ್ರ ಭಾಷೆ"ಗಳೆಂದು ಸಾರಿದ ಪ್ರಧಾನ ಮಂತ್ರಿಗಳೂ ಎಲ್ಲ ಪ್ರಾದೇಶಿಕ ಭಾಷೆಗಳ ಅಂಗೋಪಾಂಗಗಳ ಸಮುಚಿತ ಬೆಳವಣಿಗೆಗೆ ಪ್ರೋತ್ಸಾಹ ಕೊಡುವುದು ಸರಕಾರದ ಕರ್ತವ್ಯ ಎಂದು ಒಪ್ಪುತ್ತಾರೆ; ನಿಜ. ಪ್ರಾದೇಶಿಕ ಭಾಷೆಗಳನ್ನು ಮೂಲೆಗುಂಪು ಮಾಡುವ ಇಚ್ಛೆ ಯಾರಿಗೂ ಇದ್ದಂತಿಲ್ಲ. ಆದರೆ ಹಿಂದಿಯು ಪ್ರಬಲವಾದರೆ ಪ್ರಾದೇಶಿಕ ಭಾಷೆಗಳು ಮೂಲೆಗುಂಪಾಗಲಾರವೆ?

ಪ್ರಾದೇಶಿಕ ಭಾಷೆಗಳಿಗೆ ಅಡ್ಡಿ

ಭಾರತದ ವಿಶಿಷ್ಟ, ರಾಜಕೀಯ ಸ್ವರೂಪವನ್ನು ಗಮನಿಸಿದರೆ ಈ ಫೆಡರಲ್ ಮಾದರಿಯ—ಅಂದರೆ ಕೇಂದ್ರಕ್ಕೆ ಎಲ್ಲ ಪ್ರದೇಶಗಳ ಮೇಲೆ ಸಾರ್ವಭೌಮಾಧಿಕಾರವಿರುವ—ಸರಕಾರದಲ್ಲಿ ಅದು ತನ್ನ ಅಧಿಕೃತ ಭಾಷೆ ಎಂದು ಯಾವುದನ್ನು ಅಂಗೀಕರಿಸುತ್ತದೊ ಆ ಭಾಷೆಯೇ ಪ್ರಾಮುಖ್ಯವನ್ನು ಹೊಂದುತ್ತದೆ; ಮತ್ತು ಸಕಲ ಭಾರತೀಯರೂ ತಮ್ಮ ಪ್ರಾದೇಶಿಕ ಭಾಷೆಗಳೇನೇ ಇರಲಿ, ಅವನ್ನು ತೊರೆದು ಆ ಭಾಷೆಯ ಹಿಂದೆ ಓಡ ಬೇಕಾಗುತ್ತದೆ. ಭಾರತಕ್ಕೆಲ್ಲ ಒಂದೇ ನಾಗರಿಕತ್ವವಿರುವುದರಿಂದ ಮತ್ತು ರಾಜ್ಯಗಳನ್ನು ಪುನರ್ಘಟಿಸಿದ ಬಳಿಕವೂ—ದಾಟಿ ಹೋಗಬೇಕೆಂದಲ್ಲಿ ಹೋಗಿ, ಭಾರತದೊಳಗೆ ನೆಲೆಸಲೂ ವ್ಯವಹಾರವನ್ನು ಪ್ರಾರಂಭಿಸಲೂ ನೌಕರಿಯಲ್ಲಿ ಸೇರಿಕೊಳ್ಳಲೂ ಯಾವುದೇ ಅಭ್ಯಂತರವಿಲ್ಲವಾದ ದೆಸೆಯಿಂದ ಎಲ್ಲೆಡೆಯಲ್ಲೂ ವ್ಯವಹರಿಸಬಹುದಾದ ಸಾಮಾನ್ಯ ಭಾಷೆಯೊಂದು ನಮಗೆ ಅತ್ಯವಶ್ಯವೆನಿಸುತ್ತದೆ. ಆಗ ಕೇಂದ್ರ ಸರಕಾರದ ಅಧಿಕೃತ ಭಾಷೆಯೇ ವಾಸ್ತವದಲ್ಲಿ ರಾಷ್ಟ್ರ ಭಾಷೆಯಾಗಿ ಪರಿಣಮಿಸುತ್ತದೆ ಎಂದೆನ್ನಬಹುದು.

ಕೇಂದ್ರದ ಭಾಷೆಗೆ ಮನ್ನಣೆ

ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದರೆ ಕಳೆದ ಇನ್ನೂರು ವರ್ಷಗಳ ಇಂಗ್ಲ ಆಳ್ವಿಕೆಯ ಹಿನ್ನೆಲೆಯಲ್ಲಿ ನಾವು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಮರೆತು ರಾಷ್ಟ್ರ ಭಾಷೆಯೆಂದು ಹೇಳಿಕೊಳ್ಳಲ್ಪಡದಿದ್ದರೂ ಆ ಸ್ಥಾನವನ್ನು ಪಡೆದಂತಿದ್ದ ಇಂಗ್ಲ ಭಾಷೆಯ ಹಿಂದೆ ಓಡುವ ಅಭ್ಯಾಸವನ್ನು ನಾವು ಇನ್ನು ಮುಂದೆಯೂ ಊರ್ಜಿತದಲ್ಲಿಡುವುದು ಅವಶ್ಯವೆನಿಸುತ್ತದೆ. ನಮಗೆ ಹಿಂದಿ ಬೇಡ; ಅಥವಾ ಇಷ್ಟು ಬೇಗ ಬೇಡ — ಎನ್ನುತ್ತಾ ಇಂಗ್ಲಿಷೇ ಇರಲಿ ಎನ್ನುವವರ ವಾದಕ್ಕೆ ಸಮರ್ಥನೆ ದೊರೆತರೆ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಅವಕಾಶ ಸಿಗುವುದೆಂದು ಭಾವಿಸುವುದು ಶುದ್ಧ ಬೆಪ್ಪುತನ. ಇಷ್ಟರ ವರೆಗಿನ ನಮ್ಮ ಅನುಭವದಿಂದಲೇ ಇದನ್ನು ಮನಗಾಣಬಹುದು ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗೆ ಹಿಂದಿಯಾಗಲೀ ಇಂಗ್ಲಿಷಾಗಲೀ— ಕೇಂದ್ರದ ವ್ಯವಹಾರ ಭಾಷೆ ಎಂದು ಯಾವುದು ಮನ್ನಣೆ ಪಡೆಯುತ್ತದೊ ಅದರಿಂದ ಆತಂಕ ಉಂಟಾಗುವುದು ತಪ್ಪದು.

ಆಸೆಯ ಬದಲು ನಿರಾಶೆ

ರಾಜಾಜಿಯಂಥವರು ಪ್ರಾದೇಶಿಕ ಭಾಷೆಗಳನ್ನು ವ್ಯವಹಾರದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಬಳಸಬೇಕೆಂದು ಪ್ರತಿಪಾದಿಸುತ್ತಾ ಬಂದಿದ್ದರೂ ಮೊನ್ನೆ ಸಮಿತಿಯ ಮುಂದೆ ಸಾಕ್ಷಿ ಹೇಳುವಾಗ ಇಂಗ್ಲಿಷನ್ನು ಕೆಲವು ದಶಕಗಳ ವರೆಗೆ ಮುಂದರಿಸುವ ಆವಶ್ಯಕತೆಯನ್ನೆ ಪ್ರತಿಪಾದಿಸಿದರು. ಮೈಸೂರು ಸರಕಾರವು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಮಾಧ್ಯಮವಾಗಿಡುವುದಕ್ಕೆ ವಿರೋಧವನ್ನು ಸೂಚಿಸಿತು. ನ್ಯಾಯಾಲಯಗಳಲ್ಲಿ ಅಪ್ರಬುದ್ಧವಾದ ಹಿಂದಿಯ ಬದಲು

ಭವ್ಯ ಶುದ್ಧ ಸೌರಭ.
ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.
ಮೈಸೂರು ಗಂಧದ ಎಣ್ಣೆ
ಅಪ್ಪಟವಾದ ಗಂಧದ ಎಣ್ಣೆ.
ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.
ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

THE BOMBAY LIFE ASSURANCE Co., Ltd.
Excellent Bonuses !
1954 VALUATION.
Whole Life .... Rs. 19/- per 1000/-per year
Endowment .... Rs. 15/- per 1000/- per year.
Record Business: Over Rs. 5 Crores.
It pays you to consult for Representation or Insurance:-
KOCHIKAR BROTHERS, LTD.,
CHIEF AGENTS, UDIPI.
or any of their offices at:-
Bangalore, Coimbatore, Kozhikode, Madura, Mangalore and Trivandrum.

ಕಮ್ಯುನಿಸ್ಟರು ಎದುರಿಸುತ್ತಿರುವ ದ್ವಂದ್ವ

ಟೀಕೆಯ ಆಯುಧ ನಿರುಪಯೋಗಿಯಾಗಿದೆ

ಸೂಕ್ಷ್ಮವಾದ ಅರ್ಥ ವ್ಯತ್ಯಾಸಗಳನ್ನು ಸಹ ಸ್ಪಷ್ಟವಾಗಿ ವ್ಯಕ್ತಪಡಿಸಬಲ್ಲ ಶಬ್ದ ಸಂಪತ್ತಿರುವ ಇಂಗ್ಲಿಷನ್ನೇ ಉಳಿಸಬೇಕೆಂದು ಅನೇಕ ಮಹನೀಯರು ಒತ್ತಿ ಹೇಳಿದರು. ಇವೆಲ್ಲವನ್ನು ನೋಡಿದರೆ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಯ ಆಶೆ ಕಟ್ಟಿಕೊಳ್ಳುವುದರಲ್ಲಿ ಅರ್ಥವಿಲ್ಲವೆಂದೆನಿಸುತ್ತದೆ. ನಾವು ನಮ್ಮ ಭಾಷೆಯಲ್ಲಿ ಭಾವನೆಗಳನ್ನು ಹೇಳಿಕೊಳ್ಳಲು ಸಮರ್ಥರಿಲ್ಲ—ಇಂಗ್ಲಿಷೊಂದೇ ಅದಕ್ಕೆ ಸಾಧನ ಎಂದೆನ್ನುವಂಥ ಬುದ್ಧಿವಂತರಾದ ದಡ್ಡರ ನೇತೃತ್ವದಲ್ಲಿ ಜನತೆಯು ಸುಖಿಸಬೇಕಾಗಿದೆ. ಇದು ನಿಜಕ್ಕೂ ಶೋಚನೀಯವಾದ ವಿಷಯ.

ಉಕ್ಕಿನ ಕಡಲೆ—ಇಂಗ್ಲಿಷು

—ಇರಲಿ, ನಾವು ರಾಜ್ಯ ಘಟನೆಯಲ್ಲಿ ಅಡಕವಾಗಿರುವ ಫೆಡರಲ್ ತತ್ತ್ವಕ್ಕೆ ಕಟ್ಟು ಬಿದ್ದು ಪ್ರಾದೇಶಿಕ ಭಾಷೆಯ ದುರವಸ್ಥೆಯನ್ನು ನೆನೆದು ಕಣ್ಣೀರು ಸುರಿಸುವುದನ್ನು ಬಿಟ್ಟುಬಿಡೋಣ! ಹಿಂದಿ–ಇಂಗ್ಲಿಷ್ ತಿಕ್ಕಾಟದತ್ತ ಮಾತ್ರ ಗಮನ ಹರಿಸೋಣ! ಆಗ ನಾವೇನು ಅಭಿಪ್ರಾಯಕ್ಕೆ ಬರುವುದು ಸಮಂಜಸವಾದೀತು? ೧ಾಜಾಜಿಯವರು ಎಲ್ಲ ಸುಶಿಕ್ಷಿತರೂ ಇಂಗ್ಲಿಷಿನಲ್ಲಿ ಪಾಂಡಿತ್ಯ ಸಂಪಾದಿಸಿದ್ದಾರೆಂದು ವಾದಿಸುತ್ತಾರೆ. ಆದರೆ ಇವರ ದೃಷ್ಟಿಯಲ್ಲಿರುವ ಭಾರತೀಯರೆಷ್ಟು? ಈ ಸಂಖ್ಯೆ ನೂರಕ್ಕೆ ಎರಡು-ಮೂರರಷ್ಟಾದರೂ ಇರಬಹುದೆ? ಸಾಮಾನ್ಯ ವಿದ್ಯಾಭ್ಯಾಸವನ್ನು ಹೊಂದಿರಬಹುದಾದ ಬೇರೆ ೧೪% ಮಂದಿಗೆ ಎಂದಿನಂತೆ ಇಂದೂ ಸಹ ಆಂಗ್ಲ ಭಾಷೆಯು ತಿಳಿವಳಿಕೆಗೆ ಕಠಿಣವಾಗಿಯೇ ಉಳಿದಿದೆ. ನಾವು ಮುಂದೆಯೂ ಜನಸಾಮಾನ್ಯರ ಪಾಲಿಗೆ ಪಾಶ್ಚಾತ್ಯ ವಿಜ್ಞಾನದ ಭಂಡಾರವನ್ನೊಡೆಯುವ ಶಕ್ತಿ ನೀಡಲೆಂದು ಈ ಉಕ್ಕಿನ ಕಡಲೆಯನ್ನು ಉಣಗೊಡುವುದು ಹಿತವಾದೀತೆ? ಇಂಗ್ಲಿಷನ್ನು ಉಳಿಸೋಣ ಎನ್ನುವವರು ಇತ್ತ ಲಕ್ಷ್ಯ ಹರಿಸಿದಂತಿಲ್ಲ.

ಹಿಂದಿಯೇ ಇರಲಿ

ಕೇಂದ್ರಸರಕಾರಕ್ಕೆ ಅಧಿಕೃತಭಾಷೆಯೊಂದು ಬೇಕೆಂಬುದು ನಿರ್ವಿವಾದವಾದ ವಿಷಯವಾಗಿರುವಾಗ ನಾವು ಹಿಂದಿಯನ್ನೇ

(೮ನೇ ಪುಟ ನೋಡಿರಿ)

ನಮ್ಮ ದೇಶವು ಸ್ವಾತಂತ್ರ್ಯವನ್ನು ಸಂಪಾದಿಸಿದಂದಿನಿಂದ ಇಂದಿನ ವರೆಗೂ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರುಗಳ ಸಮರ್ಥ ನೇತೃತ್ವದಲ್ಲಿ ಜಗತ್ತಿನಲ್ಲಿಯೇ ವಿಶಿಷ್ಟವಾದ ಧೋರಣೆಯನ್ನು ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಕ್ಷೇತ್ರಗಳಲ್ಲಿ ಅನುಸರಿಸಿಕೊಂಡು ಬಂದಿದೆ. ಅದರ ಟೀಕೆ, ಮಹತ್ವ ಮತ್ತು ಪ್ರಯೋಜನಾಂಶಗಳ ಕುರಿತು ಕೇಳಿ ಬರುತ್ತಿದ್ದ ಟೀಕೆಗಳಲ್ಲಿ ಈಗ ಹೆಚ್ಚಿನವು ಹುರುಳನ್ನೇ ಕಳೆದುಕೊಂಡಿವೆ. ನೆಹರುಗಳ ಧೋರಣೆಯು ದೇಶವನ್ನು ಎಷ್ಟು ಮಾತ್ರಕ್ಕೂ ಉತ್ಕರ್ಷದ ಮತ್ತು ಅಭ್ಯುದಯದ ದಾರಿಯಲ್ಲಿ ಮುನ್ನಡೆಸಲಾರದೆಂದು ಎಳೆಂಟು ವರ್ಷಗಳ ಹಿಂದೆ ಹಾಗು ಕಳೆದ ಮಹಾ ಚುನಾವಣೆಯ ಸಮಯ ನಿಂದಿಸುತ್ತಿದ್ದವರೇ ಈಗ ಇನ್ನೊಂದು ಚುನಾವಣೆಯು ಹತ್ತಿರ ಬಂದಿರುವಾಗ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯು ಹೊಸ್ತಿಲಿನಲ್ಲಿರುವಾಗ ತಮ್ಮ ನಿಲುವು ಮಹತ್ವ ಕಳೆದುಕೊಂಡಿತಲ್ಲ, ಹುಸಿಯಾಯಿತಲ್ಲ – ಎಂದು ಮುಂತಾಗಿ ಗೊಂದಲದಲ್ಲಿ ಬಿದ್ದಂತಿವೆ.

ಪ್ರಜಾಪ್ರಭುತ್ವದ ಶಿಕ್ಷಣ

ಪ್ರಜಾ ಸಮಾಜವಾದಿಗಳೂ ಕಮ್ಯುನಿಸ್ಟರೂ ಮೊದಲಾಗಿ ಕಾಂಗ್ರೆಸಿನ ಪ್ರಬಲ ನಿಂದಕರಾಗಿದ್ದರು. ಅನಂತರ ಸರಕಾರದ ವಿರೋಧಕರಾಗಿದ್ದರು. ಈಗಲೂ ಪ್ರತಿ ಪಕ್ಷಗಳ ನೆಲೆಯಿಂದ ಅವರು ಕಾಂಗ್ರೆಸಿನ ಹುಳುಕುಗಳನ್ನೂ ಲೋಪದೋಷಗಳನ್ನೂ ಎತ್ತಿ ಹೇಳುವುದಕ್ಕೆ ಇರಬಹುದಾದ ಅವಕಾಶಗಳನ್ನು ಕಳೆಯುವುದಿಲ್ಲ. ಆದರೆ ಅಂಥ ಅವಕಾಶಗಳು ಈಗ ಅವರಿಗೆ ಮೊದಲಿನಂತೆ ಧಾರಾಳವಾಗಿ ಸಿಗುತ್ತಿಲ್ಲ. ಆದುದರಿಂದಲೇ ೧೯೪೭ ರಿಂದ ೫೬ನೇ ಅವಧಿಯ ಅನುಭವಗಳ ಕಟುನೆನಪನ್ನು ಅವರು ಈಗ ಜನರಿಗೆ ಮಾಡಿಕೊಡಲು ಹೋಗುತ್ತಿರುವರಲ್ಲದೆ ೧೯೫೭ನೇ ವರ್ಷದ ಕುರಿತು ಮಾತನಾಡುತ್ತಿಲ್ಲ. ಜನರ ಅಭೀಷ್ಟಗಳ ಸಿದ್ಧಿಗೆ ಪ್ರತಿನಿಧಿಸಲ್ಲರುವಂತೆ ಪ್ರಬಲ ಪ್ರತಿಪಕ್ಷದ ಅಭಾವವಿರುವ ಪ್ರಜಾಪ್ರಭುತ್ವ ಪದ್ಧತಿಯು ಸರಿಹೋಗದು ಎಂದು ಹೇಳುವ ಶ್ರೀ ಕೋಟೆ ರಾಮಕೃಷ್ಣ ಶಾಸ್ತ್ರಿಗಳಂಥ ಪ್ರಜಾ ಸಮಾಜವಾದಿ ಧುರೀಣರು ಅಲ್ಲಿ ಎಂಟು ಹತ್ತು ವರ್ಷಗಳನ್ನು ಕಾಲವನ್ನು ಪ್ರಜಾ ಪ್ರಭುತ್ವದ ಬೆಳವಣಿಗೆ ತೆಗೆದುಕೊಂಡಿತು ಎಂಬುದನ್ನು ಮರೆತೇ ಬಿಡುತ್ತಾರೆ–ಬ್ರಿಟಿಶರ ಆನುಭವವೇ ನಮಗೆ ಮಾದರಿಯಾದ ಪಕ್ಷದಲ್ಲಿ ನಮಗಿನ್ನು ಈಗಿನ ನೂರು ಪಾಲಿನಷ್ಟು ಹೆಚ್ಚು ಅವಕಾಶವು ಇದೆ! ಇನ್ನೂ ಕೆಲವು ವರ್ಷಗಳ ತರುವಾಯ ನಮ್ಮ ಪ್ರಜಾ ಪ್ರಭುತ್ವಕ್ಕೆ ಆತಂಕವಾದೀತು! —ಎಷ್ಟು ಸಮಯವೇ ಬೇಕಾದೀತು.

ಮಿಥ್ಯಾರೋಪ ಸಲ್ಲದು

ನೆಹರುಗಳ ಧುರೀಣತ್ವದಲ್ಲಿರುವ ಭಾರತವು ಇಷ್ಟು ವಿಳಂಬವನ್ನು ಎಂದಿಗೂ ಸಹಿಸಲಾರದು–ಪ್ರಜಾಪ್ರಭುತ್ವ ಪದ್ಧತಿಯು ಈಗಿನ ತಲೆಮಾರಿನಲ್ಲಿಯೇ ಜನರಿಗೆ ರೂಢವಾಗಬೇಕೆಂದು ಅವರ ಅಭಿಲಾಷೆ. ಆದುದರಿಂದಲೇ ಸಂಗಡಿಗೆ ಮತದಾನದ ಅಧಿಕಾರ, ಎಲ್ಲರಿಗೂ ವಾಕ್ ಸ್ವಾತಂತ್ರ್ಯ ಮುಂತಾದ ಮೂಲಭೂತ ಅಧಿಕಾರಗಳನ್ನು ನೀಡಿ ಎಲ್ಲರ ವಾದವನ್ನೂ ಕೇಳಿಕೊಳ್ಳುವಷ್ಟು ಸಹನೆಯನ್ನು ನೆಹರು ತೋರಿಸುತ್ತಾ ಬಂದಿದ್ದಾರೆ. ಗೋವೆಯಂಥ ಜ್ವಲಂತ ಪ್ರಶ್ನೆಯಲ್ಲಿ ಸಹ ಅವರು ರಾಷ್ಟ್ರದ ಅಭಿಪ್ರಾಯಕ್ಕೆ— ದೇಶದ ಜನರ ಪ್ರತಿನಿಧಿ ಸ್ಥಾನದಲ್ಲಿರುವ ಸಂಸತ್ತಿನ ಉಭಯ ಸದನಗಳ ಬಹುಮತದ ಬೆಂಬಲದಿಂದ ಕೂಡಿದ ನಿಲುವಿಗೆ— ಅಂಟಿಕೊಂಡಿದ್ದಾರೆ. ಈ ರಾಷ್ಟ್ರೀಯಪ್ರಶ್ನೆಯಲ್ಲಿ ಪ್ರತಿಪಕ್ಷಗಳನ್ನು ವಿಚಾರಿಸಿಲ್ಲ, ಅಥವಾ ಅವರ ಅಭಿಪ್ರಾಯಗಳನ್ನು ಕೇಳಿಕೊಳ್ಳಲಿಲ್ಲ ಎಂದ ಶ್ರೀ ಹುಂಡಿ ವಿಷ್ಣು ಕಾಮತರಂಥ ಮಹನೀಯರು ದೊಡ್ಡ ತಪ್ಪು ಮಾಡಿದ್ದಾರೆ. ಅವರು ಪ್ರತಿಪಾದಿಸುತ್ತಿರುವ ಪ್ರಜಾಪ್ರಭುತ್ವ ಪದ್ಧತಿಯ ಒರೆಗಲ್ಲಿಗೆ ಹಚ್ಚಿದ ಪಕ್ಷದಲ್ಲಿ ಎಂದಿಗೂ ಅವರ ಅಭಿಪ್ರಾಯವೇ ಸರಕಾರದ ಅಥವಾ ರಾಷ್ಟ್ರದ ಅಭಿಪ್ರಾಯವಾಗಿ ಪರಿಣಮಿಸಲೇ ಬೇಕಾದ ಅವಶ್ಯಕತೆ ಇಲ್ಲವೆಂಬುದು ಸ್ಪಷ್ಟ.

ಮೋಸದ ಬಲೆ ಏಕೆ?

ವಾಸ್ತವಾಂಶಗಳನ್ನು ಮನಗಾಣಲು ತಪ್ಪಿ ಸಾಧನೆಗಳನ್ನು ಮರೆಯಲ್ಲಿಟ್ಟು ಅಭಾವಗಳ ಚಿತ್ರವನ್ನೇ ಕಣ್ಣ ಮುಂದೆ ಕಟ್ಟಿ ಅಸಂತುಷ್ಟಿ ಹಾಗು ಕಷ್ಟಸ್ಥಿತಿ ಉದ್ಭವಗಳನ್ನೇ ಧಂಡವಾಳವಾಗಿ ಮಾಡಿಕೊಂಡು ಬದುಕುವ ಪಕ್ಷಗಳಲ್ಲಿ ಜನರಿಗೆ ವಿಶ್ವಾಸ ಉಳಿದೀತು ಹೇಗೆ? ಭಾರತದಂಥ ಸಾವಿರಾರು ಮತದಾರ ಕ್ಷೇತ್ರವನ್ನು ಅವಲೋಕಿಸಿದರೂ— ಶ್ರೀ ಟಿ. ಎ. ಪೈಗಳು ಚುನಾವಣೆಯನ್ನು ಗೆದ್ದು ಬಂದ ನಾಲ್ಕು ವರ್ಷಗಳ ಹಿಂದಿನ ಸ್ಥಿತಿಗೂ ಇಂದಿನ ಸ್ಥಿತಿಗೂ ಅಜಗಜಾಂತರವೆಂದು ಹೇಳುವಷ್ಟಿಲ್ಲದಿದ್ದರೂ ಕಣ್ಣಿಗೆ ಎದ್ದು ತೋರುವಷ್ಟು, ಬಾಳ್ವೆಯಲ್ಲಿಯ ಪಾದ ಪ್ರಗತಿಯು ಕೈಗೂಡಿದೆ. ಇವನ್ನು ಮತದಾರರ ಮುಂದೆಯೇ ಇಲ್ಲಗಳೆಯುವ ಅಥವಾ ಕಡೆಗಣಿಸಿ ಬಿಡುವ ಮಹನೀಯರ ಎದೆಗಾರಿಕೆಯನ್ನು ಮೆಚ್ಚಬೇಕೆ? ಅಥವಾ ಅವಿವೇಕಕ್ಕಾಗಿ ಕನಿಕರಪಡಬೇಕೆ? ನಾವು ಹೇಳುತ್ತಿರುವುದೇನೆಂದರೆ—ಇದರಲ್ಲಿ ಹೆಚ್ಚಿನದಕ್ಕೆ ಧನ್ಯವಾದ ಬೇಕಾಗಿಯಿಲ್ಲ ಎಂದು ಬೇರೆ ಕಾರಣಾಂತರ ಅಂತರಾತ್ಮಕ್ಕೆ ಗೊತ್ತಿರುವುದೆಂದು ನಾವು ಭಾವಿಸುವುದಾದರೆ ರೂಢಿಗೆ ಬಂದಿರುವ ವರದಿಗಳು ಇದನ್ನು ಪುಷ್ಟೀಕರಿಸುತ್ತವೆ. ಪ್ರತಿಪಕ್ಷಗಳಲ್ಲಿಯ ಒಡಕು ಹಾಗು ಮನದೊಳಗಿನಲ್ಲಿ ಮೂಡಿ ಕೊಂಡಿರುವ ಭಿನ್ನಭಾವಗಳು ಇದಕ್ಕೆ ಪ್ರತ್ಯಕ್ಷ ನಿದರ್ಶನ.

ಕಮ್ಯುನಿಸ್ಟರ ದ್ವಂದ್ವ

ಡಾ. ಲೋಹಿಯರ ಕತೆ ಎಲ್ಲರಿಗೂ ಸಾಕಷ್ಟು ಗೊತ್ತಿದೆ—ಪ್ರಜಾ ಸಮಾಜವಾದಿ ಪಕ್ಷವನ್ನು ದುರ್ಬಲಗೊಳಿಸಲು ಅವರಿತ್ತ ಭಿನ್ನಾಭಿಪ್ರಾಯದ ಹೊಡೆತವು ಆ ಪಕ್ಷದ ಕಿಬ್ಬೊಟ್ಟೆಗೆ ಬಿದ್ದ ಪೆಟ್ಟು! ಈಗ ಕಮ್ಯುನಿಸ್ಟರಲ್ಲೂ ಮತಭೇದಗಳು ತೀವ್ರವಾಗಿವೆಯೆಂದು ವರದಿಯಾಗಿದೆ. ಮಧುರೆಯಲ್ಲಿ ಎರಡು ವರ್ಷಗಳ ಹಿಂದೆ ಅವರೊಂದು ಪರಿಷತ್ತನ್ನು ನೆರೆಯಿಸಿದ್ದರು. ಅಲ್ಲಿ ತಮ್ಮ ಪಕ್ಷದ ನಾಯಕತ್ವ ಮತ್ತು ಜನಪ್ರಿಯತೆಯ ಬಗ್ಗೆ ವಿಶೇಷ ಆತ್ಮವಿಶ್ವಾಸವನ್ನು ಅವರು ತಳೆದಿದ್ದರು. ಆರ್ಥಿಕ ರಂಗದ ಕೆಲವು ಲಕ್ಷಣಗಳನ್ನು ಕಂಡು ರಾಜಕೀಯ ವಿಪ್ಲವದ ದಾರಿಯು ಸುಗಮವಾಗುವುದೆಂದು ಅವರು ಭಾವಿಸಿದ್ದರಂತೆ! ಆದರೆ ಈಗ ತಮ್ಮ ಎಣಿಕೆ ತಪ್ಪಾಗಿವೆ ಎಂದು ಅವರಲ್ಲಿ ಅನೇಕರಿಗೆ ತೋರತೊಡಗಿದೆಯಂತೆ! ನೆಹರು ಸರಕಾರಕ್ಕೆ ಬೆಂಬಲವನ್ನು ಎರಡನೇ ಪಂಚ ವಾರ್ಷಿಕ

(೮ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿವೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ರಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ ದ. ಕನ್ನಡ.

ಯೂನಿವರ್ಸಲ್ ತರದ ಬೇಂಡ್ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸುಗಳೂ ಬಲ್ಲಿದರೆಯೂ ಗರ ಜಗಿಯೂ ದೂರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, **UDIPI**, S. KANARA.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೯-೧-'೫೬	೧೯

ವಿಷಾದಕರ ತೀರ್ಮಾನ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಜೆಗಳನ್ನು- ಮುಖ್ಯವಾಗಿ ಕಾಸರಗೋಡು ತಾಲೂಕಿನ ನಾಗರಿಕರನ್ನು- ಬಹಳವಾಗಿ ದುಃಖಕ್ಕೀಡುಮಾಡಿರುವ ಸುದ್ದಿಯು ಈಗ ರಾಜಧಾನಿಯಾದ ಹೊಸ ದೆಹಲಿಯಿಂದ ಬಂದಿದೆ. ಕಾಸರಗೋಡು ತಾಲೂಕನ್ನು ಇಡಿಯಾಗಿಯೇ ಫಜಲಾಲಿ ಆಯೋಗದಲ್ಲಿ ಹೇಳಿದ ಪ್ರಕಾರ ನೂತನ ಕೇರಳ ರಾಜ್ಯದಲ್ಲಿ ಸೇರಿಸಿ ಬಿಡಬೇಕೆಂದು ಭಾರತ ಸರಕಾರ ತೀರ್ಮಾನಿಸಿದೆ ಎಂದು ತಿಳಿಯಲೂ ಅದನ್ನು ಜನತೆಗೆ ತಿಳಿಸಲೂ ನಮಗೆ ಅತ್ಯಂತ ವಿಷಾದವಾಗುತ್ತದೆ. ಭಾರತ ಸರಕಾರದ ತೀರ್ಮಾನಗಳನ್ನು ವ್ಯಕ್ತಪಡಿಸಿದ ಪ್ರಕಟನೆಯು ತಂಟೆಗಳನ್ನು ಬಗೆಹರಿಸಲು ವರಿಷ್ಠರು ಪ್ರಯತ್ನಿಸಿದ ರೀತಿಯನ್ನು ಕುರಿತು ಹೀಗೆ ಹೇಳುತ್ತದೆ— "ರಾಜ್ಯಗಳ ಪುನರ್ಘಟನೆಯ ಹಿಂದಿನ ಹೇತು ಹಾಗು ಉದ್ದೇಶವು ಆಡಳಿತ ದೃಷ್ಟಿಯಲ್ಲಿ ಅಧಿಕ ಸುಗಮವಾದ ಘಟಕಗಳನ್ನು ನಿರ್ಮಿಸುವುದೇ ಆಗಿದೆ; ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಾಚರಣೆಯಲ್ಲಿಳಿಸಲೂ ದೇಶದ ಜನರೆಲ್ಲರ ಕ್ಷೇಮವನ್ನು ಸಾಧಿಸಲೂ ಇದು ನೆರವಾಗಬೇಕೆಂದು ಸರಕಾರದ ಬಯಕೆ. ಆರ್ಥಿಕ ಪುನಾರಚನೆ ಮತ್ತು ಅಭಿವೃದ್ಧಿಯ ಕುರಿತು ರಾಷ್ಟ್ರವು ವಿಶೇಷ ಗಮನ ಕೊಡುವಂತೆ ಹಿತಕರವಾದ ವಾತಾವರಣವನ್ನು ಈ ತೀರ್ಮಾನ ಸೃಷ್ಟಿಸುವುದೆಂದು ಸರಕಾರ ನಂಬುತ್ತದೆ." ಪ್ರಧಾನ ಮಂತ್ರಿ ಶ್ರೀ ನೆಹರುಗಳು ಭಾರತ ಸರಕಾರದ ತೀರ್ಮಾನವನ್ನು ಸರಿಯಾದ ದೃಷ್ಟಿಕೋಣದಿಂದ ನೋಡಬೇಕೆನ್ನುತ್ತಾ ಶಾಂತ ಸಹಕಾರದ ಭಾವನೆಯಿಂದಲೂ ತರ್ಕ ಶುದ್ಧ ನಿಲುಮೆಯಿಂದಲೂ ಸಮಸ್ಯೆಯನ್ನು ವೀಕ್ಷಿಸಬೇಕೆಂದು ಪುನಃ ವಿನಂತಿಸಿದ್ದಾರೆ. ಇದರ ಪ್ರಕಾರವೇ ಆಲೋಚಿಸಿದರೆ— ಕಾಸರಗೋಡಿನ ಕುರಿತು ವರಿಷ್ಠರು ಕೈಗೊಂಡ ನಿರ್ಣಯವು ಎಷ್ಟು ಮಾತ್ರಕ್ಕೂ ನ್ಯಾಯಪರವಾದುದೆಂದು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಹಜೀವನದ ಮನೋಭಾವವನ್ನು ಬಿಟ್ಟುಗೊಟ್ಟು ಕಾಸರಗೋಡು ತಾಲೂಕಿನ ಕುರಿತು ವರಿಷ್ಠರೂ ಭಾರತ ಸರಕಾರವೂ ವಹಿಸಿದ ನಿಲುಮೆಯನ್ನು ನಾವು ಟೀಕಿಸುತ್ತಿಲ್ಲ— ಶಾಂತ ಸಹಜೀವನಕ್ಕೆ ಕೊಡುವ ಮಹತ್ವವನ್ನೆ ವಾಸ್ತವಾಂಶಗಳ ಮನ್ನಣೆಗೆ ಸಹ ನೀಡಬೇಕಿತ್ತೆಂದು ನಮ್ಮ ಅಭಿಪ್ರಾಯ. ಕನ್ನಡಿಗರು ಚಂದ್ರಗಿರಿ ಹೊಳೆಯ ಉತ್ತರ ಭಾಗದ ಮೇಲೆ ತಮ್ಮ ಅಧಿಕಾರವನ್ನು ಮುಂಡಿಸಿದ್ದರು; ಎರಡು ಪಂಚಾಯತುಗಳನ್ನು ಬಿಟ್ಟರೆ ಕಾಸರಗೋಡು ತಾಲೂಕಿನ ಈ ಭಾಗದ ೩೪ ಪಂಚಾಯತುಗಳು ಕರ್ನಾಟಕದಲ್ಲಿ ಸೇರ್ಪಡೆ ಹೊಂದಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದವು; ಆರ್ಥಿಕ ಅಭಿವೃದ್ಧಿ ಮತ್ತು ಆಡಳಿತದ ಅನುಕೂಲತೆ ಎಂದೇನು ಹೇಳಲಾಗಿದೆಯೊ—ಅದು ನೆರವೇರಬೇಕಾದರೆ ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಕಾಸರಗೋಡು ತಾಲೂಕಿನ ಪ್ರದೇಶವನ್ನು ಕರ್ನಾಟಕದಲ್ಲಿಡಬೇಕೆಂದು ಜನರೂ ಸ್ಥಳೀಯ ಧುರೀಣರೂ ಸಾಧಾರವಾಗಿ ವರಿಷ್ಠರ ಮುಂದೆ ಹಾಗು ಇತರ ವಿಧಾನಗಳಿಂದ ಪ್ರತಿಪಾದಿಸಿದ್ದರು. ಕಳೆದ ಹಲವು ದಶಕಗಳಿಂದ ಆಡಳಿತದ ನಿಕಟ ಪರಿಚಯವನ್ನು ಹೊಂದಿದ್ದ ಮದ್ರಾಸು ಸರಕಾರ ಸಹ ಹೊಸದುರ್ಗ ಉಪತಾಲೂಕನ್ನು ಮಾತ್ರ ಕೇರಳಕ್ಕೆ ಸೇರಿಸಿ, ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಕರ್ನಾಟಕದಲ್ಲಿ ಉಳಿಸಬೇಕೆಂದು ಸಲಹೆಯನ್ನು ಮಾಡಿದ್ದಿತು. ಹೀಗೆ ಕಾಸರಗೋಡು ತಾಲೂಕನ್ನು ವಿಭಜಿಸುವುದು ಯಾವ ರೀತಿಯಿಂದಲೂ ಕಷ್ಟಕರವಿರಲಿಲ್ಲ—ಕನ್ನಡ ಮತ್ತು ಮಲೆಯಾಳ ಪ್ರಭಾವಗಳನ್ನು ಸ್ಪಷ್ಟವಾಗಿ ಪ್ರತ್ಯೇಕಿಸುವಂತಿದ್ದ ಮುಖ್ಯ ಹಾಗು ಉಪ ತಾಲೂಕಿನ ಅಸ್ತಿತ್ವವನ್ನು ಗಮನದಲ್ಲಿಟ್ಟುಕೊಂಡಿದ್ದರೆ ತಾಲೂಕನ್ನು ಕನಿಷ್ಟ ಘಟಕವಾಗಿ ಹಿಡಿಯುವ ತತ್ತ್ವಕ್ಕೆ ಮನ್ನಣೆ ಕೊಟ್ಟಂತೆಯೆ ಕನ್ನಡಿಗರ ನ್ಯಾಯವಾದ ಆಕಾಂಕ್ಷೆ ಮತ್ತು ಒತ್ತಾಯಕ್ಕೆ ಅನುಗುಣವಾದ ತೀರ್ಮಾನವನ್ನು ಭಾರತ ಸರಕಾರದ ವರಿಷ್ಠರು ಕೊಡುವುದು ಸಾಧ್ಯವಿದ್ದಿತು. ಹಾಗೇನೂ ಮಾಡದೆ— ಭಾಷಾದೃಷ್ಟಿಯಲ್ಲಿ ಅಲ್ಪಸಂಖ್ಯಾಕರಾಗಿರುವವರಿಗೆ ಕೊಡಲಾಗುವುದೆನ್ನಲಾದ ಸಂರಕ್ಷಣೆಯ ಸುಖವನ್ನು ಅನುಭವಿಸಲು ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಕಾಸರಗೋಡಿನ ಜನರನ್ನು ಬಿಟ್ಟಿರುವುದು ತೀರ ಮನನೋಯಿಸುವ ವಿಷಯವಾಗಿದೆ. ಐತಿಹಾಸಿಕ ಅಂಶಗಳನ್ನೂ ಪ್ರಸ್ತುತ ವಿದ್ಯಮಾನಗಳನ್ನೂ ಕಡೆಗಣಿಸಿ ಕೈಗೊಂಡ ಅವಿವೇಕದ ನಿರ್ಣಯವಿದೆಂದು ಕರೆಯುವಷ್ಟು ಜನರ ಮನಸ್ಸು ಈಗ ಉದ್ವೇಗಗೊಂಡಿದೆ; ತಲ್ಲಣಗೊಂಡಿದೆ. ಭಾವೋದ್ರೇಕಕ್ಕೆ ಬಲಿಬೀಳದೆ ಪ್ರಜಾಸತ್ತೆಯ ಗೌರವವನ್ನು ಕಾಯ್ದುಕೊಳ್ಳಬೇಕು; ಶಾಂತರೀತಿಯಿಂದ ನಡೆದುಕೊಳ್ಳಬೇಕು ಎಂದು ಉಪದೇಶಿಸುವ ವರಿಷ್ಠರು ಜನತೆಯ ಅಭಿಪ್ರಾಯವನ್ನು, ೩೬ರಲ್ಲಿ ೩೪ಗ್ರಾಮ ಪಂಚಾಯತುಗಳು ಸ್ವೀಕರಿಸಿದ ಗೊತ್ತುವಳಿಗಳನ್ನು. ಕಡೆಗಣಿಸಿ ನಡೆದಾಗ ಜನರೇನು ಮಾಡಬೇಕು? ಸರಕಾರದ ಶಕ್ತಿಯು ಜನತಾ ಶಕ್ತಿಯೊಡನೆ ಘರ್ಷಿಸುವ ಈ ಆಯಕಟ್ಟಿನ ಪರಿಸ್ಥಿತಿಯಲ್ಲಿ ಸಂಯಮದ ಪ್ರತಿಜ್ಞೆ ಅಂಟಿಕೊಂಡಿರುವುದು ಎಷ್ಟು ಕಷ್ಟವೆಂದು ನಿಜವಾದ ರಾಷ್ಟ್ರವೀರರೇ ಬಲ್ಲರು! ಇಂಥ ಸತ್ತ್ವಪರೀಕ್ಷೆಯ ಕಾಲವನ್ನು ಭಾರತ ಸರಕಾರವು ಕಾಸರಗೋಡಿನ ಜನರ ಪಾಲಿಗೆ ಒದಗಿಸಿ ಕೊಡಬಾರದೆಂದು ನಾವು ಬಹಳ ಆಶಿಸುತ್ತಿಟ್ಟುಕೊಂಡಿದ್ದೆವು—ಅದೀಗ ಹುಸಿಯಾಗಿದೆ "ಪರಸ್ಪರ ಒಡಂಬಡಿಕೆಯಿಂದ ಇನ್ನು ಮುಂದೆಯೂ ಕೆಲವು ಗಡಿ ತಂಟೆಗಳನ್ನು ಬಗೆಹರಿಸುವ ಸಾಧ್ಯತೆಯಿದೆ" ಎಂದು ಭಾರತ ಸರಕಾರದ ಕಡೆಯಿಂದ ಹೇಳಲಾಗಿದೆ; ಇದನ್ನೆ ನೆಹರುಗಳೂ ಹೇಳಿದ್ದಾರೆ—ಆದರೆ ಕಾಸರಗೋಡಿನ ಕುರಿತು ಒಪ್ಪಂದವಾದೀತೆ ಎಂಬುದು ಸಂಶಯ. ಸಂಸತ್ತಿನಲ್ಲಿರುವ ಸದಸ್ಯರು ನ್ಯಾಯ ದೊರಕಿಸಿ ಕೊಡುವ ಸಂಭವವೂ ವಿರಳ. ರಾಷ್ಟ್ರ ಹಿತದ ವಿಶಾಲ ಚೌಕಟ್ಟಿನಲ್ಲಿ ಕರ್ನಾಟಕದ ನಿಜವಾದ ತುಣುಕೊಂದು ಮಹಾತ್ಯಾಗಕ್ಕೆ ಅಣಿಯಾಗಬೇಕಾಗಿ ಬಂದಿರುವುದು ಪ್ರಜಾಪ್ರಭುತ್ವಕ್ಕೆಂದೂ ಭೂಷಣದ ವಿಷಯವಲ್ಲ— ಕಾಂಗ್ರೆಸಿನ ಹಿರಿಮೆ ಮತ್ತು ನಿಷ್ಪಕ್ಷಪಾತ ದೃಷ್ಟಿಗೆ ಶೋಭಿಸುವ ಸಂಗತಿಯೂ ಇದಲ್ಲ. ಮುಂಬಯಿಯು ಕುರಿತು ಮಾತನಾಡಿದ ನೆಹರುಗಳು ಒಂದು ತೀರ್ಮಾನಕ್ಕೆ ಅದರಿಂದ ಪರಿಣಾಮಗೊಂಡ ಜನರ ಸಹಕಾರ ಅತ್ಯವಶ್ಯವೆಂದಿದ್ದಾರೆ— ಕಾಸರಗೋಡಿಗೂ ಇದನ್ನು ಅನ್ವಯಿಸಬಹುದು. ನಾವು ಕೇರಳಕ್ಕೆ ಹೋಗಲೊಲ್ಲೆವು ಎನ್ನುತ್ತಿರುವ ಜನರನ್ನು ಒತ್ತಾಯದಿಂದ ದಬ್ಬುವ ಈ ತೀರ್ಮಾನ ಎಂದಿಗೂ ಬುದ್ಧಿವಂತಿಕೆಯದಾಗದು.

ಕೇರಳೀಯರಿಗೆ ಕಾಸರಗೋಡು

ಕನ್ನಡ ರಾಜ್ಯದ ಹೆಸರು ಮೈಸೂರು

ಫಜಲಾಲಿ ಆಯೋಗದ ವರದಿಯ ಮೇಲೆ ವ್ಯಕ್ತಪಡಿಸಲಾದ ಅಭಿಪ್ರಾಯಗಳನ್ನು "ಜಾಗರೂಕತೆಯಿಂದಲೂ ಕುತೂಹಲದಿಂದಲೂ ವಿಚಾರಿಸಿದ ಬಳಿಕ" ಭಾರತ ಸರಕಾರವು ಕೆಲವು ನಿರ್ಧಾರಗಳನ್ನು ಕೈಗೊಂಡಿದೆ ಎಂದು ಇದೇ ೧೬ನೇ ದಿನಾಂಕ ಹೊಸ ದೆಹಲಿಯಿಂದ ಸಾರಲಾಯಿತು. ಸಾಮಾನ್ಯವಾಗಿ ವರದಿಯನ್ನು ಅಂಗೀಕರಿಸಲಾಗಿದೆಯೆಂದೂ ಸಮರ್ಥ ಆಡಳಿತ ಘಟಕಗಳ ರಚನೆಯಾಗುವುದು ಸಾಧ್ಯವಿಲ್ಲವೆಂದು ಸರಕಾರಕ್ಕೆ ಮನವರಿಕೆಯಾದ ಪರಿಮಿತ ಪ್ರಸಂಗಗಳಲ್ಲಿ ಮಾತ್ರ ಆಯೋಗದ ವರದಿಗಿಂತ ತುಸು ದೂರ ಸರಿಯಲಾಗಿದೆಯೆಂದೂ ಸರಕಾರದ ಪ್ರಕಟಣೆ ಹೇಳುತ್ತದೆ.

ಕನ್ನಡ ರಾಜ್ಯ—ಮೈಸೂರು

ಭಾರತ ಸರಕಾರದ ತೀರ್ಮಾನದಂತೆ ಕರ್ನಾಟಕ ರಾಜ್ಯವು 'ಮೈಸೂರು' ಎಂಬ ಹೆಸರಿನಿಂದ ಅಸ್ತಿತ್ವಕ್ಕೆ ಬರುತ್ತದೆ. ಇದರಲ್ಲಿ ಕಾಸರಗೋಡು ತಾಲೂಕು ಸೇರುವುದಿಲ್ಲ; ಆ ತಾಲೂಕು ಇಡಿಯಾಗಿ ಕೇರಳದಲ್ಲಿ ಸೇರಿಸಲ್ಪಡುತ್ತದೆ. ಬಳ್ಳಾರಿ ಜಿಲ್ಲೆಯಿಂದ ಆಂಧ್ರಕ್ಕೆ ವರ್ಗಾಯಿಸಬೇಕೆಂದು ಫಜಲಾಲಿ ಆಯೋಗದ ವರದಿಯಲ್ಲಿರುವ ಸೂಚನೆಯ ಬಗ್ಗೆ ಭಾರತ ಸರಕಾರವು ಸಂಬಂಧಿಸಿದ ರಾಜ್ಯ ಸರಕಾರಗಳೊಡನೆ ಪರಾಮರ್ಶೆಯನ್ನು ಈಗ ನಡೆಸುತ್ತಿದೆ; ಆದುದರಿಂದ ಈ ಕುರಿತು ಅಂತಿಮ ತೀರ್ಮಾನವನ್ನು ಹಿಂದಿನಿಂದ ಕೊಡಲಾಗುತ್ತದೆ. ಮಹಾರಾಷ್ಟ್ರೀಯರು ಉತ್ತರ ಕನ್ನಡ ಮತ್ತು ಬೆಳಗಾಂವಿ ಜಿಲ್ಲೆಗಳ ಕೆಲವು ಪ್ರದೇಶಗಳ ಬಗ್ಗೆ ತಮ್ಮ ಹಕ್ಕನ್ನು ಮುಂಡಿಸಿದ್ದರು; ಅದನ್ನು ಭಾರತಸರಕಾರ ಒಪ್ಪಿಕೊಳ್ಳದೆ, ಆಯೋಗದ ವರದಿಯನ್ನೆ ಎತ್ತಿ ಹಿಡಿದು ಈ ಪ್ರದೇಶ ಕರ್ನಾಟಕದಲ್ಲಿ ಉಳಿಯಬೇಕೆಂದೇ ತೀರ್ಮಾನಿಸಿದೆ. ಹೈದರಾಬಾದಿನ ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ಇಡಿಯಾಗಿ ಕರ್ನಾಟಕದಲ್ಲಿ ಸೇರಿಸಬೇಕೆಂಬ ಆಯೋಗದ ಸೂಚನೆಯನ್ನು ಸ್ವಲ್ಪ ಮಟ್ಟಿಗೆ ತಿದ್ದಿ ಅಲಂಪುರ ಮತ್ತು ಗದ್ವಾಲ ತಾಲೂಕುಗಳನ್ನೂ (ರಾಯಚೂರು ಜಿಲ್ಲೆ) ತಾಂಡೂರು ಮತ್ತು ಕೊಡಂಗಲ ತಾಲೂಕುಗಳನ್ನೂ (ಗುಲ್ಬರ್ಗ ಜಿಲ್ಲೆ) ಕರ್ನಾಟಕದಿಂದ ಹೊರತುಪಡಿಸಬೇಕೆಂದು ಹೇಳಿದೆ. ಇದರ ಬದಲಿಗೆಂಬಂತೆ ಬೀದರ ಜಿಲ್ಲೆಯ ಹುಮನಾಬಾದ, ಬೀದರ, ಭಲ್ಕಿ ಮತ್ತು ಸಂತಪುರ ತಾಲೂಕುಗಳನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ನಿರ್ಣಯಿಸಿದೆ.

ರಾಜಪ್ರಮುಖರಿಲ್ಲ

ರಾಜ್ಯರಾಜ್ಯಗಳಲ್ಲಿರುವ ಅಂತಸ್ತಿನ ಭೇದವನ್ನು ತೆಗೆದುಹಾಕಬೇಕೆಂಬ ಆಯೋಗದ ಸೂಚನೆಯನ್ನು ಸರಕಾರ ಅಂಗೀಕರಿಸಿದೆ. ಇನ್ನು ಮುಂದೆ ರಾಜ್ಯಗಳು ಮತ್ತು ಕೇಂದ್ರಾಡಳಿತೆಯ ಪ್ರದೇಶಗಳು—ಎಂಬುದಾಗಿ ಎರಡೇ ಬಗೆಯ ಘಟಕಗಳು ದೇಶದಲ್ಲಿ ಉಳಿಯುತ್ತವೆ. ಕೇಂದ್ರದ ನೇರಾದ ಆಡಳಿತಕ್ಕೆ ಒಳಪಡುವ ಪ್ರದೇಶಗಳ ಜನರಿಗೆ ಪ್ರಭುತ್ವದಲ್ಲಿ ಪ್ರಾತಿನಿಧ್ಯ ಸಿಗುವಂತೆ ಮಾಡುವ ಯೋಗ್ಯ ಕ್ರಮವೀಗ ಪರಿಶೀಲನೆಯಲ್ಲಿದೆ. ರಾಜಪ್ರಮುಖರ ಹುದ್ದೆಯನ್ನು ರದ್ದುಪಡಿಸಬೇಕೆಂಬ ಸೂಚನೆಯನ್ನು ಸಹ ಸರಕಾರವು ಮನ್ನಿಸಿದೆ. ಗಡಿ ತಂಟೆಗಳನ್ನು ಸಂಪೂರ್ಣವಾಗಿ ಈ ವಿಷಯವನ್ನು ಪರಿಶೀಲಿಸಿದ ಫಜಲಾಲಿ ಆಯೋಗದ ಸೂಚನೆಯಂತೆಯೇ ಸಾಮಾನ್ಯವಾಗಿ ತೀರ್ಮಾನಿಸಲಾಗಿದೆ; ಬದಲಾವಣೆಯನ್ನು ಮಾಡಿದ ಸಂಗತಿಗಳಲ್ಲಿ ಪರಸ್ಪರ ಒಪ್ಪಂದವೇ ಮಹತ್ವದ ಪಾತ್ರ ವಹಿಸಿತೆಂದು ಸ್ಪಷ್ಟಪಡಿಸಲಾಗಿದೆ. ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರೆನಿಸುವವರ ಹಿತಾಸಕ್ತಿಗಳ ರಕ್ಷಣೆಯ ಕುರಿತಾಗಿಯೂ ಪ್ರತ್ಯೇಕತೆಯ ಭಾವನೆಯನ್ನು ತಗ್ಗಿಸಿ ರಾಷ್ಟ್ರೀಯ ದೃಷ್ಟಿಕೋಣವನ್ನು ಬೆಳೆಯಿಸಲಿಕ್ಕಾಗಿಯೂ ಫಜಲಾಲಿ ಆಯೋಗ ಮಾಡಿರುವ ಸಿಫಾರಸುಗಳನ್ನು ತತ್ತ್ವಶಃ ಸರಕಾರ ಅನುಮೋದಿಸಿದೆ. ರಾಜ್ಯ ಸರಕಾರಗಳೊಡನೆ ಪರ್ಯಾಲೋಚಿಸಿ ಈ ಸಂಬಂಧದಲ್ಲಿ ಕೊನೆಯದಾಗಿ ವಿವರವಾದ ತೀರ್ಮಾನಕ್ಕೆ ಬರಲಾಗುತ್ತದೆ.

ಪಂಚ ಮಂಡಳಗಳು

ಹೊಸ ರಾಜ್ಯಗಳನ್ನು ಈಗಾಗಲೇ ಸಿದ್ಧಪಡಿಸಲಾಗಿರುವ ಕಾರ್ಯಕ್ರಮ

ಮೂರು ಉಪನ್ಯಾಸಗಳು

ಜನವರಿ 21, 22, 23ರಂದು ಸಾಯಂ ಘಂಟೆ 6ರಿಂದ 7ರ ವರೆಗೆ

ಮುಕುಂದ ನಿವಾಸದಲ್ಲಿ

ಶ್ರೀ ಶಿವರಾಮ ಕಾರಂತರು

ಯಕ್ಷಗಾನ ಕಲೆಯ

ಕುರಿತು ಮಾತನಾಡುವರು. ಯಕ್ಷಗಾನ ಕಲೆಯಲ್ಲಿ ಅಭಿರುಚಿಯುಳ್ಳವರಿಗೆಲ್ಲ ಸ್ವಾಗತ.

ಕರ್ನಾಟಕ ಸಂಘ, ಉಡುಪಿ.

ಪಟ್ಟಿಯಂತೆ ರಚಿಸುವ ಆಶೆಯನ್ನು ಭಾರತ ಸರಕಾರ ಇಟ್ಟುಕೊಂಡಿದೆ. ರಾಜ್ಯಗಳನ್ನು ಹೀಗೆ ನೂತನವಾಗಿ ಪುನರ್ರಚಿಸುವಾಗಲೇ ಪ್ರಾದೇಶಿಕ ಮಂಡಳಿಗಳನ್ನು ಅಸ್ತಿತ್ವದಲ್ಲಿ ತರುವ ತೀರ್ಮಾನವನ್ನು ಭಾರತ ಸರಕಾರ ಮಾಡಿದೆ. ಆರ್ಥಿಕ ಯೋಜನೆ ಮತ್ತು ಪುನರ್ಘಟನೆಯಿಂದ ಉದ್ಭವವಾದ ವಿಷಯಗಳ ಕುರಿತು ಚರ್ಚಿಸಿ ಸಲಹೆಯ ರೂಪದಲ್ಲಿ ಒಪ್ಪಂದಕ್ಕೆ ಬರಲು ಅನುಕೂಲತೆಯನ್ನು ಈ ಮಂಡಳಿಗಳು ಆಯಾ ಪ್ರದೇಶಕ್ಕೆ ಸೇರಿದ ರಾಜ್ಯಗಳಿಗೆ ಕೊಡುವವೆಂದು ಸರಕಾರ ಭಾವಿಸಿದೆ. ರಾಜ್ಯದ ಮೇಲಿನ ವ್ಯಾಮೋಹವೇ ಹೆಚ್ಚಿಕೊಳ್ಳುವ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಟ್ಟು ಅಂತಾರಾಜ್ಯ ಸೌಹಾರ್ದವನ್ನೂ ರಾಷ್ಟ್ರೀಯ ಭಾವನೆಯನ್ನೂ ಊರ್ಜಿತಗೊಳಿಸಲು ಇದರಿಂದ ಸಹಾಯವಾದೀತೆಂದು ಭಾರತ ಸರಕಾರ ನಂಬಿದೆ. ಉತ್ತರ ಪ್ರಾದೇಶಿಕ ಮಂಡಳವು ಈಗಿನ ಪಂಜಾಬು, ಪೆಪ್ಸು, ಹಿಮಾಚಲ ಪ್ರದೇಶ, ಡೆಲ್ಲಿ ಮತ್ತು ರಾಜಸ್ಥಾನಗಳನ್ನೊಳಗೊಳ್ಳುತ್ತದೆ. ಕೇಂದ್ರ ಪ್ರಾದೇಶಿಕ ಮಂಡಳವು ಉತ್ತರ ಪ್ರದೇಶ ಮತ್ತು ಸೂಚಿತ ಮಧ್ಯ ಪ್ರದೇಶಗಳನ್ನೊಳಗೊಳ್ಳುತ್ತದೆ. ಪೂರ್ವ ಪ್ರಾದೇಶಿಕ ಮಂಡಳಿಯು ಬಂಗಾಳ, ಬಿಹಾರ, ಒರಿಸ್ಸಾ, ಅಸ್ಸಾಂ, ಈಶಾನ್ಯ ಗಡಿ ಪ್ರದೇಶಯ, ತ್ರಿಪುರ ಮತ್ತು ಮಣಿಪುರಗಳನ್ನೊಳಗೊಳ್ಳುತ್ತದೆ. ಪಶ್ಚಿಮ ಪ್ರಾದೇಶಿಕ ಮಂಡಳವು ಸೂಚಿತ ಮಹಾರಾಷ್ಟ್ರ, ಗುಜರಾಥ ಮತ್ತು ಮುಂಬಯಿ ನಗರವನ್ನೊಳಗೊಳ್ಳುತ್ತದೆ; ದಕ್ಷಿಣ ಪ್ರಾದೇಶಿಕ ಮಂಡಲವು ಆಂಧ್ರ, ಮದ್ರಾಸು, ಕೇರಳ, ಮೈಸೂರು ಮತ್ತು ವಿಭಜನೆಯ ಬಳಿಕ ಉಳಿಯುವ ಹೈದರಾಬಾದನ್ನು ಒಳಗೊಳ್ಳುತ್ತದೆ. ಒಬ್ಬನೇ ರಾಜ್ಯಪಾಲನನ್ನೂ ಒಂದೇ ಉಚ್ಚ ನ್ಯಾಯಸ್ಥಾನವನ್ನೂ ಸಾಮಾನ್ಯ ಸಾರ್ವಜನಿಕ ನೌಕರಿ ಮಂಡಳವನ್ನೂ ಈ ಪ್ರದೇಶಗಳಲ್ಲಿ ಕೆಲವಕ್ಕಾದರೂ ನೇಮಿಸಿ, ಆಯಾ ಪ್ರದೇಶಕ್ಕೆ ಸೇರಿದ ರಾಜ್ಯಗಳ ಬಾಂಧವ್ಯವು ಮಧುರವಾಗಿರುವಂತೆ ಮಾಡುವ ವಿಚಾರ ಭಾರತ ಸರಕಾರದ ಪರಿಶೀಲನೆಯಲ್ಲಿದೆ.

ಉಡುಪಿ ಡಿ. ಮುಂ. ಕೋರ್ಟಿನಲ್ಲಿ

O. S. No. 547/1955.

... ನಾರಾಯಣ ರಾವ್, ರಿಸೀವರ್–ವಾದಿ

ಮತ್ತು

ಚೆನ್ನಮ್ಮ ಶೆಡ್ತಿ. ಬೊಮ್ಮ ಸೆಟ್ರ ಹೆಂಡ್ತಿ ... ತಾಲೂಕು ಪೆರ್ಡೂರು ಗ್ರಾಮದ ವಂ... — ಪ್ರತಿವಾದಿಳು.

ಸದ್ರಿ ಪ್ರತಿವಾದಿಳಿಗೆ ಈ ಮೂಲಕ ತಿಳಿಸಪಡಿಸುವುದೇನಂದ್ರೆ—

ಓಂತಿಬೆಟ್ಟು ಹೊನ್ನಯ್ಯ ಹೆಗ್ಡೆ ವಗೈರೆರ ಕುಟುಂಬ ಬಾಬ್ತು ಪ್ರತಿವಾದಿಳು ಚಾಲಗೇಣಿ ಅನುಭವಿಸಿ ಬರುವ ಆಸ್ತಿಗಳ ಕಳೆದ ...ಸಂ|ರದ ಬಾಗಾಯ್ತು ಜಯ ಸಂ|ರದ ಮಕ್ತೇನ ಗೇಣಿ, ಬಡ್ಡಿ ಕೂಡಾ ರುಪ್ಯಾ 10—10—3 ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಮೇಲಿನ ದಾವೆಯು ತಾ. 8—1 1956ಕ್ಕೆ ಇಟ್ಟಿರುತ್ತದೆ. ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಸದ್ರಿ ದಿವಸ ಹಗಲು ಗಂಟೆ 11ಕ್ಕೆ ಈ ಕೋರ್ಟ ಮುಂದೆ ಹಾಜರಾಗಿ ತನ್ನ ಉದಾಸರಣೆ ಹೇಳ್ಳು ಮಾಡಲಿಕ್ಕೆ ತಪ್ಪಿದ್ರೆ ಆವಳ ಗೈರುಹಾಜರಿಯಲ್ಲಿ ಈ ವ್ಯಾಜ್ಯ ತೀರ್ಮಾನಿಸಲ್ಪಡುವದೆ.

B. S. Hegde.
Vakil for Plff.

Udipi, 16—1—'56.

(೧ನೇ ಪುಟದಿಂದ)

ಯೋಜನೆಗೆ ಸಹಕಾರವನ್ನು ಈಗ ಕೊಡದಿದ್ದರೆ ಎರಡನೇ ಮಹಾ ಯುದ್ಧವನ್ನು ಜನತೆಯ ಯುದ್ಧವೆಂದು ತಾವು ಕರೆದಾಗ ಭಾರತೀಯ ನಾಗರಿಕರು ಎಷ್ಟು ಅಪಹಾಸ್ಯಕರ ರೀತಿಯಲ್ಲಿ ತಮ್ಮನ್ನು ಹಂಗಿಸಿದರೋ ಮತ್ತು ಉಪೇಕ್ಷಿಸಿದರೋ ಅಷ್ಟೇ ನಾಚಿಕೆಗೇಡು ದಿನಗಳನ್ನು ಎದುರಿಸಬೇಕಾಗಿ ಬರಬಹುದೆಂದು ಕಮ್ಯೂನಿಸ್ಟರು ಹೆದರಿಕೊಂಡಿರುವರಂತೆ! ಆದುದರಿಂದ ನೆಹರೂಗಳೇ ಬದಲಾಗಿದ್ದಾರೆ— ಎಂಬ ಸುಳ್ಳು ಕಲ್ಪನೆಯ ಪಲ್ಲವಿಯ ನೆರಳಿನಲ್ಲಿ ಆಶ್ರಯ ಪಡೆದು ಪಕ್ಷದ ಹೆಸರನ್ನಾದರೂ ಉಳಿಸಿಕೊಳ್ಳುವ ಪೇಚಾಟದಲ್ಲಿ ಅವರು ಈಗ ಮಗ್ನರಾಗಿದ್ದಾರೆ.

ಮೋಸ್ಕೋದ ಪ್ರೇರಣೆ

ರಶ್ಯದ ನಾಯಕರು- ಸ್ಟಾಲಿನ್ನರ ಮರಣಾ ನಂತರ— ಅನುಸರಿಸುತ್ತಾ ಬಂದ ನಿಲುಮೆಯ ಪರಿಣಾಮವಾಗಿಯೇ ಭಾರತದ ಕಮ್ಯೂನಿಸ್ಟರು ತಮ್ಮ ಬಣ್ಣ ಬದಲಾಯಿಸಬೇಕಾಗಿ ಬಂದಿದೆ ಎಂದು ಪ್ರಾಜ್ಞರು ಅಭಿಪ್ರಾಯ ಪಡುತ್ತಾರೆ. ಕಮ್ಯೂನಿಸಮಿನ ಇಬ್ಬರು ಮಹಾಪುರೋಹಿತರು ಈಚೆಗೆ ಭಾರತಕ್ಕೆ ಭೇಟಿಯನ್ನಿತ್ತು ಅಂತಾರಾಷ್ಟ್ರೀಯಕ್ಷೇತ್ರದಲ್ಲಿಶಾಂತಿ ಸ್ಥಾಪನೆಗೆ ಭಾರತವು ನಡೆಸಿದ ಕೆಲಸಗಳನ್ನು ಬಹಿರಂಗವಾಗಿ ಮುಕ್ತಕಂಠದಿಂದ ಹೊಗಳಿಯೂ ರಾಷ್ಟ್ರದ ಪುನರುಜ್ಜೀವನಕ್ಕಾಗಿ ಕೈಗೊಂಡ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವಮೂಲಕವೂ ನೆಹರೂಗಳಿಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ರಶ್ಯದ ಪತ್ರಿಕೆಗಳಲ್ಲಿ ಭಾರತ ಸರಕಾರದ ಸಾಧನೆಗಳ ಪ್ರಶಂಸೆಯೇ ತುಂಬಿದೆ. ಆದುದರಿಂದ ಇಲ್ಲಿಯ ಕಮ್ಯೂನಿಸ್ಟರು ಭಾರತವು ಶಾಂತಿವಿರೋಧಿ ಎಂದು ಸಾರುತ್ತಿರುವುದರಲ್ಲಾಗಲಿ ಪ್ರತಿಗಾಮಿಯಾಗಿದೆ ಎಂದು ನಿಂದಿಸುತ್ತಿರುವದರಲ್ಲಾಗಲಿ ಇನ್ನೂ ಸುಖ ಕಾಣುವುದಕ್ಕೆ ಸಾಧ್ಯವಾಗಿಲ್ಲ. ವಿದೇಶಗಳ ಅವಲಂಬನೆಯನ್ನು ತಗ್ಗಿಸಲು ದೇಶದೊಳಗೆ ಮಹೋದ್ಯಮಗಳನ್ನು ಕೈಗೊಳ್ಳುವುದಕ್ಕೂ ಭೂಸುಧಾರಣೆಯ ಹೆಜ್ಜೆಗಳನ್ನು ಮುಂದಿಡುವುದಕ್ಕೂ ಕಾರ್ಮಿಕರ ಕ್ಷೇಮ ಮತ್ತು ಕಲ್ಯಾಣಗಳನ್ನು ಸಾಧಿಸುವುದಕ್ಕೂ ಈಗ ಕ್ರಮಬದ್ಧವಾದ ವ್ಯವಸ್ಥೆಗಳನ್ನು ಸರಕಾರದ ಕಡೆಯಿಂದ ಮಾಡಲಾಗುತ್ತಿದೆ. ಇದನ್ನು ಪ್ರಗತಿಶೀಲ ಎಂದು ಕಮ್ಯೂನಿಸ್ಟರು ಕರೆಯಲೇ ಬೇಕಾಗಿ ಬಂದಿದೆ. ಇದನ್ನು ಒಪ್ಪದ ಶ್ರೀ ಪಿ. ಸುಂದರಯ್ಯರಂಥ ಧುರೀಣರನ್ನು "ನೆಹರುಗಳು ತಮ್ಮ ಧೋರಣೆಯಿಂದ ವಿಮುಖರಾಗುವಂತೆ ಪ್ರತಿಗಾಮಿಗಳು ಮಾಡಬಹುದು" ಎಂಬ ಎಚ್ಚರಿಕೆಯನ್ನಿತ್ತು ಶ್ರೀ ಘೋಷರು ಹೆದರಿಸಲು ತೊಡಗಿದ್ದಾರೆ.

ವೈಶಿಷ್ಟ್ಯ ರಕ್ಷಣೆ

ಭಾರತವು ಎಲ್ಲ ರಾಷ್ಟ್ರಗಳೊಡನೆಯೂ ಮೈತ್ರಿಯನ್ನು ಕಾಪಾಡಿಕೊಂಡು ಬರುವ ಮತ್ತು ಶಾಂತರೀತಿಯಲ್ಲಿ ಕ್ರಾಂತಿಯನ್ನು ಸಾಧಿಸುವ ಧೋರಣೆಗೆ ಮೊದಲಿನಿಂದಲೂ ಅಂಟಿಕೊಂಡಿದೆ. ಸ್ವಪ್ರತಿಷ್ಠೆಗೆ ಧಕ್ಕೆ ಬಾರದಂತೆ ಎಲ್ಲರೊಡನೆ ಹೊಂದಿಕೊಂಡು ಹೋಗಲಿಕ್ಕೂ ಶರ್ತಗಳವಿಷಕೊಂಡಿಯಿಲ್ಲದಉದಾರ ಸಹಾಯಗಳನ್ನು ಸ್ವಪ್ರಯೋಜನ ದೃಷ್ಟಿಯಿಂದ ಸ್ವೀಕರಿಸಲಿಕ್ಕೂ ಅದು ಹವಣಿಸಿದೆ. ಕಮ್ಯೂನಿಸ್ಟರು ಅಥವಾ ಬೇರೆ ಪಕ್ಷಗಳು ಟೀಕಿಸುತ್ತಿವೆಎಂದು ಕಾಮನ್ ವೆಲ್ತ್ ಕೂಟದಿಂದ ಹೊರಬೀಳಲು ಭಾರತವು ಮುಂದಾಗಿಲ್ಲ; ಪಾಶ್ಚಾತ್ಯ ರಾಷ್ಟ್ರಗಳಿಗೆ ಅಪ್ರಿಯವಾಗಬಹುದೆಂಬುದಕ್ಕಾಗಿ ರಶ್ಯದ ತಾಂತ್ರಿಕ ಸಹಾಯವನ್ನು ಸ್ವೀಕರಿಸುವುದಕ್ಕಾಗಲೀ ಸಾಮ್ಯವಾದಿ ರಾಷ್ಟ್ರಗಳೊಡನೆ ರಾಜಕೀಯ ಆರ್ಥಿಕಹಾಗು ವಾಣಿಜ್ಯ ಸಂಬಂಧಗಳನ್ನು ಬೆಳೆಗೊಳಿಸುವುದಕ್ಕಾಗಲೀ ಹಿಂಜರಿದಿಲ್ಲ. ಕಮ್ಯೂನಿಸ್ಟರು ಹಿಂಸೆಯನ್ನು ತ್ಯಜಿಸುವಷ್ಟು ನೈತಿಕ ಶಕ್ತಿಯನ್ನು ಇನ್ನೂ ತೋರ್ಪಡಿಸದೆ ಇರುವಾಗ ಕಾಂಗ್ರೆಸು ಅಹಿಂಸೆಯ ಅವಲಂಬನೆಯನ್ನು ತೊರೆಯದೆ ರಕ್ತ ರಹಿತ ಕ್ರಾಂತಿಯನ್ನು ಆರ್ಥಿಕ ರಂಗದಲ್ಲಿ ಮಾಡಲು ಸಿದ್ಧವಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಸಾಮಾನ್ಯ ಒಪ್ಪಿಗೆಯನ್ನು ಸಾರ್ವತ್ರಿಕವಾಗಿ ವ್ಯಕ್ತಪಡಿಸಿರುವುದೇ ಇದಕ್ಕೆ ನಿದರ್ಶನ. ಇದು ಪ್ರಜಾಪ್ರಭುತ್ವದ ಸಾಧನೆಯಾಗಿದ್ದರೆ, ರಾಷ್ಟ್ರದ ಪ್ರಗತಿಯಲ್ಲದಿದ್ದರೆ, ಸ್ವಾತಂತ್ರ್ಯದ ವೈಶಿಷ್ಟ್ಯವಾಗಿ ಪ್ರತಿಪಕ್ಷಗಳು ಏನನ್ನು ಭಾವಿಸಿವೆಯೋ — ಜನರಿಗೆ ಹೇಳಲಿಯವು. ಹೌದುಎಂದಾದರೆ, ಸರಕಾರದ ನಿಂದೆಗಿಂತ ಸಹಕಾರವೇ ಇಂದಿನ ಅವಶ್ಯಕತೆಯಾಗುತ್ತದೆ.

ಅಳಿಯಕಟ್ಟಿನ ಪ್ರತಿನಿಧಿಗಳ ಸಭೆ

ಇದೇ ತಾ. 21ರಂದು ಮಹಾಸಭೆ.

ಇದೇ ತಾ. 14ನೇ ಶನಿವಾರ ಸಂಜೆ ಅಳಿಯ ಕಟ್ಟಿನ ಪ್ರತಿನಿಧಿಗಳ ಸಭೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ, ಜಿಲ್ಲಾ ಕಾಂಗ್ರೆಸು ಕಮಿಟಿಯ ಕಚೇರಿಯಲ್ಲಿ ನಡೆಯಿತು. ಅಧ್ಯಕ್ಷರು ಹಿಂದುಕೋಡಿನ ವಾರೀಸುಪಕ್ಕಿನ ಮಸೂದೆಗೆ, ಜಿಲ್ಲೆಯ ಅಳಿಯ ಕಟ್ಟಿನವರನ್ನೂ ಸೇರಿಸಿ, ಇಲ್ಲಿಯ ರಾಜ್ಯಸಭೆಯಲ್ಲಿ ಅದು ಮಂಜೂರಾಗಿದೆ. ಇದೆ, ಫೆಬ್ರವರಿ ತಿಂಗಳ ಲೋಕ ಸಭೆಯ ಅಧಿವೇಶನದ ಮುಂದೆ ಅದು ಬರಲಿದೆ. ಅಳಿಯ ಕಟ್ಟನ್ನು ಈಗ ಹಿಂದೂ ಕೋಡಿಗೆ ಸೇರಿಸಿರುವ ವಿಧಾನ ಮತ್ತು ಅದು ಹೀಗೆ ಸೇರಿಸಲ್ಪಟ್ಟರೆ, ಹೆಚ್ಚಿನ ಜನರಿಗೆ ಸಮಾಧಾನವಾಗಬಹುದೆಂಬ ಕುರಿತು ಅಭಿಪ್ರಾಯ ಮೀಯಬೇಕೆಂದು ಕೇಳಿಕೊಂಡರು.

ಶ್ರೀಗಳಾದ ಬಿ. ಬಿ. ಶೆಟ್ಟಿ, ಎ. ಶಂಕರ ಆಳ್ವ, ಬಿ. ಮಂಜಯ್ಯ ಹೆಗ್ಡೆ, ಕೆ. ಕೆ. ಶೆಟ್ಟಿ, ಉಗ್ಗಪ್ಪ ಶೆಟ್ಟಿ, ಎಚ್. ಮಹಾಬಲ ರೈ, ಬಿ. ದೇವಪ್ಪ ಆಳ್ವ, ಆರ್. ಲಕ್ಷ್ಮಪ್ಪ ರೈ, ಕೊಂತಾಡಿ ವೆಂಕ ರೈ, ಕೆ. ಸಂಜೀವ ಶೆಟ್ಟಿ, ಬಡೂರು ಜಗನ್ನಾಥ ರೈ, ಕೆ. ಆರ್. ಆಚಾರ್, ಪಿ. ಯಂ. ಹೆಗ್ಡೆ, ಡಾ. ನಾಗಪ್ಪ ಆಳ್ವ, ಮೊದಲಾದವರು ತಮ್ಮ ಅಭಿಪ್ರಾಯಗಳನ್ನಿತ್ತರು. ದೀರ್ಘವಾದ ವಿಚಾರ ವಿನಿಮಯ ನಡೆಯಿತು.

ಕೊನೆಗೆ ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ, ನಿರ್ಧಾರಕ್ಕೆ ಬರುವರೆ ಇದೇ ತಾ. 21ನೇ ಶನಿವಾರ ಅಪರಾಹ್ನ ಘಂಟೆ 3 ಕ್ಕೆ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸಭಾಸದನದಲ್ಲಿ ಜಿಲ್ಲೆಯ ಅಳಿಯ ಕಟ್ಟಿನವರ ಮಹಾಸಭೆಯನ್ನು ಜರಗಿಸಬೇಕಾಗಿಯೂ, ಅದಕ್ಕಾಗಿ ಪ್ರತ್ಯೇಕ ಆಮಂತ್ರಣವೀಯದೆ ಪತ್ರಿಕೆಗಳ ಮೂಲಕ ಪ್ರಕಟಪಡಿಸಬೇಕೆಂದೂ ನಿರ್ಣಯ ಮಾಡಲಾಯಿತು. ಈ ಸಭೆಯ ವ್ಯವಸ್ಥೆಗಾಗಿ ಸಮಿತಿ ರಚಿಸಲಾಯಿತು.

ಕೆ. ಕೆ. ಶೆಟ್ಟಿ.
ಕಾರ್ಯದರ್ಶಿ,
ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿ.

ಉಡುಪಿ

ಸಂಕ್ರಾಂತಿ ಜಾತ್ರೆಯು— ಶ್ರೀಕೃಷ್ಣ ಮಠದಲ್ಲಿ ತಾ. ೯ರಲ್ಲಿ ಪ್ರಾರಂಭವಾಗಿ 15ರಲ್ಲಿ ಹಗಲು ಮಹಾ ರಥೋತ್ಸವ, ಅವಭೃತ ಸ್ನಾನ ಅನ್ನದಾನಾದಿ ಕಾರ್ಯಕ್ರಮಗಳಿಂದ ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥಸ್ವಾಮಿಗಳವರ ಹಿರಿತನದಲ್ಲಿ ಯಶಸ್ವಿಯಾಗಿ ಜರಗಿತು.

ಬೀಳ್ಕೊಡುವ ಸಮಾರಂಭ— ಉಡುಪಿ ಸರಕಾರಿ ಬುನಾದಿ ತರಬೇತಿ ಶಾಲಾ ವಸತಿಗೃಹದ ಉಪರಕ್ಷಕರಾದ ಶ್ರೀ. ಕೆ. ಸಂಜೀವ ಸುವರ್ಣರು, ಮೂಲ್ಕಿ ಸರಕಾರಿ ಹ್ಯಾಸ್ಕೂಲಿಗೆ ವರ್ಗಾಯಿಸಲ್ಪಟ್ಟುದರಿಂದ ಅವರನ್ನು ಬೀಳ್ಕೊಡುವ ಸಮಾರಂಭವು ತಾ. 14 ರಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯ ಅತಿಥಿಗೆ ಮಾನಪತ್ರ ಅರ್ಪಣೆ, ಸಭಿಕರ ಭಾಷಣಗಳಾದುವು. ಶ್ರೀ ರಾಧಾಕೃಷ್ಣ ರಾಯರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಅಧಮಾರು ಮಠಕ್ಕೆ ಮೈಸೂರಿನ ಆನೆ ಕಾಣಿಕೆ— ಶ್ರೀ ಅಧಮಾರು ಮಠಕ್ಕೆ ಮೈಸೂರು ರಾಜಪ್ರಮುಖರ ಕಡೆಯಿಂದ ಗಂಡಾನೆ ಮರಿಯೊಂದು ತಾ. 10ರಲ್ಲಿ ಉಡುಪಿಗೆ ತರಲ್ಪಟ್ಟಿತು. ವಾದ್ಯಘೋಷ ಮೆರವಣಿಗೆಯಿಂದ ಆನೆ ಮರಿ ಬರುವುದನ್ನು ಸಾವಿರಾರು ಮಂದಿ ನೋಡಿ ಸಂತೋಷಪಟ್ಟರು.

ಕಡಿಯಾಳಿ— ಸ್ಥಳೀಯ ಹಾ. ಪ್ರಾ. ಶಾಲೆಯ ವಿಜಯಬಾಲವೀರ ಮತ್ತು ಮರಿದಳಗಳ ಶಿಬಿರಾಗ್ನಿ ಸಮಾರಂಭವು ತಾ. 12ರಲ್ಲಿ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ವಿ. ವಾಸುದೇವ ಭಟ್ಟರು ಸ್ವಾಗತಭಾಷಣಮಾಡಿದರು. ಶ್ರೀ ಎಸ್. ಸದಾಶಿವ ರಾಯರಿಂದ ವಿರಚಿತವಾದ ಹೊಸ ಯಕ್ಷಗಾನ ಪ್ರಸಂಗ 'ಚತುರ್ಮಹಾರಾಷ್ಟ್ರ ನಾಯಕರ ಕಡಿಯಾಳಿ ಪರಿಷತ್ತು' ಅಭಿನಯಿಸಲ್ಪಟ್ಟಿತು.

ಕೆಲಂಡರ್ ಸ್ವೀಕಾರ

ಶಾರದಾ ಪ್ರೆಸ್, ಮಂಗಳೂರು1 ಕೆ. ಆರ್. ಕೆ. ಶೇಖ್ ದಯಮಂಡ್ ಮಾರ್ಟ್, ಮಂಗಳೂರ 1, ನೆಲ್ಸನ್ ಎಂಡ್ ಕೋ ಚೂಲಾಯಿ, ಮದ್ರಾಸ್ 7, ಮದ್ರಾಸು ಟೈಪ್ ಫೌಂಡ್ರಿ, ಜೋನ್ಸ್‌ಸ್ಟ್ರೀಟ್, ಮದ್ರಾಸು1 ಹಿಂದುಸ್ಥಾನ್ ಪೇಪರ್ ಎಂಡ್ ಸ್ಟೇಶನರಿ ಮಾರ್ಟ್ ಉಡುಪಿ, ಎನ್. ನರಸಿಂಹ ಶೇಟ್, ರಥಬೀದಿ, ಮಂಗಳೂರು1, ಇಂಡಿಯನ್ ಪ್ಲಾಂಟರ್ಸ್ ಕಾಫಿ ಸಿಂಡಿಕೇಟ್, ಉಡುಪಿ, ಮನೋಹರ ಬೀಡಿ ಫ್ಯಾಕ್ಟರಿ, ಬಡಗುಪೇಟೆ, ಉಡುಪಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ದಿನಾಂಕ 2–12—1955ರಲ್ಲು, ಬ್ಯಾಂಕಿನ ಹೊಸ ಶಾಖೆಯೊಂದು **ಮಧುರೆಯ** ಈಸ್ಟ್ ಆವನಿಮೂಲಾ ರಸ್ತೆಯಲ್ಲಿರುವ ನಂಬ್ರ 40ನೆ ಕಟ್ಟಡದಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED

Estd:- 1906] [H. O. UDIPI (S.India).

(೫ನೇ ಪುಟದಿಂದ)

ಬಳಸುವುದು ಕ್ಷೇಮ. ಹಿಂದಿಯನ್ನು ಕಲಿಯುವುದು ಎಂದಿಗೂ ಇಂಗ್ಲಿಷಿನಷ್ಟು ಕಠಿಣವಾಗಿಲ್ಲ. ದಕ್ಷಿಣ ಭಾರತ ಹಿಂದೀ ಪ್ರಚಾರ ಸಮಿತಿಯವರು ಕಳೆದ ೩೫ ವರ್ಷಗಳಿಂದ ನಡೆಸುತ್ತಾ ಬಂದಿರುವ ರಾಷ್ಟ್ರಭಾಷೆಯಂಥ ಪರೀಕ್ಷೆಯನ್ನು ದಿನಕ್ಕೊಂದು ತಾಸಿನಂತೆ ಒಂದು ವರ್ಷಗಳ ಖಾಸಗಿ ಅಭ್ಯಾಸದಿಂದಲೇ ಕೊಟ್ಟು ಬಿಡಬಹುದು:—ಅಷ್ಟು ಆ ಭಾಷೆ ಸುಲಭವಾಗಿದೆ. ಮತ್ತೆ ಎರಡು ವರ್ಷಗಳ ಸಾಮಾನ್ಯ ಅಭ್ಯಾಸ ಮಾಡಿದರೆ ವಿಶಾರದ ಪದವಿಯನ್ನು ಪಡೆಯುವುದು ಕಷ್ಟವಲ್ಲ. ಅದಲ್ಲದೆ ಹಿಂದಿ ಚಲಚ್ಚಿತ್ರಗಳೂ ದೇಶದ ಎಲ್ಲೆಡೆಯಲ್ಲೂ ನೆಲಸಿರುವ ಮುಸ್ಲಿಂ ಬಂಧುಗಳ ಸಹವಾಸವೂ ನಮ್ಮ ನಿತ್ಯ ಮಾತುಗಳಲ್ಲಿ ಬಳಕೆಯಾಗಿ ಹೋಗಿರುವ ಅನೇಕ ಹಿಂದಿ ಶಬ್ದಗಳ ಪ್ರಭಾವವೂ ಎಲ್ಲ ಭಾರತೀಯ ಭಾಷೆಗಳಿಗೂ ಸಾಮಾನ್ಯವಾದ ಸಂಸ್ಕೃತ ಶಬ್ದಗಳನ್ನು ಅಳವಡಿಸಿಕೊಳ್ಳಲು ಹಿಂದಿಗಿರುವ ಶಕ್ತಿಯೂ ಹಿಂದಿಯ ಗ್ರಹಣವನ್ನು ಜನ ಸಾಮಾನ್ಯರ ಪಾಲಿಗೆ ಸುಲಭವಾಗಿ ಮಾಡಿಕೊಟ್ಟಿವೆ.

ಶೀಘ್ರ ಕ್ರಮ ಅವಶ್ಯ

ನಾವು ಈಗಲೇ ಹಿಂದಿಯನ್ನು ಆಡಳಿತ ಭಾಷೆಯಲ್ಲಿ ಅಳವಡಿಸುವ ಕ್ರಮಕೈಗೊಳ್ಳಲು ತಪ್ಪಿ, ಇಂಗ್ಲಿಷಿನ ಕೈವಾರಿಗಳ ಮಾತಿಗೆ ಸೋತು ಎರಡೋ ಮೂರೊ ದಶಕಗಳ ವರೆಗೆ ಈ ಕೆಲಸವನ್ನು ಮುಂದೆ ಹಾಕಿದರೆ—ಅಷ್ಟು ಹೊತ್ತಿಗೆ ಇಂಗ್ಲಿಷಿನ ಪ್ರಭಾವವು ಮತ್ತಷ್ಟು ಹೆಚ್ಚಿಕೊಂಡೀತು, ಆಗ ಪ್ರಶ್ನೆಯನ್ನು ಪುನರ್ವಿಮರ್ಶಿಸುವಾಗ ಇಂಗ್ಲಿಷಿನ ತ್ಯಾಗದ ವಿರುದ್ಧ ಮತ್ತಷ್ಟು ಬಲವಾದ ವಾದವು ಕೇಳಿ ಬಂದೀತು. ತೂಕ—ಅಳತೆ—ನಾಣ್ಯಗಳಲ್ಲಿ ದಶಮಾಂಶ ಪದ್ಧತಿಗೆ ವಿಳಂಬಿಸುವುದಾಗಲೀ ಮೂಲೋದ್ಯೋಗಗಳನ್ನು ಖಾಸಗಿ ರಂಗಕ್ಕೆ ಈಗಲೂ ಬಿಟ್ಟುಕೊಡುವುದಾಗಲೀ ಹೇಗೆ ಸಲ್ಲದೊ-ಇಂಗ್ಲಿಷಿನ ಕೈವಾರಿಗಳ ವಾದಕ್ಕೆ ಮನಸೋಲುವುದೂ ಈಗ ಸಮಂಜಸವಾಗದು. ಪ್ರಾದೇಶಿಕ ಭಾಷೆಗಳಂತೂ ಕಬ್ಬಲಿಗಳಾಗಿಯೇ ಆಗುತ್ತವೆ-ಕುಂತೀ ಮಕ್ಕಳಿಗೆ ನಿತ್ಯವೂ ವನವಾಸವೇ ಗತಿ'ಆದಾಗ್ಯೂ ಇಂಗ್ಲಿಷಿನ ಅಂತಾರಾಷ್ಟ್ರೀಯ ಮಹಿಮೆಯು ಪ್ರಯೋಜನ ಪಡೆಯಬಹುದಾದ ಅತ್ಯಲ್ಪ ಮಂದಿಗಾಗಿ ಜನಸಾಮಾನ್ಯರನ್ನು ಕಷ್ಟಕ್ಕೆ ತಳ್ಳುವುದು ಮಾತ್ರ ಬೇಡ. ಆದುದರಿಂದ ನಮಗೆ ಹಿಂದಿಯೇ ಇರಲಿ ಎಂದು ಒಪ್ಪಿಕೊಳ್ಳೋಣ! ಇನ್ನೂರು ವರ್ಷಗಳ ಒತ್ತಾಯದಿಂದ ಇಂಗ್ಲಿಷು ಏನನ್ನು ಸಾಧಿಸಲು ಇನ್ನೂ ಶಕ್ತವಾಗಿಲ್ಲವೊ ಅದನ್ನು ಇಪ್ಪತ್ತು ವರ್ಷಗಳ ಪ್ರೋತ್ಸಾಹದಿಂದ ಹಿಂದಿ ಸಾಧಿಸೀತೆಂದು ವಿಶ್ವಾಸಪಡೋಣ! ಇಂಗ್ಲಿಷಿನ ಕುರಿತು ತೀರ ಹೆಚ್ಚಿನ ಕಾತರವಿರುವವರು ಸಂಸ್ಕೃತವನ್ನು ಹೇಗೆ ಈಗ ಅಭ್ಯಾಸ ಮಾಡಲಾಗುತ್ತದೊ— ಆ ದಾರಿ ಹಿಡಿದು ಸಾಗಲಿ!

ಕಾರ್ತಿಕೇಯ.

ಜೀರ್ಣೋದ್ಧಾರಗೊಳಿಸಿದ ಶ್ರೀ ಕೃಷ್ಣಾಪುರ ಮಠದ

ಚಿತ್ತಾಕರ್ಷಕ ಭವ್ಯ ಕಟ್ಟಡ

ಶ್ರೀ ಕೃಷ್ಣಾಪುರ ಮಠದ ಪೀಠಾಧಿಪತಿಗಳಾದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು—ತಮ್ಮ ಮಠವನ್ನು ಜೀರ್ಣೋದ್ಧಾರಗೊಳಿಸಿ ಮಠ ಪ್ರವೇಶೋತ್ಸವವನ್ನು ತಾ. 16ರಲ್ಲು ಬೆಳಗ್ಗೆ ಅತ್ಯಂತ ವೈಭವದಿಂದ ನೆರವೇರಿಸಿದರು. ಶ್ರೀ ಕೃಷ್ಣ ದೇವರ ಮೂರ್ತಿಯನ್ನು ಚಿನ್ನದ ಪಾಲಕಿಯಲ್ಲಿರಿಸಿಕೊಂಡು ಇತರ ಸ್ವಾಮಿಗಳವರು ವಾದ್ಯಘೋಷ ಮೆರವಣಿಗೆಯಿಂದ ಶ್ರೀ ಮಠಕ್ಕೆ ಆಗಮಿಸಿದರು. ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ಅವರೆಲ್ಲರಿಗೂ ಸ್ವಾಗತವನ್ನು ಬಯಸಿದರು ಶ್ರೀ ಕೃಷ್ಣ ದೇವರಿಗೆ ವಿಶೇಷ ಪೂಜೆಯಾದ ಬಳಿಕ ಎಲ್ಲಾ ಸ್ವಾಮಿಗಳವರಿಗೂ ಪಾದ ಪೂಜೆ ಮಂಗಳಾರತಿಗಳಾದುವು. ಮಧ್ಯಾಹ್ನ ವಿಶೇಷ ಸಂತರ್ಪಣೆ, ಸಂಜೆ ಲೌಕಿಕರಿಗೆ ಉಪಹಾರಾದಿ ಕಾರ್ಯಗಳಾದುವು.

ಕಟಪಾಡಿ— ಸ್ಥಳೀಯ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ವತಿಯಿಂದ ನಡೆಯುವ ಚೊಕ್ಕಾಡಿ ಶ್ರೀ ಮಹಾಲಿಂಗೇಶ್ವರ ಸ್ವಾಮಿ ಶಾಲೆಗಾಗಿ ಸ್ಥಳೀಕ ಅಭಿವೃದ್ಧಿ ಯೋಜನೆಯನ್ವಯ ಕಟ್ಟಲ್ಪಡುವ ನೂತನ ಕಟ್ಟಡದ ಉದ್ಘಾಟನೆಯನ್ನು ತಾ. 11ರಲ್ಲಿ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರು ನೆರವೇರಿಸಿದರು. ಶ್ರೀ ಕೆ. ವಾಸುದೇವ ಕಾಮತರು ಸ್ವಾಗತ ಭಾಷಣ ಮಾಡಿದರು. ಶಾಲಾ ಹೆಡ್ಮಾಸ್ತರ ಶ್ರೀ ಸಿ. ರಾಮದಾಸ ನಾಯ್ಕರು ಕಟ್ಟಡದ ವರದಿಯನ್ನು ಓದಿದರು. ಶ್ರೀಗಳಾದ ಕೆ. ಆರ್. ಶೆಣೈ, ಅನಂತ ಪುರಾಣಿಕರು ಕಾಲೋಚಿತ ಮಾತುಗಳನ್ನಾಡಿದರು. ಸಂಘದ ಅಧ್ಯಕ್ಷ ಶ್ರೀ ಯು. ಎಸ್. ನಾಯ್ಕರು ಧನ್ಯವಾದಗಳನ್ನಿತ್ತರು.

ಕುಂಜಾಲು— ಇಲ್ಲಿಯ ವಿಶ್ವಕೀರ್ತಿ ಹಾ. ಪ್ರಾ. ಶಾಲೆಯಲ್ಲಿ ತಾ. 13ರಲ್ಲಿ ಶ್ರೀ ಎ. ರಾಮಚಂದ್ರ ರಾಯರನ್ನು ಬೀಳ್ಕೊಡುವ ಸಮಾರಂಭ ಹಾಗೂ ವಾರ್ಷಿಕೋತ್ಸವವು ಶಾಲಾ ಉತ್ತರ ರೇಂಜ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ನಿವೃತ್ತರಾದ ರಾಯರಿಗೆ ನಿಧಿಯೊಂದನ್ನು ಅಧ್ಯಕ್ಷರು ಅರ್ಪಿಸಿದರು. ಶ್ರೀ ರಘುರಾಮ ಹೆಗ್ಡೆ, ಮೊದಲಾದವರು ಮಾತನಾಡಿದರು.

ಉಚ್ಚಿಲ— ಪರಿಯಾಳ ಸ್ವಸಮಾಜಸುಧಾರಕ ಸಂಘದ ವಾರ್ಷಿಕೋತ್ಸವವು ತಾ. 12ರಲ್ಲಿ ಎ. ಜೆ. ಆಳ್ವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಪಿ. ಸುವರ್ಣರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಎಮ್. ಎಮ್. ಪ್ರಭು, ಪೊರ್ಬಣ್ಣ ಸೆಟ್ಟಿ, ಸುಬ್ಬಯ್ಯ ಹೆಜ್ಮಾಡಿ, ಮೊದಲಾದವರು ಮಾತನಾಡಿದರು.

ಪಲಿಮಾರು— ಈ ಕ್ಷೇತ್ರದ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ತಾ. 7ರಲ್ಲಿ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಸ್. ನಾರಾಯಣ ಪ್ರಭುಗಳು ವರದಿಯನ್ನೋದಿದರು. ಶ್ರೀ ಎಮ್. ಎಮ್. ಪ್ರಭು ಮೊದಲಾದ ಸಭಿಕರು ಮಾತನಾಡಿದರು.

ಪಡುಕಳತೂರು— ಸ್ಥಳೀಯ ಹಾ. ಪ್ರಾ. ಶಾಲೆಯ ತಿಂಗಳ ಹಬ್ಬ ಮತ್ತು ಹೆತ್ತವರ ಕೂಟದ ಸಮಾರಂಭವು ತಾ. 7ರಲ್ಲಿ ಶ್ರೀ ಬಿ. ಬಿ. ಸೆಟ್ಟಿ, ವಿದ್ವಾನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ವಿ. ಕೃಷ್ಣಯ್ಯ, ಕೆ. ಆನಂದರಾವ್ ಮೊದಲಾದವರು ಭಾಷಣವಿತ್ತರು.

ಶಿರ್ವ ಬಂಟಕಲ್ಲು— ಇಲ್ಲಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಸಭೆಯು ತಾ. 8ರಲ್ಲಿ ಶ್ರೀ ಕೆ. ವೇಪಪ್ಪ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ತಿಂಗಳಾಂತ್ಯದಲ್ಲಿ ಜರಗಿಸಬೇಕೆಂದಿದ್ದ ಅಖಿಲಭಾರತ ಸಮ್ಮೇಳನವನ್ನು ಮುಂಬರುವ ಮೇ ತಿಂಗಳ ತಾ. 2, 3ರಲ್ಲಿ ಜರಗಿಸುವುದೆಂದು ತೀರ್ಮಾನವಾಯಿತು.

ಬೈಂದೂರು— ಬೈಂದೂರು ರಾಷ್ಟ್ರೀಯ ವಿಸ್ತರಣಾ ಯೋಜನೆಯ ದ್ವಿತೀಯ ಗ್ರಾಮನಾಯಕರ ತರಬೇತಿ ಶಿಬಿರವು ಕಳೆದ ತಾ. 25ರಿಂದ 27ರ ತನಕ ನಡೆಯಿತು. ಮೊದಲ ದಿನ ಬೆಳಗ್ಗೆ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ಶಿಬಿರವನ್ನು ಉದ್ಘಾಟಿಸುತ್ತಾ, ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಗ್ರಾಮ ನಾಯಕರ ಹೊಣೆಗಾರಿಕೆ ಏನೆಂಬುದನ್ನು ವಿವರಿಸಿದರು. ಬ್ಲೋಕ್ ಡೆವಲಪ್ ಮೆಂಟ್ ಆಫೀಸರ್ ಶ್ರೀ ಎಚ್. ಜಿ. ಕೆದಿಲಾಯರು ತರಬೇತಿ ಶಿಬಿರದ ಉದ್ದೇಶಗಳನ್ನು ವಿವರಿಸಿದರು.

ಮಧ್ಯಾಹ್ನ ಶ್ರೀ ವೈ. ಮಂಜಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಬೈಂದೂರು ಮತ್ತು ವಂಡ್ಸೆ ಡಿವಿಜನಿನ ಪಂಚಾಯತ ಅಧ್ಯಕ್ಷರುಗಳ ಪರಿಷತ್ತು ಜರಗಿತು. ಡಿಪ್ಯುಟಿ ಪಂಚಾಯತ ಆಫೀಸರ್ ಶ್ರೀ ಬಾಲಕೃಷ್ಣ ರೈಗಳು ಹಾಜರಿದ್ದರು. ಎಗ್ರಿಕಲ್ಚರ್ ಡೆಮೋನ್‌ಸ್ಟ್ರೇಟರ್ ಶ್ರೀ ಕೆ. ಸೀನಪ್ಪ ನವರು ಆಧುನಿಕ ವ್ಯವಸಾಯದ ಕುರಿತು ಭಾಷಣವಿತ್ತರು.

ಎರಡನೆಯ ದಿವಸ ಬೈಂದೂರು—ಸೋಮೇಶ್ವರ (ಪಡುವರಿ) ರಸ್ತೆ ಕೆಲಸ ನಡೆಯಿತು. ಮಧ್ಯಾಹ್ನ ಶ್ರೀ ಶಾಂತಾ ರಾಮ ರೈಗಳು ಮೀನುಗಾರಿಕೆಯ ಕುರಿತುಉಪನ್ಯಾಸವಿತ್ತರು. ಕೊನೆಯ ದಿನ ಬೆಳಗ್ಗೆ ಶಿಶುವಿಹಾರ ಕೇಂದ್ರಕ್ಕೆ ಪ್ರಮುಖಸ್ಥಾನ ಕಲ್ಪಿಸಲಾಯಿತು. ಶ್ರೀ ಎಮ್. ಎಮ್. ಹೆಗ್ಡೆಯವರು ಆದರ್ಶ ಪರಿವಾರ ಎಂಬ ವಿಷಯದಲ್ಲೂ, ಶ್ರೀ ಆರ್. ಕೆ. ಸಂಜೀವ ರಾಯರು ಸಮಾಜಸೇವೆಯ ವಿಚಾರದಲ್ಲೂ ಡಾ. ಸಿ. ರಾಮರಾಯರು ಪಶುಪಾಲನೆ ಕುರಿತೂ ಭಾಷಣವಿತ್ತರು. ಮಧ್ಯಾಹ್ನ ಶ್ರೀ ಜಿ. ಡಬ್ಲ್ಯು. ಜೆನ್ನಿಗ್ಸ್ ಮತ್ತು ಶ್ರೀ ಬಿ. ಚಂದ್ರಶೇಖರ ಹೊಳ್ಳರು ಸಹಕಾರಿ ಚಳವಳಿ ವಿಚಾರದಲ್ಲೂ ಭಾಷಣವಿತ್ತರು ಮೂರು ದಿನವೂ ರಾತ್ರಿ ವಿವಿಧ ವಿನೋದಾವಳಿಗಳಿದ್ದುವು.

ಮೂಳೂರು, ಉಚ್ಚಿಲ— ತಾ. 14ರಲ್ಲಿ ಮೂಳೂರು, ಬೆಳಪು ಮತ್ತು ಬಡ ಗ್ರಾಮಸ್ಥರ ಜಾಹೀರು ಸಭೆಯು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮೂಳೂರು ಗ್ರಾಮದ ಮಂಗಲಪೇಟೆಯಿಂದ ಪಡು ಸಮುದ್ರ ತೀರದ ವರೆಗಿನ ರಸ್ತೆಯನ್ನು ಸ್ಥಾನಿಕ ಅಭಿವೃದ್ಧಿ ಯೋಜನೆಯ ಸಹಾಯದಿಂದ ಪೂರ್ತಿಗೊಳಿಸಬೇಕೆಂದಾಯಿತು. ರಸ್ತೆ ರಚನೆ ಬಗ್ಗೆ ಶ್ರೀಗಳಾದ ಟಿ. ಎ. ಪೈ ಅಧ್ಯಕ್ಷರಾಗಿ ಶ್ರೀಗಳಾದ ಟಿ. ಎಮ್ ಸೋನ್ಸ್, ಎಮ್. ಭೋಜ ಹೆಗ್ಡೆ ಮೊದಲಾದವರಿರುವ ಕಮಿಟಿ ಸ್ಥಾಪಿಸಲಾಯಿತು. ಮೂಳೂರು, ಬೆಳಪು ಮತ್ತು ಬಡಗ್ರಾಮದ ರೈತರ ಸಾಗುವಳಿಗೆ ಪ್ರಯೋಜನಕಾರಿಯಾಗುವಂತಹ ಕಾಲುವೆ ಮಾಡಿಸುವ ಬಗ್ಗೆಯೂ ಬೇರೊಂದು ಕಮಿಟಿ ಆರಿಸಲಾಯಿತು.

ಉಳಿಪಾಡಿ— ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರಾಗಿದ್ದು ತಾ. 14ರಲ್ಲಿ ನಿವೃತ್ತಿ ಹೊಂದಿದ ಶ್ರೀ ಕಡಂದಲೆ ಅಣ್ಣಪ್ಪ ಸೆಟ್ಟರಿಗೆ ಬೀಳ್ಕೊಡುವ ಸಮಾರಂಭವು ಶ್ರೀ ದೇವಣ್ಣ ಬಲ್ಲಾಳರಅಧ್ಯಕ್ಷತೆಯಲ್ಲಿ ಜರಗಿತು.



Drama Materials at cheap rates

Drama Hair, Topans, Jari Boarders, Gangawans, Jari Cloths, Jari Crowns, Swords, Turbans, & Gondas, Hair Net, Pearl Cuda, Make up Goods and other kind of Drama Meterials, at cheap and attractive rates.

Write to:

Dharamshi Mulji Dresswalla,

132, C, Bhagat Wadi Buleshwar Road BOMBAY 2.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹೆವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkpet, UDIPI. S. Kanara.

ಫೋನ್ ನಂಬ್ರ 66

ಜಿಲ್ಲೆಯ ಮಹಾಜನರಲ್ಲಿ ವಿಜ್ಞಾಪನೆ

ಚಿಕ್ಕಂದಿನಿಂದಲೂ ನಾನು ನಿಷ್ಠಾವಂತ ಕಾಂಗ್ರೆಸ್ಸಿಗನಾಗಿ ದೇಶದ ಸ್ವಾತಂತ್ರ್ಯ ಸಾಧನೆಗಾಗಿ ನನ್ನಿಂದ ಸಾಧ್ಯವಾದಷ್ಟು ದುಡಿದವನು. ಮದ್ರಾಸಿನಲ್ಲಿ ವೈದ್ಯಕೀಯ ಶಿಕ್ಷಣವನ್ನು ಪಡೆಯುತ್ತಿದ್ದಾಗಲೂ ರಾಷ್ಟ್ರೀಯ ಆಂದೋಲನಗಳಲ್ಲಿ ಕೆಲಸ ಮಾಡಿದವನು. ಆ ಮೇಲೆ ಮಂಗಳೂರಿಗೆ ಬಂದು ವೈದ್ಯಕೀಯ ವೃತ್ತಿಯನ್ನು ಆರಂಭಿಸಿದ ಮೇಲೂ ಕಾಂಗ್ರೆಸ್ ಕೆಲಸಗಾರನಾಗಿ ಮತ್ತು ಜವಾಬ್ದಾರಿ ಸ್ಥಾನಗಳನ್ನು ಪಡೆದು ಸೇವೆ ಮಾಡಿರುತ್ತೇನೆ. ಜನರೂ ನನ್ನ ಮೇಲೆ ಯಾವಾಗಲೂ ಹೆಚ್ಚಿನ ಪ್ರೀತಿ ಮತ್ತು ವಿಶ್ವಾಸ ತೋರಿಸಿರುತ್ತಾರೆಂದು ಅಭಿಮಾನದಿಂದ ಹೇಳಬಲ್ಲೆ.

ಕೆಲವು ಪ್ರಮುಖ್ಯ ಕಾರಣಗಳಿಂದಾಗಿ 1951ನೇ ಇಸವಿ ಡಿಸೆಂಬರ್ ಅಂತ್ಯದಲ್ಲಿ ಕಾಂಗ್ರೆಸನ್ನು ಬಿಟ್ಟು ಹೊರ ಬಂದೆನು. ಜಿಲ್ಲೆಯಲ್ಲಿ ಪ್ರಜಾಸೋಶಲಿಸ್ಟ್ ಪಕ್ಷವನ್ನು ಬಲಪಡಿಸಲು ಶ್ರಮಿಸಿದೆನು. ದೀರ್ಘಕಾಲದಿಂದ ನನ್ನ ಕಾಂಗ್ರೆಸ್ ಮತ್ತು ಇತರ ಸ್ನೇಹಿತರು ನಾನು ಕಾಂಗ್ರೆಸ್ಸಿಗೆ ಪುನಃ ಸೇರಬೇಕೆಂದು ಒತ್ತಾಯಿಸುತ್ತಾ ಬಂದಿರುವರು. ಪ್ರಾಂತ್ಯ ಪುನರ್ರಚನಾ ಸಮಿತಿಯ ವರದಿ ಬಂದಂದಿನಿಂದ ಈ ತರದ ಒತ್ತಾಯ ಎಲ್ಲಾ ಕಡೆಗಳಿಂದಲೂ ಹೆಚ್ಚಾಗುತ್ತ ಬಂತು. ಆ ಮೇಲೆ ನಮ್ಮ ಪ್ರಧಾನ ಮಂತ್ರಿ ನೆಹರು ಮಂಗಳೂರಿಗೆ ಬರುವ ಸಮಯದಲ್ಲಿ ಈ ಒತ್ತಾಯ ಇನ್ನಷ್ಟು ಬಲಗೊಂಡಿತು. ಹಳ್ಳಿಗಳ ಜನರೊಡನೆ ನನ್ನ ಸಂಪರ್ಕವು ಹೆಚ್ಚಾಗಿದ್ದು ಅವರಲ್ಲಿ ಅನೇಕರು ನಾನು ಈ ಸಂದರ್ಭದಲ್ಲಿ ಜಿಲ್ಲೆಯ ಹಿತದೃಷ್ಟಿಯಿಂದ ಮತ್ತು ಹೊಸ ಕರ್ನಾಟಕ ಪ್ರಾಂತ್ಯದ ಏಳಿಗೆಗಾಗಿ ಕಾಂಗ್ರೆಸ್ಸಿಗೆ ಸೇರುವುದು ಅಗತ್ಯವೆಂದು ಅಭಿಪ್ರಾಯ ಕೊಡುತ್ತಾ ಬಂದರು. ಇದು ನಮ್ಮ ದೇಶದಲ್ಲಿ ಒಂದು ಸಂದಿಗ್ಧ ಸಮಯ. ಪ್ರಾಂತ್ಯಗಳ ಪುನರ್ರಚನೆಯಿಂದಾಗಿ ಇಡೀ ದೇಶದ ಭೂಪಟ ಮತ್ತು ಚರಿತ್ರೆ ಬದಲಾಗುವ ವಿಶೇಷಕಾಲ. ಕನ್ನಡಿಗರಿಗಂತೂ ಇಂದಿನ ಜವಾಬ್ದಾರಿ ಮತ್ತೂ ಹೆಚ್ಚು. ಐದು ಆಡಳಿತೆಗಳಿಗೆ ಒಳಪಟ್ಟಿರುವ ಕನ್ನಡ ವಲಯಗಳು ಒಂದೇ ಆಡಳಿತೆಗೆ ಬಂದು ನಮ್ಮ ಮಹತ್ತಾದ ಆಶೆ ನೆರವೇರಿ ಕರ್ನಾಟಕ ಪ್ರಾಂತ್ಯ ರಚನೆಯು ಇನ್ನು ಕೆಲವೇ ತಿಂಗಳುಗಳಲ್ಲಿ ಆಗುತ್ತದೆ. ಒಗ್ಗಟ್ಟಿನಿಂದ ಮತ್ತು ಒಮ್ಮತದಿಂದ ಕರ್ನಾಟಕವನ್ನು ಕಟ್ಟಿ ದೇಶದ ಭದ್ರತೆ ಮತ್ತು ಮೇಲ್ಮೆಗಾಗಿ ಇನ್ನು ಕೆಲವೇ ವರ್ಷಗಳಲ್ಲಿ ಕರ್ನಾಟಕ ರಾಜ್ಯವು ಮೊದಲ ಸ್ಥಾನವನ್ನು ಪಡೆಯುವಂತೆ ದುಡಿಯುವುದು ನಮ್ಮ ಕರ್ತವ್ಯ.

ಪಕ್ಷಾಲು ಹಿತ ಮಸೂದೆಯೇ ಮೊದಲಾದ ಜಿಲ್ಲೆಯ ಜನಸಾಮಾನ್ಯ ಹಿತ ಸಾಧಕ ಮಸೂದೆಗಳು ಆಗುತ್ತಿವೆ. ಅನೇಕ ಜನ ಹಿತ ಯೋಜನೆಗಳೂ ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತವಾಗಬೇಕಾಗಿದೆ. ಅವಡಿ ಕಾಂಗ್ರೆಸ್ ಅಧಿವೇಶನದ ಸಮಾಜವಾದೀ ಮಾದರಿಯ ಸಮಾಜರಚನೆಯ ಠರಾವನ್ನು ಈ ಹೊತ್ತು ಕಾರ್ಯರೂಪಕ್ಕೆ ಬರುವಂತೆ ಮಾಡುವುದು, ಜನತೆಯ ಕರ್ತವ್ಯ ನೆಹರೂರವರ ಉಜ್ವಲ ಮತ್ತು ಪ್ರಗತಿಶೀಲ ಮುಂದಾಳುತನ ದೇಶಕ್ಕೆ ಅಗತ್ಯವೆಂದು ಎಲ್ಲರೂ ಒಪ್ಪತಕ್ಕ ವಿಷಯ. ಈ ಎಲ್ಲ ವಿಚಾರಗಳನ್ನು ದೀರ್ಘ ಹಾಗು ಆಳವಾಗಿ ವಿಚಾರಿಸಿ ನಾನು ಕಾಂಗ್ರೆಸ್ಸಿಗೆನೇ ಸೇರಿ ಹೆಚ್ಚಿನ ಹಾಗೂ ಪ್ರಯೋಜನಕರವಾದ ಸೇವೆಮಾಡಬಲ್ಲೆನೆಂದು ದೃಢ ನಂಬಿಕೆಯಿಂದ ನಾನು ಕಾಂಗ್ರೆಸ್ಸಿಗೆ ಸೇರಿದ್ದೇನೆ. ಅಲ್ಲದೆ ನನ್ನಂತೆಯೇ ಅಭಿಪ್ರಾಯಪಟ್ಟು ನನ್ನ ಮೇಲೆ ಪ್ರೀತಿ ವಿಶ್ವಾಸವಿರುವ ನನ್ನ ಮಿತ್ರರೂ ಸಾರ್ವಜನಿಕ ಕೆಲಸಗಾರರೂ ಕಾಂಗ್ರೆಸ್ಸಿಗೆನೇ ಸೇರಿ ಇಂದೀಗ ದೇಶದ ಮಾತ್ರವಲ್ಲ ಇಡೀ ಲೋಕದ ಕಲ್ಯಾಣಕ್ಕಾಗಿ ನೆರವಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಪ್ರಜಾ ಪ್ರಭುತ್ವದಲ್ಲಿ ಎದುರು ಪಕ್ಷವಿರುವುದು ಬಹಳ ಅಗತ್ಯವಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಪ್ರಜಾ ಸೋಶಲಿಸ್ಟ್ ಪಕ್ಷದಲ್ಲಿ ನಾನು ಇನ್ನು ಮುಂದುವರಿಸಿದರೆ ಕಾಂಗ್ರೆಸ್ ಪ್ರಜಾ ಸೋಶಲಿಸ್ಟ್ ಪಕ್ಷಗಳ ತಿಕ್ಕಾಟದಲ್ಲಿ ದುಷ್ಟ ಶಕ್ತಿಗಳು ಮುಂದೆ ಬರಲಿಕ್ಕೆ ಆಸ್ಪದ ಮಾಡೀತೆ ಹೊರತು ಜಿಲ್ಲೆಗೆ ಅಥವಾ ಕರ್ನಾಟಕಕ್ಕೆ ಪ್ರಯೋಜನವಾಗಲಿಕ್ಕಿಲ್ಲ. ಪ್ರಜಾ ಸೋಶಲಿಸ್ಟ್ ಪಕ್ಷದ ಮುಂದಾಳುಗಳೂ ಮತ್ತು ಸದಸ್ಯರೂ ನನ್ನಲ್ಲಿ ಸದಾ ತೋರಿಸಿದ ವಿಶ್ವಾಸ ಮತ್ತು ಆದರಗಳಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ.

ಈ ಸಂದರ್ಭದಲ್ಲಿ ನನಗೆ ಹೆಚ್ಚಿನ ಸಂತೋಷದ ವಿಷಯವೇನೆಂದರೆ ನಮ್ಮ ಜಿಲ್ಲೆಯ ಮತ್ತು ಇತರ ಜಿಲ್ಲೆಗಳ ಕಾಂಗ್ರೆಸ್ ಕಾರ್ಯಕರ್ತರು ನನ್ನಮೇಲಿನ ಪ್ರೀತಿ ವಿಶ್ವಾಸಗಳನ್ನು ಇಟ್ಟುಕೊಂಡು ನಾನು ಕಾಂಗ್ರೆಸ್ಸಿಗೆಸೇರಿ ಅವರೊಡನೆ ಜನಸೇವೆ ಮಾಡಬೇಕೆಂದು ಪ್ರತ್ಯೇಕವಾಗಿನನ್ನನ್ನುಆಗಿಂದಾಗ್ಗೆ ಕೇಳಿಕೊಳ್ಳುತ್ತಾ ಬಂದದ್ದು. ಕಳೆದ ಕೆಲವೇ ದಿವಸಗಳಲ್ಲಿ ಜಿಲ್ಲೆಯ ಹಲವು ಕಡೆಗಳಿಂದ ಹಲವು ನನ್ನ ಮಿತ್ರರೂ ಮತ್ತು ಕಾಂಗ್ರೆಸ್ಸಿಗರೂ ನಾನು ಕಾಂಗ್ರೆಸ್ಸಿಗೆ ಸೇರುವೆನೆಂಬ ವರ್ತಮಾನವನ್ನು ಕೇಳಿ ಅವರ ಸಂತೋಷ ಮತ್ತು ಉತ್ತೇಜನವನ್ನು ವ್ಯಕ್ತಪಡಿಸಿದ್ದಾರೆ. ಇವೆಲ್ಲಾ ನನ್ನ ಸಾರ್ವಜನಿಕ ಜೀವನಕ್ಕೆ ತುಂಬಾ ಧೈರ್ಯವನ್ನು ಕೊಟ್ಟಿವೆ. ಜಿಲ್ಲೆಯ ಮಹಾಜನರು ನನ್ನಲ್ಲಿ ಇನ್ನು ಮುಂದೆಯೂ ಪ್ರೀತಿ ವಿಶ್ವಾಸವಿಟ್ಟು ಸಹಕಾರ ನೀಡಬೇಕಾಗಿ ದೈನ್ಯಪರಿತು ಕೇಳಿಕೊಳ್ಳುತ್ತೇನೆ. ಕನ್ನಡ ಜಾತಿಯ ಮತ್ತು ದೇಶದ ಸೇವೆ ಗೈಯಲು ಪರಮಾತ್ಮನು ನನಗೆ ಹೆಚ್ಚೆಚ್ಚು ಶಕ್ತಿ ಕೊಡಲೆಂದು ಪ್ರಾರ್ಥಿಸುತ್ತೇನೆ.

"ಜೈ ಹಿಂದ್"

ಡಾಕ್ಟರ್ ಕೆ. ನಾಗಪ್ಪ ಆಳ್ವ.

"ಸರಸ್ವತಿ"

(Estd. 1920)

ಕನ್ನಡ ಮಾಸಪತ್ರಿಕೆ.

ಕಳೆದ ಮೂವತ್ತೈದು ವರ್ಷಗಳಿಂದ ಮಹಿಳೆಯರ ಹಾಗೂ ಮಕ್ಕಳ ಸೇವೆಯನ್ನು ಸಲ್ಲಿಸಿ ಇಡೀ ಕರ್ನಾಟಕದಲ್ಲಿ ಹೆಸರಾಂತ ಮಾಸಪತ್ರಿಕೆ. ಜಾಹೀರಾತು ಕೊಡಲು ಉತ್ತಮ ಪತ್ರಿಕೆ. ಶಾಲಾ ಮಕ್ಕಳಿಗೆ ಅಗತ್ಯವಾದ ಪತ್ರಿಕೆ.

ಸಂಪಾದಕೆ:— ಆರ್. ಕಲ್ಯಾಣಮ್ಮ.

ವಾರ್ಷಿಕ ಚಂದಾ ರೂ. 3 ಮನಿಯಾರ್ಡರ್ ಮಾಡಿರಿ.

ಮ್ಯಾನೇಜರ್,
ಸರಸ್ವತಿ ಕಾರ್ಯಾಲಯ,
ಅರಳೆಪೇಟೆ, ಬೆಂಗಳೂರು2.
ಫೋನ್ ನಂ. 3303.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ತಿಂಬಳೆ ರಾಮಸ್ವಾಮಿ ಅಯ್ಯರ್ ರವರ ರತ್ನದ್ವಯಗಳು—

ಸಂತಾನ ಸಿಂಧೂರ:— ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ನಿವಾರಿಸುತ್ತದೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**
628 "ಸಂತಾನ ಸಿಂದೂರ ಸದನ" (N. Y.)
ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು (MYSORE) S I.

ಮಂಗಳೂರು

ಆದರ್ಶಸತಿ ಚಲಚಿತ್ರ— ಬೆಂಗಳೂರಿನ ಕರ್ನಾಟಕ ಫಿಲಂಸ್ ಪಂಚಿಕೆ ಮತ್ತು ಮಂಗಳೂರಿನ ಜ್ಯೋತಿ ಟಾಕೀಸ್‌ನವರು ತಾ. 7ರಲ್ಲು ಮಂಗಳೂರು ಪತ್ರಿಕೋದ್ಯಮಿಗಳಿಗಾಗಿ ಜ್ಯೋತಿ ಟಾಕೀಸ್‌ನಲ್ಲಿ 'ಆದರ್ಶಸತಿ' ಎಂಬ ಕನ್ನಡ ಚಲಚ್ಚಿತ್ರದ ಪತ್ರಿಕಾ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಈ ಚಿತ್ರದಲ್ಲಿ, ಚಿತ್ರವು ನಾರಾಯಣಮೂರ್ತಿಯವರ ನಿರ್ದೇಶನವು ಶ್ಲಾಘನಾರ್ಹವಾಗಿದ್ದು ಕನ್ನಡಿಗರಿಗೆ ಚಿರಪರಿಚಿತರಾಗಿರುವ ಶ್ರೀ ಎಚ್. ಎಲ್. ಎನ್. ಸಿಂಹರ ಕಥೆ— ಸಂಭಾಷಣೆಯು ಉತ್ತಮ ರೀತಿಯಲ್ಲಿ ಮೂಡಿಬಂದಿದೆ. ವಿಖ್ಯಾತ ನಟ ಶ್ರೀ ನಾಗೇಂದ್ರ ರಾವ್, ತಾರೆಯರಾದ ಜಾನಕಿ, ಜಮುನಾರವರೂ ಉತ್ತಮ ನಟನೆಯಿತ್ತಿದ್ದಾರೆ. ಇತರ ನಟರೂ ತಂತಮ್ಮ ಪಾತ್ರಗಳನ್ನು ಸಾಧಾರಣ ಚೆನ್ನಾಗಿ ಅಭಿನಯಿಸಿದ್ದಾರೆ. ಅಂತೂ ಎಲ್ಲಾ ರೀತಿಯಿಂದಲೂ ಈ ಚಿತ್ರವು ಶ್ಲಾಘನೀಯವಿದೆ.

ನಗರಸಭೆಯ ಬಜೆಟ್ ಮಂಜೂರಾತಿ— ಮಂಗಳೂರು ನಗರಸಭೆಯ ಅಧಿವೇಶನವು ತಾ. 11ರಲ್ಲಿ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಕಮಿಶನರ್ ಶ್ರೀ ಎ. ಕೆ. ರಾಘವನ್, ಅವರು ಒಪ್ಪಿಸಿದ 1955-56ರ ತಿದ್ದಿದ ಅಂದಾಜು ಆಯವ್ಯಯ ಪಟ್ಟಿ ಮತ್ತು 1956-57ರ ಅಂದಾಜು ಆಯವ್ಯಯ ಪಟ್ಟಿಗಳ ಮೇಲೆ ತೀವ್ರ ಚರ್ಚೆ ನಡೆದು ಕೊನೆಗೆ ಮಂಜೂರು ಮಾಡಲ್ಪಟ್ಟವು. ಡಾ. ಎಮ್. ಸಿ. ಶಾಸ್ತ್ರಿ, ಶ್ರೀಗಳಾದ ಎಮ್. ರಮಾನಾಥ, ಆರ್. ಕೆ. ಗುರ್ಜರ್, ವಾಮನ ಕೊಡಿಯಾಲಬೈಲು, ಎ. ಶಾಂತಾರಾಮ ಪೈ, ಕೆ. ವಿಶ್ವನಾಥ ಕಾಮತ್, ಮಾಧವ ಸುವರ್ಣ, ಅಬ್ದುಲ್ ಖಾದರ್, ಮಾಧವ ಕಾಮತ್, ಜೆ. ಬಿ. ಮಚಾದೋ, ಅನಿರುದ್ಧ ಮುನೇನ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ವೃತ್ತಿ ತೆರಿಗೆ, ಮನೆತೆರಿಗೆ ವಸೂಲಿಯಲ್ಲಿ ಸಿಬಂಧಿಯವರು ಹೆಚ್ಚಿನ ಆಸಕ್ತಿ ತೋರಿಸಬೇಕು. ತೆರಿಗೆ ತಪ್ಪಿಸುವವರನ್ನು ಪತ್ತೆಹಚ್ಚಲು ಪ್ರಯತ್ನಿಸಬೇಕು. ಮುನಿಸಿಪಲ್ ವಾಚನಾಲಯಗಳನ್ನು ಲೋಕಲ್ ಲೈಬ್ರೆರಿ ಅಥಾರಿಟಿಯವರು ನಡೆಸುವಂತೆ ಕೇಳಿಕೊಳ್ಳಬೇಕು. ಡಾಮರು ಹಾಕದ ರಸ್ತೆಗಳಿಗೆ ಡಾಮರು ಹಾಕಿಸಬೇಕು. ನೆಬ್ಸ್ಟರ್ ಮಾರ್ಕೆಟ್, ಜಪ್ಪು ಮಾರ್ಕೆಟ್ ಮೊದಲಾದ ಸ್ಥಳಗಳ ನೈರ್ಮಲ್ಯವನ್ನು ಕಾಪಾಡಬೇಕು, ನಗರದ ಚರಂಡಿಗಳನ್ನು ಚೊಕ್ಕಟವಾಗಿರಿಸಬೇಕು, ಇತ್ಯಾದಿ ಸಲಹೆಗಳು ಸದಸ್ಯರಿಂದ ಕೊಡಲಾದುವು. ಸಭಾಪತಿಗಳು ಉತ್ತರವಿತ್ತರು.

ಭಾಷಣ— ಎಚ್. ಕ್ಲಬ್ಬಿನ ಆಶ್ರಯದಲ್ಲಿ ತಾ. 15ರಲ್ಲು ಗಣಪತಿ ಹೈಸ್ಕೂಲಿನ ಶಾರದಾ ಭವನದಲ್ಲಿ ಶ್ರೀ ವಿ. ಎಸ್. ಕುಡ್ವರು 'ಜಪಾನು ಮತ್ತು ಯುರೋಪಿನ ರಾಷ್ಟ್ರಗಳಲ್ಲಿನ ಯುದ್ಧೋತ್ತರ ಅಭಿವೃದ್ಧಿ' ವಿಷಯದಲ್ಲೂ ಶ್ರೀ ಮಿಜಾರು ಗೋವಿಂದ ಪೈಗಳು 'ನನ್ನ ಅಮೇರಿಕಾ ಪ್ರವಾಸಾನುಭವ'ದ ಮೇರೆಯೂ ಭಾಷಣವಿತ್ತರು. ಶ್ರೀ ಪಿ. ಆರ್. ರಂಗನಾಥ ಪೂಂಜರು ಸಭಾಧ್ಯಕ್ಷತೆ ವಹಿಸಿದ್ದರು.

ರೋಟರಿ ಕ್ಲಬ್ಬಿನ ಆಶ್ರಯದಲ್ಲಿ— ಸಿ. ಪಿ. ಸಿ. ಸಭಾಭವನದಲ್ಲಿ ತಾ. 12ರಲ್ಲಿ ರಾತ್ರಿ ಸೇರಿದ ಸಭೆಯಲ್ಲಿ ಶ್ರೀ ವಿ. ಎಸ್. ಕುಡ್ವರು 'ಭವಿಷ್ಯದಲ್ಲಿ ದಕ್ಷಿಣ ಕನ್ನಡದ ಔದ್ಯೋಗಿಕ ಅಭಿವೃದ್ಧಿ' ಎಂಬ ವಿಷಯದ ಮೇಲೆ ಭಾಷಣವೀಯುತ್ತಾ, ಚಿಕ್ಕಪುಟ್ಟ ಉದ್ಯಮಗಳಿಗೆ ಉತ್ತಮ ಭವಿಷ್ಯವಿದೆ ಎಂದರು. ಶ್ರೀ ಪಿ. ಆರ್. ರಂಗನಾಥ ಪೂಂಜರು ಸ್ವಾನುಭವದಿಂದ ಇತರ ಸ್ಥಳಗಳಲ್ಲಿ ಉದ್ಯಮಗಳು ಹೇಗೆ ಯಶಸ್ವಿಯಾಗುತ್ತವೆಂಬುದನ್ನು ವಿವರಿಸಿದರು. ಜತೆಕಾರ್ಯದರ್ಶಿ ಶ್ರೀ ರತ್ನಾಕರ ಕಾಮತರು ಧನ್ಯವಾದಗಳನ್ನಿತ್ತರು.

ಜಿಲ್ಲೆಯಲ್ಲಿ ಬಿ. ಸಿ. ಜಿ. ಕಾರ್ಯ— ಕಳೆದ ಅಕ್ಟೋಬರ ತಾ. 17 ರಿಂದ ದ. ಕ. ಜಿಲ್ಲೆಯಲ್ಲಿ ಪ್ರಾರಂಭಿಸಲಾದ ಬಿ. ಸಿ. ಜಿ. ಚುಚ್ಚುಮದ್ದಿನ ಕಾರ್ಯಕ್ರಮದಂತೆ ಮಂಗಳೂರು ಮತ್ತು ಕಾರ್ಕಳ ತಾಲೂಕುಗಳಲ್ಲಿ ಆ ಕಾರ್ಯವು ಪೂರ್ಣವಾಯಿತು. ಈಗ ಕಾಸರಗೋಡು, ಹೊಸದುರ್ಗ, ಸೌತ್ ತಾಲೂಕು, ಬಂಟವಾಳ ಮತ್ತು ಉಡುಪಿ ತಾಲೂಕಿನಲ್ಲಿ ದಾಕು ಹಾಕುವ ಕೆಲಸ ನಡೆಯುತ್ತಿದೆ. ಈ ವರೆಗೆ 17,26,250 ಜನರಿಗೆ ಪ್ರಥಮ ಪರಿಶೀಲನೆಯಾಗಿದ್ದು, 63,928 ಜನರಿಗೆ ದಾಕುಹಾಕಲಾಗಿದೆಯೆಂದೂ, ಜನರು ಇದರಲ್ಲಿ ತುಂಬಾ ಆಸಕ್ತಿ ವಹಿಸುತ್ತಿದ್ದಾರೆಂದೂ ಹೇಳಲಾಗಿದೆ.

ನಗರ ಸಭೆಯು— ತಾ. 12ರಲ್ಲಿ ಶ್ರೀ ಕೆ. ಸೂರ್ಯ ನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಬಿರುಗಾಳಿ ಪರಿಹಾರ ನಿಧಿಗೆ ರೂಪಾಯಿ 200 ಸಹಾಯನೀಡಬೇಕೆಂದು ನಿರ್ಣಯವಾಯಿತು.

ಶ್ರೀ ವಿ. ಎಸ್. ಕುಡ್ವರಿಗೆ ಸತ್ಕಾರ— ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ ಮತ್ತು ಅದರ ಸಹಾಯಕ ಸಂಸ್ಥೆಗಳ ಅಧಿಕಾರಿ ಮತ್ತು ನೌಕರರು ತಾ. 15ರಲ್ಲಿ ಶ್ರೀ ವಿ. ಎಸ್. ಕುಡ್ವರಿಗೆ ಕಂಪೆನಿಯ ಆವಾರದಲ್ಲಿ ಶ್ರೀ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವಿತ್ತು ಗೌರವಿಸಿದರು. ಸಿ. ಪಿ. ಸಿ. ಜನರಲ್ ಮೆನೇಜರ್ ಶ್ರೀ ಕೆ. ಎಸ್. ಭಂಡಾರ್‌ಕರರು ಸಿಬಂದಿ ಕಡೆಯಿಂದ ಮಾನಪತ್ರವನ್ನು ಶ್ರೀ ಕುಡ್ವರಿಗೆ ಅರ್ಪಿಸಿದರು. ಶ್ರೀಗಳಾದ ಪಿ. ಆರ್. ರಂಗನಾಥ ಪೂಂಜ, ಬಿ. ವಿ. ಬಾಳಿಗ ಮತ್ತು ಉಡುಪಿಯ ಡಾ. ಎಸ್. ಆರ್. ಪೈಗಳು ಮುಖ್ಯ ಅತಿಥಿಯ ಕಾರ್ಯದಕ್ಷತೆಯನ್ನು ಎತ್ತಿ ಮಾತನಾಡಿ ಅವರಿಗೆ ಇನ್ನೂ ಹೆಚ್ಚಿನ ಶ್ರೇಯಸ್ಸನ್ನು ಕೋರಿದರು. ಶ್ರೀ ವಿ. ಸುಂದರಂ ನವರು ಧನ್ಯವಾದಗಳನ್ನಿತ್ತರು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ



ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) **ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.**
(2) **ಷಾ ಕಂಪೆನಿ—ಮಂಗಳೂರು-1.**
(3) **ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.**

(೧ನೇ ಪುಟದಿಂದ)

ಅನೇಕರಿಗೆ ಒಗಟಾಗಿ ತೋರಿದೆ. ಸರಕಾರದವರು ಈಗಿನ ದರದಲ್ಲಿ ಕಂದಾಯವೆತ್ತಿ ೩೫೦ ಕೋಟಿ; ಹೊಸತೆರಿಗೆಗಳಿಂದ ೪೫೦ ಕೋಟಿ ರೈಲ್ವೆಗಳ ಆದಾಯದಿಂದ ೧೫೦ ಕೋಟಿ; ಪ್ರೊವಿಡೆಂಟ್ ಫಂಡ್ ಇತ್ಯಾದಿಗಳಿಂದ ೨೫೦ ಕೋಟಿ; ಸಾರ್ವಜನಿಕ ಸಾಲ ಮತ್ತು ಚಿಕ್ಕ ಉಳಿತಾಯಗಳಿಂದ ೧೨೦೦ ಕೋಟಿ; ವಿದೇಶಗಳ ನೆರವಿನಿಂದ ೮೦೦ ಕೋಟಿ; ಕೊರತೆ ಧನವಿನಿಯೋಗದಿಂದ ೧೨೦೦ ಕೋಟಿ— ಹೀಗೆ ಒಟ್ಟು ೪೪೦೦ ಕೋಟಿ ರೂಪಾಯಿಗಳನ್ನು ಕೂಡಿಸಬಹುದೆಂದು ನಂಬಿದ್ದಾರೆ. ಇನ್ನೂ ಬಾಕಿ ಉಳಿಯುವ ೪೦೦ ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಉಪಾಯ ತಿಳಿದುಬಂದಿಲ್ಲ.

ಮೇಲಿನ ಅಂದಾಜುಗಳಲ್ಲಿ ಸಾರ್ವಜನಿಕರು ಎಷ್ಟರ ಮಟ್ಟಿಗೆ ಭರವಸೆಯಿಡಬಹುದೋ— ಹೇಳುವಂತಿಲ್ಲ. ವಿದೇಶಗಳು ೮೦೦ ಕೋಟಿ ರೂಪಾಯಿಗಳಷ್ಟು ಹೆಚ್ಚು ಮೊತ್ತದಲ್ಲಿ ಸಹಾಯ ನೀಡುವುದು ತೀರ ಸಂಶಯ. ಅಮೇರಿಕದ ಕಡೆಯಿಂದ ನಮಗೆ ಇಷ್ಟರ ವರೆಗೆ ಧಾರಾಳ ಆರ್ಥಿಕ ಸಹಾಯ ಸಿಗುತ್ತಿತ್ತು; ಕೊಲೊಂಬೊ ರಾಷ್ಟ್ರಗಳಿಂದಲೂ ನೆರವು ದೊರಕುತ್ತಿತ್ತು— ನಮ್ಮ ಕ್ರಿಯಾತ್ಮಕ ತಾಟಸ್ಥ್ಯ ನೀತಿಯು ನೆಲೆಯನ್ನರಿಯುವ ಸಾಮರ್ಥ್ಯ ಪಡೆದು ಬಂದಿರದ ಪಶ್ಚಿಮ ಜಗತ್ತಿನ ರಾಷ್ಟ್ರಗಳು ಸಾಮ್ಯವಾದಿ ರಾಷ್ಟ್ರಗಳೊಡನೆಯೂ ಸಹಜೀವನ ನಡೆಸುವ ನಮ್ಮ ಉದಾತ್ತ ವರ್ತನೆಯ ಬೆಲೆಯನ್ನರಿಯಲಾರದೆ ಸಿಡುಕುಗೊಂಡು ಸಹಾಯದಿಂದ ವಿಮುಖವಾಗುವ ಭಯ ಇಂದುಎಂದಿಗಿಂತ ಹೆಚ್ಚಾಗಿದೆ. ಇತ್ತೀಚೆಗೆ ಅಮೇರಿಕದ ಪ್ರಭೃತಿಗಳು ಕಮ್ಯುನಿಸ್ಟೇತರ ರಾಷ್ಟ್ರಗಳಿಗೆ ದೀರ್ಘಾವಧಿಯ ಆರ್ಥಿಕ ಸಹಾಯ ನೀಡಬೇಕೆಂದು ಹೇಳುತ್ತಿದ್ದರೂ ಇದು ಅಮೇರಿಕದ ಪಾಲಿನ ಅಧ್ಯಕ್ಷ ಚುನಾವಣೆಯ ವರ್ಷನೆಂದು ಸ್ಮರಿಸಬೇಕಾಗಿದೆ.

ಇದೇ ರೀತಿಯಲ್ಲಿ ಹೊಸ ತೆರಿಗೆಗಳಿಂದ ೪೫೦ ಕೋಟಿ ರೂಪಾಯಿಗಳ ಆದಾಯ ಬಂದೀತೆ ಎಂದೂ ಸಂಶಯವಾಗುತ್ತದೆ. ಜನರು ಇಷ್ಟು ಹೆಚ್ಚಿನ ಕರಭಾರವನ್ನು ಹೊರುವ ಚೇತನ ಪಡೆದಿರುವರೆ ಎಂಬುದೇ ಇಲ್ಲಿ ವಿಚಾರಣೀಯವಾದ ವಿಷಯ ಒಂದು ಪಕ್ಷಕ್ಕೆ ತೆರಿಗೆಗಳು ಇಷ್ಟು ಹಣವನ್ನು ಒದಗಿಸಿ ಕೊಡಬಲ್ಲವಾದರೆ ಆಗ ಜನರ ಕೈಯಲ್ಲಿ ಚಿಕ್ಕ ಉಳಿತಾಯನಿಧಿಯಲ್ಲಿ ನಿಕ್ಷೇಪಿಸುವುದಕ್ಕಾಗಲೀ ಸಾಲರೂಪದಲ್ಲಿ ಸರಕಾರಕ್ಕೆ ಕೊಡಲಿಕ್ಕಾಗಲೀ ೧೨೦೦ ಕೋಟಿ ರೂಪಾಯಿಯಷ್ಟು ಹಣ ಉಳಿದೀತೆ ಎಂಬ ಪ್ರಶ್ನೆ ಮುಂದೆ ಬರುತ್ತದೆ. ಭಾರತೀಯರ ಬಡತನದ ಕಟು ಅನುಭವವು ಇಂಥ ಸಾಧ್ಯತೆಯ ಮಟ್ಟಿಗೆ ನಿರಾಶೆಯನ್ನು ಹೊಂತೋರಿಕೆಗೆ ಉಂಟು ಮಾಡುವಂಥದೆನ್ನದೆ ನಿರ್ವಾಹವಿಲ್ಲ

ಕೊರತೆ ಧನವಿನಿಯೋಗ ಪದ್ಧತಿಯು ತನ್ನೊಡನೆ ವಸ್ತುಗಳ ಬೆಲೆ ಹೆಚ್ಚಿಕೊಳ್ಳುವ ಪರಿಸ್ಥಿತಿಯನ್ನು ತಂದೊಡ್ಡುತ್ತದೆ. ಎಂದು ಸಾಮಾನ್ಯವಾಗಿ ಎಲ್ಲ ಅರ್ಥಶಾಸ್ತ್ರಜ್ಞರೂ ಎಚ್ಚರಿಕೆ ಕೊಡುತ್ತಲೇ ಬಂದಿದ್ದಾರೆ. ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯಲ್ಲಿ ಬೆಲೆನಿಯಂತ್ರಣ ಕ್ರಮಗಳನ್ನು ಕೈಗೊಂಡು ಮತ್ತು ಉತ್ಪಾದನೆಯ ಸಮಾನ ವಿತರಣೆಯ ವ್ಯವಸ್ಥೆಗಳನ್ನು ಏರ್ಪಡಿಸಿ ಸಂಭಾವ್ಯ ಅತಿಪ್ರಸರಣ ಮತ್ತು ದ- ದುಷ್ಪರಿಣಾಮಗಳನ್ನು ತಡೆಗಟ್ಟಬಹುದೆಂಬ ಸೂಚನೆ ಮಂಡಿಸಲ್ಪಟ್ಟಿತು. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಯುದ್ಧಕಾಲದಲ್ಲಿಯೂ ಆ ನಂತರ ಕೆಲವು ವರ್ಷಗಳ ವರೆಗೂ ಇದ್ದ ನಿಯಂತ್ರಣಗಳ ಕಹಿ ಹಾಗು ಕಟುಅನುಭವ ನಮ್ಮ ಪಾಲಿಗೆ ಪುನಃ ಬರುವುದೋ ಎಂಬ ದಿಗಿಲಾಗುತ್ತದೆ.

ಕೊನೆಯದಾಗಿ ಸರಕಾರದ ಆದಾಯವು ಎಣಿಸಿದಂತೆ ೪೪೦೦ ಕೋಟಿಗಳ ಮಟ್ಟಕ್ಕೆ ಮುಟ್ಟಿದರೂ ಮತ್ತೂ ಉಳಿಯುವ ೪೦೦ ಕೋಟಿ ರೂಪಾಯಿಗಳ ಕೊರತೆಯು ಯೋಜನೆಯಲ್ಲಿ ಈಗ ಉದ್ದೇಶಿಸಿದ ಕೆಲವು ಕೆಲಸಗಳನ್ನು ಕೈಬಿಡಬೇಕಾಗಿ ಬರುವ ಪರಿಸ್ಥಿತಿಯನ್ನು ನಿರ್ಮಿಸಬಹುದು. ನಮ್ಮ ಪಂಚವಾರ್ಷಿಕ ಯೋಜನೆಯನ್ನು ಸಪ್ತವಾರ್ಷಿಕ ಯೋಜನೆಯಾಗಿ ಪರಿವರ್ತಿಸಿದರಾಗದೆ— ಎಂದು ಶ್ರೀ ಎನ್. ಸಿ. ಚಟರ್ಜಿಯವರು ಹೇಳಿದ ಮಾತನ್ನಿಲ್ಲಿ ನೆನೆಯಬಹುದು. ಎಲ್ಲವೂ ಸಾರ್ವಜನಿಕ ರಂಗದಲ್ಲಿ ಸುಸೂತ್ರ ನಡೆಯಿತೆಂದು ಇಟ್ಟುಕೊಂಡರೂ ಖಾಸಗಿ ರಂಗವು ೨೩೦೦ ಕೋಟಿ ರೂಪಾಯಿಗಳ ಬಂಡವಾಳವನ್ನು ತಾನಾಗಿಯೇ ಒದಗಿಸಿಕೊಂಡು ಬೆಳೆಯಬಲ್ಲುದೆ ಎಂಬುದು ಮತ್ತೂ ಉತ್ತರಿಸಲ್ಪಡದ ಪ್ರಶ್ನೆಯಾಗಿಯೇ ಉಳಿಯುತ್ತದೆ. ಏಕೆಂದರೆ ಖಾಸಗಿ ರಂಗದಲ್ಲಿ ಬಂಡವಾಳ ಹಾಕುವವರಿಗೆ ಈಗ ಭಯವೆನಿಸುತ್ತಿದೆ; ಅಲ್ಲದೆ ಎಲ್ಲ ಸಂಪತ್ತನ್ನೂ ಸರಕಾರವು ಹೀರಿಕೊಳ್ಳುವಷ್ಟು ಸಾರ್ವಜನಿಕ ರಂಗದ ಗಾತ್ರವು ದೊಡ್ಡದಿರುವಾಗ ಖಾಸಗಿ ರಂಗಕ್ಕೆ ಉಳಿಯುವುದಾದರೂ ಏನು?

ಆದರೆ ಇವೆಲ್ಲವೂ ಕೇವಲ ಭಯಗಳು—ಎಂದಿಷ್ಟೇ ಭಾವಿಸೋಣ! ನಮ್ಮ ಕುಶಾಗ್ರಮತಿಯಾದ ಅರ್ಥಸಚಿವರ ಕೈಯಲ್ಲಿ ರಾಷ್ಟ್ರದ ಆರ್ಥಿಕ ಪುನರುಜ್ಜೀವನವು ಯಶಸ್ವಿಯಾಗಿ ನೆರವೇರಬಲ್ಲುದೆಂಬ ಭರವಸೆಯನ್ನಿಡೋಣ! ನೆಹರುಗಳ ನೇತೃತ್ವದಲ್ಲಿ ಪುನಾರಚನೆಯ ಕಾರ್ಯವು ಸುಲಭದಲ್ಲಿ ಸಾಧಿಸಲ್ಪಡುವುದೆಂದೂ ಆಶಿಸೋಣ! ಆಗ ನಮ್ಮ ಕರ್ತವ್ಯವು ಸರ್ವರೀತಿಯಿಂದ ಯೋಜನೆಗೆ ಬೆಂಬಲವಿತ್ತು ಸಹಕರಿಸುವುದೇ ಆಗುತ್ತದೆ! ಇದಕ್ಕೆ ಬದ್ಧರಾಗೋಣ!

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

(೩ನೇ ಪುಟದಿಂದ)

ರುಗಿದ್ದಾರೆ. ಸಂಪತ್ತಿದ್ದರೂ ದರಿದ್ರನಾರಾಯಣನಿಗೆ ಮುಡುಪಿಡುವ ಬುದ್ಧಿಯೂ ಔದಾರ್ಯ ಭಾವನೆಯೂ ಮಠಕ್ಕಲ್ಲ, ಮಠಾಧಿಪತಿಗಳಿಗೆ ಬರಬೇಕು: ಅದಮಾರು ಮಠಾಧೀಶರ ವರ್ತನೆ ಈ ತೆರನ ಔದಾರ್ಯಕ್ಕೆ ಇತ್ತೀಚೆಯ ನಿದರ್ಶನ.

ಹೊಸ ಪರಂಪರೆ

ವಾಸ್ತವವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಹೊಸ ಪರಂಪರೆಯ ನಾಂದಿ ಹಾಕಿದ ಫಲಿಮಾರು ಮಠದ ಶ್ರೀ ಪುದ್ರಘುಮಾನ್ಯತೀರ್ಥರ ಬಳಿಕ ಶ್ರೀ ಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರು ಕೆಲಮಟ್ಟಿಗೆ ಈ ನಾವೀನ್ಯವನ್ನು ಉಳಿಸಿಕೊಂಡು ಬಂದರು; ಮುಂದೆ ಅದು ಶ್ರೀ ಪೇಜಾವರ ಮಠಾಧೀಶರ ಪರ್ಯಾಯ ಕಾಲದಲ್ಲಿ ತೀರ ಹೊಸ ರೂಪದಲ್ಲಿ ಬೆಳಗಿತು. ಯುದ್ಧ ಕಾಲದ ಹಿಡಿತ, ಬಿಗಿತ ಹಾಗು ನಾನಿರಾರು ಬಗೆಯ ಅತಿ ಚಣಿಗಳು ಇಲ್ಲದೆ ಹೋದುದು ಸ್ವಾಮಿಗಳ ಉತ್ಸಾಹಕ್ಕೆ ಸಹಕಾರಿಯಾಯಿತೆಂದು ಹೇಳಬಹುದು ವಿದ್ವಾಂಸರಿಗೆ ಮನ್ನಣೆ, ವಿದ್ಯಾರ್ಥಿಗಳಿಗೆ ಶಿಕ್ಷಣ ಹಾಗು ಭೋಜನ ಸೌಲಭ್ಯ, ಕಲಾವಿದರಿಗೆ ಸನ್ಮಾನಗಳು ಧಾರಾಳವಾಗಿ ಪ್ರಾಪ್ತವಾಗಹತ್ತಿದವು. ತತ್ತ್ವಜ್ಞಾನಾಮೃತಪಾನಕ್ಕಿಂತಲೂ ಈ ಬಗೆಯ ಧಾರಾಳ ವರ್ತನೆಯು ಹೆಚ್ಚಿನ ಸುಖವನ್ನು ಜನಸಾಮಾನ್ಯರ ಪಾಲಿಗೆ ತಂದುಕೊಟ್ಟಿತು.

ಈಗಿನ ಫಲಿಮಾರು ಶ್ರೀಗಳ ಪರ್ಯಾಯ ಕಾಲದಲ್ಲಿ ಇದೇ ಸಂಪ್ರದಾಯ ಮುಂದರಿಯಿತು—ಇದಕ್ಕೆ ಕಾರಣಭೂತರಾದವರೇ ಇಂದು ಪರ್ಯಾಯ ಪೀಠವೇರಿರುವ ಶ್ರೀ ಅದಮಾರು ಮಠಾಧಿಪತಿಗಳೆಂದು ಎಲ್ಲರಿಗೂ ಗೊತ್ತು. ಇನ್ನೂ ಎಳೆವಯಸ್ಸಿನ ತನ್ನ ಶಿಷ್ಯ ಸ್ವಾಮಿಗಳ ಪರ್ಯಾಯ ಕಾಲದಲ್ಲಿ ಲೋಪದೋಷಗಳು ಕಾಣಿಸಿಕೊಳ್ಳದಂತೆ ಶ್ರೀ ಅದಮಾರು ಮಠಾಧೀಶರು ತಾವೇ ಸ್ವತಃ ಮೇಲ್ವಿಚಾರಣೆಗೈದು ಎಲ್ಲ ಕಾರ್ಯಭಾರಗಳನ್ನೂ ಶಿಷ್ಯ ಸ್ವಾಮಿಗಳ ಕೈಯಿಂದ ಸಾಂಗಗೊಳಿಸಿದರು. ಈ ಅನುಭವವು ಅವರ ಪರ್ಯಾಯ ಕಾಲದ ಶೋಭೆ ಹೆಚ್ಚಿಸಲು ಯೋಗ್ಯ ಸಿದ್ಧತೆಯಾಗಿದೆ ಎಂದು ಜನರ ವಿಶ್ವಾಸ.

ಜನತೆಯ ಆಸೆ

ಶ್ರೀ ಪೇಜಾವರ ಮಠಾಧೀಶರು ಅಖಿಲ ಭಾರತ ಮಾಧ್ವ ತತ್ತ್ವಜ್ಞಾನ ಸಮ್ಮೇಳನವನ್ನು ನೆರೆಯಿಸಿದ್ದಂತೆ ಶ್ರೀ ಅದಮಾರು ಮಠಾಧೀಶರು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉಡುಪಿಯಲ್ಲಿ ಕರೆಯಲಾರರೆ ಎಂದೊಬ್ಬ ಮಹನೀಯರು ಆಶಿಸಿದ್ದಾರೆ. ಇದು ಸ್ವಾಮಿಗಳ ಚಿತ್ತಕ್ಕೆ ಸೇರಿದ ವಿಷಯ— ಇದನ್ನು ಅವರು ಹೆಚ್ಚು ಮಹತ್ವದ್ದೆಂದು ಭಾವಿಸದಿದ್ದರೂ ಅಡ್ಡಿಯಿಲ್ಲ. ಆದರೆ ಅವರು ಗಮನಿಸಲೇಬೇಕಾದ ಹಲವು ವಿಷಯಗಳಿವೆ— ಉಡುಪಿ ರಥಬೀದಿಯ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಹಾಕುವಲ್ಲಿ ಅವರು ವಹಿಸಿದ ಆಸ್ಥೆ ಎಲ್ಲರ ಮೆಚ್ಚುಗೆಯನ್ನು ಗಳಿಸಿದೆ. ಅದರೊಡನೆ ಶ್ರೀ ಕೃಷ್ಣನ ದರ್ಶನಕ್ಕಾಗಿ ಬರುವವರ ಅನೇಕ ಅನಾನುಕೂಲತೆಗಳ ನಿವಾರಣೆಯೂ ಆಗಬೇಕಾಗಿದೆ.

ಯಾತ್ರಿಕರಿಗೆ ಸುಖಕರ ವಸತಿಯ ಅನುಕೂಲತೆ, ಭೋಜನಾಲಯದ ವಾತಾವರಣದಲ್ಲಿ ಹೆಚ್ಚಿನ ಶುಚಿ, ವಿದ್ವಾಂಸರು ನೆರೆಯುವ ಸಭಾಂಗಣವನ್ನು ಆಧುನಿಕ ವಿಧಾನದಿಂದ ಸಜ್ಜುಗೊಳಿಸುವುದು— ಇತ್ಯಾದಿ ನೆರವೇರಬೇಕಾಗಿದೆ; ಭಿಕ್ಷುಕರಿಗಾಗಿ ಒಳ್ಳೆಯ ಛತ್ರವನ್ನೂ ತೆರೆಯುವುದು ಹಿತಕರ. ಇಂದಿನ ಧರ್ಮ ಪೀಠಗಳು ಧರ್ಮಜಾಗೃತಿಯೊಂದಿಗೆ ಈ ಲೌಕಿಕ ವ್ಯವಹಾರಗಳಲ್ಲೂ ಶ್ರಮ ವಹಿಸಿ ದುಡಿದರೆ, ಅವರ ಕೀರ್ತಿ ನಾಲ್ದೆಸೆಗೆ ಹಬ್ಬುತ್ತದೆ, ಜನತಾ ಜನಾರ್ಧನನ ಸೇವೆ ನಿಜವಾದ ಅರ್ಥದಲ್ಲಿ ಕೈಗೂಡುತ್ತದೆ. ನಿತ್ಯೋತ್ಸವ ನಡೆಯುವ ಶ್ರೀಕೃಷ್ಣ ಸಾನ್ನಿಧ್ಯವು ಆಗ ಅತ್ಯಂತ ಪವಿತ್ರವೆಂದು ಸಾಮಾನ್ಯ ಲೌಕಿಕ ಜನ ಸಮುದಾಯವೂ ಹೇಳಹತ್ತುತ್ತದೆ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O. Box No. 3219, BOMBAY 3.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ **ಭುವನೇಂದ್ರ** ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE POPULAR INSURANCE CO., LTD.

"POPULAR BUILDINGS" MANGALORE-1

(೨ನೇ ಪುಟದಿಂದ)

ಆದರೆ ಮುಂಬಯಿಯಲ್ಲಿ ನೆಲಸಿದ್ದ ಪೋರ್ಚುಗೀಜರು ಈ ಹಸ್ತಾಂತರವನ್ನು ವಿರೋಧಿಸಿದರು; ಆಂಗ್ಲ ಸೈನ್ಯಗಳನ್ನು ಉಪಯೋಗಿಸಿ ಈ ಪ್ರತಿಭಟನೆಯನ್ನು ನಿಷ್ಕ್ರಿಯಗೊಳಿಸಲಾಯಿತು. ಮುಂದೆ ಮುಂಬಯಿ ನಗರವು ಜನರಲ್ ಆಂಗೀರ್ ಎಂಬವನ ಮೇಲ್ವಿಚಾರಣೆಯಲ್ಲಿ ಹಲವು ಅಭಿವೃದ್ಧಿಯನ್ನು ಹೊಂದಿತು. ಆತನು ತನ್ನ ಕೇಂದ್ರವನ್ನು ಸೂರತ್ತಿನಿಂದ ಮುಂಬಯಿಗೆ ವರ್ಗಾಯಿಸಿದ್ದಲ್ಲದೆ, ಉದಾರವಾದ ಆಡಳಿತವನ್ನೂ ನಡೆಸಿದನು. ಇದರ ಪರಿಣಾಮವಾಗಿ ಎಲ್ಲ ಜಾತಿ ಮತ್ತು ವರ್ಗಗಳ ಜನರೂ ಮುಂಬಯಿಯಲ್ಲಿ ನೆಮ್ಮದಿಯಿಂದ ಜೀವನ ನಡೆಸಿಕೊಂಡಿರುವುದು ಸಾಧ್ಯವಾಯಿತು – ಹೊರಗಿನಿಂದ ಜನರು ಹಿಂಡುಗಟ್ಟಿ ಈ ನಗರಕ್ಕೆ ಬರಲು ಇದೊಂದು ಆಕರ್ಷಣೆಯಾಗಿಯೂ ಪರಿಣಮಿಸಿತು.

ಗುಜರಾಥಿನಿಂದ ವಣಿಕರು ಬಂದು ಮುಂಬಯಿಯಲ್ಲಿ ಕಾಲೂರಲು ಆಗ ಪ್ರಾರಂಭಿಸಿದರು. ಪಾರ್ಸಿಗಳೂ ಆರ್ಮೇನಿಯನ್ನರೂ ಅವರನ್ನು ಅನುಸರಿಸಿದರು. ಹತ್ತು ಸಾವಿರದಿಂದ ಅರುವತ್ತು ಸಾವಿರಕ್ಕೆ ಜನಸಂಖ್ಯೆಯು ಏರಿತು. ದುರ್ದೈವದಿಂದ ಸಾಂಕ್ರಾಮಿಕ ಜಾಡ್ಯವು ತಲೆದೋರಿ ಸಾವಿರಾರು ಮಂದಿಯನ್ನು ಆ ಹೊತ್ತಿಗೆ ಆಹುತಿ ತೆಗೆದುಕೊಂಡಿತು. ಇದನ್ನು ತಡೆಗಟ್ಟಲು ಆಂಗೀರನು ೧೬೭೫ರಲ್ಲಿ ನಗರಕ್ಕೆ ಚರಂಡಿ ವ್ಯವಸ್ಥೆಯನ್ನು ಕೈಗೊಂಡನು.

ಕ್ರಮೇಣ ಅಭಿವೃದ್ಧಿ

ಆಂಗೀರನ ತರುವಾಯ ರೋಲ್ಟ್ ಎಂಬವನು ಮುಂಬಯಿಯ ಮೇಲ್ವಿಚಾರಣೆಗೆ ನೇಮಕವಾದನು. ಈತನ ಕಾಲದಲ್ಲಿ ಆಂಗೀರನ ಆಡಳಿತದ ವೈಶಿಷ್ಟ್ಯಗಳ ನಾಶವಾಯಿತೆಂದೇ ಹೇಳಬಹುದು. ಆಂಗೀರನು ಮೊಗಲ ನೌಕಾದಳದ ಸಿದ್ದಿ ವೀರರಿಗೆ ಚಳಿಗಾಲದಲ್ಲಿ ಮುಂಬಯಿ ನಗರದಲ್ಲಿ ಸೈನ್ಯ ಕೇಂದ್ರವನ್ನಿಡಲು ಅನುಮತಿಸಿದ್ದನು; ಆದರೆ ಮರಾಠರ ವಿರುದ್ಧ ಈ ರಾಜ್ಯವನ್ನು ಉಪಯೋಗಿಸಬಾರದೆಂದು ನಿರ್ಬಂಧವನ್ನು ಸಹ ಹೇರಿದ್ದನು. ರೋಲ್ಟನ ಕಾಲದಲ್ಲಿ ಈ ನಿರ್ಬಂಧ ಸಡಿಲಾಗಿ ಮರಾಠರೂ ಸಿದ್ದಿ ವೀರರೂ ಮುಂಬಯಿ ಬಂದರವನ್ನು ನೌಕಾ ದಳದ ಕೇಂದ್ರವಾಗಿ ಉಪಯೋಗಿಸಿಕೊಳ್ಳಲು ಸಾಹಸ ಪಟ್ಟು ಘರ್ಷಣೆಗೆ ಎಡೆಕೊಟ್ಟರು.

ರೋಲ್ಟನ ನಿರ್ಬಲ ಆಡಳಿತವು ಇದಕ್ಕೆ ಕಾರಣವಾಗಿದ್ದರೂ ಕಂಪೆನಿಯವರು ಕೂಡಲೇ ಇತ್ತ ಗಮನಕೊಡಲಿಲ್ಲ. ಸೈನಿಕರು ಸ್ವಾರ್ಥಕ್ಕಾಗಿ ಈ ಘರ್ಷಣೆಯ ಪ್ರಯೋಜನ ಪಡೆಯಲು ಹವಣಿಸಿ, ದಂಗೆಯೊಂದು ನಡೆದಾಗ ಮಾತ್ರ ಅವರ ನಾಯಕನನ್ನು ಹಿಡಿದು ಕೊಲ್ಲಲಾಯಿತು. ಇದರಿಂದ ಪರಿಸ್ಥಿತಿಯು ಸುಧಾರಿಸಲಿಲ್ಲ. ೧೯೪೬ರಲ್ಲಿ, ನಮ್ಮ ಕಾಲದಲ್ಲಿ, ಹೇಗೆ ಮುಂಬಯಿಯು ನೌಕಾ ದಳದ ದಂಗೆಗೆ ಕೇಂದ್ರವಾಯಿತೋ, ಅದರಂತೆ ಮೊದಲನೆಯ ಮಹಾ ದಂಗೆಯು ೧೬೮೩ರಲ್ಲಿ ನಡೆಯಿತು. ರಿಚರ್ಡ್ ಕೇಗ್ವಿನ್ ಎಂಬವನು ಇದರ ನೇತೃತ್ವ ವಹಿಸಿದ್ದನು. ಆತನು ಮರಾಠರಿಂದ ಅನೇಕ ರಿಯಾಯತಿ ಪಡೆದು ತೆರಿಗೆ ಸುಧಾರಣೆ ನಡೆಸಿ ಹಲವು ಹೆಸರುಗಳಿಸಿದರೂ ಹಿಂದಿನಿಂದ ಆಂಗ್ಲ ಪ್ರಭುತ್ವದ ಆದೇಶವೊಂದಕ್ಕೆ ಮಣಿದು ದಂಗೆಯ ಪರಿಸ್ಥಿತಿಗೆ ಆತನು ಕೊನೆ ಹಾಕಿದನು.

ಕಂಪೆನಿಯವರು ತಮ್ಮ ಚಟುವಟಿಕೆಯನ್ನು ಮುಂಬಯಿಯಲ್ಲಿ ಮುಂದೆ ಧಾರಾಳವಾಗಿ ವಿಸ್ತರಿಸಿದರು. ೧೭೩೩ರಲ್ಲಿ ಸಿದ್ದಿಗಳೊಡನೆ ಒಪ್ಪಂದ ಮಾಡಿಕೊಂಡು ಮುಂಬಯಿಯನ್ನು ಪೂರೈಕೆಯ ಕೇಂದ್ರವಾಗಿ ಮಾರ್ಪಡಿಸಿದರು. ಮರಾಠರು ೧೭೩೭—೩೯ರಲ್ಲಿ ಮುಂಬಯಿಗೆ ಹತ್ತಿರದ ಸಾಲ್ಸೆಟ್ ಮತ್ತು ಬೇಸಿನ್ ದ್ವೀಪಗಳನ್ನು ಗೆದ್ದುಕೊಂಡುದರಿಂದ ಪೋರ್ಚುಗೀಜರ ಭಯವೂ ಬ್ರಿಟಿಷರಿಗೆ ಇಲ್ಲವಾಯಿತು. ಫ್ರೆಂಚರೊಡನೆ ೧೭೪೪—೪೮ ಮತ್ತು ೧೭೫೬—೬೩ನೇ ಅವಧಿಯಲ್ಲಿ ಯುರೋಪಿನಲ್ಲಿ ನಡೆದ ಯುದ್ಧವು ಮುಂಬಯಿಯ ಚಟುವಟಿಕೆ ಹೆಚ್ಚಲು ನೆರವಾಯಿತು. ಪರಿಣಾಮವಾಗಿ ಧಕ್ಕೆಯನ್ನು ಮುಂಬಯಿ ಬಂದರದಲ್ಲಿ ಕಟ್ಟಲಾಯಿತು. ಚೀನದೊಡನೆ ಹತ್ತಿಯ ವ್ಯಾಪಾರ ಕೇಂದ್ರವಾಗಿ ಸಂಪರ್ಕ ಸ್ಥಾಪನೆಯಾದ ಬಳಿಕ (೧೮೨೦) ಮುಂಬಯಿ ನಗರವು ಪ್ರಬುದ್ಧಾವಸ್ಥೆಯನ್ನು ಮುಟ್ಟಿತು.

ಇಂದಿನ ಮುಂಬಯಿ

ಮುಂಬಯಿಯ ಜನಸಂಖ್ಯೆಯು ಮುಂದೆ ಹೆಚ್ಚುತ್ತಾ ಬಂದಿತು. ೧೭೮೦ರಲ್ಲಿ ೧೧೩೦೦೦ ಜನರು ಅಲ್ಲಿ ನೆಲಸಿದ್ದರು. ಮುಖ್ಯ ಭೂಮಿಯಲ್ಲಿ ಕ್ಷಾಮವು ಕಾಲಿರಿಸಿದಾಗ ಮುಂಬಯಿಯಲ್ಲಿ ಆಶ್ರಯಕ್ಕೆ ಬರುವ ಜನರ ಸಂಖ್ಯೆ ತುಂಬ ಅಧಿಕವಾಯಿತು. ೧೮೦೩ರಲ್ಲಿ ರೋಮ್ ನಗರವನ್ನು ನೀರೊ ಸುಟ್ಟು ಬಿಟ್ಟಂತೆ ಅಲ್ಲವಾದರೂ ಮುಂಬಯಿಗೆ ಹೇಗೋ ಬೆಂಕಿ ತಗುಲಿ, ನಗರವು ಬಹಳಷ್ಟು ಧ್ವಂಸವಾಯಿತು. ಅದನ್ನು ಹೊಸತಾಗಿ ಕಟ್ಟಿಸಲು ನಡೆಸಿದ ಪ್ರಯತ್ನಗಳು ಜನ ಜೀವನದ ಸುಧಾರಣೆಗೆ ಅಡಿಗಲ್ಲನ್ನು ಹಾಕಿದವೆಂದು ಹೇಳಬಹುದು.

ಮರಾಠರನ್ನು ಬ್ರಿಟಿಷರು ಗೆದ್ದುಕೊಂಡ ತರುವಾಯ ದಕ್ಷಿಣದ ಹಿನ್ನಾಡನ್ನು ಪಡೆದು ಮುಂಬಯಿಯು ತೀವ್ರ ಅಭಿವೃದ್ಧಿಯನ್ನು ಸಾಧಿಸಿತು. ಡಾಲಹೌಸಿಯು ರೈಲ್ವೆಯನ್ನು ಮುಂಬಯಿಯಲ್ಲಿ ಪ್ರಾರಂಭಿಸಿದುದರಿಂದಲೂ ಸುಯೇಜ್ ಕಾಲುವೆಯನ್ನು ತೋಡಿ ಯುರೋಪ್ಯ ರಾಷ್ಟ್ರಗಳಿಗೆ ಭಾರತಕ್ಕೆ ಬರಲು ತೀರ ಹತ್ತಿರದ ಮಾರ್ಗ ಏರ್ಪಟ್ಟುದರಿಂದಲೂ ಮುಂಬಯಿಯ ವ್ಯಾಪಾರ ಪರಿಪುಷ್ಟವಾಯಿತು. ೧೮೯೧ನೇ ವರ್ಷದಲ್ಲಿ ಜನಸಂಖ್ಯೆ ೮೨೧೦೦೦ ಆಯಿತು.

ನಗರದ ಬೆಳವಣಿಗೆಗಾಗಿ ಬಹಳ ಶ್ರಮ ವಹಿಸಿದವರೆಂದರೆ ಗವರ್ನರ್ ಹುದ್ದೆಯಲ್ಲಿದ್ದ ಸರ್ ಬಾರ್ಟ್ಲೆ ಫ್ರೆರೆ-ಮುಂಬಯಿಯಲ್ಲಿ ೧೮೬೪ - ೬೬ನೇ ಅವಧಿಯಲ್ಲಿ ಕಾಣಿಸಿಕೊಂಡ ಆರ್ಥಿಕ ವಿಷಮತೆಯ ವಾತಾವರಣದಲ್ಲಿಯೂ ಅದಕ್ಕೆ ಹಿಂದೆ ಹಾಗು ಮುಂದೆ ನಡೆದ ಗೊಂದಲದ ನಡುವೆಯೂ ನೆಮ್ಮದಿಯ ಶಾಂತ ಜೀವನ ನಡೆಸುವುದು ನಾಗರಿಕರಿಗೆ ಅಸಾಧ್ಯವೆಂದು ತೋರಿತು. ಆಗ ಈ ಆಂಗ್ಲ ಗವರ್ನರರು ಏಕನಿಷ್ಠೆಯಿಂದ ಮಾಡಿದ್ದು ಮುಂಬಯಿ ಈಗ ಏನಿದೆಯೊ ಅದನ್ನು ರೂಪಿಸಿದರೆಂದರೆ ಅತ್ಯುಕ್ತಿಯಾಗಲಾರದು.

ರಾಷ್ಟ್ರದ ಎಲ್ಲ ನಾಗರಿಕ ಚಟುವಟಿಕೆಗಳಿಗೂ ಆಕರವೆನಿಸಿದ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ವದ ಪಾತ್ರ ವಹಿಸಿದ ಮುಂಬಯಿ ನಗರವು ಔದ್ಯಮಿಕ ಹಾಗು ವಾಣಿಜ್ಯ ಕೇಂದ್ರವೆಂದು ಇಂದು ಜಗತ್ತಿನಲ್ಲಿ ಪ್ರಸಿದ್ಧಿ ಪಡೆದಿದೆ. ಆಂಗ್ಲರು ತಮ್ಮ ಕೈಗೆ ಈ ನಗರ ಬಂದೊಡನೆಯೇ ೧೬೬೯ರಲ್ಲಿ ಒಂದು ಆಡಳಿತ ಮಂಡಳಿಕ್ಕೆ ಇದನ್ನು ಒಪ್ಪಿಸಿಕೊಟ್ಟಿದ್ದರು. ೧೮೮೨ರಲ್ಲಿ ಲಾರ್ಡ್ ರಿಪ್ಪನ್ ತಂದ ಸುಧಾರಣೆಯಂತೆ ಸ್ಥಳೀಯ ಆಡಳಿತಾಧಿಕಾರವು ನಾಗರಿಕರ ಕರಗತವಾಯಿತು. ೧೯೪೮ರಲ್ಲಿ ನಗರವು ೩೪ ವಾರ್ಡುಗಳಿಂದ ಕೂಡಿದ್ದಿತು. ಹೆಚ್ಚುತ್ತಿರುವ ಚಟುವಟಿಕೆಗಳ ದೆಸೆಯಿಂದ ವಿಶಾಲ ಮುಂಬಯಿಯನ್ನು ೧೯೫೦ರಲ್ಲಿ ರಚಿಸಿ ಏಳು ಹೊಸ ವಾರ್ಡುಗಳನ್ನು ಸೇರಿಸಿದರು. ಈಗ ಅಧಿಕಾರದಲ್ಲಿರುವ ಕಾರ್ಪೋರೇಶನೆಂಬ ಮಹಾ ನಗರ ಸಭೆಯು ೧೮೭೨ರಲ್ಲಿ ಆರಿಸಲ್ಪಟ್ಟಿತು.

ಜೀವರಕ್ಷಾಮೃತಂ ಎಂಬ ಆನಂದಕುಸುಮಾಕರ ಲೇಹ್ಯ



ಆರೋಗ್ಯಕ್ಕೂ ರಕ್ತವೃದ್ಧಿಗೂ ಉತ್ತಮ
ಕ್ಯಾಟಲೋಗ್ ಇನಾಮ
MALAYALA MAUNTHREEKA VAIDYASALA

ಮಧುರವಾದ
4 ವಿಧದ SR ಬೀಡಿಗಳನ್ನು
ಸಾವಿರಾರು ಜನರು ದಿನನಿತ್ಯ ಉಪಯೋಗಿಸುತ್ತಾರೆ.
ಏಕೆಂದರೆ:
೧. ಎಸ್. ಆರ್. ಉತ್ತಮ ತಂಬಾಕು, ಎಲೆಗಳಿಂದ ಕೂಡಿದ್ದಾಗಿರುತ್ತವೆ.
೨. ಎಸ್. ಆರ್. ಅನುಭವಸ್ಥ ಕೆಲಸಗಾರರಿಂದ ಕಟ್ಟಲ್ಪಟ್ಟವೆ.
೩. ಎಸ್. ಆರ್. ಪ್ರವೀಣ ಮೇಲ್ವಿಚಾರರಿಂದ ತಯಾರಿಸಿ ಪ್ಯಾಕ್ ಮಾಡಲ್ಪಟ್ಟವೆ.
೪. ಎಸ್. ಆರ್. ಸುರಕ್ಷಿತವಾದುದು. ಅದರಲ್ಲಿ ಯಾವ ಅಪಾಯಕಾರಿ ತಂಬಾಕಿನ ಮಿಶ್ರಣವಿಲ್ಲ.
ಆದುದರಿಂದ ಇಂದೇ ನಿಮ್ಮ ರುಚಿಗೆ ಹೊಂದಿಕೊಳ್ಳುವ 25.ರ ಪ್ಯಾಕೆಟೊಂದನ್ನು ಕೊಂಡುಕೊಳ್ಳಿರಿ.



ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.
S.R. BEEDI WORKS, UDIPI, S.K.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪೂರ್ವ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿ
ದಿ ವಿಜಯ ಬ್ಯಾಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಕುಮಾರಿ ಬಿಲ್ಲೆಗಳು (Govt.Regd.)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ. ಮಂಗಳೂರು

ನವ ಭಾರತದ ಪೂರ್ಣ ದರ್ಶನ

ಎಲ್ಲರೂ ನೋಡಬೇಕಾದ ಚಲಚ್ಚಿತ್ರ

ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರುಗಳು ರಶಿಯಕ್ಕೆ ನೀಡಿದ ಸಂದರ್ಶನವನ್ನು ಚಲಚ್ಚಿತ್ರ ರೂಪದಲ್ಲಿ ದಾಖಲು ಮಾಡಿದ ಅನುಭವವು ತುಂಬ ಲಾಭವನ್ನು ಈ ದೇಶಕ್ಕೆ ಉಂಟುಮಾಡಿದೆ. ಅದು ಜನರಿಗೆ ಚಾರಿತ್ರಿಕ ಮಹತ್ವದ ಪ್ರವಾಸದ ಸತ್ಪರಿಣಾಮಗಳನ್ನು ಮನಗಾಣಿಸಿದೆ. ದೇಶದಾದ್ಯಂತ ಎಲ್ಲ ಸುಶಿಕ್ಷಿತರೂ ತಿಳಿವಳಿಕೆಯುಳ್ಳ ಹೆಚ್ಚಿನ ಸಾಮಾನ್ಯರೂ ಈ ಚಲಚ್ಚಿತ್ರವನ್ನವಲೋಕಿಸಿ ಪ್ರಧಾನಿಗಳ ಜೊತೆಯಲ್ಲಿ ತಾವೂ ರಶ್ಯದ ಪ್ರವಾಸವನ್ನು ಕೈಕೊಂಡಂಥ ರೋಮಾಂಚಕ ಅನುಭವವನ್ನು ಹೊಂದಿದ್ದಾರೆ. ಭಾರತೀಯರ ಮಾನಸಿಕ ಸಂಸ್ಕಾರಕ್ಕೆ ಈ ಚಲಚ್ಚಿತ್ರದಿಂದ ವಿಶೇಷವಾದ ನೆಂವು ಲಭಿಸಿದೆ.

ಇದೀಗ ಭಾರತ ಸರಕಾರದ ಚಲಚ್ಚಿತ್ರ ವಿಭಾಗದವರು ಮೊನ್ನೆ ತಾನೆ ಭಾರತಕ್ಕೆ ಆಗಮಿಸಿ ಐದು ಸಾವಿರ ಮೈಲುಗಳಷ್ಟು ದೀರ್ಘವಾದ ಪ್ರವಾಸವನ್ನು ಈ ದೇಶದಲ್ಲಿ ಕೈಗೊಂಡು ಮರಳಿದ ರಶ್ಯದ ನಾಯಕದ್ವಯರ ಸಂಚಾರದ ದಾಖಲೆಯನ್ನು ಚಲಚ್ಚಿತ್ರದಲ್ಲಿ ಮೂಡಿಸಿದ್ದಾರೆ. ಕಳೆದ ವಾರ ಅದು ದೇಶದಾದ್ಯಂತ ಪ್ರಮುಖ ಪಟ್ಟಣಗಳಲ್ಲಿ ಪ್ರದರ್ಶಿಸಲ್ಪಟ್ಟಿತು; ಇನ್ನು ಕೆಲವೇ ದಿನಗಳಲ್ಲಿ ದೇಶದ ಸಾಮಾನ್ಯ ನಗರಗಳಲ್ಲಿರುವ ಚಲಚ್ಚಿತ್ರ ಮಂದಿರಗಳಲ್ಲೂ ಅದು ಪ್ರದರ್ಶಿಸಲ್ಪಡುವುದು ಖಂಡಿತ.

ರಶ್ಯದ ನಾಯಕರ ಪ್ರವಾಸ

ಹದಿನೈದು ಮಂದಿ ಭಾರತೀಯ ಚಲಚ್ಚಿತ್ರ ಗ್ರಾಹಕರು ಮಾರ್ಶಲ್ ಬುಲ್ಗಾನಿನ್ ಮತ್ತು ಮಿ. ಖ್ರುಶ್ಚೇವರ ಹಿಂದೆಯೂ ಮುಂದೆಯೂ ತಿರುಗುತ್ತಿದ್ದು ಸಾಮಾನ್ಯ ಚಿತ್ರ ಗ್ರಹಣದೊಟ್ಟಿಗೆ "ಗೇವಾ ಕಲರ್" ವರ್ಣ ಚಿತ್ರದಲ್ಲಿಯೂ ಅತಿಥಿಗಳ ಪ್ರವಾಸವನ್ನು ದಾಖಲು ಮಾಡಿಕೊಂಡರು. ಸುಮಾರು ಒಂದೂ ಮುಕ್ಕಾಲು ಗಂಟೆಯಷ್ಟು ಅವಧಿಯನ್ನು ನೋಡಲು ತೆಗೆದುಕೊಳ್ಳುವ ಚಲಚ್ಚಿತ್ರವು ಅವರಿಂದ ಹೀಗೆ ಸಿದ್ಧಗೊಳಿಸಲ್ಪಟ್ಟಿತು.

ರಶ್ಯದ ಚಲಚ್ಚಿತ್ರ ಗ್ರಾಹಕರು ಈ ಪ್ರವಾಸದ ಚಲಚ್ಚಿತ್ರವನ್ನು ಈಗಾಗಲೇ ತಮ್ಮ ದೇಶದಲ್ಲಿ ಸಿದ್ಧಪಡಿಸಿ ಪ್ರದರ್ಶಿಸಿಯಾಗಿದೆಯೆಂದೂ ಅದರ ಪ್ರತಿಯೊಂದು ಭಾರತಕ್ಕೆ ಬಂದಿರುವುದಾಗಿಯೂ ತಿಳಿದು ಬರುತ್ತದೆ. ರಶ್ಯದ ಚಿತ್ರಗ್ರಾಹಕರು ಭಾರತ ಸರಕಾರದ ಚಲಚ್ಚಿತ್ರಗ್ರಾಹಕರೊಡನೆ ಸ್ಪರ್ಧೆಯನ್ನು ಹೂಡದೆ ಸಹಕರಿಸಿದ್ದರು. ಆದರೆ ಅವರು ತೆಗೆದ ಚಿತ್ರಕ್ಕೂ ಭಾರತೀಯ ಚಲಚ್ಚಿತ್ರ ಗ್ರಾಹಕರು ನಿರ್ಮಿಸಿದ ಚಿತ್ರಕ್ಕೂ ಕೆಲವು ಮಹತ್ವದ ಭೇದಗಳಿವೆ ಎನ್ನಬಹುದು

ಭಾರತದ ದರ್ಶನ

ಭಾರತೀಯ ಚಲಚ್ಚಿತ್ರಗ್ರಾಹಕರಿಂದ ನಿರ್ಮಾಣಗೊಂಡು ನಮಗೆಲ್ಲರಿಗೂ ನೋಡಲು ಸಿಕ್ಕಿರುವ ಅಥವಾ ಸಿಗಲಿರುವ ಚಲಚ್ಚಿತ್ರದ ಹೆಸರು– "ಭಾರತದ ದರ್ಶನ" ಈ ಹೆಸರೆಷ್ಟು ರೋಮಾಂಚಕವೊ, ಅದು ನಮ್ಮ ಮೇಲೆ ಮಾಡುವ ಪರಿಣಾಮವೂ ಅಷ್ಟೇ ಗಂಭೀರವಾದುದಾಗಿದೆ; ಅದ್ಭುತವೆನಿಸಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಭಾರತದ ಸಂಪೂರ್ಣ ಚಿತ್ರವನ್ನಿದು ನಮ್ಮ ಮನಃ ಪಟಲದಲ್ಲಿ ರಿಸುತ್ತದೆ.

ಸನ್ಮಾನ್ಯ ಅತಿಥಿಗಳ ಪ್ರವಾಸದ ವರದಿಯನ್ನು ಸಿದ್ಧಪಡಿಸುವುದೇ ಈ ಚಲಚ್ಚಿತ್ರದ ಧ್ಯೇಯವಾಗಿಲ್ಲ— ಅತಿಥಿಗಳ ಭಾಷಣಗಳನ್ನು ಮುದ್ರಿಸುವುದೇ ಇದರ ಉದ್ದೇಶವಲ್ಲ. ನಮ್ಮೆಲ್ಲರ ಸಹಕಾರದಿಂದಲೂ ಸರಕಾರ ಹಾಗು ಖಾಸಗಿ ರಂಗದ ವಿಶೇಷ ಸಾಹಸದಿಂದಲೂ ರೂಪುಗೊಳ್ಳುತ್ತಿರುವ ರಾಷ್ಟ್ರದ ಪುನರುಜ್ಜೀವನ ಕಾರ್ಯವನ್ನು ಕಣ್ಣಿಗೆ ಕಟ್ಟುವಂತೆ ಎಲ್ಲರ ಮುಂದಿಡುವುದಕ್ಕೆ ಇಲ್ಲಿ ಮಹತ್ವ ಕೊಡಲಾಗಿದೆ.

ಅಭಿವೃದ್ಧಿ ಪ್ರಯತ್ನ

ರಶ್ಯದ ಅತಿಥಿಗಳ ಪ್ರವಾಸವು ನೆಪಮಾತ್ರವೆನಿಸುತ್ತದೆ— ಎಂದೊಮ್ಮೊಮ್ಮೆ ಹೊಳೆಯುವುದುಂಟು: ಮರುಕ್ಷಣದಲ್ಲಿ ಈ ಅತಿಥಿ ದ್ವಯರಲ್ಲದಿದ್ದರೆ ನಮಗೆ ರೂಪುಗೊಳ್ಳುತ್ತಿರುವ ನೂತನ ಭಾರತದ ಸ್ವರೂಪದ ಕಲ್ಪನೆಯನ್ನು ಒಂದೇ ನೋಟದಲ್ಲಿ ಮಾಡಿಕೊಳ್ಳಲು ಅವಕಾಶ ದೊರೆಯುತ್ತಿತ್ತೆ—ಎಂಬ ಭಾವನೆ ಮೂಡಿಕೊಳ್ಳುತ್ತದೆ. ರಶ್ಯದ ನಾಯಕರಿತ್ತ ಸಂದರ್ಶನವೇ ನೆಪವಾಗಿ ಆಸೇತು ಹಿಮಾಚಲ ಪರ್ಯಂತವಾದ ಭಾರತದ ಹೊಸ ಹೆಜ್ಜೆಗಳನ್ನು ಗುರುತಿಸುವ ಸದವಕಾಶವನ್ನು ನಮಗೆ ಈ ಚಲಚ್ಚಿತ್ರದಿಂದ ದೊರಕಿರುತ್ತದೆ.

ನಿನ್ನೆಯ ಹಾಗು—ಇಂದಿನ ಭಾರತದ ಚಿತ್ರ ಈ ಚಲಚ್ಚಿತ್ರದಲ್ಲಿದೆ—ರಾಜಕೀಯ ಧುರೀಣರೆನಿಸುವವರು ಸರಕಾರದ ವರ್ತನೆಯನ್ನು ಎಷ್ಟೇ ಆಕ್ಷೇಪಿಸಲಿ, ಟೀಕೆಮಾಡುವವರು ಏನೇ ಹೇಳಲಿ, ನಮ್ಮ ದೇಶದಲ್ಲಿ ಪ್ರಗತಿಯ ಸಲ್ಲಕ್ಷಣಗಳು ದೃಢವಾಗಿ ಮೂಡುತ್ತಿರುವುದನ್ನು ಈ ಚಲಚ್ಚಿತ್ರ ಸಾಮಾನ್ಯ ಪ್ರೇಕ್ಷಕನಿಗೆ ಮುಂದಿಟ್ಟು ಹಿಡಿಸುತ್ತದೆ. ಎಷ್ಟು ಅದ್ಭುತವಾದ ಕೆಲಸಗಳು ಭಾರತದ ಕೆಲವು ಕೇಂದ್ರಗಳಲ್ಲೀಗ ನಡೆಯುತ್ತಿವೆ! ದೇಶದ ಪ್ರಗತಿಯು ಎಷ್ಟು ಮುಖವಾಗಿ ಮೈವೆತ್ತಿಕೊಳ್ಳುತ್ತಿದೆ— ಎಂಬ ಕಲ್ಪನೆಯೇ ಅದ್ಭುತ!

ಸಾಂಸ್ಕೃತಿಕ ಚಿತ್ರ

ಅತಿಥಿಗಳು ಭಾರತದಲ್ಲಿ ಕಂಡುದೇನು ಎಂಬುದಕ್ಕೆ ಈ ಚಿತ್ರ ಮಹತ್ವ ಕೊಟ್ಟಿದೆ– ಐತಿಹಾಸಿಕ ಅವಶೇಷಗಳು, ಸಾಂಸ್ಕೃತಿಕ ಪ್ರದರ್ಶನಗಳು, ಔದ್ಯಮಿಕ ಹಾಗು ವೈಜ್ಞಾನಿಕ ಮಹತ್ವದ ಕೇಂದ್ರಗಳು, ನೀರಾವರಿ ಮತ್ತು ವಿದ್ಯುದುತ್ಪಾದನೆಯ ಯೋಜನೆಗಳು—ಎಲ್ಲವನ್ನೂ ಸುಂದರವಾದ ಭಾರತದ ನಿಸರ್ಗದ ಹಿನ್ನೆಲೆಯಲ್ಲಿ ಈ ವರ್ಣ ಚಿತ್ರವು ವಿವರಿಸುತ್ತದೆ. ರಶ್ಯದ ನಾಯಕರು ಇವನ್ನೆಲ್ಲ ಕುತೂಹಲದಿಂದ ನೋಡುತ್ತಿದ್ದ ಬಗೆಯು ಪ್ರೇಕ್ಷಕನ ಉತ್ಸಾಹವನ್ನು ದ್ವಿಗುಣಗೊಳಿಸಬಲ್ಲಷ್ಟು ಪ್ರಭಾವಿಯಾಗಿದೆ—ನಮ್ಮ ಭಾರತ ಎಷ್ಟು ಅಭಿವೃದ್ಧಿಯನ್ನು ಹೊಂದುತ್ತಿದೆ ಎಂದು ಅಭಿಮಾನಪಟ್ಟು ಕೊಳ್ಳುವುದಕ್ಕೆ ಸಮರ್ಥನೆ ನೀಡುತ್ತದೆ.

ಚಿತ್ರದ ವಿವರಣೆಯನ್ನೀಯುವ ಮಾತುಗಳು ಸ್ಫೂರ್ತಿದಾಯಕವಿವೆ; ಅಂಕೆ ಸಂಖ್ಯೆಗಳನ್ನು ಚಿತ್ರಿಸಿದ ರೀತಿಯು ನವೀನತೆಯ ಮುಖವಾಡ ಧರಿಸಿದೆ. ಸಂಗೀತದ ಮಟ್ಟಿಗೂ ಇದೊಂದು ಸುಗ್ಗಿ! ನಾನಾ ಪ್ರದೇಶಗಳ ಹಾಗು ಭಾಷೆಗಳ ಜಾನಪದ ನೃತ್ಯ ಮತ್ತು ಸಂಗೀತದ ದಾಖಲೆಯನ್ನು ಇಲ್ಲಿ ಯಥೋಚಿತ ಪ್ರಮಾಣದಲ್ಲಿ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯು ತನ್ನ ವೈವಿಧ್ಯದ ನಡುವೆಯೂ ಏಕತ್ವವನ್ನು ಉಳಿಸಿಕೊಂಡ ಬಗೆಯ ತಿಳಿವಳಿಕೆ ಈ ಚಲಚ್ಚಿತ್ರದಿಂದ ನಮಗೆ ಚೆನ್ನಾಗಿ ಆಗುತ್ತದೆ. ಬಣ್ಣದ ಬೆಡಗು ಚಿತ್ರಕ್ಕೆ ವಿಶೇಷ ಕಳೆಯನ್ನಿತ್ತಿದೆ— ಬಣ್ಣವಿಲ್ಲದಿದ್ದರೂ ನೋಡುವವರಿಗೆ ಸೊಗಸದಿರದು.

In the Court of the District Munsif of Mangalore.

S. C. No. 802/1955.

Between

M/S. Merchants Mutual Aid Fund by its partner N. Jaganath Pai ... ... *Plaintiff.*

and

P. Gopalkrishna ... *Defendant.*

To Defendant:

P. Gopalkrishna, S/o Manjunathayya, Tobacco Merchant, residing at Poochakad, Post Kikan, Kasargod Tq.

Please take notice that the Plaintiff abovenamed has fild the above suit for recovery of the balance amount due in respect of the promissory note dated 26-12-1952 executed by you and the said suit stands posted to 6—2—1956 at 11 A. M. *for your appearance. In* case you fail to apaear on that day either in person or through pleader, the suit will be decided exparte.

(By order of court)

Sd. M. Venkatraya Kamath.

Advocate for Plaintiff.

Mangalore, Dated 11—1—56.

ಇಂಗ್ಲಿಷಿನಲ್ಲಿ ದಸ್ಕತ್ತು

ಉಡುಪಿ ತಾಲೂಕು ಪಲಿಮಾರು ಗ್ರಾಮದ ಮುಡೂರು ಮಂಜಯ್ಯ ಸೆಟ್ರ ಅಳಿಯ ಬೋಜ ಸೆಟ್ಟಿಯು ಸರ್ವರಿಗೂ ತಿಳಿಸುವುದೇನೆಂದರೆ ನಾನು ತಾ. 20—11—1954 ರ ಮುಂಚೆ ಎಲ್ಲಾ ರಿಕಾರ್ಡುಗಳಲ್ಲಿ ಕನ್ನಡದಲ್ಲಿ ಭೋಜ ಸೆಟ್ಟಿ ರುಜು ಎಂತ ದಸ್ಕತ್ತು ಮಾಡಿರುತ್ತೇನೆ. ತಾ 20—11—1954 ರ ನಂತರ ಎಲ್ಲಾ ರಿಕಾರ್ಡುಗಳಲ್ಲಿ ಇಂಗ್ಲಿಷಿನಲ್ಲಿ M. Bhoja Shetty ಎಂತ ದಸ್ಕತ್ತು ಮಾಡುತ್ತಿದ್ದೇನೆ. ಇನ್ನು ಮುಂದೆಯೂ ಸಹಾ ಎಲ್ಲಾ ರಿಕಾರ್ಡುಗಳಲ್ಲಿ ಇಂಗ್ಲಿಷಿನಲ್ಲೇ ದಸ್ಕತ್ತು ಮಾಡುವೆನು.

M. Bhoja Shetty

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENG LISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:– ಸಾಧಾರಣ ಪ್ರತಿ– ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)



Edited, Printed & Published By K. H. Shetty, at the Navayuga Press, Udipi S. India

NAVAYUGA
Republic Day
Special 1956

ನವಯುಗ

ಪ್ರಜಾರಾಜ್ಯ
ವಿಶೇಷಾಂಕ ೧೯೫೬
ಬೆಲೆ: 0—3—0

ಪ್ರಜಾರಾಜ್ಯ ದಿನೋತ್ಸವ!

ಪ್ರಜಾರಾಜ್ಯ ದಿನೋತ್ಸವವನ್ನು ಆಚರಿಸುವಾಗ ನಾವು ನಮ್ಮ ಪ್ರಜಾರಾಜ್ಯದ ಭವಿಷ್ಯವನ್ನು ಭದ್ರಗೊಳಿಸಬೇಕೆಂಬುದನ್ನೂ ಸ್ಮರಿಸೋಣ! ಮುಖ್ಯವಾಗಿ ನಮ್ಮಲ್ಲಿ ಹೆತ್ತವರೆನಿಸಿದವರು ತಮ್ಮ ಮಕ್ಕಳು ಪ್ರಜಾರಾಜ್ಯದ ಉತ್ತಮ ನಾಗರಿಕರಾಗುವಂತೆ ನೋಡಿಕೊಳ್ಳೋಣ! ಪ್ರತಿಯೊಂದು ಮಗುವಿನ ಹೆಸರಿನಲ್ಲಿ ಒಂದು ಚಿಕ್ಕ ಉಳಿತಾಯದ ಲೆಕ್ಕವನ್ನು ಪ್ರಾರಂಭಿಸಿದರೆ ಮತ್ತು ಉಳಿತಾಯವನ್ನು ಪ್ರೋತ್ಸಾಹಿಸಿದರೆ ಇವಕ್ಕೆ ಒಳ್ಳೆಯ ಏರ್ಪಾಡನ್ನು ಮಾಡಿದಂತಾಗುತ್ತದೆ. ಅತ್ತ ಉಳಿತಾಯ ಖಾತೆಯಲ್ಲಿ ಹಣದ ಲೆಕ್ಕ ನಿಧಾನವಾಗಿ ಹೆಚ್ಚುತ್ತಾ ಹೋಗುವುದನ್ನೂ ಇತ್ತ ಮನೆಯಲ್ಲಿ ಮಕ್ಕಳು ನಿಧಾನವಾಗಿ ಬೆಳೆದು ದೊಡ್ಡವರಾಗುವುದನ್ನೂ ತೂಗಿ ನೋಡಿರಿ! ಭವಿಷ್ಯತ್ತಿನಲ್ಲಿ ಮಕ್ಕಳ ಸಂತೋಷ ಮತ್ತು ಅಭ್ಯುದಯದ ಸುಂದರ ಭರವಸೆಯನ್ನು ಇದು ನೀಡುವುದಿಲ್ಲವೆ? ಪ್ರಜಾರಾಜ್ಯದ ಆಂತರಿಕ ಬಲದ ಬೆಂಗೋಲಾಗಿ ಇದು ಕಾಣಿಸುವುದಿಲ್ಲವೆ? ಆದುದರಿಂದ ನಿಮ್ಮ ಮಕ್ಕಳ ಹೆಸರಿನಲ್ಲಿ ಇಂದೇ ಉಳಿತಾಯದ ಖಾತೆಯನ್ನು ತೆಗೆಯಿರಿ!

ಚಲಾವಣೆ ಭಂಡವಾಳ ರೂ. **8,50,00,000** ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925] [ಪ್ರಧಾನ ಕಚೇರಿ: ಉಡುಪಿ, ದ. ಭಾರತ

The Canara Industrial & Banking Syndicate Limited.

Estd: 1925] [Head Office: **UDIPI**, S.India

1906 — 1956

On the commencement of their Golden Jubilee Year, the United India Life Assurance Co., Ltd. extend their warmest Greetings and good wishes to all their Policyholders and constituents on this REPUBLIC DAY.

NEW BUSINESS IN 1955
exeeds Rs. 7½ Crores.

THE UNITED INDIA LIFE ASSURANCE CO., LTD.

"UNITED INDIA LIFE BUILDING", MADRAS—1.

BRANCH OFFICE:
Diamond Bldg., Hampankatta, MANGALORE.

Hearty greetings for the annual celebration of the Republic Day.

A NEW BRANCH AT
VISHWA BHAVAN BUILDING, HAMPANKATTA
HAS BEEN OPENED.

SCHOOL BOOK Co.,

BOOK SELLERS---PUBLISHERS & WHOLESALE PAPER DEALERS

Distributors: **Mysore Paper Mills Ltd., & "Ganges" Printing Inks.**

Head Office: **CAR STREET, MANGALORE-1.**

ಪ್ರಜಾರಾಜ್ಯ ಸ್ಥಾಪನಾ ಸಾಂವತ್ಸರಿಕ ದಿನಾಚರಣೆ ಸಂತಸ ಕಾಲದಲ್ಲಿ ಸರ್ವರಿಗೂ ಸುಖ ಸಂಪದಭ್ಯುದಯ ಉಂಟಾಗಲೆಂದು ಶುಭಾಶಯಗಳು.

ಸ್ಕೂಲ್ ಬುಕ್ ಕಂಪೆನಿ,

ರಥಬೀದಿ, ಮಂಗಳೂರು—1.

ಪುಸ್ತಕ ವ್ಯಾಪಾರಿಗಳು—ಪ್ರಕಾಶಕರು—ಕಾಗದ ವ್ಯಾಪಾರಿಗಳು.

ಮಂಗಳೂರು ಹಂಪನಕಟ್ಟೆಯ ವಿಶ್ವಭವನದ ಕಟ್ಟೋಣದಲ್ಲಿ ತಮ್ಮ ಹೊಸ ಶಾಖೆಯನ್ನು ತೆರೆದಿರುವರು.

Telegrams: "SCHOOLBOOK" Phone: 229

1955ರ ದಶಂಬರ ತಿಂಗಳ
ಅತ್ಯಧಿಕ ಪ್ರಮಾಣದ ವಿಕ್ರಯವು

ಚಂದ್ರಾನಾ ಬ್ರದರ್ಸ್

ಇವರಲ್ಲಿ

ಹೆಚ್ಚುತ್ತಿರುವ ಜನಪ್ರಿಯತೆ
ವರ್ಧಿಸುವ ಸಾರ್ವಜನಿಕ ವಿಶ್ವಾಸ
ಉತ್ತಮ ಜನಾದರಣೆಗಳನ್ನು ಸಾರುತ್ತವೆ.

ನಮ್ಮ ಪ್ರೋತ್ಸಾಹಕರಿಗೂ ಮಿತ್ರರಿಗೂ **ಹೊಸ ವರ್ಷದ ಶುಭಾಶಯ**ಗಳನ್ನು ಕೋರುವುದರ ಜತೆಗೆ ನಮಗೆ ಅವರು ಇಡೀ ವರ್ಷವೂ ನಿರಂತರವಾಗಿ ನೀಡುವ ಅತ್ಯುತ್ತಮ ಸಹಕಾರಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

1955 ರ ದಶಂಬರದಲ್ಲಿ **20492** ಗ್ರಾಹಕರು
ನಮ್ಮನ್ನು ಪ್ರೋತ್ಸಾಹಿಸಿದ್ದಾರೆ.
ಇವರಾರೂ ತಪ್ಪಿ ಬಿದ್ದಿರಲಾರರು.

ಚಂದ್ರಾನಾ ಬ್ರದರ್ಸ್

ಮಂಗಳೂರು 1.

CHANDARANA BROTHERS

PIECE GOODS & YARN MERCHANTS,

POST BOX NO. 50,

Mission Street, MANGALORE 1.

INDIA'S MOST DURABLE & ECONOMICAL DIESEL TRUCK & BUS CHASSIS...

THE FIRST DIESEL ENGINE IN THE WORLD

Designed by DAIMLER BENZ A. G.

TATA-MERCEDES-BENZ

DIESEL TRUCKS & BUS CHASSIS

Even in the few months since the Tata-Mercedes-Benz L. 312 Diesel truck became available in the country, its sturdy construction, its very low operating and maintenance costs and many special features, such as patented pre-combustion chamber, noiceless 5-speed transmission and combined hydraulic-air booster brakes, have made it the first choice of the discerning buyer.

The Arvind Motors Limited,

BALMATTA ROAD :: MANGALORE.



NUMBER **THIRTY** BEEDIES

FIRST AMONG THE BEST

TRADE 30 MARK
REGD.

RICH FLAVOUR

PLEASENT AROMA

REFRESHING SMOKE

Every "NUMBER THIRTY" Beedi is Rolled by men of experience.
Every "NUMBER THIRTY" Bundle leaves the Factory after Rigid Test.

MANUFACTURERS

The Bharath Beedi Works (Regd.)

P. B. No. 30, KARKALA, S. KANARA.

THE

BOMBAY LIFE ASSURANCE CO., LIMITED.

EXCELLENT BONUSES

1954 VALUATION.

Whole Life Rs. 19/- per 1000/- per year

Endowment Rs. 15/- per 1000/- per year

Record Business: Over Rs. 5 Crores.

It pays you to consult for Representation or Insurance:-

KOCHIKAR BROTHERS, LIMITED,

CHIEF AGENTS,

UDIPI,

or any of their offices at:-

BANGALORE, COIMBATORE, KOZHIKODE, MADURA, MANGALORE and TRIVANDRUM.

ನರಗಳ ದೌರ್ಬಲ್ಯ, ಮಾನಸಿಕ ಧಕ್ಕೆಗಳು, ಮನೋವಿಕಾರಗಳು ಮತ್ತು ಹದಗೆಡುವ ಮನಸ್ಸಿಗೆ

"ಪ್ರಾಶಂ" PRASHAM

(ವಿಟಮಿನ್ ಬಿ 1 ಕೂಡಾ) (WITH VIT. B 1)

ಸಿಗುವ ಸ್ಥಳ:- ನಮ್ಮ ಕರ್ನಾಟಕ ಶಾಖೆ, ಮರಾಟಗಲ್ಲಿ, ಹುಬ್ಬಳ್ಳಿ.

ದಿ ಆಯುರ್ವೇದ ರಸಶಾಲಾ ಪೂನಾ ಲಿಮಿಟೆಡ್,

ಪೂನಾ — 4.

ಇತರ ಶಾಖೆಗಳು:

ಅಮರಾವತಿ, ಬೆಳ್ಗಾಂ, ಬೊಂಬಾಯಿ, ಧಿಲ್ಲಿ, ಕೊಲ್ಹಾಪುರ, ನಾಗಪುರ, ಪೂನಾ ಮತ್ತು ಸಾಂಗಲಿ.

The Ayurveda Rasashala Poona Ltd.,

POONA 4.

ವೈದ್ಯರತ್ನಂ ಪಿ. ಎಸ್. ವಾರಿಯರವರ

ಆರ್ಯ ವೈದ್ಯಶಾಲಾ, ಕೋಟಕ್ಕಲ್.

ಸ್ಥಾಪನೆ: **1902.**

ಕೆಲವೊಂದು ಕಚ್ಚಾ ಸಾಮಗ್ರಿಗಳ ಬೆಲೆಯು ಇಳಿದಿರುವುದರಿಂದ, ನಮ್ಮಲ್ಲಿಯ ಅನೇಕ ಔಷಧಿಗಳ ಬೆಲೆಯನ್ನು ಇದೇ ತಾ. 1—10—55ರಿಂದ ಶೇಕಡಾ 10 ರಿಂದ 20ರ ತನಕ ಕಡಿಮೆ ಮಾಡಿರುವೆವು. ಇಂಗ್ಲಿಷ್ ಅಥವಾ ಮಲೆಯಾಳ ಭಾಷೆಯಲ್ಲಿಯ ತಿದ್ದಿದ ಕ್ರಯ ವಿವರ ಪಟ್ಟಿಯನ್ನು ಅಪೇಕ್ಷಿಸಿದ್ದಲ್ಲಿ ಪುಕ್ಕಟೆಯಾಗಿ ಕಳುಹಿಸಲಾಗುವುದು.

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮಿನಲ್ಲಿ

ನವೀನ ಸೌಕರ್ಯಗಳೂ, ನವರ್ಕಿಳಿ, ಧಾರೆ, ಶಿರೋವಸ್ತಿ ಮೊದಲಾದ ಕೇರಳೀಯ ಚಿಕಿತ್ಸೆಗಳಿರುವ ಪ್ರತ್ಯೇಕ ಸೌಕರ್ಯಗಳೂ ಇರುತ್ತವೆ.

For effective AYURVEDIC TREATMENT & MEDICENES

APPROACH

Vaidya Ratnam P. S. VARIAR'S

ARYA VAIDYA SALA

ESTABLISHED IN 1902.

KOTTAKKAL (S. Malabar.)

50 ವರ್ಷಗಳು....

ನಮ್ಮ ಸುವರ್ಣ ಮಹೋತ್ಸವದ ವರ್ಷದ ಪ್ರಾರಂಭದಲ್ಲಿ ಕೆನರಾ ಬ್ಯಾಂಕಿನ **50** ವರ್ಷಗಳ ಪ್ರಗತಿಪರ ಬೆಳವಣಿಗೆಯಲ್ಲಿ ನೆರವಾದ ನಮ್ಮ ಅನೇಕ ಸ್ನೇಹಿತರಿಗೆ ನಮ್ಮ ಹಾರ್ದಿಕ ವಂದನೆಗಳು. ಇನ್ನೂ ಹೆಚ್ಚಿನ ಬ್ಯಾಂಕಿಂಗ್ ಸೇವೆಗಳನ್ನು ಸಲ್ಲಿಸುವ ಆಶ್ವಾಸನೆ ನಮ್ಮದು.

CANARA BANK LTD.
ಕೆನರಾ ಬ್ಯಾಂಕ್ ಲಿಮಿಟೆಡ್

1906 **1956**

FOR ALL REQUIREMENTS IN:

Paper, Indian or Foreign,
Stationery, Printing Inks,
School Requisites,
Typewriters, Carbon Papers
Etc. Etc. Etc.

Srinivas Brothers

PAPER MERCHANTS & STATIONERS,

Car Street, **MANGALORE 1.**

Post Box No. 130.

Tel: ACTIVE. Phone: 449.

ಕಾಗದ, ಮುದ್ರಣ ಶಾಯಿ, ಶಾಲೋಪಯೋಗಿ ಸಾಹಿತ್ಯಗಳಿಗೆ

ಶ್ರೀನಿವಾಸ ಬ್ರದರ್ಸ್

ಪೇಪರ್ ಮರ್ಚಂಟ್ಸ್ & ಸ್ಟೇಶನರ್ಸ್,

ರಥಬೀದಿ :: ಮಂಗಳೂರು 1.

ನಟ ನಟಿಯರಿಗೆ ಸುಸಂಧಿ!

ಸುಲಭ ಬೆಲೆಯಲ್ಲಿ ಆಕರ್ಷಕ ನಾಟಕ ಸಾಮುಗ್ರಿಗಳು

ರಂಗ ಭೂಮಿಯಲ್ಲಿ ನಟ ನಟಿಯರ ವೇಷ ಭೂಷಣಗಳಿಗೆ ಬೇಕಾಗುವ ಯಾವತ್ತೂ ಕೂದಲು, ತೋಫನ್, ಗಡ್ಡ ಮುಂಡಾಸು, ಕಿರೀಟ, ಜರಿ ಜಲ್ಲರಿ, ಜರಿರವಕೆ, ಕಿವಿ ಬೆಂಡೋಲೆ, ತುಟಿಗೆ ಹಚ್ಚುವ ಮಿರುಗಿನ ಲೇಪ, ತಲೆಸೂಡಿ ಸುತ್ತುವ ಬಲೆ ಇತ್ಯಾದಿ, ಇತ್ಯಾದಿ ಸಾಮುಗ್ರಿಗಳು ಅತೀ ಸುಲಭ ಬೆಲೆಗೆ ಪುಷ್ಕಳ ದೊರೆಯುತ್ತವೆ. ಒಮ್ಮೆ ಉಪಯೋಗಿಸಿದರೆ ಸೈ ಸೈ ಎನ್ನುವಿರಿ.

ಸವಿಸ್ತಾರ ಕ್ಯಾಟಲಾಗಿಗೆ ಇಂದೇ ಬರೆಯಿರಿ,
(ಪತ್ರ ವ್ಯವಹಾರ ಮರಾಠಿ, ಹಿಂದಿ ಯಾ ಇಂಗ್ಲಿಷಿನಲ್ಲಿ)

FOR ALL KINDS OF DRAMA MATERIALS
AND MAKE-UP GOODS

Please write to:-

पुरुष पार्टी टोप

DHARAMSHI MULJI DRESSWALLA,

132, C, BHAGAT WADI,

BULESHWAR ROAD, BOMBAY - 2.

೩೫ ವಾರ ೨೧
ಪುಟಗಳು ಬೆಲೆ: ೦—೩—೦

ಪ್ರಜಾರಾಜ್ಯ ವಿಶೇಷಾಂಕ
೧೯೫೬

ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ.,
ಮದರಾಸು ಸರಕಾರದ ಆರೋಗ್ಯ ಮಂತ್ರಿಗಳು
* * *
ಸಂಚಾಲಕ-ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

Vol. 35 No 21

NAVAYUGA

REPUBLIC DAY SPECIAL

1956

ಗಾಂಧೀಜಿಯ ಮನನೀಯ ಮಾತುಗಳು

ನಮ್ಮ ಸಂಸ್ಕೃತಿಯ ವೈಶಿಷ್ಟ್ಯವನ್ನು ರಕ್ಷಿಸುವುದೇ ನನ್ನ ಮಟ್ಟಿಗೆ ಸ್ವರಾಜ್ಯದ ಉದ್ದೇಶ. ನಾನು ಅನೇಕ ಹೊಸ ಮಾತುಗಳನ್ನು ಆಡಬೇಕೆನ್ನುತ್ತೇನಾದರೂ ಭಾರತದ ಪರಂಪರೆಗನುಸರಿಸಿ ಅವು ಕೈಗೂಡಬೇಕೆನ್ನುತ್ತೇನೆ. ಸ್ವರಾಜ್ಯವು ಪವಿತ್ರ ಶಬ್ದ: ಸ್ವನಿಯಮನ, ಸ್ವಸಂಯಮ ಎಂದು ಅದರ ಅರ್ಥ. ಸ್ವಾತಂತ್ರ್ಯವೆಂದರೆ ಎಷ್ಟೋ ಸಲ ಸ್ವೈರವೆಂದು ತಪ್ಪು ತಿಳಿದುಕೊಳ್ಳುವುದುಂಟು. ಸ್ವರಾಜ್ಯವೆಂದರೆ ಅದಲ್ಲ.

ಅತ್ಯಂತ ಬಡವರೊಡನೆ ತನ್ಮಯತೆ, ಅವರಂತೆ ಅವರಷ್ಟೇ ಸರಳತನದಿಂದ ಜೀವಿಸುವ ಲವಲವಿಕೆ, ಬುದ್ಧಿ ಪೂರ್ವಕ ಹಾಗೆ ಜೀವಿಸುವ ಪ್ರಯತ್ನ—ಇವು ಪ್ರಜಾಪ್ರಭುತ್ವದ ನಿಜವಾದ ಉಪಾಸಕರ ಲಕ್ಷಣಗಳಾಗಿದ್ದರೆ ನಾನು ಅಂಥವರಲ್ಲಿ ಒಬ್ಬನಾಗಿದ್ದೇನೆ. ಒಂದು ತುಣುಕು ಒಣರೊಟ್ಟಿ, ಒಂದು ಚಿಟಿಕೆ ಉಪ್ಪು-ಇಷ್ಟರಿಂದಲೇ ತಮ್ಮ ಹೊಟ್ಟೆಯ ಕುಣಿಯನ್ನು ತುಂಬಿಸಿಕೊಳ್ಳುವವರಿಗಾಗಿ, ಒಂದೇ ತುಂಡು ವಸ್ತ್ರವನ್ನುಟ್ಟು ಸಂತೋಷಿಸುವವರಿಗಾಗಿ ಸ್ವರಾಜ್ಯ ದೊರಕಬೇಕೆಂದು ನಾನು ಪ್ರಯತ್ನಿಸುತ್ತಿದ್ದೇನೆ.

ನಿರುದ್ಯೋಗಿ ಹಾಗು ಉಪವಾಸ ಬಳಲುವ ಜನರಿಗೆ ದೇವರು ಒಂದೇ ಒಂದು ರೂಪದಿಂದ ಮಾತ್ರ ದರ್ಶನ ಕೊಡಬಲ್ಲನು. ಅದೆಂದರೆ ಪರಿಶ್ರಮ ಪೂರ್ವಕವಾದ ದುಡಿಮೆ; ಅಥವಾ ಕೂಲಿಯ ಮೂಲಕ ಆಹಾರ. ನಾನು ಸ್ವೇಚ್ಛೆಯಿಂದ ಶ್ರಮಜೀವಿಯಾಗಬೇಕೆನ್ನುತ್ತೇನೆ. ಪರಿಸ್ಥಿತಿ ವಶನಾಗಿ ಶ್ರಮಜೀವಿಯಾಗಿದ್ದೇನೆಂಬವನನ್ನು ನನ್ನಂತೆ ಮಾಡಿಬಿಟ್ಟರೆ ಅವನಿಗೆ ತನ್ನ ಸಂಕೋಲೆಗಳನ್ನು ಕಳಚಲು ನೆರವಿತ್ತಂತಾಗುತ್ತದೆ.

ಸತ್ಯ ಮತ್ತು ಅಹಿಂಸೆಗಳ ಪ್ರಸಾರವು ಅವುಗಳನ್ನು ಪ್ರತ್ಯಕ್ಷ ಆಚರಿಸಿ ತೋರಿಸಿದಾಗ ಆಗುವಷ್ಟು ಪುಸ್ತಕಗಳ ಮೂಲಕ, ಭಾಷಣಗಳ ಮೂಲಕ, ಲೇಖನಗಳ ಮೂಲಕ ಎಂದಿಗೂ ಆಗಲಾರದು. ಪ್ರತ್ಯಕ್ಷ ಆಚರಣೆಯೇ ಎಲ್ಲಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾದುದಾಗಿದೆ. ನಾವು ಸತ್ಯ ಮತ್ತು ಅಹಿಂಸೆಗಳ ಭಕ್ತರಾಗಿದ್ದರೆ ಸಮಸ್ಯೆಗಳ ಪರಿಹಾರಕ್ಕೆ ಆಗತ್ಯವಾದ ಬುದ್ಧಿವಂತಿಕೆಯನ್ನು ದೇವರು ನಮಗೆ ದಯಪಾಲಿಸುವನು. ಆದುದರಿಂದ ಅವನ ಮನೋಗತವನ್ನರಿಯಲು ಪ್ರಾಮಾಣಿಕವಾದ ಅಂತಃಕರಣ ಪೂರ್ವಕವಾದ ಪ್ರಯತ್ನ ನಮ್ಮದಾಗಬೇಕು. ಇದೇ ಅಹಿಂಸೆಯು ನೇರವಾಗಿ ಹಿಂಸೆಯನ್ನುಎದುರಿಸಬೇಕೆಂದು ಹೇಳುವುದರ ಅರ್ಥ.

ನಿಜವಾಗಿ ನೋಡಿದರೆ ಅಹಿಂಸೆಯೆಂದರೆಯೇ ಅಪಾರ ಪ್ರೀತಿ, ಅಖಂಡ ಔದಾರ್ಯವೆಂದು ಮನವರಿಕೆಯಾಗುತ್ತದೆ. ನಾನು ಅಹಿಂಸೆಯಲ್ಲಿ ವಿಶ್ವಾಸವುಳ್ಳವನೆನಿಸಬೇಕಾದರೆ, ನನಗೆ ಅಪರಿಚಿತನೂ ವೈರಿಸ್ಥಾನದಲ್ಲಿರುವವನೂ ಆಗಿರುವ ತಪ್ಪಿತಸ್ಥನನ್ನು ನನ್ನ ಆತ್ಮೀಯವರ್ಗದಲ್ಲಿರುವ ತಂದೆಯಂಥ ಹಿರಿಯರೋ ಮಗನಂಥ ಕಿರಿಯನೋ ತಪ್ಪು ಮಾಡಿದಾಗ ನೋಡುವ ದೃಷ್ಟಿಯಿಂದಲೇ ನಾನು ವೀಕ್ಷಿಸಲು ತಪ್ಪಬಾರದು. ಈ ಸಕ್ರಿಯ ಅಹಿಂಸಾಭಾವವು ಸತ್ಯ ಪ್ರಿಯತೆಯನ್ನೂ ನಿರ್ಭೀತಚಿತ್ತವನ್ನೂ ವ್ಯಾಪಿಸುತ್ತದೆ. ತನ್ನ ಪ್ರೀತಿಗೆ ಪಾತ್ರನಾದವನನ್ನು ಯಾವ ವ್ಯಕ್ತಿಯೂ ವಂಚಿಸುವಂತಿಲ್ಲ; ಹೆದರಿಸುವಂತಿಲ್ಲ; ಅವನಿಗೆ ಹೆದರುವ ಹಾಗೆಯೂ ಇಲ್ಲ.

ಖಡ್ಗವನ್ನು ಬಿಸಾಡಿ ಬಿಟ್ಟ ಮೇಲೆ, ನನ್ನ ಎದುರಾಳಿಗಳಿಗೆ ನಾನು ಪ್ರೀತಿರಸಾಯನವನ್ನಷ್ಟೆ ಉಣಬಡಿಸಬಲ್ಲೆ. ಅದರಿಂದಷ್ಟೇ ನಾನು ಅವರನ್ನು ನನ್ನ ಹತ್ತಿರಕ್ಕೆ ಬರಮಾಡಿಕೊಳ್ಳಬಲ್ಲೆ. ವ್ಯಕ್ತಿಗಳ ನಡುವೆ ಶಾಶ್ವತ ದ್ವೇಷವಿರಬಲ್ಲುದೆಂಬ ಕಲ್ಪನೆಯಲ್ಲಿ ನನಗೆ ವಿಶ್ವಾಸವಿಲ್ಲ. ಪುನರ್ಜನ್ಮದಲ್ಲಿ ವಿಶ್ವಾಸವು ನನಗಿರುವುದರಿಂದ ಈ ಜನ್ಮದಲ್ಲಿಯಲ್ಲದಿದ್ದರೆ ಮುಂದಿನೊಂದು ಜನ್ಮದಲ್ಲಿಯಾದರೂ ಎಲ್ಲರನ್ನೂ ಸ್ನೇಹದಿಂದ ಆಲಂಗಿಸಿಕೊಳ್ಳುವ ಆಸೆ ಸಫಲವಾದೀತು ಎಂಬ ಜಾಗೃತ ಪ್ರಜ್ಞೆ ನನ್ನದು.

ನನಗೆ ಸತ್ಯವೇ ಎಲ್ಲಕ್ಕೂ ಹೆಚ್ಚು ಮಹತ್ವದ, ಎಲ್ಲ ಸಿದ್ಧಾಂತಗಳನ್ನೂ ಒಳಗೊಂಡ ತತ್ತ್ವ. ಮಾತಿನಲ್ಲಿಯಷ್ಟೇಯಲ್ಲ, ಕೃತಿ ಮತ್ತು ಆಲೋಚನೆಗಳಲ್ಲೂ ಸತ್ಯವನ್ನೆ ನಾನು ಆರಾಧಿಸುತ್ತೇನೆ. ಹೀಗೆ ನಾನೊಬ್ಬ ನಮ್ರ ಸತ್ಯಶೋಧಕನಾಗಿದ್ದೇನೆ. ನನ್ನ ಶೋಧನೆಯಲ್ಲಿ ನಾನು ಬೇರೆ ಶೋಧಕರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ; ಮತ್ತು ತನ್ಮೂಲಕ ನನ್ನ ತಪ್ಪುಗಳನ್ನು ಅರಿತು,ತಿದ್ದಿಕೊಳ್ಳುತ್ತೇನೆ. ನನ್ನ ಅಭಿಪ್ರಾಯ ಮತ್ತು ತೀರ್ಮಾನಗಳಲ್ಲಿ ನಾನು ಅನೇಕ ವೇಳೆ ತಪ್ಪಿದ್ದುಂಟು; ಆದರೆ ಅಂಥ ತಪ್ಪುಗಳನ್ನು ತಿದ್ದಿಕೊಂಡ ಪರಿಣಾಮವಾಗಿ ಯಾವುದೇ ಸಂದರ್ಭದಲ್ಲಿಯೂ ಹಾನಿ ಸಂಭವಿಸಲಿಲ್ಲ.

ಸೇವಾಜೀವನವು ವಿನಯಪೂರ್ಣವಾಗಿರಬೇಕು. ಇತರರಿಗಾಗಿ ತನ್ನ ಜೀವನವನ್ನೆ ಅರ್ಪಿಸಬಲ್ಲವನಿಗೆ ತನಗಾಗಿ ಒಂದು ಸ್ಥಾನವನ್ನು ಕಾಯ್ದುಕೊಳ್ಳಲಿಕ್ಕೆ ಸಮಯ ಸಿಗಲಾರದು. ನಿಷ್ಕ್ರಿಯತೆಯನ್ನೆಂದೂ ವಿನಯವಾಗಿ ಭಾವಿಸಕೂಡದು. ಮಾನವ ಜಾತಿಯ ಸೇವೆಗಾಗಿ ಸಂತತವಾದ, ಬಹುಕಷ್ಟಕರವಾದ ಪರಿಶ್ರಮವನ್ನು ಮಾಡುವುದೇ ನಿಜವಾದ ವಿನಯ. ದೇಶ ಸೇವೆಯೇ ಈಶ ಸೇವೆ, ಜನತೆಯ ಸೇವೆಯೇ ಜನಾರ್ಧನನ ಸೇವೆ ಎಂಬಿತ್ಯಾದಿ ಮಾತುಗಳನ್ನು ನೆನೆದರೆ ನಮ್ಮ ಚಟುವಟಿಕೆಗಳು ದೇವರಷ್ಟೇ ಅವಿಶ್ರಾಂತವಾಗಿ ಜರಗುತ್ತಿರಬೇಕೆಂಬ ತಿಳಿವಳಿಕೆಯಾಗದಿರದು.

ನಮ್ಮದು ಆತ್ಮಶುದ್ಧೀಕರಣದ ಹೋರಾಟವೆಂದು ಹೇಳಬಹುದು. ನಮ್ಮ ದೌರ್ಬಲ್ಯ ಮತ್ತು ಕುಂದುಕೊರತೆಗಳನ್ನೆ ನಮಗೆ ಹಿತಕರವಲ್ಲದ ವಿಷಯಗಳು ಆಧರಿಸಿವೆ. ಆದುದರಿಂದ ಅವುಗಳನ್ನು ಹೋಗಲಾಡಿಸುವುದಕ್ಕಾಗಿ ನಾವು ನಮ್ಮ ಜನರ ಆತ್ಮಶುದ್ಧೀಕರಣದ ಕೆಲಸವನ್ನು ವ್ಯಾಪಕವಾದ ಮಟ್ಟದಲ್ಲಿ ಕೈಕೊಳ್ಳಬೇಕು.

ವೈಯಕ್ತಿಕ ಅಥವಾ ಸಾಮೂಹಿಕ ಜೀವನದಲ್ಲಿ ಸ್ವಾವಲಂಬನೆಯೇ ನಿಜವಾಗಿ ಸ್ವಾತಂತ್ರ್ಯದ ಅಡಿಗಲ್ಲು. ತಮ್ಮ ಸರಕಾರವನ್ನೆ ಆಗಲೀ ರಾಜ್ಯವನ್ನೆ ಆಗಲೀ ಜನರು ತಮ್ಮ ಜೀವನಕ್ಕೆ ಅತ್ಯಗತ್ಯವೆನಿಸಿದ ವಸ್ತುಗಳಿಗಾಗಿ ಅವಲಂಬಿಸಿರುವ ವರೆಗೆ ಸ್ವತಂತ್ರರೂ ಪ್ರಗತಿಪರರೂ ಎಂದವರು ಭಾವಿಸಲ್ಪಡುವುದಿಲ್ಲ.

ಜನ ಸಾಮಾನ್ಯರ ಮುಂದಾಳುತನವನ್ನು ವಹಿಸಿ ಕೊಂಡವರು ತಾವೇ ಅವರನ್ನು ಹಿಂಬಾಲಿಸಬೇಕಾಗಿ ಬರುವ ಪರಿಸ್ಥಿತಿಯನ್ನು ಎಷ್ಟು ಮಾತ್ರಕ್ಕೂ ತಂದುಕೊಳ್ಳಬಾರದು. ಹೀಗಲ್ಲದಿದ್ದರೆ ಜನಜಂಗುಳಿಯ ನಿರಂಕುಶ ಅಧಿಕಾರವೇ ತಾಂಡವವಾಡಿ, ದೇಶವು ವ್ಯವಸ್ಥಿತ ಪ್ರಗತಿಯನ್ನು ಸಾಧಿಸಲಾರದು. ಸ್ವಂತ ಅಭಿಪ್ರಾಯ ಪ್ರದರ್ಶನ ಹಾಗು ಜನತೆಯ ಮತಕ್ಕೆ ಮನ್ನಣೆ—ಇವಷ್ಟೇ ಧುರೀಣರ ಕೆಲಸವಲ್ಲ. ಜೀವಾಳದ ಪ್ರಶ್ನೆ ಉದ್ಭವಿಸಿದಾಗ ಮುಂದಾಳುಗಳು ತಮ್ಮ ಸದಸದ್ವಿವೇಕಕ್ಕೆ ಸರಿಹೊಂದದ ಸಾರ್ವಜನಿಕ ಮತವನ್ನು ಬದಿಗಿರಿಸಿ, ಅದನ್ನು ಲೆಕ್ಕಿಸದೆ ವರ್ತಿಸಬೇಕು.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
	೨೬-೧-'೫೬	೨೧

ಸಪ್ತಮ ವರ್ಷದ ಹೊಸ್ತಿಲಿನಲ್ಲಿ

ಭಾರತವು ಪ್ರಜಾರಾಜ್ಯವಾಗಿ ಘೋಷಿಸಲ್ಪಟ್ಟು ಸಪ್ತಮ ವರ್ಷಕ್ಕೆ ಪ್ರವೇಶಗೈಯುವ ಶುಭಗಳಿಗೆ ಇಂದು ಬಂದಿದೆ. ಪ್ರಗತಿಪಥದಲ್ಲಿ ಇನ್ನೊಂದು ಹೆಜ್ಜೆಯನ್ನು ನಾವು ಮುಂದಿಡುತ್ತಿರುವಾಗ ಅತ್ಯಾನಂದವಾಗುತ್ತದೆ. ಭಾರತವು ಕಲ್ಯಾಣ ರಾಷ್ಟ್ರವಾಗಬೇಕೆಂಬ ಹಿರಿಯಾಸೆಯನ್ನಿಟ್ಟುಕೊಂಡು ಹಲವು ದಶಕಗಳಿಂದ ಹೋರಾಟ ಹಾಗು ದುಡಿತಗಳೇ ಪ್ರಧಾನವಾಗುಳ್ಳ ಜೀವನವನ್ನು ನಡೆಸಿಕೊಂಡು ಬಂದವರು ನಾವಾಗಿದ್ದೇವೆ. ಇಂದಿನ ಪೀಳಿಗೆಗೆ ಸುಖವು ಅನುಭವಕ್ಕೆ ಬರಬೇಕಾದಷ್ಟು ಹೆಚ್ಚು ಪ್ರಮಾಣದಲ್ಲಿ ಬಂದಿಲ್ಲ; ಬರಲಾರದೆಂದೇ ತೋರುತ್ತದೆ. ಮುಂದಿನ ಪೀಳಿಗೆಯ ಜೀವನವನ್ನು ಸುಖಮಯವೂ ಸಂತೋಷದಾಯಕವೂ ಆಗಿ ಮಾಡಬೇಕೆಂಬ ಧ್ಯೇಯ ನಮ್ಮ ಮುಂದಿರುವುದರಿಂದಲೇ ಪರಿಸ್ಥಿತಿ ಹೀಗಿದೆ ಎಂಬ ವಿವರಣೆಯನ್ನು ಇದಕ್ಕೆ ಕೊಡಬಹುದು. ಇಂದಿನ ಪೀಳಿಗೆಗೆ ದೊರಕುವ ಸುಖ ಮಾನಸಿಕವಾದದ್ದು; ಭೌತಿಕ ಅಂಶಕ್ಕಿಂತಲೂ ಆಧ್ಯಾತ್ಮಿಕ ತೂಕವೇ ಇಲ್ಲಿ ಹೆಚ್ಚು. ತ್ಯಾಗ, ಪರಿಶ್ರಮಗಳನ್ನೇ ಹೊಸ ಸಮಾಜದ ರಚನೆಯ ಬುನಾದಿಯಾಗಿ ನಾವು ಉಪಯೋಗಿಸಿಕೊಳ್ಳುತ್ತಿದ್ದೇವೆ. ಕಷ್ಟನಷ್ಟಗಳನ್ನು ಲೆಕ್ಕಿಸದೆ ಹಲವು ಬಗೆಯ ತೊಂದರೆಗಳಿಂದ ಕಂಗೆಡದೆ ರಾಷ್ಟ್ರ ಪುನರುಜ್ಜೀವನ ಕಾರ್ಯವನ್ನು ನೆರವೇರಿಸಿ ಕೊಂಡು ಹೋಗುತ್ತಿದ್ದೇವೆ. ಸಮಾಜವಾದಿ ಮಾದರಿಯ ಸಮಾಜ ರಚನೆ ಎಂಬ ಗೊತ್ತುವಳಿಯ ಸ್ವೀಕಾರವನ್ನು ರಾಷ್ಟ್ರದ ಮಹಾ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಎಂದು ಮಾಡಿತೊ, ಅಂದಿಗೆ ಹಲವು ವರ್ಷಗಳ ಮೊದಲೇ ಈ ದಿಸೆಯಲ್ಲಿ ಪ್ರಯತ್ನವನ್ನು ಎಲ್ಲರೂ ನಡೆಸುತ್ತಿದ್ದರು. ಆದರೆ ಈ ಆದರ್ಶವು ಪ್ರಕಟವಾಗಿ ಎಲ್ಲರ ಮುಂದೆ ಬಂದು ನಿಲ್ಲಲು ಮತ್ತು ಜನತೆಯು ಅದನ್ನು ಸುಲಭದಲ್ಲಿ ಮನ್ನಿಸಿ ಬಿಡುವಂಥ ಮನೋಭಾವವನ್ನುಂಟು ಮಾಡಲು ಇಷ್ಟು ಸಮಯ ಬೇಕಾಯಿತು. ಪ್ರಜಾರಾಜ್ಯದ ಐದು ವರ್ಷಗಳು ಕಳೆದು ಹೋಗುವಷ್ಟು ವಿಳಂಬವು ನಡೆಯಿತು. ಶಾಂತ ರೀತಿಯ ಕ್ರಾಂತಿಯು ಯಾವಾಗಲೂ ಹೀಗೆ ತನ್ನದೇ ಸಮಯವನ್ನು ಧ್ಯೇಯ ಸಾಧನೆಯಲ್ಲಿ ತೆಗೆದುಕೊಳ್ಳುತ್ತದೆ. ಗೊತ್ತುವಳಿಗಳ ಸ್ವೀಕಾರವು ಮಹತ್ವದ ಕ್ರಿಯೆಯಲ್ಲ; ಜನತೆಯ ಮನೋಭಾವ ಪರಿವರ್ತನೆಯೇ ನಿಜವಾದ ಕಾರ್ಯ. ಕಾಂಗ್ರೆಸು ಹಲವು ದಶಕಗಳಿಂದ ರಭಸದ ಪ್ರಚಾರದಿಂದಲೂ ರಾಜ್ಯ ಸೂತ್ರವನ್ನು ಕೈಗೆ ತೆಗೆದು ಕೊಂಡು ಬಂದ ಬಳಿಕ ಶಾಸನ ಬದ್ಧ ಅಧಿಕಾರ ಬಲದಿಂದಲೂ ಕಲ್ಯಾಣ ರಾಷ್ಟ್ರದ ನಿರ್ಮಾಣಕ್ಕಾಗಿ ಜನರೆಲ್ಲರೂ ಸಂತೋಷದಿಂದ ಕೆಲಸಮಾಡುವಂತೆ ಪ್ರಯತ್ನಶೀಲವಾಗಿದೆ. ಸುಧಾರಣೆ ಎಂದು ಹಳೆಯ ಕಾಲದವರಿಗೆ ತೋರಬಹುದಾದ, ಆದರೆ ಖಂಡಿತವಾಗಿಯೂ ಈ ಯುಗಧರ್ಮಕ್ಕೆ ಒಪ್ಪುವ ಹಲವು ಶಾಸನಗಳನ್ನು ಜ್ಯಾರಿಗೆ ತರಲು ಅದು ನೋಡಿದೆ. ಯೋಜನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯಾಚರಣೆಗೆ ತಂದು ಅದು ಅನ್ನ ಮತ್ತು ಬಟ್ಟೆಯ ಕ್ಷಾಮಕ್ಕೆ ಕೊನೆಯನ್ನು ಹಾಕಿದೆ. ನಿರುದ್ಯೋಗ ಸಮಸ್ಯೆಯ ನಿವಾರಣೆಗಾಗಿ ಗ್ರಾಮೋದ್ಯೋಗಗಳ ಚಟುವಟಿಕೆಯನ್ನು ತೀವ್ರವಾಗಿ ವಿಸ್ತರಿಸಲು ಅದು ನಿರ್ಧರಿಸಿದೆ. ರಾಷ್ಟ್ರವನ್ನು ಸ್ವಾವಲಂಬಿಯಾಗಿ ಮಾಡಲು ಯಂತ್ರ ನಿರ್ಮಾಣಮಾಡಬಲ್ಲ ಶಕ್ತಿಯ ಕಾರಖಾನೆಗಳನ್ನೂ ನಿತ್ಯೋಪಯೋಗದ ವಸ್ತುಗಳನ್ನು ಉತ್ಪಾದಿಸುವ ಮಹೋದ್ಯಮಗಳನ್ನೂ ನೆಲೆಗೊಳಿಸಲು ಅದು ಹವಣಿಸಿದೆ. ಭೂಮಿಯ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಲು ಅದು ಕಂಕಣ ತೊಟ್ಟಿದೆ. ಆರ್ಥಿಕ ಜೀವನದಲ್ಲಿ ಉತ್ತಮ ಮಟ್ಟವನ್ನು ತಂದು ಕೊಟ್ಟು ಭೌತಿಕ ಸಮಾನತೆಯನ್ನು ಸಾಧಿಸಿ, ತನ್ಮೂಲಕ ಮಾನಸಿಕ ಶಾಂತಿ ಹಾಗು ಆಧ್ಯಾತ್ಮಿಕ ಶ್ರೇಯಸ್ಸಿನ ದಾರಿಯಲ್ಲಿ ಜನರನ್ನು ಮುನ್ನಡೆಸಲು ಸರಕಾರವು ಬದ್ಧವಾಗಿದೆ. ಇದಕ್ಕಾಗಿ ಘಟನೆಗೆ ತಿದ್ದುಪಡಿ ಮಾಡುವುದಕ್ಕಾಗಲೀ ಹೊಸ ತೆರಿಗೆಗಳನ್ನು ಹೇರುವುದಕ್ಕಾಗಲೀ ರಾಷ್ಟ್ರಸ್ವಾಮ್ಯದತತ್ತ್ವವನ್ನು ಎತ್ತಿ ಹಿಡಿಯುವುದಕ್ಕಾಗಲೀ ಉಪಯುಕ್ತವೆನಿಸಿದ ಸಂದರ್ಭಗಳನ್ನು ಬಿಟ್ಟುಕೊಟ್ಟಿಲ್ಲ; ಬದಲಾವಣೆಗಿರುವ ವಿರೋಧವನ್ನು ಕಂಡು ಹೆದರಿ ಹಿಂಜರಿದಿಲ್ಲ. ರಾಷ್ಟ್ರದೊಳಗಿನ ಈ ಸಾಧನೆಯು ಪ್ರತಿಪಕ್ಷಗಳ ಹೊಣೆಗೆಟ್ಟ ಟೀಕೆಯ ಸುರಿಮಳೆಯಿಂದಾಗಿಯೂ ಹಲವು "ಬೇಕು"ಗಳು ಈಗಲೂ ಪೂರೈಸಲ್ಪಡದೆ ಉಳಿದಿರುವ ಕಾರಣದಿಂದಲೂ ಥಕ್ಕನೆ ಗಮನಕ್ಕೆ ಬಾರದೆ ಹೋಗುವುದುಂಟು ಅಂಥ ಸಂದರ್ಭಗಳಲ್ಲಿ ನಿರಾಶೆಯ ನಿಟ್ಟುಸಿರನ್ನು ಜನಸಾಮಾನ್ಯರು ಬಿಡುವುದುಂಟು. ಬೇರೆ ದೇಶಗಳ ಪ್ರಗತಿಯ ರಮ್ಯ ಚಿತ್ರದ ಬಣ್ಣನೆಯಿಂದ ಆಕರ್ಷಿಸಲ್ಪಟ್ಟು ಕೊರಗುವುದುಂಟು. ಇದು ಸರಿಯಾದ ರೀತಿಯಲ್ಲ ಬೀಜ ಬಿತ್ತಿದೊಡನೆಯೇ ಫಲ ಕೊಯ್ಯುವುದಕ್ಕಾಗುವುದಿಲ್ಲ. ಬಿತ್ತಿದ ಬೀಜಮೊಳಕೆಯೊಡೆದು, ಚಿಗುರಿ ಮೇಲೆ ಬಂದು, ಸೊಂಪಾಗಿ ಬೆಳೆದು, ಹೂಬಿಟ್ಟು, ಹಣ್ಣು ಹೊರುವಷ್ಟು ಕಾಲ ಕಾಯಬೇಕಾಗುತ್ತದೆ; ಈ ಅವಧಿಯಲ್ಲಿ ಹಣ್ಣು ಕೊಯ್ಯುವ ಉದ್ದೇಶಕ್ಕೆ ಪೋಷಕವಾದ ಅನೇಕ ಕ್ರಿಯೆಗಳಲ್ಲಿ ನಿರತರಾಗಬೇಕಾಗುತ್ತದೆ. ನೀರು ಗೊಬ್ಬರಗಳನ್ನು ಹಾಕಿ, ಕಳೆಗಳನ್ನು ಕಿತ್ತೊಗೆದು ಬೇಲಿಗಳನ್ನುಹಾಕಿ ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಇಷ್ಟು ಎಚ್ಚರ, ಪರಿಶ್ರಮ ಹಾಗು ಪೋಷಣೆಗಳು ಕಾಲಕಾಲಕ್ಕೆ ಸಿಗದೆಹೋದರೆ ನಮ್ಮ ಧ್ಯೇಯವೆಂದೂ ನೆರವೇರಲಾರದು. ಆದುದರಿಂದ ನಮ್ಮ ಸರಕಾರದ ವಿದೇಶಧೋರಣೆಯ ಪ್ರಭೆಯ ಮಬ್ಬಿನಲ್ಲಿ ನಾವು ಆಂತರಿಕ ಧೋರಣೆಯ ಯಶಸ್ಸನ್ನು ಗಮನಿಸದೆ ಬಿಡುವುದಾಗಲೀ ಇನ್ನೂ ನಡೆಯಬೇಕಾದ ದಾರಿ ದೂರವಿದೆ ಎಂಬುದಕ್ಕಾಗಿ ನಡೆದು ಬಂದ ದಾರಿಯ ಲೆಕ್ಕವಿಟ್ಟುಕೊಳ್ಳದೆ ಉದಾಸೀನತೆ ತೋರಿಸುವುದಾಗಲೀ ಸಲ್ಲದು. ಈ ಮಟ್ಟಿಗೆ ಪ್ರಜಾರಾಜ್ಯ ದಿನೋತ್ಸವವು ಪ್ರತಿಜ್ಞೆಯ ಪುನರುಚ್ಚಾರಕಾಲವಾಗಲಿ! ಹೊರದೇಶಗಳಲ್ಲಿ ಸ್ನೇಹಿತರನ್ನು ಮಾಡಿಕೊಂಡಿರುವ ನಮ್ಮ ಸರಕಾರಕ್ಕೆ ಸ್ವದೇಶ ಬಾಂಧವರೆಲ್ಲರೂ ಬೆಂಬಲ ವೀಯುವ, ಸಹಕರಿಸಿ ದುಡಿಯುವ, ಮಿತ್ರರಾಗಲಿ!

ಮಧುರ ಮಿಲನ

ಕರ್ನಾಟಕ ಏಕೀಕರಣದ ಸಪ್ರೋದಯ ಕಾಲದಲ್ಲಿ ಕನ್ನಡ ನಾಡಿನ ಎರಡು ಪ್ರಮುಖ ಶಕ್ತಿಗಳ ಮಧುರ ಮಿಲನವನ್ನು ಮೇಲಿನ ಚಿತ್ರ ತೋರಿಸುತ್ತದೆ. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು (ಎಡಗಡೆ) ಎಲ್ಲ ಕನ್ನಡಿಗರ ಹೃದಯವನ್ನು ಗೆದ್ದುಕೊಂಡವರಿಷ್ಟೇಯಲ್ಲ— ಕರ್ನಾಟಕದಲ್ಲಿ ಉಳಿದು ಕನ್ನಡಿಗರೊಡನೆ ಸಮರಸ ಜೀವನ ನಡೆಸಿ ಬಾಳುತ್ತಾ ಬಂದಿರುವ ಇತರ ಭಾಷಾಗುಂಪಿನ ಜನರ ಕ್ಷೇಮಾಭ್ಯುದಯಗಳ ಪ್ರತಿಪಾದಕರೂ ಹೌದು. ಡಾ. ಟಿ. ಮಾಧವ ಪೈಗಳು (ಬಲಗಡೆ) ನಾಡಿನಲ್ಲಿ ಹೊಸ ಚೈತನ್ಯ ತುಂಬಿ ಬರುವಂತೆ ಅವಿಶ್ರಾಂತವಾಗಿ ಕೆಲಸ ಮಾಡುವ ಮಹಾನುಭಾವರಾಗಿದ್ದಾರೆ. ನಾಡಿಯ ಬಡಿತವನ್ನು ಜತನದಿಂದ ಪರೀಕ್ಷಿಸಿ ದೇಹಾರೋಗ್ಯಕ್ಕೆ ಉಪಚಾರ ಮಾಡುವಲ್ಲಿಂದ ಪ್ರಾರಂಭವಾದ ಅವರ ಜೀವನ ಇಂದು ಕರ್ನಾಟಕದ, ಅದೇಕೆ, ವೈದ್ಯಕೀಯ ಕಾಲೇಜಿನ ಸ್ಥಾಪಕರೆಂಬ ನೆಲೆಯಿಂದ, ಭಾರತದ, ಪಾಲಿಗೆ ಅವಿರತ ಪರಿಶ್ರಮ, ಮಹೋನ್ನತ ಪ್ರತಿಭೆ ಹಾಗು ಅದ್ಭುತ ಕಾರ್ಯದಕ್ಷತೆಯ ಸಂಗಮವೆನಿಸಿದೆ. ಸಾರ್ವಜನಿಕ ಉಪಯೋಗದ ಹಲವಾರು ಶೈಕ್ಷಣಿಕ, ಔದ್ಯಮಿಕ ಹಾಗು ವಾಣಿಜ್ಯ ಸಂಸ್ಥೆಗಳ ಜನಕರಾದ ಡಾ. ಪೈಗಳಿಗೆ ಹೊಸ ಮೈಸೂರು ರಾಜ್ಯವು ವಿಸ್ತಾರವಾದ ಕಾರ್ಯಕ್ಷೇತ್ರವಾಗಿ ಪರಿಣಮಿಸಲಿ. ಆಗ ಶ್ರೀ ಹನುಮಂತಯ್ಯನವರಂಥ ರಾಜಕೀಯ ಧುರೀಣರ ಸಹಕಾರ ಅವರಿಗೆ ಈಗಿನಿಂತ ಸಾವಿರ ಪಾಲು ಹೆಚ್ಚು ಪ್ರಮಾಣದಲ್ಲಿ ಸಿಗಲಿ!

ಈ ಸಂಚಿಕೆಯ ಕುರಿತು

ನಮ್ಮದಿದು ೧೯೫೬ ನೇ ಪ್ರಜಾರಾಜ್ಯ ದಿನೋತ್ಸವ ವಿಶೇಷ ಸಂಚಿಕೆಯಾಗಿದೆ. ಇಲ್ಲಿಯ ಲೇಖನಗಳಲ್ಲಿ ವೈವಿಧ್ಯ ಕಂಡುಬಂದರೂ ಅವುಗಳ ಜೀವಾಳ ಒಂದೇ ಆಗಿದೆ. ರಾಷ್ಟ್ರದ ಜೀವನವು ಸುಂದರವಾಗಬೇಕು, ಜನತೆಯ ಬಾಳ್ವೆ ಸುಖಕರವಾಗಬೇಕು— ಎಂಬ ಉದ್ದೇಶವನ್ನು ಇವು ಇಟ್ಟುಕೊಂಡಿರುತ್ತವೆ. ಈ ಲೇಖನಗಳನ್ನಿತ್ತು ನಮ್ಮೊಡನೆ ಪ್ರೀತಿಯಿಂದ ಸಹಕರಿಸಿದ ಬರೆಹಗಾರರಿಗೆ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ. ನಮ್ಮ ವಿಷಯ ವೈವಿಧ್ಯವನ್ನು ಇನ್ನಷ್ಟು ಮುಖವಾಗಿ ಬೆಳೆಸಲು ಸಹಾಯಕವಾಗುವಂತೆ ಶ್ರೀಗಳಾದ ಎಚ್. ಎಸ್. ಪಾಟೀಲ, ಯು. ರಾಘವೇಂದ್ರಾಚಾರ್ಯ, ಕೆ. ಎಸ್. ಸವಣೂರು, ಕೆ. ಕೆ. ಶೆಟ್ಟಿ, ಹೊಸ್ಸೊಳ ಮತ್ತಿತರ, ಮಹಾನುಭಾವರಿಂದ ಉತ್ತಮ ಲೇಖನಗಳು ಬಂದಿದ್ದರೂ ಅವು ಸಕಾಲದಲ್ಲಿ ಕೈಸೇರದ ದೆಸೆಯಿಂದ ಪ್ರಕಟಿಸಲಾಗದೆ ಹೋದುದಕ್ಕೆ ನಾವು ಕುಂಬ ವಿಷಾದವನ್ನು ವ್ಯಕ್ತಪಡಿಸುತ್ತೇವೆ. ನಮ್ಮ ಸಮಯಕ್ಕೆ ಸರಿಯಾಗಿ ಲೇಖನಗಳ ಅನುವಾದ ಮತ್ತಿತರ ರೀತಿಯಿಂದ ಬಹಳವಾಗಿ ನೆರವಾದ ವ್ಯಕ್ತಿಗಳಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ. ಎ. ಇವರನ್ನು ನಾವು ನೆನೆಯಲೇ ಬೇಕಾಗಿದೆ. ಅವರಿಗೆ ನಾವು ಋಣಿಗಳಾಗಿದ್ದೇವೆ. ನಮ್ಮ ವಾಣಿಜ್ಯ ಸಂಸ್ಥೆಗಳವರು ಪತ್ರಿಕೆಯ ಮೇಲಿನ ಅಭಿಮಾನದಿಂದ ಎಂದಿಗಿಂತಲೂ ಹೆಚ್ಚು ಮೆಚ್ಚಿಕೆಯ ರೀತಿಯಲ್ಲಿ ನಮಗೆ ಜಾಹೀರಾತುಗಳನ್ನಿತ್ತು ಬಹಳ ಉಪಕಾರ ಮಾಡಿದ್ದಾರೆ. ಅವರ ಪ್ರೋತ್ಸಾಹಕ್ಕೆ ನಾವು ಸಂತೋಷ ವ್ಯಕ್ತಪಡಿಸಿ, ಧನ್ಯವಾದಗಳನ್ನು ನೀಡುತ್ತೇವೆ. ಜಾಹೀರಾತು ಸಂಗ್ರಹದ ಕೆಲಸದಲ್ಲಿ ಮಂಗಳೂರಿನ ಶ್ರೀನಿವಾಸ್ ಬ್ರದರ್ಸ್ ಸಂಸ್ಥೆಯ ಶ್ರೀ ಯು. ಆರ್. ಪೈಗಳೂ ನ್ಯಾಶನಲ್ ಬುಕ್ ಕಂಪೆನಿಯ ಶ್ರೀ ಕಮಲಾಕ್ಷ ಭಂಡಾರಿಗಳೂ ಸದಾ ಸಹಕರಿಸುತ್ತಿರುವ 'ಅತ್ರೀಯ' ರೊಬ್ಬರಿಗೂ ಕಾರ್ಕಳ ಬೋರ್ಡ್ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಬಿ. ತ್ಯಾಮರಾಯ ಶೆಟ್ಟರೇ ಮೊದಲಾದವರೂ ಹಲವು ಬಗೆಯಿಂದ ಸಹಾಯ ಮಾಡಿದ್ದಾರೆ. ಅವರಿಗೂ ಮುದ್ರಣಾಲಯದ ಬಂಧುಗಳಿಗೂ ನಮ್ಮ ಅನಂತ ವಂದನೆಗಳು!

ಸೂಚನೆ

ಈ ಸಂಚಿಕೆಯ ೨೧ನೆಯ ಪುಟದಲ್ಲಿ ಪ್ರಕಟವಾಗಿರುವ 'ಭದ್ರಂ ಕರ್ಣೇಭಿಃ ಶೃಣುಯಾಮ' ಎಂಬ ಶಾಂತಿ ಮಂತ್ರಾನುವಾದದ ಕೊನೆಯ ಪಂಕ್ತಿ 'ಓಂ ಶಾಂತಿಯ್ಯ, ಶಾಂತಿಯ್ಯ, ಶಾಂತಿಯ್ಯ' ಎಂದಾಗಬೇಕು.

—ಸಂ. ಸ.



ಬದಲಾಗುತ್ತಿರುವುದು ಒಂದು ಬದಲಾಗದ ನಿಸರ್ಗ ನಿಯಮ, ಅಥವಾ ವಿಧಿ. ಅದೊಂದು ಅಪರಿವರ್ತನೀಯ ಸತ್ಯ. ನಾವು ಬೇಕೆಂದರೂ ಬೇಡವೆಂದರೂ ಬದಲಾವಣೆಗಳು ನಡೆಯುತ್ತಲೇ ಇರುತ್ತವೆ. ಸನ್ನಿವೇಶವು ನಮಗನುಕೂಲವಾಗಿರುವಾಗ ನಾವು ಅದು ಇದ್ದ ಹಾಗೇ ಇರಲಿ ಎಂದು ಅಪೇಕ್ಷಿಸುತ್ತೇವೆ; ಅದು ಬದಲಾಗದಿರಲು ಶತಪ್ರಯತ್ನ ಮಾಡುತ್ತೇವೆ; ಆದರೂ ಬದಲಾವಣೆ ನಡೆಯದಿರುವುದಿಲ್ಲ. ಬದಲಾವಣೆಯ ಅನಿವಾರ್ಯತೆಯನ್ನು ಮನಗಾಣುವುದು ಮನುಷ್ಯರಲ್ಲಿ ವಿವೇಕದ ಸೂಚನೆ ಎಂಬುದಾಗಿಯೂ, ನಡೆವ ಬದಲಾವಣೆಗೆ ಹೊಂದಿಕೊಂಡು ಬಾಳುವುದು ಬುದ್ಧಿವಂತಿಕೆ ಎಂಬುದಾಗಿಯೂ ನಾವು ತಿಳಿದಿರತಕ್ಕದು.

ಇಷ್ಟನ್ನು ತಿಳಿದರೆ ಮಾತ್ರ ಸಾಲದು; ಇದು ನಮ್ಮ ಪ್ರಜ್ಞೆಯಲ್ಲಿ ಸೇರಿಕೊಂಡಿರಬೇಕು. ಸದಾಕಾಲವೂ ನಮಗೆ ಇದರ ಜ್ಞಾನ ಇರಬೇಕು. ಪ್ರಾಣಿಗಳಲ್ಲೆಲ್ಲಾ ಮನುಷ್ಯನೇ ಪ್ರಾಜ್ಞನು. ಆತನಿಗೆ ಅವನ ಅಂತರಂಗ ಪರಿಚಯವಿದೆ. ಜೀವವಿಕಸನವು ಮುಂದುವರಿದಂತೆ ಅವನು ಮತ್ತಷ್ಟು ಪ್ರಜ್ಞಾಶಾಲಿಯಾಗುವನು. ಹಾಗೆ ಮಾಡಿದರೇನೆ ಅವನ ಭವಿಷ್ಯದ ಮೇಲೆ ಅವನು ಪ್ರಭುವೆನಿಸಿಯಾನು. ಪದಾರ್ಥ ಪ್ರಪಂಚದ ಜ್ಞಾನ, ಭೌತ ಪ್ರಪಂಚದ ವಸ್ತುಗಳ ಮೇಲೆ ಪರಿಣಾಮ ಮಾಡುವ ನೈಸರ್ಗಿಕ ನಿಯಮಗಳ ಪ್ರಜ್ಞೆ—ಇವರಿಂದಾಗಿ ಮನುಷ್ಯನು ನಿಸರ್ಗದ ಒಡೆತನವನ್ನು ಪಡೆಯಬಲ್ಲನು, ಅದನ್ನು ತನಗನುಕೂಲವಾಗುವಂತೆ ನಿಯಂತ್ರಿಸಬಲ್ಲನು. ಜಾಗ್ರದವಸ್ಥೆಯಲ್ಲಿರುವ, ಭೌತ ವಿಷಯಕವಾದ ಪರಿಸರದ ಮೇಲೆ ಈ ರೀತಿ ಆತನು ಪ್ರಭುತ್ವವನ್ನು ಪಡೆಯಬೇಕಾದರೂ ಸಹಿತ ಆತನಿಗೆ ಅಂತರಂಗಿಕ ಪ್ರಜ್ಞೆಯ ಪ್ರತಿಕ್ರಿಯೆಗಳ ಜ್ಞಾನವಿರಲೇಬೇಕು. ಇಂದು ಆತನನ್ನು ನಿಯಂತ್ರಿಸುವ ಯಾವ ಯಾವ ಪ್ರೇರಣೆಗಳೂ, ಮೌಲಿಕ ಪ್ರಚೋದನೆಗಳೂ ಇವೆಯೋ ಅವುಗಳ ಮೇಲೆ ಆತನು ವಿಜಯ ಪಡೆಯಬೇಕಾದರೆ ಅವನಿಗೆ ಇಂಥ ಜ್ಞಾನವು ಆವಶ್ಯಕ. ಅಂದರೆ ನಮಗೆ ಬೇಕಾದ್ದು ಆತ್ಮ ಜ್ಞಾನ, ತನ್ನನ್ನು ತಾನರಿಯುವ ಶಕ್ತಿ, ಹೊರಗಿನ ಪ್ರಪಂಚದ ಮೇಲೆ ಹಿಡಿತವಿರಿಸಿಕೊಳ್ಳಬಲ್ಲ ಸತ್ತ್ವ. ಜೀವ ವಿಕಸನದ (evolution) ತತ್ತ್ವವನ್ನೂ ಮನುಷ್ಯನಿಗೆ ಸಾಧ್ಯವಾದಷ್ಟು ಮಟ್ಟಿಗೆ ಪರಿವರ್ತಿಸಿಕೊಳ್ಳಬಲ್ಲ ಸಾಮರ್ಥ್ಯವು ಆತ್ಮಜ್ಞಾನದಿಂದ ಲಭ್ಯವೆಂದು ನನ್ನೆಣಿಕೆ.

ಆವಶ್ಯಕವಾದ ಗತಿಶೀಲತೆ

ನಮ್ಮ ಎಳೆಂಟು ವರ್ಷಗಳ ಸಾಧನೆಯನ್ನು ಲಕ್ಷ್ಯಪೂರ್ವಕ ಅವಲೋಕಿಸಿದರೆ ಮತ್ತು ನಮ್ಮ ದೇಶವು ಸ್ವತಂತ್ರವಾದಾಗಲೇ ಸ್ವಾತಂತ್ರ್ಯವನ್ನು ಸಂಪಾದಿಸಿದ ಇತರ ದೇಶಗಳ ಪ್ರಗತಿಯೊಡನೆ ತೂಗಿ ನೋಡಿದರೆ ಕಳೆದ ಎಳೆಂಟು ವರ್ಷಗಳಲ್ಲಿ ನಾವು ಐವತ್ತು ವರ್ಷಗಳಲ್ಲೂ ಪಡೆದಿರದಷ್ಟು ಅಭ್ಯುದಯವನ್ನು ಹೊಂದಿರುವುದು ಮನವರಿಕೆಯಾಗದಿರದು. ಕಾಲದೊಡನೆ ಹೊಂದಿಕೊಂಡು ಹೋಗುವ ಜಾಗ್ರತ ಪ್ರಜ್ಞೆಯೇ ಈ ಯಶಸ್ಸಿನಲ್ಲಿ ಅಡಕವಾದ ತತ್ತ್ವ.

ಬರೆದವರು: ಶ್ರೀ ರಂಗನಾಥ ದಿವಾಕರ.

ಮನುಷ್ಯರ ವ್ಯವಹಾರದಲ್ಲಿ ಗತಿಶೀಲತೆ (Dynamism)ಗೆ ಇರುವ ಸ್ಥಾನದ ನಿಷ್ಕೃಷ್ಟ ಜ್ಞಾನವು ನಮಗೆ ಇರುವುದು ಕಡಿಮೆ. ಬದಲಾವಣೆಗಳು ಒಮ್ಮೆ ನಿಧಾನವಾಗಿಯೂ, ಇನ್ನೊಮ್ಮೆ ದ್ರುತತರವಾಗಿಯೂ ನಡೆಯುವುದು ವಾಡಿಕೆ. ಆದರೂ ಬದಲಾವಣೆಯುಂಟೆಂಬುದನ್ನ ನಾವು ತಿರಸ್ಕರಿಸುವಂತಿಲ್ಲ. ಅಂತೆಯೇ ಅದರ ನಿಯಮಗಳನ್ನು ಸ್ಥೂಲವಾಗಿಯಾದರೂ ಪರಿಚಯಿಸಿಕೊಳ್ಳದೆ ಗತ್ಯಂತರವಿಲ್ಲ. ಬದಲಾವಣೆಗಳೊಡನೆ ಸಾಮರಸ್ಯವನ್ನು ಸ್ಥಾಪಿಸುವುದಕ್ಕೊ, ವಿದ್ಯಮಾನಗಳು ಹರಿಯುವ ದಿಕ್ಕನ್ನು ಯಥಾ ಸಾಧ್ಯ ತಿರುಗಿಸುವುದಕ್ಕೊ, ಇದರಿಂದ ಶಕ್ಯವಾಗುವುದು. ಸಮಾಜ ಶಾಸ್ತ್ರಗಳು ಮನುಷ್ಯ ವ್ಯವಹಾರದಲ್ಲಿ ಪರಿವರ್ತನೀಯ ಸೂತ್ರಗಳನ್ನು ಪರಿಶೀಲಿಸುವಂಥವು; ಇತಿಹಾಸದ ತತ್ತ್ವಜ್ಞಾನ, ಮತ್ತು ಜನಪದ ಸಂಸ್ಕೃತಿಗಳು ಏಳುವ ಮತ್ತು ಬೀಳುವ ನಿಯಮ ಪರಿಶೀಲನ ಮುಂತಾದುವು ವಿಜ್ಞಾನದಲ್ಲಿಯೂ ಅತ್ಯಾಧುನಿಕ ವಿಜ್ಞಾನವೆನಿಸುವುವು. ಅವುಗಳ ಅಧ್ಯಯನವು ಆರಂಭವಾದುದು ಇತ್ತೀಚೆಗೆ. ಮನುಷ್ಯ ಜೀವನದಲ್ಲಿ ಅಂತರ್ಗತವಾಗಿರುವ ಗತಿಶೀಲತೆಯನ್ನು ತಿಳಿದರೆ ನಾವು ಎತ್ತ ಸಾಗುತ್ತಿದ್ದೇವೆ ಎನ್ನುವುದರ ಜ್ಞಾನವು ನಮಗೆ ಸುಲಭವಾಗುವುದು.

ಈ ರೀತಿ ಸಮಾಜ ಶಾಸ್ತ್ರವನ್ನು ಅಧ್ಯಯನ ಮಾಡುವುದರಿಂದ ಅದೃಷ್ಟದ ಮೇಲೆ ಅಥವಾ ನಿಯಮ ರಹಿತವಾದ ಘಟನೆಗಳ ಮೇಲೆ ಅನೂಚಾನವಾಗಿ ನಡೆದುಕೊಂಡು ಬಂದಿರುವ ನಮ್ಮ ನಂಬಿಕೆಯು ಸಡಿಲವಾಗುವುದು. ಆಲಸ್ಯ, ಅಸಹಾಯತೆ, ಅಪ್ರಾಗತಿಕ ಸ್ಥಿತಿಯನ್ನು ನಿವಾರಿಸಲು ನಮಗೆ ಸಾಧ್ಯವಾದರೆ ಜೀವ ವಿಕಸನದ ಮುಂದಿನ ಹೆಜ್ಜೆಯು ಸುಲಭವಾಗುವುದು

***

ವಿಶ್ವದ ವಿದ್ಯಮಾನಗಳ ಹಿನ್ನೆಲೆಯಲ್ಲಿ ಭಾರತದಲ್ಲಿ ನಡೆಯುವ ವಿದ್ಯಮಾನಗಳನ್ನು ನಾವು ಮೇಲೆ ಹೇಳಿದ ವಿಷಯಗಳನ್ನು ನೆನಪಿನಲ್ಲಿರಿಸಿಕೊಂಡು ಪರೀಕ್ಷಿಸಿದರೆ ಏನು ಕಾಣುತ್ತದೆಂಬುದನ್ನು ನೋಡೋಣ.

ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತದ ಮೇಲೆ ಬಿದ್ದ ಪಾಶ್ಚಾತ್ಯ ಪ್ರಭಾವವು ನಮ್ಮ ದೇಶದ ಅಂತರಾಳವನ್ನು ಅಲುಗಿಸಿತು. ನಮ್ಮ ಸ್ವಾತಂತ್ರ್ಯ ಆಂದೋಲನವು ಈ ಪ್ರಭಾವದ ಒಂದು ಅಂಗವಾಗಿ ಪ್ರಾದುರ್ಭಾವಕ್ಕೆ ಬಂದಿತು. ಸ್ವದೇಶಾಭಿಮಾನವುಳ್ಳವರೆಲ್ಲರೂ ಪರಕೀಯರ ಆಡ

(೩೦ನೇ ಪುಟ ನೋಡಿರಿ)

ನವಭಾರತದ ನಿರ್ಮಾಣ ಕಾರ್ಯ.....

... ರಾಷ್ಟ್ರದ ಪುನರುಜ್ಜೀವನದಲ್ಲಿ ಒಳನಾಡಿನ ವ್ಯಾಪಾರಕ್ಕೆ ಇರುವ ಮಹತ್ವ ಅತ್ಯಧಿಕ.

ಒಳನಾಡಿನ ವ್ಯಾಪಾರವು ಮೋಟಾರು ಮತ್ತು ಲಾರಿಗಳು ಓಡಾಡಿದಷ್ಟೂ ಹೆಚ್ಚು ಪ್ರಮಾಣದಲ್ಲಿ ಅಭಿವೃದ್ಧಿಯನ್ನು ಹೊಂದುತ್ತದೆ.

ಮೋಟಾರು ಸಾರಿಗೆಯ ಜೀವನಾಡಿಯಂತಿರುವುದೇ ಸ್ಪ್ರಿಂಗ್ ಉದ್ಯಮ.

ಸ್ವಾವಲಂಬನೆಯ ದಿಸೆಯಲ್ಲಿ ಹೆಜ್ಜೆಯಿಟ್ಟು ನಾವು ನಡೆಸುತ್ತಿರುವ ದೇಶೀಯ ಸ್ಪ್ರಿಂಗ್ ಉದ್ಯಮಕ್ಕೆ ತಮ್ಮ ಪ್ರೋತ್ಸಾಹವಿರಲಿ!

ಕೆನರಾ ವರ್ಕ್‌ಶೋಪಿನ ಸ್ಪ್ರಿಂಗುಗಳು ಹಿಂದುಸ್ಥಾನದಲ್ಲಿ ತಯಾರಾಗುವ ಇತರ ಎಲ್ಲಾ ಸ್ಪ್ರಿಂಗುಗಳಿಗಿಂತಲೂ ಉತ್ಕೃಷ್ಟವಾಗಿವೆ.

ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್,

ಮಂಗಳೂರು—3.

ಭಾರತದಲ್ಲಿರುವ ಮೂರು ಕಾರ್ಖಾನೆಗಳಲ್ಲಿ ಇದೊಂದು.

THE CANARA WORKSHOPS LTD.,

MANGALORE—3.

ಕೆನರಾ ಪ್ರದೇಶದ ಆರ್ಥಿಕ ಅಭ್ಯುದಯ

ತಳದಿಂದ ರಾಷ್ಟ್ರವನ್ನು ಹೊಸತಾಗಿ ಕಟ್ಟುವ ಕೆಲಸ ನಡೆದರೇನೇ ಪ್ರಗತಿ ಮತ್ತು ಅಭ್ಯುದಯಕ್ಕೆ ನಾವು ಸರಿಯಾದ ಪ್ರಯತ್ನ ಮಾಡಿದವರಾಗುತ್ತೇವೆ. ಗ್ರಾಮ ಅಥವಾ ಜಿಲ್ಲೆಯ ಸುತ್ತಿನಲ್ಲಿ ಧಾರಾಳವಾಗಿ ಲಭ್ಯವಿರುವ ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡು ನಾವು ಪುನರುಜ್ಜೀವನದ ಅಡಿಗಲ್ಲನ್ನು ಹಾಕಬೇಕು. ಕೆನರಾ ವಲಯದಲ್ಲಿ ಇದಕ್ಕಿರುವ ಅವಕಾಶ ಅತ್ಯಧಿಕ.

ಬರೆದವರು: ಶ್ರೀ ಟಿ. ಎ. ಪೈ, ಎಂ. ಎಲ್. ಎ.

'ಕೆನರಾ ಪ್ರದೇಶ'ದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೊಂದು ಮಾತ್ರವಲ್ಲದೆ ನೆರೆಯ ಉತ್ತರ ಕನ್ನಡ ಮತ್ತು ಕೊಡಗನ್ನೂ ಸೇರಿಸಬೇಕಾಗುತ್ತದೆ. ಈ ಪ್ರದೇಶದ ಗಟ್ಟಗಳ ಸೆರಗಿಗೆ ಮಲೆನಾಡೆಂದು ಹೆಸರಿದ್ದರೂ, ನಮ್ಮ ಲೇಖನವು ಕರಾವಳಿಯ ಪ್ರಗತಿಯನ್ನು ಆಡಕಗೊಳಿಸುವುದರಿಂದ ಕೆನರಾ ಪ್ರದೇಶವೆಂಬ ಹೊಸ ನಾಮಕರಣವನ್ನು ಮಾಡಬಹುದೆಂದು ಕಾಣುತ್ತದೆ.

ನಮ್ಮ ಜಿಲ್ಲೆಯ ಜನಸಂಖ್ಯೆ 17½ ಲಕ್ಷ, ಉತ್ತರ ಕನ್ನಡದಲ್ಲಿ ಮುಂಬಯಿ ಸರಕಾರವು ಕಾಡಿನ ಬೆಳವಣಿಗೆಗೇ ಅತಿಶಯ ಪ್ರಾಶಸ್ತ್ಯವನ್ನು ಕೊಟ್ಟುದರಿಂದಲೊ ಏನೋ ಪ್ರಜಾಸಂಖ್ಯೆ ಅಲ್ಲಿ ಕೇವಲ 5⅓ ಲಕ್ಷ. ಕೊಡಗಿನಲ್ಲಿ 2½ ಲಕ್ಷ. ನಮ್ಮ ಜಿಲ್ಲೆಯಲ್ಲಿ ಸೇಕಡಾ 20ರಷ್ಟು ಭಾಗವನ್ನು ಅರಣ್ಯಗಳು ಆವರಿಸಿದ್ದರೆ ಉತ್ತರ ಕನ್ನಡ ಮತ್ತು ಕೊಡಗಿನಲ್ಲಿ ಸುಮಾರು 80%ರಷ್ಟು ಕಾಡಿದೆ. ಅರಣ್ಯ ಸಂಪತ್ತಿನ ದೃಷ್ಟಿಯಿಂದ ರಚಿತವಾಗಲಿರುವ ಕರ್ನಾಟಕವು ಭಾರತದಲ್ಲೇ ಎರಡನೇ ರಾಜ್ಯವಾಗುವ ಸಂಭವವಿದೆ. ಅಷ್ಟು ಮಾತ್ರವಲ್ಲದೆ ನಮ್ಮ ಅರಣ್ಯ ಪ್ರದೇಶವು ಕರಾವಳಿಗೆ ಸಮೀಪವಾಗಿರುವುದರಿಂದ ಉದ್ಯಮಗಳನ್ನು ಸ್ಥಾಪಿಸಲು ತುಂಬಾ ಅನುಕೂಲವಿದೆ. ಪ್ಲೈವುಡ್, ಕಾಗದ, ರೇಯನ್ ಮುಂತಾದ ಹಲವಾರು ಉದ್ಯಮಗಳಿಗೆ ಇಲ್ಲಿ ಹೇರಳ ಅವಕಾಶವಿದೆ. ಆದರೂ ಇಲ್ಲಿ ಸ್ಥಾಪಿತವಾಗಿರುವ ಉದ್ಯಮಗಳು ಯಾವುವಾದರೂ ಇವೆಯೆ? ಈಚೆಗೇನೋ ಉತ್ತರ ಕನ್ನಡದಲ್ಲಿ ಕಾಗದದ ಕಾರ್ಖಾನೆ ಒಂದನ್ನು ತೆರೆಯುವ ಪ್ರಯತ್ನ ನಡೆದಿದೆ ಎಂದು ನಾವು ಕೇಳುತ್ತೇವೆ. ಆದರೆ ಈ ಪ್ರಯತ್ನವನ್ನು ಐದು ವರ್ಷಗಳ ಹಿಂದೆಯೇ ಮಾಡಬಹುದಾಗಿತ್ತು. ಆಗ ನಾನು ಜೋಗದ ವಿದ್ಯುತ್ತು ಉತ್ತರ ಕನ್ನಡಕ್ಕೂ ಸಿಗುವುದೊಳ್ಳೆಯದೆಂದು ಮುಂಬಯಿ ಸರಕಾರಕ್ಕೆ ಸೂಚಿಸಿದರೆ ಅವರು ಆ ವಿದ್ಯುತ್ತಿನಿಂದ ಅಂಥ ಅರಣ್ಯಪ್ರದೇಶದಲ್ಲಿ ಏನು ಮಾಡಲಾದೀತೆಂದು ನಿರಾಶೆಯನ್ನು ಸೂಚಿಸಿದ್ದು ನನಗೆ ಜ್ಞಾಪಕಕ್ಕೆ ಬರುತ್ತದೆ. ಹೀಗಿರುವುದರಿಂದ ಅಧಿಕಾರ ಸಂಪನ್ನವಾದ ಸರಕಾರಕ್ಕೂ ಮಾತ್ರವಲ್ಲದೆ ಖಾಸಗಿ ಉದ್ದಿಮೆದಾರರಿಗೂ ಈ ಪ್ರದೇಶದ ಸಾಂಪತ್ತಿಕ ಪ್ರಚ್ಛನ್ನ ಶಕ್ತಿಯ ಪರಿಚಯ ಮಾಡಿಸುವುದು ನಮ್ಮ ಕರ್ತವ್ಯವಾಗುತ್ತದೆ. ನಮ್ಮ ಈ ಜಿಲ್ಲೆಗಳಲ್ಲಿ ಎಲ್ಲರಿಗೂ ಸ್ವಾಗತವಿದೆ. ಯಾರೂ ಬೇಕಾದರೂ ಇಲ್ಲಿಗೆ ಬಂದು ಉದ್ಯಮಗಳನ್ನು ಸ್ಥಾಪಿಸುವುದು ನಮ್ಮ ಜನಕ್ಕೆ ಸಮ್ಮತವಿದೆ ಎಂದು ನಾನೆಣಿಸುತ್ತೇನೆ. ಏಕೆಂದರೆ ನಾವು ಇಡೀ ದೇಶದಲ್ಲಿ ಉದ್ಯೋಗವನ್ನು ಹುಡುಕಿಕೊಂಡು ಅಲೆಯುವ ಜನರು. ಆದ್ದರಿಂದ ಇತರರಿಗೂ ನಮ್ಮಲ್ಲಿ ಸ್ವಾಗತವಿರಲೇಬೇಕು.

ರಬ್ಬರ್ ಸ್ಟಾಂಪುಗಳನ್ನೂ ಬ್ಲಾಕ್ ಬ್ಲೋಕುಗಳನ್ನೂ ನಾಜೂಕಾಗಿ ತಯಾರಿಸಿ ಕೊಡಲಾಗುವುದು.

●

ಮೋಡೆಲ್ ಇಂಡಸ್ಟ್ರೀಸ್

ಪಡುಪೇಟೆ, ಉಡುಪಿ. ದ. ಕನ್ನಡ

ಲೇಖಕ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಗಳು ಪಂಡಿತ ಜವಾಹರಲಾಲ ನೆಹರುಗಳನ್ನು ಅವರು ಕಳೆದ ತಿಂಗಳಲ್ಲಿ ಮಂಗಳೂರಿಗೆ ಆಗಮಿಸಿದಾಗ ರೈಲ್ವೆ ನಿಲ್ದಾಣದಲ್ಲಿ ಗೌರವಪೂರ್ವಕ ಹಸ್ತಲಾಘವಿತ್ತು ಸ್ವಾಗತ ಮಾಡುತ್ತಿರುವುದು.

***

ಅರಣ್ಯ ಸಂಪತ್ತಿಗೆ ಎರಡನೆಯ ಸ್ಥಾನದಲ್ಲಿ ನಿಲ್ಲುವ ನಮ್ಮ ಇನ್ನೊಂದು ಸಂಪತ್ತು ನಮ್ಮ ಮತ್ಸ್ಯವ್ಯವಸಾಯ. ಕರ್ನಾಟಕದ ಈ ಕರಾವಳಿ ಪ್ರದೇಶದ ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಮ್ಮ ಇಡೀ ದೇಶದಲ್ಲಿ ಹಿಡಿಯುವ ಮೀನಿನ ಕಾಲಂಶ ಪಾಲ್ಯದ ಮೀನು ಸಿಗುತ್ತದೆ. ದೇಶದಲ್ಲಿರುವ ಒಟ್ಟು ಹತ್ತು ಕೋಟಿ ರೂಪಾಯಿಗಳ ಮತ್ಸ್ಯ ಸಂಪತ್ತಿನಲ್ಲಿ 2·7 ಕೋಟಿಯಷ್ಟು ಈ ಎರಡು ಜಿಲ್ಲೆಗಳಿಂದಲೇ ಸಿಗುತ್ತದೆ. ಇದಿಷ್ಟೂ ಸಾಧಾರಣವಾಗಿ ಕರಾವಳಿ ಮೀನುಗಾರಿಕೆಯಿಂದಲೇ ಬರುವಂಥದು. ಸಮುದ್ರದಲ್ಲಿ ನಾಲ್ಕಾರು ಮೈಲು ದೂರ ಹೋಗಿ ಅಥವಾ 40-50 ಮೈಲು ದೂರದಿಂದ ಮೀನನ್ನು ತರುವ ಮತ್ಸ್ಯೋದ್ಯಮವನ್ನು ನಾವಿನ್ನೂ ಆರಂಭಿಸಿಲ್ಲ. ನಮ್ಮದು ವಿಶೇಷತಃ ರಂಪಣಿ ಬಲೆಯಿಂದ ಬರುವ ಮೀನು. 50–60 ಮೀನುಗಾರರು ಸೇರಿ ಈ ಬಲೆಯನ್ನು ಕಟ್ಟುತ್ತಾರೆ; ಬಂದ ಮೀನಿನಲ್ಲಿ ತಮ್ಮ ಪಾಲನ್ನು ಸ್ವೀಕರಿಸುತ್ತಾರೆ. ಇದು ಸಹಕಾರಿ ತತ್ತ್ವಕ್ಕೆ ಒಂದು ಉತ್ತಮ ನಿದರ್ಶನ. ಒಂದೇ ಒಂದು ರಂಪಣಿಯಲ್ಲಿ 55 ಲಕ್ಷ ಸಾರ್ಡೀನು ಮೀನು ಬಿದ್ದ ಉದಾಹರಣೆಯೂ ಇದೆ. ಆದರೆ ಇಷ್ಟು ವಿಶೇಷ ಪ್ರಮಾಣದಲ್ಲಿ ಮೀನು ಬೀಳುವುದೇ ನಮಗೊಂದು ದೊಡ್ಡ ಸಮಸ್ಯೆ. ಬಿದ್ದ ಮೀನನ್ನು ಏನು ಮಾಡೋಣ ಎಂದು ತಲೆಬೇಸರ. ಇತ್ತೀಚೆಗೆ ಮಂಗಳೂರಲ್ಲಿ ಸ್ಥಾಪಿತವಾದ ರೆಫ್ರಿಜರೇಶನ್ ಏರ್ಪಾಟನ್ನು ಬಿಟ್ಟರೆ ಬೇರೆಲ್ಲೂ ಈ ಕರಾವಳಿಯಲ್ಲಿ ಮೀನನ್ನು ಶೇಖರಿಸಿಡುವ ಆಧುನಿಕ ಸೌಲಭ್ಯಗಳು ದೊರೆಯುವುದಿಲ್ಲ. ಒಳನಾಡಿನ ಮಾರ್ಕೆಟುಗಳಿಗೆ ಮೀನನ್ನು ತಲೆಹೊರೆಯಲ್ಲೇ ಮುಟ್ಟಿಸಬೇಕಲ್ಲದೆ ಸಾಗಿಸಲು ಸಲುವಾಗಿ ರೆಫ್ರಿಜರೇಟೆಡ್ ಮೋಟಾರ ವ್ಯಾನುಗಳೂ ಇಲ್ಲ. ಇಷ್ಟರವರೆಗೆ ಈ ಮೀನಿಗೆ ಸಿಂಹಳ ಮತ್ತು ತ್ರಾವಣಕೋರ ಕೊಚ್ಚಿಯಲ್ಲಿ ನಮಗಿದ್ದ ಮಾರ್ಕೆಟ್ಟೂ ಈಗೀಗ ಕೈಬಿಡುವುದರಲ್ಲಿದೆ. ಸಿಂಹಳದ ಸರಕಾರವು ವಹಿಸುವ ವಿಚಿತ್ರ ಧೋರಣೆಯಿಂದಾಗಿ ಅಲ್ಲಿ ನಾವು ವ್ಯಾಪಾರಮಾಡುವುದು ಕಷ್ಟವಾಗಿದೆ. ತ್ರಾವಣಕೋರ ಕೊಚ್ಚಿ ರಾಜ್ಯದಲ್ಲಿ ಟಿ. ಸಿ. ಎ. ಸಹಾಯದಿಂದ ಹೆಚ್ಚು ಮೀನಿನ ಉತ್ಪಾದನೆ ನಡೆಯುತ್ತಿರುವುದರಿಂದ ನಮ್ಮ ಸಂಬರಾಜು ಅವರಿಗೆ ಬೇಡವೆನಿಸುವ ಪ್ರಸಂಗಬಂದಿದೆ. ಸರಿಯಾದ ಮಾರ್ಕೆಟುಗಳಿಲ್ಲದೆ ಕಳೆದ ವರ್ಷ ನಾವು 30,000 ಟನ್ ಮೀನನ್ನು ಗೊಬ್ಬರದ ರೂಪಕ್ಕೆ ಪರಿವರ್ತಿಸಬೇಕಾಯಿತು. ಮೀನಿನ ಗೊಬ್ಬರವು ನಮ್ಮ ಕೃಷಿಗೆ ಅನುಕೂಲವೆಂಬುದು ನಿಜವಾದರೂ ಆಹಾರದ ಸಮಸ್ಯೆಯನ್ನು ನೀಗುವ ಈ ಅಮೂಲ್ಯ ವಸ್ತುವನ್ನೇ ಈ ರೀತಿ ದುರ್ವ್ಯಯ ಮಾಡುವುದು ನ್ಯಾಯವಲ್ಲ. ನಾವು ಈ ವ್ಯವಸಾಯದ ಅಭಿವೃದ್ಧಿಗೆ ಏನು ಗಮನ ಕೊಟ್ಟಿದ್ದೇವೆ ಎನ್ನುವುದನ್ನು ನೋಡೋಣ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮತ್ಸ್ಯ ವ್ಯವಸಾಯಕ್ಕೆ ಮೈಸೂರು ಸರಕಾರವು ಯಾವ ಪ್ರೋತ್ಸಾಹವನ್ನೂ ಕೊಟ್ಟ ಹಾಗಿಲ್ಲ. ಕರಾವಳಿ ಇಲ್ಲದೆ ಎಲ್ಲಿನ ಮತ್ಸ್ಯ ವ್ಯವಸಾಯವೆಂದು ಅವರು ಸುಮ್ಮಗಿದ್ದರು. ಆದರೆ ಈಗ ಪರಿಸ್ಥಿತಿ ಬೇರಾಗಿದೆ. 150ರಿಂದ 200 ಮೈಲಿನ ಕರಾವಳಿ ಮಹಾ ಮೈಸೂರು ರಾಜ್ಯಕ್ಕೆ ಸಿಗುತ್ತದೆ. ಪಂಚ ವಾರ್ಷಿಕ ಯೋಜನೆಯಲ್ಲಿ ಯಾವುದಾದರೂ ಒಂದು ಕಸಮು ಸೇರಬೇಕಾದರೆ ರಾಜ್ಯ ಸರಕಾರವು ಅದನ್ನು ಸೂಚಿಸಬೇಕೆಂಬ ಒಂದು ನಿಯಮವಿದೆ. ನಮ್ಮ ಮತ್ಸ್ಯ ವ್ಯವಸಾಯಕ್ಕೆ ಯಾವ ರಾಜ್ಯದ ನೆರವೂ ಇಲ್ಲದೆ ನಿರ್ಗತಿಕವಾಗುವ ಸ್ಥಿತಿ ಬಂದುದು ಶೋಚನೀಯ.

***

ನಮ್ಮಲ್ಲಿ ಇದು ವರೆಗೆ ಆಗಿರುವ ಅಭಿವೃದ್ಧಿ ಅತ್ಯಲ್ಪ; ಇನ್ನು ಆಗಲಿರುವುದು ಬಹಳ ಎಂಬುದಕ್ಕೆ ನಮ್ಮ ಇನ್ನೊಂದು ನೈಸರ್ಗಿಕ ಸಂಪತ್ತಿನ ಉದಾಹರಣೆಯನ್ನು ಕೊಡಬಹುದೆಂದು ಕಾಣುತ್ತದೆ. ಅದು ಜಲ ವಿದ್ಯುತ್ತು. 1,40,000 ಕಿಲೋವಾಟ್ ವಿದ್ಯುತ್ತನ್ನು ಹೊರಡಿಸಬಲ್ಲ ವಾರಾಹಿನದಿ ಯೋಜನೆಯನ್ನು ನಾವು ಯೋಚಿಸಿದ ಹಾಗೆಯೇ ಇಲ್ಲ. ಏಕೆಂದರೆ ವಾರಾಹಿ ಜಲಪಾತವು ನಮ್ಮ ಜಿಲ್ಲೆಯಲ್ಲೂ, ಜಲಾಶಯ ಪ್ರದೇಶವು ಮೈಸೂರಿನಲ್ಲೂ ಇರುತ್ತದೆ. ಕೆನರಾ ಪ್ರದೇಶದಲ್ಲಿ 25 ಲಕ್ಷ ಕಿಲೋವಾಟ್ ವಿದ್ಯುತ್ತನ್ನು ಉತ್ಪಾದಿಸಲು ಸಾಧ್ಯವಿರುವುದಾದರೂ ಸದ್ಯ ಅಲ್ಲಿ ತಯಾರಾಗುತ್ತಿರುವುದು ಕೇವಲ 1·75 ಲಕ್ಷ ಕಿ. ವಾ. ವಿದ್ಯುತ್ತು. ಶರಾವತಿ ಯೋಜನೆಯಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ 7 ಲಕ್ಷ ಕಿ. ವಾ. ವಿದ್ಯುತ್ತನ್ನು ಹೊರಡಿಸಬೇಕೆಂದು ಮೈಸೂರು ಸರಕಾರ ನಿರ್ಧರಿಸಿದೆ. ಹೀಗೆ ನಾವು ನಮ್ಮ ವಿದ್ಯುತ್ತನ್ನು ಬೆಳೆಸಿಕೊಂಡಲ್ಲಿ ಈ ಪ್ರದೇಶದಲ್ಲಿ ಎಷ್ಟೋ ಹೊಸ ಉದ್ಯಮಗಳನ್ನು ತೆರೆಯಲು ಸಾಧ್ಯವಿದೆ. ಗೇರುಬೀಜ ಮತ್ತು ಹಂಚಿನ ಉದ್ಯಮಗಳನ್ನು ಬಿಟ್ಟರೆ ಇಲ್ಲಿ ಬೇರೆ ಯಾವ ಉದ್ಯಮಗಳೂ ಹೇಳಿಕೊಳ್ಳುವ ಪ್ರಮಾಣದಲ್ಲಿ ಇದ್ದ ಹಾಗೆ ಅನಿಸುವುದಿಲ್ಲ.

(೨೯ನೇ ಪುಟ ನೋಡಿರಿ)

ಉಡುಪಿಯ ವಿಚಾರದಲ್ಲಿ ಕೆಲವು ಸಮ್‌ಶೋಧನೆಗಳು

ನೆಹರೂಗಳ "ಭಾರತ ದರ್ಶನ" ಎಂಬ ಗ್ರಂಥವನ್ನು ಈ ದೇಶದ ನಾನು ಜನತೆಯು ನಿಕಟ ಪರಿಚಯದ ಸಾಧನವೆಂದು ಭಾವಿಸಲಾಗುತ್ತದೆ. ಹೊರಗಿನವರು ನಮ್ಮನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ನೆರವಾದಂತೆ ನಮಗಾದರೂ ಇದು "ಹೆಚ್ಚಿನ" ತಿಳಿವಳಿಕೆಯನ್ನು ಕೊಡುತ್ತದೆ. ಜ್ಞಾನಕ್ಕೆ ಸರಿಯಾದುದಿಲ್ಲ ಎಂಬ ಗೀತಾ ವಾಕ್ಯವನ್ನು ನೆನೆದರೆ ಗ್ರಾಮ ಸಮಾಜವನ್ನು ನಿರ್ಮಿಸಲು ಹೊರಟಿರುವ ನಾವು ಪ್ರತಿಯೊಂದು ಊರಿನ ಜನರೂ ತಮ್ಮನ್ನು ತಾವರಿತುಕೊಳ್ಳಲು ಶಕ್ತರಾಗುವಂತೆ ಊರಿನ ಪರಂಪರೆಯ ಕುರಿತು ವಿಶೇಷ ಮಾಹಿತಿ ಕಲೆ ಹಾಕಬೇಕಾಗುತ್ತದೆ. ಪ್ರಜಾರಾಜ್ಯ ದಿನೋತ್ಸವದ ಶುಭ ಸಂದರ್ಭದಲ್ಲಿ "ಉಡುಪಿ"ಯ ನಿಜವಾದ ಹೆಸರು "ಉಡಾಪಿ" ಎಂದು ಸಂಶೋಧನೆಯ ಬಳಿಕ ಘೋಷಿಸಿರುವುದೇ ಈ ಮಟ್ಟಿಗೆ ಮಾರ್ಗದರ್ಶಕ ಯೋಜನೆಯಾಗಿ ಪರಿಣಮಿಸಲಿ!

ಬರೆದವರು: ಶ್ರೀ ಶಿವರಾಮ ಕಾರಂತ.



ಲೇಖಕರು

ತಮ್ಮದೇ ಆದ ಉಡುಪಿ ಊರಿನ ವಿಚಾರದಲ್ಲಿ, ಅಂದರೆ ಅದರ ಹೆಸರಿನ ವಿಚಾರದಲ್ಲಿ, ತಮ್ಮ ತಾಲೂಕಿನವನೇ ಆದ ನಾನು ಸಂಶೋಧನೆಗೆ ಹೊರಟರೆ ಬೇಸರವಾಗದಷ್ಟೆ? ಸಮ+ಶೋಧನೆ, ಸಮ್+ಶೋಧನೆ, ಸಂಶೋಧನೆ ಹೀಗೆ ಮೂರು ಜಾತಿಯ ಅನ್ವೇಷಣೆಗಳಿರುತ್ತವೆ. ನನ್ನದು ಮಧ್ಯಮ ವರ್ಗ. ಸಮ್ ಯೊನೆ ಕೆಲವು ಶೋಧನೆಗಳನ್ನಷ್ಟೇ ನಾನು ಮಾಡಿದ್ದೇನೆ. ಅವಕಾಶ ಸಿಕ್ಕಿದರೆ ಇನ್ನೂ ಮಾಡಬಹುದು. ಈ ಕೆಲಸಕ್ಕೆ ಬೇಕಾದ್ದು ಪಾಂಡಿತ್ಯ ಮುಖ್ಯವೆಂದು ಕೆಲವರು ತಿಳಿಯಬಹುದು. ಪಾಖಲೆಗಳು ಮುಖ್ಯವೆಂದು ಇನ್ನು ಕೆಲವರು ತಿಳಿಯಬಹುದು. ಪ್ರತಿಭೆ ಅಥವಾ ಊಹಾಶಕ್ತಿ ಅದಕ್ಕೂ ಹೆಚ್ಚಿನದೆಂದು ಸಂಶೋಧನೆ ಮಾಡಿದವರು ಸಾರಿರುವಾಗ, ನಾನು ಅದೇ ಹಾದಿ ಹಿಡಿದಿದ್ದೇನೆ.

ಉಡುಪಿಯ ಜನಗಳಿಗೆ ತಮ್ಮ ಊರಿಗೆ ಆ ಹೆಸರು ಯಾಕೆ ಬಂದಿತು, ಅದರ ಕೀರ್ತಿ ಯಾಕೆ ಹಬ್ಬಿತು—ಎಂದು ಖಂಡಿತಕ್ಕೂ ತಿಳಿದಿರಲಾರದು. ಅದನ್ನು ತಿಳಿಸಿ ಹೇಳಬೇಕಾದುದು ಇಮ್ಮಡಿ ಜವಾಬ್ದಾರಿಯ ಕೆಲಸ. (ಇಮ್ಮಡಿ—ಏಕೆ?) ಉಡುಪಿಯ ಹೆಸರಿನ ವಿಚಾರ ಆ ಮೇಲೆ, ಕೀರ್ತಿಯ ವಿಚಾರ ಮೊದಲು ಹೇಳುತ್ತೇನೆ. ಆ ಕೀರ್ತಿಯು ಬಂದುದು ಶ್ರೀಕೃಷ್ಣನಿಂದ; ಶ್ರೀ ಮಧ್ವಾಚಾರ್ಯರಿಂದ; ಶ್ರೀ ಮಟ್ಟಿ ಗುಳ್ಳದಿಂದ; ಶ್ರೀ ಕಾಫೀ ಹೋಟೆಲುಗಳಿಂದ ಇವುಗಳಲ್ಲಿ ಯಾವುದು ನಿಜ? ಯಾವುದು ನಿಜವಲ್ಲ? ಕೃಷ್ಣನಿಂದ ದ್ವಾರಕೆಗೂ, ಮಥುರೆಗೂ ಕೀರ್ತಿ ಬಂದಿದ್ದರೆ - ಅದು ನಿಜ. ಉಡುಪಿಯಿಂದ ನಾವು ಗೋಪಕನ್ಯೆಯರನ್ನು ಅಲ್ಲಿಗೆ ಕಳುಹಿಸಿ ಕೊಟ್ಟವರಲ್ಲ. ಇಲ್ಲಿನ ಕೃಷ್ಣ ವಿಗ್ರಹವನ್ನು ಸ್ಥಾಪಿಸಿದ ಶ್ರೀ ಮಧ್ವಾಚಾರ್ಯರಿಂದ ಆ ಕೀರ್ತಿ ಬಂತೆಂದರೆ, ಆ ಮೊದಲು ಉಡುಪಿಗೆ ಕೀರ್ತಿ ಇದ್ದಿರಲಿಲ್ಲ ಎಂಬ ಅಪಮಾನಕ್ಕೆ ಗುರಿಯಾಗಬೇಕಾಗುತ್ತದೆ. ಮಟ್ಟಿ ಗುಳ್ಳದ ಕಾಲವು ಇನ್ನೂ ಅನಂತರದ್ದು. ಶಾಸನಗಳಲ್ಲಿ ಶ್ರೀ ವಾದಿರಾಜಸ್ವಾಮಿಯವರ ಸಮಕಾಲೀನ ಬದುಕು ಅದು. ಕಾಫೀ ಹೋಟೆಲ್ ಮತ್ತೂ ಅನಂತರದ್ದು. ಆದರೆ ನನ್ನ ವಾದ ಬೇರೆ—ಉಡುಪಿಯ ಕೀರ್ತಿ ಅನಾದಿಯಿಂದಲೇ ಬಂದದ್ದು ಎಂದು. ಆ ಊರಿನ ಶಕಾಶ "ಸನಾದಿ"ಯಿಂದಲ್ಲ.

ಮೊದಲಿಂದಲೂ ಅದಕ್ಕೆ ಆ ಹೆಸರಿತ್ತು. ಹೆಸರಿನ ಅರ್ಥ ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಆಗಿತ್ತು. "ಆಕಾಶಾತ್ಪತಿತಂ ತೋಯಂ......" ಎಂಬಂತೆ, ಹೆಸರೇನೋ ಒಂದೇ; ಕೀರ್ತಿಯ ಕಾರಣಗಳು ಮಾತ್ರ ಬೇರೆ ಬೇರೆ ಆಗಿದ್ದುವು. ಹೀಗಿದ್ದಲ್ಲಿ ಮಾತ್ರ—ಸಂಶೋಧನೆಗೆ ಅವಕಾಶವಿದೆ.

***

ಮಹಾಭಾರತದ ಕಾಲದಲ್ಲಿ, ಅರ್ಜುನ ಭೂಪತಿ ಅಜ್ಞಾತ ವಾಸಮಾಡಿದ ಕತೆಯುಂಟಲ್ಲವೇ? ಆಗ ಆತ ಎಲ್ಲಿಗೆ ಹೋಗಿ ಅಡಗಿದ್ದ? ಏನುಮಾಡಿದ? ಕೇರಳಕ್ಕಲ್ಲ; ಉಡುಪಿಗೆ ಅರ್ಜುನ. ಮತ್ತು ಉಲೂಪಿಯರ ಪ್ರಣಯ ಪ್ರಕರಣವೇ ಇದಕ್ಕೆ ದಾಖಲೆ. - ಈ ಪರಂಪರೆಯು ಅನೇಕ ಆಧುನಿಕ ಅರ್ಜುನರಿಂದ ಇಂದಿಗೂ ನಡೆದು ಕೊಂಡು ಬಂದಿದೆ. ಉಲೂಪಿಯ ಊರೇ 'ಉಲುಪಿ' ಇನ್ನು 'ಲ', 'ಳ'ವಾಗಿ 'ಳ', 'ಡ' ವಾಗುವುದಕ್ಕೆ ಯಾವ ಆತಂಕವೂ ಇಲ್ಲ. ನಾಲಗೆ ತೊದಲಿದವರ ಬಾಯಲ್ಲಿ 'ಉಲೂಪಿ' ಎಂಬುದು 'ಉಡುಪಿ' ಯಾಯಿತು.

ಆಗ ಉಡುಪಿಯ ವಿಸ್ತಾರ ಉದ್ಯಾವರಕ್ಕೂ ಮೀರಿತ್ತು. ಅಲ್ಲಿ ಅಲೂಪರ ಶಾಸನಗಳಿವೆಯೆಂದು ಮಂಜೇಶ್ವರ ಗೋವಿಂದ ಪೈಗಳವರು ಹೇಳಿದ್ದಾರೆ. ಇವು ಎರಡು ಮೂರನೆಯ ಶತಮಾನದವುಗಳಂತೆ. ಶಾಸನ ಕೆತ್ತಿದ ಮಲೆಯಾಳಿಯೊಬ್ಬನು 'ಉ' ವನ್ನು 'ಅ' ಮಾಡಿದ್ದರೆ ನಮ್ಮ ತಪ್ಪೇ? 'ಅಲೂಪ'ರೆಲ್ಲ ಉಡುಪಿಯವರು. ಅವರೆಂದೂ ಅಲ್ಪರಲ್ಲ.

ನಮಗೆ ಬರುವ ತೊಂದರೆ, ಒಂದೊಂದು ಜನ, ಒಂದೊಂದು ಹೆಸರು ಹೇಳುವುದು. ಒಂದೇ ಊರನ್ನು 'ಉಲುಪಿ' 'ಉಡುಪಿ' ಮಾಡಿದಹಾಗೆ 'ಉಡಿಪು', 'ಉಡುಪು', 'ಒಡುಪು' 'ಒಡಿಪು' 'ಉಡಪಿ', 'ಉಡಿಪಿ' ಹೀಗೆಲ್ಲ ಮಾಡಿ ಹೇಳಿದರೆ ಈ ತಪ್ಪುಗಳಿಗೆ ಯಾರು ಹೊಣೆ? ಅವು ತಪ್ಪಿರಲಾರವು. ಈ ಎಲ್ಲ ಪದಗಳಿಗೂ ಒಂದೊಂದು ಅರ್ಥವಿದ್ದಿರಬೇಕು—ಎಂಬುದು ನನ್ನ ಮತ. ಬಹುಮಟ್ಟಿಗೆ ಅದು ನಿಜವಿರಬೇಕೆಂದು ನನ್ನ ಪ್ರತಿಭಾಸಂಪನ್ನ ಶೋಧನೆಯಿಂದ ಕಂಡು ಹಿಡಿದಿದ್ದೇನೆ.

ಉದಾ— 'ಉಡಿಪು'. ನಮ್ಮಲ್ಲಿ 'ಮುಡಿಪು' ಎಂಬುದಿದೆ. ಮುಡಿಯಲ್ಲಿ ಸಿಕ್ಕಿಸಿಕೊಳ್ಳುವುದು ಮುಡಿಪು. ಹಾಗೆಯೇ ಉಡಿಯಲ್ಲಿ ಹಾಕಿಕೊಳ್ಳುವುದು 'ಉಡಿಪು' ಇದರ ಕಥೆ ಹೇಳುತ್ತೇನೆ. ಹಿಂದೆ ನನ್ನ ಮುತ್ತಜ್ಜಿಯು ನನ್ನ ಅಜ್ಜಿಯೊಡನೆ, 'ನಿನಗೆ, ಮೊಮ್ಮಗ ಹುಟ್ಟಿದ ಮೇಲೆ, ಈ ಕಥೆ ಅವನಿಗೆ ಹೇಳಿ ಲೇಖನವನ್ನು ಬರೆಯಿಸು'—ಅಂದಿದ್ದಳಂತೆ. ಹಳೆಗಾಲದ ಜನಕ್ಕೆ, ಎಷ್ಟು ಎಚ್ಚರ ನೋಡಿ! ಆಗಲೂ ನಮ್ಮೂರಿನ ಜನರು ಉಡುಪಿಯ ಉತ್ಸವಗಳಿಗೂ, ರಾಜಾಂಗಣದಲ್ಲಿ ನಡೆಯುವ ಭೋಜನಗಳಿಗೂ, ಹಿಂಡುಗೂಡಿ ಹೋಗುತ್ತಿದ್ದರು. ಬೆಳಗ್ಗೆ ಹೊತ್ತಾರೆ ಹೊರಟರೆ, ನಡೆದು ನಡೆದು, ಮಧ್ಯಾಹ್ನದ ವೇಳೆ ಶ್ರೀ ಕೃಷ್ಣನ ಸನ್ನಿಧಿಯನ್ನು ಸೇರುವಾಗ ಕಣ್ಣು ಕತ್ತಲೆಬಂದಿರುತ್ತವೆ. ಮಧ್ಯಾಹ್ನದ ಸಮಾರಾಧನೆಯ ಕೂಳು ಕಾಣುವಾಗ ಇನ್ನೂ ಜಾವ ಕಾಲಬೇಕು. ಅಲ್ಲಿಯ ತನಕ ಅವರ ಬಡ ಹೊಟ್ಟೆಯ ಗತಿ? ತಿಳಿದೇ ಇದೆ ಕೃಷ್ಣನಿಗೆ ಮಿತ್ರ ಸುಧಾಮನು ಕೊಟ್ಟ ಅವಲಕ್ಕಿ. ಹೀಗಾಗಿ, ಬರುವ ಹೆಂಗಸರು ತಮ್ಮ ಉಡಿಯಲ್ಲಿ ಅವಲಕ್ಕಿ ತುಂಬಿಕೊಂಡು, ಶ್ರೀ ಕೃಷ್ಣನಿಗೆ ತೋರಿಸಿ ಅವನ ಮೂಕ ಸಮ್ಮತಿಯನ್ನು ಪಡೆದು, ರಾಜಾಂಗಣದಲ್ಲಿ ಗೀಟು ಹಾಕಿ, ಕಣ್ಣು ಕಣ್ಣು ಬಿಡುತ್ತ ಕುಳಿತಾಗ, ಎಲೆಯ ಮೇಲೆ ಅನ್ನ ಬೀಳುವ ತನಕ ಉಡಿಯಲ್ಲಿರುವ ಅವಲಕ್ಕಿಯೇ ಗತಿಯೆಂದು ತಿಳಿಯಬೇಕು, 'ಕೃಷ್ಣಾ' 'ಕೃಷ್ಣಾ' ಎಂದು ಒಂದೊಂದೇ ಕಾಳು ಅವಲಕ್ಕಿಯನ್ನು ಅವರು ಮೆದ್ದು, ಮುಗಿಸುವಾಗ ಎಲೆಗೆ ಅನ್ನ ಬೀಳುವ ಸಮಯ ಒದಗುತ್ತದೆ. ಸಾವಿರಾರು ಜನರು ಹೀಗೆ ತರುವ 'ಉಡಿಪು'ವಿನಿಂದಾಗಿ ಬಂದಿತು ಆ ಹೆಸರು; ಬಂತು ಆ ಅರ್ಥ.

***

ಇನ್ನೊಂದು ದಂತ ಕಥೆ ಇದೆ. ಬಾರಕೂರಿನಲ್ಲಿ ಹಿಂದೆ ಒಬ್ಬ ಅರಸನಿದ್ದನಂತೆ. ಅಂತೆ ಎಂದರೇನು; ಖಂಡಿತಕ್ಕೂ ಇದ್ದ. ಅವನಿಗೆ ಹದಿನೆರಡು ಮಂದಿ ಹೆಂಡಿರು. ಮಕ್ಕಳಿಲ್ಲ; ಅದು ಆ ಮೇಲಿನ ಕಟ್ಟುಕತೆ. ಈ ಅರಸ 'ಬಾರಹ' ಕನ್ಯೆಯರನ್ನು ಮದುವೆಯಾದವನು. ಆದರೂ ರಸಿಕ; ತೃಪ್ತಿಯಿಲ್ಲ. ಆತ ಒಂದೊಂದು ರಾತ್ರೆ, ಕದ್ದು, ಕದ್ದು ಎಲ್ಲಿಗೋ ಹೋಗಿ ಬರುತ್ತಿದ್ದನಂತೆ ಕೇಳಿದರೆ 'ಉಡುಪಿಗೆ ಹೋಗಿದ್ದೇನೆ' ಎನ್ನುತ್ತಿದ್ದನಂತೆ ಆಗ ಆ ಹೆಸರಿನ ಊರೂ ಇದ್ದಿಲ್ಲವಂತೆ. ರಾಜನ ಹೆಂಡಿರು ಮಸಲತ್ತು ಮಾಡಿ, ಸಂಶೋಧನೆಗೆ ತೊಡಗಿದರು. ಬಾರಕೂರಿನಿಂದ ಎಂಟು ಮೈಲು ದಕ್ಷಿಣಕ್ಕೆ ಒಂದು ಹಳ್ಳಿ ಇತ್ತು: ಈಗ ಉಡುಪಿಯಿರುವ ಹಳ್ಳಿಯೆಂದು ತಿಳಿದುಕೊಳ್ಳಿ. ಅಲ್ಲಿ ಉಡುಪರೆಂಬ ಒಬ್ಬ ಜ್ಯೋತಿಷ್ಕರಿದ್ದರು. ಆ ರಾಣಿಯರಿಗೆ ಬೇರೆ 'ಉಡುಪಿ' ಪದವೇ ಗೋಚರಿಸಲಿಲ್ಲ. ಅಲ್ಲಿ ಹುಡುಕಿಸಿದರು. ಉಡುಪರ ಮನೆಗೂ ಆ ಅರಸ ಬಂದಿರಲಿಲ್ಲ. ಈ ಹದಿನೆರಡು ಮಂದಿ ರಾಣಿಯರು ಒಬ್ಬ ಗುಪ್ತಚರನನ್ನು ನೇಮಿಸಿ, 'ನಮ್ಮ ಗಂಡನ ಓಡಾಟ ತಿಳಿಸಿಕೊಟ್ಟರೆ, ನಿನಗೆ ಅರ್ಧ ರಾಜ್ಯ, ಅರ್ಧ ಮಗಳು ಕೊಡುತ್ತೇವೆ' ಎಂದರು. 'ಅಷ್ಟಾದರೆ ಅಷ್ಟು' ಎಂದು, ಅವನು ಹುಡುಕಲು ಹೊರಟ. ಕತ್ತಲಲ್ಲಿ ವೇಷ ಮರೆಸಿ ತೆಂಕಣಕ್ಕೆ ಹೊರಟ ದೊರೆಯ ಹಿಂದೆಯೇ ತಾನೂ ವೇಷ ಮರೆಸಿಕೊಂಡು ಹೊರಟನಂತೆ.

ನಡುವೆ ಕತೆ ನಿಲ್ಲಿಸುತ್ತೇನೆ. ಈ ಸಂದಿಗ್ಧ ಕಾಲದಲ್ಲಿ ರಾಣಿಯರು ತಮ್ಮ ಗಂಡನ ನಡತೆಯನ್ನು ಅರ್ಥ ಮಾಡಿಕೊಳ್ಳಲಾರದೆ ಅವನು ಹೋದ ಊರು 'ಒಡಪು' ಅಥವಾ 'ಒಗಟು' ಎಂದು ಕೊಂಡರು. ಆದುದರಿಂದ ತಾತ್ಕಾಲಿಕವಾಗಿ ಆ ಹಳ್ಳಿಗೆ 'ಒಡಪು' ಅಥವಾ ಒಡಿಪು' ಎಂಬ ಹೆಸರು ಬಂದಿತು.

ಮುಂದೆ? ಆ ಗುಪ್ತಚರ ಬುದ್ಧಿವಂತ ಕಷ್ಟಪಟ್ಟು ಹುಡುಕಿ, ಹುಡುಕಿ, ಅರಸು ಸದರಿ ಹಳ್ಳಿಯ ಒಬ್ಬಳು ಚೆಲುವೆಯ ಮನೆಯಲ್ಲಿರುವುದನ್ನು ಕಂಡು ಹಿಡಿದ. ಅವಳ ಹೆಸರನ್ನೂ ತಲಾಸಿ ಮಾಡಿದ. ಗಿರಿಜೆ ಎಂದು ಅವಳ ಹೆಸರು. ಈ ಗುಟ್ಟು ಈ ಗುಪ್ತಚರನಿಂದ ಆ ರಾಣಿಯರಿಗೆ ಸಿಕ್ಕಿತು. ಬಾರಕನ್ಯಾಪುರದ ರಾಣಿಯರವರು! ಸುಮ್ಮನೆ ಬಿಟ್ಟಾರೆಯೇ? ರಾಜನ ರಟ್ಟೆಯನ್ನು ಹಿಡಿದು ನೆಟ್ಟಗೆ ಕೇಳಿದರು. "ನೀವು ಗಿರಿಜೆಯ ಮನೆಗೆ ಹೋದದ್ದಲ್ಲವೆ?" ಎಂದು ಜಬರಿಸಿದರು. ರಾಜ ನಕ್ಕ; "ಹೌದು" ಎಂದ. "ಮೊದಲೇ ಹೇಳಿದ್ದೆನಲ್ಲ!" ಎಂದ.

"ನೀವು ಉಡುಪಿಗೆ ಹೋಗುತ್ತೇನೆಂದು ಹೇಳಿದ್ದಲ್ಲವೇ? ನಮ್ಮನ್ನು ಮೋಸಮಾಡುವುದೇ?" ಎಂದು ಕೇಳಿದರು.

"ಮೋಸ ಮಾಡಲಿಲ್ಲವಲ್ಲಾ" ಎಂದ ರಾಜ. "ನಾನು ನಿಮ್ಮನ್ನು ಮೋಸಮಾಡಿಯೇನೆ?" ಎಂದ. "ನಿಮ್ಮಲ್ಲಿ ಎಂದಾದರೂ ಸುಳ್ಳು ಹೇಳಿಯೇನೆ" ಎಂದು ಕೇಳಿದ.

"ಇದು ಮೋಸವಲ್ಲವೇ?" ಎಂದರು ಅವರು.

ಅದಕ್ಕೆ ಅರಸು "ಛೀ ಛೀ ಛೀ ನಿಮಗೆ ಆ ವಿಷಯ ತಿಳಿದಿತ್ತು ಎಂದು ಊಹಿಸಿದೆ"

"ಏನು ತಿಳಿಯುವುದು?"

"ಉಡುಪ ಎಂದರೆ ಚಂದ್ರನನ್ನು ಧರಿಸಿದ ಶಿವ. ಆಗ ಗಿರಿಜೆ, ಅವನ ಸ್ತ್ರೀ, ಉಡುಪಿಯಾಗಲಿಲ್ಲವೇ?" ಎಂದು ಉತ್ತರಿಸಿದ.

ಅವನ ರಾಣಿಯರು ತಮ್ಮ ಪೆದ್ದುತನಕ್ಕಾಗಿ ಬಿದ್ದು ಬಿದ್ದು ನಕ್ಕರಂತೆ. ಅಷ್ಟು

(ಮುಂದಿನ ಪುಟಕ್ಕೆ)

ಗ್ರಾಮ ಸೇವಿಕೆಯರು ಹಾಗು ಅವರ ಹೊಣೆ

ಪ್ರಜಾರಾಜ್ಯವಾದ ಭಾರತವು ಹಳ್ಳಿಯ ಮಟ್ಟದಲ್ಲಿ ಪುನರುಜ್ಜೀವನದ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಜನರ ಜೀವನದ ರೀತಿಯೇ ಬದಲಾಗುವಂತೆ ನೋಡಿಕೊಳ್ಳಲು ಗ್ರಾಮ ಸೇವಕರೂ ಸೇವಿಕೆಯರೂ ತರಬೇತಿ ಪಡೆದು ಕೆಲಸ ನಿರತರಾಗಿದ್ದಾರೆ. ಹಳ್ಳಿಯ ಜನರೊಡನೆ ಬೆರೆತು ಮಾರ್ಗದರ್ಶನ ಮಾಡುವ ಜಾಣ್ಮೆ ಅವರಲ್ಲಿದ್ದಷ್ಟೂ ಅವರ ಶ್ರಮ ಸಾರ್ಥಕವಾಗುತ್ತದೆ.

ಬರೆದವರು: ಶ್ರೀಮತಿ ಸರೋಜಿನಿ ಮಹಿಷಿ, ಎಂ.ಎ., ಎಲ್‌ಎಲ್.ಬಿ.

ಹಿಂದುಸ್ಥಾನದಲ್ಲಿ ಹಳ್ಳಿಗಳು ಸ್ವಾತಂತ್ರ್ಯ ದೊರೆತ ಮೇಲೆಯೇ ಅಸ್ತಿತ್ವದಲ್ಲಿ ಬಂದಿವೆಯೆಂದಲ್ಲ. ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿಯೂ ಹಳ್ಳಿಗಳಿದ್ದವು. ಆದರೆ ಅವುಗಳ ಕಡೆಗೆ ಸರಕಾರದ ಹಾಗೂ ಜನತೆಯ ಲಕ್ಷ್ಯ ವಿಶೇಷವಾಗಿ ಎಳೆಯಲ್ಪಟ್ಟದ್ದಿಲ್ಲ. ಗಾಂಧೀಜಿಯವರೂ ಅವರ ಅನುಯಾಯಿಗಳೂ ಮಾತ್ರ ಹಳ್ಳಿಗಳ ಪ್ರಗತಿಯಿಂದಲೇ ಭಾರತದ ಪ್ರಗತಿಯೆಂಬುದನ್ನು ಮನಗಂಡಿದ್ದರು; ಆದಕ್ಕಾಗಿ ಪರಿಶ್ರಮಪಡುತ್ತಿದ್ದರು. ಹಳ್ಳಿಗಳ ಕೈಗಾರಿಕೆಗಳಿಗೆ ಪ್ರೋತ್ಸಾಹ ದೊರೆತು ಪೇಟೆ ದೊರೆತಾಗಲೇ ಅವುಗಳ ಪರಿಸ್ಥಿತಿ ಸುಧಾರಿಸಬಹುದು. ಹಿಂದುಸ್ಥಾನವು ಪಾರತಂತ್ರ್ಯದಲ್ಲಿದ್ದಾಗ, ನಮ್ಮ ಹೋರಾಟ ಬ್ರಿಟಿಷರೊಡನೆ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಗಾಗಿ ನಡೆದಿತ್ತು ಆದರೆ ಸದ್ಯ ದೇಶದೊಳಗಿನ ಶತ್ರುಗಳಾದ ಅಜ್ಞಾನ, ಅನಾರೋಗ್ಯಗಳೊಡನೆ ಹೋರಾಡಿ, ಅವುಗಳನ್ನು ಹೊಡೆದೋಡಿಸಿ, ಗಳಿಸಿದ ರಾಜಕೀಯ ಸ್ವಾತಂತ್ರ್ಯವನ್ನು ಭದ್ರವಾಗಿರಿಸಬೇಕಾಗಿದೆ. ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಒಬ್ಬಿಬ್ಬರಲ್ಲ; ದೇಶದ ಸಮಸ್ತರೂ ಹೆಣಗಬೇಕಾಗಿದೆ. 'ಬ್ರಿಟಿಷರ ಕಾಲದಲ್ಲಿಯೇ ನಾವು ಸುಖವಾಗಿದ್ದೆವು', ಎಂಬ ಉದ್ಗಾರ ಬರದಂತೆ, ಜನತೆಯು ಸುಖವಾಗಿರಬೇಕಾಗಿದೆ. ಸದ್ಯ ಪರಿಶ್ರಮ ಪಡುವದೂ ಈ ಜನತೆ ಸುಖವಾಗಿರುವದಕ್ಕೋಸುಗ ಎಂಬ ಭಾವನೆ ಆ ಜನತೆಯಲ್ಲಿಯೇ ಮೂಡಬೇಕಾಗಿದೆ. ಯಾವ ಯೋಜನೆಯೋ, ಸರಕಾರದವರು ಅದೇನು ಮಾಡುತ್ತಾರೋ, ಎಂದು ದುರ್ಲಕ್ಷ್ಯ ಮಾಡುವ ಪ್ರವೃತ್ತಿ ಹೋಗಿ, ನಮ್ಮ ಹಿತಕ್ಕಾಗಿಯೇ ಈ ಯೋಜನೆಗಳಿವೆ. ಅವುಗಳಲ್ಲಿ ನಾವೂ ಆಸ್ಥೆಯಿಂದ ಭಾಗವಹಿಸಬೇಕು ಎಂದು ಅವರ ಒಳದನಿ ಅವರಿಗೆ ಹೇಳಬೇಕು. ಅಂದರೆ ಮಾತ್ರ ಯಾವ ಯೋಜನೆಗಳಾದರೂ ಯಶಸ್ವಿಯಾಗಿ ಕಾರ್ಯರೂಪದಲ್ಲಿ ಬರಬಲ್ಲವು. ಪ್ರಗತಿ, ಅದಕ್ಕಾಗಿ ಸ ಹ ಕಾ ರ ದ ದು ಡಿ ತ ಅವಶ್ಯ ಎಂಬುದು ಗ್ರಾಮಾಂತರಗಳಲ್ಲಿಯ ಜನತೆಗೇ ಮನವಟ್ಟಾಗಬೇಕು. ಅದಿಲ್ಲದೆ, ಅಧಿಕಾರಿ ವರ್ಗವೇ, ಜನತೆಯ ಮೇಲೆ ಒತ್ತಾಯದಿಂದ ಹೇರಿದರೆ, ಅದರಲ್ಲಿ ಏನೋ ಯುಕ್ತಿಯಿರಬೇಕೆಂಬ ಸಂಶಯವೂ ತೋರಬಹುದು.

ಭಾರತದಲ್ಲಿ ಹಳ್ಳಿಗಳಲ್ಲಿ ವಾಸಿಸುವವರ ಸಂಖ್ಯೆ ೧೦೦ಕ್ಕೆ ೮೨ರಂತೆ: ಒಟ್ಟು ಜನರಲ್ಲಿಯೇ ೧೦೦ಕ್ಕೆ ೧೬ ಜನ ಸಾಕ್ಷರರು; ಅವರಲ್ಲಿ ಏಳು ಜನ ಸ್ತ್ರೀಯರು ಬಳಿಕ ಆರೋಗ್ಯ. ಒಕ್ಕಲತನ, ಗುಡಿಕೈಗಾರಿಕೆಗಳು ಇವೆಲ್ಲವುಗಳನ್ನು ಕುರಿತು ಅವರಿಗೆ ಮೆಚ್ಚಿಕೆಯಾಗುವಂತೆ ವಿಚಾರಗಳನ್ನು ತಿಳಿಸಿಕೊಟ್ಟು, ಅವರ ಅನುವು ಆಪತ್ತುಗಳನ್ನು ನೋಡಿಕೊಂಡು ಸೂಕ್ತ ಸಲಹೆಗಳನ್ನು, ಕೊಡುವದು ಇಂದು ಮುಖ್ಯವಾಗಿ ಗ್ರಾಮ ಸೇವಕ—ಸೇವಕಿಯರ ಕರ್ತವ್ಯವಾಗಿದೆ. ಇವರೀರ್ವರ ಪ್ರತ್ಯಕ್ಷ ಕರ್ತವ್ಯದಲ್ಲಿ ಸ್ವಲ್ಪ ವ್ಯತ್ಯಾಸ ಕಂಡು ಬರಬಹುದು. ಆದರೆ ಜನತೆಯ ಹೃದಯವನ್ನು ತಿಳಿದುಕೊಂಡು, ಪ್ರಗತಿಯ ಹೆಜ್ಜೆಯನ್ನು ತೋರಿಸಿ ಕೊಡುವ ಅವರ ಗುರಿ ಒಂದೇ!

ದೇಶದಲ್ಲಿ ರಾಷ್ಟ್ರೀಯ ವಿಸ್ತರಣ ಯೋಜನೆ, ಸಮಾಜ ವಿಕಾಸ, ಸಮಾಜ ಕಲ್ಯಾಣ ಮಂಡಲಗಳು ಗ್ರಾಮಾಂತರಗಳನ್ನೇ ಕಾರ್ಯ ಕ್ಷೇತ್ರಗಳನ್ನಾಗಿ ಆರಿಸಿಕೊಂಡು ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ದೃಷ್ಟಿಯಿಂದ ದುಡಿಯುತ್ತಲಿವೆ. ವಿಷಾದದ ಸಂಗತಿಯೆಂದರೆ ಈ ಯೋಜನೆಗಳನ್ನು ತಯಾರಿಸುವಂಥವರಿಗೆ, ಹಳ್ಳಿಗಳ ಪರಿಸ್ಥಿತಿ ಹೆಚ್ಚಾಗಿ ಪರಿಚಿತವಿರುವದಿಲ್ಲ. ಆದರೆ ಈ ಯೋಜನೆಗಳನ್ನು ಮಾತ್ರ ಗ್ರಾಮ ಸೇವಕರು ಹಳ್ಳಿಗರ ಮಧ್ಯದಲ್ಲಿ ಪ್ರಯೋಗಕ್ಕಿಳಿಸಬೇಕಾಗುತ್ತದೆ. ಅಧಿಕಾರಿಗಳಿಗೂ ಹಳ್ಳಿಗರಿಗೂ ಮಧ್ಯೆ ಸಂಬಂಧವನ್ನುಂಟು ಮಾಡುವವರು ಈ ಗ್ರಾಮ ಸೇವಕರೇ!

ಅಲ್ಪ ಸ್ವಲ್ಪ ಶಿಕ್ಷಣ ಪಡೆದು, ಉದ್ಯೋಗವಿಲ್ಲದೆಯಿರುವವರಿಗೆ ಗ್ರಾಮ—ಸೇವಕಿ ಶಿಕ್ಷಣ ನಿಶ್ಚಿತವಾಗಿ ಉದ್ಯೋಗವನ್ನು ದೊರಕಿಸಿಕೊಟ್ಟು, ನಿರುದ್ಯೋಗದ ಸಮಸ್ಯೆಯನ್ನು ಕೆಲಮಟ್ಟಿಗೆ ಹೋಗಲಾಡಿಸುತ್ತದೆಯೆನ್ನಬಹುದು. ಆದರೆ ಅವರೂ ಕೂಡ ಹಳ್ಳಿಯ ಪರಿಸ್ಥಿತಿಗೆ ಅಪರಿಚಿತರೇ!

***

ಗ್ರಾಮ ಸೇವಕರ ಕಾರ್ಯ ಹೆಚ್ಚಾಗಿ ಪುರುಷರ ಮಧ್ಯದಲ್ಲಾದರೆ, ಗ್ರಾಮ ಸೇವಕಿಯರದು ಹೆಚ್ಚಾಗಿ ಸ್ತ್ರೀಯರ ಹಾಗೂ ಮಕ್ಕಳ ಮಧ್ಯದಲ್ಲಿ; ಅಂದ ಮಾತ್ರಕ್ಕೆ ಇನು ಕಟ್ಟು ನಿಟ್ಟಾದ ನಿಯಮವೆಂದು

(೨೯ನೇ ಪುಟ ನೋಡಿರಿ)

ಉಡುಪಿಯ ವಿಚಾರದಲ್ಲಿ ಕೆಲವು ಸಮಶೋಧನೆಗಳು

(ಹಿಂದಿನ ಪುಟದಿಂದ)

ಮಾತ್ರವಲ್ಲ, "ಆವಳೂ ಹದಿಮೂರನೆಯ ಹೆಂಡತಿಯಾಗಿ ನಮ್ಮೊಡನೆ ಬಾಳಲಿ" ಎಂದರಂತೆ. ಆದರೆ, ಈ ಠರಾವು ಬಿದ್ದು ಹೋಯಿತು. 'ಗಿರಿಜೆ' ಯಾನೆ 'ಉಡುಪಿ' ಅಳಿಯ ಸಂತಾನಕ್ಕೆ ಸೇರಿದ ಒಬ್ಬಳು ಹುಡುಗಿಯಾದ್ದರಿಂದ ತನ್ನ ಊರುಬಿಟ್ಟು, ಬಾರಕೂರು ಸೇರಲು ಒಪ್ಪಲಿಲ್ಲ. ತನ್ನ ಹಳ್ಳಿಯಲ್ಲೇ ಅವಳು ಉಳಿದುಕೊಂಡಳು. ಅವಳಿಂದಾಗಿ ಆ ಹಳ್ಳಿಗೆ 'ಉಡುಪಿ' ಎಂಬ ಹೆಸರು ಬಂದುವರಲ್ಲಿ ಏನು ಸೋಜಿಗ— ಹೇಳಿ.

ಆ ಮೇಲೆ ಬಂದಿತು ಫರಂಗೀ ಜನಗಳ ಕಾಲ. ಉಡುಪಿಯ ಸಮೀಪದ ಕಡಲ ತೀರಕ್ಕೆ ಕೆಲವು ಬಿಳಿ ಜನರು ಬಂದಿದ್ದರು. ಅಲ್ಲಿನ ಕಡಲನ್ನು ಕಂಡು ಮನಸ್ಸು ಹುಚ್ಚಾಯಿತು ಅವರಿಗೆ. ಅದನ್ನು ಕಂಡು 'ಓ...ಡೀಪ್" ಎಂದು ತಮ್ಮ ತಮ್ಮಲ್ಲಿ ಉದ್ಗರಿಸಿದರಂತೆ; ಕಡಲ ನೀರಿನಲ್ಲಿ ಹಾರಿದರಂತೆ. ಆ ಮಾತು ಕೇಳಿದ ಒಬ್ಬ ವ್ಯಾಪಾರಿ 'ಓಡಿಪ್' ಎಂದನ್ನ ತೊಡಗಿದ್ದರಿಂದ, ಆ ಪರಿಭಾಷೆಯೇ ಕೊಂಕಣಿ ಮಾತಿನಲ್ಲಿ ಸೇರಿ ಹೋಯಿತು.

***

ಇಷ್ಟೇ ಅರ್ಥಗಳು ಸಾಕೆಂದು ನಾಸಿಟ್ಟುಕೊಂಡು, ನಾ ನು ಸಮಶೋಧನೆ ಮುಗಿಸಿ, ಕುಳಿತ ಕಾಲದಲ್ಲಿ ಇನ್ನೊಂದು ಹೊಸ ಅನುಭವ ಬಂದಿತು ನೋಡಿ! ಇದನ್ನು ಹೇಳುವುದಕ್ಕಿಲ್ಲ; ಹೇಳದಿರುವುದಕ್ಕಿಲ್ಲ. ಸತ್ಯ ಪ್ರಿ ಯ ತೆ ಯಿಂ ದ ಹೇಳುತ್ತೇನೆ. ಉದಾರಿಗಳಾದ ನೀವು ಹಂಸಕ್ಷೀರ ನ್ಯಾಯದಂತೆ ಹಾಲನ್ನು ಬಿಟ್ಟು ಹಂಸವನ್ನು ಪರಿಗ್ರಹಿಸಬಹುದು.

ನಾನೊಮ್ಮೆ ಸ್ವಾಮಿ,ಎಂದೂ ಬೇಡದ ಬಸ್ ಪ್ರಯಾಣ ಮಾಡಿದೆ. ಹಾವೇರಿಯಿಂದ ಶಿರಸಿಗೆ. ಬಸ್ಸು ಹೊರಟಂದಿನಿಂದ ಅದಕ್ಕೆ ವಿವಿಧ ರೋಗಗಳು. ಅಲ್ಲಲ್ಲಿ ನಿಂತು, ಕುಂಟಿ, ಅದು ಮಧ್ಯಾಹ್ನ ಹನ್ನೆರಡು ಘಂಟೆಯಾಗುವಾಗ ಹಾನಗಲ್ಲಿಗೆ ಬಂದಿತು. ಅಲ್ಲಿ ನಿಂತೇ ಬಿಟ್ಟಿತು. ಡ್ರೈವರ್ ಮಹಾಶಯ ನಮ್ಮನ್ನೆಬ್ಬಿಸಿ, ಅದರ ಕತ್ತದ ಹಾಸುಗಳನ್ನು ಕಿತ್ತುಕೊಂಡು, ಮೋಟರ್ ಕೆಳಗಡೆ ಅವನ್ನು ಹಾಸಿ ಮಲಗಿಯೇ ಬಿಟ್ಟ. ಅವನು ಮತ್ತು ಅವನ ಕಂಡಕ್ಟರರು ಸೇರಿ ತಮ್ಮ ನಾಲ್ಕು ಕೈಗಳಲ್ಲಿ ಸ್ಪಾನರ್, ಸ್ಕ್ರೂಡ್ರೈವರ್ ಇತ್ಯಾದಿ ಆಯುಧಪಾಣಿಗಳಾದರು. ಅದನ್ನು ನೋಡಿದಾಗಲೇ ಗೊತ್ತಾಯಿತು— ಇದು ದೊಡ್ಡ ಬೇನೆಯೆಂದು. ನಮಗೋ —ಹೊಟ್ಟೆ ಹಸಿವು! ನೀರಡಿಕೆ! ನಿರಾಶೆ! ಹನ್ನೆರಡು ಘಂಟೆಯ ಹೊತ್ತಿಗೆ ಶಿರಸಿ ಮಾರಿಯಮ್ಮನ ಮುಂದಿರಬೇಕಾಗಿದ್ದ ನಾವು ಹಾನಗಲ್ಲಿನಲ್ಲಿ ತೊಳಲಾಡಬೇಕೆ? ಇದೇ ಅನ್ವೇಷಣೆಗೆ ಕಾಲವೆಂದು ತಿಳಿದು ಹೊರಟೆವು—ಹೋಟೇಲು ಹುಡುಕಿಕೊಂಡು, ಕಣ್ಣಿಗೆ ಬಿತ್ತೊಂದು ಗುಡಿಸಲು. ಅದರ ಮೇಲೆ 'ಕೃಷ್ಣ ವಿಲಾಸ' ಎಂಬ ಬೋರ್ಡ್ ಹಾಕಿದ್ದರು. ಉಡುಪಿಯ ಕೃಷ್ಣ ಇಲ್ಲಿಯೂ ತನ್ನ ವಿಲಾಸವನ್ನು ನಮಗೆ ಕೊಟ್ಟುದಕ್ಕಾಗಿ ತುಂಬ ಸಂತೋಷವಾಯಿತು. ಒಳಗೆ ಹೊಕ್ಕರೆ ಅಚ್ಚ ಕೃಷ್ಣವರ್ಣದ, ಅರಿವೆ ಮತ್ತು ಚರ್ಮಗಳುಳ್ಳ ಒಬ್ಬ ಮಾಲಿಕ ಕಾಣಸಿಕ್ಕಿದ. ಹಸಿದ ನಾವು, ನಾವು ಅಲ್ಲ ನಾನು "ಸ್ವಾಮಿ" ಎಂದೆ.

"ಮಠದಲ್ಲಿ" ಎಂದ ಅವನು.

"ಅಬ್ಬಾ" ಅನಿಸಿತು, ಮನಸ್ಸಿಗೆ. ವಿನಮ್ರನಾಗಿ, "ರಾಯರೇ, ಏನಾದರೂ ತಿಂಡಿತೀರ್ಥ ಇದೆಯೋ? ಬಸ್ಸು ಕೆಟ್ಟಿತು; ಹೊಟ್ಟೆ ಹಸಿವಾಗುತ್ತಿದೆ. ಒಂದಿಷ್ಟು ಅವಲಕ್ಕಿಯೋ ಪವಲಕ್ಕಿಯೋ" ಎಂದು ಕೇಳಿದರೆ, ಆತ ಉದಾಸೀನನಾಗಿ, "ತಿಂಡಿ ಎರಡು ಘಂಟೆಗೆ. ಈಗ ಮಾಡಿದ್ದು ಮುಗಿಯಿತು. ಆ ಮೇಲೆ ಮೆಣಸಿನ ಕಾಯಿ ಬೋಂಡ ಮಾಡುತ್ತೇನೆ. ಚಲೋದಾಗಿ" ಎಂದ.

ಅಲ್ಲಿಯ ವರೆಗೆ ಬದುಕಿ ಉಳಿಯುವ ಆಸೆ ಕಾಣಿಸಲಿಲ್ಲ. 'ಹಾಗಿದ್ದರೆ, ಒಂದಿಷ್ಟು ಕಾಫಿ ಕೊಡುತ್ತೀರಾ?' ಎಂದು ಕೇಳಿದೆ. "ಹೂಂ" ಎಂದು ಗುಟುರು ಹಾಕಿದ. ಅರ್ಧ ತಾಸಿನ ಮೇಲೆ ಒಂದು ಗಾಜಿನ ಪಾತ್ರೆಯಲ್ಲಿ ಒಂದಿಷ್ಟು ಕಪ್ಪು ನೀರನ್ನು ತುಂಬಿಸಿ ತಂದು ನನ್ನ ಮುಂದಿರಿಸಿದ. ಕುಡಿಯಲು ಪ್ರಯತ್ನ ಮಾಡಿದೆ. ಅದು ಕಾಫಿಯೂ ಅಲ್ಲ; ಚಾವೂ ಅಲ್ಲ. 'ಚಾಫಿ' ಇರಬಹುದೆಂದು ಊಹಿಸಿ ಕುಡಿಯ ಹೋದರೆ, ಗಂಟಲೊಳಗೆ ಇಳಿಯಲಿಲ್ಲ. ಕಣ್ಣು ಮಿಟಕಿಸುತ್ತಾ ಕುಳಿತೆ. ಈ ವೇಳೆಯಲ್ಲಿ ಸದರಿ ಮಾಲಿಕ ನನ್ನನ್ನು ಬಿಟ್ಟು, ಮುಸುರೆ ತಿಕ್ಕಲು ಬಂದ ಒಬ್ಬಳು ಮೋಹನಾಂಗಿಯೊಡನೆ ಸಂಭಾಷಣೆ ತೊಡಗಿದ. ಅವನೇನು ಮಾಡಿಯಾನು! ಕೃಷ್ಣನ ವಿಲಾಸ! ನಾನು "ಸ್ವಾಮಿ, ಇದೇನು ಕಾಫಿ?" ಎಂದು ಕೇಳದೆ ತಾಳ್ಮೆಗೆಟ್ಟು. "ಬೇಕಾದರೆ ಕುಡಿಯಿರಿ, ಬೇಡವಾದರೆ ಬಿಡಿ" ಎಂದು ಆತ ಘರ್ಜಿಸಬೇಕೇ? ನನ್ನ ಗಾತ್ರ ಮತ್ತೂ ಚಿಕ್ಕದಾಯಿತು. ಎದ್ದು ನಿಂತೆ. ಕಪ್ಪಿಗೆ ಲಿಪ್ಪು ತಾಗಿಸಿದ ಮೇಲೆ ದುಡ್ಡು ಕೊಡಬೇಕಲ್ಲ. ' ರೊಕ್ಕ" ಎಂದು ವಿಚಾರಿಸಿದೆ.

"ಎರಡಾಣೆ; ಅಲ್ಲಿಟ್ಟು ಹೋಗಿ" ಎಂದು ಇನ್ನೊಮ್ಮೆ ಗುಟುರು ಹಾಕಿದ. ಎರಡಾಣೆ ದಂಡತೆತ್ತು, ಹೊರಕ್ಕೆ ಬಂದೆ. ಈಚೆ ಬಂದು, ಅವನ ಅಂಗಡಿಯ ಬೋರ್ಡನ್ನೇ ನೋಡುತ್ತ ನಿಂತೆ. 'ಈತ ನಮ್ಮ ಉಡುಪಿಯವ. ನನಗೆ ಹೀಗೆ ಮಾಡಿದನಲ್ಲ!' ಎಂದು ನೊಂದು ಬೋರ್ಡನ್ನೆ ನಿರುಕಿಸಿದರೆ, ನನ್ನ ಮೂರ್ಖತನ ನನಗೆ ತಿಳಿಯಿತು. ಅವರ ಹೆಸರು "ಕೃಷ್ಣ ವಿಲಾಸ" ನಿಜವೇ. ಆತನ ಆಕಾರವೂ ಉಡುಪಿಯ ಮಾಣಿಯದೇ ಆದರೆ—ಆ ಹೆಸರಿನ ಮೇಲೆ ಬರೆದಿದ್ದ ಇಂಗ್ಲಿಷ್ ಪದವನ್ನು ಓದಿ ನಾನು ಒಳಗೆ ಹೋಗಬೇಡವಿತ್ತೇ? ಅವನು ಅಲ್ಲಿ ಸ್ಪಷ್ಟವಾಗಿ ಬರೆಯಿಸಿದ್ದಾನೆ —ಪೈಂಟ್ ಮಸುಕಾದರೂ, ದೊಡ್ಡ ಅಕ್ಷರಗಳಲ್ಲಿ 'UDAPI' ಎಂದು ಬರೆದುದು ಕಾಣಿಸುತ್ತಿತ್ತು. ನನಗೆ ನಗು ಬಂದಿತು.ಅವನೆ **ಉಡಾಪಿ** ಕೃಷ್ಣವಿಲಾಸ ಎಂದು ಸಾರಿಕೊಂಡಿದ್ದಾನೆ. ಹೀಗಿರುತ್ತ ಅವನ ನಡತೆಯಲ್ಲಿ ನಾನು ದೋಷ ಹುಡುಕಿ ಏನು ಬಂತು?

ನನಗೀಗ ಖಚಿತವಾಗಿಯೂ ತಿಳಿದು ಬಂದ ಅಂಶವೆಂದರೆ ನಿಮ್ಮ ಊರಿನ ಹೆಸರು 'ಉಡಾಪಿ' ಎಂದು.

———

ಲೋಕದ ಕೀರ್ತಿ ಪತಾಕೆ - ಭಾರತ

ಸ್ವದೇಶದ ಮೇಲೆ ಪ್ರೀತ್ಯಭಿಮಾನಗಳನ್ನು ವ್ಯಕ್ತಪಡಿಸುವುದು ಆಯಾ ನಾಗರಿಕರ ಸಹಜ ಸ್ವಭಾವವಾಗಿದ್ದರೂ ಭಾರತೀಯರು ತಮ್ಮ ಮಾತೃಭೂಮಿಯ ಬಗ್ಗೆ ಗೌರವ ತೋರ್ಪಡಿಸಲು ವಿಶೇಷ ಕಾರಣಗಳೂ ಇವೆ—ಸ್ವಾತಂತ್ರ್ಯೋತ್ತರದಲ್ಲಿ, ಮುಖ್ಯವಾಗಿ ಪ್ರಜಾರಾಜ್ಯವಾಗಿ ಮಾರ್ಪಾಟು ಹೊಂದಿದ ಬಳಿಕ, ಭಾರತವು ಪ್ರಧಾನ ಮಂತ್ರಿ ಶ್ರೀ ನೆಹರೂಗಳ ನೇತೃತ್ವದಲ್ಲಿ ಜಗತ್ತಿನ ಕಣ್ಮಣಿಯಾಗಿ ಬೆಳಗ ತೊಡಗಿದೆ.

ಬರೆದವರು: ಶ್ರೀ ಜಿ. ಅನಂತ ಕಿಣಿ, ಗಾವಳಿ.

ವರ್ತಮಾನ ವಿಜ್ಞಾನ ಯುಗದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಾದ ಅಮೇರಿಕಾ, ಇಂಗ್ಲಂಡುಗಳು ವಿಜ್ಞಾನ ರಾಷ್ಟ್ರಗಳಾಗಿ ಪರಿಗಣಿಸಲ್ಪಡುತ್ತಿದ್ದರೂ, ತಳಹದಿ ಹಾಕಿದ ದೇಶವು ಮಹಾ ಮಹಾ ಪಂಡಿತ, ಋಷಿ—ಮುನಿ, ಭಕ್ತಾಗ್ರೇಸರರನ್ನು ಪಡೆದು ಇಡೀ ಲೋಕಕ್ಕೆ ಮಾದರಿಯಾದ ನಮ್ಮ ಪುಣ್ಯಭೂಮಿ ಭಾರತವೆಂದರೆ ಅತ್ಯುಕ್ತಿಯಾಗಲಾರದು! ಅಂಕಗಣಿತ, ಬೀಜ ಗಣಿತ, ರೇಖಾಗಣಿತ, ಔಷಧಿ ವಿಚಾರ, ಶಸ್ತ್ರ ಚಿಕಿತ್ಸೆಯ ಕ್ರಮ, ಜ್ಯೋತಿಷ್ಯ, ಖಗೋಳ ಶಾಸ್ತ್ರ ಇತ್ಯಾದಿ ಸಕಲ ವಿಷಯಗಳು ಹುಟ್ಟಿದ್ದೂ ಇಲ್ಲಿಯೇ; ಬೆಳೆದದ್ದೂ ಇಲ್ಲಿಯೇ; ಭಾಸ್ಕರಾಚಾರ್ಯ, ಶ್ರೀಧರ, ಆರ್ಯಭಟ್ಟ, ಬ್ರಹ್ಮಗುಪ್ತ, ಮನು ಇತ್ಯಾದಿ ಇಲ್ಲಿಯ ತಜ್ಞರೇ ಈ ವಿಚಾರದಲ್ಲಿ ತಮ್ಮ ಶೋಧನೆ ನಡೆಸಿ ಗ್ರಂಥಗಳ ರೂಪಿನಲ್ಲಿ ಬರೆದಿಟ್ಟು ಸಹಕರಿಸಿದವರೆಂದರೆ ಭಾರತೀಯನಿಗೆ ಇದಕ್ಕಿಂತ ಹೆಮ್ಮೆಯ ವಿಷಯ ಬೇರಾವುದಿದೆ?

ಆದರೆ, ಇಲ್ಲಿಯ ಅನುಪಮವಾದ ಸಂಸ್ಕೃತಿ, ಹಿರಿದಾದ ಸಂಪತ್ತಿನ ವಿಚಾರವನ್ನು ದೂರದಿಂದ ಕೇಳಿ ಆಕರ್ಷಿತರಾದ ಪರಕೀಯರು, ಮೊತ್ತಮೊದಲು ಬಹು ಪ್ರಯಾಸದಿಂದ ಮಾರ್ಗವನ್ನು ಹುಡುಕಿ ವ್ಯಾಪಾರಕ್ಕಾಗಿ ಬಂದು, ಆ ಮೇಲೆ ನೆಲೆನಿಂತು ವಸಾಹತುಗಳನ್ನು ಸ್ಥಾಪಿಸುತ್ತಾ ಕೊನೆಗೆ ನಮ್ಮ ಮೇಲೆಯೇ ಅಧಿಕಾರ ಚಲಾಯಿಸಲನುವಾದರು. ಹೀಗೆಯೇ ವರ್ಷಗಳು ದಾಂಟುತ್ತ ಹೋದಂತೆ ನಮ್ಮ ಪುಣ್ಯ ಭೂಮಿ ಭಾರತವು ಪರಕೀಯರ ಅಧಿಕಾರಕ್ಕೊಳಗಾಗಿ ಸಂಪೂರ್ಣ ಅಧಃಪತನದತ್ತ ಸಾಗಿತು. ಅವರು ನಮ್ಮನ್ನು ಮಾತ್ರವಲ್ಲ, ನಮ್ಮ ವಿಶಿಷ್ಟ ಸಂಸ್ಕೃತಿ, ಆಚಾರ—ವಿಚಾರಗಳನ್ನು ಸಹಾ ಅಧೋಗತಿಯತ್ತ ಸಾಗಿಸಿ, ನಮ್ಮಲ್ಲಿರುವ ಮಹಾಮಹಾ ಋಷಿವರ್ಯ ಹಾಗೂ ತಜ್ಞರಿಂದ ಶೋಧಿಸಿ ಬರೆದಿಡಲ್ಪಟ್ಟಿದ್ದ ಅಗಾಧವಾದ ವಿಚಾರಪೂರ್ಣ ಗ್ರಂಥಗಳನ್ನು ತಮ್ಮ—ತಮ್ಮ ದೇಶಕ್ಕೆ ಸಾಗಿಸಿ, ಜೊತೆಗೆ ಇಲ್ಲಿಂದಲೇ ಭಾಷಾತಜ್ಞರನ್ನು ಕರೆದೊಯ್ದು ಅದರಲ್ಲಿಯ ಸಮಗ್ರ ವಿಚಾರವನ್ನು ತಿಳಿದುಕೊಂಡು, ಕೊನೆಗೆ ತಾವೇ ಕಂಡು ಹುಡುಕಿದ ರೀತಿಯಲ್ಲಿ ಈ ಹೊಸ ವಿಚಾರಗಳನ್ನು ಬೇರೆ ರಾಷ್ಟ್ರದವರಿಗೆ ಕೊಡುತ್ತಾ, ಮೆರೆದಾಡ ತೊಡಗಿದರು.

ಪರಿಣಾಮವಾಗಿ ಭಾರತವು ದಿನಸರಿದಂತೆ ಸೊರಗಿ ಹೋಗುತ್ತಾ, ಪರರಾಷ್ಟ್ರದವರು ಊರ್ಜಿತ ಸ್ಥಿತಿಗೆ ಬರಲನುವಾದರು ನಮ್ಮ ಸಂಪತ್ತು—ಸಂಸ್ಕೃತಿಯಿಂದ! ಪರಕೀಯರಲ್ಲಿ ಹೆಚ್ಚಿನ ಸಮಯ ನಮ್ಮ ಮೇಲೆ ಅಧಿಕಾರ ನಡೆಸಿದವರು ಇಂಗ್ಲಿಷರು.

ಇವರು ವಿದ್ಯಾಭ್ಯಾಸ ಹಾಗೂ ಇತರ ವಿಷಯಗಳಲ್ಲಿ ಉತ್ತಮ ಕಾನೂನುಗಳನ್ನು ತಂದಿದ್ದಾರೇನೋ ನಿಜ; ಆದರವೆಲ್ಲಾ ಏರಿಯ ಅವರ ಆಳ್ವಿಕೆ ಇಲ್ಲಿ ಸ್ಥಿರವಾಗಿ ನಿಲ್ಲಲು ಮತ್ತು ಸುಗಮವಾಗಿ ಸಾಗಲು ಬೇಕಾಗಿಯೇ ವಿನಹ ನಮ್ಮ ಅಭಿವೃದ್ಧಿಗಾಗಿಯಲ್ಲ; ಇವರ ಪರಿಣಾಮವೆಂದರೆ ತಲೆಬುರುಡೆ ಮಾತ್ರ ನಮ್ಮದು, ಮೆದುಳು ಪಾಶ್ಚಿಮಾತ್ಯರದು ಎಂದಂತಾಯ್ತು.

***

ಹೀಗೆ ಕೆಲವು ಶತಮಾನಗಳ ಪರ್ಯಂತ ಭಾರತ ಮಾತೆಯು ಪರಕೀಯರಾದ ಮುಸಲ್ಮಾನ, ಆಂಗ್ಲರಿತ್ಯಾದಿಯರ ಕಾಲಿನಿಂದ ತುಳಿಯಲ್ಪಡುತ್ತಾ, ಅಪಮಾನದಿಂದ ಕೊರಗುತ್ತಾ ಮುಂದುಸಾಗುತ್ತಿದ್ದಾಗ ಒಬ್ಬೊಬ್ಬರೇ ಮಹಾತ್ಮರ (ಗೌತಮ ಬುದ್ಧ, ಸಂತಕವಿಗಳು, ಮೂವರು ಆಚಾರ್ಯರು, ರಾಮಕೃಷ್ಣ ಪರಮಹಂಸ ಇತ್ಯಾದಿ) ಜನನವಾಗಿ ಇಲ್ಲಿಯ ಸ್ಥಿತಿ 'ಅತ್ತವೂ ಇಲ್ಲ; ಇತ್ತವೂ ಇಲ್ಲ,'ದೆ ಉಳಿದದ್ದು ಕೊಂಚ ಉಳಿಯಿತು. ಇಂತಹ ಸಂದಿಗ್ಧಾವಸ್ಥೆಯಲ್ಲಿ ಗಾಂಧೀಜಿಯವರಂತಹ ಮಹಾತ್ಮನನ್ನು ಜೊತೆಗೆ ಅವನಿಗೆ ಸಹಾಯಕರಾಗಿ ಎಂಬಂತೆ ನೆಹರು, ಬೋಸ್, ತಿಲಕ್, ಪಟೇಲ್...ರಂತಹ ಅದ್ವಿತೀಯ ಪುತ್ರ ರತ್ನರನ್ನು ಹೆತ್ತು, ತನ್ಮೂಲಕ ತನ್ನ ಪುಣ್ಯ ಭೂಮಿಯನ್ನು ಭಾರತ ಮಾತೆಯು ದಾಸ್ಯದಿಂದ ವಿಮುಕ್ತಪಡಿಸಿ ಪವಿತ್ರವಾಗಿ ಮಾಡಿದ್ದಾಳೆ.

ಇಂದು ಭಾರತವು ದಾಸಿಯ ಕೈಯಲ್ಲಿ ಬೆಳೆಯುತ್ತಿರದೆ, ತನ್ನ ಸ್ವಂತ ತಾಯಿಯ ಮಡಿಲಲ್ಲಿ ಬೆಳೆಯುತ್ತಾ ಎಂಟು ವರ್ಷ ದಾಂಟಿದ ಮಗುವಾಗಿ ಮೆರೆದಾಡುತ್ತಿದ್ದು "ಇನ್ನು ಕೆಲವೇ ವರ್ಷಗಳಲ್ಲಿ ನಿನ್ನನ್ನು ನಿನ್ನ ಹಿಂದಿನ ಸ್ಥಾನದಲ್ಲಿಯೇ ತಂದು ನಿಲ್ಲಿಸುತ್ತೇನೆ" ಎಂದು ತಾಯಿಗೆ ಆಶ್ವಾಸನೆ ಕೊಟ್ಟು ಉತ್ಸಾಹಿತಳನ್ನಾಗಿ ಮಾಡುತ್ತಿದೆ.

ಭಾರತವಿಂದು ಶ್ರಮೆ, ತ್ಯಾಗ, ಬಲಿದಾನಗಳ ಅನಂತರ ಪಾರತಂತ್ರ್ಯದ ಪಾಶಗಳನ್ನು ಕಿತ್ತೊಗೆದು, ನಿರಂಕುಶ ಪ್ರಭುತ್ವದ ಬಂಧನಗಳಿಂದ ವಿಮುಕ್ತವಾಗಿದೆ. ಆದರೆ ನಮ್ಮ ಗುರಿಯು ಇಲ್ಲಿಗೇ ಕೊನೆಗೊಂಡಿರದೇ ಮಾತೃ ಭೂಮಿಯನ್ನು ಪುನಃ ಪೂರ್ವದಂತೆ ಪುಣ್ಯ ಭೂಮಿಯನ್ನಾಗಿ ಮಾಡಲು ಅರ್ಥಾತ್ ಬಲಪಡಿಸಿ, ಮಹತ್ವೀಕರಿಸಿ, ಪ್ರಗತಿಪರಮಾಡಲು ಮುನ್ನಡೆಯಬೇಕಾಗಿದೆ; ಮುನ್ನಡೆಯುತ್ತಲೆ ಇದ್ದಾರೆ. ಇಂದು ಕೊಂಚ ಸುಧಾರಿಸಿದ್ದು, ಅಂದು ತುಳಿಯುತ್ತಾ ಅಪಮಾನ ಮಾಡಿದ ಪರಕೀಯರಿಂದು ಇದಕ್ಕೆ ಸುಸ್ವಾಗತವನ್ನು ಬಯಸುತ್ತಿರುವುದಲ್ಲದೆ, ಗೌರವವನ್ನು ಸಹಾ ಕೊಡುತ್ತಿರುವುದು ಗಮನಾರ್ಹವಾದ ವಿಚಾರವಾಗಿದೆ. ಅಂದು 'ಭಾರತವೆಂದರೆ ಬರಿಯ ಜಾದೂಗಾರ—ಮಂತ್ರಗಾರರ ರಾಜ್ಯ'ವೆಂದು ಹೇಳಿದ್ದ ಪರದೇಶಿಯರು ಇಂದು ಭಾರತದೊಟ್ಟಿಗೆ ಸ್ವಾತಂತ್ರ್ಯವನ್ನು ಪಡೆದ ಪಾಕಿಸ್ತಾನ, ಬರ್ಮಾ ಇತ್ಯಾದಿ ರಾಷ್ಟ್ರಗಳೊಡನೆ ತುಲನೆಮಾಡಿ, ಕೇವಲ ಅಲ್ಪ ಸಮಯದಲ್ಲಿ ಇಡೀ ಪ್ರಪಂಚದ ರಾಜಕೀಯದಲ್ಲೇ ಮುಂದುಸಾಗಿ ಹೊಸ ದಾಖಲೆಯನ್ನು ಮಾಡಿರುವ ಈ ಪುಣ್ಯ ಭೂಮಿಯ ಸಾಹಸವನ್ನು ನೋಡಿ ಕಕ್ಕಾಬಿಕ್ಕಿಯಾಗಿದ್ದಾರೆಂದರೆ ಆಶ್ಚರ್ಯವಾಗದು! ಇಂದು ಪ್ರಪಂಚದ ಯಾವ ಮೂಲೆಯನ್ನು ಪರೀಕ್ಷಿಸಿದರೂ ಅಲ್ಲಿ, ಇಲ್ಲಿಯ ಜನರಿಗೆ, ಇವರ ಮಾತಿಗೆ ಬೆಲೆ ಸಿಕ್ಕುತ್ತಿರುವುದರ ಅರಿವಾಗುತ್ತಿದೆ.

***

ಇದಕ್ಕೆ ಮುಖ್ಯ ಕಾರಣವೆಂದರೆ ಪೂಜ್ಯ ಬಾಪೂಜಿಯವರ ಪರಮ ಶಿಷ್ಯರೆನಿಸಿಕೊಂಡ, ಸ್ವತಂತ್ರ ಭಾರತದ ಸರ್ವಪ್ರಥಮ ಮುಖ್ಯಾಮಾತ್ಯರಾದ, ಭಾರತದ ಬಂಧವಿಮೋಚನೆಯಂತಹ ಅಸಾಮಾನ್ಯ ಸಾಹಸ ಕಾರ್ಯಕ್ಕೆ ಕೈಯಿಕ್ಕಿ ಆರವತ್ತು ವರುಷಗಳ ದೀರ್ಘಕಾಲ ಅವಿಚ್ಛಿನ್ನವಾದ ಹೋರಾಟ ನಡೆಸಿ ಹಿಂಸೆಗೆಡೆಕೊಡದೇ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿಯುದರಲ್ಲಿ ಮುಂದಾದ ಮಹಾ ರಾಷ್ಟ್ರೀಯವು ಸಂಸ್ಥೆ ಕಾಂಗ್ರೆಸ್ಸಿನ ಅದ್ವಿತೀಯ ವ್ಯಕ್ತಿ ಎನಿಸಿದ 'ಪಂಡಿತ ಜವಾಹರಲಾಲ ನೆಹರು' ಅರ್ಥಾತ್ 'ಭಾರತದ ಸ್ವತಂತ್ರವಾದ ವಿದೇಶ ಧೋರಣೆ'ಯೆಂದರೆ ಅತಿಶಯೋಕ್ತಿಯಾಗಲಾರದು. ಆರ್ಥಿಕ, ಸಾಂಪತ್ತಿಕ....ಎಲ್ಲಾ ದೃಷ್ಟಿಯಿಂದಲೂ ದುರ್ಬಲ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟಿದ್ದರೂ, ವಿಶ್ವದ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಿ ಕೀರ್ತಿಪಡೆದ ಶ್ರೇಯಸ್ಸು ಭಾರತಕ್ಕೆ ದೊರಕುತ್ತಿದೆ, ಈ ಮಹಾ ವ್ಯಕ್ತಿಯಿಂದ. ಭಾರತವು ಕಾಮನ್‌ವೆಲ್ತ್‌ನಲ್ಲಿ ಉಳಿಯುವ ಯೋಜನೆಮಾಡಿದಾಗ,

(೨೬ನೇ ಪುಟ ನೋಡಿರಿ)

ಸರ್ವರಿಗೂ ಸುಖ-ಶಾಂತಿ—ಸಮೃದ್ಧಿಯುಂಟಾಗಲೆಂಬುದೇ
ಭಾರತದ ಪ್ರಜಾರಾಜ್ಯ ವಾರ್ಷಿಕೋತ್ಸವದಂದು
ನಮ್ಮ ಹಾರೈಕೆ.

ನಮ್ಮ ಗ್ರಾಹಕರಿಗೆ ಅತ್ಯಧಿಕ ಪ್ರಮಾಣದಲ್ಲಿ
ಸೇವೆ ಸಲ್ಲಿಸುವಂತಾಗಲೆಂಬುದೇ ನಮ್ಮ ಸದಾಶಯ.



ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
U. RAGHAVENDRA KRISHNA BHAT
Jeweller, Tenkapet, UDIPI, S. Kanara.
ಫೋನ್ ನಂಬ್ರ 66



ಉಡುಪಿಯ ಪ್ರಸಿದ್ಧ ಜ್ಯುವೆಲರರೂ
ಅಚಲ ಕಾಂಗ್ರೆಸ್ ಭಕ್ತರೂ
ಮಾಜಿ ನಗರ ಸಭಾ ಸದಸ್ಯರೂ ಆದ
ಶ್ರೀ ಯು. ರಾಘವೇಂದ್ರ ಕೃಷ್ಣ ಭಟ್ಟರು.

ಕನ್ನಡ ಚಿತ್ರರಂಗದ ಧ್ರುವತಾರೆ!

ಪ್ರಖ್ಯಾತ ಎ.ವಿ.ಯಂ. ಪ್ರೊಡಕ್ಷನ್‌ರವರು ಪ್ರಪ್ರಥಮವಾಗಿ ತಯಾರಿಸಿರುವ ಮಹೋನ್ನತ ಕನ್ನಡ ಚಿತ್ರ

ತಾ. **31—12—55**ರಿಂದ ಅಮೋಘ ಪ್ರಾರಂಭ.

ಜ್ಯೋತಿ ಟಾಕೀಸ್, ಮಂಗಳೂರು.

ಹರನಿಗಿಂತ ಹಿರಿದೈವವಿಲ್ಲ. ಭಕ್ತಿಗೆ ಸರಿದೂಗುವ ಕರ್ಮವಿಲ್ಲ. ಪಾತಿವ್ರತ್ಯವನ್ನು ಎದುರಿಸಬಲ್ಲ ಶಕ್ತಿಯಿಲ್ಲ!



ತಮ್ಮ
ಬಂಧು ಮಿತ್ರರೊಡನೆ
ಇಂದೇ ಬಂದು
ನೋಡಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,
ರಥಬೀದಿ, ಮಂಗಳೂರು.

ಇವರ **1876**ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಿಗಳು

ಧಾತುಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ ಕಲ್ಮದ ಮಿಶ್ರಿತ)

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಮೂತ್ರದೊಡನೆ ಧಾತು ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಒಳಜ್ವರ ಅಶಕ್ತತೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ವೀರ್ಯವೃದ್ಧಿ ಉಂಟುಮಾಡುವುದು.

ಡಬ್ಬಿ 1ರ ರೂ. 3—8—0.

ಚ್ಯವನಪ್ರಾಶ ಲೇಹ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಮ್ಮಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಧಾತುತ್ವ ಉಂಟು ಮಾಡುವುದು. ಪೌಂಡು 1ರ ರೂ. 5—8—0. ½ ಪೌಂಡು ರೂ. 3-0-0.

ಗರ್ಭ ರಕ್ಷಕ

ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಪಿ ದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು.

ಬಾಟ್ಲಿ 1ರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರ ಪ್ರಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನರುದ್ದೀಪ್ತಿಸಿ, ರಕ್ತ ಧಾತುವು ಅಭಿವೃದ್ಧಿಯಾಗಿ ಶಿಶುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವುದು.

24 ಔನ್ಸ್ ರೂ. 5/-. 12 ಔನ್ಸ್ ರೂ. 2-12. 8 ಔನ್ಸ್ ರೂ. 1-12.

ಅಶೋಕಾರಿಷ್ಟ ಮತ್ತು ಮಾತ್ರೆ

ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಠೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿ ಸೆರಗು, ಸಂತಾನ ಹೀನತೆ, ರಕ್ತ ಹೀನತೆ, ಋತುಶೂಲೆ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು.

ಬಾಟ್ಲಿ 1ರ ರೂ. 3—8—0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುತ್ತದೆ. ಬಾಟ್ಲಿ 1ರ ಆಣೆ 14.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ಸಿಗುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಸಿಗುವ ಸ್ಥಳ:— 1) ನ್ಯೂ ಬಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ಸ್, 648-A, ಡಿಲ್ಯಾಲ್ ರೋಡ್, ಬಾಕುಲ್ಲಾ, ಬೊಂಬ್ಯಾ - 27. 2) ಜನರಲ್ ಸ್ಟೋರ್ಸ್, G. I. P. ಮಾಟುಂಗಾ, ಬೊಂಬ್ಯಾ—19. 3) ಯು. ಗಣಪತಿ ನ್ಯಾಕ್, ಮರ್ಚಂಟ್, ಕಾಸ್ರಗೋಡು. 4) ಪೈ ಸ್ಟೋರ್ಸ್, ಪುತ್ತೂರು. 5) ಶ್ರೀಧರ ಭಟ್, ಬ್ರದರ್ಸ್, ಪುತ್ತೂರು. 6) ಕಾಂತಾವರ ವಾಸುದೇವ ಕಾಮತ್, ಬೆಳ್ತಂಗಡಿ. 7) ಕೆ. ವೆಂಕಟೇಶ ನ್ಯಾಕ್, ಗುರುವಾಯನ ಕೆರೆ. 8) ಹೋಮ್ಯೋಪೆಥಿಕ್ ಡಿಸ್ಪೆನ್ಸರಿ, ಕಂಜ. 9) ಬಿ. ಗೋಪಾಲ ಶೆಣೈ, ಬೆಳ್ಳಾರೆ.

ಪ್ರಜಾತಂತ್ರದ ಕೆಲವು ಸಮಸ್ಯೆಗಳು

ಸರಕಾರದ ಧೋರಣೆಯು ಕಾರ್ಯಗತಗೊಳ್ಳುವಾಗ ವ್ಯಕ್ತಿ ಸ್ವಾತಂತ್ರ್ಯಕ್ಕೆ ಎಷ್ಟರ ಮಟ್ಟಿನ ರಕ್ಷಣೆ ದೊರಕುತ್ತದೆ ಎಂಬುದೇ ಪ್ರಜಾಪ್ರಭುತ್ವ ಪದ್ಧತಿಯ ಯಶಸ್ಸಿನ ಒರೆಗಲ್ಲು; ಮತ್ತಿದೇ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಬಿಡಿಸಬೇಕಾದ ಸಮಸ್ಯೆಗಳಲ್ಲೆಲ್ಲ ಉಲ್ಲೇಖನೀಯ.

ಬರೆದವರು: ಶ್ರೀ ಸೇವ ನಮಿರಾಜ ಮಲ್ಲ, ಎಂ. ಎ., ಬಿ. ಎಲ್.

ಷಟ್ಖಂಡ ಚಕ್ರವರ್ತಿ, ಬ್ರಹ್ಮಾಂಡ ಚಕ್ರವರ್ತಿ ಎಂಬಿತ್ಯಾದಿ ಪದಗಳು ನಮ್ಮ ಪುರಾಣಗಳಲ್ಲಾದರೂ ಕೇಳಿಬರುತ್ತಿವೆ. ಆದರೆ ಇಡೀ ಜಗತ್ತನ್ನು ಈತನಕ ಯಾರಾದರೂ ಒಬ್ಬರೇ ಆಳಿರಬಹುದೇ ಎಂಬ ಪ್ರಶ್ನೆಯನ್ನು ಒಪ್ಪಲು ಆಧಾರಗಳು ಸಿಗಲಾರವು. ನಿಜವಾಗಿ ನೋಡಿದರೆ ಮಾನವ ನಾಗರಿಕತೆಯು ಕೆಲವು ಖಂಡಗಳಲ್ಲಿ ತೀರ ಇತ್ತೀಚೆಗಿನ ವರೆಗೂ ಇರಲಿಲ್ಲ. ಅತಿ ಪ್ರಾಚೀನವಾದ ಮಾನವ ಇತಿಹಾಸವುಳ್ಳ ಖಂಡವೆಂದರೆ ಏಷಿಯಾ ಎನ್ನಬಹುದು. ಏಶಿಯಾ ಖಂಡಕ್ಕೆ ಪಶ್ಚಿಮದಲ್ಲಿ ತಾಗಿರುವ ಯುರೋಪ್ ಖಂಡದ ಕೆಲವು ಭಾಗಗಳನ್ನು ಮಾತ್ರ ಏಶಿಯಾದ ನಾಗರಿಕತೆಗೆ ಹೋಲಿಸ ಬಹುದು. ಪ್ರಪಂಚದ ಉಳಿದ ಭಾಗಗಳಲ್ಲಿ ಹೆಚ್ಚಿನವು ತೀರ ಇತ್ತೀಚೆಗಿನ ವರೆಗೂ 'ತಮೋ ಭೂಮಿ'ಗಳಾಗಿದ್ದುವು. ಆದುದರಿಂದ ಆರು ಖಂಡಗಳ ಮೇಲೂ ತನ್ನ ಸ್ವಾಮಿತ್ವವನ್ನು ಹಬ್ಬಿಸಿರ ಬಹುದಾದ ದಂಡ ನಾಯಕನನ್ನಾಗಲೀ ಊಹಿಸುವುದು ಕಷ್ಟ ಸಾಧ್ಯ.

ಪ್ರಪಂಚದಲ್ಲಿ ಹಿಂದಿನಿಂದಲೂ ಹಲವು ವಿಧದ ಸರ್ಕಾರಗಳಿದ್ದುವು. ದಂಡ ನಾಯಕನ ಪ್ರಭುತ್ವ, ರಾಜ ಪ್ರಭುತ್ವ, ಆನುವಂಶಿಕ ಶ್ರೀಮಂತರ ಪ್ರಭುತ್ವ, ಶ್ರೀಮಂತರ ಪ್ರಭುತ್ವ, ಸರ್ವಾಧಿಕಾರೀ ಪ್ರಭುತ್ವ, ಪ್ರಜಾ ಪ್ರಭುತ್ವ ಹೀಗೆ ಎಲ್ಲ ವಿಧದ ಸರ್ಕಾರಗಳೂ ಎಲ್ಲ ಕಾಲಗಳಲ್ಲಿಯೂ ಇದ್ದುವು. ಕಾಲ ಧರ್ಮಕ್ಕನುಗುಣವಾಗಿ ಒಂದೊಂದು ಕಾಲದಲ್ಲಿ ಒಂದೊಂದು ವಿಧದ ಸರ್ಕಾರಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿತ್ತು. ದಂಡ ನಾಯಕನ ಪ್ರಭುತ್ವ ಕಾಡುಜನರ ಕಾಲದಲ್ಲೇ ಆರಂಭವಾಗಿತ್ತೆಂಬುದಕ್ಕೆ ಸಂಶಯವಿಲ್ಲ. ಮನುಷ್ಯರು ನಾಗರಿಕತೆಯನ್ನು ರೂಪಿಸುತ್ತ ಬಂದಂತೆ ಹೆಚ್ಚು ಸುಧಾರಿಸಿದ ಸರ್ಕಾರೀ ಪದ್ಧತಿಗಳು ಆಚರಣೆಗೆ ಬಂದವು.

ಸರ್ಕಾರದ ಭಾವನೆ ಎಲ್ಲಿಂದಲೋ ಹೊರಗಿನಿಂದ ಬಂದುದಲ್ಲ. ಮನುಷ್ಯನ ಜೀವನದ ಅತಿ ಚಿಕ್ಕ ಘಟಕದಲ್ಲೂ ಸರ್ಕಾರದ ಪ್ರತಿಬಿಂಬವಿದೆ. ಒಬ್ಬ ವ್ಯಕ್ತಿಯ ದೇಹವನ್ನೇ ಪರಿಶೀಲಿಸಿದರೂ ಅದರಲ್ಲಿ ಸರ್ಕಾರ ಪದ್ಧತಿಯ ಚೌಕಟ್ಟು ಕಾಣಸಿಗುತ್ತದೆ. ಮಿದುಳು ಆಳುವ ಕೆಲಸವನ್ನು ಮಾಡುತ್ತದೆ. ಹೊಟ್ಟೆ ಸಂಪತ್ತು ಅಂದರೆ ಚೇತನದ ಖಜಾನೆಯಾಗಿದೆ. ಕೈಕಾಲುಗಳು ಮಿದುಳಿನ ಭಾವನೆಗಳನ್ನು ಕಾರ್ಯಗತ ಮಾಡುತ್ತಿವೆ. ನಾಲಿಗೆ ಕಣ್ಣುಗಳು ಪರರೊಡನೆ ವ್ಯವಹಾರ ಮಾಡುತ್ತವೆ. ಅಗತ್ಯ ಬಿದ್ದಾಗ ಕೈಗಳು ಮತ್ತು ಸ್ವಲ್ಪ ಪ್ರಮಾಣದಲ್ಲಿ ಹಲ್ಲುಗಳು ರಕ್ಷಣೆಯ ಕೆಲಸವನ್ನು ಮಾಡುತ್ತವೆ. ವ್ಯಕ್ತಿಯು ಸೇರಿರುವ ಕುಟುಂಬದ ರಚನೆಯಲ್ಲಿಯೂ ಸರ್ಕಾರದ ಪ್ರತಿರೂಪವಿದೆ. ಯಜಮಾನರೊಬ್ಬನಿಲ್ಲದ ಕುಟುಂಬ ಲೋಕದಲ್ಲಿ ಹೆಚ್ಚು ಕಡಿಮೆ ಇಲ್ಲವೇ ಇಲ್ಲವೆನ್ನಬಹುದು. ಯಜಮಾನನಾಗಿರುವವನಿಗೆ ಹೆಚ್ಚಿನ ಸೌಕರ್ಯಗಳು ಹೆಚ್ಚಿನ ಮನ್ನಣೆ ದೊರೆಯುತ್ತಿರುವುದೂ ಒಂದು ಸ್ವಭಾವಜನ್ಯ ಮಾನವ ಗುಣವೆನ್ನಬಹುದು. ಆದುದರಿಂದಲೇ ಇಂದು ಸರ್ಕಾರ ಪದ್ಧತಿ ಯಾವುದಾಗಿದ್ದರೂ ಮೇಲಿರುವ ಆಡಳಿತೆಗಾರರಿಗೆ ಬಹು ಮುಖ್ಯವಾದ ಒಂದು ಸ್ಥಾನವಿದೆಯೆಂಬುದೂ, ಅವರಿಗೆ ಇತರರಿಗಿಂತ ಹೆಚ್ಚಿನ ಸೌಕರ್ಯಗಳಿವೆಯೆಂಬುದೂ ಎಲ್ಲೆಡೆಯಲ್ಲೂ ಕಾಣಬರುವ ಸಂಗತಿಯಾಗಿದೆ.

ಆಳುವವರಿಗೂ ಆಳಲ್ಪಡುವವರಿಗೂ ಯಾವ ರೀತಿಯ ಸಂಬಂಧವಿರಬೇಕೆಂಬುದರ ಕುರಿತು ನಡೆದ ವಿದ್ಯಮಾನಗಳ ಇತಿಹಾಸವನ್ನೇ ರಾಜಕೀಯ ಇತಿಹಾಸವೆಂದು ಹೇಳಬಹುದು. ಈ ಬಗ್ಗೆ ಪ್ರಯೋಗಗಳು ಎಂದಿನಿಂದಲೂ ನಡೆಯುತ್ತ ಬಂದಿವೆ. ಈ ಒಂದು ಶತಮಾನದಲ್ಲಿಯೂ ಆ ಪ್ರಯೋಗಗಳು ನಡೆದಿವೆ. ಅವುಗಳ ಫಲಿತಾಂಶವಾಗಿ ಪ್ರಚಾರಕ್ಕೆ ಬಂದಿರುವ ಹಿಂದೂ ರಾಜಕೀಯ ತತ್ವವೆಂದರೆ ಪ್ರಜಾ ತಂತ್ರವೆನ್ನಬಹುದು.

ಇಂದು ಪ್ರಜಾ ತಂತ್ರವು ಒಂದು ಆಕರ್ಷಣೀಯ ಮಾದರಿಯಾಗಿದೆ; ಆದರೆ ಎಲ್ಲೆಡೆಯಲ್ಲೂ ಅದು ಸಫಲವಾಗಿಲ್ಲ. ಎಲ್ಲ ರಾಜ್ಯಗಳಲ್ಲೂ ಅದು ಆಚರಣೆಗೆ ಬಂದಿಲ್ಲ. ಪ್ರಜಾತಂತ್ರ ತತ್ವದ ಸಿದ್ಧಿಯು ಆಳುವ-ಆಳಲ್ಪಡುವವರೊಳಗಿನ ಭೇದವನ್ನು ನಿರ್ಮೂಲಿಸುವುದರಲ್ಲಿ ಅಡಕವಾಗಿದೆ. ಆಳುವವರೆಂದರೆ ಕೇವಲ ಸರ್ಕಾರದ ಅಧಿಕಾರದಲ್ಲಿರುವವರು ಮಾತ್ರವಲ್ಲ, ಸಮಾಜದಲ್ಲಿ ಸಂಪತ್ತಿನ ವರ್ಚಸ್ಸಿನಿಂದ ಅಧಿಕಾರವನ್ನು ಸ್ಥಾಪಿಸಿರುವವರು ಸಹಾ ಸೇರಿದ್ದಾರೆ. ಭೂಮಿಯ ಒಡೆಯ, ಕಾರಖಾನೆಗಳ ಮಾಲಿಕ ಇವರೆಲ್ಲ ಒಂದು ದೃಷ್ಟಿಯಿಂದ ಆಳುವವರೇ ಆಗಿದ್ದಾರೆ. ಈ ಭಿನ್ನ ಭಿನ್ನ ವರ್ಗಗಳೊಳಗಿನ ಭೇದಗಳನ್ನು ನಿವಾರಿಸುವ ಪ್ರಶ್ನೆಯೇ ಆಧುನಿಕ ರಾಜಕೀಯದ ಜೀವಾಳವಾಗಿದೆಯೆನ್ನಬಹುದು.

***

ಇದಕ್ಕೆ ಎದುರಾಗಿ ನಿಂತಿರುವ ಒಂದು ದೊಡ್ಡ ಸಮಸ್ಯೆಯೆಂದರೆ ಸ್ವಾತಂತ್ರ್ಯ. ಇಂದು ವ್ಯಕ್ತಿ ಸ್ವಾತಂತ್ರ್ಯದಲ್ಲಿ ಅಭಿಪ್ರಾಯ ವ್ಯಕ್ತವ್ಯ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯಗಳೂ ಅಡಕವಾಗಿವೆ. ಯಾವ ರಾಜಕೀಯಕ್ಕೂ ಈ ವ್ಯಕ್ತಿ ಸ್ವಾತಂತ್ರ್ಯದ ಕೊಡುಗೆಯಿಲ್ಲದಿದ್ದರೆ ಜೀವ ಬಾರದು. ಬಹುಮಟ್ಟಿಗೆ ಸರ್ವ ಸ್ವತಂತ್ರನಾದ ವ್ಯಕ್ತಿಯನ್ನು ರಾಜಕೀಯ ಮತ್ತು ಸಾಮಾಜಿಕ ಆದರ್ಶಗಳು ಕೊರೆದ ಇತಿಮಿತಿಗಳ ಚೌಕಟ್ಟಿನೊಳಗೆ ಹೇಗೆ ಸೇರಿಸಬಹುದು, ಆ ಆದರ್ಶಗಳಿಗೂ ವ್ಯಕ್ತಿ ಸ್ವಾತಂತ್ರ್ಯಕ್ಕೂ ಯಾವ ರೀತಿಯಲ್ಲಿ ಸಮತೂಕವನ್ನು ಉಂಟುಮಾಡಬಹುದು, ಎಂಬೀ ವಿಚಾರಗಳು ಲೋಕದ ಸಕಲ ಬುದ್ಧಿಶೀಲರನ್ನೂ ಯೋಚನೆಗೀಡು ಮಾಡಿವೆ.

ವ್ಯಕ್ತಿಯ ಹಕ್ಕು ಮತ್ತು ಕರ್ತವ್ಯಗಳ ಪಟ್ಟಿಯನ್ನು ಬರಹ ಮೂಲಕ ಯಾವೊಂದು ಸರ್ಕಾರಕ್ಕೂ ಮೊದಲಾಗಿ ತಯಾರಿಸಿಡುವುದು ಸಾಧ್ಯವಿಲ್ಲ. ಏಕೆಂದರೆ, ಅಭಿಪ್ರಾಯ ವ್ಯಕ್ತವ್ಯ ಸ್ವಾತಂತ್ರ್ಯದ ದೃಷ್ಟಿಯಿಂದ ವ್ಯಕ್ತಿಗೆ ಎಷ್ಟರ ವರೆಗೆ ತನ್ನ ಸರ್ಕಾರವನ್ನು ಅಥವಾ ಬೇರೆಯವರನ್ನು ವಿಮರ್ಶಿಸುವ, ಟೀಕಿಸುವ ಮತ್ತು ಖಂಡಿಸುವ ಹಕ್ಕಿದೆಯೆಂಬುದನ್ನು ಸಂದರ್ಭಕ್ಕನುಸಾರವಾಗಿ ನಿರ್ಣಯಿಸಬೇಕಷ್ಟೆ. ಹಾಗೆಯೇ ತೆರಿಗೆಯನ್ನು ಹೇರಿಸುವುದು, ವ್ಯಾಪಾರವನ್ನು ನಿರ್ಬಂಧಿಸುವುದು ಮುಂತಾದ ಸರ್ಕಾರೀ ಕಾರ್ಯಕ್ರಮಗಳಿಂದ ವ್ಯಕ್ತಿಯ ವ್ಯವಹಾರ ಸ್ವಾತಂತ್ರ್ಯಕ್ಕೆ ಎಷ್ಟರ ಮಟ್ಟಿಗೆ ಧಕ್ಕೆ ಬರುವುದೆಂಬುದನ್ನೂ ಪ್ರಸಂಗ ವಶಾತ್ ನಿರ್ಧರಿಸಬೇಕಾಗಿದೆ. ನಮ್ಮ ದೇಶದಲ್ಲಿ ನಮ್ಮ ಉಚ್ಚ ನ್ಯಾಯಾಲಯಗಳು ಈ ನಿರ್ಣಯವನ್ನು ಮಾಡುತ್ತವೆ. ಈ ಆರು ವರ್ಷದ ಪ್ರಜಾರಾಜ್ಯದಲ್ಲಿ ಪತ್ರಿಕಾ ಸ್ವಾತಂತ್ರ್ಯ, ಕರಹೇರುವುದು, ತೆರಿಗೆ ಹೊರಿಸುವುದು ಮುಂತಾದ ಅನೇಕ ವ್ಯಕ್ತಿ ಸಂಬಂಧ ಸ್ವಾತಂತ್ರ್ಯದ ಕುರಿತಾದ ವಿವಾದಗಳು ನಿರ್ಣಯವಾಗಿವೆಯೆಂಬುದನ್ನು ಎಲ್ಲರೂ ಬಲ್ಲರು.

ಆದುದರಿಂದ ರಾಜಕೀಯ ಆದರ್ಶವನ್ನು ಸಾಧಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡರೂ ಅದು ಒಮ್ಮೆಲೇ ಕಾರ್ಯಗತವಾಗುವ ಸಂಭವ ಕಡಿಮೆ. ವ್ಯಕ್ತಿ ಸ್ವಾತಂತ್ರ್ಯದ ಒರೆಗಲ್ಲಿಗೆ ಆ ಸುಧಾರಣೆಯನ್ನು ತಿಕ್ಕಿಯೇ ಅದನ್ನು ಸ್ವೀಕರಿಸಬಹುದಷ್ಟೇ. ಉದಾಹರಣೆಗೆ ಚಕ್ರಬಂಧ ಸ್ಪರ್ಧೆಗಳನ್ನು ಅಮಿತ ಪ್ರಮಾಣದ ಬಹುಮಾನಗಳನ್ನು ಕೊಟ್ಟು ನಡೆಸುವುದರ ವಿರುದ್ಧ ಇತ್ತೀಚೆಗೆ ಶಾಸನವಾಗಿದೆ. ಆ ಮೇರೆಗೆ ನಮ್ಮ ಮದ್ರಾಸು ರಾಜ್ಯದಲ್ಲಿಯೂ ಈ ತಿಂಗಳಾರಂಭದಲ್ಲಿ ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಬಹುಮಾನಕೊಡುವ ಚಕ್ರಬಂಧ ಸ್ಪರ್ಧೆಗಳನ್ನು ನಡೆಸಬಾರದೆಂಬ ಕಾನೂನನ್ನು ಆಚರಣೆಗೆ ತರಲಾಗಿದೆ. ಕೆಲವು ಮಂದಿ ಚಕ್ರಬಂಧ ಸ್ಪರ್ಧೆ ನಡೆಸುವವರು ತಾವು ಮಾಡುತ್ತಿರುವ ಸಾಮಾಜಿಕ ಅನಾಹುತವನ್ನು ಕಂಡು ಪಶ್ಚಾತ್ತಾಪ ಪಟ್ಟೋ ಎಂಬಂತೆ ಸರ್ಕಾರದ ಸದುದ್ದೇಶ ಪೂರಿತವಾದ ಈ ಶಾಸನಕ್ಕೆ ಸ್ವಯಂಪ್ರೇರಣೆಯಿಂದ ತಲೆಬಾಗಿ ತಮ್ಮ ಉದ್ಯಮವನ್ನು ನಿಲ್ಲಿಸಿದರು. ಆದರೆ ಇನ್ನೂ ಕೆಲವರು ಈ ಶಾಸನವು ತಮ್ಮ ಅಭಿಪ್ರಾಯದಲ್ಲಿ

(೨೮ನೇ ಪುಟ ನೋಡಿ)

ಹೊಸ ಮಾದರಿಯ
ಉಷಾ
USHA

'ಹೇಂಡ್' ಮತ್ತು 'ಟ್ರೈಲರ್ಸ್' ಹೊಲಿಯುವ ಯಂತ್ರಗಳನ್ನೇ ಎಲ್ಲರೂ ಕೇಳುತ್ತಾರೆ
ಏಕೆಂದರೆ
ಈ ಯಂತ್ರಗಳು ಬಹಳ ಉತ್ತಮವಾಗಿವೆ.

ಅಧಿಕೃತ ಮಾರಾಟಗಾರರು:
ದಿ ಇಂಡಿಯನ್ ಒಟೋಮೋಬ್ಯಾಲ್ಸ್,
ಬಸ್ ಸ್ಟೇಂಡಿನ ಬಳಿ, ಉಡುಪಿ.

ಇಲ್ಲಿ ಎಲ್ಲಾ ತರದ ಸ್ಪೇರ್ ಪಾರ್ಟುಗಳು ದೊರೆಯುತ್ತವೆ.
ಎಲ್ಲಾ ವಿಧದ ರಿಪೇರಿಗಳನ್ನೂ ಇವರು ಮಾಡಿಕೊಡುತ್ತಾರೆ.
ಪ್ರತ್ಯಕ್ಷವಾಗಿ ಕಾಣಲಿಚ್ಛಿಸುವವರು ಇವರ 'ಶೋ ರೂಮ್'ಗೆ ಭೇಟಿ ಕೊಡಬಹುದು.

ದೇಶ ಭಕ್ತಿ ಮತ್ತು ಸಾಹಿತ್ಯ ಸ್ಫೂರ್ತಿ

ಸ್ವಾತಂತ್ರ್ಯ ಪ್ರಾಪ್ತಿಯ ಪೂರ್ವದಲ್ಲಿ ದೇಶಭಕ್ತಿಯು ಸ್ಫೂರ್ತಿದಾಯಕ ಸಾಹಿತ್ಯ ಕೃತಿಗಳಿಗೆ ವಸ್ತುವಾಯಿತು. ರಾಷ್ಟ್ರ ಪುನಾರಚನೆಯ ಈ ದಿನಗಳಲ್ಲಿ ಸಾಹಿತ್ಯವು ದೇಶದ ಜನಶಕ್ತಿಯನ್ನೂ ಸಂಕಲ್ಪ ಶಕ್ತಿಯನ್ನೂ ಕಾರ್ಯಶಕ್ತಿಯನ್ನೂ ಒಂದುಗೂಡಿಸಲಿ; ಹಾಗೆ ದೇಶೋನ್ನತಿಯನ್ನು ಸಾಧಿಸಲು ನೆರವಾಗಲಿ!

ಬರೆದವರು: ಶ್ರೀ. ಜಿ. ವರದರಾಜ ರಾವ್, ಎಂ. ಎ.

"It is for the home of his childhood or of his ancestors, that a man will fight most readily because he is bound to it by a spiritual and poetic tie. Expanding from this centre, the sentiment of patriotism embraces one's country as a whole."

W. R. Inge.

ಅಪಿ ಸ್ವರ್ಣಮಯೀ ಲಂಕಾ ಲಕ್ಷ್ಮಣ
ಮೇ ನ ರೋಚತೇ। ಜನನೀ ಜನ್ಮ
ಭೂಮಿಶ್ಚ ಸ್ವರ್ಗಾದಪಿ ಗರೀಯಸೀ॥

ಮೇಲಿನ ಉದಾಹೃತ ಪದ್ಯದಲ್ಲಿ ಉತ್ತರಾರ್ಧದ ವಾಕ್ಯ ಬಹಳ ಪ್ರಸಿದ್ಧವಾದುದಷ್ಟೆ. ಈ ವಾಕ್ಯದ ಸಂದರ್ಭವನ್ನು ಕುರಿತು ಒಬ್ಬ ಹಿಂದಿ ಲೇಖಕರು ಇಂತು ನಿರೂಪಿಸಿರುತ್ತಾರೆ. ಲಂಕಾನಗರಿಯನ್ನು ಸ್ವಾಧೀನಪಡಿಸಿಕೊಂಡ ರಾಮನನ್ನು ಕುರಿತು ಲಕ್ಷ್ಮಣನು "ಅಣ್ಣಾ! ಈ ಲಂಕಾಪಟ್ಟಣ ಬಹಳ ಮನೋಹರವಾಗಿದೆ. ನಾವು ಇಲ್ಲಿಯೇ ಏಕೆ ತಂಗಬಾರದು" ಎಂದು ಕೇಳಿದನಂತೆ. ಆಗ ಶ್ರೀರಾಮನು "ಲಕ್ಷ್ಮಣ! ಲಂಕಾ ಪಟ್ಟಣವು ಸ್ವರ್ಣಮಯವಾಗಿದ್ದರೂ ಸರಿಯೆ, ಅದು ನನಗೆ ರುಚಿಸುವುದಿಲ್ಲ. ನಮ್ಮ ತವರು ನಾಡು ಮತ್ತು ನಮ್ಮನ್ನು ಪಡೆದ ತಾಯಿ ಸ್ವರ್ಗಕ್ಕಿಂತಲೂ ಹೆಚ್ಚಾದವುಗಳು" ಎಂದು ಉತ್ತರವಿತ್ತನಂತೆ. ಈ ಸನ್ನಿವೇಶದ ಸೊಗಸು ಬಹಳ ಅರ್ಥವತ್ತಾಗಿದೆ. ಪರರಾಜರ ಸಖ್ಯ ಮುಖ್ಯವೇ ಹೊರತು ಅವರ ರಾಷ್ಟ್ರಕ್ಕೆ ನಾವು ಕೈ ಹಾಕಬಾರದೆಂಬ ಉದಾತ್ತ ತತ್ವವೂ, ಏನೇ ಆಗಲಿ, ದೇಶಸೇವೆ ಮತ್ತು ಮಾತೃ ಸೇವೆಗಳು ನಮಗೆ ಸ್ವರ್ಗಸುಖಕ್ಕಿಂತಲೂ ಮಿಗಿಲಾದ ಪುಣ್ಯವನ್ನು ದೊರಕಿಸಿ ಕೊಡಬಹುದೆಂಬ ಭರವಸೆಯೂ ಇಲ್ಲಿ ವೇದ್ಯವಾಗುತ್ತವೆ. ದೇಶಭಕ್ತಿಯ ಭಾವನೆ ಅತಿಯಾದರೆ ಸಂಕುಚಿತವೆನಿಸುತ್ತದೆ; ಮಿತಿಯಲ್ಲಿದ್ದರೆ ಮಹೋನ್ನತವೆನಿಸುತ್ತದೆ. ಈ ದಿವ್ಯ ಸಂದೇಶವನ್ನು ಒಳಗೊಂಡ ಈ ಪದ್ಯವು ಬಹು ಅರ್ಥವತ್ತಾಗಿದೆ, ಎಚ್ಚರಿಕೆಯಿಂದ ಕೂಡಿಯುದೂ ಆಗಿದೆ.

ದೇಶಭಕ್ತಿಯ ಕಲ್ಪನೆ ನಮಗೆ ಹೊಚ್ಚ ಹೊಸದೆಂದು ಕೆಲವರ ಭಾವನೆ. ಆದರೆ, ಇಂದು ಅದರ ಸ್ವರೂಪವೇನೇ ಇರಲಿ, ಆರ್ಷೇಯ ಕಾಲದಿಂದಲೂ ನಮ್ಮ ದೇಶ ಒಂದು ಎಂಬ ಭಾವನೆ ದೃಢವಾಗಿ ಇದ್ದಿತೆಂದು ನಾವು ಹೇಳಬಹುದು. ಆಸೇತು ಹಿಮಾಚಲ ಪರ್ಯಂತ ವ್ಯಾಪ್ತವಾದ ಭರತ ವರ್ಷವನ್ನು ಸ್ಮರಿಸುವಾಗಲೂ, ಭರತ ಖಂಡದ ಮಹತ್ವವನ್ನು ನಾನಾ ಹೆಸರುಗಳಲ್ಲಿ ನಿರೂಪಿಸುವಾಗಲೂ, ಗಂಗಾ, ಯಮುನಾ, ಗೋದಾವರಿ, ಕೃಷ್ಣಾ ಕಾವೇರಿ ನದಿಗಳ ಸ್ಮರಣೆಯನ್ನು ಮಾಡುವಾಗಲೂ, ಕಾಶಿ, ರಾಮೇಶ್ವರಗಳ ಯಾತ್ರೆಗಳನ್ನು ಕುರಿತು ಹೇಳುವಾಗಲೂ, ನಮ್ಮ ಜನ ಒಟ್ಟು ಭರತಖಂಡವನ್ನು ಅಖಂಡ ದೃಷ್ಟಿಯಿಂದ ನೋಡುತ್ತಿದ್ದರೆನ್ನುವುದು ಸ್ಪಷ್ಟವಾದ ಸಂಗತಿಯೇ ಸರಿ. ಆರ್ಯಾವರ್ತ ಮತ್ತು ದಕ್ಷಿಣಾ ಪಥಗಳ ವಿಭಜನೆಯಾದರೂ ಸಹ ಈ ಸಾರ್ವಕಾಲಿಕ ವಿಚಾರಶಕ್ತಿಯನ್ನು ನಮ್ಮ ಅಖಂಡ ದೃಷ್ಟಿ ಕಾಪಾಡಿಕೊಂಡು ಬಂದಿತು ಎನ್ನಬಹುದು.

* * *

ಹೀಗೆ, ಆಧ್ಯಾತ್ಮಿಕವಾಗಿ ಭರತ ಖಂಡವು ಒಂದೆಂಬ ಭಾವನೆ ಒಂದಲ್ಲ ಒಂದು ರೀತಿಯಲ್ಲಿ ಗೋಚರವಾಗುತ್ತದೆ. ಭರತ ಖಂಡದ ಸಂಸ್ಕೃತಿಯ ಮುಖ್ಯಾಂಶಗಳಲ್ಲಿ ಸಮನ್ವಯವನ್ನು ಕಾಣಬಹುದು. ಆದರೂ, ಬೇರೆ ಬೇರೆ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ಭಾಷೆ, ವೇಷ, ವ್ಯವಹಾರ, ವರ್ತನೆಗಳು ವೈವಿಧ್ಯದಿಂದಲೂ ಇರುವುದನ್ನು ಇಂದಿಗೂ ಕಾಣಬಹುದು. ಇವುಗಳು "ವಿಭಜನೆಯಲ್ಲಿ ಐಕ್ಯ"ವನ್ನು ಹೊಂದಿಸಿಕೊಂಡು ಹೋದುದೇ ಹೊರತು ಒಡಕನ್ನು ಉಂಟುಮಾಡಿದ ಉದಾಹರಣೆ ಎಲ್ಲಿಯೂ ಕಂಡುಬರುವಂತಿಲ್ಲ. ಈ ಐಕ್ಯ ಸಾಧನೆಯಲ್ಲಿ ಸಂಸ್ಕೃತದ ಪಾತ್ರ ಬಹಳ ಮಿಗಿಲಾದುದು. ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತಾದಿಗಳು ನಮ್ಮ ಪೂಜ್ಯ ಗ್ರಂಥಗಳಾಗಿ, ಧರ್ಮದ ತಳಹದಿಯ ಮೇಲೆ ಈ ಐಕ್ಯದ ಕಲ್ಪನೆ ಅಚಲವಾಯಿತು. ದೇಶಾಭಿಮಾನಕ್ಕೆ ಪ್ರೇರಕವಾಗಬಹುದಾದ ಈ ಕಲ್ಪನೆ ಸಂಕುಚಿತವಾಗದಿರಲು ನಮ್ಮ ಜನರ ವಿಶ್ವ ಸೌಹಾರ್ದವೇ ಕಾರಣವೆನ್ನಬೇಕು. ಅವರು "ಸರ್ವೇಜನಾಃ ಸುಖಿನೋ ಭವಂತು"; "ಸರ್ವೇಸಂತು ನಿರಾಮಯಾಃ, ಸರ್ವೇ ಭದ್ರಾಣಿ ಪಶ್ಯಂತು, ಮಾಕಶ್ಚಿತ್ ದುಃಖ ಭಾಗ್ಭವೇತ್" ಎಂಬುದಾಗಿ ಹೇಳಿ ಲೋಕ ಹಿತವನ್ನು ಕೋರಿದರೇ ವಿನಾ, ಸ್ವಾರ್ಥವನ್ನು ಮಾತ್ರವೇ ಬಯಸಿದವರಲ್ಲ. ರಾಜಕೀಯ ಜಾಗೃತಿಯಲ್ಲಿ ಮೂಡಿಬರುವ ರಾಷ್ಟ್ರಾಭಿಮಾನವು ಇಂಥ ವಿಶ್ವ ಸೌಹಾರ್ದದಿಂದ ಬೆಳಗಿದ್ದೇ ಆದರೆ, ಪ್ರಪಂಚದ ಮೇಲ್ಮೆಗೆ ಎಷ್ಟು ಹಿತಕಾರಿಯಾದೀತು? ಭರತ ಖಂಡದಲ್ಲಿ ಈ ಸುರಾತನವಾದ ಭಾವನೆಯಿರುವುದರಿಂದಲೇ ಇಂದೂ ಸಹ ನಮ್ಮ ರಾಷ್ಟ್ರಧ್ವಜದಲ್ಲಿ ಅಶೋಕ ಚಕ್ರಕ್ಕೆ ಮಾನ್ಯತೆ ದೊರೆತಿರುವುದು. ಧರ್ಮ ಚಕ್ರವು ನಮ್ಮ ದೇಶದ ಸಂಕೇತವಾಗಿರುವುದು ಅಕ್ಷರಶಃ ಅರ್ಥವತ್ತಾಗಿದೆ.

ದೇಶಭಕ್ತಿಯು ಸ್ವಾರ್ಥ ತ್ಯಾಗವಿಲ್ಲದೆ ಬೆಳಗಲಾರದು. ಈಶ ಸೇವೆಗೆ ಸಮಾನವಾದ ದೇಶ ಸೇವೆಯು ಅಪಾರವಾದ ತ್ಯಾಗವನ್ನು ನಿರೀಕ್ಷಿಸುತ್ತದೆ. ರಾಜರಾದವರು ಈ ವ್ರತವನ್ನು ಕೈಕೊಳ್ಳದೆ ರಾಜ್ಯಾಡಳಿತಕ್ಕೆ ಕೈ ಹಾಕುವಂತಿಲ್ಲ. ಶ್ರೀ ರಾಮಚಂದ್ರನು ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾಗುವ ಕಾಲಕ್ಕೆ ವಸಿಷ್ಠರಿಂದ ಆದೇಶವೊಂದು ಬರುತ್ತದೆ. ಹದಿನಾಲ್ಕು ವರ್ಷಗಳ ಕಾಲ ಅಗಲಿದ್ದನಷ್ಟೆ. ರಾಜ್ಯದ ಹೊಣೆ ಬಹಳ ಹೆಚ್ಚಿನದೆಂದು ಕುಲಗುರುಗಳು ಎಚ್ಚರಿಸುತ್ತಾರೆ. ಆಗ ಶ್ರೀ ರಾಮನು ಹೇಗೆ ವರ್ತಿಸಿರಬಹುದೆಂಬುದನ್ನು ಭವಭೂತಿಯು ಈ ಮಾತುಗಳಲ್ಲಿ ಹೇಳಿರುತ್ತಾನೆ.

ಸ್ನೇಹಂ ದಯಾಂ ಚ ಸೌಖ್ಯಂ ಚ
ಯದಿ ವಾ ಜಾನಕೀ ಮಪಿ। ಲೋಕಸ್ಯ
ಆರಾಧನಾಯ ಮುಂಚತೋ ನಾಸ್ತಿ
ಮೇ ವ್ಯಥಾ॥

ಈ ಹೇಳಿಕೆಯಲ್ಲಿ ತ್ಯಾಗದ ಪರಮಾವಧಿಯನ್ನೇ ಕಾಣಬಹುದು. ಅತ್ಯಂತ ಆಪ್ತವಾದ ವಸ್ತುವಿನ ತ್ಯಾಗವೇ ನಿಜವಾದ ತ್ಯಾಗವೆನ್ನಿಸುವುದು. ಶ್ರೀ ರಾಮನ ಈ ಮಾತು ಬರಿಯ ಮಾತಾಗಿ ಉಳಿಯಲಿಲ್ಲ. ರಾಮಚಂದ್ರನು ಪೂರ್ಣ ಗರ್ಭಿಣಿಯಾದ ಸೀತೆಯನ್ನು ಮತ್ತೆ ಅಗಲಬೇಕಾಗಿ ಬಂದಿತು. ಜನಗಳ ತೃಪ್ತ್ಯರ್ಥವಾಗಿ ಆಕೆಯನ್ನು ತಾನಾಗಿ ಅಗಲುತ್ತಾನೆ. ಅರಣ್ಯಕ್ಕೆ ಕಳುಹಿಸುತ್ತಾನೆ. ರಾಜನಾದವನಿಗೆ ರಾಜಧರ್ಮ ಸ್ವಧರ್ಮಗಳ ಪ್ರಶ್ನೆ ಬಂದಾಗ ಅವನ ವರ್ತನೆ ಅವನ ಧೀರೋದಾತ್ತತೆಗೆ ಅನುಸಾರವಾಗಿ ಸಾಗುತ್ತದೆ. ಹರಿಶ್ಚಂದ್ರನು ಸತ್ಯರಕ್ಷಣೆಗಾಗಿ ಸತಿಸುತರನ್ನು ಮಾರಬೇಕಾಗಿ ಬಂದಿತು. (ಆಂಗ್ಲ ಕವಿಯಾದ ವರ್ಡ್ಸ್‌ವರ್ತ್ ತನ್ನ "Laodamia" ಎಂಬ ಕವಿತೆಯಲ್ಲಿ ಸೈನಿಕನಾದ, ವೀರಯೋಧನಾದ ಪ್ರೊಟಿಸಿಲಾಸ್ ದೇಶಕ್ಕಾಗಿ ತನ್ನ ಪತ್ನಿಯಾದ ಲಯಡೋಮಿಯಾಳನ್ನು ಬಿಟ್ಟು ಹೊರಟ ಪ್ರಸಂಗದಲ್ಲಿ ಇದೇ ಪ್ರಶ್ನೆ ನಮ್ಮೆದುರಿಗೆ ನಿಲ್ಲುವಂತೆ ಮಾಡಿರುತ್ತಾನೆ.) ನಮ್ಮ ನಾಟಕ ಮತ್ತು ಕಾವ್ಯಗಳಲ್ಲಿ ಬರುವ ಇಂಥ ಸನ್ನಿವೇಶಗಳು ರಾಜನ ಶಕ್ತಿ ಪರೀಕ್ಷೆಗೆ ಹೇಗೆ ಅವಕಾಶವನ್ನು ಕಲ್ಪಿಸುತ್ತವೆಯೋ ಹಾಗೆಯೇ ದೈವಲೀಲೆಯನ್ನೂ ಸಹ ಪ್ರತಿಪಾದಿಸುತ್ತವೆ. ರಾಜನ ತ್ಯಾಗಕ್ಕೆ ಹೊರಟ ಶಕ್ತಿಯೇ ಪರೋಕ್ಷವಾಗಿ ರಕ್ಷೆಯಾಗಿಯೂ ಸುಳಿಯುವುದುಂಟು. ಸೀತೆಗೆ ಈ ರಕ್ಷಾಶಕ್ತಿಯು ವಾಲ್ಮೀಕಿಯಾಗಿ ಸುಳಿದರೆ, ಚಂದ್ರಮತಿಗೆ ತುತ್ತತುದಿಯಲ್ಲಿ ಸಾಕ್ಷಾತ್ ಸದಾಶಿವನೇ ಗೋಚರಿಸುತ್ತಾನೆ. ಮುಖ್ಯವಾಗಿ, ಈ ಸಂದರ್ಭಗಳು ವ್ಯಕ್ತಿಯ ಸುಪ್ತ ಶಕ್ತಿಗಳನ್ನು ನಮ್ಮೆದುರು ಹಿಡಿದೆತ್ತಿ ತೋರಿಸುತ್ತವೆ.

***

ಪ್ರಸ್ತುತದಲ್ಲಿ ಈ ದೇಶ ಭಕ್ತಿಯು ಸಾಹಿತ್ಯದ ಮೇಲೆ ಎಂಥ ಪ್ರಭಾವವನ್ನು ಬೀರಬಲ್ಲುದು ಎನ್ನುವುದನ್ನು ನೋಡಬಹುದು. ಧರ್ಮದ ಪ್ರೇರಣೆ ಸಾಹಿತ್ಯಕ್ಕೆ ಒಂದು ಕಾಲದಲ್ಲಿ ಸ್ಫೂರ್ತಿಯನ್ನು ನೀಡಿದಂತೆಯೇ, ರಾಜಕೀಯ ಜಾಗೃತಿಯಲ್ಲಿ ಪುಟಗೊಂಡ ನಮ್ಮ ನಾಡಿನ ದೇಶಭಕ್ತಿ ಭರತ

(೨೩ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: **ಉಡುಪಿ**, ದ. ಭಾರತ.] [ಸ್ಥಾಪನೆ: ೧೯೩೫.

●

ಇದುವೇ ಪಾಲಿಸಿದಾರರಲ್ಲಿ ವಿಶ್ವಾಸವನ್ನು ಹುಟ್ಟಿಸುವ ಹೆಸರು-
ಅಲ್ಲದೆ ಸ್ಥಾಪಿತವಾದಂದಿನಿಂದಲೂ ಬೋನಸು ಹಂಚಿದ ಕಂಪೆನಿ.

1956 ಕಂಪೆನಿಯ ಬೋನಸು ವರ್ಷ.

ವಿಮೆ ಇಳಿಸಲು ಅಥವಾ ಪ್ರತಿನಿಧಿಸಲು ಅಪೇಕ್ಷಿಸುವವರು
ವಿವರಕ್ಕಾಗಿ ಬರೆಯಿರಿ.

T. R. A. PAI, Managing Director,

THE CANARA MUTUAL ASSURANCE COMPANY, LTD.

Head Office: **UDIPI**, S. India.] [Estd: 1935.

●

CHIEF AGENTS:
THE COMMERCIAL CORPORATION OF INDIA LTD.,
UDIPI, S. India.

ಪ್ರಜಾಪ್ರಭುತ್ವದಲ್ಲಿ ಮತದಾನದ ಪಾವಿತ್ರ್ಯ

ಮತವನ್ನು ಕೊಡುವ ಪವಿತ್ರ ಕಾರ್ಯಕ್ಕೆ ದಾನದ ಮಹತ್ವವನ್ನು ನೀಡಿದ್ದಾರೆ. ದಾನ ಕೊಡುವವನು ಪಾತ್ರಾಪಾತ್ರದ ವಿವೇಚನೆ ಮಾಡಬೇಕಾಗಿರುವಂತೆ ದಾನ ಪಡೆಯುವಾತನೂ ತನ್ನ ವ್ಯಕ್ತಿತ್ವವನ್ನು ತೂಗಿ ನೋಡಿಕೊಳ್ಳುವುದು ಅತ್ಯಗತ್ಯವಾಗಿದೆ. ನ್ಯಾಯ ಸಮ್ಮತ ಮತದಾನದಲ್ಲಿ ಹಣ ಮತ್ತು ದುಷ್ಟ ಸಂಪ್ರದಾಯಗಳ ವರ್ಚಸ್ಸಿಗೆ ಅವಕಾಶವಿಲ್ಲ.

ಬರೆದವರು: ಶ್ರೀ ವಿಶ್ವೇಶ್ವರ ಶರ್ಮಾ, ತದ್ದಲಸೆ.

ಒಂದು ಸಣ್ಣ ದಾರವನ್ನು ನಾವು ಸುಲಭವಾಗಿ ತುಂಡು ಮಾಡಬಹುದು. ಅದೇ ಅಂಥದೇ ಅನೇಕ ದಾರಗಳನ್ನು ಕೂಡಿಸಿದಾಗ ಅದನ್ನು ತುಂಡು ಮಾಡಲು ಅಸಮರ್ಥರಾಗುತ್ತೇವೆ. ಪ್ರಜಾಪ್ರಭುತ್ವವೂ ಹೀಗೆಯೇ ಇದೆ. ಅಸಂಖ್ಯಾತ ಸಣ್ಣ ಸಣ್ಣ ಪ್ರಜಾಶಕ್ತಿಗಳ ಕೇಂದ್ರೀಕರಣದಿಂದ ಆದೊಂದು ಬಲಿಷ್ಠವಾದ ಶಕ್ತಿಯೆನಿಸಿ ರಾಷ್ಟ್ರವನ್ನಾಳುವ ಅನೇಕ ಪ್ರಭುಶಕ್ತಿಗಳಲ್ಲಿ ಈ ಪ್ರಜಾಪ್ರಭುತ್ವವೇ ಹೆಚ್ಚಿನದೆನಿಸಿದೆ. ಯಾವ ತತ್ವ-ಶಕ್ತಿಗಳಿಗೂ ಇದು ಅಜೇಯ್ಯವೆನಿಸಿದೆ.

ಈ ಪ್ರಜಾಪ್ರಭುತ್ವದ ದಿವ್ಯ ಶಕ್ತಿಗೂ ಭವ್ಯತತ್ವಗಳಿಗೂ ತಳಹದಿಯಾಗಿರುವುದು ಪ್ರಬುದ್ಧ ಮತದಾನ. ಇದರ ಯಶಾಪಯಶಗಳೆಲ್ಲ ಈ ಮತದಾನವನ್ನೇ ಅವಲಂಬಿಸಿಕೊಂಡಿರುತ್ತದೆ. ಮತದಾನವು ವಿಚಾರಪೂರ್ಣವಾಗಿದ್ದು ಪಾವಿತ್ರ್ಯದಿಂದ ಕೂಡಿದ್ದರೆ ರಾಷ್ಟ್ರದ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುವ ಶಕ್ತಿಗಳಲ್ಲಿ ಈ ಪ್ರಜಾಪ್ರಭುತ್ವವೇ ಹೆಚ್ಚು ಯಶಸ್ಸನ್ನು ತರಬಲ್ಲದು ಎಂದು ಧಾರಾಳವಾಗಿ ಹೇಳಬಹುದು.

ರಾಷ್ಟ್ರವನ್ನಾಳುವ ರಾಜಪ್ರಭುತ್ವ—ಸರ್ವಾಧಿಕಾರಿತ್ವ— ಮುಂತಾದ ಅನೇಕ ತತ್ವಗಳಲ್ಲಿ ಪ್ರಜಾಪ್ರಭುತ್ವದಷ್ಟು ವಿಶಾಲವಾದದ್ದು ಯಾವುದೂ ಇರಲಾರದು. ಅದರಲ್ಲಿಯೂ ಆಯಾ ಕಾಲದ ಪರಿಸ್ಥಿತಿಗೆ ಹೊಂದಿಕೆಯಾದ ಶಾಸನಗಳೇ ಬರಬೇಕಾಗುತ್ತದೆ. ಅದರಲ್ಲಿಂದು ಪ್ರಜಾಪ್ರಭುತ್ವ "ರಾಷ್ಟ್ರವನ್ನಾಳುವ ಶಕ್ತಿಯೊಂದಿದ್ದರೆ ಅದು ಪ್ರಜಾಪ್ರಭುತ್ವ" ಎಂದು ಹೇಳಿಕೊಳ್ಳುವಷ್ಟು ನಮಗೆ ಸಮೀಪದ್ದಾಗಿದೆ. ನಾವು ಅಷ್ಟೂ ಆ ತತ್ವದ ಆರಾಧಕರಾಗಿದ್ದೇವೆ.

ಹೀಗಿದ್ದರೂ, ನಮ್ಮ ಉಸಿರಿನೊಂದಿಗೆ ಉಸಿರಾಗಿ ಬಾಳಿನೊಂದಿಗೆ ಬೆರೆತುಕೊಂಡಿದ್ದರೂ, ಪ್ರಜಾಪ್ರಭುತ್ವದ ಯಥಾರ್ಥ ಅರಿವು ನಮ್ಮಲ್ಲಿಯ ಬಹಳಷ್ಟು ಜನಾಂಗಕ್ಕೆ ಆಗಿಲ್ಲವೆಂದು ನಾವು ತಿಳಿದುಕೊಂಡರೆ ಅದರಲ್ಲಿ ಅಸತ್ಯವೇನೂ ಇರಲಾರದು. ಎಲ್ಲಿಯಾದರೂ ಚುನಾವಣೆಯ ಕಾಲಕ್ಕೆ ಹುರಿಯಾಳುವಿನ ಹರಕು ಮುರಕು ಭಾಷಣದ ಆವೇಶದಲ್ಲಿ ಪ್ರಜಾಪ್ರಭುತ್ವದ ಹೆಸರನ್ನು ಉಪಯೋಗಿಸಿಕೊಂಡಿದ್ದರ ಹೊರತು— ಆ ಬಗ್ಗೆ ಸರಿಯಾದ ಕಲ್ಪನೆಯನ್ನು ಹುಟ್ಟಿಸುವ ಯಾವ ಪ್ರಚಾರ— ಕೃತಿ ಇಲ್ಲದ್ದರ ಮೂಲಕ ಜನಸಾಮಾನ್ಯರಿಗೆ —ಅನಕ್ಷರಸ್ಥರಿಗೆ ಹೇಗೆ ತಿಳಿವಳಿಕೆಯಾದೀತು? ಹೀಗಾಗಿ ಪ್ರಜಾಪ್ರಭುತ್ವದ ಮಧುರ ಸ್ವರದಲ್ಲಿ ಅಪಸ್ವರವುಂಟಾಗುತ್ತಿದ್ದರೂ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರಿತ್ವ ರೂಪುಗೊಳ್ಳುತ್ತಿದ್ದರೂ ಇದರ ತತ್ವವೇ ತಿಳಿಯದ್ದರಿಂದ "ನಮ್ಮದು ಪ್ರಜಾಪ್ರಭುತ್ವ" ಎಂದು ಹೇಳಿಕೊಳ್ಳುವುದರಲ್ಲಿ ತೃಪ್ತಿಪಡುತ್ತಿದ್ದೇವೆ.

— ಬಹು ಸಂಖ್ಯೆಯ ಪ್ರಜಾಜನರ ನ್ಯಾಯದ ಕೂಗು ಎಲ್ಲಿ ಅರಣ್ಯ ರೋದನವಾಗುವುದೋ ಅಲ್ಲಿ ಪ್ರಜಾಪ್ರಭುತ್ವ "ಪ್ರಭು"ವೆಂದು ಹೇಳಿಸಿಕೊಳ್ಳಲಾರದು. ಚುನಾವಣೆಯ ಕಾಲದಲ್ಲಿ ಮಾಡಿದ ಭಾಷಣ ಪ್ರತಿಜ್ಞೆಗಳೆಲ್ಲ ಅಧಿಕಾರಕ್ಕೆ ಬಂದ ನಂತರ ಮರೆತು ತಾನೊಬ್ಬ "ಜನತೆಯ ಪ್ರತಿನಿಧಿ" ಎಂಬ ಭಾವ ಅಳಿಸಿ "ತಾನೊಬ್ಬ ಅಧಿಕಾರಿ" ಎಂದು ತಿಳಿಯುವವರ ಆಡಳಿತ ಪ್ರಜಾಪ್ರಭುತ್ವವಾಗಲಾರದು. ಅಲ್ಲಿ ಅದು ಹೆಸರಿಗೆ ಮಾತ್ರ!

* * *

ಪ್ರಜಾಪ್ರಭುತ್ವಕ್ಕೆ ಬಲವನ್ನೂ ಚೈತನ್ಯವನ್ನೂ ತಂದುಕೊಟ್ಟು ಅದನ್ನು ಸಜೀವಿಯಾಗಿ ಮಾಡಿ ರಾಷ್ಟ್ರದ ಆಡಳಿತವನ್ನು ಸಮರ್ಥವಾಗಿ ಸಾಗಿಸುವ ಶಕ್ತಿಯನ್ನು ತಂದು ಕೊಡುವಂಥದು ನಮ್ಮ ಮತದಾನ. ವಿಶ್ವದ ವಿಶ್ವಾಸ--ಜೀವನದ ಸುವ್ಯವಸ್ಥೆ—ಸಾಮಾಜಿಕ ಶಾಂತಿ ಮುಂತಾದುವುಗಳನ್ನು ಪ್ರಜಾಪ್ರಭುತ್ವವು ರೂಪಿಸುತ್ತಿದ್ದರೆ—ಆ ಪ್ರಜಾಪ್ರಭುತ್ವವನ್ನೇ ರೂಪಿಸುತ್ತಿದ್ದುದು ನಮ್ಮ ಮತದಾನ.

ತನ್ನನ್ನು ತಾನೇ ಆಳುವ ಭಿನ್ನ ಭಿನ್ನ ಶಕ್ತಿಗಳನ್ನೆಲ್ಲ ಕೇಂದ್ರೀಕರಿಸುವ ಕ್ರಿಯೆಯೇ ಈ ಮತದಾನ. ವ್ಯಕ್ತಿ ವ್ಯಕ್ತಿಗಳಲ್ಲಿರುವ ಬಲಗಳನ್ನೆಲ್ಲಾ ಇದು ಪ್ರತಿನಿಧೀಕರಿಸುತ್ತದೆ. ಇಂಥ ಪ್ರತಿನಿಧಿಗಳ ಅನುಭವ ಜ್ಞಾನ—ಕ್ರಿಯೆ—ಸಾಹಸಗಳೆಲ್ಲ ಈ ಪ್ರಜಾಪ್ರಭುತ್ವಕ್ಕೆ ಮಾರ್ಗದರ್ಶನ ಮಾಡಿಸುತ್ತವೆ. ಪ್ರಜಾಪ್ರಭುತ್ವಕ್ಕಿರುವ ಹಿನ್ನೆಲೆಯ ಅವ್ಯಕ್ತಶಕ್ತಿಯೇ ಮತದಾನವಾಗಿದೆ.

ಇಂತಿರುವಾಗ ನಮ್ಮ ಮತದಾನದ ಹೊಣೆ ಅದೆಷ್ಟು ಹಿರಿದು. ಅದಕ್ಕಿರುವ ಪಾವಿತ್ರ್ಯವೆಷ್ಟು? ಇಂದು ನಡೆಯುತ್ತಿರುವ ನಮ್ಮ ಮತದಾನಕ್ಕೂ ಅದಕ್ಕಿರುವ ತಾತ್ವಿಕತೆಗೂ ನಾವು ವಿಚಾರಿಸಿದರೆ ನಮಗೇ ಜುಗುಪ್ಸೆಯಾಗುತ್ತಿದೆ. ಈ ಮತದಾನದ ವಿಧಿ—ವಿಧಾನಗಳೆಲ್ಲಾ ಎಷ್ಟು ಹದಗೆಟ್ಟು ಹೋಯಿತಲ್ಲಾ ಎಂದು ವಿಷಾದವಾಗುತ್ತದೆ.

ಮತಕೊಡುವದಕ್ಕೆ ದಾನದ ಮಹತ್ವವನ್ನು ಯೋಜಿಸಿದ್ದಾರೆ. ನಿಜವಾಗಿಯೂ ಇದು ಇನ್ನೂ ಮೇಲಿನ ಸ್ಥಾನದ್ದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇತರೇ ದಾನಕ್ಕೊಂದು ಪ್ರಮಾಣವುಂಟು. ಅಂಕೆ—ಸಂಖ್ಯೆಯುಂಟು. ಆದರೆ ಮತದಾನಕ್ಕೆ ಹಾಗಲ್ಲ. ತನ್ನನ್ನೇ ತಾನು ದಾನಮಾಡಿಕೊಳ್ಳುವಷ್ಟು ಆಸ್ಫೂರ್ತಿ ಇದೆ. ಅಮೋಘಸ್ವಭಾವವಿದೆ.

ಇಂತಿರುವಾಗ ಇತರೇ ದಾನಗಳಿಗೆ ಇರುವ ನಿಯಮ—ನಿರ್ಬಂಧ—ಕ್ರಮ—ವಿಧಾನಗಳಿಗಿಂತಲೂ ತುಸು ಹೆಚ್ಚಿಗೆ ಇರಬೇಕಾದದ್ದು ಯುಕ್ತವಾಗಿದ್ದರೂ—ಸಾಮಾನ್ಯವಾಗಿ ಅಂಥ ನಿಯಮಗಳನ್ನಾದರೂ ನಾವು ಪಾಲಿಸಬೇಡವೇ? ದಾನ ಕೊಡುವವನು — ದಾನ ಸ್ವೀಕರಿಸುವವನ ಯೋಗ್ಯತೆ —ಅರ್ಹತೆಯನ್ನು ವಿಚಾರಿಸಿಯೇ ದಾನಮಾಡಬೇಕಾಗುತ್ತದೆ. ಇಲ್ಲದಿದ್ದರೆ—ಅಪಾತ್ರ ದಾನವಾದರೆ ಆ ದಾನದಿಂದ ಯಾವ ಸತ್ಫಲವೂ ಲಭಿಸದು. ಇಷ್ಟೇ ಅಲ್ಲದೇ ಅದರಿಂದಾಗುವ ದುಷ್ಪರಿಣಾಮಗಳಿಗೂ ಅವನು ಭಾಗಿಯಾಗಬೇಕಾಗುತ್ತದೆ.

ಅದರಲ್ಲಿಯೂ ಈ ಮತದಾನದಿಂದಾಗುವ ದುಷ್ಪರಿಣಾಮ ಕೇವಲ ಅವನೊಬ್ಬನ ಮೇಲೆಯೇ ಆಗುವದಿಲ್ಲ—ಸಮಾಜದ ಮೇಲೆ—ರಾಷ್ಟ್ರದ ಮೇಲಾಗುತ್ತದೆ. ಇನ್ನು ಮತವನ್ನು ದಾನಮಾಡುವಾಗಲಂತೂ ನಿಷ್ಕಲ್ಮಷವಾದ ಪರಿಶುದ್ಧವಾದ ಭಾವನೆಗೆ ತುಂಬಾ ಪ್ರಾಧಾನ್ಯವಿದೆ.

***

ಸ್ವಾರ್ಥ— ದುರಭಿಮಾನಕ್ಕಾಗಿ — ಅವಿಚಾರದಿಂದ— ಈ ಮತದಾನ ನಡೆದರೆ ಅದು ದೇಶಕ್ಕೆ ತುಂಬಾ ದ್ರೋಹ ಬಗೆದಂತೆ. ಮತದಾನ ಮಾಡುವವನು ತನ್ನ ದಾನದ ಬಗ್ಗೆ ಎಷ್ಟು ವಿಚಾರಿಸುತ್ತಾನೆಯೋ ಅದಕ್ಕೂ ಹೆಚ್ಚು ದಾನ ಹಿಡಿಯುವವನು ವಿಚಾರಿಸಬೇಕು. ಈ ದಾನದ ಪ್ರಯೋಜನವನ್ನು ದಾನ ಕೊಟ್ಟ ಸಮಾಜಕ್ಕೆ ತಾನು ಒದಗಿಸಬಲ್ಲೆನೇ- ಅಷ್ಟು ಶಕ್ತಿ ಇದೆಯೇ? ಅನುಭವವಿದೆಯೇ? ಸಾಹಸವಿದೆಯೇ? ಎಂದೆಲ್ಲ ಅವನು ಅರಿತಿರಬೇಕಾಗುತ್ತದೆ. ಅದಿಲ್ಲದೇ ಏನಾದರೂ ಪ್ರಚಾರಕ್ಕೆ—ಬಾಯಿ ಭಂಡವಾಳಕ್ಕೆ—ಹಣಕ್ಕೆ—ವಶೀಲಿಗೆ ಅದನ್ನು ಪಡೆದರೆ ಅದು ದಾನವೆನಿಸದೇ ದುರ್ದಾನವಾಗಿ ಬಿಡುತ್ತದೆ. ದುರ್ದಾನ ಪಡೆದ ಬ್ರಾಹ್ಮಣನ ಕುಟುಂಬ ಹೇಗೆ ಅಭಿವೃದ್ಧಿಯನ್ನು ಪಡೆಯಲಾರದೋ— ಹಾಗೆಯೇ ಇಂಥ ಅವಿಧಿಯಿಂದ ಪಡೆದ ದಾನವೂ ಅವನ ವ್ಯಕ್ತಿತ್ವದ ಮೇಲೆ ಹೇಯವಾದ ಪರಿಣಾಮವನ್ನು ಮಾಡದೇ ಇರದು.

ನಿಸ್ವಾರ್ಥವಾದ ಅಕೃತ್ರಿಮವಾದ ವಿಚಾರಪೂರ್ಣವಾದ ಭಾವನೆ ಮತದಾನದ ಜೀವವಾದರೆ—ಈ ದಾನ ಪಡೆಯುವವನ ಹೃದಯ "ಜನ ಸೇವೆಯೇ ಈಶ ಸೇವೆ"ಯೆಂಬ "ಸೇವೆ"ಯ ಸ್ಫೂರ್ತಿಯಿಂದ ಎರಕಗೊಂಡಿರಬೇಕು. ಇಂಥ ಮತದಾನದ ವಿಧಿ—ವಿಧಾನಗಳು ಪ್ರಜಾಪ್ರಭುತ್ವವನ್ನು ಸಾರ್ಥಕಗೊಳಿಸಬಲ್ಲವು. ರಾಮ ರಾಜ್ಯದ ಕನಸನ್ನು ನನಸಾಗಿ ಮಾಡಬಲ್ಲವು.

ನಮ್ಮ ಭಾರತವು ಅನೇಕ ವರ್ಷಗಳಿಂದ ಈ ಪ್ರಜಾಪ್ರಭುತ್ವವನ್ನು ಅಪೇಕ್ಷಿಸಿ ಅನೇಕ ಹೋರಾಟಗಳನ್ನು ನಡೆಸಿ ಇದನ್ನು ತಂದು ಕೊಂಡಿದೆ. ರಾಷ್ಟ್ರದ ಉಜ್ವಲವಾದ ಅನೇಕ ಆಶೋತ್ತರಗಳನ್ನು ಈ ಪ್ರಜಾಪ್ರಭುತ್ವವನ್ನು ಅವಲಂಬಿಸಿಯೇ ಇರಿಸಿಕೊಂಡಿದೆ. ಇವೆಲ್ಲ ಸುಗಮವಾಗಿ ಸಾಧಿಸ ಬೇಕಾದರೆ ನಮ್ಮ ಮತದಾನ ವಿಧ್ಯುಕ್ತವಾಗಿ ನಡೆಯಬೇಕು.

ಹೀಗೆ ರಾಷ್ಟ್ರದ ಭವಿತವ್ಯ ನಮ್ಮ ಮತದಾನದ ಮೇಲೆಯೇ ನಿಂತಿರುವಾಗ ಅದನ್ನು ವಿನಿಯೋಗಿಸುವಾಗ ಸರಿಯಾಗಿ ವಿಚಾರಿಸಬೇಕಾದದ್ದು ನಮ್ಮ ಮೊದಲ ಕರ್ತವ್ಯ. ಈ ಕರ್ತವ್ಯದಿಂದ ಕೆಲವುಸಲ ನಾವು ಚ್ಯುತಿ ಹೊಂದುತ್ತಿರುವುದರಿಂದ ನಮ್ಮ ನಾಡಿನಲ್ಲಿಂದು ಹಲ ಕೆಲವು ಅವ್ಯವಸ್ಥೆಗೆ ಅವಕಾಶವುಂಟಾಗುತ್ತದೆ.

ಇಂದಿನ ಚುನಾವಣೆ ಎಂಥವನನ್ನಾದರೂ ದಿಗ್ಭ್ರಮೆಗೊಳಿಸುತ್ತದೆ. ಎಷ್ಟು ವಿವೇಕಿಯನ್ನಾದರೂ ಒಮ್ಮೆ ದಿಙ್ಮೂಢನನ್ನಾಗಿ ಮಾಡುತ್ತದೆ. ಅಷ್ಟು ಭಯಂಕರವಾಗಿ ಭೂತಾಕಾರವಾಗಿ ಪ್ರಚಾರದ ಗದ್ದಲ ನಡೆಯುವದು. ಇದರಲ್ಲಿ ಜನಸಾಮಾನ್ಯರಿಗೆ ಹೇಗೆ ವಿಚಾರಬೇಕು? ಮೂಲತಃ ಮತದಾನದ ತತ್ವವೇ ತಿಳಿಯದಿದ್ದವರು

(ಮುಂದಿನ ಪುಟ ನೋಡಿರಿ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

(ಹಿಂದಿನ ಪುಟದಿಂದ)

ಇಂಥ ಬಾಯಿಬಡಾಯಿಯ ಭೂತದ ಬಾಯಿಗೆ ಬಲಿಯಾಗದೇ ಹೇಗೆ ಉಳಿದುಕೊಂಡಾರು? ಹಾಗಾಗಿ ಒನ್ನೊಮ್ಮೆ ಅರ್ಹತೆ— ಸಾಮರ್ಥ್ಯವಿಲ್ಲದಿದ್ದವರೂ ಇಂಥ ಕುಟಿಲ ತಂತ್ರಗಳಿಂದ ಮುಂದೆಬಂದು ಪ್ರಜಾಪ್ರಭುತ್ವದ ಸೌಂದರ್ಯವನ್ನು ಅಂದಗೆಡಿಸುತ್ತಿದ್ದಾರೆ.

* * *

ಜಿಲ್ಲಾ ಬೋರ್ಡು, ಮ್ಯುನಿಸಿಪಾಲಿಟಿಗಳ ಚುನಾವಣೆಯಂತೂ ಈಗ ತೀರ ಕೆಳಮಟ್ಟಕ್ಕೆ ಇಳಿದುಹೋಗಿದೆ. ಇಲ್ಲಿ ಸಂತೆಯ ಇತರ ವ್ಯಾಪಾರಗಳಂತೆ ಮತದಾನವೂ ಒಂದು ವ್ಯಾಪಾರದ ವಸ್ತುವಾಗಿ ಉಳಿದಿದೆ. ಹಣ ತೆತ್ತು ಮತ ಸಂಗ್ರಹಿಸುವ ಕಾರ್ಯ ಇಲ್ಲಿ ಅನಿರ್ಬಂಧವಾಗಿ ನಡೆಯುತ್ತಿದೆ. ಎಷ್ಟೋ ಜನ ತಮ್ಮ ಕೈಯೊಳಗೆ ಅನೇಕ ಮತದಾರರನ್ನು ಸಂಗ್ರಹಿಸಿಕೊಂಡು ಹೆಚ್ಚು ಹಣಕೊಟ್ಟ ಹುರಿಯಾಳುವಿಗೆ ಅದನ್ನು ನೀಡುತ್ತಿದ್ದಾರೆ. ಮತದಾನದ ಪವಿತ್ರ ಉದ್ದೇಶವೇನು?— ಹಣಕ್ಕಾಗಿ—ಮತದಾನದ ಹೆಸರಿನಿಂದ ತನ್ನನ್ನು ತಾನೇ ಮಾರಿಕೊಳ್ಳುವ ಈ ಕ್ಷುದ್ರ ವ್ಯಾಪಾರವೇನು? ಇದೆಂಥ ಹುಚ್ಚಾಟ!

ಚುನಾವಣೆಯಲ್ಲಿ ಅನ್ಯಾಯವಾಗಿ ಹಣತೆತ್ತು— ಅಸ್ವಾಭಾವಿಕವಾದ ಅಸಾಧ್ಯವಾದ ಆಶೆ—ಅಭಿರುಚಿಗಳನ್ನು ಜನಕ್ಕೆ ಹೇಳಿ ಆರಿಸಿ ಬರುವಂಥ ಪ್ರತಿನಿಧಿ ಜನಸೇವೆಯನ್ನು ಮಾಡುವುದಕ್ಕಾಗಿಯೇ? ಅಥವಾ ತನ್ನ ಲಾಭಕ್ಕಾಗಿಯೇ? ಮತದಾರನಿಗೆ ಹಣಕೊಟ್ಟು ಭೂಮಿಗೆ ಸ್ವರ್ಗವನ್ನೇ ಇಳಿಸಿ ಬಿಡುತ್ತೇನೆಂದು ಹೇಳುವ ಮಾತಿನಲ್ಲಿ ಏನಾದರೂ ಸತ್ಯಾಂಶವಿರಬಹುದೆ? ಇವೆಲ್ಲ ದೇಶಸೇವೆಯ ಹೆಸರಿನಲ್ಲಿ ಸ್ವಾರ್ಥಸಾಧಿಸುವ ಮಹಾ ತಂತ್ರಗಳಾಗಿವೆ. ಈ ಚುನಾವಣೆಗಳಿಗೆ ತೆರುವ ಹಣ ಮುಡಿಯುವ ವೇಳೆ—ಹಾಳುಮಾಡುವ ಶ್ರಮ—ಇವನ್ನೆಲ್ಲ ಇಂದು ನಡೆಯುತ್ತಿರುವ ಈ ಶ್ರಮದಾನದಂತೆ ಯಾವುದಾದರೂ ಒಂದು ಶ್ರಮದಾನದ ಉದ್ಯಮಕ್ಕೆ ವಿನಿಯೋಗಿಸಿದ್ದರೆ ನಮ್ಮ ರಾಜ್ಯದಲ್ಲಿರುವ ಕೆಲವಷ್ಟು ಕೊರತೆಗಳು ನೀಗಿ ಹೋಗುತ್ತಿತ್ತು.

ಚುನಾವಣೆಯನ್ನು ಸಾಧ್ಯವಾದಷ್ಟು ನಮ್ಮ ಸರಕಾರ ಇದೀಗ ನಿಯಂತ್ರಿಸುತ್ತಿದೆ. ಅನೇಕ ದುರ್ವ್ಯಾಪಾರಗಳನ್ನು ತಡೆಯುತ್ತಿದೆ. ಆದರೂ ಅದು ಸಾಲದಾಗಿದೆ, ಇನ್ನೂ ಬಿಗಿಯಾಗಿ—ಹುರಿಯಾಳಾಗಲು ಅರ್ಹತೆ ಇಲ್ಲದಿದ್ದವರ ಕೌಟಿಲ್ಯ ತಂತ್ರಗಳು ಸಫಲವಾಗದಂತೆ ನೋಡಿಕೊಳ್ಳಬೇಕು. ಇದರಲ್ಲಿ ಸರಕಾರದ ಬಲಕ್ಕಿಂತಲೂ ಮತದಾರರ ಬಲ ಹೆಚ್ಚಿನದು.

ಎಲ್ಲವನ್ನೂ ಸರಕಾರವೆ ಮಾಡಬೇಕು. ಆ ಬಗೆ ಕಾಯಿದೆಬೇಕು. ಈ ಬಗೆ ಕಾನೂನುಬೇಕು. ಎಂದು ಹೇಳಿ ಎಲ್ಲಕ್ಕೂ ಕಾನೂನು ಬೆಳಸಿ ಹೆಜ್ಜೆ ಹೆಜ್ಜೆಗೂ ಕಾನೂನಿನ ಅವಲಂಬನೆಯುಂಟಾದರೆ ನಮ್ಮ ನೈತಿಕ ಮಟ್ಟ ತಗ್ಗುತ್ತದೆ. ಸತ್ಯಕ್ಕೆ—ನೀತಿಗೆ ರಕ್ಷಣೆಯನ್ನೊದಗಿಸಲು ಮಾತ್ರ ಕಾಯಿದೆಬೇಕು. ಹಾಗೆ ಚುನಾವಣೆಯಲ್ಲಿಯೂ ಎಲ್ಲಕ್ಕೂ ಕಾನೂನೇಬೇಕೆಂದು ನಮ್ಮ ಸ್ವಾತಂತ್ರ್ಯವನ್ನೂ— ವಿಚಾರವನ್ನೂ ಮಾರಿಕೊಳ್ಳಬಾರದು. ಮತಕೊಡುವವನು ಸರಿಯಾಗಿ ವಿಚಾರಿಸಿ—ಮತದಾನದ ಹೊಣೆಯನ್ನು ಅರಿತು—ಮತದಾನಮಾಡಿದರೆ-ದುರ್ಬಲರೂ-ಅಧಿಕಾರಲಾಲಸೆಯವರೂ ಬಿದ್ದು ಹೋಗುತ್ತಾರೆ.

ಎಲ್ಲಿಯ ವರೆಗೆ ನಮ್ಮ ಚುನಾವಣೆಯಲ್ಲಿ ಕಾಲ—ದುಡಿಮೆ—ಹಣಗಳ ಅಪವ್ಯಯ ನಿಲ್ಲುವುದಿಲ್ಲವೋ—ಎಲ್ಲಿಯ ವರೆಗೆ ಮತದಾನದ ಪ್ರಭಾವ ಮತದಾರನಿಗೆ ಅರಿವಾಗದೇ ದೇಶದ ಆಡಳಿತದಲ್ಲಿ ಸಮರ್ಥರಿಗೂ—ದಕ್ಷರಿಗೂ ಅವಕಾಶವುಂಟಾಗುವದಿಲ್ಲವೋ—ಅಲ್ಲಿಯ ತನಕ ಪ್ರಜಾಪ್ರಭುತ್ವದಿಂದ ನಾವು ಆಶಿಸಿದಷ್ಟು ಪಡೆಯಲಾರೆವು! ನಿರೀಕ್ಷಿಸಿದಷ್ಟು ಸಾಧಿಸಲಾರೆವು!

ಪ್ರಜಾರಾಜ್ಯ ದಿನೋತ್ಸವ

೧

ಸ್ವಾತಂತ್ರ್ಯದುಸಿರ ಸುತ್ತೆಲ್ಲ ಹರಡಿ
ಪ್ರಜಾರಾಜ್ಯ ದಿನವು—
ಭರತಜರಿಗಂದು ಹಿರಿಯೊಸಗೆ ತಂದು
ನಲಿಸಿದಂಥ ದಿನವು—

೨

ದೈನ್ಯ—ದಾರಿದ್ರ್ಯ—ಕ್ಷುದ್ರಲಾಲಸೆಯ
ಹೊಡೆದು ಅಟ್ಟಲೆಂದು
ಚಿತ್ತ—ಬುದ್ಧಿ—ವ್ಯೈ—ಮನದ ಸಂಸ್ಕಾರ
ಬಿಡದೆ ಬೆಳಸಲೆಂದು
ಭಾರತದ ಭವ್ಯ ಭವಿತವ್ಯಕಾಗಿ
ಸತತ ದುಡಿಯಲೆಂದು
ಪ್ರಜಾರಾಜ್ಯವಿದು ಪ್ರಜೆಯ ಹಿತಕಾಗಿ
ಮೂಡಿಬಂದಿತಂದು—.

೩

ಹಾರುತಿಹುದು ಭಾರತದ ಬಾವುಟವು
ನಭದಿ ಮೇಲೆ ಮೇಲೆ—
ಮೆರೆಯುತಿಹುದು ಭಾರತಿಯ ಹಿರಿಮೆ
ಮೇಲೆ ಧ್ವಜವು ತೇಲೆ;—
ಅವಳ ಕೊರಳ ಸಿಂಗರಿಸಿ ನಿಂದಿರಲಿ
ನಿತ್ಯ ಜಯದ ಮಾಲೆ,
ಅವಳ ತೇಜದಲಿ ಬೆಳಗುತಿರಲಿ ಈ
ಜಗದ ಮೂಲೆ ಮೂಲೆ—

೪

ವರುಷವರುಷಕೊಮ್ಮೆ ಹೊಸಹರುಷಚಿಮ್ಮಿ
ದೇಶ ಮುಂದುವರಿದು,—
ಶಾಂತಿ ಸೂತ್ರದಲಿ ವಿವಿಧ ಕ್ಷೇತ್ರದಲಿ
ಸೊಗದ ಸೋನೆ ಸುರಿದು,—
ಪ್ರಗತಿ ಪಥದಲ್ಲಿ ಹಲವು ವಿಧದಲ್ಲಿ
ಬಿಡದೆ ಜಗದಿ ಮೆರೆದು
ಶಾಂತಿ ಮಾರ್ಗವನು ಹಾಕಿ ಕೊಡಲಿ ತಾ
ಸಕಲ ಜನವ ಪೊರೆದು.

೫

ಇಂದು ಬರುವ ಈ 'ಪ್ರಜಾರಾಜ್ಯ ದಿನ'
ನವ್ಯ ಬೆಳಕ ಬೀರಿ,—
ಇಂದು ಇರುವ ಭೂಪಟವ ಮಾರ್ಪಡಿಸಿ
ಮುಂದೆ ಬಹುದ ತೋರಿ,—
ಬರಲಿರುವ ಎಲ್ಲ ಹೊಸ ರಾಜ್ಯಗಳಿಗೆ
ಸತತ ಶುಭವ ಕೋರಿ,
ಬರೆಯುತಿಹುದು ವಿಧಿಲಿಖಿತ, ದೇಶದಾ
ಹಿರಿಮೆಯನ್ನು ಸಾರಿ.

೬

ಹಲವು ರಾಜ್ಯಗಳು, ಹಲವು ಭಾಷೆಗಳು
ನಮ್ಮ ದೇಶದಲ್ಲಿ,—
ಆದರೇನು ಅವು ವಿವಿಧ ಅಂಗಗಳು
ರಾಷ್ಟ್ರ—ದೇಹದಲ್ಲಿ; —
"ವೈವಿಧ್ಯದಲ್ಲಿ ಏಕತ್ವವಿಹುದು"
ಎಂಬ ಮಾತು ಇಲ್ಲಿ
ಜೀವಂತವಿಹುದು ಭಾರತದೊಳಿಂದು
ಮೂಲೆ ಮೂಲೆಯಲ್ಲಿ—.

೭

ಶಾಂತಿ,— ಸೌಖ್ಯ, ಸುಮಾನ್ಯತೆಗಳನು ತಾ
ಪ್ರಜಾರಾಜ್ಯ ದಿನವು
ಹರಡಿ ರಾಷ್ಟ್ರದಲಿ ಸಕಲ ಜನಮನವ
ನಲಿಸುವಂಥ ದಿನವು.

—ಎಸ್. ಎಸ್. ಬಸುಪಟ್ಟದ, ಎಂ. ಎ.

ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.,
ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರ್, ಉಡುಪಿ.
ಗ್ರಂಥಕರ್ತರು.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ ಮದ್ದು HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

"Ably written--Quite up-to-date valuable service"

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.,
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ನಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪ್ಲೇಟೋವಿನ "ಆದರ್ಶ ಪ್ರಜಾರಾಜ್ಯ"ದ ಕಲ್ಪನೆ

ಗ್ರೀಸ್ ದೇಶದ ಪ್ರಸಿದ್ಧ ತಾತ್ತ್ವಿಕ ಪ್ಲೇಟೊ ಎರಡು ಸಾವಿರ ವರ್ಷಗಳಿಗೂ ಪೂರ್ವದಲ್ಲಿ ಧರ್ಮ ನಿಯಂತ್ರಿತ, ನ್ಯಾಯ ಪಕ್ಷಪಾತಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ಮುಂದಿಟ್ಟನು. ಇದರ ಮುಂದೆ ವ್ಯಕ್ತಿ ಮತ್ತು ಸಮಾಜದ ನಡುವೆ ಭೇದ ಉಳಿಯುವುದಿಲ್ಲ; ಒಂದರ ಶ್ರೇಯಸ್ಸು ಇನ್ನೊಂದರದೂ ಶ್ರೇಯಸ್ಸಾಗುತ್ತದೆ.

ಬರೆದವರು: ಶ್ರೀ ಕೆ. ಬಿ. ರಾಮಕೃಷ್ಣ ರಾವ್, ಬಿ. ಎ. (ಆನರ್ಸ್)

ವ್ಯಕ್ತಿಗೆ ಒಂದು ಆದರ್ಶವಿದೆ. ಅದು ಲೌಕಿಕವಿರಬಹುದು ಅಥವಾ ಆಧ್ಯಾತ್ಮಿಕವಿರಬಹುದು. ಈ ಆದರ್ಶ ಸಾಧನೆಗಾಗಿ ಮಾನವನು ಸಂಸ್ಥೆಗಳನ್ನು ಕಟ್ಟುತ್ತಾನೆ. ಇತರರೊಡನೆ ಸಂಬಂಧಗಳನ್ನು ಬೆಳಸುತ್ತಾನೆ. ಹೀಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಇತ್ಯಾದಿ ಸಂಸ್ಥೆಗಳು ಹುಟ್ಟುತ್ತವೆ. ಇವೆಲ್ಲದರ ಗುರಿ ಒಂದೇ—ವ್ಯಕ್ತಿಯ ಕಲ್ಯಾಣ, ಲೌಕಿಕ ಹಾಗೂ ಆಧ್ಯಾತ್ಮಿಕ. ಆದರೆ ಕೇವಲ ಸಂಸ್ಥೆಗಳನ್ನು ನಿರ್ಮಾಣ ಮಾಡುವುದರಿಂದಲೇ ಧ್ಯೇಯವನ್ನು ಸಾಧಿಸಿದಂತಾಗುವುದಿಲ್ಲ. ಅದಕ್ಕಾಗಿ ದುಡಿಯಬೇಕು, ಹೋರಾಡಬೇಕು. ಈ ಹೋರಾಟದಲ್ಲಿ ಪ್ರತಿಯೊಬ್ಬನೂ ಹಲವು ವಿಷಯಗಳನ್ನು ಗಮನದಲ್ಲಿಟ್ಟಿರಬೇಕಾಗುತ್ತದೆ. ಅವಾವುವೆಂದರೆ:—

೧. ಅನೇಕ ವೇಳೆ ವ್ಯಕ್ತಿ ತನ್ನ ಧ್ಯೇಯ ಸಾಧನೆಯನ್ನು ತನ್ನಷ್ಟಕ್ಕೆ ತಾನೇ, ಪ್ರತ್ಯೇಕವಾಗಿ, ಸಾಧಿಸಲಾಗದುದರಿಂದ ಇತರರ ಸಹಕಾರವನ್ನು ಪಡೆಯಬೇಕಾಗುತ್ತದೆ. ಇದರ ಅರ್ಥವೇನೆಂದರೆ ಇತರರ ಧ್ಯೇಯ ಸಾಧನೆಗಳಿಗೆ ತನ್ನ ನೆರವನ್ನು ನೀಡಬೇಕೆಂಬುದು.

೨. ಮತ್ತೊಂದು ವಿಷಯವೆಂದರೆ ವ್ಯಕ್ತಿಗಳ ಸಂಪರ್ಕದಿಂದ ಉತ್ಪನ್ನವಾದ 'ಸಮಾಜ ಸಂಸ್ಥೆ' ಎಂದೆಂದಿಗೂ ಸಂಘಟಿತವಾಗಿರಬೇಕೆಂಬುದು. ಇದರ ಅರ್ಥವೇನೆಂದರೆ ಸಮಾಜದ ಧ್ಯೇಯ ಸಾಧನೆಯಲ್ಲಿಯೇ ವ್ಯಕ್ತಿಯ ಧ್ಯೇಯವೂ ಮಿಲನವಾಗಿರುವುದೆಂಬುದು. ಇದು ಸಾಮೂಹಿಕ ಧ್ಯೇಯ ಸಾಧನೆಯೆನಿಸಿಕೊಂಡರೂ ವೈಯಕ್ತಿಕ ಧ್ಯೇಯ ಸಾಧನೆಯೂ ಹೌದು.

೩. ಸಮಾಜದ ಹಾಗೂ ವೈಯಕ್ತಿಕ ಧ್ಯೇಯ ಸಾಧನೆಗಾಗಿ ವ್ಯಕ್ತಿಯು ತನ್ನ ಸ್ವಭಾವನಿಯತವಾದ ಕರ್ಮ'ವನ್ನು ಚಾಚೂ ತಪ್ಪದೆ ಶ್ರದ್ಧಾಮನಸ್ಕನಾಗಿ ನಡೆಸಬೇಕೆಂಬುದು ಮತ್ತೊಂದು ವಿಷಯ. ಒಬ್ಬನ ಭೋಗ ಆತನ ಉತ್ಪಾದನ ಶಕ್ತಿಯ ಮೇಲೆ ಆಧಾರಗೊಂಡಿರುವುದರಿಂದ ಕರ್ಮ ಪ್ರಧಾನವಾಗಿ ಭೋಗಗೌಣವಾಗುತ್ತದೆ. ಒಂದು ಸಮಾಜದ ಸುವ್ಯವಸ್ಥೆಯ ಲಕ್ಷಣವೆಂದರೆ ಪ್ರತಿಯೊಬ್ಬನೂ ತನ್ನ ಸ್ಥಾನವನ್ನು ಅರಿತುಕೊಳ್ಳುವುದು ಮತ್ತು ಆ ಸ್ಥಾನಕ್ಕೆ ಅನ್ವಯವಾದ ಕರ್ಮದಲ್ಲಿ ನಿರತನಾಗುವುದು. ಇದನ್ನೇ "My station and its duties" ಎಂದು ಹೇಳುತ್ತಾರೆ.

೪. ಸ್ವಭಾವನಿಯತ ಕರ್ಮದಲ್ಲಿ ತಲ್ಲೀನನಾದ ವ್ಯಕ್ತಿ ಇತರ ಮೂಕ ಪ್ರಾಣಿಗಳಂತೆ ಯಾಂತ್ರಿಕವಾಗಿ ಜೀವನ ನಡೆಸುವನೆಂದಲ್ಲ, 'ವಿಚಾರ ಶೀಲ'ನಾಗಿ ತನ್ನ ಸಹಜ ಪ್ರವೃತ್ತಿ ಅಥವಾ ಗುಣಗಳನ್ನು ಕಂಡುಕೊಂಡು ಅವುಗಳ ಅಭ್ಯುದಯಕ್ಕೆ ಸಹಕಾರಿಯಾದ ಉದ್ಯೋಗದಲ್ಲಿ ನಿರತನಾಗುವುದು. ವಿಚಾರ ಸೂಚಿತವಾದ ಒಬ್ಬನ ಜೀವನೋಪಾಯ ಆವನ ಹುಟ್ಟುಗುಣ ಪೋಷಕವಾಗಿದ್ದು ಆತನ 'ವ್ಯಕ್ತಿತ್ವ ಸಾಧನೆ'ಗೆ (Self realisation) ಅನುಕೂಲವಾಗಿರುತ್ತದೆ. ಪ್ರತಿಯೊಬ್ಬನನ್ನೂ ಆವನ ಅಂತರ್ಗತ 'ವಿಚಾರ' (Reason) ಅಥವಾ'ಧರ್ಮ' ನಡೆಸುವುದರಿಂದ ಸ್ವಾತಂತ್ರ್ಯಕ್ಕೆ ಯಾವ ತರಹೆಯ ಧಕ್ಕೆಯೂ ಬಂದಂತಾಗುವುದಿಲ್ಲ. ಯಾರೂ ಇನ್ನೊಬ್ಬರಿಗೆ ಅಡಿಯಾಳಲ್ಲ, ಕೀಳಲ್ಲ. ಇದು ವಿವೇಚನೆಯಿಂದ ಬರುವ ಅರಿವು. ಒಂದು ಸಮಾಜವನ್ನು ನಡೆಸುವ ಚೈತನ್ಯ ಕೇವಲ ಒಬ್ಬ ವ್ಯಕ್ತಿಯಾಗಲಾರ, ಆವನ ವಿಚಾರ ದೃಷ್ಟಿಗೆ ಗೋಚರವಾಗುವ ಒಂದು ನ್ಯಾಯ, ಸತ್ಯ ಅಥವಾ ಧರ್ಮ. ಆದ್ದರಿಂದ ಎಲ್ಲ ಸಾಮಾಜಿಕ, ರಾಜಕೀಯ ಸಂಸ್ಥೆಗಳೂ ಯಾರೊಬ್ಬರ ನಿರಂಕುಶ ಅಧಿಕಾರಕ್ಕೂ ಒಳಪಟ್ಟಿರುವುದಿಲ್ಲ.

ಈ ಮೂಲ ಭಾವನೆಗಳನ್ನು ಅರಿತುಕೊಂಡು ಒಬ್ಬನು ತನ್ನ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳಬಹುದು. ಭಾರತದಲ್ಲಿ 'ಪ್ರಜಾರಾಜ್ಯ' ಉದಿಸಿರುವುದಾದರೂ ಪ್ರಜೆಯಾದವನು ತನ್ನ ಕರ್ತವ್ಯದ ಕಡೆ ಎಷ್ಟು ಗಮನವಿತ್ತಿರುವನೆಂದು ವಿಚಾರಿಸಬೇಕಾಗಿದೆ. ರಾಜ್ಯ ಸಂಸ್ಥೆ ತನ್ನದಲ್ಲದೆ ಪ್ರತ್ಯೇಕವಾದ ಸಂಸ್ಥೆಯೆಂದು ಸ್ವಚ್ಛಂದವಾಗಿ ಪ್ರವರ್ತಿಸುವುದರಲ್ಲಿ ಗುಣವಿಲ್ಲ. ಒಂದು ದೇಶದ ಅಥವಾ ರಾಜ್ಯದ ರೂಪರೇಷೆಗಳನ್ನು ತಿದ್ದಿಕೊಳ್ಳುವ ಸ್ವಾತಂತ್ರ್ಯವನ್ನು ನಾವು ಪಡೆದಿರುವಾಗ ವಿಚಾರವಂತ ಮಹನೀಯರ ಸಲಹೆ ಅಥವಾ ಆಲೋಚನೆಗಳ ಕಡೆ ಗಮನಕೊಟ್ಟರೆ ಲಾಭದಾಯಕವಾದೀತು. ಇಂದಿನ ಮತ್ತು ಮುಂದಿನ ಸ್ಥಿತಿಗತಿಗಳನ್ನು ರೂಪಿಸಿಕೊಳ್ಳಲು ಸಹಾಯವಾದೀತು. ಆದ್ದರಿಂದ 'ಆದರ್ಶ ಪ್ರಜಾರಾಜ್ಯ'ದ ಕಲ್ಪನೆಯನ್ನು ನಮಗಿತ್ತ ಪ್ಲೇಟೋವಿನ ವಿಚಾರವಾಣಿಯ ಸೂಕ್ಷ್ಮ ಪರಿಚಯವನ್ನು ಮಾಡಿಕೊಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಮೇಲೆ ಹೇಳಿದ 'ಮುನ್ನುಡಿ' ಉದ್ದವೆಂದೆನಿಸಿದರೂ ಹೆಚ್ಚಲ್ಲ. ಅದು ಪ್ಲೇಟೋ ಹೇಳುವ ರಾಜ್ಯ ನೀತಿಯ ತಿರುಳು.

***

ಪ್ಲೇಟೋವಿನ ಆದರ್ಶ ಪ್ರಜಾರಾಜ್ಯದ ಕಲ್ಪನೆಯಲ್ಲಿ ಮುಖ್ಯವಾಗಿ ಮೂರು ವಿಶೇಷಣಗಳು ಕಾಣ ಸಿಗುತ್ತವೆ:—(೧) ನ್ಯಾಯ, ಸತ್ಯ, ಧರ್ಮಗಳ ಪ್ರಭುತ್ವದಲ್ಲಿ ವಿಚಾರವಂತರ ಮುಂದಾಳುತನ; (೨) ಕರ್ಮ ಕುಶಲತೆಯ ಮೇಲೆ ಆಧಾರಗೊಂಡ ವರ್ಗ ಸಮಾಜ; ಮತ್ತು (೩) ರಾಜ್ಯವೆಂಬ ಸಮಾಜದಲ್ಲಿ ವ್ಯಕ್ತಿ ಮತ್ತು ರಾಜ್ಯಕ್ಕೆ ಇರುವ 'ಸಮವಾಯ' ಸಂಬಂಧ.

ಆದರ್ಶ ರಾಜ್ಯದಲ್ಲಿ ಪ್ರಭುತ್ವವು ನ್ಯಾಯ ಸತ್ಯ ಧರ್ಮಗಳಿಗೆ ಸೇರಿದ್ದೆಂದು ಒಪ್ಪಿಕೊಂಡ ಮೇಲೆ ಇಂಥವುಗಳ ಅರಿವು 'ಯಥಾರ್ಥ'ವಾಗಿ ಆಗುವುದು ಹೇಗೆಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಪ್ಲೇಟೋ ನೀಡಿರುವ ಉತ್ತರವೆಂದರೆ ಯಾವನು 'ತಾತ್ತ್ವಿಕ'ನೋ ಅಂಥವನು ನ್ಯಾಯ ಧರ್ಮಗಳ ಯಥಾರ್ಥತೆಯನ್ನು ಅರಿಯಬಲ್ಲವನಾಗಿರುತ್ತಾನೆ, "ತತ್ತ್ವ"ವೆಂದರೆ ವಾಸ್ತವವಾದುದನ್ನು, ಸತ್ಯವಾದುದನ್ನು, ಯಥಾರ್ಥತೆಯನ್ನು ಅರಿತುಕೊಳ್ಳುವುದೆಂದರ್ಥ. ಇಂತಹ ಅರಿವು ಒಬ್ಬನ ವಿಚಾರಬಲದಿಂದ, ನಿರಂತರ ತಪಸ್ಸಿನಿಂದ, ಸತ್ಯಪಕ್ಷಪಾತದಿಂದ, ನಿಸ್ವಾರ್ಥ ಮನೋಭಾವದಿಂದ ಉತ್ಪನ್ನವಾಗುತ್ತದೆ. ಸಾತ್ವಿಕ ಸಂಪನ್ನರಾದ ಇಂಥವರೇ ತಾತ್ತ್ವಿಕರು. ಇವರು ರಾಜ್ಯಕ್ಕೆ ಬೇಕಾದ ನಿಯಮಗಳನ್ನು ಎಲ್ಲರಿಗೂ ಎಲ್ಲ ಕಾಲದಲ್ಲೂ ಶ್ರೇಯೋದಾಯಕವಾಗಿರುವಂತೆ ಹಾಕಬಲ್ಲರು. ಆದ್ದರಿಂದ ರಾಜ್ಯವನ್ನು ನಡೆಸುವ ಸಾಮರ್ಥ್ಯ ಇವರದಾಗಿರಬೇಕು. ಎಂದರೆ ರಾಜ್ಯದ ಸೂತ್ರಗಳು ಇವರ ಕೈಯಲ್ಲಿರಬೇಕು. ಪ್ಲೇಟೋ ಹೇಳುವಂತೆ ಎಂದಿನವರೆಗೆ ರಾಜರು "ತಾತ್ತ್ವಿಕ"ರಾಗುವುದಿಲ್ಲವೋ ಅಥವಾ "ತಾತ್ತ್ವಿಕ"ರು ರಾಜರಾಗುವುದಿಲ್ಲವೋ ಅಂದಿನವರೆಗೆ ಪ್ರಪಂಚದಲ್ಲಿ 'ಆದರ್ಶ ಪ್ರಜಾರಾಜ್ಯ' ಸ್ಥಾಪನೆಯಾಗಲಾರದು. ಇಂತಹವರು ಸತ್ಯದ 'ದರ್ಶನ'ವನ್ನು ಪಡೆದಿರುವುದರಿಂದ ಸಮಗ್ರ ಸಮಾಜಕ್ಕೆ ಕ್ಷೇಮದಾಯಕವಾದ ರೀತಿಯಲ್ಲಿ ಕಟ್ಟಳೆಗಳನ್ನು ಹಾಕುತ್ತಾ ಎಲ್ಲರ ಧ್ಯೇಯಸಾಧನೆಗೆ ಅನುಕೂಲವಾಗುವಂತೆ ಸಹಾಯಕರಾಗುತ್ತಾರೆ.

ತಾತ್ತ್ವಿಕರ ಸಲಹೆಗಳು ಕಾರ್ಯರೂಪದಲ್ಲಿ ಸುಲಭವಾಗಿ ಪ್ರವಹಿಸುವಂತೆ ಮಾಡುವವರು ಬೇರೊಂದು ವರ್ಗ. ಈ ವರ್ಗದವರು ರಾಜ್ಯದ ಶಿಸ್ತನ್ನು ಕಾಪಾಡಿ ರಾಜ್ಯದ ಸಂಘಟಿತ ವ್ಯವಸ್ಥೆಗೆ ಹೋರಾಡಬಲ್ಲ ರಾಜಸವೀರರು. ಇವರ ಮುಖ್ಯ ಕರ್ತವ್ಯ ತಮ್ಮ ರಾಜ್ಯವನ್ನು ಪರರ ಹಾವಳಿಯಿಂದ ತಪ್ಪಿಸುವುದೊಂದೇ ಅಲ್ಲದೆ ರಾಜ್ಯದಲ್ಲಿ ಆಂತರಿಕವಾಗಿ ಒದಗಬಹುದಾದ ವಿಪತ್ತುಗಳನ್ನೂ ತಪ್ಪಿಸುವುದು ಸಹ ಆಗಿದೆ. ಈ ಕರ್ತವ್ಯ ಪಾಲನೆಗೆ ಅಗತ್ಯವಾಗಿ ಬೇಕಾದ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳನ್ನು ಇವರು ಪಡೆದಿರುತ್ತಾರೆ. ಈ ವರ್ಗಕ್ಕೆ "ಯೋಧ ವರ್ಗ"ವೆಂದು ಪ್ಲೇಟೋ ಹೆಸರಿಟ್ಟಿದ್ದಾನೆ. ಇವರು ದೇಶದ ಹಿತಚಿಂತನೆಗಾಗಿ ಹೋರಾಡುವ ನಿಸ್ವಾರ್ಥ ಸೇವಾದಳದವರು. 'ಧರ್ಮ ಶಾಸನ'ದ ಅನುಚರರು. ಈ ಮೇಲಿನ ಎರಡು ವರ್ಗದವರನ್ನೂ ರಾಜ್ಯದ 'ಪೋಷಕ ವರ್ಗ'ವೆಂದು ಪ್ಲೇಟೋ ಕರೆಯುತ್ತಾನೆ.

ಪೋಷಕ ವರ್ಗದವರು ರಾಜ್ಯದ ರಚನೆ ಹಾಗೂ ಪೋಷಣೆಯಲ್ಲಿ ನಿರತರಾದರೆ ರಾಜ್ಯ ಅಥವಾ ಸಮಾಜಕ್ಕೆ ಬೇಕಾಗುವ ಸಕಲ ಸೌಕರ್ಯಗಳನ್ನೂ ಕಲ್ಪಿಸಿ ಕೊಡುವುದರಲ್ಲಿ ನಿರತರಾದವರೇ ತಾಮಸಿಕರಾದ ಸಾಮಾನ್ಯ ಪ್ರಜೆಗಳು. ಅನ್ನ, ಬಟ್ಟೆ ಮುಂತಾದ ಜೀವನದ ಪೂರೈಕೆಗಳನ್ನು ಉತ್ಪಾದನೆ ಮಾಡುವುದರಲ್ಲಿ ತೊಡಗಿದವರೂ ಇವರಾಗಿದ್ದಾರೆ. ಈ ವರ್ಗಕ್ಕೆ ರಾಜ್ಯದ ಎಲ್ಲಾ ಪ್ರಜೆಗಳೂ ಸೇರಿರುತ್ತಾರೆ. ಒಬ್ಬನೇ ತನ್ನ ಎಲ್ಲಾ ಪೂರೈಕೆಗಳನ್ನೂ ತನ್ನ ಸ್ವಶಕ್ತಿಯಿಂದಲೇ ಸಾಧಿಸಲಾರ. ಅನೇಕ ವಿಧದಲ್ಲಿ ಇತರರ ಸಹಕಾರದ ಮೇಲೆ, ಉತ್ಪಾದನೆಗಳ ಮೇಲೆ, ಹೊಂದಿಕೊಂಡು ಜೀವಿಸಬೇಕಾಗುತ್ತದೆ. ಆದ್ದರಿಂದ ರಾಜ್ಯವೆಂದರೆ 'ಸಹಕಾರ-ಸಮಾಜ'ವೆಂದು ಅರ್ಥ.

ಸಮಗ್ರ ಸಮಾಜದಲ್ಲಿ ಮೇಲಿನ ಮೂರು ವರ್ಗದವರೂ ಸೇರಿರುತ್ತಾರೆ. ಮಾರ್ಗದರ್ಶಕರು (ತಾತ್ವಿಕರು) ಮಾರ್ಗವನ್ನು ಸುಗಮಗೊಳಿಸುವವರು (ಯೋಧರು) ಮಾರ್ಗಗಾಮಿಗಳು (ಜನಸಾಮಾನ್ಯ), ಈ ಮೂರು ವರ್ಗದವರೂ ಸೇರಿ ಒಂದು ಕುಟುಂಬ. ಈ ಕುಟುಂಬ ಲೌಕಿಕ ಹಾಗೂ ಆಧ್ಯಾತ್ಮಿಕ ಶ್ರೇಯಸ್ಸಿಗಾಗಿ ದುಡಿಯುವುದರಿಂದ ಪ್ರತಿಯೊಬ್ಬನೂ ತನ್ನ ಹಕ್ಕು ಬಾಧ್ಯತೆಗಳಿಗೆ ಹೋರಾಡುವುದಕ್ಕಿಂತಲೂ ತನ್ನ ಕರ್ತವ್ಯ ಪಾಲನೆಗೇ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಫಲದಲ್ಲಿ ಮಾತ್ರವೇ ಪಾಲುಗೊಳ್ಳುವುದಲ್ಲ, ಶ್ರಮದಲ್ಲಿಯೂ ಹೌದು. ಆದ್ದರಿಂದ ಸಮಾಜದ ಪ್ರತಿಯೊಬ್ಬನೂ ಕರ್ತವ್ಯಬದ್ಧನಾಗಿ ಸಮಗ್ರ ಶ್ರೇಯಸ್ಸನ್ನು ಸಾಧಿಸಬೇಕು. ಈ ಸಾಧನೆಯಲ್ಲಿ ವ್ಯಕ್ತಿಗೆ ತಕ್ಕಂತೆ ಆತನ ಸಾಧನೆಯಾಗುತ್ತದೆ. ಕರ್ತವ್ಯ ದೃಷ್ಟಿಯಿಂದ ಪರಸ್ಪರ ವ್ಯತ್ಯಾಸವಿರುವುದಿಲ್ಲ.

***

ಈ ತೆರನಾದ ಪ್ಲೇಟೋವಿನ ಆದರ್ಶ ರಾಜ್ಯದ ಪ್ರಜಾ ವರ್ಗಗಳ ವಿಷಯದಲ್ಲಿ ನಮಗೆ ಅಗತ್ಯವೆನಿಸುವ ಒಂದು ಮಾತ ಕಾಣ ಸಿಗುತ್ತದೆ. ವರ್ಗ ನಿರ್ಮಾಣ ಜಾತಿ (caste)ಯಿಂದ ಬಂದದ್ದಲ್ಲ, ಮನೆತನ (Hereditary)ದಿಂದ ಬಂದದ್ದಲ್ಲ, ಒಬ್ಬನ ಸ್ವಭಾವದಿಂದ ಮತ್ತು ಕಸುಬಿನಿಂದ ಬಂದದ್ದು, (natural and functional). ಒಬ್ಬ ಬುದ್ಧಿ ಜೀವಿಯ ಚೈತನ್ಯ ಪ್ರಕೃತಿದತ್ತವಾದದ್ದು, ಒಬ್ಬ ಯೋಧನ ಧೈರ್ಯ ಮತ್ತು ಹೋರಾಡುವ ಛಲ ಸ್ವಭಾವದತ್ತವಾದದ್ದು, ಒಬ್ಬನ ಕೈಗಾರಿಕೆಯ ಕುಶಲತೆ ಅಥವಾ ಉದ್ಯೋಗ ಶೀಲತೆ ಪ್ರಕೃತಿ ನಿಯತವಾದದ್ದು. ಆದ್ದರಿಂದ ವರ್ಗವೆಂಬುದು ಮಾನವನ ಮೂಲ ಪ್ರಕೃತಿಗನುಸಾರವಾಗಿ ಬೆಳೆದು ಬಂದಿದೆಯೇ ಹೊರತು ಕೃತಕವಾದುದಲ್ಲ. ಈ ದೃಷ್ಟಿಯಿಂದ ನೋಡಿದುದಾದರೆ ಆಧುನಿಕ ಕಾಲದ ಜಾತಿ ವ್ಯವಸ್ಥೆ, ಆರ್ಥಿಕ ವರ್ಗ ವ್ಯವಸ್ಥೆ, ಎಷ್ಟು ಕೃತಕವೆಂದು ಕಂಡು ಬರುತ್ತದೆ.

ಮತ್ತೊಂದು ಮಾತವೆಂದರೆ ಪ್ಲೇಟೋವಿನ ಸಮತಾವಾದದ (Socialism or Communism) ನೆಲಗಟ್ಟು. ಆಧುನಿಕ ಸಮತಾವಾದ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದುದು. ಆದರೆ ಪ್ಲೇಟೋವಿನ

(೧೯ನೇ ಪುಟ ನೋಡಿರಿ.)

ಕರ್ಮಣ್ಯೇವಾಧಿಕಾರಸ್ತೇ ।
ಮಾಫಲೇಷುಕದಾಚನ
— ಗೀತಾ.

ಹಿರಿಯಡ್ಕ ರಾಮರಾಯ ಮಲ್ಯರು

ಪ್ರಜಾರಾಜ್ಯೋತ್ಸವದ ಉತ್ಸಾಹದ ನಡುವೆ ನಾವು ಪುಣ್ಯ ಜೀವಿಗಳಾಗಿ, ರಾಷ್ಟ್ರಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿ, ಅನಾಸಕ್ತಿಯೋಗದ ಅಧ್ವರ್ಯುಗಳಾಗಿ ದೇಹವಿಟ್ಟ ಮಹಾನುಭಾವರನ್ನು ಸ್ಮರಿಸಲು, ಸ್ಮರಿಸಿ ಶ್ರದ್ಧಾಂಜಲಿಯನ್ನು ಅರ್ಪಿಸಲು, ತಪ್ಪಬಾರದು. ಜಿಲ್ಲೆಯ ಶ್ರೇಷ್ಠ ಸತ್ಯಾಗ್ರಹಿ ದಿವಂಗತ ರಾಮರಾಯ ಮಲ್ಯರ ಜೀವನ ನಮಗೆ ಸ್ಫೂರ್ತಿ ಮತ್ತು ಸೇವೆಯ ಸ್ರೋತವಾಗಲಿ!

ಬರೆದವರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ.

೧

ನೂರಾರು ವರ್ಷಗಳ ದಾಸ್ಯದ ಜಾಡ್ಯ ನಿದ್ರೆಯಿಂದ ಭಾರತ ಸಿಂಹವು ಎಚ್ಚರಗೊಳ್ಳುವ ಕಾಲ ಬಂದಿತ್ತು; ಭಗವಂತನ ಪ್ರೇರಣೆಯಂತೆ ಇಂತಹ ದಿವ್ಯ ಜಾಗ್ರತಿಯ ಸತ್ಯ ಸಂದೇಶವನ್ನು ಹೊತ್ತು ಸಾರುತ್ತಾ, ಮಹಾತ್ಮಾ ಗಾಂಧಿಯವರು, ಭಾರತದಾದ್ಯಂತ ತನ್ನ ಪುಣ್ಯ ಸಂಚಾರವನ್ನು ಕೈಗೊಂಡಿದ್ದರು. ೧೯೨೦ನೇ ಆಗೋಸ್ತು ೧೯ರಂದು, ಗಾಂಧೀಜಿ, ಪ್ರಥಮ ಬಾರಿ ಮಂಗಳೂರಿಗೆ ಸಂದರ್ಶನವಿತ್ತರು; ಅವರೊಂದಿಗೆ ಖಿಲಾಫತ್ ನಾಯಕರಾದ ಮೌಲಾನಾ ಶೌಕತ್ ಅಲಿಯವರೂ ಜ। ಯಾಕೂಬ್ ಹುಸೇನರೂ ಆಗಮಿಸಿದ್ದರು. ಶಾಂತ ಸರಳ ಮೋಹನ ಮೂರ್ತಿಯಾದ ಗಾಂಧೀಜಿಯ ಇಕ್ಕಡೆಗಳಲ್ಲಿಯೂ ಈ ಇಬ್ಬರು ಪ್ರಭಾವಶಾಲೀ ಮುಖಂಡರು ಪ್ರತಿಷ್ಠಿತರಾಗಿದ್ದು, ಮಂಗಳೂರು ನಗರದಲ್ಲಿ ಪ್ರಚಂಡ ಮೆರವಣಿಗೆಯಾಗಿ, ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಬೃಹತ್ಸಭೆ ಸೇರಿತು. ಬ್ರಿಟಿಷ್ ಪೋಷಿತ ವಿದ್ಯಾಮಂದಿರಗಳನ್ನೂ ನ್ಯಾಯಾಲಯಗಳನ್ನೂ ದೇಶಾಭಿಮಾನಿಗಳಾದ ಭಾರತೀಯರು ಬಹಿಷ್ಕರಿಸಬೇಕೆಂಬ ಅಸಹಕಾರ ಸಮರದ ಪ್ರಥಮ ಪಾಂಚಜನ್ಯವನ್ನು, ನಮ್ಮ ಜಿಲ್ಲೆಯಲ್ಲಿ ಆದೇ ಮೊದಲನೆಯದಾಗಿ. ಆ ಬೃಹತ್ಸಭೆಯಲ್ಲಿ ಮಹಾತ್ಮರು ಊದಿದರು. ಆ ದಿವ್ಯ ನಾದವು-ಸತ್ಯಾಗ್ರಹ ಸಮರದ ಸ್ಫೂರ್ತಿಮಯ ಸಂದೇಶವು, ನಮ್ಮ ಜಿಲ್ಲೆಯ ಹಲವು ಮಂದಿ ಸ್ವಾತಂತ್ರ್ಯ ವೀರರನ್ನು ಮಾತೃಭೂಮಿಯ ಸೇವೆಗಾಗಿ ಮಹಾ ತ್ಯಾಗ ಮಾಡಲು ಪ್ರೇರೇಪಿಸಿತು; ಅನೇಕರು ವಿದ್ಯಾಲಯಗಳನ್ನು ಬಿಟ್ಟು ಸ್ವಾತಂತ್ರ್ಯ ಸಮರಕ್ಕೆ ಧುಮುಕಿದರು; ಹಲವರು ನ್ಯಾಯಾಲಯಗಳನ್ನು ಬಹಿಷ್ಕರಿಸಿ ದೇಶಸೇವೆಗೆ ಬದ್ಧಕಂಕಣರಾದರು. ಅಂತಹ ಮಹಿಮಾನ್ವಿತ ಮಹನೀಯರಲ್ಲಿ, ನಮ್ಮ ಜಿಲ್ಲೆಯ ಪ್ರಥಮ ಪಂಕ್ತಿಯ ಸ್ವಾತಂತ್ರ್ಯ ವೀರರಲ್ಲಿ,ಅಂದು ಗಾಂಧೀಜಿಯ ಸಂದೇಶದಂತೆ, ತನ್ನ ಹಿಂದುಮುಂದುಗಳನ್ನು ಯಾವುದನ್ನೂ ಗಣಿಸದೆ, ಏಕ ಮಾತ್ರ ಪುತ್ರನಾದ ತನ್ನ ವಿದ್ಯಾಭ್ಯಾಸದ ಮೇಲೆ ಅವಲಂಬಿಸಿದ್ದ ಹೆತ್ತವರ ಕುರಿತು ಸಹ ಯೋಚಿಸದೆ, ಮಾತೃ ಭೂಮಿಯ ಸೇವೆಯೇ ಮಿಗಿಲೆಂದು ಎಲೋಶಿಯಸ್ ಕಾಲೇಜಿನಲ್ಲಿ ಕಲಿಯುತ್ತಿದ್ದ ಬಿ. ಎ. ತರಗತಿಯ ತನ್ನ ವಿದ್ಯಾಭ್ಯಾಸವನ್ನು ತ್ಯಜಿಸಿ ಸತ್ಯಾಗ್ರಹ ಸೇನೆಗೆ ಸೇರಿದ ಶ್ರೀ ಶ್ರೀ ಹಿರಿಯಡ್ಕ ರಾಮರಾಯ ಮಲ್ಯರು ನಮ್ಮ ಜಿಲ್ಲೆಯ ಹಿರಿಯ ದೇಶ ಸೇವಕರಲ್ಲಿ ಒಬ್ಬರು; ಜಿಲ್ಲೆಯ ಹಿರಿಯ ಸತ್ಯಾಗ್ರಹಿಗಳಲ್ಲಿ ಅವರು ಶ್ರೇಷ್ಠರೂ ಎನಿಸಿದರು.

***

ಶ್ರೀ ಶ್ರೀ ರಾಮರಾಯ ಮಲ್ಯರು ತನ್ನ ಆತ್ಮ ಚರಿತ್ರೆಯ ರೂಪದಲ್ಲಿ ಬರೆದ 'ವಾಲಂಟಿಯರ್ ಶ್ಯಾಮು' ಎನ್ನುವ ಕಾದಂಬರಿಯಲ್ಲಿ ಮೇಲಿನ ಸಂದರ್ಭದ ತಾತ್ತ್ವಿಕ ವಿಮರ್ಶೆಯನ್ನು ಬಹಳ ಮಾರ್ಮಿಕವಾಗಿ ಮಾಡಿದ್ದಾರೆ. ಮದ್ರಾಸಿನಲ್ಲಿದ್ದ ಗೆಳೆಯನಾದ ಚಂದ್ರಶೇಖರನಿಗೆ ಶ್ಯಾಮು ಈ ರೀತಿಯಲ್ಲಿ ಪತ್ರ ಬರೆಯುತ್ತಾನೆ:

"ಮೌಲಾನಾಶೌಕತ ಅಲಿಯವರನ್ನೊಡಗೂಡಿ ಮಹಾತ್ಮಾ ಗಾಂಧಿಯವರು ನಿನ್ನೆ ಮಂಗಳೂರಿಗೆ ಬಂದಿದ್ದರು; ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆ ಸೇರಿ ಗಾಂಧೀಜಿಯವರ ಭಾಷಣವಾಯಿತು. ಗಾಂಧೀಜಿಯವರನ್ನು ಕಂಡು ಅವರ ಭಾಷಣ ಕೇಳಿ ನನಗೇನನಿಸಿತು ಗೊತ್ತೆ? ಗೀತೆಯ ಎರಡನೆಯ ಅಧ್ಯಾಯದ ಕೊನೆಯ ಭಾಗದಲ್ಲಿ, ಅರ್ಜುನನು ಭಗವಂತನಲ್ಲಿ ಒಂದು ಪ್ರಶ್ನೆ ಕೇಳುತ್ತಾನಷ್ಟೆ? ಸ್ಥಿತಪ್ರಜ್ಞನು ಹೇಗೆ ಮಾತನಾಡುತ್ತಾನೆ? ಹೇಗೆ ಕುಳಿತು ಕೊಳ್ಳುತ್ತಾನೆ —ಅವನ ವರ್ತನೆ ಹೇಗಿರುತ್ತದೆ?—ಎಂಬ ಈ ಪ್ರಶ್ನೆಗಳಿಗೆ ಉತ್ತರವನ್ನು ನಾನು ನಿನ್ನೆ ಕಣ್ಣಾರೆ ಕಂಡಿದ್ದೇನೆನ್ನಿಸಿತು. ಮಹಾತ್ಮಾ ಗಾಂಧಿ ಭಾರತದ ಆತ್ಮ. ಆತನ ಕರೆಯೆಂದರೆ ಭಾರತದ ಅಂತರಾಳದಿಂದ ಬಂದ ಕರೆ. ಅದು ಗೀತೋಪನಿಷತ್ತುಗಳಲ್ಲಿ ಹೇಳಿದ ನಮ್ಮ ಧರ್ಮ ಇಂದು ನಮಗೆ ಕೊಡುತ್ತಿರುವ ಸಂದೇಶ. ನಾವು ಋಷಿಗಳ ವಂಶದಲ್ಲಿ ಹುಟ್ಟಿದವರು. ಅವರ ರಕ್ತವು ಇನ್ನೂ ನಮ್ಮ ನರನಾಡಿಗಳಲ್ಲಿ ಹರಿಯುತ್ತಿದೆ. ಈ ಕರೆಗೆ ಓಗೊಡದೆ ನಾವು ಹೇಗೆ ಇರಬಲ್ಲೆವು? ಧರ್ಮದ ಸ್ಪಷ್ಟ ಸಂದೇಶವನ್ನು ಪಾಲಿಸದಿದ್ದರೆ ಮತ್ತೆ ಜೀವಿಸಿಯಾದರೂ ಫಲವೇನು? ನಾನು ಕಾಲೇಜನ್ನು ತ್ಯಜಿಸುವ ನಿರ್ಧಾರ ಮಾಡಿದ್ದೇನೆ. ಮನೆಯವರ ಗತಿಯೇನು? **ನನ್ನ ಕರ್ತವ್ಯವನ್ನು ನಾನು ಮಾಡಿಯೇ ತೀರಬೇಕು. ಅದರ ಫಲವನ್ನು ಲೆಕ್ಕಿಸುವುದು ಸರಿಯಲ್ಲ.** ಇದು ಗೀತೆ ಹೇಳಿಕೊಟ್ಟ ಪಾಠವಲ್ಲವೆ? ಮನೆಯವರ ಗತಿಯೇನು ಎಂಬುದನ್ನು ಹೇಗೆ ಲೆಕ್ಕಿಸದಿರಲಿ? ನನ್ನ ಮನೆಯ ಪೂರ್ಣ ಪರಿಸ್ಥಿತಿ ನಿನಗೆ ಗೊತ್ತಿದೆ. "ಮೂರ್ಖ! ಮನೆಯವರ ಗತಿ ನಿನ್ನ ಮೇಲೆ ಹೊಂದಿಕೊಂಡಿದೆಯೆ? ನೀನು ನಿಮಿತ್ತ ಮಾತ್ರನು. ನಿನ್ನ ಹೃದಯದಲ್ಲಿ

Where to stay--? While at Mangalore

UDIPI SRI KRISHNA BHAVAN

BOARDING & LODGING

SPECIALLY NOTED FOR ATTACHED LATRINES & BATH ROOMS

PHONE NO. 133.

MOHINI VILAS

AIR-CONDITIONED RESTAURANT FOR YOUR REFRESHMENTS.

WOODLANDS HOTEL

COIMBATORE - - - -MADRAS

ನಾನೇ ಇದ್ದು ಈ ಸಂಸಾರಚಕ್ರ ತಿರುಗಿಸುತ್ತಿದ್ದೇನೆ."— ಈ ರೀತಿ ಹೃದಯದಲ್ಲಿ ಧ್ವನಿ ಕೇಳಿಸುತ್ತಿದೆ. ಟೈಫೈಡ್ ಜ್ವರದಲ್ಲಿ ನಾನು ಮರಣ ಪಟ್ಟಿದ್ದರೆ ಮನೆಯವರ ಗತಿಯೇನಾಗುತ್ತಿತ್ತು? ಎಂಬ ಪ್ರಶ್ನೆ ಕೇಳಿಕೊಳ್ಳುತ್ತಿದ್ದೇನೆ. **ಹಿಂದೊಮ್ಮೆ ಹುಡುಗನಿದ್ದಾಗ ನಮ್ಮೂರ ದೇವರ ಸಮ್ಮುಖದಲ್ಲಿ ನಿಂತು ನನ್ನ ಜೀವನವನ್ನು ನಿನಗರ್ಪಿಸುತ್ತೇನೆ ಎಂದು ಹೇಳಿದ್ದೆ. ಆ ವಚನವನ್ನು ಇಂದು ಪಾಲಿಸು ಎಂದು ಆತನ ಆಜ್ಞೆಯಾದಂತೆ ಕಾಣುತ್ತದೆ. ಆತನ ಚರಣಾರವಿಂದದಲ್ಲಿ ನನ್ನ ಮುಂದಿನ ಜೀವನವನ್ನು ಸಮರ್ಪಿಸುತ್ತೇನೆ."**

***

ಮೇಲಿನ ಮಾತುಗಳಿಂದ ಶ್ರೀ ಶ್ರೀ ರಾಮರಾಯ ಮಲ್ಯರ ತ್ಯಾಗ ಜೀವನದ ತತ್ವವನ್ನೂ ಅದರ ಹಿನ್ನೆಲೆ ಮತ್ತು ಮುನ್ನೋಟಗಳನ್ನೂ ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು. ಕೇವಲ ಭಾವನಾಪರವಶರಾಗದೆ, ಪರಕೀಯರಾದ ಬ್ರಿಟಿಷರ ಆಳುವಿಕೆಯ ಕುರಿತು ದ್ವೇಷಭಾವನೆಯು ಮರಿರದೆ, ಎಂತಹ ನಿರ್ಮಲ ನಿಷ್ಕಾಮ ಕರ್ಮ ಬುದ್ಧಿಯಿಂದ ಅಂದು ಶ್ರೀ ಶ್ರೀ ಮಲ್ಯರು ತನ್ನ ತ್ಯಾಗ ಜೀವನದ ಮಹಾ ಕಾದಂಬರಿಯನ್ನು ಪ್ರಾರಂಭಿಸಿದರೋ, ಅದೇ ನಿರ್ಮಲ ಧ್ಯೇಯವನ್ನು ಮುಂದಿಟ್ಟುಕೊಂಡೇ ಸರಳವಾದ ತನ್ನ ಸಂಪೂರ್ಣವಾದ ಐಹಿಕ ಜೀವನವನ್ನು ಆಡಂಬರವಿಲ್ಲವೆಯೇ ಕೊನೆಗಾಣಿಸಿದರು; ಇದೇ ೧೯—೧೨—೧೯೫೫ರಂದು ಸೋಮವಾರ ಬೆಳಗ್ಗೆ ತನ್ನ ಐವತ್ತಾರನೆಯ ವಯಸ್ಸಿನಲ್ಲಿ, ಮಂಗಳೂರಲ್ಲಿರುವ ತನ್ನ ವಸತಿಯಲ್ಲಿ ಅಕಸ್ಮಾತ್ ಹೃದಯಸ್ತಂಭನದಿಂದ ನಿರ್ವಾಣ ಹೊಂದಿದರು. ತನ್ನ ತುಂಬಿದ ಸಂಸಾರವನ್ನು, ಪತ್ನಿ ಮತ್ತು ಎಂಟು ಮಂದಿ ಮಕ್ಕಳನ್ನು, ತಾನು ಯಾವ ತಾಯಿಯ ಪುಣ್ಯ ಸೇವೆಗಾಗಿ, ಸಂಪೂರ್ಣ ಜೀವನವನ್ನು ಬಲಿದಾನ ಮಾಡಿದರೋ, ತನ್ನಂತಹ ಹಲವರ ಆ ನಿಃಸ್ವಾರ್ಥ ಸೇವೆಯ ಫಲವಾಗಿ ಇಂದು ಯಾವಳು ಸ್ವತಂತ್ರಳಾಗಿ ಸಮೃದ್ಧಳಾಗಿರುವಳೋ ಆ ಭಾರತ ಮಾತೆಯ ಮಡಿಲಲ್ಲಿಟ್ಟು ಇಂತು ಶಾಂತ ಚಿತ್ತರಾಗಿ ತೆರಳಿದರು!

೨

ಪರಶುರಾಮ ಸೃಷ್ಟಿಯೆನಿಸಿದ ತುಳುನಾಡಿನಲ್ಲಿ ಅರುವತ್ತನಾಲ್ಕು 'ಅಡ್ಕ'ಗಳಿವೆಯೆಂದೂ, ಅವುಗಳಲ್ಲೆಲ್ಲಾ ಹಿರಿದಾದ ಆ ಅಡ್ಕ ಸ್ಥಳಕ್ಕೆ 'ಹಿರಿಯಡ್ಕ'ವೆಂಬ ಹೆಸರಾಯಿತೆಂದೂ ಒಂದು ಪ್ರತೀತಿಯಿದೆ. ನಮ್ಮ ಜಿಲ್ಲೆಯ ಪ್ರಾಚೀನ ಇತಿಹಾಸವನ್ನು ಅವಲೋಕಿಸಿದರೂ, ಈ ಸ್ಥಳವು ಒಂದು ವಿಶೇಷ ಸ್ಥಳವೆಂಬುದು ತಿಳಿದು ಬರುತ್ತದೆ. ಹಿಂದಿನ ಕಾಲದಿಂದಲೇ ಸುತ್ತ ಮುತ್ತಲಿನ ಅನೇಕ ಹಳ್ಳಿಗಳಿಗೆ ಇದು ವ್ಯಾಪಾರ ಕೇಂದ್ರವಾಗಿತ್ತಲ್ಲದೆ, ಅಲ್ಲಿ ದೊಡ್ಡ ಭಂಡಸಾಲೆ ನಡೆಸುವ ಹಲವು ಸಾಹುಕಾರರು ಇದ್ದರು.

ಇಲ್ಲಿಂದ ಮೂರು ಮೈಲು ದೂರದ ಸುವರ್ಣ ನದಿಯ ದಂಡೆಯಲ್ಲಿದ್ದ ಬಜೆ ಎಂಬ ಊರು ಈ ಕೇಂದ್ರಕ್ಕೆ ಚಿಕ್ಕ ಬಂದರದಂತಿದ್ದು, ಅಕ್ಕಿ ಭತ್ತಗಳನ್ನು ಅಲ್ಲಿಗೆ ಒಯ್ದು, ದೋಣಿಗಳಲ್ಲಿ ತುಂಬಿಸಿ, ಸುವರ್ಣ ನದಿಯ ಮೂಲಕ ಹಂಗಾರಕಟ್ಟೆಯ ದೊಡ್ಡ ಬಂದರಕ್ಕೆ ಸಾಗಿಸುತ್ತಿದ್ದರು. ಅಲ್ಲಿಂದ ಅದು ಮಚ್ವೆಗಳ ಮೂಲಕ ಗೋವೆ ಮೊದಲಾದ ಕಡೆಗಳಿಗೆ ರಫ್ತಾಗುತಿತ್ತು. ಇಲ್ಲಿನ ವೀರಭದ್ರ ಸ್ವಾಮಿ ದೇವಾಲಯ, ದೇವಾಲಯಕ್ಕೆ ಸಂಬಂಧಿಸಿದ ಭಜಕ ನರ್ತಕ ವೃಂದ, ಸೂರಾಲಿನ ತೋಳಾರರು ಜಿಲ್ಲೆಯ ಉತ್ತರ ಭಾಗವನ್ನು ಆಳುತ್ತಿದಾಗ ಅವರಸೈನ್ಯಕೇಂದ್ರವಾಗಿದ್ದ ಹತ್ತಿರದ ಪೆರಡೂರು, ಅಲ್ಲಿನ ಅನಂತ ಪದ್ಮನಾಭ ಸ್ವಾಮಿಯ ದೇಗುಲ, ಪ್ರಾಚೀನ ಕಾಲದಿಂದಲೇ ಪ್ರಸಿದ್ಧವಾದ ಈ ಕಡೆಯ ದಶಾವತಾರ ಮೇಳ—ಇವೆಲ್ಲವೂ ಈ ಪ್ರದೇಶದ ಹಾಗೂ ಆಸುಪಾಸಿನ ವೈಶಿಷ್ಟ್ಯವನ್ನು ಸೂಚಿಸುವಂತಹುಗಳಾಗಿವೆ.

ಇಂತಹ ಇತಿಹಾಸ ಪ್ರಸಿದ್ಧವಾದ ನಿಸರ್ಗ ಸುಂದರವಾದ ಊರಲ್ಲಿ, ಕಲಾಮಯ ವಾತಾವರಣದಲ್ಲಿ ದೈವ ದೇವರು ಭಕ್ತ ವೃಂದದ ಮಧ್ಯದಲ್ಲಿ ಶ್ರೀಶ್ರೀ ರಾಮರಾಯ ಮಲ್ಯರು ಶೇಷಗಿರಿ ಮಲ್ಯರ ಏಕಮಾತ್ರ ಪುತ್ರರಾಗಿ ಐವತ್ತಾರು ವರ್ಷಗಳ ಹಿಂದೆ ಜನ್ಮವೆತ್ತಿದರು. ಹಿಂದೆಸಾಕಷ್ಟು ಶ್ರೀಮಂತವಾಗಿದ್ದ ಈ ಕುಟುಂಬ, ದಾರಿದ್ರ್ಯಾವಸ್ಥೆಗೆ ಬಂದಿರಲು, ಶೇಷಗಿರಿ ಮಲ್ಯರು ಪೆರಡೂರು ಅನಂತ ಪದ್ಮನಾಭ ಸ್ವಾಮಿಯ ದೇಗುಲದಲ್ಲಿ ಕರಣಿಕ ವೃತ್ತಿಯನ್ನು ಕೈಕೊಂಡು ಜೀವನ ನಿರ್ವಹಣ ಮಾಡುತ್ತಾ, ತನ್ನ ಮುಂದಿನ ಆಶಾಕಿರಣವಾಗಿದ್ದ ಏಕ ಮಾತ್ರ ಪುತ್ರನಿಗೆ ಯೋಗ್ಯ ವಿದ್ಯಾಭ್ಯಾಸವನ್ನು ಬಹಳ ಕಷ್ಟದಿಂದಲಾದರೂ ಒದಗಿಸಿದರು.

ಊರಲ್ಲಿಯೇ ಖಾಸಗಿ ಶಾಲೆಯಲ್ಲಿ ಕನ್ನಡ ಸಂಸ್ಕೃತಗಳ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದು, ಶ್ರೀ ಶ್ರೀ ರಾಮರಾಯ ಮಲ್ಯರು ಮುಂದೆ ಉಡುಪಿಯ ಮಿಶನ್ ಹೈಸ್ಕೂಲಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯನ್ನು ತೇರ್ಗಡೆ ಹೊಂದಿದರು. ಉಡುಪಿಯ ಮಿಶನ್ ಹೈಸ್ಕೂಲಿನ ಅಂದಿನ ಉಪಾಧ್ಯಾಯ ವರ್ಗ, ಮಿಶನ್ ದೊರೆಗಳು ನಮ್ಮ ಜಿಲ್ಲೆಗೆ ಹಾಗೂ ಕನ್ನಡ ನಾಡಿಗೆ ಸಲ್ಲಿಸಿದ ಸೇವೆ-ಅಲ್ಲಿ ದೊರಕಿದ ಬೈಬಲ್ ಪುರಾಣದ ಪರಿಚಯ-ಇವೆಲ್ಲವೂ ಮುಂದೆ ತ್ಯಾಗ ಜೀವನಕ್ಕೆ ಸಿದ್ಧರಾಗಬೇಕಾಗಿದ್ದ ಶ್ರೀ ಶ್ರೀ ಮಲ್ಯರ ಉದಾತ್ತ ಜೀವನವನ್ನು ರೂಪುಗೊಳಿಸಲು ಸಹಾಯಕವಾದುವೆನ್ನಲು ಸಂಶಯವಿಲ್ಲ. ಹೈಸ್ಕೂಲು ವಿದ್ಯಾಭ್ಯಾಸದ ಕಾಲದಲ್ಲಿಯೇ ಅವರು ಪ್ರತಿಭಾಶಾಲಿಯಾದ ವಿದ್ಯಾರ್ಥಿಯೆನಿಸಿದ್ದು, ಆದಿನೇ ಅವರಿಗೆ ಭಗವದ್ಗೀತೆ, ವಿವೇಕಾನಂದರ ಲೇಖನಗಳು ಇವುಗಳ ಪರಿಚಯವಾಗಿ ಅವರ ಮನಸ್ಸು ಉದಾತ್ತ ತತ್ವ ಚಿಂತನೆಗೆ ಪ್ರಾರಂಭಿಸಿತ್ತೆಂಬುದನ್ನು ನಾವು ನೆನಪಿನಲ್ಲಿಡಬೇಕಾಗಿದೆ.

ಲೇಖಕರು.

***

ದಾರಿದ್ರ್ಯದ ದುಃಖಗಳನ್ನೆಲ್ಲಾ ಸಹಿಸಿಕೊಂಡು ಶೇಷಗಿರಿ ಮಲ್ಯರು ತನ್ನ ಏಕಮಾತ್ರ ಪುತ್ರನನ್ನು ಕಾಲೇಜ್ ವಿದ್ಯಾಭ್ಯಾಸ ಮಾಡಿಸಲು ನಿಶ್ಚಯಮಾಡಿ ಮಂಗಳೂರು ಸೈಂಟ್ ಎಲೋಶಿಯಸ್ ಕಾಲೇಜಿಗೆ ಸೇರಿಸಿದರು. ಅಲ್ಲಿನ ಪ್ರಸಿದ್ಧರಾದ ಅನೇಕ ಉಪಾಧ್ಯಾಯರ ಸಾನ್ನಿಧ್ಯದಿಂದ ಕಾಲೇಜ್ ವಿದ್ಯಾಭ್ಯಾಸ ಕಾಲದಲ್ಲಿ ಅನೇಕ ಆಂಗ್ಲ ಲೇಖಕ ಕವಿಗಳ ಕೃತಿ ಪರಿಚಯವನ್ನು ಶ್ರೀ ಶ್ರೀ ಮಲ್ಯರು ಚೆನ್ನಾಗಿ ಮಾಡಿಕೊಂಡಿದ್ದರೂ, "ತಾನು ಕಂಡ ಸತ್ಯವನು ಅತ್ಯಂತ ಪ್ರಬಲ ಆವೇಶದಿಂದ ಸಾರುತ್ತಿದ್ದ ಕಾರ್ಲೈಲ್, ಅಪೂರ್ವ ಕಲಾ ಪ್ರೇಮಿಯೂ, ಅತ್ಯಂತ ಮಧುರ ಶೈಲಿಯಲ್ಲಿ ಬರೆಯುವವನೂ ವಿಚಾರ ಕ್ರಾಂತಿಯನ್ನುಂಟು ಮಾಡತಕ್ಕ ಸತ್ಯವನ್ನು ಇದ್ದಕ್ಕಿದ್ದಂತೆ ಹೇಳಬಲ್ಲವನೂ ಆದ ರಸ್ಕಿನ್" ಇವರೀರ್ವರು ಗದ್ಯ ಲೇಖಕರು ಅವರಲ್ಲಿ ಹೆಚ್ಚಿನ ಪರಿಣಾಮವನ್ನುಂಟು ಮಾಡಿದ್ದರು. ಆಗ ಆಂಗ್ಲ ಕೃತಿಗಳನ್ನು ಮಾತ್ರವಲ್ಲದೆ, ಕನ್ನಡ, ಸಂಸ್ಕೃತ ಮರಾಠೀಭಾಷೆಯ ಅನೇಕ ಕೃತಿಗಳನ್ನೂ ಅವರು ಅಭ್ಯಾಸಿಸಿದರು; ಈ ತೆರನ ನಿರಂತರವಾದ ಓದುಗಾರಿಕೆಯ ಅಭ್ಯಾಸವು ಅವರಲ್ಲಿ ವಿದ್ಯಾರ್ಥಿ ದೆಸೆಯಂತೆ ಮುಂದೆ ಕೊನೆಗಾಲದ ವರೆಗೂ ಇದ್ದಿತು.

ಹೈಸ್ಕೂಲ್ ವಿದ್ಯಾರ್ಥಿ ಜೀವನದಲ್ಲಿ ಶ್ರೀ ಶ್ರೀ ಮಲ್ಯರನ್ನು ಆಕರ್ಷಿಸಿದ ಸ್ವಾಮಿ ವಿವೇಕಾನಂದರ ಲೇಖನಗಳ ಅಭ್ಯಾಸ ಕಾಲೇಜ್ ವಿದ್ಯಾಭ್ಯಾಸ ಕಾಲದಲ್ಲಿ ಮತ್ತೆ ಮುಂದುವರಿದು, ರಾಮಕೃಷ್ಣ ಪರಮಹಂಸರ ಜೀವನ ತತ್ವಗಳ ಅಭ್ಯಾಸವನ್ನು ಆಗ ಅವರು ಮಾಡಿಕೊಂಡರು. ಆ ಕಾಲದಲ್ಲಿ ಭಾರತದ ಸಾಮಾಜಿಕ ರಾಜಕೀಯ ಜೀವನದಲ್ಲಿ ಪ್ರಬಲ ಕ್ರಾಂತಿಯನ್ನುಂಟು ಮಾಡಿದ ಆರ್ಯ ಸಮಾಜ, ಬ್ರಹ್ಮ ಸಮಾಜ, ಥಿಯೋಸಫಿ ಈ ಚಟುವಟಿಕೆಗಳು ಅವರನ್ನು ಬಹಳವಾಗಿ ಆಕರ್ಷಿಸಿದುವು.

***

ಆಗ, ಗಾಂಧೀಜಿ ಖೇಡಾ ಜಿಲ್ಲೆಯಲ್ಲಿ ಸತ್ಯಾಗ್ರಹ ನಡೆಸುತ್ತಿದ್ದರು; ಬಿಸೆಂಟಮ್ಮ ಹೋಮ್ ರೂಲ್ ಚಳವಳಿವನ್ನು ಪ್ರಾರಂಭಿಸಿದ್ದರು. ಮಹಾ ಯುದ್ಧವು ಕೊನೆಗಂಡಿದ್ದರೂ, ಭಾರತೀಯರಿಗೆ ಹೆಚ್ಚಿನ ಅಧಿಕಾರವನ್ನು ಕೊಡುವ ಬದಲು ರೌಲೆಟ್ ಆಕ್ಟು ಮುಂತಾದವುಗಳ ಮೂಲಕ ನಿರ್ಬಂಧಗಳೇ ಹೆಚ್ಚುತ್ತಿದ್ದುವು; ಬ್ರಿಟಿಷರು ವಾಗ್ದಾನಕ್ಕೆ ವಿರೋಧವಾಗಿ ವರ್ತಿಸಿದರು. ಬ್ರಿಟಿಷರ ಧೋರಣೆಯನ್ನು ಪ್ರಬಲವಾಗಿ ವಿರೋಧಿಸಿದ ಬಿಸೆಂಟಮ್ಮನವರ ಮೇಲೆ ದಿಗ್ಬಂಧನವನ್ನು ಹೇರಲಾಯಿತು; ಗಾಂಧೀಜಿ ಸತ್ಯಾಗ್ರಹ ಹಾಗೂ ಅಸಹಕಾರ ಇತ್ಯಾದಿ ಕಾರ್ಯಕ್ರಮಗಳನ್ನು ಮುಂದೊತ್ತಿದರು. ಭಾರತದ ಹೃದಯದಲ್ಲಿ ಸ್ವಾತಂತ್ರ್ಯದ ಜ್ವಾಲಾಮುಖಿ

ಕೈ ಮಗ್ಗದ ಬಟ್ಟೆಗಳಿಗೆ ಮನೆ ಮಾತು

ಪೂರ್ಣಿಮ ಸ್ಟೋರ್ಸ್

ಹೆಸರಾಂತ ಪೂರ್ಣಿಮ ಸ್ಪೆಶ್ಯಲ್ ಶೀರೆ ತಯಾರಕರು.
ಎಲ್ಲಾ ತರದ ಕೈ ಮಗ್ಗದ ಬಟ್ಟೆಗಳ ರಖಂ ಮತ್ತು ಚಿಲ್ಲರೆ ಜವುಳಿ ಮಳಿಗೆ

ಪೊಪ್ಯುಲರ ಕಟ್ಟಡ, ಮಂಗಳೂರು.

ಬೊಂಬೈಯಲ್ಲಿ ನಮ್ಮ ಶೀರೆಗಳು

ಪ್ರಭಾತ ಎಂಪೋರಿಯಂ,

301, A ಲೇಮಿಂಗ್ಟನ್ ರೋಡ, ಬೊಂಬೈ.

ಕುದಿಯ ತೊಡಗಿತ್ತು; ಭಾರತವು ಧರ್ಮ ಯುದ್ಧಕ್ಕೆ ಸನ್ನದ್ಧವಾಗಿತ್ತು; ಈ ಸಂದರ್ಭದಲ್ಲಿ ಶ್ರೀ ಶ್ರೀ ರಾಮರಾಯ ಮಲ್ಯರು ಬಿ. ಎ. ತರಗತಿಯಲ್ಲಿ ಓದುತ್ತಿದ್ದರು. ಶಾಲೆಯ ಶಿಕ್ಷಣದೊಂದಿಗೆ, ವಿಶಾಲ ಭಾರತದಲ್ಲಿ, ಉಂಟಾಗಿದ್ದ ಸ್ವಾತಂತ್ರ್ಯ ದಾಹದ ಅನಿವಾರ್ಯ ಉತ್ಸಾಹವನ್ನೂ, ಸತ್ಯಾಗ್ರಹ ರೂಪದ ಧರ್ಮ ಯುದ್ಧದ ವಿಚಾರವನ್ನೂ ಅವರು ಅಂದು ಚೆನ್ನಾಗಿ ಅರ್ಥ ಮಾಡಿಕೊಂಡರು. ಹಾಗಾಗಿಯೇ ಮುಂದಿನ ಮಹಾ ತ್ಯಾಗಕ್ಕೆ ದೃಢ ಮನಸ್ಸಿನಿಂದ ನಿಶ್ಚಲ ಧ್ಯೇಯದಿಂದ ಸಿದ್ಧರಾದರೆಂದು ನಾವು ಅರಿತು ಕೊಳ್ಳಬಹುದಾಗಿದೆ.

ದೇಶ ಸೇವಾವ್ರತದ ಮಹಾ ತ್ಯಾಗದ ಕತೆಗೆ ಮುನ್ನುಡಿ ಬರೆವಂತೆ ಕಾರ್ನಾಡು ಸದಾಶಿವರಾಯರು ಆಗ ಜಿಲ್ಲೆಯ ಸತ್ಯಾಗ್ರಹೀ ಸೈನ್ಯದ ಅಗ್ರಣಿಯಾಗಿ ಮುಂದೆ ಬಂದರು. ಅವರು ಮುಂಬಯಿಗೆ ಹೋಗಿ ಮಹಾತ್ಮಾಜಿಯವರನ್ನು ಕಂಡು ಸತ್ಯಾಗ್ರಹೀ ಪ್ರತಿಜ್ಞೆಗೆ ಸಹಿ ಹಾಕಿ ಮರಳಿದವರು, ಜಿಲ್ಲೆಯಲ್ಲಿ ಚಳವಳವನ್ನು ಆರಂಭಿಸಿದ್ದರು. "ಸತ್ಯ ಮತ್ತು ಅಹಿಂಸೆಗಳನ್ನು ಪಾಲಿಸುತ್ತೇನೆ; ಸತ್ಯಾಗ್ರಹ ಸಭೆಯವರು ನಿರ್ದೇಶಿಸಿದ ಕಾನೂನುಗಳನ್ನು ಉಲ್ಲಂಘಿಸುತ್ತೇನೆ; ಇದರಿಂದ ದೊರಕಬಹುದಾದ ಶಿಕ್ಷೆಗಳನ್ನು ಅನುಭವಿಸುತ್ತೇನೆ." ಇದೇ ಸತ್ಯಾಗ್ರಹಿಗಳ ಪ್ರತಿಜ್ಞೆಯಾಗಿತ್ತು. ೧೯೩೦ನೇ ಎಪ್ರಿಲ್ ಆರನೇ ದಿನ ಭಾರತದಲ್ಲೆಲ್ಲಾ ಸತ್ಯಾಗ್ರಹ ಆರಂಭವಾಗಬೇಕೆಂದು ಗಾಂಧೀಜಿಸಾರಿದ್ದರು; ಕಾರ್ನಾಡು ಸದಾಶಿವರಾಯರು ದಕ್ಷಿಣ ಕನ್ನಡ ಜಿಲ್ಲೆಯನ್ನು ಸತ್ಯಾಗ್ರಹೀ ಸೇನೆಯನ್ನು ಸಿದ್ಧಗೊಳಿಸುತ್ತಿದ್ದರು; ನೂರಾರು ವರ್ಷಗಳ ಜಾಡ್ಯವನ್ನು ಬಿಟ್ಟು ಭಾರತವು ಒಮ್ಮೆಲೇ ಈ ಸತ್ಯ ಸಂದೇಶದಿಂದ ವಿದ್ಯುದಾವೇಶಗೊಂಡಂತೆ ಜಾಗ್ರತಾವಸ್ಥೆಗೆ ಬಂದಿತ್ತು. ಪಂಜಾಬಿನಲ್ಲಿ ಭೀಕರ ಅತ್ಯಾಚಾರ ನಡೆಯಿತು. ಇದರಿಂದಾಗಿ, ಇಡೀ ದೇಶವೇ ಪ್ರಬಲ ಪ್ರಕ್ಷೋಭೆಗೊಂಡಿತು; ಖಿಲಾಫತ್ ಚಳವಳವೂ ಭಾರತದ ಸ್ವಾತಂತ್ರ್ಯ ಚಳವಳದೊಡನೆ ಸೇರ್ಪಡೆಯಾಗಿತ್ತು; ಗಾಂಧೀಜಿ ಶೌಕತ್ ಅಲೀ ಜತೆಗೂಡಿ ಭಾರತದಾದ್ಯಂತ ರಣಕಹಳೆಯೂದುತ್ತಾ ಬಂದರು; ಆ ಮಹಾ ಸ್ವಾತಂತ್ರ್ಯ ಯಾತ್ರೆಯ ಸಂದರ್ಭದಲ್ಲಿಯೇ ಗಾಂಧೀಜಿ ಮಂಗಳೂರಿಗೆ ಬಂದು, ಕೇಂದ್ರ ಮೈದಾನಿನಲ್ಲಿ, ಸತ್ಯಾಗ್ರಹ ಅಸಹಕಾರ ಆಂದೋಳನದ ದಿವ್ಯ ಸಂದೇಶವಿತ್ತಿದ್ದು, ಆ ಕರೆಗೆ ಶ್ರೀ ಶ್ರೀ ರಾಮರಾಯ ಮಲ್ಯರೂ ಓಗೊಟ್ಟು ದೇಶಸೇವಾದೀಕ್ಷೆಯನ್ನು ಅಂದು ಮೊದಲ್ಗೊಂಡು ಕೈಗೊಂಡರೆಂದು ನಾವು ತಿಳಿದುಕೊಳ್ಳಬೇಕಾಗಿದೆ.

೩

ಶ್ರೀ ಶ್ರೀ ರಾಮರಾಯ ಮಲ್ಯರನ್ನು ಮರಳಿ ಕಾಲೇಜಿಗೆ ಸೇರಿಸಬೇಕೆಂಬ ಪ್ರಯತ್ನವೇನೋ ನಡೆಯಿತು; ಆದರೆ, ಅವರು ಅದಕ್ಕೆ ಒಪ್ಪಲಿಲ್ಲ ಮಾತ್ರವಲ್ಲ, ಜಿಲ್ಲೆಯಾದ್ಯಂತ ಸಂಚಾರ ಕೈಕೊಂಡು ವಿದ್ಯಾ ಸಂಸ್ಥೆಗಳ ಬಹಿಷ್ಕಾರ ಪ್ರಚಾರ ಕಾರ್ಯವನ್ನು ಮುಂದೊತ್ತಿದರು. ಅದರಲ್ಲಿ ಅವರು ಸಾಕಷ್ಟು ಯಶಸ್ವಿಗಳೂ ಆದರು. ಬ್ರಿಟಿಷ್ ಪೋಷಿತ ವಿದ್ಯಾಸಂಸ್ಥೆಗಳನ್ನು ಬಿಟ್ಟವರಿಗೆ, ಯೋಗ್ಯ ವಿದ್ಯಾಭ್ಯಾಸ ಕೊಡುವ ಅವಶ್ಯವನ್ನು ಮನಗಂಡು 'ತಿಲಕ ವಿದ್ಯಾಲಯ' ಎಂಬ ಸಂಸ್ಥೆ ಸ್ಥಾಪಿತವಾಗಿ ರಾಷ್ಟ್ರೀಯ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದಾಗ ಶ್ರೀ ಶ್ರೀ ಮಲ್ಯರು ಅಲ್ಲಿ ಅಧ್ಯಾಪಕರಾಗಿ ತನ್ನ ಪಾಲಿನ ಸೇವೆ ಸಲ್ಲಿಸಿದರು. ಇದರೊಂದಿಗೆ ಖಾದಿಪ್ರಚಾರ ರಾಜಕೀಯ ಪರಿಷತ್ತುಗಳ ಸಂಘಟನೆ ಇಂತಹ ಕೆಲಸಗಳಲ್ಲಿ ಕಾರ್ನಾಡು ಸದಾಶಿವ ರಾಯರೇ ಮುಂತಾದ ಮುಂದಾಳುಗಳ ಜತೆಯಲ್ಲಿ ಅವರು ಅಗ್ರಗಣ್ಯರಾಗಿ ದುಡಿದರು.

ಸತ್ಯಾಗ್ರಹತತ್ವವನ್ನು ಜನತೆಗೆ ತಿಳಿಯಪಡಿಸುವ ಆವಶ್ಯಕತೆಯನ್ನು ಮನಗಂಡು 'ಸತ್ಯಾಗ್ರಹಿ' ಎಂಬ ಪತ್ರಿಕೆಯನ್ನು ಅವರು ಪ್ರಕಟಿಸಿದರು. ಈ ಕಾರ್ಯದಲ್ಲಿ ಅವರಿಗೆ ನೆರವಾದವರಲ್ಲಿ ಶ್ರೀ ಹಿರಿಂಡಡ್ಕ ನಾರಾಯಣ ರಾಯರು ಮತ್ತು ಶ್ರೀ ವಿ. ಎಸ್. ಕುಡ್ವರು ಪ್ರಮುಖರು. ಗಾಂಧೀಜೀಯ ಸತ್ಯಾಗ್ರಹದ ಆದರ್ಶಗಳು, ಕಾಂಗ್ರೆಸ್ ತತ್ವನೀತಿಗಳು ಆ ಪತ್ರಿಕೆಯಲ್ಲಿ ವಾರ ವಾರವೂ ಪ್ರಕಟವಾಗುತ್ತಿದ್ದು ಅದು ಒಮ್ಮೆಲೇ ಅಖಿಲ ಕರ್ನಾಟಕ ಖ್ಯಾತಿಯನ್ನು ಪಡೆಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಜನಜಾಗೃತಿಯನ್ನೂ ಉಂಟುಮಾಡಿತು. 'ಸತ್ಯಾಗ್ರಹೀ' ಪತ್ರಿಕೆಯ ಲೇಖನಗಳ ತೀಕ್ಷ್ಣತೆ ಹಾಗೂ ಪರಿಣಾಮಕಾರಿತ್ವಕ್ಕೆ ಬೆದರಿದ ಪ್ರಭುತ್ವದವರು ಶ್ರೀಶ್ರೀ ರಾಮರಾಯ ಮಲ್ಯರನ್ನೂ, ಅವರ ಜತೆ ಕೆಲಸಗಾರರಾದ ಶ್ರೀ ನಾರಾಯಣ ರಾಯರನ್ನೂ ಬಂಧಿಸಿ ಒಂದೊಂದು ವರ್ಷ ಸೆರೆಮನೆಗಟ್ಟಿದರು. ಇವರಿಬ್ಬರ ಬಂಧನ ಕಾಲದಲ್ಲಿ ಸತ್ಯಾಗ್ರಹೀ ಪತ್ರಿಕೆಯನ್ನು ಶ್ರೀ ವಿ. ಎಸ್. ಕುಡ್ವರು ನಡೆಸಿದರು.

ಶ್ರೀ ಶ್ರೀ ರಾಮರಾಯ ಮಲ್ಯರುಒಂದ್ವರ್ಷದಕಾರಾ ಗೃಹ ವಾಸವನ್ನು ಮುಗಿಸಿ ಜಿಲ್ಲೆಗೆ ಬಂದವರು ಮರಳಿಯೂ ಅದೇ ಕಾಂಗ್ರೆಸ್ ಪ್ರಚಾರಕಾರ್ಯವನ್ನೂ, ಪತ್ರಿಕಾ ಸಂಪಾದಕತ್ವವನ್ನೂ ಕೈಕೊಂಡರು. ತನ್ಮಧ್ಯೆ ರಾಷ್ಟ್ರೀಯ ಚಳವಳದ ರಭಸವು ಕುಗ್ಗುತ್ತಾ ಬಂದುದರಿಂದ 'ಸತ್ಯಾಗ್ರಹಿ' ಪತ್ರಿಕೆಯು ನಷ್ಟಕಷ್ಟಗಳಿಂದ ನಡೆಯಬೇಕಾಗಿ ಬಂದಿತು; ಅಷ್ಟರಲ್ಲಿ ಸಹಕಾರ ಚಳವಳದ ಕಡೆಗೆ ಆಕರ್ಷಿತರಾಗಿ ಶ್ರೀ ಶ್ರೀ ಮಲ್ಯರು ಶ್ರೀ ಮೊಳಹಳ್ಳಿ ಶಿವರಾಯರ ಸಲಹೆಯಂತೆ, ಶ್ರೀ ಶಾಂತಾರಾಮ ರಾಯರ ಜತೆಯಲ್ಲಿ ಆ ಕ್ಷೇತ್ರಕ್ಕೆ ಕಾಲಿಟ್ಟರು. ಸ್ವಲ್ಪಕಾಲ, ಶ್ರೀ ಮಲ್ಯರು ದಿ. ಮೂಲ್ಕಿ ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಸರಕಾರದಿಂದ ನಿಯುಕ್ತವಾದ ಪಾನನಿರೋಧ ಸಮಿತಿಯಲ್ಲಿ ಪ್ರಚಾರಕರಾಗಿಯೂ ಕೆಲಸಮಾಡಿದರು. ಮದ್ಯನಿರೋಧ ಸಮಿತಿಯಲ್ಲಿ ಅವರು ಹೆಚ್ಚು ಕಾಲ ಕೆಲಸಮಾಡದಿದ್ದರೂ, ಸಹಕಾರ ಕ್ಷೇತ್ರದಲ್ಲಿ ಮುಂದೆ ಹಲವು ವರ್ಷಗಳವರೆಗೆ ಅವರು ದುಡಿದಿದ್ದಾರೆ; 'ಕನ್ನಡ ಸಹಕಾರಿ' ಪತ್ರಿಕೆಯ ಸಮರ್ಥ ಸಂಪಾದಕರಾಗಿ ಕೆಲಸ ಮಾಡಿದ್ದಾರೆ.

***

೧೯೩೦ರಲ್ಲಿ ಪುನಃ ಸ್ವಾತಂತ್ರ್ಯ ಜ್ಯೋತಿ ಜ್ವಲಿಸತೊಡಗಿತು: ಗಾಂಧೀಜಿ, ದಕ್ಷಿಣ ಭಾರತ ಪ್ರವಾಸಮಾಡಿ ಮಂಗಳೂರನ್ನು ಮರಳಿ ಒಮ್ಮೆ ಸಂದರ್ಶಿಸಿದರು. ೧೯೩೦ರಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಸಾರಿ ದಂಡಯಾತ್ರೆಗೆ ಹೊರಟರು. ಆಗ ಶ್ರೀ ಶ್ರೀ ಮಲ್ಯರು ಮದ್ಯನಿರೋಧ ಸಮಿತಿಯ ಕೆಲಸಕ್ಕೆ ರಾಜಿನಾಮೆಯಿತ್ತು ಸ್ವಾತಂತ್ರ್ಯ ಚಳವಳಕ್ಕೆ ಸೇರಿದರು. ಈ ಚಳವಳವು, ಅಖಿಲ ಭಾರತದಲ್ಲಿ ಎಂತೋ ಅಂತೆ ನಮ್ಮ ಜಿಲ್ಲೆಯಲ್ಲಿಯೂ ವಿಶೇಷ ವಿಸ್ತೃತವಾಗಿ ಅನೇಕ ಮಂದಿಯನ್ನು ಆಕರ್ಷಿಸಿತು. ಕೆಲಸಗಾರರೂ, ಮಧ್ಯ ವರ್ಗದವರೂ, ಶ್ರೀಮಂತರೂ ಸ್ತ್ರೀ ಪುರುಷರೆನ್ನದೆ ಬಾಲವೃದ್ಧರೆನ್ನದೆ ಅಸಂಖ್ಯಾತ ಭಾರತೀಯ ಸ್ವಾತಂತ್ರ್ಯವೀರರು ಈ ಸತ್ಯಾಗ್ರಹ ಸಮರದಲ್ಲಿ ಭಾಗವಹಿಸಿದರು. ಶ್ರೀ ಶ್ರೀ ರಾಮರಾಯ ಮಲ್ಯರು ಈ ಸತ್ಯಾಗ್ರಹೀ ತಂಡದಲ್ಲಿ ಸೇರಿ ಉಪ್ಪಿನ ಕಾನೂನು ಮುರಿದು ಆರು ತಿಂಗಳ ಶಿಕ್ಷೆಗೆ ಗುರಿಯಾದರು. ಸೆರೆಮನೆಯಿಂದ ಮರಳಿದವರೇ, ಶ್ರೀ ಶ್ರೀ ಮಲ್ಯರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿತ್ವವನ್ನು ಸ್ವೀಕರಿಸಿ ಜಿಲ್ಲೆಯ ರಾಜಕೀಯ ಕಾರ್ಯಕಲಾಪಗಳ ಸೂತ್ರಧಾರಿತ್ವವನ್ನು ಕೈಕೊಂಡರು.

ಗಾಂಧಿ ಇರ್ವಿನ್ ಒಪ್ಪಂದದಂತೆ, ಉಪ್ಪಿನ ಸತ್ಯಾಗ್ರಹವು ಕೊನೆಗೊಂಡು, ಗಾಂಧೀಜಿ ಮುಂತಾದ ಮುಖಂಡರನ್ನು ದುಂಡು ಮೇಜಿನ ಪರಿಷತ್ತಿಗೆ ಆಹ್ವಾನಿಸಿದರೂ, ಅದರ ಪರಿಣಾಮವು ಏನೂ ಪ್ರಯೋಜನಕಾರಿಯಾಗಲಿಲ್ಲ. ಗಾಂಧೀಜಿ ದುಂಡು ಮೇಜಿನ ಪರಿಷತ್ತಿನಿಂದ ಮರಳಿ ಬೊಂಬಯಿಯಲ್ಲಿಳಿಯುವಷ್ಟರಲ್ಲಿಯೇ ಪಂಡಿತ ಜವಾಹರಲಾಲರ ಬಂಧನವಾಗಿತ್ತು; ಪುನಃ ಸತ್ಯಾಗ್ರಹ ಚಳವಳದ ಕಾವು ಏರಿತು; ಉಪ್ಪಿನ ಸತ್ಯಾಗ್ರಹವು ನಿಂತಲ್ಲಿಂದ ಮತ್ತೆ ಸತ್ಯಾಗ್ರಹವು ಮುಂದುವರಿಯಿತು. **ನಮ್ಮ ಜಿಲ್ಲೆಯ ಸ್ವಾತಂತ್ರ್ಯ ಸಮರೇತಿಹಾಸದಲ್ಲಿ ಈ ಸಲದ ಸತ್ಯಾಗ್ರಹದಕಥೆ ಸಾಹಸ ಪೂರ್ಣವಾದ ಕಥೆಯಾಗಿದೆ.** ಪರದೇಶೀ ಬಟ್ಟೆಯಂಗಡಿಯ ಮುಂದೆ ಸ್ವಯಂ ಸೇವಕರು ಪಿಕೆ

ಹಿರೊಶಿಮ (Hiroshima)

(ಮದ್ರಾಸಿನ 'ಹಿಂದು' ಪತ್ರಿಕೆಯ ೨೬-೩-೧೯೫೬ರ ಸಂಚಿಕೆಯಲ್ಲಿ ಪ್ರಕಟವಾದ ಅದೇ ತಿಂಗಳ ೨೪ನೆಯ ತಾರೀಕಿನ 'New Terror in Hiroshima = Shadow of Atom Bomb Explosion' ಎಂಬ ಲಂಡನಿನ ತಂತಿಯ ಆಧಾರದಿಂದ.)

ನೋಡಲ್ಲಿ ಬೀದಿಯಲಿ ಸಂಕ ಚಾಚುತಿದೆ,
ಕೆಲ ಮಂದಿ ಅದರೊಳತ್ತಿತ್ತ ದಾಟುತಿದೆ;
ನೋಡಿಲ್ಲಿ ಎತ್ತುಗಳ ಬಂಡಿಯಾಟುತಿದೆ,೧
೨ಬೋವನಾ ೩ಮೊಚ್ಚೆಯಂಗುಷ್ಠ ತೋಚುತಿದೆ.
ಎಲ್ಲವೆಚ್ಚರಕನಸು! ಮಿಥ್ಯೆ! ಬರಿ ಛಾಯೆ!
೪ಹಿರೊಶಿಮದೊಳಂದು ಮುಂಜಾನೆ ಅಣುಬಾಂಬ
ನೆಸೆದಿನಿಂದಿಲ್ಲಿ ದಿನದಿನ ಕೆಲವು ಕಾಂಬ
೫'ಕಾಗೆ'ಯ ಚಲಚ್ಚಿತ್ರವಿವು ಮೂಕ ಮಾಯೆ!
ಕೆಲವೆ ಕಾಣುವವೇಕೆ ತೋರವೇನೆಲ್ಲ?
ಎನಿತೊ ಸಾವಿರ ಚರಾಚರವಳಿದವಂತೆ—
ಹಸಿಹಸಿಯೆ ಮಡಿದವರು ಕಣ್ಸುಳಿವರಂತೆ೬—
ಇತರ ಜೀವಾಜೀವರೇಕೆ ನೆರಳಿಲ್ಲ?
ಗಂಟೆ ಬಾರಿಸಿ ಮುಗಿಯೆ ಸುಳಿವ ದನಿಯಂತೆ
ಕೆಲಕೆಲವೆ ನೆರಳನಿತೆ ಕಾಣಿಸವೊ ಇಂತೆ?

ಗೋವಿಂದ ಪೈ.

೧ ಆಟು = ಹಿಂದೆ ಮುಂದೆ ಅಲ್ಲಾಡು. ೨ ಬೋವ = ಬಂಡಿಕಾರ. ೩ ಮೊಚ್ಚೆ = ಪಾದರಕ್ಷೆ. ೪ ಹಿರೊಶಿಮ (Hiroshima) ಎಂಬ ಜಪಾನಿನಲ್ಲಿಯ ಒಂದು ರೇವಿನ (ಅಂದರೆ ಬಂದರದ) ಹೆಸರು. ಅಲ್ಲಿ ಅಮೇರಿಕನವರು ೬-೮-೧೯೪೫ರ ಮುಂಜಾನೆ ಅಣುಬಾಂಬನ್ನು ಎಸೆದರು. ಅದರ ಫಲವಾಗಿ ಅಗಲೇ ಸುಮಾರು ೩೦೦೦೦೦ ಮಂದಿ ಮಡಿದರಲ್ಲದೆ, ಆ ಮೇಲೆ ಕೆಲಕಾಲದ ವರೆಗೂ ಅಲ್ಲಿ ತೋರಿ ಬರುವ ದೃಶ್ಯಗಳನ್ನು ಈ ಕವಿತೆಯಲ್ಲಿ ಸೂಚಿಸಿದೆ. (ಲಂಡನಿನ ಆ ತಂತಿಯಲ್ಲಿ ಹೇಳಿರುವ ಮೇರೆಗೆ.) ೫ 'ಕಾಗೆ' (Kage) ಎಂಬುದು ಜಪಾನೀ ಭಾಷೆಯ ಶಬ್ದ— ಅದರ ಅರ್ಥ ಛಾಯೆ, ನೆರಳು ಎಂದು. (ಈ ಶಬ್ದ ಲಂಡನಿನ ತಂತಿಯಲ್ಲಿದೆ.) ೬ ಕಣ್ಸುಳಿ= ಕಣ್ಣಿನ ಮುಂದೆ ಸುಳಿಯು.

ಶ್ರೀ ಅದಮಾರು ಮಠಾಧೀಶರ
ಹೊಸ ಪರ್ಯಾಯ ಕಾಲದಲ್ಲಿ

ನಾವು ಹೊಸದಾಗಿ ತರಿಸಿದ ತಾಮ್ರ, ಹಿತ್ತಾಳೆ, ಕಂಚು, ಬೆಳ್ಳಿ, ಸ್ಟೀಲು ಎಲ್ಯುಮಿನಿಯಂ ಪಾತ್ರೆಗಳ ಹೊಸತಾದ ಭಂಡಾರದಲ್ಲಿ ನಿಮ್ಮ ಮನೆ ಮಠ ದೇವಸ್ಥಾನಗಳಿಗೆ ಉಪಯೋಗಿಸುವ ಎಲ್ಲಾ ತರದ ಪಾತ್ರೆಗಳನ್ನು ನಾವು ಒಂದೇ ಕಡೆಯಲ್ಲಿ ಶೇಖರಿಸಿದ್ದೇವೆ.

ವಿಚಾರಿಸಿರಿ:

ಐರೋಡಿ ರಾಧಾಕೃಷ್ಣ ಪೈ

ರಥಬೀದಿ, **ಉಡುಪಿ.**

ಟಿಂಗ್ ಮಾಡುವುದು, ಕುಡುಕರಾದ ರಿಸರ್ವ್ ಪೋಲೀಸ್ ದಳದವರು ಆ ಸ್ವಯಂ ಸೇವಕರನ್ನು ಹೆಣ ಬೀಳುವಂತೆ ಹೊಡೆಯುವುದು; ಹೊಡೆತದಿಂದ ಭೂಮಿಯಲ್ಲಿ ಬಿದ್ದವರನ್ನು ಬೀದಿಯಲ್ಲಿ ಎಳೆದುಕೊಂಡು ಹೋಗಿ ಬಸ್ಸಿನಲ್ಲಿ ಹಾಕಿ ಆಸ್ಪತ್ರೆಗೆ ಸಾಗಿಸುವುದು ಇಂತಹ ಭೀಕರ ಸತ್ಯಾಗ್ರಹ ಸಮರವನ್ನು, ಅದರ ಜತೆಗೆ ೧೪೪ನೇ ಸೆಕ್ಷನು ಮುರಿದು ಸಭೆ ಮೆರವಣಿಗೆ ಮಾಡುವಂತಹ ಉಗ್ರ ಕಾರ್ಯಕ್ರಮವನ್ನು, ಈ ತೆರನ ರಾಜಕೀಯ ಚಟುವಟಿಕೆಗಳನ್ನೆಲ್ಲಾ ಶ್ರೀ ಶ್ರೀ ಮಲ್ಯರು ಅವರ ಇತರ ಸಹಾಯಕರೊಂದಿಗೆ ರಭಸದಿಂದ ಮುಂದೊತ್ತುತ್ತಾ ಬಂದರು. ಇದೇ ಸಂದರ್ಭದಲ್ಲಿ ಜಿಲ್ಲಾ ರಾಜಕೀಯ ಪರಿಷತ್ತೊಂದನ್ನು ಸಹ ಜರಗಿಸಿ ಇನ್ನಷ್ಟು ಜನಜಾಗೃತಿಯಾಗುವಂತೆ ಮಾಡಿದರು. ಈ ತೆರನ ಕಾರ್ಯಕಲಾಪಗಳನ್ನೆಲ್ಲಾ ಕಂಡ ಸರಕಾರವು ಅವರನ್ನು ಹೊರಗಿರಿಸಿದರೆ ಅಪಾಯವುಂಟೆಂದು ಮನಗಂಡು ಪುನಃ ಆರು ತಿಂಗಳ ಶಿಕ್ಷೆಗೆ ಗುರಿಪಡಿಸಿತು.

೪

ಕಾಂಗ್ರೆಸ್ ರಾಜಕೀಯದಲ್ಲಿ ಒಂದು ಅಧ್ಯಾಯ ಇಲ್ಲಿಗೆ ಮುಗಿಯುತ್ತದೆ; ಈ ಅಧ್ಯಾಯದೊಂದಿಗೆ, ತನ್ನ ಅಪಾರ ಐಶ್ವರ್ಯವನ್ನೆಲ್ಲಾ ನಾಡಿನ ಸ್ವಾತಂತ್ರ್ಯಕ್ಕಾಗಿ ಧಾರೆಯೆರೆದು ಬೇಕೆಂದೇ ಬಡತನವನ್ನು ಅಪ್ಪಿಕೊಂಡ ದೇಶಭಕ್ತ ಕಾರ್ನಾಡು ಸದಾಶಿವರಾಯರಂತಹ ತ್ಯಾಗ ಮೂರ್ತಿಗಳ ರಾಜಕೀಯ ಪ್ರಭಾವೀ ಜೀವನವೂ ಅಸ್ತಮಿಸ ತೊಡಗಿತು; ಮುಂದೆ ೧೯೩೭ರ ಕಾಲ ಬಂದಾಗ, ಕಾಂಗ್ರೆಸು ಚುನಾವಣೆಗಳಲ್ಲಿ ಸ್ಪರ್ಧಿಸಲು ನಿಶ್ಚಯಿಸಿತು, ಕಾಂಗ್ರೆಸ್ಸಿಗೆ ನಿಶ್ಚಿತಬಹುಮತವಿರುವುದನ್ನು ಮನಗಂಡ ಸೂಕ್ಷ್ಮಮತಿಗಳನೇಕರು ಕಾಂಗ್ರೆಸ್ಸಿನ ನಾಯಕತ್ವವನ್ನು ವಹಿಸಿಕೊಂಡರು: **ಆಗ ಯಾರ ತ್ಯಾಗ ಧಾರೆಯಿಂದ ಜಿಲ್ಲೆಯ ಕಾಂಗ್ರೆಸ್ ಪಕ್ಷವು ಬೆಳೆಯಿತೋ ಅವರಡಿಯಲ್ಲಿ ದಣಿವಾರಿಸಲು ದೇಶಭಕ್ತ ಕಾರ್ನಾಡು ಸದಾಶಿವರಾಯರಿಗೇ ಆಸ್ಪದ ದೊರಕಲಿಲ್ಲವೆಂಬುದನ್ನು ನಾವು ವಿಷಾದಪೂರ್ವಕ ಉಲ್ಲೇಖಿಸಬೇಕಾಗಿದೆ.** ಅದು ನಮ್ಮ ಜಿಲ್ಲೆಯು ಹೊತ್ತುಕೊಂಡ ಪಾಪವಾಗಿದೆ! ಇಂತಹ ಸಂದರ್ಭದಲ್ಲಿ ತಮ್ಮ ಪ್ರಯತ್ನ ನಿಷ್ಫಲವೆಂದು ತಿಳಿದಿದ್ದರೂ ಆತ್ಮಸಾಕ್ಷಿಯನ್ನು ಅಡಗಿಸಲಾರದೆ ಕಾರ್ನಾಡು ಸದಾಶಿವರಾಯರ ಉಮೇದ್ವಾರಿಕೆಯನ್ನು ಸಮರ್ಥಿಸಿದ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಶ್ರೀ ರಾಮರಾಯ ಮಲ್ಯರೂ ಒಬ್ಬರೆಂಬುದನ್ನು ನಾವು ಸರಿಯಾಗಿ ನೆನಪಿನಲ್ಲಿಡಬೇಕಾಗಿದೆ.

ಇಂದಿನ ನಮ್ಮ ಪಾರ್ಲಿಮೆಂಟ್ ಸದಸ್ಯರೂ ಅಖಿಲ ಭಾರತ ಖ್ಯಾತಿಯ ಕಾಂಗ್ರೆಸ್ ಧುರೀಣರೂ, ವಿಚಕ್ಷಣ ರಾಜಕಾರಣ ಪಟುಗಳೂ ಆದ ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯರು ಅಷ್ಟರಲ್ಲಿ ಕಾಂಗ್ರೆಸ್ ರಾಜಕೀಯದ ನೇತೃತ್ವವನ್ನು ವಹಿಸಿಕೊಂಡಿದ್ದರು. ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯರಿಗೂ ಶ್ರೀ ಶ್ರೀ ರಾಮರಾಯ ಮಲ್ಯರಿಗೂ ಕಾಂಗ್ರೆಸ್ ಸಂಸ್ಥೆಯೊಳಗಣ ಕಾರ್ಯಕಲಾಪಗಳನ್ನು ನಿರ್ವಹಿಸುವ ಕುರಿತಾದ ಕೆಲವು ತಾತ್ವಿಕ ಭಿನ್ನಾಭಿಪ್ರಾಯಗಳು ಖಂಡಿತವಾಗಿ ಇದ್ದರೂ, ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯರ ಸಮರ್ಥ ರಾಜನೀತಿ ಪಟುತ್ವವನ್ನು ಮುಕ್ತ ಕಂಠದಿಂದ ಕೊಂಡಾಡುವ ಸದ್ಗುಣ ಶ್ರೀ ಶ್ರೀ ರಾಮರಾಯ ಮಲ್ಯರಲ್ಲಿತ್ತೆಂಬುದನ್ನು ನಾವು ಮರೆಯಲಾಗದು. **ಅಂತೂ ಮುಂದೆ ಕಾಂಗ್ರೆಸಿನ ಪ್ರತ್ಯಕ್ಷ ರಾಜಕಾರಣದಿಂದ ಶ್ರೀ ಶ್ರೀ ರಾಮರಾಯ ಮಲ್ಯರು ತುಸು ದೂರ ಸರಿದು ನಿಂತಿದ್ದರೂ ಎಷ್ಟೋ ಮಂದಿ ನಮ್ಮ ಮುಂದಾಳುಗಳಂತೆ ನಿರಾಶರಾಗದೆ, ಅಡ್ಡದಾರಿ ಹಿಡಿಯದೆ ಕೊನೆಯ ತನಕವೂ ಕಾಂಗ್ರೆಸ್ ಸಂಸ್ಥೆಗೆ, ಅದರ ಪ್ರತಿಯೊಂದು ಹೋರಾಟದ ಸಂದರ್ಭದಲ್ಲಿಯೂ, ಪ್ರತಿಯೊಂದು ಅಗ್ನಿ ಪರೀಕ್ಷೆಯ ಕಾಲದಲ್ಲಿಯೂ, ಪ್ರತಿಯೊಂದು ಚುನಾವಣಾ ಕಾಲದಲ್ಲಿಯೂ ತನ್ನಿಂದಾಗುವ ಸಕಲ ಸೇವೆಯನ್ನು ಅಪ್ರಾರ್ಥಿತವಾಗಿಯಾದರೂ ಸಲ್ಲಿಸುತ್ತಾ ಬಂದುದು ಅವರ ಹಿರಿಯ ಗುಣವನ್ನು ತೋರಿಸುತ್ತದೆ.**

೫

ಹೀಗೆ ಕಾಂಗ್ರೆಸ್ ಪ್ರತ್ಯಕ್ಷ ರಾಜಕೀಯದಿಂದ ಶ್ರೀ ಶ್ರೀ ರಾಮರಾಯ ಮಲ್ಯರು ಇಂತು ತುಸು ದೂರವಾದ ಸಂದರ್ಭದಲ್ಲಿ ಶ್ರೀಗಳಾದ ಮೊಳಹಳ್ಳಿ ಶಿವರಾಯರು, ಶಾಂತಾರಾಮರಾಯರೇ ಮೊದಲಾದವರ ಹಿತೋಕ್ತಿಯಂತೆ ಅವರು ಜಿಲ್ಲೆಯ ಸಹಕಾರ ಕ್ಷೇತ್ರದಲ್ಲಿ ಕೆಲಸಕ್ಕೆ ಸೇರಿದರು. "ಕನ್ನಡ ಸಹಕಾರಿ"ಯ ಸಂಪಾದಕರಾಗಿಯೂ ಕೆಲಸಮಾಡಿದರು. ಆಗ ಅವರಿಗೆ ಮದ್ರಾಸಿನ 'ಹಿಂದೂ' ಪತ್ರಿಕೆಯ ಬಾತ್ಮೀದಾರನಾಗಿಯೂ ನೇಮಕವಾಯಿತು. ಅವರ ಸಹೋದ್ಯೋಗೀ ಕಾರ್ಯಕರ್ತರಾದ ಯು. ಗೋವಿಂದ ರಾಯರು ಆಗ ಹರಿಜನ ಸೇವಾ ಕಾರ್ಯದಲ್ಲಿ ನಿರತರಾಗಿದ್ದುದು ಮಾತ್ರವಲ್ಲದೆ, ಮದ್ರಾಸಿನ 'ಮೈಲ್' ಪತ್ರಿಕೆಯ ಬಾತ್ಮೀದಾರರೂ ಆಗಿದ್ದರು. ಹೀಗೆ ಬಾಲ್ಯ ಸ್ನೇಹಿತರೂ, ಸಹಕಾರ್ಯಕರ್ತರೂ ಆದ ಶ್ರೀ ಶಾಂತಾರಾಮರಾಯರು ಹಾಗೂ ಡಾ| ಯು. ಗೋವಿಂದರಾಯರ ಜತೆಯಲ್ಲಿ ಶ್ರೀ ಶ್ರೀ ರಾಮರಾಯ ಮಲ್ಯರು ಮುಂದಿನ ಕೆಲವು ವರ್ಷಗಳ ವರೆಗೆ ಸಹಕಾರ ಹಾಗೂ ಪತ್ರಿಕೋದ್ಯೋಗ ಇವೆರಡು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದರು.

ಶ್ರೀ ಶ್ರೀ ರಾಮರಾಯ ಮಲ್ಯರ ಜೀವನ ರಥಕ್ಕೆ ಕಾಂಗ್ರೆಸ್ ಧ್ಯೇಯ ಮತ್ತು ಪತ್ರಿಕೋದ್ಯೋಗ ಇವೆರಡು ಚಕ್ರಗಳಂತಿದ್ದವು. —'ಸತ್ಯಾಗ್ರಹ' ಪತ್ರಿಕೆಯು ಗಾಂಧೀಯ ಆದರ್ಶದಂತೆ ಪ್ರಾರಂಭಿಸಲ್ಪಟ್ಟು ಸ್ವಾತಂತ್ರ್ಯದ ಕಹಳೆಯೂದಿತು; ಆ ಮೇಲೆ ೧೯೩೯ರ ಸುಮಾರಿಗೆ 'ಸ್ವತಂತ್ರ ಭಾರತ' ಎನ್ನುವ ಪತ್ರಿಕೆಯ ಸಂಪಾದಕರಾಗಿ ಅವರು ಕೆಲಸಮಾಡಿ, ಆ ಪತ್ರಿಕೆಯೂ ಪ್ರಸಿದ್ಧವಾಯಿತು. ಅನಂತರ ಅವರು, 'ಕನ್ನಡ ಸಹಕಾರೀ' ಪತ್ರಿಕೆಯನ್ನು ಸಂಪಾದಿಸಿದ್ದಲ್ಲದೆ, ಮದ್ರಾಸಿನ ಹಿಂದೂ ಪತ್ರಿಕೆಯ ಬಾತ್ಮೀದಾರರಾಗಿ ಅವರು ಕೊನೆಗಾಲದ ತನಕವೂ ದುಡಿದರು. ಈ ಮಧ್ಯೆ ದಿವಂಗತ ಕಿಲ್ಲೆಯರ 'ಸರ್ವೋದಯ' ಹಾಗೂ ಶ್ರೀ ಎ. ಎಸ್. ಕಾಮತರ 'ಸ್ವದೇಶಾಭಿಮಾನಿ' ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿದ್ದು, ಕೆಲಕಾಲಗಳ ತನಕ 'ಚರಖಾ' ಎಂಬ ಪತ್ರಿಕೆಯೊಂದನ್ನು ನಡೆಸಿದರು. ಕೊನೆಗೆ ಶ್ರೀ. ಬಂಟ್ವಾಳ ನಾರಾಯಣ ನಾಯ್ಕರೇ ಮೊದಲಾದವರ ನೆರವಿನಿಂದ 'ಸಮಾಚಾರ' ಎಂಬ ಪತ್ರಿಕೆಯನ್ನು ಸಂಪಾದಿಸಿದ್ದು ಅದನ್ನು ಕೊನೆಗಾಲದ ವರೆಗೂ ನಡೆಸುತ್ತಾ ಬಂದರು. **ಇಂತು ಶ್ರೀ ಶ್ರೀ ರಾಮರಾಯ ಮಲ್ಯರು ರಾಜಕೀಯ ಹಾಗೂ ಪತ್ರಿಕೋದ್ಯಮ ಇವೆರಡರಲ್ಲಿಯೂ ಸವ್ಯಸಾಚಿಗಳಾಗಿ ದುಡಿದು ನಮ್ಮ ಜಿಲ್ಲೆಗೆ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ.** ಅದಕ್ಕಾಗಿ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿರಬೇಕಾಗಿದೆ.

***

ಶ್ರೀ ಶ್ರೀ ರಾಮರಾಯ ಮಲ್ಯರು ಇಂಗ್ಲಿಷ್ ಕನ್ನಡ ಸಂಸ್ಕೃತ ಮರಾಠೀ ಮುಂತಾದ ಭಾಷೆಗಳ ಅನೇಕ ಶ್ರೇಷ್ಠ ಗ್ರಂಥಗಳನ್ನು ಓದಿದ್ದಲ್ಲದೆ ನಿತ್ಯ ವಿದ್ಯಾರ್ಥಿಯಂತೆ ಕೊನೆಗಾಲದ ತನಕವೂ ಓದುವ ಅಭ್ಯಾಸವನ್ನು ಇಟ್ಟುಕೊಂಡವರು; ಹಾಗಾಗಿಯೇ ಅವರ ಪತ್ರಿಕಾ ಲೇಖನಗಳು ಶ್ರೇಷ್ಠ ಮಟ್ಟದವುಗಳಾಗಿದ್ದವು; ಹಿರಿಯ ಆದರ್ಶವನ್ನು ಬಿಡದ ಬರವಣಿಗೆ ಅವರದು. **ಯಾರನ್ನಾದರೂ ನೋಯಿಸುವ ಲೇಖನವನ್ನು ಅವರು ಬರೆಯುತ್ತಿರಲಿಲ್ಲ; ಆದರೆ ಸತ್ಯದಿಂದ ಎಂದೂ ವಿಚಲಿತರಾಗುತ್ತಲೂ ಇರಲಿಲ್ಲ.** ಪತ್ರಿಕೋದ್ಯಮಿಯ ಹಾಗೂ ಲೇಖಕನ ಗೌರವವನ್ನು ಚೆನ್ನಾಗಿ ಅರಿತು ಅವರು ಬರೆಯುತ್ತಿದ್ದರು; ಅವರು ತಮ್ಮ ಲೇಖನಗಳಲ್ಲಿ ವ್ಯರ್ಥವಾದ ಶಬ್ದಗಳನ್ನು ಎಂದಿಗೂ ಉಪಯೋಗಿಸುತ್ತಿರಲಿಲ್ಲ. ಅವರು ಉಪಯೋಗಿಸಿದ ಯಾವುದೇ ಒಂದು ಶಬ್ದವನ್ನಾಗಲಿ ಕಳಚಿ ಹಾಕಿದರೆ ಆ ವಾಕ್ಯವು ಸಂಪೂರ್ಣವಾಗುವಂತಿರಲಿಲ್ಲ. ಅವರಂತಹ ತೂಕದ ಬರವಣಿಗೆಯುಳ್ಳ ಮೇಲ್ಮಟ್ಟದ ಬರೆಹಗಾರರು ನಮ್ಮಲ್ಲಿ ಅತ್ಯಂತ ಅಪರೂಪವೆನ್ನಬೇಕಾಗಿದೆ. ರಾಜಕೀಯ ಲೇಖನಗಳು ಮಾತ್ರವಲ್ಲದೆ 'ಸೀತಾರಾಮ' ಎಂಬ ಗುಪ್ತನಾಮದಿಂದ ಅನೇಕ ಸಣ್ಣ ಕತೆಗಳನ್ನು ಅವರು ಬರೆದಿದ್ದಾರೆ. ಅವರ ಎಲ್ಲ ಕತೆಗಳೂ ಲೇಖನಗಳೂ ಧ್ಯೇಯವನ್ನು ನಿರೂಪಿಸುವಂತಹವುಗಳೇ ಆಗಿವೆಯಲ್ಲದೆ ಕೇವಲ

ಮಧುರವಾದ
4 ವಿಧದ SR ಬೀಡಿಗಳನ್ನು
ಸಾವಿರಾರು ಜನರು ದಿನನಿತ್ಯ ಉಪಯೋಗಿಸುತ್ತಾರೆ.
ಏಕೆಂದರೆ:
೧. ಎಸ್. ಆರ್. ಉತ್ತಮ ತಂಬಾಕು ಎಲೆಗಳಿಂದ ಕೂಡಿದ್ದಾಗಿರುತ್ತದೆ.
೨. ಎಸ್. ಆರ್. ಅನುಭವಸ್ಥ ಕೆಲಸಗಾರರಿಂದ ಕಟ್ಟಲ್ಪಟ್ಟಿದೆ.
೩. ಎಸ್. ಆರ್. ಪ್ರವೀಣ ಮೇಸ್ತ್ರಿಯಾರಿಂದ ತಯಾರಿಸಿ ಪ್ಯಾಕ್‌ಮಾಡಲ್ಪಟ್ಟಿದೆ.
೪. ಎಸ್. ಆರ್. ಸುರಕ್ಷಿತವಾದುದು. ಅದರಲ್ಲಿ ಯಾವ ಅಪಾಯಕಾರಿ ತಂಬಾಕಿನ ಮಿಶ್ರಣವಿಲ್ಲ.
ಆದುದರಿಂದ ಇಂದೇ ನಿಮ್ಮ ರುಚಿಗೆ ಹೊಂದಿಕೊಳ್ಳುವ 25 ರ ಪ್ಯಾಕೆಟೊಂದನ್ನು ಕೊಂಡುಕೊಳ್ಳಿರಿ.



ಎಲ್ಲಾ ಅಂಗಡಿಗಳಲ್ಲಿಯೂ ಮಾರಲ್ಪಡುತ್ತವೆ.
S.R. BEEDI WORKS, UDIPI S.K.



ಯಾತ್ರೆ ನೋಡಿ ಹೋಗುವಾಗ ಪಾತ್ರೆಯನ್ನು ಒಯ್ಯಬೇಕೆಂಬುದು ಹಿಂದಿನಿಂದ ಬಂದ ರೂಢಿ.
ಅವಕ್ಕೆ ತಕ್ಕಂತೆ ತಾಂಬ್ರ, ಹಿತ್ತಾಳೆ, ಕಂಚು ಮತ್ತು ಶುದ್ಧ ಬೆಳ್ಳಿಯ ದೇವತಾರ್ಚನೆಗೆ, ಅಡಿಗೆಗೆ, ಉಡುಗೊರೆಗೆ ಮಾದ ಸಂಚಾರಕ್ಕೆ ಬೇಕು ಬೇಕಾದ ತರ ತರದ ಗಾತ್ರದಲ್ಲಿ ಬಗೆ ಬಗೆಯ ಆಕಾರದಲ್ಲಿ ಅಭಿರುಚಿಗೆ ತಕ್ಕಂತೆ ಚಿತ್ತಾಕರ್ಷಕವಾಗಿ ಸಿಗಬೇಕೆಂದರೆ
ಉಡುಪಿಯ ಕಲ್ಮಂಜೆ ವ್ಯಾಸಾಚಾರ್ಯರ ಪಾತ್ರೆ ಭಂಡಾರದಲ್ಲಿ!
ಬೊಕ್ಕಸಕ್ಕೆ ತಕ್ಕ ತರವಾದ ಪಾತ್ರೆಗಳ ತಯಾರಿಕೆಗೆ ಹೆಸರುಗೊಂಡ ಊರುಗಳ ಸಕಲ ಉತ್ಕೃಷ್ಟ ವಸ್ತುಗಳೂ ಗೋಪಿಚಂದನ, ಜಾಘಂಟೆ ವಗೈರೆ ಒಂದೇ ಕಡೆ ದೊರೆಯುವ ಸಂಗ್ರಹಾಲಯವೆಂದರೆ
KALMANJE VYASACHARYA
METAL WARE EMPORIUM, CAR STREET,
UDIPI (S. KANARA).
Visit our Stainless Steel Palace for everything in Metal Ware.

ವಿನೋದಕ್ಕಾಗಿ ಬರೆದ ಲಘುವಿನ್ಯಾಸಗಳಾಗಿಲ್ಲ.

ಭಾಷಣ ಮಾಡುವ ಕುರಿತು ಶ್ರೀ ಶ್ರೀ ಮಲ್ಯರು ಹೆಚ್ಚಿನ ಉತ್ಸಾಹವನ್ನು ತೋರಿಸುತ್ತಿರಲಿಲ್ಲ. ಆದರೆ ಅಂತಹ ಪರಿಸ್ಥಿತಿ ಯೊದಗಿದಾಗ, ಅವರ ಬಾಯಿಯಿಂದ ಬೆಂಕಿಯ ಕಿಡಿಯೂ ಹಾರುತ್ತಿತ್ತು; ರಾಜಕೀಯ ವಿಚಾರ ಮಾತ್ರವಲ್ಲ, ಯಾವುದೇ ಘನವಾದ ವಿಷಯದಲ್ಲಾದರೂ ಗಂಟೆಗಳ ವರೆಗೆ ನಿರರ್ಗಳವಾಗಿ ವಿವರ ವಿವರವಾಗಿ ಮಾತನಾಡುವ ವಾಗ್ವೈಖರಿ ಅವರಿಗೆ ಸಿದ್ಧಿಸಿತ್ತು. ಆದರೆ **ಅಂತಹ ಭಾಷಣಗಳ ಅವಕಾಶವನ್ನು ಅವರು ಹೆಚ್ಚಾಗಿ ತಪ್ಪಿಸಿಕೊಳ್ಳುತ್ತಿದ್ದರೆಂಬುದನ್ನು ಗಮನಿಸಿದರೆ, ನಾವು ಮಾತಿಗಿಂತ ಕೃತಿಯಲ್ಲಿಯೇ ವಿಶ್ವಾಸವುಳ್ಳ ಅವರ ಮನೋವೃತ್ತಿಗೆ ಅದು ಸಹಜ ಗುಣವೆಂದು ನಾವಾದರೂ ಒಪ್ಪಲೇಬೇಕಾಗಿದೆ.**

೬

ಖಾದಿಯ ಕುರಿತು ಶ್ರೀ ಶ್ರೀ ರಾಮರಾಯ ಮಲ್ಯರಿಗೆ ಅಚಲ ವಿಶ್ವಾಸವಿದ್ದಿತು; **ಭಾರತದ ಬಂಧವಿಮೋಚನೆಗೆ ಮಾತ್ರವಲ್ಲ, ಭಾರತದ ಭವ್ಯ ಭವಿಷತ್ತಿಗೂ ಖಾದಿಯೇ ನಿಶ್ಚಿತವಾದ ಹಾದಿಯೆಂದು ಅವರು ಪೂರ್ಣವಾಗಿ ನಂಬಿದ್ದರು.** ಕಾಂಗ್ರೆಸ್ ಮುಂದಾಳುಗಳು ಪಾರ್ಲಿಮೆಂಟ್ ಎಸೆಂಬ್ಲಿ ಸದಸ್ಯತ್ವ ಹಾಗು ಮಂತ್ರಿ ಪದವಿಗಳಿಗಾಗಿ ಹೋರಾಡುತ್ತಿದ್ದಾಗ, ಶ್ರೀ ಶ್ರೀ ರಾಮರಾಯ ಮಲ್ಯರು 'ಚರಕಾ ಸಂದೇಶ' ವನ್ನು ಪ್ರಾರಂಭಿಸಿದರು. ರಾಷ್ಟ್ರಧ್ವಜದ ಮೇಲೆ ಚರಕದ ಬದಲು ಅಶೋಕಚಕ್ರವನ್ನಿರಿಸುವಾಗ ಚರಕವೂ ಅಶೋಕಚಕ್ರವೂ ಒಂದೇ ಎಂದು ನೆಹರು ಹೇಳಿದ ಮಾತನ್ನು ಅವರು ಬಹುವಾಗಿ ಮೆಚ್ಚಿದ್ದರು. ೧೯೩೦ರ ಮೊದಲ್ಗೊಂಡು **ಸರಳವಾದ ಉಡುಪಿನ ಸತತ ಖಾದಿಧಾರಿಗಳಾಗಿ ನಿಶ್ಚಲ ಕಾಂಗ್ರೆಸ್ ನಿಷ್ಠೆಯವರಾಗಿ, ತ್ಯಾಗ ಸಹನೆಗಳ ಮೂರ್ತಿಗಳಾಗಿ ಶ್ರೀ ಶ್ರೀ ರಾಮರಾಯ ಮಲ್ಯರು ನಮ್ಮ ಜಿಲ್ಲೆಯ ದೇಶಸೇವಕರ ಪಂಕ್ತಿಯಲ್ಲಿ ಅಗ್ರಗಣ್ಯರೆನಿಸಿದ್ದಾರೆ.**

***

'ವಾಲಂಟಿಯರ್ ಶ್ಯಾಮು' ಪುಸ್ತಕದ ಕೊನೆಯ ಈ ಭಾಗವು ಶ್ರೀ ಶ್ರೀ ರಾಮರಾಯ ಮಲ್ಯರ ಜೀವನ ಧರ್ಮವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ:

"ಮಂಗಳೂರಿನ ಅಂದವಾದ ಸ್ಮಶಾನಕ್ಕೆ ಶ್ಯಾಮು ಎರಡನೆಯ ಬಾರಿ ಹೋದನು. ತನ್ನ ಬಾಲ್ಯಜೀವನದ ಕೊನೆಯ ಸ್ಮಾರಕದಂತಿದ್ದ ತನ್ನ ಪಿತನ ದೇಹವನ್ನು ಚಿತೆಯಲ್ಲಿರಿಸಿ ಅಗ್ನಿಗೆ ಆಹುತಿಯಾಗಿ ಅರ್ಪಿಸಿದನು. ಚಿತೆಯು ಧಗಧಗನೆ ಉರಿಯುತ್ತಿತ್ತು, ಶ್ಯಾಮು ಆಗ ಸ್ಮಶಾನದಲ್ಲಿ ಕುಳಿತು ಯೋಚಿಸುತ್ತಿದ್ದನು; ಅವನ ಕಣ್ಣೆದುರು ತನ್ನ ಇಡೀ ಜೀವನದ ಚಿತ್ರವು ಹಾದುಹೋಯಿತು. ವಿಧಿಯು ತನ್ನ ಜೀವನವನ್ನು ಹೆಜ್ಜೆಹೆಜ್ಜೆಗೂ ಒಂದು ನಿರ್ದಿಷ್ಟ ರೀತಿಯಲ್ಲಿ ರೂಪಿಸುತ್ತಾ ಬಂದಿರುವುದನ್ನು ಆತನು ಕಂಡುಕೊಂಡನು. ಯಾವುದಕ್ಕೆ? ಯಾವ ಉದ್ದೇಶ ಸಾಧನೆಗೆ? ಎಂಬ ಪ್ರಶ್ನೆ ಆತನ ಮನಸ್ಸಿನಲ್ಲಿ ಉದಯವಾಯಿತು. 'ಕೈರಾಟೆಯ ಪ್ರಚಾರಕ್ಕೆಗೊಳ್ಳ' ಎಂದು ಆತನ ಹೃದಯದಲ್ಲಿ ಧ್ವನಿ ಕೇಳಿಸಿತು! 'ಇದೇ ನಿನ್ನ ಜೀವನದ ಅಂತಿಮ ಉದ್ದೇಶ' ಎಂದು ಹೇಳಿದಂತಾಯಿತು. ಆತನೊಳಗೆ ಈ ರೀತಿಯ ಸಂಭಾಷಣೆ ನಡೆಯಿತು.

"ಕೈರಾಟೆಯನ್ನಿಂದು ಹೆಚ್ಚಿನವರು ಕೈಬಿಡುತ್ತಿದ್ದಾರೆ. ಇದೊಂದು ಸಂಕುಚಿತ ದೃಷ್ಟಿಯ ಗಾಂಧೀ ಹುಚ್ಚೆನ್ನುತ್ತಾರೆ. ಈಗ ಕೈರಾಟೆಯ ಪ್ರಚಾರಕ್ಕೆ ಹೋದರೆ ಏನೆಂದಾರು?"

"ನೀನು ಕಾಲೇಜು ಬಿಡುವಾಗ ಜನ ಏನೆಂದಿದ್ದರು? ಹುಚ್ಚನೆಂದರೆ ಹಾಗೆ ಹೇಳಲಿ. ನಿನಗೇನು? ನಿನ್ನ ಕರ್ತವ್ಯ ಮಾಡು. ಜನರ ಅಭಿಪ್ರಾಯ ಏನಾದೀತೆಂಬ ಹಂಬಲ ಕಟ್ಟಿಕೊಳ್ಳುವ ಈ ದೌರ್ಬಲ್ಯ ಈಗೇಕೆ? ನಿನ್ನ ದಾರಿ ತಪ್ಪೆಂದು ಎಲ್ಲರೂ ಹೇಳಲಿ ಎಲ್ಲರೂ ತಪ್ಪೆಂದೂ ನಿನ್ನ ದಾರಿಯೇ ಸರಿಯೆಂದೂ ಸಾಹಸದಿಂದ ಮುನ್ನಡೆ. ಆ ಹಿಂದಿನ ದಿನಗಳನ್ನು ಮರೆಯಬೇಡ"

"ಕೈರಾಟೆಯ ಸಿದ್ಧಿಯಾದೀತೆ? ಎಂದಾದೀತು? ಪ್ರಪಂಚದ ತೃತೀಯಮಹಾಯುದ್ಧವು ಅನತಿ ದೂರದಲ್ಲಿದ್ದಂತೆ ಕಾಣುತ್ತದೆಯಲ್ಲ"

"ಅಯ್ಯೋ ಹುಚ್ಚ! ಫಲದ ಕಡೆಗೆ ಏತಕ್ಕೆ ದೃಷ್ಟಿ ಇಡುತ್ತಿರುವೆ? ಕಾಲೇಜು ಬಿಡುವಾಗ ಭಾರತದ ಸ್ವಾತಂತ್ರ್ಯ ನಿನ್ನ ಜೀವಮಾನದಲ್ಲಿಯೇ ಸಾಧ್ಯವಾಗುವುದೆಂದು ಎಣಿಸಿದ್ದೆಯೋ? ಮಹಾಯುದ್ಧವಾಗಲಿ, ಪ್ರಳಯವೇ ಬರಲಿ, ನಿನ್ನ ಧರ್ಮದ ದಾರಿ ನಿನ್ನ ಮುಂದೆ ಸ್ಪಷ್ಟವಿರುವಾಗ, ಆದರಲ್ಲಿ ಮುಂದೆ ಸಾಗುವುದು ನಿನ್ನ ಪಾಲಿನ ಕೆಲಸ. ಆದರ ಸಿದ್ಧಿಯೂವಾಗಾದರೆ ನಿನಗೆ ಬಂದ ಚಿಂತೆಯೇನು? ನಿನ್ನ ದಾರಿ ಮೋಕ್ಷದ ದಾರಿ- ಗಾಂಧಿಕೊಟ್ಟ ಉಪದೇಶ ಮರೆಯಬೇಡ— ಮುಂದೆ ಸಾಗು"

ಅನಾಸಕ್ತಿಯೋಗದ ಈ ಶ್ಲೋಕ ಉಚ್ಚರಿಸುತ್ತಾ ಶ್ಯಾಮು ಮನೆಗೆಬಂದನು.

"ಏವಂ ಪ್ರವರ್ತಿತಂ ಚಕ್ರಂ ನಾನು ವರ್ತಯತೀಹಯಃ ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸಜೀವತಿ."

—ಗೀತೆಬೋಧಿಸಿದ ತತ್ವದಂತೆ ಗಾಂಧಿಹೇಳಿಕೊಟ್ಟ ಉಪದೇಶದಂತೆ, ತಾಯ್ನಾಡಿಗೆ ನಿಷ್ಕಾಮ ಕರ್ಮದ, ಸೇವೆಯನ್ನು ಸಲ್ಲಿಸಿ, ಶ್ರೀ ಶ್ರೀ ಹಿರಿಯಡ್ಕ ರಾಮರಾಯ ಮಲ್ಯರು ಇಂತು ಮೋಕ್ಷದ ದಾರಿ ಹಿಡಿದು ಸಾಗಿದರು!

ಇಂಥಾ ಪುಣ್ಯಜೀವಿಗಳಿಗಲ್ಲದೆ ಮೋಕ್ಷದ ಸಿದ್ಧಿ ಇನ್ನಾರಿಗೆ?

ROYAL MAHAL

(Regd.)

UDIPI.

TRAVELLERS'

IDEAL REST HOUSE.

BOARDING & CATERING ATTACHED.

ಉಡುಪಿಯ ಕೇಂದ್ರ ಸ್ಥಳದಲ್ಲಿ,

ಪ್ರಶಾಂತ ವಾತಾವರಣದಲ್ಲಿ,

ಸರ್ವ ಸೌಕರ್ಯಗಳನ್ನೊಳಗೊಂಡಿರುವ

ಮೇಲ್ತರಗತಿಯ

ಪ್ರವಾಸಿಕರ ನಿವಾಸ.

ಒಂದೇ ಕಡೆಯಲ್ಲಿ ಉಪಾಹಾರ, ಊಟ, ವಸತಿಗಳ ಸುವ್ಯವಸ್ಥೆ!

ರೋಯಲ್ ಮಹಾಲ್

ಉಡುಪಿ.

ಕೆ. ವೆಂಕಟ್ರಮಣ ಭಟ್ಟ, ಸ್ಥಾಪಕ.

K. Venkatramana Bhat, *PROPRIETOR.*

ಉತ್ತಮ ಚಿತ್ರಗಳ ಪ್ರದರ್ಶನ!

ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು ಪತ್ರಿಕಾ ಜಾಹೀರಾತಿನ ನಿದರ್ಶನ!!

- "ಪ್ರಕಾಶ" ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ—
- ಮೋಟಾರು, ರೇಡಿಯೋ ಬೆಟ್ರಿಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು--
- ಮದುವೆ, ಮುಂಜಿಗಳಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?

ಶ್ರೀ ರಾಮಕೃಷ್ಣ ಥಿಯೇಟರ್,

ಲಿಮಿಟೆಡ್, ಉಡುಪಿ--ಇಲ್ಲಿ!

Sri Ramakrishna Theatre Limited, Udipi.

ಅತಿ ಹೆಚ್ಚು ಬಾಳಿಕೆಗೆ ಪ್ರಖ್ಯಾತಿಪಟ್ಟ ಶೂಸುಗಳಿಗೂ, ಪಾದರಕ್ಷೆಗಳಿಗೂ

ಜೆಪ್ಪು ಶ್ಯೂ ಮಾರ್ಟ್, ಉಡುಪಿ.

ಪ್ಲೇಟೋವಿನ "ಆದರ್ಶ ಪ್ರಜಾರಾಜ್ಯ"ದ ಕಲ್ಪನೆ

(೧೩ನೇ ಪುಟದಿಂದ ಮುಂದರಿದುದು)

...ಮತಾವಾದ ಒಂದು ರಾಜಕೀಯ ತಂ...ೃ, ರಾಜ್ಯ ಚಾಲಕ ಹಾಗೂ ಮಂತ್ರಿಗ...ಾದ ತಾತ್ತ್ವಿಕರಿಗೆ, ರಾಜ್ಯಪಾಲಕರಾದ ...ರೋಧರಿಗೆ ಸಂಬಂಧಪಟ್ಟ ರಾಜನೀತಿ. ...ದು ಜನ ಸಾಮಾನ್ಯಕ್ಕೆ ಅನ್ವಯಿಸು...ಂಥದಲ್ಲ. ಸ್ಥಾನಬಲದಿಂದ ರಾಜ್ಯಸೂ...ೃಗಳನ್ನು ಹಿಡಿದವರು ಸ್ವಾರ್ಥಕ್ಕಾಗಿ ಬ... ಬೀಳಬಹುದೆಂಬ ಮತ್ತು ರಾಜ್ಯದ ...ಮಹಾಕಾಂಕ್ಷೆಗಳನ್ನು ಬದಿಗೊತ್ತಬಹು...ೆಂಬ ಭೀತಿಯಿಂದ ತಾತ್ತ್ವಿಕ ಮತ್ತು ...ರೋಧ ವರ್ಗಕ್ಕೆ ಆಸ್ತಿಪಾಸ್ತಿ, ಮನೆ ...ತನಗಳು ಇರಕೂಡದೆಂಬ ಸೂಕ್ತ ಸಲಹೆ ...ಪ್ಲೇಟೋ ನೀಡಿರುತ್ತಾನೆ. ಇದು ಇಂ...ನ ಅಧಿಕಾರ ವರ್ಗದವರು ವಿಚಾರ ...ಮಾಡಬೇಕಾದ ವಿಷಯ. ವರ್ಗ ರಹಿತ ...ಾದ ಸಮಾಜವನ್ನು ಕಟ್ಟಬೇಕೆಂಬ ...ಕೊಂಗನಿಸಿನ ಆಧುನಿಕ ಸಮತಾವಾದಿ...ಳು ವರ್ಗ ನಿರ್ಮೂಲನ ಅಷ್ಟು ಸುಲಭ...ವಲ್ಲವೆಂದು ತಿಳಿಯಬೇಕು. ಮೂಲ ಭೂ...ತವಾಗಿ ವಿಚಾರ ಮಾಡುವುದಾದರೆ ಆರ್ಥಿ...ಕ ಸಮತಾವಾದಕ್ಕೆ ಅಸ್ತಿಭಾರಕಾರ್ಮಿಕ ಸಮತಾವಾದ (functional com...munism). ಅವರ ಕಾರ್ಮಿಕ ಕುಶ...ಲತೆಯಲ್ಲಿ ಸಮತಾವಾದ (ಅದರ ಸಾ...ಮಾನ್ಯ ಶಬ್ದಾರ್ಥದಲ್ಲಿ) ಸಾಧಿಸಲಾಗದು. ...ಬ್ಬನ ಕುಶಲತೆಯ ವಿಷಯದಲ್ಲಿ ಪ್ರಕೃ...ತಿಯೇ ಭೇದಗಳನ್ನು ನಿಯೋಜಿಸಿದೆ. ಆ...ದ್ದರಿಂದ ಸಮತಾವಾದದ ನಿಜವಾದ ಅ...ರ್ಥ ಪ್ರತಿಯೊಬ್ಬನಿಗೂ ತನ್ನ ವೈಯಕ್ತಿಕ ಸ್ವಾಭಾವಿಕ ಕರ್ಮದಲ್ಲಿ ನಿರತನಾಗುವ ಅವಕಾಶವನ್ನು ಕಲ್ಪಿಸಿಕೊಡುವುದು (creation of functional opportunity). ಈ ದೃಷ್ಟಿಯಿಂದ ನೋಡುವುದಾದರೆ ವರ್ಗ ಸಮಾಜ ಸಮತಾವಾದಕ್ಕೆ ವಿರೋಧವೆಂದು ಭಾಸವಾಗುವುದಿಲ್ಲ. ತೋರಿಕೆಗೆ ವಿರುದ್ಧವೆನಿಸಿದ ಈ ತತ್ತ್ವಗಳೆರಡನ್ನೂ ಪರಸ್ಪರ ಸಾಂಗತ್ಯವುಳ್ಳವುಗಳೆಂದು ಪ್ಲೇಟೋ ತೋರಿಸಿ ಕೊಟ್ಟಿರುವುದನ್ನು ಇಂದಿನ ಸಮತಾವಾದಿಗಳು ಗಮನಿಸಬೇಕು.

ಒಟ್ಟಿನಲ್ಲಿ ಹೇಳುವುದಾದರೆ ಭಾರತ ಪ್ರಜಾರಾಜ್ಯದ ನಿರ್ಮಾತೃಗಳಾದ ಪ್ರಜೆಗಳು ಪ್ಲೇಟೋವಿನ ಆದರ್ಶ ರಾಜ್ಯದ ಕಲ್ಪನೆಯಿಂದ ತಿಳಿದುಕೊಳ್ಳಬಹುದಾದ ಅನೇಕ ವಿಷಯಗಳಿವೆ. ಎಲ್ಲದಕ್ಕಿಂತ ಮುಖ್ಯವಾಗಿ ಪ್ಲೇಟೋ ಸ್ಪಷ್ಟ ವಾಣಿಯಲ್ಲಿ ಹೇಳುವ ನ್ಯಾಯ, ಧರ್ಮಗಳ ಸರ್ವಾಧಿಕಾರತ್ವವನ್ನು ಅರ್ಥ ಮಾಡಿಕೊಳ್ಳಬೇಕು. ಅನೇಕರು ಪ್ಲೇಟೋವಿನ ರಾಜ್ಯದಲ್ಲಿ ತಾತ್ತ್ವಿಕನೇ ರಾಜ, ನಿರಂಕುಶ ಪ್ರಭು, ಎಂದು ತಿಳಿದುಕೊಂಡ ಹಾಗಿದೆ. ಇದು ತಪ್ಪೆಂದು ತೋರುತ್ತದೆ ಹೇಗೆಂದರೆ 'ತಾತ್ತ್ವಿಕನೇ (Philosopher) ರಾಜನಾಗಬೇಕು; ರಾಜನಾದವನು ತಾತ್ತ್ವಿಕನಾಗಬೇಕು' ಎನ್ನುವ ಮಾತನ್ನು ಪ್ಲೇಟೋ ಸಾಂಕೇತಿಕವಾಗಿ ಹೇಳುವನೇ ಹೊರತು ಅದರ ಶಬ್ದಾರ್ಥದಿಂದ ಅಲ್ಲ. ಸಹಜ ತಾತ್ತ್ವಿಕನಾದವನು ನ್ಯಾಯ ಧರ್ಮಗಳಿಗೆ ಶರಣು ಹೋಗಿ ಅವರಂತೆ ನಡೆದು ಕೊಳ್ಳುತ್ತಾನೆ. ಸ್ವಚ್ಛಂದ ರೀತಿಯ ನಿರಂಕುಶಮತಿಯಾಗಿ ಪ್ರವರ್ತಿಸುವುದಿಲ್ಲ. ತನ್ನ ಜ್ಞಾನ ದೃಷ್ಟಿಗೆ ತೋರುವ, ಸಕಲ ಕಲ್ಯಾಣದಾಯಕವಾದ ಮಾರ್ಗದರ್ಶನವನ್ನಿತ್ತು ಜನರ ಆತ್ಮ ಸಾಧನೆಗೆ, ವ್ಯಕ್ತಿತ್ವ ಸಾಧನೆಗೆ ಸಹಾಯಕನಾಗುತ್ತಾನೆ. ಆದ್ದರಿಂದ ಸಾಮಾನ್ಯ ವ್ಯಕ್ತಿಯು ತಾತ್ತ್ವಿಕನಾದವನ ಸಲಹೆಗಳನ್ನು, ನಿಯಮಗಳನ್ನು ಪಾಲಿಸದೆ ಹೋದಲ್ಲಿ ಅಂತಹ ಉಲ್ಲಂಘನೆ ಆತ್ಮನಾಶಕ್ಕೆ ಕಾರಣವಾಗುವುದೇ ಹೊರತು ಉದ್ಧಾರಕ್ಕೆ ಅಲ್ಲ. ತಾನರಿಯಲಾಗದ ಸತ್ಯವನ್ನು ದಿವ್ಯಜ್ಞಾನ ಚಕ್ಷುಸಿನಿಂದ ತಿಳಿಯಬಲ್ಲವನಿಂದ ಪಡೆವ ಪ್ರಯೋಜನವನ್ನು ಹೊಂದಬಹುದಾದ ಸನ್ನಿವೇಶದಲ್ಲಿ ಅಂತಹುದನ್ನು ಅಲ್ಲಗಳೆಯಬಾರದು. ಏಕೆಂದರೆ ವಿಧಿಗಳನ್ನು ನಿಯಮಿಸುವ, ಕರ್ತವ್ಯಗಳನ್ನು ಸೂಚಿಸುವ ಅಧಿಕಾರ ನೇರವಾಗಿ ತಾತ್ತ್ವಿಕನಿಗೆ ಸೇರಿದುದಲ್ಲ, ಎಲ್ಲವನ್ನೂ ನಿಯಂತ್ರಿಸುವ ಧರ್ಮದ್ದು. ಅದಕ್ಕೆ ಮಣಿದರೆ ವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಿಲ್ಲ, ಗಳಿಸುತ್ತಾನೆ. ಈ ತತ್ತ್ವವನ್ನು ತಿಳಿದರೆ ಒಂದು ರಾಜ್ಯದ ಅಥವಾ ಸಮಾಜದ ಸುವ್ಯವಸ್ಥೆ ಕಠಿಣವಲ್ಲ, ತಿಳಿಯದಿದ್ದರೆ ಪತನ ದೂರವಿಲ್ಲ. ಆದ್ದರಿಂದ ಮುಖ್ಯವಾಗಿ ಪ್ರಜಾರಾಜ್ಯದಲ್ಲಿ ಯಾವ ವ್ಯಕ್ತಿಯೂ ನಿರಂಕುಶಪ್ರಭುವಲ್ಲ. ಪ್ರಭುತ್ವ ಧರ್ಮದ್ದು, ನ್ಯಾಯದ್ದು. ಇದರ ಮುಂದೆ ವ್ಯಕ್ತಿ ಮತ್ತು ಸಮಾಜ ಒಂದೇ ಆಗುತ್ತಾರೆ. ಪರಸ್ಪರ ಪೂರಕರಾಗುತ್ತಾರೆ. ಒಂದರ ಶ್ರೇಯಸ್ಸು ಇನ್ನೊಂದರ ಶ್ರೇಯಸ್ಸಾಗುತ್ತದೆ—ಒಂದರ ಪತನ ಮತ್ತೊಂದರ ಪತನವಾಗುತ್ತದೆ. ಇಂತಹ ಸಂಘಟಿತ ಧರ್ಮಬದ್ಧ ಸಮಾಜ ಮತ್ತು ವ್ಯಕ್ತಿ ಚಿತ್ರವನ್ನು ಕೊಟ್ಟಿರುವುದು ಪ್ಲೇಟೋ ಮಾನವ ಜನಾಂಗಕ್ಕೆ ಇತ್ತಿರುವ ಕಾಣಿಕೆ!

ಪ್ಲೇಟೋವಿನ ವಾದ ಬಹಳ ಆದರ್ಶ (Ideal)ವೆಂದು ಕಂಡು ಬಂದರೂ ನಾವು ಅಗತ್ಯವಾಗಿ ಮನನ ಮಾಡುವ ವಿಚಾರವಾಗಿರುತ್ತದೆ.

ತಂತಿ: ಲಕ್ಷ್ಮಿ ನಿವಾಸ್. ಟೆಲಿಫೋನ್: 82 & 95.

ಮಂಗಳೂರನ್ನು ಸಂದರ್ಶಿಸಿದಾಗ ನೆನಪಿರಲಿ!

"ಜಯ ಕೆಫೆ—ಲಕ್ಷ್ಮಿ ನಿವಾಸ್"

ಅತ್ಯಾಧುನಿಕವಾದ ಸಕಲ ಸೌಕರ್ಯಗಳಿಂದೊಡಗೂಡಿದ

ಬೋರ್ಡಿಂಗ್ ಲಾಡ್ಜಿಂಗ್



ಊಟ ಮತ್ತು ವಸತಿಗೃಹ.

ಜನತಾಸೇವೆಯೇ ನಮ್ಮ ಮುಖ್ಯ ಗುರಿ.

FOR ENTIRELY MODERNISED AND SELF CONTAINED ROOMS:-

JAYA CAFE - LAXMI NIVAS

K. S. Rao Road, MANGALORE. (S. K.)

H. O. **COIMBATORE.** *Prop:* **N. V. BHAT.**

ರಾಷ್ಟ್ರಾಭ್ಯುದಯದ ಅಡಿಗಲ್ಲು - ವ್ಯಕ್ತಿಯ ಕ್ಷೇಮ

ಇಂದು ಸಾಮಾನ್ಯವಾಗಿ ಒಬ್ಬನು ರಾಜಕೀಯವನ್ನು ಪ್ರವೇಶಿಸಿದರೆ, ಸಮಾಜ ಸೇವೆಯನ್ನು ಕೈಗೊಂಡರೆ ಅಥವಾ ಧರ್ಮ ಪ್ರವಾದಿಯಾದರೆ ಅದರಲ್ಲೇನೊ ಸ್ವಾರ್ಥ ಅಡಗಿದೆ ಎನ್ನುವವರು ಅನೇಕ. ಆದರೆ ಸ್ವಾರ್ಥಿಯಾಗುವುದೇ ತಪ್ಪಲ್ಲ. ಒಳ್ಳೆಯ ಜೀವನ ನಡೆಸುವ ವ್ಯಕ್ತಿ ಮತ್ತು ಸ್ವಯಂಪೂರ್ಣ ಕುಟುಂಬಗಳಲ್ಲಿಯೇ ಸಮಾಜಾಧಿಷ್ಠಿತವಾದ ರಾಷ್ಟ್ರದ ಕಲ್ಯಾಣ ಹುದುಗಿದೆ.

ಬರೆದವರು: ಶ್ರೀ. ಬಿ. ಡಿ. ಗಣಪತಿ.

"ನನ್ನ ಕ್ಷೇಮದಲ್ಲಿಯೇ ಸರ್ವರ ಕ್ಷೇಮ!"

ಹೀಗೆಂದಾಗ ಆಶ್ಚರ್ಯದಿಂದ ಬಿರುಗಣ್ಣು ಮಾಡಬೇಡಿ. ತಾನು ಸುಖದಲ್ಲಿರಲು ನ್ಯಾಯರೀತಿಯಲ್ಲಿ ಪ್ರಯತ್ನಿಸುವವರಲ್ಲಿ ಸರ್ವರ ಅರ್ಥಾತ್ ದೇಶದ ಕಲ್ಯಾಣವಿದೆಯೆಂದು ಹೇಳಿದಾಗ ಸ್ವಾರ್ಥಕ್ಕೆ ಪರಾರ್ಥದ ಹೊದಿಕೆ ಹಾಕುತ್ತಿರುವೆನೆಂದು ನಿರ್ಧರಿಸಿ ಬಿಡಬೇಡಿ. "ನಾನುಂಟೋ ಮೂರು ಲೋಕವುಂಟು" ಎಂಬ ಮಾತಿನಲ್ಲೂ ವಿಶಾಲ ಅರ್ಥವಿದೆ!

ಒಬ್ಬ ಮನುಷ್ಯನು ತನ್ನ ಕುಟುಂಬಕ್ಕಾಗಿ, ತನ್ನ ಹಿತ, ಉತ್ಕರ್ಷಗಳಿಗಾಗಿ ಪ್ರಯತ್ನಪಡುತ್ತಿದ್ದರೆ, ಪರರ ಗೊಡವೆಗೆ ಹೋಗದೆ, ರಾಜಕೀಯ ಕ್ಷೇತ್ರಕ್ಕಿಳಿಯದೆ ಸಮಾಜದ ಗೊಂದಲದಲ್ಲಿ ಕೈ ಹಾಕದೆ ತನ್ನಷ್ಟಕ್ಕೆ ತಾನು ಕೆಲಸಮಾಡಿಕೊಂಡು, ನ್ಯಾಯ ಪಥದಲ್ಲಿ ದುಡಿದು ಜೀವಿಸುತ್ತಿದ್ದರೆ ಆತನನ್ನು ಸ್ವಾರ್ಥಿಯೆಂದು ಕರೆಯುತ್ತಾರೆ. ನಾಯಿಯ ಮೊಲೆಯಲ್ಲಿ ಎಷ್ಟು ಹಾಲಿದ್ದರೇನು? ಯಾರಿಗೂ ಪ್ರಯೋಜನವಿಲ್ಲವೆಂದು ನಿರ್ಧರಿಸುತ್ತಾರೆ. ಆದರೆ ತನ್ನ ಕ್ಷೇಮದಲ್ಲಿಯೇ ನಿರತನಾದ ಆ "ಸ್ವಾರ್ಥಿ"ಯ ಸ್ವಾರ್ಥತೆಯು ಯಾವನೊಬ್ಬ ತ್ಯಾಗಿಯ 'ದೇಶಸೇವೆ'ಗಿಂತ ಕಿರಿದಲ್ಲ.

ಮನುಷ್ಯನು ಸ್ವಭಾವತಃ ಸ್ವಾರ್ಥಿಯಿದ್ದಾನೆ. ಆದ್ದರಿಂದ ತನ್ನ ಸುಖ, ತನ್ನ ಹಿತಗಳನ್ನು ಇತರರ ಹಿತಸುಖಗಳಿಗಿಂತ ಮಿಗಿಲೆಂದು ಪರಿಗಣಿಸುವುದು ಸ್ವಾಭಾವಿಕವೇ ಇದೆ. ಮನುಷ್ಯನು ಜನ್ಮತಃ ಸ್ವಾರ್ಥಿಯೆಂಬ ಮಾತಿಗೆ ಅಪವಾದಗಳಿಲ್ಲವೆಂದಲ್ಲ. ಎಲ್ಲಾ ನಿಯಮಗಳಿಗೂ ಅಪವಾದವಿರುವಂತೆ ಮಹಾತ್ಮಾಗಾಂಧಿ, ಜವಾಹರಲಾಲ್, ಬುದ್ಧ, ಅಶೋಕ ಮೊದಲಾದವರು ನನ್ನ ವಾದಕ್ಕೆ ಅಪವಾದವಿದ್ದಂತೆ! ಅವರೆ ಈ ಅತಿ ಮಾನವರನ್ನು ಬಿಟ್ಟು ಸಾಮಾನ್ಯರ ಮಟ್ಟಿಗೆ ಮನುಷ್ಯನು ಮುಖ್ಯತಃ ಸ್ವಾರ್ಥಿಯೆಂಬ ವಾದ ಸುಳ್ಳಲ್ಲ.

***

ಮೇಲೆ ಹೇಳಿದಂತೆ ಮನುಷ್ಯನು ಸಮಾಜ, ರಾಜಕೀಯ ಮೊದಲಾದುವುಗಳ ಗೊಡವೆಗೆ ಹೋಗದೆ ತನ್ನ ಕುಟುಂಬದ ಸುಖ ಸೌಖ್ಯಗಳನ್ನೇ ಸರ್ವಸ್ವವೆಂದು ತಿಳಿದು ಅದಕ್ಕಾಗಿ ಅಹರ್ನಿಶಿ ದುಡಿಯುತ್ತಿದ್ದರೆ ಅದನ್ನು ಜನತೆ ಮೆಚ್ಚುವದಿಲ್ಲ; "ಆ ಕೂಪ ಮಂಡೂಕ ಜೀವನವೇಕೆ?" ಎಂದು ಪ್ರಶ್ನಿಸುತ್ತಾರೆ. ಈ ಕಾರಣದಿಂದ ಜನರು ತಮ್ಮ ಈ ಮೂಲಭೂತ ಕರ್ತವ್ಯವನ್ನು ಬಿಟ್ಟು ವಿವಿಧ ಮುಖದ ವಿವಿಧ ಕ್ಷೇತ್ರಗಳಲ್ಲಿ ಕೈಯಿಕ್ಕಿದ್ದಾರೆ. ಸಮಾಜವೂ ಕೂಡ ಈ ವಿವಿಧ ಕಾರ್ಯಗಳಿಗೆ ತನ್ನದೇ ಆದ ಬೆಲೆ ಕಟ್ಟಿ ಗೌರವ ಕೊಡುತ್ತದೆ.

ಅದರಂತೆ ರಾಜಕೀಯ ವೇದಿಕೆ ಏರಿ ಉಚ್ಚ ಕಂಠದಿಂದ ನಾಲ್ಕು ಮಾತಾಡುವವ 'ದೇಶ ಸೇವಕ' ನೆನಿಸಿ ಹೂಮಾಲೆಗೆ ಅರ್ಹನಾಗುತ್ತಾನೆ. ನಾಲ್ಕಾರು ಜನರನ್ನು ಸೇರಿಸಿ, ಸಾಮೂಹಿಕ ಕೆಲಸವೆಂದು ಓಡಾಡುವವನು ಸಮಾಜ ಸೇವಕನೆನಿಸಿ ಗೌರವಾರ್ಹನಾಗುತ್ತಾನೆ. ಜನರಿಗೆ ಬೇಕಿರುವ ವಸ್ತುಗಳನ್ನು ಅವರಿರುವೆಡೆಯಲ್ಲಿ ಒದಗಿಸಿಕೊಡಬೇಕೆಂಬ ಉತ್ತಮ ಅಭಿಪ್ರಾಯವು ಯಾವ ರೀತಿ ವ್ಯಾಪಾರದ ಹೆಸರು ಪಡೆದು ಜನಶೋಷಣೆಯ ಮಾರ್ಗವಾಯಿತೋ ಅದೇ ರೀತಿ ಮೇಲಿನ ದೇಶ ಸೇವೆಯಾಗಲೀ, ಸಮಾಜ ಹಿತ ಕೆಲಸವಾಗಲೀ ಉದಾತ್ತ ಗುರಿಯಿಂದ ಪ್ರಾರಂಭವಾದರೂ ಜನ ಶೋಷಣೆಯ ಹೆದ್ದಾರಿಯಾಗಿವೆ.

ಉದಾತ್ತ ತತ್ವಗಳನ್ನು ಹೇಳುತ್ತಿದ್ದವನು ಮೇಲೇರಿ ಅಧಿಕಾರಕ್ಕೆ ಬಂದಾಗ ಅಧಿಕಾರವನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವದು, ದಾಸಾನುದಾಸನಾಗಿ ಸೇವೆ ಸಲ್ಲಿಸುವೆನೆಂಬವನು ಮತ ಪಡೆದು ಮೇಲೇರಿದ ನಂತರ ಸೇವೆಯ ಭರವಸೆಯನ್ನು ಗಾಳಿಗೆ ಚೆಲ್ಲಿ ತನ್ನ ಸ್ವಾರ್ಥದಲ್ಲಿ ಮಗ್ನನಾಗುವದು, ಸಮಾಜ ಹಿತಕ್ಕೆಂದು ಜನತೆಯ ಸಹಾಯಕ್ಕೆಂದು ನಿಧಿಸಂಗ್ರಹ ಮಾಡುವವರು, ಇತರ ಜವಾಬ್ದಾರಿ ಹೊರುವವರು ಅವುಗಳ ದುರುಪಯೋಗ ಮಾಡುವದು ಈರೀತಿಯ ವಿವಿಧ ನಿದರ್ಶನಗಳು ಸಾಮಾನ್ಯ ಮನುಷ್ಯನು ಜನ್ಮತಃ ಸ್ವಾರ್ಥಿಯೆಂಬುದನ್ನೇ ಸಿದ್ಧಪಡಿಸುತ್ತವೆ.

***

ರಾಜಕೀಯ ಧುರೀಣರ, ದೇಶಸೇವಕರೆನ್ನುವವರ, ಸಮಾಜ ಸುಧಾರಕರಾಗಿರುವವರ, ಧರ್ಮ, ನೀತಿ ಪ್ರಚಾರಕರ ಕೋಟಲೆಯಿಂದ ಜನತೆಗಾದಷ್ಟು ಹಾನಿ ನೇರವಾಗಿ ತಲೆ ಹೊಡೆಯುವವರಿಂದ, ಮನೆ ನುಗ್ಗಿ ಕಳ್ಳತನ ಮಾಡುವವರಿಂದ ಆಗಿಲ್ಲ. ಇಂದು ಸಾಮಾನ್ಯವಾಗಿ ಒಬ್ಬನು ರಾಜಕೀಯವಾದಿ ಆಗಬೇಕಾದರೆ, ಸಮಾಜಸುಧಾರಕನಾಗಬೇಕಾದರೆ, ಧರ್ಮಪ್ರವಾದಿಯಾಗಬೇಕಾದರೆ ಯಾವುದೋ ಸ್ವಾರ್ಥಗುರಿ ಇದ್ದೇ ಇದೆಯೆಂದು ಜನತೆ ತಿಳಿದುಕೊಳ್ಳುತ್ತದೆ. ಈ ತಿಳಿವಳಿಕೆ ಪೂರ್ಣ ತಪ್ಪೇನಲ್ಲ!

"ಇನ್ನೊಬ್ಬರನ್ನು ನಾನು ಉದ್ಧಾರ ಮಾಡುತ್ತೇನೆ; ಇನ್ನೊಬ್ಬರನ್ನು ನಾನು ಮೇಲೆತ್ತುತ್ತೇನೆ; ನಾನು ಮುಂದಾಳಾಗಿ ಸರ್ವರ ಹಿತಸಾಧಿಸುತೇನೆ' ಎಂಬ ಉದ್ಗಾರಗಳೆಲ್ಲಾ ಟೊಳ್ಳು ಮಾತುಗಳು. ಯಾರಿಂದ ಯಾರನ್ನೂ ಮೇಲೆತ್ತಲು ಸಾಧ್ಯವಿಲ್ಲ. ತಂದೆಯಿಂದ ಮಗನನ್ನು ಉದ್ಧರಿಸಲು ಸಾಧ್ಯವಿಲ್ಲನೆಂದಾದರೆ ಮತ್ತೆ ಸಮಾಜವನ್ನು ಉದ್ಧಾರ ಮಾಡುವ ಮಾತು ಬಹುದೂರವೇ ಉಳಿಯಿತೆಂದು ಬೇರೆ ಹೇಳುವ ಅಗತ್ಯವಿಲ್ಲ. ಸ್ವಾಮಿ ವಿವೇಕಾನಂದರು ಇದೇ ಮಾತನ್ನು ಹೇಳಿದ್ದಾರೆ. ಅವನವನಿಂದ ಅವನವನ ಉದ್ಧಾರವಾಗಬೇಕು. ಅಂಥಾ ಉದ್ಧಾರದ ಪ್ರಗತಿಗೆ ಬೇಕಾದ ಅವಕಾಶಗಳನ್ನು ಕಲ್ಪಿಸಿಕೊಡುವದು ಸರಕಾರದ, ಸಮಾಜದ, ಮುಂದಾಳುಗಳೆನ್ನುವವರ ಹಾಗೂ ರಾಜಕೀಯದ ಗುರಿ ಇರಬೇಕು.

***

ಮನುಷ್ಯನು ತನಗೆ ಬೇಕಾದ ಹಣ, ಸಂಪತ್ತನ್ನು ನ್ಯಾಯ ರೀತಿಯಿಂದ ಸಂಪಾದಿಸುವದು ತಪ್ಪಲ್ಲ. ತ್ಯಾಗ, ವೈರಾಗ್ಯಗಳನ್ನು ಬೋಧಿಸುವ ನಮ್ಮ ವೈದಿಕ ಧರ್ಮವೂ ಕೂಡ ನ್ಯಾಯ ರೀತಿಯ ಧನ ಸಂಪಾದನೆಯನ್ನು ನಿಷಿದ್ಧವೆಂದಿಲ್ಲ. ಆದರೆ ಅಂಥಾ ಸಂಪಾದನೆಯನ್ನು ಹೆರವರ ಶೋಷಣೆಯಿಂದ, ಇತರರಿಗೆ ಅನ್ಯಾಯ, ಮೋಸ ಮಾಡುವದರಿಂದ ಸಂಪಾದಿಸುವದು ಮಾತ್ರ ನಿಷಿದ್ಧವಾಗಿದೆ. ಸಿರಿವಂತರು ತಮ್ಮಸಿರಿ ಸರ್ವರ ಹಿತಕ್ಕಿರುವದೆಂದೂ, ತಾವು ಅದರ "ಟ್ರಸ್ಟಿ"ಗಳೆಂದು ಭಾವಿಸಬೇಕೆಂದೂ ಗಾಂಧೀಜಿಯವರು ಹೇಳುತ್ತಿದ್ದ, ಇಂದು ವಿನೋಬಾರವರು ಹೇಳುತ್ತಿರುವ ಮಾತಿನ ಮರ್ಮವಾದರೂ ಅದೇ ಆಗಿದೆ.

ಆದ್ದರಿಂದ ಹೆರವರಿಗೆ ಅನ್ಯಾಯ ಮಾಡದೆ ಸ್ವತಹ ದುಡಿದು ಮಾಡುವ ಸಂಪಾದನೆ ಆ ಮಟ್ಟಿಗೆ ರಾಷ್ಟ್ರದ ಉತ್ಕರ್ಷಕ್ಕೆ ಸಹಾಯಕವಾಗುತ್ತದೆ. ದೇಶದ ಸಂಪತ್ತನ್ನು ವೃದ್ಧಿಗೊಳಿಸುವ ಈ ದುಡಿಮೆ ಒಂದು ಕುಟುಂಬದ ದೃಷ್ಟಿಯಿಂದಾಗಿರ ಬಹುದಾದರೂ ರಾಷ್ಟ್ರದ ಹಿತಕ್ಕೆ ಆತಂಕವಲ್ಲ.

ಒಂದು ಮನೆ ಭದ್ರವಾಗಿರಬೇಕಾದರೆ ಗೋಡೆಯ ಇಟ್ಟಿಗೆಗಳೆಲ್ಲವೂ ಚೆನ್ನಾಗಿರಬೇಕು. ಉಪಯೋಗಿಸಿದ ಮರಗಳೆಲ್ಲವೂ ಉತ್ತಮವಿರಬೇಕು. ಗೆದ್ದಲು ಹಿಡಿದ ಒಂದು ಮರದಿಂದ ಹತ್ತಿರದ ಇತರ ಉತ್ತಮ ಮರಗಳೂ ಹಾಳಾಗುವಂತೆ ರೋಗಿಯೊಬ್ಬನಿರುವದರಿಂದ ಸಮಾಜವೇ ರೋಗ ಪೀಡಿತವಾಗುವಂತೆ ಬಡತನ ಕೆಲವರಲ್ಲಿದ್ದರೂ, ಹಲವರ ಉತ್ಕರ್ಷಕ್ಕೂ ದೇಶದ ಪ್ರಗತಿಗೂ ಆತಂಕ. ಆದ್ದರಿಂದ ಪ್ರತಿಯೊಂದು ಕುಟುಂಬವೂ ತನ್ನ ಹಿತದೃಷ್ಟಿಯಿಂದ ದುಡಿದು ಗಳಿಸುವುದನ್ನು ಸ್ವಾರ್ಥತೆಯೆಂದು ಹೇಳುವ ಜನರಿರಬಹುದಾದರೂ ಈ ಸ್ವಾರ್ಥತೆಯೇ ಸಮಾಜ ಕಲ್ಯಾಣವನ್ನು ಸಾಧಿಸುವದು. ವ್ಯಷ್ಟಿ ಸಮಷ್ಟಿಗಳಂತೆ ವಿವಿಧತೆಯಲ್ಲಿ ಏಕತೆಅಡಗಿರುವಂತೆ, ಸ್ವಯಂಪೂರ್ಣ ಕುಟುಂಬಗಳಲ್ಲಿ ರಾಷ್ಟ್ರದ ಅಭಿವೃದ್ಧಿ ಅಡಗಿದೆ. ತನ್ನನ್ನು ತಾನು ಸುಧಾರಿಸಿ ಕೊಳ್ಳುವುದೇ ವೇದಾಂತದ ತಿರುಳಿರುವಂತೆ ತನ್ನ ಕುಟುಂಬವನ್ನು ತಾನು ನ್ಯಾಯ ದೃಷ್ಟಿಯಿಂದ ದುಡಿದು ಮೇಲೆತ್ತುವದರಲ್ಲಿಯೇ ದೇಶ ಸೇವೆಯ ಸಾರಸರ್ವಸ್ವವಿದೆ.

ಇಂದಿನ ಅವಿವಾಹಿತೆಯರ ಜೀವ ಜೀವಾಳದ ಸಮಸ್ಯೆಯನ್ನು ಬಿಡಿಸಲೆತ್ನಿಸಿದ, ಮತ್ತು ಕನ್ನಡ ನಾಡಿನ ಪ್ರಮುಖ ಪತ್ರಿಕೆಗಳಿಂದ ಮೆಚ್ಚಿಕೆಯನ್ನು ಪಡೆದ

"ಅವಿವಾಹಿತೆ"

(ಲೇ: ಶ್ರೀನಿವಾಸ ಹಾವನೂರ)

ಅವಶ್ಯ ಓದಲೇ ಬೇಕು.

ಬೆಲೆ: ೧—೪—೦. ಪುಟಗಳು—೯೦.

ಕೂಡಲೇ ಬರೆಯಿರಿ:

ರಾಕಾಕು ಪ್ರಕಾಶನ

ಕುಮಟಾ, ಉ. ಕನ್ನಡ.

ಕುಮಾರಿ ಬಿಲ್ಲೆಗಳು (Govt-Regd.)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟಿನ ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/- (ವಿ. ಪಿ. ಪಿ. ಪ್ರತ್ಯೇಕ.)

MRS. P. DEVEE, F. D. S. (N. J. S.)

GULCUTTA-40.

ಸ್ಟಾಕಿಸ್ಟರು: – (1) ಸಾ ಕಂಪೆನಿ, ಮಂಗಳೂರು 1.

(2) ರಾಜಾ ಮೆಡಿಕಲ್ ಹೋಲ್, ಧರ್ಮರಾಜ ಸ್ಟ್ರೀಟ್, ಬೆಂಗಳೂರು ಕೆಂಟೋನ್ಮೆಂಟ್.

(3) ರಾಘವನ್ ಮತ್ತು ಕಂಪೆನಿ, ಬೆಂಗಳೂರು ಸಿಟಿ.

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ! ಕಿಲ್ಲೆಯವರಿಗೆ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ಮರೆಂತ ಕರ್ಣ ನಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ! ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ದರಗತಿಯ ಕವಿತೆಗಳ ಸಂಗ್ರಹ. ಬೆಲೆ:0-12-0.

(ಮುನ್ನುಡಿಕಾರರು ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆಬರೆಯಿರಿ: ನವಭಾರತ ಪುಸ್ತಕ ಭಂಡಾರ ಉಡುಪಿ

ಕವಿ - ಕೋಗಿಲೆ

೧

ವೃಂದಾವನದಲಿ ಕೋಗಿಲೆ ಕೂಗಿದೆ
ಕುಹೂ ಕುಹೂ ಕರೆದು
ಮಂಜುಳನಾದ ನಿವೇದನೆಯಲಿ ಕಣ್
ಮುಗಿದಿದೆ ಮೈಮರೆದು
ಪ್ರಿಯತಿಯ ಮೊದಲಿನ ನಗೆನೋಟದ ನಸು
ಕೊಪ್ಪಿದೆ ಬಾಂದಳದೆ
ನಿಯತಿಯ ವರ್ಣ ವಿಕಾಸದ ಕಲ್ಪನೆ
ಕೆದರಿದೆ ಭೂತಳದೆ
ತರಡಿಗಳ ಗಂಭೀರ ವಿವೇಚನೆ
ತೊಡಗಿದೆ ಹೂಗಳಲಿ
ಸಾರಸಗಳ ಹೃತ್ಸಾರದ ಮಿಡಿತಕೆ
ಸುಳಿದಿದೆ ತಂಗಾಳಿ
ಬೆಳ ಬೆಳಕಿನ ಭವ್ಯಾಂಗಣದಲಿ ಕುಣಿ
ಕುಣಿದಿದೆ ಭಾವಸಿರಿ
ಬದುಕಿನ ಹೃದಯದೆ ಹರಿಹರಿದಿದೆ ಹೊಸ
ಹುಮ್ಮಸ ಮಧುರ ಝರಿ!

೨

ಕಾಡಿನ ಕೊನೆಯಲಿ ಕೋಗಿಲೆ ಕೂಗಿದೆ
ಕುಹೂ ಕುಹೂ ಕರೆದು
ಗೂಡಿನ ಬಾಗಿಲ ಮರೆಯಲಿ ಮೆಲ್ಲನೆ
ಹೊಮ್ಮಿಸಿ ಬಾಯ್ದೆರೆದು
ನಿದ್ದೆಯ ಕಂಗಳನರಳಿಸಿ ಜಾಡ್ಯವ
ನೊದ್ದಿದೆ ಜನಜನತೆ
ಕದ್ದೊಡಗಿದ ಬ್ರಹ್ಮಾಂಡದ ಮನೆಯಲಿ
ತೊಡಗಿದೆ ನಿತ್ಯಕಥೆ
ಎದ್ದಿತು ಮಗು—ಮತ್ತೆದ್ದಳು ಭಾಮಿನಿ
ಮುಗಿಯದ ಮನೆಗೆಲಸ
ನೀರಿನ ಬಿಂದಿಗೆ ಹಾಲಿನ ತಂಬಿಗೆ
ತುಂಬಿದೆ ದನ—ದವಸ
ನೇಗಿಲಯೋಗಿಯೊ ಕರ್ಮದ ತ್ಯಾಗಿಯೊ
ಭೋಗಿಯೊ ಯಾರೇನು?
ತ್ಯಾಗದ ವಿಶ್ವದ ನಿಯಮಕೆ ಕೆಚ್ಚಲು
ತುಂಬಿದೆ ಸುರಧೇನು!

೩

ಎತ್ತಲೊ ಏನೋ ಕೋಗಿಲೆ ಕೂಗಿದೆ
ಕುಹೂ ಕುಹೂ ಕರೆದು
ಸುಖದುಃಖಕೆ ಸೆರೆಸಿಲುಕದ ನೆಮ್ಮದಿ
ಯುಸಿರನು ಸೆಳೆಸೆಳೆದು
ಗುಗು ಮುಗುಗಿದೆ—ಬಾನಟ್ಟವೆ ಬಿರಿದಿದೆ
ನಡೆದಿದೆ ಭೂಕಂಪ
ನೀರಿನ ಕೊಡ ಕೈ ಜಾರಿದೆ ಭಾಮಿನಿ
ಬಿಸುಸುಯ್ಯಳು ಪಾಪ!
ಬಯಲಿನ ಬಳಿಯಲಿ ನೇಗಲ ಯೋಗಿಯು
ಹೊಸೆದನು ಹೊಸರಾಗ
ತಾನೇ ಹಾಡುವ ತಾನೇ ಮೆಚ್ಚುವ
ಮಾನಸದಾವೇಗ
ಭೋಗಿಯು ಹಾಸುಗೆ ಬಿಟ್ಟೇಳದೆ ಹೊರ
ಹೊರಳದನತ್ತಿತ್ತ
ಕೆಲದಂಸಿಯ ಕೈ ಕಿಣಿ ಕಿಣಿ ಬಳೆಗಳ
ಕ್ವಣಿತವ ನಾಲಿಸುತ

೪

ಮತ್ತೂ ಮತ್ತೂ ಕೋಗಿಲೆ ಕೂಗಿದೆ
ಕುಹೂ ಕುಹೂ ಕರೆದು
ಮಾಣದ ಮನಸಿನ ಕಡು ಸಂತಸದಲಿ
ಗೆಲವಿನ ಜೇನ್ ಸುರಿದು
ಗೋವಳನೊಬ್ಬನು ಕೈಗೊಳಲೂದುತ
ಬಂದಿಹನತ್ತ ಕಡೆ
ಗೋದೂ—ಕಪಿಲೇ—ಗೌರಿ—ನೈರೇ
ಮಂಗಳೆಯರ ಕೂಡೆ
ನ ಮೊದಲಿನ ಮುಂಡಾರಕೆ ಹಾರುವ
ಪಾತರವವನ ಬಗೆ
ಹೆಚ್ಚನೆ ಬೆಟ್ಟದ ತುದಿಯಲಿ ತೊಳಲುವ
ಮಿಗಗಳು ಹೋಲಿಕೆಗೆ
ಹೊಸ ಬುಗ್ಗೆಯ ಕಾಳ್ಪುರಗಳ ತಿಳಿತನ
ವೈಗೂಡಿಹುದೇನು!
ನಡೆ ನುಡಿಯಲಿ ನಿಷ್ಕಾಮದ ಸಹನೆಯ
ತೃಪ್ತಿಯ ಸವಿಜೇನು!

೫

ಮತ್ತೂ ಕೂಗಿಹುದಾಮರಿ ಕೋಗಿಲೆ
ಕುಹೂ ಕುಹೂ ಕರೆದು
ಸುತ್ತಲು ಹರಡಿದ ಬೆಳ್ಬೆಳಕಿಲಿ ನವ
ಚೈತನ್ಯವನೆರೆದು
ಗೋವಳನಚ್ಚರಿಗೊಂಡನು- ಏನಿದು
ಕಾಡಿನ ನುಡಿಗಟ್ಟು!
ಹೊನಲಿನ ಪರಿಯೋ—ಗಾಳಿಯ ಕನಿಯೋ
ತುಂಬಿಯ ಮನದದಟು!
ಆ ಕಡೆ ಕಂಡನು ತುರು ಮಂದೆಯು ಕಾಲ್
ಚಾಚಿದೆ ಬಾಯ್ಕಡೆದು
ಈ ಕಡೆ ಕಮರಿಯಲೊಂದೇ ನಾದವು
ತುಂಬಿದೆ ಸೆಲೆ ಹೊಡೆದು
ಬಳುಕುವ ಬಳ್ಳಿಯ ತೂಗುವ ತೊಂಗಲ
ಹೂವಿಗು ಇದು ಮಧುರ!
ಕೇಳುವ ಕೇಳದ ಸಿಸು ಮಾತಿನ ಗೆಳೆ
ತನದೀ ಸತ್ಕಾರ!

೬

ಬನದಾದಿಯೊಳಾ ಕೋಗಿಲೆ ಕೂಗಿದೆ
ಕುಹೂ ಕುಹೂ ಕರೆದು
ನನೆಮುದಿಯಲಿ ನಲಿದಾಡುವ ಕಿರಣದ
ಕೋಮಲ ಕರಪಿಡಿದು
ಕಣ್ ಕಣ್ಣೂಡಿಸಿ—ಎದೆಯೆದೆಯಾನಿಸಿ
ಕೇಳಿದನಾತಪಸಿ
ಸೊಗಸನು ಕಂಡು ಸಮೀಹಪಸರಿವಾ —
ತ್ಮೋನ್ನತಿಯ ರಸರ್ಷಿ!
ತುರುಗಳ ಮರೆತನು—ಬೆಟ್ಟವ ಮರೆತನು
ಸುತ್ತಲ ಕಾಳ್ಕಣಿವೆ
ತಪ್ಪಲ ಮರೆತನು—ತನ್ನನೆ ಮರೆತನು
ತೆರೆಯಿತು ಬದುಕಿನೆವೆ!
ಮನಸೆಂಬುದು ಮಲರಿನ ಮಿದು ತೋಟೆಯು
ಮುಚ್ಚಿದ ಬಾಳೆಸಳು
ಎಸಳೆಸಳಿನ ಕಣ್ ತೆರೆಯಿಸಿ ಕಾಣುವ
ಹೊಸ ನೋಟದ ಸೂಳು!

೭

ಕ್ಷಣಕಾಲವು ಕಳೆಯಲು ಕಿರುಗೊಳಲನು
ಕೈಗೊಂಡನು ಗೊಲ್ಲ
ಕುಹೂ ಕುಹೂ ಮೃದುನಾದದ ಮೈನವಿ
ರೆದ್ದಿತು ಜಗವೆಲ್ಲ!
ಬಯಲಿನ ಕಮರಿಯ ತುದಿಯಲಿ ಕಂಡಿಹ
ಹಸಿಗಳ ಬಾಸಣಿಸಿ
ಬೆಟ್ಟದ ಬಂಡೆಯ ಬದಿಯಲಿ ತಳುಕಿದ
ಮುಗಿಲನು ನೇವರಿಸಿ
ಬಳ್ಳಿಯೊಳಾಡಿತು—ಪೊದರೊಳು ನುಸುಳಿತು.
ಕಮರಿಯ ಕೆಳಗಿಳಿದು
ಹಳ್ಳದೊಳದ್ದಿತು—ಮರುಮೇಲೆದ್ದಿತು
ಕೊನೆಕಿಬ್ಬದಿ ಕೊರೆದು!
ತುಂಬಿತು ತಳುಕಿತು ತಾನೇ ತೊದಲುವ
ಬೈಗಿನ ಮೆಲುಹಾಡು
ಆಗಸ ತಿರೆ ಪಾತಾಳಗಳೆಲ್ಲವು
ಜೇನಿನ ಹೊಸಗೂಡು!

೮

ವೃಂದಾವನದಲಿ ಕೋಗಿಲೆ ಕೂಗಿದೆ
ಕುಹೂ ಕುಹೂ ಕರೆದು
ನಾಡಿನ ಮೈಮೆಯ ಮಂಗಳ ಗೀತಕೆ
ಹೊಸ ಜೀವನವೆರೆದು
ಊದುವ ಕೊಳಲಲಿ ದನಿ ಮೇಳೈಸಿತು
ಕಳೆದಿದೆ ಕಾಮುಕತೆ
ಮೆಲು ಮೆಲುವಾಗಿಸಿ ಹೃದಯವೆ ಹಾಡಿದ
ವರೌನದ ಮೃದು ಮಮತೆ!
ಒಂದೇ ಬೀಣೆಯ ತಂತಿಯ ಮಿಡುಕಿಸಿ
ಕಂಡಿತು ಸುಖ ಬೋಧೆ
ಒಂದೇ ಬಿದಿರಿನ ಗಿಣ್ಣನು ತುಡುಕಿಸಿ
ರತಿಯೂದಿದ ಸೇದೆ!
ಇದನೆರಡೆಂಬಿರೆ?— ಒಂದೇ ದೇಹದ
ತುಂಬಿದ ಸಾಕಲ್ಯ!
ಕೃತಿ ಮತಿ ರುತಿಯಲಿ ರಸದೇಕಾಂತದ
ಕಲ್ಪದ ಕೈವಲ್ಯ!

—ಯಸ್. ವೆಂಕಟರಾಜ.

ಭದ್ರಂ ಕರ್ಣೇಭಿಃ ಶ್ರುಣುಯಾಮ

(ಶಾಂತಿ ಮಂತ್ರಾನುವಾದ)

***

ಒಳ್ಳಿತನೆ ಕಿವಿಗಳಿಂ ಕೇಳುವುದು ನಾವೆಲ್ಲ
ಒಳ್ಳಿತನೆ ಕಣ್ಗಳಿಂ ಕಾಣುತಿಹುದು;
ತುಂಬು ಮೈಮನಗಳಿಂ ತುಂಬಿದಾಯುಷ್ಯದಲಿ
ನಂಬಿದನ ಹಾಡಿ ಕೊಂಡಾಡುತಿಹುದು.

ಹಿರಿಯನಿಂದ್ರಂ ಪರಸಲೆಮ್ಮ ಪೇರೊಲ್ಮೆಯಲಿ
ಎಲ್ಲ ಬಲ್ಲನ ಪೂಷನೊಳ್ಳಿತಂ ಕೊಡುಗೆ;
ಕೆಡುಕ ಬಡಿವಟ್ಟುತಿಹ ತಾರ್ಕ್ಷ್ಯ ರಕ್ಷಿಸುತಿರಲಿ,
ಆ ಬೃಹಸ್ಪತಿಯೆಮ್ಮ ಬುದ್ಧಿ ಬೆಳಗಿಸುಗೆ.

ಶಾಂತಿಯ್ಶೆ! ಶಾಂತಿಯ್ಶೆ! ಶಾಂತಿಯ್ಶೆ!

—ಕಯ್ಯಾರ ಕಿಞ್ಞಣ್ಣ ರೈ.

ಕಿರಿಯರ ಪ್ರಪಂಚದ ಹಿರಿಯ ಕಾಣಿಕೆಯೇ?

ಕವಿತಾ ಕಾಮಿನಿ

ಕರ್ನಾಟಕದ ಪ್ರಸಿದ್ಧ ಕವಿಗಳಾದ
ಎಸ್. ವೆಂಕಟರಾಜರೇ
ಲೇಖಕರು.

75 ಕವನಗಳ ಅಪೂರ್ವ ಸಂಗ್ರಹ.

ಕವಿಯಾದರೂ ಸೌಂದರ್ಯವನ್ನು ಕಂಡಾಗ ಲೆಲ್ಲಾ ವರ್ಣಿಸಲಾರೆ. ಅವನ ಸೌಂದರ್ಯ ಉಪಾಸನೆಗೆ ಕಾಲವಿದೆ. ಅಂತಹ ಕ್ಷಣಿಕ ಕಾಲದಲ್ಲಿ ಭಾವನೆಯ ಮೇಲೆ ಕಲೆಯ ಚೆಲ್ಲಿಟ್ಟು ಮಿಡಿದರೆ ಅದರ ಮಾಧುರ್ಯವು ಕಲ್ಪನಾತೀತವಿದೆ. ನಿಪ್ಪದ ಎದೆ ಎದೆಯ ಮೇಲೆ ಅದು ಪ್ರತಿಧ್ವನಿಸುತ್ತದೆ.

ಉತ್ತಮವಾದ ಬಿಳಿ ಕಾಗದದ ಮುದ್ರಣ.
ಬೆಲೆ: ೨—೦—೦. (ಟ. ಖರ್ಚು ಬೇರೆ)
ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:—
ಕಿರಿಯರ ಪ್ರಪಂಚ, ಉಡುಪಿ.

ಪ್ರಜಾಪ್ರಭುತ್ವ ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆ

ಪ್ರಜಾವರ್ಗದಲ್ಲಿ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಗಳು ಕೆಲವರೇ ಇರಬಹುದು. ಅವರಿಗಾದರೂ ಯೋಗ್ಯ ಅವಕಾಶಗಳನ್ನಿತ್ತರೆ ರಾಷ್ಟ್ರ ಕಲ್ಯಾಣವಾಗುತ್ತದೆ; ಮಹತ್ವಾಕಾಂಕ್ಷೆಗೆ ಅರಳಲು ಸಂದರ್ಭ ಸಿಗದಿದ್ದರೆ ಅದು ಕಮರಿ ವಿಷ ಹುಟ್ಟಿಸಿ ರಾಷ್ಟ್ರಕ್ಕೆ ಅಪಾಯವನ್ನು ತರುತ್ತದೆ.

ಬರೆದವರು: ಶ್ರೀ. ಎ. ಎಸ್. ರಾಮಕೃಷ್ಣ.

ಮಾನವರಲ್ಲಿ ಪ್ರತಿಯೊಬ್ಬರಲ್ಲಿಯೂ ಒಂದೊಂದು ಬಗೆಯ ಆಕಾಂಕ್ಷೆ ಇದ್ದೇ ಇರುತ್ತದೆ. ಹೊಟ್ಟೆಬಟ್ಟೆಗಳಿಗೆ ಸಂಬಂಧಿಸಿದ ಜೀವನದ ಮೊತ್ತಮೊದಲಿನ ಆವಶ್ಯಕತೆಗಳು ತಕ್ಕಮಟ್ಟಿಗಾದರೂ ಪೂರೈಸಲ್ಪಡುವ ವರೆಗೆ, ಸಾಮಾನ್ಯರಿಗೆ ಅದೊಂದೇ ಆಕಾಂಕ್ಷೆಯೆನ್ನಬಹುದು. ಆ ಆಕಾಂಕ್ಷೆಯೊಂದನ್ನು ಕೂಡ ಈಡೇರಿಸಿಕೊಳ್ಳುವುದು ದುಸ್ತರವೆನಿಸಿ, ಬಹು ಮಂದಿಗೆ ಜೀವಮಾನವೆಲ್ಲ ಹೆಚ್ಚಿನ ಆಕಾಂಕ್ಷೆಗಳನ್ನು ಇಟ್ಟುಕೊಳ್ಳಲು ಅವಕಾಶವಿಲ್ಲದೆ ಹೋಗಬಹುದು. ಆದರೆ ಜೀವನದ ಮೊತ್ತಮೊದಲಿನ ಆವಶ್ಯಕತೆಗಳು ಪೂರೈಸಲ್ಪಟ್ಟಿದ್ದಾದರೆ ವ್ಯಕ್ತಿಯಲ್ಲಿ ಇತರ ಆಕಾಂಕ್ಷೆಗಳು ಮೂಡತೊಡಗುತ್ತವೆ.

ಮಾನವನ ಆಕಾಂಕ್ಷೆಗಳಲ್ಲಿ ಸ್ಥೂಲವಾಗಿ ಮೂರು ವಿಧವವುಗಳನ್ನು ಗುರುತಿಸಬಹುದು. ವಿಷಯ ಸುಖಕ್ಕಿಂತ ಮಿಗಿಲಾದುದರ ಕಲ್ಪನೆಯಿಲ್ಲದೆ, ಆ ತನ್ನ ಸುಖವೊಂದನ್ನೇ ಗುರಿಯಾಗಿಟ್ಟುಕೊಂಡು ನಿರಂತರವೂ ಅದರ ಸಾಧನೆಗಾಗಿ ಹೆಣಗುವವನ ಆಕಾಂಕ್ಷೆ ಒಂದು ಬಗೆಯದು. ಅವನ ಮಟ್ಟಿಗೆ ಅದೇ 'ಮಹಾಕಾಂಕ್ಷೆ'. ತದ್ವಿರುದ್ಧವಾಗಿ ಮಹೋನ್ನತ ಜೀವನಾದರ್ಶಗಳನ್ನು ಮುಂದಿಟ್ಟುಕೊಂಡು ಸ್ವಂತ ಸುಖ ಸಾಧನೆಯನ್ನು ಗೌಣವಾಗಿ ಪರಿಗಣಿಸಿ, ಅನಾಸಕ್ತ ಭಾವದಿಂದ ಲೋಕಸಂಗ್ರಹ ಕಾರ್ಯದಲ್ಲಿ ನಿರತರಾಗುವವರ ಮಹತ್ವಾಕಾಂಕ್ಷೆಗಳು ಇನ್ನೊಂದು ಬಗೆಯವು. ಇಂಥವರು ಲೋಕದಲ್ಲಿ ಯಾವ ಕಾಲದಲ್ಲೇ ಆದರೂ ಬೆರಳೆಣಿಕೆಯಷ್ಟು ಮಾತ್ರ ದೊರೆತಾರು. ಪ್ರಪಂಚದಲ್ಲಿ ಇಂದು ನಿಜವಾಗಿ ಒಳ್ಳೆಯದೆನಿಸಿಕೊಳ್ಳಬಹುದಾದುದೇನಿದೆಯೋ ಅದಕ್ಕೆಲ್ಲ ಈ ಮಾನವೋತ್ತಮರ ಮಹತ್ವಾಕಾಂಕ್ಷೆಗಳೇ ಕಾರಣವೆನ್ನಬಹುದು. ಇಂಥವರಲ್ಲಿ ತಮ್ಮ ಉದ್ದೇಶ ಸಾಧನೆಗಾಗಿ ಪ್ರಾಣವನ್ನು ಕೂಡ ಅರ್ಪಿಸಿ ಅಮರರಾದವರಿರುವರು. ಈ ಮಹಾ ಪುರುಷರ ಕುರಿತು ಪ್ರಸ್ತಾಪಿಸುವಾಗ 'ಮಹತ್ವಾಕಾಂಕ್ಷೆ' ಎಂಬ ಪದದ ಒಳ್ಳೆಯ ಅರ್ಥವನ್ನು ಮಾತ್ರ ನೆನೆಯಬೇಕು. ಮಾತ್ರವಲ್ಲದೆ ಅವರ ಮಹತ್ವಾಕಾಂಕ್ಷೆಗಳು ಅವರನ್ನು ಈ ಜಗತ್ತಿಗೆ ಕಟ್ಟಿ ಹಾಕಿರಲಿಲ್ಲವೆಂಬುದನ್ನೂ ಮರೆಯಬಾರದು.

***

ಉತ್ತರ ದಕ್ಷಿಣ ಧ್ರುವಗಳಂತಿರುವ ಮೇಲಿನ ಎರಡು ಬಗೆಯ ಮಹತ್ವಾಕಾಂಕ್ಷೆಗಳಲ್ಲದೆ ಮಧ್ಯಮ ವರ್ಗದ ಇನ್ನೊಂದು ರೂಪವೂ ಇದೆ. ಈ ಬಗೆಯ ಹೆಬ್ಬಯಕೆಗಳನ್ನುಳ್ಳವರಲ್ಲಿ ಉತ್ತಮ ಆದರ್ಶಗಳೂ ಇವೆ; ಬಲವಾದ ಸ್ವಾರ್ಥವೂ ಇದೆ. ಆದರೆ ಇಲ್ಲಿರುವ ಸ್ವಾರ್ಥವನ್ನು 'ಪ್ರಬುದ್ಧ ಸ್ವಾರ್ಥ' (enlightened self-interest) ಎಂದು ಕರೆಯಬಹುದು. ಈ ಮಧ್ಯಮ ವರ್ಗದ ಮಹತ್ವಾಕಾಂಕ್ಷೆಯ ಹಿನ್ನೆಲೆಯಲ್ಲಿ ಲೋಕಕ್ಕೂ ಒಳ್ಳೆಯದಾಗಬೇಕು; ನಮಗೂ ಲಾಭವಿರಬೇಕು ಎಂಬ ಮನೋವೃತ್ತಿಯಿರುತ್ತದೆ. ಆದರೆ ಇದು ಎಲ್ಲ ಸಮಯದಲ್ಲಿಯೂ ಹೀಗೆಯೇ ಇರುತ್ತದೆಂದು ಹೇಳಲು ಬರುವುದಿಲ್ಲ. ಜೀವನದ ಪ್ರಾರಂಭದಲ್ಲಿ ಸಮಾಜಹಿತ, ಸ್ವಹಿತಗಳೆರಡನ್ನೂ ಒಂದೇ ತೂಕದಲ್ಲಿಟ್ಟುಕೊಂಡು ಮುಂದುವರಿಯತೊಡಗಿದ ವ್ಯಕ್ತಿ ಬರಬರುತ್ತ ಸಮಾಜ ಹಿತಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಸ್ವಾರ್ಥವನ್ನು ಬದಿಗೊತ್ತುವ ಸ್ಥಿತಿಗೆ ಬರಬಹುದು. ಆಗ ಅವನ ಮಹತ್ವಾಕಾಂಕ್ಷೆ ಮೇಲ್ಮಟ್ಟಕ್ಕೇರುತ್ತದೆ. ಆದರೆ ಈ ರೀತಿಯ ಪರಿವರ್ತನೆಯಾಗುವುದು ತೀರ ವಿರಳ. ಸಂದರ್ಭ ಸನ್ನಿವೇಶಗಳ ದೆಸೆಯಿಂದಾಗಿ ಸ್ವಹಿತಾರ್ಥದ್ದೇ ಮೇಲುಗೈಯಾಗಿ ಸಮಾಜ ಹಿತದೃಷ್ಟಿಯು ಮಸಕು ಮಸಕಾಗುವ ಸಂಭವವೇ ಜೀವನದಲ್ಲಿ ಹೆಚ್ಚೆಂದು ಕಾಣುತ್ತದೆ. ಹೀಗೆ ಪ್ರಬುದ್ಧ ಸ್ವಾರ್ಥವಾಗಿದ್ದುದು ಅಪ್ಪಟ ಸ್ವಾರ್ಥವಾದಾಗ ವ್ಯಕ್ತಿಯ ಮಹತ್ವಾಕಾಂಕ್ಷೆಗಳೇನಿದ್ದರೂ ಅವು ಕೀಳ್ದರಜ್ಜೆನಿಸುತ್ತವೆ.

ಕೀಳ್ತರದ, ಸಮಾಜ ಘಾತಕ 'ಮಹಾಕಾಂಕ್ಷೆ' ಯುಳ್ಳ ವ್ಯಕ್ತಿಗಳಿಂದ ರಾಷ್ಟ್ರಕ್ಕೆ ಅಧಃಪತನವೇ ಸರಿ. ಹಾಗೆಯೇ ತಮ್ಮ ಹೊಟ್ಟೆ ಬಟ್ಟೆಯ ವಿಚಾರವನ್ನುಳಿದು ಬೇರೆ ಯಾವ ಆಕಾಂಕ್ಷೆಗಳೂ ಇಲ್ಲದ ವ್ಯಕ್ತಿಗಳಿಂದ ಕೂಡ ರಾಷ್ಟ್ರಕ್ಕೆ ಅಷ್ಟೇನೂ ಹಿತವಾಗಲಾರದು. ಸ್ವಾರ್ಥರಹಿತ ಮಹತ್ವಾಕಾಂಕ್ಷೆಯನ್ನುಳ್ಳ ಮಾನವೋತ್ತಮರಿಂದಲೇ ರಾಷ್ಟ್ರದ ಕಲ್ಯಾಣವಾಗಬೇಕು. ಅಂಥವರನ್ನು ಹೆಚ್ಚು ಹೆಚ್ಚಾಗಿ ಪಡೆದ ರಾಷ್ಟ್ರ ಧನ್ಯವೆಂದೇ ಹೇಳಬೇಕು. ಆದರೆ ಆ ಮಟ್ಟದವರು ಲೋಕದಲ್ಲಿ ಎಷ್ಟು ಮಂದಿ ದೊರಕುತ್ತಾರೆ? ಆದ್ದರಿಂದ ಅಂಥವರಲ್ಲದಿದ್ದರೂ 'ಪ್ರಬುದ್ಧ ಸ್ವಾರ್ಥ' ದಿಂದ ಪ್ರೇರಿತರಾದ, ಮಧ್ಯಮ ವರ್ಗದ ಮಹತ್ವಾಕಾಂಕ್ಷೆ ಯುಳ್ಳವರಾದರೂ ಹೆಚ್ಚು ಹೆಚ್ಚಾಗಿ ಕಾಣಿಸಿಕೊಂಡಲ್ಲಿ ರಾಷ್ಟ್ರವು ಅಭ್ಯುದಯವನ್ನು ಹೊಂದಬಹುದು.

***

ಭಾರತವು ಪರಾಧೀನವಾಗಿದ್ದ ಕಾಲದಲ್ಲಿ ನಮ್ಮ ಜನರ ಆಸೆ ಆಕಾಂಕ್ಷೆಗಳೇನಿದ್ದರೂ, ಅವುಗಳು ಆಳುವವರು ಹೇಳಿದಂತೆ ಅರಳಬೇಕಾಗಿತ್ತು. ಆದರೆ ಈ ಪರಿಸ್ಥಿತಿಯು ಸ್ವಾಭಿಮಾನಿಗಳಲ್ಲಿ ಬೇರೆಯೇ ಒಂದು ಉತ್ಕಟವಾದ ಮಹತ್ವಾಕಾಂಕ್ಷೆಯನ್ನು ಮೂಡಿಸಿತು. ಅದು ಅವರನ್ನು ಸ್ವಾತಂತ್ರ್ಯ ಸಾಧನೆಗೆ ತೊಡಗಿಸಿತು. ಅದರ ಪರಿಣಾಮವಾಗಿ ಕೊನೆಗೊಮ್ಮೆ ದೇಶವು ಬಂಧ ವಿಮುಕ್ತವಾಯಿತು. ಪ್ರಭುತ್ವವು ಪ್ರಜೆಗಳ ಪಾಲಿಗೆ ಬಂದಿತು. ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಭಾರತೀಯರ ಮಹತ್ವಾಕಾಂಕ್ಷೆಗಳಲ್ಲಿ ಬದಲಾವಣೆಯುಂಟಾಗಬೇಕಾಯಿತು. ಸಮಾಜಕ್ಕೆ ಹಿತವನ್ನು ತರುವ ಎಲ್ಲ ಮಹಾಕಾಂಕ್ಷೆಗಳಿಗೂ ಈಗ ಇಂಬುದೊರೆಯಬೇಕಾಗಿದೆ. ಮುಖ್ಯವಾಗಿ ಅಂಥ ಮಹಾಕಾಂಕ್ಷೆಯುಳ್ಳವರೆಲ್ಲರಿಗೂ ಸಮಾನವಾದ ಅವಕಾಶ ದೊರೆಯಬೇಕಾಗಿದೆ.

ನಮ್ಮ ರಾಷ್ಟ್ರವು ಸ್ವತಂತ್ರವೆನಿಸಿ, ನಮ್ಮ ಜನಾಂಗವು ಇತರ ಜನಾಂಗಗಳ ನಡುವೆ ಒಂದು ಮನ್ನಣೆಯ ಸ್ಥಾನವನ್ನು ದೊರಕಿಸಿಕೊಂಡಂದಿನಿಂದ ಹೆಚ್ಚು ಹೆಚ್ಚು ಜನರಲ್ಲಿ ತಾವೂ ಮುಂದೆ ಬರಬೇಕು ದೇಶವನ್ನೂ ಮುಂದಕ್ಕೆ ತರಬೇಕು. ಎಂಬ ಹೆಬ್ಬಯಕೆ ಮೂಡತೊಡಗಿದೆ. ಇಂಥ ನವೋತ್ಸಾಹಿಗಳಿಗೆಲ್ಲ ಸಮಾನವಾದ ಅವಕಾಶ ದೊರೆಯಬೇಕಾದುದು ಅತಿ ಮುಖ್ಯ. ಹಾಗೆ ದೊರೆಯುವುದಿಲ್ಲವೋ, ಅಪ್ಪಟ ಸ್ವಾರ್ಥವೇ ಪ್ರಬುದ್ಧ ಸ್ವಾರ್ಥದ ಅಥವಾ ನಿಃಸ್ವಾರ್ಥ ವೃತ್ತಿಯ ಮುಸುಕು ಹಾಕಿಕೊಂಡು ಮೆರೆಯ ತೊಡಗುತ್ತದೆ. ಆಗ ರಾಷ್ಟ್ರಹಿತ ಕಾರ್ಯಗಳಿಗೆಂದು ಹೊರಟವರು ತಮ್ಮಂತೆಯೇ ಉತ್ಸಾಹದಿಂದ ಹೊರಟ ಇತರರನ್ನು ಮುಂದುವರಿಯದಂತೆ ಮಾಡುತ್ತಾರೆ. ಕೆಲವೊಮ್ಮೆ ಪ್ರಾಮಾಣಿಕ ರಾಷ್ಟ್ರ ಸೇವಕರನ್ನು ತಳ್ಳಿ, ಕೆಡವಿ ತಮ್ಮ ಕೀರ್ತಿಯನ್ನು ಬೆಳಗಿಸಲು ಪ್ರಯತ್ನಿಸುತ್ತಾರೆ. ಇದರಿಂದ ರಾಷ್ಟ್ರಕ್ಕೆ ಉಂಟಾಗುವ ನಷ್ಟ ಅಪಾರವಾದುದು. ಇಂಥ ಸಮಾಜ ಕಂಟಕರನ್ನು ಗುರುತಿಸಲು ಜನತೆ ಎಚ್ಚರದಿಂದಿರಬೇಕಾಗುತ್ತದೆ.

***

ಇಂಗ್ಲಿಷಿನ 'Ambition' ಎಂಬ ಪದದಿಂದ ಸೂಚಿಸಲ್ಪಡುವ ಮಹತ್ವಾಕಾಂಕ್ಷೆಯೇನಿದೆಯೋ ಅದು ಮನುಷ್ಯನಲ್ಲಿ ಉತ್ಸಾಹ ಮತ್ತು ಚುರುಕನ್ನು ಹುಟ್ಟಿಸಿ ಭಾವೋದ್ರೇಕವನ್ನುಂಟು ಮಾಡುತ್ತದೆ. ಅದಕ್ಕೇನಾದರೂ ಸಾಕಷ್ಟು ಇಂಬು ದೊರೆಯಿತೋ, ಸರಿ. ಇಲ್ಲವಾದರೆ ಅದು ಕಮರಿ ಹೋಗಿ ವಿಷಪ್ರಾಯವಾಗುತ್ತದೆ. ಹೆಬ್ಬಯಕೆಯುಳ್ಳವರೆಲ್ಲರಿಗೂ ಸಮಾನವಾದ ಅವಕಾಶವಿದ್ದರೆ ಅವರಿಂದ ಬಾಧಕವಿಲ್ಲ. ಒಂದು ವೇಳೆ ಅವರ ಮಹತ್ವಾಕಾಂಕ್ಷೆಯನ್ನು ಮುನ್ನಡೆಸುವ ಸನ್ನಿವೇಶವು ಸಮಾಜದಲ್ಲಿ ದೊರೆಯಲಿಲ್ಲವೋ ಆಗ ಅವರಲ್ಲಿ ತೀವ್ರವಾದ ಅತೃಪ್ತಿಯುಂಟಾಗುತ್ತದೆ. ಅವರು ಪ್ರತಿಯೊಂದನ್ನೂ ವಕ್ರದೃಷ್ಟಿಯಿಂದಲೇ ನೋಡತೊಡಗುತ್ತಾರೆ. ಯಾವುದೇ ವಿಷಯದಲ್ಲಿ ತಿರುಗಮುರುಗವಾದರೇನೇ ಅವರಿಗೆ ಸಂತೋಷವಾಗುತ್ತದೆ. ಇದಕ್ಕಿಂತ ಕೀಳಾದ, ಅಪಾಯಕರವಾದ, ರಾಷ್ಟ್ರಹಿತಕ್ಕೆ ಧಕ್ಕೆ ತರುವಂಥ, ಮನೋವೃತ್ತಿ ಬೇರೊಂದಿರಲಾರದು. ಪ್ರಜಾಪ್ರಭುತ್ವದಲ್ಲಿ ಇಂಥ ಪರಿಸ್ಥಿತಿ ಎಂದಿಗೂ ಒದಗಬಾರದು. ಸಮಾನಾವಕಾಶವೇ ನಿಜವಾದ ಪ್ರಜಾಪ್ರಭುತ್ವದ ಪ್ರಾಮುಖ್ಯ ಲಕ್ಷಣ. ಸರ್ವಾಧಿಕಾರ ಪದ್ಧತಿಯ ರಾಷ್ಟ್ರಗಳಲ್ಲಿ ಪ್ರಜೆಯ ಮಹತ್ವಾಕಾಂಕ್ಷೆಯೇನಿದ್ದರೂ ಅದು ಪ್ರಭುತ್ವದ ಹಿಡಿತಕ್ಕೊಳಪಟ್ಟಿರುತ್ತದೆ. ಅಲ್ಲಿ ಪ್ರಜೆಯು ಸಮಾನಾವಕಾಶದ ಕುರಿತು ಯೋಚಿಸಬೇಕಾದ್ದೇ ಇಲ್ಲ! ಆದರೆ ಪ್ರಜಾಪ್ರಭುತ್ವದಲ್ಲಿ ಹಾಗಲ್ಲ. ಸಮಾನಾವಕಾಶದ ಕುರಿತು ಜನತೆ ಎಚ್ಚರ ವಹಿಸಿ ಆ ಹಕ್ಕನ್ನು ಕಾಯ್ದುಕೊಳ್ಳಲು ಪ್ರಯತ್ನಿಸಬಹುದು. ಎಲ್ಲರಿಗೂ ಸಮಾನವಾದ ಅವಕಾಶವಿಲ್ಲವೆಂದರೆ ಅದು ಕೆಲವೇ ಮಂದಿಯ ಪ್ರಭುತ್ವವೆನಿಸುತ್ತದೆ. ಸರ್ವಾಧಿಕಾರಿತ್ವಕ್ಕಿಂತಲೂ ಅಪಾಯಕರವಾದದ್ದೆನಿಸುತ್ತದೆ.

ಪ್ರಜಾವರ್ಗದಲ್ಲಿ ಕೆಲವರಿಗೆ ಮಹತ್ವಾಕಾಂಕ್ಷೆಗಳಿರಬಹುದು. ಕೆಲವರಲ್ಲಿ ಅವುಇಲ್ಲದಿರಬಹುದು.ಆದರೆ ಸದಾ ಮಹಾಕಾಂಕ್ಷೆಯುಳ್ಳವರೆಲ್ಲರಿಗೂ ಅವುಗಳನ್ನು ಈಡೇರಿಸಲು ಸಮಾನವಾದ ಅವಕಾಶವುಳ್ಳ ಪರಿಸ್ಥಿತಿಯುಂಟಾಯಿತೆಂದರೆ ಒಂದು ರಾಷ್ಟ್ರವು ಅಭಿವೃದ್ಧಿಯ ದಾರಿಯಲ್ಲಿ ಮುನ್ನಡೆದಂತೆಯೇ ಸರಿ.

ಇನ್ನು, ಯಾವುದೇ ವಿಧದ ಮಹತ್ವಾಕಾಂಕ್ಷೆಯನ್ನು ಹೊಂದಿರದಂಥವರೂ ಕೂಡ ತಾವು ಕೀಳೆಂದು ಭಾವಿಸಬೇಕಾಗಿಲ್ಲವೆನ್ನಿಸುತ್ತದೆ. ಸಮಾಜದ ಕಲ್ಯಾಣಕ್ಕಾಗಿ ಕಣ್ಣಿಗೆ ಹೊಡೆಯುವಂಥ ಯಾವ ಒಂದು ವಿಶೇಷ ಕಾರ್ಯವನ್ನು ಮಾಡಲಾಗದಿದ್ದರೂ, ಕೊನೆಯ ಪಕ್ಷ ಇತರರಿಗೆ ಹಿಂಸೆ ಕೊಡದೆ ಬದುಕಬೇಕೆನ್ನುವ ಒಂದು ಆಕಾಂಕ್ಷೆಯಾದರೂ ಇದ್ದರೆ ಸಾಕು. 'Live and let live'-'ಬದುಕು-ಬಾಳಗೊಡು'— ಎಂಬುದೂ ಕೂಡ ಲೋಕ ಕಲ್ಯಾಣಕಾರಕವಾದ ಮಹಾಕಾಂಕ್ಷೆಯಲ್ಲವೆ?

ಹೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೋಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

(೧೧ನೇ ಪುಟದಿಂದ)

ಖಂಡದ ಪ್ರತಿಯೊಂದು ಸಾಹಿತ್ಯದ ಮೇಲೂ ತನ್ನ ಪ್ರಭಾವವನ್ನು ಬೀರಿರುತ್ತದೆ. ಇಂಥ ಪರ್ವ ಸಮಯಗಳಲ್ಲಿ ಸಾಹಿತ್ಯವು ಕ್ರಾಂತಿದರ್ಶಿಯಾಗುತ್ತದೆ. ಬಂಕಿಂ ಚಂದ್ರರ “ವಂದೇ ಮಾತರಂ” ಎಂಬುದು “ಆನಂದ ಮಠ”ವೆಂಬ ಕಾದಂಬರಿಯ ಒಂದು ಗೀತೆಯಾಗಿ ಮಾತ್ರ ಉಳಿಯದೆ ಒಟ್ಟು ಭರತ ಖಂಡದ ನಾಡಿಯನ್ನೇ ಮಿಡಿಯುವ ಸಿಡಿಲ್ದನಿಯಾಯಿತು. ಹೀಗೆಯೇ ವಿಶ್ವ ಕವಿ ರವೀಂದ್ರರ “ಜನಗಣಮನ ಅಧಿನಾಯಕ ಜಯ ಹೇ ಭಾರತ ಭಾಗ್ಯ ವಿಧಾತಾ!” ಎಂಬ ಕೃತಿಯೇ ಇಂದು ನಮ್ಮ ರಾಷ್ಟ್ರಗೀತೆಯಾಗಿದೆ. ಇದೇ ಕವಿಗಳ “ದೇವೀ ಭುವನ ಮನಮೋಹಿನಿ” ಎಂಬ ಮತ್ತೊಂದು ಕೃತಿ ಭಾರತಾಂಬೆಯ ಹಿರಿಮೆಯನ್ನು ಹಾಡಿ ಹೇಳುವಂತಿದೆ.

ಭರತ ಖಂಡದಲ್ಲಿ ನಡೆದ ಮಹಾ ಕ್ರಾಂತಿಯು ಈ ದಿನಗಳು ಕನ್ನಡ ಸಾಹಿತ್ಯದಲ್ಲಿಯೂ ಅಪೂರ್ವವಾದ ರಾಷ್ಟ್ರೀಯ ಸಾಹಿತ್ಯ ನಿರ್ಮಾಣಕ್ಕೆ ಅವಕಾಶವಾಯಿತು. ಶ್ರೀ ಕುವೆಂಪು ಅವರು ಜನತೆಯನ್ನು ಕುರಿತು “ಪಾಂಚಜನ್ಯ”ವನ್ನೇ ಘೋಷಿಸಿದರು. ದೇವಾನುದೇವತೆಗಳ ಆರಾಧನೆಯನ್ನು ಮಾಡ ತೊಡಗಿದ್ದವರನ್ನು ಸಂಬೋಧಿಸಿ “ನೂರು ದೇವರನೆಲ್ಲ ನೂಕಾಚೆ ದೂರ, ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ” ಎಂದು ಎಚ್ಚರಿಸಿದರು. ಸ್ವಾತಂತ್ರ್ಯ ಯೋಧನನ್ನು ಕುರಿತು “ಕಲಿಯುಗದ ಪ್ರಚ್ಛನ್ನ ಕಲ್ಕಿ ಸತ್ಯಾಗ್ರಹಿ” ಎಂದು ಹೊಸ ವ್ಯಾಖ್ಯಾನವನ್ನು ಮಾಡಿದರು. ಮುನ್ನುಗ್ಗುವ ಧೀರನಿಗೆ ಧೈರ್ಯ ತುಂಬಿದರು. ಈ ರೀತಿ ಸಮಕಾಲೀನ ರಾಜಕೀಯ ವಿಪ್ಲವದ ಸಮಗ್ರ ಚಿತ್ರವೇ ಕಾವ್ಯವಾಗಿ ಪರಿಣಮಿಸಿದೆ. ಅಪಾರವಾದ ತ್ಯಾಗ, ಅಸಂಖ್ಯಾತವಾದ ಕಷ್ಟ ಸಹಿಷ್ಣುತೆಯಿಂದ ಈ ಅಗ್ನಿ ಪರೀಕ್ಷೆಯಲ್ಲಿ ದಿವ್ಯ ದೀಪ್ತಿಗಳಾಗಿ ಪ್ರಕಾಶಿಸ ತೊಡಗಿದ ಮಹಾತ್ಮಾ ಗಾಂಧಿ, ಮೋತಿಲಾಲ ನೆಹರೂ, ಮೊದಲಾದ ನಾಯಕರನ್ನು ಕುರಿತು ಹಾಡಿರುತ್ತಾರೆ. ಇದೇ ಕವಿಗೆ ಸ್ವಾತಂತ್ರ್ಯ ಸಾರಿದ ಮೇಲೆ ಆಗುವ ಆನಂದ ಹೇಳತೀರದು. ಮಹಾ ಪ್ರಗಾಥವನ್ನೇ ಬರೆದಿರುತ್ತಾರೆ. ಈ ದಿವ್ಯ ಸಂದೇಶದಲ್ಲಿ ಆರ್ಷೇಯ ಋಷಿ ವಾಣಿಯೂ ಬೆರೆತು ಬಂದಿರುವುದನ್ನು ನೋಡಬಹುದು.

ಸಾರಿ ಬಾ ಸರ್ವರ್ಗೆ ಸ್ವಾತಂತ್ರ್ಯಮಂ
ಸಾರಿ ಬಾ ಸರ್ವರ್ಗೆ ಸಾಮ್ಯತ್ವಮಂ
ಸರ್ವರ್ಗೆ ಸಾರಿ ಬಾ ಸೌಹಾರ್ದಮಂ
ಸರ್ವ ಲೋಕದ ಸರ್ವ ಸಂತೋಷಮಂ
ಸರ್ವರಿಂ ಸರ್ವರಾ ಉದ್ಧಾರಮಂ.

ಶ್ರೀ ಬೇಂದ್ರೆಯವರ “ಮೂವತ್ತ ಮೂರು ಕೋಟಿ” ಎಂಬ ಇನ್ನೊಂದು ಪದ್ಯವು ನಮ್ಮ ನಾಡಿನ ಇತಿಹಾಸವನ್ನು ಸಾರಿ ಹೇಳುವ ಮತ್ತೊಂದು ಅಮೋಘವಾದ ಕೃತಿ. ಶ್ರೀ ವಿ. ಸೀ. ಅವರ “ಹರಸು ತಾಯಿ” ಎಂಬ ಮತ್ತೊಂದು ಕವನ ಅಂದಿನ ಆಶೆ ಆಕಾಂಕ್ಷೆಗಳನ್ನು ತೆರೆದು ತೋರಿಸುವ ಒಂದು ಉತ್ಸಾಹ ಕೃತಿ. ಇದೇ ಕವಿಗಳ ಇತರ ಕೆಲವು ರಾಷ್ಟ್ರೀಯ ಗೀತೆಗಳು ಕನ್ನಡಕ್ಕೆ ಅತ್ಯಮೂಲ್ಯವಾದ ಕಾಣಿಕೆಗಳಾಗಿವೆ. ಹೀಗೆಯೇ ಹಲವರು ಹಲವಾರು ತೆರನಾಗಿ ಹಾಡಿರುತ್ತಾರೆ.

ಮುಖ್ಯವಾಗಿ ದೇಶಭಕ್ತಿಯು ಸಾಹಿತ್ಯಕ್ಕೆ ಪ್ರೇರಕವೂ ಹೌದು; ಪೋಷಕವೂ ಹೌದು. ಪರಸ್ಪರ ಪೂರಕವಾದುವು. ಕವಿಯ ಲೇಖನಿ ಶಾಂತಿದಾಯಕವೂ ಹೌದು; ಕ್ರಾಂತಿಕಾರಕವೂ ಹೌದು.

ಇಂದು ನಮ್ಮ ದೇಶ ಬಂಧಮುಕ್ತವಾಗಿದೆ. ದೇಶ ಪ್ರೇಮದ ದಿವ್ಯ ಕಲ್ಪನೆ ರಾಷ್ಟ್ರ ರಚನೆಗೆ ವಿನಿಯೋಗವಾಗಬೇಕಾಗಿದೆ. ಅಂದು ನಮ್ಮನ್ನು ಒಟ್ಟುಗೂಡಿಸಿದ ಶಕ್ತಿ ಇಂದು ಒಟ್ಟಿಗೇ ದುಡಿಯುವಂತೆ ಮಾಡಬೇಕಾಗಿದೆ. ನಮ್ಮ ದೇಶದ ಜನಶಕ್ತಿ ಸಂಕಲ್ಪ ಶಕ್ತಿಗಳು ಒಂದುಗೂಡಿದರೆ ಭರತ ಖಂಡದ ಭವಿತವ್ಯವು ಭವ್ಯವಾಗುವುದರಲ್ಲಿ ಸಂದೇಹವಿಲ್ಲ. ಹಿಂದೊಮ್ಮೆ ಶ್ರೀ ಕೃಷ್ಣನು ಅರ್ಜುನನಿಗೆ “ಸ್ವಧರ್ಮೇ ನಿಧನಂ ಶ್ರೇಯಃ, ಪರಧರ್ಮೋ ಭಯಾವಹಃ” ಎಂದು ಹೇಳಿದನಷ್ಟೆ. ಇಂದು ಪ್ರತಿಯೊಬ್ಬ ಭಾರತೀಯನೂ ತಾರತಮ್ಯವಿಲ್ಲದೆ ಅದೇ ಧರ್ಮಾಭಿಮಾನವನ್ನು ರಾಷ್ಟ್ರಾಭಿಮಾನದ ಸಲುವಾಗಿ “ಸ್ವದೇಶೇ ನಿಧನಂ ಶ್ರೇಯಃ ಪರದೇಶೋ ಭಯಾವಹಃ” ಎಂಬ ಧ್ಯೇಯದಿಂದ ತನ್ನ ತನ್ನ ಕ್ಷೇತ್ರದಲ್ಲಿ ತ್ರಿಕರಣಪೂರ್ವಕವಾಗಿ ದುಡಿದರೆ, ನಮ್ಮ ದೇಶದಲ್ಲಿ ಅತ್ಯಲ್ಪ ಕಾಲದಲ್ಲಿಯೇ ಹಾಲಿನ ಹೊಳೆ ಹರಿದೀತು; ಚಿನ್ನದ ಮಳೆ ಸುರಿದೀತು. ಈ ಸಂಕಲ್ಪ ಪ್ರಚೋದಿಸುವುದಕ್ಕೆ ಸಾಹಿತ್ಯ ಶಕ್ತಿಯೂ ಸಹ ಸ್ಫೂರ್ತಿ ಕೇಂದ್ರವಾಗಲಿ.

———

ಭಾರತ ಸಂಸ್ಕೃತಿಯ ದೀಪಸ್ತಂಭ: ಭಗವದ್ಗೀತೆ

ಭರತ ಖಂಡದ ಸಂಸ್ಕೃತಿಯು ಕಾಲಾಂತಕನ ವಿಕಟಾಟ್ಟಹಾಸವನ್ನು ಲೆಕ್ಕಿಸದೆ ಇಂದಿಗೂ ಜೀವಂತವಾಗಿ ಉಳಿದಿರುವುದಕ್ಕೆ ಶ್ರೀ ಮದ್ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶದಿಂದ ಸ್ಫೂರ್ತಿಯನ್ನೂ ನವಚೈತನ್ಯವನ್ನೂ ಭಾರತೀಯರು ಪಡೆಯುತ್ತಿರುವುದೇ ಕಾರಣ. ಶ್ರೀಮದ್ಭಗವದ್ಗೀತೆಯು ರಾಷ್ಟ್ರವನ್ನು ಪುನರುಜ್ಜೀವಿಸುವ ಸಾಮರ್ಥ್ಯವುಳ್ಳ ಸಂಜೀವನ.

ಬರೆದವರು: ಡಾ॥ ಕೆ. ಕೃಷ್ಣಮೂರ್ತಿ, ಎಂ. ಎ., ಬಿ. ಟಿ., ಪಿಎಚ್. ಡಿ.

ಒಂದು ದೇಶದ ಇತಿಹಾಸವನ್ನು ಕಾಲವಿಭಾಗದ ಹೆಸರಿನಲ್ಲಿ ತುಂಡುತುಂಡಾಗಿ ಖಂಡಿಸಿ ರಾಜಕೀಯ, ಸಾಮಾಜಿಕ, ಆರ್ಥಿಕ, ಮೊದಲಾದ ದೃಷ್ಟಿಗಳಿಂದ ವಿಮರ್ಶಿಸುತ್ತಾ ರಾಷ್ಟ್ರದ ಉನ್ನತಿ ಇಲ್ಲವೆ ಅವನತಿಗಳನ್ನು ಅಳತೆಮಾಡಿ ನಿರ್ಣಯಿಸುವುದು ಆಧುನಿಕ ಮಾರ್ಗ. ಅಖಂಡವಾದ ರಾಷ್ಟ್ರದ ಅಭ್ಯುದಯವನ್ನು ಸನಾತನವೂ ಉದಾತ್ತವೂ ಆದ ‘ಧರ್ಮ’ದ ಕನ್ನಡಿಯಿಂದ ಅವಲೋಕಿಸುವುದು ಪ್ರಾಚೀನರ ಪದ್ಧತಿ. ಪಾಶ್ಚಾತ್ಯ ಲೇಖಕರ ಕಣ್ಣಿಗೆ ಬೀಳುವ ಭಾರತದ ನಿರ್ಜೀವ ಭೂವಿಸ್ತೀರ್ಣವೇ ಬೇರೆ; ಲಕ್ಷೋಪಲಕ್ಷ ಭಾರತೀಯರ ಮನೋಮುಕುರದಲ್ಲಿ ಪ್ರತಿಬಿಂಬಿತವಾಗುವ ಅವರ ಜೀವಂತ ಆಕೃತಿಸ್ವರೂಪವೇ ಬೇರೆ. ಮೊದಲನೆಯ ಚಿತ್ರವು ತರಗೆಲೆಯಂತೆ ಜಡ ನೀರಸ; ಎರಡನೆಯದು ಭಾವತರಂಗಿತ ಮತ್ತು ರಸಪೂರ್ಣ.

ಐತಿಹಾಸಿಕ ಯುಗವು ಪ್ರಾರಂಭವಾಗುವುದಕ್ಕೂ ಮೊದಲೇ ನಮ್ಮ ಮನೋನಿಷ್ಠವಾದ ಭರತ ಖಂಡವು ಅಸ್ತಿತ್ವದಲ್ಲಿತ್ತು. ಪವಿತ್ರವಾದ ಸರಸ್ವತೀ ತೀರದಲ್ಲಿ ವಸಿಷ್ಠ ವಿಶ್ವಾಮಿತ್ರರು ವೇದಮಂತ್ರಗಳನ್ನು ಘೋಷಿಸಿದಾಗ, ಪರಶುರಾಮನು ದಿಗ್ವಿಜಯ ಮಾಡಿ ನರ್ಮದಾ ತೀರಕ್ಕೂ ಆರ್ಯರನ್ನು ನಡೆಸಿದಾಗ ವಿಂಧ್ಯಾದ್ರಿಯನ್ನು ದಾಟಿ ಸಾಗರೋತ್ತರ ಪ್ರವಾಸಕ್ಕೂ ಹಿಂಜರಿಯದ ಅಗಸ್ತ್ಯ ಲೋಪಾಮುದ್ರೆಯರು ದಕ್ಷಿಣಾಪಥದಲ್ಲಿ ಕಾಲಿಟ್ಟಾಗ, ಭರತ ಚಕ್ರವರ್ತಿಯು ಅಖಂಡ ಸಾಮ್ರಾಜ್ಯವನ್ನು ಸ್ಥಾಪಿಸಿ ತನ್ನ ಹೆಸರನ್ನೇ ದೇಶಕ್ಕೆ ಇರಿಸಿದಾಗ— ಆ ಅತಿ ಪುರಾತನವಾದ ಕಾಲದಲ್ಲಿಯೇ ಈ ಕಲ್ಪನೆಯ ಭರತಖಂಡವು ಸೃಷ್ಟಿಯಾಗಿ ಹೋಗಿತ್ತು.

ಮಾನವ ಸಂಸ್ಕೃತಿಯ ಈ ಉಷಃಕಾಲದಲ್ಲಿ (ಸುಮಾರು ಕ್ರಿ. ಪೂ. ೭ರಿಂದ ೧೦ನೆಯ ಶತಮಾನಗಳು) ವಿಶ್ವದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಉದ್ಯಮಗಳು ಸಾಗಿದ್ದುವು. ಚೀನದಲ್ಲಿ ಕನ್‌ಫ್ಯೂಷಿಯಸನು ತತ್ತ್ವಬೋಧೆ ಮಾಡುತ್ತಿದ್ದನು; ಇರಾನಿನಲ್ಲಿ ಜೊರಾಷ್ಟರನು ಹೊಸ ಧರ್ಮವನ್ನು ಹರಡುತ್ತಿದ್ದನು; ಬ್ಯಾಬಿಲೋನಿಯರ ಕೈಸೆರೆಯಲ್ಲಿ ಜ್ಯೂಜನರ ಭಕ್ತಿಯನ್ನೂ ಶಕ್ತಿಯನ್ನೂ ಕುದುರಿಸಿಕೊಳ್ಳುತ್ತಿದ್ದರು; ಯುರೋಪ್ಯ ಸಂಸ್ಕೃತಿಯ ಜನನವಾಗಿ ಗ್ರೀಸ್ ದೇಶವು ಮುಂಮುವರೆಯಿತು; ರೋಮ್ ನಗರವು ಸ್ಥಾಪಿತವಾಯಿತು.

ಇದೇ ಕಾಲಕ್ಕೆ ಭರತಖಂಡದಲ್ಲಿ ಆಗಲೇ ಎಷ್ಟೋ ಶತಮಾನಗಳ ಪೂರ್ವದಿಂದಲೂ ಮಹೋನ್ನತವಾದ ಸಂಸ್ಕೃತಿಯು ವಿರಾಜಿಸುತ್ತಿತ್ತು. ಅನೇಕ ರಾಜ್ಯಗಳು ಸ್ಥಾಪಿತವಾಗಿದ್ದುವು; ಆರ್ಷೇಯ ಸಾಹಿತ್ಯದಂತೆ ಇತರ ಸಾಹಿತ್ಯಗಳೂ ಧರ್ಮಶ್ರದ್ಧೆಯಂತೆ ತತ್ತ್ವವಿವೇಚನೆಯೂ ಉತ್ತಮ ಸ್ಥಿತಿಯಲ್ಲಿದ್ದುವು. ಜನ್ಮ, ಗುಣ, ಕರ್ಮ, ಇವುಗಳ ಆಧಾರದ ಮೇಲೆ ರಚಿತವಾದ ವರ್ಣಾಶ್ರಮ ಧರ್ಮದಿಂದ ಸಮಾಜವು ಸುಸಂಘಟಿತವಾಗಿದ್ದಿತು. ಧರ್ಮವು ಬಿಕ್ಕಟ್ಟಿನ ಬೇರಾಗದೆ ಒಕ್ಕೂಟದ ಆಧಾರವಾಗಿತ್ತು. ಬಾಲ್ಯಾವಸ್ಥೆಯನ್ನಾಗಲೇ ದೂರ ಬಿಟ್ಟು ಭಾರತವು ಪೂರ್ಣ ಯೌವನದಲ್ಲಿ ಕಾಲಿಟ್ಟಿತ್ತು; ಅಂದಿನ ಮಾನವ ಸಂಸ್ಕೃತಿಯ ಶಿಖರವನ್ನೇ ಸಮೀಪಿಸಿತ್ತು. ಈ ಸಂಸ್ಕೃತಿಯಿಂದ ಅರಳಿದ ಸುಂದರ ಕುಸುಮಗಳೆಂದರೆ ಮನುಧರ್ಮಶಾಸ್ತ್ರ, ಮತ್ತು ಭಗವಾನ್ ಬುದ್ಧ ಕೌಟಿಲ್ಯನ ಅರ್ಥಶಾಸ್ತ್ರ, ಮತ್ತು ಸಾಂಖ್ಯ ಮುಂತಾದ ಷಡ್ದರ್ಶನಗಳು, ರಾಮಾಯಣ ಮತ್ತು ಮಹಾಭಾರತ. ವೇದಕ್ಕೆ ವೇದ, ಶಾಸ್ತ್ರಕ್ಕೆ ಶಾಸ್ತ್ರ, ಕಾವ್ಯಕ್ಕೆ ಕಾವ್ಯ, ಇತಿಹಾಸಕ್ಕೆ ಇತಿಹಾಸವೆಂಬಂತಿರುವ ಮಹಾಭಾರತದ ತಿರುಳೇ ಶ್ರೀಮದ್ ಭಗವದ್ಗೀತೆ; ಭಗವಾನ್ ಶ್ರೀ ಕೃಷ್ಣನ ದಿವ್ಯವಾಣಿಯಲ್ಲಿ ಭಾರತ ಸಂಸ್ಕೃತಿಯ ತಿರುಳೇ ಅಡಕವಾಗಿದೆಯೆಂಬುದನ್ನು ಪ್ರಾಚೀನ ಆಚಾರ್ಯರಂತೆ ಆಧುನಿಕ ಪಂಡಿತರೂ ಮಾನ್ಯ ಮಾಡುತ್ತಾರೆ.

***

ಜೀವಂತವಾದ ಆರ್ಯಾವರ್ತ ಅಥವಾ ಭರತ ಖಂಡದ ನಿರ್ಮಾಣ ಕಾರ್ಯದಲ್ಲಿ ಎಷ್ಟೆಷ್ಟು ವಿಧವಾದ ಶಕ್ತಿಗಳು—ಆಧ್ಯಾತ್ಮಿಕ, ಸಾಮಾಜಿಕ, ನೈತಿಕ, ರಾಜಕೀಯ, ಇತ್ಯಾದಿ — ಸಹಾಯಕವೆನಿಸಿದುವೋ, ಆ ಎಲ್ಲವನ್ನೂ “ಧರ್ಮ”ವೆಂಬ ಒಂದೇ ವ್ಯಾಪಕವಾದ ಶಬ್ದದಿಂದ ಪುರಾತನರು ವ್ಯಕ್ತಪಡಿಸಿರುವರು. ಆಚಾರಗಳು ಸಂಪ್ರದಾಯಗಳು, ಕಟ್ಟಳೆಗಳು, ಕರ್ತವ್ಯಗಳು—ಈ ಎಲ್ಲವನ್ನೂ ಅಂತರ್ಗತವಾಗಿಸಿಕೊಂಡ ಮಹಾ ವರ್ತುಲವೇ ಧರ್ಮವೆಂದರೂ ಎನ್ನಬಹುದು. ಈ ಧರ್ಮವೇ ನಮ್ಮ ಪ್ರಾಚೀನ ಭಾರತದ ತಾಯಿಬೇರು; ಭಾರತವೆಂಬ ಆ ಮಹಾ ವಟ ವೃಕ್ಷದ ಪ್ರಫುಲ್ಲ ಕುಸುಮವೇ ಭಗವದ್ಗೀತೆ. ಅದರ ಪರಿಮಳವು ಇಂದಿಗೂ ಹೊಚ್ಚ ಹೊಸತಾಗಿಯೇ ಇದೆ.

ಈಗಾಗಲೇ ಸುಮಾರು ಮೂರು ಸಹಸ್ರ ವರುಷಗಳು ಉರುಳಿ ಹೋಗಿವೆ. ಫ್ಯಾರೋಗಳ ಈಜಿಪ್ಟ್ ದೇಶ, ಪೆರಿಕ್ಲಿಸನ ಸಂಪದ್ಯುಕ್ತ ಗ್ರೀಸ್, ಪೇರಿಯಸನ ಇರಾನ್, ಸೀಸರನ ರೋಮ್—ಈ ಎಲ್ಲ ಮಹಾ ಸಂಸ್ಕೃತಿಗಳೂ ಎಷ್ಟೋ ಹಿಂದೆಯೇ ಮಣ್ಣುಗೂಡಿ ಈಗ ಸಂಶೋಧಕರ ಚರ್ಚೆಗಳಿಗೆ ಆಹಾರ ರೂಪವಾದ ಭಗ್ನಾವಶೇಷಗಳನ್ನೊದಗಿಸುತ್ತಿವೆ. ಆದರೆ ಭರತ ಖಂಡದ ಸಂಸ್ಕೃತಿ ಮಾತ್ರ ಕಾಲಾಂತಕನ ವಿಕಟಾಟ್ಟಹಾಸವನ್ನು ಲೆಕ್ಕಿಸದೆ ಇಂದಿಗೂ ಜೀವಂತವಾಗಿ ತಲೆಯೆತ್ತಿ ನಿಂತಿದೆ. ಅರ್ಜುನನಿಗೆ ಅಂದು ಶ್ರೀ ಕೃಷ್ಣನು ಮಾಡಿದ ಉಪದೇಶವು ಇಂದಿಗೂ ಲಕ್ಷಾಂತರ ಜನರಿಗೆ ಸ್ಫೂರ್ತಿಯನ್ನೂ ನವಚೈತನ್ಯವನ್ನೂ ಕೊಡುತ್ತಿದೆ.

ಈ ಅಂಶದಲ್ಲಿ ಭಾರತವು ಉಪಮಾತೀತವೂ ವಿಶಿಷ್ಟವೂ ಆಗಿದೆ. ಪಾಶವೀಶಕ್ತಿಯಿಂದ ಈ ಖಂಡವನ್ನು ಪಾದಾಕ್ರಾಂತ ಮಾಡಿಕೊಂಡ ವಿದೇಶೀಯರಿಲ್ಲದೆ ಇಲ್ಲ. ಆದರೆ ಆ ಮಹಾಘಾತಗಳನ್ನೆಲ್ಲ ಸಹಿಸಿಕೊಂಡು, ತನ್ನ ಅಂತಸ್ಸತ್ತ್ವವನ್ನು ಕಳೆದುಕೊಳ್ಳದೆ ಉಳಿದಿರುವ ಭಾರತದ ಆತ್ಮವು ವಿಸ್ಮಯಜನಕವಾಗಿರುವಂತೆ ಆದರಣೀಯವೂ ಆಗಿದೆ. ತಗ್ಗಿದರೂ ನಗ್ಗದೆ, ಬಳುಕಿದರೂ ಅಳಿಯದೆ, ಸೋತರೂ ಗೆದ್ದಂತಿರುವ ಭಾರತದ ಈ ವೈಶಿಷ್ಟ್ಯವೇ ಅದರ ಮಹತ್ತ್ವಯುತ ಸತ್ತ್ವದ ಮರ್ಮ. ಈ ರಹಸ್ಯ ಮುದ್ರೆಯನ್ನೊಡೆಯಲು ಸಮರ್ಥವಾದ ಬೀಗದ ಕೈಯೆಂದರೆ ಭಗವದ್ಗೀತೆಯೊಂದೇ. ಭಾರತದ ಈ ವೈಶಿಷ್ಟ್ಯವನ್ನು, ಅಂತಸ್ಸತ್ತ್ವವನ್ನು, ಜೀವಜ್ಯೋತಿಯನ್ನು, ಅಚ್ಚಳಿಯದಂತೆ ಕಾಲಕಾಲಕ್ಕೂ ಕಾಪಾಡಿಕೊಂಡು ಬಂದಿರುವ ಮಹಾಶಕ್ತಿಯೇ ಭಗವದ್ಗೀತೆಯೆಂದರೂ ಅತಿಶಯೋಕ್ತಿಯಾಗಲಾರದು.

***

ಭರತ ಖಂಡದ ಇತಿಹಾಸದಲ್ಲಿ ಕ್ರಿ. ಶ. ಹನ್ನೆರಡನೆಯ ಶತಮಾನದವರೆಗೂ ಬೇರೆ ಬೇರೆ ಹಿಂದೂ ರಾಜರು ಭಗವದ್ಗೀತೆಯ ಸಂದೇಶವನ್ನು ಗೌರವಿಸುತ್ತಿದ್ದುದರಿಂದಲೇ ‘ಧರ್ಮರಾಜ್ಯಗಳ’, ‘ಧರ್ಮಸಂಸ್ಥೆಯ’ ಕನಸನ್ನು ಕಾಣುತ್ತಿದ್ದುದು.

ಹನ್ನೆರಡನೆಯ ಶತಮಾನದಿಂದಾಚೆಗೆ ಪರಕೀಯರ ಆಕ್ರಮಣದಿಂದ ಒದಗಿದ ರಾಷ್ಟ್ರೀಯ ಅಪಘಾತವನ್ನು ಮೂರು ನಾಲ್ಕು ಶತಮಾನಗಳ ವರೆಗೆ ಎದುರಿಸುವ ಸಾಮರ್ಥ್ಯವು ನಮ್ಮ ಜನರಿಗೆ ಬರುವುದಕ್ಕೂ ಗೀತಾ ಸಂದೇಶದ ಜೀವಂತ ಪ್ರಭಾವವೇ ಮುಖ್ಯ ನಿಮಿತ್ತ. ಕಲೆಗಳಲ್ಲೂ, ಭಕ್ತಿ ಪಂಥಗಳಲ್ಲೂ, ಗೀತಾ ಪ್ರಭಾವಿತವಾದ ಹೊಸ ಹೊಸ ಸೃಷ್ಟಿಯು ಈ ಕಗ್ಗತ್ತಲೆಯ ಕಾಲದಲ್ಲೂ ಅವ್ಯಾಹತವಾಗಿ ಹೊಂಬೆಳಗನ್ನು ಬೀರುತ್ತಲೇ ಇದ್ದಿತು. ಹಾಗೆಯೇ ಕರ್ಣಾಟಕ ರಾಜ್ಯ ರಮಾರಮಣರೆನಿಸಿದ ವಿಜಯ ನಗರದ ಸಮ್ರಾಟರಿಗೂ, ಆರ್ಯಕೀರ್ತಿಯ ಧ್ವಜವನ್ನು ಮುಗಿಲಿನೆತ್ತರ ಏರಿಸಿದ ಶಿವಾಜಿಗೂ ನವಚೈತನ್ಯವನ್ನು ದಯಪಾಲಿಸಿದ ಸತ್ವವು ಗೀತಾ ಸಂದೇಶದ ವಾಹಕರಾದ ವಿದ್ಯಾರಣ್ಯರಲ್ಲೂ ರಾಮದಾಸರಲ್ಲೂ ಪರಿಪೂರ್ಣವಾಗಿದ್ದಿತು.

ಬ್ರಿಟಿಷರ ಕಾಲದಲ್ಲಿಯೂ ಕೂಡ ಆರ್ಯ ಸಂಸ್ಕೃತಿಯ ಧಾರೆಯು ಭಿನ್ನ ಭಿನ್ನ ಮುಖಗಳಲ್ಲಿ ಪ್ರವಹಿಸುತ್ತಲೇ ಇತ್ತು. ಸಿಪಾಯಿ ದಂಗೆಯ ತರುಣದಲ್ಲೇ ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಲೋಕಮಾನ್ಯ ಟಿಳಕ, ಅರವಿಂದ ಘೋಷ, ಮಾಳವೀಯ, ರವೀಂದ್ರನಾಥ ಟಾಗೋರ, ಮಹಾತ್ಮಾ ಗಾಂಧೀಜಿ, ಮುಂತಾದ ಭಾರತದ ಬೃಹದ್ವ್ಯಕ್ತಿಗಳು ತಮ್ಮ ತಮ್ಮ ರೀತಿಯಲ್ಲಿ ಈ ಸಂಸ್ಕೃತಿಯ ಮರ್ಮವನ್ನು ದೇಶದಲ್ಲಿ ಹರಡುತ್ತಲೇ ಇದ್ದರು. ಈ ದಿಕ್ಕಿನಲ್ಲಿ ಶ್ರೀ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಕಾರ್ಯವನ್ನು ಎಷ್ಟು ಶ್ಲಾಘಿಸಿದರೂ ಸ್ವಲ್ಪವೇ.

***

ಭಾರತದ ಸಜೀವ ಅಂತರಾತ್ಮವನ್ನರಸುವವರು ಬರಿಯ ಮೇಲ್ನೋಟದಿಂದ ತೃಪ್ತರಾಗದೆ ಧರ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲು ಯತ್ನಿಸಬೇಕು. ಇದಕ್ಕೆ ಭಗವದ್ಗೀತೆಗಿಂತಲೂ ಉತ್ತಮವಾದ ಸಾಧನವು ಮತ್ತೊಂದಿಲ್ಲ. ಸನಾತನವೂ ಸಾರ್ವಕಾಲಿಕವೂ ಆದ ಧರ್ಮದ ನಿಷ್ಕರ್ಷವನ್ನು ರಮ್ಯವಾದ ಕಾವ್ಯಶೈಲಿಯಲ್ಲಿ ಮಾಡಿರುವ ಅಚ್ಚ ಭಾರತೀಯ ಗ್ರಂಥವೆಂದರೆ ಭಗವದ್ಗೀತೆಯೊಂದೇ. ಸಣ್ಣ ಪುಟ್ಟ ಎಡರು ತೊಡರುಗಳಿರಲಿ, ದೊಡ್ಡ ದೊಡ್ಡ ಪರಾಭವಗಳನ್ನೂ, ಕಡೆಗೆ ಮಹೋಗ್ರಮೃತ್ಯುವನ್ನು ಕೂಡ ಶಾಂತವಾಗಿ ಎದುರಿಸುವ ದಿವ್ಯ ಧೈರ್ಯವನ್ನು ಗೀತೆಯು ಹಿಂದೆ ಕೊಟ್ಟಿದೆ; ಈಗಲೂ ಕೊಡಬಲ್ಲುದು.

ಭಗವದ್ಗೀತೆಯ ಅಧ್ಯಯನದಿಂದ ಮನುಷ್ಯನ ಸಕಲ ಪುರುಷಾರ್ಥಗಳೂ ಸಿದ್ಧಿಸುವವೆಂದು ಶಂಕರಾಚಾರ್ಯರು ಎಳನೆಯ ಶತಮಾನದಲ್ಲಿ ಹೇಳಿದರೆ, ಲೋಕಮಾನ್ಯ ಟಿಳಕರು 'ಕಾಲಮಾನಗಳಿಗೆ ಅತೀತವಾದ ಮಾನವನ ಶಾಶ್ವತ ಧ್ಯೇಯಗಳ ಲಾಭಕ್ಕೆ ಇದೊಂದೇ ಸಾಧನ'ವೆಂದು ಇಂದು ಸಾರಿದ್ದಾರೆ, ಅರವಿಂದರ ಪ್ರಕಾರ ಗೀತೆಯು ವಿಶ್ವದಲ್ಲೇ ಉತ್ಕೃಷ್ಟತಮವಾದ ಪವಿತ್ರ ಗ್ರಂಥ, ಒಂದು ರಾಷ್ಟ್ರದ ಜೀವನವನ್ನೇ ಪುನರುಜ್ಜೀವಿಸುವ ಸಾಮರ್ಥ್ಯವುಳ್ಳ ಸಂಜೀವನ. ಗಾಂಧೀಜಿಯವರಂತೂ ಗೀತೆಯನ್ನು ಲೋಕ ಮಾತೆಯೆಂದೇ ಪರಿಗಣಿಸಿದ್ದರು; ಪೂಜಿಸುತ್ತಿದ್ದರು. ಅವರ ಜೀವನದ ಒಂದೊಂದು ಕ್ಷಣವೂ ಗೀತಾ ತತ್ವದ ಪ್ರಕಾಶನವೇ ಆಗಿತ್ತು.

ಗೀತೆಯಲ್ಲಿ ಉಕ್ತವಾದ ಧರ್ಮವು ಸೂರ್ಯ ಪ್ರಕಾಶದಂತೆ ನಿರ್ಮಲವಾದುದು, ಸಾರ್ವತ್ರಿಕವಾದುದು. ಅಲ್ಲಿ ಯಾವದೇ ಬಗೆಯ ಸಂಕುಚಿತ ದೃಷ್ಟಿಗೂ ಎಡೆಯಿಲ್ಲ. ಸ್ತ್ರೀ ಪುರುಷರೆಂದಾಗಲಿ, ಉಚ್ಚ ನೀಚ ಜಾತಿಯವರೆಂದಾಗಲಿ, ಯಾವ ಭೇದವನ್ನೂ ಗೀತೆಯು ಕಲ್ಪಿಸುವುದಿಲ್ಲ. ಮನುಷ್ಯನ ದುಃಖಗಳ ಮೂಲವನ್ನು ಗೊತ್ತು ಹಿಡಿದು ಅದನ್ನು ಉನ್ಮೂಲನ ಮಾಡಲು ನಿಷ್ಕಾಮ ಕರ್ಮ, ಭಗವಂತನಲ್ಲಿ ಭಕ್ತಿ, ಪರಮಾರ್ಥದ ಜ್ಞಾನ, —ಈ ಸಾಧನಗಳನ್ನು ಸರ್ವಾದರಣೀಯವಾಗಿ ಗೀತೆ ವಿವರಿಸುತ್ತದೆ. ವಿಶ್ವಶಾಂತಿಗಾಗಿ ಹಾತೊರೆಯುತ್ತಿರುವ ಈ ಅಣುಯುಗದಲ್ಲಿ ಭಗವದ್ಗೀತೆಯ ಸಂದೇಶದ ಆಗತ್ಯ ಹೆಚ್ಚಾಗಿದೆ. ನಮ್ಮ ರಾಜಕೀಯದ ವಿಷಬೀಜಗಳನ್ನು ದೂರೀಕರಿಸಿ ವೈಯಕ್ತಿಕ ಹಾಗೂ ಸಾಮಾಜಿಕ ಜೀವನವನ್ನು ಕಲ್ಯಾಣಮಯವಾಗಿ ಮಾಡಬಲ್ಲ ದಿವ್ಯೌಷಧವೇ ಭಗವದ್ಗೀತೆ. ನಮ್ಮ ಸ್ವಾತಂತ್ರ್ಯವು ಸರ್ವ ಸೌಖ್ಯಪ್ರದವಾಗಿ ವಿಶ್ವವಂದ್ಯವಾಗಿ ನಿಲ್ಲಲೆಂದು ಈ ಸುಮುಹೂರ್ತದಲ್ಲಿ ಹಾರೈಸುವ ನಾವೆಲ್ಲರೂ ಭಗವದ್ಗೀತೆಯ ದೀಪಸ್ತಂಭದಿಂದ ಹೊಸ ಬೆಳಕನ್ನು ಕಾಣೋಣ!

'ಸರಸ್ವತಿ'

(Estd. 1920)

ಕನ್ನಡ ಮಾಸಪತ್ರಿಕೆ.

ಕಳೆದ ಮೂವತ್ತೈದು ವರ್ಷಗಳಿಂದ ಮಹಿಳೆಯರ ಹಾಗೂ ಮಕ್ಕಳ ಸೇವೆಯನ್ನು ಸಲ್ಲಿಸಿ ಇಡೀ ಕರ್ನಾಟಕದಲ್ಲಿ ಹೆಸರಾಂತ ಮಾಸ ಪತ್ರಿಕೆ. ಜಾಹೀರಾತು ಕೊಡಲು ಉತ್ತಮ ಪತ್ರಿಕೆ. ಶಾಲಾ ಮಕ್ಕಳಿಗೆ ಅಗತ್ಯವಾದ ಪತ್ರಿಕೆ.

ಸಂಪಾದಕೆ:— ಆರ್. ಕಲ್ಯಾಣಮ್ಮ.

ವಾರ್ಷಿಕ ಚಂದಾ ರೂ. 3 ಮನಿಯಾರ್ಡರ್ ಮಾಡಿರಿ.

ಮ್ಯಾನೇಜರ್,
ಸರಸ್ವತಿ ಕಾರ್ಯಾಲಯ,
ಅರಳೆಪೇಟೆ, ಬೆಂಗಳೂರು 2.
ಫೋನ್ ನಂ. 3303.

(೯ನೇ ಪುಟದಿಂದ)

ನ್ಯಾಯಬಾಹಿರವೆಂದೂ ಇದು ತಮ್ಮ ವ್ಯಾಪಾರ ಸ್ವಾತಂತ್ರ್ಯವನ್ನು ಕುಂಠಿತಗೊಳಿಸುತ್ತದೆಂದೂ ವಾದಿಸುತ್ತ ಈ ಕುರಿತು ತಕ್ಕ ನಿರ್ಣಯವನ್ನು ಕೊಡಲು ನ್ಯಾಯಾಲಯದ ಮೊರೆಹೋಗಲು ಸಿದ್ಧರಾಗಿದ್ದಾರೆ. ಇಂಥವರನ್ನು ಸರ್ಕಾರ ಒಮ್ಮೆಲೇ ಹಿಡಿದು ಸೆರೆಮನೆಯೊಳಗೆ ಹಾಕಲು ಸಾಧ್ಯವಿಲ್ಲ; ಅವರ ವ್ಯವಹಾರಕ್ಕೆ ಮುಟ್ಟುಗೋಲು ಹಾಕಲು ಸಾಧ್ಯವಿಲ್ಲ.

ಆಧುನಿಕ ಪ್ರಜಾತಂತ್ರ ಪದ್ಧತಿಯುಳ್ಳ ಎಲ್ಲ ದೇಶಗಳಲ್ಲೂ ಈ ವೈಯಕ್ತಿಕವಾದ ತೀವ್ರ ಭಿನ್ನಾಭಿಪ್ರಾಯಗಳು ಇದ್ದೇ ಇವೆ. ಹಲವು ವ್ಯಕ್ತಿಗಳು ಸೇರಿ ಪಕ್ಷಗಳನ್ನು ಕಟ್ಟುವಾಗ ಪಕ್ಷಗಳಲ್ಲೂ ಆಡಳಿತ ವಿಧಾನ ಮತ್ತು ಸಮಾಜ ಪ್ರಗತಿಯ ಕುರಿತು ಭಿನ್ನಾಭಿಪ್ರಾಯ ಬಂದೇ ತೀರುತ್ತದೆ. ನಮ್ಮನ್ನು ಕೆಲ ವರ್ಷ ಹಿಂದಿನ ವರೆಗೆ ಆಳುತ್ತಿದ್ದ ಬ್ರಿಟಿಷರ ಇಂಗ್ಲೆಂಡನ್ನು ನೋಡಿದರೂ ಅಲ್ಲಿಯೂ ಕೂಲಿಕಾರ ಪಕ್ಷ ಮತ್ತು ಶ್ರೀಮಂತರ ಸಂಪ್ರದಾಯವಾದೀ ಪಕ್ಷಗಳೊಳಗೆ ರಾಷ್ಟ್ರೀಕರಣವೇ ಮುಂತಾದ ಅತೀ ಮಹತ್ವದ ವಿಷಯಗಳಲ್ಲಿ ತೀವ್ರ ಭಿನ್ನಾಭಿಪ್ರಾಯ ಇರುವುದನ್ನು ಕಾಣಬಹುದು.

***

ನಮ್ಮ ದೇಶದ ಪ್ರಜಾರಾಜ್ಯಕ್ಕೆ ಆರು ವರ್ಷ ತುಂಬುತ್ತಿದ್ದರೂ ನಮ್ಮಲ್ಲಿಯೂ ಭಿನ್ನಾಭಿಪ್ರಾಯಗಳಿಗೇನೂ ಕಡಿಮೆಯಿಲ್ಲ. ವೈಯ್ಯಕ್ತಿಕ ಅಭಿಪ್ರಾಯಗಳನ್ನು ಬದಿಗೊತ್ತಿ ಕೇವಲ ರಾಜಕೀಯ ಪಕ್ಷಗಳೊಳಗಿನ ಅಭಿಪ್ರಾಯಗಳನ್ನೇ ಪರಿಶೀಲಿಸಿದರೂ ನಮ್ಮಲ್ಲಿ ಎಷ್ಟು ಅಗಾಧವಾದ ಪ್ರಮಾಣದಲ್ಲಿ ಅಭಿಪ್ರಾಯದ ಅಸಮಾನತೆ ಇದೆಯೆಂಬುದು ಸ್ಪಷ್ಟವಾಗದಿರದು. ಆಳುತ್ತಿರುವ ಪಕ್ಷವಾದ ಕಾಂಗ್ರೆಸ್ ಸಮಾಜವಾದೀ ಮಾದರಿಯ ಸಮಾಜವನ್ನು ಕಟ್ಟಲು ಮುಂದೆ ಬಂದಿರುವುದಾದರೆ, ಪ್ರಜಾಸೋಶಲಿಸ್ಟ ಪಕ್ಷ ಸಮಾಜವಾದೀ ಸಮಾಜವನ್ನು ಕಟ್ಟಲು ಆಗ್ರಹ ಪಡುತ್ತದೆ. ಹಾಗೆಯೇ ಡಾ| ಲೋಹಿಯಾರ ನೂತನ ಸೋಶಲಿಸ್ಟ ಪಕ್ಷ ಏಳು ವರ್ಷಗಳೊಳಗೆ ಸರ್ಕಾರದ ಅಧಿಕಾರ ಪದವಿಗೇರುವ ಯೋಜನೆಯನ್ನು ರಚಿಸಿದೆ. ಕಮ್ಯುನಿಸ್ಟ ಪಕ್ಷದ ಪ್ರಕೃತ ಆಂತರಿಕ ಧೋರಣೆ ಏನೆಂಬುದು ಸುಸ್ಪಷ್ಟವಿಲ್ಲದಿದ್ದರೂ, ಭಾರತವು ಎಲ್ಲ ವಿಧಗಳಲ್ಲೂ ರಷ್ಯಾ—ಚೀನಗಳ ಮಾದರಿಯನ್ನು ಅನುಸರಿಸಿ ಸಮತಾ ವಾದವನ್ನು ತರಬೇಕೆಂಬ ಅಭಿಪ್ರಾಯ ಅದಕ್ಕೆ ಇನ್ನೂ ಇದ್ದಂತೆ ತೋರುತ್ತದೆ. ಮತ್ತೆ ಹಿಂದೂ ಮಹಾ ಸಭೆಯವರು, ಆರ್. ಎಸ್. ಎಸ್. ನವರು, ಹಿಂದುತ್ವದಿಂದೊಡಗೂಡಿದ, ಸುಸಂಘಟಿತ ಹಿಂದೂ ಸಮಾಜವನ್ನು ಭಾರತದಲ್ಲಿ ಕಟ್ಟಲು ನಿಶ್ಚೈಸಿರುವರಲ್ಲದೆ, ಹಿಂದುಗಳಲ್ಲದ ಮುಸ್ಲಿಂ, ಕ್ರೈಸ್ತ ಇತ್ಯಾದಿ ಜನರನ್ನು ಆದಷ್ಟು ಮಟ್ಟಿಗೆ ಜಗ್ಗಿ ಹಿಡಿಯುವ ನಿರ್ಧಾರವನ್ನು ಮಾಡಿದ್ದಾರೆ.

ಹಿಂದಿನ ದಿನಗಳ ಅರಸನರಾಜ್ಯಕ್ಕೂ, ಇಂದಿನ ದಿನದ ಪ್ರಜೆಗಳ ರಾಜ್ಯಕ್ಕೂ ಎಷ್ಟು ದೊಡ್ಡ ಅಂತರವಿದೆಯೆಂಬುದನ್ನು ಮೇಲೆ ಕೊಟ್ಟ ಒಂದೆರಡು ನಿದರ್ಶನಗಳು ಸೂಚಿಸುತ್ತಿವೆ. ಹಿಂದೆ ಅರಸನು ಹೇಳಿದುದನ್ನು ಪ್ರಜೆಗಳು "ರಾಜಾ ಪ್ರತ್ಯಕ್ಷ ದೇವತಾ" ಎಂದು ಪರಿಪಾಲಿಸಬೇಕಾಗಿತ್ತು. ಭಿನ್ನಾಭಿಪ್ರಾಯಗಳಿಗೆ ಎಡೆಯಿದ್ದಿಲ್ಲ. ಅಂದು ವ್ಯಕ್ತಿ ಸ್ವಾತಂತ್ರ್ಯವೆಂದು ಇದ್ದೇ ಇರಲಿಲ್ಲವೆಂದೂ ಹೇಳಬಹುದು. ಹಾಗಿರುತ್ತಿದ್ದರೆ ಅಶೋಕ — ಹರ್ಷರಂಥ ಕೆಲವು ದಶಕಗಳಷ್ಟು ಸಮಯ ದೇಶವನ್ನಾಳಿದ ಮಹಾರಾಜರುಗಳು ಎಂಥೆಂಥಾ ಚಾರಿತ್ರಿಕವಾದ ಧಾರ್ಮಿಕ ಹಾಗು ಸಾಮಾಜಿಕ ಸುಧಾರಣೆಗಳನ್ನು ಆಚರಣೆಗೆ ತರಲು ಶಕ್ತರಾಗುತಿದ್ದಿಲ್ಲ. ಇಂದು ದಶಮಾಂಶ ನಾಣ್ಯ ಪದ್ಧತಿಯ ಶಾಸನವು ಕಾರ್ಯಗತವಾಗಬೇಕಾದರೆ ಮೂರು ನಾಲ್ಕು ವರ್ಷಗಳು ಬೇಕಾಗುವುವು; ಆದರೆ ಅಂದು ಮಹಮದ್ ಬಿನ್ ತೊಗಲಕನು ತೊಗಲಿನ ನಾಣ್ಯ ಚಲಾವಣೆಯ ಪದ್ಧತಿಯನ್ನು ಒಂದು ವರ್ಷ ಸಮಯದೊಳಗೆ ಆಚರಣೆಗೆ ತಂದಿದ್ದನಂತೆ!

ಇಂಥ ಸರ್ಕಾರಗಳು ಇಂದೂ ಇಲ್ಲದಿಲ್ಲ. ರಷ್ಯಾ—ಚೀನ ಮುಂತಾದ ಸಮತಾವಾದೀ ರಾಜ್ಯಗಳ ಸರ್ಕಾರಗಳು ಪ್ರಾಯದಲ್ಲಿ ಇಂಗ್ಲೆಂಡ್, ಅಮೇರಿಕ ಮುಂತಾದ ದೇಶಗಳ ಸರ್ಕಾರಗಳಿಗಿಂತ ಎಷ್ಟೋ ಕಿರಿಯವು. ಆದರೆ ಅಲ್ಲಿರುವ ಕಾರ್ಮಿಕ ಸರ್ವಾಧಿಕಾರೀ ಪ್ರಭುತ್ವ ಪದ್ಧತಿಯಿಂದಾಗಿ ಅವು ನಾವು ಅರಿತಿರುವ ವ್ಯಕ್ತಿ ಸ್ವಾತಂತ್ರ್ಯಗಳನ್ನು ನಿರ್ಲಕ್ಷಿಸಿಯೇ, ತೊಡೆದು ಹಾಕಿಯೇ ತಮ್ಮ ದೇಶಗಳನ್ನು ಅಭಿವೃದ್ಧಿಯ ದಾರಿಯಲ್ಲಿ ಒಯ್ದಿವೆ, ಒಯ್ಯುತ್ತಿವೆ.

ವ್ಯಕ್ತಿ ಸ್ವಾತಂತ್ರ್ಯದ ವಿರುದ್ಧ ಸರ್ಕಾರೀ ಬಲಾತ್ಕಾರದ ಪ್ರಶ್ನೆಯಿದೆ. ಸರ್ಕಾರ ವ್ಯಕ್ತಿಯ ಮೇಲೆ ಎಷ್ಟು ಹೆಚ್ಚು ಬಲ ಪ್ರಯೋಗ ಮಾಡುವುದೋ ಅಷ್ಟೇ ಹೆಚ್ಚು ಅದು ನಿರಂಕುಶಾಧಿಕಾರೀ ಸರ್ಕಾರವಾಗುತ್ತದೆ. ಹಿಟ್ಲರನು ತನ್ನ ಅಧಿಕಾರಾವಧಿಯ ಕೇವಲ ಆರೇಳು ವರ್ಷಗಳಲ್ಲಿ, ಜರ್ಮನಿಯ ಯೆಹೂದಿಯರನ್ನು ನಿರ್ಮೂಲಮಾಡಿ, ಪ್ರಜೆಗಳ ವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದು, ಪೋಲೀಸ್ ಪಡೆಗಳಿಗೆ ಯಥೇಚ್ಛ ಸ್ವಾತಂತ್ರ್ಯ ಕೊಟ್ಟು — ತನ್ನ ರಾಜ್ಯವನ್ನು ಜಗತ್ತಿನಲ್ಲೇ ಅಗ್ರಗಣ್ಯ ರಾಷ್ಟ್ರವನ್ನಾಗಿ ಮಾಡಿದನು. ವ್ಯಕ್ತಿ ಸ್ವಾತಂತ್ರ್ಯದಿಂದಾಗಿ ದೇಶ ಪ್ರಗತಿಯನ್ನು ಹೊಂದಿಯೇ ಹೊಂದುವುದಿಲ್ಲವೆನ್ನಲಾಗದು; ಆದರೆ ಎಣಿಸಿದಷ್ಟು ಕ್ಷಿಪ್ರವಾಗಿ ಫಲವನ್ನೀಯ ಬೇಕಾದರೆ ಸರ್ಕಾರ ಹೆಚ್ಚು ಬಲಪ್ರಯೋಗವನ್ನು ಮಾಡುವುದು ಅವಶ್ಯವಿದೆ.

ನಮ್ಮ ಪ್ರಜಾರಾಜ್ಯವಾದರೂ ಈ ಎಲ್ಲ ಆಧುನಿಕ ಸಮಸ್ಯೆಗಳನ್ನು ಎದುರಿಸದಿಲ್ಲ. ಸಮಾಜ ಸುಧಾರಣೆಯ ದೃಷ್ಟಿಯಿಂದ ರಾಜ್ಯಾಂಗ ಘಟನೆಯನ್ನು ಹಲವು ಬಾರಿ ತಿದ್ದುಪಡಿ ಮಾಡಬೇಕಾಯಿತು. ಈಗ ಫಜ್ಲಾಲಿ ವರದಿಯನ್ನು ಕಾರ್ಯಗತಗೊಳಿಸಲು ಮರಳಿ ತಿದ್ದುಪಡಿಗಳು ಆಗಬೇಕಾಗಿವೆ. ನಮ್ಮಲ್ಲಿ ಪ್ರಜಾಭಿಪ್ರಾಯಕ್ಕೆ ಮನ್ನಣೆಯಿರುವುದಾದರೂ ಏಕ ಪಕ್ಷ ಸರ್ಕಾರವು ಸಾಧಾರಣವಾಗಿ ತನಗೆ ಇಚ್ಛೆ ಬಂದಂತೆ ಮಾಡಬಲ್ಲುದು. ಆದುದರಿಂದ ಫ್ರಾನ್ಸಿನಂಥ ಏಕ ಪಕ್ಷ ಪ್ರಾಬಲ್ಯವಿಲ್ಲದ ಸರ್ಕಾರವುಳ್ಳ ದೇಶಗಳ ಅವಸ್ಥೆಯಂತೆ ನಮ್ಮ ದೇಶದಲ್ಲಿ ಅನಿಶ್ಚಿತತೆ ಮತ್ತು ಅಭದ್ರತೆಯ ಪರಿಸ್ಥಿತಿಯನ್ನು ಸರ್ವ ಸಾಧಾರಣವಾಗಿ ಎದುರಿಸಬೇಕಾಗಿಲ್ಲ. ಆದರೆ ಇಂಥ ಪಕ್ಷದ ಒಗ್ಗಟ್ಟು, ಅದರಿಂದ ಸರ್ಕಾರದ ಒಗ್ಗಟ್ಟು ಎಷ್ಟರ ವರೆಗೆ ಇರಬಹುದೆಂಬುದನ್ನು ಹೇಳುವುದು ಕಷ್ಟ: ಏಕೆಂದರೆ ಮುಂಬಯಿಯ ಪ್ರಶ್ನೆಯ ಕುರಿತು ಎಲ್ಲ ಮಹಾರಾಷ್ಟ್ರೀಯರೂ ತಾವು ಮೊದಲು ಮಹಾರಾಷ್ಟ್ರೀಯರು ಮತ್ತೆ ಕಾಂಗ್ರೆಸಿಗರೋ, ಪ್ರಜಾಪಕ್ಷದವರೋ ಆಗಿದ್ದೇವೆ ಎಂಬುದನ್ನು ಪ್ರದರ್ಶಿಸಿದುದು ಪಕ್ಷಪ್ರಾಬಲ್ಯದ ವಿಚಾರದಲ್ಲಿ ಅಳತೆಗೋಲಾಗಿದೆ.

ಮಕ್ಕಳ ಮಗ್ಗಿ ಪುಸ್ತಕ

ನವಯುಗ ಪ್ರೆಸ್, ಉಡುಪಿ.

ನಮ್ಮ ಅಂಕೆ ಸಂಖ್ಯೆಗಳು

30-9-1955ರಲ್ಲು

ತೆತ್ತು ಬಂದ ಭಂಡವಾಳ ಮತ್ತು ಕ್ಷೇಮನಿಧಿ .... ರೂ. **11,00,000** ಮಿಕ್ಕಿದೆ.
ಚಲಾವಣೆ ಭಂಡವಾಳ .... ,, **76,00,000** ,,

ದಕ್ಷಿಣ ಕನ್ನಡ ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮುಂಬಾಯಿ ನಗರದಲ್ಲಿಯೂ ಮತ್ತು ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿಯೂ ತನ್ನ ಶಾಖೆಗಳನ್ನು ತೆರೆದು ತನ್ಮೂಲಕ ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ.

ದಿ ವಿಜಯ ಬೇಂಕ್, ಲಿಮಿಟೆಡ್.

1931ರಲ್ಲಿ ಸ್ಥಾಪಿತವಾದದ್ದು.

ಧನಿಕ ಬಡವನೆಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ
ತಕ್ಕ ವಹಿವಾಟನ್ನು ಕಲ್ಪಿಸಿ ಕೊಡುತ್ತಿರುವ
ಒಂದೇ ಒಂದು ಬೇಂಕು.

ಸ್ಥಾಪಿಸಲ್ಪಟ್ಟಂದಿನಿಂದಲೂ ವೃದ್ಧಿಯಿಂದ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುವಂತೆ ಇದರೊಡನೆ ಸಹಕರಿಸಿದ ಹಾಗೂ ಸಹಕರಿಸಲ್ಪಡುತ್ತಿರುವ ಇದರ ಸಹಸ್ರಾರು ಭಾಗೀದಾರರಿಗೆ, ಗ್ರಾಹಕರಿಗೆ, ಮತ್ತು ಹಿತಚಿಂತಕರಿಗೆ ಈ ಸುಸಂದರ್ಭದಲ್ಲಿ ಇದು ತನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

THE VIJAYA BANK, LTD.

H. O. MANGALORE 3.

ನಾಳ್ಪಗರಣ - ಯಕ್ಷಗಾನ - ಶಿಷ್ಟಿಗಳು

ಪ್ರಜಾರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಹಿಂದೊಮ್ಮೆ ಉತ್ತರ ಕರ್ನಾಟಕದ ಯಕ್ಷಗಾನ ಕಲಾವಿದರು ರಾಷ್ಟ್ರಾಧ್ಯಕ್ಷರ ಮುಂದೆಯೂ ಮೊನ್ನೆ ರಕ್ಷಕ ಪ್ರಭೃತಿಗಳ ಮುಂದೆ ದಕ್ಷಿಣ ಕನ್ನಡದ ಯಕ್ಷಗಾನ ಕಲಾವಿದರು ಬೆಂಗಳೂರಿನಲ್ಲಿಯೂ ಪ್ರದರ್ಶಿಸಿದ ಜಾನಪದ ಕಲೆಗೆ ತನ್ನದೇ ಆದ ವಿಶಿಷ್ಟ ಪರಂಪರೆಯಿದೆ—ಸಾವಿರಾರು ವರ್ಷಗಳ ಉಜ್ವಲ ಇತಿಹಾಸವಿದೆ. ಜನಜೀವನದ ಮೇಲೆ ವಿಪುಲ ಪರಿಣಾಮವನ್ನು ಮಾಡಬಲ್ಲ ಈ ಸಾಂಸ್ಕೃತಿಕ ಚಟುವಟಿಕೆಗೆ ಸ್ವತಂತ್ರ ಭಾರತದಲ್ಲಿ ಸರಕಾರದ ನೆಲೆಯಿಂದ ಯಥೋಚಿತ ಪ್ರೋತ್ಸಾಹ ಸಿಗಲಿ!

ಬರೆದವರು: ಶ್ರೀ ಜಿ. ಆರ್. ಪಾಂಡೇಶ್ವರ.

ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ 'ನಾಳ್ಪಗರಣ' (ನಾಡವರ ನಾಟಕ) ವನ್ನು 'ಯಕ್ಷಗಾನ ಆಟ' ಅಥವಾ 'ದಶಾವತಾರ ಆಟ' ಎಂದು ಕರೆಯಲಾಗುತ್ತಿದೆಯಷ್ಟೆ. ನೃಪತುಂಗ, ನಾಗವರ್ಮರು ಈ 'ನಾಳ್ಪಗರಣ'ಗಳನ್ನೂ, ಅವುಗಳಲ್ಲಿ ಬರುವ ಗೀತ ಭಾಗಗಳನ್ನೂ 'ದೇಸಿ' ಎಂದು ಕರೆದಿದ್ದಾರೆ. "ದೇಸಿ" ಮತ್ತು "ಮಾರ್ಗ" ಎಂಬ ನಾಮಕರಣ ಹೇಗೆ ಬಂದಿತೆಂದಿಲ್ಲಿ ತುಸು ವಿವರಿಸಬಹುದು. 'ಮಾರ್ಗ'ವು ಸಿಮೆಂಟ್ ಕಾಂಕ್ರೆಟ್ ರಸ್ತೆಯಾದರೆ, 'ದೇಸಿ'ಯು ಸಾದಾ ಹುಟ್ಟುಗಲ್ಲಿನ ಹೆದ್ದಾರಿ, ಅಥವಾ ಹಳ್ಳಿಯ ಹಾದಿ. ನೈಸರ್ಗಿಕ ಸ್ಥಿತಿಯಲ್ಲಿರುವುದನ್ನು ಮನುಷ್ಯನ ಕೈ ಪರಿಷ್ಕರಿಸುತ್ತದೆ; ಅದೇ 'ಮಾರ್ಗ'ವಾಗುವುದು. ಸಿಗರೇಟು ಮಾರ್ಗವಾದರೆ, ಬೀಡಿಯು ದೇಸಿಯಾಗುವುದು. ಕಸಿ ಕಟ್ಟಿದ ಮಾವಿನ ಮರದ ಹಣ್ಣು ಮಾರ್ಗವೆನಿಸಿದರೆ, ಕಸಿಕಟ್ಟದೆ ನೈಸರ್ಗಿಕವಾಗಿ ಬೆಳೆದ ಮಾವಿನ ಮರದ ಹಣ್ಣು ದೇಸಿಯಾಗುವುದು. ಈ ಮಾರ್ಗ–ದೇಸಿ ಎರಡರಲ್ಲಿಯೂ ಇರುವ ಮೂಲ ದ್ರವ್ಯ ಒಂದೇ! ಈಗಲೂ ಕೂಡಾ ಕರ್ನಾಟಕದ ಎಲ್ಲ ಕಡೆಯಲ್ಲಿಯೂ ಈ 'ದೇಸಿ' ವಸ್ತುಗಳನ್ನು ಈಗಿನ ಆಂಗ್ಲ ಶಿಕ್ಷಣ ಸಂಸ್ಕೃತಿಯವರು "ಕಂತ್ರೀ" (Country) ಮಾಲು, ಕಂತ್ರೀ ವಸ್ತು ಎಂದು ಹೀಯಾಳಿಸಿ ಕರೆಯುವ ವಾಡಿಕೆ ಇದೆಯಲ್ಲವೆ? ನಾಗರಿಕ ಉಡುಗೆ–ತೊಡುಗೆ ತೊಡದವನನ್ನು 'ಕಂತ್ರೀ ಮನುಷ್ಯ' ಎಂದು ಹೇಳುವುದುಂಟಲ್ಲವೆ? ಆತನು ಮಾರ್ಗಿ (Fashionable) ಗಳಂತೆ 'ಡ್ರೆಸ್ಸು' ಳ್ಳವನಾಗಿಲ್ಲದುದೇ ಆ ನಾಮಕರಣಕ್ಕೆ ಕಾರಣ. ಕಂತ್ರಿಯಾಗಲೀ, ಮಾರ್ಗಿಯಾಗಲೀ, ಇಬ್ಬರಿಗೂ ಮರ್ಯಾದೆ ಮುಚ್ಚಿ ಕೊಡುವ "ಡ್ರೆಸ್"ಗೆ ಬಟ್ಟೆಯೆಂಬುದು ಅತ್ಯವಶ್ಯವೂ ಅನಿವಾರ್ಯವೂ ಆದ ಮೂಲ ದ್ರವ್ಯವಲ್ಲವೆ?

***

ನೃಪತುಂಗ–ನಾಗವರ್ಮ ಮೊದಲಾದವರು ದೇಸಿಯನ್ನು ಹೀಯಾಳಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ದೇಸಿಯ ವಿಳಾಸವನ್ನು ಕೊಂಡಾಡಿದ ಹಳಗನ್ನಡ ಕವಿ ಚೂಡಾಮಣಿಗಳು ಕೂಡಾ 'ದೇಸಿ' 'ದೇಸಿಗ' ಎಂಬ ಪದಗಳನ್ನು ಒಂದು ಬಗೆಯ ತಾತ್ಸಾರ ವ್ಯಂಜಕವಾಗಿಯೇ ಪ್ರಯೋಗಿಸಿದ್ದಾರೆ! ಭಾರತ ಯುದ್ಧದ ಕೊನೆಯ ದಿನ ಕೌರವೇಶ್ವರನು ಏಕಾಕಿಯಾಗಿ ಭೀಷ್ಮರಲ್ಲಿಗೆ ಜಲಸ್ತಂಭನ ಮಂತ್ರೋಪದೇಶ ಪಡೆಯಲು ಬಂದಾಗ, 'ದೇಸಿಗನಂತೆ ಬರ್ಪವೊಲಾದುದೆ?' ಎಂದು ಭೀಷ್ಮರು ಆತನನ್ನು ಕನಿಕರಿಸಿ ಕೇಳುವಲ್ಲಿ, ಛತ್ರ, ಚಾಮರಾದಿ ವೈಭವ ಸೂಚಕ ಸಲಕರಣೆ ಯಾವುದೂ ಇಲ್ಲದೇ ಸಾದಾ ರೀತಿಯಲ್ಲಿ ಬಂದುದನ್ನೇ "ದೇಸಿಗ" ಪದದಿಂದ ವ್ಯಂಜಿಸಲಾಗಿದೆ! ನಿರ್ಗತಿಕನಾದವನಿಗೆ "ದೇಸಿಗ" ಮತ್ತು "ಪಾಪ, ಪರದೇಸಿ" ಎನ್ನುವ ಮಾತು ಈಗಲೂ ಹಲವೆಡೆ ರೂಢಿಯಲ್ಲುಂಟು.

ಜೈನ ಕವಿಗಳಲ್ಲಿ ಪಂಪನೊಬ್ಬನು ಮಾತ್ರವೇ 'ದೇಸಿ'ಯನ್ನೆತ್ತಿ ಹಿಡಿದಿದ್ದಾನೆ. ಉರ್ವಶಿಯ ನೃತ್ಯ ವೈವಿಧ್ಯದಲ್ಲಾತನು "ದೇಸಿಗೆ ದೇಸಿಯಾಡಿದಳ್" ಎಂಬಲ್ಲಿ ದೇಸಿಗ ಸ್ತ್ರೀ ನೃತ್ಯ ವೈವಿಧ್ಯವನ್ನು ಬಗೆದುಂಬುವಂತೆ ಬಹು ಸೂಚ್ಯವಾಗಿ ಬಣ್ಣಿಸಿದ್ದಾನೆ. (ಪಂ. ಭಾ. ಆ೭. ೮೮ ೯೧)

ಜೈನ ಕವಿಗಳೆಲ್ಲರೂ ತಮ್ಮ ಮಹಾಕಾವ್ಯಗಳನ್ನು ವೃತ್ತಕಂದಾದಿಗಳ 'ಮಾರ್ಗ' ಛಂದಸ್ಸುಗಳಲ್ಲೇ ಬರೆದು ಸಂಸ್ಕೃತ ಪುರಾಣ ಮತ್ತು ಮಹಾ ಕಾವ್ಯಗಳ 'ಮಾರ್ಗ' (ಲಕ್ಷಣ) ವನ್ನೇ ಅನುಸರಿಸಿಕೊಂಡು ಬಂದವರು. ಅವರು ಸಂಸ್ಕೃತದ ಪುರಾಣೋಕ್ತವಾದ ವಿಷ್ಣು ಸರ್ವೋತ್ತಮತೆಯ 'ದಶಾವತಾರ'ಗಳಿಗೆ ಸಂಬಂಧಿಸಿದ ರಾಮಾಯಣ-ಭಾರತಗಳ ಮೇಲೆ ಕಾವ್ಯಗಳನ್ನು ರಚಿಸಿದರು; ಅವರ ರಾಮ-ಕೃಷ್ಣಾದಿ ಪುರಾಣ ನಾಯಕರಿಗೂ ವ್ಯಾಸ–ವಾಲ್ಮೀಕಿಗಳದ್ದಕ್ಕೂ ಅಲ್ಲಲ್ಲಿ ಭೇದಗಳಿದ್ದರೂ, ಅವರು ಸಂಸ್ಕೃತದ "ಮಾರ್ಗ"ವನ್ನೇ ಹಿಡಿದವರಾಗಿದ್ದರು. ಆದ್ದರಿಂದ "ಮಾರ್ಗ" ಕೃತಿಗಳಲ್ಲಿ ಪುರಾಣದ ಹೊರಗಣ ಚರಿತ್ರೇತಿಹಾಸಾಂಶಗಳು ಕಂಡು ಬರುವುದಿಲ್ಲ. ಅವರು "ದೇಸೀ" ಪುರಾಣಗಳನ್ನೂ, ಚರಿತ್ರೇತಿಹಾಸಗಳನ್ನೂ ಕಡೆಗಣಿಸಿ ತಿರಸ್ಕರಿಸಿದ್ದರು. ಹಾಗಾಗಿ, ದೇಸಿ ಜನರ ಪುರಾಣ ಪುಣ್ಯ ಕಥೆಗಳೆಲ್ಲ "ನಾಳ್ಪಗರಣ"ಗಳ ರೂಪದಲ್ಲೇ ದೇಸೀ ಕವಿ—ಗಮಕಿ ಜನರಿಂದ ರಚಿಸಲ್ಪಡುತ್ತಿದ್ದುವು. ಅವರು ಸ್ವಾಭಾವಿಕರಾಗಿಯೇ ತಮ್ಮ "ನಾಳ್ಪಗರಣ"ಗಳನ್ನು ವಿಶೇಷವಾದ ಕೃತಿಯ ಸಲಕರಣೆಗಳ ಅಗತ್ಯವಿಲ್ಲದೆ ನಟಿಸಿ ತೋರಿಸಲು ಬರುವಂತೆ ರಚಿಸಬೇಕಾಯಿತೆನ್ನಬಹುದು. "ಮಾರ್ಗ"ದ ರಾಗ–ತಾಳಗಳೆಲ್ಲವೂ ದೇಸೀ ಯಕ್ಷಗಾನವೆಂಬ "ನಾಳ್ಪಗರಣ"ಗಳಲ್ಲಿದ್ದುವು, ಈಗಲೂ ಇವೆ. ಅವುಗಳು ಪಂಚಮ ವರ್ಜ್ಯ

[ದೇಶೀ ಪಂಚಮ ಹೀನಾಚರಾಗಾಂ ಗಾದಿಷಭತ್ರ್ಯಯಾ|| ಮತ್ತು
ತದೇವರು ಚಿಪ್ಯೈಚಿತ್ರ್ಯಾತ್ ಚಿತ್ರರಂಜನ ಕೃಜ್ಞನೈಃ
ಪ್ರಯುಕ್ತಂ ಸ್ವಸ್ವದೇಶೇಯತ್ ತತೋಽದೇಶೀತಿ ಕೀರ್ತಿತಂ||]

ವಾಗಿರುವುದರಿಂದ ವೀಣಾದಿ ಮೃದುಮಧುರ ಸ್ವರಯುಕ್ತ ವಾದ್ಯವಿಶೇಷಗಳ ಹಿಮ್ಮೇಳದ ಅವಶ್ಯವಿಲ್ಲದೆ, ಸಾದಾ "ಶ್ರುತಿ ಬುರುಡೆ"ಯಿಂದಲೇ ತಮ್ಮ ವೈಭವವನ್ನು ವ್ಯಕ್ತಪಡಿಸುವಂತಾದುವು. ಹಾಗು, ಸಂಭಾಷಣೆಗಳಿಗೂ ಕುಣಿತಕ್ಕೂ ಜವುನೆರವಾಗಿಬಳಸಲ್ಪಡಬೇಕಾದುದರಿಂದ, ಸಂಗೀತ ವಿದ್ವಾಂಸರ "ಮಾರ್ಗ"ದ ಕಛೇರಿ ಸಂಗೀತಕ್ಕೆ ದೂರಾಗಬೇಕಾಯಿತು. ಉದಾಹರಣೆಗೆ— "ಎಲವೊ

ಲೋಕದ ಕೀರ್ತಿ ಪತಾಕೆ--ಭಾರತ

(೭ನೇ ಪುಟದಿಂದ)

ಅದು ಬ್ರಿಟಿಷರ ಆಜ್ಞಾನುಸಾರ ನಡೆದೀತೆಂದು, ಆ ಮೇಲೆ ಅಮೇರಿಕೆಯ ಸಹಾಯವನ್ನು ಪಡೆಯುವ ಒಪ್ಪಂದವಾದಾಗ ಅದು ಅಮೇರಿಕೆಯ ಧೋರಣೆಯನ್ನು ಅನುಸರಿಸುತ್ತದೆಂದೂ, ತದನಂತರ ರಷ್ಯಾ-ಚೀನಗಳ ಸಂದರ್ಶನ ಮಾಡಿ ಜೊತೆಗೆ ಅವರಿಗೂ ಇಲ್ಲಿಗೆ ಬರಲು ಆಹ್ವಾನ ಕೊಟ್ಟು, ಅವರಿಂದ ಅಭೂತಪೂರ್ವ ಗೌರವವನ್ನು ಪಡೆದು ಹಿಂತಿರುಗಿ, ಈಗಾಗಲೇ ಅಲ್ಲಿಯ ಮಹಾ ನಾಯಕರಿಗೆ ಗೌರವಾದರಗಳನ್ನು ಕೊಟ್ಟುಹಿಂಪಕ್ಕೆ ಕಳುಹಿಸಿ ಕೊಟ್ಟುದನ್ನು ಗಮನಿಸಿ, ಕಮ್ಯುನಿಸ್ಟ್ ಆಗ ಬಯಸುತ್ತಿರುವುದೋ ಏನೋ! ಎಂದೂ ಟೀಕಿಸಿದರು. ಆದರೆ, ಎಲ್ಲರಿಂದಲೂ ಸ್ವಾಗತವನ್ನು ಪಡೆದು, ಎಲ್ಲರಿಗೂ ಸ್ವಾಗತವನ್ನಿತ್ತು, ಎಲ್ಲರಿಂದಲೂ ಸಹಾಯವನ್ನು ಪಡೆದುದು ನಿಜವಾದರೂ ಅವರಿಗಾಗಿ ತನ್ನ ಅಸ್ತಿತ್ವವನ್ನು ಮಾರಿಕೊಂಡಿಲ್ಲ, ಮಾರಿಕೊಳ್ಳುತ್ತಲೂ ಇಲ್ಲವೆಂಬುದು ಲೋಕದ ಗಮನಕ್ಕಿಂದು ಬರಹತ್ತಿದೆ;ಸಂಪೂರ್ಣಬಂದಿಲ್ಲ. ನೆಹರುಗಳು ಈ ಭಾರತ ಭೂಮಿಯನ್ನು ಪುಣ್ಯ ಭೂಮಿಯನ್ನಾಗಿ ಮಾಡಿ, ಇದರ ಮಾತೆಯನ್ನು ಜಗನ್ಮಾತೆಯನ್ನಾಗಿ ಮಾಡಲು ಸರ್ವರಿಗೂ ಸ್ವಾಗತವನ್ನಿತ್ತು ಸರ್ವರಿಂದಲೂ ಸ್ವಾಗತವನ್ನು ಪಡೆದು ಹೆಣಗಾಡುತ್ತಿದ್ದಾರೆ. ಮಾನಸಸರೋವರದಲ್ಲಿಯ ಹಂಸವು ಯಾವ ರೀತಿ ಹಾಲನ್ನು ಸೇವಿಸಿ ನೀರನ್ನು ನಿರಾಕರಿಸಿಬಿಡುತ್ತದೋ ಅದೇ ರೀತಿ ಮಹಾಪ್ರಧಾನಿ ನೆಹರುಗಳು ಭಾರತವನ್ನು ಪೂರ್ವದಂತೆ ಪುನಃ ಪುಣ್ಯಭೂಮಿಯನ್ನಾಗಿ ಮಾಡಲೋಸುಗ ಎಲ್ಲರೊಡನೆಯೂ ಬೆರೆತು—ಕಲೆತು ಅವರಿಂದ ತಮ್ಮ ದೇಶಕ್ಕೆ ಹಿತವಾಗುವುದನ್ನೆಲ್ಲಾ ಸ್ವೀಕರಿಸಿ, ಅಹಿತವಾದುವುಗಳನ್ನೆಲ್ಲಾ ಹಂಸದಂತೆ ಅಲ್ಲೇ ಬಿಟ್ಟುಬಿಡುತ್ತಿದ್ದಾರೆ. ಹಿಂಸೆಯ ಮಾರ್ಗವನ್ನು ತೊರೆದು, ಸತ್ಯ—ನ್ಯಾಯ—ಅಹಿಂಸೆಗಳ ಮೇಲೆ ಅಚಲವಾದ ಭಕ್ತಿಯನ್ನಿಟ್ಟು ನೆಹರುಗಳ ಮುಂದಾಳುತನದಲ್ಲಿ ಮುಂದುವರಿಯುತ್ತಿರುವ ಈ ಭಾರತವಿಂದು ಪ್ರಪಂಚದ ರಾಜಕೀಯದಲ್ಲಿ ಅಸದೃಶವಾದ ಶಕ್ತಿಯಾಗಿ ಉದಯಿಸಿದೆ. ಇತರ ಎಷ್ಟೋ ರಾಷ್ಟ್ರಗಳು ಸ್ವತಂತ್ರವಾಗಿ ಶತಮಾನಗಳಿಂದ ಬಾಳಿದರೂ ಪ್ರಪಂಚದ ರಾಜಕೀಯದಲ್ಲಿ ತಮ್ಮ ನುಡಿಯನ್ನು ನಡೆಸುವ ಸುಯೋಗವನ್ನು ಗಳಿಸಿಲ್ಲವೆಂದರೆ, ಮುಂದೆ ಪುಣ್ಯಭೂಮಿಯಾಗಲಿರುವ ಈ ಭಾರತದ ತಳಗಟ್ಟು ಈಗಲೇ ಬಿದ್ದಾಗಿದೆಯೆಂದಾಗಲಿಲ್ಲವೆ?

***

ಭಾರತದ ಹಳೆಯ ನಶಿಸಿಹೋದ ಸಂಸ್ಕೃತಿ, ಧರ್ಮ, ಆಚರಣೆ,...ಇತ್ಯಾದಿಗಳ ಅಭಿವೃದ್ಧಿಗಾಗಿ ಅರ್ಥಾತ್ ಈ ವಿಚಾರಗಳಲ್ಲಿ ಪುನಃ ಭಾರತವನ್ನು ಹಿಂದಿನ ಸ್ಥಾನದಲ್ಲಿಯೇ ತಂದು ನಿಲ್ಲಿಸಲು ಬಾಬು ರಾಜೇಂದ್ರಪ್ರಸಾದ, ಸರ್ವಪಳ್ಳಿ ರಾಧಾಕೃಷ್ಣನ್, ರಾಜಗೋಪಾಲಾಚಾರಿಯರಿತ್ಯಾದಿ ವಯೋವೃದ್ಧ ಮೇಧಾವಿಗಳು ಹೆಣಗಾಡುತ್ತಿದ್ದು ಸಫಲತೆಯ ಮಾರ್ಗವನ್ನು ಸೇರಲು ಹತ್ತಿರ—ಹತ್ತಿರ ಬರುತ್ತಿರುವಾಗ ಇನ್ನೊಂದು ಕಡೆಯಿಂದ ನೆಹರೂ ರೀತಿಯ ಒಂದು ಅದ್ವಿತೀಯವಾದ ಶಕ್ತಿಯು ಇದಕ್ಕೆ ಪ್ರಪಂಚದಲ್ಲಿಯೇ ಒಂದು ವಿಶಿಷ್ಟವಾದ ಉಚ್ಚಸ್ಥಾನ ದೊರಕುವಂತೆ (ಇಷ್ಟರಲ್ಲಿಯೇ ಹೆಚ್ಚಿನಂಶ ದೊರಕಿಯಾಗಿದೆ) ದುಡಿಯುತ್ತಿರುವುದು ಪುನಃ ಪುಣ್ಯಭೂಮಿಯಾಗಲಿರುವ ಭಾರತದ ಮುಂದಿನ ಭವಿಷ್ಯವನ್ನು ಸೂಚಿಸುತ್ತದೆ. ಈ ಭವಿಷ್ಯವು ಇನ್ನು ಕೆಲವೇ ವರ್ಷಗಳಲ್ಲಿ ನಿಜವಾಗಲಿರುವುದರಲ್ಲಿ ಸಂದೇಹವಿಲ್ಲ. ಹೆಚ್ಚೇಕೆ, ಇಲ್ಲಿಯ ಸಾಂಸ್ಕೃತಿಕ ಪಾರಂಪರ್ಯದ ಶ್ರೇಷ್ಠತೆಯನ್ನು ಕೇವಲ ಏಳೆಂಟು ವರ್ಷಗಳಲ್ಲಿ ಜಗತ್ತಿಗೆ ತಿಳಿಯಪಡಿಸಿ, ಜಗತ್ತಿನಲ್ಲಿ, ಎಂತೆಂತಹ ಎಡರು—ತೊಡರುಗಳು ಬಂದರೂ ಅದನ್ನು ಧೈರ್ಯದಿಂದ ಎದುರಿಸಿ ತನಗೇ ಒಂದು ಸ್ಥಾನವನ್ನು ಕಲ್ಪಿಸಿಕೊಂಡು ಜೊತೆಗೆ ವಿಶ್ವಶಾಂತಿಯ ಹೊಣೆಗಾರಿಕೆಯನ್ನು ಹೊತ್ತುಕೊಂಡು ತಲೆಯೆತ್ತಿ ಮುನ್ನಡೆಯುತ್ತಿದೆಯೆಂದರೆ ಇದಕ್ಕಿಂತ ಹೆಮ್ಮೆಯ ವಿಷಯ ತನ್ನ ಭೂಮಿಯ ಪ್ರತಿ ಭಾರತೀಯನಿಗೆ ಬೇರಾವುದಿದೆ?

ಕೊನೆಯದಾಗಿ ನಾವು, ನಮ್ಮ ಮಾತೃಭೂಮಿಯನ್ನು ಪುನಃ ಪುಣ್ಯಭೂಮಿಯನ್ನಾಗಿ ಮಾಡಲು ಈ ವರೆಗೆ ಹೆಣಗಾಡಿದ, ಇನ್ನೂ ಹೆಣಗಾಡುತ್ತಿರುವ ಮಹಾ ವ್ಯಕ್ತಿಗಳನ್ನು, ಏಕೆ?, ಮಹಾ ನಾಯಕರನ್ನು ಸ್ಮರಿಸಿ, ನಮ್ಮಿಂದಾದಷ್ಟು ಸಹಕರಿಸುತ್ತಾ ಪುಣ್ಯಭೂಮಿಯಾಗಿ ಮಾರ್ಪಟ್ಟು, ಇಡೀ ಲೋಕಕ್ಕೇ ಮಾದರಿಯಾಗಲಿರುವ ಭಾರತವನ್ನು ಇದಿರು ನೋಡುತ್ತಿಗೋಣ!

ಬಾಲರೋಗ ಸಂಹಾರಿ ಹರಳೆಣ್ಣೆ



ಅಮೂಲ್ಯವಾದ ಮೂಲಿಕೆ ಚಿನ್ನಗಳೂ, ಬೇರೆ ಮದ್ದುಗಳೂ ಸೇರಿದ. ಉತ್ತಮ. ಮದ್ದಾಗಿದೆ
ಕ್ಯಾಟಲಾಗ್ ಇನಾಂ
MALAYALA MAUNTHREEKA VAIDYASALA
P.B. Q. QUILON 5

ಪಾರ್ಥಕೇಳೋ ನೀನು| ಕಳವಿನಲ್ಲಿ ಸಿಂದು ನೃಪನ| ಗೆಲಿದ ಪರಿಯಿದಲ್ಲನೋಡು ನಿಲ್ಲು ಸಮರಕೇ" ಈ ಪದ್ಯವನ್ನು ಪಂಚಸುದ ನೆಯನುಣಿಪಿನ "ಮಾರ್ಗ' ದಲ್ಲಿ ಹಾಡಿದರೆ, ಪಾತ್ರೋಚಿತವಾದ ಸಂಭಾಷಣೆಯ ವೀರ ರಸವು ಕೆಟ್ಟು ಹೋಗುವುದೇ ಸರಿ.

***

ಜೈನ ಕವಿ ಮಧುರನು—

ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ
ಕ್ಷಿತಿಯೊಳ್
ಕಂಡರ್ ಕೇಳ್ವಡೆ ಗೊರವರ
ದುಂತುಬೇಯೇ? ಬೀದಿವರೆಯ
ಬೀರನ ಕತೆಯೆ? ||

ಎಂದು ಮೂದಲಿಸಿರುವುದು ಈ "ದೇಸಿ" ಜನರ "ನಾಳ್ಪಗರಣ" ಗಳನ್ನೇ ಎಂಬಲ್ಲಿ ಸಂದೇಹವಿಲ್ಲ. ಗೊರವ ಎಂದರೆಶಿವ; ಬೀರ ಎಂದರೆ ವೀರಭದ್ರ, ಜೈನಮಹಾಕವಿಗಳ ಆ ಕಾಲದಲ್ಲಿಶಿವಸರ್ವೋತ್ತಮತೆಯನ್ನು ಸಾರುವ ಶಿವಪುರಾಣೋಕ್ತ ಕಥೆಗಳೂ, ಆತನ ವೀರಭದ್ರಾದಿ ಗಣಂಗಳ ಕಥೆಗಳೂ ಬಳಕೆಯಲ್ಲಿದ್ದಿರಬೇಕು. ಬೀದಿವರೆಯ — ಎಂಬ ಪದವು ಬೀದಿಯಲ್ಲಿ ಕಟ್ಟಿದ ಅರ್ಥಾತ್ ಬಯಲಲ್ಲಿ ರಚಿಸಿದ "ರಂಗಸ್ಥಳ" ವನ್ನೇ ಸೂಚಿಸುತ್ತದೆ. ಶಿವನೇ ನೃತ್ಯಗಳ ಮೂಲ ದೈವ ಎಂಬುದನ್ನು ಆತನಿಗೆ ನಟರಾಜ ಎಂಬ ಬಿರುದನ್ನು ಕೊಟ್ಟು,ಸರ್ವರೂ ಒಪ್ಪುತ್ತ ಬಂದಿದ್ದಾರೆ. ಈ ನಟರಾಜ ಶಿವನು ತನ್ನ ಪರಿವಾರದೊಡನೆ ಕುಣಿಯುತ್ತಿದ್ದ ವಿವಿಧ ನಾಟ್ಯ ಭಂಗಿಗಳನ್ನು ಕಂಡೇ ತಾನು ತನ್ನ ನಾಟ್ಯ ಶಾಸ್ತ್ರದಲ್ಲಿ ಬದಲಾವಣೆ ಮಾಡಿದೆನೆಂದು ಭರತ ಮುನಿಯು ಪ್ರಥಮಾಧ್ಯಾಯದಲ್ಲೇ ಹೇಳುತ್ತಾನೆ; ಮಾತ್ರವಲ್ಲ, ಶೃಂಗಾರ ರಸ ಸಂಭವವಾದ ಕೈಶಿಕೀ ವೃತ್ತಿಯನು ತಾನು ಶಿವ ನೃತ್ಯದಿಂದಲೇ ರಚಿಸಿದೆನೆಂದೂ, ಪುರುಷ ಪಾತ್ರದೊಂದಿಗೆ ಸ್ತ್ರೀಯರ ಪಾತ್ರವನ್ನು ಸ್ತ್ರೀಯರೇ ಹಾಕಬೇಕೆಂದೂ ಭರತ ಮುನಿಯು ಸೂಚಿಸುತ್ತ, ಅದನ್ನು ತಾನು ಶಿವ ನಾಟ್ಯದಿಂದಲೇ ಪಡೆದನೆನ್ನುತ್ತಾನೆ! ಹಾಗೂ, ಆ ರೀತಿ ಸ್ತ್ರೀಪುರುಷ ಸಹಿತವಾದ ನಾಟಕಕ್ಕೆ ಸ್ತ್ರೀ ವೇಷಧಾರಿಗಳನ್ನೊದಗಿಸಿ ಕೊಡಬೇಕೆಂದು ಆತನು ಬ್ರಹ್ಮದೇವನನ್ನು ಕೇಳುತ್ತಲೇ, ಬ್ರಹ್ಮನು ತನ್ನ ಮನಸ್ಸಿನಿಂದ ನೂರು ಮಂದಿ ಅಪ್ಸರ ಸ್ತ್ರೀಯರನ್ನು ಸೃಜಿಸಿದನೆಂದೂ ಪ್ರಥಮಾಧ್ಯಾಯದಲ್ಲಿ ಹೇಳುತ್ತಾನೆ!! ಸ್ತ್ರೀ ಪುರುಷ ಯುಕ್ತವಾದ ಹಾಗೂ ಕೈಶಿಕೀ ವೃತ್ತಿ ಸಹಿತವಾದ, ಸಮಗ್ರ — ಸುಂದರವಾದ "ಬಯಲಾಟ" ಪದ್ಧತಿಯು "ಮಾರ್ಗಿ"ಗರಲ್ಲಿದ್ದಿಲ್ಲವೆನ್ನಬೇಕಾಗುವುದು.

ಆಡು ಮಾತು ಸ್ವಾಭಾವಿಕವಾಗಿರುವುದರಿಂದ ಅದು "ಲೋಕನೃತ್ತಾನುಕರಣ"ವನ್ನು ಪರಿಣಾಮಕಾರಿಯಾಗಿ ಮಾಡುವಂತೆ ಗ್ರಂಥಸ್ಥ ಭಾಷಾಶೈಲಿಯು ಮಾಡಲಾರದಲ್ಲವೆ? ಅದ್ದರಿಂದಲೇ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಈಗಲೀಗ ನಾಟಕಗಳನ್ನು ಆಡು ಭಾಷೆಯಲ್ಲೇ ಬರೆಯುತ್ತಿದ್ದಾರೆ! ಅಂದ ಮೇಲೆ ಸ್ವಾಭಾವಿಕವಾದ ಆಡು ಮಾತಿನಲ್ಲಿ, ಸ್ವಾಭಾವಿಕವಾದ ಛಂದಸ್ಸು ರಾಗ—ತಾಳಗಳಲ್ಲಿ ರಚಿಸಲ್ಪಟ್ಟ "ನಾಳ್ಪಗರಣ"ಗಳನ್ನು "ಪಂಡಿತರುಂ, ವಿವಿಧ ಕಳಾಮಂಡಿತರುಂ ಕೇಳತಕ್ಕ ಕೃತಿ"ಯಲ್ಲವೆಂದು ಹೀಯಾಳಿಸುವುದು ಅನ್ಯಾಯದ ಪರಮಾವಧಿ; ಅಷ್ಟೇ ಅಲ್ಲದೆ ಅಹಂಭಾವದ ಮತ್ತು ಅಸಹಿಷ್ಣುತೆಯ ಆಸುರೀ ಬುದ್ಧಿ ಎನಿಸೀತು.

***

'ದೇಸಿ'ಯ ಕುರಿತು ಇಷ್ಟು ವಿವೇಚಿಸಿದ ಮೇಲೆ ಇಂದಿನ ನಮ್ಮ ಯಕ್ಷಗಾನ ಆಟದ ಮೂಲದ ಕುರಿತು ವಿವೇಚಿಸುವುದು ಕ್ರಮ ಪ್ರಾಪ್ತವೇ ಸರಿ. ದೇವತೆಗಳಿಗೆ ಅದೇವ ಸ್ತ್ರೀಯರಲ್ಲಿ ಹುಟ್ಟಿದವರೇ ದೇವಯೋನಿಗಳು- ಇಂದಿನ ಆಂಗ್ಲೋ—ಇಂಡಿಯನ್ನರಿದ್ದಂತೆ! ಯಕ್ಷರನ್ನೂ ಗಂಧರ್ವ, ಕಿನ್ನರ ಕಿಂಪುರ.ಷಾದಿಗಳನ್ನೂ ದೇವಯೋನಿಗಳೆಂದು ಕೋಶಗಳು ಸಾರುತ್ತವೆ. ಯಕ್ಷ, ಗಂಧರ್ವ, ಮೊದಲಾದ ಹೆಸರುಗಳು ಮೂಲದಲ್ಲಿ ಅಡ್ಡ ನಾಮಕರಣ ಉಪ್ಪುಗಳಾಗಿದ್ದುವೋ, ಅಥವಾ, ಸಂಸ್ಕೃತೀಕರಿಸಲ್ಪಟ್ಟು ಹೀಗಾದುವೋ ಎಂಬುದು ಇನ್ನೂ ನಿರ್ಧರಿಸಲ್ಪಟ್ಟಿಲ್ಲ. "ಜಕ್ಕ" ಪದವು "ಯಕ್ಷ" ದಿಂ ದಾ ಯಿ ತೋ? ಅಥವಾ, ಜಕ್ಕವೇ ಯಕ್ಷವಾಗಿ ಸಂಸ್ಕೃತಿಸಲ್ಪಟ್ಟಿತೊ? ತಿಳಿಯದು! ವಿದ್ವಾಂಸರು ಈ ಕುರಿತು ವಿಚಾರಮಾಡಬೇಕು. ಗಂಧರ್ವ ವಿದ್ಯೆ (ಶಾಸ್ತ್ರ)ಯಂತೆ ಯಕ್ಷವಿದ್ಯೆ ಎಂಬುದೂ ಇದೆ. ಗೀತ, ವಾದ್ಯ, ನೃತ್ಯಗಳ ತ್ರಿವೇಣೀ ಸಂಗಮವೇ ಗಂಧರ್ವ ಶಾಸ್ತ್ರದ ಸಂಗೀತವೆನಿಸಿತು. ಆಹಾರ್ಯ ಮತ್ತು ಆಂಗಿಕಗಳೇ ಮುಖ್ಯ ವಸ್ತುವಾಗಿದ್ದ ಶಿಲ್ಪ ಶಾಸ್ತ್ರವು ಯಕ್ಷರ ಶಾಸ್ತ್ರ ಅಥವಾ ಯಕ್ಷವಿದ್ಯೆಯಾಗಿರಬೇಕು. ಇದರಲ್ಲಿ ತಾಂತ್ರಿಕ ವಿದ್ಯೆಯೂ ಅಡಕವಾಗಿದ್ದಿರಬೇಕು. ಕ್ಷಣ ಮಾತ್ರದಲ್ಲಿಯೇ ರೂಪ ಬದಲಾಯಿಸಿಕೊಂಡು ಬರುವ ಮೋಹಿನೀ ತಂತ್ರವು ಯಕ್ಷರಿಗೇ ಮೀಸಲಾಗಿದ್ದಿರಬೇಕು. ರಾತ್ರಿ ಬೆಳಗಾಗುವುದರೊಳಗೇ ಜಕ್ಕಣಾಚಾರಿಯು (ಯಕ್ಷಾಚಾರ್ಯ—ಶಿಲ್ಪಿ) ದೊಡ್ಡ ದೊಡ್ಡ ದೇವಾಲಯ ನಿರ್ಮಾಣ ಮಾಡಿದನೆಂಬ ಮಾತು ಇಂದಿಗೂ ಬಳಕೆಯಲ್ಲಿದೆ. ದಕ್ಷಿಣ ದೇಶದಲ್ಲಿರುವಷ್ಟು ದೊಡ್ಡ ದೊಡ್ಡ ದೇವಾಲಯಗಳೂ, ಕುಸುರಿಗೆಲಸದ ಶಿಲ್ಪ ರಚನೆಗಳೂ ಉತ್ತರ ಭಾರತದಲ್ಲಿಲ್ಲ! ಅದ್ದರಿಂದ "ನಾಳ್ಪಗರಣ"ಗಳಲ್ಲಿ ಬರುವ ಆಹಾರ್ಯ (ವೇಷ ಭೂಷಣ, ಬಣ್ಣಗಳು)ಗಳೂ ಆಂಗಿಕಾದಿ (ಗತಿ ಪ್ರಚಾರ ವೈವಿಧ್ಯ, ಮುದ್ರಿಕೆ ಇತ್ಯಾದಿ) ಅಭಿನಯಗಳೂ ಮಾರ್ಗ ನಾಟಕಗಳಲ್ಲಿಲ್ಲ. ಅವುಗಳಲ್ಲಿ ಸಾತ್ವಿಕ—ವಾಚಿಕಗಳೇ ವಿ ಶೇ ಷ; ಆಂಗಿಕಾಹಾರ್ಯಗಳು ಗೌಣ. ಭ—ರ—ತ ಶಾಸ್ತ್ರ (ಭಾವ, ರಾಗ, ತಾಳ)ಕ್ಕೆ ಸರಿದೊರೆಯಾದ ಶಿವನಾಟ್ಯ ಶಾಸ್ತ್ರ ಇದ್ದಿರಬೇಕು. ಉತ್ತರ ಮಾರ್ಗ, ದಕ್ಷಿಣ ಮಾರ್ಗ ಎಂದು ಕಾವ್ಯಲಾಕ್ಷಣಿಕರು ಎರಡು ಪ್ರಧಾನ ಪಂಗಡಮಾಡಿದ್ದಾರಷ್ಟೆ. ಹಾಗೆಯೇ ಈ ನಾಟಕ ಲೋಕದಲ್ಲಿಯೂ ಎರಡು ಪ್ರಧಾನ ಗುಂಪುಗಳಿದ್ದಿರಬೇಕು. ಉತ್ತರದ ಮಾರ್ಗಕ್ಕೆ ಗಂಧರ್ವರು ಹೇಗೋ ಹಾಗೆ ದಕ್ಷಿಣದ ದೇಸಿಗೆ ಯಕ್ಷರು ಆದ್ದರಿಂದ ಇವೆರಡೂ ಬಹು ಪ್ರಾಚೀನ ಕಾಲದಿಂದಲೂ ಎರಡು ದಿಗ್ಗಜಗಳಂತೆ ಒಂದನ್ನೊಂದು ಇದಿರಿಸುತ್ತ, ಮೂದಲಿಸುತ್ತ ನಿಂತಂತೆ ತೋರುತ್ತದೆ.

***

ಈ ಉತ್ತರ—ದಕ್ಷಿಣ ಪ್ರಭೇದವು ಯಕ್ಷಗಾನದಲ್ಲಿಯೂ ಕಂಡು ಬಂದಿದೆ. ಉತ್ತರ ಕರ್ನಾಟಕದ ನಾಳ್ಪಗರಣಗಳೆಲ್ಲವೂ ಶಿವ ಲೀಲೆಯ, ಶಿವ ಶರಣರ ಕಥೆಗಳು. ಅವುಗಳಲ್ಲಿ ಜಾಗಟೆ ಆಟ, ತಾಳದ ಆಟ ಎಂಬ ಎರಡು ಕಾಂಸ್ಯ ವಾದ್ಯ ಪ್ರಧಾನವಾದ ಆಟಗಳ ಗುಂಪು ಇರುವಂತೆ, ದಮ್ಮಡ ಆಟ,

ನಮ್ಮ ಯಾವತ್ತೂ ಗ್ರಾಹಕರೂ ಹಿತೈಷಿಗಳೂ ನಮಗಿತ್ತ ಪ್ರೋತ್ಸಾಹ, ಸಹಕಾರಗಳಿಗಾಗಿ ನಾವು ಸದಾ ಕೃತಜ್ಞರಾಗಿದ್ದೇವೆ.

ಮುಂದೆಯೂ ಸದಾ ಅವರ ಸೇವೆಯನ್ನು ಮಾಡುವೆವೆಂದು ಪ್ರಜಾರಾಜ್ಯದ ವಾರ್ಷಿಕ ಸಮಾರಂಭದ ಸಂತೋಷ ಕಾಲದಲ್ಲಿ ನಾವು ಭರವಸೆ ಕೊಡಲಿಚ್ಛಿಸುತ್ತೇವೆ.

ಶ್ರೀ ಗಜಾನನಾ ಕ್ಲೋತ್ ಸ್ಟೋರ್ಸ್

ತೆಂಕಪೇಟೆ, ಉಡುಪಿ, ದ. ಕನ್ನಡ.

ನಮ್ಮಲ್ಲಿ—
ಹ್ಯಾಂಡ್‌ಲೂಮ್ಸ್, ಮಿಲ್ ಗುಡ್ಸ್ (ಮೆಟ್ಟೂರು, ಬಿನ್ನಿ, ಅಹಮ್ಮದಾಬಾದ್, ಬೊಂಬಾಯಿ) ಬೆಂಗಳೂರು ಕಂಜೀವರಂ, ಕಾಶ್ಮೀರ ಶಿಲ್ಕ್, ಉಲನ್ ಗುಡ್ಸ್ (ಪೆನಾಮಾ, ಗೆಬರ್ಡಿನ್) ರಿಟೈಲ್ ಹಾಗೂ ಹೋಲ್‌ಸೇಲ್ ದೊರೆಯುತ್ತವೆ.

ಒಮ್ಮೆ ನಮ್ಮ ಜವುಳಿ ಭಂಡಾರವನ್ನು ಸಂದರ್ಶಿಸಿರಿ.

SRI GAJANANA CLOTH STORES
TENKAPET, UDIPI, S. KANARA

Phone: 584

N. NARASIMHA SHET
Jeweller and Diamond Merchant,
CAR-STREET, MANGAORE-1

ಉತ್ತಮ ಮತ್ತು ಸೊಗಸಾದ ಆಕರ್ಷಣೀಯ ಆಭರಣಗಳಿಗೂ ಉಡುಗೊರೆ ಬಹುಮಾನಗಳಿಗೆ ಉಪಯುಕ್ತವಾದ ಬೆಳ್ಳಿ ಬಂಗಾರದ ವಸ್ತುಗಳಿಗೂ ನಮ್ಮನ್ನು ಸಂದರ್ಶಿಸಿರಿ.

ಆಭರಣಗಳನ್ನು ಅನುಭವಸ್ಥ ನಿಪುಣ ಕೆಲಸಗಾರರಿಂದ ಪ್ರಶಂಸನೀಯವಾಗಿ ಗ್ರಾಹಕರ ಅಪೇಕ್ಷೆಯಂತೆ ತಯಾರಿಸಿ ಕೊಡಲಾಗುವುದು.

ಎನ್. ನರಸಿಂಹ ಶೇಟ್
ವಜ್ರ ಮತ್ತು ಬಂಗಾರ ವ್ಯಾಪಾರಿ,
ರಥಬೀದಿ, ಮಂಗಳೂರು—1

ಎಲ್ಲಾ ತರದ ಫೋಟೋ ಮತ್ತು ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ.

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು, ಹಂಪನಕಟ್ಟೆ, ಮಂಗಳೂರು.

ದಿಪ್ಪಿಸ ಆಟ ಎಂಬ ಎರಡು ಚರ್ಮವಾದ್ಯಗಳ ಆಟಗಳ ಗುಂಪೂ ಇದೆ. ಕಿಳ್ಳಿಕ್ಯೇತರ ಆಟ, ಗೊಂದಲಿಗರ ಆಟ, ಜಾಗರ ಆಟ ಎಂಬ ಒಳಜಾತಿಭೇದದ ಮೇಳಗಳೂ ಉಂಟು. ಆದರೆ, ಇವುಗಳೆಲ್ಲವೂ **ದಶಾವತಾರ**ಗಳ ಹೊರಗಿನ ಕಥೆಗಳ ನಾಟಕಗಳು, ಸಾಳ್ವಗರಣಗಳು! ಬಹುಶಃ ನಾಗವರ್ಮ, ನೃಪತುಂಗರು ಇವನ್ನೇ ಸೂಚಿಸಿರಬೇಕು ಆದ್ದರಿಂದ ಉತ್ತರ ಕರ್ನಾಟಕದ ಸಾಳ್ವಗರಣಗಳು ನಮ್ಮ ಕಡಲ್ತೀರದ ಯಕ್ಷಗಾನವಲ್ಲ-ಎಂಬುದನ್ನಿಲ್ಲಿ ಒತ್ತಿ ಹೇಳುತ್ತೇನೆ. ಪಂಡಿತರೆಂಬವರು ಈ ಕುರಿತು ವಿಚಾರಮಾಡಬೇಕು.

ಕಡಲ್ತೀರದ ಯಕ್ಷಗಾನ ಪ್ರಸಂಗಗಳೆಲ್ಲವೂ ನಖಶಿಖಾಂತ ಪದ್ಯಕೃತಿಗಳು; ಗದ್ಯಭಾಗ ಇಲ್ಲವೇ ಇಲ್ಲವೆನ್ನಬಹುದು. ಭಾಗವತನು ಹಿಮ್ಮೇಳ ಸಹಿತವಾಗಿ ಹಾಡುತ್ತಹೋದಂತೆ ಆಯಾ ಪಾತ್ರಧಾರಿಗಳು ಆಂಗಿಕಾಭಿನಯ ಯುಕ್ತವಾಗಿ ತಾಳಕ್ಕನುಗುಣವಾದ ಗತಿಪ್ರಚಾರ ಮಾಡುತ್ತ ಇಡೀ ನಾಟಕವನ್ನು ನಟಿಸಿ ತೋರುವುದೇ ಇವರ ಜೀವಾಳ. ಇದು ಕೇರಳದಲ್ಲಿರುವ 'ಕಥಕ್ಕಳಿ' (ಕಥಾಕೇಲಿ Story-play)ಯ ಕನ್ನಡ ರೂಪ; ಆದರೆ, ಪ್ರತಿ ಪಾತ್ರವೂ ಗೀತ ನೃತ್ಯ ಮಾಡಿದ ಮೇಲೆ ಅರ್ಥ ವಿವರಣೆ ಮಾಡುವುದರಿಂದ, ಇದು ಕಥಕ್ಕಳಿಗಿಂತ ತುಸು ಬೇರೆಯಾಗಿದೆ. ಕಡಲ್ತೀರದ ಯಕ್ಷಗಾನ ಆಟಗಳ ಲಕ್ಷಣ ಗ್ರಂಥವಾದ "ಸಭಾಲಕ್ಷಣ"ವು ಪ್ರತಿ ಪ್ರಸಂಗಕ್ಕೂ ಮೊದಲು ನಡೆಸಬೇಕಾದ ಪೂರ್ವರಂಗ ವಿಧಾನವನ್ನು ಮನೋಹರವಾಗಿ ವಿವರಿಸುತ್ತಿದೆ. ಸಮಾರಾಧನೆಯ ಊಟದ ಎಲೆಯ ಮೇಲೆ ಅನ್ನ ಬಡಿಸುವ ಮೊದಲು ಹೇಗೆ ಎಲ್ಲ ಭಕ್ಷ್ಯ ಭೋಜ್ಯಗಳನ್ನೂ ತುಸು ತುಸು ಇಕ್ಕುವರೋ ಹಾಗೆ ಈ ಪೂರ್ವರಂಗ ವಿಧಾನವು ಪ್ರಸಂಗದಲ್ಲಿ ಬರುವ ವಿವಿಧ ಪಾತ್ರಗಳ ಭಾವರಸಗಳ ಮಾದರಿಯನ್ನು ತೋರಿ ಕೊಡುವ ವೇಷಗಳಿಂದ ಯುಕ್ತವಾಗಿರುತ್ತದೆ. ಯಕ್ಷಗಾನದ ಆದಿಮ ಕವಿಯೆಂದು ಭಾವಿಸಲ್ಪಟ್ಟಿರುವ ಪಾರ್ತಿ ಸುಬ್ಬನು ಕೇರಳ ಕಥಕ್ಕಳಿಗೆ ಮೂಲರಾದವರ ಹೆಸರನ್ನೂ ಪ್ರಾರ್ಥನಾ ಪದ್ಯವನ್ನೂ ಈ "ಸಭಾಲಕ್ಷಣದಲ್ಲಿ ಎತ್ತಿ ಹೇಳಿರುವುದರಿಂದ, ಆತನು, ಹಾಗೂ ಆತನ ಬಳಿಕಣ ಯಕ್ಷಗಾನ ಪ್ರಸಂಗ ರಚಕರು, ಕಥಕ್ಕಳಿ ಪ್ರಬಂಧ ಪದ್ಧತಿಯಿಂದ ಪ್ರಭಾವಿತರಾಗಿರುವರೆನ್ನಬೇಕು. ಆದ್ದರಿಂದ ಇವುಗಳು ನೃಪತುಂಗಾದಿಗಳ ಕಾಲದ 'ಸಾಳ್ವಗರಣ'ದ ಬಾಜನೆಗಬ್ಬಗಳ ಜಾತಿಯುವಲ್ಲವೆನ್ನಬಹುದು. ಪಾರ್ತಿಸುಬ್ಬನಿಗಿಂತ ಹಿಂದಿನವರು ಬರೆದ ಯಕ್ಷಗಾನ ಪ್ರಸಂಗಗಳು ಇಲ್ಲವೇ ಇಲ್ಲ--ಎಂಬುದರಿಂದ ಇದು ತೀರ ನೂತನವಾದ ರಚನೆಗಳಾಗಿವೆಎನ್ನಬಹುದು. ಹಿಂದಿನ ಕನ್ನಡದಲ್ಲಿ ಈ ಬಗೆಯ ಜಾನಪದ ನಾಟಕಗಳು ಇದ್ದಿಲ್ಲವೆಂದು ಸಾಧಾರವಾಗಿ ತರ್ಕಿಸಬಹುದು.

ಈ ನಮ್ಮ ಯಕ್ಷಗಾನ ಮೇಳಗಳವರು ಹಾಕಿಕೊಳ್ಳುವ ಪಾತ್ರೋಚಿತ ವೇಷ ಭೂಷಣಗಳೆಲ್ಲವೂ ಭರತನಾಟ್ಯ ಶಾಸ್ತ್ರದಲ್ಲಿ ವಿವರಿಸಿದಂತೆಯೇ ಇವೆ. ಹಾಗೆಯೇ ಕುಣಿತಗಳೂ, ಮುದ್ರಿಕೆಗಳೂ ಸಹ.

* (ಭ. ನಾಟ್ಯ ಶಾಸ್ತ್ರದ ಆಹಾರ್ಯಾಭಿನಯ ೨೧ನೇ ಅಧ್ಯಾಯ ಮತ್ತು ೧೨ನೇ ಅಧ್ಯಾಯ ಗತಿಪ್ರಚಾರ ನೋಡಿರಿ.)

***

ಯಕ್ಷಗಾನ ಆಟದಲ್ಲಿ ಈಗಲೀಗ ಬಡಗು ತಿಟ್ಟು, ತೆಂಕು ತಿಟ್ಟು ಎಂಬ ಇಬ್ಬಗೆ ಕಂಡು ಬಂದಿದೆ. ತಿಟ್ಟು ಎಂಬುದು ತೀಡು, ಅಥವಾ ತಿದ್ದು ಎಂಬುದರ ನಾಮರೂಪ. ಊಡು ಊಟ ವಾದಂತೆ, ನೋಡು ನೋಟವಾದಂತೆ, ಓಡು ಓಟವಾದಂತೆ ತೀಡು ತೀಟ ಅಥವಾ ತಿಟ್ಟ ಆಯಿತು. ಇದಕ್ಕೆ ಇಂಗ್ಲಿಡಲ್ಲಿ ಸ್ಟೈಲ್ ಅಥವಾ ಮೋಡ್ ಅನ್ನಬಹುದು ಹಿಂದಿನ ಕಾಲದಲ್ಲಿಯೂ ಈ ಬಗೆಯ ದಕ್ಷಿಣೋತ್ತರ ತಿಟ್ಟುಗಳು ಕಾವ್ಯ ರಚನೆಗಳಲ್ಲಿದ್ದುವು. ಮಂಗಳೂರು ಜಿಲ್ಲೆಯಲ್ಲಿ ಮಂಗಳೂರು, ಕಾಸರಗೋಡು, ಪುತ್ತೂರು ತಾಲೂಕುಗಳ ಮೇಳಗಳ ವೇಷಭೂಷಣ ನೃತ್ಯಗಳಿಗೆ ತೆಂಕು ತಿಟ್ಟವೆಂದೂ, ಉಡುಪಿ, ಕುಂದಾಪುರ, ಕಾರ್ಕಳದವುಗಳಿಗೆ ಬಡಗು ತಿಟ್ಟವೆಂದೂ ಹೆಸರಿಡಲಾಗಿದೆ. ಉತ್ತರ ಕನ್ನಡದ ಮೇಳಗಳೂ ಬಡಗುತಿಟ್ಟದೊಳಗೇ ಬರುತ್ತವೆ. ಯಾಕೆಂದರೆ ಅವುಗಳು, ಹೆಚ್ಚು ಕಡಿಮೆ, ಕುಂದಾಪುರ, ಉಡುಪಿ ಕಡೆ ಮೇಳಗಳಂತೆಯೇ ಇರುತ್ತವೆ. ಒಂದೊಂದು ಜಾತಿಯವರ ಊಟ ಉಡುಗೆ ಒಂದೊಂದು ತೆರನಾಗಿದ್ದಂತೆ, ಒಂದೊಂದು ಪ್ರದೇಶದವರದ್ದೂ ಒಂದೊಂದು ತೆರನಾಗಿದೆ. ನಮ್ಮ ಕಾವ್ಯಗಳಲ್ಲಂತೂ ವಿವಿಧ ಪ್ರದೇಶಗಳ ಸ್ತ್ರೀಪುರುಷರ ಅಂಗಾಂಗ ಸೌಷ್ಠವದ ವಿಶಿಷ್ಟತೆಯನ್ನೂ, ಉಡುಗೆತೊಡುಗೆಗಳ ವಿಭಿನ್ನತೆಯನ್ನೂ ರಸವತ್ತಾಗಿ ಬಣ್ಣಿಸಿರುವುದು ಅಡಿಗಡಿಗೂ ಕಂಡುಬರುತ್ತದೆ. ಹೊರಗಣ ಪರಿಕರದಲ್ಲಿ ಪ್ರಾದೇಶಿಕ ಭಿನ್ನತೆ ಕಾಡು ಬರುವಂತೆ ಗುಣಸ್ವಭಾವಗಳಲ್ಲಿಯೂ ಭಿನ್ನತೆ ಕಂಡು ಬರುತ್ತದೆ. ಆದರೂ ಊಟದ ವಸ್ತುಗಳಿಗೆಲ್ಲ ಮೂಲ ದ್ರವ್ಯಗಳಾದ ಷಡ್ರಸಗಳಲ್ಲಾಗಲೀ ಅಕ್ಕಿ, ಗೋಧಿ, ಕಡಲೆ, ಹೆಸರು ಗಳೇ ಮೊದಲಾದ ಧಾನ್ಯಗಳಲ್ಲಾಗಲೀ ಭಿನ್ನತೆ ಇರುವುದಿಲ್ಲ; ಹಾಗೆಯೇ ಬಟ್ಟೆಬರೆಗಳ ನೂಲಿನಲ್ಲಾಗಲೀ, ಆಭರಣಗಳ ಚಿನ್ನ ಬೆಳ್ಳಿಗಳಲ್ಲಾಗಲೀ ಭಿನ್ನತೆ ಇಲ್ಲ. ಆದ್ದರಿಂದ ತೆಂಕು— ಬಡಗು ತಿಟ್ಟುಗಳಲ್ಲಿ ಮೂಲದ್ರವ್ಯಗಳಾದ ಕುಣಿತ ಮುದ್ರಿಕೆ, ಅರ್ಥ ವಿವರಣೆ, ಸಾತ್ವಿಕ ಭಾವ ಪ್ರಕಟನೆಗಳು ಎರಡೂ ತಿಟ್ಟುಗಳಿಗೂ ಒಂದೇ ವಿಧವಾಗಿರುತ್ತವೆ. ಇದನ್ನು ಸರ್ವಥಾ ಮರೆಯ ಕೂಡದು.

***

ಸೂಕ್ಷ್ಮವಾಗಿ ನಿರೀಕ್ಷಿಸಿ ನೋಡಿದರೆ, ಬಡಗು ತಿಟ್ಟದವರಲ್ಲಿ ಭರತ ನಾಟ್ಯ ಶಾಸ್ತ್ರದಲ್ಲಿ ಉಕ್ತವಾದ ಪ್ರತಿಯೊಂದು ಕುಣಿತವೂ (ಗತಿ ಪ್ರಚಾರ) ಇಂದಿಗೂ ಚಾಚೂ ತಪ್ಪದೇ ಬಳಕೆಯಲ್ಲಿದೆ. ಪ್ರಯಾಣ ಸೂಚಿಸುವ ಕುಣಿತ, ಯುದ್ಧ ಸನ್ನಾಹದ ಕುಣಿತಗಳನ್ನು ಇಂದಿಗೂ ಅವರು ಬಹುಮನೋಹರವಾಗಿ ಶಾಸ್ತ್ರದಲ್ಲಿ ಹೇಳಿದಂತೆ—ಮಾಡುತ್ತಾರೆ. ತೆಂಕು ತಿಟ್ಟದಲ್ಲಿ ಅದು ಕಂಡು ಬರುವುದಿಲ್ಲ. ವೇಷದಲ್ಲಿ ಕೂಡಾ ಭಿನ್ನತೆ ಇದೆ. ತೆಂಕು ತಿಟ್ಟದವರು ಕಥಕ್ಕಳಿ ವೇಷಧಾರಿಗಳಂತೆ 'ಮುಂಡು' ಸುತ್ತಿದರೆ, ಬಡಗಿನವರು ವೀರಗಚ್ಚೆಯನ್ನುಡುತ್ತಾರೆ. ಕಿರೀಟ ಇಬ್ಬರಲ್ಲಿಯೂ ಒಂದೇ ಬಗೆಯಾಗಿದೆ. ಮದ್ದಲೆಯಲ್ಲಿ ಭಿನ್ನತೆ ಇದೆ. ಶುದ್ಧ, ಸಾಳಗ, ಸಂಕೀರ್ಣ ಎಂಬ ಮೂಬಗೆಯ ಮದ್ದಳೆಯುಂಟಷ್ಟೆ. ಇದರಲ್ಲಿ 'ಶುದ್ಧ' ಮದ್ದಳೆಯೆಂಬುದು ದಕ್ಷಿಣದ ಮುಳ್ನಾಡು ಮತ್ತು ಕೇರಳಗಳಲ್ಲಿ ಮಾತ್ರವೇ ಬಳಕೆಯಲ್ಲುಂಟು. ತೆಂಕು ತಿಟ್ಟದವರು ಮಧ್ಯಮ ತರದ "ಸಾಳಗ" ವನ್ನು ಉಪಯೋಗಿಸುತ್ತಾರೆ; ಬಡಗು ತಿಟ್ಟದವರು "ಸಂಕೀರ್ಣ" ವನ್ನು ಉಪಯೋಗಿಸುತ್ತಾರೆ. ಈ ಮಾತನ್ನು ಚಂಡೆ (ಚಂಡಣಾ) ಗೂ ಹೇಳಬಹುದು. ಈ ಚರ್ಮ ವಾದ್ಯವು ಅದರ ಹೆಸರೇ ಹೇಳುವಂತೆ ಪ್ರಚಂಡವಾಗಿದ್ದು, ವೀರ ಮತ್ತು ರೌದ್ರ ರಸದ ಉತ್ಕರ್ಷಕ್ಕೆ ಆವಶ್ಯವಾಗಿದೆ. ತೆಂಕು ತಿಟ್ಟನವರು ದೊಡ್ಡ ಗಾತ್ರದನ್ನು ಉಪಯೋಗಿಸಿದರೆ, ಬಡಗಿನವರು ತುಸು ಚಿಕ್ಕದನ್ನು ಉಪಯೋಗಿಸುತ್ತಾರೆ. ಆದ್ದರಿಂದ ಈ 'ತಿಟ್ಟ' ಎಂಬುದು ಅಷ್ಟೊಂದು ಮಹತ್ವದ ಭಿನ್ನತೆ ಎನಿಸುವುದಿಲ್ಲ. ಹಾಡುವಿಕೆಯಲ್ಲಿಯೂ ಈ ತಿಟ್ಟುಗಳಲ್ಲಿ ತುಸು ಭಿನ್ನತೆ ಕಾಣುತ್ತದೆ. ತೆಂಕಿನವರು ಸಂಚಮ ವರ್ಜ್ಯ ಮಾಡಿದರೂ, ಆ 'ವರ್ಜ್ಯ'ದಲ್ಲಿಯೂ ಒಂದು ಬಗೆಯ 'ನಯ' 'ಲಯ'ಗಳನ್ನು ತೋರುತ್ತಾರೆ; ಬಡಗಿನವರು ಅಷ್ಟೊಂದು ನಯ-ಲಯಕ್ಕೆ ಜೋತು ಬೀಳುವುದಿಲ್ಲ. ಒಬ್ಬರು ಜಾಗಟೆಯನ್ನು ಹಿಡಿದರೆ ಮತ್ತೊಬ್ಬರು ತಾಳವನ್ನು ಹಿಡಿಯುತ್ತಾರೆ. ಆದರೂ ಇಬ್ಬರದ್ದೂ ಒಂದೇ ತಾಳ ಧ್ವನಿ, ಒಂದೇ ಗತ್ತು. ಇಷ್ಟೆ.

ಆಯಾ ಪ್ರದೇಶಕ್ಕೆ ಮತ್ತು ಆಯಾ ಸಮಾಜಕ್ಕೆ ಹೇಗೆ ಅವರವರ ಊಟ ಉಡುಗೆ ಸ್ವಾಭಾವಿಕವಾಗಿದೆಯೋ ಹಾಗೆ ಈ ತಿಟ್ಟುಗಳೂ ಆಯಾ ಪ್ರದೇಶಕ್ಕೆ ರುಚಿಸುವುದಾಗಿರುವುದರಿಂದ ಅವುಗಳಲ್ಲಿ ಏಕರೂಪತೆ ಸಾಧಿಸುವುದು ಕೃತ್ರಿಮವಾದೀತು. ಆದ್ದರಿಂದ ಅವು ಹೀಗೆಯೇ ಮುನ್ನಡೆದುಕೊಂಡು ಬರಬೇಕು—ಮಲ್ಲಿಗೆಯ ಪರಿಮಳ ಮಲ್ಲಿಗೆಗೆ, ಗುಲಾಬಿಯದು ಗುಲಾಬಿಗೆ ಇರುವಂತೆ. ಅದರಲ್ಲಿಯೇ "ದೇಶಿ"ಯ ಸುಖ-ಸೌಂದರ್ಯ ಇದೆ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಸಜ್ಜಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಬಿಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಕನರಾ ಪ್ರದೇಶದ ಆರ್ಥಿಕ ಅಭ್ಯುದಯ

(೪ನೇ ಪುಟದಿಂದ)

ಈ ಉದ್ಯಮಗಳಾದರೂ ನವೀಕರಣವಿಲ್ಲದೆ Rationalization) ಇನ್ನು ಮುಂದೆ ಜಾಗತಿಕ ಮೇಲಾಟದಲ್ಲಿ ಗೆಲ್ಲುವುದು ಕಷ್ಟ. ವಿದ್ಯುತ್ತಿನ ಉಪಯೋಗದಿಂದ ಮಲ್ಪೆಯಲ್ಲಿ ಒಂದು ಫಿಶ್ ಕ್ಯಾನಿಂಗ್ ಉದ್ಯಮವನ್ನು ತೆರೆಯಬಹುದೆಂದು ನನಗೆ ಕಾಣುತ್ತದೆ. ನಮ್ಮ ಸೈನ್ಯ ವಿಭಾಗಕ್ಕೆ ಈ ಕರಡಿಗೆಯ ಮೀನನ್ನು ಸರಬರಾಜು ಮಾಡುವಂತೆ ಸರಕಾರವು ನಮ್ಮನ್ನು ಪ್ರೋತ್ಸಾಹಿಸಬಹುದು. ಅಲ್ಲದೆ ಈ ಕರಾವಳಿಯಲ್ಲಿರುವ ಸಣ್ಣ ಪುಟ್ಟ ರೇವುಗಳನ್ನು ಅಭಿವೃದ್ಧಿಗೊಳಿಸುವ ಅಗತ್ಯವಿದೆ. ಮಂಗಳೂರು ಸರ್ವಋತು ಬಂದರಾಗಿ ನಿಯೋಜಿತವಾದ್ದು ಸಂತೋಷದ ವಿಷಯ. ಹಾಗೆಯೇ ಮಲ್ಪೆಯೂ ಮಹಾಬಂದರಾದರೆ ಒಳ್ಳೆಯದು. ಆದರೆ ಕರಾವಳಿಯ ಅಭಿವೃದ್ಧಿಗೆ ನಮ್ಮ ಎಲ್ಲ ರೇವುಗಳನ್ನು ಬಡಾವಣೆಮಾಡುವ ವಿವೇಕ ನಮಗೆ ಬರಬೇಕು. ನಮ್ಮ ದೇಶದಲ್ಲಿ ಕರಾವಳಿ ನಾಗಾಟಕ್ಕೆ ಬೇಕಾದಷ್ಟು ಅವಕಾಶವಿರುವುದರಿಂದ ಅದಕ್ಕನುಕೂಲವಾಗುವಂತೆ ಹಡಗು ಕಟ್ಟುವ ಒಂದು ಕೇಂದ್ರವನ್ನು ಈ ಪ್ರದೇಶದಲ್ಲಿ ತೆರೆಯುವುದು ಸೂಕ್ತವಾಗಿದೆ. ಐದು ವರ್ಷಗಳ ಕೆಳಗೆ ಸರಕಾರವು ನೇಮಕಮಾಡಿದ ಮಹಾ ಬಂದರಿನ ಸಮಿತಿಯವರೂ ಈ ಕೇಂದ್ರಕ್ಕೆ ಇದು ಪ್ರಶಸ್ತವಾದ ಸ್ಥಳವೆಂದು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ಬೇಕಾದ ಮರವನ್ನು ಒದಗಿಸುವ ಅರಣ್ಯವೂ ಕಾರ್ಖಾನೆಗೆ ಬೇಕಾದ ವಿದ್ಯುತ್ತೂ, ಸುರಕ್ಷಿತವಾದ ಸಮುದ್ರವೂ ಈ ಪ್ರದೇಶದಲ್ಲಿ ನಿರ್ಮಿಸಿರುವ ಅನುಕೂಲ ಪರಿಸರವು ದೇಶದಲ್ಲಿ ವಿರಳವೆಂದು ನನ್ನ ಅಭಿಪ್ರಾಯ. ಸರಕಾರವು ಈ ಪ್ರಶ್ನೆಗಳನ್ನೆಲ್ಲ ಶೀಘ್ರದಲ್ಲೇ ಗಮನಕ್ಕೆ ತಂದುಕೊಂಡು ಕಾರ್ಯ ಪ್ರವೃತ್ತವಾಗಬೇಕು. ಭಾರತದಲ್ಲಿ ಉದಯವಾಗಲಿರುವ ನವ ಸಮಾಜದ ರಚನೆಗೆ ಆರ್ಥಿಕ ಸುಧಾರಣೆಯೇ ತಳಹದಿ. ಆರ್ಥಿಕ ರಂಗದಲ್ಲಿ ನಾವು ವಹಿಸುವ ತ್ವರೆ ಅನಿವಾರ್ಯವಾಗಿ ನಮ್ಮ ಮೇಲೆ ಹೇರಲ್ಪಟ್ಟಿದೆ. ಬೆಳೆಯುವ ಜನಸಂಖ್ಯೆಗೆ ಆಹಾರವನ್ನು, ಉದ್ಯೋಗವನ್ನು ಕಲ್ಪಿಸಲು ಶತ ಪ್ರಯತ್ನ ಮಾಡದಿದ್ದರೆ ದೇಶದಲ್ಲಿ ಅಸಂತೋಷವು ಬಹು ಬೇಗನೇ ಹಬ್ಬುವುದರಿಂದ ನನ್ನ ಸೂಚನೆಗಳನ್ನು ಸರಕಾರವು ಗಣನೆಗೆ ತರುವದೆಂದು ನಾನು ಭರವಸೆಯಲ್ಲಿದ್ದೇನೆ.

ಗ್ರಾಮ ಸೇವಿಕೆಯರು ಹಾಗು ಅವರ ಹೊಣೆ

(೬ನೇ ಪುಟದಿಂದ)

ಅರ್ಥವಲ್ಲ. ಗ್ರಾಮ ಸೇವಕಿಯರ ಕಾರ್ಯ ಹಳ್ಳಿಯಲ್ಲಿ ಮನೆಮನೆಗೆ ಹೋಗಿ ತಾಯಂದಿರನ್ನು ಒಲಿಸಿ ಮಕ್ಕಳನ್ನು ಶಾಲೆಯ ಕಟ್ಟೆಗೆ ಕರೆತರುವದರಿಂದ ಪ್ರಾರಂಭವಾಗುತ್ತದೆ "ಗಂಡಸರ ಹಾಗೆ ಒಬ್ಬಳೇ ಬಂದು, ಇಲ್ಲಿ ನಮ್ಮ ಹಳ್ಳಿ ಸುಧಾರಿಸುತ್ತಾಳಂತೆ; ಇವಳ ಮುಖ ನೋಡಿರಿ", ಎನ್ನುವದರಿಂದ ಹಿಡಿದು ಅವಳು ಎದುರಿಸಬೇಕಾದ ವಿರೋಧ ಪ್ರಾರಂಭವಾಗುತ್ತದೆ. ಆದರೂ ಸದ್ಯ ಶಾಲೆಯ ಶಿಕ್ಷಕಿಯರು ತಕ್ಕ ಮಟ್ಟಿಗೆ ಹಳ್ಳಿಗಳಿಗೆ ಪರಿಚಿತರಾಗಿದ್ದಾರೆ. ಹೀಗಿದ್ದೂ ಹಳ್ಳಿಗರ ದೃಷ್ಟಿಯಲ್ಲಿ 'ಉದ್ಯೋಗ ಮಾಡುವ ಈ ಸ್ತ್ರೀಯರ ಮಾತೇ ಬೇರೆ.'

ಹಳ್ಳಿಯ ಹೆಣ್ಣು ಮಕ್ಕಳಿಗೆ ಸ್ವಚ್ಛತೆ, ಮನೆಯ ಸ್ವಚ್ಛತೆ, ವೇಳೆಯ ಸದುಪಯೋಗ, ಗುಡಿಕೈಗಾರಿಕೆಗಳಿಂದ ಆಗುವ ಆರ್ಥಿಕ ಲಾಭ, ಇವುಗಳನ್ನು ಹೇಳಿ ಕೊಡುವದಂತೂ ಸರಿ. ಅದಕ್ಕಿಂತ ಮುಖ್ಯವಾಗಿ ಮಕ್ಕಳ ಮನೋವೃತ್ತಿಯಲ್ಲಿ ಮಾರ್ಪಾಟಾಗಬೇಕಾಗಿದೆ. ಅಂದರೆ ಮುಂದಿನ ಪೀಳಿಗೆಯಾದರೂ ಬಲಶಾಲಿಯಾದೀತು. ಸದ್ಯದ ಚೀನಾದಲ್ಲಿ ಅಜ್ಜನಿಂದ ಮೊಮ್ಮಗನ ಕಾಲಕ್ಕೆ ಆಗಬೇಕಾದ ಪ್ರಗತಿ ಮಗನ ಕಾಲಕ್ಕೆ ಆಗಿದೆ. ಒಂದು ತಲೆಮಾರಿನ ಕಾಲ ಉಳಿತಾಯವಾಯ್ತು! ಮಕ್ಕಳ ಎಳೆ ಮನಸ್ಸಿನಲ್ಲಿ ಪರಿಣಾಮ ಆಜ್ಯೋತಿ ಮೂಡಿದಂತೆ, ದೊಡ್ಡವರಲ್ಲಿ ಪರಿವರ್ತನೆಯಾಗಲಾರದು. ಮಕ್ಕಳ ಶರೀರ ಸ್ವಚ್ಛತೆ ಮೊದಲ ಪಾಠ: ತಲೆ ಬಾಚಿ, ಹಲ್ಲು ಉಜ್ಜಿ, ಹರಿದ ಬಟ್ಟೆಯನ್ನು ಹೊಲಿದು, ಸ್ನಾನ ಮಾಡಿ, ಮಡಿ ಬಟ್ಟೆ ತೊಡಿಸುವದರಿಂದಲೇ ಮಕ್ಕಳ ಕಲ್ಯಾಣ ಕೇಂದ್ರ ಪ್ರಾರಂಭವಾಗುತ್ತದೆ. ಇದಕ್ಕೆ ಗ್ರಾಮಸೇವಕಿಯರಲ್ಲಿ ಪೆಚ್ಚಿನ ತಾಳ್ಮೆ ಮಾತ್ರ ಬೇಕು. ಒಂದೆರಡು ದಿನ ಈ ರೀತಿ ಮಾಡಿದರೆ, ಮೂರನೆಯ ದಿನ, ನಾಚಿಕೆಪಟ್ಟು ತಾಯಂದಿರೇ ತಮ್ಮ ಮಕ್ಕಳನ್ನು ಶುಚಿಯಾಗಿ ಶಾಲೆಗೆ ಕಳಿಸುವರು. ಹರಿದ ಗುಂಡಿಯನ್ನು ಹೊಲಿಯುವದೇ ಗೊತ್ತಿರದಿದ್ದರೆ ಮಕ್ಕಳಾದರೂ ಏನು ಮಾಡಬೇಕು? ಹಳ್ಳಿಗರಲ್ಲಿ ಪರಿಶ್ರಮದ ಅಭಾವದ ಜೊತೆಗೆ ಅಂಧಶ್ರದ್ಧೆಯೂ ತಪ್ಪು ತಿಳುವಳಿಕೆಯೂ ಬಲವಾಗಿರುತ್ತವೆ. ನಿತ್ಯ ತಲೆಬಾಚಬೇಕೆಂದರೆ, ಅವರು 'ನಾಟಕದಲ್ಲಿ ಹೋಗಗೋದೈತಾ?' ಎಂದು ಕೇಳುತ್ತಾರೆ.

ನಿಯಮಿತ ಆಹಾರ ವಿಹಾರಗಳಿಂದ ಮಕ್ಕಳ ಆರೋಗ್ಯ ಸುಧಾರಿಸುತ್ತದೆ. ಯೋಗ್ಯ ಆಹಾರದ ಅಭಾವವನ್ನು ಹೋಗಲಾಡಿಸಲು ಕಲ್ಯಾಣ ಕೇಂದ್ರ ವಿಸ್ತರಣ ಯೋಜನೆಗಳಲ್ಲಿ, ಹಾಲನ್ನೂ, ಜೀವನ ಸತ್ವ (ವ್ಹಿಟಾಮಿನ್) ಗಳನ್ನೂ ಪೂರೈಸಲಾಗುತ್ತದೆ. ಅಜೀರ್ಣಬಾಧೆಯಿಂದ, ಅಥವಾ ಜೀವನ ಸತ್ವದ ಕೊರತೆಯಿಂದ ಮಗು ಯಾವುದೋ ಬೇನೆಗೆ ಬಲಿಯಾಗಿ ನರಳುತ್ತಿದ್ದರೂ, ಅದಕ್ಕೇನೋ ಭೂತ ಬಾಧೆಯೆಂದು ಚಿಕಿತ್ಸೆ ಮಾಡಿಸುವ ತಾಯಿ ತಂದೆಗಳೇ ಹೆಚ್ಚು! ಇಂತಹ ಪ್ರಸಂಗಗಳಲ್ಲಿ ಗ್ರಾಮ ಸೇವಕಿ ಹಾಗೂ ದಾಯಿಯರು ತಮ್ಮ ಪ್ರಾವೀಣ್ಯವನ್ನೆಲ್ಲ ವೆಚ್ಚ ಮಾಡಿ ತಮ್ಮ ವಿಚಾರವನ್ನು ಯಶಸ್ವಿಯಾಗಿ ಪ್ರಯೋಗಕ್ಕಿಳಿಸಬೇಕಾಗುತ್ತದೆ. ಅದು ಭೂತ ಬಾಧೆಯಲ್ಲವೆಂದು ಸಿದ್ಧ ಮಾಡಿ ತೋರಿಸಿದರೆ, ಗ್ರಾಮ ಸೇವಕಿ ನಿಜವಾಗಿಯೂ ದೇವತೆಯೇ!

ಶರೀರದ ಸ್ವಚ್ಛತೆಯಂತೆ, ಮನೆಯ ಒಳ ಹೊರಗಿನ ಸ್ವಚ್ಛತೆಯೂ ಅಷ್ಟೇ ಮಹತ್ವದ್ದು! ಮನೆಯ ಒಳಭಾಗದಲ್ಲಿಯೇ ದನ-ಕರುಗಳನ್ನು ಕಟ್ಟುವದು ರೂಢಿಯಾಗಿ ಬಿಟ್ಟಿದೆ. ಅವುಗಳ ಮಲ-ಮೂತ್ರಗಳಿಂದುಂಟಾಗುವ ದುರ್ಗಂಧ ಹೊರಗಿನಿಂದ ಹೋದವರಿಗೆ ಹಿಡಿಸದಾದರೂ, ಅವರಿಗೆ ರೂಢಿಯಾಗಿ ಬಿಟ್ಟಿರುತ್ತದೆ. "ಬಸವಣ್ಣನನ್ನು ಮನೆಯ ಹೊರಗೆ ಇರಿಸುವದೇ?",—ಆ ವಿಚಾರವೇ ಸಲ್ಲದು. ಆದರೆ ಅದರಿಂದಾಗುವ ಹಾನಿಯು ಹಳ್ಳಿಗರಿಗೆ ಮನದಟ್ಟಾದರೆ, ಕ್ರಮೇಣ ಆ ವಿಚಾರವು ಅವರ ತಲೆಯಲ್ಲಿಯೂ ಬರಬಹುದು. ಅದರಂತೆ ಮನೆಯ ಸುತ್ತುಮುತ್ತಲು ಕೂಡಿ ಬೀಳುವ ಕೊಳಚೆ! ಕೊಳಚೆ ಗೂಡ ನೀರು ಹರಿದು ಹೋಗಲು ದಾರಿಯಿಲ್ಲದಿರುವದು, ಕಸ—ಕಡ್ಡಿಗಳು ಅಲ್ಲಿಯೇ ಕೊಳೆತು ಬೀಳುವುದು ಇತ್ಯಾದಿಗಳಿಂದಾಗುವ ಅಪಾಯವು ಅವರಿಗೆ ಸ್ಪಷ್ಟವಾಗಬೇಕು. ಮನೆಯಲ್ಲಿ ಹಾಗೂ ಮೈಯಲ್ಲಿ ಹುಟ್ಟಿದ ಕ್ರಿಮಿಕೀಟಗಳನ್ನು ನಾಶಮಾಡಬಹುದು ಎಂಬುದನ್ನು ಅವರಿಗೆ ತಿಳಿಸಿ ಹೇಳಬೇಕು. ತಲೆಯಲ್ಲಿ ಹೇನು, ಮನೆಯಲ್ಲಿ ತಗಣೆ ಇರಬೇಕಾದ ಕ್ರಿಮಿಗಳೇ ಎಂಬ ಭಾವನೆ ದೂರವಾಗಬೇಕು.

ಹಳ್ಳಿಗಳಲ್ಲಿ ಸ್ಥಳಕ್ಕೆ ಕೊರತೆಯಿಲ್ಲ. ಕಟ್ಟಡಗಳು ನೆಲವನ್ನು ಬಿಟ್ಟು ಆಕಾಶದಲ್ಲಿ ಹಬ್ಬಬೇಕಾಗಿಲ್ಲ. ಆದರೆ ಮನೆಯನ್ನು ಕಟ್ಟಬೇಕಾದಾಗ, ಅಲ್ಲಿ ಸುಲಭದಲ್ಲಿ ದೊರೆಯುವಂತಹ ವಸ್ತುಗಳಿಂದಲೇ ಅಂ

(೩೪ನೆಯ ಪುಟ ನೋಡಿರಿ)

ದಿ ಕೋಮನ್‌ವೆಲ್ತ್‌ನವರ ಸುಪ್ರಖ್ಯಾತವಾದ
ಉತ್ತಮ ತರಗತಿಯವೆಂದು ಸರ್ವತ್ರವೂ ತೃಪ್ತಿಪಡಿಸಿದ
ಬಾಸೆಲ್ ಮಿಶನ್
ಹಂಚು ದಂಬೆ
ಇತ್ಯಾದಿಗಳನ್ನು ನನ್ನ ಮುಖಾಂತ್ರ ಕೊಂಡುಕೊಳ್ಳಿರಿ.
ಕಾನಾರ್ಡ್ ಪಾಂಡುರಂಗ ರಾವ್,
ಕಮಿಶನ್ ಏಜಂಟ್, ಬಸ್ ಸ್ಟೇಂಡಿನ ಹತ್ತಿರ
ಉಡುಪಿ, ದ. ಕನ್ನಡ.
ಪೂರ್ಣ ಪರೀಕ್ಷೆಗಳಿಗೆ ನಿಲ್ಲುವ ಬಾಸೆಲ್ ಮಿಶನ್ ಹಂಚುಗಳನ್ನು ಕೊಂಡುಕೊಳ್ಳಿರಿ.

ಹೊಸ ವರ್ಷವು ಸರ್ವರಿಗೂ ಹರ್ಷದಾಯಕವಾಗಲಿ!
ಹೊಸ ಅಂಗಡಿ! ಹೊಸ ಮ್ಹಾಲು!!
ಹೊಸತಿನಲ್ಲಿಯೇ ಆಕರ್ಷಣೆ!
ಅತ್ಯಾಧುನಿಕವೂ ಅತ್ಯಾಕರ್ಷಕವೂ ಆದ
ತರತರದ ಸೊಗಸಾದ ಬಟ್ಟೆಬರೆಗಳು
ಸುಲಭ ದರದಲ್ಲಿ ದೊರೆಯುತ್ತವೆ
ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ
ಒಮ್ಮೆ ಸಂದರ್ಶಿಸಿರಿ!
ಸುಂದರ ಕ್ಲೋತ್ ಸ್ಟೋರ್ಸ್
ಚರ್ಚ್ ರೋಡ್ ::: ಉಡುಪಿ
SUNDER CLOTH STORES
CHURCH ROAD, UDIPI

ನಿತ್ಯೋಪಯೋಗಿ ಸಾಹಿತ್ಯಗಳಿಗೆ
ಮತ್ತು
ನಿಪುಣ ಕೆಲಸಗಾರರಿಂದ ನಿರ್ಮಲವಾಗಿಯೂ
ರುಚಿಯಾಗಿಯೂ ತಯಾರಿಸಲ್ಪಡುವ
ಟೋಸ್ಟ್, ಬ್ರೆಡ್, ಕೇಕ್, ಬಿಸ್ಕಿಟ್ ಇತ್ಯಾದಿಗಳಿಗೆ
ದಯಮಾಡಿ ನಮ್ಮನ್ನು ವಿಚಾರಿಸಿರಿ
ಗೋವಾ ಸ್ಟೋರ್ಸ್ ಮತ್ತು ಬೇಕರಿ
ಕೆಥೋಲಿಕ್ ಬ್ಯಾಂಕಿನ ಎದುರು, ಉಡುಪಿ.

ಆವಶ್ಯಕವಾದ ಗತಿಶೀಲತೆ

(೬ನೇ ಪುಟದಿಂದ)

ಳಿತೆಯಿಂದ ವಿಮೋಚನೆ ಪಡೆಯುವುದು ತಮ್ಮ ಪುರೋಗಮನಕ್ಕೆ ಅವಶ್ಯಂಭಾವಿ ಎಂದು ತಿಳಿದು, ಸ್ವಾತಂತ್ರ್ಯ ಸಮರಕ್ಕೆ ಪ್ರಥಮ ಸ್ಥಾನವನ್ನು ಕಲ್ಪಿಸಿದರು. ಕೊನೆಗೆ ೧೯೪೭ರಲ್ಲಿ ಅಸಹಕಾರ-ಅಹಿಂಸೆಗಳ ಪರ್ವವು ಮುಗಿದು ದೇಶವು ಶಾಂತವಾದ ರೀತಿಯಲ್ಲಿ ಲೋಕವೆಲ್ಲ ಆಶ್ಚರ್ಯಪಡುತ್ತಿರಲು ಸ್ವತಂತ್ರವಾಯಿತು.

ಸ್ವಾತಂತ್ರ್ಯ ಲಾಭದಲ್ಲಿ ಮುಂದೆ ದೇಶವನ್ನು ಕಟ್ಟುವ ತತ್ತ್ವಗಳು ಅಡಕವಾಗಿರಲಿಲ್ಲ. ದುರದೃಷ್ಟವಶಾತ್ ಆರಂಭದಲ್ಲೇ ಸ್ವಾತಂತ್ರ್ಯವು ನಮಗೆ ಅದರ ಕಹಿಯನ್ನುಣಿಸಿತು. ದೇಶ ವಿಭಜನೆಯಾಯಿತು, ಬೃಹತ್ ಪ್ರಮಾಣದಲ್ಲಿ ಜಾತೀಯ ಭೂತವು ಹತ್ಯಾಕಾಂಡವನ್ನು ರಚಿಸಿ ರಕ್ತದ ಹೊಳೆ ಹರಿಯಿಸಿತು; ಯುದ್ಧಾನಂತರದ ಇಡೀ ಯುರೋಪು ಖಂಡದಲ್ಲಿಯೂ ಇರದಷ್ಟು ಪ್ರಮಾಣದಲ್ಲಿ ನಿರಾಶ್ರಿತರ ಸಮಸ್ಯೆ ನಮ್ಮ ಮುಂದೆ ಎದ್ದಿತು. ಆದಾಗಲೂ ಸ್ವಾತಂತ್ರ್ಯವನ್ನು ಒಂದು ಸ್ಪ್ರಿಂಗ್ ಬೋರ್ಡಾಗಿ ಮಾಡಿಕೊಂಡು ನಾವು ಘಟನಾ ನಿರ್ಮಾಣದಲ್ಲಿ ತಲ್ಲೀನರಾದೆವು. ೧೯೫೦ರಲ್ಲಿ ಸಾಮ್ರಾಜ್ಯಶಾಹಿಯ ಸಂಪೂರ್ಣ ಅವಲಂಬನೆಯ ಪೂರ್ವದ ಪರಿಸ್ಥಿತಿಯು ತೊಲಗಿ ಪ್ರಜಾತಂತ್ರಾತ್ಮಕ ಗಣರಾಜ್ಯದ ಲಿಖಿತ ಘಟನೆಯನ್ನು ನಾವು ಭಾರತದಲ್ಲಿ ಮೊಟ್ಟಮೊದಲು ಪ್ರಚಾರಿಸಿದೆವು. ಇದು ಒಂದನೆಯ ಬದಲಾವಣೆ, ನಾವು ಭವಿಷ್ಯದತ್ತ ಇಟ್ಟ ಪ್ರಥಮ ತ್ರಿವಿಕ್ರಮ ಪದ.

ಐನೂರಕ್ಕೂ ಮೇಲಿನ ದೇಶೀರಾಜ್ಯಗಳನ್ನು ಭಾರತದೊಡನೆ ಸಮಾವೇಶಗೊಳಿಸಿದುದು ನಾವಿರಿಸಿದ ಎರಡನೆಯ ದೊಡ್ಡ ಹೆಜ್ಜೆ. ಈ ರಾಜ್ಯಗಳಲ್ಲಿ ಇಷ್ಟು ಕಾಲ ನಡೆಯುತ್ತಿದ್ದ ಸರ್ವಾಧಿಕಾರಿ ಪ್ರಭುತ್ವವು ಹಠತ್ತಾಗಿ ತೊಲಗಿ ಅಲ್ಲಿನ ಜನರಿಗೆ ಸ್ವಾತಂತ್ರ್ಯದ ಮಂಗಲೋದಯವು ಪ್ರಾಪ್ತಿಯಾಯಿತು, ಸುಮಾರು ಒಂಭತ್ತು ಕೋಟಿ ಪ್ರಜೆಗಳಿಗೆ ಪ್ರಜಾಪ್ರಭುತ್ವದ ಸವಿಯ ಕನಸು ಲಭ್ಯವಾಯಿತು.

ಜಮೀನ್ದಾರಿ ನಿರ್ಮೂಲನವು ಆಳಿದು ಳಿದ ಪಾಳೆಯಗಾರ ಪದ್ಧತಿಯ (Feudalism) ಅಧ್ಯಾಯಗಳನ್ನೂ ಕಿತ್ತೊಗೆಯಿತು. ಜತೆಗೆ ವೈಯಕ್ತಿಕ ಹಿಡುವಳಿಗೆ ಒಂದು ಪರಮಾವಧಿಯ ಪ್ರಮಾಣವನ್ನು ನಿರ್ಮಿಸುವ ಶಾಸನವೂ ಕಾರ್ಯರೂಪಕ್ಕೆ ಬರುವುದರಲ್ಲಿದೆ. ವಿನೋಬಾಜಿಯವರ ಭೂದಾನ ಚಳವಳವನ್ನು ಕಾಂಗ್ರೆಸೂ ಸರಕಾರವೂ ಪೋಷಿಸುತ್ತಿರುವುವು.

'ಪೋಲೀಸು ರಾಜ್ಯ'ವಾಗಿದ್ದ ಭಾರತವನ್ನು ಕಲ್ಯಾಣ ರಾಷ್ಟ್ರವಾಗಿ ಪರಿವರ್ತಿಸುವುದಕ್ಕಾಗಿ ಪಂಚವಾರ್ಷಿಕ ಯೋಜನೆಗಳನ್ನು ಸರಕಾರವು ತನ್ನ ಆರ್ಥಿಕ ಧೋರಣೆಯಾಗಿ ಸ್ವೀಕರಿಸಿತು. ಸಮಾಜ ವಿಕಾಸ ಯೋಜನೆಗಳು ದೇಶದ ನಿಶ್ಚಿತ ವಲಯಗಳಲ್ಲಿ ಪ್ರಾರಂಭವಾದುವು ಈ ಯೋಜನೆಗಳಲ್ಲಿ ಜನತೆಯ ಸಹಕಾರವನ್ನು ಪಡೆಯುವುದಕ್ಕೂ, ಅವರ ಸಾಹಸೋದ್ಯಮಗಳನ್ನು ಬೆಳೆಸುವುದಕ್ಕೂ ಪ್ರಾಧಾನ್ಯವಿದೆ. ಈ ವರ್ಷ ಅಂತ್ಯಗೊಳ್ಳುವ ಪ್ರಥಮ ಪಂಚವಾರ್ಷಿಕ ಯೋಜನೆಯು ತನ್ನ ಗುರಿಯನ್ನು ಸಾಧಿಸುತ್ತಿದೆ. ಎರಡನೆಯ ಯೋಜನೆಯು ಕರಡುಸಿದ್ಧವಾಗಿ ಕಾರ್ಯಾಚರಣೆಯನ್ನು ಕಾಯುತ್ತಿದೆ. ಬಹುಮುಖವಾದ ಕೂಲಿಕಾರ ಶಾಸನಗಳೂ, ವರಮಾನ ತೆರಿಗೆಯ ಹೆಚ್ಚಳವೂ, ವಾರಸಾ ಕರವೂ ಭೂ ವಿಷಯಕ ಧೋರಣೆಯೂ ಭಾರತವು ಸಮಾಜವಾದಿ ಸ್ವರೂಪದ ಸಮಾಜ ರಚನೆಯ ದಾರಿಯಲ್ಲಿ ನಡೆಯುತ್ತಿರುವುದನ್ನು ಸೂಚಿಸುತ್ತಿದೆ. ಕಾಂಗ್ರೆಸ್ ಪಕ್ಷವೂ, ಪಾರ್ಲಿಮೆಂಟೂ ಸಮಾಜವಾದವನ್ನು ಒಪ್ಪಿಕೊಂಡಿವೆ.

ಜನತೆಯ ಜೀವನದ ಮಟ್ಟವನ್ನು ಎತ್ತರಿಸುವ ಪ್ರಯತ್ನದಲ್ಲಿ ನಿರುದ್ಯೋಗವು ಒಂದು ಕಾರ್ಮೋಡದಂತೆ ಆವರಿಸಿದರೂ, ಹೆಚ್ಚು ಉತ್ಪಾದನೆ, ದೊಡ್ಡ ಗಿರಣಿಗಳು ಹಾಗೂ ಉದ್ಯೋಗಮಗಳ ಸುಸಂಗತವಾದ ಕೂಡಿಕೆ, ವಿವಿಧೋದ್ದೇಶದ ಬೃಹತ್ ಯೋಜನೆಗಳು, ನಮ್ಮ ಜನಜೀವನದ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ದೊಡ್ಡ ಪಾತ್ರವನ್ನು ವಹಿಸಿ ಕಾರ್ಯತತ್ಪರವಾಗಿದೆ.

***

ರಾಜಕೀಯದ ಆಡಳಿತೆಯು, ಆರ್ಥಮಂಡಲದ, ಸಮಾಜ ಜೀವನದ ಈ ನಾನಾ ವಿಭಕ್ತಿಪ್ರ ಪ್ರಗತಿಯನ್ನು ನಾವು ಅವಲೋಕಿಸಿದರೆ ನಾವು ಈ ಎಳೆಂಟು ವರ್ಷಗಳಲ್ಲಿ ಸುಮಾರು ಅರ್ಧಶತಮಾನದಷ್ಟು ನಡೆಯುವಷ್ಟು ದಾರಿಯನ್ನು ಕ್ರಮಿಸಿರುವುದು ವಿದಿತವಾಗುವುದಿಲ್ಲವೆ? ನಮ್ಮ ದೇಶವು ಸ್ವತಂತ್ರವಾಗುವಾಗಲೇ ಸ್ವತಂತ್ರವಾದ ನಮ್ಮ ನೆರೆ ಹೊರೆಯ ರಾಷ್ಟ್ರಗಳ ಪ್ರಗತಿಯ ಪ್ರಮಾಣದೊಡನೆ ನಮ್ಮ ಸವೇಗ ಅಭ್ಯುದಯವನ್ನು ತುಲನೆಮಾಡಿ ನೋಡಿದರೆ ಈ ಮಾತಿನಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲವೆಂದು ನಮಗೆ ವಿದಿತವಾಗದಿರದು.

ಇಷ್ಟಲ್ಲದೆ ಭಾರತವು ಸ್ವಾತಂತ್ರ್ಯಾನಂತರ ಗಳಿಸಿದ 'ಅಶೋಕ ವಿಜಯ'ದ ಪರಿಯನ್ನು ನಾವು ಗಮನಿಸಬೇಕು. ನಮ್ಮ ಭೂಖಂಡದ ಸ್ಥಾನದ ದೆಸೆಯಿಂದಲೂ, ನಾವು ಮನಃಪೂರ್ವಕ ಅನುಸರಿಸುವ ನಿರ್ಭೀತ ಹಾಗೂ ಶಾಂತ ಅಂತಾರಾಷ್ಟ್ರೀಯ ನೀತಿಯಿಂದಲೂ ವಿದೇಶೀ ವಲಯಗಳಲ್ಲಿ ನಮ್ಮ ಗೌರವವು ದಿನೇ ದಿನೇ ಪ್ರವರ್ಧಮಾನವಾಗುತ್ತಿರುವುದನ್ನು ನಾವು ನಮ್ಮ ಕಣ್ಣಮುಂದೆ ನೋಡುತ್ತಿರುವೆವು. ನಮ್ಮ ಪಂಚಶೀಲಗಳನ್ನು ಬೇರೆ ಬೇರೆ ರಾಷ್ಟ್ರಗಳು ತನ್ನ ಅಂತಾರಾಷ್ಟ್ರೀಯ ನೀತಿಯಲ್ಲಿ ಸೇರಿಸಿಕೊಳ್ಳುವುದಕ್ಕೆ ಆತುರವಾಗಿರುವುವು. ಹಿಂದುಳಿದ ಜನಾಂಗಗಳಿಗೆ ನಾವು ನೀಡುವ ಸಹಾಯದಿಂದಲೂ, ವಸಾಹತುವಾದದೊಡನೆ ನಮಗಿರುವ ಶತ್ರುತ್ವದ ದೆಸೆಯಿಂದಲೂ, ಎಲ್ಲ ವಿಧದ ಪರಕೀಯ ಆಡಳಿತೆಯ ಮೇಲಿನ ತಿರಸ್ಕಾರದಿಂದಲೂ, ಸೈನಿಕ ಒಡಂಬಡಿಕೆಗಳ ದ್ವೇಷದಿಂದಲೂ, ಜಾಗತಿಕ ಶಾಂತಿಗಾಗಿ ನಮ್ಮ ನಿರಂತರ ಪ್ರಯತ್ನದಿಂದಲೂ, ನಮಗೆ ಇಂದು ಮನುಷ್ಯ ಜನಾಂಗದ ಹೃದಯಾಂತರಾಳದಲ್ಲಿ ಒಂದು ಕೃತಜ್ಞತೆಯ ಮತ್ತು ಗೌರವಾರ್ಹವಾದ ಸ್ಥಾನವು ಲಭಿಸಿರುತ್ತದೆ

ನಮ್ಮ ಸುತ್ತಲೂ ನಡೆಯುವ ಇಂಥ ಕ್ರಾಂತಿಕಾರಕ ಬದಲಾವಣೆಗಳು ನಮ್ಮಿಂದ ಏನನ್ನು ಅಪೇಕ್ಷಿಸುತ್ತವೆ? ಎಂಬುದನ್ನು ಪರೀಕ್ಷಿಸಿದರೆ ಪ್ರಾಯಃ ನಡೆಯುವ ಬದಲಾವಣೆಗಳ ಜ್ಞಾನವು ನಮಗಿದ್ದರೆ ಸಾಕೆಂದು ಕಾಣುತ್ತದೆ. ಮಾನಸಿಕವಾಗಿ ಹಾಗೂ ಭೌತಿಕವಾಗಿ ನಾವು ಈ ಹೊಸ ಘಟನೆಗಳೊಡನೆ ಸಾಂಗತ್ಯದಿಂದ ಬಾಳಲು ಕಲಿಯುವುದು ಈಗ ನಮ್ಮ ಮುಂದಿರುವ ಅತಿ ಮುಖ್ಯವಾದ ಪ್ರಶ್ನೆ ಎಂದು ನನಗನಿಸುತ್ತದೆ. ಏಕೆಂದರೆ ವಿಮಾನದಲ್ಲಿ ಹಾರಾಡುವವರಿಗೆ ಎತ್ತಿನ ಗಾಡಿಯ ಯುಗದ ಮನೋವೃತ್ತಿ ಸಲ್ಲದು. ಅಂಥ ಅಸಾಂಗತ್ಯವು ಜನಜೀವನದಲ್ಲಿ ನಸಂಬಿದರೆ ನಮ್ಮ ಉಳಿವಿಗೆ ಮಾರ್ಗವಿಲ್ಲದಾಗುವುದು ನಿಷ್ಕ್ರಿಯ ಪ್ರೇಕ್ಷಕರಾಗಿರುವುದೂ ಅಥವಾ ನಿರಂತರ ವಿಮರ್ಶಕವೈದ್ಯರಾಗಿರುವುದೂ, ಅಥವಾ ಅಲಸಿಗ ಪಲಾಯನವಾದಿಗಳಾಗಿರುವುದೂ ಸುಲಭದ ದಾರಿಯಾದರೂ ಸಾಧುವಾದ ದಾರಿಯಿಲ್ಲವೆಂಬುದನ್ನು ನಾವು ಗಮನಿಸಬೇಕು. ನಮ್ಮ ಕಣ್ಣ ಮುಂದೆಯೇ, ನಮ್ಮ ಜೀವಮಾನದಲ್ಲೇ ಬರೆಯಲ್ಪಡುವ ಈ ಆಧುನಿಕ ಇತಿಹಾಸದಲ್ಲಿ ನಾವೂ ಕರ್ತವ್ಯ ನಿಷ್ಠೆಯಿಂದ ಭಾಗಿಗಳಾಗಬೇಕು. ನಮ್ಮ ಭೂತಕಾಲದ ಇತಿಹಾಸಕ್ಕಿಂತಲೂ ನಮ್ಮ ಭವಿಷ್ಯವು ಉಜ್ವಲವಾಗಿರಲು ಸಾಧ್ಯವಿದೆ. ವಿವೇಕಾನಂದ, ಶ್ರೀ ರಾಮಕೃಷ್ಣ, ಅರವಿಂದ, ತಿಲಕ, ಗಾಂಧೀ, ಠಾಕೂರರಂಥ ಮಹಾ ವ್ಯಕ್ತಿಗಳನ್ನು ದೇಶವು ಅವಸರ್ಪಿಣಿಯ ದೆಸೆಯಲ್ಲಿರುವಾಗಲೇ ಹೆತ್ತ ದೇಶವು ಬದುಕಿರುವುದರಿಂದ ಪ್ರಪಂಚಕ್ಕೆ, ನಾಗರಿಕತೆಗೆ ಮಂಗಲವುಂಟು. ಹಾಗಾಗಬೇಕಾದರೆ ಪ್ರಗತಿಯ ತತ್ತ್ವವನ್ನೂ, ಗತಿಶೀಲತೆಯ ವಾಸ್ತವತೆಯನ್ನೂ ಪ್ರಜ್ಞಾಪೂರ್ವಕವಾಗಿ ಪರಿಗ್ರಹಿಸಿ, ಅದಕ್ಕೆ ಅನುಗುಣವಾಗಿ ನಮ್ಮ ಜೀವನವನ್ನು ಹೊಂದಿಸಿ, ನಮ್ಮ ಭವಿಷ್ಯ ನಿರ್ಮಾಪಕರು ನಾವೇ ಆದಲ್ಲಿ ತರುಣ ಭಾರತವು ಅಂತಾರಾಷ್ಟ್ರೀಯ ರಂಗದಲ್ಲಿ ಪ್ರಗತಿಯ ಸಂಕೇತವಾಗಿಯೂ, ಶಾಂತಿಯ ಅಧ್ವರ್ಯುವಾಗಿಯೂ ನಿಲ್ಲಲು ಸಮರ್ಥರಾಗುವುದು.

ಅನುವಾದಕರು:

ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ. ಎ.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಟಳೆ ರಾಮಸ್ವಾಮಿ ಅಯ್ಯಂಗಾರರವರ

ಸಂತಾನ ಸಿಂದೂರ

ಈ ಭಸ್ಮವು ಬಹಿಷ್ಟೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರು 'ತಾಯ್ತಂದೆ'ಗಳಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: **ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂಪೆನಿ,**

628 "ಸಂತಾನ ಸಿಂದೂರ ಸದನ" (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0

ನವಯುಗ ಪ್ರೆಸ್ ಉಡುಪಿ

ಕೆನರಾ ಬ್ಯಾಂಕಿಂಗ್ ಕೋರ್ಪರೇಶನಿನ ಸುವರ್ಣ ಮಹೋತ್ಸವ

ವಿದ್ಯಾ ವಿನಯ ಸಂಪನ್ನರೂ ಸಾರ್ವಜನಿಕ ಸೇವೆಯಿಂದಾಗಿ ಜನಪ್ರೀತರಾದವರೂ ಅನೇಕ ಮುಖವಾದ ಚಟುವಟಿಕೆಯಿಂದ ಜಿಲ್ಲೆಯ ಅಭ್ಯುದಯಕ್ಕೆ ನಿರಂತರ ದುಡಿಯುವವರೂ ಆದ **ಡಾ: ಯು. ಸುಂದರರಾವ ಪೈ, ಎಂ. ಬಿ., ಬಿ. ಎಸ್.**

ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್, ಲಿಮಿಟೆಡ್ ಇದರ ಜನರಲ್ ಮೆನೇಜರ್ **ಶ್ರೀ ವಿ. ಆರ್. ಕಾಮತ್,** ಬಿ. ಎ., ಎಲ್ಎಲ್. ಬಿ.

ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಬ್ಯಾಂಕೆಂದು ಹೆಸರುಗಳಿಸಿದ "ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್, ಲಿಮಿಟೆಡ್" ಎಂಬ ಜನೋಪಯೋಗಿ ಸಂಸ್ಥೆಯು ಇಷ್ಟರಲ್ಲಿಯೇ ಸುವರ್ಣ ಮಹೋತ್ಸವನ್ನು ಆಚರಿಸಲಿರುವುದು ಬಹಳ ಸಂತೋಷಕರವಾದ ವಿಷಯ. ಸ್ಥಾಪನೆಯಾದ ಪ್ರಥಮ ವರ್ಷದಲ್ಲಿ ಐದು ಸಾವಿರ ರೂಪಾಯಿಗಳಷ್ಟು ತೆತ್ತು ಬಂದ ಮೊಬಲಗಿನ ವ್ಯವಹಾರ ನಡೆಸಿದ ಈ ಬ್ಯಾಂಕು ಇಂದು ಐದು ಕೋಟಿ ರೂಪಾಯಿಗಳ ಚಲಾವಣೆ ಭಂಡವಾಳದ ಮಟ್ಟಕ್ಕೆ ಏರಿರುವುದು ಸಂಸ್ಥೆಯೊಡನೆ ಸತತ ಸಂಪರ್ಕವಿರಿಸಿಕೊಂಡು ಅದನ್ನು ಪೋಷಿಸಿದ ಮಹನೀಯರ ಕೃತಕೃತ್ಯತೆಯ ದ್ಯೋತಕ. ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಡಾ. ಯು. ಸುಂದರರಾವ ಪೈಗಳು ತನ್ನ ಅಪಾರ ಅನುಭವವನ್ನೂ ಜನಸಂಪರ್ಕದ ಭಂಡಾರವನ್ನೂ ಬ್ಯಾಂಕಿಗೆ ಮೀಸಲಿರಿಸಿದ್ದಾರೆ. ಆಡಳಿತದ ದೈನಂದಿನ ಮೇಲ್ವಿಚಾರಣೆಯನ್ನು ದಕ್ಷತೆಯಿಂದಲೂ ಸಮರ್ಥವಾಗಿಯೂ ನೆರವೇರಿಸಿಕೊಂಡು ಬಂದ ಶ್ರೀ. ವಿ. ಆರ್. ಕಾಮತರು ಬ್ಯಾಂಕಿಗೆ ನೌಕರರ, ಗಿರಾಕಿಗಳ ಹಾಗು ಜನತೆಯ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಇವರ ನೇತೃತ್ವದಲ್ಲಿ ಈ ಸಂಸ್ಥೆ ಇತೋಧಿಕ ಶ್ರೇಯಸ್ಕರವಾದ ಯಶಸ್ಸನ್ನು ಹೊಂದಲಿ!

ಬಡವರು ಏಕೆ ದಾನ ಮಾಡಬೇಕು!

ಬಡವರು ಮಾಡುವ ದಾನದಿಂದ ಸ್ವಾಮಿತ್ವ ವಿಸರ್ಜನೆಯಾಗುತ್ತದೆ; ತ್ಯಾಗ ಮತ್ತು ಬಂಧು ಪ್ರೇಮ ಬೆಳೆಯುತ್ತದೆ; ಧನಿಕರ ಮೇಲೆ ನೈತಿಕ ಪ್ರಭಾವ ಬೀಳುತ್ತದೆ; ಸತ್ಯಾಗ್ರಹ ಸೇನೆಯು ತಯಾರಾಗುತ್ತದೆ: ಭಿಕ್ಷೆಯ ಭಾವನೆ ನಿರ್ಮೂಲವಾಗುತ್ತದೆ.

—ವಿನೋಬಾ.

ಮೈಸೂರು ಸರ್ಕಾರದ ವಿಮಾ ಇಲಾಖಾ

(ಸಾರ್ವಜನಿಕ ಶಾಖಾ)

ತಿಳಿವಳಿಕೆ ಕೊಡುವ ಅಂಕಿ ಅಂಶಗಳು

೧೯೫೪—೫೫ ರಲ್ಲಿ

ಆದ ಹೊಸ ಬಿಸಿನೆಸ್ ೧.೮೨ ಕೋಟಿಯನ್ನು ಮೀರಿದೆ

ಇಡಲ್ಪಟ್ಟ ಮೊಬಲಗು ೪.೭೯ ಕೋಟಿಗಳನ್ನು ಮೀರಿದೆ

ಒಟ್ಟು ವಿಮಾ ಮೊಬಲಗು ೧೩.೮೭ ಕೋಟಿಗಳು

ಪಾವತಿಯಾದ ಮೊಬಲಗು ೨.೪೫ ಕೋಟಿಗಳು.

ಹೆಚ್ಚಾದ ಬೋನಸ್ಸು

ರೂ. ೨೦/- ಜೀವನಾನ ವಿಮೆಗೆ ರೂ. ೧೭/- ಎಂಡೋಮೆಂಟಿಗೆ

ಕಡಿಮೆ ಮಾಡಲ್ಪಟ್ಟ ಪ್ರೀಮಿಯಂ ದರಗಳು

ಮೋಟಾರು ವಾಹನಗಳ ವಿಮೆಯು ಪೈಪೋಟಿ ದರಗಳಲ್ಲಿ ಅಂಗೀಕರಿಸಲ್ಪಡುತ್ತದೆ.

ಅನುಭವದಿಂದ ಬಂದ ಜ್ಞಾನ

ಶ್ರೀಗಂಧದ ಮರಗಳನ್ನು ಸಮೃದ್ಧವಾಗಿ ಬೆಳೆಸುವುದರ ರಹಸ್ಯವು ನೂರಾರು ವರ್ಷಗಳ ಅನುಭವವಾದ ಮೇಲೂ ಕೂಡಾ ಇನ್ನೂ ಮೈಸೂರು ಸೀಮೆಯೊಂದರ ವಶದಲ್ಲಿಯೇ ಇರುವ ಸ್ವತ್ತಾಗಿದೆ. ಮೈಸೂರು ಸರಕಾರದ ಕಾರ್ಖಾನೆಗಳಲ್ಲಿ ಬಟ್ಟಿಯಿಳಿಸಿದ ಅತ್ಯಂತ ಮನೋಹರವಾದ ಪರಿಮಳವುಳ್ಳ ಶ್ರೀಗಂಧದ ಎಣ್ಣೆಯೇ ಪ್ರಪಂಚದಲ್ಲೆಲ್ಲ ಅತ್ಯಂತ ಶ್ರೇಷ್ಠವಾದದ್ದು. ಈ ಎಣ್ಣೆಯು ಸರ್ವ ಸಮರ್ಪಕವಾದ ಸ್ಥಳ ಸನ್ನಿವೇಶದಲ್ಲಿ ಬೆಳೆದು ಕಡಿದು ಕೊಡಿಟ್ಟ ಶ್ರೀಗಂಧದ ಮರದಿಂದ ತಯಾರಾದದ್ದು. ಅದರ ಸುವಾಸನೆಯು ಮರದಲ್ಲಿ ಸಾಕ್ಷಾತ್ತಾಗಿರುವ ಎಣ್ಣೆಯದು ಹೇಗೆಯೋ ಹಾಗೆಯೇ ತುಂಬಿ ಕೊಂಡು ಸ್ವಲ್ಪವೂ ಕುಂದದೆ ಇರುತ್ತದೆ. ಲೋಕದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಸಾಬೂನುಗಳ ಮತ್ತು ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಈ ಸುವಾಸನೆ ಉಪಯುಕ್ತವಾಗುತ್ತದೆ.

ಮೈಸೂರು ಶ್ರೀಗಂಧದ ತೈಲ

ಗವರ್ನಮೆಂಟ್ ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ, ಮೈಸೂರು.

ಬಿಲ್ಡಿಂಗ್ ಇಂಜಿನಿಯರು ನಿರ್ದಿಷ್ಟವಾಗಿ ಹೇಳುತ್ತಾರೆ.......

ಎಣೆಯಿಲ್ಲದ ಖಾತರಿಗೆ ಚಾಮುಂಡಿ ಸಿಮೆಂಟ್

ರೋಲ್ಡ್ ಮೈಲ್ಡ್ ಸ್ಟೀಲ್ ಸೆಕ್ಷನ್ನುಗಳು

ರೌಂಡ್ಸ್—ಸ್ಕ್ವೇರುಗಳು—ಫ್ಲಾಟ್ಸ್—ಆ್ಯಂಗಲ್ಸ್

ಹೂಪ್ಸ್ ಮತ್ತು ಸ್ಟ್ರಿಪ್‌ಗಳು

ಬಳಕೆಯ ಎಲ್ಲಾ ಸೈಜುಗಳಲ್ಲಿಯೂ ದೊರೆಯುತ್ತವೆ.

ನಿಮ್ಮ ಕಟ್ಟಡ ರಚನೆಗೆ ಮೈಸೂರು ಉಕ್ಕು ಮತ್ತು ಚಾಮುಂಡಿ ಸಿಮೆಂಟ್ ಉಪಯೋಗಿಸುವುದು ಅವಶ್ಯಕವೆಂಬುದನ್ನು ಅವಕ್ಕೆ ಇರುವ ಬೇಡಿಕೆ ನಿರೂಪಿಸುತ್ತದೆ.

ದಿ ಮೈಸೂರ್ ಐರ್ನ್ ಅಂಡ್ ಸ್ಟೀಲ್ ವರ್ಕ್ಸ್, ಭದ್ರಾವತಿ [ಸದರನ್ ರೈಲ್ವೆ]

Buy advertised Goods

Hearty greetings for the **New Year** &

Annual Celebration of the

REPUBLIC DAY

VIHAR RESTAURANT

SIGNAL HILL, AVENUE REAY ROAD,

BOMBAY 10.

AN UP-TO-DATE
COFFEE & MEALS HOTEL.

ನಮ್ಮ ಹಿತೈಷಿಗಳೆಲ್ಲರಿಗೂ ನೂತನ ವರ್ಷದ ಮತ್ತು

ಪ್ರಜಾರಾಜ್ಯ ದಿನದ ಹಾರ್ದಿಕ ಶುಭಾಶಯಗಳು!

ಮನೆಯಂತೆಯೇ ಶುಚಿ-ರುಚಿಯಾದ ಚಾ, ಕಾಫಿ ಮತ್ತು ಊಟಗಳಿಗೆ

ಮುಂಬಯಿಯಲ್ಲಿ ಪ್ರಖ್ಯಾತವಾದ
ಅತ್ಯಾಧುನಿಕವಾದ ಹಾಗೂ ಗ್ರಾಹಕರ ಮನಮೆಚ್ಚುವ ಸೌಕರ್ಯಗಳಿರುವ

ಉಪಾಹಾರ ಮತ್ತು ಭೋಜನ ಮಂದಿರ.

ವಿಹಾರ್ ರೆಸ್ಟೋರೆಂಟ್

ಸಿಗ್ನಲ್ ಹಿಲ್, ಅವೆನ್ಯೂ ರೇ ರೋಡು,

ಬೊಂಬಾಯಿ – 10.

Prop: **K. ANANDA SHETTY.** ಮಾಲಕರು: **ಕೆ. ಆನಂದ ಶೆಟ್ಟಿ.**

ಜಿಲ್ಲೆಗೆ ಬಹುಮುಖ ಸೇವೆ ಸಲ್ಲಿಸಿರುವ ಪ್ರಸಿದ್ಧ ವಾಣಿಜ್ಯ ತಜ್ಞರಾದ,
ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ

ಶ್ರೀ. ಬಿ. ವಿಟ್ಠಲ ರಾಯರು

ಪೊಪ್ಯುಲರ್ ವಿಮಾ ಸಂಸ್ಥೆಯು ಪ್ರಗತಿ ಪಥದಲ್ಲಿ ಮುಂದುವರಿಯುತ್ತಿದ್ದು, 1954ನೇ ದಶಂಬರಕ್ಕೆ ಕೊನೆಗೊಳ್ಳುವ ತ್ರೈವಾರ್ಷಿಕ ಆರನೆ ಮೌಲ್ಯ ಮಾಪನದಲ್ಲಿ ರೂ- 2,13,862 ಮಿಗಿತೆ ತೋರಿಸಿದೆ. ಅಲ್ಲದೆ ಲಾಭ ಸಹಿತ ಜೀವಾವಧಿ ಪೊಲಿಸಿಗಳ ಮೇಲೆ ಸಾವಿರಕ್ಕೆ ರೂ. 14, ಲಾಭ ಸಹಿತ ಅವಧಿ ಪೊಲಿಸಿಗಳ ಮೇಲೆ ರೂ. 12 ಬೋನಸ್ಸು ಕೊಡಲು ಆಕ್ಚುವರಿಯವರು ಸಿಫಾರಸು ಮಾಡಿರುವುದು ಅಭಿನಂದನೀಯ.

ಹೊಸ ಪ್ರಕಟಣೆಗಳು

ಮನೋರಮಾ – (ಎಂ. ಆರ್. ಕುಪ್ಪು ಸ್ವಾಮಿ. ಚೆಟ್ಟಿ, ಬಿ. ಎ. ಅವರ ಥಾರ್ಸ್ಟಿಕ ಕಾದಂಬರಿ)	1–8–0
ಫಲಪ್ರಾಪ್ತಿ— (ಬಿ. ಎಸ್. ಆರ್. ಐಯ್ಯಂಗಾರ್ ಬಿ. ಎ. ಅವರ ದಾರ್ಷ್ಟಿಕ ಕಾದಂಬರಿ)	1–8–0
ನಗ್ನ ನೃತ್ಯ— (ಎಂ. ದ್ವಾರಕನಾಥ ರಾವ್ ರವರ ಸಾಮಾಜಿಕ ಕಾದಂಬರಿ)	1–0–0
ಪುನರ್ಮಿಲನ— (ಎಚ್. ನಾರಾಯಣ್, ಬಿ.ಎ. ರವರ ಸಾಮಾಜಿಕ ಕಾದಂಬರಿ)	1–0–0
ಪತ್ತೆಯಿಲ್ಲದ ವಿಜ್ಞಾನಿ— (ಪತ್ತೇದಾರಿ ಕಾದಂಬರಿ)	1–0–0

ನಿಮಗೆ ಬೇಕಾದ ಯಾವುದೇ ಪ್ರಕಟಣೆಗೆ ನಮಗೆ ಬರೆಯಿರಿ.

ಶ್ರೀ ವಾಣಿ ಪ್ರಕಾಶನ

ಮುದ್ರಕರು— ಪ್ರಕಾಶಕರು— ಬೆಂಗಳೂರು. 2

ಆಭರಣಗಳಿಗೆ ಆಕರ್ಷಣೆ ಬೇಕು!

ಆಕರ್ಷಣೀಯವಾಗಿ ತಯಾರಿಸಲು ನುರಿತ ಅನುಭವ ಬೇಕು!

20 ವರ್ಷಗಳಿಗೂ ಮಿಕ್ಕಿದ ಅನುಭವದಿಂದ, ನಿಪುಣ ಕೆಲಸಗಾರರಿಂದ ಚಿನ್ನ ಬೆಳ್ಳಿ ಆಭರಣ ಮೊದಲಾದುವನ್ನು ಸುಲಭ ದರದಲ್ಲಿ ವಾಯಿದೆಗೆ ಸರಿಯಾಗಿ ತಯಾರಿಸಿ ಕೊಡುವೆವು.

ಎನ್. ಜಿ. ಗೋಪಾಲಕೃಷ್ಣ ಶೇಟ್

ಚಿನ್ನ ಬೆಳ್ಳಿ ವ್ಯಾಪಾರಿ,

ನವಯುಗ ಪ್ರೆಸ್ಸಿನ ಎದುರು, ಸಂತೆಕಟ್ಟೆ, ಉಡುಪಿ

ಶಸ್ತ್ರಕ್ರಿಯೆಯ ಅವಶ್ಯಕತೆ ಇಲ್ಲ

ಮೂಗಿನೊಳಗಿನ ಎಲುಬು ಬೆಳೆದಲ್ಲಿ ಶ್ವಾಸೋಚ್ಛ್ವಾಸಕ್ಕೆ ತೊಂದರೆಯಾದಲ್ಲಿ ನೆಗಡಿ, ದುರ್ಗಂಧ ಇದ್ದಲ್ಲಿ ಟಪ್ಪಾಲು ಹಾಸಲು ಸಹಿತ ಬರೆಯಿರಿ . . . .

ಆರೋಗ್ಯ ಮಂದಿರ, ಸಾಂಗಲಿ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. O. Box No. 3219, BOMBAY 3-

ನಿಮ್ಮ ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ.

With best compliments from

NUTAN PHOTO STUDIO

CHURCH ROAD, UDIPI.

Specialists in

OUT-DOOR GROUP PHOTOS

Weddings, Parties and Social Gatherings.

****

ನೂತನ್ ಫೋಟೋ ಸ್ಟುಡಿಯೋ

ಚರ್ಚ್‌ರೋಡು : : ಉಡುಪಿ.

ಆಯುರ್ವೇದ ಔಷಧಗಳಿಂದ ತಯಾರು ಮಾಡಿದ

ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶ್ಯಲ್ ನಂ. ೧ (ರಿಜಿಸ್ಟರ್ಡ್)

ಪ್ರಖ್ಯಾತ ಡಾಕ್ಟರರು, ವೈದ್ಯರು, ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭಗಳನ್ನು ಕೊಡುತ್ತದೆ.

ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ. ತಲೆನೋವು ನಿಲ್ಲುತ್ತದೆ. ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು (ಎಲ್ಲಾ ಋತುಗಳಲ್ಲಿ ಅನುಕೂಲವಿದೆ, ಎಲ್ಲಾ ಕಡೆಯಲ್ಲಿ ಸಿಕ್ಕುತ್ತದೆ. ಇದೇ ಎಣ್ಣೆಯನ್ನೇ ಕೇಳಿರಿ.

ತೈಲದ ಕ್ರಯ ದೊಡ್ಡ ಬಾಟ್ಲಿ ರೂ. ೩-೮-೦. ಸಣ್ಣ ಬಾಟ್ಲಿ ರೂ. ೨-೦-೦.

ಪೋಸ್ಟ ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೫-೧೨-೦. ಸಣ್ಣ ಬಾಟ್ಲಿಗೆ ರೂ. ೪-೧೨-೦ (ಪೇಕಿಂಗ ಖರ್ಚು ಮತ್ತು ಅಂಚೆವೆಚ್ಚ ಸೇರಿ) ಮನಿಯಾರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲ ರೇಲ್ವೆ) ಮುಂಬಯಿ, ೧೪.

Tl. K 62899. ಟೆಲಿಗ್ರಾಮ: PRANAYAMA.

TEL: ADD: BLUE YAGAR

Estd. 1919 Phone No. 374

Visit

K. R. K. SHET DIAMOND MART

JEWELLERS & DIAMOND MERCHANTS

OPPOSITE GOVERNMENT COLLEGE,

MANGALORE, S. K.

Prop: K. K. R. Shet.

ಗ್ರಾಮ ಸೇವಿಕೆಯರು ಹಾಗು ಅವರ ಹೊಣೆ

(೬ನೇ ಪುಟದಿಂದ)

ದವಾದ ಮನೆಯನ್ನು ಹೇಗೆ ಕಟ್ಟಬಹುದೆಂಬುದನ್ನು ಗ್ರಾಮ ಸೇವಕ-ಸೇವಕಿಯರು ಮೊದಲು ತಿಳಿದಿರಬೇಕು. ಕಿಟಕಿಗಳಿಲ್ಲದ ದೊಡ್ಡದಾದ ಕತ್ತಲೆಯ ಮನೆ, ಹೋದೊಡನೆಯೇ ದನದ ಕೊಟ್ಟಿಗೆ, ಎಲ್ಲೆಲ್ಲಿಯೂ ಬೆಳಕಿನ ಕಿರಣ ಬರದ ಕೋಣೆ- ಈ ರೂಪ ತೀವ್ರವೇ ಬದಲಾಗಬೇಕು. ಆಹಾರದಷ್ಟೇ ಗಾಳಿಬೆಳಕುಗಳೂ ಅವಶ್ಯವೆಂಬುದನ್ನು ಅವರು ತಿಳಿದುಕೊಳ್ಳಬೇಕು. ಅದರಂತೆ ಮನೆಯು ಜನರ ವಾಸಕ್ಕೆ ಮೂರು--ನಾಲ್ಕು ಕೋಣೆಗಳುಳ್ಳ, ಹಾಗೂ ಮುಂದೆ ಮತ್ತು ಹಿಂದೆ ಅಂಗಳವುಳ್ಳ ಹವೆಯಾಡುವ ಮನೆಯನ್ನು ಅಂದವಾಗಿ ಕಟ್ಟಿಸಬಹುದು. ಇದರಿಂದ ಮುಂಭಾಗದಲ್ಲಿ ಪುರುಷರು ವಿರಾಮವಾಗಿ ಕೂಡುವಂತೆ ಹಿಂಭಾಗದಲ್ಲಿ ಸ್ತ್ರೀಯರೂ ಕುಳಿತುಕೊಳ್ಳಬಹುದು. ಅಲ್ಲದೆ ಸುಂದರವಾದ ಹೂದೋಟವನ್ನು ಮನೆಯ ಮುಂದೆ ಮಾಡಬಹುದು; ಅದರಂತೆ ಹಿಂಭಾಗದಲ್ಲಿ ಕೈದೋಟವನ್ನು ಕೂಡಾ!

***

ಮನೆಯನ್ನು ಹೊಸದಾಗಿ ಕಟ್ಟುವಂತೆ, ಸಾಮೂಹಿಕವಾಗಿ ಹಳ್ಳಿಯನ್ನೇ ಕಟ್ಟಬೇಕಾಗುವದು. ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ದೊಡ್ಡದು. ಈ ನೀರಿನ ಕೊಳೆಯ ಮೂಲಕ ಬಹಳ ಹಳ್ಳಿಗಳು ಚಳಿಜ್ವರಕ್ಕೆ ತುತ್ತಾಗಿವೆ. ವರ್ಷದಲ್ಲಿ ನಾಲ್ಕು ತಿಂಗಳು ಚಳಿಜ್ವರ ಬರಲೇಬೇಕಾದುದೆಂದು ಹಳ್ಳಿಗರ ತಿಳುವಳಿಕೆ! ಈ ನೀರನ್ನು ಸ್ವಚ್ಛಗೊಳಿಸಲು ಪ್ರೋತ್ಸಾಹಿಸುವುದು, ಕಾಲಕಾಲಕ್ಕೆ ಅದರಲ್ಲಿ ಔಷಧಿಯನ್ನು ಹಾಕುವದು ಹಳ್ಳಿಯರಿಗೆ ರೂಢಿಯಾಗಬೇಕು. ಹಳ್ಳಿಗೆ ಒಂದೇ ಆದ ಕೆರೆಯನ್ನು ಸಿಕ್ಕಂತೆ ಉಪಯೋಗಿಸಕೂಡದು. ಕೆರೆಯ ದಂಡೆಯ ಮೇಲೆ ಜನ ಮಲವಿಸರ್ಜನೆಗೆ ಹೋಗುತ್ತಿರುವುದು, ನಸುಕಿನಲ್ಲಿ ಎಲ್ಲಡೆಯಲ್ಲಿಯೂ ಕಂಡುಬರುವ ದೃಶ್ಯ! ಗ್ರಾಮಸೇವಕರು—ಸೇವಕಿಯರು ಈ ಪದ್ಧತಿಗಳನ್ನು ತಡೆಯಬೇಕು.

ಒಕ್ಕಲುತನದ ವಿಚಾರವಾಗಿ ಹಳ್ಳಿಯ ರೈತನಿಗೆ ನಾವು ಹೇಳುವುದೇನಿದೆ? ಎಂದೆನಿಸಿದರೂ ನಮ್ಮ ರೈತನು ನಿರಕ್ಷರಿಯಾದ್ದರಿಂದ ಬೇರೆ ದೇಶದ ಪ್ರಯೋಗಗಳನ್ನು, ಅಥವಾ ನಮ್ಮ ದೇಶದಲ್ಲಿಯೇ ನಡೆದ ಸುಧಾರಣೆಗಳನ್ನು ತಿಳಿಯಲಾರನು. ಸದ್ಯ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಕ್ಷೆಯಲ್ಲಿ ಬರುವ ಒಂದೊಂದು ಗುಂಪಿಗೂ ಒಕ್ಕಲತನದ ವಿವಿಧ ಪ್ರಯೋಗಗಳಿಗಾಗಿ ಒಂದೊಂದು ಪ್ರಯೋಗಶಾಲೆಯಿದೆ. ರೈತರೆಲ್ಲರೂ ಒಟ್ಟಿಗೆ ಕೂಡುವಂತೆ ಹಾಗೂ ಅವರಿಗೆ ಈ ಪ್ರಯೋಗಗಳು ಮನವರಿಕೆಯಾಗುವಂತೆ ಗ್ರಾಮ ಸೇವಕ-ಸೇವಕಿಯರು ಪ್ರಯೋಗಶಾಲೆ ಹಾಗೂ ರೈತರ ಮಧ್ಯೆ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ವರ್ಷದಲ್ಲಿ ಒಕ್ಕಲತನಕ್ಕೆ ಎಷ್ಟು ತಿಂಗಳು ನೀರು ದೊರೆಯುತ್ತದೆ. ದೊರೆತ ನೀರನ್ನು ಹೇಗೆ ಸಂಗ್ರಹಿಸಿಟ್ಟುಕೊಳ್ಳಬಹುದು ಇಲ್ಲವೆ ನೀರಿನ ಕೊರತೆಯನ್ನು ಬೇರೆಯಾವ ಮಾರ್ಗದಿಂದ ಹೋಗಲಾಡಿಸಲು ಸಾಧ್ಯವಿದೆ?-ಇವುಗಳನ್ನೆಲ್ಲ ಕುರಿತು ಯೋಚಿಸಿ ಮಾರ್ಗವನ್ನು ಕಂಡು ಹಿಡಿಯಬಹುದಾಗಿದೆ. ಅನಂತರ ಒಕ್ಕಲತನಕ್ಕೆ ಅವಶ್ಯಕವಾದ ಗೊಬ್ಬರವನ್ನು— ಸತ್ವವುಳ್ಳ ಗೊಬ್ಬರವನ್ನು—ತಯಾರಿಸುವುದನ್ನೂ ಗ್ರಾಮಸೇವಕರು ಯಶಸ್ವಿಯಾಗಿ ತೋರಿಸಿಕೊಡಬೇಕು. ಇದರಿಂದ, ಸದ್ಯ ಭಾರತದಲ್ಲಿ ಬೆಳೆಯಬಹುದಾದ ಆಹಾರ ಧಾನ್ಯದಲ್ಲಿ ಮೂರನೆಯ ಭಾಗ ಮಾತ್ರ ಬೆಳೆಯುತ್ತಿರುವ ಕೊರತೆಯನ್ನು ನಿವಾರಿಸಬಹುದು.

ಭಾರತದಲ್ಲಿಯ ಒಕ್ಕಲಿಗನು ತನ್ನ ದುಡಿಮೆಯನ್ನು ಆಲಸ್ಯವಿಲ್ಲದೆ, ನಿಯಮಿತವಾಗಿ ಮಾಡಿದರೆ ಅವನ ಹುಟ್ಟುವಳಿ ಎಷ್ಟೋ ಹೆಚ್ಚಬಹುದು. ಒಕ್ಕಲತನದ ದುಡಿಮೆಯಿಲ್ಲದೆ ಸರಾಸರಿ ೧೫೦ ದಿನಗಳು ಅವನ ಪಾಲಿಗೆ ಕಳೆದುಹೋಗುತ್ತವೆ. ಈ ಅವಧಿಯಲ್ಲಿ ಬೇರೆ ಗುಡಿಕೈಗಾರಿಕೆಗಳನ್ನೇನಾದರೂ ಮಾಡಿದರೆ, ಅವನ ವಾರ್ಷಿಕ ಉತ್ಪನ್ನವೂ ಹೆಚ್ಚುವುದು. ಹಗ್ಗ ಹೊಸೆಯುವದು, ಚಾಪೆ ಹೆಣೆಯುವುದು, ಕಲ್ಲು ನಾರನ್ನು ಸಿದ್ಧಗೊಳಿಸುವುದು—ಇಂತಹವೇ ಕೈಗಾರಿಕೆಗಳು ಅಲ್ಲಿ ದೊರೆಯಬಹುದಾದ ಕಚ್ಚಾ ಮಾಲನ್ನು ಅವಲಂಬಿಸಿರುತ್ತವೆ. ಪುರುಷರ ಜೊತೆಗೆ, ಸರಿಸಮನಾಗಿ ಸ್ತ್ರೀಯರೂ ಒಕ್ಕಲುತನ ಕೈಗಾರಿಕೆಗಳಲ್ಲಿ ನೆರವಾಗಬಹುದು. ಮನೆಯಲ್ಲಿ, ಎಂಟು ವರುಷದ ಮಗಳು ರೊಟ್ಟಿ ಒಯ್ಯಲಿಕ್ಕೂ, ಮನೆಯಲ್ಲಿ ಚಿಕ್ಕ ಮಗುವನ್ನೆತ್ತಿ ಆಡಿಸಲಿಕ್ಕೂ ನೆರವಾಗುತ್ತಾಳೆ, ನಿಜ. ಅವಳ ಜೀವನದ ಭವಿಷತ್ತಿನ ದೃಷ್ಟಿಯಿಂದ ಶಾಲೆಯ ಪಾಠಗಳನ್ನು ಕಲಿಯಲು ಒಂದೆರಡು ತಾಸು ಅವಳಿಗೆ ಅವಕಾಶಕೊಡಬೇಕು ಎಂಬ ಮನಸ್ಸು ತಾಯಿ-ತಂದೆಗಳಿಗಿರಬೇಕು. "ಶಾಲೆ ಕಲಿತರೇ ಸಂಸಾರ ಮಾಡಲು ಬರುವುದೇ?", ಎಂಬ ಅವರ ಪ್ರಶ್ನೆ ಅಡಗಬೇಕು.

ಗ್ರಾಮಸೇವಕ ಸೇವಕಿಯರು ಹಳ್ಳಿಗರೊಡನೆ ಒಂದಾಗಿ ಅವರ ವಿಶ್ವಾಸವನ್ನು ಗಳಿಸಬೇಕು. ಅವರ ಸಮಸ್ಯೆಗಳಿಗೆ ತಾವು ಮಾರ್ಗದರ್ಶಕರೆಂಬ ಭಾವನೆಯಿಂದಲ್ಲ, ಅವರೆ ಅವರ ಹಿತೈಷಿಯಂತೆ, ಅವರ ಪ್ರಶ್ನೆಗಳೇನಿವೆ, ಕೊರತೆಗಳನ್ನು ಹೇಗೆ ನಿವಾರಿಸಬಹುದು ಎಂಬುದನ್ನು, ಅವರಿಗೇ ಅರಿವಾಗುವಂತೆ ತಿಳಿಸಿಕೊಡಬೇಕು. ಊರಿನ ಹಿರಿಯರ ಹಾಗೂ ಗ್ರಾಮಸ್ಥರ ವಿಶ್ವಾಸದ ಜೊತೆಗೆ, ಕಿರಿಯರ ವಿಶ್ವಾಸವನ್ನೂ ಗ್ರಾಮ ಸೇವಕ-ಸೇವಕಿಯರು ಇದರಿಂದ ಗಳಿಸಬಹುದು. ಹಳ್ಳಿಯ ಧಾರ್ಮಿಕ ಉತ್ಸವಗಳಲ್ಲಿ, ಜಾತ್ರೆಯಲ್ಲಿ, ವ್ಯವಸ್ಥೆಯನ್ನಿಟ್ಟು, ಚಿತ್ರಪಟಗಳ ಮೂಲಕ ಒಕ್ಕಲಿಗರಿಗೆ ಮನೋರಂಜನೆಗ ಜೊತೆ ಗೂಡಿಸಿ ಪಾಠವನ್ನೂ ಹೇಳಿ, ಗ್ರಾಮ ಸೇವಕ-ಸೇವಕಿಯರು ತಮ್ಮ ಆಪ್ತಬಂಧು—ಭಗಿನಿಯರೆಂಬ ಭಾವನೆಯನ್ನು ಅವರಲ್ಲಿ ಬೆಳೆಸಬೇಕು.

ಗ್ರಾಮ ಸೇವಕ-ಸೇವಕಿಯರ ಪ್ರಾಮಾಣಿಕತೆಯ ಬಗ್ಗೆ ಒಂದು ಸಲ ವಿಶ್ವಾಸವುಂಟಾದರೆ, ಹಳ್ಳಿಗರು ಅವರಿಗಾಗಿ ಜೀವ ಕೊಡಲೂ ಸಿದ್ಧರು!

ಮೈಸೂರು ಟೈಪ್ ಫೌಂಡ್ರಿ,

ಬೆಂಗಳೂರು-2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.

ಇಂದೇ ವಿವರಗಳಿಗೆ ಬರೆಯಿರಿ:—

ಮೆನೇಜರ್

THE MYSORE TYPE FOUNDRY

LETTER FOUNDERS

GANDHI NAGAR, BANGALORE-2

ಸ್ಥಾಪನೆ: 1935.

❖ ಸರ್ವ ವಿಧದ ಇಲೆಕ್ಟ್ರಿಕ್ ಸಾಮುಗ್ರಿಗಳಿಗೂ

❖ ನೀರಿನ ಪಂಪು ಸೆಟ್ಟುಗಳಿಗೂ ❖ ನಾಜೂಕಾದ ಫಿಟ್ಟಿಂಗ್ ಕೆಲಸಗಳಿಗೂ

❖ ಧ್ವನಿವಾಹಕ (ಲೌಡ್ ಸ್ಪೀಕರ್) ಯಂತ್ರಕ್ಕೂ

ನಮ್ಮನ್ನು ವಿಚಾರಿಸಿರಿ.

ಉಡುಪಿ ಇಲೆಕ್ಟ್ರಿಕ್ ಸ್ಟೋರ್ಸ್

ಚರ್ಚ್‌ರೋಡ್, ಉಡುಪಿ.

●

ಮರದ ಸಕಲ ಬಗೆಯ ಆಕರ್ಷಕ ಸಾಮಗಾರಿಗೆ

ಉಡುಪಿ ಭಾರತ್ ಉಡ್ ಇಂಡಸ್ಟ್ರೀಸ್

ಚರ್ಚ್‌ರೋಡ್, ಉಡುಪಿ.

ಇವರನ್ನು ಸಂದರ್ಶಿಸಿರಿ, ಇಲ್ಲವೇ ಪತ್ರವ್ಯವಹಾರ ನಡೆಸಿರಿ.

Telegrams: "PEACE"   Phone: 358

Comfortable Boarding Western Style.
Healthy Lodging Indian Fashion.

HOTEL SWASTIK, LTD.,

(IN THE SWASTIK LODGE)

(INCORPORATED IN INDIA. LIABILITY OF MEMBERS LTD.,)

FALNIR ROAD :: MANGALORE-1.

NON-VEGETARIAN SECTION OPENED.

Our "NATIONAL HALL" is let on rent for Public Functions.

ನಮ್ಮ 'ನೇಶನಲ್ ಹೋಲ್'ನಲ್ಲಿ ವಿವಾಹಗಳನ್ನು ಜರಗಿಸಿರಿ.

ಹೋಟೆಲ್ ಸ್ವಸ್ತಿಕ್ ಲಿಮಿಟೆಡ್.

ಜಿಲ್ಲೆಯ ಅತ್ಯುನ್ನತ ಸೌಕರ್ಯ ಸದನ

ಫಳ್ನೀರ್ ರಸ್ತೆ, **ಮಂಗಳೂರು-1.**

In the Hoary past

HANUMAN transported
'Meru' Mountain & saved the life of Laxmana

And Today

"HANUMAN"

transports thousands of passengers daily from all walks of life

Telephone | 19 Managing Director.
| 19A Works Manager.

Telegrams: 'HANUMANCO'

THE HANUMAN TRASPORT CO., LTD.
Post Box No. 27, **UDIPI, S.INDIA.**

Silver Jubilee Year 1955

38
ವರುಷಗಳಿಂದಲೂ
ಅತ್ಯುತ್ತಮವೆಂದು ಹೆಸಗೊಂಡ

GRAMS: "MASCO"

ESTD. 1917

555
ಸಾಬೂನು

INC. 1940

PHONE: 214

NO 555 BAR SOAP

ತಯಾರಕರು
ಮಲ್ಯಾ ಸೋಪ್ ವರ್ಕ್ಸ್ ಲಿಮಿಟೆಡ್
ಮಂಗಳೂರು.

ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ
ಇವರ

ನವಜೀವಾತು

(ರಜಿಸ್ಟರ್ಡ್)

ಎಂಬ **ಸೂತಿಕಾ ರಸಾಯನ**

•

ಹೆತ್ತ ಹೆಮ್ಮಕ್ಕಳಿಗೊಂದು ವರ ಪ್ರಸಾದ

ದೇಹದಲ್ಲಿ ಪುಷ್ಟಿಯನ್ನೂ ಯೌವನದ ಕಾಂತಿಯನ್ನೂ ಉತ್ಪಾದಿಸಿ, ವೃದ್ಧಿಗೊಳಿಸುವದು.

•

ಹೆಚ್ಚಿನ ಮಾಹಿತಿಗೆ:—

ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಯಂ.
"ಗೋಪಾಲ ಭೇಷಜಾಶ್ರಮ"
ಕದಿರೆ, ಮಂಗಳೂರು-2

ಉಡುಪಿಯಲ್ಲಿ ಹಲವಾರು ವರ್ಷಗಳಿಂದ ಪ್ರತಿಯೊಂದು ವಿಷಯದಲ್ಲಿಯೂ ಹೆಸರು ಪಡೆದ ಹೋಟೆಲ್.

ನ್ಯೂ ರೋಯಲ್ ಕೆಫೆ,

ಬೋರ್ಡಿಂಗ್ & ಲಾಜಿಂಗ್
ಸಂತೆಕಟ್ಟೆ, **ಉಡುಪಿ,** ದ. ಕ.

ನಗರದ ಕೇಂದ್ರ ಸ್ಥಾನದಲ್ಲಿದ್ದು, ಬಸ್ ಸ್ಟ್ಯಾಂಡಿಗೂ, ಶ್ರೀಕೃಷ್ಣ ಮಠಕ್ಕೂ, ಸಿನೇಮಾ ಮಂದಿರಕ್ಕೂ ಅತೀ ಸಮೀಪದಲ್ಲಿದ್ದು ಹೋಗಿ ಬರಲು ಅನುಕೂಲವಿದೆ.

ಶುಚಿ-ರುಚಿಯ ತಿಂಡಿ ಪಾನೀಯಗಳಿಗೆ ಸುವಿಖ್ಯಾತವಾಗಿದೆ.

ಇತ್ತೀಚೆಗೆ ಊಟದ ದರವನ್ನೂ ಲಾಜಿಂಗ್ ಬಾಡಿಗೆಯನ್ನೂ ಇಳಿಸಲಾಗಿದೆ.

ಸಂದರ್ಶಿಸಿ ಸಂತೃಪ್ತರಾಗಿರಿ!

ವಿ. ಸೂ: ಶಾಲಾ ಮಕ್ಕಳಿಗೂ ಕಾಯಂ ಊಟದವರಿಗೂ ರಿಯಾಯತಿ ದರವನ್ನು ತೋರಿಸಲಾಗುವುದು.

ಎಂ. ಎನ್. ಭಟ್,
ಪ್ರೊಪ್ರೈಟರ್.

ಪ್ರಗತಿಪಥದಲ್ಲಿ ಸಾಗುತ್ತಿರುವ ಪ್ರಶಂಸನೀಯವಾದ ನಿಮ್ಮದೇ ಸಂಸ್ಥೆ!--

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.



1954ನೇ ದಶಂಬರ 31ಕ್ಕೆ ಕೊನೆಗೊಳ್ಳುವ ತ್ರೈವಾರ್ಷಿಕ
ಆರನೆ ಮೌಲ್ಯ ನಿರ್ಧಾರದಲ್ಲಿ
ರೂ. 2,13,862 ಮಿಗಿತೆಯಾಗಿ ನಿರ್ಣಯಿಸಲಾಗಿದೆ.

ಅಲ್ಲದೆ ವರ್ಷ ಒಂದರ
ಲಾಭಸಹಿತ ಜೀವಾವಧಿ ವಿಮಾ ಪಾಲಿಸಿಗಳ ಮೇಲೆ ರೂ. 1000/-ಕ್ಕೆ ರೂ. 14/-
ಲಾಭಸಹಿತ ಅವಧಿ ವಿಮಾ ಪಾಲಿಸಿಗಳ ಮೇಲೆ ರೂ. 1000/-ಕ್ಕೆ ರೂ. 12/-
ಈ ಪ್ರಕಾರ ಹಿಂದಿನಿಂದ ಕೂಡಿಕೊಳ್ಳುವ ಬೋನಸ್ಸು ಕೊಡಬಹುದೆಂದು
ಆಕ್ಚ್ಯುವರಿಯವರು ಶಿಫಾರಸು ಮಾಡಿದ್ದಾರೆ.

ದಕ್ಷಿಣ ಕನ್ನಡ, ಹಾಗೂ ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲೆಲ್ಲಾ
ಸಮರ್ಥರಾದ ಪ್ರಭಾವಿ ಏಜಂಟರು ಬೇಕು.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಚೇರಿ: ಪೊಪ್ಯುಲರ್ ಕಟ್ಟಡ, ಮಂಗಳೂರು —1.

ಉಡುಪಿಯ ಆಫೀಸು:
ತೆಂಕಪೇಟೆ, ಉಡುಪಿ.

ಇನ್ಸ್‌ಪೆಕ್ಟರರ ಆಫೀಸು:
ಕುಂದಾಪುರ.

The

Popular Insurance Company Ltd.

H. O: POPULAR BUILDINGS,

MANGALORE-1.

Regd. No. M. 3618
LICENCE NO. 31
Licensed to Post without Prepayment

GOLDEN JUBILEE YEAR: 1956.

ನಮ್ಮ ರಾಷ್ಟ್ರದ ಬೇಂಕಿಂಗ್ ಕ್ಷೇತ್ರದಲ್ಲಿ
50 ವರುಷಗಳ ನಮ್ಮ ಪ್ರಶಂಸನೀಯ ಸೇವೆ!

26-1-1956

ನಮ್ಮ ರಾಷ್ಟ್ರದ **6**ನೇ ಪ್ರಜಾರಾಜ್ಯ ವಾರ್ಷಿಕೋತ್ಸವ ದಿನಾಚರಣೆಯಂದು,
ನಮ್ಮ ರಾಷ್ಟ್ರಕ್ಕೆ ಇನ್ನೂ ಅಧಿಕ ಪ್ರಮಾಣದಲ್ಲಿ ಬೇಂಕಿಂಗ್ ಸೇವೆಯು
ನಮ್ಮಿಂದ ಸಲ್ಲುವಂತಾಗಲೆಂದು ನಾವು ಆಶಿಸುತ್ತೇವೆ!

ದಿ ಕೆನರಾ ಬೇಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಬೇಂಕು ಸ್ಥಾಪಿಸಲ್ಪಟ್ಟ ವರುಷ: **1906**

ಬೇಂಕು ಈಗ ದಾಟುತ್ತಲಿರುವ ವರುಷ: **1956**

ನಾವು — ಅಂದು ಮತ್ತು ಇಂದು:

	1906 (ದಿನಾಂಕ 31-12-1906ರಂದು)	1955 (ದಿನಾಂಕ 30-6-1955ರಂದು)
ತೆತ್ತು ಬಂದ ಭಂಡವಾಳ	ರೂ. 5,000	ರೂ. 20.00.000
ಕ್ಷೇಮ ನಿಧಿಗಳು	ರೂ.	ರೂ. 11.25.000
ಠೇವಣಾತಿಗಳು	ರೂ.	ರೂ. 3.88.59.000
ಕೊಟ್ಟ ಸಾಲಗಳು	ರೂ.	ರೂ. 1.75.75.000
ವ್ಯವಹಾರದಲ್ಲಿರುವ ಒಟ್ಟು ಮೊಬಲಗು	ರೂ. 5,000	ರೂ. 4.89.02.000

(ಸಾವಿರ ರೂಪಾಯಿಗಳಿಗೆ ಸರಿಯಾಗಿ ಮತ್ತು ಲೆಕ್ಕ ಪರಿಶೋಧನೆಗೆ ಒಳಪಟ್ಟು)

ಮದ್ರಾಸು, ಆಂಧ್ರ, ಮೈಸೂರು, ಮುಂಬಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ
ಪಸರಿಸಿರುವ ನಮ್ಮ **42** ಶಾಖೆಗಳ ಮೂಲಕ ಎಲ್ಲಾ ವಿಧದ ಆಧುನಿಕ
ಬೇಂಕಿಂಗ್ ವಹಿವಾಟುಗಳನ್ನು ನಾವು ನಡೆಸುತ್ತೇವೆ.

HALF A CENTURY OF BANKING SERVICE

The Canara Banking Corporation, Ltd.

Head Office: **UDIPI, S. INDIA.**

Edited, Printed & Published by K. H. Shetty at the Navayuga Press, Udipi, S. Indi

REGD. NO. M. 5015

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 2—2—1956

ಸಂಚಿಕೆ ೨೨
NO. 22

ಪ್ರದೇಶಗಳ ಹೊಸ ಕಲ್ಪನೆ

ಜನತೆಯ ಮುಂದೆ ಈಗ ರಾಜ್ಯಗಳ ಪುನಾರಚನೆಯ ಪ್ರಶ್ನೆಯು ಹಲಗಾಲದಿಂದಿದ್ದಂತೆಯೇ "ಪ್ರದೇಶ"ಗಳ ಕಲ್ಪನೆಯೊಂದು ಅಸ್ಪಷ್ಟ ರೂಪದಲ್ಲಿ ಬಂದು ನಿಂತಿದೆ. ಶ್ರೀ ರಾಜಗೋಪಾಲಾಚಾರಿಯವರಂಥ ಶ್ರೇಷ್ಠ ಧುರೀಣರು ಬಿಹಾರ ಮತ್ತು ಬಂಗಾಳಗಳ ವಿಲಯನದ ಕುರಿತು ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳು ಹೊರಡಿಸಿದ ಹೇಳಿಕೆಯನ್ನು—ಮತ್ತು ತತ್ಪರಿಣಾಮವಾಗಿ ರೂಪುಗೊಳ್ಳಬಹುದಾದ ಪೂರ್ವ ಪ್ರದೇಶವನ್ನು—ಅತಿರೇಕ ಭಾಷಾಭಿಮಾನದ ಕಾಳಾಹಲದ ಬಳಿಕ ಎದ್ದು ಬಂದ ಅಮೃತ ಕುಂಭ ಎಂದು ಕರೆಯುವಷ್ಟು ಮುಂದೆ ಹೋಗಿದ್ದಾರೆ!

ಬಿಹಾರ ಮತ್ತು ಬಂಗಾಳ ರಾಜ್ಯಗಳ ಮುಖ್ಯ ಮಂತ್ರಿಗಳ ಹೇಳಿಕೆಯು ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಇಡಿಯಾಗಿ ಪುನರಾವಲೋಕಿಸುವಷ್ಟು, ಮತ್ತು ಹೊಸ ನೆಲೆಯಿಂದ ನೋಡುವಷ್ಟು ಪ್ರಭಾವಿಯಾಗಿದೆ ಎಂದು ಧುರೀಣರು ಭಾವಿಸಿದ್ದಾರೆ. ಪರಿಣಾಮದಲ್ಲಿ ಒಂದಕ್ಕಿಂತ ಹೆಚ್ಚು ಪ್ರಧಾನ ಭಾಷೆಯಾಡುವ ಜನ ಸಮುದಾಯದಿಂದ ಕೂಡಿದ "ಪ್ರದೇಶ"ಗಳ ರಚನೆಯ ಕುರಿತು ಮಾತುಕತೆಗಳೀಗ ನಡೆಯತೊಡಗಿವೆ. ನಿರ್ದಿಷ್ಟವಾದ ಸೂಚನೆಗಳ ಮತ್ತು ವಿವರವಾದ ವಿಧಾನಗಳ ಅಭಾವವಿದ್ದರೂ ಸಹ ಧುರೀಣರು ದಕ್ಷಿಣ ಪ್ರದೇಶ, ಪಶ್ಚಿಮ ಪ್ರದೇಶ ಎಂದು ಮುಂತಾಗಿ ಭಾರತದ ಹೊಸ ನಕ್ಷೆಯನ್ನು ಬರೆಯುವ ಸಾಧ್ಯಾಸಾಧ್ಯತೆಯ ವಿಚಾರದ ಕಡೆಗೆ ಆಕರ್ಷಿಸಲ್ಪಟ್ಟಿರುವುದು ವ್ಯಕ್ತವಾಗಿದೆ.

ಕಾಂಗ್ರೆಸಿಗರೇ ಹೀಗೆ ಮನಸ್ಸನ್ನು ಕೊನೆಯ ಕ್ಷಣದಲ್ಲಿ ಬದಲಾಯಿಸಿರುವಂತೆ ತೋರುವುದು ಸ್ಪಷ್ಟ. ನೆಹರುಗಳ ಬೆಂಬಲ, ರಾಜಾಜಿಯ ಆಶೀರ್ವಾದ, ಮತ್ತಿತರ ತುಂಡು ಮುಖಂಡರ ಸ್ವಾಗತಗಳಿಂದಾಗಿ ಪ್ರದೇಶಗಳ ರಚನೆಯು ಎಲ್ಲ ಅನರ್ಥಗಳಿಗೂ ಔಷಧವೆಂದು, ಗಂಡಾಂತರಗಳನ್ನು ನಿವಾರಿಸಬಲ್ಲ ಪ್ರತಿಬಂಧಕೋಪಾಯವೆಂದು ಜನರ ಮುಂದೀಗ ಡಂಗುರ ಹೊಡೆಯಲು ಕೆಳಅಂಚಿನವರು ಸಿದ್ಧರಾಗಬೇಕಾಗಿ ಬಂದಿದೆ. ಇಷ್ಟರವರೆಗೆ ಕಟ್ಟಿಕೊಂಡು ಬಂದಿದ್ದ ವಿಶ್ವಾಸವು ಕೇವಲ ಕುರುಡು ಸ್ವರೂಪದ್ದೆಂದೂ ಈಗಷ್ಟೇ ಬಿಹಾರ—ಬಂಗಾಲ ಮುಖ್ಯ ಮಂತ್ರಿಗಳ ಸಂಯುಕ್ತ ಪ್ರಕಟಣೆಯ ದೆಸೆಯಿಂದ ಸತ್ಯದರ್ಶನವಾಗಿದೆಯೆಂದೂ ಜನತೆ ಈ ಅಪೂರ್ವ ಮಾರ್ಗದರ್ಶಕರ ಬೆನ್ನು ಹತ್ತಿ ಸಾಗಬೇಕೆಂದೂ ಹೇಳುತ್ತಿರಬೇಕಾದ ದಿನವಿದು!

ದೂರದರ್ಶಿಗಳಿಗೆ ನೆಹರುಗಳು ವಲಯಗಳ ರಚನೆಯ ಕುರಿತು ಸೂಚನೆ ಮುಂದಿಟ್ಟಾಗ ಮತ್ತು ಕೆಲವು ಧುರೀಣರು ಈ ವಲಯ ಮಂಡಳಗಳ ಸ್ವರೂಪವು ಸಲಹೆ ನೀಡುವಷ್ಟಕ್ಕೆ ಪರಿಮಿತವಾಗಿರದೆ ಕಾರ್ಯನಿರ್ವಾಹಕ ಮಜಲನ್ನೂ ವ್ಯಾಪಿಸಬೇಕೆಂದು ಹೇಳಿದಾಗ—ಇದು ಇಷ್ಟಕ್ಕೆ ನಿಲ್ಲದೆ ಮುಂದರಿದೀತು ಎಂಬ ಶಂಕೆ ಉಂಟಾಗಿತ್ತೆಂದು ಈಗ ಹೇಳದಿರಲಾಗುವುದಿಲ್ಲ. ಈ ಶಂಕೆಯು ನಿಜವಾಗಿ ಪರಿಣಮಿಸಿದೆ—ಜನರು ಒಂದಕ್ಕಿಂತ ಹೆಚ್ಚು ಪ್ರಧಾನ ಭಾಷೆಗಳುಳ್ಳ ರಾಜ್ಯಗಳ ರಚನೆಗೆ ಅನುಮೋದನೆ ಕೊಡಲಿಕ್ಕಿಲ್ಲ ಎಂಬ ಭಯದಿಂದಾವೃತರಾಗಿದ್ದ ನೆಹರುಗಳು ಆರ್ಥಿಕ ಪುನಾರಚನೆ ಮತ್ತು ಅಭಿವೃದ್ಧಿ ಪ್ರಯತ್ನಗಳ ಮಟ್ಟಿಗೆ ತಮ್ಮ ಸೂಚನೆಯ ವಿಸ್ತಾರವನ್ನು ನಿಗದಿ ಮಾಡಿದ್ದರೆ—ಈಗ ಬಿಹಾರ ಮತ್ತು ಬಂಗಾಲದ ಮುಖ್ಯ ಮಂತ್ರಿಗಳು ಎಲ್ಲ ರೀತಿಯಲ್ಲೂ ಹೊಂದಿಕೊಂಡು ಸಾಗಬೇಕಾಗಿ ಬರುವ ರೀತಿಯಲ್ಲಿ ನಿರ್ಧಾರ ಮಾಡಿದ್ದಾರೆ!

ಕಮ್ಯುನಿಸ್ಟರು ಈ ಹೊಸ ಪ್ರದೇಶಗಳ ಕಲ್ಪನೆಯನ್ನು "ಹಿಂದಿಟ್ಟ ಹೆಜ್ಜೆ" ಎಂದು ಕರೆದಿರುವುದನ್ನು ಕಂಡು ಅನೇಕ ಕಾಂಗ್ರೆಸಿಗರು ಮತ್ತು ಧುರೀಣರು ಕಿಡಿಯುಗುಳುವುದು ನಿದರ್ಶನಕ್ಕೆ ಬಂದಿದೆ. ಆದರೆ ಇದು ಹಿಂದಿಟ್ಟ ಹೆಜ್ಜೆಯಲ್ಲವಾದರೆ ಬೇರೇನೆಂದು ರಾಜಕೀಯ ಡೊಂಬರಾಟದಲ್ಲಿ ಆಸಕ್ತಿಯಿಲ್ಲದ, ಜನ ಜೀವನವನ್ನು ಸಮೃದ್ಧವಾಗಿಸುವ ಚಿಂತೆಯೊಂದೇ ಇರುವ, ನಿಷ್ಪಕ್ಷಪಾತಿ ನಿರೀಕ್ಷಕರು ಕೇಳುತ್ತಾರೆ. ಕಾಂಗ್ರೆಸಿಗರೂ ಸರಕಾರದವರೂ ಇದನ್ನು ದಯಮಾಡಿ ಕ್ಷಮಿಸಬೇಕು— ಜನತೆಯನ್ನು ಕಡೆಗಣಿಸಿಯೇ ಅವರು ಮುಂದುವರಿಯುವರಾದರೆ, ಅಥವಾ ಪ್ರತಿಪಕ್ಷಗಳವರ ಮಾತಿಗೆ ಬೆಲೆ ಕೊಡುವುದು ಭೂಷಣವಲ್ಲವೆಂದೇ ಅವರ ಭಾವನೆಯಾದರೆ, ಆ ಮಾತು ಬೇರೆ. ಹಾಗಲ್ಲದೆ ಪ್ರಜಾಸತ್ತಾತ್ಮಕ ನಡವಳಿಕೆಯಲ್ಲಿ ವಿಶ್ವಾಸವಿರುವುದು ಹೌದಾದರೆ ಪ್ರದೇಶಗಳ ಕಲ್ಪನೆಗೆ 'ಇಷ್ಟು ಬೇಗ ಒಲಿಯಬಾರದು; ಮಹತ್ವ ಕೊಡಲೂ ಬಾರದು.

ನಮಗೆ ಒಂದಕ್ಕಿಂತ ಹೆಚ್ಚು ಭಾಷೆಗಳು ಪ್ರಧಾನವಾಗುಳ್ಳ ಹೊಸ ಪ್ರದೇಶಗಳ ನಿರ್ಮಾಣ ಏಕೆ ಬೇಕು? ಭಾಷಾಭಿಮಾನವು ರಾಷ್ಟ್ರದ ಪುನಾರಚನೆಯ ಮಂಥನದಲ್ಲಿ ಕಾಣಿಸಿಕೊಂಡ ಹಾಲಾಹಲವಂತೆ! ಹರಹರ! ನೀಲಕಂಠನೇ ಗತಿ!— ಎಂದು ಆರ್ತನಾದ ಗೈಯುತ್ತಿದ್ದಾರಲ್ಲವೇ ಜನರೀಗ? ಎಂದರೆ ಹೌದೆಂದು ಧುರೀಣರಾದವರು ಮುಂಬಯಿಯ ಕಡೆಗೆ, ಕಾಸರಗೋಡಿನ ಕಡೆಗೆ, ಬಳ್ಳಾರಿಯ ಕಡೆಗೆ, ಬೆಳ್ಗಾಂವಿಯ ಕಡೆಗೆ, ಪಂಜಾಬಿನ ಕಡೆಗೆ, ಹೀರ್ಮಾಡಿನ ಕಡೆಗೆ ಕೈಯೆತ್ತಿ ತೋರಿಸುತ್ತಾರೆ. ಅಲ್ಲಿ ನಡೆದುದು ಅನರ್ಥವಲ್ಲವೇ? ಅಲ್ಲಿಯ ಹತ್ಯಾಕಾಂಡ ಅನಿಷ್ಟ ಪ್ರದವಲ್ಲವೆ? ಸೊತ್ತುಗಳ ನಾಶ ಖಂಡನೀಯವಲ್ಲವೆ? ಭಾರತ ಮಾತೆಯ ಮುಖ ಕಳಂಕಿತವಾಗಲಿಲ್ಲವೆ? ಪ್ರಜಾಪ್ರಭುತ್ವದ ಅಪಮಾನವಾಗಲಿಲ್ಲವೆ? ಇದು ಭಾಷಾಭಿಮಾನದ ದುಷ್ಪರಿಣಾಮವಲ್ಲವೆ? – ಎಂದು ಈ ಮುಖಂಡರು ಶಂಖ ಊದುತ್ತಾರೆ.

ನಿಷ್ಪಕ್ಷಪಾತಿಗಳಿಗೆ ಈ ಮಾತುಗಳು ಒಪ್ಪಿಗೆಯೆ? ಮೂಲದಲ್ಲಿಯೇ ನೀವು ತಪ್ಪಿದ್ದೀರಿ ಎಂಬುದೇ ಈ ರಾಜಕೀಯ ವಾದಿಗಳಿಗೆ ಸಾಮಾನ್ಯ ನಿರೀಕ್ಷಕರು ಕೊಡುವ ಉತ್ತರ. ಪ್ರಜಾಪ್ರಭುತ್ವದ ಉನ್ನತ ಸಂಪ್ರದಾಯವನ್ನು ಎತ್ತಿಹಿಡಿಯುವ ಉತ್ಸಾಹವುಳ್ಳ ನೀವು, ಕಾಸರಗೋಡು ಮುಖ್ಯ ತಾಲೂಕಿನಲ್ಲಿರುವ ೩೭ ಪಂಚಾಯತು ಗಳಲ್ಲಿ ೩೪ ಪಂಚಾಯತುಗಳ ಒಮ್ಮತದ ಗೊತ್ತುವಳಿಯನ್ನು ಪುರಸ್ಕರಿಸಿದ್ದೀರಾ? ಮದ್ರಾಸು, ಮೈಸೂರು ರಾಜ್ಯಗಳ ಶಾಸನಾಂಗಗಳೂ ಸಂಸತ್ತಿನಲ್ಲಿ ದಕ್ಷಿಣ ಕನ್ನಡವನ್ನು ಪ್ರತಿನಿಧಿಸುವ ಸದಸ್ಯರೂ ಈ ಜಿಲ್ಲೆಯ ಪ್ರಾತಿನಿಧಿಕ ಸಂಸ್ಥೆಗಳೂ ಕೈಗೊಂಡ ನಿರ್ಣಯವನ್ನು ಗಾಳಿಗೆ ತೂರಿ ನೀವು ಮಾಡಿದ ಅಪಮಾನ ಯಾರದು? ಪ್ರಜಾಸತ್ತೆಯದೋ, ಜನತೆಯದೋ? ಎಂದವರು ಕೇಳಬಯಸುತ್ತಾರೆ.

ಅಡಳಿತ ಇರುವುದು ಯಾರಿಗಾಗಿ? ಜನತೆಗಾಗಿಯೇ ಅಲ್ಲವೆ? ತಮಗೆ ಮಲೆಯಾಳಿ ಪ್ರಭುತ್ವದ ಸಂಪರ್ಕ ಬೇಡವೆಂದೂ! ಕನ್ನಡದೊಡನೆಯೇ ಸಂಬಂಧ ತಮ್ಮದೆಂದೂ ಕನ್ನಡದ ನೆಲಕ್ಕೆ ಒತ್ತಿಕೊಂಡಿರುವ, ಕನ್ನಡದ್ದೇ ಆದ ಭೂಭಾಗದ ಜನರು ಹೇಳುವಾಗ ಅದನ್ನು ಕಡೆಗಣಿಸುವವರು, ಈ ತಪ್ಪಿನ ಪ್ರಾಯಶ್ಚಿತ್ತವಾಗಿ ಚಳವಳವನ್ನು ಎದುರಿಸಬೇಕಾಯಿತು. ಹೊರತು ಭಾಷಾಭಿಮಾನದ ನೆಪ ಇಲ್ಲಿ ಕೇವಲ ಗೌಣ. ಕಳೆದ ಮಹಾ ಚುನಾವಣೆಯಲ್ಲಿ ಒಟ್ಟಾರೆ ನೂರಕ್ಕೆ ನಲ್ವತ್ತಕ್ಕಿಂತ ಸ್ವಲ್ಪ ಮಾತ್ರ ಹೆಚ್ಚು ಜನ ಮತದಾರರ ಬೆಂಬಲದಿಂದ ಆರಿಸಿ ಬಂದ ಪಕ್ಷವೊಂದು ಇಂದು ಅಧಿಕಾರ ಸ್ಥಾನದಲ್ಲಿದ್ದು ಸರಕಾರವನ್ನು ನಡೆಸುವುದು ತಪ್ಪಲ್ಲವಾದರೆ, ಮುಂಬಯಿಯ ೮೮% ಮರಾಠರ ವಾಣಿಗೆ ಬೆಲೆಯಿಲ್ಲವೆಂದು ಹೇಳುವುದರಲ್ಲಿರುವ ನ್ಯಾಯವಾದರೂ ಏನು?

ತಪ್ಪು ನಿರ್ಣಯಗಳನ್ನು ಖಂಡಿಸುವುದು ಜನತೆಯ ಪಾಲಿಗೆ ಬಂದ ಅಧಿಕಾರ—ಅದು ಪ್ರಜಾಸತ್ತಾತ್ಮಕ ಸ್ವರೂಪವನ್ನೇ ಹೊಂದಿದೆ. ಜನತೆಯ ಈ ಚಳವಳದಲ್ಲಿ ಕೆಲವು ಅನಪೇಕ್ಷಿತ ದುಷ್ಟ ಶಕ್ತಿಗಳು ಆಶ್ರಯ ಪಡೆಯಲೆತ್ನಿಸಿ

(೧೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ.ಭಾರತ.

ಮನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ಮನೆಯೇ ಅತ್ಯುತ್ತಮ ಸ್ಥಾನ. ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅದು ಅತ್ಯುತ್ತಮ ಸ್ಥಳವಾಗದು. ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ಆರಂಭಿಸುವುದು ಅದೆಷ್ಟು ಜಾಣ್ಮೆಯ ಕಾರ್ಯವಾಗದು! ಸ್ವಲ್ಪವೇ ಹಣದಿಂದ ನಮ್ಮಲ್ಲಿ ಲೆಕ್ಕ ಆರಂಭಿಸಬಹುದು. ನಮ್ಮ ನೌಕರರು, ನಾವು ನಿಮಗೆ ಸಹಕರಿಸಬಹುದಾದ ಅನೇಕ ರೀತಿಗಳನ್ನು ಸೂಚಿಸಲು ಸಿದ್ಧರಾಗಿರುವರು.

ಚಲಾವಣೆ ಭಂಡವಾಳ ರೂ. ೭,೫೦,೦೦,೦೦೦ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India.

ಅನ್ಯಾಯದ ವಿರುದ್ಧ ಅಹಿಂಸಾತ್ಮಕ ಸತ್ಯಾಗ್ರಹ

ಗಾಂಧಿ ಯುಗದ ಹಿಂದಿನ ಕೆಲವು ವೀರ ಘಟನೆಗಳು

ಭಾರತೀಯ ಇತಿಹಾಸದ ವಿಸ್ತಾರವಾದ ಕ್ಷೇತ್ರದಲ್ಲಿ ಜನರು ಅನ್ಯಾಯದಿಂದ ಕೂಡಿದ ಆಜ್ಞೆಯನ್ನು ಒಪ್ಪಲು ಸಿದ್ಧರಿಲ್ಲದೆ ನಿರಾಕರಿಸಿ, ಮಹಾತ್ಮಾ ಗಾಂಧೀಯವರು ಮುಂದೆ "ಸತ್ಯಾಗ್ರಹ" ಎಂದೇನನ್ನು ಕರೆದರೋ ಆ ಬಗೆಯಲ್ಲಿ ವರ್ತಿಸಿದ ಅನೇಕ ಘಟನೆಗಳು ನೋಡ ಸಿಗುತ್ತವೆ.

ಗಾಂಧೀಜಿಯ ಕಾಲದಲ್ಲಿ ತಿಳಿದುಕೊಂಡಿದ್ದ ಸತ್ಯಾಗ್ರಹದ ಸ್ವರೂಪಕ್ಕಿಂತ ಇವು ಕೆಲಮಟ್ಟಿಗೆ ಭಿನ್ನವಾಗಿದ್ದವು. ಅವುಗಳ ಗಾತ್ರ ಸಣ್ಣದಾಗಿತ್ತಲ್ಲದೆ ಚಟುವಟಿಕೆಯು ಬಹಳ ಮಿತವಿದ್ದಿತು

ಈಗ ಕಳೆದ ಶತಮಾನದ ಉತ್ತರಾರ್ಧದಲ್ಲಿ ಭಾರತೀಯರು ಕೈಗೊಂಡ ಸತ್ಯಾಗ್ರಹ ಚಳವಳದ ಕೆಲವು ಉದಾಹರಣೆಗಳನ್ನು ಅವಲೋಕಿಸೋಣ!

ಗೇಣಿ ನಿರಾಕರಣೆ

ಬಂಗಾಳದಲ್ಲಿ ಲಾರ್ಡ್ ಕಾರ್ನವಾಲೀಸನಿಂದ ರೂಢಿಗೊಳಿಸಲ್ಪಟ್ಟ ಕಾಯಂ ಭೂಕಂದಾಯ ಪದ್ಧತಿಯು ಭೂಮಿಯ ಹಿಡುವಳಿದಾರರ ಪಾಲಿಗೆ ಆಂಗ್ಲ ಪ್ರಭುತ್ವದ ಮಹಾ ಕಾಣಿಕೆಯಾಗಿ ಭಾವಿಸಲ್ಪಡುತ್ತಿದ್ದಿತು. ಈ ಕಾಯಿದೆಯು ಭೂಕಂದಾಯವನ್ನು ನಿಶ್ಚಿತಗೊಳಿಸಿತ್ತಲ್ಲದೆ ಅಗಾಗ್ಗೆ ಏರಿಸಲ್ಪಡುವ ಭೀತಿಯನ್ನು ಇಲ್ಲವಾಗಿ ಮಾಡಿತು.

೧೮೫೭ರಲ್ಲಿ "ಸಿಪಾಯಿ ದಂಗೆ" ಎಂದು ಹೆಸರಾದ ಪ್ರಥಮ ಸ್ವರಾಜ್ಯ ಕ್ರಾಂತಿಯು ನಡೆದು ವಿಫಲಗೊಂಡ ಬಳಿಕ, ಭೂಮಿಯ ಉತ್ಪನ್ನಗಳ ಬೆಲೆಯು ಸಾಮಾನ್ಯವಾಗಿ ಹೆಚ್ಚತೊಡಗಿತು. ಆದರೆ ಇದಕ್ಕನುಗುಣವಾದ ರೀತಿಯಲ್ಲಿ ಗೇಣಿಯ ಏರಿಕೆಯಾಗಲೀ ಭೂಕಂದಾಯದಲ್ಲಿ ಹೆಚ್ಚಳವಾಗಲೀ ಇಲ್ಲದ ದೆಸೆಯಿಂದ ಸಾಗುವಳಿದಾರ ಒಕ್ಕಲುಗಳು ಒಳ್ಳೆಯ ದಿನಗಳನ್ನು ಕಾಣಹತ್ತಿದರು.

ಕೃಷಿಕರ ಈ "ಅಭ್ಯುದಯ"ವನ್ನು ಭೂಮಾಲಿಕರಿಗೆ ನೋಡಿ, ಲೋಭವನ್ನು ಹತ್ತಿಕ್ಕುವುದಾಗದೆ ಹೋಯಿತು. ಅವರು ಸಾಗುವಳಿದಾರ ಒಕ್ಕಲುಗಳಿಗೆ ಕೃಷಿ ಉತ್ಪನ್ನಕ್ಕೆ ಹೆಚ್ಚು ಬೆಲೆಬರುತ್ತಿರುವ ನೆಪದಿಂದ ಹೆಚ್ಚು ಗೇಣಿಕೊಡಬೇಕೆಂದು ವಿಧಿಸಿದರು.

ಆದರೆ ಹೀಗೆ ಗೇಣಿ ಏರಿಸುವುದಕ್ಕೆ ನ್ಯಾಯವಿರಲಿಲ್ಲ. ಏಕೆಂದರೆ ಯಾವುದೇ ಪರಿಸ್ಥಿತಿಯಲ್ಲಿಯೂ ಭೂಮಾಲಿಕರು ಸರಕಾರಕ್ಕೆ ಹೆಚ್ಚು ಭೂಕಂದಾಯವನ್ನು ಕೊಡಬೇಕಾಗಿರಲಿಲ್ಲ. ಆಂಗ್ಲ ಪ್ರಭುತ್ವದವರು ಈ ಬಗ್ಗೆ ಜ್ಯಾರಿಗೆ ತಂದಿದ್ದ ಶಾಸನದಲ್ಲಿ ಒಂದು ಕೊರತೆ ಮಾತ್ರ ಇದ್ದಿತು. ಶಾಸನವು ಸರಕಾರಕ್ಕೆ ಭೂಮಾಲಿಕರು ಕೊಡಬೇಕಾದ ತೀರ್ವೆಯು ನಿಶ್ಚಿತವಾಗಿದೆ, ಅದನ್ನು ಹೆಚ್ಚಿಸುವ ಪ್ರಮೇಯವಿಲ್ಲ ಎಂದು ಹೇಳುತ್ತಿತ್ತೇ ಹೊರತು, ಸಾಗುವಳಿದಾರ ಒಕ್ಕಲುಗಳು ಕೊಡಬೇಕಾಗಿದ್ದ ಗೇಣಿಯ ಕುರಿತು ಏನನ್ನೂ ಹೇಳಿರಲಿಲ್ಲ.

ಭೂಮಾಲಿಕರು ಈ ಕೊರತೆಯ ದುರುಪಯೋಗವನ್ನು ಪಡೆಯಲು ಆತುರದಾರೆ ಒಕ್ಕಲುಗಳನ್ನು ಹೆಚ್ಚು ಗೇಣಿಯ ಭಾರಕ್ಕೆ ಹೆಗಲು ಕೊಡಲು ಒತ್ತಾಯಿಸಿದರು. ಇದರಿಂದ ನೊಂದುಕೊಂಡ ಬಂಗಾಳದ ಸಾಗುವಳಿದಾರ ಒಕ್ಕಲುಗಳು ಕೊನೆಗೆ ೧೮೭೨ರಲ್ಲಿ "ಗೇಣಿ ವಿರೋಧ" ಚಳವಳವನ್ನು ಪ್ರಾರಂಭಿಸಿದರು.

ಎಲ್ಲ ಸಾಗುವಳಿದಾರರೂ ಒಟ್ಟುಗೂಡಿ ಗೇಣಿ ನಿರಾಕರಣೆಯ ಚಳವಳ ಹೂಡಿದರು; ಅದರ ಪರಿಣಾಮವನ್ನು ಅನುಭವಿಸಲೂ ಸಿದ್ಧರಾದರು. ಬಂಗಾಳದ ಅತಿ ಶಾಂತ ಜಿಲ್ಲೆಯಾದ ಪಾಬ್ನವು ಕೃಷಿಕರ ಕ್ರಾಂತಿ ಕ್ಷೇತ್ರವಾಗಿ ಕಂಗೊಳಿಸಿತು. ರೈತರು ಹೀಗೆ ಹೇಳುತ್ತಿದ್ದರು.—

"ನಾವೇನು ಹೋರಾಡುವುದಿಲ್ಲ; ನಾವು ಹೆಚ್ಚು ಗೇಣಿ ಮಾತ್ರ ಕೊಡುವುದಿಲ್ಲ. ನಾವು ಬೇಸಾಯ ಮಾಡುತ್ತಿದ್ದ ಭೂಮಿಯ ಮೇಲೆ ಮುಂದೆಯೂ ನಮಗೆ ಸಾಗುವಳಿಯ ಅಧಿಕಾರವಿದೆ ಎಂದಿಷ್ಟೆ ಹೇಳುತ್ತೇವೆ. ನಮ್ಮಿಂದ ನೀವು ವಸೂಲುಮಾಡಬಹುದಾದ ಗೇಣಿಯು ನಿಮಗೆ ದಾವೆ ಹೂಡದ ಹೊರತು ದೊರಕಲಾರದು. ಈ ದಾವೆಯನ್ನು ನಾವು ಪ್ರತಿಯೊಂದೂ ಘಟ್ಟದಲ್ಲಿ ಪ್ರತಿವಾದಿ ಸ್ಥಾನದಿಂದ ಆಹ್ವಾನಿಸುತ್ತೇವೆ. ಕಾನೂನು ಬದ್ಧವಾದ ಪ್ರತಿಯೊಂದೂ ರೀತಿಯಲ್ಲಿ, ನೀವು ಅರ್ಜಿ ಮಾಡಿದ ಕೋರ್ಟುಗಳಿಗೆಯಿಂದ ತೀರ್ಪು ಹೇಳುವವರೆಗೆ, ಅಲ್ಲಿಂದ ಅಪೀಲುಮಾಡುವವನ್ನೂ ಮೇಲಕ್ಕೆ ಹೋಗಿ ಅಂತಿಮ ತೀರ್ಮಾನವಾಗುವ ವರೆಗೆ, ನಾವು ದಾವೆಯು ನಿಮಗನುಕೂಲವಾಗದಂತೆ ಪ್ರಯತ್ನಿಸುತ್ತೇವೆ. ನಿಮಗೆ ಅನುಕೂಲವಾಗಿಯೇ ತೀರ್ಮಾನವಾಗುವುದಾದರೂ ನಾವು ಅದು ಬಹಳ ತಡವಾಗುವಂತೆ ಮಾಡುತ್ತೇವೆ. ಈ ನಡುವೆ ನೀವು ಹಾಳಾಗಿ ಹೋಗುತ್ತೀರಿ. ನಮ್ಮ ಮಟ್ಟಿಗೆ, ನಾವೆಷ್ಟು ದುರವಸ್ಥೆ ಹೊಂದಬಲ್ಲೆವೊ ಅಷ್ಟೂ ಸೊರಗುತ್ತೇವೆ; ನೀವು ಹೇಳಿದಷ್ಟು ಗೇಣಿಯನ್ನು ಕೊಡುವುದಕ್ಕಿಂತ ನಮ್ಮಲ್ಲಿರುವ ಕೊನೆಯ ಹಸುವನ್ನು ಸಹ ಮಾರಿ ನಿಮ್ಮ ಅನ್ಯಾಯವನ್ನು ಪ್ರತಿಭಟಿಸುವುದೇ ನಮ್ಮ ಪಾಲಿಗೆ ಹಿತಕರ."

ಇನ್ನೊಂದು ಪ್ರಸಂಗ

ಇದಾದ ಕೆಲವೇ ವರ್ಷಗಳಲ್ಲಿ(೧೮೭೯) ಬಂಗಾಳದ ರೈತರು ಇನ್ನೊಮ್ಮೆ ನೇರವಾದ ಕಾರ್ಯಾಚರಣೆಗಿಳಿದರು. ಈ ಸಲ ಅವರು ನೀಲಿ ತೋಟಗಳ ಐರೋಪ್ಯ ಒಡೆಯರನ್ನು ಪ್ರತಿಭಟಿಸಿದರು. ಬಿಹಾರ ಮತ್ತು ಬಂಗಾಳಗಳಲ್ಲಿ ಕೆಲವು ಉದ್ಯಮಶೀಲ ಐರೋಪ್ಯರು ಬೆಳೆಸಿದ್ದ ನೀಲಿ ತೋಟಗಾರಿಕೆಯ ಹಿನ್ನೆಲೆಯ ಕತೆ ಅತಿ ಹಿಂಸೆ ಮತ್ತು ನೋವಿನಿಂದ ಕೂಡಿದ್ದಿತು.

ಹಣವುಳ್ಳ ಈ ತೋಟಗಾರರು ಅಜ್ಞ ರೈತರನ್ನು ಮೋಸಗೊಳಿಸಿ ಅವರು ಬಹಳ ದೀರ್ಘಕಾಲದ ವರೆಗೆ ನೀಲಿಯ ವ್ಯವಸಾಯವನ್ನು ಕೈಗೊಳ್ಳುವಂತೆ ಮಾಡಿದ್ದರು. ಈ ಸಂಬಂಧದ ಕರಾರುಗಳಿಗೆ ರೈತರ ಸಹಿಯನ್ನು ಐರೋಪ್ಯ ಭಂಡವಳಗಾರರು ಪಡೆದಿದ್ದರು.

ಮುಂದೆ ರೈತರಿಗೆ ನೀಲಿಯ ವ್ಯವಸಾಯವು ಎಷ್ಟಕ್ಕೂ ಲಾಭಕರವಾದುದಲ್ಲವೆಂದು ಮನವರಿಕೆಯಾಯಿತು. ಅವರು ಈ ಸಾಗುವಳಿಯನ್ನು ಬಿಟ್ಟುಗೊಡಲು ಹಾತೊರೆದರು. ಆದರೆ ಕರಾರುಗಳಿಗೆ ಸಹಿ ಹಾಕಿದ ಕಾರಣವನ್ನು ತೋರಿಸಿ ಈ ರೈತರು ನೀಲಿಯ ಸಾಗುವಳಿಯನ್ನೆ ಮುಂದರಿಸಿಕೊಂಡು ಹೋಗುವಂತೆ ಬಲಾತ್ಕಾರವನ್ನು ಮಾಡಲಾಯಿತು; ಹಿಂಸೆಯೂ ನಡೆಯಿತು.

ನೀಲಿಯ ಸಾಗುವಳಿದಾರರ ಸಹನೆಯು ಕೊನೆಗೆ ತೂಕ ತಪ್ಪಿತು. ತಮ್ಮ ಬಿಳಿಯ ಧನಿಗಳ ವಿರುದ್ಧ ಅವರು ಚಳವಳವನ್ನು ಹೂಡಿ ಅನ್ಯಾಯವನ್ನು ಪ್ರತಿಭಟಿಸಲು ಸನ್ನದ್ಧರಾದರು. ಹೆಚ್ಚು ಸಂಖ್ಯೆಯಲ್ಲಿ ಸಾಗುವಳಿದಾರರು ನೀಲಿಯ ವ್ಯವಸಾಯ ಕೈಗೊಳ್ಳಲು ನಿರಾಕರಿಸಿದರು.

ಸಾಗುವಳಿದಾರರು ಕೆಲವೆಡೆ ಹಿಂಸೆಗೆ, ಮತ್ತು ಕೆಲವೆಡೆ ಕಾರ್ಯಾಚರಣೆಗಳಿಗೆ ಬೆಂಕಿ ಕೊಡಲು ಮುಂದಾದರೂ ಒಟ್ಟಿನಲ್ಲಿ ಈ ಚಳವಳ ಶಾಂತವಾಗಿ ನಡೆಯಿತು ಆಗಿನ ವೈಸರಾಯಿಯಾಗಿದ್ದ ಲಾರ್ಡ್ ಕರ್ಜನ್ ಸಹ— ೧೮೫೭ನೇ ವರ್ಷದಲ್ಲಿ ನಡೆದಿದ್ದ ಮಹಾ ದಂಗೆಯನ್ನು ನೋಡಿದ ಅನುಭವದ ಬಲವಿದ್ದೂ—ರೈತರ ಸಂಘಟನೆಯಿಂದ ಕಂಗೆಟ್ಟನು.

"ಸುಮಾರು ಒಂದು ವಾರದ ವರೆಗೆ ದೆಹಲಿಯಲ್ಲಿನ್ನ ದಿನಗಳ ಕರುವಾಯ ನಾನೆಂದೂ ಹೊಂದಿರದಷ್ಟು ಉದ್ವೇಗ ನನ್ನನ್ನು ಆವರಿಸಿತು. ಭಯದಿಂದಾಗಲೀ ಕೋಪದಿಂದಾಗಲೀ ಯಾರಾವರೊಬ್ಬ ತೋಟಗಾರನು ಒಂದೇ ಒಂದು ಗುಂಡನ್ನು ರೈತರ ಮೇಲೆ ಹಾರಿಸುತ್ತಿದ್ದರೆ ಕೆಳಬಂಗಾಳದ ಪ್ರತಿಯೊಂದು ಕಾರ್ಖಾನೆಯೂ ಅಗ್ನಿಗೆ ಆಹುತಿಯಾಗುತ್ತಿದ್ದ ಸಂಭವ ಇದು" ಎಂದು ಈ ದೊರೆಯು ಬರೆಯುವಷ್ಟು ಈ ಹೋರಾಟದ ಸ್ವರೂಪ ಬಲಿಯಿತು.

ಕೆಟ್ಟವರ ವಿರುದ್ಧವಾಗಿ ಸಾಗುವಳಿದಾರರು ಶಾಂತ ರೀತಿಯಲ್ಲಿ ವ್ಯಕ್ತಪಡಿಸಿದ ಪ್ರತಿ ಘಟನೆಯು ಅಧಿಕಾರಿಗಳನ್ನು ಭಯವಿಹ್ವಲಗೊಳಿಸಿತು; ಮತ್ತು ಅವರು ತಲೆ ತಗ್ಗಿಸಲೇ ಬೇಕಾಯಿತು. ಇದರಿಂದ ಪರಿಣಾಮಗೊಂಡ ಜಿಲ್ಲೆಗಳಲ್ಲಿ ಸಂಚರಿಸಿದ ಆಗಿನ ಗವರ್ನರ್ ಸರ್ ಜಾನ್ ಪೀಟರ್ ಗ್ರಾಂಟ್ ಎಲ್ಲೆಲ್ಲಿಯೂ ನೀಲಿ ವ್ಯವಸಾಯವನ್ನು ಕೈಗೊಳ್ಳದಂತೆ ಸರಕಾರದವರೇ ಆಜ್ಞೆ ಹೊರಡಿಸಬೇಕೆಂದು ಬೇಡುತ್ತಿರುವ ರೈತರ ಸಮೂಹವನ್ನು ಕಂಡರು.

"ಗಂಡಸರು, ಹೆಂಗಸರು, ಮಕ್ಕಳು ಎನ್ನದೆ ಸಾವಿರಗಟ್ಟಳೆಯಲ್ಲಿ ನೆರೆದಿದ್ದ ಜನರ ಪ್ರದರ್ಶನವು ಆಳವಾದ ಅರ್ಥವೇನನ್ನೂ ಹೊಂದಿಲ್ಲವೆಂದು ಭಾವಿಸುವುದು ದೊಡ್ಡ ತಪ್ಪಾದೀತು. ಅಷ್ಟು ವಿಶಾಲವಾದ ಪ್ರದೇಶದಲ್ಲಿ ತಮ್ಮ ಉದ್ದೇಶ ಸಾಧನೆಗಾಗಿ ಏಕ ಕಾಲಕ್ಕೆ ಒಗ್ಗಟ್ಟಿನಿಂದ ಸುಸಂಘಟಿತ ರೂಪದಲ್ಲಿ ನೀಲಿಯ ವ್ಯವಸಾಯಗಾರರು ನಡೆಸಿದ ಪ್ರದರ್ಶನವು ಆಳವಾಗಿ ವಿಚಾರಿಸಬೇಕಾದ ವಿಷಯ" ಎಂದು ಈ ಗವರ್ನರರು ಹೇಳುವಂತಾಯಿತು

ದಕ್ಷಿಣ ಭಾರತದಲ್ಲಿ

ಮರುವರ್ಷ ಕೃಷಿಕರ ಅಸಹನೆಯು ದಕ್ಷಿಣದಲ್ಲಿ ವ್ಯಕ್ತವಾಯಿತು. ಇಲ್ಲಿ ಹಿಂಸೆಯ ಚಟುವಟಿಕೆ ಮತ್ತು ಅಹಿಂಸಾತ್ಮಕ ಕಾರ್ಯಾಚರಣೆಗಳು ಒಟ್ಟೊಟ್ಟಿಗೆ ನಡೆದುವೆನ್ನಬಹುದು. ಹಣ ಸಾಲ ಕೊಡುವವರು ಹಾಗು ಭೂಮಾಲಿಕರ ಒತ್ತಾಯದಿಂದ ಕೃಷಿಕರ ಬೆನ್ನು ಮೂಳೆ ಮುರಿದು ಹೋದುದೇ ಇವರ ಹಿನ್ನೆಲೆಯಲ್ಲಿರುವ ಕತೆ.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಯೋಜನೆಗೆ ನೆರವಾಗಬೇಕಾದ ಸಂಶೋಧನೆ

ಔದ್ಯಮಿಕ ವಿಜ್ಞಾನದ ವ್ಯಾಸಂಗಕ್ಕೆ ಪ್ರೋತ್ಸಾಹ

ಸಂಶೋಧನಾತ್ಮಕ ಯೋಜನೆಯು ಭಾರತದಲ್ಲಿ ಪ್ರಾಮುಖ್ಯತೆಯನ್ನು ಗಳಿಸಿದೆ. ಅದರಲ್ಲಿಯೂ ರಾಷ್ಟ್ರೀಯ ಅಭಿವೃದ್ಧಿಗಾಗಿ ಯೋಜನೆಯನ್ನು ಸಿದ್ಧಪಡಿಸುವ ಸನ್ನಿವೇಶದಲ್ಲಿ ಸಂಶೋಧನಾತ್ಮಕ ಯೋಜನೆಯ ಪ್ರಾಮುಖ್ಯತೆ ಹೆಚ್ಚಿದೆ. ಯೋಜನೆಯು ಜೀವನಕ್ಕೆ ಅವಶ್ಯಕವೆಂದು ಪರಿಗಣಿಸುವ ನನಗೆ ಈ ವಿಷಯವು ಹೆಚ್ಚು ಆಸಕ್ತಿಯುತವಾಗಿದೆ. ಯೋಜನೆಯ ಮೂಲಕ ವಿಜ್ಞಾನದ ಸಾಮಾಜಿಕ ಉದ್ದೇಶವು ಪೂರ್ಣವಾಗಿ ಈಡೇರುವುದೆಂಬ ವಿಷಯದಲ್ಲಿ ನನಗೆ ಮನವರಿಕೆಯುಂಟಾಗಿದೆ.

ಔದ್ಯಮಿಕ ವಿಜ್ಞಾನ

ವಿಜ್ಞಾನದ ಯೋಜನೆಯ ಪ್ರಾಮುಖ್ಯತೆಯನ್ನು ಫ್ರಾನ್ಸಿಸ್ ಬೇಕನ್ನಿನ ಕಾಲದಿಂದಲೂ ದಾರ್ಶನಿಕರು ಅಂಗೀಕರಿಸಿದ್ದಾರೆ. ಬೇಕನ್ನಿನ ಕಲ್ಪನೆಯಿಂದ ಜಗತ್ತಿನಾದ್ಯಂತವೂ ಪಂಡಿತರ ಸಂಘಗಳ ಸ್ಥಾಪನೆಯ ಬಗ್ಗೆ ಚಳವಳಿ ನಡೆಯಿತು. ತತ್ಪರಿಣಾಮವಾಗಿ ಲಂಡನ್ನಿನ ರಾಯಲ್ ಸೊಸೈಟಿಯು ಮೊಟ್ಟಮೊದಲು ಸ್ಥಾಪಿತವಾಯಿತು. ವೈಜ್ಞಾನಿಕ ಸಂಶೋಧನೆಗಾಗಿ ವಿಶೇಷವಾಗಿ ವ್ಯವಸ್ಥಿತವಾದ ಹಾಗೂ ಸಜ್ಜುಗೊಂಡ ಸಂಸ್ಥೆಗಳ ಸ್ಥಾಪನೆಗೆ ಕಾಲವು ಪಕ್ವವಾಗಿರಲಿಲ್ಲ. ಆಗ ವಿಜ್ಞಾನವು ಮುಖ್ಯವಾಗಿ ಕೆಲವು ವ್ಯಕ್ತಿಗಳಿಗೆ ಸಂಬಂಧಪಟ್ಟಿತ್ತು. ಈ ವ್ಯಕ್ತಿಗಳು ತಮ್ಮ ಬುದ್ಧಿ ಶಕ್ತಿಯ ಆಸಕ್ತಿಯನ್ನು ಸಫಲಗೊಳಿಸುವುದಕ್ಕಾಗಿ ಪ್ರಾಕೃತಿಕ ಅತಿಶಯಗಳ ಬಗ್ಗೆ ಅನ್ವೇಷಣೆ ನಡೆಸಿದರು. ವಿಜ್ಞಾನದಿಂದ ಸ್ವತಂತ್ರವಾಗಿ ಜೀವನ ಹಾಗೂ ಕೈಗಾರಿಕಾ ಕಲೆಗಳಲ್ಲಿ ಶೋಧನೆಗಳೂ ಸುಧಾರಣೆಗಳೂ ನಡೆದವು.

ಕೈಗಾರಿಕಾ ಕ್ರಾಂತಿಯು ವಿಜ್ಞಾನಕ್ಕೆ ಅಗ್ರಸ್ಥಾನ ಕೊಟ್ಟಿತು. ನಾನಾ ಕ್ಷೇತ್ರಗಳಲ್ಲಿ ಸಂಶೋಧನೆಗೆ ಅವಕಾಶ ಕೊಡಲಾಯಿತು, ಜಗತ್ತಿನ ನಾನಾ ಭಾಗಗಳಲ್ಲಿ ವಿಜ್ಞಾನದ ಅಭಿವೃದ್ಧಿಗಾಗಿ ದೊಡ್ಡ ದೊಡ್ಡ ವಿಜ್ಞಾನ ಸಂಸ್ಥೆಗಳನ್ನು ಸ್ಥಾಪಿಸಲಾಯಿತು ಈ ರೀತಿ ಕಲ್ಪಿತಗೊಂಡ ಜ್ಞಾನವನ್ನು ಔದ್ಯೋಗಿಕ ವಿಜ್ಞಾನಕ್ಕೆ ಅನ್ವಯಿಸಿದ್ದು ಗಮನಾರ್ಹವಾದ ಫಲಿತಾಂಶಗಳನ್ನು ಕೊಟ್ಟಿತು. ಹಾಗೂ ಪಾಶ್ಚಿಮಾತ್ಯ ಪ್ರಪಂಚದ ಜನರ ಸಂಪತ್ತು ಮತ್ತು ಸಮೃದ್ಧಿಯನ್ನು ಸುಧಾರಿಸಿತು. ಹೀಗಾಗುವುದಕ್ಕೆ ಔದ್ಯೋಗಿಕ ವಿಜ್ಞಾನದ ಮುನ್ನಡೆಯೇ ಮುಖ್ಯ ಕಾರಣವೆನ್ನಬಹುದು. ಸಂಶೋಧನಾ ಕ್ಷೇತ್ರದಲ್ಲಿ ಯೋಜನೆಗೆ ಪರಿಮಿತಿ ಇದೆಯೆಂಬ ವಿಷಯವನ್ನು ನಿಷ್ಪಕ್ಷಪಾತದಿಂದ ಅಂಗೀಕರಿಸಬೇಕು. ನಿಯಂತ್ರಿಸಬಹುದಾದಂತಹ ಚಟುವಟಿಕೆಗಳನ್ನು ಮಾತ್ರ ನಿಯೋಜಿಸಬಹುದು. ವಿಜ್ಞಾನದ ಅನ್ವಯವೇ ಯೋಜನೆಗೆ ಸಾಧ್ಯವಾದದ್ದು.

ಸ್ವತಂತ್ರ ಭಾರತದಲ್ಲಿ

ಸ್ವಾತಂತ್ರ್ಯ ಲಭಿಸಿದಾಗಿನಿಂದ ಭಾರತದಲ್ಲಿ ವಿಜ್ಞಾನವು ಗಳಿಸಿರುವ ಪ್ರಗತಿಯು ನಿಜವಾಗಿಯೂ ಅಸಾಧಾರಣವಾದದ್ದು. ವಿಜ್ಞಾನದ ಬೆಳವಣಿಗೆಗೆ ಈಗ ಹಿತಕರವಾದ ವಾತಾವರಣವಿದೆ. ವೈಜ್ಞಾನಿಕ ಹಾಗೂ ಔದ್ಯೋಗಿಕ ವಿಜ್ಞಾನದ ಸಂಶೋಧನೆಗಳನ್ನು ನಡೆಸಲು ದೇಶದ ಪ್ರತಿಭಾಶಾಲಿಗಳಾದ ಯುವಕರಿಗೆ ಈಗ ಅಧಿಕ ಸದವಕಾಶಗಳು ದೊರೆತಿವೆ. ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಮಂಡಳವು ಸುಸಜ್ಜಿತಗೊಂಡ ರಾಷ್ಟ್ರೀಯ ಪ್ರಯೋಗ ಶಾಲೆಗಳಿಂದ ಬೆಳವಣಿಗೆ ಪಡೆದಿದೆ. ಧನ ಸಹಾಯದ ಮೂಲಕ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಗೆ ಉತ್ತೇಜನವೀಯಲಾಗಿದೆ ಕೈಗಾರಿಕೆಯಲ್ಲಿ ಸಹಕಾರಯುಕ್ತ ಸಂಶೋಧನೆಯನ್ನು ಪ್ರೋತ್ಸಾಹಿಸಲಾಗಿದೆ. ವಿಜ್ಞಾನಕ್ಕೂ ಇತರ ಸಾಮಾಜಿಕ ಪರಿಣಾಮಗಳಿಗೂ ಇರುವ ಸಂಬಂಧದ ಬಗ್ಗೆ ಮಹಾ ಜನರಲ್ಲಿ ಅರಿವುಂಟಾಗಿದೆ. ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮದ ಮೇಲೆ ಪರಿಣಾಮಕಾರಿಯಾದ ಸಂಘಟನೆಯನ್ನು ಪಡೆಯುವ ಉದ್ದೇಶದಿಂದ ವಿಜ್ಞಾನವನ್ನು ಯೋಜಿಸುವ ಕಾರ್ಯವು ಪ್ರಾಮುಖ್ಯತೆಯನ್ನು ಪಡೆದಿದೆ.

ಸ್ವಾತಂತ್ರ್ಯಕ್ಕೆ ಮೊದಲು ವಿಜ್ಞಾನದ ಪ್ರಗತಿಯನ್ನು ಪರೀಕ್ಷಿಸಿ ವರದಿ ಮಾಡಲು ಹಲವಾರು ಸಮಿತಿಗಳನ್ನು ನೇಮಿಸಲಾಗಿತ್ತು. ರಾಷ್ಟ್ರೀಯ ಅಭಿವೃದ್ಧಿ ಯೋಜನೆಯು ಇಲ್ಲದಿರುವಾಗ ಭಾರತದಲ್ಲಿ ಸಂಶೋಧನೆ ನಡೆಸುವುದು ಗುರಿಯಿಲ್ಲದ ಕಾರ್ಯವಾಗಿದೆ ಎಂದು ಈ ಸಮಿತಿಗಳು ಟೀಕಿಸಿದವು ಸ್ವಾತಂತ್ರ್ಯನಂತರ ಕ್ರಾಂತಿಕಾರಕ ಬದಲಾವಣೆಗಳು ಕಂಡು ಬಂದಿವೆ. ಸರ್ಕಾರದವರು ತಮ್ಮ ಎಲ್ಲೆಯಲ್ಲಿ ಆದಷ್ಟು ಮಟ್ಟಿಗೆ ಉತ್ತೇಜನವೀಯುತ್ತಿದ್ದಾರೆ.

ಅಭಿವೃದ್ಧಿಯ ಸಮಸ್ಯೆ

ಸ್ಪಷ್ಟವಾಗಿ ವಿವರಿಸಿದ ಮೂಲೋದ್ದೇಶಗಳನ್ನು ಮತ್ತು ಧ್ಯೇಯಗಳನ್ನು ಪಡೆದಿರುವ ಪ್ರಥಮ ಪಂಚವಾರ್ಷಿಕ ಯೋಜನೆಯು ಮುಗಿಯುತ್ತಾ ಬಂದಿದೆ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಲಾಗುತ್ತಿದೆ. ಸುಲಭವಾಗಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಮಾರ್ಗದಲ್ಲಿ ಸರ್ಕಾರವು ಹೆಚ್ಚು ಗಮನ ಹರಿಸಿರುವುದರಿಂದ ಹೊಸ ಕೈಗಾರಿಕೆಗಳು ಉದಯಿಸಲು ಸಾಧ್ಯವಾಗಿದೆ ವಿಶಾಲವಾದ ಜಲಾನಯನ ಭೂಮಿಗಳಲ್ಲಿ ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಿರುವುದರಿಂದ ವ್ಯವಸಾಯ ಉತ್ಪಾದನೆಗಳನ್ನು ಹೆಚ್ಚಿಸಲು ಸಾಧ್ಯವಾಗಿದೆ, ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮಗಳು ಜನರ ಸಾಮಾಜಿಕ, ಕೈಗಾರಿಕಾ ಹಾಗೂ ವ್ಯಾವಸಾಯಿಕ ಸ್ಥಿತಿಗಳನ್ನು ಬಹುಮಟ್ಟಿಗೆ ಸುಧಾರಿಸಿದೆ. ಸರ್ಕಾರದ ಕೈಗಾರಿಕಾ ನೀತಿಯು ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಹೆಚ್ಚು ಪ್ರಾಮುಖ್ಯತೆಯನ್ನಿತ್ತಿದೆ. ಯಂತ್ರ ಸಾಮಗ್ರಿ, ಕಬ್ಬಿಣ ಮತ್ತು ಉಕ್ಕು, ರೈಲ್ವೆ ಎಂಜಿನ್‌ಗಳು, ಹಡಗುಗಳು, ವಿಮಾನಗಳು, ರೈಲ್ವೆ ಗಾಡಿಗಳು, ಟೆಲಿಫೋನ್‌ಗಳು, ಕೇಬಲ್‌ಗಳು ಎಲೆಕ್ಟ್ರಾನಿಕ್ ಉಪಕರಣಗಳು, ಕೃತಕ ಗೊಬ್ಬರಗಳ ಮುಂತಾದವುಗಳ ತಯಾರಿಕೆಗಾಗಿ ಕಾರ್ಖಾನೆಗಳು ಸ್ಥಾಪಿತಗೊಂಡಿವೆ. ಈ ಅಭಿವೃದ್ಧಿ ಕಾರ್ಯಗಳಿಂದ ಪ್ರಾಕೃತಿಕ ಸಾಧನ ಸಂಪತ್ತುಗಳ ಸಂಶೋಧನೆ, ಬಳಕೆಗಳ ಬಗ್ಗೆ ಅನೇಕ ಸಮಸ್ಯೆಗಳು ಉದ್ಭವವಾಗುವುವು. ಔದ್ಯೋಗಿಕ ವಿಜ್ಞಾನದ ಸಂಶೋಧನೆಯನ್ನು ಅನ್ವಯಿಸುವುದರಿಂದ ಈ ಸಮಸ್ಯೆಗಳನ್ನು ಪರಿಹರಿಸಬಹುದು.

ಕೆಲಸಗಾರರಿಗೆ ತರಬೇತಿ

ರಾಷ್ಟ್ರೀಯ ಅಭಿವೃದ್ಧಿಯ ಎಲ್ಲ ಮಜಲುಗಳಲ್ಲಿಯೂ ವೈಜ್ಞಾನಿಕ ಸಂಶೋಧನೆಯು ಪರಿಣಾಮಕಾರಿಯಾದ ಹಾಗೂ ತ್ವರಿತವಾದ ನೆರವನ್ನೀಯಬೇಕಾದಲ್ಲಿ ಇದನ್ನು ನಿರ್ದಿಷ್ಟ ಉದ್ದೇಶಗಳ ದಿಕ್ಕಿನಲ್ಲಿ ನಿಯೋಜಿಸಬೇಕಾಗುವುದು. ರಾಷ್ಟ್ರೀಯ ಅಗತ್ಯಗಳಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯ, ಪ್ರಯೋಗಶಾಲೆಗಳು, ಸರ್ಕಾರಿ ಇಲಾಖೆಗಳು ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿನ ಸಂಶೋಧನೆಯನ್ನು ಸಂಘಟಿಸಬೇಕು. ಸಂಶೋಧನೆಯನ್ನು ಕೈಗೊಳ್ಳಲು ಮತ್ತು ವಿವಿಧ ಅಭಿವೃದ್ಧಿ ಯೋಜನೆಗಳನ್ನು ನಡೆಸಲು ಅಧಿಕ ಸಂಖ್ಯೆಯಲ್ಲಿ ವಿಜ್ಞಾನಿಗಳು ಹಾಗೂ ತಂತ್ರಜ್ಞರು ಬೇಕಾಗುವರು. ತರಬೇತಾದ ಕೆಲಸಗಾರರನ್ನು ಒದಗಿಸುವ ಕಾರ್ಯವನ್ನು ವಿಶ್ವವಿದ್ಯಾನಿಲಯಗಳು ವಹಿಸಿಕೊಳ್ಳಬೇಕು. ವಿಜ್ಞಾನದ ಎಲ್ಲ ಕ್ಷೇತ್ರಗಳಲ್ಲಿಯೂ ಖಗೋಳ ಶಾಸ್ತ್ರದಿಂದ ಹಿಡಿದು ಪ್ರಾಣಿ ಶಾಸ್ತ್ರದ ವರೆಗೂ ವೈದ್ಯಕೀಯ, ಎಂಜಿನಿಯರಿಂಗ್, ವ್ಯವಸಾಯ, ವನವಿಜ್ಞಾನ, ವಿಮಾನ ಗಾರಿಕೆ ಮುಂತಾದ ಕಾರ್ಯರೂಪಕ್ಕೆ ತೊಡಗಿಸಲಾದ ವೈಜ್ಞಾನಿಕ ವಿಷಯಗಳಲ್ಲಿ (ಅಪ್ಲೈಡ್ ಸೈನ್ಸ್) ಸಂಶೋಧನೆಗೆ ವಿಜ್ಞಾನಿಗಳು ಬೇಕಾಗಿದ್ದಾರೆ.

ವಿಜ್ಞಾನವನ್ನು ಹಿಂದೆ ನಿರ್ಲಕ್ಷಿಸಿದ್ದರಿಂದ ಇಂದು ತರಬೇತಾದ ಸಿಬ್ಬಂದಿಯವರ ಬಗ್ಗೆ ತೀಕ್ಷ್ಣ ಕೊರತೆ ಕಾಣಿಸಿದೆ. ನಮ್ಮ ಸಾಧನ ಸಂಪತ್ತನ್ನು ಸಂಗ್ರಹಿಸಿ, ಯೋಗ್ಯರಾದವರನ್ನು ಆರಿಸಿ ಅವರು ರಾಷ್ಟ್ರಕ್ಕೆ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವಂತೆ ಪ್ರೋತ್ಸಾಹಿಸುವ ಮಾರ್ಗದಲ್ಲಿ ವಿಪರೀತವಾಗಿ ಪ್ರಯತ್ನಿಸಬೇಕಾಗುವುದು. ವಿಶ್ವವಿದ್ಯಾನಿಲಯ ಪ್ರಯೋಗ ಶಾಲೆಗಳು ವೈಜ್ಞಾನಿಕ ಪರಿಜ್ಞಾನವನ್ನು ವಿಸ್ತರಿಸಲು ಮುಖ್ಯ ಕೇಂದ್ರಗಳಾಗಿರುವಂತೆ ಸಜ್ಜುಗೊಳಿಸಬೇಕು. ಆಗಲೇ ವಿಶ್ವವಿದ್ಯಾನಿಲಯಗಳು ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಸಿಬ್ಬಂದಿಯ ತರಬೇತಿ ಕ್ಷೇತ್ರಗಳಾಗಿ ಪರಿಣಮಿಸುವುವು. ಏಕಪ್ರಕಾರವಾಗಿ ಪದವೀಧರ ವಿದ್ಯಾರ್ಥಿಗಳು ಬರುವುದು ವಿಶ್ವವಿದ್ಯಾನಿಲಯಕ್ಕೆ ಅಪೂರ್ವ ಲಕ್ಷಣ ಕೊಡುವುದು

ಯೋಜನೆಗಾಗಿ ಸಂಶೋಧನೆ

ಸಂಶೋಧನಾ ಸಂಸ್ಥೆಗಳಿಗೆ ಬೇಕಾಗುವ ಅಗತ್ಯತೆಗಳನ್ನು ಇತ್ತೀಚೆಗೆ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನೆಯ ಮಂಡಳದ ವಿಶೇಷ ಸಮಿತಿಯೊಂದು ಚೆನ್ನಾಗಿ ಪರೀಕ್ಷಿಸಿದೆ. ಈ ಸಮಿತಿಯು ಸಲ್ಲಿಸಿದ ವರದಿಯು ಅತ್ಯಮೂಲ್ಯವಾದ ದಾಖಲೆಯಾಗಿದೆ.

ನೂತನ ಜ್ಞಾನವನ್ನು ಕಲ್ಪಿಸುವುದು ಬುದ್ಧಿಪೂರ್ವಕ ಪ್ರಯತ್ನವಾಗಿದೆ. ಇಂತಹ ಜ್ಞಾನವನ್ನು ಉತ್ತೇಜಿಸುವುದು ಯಂತ್ರಕಲಾ ಶಾಸ್ತ್ರದ ಪ್ರಗತಿಗೆ ಅತ್ಯಗತ್ಯವಾದಾಗ್ಯೂ ಯೋಜನೆಗೆ ಸಾಧ್ಯವಾದುದಲ್ಲ, ಜ್ಞಾನವನ್ನು ಸರಿಯಾಗಿ ಗುರುತಿಸಿದ ಸಮಸ್ಯೆಗಳ ಪರಿಹಾರಕ್ಕೆ ಅನ್ವಯಿಸುವುದೇ ಯೋಜನೆಗೆ ಸಾಧ್ಯವಾದುದಾಗಿದೆ. ಈ ಕ್ಷೇತ್ರದಲ್ಲಿ ನಾವು ಯಶಸ್ವಿ

೧೨ನೇ ಪುಟ ನೋಡಿರಿ

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ಬಾಟಲಿಗೆ ರೂ 6/8; ¼ ಬಾಟಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ಸೂತಕರೋಗ
ವಿಧ್ವಂಸಿನಿ
ಸ್ತ್ರೀಯರ ಗರ್ಭಕೋಶರೋಗಕ್ಕೆ
ಅದ್ಭುತದಂತಿರುವ
ಮದ್ದು
ಕ್ಯಾಟಲಾಗ್ ಇನಾಮ್

ಕಾಂಗ್ರೆಸು ಸಂಸ್ಥೆಯೇ ಮುಂಬಯಿಗಿಂತ ಹೆಚ್ಚು ಶ್ರೇಷ್ಠ

ಮಹಾರಾಷ್ಟ್ರ ಕಾಂಗ್ರೆಸಿನ ವರಿಷ್ಠರ ಸ್ಪೃಹಣೀಯ ಅಭಿಪ್ರಾಯ

ಮುಂಬಯಿ ನಗರದ ಭವಿಷ್ಯವನ್ನು ಕುರಿತು ಭಾರತ ಸರಕಾರದವರು ಪ್ರಕಟಿಸಿದ ನಿರ್ಧಾರದಿಂದ ಮಹಾರಾಷ್ಟ್ರೀಯರು ತುಂಬ ನೊಂದುಕೊಂಡಿದ್ದಾರೆ. ಈ ನಗರವನ್ನು ಕೇಂದ್ರದ ಆಡಳಿತೆಯಲ್ಲಿಡಲಾಗುವುದೆಂದೂ ಸೂಚಿತ ವಿದರ್ಭವನ್ನೂ ಮರಾಠಿ ಭಾಷೆಯಾಡುವ ಇತರ ಪ್ರದೇಶಗಳನ್ನೂ ಸೇರಿಸಿ ಮಹಾರಾಷ್ಟ್ರವನ್ನು ರಚಿಸಲಾಗುವುದೆಂದೂ ಅದರಂತೆ ಈಗಿನ ಸೌರಾಷ್ಟ್ರವನ್ನೂ ಗುಜರಾಥಿ ಭಾಷೆಯಾಡುವ ಜನರಿರುವ ಇತರ ಪ್ರದೇಶವನ್ನೂ ಸೇರಿಸಿ ಮಹಾ ಗುಜರಾಥನ್ನು ರಚಿಸಲಾಗುವುದೆಂದೂ ಭಾರತ ಸರಕಾರದ ತೀರ್ಮಾನ ಹೇಳುತ್ತದೆ.

ಕಹಿಯಾದ ತೀರ್ಮಾನ

ಮಹಾರಾಷ್ಟ್ರೀಯ ಜನರ ಪಾಲಿಗೆ ತೀರ ಕಹಿಯಾಗಿ ಈ ಸುದ್ದಿ ಪರಿಣಮಿಸುವುದೆಂದು ತಿಳಿದಿದ್ದರೂ ಸಹ ಜನತೆಯು ಸರಕಾರದ ತೀರ್ಮಾನವನ್ನು ಒಪ್ಪಿಕೊಳ್ಳಬೇಕೆಂದು ವಿನಂತಿಸಿದ ಪ್ರಧಾನಿ ನೆಹರುಗಳು ಮುಂಬಯಿಯ ಕುರಿತು ಸರಕಾರ ಕೈಗೊಂಡ ತೀರ್ಮಾನಕ್ಕೆ ಯಾವುದೇ ಸಮಾಧಾನಕರ ಕಾರಣವನ್ನು ಕೊಡದೆ ಹೋದರು. ವಿಶ್ವ ಪ್ರಜಾಲಕ್ಷಣವುಳ್ಳ ನಗರ ಎಂಬುದೊಂದು ಮಾತನ್ನು ಬಿಟ್ಟರೆ ಮತ್ತು ವಾಣಿಜ್ಯ ಕೇಂದ್ರವೆಂಬ ಇನ್ನೊಂದಂಶವನ್ನು ಹೊರತು ಪಡಿಸಿದರೆ ಅವರ ಬೇರೆ ಮಾತುಗಳಲ್ಲಿ ಮಹಾರಾಷ್ಟ್ರೀಯರ ನಿಲುವಿಗೆಯೇ ಬೆಂಬಲ ವ್ಯಕ್ತವಾಗುತ್ತಿತ್ತೆಂದು ಹೇಳಬಹುದು. ಮಾತ್ರವಲ್ಲ, ನೆಹರುಗಳು ಮುಂಬಯಿಯು ಸುತ್ತಣಿಂದಲೂ ಮಹಾರಾಷ್ಟ್ರ ಪ್ರದೇಶದಿಂದ ಆವೃತವಾಗಿದೆಯೆಂದೂ ಮಹಾರಾಷ್ಟ್ರೀಯರೇ ಒಂದು ಗುಂಪಿನ ಆಧಿಕ್ಯದಿಂದ ಮುಂಬಯಿಯಲ್ಲಿ ಪ್ರಧಾನರಾಗಿದ್ದಾರೆಂದೂ ಮಹಾರಾಷ್ಟ್ರೀಯರು ಮುಂಬಯಿಯಲ್ಲಿ ವಹಿಸಬೇಕಾದ ಪಾತ್ರ ಮಹತ್ವದ್ದೆಂದೂ ನುಡಿದರು.

ಪ್ರಥಮದಲ್ಲೇ ತಪ್ಪು

ಇಷ್ಟು ಹೇಳಿಯೂ ಅವರು ಮುಂಬಯಿಯನ್ನು ಕೇಂದ್ರದ ವಶಕ್ಕೆ ಒಪ್ಪಿಸುವ ನಿರ್ಣಯಕ್ಕೆ ಜನರು ಸಮ್ಮತಿಸಬೇಕೆಂದು ಹೇಳಿದರು. ಕೇಂದ್ರ ಸರಕಾರ ಮತ್ತು ಕಾಂಗ್ರೆಸಿನ ವರಿಷ್ಠರು ಮುಂಬಯಿಯ ಪ್ರಶ್ನೆಯನ್ನು ಮೊದಲಿಂದಲೂ ತಪ್ಪು ವಿಧಾನದಿಂದ ಬಗೆಹರಿಸಲು ಪ್ರಯತ್ನಿಸಿರುವುದು ಸ್ಪಷ್ಟ. ಫಜಲಾಲಿ ಸಮಿತಿಯು ಸೂಚಿತ ವಿದರ್ಭವನ್ನು ಹೊರತು ಪಡಿಸಿ ಉಳಿದೆಲ್ಲ ಮಹಾರಾಷ್ಟ್ರ ಪ್ರದೇಶ ಮತ್ತು ಸೌರಾಷ್ಟ್ರ ಸಹಿತವಾದ ಎಲ್ಲ ಗುಜರಾತಿ ಪ್ರದೇಶಗಳಿಂದ ಕೂಡಿದ ಮತ್ತು ಮುಂಬಯಿ ನಗರವು ರಾಜಧಾನಿಯಾಗುಳ್ಳ ಈಗಿಂತ ವಿಶಾಲವಾದ ದ್ವಿಭಾಷಾ ರಾಜ್ಯ ಮುಂಬಯಿಯನ್ನು ರಚಿಸಬೇಕೆಂದು ಮಾಡಿದ ಸೂಚನೆಯನ್ನು ಮಹಾರಾಷ್ಟ್ರೀಯರು ಇದ್ದುದಿದ್ದಂತೆ ಒಪ್ಪಿಕೊಳ್ಳಲಿಲ್ಲ ನಿಜ. ಆದರೆ ವಿದರ್ಭವನ್ನೂ ಸೂಚಿತ ವಿಶಾಲ ಮುಂಬಯಿ ರಾಜ್ಯದಲ್ಲಿ ಸೇರಿಸಿದರೆ ದ್ವಿಭಾಷಾ ರಾಜ್ಯಕ್ಕೆ ತಮ್ಮ ಸಮ್ಮತಿ ಇದೆ ಎಂದು ಮಹಾರಾಷ್ಟ್ರೀಯರು ಗೊತ್ತುವಳಿಯೊಂದರ ಮೂಲಕ ಹೇಳಿದ್ದರು. ಅದನ್ನು ತಿರಸ್ಕರಿಸಿದ ಮತ್ತು ವಿದರ್ಭವನ್ನು ಸೇರಿಸುವ ಪ್ರಸಂಗದಲ್ಲಿ ಮುಂಬಯಿ ನಗರವನ್ನು ಪ್ರತ್ಯೇಕವಾಗಿಡಲಾಗುವುದೆಂದ ಕಾಂಗ್ರೆಸಿನ ವರಿಷ್ಠರು ದೊಡ್ಡ ತಪ್ಪನ್ನೆ ಮಾಡಿದರು.

ರಾಜೀನಾಮೆಯ ಸುರಿಮಳೆ

ಸೂಕ್ಷ್ಮವಾಗಿ ಬಿಡಿಸಬೇಕಾಗಿದ್ದ ಪ್ರಶ್ನೆಯೊಂದು ಈಗ ಕಗ್ಗಂಟಾಗಿಯೇ— ಮೂರು ತಿಂಗಳ ಬಳಿಕವೂ— ಉಳಿದಿರುವುದು ಶೋಚನೀಯ. ಕೇಂದ್ರ ಸರಕಾರದವರು ಮುಂಬಯಿ ನಗರವನ್ನು ಪ್ರತ್ಯೇಕವಾಗಿಡಬೇಕೆಂಬ ತಮ್ಮ ತೀರ್ಮಾನಕ್ಕೆ ಕೊಡುತ್ತಿರುವ "ವಿಶಾಲ" ಮನೋಭಾವದ ನೆಪಗಳು ಎಷ್ಟು ಮಾತ್ರಕ್ಕೂ ಮಹಾರಾಷ್ಟ್ರೀಯರನ್ನು ಸಂತೈಸಿಲ್ಲ. ಮುಂಬಯಿ ನಗರದ ಹೊಣೆ ಹೊತ್ತಿರುವ ಕಾರ್ಪೋರೇಶನಿನಲ್ಲಿ ಸಹ ಮಹಾರಾಷ್ಟ್ರೀಯರ ಧ್ವನಿಗೆ ಬೆಲೆ ಬಂದಿರುವುದನ್ನು ಗಮನಿಸಿದರೆ ಕೇಂದ್ರವು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆದುಕೊಂಡಿದೆ ಎಂದು ಭಾವಿಸುವುದಕ್ಕೆ ಎಡೆಸಿಗುವುದಿಲ್ಲ. ಮಹಾರಾಷ್ಟ್ರೀಯ ಮುಖಂಡರು ಸಾಮೂಹಿಕವಾಗಿ ಸರಕಾರದೊಡನೆ ಸಂಪರ್ಕವನ್ನು ಕಡಿದುಕೊಳ್ಳುವುದಕ್ಕೆ ನಿರ್ಧರಿಸಿ ರಾಜೀನಾಮೆ ಪತ್ರವನ್ನು ಒಪ್ಪಿಸಿರುವುದರಿಂದಲಾದರೂ ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಮುಂಬಯಿ ನಗರದ ಸ್ಥಾನವೇನೆಂದು ವಿದಿತವಾಗದಿರದು.

ವರಿಷ್ಠರ ಗೊತ್ತುವಳಿ

ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸಿನ ಆದೇಶದಂತೆ ನೀಡಲಾದ ಈ ರಾಜೀನಾಮೆಗಳನ್ನು ಹಿಂದಿನಿಂದ ವಾಪಸು ಪಡೆಯಲಾಯಿತು. ಇದಕ್ಕೆ ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಮಂಡಳದ ಅನುಮೋದನೆ ಇಲ್ಲವೆಂಬುದೇ ಕಾರಣ. ರಾಜೀನಾಮೆ ಪತ್ರಗಳನ್ನು ವಿಚಾರಿಸಿದ ಕಾಂಗ್ರೆಸಿನ ವರಿಷ್ಠರು ರಾಜೀನಾಮೆ ಕೊಟ್ಟವರ ಮನೋಭಾವನೆಗಳನ್ನು ಲೆಕ್ಕಿಸದೆ, ಕಾಂಗ್ರೆಸಿನ ಘಟನೆಯಲ್ಲಿ ಹೇಳಲಾದ ಅಂಶಗಳಿಗೆ ಈ ರಾಜೀನಾಮೆ ಪತ್ರಗಳು ಅನುಗುಣವಾಗಿವೆಯೆ—ಎಂದು ವಿಚಾರಿಸಲು ಮುಂದಾದರು. ಹೀಗೆ ಪರ್ಯಾಲೋಚಿಸಿದ ಬಳಿಕ ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿಗಲ್ಲದೆ, ಬೇರೆ ಯಾರಿಗೂ "ರಾಜೀನಾಮೆ ಕೊಡಿ" ಎಂದು ಕಾಂಗ್ರೆಸು ಸದಸ್ಯರಿಗೆ ಆದೇಶಕೊಡುವ ಅಧಿಕಾರವಿಲ್ಲ ಎಂಬ ತೀರ್ಮಾನಕ್ಕೆ ಬಂದರು. ಆದುದರಿಂದ ಪ್ರದೇಶ ಕಾಂಗ್ರೆಸಿನ ಹೇಳಿಕೆಯಂತೆ ರಾಜೀನಾಮೆ ಕೊಟ್ಟುದೇ ತಪ್ಪೆಂಬ ನಿರ್ಣಯವಾಯಿತು.

ಎರಡೇ ಮಾರ್ಗ

ಎಲ್ಲ ಮಂತ್ರಿಗಳೂ ಇತರರೂ ಈಗ ರಾಜೀನಾಮೆಯನ್ನು ಹಿಂದೆ ಪಡೆದಿರುವರಾದರೂ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸು ಮೊನ್ನೆಯಷ್ಟೇ ಇನ್ನೊಂದು ಗೊತ್ತುವಳಿಯನ್ನು ಸ್ವೀಕರಿಸಿ ಕಾಂಗ್ರೆಸಿನ ವರಿಷ್ಠ ಮಂಡಳವು ಕಾಂಗ್ರೆಸು ಪಕ್ಷಕ್ಕೆ ಸೇರಿದ ಮಹಾರಾಷ್ಟ್ರೀಯರಿಗೆ ಮುಂಬಯಿ ನಗರದ ಕುರಿತು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಬಿಡಬೇಕೆಂದು ಪುನಃ ವಿನಂತಿಸಿದೆ. ಆದರೆ ಈ ಸ್ವಾತಂತ್ರ್ಯವನ್ನು ಶಿಸ್ತು ಪಾಲನೆಗೆ ಬದ್ಧರಾಗಿರುವ ಕಾಂಗ್ರೆಸಿನ ವರಿಷ್ಠರು ಕೊಡುವ ಸಂಭವವಿಲ್ಲವೆಂದೇ ಹೇಳಬಹುದು. ಇಂಥ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರೀಯರಿಗೆ ಇರುವ ದಾರಿ ಕೇವಲ ಎರಡು: ಒಂದೋ ಅವರು ಕೇಂದ್ರದ ತೀರ್ಮಾನವನ್ನು ಒಪ್ಪಿಕೊಂಡು, ಸುಮ್ಮನಿರಬೇಕು; ಅಥವಾ, ಕಾಂಗ್ರೆಸಿನಿಂದ ಹೊರಗೆ ಬಂದು, ಮುಂಬಯಿ ನಗರವನ್ನು ಮಹಾರಾಷ್ಟ್ರ ರಾಜ್ಯದಲ್ಲಿ ಉಳಿಸಿಕೊಳ್ಳಲು ಹೋರಾಡಬೇಕು.

ಸಾಮಾನ್ಯರ ದ್ವಂದ್ವ

ಇಷ್ಟು ಗಂಭೀರವಾದ ಪರಿಸ್ಥಿತಿಯನ್ನು ನಿರ್ಮಿಸಿದ ಕಾಂಗ್ರೆಸಿನ ವರಿಷ್ಠರ ಬುದ್ಧಿಪಂಕ್ತಿಯನ್ನು ನಿಷ್ಪಕ್ಷಪಾತ ದೃಷ್ಟಿಯುಳ್ಳ ಯಾವ ನಿರೀಕ್ಷಕನೂ ಮೆಚ್ಚಿಕೊಳ್ಳುವಂತಿಲ್ಲ. ಮಹಾರಾಷ್ಟ್ರ ಪ್ರದೇಶದಲ್ಲಿ ಕಾಂಗ್ರೆಸು ಸಂಸ್ಥೆಗೆ ಬಲವಾದ ಪೆಟ್ಟು ಬೀಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ವರಿಷ್ಠರು ಮುಂದಿನ ಚುನಾವಣೆಯ ಕಾಲದಲ್ಲಿ ಇದರ ಪರಿಣಾಮವನ್ನು ಅನುಭವಿಸಬೇಕಾಗಿ ಬರಬಹುದು. ದೇಶದ ಒಂದು ಪ್ರಾಮುಖ್ಯ ಪ್ರದೇಶದಲ್ಲಿ ಪ್ರಬಲ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸಿಗೆ ಅರ್ಧಾಂಗ ವಾಯು ರೋಗ ಹಿಡಿಯುವ ಪ್ರಸಂಗ ಇಂದು ಬಂದಿದೆ. ಇದು ಬುದ್ಧಿವಂತರಾದ ವರಿಷ್ಠರ ಪ್ರಮಾದದ ಫಲ. ಕಾಂಗ್ರೆಸಿನ ಉಳಿದ ಅನೇಕ ಕೆಲಸಗಳಲ್ಲಿ ಮಮತೆಯಿರುವ

NOTICE.

The Municipal Council of Udipi in its resolution No. 19, dated 31—12—1955 has proposed to levy profession tax at the following enhanced rates from 1—4—1956. Any objections for the levy of the tax at the enhanced maximum rates received within one month from the date of publication of this notice will be considered by the Council when it takes up the question of confirming its proposal.

Class.	Half Yearly Income	Maximum half yearly tax Rs.
I.	More than Rs. 15,000/-	125/-
II.	More than Rs. 12,000/- but not more than Rs. 15,000/-	100/-
III.	More than Rs. 9,000/- but not more than Rs. 12,000/-	75/-
IV.	More than Rs. 6,000/- but not more than Rs. 9,000/-	50/-
V.	More than Rs. 4,800/- but not more than Rs 6,000/-	25/-
VI.	More than Rs. 3,000/- but not more than Rs. 4,800/-	12/-
VII.	More than Rs. 1,800/- but not more than Rs. 3,000/-	6/-
VIII.	More than Rs. 1,200/- but not more than Rs. 1,800/-	4/-
IX.	More than Rs. 600/- but not more than Rs. 1,200/-	2/-
X.	More than Rs. 300/- but not more than Rs. 600/-	1/-

Municipal Office, Udipi.
Dated 30—1—1956.

V. U. K. Nambissan,
COMMISSIONER.
UDIPI MUNICIPALITY, UDIPI.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆಗೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ಮತ್ತು ಅಭಿಮಾನವಿರುವ ಸಾಮಾನ್ಯ ಕಾಂಗ್ರೆಸು ಕಾರ್ಯಕರ್ತರು ಇಷ್ಟು ಘೋರವಾದ ಪರಿಣಾಮಕ್ಕೆ ಎಡೆ ಮಾಡಿ ಕೊಡಬೇಕೆ?

ಜನತೆಯ ವಿವೇಕ

ಪ್ರತಿಯೊಬ್ಬ ಮಹಾರಾಷ್ಟ್ರೀಯ ಕಾಂಗ್ರೆಸಿಗನ ಅಂತರಾತ್ಮವನ್ನು ಇಂದು ಇದೇ ಪ್ರಶ್ನೆ ಬಾಧಿಸುತ್ತಿದೆ ಪರಿಷ್ಕರು ತಪ್ಪಿ ನಡೆದು ಕೊಂಡರು. ಕಾಂಗ್ರೆಸಿನ ಪ್ರತಿಷ್ಠೆಗೆ ತಾವೇ ಧಕ್ಕೆ ಮಾಡಿಕೊಂಡರು. ಇದರಿಂದ ಮುನಿಸುಗೊಂಡು ಕಾಂಗ್ರೆಸನ್ನೆ ತ್ಯಜಿಸಿದರೆ—ಈ ಸಂಸ್ಥೆಗೆ ಅಪಾರ ಹಾನಿಯಾಗುವುದು ಖಂಡಿತ; ಈ ಸಂಸ್ಥೆಗಾಗುವ ಹಾನಿಯು ದೇಶದ ಪುನಾರಚನೆಯ ವೇಗವನ್ನು ಹಿಡಿದು ನಿಲ್ಲಿಸುವುದೂ ನಿಶ್ಚಯ. ಜನತೆಗೆ ಮಾರ್ಗದರ್ಶನ ಮಾಡಲು ಬೇರಾವುದೇ ಸಮರ್ಥಪಕ್ಷವೊಂದು ಇಂದಿಲ್ಲದಿರುವಾಗ ಕಾಂಗ್ರೆಸಿನ ನಾಶಕ್ಕೆ ದಾರಿಮಾಡಿಕೊಟ್ಟರೆ ಮುಂಬಯಿ ನಗರವೊಂದು ಸಿಗಬಹುದು—ಸಿಗದೆಯೂ ಹೋಗಬಹುದು—ಆದರೆ ದೇಶದ ಈ ಭಾಗವು ಶಾಶ್ವತವಾಗಿ ಕಷ್ಟಕ್ಕೆ ಒಳಗಾಗ ಬೇಕಾಗಿ ಬರುವುದು ಕಟ್ಟಿಟ್ಟ ಮಾತು. ಆದುದರಿಂದ ಹಿರಿಯರು ತಪ್ಪಿ ನಡೆದರೆಂದು ಕಿರಿಯರೂ ತಪ್ಪಿ ನಡೆಯಬಾರದು ಎಂಬ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ

ಸ್ತುತ್ಯ ನಿಶ್ಚಯ

ಸುದೈವದಿಂದ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸಿನಲ್ಲಿರುವ ಮುಖಂಡರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆಂದು ತಿಳಿದು ಬರುತ್ತದೆ. ವರಿಷ್ಠರು ಮುಂಬಯಿ ನಗರದ ವಿಷಯದಲ್ಲಿ ಮಹಾರಾಷ್ಟ್ರೀಯರ ಪ್ರಾಮಾಣಿಕ ಅಭಿಪ್ರಾಯಗಳನ್ನೂ ನ್ಯಾಯವಾದ ಆಕಾಂಕ್ಷೆಯನ್ನೂ ಕಡೆಗಣಿಸಿ ನಡೆದಿದ್ದರೂ ಕಾಂಗ್ರೆಸನ್ನು ಮಹಾರಾಷ್ಟ್ರ ಪ್ರದೇಶದಲ್ಲಿ ಬಲಹೀನಗೊಳಿಸುವುದಕ್ಕೆ ಇದು ಕಾರಣವಾಗಕೂಡದು ಎಂದು ಮಹಾರಾಷ್ಟ್ರದ ಕಾಂಗ್ರೆಸು ಧುರೀಣರು ಭಾವಿಸಿದ್ದಾರೆ. "ನಮಗೆ ನೆಹರುಗಳು ಬೇಕು", "ಕಾಂಗ್ರೆಸು ಸಂಸ್ಥೆಯೇ ಮುಂಬಯಿ ನಗರಕ್ಕಿಂತ ಹೆಚ್ಚು ಶ್ರೇಷ್ಠ" ಎಂಬ ವಿವೇಕಸಮ್ಮತವಾದ ನಿರ್ಧಾರಕ್ಕೆ ಮಹಾರಾಷ್ಟ್ರದ ಮುಖಂಡರು ಬಂದಿದ್ದಾರೆ. ಇದನ್ನು ವೈರಿ ಸ್ಥಾನದಲ್ಲಿರುವ ಮಹಾನುಭಾವನಾದರೂ ಮೆಚ್ಚಿಕೊಳ್ಳಬೇಕು. ಕಾಂಗ್ರೆಸಿನ ಶಿಸ್ತು, ವರಿಷ್ಠರ ನಿಷ್ಠೆಯ ಎಂಬಿತ್ಯಾದಿ ಇಕ್ಕಟ್ಟಿನ ಪ್ರಸಂಗಗಳಲ್ಲಿ ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಡದೆ ಸಾವಧಾನದಿಂದಲೂ ಮನಸ್ಸೋಲಿಸುವಿಕೆಯ ಮಾರ್ಗದಿಂದಲೂ ಸಾಗಲು ಮುಂದಾದ ಮಹಾರಾಷ್ಟ್ರೀಯರ ದೂರದರ್ಶಿತ್ವವನ್ನು ಕೊಂಡಾಡದಿರಲಾಗುವುದಿಲ್ಲ. ದೇಶದ ಹಿತವೆಂದು ಪರಿಷ್ಠರೇನು ಹೇಳುತ್ತಾ ಬಂದಿರುವರೋ ಅದನ್ನು ವರಿಷ್ಠರಿಗಿಂತ ಹೆಚ್ಚಾಗಿ ಗಮನಿಸಲು ಮುಂದಾದ ಕೆಳತಂತಸ್ತಿನ ಸಾಮಾನ್ಯ ಮಹಾರಾಷ್ಟ್ರೀಯ ಕಾಂಗ್ರೆಸಿಗರಿಗೆ ಶುಭಾಶಯಗಳನ್ನು ಅರ್ಪಿಸೋಣ!

ಬಿಹಾರ - ಬಂಗಾಲಗಳು ಒಂದಾಗುವ ಸಂಭವ

ರಾಜ್ಯಗಳ ಪುನಾರಚನೆಯ ಪ್ರಶ್ನೆಯ ಹೊಸ ಸ್ವರೂಪ

ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಕಾಂಗ್ರೆಸಿನ ವರಿಷ್ಠ ಮಂಡಳವು ವಿಚಾರಿಸುತ್ತಿದ್ದಂತೆಯೆ ಬಿಹಾರ ಮತ್ತು ಬಂಗಾಳ ರಾಜ್ಯಗಳ ಮುಖ್ಯ ಮಂತ್ರಿಗಳು ತಮ್ಮೆರಡು ರಾಜ್ಯಗಳನ್ನು ಒಂದುಗೂಡಿಸಿ ಪೂರ್ವ ಪ್ರದೇಶವೆಂಬ ಹೊಸ ರಾಜ್ಯವನ್ನು ನಿರ್ಮಿಸಲು ಸಮ್ಮತಿಸಿ ಪ್ರಕಟಣೆಯೊಂದನ್ನು ಹೊರಡಿಸಿದುದರಿಂದ ಇಡೀ ಪ್ರಶ್ನೆಗೆ ಹೊಸರೂಪ ಬಂದಿದೆ ಎಂದು ರಾಜಕೀಯ ವರ್ಗಗಳಲ್ಲಿ ಹೇಳಲಾಗುತ್ತದೆ. ಇಬ್ಬರೂ ಮುಖ್ಯ ಮಂತ್ರಿಗಳು ತಂತಮ್ಮ ಮಂತ್ರಿ ಮಂಡಳದ ಸದಸ್ಯರ ಮತ್ತು ಶಾಸನಾಂಗದಲ್ಲಿರುವ ಪ್ರತಿನಿಧಿಗಳ ಅಭಿಪ್ರಾಯವನ್ನು ತಿಳಿದುಕೊಂಡ ಬಳಿಕವೇ ವಿವರಗಳನ್ನು ಗೊತ್ತುಪಡಿಸಲಾಗುವುದೆಂದು ವಿಧಿತಪಡಿಸಿದ್ದರೂ ದೇಶದಾದ್ಯಂತ ಕಾಂಗ್ರೆಸಿನ ಧುರೀಣರೆನಿಸಿದವರು ಬಂಗಾಲ ಮತ್ತು ಬಿಹಾರ ರಾಜ್ಯಗಳ ಮುಖ್ಯ ಮಂತ್ರಿಗಳು ಜನತೆಗೆ ನಿಜವಾದ ಮಾರ್ಗದರ್ಶನ ಮಾಡಿರುವರೆಂದು ಹೇಳತೊಡಗಿದ್ದಾರೆ. ಇದಕ್ಕೆ ನೆಹರು ಮತ್ತು ರಾಜಾಜಿಯಂಥವರ ಅನುಮೋದನೆಯೂ ಸಿಕ್ಕಿದೆ.

ಇನ್ನೂ ನಿರ್ಧಾರವಾಗಿಲ್ಲ

ಇದರ ಪರಿಣಾಮವಾಗಿ ಒಂದಕ್ಕಿಂತ ಹೆಚ್ಚು ಪ್ರಧಾನ ಭಾಷೆಗಳುಳ್ಳ ವಿಶಾಲವಾದ ರಾಜ್ಯಗಳನ್ನು ಹೊಸತಾಗಿ ರಚಿಸಬೇಕೆಂಬ ಅಭಿಪ್ರಾಯಕ್ಕೆ ಚಾಲನೆಯು ದೊರಕಿದೆ. ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಹಿಂದೂಡಿ ಬಿಡುವುದೇ ಲೇಸೆಂದು ಹೇಳುತ್ತಿದ್ದ ಸಣ್ಣ ಗುಂಪೊಂದು ಸಹ ಈಗ ಹೊಸ ಮಾದರಿಯ ಪುನಾರಚನೆಗೆ ಬೆಂಬಲ ಕೊಡುತ್ತಿರುವಂತೆ ಕಾಣಿಸಿದೆ. ಹಾಗಾಗಿ ಮುಂಬಯಿ ನಗರದ ಕುರಿತು ಎದ್ದಿರುವ ಕಲಹವನ್ನು ಅಂತ್ಯಗೊಳಿಸಲು ಮುಂಬಯಿಯನ್ನು ದ್ವಿಭಾಷಾ ರಾಜ್ಯವಾಗಿಯೋ ರಾಜಸ್ಥಾನವನ್ನೂ ಸೇರಿಸಿಕೊಂಡು ತ್ರಿಭಾಷಾ ರಾಜ್ಯವಾಗಿಯೋ ರೂಪಿಸಬಹುದು; ಇದಕ್ಕೆ ಪಶ್ಚಿಮ ಪ್ರದೇಶವೆಂದು ಹೆಸರಿಡಬಹುದು ಎಂದು ಹೇಳಲಾಗಿದೆ. ಈಗಿನ ಮದ್ರಾಸು, ಕೊಡಗು, ಮೈಸೂರು, ತಿರುಕೊಚ್ಚಿಗಳನ್ನೊಳಗೊಂಡ ದಕ್ಷಿಣ ಪ್ರದೇಶವನ್ನು ರಚಿಸಬಹುದೆಂದು ಇನ್ನೊಂದು ಸೂಚನೆ ಬಂದಿದೆ. ಆಂಧ್ರ ಮತ್ತು ಕರ್ನಾಟಕಗಳನ್ನು ಒಂದುಗೂಡಿಸಿ ವಿಶಾಲ ರಾಜ್ಯವನ್ನು ರಚಿಸಿದರೆ ಆಗ ಬಳ್ಳಾರಿಯ ಪ್ರಶ್ನೆಯೂ ಕೋಲಾರದ ಮೇಲಿನ ತೆಲುಗರ ಬೇಡಿಕೆಯೂ ತಲೆ ಎತ್ತಲಾರದೆಂದೂ ವಿಜಯನಗರ ಸಾಮ್ರಾಜ್ಯದ ನೆನಪನ್ನು ಪುನರುಜ್ಜೀವಿಸಿದ ಹಾಗಾಗುವುದೆಂದೂ ಬೇರೊಂದು ಸಲಹೆ ಮುಂಡಿಸಲ್ಪಟ್ಟಿದೆ. ಆದರೆ ಯಾವುದೇ ಸೂಚನೆಯೂ "ಇದಮಿತ್ಥಂ" ಎಂದು ಹೇಳುವ ಮಟ್ಟಕ್ಕೆ ಇನ್ನೂ ಬಂದಿಲ್ಲ.

ಮಸೂದೆಯ ಮೇಲೆ ಚರ್ಚೆ

ಸಾಮಾನ್ಯವಾಗಿ ಬಿಹಾರ ಮತ್ತು ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿಗಳ ಹೇಳಿಕೆಗೆ ಸ್ವಾಗತ ದೊರೆತಿದ್ದರೂ ಸಹ ಭಾರತ ಸರಕಾರವು ಅಧಿಕೃತವಾಗಿ ಈ ಒಡಂಬಡಿಕೆಯನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ತಿಳಿದು ಬರುತ್ತದೆ. ಏಕೆಂದರೆ ಜನತೆಯ ಅಭಿಪ್ರಾಯವನ್ನು ತಿಳಿದುಕೊಳ್ಳುವ ಪ್ರಯತ್ನ ಇನ್ನು ಮುಂದೆ ನಡೆಯಬೇಕಾಗಿದೆ; ಜನತೆಯ ತೀರ್ಮಾನ ಹೇಗಿರುವುದೆಂಬುದನ್ನು ತಿಳಿಯುವ ವರೆಗೆ ಭಾರತ ಸರಕಾರವು ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಈಗಿನ ಕಾರ್ಯಕ್ರಮದಂತೆಯೇ ಮುಂದೊತ್ತಿ ಬಿಡಿಸಲು ವ್ಯವಸ್ಥೆ ಮಾಡಿದೆ. ತದನುಸಾರವಾಗಿ ಇಷ್ಟರಲ್ಲಿಯೇ ಕೇಂದ್ರ ಸರಕಾರವು ವಿವಿಧ ರಾಜ್ಯ ಸರಕಾರಗಳಿಗೆ ಪುನಾರಚನೆಗೆ ಸಂಬಂಧಿಸಿದ ಕರಡು ಮಸೂದೆಯನ್ನು ಆಯಾ ರಾಜ್ಯದ ಶಾಸನಾಂಗಗಳ ಅವಗಾಹನೆಗೆ ಮತ್ತು ಚರ್ಚೆಗೆಂದು ಕಳಿಸಲಿದೆ. ಮದ್ರಾಸಿನ ಶಾಸನಾಂಗದಲ್ಲಿ ಫೆಬ್ರವರಿಯ ೨೦ನೇ ದಿನಾಂಕ ಈ ಕರಡು ಮಸೂದೆಯ ಮೇಲೆ ಚರ್ಚೆ ಪ್ರಾರಂಭವಾದೀತೆಂದು ಮಂತ್ರಿ ಶ್ರೀ ಸುಬ್ರಹ್ಮಣ್ಯಮರ ಹೇಳಿಕೆಯು ತಿಳಿಸುತ್ತದೆ. ಈ ಕರಡು ಮಸೂದೆಯ ಮೇಲಿನ ಚರ್ಚೆಯ ಕಾಲದಲ್ಲಿ ಗಡಿಪ್ರದೇಶಗಳ ಬಗ್ಗೆ ಕೇಂದ್ರ ಸರಕಾರ ವಹಿಸಿದ ನಿಲುಮೆಯ ಕುರಿತು ಮತಭೇದ ವ್ಯಕ್ತವಾಗುವುದು ಸಂಭವನೀಯ.

ದಕ್ಷಿಣ ಪ್ರದೇಶ

ವರದಿಗಳಿಗನುಸಾರವಾಗಿ ಇದೇ ೧ನೇ ದಿನಾಂಕ ಬೆಂಗಳೂರಿಗೆ ಆಗಮಿಸಿದ ಪ್ರಧಾನಿ ನೆಹರುಗಳೊಡನೆ ದಕ್ಷಿಣ ಪ್ರದೇಶದ ಕುರಿತು ಮಾತುಕತೆ ನಡೆಸುವ ಅವಕಾಶವನ್ನು ಮೈಸೂರು, ಮದ್ರಾಸು ಮತ್ತು ತಿರುಕೊಚ್ಚಿ ರಾಜ್ಯಗಳ ಮುಖ್ಯ ಮಂತ್ರಿಗಳು ಪಡೆದಿರುವರೆಂದು ತಿಳಿದು ಬರುತ್ತದೆ. ದಕ್ಷಿಣ ಪ್ರದೇಶದ ಕಲ್ಪನೆಯು ಕಾಸರಗೋಡಿನಂಥ ಗಡಿ ಪ್ರದೇಶದ ವಿವಾದಗಳ ಮೇಲೆ ಇಷ್ಟವಾದ ಪರಿಣಾಮ

(೬ನೇ ಪುಟ ನೋಡಿರಿ)

50 ವರ್ಷಗಳು....

ನಮ್ಮ ಸುವರ್ಣ ಮಹೋತ್ಸವದ ವರ್ಷದ ಪ್ರಾರಂಭದಲ್ಲಿ ಕೆನರಾ ಬ್ಯಾಂಕಿನ **50** ವರ್ಷಗಳ ಪ್ರಗತಿಪರ ಬೆಳವಣಿಗೆಯಲ್ಲಿ ನೆರವಾದ ನಮ್ಮ ಅನೇಕ ಸ್ನೇಹಿತರಿಗೆ ನಮ್ಮ ಹಾರ್ದಿಕ ವಂದನೆಗಳು. ಇನ್ನೂ ಹೆಚ್ಚಿನ ಬ್ಯಾಂಕಿಂಗ್ ಸೇವೆಗಳನ್ನು ಸಲ್ಲಿಸುವ ಆಶ್ವಾಸನೆ ನಮ್ಮದು.

CANARA BANK LIMITED

ಕೆನರಾ ಬ್ಯಾಂಕ್ ಲಿಮಿಟೆಡ್

1906 **1956**

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, **UDIPI.** S. KANARA.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

NAVAYUGA

Popular Kannada Weekly

Founder:—

Sri **A. B. SHETTY,** *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨-೨-'೫೬	೨೨

ಬಣ್ಣದ ಕನ್ನಡಕ

ಜಿನೇವ ಸಮ್ಮೇಳನದ ಬಳಿಕ ಅಮೇರಿಕ ಮತ್ತು ರಶಿಯದ ವರಿಷ್ಠರಲ್ಲಿ ತುಸು ಸೌಹಾರ್ದಯುತವಾದ ವರ್ತನೆ ಕಂಡು ಬಂದಿದೆ. ಆಗಾಗ್ಗೆ ಎರಡೂ ದೇಶಗಳ ಪ್ರಧಾನಿಗಳ ನಡುವೆ ಪತ್ರವ್ಯವಹಾರ ನಡೆಯುತ್ತಿದ್ದಿತು. ಜನವರಿ ತಿಂಗಳ ಕೊನೆಯ ವಾರದಲ್ಲಿ ರಶಿಯದ ಪ್ರಧಾನಿ ಬುಲ್ಗಾನಿನ್ನರು ಅಧ್ಯಕ್ಷ ಐಸೆನ್ ಹೋವರರಿಗೆ ಬರೆದ ಪತ್ರದಲ್ಲಿ ಉಭಯ ದೇಶಗಳೊಳಗೆ ೨೦ ವರುಷಗಳ ಅವಧಿಯ ಅನಾಕ್ರಮಣ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಸೂಚಿಸಿದ್ದರು. ಅಂತಾರಾಷ್ಟ್ರೀಯ ತ್ವೇಷವನ್ನು ತಗ್ಗಿಸುವುದಕ್ಕೂ ಶಸ್ತ್ರ ಸ್ಪರ್ಧೆಯ ವೇಗವನ್ನು ಇಳಿಸುವುದಕ್ಕೂ ಶಾಂತಿ ಸಾಧನೆಗೆ ನೆರವಾಗುವುದಕ್ಕೂ ಉದ್ದೇಶಿಸಿ ಈ ಸಲಹೆಯನ್ನು ಅಧ್ಯಕ್ಷ ಐಕರ ಪರ್ಯಾಲೋಚನೆಗಾಗಿ ಮುಂದಿಡಲಾಯಿತು. ಈಚೆಗೆ ಹೆಚ್ಚುತ್ತಿರುವ ಅಮೇರಿಕ-ರಶಿಯ ಸಹಕಾರದ ಪ್ರಮಾಣವನ್ನು ಇನಷ್ಟು ವೃದ್ಧಿಸಲು ಹಾಗು ಉಭಯ ರಾಷ್ಟ್ರಗಳನ್ನು ಹತ್ತಿರಕ್ಕೆ ತಂದುಕೊಳ್ಳಲು ಯುದ್ಧ ಭಯವನ್ನು ನಿರ್ಮೂಲಿಸುವ ಅನಾಕ್ರಮಣ ಒಪ್ಪಂದವು ಸಹಾಯಕವಾದೀತೆಂದು ಬುಲ್ಗಾನಿನ್ ಆಶಿಸಿದ್ದರು. ಈ ಪತ್ರಕ್ಕೆ ಅಧ್ಯಕ್ಷ ಐಸೆನ್ ಹೋವರ್ ಕೂಡಲೇ ಉತ್ತರವಿತ್ತಿದ್ದಾರೆ. ಮತ್ತೀ ಉತ್ತರವು ಸಲಹೆಯನ್ನು ತಿರಸ್ಕರಿಸುವ ರೂಪದಲ್ಲಿದೆ. ಇದು ನಿಜಕ್ಕೂ ಶೋಚನೀಯವಾದ ವಿಷಯ. ಮಾತುಕತೆಗಳ ಬಾಗಿಲನ್ನು ಅಧ್ಯಕ್ಷ ಐಕರು ಮುಚ್ಚಿಲ್ಲವೆಂಬುದೇನೊ ನಿಜ. ಅವರು ಬುಲ್ಗಾನಿನ್ನರ ಸೂಚನೆಯ ಕುರಿತು ತನ್ನ ಪ್ರತಿಕ್ರಿಯೆಗಳನ್ನು ತಕ್ಷಣ ತಿಳಿಸಿದ್ದರೂ ತನ್ನ ನಿಲುವಿನ ಬಗ್ಗೆ ಬುಲ್ಗಾನಿನ್ನರು ಇನ್ನು ಮುಂದೆ ಹೇಳಬಹುದಾದ ವಿಷಯಗಳ ನಿರೀಕ್ಷಣೆಯಲ್ಲಿರುವುದು ಸುಳ್ಳಲ್ಲ. ಆದರೆ ಬುಲ್ಗಾನಿನ್ನರ ಪತ್ರದ ಹಿಂದಿದ್ದ ಭಾವನೆಗೂ ಐಕರ ಪ್ರತ್ಯುತ್ತರದ ಹಿನ್ನೆಲೆಯಲ್ಲಿರುವ ಮನೋಭಾವಕ್ಕೂ ಅಜಗಜಾಂತರವಿದೆ. ರಶ್ಯದ ಸರಕಾರವು ಸಾಮ್ಯ ವರ್ತನೆಯ ಯಾವುದೇ ಲಕ್ಷಣವನ್ನು ಪ್ರಕಟಿಸಿದರೂ ಅದನ್ನು ಒಂದೋ ದೌರ್ಬಲ್ಯದ ಪ್ರತೀಕ ಅಥವಾ ಪ್ರಚಾರದ ತಂತ್ರ ಎಂದು ದೃಢವಾಗಿ ನಂಬುವ ಅಮೇರಿಕದ ಮೂಢ ವರ್ತನೆಯು ಅನಾಕ್ರಮಣ ಒಪ್ಪಂದದ ಸೂಚನೆಯನ್ನು ಸಹ ಇದೇ ಬಣ್ಣದ ಕನ್ನಡಕದಿಂದ ನೋಡಿದೆ. ಮತ್ತು ರಶ್ಯದ ಪ್ರಾಮಾಣಿಕತೆಯನ್ನು ಪ್ರಶ್ನಿಸಿದೆ. ಮಾನಧನರೂ ಅಭಿಮಾನಪರರೂ ಆದ ನಾಯಕರು ಬೇರಾರಿಗೂ ಹೀಗೆ ತೇಜೋವಧೆಯನ್ನೂ ಮುಖಭಂಗವನ್ನೂ ಹೊಂದುವಂತೆ ಒಂದು ಜನಾಂಗವು ಮಾಡುತ್ತಾ ಹೋದರೆ ಪರಿಣಾಮವೇನಾದೀತು? ಭಬ್ರುವಾಹನನು ಅರ್ಜುನನೊಡನೆ ಸೆಣಸಿದ ಪ್ರಸಂಗ ಭಾರತೀಯರ ನೆನಪಿಗೆ ಬಾರದೆ ಇರಲಾರದು. ಅಧ್ಯಕ್ಷ ಐಕರು ಬುಲ್ಗಾನಿನ್ನರ ಸೂಚನೆಗೆ ಕೊಟ್ಟ ಉತ್ತರವು ಅರ್ಜುನನ ಮೂದಲಿಕೆಯ ಮಾತುಗಳಷ್ಟೇ ಉದ್ಧಟತನದಿಂದ ಕೂಡಿದೆ ಎಂದರೆ ಅತಿಶಯೋಕ್ತಿಯಾಗದು. ಬುಲ್ಗಾನಿನ್ನರು ತಮ್ಮೆರಡು ರಾಷ್ಟ್ರಗಳಲ್ಲಿ ಆಚರಣೆಯಲ್ಲಿರುವ ರಾಜಕೀಯ ಪದ್ಧತಿಯು ಸ್ನೇಹ-ಸಹಕಾರಗಳಿಗೆ ಅಡ್ಡಿಯಾಗಲಾರದೆಂದು ವಿಶ್ವಾಸವನ್ನು ಸೂಚಿಸಿದ್ದರು; ಇದನ್ನು ಐಕರೂ ಒಪ್ಪಿರುವಂತೆ ಕಾಣುತ್ತದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ರಶಿಯದೊಡನೆ ಸಹಪಂಕ್ತಿ ಭೋಜನ ಮಾಡುವ ಅಮೇರಿಕ ಇದನ್ನು ಪ್ರಕಟವಾಗಿ ಒಪ್ಪದಿರುವುದೆಂದರೆ ಮೂರ್ಖತನವೆನ್ನೋಣ, ಆದರೆ ಒಪ್ಪಂದ ಮಾಡಿಕೊಂಡ ಮಾತ್ರಕ್ಕೆ ಕೆಲಸವಾಗದು, ಮನೋಭಾವನೆಯೇ ಸುಧಾರಿಸಬೇಕು— ಎಂದು ಐಕರು ತಮ್ಮ ನಿಲುವೆಯನ್ನು ವಿವರಿಸಿದ್ದಾರೆ. ರಶಿಯದ ಮನೋಭಾವನೆಯು ಬದಲಾಗಿಲ್ಲವೆಂಬುದನ್ನು ವ್ಯಕ್ತಪಡಿಸುವುದಕ್ಕೋಸ್ಕರ ಜಿನೇವ ಸಮ್ಮೇಳನದ ಬಳಿಕ ರಶಿಯವು ಪಾಶ್ಚಾತ್ಯ ರಾಷ್ಟ್ರಗಳ ವಿರುದ್ಧ ದ್ವೇಷ ಭಾವನೆಯನ್ನು ಪ್ರಚಾರ ಪಡಿಸುವುದಕ್ಕೆ ಉದ್ಯುಕ್ತವಾಯಿತೆಂದು ಆರೋಪಿಸಿದ್ದಾರೆ. ಆದುದರಿಂದ ಮಾತಿಗಲ್ಲ, ಕೃತಿಗೆ ಮಹತ್ವ ಎಂದು ಐಕರು ಹೇಳಿದ್ದಾರೆ. ತಮ್ಮೆರಡು ರಾಷ್ಟ್ರಗಳು ಈಗಾಗಲೇ ಸಂಯುಕ್ತ ರಾಷ್ಟ್ರ ಸಂಘದ ತಾಮ್ರಪಟವೆಂಬ ಗಾಢವಾದ ಒಡಂಬಡಿಕೆಗೆ ಬದ್ಧವಾಗಿವೆ ಎಂಬ ವಿಷಯಕ್ಕೂ ಅವರು ಮಹತ್ವವನ್ನು ನೀಡಿದ್ದಾರೆ. ಈ ತಾಮ್ರಪಟದ ಆದೇಶಾನುಸಾರ ನಡೆಯಲು ತಮಗಿನ್ನೂ ಸಾಧ್ಯವಿಲ್ಲದಿರುವಾಗ ಮತ್ತಿದು ಪದೇ ಪದೇ ಭಂಗಿಸಲ್ಪಟ್ಟಿರುವಾಗ ಹೊಸತೊಂದು ಅನಾಕ್ರಮಣ ಒಪ್ಪಂದದಿಂದಾಗುವ ಫಲವೇನೂ ಇಲ್ಲವೆಂದು ಐಸೆನ್‌ಹೋವರ್ ಅಭಿಪ್ರಾಯಪಟ್ಟಿದ್ದಾರೆ. ಈ ತಾಮ್ರಪಟದಂತೆ, ಎಲ್ಲಿಯೇ ಆಕ್ರಮಣವಾದರೂ ಆದನ್ನು ಪ್ರತಿಬಂಧಿಸಲು ಇತರ ರಾಷ್ಟ್ರಗಳು ಬದ್ಧವಿವೆ; ಕೊರಿಯದಲ್ಲಿ ಈ ಸೂತ್ರದಂತೆಯೇ ಕಾರ್ಯಾಚರಣೆಯು ನಡೆಯಿತು. ಹೀಗಿದ್ದರೂ ಪ್ರಾದೇಶಿಕ ಸೈನಿಕ ಒಪ್ಪಂದಗಳ ಆವಶ್ಯಕತೆಯೇನು?—ಎಂಬ ಪ್ರಶ್ನೆಯು ಈ ಸಂದರ್ಭದಲ್ಲಿ ಬರಬಹುದೆಂಬ ಅಂಶವನ್ನು ಮಾತ್ರ ಐಕರು ಮರೆತಹಾಗಿದೆ. ಪ್ರಾದೇಶಿಕ ಸೈನಿಕ ಒಪ್ಪಂದಗಳು ಒಳ್ಳೆಯ ಪರಿಣಾಮವನ್ನು ಮಾಡುತ್ತವಾದರೆ, ಅನಾಕ್ರಮಣ ಒಪ್ಪಂದವು ಹಾಗೆ ಮಾಡಲಾರದೆ? ಇಲ್ಲವೆಂದೇ ಅಮೇರಿಕದ ಅಭಿಪ್ರಾಯವೆಂದು ಹೇಳಬೇಕಾಗುತ್ತದೆ; ಆದರೆ ಈ ಅಭಿಪ್ರಾಯವು ಲೋಕದ ನಯವಿದರ ಸಹಾನುಭೂತಿಯನ್ನು ಎಷ್ಟಕ್ಕೂ ಗಳಿಸಲಾರದು. ಅನಾಕ್ರಮಣ ಒಪ್ಪಂದವನ್ನು ಮಾಡಿಕೊಳ್ಳೋಣ ಎಂಬ ಮಾತನ್ನು ಮುಂದಿಡುವ ರಾಷ್ಟ್ರದ ಘನತೆಯನ್ನು ಅಮೇರಿಕವು ತನ್ನ ಉದ್ಧಟತನದಿಂದ ಮತ್ತಷ್ಟು ಹೆಚ್ಚಿಸಿದೆ ಎನ್ನಬಹುದು. ಕಮ್ಯುನಿಸ್ಟರು ಸಂಪೂರ್ಣ ಶರಣಾಗತರಾಗಬೇಕೆಂಬುದೇ ಅಮೇರಿಕದ ಇಚ್ಛೆಯಾಗಿದ್ದರೆ, ಈ ಆಶೆ ಎಂದಿಗೂ ಕೈಗೂಡಿಬರಲಾರದು. ಆದರೆ ಲೋಕ ಶಾಂತಿಯ ಬಯಕೆ ಅಮೇರಿಕಕ್ಕೆ ನಿಜಕ್ಕೂ ಇರುವುದಾದರೆ ಗಾಢವಾದ ಸಹಾನುಭೂತಿಯಿಂದ ಅನಾಕ್ರಮಣ ಒಪ್ಪಂದದಂಥ ಸೂಚನೆಗಳನ್ನು ಅದು ವಿಚಾರಿಸಬೇಕು. ಕೂಡಲೇ ತಳ್ಳಿ ಬಿಡುವಷ್ಟು ಲಘುವಾದ ವಿಷಯವೆಂದೂ ಅದಾಗದು; ಬಣ್ಣದ ಕನ್ನಡಕದಿಂದ ನೋಡುವ ಮನೋಭಾವವೂ ಇಲ್ಲಿ ಸಲ್ಲದು.

ಗೇಣಿ ನಿರ್ಣಯ ಮಸೂದೆ

ಪರಿಶೀಲಕ ಸಮಿತಿಯ ಅವಗಾಹನೆಗೆ

ಮದ್ರಾಸು ಸರಕಾರದವರು ಸಾಗುವಳಿದಾರ ಒಕ್ಕಲುಗಳಿಗೆ ಹಿತವೆನಿಸುವಂತೆ ಗೇಣಿ ನಿರ್ಣಯ ಮಾಡುವ ಮಸೂದೆಯನ್ನು ಕೆಲವು ದಿನಗಳ ಹಿಂದೆ ಪ್ರಕಟಿಸಿದ್ದರಷ್ಟೇ! ಕಳೆದ ವಾರ ನಾಲ್ಕು ದಿನಗಳವರೆಗೆ ಸೇರಿದ ಮದ್ರಾಸಿನ ಶಾಸನಾಂಗದಲ್ಲಿ ಇದು ಚರ್ಚೆಗೆ ಬಂದು, ಪರಿಶೀಲಕ ಸಮಿತಿಗೆ ಮಸೂದೆಯನ್ನು ಒಪ್ಪಿಸಿ ಅಗತ್ಯವಿರುವ ತಿದ್ದುಪಡಿಗಳನ್ನು ಮಾಡಬೇಕೆಂಬ ಮಂತ್ರಿಗಳ ಸೂಚನೆಯು ಮನ್ನಿಸಲ್ಪಟ್ಟಿತು. ಕೆಳಮನೆಯಿಂದ ಈ ಸಮಿತಿಗೆ ಆಯ್ಕೆ ಹೊಂದಿದ ಸದಸ್ಯರಲ್ಲಿ ದಕ್ಷಿಣ ಕನ್ನಡದ ಜನಾಬ್ ಎಂ. ಎಸ್. ಮೊಗ್ರಾಲ್ (ಕಾಂಗ್ರೆಸು) ಮತ್ತು ಶ್ರೀ. ಎಸ್. ಎಸ್. ಕೊಳ್ಕೆಬೈಲ್ (ಪ್ರಜಾ ಸಮಾಜವಾದಿ) ಇವರಿದ್ದಾರೆ. ಮೇಲ್ಮನೆಯಿಂದ ಆರಿಸಲಾದವರಲ್ಲಿ ಶ್ರೀ. ಎಸ್. ನರ್ಸಪ್ಪಯ್ಯ (ಕಾಂಗ್ರೆಸ್) ಒಬ್ಬರು.

ಒಕ್ಕಲೆಬ್ಬಿಸದಂತೆ ರಕ್ಷಣೆ

ಅಧಿವೇಶನವನ್ನು ರಾಜ್ಯಗಳ ಪುನಾರಚನೆಯ ಕುರಿತು ಭಾರತ ಸರಕಾರ ತಯಾರಿಸುವುದೆಂದಿದ್ದ ಕರಡು ಮಸೂದೆಯ ಚರ್ಚೆಗೆಂದು ನೆರೆಯಿಸಿದ್ದರು. ಆದರೆ ಈ ಕರಡು ಮಸೂದೆಯು ಇನ್ನೂ ಸಿದ್ಧವಾಗಿಯೇ ಇಲ್ಲವಾದುದರಿಂದ ಅಧಿವೇಶನ ಮುಂದರಿಸಲ್ಪಟ್ಟಿತು ಹಾಗೆ ಮುಂದರಿಯುವುದಕ್ಕೆ ಮುಂಚೆ ಈಗಾಗಲೇ ಜ್ಯಾರಿಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಸಾಗುವಳಿದಾರರನ್ನು ಕ್ರಮವಾಗಿ ಗೇಣಿ ಕೊಡುತ್ತಾ ಬಂದರೆ ಒಕ್ಕಲೆಬ್ಬಿಸಬಾರದೆಂಬ ಶಾಸನಕ್ಕೆ ಅವಧಿಯನ್ನು ಬೆಳೆಸುವ ಸೂಚನೆ ಅಂಗೀಕಾರವಾಯಿತು.

"ಹಿಂಸೆಗೆ ಮಣಿಯೆವು"

ಕಾಂಗ್ರೆಸಿನ ವರಿಷ್ಠ ಸಮಿತಿಯು ಒಂದು ಗೊತ್ತುವಳಿಯ ಮೂಲಕ ಮುಂಬಯಿ ಮತ್ತಿತರ ಕಡೆಗಳಲ್ಲಿ ನಡೆದ ಹಿಂಸಾಚಾರಗಳನ್ನೂ ವಿಧ್ವಂಸಕ ಕೃತ್ಯಗಳನ್ನೂ ಖಂಡಿಸಿದೆಯಲ್ಲದೆ, ಇಂಥ ಅನಪೇಕ್ಷಿತ ವರ್ತನೆಯನ್ನು ಪ್ರೋತ್ಸಾಹಿಸಬಹುದಾದ ರೀತಿಯಲ್ಲಿ ಯಾರೊಬ್ಬರೂ—ಮುಖ್ಯವಾಗಿ ಕಾಂಗ್ರೆಸಿಗರು—ನಡೆದುಕೊಳ್ಳಬಾರದಾಗಿ ಹೇಳಿದೆ. ವಿಧ್ವಂಸಕ ಕೃತ್ಯಗಳನ್ನು ಸರಕಾರವು ತನ್ನ ಸರ್ವ ಶಕ್ತಿಯಿಂದ ಹತ್ತಿಕ್ಕುವುದೆಂದೂ ಯಾವುದೇ ನಿರ್ಧಾರಗಳನ್ನು ಹಿಂಸಾಚಾರಕ್ಕೆ ಹೆದರಿ ಬದಲಿಸಲಾಗುವುದಿಲ್ಲವೆಂದೂ ವರಿಷ್ಠ ಸಮಿತಿ ಖಚಿತ ಪಡಿಸಿದೆ.

ಢೇಬರರ ಉಪದೇಶ

ಕಾಂಗ್ರೆಸಾಧ್ಯಕ್ಷ ಢೇಬರರು ಒಂದು ಪರಿಪತ್ರದಲ್ಲಿ ನಾಯಕರು ದೇಶದ ವಿಶಾಲ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ತೀರ್ಮಾನಗಳನ್ನು ನಾಗರಿಕರು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಬೇಕೆಂದು ವಿನಂತಿಸಿದ್ದಾರೆ. ವಿವಾದಕ್ಕೆ ಒಂದು ಅಂತ್ಯವಿರಲೇ ಬೇಕು ಎಂಬುದನ್ನು ಒಪ್ಪಿಕೊಂಡರೆ, ಉತ್ತರ—ದಕ್ಷಿಣ ಧ್ರುವಗಳಷ್ಟು ಅಂತರದ ಅಭಿಪ್ರಾಯಗಳನ್ನು ಮುಂದಿಡುವ ವಿಶಿಷ್ಟ ಹಿತಾಸಕ್ತಿಯುಳ್ಳ ಎರಡು ಬಣಗಳ ನಿಲುವೆಯ ಕುರಿತು ವರಿಷ್ಠರು ಕೊಡುವ ತೀರ್ಮಾನವೇ ಸಾಧುವಾದುದೆಂಬ ನಂಬಿಕೆಯನ್ನು ಹೊಂದಲೇ ಬೇಕಾಗುತ್ತದೆ; ಇಂಥ ನಿರ್ಧಾರಗಳನ್ನು ನಾಯಕರು ದೀರ್ಘ ವಿಚಾರ ವಿನಿಮಯ ಮತ್ತು ನಿಷ್ಪಕ್ಷಪಾತ ದೃಷ್ಟಿಕೋಣದಿಂದ ಮಾಡುತ್ತಾರೆ ಎಂದು ಢೇಬರರ ಅಭಿಪ್ರಾಯ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED

H. Office: UDIPI (S.India).



ಕುಮಾರಿ ಬಿಲ್ಲೆಗಳು (Govt. Regd.)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಉಡುಪಿ

ಪ್ರಜಾರಾಜ್ಯ ದಿನಾಚರಣೆ— ನಗರ ಸಭೆಯ ಆಶ್ರಯದಲ್ಲಿ ಬೆಳಿಗ್ಗೆ ನಗರಸಭಾಪತಿ ಶ್ರೀ ಕೆ. ಕೆ. ಪೈಗಳು ರಾಷ್ಟ್ರಧ್ವಜಾರೋಹಣಮಾಡಿದರು. ಶ್ರೀಗಳಾದ ಎ. ಜೆ. ಆಳ್ವ, ಬಿ. ಕೃಷ್ಣ ಭಟ್, ಕವಿರಾಜ್ ಎಮ್. ಜಿ. ಶೆಟ್ಟಿಯವರು ಭಾಷಣಮಾಡಿದರು. ಮುನ್ಸಿಪಲ್ ಕಮೀಶನರ್ ಶ್ರೀ ವಿ. ಯು. ಟಿ. ಸಂಜೀವನ್ ಅವರು ವಂದನೆಗಳನ್ನಿತ್ತರು. ಬಳಿಕ ವಿವಿಧ ಪಂದ್ಯಾಟಗಳು ಜರಗಿದವು. ಸಂಜೆ ಶ್ರೀ. ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಕೆ. ಕೆ. ಪೈಗಳು ಸ್ವಾಗತ ಮಾತುಗಳನ್ನಾಡಿದರು. ಡಾ. ಪಿ. ಜಿ. ಆಚಾರ್ಯರ ಭಾಷಣಾ ನಂತರ ಅಧ್ಯಕ್ಷರು ಕೆಲವು ಹಿತವಚನಗಳನ್ನಾಡಿ ವಿವಿಧ ಪಂದ್ಯಾಟಗಳಲ್ಲಿ ಗೆದ್ದವರಿಗೆ ಪಾರಿತೋಷ ವಿತರಣೆ ಮಾಡಿದರು.

ನೇತಾಜಿ ದಿನಾಚರಣೆ— ಪ್ರಜಾ ಸೋಶಿಯಲಿಸ್ಟ್ ಪಕ್ಷದ ಆಶ್ರಯದಲ್ಲಿ ತಾ. 23ರಲ್ಲಿ ನೇತಾಜಿ ಸುಭಾಸ್ ಚಂದ್ರ ಬೋಸರ 59ನೆ ಜನ್ಮದಿನವು ಶ್ರೀ ಬಿ. ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ ಬಿ. ಎಸ್. ಲೂವೀಸರು ಭಾಷಣವಿತ್ತರು. ಶ್ರೀ ಎಮ್. ಆರ್. ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಗ್ರಿಗ್ ಮೆಮೋರಿಯಲ್ ಸ್ಪೋರ್ಟ್ಸ್— ಜಿಲ್ಲಾ ಅಂತರ್ ಶಾಲಾ ಎತ್ಲೆಟಿಕ್ ಸಂಘದ ಕಡೆಯಿಂದ ತಾ. 27 ಮತ್ತು 28ರಲ್ಲಿ ಗಾಂಧಿ ಮೈದಾನದಲ್ಲಿ ಜರಗಿತು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರು ಸ್ವಾಗತಿಸಿದ ಬಳಿಕ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರು ಸ್ಪರ್ಧೆಯನ್ನು ಉದ್ಘಾಟಿಸಿದರು. ಎರಡನೆ ದಿನ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥಸ್ವಾಮಿಗಳವರು ಪಾರಿತೋಷಕವಿತರಣೆ ಮಾಡಿದರು. ಜಿಲ್ಲೆಯ ಹೈಸ್ಕೂಲು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

ವಾರ್ಷಿಕೋತ್ಸವ— ಅ. ಭಾ. ಅಂಚೆ ನೌಕರರ ಉಡುಪಿ ಸಂಘದ ವಾರ್ಷಿಕೋತ್ಸವವು ತಾ. 29ರಲ್ಲಿ ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿಯೂ ಹೊಸ ಕಾರ್ಯಕಾರೀ ಸಮಿತಿಯ ಚುನಾವಣೆಯು ಶ್ರೀ ಕೆ. ವರದರಾಯ ಪೈಗಳ ಅಧ್ಯಕ್ಷತೆಯಲ್ಲಿಯೂ ಜರಗಿತು.

ಗಾಂಧಿಜೀಯವರ ಪುಣ್ಯದಿನವು ತಾ. 30ರಲ್ಲಿ ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿ ಮತ್ತು ಯುವಕ ಕಾಂಗ್ರೆಸ್ ವತಿಯಿಂದ ಪ್ರಾರ್ಥನೆ, ನೂಲುವಿಕೆ, ರಥಬೀದಿಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಿಂದ ಆಚರಿಸಲಾಯಿತು.

ಪ್ರಜಾಪ್ರಭುತ್ವ ದಿನಾಚರಣೆ

ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಉತ್ಸಾಹದಿಂದ ವಿವಿಧ ಕಾರ್ಯಕ್ರಮಗಳಿಂದ ತಾ. 26 ರಲ್ಲು ಜರಗಿದ ಪ್ರಜಾಪ್ರಭುತ್ವ ದಿನಾಚರಣೆಯ ಸುದ್ದಿಗಳು ವಿಶೇಷವಾಗಿ ಬಂದಿವೆ. ಸ್ಥಳಾಭಾವದಿಂದ ಅವನ್ನು ಪ್ರಕಟಿಸಲಾಗಲಿಲ್ಲವೆಂಬ ಬಗ್ಗೆ ವಿಷಾದ ಪಡುತ್ತೇವೆ.

ಸಂ. ನ.

ಕ್ರಿಶ್ಚಿಯನ್ ಹೈಸ್ಕೂಲ್ ವರ್ಧಂತಿಯು— ತಾ. 31ರಲ್ಲಿ ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಎಸ್. ಎನ್. ಮತಾಯಸರು ಶಾಲಾ ವರದಿಯನ್ನೋದಿದರು. ಉಡುಪಿ ಜುಡೀಸಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಎಮ್. ರಾಮಚಂದ್ರ ರಾಯರು ಸ್ವಸ್ತಿ ವಾಚನಮಾಡಿದರು. ನಂತರ ವಿವಿಧ ಕಾರ್ಯಕ್ರಮಗಳಾದುವು.

ಭಾಷಣ— ಸ್ಥಳೀಯ ಬುನಾದಿ ತರಬೇತಿ ಶಾಲಾ ವಿದ್ಯಾರ್ಥಿ ಅಧ್ಯಾಪಕ ಸಂಘದ ಸಭೆಯು ತಾ. 23ರಲ್ಲು ಮುಖ್ಯೋಪಾಧ್ಯಾಯ ಶ್ರೀ ಬಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಶಿವರಾಮ ಕಾರಂತರು "ಗೀತಾ ನಾಟಕಗಳು" ಎಂಬ ವಿಷಯದಲ್ಲಿ ಭಾಷಣವಿತ್ತರಲ್ಲದೆ, ಹಾಯರ್ ಸೀನಿಯರ್ ತರಗತಿಯ 'ವಿವೇಕವಾಣಿ' ಹಸ್ತ ಪತ್ರಿಕೆಯನ್ನು ಉದ್ಘಾಟಿಸಿದರು.

ಜನಸಂಘದ ಸಭೆಯು— ತಾ. 26 ರಲ್ಲು ಶ್ರೀ. ಕೆ. ಕೇಶವ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರದ ಆದೇಶದಂತೆ ರಾಷ್ಟ್ರೀಯ ಏಕ ಸಪ್ತಾಹದ ಉದ್ಘಾಟನಾ ಭಾಷಣವನ್ನು ಶ್ರೀ. ಸೋಮಶೇಖರ ಭಟ್ಟರು ಮಾಡಿದರು. ಶ್ರೀ. ಎಮ್. ವಿಠಲ ಕಿಣಿಯವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಶ್ರೀ. ಕಾರಂತರ ಭಾಷಣ— ಕರ್ನಾಟಕ ಸಂಘ ಮತ್ತು ಯುವಕ ಕಾಂಗ್ರೆಸಿನ ಆಶ್ರಯದಲ್ಲಿ ಶ್ರೀ. ಕೆ ಶಿವರಾಮ ಕಾರಂತರು ಯಕ್ಷಗಾನ ಕಲೆಯ ಕುರಿತು ಮುಕುಂದ ನಿವಾಸದಲ್ಲಿ ಕಳೆದ ತಾ. 21, 22 ಮತ್ತು 23ನೇ ಸಂಜೆ ಭಾಷಣವಿತ್ತರು. ಯಕ್ಷಗಾನ ಕಲೆಯ ಕುರಿತಾದ ವಿಚಾರಾತ್ಮಕ ವಿಮರ್ಶೆಯನ್ನವರು ಮಾಡಿ ಯಕ್ಷಗಾನ ಸಂಗೀತವು ಏಕ್ಸ್ರದ ಸಂಗೀತ ಪದ್ಧತಿಗಿಂತ ಕಡಿಮೆಯದಲ್ಲವೆಂದೂ, ಅದರ ಮೂಲ ಘನಗಾಂಭೀರ್ಯವನ್ನು ಉಳಿಸಿಕೊಳ್ಳಬೇಕೆಂದೂ, ಈಗಿನ ಸುಧಾರಣೆಗಳಿಂದ ಅದರ ಸಹಜತೆ ಕೆಡುತ್ತಿದೆಯೆಂದೂ ಹೇಳಿದರು. ಶ್ರೀ. ಕು. ಶಿ. ಹರಿದಾಸ ಭಟ್ಟರು ಧನ್ಯವಾದಗಳನ್ನಿತ್ತರು.

ಡಿಪ್ಯುಟಿ ಕಮರ್ಶಿಯಲ್ ಟೇಕ್ಸ್ ಆಫೀಸರರ ಪ್ರಕಟಣೆ

ಎಲ್ಲಾ ಹೊಗೆಸಪ್ಪು ವ, ಹೊಗೆಸಪ್ಪಿನಲ್ಲಿ ತಯಾರು ಮಾಡಿದ ವಸ್ತುಗಳಲ್ಲಿ ವಹಿವಾಟು ನಡೆಸುವ ವ್ಯಾಪಾರಸ್ಥರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:— ಮಾನ್ಯ ಮದ್ರಾಸು ಸರಕಾರದವರು ತಮ್ಮ 2–11–55 ನೇ ತಾರೀಕಿನ G. O. 3394ನೇ ಹುಕುಮಿನಲ್ಲಿ ಮದ್ರಾಸು ಸಾಮಾನ್ಯ ಮಾರಾಟಗಳ ಮೇಲಣ ತೆರಿಗೆಯ ಕುರಿತು ಆಕ್ಟಿನ ರೂಲ್ಸಿಗೆ ತಿದ್ದುಪಡಿಗಳನ್ನು ಮಾಡಿದ ಮೇರೆಗೆ (a) ರೂ. 0—2—0ಗೆ ಕಮ್ಮಿಯಾದ ದರದ ಸಿಗಾರ್ ನ ಚುರೂಟಿಗೆ ಮತ್ತು ನಶ್ಯ, ಬೀಡಿ, ತಿನ್ನುವ ತಂಬಾಕು, ಬೀಡಿ ತಂಬಾಕು ಮತ್ತು ತಂಬಾಕಿನಿಂದ ತಯಾರಾದ ಇನ್ನಿತರ ವಸ್ತುಗಳು. (b) ಒಣಗಿಸಿದ ಅಥವಾ ಹಸಿ ತಂಬಾಕು ಇವುಗಳ ವಿಕ್ರಿತ ಟರ್ನ್ ಓವರ್‌ನ ಮೇಲೆ ತೆರಿಗೆಯಿಂದ ವಿನಾಯಿತಿ ಸಿಗುವರೆ ಸದ್ರಿ ಆಕ್ಟಿನ 5ನೇ ಸೆಕ್ಷನ್ ಪ್ರಕಾರ * ಈ ಕೆಳಗೆ ನಮೂದಿಸಿದ ಲೈಸನ್ಸು ಫೀಸನ್ನು ತೆತ್ತು ಲೈಸನ್ಸನ್ನು ಪಡಕೊಳ್ಳತಕ್ಕದ್ದು. ಇವಕ್ಕೆ ತಪ್ಪಿದರೆ ಸದ್ರಿ ವಸ್ತುಗಳ ವಿಕ್ರಿತ ಟರ್ನ್ ಓವರಿನ ಮೇಲೆ ತಾ. 1—4—55 ರಿಂದ ತೆರಿಗೆ ಹೊರಿಸಲಾದೀತು. *ಲೈಸನ್ಸು ಫೀಸಿನ ದರವನ್ನು ಆಫೀಸಿನಲ್ಲಿ ತಿಳಿಯಬಹುದು.

ರಶಿಯದ ಜಾನಪದ ಕಲಾವಿದರು

ರಶಿಯದಲ್ಲಿ ಉಜ್ಬೇಕ್‌ಸ್ತಾನ್ ಒಂದು ರಾಜ್ಯವಾಗಿದೆ. ಸುಪ್ರಸಿದ್ಧ ಬೊಖಾರಾ ಮತ್ತು ಸಮರ್ಖಂಡ ನಗರಗಳಿರುವ ಈ ರಾಜ್ಯದೊಡನೆ ಭಾರತಕ್ಕೆ ಐತಿಹಾಸಿಕ ಸಂಬಂಧವಿದೆ. ಹಿಂದೆ ಸುಲಿಗೆ ಮತ್ತು ವಶೀಕರಣಕ್ಕಾಗಿ ಇಲ್ಲಿಂದ ಭಾರತಕ್ಕೆ ದಾಳಿ ನಡೆಯುತ್ತಿದ್ದರೆ ಇಂದು ಸಾಂಸ್ಕೃತಿಕ ಮಹತ್ವದ ಸಂದೇಶವನ್ನು ಉಜ್ಬೇಕ್ ತನ್ನ ಕಲಾವಿದರ ಮೂಲಕ ಭಾರತಕ್ಕೆ ಕೊಡಲು ಮುಂದಾಗಿದೆ. ಅಲ್ಲಿಯ ಜಾನಪದ ಸಂಗೀತವು ನವ ಭಾವನೆಗಳನ್ನು ಪ್ರತಿಧ್ವನಿಸುತ್ತದೆ; ನರ್ತನವು ಪರಂಪರಾಗತವಾದ ಕಲಾವಸ್ತುವನ್ನೂ ರೂಪವನ್ನೂ ಉಳಿಸಿಕೊಂಡು ಬಂದಿದೆ. ಜನಪ್ರಿಯವಾದ ಈ ನೃತ್ಯ ಸಂಗೀತ ಪ್ರದರ್ಶನವನ್ನು ಕಳೆದ ಕೆಲವು ದಿನಗಳಲ್ಲಿ ಭಾರತದ ಪ್ರಮುಖ ಪಟ್ಟಣಗಳಲ್ಲಿ ನಮ್ಮವರು ಕಂಡರು. ೧೯ ಜನರುಳ್ಳ ಈ ನರ್ತಕರ ನಿಯೋಗವು ಇಷ್ಟರಲ್ಲಿಯೇ ಭಾರತದಿಂದ ಹಿಂದಿರುಗಲಿದೆ; ಮರಳುವುದಕ್ಕೆ ಮುಂಚೆ ತಮ್ಮ ಪ್ರದರ್ಶನದಲ್ಲಿ ಕೂಡಿ ಬಂದ ಹಣವನ್ನೆಲ್ಲ ಪ್ರಧಾನ ಮಂತ್ರಿ ನೆಹರೂಗಳ ರಾಷ್ಟ್ರೀಯ ಪರಿಹಾರ ನಿಧಿಗೆ ಇವರು ಅರ್ಪಿಸಿರುವುದು ಸ್ತುತ್ಯ.

ಶ್ರೀ ಬಾಲಕೃಷ್ಣ ಪ್ರಭುಗಳ ನಿಧನ— ತಾ. 18–1–56ನೇ ಬೆಳಿಗ್ಗೆ ಪ್ರಭಾಕರ ಪ್ರೆಸ್ಸಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಪಿ. ಬಾಲಕೃಷ್ಣ ಪ್ರಭುಗಳು ಕೆಲವೇ ದಿನಗಳ ಅನಾರೋಗ್ಯದಿಂದ 48ನೇ ವರ್ಷದಲ್ಲಿ ದೈವಾಧೀನರಾದರೆನ್ನಲು ಅತ್ಯಂತ ವಿಷಾದವಾಗುತ್ತದೆ. ಮೃತರು ವಿನಯಶೀಲರು, ಸರಳ, ಪ್ರಾಮಾಣಿಕ, ಪರೋಪಕಾರಿ ಸದ್ಗುಣಗಳಿಂದ ಜನರ ಪ್ರೀತಿವಿಶ್ವಾಸ ಗಳಿಸಿದ್ದರು; ಕಾಂಗ್ರೆಸ್ ಭಕ್ತರಾಗಿ, ಸಾರ್ವಜನಿಕ ಸೇವಾಸಕ್ತರಾಗಿ, ಕಲಾಪ್ರಿಯರಾಗಿ, ತಾಂತ್ರಿಕ ತಜ್ಞರಾಗಿ ವಿಶಿಷ್ಟ ಸ್ಥಾನಮಾನ ಪಡೆದಿದ್ದರು. ಇವರ ಅಕಾಲ ಮರಣದಿಂದುಂಟಾದ ಆಘಾತ ದುಃಖದಲ್ಲಿ ನಾವೂ ಸಹಾನುತಾಪ ಪಡುವವು.

ಡಾ. ಎಚ್. ವಿ. ಅಡಪರ ಶೋಚನೀಯ ನಿಧನ— ಕೆಲಸಮಯದಿಂದ ಅಸ್ವಾಸ್ಥ್ಯದಲ್ಲಿದ್ದ ಮಂಗಳೂರಿನ ಜನಪ್ರೀತ ಡಾ. ಎಚ್. ವಿ. ಅಡಪರು ತಾ. 29ರಂದು ರಾತ್ರಿ 10.10 ಗಂಟೆಗೆ ಅತ್ತಾವರದಲ್ಲಿಯ ತಮ್ಮ ನಿವಾಸದಲ್ಲಿ ನಿಧನಹೊಂದಿದರೆನ್ನಲು ವಿಷಾದವಾಗುತ್ತದೆ. ಮರುದಿವಸ ನಡೆದ ಶವ ಸಂಸ್ಕಾರದಲ್ಲಿ ಊರ ಮತ್ತು ಪರವೂರ ಹಲವು ಜನರು ಜಾತಿಮತಭೇದವಿಲ್ಲದೆ ಭಾಗವಹಿಸಿದ್ದು ಮೃತರ ಸರ್ವಜನಪ್ರಿಯತೆಯ ದ್ಯೋತಕವಾಗಿದೆ.

ಡಾ ಎಚ್. ವಿ. ಅಡಪರು (ಹೇರೂರು ವೆಂಕಪ್ಪ ಅಡಪ) ಕಾಸರಗೋಡು ತಾಲೂಕಿನ ಪ್ರಸಿದ್ಧ ಹೇರೂರು ಮನೆತನಕ್ಕೆ ಸೇರಿದವರಿದ್ದು, ಮಂಗಳೂರಲ್ಲಿ ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣ ಪಡೆದರು. ನಂತರ ವೈದ್ಯಕೀಯ ಶಿಕ್ಷಣಕ್ಕಾಗಿ ಮದ್ರಾಸಿಗೆ ಹೋಗಿ ಶಿಕ್ಷಣ ಪಡೆದರು. 1920ರಲ್ಲಿ ಮರಕಡ ಮನೆತನದಿಂದ ವಿವಾಹವಾಗಿ 1921ರಲ್ಲಿ ಮಂಗಳೂರಿಗೆ ಬಂದು ನೆಲೆಸಿದರು. ಜಿಲ್ಲೆಯ ಕಿವಿ, ಮೂಗು ಮತ್ತು ಗಂಟಲು ರೋಗಗಳ ತಜ್ಞರಲ್ಲಿ ಪ್ರಥಮ ಸ್ಥಾನವೂ ಜಿಲ್ಲೆಯಲ್ಲಿ ಪ್ರಥಮತಃ ಎಕ್ಸ್‌ರೇ ಯಂತ್ರ ಸ್ಥಾಪಿಸಿದ ಕೀರ್ತಿಯೂ ಡಾ. ಅಡಪರಿಗೆ ಸಲ್ಲುತ್ತದೆ. ಡಾ. ಅಡಪರು ಮಂಗಳೂರು ನಗರ ಸಭೆಯ ಸದಸ್ಯ, ಜಿಲ್ಲಾ ಹರಿಜನ ಸೇವಕಸಂಘದ ಅಧ್ಯಕ್ಷ, ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಸದಸ್ಯರಾಗಿದ್ದುಕೊಂಡು ಜನಹಿತಕಾರ್ಯಮಾಡಿದ್ದರು. ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳು, ಬೆಸೆಂಟ್ ಹೈಸ್ಕೂಲು ಸಮಿತಿ ಕ್ಷಯರೋಗ ನಿವಾರಣಾಸಂಘ ಮೊದಲಾದ ಹಲವಾರು ಸಂಘ ಸಂಸ್ಥೆಗಳ ಗೌರವ ಡಾಕ್ಟರರಾಗಿ ಸೇವೆಮಾಡಿದುದಲ್ಲದೆ ಸಾರ್ವಜನಿಕ ಸಂಸ್ಥೆಗಳಿಗೆ ಉದಾರ ಸಹಾಯ ಮಾಡಿದ್ದರು.

1942ರಲ್ಲಿ ಸ್ವಾತಂತ್ರ್ಯ ಸಮರದ ಸಮಯ ನಗರಸಭಾ ಸದಸ್ಯಸ್ಥಾನಕ್ಕೆ ಇತರರಂತೆ ರಾಜಿನಾಮೆಯಿತ್ತು ಹೊರಬಂದಿದ್ದರು. ಸತತ ಖಾದಿಧಾರಿಗಳಾಗಿದ್ದರು. ಸರಳ ಮತ್ತು ನಿರಾಡಂಬರ ಜೀವಿಗಳಾಗಿದ್ದರು. ನಿಸ್ವಾರ್ಥ ಸಾರ್ವಜನಿಕ ಕೆಲಸಗಾರರಾಗಿ ವಹಿಸಿದ ಕೆಲಸವನ್ನು ಆಸಕ್ತಿಯಿಂದ ನಿರ್ವಹಿಸುತ್ತಿದ್ದರು. ವಿದೇಶದಲ್ಲಿ ಶಿಕ್ಷಣ ಪಡೆದು ವೈದ್ಯಕೀಯ ವೃತ್ತಿ ನಡೆಸುತ್ತ ಈಗಾಗಲೇ ಜನಪ್ರಿಯರಾಗಿರುವ ಡಾ. ದೇವದಾಸ ಅಡಪರು ದಿವಂಗತರ ನಾಲ್ವರು ಪುತ್ರರಲ್ಲಿ ಹಿರಿಯವರು. ಆಂತೆಯೇ ಜಾಮಾತರಾಗಿಗಳಾದ ಡಾ. ಕೆ. ಬಾಳಪ್ಪ ಶೆಟ್ಟರ ಪತ್ನಿ ಶ್ರೀಮತಿ ಹೀರಾ ಶೆಟ್ಟರು ದಿವಂಗತರ ಏಕಮಾತ್ರ ಪುತ್ರಿ.

ಮೃತರ ಮೇಲೆ ಬಂಧು ಬಳಗದವರೊಡನೆ ನಮ್ಮ ಸಹಸಂತಾಪವಿದೆ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್.

ಮಂಗಳೂರು—3.

The Canara Industrial & Banking Syndicate, Ltd.

(Incorporated in India. Liability of Members Limited.)

NOTICE.

The Register of Members and Transfer Books of the Syndicate will remain closed from 17th February 1956 to 16th March 1956, both days inclusive.

(By order)

Udipi, February 4, 1956. (Sd.) T. M. A. PAI, *Managing Director.*

ಕಾಸರಗೋಡು ಸಮಸ್ಯೆ ಶ್ರೀ ಕೆ. ಮಹಾಬಲ ಭಂಡಾರಿಗಳ ರಾಜಿನಾಮೆ— ಕಾಸರಗೋಡಿನ ಎರಡು ಲಕ್ಷ ಕನ್ನಡ ಜನತೆಯನ್ನು ವಂಚಿಸಿದ ಕಾಂಗ್ರೆಸ್ ಚತುರ್ನಾಯಕ ಸಮಿತಿಯ ತೀರ್ಮಾನದಿಂದ ಅತೀ ನೊಂದುಕೊಂಡು ಸಂಕಟಕ್ಕೀಡಾದ ಕನ್ನಡಿಗರಲ್ಲೊಬ್ಬನಾದ ತಾನು ಆ ತೀರ್ಮಾನದ ನಿಷೇಧಾರ್ಥವಾಗಿ ಕಾಸರಗೋಡು ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಸ್ಥಾನಕ್ಕೂ ಮತ್ತು ಪ್ರಾಥಮಿಕ ಸದಸ್ಯತನಕ್ಕೂ ರಾಜಿನಾಮೆ ಸಲ್ಲಿಸಿರುವುದಾಗಿ ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಗಳು ತಿಳಿಸುತ್ತಾರೆ.

ಮುಡಪ್ಪಾರು – ಸ್ಥಳೀಯ ಶ್ರೀ ಮಂಗಳಪರಮೇಶ್ವರಿ ದೇವಸ್ಥಾನದಲ್ಲಿ ಇದೇ ತಾ. ೨೦ರಿಂದ ೨೦ರ ತನಕ ಬ್ರಹ್ಮಕಲಶಾದಿ ವಿಧಿ ಉತ್ಸವ ಕಾರ್ಯಕ್ರಮಗಳು ಜರಗಲಿವೆ. ತಾ. 15ರಲ್ಲು ಬೆಳಿಗ್ಗೆ 8½ ಗಂಟೆಗೆ ಮಹಾಬ್ರಹ್ಮಕಲಶಾಭಿಷೇಕವೂ ಮಧ್ಯಾಹ್ನ ಮಹಾ ಸಂತರ್ಪಣೆಯೂ ಜರಗಲಿರುವುದು.

ಕಣಿಯೂರು ಮತ್ತು ಬಂದಾರು- ಗ್ರಾಮಸ್ಥರ ಸಭೆಯು ತಾ. 25ರಲ್ಲು ಜರಗಿ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸುವ ಕುರಿತು ನಿಷೇಧ ಸೂಚಿಸಲಾಯಿತು.

ಅಲೆವೂರು— ತಾ. 24ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಸ್ಥಳೀಯ ಶಾಲೆಯಲ್ಲಿ ಶಿಶುವಿಹಾರ ಶಂಕುಸ್ಥಾಪನೆಯನ್ನು ಶ್ರೀ ಎ. ಜಿ. ಆಳ್ವಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ವಾಂತಿಮರು ಸ್ವಾಗತಿಸಿದರು. ಶ್ರೀ ಅಜ್ಜಣ್ಣ ಸೆಟ್ಟರು ಜನರ ಸಹಕಾರವನ್ನು ಸ್ಮರಿಸಿದರು. ಶ್ರೀ ಪಿ. ರಾಮಚಂದ್ರ ರಾಯರು ಕಾಲೋಚಿತಮಾತುಗಳನ್ನಾಡಿದರು.

ನೆಟ್ಟಣಿಗೆ— ನೆಟ್ಟಣಿಗೆ ಬೆಳ್ಳೂರು ಗ್ರಾಮಸ್ಥರ ಸಭೆಯು ತಾ. 21ರಲ್ಲು ಶ್ರೀ ಎಮ್. ಎಸ್. ಕಡಂಬಳಿತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡನ್ನು ಕರ್ನಾಟಕದಲ್ಲಿ ಇರಗೊಡಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಕೋಟೆಕಾರು— ಉಳ್ಳಾಲ ಆನಂದಾಶ್ರಮ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 26ರಲ್ಲಿ ಜಿಲ್ಲಾಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಶ್ರೀ ಟಿ. ಲಕ್ಷ್ಮಣ ಸೇನವನವರ ಅಧ್ಯಕ್ಷತೆಯಲ್ಲಿ ಪ್ರಜಾರಾಜ್ಯ ದಿನಾಚರಣೆ ನಡೆಯಿತು.

ಮುಡಪ್ಪಾರು ಮರ್ಕಂಜ— ಸ್ಥಳೀಯ ಬೋರ್ಡು ಶಾಲಾ ವರ್ಧಂತಿ ಸಮಾರಂಭವು ತಾ. 21ರಲ್ಲಿ ಡಾ. ಬಿ. ಕೆ. ವೆಂಕಟೇಶ್ವರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕಾದ ಎಮ್. ಚಿನ್ನಪ್ಪ ಗೌಡ, ಪಿ. ಆರ್. ಬೆಳ್ಯಪ್ಪ ಗೌಡ, ಪಿ. ಬಾಲಕೃಷ್ಣ ರೈ, ಡಿ. ಎನ್. ರಾಘವೇಂದ್ರ ರಾವ್, ಕೆ. ರಾಮಯ್ಯ ಮೊದಲಾದವರ ಭಾಷಣಗಳಾದುವು.

ಶಿರ್ವ—ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯು ತಾ. 24ರಲ್ಲು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವ ಪದವಿನಿಂದ ಕೆರುವಿಗೊಂಡು ರಸ್ತೆ, ಅಂತೆಯೇ ಶಿರ್ವ ಪದವಿನಿಂದ ಮಾರಿಗುಡಿಗಾಗಿ ಕಡಂಬು ಪಳ್ಳಿಗೊಂಡು ರಸ್ತೆ ನಿರ್ಮಿಸಬೇಕೆನ್ನುವ, ಶಿರ್ವ ಕಟಪಾಡಿ ರಸ್ತೆಯನ್ನು ಹೈವೇಸ್ ಇಲಾಖೆಯವರು ವಹಿಸಿಕೊಂಡು ರಿಪೇರಿ ಮಾಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಬಾಡೂರು – ಕಾಸರಗೋಡನ್ನು ಕೇರಳಕ್ಕೆ ಸೇರಿಸಬೇಕೆನ್ನುವ ತೀರ್ಮಾನದ ನಿಷೇಧ ಸೂಚನಾರ್ಥವಾಗಿ ಜಿಲ್ಲಾ ಕಾಂಗ್ರೆಸ್ ಸದಸ್ಯತನ, ಮಂಜೇಶ್ವರ ಸರ್ಕಲ್ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷ ಸ್ಥಾನ ಮತ್ತು ಕಾಂಗ್ರೆಸಿನ ಪ್ರಾಥಮಿಕ ಸದಸ್ಯತನಗಳಿಗೆಲ್ಲಾ ರಾಜಿನಾಮೆ ಕೊಟ್ಟಿರುವೆನಾಗಿ ಶ್ರೀ ಕೆ. ರಾಮ ಭಟ್ಟರು ತಿಳಿಸುತ್ತಾರೆ.

ಕಾರ್ಕಳ— ಇಲ್ಲಿಯ ಬೋರ್ಡುಹೈಸ್ಕೂಲಿನ ವರ್ಧಂತಿ ಸಮಾರಂಭವು ತಾ. 28ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರ್ ಶ್ರೀ ಎಸ್. ಆರ್. ಆಚಾರ್ಯರು ಶಾಲಾ ವರದಿಯನ್ನೋದಿದರು. ಬಳಿಕ ಶ್ರೀ ವಕೀಲ್ ಬಿ. ಬಿ. ಸೆಟ್ಟರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷ ಭಾಷಣಾ ನಂತರ ಡಿ. ಮುನ್ಸಿಫ್ ಶ್ರೀ ಎ. ಎಮ್. ದೇಸರು ಬಹುಮಾನ ವಿತರಣೆ ಮಾಡಿದರು.

ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಸಭೆಯು ಶ್ರೀ ಕೆ. ಜಿ. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಜೀರ್ಣೋದ್ಧಾರವಾದ ಉಡುಪಿ ಶ್ರೀ ಕೃಷ್ಣಾಪುರ ಮಠದ ಪ್ರವೇಶೋತ್ಸವ ಸಮಾರಂಭದಲ್ಲಿ ಭಾಗವಹಿಸಿದ ಅಷ್ಟ ಮಠದ ಶ್ರೀ ಶ್ರೀಗಳವರು.

ಕೆಲಂಡರ್ ಸ್ವೀಕಾರ

ಎಸ್. ಆರ್. ಬೀಡಿ ವರ್ಕ್ಸ್, ಎಸ್. ಆರ್. ಬೀಡಿ ತಯಾರಕರು ಉಡುಪಿ, ದಿ ಗ್ರೇಟ್ ದಿಲ್ ಬಹಾರ್ ಬೀಡಿ ವರ್ಕ್ಸ್ ಉಡುಪಿ ಸೋಟೆಕ್ಸ್ ಎಂಡ್ ಕೊ, ಚೂಲಾಯಿ, ಮದ್ರಾಸು 7 ನೇಚ್‌ವೆಲ್ ಇಲೆಕ್ಟ್ರಿಕಲ್ಸ್ (ಇಂಡಿಯಾ) ಲಿಮಿಟೆಡ್, (ಪ್ರಕಾಶ ಇಲೆಕ್ಟ್ರಿಕ್ ಸ್ಟೋರ್ಸ್, ಉಡುಪಿ ಇವರ ಮೂಲಕ) ಶ್ರೀರಾಮಕೃಷ್ಣ ಆಯಿಲ್ ಮಿಲ್ಸ್, ಕಸ್ತೂರಿಬಾ ಸೋಪು ತಯಾರಕರು ಮಂಗಳೂರು. ಅಲ್ಲದೆ ದಿ ಕೆನರಾ ಇಂಡಸ್ಟ್ರೀಯಲ್ ಎಂಡ್‌ಬ್ಯಾಂಕಿಂಗ್ ಸಿಂಡಿಕೇಟಿನವರ ಎರಡೆರಡು ತಿಂಗಳುಗಳ ತಾರೀಕುಪಟ್ಟಿ ಇರುವ ಬ್ಲಾಟಿಂಗ್ ಮತ್ತು ಬ್ಲಾಟಿಂಗ್ ಪ್ಯಾಡು. ಹೂಗ್ಲಿ ಇಂಕ್ ಕಂಪೆನಿ ಲಿಮಿಟೆಡ್, ಕಲ್ಕತ್ತ (ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು ಇವರ ಮೂಲಕ)

ಪ್ರವೇಶೋತ್ಸವದಲ್ಲಿ ಶ್ರೀ ಪುತ್ತಿಗೆ ಮಠದ ಒಂದು ನೂರು ವರುಷ ಪ್ರಾಯದ ಶ್ರೀ ಶ್ರೀಗಳವರು ಶ್ರೀಕೃಷ್ಣನಿಗೆ ಪೂಜೆಮಾಡ ತೆರಳುವುದು.

(೫ನೇ ಪುಟದಿಂದ)

ವನ್ನು ಮಾಡಬಹುದು. ಕಾಸರಗೋಡಿನಲ್ಲಿ ಚಳವಳನನ್ನು ನಡೆಸಿಕೊಂಡು ಹೋಗುವ ಆಗತ್ಯವೇ ಉಳಿಯದು ಎಂದು ಮುಂತಾಗಿ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ ಮತ್ತಿತರ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳು ಒಂದು ಹೇಳಿಕೆಯಲ್ಲಿ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದರೆ ದಕ್ಷಿಣ ಪ್ರದೇಶದ ರಚನೆಯು ಕನ್ನಡನಾಡಿನ ಮಟ್ಟಿಗೆ ಏನೇನೂ ಲಾಭವನ್ನು ತರಲಾರದು; ಅದು ಇಷ್ಟವಾದ ವಿಚಾರವೇ ಅಲ್ಲ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಅಂಬಲಿಯವರು ತಿಳಿಸಿದ್ದಾರೆ. ಮೈಸೂರಿನ ಮುಖ್ಯ ಮಂತ್ರಿಗಳು ಜನಾಭಿಪ್ರಾಯವನ್ನು ತಿಳಿದುಕೊಳ್ಳದೆ ತಾನೇನೂ ಖಚಿತ ನಿರ್ಧಾರವನ್ನು ವ್ಯಕ್ತಪಡಿಸುವಂತಿಲ್ಲವೆಂದಿದ್ದರೂ ಮೈಸೂರಿನ ವೈಶಿಷ್ಟ್ಯ ರಕ್ಷಣೆಯಲ್ಲಿ ವಿಶೇಷ ಆಸಕ್ತಿಯನ್ನು ಕರ್ನಾಟಕ ಏಕೀಕರಣದ ಪ್ರಶ್ನೆ ಬಂದಾಗಲೆಲ್ಲ ತಳೆದಿದ್ದ ಮೈಸೂರು ಪ್ರದೇಶ ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ವೀರಣ್ಣ ಗೌಡರೂ ಅವರ ಬೆಂಬಲಿಗರೂ ದಕ್ಷಿಣ ಪ್ರದೇಶದ ಕಲ್ಪನೆಗೆ ಬೆಂಬಲವಿತ್ತಿದ್ದಾರೆ. ಆಗ ಮೈಸೂರೆಂಬ ಹೆಸರೂ ಉಳಿಯುವುದಿಲ್ಲವೆಂಬ ವಿಷಯದ ಕಡೆಗೆ ಅವರು ಗಮನ ಹರಿಸಿದಂತಿಲ್ಲವೆಂಬುದು ನಿಜಕ್ಕೂ ಆಶ್ಚರ್ಯ!

ಜನತೆಯ ನಿಲುವು

ಭಾರತ ಸರಕಾರದವರು ಸಿದ್ಧಪಡಿಸಿರುವ ಕರಡು ಮಸೂದೆಯ ಮೇಲೆ ಚರ್ಚೆಯು ಸಾಮಾನ್ಯವಾಗಿ ಎಲ್ಲ ರಾಜ್ಯಗಳ ಶಾಸನಾಂಗದಲ್ಲೂ ಫೆಬ್ರವರಿ ಮಧ್ಯದಲ್ಲಿ ಪ್ರಾರಂಭವಾಗಿ ಮಾರ್ಚಿ ಮಧ್ಯದೊಳಗೆ ಕೇಂದ್ರ ಸರಕಾರಕ್ಕೆ ಈ ಕುರಿತು ರಾಜ್ಯ ಶಾಸನಾಂಗಗಳ ಅಭಿಪ್ರಾಯ ತಿಳಿಸಲಡಬಹುದು. ಮುಂದೆ ಕೇಂದ್ರದ ಸಂಸತ್ತಿನಲ್ಲಿ ಈ ಮಸೂದೆ ಮಂಡಿಸಲ್ಪಟ್ಟು, ಪರಿಶೀಲಕ ಸಮಿತಿಗೊಪ್ಪಿಸಲ್ಪಡುವುದೆಂದೂ ಮೇ ತಿಂಗಳ ಮಧ್ಯದಲ್ಲಿ ಮಸೂದೆಯು ಶಾಸನವಾಗುವುದೆಂದೂ ಹೇಳಲಾಗುತ್ತದೆ. ಪ್ರದೇಶಗಳ ರಚನೆಯ ಪ್ರತಿಪಾದಕರು ಮಾರ್ಚ್ ಮತ್ತು ಎಪ್ರೀಲುಗಳಲ್ಲಿ ತಮ್ಮ ನಿಲುವಿಗೆ ಜನರ ಬೆಂಬಲ ಗಳಿಸಲು ನೋಡಬಹುದೆಂದೂ ಸಂಸತ್ತಿನಲ್ಲಿ ಭಾರತ ಸರಕಾರದ ಈಗಿನ ಕರಡು ಮಸೂದೆಯು ಚರ್ಚೆಗೆ ಬಂದು ಸ್ವೀಕೃತವಾಗುವಷ್ಟರೊಳಗೆ ಪ್ರದೇಶಗಳ ರಚನೆಯ ಕುರಿತು ತಮ್ಮ ನಿರ್ದಿಷ್ಟ ಅಭಿಪ್ರಾಯವನ್ನವರು ತಿಳಿಸಲು ಸಿದ್ಧರಾಗುವರೆಂದೂ ತಿಳಿದು ಬರುತ್ತದೆ. ಪ್ರದೇಶಗಳ ರಚನೆಗೆ ಈ ಉತ್ಸಾಹಿ ಪ್ರತಿಪಾದಕರು ಬಯಸಿರುವಷ್ಟು ಬೆಂಬಲ ದೊರಕೀತೆ ಎಂಬುದು ಮಾತ್ರ ಸಂಶಯಾಸ್ಪದವಾದ ವಿಷಯ. ಪ್ರತಿಪಕ್ಷಗಳು ಪ್ರದೇಶಗಳ ಹೊಸ ಕಲ್ಪನೆಯನ್ನು ಮನಸ್ವಿಯಾಗಿ ಟೀಕಿಸಿವೆ. ಭಾಷಾನುಗುಣವಾಗಿ ರಾಜ್ಯಗಳನ್ನು ರಚಿಸಿಲ್ಲವೆಂದು ಫಜಲಾಲಿ ಆಯೋಗ ಎಷ್ಟೇ ಸಮರ್ಥನೆಮಾಡಿಕೊಂಡರೂ ಅದರ ಸಿಫಾರಸು ಭಾಷಾನುಗುಣ ರಾಜ್ಯಗಳ ಕಡೆಗೆಯೇ ಹೆಚ್ಚಿನ ಒಲವನ್ನು ತೋರಿಸಿರುವುದು ಸ್ವಯಂ ವ್ಯಕ್ತವಾಗಿದೆ ಎನ್ನುತ್ತಾ ಸನಾಥಾನ ಪಟ್ಟಿದ್ದ ಭಾಷಾಭಿಮಾನಿಗಳಿಗೆ ಸಹ ಪ್ರದೇಶಗಳ ಕಲ್ಪನೆಯು ಮನಸ್ಸಿಗೆ ಬಂದಿಲ್ಲ. ಸ.ವಾರು ಅರ್ಧ ಶತಮಾನದಿಂದ ಬೆಳೆದು ಬಂದ ಭಾಷಾನುಗುಣ ರಾಜ್ಯ ರಚನೆಯ ಉದ್ದೇಶದ ಸ್ಥಾನದಲ್ಲಿ ಮೊನ್ನೆಯಷ್ಟೇ ಹುಟ್ಟಿದ ಪ್ರದೇಶಗಳ ಕಲ್ಪನೆಗೆ ಎಡೆಕೊಡುವುದಕ್ಕೆ ಭಾರತೀಯರು ಸಿದ್ಧರಿರುವುದು ಸಂದೇಹ.

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ,ನರ್ತನ ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೂದಲು, ತೋಪನ್, ಗಡ್ಡ, ಮುಂಡಾಸು, ಕಿರೀಟ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬೆಂಡೋಲೆ, ತುಟಿಗೆ ಹಚ್ಚುವ ಮಿರುಗಿನ ಅಂಟು, ತಲೆಸೂಡಿ ಸುತ್ತುವ ಬಲೆ ಇತ್ಯಾದಿ ಖಾತ್ರಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ಸವಿವರವಾದ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Dharamshi Mulji, Dresswala,

132 C, Bhagatwadi, Bhuleshwar Road, BOMBAY—2.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯಂಗ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ಸಪ್ರಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆ'ಗಳಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**

628 "ಸಂತಾನ ಸಿಂದೂರ ಸದನ", (N. Y.)

ಸುಬ್ರಾಯನ ಕೆರೆ ಸೌತ್ ರೋಡ್, ಮೈಸೂರು. (MYSORE) S I.

ಮಂಗಳೂರು

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿನಂತಿ—ಮುಂದಿನ ಮಹಾ ಚುನಾವಣೆಯ ಸಂದರ್ಭದಲ್ಲಿ ಮತದಾರರಿಗೆ ಓಟು ಕೊಡುವರೆ ಅನುಕೂಲವಾಗುವಂತೆ ಪೋಲಿಂಗು ಸ್ಟೇಶನುಗಳ ಸ್ಥಾಪನೆ ಕುರಿತು ಆಗತ್ಯ ಬದಲಾವಣೆಗಳಾಗ ಬೇಕಾಗಿದ್ದಲ್ಲಿ ಸಾರ್ವಜನಿಕರು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಇದೇ ತಾ. 10ರೊಳಗೆ ತಿಳಿಸಬೇಕಾಗಿ ಪ್ರಧಾನ ಕಾರ್ಯದರ್ಶಿ ಶ್ರೀ. ಕೆ. ಕೆ. ಶೆಟ್ಟರ ವಿನಂತಿಯಿದೆ.

ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾ ಸ್ವಾಮಿಗಳವರು— ಮಾರ್ಚ ತಿಂಗಳ ತಾ. 29ರಲ್ಲು ದ. ಕ. ಜಿಲ್ಲಾ ತೆಂಕ ಮಿಜಾರ್ ಅಶ್ವತ್ಥ ಮಠದಲ್ಲಿ ನೂತನವಾಗಿ ಕಟ್ಟಿಸಿದ ದೇವಸ್ಥಾನದಲ್ಲಿ ಆರ್ಯ ಶ್ರೀ ಶಂಕರ ಭಗವತ್ಪಾದಾಚಾರ್ಯರ ವಿಗ್ರಹ ಪ್ರತಿಷ್ಠೆ ಮಾಡಲಿರುವರು. ಶ್ರೀ ಮಠದ ಭಕ್ತಶಿಷ್ಯರಾದ ಸಮಸ್ತ ಅಭಿಮಾನಿಗಳು ಸಹಕರಿಸಬೇಕಾಗಿ ಡಾ| ಎಂ. ಕೆ. ಸಿ. ಶರ್ಮರು ವಿನಂತಿಸುತ್ತಾರೆ.

ಮಂಗಳೂರು ನಗರ ಸಭೆಯು — ತಾ. 28ರಲ್ಲು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದಾಗ ಈ ನಗರಸಭೆಯ ಸದಸ್ಯರಾಗಿದ್ದು ಸಮಾಜಸೇವಾ ಕಾರ್ಯವನ್ನು ಮಾಡಿದ ಶ್ರೀ ಆರ್. ಬಿ. ಸಿ. ಡಿ. ಅಂದ್ರಾದೆಯವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವಾಗಿ ಐದು ನಿಮಿಷಗಳ ಮೌನ ಪ್ರಾರ್ಥನೆಯೊಂದಿಗೆ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಕಾಸರಗೋಡು ತಾಲೂಕನ್ನು ಕೇರಳ ರಾಜ್ಯಕ್ಕೆ ಸೇರಿಸಬೇಕೆಂದು ರಾ. ಪು. ಆಯೋಗವು ಮಾಡಿರುವ ಸೂಚನೆಯನ್ನು ಭಾರತಸರಕಾರವು ದೃಢೀಕರಿಸಿ ಮಾಡಿರುವ ನಿರ್ಣಯವನ್ನು ಪ್ರತಿಭಟಿಸುವ ಮತ್ತು ಭಾರತಸರಕಾರ ಮತ್ತು ಪ್ರಧಾನಿಯವರನ್ನು, ಚಂದ್ರಗಿರಿ ನದಿಯ ಉತ್ತರಕ್ಕಿರುವ ಕಾಸರಗೋಡು ತಾಲೂಕನ್ನು ಕರ್ನಾಟಕ ರಾಜ್ಯದಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುವ ನಿರ್ಣಯ ಮಂಜೂರಾಯಿತು.

ವಾರ್ಷಿಕೋತ್ಸವ — ಸ್ಥಳೀಯ ಬಿ. ಇ. ಎಮ್. ಹ್ಯಾಸ್ಕೂಲಿನ ವಾರ್ಷಿಕೋತ್ಸವವು ತಾ. 21ರಲ್ಲು ಸರಕಾರಿ ತರಬೇತಿ ಕಲಾಶಾಲೆಯ ಪ್ರಿನ್ಸಿಪಾಲ್ ಶ್ರೀ. ಬಿ. ಎಸ್. ಆಂಚನರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರ್ ಶ್ರೀ ಜೋರ್ಜ್ ಐಮನರು ಸ್ವಾಗತ ಭಾಷಣ ಮಾಡಿದರು. ನಂತರ ವರದಿ ವಾಚನ, ಸ್ಪರ್ಧೆ ವಾಚನ, ಬಹುಮಾನ ವಿತರಣೆ ಮೊದಲಾದ ಕಾರ್ಯಕ್ರಮಗಳಾದುವು. ಮರುದಿವಸ ಹಳೆ ವಿದ್ಯಾರ್ಥಿಗಳ ದಿನಾಚರಣೆಯು ಶ್ರೀ ಕೆ. ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ದ. ಕ. ಜಿಲ್ಲಾ ಪ್ರಜಾಸೋಶಿಯಲಿಸ್ಟ್ ಪಕ್ಷದ ಕಾರ್ಯಕಾರೀ-ಸಮಿತಿಸಭೆಯು ತಾ. 23ರಲ್ಲು ಅಧ್ಯಕ್ಷ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸೇರಿ, ಕಾಸರಗೋಡು ತಾಲೂಕಿನ ಉತ್ತರ ಭಾಗವನ್ನು ಜನತೆಯ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಕೇರಳದಲ್ಲಿ ಸೇರಿಸುವ ನಿರ್ಧಾರವನ್ನು ಖಂಡಿಸಲಾಯಿತು. ಈ ತಿಂಗಳಲ್ಲಿ ಆರಂಭಿಸಬೇಕೆಂದಿದ್ದ ಕಿಸಾನ್ ಸತ್ಯಾಗ್ರಹವನ್ನು ಸ್ವಲ್ಪ ಕಾಲ ಮುಂದೂಡಲಾಯಿತು.

ಪ್ರಜಾಪ್ರಭುತ್ವ ದಿನಾಚರಣೆಯು— ತಾ. 26ರಂದು ಬೆಳಿಗ್ಗೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ರಾಷ್ಟ್ರಧ್ವಜಾರೋಹಣ ಗೈದು ರಿಜರ್ವ್ ಪೋಲೀಸ್ ದಳ, ಕಾಲೇಜುಗಳ ಎನ್. ಸಿ. ಸಿ. ದಳಗಳ, ಸ್ಕೌಟ್ ಮತ್ತು ಗೈಡ್ ದಳಗಳ ಪಥಚಲನವನ್ನು ಈಕ್ಷಿಸಿ ವಂದನೆ ಸ್ವೀಕರಿಸಿದರು. ಸಂಜೆ ಸಾರ್ವಜನಿಕ ಸಭೆಯು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಕೆ. ತಿಂಗಳಾಯರು ಸ್ವಾಗತಭಾಷಣಮಾಡಿದರು. ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಮ್. ಸಿ. ಡಾ. ಕೆ. ನಾಗಪ್ಪ ಆಳ್ವ, ಕೆ. ಕೆ. ಸೆಟ್ಟಿ, ಡಾ. ಎಫ್. ಎಚ್. ಸ್ಪೊಹೆಯರ್ ಮೊದಲಾದವರು ವಿವಿಧ ದೃಷ್ಟಿಕೋನದಿಂದ ಮಾತನಾಡಿದರು. ಸಭಾಧ್ಯಕ್ಷ ಡಾ. ಪೈಗಳವರು ತಮ್ಮ ಭಾಷಣದಲ್ಲಿ ದೇಶದಲ್ಲಿಯ ಹಲವಾರು ಅಭಿವೃದ್ಧಿ ಕಾರ್ಯಗಳ ಕುರಿತು ಪ್ರಸ್ತಾಪಿಸಿ, ಅವುಗಳ ಸಫಲತೆಗಾಗಿ ಸರ್ವರೂ ಐಕ್ಯತೆಯಿಂದ ದುಡಿಯಬೇಕೆಂದರು. ಸರಕಾರಕ್ಕೂ ಜನಪ್ರತಿನಿಧಿಗಳಿಗೂ ಸರಿಯಾದ ಬೆಂಬಲ ನೀಡುವುದು ಅವಶ್ಯವಿದೆ ಎಂದರು. ಶ್ರೀ ಎ. ಲೋಕಯ್ಯ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ವೈದ್ಯಕೀಯ ಪ್ರದರ್ಶನ ಉದ್ಘಾಟನೆ—ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನವರು ಬಾವಟೆ ಗುಡ್ಡೆಯ ತಮ್ಮ ಹೊಸ ವಠಾರದಲ್ಲಿ ವ್ಯವಸ್ಥೆಗೊಳಿಸಿದ ವೈದ್ಯಕೀಯ ಮತ್ತು ಆರೋಗ್ಯ ಪ್ರದರ್ಶನದ ಉದ್ಘಾಟನೆಯನ್ನು ತಾ. 28ರಲ್ಲು ಮದ್ರಾಸು ಪ್ರಾಂತದ ಡ್ಯರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಕರ್ನಲ್ ಸಂಗಮ್ ಲಾಲರು ನೆರವೇರಿಸಿದರು. ಕುಮಾರಿ ದೇವಯಾನಿ ಥಾಕ್ರರು ಮುಖ್ಯ ಅತಿಥಿಗೆ ಹಾರ ಹಾಕಿದರು. ಪ್ರಿನ್ಸಿಪಾಲ್ ಡಾ| ಎಸ್. ವಿ. ರಮಣಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ವೈಸ್ ಪ್ರಿನ್ಸಿಪಾಲ್ ಡಾ| ಜಿ. ಡಿ ಮೇಲಿಯಾತರು ಪ್ರದರ್ಶನದ ವಿವಿಧ ಭಾಗಗಳ ವಿವರಗಳನ್ನಿತ್ತರು. ಉದ್ಘಾಟಕರು ತಮ್ಮ ಭಾಷಣದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ವಿಸ್ತರಣಾ ಕ್ಷೇತ್ರದಲ್ಲಿ ಚಿಕಿತ್ಸಾ ವಿಭಾಗದೊಡನೆ ಸಾರ್ವಜನಿಕ ಆರೋಗ್ಯವನ್ನೊಳಗೊಂಡ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವ ಸೂಚನೆಯನ್ನು ಮಾಡಲಾಗಿದೆ ಎಂದು ಹೇಳಿದರು. ಡಾ. ಸಿ. ಎಚ್. ಶಿವರಾಮನ್, ಅವರು ಧನ್ಯವಾದಗಳನ್ನಿತ್ತರು. ಈ ಪ್ರದರ್ಶನ ಉತ್ಪತ್ತಿಯನ್ನು ಗುರುಪುರದಲ್ಲಿ ನಡೆಸುತ್ತಿರುವ ಗ್ರಾಮ ವೈದ್ಯಕೀಯ ಸಹಾಯ ಕೇಂದ್ರಕ್ಕೆ ಉಪಯೋಗಿಸಲಾಗುವುದು.

ಕಾಸರಗೋಡಿನ ಕುರಿತು ಜಿಲ್ಲಾ ಬೋರ್ಡಿನ ನಿರ್ಣಯ— ದ. ಕ. ಜಿಲ್ಲಾಬೋರ್ಡಿನ ಸಭೆಯು ತಾ. 25ರಲ್ಲಿ ಬೆಳಿಗ್ಗೆ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಈ ಕೆಳಗಿನ ನಿರ್ಣಯವು ಬಹುಮತದಿಂದ ಪಾಸಾಯಿತು. ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಕಾಸರಗೋಡು ತಾಲೂಕನ್ನು ನಿಯೋಜಿತ ಕರ್ನಾಟಕದಲ್ಲಿ ಇರಿಸಬೇಕೆಂಬ ನ್ಯಾಯವಾದ ಬೇಡಿಕೆಗಾಗಿ ಕೈಗೊಂಡ ಎಲ್ಲಾ ನ್ಯಾಯಬದ್ಧ ಮತ್ತು ಶಾಂತ ವಿಧಾನಗಳು ನಿಷ್ಫಲವಾದುದಕ್ಕೆ ಈ ಜಿಲ್ಲಾಬೋರ್ಡು ಅತೀವ ವಿಷಾದ ಮತ್ತು ಆಶ್ಚರ್ಯಪಡುತ್ತದೆ. ಮತ್ತು ಜನತೆಯ ಇಚ್ಛೆಗೆ ವ್ಯತಿರಿಕ್ತವಾಗಿ ಇದೀ ಕಾಸರಗೋಡು ತಾಲೂಕನ್ನು ಕೇರಳದಲ್ಲಿ ಸೇರಿಸಬೇಕೆಂದು ನಿರ್ಧರಿಸುವ ಭಾರತ ಸರಕಾರದ ಇತ್ತೀಚಿನ ಘೋಷಣೆಯಿಂದಾಗಿ ಜಿಲ್ಲೆಯಾದ್ಯಂತ ಹಿಂದೆಂದೂ ಆಗದಂತಹ ಉದ್ವೇಗ ಮತ್ತು ಅತೃಪ್ತಿಯುಂಟಾಗಿದೆ. ಕಾಸರಗೋಡು ತಾಲೂಕಿನ ಕನ್ನಡಿಗರಿಗಾದ ಈ ಅನ್ಯಾಯವನ್ನು ಸರಿಪಡಿಸಲಿಕ್ಕಾಗಿ, ಕೇಂದ್ರ ಮತ್ತು ಮದ್ರಾಸು, ಮೈಸೂರು, ಬೊಂಬಾಯಿ, ಹೈದರಾಬಾದು ಮತ್ತು ಕೊಡಗು ಸರಕಾರಗಳವರು ಕೂಡಲೇ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಈ ಜಿಲ್ಲಾ ಬೋರ್ಡು ಒತ್ತಾಯಪೂರ್ವಕ ಕೇಳಿಕೊಳ್ಳುತ್ತದೆ ಅನಂತರ ಮದ್ರಾಸು ಬಿರುಗಾಳಿ ಸಹಾಯನಿಧಿಗೆ ರೂ. 250/- ಸಹಾಯಧನ ಕೊಡುವ ಮತ್ತಿತರ ನಿರ್ಣಯಗಳಾದುವು.

ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯು— ತಾ. 22ರಲ್ಲು ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಿದ್ದರಿಂದ ಉಂಟಾದ ಸಮಸ್ಯೆಗಳ ಕುರಿತು ನಡೆದ ಚರ್ಚೆಯಲ್ಲಿ ಶ್ರೀಗಳಾದ ಎಮ್. ಉಮೇಶರಾವ್, ಎಸ್ ನರ್ಸಪ್ಪಯ್ಯ, ಟಿ. ಎ. ಪೈ, ಕೆ. ಆರ್. ಆಚಾರ್, ಕೆ. ಕೆ. ಸೆಟ್ಟಿ, ಎನ್. ಎನ್. ಸುವರ್ಣ ಮೊದಲಾದವರು ತಂತಮ್ಮ ಅಭಿಪ್ರಾಯಗಳನ್ನಿತ್ತರು. ಕಾಸರಗೋಡಿನ ಸಂಬಂಧವಾಗಿ ರಾಜ್ಯ ಪುನರ್ವಿಂಗಡನಾ ಆಯೋಗದ ಸೂಚನೆಯನ್ನೇ ಕಾಂಗ್ರೆಸ್ ವರಿಷ್ಠರೂ ಕೇಂದ್ರ ಸರಕಾರದವರೂ ಸ್ವೀಕರಿಸಿ ಮಾಡಿರುವ ತೀರ್ಮಾನದಿಂದ ಇಡೀ ಜಿಲ್ಲೆಯು ಖೇದ ವಿಸ್ಮಯಗೊಳ್ಳುವಂತಾಗಿದೆಯೆಂದೂ, ಕಾಸರಗೋಡು ತಾಲೂಕಿನ ಕರ್ನಾಟಕದ ಭಾಗದಲ್ಲಿನ ಪರಿಸ್ಥಿತಿಯು ಅತ್ಯಂತ ವಿಷಮಗೊಂಡು ಈ ಸಮಿತಿಯು ಅದನ್ನು ಯಾವ ಅಂಕೆಗೂ ತರಲು ಅಸಾಧ್ಯವಾದ ಅಸಹಾಯಕಾವಸ್ಥೆಗೀಡಾಗಿರುವುದೆಂದೂ ಈ ಮಹಾಸಭೆಯು ಅತ್ಯಂತ ವಿಷಾದ ಹಾಗೂ ನಿರಾಶಾಪೂರ್ಣವಾಗಿ ಕರ್ನಾಟಕ ಪ್ರಾಂತೀಯ ಹಾಗೂ ಅ. ಭಾ. ಕಾಂಗ್ರೆಸ್ ಸಮಿತಿಗಳ ತೀವ್ರ ಗಮನಕ್ಕೆ ತರಲಿಚ್ಛಿಸುತ್ತದೆ ಎಂಬ ನಿರ್ಣಯ ಪಾಸಾಯಿತು. ಬಳಿಕ ಶ್ರೀ ಕೆ. ಕೆ. ಸೆಟ್ಟರು ಕನ್ವೀನರರಾಗಿರುವ ಸಮಿತಿಯೊಂದು ಧ್ಯೇಯ ಸಾಧನೆಗಾಗಿ ರಚಿಸಲ್ಪಟ್ಟಿತು.

ಅಳಿಯ ಸಂತಾನಿಗರ ಮಹಾ ಸಭೆ— ದ. ಕ. ಜಿಲ್ಲೆಯ ಅಳಿಯ ಸಂತಾನಿಗರ ಮಹಾಸಭೆಯು ತಾ. 21ರಲ್ಲಿ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಹಿಂದೂ ವಾರೀಸು ಹಕ್ಕು ಮಸೂದೆಯು ಅಳಿಯಸಂತಾನಿಗರಿಗೆ ಅನ್ವಯವಾಗುವಂತೆ ರಾಜ್ಯಸಭೆಯಲ್ಲಿ ಪಾಸಾದ ತಿದ್ದುಪಡಿಯನ್ನು, ಅದರಲ್ಲಿರುವ ಅಸ್ಪಷ್ಟತೆಯನ್ನು ಸರಿಪಡಿಸಿ ಅಳಿಯ ಸಂತಾನಿಗರನ್ನು ಅದರಿಂದುಂಟಾಗುವ ವ್ಯಾಜ್ಯದ ಹಾವಳಿಯಿಂದ ಯಾವರೀತಿಯಲ್ಲಿ ನಿವಾರಿಸಬಹುದೆಂಬುದನ್ನು ವಿಚಾರಿಸಲು ಜರಗಿತು. ಶ್ರೀ ಬಿ. ವೈಕುಂಠ ಬಾಳಿಗರು ಸಭಾಧ್ಯಕ್ಷತೆ ವಹಿಸಿದರು.

ಶ್ರೀಗಳಾದ ಬಿ. ಬಿ. ಶೆಟ್ಟಿ, ಎಸ್. ನಾಗರಾಜಯ್ಯ, ರಂಗನಾಥ ಪೂಂಜ, ಧರ್ಮಸಾಮ್ರಾಜ್ಯಯ್ಯ, ವಾಸಪ್ಪಾಳ್ವ, ಶಂಕರ ಆಳ್ವ, ಕೃಷ್ಣ ಶೆಟ್ಟಿ, ಮಾರಪ್ಪ ಶೆಟ್ಟಿ, ಕೆ. ಮಹಾಬಲ ಹೆಗ್ಡೆ, ಡಾ. ನೇಮಿರಾಜ ಆಳ್ವ, ಡಾ. ನಾಕಪ್ಪಾಳ್ವ ಮೊದಲಾದವರು ಯುಕ್ತ ಸಲಹೆ ಸೂಚನೆಗಳನ್ನಿತ್ತು ಮಾತನಾಡಿದರು.

ಬಳಿಕ ಮಸೂದೆಯ ಕುರಿತು ಯಾವರೀತಿಯ ಸಲಹೆಯನ್ನು ಕೇಂದ್ರ ಸರಕಾರಕ್ಕೆ ಕೊಡಬಹುದೆಂಬುದನ್ನು ನಿರ್ಣಯಿಸಲು ಶ್ರೀ ಬಿ. ಬಿ. ಶೆಟ್ಟರು ಕನ್ವೀನರರಾಗಿರುವ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು ಪುನಃ ತಾ. 1ರಂದು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸೇರಬೇಕೆಂದಾಯಿತು.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು $4\frac{1}{2}$% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	$3\frac{3}{4}$%
6	,,	$3\frac{1}{2}$%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು $\frac{1}{2}$%

THE MOOLKY BANK LTD., MULKI.

ಏಲಂ ನೋಟೀಸು

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವಾ, ದ. ಕ.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ಮೇಲ್ಕಾಣಿಸಿದ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲವನ್ನು ಕ್ರಮ ಪ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸಹ ಮರುಪಾವತಿ ಮಾಡದಿರುವುದರಿಂದ ಸದರಿಯವರಿಗೆ ವ ಸದರಿಯವರು ಮೃತಪಟ್ಟಲ್ಲಿ, ಸದರಿಯವರ ವಾರೀಸುದಾರರಿಗೆ, ಈ ಮೂಲಕ ತಿಳಿಯಪಡಿಸುವದೇನೆಂದರೆ ಸದ್ರಿಯವರು ಈಡಿಟ್ಟ ಈ ಕೆಳಗೆ ಕಾಣಿಸಿದ ನಗಗಳನ್ನು ಇದೇ ಬರುವ ಫೆಬ್ರವರಿ ತಿಂಗಳ ತಾರೀಕು 8ನೇ ಬುಧವಾರ 1956ರೊಳಗೆ ಬಿಡಿಸದಿದ್ದಲ್ಲಿ, ತಾರೀಕು 11ನೇ ಶನಿವಾರ ಗಂಟೆ 12ಕ್ಕೆ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸದ್ರಿ ತಾರೀಕಿಗೆ ಏಲಂ ಮಾಡಲಸಾಧ್ಯವಾದಲ್ಲಿ ಸದ್ರಿ ಏಲಂನ್ನು ಪುನಃ ನೋಟೀಸು ಕೊಡದೇನೇ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಮುಂದು ಬರಿಸಲಾದೀತು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
29/835	ಚಾರ್ಲ್ಸ್ ಪಿಂಟೊ S/o ಡುಜೆ ಪಿಂಟೊ, ಕೊಲ್ಲಬೆಟ್ಟು, ಪಾದೂರು.	ರೂ. 17/-
861	ದುಗ್ಗಣ್ಣ ಪೂಜಾರಿ, S/o ತಿಮ್ಮಪ್ಪ ಪೂಜಾರಿ, ಕಲತ್ತೂರು, ಬಾರೆಬೆಟ್ಟು, ಪಾದೂರು.	10/-
880	ಯಸ್. ಗೋಪಾಲ ಸೆಟ್ಟಿ, N/o ಯಸ್. ಶ್ಯಾಮ ಸೆಟ್ಟಿ, ಸುಲ್ಲೆದ್ ಮನೆ, ಶಿರ್ವ.	45/-
919	ಅಬ್ದುಲ್ ಖಾದೀರ್, S/o ಕುನ್ನಿ ಹಮುದ್ ಕಾದಿರ್, ಸಿಟ್ಟಿ.	20/-
939	ಫ್ರಾನ್ಸಿಸ್ ಮೋನಿಸ್. S/o ಅಂತೋನಿ ಮೋನಿಸ್, ದೇವರಗುಡ್ಡೆ, ಮೂಡುಬೆಳ್ಳೆ.	20/-
1152	ಶ್ಯಾಮರಾಯ ಆಚಾರಿ, S/o ಶಿವಪ್ಪ ಆಚಾರಿ, ಮಟ್ಟಾರ್	21/-
1354	ಪ್ಯಾಂಡ ಹೆಗ್ಡೆ, N/o ಚಂದಯ ಹೆಗ್ಡೆ, ನಡುಮನೆ, ಮಟ್ಟಾರ್.	10/-
30/100	ಉಸ್ಮಾನ ಸಾಹೇಬ, S/o ಇಸ್ಮಾಯಿಲ್ ಸಾಹೇಬ, ಕಲತ್ತೂರು ಕನಡಬೆಟ್ಟು, ಪಾದೂರು.	20/-
176	ಬಾಬು ಪೂಜಾರಿ, N/o ಅಣ್ಣು ಪೂಜಾರಿ, ಪಂಜಿಮಾರು, ಶಿರ್ವ.	20/-
	ಬಾಕಿ ರೂ.	15/-
30/381	ಉಮ್ಮಕ್ಕ ಪೂಜಾರ್ತಿ, D/o ಬಾಗಿ ಪೂಜಾರ್ತಿ, ಗಾಣದಪಟ್ಟು, ಶಿರ್ವ.	12/-
413	ಬೆರ್ನಾಡ್ ಕಸ್ತಲೀನೊ, S/o ಬೆಂಜ್ಮಿನ್ ಕಸ್ತಲೀನೊ, ಕೊಡಿಮಲೆ ಮನೆ, ಪಳ್ಳಿ.	25/-
515	ಎಸ್ತು ಕಸ್ತಲಿನೊ, W/o ಅಲೆಕ್ಸ್ ಸೋಜ, ಪಲದೂರು ಪಾದೂರು.	50/-

(Sd.) I. D'MELLO,
AGENT.

Date: 23—1—1956.

ಭಾರತದಲ್ಲಿ ಮಿಠಾಯಿಗಳ ಉದ್ಯಮ

೧

ಬೇಡಿಕೆಯೊಡನೆ ತಯಾರಿಕೆಯ ಸಮಜೋಡಣೆ

ಬೇರಾವ ದೇಶಕ್ಕಿಂತ ಮುಂಚಿತವಾಗಿಯೇ ಭಾರತದಲ್ಲಿ ಜನರು ಸಕ್ಕರೆಯನ್ನು ಉತ್ಪಾದಿಸಲಾಗಿತ್ತು. ಪೆಪ್ಪರಮಿಂಟು, ಚಾಕೊಲೆಟು ಗಳಂತಹ ಮಿಠಾಯಿಗಳ ತಯಾರಿಕೆಯು ನಾಗರಿಕತೆಯಷ್ಟೇ ಪ್ರಾಚೀನವಾದದ್ದು. ಸಿಹಿ ತಿಂಡಿ ತಿನಸುಗಳು ಮಕ್ಕಳ ಆಹಾರದಲ್ಲಿ ಹಾಗೂ ಹಬ್ಬ ಹುಣ್ಣಿಮೆ ದಿನಗಳಲ್ಲಿ ಮುಖ್ಯ ಅಂಶವಾಗಿರುತ್ತಿದ್ದುವು.

ಭಾರತದಲ್ಲಿ ಮೊಟ್ಟ ಮೊದಲು ಚಾಕೊಲೆಟ್, ಪೆಪ್ಪರಮಿಂಟುಗಳಂತಹವುಗಳನ್ನು ತಯಾರಿಸುವ ಕಾರ್ಖಾನೆಯನ್ನು ಸುಮಾರು 40 ವರ್ಷಗಳ ಹಿಂದೆ ಸ್ಥಾಪಿಸಲಾಯಿತು. ಆಗ ವರ್ಷಕ್ಕೆ 3,000 ಟನ್ನುಗಳ ಮಿಠಾಯಿಯನ್ನು ಆಮದುಮಾಡಿಕೊಳ್ಳಲಾಗುತ್ತಿತ್ತು. 1939ರ ವೇಳೆಗೆ ಭಾರತೀಯ ಉದ್ಯಮವು ಆಂತರಿಕ ಬೇಡಿಕೆಯಲ್ಲಿ ನೂರಕ್ಕೆ 75ರಷ್ಟನ್ನು ಪೂರೈಸುತಿತ್ತು. ವಿದೇಶೀಯ ತಯಾರಿಕಾಗಾರರೊಂದಿಗೆ ಸ್ಪರ್ಧಿಸಿ, ಸಿಲೋನ್, ಬರ್ಮ ಮತ್ತು ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ರಫ್ತು ಮಾರುಕಟ್ಟೆಯನ್ನು ಸ್ಥಾಪಿಸಿತ್ತು.

ಉದ್ಯಮದ ಹೆಚ್ಚು ಭಾಗವು ಭಂಡವಾಳಸ್ಥರ ಕೈಯಲ್ಲಿತ್ತು. ಇವರು ಅನಾದಿ ಕಾಲದ ರೀತಿಯಲ್ಲಿ ಅತ್ಯಲ್ಪ ಭಂಡವಾಳದಿಂದ ಈ ಉದ್ಯಮವನ್ನು ನಡೆಸುತ್ತಿದ್ದರು. ಇವರಿಗೆ ವೈಜ್ಞಾನಿಕ ಹಾಗೂ ತಾಂತ್ರಿಕ ವಿಚಾರಗಳ ಪರಿಶ್ರಮ ತಿಳಿದಿರಲಿಲ್ಲ. ಅಹಿತದ ಸ್ಪರ್ಧಾ ಮನೋಭಾವವು ಬೆಳೆದು ಈ ಉದ್ಯಮವು ಪ್ರಗತಿಪರ ಹಾದಿಗಳಲ್ಲಿ ಬೆಳೆಯಲು ಸಾಧ್ಯವಾಗಲಿಲ್ಲ.

ನಂತರ ಎರಡನೆಯ ಜಾಗತಿಕ ಯುದ್ಧವು ಬಂದಿತು. ವಿದೇಶಗಳಿಂದ ಭಾರತಕ್ಕೆ ಮಿಠಾಯಿಗಳನ್ನು ತರಿಸಿಕೊಳ್ಳುವುದು ನಿಂತು ಹೋಯಿತು. ರಕ್ಷಣಾ ಸೇನೆಗಳಿಂದ ಮಿಠಾಯಿಗಳ ಬಗ್ಗೆ ಬೇಡಿಕೆಯು ಹೆಚ್ಚಾಯಿತು. ಜನಸಾಮಾನ್ಯರಲ್ಲಿ ಕೊಳ್ಳುವ ಶಕ್ತಿಯು ಸುಧಾರಿಸಿತು. ನೆರೆಹೊರೆಯ ಮಾರುಕಟ್ಟೆಗಳಲ್ಲಿ ವಿದೇಶೀಯ ತಯಾರಿಕಾ ಕರ್ತರ ಸ್ಪರ್ಧೆ ತಗ್ಗಿತು. ಭಾರತೀಯ ಮಿಠಾಯಿಗಳ ಬಗ್ಗೆ ಬೇಡಿಕೆ ಹೆಚ್ಚಾಯಿತು.

ಸಕ್ಕರೆ ಕೈಗಾರಿಕೆಯ ಭದ್ರತೆಯ ದೃಷ್ಟಿಯಿಂದ ಸಹಾಯಕ ಉದ್ಯಮಗಳನ್ನು ಅಭಿವೃದ್ಧಿಪಡಿಸುವ ಮಹತ್ವವನ್ನು ದರಗಳ ಸಂಬಂಧದ ಮಂಡಲಿಯು (1937) ಮನಗಂಡಿತು.

ಕೈಗಾರಿಕೆಯ ವಿಸ್ತರಣೆ

ಹೀಗೆ ಕಲ್ಪಿತವಾದ ಹಿತಕರವಾದ ವಾತಾವರಣದಲ್ಲಿ ಭಾರತದಲ್ಲಿ ಮಿಠಾಯಿ ಉದ್ಯಮವು ಇದ್ದಕ್ಕಿದ್ದಂತೆಯೇ ಅಭಿವೃದ್ಧಿ ಹೊಂದಿತು. ಅನೇಕ ಹೊಸ ಕಾರ್ಖಾನೆಗಳು ಅಸ್ತಿತ್ವವನ್ನು ಪಡೆದುವು. ಜೊತೆಗೆ ಹಳೆಯ ಕಾರ್ಖಾನೆಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡವು. 35 ಸಕ್ಕರೆ ಕಾರ್ಖಾನೆಗಳು ಈ ಉದ್ಯಮವನ್ನು ಅಭಿವೃದ್ಧಿಪಡಿಸಿವೆ. ಈ ಕಾರ್ಯದಲ್ಲಿ ಸರ್ಕಾರದವರು ಉತ್ತೇಜನವಿತ್ತರು.

ವೃದ್ಧಿಸುತ್ತಿದ್ದ ಬೇಡಿಕೆಗೆ ತಕ್ಕಂತೆ ಉದ್ಯಮವು ವಿಸ್ತರಿಸಿದ್ದಾಗ್ಯೂ, ಸಕ್ಕರೆಯ ಹಂಚಿಕೆಯ ಬಗ್ಗೆ ಸರ್ಕಾರದವರು ಜ್ಯಾರಿಗೆ ತಂದ ಕೋಟಾ ಪದ್ಧತಿಯಿಂದ, ಉತ್ಪಾದನೆಯು ಪರಿಮಿತಿಗೊಳಪಟ್ಟಿತು. ಯುದ್ಧಾನಂತರದ ಅವಧಿಯಲ್ಲಿ ಈ ಉದ್ಯಮವು ಮತ್ತೊಮ್ಮೆ ಆಯಾತವಾದ ಮಿಠಾಯಿಗಳ ದೆಸೆಯಿಂದ ಸ್ಪರ್ಧೆಯನ್ನು ಎದುರಿಸಬೇಕಾಯಿತು. 1949-50ರಿಂದ ಮಿಠಾಯಿಗಳನ್ನು ಆಯಾತ ಮಾಡಿಕೊಳ್ಳುವುದನ್ನು ಒಂದೇ ಸಮನೆ ನಿಷೇಧಿಸಲು ಪ್ರಾರಂಭವಾಯಿತು. 1953ರ ಪ್ರಥಮಾರ್ಧದಲ್ಲಿ ಸರ್ಕಾರದವರು ಸ್ಥಾಪಿತಗೊಂಡ ಸಂಸ್ಥೆಗಳಿಂದ ಸರ್ಕಾರದವರು ಮೂಲ ವರ್ಷದ ಆಯಾತದಲ್ಲಿ ನೂರಕ್ಕೆ 5ರಷ್ಟನ್ನು ಮಾತ್ರ ಆಯಾತಮಾಡಿಕೊಳ್ಳುವ ಬಗ್ಗೆ ಅನುಮತಿ ಇತ್ತರು.

ಸಕ್ಕರೆಯ ಬಗ್ಗೆ ಇದ್ದ ನಿಯಂತ್ರಣವನ್ನು ತೆಗೆದುಹಾಕಿದ ಮೇಲೆ ಈ ಉದ್ಯಮಕ್ಕೆ ಸಕ್ಕರೆಯು ಯಥೇಚ್ಛವಾಗಿ ಸಿಗುವಂತಾದಾಗ್ಯೂ ದೇಶದಲ್ಲಿ ಉದ್ಭವಿಸಿದ ಆರ್ಥಿಕ ಪರಿಸ್ಥಿತಿಗಳಿಂದ [illegible] ನಾಯಿಕೊಡೆಗಳಂತೆ ಹುಟ್ಟಿಕೊಂಡ ಚಿಕ್ಕ ಪುಟ್ಟ ತಯಾರಿಕಾ ಸಂಸ್ಥೆಗಳಿಂದ ಉದ್ಯಮಕ್ಕೆ ಕಠಿಣಪರಿಸ್ಥಿತಿಯುಂಟಾಯಿತು. ಈ ಚಿಕ್ಕ ಪುಟ್ಟ ಸಂಸ್ಥೆಗಳು ಹಾನಿಕಾರಕ ಮಿಠಾಯಿಗಳನ್ನು ಅನಾರೋಗ್ಯದ ವಾತಾವರಣದಲ್ಲಿ ತಯಾರಿಸಿ ಸರಿಯಾದ ರೀತಿಯಲ್ಲಿ 'ಪ್ಯಾಕ್' ಮಾಡದೆ ಮಾರಾಟ ಮಾಡುತ್ತಿರುವುದರಿಂದ ಈ ಉದ್ಯೋಗಕ್ಕೆ ಧಕ್ಕೆ ತಗಲಿದೆ. ತತ್ಫಲವಾಗಿ ಅನೇಕ ಉತ್ತಮ ದರ್ಜೆಯ ಮಿಠಾಯಿಗಳನ್ನು ತಯಾರಿಸುತ್ತಿದ್ದ ಸಂಸ್ಥೆಗಳು ತಮ್ಮ ತಯಾರಿಕೆಯನ್ನು ನಿಲ್ಲಿಸಿವೆ.

ಉತ್ಪಾದನೆಯಲ್ಲಿ ಹೆಚ್ಚಳ

1948ರಲ್ಲಿ ಕೇಂದ್ರ ಆಹಾರ ಶಾಖೆಯವರು ರಚಿಸಿದ ಪೆಪ್ಪರ್ ಮಿಂಟ್, ಚಾಕೊಲೆಟ್‌ಗಳಂತಹ ಮಿಠಾಯಿ ಸಂಬಂಧದ ಮಂಡಲಿಯು ದೇಶದಲ್ಲಿ 30,000 ಟನ್ನುಗಳ ಮಿಠಾಯಿಯ ಬಗ್ಗೆ ಬೇಡಿಕೆಯಿದೆ ಎಂದು ಅಂದಾಜು ಮಾಡಿತು.

ಸಕ್ಕರೆಯ ನಿಯಂತ್ರಣವಿದ್ದ ಕಾಲದಲ್ಲಿ ಸಕ್ಕರೆಯ 'ಕೋಟಾ'ವನ್ನು ಅನುಸರಿಸಿ 10,000 ದಿಂದ 12,000 ಟನ್ನುಗಳ ಮಿಠಾಯಿಯ ತಯಾರಿಕೆಯಾಗುತ್ತಿತ್ತು. ನಿಯಂತ್ರಣವನ್ನು ತೆಗೆದು ಹಾಕಿದ ಮೇಲೆ ಉತ್ಪಾದನೆಯು ಹೆಚ್ಚಿತು. ದುರದೃಷ್ಟವಶಾತ್ ಉತ್ತಮ ದರ್ಜೆಯ ತಯಾರಿಕಾಗಾರರ ಉತ್ಪಾದನೆಯು ವರ್ಷಕ್ಕೆ 9,000 ಟನ್ನುಗಳಿಂದ 8,000 ಟನ್ನುಗಳಿಗೆ ಇಳಿಯಿತು.

ದಿನಕ್ಕೆ ಎಂಟು ಗಂಟೆಗಳಂತೆ ಕೆಲಸಮಾಡುವ ಉತ್ತಮ ದರ್ಜೆಯ ಕಾರ್ಖಾನೆಗಳು 50,000 ಟನ್ನುಗಳ ಚಾಕೊಲೆಟ್, ಪೆಪ್ಪರ್ ಮಿಂಟ್‌ಗಳಂತಹ ಮಿಠಾಯಿಗಳನ್ನು ತಯಾರಿಸುವ ಸಾಮರ್ಥ್ಯ ಪಡೆದಿವೆ. ಆದರೆ ಉತ್ತಮ ದರ್ಜೆಯ ಚಾಕೊಲೆಟ್, ಪೆಪ್ಪರ್ ಮಿಂಟ್‌ಗಳಂತಹ ಮಿಠಾಯಿಗಳ ಬಗ್ಗೆ ಬೇಡಿಕೆಯು 8,000 ಟನ್ನುಗಳಿಗೆ ಇಳಿದಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಬೇಡಿಕೆಯು 10,000 ಟನ್ನುಗಳಿಗೆ ಮೀರಲಾರದೆಂದು ಅಂದಾಜು ಮಾಡಲಾಗಿದೆ.

ಭಾರತದಲ್ಲಿ ತಲಾ ಒಬ್ಬೊಬ್ಬರು ಸಕ್ಕರೆಯನ್ನು ಬಳಸುವ ಪ್ರಮಾಣವು ಅತ್ಯಲ್ಪ. ತಲಾ ಒಬ್ಬೊಬ್ಬರು 8 ರಾತಲು ಸಕ್ಕರೆಯನ್ನು (ಬೆಲ್ಲವನ್ನೂ ಸೇರಿಸಿದರೆ 30 ರಾತಲು) ಉಪಯೋಗಿಸುತ್ತಾರೆ. ಉತ್ತಮ ಆಹಾರವನ್ನು ಸೇವಿಸುವ ರಾಷ್ಟ್ರಗಳಲ್ಲಿ ತಲಾ ಒಬ್ಬೊಬ್ಬರು 100 ರಾತಲುಗಳಿಗೂ ಮೀರಿದ ಸಕ್ಕರೆಯನ್ನು ಬಳಸುವರು.

ಚಾಕೊಲೆಟ್ ಪೆಪ್ಪರ್‌ಮಿಂಟ್‌ಗಳಂತಹ ಮಿಠಾಯಿ ತಯಾರಿಸುವ ಉದ್ಯಮವು ಪುನಃ ಚೇತರಿಸಿಕೊಂಡು ತನ್ನ ನಿರ್ಯಾತ ಮಾರುಕಟ್ಟೆಗಳನ್ನು ವಿಸ್ತರಿಸಿಕೊಳ್ಳಬಹುದೆಂದು ಆಶಿಸಬಹುದು. ಮಿಠಾಯಿ ಉದ್ಯಮಕ್ಕೆ ಉತ್ತಮ ಭವಿಷ್ಯವಿದೆ. ಜನರಲ್ಲಿ ಕೊಳ್ಳುವ ಶಕ್ತಿಯು ಹೆಚ್ಚಾದಂತೆ ಈ ಉದ್ಯಮವೂ ಮುಂದುವರಿಯುವುದು.

ಕಚ್ಚಾ ವಸ್ತುಗಳ ಪೂರೈಕೆ

ಚಾಕೊಲೆಟ್, ಪೆಪ್ಪರ್‌ಮೆಂಟ್‌ಗಳಂತಹ ಮಿಠಾಯಿಗಳ ತಯಾರಿಕೆಯಲ್ಲಿ ಉಪಯೋಗಿಸುವ ಅತ್ಯಂತ ಮುಖ್ಯವಾದ ಕಚ್ಚಾ ವಸ್ತುಗಳಾವುವೆಂದರೆ:—ಸಕ್ಕರೆ, ಗ್ಲೂಕೋಸ್ ದ್ರವ, ಸಿಟ್ರಿಕ್ ಮತ್ತು ಟಾರ್ಟರಿಕ್ ಆಮ್ಲಗಳು ವರ್ಣ ವಸ್ತುಗಳು ಮತ್ತು ಎಸೆನ್ಸ್‌ಗಳು, ದ್ರವೀಕರಿಸಿದ ಹಾಲು ಮತ್ತು ಹಾಲಿನ ಪುಡಿ, ಹಣ್ಣುಗಳು ಮತ್ತು ಬೀಜಗಳು, ಕೋಕೋ ಮತ್ತು ಚಾಕೊಲೆಟ್.

ಮಿಠಾಯಿಗಳ ತಯಾರಿಕೆಯಲ್ಲಿ ಬಳಸುವ ಅತ್ಯುತ್ತಮ ಗುಣದ ಸಕ್ಕರೆಯನ್ನು ಭಾರತದಲ್ಲಿ ಉತ್ಪಾದಿಸಲಾಗುತ್ತಿದೆ. ಸಕ್ಕರೆಯ ನಂತರ ಹೆಚ್ಚಾಗಿ ಬಳಸುವ ಗ್ಲೂಕೋಸ್ ದ್ರವವನ್ನು ಭಾರತದಲ್ಲಿಯೇ ತಯಾರಿಸುತ್ತಿದ್ದಾಗ್ಯೂ ಗುಣವು ಉತ್ತಮ ರೀತಿಯದಲ್ಲ. ಹೀಗಾಗಿ ಪ್ರತಿ ವರ್ಷವೂ 3,000 ಟನ್ನುಗಳ ಗ್ಲೂಕೋಸ್ ದ್ರವವನ್ನು ಆಯಾತ ಮಾಡಿಕೊಳ್ಳಲಾಗುತ್ತಿದೆ. ಉಳಿದ ಪದಾರ್ಥಗಳನ್ನು ಕೂಡ ಆಯಾತ ಮಾಡಿಕೊಳ್ಳಲಾಗುತ್ತಿದೆ.

'ಪ್ಯಾಕಿಂಗ್' ಅಂದವಾಗಿಯೂ ಆಕರ್ಷಣೀಯವಾಗಿಯೂ ಇದ್ದರೆ ಮಾತ್ರ ಚಾಕೊಲೆಟ್, ಪೆಪ್ಪರ್‌ಮೆಂಟ್‌ಗಳಂತಹ ಮಿಠಾಯಿಗಳನ್ನು ಚೆನ್ನಾಗಿ ಮಾರಬಹುದು. 'ಪ್ಯಾಕಿಂಗ್'ಗಾಗಿ ಸೆಲ್ಲೋಫೇನ್, ಮೇಣದ ಕಾಗದ, ಅಲ್ಯುಮಿನಿಯಂ ರೇಕುಗಳು, ರಟ್ಟಿನ ಪೆಟ್ಟಿಗೆಗಳು, ತಗಡಿನ ಪೆಟ್ಟಿಗೆಗಳು ಮತ್ತು ಮರದ ಪೆಟ್ಟಿಗೆಗಳನ್ನು ಉಪಯೋಗಿಸಲಾಗುವುದು. ಇವುಗಳಲ್ಲಿ ತಗಡಿನ ಹಾಗೂ ಮರದ ಪೆಟ್ಟಿಗೆಗಳನ್ನು ಮಾತ್ರ ಭಾರತದಲ್ಲಿ ತಯಾರಿಸಲಾಗುತ್ತಿದೆ.

ಭಾರತೀಯ ಚಾಕೊಲೆಟ್, ಪೆಪ್ಪರ್ ಮಿಂಟ್ ಗಳಂತಹ ಮಿಠಾಯಿ ತಯಾರಿಕಾಗಾರರ ಸಂಘವು ಮಿಠಾಯಿಗಳ ಗುಣದ ಬಗ್ಗೆ ಹೆಚ್ಚು ಗಮನವಿತ್ತಿದೆ. ಗುಣ ಹಾಗೂ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಘೋಷಿಸಿರುವ ಬೆರಕೆ ಆಹಾರ ಪ್ರತಿಬಂಧಕ ಶಾಸನದಿಂದ ಉತ್ತಮ ದರ್ಜೆಯ ಚಾಕೊಲೆಟ್, ಪೆಪ್ಪರ್‌ಮಿಂಟ್ ಗಳಂತಹ ಮಿಠಾಯಿಗಳನ್ನು ತಯಾರಿಸಬೇಕಾಗುವುದು.

ಭಾರತೀಯ ಪ್ರಮಾಣೀಕರಣ ಸಂಸ್ಥೆಯು ಕೂಡ ಮಿಠಾಯಿಗಳ ವಿಷಯದಲ್ಲಿ ಪ್ರಮಾಣಗಳನ್ನು ತರುವ ಕಾರ್ಯವನ್ನು ಕೈಗೊಂಡಿದೆ.

ಬೆಲೆ ಇಳಿಯಲಿ!

ದೇಶದಲ್ಲಿ ಪೆಪ್ಪರ್ ಮಿಂಟ್ ಮುಂತಾದ ಮಿಠಾಯಿಗಳ ಬಗೆ ಬೇಡಿಕೆಯನ್ನು ಹೆಚ್ಚಿಸಲು ಮಿಠಾಯಿಗಳ ಬೆಲೆಯನ್ನು ಇಳಿಸುವುದು ಅತ್ಯಗತ್ಯವಾಗಿದೆ. ಕೇಂದ್ರ ಸರ್ಕಾರದವರೂ ಮತ್ತು ಸ್ಥಳೀಯ ಸರ್ಕಾರಗಳೂ ಸಕ್ಕರೆಯ ವಿಷಯದಲ್ಲಿ ವಿಧಿಸುವ ಸುಂಕವನ್ನು ಈ ಉದ್ಯಮಕ್ಕೆ ಹಿಂದಿರುಗಿಸಿದರೆ ಆಗ ಚಾಕೊಲೆಟ್, ಪೆಪ್ಪರ್‌ಮಿಂಟ್‌ಗಳಂತಹ ಮಿಠಾಯಿಗಳ ಬೆಲೆಯನ್ನು ಇಳಿಸಲು ಸಾಧ್ಯವಾಗಬಹುದು. ಸಕ್ಕರೆಯ ಬೆಲೆ ಮಿಠಾಯಿಯ ಬೆಲೆಯಲ್ಲಿ ನೂರಕ್ಕೆ 25ರಿಂದ 90ರಷ್ಟಾಗುವುದು.

ವಿದೇಶಗಳಿಂದ ಚಾಕೊಲೆಟ್, ಪೆಪ್ಪರ್ ಮಿಂಟನಂತಹ ಮಿಠಾಯಿಗಳನ್ನು ತರಿಸುವುದನ್ನು ಪೂರ್ಣವಾಗಿ ನಿಷೇಧಿಸಬೇಕೆಂದು ಉದ್ಯಮವು ಭಾವಿಸುತ್ತದೆ. ಅಲ್ಲದೆ ಅಪಾಯಕಾರಕ ಮಿಠಾಯಿಗಳ ತಯಾರಿಕೆಯನ್ನು ಪೂರ್ಣವಾಗಿ ನಿಷೇಧಿಸುವುದು ಅವಶ್ಯಕವಾಗಿದೆ.

ದ್ವಿತೀಯ ಜಾಗತಿಕ ಯುದ್ಧದ ಮೊದಲು ಭಾರತವು ನೆರೆ ಹೊರೆಯ ರಾಷ್ಟ್ರಗಳಾದ ಬರ್ಮಾ ಸಿಲೋನ್ ಮಲಯಾ, ಹಾಂಗ್ ಕಾಂಗ್, ಮಾರಿಷಸ್, ವಿಡೆಸ್ ಬೆಹ್ರೈನ್ ದ್ವೀಪಗಳು, ಗೋಲ್ಡ್ ಕೋಸ್ಟ್, ಜಾಂಜಿಬಾರ್, ಕೆನ್ಯಾ ಮತ್ತು ಟ್ಯಾಂಗನೀಕಗಳಲ್ಲಿ ಭಾರತೀಯ ಮಿಠಾಯಿ ಬಗ್ಗೆ ಮಾರುಕಟ್ಟೆಯನ್ನು ಸ್ಥಾಪಿಸಿದ್ದಿತು.

ಯುದ್ಧಾನಂತರ, ಭಾರತದಿಂದ ವಿದೇಶಗಳಿಗೆ ನಿರ್ಯಾತ ಮಾಡುತ್ತಿರುವ ಮಿಠಾಯಿಯ ಪ್ರಮಾಣ ಅತ್ಯಲ್ಪವಾಗಿದೆ. ಹೆಚ್ಚು ಹೆಚ್ಚಾಗಿ ನಿರ್ಯಾತ ಮಾಡಲು ಈ ಉದ್ಯಮದ ಮುಂದಿರುವ ದೊಡ್ಡ ಅಡಚಣೆಯೆಂದರೆ ಮಿಠಾಯಿಯ ತಯಾರಿಕೆ ವೆಚ್ಚವು ದುಬಾರಿಯಾಗಿರುವುದು. ನಮ್ಮ ನಿರ್ಯಾತ ಮಾರುಕಟ್ಟೆಯನ್ನು ಸ್ಥಾಪಿಸುವುದಕ್ಕಾಗಿ, ಮಿಠಾಯಿಗಳ ತಯಾರಿಕಾಗಾರರ ಸಂಘವು ಸರ್ಕಾರಕ್ಕೆ ಮನವಿಯೊಂದನ್ನು ಸಲ್ಲಿಸಿದೆ.

ಇಷ್ಟರ ವರೆಗೆ ಭಾರತೀಯ ಮಿಠಾಯಿ ಉದ್ಯಮವು ಗ್ರೇಟ್ ಬ್ರಿಟನ್ನಿನ ನಿಷೇಧವಲ್ಲದ ಬಣ್ಣಗಳನ್ನು ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳು ಮುಂತಾದ ರಾಷ್ಟ್ರಗಳು ಅನುಮತಿ ಕೊಟ್ಟಿರುವ ಬಣ್ಣಗಳನ್ನು ಉಪಯೋಗಿಸುತ್ತಾ ಬಂದಿವೆ. ಮಿಠಾಯಿಗಳ ತಯಾರಿಕೆಯಲ್ಲಿ ಕೇವಲ ಐದು ಬಣ್ಣಗಳನ್ನು ಉಪಯೋಗಿಸುವುದಕ್ಕೆ ಭಾರತ ಸರ್ಕಾರದವರು ಅನುಮತಿ ಇತ್ತಿದ್ದಾರೆ.

ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ 18 ಬಣ್ಣಗಳಿಗೂ ಮತ್ತು ಗ್ರೇಟ್ ಬ್ರಿಟನ್‌ನಲ್ಲಿ 32 ಬಣ್ಣಗಳಿಗೂ ಅನುಮತಿ ಕೊಡಲಾಗಿದೆ. ಭಾರತೀಯ ಮಿಠಾಯಿ ಉದ್ಯಮದವರು ಎದುರಿಸುತ್ತಿರುವ ಎಡರು ತೊಡರುಗಳನ್ನು ಸರ್ಕಾರದವರು ಗಮನಕ್ಕೆ ತಂದು ಈ ನಿಷೇಧವನ್ನು ತೆಗೆದು ಹಾಕಿ ಗ್ರೇಟ್ ಬ್ರಿಟನ್‌ನಲ್ಲಿ ಹೆಚ್ಚು ಬಣ್ಣಗಳ ಬಳಕೆಯ ಬಗ್ಗೆ ಅನುಮತಿ ಕೊಟ್ಟಿರುವಂತೆ ಇಲ್ಲಿಯೂ ಅವಕಾಶ ಕೊಡಬೇಕೆಂದು ಉದ್ಯಮದ ಪ್ರತಿನಿಧಿಗಳು ಕೋರಿದ್ದಾರೆ.

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O. S. No. 659/55

ಬೈಕಾಡಿ ಹಸನ್ ಸಾಹೇಬ — ವಾದಿ.

ಮತ್ತು

ಹುಸೇನ ಸಾಹೇಬ — ಪ್ರತಿವಾದಿ.

ಇವರೊಳಗೆ

ಪ್ರತಿವಾದಿ:- ಹುಸೇನ ಸಾಹೇಬ, ಮೈದಿನ ಸಾಹೇಬರ ಮಗ, ಹಾರಾಡಿ ಗ್ರಾಮದ ಬಕಪಟ್ಣದಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ವಾದಿಗೆ ಪ್ರತಿವಾದಿಯು ತಾ. 3-12-52 ರಲ್ಲು ರೂಪಾ 1920-14-9ಕ್ಕೆ ಬರೆಕೊಟ್ಟ ದಿವಾಂಡ ನೋಟಿನ ಐವೇಜಿಗೆ ವಾದಿಯು ಪ್ರತಿವಾದಿ ಮೇಲೆ ಸೇಲ್ಕಂಡ ದಾವೆ ದಾಕ್ಲು ಮಾಡಿ ಅದು ಪ್ರತಿವಾದಿಗೆ ಅಟ್ಟಿದ ನೋಟೀಸಿನ ಬಗ್ಗೆ ತಾ. 9—2—56ಕ್ಕೆ ಇಡೋಣಾಗಿಯದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Sd D. N. Krishnamoorthy Rao,
Advocate for Plaintiff.
Udipi, Dated 24-1-56

ಜಾತಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು.
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkpet, UDIPI, S. Kanara.

ಫೋನ್ ನಂಬ್ರ 66

NOTICE of the meeting of Creditors to be held as required by Section 209 A of the Indian Companies Act 1913.

The Jai Hind Trading Company (Canara) Ltd.

Registered Office: T. S. No. 461, Bunder, Mangalore.

Notice is hereby given as required by Section 209 A of the *Indian Companies Act 1913*, that a meeting of the creditors of the above-mentioned Company will be held on Sunday the 19th day of February 1956 at 4 P. M. at the Registered Office of the Company.

By order of the Board.
K. K. Hegde,
Chairman.

ಅನ್ಯಾಯದ ವಿರುದ್ಧ ಅಹಿಂಸಾತ್ಮಕ ಸತ್ಯಾಗ್ರಹ

(ನೇ ಪುಟದಿಂದ)

ಲಾರ್ಡ್ ಲಿಟ್ಟನ್ ದೊರೆಯ ನೀತಿಯು ಕೃಷಿಕರ ಹಿತವನ್ನು ಕಡೆಗಣಿಸಿ ಬುಧ್ಯವು ವರ್ಗದ ಪೋಷಣೆಗೆ ಮನಸ್ಸು ಮಾಡಿದುದರಿಂದ ಸಾಗುವಳಿದಾರರಲ್ಲಿ ಅಸಂತೃಪ್ತಿ ತಲೆದೋರಿತು. ನ್ಯಾಯಾಲಯಗಳು ಋಣವನ್ನು ಸಾಲ ಕೊಡುವವರಿಗೆ ಅನುಕೂಲವಾದ ತೀರ್ಮಾನಗಳನ್ನು ಕೊಡುತ್ತಿದ್ದವು. ಸಾಲ ಪತ್ರಗಳನ್ನು ಬರೆದು ಕೊಟ್ಟಿದ್ದ ಸಾಗುವಳಿದಾರರು ಹೊಲ ಮನೆಗಳನ್ನು ಕಳೆದು ಕೊಳ್ಳುತ್ತಿದ್ದರು.

ಇದರ ಒಟ್ಟು ಪರಿಣಾಮವು ಕೃಷಿಕರ ಕ್ರಾಂತಿ ರೂಪದಲ್ಲಿ ಕೊನೆಗೊಮ್ಮೆ ವ್ಯಕ್ತವಾಯಿತು. ಪುಣೆ ಜಿಲ್ಲೆಯ ೪೫ ಗ್ರಾಮಗಳವರೂ ಅಹಮದ ನಗರ ಜಿಲ್ಲೆಯ ೩೨ ಗ್ರಾಮಗಳವರೂ ಒಟ್ಟು ಸೇರಿ ಋಣವನ್ನು ಸಾಲ ಕೊಟ್ಟವರೊಡನೆ ಸಾಲ ಪತ್ರಗಳನ್ನು ವಾಪಾಸು ಮಾಡಿ ಬಿಡುವಂತೆ ಹೇಳಿದರು. "ನೀವು ಮೋಸದಿಂದ ನಮ್ಮಿಂದ ಹೆಚ್ಚು ಹಣವನ್ನು ಕೊಡುವ ಹಾಗೆ ಸಾಲ ಪತ್ರಗಳನ್ನು ಬರೆಸಿದ್ದೀರಿ. ಕ್ರೂರ ಶಾಸನವೊಂದರ ಆಶ್ರಯದಲ್ಲಿ ನಿಮಗದನ್ನು ವಸೂಲು ಮಾಡುವ ಅಧಿಕಾರವಿಲ್ಲ" ಎಂದು ರೈತರು ಸ್ಪಷ್ಟಪಡಿಸಿದರು.

ದಿವಂಗತ ಬಾಲಗಂಗಾಧರ ತಿಲಕರು ಬ್ರಿಟನ್ನಿನ ಪಸವಿಯ ಮಹಾಕ್ಷಾಮದ ಪರಿಣಾಮಗಳಿಂದ ನೊಂದು ಅದ್ಭುತ ಸತ್ಯಾಗ್ರಹವನ್ನು ಸಂಘಟಿಸಿದರು. ದಕ್ಷಿಣದಲ್ಲಿ ಆಗ ಮಳೆಯಾಗದೆ ಜನರೆಲ್ಲರೂ ನಿರ್ಗತಿಕರಾಗಿದ್ದರು. ಇಪ್ಪತ್ತು ವರ್ಷಗಳ ಹಿಂದೆ ಇಂಥದೇ ಪರಿಸ್ಥಿತಿ ಬಂದಿದ್ದಾಗ ಸಾರ್ವಜನಿಕ ಸಭೆಯು ಸರಕಾರವನ್ನು ಒತ್ತಾಯಿಸಿದ ಪರಿಣಾಮವಾಗಿ ಒಂದು ಪ್ರಜಾಹಿತ ಶಾಸನವು ಜ್ಯಾರಿಗೆ ಬಂದಿದ್ದಿತು.

ಈ ಶಾಸನವು "ರೂಪಾಯಿಗೆ ಐದಾಣೆಗಿಂತಲೂ ಕಡಿಮೆ ಬೆಳೆಯುಳ್ಳ ಲಭ್ಯವಾದ ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಯು ಶಿಫಾರಸಿಸಿನಂತೆ ಭೂಕಂದಾಯವನ್ನು ಒಂದೋ ಮನ್ನಿಸಿ ಬಿಡಲಾಗುವುದು; ಅಥವಾ ಕೆಲ ಮಟ್ಟಿಗೆ ತಗ್ಗಿಸಲಾಗುವುದು" ಎಂಬ ರೈತರಿಗೆ ಅನುಕೂಲವಾದ ವಾಕ್ಯದಿಂದ ಕೂಡಿದ್ದಿತು.

ಕಾಯಿದೆಯಲ್ಲಿ ಹೀಗೆ ರಿಯಾಯತಿಯ ಅಂಶಗಳಿರುವುದನ್ನು ತಿಳಿದಿದ್ದ ಸಾಗುವಳಿದಾರರು ಇರಲಿಲ್ಲವೆಂದೇ ಹೇಳಬಹುದು. ಇಂಥ ರಿಯಾಯತಿಯನ್ನು ಘೋಷಿಸಿದಾಗ ಸರಕಾರ ದಯೆ ತೋರಿಸಿತೆಂದೇ ಭಾವಿಸುವ ಮನೋಭಾವ ಜನರಿಗಿತ್ತಲ್ಲದೆ, ಕಾಯಿದೆಯಂತೆ ಪಡೆದ ಸೌಕರ್ಯ ಅದೆಂದು ಭಾವಿಸುವಷ್ಟು ವಿದ್ಯಾಬುದ್ಧಿ ಅವರಲ್ಲಿಲ್ಲ.

ಆದರೆ ಇಂಥ ರಿಯಾಯತಿಗಳನ್ನು ಸರಕಾರದವರು ಸುಲಭದಲ್ಲಿ ತೋರಿಸುತ್ತಿರಲಿಲ್ಲ. ಶಾಸನಭಂಗವಾಗುವ ಭಯ ತೋರಿದಾಗ ಮಾತ್ರ ಜನರನ್ನು ಸಮಾಧಾನಪಡಿಸಲು ಸರಕಾರದ ... ಎದೆಯ ಸೂತ್ರಗಳನ್ನು ಆಶ್ರಯಿಸುತ್ತಿದ್ದರು. ಭೂಕಂದಾಯವು ರಾಜ್ಯದ ಸಂಪತ್ತಿನ ಮುಖ್ಯ ಸ್ರೋತವಾಗಿದ್ದ ದೆಸೆಯಿಂದ ... ಧಿಕಾರಿಯು ಎಷ್ಟು ಹೇ... ಕಂದಾಯವನ್ನು ವಸೂಲು ಮಾಡಿದನೋ ಅದನ್ನನುಸರಿಸಿ ಅವನನ್ನು ಮೇಲಿನ ಹುದ್ದೆಗೆ ಏರಿಸುವ ನೀತಿಯನ್ನು ಸರಕಾರ ಅನುಸರಿಸುತ್ತಿತ್ತೇ ಹೊರತು ಈ ಹಣವನ್ನು ಹೇಗೆ ಸಂಗ್ರಹಿಸಲಾಗುತ್ತದೆ ಎಂದು ವಿಚಾರಿಸುವ ಕಷ್ಟವನ್ನೇನು ಸರಕಾರ ತೆಗೆದುಕೊಳ್ಳುತ್ತಿರಲಿಲ್ಲ.

ಶಾಸನದಂತೆ ಭೂಕಂದಾಯದ ವಸೂಲಿಯನ್ನು ತಡೆಯಬಹುದಾಗಿದ್ದ ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳು ತೀರ್ವೆ ವಸೂಲು ಮಾಡುವುದನ್ನು ನಿಲ್ಲಿಸಲು ದಿವಂಗತ ತಿಲಕರು ಹೋರಾಡ ಹತ್ತಿದರು. ಕಟ್ಟ ಶಾಸನವೊಂದರ ವಿರುದ್ಧ ಪ್ರತಿಭಟನೆಯನ್ನು ಕೊಡುವ ಪ್ರಶ್ನೆ ಇಲ್ಲಿರಲಿಲ್ಲ; ಒಳ್ಳೆಯ ಶಾಸನವೊಂದನ್ನು ಕಡೆಗಣಿಸಿ ತಪ್ಪು ದಾರಿಯಲ್ಲಿ ನಡೆಯುತ್ತಿರುವ ಜಿಲ್ಲಾಧಿಕಾರಿಗಳ ವರ್ತನೆಯನ್ನು ನಿಷೇಧಿಸುವುದೇ ಈ ಹೋರಾಟದ ಉದ್ದೇಶ.

ನೂತನಾನುಭವ

ಸರಕಾರದ ಪಾಲಿಗೆ ಇದು ತೀರ ಹೊಸ ಅನುಭವವಾಗಿದ್ದಿತು. ತಿಲಕರ ನೇತೃತ್ವದಲ್ಲಿ ಕ್ಷಾಮ ಪೀಡಿತ ಪ್ರದೇಶದಲ್ಲಿ ಸಾರ್ವಜನಿಕ ಸಭೆಯು ಚಟುವಟಿಕೆಯನ್ನು ಪ್ರಾರಂಭಿಸಿತು. ಸಾಗುವಳಿದಾರರಿಗೆ ಶಾಸನದಲ್ಲಿದ್ದ ಅನುಕೂಲಾಂಶಗಳನ್ನು ಸ್ಪಷ್ಟವಾಗಿ ತಿಳಿಸಿ ಹೇಳುವುದೊಂದೇ ಅವರ ಸಹಾಯಕ್ಕೆ ಹೋಗಬಹುದಾದ ಮಾರ್ಗವೆಂದು ತಿಲಕರು ನಿರ್ಧರಿಸಿದರು.

ಇದಕ್ಕಾಗಿ ಅವರೊಂದು ಸೂತ್ರವನ್ನು ಕಂಡು ಹಿಡಿದರು. ಇಡೀ ಚಳವಳವನ್ನು ಅವರು ಈ ಮಾತುಗಳಲ್ಲಿ ಬಿಂಬಿಸಿದರು— "ರೈತರ ಕಷ್ಟ ಕಾಲದಲ್ಲಿ ಸಹಾಯವಾಗಲೆಂದು ಸರಕಾರವು ಒಂದು ಶಾಸನವನ್ನು ಮಾಡಿರುತ್ತದೆ. ಆದರೆ ಈ ಶಾಸನದಂತೆ ಜಿಲ್ಲಾಧಿಕಾರಿಗಳು ನಡೆಯದ ದೆಸೆಯಿಂದ ಮತ್ತು ಶಾಸನದ ಆಶಯವನ್ನು ಕೃಷಿಕರಿಗೆ ತಿಳಿಸಿ ಹೇಳುವಷ್ಟು ವ್ಯವಸ್ಥೆಯನ್ನು ಸರಕಾರ ಮಾಡದ ದೆಸೆಯಿಂದ ಈಗ ಕಷ್ಟ ಬಂದಿದೆ. ಆದುದರಿಂದ ಈಗ ನಾವು ಕೃಷಿಕರಿಗೆ 'ನಿಮ್ಮ ಸಹಾಯಕ್ಕೆಂದು ಸರಕಾರವು ಮೊದಲೇ ಶಾಸನ ಮಾಡಿದೆ ಮತ್ತು ನೀವದು ಜ್ಯಾರಿಗೆ ಬರುವಂತೆ ಒತ್ತಾಯಿಸುವುದೇ ಉಳಿದಿರುವ ವಿಷಯ' ಎಂದು ಸರಕಾರದ ಪರವಾಗಿ ನಾವು ಹೇಳುತ್ತಾ ಸರಕಾರಕ್ಕೆ ಸಹಾಯವನ್ನು ಸಲ್ಲಿಸಬೇಕು"

ತಿಲಕರು ಮೇಲಿನಂತೆ ನಿರ್ಧರಿಸಿ ಸಾವಿರಗಟ್ಟಳೆಯಲ್ಲಿ ಶಾಸನದ ಉಪರೋಕ್ತ ಅಂಶವನ್ನೂ ಅದಕ್ಕೆ ಸಂಬಂಧಿಸಿದಂತೆ ವಿವರವಾದ ಟಿಪ್ಪಣಿಯನ್ನೂ ಒಳಗೊಂಡ ಕರಪತ್ರಗಳನ್ನು ಮುದ್ರಿಸಿದರ; ಮತ್ತು ಅವುಗಳಲ್ಲಿ ಒಂದಂಶವನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಇವನ್ನು ತೀರ್ವೆ ವಸೂಲು ಮಾಡುವ ಸಿಬಂಧಿಯ ಮೂಲಕ ಎಲ್ಲ ಸಾಗುವಳಿದಾರ ರೈತರಿಗೂ ಅವಗಾಹನೆಗಾಗಿ ಹಂಚಬೇಕೆಂದು ವಿನಂತಿಸಿಕೊಂಡರು.

ಆದರೆ ಜಿಲ್ಲಾಧಿಕಾರಿಗಳು ಈ ಕರಪತ್ರಗಳ ಕಟ್ಟುಗಳನ್ನು ಬಿಚ್ಚದೆ ಹಾಗೆಯೇ ತಿಲಕರಿಗೆ ಮರಳಿ ಕಳಿಸಿದರು. ಆದುದರಿಂದ ತಿಲಕರು ಈಗ ತಾವೇ ಸ್ವತಃ ಗ್ರಾಮೀಣ ಜನತೆಗೆ ಶಾಸನದ ಮುಖ್ಯಾಂಶಗಳನ್ನು ತಿಳಿಸಿ ಹೇಳಲು ಪ್ರಯತ್ನಶೀಲರಾದರು.

ತಮ್ಮ ಸಾರ್ವಜನಿಕ ಕೆಲಸಗಾರರನ್ನು ತಿಲಕರು ಮುದ್ರಿತ ಕರಪತ್ರಗಳ ಕಟ್ಟುಗಳೊಡನೆ ಹಳ್ಳಿಗಳಿಗೆಲ್ಲ ಕಳುಹಿಸಿಕೊಟ್ಟರು. ಕಾನೂನನ್ನು ಮುರಿಯುವುದಕ್ಕಲ್ಲ, ಕಾನೂನನ್ನು ಜ್ಯಾರಿಗೆ ತರುವಂತೆ ಒತ್ತಾಯಿಸಲು ಜನರನ್ನು ಸಿದ್ಧಪಡಿಸಬೇಕೆಂದು ತಿಲಕರು ತಮ್ಮ ಸಾರ್ವಜನಿಕ ಸೇವಕರಿಗೆ ಬೋಧಿಸಿದರು. ತಾವು ಸ್ವತ ಬಿರುಗಾಳಿಯಂತೆ ಕ್ಷಿಪ್ರ ಪ್ರವಾಸವನ್ನು ಕ್ಷಾಮಪೀಡಿತ ಪ್ರದೇಶದಲ್ಲಿ ಕೈಗೊಂಡು ಜನತೆಗೆ ಶಾಸನದ ಆಶಯವನ್ನು ತಿಳಿಸಿ ಹೇಳಿದರು.

ತಿಲಕರ ಗುಡುಗು

ಕ್ಷಾಮಪೀಡಿತ ಪ್ರದೇಶದ ಜನರ ಜೀವನವನ್ನು ಉಳಿಸಲು ತಾನು ಆತುರಳಿರುವುದಾಗಿ ವಿಕ್ಟೋರಿಯ ಮಹಾರಾಣಿಯು ಹೇಳಿರುವುದನ್ನು ಅವರು ಜನತೆಯ ನೆನಪಿಗೆ ತಂದು ಕೊಟ್ಟರು. "ಯಾರೊಬ್ಬರೂ ಸಾಯಬಾರದೆಂದು ರಾಣಿಯು ಆಶಿಸುತ್ತಿರುವಾಗ, ಗವರ್ನರರು ಎಲ್ಲರೂ ಬದುಕಬೇಕೆಂದು ಸಾರುತ್ತಿರುವಾಗ, ಇಂಗ್ಲೆಂಡಿನಲ್ಲಿರುವ ಭಾರತೀಯ ಕಾರ್ಯದರ್ಶಿಯು ಅಗತ್ಯ ಬಿದ್ದರೆ ಸಾಲ ಎತ್ತುವುದಕ್ಕೂ ಸಿದ್ಧನೆಂದಿರುವಾಗ—ನೀವು ಹೇಡಿಗಳಾಗಿ ಹಸಿವಿನಿಂದ ಸಾಯಲು ಸಿದ್ಧರಾಗುತ್ತೀರಾ? ಸರಕಾರಕ್ಕೆ ಕೊಡುವಷ್ಟು ಹಣವಿದ್ದರೆ, ಕೊಡಿರಿ; ನನ್ನದೇನೂ ಅಡ್ಡಿಯಿಲ್ಲ. ನಿಮ್ಮೊತನೆ ಹಣವಿಲ್ಲದಿದ್ದರೆ, ಸರಕಾರದ ಕೈಕೆಳಗಿನ ಅಧಿಕಾರಿಗಳ ದುಷ್ಟ ವರ್ತನೆಗೆ ರೋಸಿ ಹೋಗಿರುವ ನೆಪದಿಂದಲೇ ನಿಮ್ಮೆಲ್ಲ ವಸ್ತುಗಳನ್ನು ಮಾರಿಬಿಟ್ಟು ತೀರ್ವೆ ತೆರುವಿರಾ? ಸಾವಿನ ದವಡೆಯಲ್ಲಿರುವಾಗಲೂ ನಿಮಗೆ ಧೈರ್ಯ ಬರಲಾರದೆ?" ಎಂದು ತಿಲಕರು ಆಗ ಗುಡುಗಿ ಜನರನ್ನು ಕೇಳುತ್ತಿದ್ದರು.

"ನಾವು ಎಷ್ಟೋ ಕ್ಷಾಮಗಳನ್ನು ನಿರಾತಂಕವಾಗಿ ಎದುರಿಸಬಹುದು. ಆದರೆ ಕುರಿಗಳಂತಿರುವ ಜನರನ್ನು ಮಾಡುವುದೇನು?" ಎಂದವರು ಜನರ ಅಭಿಮಾನವನ್ನು ಕೆಣಕುತ್ತಿದ್ದರು. ಲೂಟಿ ಮಾಡುವುದನ್ನು ಖಂಡಿಸುತ್ತಾ ಅವರು "ಜಿಲ್ಲಾಧಿಕಾರಿಯ ಬಳಿಗೆ ಹೋಗಿ ಕೆಲಸ ಮತ್ತು ಆಹಾರ ಕೇಳಿರಿ; ಅದನ್ನು ಒದಗಿಸುವುದು ಅವನ ಕರ್ತವ್ಯ ಆದರೆ ಲೂಟಿ ಮಾತ್ರ ಮಾಡಬೇಡಿರಿ" ಎನ್ನುತ್ತಿದ್ದರು.

ಜಿಲ್ಲಾಧಿಕಾರಿಗಳ ಪಾಲಿಗೆ ತಿಲಕರ ಕೆಲಸಗಾರರು ಕಣ್ಣಿಗೆಬಿದ್ದ ಕಸವಾದರು. ಆದುದರಿಂದ ಕೆಲವು ಹಳ್ಳಿಗಳನ್ನು ಪ್ರವೇಶಿಸದಂತೆ ಈ ಕೆಲಸಗಾರರನ್ನು ಸರಕಾರದ ನೆಲೆಯಿಂದ ತಡೆಯಲಾಯಿತು. ಆದರೆ ಅವರ ಮೇಲೆ ಕೈಗೊಂಡ ನ್ಯಾಯವಾತಿಕ್ರಮದ ಖಟ್ಲೆಯು ಮಾತ್ರ ನಿಷ್ಫಲಗೊಂಡಿತು.

ನ್ಯಾಯಾಲಯಗಳು ಸರಕಾರದ ಶಾಸನವೊಂದರ ಕೆಲವು ಸೂತ್ರಗಳನ್ನು ವಿಷದೀಕರಿಸುವ ಕರಪತ್ರಗಳ ಮುದ್ರಣ ಮತ್ತು ಹಂಚುವಿಕೆಯು ಕಾನೂನಿಗೆ ವಿರೋಧವಾದ ಕಾರ್ಯಾಚರಣೆಯಾಗಿದೆ ಎಂದು ಒಪ್ಪಲಿಲ್ಲ. ತಿಲಕರ ಕೆಲಸದ ಹಿಂದಿನ ಶಕ್ತಿಯು ಇದರಿಂದ ಬಹಳಷ್ಟು ಹೆಚ್ಚಿಕೊಂಡಿತು. ಶಾಸನದಂತೆ ನಿರ್ವಹಿಸಬೇಕಾಗಿದ್ದ ತಮ್ಮ ಕರ್ತವ್ಯವನ್ನು ಉದಾಸೀನತೆಯಿಂದ ಕಡೆಗಣಿಸಿದ ಜಿಲ್ಲಾಧಿಕಾರಿಗಳ ಪ್ರತಿಭಟನೆಯನ್ನು ಅವರು ಯಶಸ್ವಿಯಾಗಿ ಮಾಡಿದರು.

ಕೆಟ್ಟುದರಿಂದ ತೊಂದರೆಗೊಳಗಾದವರು ಯಾವಾಗಲೂ ಪ್ರತಿಭಟನೆಗೆ ಮುಂದಾಗುತ್ತಾರೆ; ಶತಮಾನದಿಂದ ಭಾರತೀಯರು ಪೀಡಿತರಾಗಿದ್ದ ದೆಸೆಯಿಂದಲೇ ಮಹಾತ್ಮಾ ಗಾಂಧೀ ಅವರು ತಮ್ಮ ಬತ್ತಳಿಕೆಯಿಂದ ಸತ್ಯಾಗ್ರಹವೆಂಬ ಅಸ್ತ್ರವನ್ನು ಹಿರಿದು ನಿಂತಾಗ ಭಾರತೀಯರು ಕಷ್ಟ ನಿವಾರಣೆಗೊ ಪ. ಯ. ಎಂದಿದನ್ನು ಅಂಗೀಕರಿಸಿದರು.

—ರಾಮ ಗೋಪಾಲ



ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.
P. O. Box No. 3219, BOMBAY 3-

(೧ನೇ ಪುಟದಿಂದ)

ವಿಧ್ವಂಸಕ ಕೃತ್ಯಗಳನ್ನು ನಡೆಸಿ, ಅಶಾಂತಿಯನ್ನು ಹರಡಿ ಕ್ಷೋಭೆಗೆಡೆ ಕೊಡುವುದುಂಟೇನೊ ನಿಜ. ಆದರೆ ಇದನ್ನು ತಡೆಗಟ್ಟುವುದಕ್ಕೆ ತಮ್ಮ ತಪ್ಪನ್ನು ಧುರೀಣರು ಮರೆಯುವುದು ಎಷ್ಟಕ್ಕೂ ಇಷ್ಟವಲ್ಲ. ಗೊಬ್ಬರದ ಗುಂಡಿಯನ್ನು ಅಗೆಯ ಹೋದವರು ಅಲ್ಲಿ ನುಸಿಗಳ ಕಾಟವಿದೆ ಎಂದು ದೂರುವುದರಲ್ಲಿ ನ್ಯಾಯವಿದೆಯೆ? ತಪ್ಪು ತೀರ್ಮಾನವನ್ನು ಹೇರಿರುವವರು ಇದನ್ನು ದಯವಿಟ್ಟು ಮನನ ಮಾಡಲಿ. ಗೂಂಡಾಗಿರಿಗೆ ಅವಕಾಶವಿಲ್ಲದೆ ಹೋಗಬೇಕಾದರೆ ಜನತೆಯ ಅಪೇಕ್ಷೆಗೆ ವಿರುದ್ಧವಾದ ನ್ಯಾಯ ಪಕ್ಷಪಾತಿನಿರ್ಣಯವನ್ನೇ ಕೊಡಲು ಧುರೀಣರು ಮುಂದಾಗಬೇಕೆಂದು ಅಗ ಮನವರಿಕೆಯಾಗದಿರದು.

ನಮಗೆ ಭಾಷಾಭಿಮಾನವೊಂದು ಕೇಡು—ಎಂದು ಹೇಳುವವರು ರಾಷ್ಟ್ರಾಭಿಮಾನವಾದರೂ ನಮಗೆ ಯೋಗ್ಯವೆ? ಎಂಬ ಪ್ರಶ್ನೆಗೆ ಉತ್ತರ ಕೊಡಲಿ. ನಮ್ಮ ಮನೆ ಎಂಬ ಮೋಹ, ನನ್ನ ಆತ್ಮೀಯರೆಂಬ ಪ್ರೇಮ ತಪ್ಪು ಭಾವನೆ ಅಥವಾ ಅಭಿಮಾನ ಎಂದಾದರೆ ನನ್ನ ದೇಶವೆಂಬ ಮಾತು ಹೇಗೆ ವಿಶಾಲವಾದ ಲೋಕದ ಹಿನ್ನೆಲೆಯಲ್ಲಿ ಸಮ್ಮತವಾದೀತು? ಭೂಮಿ ತಾಯಿಯನ್ನಾದರೂ ನಮ್ಮವಳೆಂದು ನಾವು ಅಭಿಮಾನ ಪಡುವಂತಿದೆಯೆ? ಖಗೋಳದಲ್ಲಿ ರಾರಾಜಿಸುತ್ತಿವೆ ಎಂದು ವಿಜ್ಞಾನಿಗಳು ಹೇಳುತ್ತಿರುವ ಇತರ ಲೋಕಗಳನ್ನು ನಾವು ಮರೆತು ಬಿಡುವಂತಿದೆಯೆ? ಆದರೆ ವಿಶ್ವಾಸರರಾಗುವ ಯೋಗ್ಯತೆ ಎಷ್ಟು ಜನಕ್ಕಿದೆ? ಇದನ್ನು ಗಮನಿಸದ ಮುಖಂಡರು ಜನರನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸುವುದು ಕಷ್ಟ.

ಪೋರ್ಚುಗಾಲದ ವಶದಲ್ಲಿ ಗೋವೆಯು ಇನ್ನೂ ಇರುವುದು ಅವಹಾಸ್ಯಕರವೆಂದು ಅಂತಾರಾಷ್ಟ್ರೀಯ ದೃಷ್ಟಿಕೋಣವನ್ನೆ ಹೊಂದಿದ ಭಾರತೀಯ ಪ್ರಭೃತಿಗಳು ಸಾರುವುದರಲ್ಲಿ ಸತ್ಯವಿರುವುದು ಹೌದಾದರೆ ಮತ್ತು ಭಾರತದೊಡನೆ ಸೇರುವುದೇ ನಮ್ಮ ಇಚ್ಛೆಯೆಂದು ಗೋವೆಯ ನಿವಾಸಿಗಳು ಹೇಳುತ್ತಿರುವ ಮಾತಿಗೆ ಬೆಲೆಯುಂಟಾದರೆ, ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಕಾಸರಗೋಡಿನ ಭಾಗವು (ಇದೊಂದು ಉದಾಹರಣೆ ಮಾತ್ರ) ಕನ್ನಡ ನಾಡಿನ ಅವಿಭಾಜ್ಯ ಅಂಗವೆಂದು ಚಳವಳ ನಡೆಸುವುದರಲ್ಲಿ ತಪ್ಪಿರಲಾರದು. ಈಗಿನ ರಾಜ್ಯಗಳ ರಚನೆಯಲ್ಲಿ ದೋಷವಿರುವುದೇ ನಿಜವಾದರೆ ಜಿಲ್ಲೆಗಳೂ ತಾಲೂಕುಗಳೂ ಫಿರ್ಕಗಳೂ ಸುಸಂಬದ್ಧವಾಗಿ ಬ್ರಿಟಿಷರಿಂದ ರಚಿಸಲ್ಪಟ್ಟಿವೆ ಎಂಬ ಅಭಿಪ್ರಾಯವನ್ನು ಮೂಡಿಸುವಂತೆ ಜಿಲ್ಲೆಯನ್ನೊಡೆಯಲಾರೆವು, ತಾಲೂಕನ್ನು ತುಂಡರಿಸಲಾರೆವು— ಎಂದು ಮುಂತಾಗಿ ಜನನಾಯಕರೆನಿಸುವವರು ಹೇಳುತ್ತಿರುವ ಮಾತಿನಲ್ಲೂ ಹುರುಳಿಲ್ಲ ಎಂಬುದು ಸ್ಪಷ್ಟ. ಕೊಲೆ ಸುಲಿಗೆಗಳು ನಡೆಯುವವೆಂದ ಮಾತ್ರಕ್ಕೆ ಊರನ್ನೆ ಬಿಡುವುದು ಎಷ್ಟು ಹಾಸ್ಯಾಸ್ಪದವೊ ಕಿಡಿಗೇಡಿಗಳು ಕೆಲವರು ಜನತೆಯ ಚಳವಳದ ಉಪಯೋಗ ಪಡೆಯುವರೆಂಬುದಕ್ಕಾಗಿ ಜನಾಭಿಪ್ರಾಯವನ್ನು ತಿರಸ್ಕರಿಸುವುದು ಸಮ್ಮತವಾಗಲಾರದು. (ಬರೆದು ಬಂದುದು)

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಬೇಂದ್ರೆ—

ಬರೆದವರು: ಬಿ. ಎಚ್. ಶ್ರೀಧರ, ಎಂ. ಎ. ಪ್ರಕಾಶಕರು: ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು, ಉಡುಪಿ. ಬೆಲೆ: ರೂ. ೦—೬—೦.

ಕನ್ನಡದ ನವೋದಯ ಕಾಲದಲ್ಲಿ ಸಾಹಿತ್ಯ ಸರಸ್ವತಿಯನ್ನು ನಾನಾಬಗೆಯಾದ ಅರ್ಚನೆಯಿಂದ ಸೇವಿಸಿದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಕವನ ಮಾಧುರ್ಯದ ಪರಿಚಯವನ್ನು ಈ ಚಿಕ್ಕ ಪುಸ್ತಕವು ಮಾಡಿಸಿಕೊಡುತ್ತದೆ. ಬೇಂದ್ರೆಯವರು ನಾಟಕಕಾರರಾಗಿ, ಪ್ರಬಂಧಕಾರರಾಗಿ, ವಿಮರ್ಶಕರಾಗಿ, ವಾಗ್ಮಿಗಳಾಗಿ ಹೆಸರು ಪಡೆದಿದ್ದರೂ ಕವಿವರರೆಂದೇ ಅವರನ್ನು ಗುರುತಿಸುವುದು ವಾಡಿಕೆಯಾಗಿದೆ. ಅವರು ರಸಋಷಿ; ನಾದಯೋಗಿ. ಅವರ ಕವಿತೆಗಳ ಒಳಹೊರೆಗನ್ನು ತಿಳಿದುಕೊಳ್ಳುವುದಕ್ಕೆ ಈ ಪುಸ್ತಕವು ಬಹಳ ಹೆಚ್ಚಿನ ಸಹಾಯವನ್ನು ನೀಡುತ್ತದೆ. ಬೇಂದ್ರೆಯವರ ನಿಕಟ ಸಂಪರ್ಕವನ್ನು ಪಡೆದ ಹಾಗು ಅವರ ಸಾಹಿತ್ಯ ಶಕ್ತಿಯ ರಹಸ್ಯವನ್ನು ಗೊತ್ತುಹಚ್ಚಿ ಮತ್ತು ವೈಭವವನ್ನು ವರ್ಣಿಸುವ ಸಾಮರ್ಥ್ಯ ಹೊಂದಿದ ಶ್ರೀ ಶ್ರೀಧರರು ಬೇಂದ್ರೆಯವರ ಕಾವ್ಯವಾಣಿಗೆ ಎಷ್ಟಕ್ಕೂ ಕಡಿಮೆಯಲ್ಲದ ಮಧುರವಾದ ಪ್ರೌಢ ಗದ್ಯ ಶೈಲಿಯಲ್ಲಿ ಪುಸ್ತಕವನ್ನು ಬರೆದಿದ್ದಾರೆ. ಇಲ್ಲಿಯ ಸಿಕ್ಕ ದರ್ಶನದಿಂದ ವಿದ್ಯಾರ್ಥಿಗಳೆಂತೂರಸಿಕರೂ ಸಹ ಸ್ಫೂರ್ತಿಯನ್ನು ಹೊಂದಿ ಬೇಂದ್ರೆಯವರ ಕವಿತೆಗಳ ಆಳವಾದ ಅಭ್ಯಾಸವನ್ನು ಮಾಡಲು ಮುಂದಾಗಬಲ್ಲರು. ಸಾಮಾನ್ಯ ವಾಚಕರ ದೃಷ್ಟಿಯಿಂದ ನೋಡುವುದಾದರೂ ಈ ಪುಸ್ತಕದ ಪ್ರಕಟಣೆಯಿಂದ ನಮ್ಮವರೇ ಆದೊಬ್ಬ ಮಹಾ ವ್ಯಕ್ತಿಯ ಸಾಧನೆಯ ಸುಂದರವಾದ ವಿವರಣೆ ಇಲ್ಲಿ ದೊರಕುವುದರಿಂದ ಪ್ರಕಾಶಕರ ಪ್ರಯತ್ನ ಸಫಲವಾಗಿದೆ ಎಂದೆನ್ನಬಹುದು.

ಸೊಹ್ರಾಬ್ ಮತ್ತು ರುಸ್ತುಂ—

ಬರೆದವರು: ಕೆ. ನರಸಿಂಹ ಶಾಸ್ತ್ರಿ. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಬೆಲೆ: ರೂ. ೦—೧೨—೦.

ಇರಾನಿನ ಶ್ರೇಷ್ಠ ವೀರ ರುಸ್ತುಂ ಮತ್ತಾತನ ಶೂರ ಮಗ ಸೊಹ್ರಾಬ್. ಇವರ ಕತೆಯನ್ನು ನಮ್ಮಲ್ಲಿ ಹೆಚ್ಚಿನವರು ಬಾಲ್ಯದಲ್ಲಿಯೇ ಓದಿರುವುದು ಸಂಭವನೀಯ. ಈ ಕತೆಯನ್ನು ಸೊಗಸಾದ ಪದ್ಯರೂಪದಲ್ಲಿ ಈ ಪುಸ್ತಕ ವಿವರಿಸುತ್ತದೆ. ಕವಿತೆಯ ರಚನೆಯಲ್ಲಿ ಸರಳತೆಯೂ ಎದ್ದು ಕಾಣುತ್ತಿದ್ದ ರೂಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಇದೆಂದೂ ಅಡ್ಡಿಯಾಗಿಲ್ಲ. ಕರುಣೆ, ಮೋಹ ಹಾಗು ವೀರರಸೋಪೇತ ಭಾವನೆಗಳ ಕಣಿಯಾಗಿದೆ ಈ ಕವನ. ಎಲ್ಲಿಯೂ ನಿರೂಪಣೆ ಕುಂಟುವುದಿಲ್ಲ; ಶಬ್ದಗಳನ್ನು ಬಲಾತ್ಕಾರವಾಗಿ ಪೋಣಿಸಿಲ್ಲ; ರಸಿಕರಿಗೆ ಇಷ್ಟ ಯಾಗುವಂತೆ ಕಥನಕ್ರಮವು ವೇಗವನ್ನು ಗಳಿಸಿಸಾಗುತ್ತದೆ. ವರ್ಣನೆಗಳೂ ಹಿತಮಿತವಾಗಿ ಕಾಣಿಸಿಕೊಂಡಿವೆ. ಕರುಣಾಜನಕವಾದ ಈ ಕತೆಯು ಅತ್ಯಂತಪರಿಣಾಮಕಾರಿಯಾಗಿ, ಹೃದಯವಿದ್ರಾವಕವಾಗಿ ಕೊನೆಗೊಳ್ಳುತ್ತದೆ. ಆಂಗ್ಲ ಮೂಲದಿಂದ ಸ್ಫೂರ್ತಿ ಪಡೆದಿದ್ದರೂ ಶ್ರೀ ನರಸಿಂಹ ಶಾಸ್ತ್ರಿಗಳು ಕೃತಿಯನ್ನು ಕನ್ನಡದ ಸ್ವಂತ ಆಸ್ತಿ ಎಂದು ಅಭಿಮಾನದಿಂದ ಕರೆಯುವಷ್ಟು ಉತ್ತಮ ರೀತಿಯಲ್ಲಿ ರಚಿಸಿದ್ದಾರೆ. ಇದು ಬಹಳ ಸಂತೋಷಕರವಾದ ವಿಷಯ.

ಪರಿಹರನು ಚಿತ್ರಿಸಿರುವ ಕೆಲವು ಶರಣರು:—

ಬರೆದವರು: ತ. ಶ್ರೀಕಂಠಯ್ಯ, ಎಂ.ಎ. ಪ್ರಕಾಶಕರು: ಕರ್ನಾಟಕ ಸಂಘ, ರಾಯಚೂರು. ಬೆಲೆ. ರೂ. ೦—೧೦—೦.

ಹೈದರಾಬಾದಿನ ಕನ್ನಡಿಗರ ... ಫಲವಾಗಿ ರಾಯಚೂರಿನಲ್ಲಿ ... ಬರಪಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ... ಸಂದರ್ಭವನ್ನು ಆ ಊರಿನ ಕನ್ನಡ ... ಘದವರು ಪ್ರಸ್ತುತ ಪುಸ್ತಕದ ... ಮೂಲಕ ಗೌರವಿಸಿದ್ದಾರೆಂದು ... ಕನ್ನಡ ಸಾಹಿತ್ಯದಲ್ಲಿ "ರಗಳೆ" ... ಜನಪ್ರಿಯವಾಗಿ ಮಾಡಲು, ಅಥವ ... ಕಾವ್ಯಗಳಲ್ಲಿ ವಿಪುಲ ಪ್ರಮಾಣದ ... ಮುಂದಾದವನೆಂದು ಹರಿಹರನಿಗೆ ... ತ್ತದೆ. ಈ ಕವಿಯು ವೀರಶೈವ ... ಶರಣರ ಕತೆಗಳನ್ನು ಸೊಗಸಾಗಿ ... ಎಂಟು ಶಿವಶರಣರ ಕತೆಗಳನ್ನು ... ಲಾಗಿದೆ. ಕತೆಗಳ ದೃಷ್ಟಿಯಿಂದ ನೋಡಿದರೆ ಮಕ್ಕಳ ಮನಸ್ಸಿಗಿವು ಯಾವ ಹೊರತು ಹೆಚ್ಚಿನ ಯೋ... ಎಂದು ತೋರಬಹುದು—ಆದರೆ ಕಾವ್ಯ ವೈಖರಿಗೆ ಮತ್ತು ವರ್ಣನೆ ... ತ್ವಾರಕ್ಕೆ ಮನಸೋಲದ ಪ್ರಾಜ್ಞ... ವೆಂಬುದನ್ನು ನೆನೆದರೆ ಈ ಕವಿಯ ... ನುವು ವಿನೂತನವಾಗಿದೆ ಎಂದೊಪ್ಪ... ತ್ತದೆ. ಕವಿಯ ನಿರೂಪಣೆ ಹೇಗೆ ಪ್ರಕ್ತವಾಗಿದೆ, ಮೂತುಗಳ ಮೋಡಿ ಹೇ... ಚಿತ್ತಾದಿ ವಿಷಯಗಳನ್ನು ಈ ... ಪಠಣದಿಂದ ಮನಗಾಣಬಹುದು. ಕಾವ್ಯಗಳ ತಿರುಳನ್ನು ಆದಷ್ಟು ಮ... ಲಕವಿಗಳ ಮಾತಿನಲ್ಲಿಯೇ ಮನೋ... ವಿವರಿಸುವ ಈ ಮಾದರಿಯ ಪುಸ್ತ... ವಿದ್ಯಾರ್ಥಿಗಳಿಗೆ ಹೆಚ್ಚಿನ ಲಾಭವಿದೆ.

(೩ನೇ ಪುಟದಿಂದ ಮುಂದರಿದುದು)

ಯಾಗಿಲ್ಲ. ಕೈಗಾರಿಕೆಯ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ನಿಯೋಜಿತ ಪ್ರಯತ್ನದ ಮೂಲಕ ಸಂಶೋಧನೆಯನ್ನು ಅನ್ವಯಿಸಬೇಕಾಗುವುದು.

ಎಂಜಿನಿಯರಿಂಗ್ ಮತ್ತು ಔದ್ಯೋಗಿಕ ವಿಜ್ಞಾನದ ಸಂಶೋಧನೆಯ ಅಭಿವೃದ್ಧಿಗೆ ಅಗ್ರ ಪ್ರಧಾನತೆಯನ್ನು ಕೊಡಲಾಗುವುದು. ಇಲ್ಲಿಯ ವರೆವಿಗೂ ಇಂತಹ ಸಂಶೋಧನೆಯ ಕಡೆ ಗಮನಹರಿಸಿರಲಿಲ್ಲ. ವೈಜ್ಞಾನಿಕ ಹಾಗೂ ಔದ್ಯೋಗಿಕ ವಿಜ್ಞಾನದ ಪ್ರಗತಿಗೆ ವಿಜ್ಞಾನ, ಯಂತ್ರಕಲಾ ವಿಜ್ಞಾನ ಮತ್ತು ಎಂಜಿನಿಯರಿಂಗ್‌ಗಳ ನಾನಾ ಶಾಖೆಗಳಲ್ಲಿ ಪರಸ್ಪರ ಪ್ರಭಾವವು ಅಗತ್ಯವಾಗಿದೆ.

ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಮಂಡಳವು ಸಂಶೋಧಾತ್ಮಕ ಯೋಜನೆಗೆ ಸಂಬಂಧಪಟ್ಟ ನಾನಾ ಸಮಸ್ಯೆಗಳ ಪರಿಹಾರದಲ್ಲಿ ನಿರತವಾಗಿದೆ. ರಾಷ್ಟ್ರೀಯ ಯೋಜನೆಗಳು ಮತ್ತು ಸಾರ್ವಜನಿಕ ಅಗತ್ಯತೆಗಳು ವಿಜ್ಞಾನಿಗಳ ಕಾರ್ಯದಲ್ಲಿ ಮಾರ್ಗದರ್ಶಕವಾಗಿರಬೇಕು. ಈ ಉನ್ನತ ರಚನಾತ್ಮಕ ಕಾರ್ಯದಲ್ಲಿ, ವಿಜ್ಞಾನಿಗಳ ಮತ್ತು ಸಂಶೋಧನಾ ಕರ್ತರ. ಫಲಿತಾಂಶಗಳು ವ್ಯರ್ಥವಾಗದೆ ಸಾಮಾಜಿಕ ಹಾಗೂ ಆರ್ಥಿಕ ಮುನ್ನಡೆಯ ಬಗ್ಗೆ ಬಳಸುವಂತೆ ಮಾಡುವುದು ಅತ್ಯಂತ ಮುಖ್ಯವಾದ ವಿಷಯವಾಗಿದೆ.

—ಪ್ರೊ|| ಎಂ. ಎಸ್. ಥ್ಯಾಕರ್.
(ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನಾ ಮಂಡಳದ ದಿಗ್ದರ್ಶಕರು.)

In the Court of the Di...
Munsif of Mangalor...
O. S. No. 611 of 1955

Between.
S. J. S. Fernandes ... Pl...
and
U. R. Bhat & another Defe...
To
1. U. R. Bhat, father's nam... known, Firewood Mer... residing C/o the Boloor ... Works, Boloor, Man... Town.
2. Daba Shetty, Father's na... known, Firewood Me... residing near New Shed... Karangalpady, Man... Town.

PLEASE TAKE NOTICE ... the Plaintiff above named ha... the above suit against yo... recovery of possession, rental ... and that it is posted to 20-2... for your appearance. On ... default to appear either in ... or by pleader on that day yo... be declared exparte.

(By Order of Court)
Sri. L. C. Pais, B. A., B. L.
Sri. C. I. J. Pais, B. A., B. L.
Light House Hill, Mangal...
Advocates for Pla...

Mangalore, 19-1-1956.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಬರೆದವರು: **ಡಾಕ್ಟರ್ ಕೊರಡಕ್ಕಲ್ ವೆಂಕಟ್ರಾವ್**, ಎಲ್. ಐ. ಎಮ್

"Ably written—Quite up-to-date valuable service"

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್.
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).



Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 9—2—1956

ಸಂಚಿಕೆ ೨೩
NO. 23

ಜನಮತ ದರ್ಶನ

ಹಿಂದಿಯ ಪ್ರಸಿದ್ಧ ಲೇಖಕರಾದ ದಿವಂಗತ ಪ್ರೇಮಚಂದರು "ಜನಸಮೂಹವು ತರ್ಕ ಬಲದಿಂದಲ್ಲ, ಕೇವಲ ಆವೇಶದಿಂದ ಕೆಲಸ ಮಾಡುತ್ತದೆ" ಎಂದೊಂದು ಕಾದಂಬರಿಯಲ್ಲಿ ಬರೆದಿದ್ದಾರೆ. ರಾಜ್ಯಗಳ ಪುನಾರಚನೆಯ ಸಂಬಂಧದಲ್ಲಿ ಈಚೆಗೆ ದೇಶದ ಹಲವೆಡೆ ನಡೆದ ಘಟನೆಗಳಿದಕ್ಕೆ ಪ್ರತ್ಯಕ್ಷ ನಿದರ್ಶನ

"ಜನಮತದ ಪ್ರದರ್ಶನ" ಎಂಬ ಸಭ್ಯ ಶಬ್ದದಿಂದ ಈ ಘಟನೆಗಳ ಕುರೂಪವನ್ನು ಮರೆಯಲ್ಲಿಡುವ ಪ್ರಯತ್ನ ವಿಶಿಷ್ಟ ಹಿತಾಸಕ್ತಿಯುಳ್ಳ ವರ್ಗಗಳಿಂದ ನಡೆದಿದೆ ಆದರೆ, ವಿವೇಕ ಶೀಲರು ದಂಗೆ ಏಳುವ, ದೊಂಬಿ ನಡಸುವ, ಆಂದೋಲನ ಹೂಡುವ ಈ ಮನೋಭಾವವೇ ನಿಜವಾದ ಜನಮತ ಎಂದೊಪ್ಪುವುದಕ್ಕೆ ಸಿದ್ಧರಿಲ್ಲ.

ಅನ್ಯಾಯವನ್ನು ಪ್ರತಿಭಟಿಸುವುದು ಪ್ರಜಾಪ್ರಭುತ್ವದಲ್ಲಿ ನಾಗರಿಕರ ಪಾಲಿನ ಮೂಲಭೂತ ಅಧಿಕಾರ ಎಂದು ಹೇಳಲಾಗುತ್ತದೆ ಆದರೆ ಜನಸಮೂಹವನ್ನು ಉದ್ರೇಕಿಸಿ, ಕಲ್ಲುಗಳಿಂದ ಹಿಡಿದು ಕೈ ಬಾಂಬುಗಳ ವರೆಗೆ ಕೈಗೆ ಸಿಕ್ಕಿದುದನ್ನೆಲ್ಲ ಎಸೆದು ಬಿಟ್ಟು, ಹಾಗು ಕಣ್ಣಿಗೆ ತೋರಿದುದನ್ನೆಲ್ಲ ಲೂಟಿ ಮಾಡಿ, ಬೊಬ್ಬೆ ಹೊಡೆಯುವುದೇ ಪ್ರತಿ ಭಟನೆಯ ರೀತಿಯಲ್ಲ

ಕಾರುಗಳಿಗೆ ಬೆಂಕಿ, ಪಂಚಾಯತು ಕಟ್ಟಡಗಳಿಗೆ ಬೆಂಕಿ, ಎದುರಿಗೆ ಬಂದವರ ತಲೆಗೆ ಹೊಡೆತ, ಚದರಲು ಹೇಳುವ ಪೋಲೀಸರ ವಿರುದ್ಧ ಆಕ್ರೋಶ—ಇಷ್ಟರಿಂದ ಶಾಂತಿ ಕಾಲದಲ್ಲಿ ತೀರ ಸಾಮಾನ್ಯನೆನಿಸಿದವನೂ "ಸಮರ" ಕಾಲದ ಸಾಹಸಿಯಾಗಬಹುದು; ಗುಂಡುತಾಗಿ ಸತ್ತರೆ "ಹುತಾತ್ಮ"ನಾಗಲೂ ಬಹುದು; ಅತಿ ವೈಭವದ ಮೆರವಣಿಗೆಯಿಂದ ಜನಸಮುದಾಯದ ಜಯ ಘೋಷದೊಡನೆ ಸ್ಮಶಾನ ಯಾತ್ರೆ ಮಾಡಲೂ ಬಹುದು—ಆದರೆ ಅದೆಂದೂ ಪ್ರಜಾಪ್ರಭುತ್ವಕ್ಕೆ ಒಗ್ಗಿದ ಮಾರ್ಗವೆಂದನಿಸಿಕೊಳ್ಳಲಾರದು.

ಪ್ರಜಾಪ್ರಭುತ್ವವು ಅನ್ಯಾಯಗಳನ್ನು ಒಪ್ಪಿ ಅದಕ್ಕೆ ತಲೆತಗ್ಗಿಸಿ ನಾಗರಿಕರು ಮೂಕರಾಗಿ, ನಿಷ್ಕ್ರಿಯರಾಗಿ ಉಳಿತಿರಬೇಕೆಂದು ನಿಜಕ್ಕೂ ಅಪೇಕ್ಷಿಸುವುದಿಲ್ಲ. ಆದರೆ ಆಂದೋಲನದ ಮನೋಭಾವವನ್ನದು ಖಂಡಿತವಾಗಿಯೂ ಮೆಚ್ಚುವುದಿಲ್ಲ ಆಂದೋಲನವಲ್ಲ—ವಿಚಾರ ವಿನಿಮಯ, ಮಾತುಕತೆ ಮುಂತಾದ ಸೌಮ್ಯ ಮಾರ್ಗದಲ್ಲಿ ನಡೆಸುವುದೇ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳವರ ಕರ್ತವ್ಯ.

ಆಂದೋಲನ ಮತ್ತು ಹೋರಾಟಗಳು ವಿಧ್ವಂಸಕ ಕೃತ್ಯಕ್ಕೆ ದಾರಿಯನ್ನು ಮಾಡಿಕೊಡುತ್ತವೆ. ನಮಗೆ ಅನ್ಯಾಯವಾಗಿದೆ ಎಂದು ಜನರನ್ನು ಉದ್ರಿಕ್ತರಾಗಿಯೂ ಭಾವನಾಪರವಶರಾಗಿಯೂ ಮಾಡಿದರೆ, ಜನಸಮೂಹದ ಪ್ರತಿಯೊಬ್ಬ ದುರ್ಬಲನಲ್ಲಿ ವಿಚಾರ ಲೋಪ ಉಂಟಾಗುತ್ತದೆ. "ಹೊಡಿಯಿರೋ ಹೊಡಿಯಿರಿ' ಎನ್ನುವ ಬೇಟೆಗಾರನ ಅಥವಾ "ಹಿಡಿಯಿರೋ ಹಿಡಿಯಿರಿ" ಎನ್ನುವ ಒಟಗಾರನ ಹಿಂದೆ 'ಏಕೆ ಏನು" ಎಂದು ತಿಳಿಯದೆ ಓಡುವ ಕುರಿಗಳಾಗುತ್ತಾರೆ ಜನ, ತಮ್ಮ ಬುದ್ಧಿಗೆ ಕೆಲಸ ಕೊಡದೆ ಧುರೀಣನೊಬ್ಬನ ಭಾವನಾತ್ಮಕ ಮಾತುಗಳಿಗೆ ಮಾರು ಹೋಗುವ ದಾಸರಾಗುತ್ತಾರೆ ಜನ

ಇದಕ್ಕಿಂತ ದೊಡ್ಡ ಅಪಾಯವು ಪ್ರಜಾ ಪ್ರಭುತ್ವಕ್ಕೆ ಬೇರೊಂದಿರಲಾರದು. ಪ್ರಜ್ಞಾವಂತ ಪ್ರಜೆಗಳೇ ಪ್ರಜಾಪ್ರಭುತ್ವದ ಜೀವಾಳ. ನಾಗರಿಕರು ಜಾಗೃತರಾಗಿಲ್ಲವಾದರೆ, ಅವರು ಕುರಿಹಿಂಡಿನಂತಿದ್ದು ಕೇವಲ ಧುರೀಣನೊಬ್ಬನ ಮಾತಿನಂತೆಯೇ ನಡೆಯುವ ಮೊದ್ದು ಜೀವಿಗಳಾಗಿದ್ದರೆ, ಪ್ರಜಾಪ್ರಭುತ್ವವೆಂಬ ಹೆಸರು ಆ ರಾಜ್ಯಪದ್ಧತಿಗೆ ಸಲ್ಲದು. ಧುರೀಣರು ಎಷ್ಟೇ ಸದ್ಭಾವನೆಯಿಂದ ಅಥವಾ ಸದುದ್ದೇಶದಿಂದ ಕೂಡಿದ್ದರೂ ಪ್ರಜಾಪ್ರಭುತ್ವದ ಯಂತ್ರವನ್ನವರು ಎಷ್ಟೇ ಉತ್ಸಾಹದಿಂದ ಸ್ಥಾಪಿಸಿದರೂ ಅದು ಯಶಸ್ವಿಯಾಗಿ ಈ ಪರಿಸ್ಥಿತಿಯಲ್ಲಿ ಕೆಲಸ ನಡೆಸಲಾರದು.

ಮಧ್ಯಮ ವರ್ಗದ ಕೆಲವೇ ಬುದ್ಧಿ ಜೀವಿಗಳ ಮನದೊಳವಿನಿಂದ ಸಾಮಾನ್ಯ ಜನಸಮುದಾಯವು ಮಾರ್ಗದರ್ಶನ ಪಡೆಯುತ್ತಿರುವ ವರೆಗೆ ಪ್ರಜಾಪ್ರಭುತ್ವವು ನಿಜವಾದ ಅರ್ಥದಲ್ಲಿ ರೂಢಿಗೆ ಬರಲಾರದು ಎಲ್ಲ ನಾಗರಿಕರೂ ಬುದ್ಧಿಜೀವಿಗಳಾಗಬೇಕು, ತಾರ್ಕಿಕರಾಗಬೇಕು, ವಿವೇಕಶೀಲರಾಗಬೇಕು, ಸ್ವಂತ ಆಲೋಚನೆಯಿಂದ ಸಾಧಕ ಬಾಧಕಾಂಶಗಳನ್ನು ತಿಳಿದುಕೊಳ್ಳುವಷ್ಟು ಯೋಗ್ಯತಾ ಸಂಪನ್ನರಾಗಬೇಕು ಆಗ ಮಾತ್ರ ಪ್ರಜಾಪ್ರಭುತ್ವದ ಸಂಪ್ರದಾಯವನ್ನು ಪೋಷಿಸಲು ಸಾಧ್ಯ.

ಜನರಲ್ಲಿ ಇಷ್ಟು ಯೋಗ್ಯತೆ ಇದ್ದ ಪಕ್ಷದಲ್ಲಿ ಹಿಂಸಾಚಾರಗಳ ಬೆದರಿಕೆಯಿಂದ ಧುರೀಣರ ತೀರ್ಮಾನವನ್ನು ಬದಲಿಸಿಯೇವೆಂಬ ವಿಶ್ವಾಸ ಹೊಂದಿ ವಾಮ ಮಾರ್ಗಾವಲಂಬಿಗಳಾಗಿ ಸಾಗುವ ಆವಶ್ಯಕತೆ ಉಳಿಯದು. "ಪ್ರಜಾಪ್ರಭುತ್ವದಲ್ಲಿ ಯಾವ ತೀರ್ಮಾನವೂ ಕೊನೆಯದಲ್ಲ" ಎಂಬ ನೆಹರುಗಳ ಮಾತಿನ ತಿರುಳು ಆಗ ಅನುಭವ ವೇದ್ಯವಾದೀತು ಚರ್ಚೆ, ಸಮಾಲೋಚನೆಗಳ ಶಾಂತ ಮಾರ್ಗದಿಂದ ಧುರೀಣರಿಗೆ ಅವರ ತಪ್ಪನ್ನು ಮನವರಿಕೆ ಮಾಡಿಸಿಕೊಟ್ಟು ಅನ್ಯಾಯದ ಪರಿಮಾರ್ಜನೆಗೆ ದಾರಿ ಕಲ್ಪಿಸಬಹುದೆಂಬ ಸತ್ಯ ಆಗ ಗೋಚರಿಸೀತು.

ಆತ್ಮ ಶುದ್ಧಿಯ ಉಪವಾಸ, ರಾಜೀನಾಮೆಯ ಬೆದರಿಕೆಗಳಂತಹ ಪ್ರಮೇಯಗಳೂ ಆಗ ಏಳಲಿಕ್ಕಿಲ್ಲ ನಮ್ಮ ಪ್ರತಿನಿಧಿಗಳು ರಾಜೀನಾಮೆ ಕೊಡಬೇಕು ಎಂದು ಜನರ ಬಾಯಿಂದ ಬರುವ ಹಾಗೆ ಕೆಲವು ಪ್ರಯತ್ನಗಳು ನಡೆಯುತ್ತಿರುವುದು ಶೋಚನೀಯ ಪ್ರತಿನಿಧಿಗೆ ತನ್ನ ಕರ್ತವ್ಯದ ಕುರಿತು ಮತದಾರರು ಬೋಧನೆ ಕೊಡಬಹುದು. ಆದರೆ "ರಾಜೀನಾಮೆ ಕೊಡಿರಿ" ಎಂಬುದೇ ಬೋಧನೆಯಾಗಲಾರದು.

ಉದಾಹರಣೆಗೆ ಚಂದ್ರಗಿರಿ ಹೊಳೆಗೆ ಉತ್ತರದಲ್ಲಿರುವ ಕಾಸರಗೋಡನ್ನು ಕರ್ನಾಟಕದಲ್ಲಿ ಇರಗೊಡಿಸಬೇಕೆಂಬುದು ಅಲ್ಲಿಯ ಪ್ರಜಾ ವರ್ಗದ ಸಾಮಾನ್ಯ ಆಸೆ. ಇದಕ್ಕೆ ವಿರುದ್ಧವಾದ ತೀರ್ಮಾನ ಈ ಪ್ರಜಾವರ್ಗದ ದೃಷ್ಟಿಯಲ್ಲಿ ಅನ್ಯಾಯದ ಪರಮಾವಧಿ ಇದರ ಪರಿಮಾರ್ಜನೆಗಾಗಿ ಎಲ್ಲ ಪ್ರಜಾಸತ್ತಾತ್ಮಕ ಮಾರ್ಗಗಳನು ನಡೆದು ನೋಡಿರಿ ಎಂದು ಪ್ರತಿನಿಧಿಗಳಿಗೆ ಮತದಾರರು ಉಪದೇಶಿಸಲಿ. ಅದು ತಪ್ಪಲ್ಲ—ಆದರೆ ರಾಜೀನಾಮೆ ಕೊಟ್ಟು ಕೈ ತೊಳೆದುಕೊಳ್ಳಿರಿ ಎನ್ನುವುದು ಶುದ್ಧ ಅವಿವೇಕ

ಕಾಂಗ್ರೆಸಿನ ವರಿಷ್ಠರು ರಾಜಿನಾಮೆ ಕೊಡುವವರನ್ನು ಕಷ್ಟ ಕಾಲದಲ್ಲಿ ಕೈ ಬಿಟ್ಟು ಕರ್ತವ್ಯವನ್ನು ಎದುರಿಸದೆ ಓಡಿ ಹೋಗುವ ಭ್ರಷ್ಟರಸಾಲಿಗೆ ಸೇರಿಸಿದ್ದಾರೆ; ಇಂಥ ರಾಜಿನಾಮೆಗಳು ಜನರನ್ನು ಮತ್ತಷ್ಟು ಭಾವನಾ ಪರವಶರಾಗಿ ಮಾಡಬಹುದು ಎಂದು ಎಚ್ಚರಿಸಿದ್ದಾರೆ. ಇದನ್ನು ಒತ್ತಟ್ಟಿಗೆ ಇಟ್ಟು ಮತದಾರರ ದೃಷ್ಟಿಯಿಂದಲೇ ನೋಡಿದರೂ ರಾಜಿನಾಮೆಗಳು ನಿಷ್ಪ್ರಯೋಜಕವೆನಿಸುತ್ತವೆ

ರಾಜೀನಾಮೆ ಕೊಟ್ಟು ತೆರವಾದ ಸ್ಥಾನಕ್ಕೆ ಮರುಚುನಾವಣೆ ನಡೆದಾಗ ರಾಜೀನಾಮೆಯಲ್ಲಿ ತೋರಿಸಲಾದ ಕಾರಣವು ಚುನಾವಣೆಯ ಮುಖ್ಯಾಂಶವಾಗುತ್ತದೆ, ಆಗ ಜನಪ್ರತಿನಿಧಿಗಳಿಗೆ ವಿಶ್ವಾಸವುಳ್ಳ ಕರ್ತವ್ಯ ನಿಷ್ಠ ವ್ಯಕ್ತಿಯೇ ಶಾಸನಾಂಗಕ್ಕೆ ಆಯ್ಕೆಯಾಗಲು ಸಾಧ್ಯವಾಗುತ್ತದೆ. —ಎಂದು ಒಪ್ಪೋಣ. ಆದರೆ ಮರು ಚುನಾವಣೆಯಲ್ಲಿ ಆಯ್ಕೆಹೊಂದಿದ ಮಹಾನುಭಾವನ ಮಾತನ್ನು ವರಿಷ್ಠರು ಕೇಳಿಯೇ ತೀರುವರೆಂಬ ಭರವಸೆ ಕೊಟ್ಟವರಿದ್ದಾರೆಯೆ? ಆತನ ಧ್ವನಿಗೆ ಬೆಲೆ ರಾಷ್ಟ್ರಾಂಗದಲ್ಲಿ ಬಾರದೆ ಹೋದರೆ ಮರಳಿ ಜನರು "ನೀವೂ ರಾಜೀನಾಮೆ ಕೊಡಿರಿ" ಎಂಬ ಮಂತ್ರವನ್ನು ಪಠಿಸಬೇಕಲ್ಲವೆ?

—ಹೀಗಾದರೆ ಇದಕ್ಕೆ ಕೊನೆ ಎಲ್ಲಿ? ಅದರ ಬದಲು ಈಗಿನವರೇ ವರಿಷ್ಠರ ಮನವೊಲಿಸುವಿಕೆಯ ಮಾರ್ಗ ಹಿಡಿದು ನಡೆಯುವಂತೆ ಅವಕಾಶ ನೀಡಲಾಗದೆ? ಅವರ ಮಾತಿಗೆ ಬೆಲೆ ಬಂದೀತು ಎಂಬ ವಿಶ್ವಾಸದಿಂದ ಜನರು ನಡೆಯಬಾರದೆ? ಈ ಆಸೆ ಕೊನೆ

(೧೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟು, ಲಿ.

ಸ್ಥಾಪನೆ, ೧೯೨೫] [ಪ್ರಧಾನ ಕಾರ್ಯಾಲಯ ಉಡುಪಿ, ದ ಭಾರತ

ಜಯಶ್ರೀಯು ನಿಮ್ಮನ್ನಗಲದಂತೆ ನೋಡಿಕೊಳ್ಳಿರಿ.

ಪ್ರತಿ ವೇತನ ದಿನದಲ್ಲಿ ಕಿಂಚಿತ್ತಾದರೂ ಉಳಿಸಿರಿ ಹಾಗೆ ಉಳಿಸಿದುದನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಉಳಿತಾಯ ಶಾಖೆಯಲ್ಲಿ ನಿಮಗಾಗಿ ಕಾರ್ಯವೆಸಗಲು ತೊಡಗಿರಿ

ಗಂಡಾಂತರಗಳನ್ನೂ ಆಕಸ್ಮಿಕ ಸಂದರ್ಭಗಳನ್ನೂ ಎದುರಿಸಲು ಬೇಕಾಗುವ ಕ್ಷೇಮ ನಿಧಿಯನ್ನು ಕೂಡಿಸಲು ಸಾಮಾನ್ಯ ಗಂಡಸು ಅಥವಾ ಹೆಂಗಸಿಗೆ ಕ್ರಮ ಪ್ರಕಾರ ಉಳಿತಾಯ ಮಾಡಿಕೊಂಡು ಬರುವುದೇ ಸುಲಭ ಸಾಧ್ಯವಾದ, ನಿಜವಾದ ಮತ್ತು ಸುರಕ್ಷಿತವಾದ ಸಾಧನ.

ಬೊಂಬಾಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದು ಮತ್ತು ತಿರುಕೊಚ್ಚಿ ರಾಜ್ಯಗಳಲ್ಲಿರುವ ನಮ್ಮ 93 ಶಾಖಾ ಕಚೇರಿಗಳಲ್ಲಿ ಯಾವುದಾದರೊಂದರಲ್ಲಿ ಉಳಿತಾಯ ಲೆಖ್ಖವನ್ನು ತೆರೆಯಿರಿ

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

THE CANARA INDUSTRIAL & BANKING SYNDICATE LTD.
Estd 1925] [Head Office UDIPI, S. India.

ಪ್ರಕೃತಿಯ ಮೂಲ ಕಣಗಳು -- ಅವುಗಳ ವೈಶಿಷ್ಟ್ಯ

ಅಣು ಲೋಕದ ರಚನೆಯ ಮೇಲೆ ವಿಶೇಷ ಬೆಳಕು

ಬರೆದವರು:
ಶ್ರೀ ಯು. ರಾಘವೇಂದ್ರಾಚಾರ್ಯ, ಎಂ.ಎ.

ಈ ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳು 92 ಮೂಲ ಧಾತುಗಳ ಜೋಡಣೆಯಿಂದ ಉಂಟಾಗಿರುವುವೆಂದು ತಿಳಿದು ಬಂದು ಎರಡು ಮೂರು ಶತಮಾನಗಳಾದವು. ಈ ಮೂಲ ಧಾತುಗಳ ಅತೀ ಚಿಕ್ಕದಾದ ಅಂಶಕ್ಕೆ 'ಪರಮಾಣು' ಎಂದು ಹೆಸರು. ಹೀಗೆ 92 ಮೂಲ ಧಾತುಗಳಿಗೆ 92 ತರದ ಪರಮಾಣುಗಳಿವೆ ಅಂದ ಹಾಗಾಯ್ತು. ಈ ಪರಮಾಣುಗಳನ್ನು ಭೇದಿಸಲಿಕ್ಕೆ ಸಾಧ್ಯವಿಲ್ಲವೆಂದು ನಮ್ಮ ಪೂರ್ವಿಕರು ತಿಳಿದು ಕೊಂಡಿದ್ದರು. ಆದರೆ ಈಗ್ಗೆ 60 ವರ್ಷಗಳಿಂದ—ಅಂದರೆ 1895 ನೇ ಇಸವಿಯಿಂದ— ಪರಮಾಣುವನ್ನು ಭೇದಿಸಲಿಕ್ಕೆ ಸಾಧ್ಯವಿದೆ ಮತ್ತು ಈ ಪರಮಾಣುಗಳು ಸಹಾ ಇತರ ಮೂಲಕಣಗಳ ಸಮೂಹವೆಂದು ತಿಳಿದು ಬಂದಿರುತ್ತದೆ. ಈ ಮೂಲಕಣಗಳು ಯಾವುವು ಎಂಬುದನ್ನು ವಿಮರ್ಶಿಸುವುದೇ ಈ ಲೇಖನದ ಉದ್ದೇಶ.

ಪರಮಾಣುಗಳಲ್ಲಿ ಅತೀ ಹಗುರವಾಗಿರುವುದು ಜಲಜನಕ ಪರಮಾಣು. ಇದಕ್ಕಿಂತಲೂ ಸುಮಾರು 1836 ಪಾಲು ಹಗುರವಾಗಿರುವ ಒಂದು ಕಣವನ್ನು 1895ರಲ್ಲಿ ಜೆ. ಜೆ. ಥೋಮ್ಸನ್ (J. J. Thomson) ಎಂಬಾತನು ಕಂಡು ಹಿಡಿದನು. ಇದರಲ್ಲಿ ಋಣವಿದ್ಯುತ್ತು ಇದೆ ಎಂದೂ ತಿಳಿದು ಬಂದಿತು. ಇದೊಂದು ಮೂಲಕಣ. ಇದನ್ನು 'ಇಲೆಕ್ಟ್ರೋನ್' ಎಂದು ಕರೆಯುತ್ತಾರೆ. ಎಲ್ಲಾ ಪರಮಾಣುಗಳಲ್ಲಿಯೂ ಇಲೆಕ್ಟ್ರೋನುಗಳಿವೆ. ಈ ಇಲೆಕ್ಟ್ರೋನ್ ತನ್ನ ಅಕ್ಷದಲ್ಲೆ ಬುಗರಿಯಂತೆ ಗರಗರನೆ ಸದಾ ತಿರುಗುತ್ತಿರುತ್ತದೆ.

ಎಲ್ಲಾ ಪರಮಾಣುಗಳಲ್ಲಿರುವ ಇನ್ನೊಂದು ಮೂಲಕಣವನ್ನು 'ಪ್ರೋಟೋನ್' ಎಂದು ಕರೆಯುತ್ತಾರೆ. ಇಲೆಕ್ಟ್ರೋನಿನಲ್ಲಿ ಎಷ್ಟೇ ಋಣವಿದ್ಯುತ್ತು ಇದೆಯೋ ಅಷ್ಟೇ ಧನ ವಿದ್ಯುತ್ತು ಪ್ರೋಟೋನಿನಲ್ಲಿದೆ. ಪ್ರೋಟೋನಿನ ಭಾರ ಮಾತ್ರ ಇಲೆಕ್ಟ್ರೋನಿನ ಭಾರಕ್ಕಿಂತ 1836 ಪಾಲು ಅಧಿಕ. ವಿದ್ಯುತ್ತಿನ ಅಂಶದಲ್ಲಿ ಮಾತ್ರ ಪ್ರೋಟೋನ್ ಮತ್ತು ಇಲೆಕ್ಟ್ರೋನ್ ಒಂದಕ್ಕೊಂದು ದ್ವಂದ್ವವಾಗಿದೆ. ಹಣ್ಣಿನೊಳಗೆ ಬೀಜವಿದ್ದಂತೆ ಪರಮಾಣುವಿನೊಳಗೆ ಕೇಂದ್ರದಲ್ಲಿ ಎಲ್ಲಾ ಪ್ರೋಟೋನುಗಳು ಸೇರಿ ಕೊಂಡಿವೆ ಎಂದು 1911ನೇ ಇಸವಿಯಲ್ಲಿ ರುದರ್ ಫೋರ್ಡ್ ಎಂಬಾತನು ತೋರಿಸಿ ಕೊಟ್ಟನು. ಪರಮಾಣುವಿನಲ್ಲಿ ಎಷ್ಟು ಪ್ರೋಟೋನುಗಳಿವೆಯೋ ಅಷ್ಟೇ ಸಂಖ್ಯೆಯಲ್ಲಿ ಇಲೆಕ್ಟ್ರೋನುಗಳೂ ಇವೆ. ಸೌರವ್ಯೂಹದಲ್ಲಿ ಸ್ಥಿರವಾದ ಸೂರ್ಯನ ಸುತ್ತಲೂ ಗ್ರಹಗಳು ತಮ್ಮ ತಮ್ಮ ಕಕ್ಷೆಗಳಲ್ಲಿ ಸುತ್ತು ತಿರುಗುತ್ತಿರುವಂತೆ ಪರಮಾಣುವಿನ ಒಳಗೂ ಕೇಂದ್ರದ ಸುತ್ತಲೂ ವಿವಿಧ ಕಕ್ಷೆಗಳಲ್ಲಿ ಪರಮಾಣುವಿನ ಪರಿಧಿಯಲ್ಲಿ ಇಲೆಕ್ಟ್ರೋನುಗಳು ಸದಾ ಪ್ರದಕ್ಷಿಣೆ ಬರುತ್ತಿವೆಯೆಂದು 1913ರಲ್ಲಿ ನೀಲ್ಸ್ ಬೋರನು ತೋರಿಸಿ ಕೊಟ್ಟನು.

1931ನೇ ಇಸವಿಯಲ್ಲಿ ಚೇಡ್ವಿಕ್ (Chadwick) ಎಂಬಾತನು 'ನ್ಯೂಟ್ರೋನ್' ಎಂಬ ಮೂರನೆಯ ಮೂಲ ಕಣವನ್ನು ಕಂಡು ಹಿಡಿದನು. ಇದರ ಭಾರವು ಇಲೆಕ್ಟ್ರೋನಿಗಿಂತ 1839 ಪಾಲು ಅಧಿಕ. ಆದರೆ ಇದರಲ್ಲಿ ವಿದ್ಯುಚ್ಛಕ್ತಿಯೇ ಇಲ್ಲ. ನ್ಯೂಟ್ರೋನುಗಳು ಪರಮಾಣುಗಳ ಕೇಂದ್ರದಲ್ಲಿ ಪ್ರೋಟೋನುಗಳ ಜೊತೆಯಲ್ಲಿ ಸೇರಿ ಕೊಂಡಿರುತ್ತದೆ. ಉದಾಹರಣೆಗಾಗಿ ಯುರೇನಿಯಮ್ ಧಾತುವಿನ ಕೇಂದ್ರದಲ್ಲಿ 92 ಪ್ರೋಟೋನುಗಳೂ 146 ನ್ಯೂಟ್ರೋನುಗಳೂ ಸೇರಿ ಕೊಂಡಿವೆ. ಪ್ರೋಟೋನು ಮತ್ತು ನ್ಯೂಟ್ರೋನುಗಳೂ ಇಲೆಕ್ಟ್ರೋನಿನಂತೆ ತಮ್ಮ ತಮ್ಮ ಅಕ್ಷದ ಸುತ್ತಲೂ ತಿರುಗುತ್ತಿರುತ್ತವೆ

ಇಲೆಕ್ಟ್ರೋನಿನಷ್ಟೇ ಭಾರದ ಆದರೆ ಋಣವಿದ್ಯುತ್ತಿನ ಬದಲಾಗಿ ಅಷ್ಟೇ ಪ್ರಮಾಣದ ಧನವಿದ್ಯುತ್ತುಳ್ಳ ಒಂದು ಮೂಲ ಕಣವನ್ನು 1931ರಲ್ಲಿ ಏಂಡರ್ಸನ್ (C. D. Anderson) ಎಂಬಾತನು ಕಂಡುಹಿಡಿದನು. ಇದರ ಹೆಸರು 'ಪೋಸಿಟ್ರೋನ್' (Positron ನಾವು ಇದನ್ನು 'ಧನ ಇಲೆಕ್ಟ್ರೋನ್' ಎಂದೂ ಕರೆಯಬಹುದು. ಋಣ ಮತ್ತು ಧನ ಇಲೆಕ್ಟ್ರೋನುಗಳು ತೂಕದಲ್ಲಿ ಸಮಾನವಾಗಿದ್ದು ವಿದ್ಯುತ್ತಿನಲ್ಲಿ ಮಾತ್ರ ಪರಸ್ಪರ ದ್ವಂದ್ವವಾಗಿವೆ. ಇವೆರಡೂ ಒಟ್ಟು ಸೇರಿದಾಗ ಎರಡರ ವಿದ್ಯುತ್ತು ನಾಶ ಹೊಂದಿ —ವಸ್ತುವಿನಂಶವೂ ಸಂಪೂರ್ಣಲಯವಾಗಿ ಶಕ್ತಿಯಾಗಿ ಮಾರ್ಪಾಟು ಹೊಂದುವುದು. ಇದರಿಂದ ಒಂದು ಮಿಲಿಯ ಮಿಲಿಯ ಇಲೆಕ್ಟ್ರೋನ್ ವೋಲ್ಟು (ಮಿ. ಇ. ವೊ.) ಶಕ್ತಿ ಉತ್ಪತ್ತಿಯಾಗುವುದು ಆದುದರಿಂದ ಪರಮಾಣುವಿನ ಒಳಗಡೆ ಧನ ಇಲೆಕ್ಟ್ರೋನ್ ಇರಲಾರದು. ಶಕ್ತಿಯು ಹೆಪ್ಪು ಗಟ್ಟಿದಾಗ ಮಾತ್ರ ಈ ಮೂಲಕಣ ಉಂಟಾಗುತ್ತದೆ.

ಅಂತೆಯೇ ಪ್ರೋಟೋನಿಗೂ ದ್ವಂದ್ವ ಇದೆಯೇ? ಧನ ಪ್ರೋಟೋನು ಇದ್ದಂತೆ ಅಷ್ಟೇ ಭಾರದ ಋಣ ಪ್ರೋಟೋನು ಸಹಾ ಇರುವುದೇ ಎಂಬ ಪ್ರಶ್ನೆ ವಿಜ್ಞಾನಿಗಳಲ್ಲಿ ಸಹಜವಾಗಿಯೇ ಮೂಡಿದ್ದಿತು. ಆದರೆ ಇದು ವರೆಗೆ ಇಂತಹ ಮೂಲಕಣ ವಿಜ್ಞಾನಿಯ ಸಂಶೋಧನೆಗೆ ಸಿಕ್ಕಿರಲಿಲ್ಲ. ಆದರೆ 1955ನೇ ಇಸವಿ ಸಪ್ಟಂಬರ ತಿಂಗಳಿನಲ್ಲಿ ಅಮೇರಿಕಾದ ಕೆಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಶೋಧನೆಯನ್ನು ನಡೆಸುತ್ತಿದ್ದ ವಿಜ್ಞಾನಿಗಳು ಈ ಋಣ ಪ್ರೋಟೋನನ್ನು ಕಂಡು ಹಿಡಿದರು. ಅದಕ್ಕೆ ಅಂಟಿ ಪ್ರೋಟೋನ್ (Ante-Proton) ಎಂದು ಹೆಸರು. ಇದನ್ನು ಹೇಗೆ ಕಂಡು ಹಿಡಿದರು ಎಂಬುದನ್ನು ಸ್ಥೂಲವಾಗಿ ವಿವರಿಸಲಾಗುವುದು.

ವಿಶ್ವಕಿರಣ (Cosmic Rays)ದ ಮೇಲೆ ಶೋಧನೆಯನ್ನು ನಡೆಸುತ್ತಿದ್ದಾಗ ವಿಜ್ಞಾನಿಗಳಿಗೆ ಇನ್ನೂ ಹೊಸ ತರದ ಮೂಲಕಣಗಳು ಗಮನಕ್ಕೆ ಬಂದವು. ಇವುಗಳಿಗೆ 'ಮೆಸೋನ್' (Meson) ಎಂದು ಹೆಸರು. ಮೆಸೋನಿನ ತೂಕವು ಇಲೆಕ್ಟ್ರೋನಿನ ತೂಕಕ್ಕೂ ಪ್ರೋಟೋನಿನ ತೂಕಕ್ಕೂ ನಡುವೆ. ಇದೆ ಮೆಸೋನುಗಳಲ್ಲಿ ಎರಡು ತರದವುಗಳಿವೆ—'ಯಲ್-ಮೆಸೋನ್' (L-Meson) ಮತ್ತೂ 'ಕೆ-ಮೆಸೋನ್' (K-Meson) ಎಂದು. L ಮೆಸೋನಿನ ತೂಕವು 207 ರಿಂದ 265ರ ವರೆಗೆ ಅಂದರೆ ಇಲೆಕ್ಟ್ರೋನಿಗಿಂತ ಅಷ್ಟೇ ಪಾಲು ಭಾರವೆಂದರ್ಥ. ಇನ್ನು ಮುಂದಕ್ಕೆ ಭಾರವನ್ನು ಈ ರೀತಿಯಲ್ಲಿಯೇ ನಿರೂಪಿಸುವೆವು.ಕೆ. ಮೆಸೋನಿನ ತೂಕವು 965ರಿಂದ ಸುಮಾರು ಸಾವಿರದ ವರೆಗೆ. ಇವುಗಳಲ್ಲಿ ಧನವಿದ್ಯುತ್ತುಳ್ಳವುಗಳೂ, ಋಣ ವಿದ್ಯುತ್ತುಳ್ಳವುಗಳೂ—ವಿದ್ಯುತ್ತೇ ಇಲ್ಲದವುಗಳೂ ಹೀಗೆ ಮೂರು ತರದವುಗಳಿವೆ. ಶಕ್ತಿಯು ಹೆಪ್ಪುಗಟ್ಟಿ ಮೆಸೋನುಗಳು ಉಂಟಾಗುವುವು.

ಪ್ರೋಟೋನಿಗಿಂತಲೂ ಸ್ವಲ್ಪ ಅಧಿಕ ಭಾರವುಳ್ಳ ಮೂಲ ಕಣಗಳಿವೆ. ಅವುಗಳ ಹೆಸರು 'ಹೈಪರೋನ್' (Hyperon) ಅವುಗಳ ತೂಕ 2181. ಅವುಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ.

ಪರಮಾಣುವಿನ ಕೇಂದ್ರದಲ್ಲಿ ಅನೇಕ ಪ್ರೋಟೋನುಗಳೂ ಅನೇಕ ನ್ಯೂಟ್ರೋನುಗಳೂ ಸೇರಿಕೊಂಡಿವೆ. ಈ ಕೇಂದ್ರದ ವ್ಯಾಸವು ಒಂದು ಅಂಗುಲದ ಮಿಲಿಯ ಮಿಲಿಯ ಪಾಲಿಗಿಂತಲೂ ಚಿಕ್ಕದು. (10^{-13}cm). ಪ್ರೋಟೋನುಗಳಲ್ಲಿ ಧನವಿದ್ಯುತ್ತಿದೆ. ಧನವಿದ್ಯುತ್ತುಳ್ಳ ಎರಡು ಕಣಗಳು ಒಂದನ್ನೊಂದು ಹಿಮ್ಮೆಟ್ಟುವುವು ಎಂಬುದು ಸರ್ವ ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯ. ಈ ಕಣಗಳು ಸಮೀಪಿಸಿದಂತೆ ಹಿಮ್ಮೆಟ್ಟುವ ಬಲವು ವರ್ಗ ರೂಪದಲ್ಲಿ ಏರುವುದು. ದೂರವು ಮುಂಚೆಗಿಂತ ಅರ್ಧದಷ್ಟಾದರೆ ಬಲವು ನಾಲ್ಕು ಪಾಲಷ್ಟಾಗುವುದು. ಆದರೂ ಪರಮಾಣು ಕೇಂದ್ರದಲ್ಲಿ ಅತೀ ಸಮೀಪದಲ್ಲಿ ಎಲ್ಲ ಪ್ರೋಟೋನುಗಳೂ ಸ್ನೇಹದಿಂದ ಇರಲು ಕಾರಣವೇನು? ಪರಮಾಣು ಕೇಂದ್ರದೊಳಗೆ ಪ್ರೋಟೋನು ಮತ್ತು ನ್ಯೂಟ್ರೋನುಗಳನ್ನು ಭದ್ರವಾಗಿ ಹಿಡಿದು ನಿಲ್ಲಿಸಿದ 'ಸಿಮೆಂಟ್' ಯಾವುದು? ಈ ಮೂಲ ಕಣಗಳೊಳಗೆ ಹಿಮ್ಮೆಟ್ಟುವ ಬಲದ ಬದಲಾಗಿ ಇನ್ನೊಂದು ತರದ ಆಕರ್ಷಕ ಬಲವಿರಬೇಕು ಈ ಬಲವು ಗುರುತ್ವಾಕರ್ಷಕ ಬಲವಲ್ಲ. ಈ ಹೊಸ ಬಲವನ್ನು 'ಕೇಂದ್ರ ಬಲ' (Nuclear Force) ಎಂದು ಕರೆಯುತ್ತಾರೆ. ಈ ಬಲದ ಸ್ವರೂಪ ಯಾವುದೆಂಬುದು ವಿಜ್ಞಾನಿಗಳಿಗೆ ಇತ್ತೀಚಿನ ವರೆಗೆ ತಿಳಿದಿರಲಿಲ್ಲ.

ಪರಮಾಣು ಕೇಂದ್ರದಲ್ಲಿ ಪ್ರೋಟೋನ್ ಮತ್ತು ನ್ಯೂಟ್ರೋನ್‌ಗಳು ಇಟ್ಟಿಗೆಯ ತುಂಡುಗಳಂತೆ ನಿರ್ಜೀವವಾಗಿ ಬಿದ್ದುಕೊಂಡಿಲ್ಲ. ನ್ಯೂಟ್ರೋನಿನ ಆಯುಷ್ಯ ಬರೀ 13 ನಿಮಿಷಗಳು ಮಾತ್ರ. ಇಷ್ಟು ಅವಧಿಯೊಳಗೆ ನ್ಯೂಟ್ರೋನ್ ಒಡೆದು ಅದರಿಂದ ಪ್ರೋಟೋನ್ ಮತ್ತು ಇಲೆಕ್ಟ್ರೋನ್ ಉತ್ಪತ್ತಿಯಾಗುತ್ತವೆ. ಇವುಗಳ ಜೊತೆಯಲ್ಲಿ ಮೆಸೋನುಗಳೂ ಹುಟ್ಟುತ್ತವೆ. ಇವುಗಳ ಆಯುಷ್ಯ ಒಂದು ಕ್ಷಣದ ಒಂದು ಮಿಲಿಯ ಅಂಶದಿಂದ ಹತ್ತು ಸಾವಿರ ಮಿಲಿಯ ಅಂಶದಷ್ಟು ಅಲ್ಪ(10^{-6} sec to 10^{-10} sec) ಈ ಮೆಸೋನುಗಳು ಪ್ರೋಟೋನಿನಿಂದ ನ್ಯೂಟ್ರೋನಿಗೆ ಹೀಗೆ ಕ್ಷಣಕ್ಕೆ 100 ಮಿಲಿಯ ಸಾರಿ ಹಾರಿ ಕೊಂಡೇ ಇರುತ್ತವೆ. ಈ ತರದ ಕ್ರಿಯೆಯು ಪ್ರೋಟೋನುಗಳನ್ನೂ ನ್ಯೂಟ್ರೋನುಗಳನ್ನೂ ಕೇಂದ್ರದೊಳಗೆ ಬಂಧಿಸಿದ ಹೊಸ ಬಲವು. ಇದೇ ಪರಮಾಣು ಕೇಂದ್ರದಲ್ಲಿರುವ 'ಸೀಮೆಂಟ್' ಇದಕ್ಕೆ ಒಂದು ಉದಾಹರಣೆ

(೧೨ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ.
ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.
ಮೈಸೂರು ಗಂಧದ ಎಣ್ಣೆ
ಅಪ್ಪಟವಾದ ಗಂಧದ ಎಣ್ಣೆ.
ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.
ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

ತುಂಗಭದ್ರೆಯೂ ದಕ್ಷಿಣ ಕನ್ನಡವೂ

ಜಿಲ್ಲೆಯ ಘಟ್ಟದ ಸೆರಗಿನಲ್ಲಿ ವಿದ್ಯುದುತ್ಪಾದನೆಯ ಕೇಂದ್ರಗಳ ಸಾಧ್ಯತೆ

ಬರೆದವರು:
ಪ್ರಿನ್ಸಿಪಲ್ ಕೃಷ್ಣ ಕುಮಾರ ಕಲ್ಲೂರ, ಎಂ.ಎ.

ದಕ್ಷಿಣ ಕನ್ನಡಕ್ಕೂ ತುಂಗಭದ್ರೆಗೂ, ಸಾಧಾರಣತಃ ಬಾದರಾಯಣ ಸಂಬಂಧವೇ ಎಂದು ಬಹುಜನರ ತಿಳುವಳಿಕೆ. ಆದರೆ ವಿದ್ಯುದ್ಯುಗವಾದ ಈ ದಿನಗಳಲ್ಲಿ, ದಕ್ಷಿಣ ಕನ್ನಡದಿಂದ ವಿಮುಖವಾಗಿ ಹರಿಯುವ ತುಂಗೆಯೂ ಭದ್ರೆಯೂ ದಕ್ಷಿಣ ಕನ್ನಡಕ್ಕೆ ಅಭಿಮುಖವಾಗಿರುವುದು ಸುಸಾಧ್ಯವೆಂದು ಮೇಲೆ ಸೂಚಿತವಾಗಿದೆ. ಅದರ ವಿವರಣೆಯ ಕೆಲವು ಮುಖ್ಯಾಂಶಗಳನ್ನು ಮಾತ್ರ ಸದ್ಯ ನೋಡಿಕೊಳ್ಳುವುದವಶ್ಯವಾಗಿದೆ.

ತುಂಗಭದ್ರೆಯ ಹುಟ್ಟು

ಗಂಗಾ ಮೂಲದ ಬಳಿ ಉಗಮಹೊಂದಿರುವ ತುಂಗೆಯೂ ಭದ್ರೆಯೂ ಒಂದೇ ಗಿರಿಶಿಖರದಲ್ಲಿ ಒಂದೇ ಮೈಲಿನಂತರದಲ್ಲಿ ಹುಟ್ಟಿದರೂ ಆರಂಭದಲ್ಲಿ ತುಂಗೆ ಉತ್ತರಾಭಿಮುಖವಾಗಿಯೂ ಭದ್ರೆಯು ದಕ್ಷಿಣಾಭಿಮುಖವಾಗಿಯೂ ತಮ್ಮ ಪ್ರವಾಹಗಳನ್ನು ಪ್ರಾರಂಭಿಸುತ್ತಾರೆ. ಪಶ್ಚಿಮದಲ್ಲಿ ದುರ್ಗಮವಾದ ಘಟ್ಟದ ಗೋಡೆಗಳು ೪ ರಿಂದ ೬ ಸಾವಿರ ಅಡಿಗಳ ವರೆಗೂ ಎತ್ತರವಾಗಿ ಅಡ್ಡಲಾಗಿ ನಿಂತಿರುವುದರಿಂದ ತುಂಗೆ–ಭದ್ರೆಯರ ಕೊಳ್ಳದ ಒಂದು ಹನಿ ನೀರೂ ದಕ್ಷಿಣ ಕನ್ನಡದತ್ತ ಹರಿಯುವುದು ಸಾಧ್ಯವಿಲ್ಲ. ಈ ಕೊಳ್ಳಗಳ ಅಂಚುಗಳು ಮಾತ್ರ ಆ ಘಟ್ಟದ ಅಂಚುಗಳಿಗೆ ತೀರ ತುತ್ತತುದಿಯವರೆಗೂ ಹೊಂದಿಕೊಂಡಿವೆ. ಕೆಲವೆಡೆಗಳಲ್ಲಂತೂ ಒಂದು ಫರ್ಲಾಂಗು ಉದ್ದವಾದ ಕಣಿವೆಯು ಕಿಂಡಿ ದೊರೆತಿದ್ದರೂ ಈ ಕೊಳ್ಳಗಳ ನೀರು ಪಶ್ಚಿಮಕ್ಕೆ ಹರಿದು ಶರಾವತಿಗಿಂತಲೂ ಎತ್ತರವಾದ ಜಲಪ್ರಪಾತಗಳನ್ನುಂಟುಮಾಡಬಹುದಿತ್ತು. ಏಕೆಂದರೆ ಇವೆರಡೂ ನದಿಗಳು (ಘಟ್ಟದ ಮೇಲೆ) ಶರಾವತಿ ನದಿಯ ಕೊಳ್ಳಕ್ಕಿಂತ ೫–೬ ನೂರು ಅಡಿ ಎತ್ತರವಾಗಿರುವ ಕೊಳ್ಳಗಳಿಂದ ಹರಿಯುತ್ತವೆ. ಪ್ರಾರಂಭದ ೨೫ ಮೈಲುಗಳಲ್ಲಿ ತುಂಗೆ (ಸಮುದ್ರ ಮಟ್ಟದ) ೨೦೦೦ ದಿಂದ ೨೫೦೦ ಅಡಿ ಎತ್ತರದಲ್ಲೂ ಭದ್ರೆ ೨,೫೦೦ ದಿಂದ ೩,೦೦೦ ಅಡಿ ಎತ್ತರದಲ್ಲೂ ಹರಿಯುತ್ತಾರೆ.

ಆರಂಭದಲ್ಲಿ ಉತ್ತರಾಭಿಮುಖಳಾದ ತುಂಗೆ ಮುಂದೆ ಈಶಾನ್ಯಾಭಿಮುಖಳಾಗುತ್ತಾಳೆ. ಸಾಮಾನ್ಯವಾಗಿ ಇಲ್ಲಿಂದ ಬಳ್ಳಾರಿ ಜಿಲ್ಲೆಯನ್ನು ಸೇರುವ ವರೆಗೂ ತುಂಗಭದ್ರೆಯು ಹರಿಯುವುದು ಈಶಾನ್ಯಾಭಿಮುಖವಾಗಿಯೇ! ಭದ್ರೆ ಮಾತ್ರ ಉಗಮದಿಂದ ಸ್ವಲ್ಪ ಅಂತರದಲ್ಲಿ ಪೂರ್ವಾಭಿಮುಖಳಾಗಿ ೨೫ ಮೈಲಿ ಸಾಗಿ ಹರಿದು, ಮಹಾಗುಂಡಿಯ ಬಳಿ ಉತ್ತರಾಭಿಮುಖಳಾಗಿ, ಮುಂದೆ ಕೂಡಲಿಯಲ್ಲಿ ತುಂಗೆಯನ್ನು ಸೇರುವ ವರೆಗೂ ಉತ್ತರಾಭಿಮುಖಳಾಗಿಯೇ ಹರಿಯುತ್ತಾಳೆ. ಇವೆರಡೂ ನದಿಗಳನ್ನು ವಿಂಗಡಿಸುವುದು ಮೇರುತೀ ಪರ್ವತಾವಳಿ. ಇದು ಸಹ್ಯಾದ್ರಿಯ ಘಟ್ಟದಿಂದ ಗಂಗಾ ಮೂಲದಲ್ಲೇ ಆರಂಭವಾಗಿ ಚಂದ್ರದ್ರೋಣ (ಬಾಬಾ ಬುಡನ) ಗಿರಿಯ ವರೆಗೂ ಹಬ್ಬಿದೆ. ಈ ಪರ್ವತಾವಳಿಯನ್ನು ದಕ್ಷಿಣದಲ್ಲಿ ಬಳಸಿಕೊಂಡೇ ಭದ್ರೆ ಹರಿಯುತ್ತಾಳೆ. ಮೇರುತೀ ಪರ್ವತಾವಳಿಯ ಪರಮಾವಧಿ ಎತ್ತರ ೫೪೫೪ ಅಡಿ. ಈ ಪರ್ವತಾವಳಿಯಲ್ಲಿ ೩,೫೦೦ರಿಂದ ೫೦೦೦ ಅಡಿಯ ವರೆಗೆ ಎತ್ತರವಾದ ಗಿರಿಶಿಖರಗಳ ಶ್ರೇಣಿಗಳೂ ಅನೇಕವಾಗಿವೆ. ಈ ಪ್ರದೇಶ ಚಹಾ ಕಾಫಿ ಹಾಗೂ ಏಲಕ್ಕಿ ತೋಟಗಳಿಂದ ತುಂಬಿ ಹೋಗಿದೆ. ತುಂಗಾ ಹಾಗು ಭದ್ರಾಕೊಳ್ಳಗಳ ದಕ್ಷಿಣ ಹಾಗು ಪಶ್ಚಿಮಗಳಲ್ಲಿಯ ಪರ್ವತ ಶ್ರೇಣಿಗಳು ೩,೫೦೦ರಿಂದ ೬,೨೦೦ ಅಡಿಯ ವರೆಗೂ ಎತ್ತರವಾಗಿವೆ. ಪ್ರಖ್ಯಾತವಾದ ಕುದುರೆ ಮುಖವೂ ಇವುಗಳಲ್ಲೊಂದು. ಹೀಗೆ, ಮೂರು ದಿಕ್ಕುಗಳಲ್ಲಿ ಉನ್ನತ ಪರ್ವತ ಶ್ರೇಣಿಗಳಿಂದ ಸುತ್ತಲ್ಪಟ್ಟ ತುಂಗಾ ಹಾಗೂ ಭದ್ರಾಕೊಳ್ಳಗಳು ಹರವಾದ ಬಟ್ಟಲುಗಳಂತೆ ಹಬ್ಬಿವೆ. ಆದರೆ ನದಿಗಳು ಹರಿಯುವ ದಾರಿಯಲ್ಲೆಲ್ಲೂ ಯಾವ ಆತಂಕಗಳೂ ಬಾರದ್ದರಿಂದ, ಈಶಾನ್ಯ ಮುಖವಾಗಿ ಸಾಧಾರಣ ಭೂಮಿಯಲ್ಲಿ ಹರಿಯುವುದರಿಂದ ಈ ನದಿಗಳಿಂದ ವಿಸ್ತಾರವಾದ ನೈಸರ್ಗಿಕ ಸರೋವರಗಳಾಗಲೀ, ಜಲಪಾತಗಳಾಗಲೀ ಉಂಟಾಗಿಲ್ಲ. ಇವೆರಡೂ ನದಿಗಳು ತಮ್ಮ ಒಟ್ಟಿನ ೩೫೦ ಮೈಲಿನ ಉದ್ದಳತೆಯಲ್ಲಿ ೧೦೦೦ ಅಡಿ ಇಳಿಯುತ್ತವೆ. ಎಂದರೆ ಮೈಲಿಗೆ ೩ ಅಡಿ ಮಾತ್ರ. ಈ ಇಳಿತ ಬಹಳ ವೇಗವಲ್ಲದ್ದು; ಹಾಗು ಜಲಯಾನಕ್ಕೂ ಅನುಕೂಲವಾದದ್ದು.

ವಿದ್ಯುದುತ್ಪಾದನೆಯ ಸಂಭವ

ದಕ್ಷಿಣ ಕನ್ನಡಕ್ಕೆ ಈ ನದಿಯಿಂದ ಮುಖ್ಯವಾಗಿ ಉಪಯೋಗಬೇಕಾಗಿರುವುದು ವಿದ್ಯುದುತ್ಪಾದನೆಯಿಂದ. ಆ ವಿಚಾರ ಹೀಗೆ: —

ಚಿಕ್ಕಮಗಳೂರು ಜಿಲ್ಲೆಯ ತೀರ ಪಶ್ಚಿಮದ ತಾಲೂಕುಗಳಾದ ಕೊಪ್ಪ, ಮೂಡಗೆರೆಗಳು ಮೈಸೂರಿನ ಪ್ರಸಿದ್ಧ ಭೂಮಿಯ ಅತ್ಯುನ್ನತ ಪ್ರದೇಶಗಳಲ್ಲೊಂದು. ಈ ತಾಲೂಕುಗಳ ಪಶ್ಚಿಮ ಗಡಿಯೇ ದಕ್ಷಿಣ ಕನ್ನಡದ ಪೂರ್ವಗಡಿ. ಈ ಗಡಿ ಬಲ್ಲಾಳರಾಯನ ದುರ್ಗ, ಬಂಗಾರ ಬಳಿಗೆ ಕುದುರೆಮುಖ, ಗಡಿಕಲ್ಲು ಗುಡ್ಡ, ಹುಲ್ಲುಗುಡ್ಡ, ಗಂಗಾಮೂಲ, ಆನೆಕಲ್ಲು ಗುಡ್ಡ ಎಂಬ ೪೦೦೦ದ ೬ ಸಾವಿರ ಅಡಿ ಎತ್ತರವಾದ ಗಿರಿ ಶಿಖರಗಳ ಮಾಲೆಯಿಂದ ರಚಿಸಲ್ಪಟ್ಟಿದೆ. ಈ ಗಿರಿ ಮಾಲೆ ಇಲ್ಲಿ ಅರ್ಧ ವರ್ತುಲಾಕಾರವಾಗಿ ಹಬ್ಬಿ, ತುಂಗಾ ಹಾಗೂ ಭದ್ರಾ ನದಿಯ ಬಟ್ಟಲುಗಳಂತ ಕೊಳ್ಳಗಳ ಎರಡು ಹರಹುಗಳನ್ನುಂಟುಮಾಡಿವೆ. ಈ ಕೊಳ್ಳಗಳಲ್ಲಿ ಭದ್ರಾ ನದಿಯ ಕೊಳ್ಳ ಸಮುದ್ರ ಮಟ್ಟದಿಂದ ೨೫೦೦ ಅಡಿ ಎತ್ತರದಲ್ಲಿದೆ; ತುಂಗಾ ಕೊಳ್ಳ ೨೨೦೦ ಅಡಿ ಎತ್ತರದಲ್ಲಿದೆ. ಭದ್ರಾ ಕೊಳ್ಳದ [illegible]. ಸಾಮಾನ್ಯವಾಗಿ ೩,೫೦೦ ಅಡಿ ಎತ್ತರದ ವರೆಗೂ ಮೇಲೆದ್ದಿದೆ; ತುಂಗಾಕೊಳ್ಳ ೨೫೦೦ ಅಡಿ ವರೆಗೂ ಮೇಲೆದ್ದಿದೆ. ಇದಲ್ಲದೆ, ಕೊಳ್ಳಗಳ ಮಧ್ಯೆ ಗಂಗಾಮೂಲದಿಂದ ಮೇರುತಿ ಶಿಖರದ ವರೆಗೆ ಪೂರ್ವಾಭಿಮುಖವಾಗಿ ಹಬ್ಬಿದ ೪—೫ ಸಾವಿರ ಅಡಿ ಎತ್ತರದ ಗಿರಿಮಾಲೆಯೊಂದು ಈ ಕೊಳ್ಳಗಳನ್ನು ವಿಂಗಡಿಸಿ ಎರಡು ಬೇರೆ ಬೇರೆ ಬಟ್ಟಲುಗಳಂತಹ ಹರಹುಗಳನ್ನುಂಟುಮಾಡಿವೆ. ಭದ್ರಾಕೊಳ್ಳವಿರುವುದು ಮೂಡಗೆರೆ ತಾಲೂಕಿನಲ್ಲಿ; ತುಂಗಾಕೊಳ್ಳವಿರುವುದು ಕೊಪ್ಪ ತಾಲೂಕಿನಲ್ಲಿ.

ಭದ್ರಾಕೊಳ್ಳ, ಗಂಗಾ ಮೂಲದಿಂದ ೨೫ ಮೈಲು ಪೂರ್ವಾಭಿಮುಖವಾಗಿ ಮಹಾಗುಂಡಿ ಎಂಬ ಕಣಿವೆಯ ವರೆಗೆ ಹರಿದು ಅಲ್ಲಿಂದ ಉತ್ತರಾಭಿಮುಖವಾಗಿ ತಿರುಗಿ ಬಾಳೆಹೊನ್ನೂರು, ಖಾಂಡ್ಯ, ಹೆಬ್ಬೆ, ಲಕ್ಕವಳ್ಳಿ, ಭದ್ರಾವತಿಗಳನ್ನು ಬಳಸಿ ಕೂಡಲಿಯಲ್ಲಿ ತುಂಗೆಯನ್ನು ಸೇರುತ್ತಾಳೆ. ಗಂಗಾ ಮೂಲದಿಂದ ಮಹಾಗುಂಡಿಯ ವರೆಗಿನ ಭದ್ರಾಕೊಳ್ಳ, ಬಟ್ಟಲಾಕಾರದಲ್ಲಿದ್ದು ಸಾಕಷ್ಟು ವಿಸ್ತಾರವಾಗಿದೆ. ಈ ಕೊಳ್ಳದ ಮಧ್ಯದಲ್ಲಿಯೇ ಕಳಸ ಎಂಬ ಪಟ್ಟಣವಿದೆ. ಇದರ ಅಕ್ಕಪಕ್ಕದಲ್ಲಿ ನಾಲ್ಕಾರು ಅತ್ಯುತ್ತಮವಾದ ಅಣೆಕಟ್ಟಿನ ಸ್ಥಾನಗಳಿವೆ. ಇಲ್ಲಿ ನದಿಯ ಪಾತ್ರ ಪಕ್ಕದಲ್ಲಿ ಎತ್ತರವಾದ ಗಿರಿಮಾಲೆಗಳು ನದಿಯ ದಂಡೆಯ [illegible] ಆಗಿ ನಿಲ್ಲುವುದರಿಂದ ಈ ಸ್ಥಾನಗಳು, ಅಣೆಕಟ್ಟುಗಳನ್ನು ಕಟ್ಟಿ ವಿಸ್ತಾರವಾದ ಜಲ ಸಂಗ್ರಹಣೆಗಳನ್ನುಂಟುಮಾಡಲು ಅತ್ಯಂತ ಅನುಕೂಲವಾಗಿವೆ.

ನೆಲ್ಲಿಬೀಡಿನ ಅಣೆಕಟ್ಟು

ಇವುಗಳಲ್ಲಿ ಕಳಸದ ಬಳಿಯಲ್ಲಿಯೇ ಒಂದು, ಕಳಸದ ಪಶ್ಚಿಮಕ್ಕೆ ೫–೬ ಮೈಲಿನಲ್ಲಿ ನೆಲ್ಲಿಬೀಡಿನ ಬಳಿ ಒಂದು, ಕಳಸದ ಪೂರ್ವಕ್ಕೆ ಐದು ಮೈಲಿನಂತರದಲ್ಲಿ ಹಾಲುವಳ್ಳಿಯ ಬಳಿಯಲ್ಲೊಂದು—ಹೀಗೆ ಇಷ್ಟು ಮೂರು ಅಣೆಕಟ್ಟಿನ ಸ್ಥಾನಗಳು ಹೆಚ್ಚು ಪ್ರಯೋಜನಕಾರಿಯಾಗಿವೆ. ನೆಲ್ಲಿಬೀಡಿನ ಅಣೆಕಟ್ಟು ಜಗತ್ತಿನಲ್ಲಿ ಅತ್ಯುನ್ನತವಾದುದು ಆಗಬಹುದಾಗಿದೆ.* ಇಲ್ಲಿ ಭದ್ರಾನದಿಯು ಮಾತ್ರ ೨೫೦೦ ಅಡಿ ಎತ್ತರದಲ್ಲಿದ್ದು ಅಣೆಕಟ್ಟನ್ನು ೩೫೦೦ ಅಡಿ ಎತ್ತರದ ವರೆಗೂ ಎಂದರೆ ೧೦೦೦ ಅಡಿ ಎತ್ತರದ ವರೆಗೆ ಕಟ್ಟಲು ಸಾಧ್ಯವಿದೆ. [illegible] ಸಾಧ್ಯವಿದೆ. ಇಷ್ಟು ಎತ್ತರವಾಗಬೇಕಾದರೆ, ಅಣೆಕಟ್ಟು ೧೧–೧೨ ಮೈಲು ಉದ್ದವಾಗಬಹುದು. ಇದ್ದರೂ ಸುಮಾರು ೩೦ ಚದರ ಮೈಲಿ ವಿಸ್ತಾರವಾದ ಹಾಗು ೫೦೦–೬೦೦ ಅಡಿ ಆಳವಾದ ಜಲಾಶಯವೊಂದು ನಿರ್ಮಿತವಾಗಿ ಇದರ ನೀರು ಕಾರ್ಕಳದ ಪೂರ್ವಕ್ಕೆ ೧೫—೧೬ ಮೈಲಿನಲ್ಲಿರುವ [illegible] ಎಂಬ ಪಶ್ಚಿಮ ಘಟ್ಟದ ಗಿರಿಶಿಖರದ ಬಳಿ ಘಟ್ಟದ ನೆತ್ತಿಯನ್ನು ದಾಟಿ ಪಶ್ಚಿಮಕ್ಕೆ ಹರಿದು ದಕ್ಷಿಣ ಕನ್ನಡದ [illegible] (ಉದ್ಯಾವರ) ಹೊಳೆಯನ್ನು ಸೇರುವುದು. ಅಣೆಯನ್ನು ಕಡಿಮೆ ಎತ್ತರದಲ್ಲಿ ಕಟ್ಟುವುದಾದರೆ ಬಳಿಯಲ್ಲಿಯ ಅಡ್ಡಗೋಡೆಗಳನ್ನು ಕಟ್ಟಬೇಕಾಗುವುದು. ಅಥವಾ ನೆಲ್ಲಿಬೀಡು ಅಣೆಕಟ್ಟನ್ನು ೧.೨ ನೂರು ಅಡಿ ಎತ್ತರದಲ್ಲಿ [illegible] ಕಟ್ಟಬೇಕಾಗುವುದು. ಎಂದರೆ ನೀರು ಸಹಜವಾಗಿ ಪಶ್ಚಿಮ ಘಟ್ಟದ ನೆತ್ತಿಯಂಚಿಗೆ ತಾಗಿ ನಿಲ್ಲುವುದು. ಈ ಜಲ ಸಂಗ್ರಹದಿಂದ ಹೊಳೆಯನ್ನು ಬಳಿ 'ಟನೆಲ್'ಗಳನ್ನು ಕಟ್ಟಿ ದೊಡ್ಡ ದೊಡ್ಡ ಕೊಳವೆಗಳ ಮೂಲಕ, ಕನಿಷ್ಠ ೨೫೦೦ ಅಡಿ ಕೆಳಕ್ಕಿಳಿಸಬಹುದು. ಕಾರ್ಕಳದ ಪೂರ್ವಕ್ಕೆ ೧೦ ಮೈಲಿ ದೂರದಲ್ಲಿರುವ ಮಾಳ ಎಂಬ ಗ್ರಾಮದ ಬಳಿ ಟರ್ಬೈನುಗಳ 'ಪವರ್ ಹೌಸ'ನ್ನು ಇಡಬಹುದು. ಮಾಳದ ಸಮುದ್ರ ಮಟ್ಟದಿಂದ ೫೦೦ ಅಡಿ; ಘಟ್ಟದ ನೆತ್ತಿ ೩,೫೦೦ ಅಡಿ. ಅಡ್ಡಗೋಡೆ ಕಟ್ಟಿದಲ್ಲಿ ೩,೦೦೦ ಅಡಿ ಎತ್ತರವಾಗಬಹುದು. ಕಾರಣ ನೀರು ಬೀಳುವ ಎತ್ತರ ೨೫೦೦ ರಿಂದ ೩೦೦೦ ಅಡಿಗಳ ವರೆಗೂ ಆದೀತು. ಇದು ಜಗತ್ತಿನ ವಿದ್ಯುದ್ಯೋಜನೆಗಳಲ್ಲೆಲ್ಲಾ ಅತ್ಯಂತ ಎತ್ತರದ್ದು.

* ಸದ್ಯ ಜಗತ್ತಿನ ಅತ್ಯುನ್ನತ ಅಣೆಕಟ್ಟು "ಬೋಲ್ಡರ್ ಡ್ಯಾಮ್" ಎಂಬುದು ೭೨೬ ಅಡಿ ಎತ್ತರ. ಅಮೇರಿಕದ [illegible] ಯೋಜನೆ [illegible] ಮಾಡಿದ.

(೧೦ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೊನಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅಮೃತಸರದ ಕಾಂಗ್ರೆಸು ಅಧಿವೇಶನ

ಪ್ರದೇಶಗಳ ಬಗೆಗೆ ವಿಶೇಷ ಮಂತ್ರಾಲೋಚನೆ

ಎಲ್ಲರ ದೃಷ್ಟಿಯೂ ಈ ಸಾರ ಭಾರತದ ಉತ್ತರ ತುದಿಯಲ್ಲಿರುವ ಪಂಜಾಬಿನ ಸುವರ್ಣ ನಗರ ಅಮೃತಸರದ ಕಡೆಗೆ ಹರಿದಿದೆ. ಪ್ರಾಂತೀಯ ಭೇದ ಭಾವನೆಯನ್ನು ಅಳಿಸಿ, ರಾಷ್ಟ್ರೀಯ ದೃಷ್ಟಿಕೋಣವನ್ನು ಪ್ರಜೆಗಳಲ್ಲಿ ಮೂಡಿಸಲು ಆತುರವಾಗಿರುವ ಕಾಂಗ್ರೆಸು ಸಂಸ್ಥೆಯ ಚಾರಿತ್ರಿಕ ಅಧಿವೇಶನವು ಕಳೆದ ಸಲ ಮದ್ರಾಸಿನ ಆವಡಿಯಲ್ಲಿ ಸೇರಿದ್ದರೆ ಈ ಬಾರಿ ಪಂಜಾಬಿನ ಅಮೃತ ಸರದಲ್ಲಿ ನೆರೆಯುತ್ತಿದೆ. ಸಾಮಾನ್ಯ ಕಾರ್ಯಕ್ರಮವು, ಅಂದರೆ ಅಧ್ಯಕ್ಷ ಶ್ರೀ ಢೇಬರರನ್ನು ಮೆರವಣಿಗೆಯಿಂದೊಯ್ಯುವ ಕೆಲಸವು ಇದೇ ೭ನೇ ದಿನಾಂಕ ಜರುಗಿರುತ್ತದೆ. ೮ನೇ ದಿನಾಂಕ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸಭೆ ಸೇರಿಯ ತೊಡಗಿದೆ. ಇದೇ ಗುರುವಾರ ಮುಂಜಾನೆ "ಶಹೀದ್ ನಗರ್" (ಹುತಾತ್ಮ ನಗರ) ಎಂದು ಹೆಸರಿಡಲಾದ ಸಭಾಂಗಣದಲ್ಲಿ ಧ್ವಜಾರೋಹಣ ನಡೆದು ಲಾಲಾಲಜಪತ ರಾಯರ ಹೆಸರಿನಿಂದೊಪ್ಪುವ ಮಂಟಪದಲ್ಲಿ ವಿಷಯ ನಿಯಾಮಕ ಸಭೆ ಸೇರುತ್ತದೆ. ಕಾಂಗ್ರೆಸಿನ ಬಹಿರಂಗ ಅಧಿವೇಶನವು ೧೧ನೇ ದಿನಾಂಕ ಕೂಡುತ್ತದೆ. ಮರುದಿನ ಗಾಂಧೀಜಿಯ ಅಸ್ತಿಯನ್ನು ರಾಷ್ಟ್ರೀಯ ಸ್ಮಾರಕವಾಗಿ ಇಡುವ ವಿಶೇಷ ಸಮಾರಂಭವೊಂದು ನಡೆಯುತ್ತದೆ. ಆಗತ್ಯ ಬಿದ್ದರೆ ಕಾಂಗ್ರೆಸಿನ ಬಹಿರಂಗ ಸಭೆಯು ಸೋಮವಾರದ ವರೆಗೂ ಮುಂದರಿಯಬಹುದು. ಇದು ನಿಯೋಜಿತ ಕಾರ್ಯಕ್ರಮ ಪಟ್ಟಿಯ ಸಾಮಾನ್ಯ ವಿವರ.

ನೂತನಾಧ್ಯಾಯಕ್ಕೆ ನಾಂದಿ

ಮೂವತ್ತೇಳು ವರ್ಷಗಳ ಪೂರ್ವದಲ್ಲಿ ಕಾಂಗ್ರೆಸಿನ ರಾಷ್ಟ್ರೀಯ ಅಧಿವೇಶನವು ಅಮೃತಸರದಲ್ಲಿ ಸೇರಿದ ನೆನಪು ಇಂದಿನ ಹಳೆಯ ತಲೆಗಳಿಗೆ ಇದ್ದಿರಬಹುದಾದರೂ ನವಜವಾನರಿಗೆ ಆಗಿನ ವಾತಾವರಣದ ಸಹಜ ಕಲ್ಪನೆ ಇರಲಾರದು. ಅಮೃತಸರದ ಕಾಂಗ್ರೆಸು ಭಾರತದ ಚರಿತ್ರೆಯಲ್ಲಿ ನೂತನಾಧ್ಯಾಯಕ್ಕೆ ನಾಂದಿಯನ್ನು ಹೇಳಿತೆಂದು ಇತಿಹಾಸಕಾರರ ಅಭಿಪ್ರಾಯ. ಅಲ್ಲಿಯ ವರೆಗೆ ಕಾಂಗ್ರೆಸಿನಲ್ಲಿ ಮೆರೆಯುತ್ತಿದ್ದ ಹಳೆಯ ಹುಲಿಗಳ ಪ್ರಭಾವವನ್ನು ಹೊಸ ಪ್ರಕಾಶವೊಂದು ಗಾಂಧೀಜಿಯ ರೂಪದಲ್ಲಿ ಬಂದು ಹಿನ್ನೆಲೆಗೆ ಸರಿಸಿತೆಂದು ಇಂದು ನಾವು ಅತ್ಯಂತ ಸ್ಪಷ್ಟವಾಗಿ ಗುರುತಿಸಬಹುದು. ನೈತಿಕ ಮೂಲ್ಯಕ್ಕೆ ಕಾಂಗ್ರೆಸು ಇಂದು ಕೊಡುತ್ತಿರುವ ಮಹತ್ವ, ಪರಸ್ಪರ ಒಪ್ಪಂದಕ್ಕೆ ಬಂದು ಮತಭೇದವನ್ನು ನಿವಾರಿಸಲು ಕಾಂಗ್ರೆಸಿಗಿರುವ ಆತುರ— ಇದರ ಬೀಜ ರೂಪದ ಘಟನೆಗಳು ಅಮೃತಸರದಲ್ಲಿ ೧೯೧೯ನೇ ಇಸವಿಯ ಎಪ್ರೀಲಿನಲ್ಲಿ ನೆರೆದ ಕಾಂಗ್ರೆಸಿನ ಅಧಿವೇಶನದಲ್ಲಿ ನಡೆದಿದ್ದವು. ಜನತೆ ಅಂದು ಕಾಂಗ್ರೆಸನ್ನು ಎಷ್ಟು ಬೆಂಬಲಿಸುತ್ತಿತ್ತೆಂದರೆ ೩೬೦೦೦ ಸಾವಿರ ಜನರು ಈ ಅಧಿವೇಶನದಲ್ಲಿ ದೇಶದ ನಾನಾ ಮೂಲೆಗಳಿಂದ ಬಂದು ಭಾಗವಹಿಸಿದ್ದರು. ಕಾಂಗ್ರೆಸು ಎಷ್ಟು ಮಹತ್ವಾಕಾಂಕ್ಷೆಯಿಂದ ದುಡಿಯುತ್ತಿತ್ತೆಂದರೆ ಜನಜೀವನದ ಸರ್ವ ಮುಖಗಳನ್ನೂ ಸ್ಪರ್ಶಿಸುವ ಸುಮಾರು ಐವತ್ತು ಗೊತ್ತುವಳಿಗಳನ್ನು ಇಲ್ಲಿ ಸ್ವೀಕರಿಸಲಾಯಿತು.

ಗಾಂಧೀಜಿಯ ವಿಜಯ

ಕಾಂಗ್ರೆಸಿನಲ್ಲಿ ಇಂದು ಏಕಾಭಿಪ್ರಾಯವಿಲ್ಲ ಎಂದೆನ್ನಲಾಗುತ್ತದೆ. ಮಹತ್ವದ ವಿಷಯಗಳ ಮಟ್ಟಿಗೆ ಅಂದು ಸಹ ಕಾಂಗ್ರೆಸಿನ ಧುರೀಣರಲ್ಲಿ ಸಹಮತವಿರಲಿಲ್ಲ. ಉದಾಹರಣೆಗೆ ಮೊಂಟೆಗೊ—ಚೆಮ್ಸ್‌ಫೋರ್ಡ್ ಸುಧಾರಣೆಗಳ ವಿಷಯದಲ್ಲಿ ಕಾಂಗ್ರೆಸು ವಹಿಸಬೇಕಾದ ನಿಲುಮೆ ಏನಿರಬೇಕೆಂಬ ಬಗ್ಗೆ ಪರಸ್ಪರ ವಿರೋಧವಾದ ಪ್ರತಿಕ್ರಿಯೆಗಳನ್ನು ಕಾಂಗ್ರೆಸಿನ ಧುರೀಣರೆನಿಸಿದವರು ವ್ಯಕ್ತಪಡಿಸುತ್ತಿದ್ದರು. ಹಳೆಯ ಹುಲಿಗಳಾದ ದಿವಂಗತ ಚಿತ್ತರಂಜನದಾಸರು ಈ ಸುಧಾರಣೆಗಳನ್ನು ನಿರಾಕರಿಸಬೇಕೆನ್ನುತ್ತಿದ್ದರೆ ಆಗ ತಾನೆ ಕಾಂಗ್ರೆಸಿನಲ್ಲಿ ಪ್ರವೇಶಿಸಿ ತನ್ನ ಪ್ರಭಾವವನ್ನು ಬೀರತೊಡಗಿದ್ದ ಗಾಂಧೀಜಿಯವರು ಸಹಕಾರವನ್ನು ನೀಡಿ ಈ ಸುಧಾರಣೆಗಳ ಪ್ರಯೋಜನ ಪಡೆಯಬೇಕೆನ್ನುತ್ತಿದ್ದರು. ಈ ದ್ವಂದ್ವದ ನಡುವೆ ಸ್ವೀಕರಿಸಿದ ಗೊತ್ತುವಳಿಯು ಆಗತ್ಯ ಬಿದ್ದರೆ ಸುಧಾರಣೆಗಳನ್ನು ಆತಂಕಿಸುವ, ಸಾಧ್ಯವಾದರೆ ಸಹಕಾರವನ್ನು ನೀಡುವ ಅಧಿಕಾರ ಜನತೆಗಿದೆ ಎಂಬ ಮಧ್ಯ ಮಾರ್ಗವನ್ನು ಅವಲಂಬಿಸಿ ಎರಡೂ ಬಣಗಳನ್ನು ತೃಪ್ತಿ ಪಡಿಸಿತು. ಗಾಂಧೀಜಿಗೆ ನಿಜಕ್ಕೂ ಮನ್ನಣೆಯನ್ನು ದೊರಕಿಸಿ ಕೊಟ್ಟ ಒಂದು ಗೊತ್ತುವಳಿಯೂ ಇದೇ ಅಧಿವೇಶನದಲ್ಲಿ ಸ್ವೀಕಾರವಾಯಿತು. "ಜನ ಸಮುದಾಯವನ್ನು ಉದ್ರೇಕಿಸುವ ವಾತಾವರಣವು ಸೃಷ್ಟಿಸಲ್ಪಟ್ಟಿತ್ತೆಂಬುದನ್ನು ಮನಗಾಣಬಹುದಾಗಿದ್ದರೂ ಜನರು ಈ ಸಂದರ್ಭದಲ್ಲಿ ಅತಿರೇಕ ವರ್ತನೆಯನ್ನು ಪ್ರದರ್ಶಿಸಿ ಜೀವ ಹಾಗು ಸೊತ್ತುಗಳ ನಾಶಕ್ಕೆ ದಾರಿ ಮಾಡಿಕೊಟ್ಟದಕ್ಕೆ ಆಳವಾಗಿ ವಿಷಾದಿಸುವ" ಈ ನಿರ್ಣಯವನ್ನು ಕಾಂಗ್ರೆಸು ಅಂಗೀಕರಿಸಬೇಕೆಂದು ಗಾಂಧೀಜಿ ಹಠದಿಂದ ಪ್ರತಿಪಾದಿಸಿದರು. ಇದಕ್ಕೆ ಜಯ ಲಭಿಸಿತು. ಜನರು ಈ ಗೊತ್ತುವಳಿಯ ಅಂತರ್ಯವನ್ನು ಚೆನ್ನಾಗಿ ತಿಳಿದಿದ್ದರೋ ಇಲ್ಲವೊ—ಕಾಂಗ್ರೆಸಿನ ಮುಂದಿನ ಚಟುವಟಿಕೆಗಳ ಮೇಲೆ ಇದು ಬೀರಿದ ವರ್ಚಸ್ಸು ಮಾತ್ರ ಅಷ್ಟಿಷ್ಟಲ್ಲ.

ಮಹಾದುರಂತದ ನೆನಪು

ಹುತಾತ್ಮ ನಗರವೆಂದು ಅಮೃತಸರದಲ್ಲಿ ಈಗ ನೆರೆಯುವ ಕಾಂಗ್ರೆಸಿನ ಸಭಾಂಗಣಕ್ಕೆ ಹೆಸರಿಟ್ಟ ಕಾರ್ಯಕರ್ತರು ನಮಗೆ ೧೯೧೯ನೇ ಎಪ್ರೀಲಿನಲ್ಲಿ ನಡೆದ ಆ ಮಹಾ ದುರಂತದ ನೆನಪನ್ನು ತಂದು ಕೊಡುತ್ತಿದ್ದಾರೆ— ಅದೇ ಜಾಲಿಯನ್ ವಾಲಾ ಭಾಗ್! ಈ ಶಬ್ದೋಚ್ಚಾರದಿಂದಲೇ ರಾಷ್ಟ್ರೀಯ ಭಾವನೆಯು ಭಾರತೀಯರಲ್ಲಿ ಜಾಗೃತವಾಗುತ್ತದೆ! ೧೯೧೯ನೇ ಎಪ್ರೀಲಿನ ೧೩ನೇ ದಿನಾಂಕ— ವೈಶಾಖೋತ್ಸವದ ಪರ್ವದಿನ. ಹನ್ನೆರಡು ಬಿಘೆಯಷ್ಟು ಮಾತ್ರ ವಿಸ್ತಾರವುಳ್ಳ, ಸುತ್ತಲೂ ಮನೆಗಳ ಗೋಡೆಯಿಂದಾವೃತವಾದ, ಒಂದು ಗಾಡಿ ಸಹ ಪ್ರವೇಶಿಸಲಾರದಷ್ಟು ಚಿಕ್ಕದಾದ ಏಕ ಮಾತ್ರ ದ್ವಾರವುಳ್ಳ ಜಾಲಿಯನ್ ವಾಲಾಬಾಗ್ ಮೈದಾನಿನಲ್ಲಿ ಸ್ತ್ರೀಯರೂ ಪುರುಷರೂ ಮಕ್ಕಳೂ ಸೇರಿ ಸುಮಾರು ಇಪ್ಪತ್ತು ಸಾವಿರ ಮಂದಿ ನೆರೆದಿದ್ದರು. ಆಗ ಅಮೃತಸರ ವಿಭಾಗದ ಸೈನ್ಯಾಧಿಕಾರಿ ಜನರಲ್ ಡ್ವಾಯರ್ ತನ್ನ ಪರಿವಾರದೊಡನೆ ಅಲ್ಲಿಗೆ ಬಂದು ದ್ವಾರದಲ್ಲಿ ನಿಂತು ಒಂದೇ ಸಮನೆ ಗುಂಡು ಹಾರಿಸಿದನು—ಜನ ಓಡುವುದೆಲ್ಲಿಗೆ? ದ್ವಾರದಿಂದಲೇ ಗುಂಡುಗಳನ್ನು ಹಾರಿಸಲಾಗುತ್ತದೆ; ೪೦೦ ಮಂದಿ ಅಲ್ಲಿಯೇ ಸತ್ತರು! ಎರಡು ಸಾವಿರ ಮಂದಿ ಗಾಯಗೊಂಡರು. ನೂರೈವತ್ತು ದೇಹಗಳು ಮೈದಾನಿನ ನಡುವಿದ್ದ ಬಾವಿಯಲ್ಲಿ ಬಿದ್ದವು. ಈಗಲೂ ಗುಂಡುಗಳಿಂದಾಗಿರುವ ಗಾಯದ ಕಲೆಗಳನ್ನು ಮೈದಾನನ್ನು ಆವರಿಸಿರುವ ಮನೆಗಳ ಗೋಡೆಯಲ್ಲಿ ನಾವು ಕಾಣಬಹುದು. ತಾನು ಜನರಿಗೆ ಚದರಲು ಮೂರು ನಿಮಿಷಗಳ ಅವಕಾಶ ಕೊಟ್ಟಿದ್ದೇನೆಂದು ಸೇನಾಧಿಕಾರಿಯು ಗಳಹಿಕೊಂಡರೂ ಇಪ್ಪತ್ತು ಸಾವಿರ ಮಂದಿಯು ಮೂರೇ ನಿಮಿಷಗಳಲ್ಲಿ ಆ ಇಕ್ಕಟ್ಟಾದ ದ್ವಾರದಿಂದ ಚೆದರುವುದು ಸಾಧ್ಯವಿಲ್ಲವೆಂಬುದನ್ನು ಚಿಕ್ಕ ಮಗುವೂ ತೀರ್ಮಾನಿಸಬಲ್ಲುದು. ಗಾಯಗೊಂಡವರನ್ನು ಉಪಚರಿಸದೆ ಇಡೀ ರಾತ್ರಿ ಅವರನ್ನು ನರಳುತ್ತಾ ಬೀಳಿಸಿದ ವರ್ತನೆಯೂ ಗುಂಡು ಹಾರಿಸಿದಷ್ಟೇ ಘೋರವಾದ ಪೈಶಾಚಿಕ ಕೃತ್ಯ.

ಸುವರ್ಣ ಮಂದಿರ

ನಿಷ್ಕಾರಣವಾಗಿ ಕೊಲೆಗೊಂಡ ಈ ಜೀವಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಸಮಾರಂಭವಾಗಿ ಗಾಂಧೀಜಿಯ ಅಸ್ತಿಯ ಸ್ಮಾರಕೋತ್ಸವವು ಈ ಸಲ ನಡೆಯಲಿದೆ. ಇದೇ ಸಮಯದಲ್ಲಿ ರಾಜ್ಯ ಶಾಸನದ ಹೊಣೆ ಹೊತ್ತಿರುವ ಕಾಂ

Estd. 1919 VISIT Phone No. 374

K. R. K. SHET DIAMOND MART

JEWELLERS & DIAMOND MERCHANTS

OPPOSIT GOVERNMENT COLLEGE, MANGALORE, S. K.

Prop: K. K. R. SHET. *Tel. Add:* BLUEYAGAR.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, **UDIDI,** S. KANARA.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16–18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆ'ಗಳಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**

628 "ಸಂತಾನ ಸಿಂದೂರ ಸದನ", (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ಗ್ರೆಸು ಜನತೆಗೆ ಹಲವು ಮಹತ್ವದ ವಿಷಯಗಳ ಕುರಿತು ಮಾರ್ಗದರ್ಶನವನ್ನು ಮಾಡಲಿದೆ. ಇವುಗಳಲ್ಲಿ ರಾಜ್ಯಗಳ ಪುನಾರಚನೆಯ ಪ್ರಶ್ನೆಗೆ ಈ ಸಲ ಪ್ರಥಮ ಪ್ರಾಶಸ್ತ್ಯ ಸಲ್ಲುತ್ತದೆ. ಪಂಜಾಬಿಗಳ ಗುಂಪೊಂದು ಅಕಾಲಿ ದಳದ ಧುರೀಣರ ನೇತೃತ್ವದಲ್ಲಿ ಮುಂದಿಟ್ಟಿರುವ ಬೇಡಿಕೆಯು ೧೭ನೇ ದಿನಾಂಕ ಹೊಸ ದಿಹಲಿಯಲ್ಲಿ ಪುನಃ ಚರ್ಚಿಸಲ್ಪಡುವುದಾದರೂ ಅದಕ್ಕೆ ಯೋಗ್ಯ ಹಿನ್ನೆಲೆಯನ್ನು ಅಮೃತಸರದ ಅಧಿವೇಶನ ಒದಗಿಸಬಹುದು. ತಮ್ಮ ಪವಿತ್ರ "ಸುವರ್ಣ ಮಂದಿರ" ವಿರುವ ನಗರದಲ್ಲಿ ಸೇರಿದ ಕಾಂಗ್ರೆಸು ನೀಡಿದ ಮಾರ್ಗದರ್ಶನವನ್ನು ಸಿಕ್ಖರು ಒಪ್ಪಿಕೊಳ್ಳದೆ ಇರಲಾರರೆಂದು ಭಾವಿಸೋಣ. ಅಮೃತಸರಕ್ಕೆ ಹೋದ ಕಾಂಗ್ರೆಸಿಗರಾದರೂ ಸಿಕ್ಖರ ಈ ಗುರುದ್ವಾರಕ್ಕೆ ಸಂದರ್ಶನವನ್ನೀಯದೆ ಮರಳಲಾರರೆಂದು ನಂಬೋಣ! ಏಕೆಂದರೆ ಈ ಮಂದಿರವು ಭಾರತದ ಆಕರ್ಷಣೆಗಳಲ್ಲಿ ಒಂದಾಗಿದೆ. ಕೆಳಭಾಗವು ಚಂದ್ರಕಾಂತ ಶಿಲೆಯಿಂದಲೂ ಮೇಲ್ಭಾಗವು ಚಿನ್ನದ ಲೇಪದಿಂದ ಕೂಡಿದ ತಾಮ್ರದಿಂದಲೂ ಕಂಗೊಳಿಸುವ ಈ ಮಂದಿರವು ಸುತ್ತಲೂ ಜಲರಾಶಿಯಿಂದಾವೃತವಾಗಿದೆ. ಸಿಕ್ಖರ ಪವಿತ್ರ ಗ್ರಂಥವಾದ "ಗುರು ಗ್ರಂಥ ಸಾಹಿಬ" ವನ್ನು ಮಂದಿರದ ಕೆಳ ಅಂತಸ್ತಿನಲ್ಲಿಡಲಾಗಿದೆ. ದೊಡ್ಡ ಗುಮ್ಮಟವಿಂದ ಕೂಡಿದ ಮೂರಂತಸ್ತಿನ ಈ ಮಂದಿರವನ್ನು ಯಾರೂ ಬೇಕಾದರೂ ಪ್ರವೇಶಿಸಬಹುದು. ಆದರೆ ಕೆಲವೊಂದು ನಿಯಮಗಳನ್ನು ಪಾಲಿಸುವುದು ಮಾತ್ರ ಅವಶ್ಯಕ. ಸಿಕ್ಖರು ನಿಯಮ ಪಾಲನೆಗೆ ಹೆಚ್ಚಿನ ಗಮನ ಕೊಡುತ್ತಾರೆ. ಅವರ ಪೋಷಾಕನ್ನು ನೋಡಿದರೆ ಇದು ವೇದ್ಯವಾಗುತ್ತದೆ. ಸುವರ್ಣ ಮಂದಿರಕ್ಕೆ ೫೦ ಗಜದಷ್ಟು ಸಮೀಪದಲ್ಲಿಯೇ ಅಕಾಲ್ ತಖ್ತ್ (ಅಮರ ಸಿಂಹಾಸನ) ಎಂಬ ಗದ್ದುಗೆ ಇದ್ದು ಇಲ್ಲಿ ಎಲ್ಲ ಚರ್ಚೆಗಳೂ ನಡೆದು ಸಿಕ್ಖರ ಸಾಮಾಜಿಕ ಹಾಗು ಧಾರ್ಮಿಕ ವಿವಾದಗಳು ತೀರ್ಮಾನ ಹೊಂದುತ್ತವೆ.

ಕನಸಿನ ಸುಂದರ ಭಾರತ

ಸುವರ್ಣ ಮಂದಿರದ ಒಳ ಹೊರಗಿನ ಶೋಭೆ, ಅಲ್ಲಿಯ ಚಿತ್ರ ಕಲೆಯ ಮೋಹಕತೆಯಿಂದ ಮೈ ಮರೆಯುವ ವ್ಯಕ್ತಿಗಳು ಭಾರತ ದೇಶವೂ ಅಷ್ಟೇ ಚೆಲುವಾಗಿ ಕಂಗೊಳಿಸಿದರೆ ಸ್ವರ್ಗವೇ ಭೂಮಿಗಿಳಿಯಿತೆಂದು ಹೇಳಲಾರರೆ? ರಾಷ್ಟ್ರೀಯ ಕಾಂಗ್ರೆಸು ಈ ದಿಸೆಯಲ್ಲಿ ಹೆಜ್ಜೆಯಿಡುವ ಸಂಕಲ್ಪವನ್ನು ಎಂದೋ ಮಾಡಿದೆ. ಜಾಲಿಯಾನ್‌ವಾಲಾ ಬಾಗ್ ದುರಂತದ ಬೆನ್ನಿಗೆ ಅಮೃತಸರದಲ್ಲಿ ನೆರೆದ ಮೂವತ್ತೈದನೇ ಕಾಂಗ್ರೆಸು ಅಧಿವೇಶನದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ದಿವಂಗತ ಪಂಡಿತ ಮೋತಿಲಾಲ ನೆಹರುಗಳು ಭಾರತದ ಭವ್ಯ ಚಿತ್ರ ಹೀಗಿರಬೇಕೆಂದು ನುಡಿದಿದ್ದರು- "ಪ್ರತಿಯೊಬ್ಬನೂ ಸ್ವತಂತ್ರನಿರಬೇಕು; ಮತ್ತು ಆತನಿಗೆ ಅಭಿವೃದ್ಧಿಯ ಪೂರ್ಣಾವಕಾಶ ದೊರಕಬೇಕು. ಮಹಿಳೆಯರಿಗೆ ಬಂಧನವಿರಕೂಡದು; ಜಾತಿ ಭೇದವು ಅಳಿಸಿ ಹೋಗಬೇಕು. ಬಂಡವಾಳಶಾಹಿಗಳೂ ಭೂಮಾಲಿಕರೂ ಮಜೂರರ ಮತ್ತು ಸಾಗುವಳಿದಾರರ ಶೋಷಣೆ ನಡೆಸುವುದಕ್ಕೆ ಅವಕಾಶವಿರಬಾರದು; ಬಡತನವು ಗತ ಕಾಲದ ವಿಷಯವಾಗಬೇಕು." ಸುದೈವದಿಂದ ಇಂದು ಮೋತಿಲಾಲ ನೆಹರುಗಳ ಸುಪುತ್ರ ಜವಾಹರಲಾಲ ನೆಹರುಗಳು ತಂದೆಯ ಮನಸ್ಸಿನಲ್ಲಿದ್ದ ಭಾವನೆಗಳಿಗೆ ರಾಷ್ಟ್ರೀಯ ಕಾಂಗ್ರೆಸಿನ ವರಿಷ್ಠ ಸ್ಥಾನದಲ್ಲಿದ್ದುಕೊಂಡು ರೂಪವನ್ನು ಕೊಡುತ್ತಿದ್ದಾರೆ. ಭಾರತವು ಸ್ವಾತಂತ್ರ್ಯ ಸಂಪಾದಿಸಿ, ಅಭಿವೃದ್ಧಿಯ ಪಥದಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯ ಹಂತವನ್ನು ಮುಗಿಸಿಕೊಂಡು ಈಗೀಗ ಎರಡನೇ ಪಂಚವಾರ್ಷಿಕ ಯೋಜನೆಯ ಹೊಸ್ತಿಲಿನಲ್ಲಿ ಕಾಲಿಟ್ಟಿದೆ. ಕಾಂಗ್ರೆಸು ಸಂಸ್ಥೆಯು ಮಹಾ ಚುನಾವಣೆಗಳಲ್ಲಿ ಜನ ಪ್ರಿಯತೆಯನ್ನು ಉಳಿಸಿಕೊಂಡು ಅನೇಕ ಸುಧಾರಣೆಗಳನ್ನು ಮಾಡುತ್ತಿರುವ ಸರಕಾರದ ದಿಗ್ದರ್ಶನ ಭಾರವನ್ನು ಸಂತೋಷದಿಂದ ಹೊತ್ತುಕೊಂಡಿದೆ. ಮೋತಿಲಾಲರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪ್ರಸ್ತಾಪಿಸಿದ ಮೇಲಿನ ಪ್ರತಿಯೊಂದೂ ವಿಷಯಗಳಲ್ಲಿ ಗಣನೀಯ ಪ್ರಗತಿಯನ್ನು ಭಾರತವು ಕಾಂಗ್ರೆಸಿನ ಹಿರಿತನದಲ್ಲಿ ಸ್ವಾತಂತ್ರ್ಯೋತ್ತರದ ಅಲ್ಪಾವಧಿಯಲ್ಲಿಯೇ ಸಾಧಿಸಿರುತ್ತದೆ. ಆವಡಿಯ ಕಾಂಗ್ರೆಸಿನಲ್ಲಿ ಕಳೆದ ವರ್ಷ ಸ್ವೀಕರಿಸಿದ ಗೊತ್ತುವಳಿಯಂತೂ ಭಾರತದ ಪ್ರಗತಿಯ ಸ್ಪಷ್ಟ ಚಿತ್ರವನ್ನು ಸಂದೇಹ ಪೀಡಿತರಂತೆ ತೋರಿಸಿಕೊಳ್ಳುತ್ತಿದ್ದ ಜನರ ಮುಂದೆ ಇಟ್ಟಿರುತ್ತವೆ. ಈ ಹಿನ್ನೆಲೆಯಲ್ಲಿ ಅಮೃತಸರದ ಈ ಸಲದ ಅಧಿವೇಶನ ದೇಶಕ್ಕೆ ಹೇಗೆ ಮಾರ್ಗದರ್ಶನ ನಡೆಸಬಹುದು?

ಪ್ರದೇಶಗಳ ಕಲ್ಪನೆ

ಮೊಂಟೆಗೊ—ಚೆಮ್ಸ್ ಫೋರ್ಡ್ ರಾಜಕೀಯ ಸುಧಾರಣೆಯು ಹಿಂದಿನ ಅಮೃತಸರ ಅಧಿವೇಶನದಲ್ಲಿ ಚರ್ಚೆಯ ಮುಖ್ಯ ವಿಷಯವಾಗಿದ್ದರೆ ಇಂದು ರಾಜ್ಯಗಳ ಪುನಾರಚನೆಯ ಸೂಚನೆಗಳು ಈ ಸ್ಥಾನವನ್ನು ಆಕ್ರಮಿಸುತ್ತವೆ. ಕಾಂಗ್ರೆಸಿನ ಮುಂದೆ ಬಂಗಾಳ ಮತ್ತು ಬಿಹಾರಗಳ ಮುಖ್ಯ ಮಂತ್ರಿಗಳ ಸಂಯುಕ್ತ ಪ್ರಕಟಣೆಯಿಂದುಂಟಾದ ಹೊಸ ವಾತಾವರಣವಿದೆ. ಪ್ರದೇಶಗಳಾಗಿ ಭಾರತದ ಭೂಪಟವನ್ನು ಹೊಸತಾಗಿ ಬರೆಯುವ ಈ ಸೂಚನೆಗಳ ಮೇಲೆ ಮೇಲ್ಮಟ್ಟದ ಚರ್ಚೆ ನಡೆಯುವುದೆಂದು ನಿರೀಕ್ಷಿಸುವುದು ತಪ್ಪಾಗಲಾರದು. ಈಗಾಗಲೇ ಹಲವು ಮುಖ್ಯ ಮಂತ್ರಿಗಳು ಪ್ರಾಸ್ತಾವಿಕ ಘಟ್ಟದಲ್ಲಿ ಪ್ರದೇಶಗಳ ಸೂಚನೆಯನ್ನು ಪರಾಮರ್ಶಿಸಿರುತ್ತಾರೆ; ಪರಸ್ಪರ ಭೇಟಿಯಾಗಿ ಈ ಸೂಚನೆಯ ಸಾಧಕ ಬಾಧಕಾಂಶಗಳ ತುಲನೆ ಮಾಡಿ ನೋಡಲೂ ಮುಂದಾಗಿದ್ದಾರೆ ಬೆಂಗಳೂರಿನಲ್ಲಿ ನೆಹರುಗಳ ಹಿರಿತನದಲ್ಲಿ ಮದ್ರಾಸು, ತಿರು-ಕೊಚ್ಚಿ ಮತ್ತು ಮೈಸೂರು ರಾಜ್ಯಗಳ ಮುಖ್ಯ ಮಂತ್ರಿಗಳು ದಕ್ಷಿಣ ಪ್ರದೇಶದ ಕುರಿತು ಮಾತುಕತೆ ನಡೆಸಿದ್ದಾರೆ. ಮುಂಬಯಿಯ ಮುಖ್ಯ ಮಂತ್ರಿಗಳು ಸೌರಾಷ್ಟ್ರದ ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನು ಪಡೆದುಕೊಂಡಿರುವರಲ್ಲದೆ, ರಾಜಸ್ಥಾನದ ಮುಖ್ಯ ಮಂತ್ರಿಗಳನ್ನೂ ಭೇಟಿಯಾಗಿ ಪಶ್ಚಿಮ ಪ್ರದೇಶದ ಸೂಚನೆಗೆ ಎಷ್ಟರ ಮಟ್ಟಿನ ಅನುಕೂಲ ಪ್ರತಿಕ್ರಿಯೆ ಇದೆ ಎಂದು ಶೋಧಿಸಿ ನೋಡುತಿದ್ದಾರೆ ಬಂಗಾಳದ ಮುಖ್ಯ ಮಂತ್ರಿಗಳು ಬಿಹಾರದೊಡನೆ ಆ ರಾಜ್ಯದ ಸೇರ್ಪಡೆಯು ಇತಿಹಾಸದ ಪುನರಾವರ್ತನೆ ಎಂದು ಕರೆದಿದ್ದು ಇದನ್ನು ಪೂರ್ಣ ಸತ್ಯವಾಗಿ ಮಾಡಲು ಒಡಿಸಾ ಮತ್ತು ಆಸ್ಸಾಮುಗಳೂ ಈ ಪೂರ್ವ ಪ್ರದೇಶದಲ್ಲಿ ಸೇರಿ ಹೋಗಲಿ ಎಂದು ಆಮಂತ್ರಿಸಿದ್ದಾರೆ. ಇದನ್ನೆಲ್ಲ ನೋಡಿದರೆ ಪ್ರದೇಶಗಳ ರಚನೆಯ ಕುರಿತು ತೀವ್ರ ಪ್ರಯತ್ನವನ್ನು ನೆಹರುಗಳು ಬಹಳವಾಗಿ ಮೆಚ್ಚಿಕೊಂಡಿರುವಂತೆ ಕಾಣುತ್ತದೆ. ಎಲ್ಲ ಮುಖ್ಯ ಮಂತ್ರಿಗಳೂ ಅಮೃತಸರದ ಅಧಿವೇಶನ ಕಾಲದಲ್ಲಿ ಒಟ್ಟಿಗೆ ಸೇರುವುದರಿಂದ ಮತ್ತು ಕಾಂಗ್ರೆಸಿನ ವರಿಷ್ಠರೂ ಆ ಸಮಯದಲ್ಲಿ ಬರುವುದರಿಂದ ಸಾಮಾನ್ಯ ಪ್ರತಿಕ್ರಿಯೆಗಳನ್ನು ಅಖಿಲ ಭಾರತ ದೃಷ್ಟಿ ಕೋಣದಿಂದ ಅಂದಾಜು ಮಾಡಲು ಸಾಧ್ಯವೆನಿಸುತ್ತದೆ.

ಸಾಮಾನ್ಯ ಪ್ರತಿಕ್ರಿಯೆ

ಹೀಗಿದ್ದರೂ ಕಾಂಗ್ರೆಸು ಸಂಸ್ಥೆಯು ಪ್ರದೇಶಗಳ ರಚನೆಯೇ ಯೋಗ್ಯವೆಂದು ನಿಸ್ಸಂದಿಗ್ಧ ಮಾತುಗಳಲ್ಲಿ ಹೇಳುವುದು ಅಸಂಭವ. ಏಕೆಂದರೆ ಕಾಂಗ್ರೆಸಿನಲ್ಲಿ ಎಲ್ಲರೂ ಪ್ರದೇಶಗಳ ರಚನೆಯನ್ನು ತಾರಕ ಮಾರ್ಗವೆಂದು ಒಪ್ಪಿರುವುದಿಲ್ಲ. ಉದಾಹರಣೆಗೆ ರಾಜಸ್ಥಾನದ ಪ್ರದೇಶ ಕಾಂಗ್ರೆಸು ಪಶ್ಚಿಮ ಪ್ರದೇಶದ ನೆಪದಿಂದ ರಾಜಸ್ಥಾನವು ಮುಂಬಯಿ ಮತ್ತು ಸೌರಾಷ್ಟ್ರಗಳೊಡನೆ ವಿಲಯನ ಹೊಂದಬೇಕಾಗಿ ಬರುವ ಸೂಚನೆಗೆ ವಿರೋಧವನ್ನು ವ್ಯಕ್ತಪಡಿಸಿದೆ. ಕಳೆದ ಏಳೆಂಟು ವರ್ಷಗಳಲ್ಲಿ ವಿಲೀನೀಕರಣದ ಆಘಾತಗಳಿಗೆಗುರಿಯಾಗಿರುವ ರಾಜಸ್ಥಾನದಂಥ ವಿಶಾಲ ಭೂಭಾಗಕ್ಕೆ ಪಶ್ಚಿಮ ಪ್ರದೇಶದಲ್ಲಿ ಸೇರುವುದರಿಂದ ಲಾಭವಾಗಲಾರದು ಎಂದದು ಹೇಳಿದೆ. ಮೈಸೂರಿನ ಮುಖ್ಯ ಮಂತ್ರಿಗಳಾದರೂ ಪ್ರದೇಶಗಳ ರಚನೆಯೇ ಯೋಗ್ಯ ಅಥವಾ ಅದು ತೀರ ಅಯೋಗ್ಯ ಎಂದು ಕಟ್ಟುನಿಟ್ಟಾಗಿ ಈಗಲೇ ಹೇಳುವ ಸ್ಥಿತಿಯಲ್ಲಿ ತಾನಿಲ್ಲ ಎಂದಿದ್ದಾರೆ. ಕರ್ನಾಟಕದ ಹಲವೆಡೆಯ ಧುರೀಣರನ್ನು ಕಂಡು ಮಾತನಾಡಿದ ಬಳಿಕವೇ ಈ ಕುರಿತು ಒಂದು ತೀರ್ಮಾನಕ್ಕೆ ಬರಲಾದೀತೆಂದು ಅವರು ಹೇಳಿದ್ದಾರೆ. ಮೈಸೂರಿನ ಹೊರಗಡೆ ಕನ್ನಡಿಗರು ದಕ್ಷಿಣ ಪ್ರದೇಶದಲ್ಲಿ ಸೇರಿ ಹೋಗುವುದಕ್ಕೆ ಏನೇನೂ ಉತ್ಸುಕತೆಯನ್ನು ತೋರಿಸುತ್ತಿಲ್ಲ. ಆಂಧ್ರದೊಡನೆ ಸೇರುವ ಸೂಚನೆಯೂ ಜನರಿಗೆ ರುಚಿಸಿಲ್ಲ. ಈಗ ಕರ್ನಾಟಕವು ತೀರ ಹರಿಹಂಚಾಗಿ ಹೋಗಿರುವ

(೬ನೇ ಪುಟ ನೋಡಿರಿ)

R. O. C. No. B. 3/ 601/56.

UDIPI MUNICIPALITY NOTICE.

Is hereby given that the right of collecting fees in the Municipal markets, Cart Stands, Jutka Stand, Mutton Stalls and Slaughter House for the year 1956—57 will be sold by public auction by the Municipal Commissioner, Udipi, on Friday the 17th February, 1956 at 3—0 P.M. in the Municipal Office, Udipi. The sale is subject to the rules in force. Further particulars or information may be obtained from the Municipal Office, Udipi, on all working days during office hours.

V. U. K. Nambissan,
Commissioner,
Udipi Municipality, Udipi.

Municipal Office, Udipi,
Dt. 3—2—1956.

R. O. C. No. B 3/ 601/56.

ಉಡುಪಿ ಮುನಿಸಿಪಾಲಿಟಿ. ನೋಟೀಸು.

ಈ ಮೂಲಕ ತಿಳಿಯಪಡಿಸುವುದೇನೆಂದರೆ:- 1956 57ನೇ ವರ್ಷದಲ್ಲಿ ಉಡುಪಿ ಮುನಿಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೆಟುಗಳು, ಗಾಡಿ ಚಾಕ, ಜಟ್ಕಾ ಚಾಕ, ಮಟನ್ ಸ್ಟಾಲ್ ಮತ್ತು ವಧಾ ಗೃಹದಲ್ಲಿ ವರಿ ವಸೂಲು ಮಾಡುವ ಹಕ್ಕನ್ನು ಮುನಿಸಿಪಲ್ ಕಮಿಷನರವರು ತಾ. 17-2-1956 ನೇ ಶುಕ್ರವಾರ ಅಪರಾಹ್ನ ಘಂಟೆ 3ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಆ ಕುರಿತು ಜಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

V. U. K. Nambissan,
ಕಮಿಷನರ್,
ಉಡುಪಿ ಮುನಿಸಿಪಾಲಿಟಿ, ಉಡುಪಿ.

ಮುನಿಸಿಪಲ್ ಆಫೀಸು ಉಡುಪಿ.
ತಾ. 3—2—1956.



Drama Materials at cheap rates

Drama Hair, Topans, Jari Boarders, Gangawans, Jari Cloths, Jari Crowns, Swords, Turbans, & Gondas, Hair Net, Pearl Cuda, Make up Goods and other kind of Drama Meterials, at cheap and attractive rates.

Write to:

Dharamshi Mulji Dresswalla,
132, C, Bhagat Wadi Buleshwar Road BOMBAY 2.

NAVAYUGA

Popular Kannada Weekly

Founder:—

Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೫	ಉಡುಪಿ ೯-೨-'೫೬	ಸಂಚಿಕೆ ೨೩

ತಪ್ಪಿಗೆ ಪ್ರಾಯಶ್ಚಿತ್ತ

ಜೀವನದಾನಿಯಾದ ಕಾರಣದಿಂದ ಪ್ರತ್ಯಕ್ಷ ರಾಜಕೀಯದಲ್ಲಿ ಚಟುವಟಿಕೆಯ ಪಾತ್ರವನ್ನು ವಹಿಸಿಕೊಳ್ಳದಿದ್ದರೂ ಪ್ರಜಾಸಮಾಜವಾದಿ ಪಕ್ಷದ ಸದಸ್ಯನಾಗಿ ಇನ್ನೂ ಉಳಿದಿರುವುದರಿಂದ ಶ್ರೀ ಜಯಪ್ರಕಾಶ ನಾರಾಯಣರು ಕೆಲವೊಮ್ಮೆ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಿ ಹೇಳಿಕೆ ಹೊರಡಿಸುವುದುಂಟು. ಕಳೆದ ವಾರ ಅವರಿಗೆ ರಾಜ್ಯಗಳ ಪುನಾರಚನೆಯ ವಿಷಯವು ಸುದೀರ್ಘ ಹೇಳಿಕೆಯನ್ನು ಹೊರಡಿಸಲು ವಸ್ತುವಾಯಿತು. ನಮ್ಮ ದೇಶದಲ್ಲಿ ಪ್ರಧಾನಿ ನೆಹರುಗಳ ಬಳಿಕ ಜನಪ್ರಿಯತೆ ಮತ್ತು ಬುದ್ಧಿವಂತಿಕೆಗಳೆರಡೂ ಸಮರಸಗೊಂಡ ದೃಷ್ಟಿಯಿಂದ ಶ್ರೀ "ಜೆ. ಪಿ." ಅಗ್ರಸ್ಥಾನವನ್ನು ಪಡೆಯುತ್ತಾರೆಂದು ಸಾಮಾನ್ಯ ಅಭಿಪ್ರಾಯವಿದೆ. ಅವರು ವಿನೋಬಾಜಿಯ ಕಡೆಗೆ ವಿಶೇಷ ಆಕರ್ಷಣೆಗೊಂಡು ಜೀವನದಾನಿಯಾಗಿ ನಡೆದುದರಿಂದ ದೇಶಕ್ಕೆ ರಾಜಕೀಯ ಕ್ಷೇತ್ರದಲ್ಲಿ ಯೋಗ್ಯ ಮಾರ್ಗದರ್ಶನವು ಸಿಗಬೇಕಾದಷ್ಟು ಹೆಚ್ಚು ಪ್ರಮಾಣದಲ್ಲಿ ಸಿಗುತ್ತಿಲ್ಲವಾಗಿ ಬಂದಿರುವುದು ನಿಜಕ್ಕೂ ವಿಷಾದಕರ. ಏಕೆಂದರೆ ತೀರ ಕಟುವಾದ ಸತ್ಯ ಸಂಗತಿಗಳನ್ನು ಹೇಳಿ, ತಪ್ಪು ಎಲ್ಲಿದೆ ಎಂದು ತೋರಿಸಿ ಕೊಡುವುದರಲ್ಲಿ ಅವರು ನಿಸ್ಸೀಮರು:— ಈ ಮಾತಿಗೆ ಉದಾಹರಣೆಯಾಗಿ ಅವರು ಭಾಷಾನುಗುಣವಾಗಿಯೇ ಪ್ರಾಂತ್ಯಗಳನ್ನು ಪುನಾರಚಿಸಬೇಕೆಂದು ಹೇಳಿರುವುದು ನಿದರ್ಶನ. "ಫಜಲಾಲಿ ಆಯೋಗವು ಪ್ರಶಂಸನೀಯವಾದಷ್ಟು ಘನತರವಾದ ಕೆಲಸ ಮಾಡಿರಬಹುದು— ಆದರೆ ಅದು ಯಾವುದೇ ನಿರ್ದಿಷ್ಟ ಸೂತ್ರಗಳನ್ನು ಅನುಸರಿಸಿಲ್ಲ; ಪರಿಣಾಮವಾಗಿ ಪರಸ್ಪರ ವಿರುದ್ಧವೆನಿಸುವ ಮಾರ್ಗಗಳನ್ನೇ ಅದು ಬೇರೆ ಬೇರೆ ಶಿಫಾರಸುಗಳ ವಿಷಯದಲ್ಲಿ ಹಿಡಿದಿದೆ" ಎಂದು ಶ್ರೀ ಜಯಪ್ರಕಾಶರಾಡಿದ ಮಾತು ತೀರ ಸತ್ಯ. "ಇಡೀ ಪ್ರಶ್ನೆಯನ್ನು ಅರೆ ಮನಸ್ಸಿನಿಂದ ವಿಚಾರಿಸಿದ ಹಾಗಿದೆ; ಯಾವುದೇ ಆಂತರಿಕ ವಿಶ್ವಾಸದಿಂದ ಪ್ರೇರಣೆಗೊಂಡಂತಿಲ್ಲ. ಗೊಂದಲಮಯ ವಾತಾವರಣವೇರ್ಪಡಲು ಇದೇ ಕಾರಣ" ಎಂಬ ಅವರ ಅಭಿಪ್ರಾಯವೂ ನ್ಯಾಯವಾದುದೆಂದು ನಮಗೆನಿಸುತ್ತದೆ. ರಾಜ್ಯಗಳ ಪುನಾರಚನೆಯಲ್ಲಿ ಭಾಷೆಗೆ ಮಹತ್ವದ ಸ್ಥಾನ ಸಲ್ಲಬೇಕು ಎಂಬ ಅವರ ನಿಲುವೆಯನ್ನೂ ನಾವು ಅನುಮೋದಿಸುತ್ತೇವೆ. ಶ್ರೀ ಜೆ. ಪಿ. ತಿಳಿಸಿರುವಂತೆ, ಭಾರತವು ತನ್ನ ಸಹಜ ಸ್ವರೂಪದಲ್ಲಿ ಕೆಲವು ಪ್ರಮುಖ ಭಾಷಾವಲಯವಾಗಿ ವಿಂಗಡವಾಗಿದೆ; ಇಡಿ ಭಾರತದ ದೃಷ್ಟಿಯಲ್ಲಿ ಇಲ್ಲಿಯ ಜನರು ಕೇಂದ್ರ ಸರಕಾರಕ್ಕೆ ಮತ್ತು ರಾಷ್ಟ್ರಕ್ಕೆ ವಿಧೇಯರೂ ನಿಷ್ಠರೂ ಆಗಿ ಎಂದಿನಿಂದಲೂ ಇದ್ದಾರೆ. ಆದರೆ ತಮ್ಮದೇ ಆದ ಒಲವುಗಳೂ ಕೆಲವು ಅವರಿಗಿವೆ. ಇವುಗಳಿಗೆ ಮನ್ನಣೆಯನ್ನು ಕೊಡುವುದೆಂದರೆ ಪ್ರತ್ಯೇಕತೆಯ ಭಾವನೆಯನ್ನು ಪ್ರೋತ್ಸಾಹಿಸಿದಂತೆ ಎಂದೆನ್ನುವುದು ಸರಿಯಲ್ಲ. ಭಾಷಾನುಗುಣ ಪ್ರಾಂತರಚನೆಯ ಬೇಡಿಕೆಯು ರಾಷ್ಟ್ರೀಯ ಐಕ್ಯಕ್ಕೆ ವಿರೋಧವೆನ್ನುವುದೂ ಯೋಗ್ಯವಲ್ಲ. ಏಕೆಂದರೆ ಆಂಧ್ರ ರಾಜ್ಯದಂಥ ಭಾಷಾನುಗುಣ ಪ್ರಾಂತ್ಯವನ್ನು ರಚಿಸಿದುದರಿಂದ ದುಷ್ಪರಿಣಾಮವೇನಾದರೂ ಆದುದುಂಟೆ? ಮೈಸೂರು, ತಿರು-ಕೊಚ್ಚಿ, ಉತ್ತರ ಪ್ರದೇಶ, ಬಂಗಾಳ, ಒಡಿಸ, ರಾಜಸ್ಥಾನ ಇತ್ಯಾದಿ ಕೇವಲ ಭಾಷಾ ಘಟಕಗಳಾಗಿ ಮೊದಲೇ ರೂಪುಗೊಂಡಿರುವ ರಾಜ್ಯಗಳಿಂದ ಭಾರತದ ಐಕ್ಯಕ್ಕೆ ತೊಂದರೆಯಾದುದಿದೆಯೆ? ಆದುದರಿಂದ "ನಾನು ಭಾಷೆಯ ಪ್ರಶ್ನೆಯನ್ನು ಹತ್ತಿಕ್ಕುವುದರ ವಿರುದ್ಧ ಎಚ್ಚರಿಕೆಯನ್ನು ಕೊಡಲು ಬಯಸುತ್ತೇನೆ" ಎನ್ನುವ ಜಯಪ್ರಕಾಶರ ಮಾತಿಗೆ ತುಂಬ ತೂಕ ಬರುತ್ತದೆ. ಭಾಷಾಭಿಮಾನವೆಂಬ ಸಹಜ ಪ್ರವೃತ್ತಿಯನ್ನು ಪ್ರತ್ಯೇಕತೆಯ ಮನೋಭಾವ ಎಂದು ಜರೆಯುವುದು ಬೇಡ; ಅದನ್ನು ರಾಷ್ಟ್ರಕ್ಕೆ ಬಗೆಯುವ ದ್ರೋಹವೆಂತಲೂ ವರ್ಣಿಸುವುದು ಬೇಡ ಎಂದು ಜೆ. ಪಿ. ನೀಡುವ ಹಿತೋಪದೇಶವನ್ನು ಇಂದು ಸರಕಾರದ ವರಿಷ್ಠ ಸ್ಥಾನದಲ್ಲಿರುವವರು ದಯಮಾಡಿ ಗಮನಿಸಬೇಕೆಂದು ನಾವು ಆಗ್ರಹದಿಂದ ವಿನಂತಿಸುತ್ತೇವೆ. "ಭಾಷಾ ಪ್ರೇಮದ ಅಪಾಯಗಳ ಕುರಿತು ಪ್ರಧಾನ ಮಂತ್ರಿಗಳು ಎಚ್ಚರ ಕೊಟ್ಟಿರುವುದು ನನಗೆ ಗೊತ್ತಿದೆ; ಇಂಥ ಎಚ್ಚರಕ್ಕೆ ಸಾಕಷ್ಟು ಕಾರಣವೂ ಇದೆ. ಆದರೆ ಗೊಂದಲಗಳು ನಮ್ಮನ್ನು ಭಯಪಡಿಸುವುದು ಬೇಡ; ಮತ್ತು ಸಾಕಷ್ಟು ದೀರ್ಘ ಪರ್ಯಾಲೋಚನೆಯ ಬಳಿಕ ನಾವು ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯುವುದೂ ಬೇಡ ......ಭಾಷಾ ಪ್ರಶ್ನೆಯನ್ನು ನಾವು ಇದ್ದುದಿದ್ದಂತೆ ಸ್ವೀಕರಿಸಿ ಅದನ್ನು ಮನ್ನಿಸುವ ರೀತಿಯಲ್ಲಿ ಮುನ್ನಡೆಯುತ್ತಿದ್ದರೆ ಭಾಷಾ ಪ್ರೇಮದ ಅತಿರೇಕ ವರ್ತನೆಗೂ ಧಿಕ್ಕಾರಕ್ಕೂ ಎಡೆಯೇ ಸಿಗುತ್ತಿರಲಿಲ್ಲ" ಎಂಬ ಜಯಪ್ರಕಾಶರ ಅಭಿಪ್ರಾಯಕ್ಕೆ ನಾವು ಬೆಂಬಲವನ್ನು ಕೊಡುತ್ತೇವೆ. ಫಜಲಾಲಿ ಆಯೋಗವಾಗಲೀ ಭಾರತ ಸರಕಾರವಾಗಲೀ ಭಾಷೆಯೊಂದಿಗೆ ಇತರ ಪ್ರಶ್ನೆಗಳೂ ರಾಜ್ಯಗಳ ಪುನಾರಚನೆಯ ವಿಷಯದಲ್ಲಿ ಮಹತ್ವ ಪಡೆಯುತ್ತವೆಂದು ಭಾವಿಸಿರುವುದನ್ನು ನಾವು ಗಮನಿಸಿದ್ದೇವೆ. ಆದರೆ ಭಾಷೆಗೆ ನಾವು ಕಳೆದ ನಲುವತ್ತು ವರ್ಷಗಳಿಂದಲೂ ಉಚ್ಚ ಸ್ಥಾನವನ್ನು ಕೊಡುತ್ತಾ ಬಂದಿರುವುದನ್ನೂ ಜನರು ಭಾಷಾ ಪ್ರಾಂತ್ಯಗಳ ಕುರಿತು ಕಡಬಿಪ್ರಾಯ ಹೊಂದಿರುವುದನ್ನೂ ಮೂಲೆಗೆ ತಳ್ಳಿ ರಾಷ್ಟ್ರೀಯ ಐಕ್ಯದಂಥ ವಿಷಯವನ್ನೆತ್ತಿ, ಅದಕ್ಕೆ ಭಾಷಾಪ್ರಾಂತಗಳಿಂದ ತೊಂದರೆಯಾಗುವುದೆಂದು ವಾದಿಸುವ ಈಗಿನ ಮನೋಭಾವವನ್ನು ಮೆಚ್ಚುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಮಹಾತ್ಮಾಗಾಂಧೀಜಿಯವರು ರಾಷ್ಟ್ರೀಯ ಭಾವನೆಯನ್ನು ಜ್ವಲಂತವಾಗಿಡುವುದಕ್ಕಾಗಿಯೇ ಭಾಷಾ ಪ್ರಾಂತಗಳ ರಚನೆಯಾಗಬೇಕೆಂದು ಪಟ್ಟ ಅಭಿಪ್ರಾಯವನ್ನೊಡನೆ ತುಲನೆ ಮಾಡಿದರೆ ಈಗಿನ ಧುರೀಣರು ಮುಖ್ಯ ಮಾರ್ಗದಿಂದ ಎಷ್ಟು ದೂರ ಸರಿದು ನಿಂತಿದ್ದಾರೆಂದು ವ್ಯಕ್ತವಾಗುತ್ತದೆ. ಜನತೆಯ ಅತಿರೇಕ ವರ್ತನೆಗಳನ್ನು ಖಂಡಿಸುವ ಆವೇಶದಲ್ಲಿ ಅಥವಾ ಭರದಲ್ಲಿ ಧುರೀಣರು ಭಾಷಾ ಪ್ರೇಮವೇ ಮಹಾಪರಾಧವೆನ್ನುವಷ್ಟು ಅನ್ಯಾಯದ ನಿಲುವೆಯನ್ನು ವಹಿಸಿರುವುದು ಬಹಳ ಶೋಚನೀಯ. ಭಾಷಾ ಪ್ರೇಮವು ಹಾಳಾಗಲೆಂದು ಹೇಳುತ್ತಾ ಪೂರ್ವ ಪ್ರದೇಶ ಪಶ್ಚಿಮ ಪ್ರದೇಶ, ದಕ್ಷಿಣ ಪ್ರದೇಶ ಎಂದು ಮುಂತಾಗಿ ಬಹು ಭಾಷಾ ರಾಜ್ಯಗಳನ್ನು ರಚಿಸುವ ಕಡೆಗೆ ಜನರ ಗಮನ ಸೆಳೆಯಲು ಇಂದು ನಡೆಯುವ ಪ್ರಯತ್ನವೂ ಹಿತಕರವಾದುದಲ್ಲ. ಬಂಗಾಳ— ಬಿಹಾರ ಮುಖ್ಯ ಮಂತ್ರಿಗಳು ಸಂಯುಕ್ತ ಪ್ರಕಟಣೆಯ ಮೂಲಕ ಈ ಮಟ್ಟಿಗೆ ಹಾಕಿದ ನಾಂದಿಯು ಶ್ರೀ ಜಯಪ್ರಕಾಶರಲ್ಲಿ ಹೇಗೋ, ನಮ್ಮಲ್ಲಿಯೂ ವಿಶ್ವಾಸವನ್ನು ಹುಟ್ಟಿಸುವಷ್ಟು ಪ್ರಭಾವಿಯಾಗಿಲ್ಲ. ಇವೆರಡು ರಾಜ್ಯಗಳಲ್ಲಿ ಒಮ್ಮಿಂದೊಮ್ಮೆ ಅನ್ಯೋನ್ಯತೆಯು ಹುಟ್ಟಿಕೊಂಡಿತೆಂದು ನಂಬುವುದೇ ಮೂರ್ಖತನ— ಆದುದರಿಂದ ಸಂಕಷ್ಟಕರವಾದ ಪರಿಸ್ಥಿತಿಯಿಂದ ಓಡಿ ಹೋಗುವುದೇ ಈ ಪ್ರಕಟಣೆಯ ಉದ್ದೇಶ ಹೊರತು ಜನತೆಗೆ ಒಳ್ಳೆಯದನ್ನು ಮಾಡುವ ಹಾಗೆ ಈ ಪ್ರಕಟಣೆ ಇಲ್ಲವೆಂದು ನಾವು ಹೇಳಿದರೆ, ಅದಕ್ಕಾಗಿ ಯಾರೂ ಕೋಪಿಸಬಾರದು. ಒಂದು ರಾಜ್ಯವು ಆಡಳಿತ ದೃಷ್ಟಿಯಲ್ಲಿಯೂ ಆರ್ಥಿಕ ದೃಷ್ಟಿಯಲ್ಲಿಯೂ ಯೋಗ್ಯವೆನಿಸಬೇಕಾದರೆ ಹೆಚ್ಚು ದೊಡ್ಡದೂ ಇರಬಾರದು; ತೀರ ಸಣ್ಣದೂ ಆಗಬಾರದು. ಪ್ರದೇಶಗಳ ಕಲ್ಪನೆಯು ಬಹಳ ವಿಶಾಲವಾದ ಭೂಭಾಗವನ್ನೂ ಭಿನ್ನ ಭಿನ್ನ ಭಾಷೆ ಮತ್ತು ಸಂಸ್ಕೃತಿಯುಳ್ಳ ಜನರನ್ನೂ ಆವರಿಸುವುದರಿಂದ ಅದೆಂದೂ ಒಳ್ಳೆಯ ಪರಿಣಾಮ ಮಾಡಲಾರದು. ಫಜಲಾಲಿ ಆಯೋಗದ ವರದಿಯನ್ನು ಅಟ್ಟದಲ್ಲಿಟ್ಟು ಸುಮ್ಮನೆ ಕುಳಿತು ಬಿಡೋಣವೆನ್ನುವುದಂತೂ ಮತ್ತಷ್ಟು ಅಪಾಯಕಾರಿಯಾದ ಸೂಚನೆ—ಏಕೆಂದರೆ ಎಲೆಹಾಕಿ, ಎಲ್ಲವನ್ನೂ ಬಡಿಸಿಟ್ಟ ಬಳಿಕ ನಾವು ತುತ್ತನ್ನು ಕೈಗೆತ್ತಿಕೊಳ್ಳುವಷ್ಟರಲ್ಲಿ ಎಲೆಯನ್ನು ಆಚೆಸರಿಸಿಟ್ಟಂತೆ ಪರಿಣಾಮವಾಗುತ್ತದೆ. ಆದುದರಿಂದ ಭಾಷಾಭಿಮಾನಿಗಳಾಗಿ ಜನರು ಮುಂದಿಡುತ್ತಿರುವ ಬೇಡಿಕೆಗೆ ಸರಕಾರ ಮನ್ನಣೆಯನ್ನು ಕೊಡಲಿ! ಇದು ಈಚೆಗಿನ ಗಲಭೆಗಳಿಗೆ ಸೋತಂತೆ ಹೊರ ತೋರಿಕೆಗೆ ಕಂಡು ಬಂದರೂ ನಿಜವಾಗಿ ಹಿರಿಯರು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವಷ್ಟೇ ಆಗುತ್ತದೆ. ಪ್ರಜಾಪ್ರಭುತ್ವದಲ್ಲಿ ಇಂಥ ಪರಿಸ್ಥಿತಿಗಳೂ ಬರುತ್ತವೆ; ಅದುದರಿಂದ ನಾಚಿಕೊಳ್ಳುವ ಪ್ರಮೇಯವೇನಿಲ್ಲ.

ಉಡುಪಿ

ಭತ್ತದ ಬೆಳೆ ಸ್ಪರ್ಧೆಯ ಬಹುಮಾನ ವಿತರಣೆ— ಉಡುಪಿ ತಾಲೂಕಿನಲ್ಲಿ 1954—55ನೇ ಇಸವಿಯಲ್ಲಿ ಹೆಚ್ಚು ಭತ್ತವನ್ನು ಬೆಳೆಸಿದವರಿಗೆ ಬಹುಮಾನ ಕೊಡುವ ಸಮಾರಂಭವು ತಾ. 31ರಲ್ಲಿ ಶ್ರೀ ಪಿ ಗೋಪಾಲ ನಾಯ಼್ರ ಅಧ್ಯಕ್ಷತೆಯಲ್ಲಿ ಜರಗಿತು. ತಹಶೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರು ಸ್ವಾಗತವಾತುಗಳನ್ನಾಡಿದರು. ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್ ಶ್ರೀ ಟಿ. ವೆಂಕಟ್ರಾಯ ಪೈ, ಮತ್ತು ಶ್ರೀ ಎ. ಜೆ. ಅಳ್ವ ಯವರ ಸಂದರ್ಭೋಚಿತ ಭಾಷಣಾನಂತರ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪರಶುರಾಮ ನಾಯ್ಕರು ಪಾರಿತೋಷಕವಿತರಣೆ ಮಾಡಿದರು. ಉಡುಪಿ ತಾಲೂಕು ಮತ್ತು ಉಡುಪಿ ಫಿರ್ಕಾದ ಬಹುಮಾನಗಳು ಒಂದು ಎಕ್ರೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಭತ್ತ ಬೆಳೆಸಿದ ಶ್ರೀ ಗೋವಿಂದ ರಾಜ ಹೆಗ್ಡೆಯವರಿಗೂ ಕಾಪು ಫಿರ್ಕಾದ ಬಹುಮಾನವು ಶ್ರೀ ದೊಡ್ಡಣ್ಣ ಸೆಟ್ಟಿರಿಗೂ ದೊರೆತವು. ಹಸುರೆಲೆ ಗೊಬ್ಬರವನ್ನು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಿದ ಬಗ್ಗೆ ಪೆರ್ಗಾ ಗ್ರಾಮಕ್ಕೆ ರೋಲಿಂಗ್ ಕಪ್ ಕೊಡಲಾಯಿತು. ವನಮಹೋತ್ಸವವನ್ನು ನಗರ ಕ್ಷೇತ್ರದಲ್ಲಿ ಯಶಸ್ವಿಯಾಗಿ ಆಚರಿಸಿದ ಮುನಿಸಿಪಲ್ ಕ್ರಿಶ್ಚಿಯನ್ ಶಾಲೆಗೆ ಮಾಜಿ ಮುನಿಸಿಪಲ್ ಸದಸ್ಯ ಶ್ರೀ ರಾಘವೇಂದ್ರ ಕೃಷ್ಣಭಟ್ಟರ ರೋಲಿಂಗ್ ಕಪ್ ದೊರೆಯಿತು.

ಬೋರ್ಡ್ ಹೈಸ್ಕೂಲ್ ವರ್ಧಂತಿ ಸಮಾರಂಭವು— ತಾ. 4ರಲ್ಲಿ ಸಂಜೆ ಎಕೆಡಮಿ ಆಫ್ ಜನರಲ್ ಎಜ್ಯುಕೇಶನ್ ಅದರ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನಾನಂತರ ಮುಖ್ಯೋಪಾಧ್ಯಾಯ ಶ್ರೀ ಬಿ. ಅನಂತ ಕೃಷ್ಣ ನಾವುಡರು ಸ್ವಾಗತಿಸಿ ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಉಡುಪಿ ನಗರಸಭಾಧ್ಯಕ್ಷ ಶ್ರೀ ಕೆ. ಕಮಲಾಕ್ಷ ಪೈಗಳು ಸ್ವಸ್ತಿವಾಚನ ಮಾಡಿದರು. ಪಾರಿತೋಷಕ ವಿತರಣೆ ಮಾಡಿ ಸಭಾಧ್ಯಕ್ಷರು ಶಾಲೆಯ ಪ್ರಗತಿಯನ್ನು ಕೊಂಡಾಡಿದರು ಶ್ರೀ ಯು ನರಸಿಂಹ ಕೇಕುಡರು ಧನ್ಯವಾದಗಳನ್ನಿತ್ತರು. ನಂತರ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ನಾಟಕಾಭಿನಯಗಳಾದುವು.

ಶ್ರೀ ರಘುರಾಮ ಶೆಟ್ಟಿ,

ಬಿ. ಯಸ್‌ಸಿ. ಬಿ. ಫಾರ್ಮ್

ಇವರು ತಾ. 3—12-55ರಂದು ಮುಂಬಯಿಯಿಂದ ಮುಂದಿನ ಅಭ್ಯಾಸಕ್ಕಾಗಿ ಅಮೇರಿಕಕ್ಕೆ ತೆರಳಿರುವರು. ಆ ಸಂದರ್ಭದಲ್ಲಿ ಹಲವು ಮಿತ್ರರು ಅವರನ್ನು ಬೀಳ್ಕೊಟ್ಟರು. ಶ್ರೀಯುತರು ಕಣಂಜಾರು ಬರ್ಕೆಮನೆ ದೇಜು ಹೆಗ್ಡೆಯರ ಪುತ್ರ; ಸ ಕಾಪು ಮೂಳೂರು ನೂದು ಮನೆ ದಿ। ಬಾಲು ಶೆಟ್ರ ಮೊಮ್ಮಗ.

(೫ನೇ ಪುಟದಿಂದ)

ಪ್ರದೇಶವಾಗಿರುವುದರಿಂದ ಮೊದಲು ಇದೊಂದು ಪೂರ್ಣ ಘಟಕವಾಗಿ ಬೆಳೆದು ಬರಬೇಕು ಎಂಬುದೇ ಕನ್ನಡಿಗರ ಮನವಾಶಯ. ಸಂಯುಕ್ತ ಮಹಾರಾಷ್ಟ್ರದ ಪ್ರತಿಪಾದಕರಿಗೂ ಪ್ರದೇಶದ ಕಲ್ಪನೆ ಮನಸ್ಸಿಗೆ ಬಂದಂತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅಮೃತಸರದ ಅಧಿವೇಶನದಲ್ಲಿ ಪ್ರದೇಶಗಳ ಕಲ್ಪನೆಯನ್ನು ಜನರು, ಮುಖ್ಯವಾಗಿ ಕಾಂಗ್ರೆಸಿಗರು, ಸಹಾನುಭೂತಿಯಿಂದ ವಿಚಾರಿಸಬೇಕು ಎಂಬ ತೀರ್ಮಾನವಷ್ಟೇ ಆದೀತು; ಹೊರತು ಅದೇ ಒಳ್ಳೆಯದೆಂಬ ನಿರ್ಧಾರದ ಅಭಿಪ್ರಾಯವನ್ನು ಗೊತ್ತುವಳಿಯ ರೂಪದಲ್ಲಿ ಪ್ರಕಟಿಸಲಿಕ್ಕಿಲ್ಲ.

ಮಾರ್ಗದರ್ಶನ ಹೇಗಿರಬಹುದು?

ಗಾಂಧೀಜಿಯು ಅಮೃತಸರದ ಅಧಿವೇಶನದಲ್ಲಿ ತಂದಿದ್ದ ಗೊತ್ತುವಳಿಯ ರೂಪವನ್ನೆ ಹೋಲುವ ನಿರ್ಣಯ ಈ ಸಲವೂ ಆಗುವುದು ಸಂಭವನೀಯ. ಅದೆಂದರೆ ರಾಜ್ಯಗಳ ಪುನಾರಚನೆಯ ಹೆಸರಿನಲ್ಲಿ ನಡೆದ ಹಿಂಸಾಚಾರಗಳ ಖಂಡನೆ. ಅಂದು ಆ ಗೊತ್ತುವಳಿಯನ್ನು ಸ್ವೀಕರಿಸಬೇಕೆಂದು ಗಾಂಧೀಜಿ ಹೆಚ್ಚಿನ ಆಗ್ರಹವನ್ನು ತೊಟ್ಟುದರಿಂದ—ಮತ್ತು ಗೊತ್ತುವಳಿಯು ಸ್ವೀಕಾರವಾಗದಿದ್ದರೆ ಕಾಂಗ್ರೆಸನ್ನೇ ತ್ಯಜಿಸುವ ನಿರ್ಧಾರ ಮಾಡುವಷ್ಟು ಅವರು ಮುಂದೆ ಹೋಗಿದ್ದುದರಿಂದ—ಜನರೂ ಧುರೀಣರೂ ಈ ಗೊತ್ತುವಳಿಯನ್ನು ಪೂರ್ಣ ಮನನಮಾಡಿ ಅದಕ್ಕೆ ಸಮ್ಮತಿಸಿದ್ದರೆನ್ನುವುದು ಕಷ್ಟ. ಆದರೆ ಇಂದು ಆಂದೋಲನದ ಮನೋಭಾವ ಬೇಡವೆನ್ನುವ ಧುರೀಣರ ಮಾತಿಗೆ ಜನರಲ್ಲಿ ಹೆಚ್ಚಿನವರ ಬೆಂಬಲವಿದೆ. ಹಿಂಸಾಚಾರಗಳನ್ನು ಯಾವ ಕಾರಣದಿಂದಲೇ ಆಗಲಿ ನಡೆಸುವುದಕ್ಕೆ ಸಾರ್ವತ್ರಿಕವಾಗಿ ಪಕ್ಷಪಂಗಡಗಳ ಭೇದವಿಲ್ಲದೆ ವಿರೋಧವಿದೆ. ಆದುದರಿಂದ ಈಚೆಗೆ ಮುಂಬಯಿ, ಒರಿಸ್ಸ ಮತ್ತಿತರ ಕಡೆಗಳಲ್ಲಿ ನಡೆದ ಗಲಭೆಯನ್ನು ಕಾಂಗ್ರೆಸು ಖಂಡಿಸಿ, ಜನರು ಈ ವಾಮ ಮಾರ್ಗದಿಂದ ದೂರವಿದ್ದು ಪ್ರಜಾಪ್ರಭುತ್ವದ ಮರ್ಯಾದೆಗೆ ತಕ್ಕುದಾದ ದಾರಿಯಲ್ಲಿಯೇ ನಡೆಯಬೇಕೆಂದು ಬೋಧಿಸಬಹುದು. ಅಷ್ಟೇಯಲ್ಲದೆ, ಎರಡನೇ ಪಂಚವಾರ್ಷಿಕ ಯೋಜನೆಯಂಥ ಮಹತ್ವದ ಕಾರ್ಯಕ್ರಮಗಳು ದೇಶದ ಮುಂದಿರುವಾಗ ಸಂಕುಚಿತ ಭಾವನೆಗಳಿಗೂ ರಾಷ್ಟ್ರದ ಹಿನ್ನೆಲೆಯಲ್ಲಿ ಖಂಡನೀಯವೆನಿಸುವ ಸ್ಥಳೀಯ ದುರಭಿಮಾನಕ್ಕೂ ಜನರು ಅವಕಾಶ ಕೊಡಲಾಗದೆಂದು ಅದು ಪುನಃ ಸಾರಿ ಹೇಳಬಹುದು. ಕಾಂಗ್ರೆಸಿಗರೇ ಹೊಡೆದಾಡಿಕೊಳ್ಳುವ ದುರ್ಬಲ ಪರಿಸ್ಥಿತಿಯನ್ನು ಪರಿಹರಿಸಲು ಅದು ಕಟ್ಟುನಿಟ್ಟಿನ ಗೊತ್ತುವಳಿಯನ್ನು ಸ್ವೀಕರಿಸಬಹುದು. ಸಾಮಾಜಿಕ ಕ್ರಾಂತಿಯನ್ನು ಸಾಧಿಸುವ ಬಗ್ಗೆ ವಿಶೇಷ ಮಾರ್ಗದರ್ಶನವನ್ನು ಅದು ನೀಡಬಹುದು. ಚುನಾವಣೆ ಸಮೀಪಿಸಿರುವುದರಿಂದ ಕಾಂಗ್ರೆಸಿನ ಹುರಿಯಾಳುಗಳ ಯೋಗ್ಯತೆ ಮತ್ತು ಪಕ್ಷದ ಬಲ ಸಂವರ್ಧನೆಯ ಕುರಿತು ವಿಶೇಷ ಗಮನವನ್ನು ಕೊಡಬಹುದು.

ಆಮಂತ್ರಣ

ಇದೇ ತಾ. 12—2—56ರಿಂದ 14—2—56ರ ವರೆಗೆ ಉಡುಪಿ ತಾಲೂಕು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ, ಮಹೋತ್ಸವವು ವರ್ಷಂಪ್ರತಿಯಂತೆ ವಿಜೃಂಭಣೆಯಿಂದ ನಡೆಯಲಿರುವುದರಿಂದ, ಭಕ್ತ ಮಹಾಶಯರೆಲ್ಲರಿಗೂ ಈ ಮೂಲಕ ಆಮಂತ್ರಣವೀಯಲಾಗಿದೆ.

(*Sd*). **B. Umesha Rao,**
Executive Officer.

ಮಂದಾರ್ತಿ, ತಾ. 6-2-56.

ಐಕರೊಡನೆ ಈಡನರ ಸಮಾಲೋಚನೆ

ಬ್ರಿಟನಿನ ಹಾರೈಕೆಯೆಲ್ಲ ನಿಷ್ಫಲ

ಬ್ರಿಟನಿನ ಪ್ರಧಾನಿ ಸರ್ ಆಂಥನಿ ಈಡನ್ನರು ಕಳೆದ ವಾರ ಅಮೇರಿಕಕ್ಕೆ ಪ್ರಯಾಣ ಬೆಳೆಸಿ, ಅಧ್ಯಕ್ಷ ಐಸೆನ್ ಹೋವರರೊಡನೆ ಸಮಾಲೋಚನೆಗಳನ್ನು ನಡೆಸಿದರು. ಆದರೆ ಅವರೇನನ್ನು ಬಯಸಿ ಅಷ್ಟು ದೂರ ಸಾಗಿದ್ದರೋ—ಆ ಆಶೆಗಳೇನೂ ಕೈಗೂಡಿ ಬರದೆ, ಅಮೇರಿಕದ ವಿದೇಶ ಧೋರಣೆಯನ್ನೇ ಎತ್ತಿಕಟ್ಟಿ, ತನ್ನ ಹಿತವನ್ನು ಹಿನ್ನೆಲೆಗೆ ಸರಿಸಿ, ಹಿಂತೆರಳುವಂತಾಯಿತು.

ಚೀನದೊಡನೆ ಗೆಳೆತನ

ರಾಜಕೀಯ ನಿರೀಕ್ಷಕರ ಅಭಿಪ್ರಾಯದಂತೆ ಈಡನ್ನರು ಕೆಂಪು ಚೀನದೊಡನೆ ವ್ಯಾಪಾರ ಸಂಬಂಧವನ್ನು ಗಾಢವಾಗಿ ಸ್ಥಾಪಿಸಲು ಎಳಸಿದ್ದರು. ಏಕೆಂದರೆ ಬ್ರಿಟನಿಗೆ ನಿರ್ಯಾತ ವ್ಯಾಪಾರವೇ ಆದಾಯದ ಸ್ರೋತ. ವಸಾಹತುಗಳೆಲ್ಲವೂ ಕೈಬಿಟ್ಟಿರುವುದರಿಂದ ಬ್ರಿಟನು ಹೊಸ ಪೇಟೆಯನ್ನು ಹುಡುಕಿಕೊಳ್ಳಬೇಕಾಗಿದೆ. ಕೆಂಪು ಚೀನವು ಹೊಂಗ್‌ಕೊಂಗ್ ದ್ವೀಪಕ್ಕೆ ಎದುರಾಗಿ ನಿಂತಿದ್ದು ಬ್ರಿಟನರಿಗೆ ವ್ಯಾಪಾರ ಕ್ಷೇತ್ರವಾಗಿ ಪರಿಣಮಿಸಬಲ್ಲುದು. ಆದರೆ ಅಮೇರಿಕವು ಇಂಥ ವ್ಯಾಪಾರ ಸಂಪರ್ಕವನ್ನು ಮನ್ನಿಸುತ್ತಿಲ್ಲ.

ಮಧ್ಯ ಪೂರ್ವದ ಪ್ರಶ್ನೆ

ಬ್ರಿಟನಿಗೆ ಮಧ್ಯ ಪೂರ್ವದಲ್ಲಿ ಈಚೆಗೆ ಮುಖಭಂಗವಾಗಿದೆ. ಅದು ಬಗ್ದಾದ್ ಒಪ್ಪಂದಕ್ಕೆ ಧುಮುಕಿರುವುದನ್ನು ಅರಬ ರಾಷ್ಟ್ರಗಳು ತೀವ್ರವಾಗಿ ಖಂಡಿಸಿರುವುವಲ್ಲದೆ, ಭಾರತವೂ ಇದರ ವಿರುದ್ಧ ಸ್ವರವೆತ್ತಿದೆ. ಪಾಶ್ಚಾತ್ಯ ಗುಂಪುಗಳಲ್ಲಿ ಸೇರಿರುವ ಫ್ರಾನ್ಸು ಸಹ ಬ್ರಿಟನು-ಅಮೇರಿಕಗಳಿಗೆ ನಿಷೇಧವನ್ನು ಸೂಚಿಸುವಷ್ಟು ಮುಂದೆ ಹೋಗಿದೆ. ಜಾರ್ಡನಿನಲ್ಲಿ ಈಚೆಗೆ ಹೆಚ್ಚಿನ ಗಲಭೆಗಳಾಗಿದ್ದುವು. ಇವರಲ್ಲಿ ಸೌದಿ ಅರೇಬಿಯದ ಕೈವಾಡವಿದೆ ಎಂದು ಊಹೆ ಇದೆ. ಸೌದಿ ಅರೇಬಿಯದ ಎಣ್ಣೆ ಗಣಿಗಳನ್ನು ನಡೆಸುತ್ತಿರುವ ಅಮೇರಿಕದ ಕಂಪೆನಿಗಳು ತಾವು ಕೊಡಬೇಕಾದ ಗೌರವ ಧನವನ್ನು ಕಡಿಮೆ ಮಾಡಿದರೆ, ಸೌದಿ ಅರೇಬಿಯ ಹಣ್ಣಾಗಬಹುದು ಎಂದು ಈಡನ್ನರು ಭಾವಿಸಿದ್ದರು

ಇಸ್ರೇಲಕ್ಕೆ ಬುದ್ಧಿವಾದ

ಇದರ ಹೊರತಾಗಿ ಇಸ್ರೇಲವನ್ನು ತಿದ್ದುವುದಕ್ಕೆ ಅಮೇರಿಕದ ಸಹಕಾರವನ್ನೂ ಈಡನ್ನರು ಯಾಚಿಸಿದ್ದರು. ಇಸ್ರೇಲವು ತುಂಬ ದುಡುಕಿ ನಡೆಯುತ್ತಿರುವುದರಿಂದಲೇ ಅರಬ ರಾಷ್ಟ್ರಗಳು ಬ್ರಿಟನಿನ ಮೇಲೆ ತಿರುಗಿ ಬೀಳುತ್ತಿವೆ; ರೋಷ ಕಾರುತ್ತಿವೆ; ರಶ್ಯದೊಡನೆ ಸ್ನೇಹ ಸಾಧಿಸಲೂ ಉತ್ಸುಕವಾಗಿವೆ ಎಂದು ಈಡನ್ನರ ಅಭಿಪ್ರಾಯ. ಆದರೆ, ಈ ವಿಷಯದಲ್ಲೂ ಅವರು ಅಮೇರಿಕದ ಸಹಾನುಭೂತಿಯನ್ನು ಪಡೆಯಲಾರದೆ ಹೋದರು. ಹೀಗೆ ಒಟ್ಟಾರೆ ಅವರ ಯಾತ್ರೆಯ ಮೂಲೋದ್ದೇಶ ವಿಫಲವಾಯಿತು.

ಚುನಾವಣೆಯ ಆತಂಕ

ಅಮೇರಿಕದಲ್ಲಿ ಚುನಾವಣೆಗಳು ಈ ವರ್ಷ ನಡೆಯಲಿವೆ. ಆದುದರಿಂದ ಅಲ್ಲಿಯ ರಾಜಕೀಯ ಧುರೀಣರು ಸಾಮಾನ್ಯ ಅಮೇರಿಕನ್ನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರಲು ಹವಣಿಸುತ್ತಿರುವರೇ ಹೊರತು, ವಿದೇಶಿ ಮಿತ್ರರ ಕಷ್ಟಗಳನ್ನು ಮನವರಿಕೆ ಮಾಡಿಕೊಂಡು ಸಹಾಯ ನೀಡುವ ಪರಿಸ್ಥಿತಿಯಲ್ಲಿಲ್ಲ. ಕೆಂಪು ಚೀನದೊಡನೆ ಸೌಮ್ಯ ಧೋರಣೆಯನ್ನು ವಹಿಸುವುದೆಂದರೆ, ಅಮೇರಿಕವು ಇಷ್ಟರವರೆಗೆ ವಹಿಸಿಕೊಂಡು ಬಂದ ಕಟುವಾದ ನಿಲುಮೆಯನ್ನು ಬಿಟ್ಟುಕೊಟ್ಟಂತಾಗುತ್ತದೆ. ಇದು ಹೇಡಿತನದ ಪರಮಾವಧಿಯಲ್ಲವೆ? ಇಸ್ರೇಲಕ್ಕೆ ಬುದ್ಧಿ ಹೇಳಲು ಹೊರಟರೆ ನ್ಯೂಯಾರ್ಕ್‌ನಲ್ಲಿರುವ ಯೆಹೂದಿ ಮತದಾರರ ಅಪೇಕ್ಷೆ ಕಟ್ಟಿಟ್ಟಂತೆ ಎಂದು ಅಮೇರಿಕದ ಪ್ರಭೃತಿಗಳಿಗೆ ಗೊತ್ತು.

ಎಣಿಸಿದ್ದೊಂದು—ಆದದ್ದೊಂದು

ಆದುದರಿಂದ ಈಡನ್ನರ ಮುಂದೆ ಅಮೇರಿಕದ ಅಧ್ಯಕ್ಷರು ತಮ್ಮ ದರ್ಪವನ್ನು ಪೋಷಿಸುವುದಕ್ಕೆ ಅನುಕೂಲವಾದ ಸಂಯುಕ್ತ ಪ್ರಕಟಣೆಯನ್ನೆ ಸಹಿಗಾಗಿ ಮುಂದಿಟ್ಟರು. ಈ ಪ್ರಕಟಣೆಯು ಕೆಂಪು ಚೀನದೊಡನೆ ಸೌಹಾರ್ದ ಸಂಬಂಧವನ್ನು ಬೆಳೆಸುವುದಕ್ಕೆ ನಾಂದಿಯಾಗುವ ಬದಲು ಅವರ ಅಭಿಮಾನವನ್ನು ಚುಚ್ಚಿ ಉರಿಯುವ ಬೆಂಕಿಗೆ ತುಪ್ಪವನ್ನು ಹೊಯ್ದಿದೆ. ಕಮ್ಯುನಿಸ್ಟರು ನಡೆಸುವ ಕುಹಕ ಕೈವಾಡಗಳ ವಿರುದ್ಧ ಈ ಪ್ರಕಟಣೆ ಎಚ್ಚರಿಕೆ ನೀಡುತ್ತಿದೆ; ಇಂಥ ತಂತ್ರಗಳನ್ನು ಬ್ರಿಟನೂ ಅಮೇರಿಕವೂ ಸೇರಿ ಪ್ರತಿಭಟಿಸುತ್ತವೆ ಎಂದು ಹೇಳಲಾಗಿದೆ. ಇಸ್ರೇಲದ ಗಡಿ ರಕ್ಷಣೆಯ ಭರವಸೆಯನ್ನೂ ಸಂಯುಕ್ತ ಪ್ರಕಟಣೆ ಕೊಟ್ಟಿರುತ್ತದೆ.

ಚಂದಾದಾರರಲ್ಲಿ ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ತಮ್ಮ ತಮ್ಮ ಬಾಕಿಯನ್ನೂ ಚಾಲ್ತಿ ಚಂದಾಹಣವನ್ನೂ ಆದಷ್ಟು ಬೇಗನೆ ನಮಗೆ ತಲಪುವಂತೆ ಮನಿಯಾರ್ಡರಿ ಕಳುಹಿಸಿಕೊಡುವಂತೆ ಕೇಳಿಕೊಳ್ಳುತ್ತೇವೆ. ಸಕಾಲದಲ್ಲಿ ಚಂದಾಹಣವನ್ನು ಕಳುಹಿಸಿಕೊಡುವುದೇ ನಮ್ಮ ಚಂದಾದಾರರು ನಮಗೆ ಮಾಡತಕ್ಕ ದೊಡ್ಡ ಸಹಾಯವಾಗಿದೆ. ನಮ್ಮ ವಿನಂತಿಯನ್ನು ನಮ್ಮ ಚಂದಾದಾರರು ಸಹೃದಯತೆಯಿಂದ ಮನ್ನಿಸಿ ಬಾಕಿಯನ್ನು ಒಡನೆ ಕಳುಹಿಸುವಂತೆ ಇನ್ನೊಮ್ಮೆ ಬಿನ್ನವಿಸುತ್ತೇವೆ

ಕೆ. ಹೊನ್ನಯ್ಯ ಶೆಟ್ಟಿ.
ಸಂಚಾಲಕ, ಸಂಪಾದಕ.

ಮಣಿಪಾಲ .. ತಾ. 3ರಲ್ಲಿ ರಾತ್ರಿ ಕೂಡಿದ ಗಂಗೊಳ್ಳಿ, ಕೋಟ, ಬಾರಕೂರು, ಬ್ರಹ್ಮಾವರ, ಇನ್ನಂಜೆ ಮತ್ತು ಮಣಿಪಾಲ ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರ ಸಮ್ಮೇಳನವನ್ನು ಡಾ. ಟಿ. ಮಾಧವ ಪೈಗಳು ಉದ್ಘಾಟಿಸಿದರು. ಬಳಿಕ ಹರಿದಾಸ್ ಶಂಕರದಾಸರ ಹರಿಕಥಾ ಕಾಲಕ್ಷೇಪ ನಡೆಯಿತು.

ಮರುದಿನದ ಸಭೆಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಬೇರೆಬೇರೆ ಸಮಸ್ಯೆಗಳ ಕುರಿತು ಶ್ರೀಗಳಾದ ಜಿ. ಆರ್. ಶೆಣೈ, ಯು. ಪಿ. ಶೆಣೈ, ಶ್ರೀ ಕೆ. ಆರ್. ಪಂದೆ ಮತ್ತು ಎ. ಶ್ಯಾಮರಾಯರು ಮಾತನಾಡಿದರು. ಸಮಾರೋಪ ಸಮಾರಂಭದ ವೇಳೆ ಡಾ. ಟಿ. ಎಮ್. ಎ. ಪೈಗಳು ಮಕ್ಕಳನ್ನು ಯೋಗ್ಯ ನಾಗರಿಕರನ್ನಾಗಿಸುವುದರಲ್ಲಿ ಮತ್ತು ಸರಕಾರದ ಯೋಜನೆಗಳನ್ನು ಮಕ್ಕಳಿಗೆ ತಿಳಿಸುವಲ್ಲಿ ಉಪಾಧ್ಯಾಯರ ಜವಾಬ್ದಾರಿ ಏನಿದೆ ಎಂಬುದನ್ನು ತಿಳಿಸಿದರು.

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

160 ಪುಟಗಳು, ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

“ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ

TENDER NOTICE

ಬ್ರಹ್ಮಾವರ ಮಲ್ಟಿ ಪರ್ಪಸ್ ಕೋಒಪರೇಟಿವ್ ಸೊಸೈಟಿಯ ಗೋಡೌನ್ ಕಟ್ಟೋಣದ ಈ ಕೆಳಗೆ ಕಾಣಿಸಿದ ಕೆಲಸಗಳನ್ನು ವಹಿಸಿಕೊಂಡು ಪೂರ್ತಿಗೊಳಿಸುವರೆ ಕಂಟ್ರಾಕ್ಟನ್ನು ವಹಿಸಿಕೊಳ್ಳುವವರು ಈ ನೋಟೀಸು ಪ್ರಕಟಪಡಿಸಿದ ಈ ತಾರೀಕಿನಿಂದ ಮೂರು ದಿನ್ನಗಳಲ್ಲಿ ಸೊಸೈಟಿ ಆಫೀಸಿನಲ್ಲಿ ಸಂಘದ ಅಧ್ಯಕ್ಷರಿಗೆ ಟೆಂಡರನ್ನು ಕೊಡತಕ್ಕದ್ದು. ಟೆಂಡರುಗಳಲ್ಲಿ ಅತೀ ಕಡಿಮೆ ಮೌಲ್ಯದ ಟೆಂಡರೇ ಸ್ವೀಕರಿಸಲ್ಪಡುವವೆಂಬ ಗ್ಯಾರಂಟಿ ಇರುವುದಿಲ್ಲ. ಕೆಲಸದ ವಿವರಗಳನ್ನು ಸಂಘದ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

	ಕೆಲಸದ ವಿವರ	ಮೊಬಲಗು ರೂಪಾಯಿ
1.	Flooring with cement concrete	369/-
2.	Plastering with cement	104/-
3.	Plastering walls with lime mortar	426/-
4.	White washing	32/-
5.	Painting and wood oiling	200/-
6.	Shut eyes for 13 windows and 6 doors	206/-
		468/-
	Total	1805/-

ಬ್ರಹ್ಮಾವರ,
9—2—1956.

B. Venkatramana Varamballi,
Secretary.

ಅಳಿಯ ಸಂತಾನಿಗರ ಸಭೆ

ಯ ತಾ. 1ರಲ್ಲು ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಕಳೆದ ತಾ. 31ರಲ್ಲು ಶ್ರೀ ಬಿ. ವಿ. ಬಾಳಿಗಾ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಪರಿಶೀಲನೆ ನಡೆಸಿ ಸೂಚನೆಯನ್ನು ಕೊಡುವ ಬಗ್ಗೆ ನೇಮಿಸಲಾದ ಸಮಿತಿಯವರು ತಮ್ಮ ಸೂಚನೆಯನ್ನು ಮುಂದಿಟ್ಟರು. ಠರಾವು ಈ ತೆರನಾಗಿದೆ:—ಹಿಂದೂ ವಾರೀಸು ಕಾನೂನು ಜ್ಯಾರಿಗೆ ಬರುವ ಮೊದಲು ಮದ್ರಾಸು ಅಳಿಯ ಸಂತಾನ ಕಾನೂನಿನನ್ವಯ ವಿಭಜಿಸಲ್ಪಟ್ಟ ಆಸ್ತಿಯ ಪಾಲನ್ನು ಪಡಕೊಂಡ ನಿಸ್ಸಂತತಿ ಕವರುಗಳ ವ್ಯಕ್ತಿಗಳನ್ನು ಸೇರಿಸಿ ಹಿಂದೂ ವಾರೀಸು ಕಾನೂನು ಕಾರ್ಯಗತವಾಗುವಾಗ ಪ್ರತಿಯೊಬ್ಬನಿಗೂ ಅನ್ವಯಿಸುವಂತಾಗಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

ಇದರಿಂದಾಗಿ ಅಳಿಯಸಂತಾನ ಪದ್ಧತಿಯು ಅನ್ವಯಿಸುವವರ ಬಗ್ಗೆ ಹಿಂದೂ ವಾರೀಸು ಮಸೂದೆಯ 7ನೇ ಕಲಮಿನಲ್ಲಿ ಪ್ರತ್ಯೇಕ ಶರ್ತಗಳನ್ನು ಸೇರಿಸುವ ಅಗತ್ಯವಿದ್ದು, 7ನೇ ಕಲಮಿನ 1ನೇ ಉಪನಿಬಂಧನೆಯಲ್ಲಿರುವ ಅಳಿಯ ಸಂತಾನಿಗರ ಕುರಿತಾದ ಎಲ್ಲಾ ವಿವರಗಳನ್ನೂ ತೆಗೆದು ಹಾಕಿ ಈ ಕೆಳಗಿನ ವಿವರಗಳನ್ನು 7ನೆ ಕಲಮಿನ 2ನೇ ಉಪನಿಬಂಧನೆಯಾಗಿ ಸೇರಿಸತಕ್ಕದ್ದು. ಕಲಮು 7 ಉಪಕಲಂ (2) — ಈ ಕಾನೂನು ಮಂಜೂರಾಗದಿದ್ದಲ್ಲಿ ಅಳಿಯ ಸಂತಾನ ಕಾನೂನೇ ಅನ್ವಯಿಸುವಂತಹ ಒಬ್ಬ ಹಿಂದುವು— ಆತನು 1949ರ ಮದ್ರಾಸು ಅಳಿಯಸಂತಾನ ಕಾನೂನಿನಲ್ಲಿ ವಿವರಿಸಿದ ಮೇರೆಗೆ ಸಂತತಿ ಅಥವಾ ನಿಸ್ಸಂತತಿ ಕವರುಗಳಲ್ಲಿ ಯಾವಕವರಿಗೆ ಸೇರಿದವನಾಗಿದ್ದವನಾದರೂ—ಈ ವಾರೀಸು ಕಾರ್ಯಗತವಾದಬಳಿಕ ವಿಭಾಗವಾಗಿ ಅಥವಾ ಆಗದೆ ಮೃತಪಟ್ಟಲ್ಲಿ, ಆತನಿಗೆ ಅಥವಾ ಅವಳಿಗೆ ಆಸ್ತಿಯಿರುವಹಕ್ಕು - ವೀಲುಕೊಡಿದಅಥವಾ ಕೊಡದಿದ್ದ ಯಾವುದೇ ಸಂದರ್ಭದಲ್ಲಿಯೂ —ಈ ವಾರೀಸು ಮಸೂದೆಯನ್ವಯ ಸಿಗಬೇಕಲ್ಲದೆ, ಅಳಿಯಸಂತಾನ ಕಾನೂನಿನನ್ವಯವಾಗಿರಕೂಡದು.

ಉಪನಿಬಂಧನೆ 2ರಲ್ಲಿ, ಒಂದು ಕುಟುಂಬದ ಅಥವಾ ಕವರಿನ ಹಕ್ಕಿನ ಆಸ್ತಿಯಲ್ಲಿ ಒಬ್ಬ ಅಳಿಯಸಂತಾನದ ಹಿಂದುವಿಗಿರುವ ಹಕ್ಕನ್ನು ಕವರು ಕುಟುಂಬದವರಿಗೆ ಅಳಿಯ ಸಂತಾನ ಕಾನೂನಿನ ಮೇರೆಗೆ ಬರುವ ಪಾಲಿನ ಮೇಲೆ, ವ್ಯಕ್ತಿಯು ಮರಣದ ವೇಳೆ, ಆ ಕುಟುಂಬದ ಅಥವಾ ಕವರಿನಲ್ಲಿರುವ ಎಲ್ಲಾ ಸದಸ್ಯರೊಳಗೆ ತಲೆವಾರು ವಿಂಗಡಣೆಯಾದಂತೆ ಅಲ್ಲದೆ ಆ ಪಾಲು ಆತನಿಗೆ ಸಂಪೂರ್ಣ ಹಕ್ಕಿನದೆಂತ ಪರಿಗಣಿಸಬೇಕು. ಇದರಲ್ಲಿ ಉಳಿಕೆಯಿದ್ದರೆ ಅವನ್ನು ಮದ್ರಾಸು ಅಳಿಯ ಸಂತಾನ ಕಾನೂನಿನನ್ವಯ ಹಕ್ಕಿಗೊಳಪಡಿಸಬೇಕು.

ಆದರೆ ಈ ವಾರೀಸು ಕಾನೂನು ಜ್ಯಾರಿಗೆಬರುವ ಮೊದಲು ಒಬ್ಬ ವ್ಯಕ್ತಿಯುಪಾಲು ಪಡೆದಿದ್ದರೆ ಮೇಲಿನಂತೆ ಬರುವ ಪಾಲು, ವಿಭಾಗದ ಸಮಯದ ಪಾಲಿಗಿಂತ ಹೆಚ್ಚು ಕೂಡದು ಮತ್ತು ಈಗಾಗಲೇ ಅವನು ಪಡೆದ ಪಾಲು ಮಾತ್ರ ಅವನ ಹಕ್ಕಿಗೆ ಒಳಪಡತಕ್ಕದ್ದು.

ಮೇಲಿನ ಅರ್ಥ ಬರುವ ನಿರ್ಣಯ ಸಭೆಯಲ್ಲಿ ಮಂಜೂರಾಯಿತು. ಸಭೆಯ ಕನ್ವೀನರ್ ಶ್ರೀ ಬಿ. ಬಿ. ಶೆಟ್ಟರು ಸಭೆಯ ಉದ್ದೇಶಗಳನ್ನು ವಿವರಿಸಿ ಠರಾವಿಗೆ ಒಪ್ಪಿಗೆಯೀಯಲು ಕೇಳಿಕೊಂಡರು.

“ಈ ಮೊದಲೇ ವಿಭಾಗವಾಗದ ಅಥವಾ 1949ನೇ ಮದ್ರಾಸ್ ಅಳಿಯ ಸಂತಾನ ಕಾನೂನಿನ ಮೇರೆಗೆ ವಿಭಾಗವಾದ ಹಿಂದೂ ಅಳಿಯಸಂತಾನದವರ ಸಮಷ್ಟಿ ಕುಟುಂಬದ ಆಸ್ತಿಗಳು, ಹಿಂದೂ ವಾರೀಸು ಮಸೂದೆಯು ಕಾನೂನಾಗಿ ಜ್ಯಾರಿಗೆ ಬಂದ ತಾರೀಕಿನಿಂದ ತಲೆವಾರೀಸು ವಿಂಗಡಿಸಲ್ಪಟ್ಟದೆಯೆಂದು ಪರಿಗಣಿಸಬೇಕು. ಆ ಬಳಿಕ ಅಳಿಯ ಸಂತಾನದ ಹಿಂದುಗಳೆಲ್ಲರಿಗೂ ಹಿಂದು ವಾರೀಸು ಮಸೂದೆಯೇ ಅನ್ವಯಿಸತಕ್ಕದ್ದು” ಎಂಬ ಶ್ರೀ ಕೃಷ್ಣ ಸೆಟ್ಟರ ಠರಾವನ್ನು ನಿರಾಕರಿಸಲಾಯಿತು.

ಶ್ರೀಗಳಾದ ಗಂಗಯ್ಯ ಸೆಟ್ಟಿ, ಬಡಿಲ ದೇವಪ್ಪ ಸೆಟ್ಟಿ, ಎ. ಕೃಷ್ಣ ಸೆಟ್ಟಿ, ಎಚ್. ಮಹಾಬಲ ರೈ, ಕೆ. ವೆಂಕಪ್ಪ ರೈ, ಡಾ. ಕೆ. ನೇಮಿರಾಜ ಆಳ್ವ, ಡಾ. ಬಿ. ಆರ್. ಹೆಗ್ಡೆ, ಕೆ. ಸುಂದರರಾಮ ಸೆಟ್ಟಿ, ಉಗ್ಗಪ್ಪ ಸೆಟ್ಟಿ, ಎಸ್. ಧರ್ಮ ಸಾಮ್ರಾಜ್ಯ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಬೆಳ್ತಂಗಡಿ— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಕಿಂಗ್ ಸಿಂಡಿಕೇಟಿನ ಮೆನೇಜಿಂಗ್ ಡ್ಯಾರೆಕ್ಟರ್ ಡಾ. ಟಿ. ಎಮ್. ಎ. ಪೈ ಮತ್ತು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾವ್ ಮೊದಲಾದವರನ್ನು ಕಳೆದ ತಾ. 25ರಲ್ಲಿ ಸರ್ವೋದಯ ಕ್ಲಬ್ಬಿನ ಮಾಳಿಗೆಯಲ್ಲಿ ಪೇಟೆಯ ಮತ್ತು ಆಸುಪಾಸಿನ ಪ್ರಮುಖರು ಬೆಳ್ತಂಗಡಿ ತಹಶೀಲ್ದಾರ್ ಶ್ರೀ ದೇವೇಂದ್ರ ನವರ ಅಧ್ಯಕ್ಷತೆಯಲ್ಲಿ ಸತ್ಕರಿಸಿದರು. ಶ್ರೀಗಳಾದ ಎಸ್. ಕೆ. ಭಿಡೆ, ಡಾ. ಬಿ. ನಾರಾಯಣ ರಾವ್, ಬಿ. ನಾರಾಯಣ ಶೇಕ, ಡಿ. ಎಸ್. ಬಾಳಿಗ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಡಾ. ಪೈಗಳು ಬೇಂಕಿನಿಂದ ಪಡೆಯಬಹುದಾದ ಸೌಲಭ್ಯಗಳನ್ನು ವಿವರಿಸಿ ಭಾಷಣವಿತ್ತರು. ಬೇಂಕಿನ ಏಜಂಟ್ ಶ್ರೀ ಎಸ್. ನಟರಾಜನ್, ಅವರು ಧನ್ಯವಾದಗಳನ್ನಿತ್ತರು.

ಅರಿಯಡ್ಕ - ಸ್ಥಳೀಯ ಬೋರ್ಡು ಶಾಲೆಯ ಮಕ್ಕಳ ಹೆತ್ತವರ ಸಭೆಯು ತಾ. 26ರಲ್ಲಿ ಶ್ರೀ ಎ. ಜತ್ತಪ್ಪ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಎಸ್. ನಾರಾಯಣ ರೈಗಳು ವಿದ್ಯೆ, ಸಮಾಜ, ಅಧ್ಯಾಪಕರ ಕರ್ತವ್ಯದಕುರಿತು ಭಾಷಣವಿತ್ತರು.

ಎಮ್ಮರ್ಗಾಳು— ಸ್ಥಳೀಯ ಬೋ। ಹಾ। ಪ್ರಾ। ಶಾಲೆಯಲ್ಲಿ ಎಮ್ಮರ್ಗಾಳು ಕೇಂದ್ರದ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವವು ತಾ. 30ರಲ್ಲಿ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೈ. ಶಾಂತಿರಾಜಯ್ಯ ಅರಸು ಮಾರೆಮ್ಮ ಹೆಗ್ಡೆಯವರು ರಾಷ್ಟ್ರಧ್ವಜವನ್ನರಳಿಸಿದರು. ಶ್ರೀ ಪಿ. ವೆಂಕಟ್ರಮಣಾಚಾರ್ಯರು ಸ್ವಾಗತ ಭಾಷಣಮಾಡಿ ವರದಿಯನ್ನೋದಿದರು. ಆಟದ ಹಬ್ಬದಲ್ಲಿ ಗೆದ್ದವರಿಗೆ ಪಾರಿತೋಷ ವಿತರಣೆ ಮಾಡಲಾಯಿತು. ಶ್ರೀ ವೈ. ಲಕ್ಷ್ಮೀನಾರಾಯಣ ರಾಯರು ಧನ್ಯವಾದವನ್ನರ್ಪಿಸಿದರು.

ಶಿರ್ವ ಬಂಟಕಲ್— ಇಲ್ಲಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಮಹಾಸಭೆಯು ತಾ. 29ರಲ್ಲಿ ಶ್ರೀ ಕೆ. ಮುಕುಂದ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ರಾಜಾಪುರಿಯಾ ಭಾಲಾವಲಿಕಾರ್ ಸಾರಸ್ವತಸಮಾಜ ಸಮ್ಮೇಳನದ ಕಾರ್ಯಕಾರೀ ಸಮಿತಿಯೊಂದು ರಚಿಸಲ್ಪಟ್ಟು ಶ್ರೀಗಳಾದ ನೀರೆ ಶ್ಯಾಮ ನಾಯಕ್ (ಅಧ್ಯಕ್ಷ), ಎನ್. ರಾಮಚಂದ್ರ ನಾಯಕ್ (ಉಪಾಧ್ಯಕ್ಷ), ಬಿ. ಗೋವಿಂದ ನಾಯಕ್ ಮತ್ತು ಕೆ. ರಾಮಚಂದ್ರ ನಾಯಕ್ (ಕಾರ್ಯದರ್ಶಿಗಳು), ಎಚ್. ಪಾಂಡುರಂಗ ನಾಯಕ್ ಮತ್ತು ಪಿ. ಸಂಜೀವ ನಾಯಕ್ (ಜತೆಕಾರ್ಯದರ್ಶಿಗಳು), ಕೆ. ಗೋವಿಂದ ಭಟ್ (ಕೋಶಾಧಿಕಾರಿ) ಗಳಾಗಿ ಆರಿಸಲ್ಪಟ್ಟರು.

ಕಾರ್ಕಳ— ಸ್ಥಳೀಯ ವಕೀಲ ಸಂಘದ ಸಾಮಾನ್ಯ ಸಭೆಯು ತಾ. ೪ರಲ್ಲಿ ಶ್ರೀ ಪಿ. ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಭಾರತದ ಪ್ರಚಲಿತ ರಾಜಕೀಯ ಸಮಸ್ಯೆಗಳ ಮೇಲೆ ವಿಚಾರ ವಿನಿಮಯ ನಡೆಯಿತು. ಬಳಿಕ ಭಾಷಾನುಗುಣ ಪ್ರಾಂತಗಳ ವಿಲಯನ ಯೋಜನೆಯನ್ನು ಸ್ವಾಗತಿಸಿ, ಈ ಯೋಜನೆಯನ್ನು ಮೊತ್ತಮೊದಲು ದೇಶದ ಮುಂದಿಟ್ಟ ಬಂಗಾಳ—ಬಿಹಾರಗಳ ಮುಖ್ಯ ಮಂತ್ರಿಗಳನ್ನು ಅಭಿನಂದಿಸಿದುದು ಮಾತ್ರವಲ್ಲದೆ, ದಕ್ಷಿಣ ಪ್ರದೇಶ ಅಥವಾ ಅದರಂಥ ಇನ್ನಾವುದಾದರೂ ಪ್ರಾಂತ ಒಕ್ಕೂಟದೊಂದಿಗೆ ಕರ್ಣಾಟಕವನ್ನು ಅತ್ಯಗತ್ಯವಾಗಿ ವಿಲಯನಗೊಳಿಸಿ, ಭಾಷಾನುಗುಣ ಪ್ರಾಂತ ರಚನೆಯಿಂದ ಉಂಟಾಗುವ ವಿಷಮಯ ವಾತಾವರಣವನ್ನು ಪರಿಶುದ್ಧಗೊಳಿಸಬೇಕಾಗಿಯೂ ಈ ಸಭೆಯಲ್ಲಿ ಸರ್ವಾನುಮತಿಯ ನಿರ್ಣಯವನ್ನು ಮಾಡಲಾಯಿತು.

ಶಿರ್ವ— ಇಲ್ಲಿಯ ಸೈಂಟ್‌ಮೇರಿಸ್ ಹ್ಯಾಸ್ಕೂಲಿನಲ್ಲಿ ತಾ. 3ರಲ್ಲಿ ರತ್ನಾಕರ ವರ್ಣಿ ಕವಿ ಜಯಂತಿಯು ಶ್ರೀ ಧರ್ಮಸ್ಥಳ ಪುಟ್ಟುಸ್ವಾಮಿಯವರ ಅಧ್ಯಕ್ಷತೆಯಲ್ಲಿಆಚರಿಸಲ್ಪಟ್ಟಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಲ್. ಮೆಂಡೋನ್ಸಾ, ಅವರು ಸ್ವಾಗತಭಾಷಣ ಮಾಡಿದರು. ಬಳಿಕ ಅಧ್ಯಕ್ಷರು ಕವಿಯ ಭಾವಚಿತ್ರವನ್ನು ಅನಾವರಣಮಾಡಿದರು. ತದನಂತರ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರಿಂದ ಉಪನ್ಯಾಸವಾಗಿ ಶ್ರೀ ಎಚ್. ಕೆ. ರಾಮಚಂದ್ರ ಮೂರ್ತಿಯವರಿಂದ ಕಾವ್ಯವಾಚನವಾಯಿತು. ಅಧ್ಯಕ್ಷ ಭಾಷಣ ನಂತರ ‘ವಿಜಯ’ ವೆಂಬನಾಟಕ ಅಭಿನಯಿಸಲಾಯಿತು.

ಅದೇ ಶಾಲೆಯ ವರ್ಧಂತ್ಯುತ್ಸವವು ತಾ. 4ರಲ್ಲಿ ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತಭಾಷಣ, ವರದಿವಾಚನಗಳಾದ ಬಳಿಕ ಶ್ರೀ ಕೃಷ್ಣಮೂರ್ತಿ ಆಚಾರ್ಯರು ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣಾನಂತರ ವಿವಿಧ ವಿನೋದಾವಳಿಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ನಾವೂರು— ಮಲೆನಾಡು ಪ್ರದೇಶವಾಗಿ ಒಂದು ಕಾಲದಲ್ಲಿ ಬಂಜರು ಬಿದ್ದಿದ್ದು ಇತ್ತೀಚೆಗೆ ಶ್ರೀ ಬಿ ನಾರಾಯಣ ಶೇಕರು ಕೃಷಿ ಕ್ಷೇತ್ರವಾಗಿ ಮಾರ್ಪಡಿಸಿರುವ ನಾವೂರು ಎಸ್ಟೇಟಿಗೆ ಕಳೆದ ತಾ. 25ರಂದು ಜಿಲ್ಲೆಯ ಪ್ರಸಿದ್ಧ ಉದ್ಯಮಶೀಲರಾದ ಡಾ. ಟಿ. ಮಾಧವ ಪೈಗಳು ಸಂದರ್ಶನವಿತ್ತು ಶ್ರೀ ಶೇಕರ ಪ್ರಯತ್ನ, ಅಲ್ಲಿಯ ಅಭಿವೃದ್ಧಿಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರೆಂದೂ ಕೃಷಿಕರಿಗೆ ಇದೊಂದು ಮೇಲ್ಪಂಕ್ತಿಯೆಂದೂ ಅಧಿಕಾರಿಗಳು ಸಹ ಇದನ್ನು ಸಂದರ್ಶಿಸಿ ಪ್ರೋತ್ಸಾಹಿಸುವುದು ಯೋಗ್ಯವೆಂದೂ ಅಭಿಪ್ರಾಯ ಪಟ್ಟಿರುವರಾಗಿ ತಿಳಿದುಬರುತ್ತದೆ.

ಪಿದಮಲೆ—ಸ್ಥಳೀಯ ಬೋರ್ಡು ಪ್ರಾಥಮಿಕ ಶಾಲೆಯುಪ್ಪಳಿಗೆಗಾಗಿ ಕಾರ್ಯವೇಗುವರೆ ತಾ. ೫ರಲ್ಲು ಸಾರ್ವಜನಿಕ ಸಭೆಯೊಂದು ಕಲ್ಲಮುಂಡ್ಕೂರ್ ವಿಲೇಜ್ ಗ್ಯಾಡ್ ಶ್ರೀ ಬಿ. ಎಮ್. ಅಹಮ್ಮದ್ ಬಾಪಾರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಆರ್. ಮುಳಗೀಕರರು ಅಧ್ಯಕ್ಷರಾಗಿಯೂ, ಎಮ್. ಆನಂದರಾಯರು ಉಪಾಧ್ಯಕ್ಷ ಹಾಗೂ ಖಜಾಂಜಿಯಾಗಿಯೂ, ಟಿ. ಡಿ'ಸೋಜ ಮತ್ತು ಗೋಪಾಲ ಸೆಟ್ಟರು ಕಾರ್ಯದರ್ಶಿಗಳಾಗಿಯೂ ಇರುವ ಶಾಲಾ ಕಮಿಟಿಯೊಂದು ರಚಿಸಲ್ಪಟ್ಟಿತು.

THE VIJAYA BANK LIMITED, UDIPI.

ದಿ ವಿಜಯ ಬೇಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದೆ ಈಡಿನ ಮೇಲೆ ಸಾಲ ಪಡಕೊಂಡು, ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿದುದರಿಂದಲೂ, ಸದರಿ ಸಾಲವನ್ನು ಬ್ರನಾಡಿಕೊಳ್ಳುವರೆ, ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೇ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ. 13—2—56ನೇ ಶನಿವಾರ ಮಧ್ಯಾಹ್ನ ಘಂಟೆ 3ಕ್ಕೆ ಸರಿಯಾಗಿ ಅಥವಾ ಬ್ಯಾಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ ತಾ. 31_12_55ರ ವರೇಗೆ ರೂ. ಅ. ಪೈ.
168/54	ಪಿ. ಸಂಕು ಪೂಜಾರಿ. ನಿದಿಯ ಪೂಜಾರಿಯವರ ಮಗ. ಕಂಟ್ರಾಕ್ಟರ್, ಕೊಡವೂರು.	125 7 0
355/54	ಸಂಕಪ್ಪ ಶೆಟ್ಟಿ. ಸಿದ್ದಯ್ಯ ಶೆಟ್ರ ಅಳಿಯ, ಮರ್ಣೆ ಗ್ರಾಮ, ಪೋಸ್ಟು ಮೂಡು ಬೆಳ್ಳೆ.	29 14 0
379/54	ಬಿ. ಜಯರಾಮ ಹೆಗ್ಡೆ. ಶ್ರೀಧರ ಬಲ್ಲಾಳರ ಮಗ. ಅಜ್ಜರಕಾಡು, ಉಡುಪಿ.	171 5 0
421/54	ನರಸಿಂಹ ಹೆಗ್ಡೆ. ಉಮಣ್ಣ ಯಾನೆ ನಾಗಪ್ಪ ಹೆಗ್ಡೇರ ಅಳಿಯ, ಕುಕ್ಕೆಹಳ್ಳಿ ದೊಡ್ಡಬೀಡು ಪೋಸ್ಟು ಕುಕ್ಕೆಹಳ್ಳಿ.	85 3 3
669/54	ಯಮ್. ಅಬ್ದುಲ್ ಹಮೀದ್ ಸಹೇಬ್. ಪೀರ್ ಮಹಮ್ಮದ್ ಸಾಹೇಬರ ಮಗ ಪೋಸ್ಟ್‌ಮೇನ್, ಕಟಪಾಡಿ.	113 0 [illegible]
105/55	ಕೆ. ಅಚ್ಚಣ್ಣ ಹೆಗ್ಡೆ. ನಾರಾಯಣ ಶೆಟ್ರ ಮಗ, ಕುಕ್ಕೆಹಳ್ಳಿ ಬೈಲುಬೀಡು, ಪೋಸ್ಟ್, ಕುಕ್ಕೆಹಳ್ಳಿ.	65 8 0

UDIPI: 6—2—1956 } B. S. S. HEGDE, AGENT.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

‘ಮುಕ್ತಿಗೆ ಭಕ್ತಿಯೇ ಕಾರಣ’ ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0
ನವಯುಗ ಪ್ರೆಸ್ ಉಡುಪಿ

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರೆರಿಗಳಿಗೆ ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ಮಂಗಳೂರು

ಮಂಗಳೂರು ಪತ್ರಿಕೋದ್ಯಮಿ ಸಂಘದ ಕಾರ್ಯಕಾರೀ ಸಮಿತಿ ಸಭೆಯು ಕಳೆದ ತಾ. 31ರಲ್ಲಿ ಶ್ರೀ. ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ತಮಿಳುನಾಡು, ಕೇರಳ, ಕರ್ನಾಟಕಗಳನ್ನು ಸೇರಿಸಿ ದಕ್ಷಿಣ ಪ್ರದೇಶವೆಂದು ಹೆಸರಿಡಬೇಕೆಂಬ ಸೂಚನೆಗೆ ಅಸಮಾಧಾನ ವ್ಯಕ್ತಪಡಿಸಿ, ಈ ಸೂಚನೆಯು ಕನ್ನಡಿಗರ ಹಿತಕ್ಕೆ ವಿರೋಧವಾಗಿಯೂ, ಭಾಷಾವಾರು ರಾಜ್ಯ ರಚನೆಯ ಮೂಲಕ್ಕೇ ಪೆಟ್ಟು ಕೊಡುವಂತಹದಾಗಿರುವ ಪ್ರತಿಗಾಮಿ ಹೆಜ್ಜೆಯೆಂದು ಅಭಿಪ್ರಾಯ ವ್ಯಕ್ತಪಡಿಸಿ, ಬಹು ಭಾಷಾರಾಜ್ಯದ ಈ ನೂತನ ಸೂಚನೆಯನ್ನು ಮುಂದೊಡ್ಡುವ ಪ್ರತಿನಿಧಿಗಳ ನಿಲುಮೆಯನ್ನು ಖಂಡಿಸಲಾಯಿತು.

ಎಸ್. ಆರ್. ಎಸ್. ಹೋಮಿನ ವಾರ್ಷಿಕ ದಿನಾಚರಣೆ – ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕ ದಿನಾಚರಣೆಯು ತಾ. ೨ರಲ್ಲಿ ಸಂಜೆ ಮೈಸೂರಿನ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆಯರಾದ ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ಸಮಾರಂಭದಲ್ಲಿ ಡಾ| ಎಚ್. ವಿ. ಆಡಹರ ನಿಧನಕ್ಕಾಗಿ ಸಂತಾಪ ಸೂಚಿಸಿ ಎರಡು ನಿಮಿಷಗಳ ಮೌನ ಪ್ರಾರ್ಥನೆಯಾಯಿತು. ಬಳಿಕ ಹಾಸ್ಟೆಲಿನ ಗೌರವ ಸುಪರಿಂಟೆಂಡೆಂಟ್ ಡಾ| ಬಿ. ಆರ್. ಹೆಗ್ಡೆಯವರು ಸ್ವಾಗತ ಭಾಷಣವಿತ್ತರು. ಶ್ರೀ ಎ. ರಾಮಣ್ಣನವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟು, ಈ ಹಾಸ್ಟೆಲಿನಲ್ಲಿ ಕನಿಷ್ಠ ಪಕ್ಷ 25 ಮಂದಿ ಬಡವಿದ್ಯಾರ್ಥಿಗಳಿಗೆ ಧರ್ಮಾರ್ಥ ಊಟ ವಸತಿ ಯೊದಗಿಸುವ ಏರ್ಪಾಡು ಆಗುವಂತೆ ಕಾರ್ಯ ಕೈಕೊಳ್ಳಬೇಕೆಂದರು. ನಂತರ ಕಾರ್ಯದರ್ಶಿ ಶ್ರೀ ವಿ. ವಿಠಲ ರೈಗಳು ಶುಭಕೋರಿ ಬಂದ ಸಂದೇಶಗಳನ್ನೋದಿದರು. ಶ್ರೀ ಎಚ್. ಸಿ. ದಾಸಪ್ಪನವರು ಬಹುಮಾನ ವಿತರಣೆ ಮಾಡಿದ ತರುವಾಯ ಜತೆಕಾರ್ಯದರ್ಶಿ ಶ್ರೀ ಬಿ. ಸದಾನಂದ ರೈಗಳು ವರದಿ ವಾಚನ ಮಾಡಿದರು. ವಿಜಯ ಬ್ಯಾಂಕಿನ ಸುಪರಿಂಟೆಂಡೆಂಟ್ ಶ್ರೀ ಸಿ. ಜಯರಾಮ ಶೆಟ್ಟರು ಹಾಸ್ಟೆಲಿನ ಸ್ವಸ್ತಿ ವಾಚನ ಮಾಡಿದರು. ಶ್ರೀ ಎ. ವಿ. ರೈಗಳು ಉತ್ತರ ವಿತ್ತರು. ಶ್ರೀಮತಿ ಯಶೋಧರಾ ದಾಸಪ್ಪನವರು ತಮ್ಮ ಭಾಷಣದಲ್ಲಿ, ಸ್ವಾತಂತ್ರ್ಯವನ್ನು ಹೆಣ್ಣಾಗಲೀ, ಗಂಡಾಗಲೀ ಸ್ವಚ್ಛಂದ ವರ್ತನೆಯೆಂದು ತಿಳಿಯಬಾರದು. ನಮ್ಮಲ್ಲಿಯೇ ಆದರ್ಶವಿಲ್ಲದಿದ್ದರೆ ಇತರರಿಗೆ ಆದರ್ಶ ಹೇಳಲು ನಮಗೆ ಹಕ್ಕಿಲ್ಲ. ನಮ್ಮ ವಿದ್ಯಾರ್ಥಿ ನಿಲಯಗಳಲ್ಲಿ ಅಭಿಮನ್ಯು, ಲವಕುಶರಂತವರು ಬೆಳೆಯಬೇಕು. ಅಂತಹ ಪುತ್ರರಿದ್ದರೆ ತಂದೆತಾಯಿಗಳಿಗೂ ಹೆಮ್ಮೆ. ನಮ್ಮ ಮುಂದಿನ ಜನಾಂಗ ಉತ್ತಮವಾಗಿ ದೇಶದಲ್ಲಿ ಐಕ್ಯ ಸೌಹಾರ್ದಗಳು ನೆಲೆಸಬೇಕಾದರೆ ನಮ್ಮನ್ನು ನಾವೇ ಸುಧಾರಿಸಿಕೊಳ್ಳಬೇಕು. ಪ್ರೀತಿ, ವಿಶ್ವಾಸ, ತ್ಯಾಗ, ಸೇವೆಗಳಿಂದ ನಾವು ಆಂತರಿಕ ಸುಧಾರಣೆ ಮಾಡಿಕೊಂಡು ದೇಶದ ಉನ್ನತಿ ಸಾಧಿಸಬೇಕು, ಕೋಮುವಾರು ಭಾವನೆಯನ್ನು ತೊಲಗಿಸಿ, ವಿಶ್ವ ಸಹೋದರತ್ವ ವಿಶ್ವಪ್ರೇಮಗಳನ್ನು ಬೆಳೆಸಬೇಕು ಎಂದು ಮಾರ್ಮಿಕವಾಗಿ ಹೇಳಿದರು. ವಂದನಾರ್ಪಣೆ, ವಿವಿಧ ಕಲಾ ಸಾಂಸ್ಕೃತಿಕ ಪ್ರದರ್ಶನಗಳಾಗಿ ಸಮಾರಂಭ ಕೊನೆಗೊಂಡಿತು.

ಗವರ್ನಮೆಂಟ್ ಕಾಲೇಜು ದಿನಾಚರಣೆಯು—ತಾ. 4ರಲ್ಲಿ ಸಂಜೆ ಕೊಡಗಿನ ಚೀಫ್ ಕಮಿಶನರ್ ಶ್ರೀ. ಟಿ. ಜಿ. ಎನ್. ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ. ಟಿ. ಕೆ. ಲಕ್ಷ್ಮಣನ್, ಅವರು ವರದಿಯನ್ನೋದಿದರು. ಕಾಲೇಜ್ ಲೆಕ್ಚರರ್ ಶ್ರೀ. ರಾಮಾಚಾರ್ಯರವರು ಸಂದೇಶಗಳನ್ನೋದಿದರು.

ಕಾಲೇಜಿನ ಹಳೆವಿದ್ಯಾರ್ಥಿ, ಜ್ಯುಡಿಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಕೆ. ಸೀತಾರಾಮರಾಯರು ಸ್ವಸ್ತಿ ವಾಚನ ಮಾಡಿದರು. ಯೂನಿಯನ್ ಅಧ್ಯಕ್ಷೆ ಕುಮಾರಿ ಎಮ್. ರತ್ನಕುಮಾರಿಯವರು ಅದಕ್ಕುತ್ತರಿಸಿದರು. ಶ್ರೀಮತಿ ಅಯ್ಯಂಗಾರರು ಬಹುಮಾನ ವಿತರಣೆ ಮಾಡಿದರು. ವರದಿ ವರ್ಷದ ಚ್ಯಾಂಪಿಯನ್ ಶಿಪ್ ಕಪ್ಪನ್ನು ರಾಮಪ್ಪ ನಾಯ್ಕರು ಪಡೆದರು. ಎಲ್ಲಾ ಆಟಗಳಲ್ಲಿ ಉತ್ತಮ ಆಟಗಾರರ ಬಹುಮಾನವು ಶ್ರೀ ದಾಮೋದರ ಮಲ್ಯರಿಗೆ ದೊರೆಯಿತು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ, ಇಂದು ಶಿಕ್ಷಣ ಕ್ಷೇತ್ರದಲ್ಲಿ ಎದುರಿಸುತ್ತಿರುವ ಒಂದು ಸಮಸ್ಯೆ—ವಿದ್ಯಾರ್ಥಿಗಳಲ್ಲಿನ ಅಶಿಸ್ತು. ಅದರ ಕಾರಣ ಕಂಡು ಹಿಡಿಯಲು ಒಂದು ಸಮಿತಿ ನೇಮಿಸಬೇಕೆಂಬ ಸೂಚನೆ ಈಗ ಬಂದಿದೆ. ಆದರೆ ಸಮಿತಿ ನೇಮಿಸಿದರೆ ಸಮಸ್ಯೆಯ ಪರಿಹಾರವನ್ನು ಮುಂದಕ್ಕೆ ತಳ್ಳಿದಂತಾಗುವುದೇ ಹೊರತು ಮತ್ತೇನೂ ಸಾಧಿಸಲು ಸಾಧ್ಯವಿಲ್ಲ. ಈ ಅಶಿಸ್ತಿನ ಕಾರಣವನ್ನು ಕಂಡು ಹಿಡಿಯಲು ನಮ್ಮೊಳಗೇ ನಾವು ಅಂತರಾವಲೋಕನ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಅಶಿಸ್ತಿನ ಪ್ರಶ್ನೆಯನ್ನು ನಾವು ಸಹೃದಯತೆಯಿಂದ ಪರಿಶೀಲಿಸಬೇಕು ಎಂದು ಮಾರ್ಮಿಕವಾಗಿ ಹೇಳಿದರು. ಶ್ರೀ ಎಮ್. ರಾಮಚಂದ್ರ ಶೇನವರು ಧನ್ಯವಾದವಿತ್ತರು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ವಿವಿಧ ವಿನೋದಾವಳಿಗಳಾದುವು.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ಪ.)

ಶ್ರೀ ಬಾಹುಬಲಿ ಸ್ವಾಮಿಯ ಚರಿತ್ರೆ—

ಬರೆದವರು: ಪಂಡಿತ ರತ್ನ ಶ್ರೀ ಎ. ಶಾಂತಿರಾಜ ಶಾಸ್ತ್ರಿ. ಪ್ರಕಾಶಕರು: ವಿವೇಕಾಭ್ಯುದಯ ಕಾರ್ಯಾಲಯ, ವೀರಭವನ, ಮಂಗಳೂರು. ಬೆಲೆ: ರೂ. ೦—೪—೦.

ಗೋಮಟನೆಂದು ಜನಪ್ರಿಯನಾಗಿರುವ ಮೋಹನಾಂಗ ಬಾಹುಬಲಿಯ ಜೀವನ ವೃತ್ತಾಂತವನ್ನು ಜೈನಶಾಸ್ತ್ರಾನುಸಾರವಾಗಿ ಇಲ್ಲಿ ಬರೆಯಲಾಗಿದೆ. ಶೈಲಿಯು ಉತ್ತಮವಿದೆ; ಕಥನಕ್ರಮವು ಸೊಗಸಾಗಿದೆ. ದಿಗಂಬರತ್ವ, ಗೋಮಟಶಬ್ದದ ವ್ಯುತ್ಪತ್ತಿ ವಿಚಾರ, ಗೋಮಟ ಮೂರ್ತಿಯ ಪ್ರತಿಷ್ಠೆಯ ಕಾಲ ಇತ್ಯಾದಿಗಳಿಗೆ ಸಂಬಂಧಿಸಿ ಕೆಲವಂಶಗಳನ್ನು ಪುಸ್ತಕದ ಕೊನೆಯಲ್ಲಿ ಕೊಟ್ಟಿರುವುದರಿಂದ ಬಾಹುಬಲಿ ಸ್ವಾಮಿಯ ಚರಿತ್ರೆಯನ್ನು ಹೆಚ್ಚಿನ ಆಸಕ್ತಿಯಿಂದ ಓದುವಂತಾಗಿದೆ.

ಸೂತ್ರಧಾರಿ—

ಬರೆದವರು: ಮಧುಕರ. ಪ್ರಕಾಶಕರು: ಚಾತಕ ಪ್ರಕಾಶನ, ೪೨, ಜರ್ನಲಿಸ್ಟ್ಸ್ ಕಾಲನಿ, ಶ್ರೀ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೨ ಬೆಲೆ: ರೂ. ೦—೫—೦.

ಇದೊಂದು ಪತ್ತೇದಾರಿ ಕತೆ; ರೋಮಾಂಚಕವಾಗಿ ಬರೆಯಲಾಗಿದೆ. ಕಾಲವು ಅತ್ಯಾಧುನಿಕವಾಗಿದ್ದು, ಈಗಿನ "ಸ್ಟಂಟ್" ಚಿತ್ರಗಳಿಗೂ ಒಂದು ಹೆಜ್ಜೆ ಮುಂದಾಗಿ ಓಡುವಂತಿದೆ ಇಲ್ಲಿಯ ವಸ್ತು. ಪುಸ್ತಕದ ಆಕಾರ ಮತ್ತು ಮುದ್ರಣ ಮಾತ್ರ ಅಷ್ಟು ಸುಂದರವಾಗಿಲ್ಲ.

ಲಘು ಪರಿಚಯ

● ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಬೇರೆ ಬೇರೆ ಭಾಷಣಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮುಖಪತ್ರವಾದ "ಕನ್ನಡ ನುಡಿ"ಯು ತನ್ನ ಜನವರಿ ೧೯೫೬ನೇ ಸಂಚಿಕೆಯಲ್ಲಿ ಮುದ್ರಿಸಿ, ಸಮ್ಮೇಳನದಲ್ಲಿ ಭಾಗಿಯಾಗದಿರುವವರಿಗೂ ಅಲ್ಲಿಯ ಸಾಹಿತ್ಯದೂಟದ ರುಚಿ ಹತ್ತುವಂತೆ ಮಾಡಿದೆ. ನಾಟಕ, ಸಣ್ಣ ಕತೆಗಳು ಮತ್ತು ಮಹಿಳೆಯರ ಸಾಹಿತ್ಯ ಸೇವೆಯ ಕುರಿತಾದ ಉಪನ್ಯಾಸಗಳು ಬಹಳ ಮನೋಜ್ಞವಾಗಿದೆ.

● ಮೂಲ್ಕಿಯ ಸರಕಾರಿ ಹೈಸ್ಕೂಲಿನ ಪರವಾಗಿ ಪ್ರಕಟವಾದ ವಾರ್ಷಿಕ ಪತ್ರಿಕೆಯು ಸಂಪಾದಕರು ಹೇಳಿಕೊಂಡಿರುವಂತೆ ಒಂದೆರಡು ವಿಷಯಗಳಲ್ಲಿ ಬೇರೆ ಶಾಲೆಗಳವರ ಉಪಕ್ರಮಕ್ಕಿಂತ ಭಿನ್ನವಾಗಿದೆ. ಶಾಲಾ ವರದಿಯು ಆಕರ್ಷಕವಾಗಿ ಬರೆಯಲ್ಪಟ್ಟಿರುವುದಲ್ಲದೆ "ಶಾಲೆಯಲ್ಲಿ ನಾನು ಮೆಚ್ಚಿದ ಮೂರು ವಿಷಯಗಳು" ಎಂಬ ವಿಚಾರ ಸಂಕಲನವು ಹೊಸ ಮಾದರಿಯಾಗಿದೆ. ಮುಖ್ಯೋಪಾಧ್ಯಾಯರಾಗಿರುವ ಶ್ರೀ ಕೆ. ವಿಠಲ ಶೆಣೈಯವರು ತಾವು ಈಚೆಗೆ ಕೈಗೊಂಡಿದ್ದ ಅಮೇರಿಕದ ಪ್ರವಾಸ ಕಾಲದಲ್ಲಿ ಭಾರತೀಯರನ್ನು ಆ ದೇಶದ ಜನ ಕಂಡ ರೀತಿಯನ್ನು ವಿವರಿಸಿ ಬರೆದ ಲೇಖನವು ವಿಚಾರಪರಿಪ್ಲುತವಾಗಿದೆ.

● "ರಾಯಭಾರಿ" ವಾರಪತ್ರಿಕೆಯು ಉಡುಪಿಯ ಪರ್ಯಾಯ ಕಾಲದಲ್ಲಿ ವಿಶೇಷ ಸಂಚಿಕೆಯನ್ನು ಹೊರಡಿಸಿ ಕನ್ನಡನಾಡಿನ ಓದುಗರಿಗೆ ಹಬ್ಬದೂಟವನ್ನು ನೀಡಿದೆ. ಪ್ರಿನ್ಸಿಪಲ್ ಕೃಷ್ಣಕುಮಾರ ಕಲ್ಲೂರರು ಈ ಸಂಚಿಕೆಯಲ್ಲಿ ಬರೆದಿರುವ "ತುಂಗಭದ್ರೆಯೂ ದಕ್ಷಿಣಕನ್ನಡವೂ" ಎಂಬ ಲೇಖನವು ನಿಯುಕ್ತ ಕರ್ನಾಟಕ ರಾಜ್ಯದ ವರಿಷ್ಠರ ಹಾಗು ಜನತಾ ಧುರೀಣರ ಗಮನಸೆಳೆಯುವಷ್ಟು ಪ್ರಭಾವಿಯಾಗಿವೆಯಲ್ಲದೆ ನಮ್ಮ ಜಿಲ್ಲೆಯ ಜನರು ಅತ್ಯವಶ್ಯವಾಗಿ ಒತ್ತಾಯದಿಂದ ರಾಜಕೀಯ ಮುಖಂಡರ ಗಮನ ಹರಿಯುವಂತೆ ನೋಡಿಕೊಳ್ಳಬೇಕಾದಷ್ಟು ಮಹತ್ವದ ಯೋಜನೆಯೊಂದರ ಉಪಾಯದಿಂದ ಕೂಡಿದೆ. ಇತರ ಲೇಖನಗಳೂ ಒಳ್ಳೆಯವಾಗಿವೆ.

● "ಸುದರ್ಶನ" ವಾರಪತ್ರಿಕೆಯ ಪರ್ಯಾಯ ಸಂಚಿಕೆಯು ಉತ್ಸವಕ್ಕೆ ಹೆಚ್ಚು ಪ್ರಾಧಾನ್ಯವನ್ನಿತ್ತು ಪ್ರಕಟವಾಗಿದೆ. 'ವೇದದಲ್ಲಿ ಭಕ್ತಿಯ ಕಲ್ಪನೆ" ಎಂಬ ವಿಚಾರಪೂರ್ಣ ಲೇಖನವನ್ನು ಈ ಸಂಚಿಕೆಗೆ ಬರೆದು ಪ್ರಿನ್ಸಿಪಲ್ ಕೌಲಗಿ ಶೇಷಾಚಾರ್ಯರು ಆಸ್ತಿಕರಿಗೆ ಹೊಸ ಆಸ್ತಿ ನೀಡಿದ್ದಾರೆ.

○ "ಪ್ರಭಾತ" (ಮಂಗಳೂರು), "ಸರಸ್ವತಿ" (ಬೆಂಗಳೂರು), "ಚಲಚ್ಚಿತ್ರ" (ಬೆಂಗಳೂರು)— ಈ ಪತ್ರಿಕೆಗಳ ಪ್ರಜಾರಾಜ್ಯ ವಿಶೇಷಾಂಕಗಳು ಕೈಸೇರಿವೆ. "ಪ್ರಭಾತ"ವು ಕೆಲವು ಸಮಯೋಚಿತ ಲೇಖನಗಳಿಂದ ಕೂಡಿದೆ. "ಸರಸ್ವತಿ"ಯ ಮಕ್ಕಳ ಮೂಲೆಯಲ್ಲಿ ರಷ್ಯದ ಪ್ರಭೃತಿಗಳ ಪ್ರವಾಸದ ಚಿತ್ರಗಳ ಸುಗ್ಗಿಯಿದೆಯಲ್ಲದೆ ಮಂತ್ರಿ ಮಹೋದಯರ ಲೇಖನಗಳು ಉಳಿದ ಭಾಗದ ವೈಶಿಷ್ಟ್ಯ. "ಚಲಚ್ಚಿತ್ರ"ವು ವಿದ್ಯುದ್ಯುಗದ ಕಲಾಸಾಧನವಾದ ಚಿತ್ರಗಳಿಗೆ ಸಂಬಂಧಿಸಿ ಹಲವು ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸಿದೆ.

"ಲೋಕ ರಾಜ್ಯ"ದ ವಿಶೇಷ ಸಂಚಿಕೆಯಲ್ಲಿ ಮುಂಬಯಿ ರಾಜ್ಯದಲ್ಲಿ ಪಂಚವಾರ್ಷಿಕ ಯೋಜನೆಯಂತೆ ಕೈಗೊಳ್ಳಲಾದ ಅಭಿವೃದ್ಧಿ ಪ್ರಯತ್ನಗಳ ವಿಸ್ತೃತ ವಿವರಣೆಯೂ ಹಲವು ಯೋಜನೆಗಳ ಪರಿಚಯ ಮಾಡಿಸಿಕೊಡುವ ಲೇಖನಗಳೂ ಇವೆ. ಬಹಳ ಸುಂದರವಾಗಿ ಮುದ್ರಣಗೊಂಡು ವಿಷಯಕ್ಕೊಪ್ಪುವ ಚಿತ್ರಗಳಿಂದಲೂ ಕೆಲವು ಬಣ್ಣದ ಚಿತ್ರಗಳಿಂದಲೂ ಒಪ್ಪುವ ಈ ಸಂಚಿಕೆ ಆ ರಾಜ್ಯದಲ್ಲಿರುವ ಕನ್ನಡಿಗರ ಪಾಲಿನ ನೀಡಲಾದ ಗಣ್ಯ ಕಾಣಿಕೆಯೇ ನಿಜ.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಗೀತೆಯ ಕೈಗನ್ನಡಿ

ನವಯುಗ ಪ್ರೆಸ್, ಉಡುಪಿ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:–

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೊ:– (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkpet, UDIPI, S. Kanara.

ಫೋನ್ ನಂಬ್ರ 66

ಮಹಿಳಾ ಸಾಹಿತ್ಯ! ನವೀನ ಪುಸ್ತಕ!

ಕುಮಾರಿ ಪಿ. ಯಶೋದಾ ಅವರು ಬರೆದ

ಬಾಳಿನ ಬೆಳಕು

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪ್ರೊ, ಉಡುಪಿ.

ತುಂಗಭದ್ರೆಯೂ ದಕ್ಷಿಣ ಕನ್ನಡವೂ

(೩ನೇ ಪುಟದಿಂದ)

ಹಾಲುವಳ್ಳಿಯ ಅಣೆಕಟ್ಟು

ಆದರೆ, ಈ ಜಲಾಶಯ ಆಳದಲ್ಲಿ ಐದಾರು ನೂರು ಅಡಿಯಾದರೂ ವಿಸ್ತಾರದಲ್ಲಿ ಕಿರಿದಾಗುತ್ತದೆ. ಅಲ್ಲದೆ ಸಾಕಷ್ಟು ಜಲಪ್ರಸ್ತಾರ ಒದಗುವುದಿಲ್ಲ. ಕಾರಣ ಕಳಸದ ಈಶಾನ್ಯಕ್ಕೆ ಭದ್ರೆಯ ಎಡದಂಡೆಯಲ್ಲಿರುವ ಹಾಲುವಳ್ಳಿಯ ಬಳಿ ಒಂದು ಅಣೆಕಟ್ಟು ಕಟ್ಟಿದರೆ ಜಲಾಶಯವೂ ಜಲಪ್ರಸ್ತಾರವೂ ಹೆಚ್ಚುವುದರಿಂದ ಹೆಚ್ಚು ಪ್ರಯೋಜನವಾಗುವುದು. ಹಾಲುವಳ್ಳಿಯ ಅಣೆಕಟ್ಟು ಮಾತ್ರ ನೆಲ್ಲಿಬೀಡಿನ ಅಣೆಕಟ್ಟಿನಷ್ಟು ಎತ್ತರವಾಗದು. ಎಂದರೆ ಸಮುದ್ರ ಮಟ್ಟದಿಂದ ಸುಮಾರು ೩೦೦೦ ಅಥವಾ ೩೨೦೦ ಅಡಿ ವರೆಗೆ ಮಾತ್ರ ಎತ್ತರವಾಗಬಲ್ಲುದು. ಆದರೆ, ಇದರಿಂದಾಗುವ ಜಲಾಶಯ ಸುಮಾರು ೯೦ ಚದರ ಮೈಲನ್ನು ಮಿಕ್ಕಬಹುದಲ್ಲದೆ, ಇದರ ಜಲಪ್ರಸ್ತಾರ ೨೦೦ ಚದರ ಮೈಲಿಗೂ ಮಿಕ್ಕುವುದು. ನೆಲ್ಲಿಬೀಡಿನಿಂದುಂಟಾಗುವ ಜಲಾಶಯವೂ ಇದರಲ್ಲೇ ಒಳಗೊಳ್ಳುವುದು; ಹಾಗು ಈ ಜಲಾಶಯದ ನೀರೂ ಹುಲ್ಲುಗುಡ್ಡೆಯ ಬಳಿ ಬೆಟ್ಟದ ನೆತ್ತಿಯನ್ನು ತಾಗುವುದರಿಂದ ಮಾಪಳದ ಯೋಜನೆಗೂ ಅನುಕೂಲವಾಗುವುದು.

ಹಾಲುವಳ್ಳಿ, ಮೇರುತಿ ಶಿಖರದ ಒಂದು ಭುಜ ಭದ್ರಾ ಕೊಳ್ಳದಲ್ಲಿ ಅಡ್ಡ ಹಾಯುವಲ್ಲಿ, ಆ ಶಿಖರದ ದಕ್ಷಿಣಕ್ಕೆ ೩ ಮೈಲಿನ ಅಂತರದಲ್ಲಿದೆ. ಅದಕ್ಕೆದುರಾಗಿ, ನದಿಯ ಬಲಮಗ್ಗುಲು, ೨ ಮೈಲಿನಲ್ಲಿರುವ ಮಲ್ಲರಸನ ಗುಡ್ಡ ಎಂಬ ೪೦೦೦ ಅಡಿ ಎತ್ತರದ ಶಿಖರದ ಮತ್ತೊಂದು ಭುಜ ಉತ್ತರಕ್ಕೆ ನದಿಯನ್ನು ಒತ್ತಿ ಸಾಗಿದೆ. ಹೀಗೆ ಮೇರುತಿಯ ಹಾಗು ಮಲ್ಲರಸನ ಗುಡ್ಡದ ಭುಜಗಳು ಎದುರುಬದುರಾಗಿ ಉಂಟುಮಾಡಿದ ಕಣಿವೆಯೊಳಗಿಂದ ಭದ್ರೆ ಹರಿಯುತ್ತಾಳೆ. ಹಾಲುವಳ್ಳಿಯು ಕಳಸ-ಬಾಳೆ ಹೊನ್ನೂರುಗಳ ರಸ್ತೆದಾರಿಯಲ್ಲಿದ್ದು ಹಾಲುವಳ್ಳಿಯಿಂದ ಹಿರೆಬೈಲಿಗೆ ಹೋಗುವ ರಸ್ತೆ ಈ ಕಣಿವೆಯ ಬಳಿಯೇ ನದಿಯನ್ನು ಹಾಯುತ್ತದೆ. ಇಲ್ಲಿ ನದಿಯ ಪ್ರವಾಹ ಸಮುದ್ರ ಮಟ್ಟದಿಂದ ೨೪೦೦ ಅಡಿ ಎತ್ತರದಲ್ಲಿದೆ. ಇಲ್ಲಿಯ ಅಣೆಕಟ್ಟನ್ನು ೩೨೦೦ ಅಡಿ ಎತ್ತರದವರೆಗೂ ಏರಿಸಬಹುದಾದ್ದರಿಂದ, ಈ ಅಣೆಕಟ್ಟು ಒಟ್ಟು ೮೦೦ ಅಡಿಯ ವರೆಗೂ ಎತ್ತರವಾಗಬಹುದು. ಇದೂ ಸಹ ಜಗತ್ತಿನಲ್ಲೇ ಅತ್ಯಂತ ಎತ್ತರವಾದ ಅಣೆಕಟ್ಟಾಗುವುದು. ೮೦೦ ಅಡಿ ಎತ್ತರವಾದ ಪಕ್ಷದಲ್ಲಿ ಅಣೆಕಟ್ಟಿನ ಉದ್ದಳತೆ ಸಾಧಾರಣ ೧½ ಮೈಲು ಆಗುವುದು. ಎತ್ತರ ಕಡಿಮೆಯಾದಂತೆ ಉದ್ದಳತೆಯೂ ಕಡಿಮೆಯಾಗುವುದು. ಪರಮಾಧಿ ಯೋಜನಕ್ಕೆ ೮೦೦ ಅಡಿ ಬೇಕಾದರೂ ಕನಿಷ್ಠ ಪ್ರಯೋಜನಕ್ಕೆ ೪೦೦ ಅಡಿ ಸಾಕು. ಇಷ್ಟಾದರೆ ಉದ್ದಳತೆ ಮುಕ್ಕಾಲು ಮೈಲಿಗಿಳಿಯುವುದು.

ನೇತ್ರಾವತಿಯ ಕೊಳ್ಳ

ಅಣೆಕಟ್ಟಿನ ಎತ್ತರ ಎಷ್ಟೇ ಆದರೂ, ಈ ಜಲಾಶಯದ ಉಪಯೋಗವಾಗುವುದು ನೇತ್ರಾವತಿ ನದಿಯ ಉಗಮ ಕೊಳ್ಳದಿಂದ ಈ ಕೊಳ್ಳ ಬಂಗಾರ ಬಳಿಗ ಹಾಗು ಬಲ್ಲಾಳರಾಯನ ದುರ್ಗದ ನಡುವೆ ಅರ್ಧ ಚಂದ್ರಾಕಾರವಾಗಿ ದಕ್ಷಿಣಾಭಿಮುಖವಾಗಿದೆ. ಈ ಕೊಳ್ಳದ ನೆತ್ತಿಯಲ್ಲಿ ಬಂಗಾರ ಬಳಿಗ ಶಿಖರದಲ್ಲಿಯೇ ನೇತ್ರಾವತಿಯ ಉಗಮ. ಇದರ ಒಂದು ಶಾಖೆ ಗಟ್ಟದ ನೆತ್ತಿಯಲ್ಲಿರುವ ಗುಟ್ಟಡಕ (ಹಳ್ಳಿ)ದ ಬಳಿ ಗಟ್ಟವನ್ನು ಭೇಧಿಸಿ ಸಿಂಸೆ (ಹಳ್ಳಿ)ಯ ಬಳಿ ಭದ್ರಾಕೊಳ್ಳ ನೇತ್ರಾವತಿ ಕೊಳ್ಳಗಳು ಬಹುಮಟ್ಟಿಗೆ ಒಂದನ್ನೊಂದು ಹೊಂದುವಂತೆ ಮಾಡಿದೆ. ಇಲ್ಲಿ ಗಟ್ಟದ ಗೋಡೆ ಎರಡು ಹೋಳಾಗಿ ಸಮುದ್ರಮಟ್ಟದ೩೬೦೦ ಅಡಿಗಳಿಗಿಳಿದಿದೆ. ಇದು ನೇತ್ರಾವತಿ ಹಾಗು ಭದ್ರಾಕೊಳ್ಳದ ನಡುವೆ ಒಂದು ಮಹಾ ದ್ವಾರದಂತಿದೆ. ಗಟ್ಟದ ಕೆಳಗೆ ನೇತ್ರಾವತಿ ಕೊಳ್ಳದಲ್ಲಿರುವ ಮಲವಂತಿಗೆ ಗ್ರಾಮದಿಂದ ಗಟ್ಟವನ್ನೇರಿ ಕಳಸ, ಕುದುರೆ ಮುಖಗಳಿಗೆ ಹೋಗುವ ದಾರಿ ಈ ದ್ವಾರದಲ್ಲೇ ಹಾಯುತ್ತದೆ. ಕಡೂರು—ಮಂಗಳೂರ ಹೆದ್ದಾರಿ ಚಾರ್ಮಾಡಿ ಗಟ್ಟವಿಳಿದು ಮುಂಡಾಜೆಗೆ ಬರುವಲ್ಲಿ ಅಲ್ಲಿಂದ ಉತ್ತರಕ್ಕೆ ೮—೧೦ ಮೈಲಿನಲ್ಲೇ ನೇತ್ರಾವತಿ ತೀರದಲ್ಲೇ ಮಲವಂತಿಗೆ ಇರುವುದು.

ಹಾಲುವಳಿಯ ಅಣೆಕಟ್ಟನ್ನು ಬರೀ ೨೦೦ ಅಡಿ ಎತ್ತರಿಸಿದರೂ ಭದ್ರಾ ಕೊಳ್ಳದ ನೀರು ನೇತ್ರಾವತಿ ಕೊಳ್ಳಕ್ಕೆ ತಾನಾಗಿಯೇ ದುಮುಕ ಬಲ್ಲುದು. ಇಷ್ಟಕ್ಕೆ ಸುಮಾರು ೨೦೦೦ ಅಡಿ ಉದ್ದದ ಅಣೆಕಟ್ಟು ಕಟ್ಟಿದರೂ ಸಾಕು. ಹಾಲುವಳ್ಳಿಯ ಅಣೆಕಟ್ಟನ್ನು ಅದಕ್ಕೂ ಹೆಚ್ಚು ಎತ್ತರಿಸಿದಂತೆ ಗುಟ್ಟಡಕದ ಗಟ್ಟದ ದ್ವಾರದಲ್ಲೂ ನೀರನ್ನು ಹಿಂದೊತ್ತಿ ಹಿಡಿಯಲು ಅಡ್ಡಗೋಡೆ ಕಟ್ಟಬೇಕಾಗುವುದು. ಅಣೆಕಟ್ಟನ್ನು ಬರೀ ೨೦೦ ಅಡಿ ಎತ್ತರಿಸಿದರೂ, ಸುಮಾರು ನೂರು ಅಡಿ ಆಳದ ೫೦ ಚದರ ಮೈಲಿನ ಜಲಾಶಯವಾಗಬಲ್ಲುದು; ಅದಕ್ಕೆ ೨೦೦ ಚದರ ಮೈಲಿನ ಜಲಪ್ರಸ್ತಾರ ಇದ್ದೇ ಇರುವುದು ಈ ಜಲಪ್ರಸ್ತಾರದ ನೀರೊದಗಿಸಬಲ್ಲ ಶಕ್ತಿಯ ಮೇರೆಗೆ ಅಣೆಕಟ್ಟಿನ ಎತ್ತರವನ್ನು ೨೦೦ ಅಡಿಯಿದದ ೮೦೦ ಅಡಿಯ ವರೆಗೆ (ಅವಶ್ಯಕತೆ ಒದಗಿಸುವಂತೆ) ಅಣೆಕಟ್ಟನ್ನು ಏರಿಸಬಹುದು ಜಲಾಶಯ ೧೦೦ ಅಡಿ ಆಳದ ೫೦ ಚದರ ಮೈಲಿನಿಂದ ೫-೬ ನೂರು ಅಡಿ ಆಳದ ೯೦ ಚದರ ಮೈಲಿನ ವರೆಗೂ ಉಂಟಾಗಬಲ್ಲುದು ಆದರೆ ಇದನ್ನು ಏರಿಸಿದಂತೆ ಗುಟ್ಟಡಕದ ಬಳಿ ಅಡ್ಡಗೋಡೆಯನ್ನು ಅದರ ಪರಮಾವಧಿ ಅಳತೆ (೩೦೦ ಅಡಿ ಎತ್ತರ ಅರ್ಧಮೈಲು ಉದ್ದ) ಯವರೆಗೆ ಎತ್ತರಿಸಬೇಕಾಗುವುದು.

ಹೀಗೆ ಉಂಟಾಗುವ ಜಲಾಶಯದಿಂದ ಗುಟ್ಟಡಕದ ಬಳಿ 'ಪೆನ್‌ಸ್ಟಾಕ್' ಗಳನ್ನು ಕಟ್ಟಿ ಕೊಳವೆಗಳ ಮೂಲಕ ಗಟ್ಟದ ಕೆಳಗೆ ೨೨೦೦ ಅಡಿ ಆಳದಲ್ಲಿರುವ ಮಲವಂತಿಗೆ ಅಥವಾ ಅದರ ದಕ್ಷಿಣದ ಪಣೆಕಲ್ಲುಗಳ ಬಳಿಯ 'ಪಾವರ್ ಹೌಸು'ಗಳಿಗಿಳಿಸಬಹುದು. ಹಾಲುವಳ್ಳಿಯ ಅಣೆಕಟ್ಟು ೮೦೦ ಅಡಿ ಎತ್ತರವಾದರೆ, ಪಣೆಕಲ್ಲಿನಲ್ಲಿ ನೀರು ಧುಮುಕುವ ಪರಮಾಧಿ ಅಂತರ ೨೬೦೦—೨೮೦೦ ಅಡಿಯುವರೆಗೂ ಆಗಬಲ್ಲುದು. ತೀರ ಕಡಿಮೆಯ ಎತ್ತರದಲ್ಲೂ ೨೦೦೦ ಅಡಿಗಳ ಜಲಪ್ರಪಾತ ಸಿಕ್ಕೇ ಸಿಕ್ಕುವುದು. ಈ ೨೦೦೦ ಅಡಿಯ ಧುಮುಕುವಿಕೆಯೂ ಜಗತ್ತಿನಲ್ಲೇ ಹೆಚ್ಚಿನದೆನ್ನಬಹುದು. ಜೋಗದ ೧½—೨ ಪಟ್ಟಿನಷ್ಟು. ಮಾಪಳದ 'ಪಾವರ್ ಹೌಸು' ಶಕ್ಯವಾಗದಿದ್ದರೂ ಪಣೆಕಲ್ಲಿನ 'ಪಾವರ್ ಹೌಸಿಗೆ' ಏನೂ ಆತಂಕವಿಲ್ಲ. ಈ ಯೋಜನೆಯ ಪರಮಾವಧಿ ಮಟ್ಟದಲ್ಲಿ ಈ ಜಲಾಶಯ ಜೋಗದ ಹೊನ್ನೆಮರಡು ಯೋಜನೆಯ ೧½-೨ ಪಟ್ಟು ದೊಡ್ಡದಾಗಬಲ್ಲುದು. ಜಲಪ್ರಪಾತದ ಎತ್ತರವೂ ೧½—೨ ಪಟ್ಟು ಹೆಚ್ಚಾಗುವುದು. ಇದರಿಂದ ಹೊನ್ನೆಮರಡು ಯೋಜನೆಯಲ್ಲಿ ಗಣಿಸಲ್ಪಟ್ಟ ೫ ಲಕ್ಷ ಕಿಲೋವ್ಯಾಟ್ಟಿನ ಎರಡರಷ್ಟು ಎಂದರೆ ೧೦ ಲಕ್ಷ ಕಿಲೋವ್ಯಾಟ್ಟಿನ ವಿದ್ಯುಚ್ಛಕ್ತಿ ಇಲ್ಲಿ ಉತ್ಪನ್ನವಾಗುವುದು ಸಾಧ್ಯವಿದೆ. ಎಂದರೆ ಸಧ್ಯ ಜೋಗದಲ್ಲಿ ಉತ್ಪನ್ನವಾಗುವ ಶಕ್ತಿಯ ಹತ್ತು ಪಟ್ಟು. ಇದು ಭಾರತದ ಅತಿ ದೊಡ್ಡ ಯೋಜನೆಯಾದ ಕೋಸಿ (ಬಿಹಾರ) ನದಿ ಯೋಜನೆಗೆ ಸರಿ ಮಿಗಿಲಾಗಬಲ್ಲುದು. ಪರಮಾವಧಿ ಯೋಜನೆಯಲ್ಲಿ ಅದನ್ನು ಮಿಕ್ಕಲೂ ಬಲ್ಲುದು.

ತುಂಗಾ ಯೋಜನೆ

ಇದಲ್ಲದೆ ತುಂಗಾ ಕೊಳ್ಳದಲ್ಲಿಯೂ ಶೃಂಗೇರಿಯ ನೈಋತ್ಯಕ್ಕೆ ೫ ಮೈಲಿನಲ್ಲಿರುವ ಸುಂಕದ ಮನೆಯ ಬಳಿಯಲ್ಲೂ ೩೫೦ ಅಡಿ ಎತ್ತರದ ಮುಕ್ಕಾಲು ಮೈಲುದ್ದದ ಅಣೆಕಟ್ಟಿನ ಸ್ಥಳವಿದೆ. ಇದರಿಂದ ತುಂಗಾ ನದಿಯ ನೀರನ್ನು ಸಮುದ್ರ ಮಟ್ಟದ ೨೨೦೦ ಅಡಿಯಿಂದ ೨೬೦೦ ಅಡಿಯ ವರೆಗೆ ಎತ್ತರಿಸಬಹುದು. ಸರಾಸರಿ ೨೦೦ ಅಡಿ ಆಳದ ೩೦ ಚದರ ಮೈಲು ವಿಸ್ತಾರವಾದ ಜಲಾಶಯ ಇಲ್ಲಿ ಉಂಟಾಗುವುದು. ಇದರ ನೀರೂ ಅನೆಕಲ್ ಗುಡ್ಡೆಯ ಬಳಿ ಪಶ್ಚಿಮ ಗಟ್ಟದ ನೆತ್ತಿಯನ್ನು ತಾಗಿ ಮಿಗಾರಿ ಹರಿಯುವುದು. ಗಟ್ಟದ ಕೆಳಗಿರುವ ಬಾರಕಲ್ಲು ಗ್ರಾಮದ ಬಳಿ "ಪವರ್‌ಹೌಸ್" ಮಾಡಿದರೆ ಇಲ್ಲಿಯೂ ಸಹಾ ೨೦೦೦ ಅಡಿ ಎತ್ತರದಿಂದ ನೀರನ್ನು ಕೊಳವೆಗಳೊಳಗಿಂದ ಕೆಳಗಿಳಿಸಬಹುದು. ಇದರಿಂದ ಸದ್ಯದ ಜೋಗದಷ್ಟಾದರೂ ವಿದ್ಯುಚ್ಛಕ್ತಿಯನ್ನುಂಟು ಮಾಡಬಹುದು.

ತುಂಗಾ ಹಾಗು ಭದ್ರಾ ಯೋಜನೆಗಳಲ್ಲಿ ಭದ್ರೆಯದೇ ಹಿರಿಯದು. ಇವೆರಡಕ್ಕೂ ಸಹಾಯಕಾರಿಯಾಗುವಂತೆ—ಮತ್ತೆ ಕೆಲ ಜಲಾಶಯಗಳನ್ನು ಈ ಪ್ರಸ್ಥಭೂಮಿಯಲ್ಲೇ ಉಂಟುಮಾಡುವುದು ಸಾಧ್ಯವಿದೆ. ಜಗತ್ತಿನಲ್ಲಿಯೇ ಎರಡನೆಯ ಮಟ್ಟದ ವರ್ಷಾಪ್ರಪಾತ ಇಲ್ಲಿರುವುದರಿಂದ ಈ ಜಲಾಶಯಗಳಿಗೆ ನೀರು ಸಾಲದೆ ಹೋಗುವ ಸಂಭವವಿಲ್ಲ. ಅದರೂ ಲಕ್ಕವಳ್ಳಿ, ಹೊಸಪೇಟೆಯ ಜಲಾಶಯಗಳಿಗೂ ನೀರಿನ ಪೂರೈಕೆ ಅವಶ್ಯ. ತುಂಗಭದ್ರೆಗೆ ಅಷ್ಟೆಲ್ಲಾ ಇರಲು ಸಾಧ್ಯವಿದೆ.

ಈ ಯೋಜನೆಯು ದಕ್ಷಿಣ ಕನ್ನಡದ ಕರಾವಳಿಗೆಲ್ಲಾ ಹತ್ತಿರವಾಗಿದೆ. ಹಾಗೆಯೇ ಮೈಸೂರು ಬೆಂಗಳೂರುಗಳಿಗೂ ಜೋಗಕ್ಕಿಂತ ಹತ್ತಿರವಾಗಿದೆ. ದಕ್ಷಿಣ ಕರ್ನಾಟಕಕ್ಕೆಲ್ಲ ಇದರಿಂದ ಪೂರ್ತಿ ಉಪಯೋಗ ದೊರೆತರೆ ಜೋಗ ಹಾಗೂ ಕಾಳೀ ನದಿಗಳನ್ನು ಉತ್ತರ ಕರ್ನಾಟಕಕ್ಕಾಗಿ ಮೀಸಲಿಡಬಹುದು. ದಕ್ಷಿಣ ಕನ್ನಡದ ಔದ್ಯೋಗಿಕ ಬೆಳವಣಿಗೆಗೂ ಮೈಸೂರು ದಕ್ಷಿಣ ಕನ್ನಡದ ಔದ್ಯೋಗಿಕ ಹಾಗೂ ಆರ್ಥಿಕ ಸಂಬಂಧ ನಿಕಟವಾಗುವುದಕ್ಕೂ ಇದೊಂದು ದೊಡ್ಡ ಸಾಧನ.

ಬಹುಮುಖ ಲಾಭ

ಈ ಯೋಜನೆ ವಿವಿಧ ಮುಖಿಯೂ ಆಗಲೂ ಬಹುದು. ಉದಾಹರಣೆಗೆ ವಿದ್ಯುತ್ತಿಗಾಗಿ ಬಳಸಿ ಉಳಿಯುವ ನೀರು ನೇತ್ರಾವತಿ ಹಾಗು ಎಣ್ಣೆ (ಉದ್ಯಾವರ) ಹೊಳೆಗಳಿಗೆ ಸೇರುವುದರಿಂದ ಈ ಹೊಳೆಗಳ ಉತ್ತರ ಭಾಗದಲ್ಲೂ ಮತ್ತೆ ಜಲಾಶಯಗಳನ್ನು ನಿರ್ಮಿಸಿ ನೀರಾವರಿಗೆ ಉಪಯೋಗಿಸಿ ದಕ್ಷಿಣ ಕನ್ನಡದಲ್ಲಿ ಮೂರು ಮೂರು ಬೆಳೆ ಬರುವಂತೆ ಮಾಡಬಹುದು. ಹಾಗೆಯೇ ನೇತ್ರಾವತಿ- ಎಣ್ಣೆ (ಉದ್ಯಾವರ) ಹೊಳೆಗಳಿಗೆ ಮಿಗಿಲಾಗಿ ಒದಗುವ ನೀರಿನ ನೆರವಿನಿಂದ ಆ ನದಿಗಳು ನೌಕಾಯಾನಕ್ಕೆ ಉಪಯೋಗವಾಗುವಂತೆಯೂ ಮಾಡಬಹುದು. ಹೀಗೆ ವಿವಿಧ ಮುಖವುಳ್ಳ ಈ ಯೋಜನೆಯು ಸಂಯುಕ್ತ ಕರ್ನಾಟಕ ರಾಜ್ಯದಲ್ಲಿ ಅರಳುವುದೆಂದು ಆಶಿಸಬಹುದು. ಏಕೆಂದರೆ ಈ ವರೆಗೆ ಈ ಯೋಜನಾ ಪ್ರದೇಶ ಎರಡು ಬೇರೆ ಬೇರೆ ರಾಜ್ಯಗಳ ಗಡಿಯಲ್ಲಿದ್ದುದರಿಂದ ಸಹ್ಯದ ಮಲೆನಾಡು ಪ್ರದೇಶದ— ಎಂದರೆ ದಕ್ಷಿಣಕನ್ನಡ ಪ್ರದೇಶದ— ನೆರವಿಲ್ಲದೆ ಸಾಧ್ಯವಿಲ್ಲವಾದ್ದರಿಂದ ನಮ್ಮ ಮೈಸೂರ ಯೋಜಕರು ಇಂತಹ ಮಹಾ ಯೋಜನೆಯ ಕಡೆಗೆ ಕಣ್ಣು ಹಾಕದಿದ್ದುದು ಕೇವಲ ಸಾಧ್ಯ. ಈ ವರೆಗೂ ಮೈಸೂರು ಬೇರೆ ರಾಜ್ಯಗಳ ಸಹಕಾರ್ಯದಿಂದ ಯಾವ ಹಿರಿಯ ಯೋಜನೆಗೂ ಕೈಹಾಕಿಲ್ಲ. ಏನುಮಾಡಿದರೂ ಮೈಸೂರಿನ ಗಡಿಯೊಳಗೇ ಎಷ್ಟು ಸಾಧ್ಯವೋ ಅಷ್ಟನ್ನು ಮಾತ್ರ ಮಾಡುವುದು ಅವರ ಸ್ವಭಾವ. ಮೈಸೂರ ಹಿತಕ್ಕೇ ಆಗಲಿ, ಗಡಿ ದಾಟುವ ವಿಚಾರವಿದ್ದರೆ ಅದನ್ನು ಅವರು ಬಿಟ್ಟು ಕೊಟ್ಟದ್ದಾರೆ. ಇದಕ್ಕೆ ನೂಗು ಹೊಳೆ ಯೋಜನೆಯೇ ಸಾಕ್ಷಿ. ಮೇಕೆದಾಟೂ ಇಂತಹದೇ! ಜೋಗದಲ್ಲಿ ಶರಾವತಿಯ ಎಡದಂಡೆಗೆಮಾತ್ರ ಅಂಟಿಕೊಂಡಿದ್ದರ ಮರ್ಮವೂ ಇದೆ.

ಆದರೆ, ಸಂಯುಕ್ತ ಕರ್ನಾಟಕದಲ್ಲಿ ದಕ್ಷಿಣ ಕನ್ನಡ—ಮೈಸೂರುಗಳ ರಾಜಕೀಯ ಗಡಿ ಹಾರಿಹೋಗುವುದರಿಂದ ಈ ಭದ್ರಾ ಯೋಜನೆಯು ಸುಕಾಲ ಸಕಾಲದಲ್ಲಿ ಒದಗೀತೆಂದು ಆಶಿಸಬಹುದು. ಆದರೆ ನಮ್ಮ ಯೋಜಕರಿಗೆ ಸಂಕುಚಿತವಲ್ಲದ, ತಕ್ಕ, ದೃಷ್ಟಿ ಬಂದರೆ ಮಾತ್ರ.

"ರಾಯಭಾರಿ", ಉಡುಪಿ.

ಕುಮಾರಿ ಬಿಲ್ಲೆಗಳು (Govt-Regd.)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) CALCUTTA—40 (ವಿ.ಪಿ.ಪಿ. ಪ್ರತ್ಯೇಕ)

ಸ್ಟಾಕಿಸ್ಟರು: ಶೆಣೈಕಂಪೆನಿ, ಮಂಗಳೂರು

ಹೆಣ್ಣೋ? ಹೊನ್ನೋ?

ಬರೆದವರು: ಶ್ರೀ ಕೆ. ಕೆ. ಶೆಟ್ಟಿ.

[ಸದ್ಯದಲ್ಲೇ ಪ್ರಕಟವಾಗಲಿರುವ ವರದಕ್ಷಿಣೆಯ ಕುರಿತಾದ ಚಿಕ್ಕ ವ್ಯಂಗ್ಯ ನಾಟಕದ ಕೆಲವು ದೃಶ್ಯಗಳು.]

ದೃಶ್ಯ ೧

(ಅಳಿಯ ಕಟ್ಟಿನ ದೊಡ್ಡ ಮನೆತನಕ್ಕೆ ಸೇರಿದ ಸಂಕಪ್ಪ ರೈಗಳು ತನ್ನ ಹೆಂಡತಿ ಮಕ್ಕಳಿಗಾಗಿ ಕಟ್ಟಿಸಿ ಕೊಟ್ಟಿರುವ ಅಚ್ಚುಕಟ್ಟಿನ ಸುಂದರ ಮನೆ. ೬೦ ವರ್ಷ ಪ್ರಾಯಕ್ಕೆ ಸಮೀಪಿಸುತ್ತಿರುವ ರೈಗಳು ಒಂದು ದಿನ ಮುಂಜಾನೆ ನಿತ್ಯ ಕರ್ಮ ಮುಗಿಸಿ ಎಂದಿನಂತೆ ಮೊಗಸಾಲೆಯಲ್ಲಿ ಗಂಭೀರವಾಗಿ ಕೂತು ವೀಳ್ಯ ಹಾಕುತ್ತಿರುವರು. ಅವರ ಏಕಮಾತ್ರ ಪುತ್ರಿ, ಒಲವು ಚೆಲುವಿನ ಸಮರಸಮೇಳದಿಂದೊಪ್ಪುವ ಲಲಿತೆಯು, ಹೊಳೆಯುವ ಕಂಚಿನ ವೀಳ್ಯದ ಪೆಟ್ಟಿಗೆಯಿಂದ, ವೀಳ್ಯದೆಲೆ ತೆಗೆತೆಗೆದು, ಸೆರಗಿಂದೊರಸಿ, ಸುಣ್ಣ ಹಚ್ಚಿ ಚಂದವಾಗಿ ಮಡಚಿ ಕೊಡುತ್ತಿರುವಳು. ಮಗಳ ಪ್ರೇಮ ಬೆರೆತ ಸವಿ ತಿನಿಸನ್ನು ಅವಳ ಕೈಯಿಂದಲೇ ಆನಂದದಿಂದ ಪಡೆಪಡೆದು ರುಚಿಸುತ್ತಿಪ್ಪಂತೆ ರೈಗಳು, ಒಂದರ ಮೇಲೆ ಇನ್ನೊಂದು ವೀಳ್ಯದೆಲೆಗಳನ್ನು ಕಬಳಿಸಿ, ಜಗಿದು, ರಸಹೀರಿದಂತೆ ಪ್ರಸನ್ನತೆಯ ಬಿಳಿ ರೇಖೆಯು ಅವರ ನಸುಕಪ್ಪಗಿನ ಮುಖದಲ್ಲಿ ಮೂಡಿ ಬರುತ್ತಿತ್ತು. ಇಷ್ಟರಲ್ಲಿ ರೈಗಳ ಮೃತ ಪತ್ನಿಗೆ ದೂರದಲ್ಲಿ ಅಣ್ಣ ಬೀಳುವ ಮಧ್ಯಮ ವರ್ಗದ ಮನೆತನಕ್ಕೆ ಸೇರಿದ ನಡು ಪ್ರಾಯದ ಕಟ್ಟಾಳು ವೆಂಕಪ್ಪ ಶೆಟ್ಟರು ಅಕಸ್ಮಾತ್ತಾಗಿ ಆಗಮಿಸುವರು. ಅವರು ಅತ್ಯವಸರದ ಕೆಲಸದ ನಿಮಿತ್ತ ಓಡಿಕೊಂಡೇ ಬಂದವರೆಂಬಂತೆ ತೋರುತ್ತಿತ್ತು. ಮುಂಜಾನೆಯ ತಂಪು ಗಾಳಿ ಬೀಸುತ್ತಿದ್ದರೂ, ಅವರ ಮುಖವೆಲ್ಲಾ ಬೆವರಿ ನೀರಿಳಿಯುತ್ತಿತ್ತು.)

ವೆಂಕಪ್ಪ ಶೆಟ್ಟಿ— ಅಬ್ಬಬ್ಬ! (ಉಸ್ಸೆಂದು ನಿಶ್ವಾಸ ಬಿಡುತ್ತಾ ಮೊಗಸಾಲೆಯಲ್ಲಿ ಹಾಸಿರುವ ಹುಲ್ಲಿನ ಚಾಪೆಯ ಮೇಲೆ ದೊಪ್ಪನೆ ಕೂತು) ಭಾವಯ್ಯನವರಿಗೆ ನಮಸ್ಕಾರ. ಎಂತಹ ಸುಮುಹೂರ್ತ ನಾನು ಬಂದ ಸಮಯ! ಒಳ್ಳೇ ಜೋಯಿಸರು ಗುಣಿಸಿ ಹೇಳಿದಂತೆ! ತಂದೆ, ಮಗಳು, ನೀವು ಒಂದಾಗಿ ಕೂತು ವೀಳ್ಯ ಹಾಕುತ್ತಿರುವ ಈ ಸುಂದರ ಶುಭ ನೋಟದಿಂದ, ಬಾಯಾರಿದವನಿಗೆ ಕೆಂದಾಳಿ ಸೀಯಾಳ ಕುಡಿಯಲು ಸಿಕ್ಕಿದಷ್ಟು ಆನಂದವಾಯಿತು ನನಗೆ. ದೂರದಿಂದ ಜೋರಾಗಿ ನಡೆದು ಬಂದ ಆಯಾಸವೆಲ್ಲಾ ಒಮ್ಮೆಲೆ ಹಾರಿ ಹೋಯಿತು. ಲಲಿತ ಏನಮ್ಮ? ಹೆಸರಿಗೆ ತಕ್ಕಂತೆ ಎಷ್ಟು ಸುಲಲಿತ ಸುಂದರಿಯಾಗಿ ಬೆಳೆದಿರುವೆ! ರೈಗಳ ಜೀವನದ ನಿಜ ಸಂಪತ್ತೇ ನೀನು. ನಮ್ಮ ಕುಟುಂಬದ ಅಕ್ಕರೆಯ ಆಭರಣ, ಅಭಿಮಾನದ ಮಣಿ.

ಲಲಿತ—(ಒಮ್ಮೆಯೇ ನಾಚಿ ಜಗ್ಗನೆದ್ದು) ಏನಿದು ಮಾವ, ಬಂದವರೇ ಆರಂಭಿಸಿರುವಿರಲ್ಲ ಹೊಗಳಿಕೆಯ ಸುರಿಮಳೆಗೆ! ನಾನು ನಿಮ್ಮವಳು, ನಿಮ್ಮ ಸೊಸೆಯೆಂಬುದನ್ನು ಮರೆತಿರಾ? ಅದಂತಿರಲಿ, ನೀವು ನಡೆ ನಡೆದು ಸುಣ್ಣವಾಗಿರುವಿರಿ. ಕೈಕಾಲು ತೊಳೆಯಲು ಬಿಸಿ ನೀರು ತರುವೆನು. ಬೇಗ ಗಂಜಿ ಊಟ ಮಾಡುವುದೇ? ಅಥವಾ ಈಗಲೇ ಒಂದು ಲೋಟ ಕಾಫಿ ಮಾಡಿ ತಂದು ಕೊಡಲೆ?

ಶೆಟ್ಟಿ—ನೀನು ನನ್ನ ದೂರದ ಸೊಸೆಯಾಗಿರದೆ ಮನೆ ಸೊಸೆಯಾಗಿರುವಂತಾಗಲಿ ಮಗು. ಪಕ್ಕನೆ ಕಣ್ಮರೆಯಾಗದೆ ಇಲ್ಲೇ ಇರು ತುಸು ಸಮಯ. ಅವಸರವಿಲ್ಲ; ರೈಗಳಿಗೆ ವೀಳ್ಯದೆಲೆ ಮಡಚಿ ಕೊಟ್ಟು ಮುಗಿಯಿತೇನು? ದಾರಿಯ ಒಂದು ಹೋಟೇಲಲ್ಲಿ ಈಗ ತಾನೆ ಕಾಫಿ ಕುಡಿದು ಬಂದೆ ಮಗು. ಈಗೇನು ಕಾಫಿ ಹೋಟೇಲುಗಳಿಗೇನು ಕಡಿಮೆಯೋ? ವೀಳ್ಯ] ಹಾಕದೆ ಮಾತ್ರ ಬಾಯಿ ಸಪ್ಪೆ ಸಪ್ಪೆಯಾಗಿದೆ. ಚಿನ್ನದಂತೆ ಮಿಂಚುವ ನಿಮ್ಮ ವೀಳ್ಯದ ಪೆಟ್ಟಿಗೆಯನ್ನು, ರೈಗಳ ಜೀವನ ರತ್ನವಾದ ನೀನೇ ಒಮ್ಮೆ ನನಗೆ ತಂದು ಕೊಡು ಚಿನ್ನ. (ಲಲಿತೆಯು ಮತ್ತಷ್ಟು ನಾಚುವಳು, ಮುಖ ಕೆಂಪೇರುವುದು. ವೀಳ್ಯದ ಪೆಟ್ಟಿಗೆಯನ್ನು ತಂದೆಯ ಬಳಿಯಿಂದ ಎತ್ತಿ ತಂದು ದಢಕ್ಕನೆ ಶೆಟ್ರ ಮುಂದಿಟ್ಟು ಸಿಟ್ಟಿನಿಂದ ಫಟ್ಟನೆ ಒಳಗೆ ಹೋಗಿ ಬಿಡುವಳು. ಮಾತಿನ ಮಾಧುರ್ಯ ಮತ್ತು ಚಾತುರ್ಯಕ್ಕೆ ಶೆಟ್ಟರು ತನ್ನ ಸಮ್ಮೋಹನಾಸ್ತ್ರದ ಪ್ರತಿಕ್ರಿಯೆಯಿಂದ ಪರಾಜಿತರಾಗಿ ತುಸು ಹೊತ್ತು ಮೌನವಾಗಿದ್ದು, ಹೆಗಲ ಮೇಲಿನ ಬೈರಾಸಿನಿಂದ ಮುಖದ ಬೆವರನ್ನೊರಸುತ್ತಿರುವಾಗ, ರೈಗಳ ಮನೆ ಆಳು ತುಕ್ರನು ಹೊಳಪಿನ ಹಿತ್ತಾಳೆಯ ದೊಡ್ಡ ಚೆಂಬುಗಳೆರಡರಲ್ಲಿ ಬಿಸಿ ನೀರು ಮತ್ತು ಬೈರಾಸು ತರುವನು. ಶೆಟ್ಟರು ತುಸು ಸಮಾಧಾನಗೊಂಡು, ಕೈಕಾಲು ಮುಖ ತೊಳೆದು, ಒರಸಿ, ಕಾಲು ಮಡಚಿ ಕೂತು ವೀಳ್ಯ ಹಾಕತೊಡಗುವರು.)

ರೈ— ಈ ಮುಂಜಾನೆ, ಇಷ್ಟೊಂದು ಅವಸರದಿಂದ ಬರಲು ಕಾರಣವೇನು ವೆಂಕಪ್ಪ? ನೀನು ಬಹುಶಃ ಮೊದಲ ಕೋಳಿ ಕೂಗಿಗೇ ನಿನ್ನ ಮನೆಯಿಂದ ಹೊರಟಿರಬೇಕು. ನಿನ್ನ ಮನೆಯಿಂದ ಇಲ್ಲಿಗೆ ಸುಮಾರು ಆರು ಹರದಾರಿ ಇಲ್ಲವೇ?

ಶೆಟ್ಟಿ— ಸ್ವಲ್ಪ ಹೆಚ್ಚೇ ಇದೆ, ಭಾವ. ನಿಮ್ಮೊಡನೆ ಮಾತಾಡುವ ಅತ್ಯವಸರದ ಕೆಲಸವಿತ್ತು. ಬೆಳ್ಳಿಯಂತೆ ಬೆಳದಿಂಗಳು ಬೆಳಗುತ್ತಿದ್ದುದರಿಂದ, ಪೂರ್ವಾಹ್ನದ ಬಿಸಿಲತಾಪ ತಪ್ಪಿಸಲು ಮೊದಲ ಕೋಳಿಕೂಗಿನ ಮೊದಲೇ ಎದ್ದು ಬಂದು ಬಿಟ್ಟೆ. ನನ್ನ ಕೆಲಸ ಅಷ್ಟೊಂದು ಜರೂರಿನದು ಭಾವ, ನನ್ನ ಮಗನ ಭವಿಷ್ಯವೇ ನಿಮ್ಮ ಕೈಯಲ್ಲಿದೆ.

ರೈ— ಬಂಟರ ಹುಡುಗರು ಕಲಿಯುವುದರಲ್ಲಿ ಬಹಳ ಹಿಂದೆ. ನಿನ್ನ ಮಗ ಪ್ರಕಾಶನು ಬಹಳ ಬುದ್ಧಿವಂತನೆಂದು ಕೇಳಿದ್ದೇನೆ. ಈ ಸಲದ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಪಾಸಾಗಿರುವನಂತೆ, ಲಲಿತ ಹೇಳುತ್ತಿದ್ದಳು. ಅವಳೂ ಕಲಿಯುವುದರಲ್ಲಿ ಚತುರಳಿದ್ದಳು. ಹೆಚ್ಚು ಕಲಿಯಬೇಕೆಂಬ ಆಶೆಯಿಂದಲೂ ಇದ್ದಳು. ನನಗೂ ಅವಳಿಗೆ ಕಲಿಸುವ ಮನಸ್ಸಿತ್ತು. ಆದರೆ......... ಆವೇಗ ತುಂಬಿ ಕುತ್ತಿಗೆ ಕಟ್ಟಿ ಬಂದು ಮಾತಾಡಲಾರದೆ ನಿಟ್ಟುಸಿರಿಡುವನು.)

ಶೆಟ್ಟಿ —ಹೌದು ಭಾವ, ಮನೆಯ ದೀವಿಗೆಯೇ ನೊಂದು ಹೋದ ಮೇಲೆ ಕತ್ತಲೆಯಲ್ಲಿರುವುದಾದರೂ ಹೇಗೆ? ಹಣತೆಯ ಬೆಳಕಾದರೂ ಬೇಕಲ್ಲವೇ ಹತ್ತಿರ

ರೈ— ಲಲಿತೆಯಿಲ್ಲದಿದ್ದರೆ ಈ ಮನೆಯೇ ನನ್ನ ಮಸಣವಾಗುತಿತ್ತು ವೆಂಕಪ್ಪ. ಸುರೇಂದ್ರನ ಸಾವೇ ಲಲಿತನ ತಾಯಿಗೆ ಮುಳುವಾಯಿತು. ಮಹಾ ದುರ್ದೈವಿ ನಾನು ವೆಂಕಪ್ಪ—ಕಡು ಪಾಪಿ! ಬೈರಾಸಿನಿಂದ ಕಣ್ಣುಗಳೆರಡನ್ನೂ ಒತ್ತಿ ಕಣ್ಣೀರನ್ನು ತಡೆಗಟ್ಟುವನು.)

ಶೆಟ್ಟಿ— ದೇವರಿಗೆ ಪ್ರಿಯರಾದವರನ್ನು ಆತನು ಬಲು ಬೇಗನೆ ತನ್ನ ಬಳಿಗೆ ಕರೆಸುವನು ಭಾವ. ಎಂತಹ ಬಾಲಕ ರತ್ನ ನಿಮ್ಮ ಮಗ ಸುರೇಂದ್ರ! ಎಷ್ಟು ಗುಣವಂತೆ ನಿಮ್ಮ ಪತ್ನಿ! ನಮ್ಮ ಮನೆತನದಲ್ಲೇ ಅಂತಹ ಹೆಂಗಸು ಹುಟ್ಟಿರಲಿಲ್ಲವಂತೆ. ನೀವು ಸುದೈವಿ ಭಾವ. ಅಂತಹ ಪತ್ನೀಪುತ್ರರನ್ನು ಪಡೆದ ನೀವು ನಿಜವಾಗಿಯೂ ಭಾಗ್ಯಶಾಲಿ. ಒಂದು ದಿನ ಮೊದಲು ಹಿಂದೆ-ಎಲ್ಲರಿಗೂ ಸಾವಿನ ಕರೆ ಬಂದೇ ಬರುವುದು. ಕತ್ತಲೆಯಾಗಿ ಹಲವು ವರ್ಷ ಜೀವನ ಸವೆಯಿಸುವುದರಿಂದೇನು? ಬೆಳಕಾಗಿ ಕೆಲವೇ ವರ್ಷ ಬಾಳುವುದು ಮೇಲಲ್ಲವೇ?

ರೈ— ಅದು ಹೌದು ವೆಂಕಪ್ಪ. ಆದರೆ ದೇವರು ನನ್ನನ್ನೂ ಅವರೊಂದಿಗೊಯ್ಯುವ ಕೃಪೆ ತೋರಬೇಕಿತ್ತು. ಪಾಪಿಯಾದ ನನ್ನ ಬಳಿ ಬರಲು ಯಮನೂ ಹೇಸುತ್ತಿರಬಹುದು.

ಶೆಟ್ಟಿ— ಛೆ! ಛೆ!! ಏನು ಮಾತಿದು ಭಾವ. ನೀವು ಈ ರೀತಿ ವೈರಾಗ್ಯಪಟ್ಟರೆ ಲಲಿತೆಯ ಪಾಡೇನು? ತಾಯಿಯ ಪ್ರತಿಮೂರ್ತಿಯಾಗಿ, ನಿಮ್ಮ ಜೀವನದ ಬೆಳಕಾಗಿ ಬೆಳೆದು ಬೆಳಗುತ್ತಿರುವ ಅವಳೇ ನಿಮ್ಮ ಆಶೆಯ ಕುಡಿಯಲ್ಲವೇ? ಭಾಗ್ಯ ಸಿರಿಯಲ್ಲವೇ? ನಿಮ್ಮ ಗುಣ ನಡತೆಯಂತೂ ಜನಜನಿತ ವಿಷಯವಲ್ಲವೇ?

ಲಲಿತೆ - (ಚೆಂಬೊಂದರಲ್ಲಿ ನೀರು ಹಿಡಿದುಕೊಂಡು, ಕಾರಿರುಳಿನ ನಡುವೆ ಮಂದಪ್ರಕಾಶ ಬೀರುವ ಚಂದ್ರರೇಖೆಯಂತೆ ನಸುನಗೆ ಬೀರುತ್ತಾ ಬಾಗಿಲಬಳಿ ಬಂದು) ಮಾವ, ಗಂಜಿ ಊಟ ತಯಾರಾಯಿತು. ಅಪ್ಪನಿಗೂ ಊಟದ ಹೊತ್ತಾಯಿತು. ಊಟಕ್ಕೇಳಿರಿ. (ಚೆಂಬನ್ನು ತಂದು ವೆಂಕಪ್ಪಶೆಟ್ಟಿ ಬಳಿ ಇಟ್ಟು ಪ್ರಸನ್ನತೆಯ ಪ್ರತಿಮೂರ್ತಿಯಾಗಿ ಗೋಡೆಗೊರಗಿ ನಿಂತುಕೊಳ್ಳುವಳು.)

ರೈ – ಬಾ ಮಗು, ಸ್ವಲ್ಪ ಕುಳಿತುಕೊ ಇಲ್ಲಿ, ನಿನ್ನ ಮಾವನು ತನ್ನ ಆಪತ್ಕಾಲದಲ್ಲಿ ನಮ್ಮ ಸಹಾಯ ಕೋರಿ ಬಂದಿರುತ್ತಾನೆ. ಅದೇನೆಂದು ಮೊದಲು ವಿಚಾರಿಸಿಕೊಳ್ಳೋಣ. ಅದು ಅತೀ ಜರೂರಿನ ವಿಷಯವಂತೆ.

ಲಲಿತೆ—ಅದು ನಿಮ್ಮಿಬ್ಬರೊಳಗಿನ ವಿಷಯ. ಅದಕ್ಕೆ ನಾನೇಕೆ?

ಶೆಟ್ಟಿ—ನಿನ್ನಿಂದ ಮುಚ್ಚುಮರೆ ಮಾಡುವ ವಿಷಯವೇನಿದೆ ಲಲಿತ. ನೀನಿದ್ದರೆ ಮತ್ತೂ ಒಳ್ಳೆಯದು. ಬಾ ಮಗು. ಇಲ್ಲಿ ಕುಳಿತುಕೊ. (ತನ್ನ ಚಾಪೆಯ ಬಳಿಯೇ ಕೈಬಡಿದು ಸ್ಥಳ ತೋರಿಸುವನು. ಲಲಿತೆಯು ತನ್ನ ತಂದೆಯ ಸನಿಹವೇ ಹೋಗಿ ಕೂತು ಕೊಳ್ಳುವಳು.)

ರೈ—ಹೇಳು ವೆಂಕಪ್ಪ ನನ್ನಿಂದೇನಾಗಬೇಕು ನಿನಗೆ?

ಶೆಟ್ಟಿ—ಪ್ರಕಾಶನು ಎಫ್. ಎ. ಎರಡನೇ ವರ್ಷದ ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸ್ ಪಾಸಾಗಿರುವುದು ಮಾತ್ರವಲ್ಲದೆ ಅವನಿಗೆ ಪುಣ್ಯದಿಂದ ಮದ್ರಾಸ್ ಮೆಡಿಕಲ್ ಕೋಲೇಜಿನಲ್ಲಿ ಸೀಟ್ ಕೂಡಾ ದೊರೆತಿದೆ.

ರೈ— ಬಹಳ ಸಂತೋಷದ ವಿಷಯ ವೆಂಕಪ್ಪ. ನೀನು ನಿಜವಾಗಿಯೂ ಪುಣ್ಯವಂತ. ಈಗೀಗ ಮೆಡಿಕಲ್ ಕೋಲೇಜಿನಲ್ಲಿ ಸೀಟ್ ಸಿಗುವುದೇ ಬಹಳ ಕಷ್ಟವಂತೆ.

ಶೆಟ್ಟಿ—ಆದರೇನು ಮಾಡುವುದು? ನಾನು ಅವನಿಗೆ ಕಲಿಸುವುದಾದರೂ ಹೇಗೆ? ಇದ್ದುದನ್ನೆಲ್ಲಾ ಮಾರಿಯೋ, ಒತ್ತೆ ಇಟ್ಟೋ ಈ ವರೆಗೆ ಕಲಿಸಿದುದಾಯಿತು. ಇನ್ನು ಮುಂದೆ ಸಾಧ್ಯವೇ ಇಲ್ಲದಂತಾಗಿದೆ. ನನ್ನ ಕೈಕಟ್ಟಿ ಹೋಗಿದೆ. ನೀವೇನಾದರೂ ದಯಮಾಡಿದರೆ ನಾನು ಮುಂದೆ ಸಾಗಬಹುದು. ಬೇಕಾದರೆ ನಿಮಗೆ ಪ್ರಕಾಶನ ತಾಯಿಯ ಹೆಸರಾಗಿ ಬಂದಿರುವ ಆಸ್ತಿಯನ್ನು ಅಡವು ಮಾಡಿಕೊಡುವೆನು.

ರೈ -- ನಿನಗೀಗ ಎಷ್ಟು ಹಣ ಬೇಕು?

ಶೆಟ್ಟಿ— ಕಡಿಮೆ ಎಂದರೆ 5000 ರೂಪಾಯಿಯಾದರೂ ಬೇಕು. ಒಮ್ಮೆಯೇ ಬೇಕಾಗಿಲ್ಲ. ನೀವು ನನಗೆ ಆಗಾಗ ಅಗತ್ಯ ಬಿದ್ದಂತೆ ಕೊಟ್ಟರೆ ಸಾಕು. ಇಲ್ಲವಾದರೆ ಪ್ರಕಾಶನಿಗೇನೇ ನೆಟ್ಟಗೆ ಕಳುಹಿಸಬಹುದು.

ರೈ— ನೀನು ತಂದೆ ಇರುವಾಗ ನಾನೇಕೆ ಕಳುಹಿಸಬೇಕು? ಅದು ಸರಿಯಾಗುವುದೇ? ನೀನೂ ನಿನ್ನ ಹೆಂಡತಿಯೂ ಹೆಸರಿಗೆ ನೋಟು ಬರೆದು ಕೊಟ್ಟರೆ ಸಾಕು. ಸುಮ್ಮನೆ ಅಡವು ಗಿಡವು ಏಕೆ? ಪ್ರಕಾಶನಿಗೆ ಕಲಿಯಲು ಬೇಕಾದಷ್ಟು ಹಣ ನಾನು ಕೊಡುತ್ತೇನೆ. ಏನು ಹೇಳುವೆ ಲಲಿತ?

ಲಲಿತೆ— ವಿದ್ಯೆಗೆ ಸಹಾಯ ಮಾಡುವುದು ಬಹಳ ಉತ್ತಮ ಕೆಲಸವಲ್ಲವೇ ಅಪ್ಪ. ಬಂಟರ ಜಾತಿಯಲ್ಲಿ ಮೇಲೆ ಕಲಿಯುವವರೇ ಅಪರೂಪ. ಮಾತ್ರವಲ್ಲದೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿದುದು ಮಾವನ ಪುಣ್ಯ. ಅಂದ ಮೇಲೆ ಸಾಧ್ಯವಿದ್ದಲ್ಲಿ ನೀವು ಸಹಾಯ ಮಾಡಬೇಕಾದುದೇ ಅಲ್ಲವೇ?

ಶೆಟ್ಟಿ— ರೂಪದಲ್ಲಿ ಮಾತ್ರವಲ್ಲ, ಗುಣ ನಡತೆಯಲ್ಲಿಯೂ ನೀನು ನನ್ನ ತಂಗಿ ಲಕ್ಷ್ಮಿಗೆ ಸರಿಯಾದ ಪುತ್ರಿ ಮಗು. ಅವಳಾದರೂ ಇದೇ ರೀತಿ ಉತ್ತರವೀಯುತ್ತಿದ್ದಳೆಂಬುದರಲ್ಲಿ ನನಗೆ ಒಂದಿಷ್ಟಾದರೂ ಸಂದೇಹವಿಲ್ಲ. ಪ್ರಕಾಶನು ಲಲಿತೆಯಂತಹ ಕನ್ಯೆಯನ್ನು ಪಡೆಯುವಂತಾದರೆ, ಅದು ಎಲ್ಲಕ್ಕಿಂತಲೂ ನನ್ನ ದೊಡ್ಡ ಭಾಗ್ಯ.

ಲಲಿತೆ—ಏನು ಮಾತಿದು ಮಾವ? ನಾನಿಲ್ಲಿಂದ ಹೋಗಬೇಕೇ?

ರೈ— ಅದೆಲ್ಲವೂ ದೈವಚಿತ್ತ ವೆಂಕಪ್ಪ. ಆ ಮಾತು ಈ ಸಂದರ್ಭದಲ್ಲೇಕೆ? ನಾನು ನಿನ್ನ ಮಗನ ವಿದ್ಯಾಭಿವೃದ್ಧಿಗಾಗಿ ಸಹಾಯ ಮಾಡುವುದಲ್ಲದೆ ಇನ್ನಾವ ತರದ ಸ್ವಾರ್ಥಚಿಂತನೆಯಿಂದಲ್ಲ. ಆ ಯೋಗವಿದ್ದರೆ ಮುಂದೆ ನೋಡೋಣ.

ಶೆಟ್ಟಿ— ಆದರೆ ನನ್ನ ಯಥಾರ್ಥ ಆಂತರಿಕ ಇಚ್ಛೆಯನ್ನು ಹೊರಗೆಡಹಬಾರದೆಂದಿದೆಯೋ? ಅದು ತಪ್ಪಾಗುವುದೇ? ಶುದ್ಧ ಮಾನವ ಸಂಕಲ್ಪ ಮತ್ತು ಯತ್ನವಿದ್ದಲ್ಲಿ ದೈವಾನುಕೂಲವಾಗದಿರುವುದೇ, ಭಾವ? ನನ್ನ ಮಟ್ಟಿಗೆ ನಿಜವಾಗಿಯೂ ಆ ಯೋಗವಿದೆ. ಅದಕ್ಕೆ ದೈವ ಬೆಂಬಲವೂ ಇದೆ.

ಲಲಿತೆ— ಅಪ್ಪ ವೇಳೆ ಮೀರಿತು, ಮಾವನಿಗೂ ಹಸಿವಾಗಿರಬಹುದು. ಊಟಮಾಡಿ ಮತ್ತೆ ಮಾತಾಡಿರಿ. ನನಗೂ ಬೇರೆ ಕೆಲಸವಿದೆ.

ಶೆಟ್ಟಿ— ಆಯ್ತು ಮಗು ಹೋಗುವ ಭಾವ ಏಳಿ.

(ಇಬ್ಬರೂ ಎದ್ದು ಊಟಕ್ಕೆ ಹೋಗುವರು)

[ಮುಂದುವರಿಯುವುದು]

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ. ಬೊಂಬಾಯಿ, ಮದ್ರಾಸು, ಕಲ್ಕತ್ತಾ

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.
P. O. Box No. [illegible] BOMBAY

(೧ನೇ ಪುಟದಿಂದ)

ಗೊಪ್ಪ್ಮೆ ಹುಸಿ ಹೋದರೂ ಹೋದೀತು— ಏಕೆಂದರೆ ಭಾರತದಲ್ಲಿರುವ "ಫೆಡರಲ್" ಮಾದರಿಯ ಪ್ರಜಾಪ್ರಭುತ್ವದಲ್ಲಿ ಕೇಂದ್ರ ಪ್ರಭುತ್ವದ ತೀರ್ಮಾನವೇ ಸಿಂಧುವಾಗುತ್ತದೆ; ಹೊರತು ಕರ್ನಾಟಕ ಅಥವಾ ಕೇರಳ ಪ್ರದೇಶ ಕಾಂಗ್ರೆಸುಗಳದ್ದಲ್ಲ; ಭಾರತೀಯ ಮುಖಂಡರ ವಾಣಿಗೆ ಬೆಲೆ ಬರುವುದೇ ಹೊರತು ಕನ್ನಡಿಗರಿಗೆ ಅಥವಾ ಮಲೆಯಾಳಿ ಧುರೀಣರಿಗಲ್ಲ.

"ರಾಷ್ಟ್ರ" ಎಂಬ ಶಬ್ದ ಪ್ರಯೋಗಕ್ಕೆ ಇಲ್ಲಿಯೇ ಅವಕಾಶ. ಮತದಾರರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ತಂತಮ್ಮ ವಿಶಿಷ್ಟ ಕ್ಷೇತ್ರಗಳ ಹಿತರಕ್ಷಣೆಗೆ ಶ್ರಮ ವಹಿಸುತ್ತಾರೆ; ಅಷ್ಟು ಮಾತ್ರ ಅವರ ಕರ್ತವ್ಯ. ಈ ಕರ್ತವ್ಯವನ್ನು ನೆರವೇರಿಸಿದ್ದಾರೆಯೇ ಎಂದು ನೋಡಿಕೊಳ್ಳುವುದೇ ಮತದಾರರ ಕರ್ತವ್ಯ. ಮಾಡಿದ ಕೆಲಸ ಫಲ ಕೊಡಲಿಲ್ಲವೆಂಬುದು ಮತದಾರರ ಸಿಟ್ಟಿಗೆ ಕಾರಣವಾಗಕೂಡದು; ಪ್ರತಿನಿಧಿಗಳು ಪ್ರಾಮಾಣಿಕತೆಯಿಂದ ಕರ್ತವ್ಯವನ್ನು ನಿರ್ವಹಿಸಿದ್ದರೇ ಎಂಬುದೇ ಒರೆಗಲ್ಲಾಗಬೇಕು.

ಇಲ್ಲಿ ಆವೇಶ, ಆಂದೋಲನಗಳು ನಿಷ್ಪ್ರಯೋಜಕ. ನ್ಯಾಯದ ತಕ್ಕಡಿ ಹಿಡಿದು ತೂಗುವ ಸಮಚಿತ್ತತೆಯೇ ಅತ್ಯಾವಶ್ಯಕ ರಾಜೀನಾಮೆಯಿಂದ ಕೆಲಸವಾಗುವುದೆಂದು ಮತದಾರರು ಭ್ರಮಿಸಬಾರದು. ಪ್ರತಿಯೊಂದು ತಪ್ಪಿಗೂ ರಾಜೀನಾಮೆ ಕೊಡುತ್ತಾ ಹೋದರೆ | ಅದೇ ಒಂದು ಕೆಲಸವಾದೀತು; ಹೊರತು ಪ್ರಯೋಜನಕಾರಿಯಾದ ಬೇರೆ ಹಲವು ಕೆಲಸಗಳಿಗೆ ಅವಕಾಶ ಸಿಗದೆ ಹೋದೀತು.

ನೆಹರುಗಳಲ್ಲಿರುವ ಮುಂಗೋಪವನ್ನು ನಾವು ಮೆಚ್ಚದಿರಬಹುದು—ಆದರೆ ಅವರ ಮುನ್ನೋಟವನ್ನು ಉಪೇಕ್ಷಿಸಬಲ್ಲೆವೆ? ಮದ್ಯಪಾನ ಪ್ರತಿಬಂಧದಲ್ಲಿ ರಾಜಾಜಿ ತೋರಿಸಿದ ಆತುರವನ್ನು ಕೆಲವು ವರ್ಗಗಳು ಆಕ್ಷೇಪಿಸಬಹುದು; ಆದರೆ ಮಾರಾಟಕರನ್ನು ಅನ್ವೇಷಿಸಿದ ಆ ಬುದ್ಧಿವಂತಿಕೆಯನ್ನು ಕೊಂಡಾಡದಿರಲಾದೀತೆ? ಈ ಕಾಂಗ್ರೆಸಿನ ಕೆಲವು ಧೋರಣೆಗಳು ಅಪ್ರಿಯವಿರಬಹುದಾದರೂ ಅದರ ಪ್ರಗತಿಶೀಲದೃಷ್ಟಿಯನ್ನು ಆದರಿಸದಿರಲಾದೀತೆ? ಪ್ರತಿಯೊಂದು ವ್ಯಕ್ತಿಯಲ್ಲಿಯೂ ಕೆಲವು ಲೋಪದೋಷಗಳಿರುವಂತೆ ತೀರ್ಮಾನಗಳಲ್ಲಿ ಸಹ ಕೆಲವು ತಪ್ಪು ಅಂಶಗಳಿರಬಹುದು. ಇಂಥದರಲ್ಲಿ ಸಹನೆಯೊಂದೇ—ತಪ್ಪು ತಿದ್ದುವ ಸರ್ವತಂತ್ರವೂ ನಿರುಪಯೋಗಿಯಾದ ಬಳಿಕ—ನಮಗುಳಿಯುವ ಮಾರ್ಗ.

(ಬರೆದು ಬಂದುದು.)

ಬಾಲರೋಗ ಸಂಹಾರಿ
ಹರಳೆಣ್ಣೆ

ಅಪೂರ್ವವಾದ
ಮೂಲಿಕೆ
ಬಣ್ಣಗಳೂ. ಬೇರೆ, ಮದ್ದುಗಳೂ
ಸೇರಿದ. ಉತ್ತಮ. ಮದ್ದುಗಿದಿ
ಕ್ಯಾಟಲಾಗ್ ಇನಾಂ
MALAYALA MAUNTHREEKA VAIDYASALA

(೩ನೇ ಪುಟದಿಂದ)

ಯನ್ನು ಕೊಡಬಹುದು. ಕಾಲ್ಚೆಂಡು (Football) ಆಟದಲ್ಲಿ ಎರಡು ಪಂಗಡಗಳಲ್ಲಿ ಹನ್ನೊಂದು ಹನ್ನೊಂದು ಜನರು ಆಡುವರು. ಒಂದು ಚೆಂಡನ್ನು ಕಾಲಿನಿಂದ ಒದೆಯುವರು. ಚೆಂಡು ಕಾಲಿಂದ ಕಾಲಿಗೆ ಚಲಿಸುತ್ತಲೇ ಇರುತ್ತದೆ. ಪರಮಾಣು ಕೇಂದ್ರದೊಳಗೂ ಈ ತರದ ಚೆಂಡಾಟ ಸದಾ ನಡೆಯುತ್ತಿದೆ. ನ್ಯೂಟ್ರೋನುಗಳು ಮತ್ತು ಪ್ರೋಟೋನುಗಳು ಎರಡು ಪಕ್ಷದ ಆಟಗಾರರು. ಮೇಸೋನ್ ಎಂಬ ಚೆಂಡು ಪ್ರೋಟೋನಿನಿಂದ ಪ್ರೋಟೋನಿಗೂ, ನ್ಯೂಟ್ರೋನಿನಿಂದ ನ್ಯೂಟ್ರೋನಿಗೂ ಕ್ಷಣಕ್ಕೆ ನೂರು ವಿಲಿಯ ಆವರ್ತಿ ಹಾರಿಕೊಂಡಿರುತ್ತದೆ. ಈ ತರದ ಚೆಂಡಾಟವು 22 ಮಂದಿ ಆಟಗಾರರನ್ನು ಆಟದ ಬಯಲಿನಲ್ಲಿ ಹಿಡಿದು ನಿಲ್ಲಿಸಿದಂತೆ ಪರಮಾಣು ಕೇಂದ್ರದಲ್ಲೂ ನ್ಯೂಕ್ಲಿಯೋನು (ಪ್ರೋಟೋನ್ ಮತ್ತು ನ್ಯೂಟ್ರೋನ್) ಗಳನ್ನು ಹಿಡಿದು ನಿಲ್ಲಿಸಿರುತ್ತವೆ.

ಪರಮಾಣು ಕೇಂದ್ರವನ್ನು ರಭಸದಿಂದ ಹೊಡೆದಾಗ ಅದರಿಂದ 'ಸಿಮೆಂಟ'ನ ಚೂರು ಹೊರಬೀಳುವುದು. ಅದೇ ಮೇಸೋನ್, ಬಡಿಯುವ ರಭಸಮಾತ್ರ ವಿಶೇಷವಾಗಿರಬೇಕು. ಮೊತ್ತಮೊದಲು ವಿಶ್ವಕಿರಣವನ್ನು ಉಪಯೋಗಿಸಿ ಪರಮಾಣುವನ್ನು ಭೇದಿಸುತ್ತಿದ್ದರು ಕ್ರಮೇಣ ಹೆಚ್ಚು ಶಕ್ತಿಯ ಪ್ರೋಟೋನುಗಳನ್ನು ಪ್ರಯೋಗ ಶಾಲೆಯಲ್ಲಿಯೇ ಒದಗಿಸಿಕೊಂಡರು. ಹೀಗೆ ಶಕ್ತಿಯನ್ನು ಒದಗಿಸಿಕೊಡುವ ಯಂತ್ರಕ್ಕೆ ಸೈಕ್ಲೊಟ್ರೋನ್, (Cyclotron), ಸಿಂಕ್ರೋಟ್ರೋನ್, (Synchrotron) ಕೊಸ್ಮೊಟ್ರೋನ್, (Cosmotron), ಮತ್ತು ಬೀವಟ್ರೋನ್ (Bevatron), ಎಂದು ಹೆಸರು.

ಅಮೇರಿಕಾದ ಬ್ರೂಕ್ ಹೇವನ್ ಎಂಬಲ್ಲಿ 2300 ಮಿ. ಇ. ವೋ. ಶಕ್ತಿಯುಳ್ಳ ಕಣಗಳನ್ನು ಒದಗಿಸಿಕೊಂಡಿದ್ದಾರೆ ಇಷ್ಟೊಂದು ಶಕ್ತಿಯನ್ನು ಹೆಚ್ಚುಗಟ್ಟಿಸಿ ಧನ ಮತ್ತು ಋಣ ಪ್ರೋಟೋನುಗಳನ್ನು ಉತ್ಪಾದಿಸಿಕೊಳ್ಳಬಹುದು. 6400 ಮಿ. ಇ. ವೋ. ಶಕ್ತಿಯ ಕಣ್ಣುಗಳನ್ನು ಒದಗಿಸಿಕೊಡುವ ಯಂತ್ರವನ್ನು ಕೆಲಿಫೋರ್ನಿಯದ ಬರ್ಕಲೆ ಎಂಬಲ್ಲಿ ಸ್ಥಾಪಿಸಿರುತ್ತಾರೆ 10 ಸಾವಿರದಿಂದ 30 ಸಾವಿರ ಮಿ. ಇ. ವೋ ಶಕ್ತಿಯ ಯಂತ್ರವನ್ನು ಜಿನೇವಾದಲ್ಲಿ ಸ್ಥಾಪಿಸಬೇಕೆಂದಿದ್ದಾರೆ.

1951ನೇ ಇಸವಿಯಲ್ಲಿ ವಿಶ್ವಕಿರಣದಲ್ಲಿ ಶೋಧನೆಯನ್ನು ನಡೆಸುತ್ತಿದ್ದ ಅಮೇರಿಕಾದ ರೇಟಾಲ್ಲಕ್ (Retallack) ಎಂಬವನು ಫೋಟೋ ಪ್ಲೇಟಿನಲ್ಲಿ ಋಣ ಪ್ರೋಟೋನನ್ನು ಮೊತ್ತ ಮೊದಲು ಕಂಡನು. 1954ರಲ್ಲಿ ಅಮೇರಿಕಾದ ರೋಸಿ (Dr. Rossi) ಎಂಬಾತನೂ ವಿಶ್ವಕಿರಣವು ಪರಮಾಣುವಿನಿಂದ ಬಿಡುಗಡೆ ಪಡಿಸಿದ ಈ ನೂತನ ಕಣವನ್ನು ಕಂಡನು. ಇತ್ತೀಚೆಗೆ ಬೀವಾಟ್ರೋನಿನಿಂದ ಮೇಸೋನುಗಳನ್ನು ಪ್ರಯೋಗ ಶಾಲೆಯಲ್ಲಿಯೇ ತಯಾರಿಸುತ್ತಿದ್ದಾರೆ. ಶಕ್ತಿಯು ಹೆಪ್ಪುಗಟ್ಟಿ ಪದಾರ್ಥವಾಗುವುದು. ಈ ಕ್ರಿಯೆಯು $E = mc^2$ ಎಂಬ ಐನ್‌ಸ್ಟೈನಿನ ಸೂತ್ರವನ್ನು ಅನುಸರಿಸುವುದು. 1955ನೇ ಇಸವಿ ಸಪ್ಟಂಬರ 21ರಲ್ಲು ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಭೌತ ವಿಜ್ಞಾನಿಗಳು 6000 ಮಿ. ಇ. ವೋ. ಶಕ್ತಿಯ ಪ್ರೋಟೋನುಗಳನ್ನು ತಾಮ್ರದ ತುಂಡಿನ ಮೇಲೆ ಪ್ರಯೋಗಿಸಿದರು. ಈ ಪ್ರೋಟೋನು ತಾಮ್ರದ ಪರಮಾಣುವಿನ ನ್ಯೂಟ್ರೋನನ್ನು ಒಡೆದಾಗ ಆ ಶಕ್ತಿಯು ಹೆಪ್ಪುಗಟ್ಟಿ ಧನ ಮತ್ತು ಋಣ ಪ್ರೋಟೋನುಗಳುಂಟಾದವು ಇದರ ಆಯುಷ್ಯವು ಮಾತ್ರ ಮೇಸೋನಿನಂತೆ ಅತೀ ಅಲ್ಪ. ಧನ ಮತ್ತು ಋಣ ಪ್ರೋಟೋನು ತಿರುಗಿ ಸೇರಿದಾಗ ವಸ್ತುವೇ ನಾಶವಾಗಿ 2000 ಮಿ. ಇ. ವೋ. ಶಕ್ತಿ ಉತ್ಪಾದನೆಯಾಗುವುದು.

ಅಣು ಬಾಂಬಿನಲ್ಲಿ ವಸ್ತುವು ಲಯವಾಗಿ ಶಕ್ತಿಯು ಉತ್ಪಾದನೆಯಾಗುತ್ತದೆ ಆದರೆ ಈ ಪ್ರಯೋಗಗಳಲ್ಲಿ ಶಕ್ತಿಯು ವ್ಯಯವಾಗಿ ಪದಾರ್ಥವು ಸೃಷ್ಟಿಯಾಗುತ್ತದೆ. ವಸ್ತು ಸಂಗ್ರಹವು ಈ ಪ್ರಪಂಚದಲ್ಲಿ ಹೇರಳವಾಗಿದೆ! ಆದುದರಿಂದ ಶಕ್ತಿಯನ್ನು ವ್ಯಯಮಾಡಿ ವಸ್ತುವನ್ನು ಸೃಷ್ಟಿಸುವುದು ಲಾಭಕರವಲ್ಲ. ಬರೇ ವೈಜ್ಞಾನಿಕ ಶೋಧನೆಗಾಗಿ ಮಾತ್ರ ಅದನ್ನು ಸಾಧಿಸುತ್ತಿರುವರು.

ಋಣ ಪ್ರೋಟೋನುಗಳು ಯಾ... ಪರಮಾಣುವಿನೊಳಗೂ ಇರಲು ಸಾ... ವಿಲ್ಲ. ಅದು ಇರಬೇಕಾದರೆ—ಅದ... ಜೊತೆಯಲ್ಲಿ ಧನ ಪ್ರೋಟೋನು ಇರಲ... ಬಾರದು. ಏಕೆಂದರೆ ಇವೆರಡೂ ಒಟ್ಟು... ಸೇರಿದಾಗ ಎರಡೂ ಲಯಹೊಂದಿ ಶ... ಯಾಗಿ ಮಾರ್ಪಾಟ ಹೊಂದುವುವು... ವಿಶ್ವದ ಯಾವುದಾದರೊಂದು ಮೂ... ಯಲ್ಲಿ ಒಂದು ಹೊಸ ತರದ ವಸ್ತುವ... ಇರಬಹುದು. ಅದರ ಪರಮಾಣುಗ... ಕೇಂದ್ರದಲ್ಲಿ ಎಲ್ಲವೂ ಋಣ ಪ್ರೋಟೋ... ನುಗಳಿರಬಹುದು. ಅದರ ಸುತ್ತಲೂ... ಧನ ಇಲೆಕ್ಟ್ರೋನುಗಳು ಸುತ್ತುತ್ತಿ... ಬಹುದು. ಈ ತರದ ಋಣ ವಸ್... (ante-matter) ಇರಲು ಸಾಧ್ಯ... ಆದರೆ ಇಂಥ ಪ್ರಪಂಚವು ನಮ್ಮ ಪ್ರಪ... ಚಕ್ಕೆ ಢಕ್ಕೆ ಹೊಡೆದರೆ ಋಣ ಮತ್ತು ಧನ ವಸ್ತುವು ಸೇರಿ ಲಯ ಹೊಂದಿ ಎ... ಡೂ ಭಸ್ಮವಾಗಬಹುದು. ಇದು ಬರೇ... ಕಲ್ಪನೆ ಅಷ್ಟೆ! ಪರಮಾಣುವಿನಲ್ಲೇ ಪ... ಮಾತ್ರನ ಮಾಟ ಇಷ್ಟೊಂದು ಗಹ... ವಿದ್ದರೆ ಇನ್ನು ಜೀವಕಣಗಳಲ್ಲಿ ಎಷ್ಟಿರಲಿ... ಕ್ಕಿಲ್ಲವೆಂಬುದನ್ನು ನೀವೇ ಯೋಚಿಸಿರಿ!

[ಇದು ನಮ್ಮ ಪ್ರಜಾರಾಜ್ಯ ವಿಶೇಷ ಸಂಚಿಕೆಗಾಗಿ ಬಂದಿದ್ದ ಲೇಖನ— ಸಂ. ನ.]

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 706/55.

ವಾದಿ. ವೈ. ಕೃಷ್ಣಪ್ಪ ಸೆಟ್ಟಿ. ಇವ... ಜನರಲ್ ಪವರ್ ಆಫ್ ಎಟರ್ನಿ ಹೋಲ್ಡರ್. ವೈ. ಸೂರ್ಯಣ್ಣ ಸೆಟ್ಟಿ ಕುಂದಾಪು... ತಾಲೂಕು ಯಡ್ತರೆಗ್ರಾಮ. ಪ್ರತಿವಾದಿ... ಎಂಕಿ ಹೆಂಗ್ಸು ಕೂಡಾ.

ಇವರೊಳಗೆ 1, 6, 7ನೇ ಪ್ರತಿವಾದಿರಿಗೆ ತಿಳಿಯಪಡಿಸುವ್ದು. 1ನೇ ಪ್ರತಿವಾದಿಳು. ಎಂಕಿ ಹೆಂಗ್ಸು ಗೋವಿಂದ ಬಳೆಗಾರನ ಮ... ಗಳು. ಶಿವಮೊಗ್ಗ ಡಿಸ್ಟ್ರಿಕ್ಟ್ ಹೊಸನಗರ ತಾಲೂಕು ಹನ್ನಾರು ಗ್ರಾಮದ ಬೆನ್ನಟ್ಟನಲ್ಲಿರುವವಳು.

6ನೇ ಪ್ರತಿವಾದಿ ಸುಬ್ಬಣ್ಣ ಸೆಟ್ಟಿ 7ನೇ ಪ್ರತಿವಾದಿ ಮಂಜಯ್ಯ ಸೆಟ್ಟಿ.

—ಗೋವಿಂದ ಸೆಟ್ರ ಆಳಿಯಂದಿರು.

ಕುಂದಾಪುರ ತಾಲೂಕು ವಂಡ್ಸೆ ಗ್ರಾಮದ ಹರವರಿಯಲ್ಲಿರುವವರು.

ವಾದಿಯ ಪೂರ್ವಾಧಿಕಾರಿಗೆ 1ನೇ ಪ್ರತಿವಾದಿಳ ಪೂರ್ವಾಧಿಕಾರಿಯು ತಾರೀಕು 9—9—1915 ರಲ್ಲು ರಿಜಿಸ್ಟ್ರಿ ಮಾಡಿ ಬರೆಸಿಕೊಟ್ಟ ಮೂಲಗೇಣಿ ಎದುರು ಚೀಟಿ ಮೇರೆಗೆ ಬರತಕ್ಕ ಮೂಲಗೇಣಿ ಗೇಣಿಬಾಕಿ ಲ್ಯಾವೇಜು ರೂಪಾಯಿ 1252—10—0ನ್ನು ಬರಮಾಡಿಕೊಳ್ಳುವರೇ ವಾದಿ ದಾಖ್ಲು ಮಾಡಿದ ಮೇಲಿನ ದಾವೆ ತಾ. 15—2—1956ಕ್ಕೆ ನೇಲ್ಯಾಣ್ಸದ ಕೋರ್ಟಿನಲ್ಲಿ ತಸ್ಕಿಗೆ ಇಟ್ಟಿದೆ. ಆ ಕುರಿತು ನಿಮ್ಮ ಉಜಾಹರಣೆಯಿದ್ದರೆ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

(Sd) Y. Manjaya Shetty.
Advocate for Plaintiff.

ಮೊಕ್ಕಾಂ. ಕುಂದಾಪುರ ತಾ. 31—1—56.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ —
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ಡಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಎಂ ಬಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

Edited, Printed & Published By K. H. Shetty, at the Navayuga Press, Udipi S. India

EGD. NO. M. 3619

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ — VOL. 35

ಉಡುಪಿ, 16—2—1956

ಸಂಚಿಕೆ ೨೪ — NO. 24

ಯೋಜನೆಯಂತೆ ಭೂಸುಧಾರಣೆ

ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ಸರ್ವವ್ಯಾಪಿ ಸ್ವರೂಪದ ಭೂಸುಧಾರಣೆಯ ಕ್ರಮಗಳನ್ನು ರೂಪಿಸುವುದಕ್ಕಾಗಿ ಒಂದು ಸಮಿತಿಯನ್ನು ಯೋಜನಾ ಆಯೋಗವು ೧೯೫೫ನೇ ನವಂಬರದಲ್ಲಿ ನೇಮಿಸಿತು ಇಗೀಗ ಪ್ರಕಟವಾಗಿರುವ ಯೋಜನೆಯ ಕರಡಿನಲ್ಲಿ ಈ ಸಮಿತಿಯ ಕೆಲಸವು ಇನ್ನೂ ಮುಗಿದಿಲ್ಲವೆಂದು ಹೇಳಲಾಗಿದ್ದರೂ ಸಾಮಾನ್ಯ ಧೋರಣೆಗಳು ಹೇಗಿರಬೇಕೆಂಬ ಬಗ್ಗೆ ನಿರ್ದೇಶನವು ಮಾಡಲ್ಪಟ್ಟಿದೆ ವಿವರಗಳನ್ನು ಮಾತ್ರ ಸಮಿತಿಯ ವರದಿ ಬಂದ ಬಳಿಕ ಗೊತ್ತುಪಡಿಸಲಾಗುತ್ತದೆ

ದೇಶದ ಹೆಚ್ಚಿನ ಭಾಗದಲ್ಲಿ ಸಾಗುವಳಿದಾರ ಒಕ್ಕಲುಗಳಿಗೂ ಸರಕಾರಕ್ಕೂ ನಡುವಿದ್ದವರ ಹಕ್ಕುಗಳನ್ನು ಅಂತ್ಯಗೊಳಿಸಲು ಶಾಸನಬದ್ಧ ಕ್ರಮವು ಈಗಾಗಲೇ ನಡೆದಿದೆ ಸಾಗುವಳಿದಾರ ಒಕ್ಕಲುಗಳ ಬಳಿಯಿದ್ದ ವಿವಿಧ ಅಂತಸ್ತುಗಳನ್ನು ಕನಿಷ್ಠ ಮಟ್ಟಕ್ಕೆ ಇಳಿಸುವ ಪ್ರಯತ್ನವೂ ಹೆಚ್ಚಿನ ಮಟ್ಟಿಗೆ ಯಶಸ್ವಿಯಾಗಿ ಮುಂದೂಡಲ್ಪಟ್ಟಿದೆ ಇನ್ನು ಮುಂದೆ ಒಬ್ಬನು ತನ್ನ ವಶದಲ್ಲಿಟ್ಟುಕೊಳ್ಳಬಹುದಾದ ಭೂಮಿಯ ಪರಿಮಿತಿಯನ್ನು ಗೊತ್ತುಪಡಿಸುವ ಶಾಸನವೂ ಹಲವು ರಾಜ್ಯಗಳಲ್ಲಿ ಈಗಾಗಲೇ ಜಾರಿಗೆ ಬಂದಿದೆ ಇಂಥ ಶಾಸನವಿಲ್ಲದ ರಾಜ್ಯಗಳಲ್ಲಿ ಕ್ಷಿಪ್ರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಯೋಜನಾ ಆಯೋಗ ಒತ್ತಾಯಿಸುತ್ತದೆ.

ಒಕ್ಕಲುಗಳಿಗೆ ರಕ್ಷಣೆಯನ್ನೂ ಭದ್ರತೆಯನ್ನೂ ಕೊಡುವ ಅಗತ್ಯವನ್ನು ಯೋಜನೆಯ ಕರಡು ಎತ್ತಿ ಹೇಳಿದೆ ಈ ಬಗ್ಗೆ ಕ್ರಮಗಳನ್ನು ತೆಗೆದುಕೊಂಡ ಸಂದರ್ಭಗಳಲ್ಲಿ ಸ್ವಂತ ಸಾಗುವಳಿಯ ವ್ಯಾಖ್ಯೆಯು ಕೆಲವು ಕಷ್ಟಗಳಿಗೆ ಎಡೆ ಕೊಟ್ಟವನ್ನು ಕಂಡು ಯೋಜನಾ ಆಯೋಗವು ಈಗ ತನ್ನ ಸ್ಪಷ್ಟೀಕರಣವನ್ನು ಕೊಟ್ಟಿದೆ. ಇದರ ಪ್ರಕಾರ ಸಾಗುವಳಿಯ ಸಂಪೂರ್ಣ ಲಾಭ-ನಷ್ಟಗಳಿಗೆ ಭೂಮಾಲಿಕನು ಬದ್ಧನಿದ್ದರೆ ಮತ್ತು ಸಾಗುವಳಿಯ ಮುಖ್ಯ ಕೆಲಸಗಳಲ್ಲಿ ಸಹಭಾಗಿಯಾಗಿದ್ದರೆ ಮಾತ್ರ ಸ್ವಂತ ಸಾಗುವಳಿದಾರನೆನಿಸಬಲ್ಲನು; ಹೊರತು ಬೇರೆ ರೀತಿಯಿಂದ ಆ ವ್ಯಾಖ್ಯೆಯನ್ನು ಪಡೆಯುವಂತಿಲ್ಲ ಈಗ ಜಾರಿಯಲ್ಲಿರುವ ಶಾಸನ ಕ್ರಮಗಳನ್ನು ಈ ಸ್ಪಷ್ಟೀಕೃತ ವ್ಯಾಖ್ಯೆಯ ಬೆಳಕಿನಲ್ಲಿ ಪುನರ್ವಿಮರ್ಶಿಸಬೇಕೆಂದು ಯೋಜನೆಯ ಕರಡು ಹೇಳುತ್ತದೆ

ಸ್ವಂತ ಸಾಗುವಳಿಗೆ ಭೂಮಿಯನ್ನು ಈಗ ಅದರ ಸಾಗುವಳಿ ಮಾಡುತ್ತಿರುವ ಒಕ್ಕಲಿನಿಂದ ಹಿಂದೆ ಪಡೆಯುವಾಗ ಕೆಲವು ಶರ್ತಗಳನ್ನು ಪಾಲಿಸುವುದು ಅವಶ್ಯಕವೆಂದೂ ಯೋಜನಾ ಆಯೋಗ ತೀರ್ಮಾನಿಸಿದೆ ಭೂಮಾಲಿಕನು ಸ್ವಂತ ಸಾಗುವಳಿಗಾಗಿ ತನ್ನೊಬ್ಬ ಒಕ್ಕಲು ಸಾಗು ಮಾಡುತ್ತಿರುವ ಎಲ್ಲ ಭೂಮಿಯನ್ನೂ ಹಿಂದೆ ಪಡೆಯಲಾರನು. ಆ ಒಕ್ಕಲಿನ ವಶದಲ್ಲಿ ಹೊಲಗಳನ್ನು ತುಂಡರಿಸುವ ಬಗ್ಗೆ ಆಯಾ ರಾಜ್ಯದಲ್ಲಿರುವ ಶಾಸನವು ಗೊತ್ತುಪಡಿಸಿದ ಕನಿಷ್ಠ ಮಿತಿಯ ಭೂಮಿಯನ್ನು ಬಿಡಲೇಬೇಕು. ಅದಲ್ಲದೆ, ಆತನು ವಾಪಸು ಪಡೆದುಕೊಳ್ಳುವ ಭೂಮಿಯ ಒಟ್ಟು ವಿಸ್ತೀರ್ಣವು ಒಂದು ಕೌಟುಂಬಿಕ ಹಿಡುವಳಿಯ ಮಿತಿಗಿಂತ ಹೆಚ್ಚಾಗಕೂಡದು ಯೋಜನಾ ಆಯೋಗವು ಉಳುವರಿಗೆ ಅಡಚಣೆಯನ್ನೊದಗಿಸದೆ ಯಾವುದಾದರೊಂದು ಸಾಗುವಳಿ ಪ್ರದೇಶವು ವರ್ಷಕ್ಕೆ ಒಟ್ಟಿಗೆ ೧೨೦೦ ರೂಪಾಯಿಗಳ ನಿವ್ವಳ ಆದಾಯ ಅಥವ ಸರಾಸರಿ ೧೬೦೦ ರೂಪಾಯಿಗಳಷ್ಟು ಒಟ್ಟು ಆದಾಯ ನೀಡುವಂತಿದ್ದರೆ ಅದನ್ನು ಕೌಟುಂಬಿಕ ಹಿಡುವಳಿ ಪ್ರಮಾಣವೆಂದು ನಿಗದಿ ಮಾಡಿದೆ ಒಂದು ಕುಟುಂಬದಲ್ಲಿ ಐದು ಸದಸ್ಯರಿರುವರೆಂಬ ಲಕ್ಷ್ಯವನ್ನು ಇಲ್ಲಿ ಹಾಕಲಾಗಿದೆ

ಒಂದು ಕೌಟುಂಬಿಕ ಹಿಡುವಳಿಗಿಂತಲೂ ಕಡಿಮೆ ಭೂಮಿ ಇರುವವರನ್ನು ಸಣ್ಣ ಹಿಡುವಳಿದಾರರೆಂದು ಯೋಜನಾ ಆಯೋಗ ಕರೆದಿದೆ ಈ ವರ್ಗದಲ್ಲಿ ಸೇರುವ ಜನರ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿರುವುದರಿಂದ ಅಂಥವರಲ್ಲಿ ಯಾರಾದರೊಬ್ಬರು ಸ್ವಂತ ಸಾಗುವಳಿ ಇಚ್ಛೆಯನ್ನು ಹೊಂದಿದ್ದರೆ, ಅದಕ್ಕೆ ಅನುಕೂಲವಾಗುವಂತೆ ಕೆಲವು ಸೌಲಭ್ಯಗಳನ್ನು ಯೋಜನಾ ಆಯೋಗವು ಕಲ್ಪಿಸಿಕೊಟ್ಟಿದೆ ಇದರ ಪ್ರಕಾರ, ಹೊಲಗಳನ್ನು ತುಂಡರಿಸುವ ಬಗ್ಗೆ ಆಯಾ ರಾಜ್ಯದಲ್ಲಿ ಶಾಸನದ ಮೂಲಕ ನಿಗದಿ ಮಾಡಲಾದ ಕನಿಷ್ಠ ಪ್ರಮಾಣಕ್ಕೆ ಕಡಿಮೆಯಾಗದಂತೆ ಸಣ್ಣ ಹಿಡುವಳಿದಾರನು ತನ್ನ ವಶವಿರುವ ಒಟ್ಟು ಭೂಮಿಯಲ್ಲಿ ಅರೆವಾಸಿಯನ್ನು ಸ್ವಂತ ಸಾಗುವಳಿಗಾಗಿ ವಾಪಸು ಪಡೆಯಬಹುದು

ಮೊದಲನೇ ಯೋಜನೆಯಲ್ಲಿ ಒಟ್ಟು ಉತ್ಪನ್ನದ ನಾಲ್ಕರಲ್ಲಿ ಅಥವಾ ಐದರಲ್ಲಿ ಒಂದಂಶಕ್ಕಿಂತಲೂ ಹೆಚ್ಚು ಪ್ರಮಾಣದ ಗೇಣಿ ನಿರ್ಣಯಿಸುವ ಪ್ರಸಂಗಗಳಿಗೆ ನ್ಯಾಯಸಮ್ಮತವಾದ ವಿಶೇಷ ಕಾರಣಗಳ ಬೆಂಬಲವಿರಬೇಕು ಎಂದು ಹೇಳಲ್ಪಟ್ಟಿದಿತು ಗೇಣಿ ನಿರ್ಣಯದ ಕುರಿತು ತೆಗೆದುಕೊಳ್ಳಬೇಕಾದ ಶಾಸನಬದ್ಧ ಕ್ರಮಗಳ ಪ್ರಗತಿಯು ಭಾರತದಲ್ಲಿ ಒಂದೇ ತೆರನಾಗಿಲ್ಲ, ಮಾತ್ರವಲ್ಲ, ಕೆಲವು ರಾಜ್ಯಗಳು ಈ ಬಗ್ಗೆ ಕೆಲಸವನ್ನೇ ಮಾಡಿಲ್ಲ ಎಂದು ಯೋಜನಾ ಆಯೋಗವು ಎರಡನೇ ಯೋಜನೆಯ ಕರಡಿನಲ್ಲಿ ವಿಷಾದಪೂರ್ವಕವಾಗಿ ನೆನಪು ಮಾಡಿದೆ ಅಲ್ಲದೆ, ದೇಶದ ಯಾವುದೇ ಭಾಗದಲ್ಲಿ ಯಾವನೂ ಈಗ ಒಟ್ಟು ಉತ್ಪನ್ನದ ಐದರಲ್ಲಿ ಒಂದಂಶಕ್ಕಿಂತಲೂ ಹೆಚ್ಚಾದ ಗೇಣಿಗೆ ನ್ಯಾಯಸಮ್ಮತವಾದ ಕಾರಣವಿರಲಾರದೆಂದೂ ಅದು ಖಂಡತುಂಡವಾಗಿ ಹೇಳಿದೆ

ಸ್ವಂತ ಸಾಗುವಳಿಗಾಗಿ ವಾಪಸು ಪಡೆಯುವಂತಿಲ್ಲದ ಭೂಮಿಯಲ್ಲಿ ದುಡಿಯುತ್ತಿರುವ ಒಕ್ಕಲುಗಳನ್ನೆಲ್ಲ ಸರಕಾರವು ನೇರಾಗಿ ತನ್ನ ಸಂಪರ್ಕಕ್ಕೆ ತಂದುಕೊಳ್ಳಬೇಕೆಂದು ಯೋಜನಾ ಆಯೋಗ ಸಲಹೆ ಮಾಡಿದೆ ಇದಕ್ಕಾಗಿ ಸ್ವಂತ ಸಾಗುವಳಿಯ ಮಿತಿಗಿಂತ ಹೆಚ್ಚಿನ ಭೂಮಿಯನ್ನು ಸರಕಾರವು ಭೂಮಾಲಿಕರಿಗೆ ಪರಿಹಾರ ಧನವನ್ನಿತ್ತು ಕೊಂಡುಕೊಳ್ಳಬೇಕೆಂದು ಅದು ಸೂಚಿಸಿದೆ ಇಪ್ಪತ್ತು ವರ್ಷಗಳಿಗೆ ಮೀರದ ಒಂದು ಅವಧಿಯಲ್ಲಿ ನ್ಯಾಯವಾದ ಗೇಣಿಯಿಂದ ತೀರ್ವೆಯನ್ನು ಕಳೆದ ಬಳಿಕ ಏನು ಆದಾಯವು ಬರಬಹುದೋ ಅದನ್ನು ನ್ಯಾಯವಾದ ಪರಿಹಾರದ ಮೊತ್ತವೆಂದು ಪರಿಗಣಿಸಲು ಯೋಜನಾ ಆಯೋಗವು ಹೇಳಿದೆ ಇಪ್ಪತ್ತು ವರ್ಷಗಳಷ್ಟು ದೀರ್ಘ ಅವಧಿಯಲ್ಲಿ ಮರಳಿಸಬಹುದಾದ ಭದ್ರತಾ ಪತ್ರಗಳನ್ನು ಪರಿಹಾರ ಧನವಾಗಿ ಕೊಡಬೇಕೆಂದು ಅದರ ಅಭಿಪ್ರಾಯ.

ಕಳೆದ ಕೆಲವು ವರ್ಷಗಳಲ್ಲಿ ಕೆಲವು ರಾಜ್ಯಗಳಲ್ಲಿ ಸ್ವೇಚ್ಛೆಯಿಂದ ಒಕ್ಕಲುತನವನ್ನು ಬಿಟ್ಟುಕೊಟ್ಟ ಉದಾಹರಣೆಗಳು ಬಹುದೊಡ್ಡ ಪ್ರಮಾಣದಲ್ಲಿ ಸಿಗುತ್ತವೆ ಒಕ್ಕಲುತನವನ್ನು ಹೀಗೆ "ಸ್ವೇಚ್ಛೆ"ಯಿಂದ ಬಿಟ್ಟುಗೊಟ್ಟುದು ನಂಬಿಕೆಯನ್ನು ಹುಟ್ಟಿಸುವುದಿಲ್ಲವೆಂದು ಯೋಜನಾ ಆಯೋಗ ಭಾವಿಸಿದೆ ಅದುರಿಂದ ಹೀಗೆ ಸ್ವೇಚ್ಛೆಯಿಂದ ಒಕ್ಕಲುತನವನ್ನು ಬಿಟ್ಟುಗೊಟ್ಟ ಮಾಹಿತಿಗಳನ್ನೆಲ್ಲ ಕೂಡಿಸಿ, ಯೋಗ್ಯ ತನಿಖೆ ನಡೆಸಿ, ಸುಮಾರು ಮೂರು ವರ್ಷಗಳಿಂದೀಚೆಗೆ ಸ್ವೇಚ್ಛೆಯಿಂದಲ್ಲದೆ ಭಯ, ಬೆದರಿಕೆ, ಒತ್ತಾಯ, ಬಲಾತ್ಕಾರಾದಿ ಕಾರಣಗಳಿಂದ ಒಕ್ಕಲುತನವನ್ನು ಬಿಟ್ಟುಬಿಡಬೇಕಾಗಿ ಬಂದವರನ್ನೆಲ್ಲ ಸನ್ನಿವೇಶನಗೊಳಿಸಿ, ಅವರಿಗೆ ಹಿಂದಿನ ಸಾಗುವಳಿ ಭೂಮಿ ಕೊಡಿಸುವ ವ್ಯವಸ್ಥೆಯಾಗಬೇಕೆಂದು ಯೋಜನಾ ಆಯೋಗ ತಿಳಿಸಿದೆ ಅಲ್ಲದೆ, ಭೂಮಿಯನ್ನು ಹಾಳು ಮಾಡಿದ ಅಥವಾ ನ್ಯಾಯವಾದ ಗೇಣಿಯನ್ನು ಕೊಡಲು ಒಪ್ಪದ ಕಾರಣಗಳ ಹೊರತು, ಬೇರೆ ನೆಪದಿಂದ ಯಾರನ್ನೂ ಒಕ್ಕಲೆಬ್ಬಿಸದಂತೆ ತಡೆಯುವ ಶಾಸನಬದ್ಧ ಕ್ರಮಗಳನ್ನು ಕೈಗೊಳ್ಳಬೇಕೆಂದು ಅದು ಆದೇಶಿಸಿದೆ ಹೀಗೆ ಮಾಡುವಾಗ ಕಳೆದ ಮೂರು ವರ್ಷಗಳಲ್ಲಿ ಅನ್ಯಾಯವಾಗಿ ಒಕ್ಕಲೆಬ್ಬಿಸಲ್ಪಟ್ಟವರಿಗೆ ಪುನಃ ಅವರ ಸಾಗುವಳಿ ಭೂಮಿಯನ್ನು ಕೊಡಿಸುವ ಕಡೆಗೆ ವಿಶೇಷ ಗಮನವನ್ನು ಹರಿಸಬೇಕೆಂದೂ ಅದು ಹೇಳಿದೆ

(೧೦ನೆ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ

ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ ಉಡುಪಿ, ದ ಭಾರತ

ಜಯಶ್ರೀಯು ನಿಮ್ಮನ್ನಗಲದಂತೆ ನೋಡಿಕೊಳ್ಳಿರಿ.

ಪ್ರತಿ ವೇತನ ದಿನದಲ್ಲಿ ಕಿಂಚಿತ್ತಾದರೂ ಉಳಿಸಿರಿ ಹಾಗೆ ಉಳಿಸಿದುದನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಉಳಿತಾಯ ಖಾತೆಯಲ್ಲಿ ನಿಮಗಾಗಿ ಕಾರ್ಯವೆಸಗಲು ತೊಡಗಿರಿ

ಗಂಡಾಂತರಗಳನ್ನೂ ಆಕಸ್ಮಿಕ ಸಂದರ್ಭಗಳನ್ನೂ ಎದುರಿಸಲು ಬೇಕಾಗುವ ಕ್ಷೇಮ ನಿಧಿಯನ್ನು ಕೂಡಿಸಲು ಸಾಮಾನ್ಯ ಗಂಡಸು ಅಥವಾ ಹೆಂಗಸಿಗೆ ಕ್ರಮಪ್ರಕಾರ ಉಳಿತಾಯ ಮಾಡಿಕೊಂಡು ಬರುವುದೇ ಸುಲಭ ಸಾಧ್ಯವಾದ, ನಿಜವಾದ ಮತ್ತು ಸುರಕ್ಷಿತವಾದ ಸಾಧನ

ಬೊಂಬಾಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದು ಮತ್ತು ತಿರುಕೊಚ್ಚಿ ರಾಜ್ಯಗಳಲ್ಲಿರುವ ನಮ್ಮ 93 ಶಾಖಾ ಕಚೇರಿಗಳಲ್ಲಿ ಯಾವುದಾದರೊಂದರಲ್ಲಿ ಉಳಿತಾಯ ಲೆಖ್ಖವನ್ನು ತೆರೆಯಿರಿ

ಚಲಾವಣೆ ಭಂಡವಾಳ ರೂ. ೮,೫೦,೦೦,೦೦೦

THE CANARA INDUSTRIAL & BANKING SYNDICATE LTD

Estd 1925] [Head Office UDIPI, S India

ಬಾಲ ಗೋಪಾಲನಿಗಾಗಿ ನವನೀತ

ಕನ್ನಡದಲ್ಲಿ ಮಕ್ಕಳ ಮನಕ್ಕೊಪ್ಪುವ ಶಿಶು ಸಾಹಿತ್ಯದ ಕೃಷಿ

ಬರೆದವರು: ಶ್ರೀ "ಹೊಯಿಸಳ"

· ನಾವೀಗ ಬಿಡುಗಡೆ ಪಡೆದಿದ್ದೇವೆ. ಯೋಜನೆಗಳನ್ನೂ ಹೂಡಿದ್ದೇವೆ. ಇನ್ನು ಮುಂದೆ ನಮ್ಮ ಭಾರತ ನಾಡು ಮಹಾ ವೈಭವದಿಂದ ಮೆರೆಯುತ್ತದೆ. ಮುಂದಿನ ಸುಖ ಸಂಪತ್ತನ್ನೆಲ್ಲ ಅನುಭವಿಸುವಂಥ ನಮ್ಮ ನಾಡಿನ ಶಿಶುಗಳು ಹೇಗಿರಬೇಕು, ಅವರನ್ನು ಹೇಗೆ ತಯಾರಿಸಬೇಕು, ಅವರಿಗೆ ಓದುವುದಕ್ಕೆ ಏನಿರಬೇಕು ಎಂದೀಗ ನಾವು ವಿಚಾರಿಸೋಣ!

ಮಕ್ಕಳ ಯೋಗಕ್ಷೇಮಕ್ಕಾಗಿ ಕೋಟ್ಯಾಂತರ ಧನವನ್ನು ಗಳಿಸಿ ಬಳಸುತ್ತಿದ್ದೇವೆ. ಅವರು ಆರೋಗ ದೃಢಕಾಯರಾಗಿ ಬೆಳೆಯುತ್ತಾರೆ; ದಿಟ. ಆದರೆ ಅವರಿಗೆ ಮನೋರಂಜನೆ ಹೇಗೆ, ಅವರಿಗೆ ನೀತಿ ಬೋಧನೆ ಹೇಗೆ, ಅವರ ಮನಸ್ಸು ಏನನ್ನು ಓದಿ ಬೆಳೆಯಬೇಕು ಎಂಬೆಲ್ಲ ವಿಚಾರಗಳಲ್ಲಿ ಮಹಾ ಮಹಾ ಸಾಹಸಿಗಳು ಯೋಚಿಸಿ ಯೋಜನೆಗಳನ್ನು ನಿರ್ಮಿಸುವ ಕಾಲವಿದು.

ಇತರ ಜನಾಂಗಗಳು ಈ ಹಂತವನ್ನು ಈಗಾಗಲೇ ಹತ್ತಿ ಮೇಲೇರಿ ನಿಂತಿದ್ದಾರೆ. ಈ ಸಮಸ್ಯೆಗಳನ್ನೆಲ್ಲಾ ಮೊದಲೇ ಬಿಡಿಸಿದ್ದಾರೆ. ಇಂಗ್ಲೆಂಡಿನಲ್ಲಿ ವಿಲಿಯಂ ಬ್ಲೇಕನು ಶಿಶು ಸಾಹಿತ್ಯವನ್ನು ಆರಂಭಿಸುವಾಗ್ಗೆ "ಪೈಪರ್, ಪೈಪ್ ಮಿ ಎ ಸೋಂಗ್" ಎಂತ ಧೇನ ಶಿಶು ಹೇಳಿತೆಂದನು. ಐದು ಶತಮಾನಕ್ಕೂ ಹಿಂದೆ "ಟೈಗರ್, ಟೈಗರ್, ಬರ್ನಿಂಗ್ ಬ್ರೈಟ್, ಇನ್ ದಿ ಫೋರೆಸ್ಟ್ಸ ಆಫ್ ದಿ ನೈಟ್" ಎಂದಾತನು ಬರೆದ ಕವನವಿನ್ನೂ ಶಿಶು ಪ್ರಿಯವಾಗಿದೆ. ಅದೇ ಇಂಗ್ಲೆಂಡಿನಲ್ಲಿ ಪದ್ಯಗದ್ಯ ಬರೆದವರು ನೂರಾರು ಮಂದಿ. ಅಂಥವರ ಕೃತಿಗಳ ನಡುವೆ "ಚೈಲ್ಡ್ಸ್ ಗಾರ್ಡನ್ ಆಫ್ ವರ್ಸಸ್", "ಅಲಿಸ್ ಇನ್ ದಿ ವಂಡರ್ ಲ್ಯಾಂಡ್" ಎಂಬಿವು ಶಿಶು ಪ್ರಿಯ.

ಆನಂತರ ಫ್ರಾನ್ಸಿನಲ್ಲಿ "ಬ್ಲೂ ಬರ್ಡ್" ಎಂಬ ನಾಟಕವನ್ನು ಮೆಟರ್ ಲಿಂಕ್ ಎಂಬವನು ಬರೆದನು. ಇಟಲಿಯಲ್ಲಿ ಈಸೋಪ್ ಎಂಬ ಗುಲಾಮನು ಪ್ರಾಣಿ ಸಂಬಂಧವಾದ ನೀತಿ ಕಥೆಗಳನ್ನು ತುಂಬಾ ಹಿಂದೆ ಬರೆದು ಬಿಟ್ಟಿದ್ದನು. ರಷ್ಯದಲ್ಲಿ ಟಾಲ್‌ಸ್ಟಾಯ್ ಎಂಬ ಸಾಹಿತಿಗಳು ಮಕ್ಕಳಿಗಾಗಿ "ಇರ್ರೆಸ್ಪೋನ್ಸಿಬಲ್ ಸ್ಕೂಲ್" ಎಂಬ ಶಾಲೆಯನ್ನು ಸ್ಥಾಪಿಸಿಕೊಂಡು ಬೀದಿಯ ಮಕ್ಕಳನ್ನೆಲ್ಲಾ ಹಿಡಿದು ತಂದು ಶಿಕ್ಷಿಸಿದಾಗ, ಅನೇಕ ಪದ್ಯ ಕಥೆ, ನಾಟಕ ಮುಂತಾಗಿ ಶಿಶು ಸಾಹಿತ್ಯವು ತಯಾರಾಯಿತು. ಜಪಾನಿನಲ್ಲಿ ಲ್ಯಾಫ್ ಕಾಡಿಯೋಹೆರ್ನ್ ಎಂಬಾತನು ಶಿಶು ಸಾಹಿತ್ಯಕ್ಕೆ ತಳಪಾಯ ಹಾಕಿದನು.

ಈ ರೀತಿಯಾಗಿ ಯೂರೋಪಿನ ಶಿಶು ಸಾಹಿತ್ಯ ಬೆಳೆಯುತ್ತಿರುವಾಗ ಅಮೇರಿಕದಲ್ಲಿ ವಾಲ್ಟ್ ಡಿ ಸ್ನೇಯ ಚಲಚ್ಚಿತ್ರ ಕಥೆಗಳು ಮಿಕ್ಕಿ ಮೌಸ್‌ನಿಂದ ಆರಂಭವಾದುವು. ಈಗ ಅಮೇರಿಕದಲ್ಲಿ ಮಕ್ಕಳ ಸಾಹಿತ್ಯ[illegible] ಮಕ್ಕಳಿಗಾಗಿ ತಯಾರಾಗಿರುವ ಚಿತ್ರ ಪುಸ್ತಕಗಳು ಅತ್ಯಂತ ಆಕರ್ಷಣೀಯ. ಮಕ್ಕಳಿಗಾಗಿ ಹೊರಡುವ ವಾರಪತ್ರಿಕೆಗಳೂ ನೂರಾರು!

ನಮ್ಮಲ್ಲಿ ಮಕ್ಕಳ ಸಾಹಿತ್ಯವಿತ್ತೆ?— ಎಂಬೀ ಪ್ರಶ್ನೆ ಎಲ್ಲರನ್ನೂ ಕಾಡಿಸುತ್ತಿದೆ. ಯೋಚಿಸಿ ನೋಡಿದರೆ ಶಿಶು ಸಾಹಿತ್ಯವು ಭಾರತದಲ್ಲೇ ಮೊದಲಾಯಿತೆನ್ನಬಹುದು. ಉಪನಿಷತ್ತಿನ ಮಕ್ಕಳಾದ ನಚಿಕೇತ ಮೊದಲಾದವರೇ ಅದಕ್ಕೆ ಮೂಲ ಕರ್ತೃಗಳು. ವಾಲ್ಮೀಕಿ ಋಷಿಯು ರಾಮಾಯಣವನ್ನು ಮಕ್ಕಳಿಗಾಗಿಯೇ ಬರೆದನು ಲವಕುಶರು ವೀಣೆ ಬಾರಿಸಿಕೊಂಡು ಆ ಮಹಾ ಕಾವ್ಯವನ್ನು ಹಾಡಿದರು. ಜಾತಕ ಕಥೆಗಳು, ಪಂಚತಂತ್ರ, ಕಥಾಸರಿತ್ಸಾಗರ ಮುಂತಾದುವೆಲ್ಲಾ ಮಕ್ಕಳಿಗಾಗಿಯೇ ಬರೆದುವು. ಮಹಾ ಭಾರತದಲ್ಲಿ ಮಕ್ಕಳು ಮೆಚ್ಚುವ ಅನೇಕ ಸಂದರ್ಭಗಳು ಅದ್ಭುತವಾಗಿಯೂ ಕೌತುಕವಾಗಿಯೂ ಬರೆಯಲಾಗಿವೆ.

ನಮ್ಮ ನಾಡಿನ ಸಂಸ್ಕೃತಿ ಹಿಂದೆ ಉನ್ನತ ಮಟ್ಟದಲ್ಲಿತ್ತು. ಆಗ ನಮ್ಮ ಹಿರಿಯರಿಗೆ ವ್ಯವಧಾನವಿತ್ತು. ಅವರು ಸಾವಧಾನನಾಗಿ ಶಾಂತರಾಗಿ ಕುಳಿತುಕೊಂಡು ಶಿಶುಗಳಿಗೆ ಕಥೆ ಹೇಳಿ ಪಾಠ ಕಲಿಸುವ ಮನಸ್ಸಿನವರಾಗಿದ್ದರು. ಎಲ್ಲಿ ಯಾವ ಯಾವ ರಾಜರು ಹೋರಾಡಿನರೂ ಹಗೆಗಳ ತಲೆಗಳು ಹಾರಾಡಿದರೂ ಮಕ್ಕಳ ವಿಹಾರ ಸ್ಥಾನಗಳಲ್ಲಿ ಮಾತ್ರ ಸದಾ ಶಾಂತಿ ನೆಲಸಿರುತ್ತಿತ್ತು. ಋಷಿಗಳೂ ವಾನಪ್ರಸ್ಥರೂ ಗದ್ದಲ ದೂರುಗಳಿಗೆ ದೂರವಾಗ ಆಶ್ರಮಗಳನ್ನು ಕಟ್ಟಿಕೊಂಡು ಮಕ್ಕಳನ್ನು ತಯಾರಿಸುತ್ತಿದ್ದರು. ಅಲ್ಲಿನ ಅರಣ್ಯಕಗಳ ಫಲವಾಗಿ ಶಿಶು ಸಾಹಿತ್ಯ ಆರಂಭವಾಯಿತು.

ಆದರೆ ಆಗಿನ ಶಿಶುಗಳಿಗೂ ಈಗಿನ ಮಕ್ಕಳಿಗೂ ವ್ಯತ್ಯಾಸವಿದೆ ಭಾಷೆಯಲ್ಲಿ ಹಾಗು ಸಂಸ್ಕೃತಿಯಲ್ಲಿ! ಈ ವ್ಯತ್ಯಾಸ ಈ ಯುಗದ ಹಿರಿಯರಿಂದ ಬಂದಿದೆ. ಆಗಿನ ಹಿರಿಯರು ತಮ್ಮ ಕಿರಿಯರ ಪಾಲಿಗೆ ನಿರಂತರ ಸಹವಾಸಿಗಳಾಗಿ ಇರುತ್ತಿದ್ದರು. ಹಿರಿಯರ ಸಂಗಡಲೇ ಮಕ್ಕಳು ನಕ್ಕು ನಲಿದು ಕಲಿತು ಕಲೆಗಾರರಾಗಿ ಬೆಳೆಯುವ ಅನುಕೂಲವಿತ್ತು. ಆ ಪುರಾತನ ಕಾಲದಲ್ಲಿ ಈಗಿನ ಇಪ್ಪತ್ತನೇ ಶತಮಾನದ ಡಾ|| ಮೋಂಟಿ ಸೋರಿಯ ಮತವೂ ಅದೇ ಆಗಿದೆ. ಲೂಥರ್ ಬರ್‌ಬ್ಯಾಂಕನು ಸಹ ತನ್ನ "ಟ್ರೈನಿಂಗ್ ಆಫ್ ದಿ ಹ್ಯೂಮನ್ ಪ್ಲಾಂಟ್" ಎಂಬ ಗ್ರಂಥದಲ್ಲಿ ಹಾಗೆಯೇ ಹೇಳುತ್ತಾನೆ.

ಈಗಿನ ಹಿರಿಯರಿಗಾದರೋ ಅಂಥಾ ಅನುಕೂಲವಿಲ್ಲ. ಇವರು ತಮ್ಮ ಮಕ್ಕಳ ಆಟಪಾಟಗಳನ್ನೇ ನೋಡಿ ಅರಿಯರು. ಹೊಟ್ಟೆಯ ಆತುರದ—ಸಂಪಾದನೆಯ—ಪರಿಚರ್ಯೆ ಹಾಗೆ ಮಾಡಿದೆ. ಎರಡು ಮೂರು ಶತಮಾನಗಳೇ, ಏಕೆ, ಹತ್ತು ಶತಮಾನಗಳಿಂದೀಚೆಗೇ ನಮ್ಮ ಭಾರತದ ಜನತೆ ನುಗ್ಗಿ ಬಂದ ಪರಜನರ ಗೊಂದಲದಲ್ಲಿ ಬಿದ್ದು ಮಕ್ಕಳ ಹಾದಿಯನ್ನೇ ಬಿಟ್ಟು ನಡೆದಿದೆ.

ಹಿರಿಯರು ಮಕ್ಕಳೊಂದಿಗೆ ಇರುವುದು ತಪ್ಪಿತು. ಅವರ ಸಂಸ್ಕೃತಿ ಮಕ್ಕಳ ಬಳುವಳಿಯಾಗಲಿಲ್ಲ! ಕೇವಲ ಗೃಹಕಾರ್ಯಗಳಲ್ಲಿ ಸದಾ ನಿರತರಾದ ಅಶಿಕ್ಷಿತ ಹೆಂಗಸರೇ ಮಕ್ಕಳ ಶಿಕ್ಷಣಕ್ಕೆ ನಿಲ್ಲಬೇಕಾಯಿತು. ಅವರಿಂದಲೇ ಮಕ್ಕಳಿಗಾಗಿ, ಮಕ್ಕಳ ಪರವಾಗಿ, ಸಾಹಿತ್ಯ ನಿರ್ಮಾಣವಾಗಬೇಕಾಯಿತು.

ಹೀಗೆ ನಮ್ಮ ಸಮಾಜದಲ್ಲಿ ವೀರಕಥನ, ಸವಾಲು ಜವಾಬು, ಕೋಲಾಟದ ಪದ ಮುಂತಾದುವುಗಳ ಸಂಗಡ ತೊ[illegible] ಲಹಾಡುಗಳೂ ಪ್ರಾಂತೀಯ ಭಾಷೆ[illegible] ಲ್ಲಿ ಆರಂಭವಾದುವು. ಅವೇ ಈಗ ನ[illegible] ಗೆ ದೊರೆತಿರುವ ಜನಪದ ಸಾಹಿತ್ಯ.

ಅಂಥಾ ಕೆಲವು ಪದಗಳಲ್ಲಿ ಮಗು[illegible] ಉತ್ಸವ ಮೂರ್ತಿ. ಮಗು[illegible] ಜಗತ್ ಸಮಾಜಕ್ಕೆ ನವ[illegible] ಸಂಸಾರ ನೀಡಿರುವ ಕಾಣಿ[illegible] ಮಗು ಸಾವಿರ ಜನದ ಮುದ್ದಾಗಿ[illegible] ವಂತೆ ಬೆಳೆಯಬೇಕು. ಮಗುವಿದ್ದ[illegible] ಮನೆ— ಎಂಬೆಲ್ಲ ಭಾವನೆಗಳು ಬೆಳೆದ[illegible] ಆಗಿನ ತೊಟ್ಟಿಲ ಹಾಡುಗಳೇ ಈ[illegible] ಕಾಲಕ್ಕೆ ಶಿಶು ಉಪನಿಷತ್ತುಗಳಂತಿ[illegible]

ಭಾರತದಲ್ಲಿ ಇಪ್ಪತ್ತನೇ ಶತಮಾ[illegible] ದಲ್ಲಿ, ಶಿಶು ಸಾಕಣೆಕೆ ಮತ್ತು ಸಾಹಿ[illegible] ವಿಚಾರಕ್ಕೆ ಪ್ರಾಧಾನ್ಯ ಬಂದುದು ದಿ[illegible] ಗತ ಶ್ರೀ ಗುರುದೇವ ರವೀಂದ್ರನಾ[illegible] ಠಾಕೂರರಿಂದ. ಅವರು ನ[illegible] ವಯಸ್ಸಿನಲ್ಲಿ ತಾಯಿ ತೀರಿಕೊಂ[illegible] ತಮ್ಮ ಮಕ್ಕಳನ್ನು ಸಲಹುತ್ತಾ ಅ[illegible] ಸಾಮೀಪ್ಯವನ್ನು ಬಿಡದಿರುವ ಪ್ರಸ[illegible] ಬಂತು. ಆಗಲಾಗ ಹಿಮಾಚ[illegible] ಪ್ರದೇಶದಲ್ಲಿ ಆರಂಭವಾದವು— ಅ[illegible] "ಬಿದಿಗೆಯ ಚಂದ್ರ" ಶಿಶು ಗೀತೆಗ[illegible] ಮತ್ತು "ಅಂಚೆ ಮನೆ" ಎಂ[illegible] ನಾಟಕ.

ಆನಂತರ ಭಾರತೀಯ ಮಕ್ಕಳಿ[illegible] ಶಾಂತಿನಿಕೇತನದಲ್ಲಾಯಿತು ಶಿಕ್ಷಣ[illegible] ಲಂ. ರಷ್ಯದಲ್ಲಿ ಟಾಲ್‌ಸ್ಟಾಯ್ ತೆ[illegible] ಇರ್ರೆಸ್ಪಾನ್ಸಿಬಲ್ ಸ್ಕೂಲಿನಲ್ಲಿ ತಯ[illegible] ರಾದ ಮಕ್ಕಳು ರಷ್ಯದ ನಾಡನ್ನು ಹೆ[illegible] ಕಟ್ಟಿದರೋ ಹಾಗೆ ಶಾಂತಿನಿಕೇತನ[illegible] ಬೆಳೆದ ಬಿಡುಗಡೆಯ ಮಕ್ಕಳು [illegible] ಭಾರತ ನಿರ್ಮಾಣಕ್ಕೆ ವಿಶೇಷತಃ ಕಾ[illegible] ರಾದರು!

ಕನ್ನಡ ನಾಡಿನಲ್ಲಿ ಸುಮಾರು ನ[illegible] ತ್ತು ವರ್ಷಗಳಿಂದ ಆರಂಭವಾಗಿದೆ [illegible] ಸಾಹಿತ್ಯ. ದಿವಂಗತ ಪಂಜೆ ಮಂಗೇ[illegible] ರಾಯರು, ಕೋಟ ಶಿವರಾಮ ಕಾ[illegible] ತರು, ಹೊಯಿಸಳ, ರಾಜರತ್ನಂ ಮ[illegible] ದೇವುಡು ಮುಂತಾದವರಿಂದ ಆಧು[illegible] ಮಕ್ಕಳ ಸಾಹಿತ್ಯ ರೂಪುಗೊಂಡಿತು.

ಇವರೆಲ್ಲ ಮಕ್ಕಳ ಸಂಗಡ ಬೆರೆತಿ[illegible] ಮಕ್ಕಳ ಮರ್ಮವನ್ನರಿತು ಬರೆಯ[illegible] ರಂಭಿಸಿದವರು. ಈ ಕಾರ್ಯದಲ್ಲಿ ಕಾರಂತರು ಮೇಲ್ತರದ ಕಾರ್ಯವೆ[illegible] ದ್ದಾರೆ. ಇತ್ತೀಚೆಗೆ ಶ್ರೀ ಪಾಂಡುರಂಗ[illegible] ರೂ, ಶ್ರೀ ಮಚ್ಚಿಮಲೆ ಶಂಕರನಾ[illegible] ಯಣರೂ ಶ್ರೀ ಬಾಳಿಗರೂ ಮೊದಲ[illegible] ಕೆಲವರಿಲ್ಲ ಆಗಾಗ್ಗೆ ಶಿಶು ಸಾಹಿತ್[illegible] ನುಗ್ಗಿ ಬಂದಿದ್ದಾರೆ.

ಈ ಶತಮಾನದಲ್ಲಿ ಜಲಪಾತದಂ[illegible] ಜ್ವಾಲಾಮುಖಿಯಂತೆ, ಮಹಾಸಾ[illegible] ದಂತೆ ನಮ್ಮ ನಾಡು ಎಚ್ಚರಗೊಂಡಿ[illegible] ಆಗಲೇ ಪುರಾತನ ಸಂಸ್ಕೃತಿಯು ನ[illegible] ನವಾಗಿ ಪುನರವತಾರಗೊಂಡಿತು [illegible] ಗಿ ಹೋಗಿದ್ದ ಸನಾತನ ಸಂಸ್ಕೃತಿ[illegible] ಶಾಖೆ ಪ್ರಶಾಖೆಗಳೆಲ್ಲ ಚಿಗುರುತ್ತಾ [illegible] ಡುವು. ಅಂಥಾ ಶಾಖೆಗಳಲ್ಲಿ ಶಿಶು ಸಾ[illegible] ತ್ಯ ನಿರ್ಮಾಣವೂ ಒಂದಾಗಿದೆ. ಎ[illegible] ಪ್ರಾಂತೀಯ ಭಾಷೆಗಳಲ್ಲೂ [illegible] ಸಾಹಿತ್ಯ ನವನವೀನವಾಗಿ ರೂ[illegible] ಗೊಳ್ಳುತ್ತಿದೆ

ಶಿಶು ಸಾಹಿತ್ಯವು ನಮ್ಮ ಜೀವ[illegible] ಸಂಸ್ಕಾರದ ಪುಣ್ಯ ಪುಷ್ಪ. ಹೊರಗಿ[illegible]

(೧೧ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ್ಯ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಎರಡನೇ ಪಂಚ ವಾರ್ಷಿಕ ಯೋಜನೆ

ಸಮಾಜವಾದಿ ಮಾದರಿಯ ಆದರ್ಶ

ಭಾರತದ ಯೋಜನಾ ಆಯೋಗವು ತಯಾರಿಸಿರುವ ಎರಡನೇ ಪಂಚ ವಾರ್ಷಿಕ ಯೋಜನೆಯ ಕರಡು ಈಗ ತಾನೇ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟವಾಗಿವೆ. ಈ ಕರಡು ಸಾರ್ವಜನಿಕ ರಂಗದಲ್ಲಿ ೪೮೦೦ ಕೋಟಿ ಮತ್ತು ಖಾಸಗಿ ರಂಗದಲ್ಲಿ ೨೪೦೦ ಕೋಟಿ ರೂಪಾಯಿಗಳ ವೆಚ್ಚವನ್ನೊಳಗೊಳ್ಳುವ ಯೋಜನೆಗಳ ವಿವರದಿಂದ ಕೂಡಿದೆ. ಅಲ್ಲದೆ, ದೇಶವನ್ನು ಕಲ್ಯಾಣ ರಾಷ್ಟ್ರದ ಧ್ಯೇಯದೆಡೆಗೆ ಒಯ್ಯಲು ಅನುಸರಿಸಬೇಕಾದ ವಿಧಾನಗಳ ಮೇಲೆ ಸಹ ಪ್ರಕಾಶವನ್ನು ಚೆಲ್ಲುತ್ತದೆ.

ಯೋಜನೆ—ಸಾಧನೆ

ಮೊದಲನೇ ಯೋಜನೆಯು ಮುಟ್ಟಿಗೆ ಪ್ರಗತಿಶೀಲವಾದ ಹಾಗು ಬಹುಮುಖಿಯಾದ ಅರ್ಥ ಮಂಡಲವನ್ನು ರೂಪಿಸಲು ಶಕ್ತವಾಗುವ ಬುನಾದಿಯನ್ನು ಹಾಕುವುದೇ ಯೋಜನಾ ಆಯೋಗದ ಧ್ಯೇಯವಾಗಿತ್ತು. ಇದರೊಂದಿಗೆ ಆಹಾರ ಮತ್ತು ಕಚ್ಚಾ ಸರಕುಗಳ ಕೊರತೆ, ಅತಿ ಪ್ರಸರಣದ ಹಾವಳಿ ಇತ್ಯಾದಿ ಕೆಲವು ಅತ್ಯಗತ್ಯದ ಸಮಸ್ಯೆಗಳನ್ನು ಬಿಡಿಸುವ ಹೊಣೆಯು ಕಡೆಗೂ ಅದು ಗಮನವನ್ನಿತ್ತಿತು. ತದನುಸಾರವಾಗಿ ಕಾರ್ಯಾಚರಣೆಗಿಳಿದ ಕ್ರಮಗಳು ಒಳ್ಳೆಯ ಫಲವನ್ನು ಕೊಟ್ಟವು; ಯೋಜನೆಗೆ ದೊರೆತ ಸ್ವಾಗತವು ಪ್ರೋತ್ಸಾಹನೀಯವಾಗಿತ್ತು. ಕೃಷಿ ಹಾಗು ಔದ್ಯಮಿಕ ರಂಗದಲ್ಲಿ ಉತ್ಪಾದನೆಯು ಗಣನೀಯ ಹೆಚ್ಚಳವನ್ನು ತೋರಿಸಿತು. ವಸ್ತುಗಳ ಬೆಲೆಯೂ ಸ್ಥಿಮಿತದಲ್ಲಿ ಉಳಿಯಿತು. ದೇಶದ ವಿದೇಶ ವಿನಿಮಯ ಖಾತೆಯೂ ಸಮತೂಕವನ್ನು ಕಾಯ್ದುಕೊಂಡಿತು. ಮೊದಲನೇ ಯೋಜನೆಯ ಗುರಿಯನ್ನು ಹಲವು ಪ್ರಾಮುಖ್ಯ ಸಂಗತಿಗಳಲ್ಲಿ ಮುಟ್ಟಲಾಯಿತಷ್ಟೇ ಅಲ್ಲ, ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಈ ಗುರಿಯನ್ನೂ ಮೀರಿ ನಿಲ್ಲುವಷ್ಟು ಹೆಚ್ಚಿನ ಸಾಧನೆ ಕಂಡು ಬಂತು.

ಅಭಿಮಾನದ ವಿಷಯ

ದೀರ್ಘ ಕಾಲದಿಂದ ಗತಿಶೀಲತೆಯನ್ನು ಕಳೆದುಕೊಂಡಾತಿದ್ದ ಭಾರತದ ಅರ್ಥ ಮಂಡಲವು ಮೊದಲನೇ ಯೋಜನೆಯಿಂದಾಗಿ ತನ್ನ ಜಡತೆಯನ್ನು ಬಿಟ್ಟುಕೊಟ್ಟಿರುತ್ತದೆ; ಚೈತನ್ಯ ಶೀಲತೆಯನ್ನು ಕಳೆದ ಯೋಜನೆ ಮರಳಿ ತಂದು ಕೊಟ್ಟಿದೆ. ಮೊದಲನೇ ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ಆದಾಯವು ೧೧% ಹೆಚ್ಚಳವನ್ನು ಸಾಧಿಸಬಹುದೆಂದು ಮೊದಲು ಅಂದಾಜು ಮಾಡಿದ್ದರೂ ನಿಜವಾಗಿ ಈ ಅಂದಾಜಿಗಿಂತ ಹೆಚ್ಚಾಗಿಯೇ, ೧೮% ಹೆಚ್ಚಳವು ಕೈಗೂಡಿ ಬಂದಿದೆ. ಯೋಜನೆಯ ಪ್ರಥಮ ವರ್ಷದಲ್ಲಿ ಅಭಿವೃದ್ಧಿ ಪ್ರಯತ್ನಗಳಿಗಾಗಿ ಎಷ್ಟು ವೆಚ್ಚವಾಗುತ್ತಿತ್ತೋ ಅದರ ಎರಡೂವರೆ ಪಾಲು ಹಣವು ಯೋಜನೆಯ ಕೊನೆಯ ವರ್ಷದಲ್ಲಿ ವೆಚ್ಚವಾದುದನ್ನು ನೋಡಿದರೆ ಪ್ರಗತಿಗಾಗಿ ನಾವು ಪಡುತ್ತಿರುವ ಸಾಹಸವು ವೇದ್ಯವಾಗುತ್ತದೆ. ಇವೆಲ್ಲವನ್ನೂ ನಮ್ಮ ಹಣಕಾಸಿನ ವಲಯದಲ್ಲಿ ಅಲ್ಲೋಲ ಕಲ್ಲೋಲವೇನನ್ನೂ ಉಂಟು ಮಾಡದೆ ಮತ್ತು ಸಾಮಾಜಿಕ ರಂಗದಲ್ಲಿ ಮನಸ್ತಾಪದ ಭಯಂಕರ ಮಾರ್ಗವನ್ನು ಅನುಸರಿಸದೆ ಶಾಂತ ಹಾಗು ಪ್ರಜಾಸತ್ತಾತ್ಮಕ ಕಾರ್ಯ ವಿಧಾನಗಳಿಂದ ಸಾಧಿಸಿರುವುದು ಅಭಿಮಾನದ ವಿಷಯ.

ಅಭಿವೃದ್ಧಿಯ ಅಡಿಗಲ್ಲು

ನಮ್ಮ ಎರಡನೇ ಪಂಚವಾರ್ಷಿಕ ಯೋಜನೆಯು ಈಗಾಗಲೇ ನಾವು ಪಡೆದ ಸಾಧನೆಯ ತಳಹದಿಯ ಮೇಲೆ ನಿಲ್ಲಬೇಕೆಂದೂ ಪ್ರಗತಿಯ ವೇಗವನ್ನು ದ್ರುತ ಗತಿಯಿಂದ ಮುಂದರಿಸಿಕೊಂಡು ಹೋಗಬೇಕೆಂದೂ ಯೋಜನಾ ಆಯೋಗವು ಬಯಸಿದೆ. ಇದಕ್ಕಾಗಿ ಕೇವಲ ಐದಾರು ವರ್ಷಗಳ ವರೆಗಷ್ಟೇ ಮುಂದೋಡಬಲ್ಲ ದೃಷ್ಟಿಯನ್ನಿಟ್ಟುಕೊಳ್ಳದೆ ಇನ್ನೂ ೧೫-೨೦ ವರ್ಷಗಳ ಬಳಿಕ ನಾವೇನು ಗುರಿಯನ್ನು ಮುಟ್ಟಬೇಕೆಂದಿರುವೆವೊ ಅಲ್ಲಿಯ ವರೆಗೂ ನೋಟವನ್ನು ಬೀರುವ ಜಾಣಾಕ್ಷತೆಯನ್ನು ಯೋಜನಾ ಆಯೋಗ ತೋರಿಸಿದೆ. ಈಗಿನ ಆವಶ್ಯಕತೆಗಳನ್ನು ಎರಡನೇ ಯೋಜನೆಯು ಕಡೆಗಣಿಸಿದೆ ಎಂದೇನು ಭಾವಿಸಬಾರದು— ಆದರೆ ಸುಮಾರು ಎರಡು ದಶಕಗಳ ಕೊನೆಗೆ ನಮ್ಮ ಜನರ ಜೀವನವನ್ನು ನಿಜಕ್ಕೂ ಸಮೃದ್ಧವೂ ಸುಖಮಯವೂ ಆಗಿ ಮಾಡಬಲ್ಲ ಮಹಾ ಸಾಹಸ ಕಾರ್ಯಗಳಿಗೆ ಈಗಲೇ ತಳಹದಿಯನ್ನು ಹಾಕಲು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಅದು ಇಂದಿನ ಆವಶ್ಯಕತೆಯ ಪರಿಹಾರದೊಡನೆ ಮಾಡಲು ನೋಡಿದೆ.

ಗುರಿಯ ನಿರೂಪಣೆ

ಮೇಲಿನ ಹಿನ್ನೆಲೆಯಲ್ಲಿ ಎರಡನೇ ಯೋಜನೆ ಇಟ್ಟುಕೊಂಡಿರುವ ಗುರಿಯು ಹೀಗಿದೆ— (೧) ದೇಶದಲ್ಲಿ ಜೀವನದ ಮಟ್ಟವನ್ನು ಗಣನೀಯವಾಗಿ ಎತ್ತರಿಸಲು ಸಾಧ್ಯವಾಗುವಂತೆ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುವುದು; (೨) ಮೂಲಭೂತ ಕೈಗಾರಿಕೆಗಳಿಗೆ ಪ್ರಾಶಸ್ತ್ಯವನ್ನಿತ್ತು ಕ್ಷಿಪ್ರ ಔದ್ಯೋಗೀಕರಣವನ್ನು ಸಾಧಿಸುವುದು; (೩) ಕೆಲಸದ ಅವಕಾಶಗಳನ್ನು ವಿಶಾಲವಾದ ಪ್ರಮಾಣದಲ್ಲಿ ಹೆಚ್ಚಿಸುವುದು; ಮತ್ತು (೪) ಆದಾಯ ಮತ್ತು ಸಂಪತ್ತಿನ ಮಟ್ಟಗಳ ಅಸಮಾನತೆಯನ್ನು ದೂರೀಕರಿಸಿ, ಆರ್ಥಿಕ ಶಕ್ತಿಯು ಆದಷ್ಟು ಮಟ್ಟಿಗೆ ಎಲ್ಲಾ ವ್ಯಕ್ತಿಗಳಲ್ಲೂ ವಿತರಣೆ ಹೊಂದಿರುವಂತೆ ನೋಡಿಕೊಳ್ಳುವುದು. ಈ ಉದ್ದೇಶದಿಂದ ಯೋಜನೆಯ ಅವಧಿಯಲ್ಲಿ ಸಾರ್ವಜನಿಕ ರಂಗವು ಕೆಳಗೆ ನಿರೂಪಿಸಿದಂತೆ ವೆಚ್ಚವನ್ನು ನಡೆಸುತ್ತದೆ:—

	(ಕೋಟಿಗಳಲ್ಲಿ)	(ಒಟ್ಟು ಹಣದಲ್ಲಿ %)
ಕೃಷಿ ಮತ್ತು ಸಮಾಜ ವಿಕಾಸ ಕಾರ್ಯ:	ರೂ. ೫೬೫	೧೨
ನೀರಾವರಿ ಮತ್ತು ನೆರೆ ನಿಯಂತ್ರಣ:	ರೂ. ೪೫೮	೯
ವಿದ್ಯುಚ್ಛಕ್ತಿ:	ರೂ. ೪೪೦	೯
ಕೈಗಾರಿಕೆ ಮತ್ತು ಖನಿಜ:	ರೂ. ೮೯೧	೧೯
ಸಾರಿಗೆ ಮತ್ತು ಸಂಪರ್ಕ: (ಇದರಲ್ಲಿ ರೈಲ್ವೆಗಳ ವಿಸ್ತರಣೆಗಾಗಿಯೇ ರೂ. ೯೦೦ ಕೋಟಿ)	ರೂ. ೧೩೮೪	೨೯
ಸಾಮಾಜಿಕ ಸೇವೆ, ಗೃಹ ನಿರ್ಮಾಣ, ಪುನರ್ನಿವೇಶನ ಕಾರ್ಯ:	ರೂ. ೯೪೬	೨೦
ಇತರ ಕೆಲಸಗಳು:	ರೂ. ೧೧೬	೨

ಸರ್ವತೋಮುಖ ಏಳಿಗೆ

ಹೀಗೆ ವಿತರಣೆಗೊಂಡ ಹಣದ ಪ್ರಮಾಣವನ್ನು ನೋಡಿದ ಮಾತ್ರಕ್ಕೆ ಎರಡನೇ ಯೋಜನೆಯಲ್ಲಿ ಔದ್ಯೋಗೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ ಎಂಬ ತಿಳುವಳಿಕೆ ನಮಗಾಗದಿರದು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೨೩೫೬ ಕೋಟಿ ರೂಪಾಯಿಗಳ ವ್ಯಯವನ್ನೊಳಗೊಂಡ ಕಾರ್ಯಕ್ರಮವಿದ್ದರೆ, ಈ ಸಲ ವೆಚ್ಚದ ಪ್ರಮಾಣ ಇಮ್ಮಡಿಯಾಗಿದೆ. ಕೃಷಿ ಮತ್ತು ನೀರಾವರಿಗಳಿಗೆ ಮೊದಲನೇ ಯೋಜನೆಯಲ್ಲಿ ೩೩% ಹಣ ವೆಚ್ಚವಾಗಿದ್ದರೆ ಇಮ್ಮಡಿ ಗಾತ್ರದ ಈ ಸಲದ ಯೋಜನೆಯಲ್ಲಿ ಕೈಗಾರಿಕೆ, ಗಣಿ ಮತ್ತು ರೈಲ್ವೆಗಳ ವಿಸ್ತರಣೆಗೆ ೪೮% ವೆಚ್ಚವಾಗುತ್ತದೆ. ಪರಿಣಾಮದಲ್ಲಿ ಕೃಷಿ ಉತ್ಪನ್ನಗಳಲ್ಲಿ ೧೮% ಹೆಚ್ಚಳವಾಗಬಹುದೆಂದು ಅಂದಾಜು. ಆಹಾರ ಧಾನ್ಯಗಳು ೧ ಕೋಟಿ ಟನ್ನಿನಷ್ಟು ಹೆಚ್ಚಬಹುದು; ಪ್ರತಿಯೊಬ್ಬ ಪ್ರಾಪ್ತವಯಸ್ಕನಿಗೆ ಈಗಿನ ೧೭.೨ ಔನ್ಸುಗಳ ಬದಲು ೧೮.೩ ಔನ್ಸುಗಳಷ್ಟು ಆಹಾರ ಪ್ರತಿದಿನ ದೊರಕುವ ಸ್ಥಿತಿಯು ೧೯೬೧ನೇ ವರ್ಷದ ಹೊತ್ತಿಗೆ ಬಂದೀತು. ಮೊದಲನೇ ಯೋಜನೆಯಲ್ಲಿ ೧೬ ಲಕ್ಷ ಎಕರೆ ಹೆಚ್ಚು ಭೂಮಿಯನ್ನು ಹೊಸತಾಗಿ ನೀರಾವರಿಗೆ ಗುರಿಪಡಿಸಿದ್ದರೆ ಈ ಸಲ ೨೧ ಲಕ್ಷ ಎಕರೆ ಭೂಮಿ ಹೊಸತಾಗಿ ನೀರುಣಬಹುದು. ಮೊದಲನೇ ಯೋಜನೆಯಲ್ಲಿ ಹೆಚ್ಚಿಸಿದ ೨೩ ಲಕ್ಷ ಕಿಲೋವಾಟು ವಿದ್ಯುಚ್ಛಕ್ತಿಯ ಸ್ಥಾನದಲ್ಲಿ ಈ ಸಲ ೩೪ ಲಕ್ಷ ಕಿಲೋವಾಟಿನಷ್ಟು ಉತ್ಪಾದನೆಯನ್ನು ಹೆಚ್ಚಿಸಿ ಇಡೀ ದೇಶದಲ್ಲಿ ವಿದ್ಯುದುತ್ಪಾದನೆಯ ಪ್ರಮಾಣವನ್ನು ೬೮ ಲಕ್ಷಕ್ಕೆ ಏರಿಸಬಹುದು. ಉಕ್ಕಿನ ಉತ್ಪಾದನೆಯು ಈಗಿನ ೧೩ ಲಕ್ಷ ಟನ್ನಿಗಿಂತ ೪೩ ಲಕ್ಷ ಟನ್ನಿಗೆ ಏರಬಹುದು; ಕಲ್ಲಿದ್ದಲು ೩೭೦ ಲಕ್ಷ ಟನ್ನಿಗಿಂತ ೬೦೦ ಲಕ್ಷ ಟನ್ನಿಗೆ; ಸಿಮೆಂಟು ೪೮ ಲಕ್ಷ ಟನ್ನಿಗಿಂತ ೧೦೦ ಲಕ್ಷ ಟನ್ನಿಗೆ; ಫಲವರ್ಧಕ ಗೊಬ್ಬರಗಳು ೫ ಲಕ್ಷ ಟನ್ನಿಗಿಂತ ೨೨ ಲಕ್ಷ ಟನ್ನಿಗೆ ಏರಬಹುದು. ನಿತ್ಯೋಪಯೋಗದ ವಸ್ತುಗಳ ಸಾಮಾನ್ಯ ಉತ್ಪಾದನೆಯು ಈಗಿನ ಒಂದೂವರೆ ಪಟ್ಟು ಹೆಚ್ಚಬಹುದು. ಶಿಕ್ಷಣ, ಆರೋಗ್ಯ, ವೈದ್ಯಕೀಯ ಸೌಲಭ್ಯ, ವಸತಿ ಇತ್ಯಾದಿ ಕ್ಷೇತ್ರಗಳಲ್ಲಿ ಸಹ ಗಣನೀಯ ಪ್ರಗತಿಯಾದೀತು

ಹೆಚ್ಚಿನ ಉದ್ಯೋಗ

ಯೋಜಕರ ಹೇಳಿಕೆಯಂತೆ, ಸಾರ್ವಜನಿಕ ರಂಗದಲ್ಲಿ ೩೮೦೦ ಕೋಟಿ ಹಾಗು ಖಾಸಗಿ ರಂಗದಲ್ಲಿ ೨೩೦೦ ಕೋಟಿ ರೂಪಾಯಿಯನ್ನು ಎರಡನೇ ಯೋಜನೆಯ ಅವಧಿಯಲ್ಲಿ ಕೇವಲ ಬಂಡವಾಳವಾಗಿ ವಿನಿಯೋಗಿಸಲಾಗುತ್ತದೆ. ಇದರಿಂದ ರಾಷ್ಟ್ರೀಯ ಆದಾಯವು ೨೫% ಹೆಚ್ಚಿಕೊಂಡು ಈಗಿನ ೧೦೮೦೦ ಕೋಟಿ ರೂಪಾಯಿ ಬದಲು ೧೩೪೮೦ ಕೋಟಿ ರೂಪಾಯಿಗೆ ಗುರಿಯನ್ನು ಮುಟ್ಟುತ್ತದೆ. ತಲಾ ಒಂದರ ವಾರ್ಷಿಕ ಆದಾಯವು (ಮುಂದಿನ ವರ್ಷಗಳಲ್ಲಿ ಹೆಚ್ಚಬಹುದಾದ ಜನಸಂಖ್ಯೆಯನ್ನು ಲೆಕ್ಕಕ್ಕೆ ಹಿಡಿದ ಬಳಿಕ) ಈಗಿನ ೨೮೦ ರೂಪಾಯಿಗಳ ಬದಲು ೩೩೦ ರೂಪಾಯಿ (೧೮% ಹೆಚ್ಚು) ಆಗುತ್ತದೆ. ಮೊದಲನೇ ಯೋಜನೆಯ ಪ್ರಮಾಣಕ್ಕಿಂತ ೬೫% ಹೆಚ್ಚು ಹಣವು ಬಂಡವಾಳವಾಗಿ ಈ ಸಲ ವಿನಿಯೋಗವಾಗುವುದರಿಂದ ದೇಶದಲ್ಲಿ ಬಂಡವಾಳವಾಗಿ ಯೋಜನೆಗಳಿಗೆ ಸುರಿಯಬಹುದಾದ ಹಣದ ಮಟ್ಟವು ಸಹ ರಾಷ್ಟ್ರೀಯ ಆದಾಯದ ೬% ಎಂಬ ಈಗಿನ ಮಟ್ಟದಿಂದ ೧೨% ಎಂಬ ಹೊಸ ಹಾಗು ಹೆಚ್ಚಿನ ಅಂತಸ್ತಿಗೆ ಏರಬಹುದು. ಇದರಿಂದ ಒಟ್ಟಾರೆ ಎರಡನೇ ಯೋಜನೆಯ ಅವಧಿಯಲ್ಲಿ ೫೦ ಲಕ್ಷ ಜನರಿಗೆ ಹೊಸತಾಗಿ ನೇರವಾದ ಉದ್ಯೋಗವೂ ೨೫ ಲಕ್ಷ ಜನರಿಗೆ ಅಪ್ರತ್ಯಕ್ಷ ಉದ್ಯೋಗವೂ ೧೭ ಲಕ್ಷ ಜನರಿಗೆ ಕೃಷಿ ಕ್ಷೇತ್ರದಲ್ಲಿ ಉದ್ಯೋಗವೂ ದೊರೆಕಬಹುದು.

(೯ನೇ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU
ದಾಮೋದರ & ಕೊ,
ಮದ್ರಾಸ್—3.

ದೇಶ ಸೇವೆಗೆ ಕಂಕಣ ತೊಡಲು ಢೇಬರರ ಕರೆ

ರಾಷ್ಟ್ರದ ಪುನರುಜ್ಜೀವನ ಕಾರ್ಯದಲ್ಲಿ ಕಾಂಗ್ರೆಸಿನ ಪಾತ್ರದ ದಿಗ್ದರ್ಶನ

ಭಾರತದ ಉತ್ತರ ಭೂಭಾಗದಲ್ಲಿರುವ ಪಂಜಾಬಿನ ಅಮೃತಸರದಲ್ಲಿ ವಿಶೇಷವಾಗಿ ಸಜ್ಜುಗೊಳಿಸಲಾಗಿದ್ದ "ಶಹೀದ್ ನಗರ್" ದೇಶಕ್ಕೆ—ಮುಖ್ಯವಾಗಿ ಕಾಂಗ್ರೆಸು ಸಂಸ್ಥೆಯ ಅಭಿಮಾನಿಗಳಿಗೆ—ಯೋಗ್ಯ ಮಾರ್ಗದರ್ಶನವನ್ನು ಮಾಡುವ ಕೈಕಂಭವಾಗಿ ಕಳೆದವಾರ ಪರಿಣಮಿಸಿತು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಢೇಬರರು "ಕೋಟ್ಯಾಂತರ ಜನರು ಮುನ್ನಡೆಯಲ್ಲಿದ್ದಾರೆ. ಅವರೆಲ್ಲರನ್ನೂ ನಾವು ಐಕ್ಯ ಭಾರತ ಮತ್ತು ಸಮೃದ್ಧ ಭಾರತದ ಆದರ್ಶದೆಡೆಗೆ ಕರೆದೊಯ್ಯೋಣ" ಎಂದು ಕಾಂಗ್ರೆಸಿಗರಿಗೆ ಕರೆಯನ್ನಿತ್ತರು. ದೇಶದ ಸಮಸ್ಯೆಗಳನ್ನು ಕಠಿಣ ಪರಿಶ್ರಮದಿಂದ ಬಿಡಿಸಬೇಕೆನ್ನುತ್ತಾ ಭಾರತದ ಯೋಜನೆಗೆ ಸರಿಯಾದ ಸಾಮಾಜಿಕ ಧೋರಣೆ, ರಾಜಕೀಯ ಹಾಗು ಸಾಮಾಜಿಕ ಸಂಸ್ಥೆಗಳ ಮನೋಭಾವದಲ್ಲಿ ಸುಧಾರಣೆ ಮತ್ತು ಕಾಂಗ್ರೆಸನ್ನು ರಾಜಕೀಯ ಪ್ರಚಾರದ ವರ್ತುಲದಿಂದ ರಚನಾತ್ಮಕ ಪ್ರಯತ್ನದೆಡೆಗೆ ಕರೆದೊಯ್ಯುವ ಸಾಹಸ ಎಂಬೀ ಮೂರು ಅಂಶಗಳು ಅತ್ಯವಶ್ಯವೆಂದು ಅವರು ಸಾರಿದರು.

ಜನತೆಯ ಬೆಂಬಲ

ಶ್ರೀ ಢೇಬರರ ಸುದೀರ್ಘ ಭಾಷಣದಲ್ಲಿ ಅನೇಕ ಮನನೀಯ ವಿಚಾರಗಳಿದ್ದುವು. ಅವರು ಪ್ರಾರಂಭದಲ್ಲಿ ಅಮೃತಸರದಲ್ಲಿ ಹಿಂದೆ ಅಧಿವೇಶನ ಜರಗಿದ್ದ ಕಾಲದ (೧೯೧೯) ಜಾಲಿಯನ್ ವಾಲಾಬಾಗ್ ಘಟನೆಯೇ ಮುಂತಾದುವನ್ನು ಸ್ಮರಿಸಿದರು; ಮತ್ತು ದೇಶವನ್ನು ಸ್ವತಂತ್ರಗೊಳಿಸಲು ನಡೆದ ತ್ಯಾಗಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಮುಂದೆ ಕಾಂಗ್ರೆಸಿಗೆ ಜನತೆಯ ಬೆಂಬಲವು ಅಗಾಧವಾಗಿರುವುದನ್ನು ಆಂಧ್ರದಲ್ಲಿ ಕಳೆದ ವರ್ಷ ನಡೆದ ಚುನಾವಣೆಗಳನ್ನು ಉದಾಹರಿಸಿ ಮನಗಾಣಿಸಿದರು. ಚುನಾವಣೆಯ ಮೇಲೆ ಪರಿಣಾಮ ಮಾಡುವ ನೂರಾರು ಅಂಶಗಳು ಇದ್ದರೂ ಸಹ ಆಂಧ್ರದಲ್ಲಿ ಕಾಂಗ್ರೆಸಿಗೆ ಜನರಿತ್ತ ಅಮೋಘ ಬೆಂಬಲವು ಈ ಸಂಸ್ಥೆಯ ಧ್ಯೇಯವಾಗಿರುವ ಯೋಜನಾಬದ್ಧ ಅಭಿವೃದ್ಧಿಗೂ ಪ್ರಜಾಸತ್ತಾತ್ಮಕ ಪದ್ಧತಿಗೂ ಕೊಟ್ಟ ಬೆಂಬಲವಾಗಿದೆ ಎಂದು ಅಭಿಪ್ರಾಯಪಟ್ಟರು. ಭಾರತದ ಕಮ್ಯುನಿಸ್ಟ್ ಪಕ್ಷವು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಮತ್ತು ವರ್ಗ ಸಮರವನ್ನೆತ್ತಿ ಕಟ್ಟುವ ಪ್ರತಿಗಾಮಿ ಗುಂಪೆಂದು ಇದರಿಂದ ವ್ಯಕ್ತವಾಯಿತೆಂದು ಶ್ರೀ ಢೇಬರರು ಘೋಷಿಸಿದರು

ಗೋವೆಯ ವಿಮೋಚನೆ

ಬಾಂಡುಂಗ್ ಸಮ್ಮೇಳನದಲ್ಲಿ ಏಶ್ಯ ಮತ್ತು ಆಫ್ರಿಕಗಳ ರಾಷ್ಟ್ರಗಳು ತೋರಿಸಿದ ಚಟುವಟಿಕೆಯು ಆತ್ಮ ಜಾಗೃತಿಯ ದ್ಯೋತಕವೆಂದು ಹೇಳಿ ಶ್ರೀ ಢೇಬರರು ಗೋವೆಯ ಕುರಿತು ನಾಲ್ಕು ಮಾತನ್ನಾಡಿದರು. ಗೋವೆಯ ವಿಮೋಚನೆಯು ಭಾರತೀಯರ ಮಟ್ಟಿಗೆ ತಾತ್ತ್ವಿಕ ಪ್ರಶ್ನೆಯಾಗಿದೆ; ಈ ವಿಷಯದಲ್ಲಿ ಇತ್ತೀಚೆಗೆ ಅಮೇರಿಕದ ರಾಜ್ಯಖಾತೆಯ ಕಾರ್ಯದರ್ಶಿಗಳು ಹೇಳಿದ ಮಾತುಗಳು ಗಲಿಬಿಲಿಗೊಳಿಸುವಂತಿವೆ. ಆದಾಗ್ಯೂ ನಾವು ಕೆಲವು ಮೂಲ ಪ್ರಶ್ನೆಗಳನ್ನು ಬಿಟ್ಟುಗೊಡುವಂತಿಲ್ಲ. ನಮ್ಮ ನಿಲುಮೆಗೆ ಡಲ್ಲೆಸರು ಏನೇ ಹೇಳಿದರೂ ಅಮೇರಿಕದ ಜನತೆಯನ್ನೊಳಗೊಂಡು ಜಗತ್ತಿನ ಎಲ್ಲ ಭಾಗದ ನೈತಿಕ ಬೆಂಬಲವಿದೆ. ದಬ್ಬಾಳಿಕೆ ನಡೆಸುವವರಿಗೂ ದಬ್ಬಾಳಿಕೆಗೆ ಗುರಿಯಾದವರಿಗೂ ನಡುವಿನ ಹೋರಾಟದಲ್ಲಿ ಜಯವು ಕೊನೆಯ ಗುಂಪಿಗೇ ಲಭಿಸುತ್ತದೆ. ಆದುದರಿಂದ ಅರ್ಧಕ್ಕಿಂತಲೂ ಹೆಚ್ಚು ಪ್ರದೇಶವು ಕಮ್ಯುನಿಸ್ಟ್ ಪಂಥವನ್ನೂ ಮೂರರಲ್ಲಿ ಒಂದಂಶಕ್ಕಿಂತ ಹೆಚ್ಚಿನದು ಪ್ರಜಾಪ್ರಭುತ್ವ ಪದ್ಧತಿಯನ್ನೂ ಅನುಸರಿಸುವ ವಿಶ್ವದಲ್ಲಿ ಸಾಮ್ರಾಜ್ಯಶಾಹಿತ್ವವು ಇನ್ನೂ ಬಹುಕಾಲ ಉಳಿಯಲಾರದು. ಭಾರತವು ತೆಗೆದುಕೊಂಡಿರುವ ಆರ್ಥಿಕ ಕ್ರಮಗಳಲ್ಲದೆ ಗೋವೆಯೊಳಗಿನ ಜನತೆಯ ಹೋರಾಟವೂ ಜಗತ್ತಿನ ರಾಷ್ಟ್ರಗಳ ಒತ್ತಾಯವೂ ಈ ಪರಿಣಾಮವನ್ನು ತಂದು ಕೊಡುವುದು ಖಂಡಿತ—ಎಂದು ಶ್ರೀ ಢೇಬರರು ಘೋಷಿಸಿದರು.

ಸೈನಿಕ ಒಪ್ಪಂದದ ಭರ್ತ್ಸನೆ

ರಶ್ಯದ ನಾಯಕರನ್ನು ಸ್ವಾಗತಿಸಿ ಭಾರತವು ಇಷ್ಟರ ವರೆಗೆ ಏಕಾಂತ ವಾಸವನ್ನನುಭವಿಸುತ್ತಿದ್ದ ರಾಷ್ಟ್ರವೊಂದಕ್ಕೆ ಪರಸ್ಪರ ಸೌಹಾರ್ದ ಪೂರ್ಣ ವರ್ತನೆ ಮತ್ತು ಸಹಕಾರದ ದೃಷ್ಟಿಕೋಣದಿಂದ ವಿಚಾರಿಸಲು ಅನುವು ಮಾಡಿಕೊಟ್ಟಿತೆಂದು ಹೇಳಿ ಭಾರತವು ಕಮ್ಯುನಿಸ್ಟ್ ರಾಷ್ಟ್ರವಾಗಬಾರದೆಂದೂ ಆದರೆ ಎಲ್ಲರೊಡನೆ ಸ್ನೇಹದಿಂದಿರುವುದು ಮಾತ್ರ ಅದಕ್ಕೆ ಬೇಕಾಗಿದೆಯೆಂದೂ ಶ್ರೀ ಢೇಬರರು ತಿಳಿಸಿದರು. ಪ್ರಜಾಸತ್ತೆಯು ಸಾಮ್ಯವಾದೀ (ಕಮ್ಯುನಿಸ್ಟ್) ಪಂಥಕ್ಕಿಂತಲೂ ಹಳೆಯದಾದುದೆಂದು ನೆನಪಿಗೆ ತಂದು ಕೊಡುತ್ತಾ ಶ್ರೀ ಢೇಬರರು "ಆದರೆ ನರಳುವ ಮಾನವತೆಯ ಸಮಸ್ಯೆಗಳ ಪರಿಹಾರ ಪ್ರಯತ್ನವೆಂಬ, ಸಾಮ್ಯವಾದಿ ತತ್ತ್ವಗಳ ಆಕರ್ಷಣೆಗಿಂತಲೂ ಪ್ರಬಲವಾದ, ಮೂಲಭೂತ ಸಂಗತಿಯನ್ನು ಮರೆತು ಸೈನಿಕ ಒಪ್ಪಂದಗಳನ್ನು ಆಧರಿಸಿಯೇ ಪ್ರಜಾಸತ್ತೆಯು ನಿಲ್ಲುವುದಾದರೆ ಅದು ಕೇವಲ ನಿರರ್ಥಕ ಆಯುಧವಾಗುವುದು" ಎಂದು ಎಚ್ಚರಿಸಿದರು. ಈ ದೃಷ್ಟಿಯಿಂದ ನೋಡಿದರೆ ಅಮೇರಿಕವು ಪಾಕಿಸ್ತಾನಕ್ಕೆ ಕೊಡುತ್ತಿರುವ ಸೈನಿಕ ಸಹಾಯವಾಗಲಿ "ಸೀಟೋ", ಬಾಗ್ದಾದ್ ಇತ್ಯಾದಿ ಸೈನಿಕ ಒಪ್ಪಂದ ಸಂಸ್ಥೆಗಳಾಗಲೀ ಅಭಿವೃದ್ಧಿ ಪ್ರಯತ್ನಕ್ಕೆ ತೊಡಗಿಸಬಹುದಾದ ಹಣವನ್ನು ಒತ್ತಾಯದಿಂದ ಯುದ್ಧ ಸಿದ್ಧತೆಗೆ ತೊಡಗಿಸುವ ಕ್ರಮಗಳಾಗುತ್ತವೆ ಎಂದು ಖಂಡತುಂಡವಾಗಿ ಹೇಳಿದರು.

ರಾಜ್ಯಗಳ ಪುನಾರಚನೆ

ಫಜಲಲಿ ಆಯೋಗದ ವರದಿಯನ್ನು ಪ್ರಸ್ತಾಪಿಸುತ್ತಾ ಅವರು ನರ್ಮದೆಯ ಕೆಳಗಿನ ದಕ್ಷಿಣ ಭಾರತದ ಜನರಲ್ಲಿ ತಮ್ಮ ಇಚ್ಛೆಗೆ ವಿರುದ್ಧವಾಗಿ ಬಂಧುಗಳಿಂದ ಬೇರ್ಪಟ್ಟು ಇರಬೇಕಾಗಿದೆಯೆಂದೂ ತಮ್ಮೆಲ್ಲರ ನೈತಿಕ, ಭೌತಿಕ ಹಾಗು ಬೌದ್ಧಿಕ ಶಕ್ತಿಗಳನ್ನು ಪೂರ್ಣವಾಗಿ ಉಪಯೋಗಿಸುವ ಅವಕಾಶ ಸಿಗುತ್ತಿಲ್ಲವೆಂದೂ ಭಾವನೆ ಇದೆ ಎಂದರು ಭಾಷೆಯ ತಳಹದಿಯ ಮೇಲೆ ರಾಜ್ಯಗಳ ಪುನಾರಚನೆಯಾಗಬೇಕೆಂಬ ಬೇಡಿಕೆಗೆ ಇದು ತಳಹದಿಯಾಯಿತೆನ್ನುತ್ತಾ ಫಜಲಾಲಿ ಆಯೋಗದ ನಿಸ್ಪೃಹ ಕಾರ್ಯವನ್ನು ಪ್ರಶಂಸಿಸಿದರು. ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಫಜಲಾಲಿ ಆಯೋಗ ವರದಿಯನ್ನು ಇದ್ದುದಿದ್ದಂತೆ ದೇಶದ ಜನತೆಗೆ ಕೊಡುಗೆಯ ರೂಪದಲ್ಲಿ ನೀಡಬೇಕೆಂದು ಮೊದಲು ಭಾವಿಸಿದರೂ ಹಿಂದಿನಿಂದ ಈ ಒತ್ತಾಯದ ಕ್ರಮವನ್ನು ಅನುಸರಿಸುವುದು ಹಿತವಲ್ಲವೆಂದು ಭಿನ್ನಾಭಿಪ್ರಾಯ ಹೊಂದಿದವರ ನಿಲುವನ್ನು ಸಹಾನುಭೂತಿಯಿಂದ ವಿಚಾರಿಸಲು ಮುಂದಾಯಿತು ಎಂದರು. ಈ ಸಮಾಲೋಚನೆಯ ಬಳಿಕ ಸೂಕ್ಷ್ಮ ಸಮಸ್ಯೆಗಳ ಮಟ್ಟಿಗೆ ನಿರ್ಣಯಗಳನ್ನು ಕೈಗೊಳ್ಳಲಾಯಿತು; ಆದರೆ ಯಾವುದೇ ನಿರ್ಣಯವು ಎಲ್ಲ ಅಭಿಪ್ರಾಯಗಳವರನ್ನೂ ತೃಪ್ತಿಪಡಿಸುವಂತಿಲ್ಲವೆಂಬ ಸತ್ಯವು ಇಲ್ಲೂ ಅನುಭವಕ್ಕೆ ಬಂತು ಎಂದರು.

ನೂತನ ಮಾರ್ಗದರ್ಶನ

ಒಂದೇ ಭಾಷೆಯಾಡುವ ಕುಟುಂಬದ ಸದಸ್ಯರಂತೆ ಒಟ್ಟಿಗಿರಬೇಕೆಂಬ ಸಹಜಾಭಿಲಾಷೆಯು ಕೆಲವೆಡೆ ರಾಷ್ಟ್ರದ ಐಕ್ಯ ಮತ್ತು ಭದ್ರತೆಯನ್ನು ಕಡೆಗಣಿಸಿ ಕ್ರೂರ ವರ್ತನೆಗಳಲ್ಲಿ ಪರಿಣಾಮ ಹೊಂದಿದುದಕ್ಕೆ ಶ್ರೀ ಢೇಬರರು ವಿಷಾದವನ್ನು ಸೂಚಿಸಿದರು. ರಾಜ್ಯಗಳ ಪುನಾರಚನೆಯು ಇಡೀ ರಾಷ್ಟ್ರದ ಮೇಲೆ ಪರಿಣಾಮ ಮಾಡುವ ಗಂಭೀರ ವಿಷಯವಾದುದರಿಂದ ಅದರ ಮೇಲೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೊನೆಯ ನಿರ್ಣಯವಾಗುವ ವರೆಗೆ ಕಾಂಗ್ರೆಸಿಗರಿಗೆ ವಿಚಾರಗಳನ್ನು ಪ್ರಕಟಿಸಲು ಬಿಡಲಾಯಿತು. ಆದರೂ ಕಾಂಗ್ರೆಸಿಗರನೇಕರು ಶಿಸ್ತುಭಂಗ ಮಾಡುವಷ್ಟು ಭಾವೋದ್ರೇಕವನ್ನು ಪ್ರಕಟಿಸಿದ್ದಲ್ಲದೆ ಪರಿಷ್ಕೃತ ಮುಂಡಳಡೆ ತೀರ್ಮಾನಗಳನ್ನು ಪ್ರಶ್ನಿಸುವಷ್ಟು ಮುಂದೆ ಹೋದರು ಪ್ರತ್ಯೇಕತೆಯ ಹಾಗು ಪ್ರಾಂತೀಯತೆಯ

(೭ನೇ ಪುಟ ನೋಡಿರಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

KHALLIKOTE COLLEGE LOTTERY
IN AID OF THE COLLEGE.

ಖಲ್ಲಿಕೋಟೆ ಕಾಲೇಜ್ ಸಹಾಯಾರ್ಥ ಸೋಡ್ತಿ

(ಒರಿಸ್ಸಾ ಸರಕಾರದ ತಾ. 5--11—55ರ ನಂಬ್ರ 17958ರ ಪತ್ರದಂತೆ ಅನುಮತಿ ಪಡೆದಿದೆ)

ಒಂದು ಟಿಕೇಟಿನ ಬೆಲೆ ರೂಪಾಯಿ 1 ಮಾತ್ರ.

ಮಾರಾಟದ ಕೊನೆಯ ದಿನ: 9-7-56. ಸೋಡ್ತಿ ತೆಗೆಯುವ ದಿನ: 29-7-56.

1ನೆ ಬಹುಮಾನ	ರೂ.	5000	5ನೆ ಬಹುಮಾನ	ರೂ.	400
2ನೆ "	"	2000	6ನೆ "	"	300
3ನೆ "	"	1000	7ನೆ "	"	200
4ನೆ "	"	500	10 ಬಹುಮಾನಗಳು ರೂ.100ರಂತೆ		

ಇತರ ಚಿಕ್ಕ ಬಹುಮಾನಗಳೂ ಇವೆ. ಒಟ್ಟು ಬಹುಮಾನಗಳು: 289.

ದೇಶದ ಎಲ್ಲೆಡೆಗಳಿಂದಲೂ ಏಜಂಟರೂ ಒರ್ಗನೈಜರರೂ ಬೇಕಾಗಿದ್ದಾರೆ. ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

The Principal, Khallikote College,
P. O. Berhampur, Dt. Gunjam (Orissa).

ಯೋಜನೆಯ ರೂಪರೇಖೆಗೆ ಅನುಮೋದನೆ ಹಾಗು ಬೆಂಬಲ

ಅಮೃತಸರದ ಕಾಂಗ್ರೆಸು ಅಧಿವೇಶನದಲ್ಲಿ ಸ್ವೀಕೃತ ಗೊತ್ತುವಳಿ

ಅಮೃತಸರದಲ್ಲಿ ಈ ಸಲ ನಡೆದ ಕಾಂಗ್ರೆಸು ಅಧಿವೇಶನ ಸಹ ಚಾರಿತ್ರಿಕ ಮಹತ್ವದ ದಾಖಲೆ ಎನ್ನಿಸಿಕೊಂಡಿತು. ಹಿಂದೆ ೧೯೫೫ನೇ ಇಸವಿಯಲ್ಲಿ ಈ ಸ್ಥಳದಲ್ಲಿ ನೆರೆದಿದ್ದ ಅಧಿವೇಶನವು ಕಾಂಗ್ರೆಸಿನೊಳಗೆ ಎರಡು ಧ್ರುವಗಳಷ್ಟು ಅಂತರದ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದ ಗುಂಪುಗಳನ್ನು ಗಾಂಧೀಜಿ ಎಂಬ ಸೇತುವೆಯು ಮೂಲಕ ಜೋಡಿಸಿ ಹತ್ತಿರಕ್ಕೆ ತಂದಿದ್ದರೆ, ಈ ಬಾರಿಯ ಅಧಿವೇಶನದಲ್ಲಿ ರಾಜ್ಯಗಳ ಪುನಾರಚನೆಯನ್ನು ಭಾಷಾನುಗುಣವಾಗಿ ಮಾಡುವುದು "ಜೀವನ ಮತ್ತು ಮರಣದ ಪ್ರಶ್ನೆ" ಎಂಬ ಒಂದು ಧ್ರುವಕ್ಕೂ "ಹಾಗೆ ಮಾಡುವುದೆಂದರೆ ರಾಷ್ಟ್ರೀಯ ಐಕ್ಯಕ್ಕೆ ಕುಠಾರಾಘಾತ" ಎಂಬ ಇನ್ನೊಂದು ಧ್ರುವಕ್ಕೂ ನಡುವೆ ನೆಹರೂಗಳ ಹಿತಬೋಧೆಯು ಸೇತುವೆಯಾಗಿ ಪರಿಣಮಿಸಿತು. ಅವರು ಪ್ರಜಾಪ್ರಭುತ್ವಾತ್ಮಕ ವಿಧಾನದಿಂದ ಪ್ರಕಟವಾಗುವ ಜನತೆಯ ಇಚ್ಛೆಗೆ ಪ್ರತಿಕೂಲವಾಗಿ ಸರಕಾರ ವರ್ತಿಸುವುದಿಲ್ಲವೆಂಬ ಭರವಸೆ ಕೊಟ್ಟುದಲ್ಲದೆ, ರಾಷ್ಟ್ರೀಯ ಐಕ್ಯ ಮತ್ತು ಪ್ರಗತಿಗೆ ಸಲ್ಲಬೇಕಾದ ಮಹತ್ವವನ್ನು ಕಡೆಗಣ್ಣಿನಿಂದ ನೋಡಲಾಗದೆಂದೂ ಉಪದೇಶಿಸಿದರು.

ಗೃಹಮಂತ್ರಿಗಳ ಎಚ್ಚರಿಕೆ

ರಾಜ್ಯಗಳ ಪುನಾರಚನೆಯ ಪ್ರಶ್ನೆಗೆ ಸಂಬಂಧಿಸಿದ ಗೊತ್ತುವಳಿಯು ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಗೆ ಬಂದಾಗ ಬಹಳ ಬಿರುಸಾದ ಅಭಿಪ್ರಾಯಭೇದ ವ್ಯಕ್ತವಾಯಿತು. ಮುಂಬಯಿ ಸಹಿತ ಸಂಯುಕ್ತ ಮಹಾರಾಷ್ಟ್ರದ ಪ್ರತಿಪಾದಕರಾದ ಶ್ರೀ ಗಾಡಗೀಳರಿಗೂ ಮುಂಬಯಿಯನ್ನು ಕೇಂದ್ರಾಡಳಿತ ಪ್ರದೇಶವಾಗಿ ಮಾಡುವುದಕ್ಕೆ ಸಮ್ಮತಿಸುವ ಶ್ರೀ ಪಾಟೀಲರಿಗೂ ವಾಕ್ಸಮರ, ಮಲ್ಲಯುದ್ಧ ನಡೆಯಿತೆನ್ನಬಹುದು. ಸಂಯುಕ್ತ ಮಹಾರಾಷ್ಟ್ರದಲ್ಲಿ ಮುಂಬಯಿಯನ್ನು ಸೇರಿಸಬೇಕು; ಮುಂಬಯಿಯಲ್ಲಿರುವ ಮಹಾರಾಷ್ಟ್ರೇತರರಿಗೆ ಯಾವದೇ ಗ್ಯಾರಂಟಿಯನ್ನು ಬರೆದು ಕೊಡಲು ಸಿದ್ಧ ಎಂಬ ಗಾಡಗೀಳರ ಹೇಳಿಕೆಗೆ ಆ ಗ್ಯಾರಂಟಿಗೆ ಬೆಲೆಯಿಲ್ಲ ಎಂಬ ಪ್ರತ್ಯುತ್ತರ ಪಾಟೀಲರಿಂದ ಬಂತು. ಅಭಿಪ್ರಾಯ ಭೇದಗಳಿವೆ ಎಂದ ಮಾತ್ರಕ್ಕೆ ರಾಜ್ಯಗಳ ಪುನಾರಚನೆಯನ್ನು ಹತ್ತೋ ಹದಿನೈದೋ ವರ್ಷಗಳ ವರೆಗೆ ಮುಂದೂಡುವ ವಿಚಾರ ಸರಕಾರಕ್ಕಿಲ್ಲವೆಂದು ಗೃಹಮಂತ್ರಿ ಪಂತರು ಸ್ಪಷ್ಟಪಡಿಸಿದರು. ಆದರೆ ಹಲವೊಡೆ ಬೆದರಿಕೆ ಮತ್ತು ಸತ್ಯಾಗ್ರಹ ಹಾಗು ಇತರ ಬೆದರಿಕೆಯ ಕ್ರಮಗಳಿಂದ ಸರಕಾರದ ಮನಸ್ಸನ್ನು ತಮಗೆ ಅನುಕೂಲವಾಗಿ ಯಾರೂ ತಿರುಗಿಸಿಕೊಳ್ಳಲಾರರೆಂದು ಖಂಡತುಂಡವಾಗಿ ಅವರು ಹೇಳಿದರು.

ಪ್ರದೇಶಗಳಿಗೆ ಸ್ವಾಗತ

ಒಂದಕ್ಕಿಂತ ಹೆಚ್ಚು ಭಾಷೆಯಾಡುವ ವಿಶಾಲ ರಾಜ್ಯಗಳ ರಚನೆಗೆ ಬಿಹಾರ ಮತ್ತು ಬಂಗಾಳದ ಮುಖ್ಯ ಮಂತ್ರಿಗಳು ಹಾಕಿದ ನಾಂದಿಯನ್ನು ಪಂತರು ಸ್ವಾಗತಿಸಿದರು. ಇದನ್ನು ದಾರಿಗಂಬವೆಂದು ಅವರು ಪ್ರಶಂಸಿಸಿದರು. ಈ ಮಾದರಿಯನ್ನು ಇತರ ರಾಜ್ಯಗಳವರೂ ಅನುಸರಿಸಿದರೆ ಹಿತವಾದೀತೆಂದು ಅವರು ಆಶಿಸಿದರು. ಆದರೆ ಈ ಕುರಿತು ತಾವು ಒತ್ತಾಯ ಮಾಡುವುದಿಲ್ಲವೆಂದೂ ಹೇಳಿದರು. ಕಾರ್ಯಕಾರಿ ಸಮಿತಿಯಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮದ್ರಾಸಿನ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ದಕ್ಷಿಣಭಾಗದ ಬಹುಭಾಷಾ ರಾಜ್ಯಗಳ ರಚನೆಗೆ ಸಮ್ಮತಿಸುವ ಮೂಲಕ ಶ್ರೀ ಕಾಮರಾಜ ನಾಡರು ಬಿಹಾರ ಮತ್ತು ಬಂಗಾಳದ ಮುಖ್ಯ ಮಂತ್ರಿಗಳಿಗೆ ಈಗ ಸಲ್ಲುತ್ತಿರುವ ಪ್ರಶಂಸೆಯನ್ನು ಬಹಳ ಸುಲಭದಲ್ಲಿ ಪಡೆಯುವುದು ಸಾಧ್ಯವಿತ್ತೆಂದು ಧ್ವನಿಸಿ, ಸಚಿವ ಸಂಪುಟದಲ್ಲಿ ಸಹ ಮತವಿಲ್ಲವೇ ಎಂಬ ಸಂಶಯದ ಬೀಜಾರೋಪಣೆ ಗೈದರು. 'ಯಾವುದಾದರೊಂದು ಭಾಷೆಯ ಸಂಪೂರ್ಣ ಬೆಳವಣಿಗೆಯನ್ನು ಸಾಧಿಸುವುದಕ್ಕೋಸ್ಕರ ರಾಜ್ಯದೊಳಗೆ ಆ ಭಾಷೆಗೆ ಮಹತ್ವವಿರುವ ಪ್ರದೇಶಗಳನ್ನು ಒಂದು ಘಟಕವಾಗಿ ರೂಪಿಸಬಹುದು" ಎಂದು ಕಾಂಗ್ರೆಸಿನ ಗೊತ್ತುವಳಿಯಲ್ಲಿನ ಅಂಶಕ್ಕೆ ಅವರು ಬೆಂಬಲವನ್ನಿತ್ತು ಮಾತನಾಡಿದರು.

ರಾಷ್ಟ್ರೀಯ ಐಕ್ಯ

ಪ್ರಧಾನಿ ನೆಹರೂಗಳು ಸ್ವಾತಂತ್ರ್ಯ ದೊರೆತ ಇಷ್ಟು ವರ್ಷಗಳ ಬಳಿಕ "ಭಾರತವು ಒಂದು ದೇಶ ಮತ್ತು ಭಾರತೀಯರೆಲ್ಲರೂ ಒಂದು ಜನಾಂಗ" ಎಂಬ ತಿಳುವಳಿಕೆಯನ್ನು ಹುಟ್ಟಿಸಲು ಪ್ರಯತ್ನ ನಡೆಬೇಕಾಗಿ ಬಂದುದಕ್ಕೆ ವ್ಯಸನಿಸಿದರು. ಗೊಂದಲಕ್ಕೆ ಈಡಾದ ಪ್ರದೇಶದಲ್ಲಿ ಶಾಂತ ವಾತಾವರಣವು ನೆಲೆಗೊಳ್ಳುವುದು ಪ್ರಥಮಾವಶ್ಯಕತೆಯೆಂದೂ ಗಾಯಗಳು ಮೊದಲು ಮಾಯವಾಗಬೇಕೆಂದೂ ಅನಂತರ ಸರಕಾರದ ಕಡೆಯಿಂದಾಗಿರಬಹುದಾದ ತಪ್ಪುಗಳನ್ನು ಪ್ರಕಟ ಜನಾಭಿಪ್ರಾಯದ ಪ್ರಕಾಶದಲ್ಲಿ ಪರಿಶೀಲಿಸಿ ತಿದ್ದಬಹುದೆಂದೂ ಅವರು ಪುನರುಚ್ಚರಿಸಿದರು. ರುಂಡ ಬೇಟೆಯಾಡುವ ಕಾಡು ಜನರಿಗಿಂತಲೂ ನಾವು ನೀಚವಾದ ಕೆಲಸಗಳನ್ನು ಮಾಡುತ್ತಿರುವುದಕ್ಕೆ ಅವರು ವಿಷಾದಿಸಿ, ಎರಡು ವರ್ಷಗಳ ಹಿಂದೆ ರಾಜಾಜಿಯವರು ಭಾಷಾ ಪ್ರಾಂತ್ಯಗಳ ರಚನೆಯನ್ನು ಅನಾಗರಿಕ ಕಾಡುವರ್ತನೆ ಎಂದು ಕರೆದುದರ ನೆನಪು ಬರುವಂತೆ ಮಾಡಿದರು. ಮೌಲಾನಾ ಆಝಾದ, ಪಂಡಿತ ಪಂತ ಇತ್ಯಾದಿ ಧುರೀಣರು ರಾಷ್ಟ್ರೀಯ ಐಕ್ಯಕ್ಕೆ ಮಹತ್ವಕೊಟ್ಟು ಮಾಡಿದ ಭಾಷಣವು ಎಷ್ಟು ಪರಿಣಾಮಕಾರಿಯಾಯಿತೆಂದರೆ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ದೇವಕಿನಂದನರು ಬಹಿಷ್ಕಾರ ಮಾತನ್ನು ಮೊದಲೇ ಕೇಳದಿದ್ದುದಕ್ಕೆ ವಿಷಾದಿಸುತ್ತಾ ಆ ಕಟುವಾದ ಭಾಷಣವನ್ನು ಅಲ್ಲಿಯೇ ಬಿಗಿದರು.

ಯೋಜನೆಗೆ ಬೆಂಬಲ

ಪಂಡಿತ ಪಂತರು ಕೆಲವು ಪ್ರದೇಶಗಳು ಹಿಂದುಳಿದಿವೆ ಎಂಬ ಕಾರಣದಿಂದ ಅವುಗಳೊಡನೆ ಹೊಂದಿಕೊಂಡು ಹೊಸ ರಾಜ್ಯದಲ್ಲಿ ಸೇರಿ ನಡೆದುಕೊಳ್ಳಲು ಕೆಲವರು ಇಷ್ಟಪಡದಿರುವುದನ್ನು ಖಂಡಿಸಿದರು. ರಾಜ್ಯಗಳ ಪುನಾರಚನೆಯಲ್ಲಿ ಕಾಂಗ್ರೆಸಿಗರೆಲ್ಲ ಭಿನ್ನಾಭಿಪ್ರಾಯವಿದ್ದರೂ ಅವುಗಳನ್ನು ಬಹಳ ಮಟ್ಟಿಗೆ ವಿಚಾರವಿನಿಮಯ ಮತ್ತು ಸದುಪದೇಶದಿಂದ ಪರಿಹರಿಸಲಾಗಿದೆ ಎನ್ನುತ್ತಾ ಕರ್ನಾಟಕ ಏಕೀಕರಣಕ್ಕೆ ಮೈಸೂರು ಸಮ್ಮತಿಸಿರುವುದನ್ನು ನಿದರ್ಶನವಾಗಿ ಕೊಟ್ಟರು. ಆದರೆ ಇಂಥ ಕಷ್ಟ ಮತ್ತು ಕಠಿಣ ಪರಿಶ್ರಮಗಳನ್ನು ಎರಡನೇ ಯೋಜನೆಗೆ ಬೆಂಬಲ ನೀಡುವ ಪ್ರಸಂಗ ಬಂದಾಗ ಪರಿಷತ್ತು ಅನುಭವಿಸಬೇಕಾಗಲಿಲ್ಲವೆಂಬುದು ಉಲ್ಲೇಖನೀಯವಾದ ತೃಪ್ತಿಕರ ವಿಷಯ. ಇದೇ ಈ ಸಲದ ಅಮೃತಸರ ಅಧಿವೇಶನದ ಪ್ರಮುಖ ವೈಶಿಷ್ಟ್ಯವೆಂದು ಹೇಳಿದರೂ ತಪ್ಪಾಗಲಾರದು. ಈಗಷ್ಟೇ ಪ್ರಕಟವಾಗಿರುವ ಯೋಜನೆಯ ಕರಡಿನಲ್ಲಿ ವ್ಯಕ್ತವಾದ ಅಭಿವೃದ್ಧಿಯ ರೂಪರೇಖೆಗಳಿಗೆ ಕಾಂಗ್ರೆಸು ಸಂಪೂರ್ಣ ಅನುಮೋದನೆಯನ್ನಿತ್ತಿತು; ಅಲ್ಲದೆ ಜನತೆಯ ವಿಶಾಲವಾದ ಸಹಕಾರವನ್ನು ಕೋರಿತು. ಚಿಕ್ಕ ಉಳಿತಾಯಗಳನ್ನು ಹೆಚ್ಚು ಪ್ರಮಾಣದಲ್ಲಿ ಸಾಧಿಸಬೇಕೆಂದೂ ಭೋಗಸುಖವನ್ನು ಆದಷ್ಟು ಮಟ್ಟಿಗೆ ತ್ಯಜಿಸಿ, ಹಣವನ್ನೂ ಶಕ್ತಿಯನ್ನೂ ಉತ್ಪಾದಕ ಕಾರ್ಯಗಳಿಗೆ ವಿನಿಯೋಗಿಸಬೇಕೆಂದೂ ಕಾಂಗ್ರೆಸಿಗರೆಲ್ಲರೂ ಈ ದೀಕ್ಷೆಯನ್ನು ತೊಟ್ಟು ಜನರಲ್ಲಿ ಪ್ರಚಾರಮಾಡಿ ಇಂಥ ಮನೋಭಾವ ಮೂಡಿ ಬರುವಂಥ ಶಿಕ್ಷಣವನ್ನೀಯಬೇಕೆಂದೂ ಅಧಿವೇಶನದಲ್ಲಿ ಗೊತ್ತುವಳಿಗಳ ಸ್ವೀಕಾರವಾಯಿತು.

ನವೀನವಾದ ಮಾರ್ಗ

ನೆಹರೂಗಳು ಈ ಸಂಬಂಧದಲ್ಲಿ ಉಜ್ವಲವಾದ ಭಾಷಣವನ್ನು ಮಾಡಿ ಭಾರತದ ಮಹಾರಾಜಕೀಯ ಸಂಸ್ಥೆಯಾದ ಕಾಂಗ್ರೆಸಿನ ದೃಷ್ಟಿಪಥದಲ್ಲಿರುವ ಸಮಾಜವಾದಿ

(೬ ನೇ ಪುಟ ನೋಡಿರಿ)

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೋಕ್ಷಕ್ಕಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದಕ್ಕೆ ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖಹೊಂದುವಿರಿ. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0.

ಮುಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟಲಾಗು ಇನಾಂ.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸ ಂ ತಾ ನ ಸಿ ಂ ಧೂ ರ

ಈ ಭಸ್ಮವು ಬಸಿಸ್ತ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16–18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟ್ಯಾಂಪು ಕಳಿಸಿರಿ.

ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

623 "ಸಂತಾನ ಸಿಂಧೂರ ಸದನ", (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು (MYSORE) S. I.

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ, ನರ್ತನ ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕಾಲ್ಗಳು, ತೋಫನ್, ಗಡ್ಡ, ಮುಂಡಾಸು, ಕಿರೀಟ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬೆಂಡೋಲೆ, ತುಟಿಗೆ ಹಚ್ಚುವ ಮಿರುಗಿನ ಅಂಟು, ತಲೆಸೂಡಿ ಸುತ್ತುವ ಬಲೆ ಇತ್ಯಾದಿ ಖಾತ್ರಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.



ಸವಿವರವಾದ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Dharamshi Mulji, Dresswala,

132 C, Bhagatwadi, Bhuleshwar Road, BOMBAY—2.

NAVAYUGA

Popular Kannada Weekly

Founder:—

Sri A. B. SHETTY, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೬-೨-'೫೬	೨೪

ರಚನಾತ್ಮಕ ಕ್ರಾಂತಿಪಥ

ಅಮೃತಸರದಲ್ಲಿ ನೆರೆದ ಅರುವತ್ತೊಂದನೇ ಕಾಂಗ್ರೆಸು ಅಧಿವೇಶನವು ದೇಶದ ಜನತೆಗೆ ಯೋಗ್ಯ ಮಾರ್ಗದರ್ಶನವನ್ನಿತ್ತಿರುವುದೆಂದು ಹೇಳುವ ಮೊದಲು ಕಾಂಗ್ರೆಸಿಗರಿಗೆ ಒಳ್ಳೆಯ ಎಚ್ಚರಿಕೆಯನ್ನು ಸ್ಪಷ್ಟ ರೂಪದಲ್ಲಿ ಕೊಟ್ಟಿದೆ ಎಂದು ತಿಳಿಸುವುದು ಹೆಚ್ಚು ಸಮಂಜಸವಾದೀತು. ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರಿಂದ ಹಿಡಿದು ಎಲ್ಲ ವರಿಷ್ಠರೂ ಕಾಂಗ್ರೆಸಿಗರು ಇಟ್ಟುಕೊಳ್ಳಬೇಕಾದ ನಡವಳಿಕೆಯ ಮಟ್ಟವನ್ನು ನಾನಾ ದೃಷ್ಟಿಕೋಣದಿಂದ ವಿಮರ್ಶಿಸಿ ಮನಗಾಣಿಸಿ ಕೊಡಲು ಪ್ರಯತ್ನಿಸಿದರು. ರಾಜಕೀಯವಾಗಿ ಕಾಂಗ್ರೆಸಿಗರ ಮನೋಭಾವವು ಪ್ರಜಾಸತ್ತಾತ್ಮಕ ಚೌಕಟ್ಟಿಗೆ ಹೊಂದಿಕೊಂಡಿರಬೇಕೆಂದು ಅವರು ತಿಳಿಸಿದರು: ತಲೆಯೊಡೆಯುವಿಕೆ, ಹಿಂಸಾಚಾರಗಳಿಂದಾಗಲೀ ಚರ್ಚೆ, ಮಾತುಕತೆಗಳ ಬದಲು ಮೆರವಣಿಗೆ, ಘೋಷಣೆಗಳ ಅನುಕರಣೆಯಿಂದಾಗಲೀ ಪ್ರಜಾಪ್ರಭುತ್ವ ಪದ್ಧತಿಯ ಗೌರವವನ್ನು ಉಳಿಸಿಕೊಳ್ಳುವಂತಿಲ್ಲ ಎಂದವರು ಸ್ಪಷ್ಟಪಡಿಸಿದರು. ಸಂಕುಚಿತ ದೃಷ್ಟಿಕೋಣವನ್ನು ಬಿಟ್ಟು ರಾಷ್ಟ್ರೀಯ ಮನೋಭಾವದಿಂದ ವಿದ್ಯಮಾನಗಳ ನಿರೀಕ್ಷಣೆ ಮಾಡಬೇಕೆಂದು ಅವರು ಬೋಧಿಸಿದರು. ರಾಷ್ಟ್ರದ ಹಿತರಕ್ಷಣೆಯ ಮುಂದೆ ಸ್ಥಳೀಯ ಆಸಕ್ತಿಯು ಆಟೋಪ ತೋರಿಸದೆ ಹಿಂದೆ ಸರಿಯಬೇಕೆಂದು ಅವರು ಹಿತೋಪದೇಶವನ್ನಿತ್ತರು. ಶಾಂತ ವಾತಾವರಣವನ್ನು ಎಂದೂ ಕಲುಷಿತಗೊಳಿಸಲು ನೋಡಬಾರದೆಂದೂ ಸರಕಾರ ಇದಕ್ಕೆ ಅವಕಾಶ ಕೊಡುವಂತಿಲ್ಲವೆಂದೂ ಹೇಳಿ ಪ್ರಜಾಪ್ರಭುತ್ವದಲ್ಲಿ ಯಾವುದೇ ನಿರ್ಣಯವು ಅಂತಿಮವಲ್ಲವೆಂಬ ಮೂಲಭೂತ ಅಂಶವನ್ನೂ ನೆನಪಿಸಿದರು. ಕಾಂಗ್ರೆಸಿಗರಲ್ಲಿ ಇನ್ನೂ ಬೇರು ಬಿಟ್ಟಿರುವ ಜಾತೀಯತೆ ಹಾಗು ಧರ್ಮಾಂಧತೆಯನ್ನು ಸಹ ವರಿಷ್ಠರು ಖಂಡಿಸಿದರು. ಕಾಂಗ್ರೆಸಿನ ವ್ಯಾಪಕವೂ ಭವ್ಯವೂ ಆದ ಸ್ವರೂಪವನ್ನು ಅವರು ಸ್ಮರಿಸಿ, ಅಲ್ಲಿ ಸಾಮಾಜಿಕ ಸಮತೆಗೆ ಮಾತ್ರ ಮಹತ್ವವಿದೆ ಎಂದರು. ಈ ದೃಷ್ಟಿಯಿಂದ ಮಹಿಳೆಯರು ಪುರುಷರಷ್ಟೇ ಹೆಚ್ಚು ಚಟುವಟಿಕೆಯನ್ನು ಕಾಂಗ್ರೆಸು ಸಂಸ್ಥೆಯಲ್ಲಿ ಸೇರಿ ನಡೆಸುವುದಕ್ಕೆ ಅವಕಾಶವನ್ನೊದಗಿಸಬೇಕೆಂದೂ ಹಿಂದುಳಿದ ಇತರ ವರ್ಗಗಳಿಗೆ ಸಹ ಇಂಥ ಸಂದರ್ಭಗಳನ್ನು ನೀಡಬೇಕೆಂದೂ ಅವರು ಒತ್ತಿ ಹೇಳಿದರು. ಸಾಮಾಜಿಕ ಹಾಗೂ ಆರ್ಥಿಕ ರಂಗದ ಪುನಾರಚನೆಯು ಕೇವಲ ಧ್ಯೇಯಾತ್ಮಕ ಸ್ವರೂಪವನ್ನು ಹೊಂದಿಲ್ಲ—ಅದು ವ್ಯವಹಾರಾತ್ಮಕವಾಗಿದೆ ಎಂಬುದನ್ನು ಅವರು ಸರಕಾರದ ನೆಲೆಯಿಂದ ಕಾಂಗ್ರೆಸು ಸಂಸ್ಥೆಯು ಈಗ ಕೈಗೊಂಡಿರುವ ಅಭಿವೃದ್ಧಿ ಪ್ರಯತ್ನಗಳನ್ನು ಪ್ರಸ್ತಾಪಿಸಿ ಮಂದಟ್ಟು ಪಡಿಸಿದರು. ಸಮಾಜವಾದಿ ಮಾದರಿಯ ಆದರ್ಶವನ್ನು ಸಂಸ್ಥೆಯು ಘೋಷಿಸಿ ಹೇಳಿರುವಾಗ ಸಂಸ್ಥೆಯ ಸದಸ್ಯರೆನಿಸಿಕೊಂಡವರು ಈ ಆದರ್ಶಕ್ಕೆ ವಿರುದ್ಧವಾದ ನಡವಳಿಕೆಯನ್ನಿಟ್ಟುಕೊಂಡಿದ್ದರೆ—ಅದು ಸಂಸ್ಥೆಗೆ ಅಪಕೀರ್ತಿಯನ್ನು ತರುವುದಷ್ಟೇಯಲ್ಲ, ಕಾಂಗ್ರೆಸಿನ ಜನಪ್ರಿಯತೆಗೂ ಅಭ್ಯುದಯಕ್ಕೂ ಆತಂಕವನ್ನೊಡ್ಡುತ್ತದೆ. ಇಂಥವರು ಶಿಸ್ತುಭಂಗದ ಆರೋಪಕ್ಕೊಳಗಾಗಿ ಹೊರದಬ್ಬಲ್ಪಡುವ ಪರಿಸ್ಥಿತಿ ಬರುತ್ತದೆ ಎಂದು ವರಿಷ್ಠರು ನೀಡಿದ ಎಚ್ಚರಿಕೆಯು ಸಮಯೋಚಿತವಾಗಿದೆ. ಇನ್ನೊಂದು ಮಹಾಚುನಾವಣೆಯು ಸಮೀಪಗತವಾಗಿರುವುದರಿಂದ ಕಾಂಗ್ರೆಸಿಗರಿಗೆ ಧುರೀಣರು ಕೊಟ್ಟ ಈ ಎಚ್ಚರಿಕೆಯೂ ಉಪದೇಶವೂ ಜನತೆಯ ದೃಷ್ಟಿಯಿಂದ ಮಹತ್ವಪೂರಿತವಾಗಿದೆ. ಸಂಸ್ಥೆಯ ಬಲಸಂವರ್ಧನೆಯ ದೃಷ್ಟಿಯಿಂದಲೂ ಅದು ಸಮಂಜಸವಾಗಿದೆ "ಬಾಯಿಯಲ್ಲಿ ಬೆಣ್ಣೆ, ಕಂಕುಳದಲ್ಲಿ ದೊಣ್ಣೆ" ಎಂಬಂತೆ ಕಾಂಗ್ರೆಸಿಗರನೇಕರು ಸಮಾಜವಾದಿ ಮಾದರಿಯ ಆದರ್ಶಕ್ಕೂ ಪ್ರಜಾಸತ್ತಾತ್ಮಕ ನಡವಳಿಕೆಯ ಮೂಲಭೂತ ಅಂಶಗಳಿಗೂ ವಿರೋಧವಾಗಿ ವರ್ತಿಸುತ್ತಿರುವುದನ್ನು ಜನತೆಯು ಎಂದೋ ಗುರುತಿಸಿಯಾಗಿದೆ—ಸಂಸ್ಥೆಯ ಧ್ಯೇಯಾದರ್ಶಗಳ ಮೇಲೆ ಅಭಿಮಾನವುಳ್ಳ ಜನವರ್ಗವು ಇಂಥ ಪ್ರತಿಗಾಮಿ ಕುಲಕಂಟಾರರಿಗೆ ವರಿಷ್ಠರು ಕೊನೆಯ ಎಚ್ಚರಿಕೆಯನ್ನು ಕೊಡಬೇಕೆಂದು ಇಟ್ಟುಕೊಂಡಿದ್ದ ಬಯಕೆ ಅಮೃತಸರದಲ್ಲಿ ಈಡೇರಿದೆ. ಶ್ರೀ ಜಗಜೀವನರಾಮರು ಈ ಸಂಬಂಧದ ಗೊತ್ತುವಳಿಯನ್ನು ಬಹಿರಂಗಾಧಿವೇಶನದಲ್ಲಿ ಮಂಡಿಸುತ್ತಾ ಹೇಳಿದಂತೆ, ಕಾಂಗ್ರೆಸು ದೀಪದ ಕಂಭವೊಂದನ್ನು ನಿಲ್ಲಿಸಿ ಅದಕ್ಕೆ ಮತವನ್ನು ಕೊಡಿರಿ ಎಂದು ಹೇಳಿದರೂ ಜನರು ನಿಷ್ಠೆಯಿಂದ ಹಾಗೆ ಮಾಡುವ ಕಾಲವೊಂದಿತ್ತು; ಆದರೆ ಇಂದು ಕಾಲವು ಹಾಗೆ ಉಳಿದಿಲ್ಲ. ಜನಸೇವಕರು ಕಾಂಗ್ರೆಸು ಸಂಸ್ಥೆಯ ಧ್ಯೇಯಕ್ಕೆ ತಕ್ಕ ವ್ಯವಹಾರವನ್ನಿಟ್ಟುಕೊಂಡವರೂ ಯಾರೆಂದು ಗುರುತಿಸಿ ಅಂಥವರನ್ನು ಕಾಂಗ್ರೆಸು ಸಂಸ್ಥೆಯು ತನ್ನ ಪರವಾಗಿ ನಿಲ್ಲಿಸಿದರೆ ಆ ಹುರಿಯಾಳು ಗೆದ್ದು ಬರಬಲ್ಲನು. ಕಾಂಗ್ರೆಸೆಂಬ ನಾಮ ಮಾತ್ರ ಬಂಡವಾಳವು ಎಷ್ಟಕ್ಕೂ ಸಾಲದು. ಚುನಾವಣೆಗೆ ಹೊರಗಿನ ಚಟುವಟಿಕೆಗಳ ಮಟ್ಟಿಗೆ ಸಹ ಇದೇ ಮಾತು ಅನ್ವಯಿಸುತ್ತದೆ. ಆದುದರಿಂದ ರಚನಾತ್ಮಕ ಕ್ರಾಂತಿ ಪಥದಲ್ಲಿ ಮುನ್ನಡೆಯುವ ಸದುದ್ದೇಶವನ್ನು ಕಾಂಗ್ರೆಸಿಗರು ಇನ್ನಾದರೂ ಇಟ್ಟುಕೊಂಡು ಸಾಗಬೇಕು—ಹೊರತು ಅಧಿಕಾರದ ವ್ಯಾಮೋಹ, ಸ್ವಪ್ರತಿಷ್ಠೆಯನ್ನು ಮೆರೆಸುವ ಹಂಬಲ ಮಾತ್ರ ಉಳ್ಳವರಿಂದ ಕಾಂಗ್ರೆಸು ತುಂಬಿದ್ದರೆ ಸಂಸ್ಥೆಗೆ ಅಪಾಯ ತಪ್ಪಿದ್ದಲ್ಲ. ಕಾಂಗ್ರೆಸಿಗರು ತಾವು ತಿದ್ದಿಕೊಳ್ಳಬೇಕಾದ ತಪ್ಪುಗಳೇನಿವೆ ಎಂಬುದನ್ನು ಅಮೃತಸರ ಅಧಿವೇಶನದಲ್ಲಿ ಧುರೀಣರಿತ್ತ ಭಾಷಣದ ಪೂರ್ತಿ ಪಾಠವನ್ನೋದಿ ಕಂಡುಕೊಳ್ಳಬೇಕು. ಇಂಥ ಆತ್ಮನಿರೀಕ್ಷಣೆಯ ಬುದ್ಧಿ ಬಾರದ ಕಾಂಗ್ರೆಸಿಗನಿದ್ದರೆ ಆತನು ಸಂಸ್ಥೆಯ ಸದಸ್ಯನಾಗಿರಲೂ ಯೋಗ್ಯನಲ್ಲ ಏಕೆಂದರೆ ನೆಹರುಗಳ ಮುಖ ನೋಡಿ ಕಾಂಗ್ರೆಸನ್ನು ಮೆಚ್ಚುವ ದಿನವೀಗ ಉಳಿದಿಲ್ಲ— ಇಂದು ಹಾಗು ಇನ್ನು ಮುಂದೆ ಸಾಮಾನ್ಯ ಸದಸ್ಯನೇ ಸಂಸ್ಥೆಯ ಜೀವಾಳ.

(೫ನೇ ಪುಟದಿಂದ)

ಮಾದರಿಯ ಸಮಾಜವೆಂದರೇನೆಂದು ಮನಮುಟ್ಟುವಂತೆ ವಿವರಿಸಿದರು. ಅಮೇರಿಕ, ಬ್ರಿಟನ್, ಫ್ರಾನ್ಸ್, ಜರ್ಮನಿ ಇತ್ಯಾದಿ ಕೆಲವು ರಾಷ್ಟ್ರಗಳು ನೂರು-ನೂರೈವತ್ತು ವರ್ಷಗಳ ದೀರ್ಘಾವಧಿಯಲ್ಲಿ ಔದ್ಯಮಿಕ ಕ್ರಾಂತಿಯನ್ನು ಸಾಧಿಸಿ ಒಂದು ದಾರಿಯನ್ನು ತೋರಿಸಿ ಕೊಟ್ಟಿವೆ; ಅವರಿಗಷ್ಟು ಪುರಸೊತ್ತಿತ್ತೆನ್ನಬಹುದು. ಇನ್ನೊಂದೆಡೆ ರಶ್ಯವು ಇಪ್ಪತ್ತು, ಮೂವತ್ತು ವರ್ಷಗಳ ಅವಧಿಯಲ್ಲಿ ಔದ್ಯಮಿಕ ಕ್ರಾಂತಿಯನ್ನು ಸಾಧಿಸುವ ಇನ್ನೊಂದು ದಾರಿಯನ್ನು ಹಿಡಿಯಿತು; ಆದರೆ ಇಲ್ಲಿ ಸರಕಾರವು ಒತ್ತಾಯವನ್ನು ಜನರ ಮೇಲೆ ಹೇರಿತು. ನಾವು ನೂರೈವತ್ತು ವರ್ಷಗಳ ದೀರ್ಘಕಾಲವನ್ನು ತೆಗೆದುಕೊಳ್ಳದೆಯೂ ಒತ್ತಾಯವನ್ನು ಹೇರದೆ ಪ್ರಜಾಸತ್ತಾತ್ಮಕ ರೀತಿಯಿಂದಲೂ ಎರಡು ದಶಕಗಳ ಅಲ್ಪಾವಧಿಯಲ್ಲಿ ಕ್ರಾಂತಿಯನ್ನು ಸಾಧಿಸುವ ಆಶೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಇಂಥ ಮಾರ್ಗವನ್ನು ಜಗತ್ತಿನ ಯಾವುದೇ ರಾಷ್ಟ್ರವು ಇಷ್ಟರವರೆಗೆ ಅನುಸರಿಸಿ ನಡೆದಿಲ್ಲ—ಆದುದರಿಂದಲೇ ನಮ್ಮದು ನವೀನ ಮಾರ್ಗ. ನೆತ್ತರನ್ನು ಚೆಲ್ಲದೆ, ಒತ್ತಾಯವನ್ನು ಹೇರದೆ, ಶಾಂತ ಹಾಗು ಯೋಜನಾಬದ್ಧ ರೀತಿಯಲ್ಲಿ ಪ್ರಗತಿ ಸಾಧಿಸುವ ನಮ್ಮ ಧ್ಯೇಯವು ಬಿಗಿಯಾದ ಯಾವುದೇ ಬಂಧನವಿಲ್ಲದೆ ಅನುಭವದ ಬಲದಿಂದ ಬದಲಾವಣೆಗಳನ್ನು ಮಾಡಿಕೊಂಡು ಕೈಗೂಡಬಲ್ಲುದು—ಎಂಬ ಸಂಶಯವನ್ನು ನೆಹರು ಬಿಂಬಿಸಿದರು. ಹೀಗೆ ಕೆಲವು ಪಕ್ಷಗಳು ಸಮಾಜವಾದಿ "ಮಾದರಿ" ಎಂಬ ಶಬ್ದವನ್ನೆತ್ತಿ ಅವಹೇಳನೆ ಮಾಡುತ್ತಿರುವುದಕ್ಕೆ ನೆಹರುಗಳು ಮೇಲೆ ಹೇಳಿದಂತೆ ಕೊಟ್ಟ ವಿವರಣೆ ಯೋಗ್ಯ ಉತ್ತರವೆಂದು ಜನರು ಭಾವಿಸುವುದಕ್ಕೆ ಅಮೃತಸರದ ಅಧಿವೇಶನ ಅವಕಾಶವಿತ್ತಿತು.

ವಿದೇಶ ಧೋರಣೆ

ರಾಜ್ಯಗಳ ಪುನಾರಚನೆಯ ಕುರಿತಾದ ಗೊಂದಲದ ಮನೋಭಾವವು ಎರಡನೇ ಪಂಚವಾರ್ಷಿಕ ಯೋಜನೆ ಮತ್ತು ಆರ್ಥಿಕ ಧೋರಣೆಯ ಕುರಿತಾದ ಚರ್ಚೆಗಳ ಮಹತ್ವವನ್ನು ಹಿನ್ನೆಲೆಗೆ ಸರಿಸಲು ನೆಪವಾಗಿ ಹೇಗೆ ಕಂಡಿತೋ ಹಾಗೆ ಕಾಂಗ್ರೆಸಿನ ವಿದೇಶ ಧೋರಣೆಯನ್ನು ಕುರಿತಾದ ಗೊತ್ತುವಳಿಯ ಪ್ರಾಮುಖ್ಯತೆಯೂ ಈ ಸಲ ತೆರೆಯ ಹಿಂದೆ ನಿಂತಿತೆನ್ನಬಹುದು. ಆದರೆ ವಿದೇಶ ಧೋರಣೆಯು ತನ್ನ ಎಂದಿನ ವೈಶಿಷ್ಟ್ಯಗಳನ್ನೇನು ಕಳೆದುಕೊಂಡಿಲ್ಲ—ಪಂಚಶೀಲಗಳ ಮೇಲಿನ ವಿಶ್ವಾಸವನ್ನು ಅದು ಪುನರುಚ್ಚರಿಸಿರುವುದಲ್ಲದೆ, ವರ್ಣಭೇದ, ವಸಾಹತುವಾದಗಳಿಗೆ ತನ್ನ ಮೂಲಭೂತ ವಿರೋಧವನ್ನು ಸ್ಪಷ್ಟ ಶಬ್ದಗಳಲ್ಲಿ ಎತ್ತಿಹೇಳಿದೆ. ಸ್ವಾತಂತ್ರ್ಯದ ಹೊಸ್ತಿಲನ್ನು ದಾಟಿ ಮುನ್ನಡೆಯುವ ಏಶ್ಯ ಮತ್ತು ಆಫ್ರಿಕದ ರಾಷ್ಟ್ರಗಳ ಶ್ರೇಯಸ್ಸನ್ನು ಅದು ಬಯಸಿದೆ. ಗೋವೆಯು ಭಾರತದ ಅವಿಭಾಜ್ಯ ಭೂಭಾಗವೆಂಬ ನಿಲುಮೆಯನ್ನು ಪುನಃ ಸಾರುತ್ತಾ ಗೊತ್ತುವಳಿಯು ಕೆಲವು ವರ್ಗಗಳಿಂದ ಪೋರ್ಚುಗಾಲದ ಸಾಮ್ರಾಜ್ಯಶಾಹಿ ವಸಾಹತು ವಾದಕ್ಕೆ ದೊರಕುತ್ತಿರುವ ಬೆಂಬಲವನ್ನು ಖಂಡಿಸಿದೆ. ಆದರೆ ಕಾಂಗ್ರೆಸು ಶಾಂತ ವಿಧಾನವನ್ನೇ ಸಮಸ್ಯೆಯ ಪರಿಹಾರಕ್ಕೆ ಉಪಯೋಗಿಸಬೇಕೆಂದು ನಿರ್ಧಾರವನ್ನು ಹೊಂದಿದೆ. ಶಾಂತಿಗೆ ಪೋಷಕವಲ್ಲದ ಸೈನಿಕ ಒಪ್ಪಂದಗಳನ್ನು ಅದು ವಿರೋಧಿಸಿದೆ. ಈ ಸಂದರ್ಭದಲ್ಲಿ ಮಾತನಾಡಿದ ನೆಹರುಗಳು ಸೈನಿಕ ಸಿದ್ಧತೆಗಳನ್ನು ನಡೆಸುತ್ತಾ ಶಾಂತಿ ಪಾಲನೆ ಮಾಡುತ್ತಿದ್ದೇವೆ ಎನ್ನುವವರ ನಿಲುಮೆ ಅರ್ಥಹೀನವೆಂದು ಸಾರಿದರು.

ಕಾಂಗ್ರೆಸಿನ ಶುಚಿತ್ವ

ಸಂಸ್ಥೆಯ ಶುಚಿತ್ವವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಕೆಲವು ವಿಷಯಗಳನ್ನು ಗೊತ್ತುವಳಿಯ ರೂಪದಲ್ಲಿ ಪರ್ಯಾಲೋಚಿಸಿ ಸ್ವೀಕರಿಸಲಾಯಿತು. ರಚನಾತ್ಮಕ ಚಟುವಟಿಕೆಯಲ್ಲಿ ತೊಡಗಿದ ಸಂಸ್ಥೆಯಾಗಿಯೂ ಸರಕಾರದಲ್ಲಿ ಸೇರಿ ಕೆಲಸ ಮಾಡುವ ರಾಜಕೀಯ ಪಕ್ಷವಾಗಿಯೂ ಕಾಂಗ್ರೆಸು ನಿರ್ವಹಿಸಬೇಕಾದ ಕರ್ತವ್ಯಗಳ ಪಾಲನೆಯೊಡನೆ ಈ ಗೊತ್ತುವಳಿಯ ವಿಶೇಷ ಸಂಬಂಧವಿದೆ. ಗೊತ್ತುವಳಿಯು ನಿಸ್ಸಂದಿಗ್ಧ ಶಬ್ದಗಳಲ್ಲಿ ಕಾಂಗ್ರೆಸಿಗರು ಸ್ವತಃ ಪೂರೈಸಬೇಕಾದ ನಡವಳಿಕೆಯ ಮಟ್ಟದ ಮಹತ್ವವನ್ನು ಸಾರಿದೆ. ಈ ಮಟ್ಟವನ್ನು ಮುಟ್ಟದೆ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಕಾಂಗ್ರೆಸು ಸಂಸ್ಥೆಯ ಸಾಮಾಜಿಕ ಹಾಗು ಆರ್ಥಿಕ ಧ್ಯೇಯಗಳಿಗೂ ಸದಸ್ಯರ ನಿತ್ಯ ವ್ಯವಹಾರಕ್ಕೂ ನಡುವೆ ತಿಕ್ಕಾಟ ಏಳುವುದರಿಂದ ಶಿಸ್ತುಭಂಗವಾಗುವುದು ನಿಶ್ಚಯ ಎಂದದು ಎಚ್ಚರಿಸಿದೆ. ಆದುದರಿಂದ ಕಾಂಗ್ರೆಸಿಗರು ಯೋಗ್ಯ ನಡವಳಿಕೆಯ ಮಟ್ಟವನ್ನು ಕಾಯ್ದುಕೊಂಡು ಜನರು ರಚನಾತ್ಮಕ ಕ್ರಾಂತಿಪಥದಲ್ಲಿ ಮುನ್ನಡೆಯುವಂತೆ ತಾವೇ ಆದರ್ಶಗಳನ್ನು ವ್ಯವಹಾರದಲ್ಲಿಳಿಸಿ ದಾರಿ ತೋರಿಸಬೇಕು; ಕೆಲಸಗಾರರು ಈ ದಿಸೆಯಲ್ಲಿ ಸಂಪಾದಿಸಿದ ಯೋಗ್ಯತೆಯೇ ಕ್ರಾಂತಿಯ ಯೋಗ್ಯತೆಯನ್ನು ನಿರ್ಣಯಿಸುವುದು ಎಂದು ಗೊತ್ತುವಳಿ ಹೇಳುತ್ತದೆ.

ದಿ ಕೆನರಾ ಬ್ಯಾಂಕಿಂಗ್ ಕೊಪ್ರೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED

H. Office: UDIPI (S.India).

(೫ನೇ ಪುಟದಿಂದ)

ಮನೋಭಾವವು ರಾಷ್ಟ್ರೀಯ ಸ್ವಾತಂತ್ರ್ಯದ ಅಡಿಗಲ್ಲಿಗೆ ಅಪಾಯ ತಪ್ಪಿಸಿ ...ಂಥದಿದೆ ಎಂಬುದನ್ನು ಚರಿತ್ರೆಯ ಪಾಠವೇ ನೆನಪು ಮಾಡಿಕೊಡುತ್ತದೆ ಎಂದು ...ಬರರು ಬೋಧಿಸಿದರು. ಮುಂಬಯಿಯ ...ಭೆಗಳು ನಿದ್ರಾಸಕ್ತವಾಗಿದ್ದ ಪ್ರಜ್ಞೆಯನ್ನು ಎಚ್ಚರಿಸಿ, ಬಂಗಾಳ—ಬಿಹಾರ ಮುಖ್ಯ ಮುಂತ್ರಿಗಳ ಹೇಳಿಕೆಯ ರೂಪದಲ್ಲಿ ನವೀನ ಮಾರ್ಗದರ್ಶನವನ್ನು ದೇಶಕ್ಕೆ ಮಾಡಿತು. ಪ್ರಧಾನಿ ನೆಹರುಗಳ ...ರ್ಥಿಕ ವಲಯ ಮಂಡಳಗಳ ರಚನೆಯೂ ಇದೇ ಮಾದರಿಯ ಪರಿಹಾರ ಮಾರ್ಗ ಎಂದು ಢೇಬರರು ತಿಳಿಸಿದರು.

ಪ್ರಜಾಪ್ರಭುತ್ವದ ಲಕ್ಷಣ

ಇಂದಿನ ಭಾರತದಲ್ಲಿ ದೇಶವನ್ನು ದೃಢ...ದ ಅಚ್ಚಿನಲ್ಲಿ ನಿಲ್ಲಿಸುವ ಮಹಾಶಕ್ತಿಯಾಗಿ ನೆಹರುಗಳಿದ್ದಾರೆ ಎನ್ನುತ್ತಾ, ಆದರೆ ಪ್ರಜಾಪ್ರಭುತ್ವದಲ್ಲಿ ಅವರು ತನ್ನ ...ಂಬಲಕ್ಕೆ ಎಷ್ಟು ಜನರಿದ್ದಾರೋ ...ಷ್ಟು ಪ್ರಮಾಣದಲ್ಲಿಯಷ್ಟೆ ಕೆಲಸಮಾಡ...ಲ್ಲರು" ಎಂಬ ಸಂಗತಿಯನ್ನೂ ಢೇಬರರು ಉಲ್ಲೇಖಿಸಿದರು. ನಮ್ಮ ದೇಶದ ...ಚರಿತ್ರೆಯಲ್ಲಿ ಇದೀಗ ಮೊದಲ ಬಾರಿಗೆ ಪ್ರಜಾಪ್ರಭುತ್ವ ಪದ್ಧತಿಯು ವಿಶಾಲ ತಳ...ದಿಯ ಮೇಲೆ ರೂಢಿಗೆ ಬಂದಿದೆ; ಮೂ...ತ್ತಾರು ಕೋಟಿ ಜನರ ಸಮುದಾಯವು ... ಮಾರ್ಗವನ್ನವಲಂಬಿಸಿ ನಡೆಯತೊಡಗಿದೆ. ಆದರೆ ಪ್ರಜಾಪ್ರಭುತ್ವವು ಕೇವಲ ಅಂಕೆ ಸಂಖ್ಯೆಗಳ ಬಲದ ಮೇಲೆ ...ತ ವಿಜ್ಞಾನವಲ್ಲವೆಂಬುದನ್ನು ಮನ...ಣಿಸಲು ನಾವೇನು ಮಾಡಿದ್ದೇವೆ? ಪ್ರಜಾಪ್ರಭುತ್ವದ ಪರಂಪರೆಗನುಗುಣವಾ... ಮಾರ್ಗವನ್ನು ಬಿಟ್ಟುಗೊಟ್ಟರೆ ಅನ...ರ್ಥವಾದೀತೆಂದು ತಿಳಿಸಲು ನಾವೇನು ಮಾಡಿದ್ದೇವೆ? ಎಂದು ಪ್ರಶ್ನಿಸುತ್ತಾ ಈ ಪರಂಪರೆಯನ್ನು ಕಡೆಗಣಿಸಿದರೆ ಪ್ರಜಾಪ್ರಭುತ್ವವು ಜನಸಮುದಾಯದ ಮನೋಭಾವದ ಉದ್ರಿಕ್ತಾವಸ್ಥೆಯಿಂದ ಲಾಭ ಹೊಂದುವ ಕೆಲವೇ ಮಂದಿಯ ಸೊತ್ತಾಗುತ್ತದೆ. ಕಮ್ಯುನಿಸ್ಟರಿಗೆ, ಜನಸಂಘಕ್ಕೆ, ...ಂದು ಮಹಾಸಭೆಗೆ ಸರಕಾರದ ಮತ್ತು ...ದನ್ನು ನಡೆಸುವ ಪಕ್ಷದ ವಿರುದ್ಧ ಜನ...ನ್ನು ಎತ್ತಿ ಕಟ್ಟುವುದಕ್ಕೆ ಹೊರತು ಪ್ರಜಾಪ್ರಭುತ್ವದೊಡನಿರುವ ಸಂಬಂಧವಾದರೂ ಏನು?" ಎಂದು ಢೇಬರರು ಮಾರ್ಮಿಕ ವಾಗ್ಬಾಣವನ್ನೆಸೆದರು.

ಐಕ್ಯ ಭಾವನೆಯ ಮಹತ್ವ

ರಾಷ್ಟ್ರದಲ್ಲಿ ಐಕ್ಯ ಭಾವನೆಯ ಆವಶ್ಯಕತೆಯನ್ನು ಪ್ರತಿಪಾದಿಸುತ್ತಾ ಶ್ರೀ ಢೇಬರು ಆಳವಾಗಿ ಬೇರೂರಿರುವ ಜಾತೀಯತೆ, ಧರ್ಮಾಂಧತೆ, ಪ್ರಾಂತೀಯತೆ ಮುಂಥ ಮನೋಭಾವನೆಗಳೂ ಅನಾಗರಿಕ ಶೋಷಕ ಹಾಗು ಪಾಳೆಯಗಾರಿ ವ...ರ್ತನೆಗಳೂ ಬದಲಾಗದೆ ಹೊಸ ಮೌಲ್ಯಗಳನ್ನು ಗುರುತಿಸುವುದು ಕಷ್ಟವೆಂದರು. ಭಾರತದಲ್ಲಿ ನಾವು ಭಾಷಾನುಗುಣವಾ... ರಾಜ್ಯ ರಚಿಸುವ ಬೇಡಿಕೆಯ ಮೂಲ...ಕಾತವಾದ ಆದರ್ಶವೆಂಬ ಭ್ರಮೆಗೊಳ...ಗಾಗಿದ್ದೇವೆ. ಎಲ್ಲಕ್ಕೂ ಕಟ್ಟ ತಿಳಿವಳಿಕೆ ...ಎಂದರೆ, ಭಾರತ ದೇಶದ ನಾಗರಿಕಾಧಿಕಾರವನ್ನು ಒಂದು ಚಿಕ್ಕ ಘಟಕಕ್ಕೆ ಸೀಮಿತಗೊಳಿಸಲು ನೋಡುತ್ತಿದ್ದೇವೆ. ನಾವು ಪ್ರಬುದ್ಧ ಜನರಾಗಲಿದ್ದೇವೋ ಹಾದ್ದು ಅ...ರೆ ಅಂಥವರಾ ಒಮ್ಮೊಮ್ಮೆ ಕಪ್ಪು ಹೆಜ್ಜೆಯನ್ನಿಡುವುದುಂಟು. ಆಂಗ್ಲ ಸಾಮ್ರಾಜ್ಯ ಶಾಹಿತ್ವಕ್ಕೆ ರಾಜಕೀಯ ಹಾಗು ಆರ್ಥಿಕ ಬಲದ ಮೂಲವಾಗಿ ಭಾರತವು ಎಷ್ಟು ಅರ್ಥ ಪೂರ್ಣ ಪಾತ್ರಹೊತ್ತಿತ್ತೆಂದು ನಮಗೆಲ್ಲರಿಗೂ ಗೊತ್ತು. ಅಂಥದನ್ನು ಸ್ವತಂತ್ರವಾಗಿ ಮಾಡಲು ಆಂಗ್ಲ ಕೂಲಿ ಕಾರ ಪಕ್ಷದ ಪಾರ್ಲಿಮೆಂಟಿನ ಒಪ್ಪಿಗೆಯಿಂದ ನಿರ್ಧರಿಸಿದಾಗ ಬ್ರಿಟನಿನಲ್ಲಿ ರಾಜೀನಾಮೆ, ಮುಷ್ಕರ, ಮೆರವಣಿಗೆ ಇತ್ಯಾದಿಗಳೇನಾದರೂ ನಡೆದವೆ? ನಾವು ಯಾವುದು ಭವ್ಯವೋ ಅದನ್ನು ಅನುಕರಿಸಲು ಹಿಂಜರಿಯಬಾರದು" ಎಂದು ಕಾಂಗ್ರೆಸಾಧ್ಯಕ್ಷರು ಪ್ರಜಾಸತ್ತಾತ್ಮಕ ನಡವಳಿಕೆಯ ಆವಶ್ಯಕತೆಯನ್ನು ಮನಗಾಣಿಸಿದರು. ರಾಜ್ಯಗಳ ಪುನಾರಚನೆಯ ಪ್ರಶ್ನೆಯ ಸಂಬಂಧದಲ್ಲಿ ಎದ್ದಿರುವ ಗೊಂದಲಗಳು ನಮ್ಮ ದೌರ್ಬಲ್ಯವನ್ನು ಚೆನ್ನಾಗಿ ಎತ್ತಿತೋರಿಸಿವೆ ಎನ್ನುತ್ತಾ "ಜನರು ತಾವಾಗಿಯೇ ಆಂತರಿಕ ನ್ಯಾಯವನ್ನು ತಂದುಕೊಳ್ಳದಿದ್ದರೆ, ಪೋಲೀಸು ಪಡೆಯೊಂದೇ ನಿಯಂತ್ರಣದಲ್ಲಿ ಸದಾಕಾಲ ಇಡಲಾರದು; ಗೊಂದಲವು ಎಷ್ಟೇ ಹೆಚ್ಚಿದ್ದರೂ ಜನರ ಮೇಲೆ ಪ್ರಭಾವ ಬೀರಿ ಶಾಂತಗೊಳಿಸಬಲ್ಲ ವರ್ಚಸ್ವಿ ಸಾರ್ವಜನಿಕ ಕಾರ್ಯಕರ್ತರಿಲ್ಲದಿದ್ದರೆ ಪ್ರಗತಿ ಪಥದಲ್ಲಿ ಮುನ್ನಡೆಯು ಸಾಧ್ಯವಾಗಲಾರದು; ಈ ಕುರಿತು ನಾವೀಗಲಾದರೂ ಗಮನವೀಯಬೇಕು" ಎಂದು ಬೋಧಿಸಿದರು

ಸಮಾಜವಾದಿ ಆದರ್ಶ

ಆವಡಿಯ ಅಧಿವೇಶನದಲ್ಲಿ ಕಾಂಗ್ರೆಸು ತನ್ನ ಧ್ಯೇಯಧೋರಣೆಗಳನ್ನು ಸಮಾಜವಾದಿ ಮಾದರಿಯನ್ನು ಆದರ್ಶವಾಗಿಟ್ಟುಕೊಳ್ಳುವ ಮೂಲಕ ಸ್ಪಷ್ಟವಾಗಿ ಸಾರಿತೆಂದು ಉಲ್ಲೇಖಿಸುತ್ತಾ ಕಾಂಗ್ರೆಸಾಧ್ಯಕ್ಷರು ಫಜಲಾಲಿ ಆಯೋಗದ ವರದಿ ಪ್ರಕಟವಾಗುವ ವರೆಗೆ ಈ ಕುರಿತು ಕಾಂಗ್ರೆಸಿಗರು ಭರದಿಂದ ಪ್ರಚಾರ ಮಾಡುತ್ತಿದ್ದರೆಂದೂ ಜನರಾದರೂ ವಿಶೇಷ ಆಸಕ್ತಿಯನ್ನು ಈ ಬಗ್ಗೆ ಪ್ರದರ್ಶಿಸುತ್ತಿದ್ದರೆಂದೂ ನುಡಿದರು. "ಕೆಲವೇ ಮಂದಿಗೆ ವಿಶೇಷ ಸ್ಥಾನಮಾನ ಹಾಗು ಲಾಭಗಳನ್ನು (ಈಗಿನ) ಸಾಮಾಜಿಕ ಪದ್ಧತಿಯಿಂದ ಪ್ರತಿಯೊಬ್ಬರಿಗೂ ಸಮಾನ ಸ್ಥಾನಮಾನವೂ ಅಭಿವೃದ್ಧಿಯ ಸಮಾನ ಅವಕಾಶಗಳೂ ಇರುವ (ನವೀನ) ಸಮಾಜದ ಪದ್ಧತಿಯ ಸ್ಥಾಪನೆಯು ಬಹಳ ದೂರವಾದ ಮಾರ್ಗ ಕ್ರಮಣ ಆವಶ್ಯಕವೆನಿಸುವ ವಿಷಯವೆಂಬುದು ನಿಜ ಇದಕ್ಕಾಗಿ ಗತಿಶೀಲತೆಯುಳ್ಳ ಕಾರ್ಯಕ್ರಮ ಆವಶ್ಯಕ. ಮೊದಲನೇ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಬೇಕು." ಎನ್ನುತ್ತಾ ಢೇಬರರು ಪ್ರಥಮ ಯೋಜನೆಯ ಯಶಸ್ಸು ಸಾಕಷ್ಟು ದೊಡ್ಡ ಪ್ರಮಾಣದ ಯೋಜನಾ ಬದ್ಧ ಪ್ರಗತಿಯ ಕಾರ್ಯಕ್ರಮಗಳ ಭಾರಕ್ಕೆ ಹೆಗಲು ಕೊಡಬಲ್ಲ ಆತ್ಮವಿಶ್ವಾಸವನ್ನು ಹುಟ್ಟಿಸಿದೆಯಾಗಿ ತಿಳಿಸಿದರು. ಯೋಜನೆಗೆ ದೊರೆತಿರುವ ಜನತಾ ಸಹಕಾರವನ್ನು ಅವರು ಮುಕ್ತ ಕಂಠದಿಂದ ಪ್ರಶಂಸಿಸಿದ್ದಲ್ಲದೆ ಯೋಜನೆಯ ಉದ್ದೇಶವನ್ನು ಸಾಧಿಸುವುದಕ್ಕೆ ಯೋಗ್ಯ ಸಿಬ್ಬಂದಿಯ ಅಗತ್ಯವಿದೆಯೆಂದೂ ಒತ್ತಿಹೇಳಿದರು. 'ಜನರ ಕೊರತೆಯಿದೆ ಎಂದಿದರ ಅರ್ಥವಲ್ಲ; ಅವರೆ ನಮಗೆ ಬೇಕಾದ ಪ್ರಮಾಣದಲ್ಲಿ ಜನರ ಕೊರತೆ ಬಹಳವೆಂದವರು ವಿಷಾದದಿಂದ ನುಡಿದರು ಸರಕಾರದಿಂದ ಮುಂದಾಳುತನವು ದೊರಕಿ, ನಮ್ಮ ಸಾಮಾಜಿಕ ಹಾಗು ಶೈಕ್ಷಣಿಕ ಸಂಸ್ಥೆಗಳು ಈ ಅಭಾವವನ್ನು ಪರಿಹರಿಸಲು ಸಾಧ್ಯವಾಗಬೇಕು; ನೌಕರರನ್ನು ಸೇರಿಸಿ ಕೊಳ್ಳುವ ಹಾಗು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿಕೊಡುವ ಧೋರಣೆಯಲ್ಲಿ ತಿದ್ದುಪಡಿಯಾಗಬೇಕು ಎಂದು ಕಾಂಗ್ರೆಸಾಧ್ಯಕ್ಷರು ಬಯಸಿದರು. ಶೈಕ್ಷಣಿಕ ಪದ್ಧತಿಯಲ್ಲಿ ಅಮೂಲಾಗ್ರ ಸುಧಾರಣೆಯು ನಮ್ಮ ಜನಾಂಗದ ಭವಿಷ್ಯದೊಡನೆ ಸಂಬಂಧವಿರುವ ಪ್ರಶ್ನೆ. ದೈಹಿಕ ಪರಿಶ್ರಮ, ಸಾಮಾಜಿಕ ಸಮಾನತೆ, ಆರ್ಥಿಕ ನ್ಯಾಯವೆಂಬೀ ಆದರ್ಶಗಳನ್ನು ಗೌರವಿಸಬಲ್ಲ ನವಜನಾಂಗದ ರಚನೆಯಾಗಬೇಕಾದರೆ ಇದಕ್ಕೆ ತಕ್ಕ ರಾಷ್ಟ್ರೀಯ ಶಿಕ್ಷಣ ಬೇಕೇ ಬೇಕು ಎಂದರವರು.

ಸಂಸ್ಥೆಯ ಶ್ರೇಯಸ್ಸು

ಪ್ರಕೃತದ ಪರಿಸ್ಥಿತಿಯಲ್ಲಿ ಕಾಂಗ್ರೆಸು ಸಂಸ್ಥೆಯ ಜನಪ್ರಿಯತೆಯು ಗುಟ್ಟೆಂದರೆ ನಾಗರಿಕರಿಗೆ ಕಾಂಗ್ರೆಸಿನ ಮುಖ್ಯ ಧುರೀಣರಲ್ಲಿರುವ ವಿಶ್ವಾಸ ಎಂಬ ಮೂಲಭೂತ ಅಂಶವನ್ನು ಕಾಂಗ್ರೆಸಿನ ಸಾಮಾನ್ಯ ಸಭ್ಯರ ಗಮನಕ್ಕೆ ಶ್ರೀ ಢೇಬರರು ತಂದುಕೊಟ್ಟರು. ಇಂಥ ವಿಶ್ವಾಸವು ಶಕ್ತಿಯ ಮೂಲವಾಗಿದೆ; ಆದರೆ ನಮ್ಮ ಧುರೀಣರ ಬೆಂಬಲಕ್ಕೆ ಸಂಸ್ಥೆಯು ಯೋಗ್ಯ ಕಾರ್ಯಕರ್ತರ ಸಮೂಹವನ್ನು ಒದಗಿಸಿ ಕೊಡದಿದ್ದರೆ ಅದು ದೌರ್ಬಲ್ಯಕ್ಕೆ ನೆಪವಾಗುವುದು ಖಂಡಿತ ಎಂಬುದಾಗಿ ಅವರು ಎಚ್ಚರಿಕೆ ಕೊಟ್ಟರು. ಯೋಗ್ಯ ಕಾರ್ಯಕರ್ತರ ಆಯ್ಕೆ, ಅವರಿಗೆ ಉತ್ತಮ ತರಬೇತಿ ಮತ್ತು ಶಿಕ್ಷಣ, ಕೆಲಸದ ವರ್ಗೀಕರಣ ಮತ್ತು ಶಿಸ್ತಿಗೆ ಮಹತ್ವ ಇವಿಷ್ಟು ಸಂಗತಿಗಳನ್ನು ಇಲ್ಲಿ ಗಮನಿಸಬೇಕು. ಚುನಾವಣೆಗಾಗಿ ಕೆಲಸ ಮಾಡುವುದು ಅಥವಾ ಸರಕಾರ ಮತ್ತು ಜನರ ನಡುವೆ ಮಧ್ಯಸ್ಥಿಕೆ ನಡೆಸುವುದು ಮಾತ್ರ ಕಾಂಗ್ರೆಸಿನ ಕೆಲಸವಲ್ಲ ನಮ್ಮದು ರಚನಾತ್ಮಕ ಕ್ರಾಂತಿಪಥ—ಮೌನಕಾರ್ಯವೇ ಇದರ ವೈಶಿಷ್ಟ್ಯ. ಪಲ್ಲವಿಗಳ ಘೋಷಣೆ ಅಥವಾ ಬಾಯಿ ಮಾತಿನ ಸಹಾನುಭೂತಿಯು ಬದಲು ಜನಪದದ ಸಮಸ್ಯೆಯನ್ನು ವ್ಯಾವಹಾರಿಕ ಮಟ್ಟದಲ್ಲಿ ಪರಿಹರಿಸಿ ಪ್ರೀತಿ ವಿಶ್ವಾಸಗಳಿಂದ ಜನರ ಹೃದಯದ ಕದ ತೆರೆಯುವ ಆದರ್ಶ ನಮ್ಮದು. ಸಾಮಾಜಿಕ ಮನೋಭಾವವನ್ನು ಹೀಗೆ ಮಾತ್ರ ತಿದ್ದಬಲ್ಲೆವು; ಮತ್ತು ಹೀಗೆ ತಿದ್ದಿದರೆ ಮಾತ್ರ ನವೀನ ಸಾಮಾಜಿಕ ಹಾಗು ಆರ್ಥಿಕ ಪದ್ಧತಿ ನೆಲೆಯೂರೀತು—ಎಂದವರು ಹೇಳಿದರು. ಕಾಂಗ್ರೆಸು ಸಂಸ್ಥೆಯು ಅಧಿಕಾರದಿಂದ ಸೇವೆಗೆ, ಸಂದರ್ಭ ಸಾಧನೆಯಿಂದ ಮೂಲಭೂತಾಂಶಪಡೆಗೆ, ನೈಮಿತ್ತಿಕ ರಾಜಕೀಯ ವ್ಯವಹಾರದಿಂದ ವಿಧಾಯಕ ಕಾರ್ಯದತ್ತ ಗಮಿಸಬೇಕೆಂದು ಶ್ರೀ ಢೇಬರರು ಆಶಿಸಿದರು. ಅಡಳಿತದ ಹೊಣೆ ಹೊತ್ತವರಿಗೆ ತನ್ನ ಕರ್ತವ್ಯಭಾರದ ತಿಳಿವಳಿಕೆ ಇದೆಯೆಂಬ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ ಕಾಂಗ್ರೆಸಾಧ್ಯಕ್ಷರು ಎಲ್ಲ ಜನರೂ ಸಂತೋಷದಿಂದ ಕಾಂಗ್ರೆಸಿನ ಸೇವೆಯನ್ನು ಪ್ರತಿಯೊಂದೂ ಕ್ಷೇತ್ರದಲ್ಲಿ ಹೊಂದುವಷ್ಟು ಪ್ರಬಲವೂ ವ್ಯಾಪಕವೂ ಸೌಜನ್ಯ ಶೀಲವೂ ಆಗಿ ಈ ಮಹಾರಾಷ್ಟ್ರೀಯ ಸಂಸ್ಥೆ ಬೆಳವಣಿಗೆ ಹೊಂದಲಿ ಎಂದು ಹಾರೈಸಿದರು.

ಉಡುಪಿ

ಕಾಲೇಜು ದಿನಾಚರಣೆ— ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ವರ್ಧಂತಿ ಸಮಾರಂಭವು ಇದೇ ತಾ. 17ರಲ್ಲಿ ಸಂಜೆ ಜರಗುವುದೆಂದೂ ಹಳೆವಿದ್ಯಾರ್ಥಿಗಳೆಲ್ಲರೂ ಬರಬೇಕೆಂದೂ ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ತಿಳಿಸುತ್ತಾರೆ.

ನಗರಸಭೆಯು— ತಾ 11ರಲ್ಲಿ ಸಂಜೆ ಚೇರ್ಮನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್‌ನ ಗೋಲ್ಡನ್ ಜ್ಯುಬಿಲಿ ಮಹೋತ್ಸವದ ಸ್ಮಾರಕಾರ್ಥವಾಗಿ ಅವರ ಪಕ್ಕಿನ ಮುನಿಸಿಪಲ್ ನೋರ್ತ್ ಎಲಿಮೆಂಟರಿ ಶಾಲಾ ಕಟ್ಟಡವನ್ನು ಶಾಲೆಗಾಗಿ ಉಪಯೋಗಿಸಲು ನಗರ ಸಭೆಗೆ ದಾನ ಕೊಡುವ ಬೇಂಕಿನ ಚೇರ್ಮನ್ ಮತ್ತು ಇತರ ಡೈರೆಕ್ಟರರ ಸೂಚನೆಯನ್ನು ಮನ್ನಿಸಿ ಆ ಬಗ್ಗೆ ಅವರನ್ನು ಅಭಿನಂದಿಸಲಾಯಿತು. ನಗರದ ರಸ್ತೆಗಳಿಗೆ ಅಸುಪಾಸಿನಿಂದ ಬರತಕ್ಕ ಕೊಳಕು ನೀರನ್ನು ತಡೆಗಟ್ಟುವರೆ ಕಾರ್ಯಕ್ರಮ ವೆಸಗುವ ಕುರಿತು ತುಂಬಾ ಚರ್ಚೆ ನಡೆಯಿತು. ಕೊಳಕು ನೀರು ರಸ್ತೆಗಳಿಗೆ ಬಾರದಂತೆ ಉಪಾಯವನ್ನು ಕಂಡುಹಿಡಿದು ಯೋಗ್ಯ ಸೂಚನೆಗಳನ್ನು ಕೊಡಬೇಕೆಂದೂ ಆ ಕಾರ್ಯದಲ್ಲಿ ನಗರ ಸಭಾ ಸದಸ್ಯರು ಸಹಕಾರವನ್ನೀಯುವರೆಂದೂ ಹೆಲ್ತ್ ಆಫೀಸರರ ಗಮನಕ್ಕೆ ತರಲಾಯಿತು.

ಸರ್ವೋದಯ ಮೇಳ— ಬಾಪೂಜಿ ಪುಣ್ಯದಿನಾಚರಣೆ ಹಾಗೂ ಸರ್ವೋದಯ ಮೇಳವು ತಾ. 12ರಲ್ಲು ವಾಳ್ಪೆಯ ಒಡಭಾಂಡೇಶ್ವರದಲ್ಲಿ ಸರ್ವೋದಯ ಕಾರ್ಯಕರ್ತರಾದ ಶ್ರೀ ಎಸ್. ಯು. ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೆ. ಶ್ರೀನಿವಾಸಪೈ ಎ. ಜಿ. ಅಳ್ವೆ, ಶೀನಪ್ಪ ಹೆಗ್ಡೆ, ಪಿ. ಎಸ್. ಆಚಾರ್ಯ, ಟಿ. ಎ. ಪೈ, ಎಮ್. ಎಲ್. ಎ, ಮೊದಲಾದವರು ಮಾತನಾಡಿದರು.

ಪುರಂದರ ದಾಸರ ಸ್ಮಾರಕೋತ್ಸವ— ತಾ. 9ರಿಂದ 11ರ ತನಕ ಶ್ರೀಕೃಷ್ಣ ಮಠದ ವಸಂತಮಹಲಿನಲ್ಲಿ ಪರ್ಯಾಯ ಅದಮಾರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಕಲಾವೃಂದದ ಆಶ್ರಯದಲ್ಲಿ ಜರಗಿತು.

ಬಹುಮಾನ ವಿತರಣೆ - ಉಡುಪಿ ಸ್ಯೆಂಟ್ ಸಿಸಿಲೀಸ್ ಕಾನ್ವೆಂಟ್ ಹೈಸ್ಕೂಲಿನ ಬಹುಮಾನ ವಿತರಣೆ ಸಮಾರಂಭವು ತಾ. 13ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಪ್ರೇಮಾ ಎ. ಪೈಗಳು ಬಹುಮಾನ ವಿತರಣೆಮಾಡಿದರು. ಪರದಿವಾಚನ ನಾಟಕಾಭಿನಯಗಳಾಗಿ ಸಮಾರಂಭ ಕೊನೆಗೊಂಡಿತು.

ಬೀಡಿ ಲೇಬರ್ -- ಯೂನಿಯನ್ನಿನ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ತಾ. 12ರಂದು ರಥಬೀದಿಯಲ್ಲಿ ಶ್ರೀ ಡೇವಿಡ್ ಕರ್ಕೇರರ ಅಧ್ಯಕ್ಷತೆಯಲ್ಲಿ ಕಾಸರಗೋಡಿನ ಕನ್ನಡ ಭಾಗವನ್ನು ಕರ್ನಾಟಕಕ್ಕೆ ಸೇರಿಸಬೇಕೆನ್ನುವ ಯೂನಿಯನಿನ ಕೇಳಿಕೆಗಳನ್ನು ಸರಕಾರವೂ ಮಾಲಕರೂ ಮನ್ನಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಮೂಲ್ಕಿ— ಮಂಗಳೂರಿನ ವಿಜಯ ಬೇಂಕಿನ ಸುಪರಿಂಟೆಂಡೆಂಟ್ ಶ್ರೀ ಸಿ. ಜಯರಾಮ ಸೆಟ್ಟರ ತಂದೆ ಶ್ರೀ ಕೊಲ್ನಾಡು ಪಾದೆಮನೆ ನಾರಾಯಣ ಸೆಟ್ಟರು ತಾ. 7ರಲ್ಲಿ 82 ವಯಸ್ಸಿನಲ್ಲಿ ತಮ್ಮ ಸ್ವಂತ ಮೂಲ್ಕಿ ಗೇರುಕಟ್ಟೆ ಮನೆಯಲ್ಲಿ ಸ್ವರ್ಗಸ್ಥರಾದರು. ದಿವಂಗತರು ನಯವಿನಯಾದಿ ಗುಣಗಳಿಂದ ಜನಪ್ರಿಯರಾಗಿದ್ದರು.

ಮಂಗಳೂರು

ಸಾರ್ವಜನಿಕ ಭಾಷಣ— ಮೈಸೂರಿನ ಪಾರ್ಲಿಮೆಂಟ್ ಮೆಂಬರ್ ಶ್ರೀ ಎಚ್. ಸಿ. ದಾಸಪ್ಪನವರು ತಾ. ೮ರಲ್ಲಿ ಸಂಜೆ ಕೇಂದ್ರ ಮೈದಾನಿನಲ್ಲಿ ಶ್ರೀಮತಿ ಉಮಾ ವಿ. ಕಾಮತ್, ಜಿಲ್ಲಾ ಬೋರ್ಡು ಮೆಂಬರ್, ಅವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಭಾಷಣವಾಡಿ ದಕ್ಷಿಣ ಪ್ರದೇಶದ ರಚನೆಯನ್ನು ನಿರ್ಮಲ ಮನಸ್ಸಿನಿಂದ ಜನರು ಮಾಡುವಂತೆ ಕೇಳಿಕೊಂಡರು. ಶ್ರೀಮತಿ ದಾಸಪ್ಪನವರೂ ಮಾತಾಡುತ್ತಾ ಬಾಪೂಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಆಚರಣೆಗೆ ತಂದುಕೊಳ್ಳಬೇಕಾದ ಆವಶ್ಯಕತೆಗಳನ್ನು ವಿವರಿಸಿದರು.

ಸಂಘ ಸಂಸ್ಥೆಗಳಿಗೆ ಭೇಟಿ— ಶ್ರೀಯುತ ಯಶೋಧರಾ ದಾಸಪ್ಪ ದಂಪತಿಗಳು ತಾ. ೬ರಲ್ಲಿ ನಗರದ ಪ್ರಮುಖ ಸಂಸ್ಥೆಗಳಿಗೆ ಭೇಟಿಯಿತ್ತರು. ಶ್ರೀಮತಿ ದಾಸಪ್ಪನವರು ಅಂದು ಪೂರ್ವಾಹ್ನ ಬೆಸೆಂಟ್ ಬಾಲಿಕಾ ಪಾಠಶಾಲೆಗೆ ಭೇಟಿಯಿತ್ತು ವಿದ್ಯಾರ್ಥಿನಿಯರಿಗೆ ಉತ್ತಮ ಗೃಹಿಣಿಯರಾಗಬೇಕೆಂದು ಉಪದೇಶವಿತ್ತರು. ಅಪರಾಹ್ನ ಕಾಂಗ್ರೆಸ್ ಕಚೇರಿಯಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳ ವಿಚಾರವಾಗಿ ಭಾಷಣವಿತ್ತರು. ಬಳಿಕ ಮಹಿಳಾ ಸಭೆಯಲ್ಲಿ ಮಾತನಾಡುತ್ತಾ, ಸ್ತ್ರೀಯರು ಪಾಶ್ಚಾತ್ಯ ಥಳಕುಗಳಿಗೆ ಮನಸೋಲಬಾರದೆಂದೂ ಭಾರತೀಯರು ಧರ್ಮ ಸಂಸ್ಕೃತಿಯಂತೆ ಗೃಹಲಕ್ಷ್ಮಿಯರಾಗಿ ರಾಷ್ಟ್ರ ರಚನೆಗೆ ಮುಂದೆಬರಬೇಕೆಂದೂ ತಿಳಿಸಿದರು. ಅಂದೇ ಸಂಜೆ ಕಂಕನಾಡಿಯಲ್ಲಿರುವ ಶ್ರೀ ಕೃಷ್ಣಾನಂದ ಮಹಿಳಾ ಸೇವಾಶ್ರಮಕ್ಕೆ ಭೇಟಿಯಿತ್ತಾಗ ಡಾ. ಎಸ್. ಕೇಶವ ಪೈಗಳು ಸ್ವಾಗತಿಸಿದರು.

ನವಭಾರತ ರಾತ್ರಿ ಶಾಲೆಯ ವಾರ್ಷಿಕೋತ್ಸವವು— ತಾ. ೧೩ರಲ್ಲಿ ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಬಿ. ಇ. ಎಮ್. ಹೈಸ್ಕೂಲಿನ ವಠಾರದಲ್ಲಿ ಜರಗಿತು. ಶಾಲಾ ಸಮಿತಿ ಅಧ್ಯಕ್ಷ ಡಾ. ನಾಗಪ್ಪ ಆಳ್ವರು ಸ್ವಾಗತಭಾಷಣವಾಡಿದರು. ಹೆಡ್ಮಾಸ್ತರ್ ಶ್ರೀ ಖಲಿದ್ ಮಹಮ್ಮದರು ವರದಿಯನ್ನೋದಿದರು. ಶ್ರೀಮತಿ ಎಮ್. ಜಿ. ರಾಜಾರಾಮರು ಬಹುಮಾನವಿತರಣೆ ಮಾಡಿದರು. ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಧನ್ಯವಾದವನ್ನರ್ಪಿಸಿದರು.

ರೂಪಾಯಿ 500 ಬಹುಮಾನ

ಲ್ಯುಕೋಡ್ರ್ಮಾ

(ಬಿಳಿ ಕಲೆಗಳು)

ಲ್ಯುಕೋಡ್ರ್ಮಾ ಮತ್ತು ಕುಷ್ಠ ರೋಗವನ್ನು ಸುಲಭವಾಗಿ ಹೋಗಲಾಡಿಸಲು ದೇಹದ ಹೊರಗೂ ಒಳಗೂ ನಮ್ಮ ಅನುಭವೀ ಔಷಧ ಪ್ರಯೋಗದಿಂದ ಸಾಧ್ಯವಿದೆ. ಸಾವಿರಾರು ಮಂದಿ ಗ್ಯಾರಂಟಿಯಾಗಿ ಗುಣ ಹೊಂದಿದ್ದಾರೆ. ರೂಪಾಯಿ ೫/- ಬೆಲೆಯ ನಮ್ಮ ಔಷಧಿಯನ್ನು ದೇಹದ ಹೊರಗೆ ಲೇಪಿಸಿ ಕೆಲವೇ ದಿನಗಳೊಳಗೆ ಈ ಮಹಾ ವ್ಯಾಧಿಯಿಂದ ಗುಣಹೊಂದಿರಿ. ವೇದನಾರೋಧಕ ಮತ್ತು ಕ್ಷಯರೋಗ ವಿಕಾರ ಹಾಗೂ ಎಲ್ಲಾ ತರದ ಕುಷ್ಠ ರೋಗಗಳ ನಿವಾರಣೆ ಬಗ್ಗೆ ಸೇವಿಸುವ ಔಷಧಿ, ಬೆಲೆ ರೂ. ೫/-.

Indra Ayurved Bhavan,
(60) P. O. Rajdhanwar (H. Bagh)

ಪ್ರಜಾರಾಜ್ಯ ದಿನೋತ್ಸವ



ಹೊಸ ದಿಲ್ಲಿಯಲ್ಲಿ ಪ್ರಜಾರಾಜ್ಯ ದಿನೋತ್ಸವವು ವಿಶೇಷ ಕಾರ್ಯಕ್ರಮಗಳೊಂದಿಗೆ ಇದೇ ೨೬ನೇ ಜನವರಿಯಂದು ವಿಜೃಂಭಣೆಯಿಂದ ನಡೆಯಿತು. ಮೇಲೆ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ವಿಶೇಷ ವೇದಿಕೆಯ ಮೇಲೆ ನಿಂತು ರಾಜಪಥದಲ್ಲಿ ಗೌರವವನ್ನರ್ಪಿಸಿ ಹೋಗುತ್ತಿರುವ ಸೇನೆಯ ಘಟಕ ದವಂದನೆ ಸ್ವೀಕರಿಸುತ್ತಿರುವುದನ್ನು ಕಾಣಬಹುದು.

ವಾರ್ಷಿಕೋತ್ಸವದ ಅಂಗವಾಗಿ ಅಂದು ಬೆಳಿಗ್ಗೆ ಡಾ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಸಾಮಾಜಿಕ ಕೂಟವೊಂದು ಜರಗಿತು. ವಿದ್ಯಾರ್ಥಿ ಮುಖಂಡ ಶ್ರೀ ಪಿ. ಭೋಜರಾಯರು ಸ್ವಾಗತಭಾಷಣಮಾಡಿದರು. ಶ್ರೀಗಳಾದ ಕೆ. ಎಲ್. ಎನ್. ರಾವ್, ಡಿ. ಎಸ್. ಕೆಸ್ತೂರ್, ಅಪ್ಪಯ್ಯ ಬೇಲಗದ್ದೆ, ಮನಮೋಹನ ಕಾಮತ್ ಮೊದಲಾದವರು ಹಿತವಚನಗಳನ್ನಾಡಿದರು. ಸಂಜೆ ಜನಮನರಂಜನಾ ಕಾರ್ಯಕ್ರಮಗಳಾದುವು.

ಎಲೋಸಿಯಸ್ ಕಾಲೇಜ್ ಯೂನಿಯನ್ ವಾರ್ಷಿಕೋತ್ಸವವು— ತಾ. ೧೧ರಲ್ಲಿ ಸಂಜೆ ಕೊಡಗು ಶಾಸನ ಸಭೆಯ ಅಧ್ಯಕ್ಷ ಶ್ರೀ ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜ್ ಯೂನಿಯನ್ ಅಧ್ಯಕ್ಷ ಶ್ರೀ ಎಸ್. ಜೆ. ಜೆಸ್ಟೀನ್ ರವರು ಸ್ವಾಗತಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ ಒಲಿವರ್ ಇ. ಕುಲಾಸೋರವರು ವರದಿಯನ್ನೋದಿದರು. ಶ್ರೀ ಪಿ. ಎಸ್. ರೋಡ್ರಿಗಸರು ಯೂನಿಯನ್ನಿನ ಸ್ವಸ್ತಿವಾಚನ ಮಾಡಿದರು. ಶ್ರೀ ಎಸ್. ರಮಾನಂದ ಹೆಗ್ಡೆಯವರು ಉತ್ತರಕೊಟ್ಟರು. ಶ್ರೀ ಎಸ್. ಎಸ್. ಶ್ರೀಪತಿಯವರು ಕಾಲೇಜಿನ ಸ್ವಸ್ತಿವಾಚನಮಾಡಿದುದಕ್ಕೆ ಫಾ. ರೆಕ್ಟರು ಉತ್ತರವಿತ್ತರು. ಶ್ರೀ ಬಿ. ಎಲ್. ಕಮಲಾಕರ ರೈಗಳು ಕಾಲೇಜಿನ್ನಗಲುವ ವಿದ್ಯಾರ್ಥಿಗಳ ಸ್ವಸ್ತಿವಾಚನ ಮಾಡಿದರು. ಶ್ರೀ ಐವಾನ್ ಡಿ' ಕೋಸ್ಟಾರವರು ಉತ್ತರ ಕೊಟ್ಟರು. ಅಧ್ಯಕ್ಷರು ಫಾ. ಬಿ. ಆಲ್ಬುಕರ್ಕರ ಭಾವಚಿತ್ರ ಅನಾವರಣ ಮಾಡಿದರು. ಶ್ರೀಮತಿ ಬಿ. ಎಸ್. ಕುಶಾಲಪ್ಪನವರು ಬಹುಮಾನ ವಿತರಣೆಮಾಡಿ, 'ಅಪೇಕ್ಷಿತವಾಗಿಯೋ ಅಥವಾ ಅನಪೇಕ್ಷಿತವಾಗಿಯೋ— ನಮ್ಮ ರಾಷ್ಟ್ರೀಯ ಮುಂದಾಳುಗಳು ಅಂದಿನ ಸ್ವಾತಂತ್ರ್ಯ ಹೋರಾಟಕ್ಕೆ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಂಡು, ವಿದ್ಯಾರ್ಥಿಗಳಲ್ಲಿ ಶಿಸ್ತುಗೇಡಿತನವನ್ನು ಬೆಳೆಯಿಸಿದರು. ಆದೇ ಬೀಜವು ಇಂದು ಬೆಳೆದು ಪ್ರಸ್ತುತ ಸಮಾಜದ ದೊಡ್ಡ ಅನಿಷ್ಟವಾಗಿ ನಮ್ಮ ರಾಷ್ಟ್ರದ ಪ್ರಜಾಸತ್ತಾತ್ಮಕ ಅಭಿವೃದ್ಧಿಗೆ ದೊಡ್ಡ ಆತಂಕವಾಗಿದೆ ಎಂದು ಮುಂಕಾಗಿ ಭಾಷಣವಿತ್ತರು.

ದಕ್ಷಿಣ ಪ್ರದೇಶ ರಚನೆಗೆ ವಿರೋಧ— ಮಂಗಳೂರು ಸಹಕಾರಿ ಬ್ಯಾಂಕಿನ ಮಾಳಿಗೆಯಲ್ಲಿ ತಾ. ೩ರಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಮಾತನಾಡುತ್ತಾ ಕರ್ನಾಟಕದ ಉದಯವಾಗುತ್ತಿರುವ ಕಾಲದಲ್ಲೇ ಕರ್ನಾಟಕ ಜನತೆಗೆ ವಿರೋಧವಾದ ಅಭಿಪ್ರಾಯವನ್ನು ಜಿಲ್ಲೆಯ ಮೂವರು ಪ್ರತಿನಿಧಿಗಳು ಮಂಡಿಸಿರುವುದು ಶೋಚನೀಯವೆಂದೂ ಕಾಸರಗೋಡನ್ನು ಳಿಸಿಕೊಳ್ಳಲಾರದ ತಪ್ಪನ್ನು ಮುಚ್ಚುವ ಹೋ ನವೆಂದೂ ತಿಳಿಸಿದರು. ಬಳಿಕ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಡಾ. ಸೀತಾರಾಮ ರಾಯರು ಮಾತನಾಡಿದರು. ಅಂತ್ಯದಲ್ಲಿ ಕರ್ನಾಟಕವನ್ನೊಳಗೊಂಡ ದಕ್ಷಿಣಪ್ರದೇಶದ ರಚನೆಯಾಗಬೇಕೆಂಬ ಸೂಚನೆಯು ಅಪೇಕ್ಷಿತವಲ್ಲ; ಕರ್ನಾಟಕ ಪ್ರಾಂತಕ್ಕಾಗಿ ಕಾರ್ಯವೆಸಗುತ್ತ ಬಂದ ಕನ್ನಡಿಗರಿಗಿದು ಸ್ವೀಕಾರ ಯೋಗ್ಯವಲ್ಲ, ಆದ್ದರಿಂದ ಈ ಸೂಚನೆಯನ್ನು ಕರ್ನಾಟಕದ ಪ್ರತಿನಿಧಿಗಳೂ ಮುಂಬಯಿ ಪ್ರಜಾಪ್ರಭುತ್ವ ಸಂಸ್ಥೆಗಳೂ ವಿರೋಧಿಸಬೇಕೆಂದು ಈ ಸಭೆಯು ಕೇಳುತ್ತದೆ—ಎಂಬ ನಿರ್ಣಯ ಪಾಸಾಯಿತು.

ಆಯುರ್ವೇದ ವೈದ್ಯರ ಪರಿಷತ್ತು

ಕರ್ನಾಟಕ ಮತ್ತು ಕೇರಳ ಪ್ರಾಂತೀಯ ಗಾಮವೈದ್ಯ ಸಂಘದ ವಾರ್ಷಿಕ ಮಹಾಸಭೆಯು ತಾ. ೫ರಲ್ಲಿ ಮಂಗಳೂರಿನ ಶ್ರೀ ಶ್ರೀನಿವಾಸ-ವಾತಶಾಲಾ ಓರಿಯಂಟಲ್ ಹೈಸ್ಕೂಲಿನಲ್ಲಿ ನಗರಸಭಾ ಸದಸ್ಯ ವೈದ್ಯ ಶ್ರೀ ವಾಮನ ಕೊಡಿಯಾಲಬೈಲು, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರೀ ಸಮಿತಿ ಸದಸ್ಯರ ಚುನಾವಣೆಯಾದಬಳಿಕ ಸಂಜೆ ಅಖಿಲ ಕರ್ನಾಟಕ ಆಯುರ್ವೇದ ಮಂಡಲದ ಅಧ್ಯಕ್ಷ ಡಾ. ಎಮ್. ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಆಯುರ್ವೇದ ವೈದ್ಯರ ಪರಿಷತ್ತು ಜರಗಿತು.

ವಿವಾಹ— ದ. ಕ. ಜಿಲ್ಲಾ ತರುಣ ಸಾಹಿತಿಗಳೂ ಪತ್ರಿಕೋದ್ಯೋಗಿಗಳೂ ಆದ ಶ್ರೀ ಕುಳಕುಂದ ಶಿವರಾಯ (ನಿರಂಜನ) ರಿಗೂ ಸಾಹಿತ್ಯ ಪ್ರಪಂಚದಲ್ಲಿ ಈಗಾಗಲೇ ಹೆಸರು ಗಳಿಸುತ್ತಿರುವ ಮೈಸೂರಿನ ಶ್ರೀ ಸಾ. ವೆಂಕಟಲಕ್ಷ್ಮಿ (ಅನುಪಮಾ) ರವರಿಗೂ ವಿವಾಹವಾಗಿ ಆ ಸಂಬಂಧ ತಾ. ೬ರಲ್ಲಿ ಸಂಜೆ ಬೆಂಗಳೂರಿನಲ್ಲಿ ಜರಗಿದ ಉಪಾಹಾರ ಕೂಟಕ್ಕೆ ನಗರದ ಸಾಹಿತಿಗಳೂ ಬಂದು ವಧೂವರರನ್ನು ಆಶೀರ್ವದಿಸಿದರು.

ಕಾಸರಗೋಡಿನಲ್ಲಿ ಆರು ಮಹಿಳೆಯರಿಗೆ ಶಿಕ್ಷೆ— ತಾ. ೧೦ರಲ್ಲಿ ಸ್ಥಳೀಯ ಜ್ಯುಡಿಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಯು. ವಾಸುದೇವಪ್ಪನವರು ಆರು ಮಂದಿ ಮಹಿಳೆಯರಿಗೆ ತಲಾ ರೂಪಾಯಿ ೫/- ದಂಡ ಜುಲ್ಮಾನೆ, ಇದನ್ನು ಕೊಡಲು ತಪ್ಪಿದರೆ ಮೂರು ದಿನಗಳ ಸಾಧಾ ಶಿಕ್ಷೆ ವಿಧಿಸಿದರು. ಡಾ. ಕೆ. ಸಿ. ಆಳ್ವರ ಮಗಳು ಕುಮಾರಿ ಯ. ಶ್ರೀ. ಲತಾ ಅವರು ಕೂಡಾ ದಂಡನೆ ಕೊಡಲು ನಿರಾಕರಿಸಿದರು. ಅವರು ಅಪ್ರಾಪ್ತವಯಸ್ಕಳಾದ ಕಾರಣ ಬಿಡುಗಡೆ ಮಾಡಲ್ಪಟ್ಟರು. ಕುಮಾರಿ ಗೀತಾರತ್ನರ ವಿಚಾರಣೆಯು ಇದೇ ತಾ. ೨೦ಕ್ಕೆ ಮುಂದರಿಸಲಾಗಿದೆ. ಕಾಸರಗೋಡನ್ನು ನಿಯೋಜಿತ ಕೇರಳಕ್ಕೆ ಸೇರಿಸುವ ನಿರ್ಣಯವನ್ನು ಪ್ರತಿಭಟಿಸಿದರೆ ಇವರು ಜ್ಯಾರಿಯಲ್ಲಿದ್ದ ಪೋಲೀಸ್ ಆಕ್ಟ್ V ಸೆ 30 (2)ರ ಉಲ್ಲಂಘನೆ ಗೈದು ಮೆರವಣಿಗೆ ಮಾಡಿದ ಅಪರಾಧವು ಇವರ ಮೇಲೆ ಹೊರಿಸಲಾಗಿತ್ತು. ಸೆರೆಮನೆಗೆ ತೆರಳಿದವರ ವಿವರ:- ಶ್ರೀಮತಿಯರಾದ (1) ಡಾ. ಕೆ. ಎ. ಶೆಟ್ಟಿಯ ಪತ್ನಿ ಶ್ರೀಮತಿ ಕಮಲಾ (2) ಡಾ. ಪಿ. ಎನ್. ಭಟ್ಟರ ಪುತ್ರಿ ಶ್ರೀಮತಿ ಪರಮೇಶ್ವರಿ (3) ಎಡ್ವೊಕೇಟ್ ಕೆ. ಪಿ. ಅನಂತರಾಯರ ಪತ್ನಿ ಶ್ರೀಮತಿ ಸರಸ್ವತಿ ಬಾಯಿ (4) ಎಡ್ವೊಕೇಟ್ ಕಳ್ಳಿಗೆ ಮಹಾಬಲ ಬಂಡಾರಿಯವರ ಪತ್ನಿ ಶ್ರೀಮತಿ ಸುವಾಸಿನಿ ಭಂಡಾರಿ (5) ಎಡ್ವೊಕೇಟ್ ಯು. ಪಿ. ಕುಣಿಕುಳ್ಳಾಯರ ಪತ್ನಿ ಶ್ರೀಮತಿ ಲಕ್ಷ್ಮೀ ಮತ್ತು (6) ಟ್ರೈಪ್ಸ್ ಸಿ. ಎಚ್. ಕಾಮತರ ಪತ್ನಿ ಶ್ರೀಮತಿ ರಾಧಾ ಕಾಮತ್.

ವಿಟ್ಲ— ಸ್ಥಳೀಯ ಬೋರ್ಡು ಹಾ. ಎ. ಶಾಲಾ ವಠಾರದಲ್ಲಿ ತಾ. ೯ರಲ್ಲಿ ಸಂಜೆ ವಿಟ್ಲ ಪಂಚಾಯತ ಅಧ್ಯಕ್ಷ ಶ್ರೀ ವಿ. ರಾಮವರ್ಮ ರಾಜರ ಅಧ್ಯಕ್ಷತೆಯಲ್ಲಿ ವಿಟ್ಲ ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ಯು. ಭವಾನಿಶಂಕರ ರಾಯರು ಲೋಕಲ್ ಲೈಬ್ರೆರಿ ಅಥಾರಿಟಿಯ ಡೆಲಿವರಿ ಕೇಂದ್ರವನ್ನು ಉದ್ಘಾಟಿಸಿದರು.

ಹಿರಿಯಡಕ— ದಿವಂಗತ ಶೆಟ್ಟಿ ನಾರಾಯಣ ಅಡ್ಯಂತಾಯರ ಸ್ಮಾರಕಾರ್ಥವಾಗಿ ಹಿರಿಯಡಕ ಬೋರ್ಡು ಹೈಸ್ಕೂಲಿನ ಐದನೇ ಇಯತ್ತೆಯ ಮಕ್ಕಳಲ್ಲಿ ವರ್ಷಂಪ್ರತಿ ಕನ್ನಡ, ಇಂಗ್ಲಿಷ್, ಹಿಂದೀ— ಈ ಮೂರು ಭಾಷೆಗಳಲ್ಲಿ ಪ್ರಥಮ ಶ್ರೇಣಿಯ ಮಾರ್ಕುಗಳನ್ನು ಪಡೆಯುವ ಮಕ್ಕಳಿಗೆ ಮೂರು ಪ್ರಥಮ ಬಹುಮಾನಗಳೂ ಇದೇ ಶಾಲೆಯಲ್ಲಿ ಉತ್ತಮ ಆಟಗಾರನೆಂದು ಪರಿಗಣಿಸಲ್ಪಡುವ ಹುಡುಗನಿಗೆ ಒಂದು 'ಛೇಂಪಿಯನ್ ಶಿಪ್' ಬಹುಮಾನವೂ ದೊರೆಯಲು ಅನುಕೂಲವಾಗುವಂತೆ ರೂಪಾಯಿ ೬೦೦/- ನ್ನು ದಿವಂಗತರ ಪತ್ನಿ ಪುತ್ರರು ಜಿಲ್ಲಾ ಬೋರ್ಡಿನಲ್ಲಿ ಠೇವಣಾತಿ ಕಟ್ಟಿರುವರೆಂದೂ ತಿಳಿದುಬರುತ್ತದೆ. ಅಂತೆಯೇ ದಿವಂಗತ ಅಂಜಾರು ಮಾಂಬೆಟ್ಟು ಮಂಜಪ್ಪ ಹೆಗ್ಡೆಯವರ ಸ್ಮಾರಕಾರ್ಥವಾಗಿ ಅವರ ಪತ್ನಿ ಶ್ರೀಮತಿ ಸರೋಜಿನಿ ವಿ. ಹೆಗ್ಡೆಯವರು ಈ ಹೈಸ್ಕೂಲಿನ ಬೇಡ್ಮಿಂಟನ್ ಸ್ಪರ್ಧೆಯಲ್ಲಿ ಗೆದ್ದವರಿಗೆ ಕೊಡಲು ಬೆಳ್ಳಿಯ ರೋಲಿಂಗ್ ಕಪ್ಪನ್ನು ದಾನವಿತ್ತಿರುವರು.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳಿರಿ.

P. O. Box No. 3219, BOMBAY 3-

ಖಾತ್ರಿ ಚಿನ್ನದ ನೆಕ್ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkpet, UDIPI, S. Kanara.

ಫೋನ್ ನಂಬ್ರ ೬೬



ಕುಮಾರಿ ಬಿಲ್ಲೆಗಳು (Govt. Regd.)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಸರಿಪಡಿಸುವ ಪ್ರಕಾರ ದೋಷಗಳನ್ನು ಪಕೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. ೫/- ಸ್ಪೆಶಲ್ ರೂ. ೮/-

Mrs. P. DEVEE, F. Ds. (N. J.)
CALCUTTA—40

(ವಿ. ಪಿ. ಪಿ. ಪ್ರತ್ಯೇಕ)

ಸ್ಟಾಕಿಸ್ಟರು: ರಘುಕಂಪೆನಿ, ಮಂಗಳೂರು

(೩ ನೇ ಪುಟದಿಂದ)

...ರಿ ಜನ ಸಂಖ್ಯೆಯ ಹೆಚ್ಚಳವನ್ನು ...ಯಂತ್ರಿಸುವುದು ಕಷ್ಟವಾದುದರಿಂದ ... ನಿರುದ್ಯೋಗಿಗಳಿಗಾಗಿ ೫೩ ಲಕ್ಷ ಜನ ...ಗಿರುವರೋ ಹಾಗೆ ಎರಡನೇ ಯೋ...ಯ ಅಂತ್ಯದಲ್ಲಿ ಸಹ ೫೮ ಲಕ್ಷ ಜನ ...ಸಗೇಡಿಗಳಾಗಿ ಉಳಿದಾರೆಂದು ಅಂ...ಜು.

ಸಮಾಜವಾದಿ ಆದರ್ಶ

...ಆರ್ಥಿಕ ಧೋರಣೆಯ ಗುರಿಯಾಗಿ ...ಯೋಜನಾ ಆಯೋಗವು ಸಮಾಜವಾದಿ ...ಮಾದರಿಯ ಸಮಾಜ ರಚನೆಯ ಆದ...ವನ್ನು ತೆಗೆದು ಕೊಂಡಿದೆ. ಖಾಸಗಿ ...ಲಾಭವಲ್ಲ, ಸಾಮಾಜಿಕ ಪ್ರಯೋಜನವೇ ...ಮುನ್ನಡೆಯ ದಾರಿಯನ್ನು ರೂಪಿಸುವಲ್ಲಿ ಮುಖ್ಯಾಂಶವಾಗಿರಬೇಕೆಂದು ಇದರ ...ರ್ಥ. ಆದುದರಿಂದ ಉತ್ಪಾದನೆ, ವಿತ...ಣೆ, ಉಪಯೋಗ ಭಂಡವಾಳ ನಿಕ್ಷೇಪ ...ವ್ಯಾದಿ ಪ್ರತಿಯೊಂದೂ ಸಾಮಾಜಿಕ ...ಗು ಆರ್ಥಿಕ ಸಂಬಂಧಗಳಲ್ಲಿ ಜನತೆ...ಯ ಧ್ಯೇಯವಾಗುಳ್ಳ ಅಂಗಗಳ ಕೈವಾ...ಸ್ವಾಧೀನವಾಗಬೇಕೆಂದು ಪ್ರತ್ಯೇಕ ಹೇ...ವ ಅಗತ್ಯವಿಲ್ಲ. ಆರ್ಥಿಕ ಕ್ಷೇತ್ರದ ...ಅಭಿವೃದ್ಧಿ ಪ್ರಯತ್ನಗಳ ಪ್ರಯೋಜನವು ...ಸಮಾಜದಲ್ಲಿ ಕಡಿಮೆ ಅಂತಸ್ತಿನ ಜೀವನ ...ಮಟ್ಟವುಳ್ಳವರಿಗೆ ಹೆಚ್ಚು ಹೆಚ್ಚಾಗಿ ಸಿಗ...ಬೇಕು; ಆದಾಯ, ಸಂಪತ್ತು ಮತ್ತಿತರ ...ಆರ್ಥಿಕ ಬಲವು ಕೇಂದ್ರೀಕೃತವಾಗ...ದಂತೆ ಪ್ರಗತಿಪರ ಉಪಾಯಗಳನ್ನು ಕೈ...ಕೊಳ್ಳಬೇಕು; ಈ ಉದ್ದೇಶದಿಂದ ಪ್ರೇರಣೆಗೊಂಡ ಸಮಾಜವಾದಿ ಮಾದರಿಯ ಆದರ್ಶವು ಯಾವುದೇ ಇಕ್ಕಟ್ಟಾದ ಸೂತ್ರ ಬಂಧಕ್ಕೆ ಕಟ್ಟು ಬೀಳಬೇಕಾಗಿಲ್ಲ— ಎಂದು ಯೋಜನಾ ಆಯೋಗ ನಂಬಿದೆ. ಪ್ರತಿಯೊಂದು ದೇಶವೂ ತನ್ನ ವಿಶಿಷ್ಟ ಪರಿಸ್ಥಿತಿ ಮತ್ತು ಬುದ್ಧಿವಂತಿಕೆಗೆ ಒಗ್ಗುವ ದಾರಿ ಹಿಡಿದು ಸಾಗಬಹುದೆಂದು ಅದು ಭಾವಿಸಿದೆ; ಮೂಲ ಭೂತವಾದ ಅಂಶಗಳನ್ನು ಕಡೆಗಣಿಸದೆ, ದೇಶದ ಅಭ್ಯುದಯದಲ್ಲಿ ಎಲ್ಲರೂ ಪಾಲುಗಾರರೆಂಬ ಭಾವನೆಯನ್ನು ಹುಟ್ಟಿಸಲು ಸಾಧ್ಯವೆಂದೂ ಅದು ಹೇಳಿದೆ.

ಘಟನೆಯ ನಿರ್ದೇಶ

ನಮ್ಮ ರಾಜ್ಯ ಘಟನೆಯಲ್ಲಿರುವ ನಿರ್ದೇಶ ಸೂತ್ರಗಳು ನಾವು ಯಾವ ದಾರಿಯನ್ನು ಹಿಡಿದು ಸಾಗಬೇಕೆಂದು ಸಾಮಾನ್ಯ ಮಾತುಗಳಲ್ಲಿ ಸೂಚಿಸುತ್ತವೆ. ಸಮಾಜವಾದಿ ಮಾದರಿಯ ಆದರ್ಶವೆಂಬುದು ಇದಕ್ಕೆ ಸ್ಪಷ್ಟೀಕರಣದ ರೂಪವಿದೆ. ಪ್ರಜಾಪ್ರಭುತ್ವಕ್ಕೆ ಒಪ್ಪಬಲ್ಲ ಮತ್ತು ಪ್ರಜೆಗಳ ಕ್ಷೇಮಾಭ್ಯುದಯದ ಮುನ್ನೋಟವುಳ್ಳ ಧೋರಣೆಯನ್ನು ಅನುಸರಿಸಿ ಧ್ಯೇಯವನ್ನು ಮುಟ್ಟಲು ಎರಡನೇ ಯೋಜನೆಯು ಹವಣಿಸಿದೆ. ಇದಕ್ಕಾಗಿ ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ನಮಗೆ ಪರಿಚಿತವಾಗಿರುವ ಕೆಲವು ಬಗೆಯ ಕಾರ್ಯಕ್ರಮಗಳನ್ನಲ್ಲದೆ ಬೇರೆ ಹೊಸ ಚಟುವಟಿಕೆಗಳನ್ನು ಸಹ ನಡೆಸಬೇಕೆಂದೂ ಎರಡನೇ ಯೋಜನೆಯ ಕರಡನ್ನು ತಯಾರಿಸಿದವರು ಹೇಳಿದ್ದಾರೆ. ಈ ಕಾರ್ಯಕ್ರಮಗಳನ್ನು ಜ್ಯಾರಿಗೆ ತರುವ ಮುಖ್ಯ ಜವಾಬ್ದಾರಿಯು ಕೇಂದ್ರ ಸರಕಾರದ್ದೆಂದು ಯೋಜನಾ ಆಯೋಗ ಹೇಳಿದೆ. ಆಡಳಿತ ಹಾಗು ವ್ಯಾವಹಾರಿಕ ದೃಷ್ಟಿಯಿಂದ ಇದಕ್ಕೆ ಯೋಗ್ಯ ಸಿದ್ಧತೆಗಳಾಗಬೇಕಾಗಿವೆ. ಮಾಡಿದ ನಿರ್ಣಯಗಳನ್ನು ಕಾರ್ಯರೂಪಕ್ಕೆ ಇಳಿಸಬಲ್ಲ ಕೆಲಸಗಾರ ಮಂಡಳಿಯೂ ಅವಶ್ಯವಾಗಿದೆ ಎಂಬ ಸಂಗತಿಯನ್ನೂ ಯೋಜನಾ ಆಯೋಗ ನೆನಪಿಸಿದೆ.

ಮುಖ್ಯ ವೈಶಿಷ್ಟ್ಯ

ಮುಂದಿನ ಐದು ವರ್ಷಗಳಲ್ಲಿ ಸಮಾಜವಾದಿ ಆದರ್ಶವು ಮುಖ್ಯವಾಗಿ ಮೂರು ವಿಷಯಗಳಲ್ಲಿ ವ್ಯಕ್ತವಾಗುತ್ತದೆ. (೧) ಔದ್ಯಮಿಕ ಕ್ಷೇತ್ರ: ಇಲ್ಲಿ ಖಾಸಗಿ ರಂಗವು ಸಂಪೂರ್ಣ ನಾಶವಾಗುವುದಿಲ್ಲವಾದರೂ ಮಹತ್ವದ ಕೈಗಾರಿಕೆಗಳಲ್ಲಿ ಸರಕಾರದ ವರ್ಚಸ್ಸು ಉಳಿಯುವುದಲ್ಲದೆ ಸಾಮಾನ್ಯ ನಿಯಂತ್ರಣವನ್ನು ಹೇರಿ ಸರಕಾರವು ಖಾಸಗಿ ರಂಗಕ್ಕೆ ನಿರ್ದೇಶನವನ್ನೂ ಕೊಡುವುದು; ಮಾತ್ರವಲ್ಲ, ಮೂಲೋದ್ಯಮಗಳನ್ನು ತನ್ನ ನೇರವಾದ ಮೇಲ್ವಿಚಾರಣೆ ಮತ್ತು ಪ್ರಭುತ್ವದಲ್ಲಿಡಲು ಅನುಕೂಲವಾಗುವಂತೆ ೧೯೪೮ನೇ ಇಸವಿಯ ಔದ್ಯೋಗಿಕ ಧೋರಣೆಯ ಘೋಷಣೆಯನ್ನು ಪರಿಷ್ಕರಿಸಲಾಗುವುದು. (೨) ಸಾಂಪತ್ತಿಕ ಕ್ಷೇತ್ರ: ಮಥಾಯಿ ಮಂಡಳಿಯು ತೆರಿಗೆ ಸುಧಾರಣೆಯ ಸೂಚನೆ ಮಾಡುವಾಗ ಹೇಳಿದ ನಿರ್ದೇಶನವನ್ನು ತಕ್ಕಮಟ್ಟಿಗೆ ಅನುಸರಿಸಿಯೂ ನೂತನೋಪಾಯಗಳನ್ನು ಕೈಗೊಂಡೂ ಆದಾಯದಲ್ಲಿರುವ ವ್ಯತ್ಯಾಸವನ್ನು ಕಡಿಮೆಗೊಳಿಸಲಾಗುವುದು; ಹೆಚ್ಚು ಸಂಪತ್ತು ಇರುವವರ ಮೇಲೆ ತೆರಿಗೆ ಅಧಿಕವಾಗುವುದಲ್ಲದೆ, ಸಾಮಾನ್ಯ ಪ್ರಮಾಣಕೂ, ಗರಿಷ್ಠ ಆದಾಯ ಪ್ರಮಾಣಕ್ಕೂ ೧:೩೦ ಎಂಬ ದಾಮಾಶಯದ ಪದ್ಧತಿಯನ್ನು ಜ್ಯಾರಿಗೆ ತರಲಾಗುವುದು. (೩) ಪ್ರಾದೇಶಿಕ ಕ್ಷೇತ್ರ: ಕಡಿಮೆ ಉತ್ಪನ್ನದ ವರ್ಗಗಳ ಆದಾಯ ಹೆಚ್ಚಲು ಪ್ರಯತ್ನಿಸಿದಂತೆ, ಹಿಂದುಳಿದ ಪ್ರದೇಶಗಳ ಮುನ್ನಡೆಗೆ ವಿಶೇಷ ಗಮನವೀಯಲಾಗುವುದು; ಯಾವುದೇ ಭೂಭಾಗದಲ್ಲಿರುವ ಸಾಂಪತ್ತಿಕ ಸ್ತ್ರೋತವು ವ್ಯರ್ಥವಾಗದಂತೆ ನೋಡಿಕೊಳ್ಳಲಾಗುವುದು. ಮೇಲಿನೆಲ್ಲ ಕೆಲಸವು ಕಟ್ಟುನಿಟ್ಟಾದಸೂತ್ರಗಳ ಬಂಧನವಿಲ್ಲದೆ ನಡೆಯಲಿದೆಯೆಂಬುದೂ ಯೋಜನೆಯ ಮುಖ್ಯ ವೈಶಿಷ್ಟ್ಯ.

ಬೊಂಬಾಯಿ— ಕಳೆದ ಎಂಟು ವರ್ಷಗಳಿಂದ ಅನೌಪಚಾರಿಕವಾಗಿ ಸಾಹಿತ್ಯಕ ಚಟುವಟಿಕೆಗಳನ್ನು ನಡಿಸುತ್ತಿದ್ದ ಕನ್ನಡ ಸಾಹಿತ್ಯ ಕೂಟವು ತಾ. 5ರಲ್ಲಿ ಸಭೆಸೇರಿ, ಘಟನೆಯನ್ನು ರಚಿಸಿಕೊಂಡಿತು. ಲೇಖನ ಕಾರ್ಯಕ್ಕೆ ಉತ್ತೇಜನ, ಕನ್ನಡ ಸಾಹಿತ್ಯದ ಪ್ರಗತಿಯ ಅವಲೋಕನ, ಅದಕ್ಕಾಗಿ ವಿದ್ವಾಂಸರ ಒಂದು 'ಭೋಜಸಭೆ'ಯ (Book club) ಸ್ಥಾಪನೆ ಮತ್ತು ಗ್ರಂಥಾಲಯ ಕಾರ್ಯ ಇವು ಘಟನೆಯಲ್ಲಿ ಹೇಳಲಾದ ಪ್ರಮುಖ ಧ್ಯೇಯ ಧೋರಣೆಗಳಾಗಿವೆ. ಶ್ರೀಗಳಾದ ದಿನಕರ ದೇಸಾಯಿ (ಅಧ್ಯಕ್ಷ), ಕೃಷ್ಣಕುಮಾರ ಕಲ್ಲೂರ ಮತ್ತು ವ್ಯಾಸರಾಯ ಬಲ್ಲಾಳ (ಉಪಾಧ್ಯಕ್ಷರು) ಎಮ್. ವಿ. ನಾಯಕ್ (ಕೋಶಾಧಿಕಾರಿ), ರಂಗನಾಥ ಪುರಂದರೆ ಮತ್ತು ಶ್ರೀನಿವಾಸ ಹಾವನೂರ (ಕಾರ್ಯದರ್ಶಿಗಳು), ಚಿದಂಬರ ದೀಕ್ಷಿತ, ಪ. ಸು. ಭಟ್ಟ, ಶ್ರೀನಿವಾಸ ಚಂದ್ರಕಾಂತ, ಟಿ. ಕೆ. ಸುಂದರ್ ಮತ್ತು ಹೇಮಂತ ಕುಲಕರ್ಣಿ (ಇತರ ಸದಸ್ಯರು) ಇರುವ ಕಾರ್ಯಕಾರೀ ಸಮಿತಿ ರಚಿಸಲ್ಪಟ್ಟಿತು.

In the Court of the District Munsif of Mangalore.

O. S. No. 620 of 1955.

Between:
Harold J. Brito by Power Agent L. C. Pais ... Plaintiff,
and
Haniel Karkada ... Defendant.

To:
Haniel Karkada, Hotel Manager, Near M. R. Bakery, Behind Webster Market, Hampankatta, Mangalore.

TAKE NOTICE that the Plaintiff abovenamed has instituted a suit for recovery of the Mulgeni rental due by you for four holdings in your possession and for other reliefs, and that the said suit stands posted to 28—2—1956 at 11 A. M. for your appearance. On your failure to appear either in person or by Pleader, you will be declared exparte.

(By Order of Court)

Sri C. I. J. Pais, B. A., B. L.,
Light House Hill,
Mangalore—1
Advocate for Plaintiff.

Mangalore, 6-2-1956.

THE VIJAYA BANK Ltd., BRAHMAVAR.

ದಿ ವಿಜಯ ಬೇಂಕ್, ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು, ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ...ದಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮುಖಲ...ಕೊಂಡಾಗ್ಯೂ ಅಸಲ್ಲ ವ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿ...ಕೊಂಡಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಇಡಿಟ್ಟ ನಗಗಳನ್ನು ಇದೇ ಬರುವ ...-2-56ನೇ ಮಂಗಳವಾರ, ಅಪರಾಹ್ನ ಗಂಟೆ 4ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತ...ವಾದ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 31 12_55ರ ವರೆಗೆ		
503/53	ಮೂಡನರಂಗ ಸ್ವಾಮಿ, ಮೂಡ ಸ್ವಾಮಿ ಮಗ, ಚಾಂತಾರು ಗ್ರಾಮ ಪೋಸ್ಟು ಬ್ರಹ್ಮಾವರ.	53	2	0
585/53	ರಾಮಮ್ಮ, ಮೂಡನರಂಗ ಸ್ವಾಮಿ ಹೆಂಡತಿ, ಚಾಂತಾರು ಗ್ರಾಮ ಪೋಸ್ಟು ಬ್ರಹ್ಮಾವರ.	32	2	0
176/54	ಅಣ್ಣಪ್ಪ ಸೆಟ್ಟಿ, ಮಂಜಯ್ಯ ಸೆಟ್ಟಿ ಅಳಿಯ, ಹಂದಾಡಿ ಬೈಲು ಮನೆ, ಪೋಸ್ಟು ಬ್ರಹ್ಮಾವರ.	28	2	0
259/54	ಕಾಡ್ಯ ಪೂಜಾರಿ, ಕುರುಡ ಪೂಜಾರಿ ಅಳಿಯ, ಮಕ್ಕಿಮನೆ ಹಂದಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ.	51	14	0
274/54	ರಾಮಣ್ಣ ಸೆಟ್ಟಿ, ಮುತ್ತಯ್ಯ ಸೆಟ್ಟಿ ಅಳಿಯ, ಕುಮ್ರಗೋಡು ಗ್ರಾಮ, ಪೋಸ್ಟು ಬ್ರಹ್ಮಾವರ.	52	8	0
609/54	ಮೂಡನರಂಗ ಸ್ವಾಮಿ, ಮೂಡ ಸ್ವಾಮಿ ಮಗ, ಚಾಂತಾರು ಗ್ರಾಮ, ಪೋಸ್ಟು ಬ್ರಹ್ಮಾವರ.	79	5	0
516/544	ಶ್ರೀನಿವಾಸ ನಾಯಕ, ನಾರ್ಣಪ್ಪ ನಾಯಕರ ಮಗ, ಬಾರಕೂರು, ಪೋಸ್ಟು ಬಾರಕೂರು.	134	1	0
585/54	ಮುತ್ತ ಮರಕಾಲ, ಮಂಜಯ್ಯ ಮರಕಾಲನ ಅಳಿಯ ನೆಡೂರು ಗ್ರಾಮ, ಪೋಸ್ಟು ಕೂರಾಡಿ.	13	8	0
591/54	ಮೂಡನರಂಗ ಸ್ವಾಮಿ, ಮೂಡ ಸ್ವಾಮಿ ಮಗ, ಚಾಂತಾರು ಗ್ರಾಮ, ಪೋಸ್ಟು ಬ್ರಹ್ಮಾವರ.	21	4	0
676/54	ಕೆ. ವೆಂಕಪ್ಪ ಹೆಗ್ಡೆ, ಕೆ. ರಾಮಣ್ಣ ಸೆಟ್ಟಿ ಅಳಿಯ ಚೆರ್ಕಾಡಿ ಗ್ರಾಮ, ಪೋಸ್ಟು ಪೇತ್ರಿ.	89	13	0
077/54	ಮಂಜಯ್ಯ ಸೆಟ್ಟಿ, ಪದ್ಮಯ ಸೆಟ್ಟಿ ಅಳಿಯ ಹಲ್ಲಾರು ಹಲ್ಲಾರು ಗ್ರಾಮ, ಪೋಸ್ಟು ತೆಕ್ಕಟ್ಟೆ.	355	5	0

Brahmavar, 11_2_1956. ಬಿ. ಭಾಸ್ಕರ ಸೆಟ್ಟಿ. ಏಜಂಟ್.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಹೆಣ್ಣೋ? ಹೊನ್ನೋ?

ಬರೆದವರು: ಶ್ರೀ ಕೆ. ಕೆ. ಶೆಟ್ಟಿ.

[ಸದ್ಯದಲ್ಲೇ ಪ್ರಕಟವಾಗಲಿರುವ ವರದಕ್ಷಿಣೆಯ ಕುರಿತಾದ ಚಿಕ್ಕ ವ್ಯಂಗ್ಯ ನಾಟಕದ ಕೆಲವು ದೃಶ್ಯಗಳು.]

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಎರಡನೇ ನೋಟ

(ಐದಾರು ವರ್ಷ ಕಳೆದ ಮೇಲೆ ಒಂದು ದಿನ ರೈಗಳು ವೆಂಕಪ್ಪ ಶೆಟ್ರ ಮನೆಗೆ ಮುಂಜಾನೆ ಬೇಗ ಎದ್ದು ಹೋದವರು ಸಂಜೆಯು ತನಕವೂ ಹಿಂದೆ ಬಾರದಿರುವುದರಿಂದ ಲಲಿತೆಯು ಚಿಂತಾತುರದಿಂದ ಪಡಸಾಲೆಯ ಗೋಡೆಗೊರಗಿ ಮೌನವಾಗಿ ಕುಳಿತಿರುವಳು. ಮನೆಗೆಲಸದ ಮುತ್ತಪ್ಪನ ಮಗಳು ಸುಬ್ಬಿಯು ಹತ್ತಿರದಲ್ಲೇ ಇರುವಳು. ಮುತ್ತಪ್ಪನು ಹೊರಗೆ ಬಿಟ್ಟ ಜಾನುವಾರುಗಳನ್ನು ಹಟ್ಟಿಗೆ ಸೇರಿಸಿ ಕಟ್ಟಿ, ಲಲಿತೆಯನ್ನು ಹುಡುಕುತ್ತಾ ಪಡಸಾಲೆಗೆ ಬರುವನು.)

ಮುತ್ತಪ್ಪ—ಇದೇ ನಮ್ಮ! ಇಡೀ ದಿನ ಕೂತು ಚಿಂತಿಸುವುದೊಂದೇ ಕೆಲಸವೆ? ಯಜಮಾನರು ಇನ್ನೂ ಬಂದಿಲ್ಲವೇ?

ಲಲಿತೆ—ಇಲ್ಲ; ಇನ್ನೂ ಇಲ್ಲ ಮುತ್ತಪ್ಪಣ್ಣ, ಅಣ್ಣ ಮತ್ತು ತಾಯಿಯೊಂದಿಗೆ ನನ್ನನ್ನೂ ಮೃತ್ಯುವು ಒಯ್ಯುತ್ತಿದ್ದರೆ ಎಷ್ಟು ಚೆನ್ನಾಗುತ್ತಿತ್ತು! ಈ ಪ್ರಾಯದಲ್ಲಿ ಪಪ್ಪನು ನನಗಾಗಿ ಪಡುತ್ತಿರುವ ಈ ವ್ಯಥೆ-ಸಂಕಷ್ಟವಾದರೂ ತಪ್ಪುತ್ತಿತ್ತು. 'ಅಣ್ಣನು ಹೇಗಾದರೂ ಬದುಕುವಂತಾಗಲಿ, ಬದಲಿಗೆ ಮೃತ್ಯುವು ನನ್ನ ಪ್ರಾಣವನ್ನು ಬಲಿ ತೆಗೆದುಕೊಳ್ಳಲಿ'ಯೆಂದು ಆತನ ಮೃತ್ಯು ಶಯ್ಯೆಯ ಬಳಿ ಕೂತು ದಿನ ದಿನ ಕ್ಷಣ ಕ್ಷಣ ಮಾಡುತಿದ್ದ ನನ್ನ ಆಂತರಿಕ ಪ್ರಾರ್ಥನೆಯನ್ನು ಭಗವಂತನು ಸಲ್ಲಿಸಲಿಲ್ಲ. ತನ್ನ ಏಕ ಮಾತ್ರ ಪುತ್ರ ರತ್ನದ ವಿಯೋಗ ಶೋಕದಿಂದ ತಾಯಿಯು ಕೊರಗಿ ಕೊರಗಿ ಕರಗಿಯೇ ಹೋದಳು. ತನಗೆ ಶಾಪಪ್ರಾಯವಾಗಿರುವ ನನ್ನಿಂದಾಗಿ ಪಪ್ಪ ಈಗ ಅನುದಿನ ವ್ಯಥೆ ಪಟ್ಟು ಪಟ್ಟು ಜೀವಂತ ಶವವಾಗುತ್ತಿದ್ದಾರೆ. ಸಾಲದೆ ಏಕ ಮಾತ್ರ ಪುತ್ರಿಯಿಂದ ಅವರು ಪಡುತ್ತಿರುವ ಸುಖ! ಕೊಡದು, ಸ್ತ್ರೀಯಾಗಿ ದೇವರು ಜನ್ಮ ಕೊಡಕೊಡದು, ವೆಂಕಪ್ಪಣ್ಣ. ಹೆತ್ತವರಿಗೆ, ಕುಟುಂಬಕ್ಕೆ, ಸಮಾಜಕ್ಕೆ ಅದೊಂದು ನಿರಂತರ ದುಃಖ, ಘೋರ ಶಾಪ.

ಮು—ಓ ದೇವರೇ! ಏನು ಮಾತಿದು ಲಲಿತಮ್ಮ! ನೀನು ಬಹಳ ಬುದ್ಧಿವಂತೆ—ನಿನ್ನನ್ನು ಪಡೆದ ರೈಗಳು ಭಾಗ್ಯಶಾಲಿಯೆಂದು ಭಾವಿಸಿದ್ದೆ. ತಿಳಿದವಳಾದ ನೀನೂ ಹೀಗೆ ಮಾತಾಡುವುದೇ ?

ಸುಬ್ಬಿ—ಮಾತಾಡುವುದು ಮಾತ್ರವೇ ಅಪ್ಪ? ನಿಮಗೇನು ಗೊತ್ತು ಹಾಗಾದರೆ? ಈಗ ಹಲವು ದಿನಗಳಿಂದ ಏಕಾಂತ ಚಿಂತೆಯಿಂದ ಲಲಿತಕ್ಕನೆಷ್ಟು ಸೊರಗಿದ್ದಾರೆಂದು ನೀವು ಗಮನಿಸಿಲ್ಲವೇ? ಯಜಮಾನರ ಇದಿರಲ್ಲಿ ನಕ್ಕು ನಲಿದು ನಟನೆ ಮಾಡುವರು. ಅವರ ಹಿಂದಿನಿಂದ ಸದಾ ವ್ಯಥೆ ಪಡುತ್ತಲೇ ಇರುವರು ಹೀಗಾದರೆ ಇವರಿಗೂ ಅಮ್ಮನದೇ ಗತಿ!

ಮು—ಛೆ! ಅಬದ್ಧ ಮಾತಾಡಬೇಡ ಸುಬ್ಬಿ. ದೇವರು ಲಲಿತಮ್ಮನಂತಹ ಕನ್ಯೆಗೆ ಚಿರಸೌಭಾಗ್ಯವನ್ನೀಯುವನೆಂಬುದರಲ್ಲಿ ನನಗೆ ಸಂದೇಹವಿಲ್ಲ. ಆದರೆ ಎಲ್ಲದಕ್ಕೂ ಕಾಲಬರಬೇಕು. ಅ ತನಕ ನಮಗೆ ತಾಳ್ಮೆಬೇಕು. ಆ ವೆಂಕಪ್ಪ ಸೆಟ್ಟರ ಮಗನ ನೆಂಟಸ್ತಿಕೆ ನಿಶ್ಚಯವಾಗಲು ಈಗ ಕೊಂಪೆರೆ ಬಂದದ್ದೇ ನಂತೆ ಲಲಿತಮ್ಮ? ನನ್ನೊಡನೆ ಏನನ್ನಾದರೂ ಮನ ಬಿಚ್ಚಿ ಹೇಳುವ ರೈಗಳು ಈಗ ಮಾತಾಡುವುದೇ ಇಲ್ಲ. ಯಾವಾಗಲೂ ಗಂಭೀರ ಮೌನ. ನನಗೂ ಅವರೊಡನೆ ಏನಾದರೂ ಕೇಳಲು ಈಗೀಗ ಹೆದರಿಕೆಯಾಗುವುದು. ಮೊದಲಿನ ಸಲುಗೆಯೇ ಇಲ್ಲ ಅವರಲ್ಲೀಗ.

ಸುಬ್ಬಿ—ತೊಂದರೆ ಮತ್ತೇನು— ಈ ಹಾಳು ವರದಕ್ಷಿಣೆ! ದಿನ ದಿನವೆಂಬಂತೆ ಆ ವೆಂಕಪ್ಪ ಶೆಟ್ಟರು ವರದಕ್ಷಿಣೆಯ ದರ ಏರಿಸುತ್ತಿರುವರಂತೆ. ಮೊದಲು ಆಗಾಗ ಬಂದು ಯಜಮಾನರಿಗೆ ಕಾಟ ಕೊಡುತ್ತಿದ್ದ ಅವರು ಈಗ ಈ ಮನೆಗೆ ಕಾಲಿಡುವುದಿಲ್ಲ. ಅವರ ಮಗನಿಗೇನೊ ಸರಕಾರದ ದೊಡ್ಡ ಚಾಕರಿಯಾಗಿದೆಯಂತೆ. ದೊಡ್ಡ ದೊಡ್ಡವರೆಲ್ಲಾ ಅವರಿಗೆ ಈಗ ಹೆಣ್ಣು ಕೊಡಲು ಮೇಲಾಡುತ್ತಿದ್ದಾರಂತೆ. ಹಾವಿರಗಟ್ಟಲೆಯಲ್ಲಿ ವರದಕ್ಷಿಣೆಯ ದರ ಏರಿಸುತ್ತಿರುವರಂತೆ.

ಮು—ಮೊದಲು ಅವರೇ ರೈಗಳನ್ನು ಒತ್ತಾಯಿಸಿ, ಎಲ್ಲವನ್ನೂ ನಿಶ್ಚೈಸಿ, ಮಗನ ವಿದ್ಯೆಯ ಖರ್ಚಿಗೆ ಹಣಸಹ ಕೊಂಡುಹೋಗಿರುವರಲ್ಲ?

ಲಲಿತೆ—ನಾನು ಪಪ್ಪನಿಗೆ ಮೊದಲೇ ಹೇಳಿದ್ದೆ. ವಿಪರೀತ ಮಾತಾಡುವವರನ್ನೂ, ಮಿತಿಮೀರಿ ಹೊಗಳುವವರನ್ನೂ ನಂಬಬಾರದೆಂದು. ಸಾಮಾನ್ಯವಲ್ಲ ಆ ವೆಂಕಪ್ಪ ಮಾವನ ನಾಲಗೆ! ಪಪ್ಪ ಅವರನ್ನೂ ನಂಬಿದರು; ವಿಶ್ವಾಸದಿಂದ ಉದಾರ ಸಹಾಯ ಮಾಡಿದರು. ಅವರು ಪಪ್ಪನ ಮುಂಗೈಗೆ ಬೆಲ್ಲತಾಗಿಸಿ, ಈಗ ಆಟವಾಡುತ್ತಿದ್ದಾರೆ. ಸರಕಾರದ 'ಆಸಿಸ್ಟಾಂಟ್ ಸರ್ಜನ್' ನೌಕರಿದೊರೆತಿರುವ ತನ್ನ ಮಗನನ್ನು, ಏಲಂ ಹಾಕುವ ಸೊತ್ತಿನಂತೆ, ವರದಕ್ಷಿಣೆಯ ಮಾರ್ಕೆಟಿನಲ್ಲಿ ಹರಾಜಿಗೆ ಹಾಕಿ ಅತಿ ಹೆಚ್ಚಿನ ಬೆಲೆ ಪಡೆಯಲು ಹೊರಟಿದ್ದಾರೆ.

ಮು.—ಹತ್ತು ಹೋಗಲಿ ಆ ವೆಂಕಪ್ಪ ಶೆಟ್ರು! ನಮ್ಮ ಜಾತಿಯಲ್ಲಿ ಅವರ ಮಗನೊಬ್ಬನೇ ಯೋಗ್ಯ ಯುವಕನಿರುವುದೇ? ಬೇರೆ ಒಳ್ಳೇ ತರುಣರೇ ಇಲ್ಲವೇ? ರೈಗಳೇಕೆ ಆ ನೆಂಟಸ್ತಿಗೇನೇ ಕಟ್ಟು ಬಿದ್ದು ನೇತಾಡುತ್ತಿರಬೇಕು. ನಿನ್ನಂತಹ ಕನ್ಯೆಗೆ ಯೋಗ್ಯ ಹುಡುಗನನ್ನು ನಾನು ಹುಡುಕಬಲ್ಲೆ. ನನಗೆ ಬಿಡಲಿ ಆ ಕೆಲಸ. ನಿಮಗೆ ಸಾಕಷ್ಟು ಅನುಕೂಲತೆ ದೇವರು ಕೊಟ್ಟಿದ್ದಾನೆ. ನಿನ್ನ ಗುಣ-ರೂಪವಂತೂ ಜನಜನಿತ ವಿಷಯ. ಈ ಪ್ರಾಯದಲ್ಲಿ ಯಜಮಾನರ ಬಳಿಯಲ್ಲೇ ನೀನು ಇರುವುದು ಅವಶ್ಯ. ಹಿಂದ ಮೇಲೆ ಮನೆ ಅಳಿಯನಾಗಿಯೇ ಇರುವ, ರೂಪ ಹಾಗೂ ಗುಣವಂತ ಸಾಮಾನ್ಯ ಹುಡುಗನೊಬ್ಬನು ದೊರೆತರೆ ಸಾಲದೆ? ಅದಕ್ಕೆಲ್ಲ ಇಷ್ಟೊಂದು ತೊಂದರೆ ಬೇಕೆ? ನನಗೆ ಅರ್ಥವೇ ಆಗುವುದಿಲ್ಲ ನಿಮ್ಮ ದೊಡ್ಡವರ ಸಂಗತಿ. ಬಡವರಾದ ನಮ್ಮಲ್ಲಿ ಈ ಗಲಾಟೆಯೇ ಇಲ್ಲ.

ಲಲಿತೆ—(ನಿಟ್ಟುಸಿರು ಬಿಟ್ಟು) ನನ್ನದೇನೂ ಅಡ್ಡಿಯಿಲ್ಲ ಮುತ್ತಪ್ಪಣ್ಣ ಅದಕ್ಕೆ. ನಾನು ಮದುವೆಯೇ ಆಗದೆ, ಪಪ್ಪನ ಬಳಿಯೇ ಜೀವನ ಸವೆಯಿಸಲು ಸಿದ್ಧಳು; ಮಾತ್ರವಲ್ಲ ಮದುವೆಗಿಂತಲೂ ಅದೇ ನನ್ನ ಪಾಲಿನ ದೊಡ್ಡ ಭಾಗ್ಯವೆಂದೆಣಿಸುವೆ. ಮದುವೆಯೇ ಸ್ತ್ರೀ ಜೀವನದ ಏಕ ಮಾತ್ರ ಉದ್ದೇಶವೆ? ಅದು ಬಿಟ್ಟರೆ ಸಮಾಜದಲ್ಲಿ ಅವರ ಕರ್ತವ್ಯ ಬೇರೊಂದಿಲ್ಲವೇ? ಅವಳ ಸೇವಾಕ್ಷೇತ್ರ ಇನ್ನೊಂದಿಲ್ಲವೇ? ಮದುವೆ ಮಕ್ಕಳ ವಿಚಾರವೇ ಇಲ್ಲದೆ ಆಜೀವ ಕನ್ಯೆಯರಾಗಿ ಅತ್ಯುತ್ತಮ ಸಮಾಜ ಸೇವೆ ಸಲ್ಲಿಸುತ್ತಿರುವ ಕ್ರೈಸ್ತ ಸನ್ಯಾಸಿನಿಯರೆಷ್ಟು ಮಂದಿಯಿಲ್ಲ! ಈಗೀಗ ಅಂತಹ ಹಿಂದು ಸನ್ಯಾಸಿನಿಯರೂ ಮುಂದೆ ಬರುತ್ತಿದ್ದಾರೆ.

ಮು.—ಛೆ! ಆ ಮಾತಾಡ ಬಾರದಮ್ಮ! ಅದಕ್ಕೆಂದೂ ನಾನೊಪ್ಪಲಾರೆ, ಮದುವೆಯಾಗಲೇ ಬೇಕು. ನೀವು ಮದುವೆ ಮಾಡಿಕೊಂಡು, ಮಕ್ಕಳು ಮರಿ ಪಡೆದು ಸೌಭಾಗ್ಯವಂತೆಯಾಗಿ ಸಂಸಾರ ಮಾಡಬೇಕಮ್ಮ. ಅದನ್ನು ರೈಗಳೂ ನಾನೂ ಕಣ್ಣುತುಂಬ ನೋಡಿ ಆನಂದಿಸಬೇಕು. ನಿನಗೊಬ್ಬ ಹುಡುಗ ಹುಡುಕಲು ಇಷ್ಟು ಕಷ್ಟವೇ? ಇದರ ಅರ್ಥವೇ ಆಗುವುದಿಲ್ಲ ನನಗೆ. ನಮ್ಮ ಜಾತಿಯಲ್ಲಿ ನೂರಾರು ಯೋಗ್ಯ ಹುಡುಗರಿಲ್ಲವೇ? ಇಲ್ಲದೇನು?

ಲಲಿತೆ—ಆದರೆ (ಕಣ್ಣುಗಳು ಅಶ್ರುಭರಿತವಾಗುವವು. ಕಂಠ ಬಿಗಿದು ಬರುವುದು).

ಮು.—ಆದರೆ ಏನಮ್ಮ? ಏನು ಹೇಳಮ್ಮ ನನ್ನೊಡನೆ ಬಾಯ್ಬಿಟ್ಟು. ನಾನು ನಿಮ್ಮವನೇ ಅಲ್ಲವೇ? ರೈಗಳೂ ಯಾವುದನ್ನೂ ನನಗೀಗ ತಿಳಿಸುವುದೇ ಇಲ್ಲ. ಅವರ ವರ್ತನೆಯೇ ಬದಲಾಗಿದೆ, ಯಾವಾಗಲೂ ಮೌನ-ಚಿಂತೆ-ವ್ಯಥೆ.

ಲಲಿತೆ—ನಿಮಗೆ ಪಪ್ಪನ ಮರ್ಜಿ ಗೊತ್ತಿಲ್ಲವೇ ಮುತ್ತಪ್ಪಣ್ಣ? ಅವರು ಗಂಭೀರ ವ್ಯಕ್ತಿಯವರು. ಮರ್ಯಾದೆಯೆಂದರೆ ಪ್ರಾಣ ಕೊಡುವವರು. ಈ ನೆಂಟಸ್ತಿಕೆಯಿಂದಾಗಿ ಅವರ ಸ್ವಾಭಿಮಾನಕ್ಕೆ ಪೆಟ್ಟಾಗಿದೆ, ಮರ್ಯಾದೆಗೆ ಕುಂದಾಗಿದೆ, ಪ್ರತಿಷ್ಠೆಗೆ ಧಕ್ಕೆ ತಗಲಿದೆ. ಅದನ್ನು ಅವರು ಸಹಿಸರು, ಎಂದೂ ಸಹಿಸರು. ಆ ಅಧಿಕ ಪ್ರಸಂಗಿ, ಕುತಂತ್ರಿ ವೆಂಕಪ್ಪ ಮಾವನೇ ಅದರ ಮೂಲಕಾರಣ, ಅವರಿಂದಾಗಿಯೇ ನಮ್ಮ ನೆಂಟಸ್ತಿಕೆ ಊರಲ್ಲೆಲ್ಲಾ ಹಬ್ಬಿ ಮನೆ ಮಾತಾಯಿತು. ಅದೀಗ ತಪ್ಪಿದರೆ ಪಪ್ಪನ ಅವಸ್ಥೆ ಏನಾಗುವುದೋ ಎಂಬ ಭೀತಿಯಿಂದ ನಾನು ತತ್ತರಿಸುತ್ತಿದ್ದೇನೆ. ಪ್ರತಿನಿತ್ಯ ಆ ದಯಾಮಯನ ಮುಂದೆ ಹೃದಯ ತೆರೆದಿಟ್ಟು ಮೊರೆಯಿಡುತ್ತಿದ್ದೇನೆ.

ಮು.—ಹಾಗಾದರೆ ನಿಮಗೆ ದೊಡ್ಡವರಿಗೆ ದುಡ್ಡೇ ಸರ್ವಸ್ವ. ಅವರೆದುರಲ್ಲಿ ಕೊಟ್ಟ ಮಾತಿಲ್ಲ, ಮಾಡಿದ ಉಪಕಾರವಿಲ್ಲ, ಗುಣ-ರೂಪ ಮನೆತನ-ಗೌರವ ಯಾವುದೂ ಇಲ್ಲವೇ ಲಲಿತಮ್ಮ?

ಲಲಿತೆ—ಇದ್ದರೆ ಹೀಗಾಗುತ್ತಿತ್ತೆ?

ಮು.—ದುಡ್ಡೊಂದಿದ್ದರೆ ಏನೂ ಆಗುತ್ತದೆಯೇ?

ಲಲಿತೆ—ಅದಕ್ಕೆ ಸಂದೇಹವಿದೆಯೇ?

ಮು—ಹಾಗಾದರೆ ಬೇಕಷ್ಟು ದುಡ್ಡು ಕೊಟ್ಟರೆ, ನಾಳೆಗೆ ಕಲೆಯ ಮುಖದ ನನ್ನ ಈ ಕುರೂಪಿ ಸುಬ್ಬಿಯಂತವಳನ್ನೂ ವೆಂಕಪ್ಪ ಶೆಟ್ಟರು ತನ್ನ ಮಗನಿಗೆ ಮದುವೆ ಮಾಡುವರೆ?

(ಹಠಾತ್ತಾಗಿ ಲಲಿತೆಯಲ್ಲೊಂದು ನವ ವಿಚಾರೋದಯವಾಗುವುದು. ಉಪಾಯ ಸೂಚಿತವಾಗುವುದು. ಪ್ರತೀಕಾರೇಚ್ಛೆಯಿಂದ ಅವಳ ಮುಖ ವಿವರ್ಣವಾಗುವುದು. ಅವಳು ಗಾಢ ಚಿಂತಾಮಗ್ನಳಾಗುವಳು. ಅಷ್ಟರಲ್ಲಿ ರೈಗಳ ಮೆಟ್ಟಿನ ಹೆಜ್ಜೆಯು ಸಪ್ಪಳವಾಗುವುದು. ಲಲಿತೆಯು ಒಡನೆ ಸುಪ್ರಸನ್ನತೆಯ ನಟನೆಯಿಂದ ಪಪ್ಪನನ್ನು ಎದುರುಗೊಳ್ಳಲು ಧಾವಿಸುವಳು. ಮುತ್ತಪ್ಪನು ತನ್ನ ಕೆಲಸಕ್ಕೆ ಹೋಗುವನು. ಸುಬ್ಬಿಯೂ ಅಡಿಗೆ ಮನೆಗೆ ಧಾವಿಸುವಳು. ರೈಗಳು ಬಂದು ಲಲಿತೆಯ ಮುಖವನ್ನೂ ನೋಡದೆ ಸುಯ್ಯೆಂದು ಬಿಸುಸುಯ್ದು ತನ್ನ ನಿಲುವಂಗಿ ಮುಂಡಾಸುಗಳನ್ನೆಲ್ಲ ತಾನೆ ತೆಗೆದಿಟ್ಟು ಚಾವಡಿಯ ದೊಡ್ಡ ಕಂಬಕ್ಕೊರಗಿ ಮೌನವಾಗಿ ಕುಳಿತುಬಿಡುವರು)

ಲಲಿತೆ—ಪಪ್ಪ, ಬಾಯಿಕೆರಿಗೇನು ತರಲಿ? ಶರ್ಬತು ಮಾಡಿ ಕೊಡಲೆ? ಊಟವಾದಿರುವಿರೇನು? ಈಗಲೇ ಸ್ವಲ್ಪ ಹಾಲು ತಂದುಕೊಡಲೆ? ಅಥವಾ ಕಾಫಿ ಮಾಡಿತರಲೆ?

ರೈ—ಯಾವುದೂ ಬೇಡಮ್ಮ ಲಲಿತ, ನನ್ನನ್ನು ನನ್ನಷ್ಟಕ್ಕೆ ಬಿಡು ನೀನು ಒಳಗೆ ಹೋಗು.

ಲಲಿತೆ—(ಸಂತಾಪ—ಕೋಪ—ನಿರಾಶ ಭಾವಗಳೆಲ್ಲ ಒಮ್ಮೆಯೇ ಉಕ್ಕೇರಿ ತಟನಿೂರಿ ಹರಿದು, ಧಾರೆಕಟ್ಟಿ ಕಣ್ಣೀರಿಳಿಯ ಹತ್ತುವುದು.) ಬಿಡಲ್ಲಾರೆ! ಪಪ್ಪ, ನಿಮ್ಮನ್ನು ನಿಮ್ಮಷ್ಟಕ್ಕೆ ನಾನೆಂದಿಗೂ ಬಿಡಲಾರೆ ನಿಮ್ಮ ಸುಖ ನನ್ನ ಸುಖ—ನಿಮ್ಮ ದುಃಖ ನನ್ನ ದುಃಖ—ನಿಮ್ಮ ಮಾನಾಭಿಮಾನ ನನ್ನ ಮಾನಾಭಿಮಾನ—ನಿಮ್ಮ ರಕ್ತದ ರಕ್ತ ನಾನು, ಮಾಂಸದ ಮಾಂಸ, ಜೀವದ ಜೀವದ ಜೀವ. ನಿಮ್ಮಷ್ಟಕ್ಕೆ ನಿಮ್ಮನ್ನು ಬಿಡುವುದೂ ಪ್ರಾಣ ಬಿಡುವುದೂ ಒಂದೇ, ನನಗೆ. ಬಿಡಿರಿ ಈ ವಿಷಯ. ನಾನಿದನ್ನು ಬಿಡಿಸುವೆ. ನಿಮ್ಮ ಮಾನಭಂಗಕ್ಕೆ ತಕ್ಕ ಪ್ರತೀಕಾರ ಮಾಡುವೆ. ನಿರ್ದಯ ಸಮಾಜಕ್ಕೆ ತಕ್ಕ ಪಾಠಕಲಿಸುವೆ. ನಾನೀಗ ಅಬಲೆಯಲ್ಲ ಸಬಲೆ-ನಾರಿಯಲ್ಲ ಹಟಮಾರಿ ನನ್ನ ಹಠ ಸಾಧಿಸಿಯೇ ಸಿದ್ಧ. ನೀವದಕ್ಕೆ ಅಡ್ಡಬರಬಾರದು. ಪಪ್ಪ, ಅಂಗಲಾಚಿ ಬೇಡಿಕೊಳ್ಳುತ್ತೇನೆ, ಸ್ವಲ್ಪಸಮಯ ನನನ್ನು ನನ್ನಷ್ಟಕ್ಕೆ ಬಿಡಿರಿ. ನಾನು ಹೇಳಿದಂತೆ ನಡೆಯಿರಿ. ಕೊನೆಗೆ ಎಲ್ಲ ಸರಿಹೋಗುವುದು. ನಿಮ್ಮ ಗೌರವ ಉಳಿಯುವುದು. ಮಾತ್ರವಲ್ಲ ಮೇಲೇರುವುದು. ನಮಗೆ ಆ ನೆಂಟಸ್ತಿಕೆಯೇ ಆಗುವುದು.

ರೈ—(ಸ್ತಂಭಿತರಾಗಿ ನೋಗವೆತ್ತಿ ಲಲಿತೆಯ ಕೆಂಪೇರಿ ಥಳ ಥಳ ಹೊಳೆವ ಮುಖನೋಡಿ) ಏನಮ್ಮ ಲಲಿತ, ಏನಾಗಿದೆ ನಿನಗೆ? ಆವೇಶಬಂದಂತೆ ಮಾತಾಡುತ್ತಿರುವೆ! ನಿನ್ನಿಂದೇನಾಯಿತು? ನೀನು ನನ್ನ ಮಾನ ಉಳಿಸುವುದೇ' ಆ ನೆಂಟಸ್ತಿಗೆ ಆಗುವುದೇ? ನಿನಗೇನೋ ಭ್ರಾಂತು ಹಿಡಿದಿದೆ, ಆ ಮೂರ್ಖನಿಗೆ ೩೬,೦೦೦ ವರದಕ್ಷಿಣೆ ಕೊಡಬೇಕಂತೆ. ಅದಕ್ಕಿಂತಲೂ ಹೆಚ್ಚು ಕೊಡಲು ಕೆಲವರು ಮೇಲಾಡುತ್ತಿರುವರಂತೆ. ನನಗೋಸ್ಕರ ಆ ಮಹಾನುಭಾವ ದೊಡ್ಡ ಉದಾರತೆತೋರಿಸುವುದಂತೆ 30,000 ವರದಕ್ಷಿಣೆ ಪೇಳಿ. ಪ್ರಕಾಶನಿಗೆ 40,000 ವರದಕ್ಷಿಣೆಯಲ್ಲದೆ, ಹೊಸ ಮೋಟಾರುಕಾರೊಂದನ್ನು ಕೂಡಾ ಉಡುಗೊರೆ ಕೊಡಲು ಒಂದು ಕಡೆಯವರು ಮುಂದೆಬಂದಿದ್ದಾರಂತೆ.

ಲಲಿತ—ಅದೇನೇ ಇರಲಿ ಪಪ್ಪ, ಆಪತ್ಕಾಲ ಉಪಾಯ ಮಾಡಿದ್ದೇನೆ. ದಯಮಾಡಿ ನನ್ನ ಮೇಲೆ ವಿಶ್ವಾಸವಿಡಿ. ಒಂದು ಪೈ ವರದಕ್ಷಿಣೆಯಿಲ್ಲದೆ "ದಮ್ಮಯ್ಯ ಹೆಣ್ಣು ಕೊಡಿ—ನಿಮ್ಮ ಮಗಳನ್ನು ನನ್ನ ಮಗನಿಗೆ ಕೊಟ್ಟು ಮರ್ಯಾದೆ ಉಳಿಸಿ—ಅಷ್ಟು ಮಾಡಿ ರೈಗಳೇ, ನಮ್ಮನ್ನೊಮ್ಮೆ ಈ ಅವಸ್ಥೆಯಿಂದ ರಕ್ಷಿಸಿರಿ, ನಿಮ್ಮ ಕಾಲು ಹಿಡಿಯುತ್ತೇನೆ, ಎಂದು ಇದೇ ವೆಂಕಪ್ಪ ಮಾವನು ನಿಮ್ಮ ಕಾಲಿಗೆ ಬೀಳುವಂತೆ ಮಾಡದಿದ್ದರೆ ನಾನು ಲಲಿತೆಯಲ್ಲ—ನಿಮ್ಮ ಮಗಳಲ್ಲ.

ರೈ—(ಮನಸ್ಸಿನಲ್ಲಿ ಸಂದೇಹಗೊಂಡು ಅಳುಕಿ) ನಿನ್ನ ಮಾತಿನ ತಲೆ ಬುಡವೇ ನನಗಾಗುವುದಿಲ್ಲವಲ್ಲ ಮಗು. ಅದೇಕೆ ಇಷ್ಟು ಉ

(೧೨ನೇ ಪುಟ ನೋಡಿರಿ)



ಬಾಲ ಗೋಪಾಲನಿಗಾಗಿ ನವನೀತ

(೨ನೇ ಪುಟದಿಂದ)

ದ ತಂದು ಅಲಂಕರಿಸಿ ಕೊಳ್ಳುವ ಪುಷ್ಪವಲ್ಲ. ಅದರ ಬಣ್ಣ ಬಗೆಯೆಲ್ಲ ನಮ್ಮ ಇಹ ಜೀವನದ ರೀತಿ ನೀತಿಗಳನ್ನು ಅವಲಂಬಿಸಿರುತ್ತದೆ. ಆದ್ದರಿಂದ ಶಿಶು ಸಾಹಿತ್ಯದ ಕಡೆಗೆ ತನುಮನಧನವಿತ್ತು ಸಚೇತನರಾಗಿ, ನವೀನರಾಗಿ, ಪವಿತ್ರ ರೀತಿಯಲ್ಲಿ ಸೇವೆ ಸಲ್ಲಿಸಬೇಕು.

ಶಾಂತಿನಿಕೇತನ, ಸಬರ್ಮತಿ ಮೊದಲಾದ ಆಶ್ರಮಗಳು ಉತ್ತರದಲ್ಲಿ ಶಿಶು ಸಾಹಿತ್ಯದ ಒರತೆಗಳಾಗಿದ್ದಂತೆ, ಕನ್ನಡ ನಾಡಿನಲ್ಲಿ ಕಾರಂತರಿಂದ ಏರ್ಪಟ್ಟಿದ್ದ ಮಕ್ಕಳ ಕೂಟಗಳೂ (ಪುತ್ತೂರಿನ) ಬಾಲವನವೂ ಹೇರಾಂತವು. ಈಚೆಗೆ ಶಿಶು ವಿಹಾರಗಳು ನಮ್ಮ ನಾಡಿನಲ್ಲಿ ಅನೇಕವಾಗಿ ಕಟ್ಟಿಕೊಂಡಿವೆ. ಇಂಥಾ ಮಕ್ಕಳ ಮಂದಿರ, ಮಂಟಪಗಳೆಲ್ಲ ಸಾಹಿತ್ಯದ ಮೂಲ ಸ್ಥಾನಗಳು. ಶಿಶು ಮಂದಿರಗಳಲ್ಲಿ ವಾತ್ಸಲ್ಯ ತುಂಬಿ ತುಳುಕುತ್ತಿದ್ದರೆ ಮಕ್ಕಳ ಪ್ರತಿಭೆಯು ಮಿಂಚು ಹರಿದಾಡುತ್ತಿರುತ್ತದೆ.

ಎಷ್ಟೋ ಮಕ್ಕಳು ಬರಹ ಕಲಿಯುವ ಮುನ್ನವೇ ಸಾಹಿತ್ಯ ಸೃಷ್ಟಿಗೆ ತೊಡಗುತ್ತಾರೆ. ಶಾಂತಿನಿಕೇತನದಲ್ಲಿ ಇಂಥ ನಿದರ್ಶನಗಳಿಗೆ ಲೆಕ್ಕವಿಲ್ಲ. ಗುರುವಿನ ಹೆಗಲ ಮೇಲಿದ್ದ ಬರಹಬಾರದಪುಟಾಣಿಶಿಷ್ಯರು ಹೇಳಿ ಬರೆಸಿದ ನಾಟಕಗಳನ್ನು ಆಯಾ ಮಾಸಗಳ ಪೌರ್ಣಮಿಯ ಹಬ್ಬಗಳಲ್ಲಿ ಆಗಾಗ್ಗೆ ಆಡಿ ತೋರಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ ಹೀಗೆ ನಮ್ಮ ಮಕ್ಕಳ ಶಿಕ್ಷಣ ಮಂದಿರಗಳಿಂದಲೂ ಶಿಶು ಸಾಹಿತ್ಯ ಹರಿದು ಬರಬೇಕು ಮತ್ತು ಸಾಹಿತಿಗಳು ಬೆಳೆದು ಬರಬೇಕು.

ಶಿಶು ಸಾಹಿತ್ಯಕ್ಕೆ ಇತ್ತೀಚೆಗೆ ವಾರ ಮತ್ತು ಮಾಸ ಪತ್ರಿಕೆಗಳು ತುಂಬಾ ನೆರವಾಗಿವೆ. ಇಂಗ್ಲೆಂಡಿನಲ್ಲಿ, ಅಮೇರಿಕದಲ್ಲಿ, ರಷ್ಯಾ ಮತ್ತು ಜಪಾನುಗಳಲ್ಲಿ ಇಡೀ ಪತ್ರಿಕೆಗಳೇ ಮಕ್ಕಳಿಗಾಗಿ ಪ್ರಕಟವಾಗುತ್ತಿವೆ. ಭಾರತದಲ್ಲಿ ಹಿಂದೀ, ಬಂಗಾಳೀ, ತಮಿಳು ಮತ್ತು ತೆಲುಗು ಭಾಷೆಗಳಲ್ಲೂ ಹಾಗು ಕನ್ನಡದಲ್ಲೂ ಮಕ್ಕಳ ಮಾಸ ಪತ್ರಿಕೆಗಳಿವೆ ಆದರೂ ಹಿಂದಿಯ ಮಕ್ಕಳ ಸಾಹಿತ್ಯದ ಸಮಭುಜವಾಗಿ ಕನ್ನಡ ಮಕ್ಕಳ ಸಾಹಿತ್ಯ ನಿಲ್ಲುವಂತಿಲ್ಲ.

ಕನ್ನಡಿಗರಿಗೆ ಉತ್ಸಾಹವಿಲ್ಲವೆನ್ನೋಣವೇ? ತಮ್ಮ ಮಕ್ಕಳನ್ನು ತಿದ್ದುವುದರಿಂದಾಗುವ ಲಾಭ ಅವರಿಗೆ ಅರಿವಾಗಿಲ್ಲವೆ? ವಯಸ್ಕರ ವಿದ್ಯಾಭ್ಯಾಸ ಸಮಿತಿಯವರು ಪ್ರಕಟಿಸುತ್ತಿರುವ ಹಲವಾರು ಪುಸ್ತಕಗಳು ಮಕ್ಕಳ ಮಟ್ಟದ ಮನದ ಹಿರಿಯರಿಗೆ ಹೇಗೋ ಹಾಗೆ ಮಕ್ಕಳಿಗೂ ರುಚಿಕರವಾಗಿವೆ. ಆದರೆ ನೇರವಾಗಿ ಮಕ್ಕಳಿಗಾಗಿ ಸಚಿತ್ರವಾದ ಪ್ರಕಟಣೆಗಳು ಸಾಕಾದಷ್ಟು ಇಲ್ಲ.

ಶಿಶು ಸಾಹಿತ್ಯವು ಹಿರಿಯರ ಸಾಹಿತ್ಯಕ್ಕೇನೂ ಹೊರತಲ್ಲ. ಅದು ನಾಡಿನ ಸಂಸ್ಕೃತಿಯ ಪ್ರತಿಫಲವು ಹೇಗೋ ಹಾಗೆ ಹಿರಿಯರ ಸಾಹಿತ್ಯದ ಪ್ರತಿಬಿಂಬವೂ ಹೌದು. ಇದು ಬೆಳೆದರೆ ಅದು ಬೆಳೆಯುತ್ತದೆ. ಮಕ್ಕಳ ಆಟದ ವಿಮಾನಕ್ಕೂ ನಿಜವಾದ ವಿಮಾನಕ್ಕೂ ಯಾವ ವ್ಯತ್ಯಾಸವುಂಟೋ ಅಷ್ಟೇ ವ್ಯತ್ಯಾಸ ಇಲ್ಲೂ ಇರುತ್ತದೆ.

ನಮ್ಮದು ರೈತ ಜನಾಂಗವಾದರೆ ಮಣ್ಣು ಮತ್ತು ನೇಗಿಲ ಕಥೆ ಕವನಗಳು ನಮಗೆ ಹೆಚ್ಚಾಗಿ ಬೇಕು. ವ್ಯಾಪಾರಿ ಜನಾಂಗವಾದರೆ ಅದಕ್ಕೆ ತಕ್ಕ ಪೋಷಕ ಸಾಹಿತ್ಯವಿರಬೇಕು – ಹಿರಿಯರಿಗಾಗಿ, ಕಿರಿಯರಿಗಾಗಿ! ನಮಗೆ ಇಂದಿನ ತನಕ ಹೆಚ್ಚು ಪರಿಚಿತವಾಗಿರುವ ಆಂಗ್ಲ ಸಾಹಿತ್ಯದಲ್ಲಿ ಎಲ್ಲಾ ಬಗೆಯ ಕವಿತೆ ಕಥನಗಳು ಕಂಡುಬರುತ್ತವೆ. ಆ ಜನಾಂಗದ ಸಂಸ್ಕೃತಿ ಹಾಗೆ ಆ ನಾಡಿನ ಸರ್ವೋದಯದ ಫಲ ಮತ್ತು ಹಲವು ಜನಾಂಗಗಳ ಸಂಗಮದ ಫಲ!

ಸಾಹಿತ್ಯವು ಕೇವಲ ಪರಿಷತ್ತುಗಳ ಫಲ ಹೇಗಲ್ಲವೋ ಹಾಗೇ ಶಿಶು ಸಾಹಿತ್ಯವು ಕೇವಲ ಬಾಲ ಮಂದಿರ ಮಂಟಪ ವಿಹಾರಗಳ ಫಲವಲ್ಲ. ಪ್ರತಿಯೊಬ್ಬ ತಾಯಿಯೂ, ತಂದೆಯೂ, (ಅಹಂಭಾವ ರಹಿತರಾದ) ಸಾಹಿತಿಗಳೇ ಸರಿ. ಅಂತೇ ಮಕ್ಕಳಲ್ಲಿ ವಾತ್ಸಲ್ಯವುಳ್ಳವರೆಲ್ಲ ಮಕ್ಕಳ ಸಾಹಿತ್ಯ ಕಾರರು ಶ್ರೀ ಜವಾಹರಲಾಲ್ ನೆಹರೂರವರು ಅತೀವಕಾರ್ಯನಿರತರು; ಹಾಗಾದರೂ ಅವರು ಮಕ್ಕಳನ್ನು ಮರೆತಿಲ್ಲ. ಅವರ ಬರೆಹಗಳೆಲ್ಲದರ ನಡುವೆ ಅವರ ಮಗಳು ಶ್ರೀ ಇಂದಿರಾಗೆ ಬರೆದ ಕಾಗದಗಳ ಪುಸ್ತಕವೇ ಪ್ರಪಂಚಕ್ಕೆ ತುಂಬಾ ಪ್ರಿಯವಾಗಿದೆ.

ಕೆಲವರಾದರೋ ಸಾಹಿತ್ಯ ನಿರ್ಮಾಣವನ್ನೇ ತಮ್ಮ ಜೀವನದ ಪರಮಧ್ಯೇಯವೆಂದು ಭಾವಿಸುತ್ತಾರೆ. ಅವರಿಂದ ಯಾವ ಬಗೆಯ ಸಾಹಿತ್ಯವಾದರೂ ನಿರ್ಮಾಣವಾಗಬಹುದು ಇತರ ಬಗೆಯ ಸಾಹಿತ್ಯಕ್ಕೆ ಹೇಗೋ ಹಾಗೆ ಮಕ್ಕಳ ಸಾಹಿತ್ಯಕ್ಕೂ ವಿಶ್ವವಿಶಾಲ ಪಾಂಡಿತ್ಯವಿರಬೇಕು. ಆದರೆ ಇಲ್ಲಿನ ತನಕ ಶಿಶು ಸಾಹಿತ್ಯವು ಮನ ಮೆಚ್ಚುವಷ್ಟು ಬೆಳೆದಿಲ್ಲ

ಶಿಶು ಸಾಹಿತಿಯು ತಾನು ಬಳಸುವ ಭಾಷೆಯನ್ನು ಚೆನ್ನಾಗಿ ಬಲ್ಲವನಾಗಿರಬೇಕು. ಮಗುವಿನ ವಾತಾವರಣವನ್ನು ಹೊಕ್ಕು ಬಳಸುವಂಥವನಾಗಿರಬೇಕು. ಶಿಶು ಸಾಹಿತ್ಯದ ಭಾಷೆಯು ಗ್ರಾಮ್ಯವಾದ ಹರುಕು ಮುರುಕು ಪದಗಳಿಂದ ತುಂಬಿರಬೇಕಾಗಿಲ್ಲ. ಮಗುವು ಸುಲಭವಾಗಿ ಉಚ್ಚರಿಸಬಹುದಾದ ಪದಗಳಲ್ಲಿ ಪ್ರಾಸ ಜೋಡಿಸಿದ ಮಾತುಗಳಲ್ಲಿ ಲಯ ಬದ್ಧವಾದ ಸಾಲುಗಳಿದ್ದರೆ ಸಾಕು

ಸುಲಭವೆಂದ ಮಾತ್ರಕ್ಕೆ ಮಗುವಿನ ಶಕ್ತಿಯನ್ನು ಅಲ್ಲಗಳೆಂತಾಗದಿರಲಿ! ಮಕ್ಕಳಲ್ಲಿ ಮಹಾಶಕ್ತಿ ಅಡಗಿರುತ್ತದೆ. ಸುತ್ತಣ ಜನಗಳನ್ನು ನೋಡಿ ಮಕ್ಕಳು ಅನುಕರಿಸುತ್ತವೆ. ಆದ್ದರಿಂದ ಮಕ್ಕಳ ಬಳಿ ಇರುವವರ ಭಾಷೆ ಚೆನ್ನಾಗಿರಲೇ ಬೇಕು.

ಹಾಗಾದರೆ ಶಿಶು ಸಾಹಿತ್ಯಕ್ಕೆ ಬೇಕಾದ ವಿಷಯಗಳೇನೇನು? ಬಹುಮುಖ್ಯವಾ ಶಿಶು ಸಾಹಿತ್ಯದಲ್ಲಿ ಹೂವು ಜೇನು. ಹಣ್ಣು. ಹಕ್ಕಿ, ಮೀನು, ಹಸು, ಹುಲಿ ಇತ್ಯಾದಿಗಳಿರಬೇಕು. ಹಾಗು ಕಿನ್ನರ ಕಿಂಪುರುಷರೂ ವೀರಾಧಿ ವೀರರೂ ಇರಬಹುದು. ಅವು ಮಗುವಿನ ಸಂಗಡ ಮಾತಾಡುವ ಹಾಗಿದ್ದರೆ ಇನ್ನೂ ಸೊಗಸು.

"ಕೂಗಿತೊಂದು ನೊಲ, ಬೇಕೆ ಹಸುರು ಹೊಲ"-ಎಂದ ಕೂಡಲೇ ಮಗು ಕೌತುಕದಿಂದ ಕೂತು ಕೇಳುತ್ತದೆ. "ದೊಡ್ಡ ಪಟ್ಟೆ ಹುಲಿ, ಕಾಡು ದಾರಿಯಲಿ"—ಎಂದರೆ ಆ ವೇಳೆ ಎಂದು ಅಚ್ಚರಿಯಿಂದ ಕಿವಿಗೊಟ್ಟು ಕೇಳುತ್ತದೆ. ನೋಡು, ಆ ಹುಲಿ ಹೇಳುತ್ತಿತ್ತು – "ಅಯ್ಯೋ ಅಪ್ಪ ಚಳಿ!" ಎಂದರೆ ಮಗು ನಗಬಲ್ಲುದು.

ಭಾವನಾಮಯ ವಿಚಾರಗಳೂ ಮಗುವಿಗೆ ಪ್ರಿಯ. ಬಡ ಕೂಸಪ್ಪ ಗಂಧರ್ವನ ವರದಿಂದ ಚಕ್ರವರ್ತಿಯಾದನೆಂದರೆ- ಮಗುವಿಗೆ ಆನಂದ. ಹೊಟ್ಟೆ ಬಟ್ಟೆಗಿಲ್ಲದವನು ಕೊನೆಗಾದರೂ ಚಕ್ರವರ್ತಿಯಾದನಲ್ಲ ಎಂಬಷ್ಟೇ— ಅದಕ್ಕೆ ಸಂತೋಷ!

ಶಿಶು ಸಾಹಿತ್ಯವೆಂದರೆ ಕೇವಲ ಪದ್ಯವೇ ಅಲ್ಲ. ಗದ್ಯದಲ್ಲಿ ಬರೆದ ಆತ್ಮಕಥೆ, ಅಣುಶಕ್ತಿಯ ಆವಿಷ್ಕಾರ, ಹೊಸ ಭಾವನೆಯ ನಿರ್ಧಾರಗಳೂ ಶಿಶು ಸಾಹಿತ್ಯಕ್ಕೆ ವಸ್ತುವಾಗಬಹುದು. ಹೊಯಿಸಳನ "ಹೂವಿನಹಾಸಿಗೆ" ಯ ಕಥೆಗಳು ಅಂಥವೆಂದು ಪ್ರೊಫೆಸರ್ ಶ್ರೀ ಮುಗುಳಿಯವರು ಹೇಳಿದ್ದಾರೆ. ಶ್ರೀ ಕುವೆಂಪುರವರ "ನನ್ನ ಗೋಪಾಲ" ಮತ್ತು ಶ್ರೀ ಸದಾಶಿವರ "ಮಕ್ಕಳೇ ದೇವರು" ಇಂಥ ನಾಟಕಗಳು ಇನ್ನೂ ಮುನ್ನೂ ಬೇಕಾಗಿವೆ.

ಶಿಶು ಸಾಹಿತ್ಯ ಪುಸ್ತಕಗಳೆಲ್ಲವನ್ನೂ ಮಕ್ಕಳು ತಮಗೆ ತಾವೇ ಓದಿಕೊಳ್ಳಲಾರದಿದ್ದಾಗ ಹಿರಿಯರು ಶ್ರಮವಹಿಸಿ ಓದಿ ಹೇಳಬೇಕು. ತಿಂಗಳು ತಿಂಗಳೂ ಕೊಂಚವಾದರೂ ಹಣ ಉಳಿಸಿ ಮಕ್ಕಳ ಪುಸ್ತಕ ಪತ್ರಿಕೆ ಮೊದಲಾದವನ್ನು ಕೊಂಡು ತರಬೇಕು. ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಮಾಡಬಲ್ಲ ಶುಭಶುಚಿ ಸಾಹಿತ್ಯವನ್ನು ಗೊತ್ತುಹಚ್ಚುವ ಯಾವುದಾದರೂ ಸಮಿತಿಯನ್ನು ರಚಿಸಬೇಕು. ಅಂಥಾ ಸಮಿತಿಯ ಒಪ್ಪಿಗೆ ಪಡೆದ ಶಿಶು ಸಾಹಿತ್ಯಕ್ಕೆ ಪುರಸ್ಕಾರವಿರಬೇಕು ಅಂತು ನಮ್ಮ ನಾಡಿನ ಶಿಶುಸಾಹಿತ್ಯ ಬೆಳೆಯಬೇಕು. ಅದಕ್ಕೆ ಪ್ರೋತ್ಸಾಹವೂ ಪೋಷಣೆಯೂ ಅತ್ಯಗತ್ಯ.

ನಮ್ಮನಾಡು ಬಾಲಗೋಪಾಲನ ಆಡುಂಬೊಲ; ಪಟಪತ್ರಶಾಯಿಯಾದ ಅನಂತ ಶಿಶುವಿನ ಜೀವಾಲಯ. ಇಲ್ಲಿನ ಮಹಾಭಾರತ ಮೊದಲಾದ ಮಹಾಕಾವ್ಯಗಳಲ್ಲೂ ಮಕ್ಕಳ, ಸವಿಯ ಒಲ್ಲ ಸಾಹಿತ್ಯ ನವನೀತವಿದೆ ಎಂದು ಪ್ರಾರಂಭದಲ್ಲಿಯೇ ಹೇಳಿದ್ದೇವೆ. ಇದರ ಪರಿಚಯದೊಂದಿಗೆ ದಿನದಿನಕ್ಕೂ ಹೊಸಹೊಸದಾಗುತ್ತಿರುವ ಪ್ರಪಂಚದ ವಿವಿಧ ಸನ್ನಿವೇಶಗಳ ತಿಳಿವಳಿಕೆಯೂ ಬೆಳೆಯುವ ಕಿರಿಯರಿಗೆ ಅವಶ್ಯ. ಆದುದರಿಂದ ಶಿಶು ಸಾಹಿತ್ಯವು ನವನವೀನವಾಗಿ ವಿವಿಧವಾಗಿ ಹರಿದು ಬರಲೇ ಬೇಕು.

ಕೇಂದ್ರ ಸರ್ಕಾರದ ನೇತಾರರಾದ ಶಿಶುಪ್ರಿಯರಾದ ನೆಹರೂ ಮೊದಲಾದವರೆಲ್ಲ ನಮ್ಮೊಂದಿಗೆ ಇರುವುದರಿಂದ ಇನ್ನು ಮುಂದೆ ಸಾಹಿತ್ಯ ಮಾತ್ರವಲ್ಲದೆ ಚಲಚ್ಚಿತ್ರಗಳೂ ಮಕ್ಕಳಿಗೆ ಮೀಸಲಾಗಿ ನಿರ್ಮಾಣವಾಗುತ್ತವೆಯೆಂದೂ ಅವು ಡಿಸ್ನೆಯ ಬ್ಯಾಂಬಿಗಿಂತ, ಜಪಾನಿನ ಯೂಕಿ ವಾರಿಸ್ಸಾವಿಗಿಂತ, ಬಹಳ ಉತ್ತಮವಾಗಿ ವಿಶಾಲ ಭಾರತದ ಹಾದಿಯನ್ನು ಸೂಚಿಸುತ್ತವೆ ಎಂತಲೂ ಆಶಿಸೋಣ! ರಮ್ಯವಾದ ಮಕ್ಕಳ ಪುಸ್ತಕಗಳು ಪ್ರಕಟವಾಗುತ್ತವೆ; ಭಾರತದ ಹದಿನಾಲ್ಕು ಭಾಷೆಗಳೂ ಮಕ್ಕಳನ್ನು ಮುಂದುಮಾಡಿಕೊಂಡು ಬಾಳಿಬೆಳೆಯುತ್ತವೆ; ಭಾವಿ ಭಾರತದಲ್ಲಿ ಶಿಶುಸಾಹಿತ್ಯವು ಅದಕ್ಕೆ ಸಲ್ಲಬೇಕಾದ ಪ್ರಥಮ ಸ್ಥಾನವನ್ನು ಗಳಿಸಿಕೊಳ್ಳುತ್ತದೆ; ಎಂದು ಹಾರೈಸೋಣ!

(ಜಾಸುಲಿಯ ಅನುಮತಿಯಿಂದ)

ಮಗುವಿನ ಬೇಡಿಕೆ

ಇದ್ದೇನಲ್ಲ ಇಲ್ಲೇ ನಾನು
ಪುಟಾಣಿ ಪುಟ್ಟ ಮಗು
ಎರಡೂ ಕೈಗಳ ಎತ್ತಿದ್ದೇನೆ
ಪುಟಾಣಿ ಪುಟ್ಟ ಮಗು! ॥ ೧ ॥

ಸೂರ್ಯನ ಕಳಿಸಿ ಹೂಗಳ ನಗಿಸಿ
ಬೆಳಕನು ಕೊಡುವೆ ಎಲೆ ತಂದೆ
ಹೊತ್ತಿನ ತಿಂಡಿ ಸುತ್ತುವ ಬಟ್ಟೆ
ಕೊಡುತೀಯಂತೆ ಎಲೆ ತಂದೆ ॥ ೨ ॥

ಅಪ್ಪ ಅಮ್ಮ ಹೇಳುವರೆಲ್ಲ
ನೀನೇ ತಂದೆ ನಮಗಂತೆ
ಎರಡೂ ಕೈಗಳ ಎತ್ತಿದ್ದೇನೆ
ಬೇಡುತ್ತಿದ್ದೇನೆ ಪುಟ್ಟ ಮಗು ॥ ೩ ॥

ಅಪ್ಪ ಅಮ್ಮ ಚೆನ್ನಾಗಿರಲಿ
ಲಾಲಿಸು ಬೇಡಿಕೆ ಎಲೆ ತಂದೆ
ತಂಗಿ ಪಾಪ ನಗುನಗುತಿರಲಿ
ಲಾಲಿಸು ಪಾಲಿಸು ಎಲೆ ತಂದೆ ॥ ೪ ॥

ಹಸುವೂ ಕರುವೂ ಹಾಯಾಗಿರಲಿ
ಮಳೆ ಬೆಳೆಯೆಲ್ಲ ಬರುತಿರಲಿ
ನೆರೆ ಹೊರೆಯೆಲ್ಲ ಸುಖವಾಗಿರಲಿ
ಬೇಡುತ್ತೇನೆ ಪುಟ್ಟ ಮಗು
ಪುಟಾಣಿ ಪುಟ್ಟ ಮಗು. ॥ ೫ ॥

— ಹೊಯಿಸಳ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ
ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು
ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

(೧ನೇ ಪುಟದಿಂದ)

ಹಿಡುವಳಿಯ ಪರಮ ಮಿತಿಯನ್ನು ಎರಡನೇ ಯೋಜನೆಯ ಅವಧಿಯಲ್ಲಿ ನಿರ್ಣಯಿಸಿ ಜಾರಿಗೆ ತರಬೇಕೆಂದು ಯೋಜನಾ ಆಯೋಗ ಸಂಕಲ್ಪಿಸಿದೆ. ಒಂದು ಕುಟುಂಬದ ಎಲ್ಲ ಸದಸ್ಯರೂ ಪಡೆದಿರಬಹುದಾದ ಒಟ್ಟು ಭೂಮಿಯನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಗಂಡ, ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಇವರೆಲ್ಲ ಕೂಡಿ ಕುಟುಂಬವಾಗುತ್ತಾರೆ. ಹಿಂದೆ ವ್ಯಾಖ್ಯಾನಿಸಿದ ಐದು ಮಂದಿ ಸದಸ್ಯರುಳ್ಳ ಕುಟುಂಬಕ್ಕೆ ಅನ್ವಯಿಸುವ ಹಿಡುವಳಿಯ ಮೂರು ಪಾಲಿನಷ್ಟನ್ನು ಒಂದು ಹಿಡುವಳಿಯ ಪರಮ ಮಿತಿಯಾಗಿ ಸ್ವೀಕರಿಸಬೇಕು. ಐದಕ್ಕಿಂತ ಹೆಚ್ಚು ಸದಸ್ಯರ, ಒಂದು ಕುಟುಂಬದಲ್ಲಿದ್ದರೆ ಆರು ಕೌಟುಂಬಿಕ ಹಿಡುವಳಿಯ ಗರಿಷ್ಠ ಮಿತಿಗೆ ಹೆಚ್ಚಾಗದಂತೆ ಈ ಪರಮ ಮಿತಿಯನ್ನು ವಿಸ್ತರಿಸಬಹುದು. ಭೂ ಸುಧಾರಣೆಯ ಸುಳಿವನ್ನು ಕಂಡುಕೊಂಡು ಇದರ ಪರಿಣಾಮಗಳನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಕಳೆದ ಕೆಲವು ವರ್ಷಗಳಲ್ಲಿ ನಡೆದಿರಬಹುದಾದ ಭೂಮಿಯ ಮಾಲಿಕತನದ ವರ್ಗಾವಣೆ ಇತ್ಯಾದಿ ವ್ಯವಹಾರಗಳ ಮೇಲೆ ಸರಕಾರ ಕಣ್ಣಿಟ್ಟು ಅವುಗಳು ಸುಧಾರಣೆಗೆ ಆತಂಕವಾಗದಂತೆ ನೋಡಿಕೊಳ್ಳಬೇಕೆಂದೂ ಯೋಜನಾ ಆಯೋಗ ನಿರ್ದೇಶಿಸಿದೆ.

ಕಾಫಿ, ಚಾ, ರಬ್ಬರು ಇತ್ಯಾದಿ ರೊಕ್ಕದ ಬೆಳೆಯ ತೋಟಗಳನ್ನೂ ಪ್ರತ್ಯೇಕ ಅಸ್ತಿತ್ವ ಪಡೆದಿರುವ ಹಣ್ಣು ಹಂಪಲಿನ ತೋಟಗಳನ್ನೂ, ಹೈನ, ಜಾನುವಾರು ಸಾಕಣೆ, ಉಣ್ಣೆಯ ಕೈಗಾರಿಕೆಗಳು ಪಡೆದಿರಬಹುದಾದ ವಿಶೇಷ ಹೊಲಗಳನ್ನೂ ಹಿಡುವಳಿಯ ಪರಮ ಮಿತಿಯ ಶಾಸನದಿಂದ ಹೊರತು ಪಡಿಸಬೇಕೆಂದು ಯೋಜನಾ ಆಯೋಗವು ಉದಾರ ಭಾವನೆಯಿಂದ ಹೇಳಿದೆ. ಸಕ್ಕರೆ ಕಾರ್ಖಾನೆಗಳು ತಮ್ಮ ವಶದಲ್ಲಿ ಪಡೆದಿರುವ ವಿಶಾಲವಾದ ಕಬ್ಬಿನ ತೋಟಗಳನ್ನು ಸಹ ಹೀಗೆ ವಿನಾಯತಿಗೆ ಗುರಿಪಡಿಸಬೇಕೇ ಎಂಬ ವಿಷಯ ಇನ್ನೂ ಪರ್ಯಾಲೋಚನೆಯಲ್ಲಿದೆ ಸ್ಥಳೀಯ ಪರಿಸ್ಥಿತಿಗಳಿಗನುಸರಿಸಿ ಸ್ವಲ್ಪ ಮಟ್ಟಿಗೆ ಹೆಚ್ಚು ಕಡಿಮೆ ಮಾಡಿ ಧೋರಣೆಯನ್ನು ಹೊಂದಿಸಿಕೊಂಡು ಹೋಗುವ ಸ್ವಾತಂತ್ರ್ಯವನ್ನೂ ಯೋಜನಾ ಆಯೋಗ ಕೊಟ್ಟಿದೆ. ಹಿಡುವಳಿಯ ಪರಮಮಿತಿಗಿಂತ ಹೆಚ್ಚಿನ ಭೂಮಿಯನ್ನು ವಶಪಡಿಸಿಕೊಂಡ ಬಳಿಕ ಇದರ ವಿತರಣೆಯಲ್ಲಿ ಸ್ವಂತ ಸಾಗುವಳಿಯ ನೆಪದಿಂದ ಧನಿಗೆ ಭೂಮಿಯನ್ನು ಬಿಟ್ಟುಕೊಡಬೇಕಾಗಿ ಬಂದ ಒಕ್ಕಲಿಗೆ ವಿಶೇಷ ಪ್ರಾಶಸ್ತ್ಯ ಕೊಡಲಾಗುತ್ತದೆ. ಅನಂತರ ಕ್ರಮವಾಗಿ ಆರ್ಥಿಕ ಹಿಡುವಳಿಗಿಂತಲೂ ಕಡಿಮೆ ಭೂಮಿಯನ್ನು ಹೊಂದಿದ ಒಕ್ಕಲಿಗೆ, ಭೂಮಿಯಿಲ್ಲದ ಕೃಷಿ ಕೆಲಸಗಾರರಿಗೆ ಪ್ರಾಶಸ್ತ್ಯವು ಸಲ್ಲುತ್ತದೆ

ಪ್ರತಿಯೊಬ್ಬ ಸಾಗುವಳಿದಾರನೂ ಕೃಷಿಯಲ್ಲಿ ಯೋಗ್ಯ ಮಟ್ಟವನ್ನು ಕಾಯ್ದುಕೊಂಡು ಹೋಗಬೇಕು; ಭೂಮಿಯ ಫಲವತ್ತತೆಯನ್ನು ಅವನು ಉಳಿಸಿಕೊಳ್ಳಬೇಕು; ನೆಲದ ಯೋಗ್ಯತೆಯನ್ನು ಆಯಾ ರಾಜ್ಯ ಸರಕಾರವು ಸುಮಾರು ಐದು ಅಂತಸ್ತುಗಳಲ್ಲಿ ನಿರ್ಣಯಿಸಿ, ಮೇಲ್ಮಟ್ಟ ಮುಟ್ಟಿದವರಿಗೆ ಪ್ರೋತ್ಸಾಹ ಹಾಗು ಕೆಳ ಮಟ್ಟ ಮುಟ್ಟಿದವರಿಗೆ ಎಚ್ಚರಿಕೆ ಕೊಡಬೇಕು; ಹಾಳು ಬಿದ್ದ ಸಾಗುವಳಿ ಯೋಗ್ಯ ಭೂಮಿಯನ್ನು ನಿರ್ದಿಷ್ಟ ಅವಧಿಯೊಳಗೆ ಸಾಗುವಳಿಗೊಳಪಡಿಸುವಂತೆ, ಕೃಷಿಯನ್ನು ಕೀಟಾಣು ಮತ್ತಿತರ ಬಾಧೆಗಳಿಂದ ರಕ್ಷಿಸುವಂತೆ, ಮತ್ತು ಸುಧಾರಿತ ಬೀಜ, ಗೊಬ್ಬರಗಳಿಂದ ಪೈರನ್ನು ಹುಲುಸಾಗಿ ಪೋಷಿಸುವಂತೆ ಸಾಗುವಳಿದಾರರ ಮೇಲೆ ಒತ್ತಾಯದ ಕ್ರಮ ಹೇರಬೇಕು—ಎಂದು ಮುಂತಾಗಿ ಸರಕಾರಗಳಿಗೆ ಯೋಜನಾ ಆಯೋಗವು ಕೃಷಿಯ ಮಟ್ಟದಲ್ಲಿ ಸಾಗುವಳಿದಾರರು ತೋರಿಸಬೇಕಾದ ದಕ್ಷತೆಯ ಬಗ್ಗೆ ಸಲಹೆ ಮಾಡಿದೆ. ಸಮಾಜ ವಿಕಾಸ ಯೋಜನೆ ಹಾಗು ರಾಷ್ಟ್ರೀಯ ವಿಸ್ತರಣೆಯ ಚಟುವಟಿಕೆ ನಡೆದಿರುವ ಭೂಭಾಗದಲ್ಲಿ ಈ ಮನ್ನೆಚ್ಚರಿಕೆಯ ಕ್ರಮಗಳನ್ನು ಪ್ರಥಮ ಪ್ರಾಶಸ್ತ್ಯವಿತ್ತು ವ್ಯವಹಾರದಲ್ಲಿಳಿಸಲು ನೋಡಬಹುದೆಂದು ಯೋಜನಾ ಆಯೋಗ ಭಾವಿಸಿದೆ.

(೧೦ನೇ ಪುಟ ದಿಂದ)

ದ್ವೇಗಗೊಂಡಿರುವೆ, ಸಂತಪ್ತಳಾಗಿರುವೆ. ಶಾಂತಳಾಗಮ್ಮ. ನನ್ನ ಜೀವವೊಂದಿದ್ದರೆ ನಿನಗೆ ಆ ಪ್ರಕಾಶನಿಗಿಂತಲೂ ಉತ್ತಮ ಹುಡುಗನನ್ನು ಮದುವೆ ಮಾಡುತ್ತೇನೆ. ನನ್ನ ಮನೆ ಮಾರೆಲ್ಲಾ ಮಾರಿ ಹೋಗಲಿ ಬೇಕಾದರೆ—ಆ ಪ್ರತಿಜ್ಞೆ ನಾನು ಮಾಡಿದ್ದೇನೆ. ಅದನ್ನು ಪಾಲಿಸಿಯೇ ಸಿದ್ಧ.

ಲಲಿತೆ—ಬೇಡ ಬೇಡ ಪಪ್ಪ ನೀವು ನನಗಾಗಿ ಈ ವರೆಗೆ ಪಟ್ಟ ಪಾಡೇ ಸಾಕು. ಇನ್ನೂ ಬೇಡ ನಿಲ್ಲಿಸಿರಿ. ಅದನ್ನು ನಾನು ಸಹಿಸಲಾರೆ, ಇನ್ನೂ ನೀವು ನನಗಾಗಿ ಪಾಡುಪಟ್ಟರೆ ನಾನು ಪ್ರಾಣಬಿಟ್ಟುಕೊಳ್ಳಲಾರೆ, ಇದು ಖಂಡಿತ, ಆದುದರಿಂದ ನೀವಿನ್ನು ಸುಮ್ಮಗಿದ್ದು ನಾನು ಹೇಳಿದ್ದಂತೆ ನಡಿಯಿರಿ. ಎಲ್ಲವೂ ಸರಿ ಹೋಗುವುದು. ಕೆಟ್ಟು ಕೊಳೆತು ನಾರುವ ವ್ಯಕ್ತಿಯಿಂದಾಗಲಿ, ಸಮಾಜದಿಂದಾಗಲಿ ಮುನಿಸಿಗೆದ್ದು ಪ್ರತೀಕಾರೋನ್ಮತ್ತಳಾದ ಸ್ತ್ರೀಯು ಯಾವ ಸಾಹಸಕ್ಕೂ, ಎಂತಹ ತ್ಯಾಗಬಲಿದಾನಕ್ಕೂ ಸಿದ್ಧಳು ಅದಕ್ಕೀಗ ನಾನು ಮುಂದಾಗಿದ್ದೇನೆ. ನೀವು ದಯಮಾಡಿ ಅಡ್ಡಬರಬೇಡಿರಿ. ನೆರವಾಗಿರೆಂದು ಬೇಡುತ್ತೇನೆ.

ರೈ - ನಾನೇನುಮಾಡಬೇಕೆಂದು ನೀನು ಹೇಳುವುದು ಮಗು?

ಲಲಿತೆ – ವೆಂಕಪ್ಪ ಮಾವನು ಎಷ್ಟು ಹಣ ವರದಕ್ಷಿಣೆ ಕೇಳುವನೋ ಆದಕ್ಕೊಪ್ಪಿರಿ. ಮೋಟಾರ್ ಕಾರು ಉಡುಗೊರೆ ಕೊಡುವೆನೆಂದೂ ತಿಳಿಸಿರಿ. ಮಗಳನ್ನು ಚಿನ್ನಾಭರಣಗಳಿಂದಲೇ ಮುಚ್ಚುವೆನೆನ್ನಿರಿ. ಮದುವೆ ಮಾತ್ರ ನೀವೇ ನಿಮ್ಮ ಮನೆಯಲ್ಲಿ ಮಾಡುವುದೆಂದು ಶರ್ತ ಹಾಕಿರಿ. ಅವರು ದಿಬ್ಬಣ ಬರಬೇಕು. ಕೂಡಲೇ ಕಾಗದ ಬರೆದು ಮುತ್ತಪ್ಪಣ್ಣನ ಮೂಲಕ ಕಳುಹಿಸಿರಿ. ಉಳಿದುದನ್ನೆಲ್ಲಾ ನನಗೆ ಬಿಟ್ಟು ನಿಶ್ಚಿಂತರಾಗಿರಿ.

ರೈ— ಆದೀತು. ನೀನು ಹೇಳಿದಂತೆಯೇ ಮಾಡುವೆನಮ್ಮ, ಒಮ್ಮೆ ಶಾಂತಳಾಗು. ಕಾತರ ಪಡಬೇಡ. ನನ್ನ ಬಾಯಾರಿದೆ. ಗಂಟಲೊಣಗಿದೆ, ಹಸಿವಾಗುತ್ತದೆ. ನನಗೇನಾದರೂ ತಂದುಕೊಡು.

ಲಲಿತೆ — ಕ್ಷಮಿಸಿರಿ ಪಪ್ಪ ತಪ್ಪಾಯಿತು. ನಾನು ತುಸು ಉದ್ವೇಗಗೊಂಡಿದ್ದೆ. ಆದರೆ ವಿವೇಕಗೆಟ್ಟಿಲ್ಲ. ಗಾಢವಿಚಾರಮಾಡಿ ನಿರ್ಧಾರಕ್ಕೆ ಬಂದಿರುತ್ತೇನೆ, ಉಪಾಯ ಕಂಡುಕೊಂಡಿದ್ದೇನೆ. ಧನ ಪಿಶಾಚಿಯನ್ನೂ ಹೃದಯ ರಹಿತ ಸಮಾಜವನ್ನೂ, ಪ್ರತಿಭಟಿಸದೆ, ನಿಷೇಧಿಸದೆ, ಆದರೆದುರು ಬಂಡಾಯ ಹೂಡದೆ ಗತ್ಯಂತರವಿಲ್ಲ. ಗಲಾಟೆಯಿಲ್ಲದೆ, ಯುಕ್ತಿಯಿಂದ ನಾನದನ್ನು ಸಾಧಿಸುವೆ . ನೋಡಿರಿ. ಆ ಮೇಲೆ ನೀವೇ ಶಾಭಾಸೆನ್ನುವಿರಿ.

ರೈ— ಆಯ್ತು ಮಗು, ನೈವೇದ್ಯ ಇದ್ದಂತಾಗಲಿ, ಈಗ ಒಳಗೆ ಹೋಗು ನನಗೆ ಸ್ವಲ್ಪ ಕೈಕಾಲು ಮುಖ ತೊಳೆಯಬೇಕು. ಬಚ್ಚಲಿಗೆ ಹೋಗಿ ಬರುತ್ತೇನೆ.

[ಮುಂದುವರಿಯುವುದು]

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಪಾಣಿನಿಸೂತ್ರವ್ಯಾಖ್ಯಾ—

(ದ್ವಿತೀಯ ಭಾಗ) ರಚಯಿತರು: ಮಣಲೂರು ವೀರ ರಾಘವಾಚಾರ್ಯ. ಪ್ರಕಾಶಕರು: ಮದ್ರಾಸು ಸರಕಾರದ ಪುರಾತನ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಬೆಲೆ: ರೂ. ೧೮—೦—೦.

ಪಾಣಿನಿಯು ಸಂಸ್ಕೃತ ವ್ಯಾಕರಣ ಕ್ಷೇತ್ರದಲ್ಲಿ ತನ್ನ ಕೈವಾಡವನ್ನು ತೋರಿಸಿ, ಸಂಸ್ಕೃತಾಭ್ಯಾಸಿಗಳಿಗೆ ಮಾಡಿರುವ ಮಹದುಪಕಾರವು ಎಲ್ಲರಿಗೂ ಗೊತ್ತಿರುವ ವಿಷಯ. ಆತನ ವ್ಯಾಕರಣ ಸೂತ್ರಗಳನ್ನು ಸುಲಭದಲ್ಲಿ ಅರ್ಥವಿಸಿಕೊಂಡು, ಪ್ರಯೋಗ ಜ್ಞಾನವನ್ನು ಸಂಪಾದಿಸಿಕೊಂಡು ಭಾಷಾಮಾಧುರ್ಯದಂತೆ ವ್ಯಾಕರಣ ಶುದ್ಧಿಯನ್ನೂ ಕಾಯ್ದುಕೊಂಡು ಹೋಗುವ ಉತ್ಸಾಹಕ್ಕೆ ಸಂಸ್ಕೃತಾಭ್ಯಾಸಿಗಳಲ್ಲಿ ಕೊರತೆಯಿರಲಿಕ್ಕಿಲ್ಲ. ಆದರೆ, ಇಂಥ ಉತ್ಸಾಹವು ವಿಪುಲ ಪ್ರಯತ್ನವನ್ನು ಅವಶ್ಯಕವಾಗಿ ಮಾಡುತ್ತದೆ. ಅಂಥವರ ಅಧ್ಯಯನ ಪೂರ್ವಕವಾದ ಪ್ರಯತ್ನವು ಯಶಸ್ಸನ್ನು ಪಡೆಯುವುದಕ್ಕೆ ಮದ್ರಾಸು ಸರಕಾರದವರ ಪರವಾಗಿ ಪ್ರಕಟವಾಗಿರುವ ಈ ಉದ್ಗ್ರಂಥವು ಬಹಳವಾಗಿ ನೆರವೀಯಬಲ್ಲುದು. ಗ್ರಂಥದ ಪ್ರಥಮ ಭಾಗವು ಮೊದಲೇ ಪ್ರಕಟವಾಗಿದೆ- (ಇದರ ವಿಮರ್ಶೆಯು "ನವಯುಗ" ದ ತಾ. ೧೬—೯—೫೪ನೇ ಸಂಚಿಕೆಯಲ್ಲಿ ಬಂದಿದೆ.) ಈ ದ್ವಿತೀಯ ಭಾಗವು ಭ್ವಾದಿಯಿಂದ ಲಿಂಗಾನುಶಾಸನದ ವರೆಗಿನ ಅಂಶಗಳನ್ನೊಳಗೊಂಡಿದೆ. ಪ್ರತಿಯೊಂದು ಸೂತ್ರದ ವಿವರಣೆಯನ್ನು ಅನೇಕ ಪ್ರಸಿದ್ಧ ಸಂಸ್ಕೃತ ಗ್ರಂಥಗಳಲ್ಲಿ ಬರುವ ವಾಕ್ಯಗಳನ್ನು ಎತ್ತಿ ಹೇಳಿ ಕೊಟ್ಟಿರುವುದೇ ಈ ಪುಸ್ತಕದ ಮುಖ್ಯ ವೈಶಿಷ್ಟ್ಯ. ಪ್ರಸ್ತುತ ಭಾಗದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾಗಬಹುದಾದ ಅನೇಕ ಅನುಬಂಧಗಳನ್ನು ಸೇರಿಸಲಾಗಿದೆ. ಸಂಸ್ಕೃತ ವ್ಯಾಕರಣ ಪ್ರಯೋಗಜ್ಞಾನ ಪ್ರಸಾರಕ್ಕೆ ಗ್ರಂಥದ ಎರಡೂ ಭಾಗಗಳ ಪ್ರಕಟಣೆಯಿಂದಾಗಿರುವ ಸಹಾಯವು ದೊಡ್ಡ ಮಣಭಾರವೆಂದರೆ ಅತ್ಯುಕ್ತಿಯಾಗದು.

ಪ್ರತಿಜ್ಞೆ—

ಅನುವಾದಿಕೆ: ಶ್ರೀಮತಿ ಬಿ. ಕೆ. ಸುಬ್ಬಲಕ್ಷ್ಮಿ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧—೮—೦.

ಹಿಂದಿಯ ಕಾದಂಬರಿ ಲೋಕದ ಸಾಮ್ರಾಟರೆನಿಸಿದ ದಿವಂಗತ ಪ್ರೇಮಚಂದರ ಸೊಗಸಾದ ಕಾದಂಬರಿಯೊಂದರ ಈ ಅನುವಾದವು ಚೆನ್ನಾಗಿ ಮೂಡಲ್ಪಟ್ಟಿದೆ. ಮೂಲಪ್ರಯೋಗಗಳನ್ನು ಆದಷ್ಟು ಹೆಚ್ಚು ಸೊಗಸಾಗಿ ಕನ್ನಡದಲ್ಲಿ ಕೊಡಲು ಮಾಡಿದ ಪ್ರಯತ್ನ ಸ್ತುತ್ಯಾರ್ಹವೇ ನಿಜ. ಸಮಾಜದಲ್ಲಿ ವಿಧವೆಯರು ಪಡುತ್ತಿರುವ ತೊಂದರೆಗಳ ನಿವಾರಣೆಗಾಗಿ ಆಶ್ರಮವೊಂದನ್ನು ತೆರೆದು ದುಡಿಯುವ ಯುವಕನ ಆದರ್ಶಜೀವನವೇ ಕಾದಂಬರಿಯ ವಸ್ತು. ಪಾತ್ರಪೋಷಣೆಯು ಆಕರ್ಷಕವೂ ಸತ್ವಯುತವೂ ಆಗಿ ಬಂದಿರುವುದಲ್ಲದೆ ಸಾಮಾಜಿಕರ ಮುಂದೆ ಪಾತ್ರಗಳು ಒಟ್ಟಿನಲ್ಲಿ ಉತ್ತಮ ವಿಚಾರಗಳನ್ನು ಮಂಡಿಸುತ್ತವೆ.

ಉಯ್ಯಾಲೆ—

ಬರೆದವರು: ಕೆ. ತಿಮ್ಮಣ್ಣ ಆಳ್ವ, ವಿಶಾರದ.
ಪ್ರಕಾಶಕರು: ಕುದ್ರೆಪ್ಪಾಡಿ ವಿಶ್ವನಾಥ ಶೆಟ್ಟಿ, ಮಾಯಿಪ್ಪಾಡಿ, ದಕ್ಷಿಣ ಕನ್ನಡ. ಬೆಲೆ: ರೂ. ೦—೬—೦.

ಇದು ಮಕ್ಕಳ ಓದಿಗೆ ಹೇಳಿಸಿದ ಚಿಕ್ಕ ಪದ್ಯಗಳಿಂದ ಕೂಡಿದ ಪುಸ್ತಕ. ಪ್ರಾಸಬದ್ಧವಾಗಿಯೂ ಅರ್ಥವತ್ತಾಗಿಯೂ ಭಾವಯುಕ್ತವಾಗಿಯೂ ಈ ಪದ್ಯಗಳಿವೆ. "ಹಿಂದು ಮುಂದಕೆ ಓಡಿ ಚೆನ್ನಾಗಿ ದೂಡಿ ಬಿಡುವಾಗ ಗಾಳಿಗೆ ತೇಲುವ ಗಾಡಿ" ಎಂದು ಉಯ್ಯಾಲೆಯನ್ನು ವರ್ಣಿಸುವಾಗ ನಾವು ನಿರೂಪಣೆಯ ಸರಳತೆಯಂತೆ ಅಲಂಕಾರದ ಬೆಡಗಿಗೂ ಮಾರುಹೋಗುತ್ತೇವೆ. "ಮನುಜನು ಕಾಸಿನ ಕಿಂಕರನಲ್ಲ, ಪ್ರೀತಿಗೆ ಎಂದೂ ಹಣ ಸರಿಯಲ್ಲ" ಎಂಬಲ್ಲಿಯ ತತ್ವಬೋಧೆಯು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಮಾಡುವಂತಿದೆ. "ಡೂಲಿ" ಎಂಬಂಥ ಅಭಿನಯಕ್ಕೆ ಹೇಳಿಸಿದ ಕವನಗಳಾಗಲೀ "ಕನಕ ದಾಸ"ದಂಥ ಕಥನ ಕವನಗಳಾಗಲೀ ಸಭಾತಫೇರಿ, ಕುಮ್ಮಿನೃತ್ಯ ಇತ್ಯಾದಿ ಮಕ್ಕಳಿಗೆ ಪ್ರಿಯವೆನಿಸುವ ಚಟುವಟಿಕೆಗಳಿಗೆಂದು ಬರೆದ ಪದ್ಯಗಳಾಗಲೀ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ, ಮುದ್ದಾಗಿವೆ. ಮೊಟ್ಟೆಯನ್ನು "ಬೆಳ್ಳಿಯ ಗಟ್ಟಿಯೋ" ಎಂದು ಕರೆದ ಈ ಕವಿಗೆ ಮಕ್ಕಳ ಮನೋಲೋಕದ ಪರಿಚಯ ಚೆನ್ನಾಗಿದೆ.

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

(ಬರೆದವರು: **ಕುಮಾರಸ್ವಾಮಿ**)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ನವಯುಗ ಪ್ರೆಸ್ ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 23—2—1956

ಸಂಚಿಕೆ ೨೫.
NO. 25

ರಾಜ ಸಂದರ್ಶನ

ಮೂರು ವಾರಗಳ ಸಂದರ್ಶನದ ಮೇಲೆ ಭಾರತಕ್ಕೆ ಇದೇ ೧೬ನೇ ದಿನ ಒಕ್ಕನೆರೆಯ ರಾಷ್ಟ್ರವಾದ ಇರಾನಿನ ರಾಜರೂ ರಾಣಿಯೂ ಆಗಮಿಸಿದ್ದಾರೆ. ಅವರೊಡನೆ ಇರಾನಿನ ಶಿಕ್ಷಣ ಮತ್ತು ಸಾಂಸ್ಕೃತಿಕ ಶಾಖೆಯ ಮಂತ್ರಿಗಳೂ ಆ ರಾಷ್ಟ್ರದ ಸಂಸತ್ತಿನ ಆರು ಮಂದಿ ಸದಸ್ಯರೂ ಇಬ್ಬರು ವೈದ್ಯರೂ ಆರು ಮಂದಿ ಸೈನಿಕ ಹಾಗು ಸಾಮಾನ್ಯ ಅಧಿಕಾರಿಗಳೂ ಇದ್ದಾರೆ. ಪಾಲಂ ವಿಮಾನ ನಿಲ್ದಾಣದಲ್ಲಿ ರಾಜವೈಭವದೊಡನೆ ಸ್ವಾಗತವನ್ನು ಪಡೆದ ಗಳಿಗೆಯಿಂದಲೇ ಅತಿಥಿಗಳಿಗೆ ಅಭ್ಯಾಗತ ದೇಶವು ಎಷ್ಟು ಗೌರವಾದರಗಳಿಂದ ತಮ್ಮನ್ನು ನೋಡುತ್ತಿದೆ ಎಂಬುದರ ತಿಳುವಳಿಕೆಯಾಗಿರುವುದು ಸಹಜ. ಭಾರತೀಯರಿಗಾದರೂ ಇರಾನಿನ ಜನರು ಸಹೋದರರೇ ಆಗಿರುವರೆಂಬ ನೆನಪಾಗದಿರದು.

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಅತಿಥಿಗಳಿಗಿತ್ತ ಭೋಜನ ಸಮಾರಂಭದಲ್ಲಿ ಹೇಳಿದಂತೆ ಸಾಮಾನ್ಯ ಭಾರತೀಯನಿಗೆ ಪ್ರಾಚೀನ ಕಾಲದಲ್ಲಿದ್ದ ಬಾಂಧವ್ಯ ಹಾಗು ಸ್ನೇಹ ಸಂಬಂಧದ ನೆನಪನ್ನು ಹುಟ್ಟಿಸಲು ಇರಾನ್ ಎಂಬ ಒಂದೇ ಹೆಸರು ಸಾಕು. ಚರಿತ್ರೆಯಲ್ಲಿಯೂ ಶ್ರೀ ಉಲ್ಲೇಖಗೊಳ್ಳುತ್ತಿರುವ ಹಿಂದಿನ ಆ ಕಾಲದಲ್ಲಿ ಭಾರತೀಯರೂ ಪರ್ಶಿಯನರೂ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದರು. ಮಧ್ಯ ಏಶ್ಯದಿಂದ ಹೊರಟ ಆರ್ಯ ಜನಾಂಗದ ಒಂದು ಕವಲು ಭಾರತವನ್ನು ಹೊಕ್ಕರೆ ಇನ್ನೊಂದು ಕವಲು ಇರಾನನ್ನು ಪ್ರವೇಶಿಸಿತು. ಆರ್ಯ ಸಂಸ್ಕೃತಿಯನ್ನೆ ಎರಡೂ ಕವಲುಗಳವರು ಎತ್ತಿ ಹಿಡಿದರು.

ಹಳೆಯ ಪಾಹ್ಲವಿ ಭಾಷೆಗೂ ವೇದದ ಭಾಷೆಗೂ ಇರುವ ಅತಿ ನಿಕಟ ಸಂಬಂಧವನ್ನು ನೋಡಿದರೆ ಇವೆರಡು ಭಾಷೆಗಳನ್ನಾಡುತ್ತಿದ್ದವರಿಗಿದ್ದ ಸಾಮ್ಯವು ಮನವರಿಕೆಯಾಗುತ್ತದೆ. ಇವತ್ತಿಗೆ ಸಹ ಹಿಂದಿ ಮುಂತಾದ ಆರ್ಯ ಭಾಷೆಗಳಲ್ಲಿಯಲ್ಲದೆ ತಮಿಳು, ತೆಲುಗು ಮುಂತಾದ ದ್ರಾವಿಡ ಭಾಷೆಗಳಲ್ಲಿ ಕೂಡಾ ಪಾರ್ಶಿ ಭಾಷೆಯಿಂದ ರೂಢಿಸಿಕೊಂಡ ಅನೇಕ ಶಬ್ದಗಳನ್ನು ಕಾಣಬಹುದು. ಋಗ್ವೇದದಲ್ಲಿ ಇರಾನಿನ ನಾಗರಿಕರನ್ನು ಪಾರಶೀತರೆಂದು ಕರೆದಿದೆ. ಇರಾನಿನ ಪವಿತ್ರ ಗ್ರಂಥವಾದ ಅವೆಸ್ತದಲ್ಲಿ ಭಾರತದ ಉಲ್ಲೇಖವಿದೆ. ಡರಾಯಸನ ಸಾಮ್ರಾಜ್ಯವು ಇರಾನಿನ ಈಗಿನ ಮೇರೆಯನ್ನು ಮೀರಿ ಸಿಂಧು ಮತ್ತು ಪಂಜಾಬುಗಳ ವರೆಗೆ ವಿಸ್ತರಿಸಿದ್ದಿತು. ಈ ಕಾಲದಲ್ಲಿ ಭಾರತ ಮತ್ತು ಇರಾನುಗಳ ನಡುವೆ ಅತಿ ಗಾಢವಾದ ಸಾಂಸ್ಕೃತಿಕ ಬಾಂಧವ್ಯ ಏರ್ಪಟ್ಟಿತು.

ಅನೇಕ ಬೌದ್ಧರು ಇರಾನಿನಲ್ಲಿ ಧರ್ಮ ಪ್ರಚಾರವನ್ನು ಮಾಡಿದರು. ಡರಾಯಸನ ಎತ್ತರ ಕಲ್ಲಿನಲ್ಲಿ ಶಾಸನವನ್ನು ಕೊರೆಸಿ ನಡಿಸುವ ಸಂಪ್ರದಾಯವನ್ನು ಕಂಡು ಅಶೋಕನು ಸಹ ಇದೇ ರೀತಿ ತನ್ನ ಸಂದೇಶವನ್ನು ಜನರಿಗೆ ಮುಟ್ಟಿಸಲು ಸಾಹಸಪಟ್ಟನು. ಗುಪ್ತರ ಕಾಲದಲ್ಲಿ ಬೌದ್ಧಧರ್ಮವು ಇರಾನಿನಲ್ಲಿ ಬಹಳ ಪೋಷಣೆಯನ್ನು ಹೊಂದಿತು ಈ ಕಾಲದಲ್ಲಿ ಎರಡೂ ರಾಷ್ಟ್ರಗಳಲ್ಲಿ ಸಾಂಸ್ಕೃತಿಕ ಆದಾನ ಪ್ರದಾನ ಕಾರ್ಯವು ನಡೆಯಿತು ಆಗಿನ ನಾಣ್ಯಗಳ ರಚನೆಯನ್ನೂ ಶಿಲ್ಪವನ್ನೂ ನೋಡಿದರೆ ಇದು ಸ್ಪಷ್ಟವಾಗುತ್ತದೆ. ಭಾರತದಲ್ಲಿ ಮುಸ್ಲಿಮರು ಕಾಲಿಡುವುದಕ್ಕೆ ಮುಂಚೆ ಇರಾನು ಮುಸ್ಲಿಂ ಸಂಸ್ಕೃತಿಗೆ ಅಧೀನವಾಯಿತು. ಇನ್ನೂ ಮುಸ್ಲಿಂ ಪ್ರಭಾವಕ್ಕೊಳಗಾಗದಿದ್ದ ಭಾರತಕ್ಕೆ, ಸುಮಾರು ಹನಿಮೂರು ಶತಮಾನಗಳ ಹಿಂದೆ, ಅನೇಕ ಪಾರ್ಸಿಗಳು ಓಡಿ ಬಂದು, ಆಶ್ರಯವನ್ನು ಇಲ್ಲಿ ಪಡೆದರು. ಈ ಪಾರ್ಸಿಗರಿಗೂ ಭಾರತೀಯರಿಗೂ ಅಗ್ನಿ ಪೂಜೆ, ಸೂರ್ಯಾರಾಧನೆ ಇತ್ಯಾದಿ ಸಂಪ್ರದಾಯಗಳಲ್ಲಿರುವ ವಿಶ್ವಾಸವನ್ನು ನೋಡಿದರೆ ಒಂದೇ ಮೂಲದಿಂದ ಕವಲೊಡೆದ ಜನಾಂಗವಿದೆಂದು ಪ್ರತ್ಯೇಕ ಹೇಳುವ ಅಗತ್ಯವಿಲ್ಲವಷ್ಟು.

ಮುಸ್ಲಿಂ ಪ್ರಭುತ್ವಕ್ಕೆ ಭಾರತವು ಒಳಪಟ್ಟಾಗ ಪಾರ್ಸಿಯು ಇಲ್ಲಿಯ ರಾಜಭಾಷೆಯ ಸ್ಥಾನವನ್ನು ಹೊಂದಿತು. ಫಿರ್ದೂಸಿ ಮುಂತಾದ ಪ್ರಸಿದ್ಧ ಕವಿಗಳು ಭಾರತೀಯರಿಗೆ ರಸದೌತಣವನ್ನು ಸಾಹಿತ್ಯ ಕ್ಷೇತ್ರದಲ್ಲಿ ಉಣಿಸಿದರು; ನೌರೋಜೇ ಮುಂತಾದ ಹಬ್ಬಗಳನ್ನು ಭಾರತೀಯರೂ ಅತಿ ಉತ್ಸಾಹದಿಂದ ಆಚರಿಸಹತ್ತಿದರು. ಪಾರ್ಸಿ ಭಾಷೆಯನ್ನಾಡುವುದೂ ಪಾರ್ಸಿ ಸಂಪ್ರದಾಯವನ್ನು ಅನುಸರಿಸುವುದೂ ಸುಶಿಕ್ಷಿತ ಭಾರತೀಯರಿಗೆ ಬಹಳ ಪ್ರಿಯವಾಗಿ ಪರಿಣಮಿಸಿತು. ಇರಾನಿನ ರತ್ನಗಂಬಳಿ, ಶಿರಾಜಿನ ಮಧುಪಾನ, ಪಾರ್ಸಿಕೊಲ್ಲಿಯ ಮುತ್ತು ಭಾರತೀಯರನ್ನು ಮುಗ್ಧಗೊಳಿಸಿದವು. ದೆಹಲಿ ಮತ್ತು ಆಗ್ರಗಳಲ್ಲಿ ಮುಸ್ಲಿಂ ಸಾಮ್ರಾಟರು ಕಟಿಸಿದ ಅದ್ಭುತ ಭವನಗಳನ್ನು ಪಾರ್ಸಿ ಸಂಸ್ಕೃತಿಯೊಡನೆ ಭಾರತೀಯ ಸಂಸ್ಕೃತಿಯು ಸಮರಸವಾಗಿ ಮಿಲನಗೊಂಡುದಕ್ಕೆ ನಿದರ್ಶನವಾಗಿ ತೋರಿಸಬಹುದು. ಫ್ರೆಂಚ್ ಮಹಾತ್ಮನೊಬ್ಬನ ಮಾತಿನಲ್ಲಿ ಹೇಳುವುದಾದರೆ ಈ ಕಟ್ಟಡಗಳೆಂದರೆ ಪಾರ್ಸಿ ಆತ್ಮವು ಮನೆ ಮಾಡಿ ಕೊಂಡಿರುವ ಭಾರತೀಯ ಶರೀರ.

ಭಾರತವೊಂದೇ ಇರಾನಿನ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಯಿತೆಂದು ಇದರ ಅರ್ಥವಲ್ಲ. ಕುಂಜನಾದ ತೈಮೂರನು ಭಾರತವನ್ನು ಸುಲಿದು ಮರಳಿದ ಬಳಿಕ ಇಲ್ಲಿಯ ಶಿಲ್ಪಿಗಳಿಂದ ಭಾರತೀಯ ಮಾದರಿಯ ಭವನಗಳನ್ನು ನಿರ್ಮಿಸಿದನು. ಇರಾನಿನಲ್ಲಿ ಕಂಡು ಬರುವ ಮನೋಹರವಾದ ಗುಮ್ಮಟ ಮತ್ತು ಕಮಾನುಗಳು ಸಾಂಸ್ಕೃತಿಕ ಮಿಲನದ ಸಾಕ್ಷಿಯಾಗಿ ನಿಲ್ಲುತ್ತವೆ. ಇರಾನಿನ ವರ್ಣಚಿತ್ರಕಲೆಯಾಗಲೀ ನೇಯಿಗೆ, ಕಸೂತಿ, ಮೂರ್ತಿಶಿಲ್ಪ ಮತ್ತಿತರ ಕಲೆಗಳಾಗಲೀ ಭಾರತದ ಸಂಬಂಧದಿಂದ ಪಾರ್ಶಿಗಳಿಗೆ ಪರಿಚಿತವಾದ ಸಾಂಸ್ಕೃತಿಕ ಮಹತ್ವದ ವಿಷಯಗಳೆಂದು ಇತಿಹಾಸಕಾರರ ಪ್ರಾಮಾಣಿಕವಾದ ಅಭಿಪ್ರಾಯ. ಆದರೆ ಇವೆಲ್ಲವೂ ಬ್ರಿಟಿಷರ ಆಡಳಿತ ಕಾಲದಲ್ಲಿ ಸ್ಥಗಿತಾವಸ್ಥೆಯನ್ನು ಮುಟ್ಟಿತು. ಅವರು ಗಡಿರಕ್ಷಣೆಗೆಂದು ವಹಿಸಿದ ಮುಂಜಾಗರೂಕತೆಯು ಉಭಯ ದೇಶಗಳ ನಡುವಿದ್ದ ಹೆಬ್ಬಾಗಿಲನ್ನು ಮುಚ್ಚಿಬಿಟ್ಟಿತು.

ಸ್ವಾತಂತ್ರ್ಯೋತ್ತರದಲ್ಲಿ ಎಲ್ಲರೊಡನೆಯೂ ಸ್ನೇಹ ಬಾಂಧವ್ಯವನ್ನು ಸ್ಥಾಪಿಸುವ ಭಾರತೀಯ ನಾಯಕರ ಉತ್ಸಾಹದ ಫಲರೂಪವಾಗಿ ಇರಾನಿನೊಡನೆ ಮಧುರ ಮೈತ್ರಿಯು ಪುನಃ ಏರ್ಪಟ್ಟಿದೆ. ಅನೇಕ ಸೌಹಾರ್ದ ನಿಯೋಗಗಳು ಉಭಯ ದೇಶಗಳ ನಡುವೆ ಪ್ರೀತಿಯನ್ನು ಪುನರುಜ್ಜೀವಿಸಿ ಹಳೆಯ ಸಂಬಂಧವನ್ನು ತಿರುಗಿ ನೆಲೆಗೊಳಿಸುವ ದೃಷ್ಟಿಯಿಂದ ಚೆನ್ನಾಗಿ ಉಳುಮೆ ಕೆಲಸವನ್ನು ಈಗಾಗಲೇ ಮಾಡಿವೆ ಸರಕಾರದ ನೆಲೆಯಿಂದಲೂ ಉಭಯದೇಶಗಳ ನಡುವೆ ಈಗ ವ್ಯಾಪಾರ ಮತ್ತು ನೌಕಾಯಾನ ಸಂಬಂಧದ ಒಪ್ಪಂದವೇರ್ಪಟ್ಟಿದೆ.

ಪ್ರಾಚೀನ ಕಾಲದಿಂದಲೂ ಇಂತಹ ವ್ಯಾಪಾರ ಸಂಬಂಧವು ಉಭಯ ದೇಶಗಳ ನಡುವೆ ಇತ್ತೆಂದು ಭಾವಿಸುವುದಕ್ಕೆ ಬಲವಾದ ಆಧಾರಗಳಿವೆ ಅಲಂಕೃತ ಮಣ್ಣಿನ ಪಾತ್ರೆಗಳು, ದಂತದ ಸಾಮಾನುಗಳು, ಭಾರತದ ದೃಶ್ಯಗಳ ಚಿತ್ರವಿರುವ ಕಡಿದ ಒಡವೆಗಳು ಇರಾನಿನಲ್ಲಿ ಸಂಶೋಧಕರಿಗೆ ಸಿಕ್ಕಿವೆ; ಅನುರೂಪ್ಯ ಹವಳುಗಳು, ಮುತ್ತುಗಳು ಮತ್ತು ಲೋಹಗಳು ಭಾರತದಲ್ಲಿ ಸಂಶೋಧಕರಿಗೆ ದೊರೆತಿವೆ ಭಾರತ ಮತ್ತು ಇರಾನುಗಳೊಳಗೆ ಆಗ ಯಾವ ಸರಕುಗಳ ಆಯಾತ, ನಿರ್ಯಾತ ವ್ಯಾಪಾರ ನಡೆಯುತ್ತಿತ್ತೆಂಬುದನ್ನು ಇದು ಸೂಚಿಸುತ್ತದೆ. ಭಾರತವು ನಿತ್ಯೋಪಯೋಗದ ವಸ್ತುಗಳಾದ ಸಂಬಾರ ಜೀನಸು, ಪರಿಮಳ ದ್ರವ್ಯ, ಬಟ್ಟೆಬರೆಗಳನ್ನು ಸಹ ಇರಾನಿಗೆ ಕಳಿಸುತ್ತಿದ್ದಿತು. ಇರಾನಿನಿಂದ ಕುದುರೆಗಳು, ಆಯುಧಗಳ ತಯಾರಿಕೆಗಾಗಿ ಬಹಳ ಶ್ರೇಷ್ಠ ದರ್ಜೆಯ ಲೋಹಗಳು ಭಾರತಕ್ಕೆ ಬರುತ್ತಿದ್ದವು

ಯುದ್ಧೋತ್ತರದಲ್ಲಿ ಸ್ವತಂತ್ರ ಭಾರತವು ಇರಾನಿಗೆ ಬಟ್ಟೆ ಬರೆ, ಸೈಕಲು, ಟಾಯರು, ಕಾಗದ, ರಸಾಯನ ದ್ರವ್ಯ, ಸುಗಂಧ ಪ್ರಸಾಧನ ದ್ರವ್ಯ, ವಿದ್ಯುದುಪಕರಣಗಳು, ಹೊಲಿಗೆ ಯಂತ್ರ ಇತ್ಯಾದಿಗಳನ್ನು ಪೂರೈಸುತ್ತದೆ. ಈ ನಿರ್ಯಾತ ವ್ಯಾಪಾರದ ಪ್ರಮಾಣವು ಗಣನೀಯವಾಗಿರಲ್ಲಿ ೨

(೧೬ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಜಯಶ್ರೀಯು ನಿಮ್ಮನ್ನಗಲದಂತೆ ನೋಡಿಕೊಳ್ಳಿರಿ.

ಪ್ರತಿ ವೇತನ ದಿನದಲ್ಲಿ ಕಿಂಚಿತ್ತಾದರೂ ಉಳಿಸಿರಿ. ಹಾಗೆ ಉಳಿಸಿದುದನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಉಳಿತಾಯ ಶಾಖೆಯಲ್ಲಿ ನಿಮಗಾಗಿ ಕಾರ್ಯವೆಸಗಲು ತೊಡಗಿರಿ.

ಗಂಡಾಂತರಗಳನ್ನೂ ಆಕಸ್ಮಿಕ ಸಂದರ್ಭಗಳನ್ನೂ ಎದುರಿಸಲು ಬೇಕಾಗುವ ಕ್ಷೇಮ ನಿಧಿಯನ್ನು ಕೂಡಿಸಲು ಸಾಮಾನ್ಯ ಗಂಡಸು ಅಥವಾ ಹೆಂಗಸಿಗೆ ಕ್ರಮ ಪ್ರಕಾರ ಉಳಿತಾಯ ಮಾಡಿಕೊಂಡು ಬರುವುದೇ ಸುಲಭ ಸಾಧ್ಯವಾದ, ನಿಜವಾದ ಮತ್ತು ಸುರಕ್ಷಿತವಾದ ಸಾಧನ.

ಬೊಂಬಾಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದು ಮತ್ತು ತಿರುಕೊಚ್ಚಿ ರಾಜ್ಯಗಳಲ್ಲಿರುವ ನಮ್ಮ 93 ಶಾಖಾ ಕಚೇರಿಗಳಲ್ಲಿ ಯಾವುದಾದರೊಂದರಲ್ಲಿ ಉಳಿತಾಯ ಲೆಖ್ಖವನ್ನು ತೆರೆಯಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

THE CANARA INDUSTRIAL & BANKING SYNDICATE LTD.

Estd: 1925] [Head Office: UDIPI, S. India.

ಬೆಳಕು ಹಾಗು ವರ್ಣ ವಿಭಜನೆ

ಬರೆದವರು: ಪ್ರೊ. ಕೆ. ಎಸ್. ನವಣಾರ್ಕ, ಎಂ. ಎಸ್ಸಿ.

ಅಂದು ಸಾಯಂಕಾಲ ರಾಮರಾಯರು ಮನೆಗೆ ಬಂದೊಡನೆಯೇ, ತಮ್ಮ ಮಗನಾದ ಕೃಷ್ಣನು ಈ ಮೊದಲೇ ಅವರಿಗೆ ಕೇಳಿದ ಪ್ರಶ್ನೆಗಳ ಉತ್ತರಗಳನ್ನು ಕುತೂಹಲದಿಂದ ವಿವರಿಸ ತೊಡಗಿದರು:

'ಸಾಮಾನ್ಯವಾಗಿ ನಾವು ಯಾವುದನ್ನು ಬೆಳಕೆಂದು ಕರೆಯುವೆವೋ ಅದು ನಿಜವಾಗಿಯೂ ಅನೇಕ ಬಣ್ಣಗಳ ಮಿಶ್ರಣವಾಗಿದೆ. ಉದಾಹರಣೆಗಾಗಿ—ನಾವು ಕಾಮನ ಬಿಲ್ಲಿನೊಳಗೆ ಕಾಣುವ ಎಲ್ಲ ಬಣ್ಣಗಳನ್ನೂ ಒಟ್ಟುಗೂಡಿಸಿದಲ್ಲಿ, ಮಿಶ್ರಣವು ಬಿಳಿದಾಗಿ ಕಾಣುವುದು; ವಿಚಾರ ಮಾಡಿದಲ್ಲಿ, ಬಿಳಿ ಎಂಬುದು ಪ್ರತ್ಯೇಕವಾದ ಬಣ್ಣವಿರದೆ, ಅನೇಕ ಬಣ್ಣಗಳ ಮಿಶ್ರಣವಿದೆ ಎಂದು ಕಂಡು ಬರುವುದು. ಸೂರ್ಯನಿಂದ ಬರುವ-ಹಸರು, ಕೆಂಪು, ಹಳದಿ, ಕಿತ್ತಳಿ, ನೀಲಿ ಇತ್ಯಾದಿ ಬಣ್ಣಗಳು ಕೂಡಿ ಬೆಳಕು ಎಂದು ಕರೆಯಲ್ಪಡುತ್ತವೆ. ಇಂತಹ ಮಿಶ್ರಣವು ನೀಲವರ್ಣದ ಕಾಜಿನಲ್ಲಿ ಹಾಯುವಾಗ—ಇಂತಹ ಕಾಜು ನೀಲೀ ಬಣ್ಣವನ್ನು ಹಾಯಲು ಬಿಟ್ಟು ಉಳಿದ ಬಣ್ಣಗಳನ್ನು ನುಂಗುತ್ತವೆ'.

'ಎಂದರೆ ಬೆಳಕು ಹಸರು ಬಣ್ಣದ ಕಾಜಿನಲ್ಲಿ ಹಾಯ್ದರೆ, ಇಂತಹ ಕಾಜು ಹಸರು ಬಣ್ಣವನ್ನು ಬಿಟ್ಟು ಉಳಿದ ಎಲ್ಲ ಬಣ್ಣಗಳನ್ನು ನುಂಗುವುದೆಂದು ತಿಳಿಯಬಹುದೋ?' ಎಂದು ಕೃಷ್ಣನು ಪ್ರಶ್ನೆ ಮಾಡಿದನು.

ರಾಮರಾಯರು 'ಅಹುದು' ಎಂದು ಉತ್ತರಿಸುವಷ್ಟರಲ್ಲಿಯೇ 'ಸಾಮಾನ್ಯವಾದ ಕಾಜಿನಲ್ಲಿ ಯಾವುದೇ ಬಣ್ಣವನ್ನು ನುಂಗುವ ಶಕ್ತಿಯಿಲ್ಲವಲ್ಲವೇ? ಮತ್ತು ಅದೇ ಪ್ರಕಾರ ಯಾವ ವಸ್ತುವಿಗೂ ಕೂಡ ತನ್ನದೇ ಆದ ಬಣ್ಣವೆಂಬುದು ಇಲ್ಲವಲ್ಲವೇ?' ಎಂದು ಕೃಷ್ಣನು ಪ್ರಶ್ನೆ ಮಾಡಿದನು.

'ನಿನ್ನ ಅಭಿಪ್ರಾಯವೇನು?' ಎಂದು ರಾಮರಾಯರು ಕೇಳಿದರು.

'ಎಲ್ಲ ಬಣ್ಣಗಳೂ ಬೆಳಕಿನಿಂದಲೇ ಬರುವುವಲ್ಲವೇ? ಈಗ ಒಂದು ಕಿತ್ತಳೆಯ ಹಣ್ಣು ಕಿತ್ತಳೆಯ ಬಣ್ಣದ್ದಾಗಿ ಕಾಣಲು, ಅದು ಕಿತ್ತಳೇ ಬಣ್ಣದ್ದಿದೆ ಎಂಬುದು ಕಾರಣವಿರದೆ—ಬೆಳಕಿನಲ್ಲಿ ಹಿಡಿದ ಕಿತ್ತಳೆಯ ಹಣ್ಣು ಉಳಿದ ಬಣ್ಣಗಳನ್ನು ನುಂಗಿ ಇದೊಂದೇ ಬಣ್ಣವನ್ನು ತಿರುಗಿ ಬಿಡುವುದೇ ಕಾರಣವು ಅಲ್ಲವೇ?' ಎಂದು ಕೃಷ್ಣನು ತನ್ನ ಅಭಿಪ್ರಾಯವನ್ನು ತಿಳಿಸಿದನು.

'ಅಹುದು ಕಿತ್ತಳೆ ಹಣ್ಣಿನ ಬಣ್ಣವು ಅದರ ಮೇಲೆ ಬೀಳುವ ಬೆಳಕಿನಲ್ಲಿಯೇ ಇದೆ. ಈಗ ಯಾವುದೊಂದು ವಸ್ತುವು ಉರಿಯ ತೊಡಗಿದೊಡನೆ ಅದು ತನ್ನದೇ ಆದ ವಿಶಿಷ್ಟ ಬಣ್ಣವನ್ನು ಹೊರಗೆ ಬಿಡುವುದು. ಸೂರ್ಯಗೋಲದಲ್ಲಿ ಬೇರೆ ಬೇರೆ ತರದ ವಸ್ತುಗಳು ಉರಿಯುತ್ತಿದ್ದು, ಅವುಗಳು ತಮ್ಮ ತಮ್ಮ ವಿಶಿಷ್ಟವಾದ ಬಣ್ಣಗಳ ಬೆಳಕುಗಳನ್ನು ಕಳುಹಿಸುತ್ತಿರುವವು. ಇವುಗಳ ಮಿಶ್ರಣವನ್ನೇ ನಾವು ಸಾಮಾನ್ಯವಾಗಿ ಬೆಳಕೆಂದು ಕರೆಯುತ್ತೇವೆ' ಎಂದು ರಾಮರಾಯರು ವಿವರಿಸಿದರು.

'ಹಾಗಾದರೆ ಬೆಳಕು ಎಂದರೇನು? ಧ್ವನಿಯ ತರಂಗಗಳು ಹವೆಯಲ್ಲಿ ಚಲಿಸುವ ರೀತಿಯಲ್ಲಿಯೇ ಬೆಳಕಿನ ತೆರೆಗಳೂ ಹವೆಯಲ್ಲಿ ಚಲಿಸುವವೇ?' ಎಂದು ಕೃಷ್ಣನು ಪ್ರಶ್ನೆ ಮಾಡಿದನು.

'ಇಲ್ಲ. ಬೆಳಕಿನ ತೆರೆಗಳು ಚಲಿಸುವ ವಾಹಕವನ್ನು ನಾವು ಈಥರ್ ಅಂತಾ ಕರೆಯುತ್ತೇವೆ. ಇಂತಹ ವಾಹಕವು ಎಲ್ಲ ಕಡೆಗೂ ಇದೆ. ಇದು ಈ ಕೋಣೆಯಲ್ಲಿ ತುಂಬಿದೆ, ಜಗತ್ತಿನಲ್ಲೆಲ್ಲವೂ ತುಂಬಿದೆ. ಇಲ್ಲಿನಿಂದ ಸೂರ್ಯನವರೆಗೆ ಹಾಗು ನಕ್ಷತ್ರಗಳ ವರೆಗೂ ಕೂಡ ಹಬ್ಬಿದೆ. ಅದು ಎಲ್ಲೆಡೆಗೂ ಇದೆ'. ಎಂದು ರಾಮರಾಯರು ವಿವರಿಸಿದರು.

'ಈಥರದ ಗುಣಧರ್ಮಗಳೇನು? ಅದು ಹೇಗೆ ಇದೆ?' ಎಂದು ಕೃಷ್ಣನು ತನ್ನ ಪ್ರಶ್ನೆಯನ್ನು ಮುಂದುವರಿಸಿದನು.

'ಯಾರಿಗೂ ಗೊತ್ತಿಲ್ಲ. ಅದನ್ನು ನೋಡಲು, ಮುಟ್ಟಲು, ರುಚಿಸಲು, ಮೂಸಿನೋಡಲು ಸಾಧ್ಯವಿಲ್ಲ; ಆದರೂ ಕೂಡ ಅದು ಇದೆ.' ಎಂದು ರಾಮ ರಾಯರು ಉತ್ತರಿಸಿದರು.

'ಹಾಗಾದರೆ ಅದು ಇದೆ ಎಂಬುದಾದರೂ ನಿನಗೆ ಹೇಗೆ ಗೊತ್ತು?' ಎಂದು ಕೃಷ್ಣನು ಅಂದನು.

'ಅದಕ್ಕೆ ಅನೇಕ ಕಾರಣಗಳು ಇವೆ. ನೀನು ಅಜ್ಞಾನದ ಅಭ್ಯಾಸವನ್ನು ಮಾಡಲು ಪ್ರಾರಂಭಿಸಿದಿ ಎಂದರೆ ಎಲ್ಲವೂ ತಿಳಿಯುವುದು ಆದರೆ ಇವುಗಳಲ್ಲಿಯ ಒಂದು ಕಾರಣವನ್ನು ಮಾತ್ರ ಈಗ ವಿವರಿಸುವೆನು ನಾವು ಯಾವುದನ್ನು ಬೆಳಕೆಂದು ಕರೆಯುವೆವೋ ಅದು ಒಂದು ತೆರದ ಆಂದೋಲನವಿದ್ದು ಆಂದೋಲನವೆಂದೊಡನೆ ಯಾವುದಾದರೂ ವಾಹಕವು ಹೊಯ್ದಾಡಲೇ ಬೇಕಲ್ಲವೇ? ಇಂತಹ ವಾಹಕವು ಹವೆಯು ಮಾತ್ರ ಅಲ್ಲ! ಏಕೆಂದರೆ, ನಮ್ಮನ್ನು ಸುತ್ತವರಿದ ಹವೆಗೆ ಮುಟ್ಟಲು ಕೂಡ ಸಾಧ್ಯವಿಲ್ಲದಂತಹ ಸೂರ್ಯ ಹಾಗು ನಕ್ಷತ್ರಗಳಿಂದ ಹೊರಟಂತಹ ಬೆಳಕು ನಮಗೆ ಬರುವುದಿಲ್ಲವೇ? 'ಎಂದು ರಾಮ ರಾಯರು ಉತ್ತರಿಸಿದರು.

'ಹವೆಯು ಎಲ್ಲಿಯ ವರೆಗೆ ಹಬ್ಬಿರುವದು?' ಎಂದು ಕೃಷ್ಣನು ಕೇಳಿದನು.

'ಪೃಥ್ವಿಯಿಂದ ನಾವು ಹಲವೇ ಮೈಲುಗಳಷ್ಟು ಮೇಲೆ ಹೋದೊಡನೆಯೇ, ಅದು ಅತ್ಯಂತ ವಿರಳವಾಗುವದು. ಇದೇ ಕಾರಣಕ್ಕಾಗಿ ನಮಗೆ ಎತ್ತರವಾದ ಗುಡ್ಡಗಳ ಮೇಲೆ ಉಸಿರಾಡುವುದೂ ಕೂಡ ಕಠಿಣದ್ದಾಗಿ ಪರಿಣಮಿಸುವುದು. ಹಾಗೆಯೇ ನಾವು ಮೇಲೆ ಮೇಲೆ ಮುಂದುವರಿದರೆ ನಮಗೆ ಉಸಿರಾಡಲು ಹವೆಯೇ ಉಳಿಯದು. ಆದರೆ ಈಥರ್ ಮಾತ್ರ ಎಲ್ಲ ಕಡೆಗೂ ಪಸರಿಸಿರುವುದು' ಎಂದರು ರಾಮ ರಾಯರು.

'ಈಥರ್‌ದಲ್ಲಿ ಚಲಿಸುವ ಬೆಳಕಿನ ಆಂದೋಲನಗಳು ಬಹಳೇ ವೇಗದಿಂದ ಮುಂದುವರಿಯುವವೋ?' ಎಂದು ಕೃಷ್ಣನು ಕೇಳಿದನು.

'ಅತಿಯಾದ ವೇಗದಿಂದ' ಎಂದು ರಾಮ ರಾಯರು ವಿವರಿಸತೊಡಗಿದರು. 'ಧ್ವನಿಗಿಂತಲೂ ಬೆಳಕು ವೇಗದಿಂದ ಚಲಿಸುವದು; ಇಷ್ಟೇ ಏಕೆ—ಬೆಳಕಿನ ವೇಗದಿಂದ ಯಾವುದೂ ಚಲಿಸದು. ಬೆಳಕು ನಮ್ಮ ಪೃಥ್ವಿಯನ್ನು ಒಂದು ಸೆಕಂಡಿನಲ್ಲಿ ೭ ಬಾರಿ ಸುತ್ತುವುದು ಎಂದು ಹೇಳಿದಲ್ಲಿ ನಿನಗೆ ಇದರ ಕಲ್ಪನೆಯು ಬರಬಹುದು. ನಿಜವಾಗಿಯೂ ಹೇಳುವುದಾದರೆ, ಬೆಳಕಿನ ವೇಗವು ಪ್ರತಿ ಸೆಕಂಡಿಗೆ ೧೮೬,೦೦೦ ಮೈಲುಗಳಷ್ಟಿದೆ.'

ವಿನೂ ಕಿರಿಯದವನಂತೆ ಕೇಳಲಿರುವ ಕೃಷ್ಣನನ್ನು ಕಂಡ ರಾಮ ರಾಯರು 'ವಿಜ್ಞಾನದ ವಿದ್ಯಾರ್ಥಿಯಾಗಬೇಕೆಂದು ನಿನ್ನ ಮನಸ್ಸಿನಲ್ಲಿ ಇದ್ದರೆ, ಇಂತಹ ದೊಡ್ಡ ದೊಡ್ಡ ಅಂಕೆಗಳಿಗೆ ನೀನು ರೂಢಿ ಮಾಡಿಕೊಳ್ಳಬೇಕಾಗುವುದು. ನಮ್ಮ ಸೂರ್ಯನು ಪೃಥ್ವಿಯಿಂದ ಎಷ್ಟು ಅಂತರದಲ್ಲಿ ಇರುವನು ಎಂಬುದು ನಿನಗೆ ಗೊತ್ತಿದೆಯೇ?' ಎಂದು ರಾಮ ರಾಯರು ಕೇಳಿದರು.

ಕೃಷ್ಣನು "ಇಲ್ಲ"ವೆಂದು ತಲೆಯನ್ನು ಅಲ್ಲಾಡಿಸಿದನು.

'ಇಲ್ಲಿ ನೋಡು. ಬೆಳಕಿಗೆ ಸೂರ್ಯನಿಂದ ಪೃಥ್ವಿಗೆ ಬರಲು ಸಾಧಾರಣವಾಗಿ ಎಂಟು ಮಿನಿಟುಗಳಷ್ಟು ವೇಳೆಯು ಹಚ್ಚುವದು; ಎಂದರೆ ಪೃಥ್ವಿ ಹಾಗು ಸೂರ್ಯ ಇವುಗಳೊಳಗಿನ ಅಂತರವು—೧೮೬,೦೦೦ × ೪೮೦, ಇಷ್ಟು ಮೈಲುಗಳಾಗುವದು' ಎಂದರು ರಾಮರಾಯರು.

'ಹಾ, ಇದು ಎಷ್ಟಾಗುವದು?' ಎಂದು ಕೃಷ್ಣನು ಕೆಳಗಿನಂತೆ ಗುಣಿಸತೊಡಗಿದನು.

```
  ೧೮೬೦೦೦
     ೪೮೦
 ───────
  ೦೦೦೦೦೦
 ೧೪೮೮೦೦೦
 ೭೪೪೦೦೦
 ───────
 ೮೯,೨೮೦,೦೦೦
```

'ಅಬ್ಬಾ! ಎಕೋಟಿ ೯೨ಲಕ್ಷ ೮೦ಸಾವಿರ ಮೈಲುಗಳೇ?' ಎಂದು ಕೃಷ್ಣನು ಆಶ್ಚರ್ಯದಿಂದ ನುಡಿದನು.

'ಈ ಅಂತರವು ನಿಜವಾಗಿಯೂ ೯ಕೋಟಿ ೩೦ಲಕ್ಷ ಮೈಲುಗಳಷ್ಟಿದೆ, ಏಕೆಂದರೆ ಬೆಳಕಿಗೆ ಸೂರ್ಯನಿಂದ ಇಲ್ಲಿಗೆ ಬರಲು ೮ಮಿನಿಟುಗಳಿಗಿಂತಲೂ ಹಲವು ಸೆಕುಂಡುಗಳಷ್ಟು ಹೆಚ್ಚು ವೇಳೆಯು ಬೇಕಾಗುವದು' ಎಂದು ರಾಮರಾಯರು ವಿವರಿಸಿದರು.

'ನಮಗೆ ಸೂರ್ಯನಿಂದಲೂ ದೂರವಿರುವ ಯಾವುದಾದರೂ ವಸ್ತುಗಳಿವೆಯೇ?' ಎಂದು ಆಶ್ಚರ್ಯಚಕಿತನಾದ ಕೃಷ್ಣನು ಕೇಳಿದನು.

'ಅಹುದು, ಎಲ್ಲ ನಕ್ಷತ್ರಗಳು ಸೂರ್ಯನಿಗಿಂತಲೂ ದೂರದಲ್ಲಿವೆ. ಅಲ್ಲಿಂದ ಹೊರಟ ಬೆಳಕು ಸೆಕಂಡಿಗೆ ೧೮೬,೦೦೦ ಮೈಲುಗಳ ವೇಗದಿಂದ ಇಲ್ಲಿಗೆ ಬರಲು ಅನೇಕ ವರುಷಗಳೂ ಹತ್ತಲಿವೆ. ಹಲವು ನಕ್ಷತ್ರಗಳಿಂದ ಹೊರಟ ಬೆಳಕು ಇಲ್ಲಿಗೆ ಮುಟ್ಟಲು ಸಾವಿರಾರು ವರುಷಗಳೂ ಬೇಕಾಗುವವು' ಎಂದು ರಾಮರಾಯರು ಹೇಳಿದೊಡನೆ, ಇದು ನಿಜವಿರಬಹುದೇ ಎಂಬ ಸಂದೇಹವು ಕೃಷ್ಣನಲ್ಲಿ ಮೂಡದೆ ಇರಲಿಲ್ಲ. ೧೦೦ ವರುಷಗಳಲ್ಲಿ ಬೆಳಕು ಎಷ್ಟು ಮೈಲುಗಳನ್ನು ಕ್ರಮಿಸಬಹುದು ಎಂಬುದನ್ನು ತಿಳಿಯಲು ಕೃಷ್ಣನು ಕೆಳಗಿನ ಗುಣಾಕಾರವನ್ನು ಬರೆದನು.

೬೦ × ೬೦ × ೨೪ × ೩೬೫ × ೧೦೦ × ೧೮೬,೦೦೦ ಮೈಲುಗಳು.

'ಅಬ್ಬಾ!' ಈ ಲೆಖ್ಖವನ್ನು ಮತ್ತೊಂದು ದಿನ ಮಾಡುವುದೆಂದು ಮನಸ್ಸಿನಲ್ಲಿ ವಿಚಾರಮಾಡಿ, ತಂದೆಗೆ ಈ ರೀತಿಯಾಗಿ ಕೇಳಿದನು-

'ಸೂರ್ಯನಿಂದ ಬಂದ ಬೆಳಕು ಅನೇಕ ಬಣ್ಣಗಳ ಮಿಶ್ರಣವಾದರೆ—ಈ ಬೇರೆ ಬೇರೆ ಬಣ್ಣದ ಕಿರಣಗಳು ಅದೇ ವೇಗದಿಂದ ಚಲಿಸುವವೇ?'

'ಇವುಗಳೆಲ್ಲವೂ ನಾನು ಈ ಮೊದಲೇ ಹೇಳಿದಂತೆ ಸೆಕಂಡಿಗೆ ೧೮೬,೦೦೦ ಮೈಲುಗಳ ವೇಗದಿಂದ ಚಲಿಸುವವು' ಎಂದು ರಾಮರಾಯರು ಹೇಳಿದರು.

(೧೦ನೇ ಪುಟ ನೋಡಿರಿ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: ಡಾಕ್ಟರ್ ಕೊರಡಕ್ಕಲ್ ವೆಂಕಟ್ರಾವ್, ಎಲ್. ಐ. ಎಮ್

"Ably written—Quite up-to-date valuable service"

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್.

ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.

ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೩—೦—೦ (ಟ. ಖರ್ಚು ಬೇರೆ).

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕಭಂಡಾರ, ಉಡುಪಿ.

ವೇಣೂರಿನ ಗೋಮಟ ಮಹಾಭಿಷೇಕ

ಜೈನರ ಪವಿತ್ರ ಕ್ಷೇತ್ರದಲ್ಲಿ ಮಂಗಲೋತ್ಸವ

ನಮ್ಮ ದಕ್ಷಿಣ ಕನ್ನಡವನ್ನು ಪ್ರಾಚೀನ ಕಾಲದಲ್ಲಿ ಸತ್ಯಪುತ್ರವೆಂಬ ಹೆಸರಿನಿಂದ ಕರೆಯುತ್ತಿದ್ದರೆಂದು ಅಶೋಕನ ಶಿಲಾ ಶಾಸನದಿಂದ ತಿಳಿದು ಬರುತ್ತದೆ. ಈ ಜಿಲ್ಲೆಯಲ್ಲಿ ತುಳು ಭಾಷೆಯನ್ನು ಜನರು ಬಹಳ ಹಿಂದಿನಿಂದಲೂ ಆಡುತ್ತಿದ್ದರು; ಆದರೆ ಮಾತಿಗಿಂತ ಮಿಕ್ಕಿನ ವ್ಯವಹಾರದಲ್ಲಿ ಕನ್ನಡವನ್ನೇ ಇಲ್ಲಿಯ ರಾಜರು ಪ್ರೋತ್ಸಾಹಿಸಿದರು. ಹೀಗಾಗಿ ಬೇರೆ ಭಾಷೆಗಳಂತೆ ಸಾಹಿತ್ಯ ಕ್ಷೇತ್ರದಲ್ಲಿ ಗ್ರಂಥಸ್ಥವಲ್ಲದ ಪಾಡ್ದನೆಗಳ ಹೊರತು ಬೇರೇನೂ ಸೃಷ್ಟಿಯಾಗಲಿಲ್ಲ; ತುಳುವಿಗೊಂದು ಲಿಪಿಯೂ ರೂಢವಾಗಲಿಲ್ಲ.

ತುಳುನಾಡಿನ ಅರಸರು

ಈ ತುಳುನಾಡನ್ನು ಗೆದ್ದು, ಅದನ್ನು ತಮ್ಮ ಅಂಕಿತದಲ್ಲಿರಿಸಿಕೊಂಡು ಅಚ್ಚಳಿಯದ ಪ್ರಭಾವವನ್ನು ಬೀರಿದ ಏಕಮಾತ್ರ ಜನಾಂಗವೆಂದರೆ ಬ್ರಿಟಿಷರೆನ್ನಬಹುದು. ಬೇರೆ ಯಾವದೇ ಭಾರತೀಯ ರಾಜವಂಶಜರು ತುಳುನಾಡನ್ನು ತಮ್ಮ ವಜ್ರಮುಷ್ಟಿಯ ಹಿಡಿತದಲ್ಲಿರಿಸಲು ಶಕ್ತರಾಗಲಿಲ್ಲ. ಇಲ್ಲಿ ಕೆಲವು ಗ್ರಾಮಗಳಿಗೆ ಅಥವಾ ಮಾಗಣೆಗಳಿಗೆ ಒಬ್ಬೊಬ್ಬ ರಾಜರು ಆಳುತ್ತಿದ್ದರು; ನೆರೆಯ ರಾಜರು ದಂಡೆತ್ತಿಬಂದಾಗ ಅವರೊಡನೆ ಸಂಧಿಯನ್ನು ಮಾಡಿಕೊಂಡೊ ಕಪ್ಪವನ್ನಿತ್ತು ಒಮ್ಮೆಗೆ ವಿಪತ್ತನ್ನು ದೂರೀಕರಿಸಿಯೋ— ಅಂತೂ ತಮ್ಮ ರಾಜ್ಯದ ಮೇಲಿನ ಸ್ವಾಮ್ಯವನ್ನು ಉಳಿಸಿಕೊಳ್ಳುತ್ತಿದ್ದರು.

ನಮ್ಮ ಜಿಲ್ಲೆಯನ್ನು ಆಳಿದ ಪ್ರಸಿದ್ಧ ಪ್ರಾಚೀನ ವಂಶವೆಂದರೆ ಆಲೂಪರದೆಂದು ಹೇಳಬಹುದು. ಕ್ರಿಸ್ತಶಕದ ಆದಿ ಭಾಗದಲ್ಲಿ ಉಡುಪಿಗೆ ಸಮೀಪದ ಉದ್ಯಾವರದಲ್ಲಿ ರಾಜಧಾನಿಯನ್ನು ಮಾಡಿಕೊಂಡು ಆಳಿದ ಆಲೂಪ ಮನೆತನವು ತುಂಬ ಹೆಸರಾಗಿದೆ. ಕ್ರಿಸ್ತಶಕ ಎರಡನೇ ಶತಮಾನದ ಹೊತ್ತಿಗೆ ಈ ಜಿಲ್ಲೆಯು ಬನವಾಸಿಯ ಕದಂಬ ವಂಶಜರ ಅಧೀನವಾಯಿತೆಂದು ತೋರುತ್ತದೆ. ಕದಂಬರ ಮಯೂರವರ್ಮನು ನಾಗಾರಾಧಕರಾಗಿದ್ದ ತುಳುವರ ಮೇಲೆ ಆರ್ಯ ಸಂಸ್ಕೃತಿಯ ಪ್ರಭಾವವನ್ನು ಬೀರಲು ಕಾರಣನಾದನು. ಬ್ರಾಹ್ಮಣರ ಅಗ್ರಹಾರಗಳೂ ದೇವಸ್ಥಾನಗಳೂ ಇಲ್ಲಿ ತಲೆಎತ್ತಿದವು; ಅಲ್ಲದೆ ಕದಂಬರಲ್ಲಿ ಜೈನ ಮತಾನುಯಾಯಿಗಳೂ ಇದ್ದುದರಿಂದ, ನಮ್ಮ ಜಿಲ್ಲೆಗೆ ಜೈನರೂ ಬಂದು ನೆಲಸುವಂತಾಯಿತು.

ಜೈನರ ಪ್ರವೇಶ

ಜೈನರು ಹೀಗೆ ಪ್ರಥಮದಲ್ಲಿ ನಮ್ಮ ಜಿಲ್ಲೆಯಲ್ಲಿ ಬೀಡು ಮಾಡಿಕೊಂಡ ಬಳಿಕ, ಹನ್ನೆರಡನೇ ಶತಮಾನದಲ್ಲಿ ಹೊಯ್ಸಳ ಬಲ್ಲಾಳರು ವಿಶೇಷ ಪ್ರೋತ್ಸಾಹವನ್ನು ಜೈನ ಮತಕ್ಕೆ ಕೊಡುವ ವರೆಗೆ ಸಾಮಾನ್ಯರಂತೆಯೇ ಜೀವನ ನಡೆಸಿದರು. ಹೊಯ್ಸಳರ ಕಾಲದಲ್ಲಿ ಮಾತ್ರ ಅವರು ವಿಶೇಷ ಪ್ರಾಬಲ್ಯವನ್ನು ಹೊಂದಿದರು. ವಿದೇಶ ವ್ಯಾಪಾರದಲ್ಲಿ ಜೈನರ ಕೈನಡ ಪ್ರಬಲಿಸಿತಲ್ಲದೆ ಸಾಹಿತ್ಯ ಕೃತಿಗಳನ್ನೂ ರಚಿಸಿ ಜೈನರು ಧರ್ಮ ಪ್ರಚಾರ ಮಾಡುತ್ತಲೇ ಜನಪ್ರಿಯತೆಯನ್ನೂ ಗಳಿಸಲು ಸಮರ್ಥರಾದರು. ಅನೇಕ ಜಿನಮಂದಿರಗಳನ್ನು ಕಟ್ಟಿಸಿ ಹಾಕಲಾಯಿತು. ಹೀಗೆ ಜೈನ ಮತವು ಉಚ್ಛ್ರಾಯಾವಸ್ಥೆಯನ್ನು ಹೊಂದಿದರೂ ಇಲ್ಲಿನ ಮೂಲ ವಂಶಜರಾದ ತುಳುವರ ಸಂಸ್ಕೃತಿಯ ಆಶ್ರಯವನ್ನು ಸಂಪೂರ್ಣವಾಗಿ ಬಿಟ್ಟಿರುವುದು ಜೈನರಿಗೆ ಸಾಧ್ಯವಾಗಲಿಲ್ಲ. ಅಳಿಯಕಟ್ಟನ್ನು ಬಿಡದೆ ಅನುಸರಿಸಿಕೊಂಡು ಬಂದುದೂ ಭೂತಸ್ಥಾನಗಳ ಯಜಮಾನಿಕೆಯನ್ನು ಇಟ್ಟುಕೊಂಡುದೂ ಇದಕ್ಕೆ ನಿದರ್ಶನ.

ಒಂದು ಕಾಲದಲ್ಲಿ ತುಳುನಾಡಿನಲ್ಲಿ ಮೆರೆದ ರಾಜವಂಶಜರು ಕಾಸರಗೋಡಿನ ಕುಂಬಳೆಯಿಂದ ಹಿಡಿದು, ವಿಟ್ಲ, ಮೂಲ್ಕಿ, ಪಡುಬಿದರೆ, ಎರ್ಮಾಳು, ಮೂಡಬಿದರೆಗಳಲ್ಲಿಯಲ್ಲದೆ ಉಡುಪಿಯ ಸುರಾಲಿನ ವರೆಗೆ ಈಗಲೂ ಸಿಗುತ್ತಾರೆ. ಇವರ 'ಅರಮನೆ"ಗಳೂ ನೋಡಸಿಗುತ್ತವೆ; ಇವರಲ್ಲಿ ಕೆಲವರಿಗೆ ಸರಕಾರದಿಂದ ವರ್ಷಾಸನವೂ ಸಿಗುತ್ತದೆ. ತುಳು ವಂಶಜರು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಕೇಂದ್ರಗಳಿಂದ ರಾಜ್ಯವನ್ನಾಳಿದರು. ಕಾರ್ಕಳದಲ್ಲಿ ಭೈರರಸರು, ಮೂಡಬಿದರೆಯಲ್ಲಿ ಚೌಟರಸರು, ವೇಣೂರಿನಲ್ಲಿ ಅಜಿಲರಸರು, ಬಾರಕೂರಿನಲ್ಲಿ ಪಾಂಡ್ಯರಸರು, ಬಂಗನಾಡಿಯಲ್ಲಿ ಬಂಗರಸರು—ಇವರೆಲ್ಲ ಜೈನ ಧರ್ಮಕ್ಕೆ ಅಪಾರವಾದ ಪ್ರೋತ್ಸಾಹವನ್ನಿತ್ತು ಪೋಷಿಸಿದರು.

ವೇಣೂರಿನ ಹಿರಿಮೆ

ಇದೀಗ ಭಾರತದಲ್ಲಿರುವ ಜೈನ ಧರ್ಮಾನುಯಾಯಿಗಳ ದೃಷ್ಟಿಯು ನಮ್ಮ ಜಿಲ್ಲೆಯತ್ತ ಹರಿದಿದೆ; ನಮ್ಮ ಜಿಲ್ಲೆಯ ವೇಣೂರಿನಲ್ಲಿರುವ ಶ್ರೀ ಗೋಮಟೇಶ್ವರನ ಮಹಾಮಸ್ತಕಾಭಿಷೇಕೋತ್ಸವದ ಪರ್ವಕಾಲವೇ ಇದರ ಕಾರಣ. ವೇಣೂರು ಮಂಗಳೂರಿನಿಂದ ಈಶಾನ್ಯಕ್ಕೆ ೩೪ ಮೈಲುಗಳ ಅಂತರದಲ್ಲಿದೆ, ವೇಣೂರಿನ ಪೂರ್ವ ದಿಕ್ಕಿಗೆ ಗುರುವಾಯನ ಕೆರೆ, ಬೆಳ್ತಂಗಡಿಗೆ ಹೋಗುವ ರಸ್ತೆಯೂ ಪಶ್ಚಿಮ ದಿಕ್ಕಿಗೆ ಮೂಡಬಿದರೆಗೆ ಹೋಗುವ ರಸ್ತೆಯೂ ಇದೆ. ವೇಣೂರಿನಿಂದ ದಕ್ಷಿಣದ ಬೆಳ್ತಂಗಡಿಗೆ ಮತ್ತು ಉತ್ತರದ ಮೂಡಬಿದರೆಗೆ ೧೨ ಮೈಲುಗಳಷ್ಟು ದೂರ. ಫಲ್ಗುನಿ ನದಿಯ ದಂಡೆಯ ಮೇಲೆ ನಿಂತಿರುವ ವೇಣೂರು ಸಾಕಷ್ಟು ಪ್ರಕೃತಿ ಸೌಂದರ್ಯವನ್ನು ಪಡೆದಿದೆ.

ಈಗ ವೇಣೂರು ಒಂದು ಹಳ್ಳಿಯಾಗಿದೆ—ನಾಲ್ಕು ಚದರ ಮೈಲು ವಿಸ್ತೀರ್ಣದ ಈ ಹಳ್ಳಿಯಲ್ಲಿ ಸುಮಾರು ೩೦೦ ಮನೆ ಅಂಗಡಿ, ಗುಡಿಸಲುಗಳಿವೆ. ಆದರೆ ಸುಮಾರು ಮುನ್ನೂರು ವರ್ಷಗಳ ಹಿಂದೆ ಅಜಿಲರಸರು ಇಲ್ಲಿ ಟಕಳವಾಗಿ ಮೆರೆದ ಸಮಯ ೭೭೦ ಜೈನ ಮನೆಗಳೇ ಇದ್ದುವೆಂದು ಜೈನಾಚಾರವೆಂಬ ಗ್ರಂಥದಿಂದ ತಿಳಿದು ಬರುತ್ತದೆ. ಅಜಿಲರಸರ ಚರಿತ್ರೆಯು ಮೊದಲನೇ ತಿಮ್ಮಣ್ಣಾಜಿಲು ಕಾಲದಿಂದ (ಕ್ರಿ. ಶ. ೧೧೫೪) ಮಾತ್ರ ತಿಳಿದಿದೆ. ಅಲ್ಲಿಂದ ೬೨೨ ವರ್ಷಗಳ ವರೆಗೆ (ಕ್ರಿ. ಶ. ೧೭೭೬) ಆಳಿದ ಈ ಮನೆತನವು ವೇಣೂರನ್ನು ಜೈನರ ಪವಿತ್ರ ಕ್ಷೇತ್ರವಾಗಿ ರೂಪಿಸಿತು.

ಅಜಿಲರ ಸಾಹಸ

ಇದಕ್ಕೆ ನೆನಪೆನಿಸಿದುದೇ ಶ್ರೀ ಗೋಮಟೇಶ್ವರ ಮೂರ್ತಿಯ ಪ್ರತಿಷ್ಠೆ: ಅಜಿಲರಸರಲ್ಲಿ ಶ್ರೇಷ್ಠನೆನಿಸಿದ ನಾಲ್ಕನೇ ವೀರ ತಿಮ್ಮಣ್ಣಾಜಿಲನ (ಕ್ರಿ. ಶ. ೧೫೫೦ರಿಂದ ೧೬೧೦) ಶಾಸನ ಕಾಲದಲ್ಲಿ ಗೋಮಟನನ್ನು ನಿಲ್ಲಿಸಲಾಯಿತು. ಈತನು ಕ್ರಿ.ಶ. ೧೫೫೨ರಿಂದ ೧೫೫೦ರ ತನಕ ವೇಣೂರಿನಿಂದ ಆಳಿದ ಅಜಿಲರ ರಾಯ ಕುಮಾರನ ತಂಗಿ ಪಾಂಡ್ಯಕ್ಕ ದೇವಿಯ ಪುತ್ರನು. ತನ್ನ ವಂಶೀಯನಾದ ಚಾಮುಂಡರಾಯನು ಮೈಸೂರು ರಾಜ್ಯದ ಶ್ರವಣ ಬೆಳ್ಗೊಳದಲ್ಲಿ ಶ್ರೀ ಬಾಹುಬಲಿ ಸ್ವಾಮಿಯ ಪ್ರತಿಮೆಯನ್ನು ಪ್ರತಿಷ್ಠಿಸಿ ಜಗದ್ವಿಖ್ಯಾತನಾದ ಸಂಗತಿಯನ್ನು ಅರಿತಿದ್ದ ವೀರ ತಿಮ್ಮಣ್ಣಾಜಿಲನು ತನ್ನ ರಾಜಧಾನಿಯಲ್ಲಿ ಸಹ ಅಂಥದೊಂದು ಮೂರ್ತಿಯನ್ನು ನಿಲ್ಲಿಸಲು ಆಶಿಸಿದನು.

ತನ್ನ ಮನದಿಚ್ಛೆಯನ್ನು ಈಡೇರಿಸಲು ಅತನು ತುಳುನಾಡಿನ ಶಿಲ್ಪಿಗಳನ್ನು ಕರೆಸಿಕೊಂಡನು. (ಕಲ್ಲಿನಲ್ಲಿ ಕೆಲಸ ಮಾಡುವ ಶಿಲ್ಪಿಗಳನ್ನು ಕಲ್ಕುಡರೆಂದು ತುಳುವಿನಲ್ಲಿ ಕರೆಯಲಾಗುತ್ತದೆ. (ಕಾರ್ಕಳದಲ್ಲಿ ಕ್ರಿ. ಶ. ೧೪೩೨ರಲ್ಲಿ ಭೈರರಸ ಶ್ರೀ. ವೀರ ಪಾಂಡ್ಯನಿಂದ ಪ್ರತಿಷ್ಠಿಸಲ್ಪಟ್ಟ ಗೋಮಟ ಮೂರ್ತಿಯನ್ನು ಕೆತ್ತಿದ್ದ ಶಿಲ್ಪಿ ಶಂಭು ಕಲ್ಕುಡನ ವಂಶಜನಿಗೆ ವೇಣೂರಿನ ಗೋಮಟ ಮೂರ್ತಿಯ ಕೆಲಸವನ್ನು ವಹಿಸಿಕೊಡಲಾಯಿತು.

ಗೋಮಟೇಶ್ವರನ ಪ್ರತಿಷ್ಠೆ

ಕಾರ್ಕಳದಲ್ಲಿ ಆಗ ಆಳುತ್ತಿದ್ದ ಇಮ್ಮಡಿ ಭೈರವ ರಾಯನಿಗೆ ಈ ಸುದ್ದಿ ತಿಳಿಯಲು ತನ್ನ ಸೀಮೆಯಲ್ಲಿ ನೆಲಸಿರುವ ಗೋಮಟ ಮೂರ್ತಿಗೆ ಪ್ರತಿಸ್ಪರ್ಧಿಯಾಗಿ ಇನ್ನೊಂದು ಮೂರ್ತಿಯನ್ನು ಪ್ರತಿಷ್ಠಿಸಲು ಬಿಡೆನೆಂದು ಛಲ ಹಿಡಿದ ಆತನು ಅಜಿಲರ ಸೀಮೆಯನ್ನು ಹೊಕ್ಕು ಗಡಿನಾಡಾದ ನಾರಾವಿಯನ್ನು ಸೂರೆ ಮಾಡಿದನು. ಆಗ ಅಜಿಲ ಅರಸು ಗೋಮಟ ಮೂರ್ತಿಯನ್ನು ಮರಳಿನ ರಾಶಿಯಲ್ಲಿ ಅಡಗಿಸಿಟ್ಟು, ತನ್ನ ಸೇನಾನಾಯಕನಾದ ನಾರಾವಿಯ ಕಾಂತ ಸಾಮಣಿಯನ್ನು ದೊಡ್ಡ ಸೈನ್ಯದೊಡನೆ ಭೈರರಸನೊಡನೆ ಕಾದಲು ಕಳಿಸಿದನು. ಯುದ್ಧದಲ್ಲಿ ಅಜಿಲರಸು ಗೆದ್ದನು; ಮುಂದೆ ವಿಜೃಂಭಣೆಯಿಂದ ಗೋಮಟ ಮೂರ್ತಿಯನ್ನು ವೇಣೂರಿನಲ್ಲಿ (ಕ್ರಿ. ಶ. ೧೬೦೪ನೇ ಮಾರ್ಚ ೧ನೇ ತಾರೀಕು) ಪ್ರತಿಷ್ಠಿಸಲಾಯಿತು.

ವೇಣೂರಿನ ಗೋಮಟ ಮೂರ್ತಿಯು ೩೫ ಅಡಿ ಎತ್ತರವಾಗಿದೆ. ಕಾರ್ಕಳದ ಮೂರ್ತಿ ೪೨ ಅಡಿ ಮತ್ತು ಶ್ರವಣ ಬೆಳ್ಗೊಳದ ಮೂರ್ತಿ ೫೭ ಅಡಿ ಎತ್ತರ ಇವೆ. ಉತ್ತರಾಭಿಮುಖವೂ ಕಾಯೋತ್ಸರ್ಗವೂ ಆದ ಈ ಮೂರ್ತಿಯನ್ನು ಕರಿಕಲ್ಲಿನಿಂದ ನಿರ್ಮಿಸಲಾಗಿದೆ. ಮೂರ್ತಿಯ ಹಿಂದೆ ಪಾದತಳದಿಂದ ಮೊಣಕಾಲಿನ ವರೆಗೆ ಅಗಲವಾದೊಂದು ಶಿಲಾಫಲಕವಿದೆ. ಇದು ಆಧಾರಕ್ಕಿರಬಹುದೆಂದು ತೋರುತ್ತದೆ. ಈ ಫಲಕದ ಆಚೀಚೆ ಬದಿಗಳಲ್ಲಿ ಎರಡು ಕುಕ್ಕುಟ ಸರ್ಪಗಳ ಚಿಹ್ನೆಯು ಇದ್ದು ಮೂರ್ತಿಯ ಇಕ್ಕಡೆಗಳಲ್ಲಿಯೂ ನೂರು ಹೆಡೆಯ ಎರಡು ಸರ್ಪಗಳು ಡೊಂಕು ಡೊಂಕಾಗಿ ಮೇಲೆ ಹರಿದಿವೆ. ಇನ್ನು ಬೇರೆ ಕೆಲವು ಸರ್ಪಗಳೂ ಮೂರ್ತಿಯ ಮೈಮೇಲಿವೆ. ಮೂರ್ತಿಯ ತಲೆಗೂದಲು ಗುಂಗುರು ಗುಂಗುರಾಗಿದೆ. ಇವರ ಮುಖಮುದ್ರೆಯು ಶ್ರವಣ ಬೆಳ್ಗೊಳದ ಮೂರ್ತಿಯಂತೆ ನಗುವನ್ನು ಚಿಮ್ಮುತ್ತಿರುತ್ತದೆ.

ಬಸದಿಗಳ ಬೀಡು

ಗೋಮಟ ಮೂರ್ತಿಯನ್ನು ವೇಣೂರಿನಲ್ಲಿ ಇತರೆರಡು ಕಡೆಯಂತೆ ದೊಡ್ಡ ಬೆಟ್ಟದ ಮೇಲೆ ನಿಲ್ಲಿಸಿರದೆ ಸಮತಟ್ಟಾದ ದಿನ್ನೆಯೊಂದರಲ್ಲಿ ಪ್ರತಿಷ್ಠಿಸಲಾಗಿದೆ. ಗೋಮಟ ಮೂರ್ತಿಯ ಪ್ರಾಕಾರದ ಹೊರಗಡೆಯ ಅಂಗಣದಲ್ಲಿ ಬ್ರಹ್ಮದೇವರ ಸ್ತಂಭವಿದೆ. ಬಡಗು ಪಾರ್ಶ್ವದ ಬಾಗಿಲನ್ನು ಒಳ ಹೊಕ್ಕುತ್ತಲೇ ಆ ಕಡೆಯ ಪಕ್ಕದಲ್ಲಿ ಎರಡು ಚಿಕ್ಕ ಬಸದಿಗಳಿವೆ, ಇವುಗಳಲ್ಲಿ ಪಡುಗಡೆಯುದು ಅಕ್ಕಂಗಳ ಬಸದಿ. ಇವನ್ನು ನಾಲ್ಕನೇ ವೀರ ತಿಮ್ಮಣ್ಣಾಜಿಲರ ಹಿರಿಯ ಹೆಂಡಂದಿರಾದ ಪಾಂಡ್ಯಕ್ಕ ಮತ್ತು ಮಲ್ಲಿ ದೇವಿಯರು ಕಟ್ಟಿಸಿದರು. ಮೂಡುಗಡೆಯ ಬಸದಿ ಬಿನ್ನಾಣಿ ಬಸದಿ ಎಂದು ಹೆಸರು. ಇದನ್ನು ಉಪರೋಕ್ತ ಅರಸನ ಕಿರಿಯ ಹೆಂಡತಿ ಬಿನ್ನಾಣಿಯು ಕಟ್ಟಿಸಿದಳು.

ವೇಣೂರಿನಲ್ಲಿ ಎಂಟು ಜೈನ ಬಸದಿಗಳಿವೆ. ಅವುಗಳಲ್ಲಿ ಒಂದೆರಡು ಬಸದಿಗಳನ್ನು ಬಿಟ್ಟರೆ ಉಳಿದವು ಶಿಲಾಮಯವೂ ಸುಮಾರು ೪೬೦ ವರ್ಷಗಳಷ್ಟು ಪುರಾತನವೂ ಆಗಿವೆ. ಶ್ರೀ ಶಾಂತೀಶ್ವರ ಬಸದಿಯ ಹೊರಗಡೆ ಮಾನಸ್ತಂಭದಲ್ಲಿರುವ ಕೆತ್ತನೆ ಕೆಲಸ ಮನೋಹರವಾಗಿದೆ.

(೧೦ನೇ ಪುಟ ನೋಡಿರಿ)

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ. ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, **UDIPI,** S. KANARA.

ಪ್ರಜಾಸತ್ತಾತ್ಮಕ ಅಭಿವೃದ್ಧಿ ಕಾರ್ಯಕ್ರಮ

ಹಳ್ಳಿಯ ಧುರೀಣತ್ವಕ್ಕಿತ್ತ ಪ್ರೋತ್ಸಾಹದ ಸತ್ಫಲ

ಸಾಮುದಾಯಕ ಯೋಜನೆಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಗಳು, ಗ್ರಾಮಾಂತರ ಪ್ರದೇಶಗಳಲ್ಲಿನ ಜನತೆಯ ಹಿತರಕ್ಷಣೆಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ಪ್ರಮುಖ ಸ್ಥಾನವನ್ನು ವಹಿಸುತ್ತವೆ. ವ್ಯವಸಾಯ, ಶಿಕ್ಷಣ, ಆರೋಗ್ಯ, ಗ್ರಾಮೋದ್ಯೋಗ ಮತ್ತು ಸಹಕಾರಗಳ ಬಗೆಗೆ ಹೆಚ್ಚು ಹೆಚ್ಚು ಯೋಜನಾ ಕಾರ್ಯಕ್ರಮಗಳನ್ನು ರಚಿಸಲಾಗುವುದು. ಈ ಯೋಜನಾ ಕಾರ್ಯ ಕ್ರಮಗಳನ್ನು, ರಾಷ್ಟ್ರೀಯ ವಿಸ್ತರಣ ಮತ್ತು ಸಾಮುದಾಯಕ ಯೋಜನೆಗಳಿಗಾಗಿ ಆರಿಸಲಾದ ಕ್ಷೇತ್ರಗಳಲ್ಲಿ ತೀವ್ರವಾಗಿ ಕೈಗೊಳ್ಳಲಾಗುವುದು. ಈ ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಕ್ಷೇತ್ರಗಳ ಕಾರ್ಯವನ್ನು, ಸಮನ್ವಯಗೊಳಿಸಿ ಜನತೆಯ ಸಹಕಾರದೊಂದಿಗೆ, ಕೈಗೊಳ್ಳುವುದೇ ಈ ಯೋಜನೆಗಳ ಅಭಿಪ್ರಾಯವಾಗಿದೆ. ವಿಸ್ತರಣ ಚಳುವಳಿಯು ಹೆಚ್ಚಾದಂತೆ ಕ್ರಮೇಣ ಕಾರ್ಯತಃ ಅವು ಸರ್ವ ರಾಜ್ಯದ ಸಾಮಾನ್ಯ ವಿಧಾನಗಳಾಗುವುವು.

ತ್ರಿವಿಧ ಕಾರ್ಯಕ್ರಮ

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ, ಸಾಮುದಾಯಕ ಅಭಿವೃದ್ಧಿಯನ್ನು ಪ್ರಗತಿಯ ಒಂದು ವಿಧಾನವೆಂದೂ ಗ್ರಾಮಾಂತರ ವಿಸ್ತರಣೆಯನ್ನು, ಗ್ರಾಮಗಳ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಪರಿವರ್ತನೆ ಮಾಡುವ ಸಂಸ್ಥೆಯೆಂದೂ ವಿವರಿಸಲಾಗಿತ್ತು. ಈ ಸಾಧನೆಯಲ್ಲಿ ಮುಖ್ಯವಾದ ಅಂಶಗಳೆಂದರೆ ಮೊದಲನೆಯದಾಗಿ, ಸಾಮುದಾಯಕ ಅಭಿವೃದ್ಧಿಯ ವಿಧಾನ; ಎರಡನೆಯದಾಗಿ, ಸಾಮುದಾಯಕ ಅಭಿವೃದ್ಧಿಯ ವಿಧಾನವನ್ನು ಜನತೆಯ ಸಹಕಾರದೊಂದಿಗೆ ಕೈಗೊಳ್ಳುವ ವಿಸ್ತರಣ ಸೇವಾ ಸಂಸ್ಥೆ; ಮೂರನೆಯದಾಗಿ, ಸಾಮುದಾಯಕ ಸಾಧನೆಗೆ ಸತ್ತ್ವವನ್ನು ಕೊಡುವ ಹಾಗೂ ಅಧಿಕಾರಿ ಮತ್ತು ಖಾಸಗೀ ಕಾರ್ಯಕರ್ತರನ್ನು ಒಂದು ಉಭಯ ಸಾಮಾನ್ಯ ಧ್ಯೇಯಕ್ಕಾಗಿ ಒಂದುಗೂಡಿಸುವ ಅಭಿವೃದ್ಧಿ ಕಾರ್ಯಕ್ರಮಗಳು.

ಒಪ್ಪಿಕೊಂಡ ಉಪಯುಕ್ತತೆ

ಯೋಜನಾ ಕಾರ್ಯಕ್ರಮಗಳ ಬೆಲೆಗಿರ್ಣಯ ಸಂಸ್ಥೆಯ ದ್ವಿತೀಯ ವರದಿಯು ಗ್ರಾಮಾಂತರ ಪ್ರದೇಶಗಳಲ್ಲಿ ಮಾನಸಿಕ, ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯಲ್ಲಿ ಸಾಮುದಾಯಕ ಅಭಿವೃದ್ಧಿ ಕಾರ್ಯ ಕ್ರಮವು ಮಹತ್ತರ ಪಾತ್ರವನ್ನು ನಿರ್ವಹಿಸಿರುವುದನ್ನು ಒಪ್ಪಿಕೊಂಡಿದೆ. ಸಹಕಾರೀ ಸಂಸ್ಥೆಗಳು ನಿಧಾನವಾಗಿ ಬೆಳೆಯುತ್ತಿರುವುದು, ಗ್ರಾಮ ಪಂಚಾಯತುಗಳ ಪಾತ್ರ, ಪೂರೈಕೆಗಳಿಗಾಗಿ ಸಮರ್ಪಕವಾದ ಆಡಳಿತ ವ್ಯವಸ್ಥೆ ಕೈಗೊಳ್ಳುವುದರ ಅಗತ್ಯ ಮತ್ತು ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಗೊಳಿಸುವುದರ ಪ್ರಾಮುಖ್ಯತೆ- ಇವುಗಳನ್ನು ಕುರಿತು ವರದಿ ಪ್ರಸ್ತಾಪಿಸಿದೆ. ಸಾಮುದಾಯಕ ಯೋಜನೆ ಮತ್ತು ವಿಸ್ತರಣ ಕೆಲಸಗಾರರ ಪ್ರಾದೇಶಿಕ ವಿಚಾರ ಗೋಷ್ಠಿಗಳ ಮೂಲಕವೂ, ಇತರ ವಿಧಾನಗಳ ಮೂಲಕವೂ ಈ ಕಾರ್ಯಕ್ರಮವನ್ನು ಗ್ರಾಮ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

ಪ್ರಜೆಗಳ ಮೇಲೆ ಪ್ರಭಾವ

ರಾಷ್ಟ್ರೀಯ ವಿಸ್ತರಣೆ ಮತ್ತು ಸಾಮುದಾಯಕ ಯೋಜನೆಗಳ ಫಲಿತಾಂಶಗಳನ್ನು ಈ ಕಾರ್ಯಕ್ರಮಗಳಿಗಾಗಿ ಆದಗಿ ಸೇರವಾದ ವೆಚ್ಚ ಮತ್ತು ಭೌತಿಕ ಸಾಧನೆಯ ಮಾತುಗಳಲ್ಲಿ ಅಳೆಯುವುದಕ್ಕಿಂತ ಹೆಚ್ಚಾಗಿ ಜನತೆಯ ಜೀವನ ಮತ್ತು ಚಟುವಟಿಕೆಗಳ ಮೇಲೆ ಅದು ಬೀರಿರುವ ಪ್ರಭಾವದ ಮಾತುಗಳಲ್ಲಿ ಅಳೆಯಬೇಕು. ಸರ್ಕಾರದ ಒಟ್ಟು ವೆಚ್ಚದಲ್ಲಿ ನೂರಕ್ಕೆ ೬೦ರಷ್ಟು ಪಾಲು ಜನತೆಯಿಂದ ದೊರೆತಿರುವುದರಿಂದ ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸುವ ಬಗೆಗೆ ಜನತೆಯ ಉತ್ಸುಕತೆಯು ವ್ಯಕ್ತಗೊಳ್ಳುವುದು. ಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಜನತೆಯು ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು ಜನತೆಯು ಯೋಜನೆಯ ಬಗೆಗೆ ಹೆಚ್ಚಿನ ಭರವಸೆಯನ್ನು ಹೊಂದಿರುವುದರ ಸಂಕೇತವಾಗಿದೆ. ಆಡಳಿತದವರು ಸೂಕ್ಷ್ಮವಾದ ಕಾರ್ಯಕ್ರಮವನ್ನು ಕೈಗೊಂಡಾಗಲೆಲ್ಲಾ, ಜನರು ಉಚಿತ ಸೇವೆ ಕೈಗೊಳ್ಳಲು ಮುಂದೆ ಬಂದಿರುವರು.

ಹಳ್ಳಿಯ ಮುಂದಾಳುತ್ವ

ಜನತೆಯು ಭಾಗವಹಿಸುವುದನ್ನು ಸಟ್ಟಿ ಮಾಡುವ ಕಾರ್ಯದಲ್ಲಿ ಗ್ರಾಮ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸಿವೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ನೆರವೇರಿಸುವುದರಲ್ಲಿ, ಪಂಚಾಯತಿಗಳು ಸಹಕಾರ ಸಂಘಗಳು, ಮತ್ತು ಯೂನಿಯನ್ ಬೋರ್ಡ್‌ಗಳಂತಹ ಸ್ಥಳೀಯ ಸಂಸ್ಥೆಗಳನ್ನು ಗಮನಾರ್ಹವಾದ ರೀತಿಯಲ್ಲಿ ಉಪಯೋಗಿಸಲಾಯಿತು.

ಕೆಲವು ಕ್ಷೇತ್ರಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು, ಅನಧಿಕೃತವಾದ ಚುನಾವಣೆಯಿಲ್ಲದೆ ರೂಪಗೊಂಡ ತಾತ್ಕಾಲಿಕ ಸಂಸ್ಥೆಗಳಿಗೆ ವಹಿಸಲಾಯಿತು. ಇಂತಹ ಸಂಸ್ಥೆಗಳನ್ನು ಮಧ್ಯ ಪ್ರದೇಶದಲ್ಲಿ ಗ್ರಾಮ ವಿಕಾಸ ಮಂಡಲಿಗಳೆಂದೂ, ಒರಿಸ್ಸಾದಲ್ಲಿ ಗ್ರಾಮ ಮಂಗಳ ಸಮಿತಿಗಳೆಂದೂ, ಮದರಾಸಿನಲ್ಲಿ ಗ್ರಾಮ ಸೇವಾ ಸಂಘಗಳೆಂದೂ ಮತ್ತು ಪಶ್ಚಿಮ ಬಂಗಾಳದಲ್ಲಿ ಪಲ್ಲಿ ಉನ್ನಯನ ಸಮಿತಿಗಳೆಂದೂ ಕರೆಯಲಾಗುತ್ತದೆ.

ಯೋಜನೆಯ ಬೆಳವಣಿಗೆ

೧೯೫೩ರ ಅಕ್ಟೋಬರ್‌ನಲ್ಲಿ, ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವಾ ಕಾರ್ಯಕ್ರಮವು ಪ್ರಾರಂಭವಾದಂದಿನಿಂದ, ಪ್ರಥಮ ಪಂಚ ವಾರ್ಷಿಕ ಯೋಜನೆಯಲ್ಲಿ ನಿರೂಪಿಸಲಾದ ಗುರಿಯನ್ನು ಸಾಧಿಸುವ ಸಲುವಾಗಿ ಕಾಲ ಕಾಲಕ್ಕೆ ಹೆಚ್ಚು ಹೆಚ್ಚು ಯೋಜನೆಗಳನ್ನು ಕೈಗೊಳ್ಳಲಾಯಿತು. ೧೯೫೫ ೫೬ರ ಹೊತ್ತಿಗೆ ಭಾರತದ ನಾಲ್ಕನೆಯ ಒಂದು ಭಾಗದಷ್ಟು ಗ್ರಾಮಾಂತರ ಜನತೆಯನ್ನು ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಕಾರ್ಯಕ್ರಮಗಳ ವ್ಯಾಪ್ತಿಗೆ ಒಳಪಡಿಸಬೇಕೆಂ[…] ಯೋಜನೆಯನ್ನಿಟ್ಟುಕೊಳ್ಳಲಾಗಿತ್ತು. ಈಗ ಒಟ್ಟು ೧,೨೦೦ ಅಭಿವೃದ್ಧಿ ಕೇಂ[…] (ಬ್ಲಾಕ್) ಗಳನ್ನು ಪ್ರಾರಂಭಿಸಲಾಗಿದೆ. ಸುಮಾರು ೧,೨೩,೦೦೦ ಗ್ರಾಮಗಳೂ ೪೦೦ ಲಕ್ಷ ಜನರೂ ಈ ಕೇಂದ್ರಗಳ ವ್ಯಾಪ್ತಿಗೆ ಒಳಪಡುವರು. ೧,೨೦೦ ಬ್ಲಾಕ್‌ಗಳಲ್ಲಿ ೭೦೦ ಸಾಮುದಾಯಕ ಯೋಜನಾ ಕೇಂದ್ರಗಳು.

ಮುಂದಿನ ಗುರಿ

ರಾಷ್ಟ್ರೀಯ ಅಭಿವೃದ್ಧಿ ಮಂಡಳ[…] ೧೯೫೫ರ ಸಪ್ಟೆಂಬರ್‌ನಲ್ಲಿ ನಡೆಸಿದ ಸ[…]ಯಲ್ಲಿ, ದ್ವಿತೀಯ ಯೋಜನೆಯಲ್ಲಿ, ಭಾರತವೆಲ್ಲಾ ರಾಷ್ಟ್ರೀಯ ವಿಸ್ತರಣ ಸೇ[…]ಗೊಳಪಟ್ಟಿರಬೇಕೆಂದೂ, ನೂರಕ್ಕೆ ೪[…]ಕ್ಕಿಂತ ಕಡಿಮೆ ಇಲ್ಲದಂತೆ ರಾಷ್ಟ್ರೀಯ ವಿಸ್ತರಣ ಕೇಂದ್ರ (ಬ್ಲಾಕ್) ಗಳನ್ನೆಲ್ಲಾ ಸಾಮುದಾಯಕ ಅಭಿವೃದ್ಧಿ ಬ್ಲಾಕ್‌ಗಳನ್ನಾಗಿ ರೂಪಾಂತರಿಸಬೇಕೆಂದೂ, ತೀರ್ಮಾನಿಸಿದೆ. ಸುಮಾರು ನೂರಕ್ಕೆ ೫[…]ರಷ್ಟು ರಾಷ್ಟ್ರೀಯ ವಿಸ್ತರಣ ಕೇಂ[…] (ಬ್ಲಾಕ್) ಗಳನ್ನು ಸಾಮುದಾಯಕ ಅ[…]ವೃದ್ಧಿ ಬ್ಲಾಕ್‌ಗಳನ್ನಾಗಿ ಪರಿವರ್ತಿಸಬೇಕೆಂ[…] ಪ್ರಶ್ನೆಯು ಈ ಉದ್ದೇಶಗಳಿಗಾಗಿ ದೊ[…]ಯಬಹುದಾದ ಸಾಧನ ಸಂಪತ್ತುಗಳನ್ನು ಅವಲಂಬಿಸಿದೆ. ಅಂದರೆ, ಸುಮಾ[…] ೩೮೦೦ಕ್ಕೂ ಹೆಚ್ಚು ರಾಷ್ಟ್ರೀಯ ವಿಸ್ತರಣ ಬ್ಲಾಕ್‌ಗಳಲ್ಲಿ ದ್ವಿತೀಯ ಯೋಜನೆಯ ಕೊನೆಗೆ ಸುಮಾರು ೧,೧೨೦ ರಾಷ್ಟ್ರೀಯ ವಿಸ್ತರಣ ಕೇಂದ್ರಗಳನ್ನು ಸಾಮುದಾಯಕ ಅಭಿವೃದ್ಧಿ ಕೇಂದ್ರಗಳಾಗಿ ಪರಿವರ್ತಿಸಬೇಕಾಗುವುದು.

ಅಂದಾಜು ಖರ್ಚು

ಈ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸುಮಾರು ೬೬೩ ಕೋಟಿ ರೂಪಾಯಿಗಳು ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ. ಇದಕ್ಕಾಗಿ ೨೦೦ ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ೧೯೫೬-೫೭ಕ್ಕೆ ಈಗಾಗಲೇ ರಚಿಸಲಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡಲಾಗಿದೆ. ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣ ಕೇಂದ್ರ (ಬ್ಲಾಕ್) ಗಳಿಗೆ ಹಂ[…]ಲಾದ ಹಣವನ್ನು ಸರಿಹೊಂದಿಸಿಕೊ[…]

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈ ಕಾಲು ಸಣ್ಣದಾಗುವಿಕೆ, ಅವರ ಬೆಳೆಯುವುವದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ರಾಮತೀರ್ಥ
ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ. ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಬೇಕೇ. ಕಾರ್ಯಕ್ರಮವನ್ನು ಕುಂಠಿತಗೊಳಿಸಬೇಕೇ ಅಥವಾ ಹೆಚ್ಚು ಸಾಧನ ಸಂಪತ್ತುಗಳನ್ನು ಒದಗಿಸಿಕೊಳ್ಳಬೇಕೇ ಅಥವಾ ಹೆಚ್ಚು ಸಾಧನ ಸಂಪತ್ತುಗಳನ್ನು ಒದಗಿಸಿಕೊಳ್ಳಬೇಕೇ ಎಂಬ ಪ್ರಶ್ನೆಯನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿವು ಸಾಧಿಸಲಾದ ಪ್ರಗತಿ ಮತ್ತಿತರ ಅನುಭವದಿಂದ ಮುಂದೆ ತೀರ್ಮಾನಿಸುವುದು.

ಸಿಬ್ಬಂದಿಯ ಅಗತ್ಯಗಳು

ಸಾಮುದಾಯಿಕ ಯೋಜನೆ ಹಾಗೂ ರಾಷ್ಟ್ರೀಯ ವಿಸ್ತರಣಕೇಂದ್ರ(ಬ್ಲಾಕ್)ಗಳ ಆಗಳಿತ ಮತ್ತು ತಾಂತ್ರಿಕ ಸಿಬ್ಬಂದಿಯು ಅಧಿಕ ಪ್ರಮಾಣದ ಬೇಕಾಗುವುದು. ಪ್ರಥಮ ಯೋಜನೆಯ ಅಂತ್ಯದಲ್ಲಿ, ಈ ಕಾರ್ಯಕ್ರಮಗಳಲ್ಲಿ, ಯೋಜನೆಯ ನಿರ್ವಹಣಾಧಿಕಾರಿಗಳು, ಕೇಂದ್ರಾಭಿವೃದ್ಧಿ ಅಧಿಕಾರಿಗಳು, ಪಶುವೈದ್ಯ ಸಿಬ್ಬಂದಿ ಸಹಕಾರಿ ಇನ್ಸ್‌ಪೆಕ್ಟರುಗಳು, ವೈದ್ಯರು, ಕಾಂಪೌಂಡರುಗಳು, ದಾದಿಯರು, ಸೂಲಗಿತ್ತಿಯರು, ಮಹಿಳಾ ಆರೋಗ್ಯಾಧಿಕಾರಿಗಳು, ಆರೋಗ್ಯ ರಕ್ಷಣೆ ಇನ್ಸ್‌ಪೆಕ್ಟರುಗಳು, ಮೇಲ್ವಿಚಾರಕರು, ಕಲೆ ಮತ್ತು ಕುಶಲ ವಸ್ತುಗಳ ಶಿಕ್ಷಣದ ಮೇಲ್ವಿಚಾರಕರು, ಯಾಂತ್ರಿಕರು, ಎಂಜಿನಿಯರು, ಮತ್ತಿತರಂತಹ ವಿವಿಧ ವರ್ಗಗಳಲ್ಲಿ ಸುಮಾರು ೪೫,೦೦೦ ಮಂದಿ ನಿರತರಾಗಿರುವರೆಂದು ಅಂದಾಜು ಮಾಡಲಾಗಿದೆ. ದ್ವಿತೀಯ ಯೋಜನೆಯಲ್ಲಿ, ಈ ವರ್ಗಗಳಲ್ಲಿ ಒಟ್ಟು ೨ ಲಕ್ಷದಷ್ಟು ಹೆಚ್ಚು ಸಿಬ್ಬಂದಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಸಂಭವವಿದೆ.

ತರಬೇತಿಯ ಅನುಕೂಲತೆ

ಎಲ್ಲಾ ವರ್ಗಗಳ ಸಿಬ್ಬಂದಿಗೂ ತರಬೇತಿ ಕೊಡುವ ಬಗೆಗೆ ವ್ಯವಸ್ಥೆ ಮಾಡಲಾಗಿದೆ. ನಾಲ್ಕು ವರ್ಷಗಳ ಹಿಂದೆ ವಿಸ್ತರಣ ಕೆಲಸಗಾರರಿಗೆ ೨೫ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಯಿತು. ಈಗ ೪೨ ತರಬೇತಿ ಕೇಂದ್ರಗಳು ಪ್ರತಿ ವರ್ಷ ಸುಮಾರು ೫೦೦೦ ಮಂದಿಗೆ ತರಬೇತಿ ಕೊಡುತ್ತಿವೆ. ದ್ವಿತೀಯ ಯೋಜನೆಯ ಅವಧಿಯಲ್ಲಿ ದೇಶಾದ್ಯಂತ, ತರಬೇತಿ ಕೇಂದ್ರಗಳು ಮತ್ತು ಬೇಸಾಯ ಕಾಲೇಜುಗಳಿಗೆ ಹೊಂದಿಕೊಂಡಂತೆ, ೭೧ ವಿಸ್ತರಣೆ ಸೇವಾ ತರಬೇತಿ ಕೇಂದ್ರಗಳು ಮತ್ತು ೧೫ ಮೂಲ ಬೇಸಾಯ ಶಿಕ್ಷಣ ಶಾಲೆಗಳೂ ಏರ್ಪಟ್ಟು ಅವು ಗ್ರಾಮ ಮಟ್ಟದ ಕೆಲಸಗಾರರಿಗೆ ವಿಸ್ತರಣೆ ಮತ್ತು ಮೂಲ ಶಿಕ್ಷಣಗಳಲ್ಲಿ ತರಬೇತಿಯನ್ನು ಕೊಡುತ್ತವೆ. ಗ್ರಾಮ ಮಟ್ಟದ ಮಹಿಳಾ ಕೆಲಸಗಾರರಿಗೆ ಗೃಹ ವಿಜ್ಞಾನದಲ್ಲಿ ತರಬೇತಿಯನ್ನೀಯಲಾಗುವುದು. ಗ್ರಾಮೋದ್ಯೋಗ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಶೀಘ್ರವಾಗಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ೨೬ ಪ್ರಾಯೋಗಿಕ ಯೋಜನೆಗಳನ್ನು ಕೈಗೊಳ್ಳಲಾಗುವುದು. ಸಾಮುದಾಯಿಕ ಮತ್ತು ರಾಷ್ಟ್ರೀಯ ವಿಸ್ತರಣ ಕೇಂದ್ರಗಳಿಗಾಗಿ ಆರಿಸಲಾದ ಸಿಬ್ಬಂದಿಗೆ ಸಹಕಾರ ಮತ್ತು ಗ್ರಾಮ ಕೈಗಾರಿಕೆಗಳ ಬಗೆಗೆ ತರಬೇತಿಯನ್ನು ಕೊಡಲು ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು. ಅದರಂತೆ, ಬ್ಲಾಕ್ ಅಭಿವೃದ್ಧಿ ಅಧಿಕಾರಿಗಳು ಸಾಮಾಜಿಕ ಶಿಕ್ಷಣಾಧಿಕಾರಿಗಳು ಮತ್ತು ಆರೋಗ್ಯಾಧಿಕಾರಿಗಳು— ಇವರಿಗೂ ತರಬೇತಿ ಕೊಡುವ ವ್ಯವಸ್ಥೆ ಮಾಡಲಾಗಿದೆ.

ಮನೋಭಾವದ ಬದಲಾವಣೆ

ಗ್ರಾಮದಲ್ಲಿನ ಜನರಿಗೆ ಸಾಕಷ್ಟು ಆಹಾರ, ವಸ್ತ್ರ, ವಸತಿ, ಆರೋಗ್ಯ ಮತ್ತು ಮನರಂಜನೆ ಸೌಕರ್ಯಗಳನ್ನು ಒದಗಿಸುವುದಷ್ಟೇ ಸಾಮುದಾಯಿಕ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣೆಯ ಗುರಿಯಲ್ಲ. ಇವು ಆವಶ್ಯಕವೇನೋ ನಿಜ. ಆದರೆ, ಇವುಗಳಷ್ಟೇ ಮುಖ್ಯವಾದುದು ಜನತೆಯ ಮನೋವೃತ್ತಿಯ ಪರಿವರ್ತನೆ ಅವರ ಮನಸ್ಸಿನಲ್ಲಿ ಹೆಚ್ಚಿನ ಮಟ್ಟವನ್ನು ಸಾಧಿಸುವ ಬಗ್ಗೆ ಹುಮ್ಮಸ್ಸು ಹುಟ್ಟುವಂತಾಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿರುವ ಸುಮಾರು ೭೦೦ ಲಕ್ಷ ಸಂಸಾರಗಳ ದೃಷ್ಟಿಯನ್ನು ಪರಿವರ್ತಿಸುವುದು ಹೇಗೆ? ಅವರಲ್ಲಿ ಉತ್ಸಾಹವನ್ನು ಮೂಡಿಸುವುದು ಹೇಗೆ? ಅವರಲ್ಲಿ ಹೊಸ ಜ್ಞಾನ, ಅವರ ಬಾಳಿನಲ್ಲಿ ಹೊಸ ಮಾರ್ಗವನ್ನು ತೋರಿ, ಅವರಲ್ಲಿ ಹುಮ್ಮಸ್ಸನ್ನು ತುಂಬಿ, ಉತ್ತಮ ಜೀವನವನ್ನು ನಡೆಸಬೇಕೆಂಬ ದೃಢ ನಿರ್ಧಾರವನ್ನು ಅವರು ಕೈಗೊಳ್ಳುವಂತೆ ಮಾಡುವುದು ಹೇಗೆ?— ಇವೇ ಮುಖ್ಯವಾದ ಮಾನವೀಯ ಸಮಸ್ಯೆಗಳಾಗುತ್ತವೆ.

ಗ್ರಾಮಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಶ್ರಮದಾನಕ್ಕೆ ಬಹಳ ಮಹತ್ವವು ಸಲ್ಲುತ್ತದೆ. ಉತ್ಸಾಹಿಗಳಾದ ಹಳ್ಳಿಗರು ಕೋಸಿ ನದಿಗೆ ಒಡ್ಡು ನಿರಿಸಲು ನೆರವಾಗುವುದನ್ನು ಮೇಲಿನ ಚಿತ್ರದಲ್ಲೂ ಸುಶಿಕ್ಷಿತ ಕಾಲೇಜು ಹುಡುಗಿಯರು ಬ್ರಹ್ಮಪುತ್ರ ನದಿಯ ಹಾವಳಿ ನಿಯಂತ್ರಣಕ್ಕಾಗಿ ದುಡಿಯುತ್ತಿರುವುದನ್ನು ಕೆಳಗಿನ ಚಿತ್ರದಲ್ಲೂ ಕಾಣಬಹುದು. ಇಂಥ ಚಿತ್ರ ಈಗ ಭಾರತದ ಪ್ರತಿಯೊಂದು ಹಳ್ಳಿಯಲ್ಲಿ ನೋಡಸಿಗುತ್ತದೆ.



ಸ್ವಸಹಾಯದ ಸಿದ್ಧಾಂತ

ಪ್ರಜಾಸತ್ತಾತ್ಮಕ ಯೋಜನೆಯಲ್ಲಿ ರಾಷ್ಟ್ರೀಯ ವಿಸ್ತರಣೆ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಮುಖ್ಯವಾದ ಶಕ್ತಿ ಸಾಧನೆಗಳಲ್ಲೊಂದಾಗುತ್ತವೆ. ಸಾಮುದಾಯಿಕ ಯೋಜನೆಗಳು ಮತ್ತು ರಾಷ್ಟ್ರೀಯ ವಿಸ್ತರಣೆಗೇ ವ್ಯೂಹ ಮೂಲಕವಾಗಿ ದ್ವಿತೀಯ ಪಂಚ ವಾರ್ಷಿಕ ಯೋಜನೆಯು ಲಕ್ಷಾಂತರ ಜನರನ್ನು ಅಭಿವೃದ್ಧಿಯ ವ್ಯಾಪ್ತಿಗೆ ಒಳಪಡಿಸುವುದು. ಸಹಕಾರ, ಸ್ವಸಹಾಯ ಮತ್ತು ಸ್ಥಳೀಯ ಪ್ರಯತ್ನಗಳ ಮೂಲಕ ಗ್ರಾಮ ನಿವಾಸಿಗಳು, ಗ್ರಾಮ ವರ್ಗಗಳ ಈ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಹೆಚ್ಚಿನ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸಿ ರಾಷ್ಟ್ರಾಭಿವೃದ್ಧಿ ಪ್ರಯತ್ನದಲ್ಲಿ ಅವರು ಪಾಲುದಾರರಾಗುವರು.

---

50 YEARS OF PROGRESSIVE BANKING SERVICE

FIGURES AS AT 31-12-1955

Authorised Capital	**Rs.**	**50,00,000**
Subscribed & Paid up Capital	**Rs.**	**29,00,000**
Reserves	**Rs.**	**29,00,000**
Deposits	**Rs.**	**11,95,00,000**

CANARA BANK LIMITED

1906 - A BANK FOR ALL THE PEOPLE - 1956

ಮಾರಾಟಕ್ಕೆ ಸಿದ್ಧವಾಗಿದೆ ಮಾರಾಟಕ್ಕೆ ಸಿದ್ಧವಾಗಿದೆ

ಮುಂಬಾಯಿಯ ಶೈಲಜಾ ಪಬ್ಲಿಕೇಶನ್ಸ್ ಪ್ರಕಟಿಸಿದ ಕನ್ನಡ ಪುಸ್ತಕ

" ವಾಣಿಜ್ಯಶಾಸ್ತ್ರ ಪರಿಚಯ "

(AN INTRODUCTION TO COMMERCE)

ಲೇ: ಪ್ರೊ. ವ್ಹಿ. ಡಿ. ಕುಲಕರ್ಣಿ, ಪೋದಾರ ಕಾಲೇಜ, ಮುಂಬಾಯಿ.

ವಾಣಿಜ್ಯದ ಹುಟ್ಟು, ಬೆಳವಣಿಗೆ, ಏಕಮೇವ ಒಡೆತನದ ವ್ಯವಹಾರಗಳು, ಪಾಲುಗಾರಿಕೆ, ಲಿಮಿಟೆಡ್ ಕಂಪನಿಗಳು, ಬ್ಯಾಂಕುಗಳು, ವಿಮೆ, ಸೋಕ ಹಾಗು ಕಿರುಕುಳ ವ್ಯವಹಾರ, ಮಾರಾಟಗಾರಿಕೆ, ವಿಕ್ರಯಶಾಸ್ತ್ರ, ಜಾಹೀರಾತುತನ, ಮಾರ್ಕೆಟ್ ಸಂಘಗಳು ಮೊದಲಾದುವುಗಳನ್ನು ವಿವರವಾಗಿ ಚರ್ಚಿಸಲಾಗಿದೆ.

೨ ನೂರು ಪುಟಗಳು.] ನಿಮ್ಮ ಪ್ರತಿಗಾಗಿ ಇಂದೇ ಬರೆಯಿರಿ. ವ್ಯಾಪಾರಿಗಳಿಗೆ ಧಾರಾಳವಾದ ಕಮೀಶನ್ [ಬೆಲೆ: ೨ ರೂಪಾಯಿ

ಅಧಿಕೃತ ಮಾರಾಟಗಾರರು:

A-1 TRADERS

Departmental Stores, Matunga — BOMBAY-19.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೪-೨-'೫೬	೨೫

ಕೈಮಗ್ಗದ ಬಟ್ಟೆ

ಅಮೇರಿಕದ ಅಲಬಾಮಾ ರಾಜ್ಯದ ಬರ್ಮಿಂಗ್ಹಾಮ್ ಪಟ್ಟಣದ ಪೌರ ಸಭಾಧ್ಯಕ್ಷರು ಫೆಬ್ರವರಿ ೨೬ನೇ ದಿನಾಂಕದಿಂದ ಪ್ರಾರಂಭವಾಗುವ ವಾರದಲ್ಲಿ ಯಾವುದೇ ಉತ್ಸವದ ಮಹತ್ವದಿಂದ ಕೂಡಿದ ಸಪ್ತಾಹವನ್ನು ಆಚರಿಸಬಾರದೆಂದೂ ಸಪ್ತಾಹಗಳನ್ನಾಚರಿಸಿ ದಣಿದಿರುವ ಜನರಿಗೆ ಇದೊಂದು ವಾರದ ವಿಶ್ರಾಂತಿ ದೊರೆಯುವುದು ಅತ್ಯವಶ್ಯವೆಂದೂ ಹೇಳಿರುವುದಾಗಿ ತಿಳಿದು ಬರುತ್ತದೆ. ಇದು ಭಾರತೀಯರ ಪಾಲಿಗೆ ನೋಜಿನ ಸುದ್ದಿಯಾಗಿದೆ; ಏಕೆಂದರೆ ಈ ಸುದ್ದಿ ಬಂದ ಹೊತ್ತಿಗಾಗಲೇ ಭಾರತೀಯರು "ಕೈ ಮಗ್ಗದ ಸಪ್ತಾಹ"ವನ್ನು ಆಚರಿಸತೊಡಗಿದ್ದರು. ಇದೇ ೧೯ನೇ ದಿನಾಂಕದಿಂದ ೨೫ನೇ ದಿನಾಂಕದ ವರೆಗೆ ಅಖಿಲ ಭಾರತ ಸ್ವರೂಪದಲ್ಲಿ ಆಚರಿಸಲ್ಪಡುತ್ತಿರುವ ಕೈಮಗ್ಗದ ಸಪ್ತಾಹ ಕಾಲದಲ್ಲಿ ನಮ್ಮ ಗಮನವನ್ನು ಸೆಳೆಯಬಲ್ಲ ಸಂದೇಶಗಳನ್ನು ರಾಷ್ಟ್ರಾಧ್ಯಕ್ಷರೂ ಇತರ ಧುರೀಣರೂ ನೀಡಿದ್ದಾರೆ; ಕೈಮಗ್ಗದ ಬಟ್ಟೆಯ ವ್ಯಾಪಾರಿಗಳು ಚೆಲುವಾಗಿ ಅಂಗಡಿಗಳನ್ನು ಶೃಂಗರಿಸಿಯೂ ಗಿರಾಕಿಗಳಿಗೆ ಕ್ರಯದಲ್ಲಿ ರಿಯಾಯತಿಯನ್ನು ತೋರಿಸಿಯೂ ಉತ್ಸವದ ಸಾಮಾನ್ಯ ಕಲ್ಪನೆಯಾಗುವಂತೆ ಮಾಡಿದ್ದಾರೆ. ಆದರೆ ಉತ್ಸವದ ಆಚರಣೆಯಷ್ಟಕ್ಕೆ ಕೈಮಗ್ಗದ ಸಪ್ತಾಹದ ಹಿಂದಿದ್ದ ಮನೋಭಾವವೆ ಸೀಮಿತವಿರ ಕೂಡದು. ಅದು ವರ್ಷದ ಐವತ್ತೆರಡೂ ವಾರಗಳಲ್ಲಿ ಕೈಮಗ್ಗದ ಬಟ್ಟೆಗಳಿಗೆ ಪ್ರೋತ್ಸಾಹ ಕೊಡುವ ಬುದ್ಧಿಯನ್ನು ಭಾರತೀಯರಲ್ಲಿ ಹುಟ್ಟಿಸಲು ಸಮರ್ಥವಾಗಬೇಕು. ಭಾರತದಲ್ಲಿ ಸುಮಾರು ೨೦ ಲಕ್ಷ ನೇಕಾರ ಕುಟುಂಬಗಳಿಗೆ ಕೈಮಗ್ಗವೊಂದೇ ಜೀವನಾಧಾರವಾಗಿದೆ. ಇವರು ವರ್ಷಕ್ಕೆ ಸುಮಾರು ೧೩೦೦ ಕೋಟಿ ಗಜ ಬಟ್ಟೆಯನ್ನು ತಯಾರಿಸುತ್ತಿದ್ದಾರೆ. ಈಚೆಯ ವರೆಗೆ ಈ ಬಟ್ಟೆಗೆ ವಿದೇಶಗಳ ಪೇಟೆ ಸಹ ಹೆಚ್ಚು ಪ್ರಮಾಣದಲ್ಲಿ ಸಿಗುತ್ತಿದ್ದಿತು. ಆದರೆ ಈಗ ಬರ್ಮಾ, ಸಿಂಹಳ, ಇಂಡೋನೇಶಿಯ ಮುಂತಾದ ಸರಕಾರಗಳವರು ಸ್ಥಳೀಯ ನೇಕಾರರಿಗೂ ಬಟ್ಟೆಯ ಕೈಗಾರಿಕೆಗೂ ಪ್ರೋತ್ಸಾಹವನ್ನು ಕೊಡುವ ದೃಷ್ಟಿಯಿಂದ ಬಟ್ಟೆಯ ಆಯಾತದ ಮೇಲೆ ನಿರ್ಬಂಧ ಹೇರಿರುವ ಕಾರಣ ಭಾರತದ ಕೈಮಗ್ಗದ ಬಟ್ಟೆಯ ಮಟ್ಟಿಗೆ ಆ ದೇಶಗಳ ಪೇಟೆಯು ಕೈ ಬಿಟ್ಟಂತಾಗಿದೆ. ನಿಧಾನವಾಗಿ ರಾಷ್ಟ್ರೀಯ ಜಾಗೃತಿಯನ್ನು ಏಶ್ಯ ಮತ್ತು ಆಫ್ರಿಕದ ದೇಶಗಳವರು ಹೊಂದುತ್ತಿರುವುದರಿಂದ ಭಾರತವು ತನ್ನ ಕೈಮಗ್ಗದ ಬಟ್ಟೆಗಳಿಗೆ ವಿದೇಶಗಳ ಪೇಟೆಯನ್ನು ಇನ್ನು ಮುಂದೆ ಅವಲಂಬಿಸುವಂತಿಲ್ಲವೆಂದು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಆದುದರಿಂದ ನಮ್ಮ ದೇಶದೊಳಗೆಯೇ ಕೈಮಗ್ಗದ ಬಟ್ಟೆಗಳಿಗೆ ಗಿರಾಕಿಗಳನ್ನು ಹೆಚ್ಚಿಸಬೇಕು ಈ ಬಟ್ಟೆಗಳ ಜನಪ್ರಿಯತೆಯನ್ನು ವೃದ್ಧಿಸಬೇಕು. ಇಲ್ಲದಿದ್ದರೆ ಈ ಕೈಗಾರಿಕೆಯ ಭವಿಷ್ಯ ಹಾಳಾಗುವುದು ನಿಶ್ಚಯ. ಸುದೈವದಿಂದ ಭಾರತ ಸರಕಾರದವರು ತೆಗೆದುಕೊಂಡ ಕೆಲವು ಶಾಸನಿಕ ಕ್ರಮಗಳಿಂದಾಗಿಯೂ ಸ್ಥಾಪಿಸಿದ ಅಖಿಲ ಭಾರತ ಸ್ವರೂಪದ ಕೆಲವು ಮಂಡಳಗಳ ನಿರಂತರ ಪರಿಶ್ರಮದ ಫಲವಾಗಿಯೂ ಕೈಮಗ್ಗದ ಬಟ್ಟೆಗಳ ಜನಪ್ರಿಯತೆಯು ದೃಢವಾಗಿ ಹೆಚ್ಚುತ್ತಲಿದೆ. ಸುಮಾರು ಮೂರು ವರ್ಷಗಳಿಂದೀಚೆಗೆ ಸಾಮಾನ್ಯ ನೇಕಾರನ ವಾರ್ಷಿಕಾದಾಯವು ಸೇಕಡಾ ೧೦ ರಿಂದ ೩೦ ರಷ್ಟು ಹೆಚ್ಚಿರುತ್ತದೆ; ಅಂದರೆ ೧೯೫೨ರಲ್ಲಿ ತಿಂಗಳಿಗೆ ೪೧ ರೂಪಾಯಿಯಷ್ಟು ನೇಕಾರನೊಬ್ಬನ ಸಂಸಾರ ಸಂಪಾದನೆಯಾಗಿದ್ದರೆ ೧೯೫೫ರಲ್ಲಿ ಅದು ೫೩ ರೂಪಾಯಿಯ ಮಟ್ಟವನ್ನು ಮುಟ್ಟಿರುತ್ತದೆ. ನಿರುಪಯೋಗಿಗಳಾಗಿ ಬಿದ್ದಿದ್ದ ಮಗ್ಗಗಳು ಪುನಃ ಕೆಲಸ ಮಾಡತೊಡಗಿವೆ. ಆದರೆ ಕೈಮಗ್ಗದ ಬಟ್ಟೆಗಳಿಗೆ ದೊರೆತಿರುವ ಪ್ರೋತ್ಸಾಹವು ಕೃತಕ ರೀತಿಯಿಂದ ಪೋಷಣೆಗೊಂಡುದಾಗಿರುವುದು ಅಷ್ಟು ತೃಪ್ತಿಕರವಲ್ಲದ ವಿಷಯ. ಭಾರತ ಸರಕಾರದವರೂ ರಾಜ್ಯ ಸರಕಾರಗಳವರೂ ಉದಾರವಾದ ಹೃದಯದಿಂದ ಸಹಾಯ ಧನವನ್ನಿತ್ತು ಕೈಮಗ್ಗದ ಬಟ್ಟೆಯ ಬೆಲೆಯನ್ನು ತಗ್ಗಿಸಲು ನೋಡಿರುವುದರಿಂದಲೇ ಜನಪ್ರಿಯತೆಯನ್ನು ಈ ವರ್ಗದ ಬಟ್ಟೆಯು ಗಳಿಸಿದೆ ಎಂಬ ಆಭಾಸ ಉಂಟಾಗಿದೆ, ಹೊರತು ಜನರಲ್ಲಿ ನಿಜವಾಗಿಯೂ ಪ್ರೀತಿ ಹುಟ್ಟಿದೆ ಎಂಬ ತೀರ್ಮಾನಕ್ಕೆ ಬರಲು ಸಾಕಷ್ಟು ಆಧಾರವಿಲ್ಲ. ಗಿರಣಿಗಳು ಧೋತರ ಮತ್ತು ಸೀರೆಗಳನ್ನು ಉತ್ಪಾದಿಸುವ ಮಟ್ಟಿಗೆ ಕೆಲವೊಂದು ನಿರ್ಬಂಧಗಳನ್ನು ಶಾಸನಿಕವಾಗಿ ಅನುಭವಿಸಬೇಕಾದ ದೆಸೆಯಿಂದಲೇ ನಮ್ಮ ಹೆಂಗಸರೂ ಗಂಡಸರೂ ಉಡುವ ಬಟ್ಟೆಯಲ್ಲಿ ಸ್ವಲ್ಪಾಂಶ ಕೈಮಗ್ಗದಲ್ಲಿ ತಯಾರಾದವು ಸೇರಿದವಲ್ಲದೆ, ಬೇರೆ ಕಾರಣದಿಂದಲ್ಲ. ಸರಕಾರವು ಗಿರಣಿ ಬಟ್ಟೆಗಳ ಮೇಲೆ ಹೆಚ್ಚು ಕರವನ್ನು ಅನಿಶ್ಚಿತಾವಧಿಯವರೆಗೆ ಹೇರುತ್ತಾ ಹೋಗಲಾರದು; ಕೈಮಗ್ಗದ ಬಟ್ಟೆಯ ಬೆಲೆಯು ಗ್ರಾಹಕರ ದೃಷ್ಟಿಯಲ್ಲಿ ಕಡಿಮೆಯಾಗುವಂತೆ ಸಹಾಯ ಧನವನ್ನಾದರೂ ನಿರಂತರವಾಗಿ ಕೊಡುತ್ತಿರಲಾರದು. ಕೈಮಗ್ಗದ ಬಟ್ಟೆಯು ತನ್ನ ಸ್ವಂತ ಕಾಲುಗಳ ಮೇಲೆ ನಿಲ್ಲಲು ಶಕ್ತವಾಗಬೇಕೆಂಬ ಮಾತನ್ನು ಪ್ರತಿ ಸಪ್ತಾಹದ ಕಾಲದಲ್ಲಿ ಪುನರುಚ್ಚರಿಸುತ್ತಾ ಬಂದಿದ್ದರೂ ಈ ತನಕ ಸುಧಾರಣೆಯೇನೂ ಪರಿಸ್ಥಿತಿಯಲ್ಲಿ ಆಗಿಲ್ಲದಿರುವುದು ವಿಷಾದಕರ. ನೇಕಾರರ ಶೋಚನೀಯಾವಸ್ಥೆಯನ್ನು ಸುಧಾರಿಸುವುದಕ್ಕೆ ಸಹಕಾರ ಸಂಘಗಳನ್ನು ಸ್ಥಾಪಿಸುವ ಮೂಲಕ ಒಳ್ಳೆಯ ಪ್ರಯತ್ನ ನಡೆದಿದೆ. ಅವರಿಗೆ ನೂಲನ್ನು ಕೊಂಡುಕೊಳ್ಳಲು ಸಾಲಕೊಡುವ ಅನುಕೂಲತೆಯನ್ನೊದಗಿಸಲು ರಿಜರ್ವ್ ಬ್ಯಾಂಕನ್ನು ಕೇಳುವ ಏರ್ಪಾಡಿಗೆ ಅನುಕೂಲವಾಗುವಷ್ಟು ಉತ್ತಮ ವಾತಾವರಣ ಏರ್ಪಟ್ಟಿದೆ—ಎಲ್ಲ ನಿಜ. ಆದರೆ ಬಟ್ಟೆಯು ತಯಾರಿಕೆಯಲ್ಲಿರುವ ಮೂಲ ದೋಷಗಳ ನಿವಾರಣೆಗೆ ನಡೆಸಿದ ಪ್ರಯತ್ನ ಏನೂ ಸಾಲದು. ಕೈಮಗ್ಗದ ಬಟ್ಟೆಗಳ ರಚನೆಯಲ್ಲಿ ಏಕರೂಪತೆಯನ್ನು ತರುವುದಕ್ಕೂ ಅವುಗಳ ಉದ್ದಗಲ ಅಳತೆಗಳನ್ನು ಸ್ಥಿರ ರೂಪದಲ್ಲಿಡುವುದಕ್ಕೂ ಮನಸ್ಸಿಗೊಪ್ಪುವ ಅಂದಚಂದ, ತಾಳಿಕೆಯ ಬಣ್ಣ ಮತ್ತು ದೀರ್ಘಕಾಲ ಬಾಳುವ ಚೀತಸಗಳನ್ನು ಹುಟ್ಟಿಸುವುದಕ್ಕೂ ನಾವು ಸಮರ್ಥರಾಗದೆ ಹೋದರೆ ಈ ಕೈಗಾರಿಕೆಯನ್ನು ಭದ್ರವಾದ ಬುನಾದಿಯ ಮೇಲೆ ನಿಲ್ಲಿಸುವುದು ಸಾಧ್ಯವಾಗಲಾರದು. ವ್ಯಾಪಾರಿಗಳಾಗಲೀ ಯಾರೇ ಆಗಲಿ, ಕೈಮಗ್ಗದ ಬಟ್ಟೆಗಳ ರಚನೆಯ ನಿಕೃಷ್ಟಾವಸ್ಥೆಯ ಕಾರಣದಿಂದಾಗಿ ಗಿರಾಕಿಗಳಿಗೆ ಅದರ ಯೋಗ್ಯತೆಯ ಕುರಿತು ಭರವಸೆಯ ಮಾತನ್ನಾಡುವ ಸ್ಥಿತಿಯಲ್ಲಿ ಈಗ ಇರುವುದಿಲ್ಲ ಅಮೇರಿಕ ಮುಂತಾದ ದೂರದ ಪಾಶ್ಚಾತ್ಯ ದೇಶಗಳಲ್ಲಿ ಹೊಸ ಪೇಟೆಯು ನಮ್ಮ ಕೈಮಗ್ಗದ ಬಟ್ಟೆಗೆ ಸಿಗುವ ಲಕ್ಷಣವಿದ್ದರೂ ಸಹ, ಮೇಲೆ ಹೇಳಿದ ಮೂಲಭೂತ ದೋಷಗಳ ಪರಿಹಾರವಾಗದೆ ಆಶಾಜನಕವಾದ ಯಾವ ಮಾತನ್ನೂ ಹೇಳುವುದಕ್ಕೆ ಅವಕಾಶವಿಲ್ಲ. ನಾವು ಮುಂದಿನ ಸಲ ಸಪ್ತಾಹವನ್ನು ಆಚರಿಸುವ ಹೊತ್ತಿಗೆ ಈ ಕೊರತೆಗಳ ನಿವಾರಣೆಯ ದಿಸೆಯಲ್ಲಿ ದೃಢವಾದ ಹೆಜ್ಜೆಗಳನ್ನಿಟ್ಟಿರುವೆವೆಂದು ಆಶಿಸೋಣ! ಅಲ್ಲಿಯ ತನಕ ಕೈಮಗ್ಗದ ಬಟ್ಟೆಗೆ ನಮ್ಮ ಪ್ರೋತ್ಸಾಹವು ಕುಂದದಿರಲಿ!

ಸಂಸತ್ತಿನ ಅಧಿವೇಶನದ ಪ್ರಾರಂಭ

ರಾಷ್ಟ್ರಾಧ್ಯಕ್ಷರಿಂದ ಸಮಾಜವಾದಿ ಆದರ್ಶದ ಪ್ರತಿಪಾದನೆ

ಸಂಸತ್ತಿನ ಉಭಯ ಸದನಗಳ ಅಧಿವೇಶನವನ್ನು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಇದೇ ೧೫ನೇ ದಿನಾಂಕ ತಮ್ಮ ಉದ್ಘಾಟನಾ ಭಾಷಣದಿಂದ ಪ್ರಾರಂಭಿಸಿದರು. ರಾಷ್ಟ್ರಾಧ್ಯಕ್ಷರು ಈ ಸಂದರ್ಭದಲ್ಲಿ ವಿದೇಶಗಳ ವರಿಷ್ಠರು ಭಾರತಕ್ಕೆ ಸಂದರ್ಶನವನ್ನಿತ್ತು ಇಲ್ಲಿಯ ಪ್ರಗತಿಯನ್ನು ಕಂಡು ತೃಪ್ತಿ ವ್ಯಕ್ತಪಡಿಸಿದ ವಿಚಾರವನ್ನೂ ಪಂಚಶೀಲಗಳ ಜನಪ್ರಿಯತೆ ಹೆಚ್ಚುತ್ತಿರುವ ಸಂಗತಿಯನ್ನೂ ಪ್ರಸ್ತಾಪಿಸಿದರು. ಸಂಯುಕ್ತ ರಾಷ್ಟ್ರ ಸಂಘಕ್ಕೆ ೧೬ ಹೊಸ ರಾಷ್ಟ್ರಗಳ ಪ್ರವೇಶವಾಗಿರುವುದನ್ನೂ ಸ್ವಾಗತಿಸಿದರು; ಆದರೆ ಕೆಂಪು ಚೀನಕ್ಕೆ ಇನ್ನೂ ಇಂಥ ಭಾಗ್ಯ ಸಿಗದಿರುವುದನ್ನು ಅನ್ಯಾಯವೆಂದರು.

ಗೋವೆಯ ವಿಮೋಚನೆ

ರಾಷ್ಟ್ರಾಧ್ಯಕ್ಷರು ಸೈನಿಕ ಒಪ್ಪಂದಗಳ ಹಿಂದಿನ ಮನೋಭಾವವನ್ನು ಬಲವಾಗಿ ಖಂಡಿಸಿದರು. ಬಗ್ದಾದ್ ಒಪ್ಪಂದದಂಥ ವ್ಯೂಹರಚನಾಕ್ರಮವು ಭಾರತಕ್ಕೆ ತೀರ ಅಸಂತೃಪ್ತಿಯನ್ನು ಹುಟ್ಟಿಸಿದೆ ಎಂದು ಅವರು ಹೇಳಿದರು. ನಮ್ಮ ಅಭಿವೃದ್ಧಿ ಪ್ರಯತ್ನಗಳ ವೇಗವನ್ನು ತಡೆದು, ಹಣವನ್ನು ಸೈನ್ಯದ ಮೇಲೆ ವಿನಿಯೋಗಿಸಬೇಕಾದ ದುರಂತ ಪ್ರಮೇಯವನ್ನಿದು ತಂದೊಡ್ಡುತ್ತದೆ ಎಂಬ ಭಾವನೆಯನ್ನು ಪುಷ್ಟೀಕರಿಸಿದರು. ಅಲ್ಲದೆ ಗೋವೆಯ ವಿಷಯದಲ್ಲಿ ಅಮೇರಿಕದ ರಾಜ್ಯ ಖಾತೆಯ ಮಂತ್ರಿ ಡಲ್ಲೆಸರು ಕೊಟ್ಟ ಹೇಳಿಕೆಗೆ ತೀವ್ರ ಅಸಮಾಧಾನವನ್ನು ಸೂಚಿಸಿದರು ಪೋರ್ಚುಗಾಲವು ಭಾರತದ ಎಲ್ಲ ಸಂಧಿ ಪ್ರಯತ್ನಗಳನ್ನೂ ಉಪೇಕ್ಷೆಯಿಂದ ಕಂಡು ವಸಾಹತುವಾದಕ್ಕೆ ಇನ್ನೂ ಅಂಟಿರುವುದನ್ನು ರಾಷ್ಟ್ರಾಧ್ಯಕ್ಷರು ವಿರೋಧಿಸಿದರು.

ಸಮಾಜವಾದಿ ಆದರ್ಶ

ದೇಶದೊಳಗಿನ ಪರಿಸ್ಥಿತಿಯನ್ನು ಪ್ರಸ್ತಾಪಿಸುತ್ತಾ ಸಮಾಜವಾದಿ ಮಾದರಿಯ ಸಮಾಜವನ್ನು ರಚಿಸುವುದೇ ಸರಕಾರದ ಧ್ಯೇಯವೆಂದು ಹಲವು ಬಾರಿ ಅವರು ಹೇಳಿದರು. ಎರಡನೇ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಗೊಳಿಸಲು ಜನರ ಹಾರ್ದಿಕ ಸಹಕಾರ ಅತ್ಯಗತ್ಯವೆಂದರು. ರಾಜ್ಯಗಳ ಪುನಾರಚನೆಯ ಸಮಸ್ಯೆಯನ್ನು ಶಾಂತಚಿತ್ತದಿಂದ ನಾಗರಿಕರು ಪರಿಶೀಲಿಸ ಬೇಕಾದ ಅಗತ್ಯವನ್ನು ಅವರು ಪ್ರತಿಪಾದಿಸಿದರು. ಹಳ್ಳಿಯಲ್ಲಿ ಧುರೀಣತ್ವವು ಪ್ರಕಟವಾಗುತ್ತಿರುವ ರೀತಿಯನ್ನು ಅವರು ಪ್ರಶಂಸಿಸಿದ್ದಲ್ಲದೆ ಜನರ ಸಹಾಯವು

ಆಚಾರ್ಯ ನರೇಂದ್ರ ದೇವ

ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರೂ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಭಾರತದ ಸುಪುತ್ರರಲ್ಲೊಬ್ಬರೂ ಪ್ರಸಿದ್ಧ ಶಿಕ್ಷಣ ತಜ್ಞರೂ ಆಗಿ ಮೆರೆದ ಆಚಾರ್ಯ ನರೇಂದ್ರದೇವರು ಇದೇ ೧೯ನೆ ದಿನಾಂಕ ದಕ್ಷಿಣ ಭಾರತದ ಈರೋಡಿನ ಆರೋಗ್ಯಧಾಮದಲ್ಲಿ ಪರಂಧಾಮವನ್ನೈದಿದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ದಿವಂಗತರು ಬಹಳ ದೀರ್ಘ ಕಾಲದಿಂದ ಉಬ್ಬಸದಿಂದ ಬಳಲುತ್ತಿದ್ದರು: ಇದೇ ಅವರು ಕೊನೆಯುಸಿರನ್ನೆಳೆಯಲು ನೆಪವಾಯಿತು. ಆಚಾರ್ಯರು ಶ್ರೇಷ್ಠ ಮೇಧಾವಿಗಳಾಗಿದ್ದರು; ಮಹಾ ದಾರ್ಶನಿಕರಾಗಿದ್ದರು. ಸಮಾಜವಾದದ ಅಧ್ವರ್ಯುಗಳಾಗಿದ್ದರು. ನಿರಾಡಂಬರ ಸರಳ ಜೀವನ, ತ್ಯಾಗ ಮತ್ತು ಸೇವೆಯ ಆದರ್ಶ, ಉಚ್ಚ ಮಟ್ಟದ ಬೌದ್ಧಿಕ ಪ್ರತಿಭೆಗಳು ಆಚಾರ್ಯರ ವೈಶಿಷ್ಟ್ಯ. ಇಂಥ ಉತ್ತಮ ಗುಣಗಣಗಳಿಂದ ವಿಭೂಷಿತರಾದ ವ್ಯಕ್ತಿಯು ಒಂದು ವಿಶಿಷ್ಟ ಪಕ್ಷದೊಡನೆ ವಿಶೇಷ ಸಮೀಪದ ಸಂಬಂಧ ಇರಿಸಿಕೊಂಡಿರುವರೆಂದ ಮಾತ್ರಕ್ಕೆ ಪರಕೀಯರೆನಿಸುವಂತಿಲ್ಲ. ಆದುದರಿಂದಲೇ ಪಕ್ಷಭೇದವಿಲ್ಲದೆ ಎಲ್ಲ ಧುರೀಣರೂ ಆಚಾರ್ಯರ ಗುಣಗಾನ ಮಾಡಿದ್ದಾರೆ; ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ. ಭಾರತವು ತ್ಯಾಗಶೀಲರಾದ ಸದ್ಗುಣಗಳನ್ನು ಒಬ್ಬೊಬ್ಬರಾಗಿಯೇ ಕಳೆದುಕೊಂಡು ಬಡವಾಗುತ್ತಿದೆ ಎಂಬ ಭಾವನೆಯು ಹೀಗೆ ಮರಳಿ ಮರಳಿ ಉಂಟಾಗುವಾಗ, ನಾವು ದಿವಂಗತರ ಆತ್ಮಕ್ಕೆ ಶಾಂತಿ ಕೋರುತ್ತಿದ್ದಂತೆಯೇ ಅವರ ಆತ್ಮವು ದಿವ್ಯ ಸ್ಫೂರ್ತಿಯನ್ನಿತ್ತು ತಮ್ಮಿಂದ ತೆರವಾದ ಸ್ಥಾನವನ್ನು ಸಮರ್ಥ ರೀತಿಯಿಂದ ತುಂಬ ಬಲ್ಲ ಭಾರತೀಯ ಸುಪುತ್ರರನ್ನು ಮುಂದಕ್ಕೆ ತರಲಿ ಎಂದೂ ಹಾರೈಸುತ್ತೇವೆ.

ಧಾರಾಳವಾಗಿ ಇನ್ನು ಮುಂದೆ ಸಹ ಸಿಗಲೆಂದು ಹಾರೈಸಿದರು.

ರಾಷ್ಟ್ರೀಕೃತ ಜೀವವಿಮೆ

ಭಾರತ ಸರಕಾರದವರು ಜೀವ ವಿಮೆಯನ್ನು ರಾಷ್ಟ್ರೀಕರಿಸುವುದಕ್ಕೆ ಪೂರ್ವಭಾವಿಯಾಗಿ ಹೊರಡಿಸಿದ ಸುಗ್ರೀವಾಜ್ಞೆಯನ್ನು ಶಾಸನವಾಗಿ ಮಾಡುವ ಮಸೂದೆಯೊಂದನ್ನು ಈಗ ಸಂಸತ್ತಿನಲ್ಲಿ ಮಂಡಿಸಲಾಗಿದೆ. ಇದರೊಟ್ಟಿಗೆ ಜೀವವಿಮೆಯನ್ನು ರಾಷ್ಟ್ರೀಕರಿಸಿ ಅಖಿಲ ಭಾರತ ಸ್ವರೂಪದ ಶಾಸನಕೃತ ಮಂಡಳಿಯೊಂದಕ್ಕೆ ಈ ಉದ್ದಿಮೆಯನ್ನು ವಹಿಸಿಕೊಡುವ ಇನ್ನೊಂದು ಮಸೂದೆಯನ್ನೂ ಮಂಡಿಸಲಾಗಿದೆ. ಈ ನಡುವೆ ಎಲ್ಲ ಜೀವ ವಿಮಾ ಕಂಪೆನಿಗಳ ಕಾರ್ಯ ನಿರ್ವಹಣಾಧಿಕಾರವನ್ನು ಸರಕಾರವು ವಹಿಸಿಕೊಂಡಿದ್ದು ಪ್ರೀಮಿಯಂ ದರಗಳಲ್ಲಿಯೂ ಪಾಲಿಸಿ ಶರ್ತಗಳಲ್ಲಿಯೂ ಏಜಂಟರ ಕಮಿಶನಿನ ಮಟ್ಟದಲ್ಲಿಯೂ ತಾ ೨೦ನೇ ಜನವರಿಯಿಂದ ಏಕರೂಪತೆಯನ್ನು ತರಲಾಗಿದೆ.

ಉಡುಪಿ

ದಿವ್ಯ ಜೀವನ ಹೆಮ್ಮಕ್ಕಳ ಸಂಘ ಸ್ಥಾಪನೆ – ಹಿಮಾಲಯದ ಹೃಷಿಕೇಶದ ಶ್ರೀ ಶ್ರೀ ಸ್ವಾಮಿ ಶಿವಾನಂದ ಸರಸ್ವತಿಸ್ವಾಮಿಗಳಿಂದ ಸ್ಥಾಪಿತವಾದ 'ದಿವ್ಯ ಜೀವನ ಸಂಘ'ದ ಶಾಖೆಯೊಂದು ಉಡುಪಿಯಲ್ಲಿ ಹೆಮ್ಮಕ್ಕಳಿಗಾಗಿ ಶ್ರೀ ಸ್ವಾಮಿ ಗಣೇಶಾನಂದಜೀಯವರಿಂದ ತೆರೆಯಲ್ಪಟ್ಟಿತು. ಶ್ರೀಮತಿ ಲೀಲಾಬಾಯಿ ಕಾಮತರು ಅಧ್ಯಕ್ಷೆಯರಾಗಿಯೂ ಕುಮಾರಿ ಲೀಲಾ ಶೆಣೈಯವರು ಕಾರ್ಯದರ್ಶಿನಿಯರಾಗಿಯೂ ಆರಿಸಲ್ಪಟ್ಟಿರುವರು.

ಯಂ. ಜಿ ಎಮ್. ಕಾಲೇಜ್ ಯೂನಿಯನ್ ದಿನಾಚರಣೆಯು— ತಾ. ೧೬ರಲ್ಲಿ ಮಂಗಳೂರಿನ ಶ್ರೀ ಬಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಅಧ್ಯಕ್ಷ ಶ್ರೀ ಕೆ. ಆರ್. ಕಾರಂತರು ಸ್ವಾಗತಿಸಿದರು. ಶ್ರೀ ಹರಿದಾಸ ಆಚಾರ್ಯರು ಗುರುವಂದನ ಮಾಡಿದರು. ಜೂನಿಯರ್ ವಿದ್ಯಾರ್ಥಿಗಳ ಪರವಾಗಿ ಶ್ರೀಮತಿ ಅಂಜಲಾ ಪ್ರೇಮಲತಾ ಮತ್ತು ಸೀನಿಯರ್ ವಿದ್ಯಾರ್ಥಿಗಳ ಪರವಾಗಿ ಶ್ರೀ ಸಿ. ಜಯರಾಮ ಶೆಟ್ಟರು ಸ್ವಸ್ತಿವಾಚನ ಮಾಡಿದರು. ಶ್ರೀಗಳಾದ ಎ. ಬಿ. ಗೌಡಿಯಾನ್ ಮತ್ತು ವಿ. ಬಿ. ಶೆಟ್ಟರು ಉತ್ತರವಿತ್ತರು. ವಿದ್ಯಾರ್ಥಿಗಳು ಶಿಸ್ತನ್ನು ಪಾಲಿಸಬೇಕಾಗಿ ಅಧ್ಯಕ್ಷರು ಬೋಧಿಸಿದರು. ಶ್ರೀಮತಿ ಶಾಂತಾ ಅವರು ಧನ್ಯವಾದವಿತ್ತರು. ನಂತರ ವಿನೋದಾವಳಿಗಳಾದುವು.

ವಾರ್ಷಿಕ ಪಂದ್ಯಾಟ ಸ್ಪರ್ಧೆಯು- ತಾ. ೧೮ರಂದು ಕಾಲೇಜು ವಠಾರದಲ್ಲಿ ಜರಗಿತು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಡಾ ಎ. ಕೃಷ್ಣರಾಯರು ವಿತರಣೆಮಾಡಿದರು.

The Moolky Bank Ltd.,
MULKI.

NOTICE.

The 26th Ordinary Annual General Body meeting of the Bank will be held at the Registered Office of the Bank on Sunday the 18th March, 1956, at 10 A. M.

(The Register of Members & Transfer Books of the Bank will remain closed from 12—3—1956 to 20—3—1956, both days inclusive.)

(*Sd.*) M. R. H. Punja,
Manager.

ಕಾಲೇಜ್ ಡೇ ಸಮಾರಂಭವು— ತಾ. ೧೭ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜು ಕರೆಸ್ಪೊಂಡೆಂಟ್ ಡಾ. ಟಿ. ಎಮ್. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ. ರಾಮ ಭಟ್ಟರು ಕಾಲೇಜಿನ ಸ್ವಸ್ತಿವಾಚನ ಮಾಡಿದರು. ಶ್ರೀ ಕು. ಶಿ. ಹರಿದಾಸ ಭಟ್ಟರು ಉತ್ತರವಿತ್ತರು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಕಾಲೇಜಿನ ಪ್ರಗತಿಪರ ವರದಿಯನ್ನೋದಿದರು. ಹಾಸ್ಟೆಲಿನ ಅವಶ್ಯಕತೆ ಬಗ್ಗೆ ಆಡಳಿತ ಮಂಡಳಿಯವರು ತಕ್ಕ ಯೋಜನೆ ಮಾಡಿರುವುದನ್ನು ಯುನಿವರ್ಸಿಟಿಯವರು ಮಂಜೂರು ಮಾಡಿರುತ್ತಾರೆ. ಹೊಸವರ್ಷದಲ್ಲಿ ಎನ್. ಸಿ. ಸಿ. ಶಾಖೆಯು ತೆರೆಯಲ್ಪಡುವುದು. ವಿದ್ಯಾರ್ಥಿಗಳ ಆರೋಗ್ಯ ಚೆನ್ನಾಗಿದೆ. ವಿದ್ಯಾರ್ಥಿಗಳು ಶೀಲವಂತರಾಗಿದ್ದಾರೆ. ಎಂದು ಮೊದಲಾಗಿ ವರದಿಯಲ್ಲಿ ಹೇಳಲಾಗಿತ್ತು. ಸಭಾಧ್ಯಕ್ಷರು ಬಹುಮಾನ ಹಂಚಿದ ಬಳಿಕ ಕಾಲೇಜಿನ ಪ್ರಗತಿಯನ್ನು ಕಂಡು ಸಂತೋಷ ವ್ಯಕ್ತಪಡಿಸಿದರು. ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಿರುವುದು ಅಭಿನಂದನೀಯ ವೆಂದರು. ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದು ಸರಿಯಲ್ಲವೆಂದೂ ವೈಯಕ್ತಿಕವಾಗಿ ರಾಜಕೀಯ ವಿಚಾರಗಳನ್ನು ತಿಳಿಯುವುದರಲ್ಲಿ ಆಕ್ಷೇಪವಿಲ್ಲವೆಂದೂ ಹೇಳಿ ವಿದ್ಯಾರ್ಥಿಗಳು ಯೋಗ್ಯ ನಾಗರಿಕರಾಗಬೇಕೆಂದೂ ಆಶಿಸಿದರು. ಯೂನಿಯನ್ ಪ್ರೆಸಿಡೆಂಟ್ ಶ್ರೀ ಕೆ. ಆರ್. ಕಾರಂತರು ಧನ್ಯವಾದಗಳನ್ನಿತ್ತರು.

ಕಾಲೇಜ್ ಹಾಸ್ಟೆಲ್ ದಿನಾಚರಣೆಯು– ತಾ. ೧೮ರಲ್ಲಿ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ವಾರ್ಡನ್ ಹಾಗೂ ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರು ಸ್ವಾಗತವಾಕ್ಯಗಳನ್ನಾಡಿದರು. ಕಾರ್ಯದರ್ಶಿ ಶ್ರೀ ವಸಂತ ಶೆಟ್ಟರು ವರದಿಯನ್ನೋದಿದರು. ಶ್ರೀ ಜಿ. ಶೀನನವರು ಮಾಡಿದ ಸ್ವಸ್ತಿವಾಚನಕ್ಕೆ ಶ್ರೀ ಎ. ಶಂಕರ ಪೂಜಾರ ಉತ್ತರವಿತ್ತರು. ಡೆಪ್ಯುಟಿ ವಾರ್ಡನ್ ಶ್ರೀ ಎನ್. ದಯಾನಂದ ಮಲ್ಯರು ವಂದನೆಗಳನ್ನಿತ್ತರು. ನಂತರ ಕನ್ನಡ, ಹಿಂದಿ ನಾಟಕಾಭಿನಯಗಳಾದುವು.

ಶಾಲಾವರ್ಧಂತಿ— ಉಡುಪಿ ಸರಕಾರಿ ಮೂಲ ಶಿಕ್ಷಣ ತರಬೇತಿ ಶಾಲೆಯ ವರ್ಧಂತ್ಯುತ್ಸವವು ತಾ. ೧೯ರಂದು ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ! ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಬಿ. ಶ್ರೀನಿವಾಸಾಚಾರ್, ಅವರು ವರದಿಯನ್ನೋದಿ ಸ್ವಾಗತ ಕೋರಿದರು. ಬೇಸಿಕ್ ಎಜ್ಯುಕೇಶನಲ್ ಆಫೀಸರ್ ಶ್ರೀ ಯಸ್. ರಾಜಾರಾಮರವರು ಬುನಾದಿ ಶಿಕ್ಷಣದ ಮಹತ್ವವನ್ನು ವಿವರಿಸಿ ಭಾಷಣವಿತ್ತರು. ಶ್ರೀ. ಯಸ್. ಸದಾಶಿವರಾಯರು ಸ್ವಸ್ತಿ ವಾಚನ ಮಾಡಿದರು. ಬಹುಮಾನ ವಿತರಣೆಯಾದ ಬಳಿಕ ವಿವಿಧ ವಿನೋದಾವಳಿಗಳು ಜರಗಿದವು. ಹಳೆಯ ವಿದ್ಯಾರ್ಥಿ ಸಂಘದ ವರ್ಧಂತಿಯೂ ಇದರ ಜತೆಗೆ ನೆರವೇರಿತು. ಕಾರ್ಯದರ್ಶಿ ಶ್ರೀ. ಸರ್ವೋತ್ತಮ ಶೆಟ್ಟರು ವರದಿ ವಾಚನ ಮಾಡಿದರು.

ಕೈಮಗ್ಗ ಸಪ್ತಾಹದ ಉದ್ಘಾಟನೆಯು ತಾ. ೧೯ರಂದು ಡಾ! ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ. ಟಿ. ಎ. ಪೈ, ಎಂ. ಎಲ್. ಎ.ರವರಿಂದ ನೇಕಾರರ ಸಹಕಾರ ಸಂಘದ ವತಿಯಿಂದ ನೆರವೇರಿಸಲ್ಪಟ್ಟಿತು. ಶ್ರೀ. ಯು. ರಾಮರಾಯರು ಸ್ವಾಗತಿಸಿದರು. ಶ್ರೀ. ಎ ಜೆ. ಆಳ್ವಿಯವರು ಭಾಷಣವಿತ್ತರು.

ಶ್ರೀ ಬೆನಗಲ್ ರಾಮರಾಯರು ಬರುವರು— ಉಡುಪಿಯ ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನಿನ ಸುವರ್ಣ ಮಹೋತ್ಸವವು ಬರುವ ಮಾರ್ಚ ೧೨ರಲ್ಲಿ ಜರಗಲಿದ್ದು ಅದರ ಉದ್ಘಾಟನೆಯನ್ನು ನೆರವೇರಿಸಲು ರಿಸರ್ವ್ ಬ್ಯಾಂಕಿನ ಗವರ್ನರರಾದ ಶ್ರೀ ಬೆನಗಲ್ ರಾಮರಾಯರು ಒಪ್ಪಿಗೆ ಯಿತ್ತಿರುವರೆಂದು ಸುದ್ದಿ.

ಹಸ್ತ ಕೌಶಲ್ಯದ ಸಾಮಗ್ರಿ

ಭಾರತದ ಹಸ್ತ ಕೌಶಲ್ಯದ ಸಾಮಗ್ರಿಗಳು ವಿದೇಶಗಳಲ್ಲಿ ಈಗ ಬಹು ಮೆಚ್ಚಿಕೊಳ್ಳಲ್ಪಡುತ್ತವೆ. ಸರಕಾರದವರು ಈ ಕೈಗಾರಿಕೆಯ ಕ್ಷೇಮಾಭ್ಯುದಯಕ್ಕಾಗಿ ವಿಶೇಷ ಮಂಡಳವನ್ನು ರಚಿಸಿ ಧಾರಾಳವಾದ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ನಮ್ಮ ಹಳ್ಳಿಯ ಕುಶಲ ಕೆಲಸಗಾರರಿಂದ ತಯಾರಾಗುವ ಈ ವಸ್ತುಗಳು ಎಷ್ಟು ಆಕರ್ಷಕವಾಗಿವೆ, ನಾಜೂಕಾಗಿವೆ ಮತ್ತು ವೈವಿಧ್ಯದಿಂದ ಕೂಡಿವೆ ಎಂಬುದನ್ನು ಈ ಚಿತ್ರಗಳು ತೋರಿಸುತ್ತವೆ. ಮೇಲ್ಗಡೆ ಎಡಬದಿಗಿರುವುದು ದಂತದ ಮೂರ್ತಿಯ ಚಿತ್ರ; ಬಲಬದಿಯದು ದೀಪಾಲಂಕಾರದ ಒಂದು ಮಾದರಿ. ಕೆಳಗಡೆ ಹಾವಿನ ಚರ್ಮದಿಂದ ರಚಿಸಿದ ಕೈ ಚೀಲಗಳನ್ನು ನೋಡಬಹುದು.

ಮಣಿಪಾಲ— ಸ್ಥಳೀಯ ಹೈಸ್ಕೂಲಿನ ವರ್ಧಂತಿ ಸಮಾರಂಭವು ತಾ. ೨೦ರಲ್ಲಿ ಶ್ರೀ ಟಿ. ಎ ಪೈ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಯು. ಪುಂಡಲೀಕ ಶೆಣೈಯವರು ವರದಿಯನ್ನೋದಿದರು. ಶ್ರೀ ಕೆ. ಗುಂಡು ಕಾಮತರು ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣಗಳಾದ ಬಳಿಕ ಕನ್ನಡ, ಇಂಗ್ಲಿಷ್, ಹಿಂದಿ ನಾಟಕಾಭಿನಯಗಳಾದುವು.

ಅಂದು ಬೆಳಿಗ್ಗೆ ಧ್ವಜಾರೋಹಣ, ಛದ್ಮವೇಷ ಸ್ಪರ್ಧೆ, ಬಾಲಮಕ್ಕಳಿಗೆ ಸಿಹಿ ತಿಂಡಿ ಹಂಚುವಿಕೆ ಕಾರ್ಯಕ್ರಮಗಳಿದ್ದುವು.

ಆಕಾಶವಾಣಿಯಲ್ಲಿ ಯಕ್ಷಗಾನ- ಧರ್ಮಸ್ಥಳ ಮೇಳದ ಯಕ್ಷಗಾನ ಕಲಾವಿದರು ಇದೇ ತಾ. ೨೬ರಲ್ಲು ರಾತ್ರಿ ೯½ ಗಂಟೆಯಿಂದ ೧೧ ಗಂಟೆಯ ನಡುವೆ ಬೆಂಗಳೂರು ಆಕಾಶವಾಣಿ ಕೇಂದ್ರದಿಂದ 'ಕುಮಾರ ವಿಜಯ' ಪ್ರಸಂಗದ ಪ್ರದರ್ಶನವನ್ನು ಪ್ರಸಾರಗೊಳಿಸಲಿರುವರು. ಶ್ರೀ ಅಮ್ಮನವರ ಪಿ. ಗೋಪಾಲ ಕೃಷ್ಣ ಭಟ್ಟರ ನಿರ್ದೇಶನದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಕಾಪು— ಜನಾಬ್ ಮೊಹಿಸಿನ್ ಹಾಜಿ ಕಾಸಿಮ್ ಅವರ 'ಇಂಟರ್ ನೇಶನಲ್ ಪ್ರಿಂಟಿಂಗ್ ಪ್ರೆಸ್' ಎಂಬ ಮುದ್ರಣಾಲಯದ ಉದ್ಘಾಟನೆಯನ್ನು ಶ್ರೀ ಟಿ. ಎ ಪೈ, ಎಂ. ಎಲ್. ಎ.ರವರು ತಾ. ೨೧ರಂದು ನೆರವೇರಿಸಿದರು.

ಬ್ರಹ್ಮಾವರ— ಬೋರ್ಡ್ ಹಾ! ಎ! ಶಾಲೆಯ ವರ್ಧಂತಿಯು ತಾ. ೧೯ರಂದು ಶ್ರೀ ಟಿ. ಎ. ಪೈ, ಎಂ. ಎಲ್. ಎ.ಗಳ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು. ಶ್ರೀ ಎಸ್. ಎಸ್. ಕೊಳ್ಕೆಬೈಲು ಎಂ. ಎಲ್. ಎ. ಮೊದಲಾದವರು ಭಾಷಣವಿತ್ತರು.

ಅದೇ ದಿನ ಕೈಮಗ್ಗ ಸಪ್ತಾಹದ ಉದ್ಘಾಟನೆಯನ್ನು ಶ್ರೀ ಎಸ್. ಎಸ್ ಕೊಳ್ಕೆಬೈಲ್ ಎಂ. ಎಲ್. ಎ ರವರು ನೆರವೇರಿಸಿದರು. ಶ್ರೀಗಳಾದ ಟಿ. ಎ. ಪೈ, ಎಂ. ಎಲ್. ಎ; ಬೈಕಾಡಿ ವೆಂಕಟ ಕೃಷ್ಣರಾವ್ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು.

ದಯಮಾಡಿ ಚಂದಾಹಣವನ್ನು ಕಳುಹಿಸಿಕೊಡಿರಿ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ನವ್ಯತೆ ಹಾಗು ಕಾವ್ಯಜೀವನ—

ಬರೆದವರು: ವಿ. ಕೃ. ಗೋಕಾಕ. ಪ್ರಕಾಶಕರು: ಸುರುಚಿ ಪ್ರಕಾಶನ, ಮೈಸೂರು. ಪ್ರತಿಗಳಿಗೆ ಕಾರ್ಯಾಲಯ, ಪ್ರಕಾಶಕರು, ಮೈಸೂರು. ಬೆಲೆ: ರೂ. ೨—೦—೦.

ಪ್ರಿನ್ಸಿಪಲ್ ಗೋಕಾಕರು ಇಲ್ಲಿ ಬಹಳ ಪ್ರಾಮುಖ್ಯವಾದ ವಿಷಯವೊಂದನ್ನು ವಿವೇಚನೆಗೆ ಆರಿಸಿಕೊಂಡಿದ್ದಾರೆ ಕಾವ್ಯವು ನವ್ಯವಾಗುವುದು ಸ್ಪರ್ಧೆಗೆಂದಲ್ಲ, ಪೂರಕವೆಂದು— ಎಂದವರು ತಮ್ಮ ನಿಲುವೆಯನ್ನು ಸ್ಪಷ್ಟೀಕರಿಸಿದ್ದಾರೆ. ನವ್ಯತೆಯ ಅಭಿವ್ಯಕ್ತಿಯು ಒಂದು ಹೊಸಬಗೆಯ ಚೆಲುವನ್ನು ಕಾವ್ಯದಲ್ಲಿ ಮೂಡಿಸುತ್ತದೆಂದು ಅವರು ಬಹಳ ವಿಶದವಾಗಿ ವಿವರಿಸಿದ್ದಾರೆ. ನವ್ಯಕಾವ್ಯದ ರೀತಿಗೆ ಅವರು ನಿರಾಭರಣ ಸುಂದರಿಯ ಮಾದರಿಯನ್ನು ಕೊಡುತ್ತಾರೆ — ನವ್ಯಕಾವ್ಯವು ವಸ್ತುನಿಷ್ಠವೇ ಹೊರತು ವ್ಯಕ್ತಿನಿಷ್ಠವಲ್ಲ, ಹೇಳುವ ಮಾತನ್ನು ಅಲಂಕಾರದ ಮುಸುಕಿನೊಳಗಿಂದ ಹೇಳದೆ ನೇರವಾಗಿ ಅದಿ ತೋರಿಸುವುದೇ ನವ್ಯಕಾವ್ಯದ ವೈಶಿಷ್ಟ್ಯ ಎಂದಿಲ್ಲಿ ನುಡಿದಿದ್ದಾರೆ. ಕಾವ್ಯಜೀವನವನ್ನು ಕುರಿತು ಇಲ್ಲಿ ನಾಲ್ಕು ಪ್ರಬಂಧಗಳಿವೆ. ಇವುಗಳಲ್ಲಿ ಎರಡು ಬಹಳ ಮುಖ್ಯವಾಗಿವೆ. ಕಾವ್ಯಕ್ಕೂ ಸೌಂದರ್ಯಕ್ಕೂ ಇರುವ ಸಂಬಂಧವನ್ನು ಅವರು ಸೌಂದರ್ಯ ದೃಷ್ಟಿಯಿಲ್ಲದೆ ಕಾವ್ಯರಸಾಸ್ವಾದನೆಯೆ ಅಸಾಧ್ಯವೆಂಬ ಮಾತಿನ ಜಾಡು ಹಿಡಿದು ವರ್ಣಿಸಿದ್ದಾರೆ. ಕಾವ್ಯ ಜೀವನದ ಚೆಲುವಿಕೆಯನ್ನು ಮನಗಾಣಲು ನಾವು ಎಷ್ಟು ಎತ್ತರದಲ್ಲಿ ನಿಲ್ಲಬೇಕಾಗುತ್ತದೆ, ನಮ್ಮ ಪೂರ್ಣ ದೃಷ್ಟಿಯ ಸ್ವರೂಪ ಆಗ ಏನಿರುತ್ತದೆ ಎಂಬುದನ್ನು ಆಧ್ಯಾತ್ಮಿಕವಾದಪಟ್ಟಿಸ್ಥಲಗಳನ್ನು ಕಾವ್ಯಕ್ಕೆ ಅನ್ವಯಿಸಿ ನಿರೂಪಿಸಿದ್ದಾರೆ. ಅರವಿಂದರ ಕಾವ್ಯ ದೃಷ್ಟಿಯೆಂಬ ಪ್ರಬಂಧವು ನವ್ಯ ಕಾವ್ಯದ ಆರಾಧಕರಿಗೆ ಕೈಗನ್ನಡಿಯಂತೆಯೂ ಕೈಕಂಬದಂತೆಯೂ ಇದೆ. ರತ್ನಾಕರ ವರ್ಣಿಯ ಕಾವ್ಯಧರ್ಮವೆಂಬ ಇನ್ನೊಂದು ಪ್ರಬಂಧವು ಕಾವ್ಯದಲ್ಲಿ ಧರ್ಮ, ರಸಿಕತೆ ಮತ್ತು ತತ್ವಗಳ ಸಾಮ್ಯವನ್ನು ಹೇಗೆ ಸಾಧಿಸಬಹುದೆಂದು ತಿಳಿಸಿ ಹೇಳುತ್ತದೆ. ಈ ಪುಸ್ತಕವು ಒಟ್ಟಿನಲ್ಲಿ ವಿಪುಲ ವಿಷಯ ಸಂಪತ್ತಿನಿಂದ ಕೂಡಿದೆ. ಸಾಹಿತ್ಯಾರಾಧಕರಿಗೆ ಇಲ್ಲಿ ರಸದೂಟವಿದೆ. ಗೋಕಾಕರ ಹೃದಯ ಸ್ಪರ್ಶಿಯಾದ, ರಸಸ್ಯಂದಿಯಾದ ಶೈಲಿಯೂ ಮಾರ್ಮಿಕವಾದ, ಚತುರವಾದ ನಿರೂಪಣೆಯೂ ಭಾಷೆಯ ಮೇಲೆ ಅವರಿಗಿರುವ ಹಿಡಿತ ಮತ್ತು ಬಿಗಿಯೂ ಈ ಪುಸ್ತಕವನ್ನು ಪ್ರತಿಯೊಬ್ಬ ಕವಿಯೂ ಲೇಖಕನೂ ಓದಲೇಬೇಕೆನ್ನುವಂತೆ ಮಾಡಿರುತ್ತವೆ. ಕಾವ್ಯಾಭ್ಯಾಸಿಗಳಿಗಿದು ಕೈಪಿಡಿ; ಸಾಹಿತ್ಯ ಪ್ರಿಯರಿಗಿದು ಅನುಭವಾಮೃತ.

ಲಘು ಪರಿಚಯ

ಮಂಗಳೂರಿನ "ವಿವೇಕಾಭ್ಯುದಯ" ಮಾಸ ಪತ್ರಿಕೆಯು ವೇಣೂರಿನ ಗೋಮಟನಿಗೆ ಮಹಾ ಮಸ್ತಕಾಭಿಷೇಕದ ಉತ್ಸವ ನಡೆಯುವ ಸಂದರ್ಭದಲ್ಲಿ ವಿಶೇಷ ಸಂಚಿಕೆಯೊಂದನ್ನು ಹೊರಡಿಸಿದೆ. ಇದನ್ನೋದಿದರೆ ತುಳುನಾಡಿನಲ್ಲಿ ಜೈನರ ಆಳ್ವಿಕೆಯು ಬೀರಿದ ಪ್ರಭಾವದ ಮತ್ತು ಇಲ್ಲಿಯ ಜೈನ ಕ್ಷೇತ್ರಗಳ ಮಹಿಮೆಯ ಪರಿಚಯ ನಮಗಾಗುತ್ತದೆ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ 686/1955

ಕೆ. ವಾಸುದೇವ ಹೆಗ್ಡೆ ಇವರ ಜನರಲ್ ಏಜಂಟ್ ಬಿ. ನಾಗೇಶ ಭಟ್ಟ —ವಾದಿ.

ಮತ್ತು

ಮಾರ್ಗರೆಟ್ ಲೂವಿಸ್ ಬ್ಯ ಕೂಡಾ —ಪ್ರತಿವಾದಿದು.

ಇವರೊಳಗೆ

ಹೆಲೆನ್ ಸಿರೇರ, ಶ್ಯಾಬಿ ಸಿರೇರರ ಮಗಳು ವ ಲಿಯಾಂ ಸಿಕೇರರ ಹೆಂಡತಿ, ಉಡುಪಿ ತಾಲೂಕು ತೆಂಕನಿಡಿಯೂರು ಗ್ರಾಮದ ತೊಟ್ಟಂಬು ಎಂಬಲ್ಲಿರುವವಳು—5ನೇ ಪ್ರತಿವಾದಿ.

ಸದ್ರಿ ವ್ಯಾಜ್ಯದ 5ನೇ ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ವಾದಿಯು ಜರು ಸಂವತ್ಸರದ ಮೂಲಗೇಣಿ ವಸೂಲಿ ಬಗ್ಗೆ ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು 5ನೇ ಪ್ರತಿವಾದಿಳಿಗೆ ಅಪ್ಪೆರಿ ನೋಟೀಸ್ ಬಗ್ಗೆ 5-3-56ಕ್ಕೆ ಇಡೋಣವಾಗಿಯದೆ. 6ನೇ ಪ್ರತಿವಾದಿಳು ಸದ್ರಿ ತನಬ ದಿನ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳದಿದ್ದರೆ ಅವಳ ಗೈರ ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

(By Order of the Ccurt)

K. Varadaraya Pai,
Advocate for Plaintiff.

ಉಡುಪಿ, 20-2-56.

ಕಾರ್ಕಳ—ದ. ಕ. ಜಿಲ್ಲಾ ಬೇಸಾಯಗಾರರ ಸಂಘದ ಮಹಾ ಸಭೆಯು ಕಾರ್ಕಳ ತಾಲೂಕಿನ ಮೂಳಗ್ರಾಮದಲ್ಲಿ ತಾ. 8ರಲ್ಲಿ ಶ್ರೀ ಎಮ್. ಜಯರಾಮ ಶಂಕರ ಅಧ್ಯಕ್ಷತೆಯಲ್ಲಿ ಜರಗಿ ಬೇಸಾಯಗಾರನ ಬೇಸಾಯದ ಭೂಮಿಯ ಹಕ್ಕಿನ ಅಸ್ಥಿರತೆಯನ್ನು ಹೋಗಲಾಡಿಸುವ! ಭೂಮಿಯು ಆತನ ಹಕ್ಕಿನಲ್ಲಿ ಸ್ಥಿರತೆಯನ್ನು ಕಲ್ಪಿಸಿಕೊಡಬೇಕೆನ್ನುವ, ಮೂಲಧನದ ಬಡ್ಡಿರೂಪವಾಗಿ ಕೊಡುವ ಗೇಣಿಯನ್ನು ಸರಕಾರ ನಿರ್ಣಯಿಸಿಕೊಟ್ಟು ಅದಕ್ಕಿಂತ ಹೆಚ್ಚಿನ ಗೇಣಿಯನ್ನು ವಸೂಲು ಮಾಡುವರೆ ಧನಿಗೆ ಹಕ್ಕು ಇರಕೂಡದೆನ್ನುವ ಗೇಣಿಯನ್ನು ಭೂಮಿಯಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಎರಡು ಬೆಳೆಗಳಿಗೆ ಮಾತ್ರವೇ ಎಣಿಕೆಮಾಡಬೇಕೆನ್ನುವ, ಉತ್ತಮ ವರ್ಗದ ಭೂಮಿಗಳ ಬೆಳೆಯನ್ನು ಕನಿಷ್ಠತರ ಭೂಮಿಗಳಲ್ಲಿ ಎತ್ತುವರೆ ದುಬಾರಿ ಭೂಮಿಯನ್ನು ಸಾಗುವಳಿಮಾಡುವ ಅವಶ್ಯಕತೆಯಿರುವುದರಿಂದ, ಕನಿಷ್ಠತರ ಭೂಮಿಗಳಿಗೆ ಉತ್ತಮತರ ಭೂಮಿಗಳ ಗೇಣಿಯ ಅರ್ಧಾಂಶದಷ್ಟು ಗೇಣಿಯನ್ನು ಎಣಿಕೆ ಮಾಡಬೇಕೆನ್ನುವ ಉತ್ತಮ ವರ್ಗದ ಭೂಮಿಗಳಲ್ಲಿ ಬೆಳೆಯುವ ಎರಡೂ ಬೆಳೆಗಳ ಸರಾಸರಿ ಎಂಟನೇ ಒಂದಂಶದಷ್ಟು ಗೇಣಿಯನ್ನು ಉತ್ತಮ ವರ್ಗದ ಭೂಮಿಗಳಿಗೆ ಎಣಿಕೆಮಾಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಶಿರ್ವ ಬಂಟಕಲ್ಲು—ರಾಜಾಪುರ ಸಾರಸ್ವತ ವ ಭಾಲಾವಲಿಕಾರ್ ರಾಜಾಪುರಸಾರಸ್ವತ ಸಮ್ಮೇಳನದ ಕಾರ್ಯಕಾರೀ ಸಮಿತಿಯು ತಾ. 12ರಲ್ಲಿ ಶ್ರೀ ದಿ. ಅಣ್ಣಯ್ಯ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಸಮ್ಮೇಳನ ಅಂದಾಜು ಬಜೇಟಿನ ಖರ್ಚನ್ನು ಒಟ್ಟುಗೂಡಿಸುವ ಸಮ್ಮೇಳನದ ಅಧ್ಯಕ್ಷ ಮತ್ತು ಉದ್ಘಾಟಕರನ್ನು ಆರಿಸುವ ಸ್ವಾಗತ ಸಮಿತಿ ರಚನೆಯ ಕುರಿತು ತೀರ್ಮಾನಗಳಾದುವು.

ನಿಂಜೂರು—ಸ್ಥಳೀಯ ಶ್ರೀ ವಿವೇಕಾನಂದ ಸೇವಾ ಸಂಘದ ವತಿಯಿಂದ ತಾ. 11ರಲ್ಲಿ ನಡೆದ ವಾಲಿಬೋಲ್ ಪಂದ್ಯಾಟದಲ್ಲಿ ನಿಂಜೂರು ಟೀಮಿನವರು ವಿಜಯಿಗಳಾಗಿರುತ್ತಾರೆ. ಶ್ರೀ ವಿವೇಕಾನಂದ ಸೇವಾ ಸಂಘದ ವಾರ್ಷಿಕ ಮಹಾಸಭೆಯು ಇದೇ ತಾ 26ರಲ್ಲಿ ಜರಗಲಿರುವುದು.

ಹೆಜ್ಮಾಡಿಕೋಡಿ—ತಾ. 12ರಲ್ಲಿ ಹೆಜ್ಮಾಡಿಕೋಡಿ ಫಿಶರೀಸ್ ಶಾಲಾ ಹಳೆ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಸಮಾಜ ವಿಕಾಸ ಯೋಜನೆಯ ಸಹಾಯದಿಂದ ನಿರ್ಮಿತವಾದ ಸಮಾಜ ಭವನದ ಉದ್ಘಾಟನೆಯನ್ನು ಫಿಶರೀಸ್ ಇಲಾಖೆಯ ಅಸಿಸ್ಟಾಂಟ್ ಡೈರೆಕ್ಟರ್ ಶ್ರೀ ಕೆ. ದೂಮಪ್ಪನವರು ನೆರವೇರಿಸಿದರು. ಡಿ! ಮುನ್ಸಿಫ್ ಶ್ರೀ. ಎಚ್. ಲಕ್ಷ್ಮಣ ಸಾಲಿಯಾನರು ಸಭಾಧ್ಯಕ್ಷತೆ ವಹಿಸಿದ್ದರು. ಮಹಿಳಾಭಿವೃದ್ಧಿ ಕಟ್ಟಡದ ಹಾಗೂ ರೇಡಿಯೋದ ಉದ್ಘಾಟನೆಯು ಅಸಿಸ್ಟಾಂಟ್ ಪ್ರೊಜೆಕ್ಟ್ ಆಫೀಸರ್ ಶ್ರೀ. ಎನ್. ಮಾಬೆನರಿಂ ನೆರವೇರಿಸಲ್ಪಟ್ಟಿತು. ಪಡಿಕುದ್ರು ಕೋಡಿಕಾಲು ಸಂಕದ ಶಂಕು ಸ್ಥಾಪನೆಯನ್ನು ಕುಮಾರಿ ಎ. ವಿಶಾಲಾಕ್ಷಿಯವರು ನೆರವೇರಿಸಿದರು. ಡಾ ಚಾಪ, ಶ್ರೀಗಳಾದ ನಾರಾಯಣ ನೇವಾಡಿಗ ಮತ್ತು ಬಿ. ಕೆ. ಶ್ರೀಯಾನರು ಕಾಲೋಚಿತ ಮಾತುಗಳನ್ನಾಡಿದರು.

ಹೊಸೂರು ಕರ್ಜೆ—ಹೊಸೂರು ಗ್ರಾಮದ ಕರ್ಜೆಯಲ್ಲಿ ಹೊಸೂರು ಮತ್ತು ಹಲುವಳಿ ಗ್ರಾಮಗಳ ಬಗ್ಗೆ ಬ್ರಾಂಚ್ ಪೋಸ್ಟಾಫೀಸನ್ನು ತಾ. 7ರಲ್ಲಿ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ, ಉಡುಪಿ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಎನ್. ಕೆ. ಮೆನೋನರು ತೆರೆದರು.

ಜಾನುವಾರು ಕಟ್ಟೆ—ಬಿಲ್ಲಾಡಿ ಗ್ರಾಮದ ಜಾನುವಾರು ಕಟ್ಟೆಯಲ್ಲಿ ಇದೇ ತಾ 1ರಲ್ಲಿ ಉಡುಪಿ ಪೋಸ್ಟಲ್ ಇನ್ಸ್‌ಪೆಕ್ಟರರು ಬ್ರಾಂಚ್ ಪೋಸ್ಟಾಫೀಸನ್ನು ತೆರೆದಿರುವರು.

ಕುಂಬಳೆ—ತಾ. 18ರಲ್ಲಿ ಮಾಯಿಪ್ಪಾಡಿ ಬುನಾದಿ ಶಾಲಾ ಶ್ರೇಣಿಗೆ ಒಳಪಟ್ಟ ಶಾಲಾಧ್ಯಾಪಕರ ತ್ರೈಮಾಸಿಕ ಸಮ್ಮೇಳನವು ಮಾಯಿಪ್ಪಾಡಿ ತರಬೇತಿ ಶಾಲೆಯಲ್ಲಿ ಶ್ರೀ ಕೆ. ರಾಮಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಿ. ತಿಮ್ಮಪ್ಪ ಸೆಟ್ಟರು ಭಾಷಣವಿತ್ತರು.

ತಾ. 17ರಲ್ಲಿ ಇಲ್ಲಿಯ ಪಂಚಾಯತ ಕಟ್ಟಡದಲ್ಲಿ ಶ್ರೀ ಎಮ್. ಎಸ್. ಮೊಗ್ರಾಲರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಇಲ್ಲೊಂದು ಆಸ್ಪತ್ರೆ ಸ್ಥಾಪನೆಯಾಗುವ ಪ್ರಯತ್ನ ಮಾಡಬೇಕೆಂದು ನಿರ್ಧಾರವಾಯಿತು.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 5 1956.

1 ಕೃಷ್ಣಾಬ್ಯ- ಮಧ್ವಬುಕಳ ರಘುರಾಮ ಪ್ರಭುಗಳ ವಿಧವೆ, 2. ಮಧ್ವರಾಯ, 3. ಮೋಹಿನಿ, 4. ಪಾಂಡುರಂಗ, 5. ಆನಂದರಾಯ, 6. ಸರೋಜಿನಿ, 7 ಶ್ರೀನಿವಾಸ, 1ನೇ ಅರ್ಜಿದಾರಳ ಮ್ಯಾನರ ಮಕ್ಕಳು ಇವರ ಕ್ಷೇಮ ಚಿಂತಕಳು ತಾಯಿ 1ನೇ ಅರ್ಜಿದಾರಳು— ಉಡ್ಪಿ ತಾಲೂಕು ಬ್ರಹ್ಮಾವರ ಸ್ನಬೆಯಲ್ಲಿರುವವರು —ಅರ್ಜಿದಾರರು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದ್ರೆ:—

1ನೇ ಅರ್ಜಿದಾರಳ ಗಂಡ ವ ಚಿಕ್ಕ ಅರ್ಜಿದಾರರ ತಂದೆ ಬ್ರಹ್ಮಾವರ ಕಸಬೆಯಲ್ಲಿ ತಾ. 16-12-55ರಲ್ಲಿ ಮೃತಪಟ್ಟ ಮಧ್ವಬುಕಳ ರಘುರಾಮ ಪ್ರಭುಗಳ ಹಕ್ಕಿನ ಬಾಬ್ತು ಸದ್ರಿ ಅರ್ಜಿಯಲ್ಲಿ ಕಾಣಿಸಿದ ಆ್ಯವೇಜು ರೂಪಾಯಿ 636 8—0ನ್ನು ವಸೂಲು ಮಾಡುವರೆ ಅರ್ಜಿದಾರರ ಗೋಸ್ಕರ 1ನೇ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ದಾಕಲ್ಲು ಮಾಡಿದ ಸದ್ರಿ ಅರ್ಜಿಯು ತಾ. 12-3-56ಕ್ಕೆ ತನ್ನಿಗೆ ಇಟ್ಟಿರುವದಿಂದ ಆ ಕುರಿತು ಆಕ್ಷೇಪ ಹೇಳ ತಕ್ಕವರು ಸದ್ರಿ ತಾರೀಕಿನ ದಿವ್ಸ ಸದ್ರಿ ಅರ್ಜಿ ತನ್ನಿ ಸಮಯ ಸದ್ರಿ ಕೋರ್ಟು ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜ್ರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸೋಣಾಗುತ್ತದೆ.

V. G. Kedlaya M. A., LL. B.
Advocate for Petitioners.

Udipi. 20-2-'56.

ರೂಪಾಯಿ 500 ಬಹುಮಾನ

ಲುಕೋಡ್ರಮಾ

(ಬಿಳಿ ಕಲೆಗಳು)

ಲುಕೋಡ್ರಮಾ ಮತ್ತು ಕುಷ್ಠ ರೋಗವನ್ನು ಸುಲಭವಾಗಿ ಹೋಗಲಾಡಿಸಲು ದೇಹದ ಹೊರಗೂ ಒಳಗೂ ನಮ್ಮ ಅನುಭವೀ ಔಷಧ ಪ್ರಯೋಗದಿಂದ ಸಾಧ್ಯವಿದೆ. ಸಹಸ್ರಾರು ಮಂದಿ ಗ್ಯಾರಂಟಿಯಾಗಿ ಗುಣ ಹೊಂದಿದ್ದಾರೆ. ರೂಪಾಯಿ 5/- ಬೆಲೆಯ ನಮ್ಮ ಔಷಧಿಯನ್ನು ದೇಹದ ಹೊರಗೆ ಲೇಪಿಸಿ ಕೆಲವೇ ದಿನಗಳೊಳಗೆ ಈ ಮಹಾ ವ್ಯಾಧಿಯಿಂದ ಗುಣಹೊಂದಿರಿ. ವೇದನಾರೋಧಕ ಮತ್ತು ಕ್ಷಯರೋಗ ವಿಕಾರ ಹಾಗೂ ಎಲ್ಲಾ ತರದ ಕುಷ್ಠ ರೋಗಗಳ ನಿವಾರಣೆ ಬಗ್ಗೆ ಸೇವಿಸುವ ಔಷಧಿ, ಬೆಲೆ ರೂ. 5/-.

Indra Ayurved Bhavan,
(60) P. O. Rajdhanwar (H. Bagh)

ಮಹಿಳಾ ಸಾಹಿತ್ಯ! ನವೀನ ಪುಸ್ತಕ!

ಕುಮಾರಿ ಪಿ. ಯಶೋದಾ ಅವರು ಬರೆದ

ಬಾಳಿನ ಬೆಳಕು

ಬಾಳಿನ ಸೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪ್ಪೋ, ಉಡುಪಿ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪ್ಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಮಂಗಳೂರು

ಜೀವವಿಮಾ ಕಂಪೆನಿಗಳ ಕಸ್ಟೋಡಿಯನ್ ನೇಮಕ-- ಉಡುಪಿಯ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಆರ್. ಪೈ, ಇವರು ಮಂಗಳೂರು ರೋಮನ್ ಕೆಥೊಲಿಕ್ ಪಬ್ಲಿಕ್ ಪ್ರೊವಿಡೆಂಟ್ ಫಂಡ್, ದಿ ಕ್ಯಾಥೊಲಿಕ್ ಸೆಕ್ಯುಲರ್ ಇನ್ಸೂರೆನ್ಸ್ ಕಂಪೆನಿ ಮತ್ತು ದಿ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಎಂಬ ಮೂರು ಜೀವವಿಮಾ ಕಂಪೆನಿಗಳ ಕಸ್ಟೋಡಿಯನ್ ಆಗಿ ಕೇಂದ್ರ ಸರಕಾರದವರಿಂದ ನೇಮಕವಾಗಿದ್ದಾರೆ. ಅವರು ತಮ್ಮ ಕೆಲಸವನ್ನು ಮೊದಲಿನೆರಡು ಕಂಪೆನಿಗಳ ವಿಷಯದಲ್ಲಿ ತಾ. 27—1—1956ರಂದು ಮತ್ತು ಕೊನೆಯವರ ಸಂಗತಿಯಲ್ಲಿ 3—2—1956 ರಂದು ಕೈಗೊಂಡಿದ್ದಾರೆ. ಅವರನ್ನು ಮೇಲಿನ ಮೂರೂ ಕಂಪೆನಿಗಳ ವ್ಯವಹಾರದ ಸಂದರ್ಭದಲ್ಲಿ ಪಾಲಿಸಿದಾರರೂ ಇತರರೂ ಮಂಗಳೂರಿನ ಪೊಸ್ಟಾಫೀಸ್ ಬಿಲ್ಡಿಂಗ್‌ನಲ್ಲಿರುವ ಅವರ ಕಚೇರಿಯಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಆಫೀಸು ಸಮಯದಲ್ಲಿ ಯಾವಾಗಬೇಕಾದರೂ ಭೇಟಿ ಮಾಡಬಹುದೆಂದು ಅಧಿಕೃತವಾಗಿ ತಿಳಿದು ಬರುತ್ತದೆ.

ವಿದಾಯ ಸತ್ಕಾರ— ಮಂಗಳೂರಿನ ದಕ್ಷಿಣ ವರ್ಗವಾದ ಸರಕಾರಿ ವಿದ್ಯುತ್ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಸಿ. ಆರ್. ಪಾರ್ಥಸಾರಥಿ ಯವರನ್ನು ಬೀಳ್ಕೊಡುವ ಸತ್ಕಾರ ಸಮಾರಂಭವು ತಾ. 16ರಲ್ಲಿ ಜೆ. ಸಿ. ಪಿ. ಸಿ. ಕಂಪೆನಿಯ ವಠಾರದಲ್ಲಿ ಬಿ. ವೈಕುಂಠ ಬಾಳಿಗ, ಎಮ್. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಸಿ. ಪಿ. ಮಲ್ಯ, ಶ್ರೀಗಳಾದ ಕೆ. ಆರ್. ಕಾರಂತ್, ಪಿ. ಆರ್. ರಂಗನಾಥ ಪೂಂಜ ಮೊದಲಾದವರು ಮುಖ್ಯ ಅತಿಥಿಗೆ ಶುಭಾಶಯ ಬಯಸಿ ಕಾಲೋಚಿತಮಾತುಗಳನ್ನಾಡಿದರು. ಸಮಾರಂಭ ವ್ಯವಸ್ಥಾಪಕರಾದ ಶ್ರೀ ವಿ. ಎಸ್. ಕುಡ್ವರು ಧನ್ಯವಾದ ಗಳನ್ನಿತ್ತರು. ಹೊಸ ಎಕ್ಸಿಕ್ಯೂಟಿವ್ ಇಂಜಿನಿಯರರಾಗಿ ಶ್ರೀ ಸುಬ್ಬರಾಮನ್ ರವರು ನೇಮಕಹೊಂದಿರುವರು.

ನಮ್ಮ ರಾಜ್ಯಾಂಗ ಘಟನೆಯ ಚೌಕಟ್ಟು— ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ತಾ. 16ರಲ್ಲಿ ರಾತ್ರಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಬಿ. ಬಿ. ಶೆಟ್ಟರು 'ನಮ್ಮ ರಾಜ್ಯಾಂಗ ಘಟನೆಯ ಚೌಕಟ್ಟು' ಕುರಿತು ಮಾತನಾಡುತ್ತಾ, ಒಂದು ರಾಜ್ಯಾಂಗ ಘಟನೆಯ ಉಪಯುಕ್ತತೆ ಅಥವಾ ಯಶಸ್ಸು, ಅದು ಒಳಗೊಂಡಿರುವ ನಿಬಂಧನೆಗಳು ಅದು ಕೊಟ್ಟಿರುವ ಸೌಲಭ್ಯಗಳ ಆಶ್ವಾಸನೆಗಳನ್ನು ಹೊತ್ತ್ರವೇ ಹೊಂದಿಕೊಂಡಿರದೆ, ಅವರ ಕಾರ್ಯಾಚರಣೆ ಮತ್ತು ನ್ಯಾಯಾಂಗದ ವ್ಯವಸ್ಥೆಯನ್ನು ಹೊಂದಿಕೊಂಡಿದೆ ಎಂದರು. ಸಾಮಾನ್ಯವಾಗಿ ರಾಜ್ಯಾಂಗ ಘಟನೆಗಳಲ್ಲಿ ಏಕೀಕೃತ ಸರಕಾರ—ರಾಷ್ಟ್ರಗಳ ಸಂಘ—ಒಳ ಆಡಳಿತದಲ್ಲಿರುವ ರಾಜ್ಯಗಳ ಕೂಟ—ಹೀಗೆ ಮೂರು ವಿಧದವುಗಳಿವೆ. ಆದರೆ ನಮ್ಮ ರಾಜ್ಯಾಂಗ ಘಟನೆಯು ಏಕೀಕೃತ ಸರಕಾರ ಮತ್ತು ಒಳ ಆಡಳಿತದಲ್ಲಿರುವ ರಾಜ್ಯಗಳ ಕೂಟ ಹೀಗೆ ಎರಡೂ ಗುಣಗಳನ್ನು ಹೊಂದಿಕೊಂಡಿರುವುದು ಒಂದು ವೈಶಿಷ್ಟ್ಯವಾಗಿದೆ ಎಂದರು. ಅಧ್ಯಕ್ಷರ ಭಾಷಣಾನಂತರ ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದವನ್ನರ್ಪಿಸಿದರು.

ಆಧುನಿಕ ಔದ್ಯೋಗೀಕರಣದ ವೃತ್ತಿ ಎಂಬ ವಿಷಯದ ಮೇಲೆ ನಿವೃತ್ತ ಇಲೆಕ್ಟ್ರಿಕಲ್ ಚೀಫ್ ಇಂಜಿನಿಯರ್ ಶ್ರೀ ಕೆ. ವಾಸುದೇವ ಕಾರಂತರು, ಕರ್ನಾಟಕ ಪೊಲಿಟೆಕ್ನಿಕ್‌ನ ಯಾಂತ್ರಿಕ ವಿಜ್ಞಾನ ಸಂಘದ ಸ್ವಸ್ತಿವಾಚನ ಸಮಾರಂಭದಲ್ಲಿ ವ್ಯಾಖ್ಯಾನ ನೀಡುತ್ತಾ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಉದ್ಯಮಗಳ ಅಭಿವೃದ್ಧಿಯನ್ನು ಒಂದು ದೃಢ ಸಂಕಲ್ಪದಿಂದ ಸಾಧಿಸುತ್ತಿರುವರೆಂಬುದನ್ನು ವಿವರಿಸಿ, ನಮ್ಮ ದೇಶದಲ್ಲಿ ದುರ್ದೈವವಶಾತ್ ಉದ್ಯಮ ಕ್ಷೇತ್ರದಲ್ಲಿ ಅಂತಹ ಒಂದು ವೃತ್ತಿ ಕಂಡುಬರುವುದಿಲ್ಲವೆಂದರು. ಶ್ರೀ ಕೆ. ಕೆ. ನಾಯರರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಅನಂತ ಬಿ. ಎಮ್. ಅವರು ಧನ್ಯವಾದವನ್ನಿತ್ತರು.

ಕಲೆಕ್ಟರರ ಪ್ರಕಟಣೆ— ಕೈಮಗ್ಗದಲ್ಲಿ ತಯಾರಿಸುವ ಉತ್ತಮ ನಮೂನೆಯ ಹತ್ತಿಯ ಬಟ್ಟೆಗಳಿಗೆ ಬಹುಮಾನ ವಿತರಣೆ ಮಾಡುವ ಏರ್ಪಾಡನ್ನು ಸರಕಾರದವರು ಮಾಡಿರುತ್ತಾರೆ. ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆಗಳಿಗೆ ಸ್ಪರ್ಧೆಯು ಮಲಬಾರು ಜಿಲ್ಲೆಯ ಕಣ್ಣಾನೂರು ಸೆಂಟರಿನಲ್ಲಿ ಜರಗಲಿರುವುದು. ಉತ್ತಮ ತರದ 'ಶರ್ಟಿಂಗ್' 'ಟವಲ್' 'ಬೆಡ್ ಸ್ಪ್ರೆಡ್' 'ಕೋಟಿಂಗ್' ಮತ್ತು 'ಫರ್ನಿಶಿಂಗ್ ಫೆಬ್ರಿಕ್ಸ್' ಗಳಿಗೆ ರೂಪಾಯಿ 50 ರಿಂದ 250 ರ ತನಕ ಬಹುಮಾನಗಳಿರುವುವು. ಬಹುಮಾನವನ್ನು ತಾ. 21-3-56 ಮತ್ತು 25—3—56 ರೊಳಗೆ ಕಣ್ಣಾನೂರು ಸ್ಪರ್ಧೆಯಲ್ಲಿ ಹಂಚುವರು. ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಳ್ಳುವ ಬಗ್ಗೆ ಕೂಡಲೇ ಮಲಬಾರು ಕಲೆಕ್ಟರರಿಗೆ ಬರೆಕೊಳ್ಳುವುದು. ಸ್ಪರ್ಧೆಯ ಶರ್ತಗಳನ್ನು ಮಲಬಾರು ಕಲೆಕ್ಟರರು ತಿಳಿಸುವರು. ಹೆಸರುಗಳನ್ನು ತಾ. 25-3-56 ರೊಳಗೆ ರಿಜಿಸ್ಟರ್ ಮಾಡಬೇಕು. ಮತ್ತು ಸ್ಪರ್ಧೆಯ ವಸ್ತ್ರಗಳನ್ನು ತಾ. 15-3-56 ರೊಳಗಾಗಿ ಕಣ್ಣಾನೂರು ತಹಶೀಲ್ದಾರರಿಗೆ ರವಾನಿಸಬೇಕು.

ಕೈಮಗ್ಗ ಸಪ್ತಾಹ – ಅಖಿಲಭಾರತ ಕೈಮಗ್ಗ ಸಪ್ತಾಹೋತ್ಸವ ಮತ್ತು ಕೈಮಗ್ಗ ವಸ್ತ್ರಗಳ ಪ್ರದರ್ಶನವು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. 19ರಲ್ಲಿ ದ. ಕ. ಸೆಂಟ್ರಲ್ ಕೋಓಪರೇಟಿವ್ ಬ್ಯಾಂಕಿನ ಮಾಳಿಗೆಯಲ್ಲಿ ಶ್ರೀ ಎಂ. ಜಿ. ರಾಜಾರಾಮರಿಂದ ಉದ್ಘಾಟಿಸಲ್ಪಟ್ಟಿತು. ಉದ್ಘಾಟಕರು "ಕೈಮಗ್ಗ ಬಟ್ಟೆಗಳ ತಯಾರಿಕೆಗೆ ಸರಕಾರವೂ ತುಂಬಾ ಪ್ರೋತ್ಸಾಹವನ್ನು ಕೊಡುತ್ತಿದೆ, ಅಲ್ಲದೆ ಈ ಬಟ್ಟೆಗಳಿಗೆ ವಿದೇಶೀ ಬೇಡಿಕೆ ಹೆಚ್ಚುತ್ತಲಿದೆ" ಎಂದರು. ನಂತರ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಶ್ರೀ ಎಸ್. ಸಣ್ಣಪ್ಪಯ್ಯ ಎಮ್. ಎಲ್. ಸಿ, ಮೊದಲಾದವರ ಭಾಷಣಗಳಾದುವು. ಅಧ್ಯಕ್ಷರಾದ ಕೆ. ಕೆ. ಹೆಗ್ಡೆಯವರು ನೇಕಾರ ಸಂಘಗಳಿಗೆ ಬಹುಮಾನವಿತರಣೆ ಮಾಡಿ ಕೈಮಗ್ಗದ ಬಟ್ಟೆಗಳನ್ನು ಒಳ್ಳೆಯ ರೀತಿಯಲ್ಲಿ ತಯಾರಿಸಲು ಪ್ರಯತ್ನಿಸಬೇಕೆಂದೂ ಜನರು ಅವಕ್ಕೆ ಹೆಚ್ಚಿನ ಪ್ರೋತ್ಸಾಹವನ್ನೀಯಬೇಕೆಂದೂ ಹೇಳಿದರು. ಕೋಓಪರೇಟಿವ್ ಡೆಪ್ಯುಟಿ ರಿಜಿಸ್ಟ್ರಾರ್ ಶ್ರೀ ಕಾಳಪ್ಪ ಶೆಟ್ಟರು ಧನ್ಯವಾದವನ್ನಿತ್ತರು.

ವಾರ್ಷಿಕೋತ್ಸವ - ತಾ. 18ರಲ್ಲಿ ಮಹಿಳೆಯರ ಗವರ್ನ್‌ಮೆಂಟ್ ಸೆಕೆಂಡರೀ ಮತ್ತು ಟ್ರೈನಿಂಗ್ ಶಾಲೆಯ ವಾರ್ಷಿಕೋತ್ಸವವು ನಗರಸಭಾಪತಿಯಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು.

ಶಾಲೆಯ ಸುಪರಿಂಟೆಂಡೆಂಟ್ ಕುಮಾರಿ ಚಾಂದಿಯವರು ವರದಿಯನ್ನೋದಿದ ಬಳಿಕ ಬರುವ ವರ್ಷದಿಂದ ಸೆಕ್ರೆಟೇರಿಯಲ್ ಮತ್ತು ಗೃಹ ವಿಜ್ಞಾನ ತರಗತಿಗಳನ್ನು ತೆರೆದು, ಈ ಶಾಲೆಯನ್ನು ವಿವಿಧೋದ್ದೇಶ ಶಾಲೆಯಾಗಿ ಪರಿವರ್ತಿಸಬೇಕೆಂದು ನಿಶ್ಚಯಿಸಿರುತ್ತೇವೆ ಎಂದು ಹೇಳಿದರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಾನಂತರ ವಿದ್ಯಾರ್ಥಿನಿಯರಿಂದ ವಿವಿಧವಿನೋದಾವಳಿಗಳ ಕಾರ್ಯಕ್ರಮಗಳು ಜರಗಿದುವು.

ಹರಿಜನ ಯುವಕ ಸೇವಾ ಸಂಘದ— ಆಶ್ರಯದಲ್ಲಿ ತಾ. 12ರಲ್ಲು ದಿ. ರಾಮಾನಂದ ಸ್ಮಾರಕ ಕಪ್ ಪ್ರಥಮ ಉದ್ಘಾಟನೆಯು ಶ್ರೀ ಎಚ್. ಮನಮೋಹನ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮಂಜಪ್ಪನವರು ಸ್ವಾಗತ ಭಾಷಣ ಮಾಡಿದರು. ಸಂಜೆ ಪಂದ್ಯಾಟದಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯು ಶ್ರೀ ಲೋಕಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಕೋಟ್ಯಾನರು ವರದಿಯನ್ನೋದಿದರು. ಶ್ರೀಗಳಾದ ಯು. ರಾಮರಾವ್, ಪಿ. ವಿ. ಬಂಗೇರ, ಯಂ. ರಮಾಕರರು ಭಾಷಣವಿತ್ತರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ-- ಸಾಮಾನ್ಯ ಸಭೆಯು 26—2—56ನೇ ಆದಿತ್ಯವಾರ ಅಪರಾಹ್ನ 3ಗಂಟೆಗೆ ಜರಗಲಿರುವುದು

ಆದರ್ಶ ಸತಿ—ಸ್ಥಳೀಯ ಜ್ಯೋತಿ ಟಾಕೀಸಿನಲ್ಲಿ ನಡೆಯುತ್ತಿರುವ ಎ. ವಿ. ಎಂ. ರವರ 'ಆದರ್ಶ ಸತಿ' ಕನ್ನಡ ಚಿತ್ರದ 50ನೇ ದಿನಾಚರಣೆಯು ತಾ. 18ರಂದು ನೆರವೇರಿಸಲ್ಪಟ್ಟಿತು

ಪ್ರಥಮ ಸ್ತ್ರೀ ವಕೀಲರು—— ಕುಮಾರಿ ಅಜ್ಜಾಡಿ ಪುಷ್ಪಾ ಭಂಡಾರಿಯವರು ಕಳೆದ ತಾ. 13ರಿಂದ ಮಂಗಳೂರಲ್ಲಿ ವಕಾಲತನ್ನು ಆರಂಭಿಸಿರುವರು. ಜಿಲ್ಲೆಯಲ್ಲಿ ಇವರೇ ಪ್ರಥಮ ಸ್ತ್ರೀ ವಕೀಲರು.

ಶ್ರೀ ವಿ. ಕೇಶವ ಕಾಮತರ ನಿಧನ-- ದಿ. ವಿ. ಎಸ್. ಕಾಮತರ ಪುತ್ರರೂ ಜಿಲ್ಲೆಯ ಮೊದಲ ದೈನಂದಿಕ 'ಸ್ವತಂತ್ರ ಭಾರತ'ದ ಸಂಚಾಲಕರೂ ಕೆನರಾ ಪ್ರಿಂಟಿಂಗ್ ಎಂಡ್ ಪಬ್ಲಿಷಿಂಗ್ ಹೌಸ್ ಲಿಮಿಟೆಡಿನ ಸ್ಥಾಪಕರೂ ಆಗಿದ್ದ ಶ್ರೀ ವಿ. ಕೇಶವ ಕಾಮತರು ತಾ. 20ರಂದು ತಮ್ಮ 50ನೇ ವಯಸ್ಸಿನಲ್ಲಿ ಮೃತರಾದುದು ವಿಷಾದಕರವಿದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O P. No. 71/1955

ಅಪ್ಪಿ ಹೆಂಗ್ಸು — ಅರ್ಜಿದಾರಳು.
ಚಿನ್ನಪ್ಪ ಯಾನೆ ಕುಂಜಿರೆ—ಅಣ್ಣಪ್ಪ ಮಡಿವಾಳನ ಮಗ. ಪುತ್ತೂರು ತಾಲೂಕು ಕರಾಯ ಗ್ರಾಮದಲ್ಲಿ ರಾಮ ಮಡಿವಾಳರ ಸಂಗಡ ಹಾಲಿಮುಡಿಪಾಡಿ ಗ್ರಾಮದಲ್ಲಿರುವ ಎದ್ರಿ.

ಸದ್ರಿ ವ್ಯವಹರಣೆಯಲ್ಲಿ ಅರ್ಜಿದಾರಳು ವಿವಾಹ ವಿಚ್ಛೇದನೆಗೆ (Dissolution of marrige) ಅರ್ಜಿ ಬರೆಕೊಂಡಿರುವದರಿಂದ ಆದರ ನೋಟೀಸಿನ ತಕ್ಷೀರಿನ ತಾ. 6—3—1956ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಎದ್ರಿಯು ತನ್ನ ಆಕ್ಷೇಪ ಏನಾದರೂ ಹೇಳುವದಿದ್ದರೆ ಆ ವ್ಯಾದೆಯ ಈ ಕೋರ್ಟು ಮುಂದೆ 11 ಘಂಟೆಗೆ ಹಾಜರಾಗಿ ಬರೆದ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಆತನನ್ನು ಶಿವಾಯಿ ಎಂತ ಮಾಡಿ ಈ ವ್ಯವಹರಣೆಯನ್ನು ಒಂದಿನ ತಕ್ಷೀರಿಂದ ತೀರ್ಮಾನಿಸಲಾಗುವುದು—ಎಂತ ಈ ಕೋರ್ಟು R. I. A. 7/56ನೆ ಅರ್ಜಿಯ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(Sd) P Anantharaja Ariga
Advocate for Pititioner.s
ಪುತ್ತೂರು, ತಾ. 10-2-1956.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O. Box No. 3219, BOMBAY 3-

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೇವಾರು ಉಂಗುರಗಳು
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT
Jeweller, Tenkpet, UDIPI, S. Kanara.
ಫೋನ್ ನಂಬ್ರ 66

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಕಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.
ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.
ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
623 "ಸಂತಾನ ಸಿಂಧೂರ ಸದನ" (N. Y.)
ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು (MYSORE) S I.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೋಕ್ಷೆಗಾಗಿ ಲಕ್ಷ್ಮಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳ ಗುಳಿಬಿದ್ದಿದ್ದು ಹಿಂದೆ ರೂಪವನ್ನು ಹೋಗಿ ಕೆಟ್ಟಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಾಶವಾಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖಹೊಂದುವಿರಿ. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು, ಇಂತಹ ಜೀವದಾಯಕವಾದ ಅನ್ಯತ ಸಮಾನವಾದ ರಸಾಯನವು
ಪೌಂಡು ಒಂದಕ್ಕೆ ರೂ. 5—0—0
ಮಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).
ಅಪೇಕ್ಷಕರಿಗೆ ಕ್ಯಾಟಲಾಗು ಇನಾಂ.

(೨ನೇ ಪುಟದಿಂದ)

'ಬೆಳಕಿನ ಕಿರಣಗಳಲ್ಲಿ ಬೇರೆ ಬೇರೆ ಬಣ್ಣದವುಗಳು ಏಕೆ ಇವೆ? ಇವುಗಳೊಳಗಿನ ಅಂತರವೇನು?' ಎಂಬುದು ಕೃಷ್ಣನ ಮುಂದಿನ ಪ್ರಶ್ನೆ.

"ಬೆಳಕೆಂದರೆ ಈಥರದೊಳಗಿನ ಅಂದೋಲನಗಳೆಂದು ನಾನು ಈ ಮೊದಲೇ ಹೇಳಿದುದು ನಿನ್ನ ನೆನಪಿನಲ್ಲಿದೆಯೇ? ಹಲವು ಅಂದೋಲನಗಳು ಬೇರೆಯವುಗಳಿಗಿಂತ ತೀವ್ರ ಇಲ್ಲವೆ ಮಂದವಿವೆ. ಇದರಿಂದಾಗಿಯೇ ಬಣ್ಣಗಳೊಳಗೆ ಅಂತರವು ಉಂಟಾಗುವದು" ಎಂದು ರಾಮರಾಯರು ವಿವರಿಸಿದರು.

"ಅತಿಯಾದ ಅಂದೋಲನಗಳುಳ್ಳ ಬಣ್ಣವು ಯಾವುದು?" ಎಂದು ಕೃಷ್ಣನು ಕೇಳಿದನು.

"ನೀಲಿ" ಎಂದು ರಾಮರಾಯರು ಉತ್ತರಿಸಿದರು. "ಕೆಂಪು ಬಣ್ಣವು ಕಡಿಮೆ ಅಂದೋಲನಗಳುಳ್ಳದ್ದು. ಕೆಂಪು ಮತ್ತು ನೀಲಿ ಇವುಗಳ ಮಧ್ಯದಲ್ಲಿ ಅನುಕ್ರಮವಾಗಿ—ಕಿತ್ತಳೆ, ಹಳದಿ, ಹಸರು ಇತ್ಯಾದಿ ಬಣ್ಣಗಳು ಬರಲಿವೆ. ಆದರೆ ನೀಲವರ್ಣದ ಅಂದೋಲನಗಳಿಗಿಂತಲೂ ಹೆಚ್ಚು ತೀವ್ರವಾದ ಅಂದೋಲನಗಳೂ ಕೂಡ ಈಥರದಲ್ಲಿ ಇರಬಹುದಾಗಿವೆ" ಎಂದು ರಾಮರಾಯರು ಹೇಳಿದರು.

"ಇವುಗಳನ್ನು ಯಾವ ಬಣ್ಣಗಳೆಂದು ಕರೆಯುವರು?" ಎಂದು ಕೃಷ್ಣನು ಪ್ರಶ್ನೆ ಮಾಡಿದನು.

"ಇವುಗಳು ಬಣ್ಣಗಳೇ ಅಲ್ಲ. ಇವುಗಳು ನಮ್ಮ ಕಣ್ಣುಗಳ ಮೇಲೆ ಪರಿಣಾಮಗಳನ್ನು ಮಾಡವು. ನಮ್ಮ ಕಣ್ಣುಗಳಿಗೆ ಇಂತಹ ಅಂದೋಲನಗಳನ್ನು ನೋಡಲು ಸಾಧ್ಯವೇ ಇಲ್ಲ; ಆದರೆ ಛಾಯಾ ಚಿತ್ರಗಳನ್ನು ತೆಗೆಯುವ ಪ್ಲೇಟುಗಳ ಮೇಲೆ ಇವುಗಳು ತಮ್ಮ ಪರಿಣಾಮಗಳನ್ನುಂಟುಮಾಡುವವು. ನಮಗೆ ಇವುಗಳನ್ನು ನೋಡಲುಸಾಧ್ಯವಿರದಿದ್ದರೂ, ಇವುಗಳ ಸಹಾಯದಿಂದ ಛಾಯಾಚಿತ್ರಗಳನ್ನು ತೆಗೆಯುವದು ಸಾಧ್ಯ. ಇಂತಹ ಅಂದೋಲನಗಳು ಕತ್ತಲೆಯಲ್ಲಿಯೂ ಕೂಡ ಛಾಯಾಗ್ರಹಣಕ್ಕೆ ಅನುವು ಮಾಡಿಕೊಡುವವು" ಎಂದರು ರಾಮರಾಯರು ಆಶ್ಚರ್ಯಚಕಿತನಾದ ಕೃಷ್ಣನನ್ನು ನೋಡುತ್ತ "ಈಥರದಲ್ಲಿ ಎಲ್ಲ ತೆರನ ಅಂದೋಲಗಳೂ ಇವೆ. ಇವುಗಳಲ್ಲಿಯ ಹಲವುಗಳು ಮಂದವಿದ್ದರೆ ಉಳಿದವುಗಳು ತೀವ್ರವಿವೆ; ಆದರೆ ಈ ಎಲ್ಲ ಅಂದೋಲನಗಳು ಸೆಕೆಂಡಿಗೆ ೧೮೬,೦೦೦ ಮೈಲುಗಳಷ್ಟು ಚಲಿಸುವಂತಹಗಳು" ಎಂದು ರಾಮರಾಯರು ತಮ್ಮ ಮಾತುಗಳನ್ನು ಮುಗಿಸಿದರು.

'ಎಲ್ಲಕ್ಕೂ ಹೆಚ್ಚು ತೀವ್ರವಾದ ಅಂದೋಲನಗಳು ಯಾವವು?" ಎಂದು ಕೃಷ್ಣನು ಕೇಳಿದನು.

"ಇವುಗಳನ್ನು ಕ್ಷ ಕಿರಣಗಳೆಂದು ಕರೆಯುವೆವು ಇವುಗಳ ಉಪಯೋಗವನ್ನು ನೀನು ಕೇಳಿಬಲ್ಲೆಯಷ್ಟೇ? ಅದೇ ಪ್ರಕಾರ ನಮ್ಮ ಕಣ್ಣುಗಳಿಗೆ ಗೋಚರವಾಗದ ಮತ್ತು ಬೆಳಕನ್ನು ಉತ್ಪಾದಿಸಲಿರುವ ಅಂದೋಲನಗಳಿಗಿಂತಲೂ ಕಡಿಮೆ ತೀವ್ರವಾದ ಬೇರೆ ಅಂದೋಲನಗಳೂ ಕೂಡ ಉಂಟು. ಇವುಗಳನ್ನು ನಾವು ಉಷ್ಣತೆಯ ಅಂದೋಲನಗಳೆಂದು ಕರೆಯುವೆವು" ಎಂದು ರಾಮರಾಯರು ವಿಶದೀಕರಿಸಿದರು.

'ಇವೆಂತಹ ಅಂದೋಲನಗಳು?, ಎಂದು ಕೃಷ್ಣನು ಮತ್ತೆ ಪ್ರಶ್ನೆ ಮಾಡಿದನು.

"ನೀನು ಕೆಂಪಾಗಿ ಕಾಯ್ದ ಕಬ್ಬಿಣವನ್ನು ನೋಡಿದ್ದೀಯಾ? ಇದು ಕೆಂಪು ಬಣ್ಣವನ್ನು ಕೊಡುವಂತಹುದು. ಇದನ್ನು ಇನ್ನೂ ಹೆಚ್ಚಾಗಿ ಕಾಯಿಸಿದಲ್ಲಿ ಇದು ಬಿಳಿದಾಗಿ ಕಾಣುವುದು. ಆದರೆ ಕಬ್ಬಿಣದ ಸಳಿಯು ಯಾವುದೇ ಬಣ್ಣದಾಗಿ ಕಾಣದೆ ಕಾಯ್ದಿರಲೂ ಬಹುದಾಗಿದೆ. ನೀನು ಕೈಯನ್ನು ಸಮೀಪದಲ್ಲಿ ಒಯ್ದರೆ ಇದು ತಿಳಿದು ಬರುವದು. ಈಗ ಇಂತಹ ಸಳಿಯನ್ನು ಕತ್ತಲೆ ಕೋಣೆಯಲ್ಲಿಇರಿಸಿದರೆ ಅದು ನಿನಗೆ ಕಾಣದಾದರೂ, ನೀನು ಅದರ ಸಮೀಪದಲ್ಲಿ ಹೋದೊಡನೆ ಅದು ಬಿಸಿಯಾಗಿದೆ ಎಂಬುದು ತಿಳಿದು ಬರುವದಲ್ಲವೇ? ಇದು ಹೇಗೆ?" ಎಂದುರಾಮರಾಯರುಕೇಳಿದರು.

'ಕಬ್ಬಿಣದ ಸಳಿಯಿಂದ ಏನಾದರೂ ಬರುತ್ತಿರಬೇಕಲ್ಲವೇ?' ಎಂದು ಕೃಷ್ಣನು ಮತ್ತೆ ಕೇಳಿದನು.

'ಅಹುದು. ಕಬ್ಬಿಣದ ಸಳಿಯು ಕಳುಹಿಸಲಿರುವ ಅಂದೋಲನಗಳು ನಮ್ಮ ಕಣ್ಣಿಗೆ ಕಾಣಿಸದಿದ್ದರೂ, ಉಷ್ಣತೆಯೆಂದು ನಮ್ಮ ಸ್ಪರ್ಶೇಂದ್ರಿಯದಿಂದ ತಿಳಿದು ಬರುವವು. ಇವುಗಳು ಬೆಳಕನ್ನು ಉತ್ಪಾದಿಸಲಿರುವ ಅಂದೋಲನಗಳಿಗಿಂತಲೂ ಮಂದವಿವೆ' ಎಂದು ರಾಮರಾಯರು ವಿವರಿಸಿದರು.

'ಕ್ಷ ಕಿರಣಗಳಂತಹ ಅಂದೋಲನಗಳು ಅತಿ ತೀವ್ರವಿದ್ದು ಕಣ್ಣಿಗೆ ಗೋಚರಿಸವು ಹಾಗು ಉಷ್ಣತೆಯನ್ನು ಬೀರುವಂತಹ ಅಂದೋಲನಗಳು ಅತಿ ಮಂದವಿದ್ದು ಕಾಣಿಸಿಕೊಳ್ಳವು ಎಂದು ನಿಮ್ಮಅಭಿಪ್ರಾಯವೇ?' ಎಂದು ಕೃಷ್ಣನು ತಂದೆಯನ್ನು ಕೇಳಿದನು.

'ನಿಜವದೆ. ಮೇಲಾಗಿ ಉಷ್ಣತೆಯ ಅಂದೋಲನಗಳಿಗಿಂತಲೂ ಮಂದವಾದ ಬೇರೆ ಅಂದೋಲನಗಳೂ ಕೂಡ ಉಂಟು. ಅವುಗಳ ವಿಷಯವಾಗಿ ನಿನಗೆ ಮತ್ತೊಮ್ಮೆ ವಿವರಿಸುವೆನು' ಎಂದು ರಾಮರಾಯರು ತಮ್ಮ ಮಾತನ್ನು ಮುಗಿಸಿದರು.

❖ ಇಂದು ಚಿಕ್ಕ ಮಕ್ಕಳಿಗೆ ಭೌತ ಶಾಸ್ತ್ರವನ್ನು ಹೇಗೆ ಮತ್ತು ಯಾವ ರೀತಿಯಲ್ಲಿ—ಅವರಿಗೆ ತಿಳಿಯುವ ಮಾತುಗಳಲ್ಲಿ ಹೇಳಬೇಕು ಎಂಬುದೂ ಕೂಡ ಒಂದು ಕಲೆಯಿದೆ ಎಂಬುದು ಎಲ್ಲರೂ ಒಪ್ಪಲೇ ಬೇಕಾದ ವಿಷಯವಾಗಿದೆ. ಅದೇ ಪ್ರಕಾರ ಹಿರಿಯರು ಸತತ ಪ್ರಯತ್ನದಿಂದ ರಾಷ್ಟ್ರವು ಔದ್ಯೋಗೀಕರಣದ ಹಾದಿಯಲ್ಲಿ ಸಾಗುವಂತೆ ಪರಿಶ್ರಮ ಪಡಲಿರುವಾಗ, ಇಂತಹ ನಿಸರ್ಗನಿಯಮಗಳ ಆಧಾರದ ಮೇಲೆ ಮುನ್ನಡೆಯಲಿರುವ ಔದ್ಯೋಗೀಕರಣವನ್ನು ತೂಗಿಸಿಕೊಂಡು ಹೋಗುವಂತೆ ಚಿಕ್ಕ ಮಕ್ಕಳನ್ನು ಪ್ರಾರಂಭದಿಂದಲೇ ತರಬೇತಿಗೊಳಿಸುವುದೂ ಕೂಡ ಔದ್ಯೋಗೀಕರಣದಷ್ಟೇ ಮಹತ್ವದ ಸಮಸ್ಯೆಯಾಗಿದೆ. ಇಂದು ಪಾಶ್ಚಿಮಾತ್ಯ ದೇಶಗಳಲ್ಲಿ ವಿಜ್ಞಾನ ವಿಷಯದಲ್ಲಿಯ ತಜ್ಞರು ಈ ದಿಶೆಯಲ್ಲಿ ಹೇಗೆ ಕಾರ್ಯಮಾಡಲಿದ್ದಾರೆ ಹಾಗು ಚಿಕ್ಕವರ ಕುತೂಹಲ ಮತ್ತು ಜಿಜ್ಞಾಸೆಯು ಜಾಗ್ರತಗೊಳ್ಳುವ ರೀತಿಯಲ್ಲಿ ಎಂತಹ ಸಾಹಿತ್ಯವನ್ನು ನಿರ್ಮಿಸಲಿದ್ದಾರೆ ಎಂಬುದನ್ನು ಈ ಲೇಖದಿಂದ ತಿಳಿಯಬಹುದಾಗಿದೆ. ಈ ಲೇಖದ ಶ್ರೇಯಸ್ಸೆಲ್ಲವೂ ಮೂಲ ಲೇಖಕರಾದ ಸುಲಿವಾನ್ ಅವರಿಗೇ ಸೇರಿದ್ದು. ಈ ಲೇಖವು 'How Things Behave—By J. W. N. Sulivan' ಎಂಬ ಪುಸ್ತಕದಲ್ಲಿಯ ೭ನೆಯ ಪ್ರಕರಣದ ಸರಳಾನುವಾದವಿದ್ದು—ಇದನ್ನು ಅನೇಕ ಕಡೆಯಲ್ಲಿ ಸಂಕ್ಷಿಪ್ತಗೊಳಿಸಿದ್ದೇನಲ್ಲದೆ ಅಲ್ಲಿಯ ಹೆಸರುಗಳನ್ನಾದರೂ ನಮ್ಮ ಪರಿಸ್ಥಿತಿಗೆ ತಕ್ಕಂತೆ ಬದಲು ಮಾಡಿದ್ದೇನೆ. —ಅನುವಾದಕರು.

[ನಮ್ಮ ಪ್ರಜಾರಾಜ್ಯ ವಿಶೇಷ ಸಂಚಿಕೆಗೆಂದು ಬಂದಿದ್ದ ಲೇಖನವಿದು—ಸಂ. ನ.]

(೬ನೇ ಪುಟದಿಂದ)

ಶಾಂತೀಶ್ವರ ಬಸದಿಯ ಪಕ್ಕದಲ್ಲಿ ಶಿಲಾಮಯವಾದ ೨೪ ತೀರ್ಥಂಕರರ ನಿಲುಮೂರ್ತಿಗಳಿರುವ "ತೀರ್ಥಂಕರ ಬಸದಿ" ಇದೆ. ಇದರ ದ್ವಾರಬಂಧವು ಬಳಪದ ಕಲ್ಲಿನಿಂದ ಮಾಡಲ್ಪಟ್ಟಿದೆ. ಇದರಲ್ಲಿ ಹಲವು ವಿಧದ ಕೆತ್ತನೆಯ ಲತೆಗಳನ್ನು ರೂಪಿಸಿದ್ದು ಬಹಳ ಮನೋಹರವಾಗಿದೆ; ನಮ್ಮ ಜಿಲ್ಲೆಯಲ್ಲಿ ಬೇರೆಲ್ಲೂ ಇಂಥ ಕುಸುರಿನ ಕೆಲಸ ನೋಡಸಿಗಲಾರದು. ಈ ಬಸದಿಯ ಮೂಡಣ ಗೋಡೆಗೆ ಅನಿಸಿರುವ ಒಂದು ಬಳಪದ ಕಲ್ಲಿನಲ್ಲಿ ಮೂರನೇ ಮಧುರಕ್ಕ ದೇವಿಯು ಕ್ರಿ. ಶ. ೧೬೨೧ರಲ್ಲಿ ಕೆತ್ತಿಸಿದ ಶಾಸನವು ನವೀನವಾಗಿಯೂ ಚೊಕ್ಕಟವಾಗಿಯೂ ಕಾಣಸಿಗುತ್ತದೆ.

ವೇಣೂರಿನ ಅವಶೇಷ

ಮಧುರಕ್ಕ ದೇವಿಯು ವೇಣೂರಿನಲ್ಲಿ ಗೋಮಟನನ್ನು ನೆಲೆಗೊಳಿಸಿದ ವೀರ ತಿಮ್ಮಣ್ಣಾಜಿಲನ ಸೊಸೆ; ಅವಳು ಕ್ರಿ. ಶ. ೧೬೧೦ರಲ್ಲಿ ಅಜಿಲರಸರುಗಳ ಸಿಂಹಾಸನವನ್ನೇರಿದಳು, ಇವಳ ಕಾಲದಲ್ಲಿ ವೇಣೂರಿನ ಗೋಮಟೇಶ್ವರ ಸ್ವಾಮಿಗೆ ಮಹಾಮಸ್ತಕಾಭಿಷೇಕವನ್ನು ಮಾಡಬೇಕೆಂದು ಮೊದಲಾಗಿ ಸಂಕಲ್ಪಿಸಲಾಯಿತು. ಇವಳು ಕಾರ್ಕಳದ ರಾಮನಾಥ ಒಡೆಯರನ್ನು ವರಿಸಿದ್ದಳು. ಮಸ್ತಕಾಭಿಷೇಕದ ವಾರ್ತೆಯನ್ನು ಕಾರ್ಕಳದಲ್ಲಿ ರಾಮನಾಥ ಒಡೆಯರ ಬಳಿಕ ಆಳುತ್ತಿದ್ದ ವೀರಪಾಂಡ್ಯ ಭೈರವರಾಯನು ಕೇಳಿ ಅಭಿಷೇಕವಾಗದಂತೆ ಆಕ್ಷೇಪಿಸಿ ಯುದ್ಧಕ್ಕೆ ಬಂದನು. ಮಧುರಕ್ಕನು ನಾರಾವಿ ಮಾಗಣೆಯನ್ನು ಆತನಿಗೆ ಬಿಟ್ಟುಕೊಟ್ಟು ಸಂಧಿಯನ್ನು ಮಾಡಿಕೊಂಡು, ಮತ್ತೆ ಮಸ್ತಕಾಭಿಷೇಕವನ್ನು ಪೂರೈಸಿದಳು.

ಅಜಿಲರಸರದ ಅರಮನೆಯು ಗೋಮಟೇಶ್ವರ ಸ್ವಾಮಿಯ ದಿನ್ನೆಯ ಪಕ್ಕದ ತಗ್ಗಾದ ಮೈದಾನಿನಲ್ಲಿ ಇತ್ತೆಂದು ತಿಳಿದುಬರುತ್ತದೆ. ಆದರೆ ಅದು ಈಗೇನು ನೋಡಸಿಗುತ್ತಿಲ್ಲ. ಅರಮನೆಯ ತಳಹದಿಯ ನೆಲಕ್ಕೆ ಹಾಸಿದ್ದ ಕೆಲವು ದೊಡ್ಡ ದೊಡ್ಡ ಕಲ್ಲುಗಳು ಅಲ್ಲಲ್ಲಿ ಚದರಿಕೊಂಡು ಬಿದ್ದಿರುವುದನ್ನು ಮಾತ್ರ ಗೋಚರಿಸುತ್ತದೆ. ಆ ಅರಮನೆಯ ಬಡಗಣ ಹೆಬಗಿಲಿನ ಉಭಯ ಪಾರ್ಶ್ವಗಳಲ್ಲಿ ನಿಲ್ಲಿಸಿ ಮೂರಡಿ ಎತ್ತರದ ಕಲ್ಲಾನೆಗಳು ಈಗ ಅಜಿಲರಸರ ವೈಭವವನ್ನು ಸೂಚಿಸುತ್ತ ಅಜಿಲರಸರಿಗೆ ವೇಣೂರಿನಲ್ಲಿಯಲ್ಲದೆ ಅ ದಂಗಡಿ, ಕೇಳ, ಬರಯ ಎಂಬ ಸ್ಥಳ ಲ್ಲಿಯೂ ಅರಮನೆಗಳಿದ್ದುವು.

ಪುನರುಜ್ಜೀವನದ ಪ್ರಯತ್ನ

ಚರಿತ್ರಾರ್ಹವಾದ ವೇಣೂರು ಕ್ಷೇ ವನ್ನು ಅಭಿವೃದ್ಧಿಗೊಳಿಸಲು ೧೯೫೦ ಅಲ್ಲಿಯ ಧರ್ಮಾತ್ಮರಾದ ಮಾರಗುತ್ತಿ ಶ್ರೀ ಧರ್ಣಪ್ಪ ಅಧಿಕಾರಿಗಳೇ ಮೊದ ದವರು ಒಟ್ಟು ಸೇರಿ ಒಂದು ಸಮಿತಿ ನ್ನು ರಚಿಸಿಕೊಂಡರು. ಅಲ್ಲಿಯ ಬಸದಿ ಳ ಜೀರ್ಣೋದ್ಧಾರ ಕಾರ್ಯವನ್ನು ಮ ಡಿ ಮತ್ತು ಯಾತ್ರಿಕರ ಸುಖಕ್ಕಾಗಿ ಅ ಕೂಲತೆಗಳನ್ನು ಒದಗಿಸಿಕೊಟ್ಟು ಸಮಿತಿ ಈಗಾಗಲೇ ಒಳ್ಳೆಯ ಕೆಲಸ ನ್ನು ಮಾಡಿರುತ್ತದೆ. ಈ ತಿಂಗಳ ೧೬ ತಾರೀಕಿನಿಂದ ೨೬ನೇ ತಾರೀಕಿ ವರೆಗೆ ಏರ್ಪಡಿಸಿರುವ ಮಹಾ ಮಸ್ತ ಭಿಷೇಕದ ಉತ್ಸವವೂ ಈ ಸಮಿತಿ ಉತ್ಸಾಹದ ಫಲ.

ಉತ್ಸವವನ್ನು ನೋಡಲೆಂದು ಬಂ ಯಾತ್ರಿಕರು ಜೈನರ ಪಾಲಿಗೆ ಪ್ರಸಿದ್ಧ ಗಿರುವಜಿಲ್ಲೆಯಬೇರೆಕ್ಷೇತ್ರಗಳನ್ನೂ ನೋ ಡದೆ ಮರಳಬಾರದು. ಮೂಡಬಿದ್ರೆಯು ನ ಕಾಶಿ ಎಂದು ಪ್ರಸಿದ್ಧವಾಗಿದೆ. ಇಲ್ಲಿ ೧ ಪ್ರಾಚೀನ ಬಸದಿಗಳು, ಚೌಟರಸರ ಅ ಮನೆ ಇತ್ಯಾದಿಗಳಿವೆ. ಜೈನರ ಪರ ಪವಿತ್ರ ಸಿದ್ಧಾಂತ ಗ್ರಂಥಗಳಾದ ಧವ ಜಯ ಧವಲ ಮತ್ತು ಮಹಾ ಧವಲ ಳೆಂಬ ಗ್ರಂಥತ್ರಯಗಳನ್ನು ಮೂಡಬಿ ರೆಯ ಗುರು ಬಸದಿಯಲ್ಲಿ ನೋಡಬ ದು. ಇಲ್ಲಿ ವಜ್ರ, ಪಚ್ಚೆ, ಕೆಂಪು, ನೀ ಗೋಮೇದಿಕಾದಿ ನವರತ್ನಗಳಿಂದ ಮಾ ದ ಮೂವತ್ತೈದು ವಿಗ್ರಹಗಳೂ ಇ ಸಾವಿರಕಂಬದ ಬಸದಿಯೂ ಅರಮನೆ ಒಡ್ಡೋಲಗದ ಚಾವಡಿಯಲ್ಲಿರುವ ನ ನಾರಿ ಕುಂಜರ ಮತ್ತು ಪಂಚನಾರಿ ತ ಗ ನೊಡಲಾದ ಚಿತ್ರಗಳೂ ಪ್ರೇಕ್ಷ ಯವಾಗಿವೆ. ಕಾರ್ಕಳದಲ್ಲಿ ೧೮ ಬಸದಿ ಳಿವೆ. ಗೋಮಟೇಶ್ವರನ ಮೂ ಇದೆ. ಈ ಮೂರ್ತಿಯು ನಗು ಮು ದಿಂದ ಕೂಡಿಲ್ಲ. ತಪಶ್ಚರ್ಯೆಯ ಗಾ ಭೀರ್ಯವನ್ನು ಹೊರ ಸೂಸುತ್ತದೆ. ಇ ಯ ಚತುರ್ಮುಖ ಬಸದಿಯು ಮನ ಹರವಾಗಿದೆ ಹಿರೆ ಅಂಗಡಿಯ ಸಮೀಪ ಮಾನಸ್ತಂಭವೂ ಕೆತ್ತನೆ ಕೆಲಸಕ್ಕೆ ಹೆ ರಾಗಿದೆ. ಬಂಗವಾಡಿಯ ಶ್ರವಣಗುಂ ಡೆಂಬ ಸ್ಥಾನದಲ್ಲಿ ಕಲ್ಲಿನ ಗುಂಡು ನೀ ನಲ್ಲಿ ತೇಲುವುದೊಂದು ಆಶ್ಚರ್ಯ!

ಕುಮಾರಿ ಬಿಲ್ಲೆಗಳು (Govt. Regd.)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು



ಶಿದ ಸಂಚಿಕೆಯಿಂದ ಮುಂದುವರಿದುದು]

ಕೊನೆಯ ನೋಟ

(ವೆಂಕಪ್ಪ ಸೆಟ್ರ ಮನೆಯಲ್ಲಿ ಮದುವೆ ಯುವಾಗುವುದು. ಅವರ ಎಲ್ಲಾ ಶರ್ತಗ ೂ ರೈಗಳು ಒಪ್ಪುವರು. ಲಲಿತೆಗೆ ಸ್ವಲ್ಪ ುಳಿಯಾಗಿ ಈಗ ಆವಳು ಮೊದಲಿನಂತಿ ುದು ನೇ ಸ್ವತಃ ಬಂದು ಹೆಣ್ಣು ನೋ ಸಮಾಧಾನ ಪಡುವುದು ಎಲ್ಲದಕ್ಕೂ ಉತ್ತ ವೆಂಬ ರೈಗಳು ನಿಶ್ಚಯದ ವೇಳೆ ಉದ್ದೇ ಪೂರ್ವಕವಾಗಿ ಬರಿ ಬಾರಿ ಒತ್ತಾಯಿಸು), ವೆಂಕಪ್ಪ ಶೆಟ್ರು ಅಂತಹ ಅಗತ್ಯವೇ ನೆಂದು ಹಠತೊಟ್ಟು ಜೋಯಿಸರನ್ನು ಕ ಮದುವೆಯ ದಿನ—ಮುಹೂರ್ತವೆಲ್ಲವನ್ನು ನೆಯೇ ನಿರ್ಧರಿಸುವರು. ಆಗಲೇ ನಿಶ್ಚ ಕಾಗದವೂ ಬದಲಾವಣೆ ಯಾಗುವುದು. ಳ ಮನೆಯಲ್ಲಿ ಅತಿ ವಿಜೃಂಭಣೆಯಿಂದ ುವೆಯ ಏರ್ಪಾಡು ನಡೆದು ವರನ ದಿಬ್ಬ ಬರುವುದು. ವಧುವಿನ ಕಾಯಿಲೆ ಇನ್ನೂ ರ್ಣ ಗುಣವಾಗಿಲ್ಲೆಂಬ ನೆವನದಿಂದ ಅವ ಕೋಣೆಯೊಳಗೇನೇ ಇರುವಳೆಂಬುದರಿಂದ ನ ಕಡೆಯವರಾರಿಗೂ ಅವಳನ್ನು ನೋಡ ಅವಕಾಶ ದೊರೆಯದಾಗುವುದು. ಮು ರ್ತದ ಸಮಯಕ್ಕೆ ಸುಬ್ಬಿಯನ್ನು ಸುಂದ ಾಗಿ ಶೃಂಗರಿಸಿ, ನಿರಾಭರಣೆಯಾಗಿ ಸನ್ಯಾ ಯಂತೆ ಕಾವಿ ಸೀರೆಯುಟ್ಟು ಲಲಿತೆಯು ಳ ಕೈಹಿಡಿದು ಕರಕೊಂಡು ಬಂದು ರೆ ಮಂಟಪದಲ್ಲಿ ವರನ ಬಳಿ ಿತುಕೊಳ್ಳಿಸುವಳು. ತಾನು ಕೇವಲ ರ್ ಪರಿಚಾರಿಕೆಯಂತೆ ಸುಬ್ಬಿಯ ಬಳಿ ಂನಗುತ್ತಾ ನಿಂತು ಅವಳಿಗೆ ಗಾಳಿ ಕುತ್ತಿರುವಳು. ವೆಂಕಪ್ಪಶೆಟ್ರೇ ಮೊದಲಾ ವರನ ಕಡೆಯವರು ವಧುವನ್ನು ಕಂಡು ್ಭಿತರಾಗುವರು. ಆದರೆ ವಿಚಾರಕ್ಕೆ ಒಂದಿ ದರೂ ಅವಕಾಶ ದೊರೆಯದೆ, ವಾದ್ಯ ೦ದುಗಳ ಗದ್ದಲದೊಂದಿಗೆ, ಪುರೋಹಿತ ಮಂತ್ರೋಚ್ಚಾರಮಾಡುತ್ತಾ ವಿವಾಹ ವಿಧಿ ಭರದಿಂದ ಮುಂದುವರಿಯುವುದು. ವಧೂ ರು ಪರಸ್ಪರ ಹೂವಿನ ಮಾಲೆ ಹಾಕಿಕೊ ು ಎದ್ದು ನಿಲ್ಲುವರು. ವರನು ವಧುವಿಗೆ ತೆ ಹಾಕಲು ಕೈಯೆತ್ತುವಾಗ, ಮುಸಿಯಂ ಕರಿದಾದ, ಮೈಲಿಗೆ ಕಲೆಯಿಂದ ತುಂಬಿದ ಳ ವಿಕಾರ ಮುಖನೋಡಿ ಚಕಿತನಾಗಿ ತು ಬಿಡುವನು. ಆ ಮೇಲೆ ಕ್ರೋಧಾವೇಶ ವ ಗಡಗಡ ನಡುಗುತ್ತಾ ಹೂಮಾಲೆ ಬಿಸೊಗೆದು ಮದುವೆ ಮಂಟಪದಿಂದ ಹೊರ ಯುವನು.)

ಪ್ರಕಾಶ— ನಾನು ಈ ಹುಡುಗಿಯನ್ನು ್ಪಕ್ಕೂ ಮದುವೆಯಾಗಲಾರೆ! ಬೇಕಾದರೆ ದೆಯವರೇ ಇನ್ನೊಂದು ಮದುವೆಯಾಗಲಿ! ಸಾವಿರ ವರದಕ್ಷಿಣೆಯ ಹಣವನ್ನು ಅವ ಉಪಯೋಗಿಸಿ ಸುಖವಾಗಿ ಸಂಸಾರ ನಡೆ ! ನಾನು ಈಗಲೇ ಹೊರಟೆ ಇಲ್ಲಿಂದ! ಂದು ಉದ್ವೇಗದಿಂದ ಹೊರ ನಡೆಯುವ ಲ್ಲಿ, ರೈಗಳ ಧಾಂಡಿಗ ಒಕ್ಕಲು ಬಂಟಪ್ಪ ಅವನ ರಟ್ಟೆ ಹಿಡದು ನಿಲ್ಲಿಸುವನು.)

ಬಂಟಪ್ಪ— ಈಗ ಎಲ್ಲಿಗೆ ಹೋಗುವುದು! ದಲು ಮದುವೆಯಾಗಲಿ. ಆ ಮೇಲೆ ುವಿನೊಂದಿಗೆ ನಾವೇ ಬೇಂಡು ವಾಲಗ ಲಕ ಸಂಭ್ರಮದಿಂದ ಕಳುಹಿಸಿ ಡುವೆವು.

ವೆಂಕಪ್ಪ ಶೆಟ್ರು— (ಥಟ್ಟನೆ ಓಡಿ ಬಂದು ಟಪ್ಪನ ಮೇಲೆ ಬಿದ್ದು) ಬಿಡು ಅವನ ಕೈ ನಾರು ಅವನನ್ನು ತಡೆಯಲು? ರೈಗಳೆಲ್ಲಿ? ಹುಡುಗಿಯಲ್ಲ ನನ್ನ ಮಗನಿಗೆ ನಿಶ್ಚಯ ದುದು. ಇವಳು ಲಲಿತೆಯಲ್ಲ. (ಇಷ್ಟು ರಾಮಪ್ಪನೆಂಬ ರೈಗಳ ಇನ್ನೊಬ್ಬ ಗಟ್ಟಿ ಟ್ಟಾಳು ಬಂದು ವೆಂಕಪ್ಪ ಶೆಟ್ರ ರಟ್ಟೆ ಿದು ದೂರಕ್ಕೆ ದೂಡಿ ನಿಲ್ಲಿಸುವನು.)

ರಾಮಪ್ಪ— ನಿಮ್ಮನ್ನು ನೋಡಿಕೊಳ್ಳಲು ಇರುವಾಗ ರೈಗಳೇಕೆ ನಿಮಗೆ? ಅವರಿಗೆ ಯಾಸವಾಗಿದೆ. ವಿಶ್ರಾಂತಿ ತೆಗೆದುಕೊ ್ತಿದ್ದಾರೆ.

(ಈ ದೃಶ್ಯದಿಂದ ದಿಬ್ಬಣಿಗರೆಲ್ಲ ಸ್ತಂಭಿತ ಗಿ ಅವಕ್ಕಾಗಿ ಬಿಡುವರು. ವರನ ಕಡೆಯ ಗಸರೆಲ್ಲಾ ತಬ್ಬಿಬ್ಬಾಗಿ ಕಣ್ಣೀರು ಸುರಿಸ ಡೆಗುವರು. ಆಗ ಸನ್ಯಾಸಿನಿ ವೇಷಧಾ ಲಲಿತೆಯು ಶಾಂತ—ಗಂಭೀರ ಮುಖ ದ್ರೆಯಿಂದ ಮುಂದೆ ಬಂದು ಮಾತಾಡು .)

ಹೆಣ್ಣೋ? ಹೊನ್ನೋ?

ಬರೆದವರು: ಶ್ರೀ ಕೆ. ಕೆ. ಶೆಟ್ಟಿ

[ಸದ್ಯದಲ್ಲೇ ಪ್ರಕಟವಾಗಲಿರುವ ವರದಕ್ಷಿಣೆಯ ಕುರಿತಾದ ಚಿಕ್ಕ ವ್ಯಂಗ್ಯ ನಾಟಕದ ಕೆಲವು ದೃಶ್ಯಗಳು.]

ಲಲಿತೆ— ಬಂಟಪ್ಪ, ಬಿಡು ಆವರನ್ನು. ಅವರೊಡನೆ ನನಗೆ ಸ್ವಲ್ಪ ಮಾತಾಡಲಿದೆ. (ಬಂಟಪ್ಪನು ವರನ ಕೈಬಿಟ್ಟು ಹತ್ತಿರವೇ ನಿಲ್ಲುವನು. ಪ್ರಕಾಶನು ಲಲಿತೆಯನ್ನು ಕಂಡು ವಿಸ್ಮಿತನಾಗಿ ನಿಂತಲ್ಲೆ ನಿಂತು ಬಿಡುವನು.)

ಲಲಿತೆ— ನೀವು ಈ ವಧುವನ್ನು ಮದುವೆಯಾಗಲೊಪ್ಪುದಿಲ್ಲವೇಕೆ? ನಿಮ್ಮ ತಂದೆ ಕೇಳಿದಷ್ಟು ವರದಕ್ಷಿಣೆ ನಾವು ಕೊಡಲೊಪ್ಪಲಿಲ್ಲವೇ? ಅವರ ಇತರ ಎಲ್ಲಾ ಶರ್ತಗಳಿಗೂ ಒಪ್ಪಲಿಲ್ಲವೇ? ವಧುವನ್ನು ವರನೇ ಬಂದು ಸ್ವತಃ ನೋಡಬೇಕೆಂದು ರೈಗಳು ಬಲವಂತಗೊಳಿಸಿದರೂ, ನಿಮ್ಮ ತಂದೆಯವರೇ ಅದರ ಅನಾವಶ್ಯಕತೆಯೇ ಇಲ್ಲೆಂದು ಹೇಳಿ ಎಲ್ಲವನ್ನೂ ನಿಶ್ಚೈಸಿದುದಲ್ಲವೇ? ಈಗ ದಿಬ್ಬಣ ಬಂದು ಮದುವೆ ಮಂಟಪದಲ್ಲಿ ನೀವು ಕೂತು, ವಿವಾಹ ವಿಧಿಯೆಲ್ಲ ಮುಗಿದು ಪುಷ್ಪಹಾರ ಹಾಕುವುದು ಮಾತ್ರ ಉಳಿದಿರುವಾಗ ನಿರಾಕರಿಸಿ ಹೊರ ನಡೆದರೆ ಅದು ನ್ಯಾಯವಾಗುವುದೇ? ನಮಗದು ಅಪಮಾನವಲ್ಲವೇ? ನಮ್ಮನ್ನು ಜೀವಂತ ಕೊಂದ ಹಾಗೆ ಆಗುವುದಿಲ್ಲವೇ? ಇಲ್ಲಿ ನೆರೆದ ಸಭಿಕರೇ ಇದನ್ನು ತೀರ್ಮಾನಿಸಲಿ. ಯಾವ ರೀತಿಯಲ್ಲಿಯೂ ತಪ್ಪು ನಮ್ಮದಿದ್ದರೆ ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಲು ನಾವು ಸಿದ್ಧರು.

ಪ್ರ— (ಒಮ್ಮೆಯೇ ಉದ್ವೇಗಗೊಂಡು) ಬೆಂಕಿ ಹಾಕಲಿ ನಿಮ್ಮ ವರದಕ್ಷಿಣೆಗೆ! ಈ ಕೊಟ್ಟ ಮೋರೆಯ ಹೆಣ್ಣನ್ನು ನಾನೆಂದೂ ಮದುವೆಯಾಗಲಾರೆ! ನೀವಾರು? ರೈಗಳೆಲ್ಲಿ? ನಾನು ಈಗಲೇ ಹೊರಟೆ ಇಲ್ಲಿಂದ!

ಲಲಿತೆ— ಹಾಂ— ಹಾಂ! ತಾಳಿರಿ— ತಾಳಿರಿ ಸ್ವಲ್ಪ ಒಮ್ಮೆಯೇ ಮನಸ್ಸನ್ನು ಉದ್ವೇಗದ ಮರ್ಕಟನ ವಶ ಕೊಡಬೇಡಿರಿ. ವಿವೇಕ ತಳೆಯಿರಿ. ನೀವು ಸುಶಿಕ್ಷಿತ ತರುಣರು ಮೇಲಾಗಿ ಎಮ್. ಬಿ. ಬಿ. ಎಸ್. ಪದವೀಧರರು. ಮಾತ್ರವಲ್ಲದೆ ಜವಾಬ್ದಾರಿಯುಳ್ಳ ಸರಕಾರಿ ನೌಕರರು. ತಲೆಗೆಟ್ಟು ತಪ್ಪಿ ಮಾತಾಡುವುದಾಗಲಿ, ವರ್ತಿಸುವುದಾಗಲಿ ನಿಮಗೆ ಭೂಷಣವಲ್ಲ. ಸಾರಾಸಾರ ವಿಚಾರ ಮಾಡಿರಿ. ತಪ್ಪು ಯಾರದೆಂಬುದು ಮೊದಲು ಸಿದ್ಧವಾಗಲಿ. ಇಲ್ಲಿ ನೆರೆದಿರುವ ಸ್ವಜಾತಿ ಪರಜಾತಿ ಗೃಹಸ್ಥರೇ ಅದನ್ನು ತೀರ್ಮಾನಿಸಲಿ.

ಪ್ರ— ತಪ್ಪು ನನ್ನದಲ್ಲ, ತಂದೆಯದು. ಅದಕ್ಕೆ ನಾನು ಹೊಣೆಯಲ್ಲ. ಎಷ್ಟುಮಾತ್ರಕ್ಕೂ ನಾನು ಈ ಹೆಣ್ಣನ್ನು ಮದುವೆಯಾಗಲಾರೆ. ಇದು ಖಂಡಿತ.

ಲಲಿತೆ (ವೀರಾವೇಶಗೊಂಡು) ಏನು ತಪ್ಪು ನಿಮ್ಮದಲ್ಲವೇ? ನೀವು ಕೇವಲ ನಿಮ್ಮ ತಂದೆಯ ಕೈಗೊಂಬೆಯೇ ಹಾಗಾದರೆ. ನೀವು ಮದುವೆಯಾಗಿ ಈ ಹೆಣ್ಣನ್ನು ಕುತ್ತಿಗೆಗೆ ಕಟ್ಟಿಕೊಂಡು ಹೋಗಲೇ ಬೇಕು. ಅಷ್ಟು ಮಾಡದೆ ನಾವು ಬಿಡುವವರಾಗಿಲ್ಲ. ಇದೂ ಖಂಡಿತ. ನೀವು ಇಲ್ಲಿಂದ ಒಂದು ಹೆಜ್ಜೆ ಮುಂದಿಟ್ಟರೆ ನಿಮ್ಮನ್ನು ಬಲಾತ್ಕರಿಸಿಯಾದರೂ ಈ ಮದುವೆ ಮಾಡಿಯೇ ಸಿದ್ಧ. ಅದರಲ್ಲಿ ನಮ್ಮ ತಪ್ಪೇನೂ ಇಲ್ಲ. ನೀವು ಪ್ರಾಯ ಬಾರದ ಮಗುವೇ? ನಿಮಗೆ ಸ್ವತಂತ್ರವಿಚಾರ ವಿಲ್ಲವೇ? ನೀವು ಸ್ವತಃ ಹೆಣ್ಣನ್ನೇಕೆ ನೋಡಲಿಲ್ಲ? ಆಗ ಎಲ್ಲವನ್ನೂ ತಂದೆಗೆ ಬಿಟ್ಟು ಕೊಟ್ಟು, ಈಗ ಹೊಣೆಗಾರನಲ್ಲವೆಂದರೆ ಕೇಳುವವರಾರು? ಈ ಹುಡುಗಿಯನ್ನು ನಾವೇನುಮಾಡಬೇಕು. ನೀವು ಮಾಡಿರುವ ಅಪಮಾನವನ್ನು ನಾವು ಹೇಗೆ ಸಹಿಸಬೇಕು? ನಿಮಗೆ ಬೇಕಾದುದನ್ನೆಲ್ಲಾ ನಿಮ್ಮ ತಂದೆಯ ಶರ್ತದಂತೆ ನಾವು ಒಂದಿಷ್ಟಾದರೂ ತಪ್ಪದೆ ಪರಿಪಾಲಿಸಿದ್ದೇವೆ. ಈಗ ಅವಾಗದೆಂದರೆ ಕೇಳುವವರಾರು?

ಪ್ರ— ನನಗೆ ಮೊದಲಾಗಿ ಬೇಕಾದುದು ಹೆಣ್ಣು— ಹೊನ್ನಲ್ಲ.

ಲಲಿತೆ— ಹಾಂ— ಹಾಗೆ ಬನ್ನಿ. ಅದೇ ಈಗ ನಿಶ್ಚಯವಾಗಲಿ. ನಿಮಗೆ ಮೊದಲಾಗಿ ಬೇಕಾದುದು ಹೆಣ್ಣಲ್ಲ ಹೊನ್ನು. ನಿಮಗೆ ಮಾತ್ರವಲ್ಲ ಇಂದಿನ ನಿಮ್ಮ ಜಾತಿಯ ಯುವಕರೆಲ್ಲ, ಅಷ್ಟೇ ಏಕೆ ಬಂಟರ ಸಮಾಜವೆಲ್ಲ ಮೊದಲಾಗಿ ಕೇಳುವುದು ಹೆಣ್ಣನ್ನಲ್ಲ— ಹೊನ್ನನ್ನು. ಹೊನ್ನನ್ನು ರೈಗಳು ಕೊಟ್ಟಿದ್ದಾರೆ. —ಬೇಕಷ್ಟು ಕೊಟ್ಟಿದ್ದಾರೆ, ಆಸ್ತಿ ಬದುಕು, ಮನೆ ಮಾರನ್ನೆಲ್ಲಾ ಆಡವು ಹಾಕಿ ತನ್ನ ಘನವಂತ ಭವಿಷ್ಯವನ್ನೇ ಬಲಿಕೊಟ್ಟು, ಕೊಟ್ಟ ಮಾತಿಲ್ಲದೆ, ಮಾಡಿದ ಉಪಕಾರವಿಲ್ಲದೆ ಧನ ಪಿಶಾಚಿಯಂತೆ ರೈಗಳ ರಕ್ತ ಹೀರಲು ಹೊರಟಿರುವ ನಿಮ್ಮ ತಂದೆಗೆ ಅವರು ಸಂಪೂರ್ಣ ತೃಪ್ತಿಯ ಆಹಾರ ಕೊಟ್ಟಿದ್ದಾರೆ.

ಪ್ರ— ನಾನು ಮದುವೆಯಾಗುವುದು ಹೆಣ್ಣನ್ನು— ಹೊನ್ನನ್ನಲ್ಲ. ಇದು ಸತ್ಯ.

ಲಲಿತೆ— ಅದೂ ಸುಳ್ಳು— ಶುದ್ಧ ಸುಳ್ಳು. ನೀವು ಮದುವೆಯಾಗುವುದು ಹೊನ್ನನ್ನು— ಹೆಣ್ಣನ್ನಲ್ಲ— ಎಷ್ಟಕ್ಕೂ ಅಲ್ಲ. ರೈಗಳು ನಿಮಗೊಂದು ಹೆಣ್ಣು ಕೊಟ್ಟು ದೊಡ್ಡ ಉಪಕಾರ ಮಾಡಿದ್ದಾರೆ. ಅವರೊಂದು ಹೆಣ್ಣು ಪಾಪೆಯನ್ನು ಈ ಮದುವೆ ಮಂಟಪದಲ್ಲಿ ತಂದಿರಿಸಿ ನಿಮಗೆ ಧಾರೆಯೆರೆದು ಕೊಡಬೇಕಿತ್ತು. ಆಗ ಸರಿಯಾಗುತ್ತಿತ್ತು. ಕರಾಳ ಧನ ಪಿಶಾಚಿಯಿಂದ, ನಳನಳಿಸುವ ನೂರಾರು ಎಳೆ ತರುಣಿಯರ ಬಿಸಿ ರಕ್ತ ಹೀರಿಸಿ ಜೀವಂತ ಶವಗಳಾಗಿಸುವ ನಿಮ್ಮ ಕಟುಕ ಸಮಾಜಕ್ಕದು ಭೂಷಣವಾಗುತ್ತಿತ್ತು! (ಇಡೀ ಸಭೆಯು ಚಕಿತವಾಗಿ ಸಭಾಸದನದ್ದು ಗಂಭೀರ ನೀರವತೆಯಿಂದ ತುಂಬುವುದು) ವೆಂಕಪ್ಪ ಶೆಟ್ರು ಒಮ್ಮೆಯೇ ದುಡುಕಿ ರಾಮಪ್ಪನ ಕೈಬಿಡಿಸಿ ಲಲಿತೆಯ ಬಳಿಗೆ ಬಂದು ನಿಲ್ಲುವರು.)

ವೆ— ನಾನು ನಿಶ್ಚೈಯಿಸಿದುದು ಆ ಹುಡುಗಿಯಲ್ಲ— ಈ ಹುಡುಗಿ! ಇವಳೇ ರೈಗಳ ಮಗಳು ಲಲಿತೆ— ಅವಳಲ್ಲ. ಮೋಸ ಮಾಡಿದ್ದಾರೆ, ನಮಗೆ ರೈಗಳು ಮೋಸಮಾಡಿದ್ದಾರೆ. ಅವರೆಲ್ಲಿ?

ಲಲಿತೆ— (ಕೋಪಾವೇಶದಿಂದ) ಬಾಯ್ಮುಚ್ಚಿರಿ ವೆಂಕಪ್ಪ ಶೆಟ್ಟರೇ! ಅತಿ ತೋರಿಸಿ ಮೋಸ ಮಾಡಿದವರಾರು? ವಿಶ್ವಾಸ ಹುಟ್ಟಿಸಿ ಘಾತಮಾಡಿದವರಾರು? ರೈಗಳೇ? ನೀವೇ? ಮೊದಲು ಅದರ ತೀರ್ಮಾನವಾಗಲಿ. ನಿಮ್ಮ ಪ್ರೀತಿಯ ಆ ಸೊಸೆ ಲಲಿತೆ, ಸತ್ತು ಬೂದಿಯಾಗಿ ಇಂದಿಗೆ ಹನ್ನೊಂದು ದಿವಸ ಸಂದು ಹೋಗಿದೆ. ಆ ಬೂದಿ ಬಳಕೊಂಡು ಈ ವಿರುತ್ತೆ ಇಂದೀಗ ನಿಮ್ಮ ಮುಂದಿದ್ದಾಳೆ. ಲಲಿತೆಯನ್ನು ತನ್ನ ಮಗನಿಗೆ ಕೊಟ್ಟು ಮದುವೆಯಾಗಬೇಕೆಂದು ರೈಗಳನ್ನು ಆಗಾಗ ಕಾಡಿ ಪೀಡಿಸುತ್ತಿದ್ದ, ತನ್ನ ಮಗನಿಗೆ ವಿದ್ಯಾದಾನ ಮಾಡಬೇಕು; ಅಷ್ಟೊಂದು ಉಪಕಾರ ಮಾಡಿ ನನ್ನ ಮರ್ಯಾದೆ ಉಳಿಸಬೇಕು. ಆತನ ಭವಿಷ್ಯ ನಿಮ್ಮ ಕೈಯಲ್ಲಿದೆಯೆಂದು ಅಂಗಲಾಚಿ ಬೇಡಿ, ಅವರಿಂದ ಬೇಕಷ್ಟು ಹಣ ಪಡೆದುಕೊಂಡಿದ್ದ ಆ ವೆಂಕಪ್ಪ ಮಾವನೂ ಸತ್ತು ಹದಿಮೂರು ದಿನ ಸಂದು ಹೋಗಿದೆ. ಇಂದು ನಾನು ಸನ್ಯಾಸಿನಿ. ನೀವು ಧನ ಪಿಶಾಚಿ. ನನಗಾಗಿ ಕರಗಿ, ಕೊರಗಿ, ನೊರಗಿ ಹೋಗಿರುವ ಮುದುಕ ತಂದೆಯ ಆಮರಣ ಸೇವೆಗೆ ನನ್ನೀ ಜೀವನವು ಮುಡಿಪು. ಮಾತ್ರವಲ್ಲದೆ ನನ್ನಿಂದ ಸಾಧ್ಯವಾದ ಸಮಾಜಸೇವೆ ಕೂಡಾ ಮಾಡುವೆನು. ಹಳ್ಳಿ ಹಳ್ಳಿ, ಮನೆಮನೆ ತಿರುಗಾಡಿ, ನನ್ನಂತಹ ತರುಣಿಯರನ್ನು ಕಂಡು, ಎಷ್ಟರ ವರೆಗೆ ಈ ವರದಕ್ಷಿಣೆಯ ಪಿಶಾಚಿಯು ಸಮಾಜವನ್ನು ಕಾಡುತ್ತಿರುವುದೋ, ನಮ್ಮ ತರುಣರು ಕೇವಲ ಹಣದಾಶೆಯಿಂದ ನಿಜ ಪ್ರೇಮವನ್ನು ಬಲಿಕೊಡುವರೋ, ಆ ವರೆಗೆ ಅವರಾರೂ ಮದುವೆ ಯಾಗದೆ, ಸನ್ಯಾಸಿನಿಯರಾಗಿ ಸಮಾಜ ಸೇವೆಮಾಡಬೇಕೆಂದು ಬೋಧಿಸಿ ಪ್ರಚಾರ ಮಾಡುವ ದೀಕ್ಷೆ ತೊಟ್ಟಿರುತ್ತೇನೆ. ನೀವು 40,000 ರೂಪಾಯಿ ವರದಕ್ಷಿಣೆಯ ದೊಡ್ಡ ಗಂಟಿನೊಂದಿಗೆ ಈ ಹೆಣ್ಣನ್ನು ನಿಮ್ಮ ಮಗನಿಗೆ ಗಂಟುಹಾಕಿಕೊಂಡು ಸುಖವಾಗಿ ನಿಮ್ಮ ಭವಿತವ್ಯವನ್ನು ಕಟ್ಟಿಕೊಳ್ಳಿರಿ. ನಿಮ್ಮ ಸಮಾಜವೂ ಇದೇ ರೀತಿ, ವರದಕ್ಷಿಣೆಯ ದರವನ್ನು ದಿನದಿನ ಏರಿಸುತ್ತಾ ಹೋಗಿ ಆ ವ್ಯಾಪಾರದಿಂದಲೇ ಸುಖ ಸಮೃದ್ಧಿ ಹೊಂದಲಿ. ಹೂಂ, ವಾದ್ಯವಾಗಲಿ. ಪುರೋಹಿತರೇ! ಏನು ನೋಡುತ್ತಿರುವಿರಿ? ಮುಂದುವರಿಸಿರಿ. ವಧೂವರರಿಗೆ ಮಂಗಲವಾಗಲಿ! ಸಮಾಜ ಕಲ್ಯಾಣವಾಗಲಿ ಮಂತ್ರ ಪಠಿಸಿರಿ! ನಿಮ್ಮ ಕೆಲಸ ತೀರಿಸಿ ದಕ್ಷಿಣೆ ಪಡೆದು ಹೋಗಿರಿ. ನಿಮಗೂ ಬೇಕಾದುದು ಅದೇ. ಧರ್ಮ— ನೀತಿ— ನ್ಯಾಯವೆಲ್ಲವೂ ಇಂದು ಧನವನ್ನವಲಂಭಿಸಿದೆ— ದೇವರನ್ನಲ್ಲ.

ವೆ— ಅಮ್ಮಾ, ಲಲಿತ, ಕ್ಷಮಿಸು. ನೀನು ನನ್ನ ಸೊಸೆಯಲ್ಲವೇ? ನಮ್ಮ ಕುಟುಂಬದವಳೇ ಅಲ್ಲವೇ? ನನ್ನ ಮಾನವನ್ನೊಮ್ಮೆ ಉಳಿಸಮ್ಮಾ, ಧಾವನವರೆಲ್ಲಿ?

ಲಲಿತೆ— ಯಾರು ನಿಮ್ಮ ಸೊಸೆ? ನಿಮ್ಮ ಕುಟುಂಬದವರಾರು? ನಿಮ್ಮ ಧಾವನಾರು? ನಿಮಗೆ ಮಾನಾಭಿಮಾನವೇನು? ಹಣದ ಹೊರತು ನಿಮಗೆ ಈ ಜಗತ್ತಿನಲ್ಲಿ ಇನ್ನೇನಾದರು ಇದೆಯೇ? ಇದ್ದರೆ ಈ ರೀತಿ ವರ್ತಿಸುವಿರೇ? ಈಗ ಸಿಕ್ಕಿ ಬಿದ್ದಿರುವಾಗ ತಪ್ಪಿಸಿ ಕೊಳ್ಳಲೆಂದು ತತ್ತ ಮಾತಾಡುವುದು ಬೇಡ. ತತ್ತದ ರೋಗಿನಿಂದ ಸಮಾಜವು ಪಡುತ್ತಿರುವ ಪಾಡು ಸಾಕು.

ಪ್ರ— (ಆವೇಗಗೊಂಡು ಲಲಿತೆಯ ಬಳಿಗೆ ಹೋಗಿ ಕೈಮುಗಿದು) ಲಲಿತಾ, ದಯಮಾಡಿ ನನ್ನನ್ನು ಕ್ಷಮಿಸು. ನಿಜವಾಗಿಯೂ ತಪ್ಪು ನನ್ನದು. ಈಗ ನನ್ನಲ್ಲಿ ವಿವೇಕೋದಯವಾಗಿದೆ. ಆದಕ್ಕಾಗಿ ನಿನಗೆ ನಾನು ಆಜೀವ ಋಣಿ. ತಂದೆಗೆ ನಾನು ನನ್ನನ್ನು ಮಾರಬಿಡಬಾರದಿತ್ತು. ಸ್ವತಂತ್ರನಾಗಿ ವರ್ತಿಸ ಬೇಕಿತ್ತು. ವರದಕ್ಷಿಣೆಯ ಗೊಡವೆಗೆ ಹೋಗದೆ ನನ್ನ ಜೀವನ ಸಂಗಾತಿಯನ್ನು ನಾನೇ ಸ್ವತಃ ನೋಡಿ ಆರಿಸಬೇಕಿತ್ತು. ಈ ವರದಕ್ಷಿಣೆಯ ಕ್ಷುದ್ರ ವ್ಯಾಪಾರಕ್ಕೆ ಎಡೆಗೊಡಬಾರದಿತ್ತು. ನನ್ನನ್ನು ಕ್ಷಮಿಸುವೆಯಾ? ದಯಮಾಡಿ ನನ್ನ ಅಪರಾಧ ಮನ್ನಿಸುವೆಯಾ?

ಲಲಿತೆ— ಅದು ನಿಮ್ಮೊಬ್ಬರ ತಪ್ಪಲ್ಲ, ನಿಮ್ಮ ತಂದೆಯೊಬ್ಬರದೂ ಅಲ್ಲ, ನಮ್ಮ ಸಮಾಜದ ತಪ್ಪು. ಅದು ಕಣ್ಮುಚ್ಚಿ ನಡೆಸುತ್ತಿರುವ ಭಯಂಕರ ಪಾಪ. ಈ ಮಹಾ ಪಾಪದ ಕುರಿತು ಸಮಾಜದ ಮನಸ್ಸಾಕ್ಷಿಯನ್ನು ಹೊಡೆದೆಬ್ಬಿಸಬೇಕಾದರೆ, ರೂಢಿಬದ್ಧರಾಗಿಸ್ವಾರ್ಥಾಂಧರಾಗಿ ಹೃದಯರಹಿತವಾಗಿ ನಡೆಯುವ ನಮ್ಮ ತರುಣ

(ಮುಂದಿನ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ
ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು
ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

(೧ನೇ ಪುಟದಿಂದ)

ಕೋಟಿ ರೂಪಾಯಿಯಷ್ಟಿದ್ದರೆ ಈಗ ಕೋಟಿ ರೂಪಾಯಿಯನ್ನು ಮೀರುತ್ತದೆ. ಇರಾನಿನಿಂದ ಈಚಿನ ವರೆಗೆ ಭಾರತಕ್ಕೆ ಎಣ್ಣೆಯ ಪೂರೈಕೆಯಾಗುತ್ತಿದ್ದರೂ ಈಗ ಭಾರತದಲ್ಲಿ ತೈಲ ಶುದ್ಧೀಕರಣ ಕಾರ್ಖಾನೆಗಳು ಸ್ಥಾಪನೆಯಾದ ದೆಸೆಯಿಂದ ಈ ವ್ಯಾಪಾರ ಕಡಿಮೆಯಾಗಿದೆ. ಆದಾಗ್ಯೂ ರತ್ನಗಂಬಳಿ, ಚರ್ಮ ಮತ್ತು ತುರಾಯಿ, ಹಣ್ಣುಹಂಪಲು, ಔಷಧ ದ್ರವ್ಯಗಳು ಭಾರತಕ್ಕೆ ಈಗಲೂ ಬರುತ್ತವೆ. ಈ ಆಯಾತ ವ್ಯಾಪಾರದ ಪ್ರಮಾಣವು ೧೯೫೩ರಲ್ಲಿ ೨ ಕೋಟಿಯಷ್ಟಿದ್ದದ್ದು ಈಗ ನಾಲ್ಕು ಕೋಟಿ ರೂಪಾಯಿಯನ್ನೂ ಮೀರುತ್ತದೆ.

ಇರಾನಿನ ಈಗಿನ ಅರಸರು ಭಾರತವು ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಯನ್ನಿಡುತ್ತಿರುವುದಕ್ಕೆ ಆನಂದವನ್ನು ಸೂಚಿಸಿದ್ದಾರೆ; ಅಲ್ಲದೆ ಉಭಯ ದೇಶಗಳ ನಡುವಿದ್ದ ಬಾಂಧವ್ಯವನ್ನು ಇನ್ನಷ್ಟು ಬಿಗುಗೊಳಿಸುವ ಹಂಬಲವನ್ನು ಪ್ರದರ್ಶಿಸಿದ್ದಾರೆ. ಈ ಅರಸರ ತಂದೆಯೇ ಆಧುನಿಕ ಇರಾನಿನ ಅಡಿಗಲ್ಲನ್ನಿಟ್ಟರೆಂದು ಹೇಳಬಹುದು. ಗಣಿತಶಾಸ್ತ್ರ, ವೈದ್ಯಕೀಯ ವಿಜ್ಞಾನ ಇತ್ಯಾದಿಗಳನ್ನು ಭಾರತಕ್ಕೆ ಪರಿಚಯ ಮಾಡಿಸಿ ಕೊಡುವಲ್ಲಿ ನೆರವಾದ ಇರಾನು ಹಿಂದಿನ ಕಾಲದಲ್ಲಿ ಗ್ರೀಕರ, ಮಂಗೋಲರ, ತುರ್ಕರ ಪ್ರಭಾವಕ್ಕೆ ಬಿದ್ದಿದ್ದಿತು; ಜರ್ಮನರ ಪ್ರಭಾವ ಸಹ ಇಲ್ಲಿ ನಡೆಯಿತು; ಈಗ ಬ್ರಿಟನ್ನೇ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳ ರಾಜಕೀಯ ಕೈವಾಡ ಅಲ್ಲಿ ಕಂಡುಬರುತ್ತದೆ. ಇರಾನಿನಲ್ಲಿ ೧೭ ಕೋಟಿ ಪ್ರಜೆಗಳಿದ್ದಾರೆ. ತೈಲ ಸಂಪತ್ತು ಅಲ್ಲಿ ವಿಪುಲವಾಗಿದೆ. ರಶ್ಯದೊಡನೆ ಅದಕ್ಕೆ ಮೇರೆ ಇದೆ. ಆದುದರಿಂದ ಪಾಶ್ಚಾತ್ಯರ ಕಣ್ಣು ಇರಾನಿನ ಮೇಲೆ ಬಿದ್ದಿದೆ.

ಬಗ್ದಾದ್ ಒಪ್ಪಂದದಲ್ಲಿ ಇರಾನು ಸೇರಿದ ದೆಸೆಯಿಂದ ಬ್ರಿಟನಿನ ಪ್ರಭಾವಕ್ಕೆ ಅದು ಮಣಿದಿದೆ ಎಂದೇ ಅರ್ಥವಾಗುತ್ತದೆ; ರಶಿಯದ ಕೋಪಕ್ಕೂ ಅದು ಪಾತ್ರವಾದಂತೆ—ಭಾರತಕ್ಕೂ ಈ ಒಪ್ಪಂದದಲ್ಲಿ ಇರಾನು ಸೇರಿದ ವಿಷಯವು ಮನಸ್ಸಿಗೆ ಬಂದಿಲ್ಲ. ಆದರೆ ಇದೊಂದೇ ನೆಪದಿಂದ ಭಾರತವು ಇರಾನಿನ ಸ್ನೇಹವನ್ನು ನಿರಾಕರಿಸಲಾರದು. ಇರಾನಿನ ಅರಸರು ಇದೇ ವರ್ಷ ರಶ್ಯಕ್ಕೆ ಸಹ ಭೇಟಿ ಕೊಡಲಿದ್ದಾರೆ. ರಶ್ಯವು ಬಗ್ದಾದ್ ಒಪ್ಪಂದದಲ್ಲಿ ಸೇರಿರುವ ಈ ಪ್ರತಿಸ್ಪರ್ಧಿಯನ್ನು ಸ್ವಾಗತಿಸಲು ಸಿದ್ಧವಿದೆ ಎಂದ ಮೇಲೆ ಹಳೆಯ ಬಂಧುಗಳಾದ ಭಾರತೀಯರು ಇರಾನಿನ ಸಹೋದರರ ಶುಭಾಶಯಗಳನ್ನು ತಂದಿರುವ ರಾಜರಿಗೆ ಆತ್ಮೀಯತೆಯನ್ನು ಪ್ರದರ್ಶಿಸದೆ ಇರುವಂತಿಲ್ಲ. ಇರಾನು ಭಾರತದಂತೆ ಹಿಂದುಳಿದ ದೇಶ. ಅಲ್ಲೀಗ ಪುನರುದ್ಧಾರದ ಕೆಲಸ ಭರದಿಂದ ನಡೆದಿದೆ. ಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿ ಕೊಡಲ್ಪಡುತ್ತದೆ. ಸಪ್ತವಾರ್ಷಿಕ ಯೋಜನೆಯೊಂದರಂತೆ ನಡೆಯುವ ಅಭಿವೃದ್ಧಿ ಪ್ರಯತ್ನಗಳು ಕೃಷಿವಲರಾದ ಇರಾನಿನ ನಾಗರಿಕರಲ್ಲಿ ಆಶೋದಯವನ್ನು ಹುಟ್ಟಿಸಿವೆ. ನಾವು ಅವರಿಗೆ ಮಂಗಲವನ್ನು ಹಾರೈಸೋಣ!

ಭಾರತಕ್ಕೆ ಇತ್ತೀಚೆಗೆ ಬಂದು ಆತಿಥ್ಯವನ್ನು ಸ್ವೀಕರಿಸಿ ತೆರಳಿದ ಹಲವರಲ್ಲಿ ಪಶ್ಚಿಮ ಜರ್ಮನಿಯ ಉಪ ಮುಖ್ಯ ಮಂತ್ರಿ ಡಾ। ಫ್ರಾಂಜ್ ಬ್ಲೂಚರ್ ಒಬ್ಬರು ಅವರು ಭಾರತದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಆಸಕ್ತಿಯಿಂದ ನಿರೀಕ್ಷಿಸಿ ತೃಪ್ತಿಯನ್ನು ವ್ಯಕ್ತಪಡಿಸಿದರು. ಎಲ್ಲೋರ ಮತ್ತು ಅಜಂತೆಗಳ ಸಾಂಸ್ಕೃತಿಕ ಹಿರಿಮೆಯನ್ನೂ ಅವರು ನೋಡಿ, ಸಂತಸಗೊಂಡರು.

(ಹಿಂದಿನ ಪುಟದಿಂದ)

ವರ್ಗವನ್ನು ಜಾಗ್ರತಗೊಳಿಸಿ ಸರಿದಾರಿಗೆ ತರಬೇಕಾದರೆ ಕೆಲವು ತರುಣಿಯರು ಎದೆಗಾರರಾಗಿ ಪರಿಸೆಯ ಗೋಡೆಯೊಡೆದು ಹೊರ ನಡೆದು, ಅಗ್ನಿ ಕೊಂಡಕ್ಕೆ ಹಾರಲು ಮುಂದಾಗಬೇಕು. ಬಂಡಾಯಗಾರಿಕೆಯ ಪತಾಕೆಯನ್ನೆತ್ತಿ ಹಿಡಿದು ಹೋರಾಡಲು ಕಟಿಬದ್ಧರಾಗಬೇಕು. ಮೂಢಾಚಾರದ ಕಟ್ಟಿನೊಳಗೆ ಸಿಕ್ಕಿ ಸ್ವಾರ್ಥದ ಕೊಳಕು ನೀರಲ್ಲಿ ಕಣ್ಮುಚ್ಚಿ ಮುಳುಗಿಕೊಂಡಿರುವ ಸಮಾಜದ ಕಟ್ಟುಪಾಡುಗಳನ್ನು ಒಡೆದು ಹಾಕಿ, ಸ್ವಚ್ಛ ನೀರು ಸದಾ ಹರಿವಂತೆ ಮಾಡಬೇಕು. ಆಗ ಮಾತ್ರ ಇದ್ದಂತೆ ಬಿದ್ದುಕೊಂಡು ಸಜೀವ ಶವದಂತಿರುವ ಸಮಾಜದ ದುರವಸ್ಥೆಯು ದೂರವಾಗುವುದು. ನವಸಮಾಜದ ರಚನೆಯಾಗುವುದು. ಜನತೆಯ ಕಲ್ಯಾಣವಾಗುವುದು.

ಪ್ರ— ಲಲಿತೆ, ಒಪ್ಪಿಗೆ- ನೀನು ಹೇಳುವುದೆಲ್ಲಕ್ಕು ನನ್ನ ಒಪ್ಪಿಗೆ. ನೀನು ಹೇಳಿದಂತೆ ಮಾಡಲು ನಾನು ಇನ್ನು ಮುಂದೆ ಸಿದ್ಧನು. ನನ್ನಲ್ಲಿ ಜ್ಞಾನೋದಯವನ್ನುಂಟು ಮಾಡಿದುದ ನಿನಗೆ ನಾನು ತುಂಬಾ ಕೃತಜ್ಞನು. ತಂದೆಯ ಅಂಕೆಗೊಳಗಾಗಿ ನಾನು ಎಂತಹ ಪಾಪಾಚಾರಕ್ಕೆ, ಸಮಾಜ ಘಾತುಕ ಕೃತ್ಯಕ್ಕೆ ಕಾರಣನಾಗಿರುವೆನೆಂಬುದನ್ನೀಗ ನಾನು ಮನಗಂಡೆನು. ನೀನು ನನ್ನ ಸಂಗಾತಿನಿಯಾಗುವಂತಾದರೆ ಅದೇ ನನ್ನ ಜೀವನದ ಮಹಾ ಭಾಗ್ಯವೆಂದೆಣಿಸುವೆ

ಲಲಿತೆ—ಬಡ ಸನ್ಯಾಸಿನಿಯೊಬ್ಬಳು ನಿಮ್ಮ ಜೀವನ ಸಂಗಾತಿನಿ ಯಾಗುವುದಾದರೂ ಹೇಗೆ? ನಿಮಗೆ 40 ಸಾವಿರ ವರದಕ್ಷಿಣೆ ಬೇಡವೇ?

ಪ್ರ—(ಕಾತರಗೊಂಡು) ಬೇಡ, ಬೇಡ ಲಲಿತ, ಒಂದು ಚಿಕ್ಕಾಸು ವರದಕ್ಷಿಣೆ ಬೇಡ.

ಲಲಿತೆ—'ಹೊಸ ಮೋಟಾರ್ ಕಾರ್' ಉಡುಗೊರೆಯೂ ಬೇಡವೇ?

ಪ್ರ— ಬೆಂಕಿಹಾಕಲಿ ಉಡುಗೊರೆಗೆ!

ಲಲಿತೆ— ವಜ್ರದ ಕುಪ್ಪ, ಮೈ- ಕೈ ಕಂಠ ತುಂಬ ಐಲೆಂಟು ಸಹಸ್ರ ರೂಪಾಯಿ ಬೆರೆಯ ಆಭರಣ, ಐನೂರು ಆರುನೂರು ರೂಪಾಯಿ ಮೌಲ್ಯದ ಜರಿಸೀರೆ ಕುಪ್ಪಸ ಬೇಡವೇ?

ಪ್ರ— ಈ ರೀತಿ ಹಂಗಿಸಿ ಭಂಗಿಸಿ ನನ್ನ ಹೃದಯವನ್ನು ಘಾತಿಸಬೇಡ ಲಲಿತ. ನನಗೆ ಬೇಕಾದುದು ನಿನ್ನಂತಹ ರಮಣಿ. ದಾಂಪತ್ಯವನ್ನು ಸದಾ ಪ್ರೇಮದ ಬೆಳ್ದಿಂಗಳಿಂದ ಬೆಳಗಿಸಿ ಸುಖಮಯಗೊಳಿಸುವವರೆಂದರೆ ನಿನ್ನಂತಹ ಜೀವನ ಸಂಗಾತಿನಿ ಎಷ್ಟೊಂದು ಆಸ್ತಿಪಾಸ್ತಿ—ಬದುಕುಭಾಗ್ಯವಿದ್ದರೂ ಸಂಸಾರದಲ್ಲಿ ನಿಜ ಸಂಗಾತಿಯ ಸೌಭಾಗ್ಯ ದೊರೆಯದಿದ್ದರೆ ಅವೆಲ್ಲ ದೊಡ್ಡ ಹೊರೆ—ಜಿಗುಪ್ಸೆ ಗೊಳಿಸುವ ಹೊರೆ, ಲಲಿತ; ನೀನು ಕೃಪೆ ಮಾಡಿದರೆ, ಬೇರೆ ಯಾವ ಗೊಡವೆಯೂ ಇಲ್ಲದೆ ನಿನ್ನನ್ನು ನಾನು ಈ ಕ್ಷಣವೇ, ಈ ಮದುವೆ ಮಂಟಪದಲ್ಲೆ ಮದುವೆಮಾಡಿಕೊಳ್ಳಲು ಸಿದ್ಧನು. ಅದೇ ನನ್ನ ಜೀವನ ಮಹಾ ವರದಕ್ಷಿಣೆ, ಚಿನ್ನಾಭರಣ—ಆಸ್ತಿಪಾಸ್ತಿ ಎಲ್ಲವೂ!

ಲಲಿತೆ— ಈ ನಿರಾಭರಣೆಯು, ಈ ಕಾಸೀರೆಯ ವಿರಕ್ತೆಯು ನಿಮ್ಮಂತಹ ಯೋಗ್ಯ ತರುಣರನ್ನು ವಿವಾಹವಾಗಲು ಅನರ್ಹಳು.

ಪ್ರ— ಅಲ್ಲ, ಲಲಿತ ಅಲ್ಲ- ಪಶ್ಚಾತ್ತಾಪ ಇನ್ನೂ ಇನ್ನೂ ನನ್ನೊಡನೆ ವಾದಿಸಿ ನರಳಿಸಿ ನನ್ನ ಮನನೋಯಿಸಬೇಡ. ಪಶ್ಚಾತ್ತಾಪದಿಂದ ನನ್ನ ಹೃದಯ ಬಿರಿಯುತ್ತಿದೆ ಅಂಗಾಂಗಗಳು ಕಂಪಿಸುತ್ತಿವೆ. ನನ್ನನು ನನ್ನ ತಂದೆಯನ್ನೂ ಕ್ಷಮಿಸು. ಇದು ನವಸಮಾಜಕ್ಕೊಂದು ಪಾಠವಾಗಲಿ. ನಮ್ಮ ತಂದೆಯಂತಹವರು ಇದರಿಂದ ಕಣ್ಣು ತೆರೆಯುವಂತಾಗಲಿ. ನಮ್ಮ ತರುಣಿಯರ ಜೀವನವು ಸುಖದ ಬೆಳಕನ್ನು ಕಾಣಲಿ.

ಲಲಿತೆ— ವರದಕ್ಷಿಣೆಯ ಘೋರ ಪಾಪದಿಂದ ಇನ್ನಾದರೂ ಸಮಾಜವು ವಿಮುಕ್ತವಾಗಲಿ. ಬನ್ನಿ—ತಂದೆಯ ಬಳಿಗೆ ಹೋಗೋಣ. ಈ ಕೃತಕ ನಾಟಕದ ಮಂಗಲ ಮಾಡಿ ನಮ್ಮ ಜೀವನದ ನಿಜ ನಾಟಕಕ್ಕೆ ನಾಂದಿಯನ್ನಿಡುವ ಮೊದಲು ಅಪ್ಪನ ಅಪ್ಪಣೆ ಬೇಕು. ಆಶೀರ್ವಾದಬೇಕು. ಇದಕ್ಕೆಲ್ಲ ನಿಮ್ಮ ತಂದೆಯ ಸಂಪೂರ್ಣ ಒಪ್ಪಿಗೆಯೇ?

ಪ— ಒಪ್ಪಿಗೆ ಅತಳ, ಪರಿಪೂರ್ಣ ಒಪ್ಪಿಗೆ. ಎಲ್ಲಾ ತಪ್ಪು ನನ್ನದು. ಹಾದು— ನಾನು ಪಿಶಾಚಿ. ನಾನು ಪಶ್ಚಾತ್ತಾಪ ಪಡಬೇಕಲ್ಲದೆ ನೀವಾರೂ ಅಲ್ಲ. ದೈನ್ಯ ಕಾಲು ಹಿಡಿದು ನಾನು ಕ್ಷಮೆ ಕೇಳುವೆನು. ನಿನ್ನನ್ನು ನನ್ನ ಮಗನಿಗೆ ಮದುವೆ ಮಾಡುವ ಕೃಪೆಮಾಡಬೇಕೆಂದು ಅಂಗಲಾಚಿ ಬೇಡುವೆನು. ಅವರು ಒಳ್ಳೆಯವರು; ಒಪ್ಪುವರು.

ಲಲಿತೆ— ಓಹೋ, ಎಂತಹ ಪ್ರಮಾದವಾಯಿತು! ಮನುಷ್ಯ ಸ್ವಾರ್ಥವು ಎಷ್ಟೊಂದು ಕುರುಡು! ನಾನು ಮಂಟಪದ ಮದುಮಗನನ್ನು ಮರೆತೇ ಬಿಟ್ಟೆ. ನನಗೆ ಸಕಾಲದಲ್ಲಿ ನೆರವಾಗಿ ನಮಗೆಲ್ಲರಿಗೂ ಮಹತ್ತ್ವದ ಉಪಕಾರ ಮಾಡಿದವಳು ಅವಳು.

ಪ್ರ— ಪಾಪ ಅವಳಿಗಿನ್ನೇನು ಮಾಡುವುದು ಲಲಿತ?

ಲಲಿತೆ— ಈ ಮುಹೂರ್ತದಲ್ಲೇ ಅವಳಿಗೂ ನಮ್ಮೊಂದಿಗೇನೆ ಮದುವೆಯಾಗುವುದು. ಬಂಟಪ್ಪನ ಮಗನನ್ನು ನಾನು ಅವಳಿಗೆ ಮೊದಲೇ ನಿಶ್ಚೈಸಿರುತ್ತೇನೆ. ನೀವು ಮೊದಲು ಹೋಗಿ ಅಪ್ಪನೊಡನೆ ಮಾತಾಡಿರಿ. ನಾನು ಅವಳನ್ನು ಮಂಟಪದಿಂದ ಕರೆಕೊಂಡು ಬರುವೆನು.

(ಸಮಾಪ್ತಿ)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 529,51 R.E.P. 809/55

ವಾದಿ— ಕೃಷ್ಣ ಆತಾಳ ವೆಂಕಟ್ರಮಣ ಆತಾಳರ ಮಗ ಉಡುಪಿ ತಾಲೂಕು ಚಿತ್ರಪಾಡಿ ಗ್ರಾಮದಲ್ಲಿರುವವರು.

ಪ್ರತಿವಾದಿ— ರಾಮ ಆತಾಳ ಲಕ್ಷ್ಮೀನಾರಾಯಣ ಆತಾಳರ ಮಗ. ಕುಂದಾಪುರ ತಾಲೂಕು ಹೊಸಕುತ್ರೂರ ಗ್ರಾಮದ ಹಾಡ್ಯಾಡಿಯಲ್ಲಿರುವವರು.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನೆಂದ್ರೆ—

ವಾದಿಯು ನಿಮ್ಮ ಮೇಲೆ ನಡ್ಸಿದ ಮೇಲಿನ ಅಮಲ್ಜ್ಯಾರಿಯು ತಾ. 1—3—56ನೇ ದಿವ್ಸ ತನ್ಖಿಗೆ ಯಿಡೋಣಾಗಿಯದೆ. ಆ ದಿವ್ಸ ನೀವು ಕೋರ್ಟು ಮುಂದೆ ಹಾಜ್ರಾಗಿ ನಿಮ್ಮ ಆಕ್ಷೇಪಣೆಗಳನ್ನು ಇದ್ದರೆ ತಿಳಿಸತಕ್ಕದ್ದು. ಇಲ್ಲವಾದ್ರೆ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂದು ತಿಳಿಸಿರುತ್ತದೆ.

(By order of the court)

Y. Tejappa Shetty
Advocate for Plff.
Coondapoor 14—2—1956.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ ಶ್ರೀ. ಎ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್. ಬಾರ್-ಎಟ್ ಲಾ. ಎ. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ



ಅನುವಾದಕರು— ಶ್ರೀ. ಕೊಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತೂ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

101 ಕತೆಗಳು **ಬೆಲೆ ರೂ. 1-12-0**

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 8/1956-

ಸುಮತಿ ಹೆಗ್ಗಡ್ತಿ ಕೂಡಾ 3 ಜನರು— ಅರ್ಜಿದಾರರು

ಮತ್ತು

ಹಿರಿಯಣ್ಣ ಹೆಗ್ಡೆ ಕೂಡಾ 2 ಜನರು— ಎದ್ರಿ:

ಇವರೊಳಗೆ —

ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ —

ಉಡ್ಪಿ ತಾಲ್ಲೂ ಪೆರ್ಡೂರು ಕೈಬಾ ಗ್ರಾಮದಲ್ಲಿ ಮೃತರಾದ ಶಿರ್ವ ಕೋಡು ಶೀನಪ್ಪ ಹೆಗ್ಡೆರು ತಾರೀಕು 29—4—1956ರಲ್ಲಿ ಬರೆದಿಟ್ಟ ರಿಜಿಸ್ಟ್ರಿ ಮೀಲನಾಮೆ ಪ್ರಕಾರ ಬರತಕ್ಕ ಸೊತ್ತುಗಳಿಗೆ 1-2ನೇ ಅರ್ಜಿದಾರರಿಗೆ ವಾರಿಸ ಸರ್ಟಿಫಿಕೇಟು ಕೊಡಹೇಳಿ ಅರ್ಜಿದಾರರು ಬರಕೊಂಡ ಮೇಲ್ಕಂಡ ಅರ್ಜಿ ತಾರೀಕು 15—3—1956ಕ್ಕೆ ಇಟ್ಟಿದೆ. ಆದ್ರಿಂದ ನೀವು ಆಕ್ಷೇಪವುಳ್ಳವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹ ಯಾ ವಕೀಲರ ದ್ವಾರಾ ಹಾಜರಾಗಿ ಉದಾಹರಿಸತಕ್ಕದ್ದು ಎಂತ ಈ ಮೂಲಕ ತಿಳಿಸಲಾಗುತ್ತದೆ.

(By order of the Court)

N. M. Adyanthaya
Advocate for Pititioners.
Karkala, Date 17—2—1956.

Edited, Printed & Published By K. H. Shetty, at the Navayuga Press. Udipi S. India

REGD. NO. M.1-3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ | ಉಡುಪಿ, 1—3—1956 | ಸಂಚಿಕೆ ೨೬

VOL. 35 | NO. 26

ಏಕ ಘಟಕ ಭಾರತ

[illegible]ಮುಖಂಡರೆನಿಸಿದವರು ಬ್ರಿಟಿಷರು ಭಾರತವನ್ನಾಳುತ್ತಿದ್ದಾಗ ಭಾಷಾನುಗುಣ ರಾಜ್ಯಗಳಬೇಡಿಕೆಯನ್ನು ತಾವು ಮುಂದಿಟ್ಟದ್ದು ಸ್ವಾತಂತ್ರ್ಯಾಂದೋಲನದ ಒಂದು ತಂತ್ರ ಮಾತ್ರವೆಂಬಂತೆ, ಈಗ ಭಾಷಾಭಿಮಾನವನ್ನು ರಾಷ್ಟ್ರಾಭಿಮಾನದ ಬೆಳಕಿನಲ್ಲಿ ನೋಡಿ ಅದನ್ನು ಸಂಯಮದಲ್ಲಿಟ್ಟಿರಬೇಕೆಂದು ಉಪದೇಶ ಕೊಡಹತ್ತಿದ್ದಾರೆ. ಅಲ್ಲದೆ, ಮುಖ್ಯವಾಗಿ ಆರ್ಥಿಕ ಮುಖವೇ ಪ್ರಧಾನವಾಗುಳ್ಳ ಪ್ರದೇಶಗಳ ರಚನೆಯನ್ನುಮಾಡಿರಾಷ್ಟ್ರಾಭಿಮಾನಕ್ಕೂ ಭಾಷಾಭಿಮಾನಕ್ಕೂ ಆಡಳಿತ ದೃಷ್ಟಿಯಿಂದ ಸುಖಕರವೆನಿಸುವ ಅಂತರವನ್ನು ನಿರ್ಮಿಸಲು ವಿಶೇಷವಾಗಿ ಪ್ರಯತ್ನಿಸುತ್ತಿದ್ದಾರೆ.

ಒಂದಕ್ಕಿಂತ ಹೆಚ್ಚು ಪ್ರಧಾನ ಭಾಷೆ ಯಾಡುವ ವಲಯಗಳನ್ನ, ಬಿಹಾರ-ಬಂಗಾಳಗಳ ಜೋಡಣೆಯು ಮಾದರಿಯನ್ನನುಸರಿಸಿ ಪ್ರದೇಶಗಳಾಗಿ ಒಂದುಗೂಡಿಸುವುದು ಹಿತಕರ ಎಂಬ ವಾದವನ್ನು ಈಗ ಧುರೀಣರು ಮೇಲಿನ ನೆಲೆಯಿಂದ ಮುಂದಿಡುತ್ತಿದ್ದಾರೆ. ಭಾಷಾಭಿಮಾನವು ಅತಿರೇಕಕ್ಕೆ ಹೋದರೆ ಹಿತವಲ್ಲ ಎಂದು ಹೇಳುವವರು ಮತ್ತು ರಾಷ್ಟ್ರದ ಸರ್ವತೋಮುಖ ಪ್ರಗತಿಯಾಗಬೇಕೆಂದು ಬಯಸುವವರು ಪ್ರದೇಶಗಳ ರಚನೆಯಿಂದ ಇದು ಸಾಧ್ಯವೆನ್ನ ಹತ್ತಿದ್ದಾರೆ. ಆದರೆ ಇದಾದರೂ ಯಾವ ಮಟ್ಟದ ತನಕ ಸಮಸ್ಯೆಗೆ ತಕ್ಕ ಪರಿಹಾರವೆನಿಸೀತು — ಎಂಬ ವಿಷಯದಲ್ಲಿ ಯಾರಿಗೂ ಸಾಕಷ್ಟು ಸಮಾಧಾನವಿಲ್ಲ. ಇದಕ್ಕೇನು ಕಾರಣ? ವಿಚಾರಿಸೋಣ!

ಭಾಷಾರಾಜ್ಯಗಳ ರಚನೆಯು ರಾಷ್ಟ್ರೀಯ ಐಕ್ಯದ ಭಾವನೆಯನ್ನು ಪೋಷಿಸುವುದಿಲ್ಲವಾದರೆ, ಪ್ರದೇಶಗಳ ರಚನೆಯಾದರೂ ಇವೇ ಅನಿಷ್ಟ ಪರಿಣಾಮವನ್ನುಮಾಡಬಹುದು. ಉದಾಹರಣೆಗೆ ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಆಂಧ್ರಗಳನ್ನು ಒಟ್ಟುಗೂಡಿಸಿ ದಕ್ಷಿಣ ಪ್ರದೇಶವನ್ನು ರಚಿಸಿದರೆ, ಈ ಹೊಸ ಪ್ರದೇಶವು ಔತ್ತರೇಯರಿಗೆ ಆಹ್ವಾನವನ್ನ ಕೊಡುವ ಭಾವನೆಯನ್ನು ತನ್ನಲ್ಲಿ (ಬೇಕೆಂದರೆ) ಬೆಳೆಯಿಸಿಕೊಳ್ಳಬಹುದು. ಈಗಾಗಲೇ ತಮಿಳು ನಾಡಿನಲ್ಲಿ ದ್ರಾವಿಡ ಕಳಗದವರು ಔತ್ತರೇಯ, ದಾಕ್ಷಿಣಾತ್ಯ ಎಂಬ ಭಾವನೆಗೆ ಬೆಂಬಲವನ್ನು ಕೊಡುತ್ತಿದ್ದಾರೆ ಇದು ಒಳ್ಳೆಯದಲ್ಲವಾದರೆ, ಮತ್ತು ಹರಿದು ಹಂಚಾದ ಕನ್ನಡ ಪ್ರದೇಶಗಳು ಒಂದುಗೂಡುವುದು ತಪ್ಪಾದರೆ, ದಕ್ಷಿಣ ಪ್ರದೇಶ ಮುಂತಾದ ವಿಶಾಲ ಬಹುಭಾಷಾ ಪ್ರಧಾನ ರಾಜ್ಯಗಳ ರಚನೆಯಾದರೂ ಹಿತಕರವಲ್ಲ.

ಇನ್ನೂ ಒಂದು ವಿಷಯ— ಫಜಲಾಲಿ ಆಯೋಗದ ವರದಿಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಬೇಕೆನ್ನುವವರು ಅಲ್ಲಿ ಎತ್ತಲಾದ "ಭಾರತಕ್ಕೆಲ್ಲ ಒಂದೇ ನಾಗರಿಕತ್ವ" ಎಂಬ ಅಂಶವೊಂದನ್ನು ಜನರ ಮುಂದಿಟ್ಟಿದ್ದಾರೆ- ರಾಷ್ಟ್ರೀಯ ಐಕ್ಯದ ಕುರಿತು ಏನೆಲ್ಲ ಮಾತುಗಳನ್ನಾಡಲಾಗುತ್ತದೊ ಅವೆಲ್ಲದರ ಮೂಲಭೂತಾಂಶವಾಗಿ ಒಂದೇ ನಾಗರಿಕಾಧಿಕಾರ ಮತ್ತು ಒಂದೇ ರಾಷ್ಟ್ರಧ್ವಜದ ಸಂಕೇತವಿದೆ. ನಮ್ಮ ಘಟನೆಯು ಇದನ್ನು ಒಪ್ಪಿಕೊಂಡಿದೆ. ಆದರೆ ನಿಜವಾಗಿ ಕಾರ್ಯಾಚರಣೆಯಲ್ಲಿ ಈ ಮೂಲಭೂತಾಧಿಕಾರವು ವ್ಯಕ್ತವಾಗಿದೆಯೆ ಎಂಬ ವಿಷಯದಲ್ಲಿ ಸಂದೇಹವಿದೆ. ಒಂದು ಚಿಕ್ಕ ಉದಾಹರಣೆಯನ್ನು ಕೊಡುವುದಾದರೆ, ಜನಸಂಖ್ಯೆಯು ಅತಿ ನಿಬಿಡವಾಗಿರುವ ತಿರು-ಕೊಚ್ಚಿಯಲ್ಲಿ ಭೂಸಂಘಾರಣೆಯ ಬಗ್ಗೆ ಒಂದು ಶಾಸನವನ್ನು ಮಾಡಿದರೆ, ಅಲ್ಲಿ ಒಬ್ಬ ರೈತನಿಗೆ ಸಿಗಬಹುದಾದ ಭೂಮಿಯ ಉತ್ಪನ್ನವು ಮೈಸೂರಿನಲ್ಲಿ ಅಂಥವೇ ಶಾಸನದಿಂದ ರೈತನೊಬ್ಬನಿಗೆ ಸಿಗಬಹುದಾದ ಉತ್ಪನ್ನದ ಮಿತಿಗಿಂತ ತೀರ ಕಡಿಮೆ ಇರಬಹುದಾಗಿದೆ ಏಕೆಂದರೆ ಈ ರಾಜ್ಯಗಳ ಶಾಸನವು ಆಯಾ ರಾಜ್ಯದ ಗಡಿಯನ್ನು ಮೀರಿ ವ್ಯಾಪಕವಾಗುವಂತಿಲ್ಲ.

ಆದುದರಿಂದ ಶಾಸನದ ಮುಂದೆ ಒಂದೇ ಭಾವನೆಯಿಂದ ನಾಗರಿಕರನ್ನು ನಡೆಸಿಕೊಳ್ಳಲಾಗುವುದೆಂಬ ಘಟನೆಯ ಘೋಷಣೆಗೆ ಎಷ್ಟರ ಮಟ್ಟಿನ ಬೆಲೆ ಕೊಡಬೇಕೊ ಗೊತ್ತಾಗುವುದಿಲ್ಲ. ಯೋಜನಾ ಆಯೋಗದವರು ಸಮಗ್ರ ರಾಷ್ಟ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಸೂಚನೆಗಳಾದರೂ ಒಂದೇ ರೀತಿಯಲ್ಲಿ ಕಾರ್ಯಾಚರಣೆಗೆ ಇಳಿದಿಲ್ಲ. ಉದಾಹರಣೆಗೆ ಮುಂಬಯಿ ರಾಜ್ಯವು ಉಳುವವನಿಗೆ ಹೊಲದೊಡೆತನ ಕೊಡುವ ದಿನವನ್ನು ನಿರ್ಧರಿಸಿ ಸಾರಿರುವಾಗ, ಮದ್ರಾಸ್ ರಾಜ್ಯದಲ್ಲಿ ನ್ಯಾಯವಾದ ಗೇಣಿ ನಿರ್ಣಯ ಮಾಡುವ ಶಾಸನವು ಸಹ ಜ್ಯಾರಿಗೆ ಬಂದಿಲ್ಲ. ಪಾನಪ್ರತಿಬಂಧದ ಕುರಿತುವಿಶೇಷ ಜಾಗರೂಕತೆಯು ಹಾಗು ನಿಧಾನವಾದ ಹೆಜ್ಜೆಯನ್ನಿಡಬೇಕೆಂದು ಯೋಜನಾ ಆಯೋಗ ಹೇಳುವುದಕ್ಕೆ ಎಷ್ಟೊ ಮುಂಚೆಯೆ ಮುಂಬಯಿ ಮತ್ತು ಮದ್ರಾಸುಗಳು ಸಂಪೂರ್ಣ ಪಾನ ನಿರೋಧವನ್ನು ಜ್ಯಾರಿಗೆ ತಂದಿವೆ. ಭವಿಷ್ಯದ ದೃಷ್ಟಿಯಿಂದ ಮೂಲಭೂತ ಮಹತ್ವವನ್ನು ಪಡೆಯುವ ಶಿಕ್ಷಣದಂಥ ವಿಷಯದಿಂದ ಹಿಡಿದು ತೀರ ಸಾಮಾನ್ಯವಾದ ರಂಗದಲ್ಲಿ ಸಹ ಮಹದಂತರವು ರಾಜ್ಯ ರಾಜ್ಯಗಳ ನಡುವೆ ಕಂಡು ಬರುತ್ತದೆ.

ರಾಷ್ಟ್ರದ ಪ್ರಬಲ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಕೇಂದ್ರದಲ್ಲಿಯೂ ಎಲ್ಲ ರಾಜ್ಯಗಳಲ್ಲಿಯೂ ಅಧಿಕಾರವನ್ನು ವಹಿಸಿರುವಾಗಲೇ ಇಂಥ ವೈವಿಧ್ಯ ಮತ್ತು ನಾಗರಿಕರನ್ನು ನಡೆಸಿಕೊಳ್ಳುವ ರೀತಿಯಲ್ಲಿ ಇಷ್ಟು ವ್ಯತ್ಯಾಸ ಕಾಣಿಸಿರುವಾಗ, ಒಂದೊಂದು ರಾಜ್ಯದಲ್ಲಿ ಒಂದೊಂದು ಪಕ್ಷದ ಸರಕಾರ ರಚನೆಯಾದರೆ ಮತ್ತು ಕೇಂದ್ರದಲ್ಲಿ ಬೇರೆಯೇ ಪಕ್ಷವೊಂದು ಅಧಿಕಾರವನ್ನು ಸ್ಥಾಪಿಸಿಕೊಂಡರೆ, ಆಗ ಭಾರತದ ಸಮಗ್ರ ಪುರೋಗತಿಯನ್ನು ಕಾಣಬೇಕೆನ್ನುವ ಈಗಿನ ಜನತಾ ಧುರೀಣರಿಗೆ ಕೆಡುಕೆನಿಸಲಾರದೆ? ಸುದೈವದಿಂದ ಈಗ ಕಾಂಗ್ರೆಸು ದೇಶದಲ್ಲಿ ಏಕ ಮೇವಾದ್ವಿತೀಯವೆನಿಸುವಷ್ಟು ಪ್ರಚಂಡ ಬಲವನ್ನು ಹೊಂದಿದೆ— ಇತರ ಪಕ್ಷಗಳು ಏನೇನೂ ಶಕ್ತಿ ಸಾಮರ್ಥ್ಯವನ್ನು ಹೊಂದಿಲ್ಲ. ಹೀಗಿದ್ದರೂ ನೆರೆಯ ತಿರು-ಕೊಚ್ಚಿಯಿಂದ ಹಿಡಿದು, ಆಂಧ್ರ, ಪೆಪ್ಸುಗಳ ವರೆಗೆ ಕಾಂಗ್ರೆಸು ಪಕ್ಷವು ದುರ್ಬಲವಾದ ಪ್ರಾತಿನಿಧ್ಯವನ್ನು ಸರಕಾರದಲ್ಲಿ ಹೊಂದಿ ಕೇಂದ್ರದಲ್ಲೊಂದು, ರಾಜ್ಯದಲ್ಲೊಂದು ಪಕ್ಷದ ಸರಕಾರವಿರಬೇಕಾದ ಪರಿಸ್ಥಿತಿ ಕಳೆದ ನಾಲ್ಕೇ ವರ್ಷಗಳಲ್ಲಿ ನಿರ್ಮಾಣವಾಗಿದೆ. ಈಗ ದುರ್ಬಲವೆನಿಸಿದ ಪ್ರತಿಪಕ್ಷಗಳು ಹೀಗೆಯೇ ಶಕ್ತಿಹೀನವಾಗಿ ಸದಾಕಾಲ ಉಳಿಯುವುವೆಂದಾಗಲೀ ಕಾಂಗ್ರೆಸು ತನ್ನ ಜನಪ್ರಿಯತೆಯನ್ನು ಅನಂತ ಕಾಲದ ವರೆಗೆ ದೇಶದಲ್ಲಿ ಕಾಯ್ದುಕೊಂಡು ಹೋಗುವುದಾಗಲೀ ಅನಿಶ್ಚಿತವಾದ ವಿಷಯ. ಆದುದರಿಂದ ಕೆಲವು ರಾಜ್ಯಗಳಲ್ಲಿಯಾದರೂ ಕೆಲವು ಪಕ್ಷಗಳು ಪ್ರಬಲಿಸಿಕೊಂಡು ಸರಕಾರ ನಡೆಸುವ ಸಂಭವವನ್ನು ನಾವು ಲಘುವಾಗಿ ತಿಳಿದು ಕಡೆಗಣಿಸಬಾರದು.

ಹಾಗೆಲ್ಲಿಯಾದರೂ ಆದರೆ, ಕೇಂದ್ರದ ಈಗಿನ ಸರಕಾರ ಘೋಷಿಸಿರುವ ಸಮಾಜವಾದಿ ಮಾದರಿಯ ಸಮಾಜ ರಚನೆಯೇ ಮುಂತಾದ ಯಾವುದೇ ಧ್ಯೇಯವು ರಾಷ್ಟ್ರದಾದ್ಯಂತ ಪ್ರತಿಬಿಂಬಿಸಲ್ಪಡುವ ಸಾಧ್ಯತೆ ಇದೆಯೆ? ಭಾರತದ ಈಗಿನ ಘಟನಾತ್ಮಕ ಸ್ವರೂಪವನ್ನು ವೀಕ್ಷಿಸಿದರೆ, ಅಂಥ ಸಾಧ್ಯತೆ ಇಲ್ಲವೆಂದೇ ಹೇಳಬೇಕಾಗುತ್ತದೆ. ನಮ್ಮದು "ಫೆಡರಲ್" ಮಾದರಿಯ ಘಟನೆಯಾಗಿದೆ. ಇಲ್ಲಿ ರಾಜ್ಯಗಳಿಗೆ ಕೆಲವು ವಿಷಯಗಳಲ್ಲಿ ಸರ್ವಸ್ವಾಮ್ಯವಿದೆ; ಕೇಂದ್ರ ಸರಕಾರ ಸಹ ಘಟನಾತ್ಮಕವಾಗಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿರುವಾಗ ಈ ಹಕ್ಕನ್ನು ಕಸಿದುಕೊಳ್ಳಲಾರದು; ಹಸ್ತಕ್ಷೇಪವನ್ನು ಸಹ ಮಾಡಲಾರದು. ಸೇನೆ, ನಾಣ್ಯ ಮತ್ತು ನೋಟುಗಳ ಚಲಾವಣೆ, ರೈಲ್ವೆ ಮತ್ತು ಟಪ್ಪಾಲು ತಂತಿಯಂಥ ಸಾರಿಗೆ ಸಂಪರ್ಕ ಸಾಧನ— ಇತ್ಯಾದಿ ಕೆಲವೇ ಕ್ಷೇತ್ರಗಳ ಮಟ್ಟಿಗೆ ಈಗ ಅಧಿಕಾರವು ಕೇಂದ್ರದ ವಶದಲ್ಲಿದೆ. ಕೇಂದ್ರದಲ್ಲಿಯೂ ರಾಜ್ಯದಲ್ಲಿಯೂ ಒಂದೇ ಪಕ್ಷ ಅಧಿಕಾರದಲ್ಲಿದ್ದರೆ ಪಕ್ಷದ ಶಿಸ್ತು

(೧೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ.ಭಾರತ.

ಜಯಶ್ರೀಯು ನಿಮ್ಮನ್ನಗಲದಂತೆ ನೋಡಿಕೊಳ್ಳಿರಿ.

ಪ್ರತಿ ವೇತನ ದಿನದಲ್ಲಿ ಕಿಂಚಿತ್ತಾದರೂ ಉಳಿಸಿರಿ. ಹಾಗೆ ಉಳಿಸಿದುದನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಉಳಿತಾಯ ಖಾತೆಯಲ್ಲಿ ನಿಮಗಾಗಿ ಕಾರ್ಯವೆಸಗಲು ತೊಡಗಿರಿ.

ಗಂಡಾಂತರಗಳನ್ನೂ ಆಕಸ್ಮಿಕ ಸಂದರ್ಭಗಳನ್ನೂ ಎದುರಿಸಲು ಬೇಕಾಗುವ ಕ್ಷೇಮ ನಿಧಿಯನ್ನು ಕೂಡಿಸಲು ಸಾಮಾನ್ಯ ಗಂಡಸು ಅಥವಾ ಹೆಂಗಸಿಗೆ ಕ್ರಮ ಪ್ರಕಾರ ಉಳಿತಾಯ ಮಾಡಿಕೊಂಡು ಬರುವುದೇ ಸುಲಭ ಸಾಧ್ಯವಾದ, ನಿಜವಾದ ಮತ್ತು ಸುರಕ್ಷಿತವಾದ ಸಾಧನ.

ಬೊಂಬಾಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದು ಮತ್ತು ತಿರುಕೊಚ್ಚಿ ರಾಜ್ಯಗಳಲ್ಲಿರುವ ನಮ್ಮ 93 ಶಾಖಾ ಕಚೇರಿಗಳಲ್ಲಿ ಯಾವುದಾದರೊಂದರಲ್ಲಿ ಉಳಿತಾಯ ಲೆಖ್ಖವನ್ನು ತೆರೆಯಿರಿ.

ಚಲಾವಣೆ ಭಂಡವಾಳ ರೂ. ೮,೫೦,೦೦,೦೦೦

THE CANARA INDUSTRIAL & BANKING SYNDICATE LTD.

Estd: 1925] [Head Office: UDIPI, S. India.

ರಾಷ್ಟ್ರೀಯ ಸಂಸ್ಕೃತಿಯ ಸಕೃದ್ದರ್ಶನ

ನೆಹರುಗಳಿಂದ ಭಾರತೀಯ ಪರಂಪರೆಯ ನಿರೂಪಣೆ

ಹಲವೊಮ್ಮೆ ನಾನು ನನ್ನಲ್ಲಿಯೇ ಕೇಳಿಕೊಳ್ಳುವುದುಂಟು: ಭಾರತವೆಂದರೇನು? ಭಾರತದ ತಿರುಳೇನು? ಭಾರತವನ್ನು ರೂಪಿಸಿದ ಶಕ್ತಿಗಳೇನು? ಹಿಂದೆಯೂ ಈಗಲೂ ಜಗತ್ತಿನ ಪ್ರಭಾವಶಾಲಿ ವರ್ಚಸ್ಸಿನೊಡನೆ ಇವುಗಳ ಸಂಬಂಧವೇನು?

ಈ ವಿಷಯವು ಬಹಳ ವಿಶಾಲವಾದುದಾಗಿದೆ. ಭಾರತದೊಳಗಿನದಷ್ಟೇ ಅಲ್ಲ, ಇತರೆಡೆಯಲ್ಲಿಯ ಮಾನವೀಯ ಚಟುವಟಿಕೆಗಳ ಕ್ಷೇತ್ರವನ್ನೂ ಇದು ವ್ಯಾಪಿಸುತ್ತದೆ. ಯಾವನೇ ವ್ಯಕ್ತಿಯೊಬ್ಬನು ಈ ವಿಷಯದ ಕುರಿತು ವ್ಯಾಖ್ಯಾನಿಸಿ ನ್ಯಾಯ ಮಾಡಲಾರನೆಂದು ಕಾಣುತ್ತದೆ.

ಆದರೂ ನಾವು ಇದರ ಕೆಲವು ಪ್ರಾಮುಖ್ಯಾಂಶಗಳನ್ನು ತೆಗೆದುಕೊಂಡು ಅವುಗಳನ್ನು ಮನವರಿಕೆ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಕನಿಷ್ಠ ಪಕ್ಷದಲ್ಲಿ ನಾವು ಭಾರತವನ್ನಾದರೂ ತಿಳಿದುಕೊಳ್ಳಲು ಪ್ರಯತ್ನಿಸಬಹುದು. ಜಗತ್ತಿನ ವಿಶಾಲ ಚಿತ್ರವು ಮುಂದಿರದಿದ್ದರೆ ನಮ್ಮ ತಿಳಿವಳಿಕೆ ತೀರ ಸಂಕುಚಿತವಿರುವಂತೆ ಕಂಡರೂ, ಈ ಸಾಹಸ ಮಾಡಬಹುದು.

ಸಂಯುಕ್ತ ಪ್ರಭಾವ

ಇನ್ನು, ಸಂಸ್ಕೃತಿ ಎಂದರೇನು? ನಾನು ನಿಘಂಟುವನ್ನು ನೋಡಿದಾಗ ಅಲ್ಲಿ ವ್ಯಾಖ್ಯೆಯ ವೈವಿಧ್ಯವೇ ಕಂಡು ಬರುತ್ತದೆ. ಒಬ್ಬ ಮಹಾ ಲೇಖಕರು "ಜಗತ್ತಿನಲ್ಲಿ ಒಳ್ಳೆಯದೆಂದು ಹೆಸರಾದ ಮತ್ತು ಭಾವಿಸಲಾದ ವಿಷಯದೊಡನೆ ನಮ್ಮ ಪರಿಚಯ" ಎಂದು ಸಂಸ್ಕೃತಿಯನ್ನು ಕರೆದಿದ್ದಾರೆ ಇನ್ನೊಂದು ನಿರೂಪಣೆಯಂತೆ, ಸಂಸ್ಕೃತಿಯು ದೈಹಿಕ ಅಥವಾ ಮಾನಸಿಕ ಶಕ್ತಿಗಳ ತರಬೇತಿ, ಅಭಿವೃದ್ಧಿ ಅಥವಾ ಶಕ್ತಿವೃದ್ಧಿ; ಅಂದರೆ, ಮನಸ್ಸಿನ, ನೈತಿಕ ಮೌಲ್ಯಗಳ, ಅಭಿರುಚಿ ಮತ್ತು ಒಲವುಗಳ ರಚನೆಯ ಸುಧಾರಣೆ ಅಥವಾ ನಾಗರಿಕತೆಯ ಭವ್ಯತೆಯನ್ನು ಪೋಷಿಸುವ ಸಾಧನ. ಈ ದೃಷ್ಟಿಯಲ್ಲಿ ಸಂಸ್ಕೃತಿಯು ಮೂಲಭೂತವಾದುದೆಂತೊ ಅಂತೆಯೇ ಅಂತರಾಷ್ಟ್ರೀಯವೂ ಹೌದು. ಸಂಸ್ಕೃತಿಗೆ ರಾಷ್ಟ್ರೀಯ ಸ್ವರೂಪವೂ ಉಂಟು. ಎಲ್ಲ ರಾಷ್ಟ್ರಗಳೂ ತಮಗೆ ವಿಶಿಷ್ಟವಾದ ಪ್ರತಿಭೆಯನ್ನು ಬೆಳೆಸಿಕೊಂಡು ಹಾಗು ವ್ಯಕ್ತಿತ್ವವನ್ನು ಕಾಯ್ದುಕೊಂಡು ಬಂದಿರುತ್ತವೆ. ಈ ಚೌಕಟ್ಟಿನಲ್ಲಿ ಭಾರತದ ನೆಲೆಯೇನು?

ಕೆಲವರು ಹಿಂದೂ ಸಂಸ್ಕೃತಿ, ಮುಸ್ಲಿಂ ಸಂಸ್ಕೃತಿ, ಕ್ರೈಸ್ತ ಸಂಸ್ಕೃತಿ ಎಂದೆಲ್ಲ ಮಾತನಾಡುತ್ತಾರೆ. ಒಂದು ಜನಾಂಗದ ಅಥವಾ ರಾಷ್ಟ್ರದ ಸಂಸ್ಕೃತಿಯ ಮೇಲೆ ಮಹಾ ಧಾರ್ಮಿಕ ಚಳವಳಿಗಳು ಪರಿಣಾಮವನ್ನೂ ಪ್ರಭಾವವನ್ನೂ ಮಾಡಿವೆ ಎಂಬುದನ್ನು ನಾನು ಸತ್ಯವೆಂದು ಭಾವಿಸುವೆನಾದರೂ ಮೇಲಿನ ಮಾತುಗಳ ಅರ್ಥ ನನಗಾಗದು. ನಾನು ಭಾರತವನ್ನು ನೋಡಿದಾಗ, ನನಗಲ್ಲಿ ಭಾರತೀಯರ ಸಂಯುಕ್ತ ಸಂಸ್ಕೃತಿಯು ದೃಢವಾಗಿ, ನಿಧಾನವಾಗಿ ಬೆಳೆದಿರುವುದೇ ಕಾಣುತ್ತದೆ. ಈ ಸಂಸ್ಕೃತಿಯ ಮೂಲವನ್ನು ಆರ್ಯಕಾಲಕ್ಕೂ ಹಿಂದೆ, ಮೊಹೆಂಜೊದಾರೊ ಇತ್ಯಾದಿ ನಾಗರಿಕತೆಯ ಕಾಲಕ್ಕೂ ದ್ರಾವಿಡ ನಾಗರಿಕತೆಯ ಯುಗಕ್ಕೂ ಕೊಂಡೊಯ್ಯಬಹುದು ಇನ್ನೊಂದು ದಿಸೆಯಲ್ಲಿ ಮಧ್ಯ ಏಶ್ಯದಿಂದ ಬಂದ ಆರ್ಯ ಜನಾಂಗದಿಂದಲೂ ನಮ್ಮ ಸಂಸ್ಕೃತಿಯು ಪ್ರಭಾವಶಾಲಿಯಾದ ವರ್ಚಸ್ಸಿಗೊಳಗಾಯಿತು. ವಾಯವ್ಯದಿಂದ ಪ್ರವೇಶಗೈದ ಮತ್ತು ಸಮುದ್ರಗಳನ್ನು ದಾಟಿ ಪಶ್ಚಿಮದಿಂದ ಬಂದ ಜನಾಂಗಗಳಿಂದಲೂ ಅದು ಪ್ರಭಾವಿಸಲ್ಪಟ್ಟಿತು.

ಅದ್ಭುತ ಸಾಮರ್ಥ್ಯ

ಹೀಗೆ ನಮ್ಮ ರಾಷ್ಟ್ರೀಯ ಸಂಸ್ಕೃತಿಯು ನಿಧಾನವಾಗಿ ಬೆಳೆದು, ರೂಪುಗೊಂಡಿತು. ಅದಕ್ಕೆ ಸಂಶ್ಲೇಷಣೆಗೊಳ್ಳುವ ಹಾಗು ಹೊಸ ಅಂಶಗಳನ್ನು ಅಡಕಮಾಡಿಕೊಳ್ಳುವ ಅದ್ಭುತ ಸಾಮರ್ಥ್ಯವಿದ್ದಿತು. ಹೀಗೆ ಮಾಡುತ್ತಿರುವಷ್ಟು ಕಾಲ ಈ ಸಂಸ್ಕೃತಿಯು ಗತಿಶೀಲವೂ ಜೀವಂತವೂ ಆಗಿ ಉಳಿಯಿತು. ಮುಂದೆ ಅದು ತನ್ನ ಗತಿಶೀಲ ವೈಶಿಷ್ಟ್ಯವನ್ನು ಕಳೆದುಕೊಂಡು ತೆಸರಿನ ಕೊಳವಾಗಿ ಮಾರ್ಪಟ್ಟು ತನ್ನೆಲ್ಲ ಅಂಗಗಳಲ್ಲೂ ದೌರ್ಬಲ್ಯವನ್ನು ತಂದುಕೊಂಡಿತು. ಭಾರತದ ಸಮಗ್ರ ಇತಿಹಾಸದಲ್ಲಿ ನಾವು ಎರಡು ಪರಸ್ಪರ ವಿರುದ್ಧವಾದ ಮತ್ತು ಪ್ರತಿಸ್ಪರ್ಧಿಯಾದ ವಿಷಯಗಳನ್ನು ನೋಡುತ್ತೇವೆ— ಸಂಶ್ಲೇಷಣೆಗೂ ಇನ್ನೊಂದು ವಸ್ತುವನ್ನು ಅಡಕ ಮಾಡಿಕೊಳ್ಳುವುದಕ್ಕೂ ಅನುಕೂಲವಾದ ವಿಷಯವೊಂದು; ನಮ್ಮನ್ನು ಪ್ರತ್ಯೇಕಿಸಿಡುವ ಕ್ಷುಲ್ಲಕ ಮನೋಭಾವ ಇನ್ನೊಂದು. ಇಂದಿಗೂ ನಾವು ಬೇರೊಂದು ರೀತಿಯಲ್ಲಿ ಇದೇ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಕೇವಲ ರಾಜಕೀಯ ಸ್ವರೂಪದ್ದಲ್ಲ, ಸಾಂಸ್ಕೃತಿಕ ಐಕ್ಯಕ್ಕಾಗಿ ಕೆಲಸ ಮಾಡುವ ಶಕ್ತಿಯೊಂದೆಡೆ— ಚೂರು ಚೂರು ಮಾಡಿ ಪ್ರತ್ಯೇಕಿಸಿಡುವ ಶಕ್ತಿಗಳು ಇನ್ನೊಂದೆಡೆ ಕಾಣಿಸುತ್ತವೆ.

ಆದುದರಿಂದ ನಮ್ಮ ಮುಂದಿರುವ ಇಂದಿನ ಪ್ರಶ್ನೆಯು ಕೇವಲ ವಿದ್ವತ್ಪ್ರದರ್ಶನ ಮಹತ್ವದಿಂದ ಕೂಡಿರುವಂಥದಲ್ಲ- ಅಸ್ತಿತ್ವದ ಮೇಲೆ ಪರಿಣಾಮ ಮಾಡಬಲ್ಲ ಮಹತ್ವ ಅದಕ್ಕಿದೆ: ನಮ್ಮ ಭವಿಷ್ಯವು ಈ ಪ್ರಶ್ನೆಯನ್ನು ಅರ್ಥಮಾಡಿಕೊಂಡು ಅದಕ್ಕೊಂದು ಪರಿಹಾರವನ್ನು ಹುಡುಕುವುದರ ಮೇಲೆಯೇ ಅವಲಂಬಿಸಿದೆ. ಇಂಥ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯೋಗ್ಯ ಮುಂದಾಳುತ್ವವನ್ನು ವಹಿಸುವುದು ಸಾಮಾನ್ಯವಾಗಿ ಬುದ್ಧಿ ಜೀವಿಗಳ ಪಾಲಿನ ಕಾರ್ಯ; ಆದರೆ ಈ ಬುದ್ಧಿ ಜೀವಿಗಳಿನ್ನೂ ನಮ್ಮ ಅಪೇಕ್ಷೆಗಳ ಮಟ್ಟಕ್ಕೆ ಬಂದಿಲ್ಲ. ಈ ಸಮಸ್ಯೆಯ ಪ್ರಕೃತಿಯನ್ನೆ ತಿಳಿಯಲು ಅವರಲ್ಲಿ ಹಲವರಿಗೆ ಸಾಧ್ಯವಾಗಿಲ್ಲವೆಂದು ತೋರುತ್ತದೆ; ಉಳಿದವರಿಗಾದರೂ ಎತ್ತ ತಿರುಗಬೇಕೆಂಬ ಜ್ಞಾನವಿಲ್ಲದೆ ಆತ್ಮಿಕ ಜಾಡ್ಯದ ವಿಷಮ ಚಕ್ರದಲ್ಲಿ ಸಿಲುಕಿರುವಂತೆ ಅನುಭವವಾಗುತ್ತದೆ. ಉದಾಹರಣೆಗೆ, ಮಾರ್ಕ್ಸ್ ವಾದವು ನಮ್ಮ ಅನೇಕ ಬುದ್ಧಿಜೀವಿಗಳನ್ನು ಆಕರ್ಷಿಸಿತು. ಚಾರಿತ್ರಿಕ ಬೆಳವಣಿಗೆಯನ್ನು ವಿಶ್ಲೇಷಿಸುವ ಕೆಲವು ಸೂತ್ರಗಳನ್ನಿದು ಕೊಟ್ಟಿತು. ಇದರಿಂದ ನಮಗೆ ವಿಚಾರ ಮಾಡಲೂ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಲೂ ಸಹಾಯವಾಯಿತು— ಎಲ್ಲ ನಿಜ. ಆದರೆ ಅದಾದರೂ ತೀರ ಸಂಕುಚಿತವಾದ ಸಿದ್ಧಾಂತವೊಂದೇ ಸಿದ್ಧವಾಯಿತು. ಅದರ ಆರ್ಥಿಕ ಮಹತ್ವವೇನೇ ಇರಲಿ ಮೂಲಭೂತ ಸಂಶಯಗಳ ಪರಿಹಾರದಲ್ಲಿ ಅದು ಅನುತ್ತೀರ್ಣವಾಯಿತು. ಜೀವನವು ಆರ್ಥಿಕ ಬೆಳವಣಿಗೆಗಿಂತಲೂ ಹೆಚ್ಚಿನದು. ಆರ್ಥಿಕ ಬೆಳವಣಿಗೆಯು ಜೀವನ ಮತ್ತು ಪ್ರಗತಿಯ ಅಡಿಗಲ್ಲುಗಳಲ್ಲಿ ಒಂದಾಗಿದ್ದರೂ ಈ ಮಾತು ಸತ್ಯ.

ಕಾರ್ಯನಿರತ ಸೂತ್ರಗಳು

ಇತಿಹಾಸವು ನಮಗೆ ಎರಡು ಸೂತ್ರಗಳು ಸದಾ ಕಾರ್ಯನಿರತವಾಗಿರುವುದನ್ನು ತೋರಿಸುತ್ತದೆ— ಒಂದು ಇದ್ದುದನ್ನು ಮುಂದರಿಸಿಕೊಂಡು ಹೋಗುವ ಸೂತ್ರ; ಮತ್ತೊಂದು ಬದಲಾವಣೆಯನ್ನು ಅಳವಡಿಸಿಕೊಳ್ಳುವ ಸೂತ್ರ. ಇವು ಒಂದಕ್ಕೊಂದು ವಿರುದ್ಧವಿರುವಂತೆ ಭಾಸವಾದರೂ ಇವುಗಳಲ್ಲಿ ಪ್ರತಿಯೊಂದೂ ಇನ್ನೊಂದರ ಸ್ವಲ್ಪಾಂಶವನ್ನು ಪಡೆದಿದೆ. ಕ್ರೂರ ಕ್ರಾಂತಿಗಳ ಹಾಗು ಭೂಕಂಪಗಳ ರೂಪದಲ್ಲಿ ನಾವು ತೀರ ಕ್ಷಿಪ್ರವಾದ ಬದಲಾವಣೆಗಳೆಂದು ಏನನ್ನು ಕರೆಯುತ್ತೇವೊ— ಅಂಥ ಘಟನೆಗಳಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ ಪ್ರತಿಯೊಬ್ಬ ಭೂಗರ್ಭ ವಿಜ್ಞಾನಿಗೂ ಭೂಪೃಷ್ಠದಲ್ಲಿ ಪ್ರಾಮುಖ್ಯ ಬದಲಾವಣೆಗಳು ನಿಧಾನವಾಗಿಯಷ್ಟೆ ಜರಗುತ್ತವೆ; ಆದಾಗ್ಯೂ ಅವುಗಳ ಮುಂದೆ ಹೋಲಿಸಿದಾಗ ಭೂಕಂಪ ಕೇವಲ ಕ್ಷುಲ್ಲಕವೆನಿಸುತ್ತದೆ ಎಂದು ತಿಳಿದಿದೆ. ಇದರಂತೆ ಕ್ರಾಂತಿಗಳಾದರೂ ಬಹಳ ದೀರ್ಘಕಾಲದಿಂದ ನಡೆಯುತ್ತಾ ಬಂದ ಪರಿವರ್ತನೆಯ ಸ್ಪಷ್ಟ ಪ್ರಕಟರೂಪ. ಹೀಗೆ ಬದಲಾವಣೆಯೆಂಬುದೇ ಮುನ್ನಡೆಯುತ್ತಾ ಹೋಗುವ ಕ್ರಿಯೆಯಾಗಿದೆ. ಸ್ಥಿತ್ಯಾತ್ಮಕಾವಸ್ಥೆಯು ಸಂಪೂರ್ಣವಾಗಿ ಕೊಳೆತು ನಾರುವವರೆಗೆ ಮತ್ತು ಸಾಯುವವರೆಗೆ ಮುಂದರಿದುಕೊಂಡು ಹೋಗುವುದಕ್ಕಾದರೂ ಬದಲಾವಣೆ ಬೇಕೇ ಬೇಕು.

ಚರಿತ್ರೆಯಲ್ಲಿ ಪರಿವರ್ತನ ಕ್ರಿಯೆಯ ವೇಗವು ಸ್ಪಷ್ಟವಾಗಿ ಗೋಚರವಾದ ಕೆಲವು ಕಾಲಗಳಿವೆ. ಉಳಿದ ಸಮಯದಲ್ಲಿ ನೋಟವು ಕೇವಲ ಸ್ಥಿತ್ಯಾತ್ಮಕವೆನಿಸಿವೆ ಆದರೆ ಸ್ಥಿತ್ಯಾತ್ಮಕಾವಸ್ಥೆಯ ಅವಧಿಯು ಜನಾಂಗವನ್ನು ಕ್ಷಿಪ್ರದಲ್ಲಿ ಅವನತಿಗೂ ದೌರ್ಬಲ್ಯಕ್ಕೂ ತಳ್ಳಿ ರಚನಾತ್ಮಕ ಕಲೆಗಳ ಅಪಕರ್ಷಕ್ಕೂ ರಾಜಕೀಯ ಗುಲಾಮಗಿರಿಗೂ ಗುರಿಮಾಡಿವೆ.

ಆರ್ಯ ದ್ರಾವಿಡ ಮಿಲನ

ಪ್ರಾಯಶಃ ಆರ್ಯರು ದ್ರಾವಿಡರೇ ಮುಂತಾದ ಹಿಂದಿನ ವಂಶಜರೊಡನೆ ಬೆರೆತುದು ಭಾರತದಲ್ಲಿ ಅತ್ಯಂತ ಶಕ್ತಿಯುತವಾದ ಸಾಂಸ್ಕೃತಿಕ ಬಂಧ. ಇದರಿಂದಲೇ ನಮ್ಮ ಶಾಸ್ತ್ರೀಯ ಭಾಷೆಯಾದ ಸಂಸ್ಕೃತದಲ್ಲಿ ಮುಖ್ಯವಾಗಿ ವ್ಯಕ್ತಗೊಂಡ ಪ್ರಬಲಶಕ್ತಿಸಂಪನ್ನ ಸಂಸ್ಕೃತಿಯ ಉದಯವಾಯಿತು. ಆ ಭಾಷೆಯು ಮಧ್ಯಏಶ್ಯದಲ್ಲಿ ಇತರ ಭಾಷೆಯೊಡನೆ ಒಂದೇ ಮೂಲದಿಂದ ಹುಟ್ಟಿದರೂ ವಾಸ್ತವದಲ್ಲಿ ಭಾರತದ ರಾಷ್ಟ್ರಭಾಷೆಯಾಗಿ ಪರಿಣಮಿಸಿತು. ಅದರ ಬೆಳವಣಿಗೆಗೆ ಉತ್ತರ ಹಾಗು ದಕ್ಷಿಣ ಭಾರತಗಳೆರಡೂ ನೆರವಾದುವು. ಸಂಸ್ಕೃತವು ನಮ್ಮ ಜನತೆಯ ವಿಚಾರಗಳ ಹಾಗು ಧರ್ಮದ ಸಂಕೇತವೆನಿಸಿದುದಷ್ಟೇ ಅಲ್ಲ, ಭಾರತದ ಸಾಂಸ್ಕೃತಿಕ ಐಕ್ಯದ ಪ್ರತೀಕವಾಗಿಯೂ ಅದು ಕಂಗೊಳಿಸಿತು. ಬುದ್ಧನ ಕಾಲದಿಂದೀಚೆಗೆ ಜನರ ಆಡುಭಾಷೆಯಾಗಿ ಸಂಸ್ಕೃತವು ಉಳಿದಿಲ್ಲ, ನಿಜ. ಆದಾಗ್ಯೂ ಅದು ಸಮಗ್ರ ಭಾರತದಲ್ಲಿ ತನ್ನ ಶಕ್ತಿಶಾಲಿಯಾದ ವರ್ಚಸ್ಸನ್ನು ಬೀರುತ್ತಿರುವುದೇನು ಸುಳ್ಳಲ್ಲ.

ಭೌಗೋಲಿಕ ಸ್ವರೂಪವು ಭಾರತವನ್ನು ಅದರ ಪ್ರಾಚೀನೇತಿಹಾಸದ ದಿನ

(೧೧ನೇ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/3; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ದಕ್ಷಿಣ ಧ್ರುವ ಪ್ರದೇಶದ ದಿಗ್ವಿಜಯ

ಹನ್ನೆರಡು ರಾಷ್ಟ್ರಗಳ ಭೂಪೃಷ್ಠ ವಿಜ್ಞಾನಶಾಸ್ತ್ರ ತಜ್ಞರಲ್ಲಿ ಸ್ಪರ್ಧೆ

ಕಳೆದ ಕೆಲವು ವಾರಗಳಿಂದ ದಕ್ಷಿಣ ಧ್ರುವ ಪ್ರದೇಶದಲ್ಲಿ ಹೊಸ ಚಟುವಟಿಕೆಯನ್ನು ಬೇರೆ ಬೇರೆ ಜನಾಂಗಗಳವರು ನಡೆಸುತ್ತಿರುವ ವಾರ್ತೆಯನ್ನು ಸುದ್ದಿ ಸಂಸ್ಥೆಗಳು ಪ್ರಕಟಿಸತೊಡಗಿವೆ: ಅಂತಾರಾಷ್ಟ್ರೀಯ ಭೂಪೃಷ್ಠ ವಿಜ್ಞಾನ ವರ್ಷದ (೧೯೫೭-೫೮) ಪ್ರಮುಖ ಅಂಗವಾಗಿ ನಡೆಸುತ್ತಿರುವ ಪೂರ್ವಭಾವಿ ಕಾರ್ಯಕ್ರಮದ ಮೇಲೆ ಈ ಸಮಾಚಾರಗಳು ಬೆಳಕನ್ನು ಚೆಲ್ಲುತ್ತವೆ. ಇದುವರೆಗೆ ಹೆಚ್ಚಿನ ಸಂಶೋಧನೆಗೇನೂ ಒಳಗಾಗದೆ ಶ್ವೇತ ಭೂಖಂಡವಾಗಿ ಉಳಿದಿದ್ದ ದಕ್ಷಿಣ ಧ್ರುವ ಪ್ರದೇಶವು ಈಗ ಅಮೇರಿಕ, ರಶಿಯ, ಬ್ರಿಟನ್, ಫ್ರಾನ್ಸ್, ಆಸ್ಟ್ರೇಲಿಯ, ನ್ಯೂಜೀಲೆಂಡ್ ಮುಂತಾದ ಹನ್ನೆರಡು ರಾಷ್ಟ್ರಗಳವರು ಕಳಿಸಿದ ಸಾಹಸಪರ ತಂಡಗಳ ಪದಾಘಾತಕ್ಕೆ ಗುರಿಯಾಗಿರುವುದು ನಿಜಕ್ಕೂ ಕುತೂಹಲವನ್ನು ಕೆರಳಿಸುವ ವಿಷಯ.

ಹಾಲಿನಂತಹ ಭೂಭಾಗ

ಹಿಂದು ಪುರಾಣಗಳಲ್ಲಿ ಉಲ್ಲೇಖಗೊಂಡಿರುವ ಕ್ಷೀರಸಾಗರವೆಂಬುದು ಇಂದಿನ ಭೌಗೋಳಿಕ ಸ್ವರೂಪದಲ್ಲಿ ಕಾಣಸಿಕ್ಕಿಲ್ಲವಾದರೂ, ದಕ್ಷಿಣ ಧ್ರುವ ಪ್ರದೇಶವು ತನ್ನ ಬಿಳಿ ಬಣ್ಣದ ಹೊದಿಕೆಯ ದೆಸೆಯಿಂದ ಶ್ರೀಮನ್ನಾರಾಯಣನ ಆವಾಸಸ್ಥಾನದ ನೆನಪನ್ನು ತಂದುಕೊಡುತ್ತದೆ. ಸದಾಕಾಲ ಹಿಮಾಚ್ಛಾದಿತವಾಗಿರುವ ಈ ಪ್ರದೇಶವು ಮನುಷ್ಯ ಪ್ರಾಣಿಯ ಮಟ್ಟಿಗೆ ನಿಜಕ್ಕೂ ಬಹಳ ದುರ್ಗಮವಾಗಿದೆ. ಚಂದ್ರಲೋಕವು ಎಷ್ಟು ಶೀತಲವಿರಬಹುದೆಂಬ ಕಲ್ಪನೆಯನ್ನು ತುಸುವಾದರೂ ಮಾಡಿಸಿಕೊಡುವಷ್ಟು ದಕ್ಷಿಣ ಧ್ರುವ ಪ್ರದೇಶವು ವಿಪರೀತ ಚಳಿಯಿಂದ ಕೂಡಿದೆ.

ದಕ್ಷಿಣ ಧ್ರುವ ಪ್ರದೇಶದ ಹೆಸರು ಉತ್ತರ ಧ್ರುವ ಪ್ರದೇಶದ ನೆನಪು ಹುಟ್ಟಿಸಬಹುದಾದರೂ ಇವೆರಡರ ವಾತಾವರಣದ ಮಟ್ಟಿಗೆ ಧ್ರುವಗಳ ನಡುವಿದ್ದಷ್ಟೆ ಅಂತರವಿದೆ. ಉತ್ತರ ಧ್ರುವ ಪ್ರದೇಶಕ್ಕಿಂತ ದಕ್ಷಿಣ ಧ್ರುವ ಪ್ರದೇಶವು ಅನೇಕ ವಿಷಯಗಳಲ್ಲಿ ಕೌತುಕಪ್ರದವೂ ಆಗಿದೆ. ಉದಾಹರಣೆಗೆ, ಉತ್ತರ ಧ್ರುವದ ಕಡೆಗಿನ ಭೂಭಾಗದಲ್ಲಿ ೬೦ ಡಿಗ್ರಿ ಉತ್ತರ ಅಕ್ಷಾಂಶದ ಉತ್ತರಕ್ಕೆ ಸುಮಾರು ಹತ್ತು ಲಕ್ಷ ಮಾನವರು ಈಗ ವಾಸಮಾಡಿಕೊಂಡಿದ್ದಾರೆ; ಅಲ್ಲದೆ ಬಗೆ ಬಗೆಯ ಪ್ರಾಣಿಗಳೂ ಅಲ್ಲಿ ಜೀವಿಸಿಕೊಂಡಿವೆ. ಮೋಪಿನ ಮರಗಳುಳ್ಳ ಹುಲುಸಾದ ಕಾಡುಗಳೂ ಸಮೃದ್ಧ ಆಹಾರವನ್ನೊದಗಿಸಬಲ್ಲ ಮೀನುಗಾರಿಕೆಯ ಕೇಂದ್ರಗಳೂ ಇಲ್ಲಿವೆ. ಆದರೆ ದಕ್ಷಿಣ ಧ್ರುವ ಪ್ರದೇಶದಲ್ಲಿ ಜೀವನದ ಯಾವುದೇ ಚಟುವಟಿಕೆಯೂ ಕಂಡುಬರುತ್ತಿಲ್ಲ. ಮನುಷ್ಯನಿರಲಿ, ಮರಗಿಡಗಳೂ ನೋಡಸಿಗುವುದಿಲ್ಲ. ತಿಮಿಂಗಿಲ ಪೆಂಗ್ವಿನ್‌ಗಳನ್ನು ಬಿಟ್ಟರೆ ಬೇರೆ ಪಕ್ಷಿ ಅಥವಾ ಪ್ರಾಣಿಗಳೂ ಇದ್ದಂತಿಲ್ಲ.

ನಿರಂತರ ಆತಂಕ

ಸುಮಾರು ಐವತ್ತು ಲಕ್ಷ ಚದರ ಮೈಲುಗಳಷ್ಟು ವಿಸ್ತಾರವುಳ್ಳ ದಕ್ಷಿಣ ಧ್ರುವ ಪ್ರದೇಶವು ಉತ್ತರ ಧ್ರುವ ಪ್ರದೇಶಕ್ಕಿಂತ ಬಹಳ ವಿಶಾಲವೆನಿಸುತ್ತದೆ. ರಶಿಯವನ್ನುಳಿದ ಯುರೋಪು ಮತ್ತು ಆಸ್ಟ್ರೇಲಿಯದಷ್ಟು ಅಥವಾ ಅಮೇರಿಕದ ಸಂಯುಕ್ತ ರಾಜ್ಯದಷ್ಟು ವಿಶಾಲವಾದ ಭೂಭಾಗವಿದು. ಆದರೆ ಇದಿನ್ನೂ ತೀರ ನಿಶಾಂತವಲ್ಲಿದೆ. ಇದಕ್ಕೆ ಬಲವಾದ ಕಾರಣಗಳುಂಟು - ದಕ್ಷಿಣ ಧ್ರುವ ಪ್ರದೇಶಕ್ಕೆ ಸಮೀಪಗತನಾಗಬೇಕಾದರೆ ಸಾಹಸಿಯು ಸುಮಾರು ೬೦೦ ಮೈಲುಗಳಷ್ಟಾದರೂ ದೂರದ ವರೆಗೆ ಹತ್ತಿರದ ಇತರ ಭೂಖಂಡದಿಂದ ತೀವ್ರ ವಿಷಮಾವಸ್ಥೆಯಲ್ಲಿರುವ ಸಮುದ್ರದಲ್ಲಿ ಪ್ರಯಾಣಿಸಬೇಕಾಗುತ್ತದೆ. ಈ ಸಮುದ್ರ ಪ್ರಯಾಣದ ಅನುಭವ ಬಹಳ ಭಯಂಕರವೆನಿಸುತ್ತದೆ. ಏಕೆಂದರೆ ಜಗತ್ತಿನ ಬೇರಾವುದೇ ಭೂಭಾಗದಲ್ಲಿ ಕಂಡು ಕೇಳರದಷ್ಟು ವಿಪ್ಲವಕಾರಕವಾದ ಭೀಷಣ ಸುಂಟರಗಾಳಿ, ಬಿರುಗಾಳಿ ಮತ್ತು ತೊಗಲು ಕೊರೆಯುವ ಹಿಮಗಾಳಿಗಳು ೫೫-೬೫ ಡಿಗ್ರಿ ದಕ್ಷಿಣ ಅಕ್ಷಾಂಶದ ಈ ಪ್ರದೇಶದಲ್ಲಿ ಇದಿರಾಗುತ್ತವೆ.

ನಿರಂತರವಾದ ಈ ಆತಂಕಗಳನ್ನು ಯಶಸ್ವಿಯಾಗಿ ಗೆದ್ದು ಬಂದರೂ ಪ್ರಯಾಣವೇನು ಸುಖಕರವಾಗಲಾರದು. ಉತ್ತರ ಧ್ರುವ ಪ್ರದೇಶದ ಸಮುದ್ರಾಂತರ್ಗತ ಜಲ ಪ್ರವಾಹಗಳ ವೈವಿಧ್ಯದ ಪರಿಣಾಮವಾಗಿ ಅಲ್ಲಲ್ಲಿ ವಾತಾವರಣದ ಉಷ್ಣಮಾನವು ಆಶ್ಚರ್ಯ ಜನಕವೆನಿಸುವಷ್ಟು ಅನುಕೂಲವಿರುತ್ತದೆ. ನಿದರ್ಶನಕ್ಕಾಗಿ ೫೫ ಡಿಗ್ರಿ ಉತ್ತರ ಅಕ್ಷಾಂಶದಲ್ಲಿರುವ ಲಿಬ್ರಾಡಾರಿನಲ್ಲಿ ಹಿಮಕವಿದರೂ ೭೮ ಡಿಗ್ರಿ ಉತ್ತರ ಅಕ್ಷಾಂಶದಲ್ಲಿರುವ ಸ್ಪಿಟ್ಸ್‌ಬರ್ಗೆನ್ ವಲಯದಲ್ಲಿ ಮಂಜು ಮುಸುಕಿರುವುದಿಲ್ಲ! ದಕ್ಷಿಣ ಧ್ರುವ ಪ್ರದೇಶದಲ್ಲಿ ಇಂಥ ವೈವಿಧ್ಯವಿಲ್ಲವೇ ಇಲ್ಲ. ಆ ಭೂಭಾಗವು ಸಾಮಾನ್ಯವಾಗಿ ಏಶಿಯದ ನೆಲಗಳ ಸರಾಸರಿ ಎತ್ತರದ ಇಮ್ಮಡಿಯಷ್ಟು, ಅಂದರೆ ೬೦೦೦ ಅಡಿ ಎತ್ತರವಾಗಿ ಹರಡಿದೆ. ದಕ್ಷಿಣ ಧ್ರುವವೆಂದಾವ ಏಶಿಷ್ಟ ಕ್ಷೇತ್ರವನ್ನು ಗುರುತಿಸುತ್ತೇವೊ ಅದು ಹತ್ತು ಸಾವಿರ ಅಡಿ ಎತ್ತರದ ಪೀಠ ಭೂಮಿಯಲ್ಲಿದೆ. ಇಷ್ಟು ಎತ್ತರವನ್ನು ಹೊಂದಿದ ಹತ್ತು ಲಕ್ಷ ಚದರ ಮೈಲು ವಿಸ್ತಾರದ ದಕ್ಷಿಣ ಧ್ರುವ ಪ್ರದೇಶವು ಬಿಟ್ಟಿಗೆ ಸುಮಾರು ಒಂದು ನೂರು ಚದರ ಮೈಲು ಪ್ರದೇಶವನ್ನು ಹೊರತು ಪಡಿಸಿದರೆ, ಸದಾ ಕಾಲ ಹಿಮಾವೃತವಾಗಿರುತ್ತದೆ. ಕಡು ಬೇಸಗೆಯ ಸೂರ್ಯನ ಕಿರಣಗಳೂ ಗಾಢವಾಗಿ ಕವಿದ ಈ ಹಿಮದ ಪದರನ್ನು ಕರಗಿಸಲಾರವು. ಹಿಮವಿಲ್ಲದೆ ಜಲವೆಲ್ಲಿಯಾದರೂ ಕಂಡುಬಂದರೆ ಅದಕ್ಕೆ ಬೀಸುವ ಗಾಳಿಯ ತೀವ್ರತೆಯು ಮಂಜುಗಡ್ಡೆ ಕಟ್ಟದಂತೆ ತಡೆಯುವುದೇ ಕಾರಣ.

ವಿಪುಲವಾದ ಖನಿಜ

ಭೌಗೋಳಿಕ ದೃಷ್ಟಿಯಿಂದ ನೋಡಿದರೆ ದಕ್ಷಿಣ ಧ್ರುವ ಪ್ರದೇಶವು ಪ್ರಾಚೀನಾವಸ್ಥೆಯ ಶಿಲೆಗಳಿಂದ ತುಂಬಿದೆ. ಸಮುದ್ರದಲ್ಲಿ ಪ್ರಯಾಣಿಸುವ ಸಾಹಸಿಗರಿಗೆ ಈ ವಲಯದಲ್ಲಿ ಹಿಮ ಪರ್ವತಗಳೇ ಗೋಚರಿಸುತ್ತವೆ. ಈ ಪರ್ವತಗಳ ಗಾತ್ರವು ಬಹಳ ಅದ್ಭುತವಾಗಿದೆ. ಕೆಲವು ನೂರು ಮೈಲುಗಳ ವರೆಗೆ ಇಪ್ಪತ್ತು ಮೂವತ್ತು ಅಡಿ ಎತ್ತರ ಹಾಗು ನೂರು–ನೂರೈವತ್ತು ಅಡಿ ಅಗಲವಾಗಿ ಈ ಹಿಮ ಗೋಡೆಗಳು ನಿಂತು ಮುಂದೋಗುವುದಕ್ಕೆ ಅಡ್ಡಿಮಾಡುತ್ತವೆ. ಹಿಮ ಕತ್ತರಿಸುವ ಯಾವುದೇ ಆಧುನಿಕ ಸಾಧನವು ಈ ಗೋಡೆಯಲ್ಲಿ ಬಿರುಕನ್ನು ಕೊರೆಯಲಾರದು. ಮಂಜುಗಡ್ಡೆಯಿಂದಲೇ ತುಂಬಿರುವ ಈ ಸಮುದ್ರದಲ್ಲಿ ಹಡಗುಗಳು ಚಲಿಸುವುದೇ ಕಷ್ಟ. ವಿಶೇಷ ಮಾದರಿಯ ಮಂಜು ಕೊರೆದು ಸಾಗುವ ರಚನೆಯುಳ್ಳ ಹಡಗುಗಳಾದರೂ ಬಹಳ ನಿಧಾನವಾಗಿಯಷ್ಟೇ ಗಮಿಸುತ್ತವೆ. ಆದರೆ ಅಡ್ಡಗೋಡೆಯ ಮುಂದೆ ಯಾರ ಆಟವೂ ನಡೆಯದು.

ಹೀಗಿದ್ದರೂ ಬೇರೆ ಬೇರೆ ಜನಾಂಗಗಳೇಕೆ ಸಾಹಸವನ್ನು ತೋರ್ಪಡಿಸುತ್ತವೆ? ಪ್ರತಾಪ ಪ್ರದರ್ಶನವೇ ಈ ಸಾಹಸಿಗರ ಉದ್ದೇಶವೆಂದು ಹೇಳುವುದು ಅಷ್ಟು ಸಮಂಜಸವಲ್ಲ; ಅದು ಕೇವಲ ಆನುಷಂಗಿಕ ಕಾರ್ಯ. ಐರೋಪ್ಯ ರಾಷ್ಟ್ರಗಳಿಗೂ ದಕ್ಷಿಣ ಧ್ರುವ ಪ್ರದೇಶಕ್ಕೆ ಹತ್ತಿರವಿರುವ ಆಸ್ಟ್ರೇಲಿಯ ಮುಂತಾದ ಭೂಖಂಡಗಳವರಿಗೂ ಹತ್ತು ಲಕ್ಷ ಚದರಮೈಲುವಿಸ್ತಾರವಿರುವ ದಕ್ಷಿಣಧ್ರುವ ಪ್ರದೇಶದ ಅತುಳ ನೈಸರ್ಗಿಕ ಸಂಪತ್ತಿನ ಮೇಲೆ ಕಣ್ಣು ಬಿದ್ದಿದೆ ಎಂಬುದೇ ಈ ಸಾಹಸ ಪ್ರದರ್ಶನದ ಮೂಲ ಕಾರಣ. ಕಲ್ಲಿದ್ದಲು, ಕಬ್ಬಿಣ, ಅಣುಶಕ್ತಿಯುಳ್ಳ ಯುರೇನಿಯಂ ಧಾತು ಇತ್ಯಾದಿಗಳ ನಿಕ್ಷೇಪವು ದಕ್ಷಿಣ ಧ್ರುವ ಪ್ರದೇಶದ ನಿಜವಾದ ಆಕರ್ಷಣೆಯಾಗಿ ಪರಿಣಮಿಸಿದೆ. ಅಮೇರಿಕದ ಸಾಹಸಿಗರೊಬ್ಬರು ದಕ್ಷಿಣ ಧ್ರುವ ಪ್ರದೇಶವನ್ನು ಆಹಾರ ವಸ್ತುಗಳು ಕೆಡದಂತೆ ಇಡುವ ಭಂಡಾರವಾಗಿ ಸಹ ಬಳಸಬಹುದೆಂದು ಹೇಳಿದ್ದಾರೆ. ೧೯೪೭ರಲ್ಲಿ ನಾಲ್ಕನೇ ಸಲ ದಕ್ಷಿಣ ಧ್ರುವ ಪ್ರದೇಶದಲ್ಲಿ ಸುತ್ತಾಡಲು ಹೊರಟ ಈ ಮಹಾನುಭಾವರಿಗೆ ೧೯೩೪ನೇ ವರ್ಷದಲ್ಲಿ ತಾವು ಹೀಗೆಯೇ ಸುತ್ತಾಡಲು ಹೋಗಿದ್ದಾಗ ಬಿಟ್ಟು ಬಂದಿದ್ದ ಆಹಾರವು ಕೆಡದೆ ಉಳಿದದ್ದು ಗೋಚರಿಸಿತಂತೆ—ಅದನ್ನು ತಿಂದು ನೋಡಿದಾಗ ರುಚಿಯು ತೀರ ಒಳ್ಳೆಯದಿತ್ತೆಂದು ಅವರ ಅಂಬೋಣ. ಅವರ ಸಂಗಡದ ಮತ್ತೊಬ್ಬರಿಗೆ ೧೯೧೪ನೇ ವರ್ಷದಲ್ಲಿ ಸರ್ ಅರ್ನೆಸ್ಟ್ ಶಕ್ಲ್‌ಟನ್ ಗುಂಪಿನವರು ಬಿಟ್ಟು ಹೋಗಿದ್ದ ಆಹಾರವು ಏನೂ ಹಾಳಾಗದೆ ತಿನ್ನಲು ದೊರೆಯಿತೆಂದು ತಿಳಿದು ಬರುತ್ತದೆ. ಪ್ರತಿ ವರ್ಷ ೨೭ ಕೋಟಿ ಡಾಲರುಗಳನ್ನು ಕೇವಲ ಶೀತಾಲಯಗಳಲ್ಲಿ ಉಳಿಕೆಯ ಆಹಾರ ವಸ್ತುಗಳನ್ನು ಸಂಗ್ರಹಿಸಿಡಲು ವೆಚ್ಚಮಾಡುವ ಅಮೇರಿಕವು ದಕ್ಷಿಣ ಧ್ರುವ ಪ್ರದೇಶವನ್ನು ತನ್ನ ವಸಾಹತುವಾಗಿ ಮಾಡಿಕೊಂಡರೆ ಕ್ಷೇಮ ಎಂದವರ ಅಭಿಪ್ರಾಯ.

ಅಧಿಕಾರ ಸ್ಥಾಪನೆಯ ಆತುರ

ಆ್ಯಡ್ಮಿರಲ್ ರಿಚಾರ್ಡ್ ಬೇರ್ಡ್ ಎಂಬ ಹೆಸರಿನ ಈ ಮಹಾನುಭಾವರು ಇದೀಗ ಐದನೇ ಸಲ ದಕ್ಷಿಣ ಧ್ರುವ ಪ್ರದೇಶದ ಪರ್ಯಟನೆಗೈಯಲು ಅಮೇರಿಕದ ಸರಕಾರದ ಪರವಾಗಿ ಹೊರಟಿದ್ದಾರೆ. ಬ್ರಿಟನಿನಿಂದ ಡಾ. ವಿ. ಇ. ಫ್ಯುಚಸ್ ಎಂಬ ಶೂರರು ತೆರಳಿದ್ದಾರೆ. ರಶಿಯದ ತಂಡದ ಧುರೀಣತ್ವವನ್ನು ಟಿರೆಷ್ನಿಕೊ ಎಂಬವರು ವಹಿಸಿದ್ದಾರೆ. ಇವರೆಲ್ಲರ ತಂಡದಲ್ಲಿ ಪ್ರಸಿದ್ಧ ವಿಜ್ಞಾನಿಗಳು, ಭೂಪೃಷ್ಠ ಶಾಸ್ತ್ರಜ್ಞರು, ಹಿಮಾವೃತ ಪ್ರದೇಶದ ಪರಿಚಯ ಮತ್ತು ಸಂಶೋಧನೆಯಲ್ಲಿ ಪ್ರಾವೀಣ್ಯ ಪಡೆದ ತಜ್ಞರು ಮುಂತಾದವರಿದ್ದಾರೆ. ಅಲ್ಲದೆ ಪ್ರತಿಯೊಂದು ತಂಡವೂ ಅತ್ಯಾಧುನಿಕ ಮಾದರಿಯ ಸಾಧನ ಸಲಕರಣೆಗಳೊಡನೆಯೂ ವಿಪುಲ ಆಹಾರ ವಸ್ತುಗಳ ಸಂಗ್ರಹದಿಂದಲೂ ಕೂಡಿ ನಡೆದಿದೆ. ಪ್ರಾಸ್ತಾವಿಕ ಘಟ್ಟದಲ್ಲಿ ವಾತಾವರಣವನ್ನು ನಿರೀಕ್ಷಿಸಿ, ಅಲ್ಲಲ್ಲಿ ಶಿಬಿರಗಳನ್ನು ರಚಿಸಿ, ವಿಸ್ತೃತ ಜ್ಞಾನವನ್ನು ದಕ್ಷಿಣ ಧ್ರುವ ಪ್ರದೇಶದ

(೧೦ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ, ಮೈಸೂರು.

ನೆಹರುಗಳಿಂದ ಹಿಂಸಾಚಾರದ ಖಂಡನೆ

ಪ್ರದೇಶಗಳ ರಚನೆಯ ಬಗ್ಗೆ ಧುರೀಣರ ಒತ್ತಾಸೆ

ರಾಷ್ಟ್ರಾಧ್ಯಕ್ಷರ ಭಾಷಣಕ್ಕೆ ಅಭಿನಂದನೆಯನ್ನೀಯುವ ಗೊತ್ತುವಳಿಯ ಮೇಲೆ ಸಂಸತ್ತಿನ ಉಭಯ ಸಭೆಗಳಲ್ಲಿ ಚರ್ಚೆ ನಡೆದಾಗ ಸಾಮಾನ್ಯವಾಗಿ ಸದಸ್ಯರು ಫಜಲಾಲಿ ಆಯೋಗದ ವರದಿಯ ಕುರಿತಾಗಿಯೇ ಮಾತನಾಡಿದರು. ಆಚಾರ್ಯ ಕೃಪಲಾನಿಯವರಿಂದ ರಾಜ್ಯ ಪುನರ್ಘಟನೆಯ ಪ್ರಶ್ನೆಯನ್ನು ಕೆಲವು ಸಮಯದ ವರೆಗೆ ಮುಂದೂಡಬೇಕೆಂಬ ಸಲಹೆ ಬಂತು; ಕಮ್ಯುನಿಸ್ಟರು ಭಾಷೆಯ ತಳಹದಿಯ ಮೇಲೆಯೇ ರಾಜ್ಯಗಳ ಪುನರ್ಘಟನೆಯಾಗಬೇಕೆಂದು ಆಗ್ರಹಗೊಂಡರು. ಮುಂಬಯಿ ನಗರವನ್ನು ಮಹಾರಾಷ್ಟ್ರ ರಾಜ್ಯದಲ್ಲಿ ಸೇರಿಸಬೇಕೆಂದು ಶ್ರೀ ಗಾಡ್ಗೀಳರು ಪುನಃ ಒತ್ತಾಯಿಸಿದರು.

ಹೆಗ್ಡೆಯವರ ಅಭಿಪ್ರಾಯ

ನಮ್ಮ ಜಿಲ್ಲೆಯ ಶ್ರೀ ಕೆ. ಸದಾನಂದ ಹೆಗ್ಡೆಯವರು ಭಾಷಾಂಧತೆಯನ್ನು ಖಂಡಿಸಿ, ಭಾಷಾರಾಜ್ಯಗಳ ತತ್ತ್ವವನ್ನು ಈಗ ಬಲವಾಗಿ ಪ್ರತಿಪಾದಿಸುವ ಕಮ್ಯುನಿಸ್ಟರು ಕೆಲವು ಚಿಕ್ಕ ರಾಜ್ಯಗಳಲ್ಲಿಯಾದರೂ ಅಧಿಕಾರವನ್ನು ಸಂಪಾದಿಸುವ ಉದ್ದೇಶದಿಂದ ಕೂಡಿದ್ದಾರೆಂದು ಆರೋಪಿಸಿದರು. ರಾಜ್ಯಾಂಗ ಘಟನೆಯನ್ನು ರಚಿಸುವಾಗ ಪ್ರಾಂತ್ಯಗಳ ಬದಲು ರಾಜ್ಯಗಳನ್ನು ನಿರ್ಮಿಸಿದುದರಿಂದ ರಾಷ್ಟ್ರದ ಐಕ್ಯಭಾವನೆಗೆ ಪೆಟ್ಟುತಗಲಿದೆಯೆಂದೂ ರಾಜ್ಯಗಳ ಕೈಯಲ್ಲಿ ಈಗ ಇರುವ ಅಧಿಕಾರಗಳಲ್ಲಿ ಕೆಲವನ್ನಾದರೂ ಕೇಂದ್ರಕ್ಕೆ ವರ್ಗಾಯಿಸುವಂತೆ ಘಟನೆಗೆ ತಿದ್ದುಪಡಿಯಾಗಬೇಕೆಂದೂ ಅವರು ಸೂಚಿಸಿದರು.

ಫಜಲಾಲಿ ಆಯೋಗದವರು ಭಾಷಾರಾಜ್ಯದ ತತ್ತ್ವವನ್ನು ಕಡೆಗಣಿಸಿದ್ದೇವೆ ಎಂದು ಹೇಳುವಂತೆಯೇ ಆ ತತ್ತ್ವವನ್ನು ಅಪ್ರತ್ಯಕ್ಷವಾಗಿ ಅನುಮೋದಿಸಿದ್ದಾರೆ. ಆಯೋಗದ ಒಬ್ಬ ಸದಸ್ಯರಂತೂ ಕೇರಳ-ಕರ್ನಾಟಕಗಳ ಐತಿಹಾಸಿಕ ಗಡಿಯು ಚಂದ್ರಗಿರಿ ಹೊಳೆ ಎಂದು ಘಂಟಾ ಘೋಷವಾಗಿ ಸಾರಿದ್ದರು. ಆದರೆ ಇಡೀ ಕಾಸರಗೋಡನ್ನು ಕೇರಳಕ್ಕೆ ಈಗ ಕೊಡಲಾಗಿದೆ. ವ್ಯಕ್ತಿಗತವಾಗಿ ತಾನು ಬಹು ಭಾಷಾ ರಾಜ್ಯಗಳ ರಚನೆಗೆ ಅನುಕೂಲವಿದ್ದರೂ ಭಾಷಾ ರಾಜ್ಯಗಳನ್ನೆ ರಚಿಸುವ ಪಕ್ಷದಲ್ಲಿ ಒಂದು ಭಾಷೆಯಾಡುವ ಜನರಿರುವ ಪ್ರದೇಶವನ್ನು ಇನ್ನೊಂದು ಭಾಷೆಯಾಡುವ ಜನರ ಪ್ರದೇಶಕ್ಕೆ ಸೇರಿಸಬಾರದು ಎಂದರು. ಅಲ್ಲದೆ, ಈಗ ಗಡಿ ನಿರ್ಣಯ ಪ್ರಶ್ನೆಯನ್ನು ಕಾಂಗ್ರೆಸಿನ ವರಿಷ್ಠರು ತೀರ್ಮಾನಿಸುತ್ತಿರುವರೆಂದು ಹೇಳುತ್ತಾ ಈ ತೀರ್ಮಾನಗಳು ಅನೇಕ ವಿವಾದಗಳಿಗೆ ಎಡೆ ಮಾಡಿಕೊಟ್ಟಿರುವುದರಿಂದ ನ್ಯಾಯಾಧಿಕಾರ ಸಂಪನ್ನ ಸಂಸ್ಥೆಯೊಂದಕ್ಕೆ ವಿವಾದಗಳ ತೀರ್ಮಾನವನ್ನು ವಹಿಸಿ ಕೊಡುವುದೇ ಲೇಸೆಂದು ಅಭಿಪ್ರಾಯಪಟ್ಟರು.

ಗೃಹ ಮಂತ್ರಿಗಳ ಉತ್ತರ

ಚರ್ಚೆಗೆ ರಾಜ್ಯಸಭೆಯಲ್ಲಿ ಉತ್ತರವಿತ್ತ ಗೃಹ ಮಂತ್ರಿ ಪಂಡಿತ ಪಂತರು ಅನೇಕ ವಿವಾದಗಳನ್ನು ಪರಸ್ಪರ ಸಮ್ಮತಿಯಿಂದ ಶಾಂತ ಚರ್ಚೆಯ ವಿಧಾನವನ್ನನುಸರಿಸಿ ಬಿಡಿಸಲಾಗಿದೆ ಎಂದು ಸದಸ್ಯರ ಗಮನಕ್ಕೆ ತಂದುಕೊಟ್ಟರು. ರಾಜ್ಯಗಳ ಪುನರ್ಘಟನೆಯನ್ನು ಮುಂದಕ್ಕೆ ಹಾಕಬೇಕೆಂಬ ಸೂಚನೆಯನ್ನು ಅವರು ಅಂಗೀಕರಿಸದೆ, ತೊಂದರೆಗಳೇಳುವವೆಂಬ ಹೆದರಿಕೆಯಿಂದ ಹಾಗೆ ಮಾಡುವುದು ಮಹಾರಾಷ್ಟ್ರವೊಂದಕ್ಕೆ ಭೂಷಣವಲ್ಲ ಎಂದರು. ಇತ್ತೀಚೆಯ ಗಲಭೆಗಳಿಗೆ ಕೆಲವು ಮುಖಂಡರು ಪಾರಿತಪ್ಪಿ ನಡೆದುದೇ ಕಾರಣವೆಂದು ಅವರು ಅಭಿಪ್ರಾಯಪಟ್ಟರು. ಬಂಗಾಳ ಮತ್ತು ಬಿಹಾರಗಳ ಮುಖ್ಯ ಮಂತ್ರಿಗಳು ಹೊರಡಿಸಿದ ಸಂಯುಕ್ತ ಪ್ರಕಟಣೆಯು ಆ ರಾಜ್ಯಗಳ ಜನತೆಯನ್ನು ಇದಿರಿಸುತ್ತಿರುವ ಸಮಸ್ಯೆಗೆ ತಕ್ಕ ಪರಿಹಾರ ಮಾರ್ಗವನ್ನು ಸೂಚಿಸುತ್ತದೆ ಎನ್ನುತ್ತಾ ಸ್ವೇಚ್ಛೆಯಿಂದ ಮುಂಬರುವ ಇಂಥ ನಿರ್ಣಯಗಳನ್ನು ಸ್ವಾಗತಿಸಿದರು.

ನೆಹರುಗಳ ಹೇಳಿಕೆ

ಲೋಕ ಸಭೆಯಲ್ಲಿ ಚರ್ಚೆಗೆ ಉತ್ತರವಿತ್ತ ಪ್ರಧಾನ ಮಂತ್ರಿ ನೆಹರುಗಳು ಹಿಂಸಾಚರಣೆಗೆ ತೊಡಗಿ ಸಮಸ್ಯೆಯ ಇತ್ಯರ್ಥಕ್ಕೆ ಹವಣಿಸುವ ಪ್ರವೃತ್ತಿಯನ್ನು ಬಲವಾಗಿ ಖಂಡಿಸಿದರು. ಕಮ್ಯುನಿಸ್ಟರು ಭಾಷಾ ರಾಜ್ಯದ ತತ್ತ್ವವನ್ನು ಎತ್ತಿ ಹಿಡಿಯುತ್ತಾ ಪ್ರತಿಯೊಂದೂ ಹಳ್ಳಿಯನ್ನು ಯುದ್ಧ ಕ್ಷೇತ್ರವಾಗಿ ಪರಿವರ್ತಿಸಲು ನೋಡುತ್ತಿದ್ದಾರೆ ಎಂದು ನೆಹರು ಆರೋಪಿಸಿದರು. ಕಮ್ಯುನಿಸ್ಟರು ತಮ್ಮ ಉದ್ದೇಶ ಇದಲ್ಲವೆಂದು ಹೇಳಿದಾಗ ನೆಹರುಗಳು, ಉದ್ದೇಶ ಅದಾಗಿರಲಿ, ಇಲ್ಲದಿರಲಿ, ಪರಿಣಾಮನಂತೂ ಬೇರೆಯಾಗದು ಎಂದು ಮಾರ್ನುಡಿದರು. ಆಚಾರ್ಯ ಕೃಪಲಾನಿಯವರು ಹಿಂಸಾಚಾರದ ಕುರಿತು ನೆಹರುಗಳಾಡಿದ ಮಾತು ಕಾಂಗ್ರೆಸಿಗರಿಗೆಯೇ ಹೆಚ್ಚಾಗಿ ಅನ್ವಯಿಸುತ್ತದೆ ಎಂದಾಗ ನೆಹರುಗಳು ಎಲ್ಲ ಪಕ್ಷಗಳ ಎಲ್ಲ ಸದಸ್ಯರನ್ನೂ ಉದ್ದೇಶಿಸಿ ತಾನು ಆ ಮಾತು ಹೇಳಿದ್ದೇನೆ ಎಂದು ಸ್ಪಷ್ಟೀಕರಿಸಿದರು. ಜನಮತಗಣನೆಯು ಕೆಲವು ವಿವಾದಗಳನ್ನು ಪರಿಹರಿಸಲು ಸಾಧನವಾದೀತೆಂದು ಅವರು ಹೇಳಿದರಾದರೂ ಸದ್ಯಕ್ಕೆ ಉದ್ರಿಕ್ತ ಭಾವನೆಯನ್ನು ಶಾಂತವಾಗಗೊಡಬೇಕೆಂದು ಹೇಳಿದರು. "ನಾವೇನು ಮಾಡಿದ್ದೇವೊ ಅದರಲ್ಲಿ ಬದಲಾಯಿಸಲ್ಪಡಲಾಗದುದೇನೂ ಇಲ್ಲ; ಇಂಥ ವಿಷಯಗಳಲ್ಲಿ ಕೊನೆಯ ನಿರ್ಣಯವೆಂಬುದೇ ಇಲ್ಲ. ನಮ್ಮ ಪ್ರಜಾಸತ್ತಾತ್ಮಕ ಸಮಾಜರಚನೆಯಿರುವಾಗ, ಪ್ರಜಾಸತ್ತಾತ್ಮಕ ಸರಕಾರವಿರುವಾಗ, ನಾವು ಯಾವುದೇ ವಿಷಯವನ್ನು ಯಾವುದೇ ಸಮಯದಲ್ಲಾದರೂ ಎತ್ತಿಕೊಂಡು ವಿವಾದವನ್ನು ಶಾಂತರೀತಿಯಲ್ಲಿ ಬಗೆಹರಿಸಬಹುದು ಎಂದವರು ಸಾರಿದರು ಬಿಹಾರ ಮತ್ತು ಬಂಗಾಳಗಳ ವಿಲಯನ ಸೂಚನೆಯನ್ನು ಅವರು ಸ್ವಾಗತಿಸಿದರು— ಆದರೆ ಇಂಥ ವಿಷಯಗಳು ಜನರ ಒಪ್ಪಿಗೆಯಿಂದ ನಡೆಯಬೇಕೇ ಹೊರತು ಮೇಲಿನಿಂದ ನಿರ್ಣಯ ಹೇರಲಾಗದು ಎಂದರು.

ಪೂರ್ವ ಪ್ರದೇಶಕ್ಕೆ ಸ್ವಾಗತ

ಬಿಹಾರದ ಶಾಸನಾಂಗವು ವಿಲಯನದ ಸೂಚನೆಗೆ ಬಹುಮತದ ಸಮ್ಮತಿಯನ್ನು ಕೊಟ್ಟಿದೆ. ಮುಖ್ಯ ಮಂತ್ರಿ ಡಾ। ಸಿಂಹರು ಈ ಸಂದರ್ಭದಲ್ಲಿ ಮಾತನಾಡುತ್ತಾ ಈ ಸೂಚನೆಯ ಅಂಗೀಕಾರವು ಬಿಹಾರಕ್ಕೆ ಲಾಭವನ್ನೆ ತರುವುದೆಂದು ಹೇಳಿದ್ದಾರೆ. ಬಂಗಾಳದ ಶಾಸನಾಂಗದಲ್ಲಿಯೂ ಹೊರಗಡೆಯೂ ವಿಲಯನದ ವಿರುದ್ಧ ರಭಸದ ಪ್ರದರ್ಶನ ನಡೆದಿದೆ. ಹರತಾಳಗಳನ್ನು ಕಾಂಗ್ರೆಸೇತರ ಪಕ್ಷಗಳು ಸಂಘಟಿಸಿರುವುವಲ್ಲದೆ, ಶಾಸನಾಂಗದ ಸಭೆಯಲ್ಲಿ ಪ್ರತಿಪಕ್ಷಗಳವರು ಅಧ್ಯಕ್ಷರ ಮೇಲೆ ಏರಿ ಹೋಗುವಷ್ಟು ಉದ್ರೇಕಕ್ಕೆ ಬಲಿಯಾದರು. ನೆಹರುಗಳು ಬೀದಿಯ ತೀರ್ಮಾನವೆಂದೇನನ್ನುರೆಕದರೋ, ಅದಕ್ಕೆ ತಾವು ಬಲಿದಂತೆ ಶಾಸನಾಂಗದ ಸದಸ್ಯರು ಹೇಯವಾಗಿ ವರ್ತಿಸಿದರು. ಆದರೆ ಪ್ರತಿಪಕ್ಷಗಳ ಆರ್ಭಟೆಯೇ ದೊಡ್ಡದು ಹೊರತು, ಅವುಗಳಿಗೆ ಬೆಂಬಲ ಬಲವಾಗಿಲ್ಲ. ಗವರ್ನರರ ಭಾಷಣಕ್ಕೆ ಅಭಿನಂದನೆಯನ್ನು ಸೂಚಿಸುವ ಗೊತ್ತುವಳಿಗೆ, ಬಂಗಾಳ-ಬಿಹಾರ ವಿಲಯನಕ್ಕೆ ವಿರೋಧ ಸೂಚಿಸುವ ತಿದ್ದುಪಡಿಯನ್ನು ಮಂಡಿಸಿದ ಪ್ರತಿ ಪಕ್ಷಗಳಿಗೆ ಏನೇನೂ ಬೆಂಬಲ ವ್ಯಕ್ತವಾಗದೆ ತಿದ್ದುಪಡಿಯು ಧ್ವನಿ ಮತದ ಘಟ್ಟದಲ್ಲಿಯೇ ತಿರಸ್ಕೃತವಾಯಿತು.

ಬಂಗಾಳಕ್ಕೆಯೇ ಹೆಚ್ಚು ಲಾಭ

ಬಂಗಾಳದ ಮುಖ್ಯಮಂತ್ರಿಗಳು ವಿಲಯನವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಪ್ರತಿ ದಿನವೂ ಪೂರ್ವ ಬಂಗಾಲದಿಂದ ಸಾವಿರಗಟ್ಟಳೆ ನಿರಾಶ್ರಿತರು ಬರುತ್ತಿರುವ ಪಶ್ಚಿಮ ಬಂಗಾಳಕ್ಕೆ ಮತ್ತು ಔದ್ಯಮಿಕ ಪ್ರಗತಿಯು ನಡೆಯುತ್ತಿರುವ ಈ ರಾಜ್ಯಕ್ಕೆ ಈಗ ಬಿಹಾರದಲ್ಲಿರುವ ಬಂಗಾಳಿ ಭಾಷೆಯಾಡುವ ಜನರೇ ಪ್ರಧಾನವಾಗುಳ್ಳ ಒಂದು ತುಣುಕು ಭೂಮಿ ದೊರೆತ ಮಾತ್ರಕ್ಕೆ ಸಮಸ್ಯೆ ಪರಿಹಾರ ಹೊಂದಲಾರದು ಎಂದವರ ನಿಲುವೆಯಾಗಿದೆ, ಈ ದೃಷ್ಟಿಯಿಂದ ಬಿಹಾರಿಗಿಂತ ಎಷ್ಟೋ ಹೆಚ್ಚು ಲಾಭ ಬಂಗಾಳಕ್ಕೆ ವಿಲಯನದಿಂದಾಗುತ್ತದೆ. ಬಿಹಾರವು ಸ್ವಲ್ಪ ಮಟ್ಟಿಗೆ ತೊಂದರೆಯನ್ನೆ ಅನುಭವಿಸಬೇಕಾದೀತು. ಏಕೆಂದರೆ ತನ್ನ ಸಂಪತ್ತಿನಲ್ಲಿ ಪಾಲುಗೊಳ್ಳಲು ಹೊಸಬರಿಗೆ ಅದು ಅವಕಾಶವನ್ನು (ವಿಲಯನಕ್ಕೆ ಒಪ್ಪುವುದರಿಂದ) ಕೊಟ್ಟಂತಾಗುತ್ತದೆ. ಅಲ್ಲದೆ, ಈಗ ಕಾಂಗ್ರೆಸಿನ ಪ್ರಬಲ ಕೋಟೆಯಾಗಿರುವ ಬಿಹಾರದಲ್ಲಿ ಬಂಗಾಳದಲ್ಲಿ ಆಟೋಪ ನಡೆಸುತ್ತಿರುವ ಪ್ರತಿಪಕ್ಷಗಳ ಕೈವಾಡಕ್ಕೆ ಎಡೆಯನ್ನು ನೀಡಿದಂತೆಯೂ ಆಗುತ್ತದೆ. ಅದೇನೇ ಇದ್ದರೂ ವಿಲಯನದ ಸಾಮಾನ್ಯ ತತ್ತ್ವವೊಂದನ್ನು ಈಗ ಸರಕಾರಿ ಮಟ್ಟದಲ್ಲಿ ನಿರ್ಧರಿಸುವ ಪ್ರಯತ್ನಗಳು ನಡೆದಿವೆ- ಬಂಗಾಳ ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ, ಈ ತತ್ತ್ವಗಳನ್ನು ನಿರೂಪಿಸುತ್ತದೆ.

ಜನಮತದ ಪಾಡು

ಪ್ರಜಾಪ್ರಭುತ್ವದಲ್ಲಿ ಜನತೆಯ ಅಭಿಪ್ರಾಯವನ್ನು ಕೇಳದೆ ಯಾವುದೇ ನಿರ್ಣಯವನ್ನು ಮಾಡುವಂತಿದೆಯೆ ಎಂಬ ಪ್ರಶ್ನೆಗೆ ಬಂಗಾಳದ ಮುಖ್ಯ ಮಂತ್ರಿಗ

KHALLIKOTE COLLEGE LOTTERY
IN AID OF THE COLLEGE.

ಖಲ್ಲಿಕೋಟೆ ಕಾಲೇಜ್ ಸಹಾಯಾರ್ಥ ಸೋಡ್ತಿ

(ಒರಿಸ್ಸಾ ಸರಕಾರದ ತಾ. 5—11—55ರ ನಂಬ್ರ 17958ರ ಪತ್ರದಂತೆ ಅನುಮತಿ ಪಡೆದಿದೆ)

ಒಂದು ಟಿಕೇಟಿನ ಬೆಲೆ ರೂಪಾಯಿ 1 ಮಾತ್ರ.

ಮಾರಾಟದ ಕೊನೆಯ ದಿನ: 9-7-56. ಸೋಡ್ತಿ ತೆಗೆಯುವ ದಿನ: 29-7-56.

1ನೆ ಬಹುಮಾನ	ರೂ.	5000	5ನೆ ಬಹುಮಾನ	ರೂ.	400
2ನೆ ,,	,,	2000	6ನೆ ,,	,,	300
3ನೆ ,,	,,	1000	7ನೆ ,,	,,	200
4ನೆ ,,	,,	500	10 ಬಹುಮಾನಗಳು ರೂ.100ರಂತೆ		

ಇತರ ಚಿಕ್ಕ ಬಹುಮಾನಗಳೂ ಇವೆ. ಒಟ್ಟು ಬಹುಮಾನಗಳು: 289.

ದೇಶದ ಎಲ್ಲೆಡೆಗಳಿಂದಲೂ ಏಜಂಟರೂ ಒರ್ಗನೈಜರರೂ ಬೇಕಾಗಿದ್ದಾರೆ. ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

The Principal, Khallikote College,
P. O. Berhampur, Dt. Gunjam (Orissa).

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತವೆ.

ಶೋಭನ(Nuptial)ವಾಗಿ 16–18 ವರ್ಷ ಮಕ್ಕಳಿಲ್ಲದವರೂ 'ತಾಯ್ತಂದೆ'ಗಳಾಗಿದ್ದಾರೆ.
ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**
638 "ಸಂತಾನ ಸಿಂಧೂರ ಸದನ", (N. K.)
ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ಛಡ ದ್ವೀಪದ ಆಕ್ರಮಣ ಮುಕ್ತಾಯ

ಪಾಕಿಸ್ತಾನದ ಅಸಂಬದ್ಧ ಪ್ರಲಾಪಕ್ಕೆ ಭಾರತದ ಖಂಡತುಂಡ ಉತ್ತರ

ಪಾಕಿಸ್ತಾನವು ಭಾರತವನ್ನು ಕೆಣಕಲು ವಿವಿಧ ಉಪಾಯಗಳನ್ನು ಬುದ್ಧಿಪೂರ್ವಕವಾಗಿ ಅನುಸರಿಸುತ್ತಿರುವಂತೆ ಕಾಣುತ್ತದೆ. ತಮ್ಮ ದೇಶದ ಆಂತರಿಕ ದೌರ್ಬಲ್ಯಗಳ ಕಡೆಗೆ ಪ್ರಜೆಗಳು ವಿಶೇಷ ಗಮನವನ್ನು ಕೊಡದೆ ದೂರಕ್ಕೆ ದೃಷ್ಟಿ ಹಾಯಿಸಬೇಕೆಂಬುದೇ ಅಲ್ಲಿ ಅಧಿಕಾರಕ್ಕೆ ಬಂದ ಎಲ್ಲ ಧುರೀಣರ ಅಭಿಲಾಷೆಯಾಗಿರುವಂತೆ ಕಾಣುತ್ತದೆ. ದೇಶದಲ್ಲಿ ಭದ್ರವಾದ ಮತ್ತು ದೃಢವಾದ ಸರಕಾರವನ್ನು ಸ್ಥಾಪಿಸಿ, ಪ್ರಜೆಗಳ ಕಲ್ಯಾಣಕ್ಕಾಗಿ ಒಳ್ಳೆಯ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು ವ್ಯವಸ್ಥಿತ ರೀತಿಯಲ್ಲಿ ರಾಜಕೀಯ ಚಟುವಟಿಕೆಯನ್ನು ನಡೆಸಲು ಅಸಮರ್ಥರಾದ ಅಲ್ಲಿಯ ಧುರೀಣರು ಸಾಮಾನ್ಯ ಪಾಕಿಸ್ತಾನಿಗಳನ್ನು ಭಾರತೀಯರ ವಿರುದ್ಧ ಎತ್ತಿ ಕಟ್ಟುವ ಒಂದೇ ತಂತ್ರವನ್ನು ಹಲವು ವರ್ಷಗಳಿಂದ ಬಗೆ ಬಗೆಯಾಗಿ ಪ್ರದರ್ಶಿಸುತ್ತಾ ಬಂದಿರುವರೆಂದು ನಿರೀಕ್ಷಕರು ಭಾವಿಸಬೇಕಾಗುತ್ತದೆ.

ಪ್ರಬಲ ಬಿಕ್ಕಟ್ಟು

ದೇಶದಲ್ಲಿ ಪ್ರಬಲ ಘಟನಾತ್ಮಕ ಬಿಕ್ಕಟ್ಟುಗಳಿದ್ದು ತಾಂಡವವಾಡುತ್ತಿದ್ದಾಗ ಪಾಕಿಸ್ತಾನದ ಧುರೀಣರು ಕಾಶ್ಮೀರ ಸಮಸ್ಯೆಯನ್ನು ಪರ್ಯಾಲೋಚಿಸಲು ಸರ್ವ ಪಕ್ಷೀಯ ಸಮ್ಮೇಳನವನ್ನು ಕರೆದರು. ಪಾಕಿಸ್ತಾನದ ರೇಡಿಯೋದಿಂದ ಬಿತ್ತರಿಕಲ್ಪಡುವ ಸುದ್ದಿಗಳೇನಿವೆಯೊ ಅವು ಕಾಶ್ಮೀರದ ಪ್ರಶ್ನೆಯ ಪರಧಿಯನ್ನು ಮೀರುವುದಿಲ್ಲ; ಭಾರತವನ್ನು ನಿಂದಿಸದೆ ಒಂದು ಒಂದು ಸುದ್ದಿಯನ್ನೂ ಪ್ರಸಾರ ಮಾಡುವಷ್ಟು ಸೌಜನ್ಯ ಅದಕ್ಕಿಲ್ಲ. ಈಗ ಅಲ್ಲಿ ಪ್ರಬಲ ಪಕ್ಷಗಳೊಳಗೆ ಘಟನೆಯನ್ನು ರೂಪಿಸುವ ವಿಷಯದ ಕುರಿತು ಭಿನ್ನಾಭಿಪ್ರಾಯವೆದ್ದಿದೆ. ಮುಸ್ಲಿಮನೇ ಪಾಕಿಸ್ತಾನದ ಅಧ್ಯಕ್ಷ ಸ್ಥಾನಕ್ಕೇರಬೇಕೆಂಬ ಮತ್ತು ಉಪರಾಷ್ಟ್ರಾಧ್ಯಕ್ಷ ಸ್ಥಾನವೇ ಇರಬಾರದೆಂಬ ನಿರ್ಣಯವು ಅಲ್ಲಿಯ ಅಲ್ಪ ಸಂಖ್ಯಾಕ ಹಿಂದುಗಳನ್ನಂತೂ ಸರಿಯೇ—ಮುಸ್ಲಿಮರಲ್ಲಿಯೇ ಕೆಲವು ವರ್ಗಗಳಿಗೆ ನಿರಾಶೆಯನ್ನು ತಂದು ಕ್ಷೋಭೆಗೆ ಕಾರಣವಾಗಿದೆ. ಆದುದರಿಂದ ಜನರ ಮನಸ್ಸು ಪರದೇಶದ ಮೇಲೆ ದ್ವೇಷ ಕಾರುವಂತೆ ಮಾಡಲು ಅದು ಹೊಸ ಕುತಂತ್ರಕ್ಕೆ ಕೈಯಿಕ್ಕಿದೆ.

ಛಡ ದ್ವೀಪದ ಆಕ್ರಮಣ

ಈ ಕುತಂತ್ರವು ಕಳೆದ ವಾರ ಭಾರತದ ನೆಲವಾದ ಕಚ್ಛದಲ್ಲಿ ಪ್ರಕಟವಾಯಿತು. ಕಚ್ಛಕ್ಕೂ ಪಾಕಿಸ್ತಾನದ ಸಿಂಧಿಗೂ ಸಾಮಾನ್ಯವಾದ ಮೇರೆಯಿದೆ. ಕಚ್ಛವು ಸಂಪತ್ತಾದ, ಜನನಿಬಿಡವಾದ ಭೂಮಿಯಲ್ಲ. ಅದು ಜವುಗು ಪ್ರದೇಶ; ಅಲ್ಲದೆ ಮರುಭೂಮಿಯ ಅಂಶವೇ ಅಲ್ಲಿ ಹೆಚ್ಚು. ಆದುದರಿಂದ ಜನಸಂಖ್ಯೆ ಬಹಳ ಕಡಿಮೆಯಾಗಿದೆ. ಸಧ್ಯಕ್ಕೆ ಕಚ್ಛವು ಕೇಂದ್ರದ ನೇರಾದ ಆಡಳಿತದಲ್ಲಿದೆ. ಇದೇ ಫೆಬ್ರವರಿಯ ೧೭ನೇ ದಿನಾಂಕ ಪಾಕಿಸ್ತಾನ ಪ್ರದೇಶವಾದ ಸಿಂಧಿನಿಂದ ಒಂದು ಸೈನ್ಯ ಪಡೆಯು ಕಚ್ಛ ಮತ್ತು ಸಿಂಧಿನ ಗಡಿಯನ್ನು ದಾಟಿ, ನಾಲ್ಕು ಮೈಲು ಒಳಗಡೆ ಭಾರತದ ನೆಲದೊಳಗೆ ಹೊಕ್ಕು ಛಡ ದ್ವೀಪವೆಂಬಲ್ಲಿ ನೆಲೆಯೂರಿರುವುದನ್ನು ಭಾರತೀಯ ಕಾವಲು ದಳವು ಕಂಡಿತು. ಮರುದಿನ ಭಾರತದ ಸೈನ್ಯದ ತುಣುಕೊಂದು ಅಲ್ಲಿಗೆ ಹೋದಾಗ, ಪಾಕಿಸ್ತಾನದ ಸೈನಿಕರು ತಾವು ಅವಿತುಕೊಂಡಿದ್ದ ಕಂದಕಗಳ ಎಡೆಯಿಂದ ಗುಂಡು ಹಾರಿಸಿ, ಪ್ರತಿಭಟನೆಯನ್ನು ಕೊಟ್ಟರು. ಪಾಕಿಸ್ತಾನದ ಸೈನ್ಯವು ಬಲಿಷ್ಠವಾಗಿದ್ದುದರಿಂದ ಭಾರತೀಯ ಸೇನಾಪಡೆಯು ಮೆಲ್ಲನೆ ವಾಪಸು ಬಂತು. ಈ ಘರ್ಷಣೆಯಲ್ಲಿ ಕೆಲವು ಭಾರತೀಯ ಸೈನಿಕರೂ ಒಂಟೆಗಳೂ ಸತ್ತವೆನು ತಿಳಿದು ಬರುತ್ತದೆ.

ತ್ವರಿತ ಕ್ರಮ

ಅಧಿಕಾರಿಗಳು ಇದನ್ನು ಕೂಡಲೇ ಭಾರತ ಸರಕಾರಕ್ಕೆ ತಿಳಿಸಿದರು. ಭಾರತ ಸರಕಾರವು ಪಾಕಿಸ್ತಾನಿ ಸೈನಿಕರಿಂದ ಆಕ್ರಮಿತವಾದ ಛಡ ದ್ವೀಪವನ್ನು ವಶಪಡಿಸಿಕೊಳ್ಳಲು ದಕ್ಷಿಣ ಸೇನಾವ್ಯೂಹದ ಪ್ರಬಲ ಪಡೆಯನ್ನು ಕಳಿಸಿತು. ಸೇನೆಯ ದಕ್ಷಿಣ ವಿಭಾಗದ ದಳಪತಿಯಾದ ಲೆಫ್ಟಿನೆಂಟ್ ಜನರಲ್ ಕೆ. ಎಸ್. ತಿಮ್ಮಯ್ಯನವರೇ ಮೊದಲಾದ ಸೇನೆಯ ವರಿಷ್ಠರು ಭಾರತೀಯ ಸೇನೆಯನ್ನು ಮುನ್ನಡೆಸಿದರು. ಈ ಸೇನೆಯು ಮುಂದೊತ್ತಿ ಬರುತ್ತಿರುವುದನ್ನು ಕಂಡ ಪಾಕಿಸ್ತಾನಿ ಸೈನಿಕರು ಕಾಲಿಗೆ ಬುದ್ಧಿ ಹೇಳಿದರು. ಈಗ ಛಡ ದ್ವೀಪವು ಆಕ್ರಮಣ ಮುಕ್ತವಾಗಿದೆ. ಅಲ್ಲದೆ ಅಲ್ಲಿ ಸೇನೆಯು ಪ್ರಬಲ ದಳವೊಂದನ್ನು ಇಡಲಾಗಿದೆ. ಆದರೆ ಇಷ್ಟಕ್ಕೆ ಸಮಸ್ಯೆಯು ಪರಿಹಾರವಾಯಿತೆಂದು ಭಾವಿಸುವಂತಿಲ್ಲ. ಛಡ ದ್ವೀಪವು ಭಾರತದ ಮುಖ್ಯ ನೆಲದಿಂದ ಮೂವತ್ತು ಮೈಲು ದೂರ ವ್ಯಾಪಿಸಿರುವ ಮರುಭೂಮಿಯ ನಡುವಿದೆ. ಒಂಟೆಗಳ ಮೇಲೆಯೇ ಅದನ್ನು ಮುಟ್ಟಬೇಕಾಗುತ್ತದೆ. ಅದು ಮಳೆಗಾಲದಲ್ಲಿ ನೀರಿನಲ್ಲಿ ಮುಳುಗಿರುತ್ತದೆ; ಬೇರೆ ಸಮಯ ಅಲ್ಲಿ ಹುಲ್ಲು ಬೆಳೆಯುತ್ತದೆ. ಈ ಹುಲ್ಲು ಗಾವಲಿನ ಪ್ರಯೋಜನವನ್ನು ಒಂಟೆ ಸಾಕುವವರಿಗೆ ಭಾರತ ಸರಕಾರವು ಪ್ರತಿ ವರ್ಷ ಏಲಮಿನ ಮೂಲಕ ವಹಿಸಿ ಕೊಡುತ್ತದೆ. ಇಲ್ಲಿಂದ ಮಾರ್ವಾಡಿಗಳ ಉತ್ತರ ಬಂದಿದೆ—ಭಾರತದಲ್ಲಿ ನಡೆದ ಮುಖ್ಯ ಸಂಗತಿಗಳೆಲ್ಲವೂ ಜನರನ್ನು ವಿಚಾರಿಸದೆ ಘಟಿಸಿವೆ ಎಂದು ಅವರು ನೆನಪಿಗೆ ತಂದು ಕೊಟ್ಟಿದ್ದಾರೆ. ಉದಾಹರಣೆಗೆ ೬೦೦ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಸೂಚನೆಯನ್ನು ಜನತೆಯ ಅನುಮೋದನೆಗಾಗಿ ಎಂದೂ ಮುಂದಿಟ್ಟಿರಲಿಲ್ಲ ಎಂದವರು ಹೇಳಿದಾರೆ. ಫಜಲಾಲಿ ಆಯೋಗದ ರಚನೆಯ ಮುಂಚೆ ಸಹ ಜನರನ್ನು ಸರಕಾರ ವಿಚಾರಿಸಿಲ್ಲವೆಂದೂ ಅವರು ನುಡಿದಿದ್ದಾರೆ. ಮದ್ರಾಸಿನ ಮಂತ್ರಿ ಶ್ರೀ ಸುಬ್ರಹ್ಮಣ್ಯಮರು ಡಾ. ರೆಡ್ಡಿ ಹೇಳಿದ ಮಾತುಗಳನ್ನೆ ಇನ್ನೊಂದು ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಪ್ರಜಾಪ್ರಭುತ್ವ ತತ್ತ್ವದಂತೆ ಬಹುಮತದ ಅಭಿಪ್ರಾಯವೇ ಸಿಂಧುವೆನಿಸುವುದಾದರೂ ತನ್ನ ಮಟ್ಟಿಗೆ ಹೇಳುವುದಾದರೆ ಬಹುಮತದ ಅಭಿಪ್ರಾಯವು ಸದಾಕಾಲ ಯೋಗ್ಯವಾಗಿದೆ ಎಂದು ಒಪ್ಪುವುದು ಸಾಧ್ಯವಿಲ್ಲ ಎಂದಿವರು ಅಭಿಪ್ರಾಯಪಟ್ಟಿದ್ದಾರೆ. ಬುದ್ಧಿಜೀವಿಗಳ ನೆಲೆಯಿಂದ ಧುರೀಣರಾದವರು ಜನತೆಗೆ ಮಾರ್ಗದರ್ಶನ ನೀಡಬೇಕಾದ ಅಗತ್ಯವನ್ನು ಜನಾಭಿಪ್ರಾಯ ಪ್ರದರ್ಶನಕ್ಕೆ ಕೊಡುವ ಮಹತ್ವಕ್ಕೆ ಕಟ್ಟುಬಿದ್ದು ಕಡೆಗಣಿಸಬಾರದೆಂದು ಅವರ ನಿಲವು.

ದಾಕ್ಷಿಣಾತ್ಯರ ಮನಸ್ಸು

ದಕ್ಷಿಣ ಪ್ರದೇಶದ ರಚನೆಯನ್ನು ಪ್ರತಿಪಾದಿಸುತ್ತಾ ಸುಬ್ರಹ್ಮಣ್ಯಮರು ಹೇಳಿದ ಮಾತಿದು. ಅವರ ದೃಷ್ಟಿಯಲ್ಲಿ ತಮಿಳುನಾಡು ಮತ್ತು ಕೇರಳಗಳು ಒಂದುಗೂಡುವುದರಿಂದ ಬಹಳ ಹೆಚ್ಚಿನ ಲಾಭವಿದೆ. ಕೃಷಿಯ ಅಭಿವೃದ್ಧಿಗಾಗಿಯೂ ವಿದ್ಯುದುತ್ಪಾದನೆಗಾಗಿಯೂ ಪಶ್ಚಿಮ ಘಟ್ಟದ ಸಾಮಾನ್ಯ ಸೆರಗನ್ನು ಕೇರಳ-ತಮಿಳು ನಾಡುಗಳ ವಿಲಯನದಿಂದ ಉಪಯೋಗಿಸಬಹುದಾಗುತ್ತದೆ; ಅಲ್ಲದೆ ಅರಣ್ಯ ಸಂಪತ್ತನ್ನೂ ತಮಿಳುನಾಡು ಪಡೆಯುವಂತಾಗುತ್ತದೆ. ಆಡಳಿತೆಯನ್ನು ಜನತೆಯ ಭಾಷೆಯಲ್ಲಿಯೇ ನಡೆಸಬಹುದು— ಸ್ವಿಜರಲೇಂಡಿನಲ್ಲಿರುವಂತೆ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ರಾಜ್ಯದ ಅಧಿಕೃತ ಭಾಷೆಯಾಗಿ ನಂಬಹುದು. ಶಾಸನಾಂಗದಲ್ಲಿ ಪ್ರತಿನಿಧಿಗಳು ಮಾತನಾಡುವುದು ಅರ್ಥವಾಗುವುದಿಲ್ಲವೆಂಬ ಕೊರತೆಯನ್ನು ಅನುವಾದಕ್ಕೆ ಉಚಿತ ಯಂತ್ರಗಳ ವ್ಯವಸ್ಥೆ ಮಾಡುವ ಮೂಲಕ ನಿವಾರಿಸಬಹುದು. ಹಿಂದಿನ ಮದ್ರಾಸು ರಾಜ್ಯದಲ್ಲಿದ್ದ ನಾಲ್ಕು ಮುಖ್ಯ ದ್ರಾವಿಡ ಭಾಷೆಗಳನ್ನು ಅಧಿಕೃತ ಭಾಷೆಯಾಗಿ ಸರಕಾರವು ಮನ್ನಿಸಿದರೆ ಆಂಧ್ರ, ಕರ್ನಾಟಕ, ಕೇರಳ, ತಮಿಳುನಾಡುಗಳನ್ನೊಳಗೊಂಡ ವಿಶಾಲವಾದ ದಕ್ಷಿಣ ಪ್ರದೇಶವನ್ನು ಸ್ಥಾಪಿಸಬಹುದು—ಎಂದವರ ವಾದ. ಆದರೆ ಕೇರಳದೊಡನೆ ತಮಿಳುನಾಡಿಗೆ ಸೇರಲು ಇಚ್ಛೆಯಿದ್ದಂತಿಲ್ಲ. ಕೇರಳೀಯರು ಈ ಮಟ್ಟಿಗೆ ನಿರಾಶರಾಗಿದ್ದಾರೆ–ಮತ್ತು ಕರ್ನಾಟಕದೊಡನೆ ಸೇರಿ ಹೋಗಬಹುದೊ ಎಂದು ಮೈಸೂರಿನ ಮುಖ್ಯ ಮಂತ್ರಿಗಳತ್ತ ನೋಡ ತೊಡಗಿದ್ದಾರೆ. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ದಕ್ಷಿಣ ಪ್ರದೇಶ ರಚನೆಯ ಕುರಿತು ಸರಕಾರವು ಯಾವುದೇ ನಿರ್ಣಯಕ್ಕೆ ಇನ್ನೂ ಬಂದಿಲ್ಲವೆಂದಿದ್ದಾರೆ. ಆದರೆ, ಮೈಸೂರಿನಲ್ಲಿ ಪ್ರಬಲ ಗುಂಪೊಂದು ಶ್ರೀ ವೀರಣ್ಣ ಗೌಡ, ದಾಸಪ್ಪ, ಕೃಷ್ಣಪ್ಪ ಮುಂತಾದ ಮುಖಂಡರಲ್ಲಿ ನೇತೃತ್ವದಲ್ಲಿ ದಕ್ಷಿಣ ಪ್ರದೇಶ ರಚನೆಗೆ ಬೆಂಬಲ ಕೊಡುತ್ತಿದೆ. ಆದರೆ ಮೈಸೂರಿನೊಡನೆ ಸೇರುವ ಕನ್ನಡದ ಉಳಿದ ಭಾಗಗಳಲ್ಲಿ ದಕ್ಷಿಣ ಪ್ರದೇಶದ ರಚನೆಗೆ ಸಾಕಷ್ಟು ಅನುಕೂಲ ಮತ ಕಂಡು ಬರುತ್ತಿಲ್ಲ.

(೬ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 — ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! — 1956

THE CANARA BANKING CORPORATION LIMITED

H. Office: UDIPI (S.India).

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩-೦-೧.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು 1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧-೩-'೫೬	೨೫

ಹೊಸ ನಂಬಿಕೆ

ರಷ್ಯದಲ್ಲಿಂದು ನಿಜವಾಗಿಯೂ ಬದಲಾವಣೆ ನಡೆದಿದೆಯೆ?— ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಮಾಡುತ್ತಿದ್ದವರಿಗೆ ಇದೀಗ ಒಳ್ಳೆಯ ಸಾಮಗ್ರಿ ದೊರಕಿದೆ. ಸ್ಟ್ಯಾಲಿನ್ನರ ಮರಣಾನಂತರ ರಷ್ಯದ ರಾಜಕೀಯ ಹಾಗು ಆರ್ಥಿಕ ಕ್ಷೇತ್ರದಲ್ಲಿ ಹಿಂದಿನ ತತ್ತ್ವಗಳನ್ನು ಬಿಟ್ಟುಗೊಟ್ಟು ಹೊಸ ನೆಲೆಯಿಂದ ತೊಡಗಿದ ಚಟುವಟಿಕೆಗಳ ಕೈವಾಡ ಕಂಡು ಬರುವುದೆಂದು ಸಾಮಾನ್ಯವಾಗಿ ನಿರೀಕ್ಷಕರು ಅಭಿಪ್ರಾಯಪಡುತ್ತಿದ್ದರು. ಸ್ಟ್ಯಾಲಿನ್ನರ ವಜ್ರ ಮುಷ್ಟಿಯ ಬಿಗಿಯು ಸಡಿಲುಗೊಂಡು, ಒಬ್ಬ ವ್ಯಕ್ತಿಯಲ್ಲಿ ಸರ್ವಾಧಿಕಾರವು ನಿಹಿತವಾಗಿರುವ ಪರಿಸ್ಥಿತಿಯು ಕೈತಪ್ಪಿ, ಸೌಮ್ಯ ಧೋರಣೆಯೂ ಸಾಮೂಹಿಕ ಹೊಣೆಗಾರಿಕೆಯೂ ಸದ್ಯಕ್ಕೆ ರಷ್ಯದ ವೈಶಿಷ್ಟ್ಯವಾಗಿ ಪರಿಣಮಿಸಿದೆ ಎಂದು ಭಾವಿಸುವುದಕ್ಕೆ ಅನೇಕ ನಿದರ್ಶನಗಳು ದೊರೆತವು. ಪಂಚ ಶೀಲಗಳ ಮೇಲೆ ಆಧರಿತವಾದ ಅಂತಾರಾಷ್ಟ್ರೀಯ ಸಂಬಂಧ, ಸ್ಟ್ಯಾಲಿನ್ನರ ಕಾಲದಲ್ಲಿ ಸ್ನೇಹವನ್ನು ಕಡಿದುಕೊಂಡಿದ್ದ ಯುಗೊಸ್ಲಾವಿಯ ದೇಶದೊಡನೆ ಮೈತ್ರಿಯ ಪುನರುಜ್ಜೀವನ, ಅಮೇರಿಕ ಮತ್ತು ಪಾಶ್ಚಾತ್ತ್ಯ ರಾಷ್ಟ್ರಗಳೊಡನೆ ಜಿನೇವ ಸಮ್ಮೇಳನವೇ ಮುಂತಾದ ಕೂಟದಲ್ಲಿ ಸೌಜನ್ಯ ಪ್ರದರ್ಶನ—ಇತ್ಯಾದಿಗಳನ್ನು ಕಂಡ ಹೊರ ದೇಶಗಳವರು ರಷ್ಯದ ದೃಷ್ಟಿಕೋಣ ಬದಲಾಗಿದೆ ಎಂದು ಒಪ್ಪುವುದಕ್ಕೆ ಸಿದ್ಧರಾಗಿದ್ದರು. ಆದರೆ ಒಳದೇಶದ ಧೋರಣೆಯಲ್ಲಿ ಪರಿವರ್ತನೆಯಾಗಿರುವುದೇ ಇಲ್ಲವೇ ಎಂಬ ಸಂಶಯ ಸಾಮಾನ್ಯವಾಗಿದ್ದಿತು-ಸ್ಟ್ಯಾಲಿನ್ನರ ಮರಣಾನಂತರ ಅಧಿಕಾರಕ್ಕೆ ಬಂದ ಜಾರ್ಜಿ ಮೆಲೆಂಕೊಫರು ತಾನು ಕೃಷಿ ವಿಭಾಗದಲ್ಲಿ ತಪ್ಪು ನಡೆಸಿರುವೆನೆಂದು ಸ್ವತಃ ಒಪ್ಪಿಕೊಂಡು ಪ್ರಧಾನಿಪಟ್ಟವನ್ನು ನಿಕೊಲಾಯ್ ಬುಲ್ಗಾನಿನ್ನರಿಗೆ ಕೊಡಮಾಡಿದುದು ರಷ್ಯದ ಆಂತರಿಕ ಚರಿತ್ರೆಯಲ್ಲಿ ಹೊಸಅಧ್ಯಾಯ; ಹಾಗೆ ಮಾಡಿಯೂ ಅವರು ಉಪ ಮುಖ್ಯ ಮಂತ್ರಿ ಸ್ಥಾನದಲ್ಲಿಉಳಿದದ್ದುಎಷ್ಟು ಆಶ್ಚರ್ಯಜನಕವಿಷಯವಾಗಿದ್ದರೂರಷ್ಯದ ಧೋರಣೆಯು ಆಂತರಿಕವಾಗಿಯೂ ಪರಿವರ್ತನೆ ಹೊಂದಿದ್ದುದರ ಸಂಕೇತವದು. ಹೀಗೆ ಭಾವಿಸುವವರಿದ್ದರೂ ಧಾರಾಳವಾದ ಪುಷ್ಟಿಯನ್ನು ಈ ವರೆಗೆ ಈ ನಿಲುವು ಹೊಂದಿರಲಿಲ್ಲ. ಈಗ ಸ್ಟ್ಯಾಲಿನ್ನರ ಮರಣಾನಂತರ ಮೊದಲನೇ ಸಲ ಸೇರಿರುವ ಸಾಮ್ಯವಾದಿ ಪಕ್ಷದ(ಕಮ್ಯುನಿಸ್ಟ್) ಸಮ್ಮೇಳನದಲ್ಲಿ ರಷ್ಯವು ನಿಜವಾಗಿಯೂ ತನ್ನ ನೀತಿ ಸೂತ್ರಗಳನ್ನು ಪರಿವರ್ತಿಸಿಕೊಂಡಿದೆ ಎಂಬುದಕ್ಕೆ ಬಲವಾದ ಉದಾಹರಣೆಗಳು ವ್ಯಕ್ತವಾಗಿವೆ. ಈ ಸಮ್ಮೇಳನಕ್ಕೆ ಸಾಮ್ಯವಾದಿ ಪಕ್ಷದ ಕಾರ್ಯದರ್ಶಿ ಖ್ರುಶ್ಚೆಫರು ಒಪ್ಪಿಸಿದ ವರದಿಯೂ ಇತರ ಮುಖಂಡರು ಕೊಟ್ಟ ಭಾಷಣಗಳೂ ಸ್ಟ್ಯಾಲಿನ್ನರು ತಮ್ಮ ಜೀವಿತಾವಧಿಯಲ್ಲಿ ನಡೆಸಿದ ಏಕ ವ್ಯಕ್ತಿ ಸರ್ವಾಧಿಕಾರಿತ್ವ ಕ್ರಮಕ್ಕೆ ಇನ್ನು ಮುಂದೆ ರಷ್ಯದಲ್ಲಿ ಸ್ಥಾನವಿಲ್ಲ ಎಂದು ಸ್ಪಷ್ಟ ಪಡಿಸಿರುತ್ತವೆ. ಸ್ಟ್ಯಾಲಿನ್ನರು ಅನೇಕ ತಪ್ಪುಗಳನ್ನು ಮಾಡಿದ್ದಾರೆಂದೂ ಅವರ ತೀರ್ಮಾನಗಳು ಎಲ್ಲ ಸಂದರ್ಭಗಳಲ್ಲಿ ಸರಿಯಾಗಿರಲಿಲ್ಲವೆಂದೂ ರಷ್ಯದ ಈಗಿನ ಧುರೀಣರು ಘಂಟಾಘೋಷವಾಗಿ ಸಾರಿ ಅದಕ್ಕೆ ನಿದರ್ಶನಗಳನ್ನು ಹೆಕ್ಕಿ ತೆಗೆದು ತೋರಿಸಿದ್ದಾರೆ. ರಷ್ಯದಲ್ಲಿ ಈಗ ಸಾಮ್ಯವಾದಿ ಪದ್ಧತಿಯು ತನ್ನ ಸಕಲ ವೈಭವದೊಡನೆ ನೆಲೆಗೊಂಡಿವೆ ಎಂದು ಯಾರೂ ಭಾವಿಸಕೂಡದೆಂದು ಈ ನಾಯಕರು ಎಚ್ಚರಿಕೆ ಕೊಟ್ಟದ್ದು ಸಹ ಒಂದು ವಿಶೇಷ. ರಷ್ಯದಲ್ಲಿ ನಿತ್ಯೋಪಯೋಗದ ಸಾಮಗ್ರಿಗಳ ಕೊರತೆ ಬಲವಾಗಿದೆ, ಉತ್ಪಾದನೆಯ ಕೌಶಲ್ಯವು "ಭಂಡವಾಳಶಾಹಿ" ರಾಷ್ಟ್ರಗಳ ಮಟ್ಟಕ್ಕಿಂತ ತುಂಬ ಕೀಳಾಗಿದೆ ಎಂದು ಮುಂತಾಗಿ ಸ್ವದೇಶ ಬಾಂಧವರಿಗೆ ಈ ಧುರೀಣರು ಹೇಳಿದ್ದು, ರಷ್ಯನ್ನರ ಭ್ರಮೆಯನ್ನು ಹೀಗೆ ನಿವಾರಿಸಲು ಸಾಹಸಪಟ್ಟಿದ್ದಾರೆ; ಮತ್ತು ತಮ್ಮ ದೌರ್ಬಲ್ಯವನ್ನೂ ಬಹಿರಂಗವಾಗಿ ತೋರ್ಪಡಿಸಿದ್ದಾರೆ. ಎಲ್ಲಕ್ಕಿಂತಲೂ ಹೆಚ್ಚು ಮಹತ್ತ್ವದ ಸಂಗತಿಯೆಂದರೆ ವರ್ಗ ಸಮರದ ಮೂಲಭೂತ ಅಂಶವನ್ನೆ ಮೂಲೆಗೆ ತಳ್ಳಿ ಸಹಜೀವನದ ಸಿದ್ಧಾಂತವನ್ನು ಈ ನಾಯಕರು ಎತ್ತಿಹಿಡಿದಿದ್ದಾರೆ- ಭಂಡವಾಳಶಾಹಿಯು ಜಗತ್ತಿನಲ್ಲಿರುವಷ್ಟು ಕಾಲ ಯುದ್ಧವು ಅಪರಿಹಾರ್ಯವೆಂಬ ಮಾರ್ಕ್ಸನ ತತ್ತ್ವಗಳನ್ನು ಈಗಿನ ರಷ್ಯದ ಧುರೀಣರು ತಿದ್ದುಪಡಿಮಾಡಿ, ಯುದ್ಧ ಸಂಭವಿಸಲೇ ಬೇಕಾದ ಅಗತ್ಯವಿಲ್ಲ ಎಂದಿದ್ದಾರೆ. ಹಿಂಸಾತ್ಮಕ ವರ್ಗ ಕಲಹವಾಗಲೀ ಭಂಡವಾಳ ಶಾಹಿತ್ವದ ಯುದ್ಧದಂಥ ಭೀಕರ ಕ್ರಮವಾಗಲೀ ಸಾಮ್ಯವಾದವನ್ನು ಅಥವಾ ಅದಕ್ಕಿಂತ ಸೌಮ್ಯವಾದ ಸಮಾಜವಾದವನ್ನು ನೆಲೆಗೊಳಿಸಲು ಅನಿವಾರ್ಯ ತಂತ್ರವಾಗಬೇಕಾಗಿಲ್ಲ—ಆಯಾ ರಾಷ್ಟ್ರದ ಜನತೆಯ ಒಪ್ಪಿಗೆಯು ಮತ್ತು ಶಾಂತ ಚಟುವಟಿಕೆಗಳು ವರ್ಗ ಸಮರಕ್ಕಾಗಲೀ ಯುದ್ಧಕ್ಕಾಗಲೀ ಎಡೆಯನ್ನು ಕೊಡದೆ ಅಹಿಂಸಾತ್ಮಕ ಕ್ರಾಂತಿಯನ್ನು ತರಬಹುದು ಎಂಬ ಹೊಸ ನಂಬಿಕೆಯನ್ನು ರಷ್ಯದ ಈ ಧುರೀಣರು ವ್ಯಕ್ತಪಡಿಸಿದ್ದಾರೆ. ಹೊರ ಜಗತ್ತಿನ ದೃಷ್ಟಿಯಲ್ಲಿ ಇದರಷ್ಟು ಮಹತ್ತ್ವದ ವಿಷಯ ಬೇರೆ ಇರಲಾರದು—ರಷ್ಯವು ಹೀಗೆ ತನ್ನ ತಪ್ಪನ್ನು ತಿದ್ದಿಕೊಂಡಿರುವುದು ಆ ದೇಶದೊಡನೆ ಹೊಸ ಬಗೆಯ ಸಂಬಂಧವಿರಿಸಿಕೊಂಡು ಹೋಗಬಯಸುವವರಿಗೆ ಅನುಕೂಲವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಭಾರತದ ನೆಲೆಯಿಂದ ಆಲೋಚಿಸುವುದಾದರೆ, ನಮ್ಮ ಪ್ರಧಾನ ಮಂತ್ರಿ ನೆಹರುಗಳು ಹೇಳಿದಂತೆ, ರಷ್ಯದಲ್ಲಿನ ಈ ಮಹಾಸ್ಥಿತ್ಯಂತರಗಳು ಸ್ವಾಗತಾರ್ಹ ದಿಸೆಯಲ್ಲಿ ನಡೆದಿರುತ್ತವೆ. ಅಲ್ಲದೆ ಹಿಂಸಾತ್ಮಕ ಕ್ರಾಂತಿಯಲ್ಲಿ ಒಂದು ರಾಷ್ಟ್ರವು ಸದಾ ಕಾಲ ನಂಬಿಕೆಯನ್ನಿಟ್ಟು ಸಾಗಲಾರದೆಂದೂ ರಕ್ತ ಕ್ರಾಂತಿಗೆ ನೆಪವಾದ ಕ್ಷಣಿಕ ಉದ್ವೇಗವು ಶಮನವಾದ ಬಳಿಕ ಶಾಂತವಾದ ಉಪಾಯಗಳೇ ಯೋಗ್ಯವೆಂಬ ತಿಳಿವಳಿಕೆ ಮೂಡಿ ಬರುವುದೆಂದೂ ಈ ತಿದ್ದುಪಡಿಗಳ ಮೇಲಿಂದ ತೀರ್ಮಾನಿಸಬಹುದು. ಕೆಂಪು ಚೀನವೇ ಮುಂತಾದ ಇತರ ಸಾಮ್ಯವಾದಿ ರಾಷ್ಟ್ರಗಳು ರಷ್ಯದಲ್ಲಿ ನಡೆದಿರುವ ಪರಿವರ್ತನೆಯನ್ನು ಗಮನಿಸಿ, ಈಗಲೇ ತಮ್ಮ ದಾರಿಯನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುವುದು ಅಗತ್ಯವಾಗಿದೆ. ಭಾರತದ ಮಟ್ಟಿಗೆ, ನಾವು ಅನುಸರಿಸಿಕೊಂಡು ಬರುತ್ತಿರುವ ಶಾಂತ ಮಾರ್ಗಕ್ಕೆ ಹಿಂಸಾವಾದಿಗಳು ಸಹ ತಿರುಗಿರುವುದು ಸಂತೋಷವನ್ನೆ ತರಬೇಕು; ಅಲ್ಲದೆ ನಮ್ಮ ಆತ್ಮ ವಿಶ್ವಾಸವನ್ನೂ ಇದು ಹೆಚ್ಚಿಸಬೇಕು. ಭಂಡವಾಳಶಾಹಿತ್ವದ ತಲೆಪಟ್ಟಿಯನ್ನು ಹಚ್ಚಿಕೊಂಡಿರುವ ಪಾಶ್ಚಾತ್ತ್ಯ ರಾಷ್ಟ್ರಗಳಿಗಾದರೂ ರಷ್ಯದೊಡನೆ ಪಂಚಶೀಲಗಳ ಉದಾರಾಶ್ರಯದಲ್ಲಿ ಸ್ನೇಹ ಪೂರ್ಣವಾದ ಸಂಬಂಧವನ್ನು ಬೆಳೆಸಲು ಈಗ ಅವಕಾಶ ದೊರೆತಿದೆ. ಅಮೇರಿಕವು ಸೈನಿಕ ವ್ಯೂಹಕ್ಷೇತ್ರವನ್ನು ನಿರ್ಮಿಸುತ್ತಿರುವಷ್ಟು ಕಾಲ ರಷ್ಯವು ಯುದ್ಧ ಸಿದ್ಧತೆಗಳನ್ನು ಅಲಕ್ಷ್ಯಿಸಲಾರದು ಎಂದು ಖ್ರುಶ್ಚೆಫರು ಹೇಳಿರುವರೇನೋ, ನಿಜ. ಇದು ಪರಸ್ಪರ ಅಪನಂಬಿಕೆಯಿಂದ ಜನಿತವಾದ ಮಾತೇ ಹೊರತು, ಯುದ್ಧಾಸಕ್ತಿ ರಷ್ಯಕ್ಕಿದೆ ಎಂದು ಭಾವಿಸುವುದು ಸರಿಯಲ್ಲ. ರಷ್ಯವು ಹೊಸ ಧೋರಣೆಯನ್ನು ರೂಪಿಸಿಕೊಂಡು ಸಾಗಲು ಈಗ ಹವಣಿಸಿದೆ. ಜಾಗತಿಕ ಶಾಂತಿ ಸಾಧನೆಯಾಗಬೇಕೆಂಬ ತೀವ್ರ ಹಂಬಲವಿರುವ ಎಲ್ಲರೂ—ಆ ಹಂಬಲವಿಲ್ಲದವರು ಯಾರೂ ಇಲ್ಲ!—ಇದಕ್ಕೆ ಪೋಷಕವಾಗಿ ನಡೆದುಕೊಳ್ಳುವುದು ನಿಜಕ್ಕೂ ಅಪೇಕ್ಷಣೀಯವಾಗಿದೆ. ರಷ್ಯಕ್ಕೆ ಸಾಮ್ಯವಾದಿ ತತ್ತ್ವದಲ್ಲಿಯೇ ಅಪನಂಬಿಕೆ ಹುಟ್ಟಿರುವುದಿಲ್ಲ- ಅದು ಪ್ರಜಾಪ್ರಭುತ್ವದೊಡನೆ ಶಾಂತ ಸ್ಪರ್ಧೆಯನ್ನು ನಡೆಸಿ, ಜನರೇ- ಅಥವಾ ಕಾಲವೇ- ಯಾವ ಪದ್ಧತಿ ಯೋಗ್ಯವೆಂಬುದನ್ನು ನಿರ್ಣಯಿಸುವುದಕ್ಕೆ ಬಿಡಬೇಕೆಂದು ಈಗ ನಿರ್ಧರಿಸಿದೆ. ಈ 'ಶಾಂತ" ಸ್ಪರ್ಧೆಯ ಮಾತೇ ರಷ್ಯದ ಹಿಂದಿನ ಧೋರಣೆಯ ಕೆಲವಾದರೂ ವಿಷಾಕ್ತ ಹಲ್ಲುಗಳನ್ನು ಕೀಳುತ್ತದೆ. ಆದುದರಿಂದ ಅದು ಪಾಶ್ಚಾತ್ತ್ಯರಿಗೂ ಪ್ರಿಯವಾಗಬೇಕು. ಹಾಗಾಗದೆ, ಸ್ಟ್ಯಾಲಿನ್ನರು ಸತ್ತ ಬಳಿಕ, ತಮ್ಮ ವರ್ಚಸ್ಸನ್ನು ಉಳಿಸಿಕೊಳ್ಳಲು ರಷ್ಯದ ಈಗಿನ ನಾಯಕರು ಸಾಮೂಹಿಕ ಹೊಣೆಗಾರಿಕೆಯ ಮಾತನ್ನಾಡುತ್ತಿರುವರೆಂದಾಗಲೀ ಸ್ಟ್ಯಾಲಿನ್ನರು ಸತ್ತು ಹೋಗಿರುವುದರಿಂದ ಈಗ ಅವರಿಗೆ ಬೈದು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾ ಹೊರ ದೇಶಗಳಲ್ಲಿ ರಷ್ಯವು ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡಿದೆ ಎಂಬ ಭಾವನೆ ಮೂಡಿಸುತ್ತಾ ಮೆರೆದಾಡುವ ಕುತಂತ್ರವನ್ನು ಅನುಸರಿಸುತ್ತಿದ್ದಾರೆಂದಾಗಲೀ ಅಥವಾ ಡಲ್ಲೇಸರು ಹೇಳುವಂತೆ ಹಳೆಯ ಉದ್ದೇಶಗಳ ಸಾಧನೆಗಾಗಿ ಅವಲಂಬಿಸುವ ಹೊಸ ಉಪಾಯ ಇದೆಂದಾಗಲೀ ಭಾವಿಸುವುದು ಲೋಕ ಕ್ಷೇಮದ ದೃಷ್ಟಿಯಿಂದ ಹಿತವಲ್ಲ. ಸ್ಟ್ಯಾಲಿನ್ನರಿಗೆ ಈಗ ಬೈದರೆ ಅದಕ್ಕಾಗಿ ಶಿಕ್ಷೆಯನ್ನು ಈ ನಾಯಕರೀಗ ಅನುಭವಿ
ಸಬೇಕಾಗಿ ಬರುವುದಿಲ್ಲವೆಂಬುದು ನಿಜ
ಆದರಂತೆಯೇ ಸ್ಟ್ಯಾಲಿನ್ನರ "ಶಿಸ್ತ
ವನ್ನು ಸ್ವೀಕರಿಸಿದ, ರಕ್ತಕಲುಷಿತವಾ
ಕೈಗಳು ಈ ಧುರೀಣರದೆಂಬುದೂ ಸತ್ಯ
ಆದರೆ ಒಂದು ರಾಷ್ಟ್ರವಾಗಲೀ ವ್ಯ
ಯಾಗಲೀ ಸ್ವಾಗತಾರ್ಹ ಪರಿವರ್ತನೆ
ದಿಸೆಯಲ್ಲಿ ಹೆಜ್ಜೆಯನ್ನು ಇಡಬಾರದೆಂ
ನಿಲ್ಲ. ರಾಜಕೀಯ ಮತ್ತು ಆರ್ಥಿ
ಕ್ಷೇತ್ರಗಳ ಹಿತಾಸಕ್ತಿಯು ಸಹ ಈ ಮ
ನಸಿಕ ಅಥವಾ ಆತ್ಮಿಕ ಸ್ವರೂಪದ ವಿ
ವನನ್ನು ಕಡೆಗಣಿಸಲಾಗದು; ಮತ್ತಿದ
ಪ್ರಾಮಾಣಿಕತೆಯನ್ನು ಸಹ ಮಿತಿಮೀ
ಶಂಕಿಸಲಾಗದು.

"ಲೋಕ ಸಭೆಯ ತಂದೆ"

ಈ ವಾರ ಇನ್ನೊಂದು ಶೋಕ ವಾರ್ತೆ
ಯನ್ನು ತಿಳಿಸಬೇಕಾಗಿ ಬಂದುದು ನಿ
ಜಕ್ಕೂ ಶೋಚನೀಯ— ಲೋಕಸಭೆಯ
ತಂದೆಯಂತಿದ್ದ, ಆ ಸಭೆಯ ಅಧ್ಯ
ಶ್ರೀ ಗಣೇಶ ವಾಸುದೇವ ಮಾವಳಣಕ
ರು ಇದೇ ೨೭ನೇ ಫೆಬ್ರವರಿಯಂದು ತಮ
೬೮ನೇ ವಯಸ್ಸಿನಲ್ಲಿ ದೈವಾಧೀನರಾ
ರು. ಶ್ರೀ. ಮಾವಳಣಕರರು ಈಚೆಗೆ ಕೆ
ವು ವಾರಗಳಿಂದ ಹೃದ್ರೋಗ ಪೀಡಿತರಾ
ಗಿದ್ದರು. ಮರಣ ಪೂರ್ವದ ಕೆಲವು ದಿ
ಗಳಲ್ಲಿ ಅವರ ಪರಿಸ್ಥಿತಿ ಸುಧಾರಿಸುತ್ತಿ
ಎಂದು ವೈದ್ಯರು ಹೇಳುತ್ತಿದ್ದರು. ಆ
ರೂ ವಿಧಿಲೀಲೆಯು ಅವರ ಮರಣ ಶೋ
ಕವನ್ನು ದೇಶವು ಇಷ್ಟು ಬೇಗನೇ ಅನು
ಭವಿಸುವಂತೆ ಮಾಡಿತು; ಮತ್ತು ಹೀ
ನಮ್ಮಲ್ಲಿಯ ಹಳೆಯ ಪೀಳಿಗೆಯ ಶ್ರೇಷ
ಸದಸ್ಯನೊಬ್ಬನನ್ನು ನಮ್ಮಿಂದ ಅಗಲಿಸಿ
ಅಷ್ಟು ಮಟ್ಟಿಗೆ ಅನಾಥವಾಗಿ ಈ ದೇ
ವನ್ನು ಮಾಡಿತು. ಶ್ರೀ. ಮಾವಳಣಕ
ರು ಸ್ವತಂತ್ರ ಭಾರತದಲ್ಲಿ ಪ್ರಜಾಸತ್ತಾ
ತ್ಮಕ ಪರಂಪರೆಯನ್ನು ಹಾಕಿ ಕೊಡಲು
ಬಹಳವಾಗಿ ದುಡಿದ ಮಹಾ ಪುರುಷರಾ
ಗಿದ್ದಾರೆ; ನಮ್ಮ ಸಾರ್ವಭೌಮಾಧಿಕಾ
ಸಂಪನ್ನ ಸಂಸತ್ತಿನ ಲೋಕ ಸಭೆಯನ
ಪ್ರಜಾಪ್ರಭುತ್ವದ ಪ್ರಯೋಗ ಕ್ಷೇ
ವಾಗಿ ಬಳಸುವುದರಲ್ಲಿ ಶ್ರೀ ಮಾವಳಣ
ರರು ವಹಿಸಿದ ಆಸಕ್ತಿಯೂ ಪ್ರದರ್ಶಿಸಿ
ಜಾಣ್ಮೆಯೂ ನಾಳೆಯ ಇತಿಹಾಸಕಾ
ರಿಂದ ಪ್ರಶಂಸಿಸಲ್ಪಡುವುದು ಖಂಡಿತ
ಅವರು ಪ್ರಜಾಸತ್ತೆಯ ಅಧ್ವರ್ಯುವಾ
ದ್ದಂತೆಯೇ ಉಜ್ವಲ ದೇಶಪ್ರೇಮಿ
ಗಳೂ ಅದಕ್ಕಿಂತ ಹೆಚ್ಚಾ
ಸಾರ್ವಜನಿಕ ಕಾರ್ಯಕರ್ತರು
ಆಗಿದ್ದರು. ೧೯೧೩ರಲ್ಲಿ ಅವ
ಸಾರ್ವಜನಿಕ ಜೀವನ ಪ್ರಾರಂಭವಾ
ಯಿತು. ಮಹಾತ್ಮಾ ಗಾಂಧಿ ಮತ್ತು
ಸರ್ದಾರ್ ಪಟೇಲರೊಡನೆ ಅವರಿ
ನಿಕಟ ಸಂಪರ್ಕವೇರ್ಪಟ್ಟಿತು. ಗಾಂಧಿ
ಜಿಯ ಸಬರ್ಮತಿ ಆಶ್ರಮದ ಕಾರ್ಯ
ಕಲಾಪಗಳ ನೇತೃತ್ವವನ್ನು ವಹಿಸಿದಲ್ಲಿ
ದ ಗಾಂಧಿ ಹಾಗು ಕಸ್ತೂರ್ಬಾ ಸ್ಮಾರ
ನಿಧಿಗಳ ಅಧ್ಯಕ್ಷಸ್ಥಾನವನ್ನು ವಹಿಸಿ ದ
ಡಿಯುವ ತನಕ ಅವರ ಕಾರ್ಯದಕ್ಷತೆ
ಹರಡಿತು. ಗುಜರಾಥ ವಿಶ್ವವಿದ್ಯಾನಿ
ಯದಂಥ ಅನೇಕ ಶೈಕ್ಷಣಿಕ ಸಂಸ್ಥೆಗ
ಗೂ ಗುಜರಾಥಿನಲ್ಲಿ ಕಾಂಗ್ರೆಸು ಸಂಸ್ಥೆ
ಯ ಬೆಳವಣಿಗೆಗೂ ಅವರಿಂದ ಸಂ
ಸಹಾಯ ಅಪಾರ. ಸೆರೆಮನೆ ವಾಸವನ್ನು
ಸಂತೋಷದಿಂದ ಸ್ವೀಕರಿಸಿ, ಭಾರ
ಮಾತೆಯ ಸೇವೆಯನ್ನು ವಿಧಾಯಕ
ರಂಗದಲ್ಲಿ ಮಾಡಿದ ಈ ಧುರೀಣರ ಆತ್ಮ
ಕ್ಕೆ ಚಿರಶಾಂತಿಯಿರಲಿ ಅವರ ತುಂಬು
ಜೀವನದ ಆದರ್ಶವು ಈಗಿನ ಯುವಕ
ರನ್ನು ಸತ್ಪಥದಲ್ಲಿ ಮುನ್ನಡೆಸಲಿ!

ಉಡುಪಿ

ವಿವಾಹ ಸಮಾರಂಭ— ವಕೀಲ್ ಶ್ರೀ ಪಿ. ಪದ್ಮನಾಭ ರಾಯರ ಪುತ್ರ ಎಡ್ವೋಕೇಟ್ ಶ್ರೀ ಪಿ. ರಾಮಚಂದ್ರ ರಾಯರು ಶ್ರೀ ಆರ್. ಆರ್. ಕುಂಜೂರರ ಪುತ್ರಿ ಚಿ. ಸೌ. ಕಮಲಿನಿಯನ್ನು ತಾ. ೨೬ರಲ್ಲಿ ಬೆಳಿಗ್ಗೆ ಗುಂಡಿಬೈಲಿನ ವಧುವಿನ ಮನೆಯಲ್ಲಿ ವಿವಾಹವಾದರು. ಸಂಜೆ ಜರಗಿದ ಸತ್ಕಾರಕೂಟಕ್ಕೆ ಊರ ಪರಊರ ಅಭ್ಯಾಗತರನೇಕರು ಆಗಮಿಸಿದ್ದರು.

ಬೆನಗಲ್ ರಾಮ ರಾಯರಿಗೆ ಮಾನಪತ್ರ— ಉಡುಪಿ ಮುನಿಸಿಪಲ್ ಕೌನ್ಸಿಲಿನ ಜರೂರು ಸಭೆಯು ತಾ. 25ರಲ್ಲಿ ಸಂಜೆ ಚೇರ್‌ಮನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ತಾ. 12ರಲ್ಲಿ ಕೆನರಾಬ್ಯಾಂಕಿಂಗ್ ಕೋರ್ಪರೇಶನಿನ ಸುವರ್ಣೋತ್ಸವದ ಅಧ್ಯಕ್ಷತೆ ವಹಿಸಲು ಉಡುಪಿಗೆ ಆಗಮಿಸಲಿರುವ ಇಂಡಿಯಾದ ರಿಜರ್ವ್ ಬ್ಯಾಂಕಿನ ಗವರ್ನರ್ ಶ್ರೀ ಬೆನಗಲ್ ರಾಮರಾಯರಿಗೆ ಮಾನಪತ್ರವೀಯಬೇಕೆನ್ನುವ ನಿರ್ಣಯವು ಡಾ. ವಿ. ಜಿ. ಆಚಾರ್ಯರಿಂದ ಸೂಚಿಸಲ್ಪಟ್ಟು ವಕೀಲ್ ಶ್ರೀ ಪಿ. ವಿ. ಆಚಾರ್ಯರಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಪಾಸಾಯಿತು.

ನಂತರ ಸಾಮಾನ್ಯ ಸಭೆಜರಗಿದಾಗ ಡಾ. ವಿ. ಜಿ. ಆಚಾರ್ಯರ ಪ್ರಶ್ನೆಗಳಿಗೆ ಉತ್ತರವೀಯಲಾಯಿತು. ಆಫೀಸು ಉಪಯೋಗಕ್ಕಾಗಿ 24 ಕುರ್ಚಿಗಳನ್ನು ಕೊಂಡುಕೊಳ್ಳಲು ರೂಪಾಯಿ 400 ಮಂಜೂರು ಮಾಡಲು ಶಕ್ಯವಿಲ್ಲವೆಂದು ತೀರ್ಮಾನವಾಯಿತು. ಪೊಸಲ್ಲೆ ನಿರ್ಮಾಣ ಮತ್ತು ಕಡಿಯಾಳಿ ಶಾಲಾ ಬಯಲಾಟಕ್ಕೆ ಭೂಮಿಯನ್ನು ನಗರಸಭೆಯ ಸ್ವಾಧೀನಕ್ಕೆ ಬಿಟ್ಟುಕೊಡುವುದಾಗಿ ಸೂಚಿಸಿದ ರೆವಿನ್ಯೂ ಡಿವಿಜನಲ್ ಆಫೀಸರರ ಪತ್ರದ ಕುರಿತು ಒಪ್ಪಿಗೆ ನಿರ್ಣಯವಾಯಿತು. ಅಂತೆಯೇ ಮೂಡನಿಡಂಬೂರು ಗ್ರಾಮದ ಕೆಲವೊಂದು ಸ್ಥಳವನ್ನು ಸಿಟಿಬಸ್ ವಿಸ್ತರಣೆಗಾಗಿ ಕೊಡಬಹುದೆಂದು ಸೂಚಿಸಿದ ಜಿಲ್ಲಾ ಕಲೆಕ್ಟರ ಶರ್ತಗಳನ್ನು ಒಪ್ಪಲಾಯಿತು. ಸ್ಥಾನಿಕ ಅಭಿವೃದ್ಧಿ ಯೋಜನೆಗನುಸಾರವಾಗಿ ಶಿವಳ್ಳಿ ಗ್ರಾಮದಲ್ಲಿ ಭಜನಾಮಂದಿರ ಮತ್ತು ಮಕ್ಕಳ ಆಟದ ಸ್ಥಳ ನಿರ್ಮಾಣಮಾಡಲು ನಗರಸಭೆಯ ವಿರೋಧವಿಲ್ಲವೆಂದು ಶ್ರೀಮತಿ ಮನೋರಮಾ ದೇವಿಯವರ ಪತ್ರಕ್ಕೆ ಉತ್ತರವೀಯಲಾಯಿತು.

ಶಾಲಾವರ್ಧಂತಿ— ಸ್ಥಳೀಯ ಕಡಿಯಾಳಿ ಹಾ. ಎ. ಶಾಲಾವರ್ಧಂತಿ ಸಮಾರಂಭವು ತಾ. 25ರಲ್ಲಿ ವಿದ್ಯಾಧಿಕಾರಿ ಶ್ರೀ ಬಿ. ಪಿಂಟೋ ರವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ವಿ. ವಾಸುದೇವ ಭಟ್ಟರು ವರದಿಯನ್ನೋದಿದರು. ಶ್ರೀ ಪಿ. ವಿ. ಆಚಾರ್ಯರು ವಿದ್ಯುದ್ದೀಪಗಳನ್ನು ಬೆಳಗಿಸಿದರು. ಶ್ರೀ ಪಿ. ಎಲ್. ಎನ್. ಉಪಾಧ್ಯಾಯರು ಸ್ವಸ್ತಿವಾಚನಮಾಡಿದರು. ಅಧ್ಯಕ್ಷ ಭಾಷಣ, ಮನರಂಜನ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ನಗರದಲ್ಲಿ— ಕೆಲವೆಡೆಗಳಲ್ಲಿ ನೀರು ಕೋಟಲೆ ಕಾಯಿಲೆ ತಲೆದೋರಿರುವುದೆಂದು ತಿಳಿದುಬರುತ್ತದೆ.

ಐ. ಎ. ಎಸ್. ಪದವೀಧರರು— ದ. ಕ. ಜಿಲ್ಲೆಯಿಂದ ಐ. ಎ. ಎಸ್. ಪದವಿಗೆ ಉಡುಪಿಯ ದಿವಂಗತ ಶ್ರೀ ಸಾಂಗಾಳ ಪಾಂಡುರಂಗ ನಾಯ್ಕರ ಪುತ್ರ ಶ್ರೀ ಸಾಂಗಾಳ ವಾಸುದೇವ ನಾಯ್ಕರು ಆರಿಸಲ್ಪಟ್ಟಿರುವರು.

ವಜ್ರೋತ್ಸವ— ಆದಿ ಉಡುಪಿ ಹಾ. ಎ. ಶಾಲೆಯ ವಜ್ರೋತ್ಸವವು ಮಾರ್ಚ್ 2, 3 ಮತ್ತು 4ನೇ ತಾರೀಕುಗಳಲ್ಲಿ ಜರಗಲಿರುವುದೆಂದೂ ಎಲ್ಲರೂ ಸಹಕರಿಸಬೇಕೆಂದೂ ಸ್ಥಾಪಕ ಶ್ರೀ ಟಿ. ಸೀತಾರಾಮಯ್ಯನವರು ವಿನಂತಿಸುತ್ತಾರೆ.

ಡಾ. ನಿರುಪಮಾ ನಾಯಕ್— M.B.B.S., D.G.O., M.R.C.O.G., ಮಹಾತ್ಮರ ಅಸಹಕಾರ ಚಳವಳದಲ್ಲಿ ಭಾಗವಹಿಸಿ ಕಾರಾಗೃಹವಾಸವನ್ನು ಅನುಭವಿಸಿ ಪ್ರಸಿದ್ಧರಾದ ಶ್ರೀ ಸಾಂಗಾಳ ಮಂಜುನಾಥ ನಾಯಕ್ ಮತ್ತು ಶ್ರೀಮತಿ ಮನೋರಮಾ ಎಂ. ನಾಯಕರ ಸುಪುತ್ರಿ ಡಾ. ನಿರುಪಮಾ ನಾಯಕರು ಹೆಚ್ಚಿನ ವೈದ್ಯ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ತೆರಳಿದವರು ಎರಡೂವರೆ ವರ್ಷಗಳ ವ್ಯಾಸಂಗ ಮುಗಿಸಿ ಕಳೆದ ವಾರದಲ್ಲಿ ಊರಿಗೆ ಹಿಂತಿರುಗಿರುವರು. ಇವರು ಅಲ್ಲಿಯ ಪ್ರೊಫೆಸರುಗಳಿಂದ ಶ್ಲಾಘನೀಯ ಪ್ರಶಸ್ತಿ ಪತ್ರಗಳನ್ನು ಪಡೆದಿರುವರೆಂದೂ ಯಾವುದೇ ವೈದ್ಯಕೀಯ ಕಲಾಶಾಲೆಯಲ್ಲಿ ಪ್ರಾಧ್ಯಾಪಕಿಯಾಗುವುದರಲ್ಲಿ ಇವರ ಹೆಚ್ಚಿನ ಒಲವು ಇರುವುದೆಂದೂ ಇವರು ನಮ್ಮ ಜಿಲ್ಲೆಯಲ್ಲಿ ಈ ಡಿಗ್ರಿ ಪಡೆದ ಪ್ರಥಮ ಮಹಿಳೆ ಎಂದೂ ತಿಳಿದು ಬರುತ್ತದೆ.

ಮದ್ರಾಸು ಬಾನುಲಿ ಕೇಂದ್ರದಿಂದ— ಇದೇ ತಾ. 3ನೇ ಶನಿವಾರ ಬೆಳಿಗ್ಗೆ ಗಂಟೆ 8–15ರಿಂದ 9ರ ತನಕ ರೇಡಿಯೋವಾದದ ವಿಶೇಷ ಪ್ರಸಾರದ ಅಂಗವಾಗಿ 'ಉತ್ತರ ಗೋಗ್ರಹಣ' ವೆಂಬ ಯಕ್ಷಗಾನ ಪ್ರಸಂಗವು ಶ್ರೀ ಎಮ್. ಆರ್. ಶಾಸ್ತ್ರಿಗಳ ದಿಗ್ದರ್ಶನದಲ್ಲಿ ಪ್ರಸಾರವಾಗಲಿರುವುದು. ಇದರಲ್ಲಿ ಶ್ರೀಗಳಾದ ಎ. ವೆಂಕಟ್ರಮಣ ಭಟ್, ಎನ್. ವಿ. ಮೂರ್ತಿ, ಪಿ. ಎಸ್. ಭಟ್, ಡಿ. ವಿ. ತಂತ್ರಿ ಮೊದಲಾದವರು ಪಾತ್ರ ವಹಿಸುವರು.

ದೆಹಲಿ ಕರ್ನಾಟಕ ಸಂಘ— ಕಡೆಯಿಂದ ತಾ. 11ರಲ್ಲು ಸಂಜೆ ನವ ದೆಹಲಿಯ ರೈಸಿನಾ ಬಂಗಾಳಿ ಶಾಲಾ ಭವನದಲ್ಲಿ ಪುರಂದರ ದಾಸರ ಪುಣ್ಯ ತಿಥಿಯನ್ನು ಆಚರಿಸಲಾಯಿತು.



ಲಂಡನಿನ ವಿಮಾನ ನಿಲ್ದಾಣದಲ್ಲಿ ಪ್ರತಿ ದಿನ ಸರಾಸರಿ ೫೦೦ ವಿಮಾನಗಳು ಇಳಿಯುತ್ತಿವೆ ಎಂಬುದನ್ನು ಕೇಳಿದರೆ ಯಾರಿಗೆ ಆಶ್ಚರ್ಯವಾಗಲಾರದು? ಇಷ್ಟು ವಿಮಾನಗಳಿಂದ ಬಂದಿಳಿದ ಪ್ರಯಾಣಿಕರಿಗೆ ಎಷ್ಟು ಅನುಕೂಲತೆಗಳ ಅಗತ್ಯ ಬೀಳಲಾರದು? ಚಿತ್ರದಲ್ಲಿ ಈ ವಿಮಾನ ನಿಲ್ದಾಣದ ದೃಶ್ಯವನ್ನು ಅಲ್ಲಿ ಕಟ್ಟಲಾದ ಅತ್ಯಾಧುನಿಕ ಮಾದರಿಯ ವಿಶ್ರಾಮಧಾಮಗಳನ್ನೂ ನೋಡಬಹುದು.

ಮದ್ರಾಸಿನ ಮುಂಗಡಪತ್ರ

ಸೂಚಿತ ತೆರಿಗೆಗಳ ವಿವರ

ಮದ್ರಾಸಿನ ಶಾಸನಾಂಗದ ಮುಂದೆ ಅರ್ಥ ಸಚಿವ ಶ್ರೀ. ಸುಬ್ರಹ್ಮಣ್ಯಮರು ೧೯೫೮–೫೯ನೇ ಸಾಲಿನ ಅಂದಾಜು ಆಯವ್ಯಯ ಪತ್ರವನ್ನು ಇದೇ ಸೋಮವಾರ ಮಂಡಿಸಿದ್ದಾರೆ. ಇದು ೩೧೧ ಲಕ್ಷ ರೂಪಾಯಿಗಳ ಕೊರತೆಯನ್ನು ತೋರಿಸುತ್ತದೆ. ಇದರಲ್ಲಿ ೧೪೫ ಲಕ್ಷ ರೂಪಾಯಿಗಳನ್ನು ಹೊಸ ತೆರಿಗೆಯಿಂದ ತುಂಬಿಸಲು ಸರಕಾರ ನಿರ್ಧರಿಸಿದೆ. ಉಳಿದ ೧೬೬ ಲಕ್ಷ ರೂಪಾಯಿಗಳನ್ನು ಈಗ ಹಾಗೆಯೇ ಕೊರತೆಯಾಗಿ ಬಿಟ್ಟು ಬಿಡಲಾಗುತ್ತದೆ. ಅಭಿವೃದ್ಧಿ ಪ್ರಯತ್ನಗಳೆಲ್ಲ ಒಳ್ಳೆಯ ಫಲವನ್ನಿತ್ತರೆ, ಈ ಕೊರತೆಯೂ ತುಂಬಿ ಬಂದೀತೆಂದು ಅರ್ಥ ಸಚಿವರ ಆಶಯ.

ಹೊಸ ತೆರಿಗೆ

ಕೊರತೆಯನ್ನು ಆಂಶಿಕವಾಗಿ ತುಂಬಿಸಿಕೊಳ್ಳಲು ಸೂಚಿತವಾದ ತೆರಿಗೆಗಳ ವಿವರಗಳು ಹೀಗಿವೆ(೧) ಡೀಸೆಲ್ ಎಣ್ಣೆಯ ಮೇಲಿನ ತೆರಿಗೆಯನ್ನು ಗೆಲನಿಗೆ ಒಂದೂವರೆ ಆಣೆಯಿಂದ ನಾಲ್ಕಾಣೆಗೆ ಹೆಚ್ಚಿಸಲಾಗುತ್ತದೆ; ಇದರಿಂದ ಬರುವ ಆದಾಯ ೩೦ ಲಕ್ಷ ರೂಪಾಯಿ. (೨) ಸಕ್ಕರೆಯ ಮೇಲೆ ರೂಪಾಯಿಗೆ ಒಂದಾಣೆಯಂತೆ ಹೆಚ್ಚು ಕರ; ಇದರಿಂದ ಬರುವ ಉತ್ಪನ್ನ ರೂ. ೪೦ ಲಕ್ಷ. (೩) ಮದ್ರಾಸು ನಗರವನ್ನು ಹೊರತು ಪಡಿಸಿ ಉಳಿದೆಡೆ ವಿಶಾಲ ಪ್ರಮಾಣದಲ್ಲಿ ವಿದ್ಯುತ್ತನ್ನು ಬಳಸುವುದರ ಮೇಲೆ ೩೦% ಹೆಚ್ಚಿಗೆ ಕರ; ಇದರಿಂದ ೪೫ ಲಕ್ಷ ರೂಪಾಯಿ ಆದಾಯ ಬಂದೀತು. ಮತ್ತು (೪) ರೈತವಾರಿ ಪದ್ಧತಿಯ ಮೇಲೆ ಈಗಿನ ಇನಾಂ ಭೂಮಿಗಳ ತೆರಿಗೆಯನ್ನು ನಿಗದಿಗೊಳಿಸುವ ಕ್ರಮ; ಇದು ೩೦ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಸಂಪಾದಿಸಿ ಕೊಡುತ್ತದೆ.

ವಿನಾಯತಿಗಳು

ಮುಂಗಡ ಪತ್ರವು ತಾಳೆ ಬೆಲ್ಲದ ಮಾರಾಟದ ಮೇಲಿನ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಪಡಿಸುವ ಸ್ತುತ್ಯ ಸೂಚನೆಯನ್ನು ಮುಂದಿಟ್ಟಿದೆ. ಅಲ್ಲದೆ ಈಗ ಪ್ರಾಥಮಿಕ ಶಾಲೆಯ ಅಧ್ಯಾಪಕರ, ಪೋಲೀಸು ಕಾನ್‌ಸ್ಟೇಬಲುಗಳ, ಮತ್ತು ಕೊನೆಯ ವರ್ಗದ ಸರಕಾರಿ ನೌಕರರ ಮಕ್ಕಳಿಗೆ ಹೈಸ್ಕೂಲಿನಲ್ಲಿ ೧೦ನೇ ಫಾರ್ಮುಗಳ ವರೆಗೆ ಶಿಕ್ಷಣ ಶುಲ್ಕವನ್ನು ಸಂಪೂರ್ಣವಾಗಿ ಮಾಫಿ ಬಿಡುವ ಸೂಚನೆಯನ್ನೊಳಗೊಂಡಿದೆ. ಅಲ್ಲದೆ ಸರಕಾರದವರಿಂದ ಆಡಳಿತನಿರ್ವಹಣೆಯು ವಹಿಸಿಕೊಳ್ಳಲ್ಪಟ್ಟ ಇನಾಂ ಭೂಮಿಗಳಲ್ಲಿಯ ಗ್ರಾಮಾಧಿಕಾರಿಗಳ ಸಂಬಳವನ್ನು ರೈತವಾರಿ ಪದ್ಧತಿಯ ಪ್ರದೇಶದ ಮಟ್ಟಕ್ಕೆ ತರುವ, ಪಶು ವೈದ್ಯರಲ್ಲಿ ಕೆಲವು ಅಂತಸ್ತಿನವರ ಸಂಬಳ ಹೆಚ್ಚಿಸುವ, ಬೇರೆ ಕೆಲವು ಸರಕಾರಿ ನೌಕರರ ಮೂಲ ಸಂಬಳವನ್ನು ಅಧಿಕಗೊಳಿಸುವ ಸೂಚನೆಗಳಿಂದಲೂ ಮುಂಗಡ ಪತ್ರವು ಕೂಡಿದೆ.

ರೈಲ್ವೆ ಮುಂಗಡ ಪತ್ರ

ರೈಲ್ವೆ ಮುಂಗಡ ಪತ್ರವನ್ನು ಕೇಂದ್ರದ ಲೋಕಸಭೆಯಲ್ಲಿ ಕಳೆದವಾರ ಮಂಡಿಸಲಾಗಿದೆ. ಇದು ಮೂರನೇ ವರ್ಗವನ್ನೇ ರದ್ದುಗೊಳಿಸಲಾಗುವುದೆಂದು ಹೇಳುತ್ತದೆ; ಮತ್ತು ದೂರ ಪ್ರಯಾಣ ಮಾಡುವವರ ಅನುಕೂಲತೆಗಾಗಿ ಮಲಗುವ ಮಂಚಗಳನ್ನು ಪ್ರತ್ಯೇಕ ಡಬ್ಬಿಗಳಲ್ಲಿ ಏರ್ಪಡಿಸಲಾಗುವುದೆಂದೂ ಭರವಸೆ ಕೊಡುತ್ತದೆ. ಇಷ್ಟುಮಾತ್ರವಲ್ಲದೆ ಜುಲೈ ೧೫ರಿಂದ ಸಪ್ಟಂಬರ ೩೦ನೇ ತಾರೀಕಿನ ವರೆಗೆ ಒಂದು ಪ್ರಯಾಣದ ಒಂದೂವರೆ ಪಾಲಿನಷ್ಟು ದರದಲ್ಲಿ ಮರು ಪ್ರಯಾಣದ (ರಿಟರ್ನ್ ಟಿಕೆಟ್) ಟಿಕೇಟುಗಳನ್ನು ಕೊಡಲಾಗುವುದೆಂದೂ ತಿಳಿಸುತ್ತದೆ; ಈಗಾಗಲೇ ಜನಪ್ರಿಯವಾಗಿರುವ ದಸರಾ, ದೀಪಾವಳಿ ಮತ್ತು ಕ್ರಿಸ್‌ಮಸ್ ಕಾಲದ ಅಗ್ಗ ದರದ ಪ್ರಯಾಣ ಸೌಲಭ್ಯವನ್ನು ಅಲ್ಲಲ್ಲಿ ತಂಗಿ ಪ್ರಯಾಣವನ್ನು ಮುಂದರಿಸಲು ಅನುಕೂಲವಾಗುವಂತೆ ವಿಸ್ತರಿಸಲಾಗುವುದೆನ್ನುತ್ತದೆ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ **ಭುವನೇಂದ್ರ** ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:–

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:– (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.



(೫ನೇ ಪುಟದಿಂದ)

ಯ ಜನರೆಂದೂ ಪಾಕಿಸ್ತಾನದ ಕಡೆಗೆ ಮೋಹ ಇಟ್ಟುಕೊಂಡವರಲ್ಲ — ಆದರೆ ಪಾಕಿಸ್ತಾನಿ ಸೈನಿಕರು ಆಗಾಗ್ಗೆ ಈ ಜನರನ್ನು ಭಾರತಕ್ಕೆ ಕಂದಾಯ ಕೊಡಬೇಡಿರೆಂದು ಪ್ರೋತ್ಸಾಹಿಸುತ್ತಿದ್ದರು; ಅಲ್ಲದೆ ಚಿಕ್ಕ ಲೂಟಿಗಳನ್ನೂ ನಡೆಸುತ್ತಿದ್ದರು.

ಆಪಾದನೆ— ನಿರಾಕರಣೆ

ಛಡ ದ್ವೀಪದ ಸ್ಥಳ ಮಹತ್ವವು ಗಂಭೀರವಾಗಿ ಆಲೋಚಿಸಬೇಕಾದ ವಿಷಯವಲ್ಲ—ಇಲ್ಲಿ ಗಮನಿಸಬೇಕಾದದ್ದು ಭಾರತದ ನೆಲದೊಳಗೆ ಅಕ್ರಮ ಪ್ರವೇಶ ಮಾಡಲು ಪಾಕಿಸ್ತಾನಿ ಸೈನ್ಯ ಮುಂದಾದುದು ಸರಿಯೇ ಎಂಬ ವಿಷಯ. ಈ ಸೈನ್ಯವು ಸಿಂಧಿನ ಗಡಿಯಿಂದ ಛಡ ದ್ವೀಪಕ್ಕೆ ದಾರಿ ಮಾಡಿಕೊಂಡುದೂ ಗಂಭೀರ ಅಪರಾಧ. ಪಶ್ಚಿಮ ಪಾಕಿಸ್ತಾನದ ಸರಕಾರವು ಛಡ ದ್ವೀಪಕ್ಕೆ ಪಾಕಿಸ್ತಾನಿ ಸೇನೆ ಹೋಗಿಲ್ಲವೆಂದೂ ಪೋಲೀಸು ಪಡೆಯೊಂದು ಅಲ್ಲಿಗೆ ತೆರಳಿತ್ತೆಂದೂ ತಿಳಿಸಿದೆ; ಅಲ್ಲದೆ, ಛಡ ದ್ವೀಪವು ಸಿಂಧಿನ ಅಂಗವೆಂದೂ ಅದೆಂದೂ ಭಾರತದ ನೆಲವಾಗಿರಲಿಲ್ಲವೆಂದೂ ಅಲ್ಲಿ ಭಾರತವು ಅಧಿಕಾರ ನಡೆಸಿಯೇ ಇಲ್ಲವೆಂದೂ ಸಾರಿದೆ. ಆದುದರಿಂದ ಭಾರತೀಯ ಸೇನೆಯೇ ಪಾಕಿಸ್ತಾನವನ್ನು ಅಕ್ರಮವಾಗಿ ಪ್ರವೇಶಿಸಿತೆಂದು ಅದು ಆರೋಪಿಸಿದೆ. ಪಾಕಿಸ್ತಾನದ ಈ ಆರೋಪವು ಸಂಪೂರ್ಣವಾಗಿ ಸುಳ್ಳೆಂಬುದನ್ನು ಭಾರತ ಸರಕಾರವು ತನ್ನ ಪತ್ರಗಳಲ್ಲಿ ಈಗ ಸ್ಪಷ್ಟಪಡಿಸಿರುತ್ತದೆ. ಬ್ರಿಟಿಷರು ಭಾರತವನ್ನು ಆಳುತ್ತಿದ್ದ ೧೯೩೯ನೇ ಇಸವಿಯಷ್ಟು ಹಿಂದೆಯೇ ಆಗಿನ ಸಿಂಧ ಮತ್ತು ಕಚ್ಛಗಳ ಗಡಿಯನ್ನು ನಿರ್ಧರಿಸಲಾಗಿತ್ತೆಂದು ಭಾರತವು ನೆನಪಿಗೆ ತಂದುಕೊಟ್ಟಿದೆ. ಅಲ್ಲದೆ ಕಳೆದ ವರ್ಷದ ಮೇ ತಿಂಗಳಲ್ಲಿಯೂ ಈ ವರ್ಷದ ಜನವರಿ ತಿಂಗಳಲ್ಲಿಯೂ ಸಿಂಧಿಗೂ ಕಚ್ಛಕ್ಕೂ ನಡುವಿರುವ ಗಡಿಯನ್ನು ಮೀರಿ ಪಾಕಿಸ್ತಾನಿ ಪಡೆಗಳು ಬಂದಿದ್ದಾಗ ಅದನ್ನು ಪ್ರತಿಭಟಿಸಿ ಭಾರತವು ಬರೆದ ಪತ್ರಕ್ಕೆ ಉತ್ತರವನ್ನೇ ಪಾಕಿಸ್ತಾನದ ಸರಕಾರ ಕೊಟ್ಟಿಲ್ಲವೆಂದೂ ಭಾರತ ಸರಕಾರ ಹೇಳಿದೆ: ಆದುದರಿಂದ ಸ್ವಾತಂತ್ರ್ಯ ದೊರೆತು ಇಷ್ಟು ಸಮಯದ ಬಳಿಕ, ಅದರಲ್ಲಿಯೂ ಭಾರತವು ಛಡ ದ್ವೀಪ ಕ್ಷೇತ್ರವು ತನ್ನ ಅಧಿಕಾರಕ್ಕೊಳಪಟ್ಟುದೆಂಬ ಸಂಗತಿಯನ್ನು ಕಳೆದ ಮೇ ತಿಂಗಳಲ್ಲಿ ಸ್ಪಷ್ಟವಾಗಿ ಹೇಳಿದಾಗ ಅದನ್ನು ನಿರಾಕರಿಸದೆ, ಈಗ ಆ ಪ್ರದೇಶ ತನ್ನದೆಂದು ವಾದಿಸುವುದರಲ್ಲಿ ಅರ್ಥವಿಲ್ಲವೆಂದೂ ಭಾರತವು ಖಂಡ ತುಂಡವಾಗಿ ತಿಳಿಸಿದೆ.

ಸಂಶಯಾತೀತ ವಿಷಯ

ಲೋಕ ಸಭೆಯಲ್ಲಿ ಈ ಕುರಿತು ಹೇಳಿಕೆಯನ್ನು ಕೊಟ್ಟ ಪ್ರಧಾನ ಮಂತ್ರಿಗಳು ಪಾಕಿಸ್ತಾನದ ಅಕ್ರಮ ವರ್ತನೆಯನ್ನು ಭಾರತ ಸರಕಾರವು ಗಂಭೀರವಾಗಿ ಪರಿಗಣಿಸುವುದೆಂದು ಮುಚ್ಚುಮರೆಯಿಲ್ಲದೆ ಹೇಳಿದ್ದಾರೆ. ಅಲ್ಲದೆ ಛಡ ದ್ವೀಪದ ಮೇಲಿನ ಸ್ವಾಮಿತ್ವದ ಬಗ್ಗೆ ಯಾವುದೇ ಸಂಶಯಕ್ಕೆ ಆಸ್ಪದವಿಲ್ಲವೆಂದೂ ಸಾರಿದ್ದಾರೆ. ಪ್ರತಿಪಕ್ಷದ ಪರ್ರ್ಯ ಈ ಗಡಿ ವಿವಾದವನ್ನು ಬಗೆ ಹರಿಸಲು ಸಮಿತಿಯ ಮಟ್ಟದಲ್ಲಿ ಪರ್ಯಾಲೋಚನೆ ನಡೆಸಲಾಗುವುದೇ ಎಂದು ಕೇಳಿದಾಗ, ಆ ಪ್ರಶ್ನೆಯೇ ಇಲ್ಲ; ನಾವು ಇತರ ಕ್ರಮಗಳನ್ನು ಅನುಸರಿಸುತ್ತೇವೆ ಎಂದು ನೆಹರುಗಳು ಹೇಳಿ, ಭಾರತೀಯ ಸೇನೆಯನ್ನು ಛಡ ದ್ವೀಪಕ್ಕೆ ಕಳಿಸಿದರು. ಛಡ ದ್ವೀಪದ ಸ್ವಾಮಿತ್ವದ ಪ್ರಶ್ನೆ ಸಂದೇಹಾತೀತವಾಗಿರುವುದರಿಂದಲೇ ಹೀಗೆ ಮಾಡಬಹುದಾಯಿತು. ಪಾಕಿಸ್ತಾನದ ಸರಕಾರವು ಹಲವು ಬಾರಿ ತನ್ನ ಗಡಿಯನ್ನು ಮೀರಿ, ಭಾರತದ ಅಧಿಕಾರ ಕ್ಷೇತ್ರಕ್ಕೆ ಕೈ ಚಾಚಿದೆ. ಅಲ್ಲಿಯ ಸೈನ್ಯ ಪಡೆಯ ವಿಮಾನಗಳು ಹಲವು ಸಲ ಭಾರತದ ನೆಲದ ಮೇಲೆ ಅಪ್ಪಣೆಯಿಲ್ಲದೆ ಹಾರಾಡಿವೆ. ಕೇವಲ ಆಕಸ್ಮಿಕವೆಂದು ಪರಿಗಣಿಸದಷ್ಟು ಈ ಆಕ್ರಮಣದ ಆವೃತ್ತಿ ಹೆಚ್ಚುತ್ತಿದೆ— ಪಾಕಿಸ್ತಾನವು ಇಂಥ ಕುಹಕ ತಂತ್ರಗಳನ್ನು ಬಿಟ್ಟುಗೊಟ್ಟು, ಜನತೆಯ ಕ್ಷೇಮಾಭ್ಯುದಯಗಳ ಕಡೆಗೆ ಹೆಚ್ಚಿನ ಗಮನ ಕೊಡಬಾರದೆ?

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 488/1955.

ಲಕ್ಷ್ಮಿನಾರಾಯಣ ಬ್ಯಾರಿ— ವಾದಿ

ಮತ್ತು

ಅಕ್ಕು ಸೇರಿಗಾರ್ತಿ ಕೂಡಾ— ಪ್ರತಿವಾದಿರು

ಇವರೊಳಗೆ

ಉಡುಪಿ ತಾಲೂಕು ಕೊರಂಗ್ರಪಾಡಿ ಗ್ರಾಮದ ಮೂಡಬೆಟ್ಟಿಯಲ್ಲಿರುವ ರುಕ್ಕು ಸೇರಿಗಾರ್ತಿ ಮಗಳು 1ನೇ ಪ್ರತಿವಾದಿಳು ಅಕ್ಕು ಸೇರಿಗಾರ್ತಿ ವ, ಇವಳ ಮಗ 2ನೇ ಪ್ರತಿವಾದಿ ಪಟ್ಟು ಸೇರಿಗಾರರಿಗೆ ಸಹಾ—

ವಾದಿಗೆ ನೀವು ತಾ. 7—6—1950ರಲ್ಲಿ ರಿ. ನಿತಿ ಬರಕೊಟ್ಟ ಈಡು ದಸ್ತಾವೇಜಿನ ಅಸಲು ವ, ಬಡ್ಡಿ ವಗೈರೆ ರೂಪಾಯಿ 669-4-8 ನ್ನು ಬರಮಾಡಿಕೊಳ್ಳುವರೇ ವಾದಿಯು ಮಾಡಿದ ಮೇಲಿನ ದಾವೆಯು ತಾ. 12—3—1956 ಕ್ಕೆ ಇಟ್ಟಿರುತ್ತದೆ. ಸದ್ರಿ ದಾವೆಯಲ್ಲಿ ನಿಮ್ಮ ಉದಾಹರಣೆ ಇದ್ದರೆ ನೀವು ಸದ್ರಿ ದಿನ್ನ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ವ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

B. Vasudeva Rao,
Counsel for Plaintiff.

Udipi 25—2—1956.

ಪೆರಡಾಲ— ಎರಡು ಲಕ್ಷ ಕನ್ನಡಿಗರ ಭವಿಷ್ಯವನ್ನು ಹಾಳುಗೆಡಹುವ ಉತ್ತರ ಕಾಸರಗೋಡನ್ನು ಕೇರಳಕ್ಕೆ ಸೇರಿಸುವ ಯೋಜನೆಯು ಪ್ರಜಾ ಪ್ರಭುತ್ವ ತತ್ವಕ್ಕೆ ವಿರೋಧವಾದುದು. ಆದುದರಿಂದ ಬಲಾತ್ಕಾರದ ತೀರ್ಮಾನವನ್ನು ಕಾಸರಗೋಡು ಕನ್ನಡಿಗರ ಮೇಲೆ ಹೇರದೆ ಜನಮತ ಸಂಗ್ರಹಿಸಿ ಸರಕಾರವು ವರ್ತಿಸುವಂತೆ ನಾವು ಕೇಳಿಕೊಂಡಿರುವೆವು' ಎಂದು ನೀರ್ಚಾಲಿನಲ್ಲಿ ಸೇರಿದ ಸಭೆಯಲ್ಲಿ ಕಾಸರಗೋಡು ಸಂಯುಕ್ತ ಕರ್ನಾಟಕ ಪ್ರಾಂತೀಕರಣ ಸಮಿತಿಯ ಅಧ್ಯಕ್ಷ ಶ್ರೀ ಎಮ್. ಉಮೇಶ ರಾಯರು ವಿಶದ ಪಡಿಸುತ್ತಾ, ಈ ಗುರಿಯನ್ನು ಸಾಧಿಸಲು ಬೇಕಾಗುವ ಎಲ್ಲ ಕಾರ್ಯಕ್ರಮಗಳನ್ನು ಅಹಿಂಸಾ ಕ್ರಮದಲ್ಲಿ ತೀವ್ರಗೊಳಿಸಬೇಕಾದ ಅವಶ್ಯಕತೆಯನ್ನು ವಿವರಿಸಿದರು. ನಮ್ಮ ಕೇಳಿಕೆಗಳಿಗೆ ವಿರುದ್ಧವಾಗಿ ನಮ್ಮನ್ನು ಕೇರಳಕ್ಕೆ ಸೇರಿಸಿದರೆ ಸತ್ಯಾಗ್ರಹ ಹೂಡಲು ಸಿದ್ಧರಾಗಿರುವ ಸ್ವಯಂಸೇವಕರು ಈಗಾಗಲೇ ಪ್ರತಿಜ್ಞಾ ಪತ್ರಕ್ಕೆ ಸಹಿಹಾಕಿದ್ದಾರೆ ಎಂದು ಹೇಳಿದರು. ಶ್ರೀಗಳಾದ ಎಸ್. ಎನ್. ನವಕಾನ, ಎಮ್. ನಾರಾಯಣ ಭಟ್, ಎಚ್. ಎಮ್. ನಾರಾಯಣ ಭಟ್, ಮೊದಲಾದವರು ಮಾತನಾಡುತ್ತಾ ಕಾಸರಗೋಡು ಕನ್ನಡಿಗರ ಸತ್ವ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂದರು.

ಕಾಸರಗೋಡು ಪ್ರತ್ಯಕ್ಷ ಚಳವಳದಲ್ಲಿ ನಿಯಮೋಲ್ಲಂಘನ ಮಾಡಿ ತುರಂಗ ವಾಸಿಗಳಾದ 28 ಮಂದಿ ಸ್ವಯಂಸೇವಕರ ಜಾಥಾದಲ್ಲಿದ್ದ ಡಾ. ಕೆ. ಎಸ್. ಶೆಟ್ಟಿ, ಶ್ರೀಗಳಾದ ಬಿ. ಕೃಷ್ಣಪ್ಪ ಸುವರ್ಣ, ಕೆ. ದೇವರಾಯ, ಕೆ. ಅಣ್ಣು, ಕೆ. ಬಾಬು ಮತ್ತು ಕೆ. ನಾರಾಯಣ ರಾಯರನ್ನು ಅಭಿನಂದಿಸಲಾಯಿತು. ಸಭಾಧ್ಯಕ್ಷತೆ ಶ್ರೀ ಶಂಕರ ನಾರಾಯಣ ಭಟ್ಟರು ವಹಿಸಿದ್ದರು. ಶ್ರೀ ಪಿ. ವೆಂಕಟರಾಜ ಪುಣಿಂಚತ್ತಾಯರು ಪುಷ್ಪಹಾರಗಳನ್ನರ್ಪಿಸಿದರು.

ಬೇಳದಲ್ಲಿ ಸಭೆಯು— ಶ್ರೀ ತಿಮಣ್ಣಾಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕೆಪ್ಟನ್ ಕೆ. ಎ. ಶೆಟ್ಟಿ, ಡಾ. ಕೆ. ಸಿ. ಆಳ್ವ, ಶ್ರೀಗಳಾದ ಎಮ್. ಉಮೇಶರಾವ್, ಎಮ್. ನಾರಾಯಣ ಭಟ್, ಎಚ್. ಗೋವಿಂದಯ್ಯ, ಕೆ. ಮಹಲಿಂಗ ಭಟ್ ಮೊದಲಾದವರು ಭಾಷಣವೀಯುತ್ತಾ, ಕಾಸರಗೋಡು ದಕ್ಷಿಣ ಕನ್ನಡದಿಂದ ಬೇರ್ಪಡಿಸಲ್ಪಡಬಾರದೆಂದೂ ಈ ಗುರಿಯು ಸಾಧನೆಯಾಗುವ ತನಕ ಇಲ್ಲಿಯ ಕನ್ನಡಿಗರು ವಿಶ್ರಮಿಸಲಾರರೆಂದೂ ನುಡಿದರು.

ಪೆರ್ಲದಲ್ಲಿ ಮಹಾ ಸಭೆ— ತಾ. 22ರಲ್ಲಿ ಸ್ಥಳೀಯ ಗಾಂಧೀ ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಶ್ರೀ ಪಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಶಿವರಾಮ ಕಾರಂತರು ಮಾತನಾಡುತ್ತಾ, ಬರೇ ಬಾಯಿಯ ಸಹಾನುಭೂತಿಯಿಂದ ಯಾವ ಕೆಲಸವೂ ಸಾಧ್ಯವಾಗಲಾರದೆಂದೂ, ಅಸಹಕಾರ ಚಳವಳವನ್ನು ಶಾಂತರೀತಿಯಲ್ಲಿ ಮುಂದೊತ್ತಿದರೆ ಮಾತ್ರ ನಮ್ಮ ಕೇಳಿಕೆಗಳಿಗೆ ಬೆಲೆ ಬರುವುದೆಂದೂ ಹೇಳಿದರು. ಶ್ರೀಗಳಾದ ಎಮ್. ಉಮೇಶ ರಾವ್, ಕೆ. ಸುಂದರ ಶೆಟ್ಟಿ, ಕೂಡೂರು ನಾರಾಯಣ ರೈ, ಕಳ್ಳಿಗೆ ಮಹಾಬಲ ಭಂಡಾರಿ, ಕೆ. ಕೇಶವ ಭಟ್, ಬೇಕಲ್ ಸೀತಾರಾಮ ರಾವ್, ಕೆ. ಬಾಲಕೃಷ್ಣ ರಾವ್, ಪೈ ಮಹಲಿಂಗ ಭಟ್, ಎಸ್. ಕೃಷ್ಣ ಭಟ್, ಬಿ.ಬಿ. ಶೆಟ್ಟಿ, ಡಾ. ರಾಮಣ್ಣ ಶೆಟ್ಟಿ, ಡಾ. ಸಂಜೀವನಾಥ್ ಮೊದಲಾದವರು ಮಾತನಾಡಿದರು. ಜನಮತವನ್ನು ಸಂಗ್ರಹಿಸಿಯೇ ಕಾಸರಗೋಡಿನ ಭವಿಷ್ಯ ತೀರ್ಮಾನಿಸಲ್ಪಡಬೇಕೆಂಬ, ಪ್ರತ್ಯಕ್ಷ ಚಳವಳದಲ್ಲಿ ಕಾರಾಗ್ರಹವಾಸವನ್ನು ಅನುಭವಿಸಿದವರನ್ನು ಅಭಿನಂದಿಸುವ, ಜಿಲ್ಲೆಯ ಜನ ಪ್ರತಿನಿಧಿಗಳು ರಾಜಿನಾಮೆ ಕೊಟ್ಟು ಪ್ರತ್ಯಕ್ಷ ಚಳವಳದಲ್ಲಿ ಭಾಗವಹಿಸುವಂತೆ ಕೇಳಿಕೊಳ್ಳುವ— ಇತ್ಯಾದಿ ನಿರ್ಣಯಗಳಾದುವು.

ಮೂಡಬಿದ್ರೆ- ವೇಣೂರು- ಟಪ್ಪಾಲು ಸೌಕರ್ಯ— ವೇಣೂರು ಮತ್ತು ಪರಿಸರದ ಕೇಂದ್ರದ ಸಾರ್ವಜನಿಕರ ಸೌಕರ್ಯಕ್ಕಾಗಿ ಬೇಗನೆ ಟಪ್ಪಾಲು ಸಿಕ್ಕಲು ಮತ್ತು ಬೇಗನೆ ಉತ್ತರ ಬರೆದು ಟಪ್ಪಾಲಿಗೆ ಹಾಕಲು ಅನುಕೂಲವಾಗುವಂತೆ ಇದೇ ಮಾರ್ಚ್ ತಿಂಗಳ ತಾ. 1ರಿಂದ ಮೂಡಬಿದ್ರೆಯಿಂದ ವೇಣೂರಿಗೆ ಸ್ಪೈಲ್ ಮೋಟಾರ್ ಸರ್ವಿಸ್ ಆರಂಭಿಸಲಾಗುವುದೆಂದು ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟರು ತಿಳಿಸುತ್ತಾರೆ.

ಕಟಪಾಡಿ- ಇಲ್ಲಿಯ ಎಸ್. ವಿ. ಎಸ್. ಹೈಸ್ಕೂಲಿನ ವರ್ಧಂತಿ ಸಮಾರಂಭವು ತಾ. 24ರಲ್ಲು ಸಂಜೆ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾನಂತರ ಶಾಲಾ ಹೆಡ್ಮಾಸ್ಟರ್ ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಮಾತುಗಳನ್ನಾಡಿ ಶಾಲೆಯ ಅಭಿವೃದ್ಧಿಪರ ವರದಿಯನ್ನೋದಿದರು. ಶ್ರೀ ಪಿ. ದಯಾನಂದ ನಾಯ್ಕರು ಶುಭಸಂದೇಶಗಳನ್ನು ಓದಿದರು. ಶ್ರೀ ಬಿ. ಶಂಕರಾಚಾರ್ಯರು ಸ್ವಸ್ತಿ ವಾಚನ ಮಾಡಿದರು. ಅಧ್ಯಕ್ಷರು ಪಾರಿತೋಷ ವಿತರಣೆಮಾಡಿ ಈ ಹೈಸ್ಕೂಲನ್ನೂ 10 ಪ್ರಾಥಮಿಕ ಶಾಲೆಗಳನ್ನೂ 2 ಹಾಯರ್ ಎಲಿಮೆಂಟರಿ ಶಾಲೆಗಳನ್ನೂ ನಡೆಸುತ್ತಿರುವ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಚಾಲಕರನ್ನು ಅಭಿನಂದಿಸಿದರು. ಮುಂಬರುವ ಸುಧಾರಿತ ಸೆಕೆಂಡರಿ ವಿದ್ಯಾಭ್ಯಾಸದಲ್ಲಿಯ ಗುಣದೋಷಗಳನ್ನು ವಿವರಿಸಿ ಶಿಕ್ಷಣವು ಸ್ವತಂತ್ರ ಜೀವನ ನಡೆಸಲು ಸಹಕಾರಿಯಾಗುವಂತಹದಾಗಬೇಕೆಂದು ಹೇಳಿದರು. ಶ್ರೀ ಕೆ. ಆರ್. ಶೆಣೈಯವರು ಧನ್ಯವಾದಗಳನ್ನಿತ್ತರು. ರಾತ್ರಿ ಬಾಲ ಬಾಲಿಕೆಯರಿಂದ ಮನರಂಜನ ನಾಟಕ ಪ್ರದರ್ಶನಗಳಾದುವು.

ಪೆಡೂರ್ರು— ಸ್ಥಳೀಯ ಶ್ರೀ ಅನಂತ ಪದ್ಮನಾಭ ಸ್ವಾಮಿ ದೇವಸ್ಥಾನದಲ್ಲಿ ಮಾಮೂಲು ಮೇರೆಗೆ ನಡೆಯುವ ಮಹಾ ರಥೋತ್ಸವ ಕಾರ್ಯಕ್ರಮಗಳು ಇದೇ ತಾ. 11ರಲ್ಲಿ ಆರಂಭವಾಗಿ ತಾ. 18ರಲ್ಲಿ ಬ್ರಹ್ಮಕುಂಭಾಭಿಷೇಕದಿಂದ ಕೊನೆಗೊಳ್ಳುವುವು. ಶ್ರೀ ಮನ್ಮಹಾ ರಥೋತ್ಸವವು ತಾ. 15ರಲ್ಲಿ ಜರಗುವುದೆಂದು ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಕೋಲ್ಯಾರ್ ಭೋಜರಾಜ ಸೆಟ್ಟಿರು ತಿಳಿಸುತ್ತಾರೆ.

ಕಳೆದ ತಾ. 24ರಂದು ಸ್ಥಳೀಯ ಬಜಾಲು ನಕ್ಷತ್ರ ಸೆಟ್ಟಿಯವರು ಸ್ಥಳೀಯ ಶ್ರೀ ಅನಂತಪದ್ಮನಾಭ ಕೃಪಾಪೋಷಿತ ದಶಾವತಾರ ಮೇಳದವರಿಂದ, ಶ್ರೀ ದೇವಸ್ಥಾನದ ಮುಂಭಾಗದಲ್ಲಿ, "ವೀರ ಬಭ್ರುವಾಹನ ಮತ್ತು ಕನಕಾಂಗಿ ಕಲ್ಯಾಣ" ಎಂಬ ಪ್ರಸಂಗವನ್ನು ಆಡಿಸಿದರು. ಕಿಕ್ಕಿರಿದ ಜನಸಂದಣಿಯೊಂದಿಗೆ ಕಾರ್ಯಕ್ರಮ ಜರಗಿತು.

ಆಲೂರು— ಸ್ಥಳೀಯ ಸರಸ್ವತಿ ಶಾಲೆಯಲ್ಲಿಯ ಶಾಲಾ ವಯಸ್ಕರ ಸಾಕ್ಷರತಾ ಮಂದಿರದಲ್ಲಿ ತಾ. 24ರಲ್ಲಿ ಶ್ರೀ ಎ. ಅನಂತ ನಾಯ್ಕರು ರಾಮಾಯಣ ವಾಚನ ಮಾಡಿದರು. ಅಧ್ಯಕ್ಷತೆಯನ್ನು ಪಂಚಾಯತು ಬೋರ್ಡು ಪ್ರೆಸಿಡೆಂಟ್ ಶ್ರೀ ಶ್ರೀನಿವಾಸ ಜೋಯಿಸರು ವಹಿಸಿದ್ದರು.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನನ್ನ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು ಪೌಂಡು ಒಂದಕ್ಕೆ ರೂ. 5—0—0.

ಮಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಖರೀದಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ. ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಪೇರ್ಡ್‌ಲಾಂಗ್, ಮಿಲ್ ಬಟ್ಟೆಗಳೂ ಶಿಲ್ಕ್, ಉಳನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, **UDIPI**, S. KANARA.

ಮಂಗಳೂರು

ಸೈಂಟ್ ಎಲೋಸಿಯಸ್ ಕಾಲೇಜ್ – ಕರ್ನಾಟಕಸಂಘದ ವಾರ್ಷಿಕೋತ್ಸವ ತಾ. ೨೦ರಲ್ಲಿ ಶ್ರೀ ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಾಧ್ಯಕ್ಷ ಶ್ರೀ ಟಿ. ಕೆ. ಭಟ್ಟರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಆರ್. ವೆಂಕಟೇಶ ಭಟ್ಟರು ವರದಿಯನ್ನೋದಿದರು. ಸರಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಶ್ರೀ ನಂಜುಂಡ ಸ್ವಾಮಿ ಮತ್ತು ಶ್ರೀ ಎಮ್. ರಾಯರು, ಅವರು ವಿದ್ಯಾರ್ಥಿಗಳ ಕರ್ತವ್ಯ ಕುರಿತು ಭಾಷಣವಿತ್ತರು. ಅಧ್ಯಕ್ಷರು ... ಮತ್ತು ಸಾಹಿತ್ಯದ ಕುರಿತು ಉಪನ್ಯಾಸವಿತ್ತರು. ಸಹಕಾರ್ಯದರ್ಶಿ ಶ್ರೀ ಉಮಾಕರ ಶೆಣೈಯವರು ಧನ್ಯವಾದಗಳನ್ನಿತ್ತರು.

ಜಿಲ್ಲಾ ರೆವೆನ್ಯೂ ನೌಕರರ ಪಂದ್ಯಾಟಗಳು— ದ. ಕ. ಜಿಲ್ಲಾ ರೆವೆನ್ಯೂ ಇಲಾಖೆಯ ನೌಕರರ ಪಂದ್ಯಾಟವು ತಾ. 19ರಂದು ಕೇಂದ್ರ ಮೈದಾನದಲ್ಲಿ ಜರಗಿತು. ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ನೌಕರರು ಪಂದ್ಯಾಟದಲ್ಲಿ ಭಾಗವಹಿಸಿದ್ದು, ಅತ್ಯುತ್ತಮ ಪ್ರದರ್ಶನಕ್ಕಾಗಿ ಜಿಲ್ಲಾ ರೆವೆನ್ಯೂ ಗುರಾಣಿಯನ್ನು ಕಾಸರಗೋಡು ತಾಲೂಕು ವಿಭಾಗಕ್ಕೆ ಕೊಡಲಾಯಿತು. ವೈಯಕ್ತಿಕ ಚಾಂಪಿಯನ್ ಶಿಪ್ ಕಪ್ ಕುಂದಾಪುರ ತಾಲೂಕು ಕಚೇರಿಯ ಶ್ರೀ ಕೆ. ನಾರಾಯಣ ರಾಯರಿಗೆ ದೊರೆಯಿತು. ಪಂದ್ಯಾಟಗಳ ಪೈಕಿ ಸಂದರ್ಭಕ್ಕಾಗಿ, ಏರ್ಪಡಿಸಲಾದ ... ಪಂದ್ಯದಲ್ಲಿ ಮದ್ರಾಸ್ ರೆವೆನ್ಯೂ ಬೋರ್ಡಿನ ಪ್ರಥಮ ಸದಸ್ಯ ಶ್ರೀ ವಿ. ಎನ್. ...ದ್ದರು ಅವರ ಸಂಗಾತಿ ಶ್ರೀಮತಿ ಉಷಾ ...ಸ್ತ್ರಿಯವರೊಡನೆ ದ್ವಿತೀಯ ಬಹುಮಾನ ಪಡೆದರು. ಪಂದ್ಯಾಟ ಆರಂಭದಲ್ಲಿ ಆಟಗಾರರ ಪಥಸಂಚಲನ ನಡೆಸಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ವಂದನೆ ಸ್ವೀಕರಿಸಿದರು.

ಸಣ್ಣಮಟ್ಟದ ಕೈಗಾರಿಕೋದ್ಯಮಗಳು – ಸ್ಥಳೀಯ ರೋಟರಿ ಕ್ಲಬ್ಬಿನ ಸಭೆಯು ತಾ. 23ರಲ್ಲಿ ಶ್ರೀ ಪಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ರಾಜ್ಯ ಸರಕಾರದ ನಿವೃತ್ತ ವಿದ್ಯುತ್ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಕೆ. ವಾಸುದೇವ ಕಾಮತರು 'ಸಣ್ಣಮಟ್ಟದ ಕೈಗಾರಿಕೋದ್ಯಮಗಳು' ಎಂಬ ವಿಷಯದಲ್ಲಿ ಉಪನ್ಯಾಸ ನೀಡಿಯು ... ನಮ್ಮ ದೇಶದಲ್ಲಿ ವಿಶಿಷ್ಟವಾಗಿ, ಉತ್ತರ ಹಿಂದೂಸ್ಥಾನದಲ್ಲಿ ಬೃಹತ್ ಕೈಗಾರಿಕೆಗಳ ವಿಸ್ತರಣವು ತ್ವರಿತ ಗತಿಯಿಂದ ಆಗುತ್ತಿರುವ ಈ ಸನ್ನಿವೇಶದಲ್ಲಿ, ಉದ್ಯಮ ಕ್ಷೇತ್ರದಲ್ಲಿ ಹಿಂದುಳಿದಿರುವ ದಕ್ಷಿಣ ಹಿಂದೂಸ್ಥಾನವು ಸಣ್ಣ ಮಟ್ಟದ ಕೈಗಾರಿಕೋದ್ಯಮಗಳ ವಿಸ್ತರಣೆಯಿಂದ ಬೃಹತ್ ಕೈಗಾರಿಕೆಗಳೊಂದಿಗೆ ಹೋರಾಟವನ್ನು ನಡೆಸಬೇಕಾಗಿದೆ. ಉತ್ತಮ ಆಡಳಿತೆಯೊಡನೆ ದೃಢಸಂಕಲ್ಪದಿಂದ ಸಣ್ಣಮಟ್ಟದ ಕೈಗಾರಿಕೋದ್ಯಮಗಳನ್ನು ಯಶಸ್ವಿಯಾಗಿ ನಡೆಸಲಿಕ್ಕೆ ಸಾಧ್ಯವಿದೆಯಲ್ಲದೆ ಅದಕ್ಕೆ ಉತ್ತಮ ಭವಿಷ್ಯವೂ ಇದೆ ಎಂದರು.

ಸಭಾಧ್ಯಕ್ಷರು ತನ್ನ ಮುಕ್ತಾಯ ಮಾತುಗಳಲ್ಲಿ, ನಮ್ಮ ಜಿಲ್ಲೆಯ ಗುಡಿಕೈಗಾರಿಕೆಗಳ ಅಭಿವೃದ್ಧಿಗೆ ಕೇಂದ್ರ ಸರಕಾರವು ಕೊಟ್ಟ ರೂಪಾಯಿ 75,000 ಸಹಾಯ ಧನವನ್ನು ಜನರ ಅಸಡ್ಡೆಯಿಂದಾಗಿ ಹೇಗೆ ಉಪಯೋಗ ಮಾಡಿಕೊಳ್ಳಲಾಗಲಿಲ್ಲ ಎಂಬುದನ್ನು ವಿವರಿಸಿದರು. ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದಗಳನ್ನಿತ್ತರು.

ವಾರ್ಷಿಕೋತ್ಸವ— ಮಂಗಳೂರು ಸರಕಾರಿ ತರಬೇತಿ ಕಾಲೇಜಿನ ವಾರ್ಷಿಕೋತ್ಸವವು ತಾ. 23ರಲ್ಲಿ ಸಂಜೆ ಮಂಗಳೂರು ಸರಕಾರಿ ಕಲಾಶಾಲೆಯ ಪ್ರಿನ್ಸಿಪಾಲ್ ಶ್ರೀ ಟಿ. ಕೆ. ಲಕ್ಷ್ಮಣನ್ನರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವಿ. ರಮಣನವರು ಸಂದೇಶಗಳನ್ನೋದಿದರು. ಶ್ರೀಗಳಾದ ಎಚ್. ಗಣೇಶ್ ಮತ್ತು ಕೆ. ನಾಗೇಶ ರಾವ್ ಅವರು ಕಾಲೇಜಿನ ಮತ್ತು ಶಾಲೆಯ ಸ್ವಸ್ತಿವಾಚನ ಮಾಡಿದರು. ಶ್ರೀಗಳಾದ ಕೆ. ರಾಜಗೋಪಾಲಾಚಾರ್ ಮತ್ತು ಎಮ್. ಶಂಕರ ನಾರಾಯಣ ಭಟ್ಟರು ಉತ್ತರವಿತ್ತರು. ಶ್ರೀಮತಿ ಇ. ಎಸ್. ಲಕ್ಷ್ಮಣನ್ನರು ಪಂದ್ಯಾಟಗಳಲ್ಲಿ ವಿಜಯಿಗಳಾದ ವಿದ್ಯಾರ್ಥಿ ಅಧ್ಯಾಪಕರಿಗೆ ಪಾರಿತೋಷಕವಿತರಣೆ ಮಾಡಿದರು. ಅಧ್ಯಕ್ಷ ಭಾಷಣಾ ನಂತರ ಶ್ರೀ ಎಚ್. ಎಮ್. ಕೃಷ್ಣನ್ನರು ಧನ್ಯವಾದಗಳನ್ನರ್ಪಿಸಿದರು. ನಂತರ ಮನರಂಜನ ಕಾರ್ಯಕ್ರಮಗಳಾದುವು.

ರಾಷ್ಟ್ರೀಕರಣ ಮತ್ತು ಆಡಳಿತೆ— ಎಂಬೀ ವಿಷಯದಲ್ಲಿ ತಾ. 26ರಲ್ಲಿ ಶ್ರೀ ಪಿ. ಎಸ್. ಕುಡ್ವರು, ಮೆನೇಜ್‌ಮೆಂಟ್ ಎಸೋಸಿಯೇಶನಿನಲ್ಲಿ ಮಾತನಾಡುತ್ತಾ 'ವ್ಯಾಪಾರಿಕ ತಜ್ಞ, ಕರ್ತವ್ಯ ದಕ್ಷ ಹಾಗೂ ಸಂತುಷ್ಟರಾದ ಆಡಳಿತೆಯ ಅಧಿಕಾರಿ ವರ್ಗದಿಂದ ಕೂಡಿದ್ದರೆ ಮಾತ್ರ, ರಾಷ್ಟ್ರೀಕರಣವು ಯಶಸ್ವಿಯಾಗಬಹುದು. ಅಷ್ಟುಮಾತ್ರವಲ್ಲ. ಕಾರ್ಯವಿಳಂಬ ನೀತಿಯನ್ನು ಆದಷ್ಟು ಕಡಿಮೆ ಮಟ್ಟಕ್ಕೆ ತರಲು ಮತ್ತು ಆಡಳಿತೆಯಲ್ಲಿ ಬರಬಹುದಾದ ಕೊರತೆಗಳನ್ನು ನಿವಾರಿಸಿ, ಕಾರ್ಯಸಾಮರ್ಥ್ಯವನ್ನು ಹೆಚ್ಚಿಸುವಂತೆ ಮಾಡಲು ಈ ಅಧಿಕಾರಿಗಳಿಗೆ ಕೆಲವು ಅಧಿಕಾರಗಳನ್ನು ಬಿಟ್ಟುಕೊಡಬೇಕು. ರಾಷ್ಟ್ರೀಕೃತ ಉದ್ಯಮ ಸಂಸ್ಥೆಗಳ ಆಡಳಿತೆ ಇತ್ಯಾದಿಗಳಲ್ಲಿ ರಾಜಕೀಯ ಪರ್ವಸ್ವನ್ನು ಬೀಳುವ ತನಕ ರಾಷ್ಟ್ರೀಕರಣವು ಯಶಸ್ವಿಯಾಗಲಾರದು" ಎಂದು ಹೇಳಿದರು. ಇಂದು ಜೀವವಿಮಾ ಸಂಸ್ಥೆಗಳ ರಾಷ್ಟ್ರೀಕರಣವಾಗಿದ್ದು ಇದು ಎಷ್ಟು ಯಶಸ್ವಿಯಾಗುವುದು ಎಂಬುದನ್ನು ನಿರೀಕ್ಷಿಸಬೇಕಾಗಿದೆ ಎಂದರು.

ಶೈಕ್ಷಣಿಕ ಪ್ರದರ್ಶನ ಮಂಗಳೂರು ಸರಕಾರಿ ಟ್ರೈನಿಂಗ್ ಕಾಲೇಜಿನಲ್ಲಿ ತಾ. 25ರಿಂದ ಎರಡು ದಿವಸಗಳ ತನಕ ಶೈಕ್ಷಣಿಕ ಪ್ರದರ್ಶನ ಜರಗಿತು. ಬಿ. ಇ. ಎಮ್. ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಜೋರ್ಜ್ ಮಿಮನರು ಪ್ರದರ್ಶನವನ್ನು ಉದ್ಘಾಟಿಸಿದರು. ಚಿಕ್ಕ ವಿದ್ಯಾರ್ಥಿಗಳಿಗೆ, ಸಂಖ್ಯಾಜ್ಞಾನವನ್ನು ಕೊಡುವ ರೇಖಾ ಚಿತ್ರಗಳು, ಸುಲಭವಾಗಿ ಅಕ್ಷರಾಭ್ಯಾಸ ಮಾಡಲು ಅನುಕೂಲವಾಗುವ ತಖ್ತೆಗಳು, ಶಬ್ದ ಪೂರಣಗಳು, ಭೌಗೋಳಿಕ, ಸಾಮಾಜಿಕ, ವೈಜ್ಞಾನಿಕ, ಗಣಿತ ಶಾಸ್ತ್ರ ಮೊದಲಾದ ಶಿಕ್ಷಣಕ್ಕೆ ಸಂಬಂಧಿಸಿದ ವಸ್ತುಗಳು ಪ್ರದರ್ಶನದಲ್ಲಿದ್ದುವು.

ಬ್ರಿಟಿಷ್ ನೌಕಾ ಪಡೆಯ— ಎಚ್. ಎಮ್. ಎಸ್. ಲೋಕ್ ಆಲ್ವಿ ಎಂಬ ಹಡಗಿನ ನಾವಿಕರು ತಾ. 26ರಲ್ಲು ಸಂಜೆ ಮಂಗಳೂರಿಗೆ ಸೌಹಾರ್ದ ಸಂದರ್ಶನವಿತ್ತರು. ಅವರ ಗೌರವಾರ್ಥವಾಗಿ ಪೋರ್ಟ್ ಟ್ರಸ್ಟ್ ಕಛೇರಿಯ ಸಲಯದಲ್ಲಿ ಸತ್ಕಾರ ಕೂಟ ಜರಗಿತು.

ದ. ಕ. ಸಂಸ್ಕೃತ ಶಾಲೆಗಳ- ದ್ವಿತೀಯ ಪರಿಷತ್ತು ಜರಗಿ ಈ ಕೆಳಗಿನ ನಿರ್ಣಯಗಳು ಮಂಜೂರಾದುವು. ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗ ಕರ್ನಾಟಕ ಪ್ರಾಂತಕ್ಕೆ ಸೇರಬೇಕು; ದಕ್ಷಿಣ ಪ್ರದೇಶ ರಚನೆ ಅನಪೇಕ್ಷಿತವೂ ಅಯುಕ್ತವೂ ಆಗಿದೆ, ಸಂಸ್ಕೃತ ಶಾಲೆಗಳ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಕೊಡಬೇಕು, ಸಾಮಾನ್ಯ ಹೈಸ್ಕೂಲುಗಳಿಗೆ ಕೊಡುವ ಎಲ್ಲಾ ಶಿಕ್ಷಣ ಸವಲತ್ತುಗಳನ್ನು ಸಂಸ್ಕೃತ ಶಾಲೆಗಳಿಗೂ ಕೊಡಬೇಕು, ಸಂಸ್ಕೃತ ಶಾಲಾಧ್ಯಾಪಕರಿಗೆ ಇತರ ಶಾಲಾಧ್ಯಾಪಕರಂತೆ ಸಂಬಳ, ಗ್ರಾಂಟು ಇತ್ಯಾದಿ ಸಿಗಬೇಕು.

ವಿಮಾನ ಅಪಘಾತಗಳ ವರದಿಗಳು ಪದೇ ಪದೇ ಬರುತ್ತಿದ್ದರೂ ಸಾಹಸಪ್ರಿಯ ಮನುಷ್ಯನ ಎದೆಗಾರಿಕೆ ಕಡಿಮೆಯಾಗಿಲ್ಲ. ತಾಸಿಗೆ ೫೦೦ ಮೈಲು ವೇಗದಲ್ಲಿ ಓಡುವ "ಕೊಮೆಟ್ III" ಎಂಬ ಜೆಟ್ ವಿಮಾನವು ಜಗತ್ತಿನ ಸುತ್ತ ತನ್ನ ಯಶಸ್ವಿ ಹಾರಾಟವನ್ನು ಮುಗಿಸಿ ಲಂಡನಿನಲ್ಲಿ ಬಂದಿಳಿದಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಪ್ರಕಟಣೆ

ತೋನ್ಸೆ ಪಂಚಾಯತ್ ಬೋರ್ಡ್.

ಈ ಬೋರ್ಡ್ ವ್ಯವಹಾರ ಕ್ಷೇತ್ರಕ್ಕೊಳಪಟ್ಟ ಕೆಮ್ಮಣ್ಣು ಹಫ್ತೆವಾರು ಸಂತೆ, ದಿನಚರಿಯ ಮೀನು ಮಾರ್ಕೆಟು ಮತ್ತು ಪಡುಕುದ್ರು ಬಾರಿಯಲ್ಲಿ ಕೂಡಾ 1956ನೇ ಇಸವಿ ಎಪ್ರಿಲ್ ತಾರೀಕು 1ರಿಂದ 1957ನೇ ಇಸವಿ ಮಾರ್ಚಿ ತಾ. 31ರ ತನಕ ಮರಿ ವಸೂಲು ಮಾಡುವ ಸ್ವಾತಂತ್ರ್ಯವನ್ನು ಇದೇ ಮಾರ್ಚ್ ತಿಂಗಳ ತಾ. 15ನೇ ಗುರುವಾರ ಸಾಯಂಕಾಲ ಘಂಟೆ 3—30ಕ್ಕೆ ಬೋರ್ಡ್ ಆಫೀಸಿನಲ್ಲಿ ಪ್ರತ್ಯ ಪ್ರತ್ಯೇಕ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಮಿನ ಶರತ್ತು ವಗೈರೆ ಇತರ ವಿವರಗಳನ್ನು ಬೋರ್ಡ್ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ಕೇಳಿ ತಿಳಿದು ಕೊಳ್ಳಬಹುದು.

ವಿ. ಸೂ. ತಾ. 1—4—1956ರಿಂದ ಪೈಸಂದಿರ ಮೀನು ಮಾರ್ಕೆಟು, ಮತ್ತು ವಾರದ ಸಂತೆ ಮಾರ್ಕೆಟು, ಇಗರ್ಜಿಯ ಎದುರಿನಲ್ಲಿರುವ, ಬೋರ್ಡಿನ ವಿಸ್ತಾರವಾದ ಸ್ವಂತ ಸ್ಥಳ ಸರ್ವೆ ನಂಬ್ರ 122/1A ವಿಸ್ತೀರ್ಣ 46 ಸೆಂಟ್ಸಿನಲ್ಲಿ ನಡೆಯಲ್ಪಡುವುದು.

ಟಿ. ಗೋವಿಂದ ಉಡುಪ,
ಅಧ್ಯಕ್ಷ,
ತೋನ್ಸೆ ಪಂಚಾಯತ ಬೋರ್ಡ್.

ಕೆಮ್ಮಣ್ಣು, 1-3-1956

ಭಾರತದ ಗುರುಕುಲ

(ಯಕ್ಷಗಾನ)

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಬೆಲೆ: ೦ ೮ ೦





ಕುಮಾರಿ ಬಿಲ್ಲೆಗಳು (Govt. Regd.)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ. ಪಿ. ಪಿ. ಪ್ರತ್ಯೇಕ)

Mrs. P. DEVEE, F. Ds. (N. J.)
CALCUTTA—40

ಸ್ಟಾಕಿಸ್ಟರು: ಕಹಾ ಕಂಪೆನಿ, ಮಂಗಳೂರು

ದಕ್ಷಿಣ ಧ್ರುವ ಪ್ರದೇಶದ ದಿಗ್ವಿಜಯ

(೩ನೇ ಪುಟದಿಂದ)

ಬಗ್ಗೆ ಮಾಡಿಕೊಡಲು ಶಕ್ತರಾಗಬಲ್ಲ ಪಂಡಿತರನ್ನು ಈ ಪ್ರಥಮ ತಂಡವು ಕೆಲವು ತಿಂಗಳಲ್ಲಿ ಬರಮಾಡಿಕೊಳ್ಳುತ್ತದೆ.

ಹೊರ ತೋರಿಕೆಗೆ ಸಾಹಸವೆಂದು ಕಂಡರೂ ಒಳಗಡೆ ಈ ಎಲ್ಲ ಪ್ರಯತ್ನಗಳ ಹಿಂದೆ ದಕ್ಷಿಣ ಧ್ರುವ ಪ್ರದೇಶದಲ್ಲಿ ಸ್ವಾಮ್ಯವನ್ನು ಸ್ಥಾಪಿಸುವುದೇ ಪ್ರತಿಯೊಂದು ರಾಷ್ಟ್ರದ ಉದ್ದೇಶವೆಂದು ಮನಗಂಡ ಭಾರತವು ಸಂಯುಕ್ತ ರಾಷ್ಟ್ರ ಸಂಘದ ಮುಂದಿನ ಸಭೆಯ ವಿಷಯ ಪಟ್ಟಿಯಲ್ಲಿ ದಕ್ಷಿಣ ಧ್ರುವದ ಕುರಿತು ಚರ್ಚೆ ನಡೆಯಬೇಕೆಂಬ ಸೂಚನೆಗೆ ಅವಕಾಶ ನೀಡಬೇಕೆಂದು ಹೇಳಿದೆ. ಭಾರತದ ಅಭಿಪ್ರಾಯದಲ್ಲಿ ದಕ್ಷಿಣ ಧ್ರುವ ಪ್ರದೇಶವನ್ನು ಸಂಯುಕ್ತ ರಾಷ್ಟ್ರ ಸಂಘದ ವಿಶ್ವಸ್ತ ಮಂಡಳದ ಅಧೀನ ಪಡಿಸುವುದೇ ಎಲ್ಲ ತಕರಾರುಗಳಿಗೂ ಸಮಾಧಾನಕರವಾದ ಪರಿಹಾರ. ಸುದ್ದಿ ಸಂಸ್ಥೆಗಳ ವರದಿಯನ್ನು ನೋಡಿದರೆ ಈಗಾಗಲೇ ದಕ್ಷಿಣ ಧ್ರುವ ಪ್ರದೇಶದಲ್ಲಿ ಸಾರ್ವಭೌಮಾಧಿಕಾರ ರಕ್ಷಣೆಯ ಬಗ್ಗೆ ಜಗಳ ತೊಡಗಿರುವಂತೆ ಕಾಣುತ್ತದೆ. ರಶ್ಯದ ತಂಡವು ಆಸ್ಟ್ರೇಲಿಯ ಸರಕಾರದ ಅಧೀನವಿರುವ ಪ್ರದೇಶದಲ್ಲಿ ಧ್ವಜವನ್ನೂರಿದೆಎಂಬ ವಾರ್ತೆಯೇ ಈ ಜಗಳದ ನಾಂದಿ. ದಕ್ಷಿಣ ಧ್ರುವ ಪ್ರದೇಶದಲ್ಲಿಅರ್ಧದಷ್ಟು ಭೂಭಾಗವನ್ನುಈಗ ಆಸ್ಟ್ರೇಲಿಯವು ತನ್ನದೆನ್ನುತ್ತದೆ. ನಾರ್ವೆ, ಫ್ರಾನ್ಸುಗಳಲ್ಲದೆ, ಬ್ರಿಟನ್, ಚಿಲಿ,ಅರ್ಜೆಂಟೀನ ಇತ್ಯಾದಿ ದೇಶಗಳು ಸಹ ತಮ್ಮ ಅಧಿಕಾರವನ್ನು ದಕ್ಷಿಣ ಧ್ರುವ ಪ್ರದೇಶದ ಮೇಲೆ ಹೇರಲು ಹೆಣಗಾಡುತ್ತವೆ.ಅಮೇರಿಕವು ತನ್ನ ಪ್ರಭುತ್ವವು ದಕ್ಷಿಣ ಧ್ರುವದ ಮೇಲಿದೆ ಎಂದು ಇಷ್ಟರವರೆಗೆ ಹೇಳಿಲ್ಲ—ಆದರೆ, ಅದು ಬೇರೆ ಜನಾಂಗಗಳಲ್ಲಿ ಯಾವುದಕ್ಕೆಯೇ ಆಗಲಿ, ದಕ್ಷಿಣ ಧ್ರುವ ಪ್ರದೇಶದ ಮೇಲೆ ಅಧಿಕಾರವಿದೆ ಎಂಬ ವಾದವನ್ನೂ ಮನ್ನಿಸಿಲ್ಲ.

ಶೂರರ ಸಾಹಸ

ಭೂಪಟದಲ್ಲಿ ನೋಡಿದರೆ ದಕ್ಷಿಣ ಧ್ರುವ ಪ್ರದೇಶವು ಒಂದು ವೃತ್ತದ ಅಚ್ಚಿನಲ್ಲಿ ನಿಲ್ಲುವ ಸ್ವರೂಪದಿಂದ ಕೂಡಿದೆ. ಈ ಅಚ್ಚನ್ನು ನ್ಯೂಜೀಲೆಂಡಿಗೂ ಶಾಂತ ಸಾಗರಕ್ಕೂ ನಡುವೆ ಚಾಚಿಕೊಂಡ ರೋಸ್ ಸಮುದ್ರವು ಪೂರ್ವದಲ್ಲಿ ಹಾಗು ಆಫ್ರಿಕ ಮತ್ತು ದಕ್ಷಿಣ ಅಮೇರಿಕಗಳ ನಡುವೆ ಅಟ್ಲಾಂಟಿಕ್ ಸಾಗರದ ಅಂಗವಾಗಿ ನೈಋತ್ಯದಿಂದ ಒಳಹೊಕ್ಕ ವೆಡ್ಡೆಲ್ ಸಮುದ್ರವೂ ಸ್ವಲ್ಪ ಮಟ್ಟಿಗೆ ನುಂಗಿಬಿಡುತ್ತವೆ. ಹಿಮಾವೃತ ಸಮುದ್ರದ ಎಲ್ಲ ಆತಂಕಗಳನ್ನೂ ಯಶಸ್ವಿಯಾಗಿ ಪ್ರತಿಭಟಿಸಿ ಹಿಮದ ತೊಂದರೆಯಿಲ್ಲದ ರೋಸ್ ಸಮುದ್ರಕ್ಕೆ ೧೮೪೧ರಲ್ಲಿ ಬಂದ ರೋಸ್ ಎಂಬ ಶೂರನು ಈಗ ರೋಸ್ ಗೋಡೆ ಎಂದು ಹೆಸರಾದ ಮಹಾ ಹಿಮರಾಶಿಯನ್ನು ದಾಟಲಾರದೆ ಹೋದನು. ಈ ಹಿಮರಾಶಿಯ ಮೈಮೇಲೆ ಕಾಲೂರಿ ನಡೆಯುವುದು ಸಾಧ್ಯವಾದರೆ ದಕ್ಷಿಣ ಧ್ರುವ ಕ್ಷೇತ್ರಕ್ಕೆ ೩೦೦ ಮೈಲುಗಳಷ್ಟು ಹತ್ತಿರಕ್ಕೆ ಬರಲು ತಂಡಗಳು ಸಮರ್ಥವಾಗುತ್ತವೆ.

ವಿಮಾನದ ಮೇಲಿನ ಹಾರಾಟದಿಂದ ಕಂಡುಕೊಂಡ ವಿಷಯ ಇದಾಗಿದೆಯೇ ಹೊರತು, ಈ ಸಲ ದಕ್ಷಿಣ ಧ್ರುವ ಕ್ಷೇತ್ರದಲ್ಲಿ ಹೀಗೆ ಕಾಲೂರುವುದು ಇನ್ನೂ ಸಾಧನೆಯ ಮಾತಾಗಿ ಉಳಿದಿದೆ. ಆದರೆ ಸಾಹಸ ಪ್ರಿಯರು ಕಳೆದ ಆರು ಶತಮಾನಗಳಿಂದ ದಕ್ಷಿಣ ಧ್ರುವದ ಕಡೆಗೆ ಆಕರ್ಷಿತರಾಗಿರುವುದೇನು ಸುಳ್ಳಲ್ಲ. ಹದಿನೈದನೇ ಶತಮಾನದಲ್ಲಿ ಹೆನ್ರಿಯ ಪ್ರೋತ್ಸಾಹದಿಂದ ಭಾರತಕ್ಕೆ ಆಫ್ರಿಕ ಖಂಡವನ್ನು ಸುತ್ತುವರಿದು ದಾರಿಯನ್ನು ಹುಡುಕಲು ಹೊರಟವರು (೧೪೮೮) ಆಫ್ರಿಕದ ದಕ್ಷಿಣ ಭಾಗದಾಚೆಗಿನ ಸಮುದ್ರದಲ್ಲಿ ಹೊಸ ಭೂಖಂಡವಿರುವ ಸಂಶಯಕ್ಕೆ ಒಳಗಾಗಿದ್ದರು. ಹದಿನೆಂಟನೇ ಶತಮಾನದಲ್ಲಿ ಈ ಸಂಶಯವು ಎಷ್ಟರ ಮಟ್ಟಿಗೆ ಸತ್ಯವಾಗಿದೆ ಎಂದು ಮನಗಾಣುವ ಅನೇಕ ಪ್ರಯತ್ನಗಳನ್ನು ನಡೆಸಲಾಯಿತು. ಫ್ರಾನ್ಸಿನ ಕೆಲವು ಸಾಹಸಿಗರು ೫೪ ಡಿಗ್ರಿ ದಕ್ಷಿಣ ಅಕ್ಷಾಂಶವನ್ನು ದಾಟಿ ದಕ್ಷಿಣಕ್ಕೆ ಬಂದು ಮರಳಿದರೆ, ೧೭೭೩ರಲ್ಲಿ ಬ್ರಿಟನಿನ ಕ್ಯಾಪ್ಟನ್ ಜೇಮ್ಸ್ ಕುಕ್ ಎಂಬ ಶೂರನು ದಕ್ಷಿಣ ಧ್ರುವ ವೃತ್ತವನ್ನು ದಾಟಿ ದಕ್ಷಿಣಕ್ಕೆ ಕಾಲಿಟ್ಟನು. ೧೮೧೯ರಲ್ಲಿ ರಶಿಯದ ಬೆಲ್ಲಿಂಗ್ ಶಾಸೆನ್ ಎಂಬವನು ದಕ್ಷಿಣ ಜಾರ್ಜಿಯ, ಟ್ರಾವರ್ಸ್ ಮತ್ತು ಸ್ಯಾಂಡ್‌ವಿಚ್ ದ್ವೀಪ ಸಮುದಾಯಗಳನ್ನು ಕಂಡ.ಹಿಡಿದುದಲ್ಲದೆ, ಹಿಂದಿನವರಾರೂ ಕ್ರಮಿಸದಷ್ಟು ದಕ್ಷಿಣಕ್ಕೆ (ಅಂದರೆ ೬೯ ಡಿಗ್ರಿ ದಕ್ಷಿಣ ಅಕ್ಷಾಂಶ) ೧೮೨೧ರಲ್ಲಿ ಸಾಗಿದನು. ಈ ಪ್ರಯಾಣ ಕಾಲದಲ್ಲಿ ಆತನಿಗೆ ದಕ್ಷಿಣ ಧ್ರುವ ಪ್ರದೇಶಕ್ಕೆ ವಿಶಿಷ್ಟವಾದ ಪೆಂಗ್ವಿನ್ ಹಕ್ಕಿಗಳೇ ಇತ್ಯಾದಿ ಜೀವಜಂತುಗಳು ಕಂಡು ಬಂದು, ಹತ್ತಿರದಲ್ಲಿಯೇ ನೆಲವಿರುವ ಸುಳಿವನ್ನು ಮನಗಾಣಿಸಿದವೆನ್ನಬಹುದು. ಮರು ವರ್ಷ ಆತನು ದಕ್ಷಿಣ ಧ್ರುವದ ಭೂಭಾಗವನ್ನು ನಿಜಕ್ಕೂ ಕಂಡನು.

ಪ್ರಥಮ ಪದಾರ್ಪಣ

ಆದರೆ ದಕ್ಷಿಣ ಧ್ರುವ ಪ್ರದೇಶದ ನಿಜವಾದ ಪರಿಚಯ ಅವನಿಗಾಗಲಿಲ್ಲ. ಆದುದರಿಂದ ಸಾಹಸಿಗಳು ಮತ್ತೂ ಮುಂದೆ ಬರುವಂತಾಯಿತು. ಜೇಮ್ಸ್ ವೆಡೆಲ್ ಎಂಬವರು ೩೪ ಡಿಗ್ರಿ ಪಶ್ಚಿಮ ರೇಖಾಂಶದಲ್ಲಿ ೭೪ ಡಿಗ್ರಿ ದಕ್ಷಿಣ ಅಕ್ಷಾಂಶವನ್ನು ದಾಟುವಷ್ಟು ಶೌರ್ಯವನ್ನು ಪ್ರದರ್ಶಿಸಿದರು. ೧೮೩೯ರಲ್ಲಿ ಜಾನ್ ಬೆಲೆನಿ ಎಂಬವರು ದಕ್ಷಿಣ ಧ್ರುವ ವೃತ್ತವನ್ನು ೧೬೪ ಡಿಗ್ರಿ ಪೂರ್ವ ರೇಖಾಂಶದಲ್ಲಿ ದಾಟಿ ೧೨೦೦೦ ಅಡಿ ಎತ್ತರದ ಶಿಖರವುಳ್ಳ ಬೆಲೆನಿದ್ವೀಪ ಸಮುದಾಯವನ್ನು ಗುರುತಿಸಿದರು. ಇಷ್ಟು ಹೊತ್ತಿಗೆ ಅಮೇರಿಕವೂ ಈ ಸಾಹಸ ಕಾರ್ಯದಲ್ಲಿ ಭಾಗವಹಿಸತೊಡಗಿತು. ಲೆಫ್ಟಿನೆಂಟ್ ಚಾರ್ಲ್ಸ್ ವಿಲ್ಕಿಸ್ ಎಂಬವನು ೬೦ ಡಿಗ್ರಿ ಕ್ಷಿಣ ಅಕ್ಷಾಂಶವನ್ನು ದಾಟಿ ಈಗ ವಿಲ್ಕೆಸ್‌ಲ್ಯಾಂಡ್ ಎಂದು ಹೆಸರಾಗಿರುವ ಭೂಭಾಗವನ್ನು ಕಂಡುಹಿಡಿದನು. ಆದರೆ ದಕ್ಷಿಣ ಧ್ರುವ ಪ್ರದೇಶದಲ್ಲಿ ಮೊದಲಾಗಿ ಪದಾರ್ಪಣಮಾಡಿದ ಶ್ರೇಯಸ್ಸು ಕೆಪ್ಟನ್ ಜೆ. ಕ್ಲಾರ್ಕ್ ರೋಸ್ ಎಂಬವನಿಗೆ ಸಲ್ಲುತ್ತದೆ. (೧೮೪೧) ಆವನು ಆಗಿನ ರಾಣಿ ವಿಕ್ಟೋರಿಯಾಳ ಹೆಸರಿನಿಂದ ನ್ಯೂಜೀಲೆಂಡಿಗೆ ದಕ್ಷಿಣದಲ್ಲಿರುವ ಧ್ರುವ ಪ್ರದೇಶವನ್ನು ಕರೆದನು.

ನಾರ್ವೆ ದೇಶದ ಕ್ಯಾಪ್ಟನ್ ಲಾರ್ಸೆನ್ ಎಂಬ ನಾವಿಕನು ೧೮೯೪ರಲ್ಲಿ ಆಫ್ರಿಕದ ದಕ್ಷಿಣಕ್ಕಿರುವ ಧ್ರುವ ಪ್ರದೇಶದಲ್ಲಿ ಕಾಲೂರಿದನು. ೬೫ ಡಿಗ್ರಿ ದಕ್ಷಿಣ ಅಕ್ಷಾಂಶದ ಉತ್ತರಕ್ಕೆ ಆತನು ಅನೇಕ ಪ್ರಾಣಿಗಳ ಅವಶೇಷಗಳನ್ನು ಸಂಗ್ರಹಿಸಿದನು ಮರುವರ್ಷ ಇನ್ನೊಬ್ಬ ನಾರ್ವೆ ರಾಷ್ಟ್ರಿಕನು ಬೆಲೆನಿದ್ವೀಪ ಸಮುದಾಯ, ವಿಕ್ಟೋರಿಯಾ ಲ್ಯಾಂಡ್ ಇತ್ಯಾದಿಗಳನ್ನಲ್ಲದೆ ೭೪ ಡಿಗ್ರಿ ದಕ್ಷಿಣ ಅಕ್ಷಾಂಶದಲ್ಲಿ ನೆಲೆಗೊಂಡ ದ್ವೀಪವೊಂದನ್ನು ಕಂಡನು. ಆದರೆ ಇವೆಲ್ಲ ಸಾಧನೆಗಳನ್ನು ಇಪ್ಪತ್ತನೇ ಶತಮಾನದಲ್ಲಿ ಸಂಪಾದಿಸಿದ ಯಶಸ್ಸು ಮಸುಕುಗೊಳಿಸುತ್ತದೆ. ೧೯೦೧ರಲ್ಲಿ ಮೂರು ತಂಡಗಳು ಯುರೋಪಿನಿಂದ ದಕ್ಷಿಣ ಧ್ರುವಾಭಿಮುಖವಾಗಿ ಹೊರಟವು. ಕಮಾಂಡರ್ ಸ್ಕಾಟ್ ಎಂಬವನ ತಂಡವು ೮೨ ಡಿಗ್ರಿ ದಕ್ಷಿಣ ಅಕ್ಷಾಂಶವನ್ನು ಮಿಕ್ಕಿ ದಕ್ಷಿಣಕ್ಕೆ ನಡೆದುದಲ್ಲದೆ ಜಲವನ್ನು ಬಿಟ್ಟು ಹಿಮಾವೃತ ನೆಲದಲ್ಲಿ ೩೫೦ ಮೈಲು ದೂರ ಒಳಗೆ ಹೊಕ್ಕಿತು. ಇದು ೮೦೦೦ ಅಡಿ ಎತ್ತರದ ಒಂದು ಸೀತ ಭೂಮಿ. ಸ್ಕಾಟನಂತೆ ಹೊರಟಿದ್ದ ಶಾಕ್ಲ್‌ಟನ್ ಎಂಬವನು ೧೯೦೮ರಲ್ಲಿ ಅತಿ ಸಾಹಸದಿಂದ ೮೮ ಡಿಗ್ರಿ ದಕ್ಷಿಣ ಅಕ್ಷಾಂಶವನ್ನು ಮುಟ್ಟಿದನು; ಅಲ್ಲದೆ ದಕ್ಷಿಣ ಧ್ರುವ ಕ್ಷೇತ್ರಕ್ಕೆ ನೇರಾಗಿ ಹೋಗಬಲ್ಲ ದಾರಿಯ ಸುಳಿವನ್ನೂ ಗುರುತಿಸಿದನು.

ನೆತ್ತಿಯ ಮೇಲಿಟ್ಟ ಹೆಜ್ಜೆ

ಮುಂದೆ ೧೮ನೇ ಜನವರಿ, ೧೯೧೨ರಂದು ಸ್ಕಾಟನು ದಕ್ಷಿಣ ಧ್ರುವ ಕ್ಷೇತ್ರದ ನೆತ್ತಿ ಮುಟ್ಟಿದನು. ಆದರೆ, ಅಮುಂಡ್‌ಸೆನ್ ಎಂಬ ನಾರ್ವೆಯ ನಾಗರಿಕನು ಒಂದು ತಿಂಗಳಷ್ಟು ಮೊದಲೇ ಅಲ್ಲಿ ಧ್ವಜವೂರಿದುದು ಆತನ ಗಮನಕ್ಕೆ ಬಂತು. ನಿರಾಶೆಯಿಂದ ಬೆಂದ ಸ್ಕಾಟನು ಮರಳುವ ದಾರಿಯಲ್ಲಿ ಕರಾವಳಿಗೆ ೬೦ ಮೈಲುಗಳಿರುವಾಗ ಮುನ್ನಡೆಯಲಾರದೆ ಚಳಿಗಾಲವನ್ನು ಡೇರೆಯಲ್ಲಿ ಕಳೆಯಲು ನಿಶ್ಚಯಿಸಿದನು. ಆದರೆ ಕೆಲವು ತಿಂಗಳುಗಳ ಬಳಿಕ ಹೋದ್ದೊಂದು ತಂಡಕ್ಕೆ ಆತನ ಹೆಣವು ನೋಡ ಸಿಕ್ಕಿತು. ಮುಂದೆ ಶಕ್ಲ್‌ಟನ್ ಮತ್ತೆರಡು ಪ್ರವಾಸಗಳನ್ನು ಯೋಜಿಸಿದನಾದರೂ ದಕ್ಷಿಣ ಜಾರ್ಜಿಯದಲ್ಲಿ ಆತನ ಮರಣವಾಯಿತು. ೧೯೨೮ ರಿಂದ ೧೯೫೧ರ ವರೆಗೆ ಗಗನ ಸಂಚಾರವನ್ನು ಕೈಗೊಂಡು ದಕ್ಷಿಣ ಧ್ರುವ ಪ್ರದೇಶದ ಭೌಗೋಲಿಕ ಸ್ವರೂಪವನ್ನು ತಿಳಿದುಕೊಳ್ಳುವ ಪ್ರಯತ್ನ ಅನೇಕ ವೇಳೆ ನಡೆದಿದೆ. ಈ ಮಾಹಿತಿಯ ಲಾಭ ಈ ಸಲದ ದೊರಕಿದೆ—ಆದರೆ ನಿಸರ್ಗ ಅವರಿಗೆ ಅನುಕೂಲವಾಗಿ ಉಳಿದೀತೆ ಎಂಬುದು ಮಾತ್ರ ಸಂಶಯ.

ಈಗ ಬಂದಿರುವ ವರದಿಯಂತೆ ಬ್ರಿಟನಿನ ತಂಡಕ್ಕೆ ನಾಲ್ಕು ಸಾವಿರ ಅಡಿ ಎತ್ತರದ ಹೊಸ ಪರ್ವತ ಶ್ರೇಣಿಯೊಂದು ದಕ್ಷಿಣ ಧ್ರುವ ಪ್ರದೇಶದಲ್ಲಿ ಕಾಣಸಿಕ್ಕಿದೆ. ಬಲವಾದ ಚಂಡ ಮಾರುತವು ಹಡಗಗಳ ಚಲನೆಗೆ ಪ್ರತಿಭಟನೆಯನ್ನು ನೀಡುತ್ತಿದೆ. ಆದರೂ ಫ್ರಾನ್ಸಿನ ತಂಡದವರು ತಾತ್ಕಾಲಿಕವಾಗಿ ಹಡಗು ನಿಲ್ಲುವ ಧಕ್ಕೆಯೊಂದನ್ನು ದಕ್ಷಿಣ ಧ್ರುವ ಪ್ರದೇಶದಲ್ಲಿ ಕಟ್ಟಿ ಅಲ್ಲಿಂದ ತಮ್ಮ ಶಿಬಿರಕ್ಕೆ ಸಾಮಾನನ್ನು ಒಯ್ಯಲು ೧೬೦ ಗಜ ಉದ್ದದ ರೈಲು ಮಾರ್ಗವನ್ನು ರಚಿಸಿರುವರೆಂದು ತಿಳಿದು ಬರುತ್ತದೆ. ಪ್ರಗತಿಯ ಪಥದಲ್ಲಿ ಸ್ವಲ್ಪ ಹೆಚ್ಚುದೂರ ಕ್ರಮಿಸಿದವರು ರಶ್ಯದ ಸಾಹಸಿಗರೆಂದೇ ಭಾವಿಸಬೇಕಾಗುತ್ತದೆ. ಇವರು ದಕ್ಷಿಣ ಧ್ರುವ ಪ್ರದೇಶದಲ್ಲಿ ಹೆಲಿಕಾಪ್ಟರುಗಳ ಮೂಲಕ ಸುಮಾರು ೩೦೦ ಮೈಲು ಒಳಗೆ ಹಾರಾಡಿ, ಬಿಳಿ ಹಿಮಾವೃತ ಪ್ರದೇಶಗಳ ನಡುವೆ ಹತ್ತು-ಹನ್ನೆರಡು ನೀಲ ಜಲಾಶಯಗಳನ್ನು ಕಂಡಿರುವರೆಂದು ಆಕಾಶ ವಾಣಿಯ ವರದಿಗಳು ತಿಳಿಸುತ್ತವೆ. ಅಲ್ಲದೆ ಆಹಾರ ಸಂಗ್ರಹದ ಹಾಗು ರೇಡಿಯೋ ಸಂಪರ್ಕದ ವ್ಯವಸ್ಥೆಯನ್ನು ಈ ತಂಡ ತೃಪ್ತಿಕರವಾಗಿ ಕೈಗೊಂಡಿದೆಯೆಂದೂ ಕೇಳುತ್ತೇವೆ. ರಶ್ಯದ ಪ್ರಚಾರ ತಂತ್ರದ ವೈಖರಿಯನ್ನು ಕಂಡವರಿಗೆ ಮಾತ್ರ ಈ ಸುದ್ದಿಯು ನಿಜವಿದ್ದೀತೆ ಎಂಬ ಅನುಮಾನವಾಗುತ್ತದೆ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24 ತಿಂಗಳಿಗೆ 4%
12 ,, 3¾%
6 ,, 3½%
3 ,, 3%
ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O. Box No. 3219,BOMBAY 3.

ರಾಷ್ಟ್ರೀಯ ಸಂಸ್ಕೃತಿಯ ಸಕೃದ್ದರ್ಶನ

(೨ನೇ ಪುಟದಿಂದ)

ಗಳಲ್ಲಿ ಬಾಗಿಲು ಮುಚ್ಚಿದ ದೇಶವಾಗಿ ಮಾಡಿತು. ಸಮುದ್ರದಿಂದಲೂ ಹಿಮಾಲಯದಿಂದಲೂ ಆವೃತವಾಗಿದ್ದ ಈ ದೇಶವು ಪ್ರವೇಶಕ್ಕೆ ಸುಲಭವಾಗಿರಲಿಲ್ಲ. ಇಲ್ಲಿ ಜನವರ್ಗದ ಸ್ಥಳಾಂತರವು ನಡೆದಿದೆ, ಹೌದು; ಆದರೆ ಅದು ಸಾವಿರಾರು ವರ್ಷಗಳ ದೀರ್ಘಕಾಲವನ್ನೂ ತೆಗೆದುಕೊಂಡಿದೆ. ಆರ್ಯರ ಆಗಮನದ ಬಳಿಕ ಬಹುಶಃ ಎಲ್ಲಿಯೂ ಉಲ್ಲೇಖನೀಯವಾದಷ್ಟು ದೊಡ್ಡ ಪ್ರಮಾಣದಲ್ಲಿ ಜನರು ತಲಸಿ ಹೋಗಿಲ್ಲ; ಸ್ಥಳಾಂತರ ಹೊಂದಿಲ್ಲ. ಇದನ್ನು ನಾವು ಏಶ್ಯ ಮತ್ತು ಯುರೋಪುಗಳಲ್ಲಿ ಒಂದು ಜನವರ್ಗವು ಇನ್ನೊಂದನ್ನು ಓಡಿಸುತ್ತಾ, ಜನತೆಯ ರಚನೆಯಲ್ಲಿ ವೈವಿಧ್ಯವನ್ನುಂಟುಮಾಡುತ್ತಾ ನಡೆಸಿದ ಅದ್ಭುತ ಚಳವಳಿಯೊಡನೆ ಹೋಲಿಸಬೇಕು- ಆಗ ಆರ್ಯರ ಬಳಿಕ ಬಂದ ಜನವರ್ಗಗಳು ಭಾರತವಲ್ಲಿಯ ಜನತೆಯ ರಚನೆಯವಿಧಾನವನ್ನು ಸ್ಪಷ್ಟವಾಗಿ ಗೋಚರಿಸುವಷ್ಟು ಪ್ರಭಾವಿಯಾಗಿಯೂ ಮಾರ್ಪಡಿಸಲಿಲ್ಲವೆಂದು ತೋರುತ್ತ.

ಜಾತೀಯತೆಯ ಬಂಧನ

ಮೊದಲೇ ಹೇಳಿದಂತೆ ಪರಕೀಯರ ಪ್ರವೇಶಕ್ಕೆ ಅಷ್ಟು ಅನುಕೂಲವಿಲ್ಲದ್ದ ನಾಡು ಭಾರತವಾದುದರಿಂದ ಭಾರತೀಯರು ಕೂಪಮಂಡೂಕಗಳಂತಾದರು. ಈ ವೈಶಿಷ್ಟ್ಯ ಅವರದೆನಿಸಿತು ಜಗತ್ತಿನ ಬೇರೆ ಯಾವುದೇ ಭಾಗದಲ್ಲಿಲ್ಲದಿರುವ, ಯಾರಿಗೂ ತಿಳಿಯದಿರುವ ಪದ್ಧತಿಗಳೂ ಆಚಾರಗಳೂ ಭಾರತೀಯರಲ್ಲಿ ಮನೆಮಾಡಿಕೊಂಡವು. ತನ್ನ ಅಸಂಖ್ಯ ರೂಪದಲ್ಲಿ ವ್ಯಕ್ತವಾಗುವ ಜಾತಿಪದ್ಧತಿಯು ಭಾರತಕ್ಕೆಯೇ ಮೀಸಲಾದ ಒಂದು ಕ್ರಮ. ಅಸ್ಪೃಶ್ಯತೆಯೂ, ಸಹಭೋಜನ, ಅಂತರ್ಜಾತೀಯ ವಿವಾಹ ಇತ್ಯಾದಿಗಳಿಗಿರುವ ತಡೆಯೂ ಬೇರಾವ ದೇಶದಲ್ಲಿಯೂ ಕಂಡು ಬರುತ್ತಿಲ್ಲ. ಇದರ ಪರಿಣಾಮವಾಗಿ ನಮ್ಮ ದೃಷ್ಟಿಕೋಣದಲ್ಲಿ ಸಂಕುಚಿತತೆಯು ನೆಲೆಗೊಂಡಿವೆ. ಇವತ್ತಿಗೆ ಹ ಭಾರತೀಯರಿಗೆ ಇತರರೊಡನೆ ಬೆರಯುವುದು ಕಷ್ಟಕ್ಕಿಟ್ಟುಕೊಳ್ಳುತ್ತದೆ. ಪರಿಸ್ಥಿತಿಗೊಳಪಟ್ಟು ಭಾರತೀಯರು ಬೇರೊಂದು ದೇಶಕ್ಕೆ ಪ್ರಯಾಣ ಬೆಳೆಸಿದರೂ ಸಹ, ಅಲ್ಲಿಯೂ ಅವರ ಜಾತಿಯು ಅವರನ್ನು ಪ್ರತ್ಯೇಕವಾಗಿಡುತ್ತದೆ. ನಮ್ಮಲ್ಲಿ ಹೆಚ್ಚಿನವರು ಇದನ್ನು ಮಾಮೂಲಾಗಿ ತೆಗೆದುಕೊಂಡಿದ್ದೇವೆಯೇ ಹೊರತು ಬೇರೆ ದೇಶದ ಜನಗಳನ್ನು ಇದು ಎಷ್ಟು ಆಶ್ಚರ್ಯ ಪಡಿಸುತ್ತದೆ ಎಂದು ಯೋಚಿಸುತ್ತಿಲ್ಲ.

ಹೀಗೆ ನಾವು ಏಕಕಾಲದಲ್ಲಿಯೇ ವಿಶಾಲವಾದ ಸಹಿಷ್ಣುತೆ ಮತ್ತು ವ್ಯಾಪಕವಾದ ವಿಚಾರ ಮತ್ತು ಅಭಿಪ್ರಾಯಗಳನ್ನೂ ತೀರ ಸಂಕುಚಿತವಾದ ಸಾಮಾಜಿಕ ನಡವಳಿಕೆಯ ಕ್ರಮವನ್ನೂ ಭಾರತದಲ್ಲಿ ಬೆಳೆಸಿಕೊಂಡಿದ್ದೇವೆ. ಈ ತಂಡರಿದ ವ್ಯಕ್ತಿತ್ವವು ನಮ್ಮ ಚಟುವಟಿಕೆಗಳನ್ನು ಹಿಂದಿನಿಂದಲೂ ಕತ್ತಲಿನ ಛಾಯೆಗೊಳಪಡಿಸಿದ್ದು ಈಗ ಸಹ ನಮಗೆ ಇದರ ವಿರುದ್ಧ ಹೋರಾಡುವ ಕೆಲಸ ತಪ್ಪಿಲ್ಲ. ನಾವು ನಮ್ಮ ಪೂರ್ವಜರಿಂದ ಪರಂಪರಾನುಗತವಾಗಿ ಪಡೆದು ಬಂದ ಮಹಾ ವಿಚಾರಗನ್ನು ಉಲ್ಲೇಖಿಸುತ್ತಾ ನಮ್ಮ ಪದ್ಧತಿ ಮತ್ತು ಅಭ್ಯಾಸಗಳ ಸಂಕುಚಿತ್ವವನ್ನೂ ನಮ್ಮ ಅನುತ್ತೀರ್ಣತೆಯನ್ನೂ ಕಡೆಗಣಿಸಿಬಿಡಲು ನೋಡುತ್ತಿದ್ದೇವೆ. ಆದರೆ ನಿಜಕ್ಕೂ ಇವೆರಡರ ನಡುವೆ ಬಲವಾದ ಘರ್ಷಣೆನಡೆದಿದೆ; ಇದಕ್ಕೆ ಕೊನೆಯಾಗದಿರುವ ವರೆಗೆ ನಮ್ಮ ವ್ಯಕ್ತಿತ್ವದ ತುಂಡರಿದ ಭಾವವು ನಿವಾರಣೆ ಹೊಂದಿ, ಐಕ್ಯ ಪ್ರಾಪ್ತಿಯಾಗಲಾರದು. ಸ್ಥಿತ್ಯಾತ್ಮಕ ಅವಧಿಯಲ್ಲಾದರೆ ಪರಸ್ಪರ ವಿರೋಧವೆನಿಸಿದ ಈ ಅಂಶಗಳು ಹೆಚ್ಚಿನ ತಿಕ್ಕಾಟಕ್ಕೆ ಎಡೆ ಕೊಡದಿರಬಹುದು. ಆದರೆ ರಾಜಕೀಯ ಹಾಗು ಆರ್ಥಿಕ ಬೆಳವಣಿಗೆಯು ವೇಗವು ತೀವ್ರವಾಗಿರುವುದರಿಂದ, ಈ ಘರ್ಷಣೆಗೆ ಕಣ್ಣು ಮುಂದೆ ಅವಕಾಶ ದೊರಕಿದೆ. ನಾವೀಗ ಹೊಸ್ತಿಲಲ್ಲಿ ನಿಂತಿರುವ ಅಣುಯುಗದಲ್ಲಿ ಪರಿಸ್ಥಿತಿಯೇ ನಮ್ಮನ್ನು ಈ ಆಂತರಿಕ ಸಂಘರ್ಷದಿಂದ ಬಿಡುಗಡೆಗೊಳ್ಳುವಂತೆ ಒತ್ತಾಯಿಸುತ್ತದೆ. ಇದಕ್ಕೆ ತಪ್ಪಿದರೆ, ಜನಾಂಗವಾಗಿ, ನಾವು ಅನುಸರಿಸಿಕೊಂಡು ಬಂದಮೂಲ್ಯವನ್ನು ಮರೆತವರಾಗಿ, ಸೋಲುವುದೆಂದೆ ಅರ್ಥ.

ಬದಲಾವಣೆ ಅನಿವಾರ್ಯ

ಕಾರಣ ನಾವಿಂದು ಮಹಾ ರಾಜಕೀಯ ಹಾಗು ಆರ್ಥಿಕ ಸಮಸ್ಯೆಗಳನ್ನು ಭಾರತದಲ್ಲಿ ಇದಿರಿಸುತ್ತಿದ್ದಂತೆಯೇ ಭಾರತದ ಜೀವಾಳವೆನಿಸಿದ ಭಾರತದಲ್ಲಿ ತಲೆದೋರಿರುವ ವಿಷಮತೆಯನ್ನು ಪರಿಹರಿಸುವುದು ಅತ್ಯವಶ್ಯ. ಭಾರತಕ್ಕೆ ಔದ್ಯೋಗಿಕ ಕ್ರಾಂತಿಯು ಬಹಳ ವೇಗದಲ್ಲಿ ಕಾಲಿಡುತ್ತಿದೆ ಮತ್ತು ನಮ್ಮನ್ನು ಅನೇಕ ರೀತಿಯಲ್ಲಿ ಬದಲಾವಣೆಗಳಿಗೊಳಪಡಿಸುತ್ತದೆ. ನಾವು ಸುಸಂಬದ್ಧ ಜೀವನಕ್ರಮವನ್ನನುಸರಿಸುವ ಮಾನವರಾಗಿಯೂ ಒಕ್ಕಟ್ಟಿನ ಜನಾಂಗವಾಗಿಯೂ ಬಾಳಬೇಕಾದರೆ ಆರ್ಥಿಕ ಹಾಗು ರಾಜಕೀಯ ಬದಲಾವಣೆಗಳು ಸಾಮಾಜಿಕ ಪರಿವರ್ತನೆಗಳನ್ನು ಸಹ ತಂದು ಕೊಡುವುದು ಅನಿವಾರ್ಯ. ನಾವು ರಾಜಕೀಯ ಹಾಗು ಔದ್ಯಮಿಕ ಬದಲಾವಣೆಗಳನ್ನು ತಂದುಕೊಂಡೂ ಸಾಮಾಜಿಕ ರಂಗದಲ್ಲಿ ಬದಲಾವಣೆಗೊಳಪಡದೆ ಉಳಿದಿರಬಹುದೆಂದು ಯೋಚಿಸುವುದು ತೀರ ತಪ್ಪು.

ಕ್ರೈಸ್ತಯುಗಕ್ಕೆ ಹತ್ತಿರದ ಅವಧಿಯನ್ನು ಅವಲೋಕಿಸಿದರೆ, ಭಾರತದ ಚಿತ್ರವು ಅನಂತರದಕ್ಕಿಂತ ತೀರ ಭಿನ್ನವಾಗಿರುವುದು ಗೋಚರಿಸುತ್ತದೆ. ನಾಗರಿಕತೆಯ ಆ ಪ್ರಥಮ ದಿನದಲ್ಲಿ ನಮಗೆ ಕಾಣುವುದು ಜೀವನೋತ್ಸಾಹಿಗಳಾದ, ಸಾಹಸಪರರಾದ, ಶಕ್ತಿ ಮತ್ತು ಬುದ್ಧಿ ಸಂಪನ್ನರಾದ, ತಮ್ಮ ಸಂದೇಶಗಳನ್ನು ಬಹಳ ದೂರದ ವರೆಗೆ ಮುಟ್ಟಿಸಬಲ್ಲ ಕೆಚ್ಚಿರುವ ಜನತೆ. ವಿಚಾರ ಕ್ಷೇತ್ರದಲ್ಲಿ ಅವರು ಅತ್ಯುನ್ನತ ಶಿಖರವನ್ನು ಮುಟ್ಟಲು ಸಾಹಸಪಟ್ಟರು. ಅವರು ಮಹಾದ್ಭುತವೂ ಭವ್ಯವೂ ಆದ ಭಾಷೆಯೊಂದನ್ನು ಕಟ್ಟಿಕೊಂಡರು. ಕಲಾಕ್ಷೇತ್ರದಲ್ಲಿ ಅವರು ಶ್ರೇಷ್ಠ ಮಟ್ಟದ ಪ್ರತಿಭೆಯನ್ನು ಪ್ರದರ್ಶಿಸಿದರು. ಆ ಪ್ರಾರಂಭದ ಕಾಲವು ಬಾಗಿಲು ಮುಚ್ಚಿ ಕುಳಿತುಕೊಳ್ಳುವ ನಿತ್ಯ ಜೀವನ ಅಥವಾ ಕೊಳೆಯುತ್ತಿರುವ ಸಾಮಾಜಿಕ ಕ್ರಮಕ್ಕೆ ಬದ್ಧವಾಗಿರಲಿಲ್ಲ; ಅಥವಾ ಅದು ಭಾರತದ ಒಂದು ವಿಶಿಷ್ಟ ಕ್ಷೇತ್ರಕ್ಕೆ ಮಾತ್ರ ಮೀಸಲಾದ ಚಟುವಟಿಕೆಯೂ ಆಗಿರಲಿಲ್ಲ. ದಕ್ಷಿಣ ಭಾರತದಿಂದ ಸಾಗರದಾಚೆಯ ದೂರ ದೇಶಗಳಿಗೆ ಸಾಹಸಿಗರ ತಂಡವು ಸಂದೇಶವನ್ನು ಸಾರುತ್ತಾ ಹೊರಟಿತ್ತು. ಉತ್ತರ ಹಾಗು ದಕ್ಷಿಣ ಭಾರತಗಳೆರಡೂ ಎಡ-ಬಲಕೈಗಳಾಗಿ ಕೆಲಸಮಾಡಿದುದರಿಂದ ಭಾರತದ ಹಿರಿಮೆ ಅತ್ಯುನ್ನತ ಹಂತವನ್ನು ಮುಟ್ಟಿತು.

ಆಂತರಿಕ ಸಂಘರ್ಷ

ಮುಂದೆ ಭಾಷಾ ಸೌಂದರ್ಯದಲ್ಲಿಯೂ ಕಲಾ ವೈಭವದಲ್ಲಿಯೂ ಅವನತಿಯ ಕ್ರಿಯೆಗೆ ಇಂಬು ದೊರೆತ ನಂತರದ ಕಾಲವನ್ನು ನಾವು ಚರಿತ್ರೆಯಲ್ಲಿ ಕಾಣುತ್ತೇವೆ. ನಮ್ಮ ವಿಚಾರ ಶಕ್ತಿಯೂ ಈ ಕಾಲದಲ್ಲಿ ಕುಂಠಿತವಾಗಿ, ಹಿಂದಿನವರು ಹೇಳಿರುವುದರ ಪುನರುಚ್ಚಾರವೇ ತೃಪ್ತಿಯ ಸಾಧನವೆನಿಸಿತು; ರಚನಾತ್ಮಕ ಭಾವವೇ ಬಲಹೀನವಾಯಿತು. ದೈಹಿಕ ಅಥವಾ ಮಾನಸಿಕ ಸ್ವರೂಪದ ಯಾವುದೇ ಸಾಹಸ ಕಾರ್ಯದಲ್ಲೂ ಆಸಕ್ತಿಯುಳಿಯದ ಹೇಡಿ ಜನಾಂಗವಾಗಿ ಭಾರತೀಯರು ಪರಿಣಮಿಸಿದರು. ಈ ಮೌಢ್ಯ ಮತ್ತು ದೌರ್ಬಲ್ಯವನ್ನು ಜಾತೀಯತೆಯ ಬಂಧನವೇ ಮುಂತಾದ ಸಕಾರಾತ್ಮಕವ್ಯೂಹಗಳ ನೆಲೆಯಿಂದ ಮುಚ್ಚಿಟ್ಟುಕೊಳ್ಳುವ ಪ್ರಯತ್ನವು ನಡೆಯಿತೇ ಹೊರತು, ಪುನರುಜ್ಜೀವನದ ಪ್ರಯತ್ನ ನಡೆಯಲಿಲ್ಲ. ನಾವೀಗಲೂ ಹಳೆಯ ಬುದ್ಧಿವಂತರ ಮಾತುಗಳನ್ನೇ ಆಡುತ್ತಿದ್ದೇವೆ; ಆದರೆ ಮಾತಿಗೆ ಸರಿಯಾದ ನಡತೆಯಿಲ್ಲ. ಶಾಂತಿ ಮತ್ತು ಹಿಂಸೆಯ ಮಾತಾಡುತ್ತಿದ್ದಂತೆಯೇ ಅದಕ್ಕೆ ವಿರುದ್ಧ ವರ್ತಿಸಲು ಹಿಂಜರಿಯುತ್ತಿಲ್ಲ. ಸಹನೆ ಮತ್ತು ಸಹಿಷ್ಣುತೆಗಳ ಹಿರಿಮೆಯನ್ನು ಕೊಚ್ಚಿಕೊಳ್ಳುತ್ತಿದ್ದಂತೆಯೇ ಜಾತಿ ಮತ್ತು ವರ್ಗಭೇದದ ಕಹಳೆ ಮೊಳಗುತ್ತಿದ್ದೇವೆ. ಸ್ಥಿತಪ್ರಜ್ಞತ್ವವನ್ನು ಪ್ರತಿಪಾದಿಸುತ್ತಿದ್ದಂತೆಯೇ ಶಿಸ್ತು ಮತ್ತು ಸಂಯಮದ ಎಲ್ಲೇ ಮೀರಿ ಪಶುಗಳ ಕೀಳ್ಮಟ್ಟಕ್ಕಿಳಿಯುತ್ತೇವೆ.

ಪಾಶ್ಚಾತ್ಯರು ಸಮುದ್ರಗಳನ್ನು ದಾಟಿ ಬಂದ ಬಳಿಕ ಭಾರತವು ಹೊಸ ದಾರಿಯೊಂದನ್ನು ಗುರುತಿಸಿಕೊಂಡಿತು. ಆಧುನಿಕ ಔದ್ಯಮಿಕ ನಾಗರಿಕತೆಯು ನಿಧಾನವಾಗಿ ತಲೆಎತ್ತಿತು. ಹೊಸ ವಿಚಾರಗಳೂ ಆಚಾರಗಳೂ ಮೂಡಿಕೊಂಡು ಬುದ್ಧಿಜೀವಿಗಳು ಆಂಗ್ಲ ಸಂಪ್ರದಾಯದ ತಿರುಳರಿಯಲು ಹವಣಿಸಿದರು. ಹೀಗೆ ನಮ್ಮ ಜೀವನವು ಹೊಡೆದೆಬ್ಬಿಸಲ್ಪಟ್ಟಿತು. ಜಡತೆಯ ಆವರಣವನ್ನು ಕಳಚಲು ನೆಪವಾದ ಈ ಆಘಾತವು ನಮಗೆ ವಿಶಾಲವಾದ ಆಧುನಿಕ ಜಗತ್ತಿನ ಮಟ್ಟಕ್ಕೆ ಬಂದು ನಿಲ್ಲುವ ಪ್ರೇರಣೆಯನ್ನೊದಗಿಸಿತು. ಆದರೆ ಬುದ್ಧಿಜೀವಿಗಳ ಮಟ್ಟಕ್ಕಿಂತ ಹಿಂದುಳಿದ ಜನ ಸಾಮಾನ್ಯರ ಪಾಲಿಗಿನ್ನೂ ನವೋದಯವಾಗಿಲ್ಲ. ಸಂಪ್ರದಾಯ ಪ್ರಿಯರು ಹಾಗು ಪುರಾತನ ಆಚಾರ ವಿಚಾರಗಳಿಗೆ ಶರಣಾದವರ ಪ್ರಮಾಣ ತುಂಬ ಹೆಚ್ಚಿಗಿದ್ದರೂ ಆಧುನಿಕ ಜಗತ್ತಿನ ವ್ಯಾಪಾರದೊಡನೆ ಹೊಂದಿಕೊಳ್ಳುವಷ್ಟು ಪ್ರಜ್ಞೆ ನಿಧಾನವಾಗಿ ಮೂಡಿಕೊಳ್ಳುತ್ತಿರುವುದು ಶುಭಲಕ್ಷಣ.

ಪ್ರಜಾವರ್ಗದ ಕರ್ತವ್ಯ

ಆದರೆ ಈಚೆಗೆ ಪಾಶ್ಚಾತ್ಯ ಪದ್ಧತಿಯ ಮೇಲಿನ ವಿಶ್ವಾಸವೂ ನಡುಗುತ್ತಿದೆ. ಇದು ನಮ್ಮನ್ನು ಹೊಸ ವಿಷಮಾವಸ್ಥೆಗೆ ನೂಕಿದೆ. ನಮಗೆ ಹಿಂದಿನದೂ ಇಲ್ಲ, ಇಂದಿನದೂ ಉಳಿದಿಲ್ಲ ಎಂಬ ಪರಿಸ್ಥಿತಿ ಬಂದಿದೆ. ನಾವೆಲ್ಲಿ ಹೋಗಬೇಕು, ಹೋಗುತ್ತಿದ್ದೇವೆ ಎಂಬ ಪರಿಜ್ಞಾನವಾಗಲೀ ಸಂಕಲ್ಪವಾಗಲೀ ಇಲ್ಲದೆ ಹೊಳಲಾಡುವವರು ಅನೇಕ. ಹಿರಿಯರು ಹೀಗೆ ಅನಿ

(ಮುಂದಿನ ಪುಟ ನೋಡಿರಿ)

ಪ್ರಕಟಣೆ

ಉಡುಪಿ ತಾಲೂಕು ಪೆರಂಪಳ್ಳಿ ಗ್ರಾಮದಲ್ಲಿರುವ ಗೊಪೆಲ್ ದಾಲ್ ಮೋದರ ಮಗ ಸ್ಟ್ಯಾಂ ದಾಲ್ಮೇದನು ಈಮೂಲಕ ತಿಳಿಯಪಡಿಸುವುದೇನೆಂದರೆ.

ನನ್ನ ಮಗಂದಿರು ಗ್ರಿಗೊರಿ ದಾಲ್ಮೇದ ಮತ್ತು ವಿಲಿಯಂ ದಾಲ್ಮೇದ ಕೂಡಾ ಎರಡನೆರು ನವಯುಗ ಪತ್ರಿಕೆಯಲ್ಲಿ ತಾರೀಕು ೩೧—9—1954ರಲ್ಲು ಕೊಟ್ಟ ಪ್ರಕಟಣೆ ಈ ನನ್ನ ತಿಳುವಳಿಕೆಗೆ ಬಂತು. ಸದ್ರಿ ಪ್ರಕಟಣೆಯಲ್ಲಿ ತೋರಿರುವ ಯಾವತ್ತೂ ವಿಷಯಗಳು ಸುಳ್ಳು ಮತ್ತು ನಿರಾಧಾರವಾದವುಗಳಾಗಿರುತ್ತವೆ. ಸದ್ರಿ ಪ್ರಕಟಣೆಯಲ್ಲಿ ತೋರಿರುವ ಮೂಲಗೇಣಿ ಆಸ್ತಿಯು ಮತ್ತು ಚರಸೊತ್ತುಗಳು ನನ್ನ ಸ್ವಂತ ಅರ್ಜಿತವಾದ್ದರಿಂದ ಅದನ್ನು ನಾನು ನನ್ನ ಇಚ್ಛಾನುಸಾರ ಅನುಭವಿಸಿಕೊಂಡು ಬರಲಿಕ್ಕೂ ಅಗತ್ಯಬಿದ್ದಲ್ಲಿ ಅದನ್ನು ಪರಭಾರೆ ಮಾಡಲಿಕ್ಕೂ ಸ್ವತಂತ್ರನಾಗಿರುತ್ತೇನೆ. ನನ್ನ ಸ್ಥಿರ ಚರ ಸೊತ್ತುಗಳಲ್ಲಿ ಅವರಿಬ್ಬರಿಗೆ ಏನೊಂದು ಹಕ್ಕಿರುವುದಿಲ್ಲ, ಅಲ್ಲದೆ ಸದ್ರಿಯವರಲ್ಲಿ ನನಗೆ ಸ್ವಂತ ತಾಮ್ರದ ಅಂಶ ಇರುವುದಿಲ್ಲಾ ಎಂಬು ಈ ಮೂಲಕ ತಿಳಿಸುತ್ತೇನೆ

ಈ ಎಡ ಹೆಬ್ಬೆಟ್ಟಿನ ಗುರುತು, ಕೂಡಾ ಸ್ಟೇನ್ ಬಸ್ತ್ಯಾಂ ದಾಲ್ಮೇದನರುಜು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
U. RAGHAVENDRA KRISHNA BHAT
Jeweller, Tenkpet, UDIPI, S. Kanara.
ಫೋನ್ ನಂಬ್ರ 66

(ಹಿಂದಿನ ಪುಟದಿಂದ)

ಸ್ಥಿತತೆಯ ಮಡುವಿನಲ್ಲಿ ಬಿದ್ದಿರುವಾಗ, ಕಿರಿಯ ನಾಗರಿಕರಿಗೆ ಯೋಗ್ಯ ಮಾರ್ಗದರ್ಶನವಿಲ್ಲದೆ ಅವರು ತೊಂದರೆಗೀಡಾಗಿದ್ದಾರೆ. ಈ ಅಪಾಯಕಾರಿಯಾದ ವಾತಾವರಣವನ್ನು ನಿಯಂತ್ರಣದಲ್ಲಿಟ್ಟು ಸುಧಾರಿಸದಿದ್ದರೆ ಪರಿಣಾಮವು ಬಹಳ ಗಂಭೀರವಾಗಬಹುದು. ನಾವೀಗ ದ್ರುತಗತಿಯಿಂದ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ಪರಿವರ್ತನೆಗಳನ್ನು ಅಂಗೀಕರಿಸಿಕೊಳ್ಳುತ್ತಿರುವುದರಿಂದ ಇಂಥಾ ಸಹಜ ದಿಗ್ಭ್ರಮೆಯಾಗಿ ಇದು ಕೆಲವರಿಗೆ ತೋರಬಹುದು. ಆದರೆ, ಅಣುಯುಗದಲ್ಲಿ ಯಾವುದೇ ಜನಾಂಗಕ್ಕಾಗಲಿ, ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅಥವಾ ಅದನ್ನು ತಿದ್ದಿಕೊಳ್ಳಲು ಧಾರಾಳವಾದ ಅವಕಾಶವು ಸಿಗಲಾರದು. ಅಂಥ ಅವಕಾಶವನ್ನು ಸೃಷ್ಟಿಸಿಕೊಳ್ಳದಿದ್ದರೆ, ಅಥವಾ ಸಿಕ್ಕಿದಾಗ ಉಪಯೋಗಿಸಿಕೊಳ್ಳದಿದ್ದರೆ ಸರ್ವನಾಶ ನಿಶ್ಚಯ.

ಮೇಲಿನ ಹಿನ್ನೆಲೆಯಲ್ಲಿ ವಿವೇಚನೆ ಮಾಡಿದರೆ, ಜಗತ್ತಿನ ಸುದ್ದಿಯನ್ನಲ್ಲವಾದರೂ ಭಾರತದ ವಿಷಯವನ್ನು, ಈ ಜನಾಂಗದ ಸಂಯುಕ್ತ ವ್ಯಕ್ತಿತ್ವವನ್ನು, ಇಲ್ಲಿಯ ವೈವಿಧ್ಯಮಯ ಸಂಸ್ಕೃತಿಯಲ್ಲೂ ವ್ಯಕ್ತವಾದ ಏಕತ್ವವನ್ನು ಮನವರಿಕೆ ಮಾಡಿಕೊಳ್ಳುವುದೂ ಇವೆಲ್ಲ ಸಂಗತಿಗಳ ಹಿಂದಿರುವ ಶಕ್ತಿಯ ಕೈವಾಡವನ್ನು ಗುರುತಿಸುವುದೂ ಭಾರತೀಯರೆಲ್ಲರ ಕರ್ತವ್ಯವೆಂದು ಸ್ಪಷ್ಟವಾಗುತ್ತದೆ. ಭಾರತದಲ್ಲಿರುವ ಯಾವುದೇ ಒಂದು ಜನವರ್ಗವು ಅಥವಾ ಸಮುದಾಯವು ಈ ಸಂಸ್ಕೃತಿಯನ್ನು ತನ್ನದೇ ದೇಣಿಗೆಯೆಂದು ಕರೆಯಲಾರದು; ಇಲ್ಲಿಯ ಬೌದ್ಧಿಕ ಹಾಗು ಮಾನಸಿಕ ಹಿರಿಮೆಯ ಮೇಲೆ ತನ್ನ ಸ್ವಂತಾಧಿಕಾರವನ್ನದು ಹೇರಲಾರದು. ಪ್ರತಿಯೊಂದು ಭಾಗವೂ ಜನವರ್ಗವೂ ವ್ಯಕ್ತಿಯೂ ಭಾರತೀಯ ಸಂಸ್ಕೃತಿಯನ್ನು ರೂಪಿಸಿವೆ. ಮೂಲಭೂತವಾದ ಈ ಅಂಶವನ್ನು ಮನಗಾಣದಿದ್ದರೆ ನಾವು ಭಾರತವನ್ನು ತಿಳಿದುಕೊಂಡಂತಾಗಲೇ ಇಲ್ಲ. ಭಾರತವನ್ನು ನಮಗೆ ತಿಳಿಯುವುದಾಗದಿದ್ದರೆ, ಈ ದೇಶಕ್ಕೆ ಸೇವೆ ಸಲ್ಲಿಸುವುದಾದರೂ ತೀರ ಕಷ್ಟ.

—ಜವಾಹರಲಾಲ ನೆಹರು



ಕ್ರಯ 0—12—0
ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ

(೧ನೇ ಪುಟದಿಂದ)

ಮತ್ತು ಘೋಷಣೆಗಳಿಗಾದರೂ ಕಟ್ಟುಬಿದ್ದು ಸುಸಂಬದ್ಧ ರೀತಿಯಲ್ಲಿ ಪ್ರಗತಿ ಸಾಧಿಸಲ್ಪಡಬಹುದೆಂಬ ಆಶೆ-ಅದು ತೀರ ಅಲ್ಪ ಆಶೆ ಎಂಬುದು ಅನುಭವ ಜನ್ಯ ವಿಷಯ—ಇದೆ. ಆದರೆ ಕಠಿಣ ಪ್ರಸಂಗ ಬಂದಾಗ, ಏನು ಮಾಡೋಣ?

ರಾಷ್ಟ್ರಾಧ್ಯಕ್ಷರಿಗೆ ರಾಜ್ಯದ ಶಾಸನಾಂಗವನ್ನು ವಿಸರ್ಜಿಸಿ, ನೇರವಾದ ಆಡಳಿತ ನಡೆಸುವ ಅಧಿಕಾರವನ್ನು ಕಠಿಣ ಪ್ರಸಂಗಗಳಲ್ಲಿ ಉಪಯೋಗಿಸುವ ಮಟ್ಟಿಗೆ ಕೊಡಲಾಗಿದೆ, ನಿಜ. ಆದರೆ ಕೇಂದ್ರದಲ್ಲೊಂದು, ರಾಜ್ಯದಲ್ಲೊಂದು ಪಕ್ಷದ ಅಧಿಕಾರ ಸ್ಥಾಪನೆಗೆ ಅವಕಾಶ ದೊರಕುವುದೆಂಬುದೊಂದೇ ಈ ಉಗ್ರ ಕ್ರಮಕ್ಕೆ ಯೋಗ್ಯ ಕಾರಣವೆನಿಸಲಾರದು. ಆದುದರಿಂದ, ನಾವು ಘಟನಾತ್ಮಕ ಹಾಗು ಸಾಮಾಜಿಕ ಹಿತ ದೃಷ್ಟಿಯಿಂದ ಈ ಸಮಸ್ಯೆಯನ್ನು ವಿವೇಚಿಸಬೇಕು. ಇದಕ್ಕೆ ಹೊಸ ನೆಲೆಯಲ್ಲಿ ನಾವು ನಿಂತು ನೂತನ ದೃಷ್ಟಿಕೋಣವನ್ನಿಟ್ಟು ವೀಕ್ಷಿಸುವುದು ಅತ್ಯಗತ್ಯ. ಆಗ ನಮಗೆ ಒಂದು ಪರಿಹಾರ ಮಾರ್ಗ ಗೋಚರಿಸುತ್ತದೆ-ಅದೆಂದರೆ ಭಾರತವನ್ನು ಏಕಘಟಕವಾಗಿ ರೂಪಿಸುವ ಮಹಾ ಪ್ರಯೋಗ. ಎಲ್ಲರೂ ಭಾರತದ ನಾಗರಿಕರು ಮತ್ತೆ ಎಲ್ಲರೂ ಸಮಾನ ಸುಖಿಗಳು (ಅಥವಾ ದುಃಖಿಗಳು!) ಎಂಬ ಭಾವನೆಯನ್ನುಂಟು ಮಾಡುವುದಕ್ಕೆ ಇದರಷ್ಟು ಚೆಲುವಾದ ಮತ್ತು ಸುಲಭವಾದ ಬೇರೆ ದಾರಿ ಸಿಗಲಾರದು. ಈ ಮಾದರಿಯ ಸೂಚನೆಯನ್ನು ರಾಜಾಜಿ ಹಿಂದೊಮ್ಮೆ ಮಾಡಿದ್ದರು. ಈಗ ಭಾರತದ ಸರ್ವಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ ಶ್ರೀ ಮೆಹರ್‌ಚಂದ್ ಮಹಾಜನ್ ತಮ್ಮ ಸುದೀರ್ಘ ಲೇಖನವೊಂದರಲ್ಲಿ ಈ ವಿಷಯಕ್ಕೆ ಪುಷ್ಟಿಯನ್ನಿತ್ತಿದ್ದಾರೆ.

ನಮ್ಮ ಪ್ರಧಾನಿ ನೆಹರುಗಳು ವಿಶ್ವಪ್ರಜಾ ಲಕ್ಷಣವನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಲೋಕದ ವಿದ್ಯಮಾನಗಳ ಹಿನ್ನೆಲೆಯಲ್ಲಿ ಅವರು ಭಾರತವನ್ನು ನೋಡುತ್ತಿದ್ದಾರೆ-ಮತ್ತು ಪ್ರಾಂತಕ್ಕಿಂತ ಕಡಿಮೆಯದಾದ, ಕೇರಳ, ಕರ್ನಾಟಕ ಮುಂತಾದ, ಘಟಕಗಳು ಅವರಿಗೆ ಕಾಣಿಸುತ್ತಲೇ ಇಲ್ಲ! ಜಗತ್ತಿಗೆಲ್ಲ ಒಂದೇ ಸರಕಾರವಿರಬೇಕು ಎನ್ನುವಷ್ಟು ಮುಂದೆ ಹೋದ ಅವರು, ಭಾಷಾರಾಜ್ಯಗಳ ರಚನೆಯ ಬದಲು ಪ್ರದೇಶಗಳ ರಚನೆಯನ್ನು ಅನುಮೋದಿಸಿದ ಅವರು, ಉಪರೋಕ್ತ ದೋಷಗಳ ನಿವಾರಣೆಗಾಗಿ ಏಕ ಘಟಕ ಭಾರತವನ್ನು ರಚಿಸಬೇಕೆಂಬ ಸೂಚನೆಯನ್ನು ಒಪ್ಪಬೇಕೆಂದು ವಿದ್ವಜ್ಜನರ ವರ್ತುಲದಲ್ಲಿ ಅಭಿಪ್ರಾಯ ಪಡಲಾಗುತ್ತದೆ. ಈಚೆಗೊಮ್ಮೆ ನೆಹರುಗಳು ಈ ಸೂಚನೆಯನ್ನು ಅವ್ಯವಹಾರ್ಯವೆಂದು ಕರೆದಿರುವರಾದರೂ ನಿಜವಾಗಿ ವಿಚಾರಿಸಿದರೆ ವ್ಯವಹಾರ್ಯವಲ್ಲದುದೇನೂ ಈ ಸೂಚನೆಯಲ್ಲಿಲ್ಲ. (ಇದನ್ನು ವಿವರವಾಗಿ ಹಿಂದಿನಿಂದ ಬೇಕಾದರೆ ನಿರೂಪಿಸೋಣ!) ಪ್ರದೇಶಗಳ ರಚನೆಯಿಂದ ಭಾಷಾ ರಾಜ್ಯಗಳ ರಚನೆಯಿಂದಾಗುವ ತೊಂದರೆಗಳೇನು ತಪ್ಪುವುದಿಲ್ಲ—ಎಂದ ಬಳಿಕ, ಏಕಘಟಕ ಭಾರತದ ರಚನೆಯೇ ಯೋಗ್ಯ. ಇದಾದರೂ ಜಗತ್ತಿಗೆಲ್ಲ ಒಂದೇ ಸರಕಾರ ಸ್ಥಾಪಿಸುವ ಉನ್ನತವಾದ ನೆಲೆಯಿಂದ ಹೇಯವಾದ ಆಲೋಚನೆ; ಅದನ್ನೂ ಮಹಲನ್ನು ಕಟ್ಟುವ ತಳಪಾಯವಾಗಿ ಇದನ್ನು ರಚಿಸಬಹುದು. ಭಾರತ, ಭಾರತೀಯ ಎಂಬ ಸೊಲ್ಲನ್ನು ಕರ್ನಾಟಕ, ಕನ್ನಡಿಗ ಎಂಬ ಸೊಲ್ಲು ಪ್ರತಿಕ್ಷೇಪಿಸುವ ದಿನ ಬಂದರೆ, ಅದನ್ನು ನೆಹರುಗಳೇಕೆ ಸ್ವಾಗತಿಸಬಾರದು? ಈ ದಿಸೆಯಲ್ಲಿ ಅವರೇ (ಅಥವಾ ಅವರೂ) ಪ್ರಯತ್ನ ಮಾಡಲಿ! ಭಾರತಕ್ಕೆಲ್ಲ ಒಂದೇ ಶಾಸನಾಂಗವಿದ್ದು, ಆಡಳಿತವು ಸುಖಕರವೆನಿಸುವ ದಿನಗಳನ್ನು ಘಟನೆಗೆ ತಿದ್ದುಪಡಿ ಮಾಡುವ ಮೂಲಕ ಅವರು ತಂದು ಕೊಡಲಿ!

(ಬರೆದು ಬಂದುದು)

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಬೇಲೂರು-ಹಳೇಬೀಡುಗಳ ಕೈಪಿಡಿ-

ಬರೆದವರು: ಎನ್. ಅನಂತಾಚಾರ್ಯ. ಪ್ರಕಾಶಕರು: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ ಬೆಲೆ: ರೂ. ೦—೧೨—೦.

ಕನ್ನಡನಾಡಿನ ಶ್ರೇಷ್ಠ ಶಿಲ್ಪ ಕೃತಿಗಳನ್ನು ಕಣ್ಣಾರೆ ಕಾಣಬೇಕೆಂಬವರು ಬೇಲೂರು ಮತ್ತು ಹಳೇಬೀಡುಗಳಿಗೆ ಪ್ರಯಾಣವನ್ನು ಬೆಳೆಸಬೇಕು ಎಂಬುದು ಜನಜನಿತವಾಗಿರುವ ವಿಷಯ. ಅಲ್ಲಿಗೆ ಹೋಗಿ, ಅಲ್ಲಿಯ ದೇವಾಲಯಗಳನ್ನು ಆಸಕ್ತಿಯಿಂದ ನಿರೀಕ್ಷಿಸಿದರೆ ಮತ್ತು ಕಲಾವಿದನ ದೃಷ್ಟಿಯಿಂದ ಆಳವಾಗಿ ಅಭ್ಯಸಿಸಿದರೆ ಕಣ್ಮನಗಳಿಗೆ ಹಬ್ಬದೂಟವು ದೊರೆಯುತ್ತದೆ ಎಂದು ನಮ್ಮೆಲ್ಲರ ವಿಶ್ವಾಸ. ಆದರೆ ಈ ದೇವಾಲಯಗಳ ಮತ್ತು ಶಿಲ್ಪ ಕೃತಿಗಳ ಏನೇನೂ ಪರಿಚಯವಿಲ್ಲದೆ, ಕೇವಲ ನಮ್ಮ ಬುದ್ಧಿಮಂತಿಕೆ ಮತ್ತು ನೋಟದ ತೀಕ್ಷ್ಣತೆಯನ್ನಷ್ಟೆ ಅವಲಂಬಿಸಿದರೆ, ಇಲ್ಲಿಯ ಸೌಂದರ್ಯವನ್ನು ಪೂರ್ಣವಾಗಿ ಆಸ್ವಾದಿಸುವುದು ಸಾಧ್ಯವಾಗಲಿಕ್ಕಿಲ್ಲ-ನೋಡುವ ಕಣ್ಣುಗಳಿಗೆ ಏನನ್ನು ನೋಡಬೇಕು ಎಂಬುದನ್ನೂ ಗ್ರಹಿಸುವ ಬುದ್ಧಿಗೆ ಏನನ್ನು ಗ್ರಹಿಸಬೇಕು ಎಂಬುದನ್ನೂ ಮೊದಲಾಗಿ ತಿಳಿಸಿ ಕೊಡದಿದ್ದರೆ ಅವುಗಳು ನಮ್ಮ ಪ್ರವಾಸಕ್ಕೆ ಪೂರ್ಣಪ್ರತಿಫಲವನ್ನು ಸಂಪಾದಿಸಿ ಕೊಡುವುದು ಕಷ್ಟ. ಇಂಥ ತರಬೇತಿಯನ್ನು ಒದಗಿಸಿಕೊಡುವ ಹಾಗು ನೋಟಕನ ಮನೋಭಾವವನ್ನು ವಿಷಯ ಗ್ರಹಣಕ್ಕೆ ಸಿದ್ಧವಾಗಿರುವಂತೆ ರೂಪಿಸುವ ಕೆಲಸವನ್ನು ಪ್ರಸ್ತುತ ಪುಸ್ತಕವಂಥ ಕೈಪಿಡಿಯು ಹಿರಿದಾಗಿ ಮಾಡಬಲ್ಲದು. ಬೇಲೂರಿನವರೇ ಆದ ವಿದ್ವಾಂಸರೊಬ್ಬರು ಈ ಕೈಪಿಡಿಯಲ್ಲಿ ಪ್ರವಾಸಿಗಳಿಗೆ ಅತ್ಯಂತ ಉಪಯುಕ್ತವಾಗಬಹುದಾದ ಹಲವು ವಿಷಯಗಳನ್ನು ಕ್ರೋಢೀಕರಿಸಿದ್ದಾರೆ. ಬೇಲೂರು ಮತ್ತು ಹಳೇಬೀಡುಗಳಿಗೆ ಬರುವ ಮಾರ್ಗದ ವಿವರ, ಅಲ್ಲಿ ಪ್ರವಾಸಿಗಳಿಗಿರುವ ಅನುಕೂಲತೆಗಳ ನಿರೂಪಣೆಯಿಂದ ತೊಡಗಿ ಆ ಊರುಗಳ ಇತಿಹಾಸ, ಅಲ್ಲಿ ಶಿಲ್ಪ ವೈಭವದಿಂದ ಮೆರೆಯುವ ದೇವಾಲಯಗಳ ಪರಿಚಯ, ಆತ್ಮಾಕರ್ಷಕವಾದ ಶಿಲ್ಪ ಕೃತಿಗಳಲ್ಲಿ ಸೌಂದರ್ಯವು ಒಡೆದು ಕಾಣುವ ಬಗೆಯ ವಿವರಣೆ, ಇವುಗಳ ಮಹೋನ್ನತಿಯ ಕುರಿತು ವಿದ್ವಾಂಸರು ಪ್ರಕಟಿಸಿದ ಅಭಿಪ್ರಾಯ-ಇವೆಲ್ಲವನ್ನೂ ಬಹಳ ಸರಳವೂ ಸುಲಭ ಗ್ರಾಹ್ಯವೂ ಆದ ಶೈಲಿಯಲ್ಲಿ ಹೃದಯಂಗಮವಾಗಿ, ಬಿಡಿಸಿ ಬಿಡಿಸಿ ಬರೆದಿದ್ದಾರೆ. ಈ ಪುಸ್ತಕವು ಕನ್ನಡ ನಾಡಿನ ಪ್ರತಿಯೊಬ್ಬ ಪ್ರವಾಸ ಪ್ರಿಯನ ಬಳಿಯಲ್ಲೂ ಇರಬೇಕಾದ ಪರಿಚಯಾತ್ಮಕ ಕೈಪಿಡಿ; ಅಲ್ಲದೆ, ನಮ್ಮಲ್ಲಿಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಿ, ಅರಗಿಸಿಕೊಳ್ಳಬೇಕಾದ ಐತಿಹಾಸಿಕ ಮಹತ್ವದ ಗ್ರಂಥ. ಇದಕ್ಕೆ ಸರಕಾರದ ಪ್ರಚಾರ ಹಾಗು ಶಿಕ್ಷಣ ಖಾತೆಯಿಂದ ಪ್ರೋತ್ಸಾಹ ಸಿಕ್ಕರೆ ಬಹು ಹಿತವಾದೀತು.

ಮಲೆದೇಗುಲ—

ಬರೆದವರು: ಪು. ತಿ. ನರಸಿಂಹಾಚಾರ್. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಬೆಲೆ: ರೂ. ೧—೦—೦.

ಈ ಕವನ ಸಂಕಲನದಲ್ಲಿರುವ ಪದ್ಯಗಳು ಬಹಳ ಹೆಚ್ಚಿನ ಸಂಸ್ಕಾರವನ್ನು ಹೊಂದಿದ ಜೀವದ ಆಧ್ಯಾತ್ಮಿಕ ಹಂಬಲವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸುತ್ತವೆ; ಮತ್ತು ಹೃದಯಾಂತರಾಳವನ್ನು ಮುಟ್ಟಿ ಓದುಗನಲ್ಲಿಯೂ ಆತ್ಮಜಾಗೃತಿಯನ್ನುಂಟು ಮಾಡುವಷ್ಟು ಪ್ರಭಾವಶಾಲಿಯಾಗಿವೆ. ಸೌಂದರ್ಯಾನುಭೂತಿಯೂ ರಸಚಿಂತನೆಯೂ ಈ ಪದ್ಯಗಳಲ್ಲಿ ತೇಜೋವಂತವಾಗಿ ಮೈವೆತ್ತು ತೀವ್ರ ಸಂವೇದನೆಯನ್ನು ಓದುಗರಲ್ಲಿ ಪ್ರಚೋದಿಸುತ್ತವೆ. ಶೈಲಿಯು ಬಹಳ ಪ್ರೌಢವೂ ಗಂಭೀರವೂ ರಸಸ್ಯಂದಿಯೂ ಆಗಿದೆ. ಇದು ಸಾಮಾನ್ಯರಿಗಲ್ಲ-ವಿದ್ವಾಂಸರ ನಿರ್ಮಲ ಓದಿಗೆ ಹೇಳಿಸಿದ ಕವನ ಸಂಕಲನ.

ಮಾವನ ಆಸ್ತಿ—

ಬರೆದವರು: ಕೆ. ವೀರೇಶ್ವರ. ಪ್ರಕಾಶಕರು: ಪ್ರತಿಭಾಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧—೮—೦.

ಆಂಗ್ಲ ಕಾದಂಬರಿಯೊಂದನ್ನು ಅನುಕರಿಸಿ ಬರೆದ ಈ ಪುಸ್ತಕವು ಹಾಸ್ಯರಸವನ್ನು ಬಹಳವಾಗಿ ಹೊರಸೂಸುತ್ತದೆ. ಮೋಜಿನ ವಿಷಯವೊಂದನ್ನು ವಸ್ತುವಾಗಿ ಆರಿಸಿಕೊಂಡು ಪಾತ್ರವನ್ನು ಕುಶಲವಾಗಿ ವಿಸ್ತರಿಸಿಕೊಂಡು ಅವುಗಳ ವರ್ತನೆಯಲ್ಲೂ ಮಾತಿನಲ್ಲೂ ಆಕಸ್ಮಿಕವಾದ ನಗೆಬರಿಸುವ ಸಂಗತಿಗಳನ್ನು ಪೋಣಿಸಿಕೊಂಡು ಈ ಕಾದಂಬರಿ ನಡೆದಿದೆ. ಶೈಲಿ ಚೆಲುವಾಗಿದೆ; ವಸ್ತು ಕನ್ನಡಕ್ಕೆ ಹೊಸತಾಗಿದೆ— ಎನ್ನಬಹುದು

ಶ್ರೀಮತಿ ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—



ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಪಾಠಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೊಟ್ಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೀ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ? ಹಾಗಿದ್ದರೆ

ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 8—3—1956

ಸಂಚಿಕೆ ೨೭
NO. 27

ವ್ಯೂಹಪ್ರಿಯರಿಗೆ ಬುದ್ಧಿವಾದ

ಭಾರತಕ್ಕೆ ಈ ವಾರ ಪ್ರಮುಖ ಪಾಶ್ಚಾತ್ಯ ಮಿತ್ರರ ಆಗಮನ ಲಾಭ ದೊರಕಿದೆ. ಇದೇ ೩ನೇ ದಿನಾಂಕ ಬ್ರಿಟನಿನ ವಿದೇಶ ಮಂತ್ರಿ ಮಿ. ಸೆಲ್ವಿನ್ ಲ್ಲಾಯ್ಡ್ ಹೊಸ ದೆಹಲಿಗೆ ಬಂದು ಮೂರು ದಿನಗಳ ಸಮಾಲೋಚನೆಯನ್ನು ಪ್ರಧಾನ ಮಂತ್ರಿ ಹಾಗು ವಿದೇಶ ಸಚಿವ ಶ್ರೀ ನೆಹರುಗಳೊಡನೆ ನಡೆಸಿದರು. ಇದೇ ೯ನೇ ದಿನಾಂಕ ಅಮೇರಿಕದ ವಿದೇಶ ಸಚಿವ ಮಿ. ಜಾನ್ ಫಾಸ್ಟರ್ ಡಲ್ಲೇಸರು ಹೊಸ ದೆಹಲಿಗೆ ಬಂದು ಎರಡು ದಿನ ಉಳಿಯುವರು. ಫ್ರಾನ್ಸಿನ ವಿದೇಶ ಮಂತ್ರಿಗಳೂ ಭಾರತಕ್ಕೆ ಬಂದು ಹೋಗುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಇವರೆಲ್ಲ ಹೊಸ ದೆಹಲಿಯಲ್ಲಿ ನೆಹರುಗಳನ್ನು ಕಂಡು ಮಾತನಾಡಿ, ಮಾಡುವುದೇನು?

ಮೊನ್ನೆ ೬ನೇ ತಾರೀಕಿನಂದು ಕರಾಚಿಯಲ್ಲಿ ಸೀಟೋ ರಾಷ್ಟ್ರಗಳ ವಿದೇಶಮಂತ್ರಿಗಳ ಸಭೆ ಜರಗಿತು. ನಮ್ಮ ಪಾಶ್ಚಾತ್ಯ ಮಿತ್ರರು ಇದರಲ್ಲಿ ಭಾಗವಹಿಸಲೆಂದು ಬಂದುದಾಗಿದೆ. ಹಾಗೆ ಬಂದವರು ಭಾರತದೊಡನೆ ಪರಸ್ಪರ ಆಸಕ್ತಿಯುಳ್ಳ ವಿಷಯಗಳ ಬಗ್ಗೆ ಅಭಿಪ್ರಾಯ ವಿನಿಮಯ ಮಾಡಿಕೊಂಡು ಹೋಗೋಣವೆಂದು ಆಶೆಪಟ್ಟರು. ಈ ಆಸೆಯಲ್ಲಿ ಅಸಹಜವಾದುದೇನೂ ಇಲ್ಲ. ಭಾರತದ ಪಾಲಿಗಂತೂ ತನ್ನ ಅಭಿಪ್ರಾಯವನ್ನು ಅತಿ ಸ್ಪಷ್ಟ ಮಾತುಗಳಲ್ಲಿ ಪ್ರಬಲ ಪಾಶ್ಚಾತ್ಯ ಮಿತ್ರರಾಷ್ಟ್ರಗಳ ಮುಂದೆ ನಿವೇದಿಸಲು ಇದು ಅತ್ಯಂತ ಅನುಕೂಲವಾದ ಸಂದರ್ಭವೇ ನಿಜ.

ಭಾರತಕ್ಕೂ ಪಾಶ್ಚಾತ್ಯ ಮಿತ್ರರಿಗೂ ಸಾಮಾನ್ಯ ಆಸಕ್ತಿಯಿರುವ ಪ್ರಶ್ನೆಗಳಲ್ಲಿ ಸೀಟೊ ಒಡಂಬಡಿಕೆ ಪ್ರಮುಖಸ್ಥಾನವನ್ನು ಪಡೆಯುತ್ತದೆ. ಇದರೊಂದಿಗೆ ಬಗ್ದಾದಿನ ಸೈನಿಕ ಒಪ್ಪಂದವನ್ನೂ ಸೇರಿಸಬಹುದು. ಸೀಟೋ ರಾಷ್ಟ್ರಗಳ ಪರಿಷತ್ತು ನಡೆಯುವ ಸಂದರ್ಭದಲ್ಲಿ ಭಾರತವು ತನ್ನ ಸ್ವರವನ್ನು ದೃಢವಾಗಿ ಎತ್ತಿನಿಲ್ಲಿಸುವುದಕ್ಕೆ ದೊರೆತ ಈ ಅವಕಾಶ ದೈವನಿರ್ಮಿತವಾದುದೆಂದೇ ಭಾವಿಸಬಹುದು. ಭಾರತವು ಸಾಮಾನ್ಯ ದೇಶವಲ್ಲ. ಅದು ಏಶಿಯದಲ್ಲಿ ಪ್ರಜಾಪ್ರಭುತ್ವದ ಭದ್ರಕೋಟೆಯಾಗಿದೆ, ಅಲ್ಲದೆ ಸ್ವಾತಂತ್ರ್ಯವನ್ನು ಸಂಪಾದಿಸಿದ ಎಂಟು ವರ್ಷಗಳ ಅಲ್ಪಾವಧಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ಅನುಸರಿಸಿ ಅತಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿ, ಸಮೃದ್ಧವಾಗಿದೆ. ವಿದೇಶ ವ್ಯವಹಾರದಲ್ಲಿಯಂತೂ ಅದು ಎಲ್ಲ ಪ್ರಬಲ ರಾಷ್ಟ್ರಗಳಿಂದಲೂ ಗೌರವಿಸಲ್ಪಡುವ ಉನ್ನತ ನೈತಿಕ ಸ್ಥೈರ್ಯವನ್ನು ತೋರಿಸಿದೆ. ಆದುದರಿಂದ ಜಾಗತಿಕ ಸಮಸ್ಯೆಗಳ ವಿವೇಚನೆಯಲ್ಲಿ ಅದರಲ್ಲೂ ಮುಖ್ಯವಾಗಿ ಏಶ್ಯದ ಪ್ರಶ್ನೆಗಳಲ್ಲಿ, ಭಾರತದ ಅಭಿಪ್ರಾಯ ಕೇಳಿಕೊಳ್ಳದೆ ಮುಂದರಿಯುವುದು ಯೋಗ್ಯವೆಂದು ಯಾರಿಗೂ ಕಾಣುತ್ತಿಲ್ಲ.

ಸೈನಿಕ ಒಪ್ಪಂದಗಳ ವಿರುದ್ಧ ಭಾರತವು ತನ್ನ ಪ್ರತಿಭಟನೆಯನ್ನು ಪದೇ ಪದೇ ವ್ಯಕ್ತಪಡಿಸಿದೆ. ಪರಕೀಯ ಆಕ್ರಮಣದ ವಿರುದ್ಧ ಸ್ವಜಾತಿ ಬಾಂಧವರ ಒಗ್ಗಟ್ಟಿನ ಪ್ರತೀಕವೆಂದು ಪಾಶ್ಚಾತ್ಯ ಮಿತ್ರರು ಸೈನಿಕ ವ್ಯೂಹಗಳನ್ನು ಸಮರ್ಥಿಸಿಕೊಳ್ಳುತ್ತಾರೆ. ಪರಕೀಯರು ಯಾರು ಎಂಬ ಪ್ರಶ್ನೆ ಬಂದಾಗ ಕಮ್ಯುನಿಸ್ಟರನ್ನು ಅವರು ತೋರಿಸುತ್ತಾರೆ. ಆದರೆ, ಕಮ್ಯುನಿಸ್ಟರು ಈಗ ಹಿಂದಿನಷ್ಟು ಹಿಂಸಾಚಾರಿಗಳಾಗಿಲ್ಲ; ಅವರ ನೀತಿಯಲ್ಲಿ ಸೌಮ್ಯ ಭಾವನೆ ವ್ಯಕ್ತವಾಗತೊಡಗಿದೆ; ಅವರೂ ಲೋಕ ಶಾಂತಿಯನ್ನು ಬಯಸುತ್ತಿದ್ದಾರೆ; ಕಲಹಪ್ರಿಯತೆಯನ್ನು ತೊರೆಯ ಹತ್ತಿದ್ದಾರೆ; ಆದುದರಿಂದ ಅವರಿಗೆ ಸ್ನೇಹ ಹಸ್ತವನ್ನು ನೀಡಿ ಮಾನಸಿಕ ಪರಿವರ್ತನೆಯನ್ನು ಸಾಧಿಸುವುದೇ ಹಿತಕರ ಎಂಬುದಾಗಿ ಭಾರತದ ಸಾಮಾನ್ಯ ಅಭಿಪ್ರಾಯ. ಪರದೇಶಗಳಲ್ಲಿ ತನಗಿದ್ದ ಸೈನ್ಯ ಠಾಣ್ಯಗಳನ್ನು ರಶಿಯವು ಒಂದೊಂದೇಯಾಗಿ ಬಿಟ್ಟು ಕೊಟ್ಟಿರುವುದಲ್ಲದೆ, ಇರಾನಿನೊಡನೆ ತನಗಿದ್ದ ಗಡಿತಂಟೆಯೇ ಮುಂತಾದುವನ್ನೂ ಪರಸ್ಪರ ಸಮ್ಮತ ತೀರ್ಮಾನಕ್ಕೆ ಒಳಪಡಿಸಿದೆ. ಏಶ್ಯದಲ್ಲಿಯ ಕಮ್ಯುನಿಸ್ಟರಾದರೂ ಯುದ್ಧವನ್ನು ನಿಲ್ಲಿಸುವ ಸೂಚನೆಗೆ ಒಪ್ಪಿಕೊಂಡು ಶಾಂತಿಯನ್ನು ಕಾಯ್ದುಕೊಳ್ಳಲು ಸಮ್ಮತಿಸಿದ್ದಾರೆ— ಇವೆಲ್ಲ ಲೋಕ ಶಾಂತಿಯ ಕಡೆಗೆ ಕಮ್ಯುನಿಸ್ಟರು ಒಲಿಯುತ್ತಿರುವುದರ ನಿದರ್ಶನೆ ಎಂದು ಭಾರತವು ಹೇಳುತ್ತದೆ.

ಆದರೆ ಪಾಶ್ಚಾತ್ಯ ಮಿತ್ರರು ಈ ವಾದವನ್ನು ಅದರ ಹಿಂದಿನ ಪ್ರಾಮಾಣಿಕತೆಯ ಹಿನ್ನೆಲೆಯಲ್ಲಿ ಸ್ವೀಕರಿಸಲು ಒಪ್ಪುವುದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳನ್ನು ಹೆದರಿಸಿ, ಸೋಲಿಸಿ ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದು ಅಸಾಧ್ಯವೆಂದು ಮನವರಿಕೆಯಾದ ಕಾರಣವೇ ಕಮ್ಯೂನಿಸ್ಟರು ಹೀಗೆ ಶಾಂತ ವಿಧಾನಗಳ ಕಡೆಗೆ ಒಲಿದಿದ್ದಾರೆ ಎಂದು ಪಾಶ್ಚಾತ್ಯ ಮಿತ್ರರ ಖಚಿತ ನಿಲುಮೆಯಾಗಿದೆ. ಪಾಶ್ಚಾತ್ಯ ಮಿತ್ರರು ಕಮ್ಯುನಿಸ್ಟರ ಮುಂದೆ ಸೋಲನ್ನೊಪ್ಪಿಕೊಳ್ಳದೆ ಸೆಟೆದು ನಿಲ್ಲುವಂತೆ ಮಾಡಿದುದೇನು? ಸೈನಿಕ ವ್ಯೂಹಗಳನ್ನು ರಚಿಸಿಕೊಂಡು ಸಾಮೂಹಿಕ ಕ್ರಮದಿಂದ ಶತ್ರುದಮನ ಮಾಡುವ ತಂತ್ರವೇ ಕಮ್ಯೂನಿಸ್ಟರ ಎದೆ ನಡುಗಿಸಿತೆಂದು ಪಾಶ್ಚಾತ್ಯ ಲೋಕದಲ್ಲಿ ಹೇಳಲಾಗುತ್ತದೆ. ಒಗ್ಗಟ್ಟಿನಿಂದಿದ್ದು, ಪ್ರಬಲ ಸೈನ್ಯವನ್ನು ಸಂಗ್ರಹಿಸಿಕೊಂಡು, ಯಶಸ್ವಿ ಪ್ರತಿಭಟನೆಯನ್ನು ಪಾಶ್ಚಾತ್ಯ ರಾಷ್ಟ್ರಗಳು ಕೊಡಬಲ್ಲವೆಂಬ ಮಾತು ಖಚಿತವಾದ ದೆಸೆಯಿಂದ ಕಮ್ಯುನಿಸ್ಟರು ಉಪಾಯಾಂತರಗಳನ್ನು ಅನುಸರಿಸತೊಡಗಿದ್ದಾರೆಂದು ಪಾಶ್ಚಾತ್ಯ ಪ್ರಚಿಗಳ ಅಂಬೋಣ.

ಇದನ್ನು ಭಾರತವು ಸ್ವಲ್ಪಮಟ್ಟಿಗೆ ಅರ್ಥ ಮಾಡಿಕೊಳ್ಳಬಲ್ಲುದಾದರೂ, ಇಂಥ ಮನೋಭಾವನೆಯನ್ನು ಅದು ಪುರಸ್ಕರಿಸುವುದಿಲ್ಲ. ಕಮ್ಯುನಿಸಂ ಪ್ರಭಾವವು ಬಡತನ, ಅಜ್ಞಾನ, ರೋಗರುಜಿನ ಇತ್ಯಾದಿ ಮೂಲಭೂತ ಪ್ರಶ್ನೆಗಳ ನೆರಳಿನಲ್ಲಿಯಷ್ಟೇ ವ್ಯಕ್ತವಾಗುವುದರಿಂದ, ಈ ಕರಾಳ ಛಾಯೆಯು ಉಳಿಯದಂತೆ ಪ್ರಯತ್ನಿಸಿದರೆ, ಕಮ್ಯುನಿಸ್ಟರು ಪ್ರಬಲಿಸುವ ಸಂದರ್ಭವೇ ಬರಲಾರದೆಂದು ಭಾರತವು ಹೇಳುತ್ತದೆ. ಇದಕ್ಕಾಗಿ ಸೈನಿಕ ವ್ಯೂಹಗಳ ರಚನೆಗೆ ವಿನಿಯೋಗಿಸುವ ಕೋಟಿಗಟ್ಟಲೆ ರೂಪಾಯಿಯನ್ನು ರಚನಾತ್ಮಕ ಕಾರ್ಯಕ್ಕೆ ವೆಚ್ಚಮಾಡಬೇಕೆಂದು ಅದು ಹೇಳುತ್ತದೆ. ದೇಶದ ಆಂತರಿಕ ಸಂಪತ್ತನ್ನು ಹೆಚ್ಚಿಸುವ ಉತ್ಪಾದಕ ಕಾರ್ಯಗಳಲ್ಲಿ ಹಣವನ್ನು ಉಪಯೋಗಿಸುವುದರಿಂದ ಪ್ರಜೆಗಳಲ್ಲಿ ಸಂತುಷ್ಟಿ ನೆಲೆಗೊಳ್ಳುವುದೆಂದು ಭಾರತಕ್ಕೆ ಮನವರಿಕೆಯಾಗಿದೆ. ಸೈನಿಕ ರಕ್ಷಣೆಗಾಗಿ ಹಣವನ್ನು ಮಿತಿಮೀರಿ ವ್ಯಯಿಸುವುದರಿಂದ, ಉತ್ಪಾದಕ ಕ್ಷೇತ್ರದ ಚಟುವಟಿಕೆ ಕುಂಠಿತವಾಗುವುದೆಂದೂ ಒತ್ತಾಯದ ದಾರಿದ್ರ್ಯ ಹೆಚ್ಚುವುದೆಂದೂ ಪರಿಣಾಮದಲ್ಲಿ ಇದೇ ಕಮ್ಯುನಿಸಂ ಭಾವನೆ ಬೆಳೆಯಲು ಕಾಲಾಂತರದಲ್ಲಿಯಾದರೂ ನೆಪವಾದೀತೆಂದೂ ಭಾರತವು ಭಯಪಡುತ್ತದೆ.

ಸೀಟೋ ಮತ್ತು ಬಗ್ದಾದಿನ ಒಪ್ಪಂದ ರಾಷ್ಟ್ರಗಳ ಪರಿಸ್ಥಿತಿಯನ್ನೆ ತೆಗೆದುಕೊಂಡರೆ, ಏಶ್ಯದಲ್ಲಿ ಇಂಥ ಸೈನಿಕ ಚಟುವಟಿಕೆ ಅಗತ್ಯವಿತ್ತೆ ಎಂಬ ಪ್ರಶ್ನೆ ಮುಂದೆ ಬಂದು ನಿಲ್ಲುತ್ತದೆ. ಮಧ್ಯ ಪೂರ್ವ ಏಶ್ಯದ ರಕ್ಷಣೆಯ ಉದ್ದೇಶವಿಟ್ಟುಕೊಂಡ ಬಗ್ದಾದಿನ ಒಪ್ಪಂದವು ಕಮ್ಯುನಿಸ್ಟರ ವಿರುದ್ಧವಿದೆ ಎಂದು ಹೇಳುವುದೇ ನಿರೀಕ್ಷಕರಿಗೆ ಕಷ್ಟವಾಗುತ್ತದೆ ಏಕೆಂದರೆ ಈ ಒಪ್ಪಂದಕ್ಕೆ ಸೇರಿದ ಇರಾನು ರಶ್ಯದೊಡನೆ ಮೈತ್ರಿಯಿಂದಿದೆ; ಮಾತ್ರವಲ್ಲ, ಇರಾನಿನ ಶಹಾರು ರಶ್ಯಕ್ಕೆ ಇಷ್ಟರಲ್ಲಿಯೇ ಭೇಟಿಕೊಡಲಿದ್ದಾರೆ! ಒಪ್ಪಂದಕ್ಕೆ ಸೇರಿರದ ಮಧ್ಯ ಪೂರ್ವ ರಾಷ್ಟ್ರಗಳಾದ ಈಜಿಪ್ತ, ಸೌದಿ ಅರೇಬಿಯ, ಅಫಘಾನಿಸ್ತಾನ, ಸಿರಿಯ, ಜೋರ್ಡಾನ್ ಮುಂತಾದ ದೇಶಗಳಲ್ಲಿ ಕಮ್ಯುನಿಸ್ಟರ ಕೈವಾಡವೇ ಇಲ್ಲ! ಆ ದೇಶಗಳು ಪ್ರಕಟವಾಗಿಯೇ ಕಮ್ಯುನಿಸಮ್ಮನ್ನು ವಿರೋಧಿಸುತ್ತವೆ. ಹೀಗಿರುವಾಗ ಯಾರ ಆಕ್ರಮಣದ ಭಯದಿಂದ ಪ್ರೇರಣೆಗೊಂಡ ಒಪ್ಪಂದವಿದು—ಎಂದು ಗೊತ್ತಾಗುವುದಿಲ್ಲ.

ಸೀಟೋ ಒಪ್ಪಂದಕ್ಕಾದರೂ ಇದೇ ಮಾತು ಅನ್ವಯಿಸುತ್ತದೆ. ಕೆಂಪು ಚೀನ,

(೧೨ನೇ ಪುಟ ನೋಡಿರಿ.)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಜಯಶ್ರೀಯು ನಿಮ್ಮನ್ನಗಲದಂತೆ ನೋಡಿಕೊಳ್ಳಿರಿ.

ಪ್ರತಿ ವೇತನ ದಿನದಲ್ಲಿ ಕಿಂಚಿತ್ತಾದರೂ ಉಳಿಸಿರಿ. ಹಾಗೆ ಉಳಿಸಿದುದನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಉಳಿತಾಯ ಖಾತೆಯಲ್ಲಿ ನಿಮಗಾಗಿ ಕಾರ್ಯವೆಸಗಲು ತೊಡಗಿರಿ.

ಗಂಡಾಂತರಗಳನ್ನೂ ಆಕಸ್ಮಿಕ ಸಂದರ್ಭಗಳನ್ನೂ ಎದುರಿಸಲು ಬೇಕಾಗುವ ಕ್ಷೇಮ ನಿಧಿಯನ್ನು ಕೂಡಿಸಲು ಸಾಮಾನ್ಯ ಗಂಡಸು ಅಥವಾ ಹೆಂಗಸಿಗೆ ಕ್ರಮಪ್ರಕಾರ ಉಳಿತಾಯ ಮಾಡಿಕೊಂಡು ಬರುವುದೇ ಸುಲಭ ಸಾಧ್ಯವಾದ, ನಿಜವಾದ ಮತ್ತು ಸುರಕ್ಷಿತವಾದ ಸಾಧನ.

ಬೊಂಬಾಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದು ಮತ್ತು ತಿರುಕೊಚ್ಚಿ ರಾಜ್ಯಗಳಲ್ಲಿರುವ ನಮ್ಮ 93 ಶಾಖಾ ಕಚೇರಿಗಳಲ್ಲಿ ಯಾವುದಾದರೊಂದರಲ್ಲಿ ಉಳಿತಾಯ ಲೆಖ್ಖವನ್ನು ತೆರೆಯಿರಿ.

ಚಲಾವಣೆ ಭಂಡವಾಳ ರೂ. ೮,೫೧,೦೦,೦೦೦

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India.

ಇಸ್ಲಾಂ ಪ್ರಜಾರಾಜ್ಯ: ಪಾಕಿಸ್ತಾನ

ಅತಿರೇಕ ಧರ್ಮಾಂಧತೆಯ ಕರಾಳ ಉದಾಹರಣೆ

ಇನ್ನು ಹದಿನೈದು ದಿನಗಳಲ್ಲಿ, ಅಂದರೆ ಇದೇ ಮಾರ್ಚಿಯ ೨೩ನೇ ದಿನಾಂಕ, ನೆರೆಯರಾಷ್ಟ್ರವಾದ ಪಾಕಿಸ್ತಾನವು ಇಸ್ಲಾಂ ಪ್ರಜಾರಾಜ್ಯವೆಂದು ವಿಧ್ಯುಕ್ತವಾಗಿ ಘೋಷಿಸಲ್ಪಟ್ಟು, ತನ್ನದೇ ಘಟನೆಯನ್ನು ಅನುಸರಿಸುವ ಪರಮ ಸ್ವಾತಂತ್ರ್ಯ ಸಂಪನ್ನ ದೇಶವಾಗುವುದೆಂದು ತಿಳಿದು ಬರುತ್ತದೆ. ಪ್ರಜಾರಾಜ್ಯವಾದ ಬಳಿಕವೂ ಪಾಕಿಸ್ತಾನವು ಕಾಮನ್‌ವೆಲ್ತ್ ಕೂಟದಿಂದ ಹೊರಗುಳಿಯದೆ, ಭಾರತದಂತೆ ತಾನೂ ಸಹ ಸದಸ್ಯ ರಾಷ್ಟ್ರವಾಗಿ ಮುಂದರಿಯುವುದೆಂದೂ ವರದಿಗಳು ಹೇಳುತ್ತವೆ.

ನಮಗೆ ಸಹ ಪೇಚಾಟ

ಮಾರ್ಚಿ ೨೩ನೇ ದಿನಾಂಕವು "ಮುಸ್ಲಿಂ" ಭಾವನೆಯಿಂದ ತುಂಬಿ ತುಳುಕುವವರಿಗೆ "ಪವಿತ್ರ"ವೆನಿಸಬಹುದಾದ ದಿನವಾಗಿದೆ—ಅಂದಿನ "ಅಖಿಲ ಭಾರತ" ಮುಸ್ಲಿಂ ಲೀಗು ೧೬ ವರ್ಷಗಳ ಹಿಂದೆ, ಲಾಹೋರಿನ ಅಧಿವೇಶನದಲ್ಲಿ ಯಾವ ಸುಪ್ರಸಿದ್ಧ ಗೊತ್ತುವಳಿಯನ್ನು ಸ್ವೀಕರಿಸಿತೋ ಅದರ ಹಾಗು ಆ ದಿನದ ನೆನಪನ್ನು ಶಿಲಾಶಾಶ್ವತವಾಗಿರಿಸುವುದಕ್ಕೆ ಗೊತ್ತುವಳಿಯ ಆಶಯವನ್ನು ಬಿಂಬಿಸುವ ಇಸ್ಲಾಂ ಪ್ರಜಾರಾಜ್ಯ ಪಾಕಿಸ್ತಾನದ ಜನನವನ್ನು ಆ ತಾರೀಕಿನಂದೇ ವ್ಯವಸ್ಥಿತಗೊಳಿಸಲಾಗಿರುತ್ತದೆ.

ಪಾಕಿಸ್ತಾನದ ಹೆಸರೇ ಇಸ್ಲಾಂ ಪ್ರಜಾರಾಜ್ಯ ಎಂಬ ಮಾತನ್ನು ಘಂಟಾಘೋಷವಾಗಿ ಸಾರುತ್ತಿರುವುದರಿಂದ ಅಲ್ಲಿರುವ ಅಲ್ಪಸಂಖ್ಯಾಕ ವರ್ಗಕ್ಕೆ ಈಗ ವಿಪರೀತ ಕಳವಳ ಉಂಟಾಗಿದೆ; ಇದರ ಪರಿಣಾಮವು ಭಾರತದ ಮೇಲೆ ಸಹ ಸ್ವಲ್ಪಮಟ್ಟಿಗೆ ಆಗಿದೆ. ತಮಗೆ ರಕ್ಷಣೆ ಇಲ್ಲವೆಂದು ಭಾವಿಸಿದ ಪೂರ್ವಬಂಗಾಳದ (ಪಾಕಿಸ್ತಾನ) ಹಿಂದುಗಳು ಸಾಕಷ್ಟು ಸಂಖ್ಯೆಯಲ್ಲಿ ಈಗ ಪಶ್ಚಿಮ ಬಂಗಾಳಕ್ಕೆ (ಭಾರತ) ವಲಸೆಬರುತ್ತಿದ್ದಾರೆ. ಇವರನ್ನು ಹಿಂತಿರುಗಿಸುವುದಕ್ಕೆ ಪಾಕಿಸ್ತಾನದ ರಾಜಕೀಯ ವಾತಾವರಣ ಅನುಕೂಲವಾಗಿಲ್ಲ; ಭಾರತದಲ್ಲಿ ಇರಗೊಡುವುದಕ್ಕೆ ಸುಲಭ ಸಾಲಭ್ಯ ಸಿಗುತ್ತಿಲ್ಲ. ಹೀಗಾಗಿ ನಮಗೂ ಪಾಕಿಸ್ತಾನದಿಂದ ಪೇಚಾಟ!

ಪ್ರಜಾಪ್ರಭುತ್ವಕ್ಕೂ ಪೆಟ್ಟು

ಕೇವಲಘಟನೆಯಹೆಸರಿನಿಂದಷ್ಟೇಪಾಕಿಸ್ತಾನದ ಮುಸ್ಲಿಮೇತರ ನಾಗರಿಕರು ಹೆದರಿರುವರೆಂದು ಭಾವಿಸಲಾಗದು—ಇಸ್ಲಾಂ ಪ್ರಜಾರಾಜ್ಯ ಎಂಬ ಅಭಿದಾನವನ್ನು ಸಾರ್ಥಕಗೊಳಿಸುವುದಕ್ಕೆ ಅನುಕೂಲವಾಗುವಂತೆ ರೂಪಿಸಿದ ಬೇರೆ ಅನೇಕ ಆಡಳಿತ ಸೂತ್ರಗಳೂ ಈ ಘಟನೆಯಲ್ಲಿವೆ. ಇವು ಅಲ್ಪಸಂಖ್ಯಾಕ ವರ್ಗದ ಮೂಲಭೂತಾಧಿಕಾರಗಳನ್ನು ಕಸಿದುಕೊಳ್ಳುತ್ತವೆ; ಮತ್ತು ಪ್ರಜಾಪ್ರಭುತ್ವದ ಘನ ಸಂಪ್ರದಾಯವನ್ನು ಸಂಪೂರ್ಣವಾಗಿ ಕಡೆಗಣಿಸುತ್ತವೆ.

ಪ್ರಜಾಪ್ರಭುತ್ವದಲ್ಲಿ ಪಾಕಿಸ್ತಾನಕ್ಕೆ ಹೆಚ್ಚಿಗೆ ವಿಶ್ವಾಸವಿಲ್ಲ ಎಂಬುದನ್ನು ಕಳೆದ ಎಂಟು ವರ್ಷಗಳ ಕಾಲವು ಚೆನ್ನಾಗಿ ತೋರಿಸಿಕೊಟ್ಟಿದೆ. ಈಗಿನ ಗವರ್ನರಜನರಲರಾದ ಮಿರ್ಜಾರವರು "ನಿಯಂತ್ರಿತ ಪ್ರಜಾಪ್ರಭುತ್ವ" ಎಂಬ ಹೊಸ ಶಬ್ದ ಪ್ರಯೋಗದ ಮೂಲಕ ಪಾಕಿಸ್ತಾನವು ರಾಜಕೀಯ ಕ್ಷೇತ್ರದಲ್ಲಿ ಇಡುತ್ತಿರುವ ಹೆಜ್ಜೆಯ ದಿಸೆಯನ್ನು ನಿರೂಪಿಸಿದ್ದಾರೆ. ಪೂರ್ವ ಬಂಗಾಳದಲ್ಲಿ ಮುಸ್ಲಿಂ ಲೀಗಿಗೆ ಬಲವಾದ, ಅಪಮಾನಜನಕವಾದ, ಕಠಿಣ ಸೋಲು ಕಳೆದ ಚುನಾವಣೆಯಲ್ಲಿ ಸಂಭವಿಸಿದಾಗ, ಅಲ್ಲಿ ಗವರ್ನರರ ಆಡಳಿತವನ್ನು ಹೇರಿದ ಒಂದೇ ನಿದರ್ಶನವು ಪಾಕಿಸ್ತಾನದ ರಾಜಕೀಯ ಧುರೀಣರಿಗೆ ಕುಹಕ ತಂತ್ರಗಳಲ್ಲಿದ್ದಷ್ಟು ಆಸಕ್ತಿಯು ಪ್ರಜಾತಂತ್ರದಲ್ಲಿಲ್ಲ ಎಂಬುದನ್ನು ಮನಗಾಣಿಸಿಕೊಡುತ್ತದೆ.

ಮುಸ್ಲಿಂ ಪ್ರಭಾವ

ಇಸ್ಲಾಂ ಪ್ರಜಾರಾಜ್ಯ ಎಂದು ಪಾಕಿಸ್ತಾನವನ್ನು ಕರೆಯುವ ಧುರೀಣರ ಸಂಕಲ್ಪವು ಆ ರಾಷ್ಟ್ರದ "ಪರಂಪರೆ" ಗೆ ಒಗ್ಗುವ ವಿಷಯವೇ ಆಗಿರಬಹುದು. ಪ್ರಧಾನಿ ಮಹಮ್ಮದಾಲಿಯವರು ತಮ್ಮದೊಂದು ಭಾಷಣದಲ್ಲಿ ತನ್ನ ಅಸ್ತಿತ್ವಕ್ಕೆ ಕಾರಣವಾದ ಬೀಜವನ್ನು ಗೌರವಿಸದೆ, ಪಾಕಿಸ್ತಾನವು ಮಹಾ ವೃಕ್ಷವಾಗಿ ಬೆಳೆದು ಬರಲಾರದು ಎಂದು ಪಾಕಿಸ್ತಾನದ ಮುಸ್ಲಿಮರಿಗೆ ನೆನಪು ಹುಟ್ಟಿಸಿದ್ದಾರೆ.

ಈ "ಬೀಜ" ಯಾವುದು? ದ್ವಿರಾಷ್ಟ್ರವಾದಕ್ಕೆ ಅಂದಿನ ಭಾರತದಲ್ಲಿ ಅವಕಾಶವನ್ನು ಕೊಟ್ಟ ಇಸ್ಲಾಂ ರಾಜ್ಯದ ಪ್ರೇಮವೇ ಈ ಬೀಜ ಎಂಬುದು ಸ್ಪಷ್ಟ. ಮುಸ್ಲಿಂ ಲೀಗಿನ ಪ್ರಚಂಡ ಹೋರಾಟವಲ್ಲದಿದ್ದರೆ ಪಾಕಿಸ್ತಾನವು ಹುಟ್ಟುತ್ತಿರಲಿಲ್ಲ. ಈ ಹುಟ್ಟಿಗೆ ಕಾರಣವಾದ ಮುಸ್ಲಿಂ ಆಶೋತ್ತರಗಳನ್ನು ಪುರಸ್ಕಾರವಾಗಿ ಬೆಳೆಸುವುದೇ ಇಸ್ಲಾಂ ಪ್ರಜಾರಾಜ್ಯವೆಂದು ಘೋಷಿಸಲ್ಪಟ್ಟ ಬಳಿಕ ಪಾಕಿಸ್ತಾನದ ಕರ್ತವ್ಯ ಧರ್ಮವಾಗುತ್ತದೆ ಎಂದು ಆ ರಾಜ್ಯದ ಧುರೀಣರ ದೃಢವಾದ ಅಭಿಪ್ರಾಯ.

ಮುಸ್ಲಿಂ ವರ್ಗಕ್ಕೆ ಪಾಕಿಸ್ತಾನದ ಧುರೀಣರು ಇಷ್ಟು ದೂರದ ವರೆಗೆ ಪ್ರಭಾವವನ್ನು ಬೀರಲು ಅವಕಾಶವಿತ್ತಿದ್ದಾರೆ. ಮುಸ್ಲಿಂ ಅಥವಾ ಇಸ್ಲಾಂ ಎಂಬ ಹೆಸರಿನ ಸಂಬಂಧ ಜೋಡನೆ ಇಲ್ಲದಿದ್ದರೆ ಅಸ್ವಾಭಾವಿಕವಾಗಿ ಒಡೆದು, ಎರಡು ತುಂಡುಗಳಲ್ಲಿ ಹಂಚಿ ಹೋಗಿರುವ ಪಾಕಿಸ್ತಾನದ ಪೂರ್ವ ಹಾಗು ಪಶ್ಚಿಮ ಭೂಭಾಗಗಳನ್ನು ಒಂದೇ ದೇಶದ ಅವಿಭಾಜ್ಯ ಅಂಗವೆಂಬ ಭಾವನೆಗೆ ಇಂಬು ಕೊಡುವಂತೆ ಮತ್ತು ಅದನ್ನು ಪೋಷಿಸುವಂತೆ ಮಾಡುವುದು ತೀರ ಅಸಾಧ್ಯವೆಂಬ ವ್ಯಾವಹಾರಿಕ ಬುದ್ಧಿವಂತಿಕೆಯನ್ನೂ ಈ ಧುರೀಣರು ವ್ಯಕ್ತಪಡಿಸಿದ್ದಾರೆ. ಇಸ್ಲಾಂ ಶಬ್ದವೇ ಪಾಕಿಸ್ತಾನದ ಧುರೀಣರಿಗೆ ಎಲ್ಲ ತೊಂದರೆಗಳನ್ನೂ ದಾಟಿ ಬರಲು ಅನುಕೂಲವಾದ ಸೇತುವೆಯಾಗಿದೆ!

ದ್ವಿರಾಷ್ಟ್ರ ತತ್ವ

ಆದರೆ ಇದು ನಿಜವಾಗಿಯೂ, ಸ್ವಾತಂತ್ರ್ಯವನ್ನು ಪಡೆದ ಕಾಲದಲ್ಲಿ(೧೯೪೭) ಪಾಕಿಸ್ತಾನದ ಉದ್ದೇಶವಾಗಿತ್ತೆ ಎನ್ನುವುದು ಸಂಶಯ. ಅಂದಿನ ಘಟನಾ ಸಮಿತಿಯ ಮುಂದೆ ಆಗಿನ ಗವರ್ನರಜನರಲರೂ "ದ್ವಿರಾಷ್ಟ್ರ ತತ್ತ್ವ"ವನ್ನು ಎತ್ತಿ ಹಿಡಿದು ಮುಸ್ಲಿಂ ಲೀಗಿನ ಆಶ್ರಯದಲ್ಲಿ ಪಾಕಿಸ್ತಾನದ ರಚನೆಯನ್ನು ಬೇಡಿಪಡೆದವರೂ ಆದ ಜಿನ್ನಾರವರು ಪಾಕಿಸ್ತಾನದ ಎಲ್ಲ ಪ್ರಜೆಗಳೂ ತಮ್ಮತಮ್ಮ ಜಾತಿ ಮತ ಪಂಥಗಳ ಭೇದ ಭಾವವನ್ನು ಮರೆತು ಪರಸ್ಪರ ಕೂಡಿಕೊಂಡು, ಸೌಹಾರ್ದತೆಯಿಂದ ವರ್ತಿಸಬೇಕು; ಹಾಗೆ ಕೆಲಸ ಮಾಡಿದರೆ ಮಾತ್ರ ಪಾಕಿಸ್ತಾನವು ಅಭಿವೃದ್ಧಿ ಹೊಂದಿ ಸಮೃದ್ಧವಾಗಬಲ್ಲುದು ಎಂದಿದ್ದರು.

ದ್ವಿರಾಷ್ಟ್ರ ತತ್ತ್ವವನ್ನು ಇನ್ನು ಮುಂದೆಯೂ ಎತ್ತಿ ಹಿಡಿದರೆ ಪಾಕಿಸ್ತಾನದೊಳಗೆ ಇನ್ನೊಂದು ಹಿಂದುಸ್ತಾನವನ್ನು ಅಲ್ಪ ಸಂಖ್ಯಾಕರಲ್ಲಿ ಬಹು ಸಂಖ್ಯಾಕರಾಗಿರುವ ಹಿಂದುಗಳಿಗಾಗಿ ಸೃಷ್ಟಿಸಿಕೊಡಬೇಕಾದೀತೆ?—ಎಂಬ ಪ್ರಶ್ನೆಯನ್ನು ಜಿನ್ನಾರವರು ದೂರ ದೃಷ್ಟಿಯಿಂದ ಕಂಡುಕೊಂಡಿದ್ದರೆಂದು ಹೇಳಬೇಕಾಗುತ್ತದೆ. ಆದರೆ ಜಿನ್ನಾರ ಸೂಕ್ಷ್ಮ ಬುದ್ಧಿಯು ಈಗಿನ ಪಾಕಿಸ್ತಾನಿ ಧುರೀಣರಲ್ಲಿ ಯಾರಿಗೂ ಇಲ್ಲ. ಆದುದರಿಂದಲೇ ಎಲ್ಲ ಅನರ್ಥಗಳಿಗೂ ಮೂಲವಾದ, ಭೇದ ಭಾವನೆ ಹಾಗು ಕಲಹವನ್ನೆ ಪ್ರಚೋದಿಸುವ, ಅನಪೇಕ್ಷಿತ ಸಂಗತಿಗಳ ಬೀಜವನ್ನು ಇವರು ಬಿತ್ತಿದ್ದಾರೆ.

ಮುಲ್ಲಾಗಳ ವರ್ಚಸ್ಸು

ಮುಲ್ಲಾಗಳೆಂದು ಹೆಸರಾದ ಮುಸ್ಲಿಂ ಧರ್ಮಗುರುಗಳ ವರ್ಚಸ್ಸು ಪಾಕಿಸ್ತಾನದ ಧುರೀಣರ ಮೇಲೆ ಅಚ್ಚಳಿಯದೆ ಉಳಿದಿರುವುದನ್ನು ಇಸ್ಲಾಂ ಪ್ರಜಾರಾಜ್ಯದ ಹೆಸರು ಸ್ಪಷ್ಟಪಡಿಸುತ್ತದೆ. ರಾಜಕೀಯದಲ್ಲಿ ಧರ್ಮದ ಕೈವಾಡಕ್ಕೆ ಅವಕಾಶವಿಲ್ಲವೆಂದೊಮ್ಮೆ ಸಾರಿದ್ದ ಗವರ್ನರ ಜನರಲ ಮಿರ್ಜಾರೇ ಈಗ ತಮ್ಮ ವಜ್ರಮುಷ್ಟಿಯಲ್ಲಿ ಲೇಖನಿಯನ್ನು ಎತ್ತಿಕೊಂಡು ಇಸ್ಲಾಂ ಪ್ರಜಾರಾಜ್ಯವು ಅಸ್ತಿತ್ವಕ್ಕೆ ಬರುವಂತೆ ಸಹಿಯನ್ನಿಕ್ಕಬೇಕಾಗಿ ಬಂದಿರುವುದನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು.

ಅಲ್ಪಸಂಖ್ಯಾಕರ ಭಯವನ್ನು ವಿಶ್ಲೇಷಿಸುವುದಕ್ಕೆ ಪ್ರಯತ್ನಪಡುವಾಗ, ನಮಗೆ ಮೊತ್ತಮೊದಲು ಇನ್ನೊಂದು ಸಂಗತಿಯ ಮರ್ಮ ತಿಳಿದುಕೊಳ್ಳುವ ಹಂಬಲವಾಗುತ್ತದೆ: ಅದೇನೆಂದರೆ, ಇಸ್ಲಾಂ ಪ್ರಜಾರಾಜ್ಯವಾಗಿ ಪಾಕಿಸ್ತಾನವನ್ನು ಘೋಷಿಸಲು ಎಂಟು ವರ್ಷಗಳಷ್ಟು ದೀರ್ಘಕಾಲದ ವಿಳಂಬವೇಕಾಯಿತು? ಅಲ್ಪಸಂಖ್ಯಾಕರ ಪ್ರತಿಭಟನೆಯು ಎಂದೂ ಈ ಘಟನೆ ರೂಪುಗೊಳ್ಳುವುದನ್ನು ನಿಲ್ಲಿಸುವಷ್ಟು ಸಶಕ್ತವಾಗಿರಲಿಲ್ಲ. ಹಾಗಿದ್ದರೂ ಎಂಟು ವರ್ಷಗಳ ಅವಧಿಯಲ್ಲಿ ಐದು ಸಲ ಘಟನೆಯ ಕರಡನ್ನು ಹೊಸದಾಗಿ ಬರೆದು ಸಿದ್ಧಗೊಳಿಸಬೇಕಾಯಿತೇಕೆ? ಇದು ತುಸು ಆಶ್ಚರ್ಯದ ಮಾತೇ ನಿಜ.

ಸಹಜ ಅನುಮಾನ

ಡಾ. ಜಾಫರುಲ್ಲಾಖಾನರನ್ನು ಮಂತ್ರಿ ಪದವಿಯಿಂದ ಮುಕ್ತಗೊಳಿಸಲು ಪಶ್ಚಿಮ ಪಾಕಿಸ್ತಾನದಲ್ಲಿ ಆಂದೋಲನ ನಡೆದುದನ್ನು ರಾಜಕೀಯದಲ್ಲಿ ಆಸಕ್ತಿಯುಳ್ಳವರು ಗಮನಿಸಿರಬಹುದು. ಕಾದಿಯಾನಿ ಪಂಥಕ್ಕೆ ಸೇರಿದವರೆಂಬುದೇ ಡಾ. ಜಾಫರುಲ್ಲಾಖಾನರು ಮಂತ್ರಿಸ್ಥಾನದಲ್ಲಿರುವುದಕ್ಕೆ ಅನರ್ಹರೆಂದು ಜನರು ಹೇಳುವುದಕ್ಕೆ ನೆಪವಾಯಿತು. ಹೊರಗಿನವರ ಮಟ್ಟಿಗೆ ಡಾ. ಜಾಫರುಲ್ಲಾಖಾನರು ಕೇವಲ ಮುಸ್ಲಿಮನಾಗಿದ್ದರೆ, ಪಾಕಿಸ್ತಾನದೊಳಗಿನ ಮುಸ್ಲಿಮರ ಪಾಲಿಗೆ ಅವರೊಬ್ಬ ಕಾದಿಯಾನಿ!

ಈ ಬಗೆಯ ಭೇದಭಾವವು ಮುಸ್ಲಿಮರಲ್ಲಿ ಇರುವಾಗ, ಪಾಕಿಸ್ತಾನವು ಇಸ್ಲಾಂ ಪ್ರಜಾರಾಜ್ಯವಾಗಿ ಮೆರೆಯುವುದು ಎಂದಾದರೂ ಸಾಧ್ಯವೆ ಎಂಬ ಅನುಮಾನ ಸಹಜವಾಗಿಯೇ ಉಂಟಾಗುತ್ತದೆ. ಮುಸ್ಲಿಂ ಬಾಂಧವ್ಯವನ್ನು ಉಜ್ವಲವಾಗಿ ಲೋಕದ ಮುಂದೆ ಕಣ್ಣಿಗೆ ಕಟ್ಟುವಂತೆ ಬೇಗಿ ತೋರಿಸುವುದು ಒಂದು ಕಾಲದಲ್ಲಿ ಪಾಕಿಸ್ತಾನದ ಹೆಮ್ಮೆಯ ಉದ್ದೇಶವಾಗಿದ್ದಿತು. ಆದರೆ ಪಾಶ್ಚಾತ್ಯ ರಾಷ್ಟ್ರಗಳ ಬಳಿಗೆ

(೧೧ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ.
ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಸೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.
ಮೈಸೂರು ಗಂಧದ ಎಣ್ಣೆ
ಅಪ್ಪಟವಾದ ಗಂಧದ ಎಣ್ಣೆ.
ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.
ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

ಜೀವವಿಮೋದ್ಯಮದ ರಾಷ್ಟ್ರೀಕರಣ

ಪ್ರಜೆಗಳ ಕ್ಷೇಮಾಭ್ಯುದಯ ವೃದ್ಧಿಯ ಮಾರ್ಗದಲ್ಲಿ ಮುಂದಿಟ್ಟ ಹೆಜ್ಜೆ

ಕಾಂಗ್ರೆಸಿನ ನೇತೃತ್ವದಲ್ಲಿ ಕೆಲಸಮಾಡುತ್ತಿರುವ ಭಾರತ ಸರಕಾರವು ಸಮಾಜವಾದಿ ಮಾದರಿಯ ಸಮಾಜ ರಚಿಸುವ ತನ್ನ ಧ್ಯೇಯ ಸಾಧನೆಯ ದಿಸೆಯಲ್ಲಿ ಜೀವವಿಮೆಯ ರಾಷ್ಟ್ರೀಕರಣಕ್ಕೆ ಲೋಕಸಭೆಯ ಒಪ್ಪಿಗೆಯನ್ನು ಪಡೆಯುವ ಮೂಲಕ ಇನ್ನೊಂದು ಹೆಜ್ಜೆಯನ್ನು ಕಳೆದ ವಾರ ಮುಂದಿಟ್ಟಿತು. ಸರಕಾರವು ತೆಗೆದುಕೊಂಡ ಕ್ರಮಕ್ಕೆ ಕಾಂಗ್ರೆಸಿನಿಂದಲೂ ಪ್ರತಿಪಕ್ಷದಿಂದಲೂ ಸಾಮಾನ್ಯ ಸ್ವಾಗತವು ದೊರಕಿತು. ಕೇವಲ ಇಬ್ಬರು ಸ್ವತಂತ್ರ ಸದಸ್ಯರು ಮಾತ್ರ ಸರಕಾರದ ವರ್ತನೆಯನ್ನು ಆಕ್ಷೇಪಿಸಿದರು. ಇವರು ಜೀವ ವಿಮಾ ಕಂಪೆನಿಗಳ ವ್ಯವಹಾರದಲ್ಲಿ ಸ್ವಹಿತಾಸಕ್ತಿಯನ್ನು ಪಡೆದವರಾಗಿದ್ದುದರಿಂದ ಅವರ ವಿರೋಧಕ್ಕೆ ಏನೇನೂ ಮಹತ್ವವನ್ನು ಲೋಕಸಭೆಯು ಕೊಡಲಿಲ್ಲ.

ಸುಗ್ರೀವಾಜ್ಞೆಯ ಅಗತ್ಯ

ಸರಕಾರದವರು ಮೊನ್ನೆ ಜನವರಿ ೨೦ನೇ ದಿನಾಂಕದಿಂದ ರಾಷ್ಟ್ರಾಧ್ಯಕ್ಷರ ಸುಗ್ರೀವಾಜ್ಞೆಯೊಂದರ ಮೂಲಕ ಎಲ್ಲ ಜೀವವಿಮಾ ಕಂಪೆನಿಗಳ ಆಡಳಿತಾಧಿಕಾರವನ್ನು ಸ್ವತಃ ವಹಿಸಿಕೊಂಡಿದ್ದರು. ಸಂಸತ್ತಿನ ಅಧಿವೇಶನ ಜರಗುತ್ತಿಲ್ಲವೆಂಬ ಕಾರಣವನ್ನು ಸುಗ್ರೀವಾಜ್ಞೆ ಹೊರಡಿಸುವುದಕ್ಕೆ ನೆಪವಾಗಿ ಕೊಟ್ಟಿದ್ದರೂ ಸುಗ್ರೀವಾಜ್ಞೆಯಂಥ ಕ್ರಮವನ್ನೆ ಅನುಸರಿಸಿದುದಕ್ಕೆ ನಿಜವಾದ ಕಾರಣಗಳು ಬೇರೆಯೇ ಇದ್ದುವೆಂದು ಅರ್ಥ ಸಚಿವ ಶ್ರೀ. ದೇಶಮುಖರ ಭಾಷಣವು ಸ್ಪಷ್ಟಪಡಿಸುತ್ತದೆ. ಸಾಮಾನ್ಯ ಪ್ರಜಾಸತ್ತಾತ್ಮಕ ಕ್ರಮವನ್ನೆ ಅನುಸರಿಸುವುದಾದರೆ, ಮೊದಲು ರಾಷ್ಟ್ರೀಕರಣದ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಬೇಕಾಗುತ್ತದೆ; ಮತ್ತು ಈ ಮಸೂದೆಯು ಕಾನೂನಾಗುವುದಕ್ಕೆ ಆರೇಳು ತಿಂಗಳ ಕಾಲವಾದರೂ ಹಿಡಿಯುತ್ತದೆ. ಈ ಮಧ್ಯಾವಧಿಯಲ್ಲಿ ಕಂಪೆನಿಗಳ ಆಡಳಿತಗಾರರಿಗೆ ಸಂಸ್ಥೆಯಲ್ಲಿಯೂ ಪಾಲಿಸಿದಾರರ ಕ್ಷೇಮಾಭ್ಯುದಯದಲ್ಲಿಯೂ ಏನೇನೂ ಆಸಕ್ತಿಯುಳಿಯದೆ ಹೋಗಿ, ಪರಿಸ್ಥಿತಿಯು ಕೆಡುವ ಸಂಭವವಿದೆ. ನಿತ್ಯದ ಆಡಳಿತದಲ್ಲಿಯೂ ಶಿಥಿಲತೆಯು ಕಂಡುಬರುವುದು ಅಸಂಭವವಲ್ಲ. ಅಷ್ಟೇ ಏಕೆ, ಅನೇಕ ಬಗೆಯ ಅಕ್ರಮ ವರ್ತನೆಗಳೂ ಪಾಲಿಸಿದಾರರ ಹಿತಕ್ಕೆ ವಿರುದ್ಧವಾಗಿ ನಡೆಯಲು ಎಡೆಯುಂಟು. ಉದಾಹರಣೆಗಾಗಿ, ಕಂಪೆನಿಗಳ ವಶವಿರುವ ಹಣವನ್ನು ಸಿಕ್ಕಾಬಟ್ಟೆಯಾಗಿ ದುರುಪಯೋಗ ಪಡಿಸಬಹುದು; ಹೀಗೆ ದುರುಪಯೋಗ ಪಡಿಸಿದುದನ್ನು ಸಮರ್ಥಿಸುವ ತಂತ್ರಗಳು ನಡೆಯಬಹುದು. ನಿದರ್ಶನಕ್ಕಾಗಿ ಸಣ್ಣದೊಂದು ಭೂಮಿಯ ತುಂಡುಕಿಗೆ ಅದರ ನಿಜವಾದ ಯೋಗ್ಯತೆಗಿಂತ ಎಷ್ಟೋ ಪಟ್ಟು ಹೆಚ್ಚು ಹಣವನ್ನು ಕೊಟ್ಟು, ಕಂಪೆನಿಯ ಲೆಕ್ಕವನ್ನು ಹೊಂದಿಸಿಕೊಳ್ಳಬಹುದು. ಇಂಥ ಕಟ್ಟು ಕೆಲಸಗಳಿಗೆ ಅವಕಾಶವಿರಕೂಡದೆಂಬುದಕ್ಕಾಗಿಯೇ ಸರಕಾರವು ಸುಗ್ರೀವಾಜ್ಞೆಯನ್ನು ಹೊರಡಿಸಿತು.

ಹಣದ ದುರುಪಯೋಗ

ಸುಗ್ರೀವಾಜ್ಞೆಯ ಬಳಿಕ ಸರಕಾರದಿಂದ ನೇಮಕಗೊಂಡ ಅಧಿಕಾರಿಗಳು ಅನೇಕ ಅಕ್ರಮ ವರ್ತನೆಗಳನ್ನು ಕಂಡು ಹಿಡಿದಿದ್ದಾರೆಂದು ತಿಳಿದುಬರುತ್ತದೆ. ಶ್ರೀ ಡಾಲ್ಮಿಯಾರವರು ಭಾರತ್ ಇನ್ಸೂರೆನ್ಸ್ ಕಂಪೆನಿಯ ಸುಮಾರು ಎರಡು ಕೋಟಿ ರೂಪಾಯಿ ಮೊತ್ತದ ಭದ್ರತಾ ಪತ್ರಗಳನ್ನು ಸ್ವಪ್ರಯೋಜನಾರ್ಥವಾಗಿ ದುರುಪಯೋಗ ಪಡಿಸಿಕೊಂಡ ವಿಷಯವು ಸುಗ್ರೀವಾಜ್ಞೆಯ ಹೊತ್ತಿಗಾಗಲೇ ಜನಜನಿತವಾಗಿದ್ದಿತು. ಬೇರೆ ಕಂಪೆನಿಗಳಲ್ಲಿ ಸಹ ಇಂಥ ದುರುಪಯೋಗ ನಡೆದಿರಬಹುದೆನ್ನುವ ಸಾರ್ವಜನಿಕ ಅಭಿಪ್ರಾಯಕ್ಕೆ ಸರಕಾರಿ ಅಧಿಕಾರಿಗಳು ಕಂಡುಕೊಂಡ ಸಂಗತಿಗಳು ಪುಷ್ಟಿಯನ್ನು ಕೊಡುತ್ತವೆ. ಶ್ರೀ ದೇಶಮುಖರ ಹೇಳಿಕೆಗನುಸಾರವಾಗಿ ಕಲ್ಕತ್ತೆಯ ಎರಡು ಕಂಪೆನಿಗಳಲ್ಲಿ ಪ್ರತಿಯೊಂದೂ ೧೫ ಲಕ್ಷ ರೂಪಾಯಿ ಬೆಲೆಯ ಭದ್ರತಾ ಪತ್ರಗಳ ದುರುಪಯೋಗ ಮಾಡಿವೆ; ಮುಂಬಯಿಯ ಕಂಪೆನಿಯೊಂದು ೩೦ ಲಕ್ಷ ರೂಪಾಯಿಗಳ ಭದ್ರತಾಪತ್ರವನ್ನು ದುರುಪಯೋಗಪಡಿಸಿದೆ. ಉತ್ತರ ಪ್ರದೇಶದ ಕಂಪೆನಿಯೊಂದರಲ್ಲಿ ೧೨ ಲಕ್ಷ ರೂಪಾಯಿಗಳ ಭದ್ರತಾ ಪತ್ರವು ಕಾಣೆಯಾಗಿದೆ. ಭದ್ರತಾ ಪತ್ರಗಳ ದುರುಪಯೋಗವಾದ ನಿದರ್ಶನಗಳು ಜೀವವಿಮಾ ಕಂಪೆನಿಗಳ ಒಟ್ಟು ಸಂಖ್ಯೆಯ ದೃಷ್ಟಿಯಿಂದ ತೀರ ಕಡಿಮೆ ಎಂದು ತೋರಬಹುದು. ಆದರೆ, ಬೇರೆ ಕಂಪೆನಿಗಳವರು ಇತರ ಬಗೆಯಲ್ಲಿ ಹಣವನ್ನು ಸ್ವಲಾಭಕ್ಕಾಗಿ ಬಳಸಿಕೊಳ್ಳುವರೆಂದು ಸರಕಾರದ ಅಭಿಪ್ರಾಯ. ಜೀವವಿಮಾ ಕಂಪೆನಿಗಳ ಡೈರೆಕ್ಟರರಿಗೆ ಸಾಮಾನ್ಯವಾಗಿ ಬ್ಯಾಂಕು ಮತ್ತಿತರ ವಾಣಿಜ್ಯ ಸಂಸ್ಥೆಗಳ ನಿಕಟ ಸಂಬಂಧವಿದೆ. ಈ ಡೈರೆಕ್ಟರರು ಪಾಲಿಸಿದಾರರ ಹಣವನ್ನು ತಮ್ಮ ಕೈವಶವಿರುವ ವಾಣಿಜ್ಯ ಸಂಸ್ಥೆಗಳಿಗೂ ಬ್ಯಾಂಕುಗಳಿಗೂ ಬಂಡವಾಳವಾಗಿ ಉಪಯೋಗಿಸಿಕೊಂಡು ಅನ್ಯಾಯವಾಗಿ ಲಾಭಗಳಿಸುತ್ತಿದ್ದಾರೆ. ಅಲ್ಲದೆ ಏನೇನೂ ಭದ್ರತೆಯಿಲ್ಲದ ವ್ಯವಹಾರಗಳಲ್ಲಿಯೂ ಸ್ವಪ್ರಯೋಜನದ ಏಕಮಾತ್ರ ಧ್ಯೇಯದಿಂದ ಜೀವವಿಮಾ ಕಂಪೆನಿಗಳ ಹಣವನ್ನು ತೊಡಗಿಸುತ್ತಾರೆ ಎಂದು ಸರಕಾರ ಹೇಳುತ್ತದೆ. ೧೯೫೧ರಲ್ಲಿ ಜೀವವಿಮಾ ಕಂಪೆನಿಗಳ ಹಣವನ್ನು ನಿಕ್ಷೇಪಿಸಿದ ವಿವರಗಳನ್ನು ಸಂಗ್ರಹಿಸಿದಾಗ, ಸರಕಾರಕ್ಕೆ ಬಹಳ ಆಶ್ಚರ್ಯವಾಯಿತಂತೆ—ಭದ್ರತೆ ಎಂಬ ಹೆಸರಿಗೆ ಚಿಕ್ಕಾಸಿನ ಗೌರವವನ್ನೂ ಕೆಲವು ಕಂಪೆನಿಗಳವರು ಕೊಟ್ಟಿಲ್ಲವೆಂದು ಆಗ ವ್ಯಕ್ತವಾದುದೇ ಆಶ್ಚರ್ಯದ ಕಾರಣ.

ದೋಷಪೂರಿತ ಆಡಳಿತ

ನಮ್ಮ ದೇಶದಲ್ಲಿರುವ ಎಲ್ಲ ಜೀವವಿಮಾ ಕಂಪೆನಿಗಳೂ ದುರ್ವ್ಯವಹಾರವನ್ನು ನಡೆಸುತ್ತಿವೆ ಎಂದಿದರ ಅರ್ಥವಲ್ಲ. ಆದರೆ ಅಕ್ರಮ ವ್ಯವಹಾರದಿಂದ ದೂಷಿತವಾಗಿರುವ ಕಂಪೆನಿಗಳ ಸಂಖ್ಯಾವೃದ್ಧಿಯಾಗುತ್ತಿದೆ ಎಂಬುದೇ ಸರಕಾರವು ರಾಷ್ಟ್ರೀಕರಣಕ್ಕೆ ಕೈಯಿಕ್ಕಿದುದರ ಮುಖ್ಯ ಕಾರಣ. ಕಳೆದ ಹತ್ತು ವರ್ಷಗಳಲ್ಲಿ (೧೯೪೪–೫೪) ಆಡಳಿತದಲ್ಲಿ ಕಾರ್ಯದಕ್ಷತೆಯನ್ನು ತೋರಿಸದೆ ಅಕ್ರಮ ವರ್ತನೆಯನ್ನೆ ನಡೆಸಿದುದರಿಂದ ೨೫ ಜೀವವಿಮಾ ಕಂಪೆನಿಗಳು ದಿವಾಳಿ ತೆಗೆದವು; ಅಲ್ಲದೆ ಮತ್ತೆ ೨೫ ಜೀವವಿಮಾ ಕಂಪೆನಿಗಳು ಬೇರೆ ಪ್ರಬಲ ಕಂಪೆನಿಗಳಿಗೆ ತಮ್ಮ ವ್ಯವಹಾರವನ್ನು ಬಿಟ್ಟುಕೊಟ್ಟು, ಸೇರ್ಪಡೆಹೊಂದಿದವು. ಈ ಸೇರ್ಪಡೆಯ ಕಾಲದಲ್ಲಿ ಆ ಕಂಪೆನಿಗಳ ಅಕ್ರಮ ವ್ಯವಹಾರದ ಪರಿಣಾಮವು ಪಾಲಿಸಿಗಳ ಬೆಲೆಯನ್ನು ಅಕ್ರಮ ನಡೆದ ಪ್ರಮಾಣಕ್ಕನುಸಾರವಾಗಿ ತಗ್ಗಿಸುವುದರಲ್ಲಿ ಪ್ರತಿಫಲನಗೊಂಡಿತು. ಸಾವಿರಾರು ಪಾಲಿಸಿದಾರರ ಹಣವು ಹೀಗೆ ವ್ಯರ್ಥವಾದುದಲ್ಲದೆ, ಸ್ವತಃ ಪಾಲಿಸಿದಾರರು ಆಡಳಿತಗಾರರ ದೋಷಕ್ಕೆ ತಾವು ದಂಡವನ್ನು ಭೋಗಿಸಬೇಕಾಯಿತು. ಇವತ್ತಿಗೆ ಸಹ ಸುಮಾರು ೭೫ ಜೀವವಿಮಾ ಕಂಪೆನಿಗಳು ತಮ್ಮ ಪಾಲಿಸಿದಾರರಿಗೆ ಲಾಭಾಂಶವನ್ನು ವಿತರಿಸಲು ಶಕ್ತವಾಗದಷ್ಟು ಅಸಮರ್ಥತೆಯಿಂದ ಕೂಡಿವೆ. ಆದರೆ ಲಾಭಾಂಶದಲ್ಲಿ ಪಾಲುಗೊಳ್ಳುವ ಅಧಿಕಾರ ಹೊಂದಿದ ಎಲ್ಲ ಪಾಲಿಸಿದಾರರೂ ಈ ಬಗ್ಗೆ ಹೆಚ್ಚಿನ ಪ್ರೀಮಿಯಂ ಹಣವನ್ನು ಆಯಾ ಕಂಪೆನಿಗೆ ತೆರುತ್ತಾ ಬರುವ ಮೂಲಕ ನಷ್ಟವನ್ನು ಬಿಡದೆ ಅನುಭವಿಸುತ್ತಿದ್ದಾರೆ! ನಿಮಗೆ ಲಾಭಾಂಶದಲ್ಲಿ ಪಾಲು ಕೊಡುತ್ತೇವೆ ಎನ್ನುವ ಈ ಮಾದರಿಯ ಕಂಪೆನಿಗಳು ತಮ್ಮ ಪಾಲಿಸಿದಾರರ ಮುಂದೆ ಮೋಸದ ನಟನೆಯನ್ನು ಮಾಡುತ್ತಿಲ್ಲವೆ ಎಂಬ ಭಾವನೆ ಸಾಮಾನ್ಯ ನಿರೀಕ್ಷಕರಲ್ಲಿ ಮೂಡುವುದಕ್ಕೆ ಇದರಿಂದ ಅವಕಾಶವಾಗಿದೆ. ಇನ್ನು ಪ್ರೊವಿಡೆಂಟ್ ಸಂಘಗಳ ಕ್ಷೇತ್ರದಲ್ಲಂತೂ ನಿರಾಶೆಯೆ ಗತಿ— ಈ ಶತಮಾನದ ಆದಿಭಾಗದಲ್ಲಿ ಐನೂರಕ್ಕಿಂತಲೂ ಹೆಚ್ಚಾಗಿದ್ದ ಈ ಸಂಘಗಳ ಸಂಖ್ಯೆಯು ಈಗ ಎಪ್ಪತ್ತೊಂದಕ್ಕೆ ಇಳಿದಿದೆ; ಇವಾದರೂ ಈಗಲೋ ನಾಳೆಯೋ ದಿವಾಳಿಯಾಗುವ ಶೋಚನೀಯಸ್ಥಿತಿಯಲ್ಲಿವೆ ಎಂದು ಸರಕಾರ ಭಯಪಡುತ್ತದೆ.

(೪ನೇ ಪುಟ ನೋಡಿರಿ)

* 17 Jewels, Glucidor Balance, Antimagnetic, Nivarox hairspring.

	5120	5311	7926
Chromium Front Steel Back	Rs. 130/-	Rs. 130/-	–
Full Stainless Steel Case	Rs. 155/-	Rs. 155/-	Rs. 150/-
20 Microns Rolled Gold Steel Back	Rs. 160/-	Rs. 160/-	Rs. 160/-

M. VAMAN NAYAK & SONS,
POST BOX NO. 8. MANGALORE-2.

INSIST ON Bentex STRAPS & BRACELETS

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

R- E P No 372/1955
O. S No 72/1950.

ಡಿ. ಫಕೀರ ಶೆಟ್ಟಿ.........ಅರ್ಜಿದಾರ
ಪೊನ್ನಮ್ಮ ಹೆಂಗ್ಸು ಕೂಡಾ-ಪ್ರತಿವಾದಿಗಳು
ಪೆರ್ಡಾಲ ಗ್ರಾಮದ ಮುನಿಯೂರಲ್ಲಿರುವ ಮೃತ ಪಟ್ಟಿ ರಾಮಕ್ಕೆ ಹೆಂಗ್ಸಿನ ಮಗಳು ೨ನೇ ಪ್ರತಿ-ಕು ಬಾಗಿ ಅಂಮ. ಮತ್ತು ಮೃತ ಪಟ್ಟಿ ದೆಯ್ಯಕ್ಕ ಹೆಂಗ್ಸಿನ ಮಗ ೩ನೇ ಪ್ರತಿ-ತಿಮ್ಮಣ್ಣ ಬಂಟ ಕೂಡಾ ೨ ಜನರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ.

ಮೇಲಿನ ಡಿಕ್ರಿಯ ಅಮ್ಲ್ಜಾರಿಯಲ್ಲಿ ನಿಮ್ಮ ಹಕ್ಕಿನ ಬಾಬ್ತು ಆಸ್ತಿಯನ್ನು ಏಲಂ ಪಡಿಸುವ ಬಗ್ಗೆ ದಾಖಲು ಮಾಡಿದ ಏಲಂ ಇಸ್ತಿಹಾರ ಮಂಜೂರಾತಿ ಕುರಿತು ಮೇಲಿನ ಅಮ್ಲ್ಜಾರಿಯು ತಾ. 16-3-1956ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ದಿವಸ ಕೋರ್ಟಿನ ಮುಂದೆ 11 ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

ಕಳ್ಳಿಗೆ ನೃಹಾಬಲ ಭಂಡಾರಿ.
ಎಂ. ಎ, ಎಲ್, ಎಲ್. ಬಿ.
ಅರ್ಜಿದಾರರ ಕಡೆ ಎಡ್ವಕೇಟ್
ಕಾಸ್ರಗೋಡು.
ತಾ. 1.3.56

(೩ನೇ ಪುಟದಿಂದ)

ಹಳ್ಳಿಯನ್ನಿನ್ನೂ ಮುಟ್ಟಿಲ್ಲ

ರಾಷ್ಟ್ರೀಕರಣವು ೧೯೫ ಭಾರತೀಯ ಜೀವವಿಮಾ ಕಂಪೆನಿಗಳನ್ನೂ ೩ ವಿದೇಶಿ ಕಂಪೆನಿಗಳನ್ನೂ ಬಾಧಿಸುತ್ತದೆ. ಇಷ್ಟು ಮಾತ್ರವಲ್ಲ, ಸಾಮಾನ್ಯ ವಿಮೆಯೊಡನೆ ಜೀವ ವಿಮೆಯನ್ನೂ ನಡೆಸುವ ೪೦ ಭಾರತೀಯ ಹಾಗು ೧೩ ವಿದೇಶಿ ಕಂಪೆನಿಗಳ ಜೀವ ವಿಮಾವ್ಯವಹಾರದ ಮೇಲೂ ರಾಷ್ಟ್ರೀಕರಣವು ಅನ್ವಯಿಸಗೊಳ್ಳುತ್ತದೆ. ಸಾಮಾನ್ಯ ಅಂದಾಜಿನಂತೆ ಜೀವವಿಮೋದ್ಯಮದಲ್ಲಿ ಈಗ ೩೮೦ ಕೋಟಿ ರೂಪಾಯಿಗಳ ಜೀವ ನಿಧಿಯು ಕೂಡಿ ಬಂದಿದೆ. ಒಟ್ಟು ೫೦ ಲಕ್ಷ ಪಾಲಿಸಿಗಳು ಈಗ ಊರ್ಜಿತಾವಸ್ಥೆಯಲ್ಲಿದ್ದು ಪ್ರತಿ ವರ್ಷ ಪ್ರೀಮಿಯಂ ಹಣದ ರೂಪದಲ್ಲಿ ೫೫ ಕೋಟಿ ರೂಪಾಯಿಗಳು ಜಮೆಯಾಗುತ್ತವೆ. ತಲೆಯೊಂದಕ್ಕೆ ೨೫ ರೂಪಾಯಿಗಳಂತೆ ಜೀವವಿಮೆಯು ರಕ್ಷಣೆಯು ಭಾರತೀಯರಲ್ಲಿ ಈಗ ಹಂಚಿ ಬೀಳುತ್ತದೆ. ಆದರೆ ಬೇರೆ ದೇಶಗಳೊಡನೆ ಹೋಲಿಸಿದರೆ ಈ ಪ್ರಮಾಣವು ತೀರ ಅತ್ಯಲ್ಪವಾಗಿದೆ: ಉದಾಹರಣೆಗೆ ಬ್ರಿಟನಿನಲ್ಲಿ ತಲೆಯೊಂದಕ್ಕೆ ೧೮೪೦, ಆಸ್ಟ್ರೇಲಿಯದಲ್ಲಿ ೨೫೪೪, ಕೆನಡದಲ್ಲಿ ೭೭೪೭ ಮತ್ತು ಅಮೇರಿಕದಲ್ಲಿ ೮೩೭೫ ರೂಪಾಯಿಗಳ ಜೀವವಿಮೆಯಿದೆ. ವಿಮೆ ಇಳಿಸುವುದರಲ್ಲಿ ಭಾರತೀಯರು ಹಿಂದುಳಿದಿರುವುದಕ್ಕೆ ಹಣವನ್ನು ಉಳಿಸುವಷ್ಟು ಅವರ ಸಾಂಪತ್ತಿಕ ಸ್ಥಿತಿಯು ಉತ್ತಮವಿಲ್ಲದಿರುವುದು ಒಂದು ಕಾರಣವೆಂದು ತೋರುವುದಾದರೂ ಖಾಸಗಿ ಕ್ಷೇತ್ರದಲ್ಲಿ ಇದು ವರೆಗೆ ನಡೆದ ಚಟುವಟಿಕೆಯು ವೇಗವು ಜೀವವಿಮೆಯ ಸಂದೇಶವು ಪ್ರತಿ ಹಳ್ಳಿಯಲ್ಲಿಯೂ ಮೊಳಗುವಷ್ಟು ಹೆಚ್ಚಿಲ್ಲವೆಂಬುದು ಇದಕ್ಕೂ ಪ್ರಬಲವಾದ ಕಾರಣ ಎನ್ನಬಹುದು. ಸರಕಾರದವರು ಈಗ ಭಾರತದ ೮೫೦೦ ಪಟ್ಟಣಗಳಲ್ಲಿಯ ೬ ಕೋಟಿ ಜನರಿಗಷ್ಟೇ ಸುಪರಿಚಿತವಿರುವ ಜೀವ ವಿಮೆಯ ಸೌಲಭ್ಯವನ್ನು ೫,೬೫,೬೫೫ ಹಳ್ಳಿಗಳಲ್ಲಿ ಚದರಿರುವ ೩೦ಕೋಟಿ ಗ್ರಾಮೀಣ ಭಾರತೀಯರಿಗೆ ಪರಿಚಯ ಮಾಡಿಸಿಕೊಡಲು ಉದ್ದೇಶಿಸಿದ್ದಾರೆ.

ಉಳಿತಾಯದ ಮಾರ್ಗ

ಸರಕಾರವು ಜೀವವಿಮೆಯನ್ನು ಸಮಾಜವಾದಿ ದೃಷ್ಟಿ ಕೋಣದಿಂದ ನೋಡುತ್ತದೆ. ಇಲ್ಲಿ ಆರ್ಥಿಕ ಸಂರಕ್ಷಣೆಗೂ ಪ್ರಜೆಗಳ ಕ್ಷೇಮಾಭ್ಯುದಯಕ್ಕೂ ಮಹತ್ವವು ಸಲ್ಲುತ್ತದೆ. ಹಣ ಕಾಸಿನ ನೆಲೆಯಿಂದ ನೋಡಿದರೆ, ಪಾಲಿಸಿದಾರರು ತಮ್ಮ ಉಳಿತಾಯದ ಹಣವನ್ನು ಜೀವ ವಿಮೆಯಲ್ಲಿ ತೊಡಗಿಸುವ ಮೂಲಕ ಭಂಡವಾಳವನ್ನು ರೂಪಿಸುತ್ತಾರೆ ಈ ಅಪಾರ ಭಂಡವಾಳವು ಸಮಾಜಕ್ಕೆ ಹಿತಕರವಾದ ಉಪಯುಕ್ತ ಉತ್ಪಾದಕ ಕಾರ್ಯಗಳಲ್ಲಿ ವಿನಿಯೋಗವಾಗಬೇಕೇ ಹೊರತು, ದೈರೆಕ್ಟರುಗಳಂಥ ಕೆಲವೇ ಮಂದಿಯ ಸ್ವಾರ್ಥಪರ ಕೈವಾಡಕ್ಕೆ ಅದು ಬಲಿಯಾಗ ಕೂಡದು ಎಂದು ಸರಕಾರ ಬಯಸುತ್ತದೆ. ಅಷ್ಟೇಯಲ್ಲದೇ ಜನರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಬಹಳವಾಗಿ ಪೋಷಿಸಲು ಜೀವವಿಮೆಯು ನೆರವಾಗುವುದರಿಂದ ಅಭಿವೃದ್ಧಿ

ಅಮೇರಿಕದ ಚುನಾವಣೆ

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಐಕರ ಸಂಕಲ್ಪ

ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಇದು ಚುನಾವಣೆಯ ವರ್ಷ. ಈಗ ಅಲ್ಲಿ ಆಡಳಿತ ನಡೆಸುತ್ತಿರುವ ಅಧ್ಯಕ್ಷ ಐಸೆನ್‌ಹೋವರರು ರಿಪಬ್ಲಿಕನ್ ಪಕ್ಷದಿಂದ ಆರಿಸಿ ಬಂದವರಾಗಿದ್ದಾರೆ. ಈ ಸಲದ ಚುನಾವಣೆಗೆ ಅವರು ಪುನಃ ಸ್ಪರ್ಧಿಸುವರೇ ಏನೆಂಬ ಬಗ್ಗೆ ಮೊನ್ನೆ ಮೊನ್ನೆಯವರೆಗೆ ಖಚಿತವಾಗಿ ಏನೂ ತಿಳಿದಿರಲಿಲ್ಲ.

ಐಕರ ನಿರ್ಧಾರ

ಐಕರು ಕೆಲವು ತಿಂಗಳ ಹಿಂದೆ ಹೃದ್ರೋಗವೊಂದಕ್ಕೆ ಬಲಿಬಿದ್ದರು ಈಗ ಅವರು ಅದರಿಂದ ಬಿಡುಗಡೆ ಹೊಂದಿ ಸಂಪೂರ್ಣ ಆರೋಗ್ಯವನ್ನು ಸಂಪಾದಿಸಿದ್ದಾರೆ. ಅವರ ಚಿಕಿತ್ಸೆ ನಡೆಸಿದ ವೈದ್ಯರು ಇನ್ನು ಮುಂದೆ ಐಕರು ಅಮೇರಿಕದ ಅಧ್ಯಕ್ಷನೆಂದು ತನ್ನ ಮೇಲೆ ಬಿದ್ದಿರುವ ಕೆಲಸದ ಭಾರಕ್ಕೆ ಹೆಗಲು ಕೊಡಬಹುದೆಂದು ಸಲಹೆ ಮಾಡಿದ್ದಾರೆ. ವೈದ್ಯರ ಈ ಅಭಿಪ್ರಾಯ ಬಲದ ಮೇಲಿಂದ ಐಕರು ಪುನಃ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ನಿರ್ಧರಿಸಿರುವರೆಂದು ತಿಳಿದು ಬರುತ್ತದೆ.

ಡೆಮೊಕ್ರಾಟರ ಪ್ರತಿ ಸ್ಪರ್ಧೆ

ಅಮೇರಿಕದಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಲ್ಕು ವರ್ಷಗಳ ಕಾಲಾವಧಿಯಿದೆ. ಐಕರು ಗೆದ್ದು ಬಂದ ಚುನಾವಣೆಯು ೧೯೫೨ನೇ ನವಂಬರದಲ್ಲಿ ನಡೆಯಿತು. ಈ ಸಲದ ಚುನಾವಣೆಯೂ ಮುಂದಿನ ನವಂಬರದಲ್ಲಿ ನೆರವೇರುತ್ತದೆ. ಅಮೇರಿಕದ ಇನ್ನೊಂದು ಪ್ರಬಲ ಪಕ್ಷದವರಾದ ಡಿಮೊಕ್ರಾಟರೂ ಬಹಳ ಉತ್ಸಾಹದಿಂದ ಚುನಾವಣೆಯಲ್ಲಿ ಭಾಗ ವಹಿಸಲು ಹಾತೊರೆಯುತ್ತಿದ್ದಾರೆ. ಈ ಪಕ್ಷದ ಪತಿಯಿಂದ ಐಕರೊಡನೆ ಪ್ರತಿಸ್ಪರ್ಧೆಗೆ ನಿಲ್ಲುವ ಹುರಿಯಾಳು ಅಡ್ಲ್ಯೈ ಸ್ಟೀವನ್‌ಸನ್ ಎಂದು ಕಾಣುತ್ತದೆ. ಕಳೆದ ಸಲವೂ ಇವರು ಐಕರನ್ನು ಎದುರಿಸಿ, ಸೋತಿದ್ದರು.

ರಿಪಬ್ಲಿಕನ್ನರ ಆನಂದ

ತಾನು ಚುನಾವಣೆಯಲ್ಲಿ ಗೆದ್ದು ಬರುವುದಕ್ಕೋಸ್ಕರ ಮನೆ ಮನೆಗೆ ಹೋಗಿ ಮತದಾರರನ್ನು ಒಲಿಸುವುದಕ್ಕೆ ಸಾಧ್ಯವಾಗದೆಂದು ಐಕರು ಈಗಾಗಲೇ ಹೇಳಿದ್ದಾರೆ. ಆದರೆ ಇದರಿಂದ ರಿಪಬ್ಲಿಕನ್ನರ ಎದೆಗುಂದಿಲ್ಲ. ಹಾಗೆ ಮತದಾರರನ್ನು ಪ್ರತ್ಯಕ್ಷವಾಗಿ ಯಾಚಿಸಬೇಕಾದ ಆವಶ್ಯಕತೆ ಬರಲಿಕ್ಕಿಲ್ಲವೆಂದು ಐಕರ ಬೆಂಬಲಿಗರು ಹೇಳುತ್ತಾರೆ. ಅಮೇರಿಕದಲ್ಲಿ ಸದ್ಯಕ್ಕೆ ೩೫೦ ಲಕ್ಷ ಮನೆಗಳಲ್ಲಿ ಟೆಲಿವಿಜನ್ ಸೌಲಭ್ಯವಿದೆ. ಅಧ್ಯಕ್ಷ ಐಕರು ತಮ್ಮ ರಾಜಧಾನಿಯಲ್ಲಿದ್ದುಕೊಂಡೇ ಟೆಲಿವಿಜನಿನ ಮೂಲಕ ಹೆಚ್ಚಿನ ಮತದಾರರ ಮುಂದೆ ಕಾಣಿಸಿಕೊಂಡು, ಅವರಿಗೆ ತಮ್ಮ ಬಿನ್ನಹವನ್ನು ಮಾಡಿಕೊಳ್ಳಬಹುದೆಂದು ಇವರು ಸೂಚಿಸಿದ್ದಾರೆ. ಪಕ್ಷದ ಇತರ ಪ್ರಭೃತಿಗಳು ಬೇಕಾದರೆ ಮತದಾರರನ್ನು ಮುಖತಃ ಕಂಡು ಅಧ್ಯಕ್ಷ ಐಕರಿಗಾಗಿ ಮತ ಕೇಳಬಹುದೆಂದೂ ಹೇಳಲಾಗುತ್ತದೆ.

ಜನಪ್ರೀತ ಅಧ್ಯಕ್ಷ

ಸಾಮಾನ್ಯವಾಗಿ ಐಕರು ಹೆದರಬೇಕಾದ ಪ್ರಮೇಯವೇನೂ ಇಲ್ಲ. ಅವರು ಅಮೇರಿಕದ ಜನರಿಗೆಲ್ಲ ಈಗ ಸುಪರಿಚಿತರಾಗಿರುವುದರಿಂದ ಅಧ್ಯಕ್ಷ ಸ್ಥಾನಕ್ಕೆ ಮರಳಿ ನಿಲ್ಲುವಾಗ, ತನ್ನ ಪರಿಚಯವನ್ನು ಇತರ ಹುರಿಯಾಳುಗಳಂತೆ ಹೊಸತಾಗಿ ಮಾಡಿಸಿ ಕೊಡಬೇಕಾಗುವುದಿಲ್ಲ. ಹಿಂದೆ ಒಮ್ಮೆ ಅಧ್ಯಕ್ಷರಾಗಿದ್ದ ೧೨ ಮಂದಿ ಅಧ್ಯಕ್ಷ ಸ್ಥಾನದ ಇನ್ನೊಂದು ಅವಧಿಗೆ ಸ್ಪರ್ಧಿಸಿದ್ದರು. ಅವರಲ್ಲಿ ಎಂಟು ಮಂದಿ ಗೆದ್ದು ಬಂದಿದ್ದರು. ಐಕರ ಪಾಲಿಗಾದರೂ ಜಯಲಾಭವೇ ಆದೀತು. ಏಕೆಂದರೆ ಈಗಾಗಲೇ ಐಕರಿಗೆ ೭೭% ಅಮೇರಿಕನ್ನರ ಪ್ರೀತಿ ದೊರೆತಿದೆಯೆಂದು ಅನೇಕ ಬಗೆಯಿಂದ ಕ್ರೋಢೀಕರಿಸಿದ ಅಂಕೆ ಸಂಖ್ಯೆಗಳು ಹೇಳುತ್ತವೆ.

ಮತದಾರರ ಭಯ

ಪ್ರತಿಪಕ್ಷದವರೆನಿಸಿದ ಡೆಮೋಕ್ರಾಟರಲ್ಲಿ ಸಹ ಐಕರು ಜನಪ್ರೀತರಾಗಿದ್ದಾರೆಂಬುದನ್ನು ಮೇಲಿನ ಅಂಕೆ ಸಂಖ್ಯೆ ಅಪ್ರತ್ಯಕ್ಷವಾಗಿ ಸೂಚಿಸುತ್ತದೆ. ಆದರೆ ಚುನಾವಣೆಯಲ್ಲಿ ಸ್ಪರ್ಧಿಸದಿರುವಷ್ಟು ನಿರ್ವೀರ್ಯತೆಯನ್ನು ಡೆಮೊಕ್ರಾಟರು ತೋರಿಸುವುದು ನಾಚಿಕೆಗೇಡಿನ ವಿಷಯವಾದೀತು. ಆದುದರಿಂದ ಅವರು ಐಕರನ್ನು ವಿರೋಧಿಸಲು ಉಪಾಯಾಂತರವನ್ನು ಹುಡುಕಬೇಕಾಗಿದೆ. ಜನಪ್ರಿಯತೆಯ ದೃಷ್ಟಿಯಿಂದ ಪ್ರಬಲ ಅಧ್ಯಕ್ಷನೆನಿಸಿದ ಐಕರನ್ನು ಅವರ ದೇಹಾರೋಗ್ಯವು ಯಾವ ಗಳಿಗೆಯಲ್ಲೂ ಕೆಡಬಹುದೆಂದು ಮತದಾರರಿಗೆ ಭಯ ಹುಟ್ಟಿಸಿ ಅಧಿಕಾರದಿಂದ ಉರುಳಿಸಬೇಕೆಂದು ಡೆಮೊಕ್ರಾಟರು ಸಂಕಲ್ಪಿಸಿದಂತಿದೆ ಸದಾರೋಗಗ್ರಸ್ತನಾದ ಅಧ್ಯಕ್ಷನ ಆಡಳಿತವು ಸುಖಕರವಾಗಲಾರದೆಂಬುವೇ ಡೆಮೊಕ್ರಾಟರ ಚಳವಳದ ಪಲ್ಲವಿಯಾಗಬಹುದು.

ಪ್ರಯತ್ನಗಳಿಗೆ ಆಗತ್ಯವೆನಿಸಿದ ಹಣವು ಜನರಿಂದ ಬರುವಂತೆ ಈ ಉಳಿತಾಯ ಮಾರ್ಗವನ್ನು ಸುಗಮಗೊಳಿಸಬೇಕೆಂದೂ ಸರಕಾರ ಇಚ್ಛಿಸುತ್ತದೆ. ಆದುದರಿಂದ ಜೀವವಿಮೋದ್ಯಮದಲ್ಲಿ ಸಂಗ್ರಹವಾಗುವ ಹಣದ ಲಾಭವನ್ನು ಪಡೆಯಲಿಕ್ಕಾಗಿ ರಾಷ್ಟ್ರೀಕರಣಕ್ಕೆ ಸರಕಾರ ಮನಸ್ಸು ಮಾಡಿತು. ಸರಕಾರಕ್ಕೆ ಹಣದಮೇಲೆ ಕಣ್ಣಿರುವುದಾದರೆ, ಅದು ಶಾಸನದ ಮೂಲಕ ಹಣವನ್ನು ಹೆಚ್ಚು ಪ್ರಮಾಣದಲ್ಲಿ ಪಡೆಯಲು ನೋಡಬಹುದಿತ್ತೆಂದು ಕೇಳಲಾಗುತ್ತದೆ-ಆದರೆ ಸರಕಾರವು ಶಾಸನಿಕ ನಿಯಂತ್ರಣವೊಂದರಿಂದಲೇ ಎಲ್ಲ ಅನಿಷ್ಟಗಳನ್ನು ಪರಿಹರಿಸಲಾಗುವುದಿಲ್ಲವೆಂಬ ತೀರ್ಮಾನಕ್ಕೆ ಈಗ ಬಂದಿದೆ. ವಿಮಾ ಶಾಸನದಂತೆ ಜೀವ ನಿಧಿಯ ೫೫% ಹಣವನ್ನು ಸರಕಾರದ ಭದ್ರತಾ ಪತ್ರಗಳಲ್ಲಿ ನಿಕ್ಷೇಪಿಸಬೇಕೆಂಬ ನಿರ್ಬಂಧ ವಿದ್ದರೂ ಈ ಭದ್ರತಾ ಪತ್ರಗಳನ್ನೇ ದುರುಪಯೋಗಪಡಿಸಿ ಸ್ವಾರ್ಥ ಸಾಧಿಸಿದ ಉದಾಹರಣೆಗಳು ಬೆಳಕಿಗೆ

(೯ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

HIGH CLASS WATCHES.
WATERPROOF SHOCKPROOF
EACH GTD. 10 YEARS.
ANY DESIGN

No. 80 OR 82 WATERPROOF
15 JEWELS 40/-
17 JEWELS 50/-

No. 80 OR 82 NON-WATERPROOF LENS SHAPE
15 JEWELS R/G. 31/-
15 ,, SUPERIOR 33/-

CALCUTTA WATCH Co.
Post Box No. 12203, CALCUTTA.

ಕೇಂದ್ರ ಸರಕಾರದ ಮುಂಗಡಪತ್ರ

ಕೊರತೆ ತುಂಬಿಸಲು ೧೪ ಬಗೆಯ ಹೊಸ ತೆರಿಗೆ

ಕೇಂದ್ರದ ಅರ್ಥ ಸಚಿವರಾದ ಶ್ರೀ.ಸಿ. ಡಿ. ದೇಶಮುಖರು ತಮ್ಮ ಆರನೇ ಮುಂಗಡ ಪತ್ರವನ್ನು ಇದೇ ೨೯ನೇ ಫೆಬ್ರವರಿಯಂದು ಲೋಕ ಸಭೆಯ ಮುಂದೆ ಮಂಡಿಸಿದರು. ಈ ಮುಂಗಡ ಪತ್ರದ ಕುರಿತು ಹಲವು ಊಹಾಪೋಹಗಳೆದ್ದಿದ್ದುವು. ಸರಕಾರವು ಪ್ರವರ್ತಿಸಿರುವ ಮೊದಲನೇ ಪಂಚವಾರ್ಷಿಕ ಯೋಜನೆಯ ಅವಧಿಯು ಮುಗಿದು ಎರಡನೇ ಯೋಜನೆಯನ್ನು ಪ್ರವೇಶಿಸುವ ಹೊಸ್ತಿಲಿದು. ಅಲ್ಲದೆ, ದೇಶದ ಮುಂದೆ ಸಮಾಜವಾದಿ ಮಾದರಿಯ ಸಮಾಜ ರಚನೆಯ ಆದರ್ಶವನ್ನು ಇನ್ನಷ್ಟು ಸ್ಫುಟವಾಗಿ ಮಂಡಿಸಿದ ಅಮೃತಸರದ ಕಾಂಗ್ರೆಸು ಅಧಿವೇಶನದ ಹಿನ್ನೆಲೆಯಲ್ಲಿ ರೂಪುಗೊಳ್ಳುವ ಮುಂಗಡ ಪತ್ರವಿದು. ಹೀಗಿದ್ದರೂ ಮುಂಗಡ ಪತ್ರವು ಪ್ರಕಟವಾದ ತರುವಾಯ ಹೆದರುತ್ತಿದ್ದ ವರ್ಗಗಳಿಗೆ ತುಸು ಸಮಾಧಾನವಾಗಿದೆ; ಜನರಿಗಾದರೂ ಯೋಜನೆಯ ಪರಿಣಾಮವಾಗಿ ಅತಿರೇಕ ಭಾರಕ್ಕೆ ಹೆಗಲು ಕೊಡಬೇಕಾಗಿ ಬಂದಿಲ್ಲ. ಬಡವ, ಮಧ್ಯಮ ಹಾಗು ಶ್ರೀಮಂತ ಎಂಬೀ ಮೂರೂ ವರ್ಗಗಳಲ್ಲಿ ಯಾರಿಗೂ ಅಸಹನೀಯವೆನಿಸದಂತೆ ದೇಶದ ಆರ್ಥಿಕ ಸಮತೋಲನವೂ ಕೆಡದಂತೆ, ಸಮಾಜವಾದಿ ಆದರ್ಶವನ್ನು ಮುಟ್ಟಲು ಪೃಥವಾಗಿ ಪ್ರಯತ್ನಿಸಿದ ಮುಂಗಡಪತ್ರವೆಂದು ಸಾಮಾನ್ಯ ಪ್ರತಿಕ್ರಿಯೆಯಿಂದ ಹೇಳಬಹುದಾಗುತ್ತದೆ.

ಸಾಮಾನ್ಯ ಆಯವ್ಯಯ

ಶ್ರೀ ದೇಶಮುಖರು ಕೊರತೆಯ ಮುಂಗಡಪತ್ರವನ್ನೆ ಮಂಡಿಸಿದ್ದಾರೆ—ಆದರೆ, ಈ ಸಂದರ್ಭದಲ್ಲಿ ಅವರು ಮುಂದಿಟ್ಟ ಕಳೆದ ವರ್ಷದ (೧೯೫೫-೫೬) ಆಯವ್ಯಯವನ್ನು ಕುರಿತು ತಿದ್ದಿದ ಅಂದಾಜು ಹೆಚ್ಚಿನ ತೃಪ್ತಿಯನ್ನು ಕೊಡುತ್ತದೆ. ಕಳೆದ ವರ್ಷದ ಸಾಮಾನ್ಯ ಮುಂಗಡ ಪತ್ರವು ೧೭೩೫ ಲಕ್ಷ ರೂಪಾಯಿಗಳ ಕೊರತೆಯನ್ನು ತೋರಿಸಿದ್ದರೂ ನಿಜವಾಗಿ ೧೫೩೧ ಲಕ್ಷ ರೂಪಾಯಿಗಳ ಉಳಿತಾಯದಲ್ಲಿ ಅದು ಪರಿಣಮಿಸಿದೆ. ಇದಕ್ಕೆ ಎರಡು ಕಾರಣಗಳಿವೆಯೆಂದು ದೇಶಮುಖರು ಹೇಳಿದ್ದಾರೆ—ಸಂರಕ್ಷಣ ವೆಚ್ಚ ೯೫೭ ಲಕ್ಷ ರೂಪಾಯಿಗಳಷ್ಟು ಕಡಿಮೆಯಾದುದು ಒಂದು ಕಾರಣ; ಅಬಕಾರಿ ಸುಂಕವು ೨೦೦೯ ಲಕ್ಷರೂ.ಗಳಷ್ಟು ಹೆಚ್ಚು ಸಂಗ್ರಹವಾದುದು ಇನ್ನೊಂದು ಕಾರಣ. ಆದರೆ ಇಷ್ಟೇ ಒಳ್ಳೆಯ ರೀತಿಯಲ್ಲಿ ಆಯ-ವ್ಯಯವು ಈ ವರ್ಷ ಸಹ ಹೊಂದಿಕೊಳ್ಳುವುದೇ ಎಂಬುದನ್ನು ಭವಿಷ್ಯವೇ ತೋರಿಸಿ ಕೊಡಬೇಕು. ಈಗಿನ ಅಂದಾಜಿನಂತೆ, ಸಾಮಾನ್ಯ ಆಯವ್ಯಯ ಪತ್ರವು ೫೧೮೩ ಲಕ್ಷ ರೂಪಾಯಿಗಳ ಕೊರತೆಯಿಂದ ಕೂಡುತ್ತದೆ. ಶ್ರೀ. ದೇಶಮುಖರು ಇದರಲ್ಲಿ ೩೪೧೫ ಲಕ್ಷ ರೂಪಾಯಿಯಷ್ಟನ್ನು ಸುಮಾರು ೧೪ ಬಗೆಯ ಹೊಸ ತೆರಿಗೆಗಳಿಂದ ತುಂಬಿಸಿಕೊಳ್ಳಲು ಇಚ್ಛಿಸಿದ್ದಾರೆ. ಆದಾಗ್ಯೂ ವರ್ಷಾಂತ್ಯದಲ್ಲಿ ೧೭೬೮ ಲಕ್ಷ ರೂಪಾಯಿಗಳ ಕೊರತೆ ಉಳಿದೇ ಉಳಿಯುತ್ತದೆ. ಇದನ್ನು ತುಂಬಿಸುವ ಪ್ರಯತ್ನ ಸಧ್ಯಕ್ಕಿಲ್ಲ.

ಬಟ್ಟೆಯ ಕರದಲ್ಲಿ ಹೆಚ್ಚಳ

ಕೊರತೆಯನ್ನು ತುಂಬಿಸಿಕೊಳ್ಳಲು ಶ್ರೀ ದೇಶಮುಖರು ಮುಂದಿಟ್ಟ ಸೂಚನೆಗಳಲ್ಲಿ ಕೆಲವು ಜನಸಾಮಾನ್ಯರ ನಿತ್ಯ ಜೀವನದ ಮೇಲೆ ಹೆಚ್ಚಿನ ಪರಿಣಾಮವನ್ನು ಮಾಡುವಂತಿವೆ. ಒರಟು ಧೋತರ ಮತ್ತು ಸೀರೆಗಳನ್ನು ಬಿಟ್ಟು ಉಳಿದೆಲ್ಲ ಬಗೆಯ ಹತ್ತಿ ಬಟ್ಟೆಗಳ ಮೇಲೆ ಚದರ ಗಜಕ್ಕೆ ಆರು ಪೈಯಂತೆ ಅಬಕಾರಿ ಸುಂಕವನ್ನು ಹೆಚ್ಚಿಸಲಾಗುತ್ತದೆ. ಕೈಮಗ್ಗ ಹಾಗು ಖಾದಿ ಬಟ್ಟೆಯನ್ನು ಉಪಯೋಗಿಸುವವರಿಗೆ ಈ ಹೊಸ ತೆರಿಗೆಯಿಂದ ಬಾಧಕ ಬರಲಾರದಾದರೂ ಗಿರಣಿಗಳ ಬಟ್ಟೆಯನ್ನು ಈಗಲೂ ಬಡವರಲ್ಲಿ ಹೆಚ್ಚಿನವರು ಧರಿಸುತ್ತಿರುವುದರಿಂದ ಅವರಿಗೆ ತುಸು ತ್ರಾಸವಾದೀತೆಂದು ಹೇಳಬಹುದು ಆದರೆ ಬಡವರೆಂದು ಭಾವಿಸಲ್ಪಟ್ಟವರು ಸಹ ಈಗ ಹೆಚ್ಚಿನ ಸಾಂಪತ್ತಿಕ ಸ್ಥಿತಿಯನ್ನು ಹೊಂದುತ್ತಾ ನಡೆದಿರುವುದರಿಂದ ದೇಶಾಭ್ಯುದಯಕ್ಕಾಗಿ ೧೫೫೦ ಲಕ್ಷ ರೂಪಾಯಿಗಳಷ್ಟು ಒಟ್ಟು ವಸೂಲಾಗಲಿರುವ ಈ ಹೊಸ ತೆರಿಗೆಯನ್ನು ಸಂತೋಷದಿಂದ ಕೊಡಬಹುದೆಂದು ಆಶಿಸಿದರೆ ತಪ್ಪಾಗದು. ಬಡವರನ್ನು ಕಾಡಿಸಬಹುದಾದ ಇನ್ನೊಂದು ಹೊಸ ತೆರಿಗೆಯೆಂದರೆ ವಿದ್ಯುಚ್ಛಕ್ತಿಯಿಂದ ನಡೆಯುವ ಯಂತ್ರಗಳಲ್ಲಿ ಉತ್ಪಾದಿಸಲ್ಪಟ್ಟ ಅತ್ಯಗತ್ಯವಲ್ಲದ ವನಸ್ಪತಿ ತೈಲಗಳ ಮೇಲೆ ಮೊದಲಿನ ೧೩೫ ಟನ್ನುಗಳನ್ನು ಬಿಟ್ಟು ಉಳಿದೆಣ್ಣೆಯ ಪ್ರತಿ ರಾತಲಿಗೆ ಅರ್ಧಾಣೆಯಂತೆ ಹಾಕಿದ ಕರ. ಇದು ಆಹಾರದಲ್ಲಿ ಉಪಯೋಗಿಸುವ ತೆಂಗಿನೆಣ್ಣೆಗೆ ಸಹ ಅನ್ವಯಿಸುವುದರಿಂದ ನಮ್ಮ ಭಾಗದ ಜನರ ಕಷ್ಟ ಸ್ವಲ್ಪ ಹೆಚ್ಚುವುದೆನ್ನಬಹುದು.

ತಂತಿಯ ದರ ಏರಿತು

ದೊಡ್ಡವರು ಅಥವಾ ಬಡವರೆನ್ನದೆ ಎಲ್ಲರ ಪಾಲಿಗೂ ತೊಂದರೆಯೆನಿಸಬಹುದಾದ ಇನ್ನೊಂದು ತೆರಿಗೆಯ ರೂಪವೆಂದರೆ ರಿಜಿಸ್ಟ್ರೇಶನ್ ಮತ್ತು ಟೆಲಿಗ್ರಾಫ್ ದರದಲ್ಲಿ ಮಾಡಿದ ಹೆಚ್ಚಳ. ಟಪ್ಪಾಲು ರಿಜಿಸ್ಟ್ರೇಶನಿನ ದರವನ್ನು ಆರಾಣೆಯಿಂದ ಎಂಟಾಣೆಗೆ ಏರಿಸಲಾಗುತ್ತದೆ; ಸಾಮಾನ್ಯ ತಂತಿಗಾಗಿ ತೆರಬೇಕಾದ ಕನಿಷ್ಠ ಹಣವನ್ನು ಹನ್ನೆರಡಾಣೆಯಿಂದ ಹದಿಮೂರಾಣೆಗೂ ಎಕ್ಸ್‌ಪ್ರೆಸ್ ತಂತಿಗಾಗಿ ತೆರಬೇಕಾದ ಕನಿಷ್ಠ ಹಣವನ್ನು ಒಂದೂವರೆ ರೂಪಾಯಿಯಿಂದ ಒಂದು ರೂಪಾಯಿ ಹತ್ತಾಣೆಗೂ ಹೆಚ್ಚಿಸಲಾಗುತ್ತದೆ. ಟಪ್ಪಾಲು ಮತ್ತು ತಂತಿ ಇಲಾಖೆಯು ಹಳ್ಳಿ ಹಳ್ಳಿಯಲ್ಲೂ ಕೆಲಸ ನಡೆಸುವ ತನ್ನ ಉತ್ಸಾಹದಲ್ಲಿ ನಷ್ಟಕ್ಕೆ ಬಹಳವಾಗಿ ಗುರಿಯಾಗಿದೆ ಎಂಬುದೇ ಹೀಗೆ ದರಗಳನ್ನು ಹೆಚ್ಚಿಸಿದುದರಲ್ಲಿರುವ ಗುಟ್ಟು. ಆದರೆ, ಟಪ್ಪಾಲು ಮತ್ತು ತಂತಿ ಇಲಾಖೆಯು ಜನರ ಸೇವೆಗಾಗಿ ಇವೆ ಎಂಬುದನ್ನು ಸರಕಾರವು ಮರೆಯಬಾರದಾಗಿತ್ತೆಂದು ನಮಗೆ ತೋರುತ್ತದೆ. ಸೇವೆಯನ್ನು ವಿಸ್ತರಿಸುವಾಗ ಹೆಚ್ಚಿನ ವೆಚ್ಚವು ತಾನಾಗಿಯೇ ಆಗುತ್ತದೆ; ಅದನ್ನು ತುಂಬಿಕೊಳ್ಳಲು ಬೇರೆ ಕ್ಷೇತ್ರಗಳಲ್ಲಿ ತೆರಿಗೆ ಹೆಚ್ಚಿಸಬೇಕೇ ಹೊರತು ಸೇವೆಯೇ ದುರ್ಲಭವಾಗುವಂತೆ ಅಥವಾ ಅದನ್ನು ಪಡೆಯುವುದು ತ್ರಾಸದಾಯಕವಾಗುವಂತೆ ಮಾಡುವುದು ಹಿತಕರವೆನಿಸುತ್ತಿಲ್ಲ.

ಅಧಿಕ ಆದಾಯ ಕರ

ಅಬಕಾರಿ ಸುಂಕದಿಂದ ವಸೂಲಾಗುವ ಹಣವು ಹೊಸ ತೆರಿಗೆಗಳಲ್ಲಿ ಹೆಚ್ಚಿನ ಪಾಲನ್ನು ಪಡೆದಿದ್ದರೂ ಶ್ರೀಮಂತ ವರ್ಗದ ಮೇಲೆ ಸಹ ಹಲವು ಬಗೆಯಿಂದ ಭಾರವನ್ನು ಹೊರಿಸಲಾಗಿದೆ. ತೆರಿಗೆ ರಚನೆಯನ್ನು ವಿಚಾರಿಸಿ, ವಿಮರ್ಶಿಸಿದ ಮಥ್ಯಾ ಮಂಡಳದ ಸೂಚನೆ ಮತ್ತು ಯೋಜನಾ ಆಯೋಗವು ಜೊತೆಗೆ ಕೈಗೊಂಡಿದ್ದ ಕೆಲವು ನಿರ್ಧಾರಗಳನ್ನು ತಿಳಿದಿದ್ದ ಶ್ರೀಮಂತ ವಾಣಿಜ್ಯ ವರ್ಗಗಳವರು ದೇಶಮುಖರ ಮುಂಗಡಪತ್ರದಲ್ಲಿ ತಮಗೆ ತೀರ ಅಪ್ರಿಯವಾಗಬಹುದಾದ ಸೂಚನೆಗಳಿರಬಹುದೆಂದು ಭಯಪಟ್ಟಿದ್ದರು. ಉದಾಹರಣೆಗೆ ಒಟ್ಟು ಆದಾಯದ ಮೇಲೆ ಭಾರವಾದ ತೆರಿಗೆ ಹೊರಿಸಲ್ಪಡುವುದೆಂಬ ಅಂಜಿಕೆಗೆ ಪುಷ್ಟಿ ಸಿಕ್ಕಿದ್ದಿತು. ಆದರೆ ದೇಶಮುಖರ ಈ ಸಲದ ಮುಂಗಡ ಪತ್ರವು ಸಮಾಜವಾದಿ ಸಮಾಜದ ರಚನೆಗಾಗಿ ಈಗಲೇ ಇಷ್ಟು ದೂರದ ಹೆಜ್ಜೆಯನ್ನು ಮುಂದಿಡಲು ನೋಡಿಲ್ಲ — ಎರಡನೇ ಯೋಜನಾವಧಿಯ ಮುಂದಿನ ವರ್ಷಗಳಿಗೆ ಅದನ್ನು ಬಾಕಿ ಬಿಟ್ಟಂತೆ ತೋರುತ್ತದೆ. ಆದಾಗ್ಯೂ ಶ್ರೀಮಂತ ವರ್ಗದಿಂದ ವಸೂಲು ಮಾಡಬಹುದಾದಷ್ಟನ್ನು ವಸೂಲು ಮಾಡಿಯೇ ತೀರುವ ಪ್ರಗತಿಪರ ಕ್ರಮಗಳನ್ನು ಅವರು ಯೋಜಿಸಿದ್ದಾರೆ. ವರ್ಷಕ್ಕೆ ೭೦ರಿಂದ ೧೫೦ ಸಾವಿರ ರೂಪಾಯಿ ಆದಾಯವಿರುವ ವರ್ಗಗಳು ತೆರಬೇಕಾದ ತೆರಿಗೆಯನ್ನು ಅವರು ಹೆಚ್ಚಿಸಿದ್ದಾರೆ. ಪರಿಣಾಮದಲ್ಲಿ ಒಂದೂವರೆ ಲಕ್ಷ ರೂಪಾಯಿ ಆದಾಯವುಳ್ಳವರು ಇಷ್ಟರವರೆಗೆ ಉತ್ಪನ್ನದ ೮೮.೩% ಅಂಶವನ್ನು ತೆರಿಗೆಯಾಗಿ ಕೊಡುತ್ತಿದ್ದರೆ ಈಗ ೯೧.೯% ಕರ ರೂಪದಲ್ಲಿ ಸಲ್ಲುವಂತಾಗುತ್ತದೆ.

ಕೊರತೆ ಧನ ವಿನಿಯೋಗ

ಶ್ರೀಮಂತರ ಇತರ ವ್ಯವಹಾರಗಳ ಮೇಲೂ ದೇಶಮುಖರು ಹೆಚ್ಚಿಗೆ ತೆರಿಗೆ ಹೊರಿಸಿದ್ದಾರೆ. ಕಂಪೆನಿಗಳ ಆದಾಯ, ಅವು ಹಂಚುವ ಬೋನಸು ಇತ್ಯಾದಿಗಳ ಮೇಲಿನ ತೆರಿಗೆ ಹೆಚ್ಚಿಸುವುದರಿಂದ ವಾಣಿಜ್ಯಸಂಸ್ಥೆಗಳ ಲಾಭ ಪಡೆಯುವ ವರ್ಗದ ಮನಸ್ಸು ಸ್ವಲ್ಪಮಟ್ಟಿಗೆ ಬೇಸರಗೊಂಡಿದೆ. ಆದರೆ ಜನ ಸಾಮಾನ್ಯರಿಗೆ ಇದು ಕೆಟ್ಟುದೆಂದು ತೋರಲಾರದು. ದೇಶಮುಖರು ಯೋಜನೆಯ ಹಿನ್ನೆಲೆಯಲ್ಲಿ ತಮ್ಮ ಮುಂಗಡ ಪತ್ರವನ್ನು ರೂಪಿಸಿರುವುದರಿಂದ ಹೆಚ್ಚಿನ ಕರಭಾರಕ್ಕೆ ಎಲ್ಲ ವರ್ಗದ ಪ್ರಜೆಗಳೂ ಸಂತೋಷದಿಂದ ಹೆಗಲು ಕೊಡಲೇ ಬೇಕಾಗುತ್ತದೆ. ಅರ್ಥಸಚಿವರ ಅಂದಾಜಿನಂತೆ ಸಾಧ್ಯವಿದ್ದಷ್ಟು ಹೆಚು ಉಪಾಯಗಳನ್ನು ಅವಲಂಬಿಸಿದ ಬಳಿಕವೂ ಸರಕಾರಕ್ಕೆ ಒಟ್ಟಾರೆ ೩೫೬ ಕೋಟಿ

(೭ನೇ ಪುಟ ನೋಡಿರಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಮುಟು ದೋಷಗಳನ್ನು, ಮುಟು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

. ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 | ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! | 1956

THE CANARA BANKING CORPORATION LIMITED
H. Office: UDIPI (S.India).

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೮-೩-'೫೩	೨೭

ಗೋಪ್ಯ ರಕ್ಷಣೆ

ಸಂಸತ್ತಿನಲ್ಲಿ ಕೇಂದ್ರದ ಅರ್ಥ ಸಚಿವರು ಮುಂಗಡ ಪತ್ರವನ್ನು ಮಂಡಿಸುವುದಕ್ಕೆ ಕೆಲವು ದಿನ ಮುಂಚೆಯೇ ಆ ಮುಂಗಡ ಪತ್ರದ ಅಂಶಗಳು ಬಹಿರಂಗವಾಗಿದ್ದವೆಂದು ಈಗ ತಿಳಿದು ಬರುತ್ತದೆ. ಪ್ರತಿಪಕ್ಷದ ಸದಸ್ಯರು ಸರಕಾರದ ಮೇಲೆ ಈ ಆರೋಪವನ್ನು ಹೊರಿಸಿದಾಗ ಅದನ್ನು ಪ್ರಧಾನ ಮಂತ್ರಿಗಳೂ ಅರ್ಥ ಸಚಿವರೂ ಒಪ್ಪಿಕೊಂಡರು. ಮುಂಗಡ ಪತ್ರದ ಅಂಶಗಳು ಹೇಗೆ ಬಹಿರಂಗವಾದವು ಎಂಬುದರ ಬಗ್ಗೆ ಖಚಿತ ವಿವರಗಳೇನೂ ತಿಳಿದಿಲ್ಲ—ಸರಕಾರವು ವಿಚಾರಣೆಯನ್ನು ನಡೆಸಿದೆ; ಅದರ ಫಲಿತಾಂಶವನ್ನು ಸಂಸತ್ತಿಗೆ ತಿಳಿಸಲಾಗುತ್ತದೆ ಎಂದು ಪ್ರಧಾನ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಸದಸ್ಯರಾದರೂ ಇಂಥ ಘಟನೆಗಳನ್ನು ಕಡೆಗಣಿಸಿ ಬಿಡಲಾಗದೆಂದೂ ಬಹಳ ಗಂಭೀರವಾಗಿ ಪರ್ಯಾಲೋಚಿಸುವುದು ಅವಶ್ಯವೆಂದು ಸರಕಾರದ ಮೇಲೆ ಒತ್ತಾಯವನ್ನು ತಂದಿದ್ದಾರೆ. ನೆಹರುಗಳು ವಿಷಯಕ್ಕಿರುವ ಮಹತ್ವದ ಪೂರ್ಣ ಜ್ಞಾನವನ್ನು ಸರಕಾರ ಹೊಂದಿದೆ ಎಂದಿದ್ದಾರೆ. ರಾಜ್ಯ ಸಭೆಯಲ್ಲಿ ಕಮ್ಯುನಿಷ್ಟರ ನಾಯಕ ಶ್ರೀ. ಭೂಪೇಶ ಗುಪ್ತರು ಹೇಳುವಂತೆ ಮುಂಗಡ ಪತ್ರದ ವಿಷಯಗಳಿದ್ದ, ಸ್ಟೈಕ್ಲೊಸ್ಟಾಯಿಲಿನಲ್ಲಿ ಮುದ್ರಿತವಾದ, ಕಾಗದದ ಒಂದೊಂದೂ ಪ್ರತಿಯನ್ನು ಸಾವಿರ ರೂಪಾಯಿ ಬೆಲೆಗೆ ಮುಂಬಯಿಯಲ್ಲಿ ಫೆಬ್ರುವರಿಯ ೨೬ನೇ ದಿನಾಂಕ ಮಾರಲಾಗುತ್ತಿದ್ದಿತು; ಅಂದೆಂದು ಈ ಬೆಲೆ ೫೦೦ ರೂಪಾಯಿಗೂ ಮುಂಗಡ ಪತ್ರವನ್ನು ವಿಧ್ಯುಕ್ತವಾಗಿ ಸಂಸತ್ತಿನಲ್ಲಿ ಮಂಡಿಸಿದ ೨೮ನೇ ದಿನಾಂಕ ಸಂಜೆ ೫ ರೂಪಾಯಿಗೂ ಇಳಿಯಿತು! ಮುಂಬಯಿಯ "ಟೈಮ್ಸ್ ಆಫ್ ಇಂಡಿಯ" ಪತ್ರಿಕೆಯು ತನ್ನ "ಪಟ್ಟಣದ ಟಿಪ್ಪಣಿ" ಎಂಬ ಶೀರ್ಷಿಕೆಯ ಅಡಿಯಲ್ಲಿ ೨೮ನೇ ದಿನಾಂಕ ಮುಂಗಡ ಪತ್ರದ ಎಲ್ಲ ವಿವರಗಳನ್ನು ಪ್ರಸಿದ್ಧಪಡಿಸಿತ್ತೆಂದೂ ಈ ಸದಸ್ಯರು ದೂರಿಕೊಂಡಿದ್ದಾರೆ. ಅರ್ಥ ಸಚಿವರು ಮುಂಬಯಿಯಲ್ಲಿದ್ದ ತಮ್ಮ ಉಪಮಂತ್ರಿ ಶ್ರೀ. ಶಹಾರಿಗೆ ದಿನಾಂಕ ೨೭ರಂದು ಮುಖ್ಯ ಮಂತ್ರಿ ಶ್ರೀ. ಮುರಾರ್ಜಿ ದೇಸಾಯಿಯವರು ಮುಂಗಡ ಪತ್ರದ ಅಂಶವಿದ್ದ ಕಾಗದದ ಪ್ರತಿಯನ್ನು ನೀಡಿದರೆಂದೂ ಕೂಡಲೇ ಸರಕಾರವು ಇದು ಬಹಿರಂಗವಾದ ಬಗ್ಗೆ ವಿಚಾರಣೆ ನಡೆಸತೊಡಗಿತೆಂದೂ ತಿಳಿಸಿದ್ದಾರೆ. ಈ ಸಲದ ಮುಂಗಡಪತ್ರದಲ್ಲಿ ವರ್ತಕ ವರ್ಗವು ಮುಂದಾಗಿ ಸುದ್ದಿ ತಿಳಿದುಕೊಂಡು, ಲಾಭಗಳಿಸುವುದಕ್ಕೆ ಬೇಕಾದ ಸೂಚನೆಗಳು ಅಷ್ಟೇನೂ ಇರಲಿಲ್ಲವೆಂದು ಒಪ್ಪಬಹುದು. ಆದರೆ, ಗೋಪ್ಯ ರಕ್ಷಣೆಯನ್ನು ಭಂಗಪಡಿಸಿ, ಗೋಪ್ಯ ಸ್ಫೋಟನಕ್ಕೆಯೇ ಪ್ರೋತ್ಸಾಹ ಕೊಡುವ ಚಟುವಟಿಕೆಗಳ ದೂರಗಾಮಿ ಪರಿಣಾಮಗಳನ್ನು ಎಂದಿಗೂ ಅಲಕ್ಷಿಸತಕ್ಕದ್ದಲ್ಲ. ತೆರಿಗೆಯ ಸೂಚನೆಗಳನ್ನು ಬಹಳ ಗೋಪ್ಯವಾಗಿ ಜತನದಿಂದ ಕಾಯ್ದಿಡ ಬೇಕಾಗುತ್ತದೆ; ಇಲ್ಲದಿದ್ದರೆ ವಾಣಿಜ್ಯ ಸಂಸ್ಥೆಗಳು ಸ್ವಲಾಭಕ್ಕಾಗಿ ಸಾರ್ವಜನಿಕರಿಗೆ ಉಪದ್ರವನ್ನು ಕೊಡಲು ತೊಡಗುತ್ತವೆ. ಎಷ್ಟೇ ಜಾಗರೂಕತೆಯನ್ನು ವಹಿಸಿದರೂ ಕೆಲವೊಮ್ಮೆ ಗೋಪ್ಯ ಸ್ಫೋಟನ ನಡೆಯುವುದುಂಟು. ಭಾರತದ ಹಣ ಮಂತ್ರಿ ಸಹ ಹಿಂದೆ ಕೆಲವುವೇಳೆ ಹೀಗೆ ಗುಟ್ಟು ರಟ್ಟಾದುದಿದೆ. ಪ್ರಜಾಪ್ರಭುತ್ವದ ಮಾತೃ ಭೂಮಿ ಎಂದೆನಿಸಿದ ಬ್ರಿಟನಿನಲ್ಲಿ ಸಹ ಅನೇಕ ಸಲ ಗಟ್ಟಿನ ಸುದ್ದಿಯು ಆ ಕಾಲದಲ್ಲಿ ಹೊರಬಿದ್ದಿದೆ. ಇಂಥ ಸಂದರ್ಭಗಳಲ್ಲಿ ತಮ್ಮ ವೈಯಕ್ತಿಕ ತಪ್ಪಿಗೆ ಪಶ್ಚಾತ್ತಾಪಪಟ್ಟು ಅರ್ಥಸಚಿವ ಸ್ಥಾನದಲ್ಲಿದ್ದ ಮಹಾನುಭಾವರು ಮಂತ್ರಿಮಂಡಳದ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟ ನಿದರ್ಶನಗಳೂ ಅಲ್ಲಿ ಕಂಡು ಬರುತ್ತವೆ. ಒಬ್ಬ ನಿರ್ದಿಷ್ಟ ವ್ಯಕ್ತಿಯು ಮಾಡಿದ ತಪ್ಪನ್ನು ಆತನನ್ನೆ ಅಧಿಕಾರದಿಂದ ನಿವೃತ್ತಿಪಡಿಸುವ ಮೂಲಕ ಸುಧಾರಿಸಿಕೊಳ್ಳಬಹುದು. ಆದರೆ ಎಲ್ಲಿ, ಹೇಗೆ, ಯಾರಿಂದ ರಹಸ್ಯವು ಬಯಲಾಯಿತೆಂದು ಖಚಿತವಾಗಿ ತಿಳಿದಿರದ, ಭಾರತದಲ್ಲಿ ಈ ಸಲ ಘಟಿಸಿದಂಥ, ಪ್ರಸಂಗಗಳಲ್ಲಿ ಅರ್ಥಸಚಿವರನ್ನು ಮನೆಗೆ ಹೋಗಿ ಎಂದು ಹೇಳಿದ ಮಾತ್ರಕ್ಕೆ ಕೆಲಸವಾಗದು. (ಹಾಗೆ ಹೇಳುವ ಆಗತ್ಯವೇ ಇಲ್ಲಿಲ್ಲ— ಏಕೆಂದರೆ ಅರ್ಥಸಚಿವರು ಸ್ವತಃ ಮುಂಗಡ ಪತ್ರದ ಅಂಶವನ್ನು ಅಕಾಲಿಕವಾಗಿ ಬಹಿರಂಗಪಡಿಸಿಲ್ಲ) ಸರಕಾರದ ದೈನಂದಿನ ಆಡಳಿತ ಯಂತ್ರದಲ್ಲಿರುವ ದೋಷವನ್ನೇ ತಿದ್ದಿ ಸುಧಾರಿಸಬೇಕಾಗುತ್ತದೆ. ಸರಕಾರದ ನೌಕರಿಯಲ್ಲಿರುವವರು ತಮ್ಮ ಹೊಣೆಗಾರಿಕೆಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳದೆ ವರ್ತಕವರ್ಗದ ಆಮಿಷಕ್ಕೆ ಸುಲಭದಲ್ಲಿ ಬಲಿಬಿದ್ದು ಸರಕಾರದ ಗೋಪ್ಯ ರಕ್ಷಣೆಗೆ ಭಂಗವನ್ನು ತರುತ್ತಾರೆಂದು ಸಾಮಾನ್ಯವಾಗಿ ನಾವು ಭಾವಿಸಬಹುದು. ವಾಣಿಜ್ಯ ಪ್ರಪಂಚದಲ್ಲಿ ತೆರಿಗೆಯ ಸೂಚನೆಗಳ ವಿವರವು ಮುಂದಾಗಿ ದೊರೆತರೆ ಕೃತಕ ಅಭಾವವನ್ನು ಸೃಷ್ಟಿಸಿ, ಕಳ್ಳತನದಿಂದ ಮಾಲುಗಳನ್ನು ಅಡಗಿಸಿಟ್ಟು ಹೆಚ್ಚು ಬೆಲೆಗೆ ಅವನ್ನು ಮಾರುವುದು ವರ್ತಕರಿಗೆ ಸಾಧ್ಯವಾಗುತ್ತದೆ- ಹೀಗೆ ಬರುವ ಅಪಾರ ಲಾಭದಲ್ಲಿ ಒಂದಂಶವನ್ನು ತೆರಿಗೆಯ ಸೂಚನೆಯನ್ನು ಮುಟ್ಟಿಸಿದ ಸರಕಾರಿ ನೌಕರನಿಗೆ ಕೊಟ್ಟು ಬಿಟ್ಟರೆ ಆಯಿತು! ಇಂಥ ಹೇಯ ವರ್ತನೆಗಳನ್ನು ಸರಕಾರವು ಎಷ್ಟಕ್ಕೂ ನಡೆಯಗೊಡಲಾಗದು. ಸಾರ್ವಜನಿಕ ರಂಗವನ್ನು ವಿಸ್ತಾರಗೊಳಿಸುತ್ತಾ ಸಮಾಜವಾದಿ ಮಾದರಿಯ ಕಡೆಗೆ ವಿಶೇಷ ಒಲವು ಬೀರುತ್ತಾ ನಡೆದಿರುವ ಸರಕಾರದೊಡನೆ ಗೋಪ್ಯ ವಿಷಯಗಳು ವಿಂಳವಾಗುತ್ತಾ ಬರುತ್ತಿವೆ ಎಂಬುದೇನೋ ನಿಜ. ತೆರಿಗೆಗಳು ಹೆಚ್ಚಾಗಿ ಹೊರಿಸಲ್ಪಡುವ ಕುರಿತಾಗಿ ಈಗ ಯಾರಿಗೂ ಸಂಶಯವುಳಿದಿಲ್ಲ; ಈ ತೆರಿಗೆ ಯಾವ ವಸ್ತುಗಳ ಮೇಲೆ ಬೀಳಬಹುದೆಂಬುದನ್ನಾದರೂ ಸ್ವಲ್ಪ ಬುದ್ಧಿವಂತಿಕೆಯಿದ್ದರೆ ಮೊದಲೇ ತರ್ಕಿಸಿ ನಿರ್ಧರಿಸಬಹುದು—ಏಕೆಂದರೆ, ಸರಕಾರದ ತೆರಿಗೆ ಧೋರಣೆಯು ಸಾಮಾನ್ಯವಾಗಿ ಬಹಿರಂಗ ಚರ್ಚೆಯ ವಿಷಯವಾಗಿ ಪ್ರಜಾಪ್ರಭುತ್ವ ಪದ್ಧತಿಯು ಇಂದಿನ ಭಾರತದಲ್ಲಿ ಪರಿಣಮಿಸಿದೆ; ಮತ್ತು ಸರಕಾರದಲ್ಲಿರುವ ವರಿಷ್ಠರು ತಮ್ಮ ಮನೋಗತವನ್ನು ಆಗಾಗ್ಗೆ ಪ್ರಕಟಪಡಿಸುತ್ತಲೇ ಇರುತ್ತಾರೆ. ಆದರೆ ನಿರ್ದಿಷ್ಟ ವಿಷಯವೊಂದನ್ನು ಜವಾಬ್ದಾರಿಯ ತಿಲಾಂಶ ಭಾವನೆಯೂ ಇಲ್ಲದೆ ಸ್ವಾರ್ಥಕ್ಕಾಗಿ ಬಹಿರಂಗಪಡಿಸುವುದನ್ನು ಪ್ರಜಾಪ್ರಭುತ್ವದ ಸಾಮಾನ್ಯ ಸಂಪ್ರದಾಯದೊಡನೆ ಸಂಹೋಲಿಸುವುದು ಯೋಗ್ಯವಲ್ಲ. ಶಿಸ್ತಿನ ಪಾಲನೆಯ ದೃಷ್ಟಿಯಿಂದಲಾದರೂ ಸರಕಾರವು ತನ್ನ ಆಡಳಿತ ಯಂತ್ರದ ಬಗ್ಗೆ ಹೆಚ್ಚಿನ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿದೆ. ಬ್ರಿಟಿಷರು ಈ ದೇಶವನ್ನು ಆಳುತ್ತಿದ್ದಾಗ ಶಿಸ್ತು ಪಾಲನೆ, ಗೋಪ್ಯ ರಕ್ಷಣೆ ಇತ್ಯಾದಿ ವಿಷಯಗಳ ಕುರಿತು ಒಳ್ಳೆಯ ಸಂಪ್ರದಾಯವನ್ನು ಹಾಕಿ ಕೊಟ್ಟಿದ್ದರು. ನಮ್ಮ ದುರ್ದೈವದಿಂದ, ನಮ್ಮವರೇ ಅಧಿಕಾರ ಸ್ಥಾನವನ್ನು ಏರಿದ ಬಳಿಕ, ಈ ಸತ್ಸಂಪ್ರದಾಯಗಳು ಅಳಿಸಿ ಹೋಗತೊಡಗಿವೆ. ಆಡಳಿತದಲ್ಲಿರುವ ಈ ಮಾದರಿಯ ಶೈಥಿಲ್ಯಗಳನ್ನು ನಿವಾರಿಸದಿದ್ದರೆ, ಸರಕಾರವು ತನ್ನ ಕರ್ತವ್ಯವನ್ನು ಸುಗಮತೆಯಿಂದ ಸಾಗಿಸಿಕೊಂಡು ಹೋಗಲಾರದು. ಸರಕಾರದ ರಹಸ್ಯಗಳು ಸಮಯವಲ್ಲದ ಸಮಯದಲ್ಲಿ ಬಹಿರಂಗಗೊಂಡರೆ, ಅಂಥ ಸರಕಾರವು ಪತನದ ಹಾದಿಯನ್ನು ತುಳಿಯಬೇಕಾಗಿಯೂ ಬರಬಹುದು. ಗತಕಾಲದ ಇತಿಹಾಸದಲ್ಲಿ ಇದಕ್ಕೆ ವಿಪುಲ ನಿದರ್ಶನಗಳು ಸಿಗುತ್ತವೆ. ಆದುದರಿಂದ ನಮ್ಮ ಸರಕಾರವು ತ್ವರೆಯಿಂದ ಜಾಗೃತವಾಗಲಿ!

ಸಮಾಜವಾದಿ ಆದರ್ಶ

ಹೊಸ ಬೆಳಕಿನ ವಿಶೇಷ ಆಕರ್ಷಣೆ

ಅಖಿಲ ಭಾರತ ವಾಣಿಜ್ಯ ಮಹಾಮಂಡಳದ ಅಧಿವೇಶನವು ಮೊನ್ನೆ ಹೊಸ ದೆಹಲಿಯಲ್ಲಿ ಜರಗಿದಾಗ ಅದನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿಗಳು ವಿಶಾಲವಾದ ದೃಷ್ಟಿಕೋಣವನ್ನಿಟ್ಟುಕೊಂಡು ವಿಚಾರಿಸುವ ಹೊಸ ಸಂಪ್ರದಾಯವು ಭಾರತದಲ್ಲಿ ಪುಷ್ಟಿಗೊಳ್ಳಬೇಕೆಂದು ಹೇಳಿದರು. ಎಲ್ಲ ರಾಷ್ಟ್ರಗಳೂ ಈಗ ಸಾಮಾನ್ಯ ಜನತೆಯ ಕ್ಷೇಮಾಭ್ಯುದಯವನ್ನೆ ಬಯಸುತ್ತವೆ; ಈ ಗುರಿಯ ಸಾಧನೆಗಾಗಿ ಸಮಾಜವಾದಿ ಆದರ್ಶದ ಕಡೆಗೆಯೇ ಅವು ಒಲಿದಿರುತ್ತವೆ. ಭಾರತದಲ್ಲಿಯಾದರೂ ಜನರು -ಬಡವರೂ ಧನಿಕರೂ ಎಲ್ಲರೂ—ಸಮಾಜವಾದಿ ನೆಲೆಯಿಂದ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸಲು ಪ್ರಯತ್ನಿಸಬೇಕು ಎಂದು ನೆಹರು ಉಪದೇಶಿಸಿದರು

ಜಿಲ್ಲೆಯಲ್ಲಿ ಕೈಗಾರಿಕೆ

ಮದ್ರಾಸಿನ ಮುಂಗಡ ಪತ್ರದ ಮೇಲೆ ನಡೆದ ಚರ್ಚೆಯಲ್ಲಿ ಮಾತನಾಡಿದ ಶ್ರೀ. ಟಿ ಎ. ಪೈಗಳು ಸಾಮಾನ್ಯವಾಗಿ ದಕ್ಷಿಣ ಭಾರತವನ್ನು ಅಲಕ್ಷಿಸಲಾಗಿದೆ ಎಂದು ಹೇಳುತ್ತಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಪೂರ್ಣ ಕಡೆಗಣಿಸಲಾಗಿದೆ ಎಂದ ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಜ್ಜಿನ ಪ್ರೋತ್ಸಾಹ ಸಿಗಬೇಕು; ಪ್ರಶ್ನೆ ನಡೆಯಬೇಕು ಎಂದರು. ಚರ್ಚೆ ಉತ್ತರವಿತ್ತ ಮಂತ್ರಿಗಳು ಸಮಾಜವಾದದ ಮಾದರಿಯ ಕಡೆಗೆ ಸರಕಾರವು ವಿಶೇ ಒಲವು ತೋರಿಸಿ ನಡೆದಿದೆ ಎಂಬ ವಿಪ್ರಾಯವನ್ನು ಸದಸ್ಯರಲ್ಲಿ ಬಿಂ ಮಾತನಾಡಿದರು.

ಮದ್ಯಪಾನ ಪ್ರತಿಬಂಧ

ಬೇರೆ ಬೇರೆ ಇಲಾಖೆಗಳ ಬೇ ಯನ್ನು ಈಗ ಮದ್ರಾಸಿನ ಶಾಸನಾಂ ಮುಂದೆ ಮಂಡಿಸಲಾಗುತ್ತದೆ. ಈ ಸರ್ಭದಲ್ಲಿ ಕಂದಾಯ ಸಚಿವರು ರಾಜ್ಯ ಭೂಸ-ಧಾರಣೆಯ ಪ್ರಗತಿಪರ ಕ್ರಮಗಳನ್ನು ನಿಧಾನವಾಗಿ ಮುಂದೊತ್ತಲಾಗುತ್ತಿದೆ ಎನ್ನುತ್ತಾ ಇಷ್ಟರ ವರೆಗೆ ನಡೆ ಪ್ರಯತ್ನಗಳನ್ನು ವಿವರಿಸಿದರು. ಸರಕಾರವು ಪಾನನಿರೋಧ ಧೋರಣೆಯ ಬಿಟ್ಟುಗೊಡುವುದಿಲ್ಲವೆಂದೂ ಮದ್ಯಪ ಪ್ರತಿಬಂಧವು ಸಾಮಾಜಿಕ ಹಿತದ ಕ್ರಮವಾಗಿದ್ದು ಇದರಿಂದ ಬಡ ಜನರಿಗೆ ಬ ಪ್ರಯೋಜನವ ಗಿದೆಯೆಂದೂ ಆ ಖಾಯ ಮಂತ್ರಿಗಳು ಸ್ಪಷ್ಟಪಡಿಸಿದರು.

ದಕ್ಷಿಣಪ್ರದೇಶ

ಬೆಂಗಳೂರಿನಲ್ಲಿ ದಕ್ಷಿಣ ಪ್ರದೇ ನ್ನು ರಚಿಸುವ ಕುರಿತು ಕರ್ನಾಟ ಮುಖಂಡರ ಸಭೆಯೊಂದು ಕಳೆದವ ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯ ಶ್ರೀ ಚೆನ್ನಯ್ಯನವರ ಹಿರಿತನದಲ್ಲಿ ಯಿತು. ತಮಿಳುನಾಡಿನವರಿಗೆ ದಕ್ಷಿ ಪ್ರದೇಶದಲ್ಲಿ ಏನೇನೂ ಆಸಕ್ತಿ ಇಲ್ಲ ದು ಈಗ ಸ್ಪಷ್ಟವಾಗಿದೆ. ಕೊಡಗಿನ ಪ್ರ ನಿಧಿಗಳು ಕೇರಳದೊಡನೆ ಕರ್ನಾಟ ಕೂಡಿಹೊಸರಾಜ್ಯ ರಚಿಸಲ್ಪಡುವುದ ವಿರೋಧ ಸೂಚಿಸಿದ್ದಾರೆಂದು ತಿಳಿದು ರುತ್ತದೆ. ಈ ಸಭೆಯಲ್ಲಿ ವಿಚಾರವಿನಿ ಯಕ್ಕಿಂತ ಹೆಚ್ಚಿನದೇನೂ ನಡೆಯಲಿ

ಕನ್ನಡಿಗರ ಅಭಿಪ್ರಾಯ

ಕರ್ನಾಟಕದಲ್ಲಿ ದಕ್ಷಿಣ ಪ್ರದೇಶದ ಲ್ಪನೆಗೆ ಏನೇನು ಉತ್ಸಾಹಕರವಾ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಒಡೆ ಹಂಚಿಹೋದ ಕನ್ನಡದ ಭಾಗಗಳು ಟ್ಟುಗೂಡಿ ಒಂದೇ ಆಡಳಿತ ಕ್ಷೇತ್ರ ಬರುವುದೇ ಒಂದು ಮಹಾಸಾಧನೆಯಾ ರುವಾಗ ಅಥವಾ ಮಹಾಪ್ರಯೋಗವಾ ರುವಾಗ ಅದು ಎಷ್ಟರಮಟ್ಟಿಗೆ ಯಶ ಯಾಗುವುದೆಂಬುದನ್ನು ಕಾದುನೋ ಅಥವಾ ಆದರ ಯಶಸ್ಸಿಗಾಗಿ ದುಡಿಯ ಮೊನ್ನೆಮೊನ್ನೆಯಷ್ಟೆ ಉದಯಿಸಿದ ದೇಶಗಳ ರಚನೆಯ ವಿಚಾರಕ್ಕೆ ಯುವುದು ಸರಿಯಲ್ಲವೆಂದು ಸಾಮಾ ಅಭಿಪ್ರಾಯ.

ವರಿಷ್ಠರಿಂದ ಒತ್ತಾಯವಿಲ್ಲ

ಆದರೆ ಮೈಸೂರಿನಲ್ಲಿ ಕೆಲವರೂ ಮತ್ರಿ ಶ್ರೀ ಎ ಬಿ. ಶೆಟ್ಟಿ ಮಂತಾದ ಚೆ ಕೆಲವು ಮಹನೀಯರೂ ಕೇರಳ-ಕರ್ನಾಟಕಗಳ ಸೇರ್ಪಡೆಯಾದರೂ ಆಗ ಎನ್ನುತ್ತಾರೆ. ಕಾಂಗ್ರೆಸಿನ ಕಾರ್ಯದರ್ಶಿ

ಳೂ ಕೇರಳದ ಪ್ರಮುಖ ನಾಯಕರೂ ಆದ ಶ್ರೀ ಮಾಧವನ್ ನಾಯರರು ಬೆಂಗಳೂರಿನಲ್ಲಿ ಈ ಸೀರ್ಪಡಿಯ ಸಾಧ್ಯಾಸಾಧ್ಯತೆಯನ್ನು ವಿಚಾರಿಸಿದರು. ಅವರಿಗೆ ಹೆಚ್ಚಿನ ಆಶೆಯೇನೂ ಉಳಿದಿಲ್ಲವೆಂದು ವರದಿಗಳು ಹೇಳುತ್ತವೆ. ಕಾಂಗ್ರೆಸಿನ ವರಿಷ್ಠ ಮಂಡಳದವರಾದರೂ ಒತ್ತಾಯದಕ್ರಮಗಳಿಗೆ ವಿರೋಧವಿದ್ದಾರೆ.

ಅಯ್ಯಂಗಾರರಿಗೆ ಅಧ್ಯಕ್ಷ ಪದ

ದಿವಂಗತ ಮಾವಳಂಕರರು ಅಲಂಕರಿಸಿದ್ದ ಲೋಕ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಇದೇ ಗುರುವಾರ (ದಿನಾಂಕ೮) ಪುನಃ ಚುನಾವಣೆ ನಡೆಯಲಿದೆ. ಕಾಂಗ್ರೆಸು ಪಕ್ಷವು ಲೋಕಸಭೆಯ ಉಪಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರರನ್ನು ಅಧ್ಯಕ್ಷ ಸ್ಥಾನಕ್ಕಾಗಿ ಸೂಚಿಸಿದೆ. ಇವರು ಆರಿಸಿ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ.

ರಾಜ್ಯದ ವರಿಷ್ಠರ ಪರಿಷತ್ತು

ವಿವಿಧ ರಾಜ್ಯಗಳ ಗವರ್ನರ ಹಾಗು ರಾಜಪ್ರಮುಖರ ಸಭೆಯೊಂದು ಹೊಸ ದೆಹಲಿಯಲ್ಲಿ ಕಳೆದ ವಾರ ಜರಗಿತು. ಅಲ್ಲಿ ರಾಜ್ಯದ ವರಿಷ್ಠ ಸ್ಥಾನದಲ್ಲಿರುವ ಈ ಮಹಾನುಭಾವರಿಗೆ ಭಾಷೆಯ ದೃಷ್ಟಿಯಿಂದ ಅಲ್ಪಸಂಖ್ಯಾಕರಾದವರಿಗೆ ಯೋಗ್ಯ ರಕ್ಷಣೆಯನ್ನು ಕೊಡುವುದೇ ಮುಂತಾದ ಕೆಲವು ಮುಖ್ಯ ವಿಷಯಗಳಲ್ಲಿ ವಿಶೇಷ ಅಧಿಕಾರವನ್ನು ನೀಡುವ ಕುರಿತು ಒಮ್ಮತದ ತೀರ್ಮಾನವಾಯಿತು. ರಾಜ್ಯಗಳ ಪುನರ್ಘಟನೆಯಾದ ಬಳಿಕ ಹೊಸ ರಾಜ್ಯಗಳಲ್ಲಿ ಉದ್ಭವಿಸಬಹುದಾದ ಅನೇಕ ಸಮಸ್ಯೆಗಳನ್ನು ಫಜಲಾಲಿ ವರದಿಯಲ್ಲಿ ವ್ಯಕ್ತವಾದ ಸೂಚನೆಗಳ ಬೆಳಕಿನಲ್ಲಿ ಪರಿಹರಿಸುವುದಕ್ಕೆ ರಾಜ್ಯದ ವರಿಷ್ಠರಿಗೆ ಹೆಚ್ಚಿನ ಅಧಿಕಾರವಿರುವುದು ಅವಶ್ಯವೆಂದು ಕೇಂದ್ರ ಸರಕಾರಕ್ಕೆ ಮಂಡಟ್ಟು ಪಡಿಸಲಾಯಿತು.

(೫ನೇ ಪುಟದಿಂದ)

ರೂಪಾಯಿಗಳ ಕೊರತೆ ಬೀಳುತ್ತದೆ. ಇದನ್ನು ಕೊರತೆ ಧನವಿನಿಯೋಗದ ಪದ್ಧತಿಯಿಂದ ತುಂಬಿಸಿಕೊಳ್ಳಲಾಗುತ್ತದೆ. ಆದರೆ ಈ ಕ್ರಮವನ್ನು ನಿರಂತರವಾಗಿ ಅನುಸರಿಸುತ್ತಿರುವಂತಿಲ್ಲವೆಂಬ ಎಚ್ಚರಿಕೆಯನ್ನು ಅವರು ಕೊಡಲು ಮರೆತಿಲ್ಲ.

ಸಾಲವೆತ್ತುವ ನಿರ್ಧಾರ

ಮುಂದಿನ ವರ್ಷದಲ್ಲಿ ದೇಶಮುಖರು ಹಲವು ಬಗೆಯಿಂದ ಒಟ್ಟಾರೆ ಆಯವ್ಯಯವನ್ನು ಸ್ವಲ್ಪ ಮಟ್ಟಿಗಾದರೂ ಜಾಯಿಗೂಡಿಸುವ ಪ್ರಯತ್ನ ಮಾಡಲಿದ್ದಾರೆ. ಸಾರ್ವಜನಿಕರಿಂದ ಅವರು ೧೦೦ ಕೋಟಿ ರೂಪಾಯಿಗಳ ಸಾಲವನ್ನು ಕೇಳಲಿದ್ದಾರೆ. ೭೦ ಕೋಟಿ ರೂಪಾಯಿಗಳಷ್ಟು ಚಿಕ್ಕ ಉಳಿತಾಯದ ಹಣವು ಸಾರ್ವಜನಿಕರಿಂದ ಸಂಗ್ರಹವಾಗಬಹುದೆಂಬ ಹಾರೈಕೆಯನ್ನು ಅವರು ಇಟ್ಟುಕೊಂಡಿದ್ದಾರೆ; ಹೊರದೇಶಗಳು ೮೫ ಕೋಟಿ ರೂಪಾಯಿಗಳಷ್ಟು ಸಹಾಯ ನೀಡಬಹುದೆಂದೂ ಅವರು ಊಹಿಸಿದ್ದಾರೆ. ೧೧೦ ಕೋಟಿ ರೂಪಾಯಿಗಳು ಬೇರೆ ರೀತಿಯಿಂದ ಬರಬಹುದೆಂದು ಕಂಡುಕೊಂಡಿದ್ದಾರೆ. ಸಾಮಾನ್ಯವಾಗಿ ದೇಶಮುಖರ ಎಲ್ಲ ಅಂದಾಜೂ ತೂಕದಿಂದ ಕೂಡಿವೆ; ಇಂದಿನ ಅನುಭವದ ಬಲವು ಅದರ ಯಥಾರ್ಥತೆಗೆ ಸಾಕ್ಷಿಕೊಡುತ್ತದೆ. ಎರಡನೇ ಯೋಜನೆಯ ಪ್ರಥಮ ವರ್ಷಕ್ಕೆ ಈ ಮುಂಗಡ ಪತ್ರ ಸಂಬಂಧಿಸಿರುವುದರಿಂದ ಪ್ರತಿಯೊಂದೂ ಬಾಬಿಗೆ ಹಿಂದಿಗಿಂತಲೂ ಹೆಚ್ಚಿನ ವೆಚ್ಚವಾಗುತ್ತದೆ. ಈ ವೆಚ್ಚದ ಭಾರವನ್ನು ಹೆಚ್ಚು ಕಷ್ಟವಿಲ್ಲದೆ ಭಾರತೀಯರು ಸಹಿಸಬಹುದು; ಅಷ್ಟು ಮಟ್ಟಿಗೆ ಮೊದಲನೇ ಯೋಜನೆಯು ಅವರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿದೆ—ಎಂದು ಶ್ರೀ. ದೇಶಮುಖರ ಅಭಿಪ್ರಾಯ.

ಸಂಸತ್ತಿನ ಅಭಿಪ್ರಾಯ

ರಾಜ್ಯ ಸಭೆಯಲ್ಲೂ ಲೋಕ ಸಭೆಯಲ್ಲೂ ಮುಂಗಡ ಪತ್ರದ ಕುರಿತು ಚರ್ಚೆ ನಡೆದಿವೆ. ವಾಣಿಜ್ಯ ವ್ಯವಹಾರಗಳಲ್ಲಿ ನಿರತರಾದವರ ಮೇಲೆ ಹೊರಿಸಲಾದ ಹೊಸ ತೆರಿಗೆಗಳನ್ನು ಎಲ್ಲರೂ ಸ್ವಾಗತಿಸಿ ಮಾತನಾಡಿದ್ದಾರೆ. ಆದರೆ ನಿತ್ಯೋಪಯೋಗಕ್ಕೆ ಅತ್ಯಗತ್ಯವೆನಿಸಿದ ಬಟ್ಟೆ, ಎಣ್ಣೆ, ಸಾಬೂನು ಇತ್ಯಾದಿಗಳ ಬೆಲೆ ಹೆಚ್ಚಲು ಅರ್ಥ ಸಚಿವರ ತೆರಿಗೆಯ ಸೂಚನೆಗಳಲ್ಲಿ ಕೆಲವು ಕಾರಣವಾದುದಕ್ಕೆ ಸದಸ್ಯರು ವಿಮರ್ಶೆಯನ್ನು ವ್ಯಕ್ತಪಡಿಸಿದ್ದಾರೆ. ಟಪ್ಪಾಲು ರಿಜಿಸ್ಟ್ರೇಶನಿನ ದರದಲ್ಲಿಯೂ ತಂತಿಯ ದರಗಳಲ್ಲಿಯೂ ಹೆಚ್ಚಳವಾದುದಕ್ಕೆ ಸಹ ಸದಸ್ಯರ ಆಕ್ಷೇಪವಿದೆ. ಆದರೆ ಇವಾವುದೇ ದೂರಿಗೆ ಸರಕಾರ ಕಿವಿಗೊಡಲಿಕ್ಕಿಲ್ಲವೆಂಬುದೇ ಕಾಣುತ್ತದೆ. ಏಕೆಂದರೆ ಕೊರತೆ ತುಂಬಿಸಿಕೊಳ್ಳಲು ಜನರಲ್ಲಿ ಇಷ್ಟು ಕಷ್ಟವನ್ನು ಸಹಿಸುವ ಶಕ್ತಿಯಿದೆ ಎಂದೇ ಸರಕಾರ ಹೇಳುತ್ತದೆ.

ಆಕಾಶವಾಣಿ ವಾರ

ಭಾರತವು ಕಳೆದ ವಾರ ಆಕಾಶವಾಣಿ ವಾರವನ್ನು ಆಚರಿಸಿತು. ಜನರಲ್ಲಿ ಆಕಾಶವಾಣಿಯನ್ನು ಆಲಿಸುವ ವಿಶೇಷ ಕುತೂಹಲವನ್ನು ಪ್ರೋತ್ಸಾಹಿಸುವುದೇ ಇದರ ಉದ್ದೇಶ. ಅನೇಕ ವಿಶಿಷ್ಟ ಕಾರ್ಯಕ್ರಮಗಳಿಂದ ಈ ವಾರವನ್ನು ಆಕರ್ಷಕಗೊಳಿಸಲಾಯಿತು. ಮಕ್ಕಳ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಗಳು ಭಾಗವಹಿಸುತ್ತಿರುವುದನ್ನು ಚಿತ್ರವು ತೋರಿಸುತ್ತದೆ.

ಉಡುಪಿ

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಸುವರ್ಣಮಹೋತ್ಸವವು—ಇದೇ ತಾ. 12ನೇ ಸೋಮವಾರ ಸಂಜೆ 5–15 ಗಂಟೆಗೆ ರಿಝರ್ವ್ ಬೇಂಕಿನ ಗವರ್ನರ್ ಶ್ರೀ ಬೆನಗಲ್ ರಾಮ ರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಸರ್ವರೂ ಬಂದು ಸಹಕರಿಸಬೇಕೆಂದೂ ಚೇರ್ಮೆನ್ ಡಾ. ಸುಂದರ ರಾಮ ಪೈಗಳು ಅಪೇಕ್ಷಿಸುತ್ತಾರೆ.

ಭಾವಚಿತ್ರ ಅನಾವರಣ— ಸದ್ರಿ ಬೇಂಕಿನ ಮೆನೇಜರರಾಗಿದ್ದ ದಿವಂಗತ ಶ್ರೀ ಎನ್. ಆನಂದ ರಾಯರ ಮತ್ತು ಶ್ರೀ ಎಮ್. ಶ್ರೀನಿವಾಸ ಪ್ರಭುಗಳ ಭಾವಚಿತ್ರ ಅನಾವರಣವನ್ನು ತಾ. 12ನೇ ಸೋಮವಾರ ಬೆಳಿಗ್ಗೆ 10–45ಕ್ಕೆ ಶ್ರೀ ವಿ. ಎಸ್ ಕುಡ್ವರು ನೆರವೇರಿಸುವರು. ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು ಸಮಾರಂಭದ ಅಧ್ಯಕ್ಷತೆವಹಿಸುವರು.

ಉಡುಪಿ ಕೋಪರೇಟಿವ್ ಮಿಲ್ಕ್ ಸಪ್ಲೈ ಸೊಸೈಟಿಯ—ಮಹಾ ಸಭೆಯು ತಾ. 6ರಲ್ಲಿ ಸಂಜೆ ಡಾ. ಟಿ ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ಮತ್ತು ಲೆಕ್ಕಪತ್ರಗಳ ಪರಿಶೀಲನೆಯಾದ ಬಳಿಕ ಹೊಸ ವರ್ಷಕ್ಕೆ ಡಾ. ಟಿ. ಮಾಧವ ಪೈ, ಡಾ. ಸುಂದರ ರಾಮ ಪೈ, ಡಾ. ಕೆ. ಎಲ್. ಉಪಾಧ್ಯಾಯ, ಶ್ರೀಗಳಾದ ಎಮ್. ವಾಮನ ಭಟ್ ಪಿ. ಎನ್. ಕೃಷ್ಣಮೂರ್ತಿ ರಾವ್, ಕೆ. ಕಮಲಾಕ್ಷ ಪೈ, ಎ. ಲಕ್ಷ್ಮೀನಾರಾಯಣ ರಾವ್, ಪಿ ಕೆ. ಶೇಷಗಿರಿ ರಾವ್ ಮತ್ತು ಎ. ತ್ರಿವಿಕ್ರಮ ನಾಯಕರು ಒಮ್ಮತದಿಂದ ಆರಿಸಲ್ಪಟ್ಟರು. ಸಂಘದ ಅಭಿವೃದ್ಧಿಗಾಗಿ ಜೀನವ ಹೋರಿ ಮತ್ತು ಕೋಣದ ಮತ್ತು ಡೈರೆಕ್ಟರ್ ಮಂಡಳಿಯಲ್ಲಿ ಹಾಲು ಉತ್ಪಾದಕರಿಗೆ ಸ್ಥಾನದ ಆವಶ್ಯಕತೆ ಕುರಿತು ಸೂಚನೆಗಳು ಬಂದುವು.

ಬ್ರಹ್ಮೋಪದೇಶ ಸಮಾರಂಭ—ಸ್ಥಳೀಯ ಮೋಡರ್ನ್ ಸ್ಟುಡಿಯೋದ ಒಡೆಯರಾದ ಶ್ರೀ ಎಮ್. ಎಸ್. ಶಿಬಾರಿ ಯವರು ಕಳೆದ ತಾ. 29ರಲ್ಲಿ ತಮ್ಮ ಗುರುಕೃಪಾ ಸದನದಲ್ಲಿ ತಮ್ಮ ಪುತ್ರರು ಶ್ರೀಗಳಾದ ಅಶೋಕ ಮತ್ತು ಅರುಣರಿಗೆ ಬ್ರಹ್ಮೋಪದೇಶವಿತ್ತರು. ಈ ಮಂಗಲ ಕಾರ್ಯಕ್ಕೆ ಸಾರಸ್ವತ ಸಮಾಜದ ಗುರುಗಳಾದ ಚಿತ್ರಾಪುರ ಮಠದ ಶ್ರೀ ಆನಂದಾಶ್ರಮ ಸ್ವಾಮಿಗಳವರು ಚಿತ್ತೈಸಿ ಬಾಲವಟುಗಳನ್ನು ಆಶೀರ್ವದಿಸಿದರು. ಶ್ರೀ ಪಾದಂಗಳವರಿಗೆ ಮಾನಪತ್ರ ಅರ್ಪಿಸಿ ಗೌರವಿಸಲಾಯಿತು.

ಎಮ್. ಜಿ. ಎಮ್. ಕಾಲೇಜಿನಲ್ಲಿ—ಕಳೆದ ತಾ. 28ರಲ್ಲಿ ಚಿತ್ರಾಪುರ ಮಠದ ಶ್ರೀ ಆನಂದಾಶ್ರಮ ಸ್ವಾಮಿಗಳವರು ಸ್ಥಳೀಯ ಎಮ್. ಜಿ ಎಮ್. ಕಾಲೇಜಿಗೆ ಸಂದರ್ಶನವಿತ್ತು ವಿದ್ಯಾರ್ಥಿಗಳಿಗೆ ಧರ್ಮ ಬುದ್ಧಿಯ ಸದುಪದೇಶವಿತ್ತರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಸ್ವಾಗತವಿತ್ತರು. ಡಾ. ಮಾಧವ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಕಡಿಯಾಳಿ ಶಾಲಾ ಹಳೆವಿದ್ಯಾರ್ಥಿ ಸಂಘದ—ವಾರ್ಷಿಕೋತ್ಸವವು ಕಳೆದ ತಾ. 26ರಲ್ಲಿ ಎ. ಜೆ. ಆಳ್ವ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಉಪಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣವಿತ್ತರು. ಕಾರ್ಯದರ್ಶಿ ಶ್ರೀ ವಿ. ವಾಸುದೇವ ಭಟ್ಟರು ವರದಿವಾಚನಮಾಡಿದರು.

ಆದಿಉಡುಪಿ ಹಾ. ಎ. ಶಾಲೆಯ ವಜ್ರೋತ್ಸವ— ಸಮಾರಂಭವು ಇದೇ ತಾ. 2, 3 ಮತ್ತು ನಾಲ್ಕರಲ್ಲಿ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾವ್, ಶ್ರೀ ಕೆ. ಕೆ. ಪೈ ಮತ್ತು ಶ್ರೀ ಬಿ. ಪಿಂಟೋ ರವರ ಅಧ್ಯಕ್ಷತೆಗಳಲ್ಲಿ ಜಯಶೀಲವಾಗಿ ಜರಗಿತು. ಶಾಲಾ ಸ್ಥಾಪಕ ಶ್ರೀ ಟಿ. ಸೀತಾರಾಮಯ್ಯನವರು ಸ್ವಾಗತಭಾಷಣಮಾಡಿದರು. ಹೆಡ್ಮಾಸ್ಟರ್ ಶ್ರೀ ಶ್ರೀನಿವಾಸ ರಾಯರು ವರದಿಯನ್ನೋದಿದರು. ಉತ್ಸವದ ಅಂಗವಾಗಿ ವಿಶೇಷ ಪಂದ್ಯಾಟಗಳು ಜರಗಿದ್ದುವಲ್ಲದೆ ಹಳೆವಿದ್ಯಾರ್ಥಿಗಳ ಹೆತ್ತವರ ಮತ್ತು ಹಳೆ ಉಪಾಧ್ಯಾಯರ ಕೂಟಗಳೂ ಜರಗಿದ್ದುವು. ಹಲವು ಭಾಷಣಗಾರರು ಶಾಲೆಯ ಶ್ರೇಯಃ ಪ್ರಾರ್ಥನೆ ಮಾಡಿದರು. ದಿನಾಲೂ ಮನರಂಜನ ಕಾರ್ಯಕ್ರಮಗಳಿದ್ದುವು.

In the Court of the District Munsif of Coondapur

O. P. 8/1956

Trivikram Pai,
S/o Marthappa Pai— Coondapur
Town ……. ….. Petitioner
No Respondent

To whomsoever it may concern

Notice is hereby given that the petitioner has applied to this Court for the grant to him of a Succession Certificate with respect to certain debts and securities of his aunt, the late Nethravathiamma, widow of Kedoor Laxman Kamath who died on 23—11—1955 in Coondapur Town and that the said petition will be heard on 21-3-'56 when you are at liberty to appear before this court and oppose the same.

(By order of the court)

S. N. Acharya.
Advocate
Coondapur 5—3—1956-

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 dated 12-12-1950 of the Director of public Instructions Madras.

ಕಾರ್ಕಳ— ನಾರಾವಿಯ ಸರಕಾರಿ ಆಸ್ಪತ್ರೆಯ ಡಾ. ಕೆ. ನಾಗಪ್ಪ ಸೆಟ್ಟರ ವಿವಾಹವು ಅಡ್ಡೆ ಪಟೇಲ್ ಶ್ರೀ ದೊಡ್ಡಣ್ಣ ಸೆಟ್ಟರ ಸೋಸೆ ಕುಮಾರಿ ಸುಮತಿಯೊಂದಿಗೂ, ದೊಡ್ಡಣ್ಣ ಸೆಟ್ಟರ ಅಳಿಯ ಶ್ರೀ ಎ. ಕರುಣಾಕರ ಸೆಟ್ಟರ ವಿವಾಹವು ಶ್ರೀ ರುದ್ರಪ್ಪ ಸೆಟ್ಟರ ಪುತ್ರಿ ಕುಮಾರಿ ಸುಹಾಸಿನಿಯೊಂದಿಗೂ ಕಳೆದ ತಾ. 27ರಂದು ಸ್ಥಳೀಯ ಜೈಹಿಂದ್ ಸಿನೆಮಾ ಮಂದಿರದಲ್ಲಿ ಅತ್ಯಂತ ವೈಭವದಿಂದ ಜರಗಿತು.

ಇನ್ನಂಜೆ— ಸ್ಥಳೀಯ ಶ್ರೀ ವಿಷ್ಣುಮೂರ್ತಿ ಹಯವದನ ಹೈಸ್ಕೂಲು ಮತ್ತು ಎಲಿಮೆಂಟರಿ ಶಾಲಾ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ. 25, 26 ರಲ್ಲು ಮೂಲ್ಕಿ ಸರಕಾರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಕೆ. ವಿಠಲ ಶೆಣೈ ಮತ್ತು ಡಾ. ಕೆ. ಜಿ. ಕಿಣಿಯವರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಯಿತು.

ಕುವಾ್ರಡು— ಸ್ಥಳೀಯ ಶ್ರೀ ದತ್ತಾತ್ರೇಯ ಪ್ರಾಥಮಿಕ ಶಾಲೆಗೆ ಸಮಾಜವಿಕಾಸ ಯೋಜನೆಯ ಸಹಾಯದಿಂದ ಕಟ್ಟಿಸಲ್ಪಟ್ಟ ಹೊಸ ಕಟ್ಟಡವನ್ನು ತಾ. 2ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಮ್, ಅವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ. ಕೆ. ನಾಗಪ್ಪ ಆಳ್ವರು ವಹಿಸಿದ್ದರು. ಹೆಡ್ಮಾಸ್ತರ್ ಶ್ರೀ ಎ. ನಾರಾಯಣ ಮಲ್ಯರು ವರದಿಯನ್ನೋದಿದರು. ಡಾ. ಎಮ್. ಆರ್. ಭಟ್ ಶ್ರೀಗಳಾದ ಬಿ. ಆನಂದ ರೈ ಎಚ್. ನರಸಿಂಹ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ನೋಟೀಸು.

ಪಡುಬಿದ್ರೆ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರಿ. ಕೆ. ಗೋಪಾಲ ಹೆಗ್ಡೆ ಸ್ರುತ ಪಡಿಸುವುದೇನೆಂದರೆ ನ ಬ್ಟ ಪಂಚಾಯತ ಬೋರ್ಡು ತಾಬೆಯಲ್ಲಿರುವ ಹಪ್ತೆವಾರು ಮಾರ್ಕೆಟು ಮತ್ತು ದಿನವಹಿ ಮಾರ್ಕೆಟು ಕೂಡಾ 1956–57ನೇ ಇಸವಿ ಬಾಬ್ತು ತಾ. 1–4–56 ರಿಂದ ತಾ. 31—3—1957ರವರೆಗಿನ ವರಿನ ಸುಂಕ ವಸೂಲು ಮಾಡುವ ಸ್ವತಂತ್ರವನ್ನು ಇದೇ ತಿಂಗಳ ತಾರೀಕು 15–3–56ನೇ ಗುರುವಾರ ಅಪರಾಹ್ನ ಗಂಟೆ 3–30ಕ್ಕೆ ಸರಿಯಾಗಿ ಪಂಚಾಯತ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಶರ್ತ ವಗೈರೆ ಆಗತ್ಯವಿದ್ದಲ್ಲಿ ಆಫೀಸಿಗೆ ಬಂದು ತಿಳಿದು ಕೊಳ್ಳುವುದು.

K. Gopal Hegde.
President, Panchayat Board.
Padubidri, 5—3—56

ಮಂಜೇಶ್ವರ— ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸುವ ನಿರ್ಣಯವನ್ನು ವಿರೋಧಿಸಿ, ಮಂಜೇಶ್ವರ ಸರ್ಕಲಿನ ಕಾಂಗ್ರೆಸ್ ಜಿಲ್ಲಾ ಬೋರ್ಡಿನ ಸದಸ್ಯ ಶ್ರೀ ಟಿ. ನಾರಾಯಣ ಭಟ್ಟರು ತಮ್ಮ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವರಾಗಿ ತಿಳಿದುಬರುತ್ತದೆ.

ನೀಲಾವರ— ಕೋಟ ವಿವೇಕ ಹೈಸ್ಕೂಲಿನ ಸ್ಕೌಟ್ ದಳದವರು ಸ್ಕೌಟ್ ಮಾಸ್ತರ್ ಶ್ರೀ ಕೆ. ಶ್ರೀನಿವಾಸ ಉಡುಪರ ನಾಯಕತ್ವದಲ್ಲಿ ತಾ. 24ರಲ್ಲಿ ಸ್ಥಳೀಯ ಮಹಿಷಮರ್ದಿನಿ ದೇ. ಎ. ಶಾಲೆಯ ಆವಾರದಲ್ಲಿ ಶಿಬಿರಾಗ್ನಿಯನ್ನು ಪ್ರಜ್ವಲಿಸಿ, ಸ್ಕೌಟ್ ಚಟುವಟಿಕೆಗಳನ್ನು ಪ್ರದರ್ಶಿಸಿದರು.

ಹೆಬ್ರಿ— ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರ್ ಡಾ. ಟಿ. ಎಮ್. ಎ. ಪೈಗಳಿಗೆ, ಹೆಬ್ರಿ ಬೇಂಕಿನ ಸ್ಥಳೀಯ ಶಾಖಾ ಕಚೇರಿಯವರು ತಾ. 24ರಲ್ಲಿ ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು. ಶ್ರೀ ಎಚ್. ಭುಜಂಗ ಬಲ್ಲಾಳರು ಸ್ವಾಗತಭಾಷಣವಿತ್ತರು. ಡಾ. ಪೈಗಳು, ಹೆಬ್ರಿಯಲ್ಲೊಂದು ಹೈಸ್ಕೂಲು ಸ್ಥಾಪನೆಯ ಆವಶ್ಯಕತೆಯನ್ನು ಸೂಚಿಸಿ ಊರವರು ಆ ಕಾರ್ಯವನ್ನೆಸಗಬೇಕೆಂದು ಅಪೇಕ್ಷಿಸಿದರು. ಶ್ರೀ ಎಚ್. ನಾಗೇಶ ಶೆಣೈಯವರು ಧನ್ಯವಾದಗಳನ್ನಿತ್ತರು.

ಬೈಂದೂರು— ತಾ. 22ರಲ್ಲಿ ಸಿಂಡಿಕೇಟ್ ಬೇಂಕಿನ ಸ್ಥಳೀಯ ಶಾಖೆಯವರು ಡಾ. ಟಿ. ಎಮ್. ಎ. ಪೈಗಳಿಗೆ ಚಹಾ ಸತ್ಕಾರವಿತ್ತು ಗೌರವಿಸಿದರು. ಜಿಲ್ಲಾ ಬೋರ್ಡು ಮೆಂಬರ್ ಶ್ರೀ ಆರ್. ಕೆ. ಸಂಜೀವ ರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಪಿ. ಉರಾಳ್, ಬಿ. ಆರ್. ಜೋಶಿ, ಬಿ. ಸುಬ್ಬಣ್ಣ ಸೆಟ್ಟಿ; ಎಚ್. ಗಣಪತಿ ಕೆದ್ಲಾಯ, ರೆ. ಫಾ. ಲೂವಿಸ್ ಫುರ್ಟಾಡೋ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಡಾ. ಪೈಗಳು ತಮ್ಮ ಭಾಷಣದಲ್ಲಿ ಉಳಿತಾಯ ಯೋಜನೆಯ ಆವಶ್ಯಕತೆಯನ್ನು ಸೂಚಿಸಿ, ಸರಕಾರದ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಜನತೆಯ ಸಹಕಾರವನ್ನು ಅಪೇಕ್ಷಿಸಿದರು.

ಬಸ್ರೂರು— ಸ್ಥಳೀಯ ನೇಕಾರ ಸಹಕಾರಿ ಸಂಘದ ಆಶ್ರಯದಲ್ಲಿ ಕೈಮಗ್ಗ ಸಪ್ತಾಹವು ತಾ. 19ರಿಂದ 25ರ ತನಕ ಜರಗಿತು. ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರು ಸಪ್ತಾಹವನ್ನು ಉದ್ಘಾಟಿಸಿದರು. ಚಲೋ ಬಟ್ಟೆ ತಯಾರಿಸಿದ ಶ್ರೀ ಸಾಮುವೆಲ್ ಪ್ರಭುಗಳಿಗೆ ರಜತ ಪದಕ ಪಾರಿತೋಷಕ ನೀಡುವ ಸಮಾರಂಭವು ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಕೆ. ಎಮ್. ಚೆಲ್ಲಯ್ಯ ನವರ ಹಿರಿತನದಲ್ಲಿ ಜರಗಿತು. ಸಂಘದ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಶ್ರೀ ಸಂಜೀವ ರಾಯರು ಕಾಲೋಚಿತ ಭಾಷಣವಿತ್ತರು. ಸಂಘದ ಕಾರ್ಯದರ್ಶಿ ಶ್ರೀ ಶ್ರೀಪತಿ ಭಟ್ಟರು ವಂದನೆಗಳನ್ನಿತ್ತರು.

ನಿಂಜೂರು— ಶ್ರೀ ವಿವೇಕಾನಂದ ಸೇವಾ ಸಂಘದ ಮಹಾ ಸಭೆಯು ಕಳೆದ ತಾ 26ರಲ್ಲಿ ವಿಲೇಜ್ ಗೈಡ್ ಶ್ರೀ ರಾಘವೇಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿ ವರದಿವಾಚನ, ಆಯವ್ಯಯ ಮಂಜೂರು ಆದುವು. ಬಳಿಕ ಕಾರ್ಯಕಾರೀ ಚುನಾವಣೆ ನಡೆದು ಶ್ರೀಗಳಾದ ಎನ್. ಶ್ರೀನಿವಾಸ ಆಚಾರ್ (ಅಧ್ಯಕ್ಷ), ಎನ್. ಮಹಾಬಲ ಸೆಟ್ಟಿ ಮತ್ತು ಎಸ್. ವಿಠಲ ಸೆಟ್ಟಿ, (ಉಪಾಧ್ಯಕ್ಷರು), ಎನ್. ಹಿರಿಯಣ್ಣ ಸೆಟ್ಟಿ (ಕಾರ್ಯದರ್ಶಿ), ಎನ್. ಮುದ್ದಣ್ಣ ಸೆಟ್ಟಿ (ಉಪಕಾರ್ಯದರ್ಶಿ), ಎನ್. ಜಗನ್ನಾಥ ಸೆಟ್ಟಿ (ಕೋಶಾಧಿಕಾರಿ), ಗಳಾಗಿಯೂ ಇತರ 9 ಮಂದಿ ಕಾರ್ಯಸಮಿತಿಯ ಸದಸ್ಯರಾಗಿಯೂ ಬಹುಮತದಿಂದ ಆರಿಸಲ್ಪಟ್ಟರು.

ಕೊಳಂಬೆ— ಸ್ಥಳೀಯ ಶಾಲಾ ಅಧ್ಯಾಪಕರೂ, ಅಧ್ಯಾಪಕಿಯರೂ, ವಿದ್ಯಾರ್ಥಿಗಳೂ ತಾ. 25ರಲ್ಲಿ ಕೊಳಂಬೆಯಿಂದ ಆರು ಮೈಲು ದೂರದ ನೆಲ್ಲಿ ತೀರ್ಥಸ್ನಾನಕ್ಕಾಗಿ ಪ್ರವಾಸಗೈದರು.

ನಿಟ್ಟೂರು— ಇಲ್ಲಿಯ ಶ್ರೀ ನಿಟ್ಟೂರು ಲಕ್ಷ್ಮಣ ನಾಯ್ಕರು ಕಳೆದ ತಾ. 27ರಲ್ಲಿ ತಮ್ಮ 80ನೇ ವಯಸ್ಸಿನಲ್ಲಿ ತಮ್ಮ ಸ್ವಗೃಹದಲ್ಲಿ ಪರಂಧಾಮ ಗೈದರು. ಅವರ ಆತ್ಮಕ್ಕೆ ಚಿರಶಾಂತಿಯಿರಲಿ.

ಕಿನ್ನಿಗೋಳಿ— ಸ್ಥಳೀಯ ಕರ್ನಾಟಕ ಸಂಘದ 8ನೇ ವರ್ಷಾಂತ್ಯುತ್ಸವವು ಕಳೆದ ತಾ. 26ರಲ್ಲು ಮಂಗಳೂರಿನ ಎಲೋಸಿಯಸ್ ಕಾಲೇಜಿನ ಪ್ರಾಧ್ಯಾಪಕ ಶ್ರೀ. ಟಿ. ಗೋಪಾಲ ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ. ಸುರೇಂದ್ರ ಶೆಣೈಯವರು ನಾಡಗೀತೆಯನ್ನು ಹಾಡಿದರು. ಶ್ರೀ. ಆ ಗೌ. ಕಿನ್ನಿಗೋಳಿ ಅವರು ಸ್ವಾಗತ ಭಾಷಣ ಮಾಡಿದರು. ಡಾ| ಎನ್. ಚೆಂಬಾ, ರೆ|| ಫಾ| ಬಿ. ಎ. ಡಿ'ಸೋಜ, ಶ್ರೀ ಸೇವ ನವಿರಾಜಮಲ್ಲ, ಡಾ| ಎಮ್. ಗೋಪಾಲಕೃಷ್ಣರಾವ್ ಮೊದಲಾದವರು ಭಾಷಣವಿತ್ತರು. ಅಧ್ಯಕ್ಷರು 'ಮುದ್ದಣನ ರಾಮಾಶ್ವಮೇಧ' ಕುರಿತು ಉಪನ್ಯಾಸವಿತ್ತರು. ಬಳಿಕ ಸಂಗೀತ ಕಾರ್ಯಕ್ರಮವಾಯಿತು. ಶ್ರೀ. ಕೊ. ಅ. ಉಡುಪರು ಧನ್ಯವಾದಗಳನ್ನಿತ್ತರು.

ಇರ್ದೆ— ಪುತ್ತೂರು ತಾಲೂಕು ಇರ್ದೆ ಗ್ರಾಮದಲ್ಲೊಂದು ಹೊಸ ಟಪ್ಪಾಲು ಕಟ್ಟೆಯನ್ನು ತಾ. 22ರಲ್ಲಿ ಪೋಸ್ಟಲ್ ಇನ್ಸ್ಪೆಕ್ಟರ್ ಶ್ರೀ ಬಿ. ಶಿವಶಂಕರ ರಾಯರು ಉದ್ಘಾಟಿಸಿದರು.

ದ. ಕ. ಜಿಲ್ಲೆಯ ಮಹಾ ಜನರಲ್ಲಿ ವಿನಂತಿ— ಇದೇ 1956ನೆ ಮಾರ್ಚ ತಾ. 31ಕ್ಕೆ 21 ವರ್ಷ ಪ್ರಾಯವಾಗುವ ಪ್ರತಿಯೊಬ್ಬ ಹೆಂಗಸು ಮತ್ತು ಗಂಡಸು ತಮ್ಮ ಹೆಸರನ್ನು ಹೊಸತಾಗಿ ಓಟರರ ಪಟ್ಟಿಯಲ್ಲಿ ಇದೇ ತಾ. 15ರೊಳಗೆ ದಾಖಲು ಮಾಡಿದರೆ ಮಾತ್ರ ಅವರಿಗೆ ಬರುವ ಚುನಾವಣೆಯಲ್ಲಿ ಓಟಿನ ಹಕ್ಕು ಸಿಗುವಂತಾಗುವುದು. ಆದುದರಿಂದ ಪ್ರಾಯಬಂದವರೆಲ್ಲರೂ ತಮ್ಮ ಗ್ರಾಮದ ಪಂಚಾಯತ ಬೋರ್ಡು ಆಫೀಸಿನಲ್ಲಾಗಲೀ ಗ್ರಾಮ ಉದ್ಯೋಗಸ್ಥರ ಮುಖಾಂತರ ವಾಗಲೀ ತಮ್ಮ ಹೆಸರುಗಳನ್ನು ದಾಖಲು ಮಾಡುವಂತೆ ಪ್ರತ್ಯೇಕ ಗಮನ ಕೊಡಬೇಕಾಗಿದೆ. ಮೊದಲಿನ ಓಟರರ ಪಟ್ಟಿಯಲ್ಲಿ ಹಲವು ರೀತಿಯ ಲೋಪದೋಷಗಳಿರುತ್ತವೆ ಇವನ್ನು ನಿವಾರಿಸಲು ಕಾಂಗ್ರೆಸಿಗರೂ, ಸಾರ್ವಜನಿಕ ಕೆಲಸಗಾರರೂ ಸಕಾಲದಲ್ಲಿ ಗಮನ ಕೊಟ್ಟರೆ ಮುಂದಿನ ಚುನಾವಣೆಗೆ ತಯಾರಿಸಲ್ಪಡುವ ಓಟರರ ಪಟ್ಟಿಯಲ್ಲಿ ಹೆಚ್ಚಿನ ದೋಷಗಳು ಬಾರದ ಹಾಗೆ ಮಾಡಬಹುದು. ಪ್ರತಿ ಗ್ರಾಮಗಳ ಕಾಂಗ್ರೆಸ್ ಕೆಲಸಗಾರರು, ಸಾರ್ವಜನಿಕ ಕೆಲಸಗಾರರೂ ಇತರರೂ ಮೇಲೆ ಹೇಳಿದ ಕಾರ್ಯವನ್ನು ಯಶಸ್ವಿಗೊಳಿಸುವಂತೆ ವಿಶೇಷ ಲಕ್ಷ್ಯಕೊಡಬೇಕಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ. ಯು. ಪಿ. ಮಲ್ಯರು ವಿನಂತಿಸುತ್ತಾರೆ.

ಕನ್ನಡಿಗರಲ್ಲಿ ಸವಿನಯ ವಿಜ್ಞಾಪನೆ

ಚಂದ್ರಗಿರಿಯ ಉತ್ತರದ ಕಾಸರಗೋಡು ತಾಲೂಕಿನ ಅಂಶವನ್ನು ಕೇರಳಕ್ಕೆ ಸೇರಿಸುದುದು ನ್ಯಾಯವಲ್ಲವೆಂದು ಎಲ್ಲರೂ ಒಪ್ಪುವ ವಿಷಯ. ಇಲ್ಲಿಯ ಜನತೆಯ ಅಭಿಪ್ರಾಯದ ಮೇರೆಗೆ ನಡೆಯುವುದಾದರೆ ಅದು ಕರ್ನಾಟಕಕ್ಕೇ ಸೇರಬೇಕು. ಕಾಸರಗೋಡನ್ನು ಕೇರಳಕ್ಕೆ ಸೇರಿಸಬೇಕೆನ್ನುವುದು ದ. ಕ. ಜಿಲ್ಲೆಗೊಂದು ಅಪಮಾನ. ಇದನ್ನು ತಡೆಕಟ್ಟಲು ಶಾಂತ ರೀತಿಯ ಸಭೆ ಮೆರವಣಿಗೆಗಳಾಗಿ ಕೆಲವರು ತುರಂಗ ವಾಸವನ್ನು ಅನುಭವಿಸಿದರು. ಜನತೆಯಲ್ಲಿ ಸಂಘಟನಾ ಶಕ್ತಿಯನ್ನು ವೃದ್ಧಿಸಲು ಕ್ರಿಯಾ ಸಮಿತಿಯು ಸರ್ವಪ್ರಯತ್ನ ಮಾಡುತ್ತಲೇ ಇದೆ. ಸಮಿತಿಯ ಮುಂದಿನ ಎಲ್ಲಾ ಕೆಲಸಗಳಲ್ಲೂ ಎಲ್ಲಾ ಕನ್ನಡಿಗರ ಸಹಕಾರವೂ ಸಹಾಯವೂ ಬೇಕಾಗಿದೆ. ಈ ಜಿಲ್ಲೆಯವರಾಗಿದ್ದು ಮುಂಬಯಿ ಮೊದಲಾದ ಪಟ್ಟಣಗಳಲ್ಲಿ ವಾಸಿಸುವ ಜನರೂ ಇಲ್ಲಿಯ ಹಲವು ಸಾರ್ವಜನಿಕ ಕಾರ್ಯಗಳಲ್ಲಿ ಸಹಭಾಗಿಗಳಾಗಿ ತಮ್ಮ ಹುಟ್ಟಿದ ನಾಡಿನ ಸೇವೆಯನ್ನು ಸಲ್ಲಿಸುತ್ತಿರುವರು. ಈಗ ಬಂದೊದಗಿದ ವಿಪತ್ತನ್ನು ಹೋಗಲಾಡಿಸುವರೆ ಸರ್ವರೂ ನೆರವಾಗಬೇಕಾಗಿ ಕರ್ನಾಟಕ ಪ್ರಾಂತೀಕರಣ ಸಮಿತಿ ಅಧ್ಯಕ್ಷ ಶ್ರೀ ಎಮ್. ಉಮೇಶ ರಾಯರು ವಿಜ್ಞಾಪಿಸುತ್ತಾರೆ.

ನೇಯಿಗೆ ತರಬೇತಿ

5ನೇ ಕ್ಲಾಸಿನಿಂದ ಎಸ್. ಎಸ್. ಎಲ್. ಸಿ. ತನಕ ಕಲಿತು ನಿರುದ್ಯೋಗಿಗಳಾಗಿರುವ ಜಿಲ್ಲೆಯ ಯುವಕರನೇಕರು ಪೇಟೆ ಅಥವಾ ಆಫೀಸು ಕೆಲಸಗಳಿಗೆ ಅರ್ಜಿ ಹಾಕಿ ಕೆಲಸ ಸಿಗದೆ ನಿರಾಶರಾಗುತ್ತಿರುವ ಪರಿಸ್ಥಿತಿಯನ್ನು ನೋಡಿ, ಅಂತಹವರಿಗೆ ಸ್ವತಂತ್ರ ಜೀವನೋಪಾಯದ ಅವಕಾಶಕ್ಕಾಗಿ ಮಣಿಪಾಳ ಟೆಕ್ಸ್ಟೈಲ್ಸ್‌ನವರು ತಮ್ಮ ಮಣಿಪಾಳ ಕಾರ್ಖಾನೆಯಲ್ಲಿ ಕೈಮಗ್ಗ ನೇಯಿಗೆಯ ತರಬೇತಿ ಕೊಡಲು ನಿರ್ಧರಿಸಿರುವುದಾಗಿ ತಿಳಿದುಬರುತ್ತದೆ. ಉಮೇದ್ವಾರಗಳು ಮಣಿಪಾಳ ಟೆಕ್ಸ್ಟೈಲ್ಸ್, ಉಡುಪಿ, ಇವರಿಗೆ ಅರ್ಜಿ ಕಳುಹಿಸಬಹುದು.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೊ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ.........ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಹಿಳಾ ಸಾಹಿತ್ಯ! **ನವೀನ ಪುಸ್ತಕ!**

ಕುಮಾರಿ ಪಿ. ಯಶೋದಾ ಅವರು ಬರೆದ

ಬಾಳಿನ ಬೆಳೆ

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ- ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪೋ, ಉಡುಪಿ.

ಮಂಗಳೂರು

ಹೊಸ ಸಬ್ ಪೋಸ್ಟ್ ಆಫೀಸು— ತಾ. 29 ರಂದು ಬೆಳಗ್ಗೆ ಬಲ್ಮಠದಲ್ಲಿರುವ ಕಲೆಕ್ಟರರ ಬಂಗ್ಲೆ ಬಳಿಯಲ್ಲಿ ಏರ್ಪಾಡಿಸಲ್ಪಟ್ಟ ಸಬ್ ಪೋಸ್ಟಾಫೀಸನ್ನು ಕಲೆಕ್ಟರರ ಪರ್ಸನಲ್ ಅಸಿಸ್ಟೆಂಟ್ ಶ್ರೀ ಎಸ್. ಯು. ಪರಶುರಾಮ ನಾಯ್ಕರು ಉದ್ಘಾಟಿಸಿದರು. ಪೋಸ್ಟಲ್ ಸುಪರಿಂಟೆಂಡೆಂಟ್ ಕೆಪ್ಟನ್ ಎಸ್. ಎ. ಕಲಾಮ್, ಅವರು ಸ್ವಾಗತ ಭಾಷಣವಿತ್ತರು. ಮಂಗಳೂರು ಸಬ್ ಡಿವಿಜನ್ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಬಿ. ಶಿವಶಂಕರ ರಾಯರು ವಂದನೆಗಳನ್ನರ್ಪಿಸಿದರು.

ಸೈಂಟ್ ಎಲೋಸಿಯಸ್ ಕಾಲೇಜಿನ— ಸಮಾಜ ಸೇವಾದಳದ ಎಂಟನೇ ವಾರ್ಷಿಕೋತ್ಸವವು ಕಳೆದ ತಾ. 27ರಲ್ಲಿ ಮಣಿಪಾಲದ ಎಕೆಡಮಿ ಆಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಮಾನಂದ ಹೆಗ್ಡೆಯವರು ಸ್ವಾಗತ ಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಡಿ. ಎನ್. ಶಂಕರ ಭಟ್ಟರು ವರದಿವಾಚನ ಮಾಡಿದರು. ದಳದಲ್ಲಿ 200 ಸದಸ್ಯರಿದ್ದು 21 ಮಂದಿಗೆ ಸಮಾಜ ಸೇವೆಯ ಡಿಪ್ಲೋಮಾ ಮತ್ತು 15 ಮಂದಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲಾಗಿತ್ತು. ಶ್ರೀಗಳಾದ ರಾಮಚಂದ್ರ ರಾವ್, ಡಿ. ಎನ್. ಶಂಕರ ಭಟ್, ಜಗದೀಶ ರಾವ್, ಗೋಪಾಲ ಪೈ, ಸುಬ್ಬಯ್ಯ ಕೋಟ್ಯಾನ್ ರವರಿಗೆ ಉತ್ತಮ ಕೆಲಸಕ್ಕಾಗಿ ಪದಕಗಳನ್ನೀಯಲಾಯಿತು. ಅಧ್ಯಕ್ಷರು ಸುದಿಯಂತೆ ನಡೆ ಇರಬೇಕೆಂದೂ, ದೇಶದ ಪ್ರಗತಿಗಾಗಿ ತ್ಯಾಗಕ್ಕೂ ಸಿದ್ಧರಿರಬೇಕೆಂದೂ ಹೇಳಿದರು. ದಳದ ಅಧ್ಯಕ್ಷ ಪ್ರೊಫೆಸರ್ ಎ. ಬಿ. ಮಥಾಯಿ ಯವರು ವಂದನೆಗಳನ್ನಿತ್ತರು.

ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ— ಆಶ್ರಯದಲ್ಲಿ ಕಳೆದ ತಾ. 29ರಲ್ಲಿ ನಗರದ ಎಲ್ಲಾ ವಾರ್ಡು ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳ ಮತ್ತು ಕಾಂಗ್ರೆಸ್ ವಾರ್ಡು ಕೌನ್ಸಿಲರುಗಳ ಸಭೆಯೊಂದು ಕಾಂಗ್ರೆಸ್ ಕಚೇರಿಯಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಎರಡನೇ ಮಹಾ ಚುನಾವಣೆಯ ಸಂಬಂಧ ವಾರ್ಡು ಸಂಚಾರಮಾಡಿ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರನ್ನು ಕಂಡು ಹಿಡಿದು, ಅದಕ್ಕಾಗಿ ತಯಾರಿಸಿರುವ ಫಾರ್ಮಿನಲ್ಲಿ ಬೇಕಾದ ತಪಶೀಲಿನೊಂದಿಗೆ ಬರೆಯಿಸಿ ಇದೇ ತಾ. 9ರೊಳಗೆ ಕಾಂಗ್ರೆಸ್ ಕಚೇರಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು. ಶ್ರೀ ಕೆ. ಕೆ. ಸೆಟ್ಟರು ಅವಡಿ ಕಾಂಗ್ರೆಸ್ ಅಧಿವೇಶನದಲ್ಲಿ ಕೈಗೊಂಡ ನಿರ್ಣಯಗಳನ್ನು ವಿವರಿಸಿದರು.

ಎ. ಸಿ. ಸಿ. ಯ ಹಿರಿಯರ ದಿನಾಚರಣೆ— ಮಂಗಳೂರು ಮಹಿಳಾ ತರಬೇತಿ ಶಾಲೆಯ ಸಹಾಯಕ ವಿದ್ಯಾರ್ಥಿ ಸೇನಾಪಡೆ (ಎ. ಸಿ. ಸಿ.) ಯ ಹಿರಿಯರ ದಿನಾಚರಣೆಯು ಜಿಲ್ಲಾ ಪೋಲಿಸ್ ಅಧಿಕಾರಿ ಶ್ರೀ ಎಸ್. ಕೃಷ್ಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆರಂಭದಲ್ಲಿ ಎ. ಸಿ. ಸಿ. ವಿದ್ಯಾರ್ಥಿನಿಯರು ಅಧ್ಯಕ್ಷರಿಗೆ ಗೌರವ ರಕ್ಷೆಯನ್ನು ಸಲ್ಲಿಸಿದರು. ಮುಖ್ಯಾಧ್ಯಾಪಕಿ ಕುಮಾರಿ ಚಾಂದಿಯವರು ಸ್ವಾಗತಭಾಷಣ ಮಾಡಿದರು. ದಳನಾಯಕಿ ಕುಮಾರಿ ಮೇರಿ ಬ್ರಿಟೋ ರವರು ವರದಿಯನ್ನೋದಿದರು. ಅಧ್ಯಕ್ಷರು ಎ. ಸಿ. ಸಿ. ತರಬೇತಿಯ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಮನರಂಜನ ಕಾರ್ಯಗಳಾಗಿ ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ನೇಕಾರ ಸಭೆ— ದ. ಕ. ಜಿಲ್ಲಾ ನೇಕಾರರ ಸಂಘದ ಪ್ರಾದೇಶಿಕ ಮಹಾ ಸಭೆಯು ಶ್ರೀ ರಾಮಪ್ಪ ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಚಂದ್ರಶೇಖರ, ಕೆ. ರೂಪಪ್ಪ ಸಾಲಿಯಾನ್ ಮೊದಲಾದವರು ಮಜೂರರ ಸಂಘಟನೆಯ ಕುರಿತು ಮಾತನಾಡಿದರು.

ಶ್ರೀ ಶೃಂಗೇರಿ ಶ್ರೀ ಜಗದ್ಗುರು ಮಹಾ ಸ್ವಾಮಿಗಳವರು— ಇದೇ ತಿಂಗಳ ಕೊನೆಯ ವಾರದಿಂದ ದ. ಕ. ಜಿಲ್ಲೆಯಲ್ಲಿ ಕೆಲವು ದಿವಸಗಳ ವಿಜಯ ಯಾತ್ರೆ ಪ್ರವಾಸ ಕೈಕೊಳ್ಳುವರು. ಆ ಕಾರಣ ಸಮಸ್ತ ಭಕ್ತ ಜನರು ಅವರ ಪ್ರವಾಸವು ಜಯಪ್ರದವಾಗುವಂತೆ ಸಹಕರಿಸಿ ಅವರ ದರ್ಶನ ಲಾಭ, ಭಾಷಣಾದಿಗಳನ್ನು ಕೇಳಿ ಕೃತಕೃತ್ಯರಾಗಬೇಕಾಗಿ ಶ್ರೀ ಮಠದ ದ. ಕ. ಜಿಲ್ಲಾ ಮುದ್ರಾಧಿಕಾರಿ ಡಾ. ವಿ. ಕೆ. ಪಿ. ಶರ್ಮರವರು ವಿನಂತ್ರಿಸುತ್ತಾರೆ.

ಮದ್ರಾಸು— ಇಲ್ಲಿಯ ಕರ್ನಾಟಕ ಸಂಘದ ಸಮಾರೋಪ ಸಭೆಯು ತಾ. 2ರಲ್ಲಿ ಪ್ರೊ। ಎಮ್. ಆರ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಕಾರ್ಯದರ್ಶಿ ಶ್ರೀ ಎ. ಶ್ರೀನಿವಾಸ ಭಟ್ಟರು ವರದಿಯನ್ನೋದಿದರು. ಹಿರಿಯ ವಿದ್ಯಾರ್ಥಿ ಶ್ರೀ ಚಕ್ರಪಾಣಿ ಉಡುಪರು ಸ್ವಸ್ತಿವಾಚನಮಾಡಿದರು. ಅಂದಿನ ಮುಖ್ಯ ಭಾಷಣಕಾರರಾದ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಮಾತನಾಡುತ್ತಾ ಭಾರತದ ರಾಜ್ಯ ಪುನರ್ನಿರ್ಮಾಣಕೆಯು ಸಫಲತೆಯನ್ನು ಹೊಂದಬೇಕಾದರೆ ಜನರು ತಮ್ಮಲ್ಲಿರುವ ಸಣ್ಣತನದೂರಮಾಡಿ, ವಿಶಾಲ ಹೃದಯದವರಾಗಬೇಕೆಂದೂ ಮತ್ತು ಭಾರತದ ನಿಸರ್ಗ ಸಂಪತ್ತನ್ನು ಸದುಪಯೋಗಗೊಳಿಸಲು ಬೇಕಾದ ಅವಕಾಶವನ್ನು ಕಲ್ಪಿಸಿಕೊಡಬೇಕೆಂದೂ ಹೇಳಿದರು. ಶ್ರೀ ಪಿ. ಹರಿಭಟ್ಟರು ವಂದನೆಯನ್ನರ್ಪಿಸಿದ ಬಳಿಕ ಸಭೆಯು ಕೊನೆಗೊಂಡಿತು.

ಪುರಂದರ ದಾಸರ ದಿನಾಚರಣೆಯು— ಕರ್ನಾಟಕ ಸಂಘದ ಆಶ್ರಯದಲ್ಲಿ ಕಳೆದ ತಾ. 19ರಲ್ಲಿ 'ಉಡ್ಲೆಂಡ್ಸ್ ಹೊಟೆಲ್' ನಲ್ಲಿ ನೆರವೇರಿತು. ಶ್ರೀ ಕೆ. ಸೀತಾರಾಮಭಟ್ಟರು ಪುರಂದರ ದಾಸರ ಜೀವನ ಮತ್ತು ಕೃತಿಗಳ ಕುರಿತು ಭಾಷಣವಿತ್ತರು. ನಂತರ ಸಂಗೀತ ಕಚೇರಿ ನಡೆಯಿತು. ಶ್ರೀ ಕೆ. ಪೈ. ನಾರಾಯಣ ರಾಯರು ಧನ್ಯವಾದಗಳನ್ನಿತ್ತರು.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಕೊಟ್ರೆಲ್ಲ ಕೈನ—

ಬರೆದವರು: ಕೃ. ನ. ಮೂರ್ತಿ, ಬೆಲೆ: ರೂ ೦—೮—೦.

ವರ ಪರೀಕ್ಷೆ—

ಬರೆದವರು: "ರವಿ" ಬೆಲೆ: ರೂ. ೦-೮-೦

ಬಾದರಾಯಣ ಸಂಬಂಧ—

ಬರೆದವರು: ಎ. ಎಸ್. ಸುಬ್ಬರಾವ್, ಬೆಲೆ: ರೂ. ೦—೬—೦.

(ಮೇಲಿನೆಲ್ಲ ಪುಸ್ತಕಗಳ ಪ್ರಕಾಶಕರು: ಚಿತ್ರವಾಣಿ ಪ್ರಕಾಶನ, ಚಿಕ್ಕಪೇಟೆ, ಬೆಂಗಳೂರು ೨.)

ಕಾಲೇಜಿನಲ್ಲಿ ಕಲಿತ ಹುಡುಗಿಯೇ ಆಗಬೇಕೆಂದು ಹಠ ಮಾಡುತ್ತಿದ್ದ ಬಾಲುವಿಗೆ ಉಪಾಯಾಂತರದಿಂದ ಸಾಲ್ಮನೇ ಕಾಯುತ್ತಿಯ ವಿದ್ಯಾಭ್ಯಾಸವಷ್ಟೆ ಆಗಿದ್ದ ಶಾರದೆಯನ್ನು ತಂದು ಮದುವೆ ಮಾಡಿಸಿದ ವಿಷಯವೇ "ಕೊಟ್ರೆಲ್ಲ ಕೈನ" ನಾಟಕದ ವಸ್ತು. ಹಳ್ಳಿಯ ಹುಡುಗಿಯಲ್ಲೂ ಸೌಂದರ್ಯವಿರಬಲ್ಲುದು, ವಿದ್ಯಾವಿಹೀನಳೂ ಸಂಸ್ಕಾರವಂತೆಯಾಗಿರಬಲ್ಲಳು ಎಂಬುದನ್ನು ಈ ನಾಟಕ ಚೆನ್ನಾಗಿ ತೋರಿಸಿ ಕೊಡುತ್ತದೆ. ಮಾತು ಹಾಸ್ಯ ರಸದಿಂದ ಕೂಡಿದೆ. ಕೊನೆಯ ವರೆಗೂ ಕುತೂಹಲವು ಉಳಿಯುತ್ತದೆ.

ಕಣ್ಣು ಸರಿ ಕಾಣಿಸದ, ಕಿವಿ ಸರಿ ಕೇಳಿಸದ, ಅವರೆ ಮದುವೆಯಾಗಿ ಸಂಸಾರ ನಡೆಸಲೇಬೇಕೆಂಬ ಸಹಜ ಅಭಿಲಾಷೆಯಿರುವ ವೆಂಕಣ್ಣನೆಂಬ ವರನನ್ನು ನೋಡಿಕೊಂಡು ಹೋಗಲು ಬಂದ ಹೆಣ್ಣಿನ ಕಡೆಯವರು ಈ ವರನ ದೋಷಗಳನ್ನು ಮರೆಯಾಗಿಟ್ಟರಲು ಸ್ನೇಹಿತ ಕಿಟ್ಟುವು ಎಷ್ಟೇ ಪ್ರಯತ್ನಿಸಿದರೂ ಅದನ್ನು ಕೊನೆಗಾದರೂ ಕಂಡುಕೊಂಡು ಸಂಬಂಧ ಬೆಳೆಸದೆ ಹೊರಟು ಹೋದುದು "ವರ ಪರೀಕ್ಷೆ"ಯ ಕಥಾವಸ್ತು. ಕತೆಯು ಮುಗಿದ ರೀತಿ ಅಷ್ಟು ಸಂತೋಷವನ್ನು ಕೊಡುತ್ತಿಲ್ಲ—ಇದೊಂದು ದೋಷವನ್ನು ಹೊರತು ಪಡಿಸಿದರೆ ಸಂಭಾಷಣೆ ನಡೆಯುವ ಹಾಗು ಬೆಳೆಯುವ ರೀತಿ ಸೊಗಸಾಗಿದೆ; ವಿನೋದಕರವಾಗಿದೆ.

ಹೋಟೆಲಿನ ಅನ್ನವನ್ನು ಉಣ್ಣುವ ಮನಸ್ಸಿಲ್ಲದೆ ಮನೆಯನ್ನವನ್ನೆ ಉಣ್ಣಲೆಂದು ಬಯಸಿ ಸಂಬಂಧಿಕನೆಂದು ಸುಳ್ಳು ಹೇಳಿ ವಕೀಲ ರಂಗನ ಮನೆಯಲ್ಲಿ ಮೂರು ದಿನ ಖಿಷ್ಟಾನ್ನ ಭೋಜನ ಸ್ವೀಕರಿಸಿದ ನಾರಣಪ್ಪನ ಗುಟ್ಟು ಕೊನೆಗಾದರೂ ರಟ್ಟಾಗಿ ಅಪಮಾನಿತನಾಗಿ ಹೊರಬೀಳಬೇಕಾಗಿ ಬಂದ ಪರಿಯನ್ನು "ಬಾದರಾಯಣ ಸಂಬಂಧ" ವಿವರಿಸುತ್ತದೆ. ಇಲ್ಲಿಯ ಸಂಭಾಷಣೆಯಲ್ಲಿ ಬರುವ ಕೆಲವು ಮಾತುಗಳು ಅತಿರೇಕ ಊಹೆಗಳೆನಿಸುತ್ತವೆಯೇ ಹೊರತು ಸರಿಯಾದ ಹಿಂದು ಮುಂದಿನ ಸಂಬಂಧವನ್ನು ಹೊಂದಿಲ್ಲ. ನಾಟಕದ ಆಕರ್ಷಣೆಯ ಭರದಲ್ಲಿಯಷ್ಟೇ ಈ ದೋಷ ಮರೆಯಾಗಬಲ್ಲುದು; ಹೊರತು ಸೂಕ್ಷ್ಮ ದೃಷ್ಟಿಗೂ ಮರೆಯಾಗಿ ನಿಲ್ಲಲಾರದು. ಅವರೆ ಪ್ರಹಸನವಾಗಿ ಅಭಿನಯಿಸಲು ತೊಂದರೆಯಿಲ್ಲ.

ರೂಪಾಯಿ 500 ಬಹುಮಾನ

ಲ್ಯುಕೋಡ್ರ್ಮಾ

(ಬಿಳಿ ಕಲೆಗಳು)

ಲ್ಯುಕೋಡ್ರ್ಮಾ ಮತ್ತು ಕುಷ್ಠ ರೋಗವನ್ನು ಸುಲಭವಾಗಿ ಹೋಗಲಾಡಿಸಲು ದೇಹದ ಹೊರಗೂ ಒಳಗೂ ನಮ್ಮ ಅನುಭವೀ ಔಷಧ ಪ್ರಯೋಗದಿಂದ ಸಾಧ್ಯವಿದೆ. ಸಹಸ್ರಾರು ಮಂದಿ ಗ್ಯಾರಂಟಿಯಾಗಿ ಗುಣ ಹೊಂದಿದ್ದಾರೆ. ರೂಪಾಯಿ 5/- ಬೆಲೆಯ ನಮ್ಮ ಔಷಧಿಯನ್ನು ದೇಹದ ಹೊರಗೆ ಲೇಪಿಸಿ ಕೆಲವೇ ದಿನಗಳೊಳಗೆ ಈ ಮಹಾ ವ್ಯಾಧಿಯಿಂದ ಗುಣಹೊಂದಿರಿ. ವೇದನಾರೋಧಕ ಮತ್ತು ಕ್ಷಯರೋಗ ವಿಕಾರ ಹಾಗೂ ಎಲ್ಲಾ ತರದ ಕುಷ್ಠ ರೋಗಗಳ ನಿವಾರಣೆ ಬಗ್ಗೆ ಸೇವಿಸುವ ಔಷಧಿ, ಬೆಲೆ ರೂ. 5/-.

Indra Ayurved Bhavan,
(60) P. O. Rajdhanwar (H Bagh)

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್ ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಟೆ ಸಂಬಂಧವ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628 "ಸಂತಾನ ಸಿಂಧೂರ ಸದನ", (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—

ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕಭಂಡಾರ, ಉಡುಪಿ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkpet, UDIPI, S. Kanara.

ಫೋನ್ ನಂಬ್ರ 66

(೪ನೇ ಪುಟದಿಂದ)

...ಲದಿವೆ. ಅಕ್ರಮವು ನಡೆದ ಎಷ್ಟೋ ಸಮಯದ ಬಳಿಕ. ಅದು ಬೆಳಕಿಗೆ ಬರುವುದರಿಂದ ಮತ್ತು . ಶಾಸನದ ಹಿಂದಿನ ಪ್ರಾಮಾಣಿಕ ಉದ್ದೇಶವನ್ನು ಕಡೆಗಣಿಸಿ ಉಪಾಯಾಂತರಗಳಿಂದ ಆ ಉದ್ದೇಶವನ್ನು ವಿಫಲಗೊಳಿಸುವ ಕುತಂತ್ರ ಬುದ್ಧಿಯೇ ಹೆಚ್ಚಿನ ಜೀವವಿಮಾ ಕಂಪೆನಿಗಳ ಆಡಳಿತಗಾರರಲ್ಲಿ ಪ್ರಬಲಿಸಿರುವುದರಿಂದ ಸರಕಾರವೇ ತನ್ನ ನೇರಾದ ಆಡಳಿತದಲ್ಲಿ ಜೀವವಿಮೋದ್ಯಮವನ್ನು ನಡೆಸುವುದು ಕ್ಷೇಮಕರವೆಂದು ನಂಬಿದೆ.

ಪ್ರಜೆಗಳ ಕ್ಷೇಮ

ಸರಕಾರದ ಮುಂದಿರುವ ಇನ್ನೊಂದು ವಿಶಾಲವಾದ ಧ್ಯೇಯವೆಂದರೆ ಕಲ್ಯಾಣ ರಾಷ್ಟ್ರದ ನಿರ್ಮಾಣ. ಕೇವಲ ಭಂಡವಾಳದ ಯಶಸ್ವಿ ನಿಯಂತ್ರಣಕ್ಕಾಗಿ ಸರಕಾರವು ಜೀವವಿಮೋದ್ಯಮದ ರಾಷ್ಟ್ರೀಕರಣಕ್ಕೆ ಕೈಹಾಕಿತೆಂದು ಭಾವಿಸುವವರು ರಾಷ್ಟ್ರದ ಒಂದು ಮುಖವನ್ನಷ್ಟೇ ನೋಡುವವರೆನಿಸುತ್ತಾರೆ. ಪ್ರಜೆಗಳ ಕ್ಷೇಮಾಭ್ಯುದಯವೇ ಧ್ಯೇಯವಾಗಿರುವ ರಾಷ್ಟ್ರಗಳಲ್ಲಿ ಸಾಮಾನ್ಯ ನಾಗರಿಕನ ಸುಖ ಜೀವನಕ್ಕೆ ಜೀವವಿಮೆಯ ಸೌಲಭ್ಯವು ಬಹಳವಾಗಿ ನೆರವಾಗುತ್ತದೆ. ಆದ್ದರಿಂದ ಜೀವವಿಮೆಯೂ ಮುದಿತನ, ನಿಶಕ್ತತೆ, ಮಾತೃತ್ವ ಮತ್ತಿತರ ಮಾನವೀಯ ಅವಸ್ಥೆಗಳ ಗಂಡಾಂತರದ ವಿರುದ್ಧ ಜೀವವಿಮೆಯು ಕೊಡುವ ರಕ್ಷಣೆಯೂ ಪ್ರಜಾಸತ್ತಾತ್ಮಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೆಚ್ಚು ಜನಪ್ರಿಯವಾಗಿವೆ. ಇದರ ಪ್ರಮಾಣವನ್ನು ಅಳೆಯಲು ಕೆಲವು ಅಂಕಿ ಸಂಖ್ಯೆಗಳನ್ನು ಕೊಟ್ಟರೆ ಸಾಕು— ಭಾರತದ ರಾಷ್ಟ್ರೀಯ ಉತ್ಪಾದನೆಯಲ್ಲಿ ೧೦% ಮಾತ್ರ ಇಲ್ಲಿಯ ಜೀವವಿಮೆಯ ಮೊತ್ತವಾಗಿದ್ದರೆ, ಕೆನಡದಲ್ಲಿ ೧೦೮% ಅಮೇರಿಕದಲ್ಲಿ ೯೫% ಬ್ರಿಟನಿನಲ್ಲಿ ೫೧% ಮತ್ತು ಆಸ್ಟ್ರೇಲಿಯದಲ್ಲಿ ೪೭% ಈ ದಾಮಾಶೆಯವಿದೆ. ಭಾರತದಲ್ಲಿ ಜೀವವಿಮೋದ್ಯಮವು ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚಿನ ವೇಗವನ್ನು ಪಡೆದಿರುವುದೇನೋ ನಿಜ. ೧೯೩೭—೫೩ನೇ ವರ್ಷಗಳ ಅವಧಿಯಲ್ಲಿ ಊರ್ಜಿತದಲ್ಲಿರುವ ಒಟ್ಟು ಜೀವವಿಮೆಯ ಮೊತ್ತವು ೨೩೭ ಕೋಟಿ ರೂಪಾಯಿಯಿಂದ ಮೂರೂವರೆ ಪಾಲು ಹೆಚ್ಚಿಕೊಂಡು ೯೬೨ ಕೋಟಿ ರೂಪಾಯಿಗಳಿಗೆ ಏರಿತು. ಇದೇ ಅವಧಿಯಲ್ಲಿ ಅಮೇರಿಕ ಮತ್ತು ಕೆನಡಗಳಲ್ಲಿ ಮೂರು ಪಾಲು ಹಾಗು ಬ್ರಿಟನಿನಲ್ಲಿ ಎರಡು ಪಾಲು ಮಾತ್ರ ಅಭಿವೃದ್ಧಿ ಸಾಧಿಸಲ್ಪಟ್ಟಿತು. ಆದರೆ ನಾವೊಂದು ಸಂಗತಿಯನ್ನು ಮರೆಯಬಾರದು—ಅದೇನೆಂದರೆ, ಪಾಶ್ಚಾತ್ಯದಲ್ಲಿ ೧೯೩೭ನೇ ಇಸವಿಯ ಹೊತ್ತಿಗಾಗಲೇ ಅತಿ ಹೆಚ್ಚು ಜನರು ಜೀವವಿಮೆಯ ಸೌಲಭ್ಯಕ್ಕೆ ಒಳಗಾಗಿದ್ದರು; ಆದುದರಿಂದ ಈ ಸೌಲಭ್ಯವನ್ನು ವಿಸ್ತರಿಸಲು ಆ ದೇಶಗಳಲ್ಲಿ ವಿಶಾಲವಾದ ಅವಕಾಶವಿರಲಿಲ್ಲ. ನಮ್ಮ ದೇಶದಲ್ಲಿಯ ಪರಿಸ್ಥಿತಿ ತೀರ ವಿರುದ್ಧ. ೩೭ ಕೋಟಿ ಜನರಲ್ಲಿ ೫೦ ಲಕ್ಷ ಮಂದಿಗೂ ಕಡಿಮೆ ಈಗ ಜೀವವಿಮೆಯ ಪಾಲಿಸಿದಾರರಾಗಿರುವರೆಂಬ ಒಂದೇ ಸಂಗತಿ ಇದನ್ನು ಸ್ಪಷ್ಟಪಡಿಸುತ್ತದೆ.

ಸುಧಾರಣೆ ಬೇಕು

ಪ್ರಕೃತಕ್ಕೆ ದುರಾಡಳಿತದ ದೋಷದಿಂದ ಕಲಂಕಿತವಾಗಿರುವ ಜೀವ ವಿಮೋದ್ಯಮವನ್ನು ಉದ್ಧರಿಸಿ, ಸರಕಾರವು ಪ್ರತಿಯೊಬ್ಬ ಪ್ರಜೆಗೂ ಸರ್ವವ್ಯಾಪಕ ಸ್ವರೂಪದ ಸಂರಕ್ಷಣೆಯನ್ನೊದಗಿಸಿಕೊಡುವ ಈ ಸೌಲಭ್ಯದ ರುಚಿ ಹತ್ತಿಗೊಡಬೇಕೆಂದು ತೀರ್ಮಾನಿಸಿದೆ. ಈಗ ಭಾರತದಲ್ಲಿ ಹೆಸರಿಗೆ ನೂರೈವತ್ತಕ್ಕಿಂತಲೂ ಹೆಚ್ಚು ಜೀವವಿಮಾ ಕಂಪೆನಿಗಳಿದ್ದರೂ ಅವುಗಳಲ್ಲಿ ಜೀವವಿಮೆಯ ಸಂದೇಶವನ್ನು ಜನರಿಗೆ ಮುಟ್ಟಿಸುವ ವಿಷಯದಲ್ಲಿ ಸಾಕಷ್ಟು ಚಟುವಟಿಕೆ ತೋರಿಸುವವುಗಳು ಸುಮಾರು ೨೦ ಮಾತ್ರ. ಇವು ಒಟ್ಟು ಜೀವವಿಮೆಯ ೯೫% ವ್ಯವಹಾರವನ್ನು ನಡೆಸುತ್ತವೆಂದು ತಿಳಿದು ಬರುತ್ತದೆ. ಇನ್ನೊಂದು ಲೆಕ್ಕದಂತೆ, ಭಾರತದ ಒಟ್ಟು ಜೀವವಿಮೆಯಲ್ಲಿ ವಿದೇಶಿ ಕಂಪೆನಿಗಳ ವ್ಯವಹಾರದ ಪಾಲು ೧೫%; ಐದೇ ಐದು ಪ್ರಸಿದ್ಧ ಭಾರತೀಯ ವಿಮಾ ಕಂಪೆನಿಗಳ ಪಾಲು ೫೫%. ಇವೈದು ಕಂಪೆನಿಗಳ ವಶದಲ್ಲಿಯೇ ಒಟ್ಟು ಜೀವ ನಿಧಿಯ ಅರ್ಧಾಂಶವಿದೆ ಎಂದ ಮೇಲೆ ಒಂದು ವಿಶಿಷ್ಟ ಗುಂಪಿನ ಕೈವಾಡವೇ ಸಮ್ಯಕ್ಕೆ ಜೀವವಿಮೋದ್ಯಮದಲ್ಲಿ ನಡೆಯುತ್ತಿದೆ ಎಂಬುದು ಸ್ಪಷ್ಟ. ಇದನ್ನು ತಪ್ಪಿಸುವುದು ಅವಶ್ಯಕ ಹೇಗೋ ಹಾಗೆಯೇ ಲೆಕ್ಕಕ್ಕೆ ಮಾತ್ರ ಅಸ್ತಿತ್ವದಲ್ಲಿದ್ದು ಪಾಲಿಸಿದಾರರ ಹಣದ ಮೇಲೆ ಜೀವನಯಾಪನೆಮಾಡುವ ಆಡಳಿತ ವರ್ಗದ ನಿರ್ಮೂಲನವೂ ಅಗತ್ಯ. ಅರ್ಥಸಚಿವರು ಕೊಟ್ಟ ವಿವರಗಳಿಗನುಸಾರವಾಗಿ ಶಾಸನಿಕವಾದ ನಿರ್ಬಂಧಗಳಿದ್ದಾಗ್ಯೂ ಭಾರತೀಯ ಜೀವವಿಮಾ ಕಂಪೆನಿಗಳು ಜೀವ ನಿಧಿಯ ೨೬% ಹಣದಷ್ಟು ಹೆಚ್ಚು ಖರ್ಚುಮಾಡುತ್ತವೆ. ಈ ಸರಾಸರಿ ಪ್ರಮಾಣವು ಬ್ರಿಟನಿನ ಮಟ್ಟಿಗೆ ೧೫%, ಅಮೇರಿಕದಲ್ಲಿ ೧೭% ಆಗಿದೆ. ಇದರ ಹೊರತಾಗಿ ಇಲ್ಲಿಯ ಪ್ರೀಮಿಯಂ ದರಗಳು ಲೋಕದಲ್ಲಿಯೇ ಹೆಚ್ಚಾಗಿವೆ— ನಮ್ಮ ದೇಶದಲ್ಲಿ ಮರಣ ಪ್ರಮಾಣ ಹೆಚ್ಚೆಂಬುದು ನಿಜವಾದರೂ ಅದಕ್ಕೆ ಸಾಕಷ್ಟು ಅವಕಾಶಬಿಟ್ಟ ಮೇಲೂ ಈಗಿನ ದರಗಳನ್ನು ಗಣನೀಯವಾಗಿ ತಗ್ಗಿಸಬಹುದೆಂದು ತಜ್ಞರ ಅಭಿಪ್ರಾಯ. ಪಾಲಿಸಿಗಳು ನಿಷ್ಫಲಹೊಂದುವ ಪ್ರಮಾಣವೂ (೪೦%) ಭಾರತದಲ್ಲಿ ಅತ್ಯಧಿಕವಾಗಿದೆ. ಪಾಲಿಸಿಯ ಹಣವನ್ನು ನ್ಯಾಯವಾಗಿ ಕೊಡಬೇಕಾಗಿ ಬಂದಾಗ, ಅದನ್ನು ತೆರದೆ ಅಕ್ರಮವಾಗಿ ವರ್ತಿಸಿದ ಉದಾಹರಣೆ ಸಹ ಭಾರತದಲ್ಲಿ ಹೆಚ್ಚು. ಆಸ್ಟ್ರೇಲಿಯದಲ್ಲಿ ಕೇವಲ ಒಂದೇ ಒಂದು ದೂರು ಸರಕಾರದ ಬಳಿಗೆ ಬಂದಿದ್ದಾಗ (೧೯೫೪) ಭಾರತದಲ್ಲಿ ಒಂದು ಸಾವಿರ ದೂರು ಬಂತು!

ಸರಕಾರದ ಆದರ್ಶ

ಇದನ್ನೆಲ್ಲ ಗಮನಿಸಿ, ದೇಶಮುಖರು ಆದರ್ಶ ರೀತಿಯಲ್ಲಿ ಜೀವವಿಮೋದ್ಯಮವನ್ನು ನಡೆಸುವುದೆಂದರೆ ಹೇಗೆಂದು ವಿವರಿಸಿದ್ದಾರೆ — ಅವರ ಅಭಿಪ್ರಾಯಾನುಸಾರ, ಪಾಲಿಸಿದಾರರ ಹಣವೆಂಬ ಭಾವನೆಯು ಸದಾ ಜಾಗ್ರತವಾಗಿದ್ದು ಅತ್ಯಂತ ಮಿತವ್ಯಯದಿಂದ ಜೀವವಿಮೋದ್ಯಮವು ಕೆಲಸ ನಡೆಸಬೇಕು; ಪ್ರೀಮಿಯಂ ಹಣವು ಸಾಮಾನ್ಯ ಕ್ರಮದ ಒರೆಗಲ್ಲಿಗೆ ಹಚ್ಚಿದಾಗ ಹೆಚ್ಚೆಂದು ಕಂಡು ಬರಬಾರದು; ಭಂಡವಾಳಕ್ಕೆ ಯೋಗ್ಯ ಸಂರಕ್ಷಣೆ ಸಿಗುವಂತೆಯೂ ಪಾಲಿಸಿದಾರರ ಕ್ಷೇಮಾಭ್ಯುದಯ ಹೆಚ್ಚುವಂತೆಯೂ ನಿಕ್ಷೇಪ ನೀತಿಯಿರಬೇಕು; ಪಾಲಿಸಿದಾರರಿಗೂ ಸಾರ್ವಜನಿಕರಿಗೂ ಕ್ಷಿಪ್ರ ಹಾಗು ದಕ್ಷ ಸೇವೆಯು ಸಲ್ಲಬೇಕು; ಕೊನೆಯದಾಗಿ ಆಡಳಿತವು ವಿಶ್ವಸ್ತ ಭಾವನೆಯಿಂದ ಪ್ರೇರಿತವಾಗಿರಬೇಕು. ಈ ನೆಲೆಯಿಂದ ಕೆಲಸ ಮಾಡಲು ಸರಕಾರವು ಬಯಸಿದೆ. ಖಾಸಗಿ ಕ್ಷೇತ್ರವನ್ನು ಈಗಿದ್ದಂತೆಯೇ ಇರಗೊಟ್ಟು ಈ ಆದರ್ಶವನ್ನು ಸಾಧಿಸುವುದು ಸಾಧ್ಯವಿಲ್ಲವೆಂದು ಸರಕಾರಕ್ಕೆ ಮನವರಿಕೆಯಾಗಿದೆ. ಆದುದರಿಂದ ಅದು ತನ್ನ ನೇತೃತ್ವದಲ್ಲಿ ಒಂದು ಕಾರ್ಪೋರೇಶನನ್ನು ಸ್ಥಾಪಿಸಿ ನಾಲ್ಕು ವಲಯಗಳಾಗಿ ಅದರ ಕಾರ್ಯ ಕ್ಷೇತ್ರವನ್ನು ವಿಂಗಡಿಸಿ ಜೀವವಿಮೋದ್ಯಮವನ್ನು ನಡೆಸಬೇಕೆಂದು ಸಂಕಲ್ಪಿಸಿದೆ. ಈ ಕಾರ್ಪೋರೇಶನಿನ ಸ್ಥಾಪನೆಯು ಇದೇ ಬರುವ ಜೂನಿನ ೧೫ನೇ ದಿನಾಂಕದ ಹೊತ್ತಿಗೆ ನೆರವೇರಬಹುದೆಂದು ಅಂದಾಜು. ಇದಕ್ಕೆ ಸಂಬಂಧಿಸಿದ ಮಸೂದೆಯೊಂದು ಸಂಸತ್ತಿನ ಮುಂದೆ ಈಗಾಗಲೇ ಮಂಡಿಸಲ್ಪಟ್ಟಿದ್ದು ಅದು ಮಂಜೂರಾಗುವುದರಲ್ಲಿ ಸಂದೇಹವಿಲ್ಲ. ಏನಾದರೂ ಸಂದೇಹವು ಸಾರ್ವಜನಿಕರಲ್ಲಿದ್ದರೆ ಸರಕಾರದ ರಾಷ್ಟ್ರೀಕರಣ ನೀತಿಯು ಎಷ್ಟೇ ಘನೋದ್ದೇಶದಿಂದ ಪ್ರೇರಿತವಾಗಿದ್ದರೂ ಯಶಸ್ವಿಯಾದೀತೆ ಎಂಬ ಬಗ್ಗೆ ಮಾತ್ರ. ದೇಶಮುಖರು ಯಶಸ್ಸಿನ ಕುರಿತು ಯಾರಿಗೂ ಸಂಶಯ ಬೇಡವೆಂದಿದ್ದಾರೆ—ಖಾಸಗಿ ಉದ್ಯಮವು ಕೆಡಬಹುದು; ಆದರೆ ಸರಕಾರದಿಂದ ಪ್ರವರ್ತಿಸಲ್ಪಟ್ಟ ಉದ್ಯಮ ಬಾಳಿಬದುಕುವುದೆಂದೆ ಅವರ ಭರವಸೆಯ ಮಾತು.

ನೋಟೀಸು.

ಈ ಮೂಲಕ ತಿಳಿಯಪಡಿಸುವುದೇನೆಂದರೆ 1956—57ನೇ ವರ್ಷದ ಬಾಬ್ತು ಕಟಪಾಡಿ ಪಂಚಾಯತ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಮಾರ್ಕೆಟು, ಇಳಿಯುವ ಸ್ಥಳ (Jetty) ಬಟ್ಟುಕಡವು, ಇವುಗಳಲ್ಲಿ ಕರ ವಸೂಲು ಮಾಡುವ ಹಕ್ಕನ್ನು ಪಂಚಾಯತ ಬೋರ್ಡಿನ ಪ್ರೆಸಿಡೆಂಟರು ತಾರೀಕು 15—3—1956 ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ, ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಪ್ರತ್ಯೇಕ ಪ್ರತ್ಯೇಕವಾಗಿ, ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸಿನ ಸಮಯ ಪಂಚಾಯತ ಬೋರ್ಡು ಆಫೀಸಿಗೆ ಬಂದು ತಿಳಿದು ಕೊಳ್ಳಬಹುದು.

P. Venkatraya Nayak.
B. Sc.
President-

Katapadi 3-3-1956-

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0.

ಮುಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್ಸ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, **UDIPI,** S. KANARA.

ಕುಮಾರಿ ಬಿಲ್ಲೆಗಳು (Govt. Regd.)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

ಇಸ್ಲಾಂ ಪ್ರಜಾರಾಜ್ಯ: ಪಾಕಿಸ್ತಾನ

(೨ನೇ ಪುಟದಿಂದ)

...ದ್ದು ಬಗ್ದಾದಿನ ಸೈನಿಕ ಒಪ್ಪಂದಕ್ಕೆ ...ಗುಟ್ಟಿದ ಬಳಿಕ ಈ ಪ್ರಬಲ ಮುಸ್ಲಿಂ ರಾಷ್ಟ್ರವು ಅರೇಬಿಯ, ಐಗುಪ್ತ ಮುಂ...ನ ದೂರದ ಮುಸ್ಲಿಂ ರಾಷ್ಟ್ರಗಳ ಗೆಳೆ...ನವನ್ನು ಕಳೆದು ಕೊಂಡಿತು; ಹತ್ತಿರದ ಆಫಘಾನಿಸ್ತಾನದೊಡನೆಯಂತೂ ಅದ... ಜನ್ಮದಿಂದಲೇ ವೈರಭಾವವಿದೆ. ಹೀ...ಗಿ ಈ ದೊಡ್ಡ ಮುಸ್ಲಿಂ ರಾಷ್ಟ್ರವು ...ಹಿತರಿಲ್ಲದ, ಏಕಾಕಿ ದೇಶವಾಗಿ ಹೊಸ...ಗಷ್ಟೇ ಇಸ್ಲಾಂ ಪ್ರಜಾರಾಜ್ಯವಾಗಿ ರೂ...ಗೊಳ್ಳುತ್ತಿದೆ.

ಆತ್ಮ ವಿಶ್ವಾಸವಿಲ್ಲ

ಜಗತ್ತಿನಲ್ಲಿ ಬೇರೆ ಇಸ್ಲಾಂ ಧರ್ಮೀ...ಯಾಯಿ ದೇಶಗಳೇ ಇಲ್ಲವೆನ್ನುವಂತೆ ...ಕಿಸ್ತಾನವು ಇಸ್ಲಾಮಿನ ಹೆಸರನ್ನು ...ರುಪಯೋಗಪಡಿಸಿಕೊಂಡಿದೆ-ಆದರೂ ...ದಕ್ಕೆ ಆತ್ಮ ವಿಶ್ವಾಸವಿಲ್ಲವೇ ಇಲ್ಲ. ಹಾ...ಲ್ಲದಿದ್ದರೆ, ಪಾಕಿಸ್ತಾನದ ಅಧ್ಯಕ್ಷ ಸ್ಥಾ...ಕ್ಕೆ ಮುಸ್ಲಿಮನೊಬ್ಬನು ಮಾತ್ರ ಆರಿಸಿ...ಬಹುದು; ಬೇರೆ ಯಾವ ಮತದವನು ...ಯಾಯಿಗೂ ಆ ಅಧಿಕಾರ ಪೀಠವನ್ನೇ...ವ ಅರ್ಹತೆಯಿಲ್ಲ ಎಂಬುದಾಗಿ ಘಟನೆ...ಯಲ್ಲಿ ಉಲ್ಲೇಖಿಸುವ ಆವಶ್ಯಕತೆಯಿರುತ್ತಿ...ರಲಿಲ್ಲ. ೯೦% ಮುಸ್ಲಿಮರಿರುವ ಪಾಕಿಸ್ತಾನದಲ್ಲಿ ಬಹುಮತದ ...ನಿರ್ಮಾಣವೇ ಸಿಂಧುವಾಗುವ ಪ್ರಜಾ...ಪ್ರಭುತ್ವವು ಅಸ್ತಿತ್ವದಲ್ಲಿದ್ದರೆ, ಮತ್ತು ...ಪ್ರಜೆಗಳು ನಿಜವಾಗಿ ಧರ್ಮಾಂಧರಾ...ಗಿದ್ದರೆ, ಮುಸ್ಲಿಮನ ವಿರುದ್ಧವಾಗಿ ಯಾ... ಅಲ್ಪಸಂಖ್ಯಾಕ ವರ್ಗದ ಸದಸ್ಯನೂ ...ಚುನಾವಣೆಯಲ್ಲಿ ಹೋರಾಟಕೊಟ್ಟು ಗೆ...ದ್ದು ಬರುವಂತಿಲ್ಲ.

ಸತ್ಯ ಹೀಗಿದ್ದರೂ ಘಟನಾತ್ಮಕವಾಗಿ ...ಸಾಮಾನ್ಯ ಮುಸ್ಲಿಮೇತರ ಪ್ರಜೆಯೊಬ್ಬನ ...ಮೂಲಭೂತಾಧಿಕಾರವನ್ನು ಕಸಿದು...ಕೊಂಡುದಕ್ಕೆ ಆತ್ಮವಿಶ್ವಾಸವು ಪಾಕಿಸ್ತಾನದ ಮುಸ್ಲಿಮರಲ್ಲಿ ಎಳ್ಳಷ್ಟೂ ಇಲ್ಲ...ವೆಂಬುದೇ ಕಾರಣ. ಹೀಗೆ ನಾಗರಿಕರಲ್ಲಿ ...ಭೇದವನ್ನುಂಟುಮಾಡುವ ಪ್ರಜಾರಾಜ್ಯ... ಜಗತ್ತಿನಲ್ಲಿ ಬೇರೊಂದಿರಲಾರದು. ...ಮುಸ್ಲಿಂ ಅಧ್ಯಕ್ಷನು ಕುರಾನಿಗೂ ಸುನ್ನಾಹಿಗೂ ವಿರುದ್ಧವಲ್ಲದ ಶಾಸನಗಳೇ ಪಾಕಿಸ್ತಾನದಲ್ಲಿ ರೂಪುಗೊಳ್ಳುವಂತೆ ಮುಂಜಾಗರೂಕತೆಯನ್ನು ವಹಿಸಬೇಕೆಂದು ಘಟನೆಯಲ್ಲಿ ವಿಧಿಸಿರುವುದು ಹಳೆಯ ಮುಸ್ಲಿಂ ಪ್ರಭಾವವು ಪುನರುಜ್ಜೀವನ ಹೊಂದಿರುವುದರ ದ್ಯೋತಕ.

ಭಿನ್ನಾಭಿಪ್ರಾಯ ತಪ್ಪಿದ್ದಲ್ಲ

ಕೊರಾನ್, ಸುನ್ನಾ, ಮುಸ್ಲಿಂ ಎಂದು ಮುಂತಾಗಿ ಇಸ್ಲಾಮಿ ವಾತಾವರಣವೇ ಪಾಕಿಸ್ತಾನದ ರಾಜಕೀಯದಲ್ಲಿ ತುಂಬಿರುವಂತೆ ಮಾಡಲು ಧುರೀಣರು ಇಷ್ಟರ ವರೆಗೆ ಕೈಕಾಲು ಬಡಿದುಕೊಂಡರು—ಆದರೆ ಇದಾದರೂ ಒಳ್ಳೆಯ ಫಲವನ್ನು ಕೊಡಬಹುದೆ ಎಂಬ ಕುರಿತು ನಿರೀಕ್ಷಕರು ಸಂಶಯವನ್ನೆ ತೋರ್ಪಡಿಸುತ್ತಾರೆ. ಮುಸ್ಲಿಮನೇ ಅಧ್ಯಕ್ಷನಾಗಬೇಕೆಂದು ಘಟನೆಯು ಹೇಳುತ್ತದೆ; ಆದರೆ ಮುಸ್ಲಿಂ ಎಂದರೆ ಯಾರು? ಎಂಬ ಮುಖ್ಯ ಪ್ರಶ್ನೆಗೆ ಅಲ್ಲಿ ಉತ್ತರವಿಲ್ಲ!

ಹಿಂದೆ ಪ್ರಸ್ತಾಪಿಸಿದಂತೆ ಕಾದಿಯಾನಿಗಳು ಮುಸ್ಲಿಮರಲ್ಲ ಎಂದು ಒಂದು ಜನವರ್ಗ ಹೇಳುತ್ತದೆ. ಶಿಯಾ ಪಂಥದವರೂ ಮುಸ್ಲಿಮರಲ್ಲವೆಂದು ಇನ್ನೊಂದು ಮುಲ್ಲಾಗಳ ಗುಂಪು ಸಾರಿದೆ. ಈಗಿನ ಗವರ್ನರ ಜನರಲರಾದ ಮಿರ್ಜಾರವರು ಶಿಯಾ ಪಂಥಕ್ಕೆ ಸೇರಿದವರಾಗಿದ್ದಾರೆ. ಇವರನ್ನೆ ಪಾಕಿಸ್ತಾನದ ಪ್ರಥಮ ಘಟನಾತ್ಮಕ ಅಧ್ಯಕ್ಷಸ್ಥಾನಕ್ಕೆ ನಿಲ್ಲಿಸಲು ಎಲ್ಲ ಪ್ರಯತ್ನಗಳನ್ನು ಧುರೀಣರು ನಡೆಸಿದ್ದಾರೆ. ಇವರೆಲ್ಲಿಯಾದರೂ ಆರಿಸಿ ಬಂದರೆ ಜಗಳಕ್ಕೆ ನಾಂದಿಯಾಗಬಹುದು!

ವ್ಯಾಖ್ಯೆಯಲ್ಲೂ ವ್ಯತ್ಯಾಸ

ಕಾದಿಯಾನಿ ವಿರೋಧ ಪ್ರದರ್ಶನಗಳನ್ನು ವಿಚಾರಿಸಿ ತೀರ್ಮಾನವನ್ನು ಸಾರಿದ ಪಾಕಿಸ್ತಾನಿ ಸರ್ವೋನ್ನತ ನ್ಯಾಯಸ್ಥಾನದ ಮುಖ್ಯ ನ್ಯಾಯ ಮೂರ್ತಿಗಳಾದ ಮುನೀರರು ಒಬ್ಬ ವ್ಯಕ್ತಿಯು ಎಷ್ಟೇ ಘನ ಪಂಡಿತನಾಗಿದ್ದರೂ ಇಸ್ಲಾಂ ಅಥವಾ ಮುಸ್ಲಿಂ ಎಂಬ ಶಬ್ದದ ಅರ್ಥವನ್ನು ವಿವರಿಸುವಾಗ ವ್ಯಕ್ತಿ ವ್ಯಕ್ತಿಗಳಲ್ಲಿ ಒಮ್ಮತವಾಗುವ ವ್ಯಾಖ್ಯೆಯನ್ನೆಂದೂ ಕೊಟ್ಟಿಲ್ಲ, ಒಬ್ಬೊಬ್ಬರ ಅಭಿಪ್ರಾಯವು ಒಂದೊಂದು ರೀತಿಯಾಗಿದೆ ಎಂದಿದ್ದರು. ಸುದೈವದಿಂದ ಕೊರಾನಿನ ಪಾವಿತ್ರ್ಯದ ಕುರಿತು ಮುಸ್ಲಿಂ ಪಂಗಡಗಳಲ್ಲಿ ಭಿನ್ನಾಭಿಪ್ರಾಯವಿಲ್ಲ; ಆದರೆ ಇದೇ ಮಾತನ್ನು ಸುನ್ನಾದ ಕುರಿತು ಹೇಳುವುದು ಕಷ್ಟ.

ಎಪ್ಪತ್ತೆರಡು ಮುಸ್ಲಿಂ ಪಂಗಡಗಳು ಸುನ್ನಾದ ಅರ್ಥವನ್ನು ಎಪ್ಪತ್ತೆರಡು ರೀತಿಯಲ್ಲಿ ವಿವರಿಸುತ್ತವೆ. ಪೈಗಂಬರರ ಮರಣಾನಂತರದ ಒಂದು ಶತಮಾನದಲ್ಲಿ ಕ್ರೋಢೀಕರಿಸಿದ ಮುಸ್ಲಿಂ ಸಂಪ್ರದಾಯಗಳ ವಿವರಣೆಯನ್ನು ಸುನ್ನಾಗಳು ಒಳಗೊಂಡಿವೆ ಎಂಬ ಸಾಮಾನ್ಯ ನಂಬಿಕೆಯಿದ್ದರೂ ಈಚೆಗೆ ಪಂಡಿತರೆನಿಸಿದವರು ಸುನ್ನಾದಲ್ಲಿ ಬರುವ ಎಲ್ಲವೂ ಮೂಲ ಗ್ರಂಥದಲ್ಲಿದ್ದಿರಲಾರದೆಂದೂ ಆ ನಂತರ ಜನರೇ ರಚಿಸಿಕೊಂಡ ಸೂತ್ರಗಳ ಬಾಹುಳ್ಯವೇ ಈಗಿನ ಗ್ರಂಥಗಳಲ್ಲಿ ಇವೆಯೆಂದೂ ಅಭಿಪ್ರಾಯಪಡುತ್ತಿದ್ದಾರೆ.

ಪೈಗಂಬರರೇ ಸ್ವತಃ ವಿವರಿಸಿದರು, ಅಥವಾ ವಿಧಿಸಿದರು ಎನ್ನಬಹುದಾದ ಮೂಲ ವಾಕ್ಯಗಳನ್ನು ಇಂದು ಗುರುತಿಸುವುದೇ ಕಷ್ಟಕರವಾಗಿದೆ ಎಷ್ಟೋ ಮಂದಿ ವಿದ್ವಾಂಸರು ಈ ಮಾತುಗಳ ಸಂಗ್ರಹಕ್ಕಾಗಿ ತಮ್ಮ ಜೀವಮಾನವನ್ನೆ ಮುಡುಪಿಟ್ಟರು. ಇಮಾಂಬುಖಾರಿ ಎಂಬ ಘನ ಪಂಡಿತರೊಬ್ಬರು ಇವರಲ್ಲೆಲ್ಲ ಶ್ರೇಷ್ಠರೆಂದು ಹೆಸರಾಗಿದ್ದಾರೆ. ಆದರೆ ಹತ್ತು ಲಕ್ಷಕ್ಕಿಂತಲೂ ಹೆಚ್ಚು "ಪವಿತ್ರ" ವಾಕ್ಯಗಳನ್ನು ಸಂಗ್ರಹಿಸಿದ ಇವರು ಒಂದೊಂದೇ ವಾಕ್ಯವನ್ನು ಒರೆಗಲ್ಲಿಗೆ ಹಚ್ಚುತ್ತಾ ಬಂದಂತೆ, ಅದು ಮೂಲ ವಾಕ್ಯವಲ್ಲವೆಂಬ ತೀರ್ಮಾನಕ್ಕೆ ಬರಬೇಕಾಯಿತು. ಕೊನೆಗೆ ಉಳಿದದ್ದು ಎಲ್ಲಿಯೋ ಕೆಲವು ನೂರು ಮಾತುಗಳು ಮಾತ್ರ!

ಶಾಸನಕ್ಕೂ ಆತಂಕ

ಹೀಗಿರುವಾಗ ಪವಿತ್ರವಾದ ಕೊರಾನಿಗೂ ಸುನ್ನಾದ ಆದೇಶಕ್ಕೂ ವ್ಯತಿರಿಕ್ತವಾಗಿ ಪಾಕಿಸ್ತಾನದ ಪ್ರಭುತ್ವವು ಶಾಸನಗಳನ್ನು ಮಾಡಲಾಗದೆಂದ ಘಟನೆಯ ಭಾವಕ್ಕೆ ಎಷ್ಟು ಮನ್ನಣೆ ಸಿಗಬಹುದು? ಹಲವಾರು ಪಂಗಡಗಳಾಗಿ ಮುಸ್ಲಿಮರು ಒಡೆದು ಹೋಗಿರುವುದು ಅಧ್ಯಕ್ಷನು ಯಾರಾಗಬೇಕೆಂದು ಜಗಳಾಡಲು ಅವಕಾಶವಿತ್ತಂತೆ, ಸುನ್ನವನ್ನು ಒಂದೊಂದು ಗುಂಪು ಒಂದೊಂದು ಬಗೆಯಾಗಿ ಅರ್ಥವಿಸುವುದೂ ಕಲಹಕ್ಕೆ ಕಾರಣವಾದೀತು. ಈಗಾಗಲೇ ಇಂಥ ಕಲಹದ ಕಹಳೆ ಮೊಳಗತೊಡಗಿದೆ. ಖಾಸಗಿ ಆಸ್ತಿಯನ್ನು ಉಪಭೋಗಿಸುವ ಹಕ್ಕನ್ನು ಕೊರಾನು ಕೊಟ್ಟಿದೆ ಎನ್ನುತ್ತಾ ಸಿಂಧಿನ ಜಮೀನುದಾರವರ್ಗವು ಜಮೀನುದಾರಿಯ ನಿರ್ಮೂಲನ ಮಾಡುವ ಶಾಸನಕ್ಕೆ ವಿರೋಧವನ್ನು ಸೂಚಿಸಿಯಾಗಿದೆ.

ಈಗಿನ ಗವರ್ನರ ಜನರಲರನ್ನೆ ಉಲ್ಲೇಖಿಸುವುದಾದರೆ ಅವರು ಒಬ್ಬ ಪತ್ರಿಕೋದ್ಯಮಿಯನ್ನು ರಮ್‌ಜಾನ್ ಹಬ್ಬದ ಪವಿತ್ರ ದಿನಗಳ ಒಂದು ರಾತ್ರಿ ಸುರಾಪಾನ ಮಾಡಲು ಆಹ್ವಾನಿಸುತ್ತಾ "ನಾನು ಹಗಲಲ್ಲಿ ಮಾತ್ರ ಮುಸ್ಲಿಂ" ಎಂದು ಹೇಳಿದ್ದರು.—ನಾಳೆ ಇವರು ಅಧ್ಯಕ್ಷಸ್ಥಾನವನ್ನೇರಿದರೆ, ಶಿಯಾ ಪಂಥದವರಾದುದು ಪವಿತ್ರ ಮುಸ್ಲಿಮನಲ್ಲ ಎಂಬುದರೊಡನೆ, ಸುರಾಪಾನವು ಕೊರಾನಿಗೆ ವಿರುದ್ಧ; ಆದದ್ದರಿಂದ ತಾನು ರಾತ್ರಿಹೊತ್ತು ಮುಸ್ಲಿಮನಲ್ಲ ಎಂಬ ಮಾತು ತೀರ ನಿಷಿದ್ಧ— ಎಂಬ ವಾದಕ್ಕೆ ಸಹ ಪುಷ್ಟಿ ದೊರೆತು, ಪಾಕಿಸ್ತಾನದ ಘಟನೆಯ ರಕ್ಷಕನೆನಿಸಿದಾತನ ವಿರುದ್ಧ ಪ್ರಚಂಡ ಆಂದೋಲನವೇಳಬಹುದು

ನಿಂದನೀಯ ನೀತಿ

ಇಂತ ಪರಿಸ್ಥಿತಿಯಲ್ಲಿ ಸಮತೂಕವನ್ನು ಕಾಯ್ದುಕೊಂಡು ಹೋಗುವುದು ಹೇಗೆ? ಮುಸ್ಲಿಮರಲ್ಲಿ ಒಗ್ಗಟ್ಟಿನ ಭಾವನೆಯು ಬೆಳೆಯದೆ, ಆಂದೋಲನದ ಮನೋಭಾವವೇ ಬಲಿತು ಕೊಂಡರೆ, ಪಾಕಿಸ್ತಾನದ ಭವಿಷ್ಯದ ಗತಿಯೇನು? ಅಲ್ಪಸಂಖ್ಯಾಕರಂತೂ ಪಾಕಿಸ್ತಾನದ ಘಟನೆಯನ್ನು ಹಿಂದಾಗಲೀ ಮುಂದಾಗಲೀ, ಎಂದೇ ಆಗಲಿ ಒಪ್ಪಿಕೊಂಡಿಲ್ಲ, ಒಪ್ಪಿಕೊಳ್ಳುವಂತಿಲ್ಲ. ಜಿನ್ನಾರಂಥ ಮಹಾನು ಭಾವರು ಸಹ ಪರಸ್ಪರ ಪ್ರೀತಿ, ಸೌಹಾರ್ದಗಳಿಂದ ಎಲ್ಲ ಪ್ರಜೆಗಳೂ ಪಾಕಿಸ್ತಾನದ ಅಭಿವೃದ್ಧಿಗಾಗಿ ದುಡಿಯಬೇಕೆಂದು ಹೇಳಿದರು—ಆದರೆ, ಈ ಹಾರೈಕೆ ಕೇವಲ ಮಾತಿನಲ್ಲಿಯೇ ಉಳಿಯಿತು.

ಅಲ್ಪ ಸಂಖ್ಯಾಕರಿಗೆ ನಿಜಕ್ಕೂ ಬಹಳ ಕಷ್ಟಕಾಲವು ಸನ್ನಿಹಿತವಾಗಿದೆ. ಪಾಕಿಸ್ತಾನದ ಆರ್ಥಿಕ ಹಾಗು ಸಾಮಾಜಿಕ ಸುಧಾರಣೆಗೆ ಮಧ್ಯಯುಗೀನ ಕಾಲದ ಸಂಪ್ರದಾಯಗಳನ್ನು ಎತ್ತಿ ಹಿಡಿಯುವ ಕೊರಾನು ಮತ್ತು ಸುನ್ನಾಗಳು ಒಂದು ಬಗೆಯ ಆತಂಕವಾದರೆ, ಅಲ್ಪ ಸಂಖ್ಯಾಕರ ಅಸಂತುಷ್ಟಿಯು ಇನ್ನೊಂದು ಪ್ರಬಲ ಸ್ವರೂಪದ ಅಡ್ಡಿಯಾಗಿದೆ. ಒಂದೇ ನಾಗರಿಕತ್ವವನ್ನು ಪುರಸ್ಕರಿಸುವುದು ಪ್ರಜಾಪ್ರಭುತ್ವವಾದಿ ರಾಷ್ಟ್ರಗಳ ಪರಮ ಸಂಪ್ರದಾಯವಾಗಿರುವಾಗ, ಪಾಕಿಸ್ತಾನವು ಮುಸ್ಲಿಮರಿಗೊಂದು ಬಗೆಯ ಉಚ್ಚತಮ ನಾಗರಿಕಾಧಿಕಾರವನ್ನೂ ಮುಸ್ಲಿಮೇತರ ವರ್ಗಕ್ಕೆ ನೀಚ ಮಟ್ಟದ ನಾಗರಿಕಾಧಿಕಾರವನ್ನೂ ಕೊಟ್ಟಿದು ವಿಷಾದಕರವಷ್ಟೇ ಅಲ್ಲ, ನಿಂದನೀಯವೂ ಹೌದು.

ಪ್ರಕಟಣೆ

ಶಿರ್ವಾ ಪಂಚಾಯತ್ ಬೋರ್ಡು ಪ್ರೆಸಿಡೆಂಟರಿಂದ ಈ ಮೂಲಕ ತಿಳಿಯ ಪಡಿಸುವದೇನೆಂದರೆ:—

ಶಿರ್ವಾ ಪಂಚಾಯತ್ ಬೋರ್ಡು ವ್ಯವಹಾರ ಕ್ಷೇತ್ರಕ್ಕೆ ಒಳಪಟ್ಟ ಮಂಚಕಲ್ಲು ಹಪ್ತೆವಾರು ಸಂತೆ, ದಿನಚರಿ ಮಾರ್ಕೆಟು ಮತ್ತು ಘಂಜಿ...ವಾರು ಬಾರಿಯಲ್ಲಿ ಕೂಡಾ ತಾ1 4_1956 ರಿಂದ 31—3—1957ರ ವರೆಗೆ ವರಿ ವಸೂಲು ಮಾಡುವ ಸ್ವಾತಂತ್ರ್ಯವನ್ನು ಮತ್ತು ಮಾರ್ಕೆಟು ಲೈನ್ ಕಟ್ಟೋಣಗಳನ್ನು ತಾ.1.4.1956ರಿಂದ ಮೂರು ವರ್ಷದ ವರೆಗೆ ಬಾಡಿಗೆಗೆ ಹಿಡಿಸಿಕೊಂಡು ಸ್ವಾಧೀನ ಇಟ್ಟು ಕೊಳ್ಳುವ ಹಕ್ಕನ್ನು, ತಾರೀಕು 22—3—1956 ನೇ ಗುರುವಾರ ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ್ ಬೋರ್ಡು ಆಫೀಸಿನ ಬಳಿ, ಬಹಿರಂಗವಾಗಿ, ಏಲಂ ಮಾಡಲಾಗುವುದು. ಏಲಂ ಶರ್ತಗಳನ್ನು ಆಫೀಸಿನ ನೋಟಿಸು ಬೋರ್ಡಿನಲ್ಲಿರುವ ಪ್ರಕಟಣೆಗಳಿಂದ ತಿಳಿಯಬಹುದು.

(SD) S. Annayya Hegde,
President Panchayat Board
Shirva. S. Kanara.
Shirva 27-2-56

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡಿಪೊಸಿಟ್ ವಾಲ್ಟ್
ಮಂಗಳೂರು—3.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ. ಬೊಂಬಾಯಿ ಮದರಾಸು ಕಲ್ಕತ್ತಾ

ಅಣು ಬಾಂಬಿನ ಸ್ಫೋಟನ ಪ್ರಯೋಗ

ಮೆನನ್ನರ ಎಚ್ಚರಿಕೆ

ಪ್ರಧಾನ ಮಂತ್ರಿ ನೆಹರುಗಳ ವಿದೇಶ ನೀತಿಯನ್ನು ಕಾರ್ಯಗತಗೊಳಿಸುವುದರಲ್ಲಿ ಶ್ರೀ ವಿ. ಕೆ. ಕೃಷ್ಣ ಮೆನೊನ್ನರಷ್ಟು ಯಶಸ್ವಿ ಸಹಕಾರವನ್ನು ನೀಡಿದ ವ್ಯಕ್ತಿ ಬೇರೊಬ್ಬನಿಲ್ಲ: ಬ್ರಿಟನಿನಲ್ಲಿ ಸ್ವತಂತ್ರ ಭಾರತದ ಪ್ರಥಮ ರಾಯಭಾರಿ ಹುದ್ದೆಯನ್ನು ನಿರ್ವಹಿಸುತ್ತಿದ್ದ ಕೆಲವು ವರ್ಷಗಳಲ್ಲಿ ಜೀಪಿನ

ಪ್ರಕರಣವೇ ಮುಂತಾದ ಅಪ್ರಿಯ ಘಟನೆಗಳಿಂದ ಭಾರತೀಯರ ದೃಷ್ಟಿಯಲ್ಲಿ ವರ್ಚಸ್ಸನ್ನು ಕಳೆದುಕೊಂಡಿದ್ದ ಶ್ರೀ ಮೆನೊನ್ನರು ಮುಂದೆ ನೆಹರುಗಳ ಸಂಚಾರಿ ರಾಯಭಾರಿ ಎನಿಸಿಕೊಂಡು, ತಮ್ಮ ಬುದ್ಧಿವಂತಿಕೆಯನ್ನು ವಿಚಕ್ಷಣತೆಯಿಂದ ಪ್ರದರ್ಶಿಸಿ, ವಿಶೇಷವಾದ ಮರ್ಯಾದೆಯನ್ನು ಕಷ್ಟಪಟ್ಟು ಸಂಪಾದಿಸಿಕೊಂಡರು; ಹಿಂದಿನ ಸೋಲಿನ ಮೇಲೆ ಪರದೆ ಹೀಗೆ ಬಿದ್ದಿತು. ಅಷ್ಟೇ ಅಲ್ಲದೆ, ಭಾರತದ ಮಂತ್ರಿ ಸ್ಥಾನವನ್ನೂ ಅವರ ಚಾತುರ್ಯತೆ ತಂದುಕೊಟ್ಟಿತು.

ಈಗ ಕೃಷ್ಣ ಮೆನೊನ್ನರು ಖಾತೆಯಿಲ್ಲದ— ಅದಾಗ್ಯೂ ನೆಹರುಗಳೊಂದಿಗೆ ವಿದೇಶ ಖಾತೆಯಲ್ಲಿ ದುಡಿಯುವ— ಮಂತ್ರಿಯಾಗಿದ್ದಾರೆ. ಈಗಷ್ಟೇ ಕರಾಚಿಯಲ್ಲಿ ನಡೆದಿರುವ „ಸೀಟೋ" ರಾಷ್ಟ್ರಗಳ ಪರಿಷತ್ತಿನಲ್ಲಿ ಭಾಗ ವಹಿಸಿದ ಪಾಶ್ಚಾತ್ಯ ರಾಷ್ಟ್ರಗಳ ವಿದೇಶ ಮಂತ್ರಿಗಳಿಗೆ ಭಾರತದ ಮನೋಭಾವ ಏನೆಂಬುದನ್ನು ಸ್ಪಷ್ಟವಾಗಿ ತಿಳಿಸಲು ಮೆನೊನ್ನರು ಲಂಡನಿಗೆ ಈಚೆಗಷ್ಟೇ ತಾನಿತ್ತ ಭೇಟಿಯ ಅವಕಾಶವನ್ನು ಉಪಯೋಗಿಸಿಕೊಂಡರು. ಅಲ್ಲಿಂದ ಮುಂದೆ ನ್ಯೂಯಾರ್ಕಿಗೆ ತೆರಳಿದ ಮೆನೊನ್ನರು ಲೋಕದ ಅಸ್ತಿತ್ವವನ್ನೆ ಸಂಶಯದಲ್ಲಿ ಕೆಡಹುವ ಅಮೇರಿಕದ ಪ್ರಳಯಕಾರಿ ಚಟುವಟಿಕೆಗಳ ವಿರುದ್ಧ ತಮ್ಮ—ಹಾಗು ಭಾರತದ—ಸ್ವರವನ್ನೆತ್ತಿದ್ದಾರೆ.

ಅಮೇರಿಕವು ಇದೇ ಎಪ್ರೀಲಿನ ೨೦ನೇ ತಾರೀಕಿನ ಬಳಿಕ ಶಾಂತ ಸಾಗರದ ಮಾರ್ಶಲ್ ದ್ವೀಪ ಸಮುದಾಯದ ಬಳಿ ಅಣುಶಸ್ತ್ರಗಳ ಸ್ಫೋಟನ ಪ್ರಯೋಗವನ್ನು ಮರಳಿ ಪ್ರಾರಂಭಿಸಬೇಕೆಂದು ಸಂಕಲ್ಪಿಸಿದೆ. ಈ ದ್ವೀಪ ಪ್ರದೇಶವು ಅಮೇರಿಕಕ್ಕೆ „ವಿಶ್ವಸ್ತ" ಆಡಳಿತ ಕ್ರಮದಂತೆ ದೊರೆತಿದೆಯೇ ಹೊರತು, ಅಮೇರಿಕದ ಸಾರ್ವಭೌಮಾಧಿಕಾರವೇನು ಆ ಪ್ರದೇಶದಲ್ಲಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ವಿಶ್ವಸ್ತ ಪ್ರದೇಶದಲ್ಲಿ ಕೇವಲ ಆಡಳಿತದ ಹೊಣೆಯಷ್ಟೇ ಇರುವ ಅಮೇರಿಕವು ಅಣುಸ್ಫೋಟನ ಪ್ರಯೋಗಗಳನ್ನು ನಡೆಸಿ, ಆ ಪ್ರದೇಶವನ್ನು ನಷ್ಟಪ್ರಾಯವಾಗಿ ಮಾಡಿಬಿಡುವುದು ಕ್ರಮಬದ್ಧವೆ? ಎಂದು ಮೆನೊನ್ನರ ಪ್ರಶ್ನೆ. ಇದರ ಇತ್ಯರ್ಥವಾಗಬೇಕೆಂದು ಬಯಸಿ ಅವರು ಭಾರತ ಸರಕಾರದ ಪರವಾಗಿ ಸೂಚನೆಯೊಂದನ್ನು ಮುಂದಿಟ್ಟು, ಜಾಗತಿಕ ನ್ಯಾಯಾಲಯವು ತನ್ನ ತೀರ್ಮಾನವನ್ನು ಈ ವಿಷಯದ ಮೇಲೆ ಕೊಡಬೇಕೆಂದು ಹೇಳಿದ್ದಾರೆ.

ಇನಿವಿಟೋಕ್ ಪ್ರಯೋಗ ಭೂಮಿಯಲ್ಲಿ ನಡೆಯುವ ಸ್ಫೋಟನದಿಂದ ಅನಾಹುತವಾಗದಂತೆ ಹಡದರ ಲಕ್ಷ ಮೈಲು ಭೂಮಿಯನ್ನು ರಕ್ಷಿಸಲಾಗುವುದೆಂದು ಅಮೇರಿಕ ಹೇಳುತ್ತದೆ. ಅಲ್ಲದೆ ಅಲ್ಲಿ ಸುತ್ತಾಡಬಹುದಾದ ನಾವಿಕರಿಗೆ ಸರಕಾರವು ಪ್ರಕಟಣೆಯ ಮೂಲಕ ಮುನ್ನೆಚ್ಚರಿಕೆ ಕೊಡುವುದೆಂದೂ ಅದು ತಿಳಿಸುತ್ತದೆ. ಆದರೆ ಮೆನೊನ್ನರು ಇಷ್ಟರಿಂದಲೇ ಸ್ಫೋಟನ ಪ್ರಯೋಗವನ್ನು ನಡೆಸಬಹುದೆಂದು ಒಪ್ಪುತ್ತಿಲ್ಲ. ಓದು ಬರಹ ಬಾರದ ಮೀನುಗಾರರಿಗೆ ಸರಕಾರದ ಪ್ರಕಟಣೆಯ ಗಂಧಗಾಳಿಯೂ ಹತ್ತಲಿಕ್ಕಿಲ್ಲವೆಂದವರ ಸಹಜ ಸಂಶಯ; ಅದಲ್ಲದೆ, ಅಣುವಿಕಿರಣಶೀಲತೆಯ ವಿರುದ್ಧ ಯಾವ ರಕ್ಷಣೆಯನ್ನೂ ನೀಡುವುದು ಅಸಾಧ್ಯವೆಂದವರ ಖಚಿತ ಅಭಿಪ್ರಾಯ. ಆದುದರಿಂದ ವಿಶ್ವಸ್ತ ಪ್ರದೇಶವನ್ನು ಉಧ್ವಸ್ತಗೊಳಿಸುವ ಅಕ್ರಮವನ್ನಷ್ಟೇ ಅಲ್ಲ, ಮಾನವೀಯತೆಯ ದೃಷ್ಟಿಯಿಂದಲೂ ಹೇಯ ಕೆಲಸವನ್ನು ಅಮೇರಿಕ ಮಾಡುತ್ತಿದೆ ಎಂದವರ ಆರೋಪ.

ಮಹಾತ್ಮರಿಗೆ ಶ್ರದ್ಧಾಂಜಲಿ

ರಾಜಘಾಟಿನಲ್ಲಿ ಮಹಾತ್ಮಾ ಗಾಂಧೀಜಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲು ರಾಷ್ಟ್ರಪಿತನ ಶ್ರಾದ್ಧ ದಿನವಂದು (ಜನವರಿ ೩೦) ನೆರೆ[illegible] ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿಗೆ ಪ್ರಿಯವಾದ ಭಕ್ತಿ ಗೀತೆಗಳನ್ನು ನುಡಿಸಲಾಯಿತು; ಅಲ್ಲದೆ ಸೂತ್ರ ಯಜ್ಞ ಇತ್ಯಾದಿಗಳನ್ನು [illegible]ಲಾಯಿತು. ಚಿತ್ರದ ಮುಂದಿನ ಸಾಲಿನಲ್ಲಿ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ, ಅವರ ಪತ್ನಿ ಶ್ರೀಮತಿ ರಾಜಬನ್ಸಿ ದೇವಿ, ರಾಷ್ಟ್ರೋಪಾಧ್ಯಕ್ಷ ಡಾ. ರಾಧಾಕೃಷ್ಣನ್ ಮತ್ತು ರೈಲ್ವೆ ಮಂತ್ರಿ ಶ್ರೀ ಲಾಲಬಹಾದ್ದೂರ ಶಾಸ್ತ್ರಿ—ಇವರು ಕುಳಿತಿರುವುದನ್ನು ಕಾಣಬಹುದು.

(೧ನೇ ಪುಟದಿಂದ ಮುಂದುವರಿದುದು.)

ಕೊರಿಯ ಮತ್ತು ಇಂಡೋಚೀನಗಳನ್ನು ಳಿದರೆ ಆಗ್ನೇಯ ಏಶ್ಯದಲ್ಲಿ ಬೇರೆಲ್ಲೂ ಕಮ್ಯುನಿಸಂ ಪ್ರಭಾವವಿಲ್ಲ. ಈ ಕಮ್ಯುನಿಸ್ಟ ರಾಷ್ಟ್ರಗಳಾದರೂ ಈಚೆಗೆ ಯುದ್ಧ ವಿರಾಮಕ್ಕೆ ಒಪ್ಪುವ ಸೌಜನ್ಯವನ್ನು ತೋರಿಸಿರುತ್ತವೆ. ಇದಕ್ಕೆ ಪಾಶ್ಚಾತ್ಯರ ಬಲಪ್ರದರ್ಶನವು ಕಾರಣವಾಗಲಿಲ್ಲ—ಭಾರತದಂಥ ಮಿತ್ರ ರಾಷ್ಟ್ರದ ಹಿತಬೋಧೆಯೇ ಹೇತುವಾಯಿತೆಂದು ಎಲ್ಲರಿಗೂ ಗೊತ್ತು. ಆದುದರಿಂದ ಶಕ್ತಿ ಸಂಗ್ರಹವೇ ಸವಸ್ಯೆಗಳ ನಿವಾರಣೆಮಾಡುವುದೆಂಬ ಪಾಶ್ಚಾತ್ಯ ಮಿತ್ರರ ಅಭಿಪ್ರಾಯವು ಮನ: ಶಾಸ್ತ್ರದ ಬೆಳಕಿನಲ್ಲಿ ತಪ್ಪೆಂದು ಸಿದ್ಧವಾಗುತ್ತದೆ. ಆರ್ಥಿಕ ದೃಷ್ಟಿಯಿಂದ ವಿಚಾರಿಸಿದರಂತೂ, ಮೊದಲೇ ಹೇಳಿದಂತೆ, ಸೈನ್ಯವಿಸ್ತಾರದ ಮೇಲಿನ ಅಪಾರ ವೆಚ್ಚವು ಏಶ್ಯದ ಬಡರಾಷ್ಟ್ರಗಳ ಪಾಲಿಗೆ ಘೋರಲಾಗದ ಹೊರೆ ಮಾಗುತ್ತದೆ. ಶ್ರೀಮಂತ ರಾಷ್ಟ್ರಗಳೇ ಆರ್ಥಿಕ ನೆರವನ್ನು ನೀಡುತ್ತವೆ ಎಂದು ಸೈನ್ಯಸಂಗ್ರಹವನ್ನು ಸಮರ್ಥಿಸಿಕೊಳ್ಳಬಹುದಾದರೂ, ಇದು ಪಾರತಂತ್ರ್ಯವನ್ನು ಸಹಾಯ ಪಡೆಯುವ ರಾಷ್ಟ್ರಕ್ಕೆ ತಂದುಕೊಡುವುದೆಂಬ ಭಾವನೆಯ ಜೊತೆಗೆ, ಅದರ ಅಹಂಕಾರವನ್ನೂ ಉದ್ದೀಪನಗೊಳಿಸುವುದೆಂಬ ವಾದಕ್ಕೂ [illegible] ಇಲ್ಲಿ ಎಡೆಸಿಗುತ್ತದೆ.

ಇದಕ್ಕೆ ಪ್ರತ್ಯಕ್ಷ ನಿದರ್ಶನವೆಂದರೆ ಪಾಕಿಸ್ತಾನ—ಅಮೇರಿಕವು ಅದಕ್ಕೆ ಕಳೆದ ಎರಡು ವರ್ಷಗಳಲ್ಲಿ ೧೭ ಕೋಟಿ ಡಾಲರುಗಳಷ್ಟು ಹಣವನ್ನು ಸೈನ್ಯ ಸಂಗ್ರಹಕ್ಕಾಗಿ ಕೊಟ್ಟಿದೆ. ಈ ಸೈನ್ಯ ಬಲವು ಕಾಶ್ಮೀರ ಪ್ರಶ್ನೆಯ ಇತ್ಯರ್ಥಕ್ಕೆ ಸಾಧನವಾಗುವುದೆಂದು ಪಾಕಿಸ್ತಾನದ ಹಿಂದಿನ ಪ[illegible] ಧಾನಿಗಳು ಬಹಿರಂಗವಾಗಿ ಹೇಳಿದ್ದರು. ಈಗಿನ ಪ್ರಧಾನಿಗಳು ತಮ್ಮ ಸೈನ್ಯಗಳು [illegible]ಕ್ರಮವಾಗಿ ಭಾರತವನ್ನು ಪ್ರವೇಶಿಸು[illegible]ವಕ್ಕೆ ಹೆಚ್ಚಿನ ಉತ್ತೇಜನೆಯನ್ನು ಕೊಡುತ್ತಿದ್ದಾರೆ. ಅಲ್ಲದೆ ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಹೆಚ್ಚು ಆಸಕ್ತಿಯನ್ನು(ಪಾಕಿಸ್ತಾನಕ್ಕೆ ಅನುಕೂಲವಾಗಿ ಎಂಬುದೂ ಸ್ಪಷ್ಟ) ವಹಿಸದಿರುವುದಕ್ಕೆ ಪಾಶ್ಚಾತ್ಯ ಮಿತ್ರ ವೃಂದವನ್ನು ಪಾಕಿಸ್ತಾನ ನಿಂದಿಸುತ್ತಲಿದೆ. ಈ ಪರಿಸ್ಥಿತಿಯಲ್ಲಿ [illegible]ನಿಕ ಒಪ್ಪಂದಗಳಲ್ಲಿ ಸೇರಿಕೊಂಡುದರಿಂ[illegible] ಪಾಕಿಸ್ತಾನವು ಉನ್ಮಾದಕ್ಕೆ ಗುರಿಯಾ[illegible] ಮೂಲೋದ್ದೇಶವನ್ನು ಮರೆತು ತಾ[illegible] ಆಕ್ರಮಣಕ್ಕೆ ಮಲೆತು ನಿಂತಿದೆ ಎ[illegible] ಬೇಕಾಗುತ್ತದೆ.

ಸೈನಿಕ ಒಪ್ಪಂದಗಳ ರಚನೆಯ[illegible] ತಮ್ಮ ಉದ್ದೇಶ ಎಂದೂ ಇದಲ್ಲವೆಂ[illegible] ಪಾಶ್ಚಾತ್ಯ ಮಿತ್ರವೃಂದ ಹೇಳುತ್ತ[illegible] ಆದರೆ ಉನ್ಮಾದಾವಸ್ಥೆಯನ್ನು ಮುಟ್ಟಿ[illegible] ಎಲ್ಲ ಲಕ್ಷಣಗಳನ್ನು ತೋರಿಸುವ [illegible]ಕ್ಕೆ ಸಹ ಒಪ್ಪಂದದಲ್ಲಿ ಸದಸ್ಯತ್ವವ[illegible] ಕೊಡುವುದೆಂದರೆ ಬುದ್ಧಿವಂತಿಕೆಯು [illegible] ಯಾವಾದೀತೆ? ಇಂಥ ಉನ್ಮಾದಕ್ಕೆ [illegible] ಚಿಕಿತ್ಸೆ ನಡೆಸುತ್ತೇವೆಂದು ಪಾಶ್ಚಾತ್ಯ [illegible]ಷ್ಟ್ರಗಳ ವರಿಷ್ಠರು ಹೇಳುತ್ತಿದ್ದಾ[illegible] ಪಾಕಿಸ್ತಾನ, ಅಥವಾ ಯಾವುದೇ ಸ[illegible] ರಾಷ್ಟ್ರ ಆಕ್ರಮವಾಗಿ ವರ್ತಿ[illegible] ಸಹಾಯವನ್ನು ತಕ್ಷಣ ನಿಲ್ಲಿಸಿಬಿಡಲಾ[illegible]ವುದೆನ್ನುತ್ತಾರೆ ಅವರು. ಆದರೆ ಒ[illegible] ಸಂಗ್ರಹವಾದ ಸೈನಿಕ ಶಕ್ತಿ ಅವಾ[illegible] ಮಾಡುವುದನ್ನು ಅವರೆಂತು ನಿಲ್ಲಿಸಿ[illegible]ರು? ಲೋಕ ಶಾಂತಿಗೆ ಇದೆಂದೂ [illegible] ಪಕವಾಗಲಾರದು. ಭಾರತವು ಪಾಕಿ[illegible]ನದ ಶಕ್ತಿ ಹೆಚ್ಚುತ್ತಿರುವುದಕ್ಕೆ ಮ[illegible]ಪಟ್ಟು ಹೀಗೆ ಹೇಳುತ್ತಿಲ್ಲ— ಪ್ರ[illegible] ಕಲ್ಯಾಣ ಸಾಧನೆಗೆ ಸೈನಿಕ ಒಪ್ಪಂ[illegible] ಎಳ್ಳಷ್ಟೂ ಉಪಯುಕ್ತವಲ್ಲವೆಂಬ ನ[illegible]ಯಿಂದ ಅದು ವಿರೋಧ ಸೂಚಿಸುತ್ತ[illegible]

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಕಲ್ ವೆಂಕಟ್ರಾವ್, ಎಲ್. ಎ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ಸವಭಾರತ ಪುಸ್ತಕಭಂಡಾರ. ಉಡುಪಿ

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 15—3—1956

ಸಂಚಿಕೆ ೨೮
NO. 28

ಕೇರಳ - ಕರ್ನಾಟಕ ಸೇರ್ಪಡೆ

ಬೆಂಗಳೂರಿನಲ್ಲಿ ಈಚೆಗೆ ಕೇರಳ-ಕರ್ನಾಟಕ ಸೇರ್ಪಡೆಯ ಕುರಿತು ಕೆಲವು ಕನ್ನಡಿಗ ಧುರೀಣರು ಔಪಚಾರಿಕ ಸಮಾಲೋಚನೆಗಳನ್ನು ನಡೆಸಿದರೆಂದು ತಿಳಿದು ಬರುತ್ತದೆ. ಕೇರಳದಲ್ಲಿ ಕಮ್ಯುನಿಸ್ಟರು ಪ್ರಬಲಿಸಿದ್ದಾರೆ; ಅವರ ಶಕ್ತಿಯನ್ನು ದಮನಿಸುವುದಕ್ಕಾಗಿ ಕಾಂಗ್ರೆಸಿನ ಶಕ್ತಿ ಹೆಚ್ಚಿರುವ ಪ್ರದೇಶದೊಡನೆ ಕೇರಳವನ್ನು ಸೇರಿಸಿ ಏಕಘಟಕವಾಗಿ ರೂಪಿಸಬೇಕು ಎಂಬ ಭಾವನೆಗೆ ಈ ಸಭೆಯಲ್ಲಿ ಮಹತ್ವವನ್ನು ಕೊಡಲಿಲ್ಲ. ಭಾರತದ ಐಕ್ಯ ಮತ್ತು ವಿಶಾಲ ಘಟಕಗಳಾಗಿ ಆಡಳಿತ ಕ್ಷೇತ್ರವನ್ನು ರೂಪಿಸುವುದರ ಔಚಿತ್ಯವೆಂಬೀ ಹಿನ್ನೆಲೆಯಲ್ಲಿ ವಿಷಯವನ್ನು ಪರ್ಯಾಲೋಚಿಸಲಾಯಿತೆಂದು ವರದಿಗಳಿಂದ ವ್ಯಕ್ತವಾಗುತ್ತದೆ.

ನೆಹ್ರೂ-ಸಿಂಹ ಸಂಯುಕ್ತ ಪ್ರಕಟಣೆಯ ಬಳಿಕ ನಮ್ಮ ಧುರೀಣರಲ್ಲಿ ಕೆಲವರನ್ನು ಅನಾವಶ್ಯಕವಾಗಿ ಈ ಪ್ರದೇಶ ರಚನೆಯ ಹುಮ್ಮಸ್ಸು ಆವರಿಸಿದೆ ಎಂದು ಜನತೆ ಭಾವಿಸುತ್ತದೆ. ನೆಹ್ರೂ-ಸಿಂಹ ಪ್ರಕಟಣೆಗೆ ಜನತೆಯ ಬೆಂಬಲವು ದೊರೆಯದೆ ಪ್ರಚಂಡ ವಿರೋಧವೇ ವ್ಯಕ್ತವಾಗಿರುವುದನ್ನು ಗಮನಿಸಿಯೂ ಪ್ರದೇಶಗಳ ರಚನೆಯ ಸಾಧ್ಯಸಾಧ್ಯತೆಯನ್ನು ಬೇರೆ ಕಡೆಯ ಕೆಲವರು ತಾವಾಗಿ ಸ್ವೇಚ್ಛೆಯಿಂದ ಮೇಲಿನ ಯಾವುದೇ ಒತ್ತಾಯವಿಲ್ಲದೆ ಜನರ ಬೇಡಿಕೆ ಸಹ ಇಲ್ಲದೆ ವಿಚಾರಿಸ ತೊಡಗಿರುವುದು ನಿಜಕ್ಕೂ ಆಶ್ಚರ್ಯಕರವಾದ ವಿಷಯ.

ಇಂಥ ಮಾತುಕತೆಯ ಪ್ರವಾಹ ಮೊದಲು ತಮಿಳುನಾಡು, ಕೇರಳ, ಕರ್ನಾಟಕಗಳನ್ನು ಒಂದು ಗೂಡಿಸಿ, ಸಾಧ್ಯವಾದರೆ ಆಂಧ್ರವನ್ನು ಸಹ ಸೇರಿಸಿ, ದಕ್ಷಿಣ ಪ್ರದೇಶ ರಚಿಸುವ ದಿಸೆಯಲ್ಲಿ ಹರಿಯಿತು. ಈಗ ಕೇರಳ ಮತ್ತು ಕರ್ನಾಟಕಗಳೆರಡೇ ಸೇರ್ಪಡೆ ಹೊಂದುವ ವಿಚಾರ ತೀವ್ರವಾಗಿ ಪರ್ಯಾಲೋಚಿಸಲ್ಪಡುತ್ತಿರುವಂತೆ ಕಾಣುತ್ತದೆ. ಜನತೆಯ ಇಚ್ಛೆಯಂತೆ ಈ ವಿಷಯದಲ್ಲಿ ಹೆಜ್ಜೆ ಮುಂದಿಡಲಾಗುವುದೇ ಹೊರತು ಬಲಾತ್ಕಾರಕ್ಕೆ ಇಲ್ಲಿ ಅವಕಾಶವಿಲ್ಲ ಎಂಬುದೊಂದು ಸಮಾಧಾನದ ಮಾತನ್ನು ಸೇರ್ಪಡೆಯ ಕುರಿತು ಮಾತುಕತೆ ನಡೆಸುತ್ತಿರುವ ಕೆಲವು ಧುರೀಣರು ಜನತೆಗೆ ಭರವಸೆಯ ರೂಪದಲ್ಲಿ ಆಡಿದ್ದಾರೆ.

ಈ ಭರವಸೆಯೊಂದೇ ಸಾಂತ್ವನಕರವಾಗಿದೆಯಲ್ಲದೆ, ಕೇರಳ ಕರ್ನಾಟಕಗಳ ಸೇರ್ಪಡೆಯು ಸೂಚನೆ ಎಷ್ಟಕ್ಕೂ ಸ್ವಾಗತಾರ್ಹವಾದುದಲ್ಲವೆಂದು ಜನತೆ ಹೇಳುತ್ತದೆ. ಹೀಗೆ ಸೇರ್ಪಡೆ ಹೊಂದೋಣ ಎಂದು ಹೇಳುತ್ತಿರುವ ಮುಖಂಡರು ಇಂಥ ಸೇರ್ಪಡೆಯಿಂದ ಏನು ಪ್ರಯೋಜನವಿದೆ ಎಂಬುದನ್ನು ಜನರಿಗೆ ಸ್ವಲ್ಪವೂ ತಿಳಿಸಿಹೇಳಿಲ್ಲ. ಇಂಥ ಪರಿಸ್ಥಿತಿಯಲ್ಲಿ ಜನರೇ ತಮಗೆ ಹೊಳೆದುದನ್ನು ಪರಾಮರ್ಶಿಸಿ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಸೇರ್ಪಡೆಯ ಪ್ರತಿಪಾದಕರು ತಮ್ಮ ನಿಲುವೆಯನ್ನು ವಿಶದವಾಗಿ ಜನತೆಯ ಮುಂದಿಡದೆ ಗುಟ್ಟಿನ, ಔಪಚಾರಿಕ ಸಮಾಲೋಚನೆಗಳನ್ನು ನಡೆಸಿ ತೃಪ್ತರಾಗುವುದು ಅಷ್ಟು ಪ್ರಶಂಸನೀಯ ಕೆಲಸವಲ್ಲ.

ಸಾಮಾನ್ಯವಾಗಿ ಕರ್ನಾಟಕದ ಜನತೆಯು ಸೇರ್ಪಡೆಗೆ ವಿರೋಧ ಸೂಚಿಸಿ ಹೇಳುವ ಮಾತೇನು? ಕನ್ನಡಿಗರ ಸುಖದುಃಖಗಳನ್ನು ಸಹಾನುಭೂತಿಯಿಂದ ಕಾಣುವ ಒಂದು ಸರಕಾರವಿರಬೇಕೆಂಬುದು ಕರ್ನಾಟಕದ ಜನತೆಯ ಮುಖ್ಯ ಉದ್ದೇಶ. ಬಹು ಭಾಷಾಪ್ರಧಾನ ರಾಜ್ಯಗಳಲ್ಲಿ ತಮ್ಮ ಸ್ವರಕ್ಕೆ ಏನೇನೂ ಬೆಲೆ ಬಂದಿಲ್ಲವೆಂಬುದನ್ನು ಗಮನಿಸಿದ ಮದ್ರಾಸು, ಮುಂಬಯಿ ಮತ್ತು ಹೈದರಾಬಾದು ಕರ್ನಾಟಕದ ಜನರು ಏಕೀಕರಣಕ್ಕೆ ಪ್ರಯತ್ನಿಸಿ ಇದೀಗ ಕೃತಕೃತ್ಯರೆನಿಸುವ ಘಟ್ಟಕ್ಕೆ ಬಂದು ಮುಟ್ಟಿದ್ದಾರೆ. ಸಮಾನ ಸಾಂಸ್ಕೃತಿಕ ಹಾಗು ಐತಿಹಾಸಿಕ ಬಾಂಧವ್ಯವಿದೆ ಎಂಬ ಕಾರಣದಿಂದ ಮೈಸೂರು ಮತ್ತು ಕೊಡಗಿನ ಜನರೂ ಕರ್ನಾಟಕ ಏಕೀಕರಣಕ್ಕೆ ಅನುಕೂಲರಾಗಿ ಪರಿವರ್ತನೆ ಹೊಂದಿದ್ದಾರೆ. ಫಜಲಾಲಿ ಆಯೋಗವಾದರೂ ಭೌಗೋಲಿಕ, ಐತಿಹಾಸಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳನ್ನು ವಿಚಾರಿಸಿ ಕರ್ನಾಟಕ ರಾಜ್ಯವನ್ನು ರಚಿಸಲು ಶಿಫಾರಸು ಮಾಡಿರುತ್ತದೆ.

ಈಗ ನಲ್ವತ್ತು ವರ್ಷಗಳಿಂದ ಜನತೆಯು ಪ್ರತಿಪಾದಿಸುತ್ತಾ ಬಂದ ತತ್ವವೊಂದನ್ನು ಮೂಲೆಗುಂಪು ಮಾಡಿ ನಿನ್ನೆ ಮೊನ್ನೆಯಷ್ಟೆ ಉದಯಿಸಿದ ಪ್ರದೇಶಗಳ ಕಲ್ಪನೆಯ ಹಿಂದೆ ಓಡುವುದು ವ್ಯವಹಾರ್ಯವೇ? ಭಾರತದ ಐಕ್ಯವೇ ನಿಜವಾಗಿ ಮುಖಂಡರನ್ನು ಕಾಡುವ ವಿಷಯವಾಗಿದ್ದರೆ ನಮ್ಮ ಪವಿತ್ರವಾದ ಘಟನೆಗೆ ತಿದ್ದುಪಡಿಯನ್ನು ಮಾಡಿ "ಏಕಘಟಕ"ವಾಗಿ ಭಾರತವನ್ನು ರೂಪಿಸಿ ಕೇಂದ್ರ ಸರಕಾರದ ನೇರಾದ ಆಡಳಿತಕ್ಕೆ ಎಲ್ಲ ಪ್ರದೇಶವನ್ನೂ ಗುರಿಪಡಿಸುವುದು ಬಹಳ ಅಪೇಕ್ಷಣೀಯ. ಹೀಗೆ ಮಾಡದೆ ರಾಜ್ಯಗಳಿಗೆ ಅವುಗಳ ಅಧಿಕಾರ ಕ್ಷೇತ್ರದಲ್ಲಿ ಕೆಲವೊಂದು ವಿಶಿಷ್ಟ ವಿಷಯಗಳ ಪಟ್ಟಿಗೆ ಪರಮಾಧಿಕಾರವನ್ನು ಕೊಟ್ಟುದರಿಂದ ಹಲವು ದುಷ್ಪರಿಣಾಮಗಳಾಗುತ್ತಿರುವುದನ್ನು ಕಳೆದ ಎಂಟು ವರ್ಷಗಳ ಅನುಭವವು ತೋರಿಸಿದೆ. ಪ್ರದೇಶಗಳ ರಚನೆಯಿಂದ ಈ ದುಷ್ಪರಿಣಾಮಗಳ ಪರಿಹಾರ ಎಷ್ಟು ಮಾತ್ರಕ್ಕೂ ಆಗದೆಂದ ಮೇಲೆ, ಏಕಘಟಕ ಭಾರತದ ರಚನೆಯೇ ನಮಗೆ ಉಳಿಯುವ ಮಾರ್ಗ.

ಅಷ್ಟು ಮಹತ್ವದ ಹೆಜ್ಜೆಯನ್ನಿಡಲು ಈ ಕಾಲವು ಪಕ್ವವಾಗಿಲ್ಲವೆಂದು ಧುರೀಣರ ಅಭಿಪ್ರಾಯವಾದರೆ, ನಲ್ವತ್ತು ವರ್ಷಗಳಿಂದ ಜನತೆಯು ಕಟ್ಟಿಕೊಂಡು ಬಂದ ಅಭಿಪ್ರಾಯವೊಂದು ಕಾರ್ಯಾಚರಣೆಗಿಳಿಯುವ ಈ ಸಂದರ್ಭದ ಕಂದಗೆಡಿಸುವ ಪ್ರಯತ್ನವನ್ನು ಅವರು ನಡೆಸಲಾಗದು. ಪ್ರದೇಶಗಳ ರಚನೆಯಿಂದ ಹಿತವಿರುವುದೇ ಆದರೆ, ಆ ದಿಸೆಯಲ್ಲಿ ಕೆಲವು ವರ್ಷಗಳ ವರೆಗೆ ಬೋಧನೆಯನ್ನು ಕೊಟ್ಟು ಜನತೆಯನ್ನು ಒಲಿಸಲಿ! ಆ ಕೆಲಸದ ನಾಂದಿಯಷ್ಟೇ ಈಗ ನಡೆಯುತ್ತಿರುವುದಾದರೆ ಚಿಂತಿಲ್ಲ—ಪ್ರಜಾಪ್ರಭುತ್ವದಲ್ಲಿ ಯಾವ ನಿರ್ಣಯವೂ ಶಿಲಾಶಾಸ್ವತವಲ್ಲ ಎಂಬ ನಂಬಿಕೆಯಿಂದ ಅವರು ಕೆಲಸ ಮಾಡಲಿ! ಇನ್ನು ಐವತ್ತು ವರ್ಷಗಳ ಬಳಿಕ ಜನರು ಪ್ರದೇಶಗಳ ರಚನೆಯನ್ನೆ ಪುರಸ್ಕರಿಸ ಬಹುದೆಂಬ ಆಶೆಯಿಂದ ಇವರು ದುಡಿಯಲಿ! ಆದರೆ ಈಗ ಮಾತ್ರ ಪ್ರದೇಶಗಳ ರಚನೆ ಹಿತವಾಗದು.

ಫಜಲಾಲಿ ಆಯೋಗ ನಿರೂಪಿಸಿದ ಸೂತ್ರಗಳ ಒರೆಗಲ್ಲಿಗೆ ಹಚ್ಚಿ ನೋಡೋಣ: ಕೇರಳ ಕರ್ನಾಟಕಗಳ ಸೇರ್ಪಡೆಯಿಂದ ಉತ್ಪತ್ತಿಯಾಗಲಿರುವ ಒಂದು ಪ್ರದೇಶವು ಏಕಸತ್ತಾಧಿಕಾರಕ್ಕೆ ಒಳಪಟ್ಟಂತಾಗುತ್ತದೆಯೇ? ಭೂಪಟದಲ್ಲಿ ನಾವು

(೧೧ನೇ ಪುಟ ನೋಡಿರಿ)

1 Is an important year in the History of our Mother-land
9 It's the 2500th Anniversary of Lord Buddha
It's the 1st year of Second Five Year Plan
5 It's the year in which the country will have New STATES based on S. R. C. Report
6 In our own District two of the Scheduled Banks are celebrating the GOLDEN JUBILEE this year.

Syndicate has grown from the lean years of 1925 to this Historic year of 1956 with such rapid strides that the initial resources of Rs. 8,000/- have multiplied into

Rs. 9 CRORES

The Directors and Officers of the Syndicate extend their sincere thanks to the customers and friends whose goodwill has made these 31 years of progress possible. They also pledge to offer

" *Banking at its Best* "
AT

The Canara Industrial & Banking Syndicate, Limited,

Head Office: UDIPI, S. India.

ಸಮಸ್ತ ಕನ್ನಡಿಗರಿಗೆ

ಕಾಸರಗೋಡಿನ ಬಂಧು-ಭಗಿನಿಯರ ಕರುಳಿನ ಕರೆ

ಬರೆದವರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್.
ನವಜೀವನ ಹೈಸ್ಕೂಲು, ಪೆರಡಾಲ.

ಕನ್ನಡಿಗರ ಬಹುಕಾಲದ ಹರಕೆ ಹಾರೈಕೆಗಳು ಕೈಗೂಡುತ್ತಿವೆಯೆನ್ನುವ- ಕನ್ನಡ ನಾಡು ಒಂದುಗೂಡುತ್ತಿದೆಯೆನ್ನುವ— ಇಂದಿನೀ ಸುಂದರ ಸಂದರ್ಭದಲ್ಲಿ, ಕನ್ನಡ ನಾಡಿನ ಕೋಟಿ ಕೋಟಿ ಕನ್ನಡ ಬಂಧುಭಗಿನಿಯರೊಡನೆ, ಕನ್ನಡ ನಾಡು ನುಡಿಗಳ ಪ್ರೇಮವೇ ಪಾಪವಾಗಿ ಪರಿಣಮಿಸಿರುವ, ತಾಯಿ ಪಯಸ್ವಿನಿಯ ಅಮೃತ ಸ್ತನ್ಯ ಧಾರೆಯೇ ವಿಷಮಯವಾಗಿರುವ, ಕನ್ನಡ ನಾಡಿನ ಇಂದಿನೀ ಉದಯವೇ ತಮ್ಮ ಪಾಲಿಗೆ ಅಸ್ತಮಾನವಾಗಿರುವ, ಪುಣ್ಯ ಕನ್ನಡದ ನೆಲವೇ ಅಕನ್ನಡವೆನಿಸಿ ಕೇರಳೀಭವಿಸಿರುವ, ತಮಗಾದೀ ಅನ್ಯಾಯವನ್ನು ಅನ್ಯಾಯವೆನ್ನುವುದೇ ಪರಮ ಅನ್ಯಾಯವಾಗಿರುವ, ಕಾಸರಗೋಡಿನ ಲಕ್ಷಾಂತರ ಮಂದಿ ಕನ್ನಡಿಗರು ನಾಡು ನುಡಿಗಳ ಅಭಿಮಾನದಯಜ್ಞ ಕುಂಡದಲ್ಲಿ ತಮ್ಮ ಹಾಗೂ ತಮ್ಮ ಸಂತಾನದ ಬೆವರು ಕಣ್ಣೀರು ನೆತ್ತರುಗಳನ್ನೆ ಆಹುತಿಯಾಗಿ ಅರ್ಪಿಸುತ್ತಾ, ಇಂದು ತಮ್ಮಲ್ಲಿನ ಕೊನೆಯ ಕನ್ನಡಿಗನ ದೇಹದಲ್ಲಿ ಕೊನೆಯುಸಿರು ಇರುವ ತನಕ ಇಂತು ಕರೆಯೊಯುತ್ತಿದ್ದಾರೆ: ಮೊರೆಯಿಡುತ್ತಿದ್ದಾರೆ.

ಯಾವ ಕನ್ನಡನಾಡಿನ ನವನಿರ್ಮಾಣದ ಭವ್ಯ ಕಲ್ಪನೆಯ ನವೀನೋತ್ಸಾಹದಿಂದ, ನಾವು, ನಿಮ್ಮೆಲ್ಲರೊಡಗೂಡಿ, ಹೆಗಲಿಗೆ ಹೆಗಲೊಡ್ಡಿ, ನಿರಂತರ ಹೋರಾಡಿದೆವೋ ನಮ್ಮ ಅಂತಹ ಅವಿಶ್ರಾಂತವಾದ ಹೋರಾಟದ ಫಲವಾಗಿಇಂದು ನಮ್ಮೆಲ್ಲರ ಆಶಯಿಯ ಕನಸು ನನಸಾಗುವ ಸುಮುಹೂರ್ತ ಸನ್ನಿಹಿತವಾಗಿರುವಾಗ, ಕರ್ಣಾಟಕ ಪ್ರಾಂತವಿಂದು ರೂಪಿತಗೊಳ್ಳುತ್ತಿರುವಾಗ, ಕಾಸರಗೋಡಿನ ಕನ್ನಡಿಗರನ್ನು ನಡುನೀರಿನಲ್ಲಿ ಕೈಬಿಡಬೇಡಿರಿ; ಇಂದು ದಡದಲ್ಲಿ ನಿಂತು ನೋಡುತ್ತಿರುವ ನೀವೆಲ್ಲರೂ ಮುಳುಗುತ್ತಲಿರುವ ನಮ್ಮನ್ನು ಮೇಲೆತ್ತುವ ಪ್ರಯತ್ನಗಳನ್ನೆಲ್ಲಾ ಮಾಡಿದಿರೆಂದಾದರೆ ಅದೇ ನಮಗೆ ಸಕಲ ಸಮಾಧಾನವಾದೀತು. ನಿಮ್ಮೆಲ್ಲರ ಸದಾಶಯದ ಪ್ರಯತ್ನದ ಫಲವಾಗಿ ನಾವು ದಡವನ್ನು ತಲುಪುವೆವೆಂಬ, ಕನ್ನಡನಾಡನ್ನು ಅಗಲಿ ಹೋಗಲಾರೆವೆಂಬ ಆಸೆ ಭರವಸೆಗಳು ನಮಗಿನ್ನೂ ಇವೆ. ಆದರೆ ಇಂದು ಇಂತಿರುವ ನಮ್ಮ ಕಡೆಗೆ ಸಹಾಯ ಹಸ್ತ ನೀಡುವುದೇ ನೀವು ನಿಂತ ನೆಲೆಗೆ ಅಪಾಯಕರವೆಂದು ಅಂಜಿಯೋ ಅಸಡ್ಡೆ ಮಾಡಿಯೋ ಬೆನ್ನು ತೋರಿಸಬೇಡಿರಿ. ನಾವು ನೀವೂ ಕೂಡಿ ನಡೆದ ನಡೆವಳಿಕೆಗೆ ಯೋಗ್ಯವಾಗುವಂತೆಯೂ, ಕನ್ನಡಿಗರೆಂಬ ನಮಗೂ ನಿಮಗೂ ಭೂಷಣವಾಗುವಂತೆಯೂ ನಿಮ್ಮ ನಮ್ಮ ನಡತೆಯಿರಲಿ! "ತೇಲಿದರು ಮುಳುಗಿದರು ಎಲ್ಲರೂ ಒಮ್ಮೆಗೇ!" ಎನ್ನಲಾರಿರಾ? ಅಂತಹ ಭರವಸೆ, ಅಂತಹ ಕೆಚ್ಚೆದೆಯ ಕಾರ್ಯ ನೀವು ಕೈಕೊಂಡಿರಾದರೆ ನಾವೆಲ್ಲರೂ ತೇಲುವುದೇ ನಿಶ್ಚಿತವೆಂಬ ಭರವಸೆ ನಮಗೆ ಇನ್ನೂ ಸಂಪೂರ್ಣ ಇದೆ.

ಕಾಸರಗೋಡನ್ನು ಕನ್ನಡನಾಡಿನಲ್ಲಿ ಉಳಿಸುವ ಪ್ರಯತ್ನವನ್ನು ಇದುವರೆಗೆ ಯಾರೂ ಮಾಡಲಿಲ್ಲ ವೆಂದಾಗಲಿ, ಈಗಲಾದರು ನಮ್ಮ ಮೇಲೆ ಯಾರಿಗೂ ಸಹಾನುಭೂತಿ ಇಲ್ಲವೆಂದಾಗಲಿ ನಾವು ಹೇಳಲಾರೆವು. ಆದರೆ, ಇದು ತನಕ, ಯಾರಿಂದಲೂ, ಕನ್ನಡಿಗರ ಯಾವ ಸಾಹಸದಿಂದಲೂ ಕಾಸರಗೋಡನ್ನು ಉಳಿಸುವುದು ಸಾಧ್ಯವಾಗಲಿಲ್ಲ ವೆಂಬುದು ಸಾವಿರ ಸತ್ಯವಷ್ಟೆ? ನಮ್ಮ ಮಂತ್ರಿಗಳು ಕಾಸರಗೋಡಿನ ಬಗ್ಗೆ ಪ್ರಯತ್ನಿಸಿದ್ದಾರೆ; ನಮ್ಮ ಪಾರ್ಲಿಮೆಂಟು, ಎಸೆಂಬ್ಲಿ ಸದಸ್ಯರು ನಮಗಾಗಿ ದುಡಿದಿದ್ದಾರೆ. ಜಿಲ್ಲಾ ಬೋರ್ಡು, ಮುನ್ಸಿಪಾಲಿಟಿ, ಪಂಚಾಯತ ಬೋರ್ಡುಗಳು ಸಹ ನಮ್ಮ ಪರವಾಗಿ ನಿರ್ಣಯಗಳನ್ನು ಮಾಡಿವೆ. ಮದ್ರಾಸು, ಮೈಸೂರು, ಕೊಡಗು ಸರಕಾರಗಳು ಕಾಸರಗೋಡಿನ ಕನ್ನಡಿಗರಿಗೆ ಬೆಂಬಲವಿತ್ತಿವೆ. ಕನ್ನಡದ ಸಮಸ್ತ ರಾಜಕೀಯ ಪಕ್ಷಗಳೂ ಇಷ್ಟೆಲ್ಲಾ ಮುಂದಾಳುಗಳೂ ನಮಗಾಗಿ ಪ್ರಯತ್ನಿಸಿದ್ದನ್ನು ನಾವು ಚೆನ್ನಾಗಿಬಲ್ಲೆವು. ಆದರೆ ಈ ಎಲ್ಲಾ ಪ್ರಯತ್ನಗಳಿಗೆ, ಈ ಎಲ್ಲಾ ನ್ಯಾಯವಾದ ಜನತಾ ಪ್ರಾತಿನಿಧ್ಯದ ಕೋರಿಕೆಗಳಿಗೆ ಏನು ಬೆಲೆ ಬಂದಿತೆಂಬುದೇ ನಮ್ಮ ಮುಂದಿರುವ ಪ್ರಶ್ನೆಯಾಗಿದೆ.

ಇಂತಹ ಪ್ರಶ್ನೆಗೆ ಒಂದು ಧೀರವಾದ ಉತ್ತರ ನಮಗೆ ಸಿಗಬೇಕಾಗಿದೆ. ಕಾಸರಗೋಡು ಕನ್ನಡ ನಾಡಿನ ಅವಿಭಾಜ್ಯವಾದೊಂದು ಅಂಗವೆಂದು ನೀವು ಉಳಿದ ಕನ್ನಡನಾಡಿಗರೆಲ್ಲರೂ ಕಾಯಾವಾಚಾ ಮನಸಾ ಒಪ್ಪುವುದಿದ್ದರೆ, ಈ ಸಂದರ್ಭದಲ್ಲಿ ಒಂದು ಧೈರ್ಯದ ಹೆಜ್ಜೆಯಿಡುವ ಸಾಹಸ ಮಾಡಬೇಡವೆ?, ಒಂದು ನಿಶ್ಚಿತ ನಿರ್ಧಾರಕ್ಕೆ ಇಂದು ಬರಲಾಗದೆ ಇದ್ದಲ್ಲಿ ಕನ್ನಡಿಗರು ಒಂದು ಮಹಾ ಪ್ರಮಾದವನ್ನು ಮಾಡಿದಂತಾಗುವುದಿಲ್ಲವೆ? ಇಂದಿನೀ ಕಾಸರಗೋಡು ಪ್ರಶ್ನೆಯಲ್ಲಿ, ಅದನ್ನು ಸರ್ವಥಾ ಕನ್ನಡ ನಾಡಿನಲ್ಲಿಯೇ ಉಳಿಸಿಕೊಳ್ಳಬೇಕೆಂದು ಮಾಡುವ ಪ್ರಯತ್ನದಲ್ಲಿ ತೀರಾ ಅನಿಶ್ಚಿತತೆಯಿದ್ದರೆ, ತುಂಬಾ ಅಧೀರರಾಗಿ ವರ್ತಿಸಿದರೆ, ಅದು ತಾವು ಹೊತ್ತುಕೊಳ್ಳುವ ಪಾಪವೆಂಬ, ಶಾಪವೆಂಬ ಕಲ್ಪನೆ ಕನ್ನಡಿಗರೆಲ್ಲರಿಗೂ ಬಂದಿದೆಯೇ? ಅಂತಹ ಕಲ್ಪನೆ ಬಂದಿದ್ದರೆ, ಸಹಜವಾಗಿ ಅದನ್ನು ಕಾರ್ಯರೂಪಕ್ಕೆ ತರುವ ಎದೆಗಾರಿಕೆಯನ್ನಾದರೂ ತೋರಿಸಬೇಡವೆ? ಕನ್ನಡಿಗರು ಸರಿಯಾಗಿ ಬೆಂಬಲಿಸದೆ ಕಾಸರಗೋಡು ಕೈಬಿಟ್ಟು ಹೋಯಿತೆನ್ನುವುದಕ್ಕಿಂತ, ಅವರೆಲ್ಲರೂ ಪ್ರಯತ್ನಗಳನ್ನು ಮಾಡಿದರೂ ಉಳಿಸಲಾಗಲಿಲ್ಲವೆಂದಾದರೆ ಮಾತ್ರ ನಾವು ನೀವು ಯಾರಾದರೂ ಚಿಂತಿಸಬೇಕಾದ ಕಾರಣವಿಲ್ಲ. ಅಂತಹ ಸರ್ವ ಪ್ರಯತ್ನಗಳನ್ನು ಕನ್ನಡಿಗರೆಲ್ಲರೂ ಇಂದು ಮಾಡುತ್ತಿದ್ದಾರೆಯೆ? ಒಮ್ಮೆಲ್ಲದು ನಿರ್ವಂಚನೆಯಿಂದ ಈ ವಿಚಾರವನ್ನು ಕುರಿತು ಯೋಚಿಸಿರಿ.

ದಕ್ಷಿಣ ಕನ್ನಡ ಜಿಲ್ಲೆ ಅರ್ಥಾತ್ ಆ ಮೂಲಕ ಇಡೀ ಕನ್ನಡ ನಾಡೇ ಕಾಸರಗೋಡನ್ನು ಕಳೆದುಕೊಂಡಲ್ಲಿ ತೀರಾ ದರಿದ್ರವಾಗುವುದೆಂಬುದನ್ನು ಸಮಸ್ತರೂ ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಅಡಿಕೆ, ತೆಂಗು, ಗೇರುಬೀಜ, ಒಳ್ಳೆಯ ಮೆಣಸುಗಳಂತಹ ಲಾಭದಾಯಕವಾದ ಕೃಷಿ ಸಂಪತ್ತಿನಿಂದ ಸಮೃದ್ಧವಾದುದು ಈ ಪ್ರದೇಶವಾಗಿದೆ. ಇಂತಹ ಭೂಭಾಗವೊಂದು ತುಂಡಾಗಿ ಹೋದಾಗ, ಜಿಲ್ಲೆಯ ಆರ್ಥಿಕ ಮಟ್ಟ ಎಷ್ಟು ಕೀಳ್ಮಟ್ಟಕ್ಕೆ ಇಳಿಯಲಿದೆಯೆಂದು ಯೋಚಿಸಿರಿ; ಮಂಗಳೂರಿನ ಬಂದರದ ವ್ಯಾಪಾರಕ್ಕೆ ಅದರಲ್ಲಿಯೂ ಇಂದು ಪ್ರಾಮುಖ್ಯ ವ್ಯಾಪಾರವಾದ ಅಡಿಕೆ ವ್ಯಾಪಾರಕ್ಕೆ ಎಷ್ಟರ ಮಟ್ಟಿಗೆ ಧಕ್ಕೆಯುಂಟಾಗಲಿದೆಯೆಂದು ಅರ್ಥ ಮಾಡಿಕೊಳ್ಳಿರಿ. ಎರಡು ಲಕ್ಷಕ್ಕಿಂತಲೂ ಮಿಕ್ಕಿದ ಜನ ಸಂಖ್ಯೆಯ ಪ್ರಾತಿನಿಧ್ಯ ಸ್ಥಾನಮಾನಗಳು ಊನವಾದಾಗ ಭಾವೀ ಕರ್ಣಾಟಕ ಪ್ರಾಂತದಲ್ಲಿ ಜಿಲ್ಲೆಯ ಪ್ರಾತಿನಿಧ್ಯ ತನ್ಮೂಲಕ ಭಾರತದ ರಾಜಕಾರಣದಲ್ಲಿ ಕರ್ಣಾಟಕದ ಪ್ರಾತಿನಿಧ್ಯ, ಎಷ್ಟು ಕೊರತೆಯದಾಗುತ್ತದೆಂದು ಪರ್ಯಾಲೋಚಿಸಿರಿ. ಇಂತು ಕಾಸರಗೋಡನ್ನು ಕಳೆದುಕೊಂಡು ಸರ್ವಥಾ ದರಿದ್ರವಾಗುವ ದಕ್ಷಿಣ ಕನ್ನಡ ಜಿಲ್ಲೆಯನ್ನು ಪಡೆದು ಅದರಿಂದ ರೂಪುಗೊಳ್ಳುವ ಕರ್ಣಾಟಕ ಪ್ರಾಂತ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಲಿದೆಯೆಂದು ಕನ್ನಡಿಗರೆಲ್ಲರೂ ಆಳವಾಗಿ ಯೋಚಿಸದಿರುವುದು ವಿವೇಕ ಶೂನ್ಯತೆಯಾದೀತು!

ಇಂಗ್ಲೆಂಡಿನ ಜನರು ಸಾಮ್ರಾಜ್ಯವನ್ನಾದರೂ ಕಳೆದುಕೊಂಡಾರು, ತಮ್ಮ ರಾಷ್ಟ್ರೀಯ ಕವಿ ಷೇಕ್ಸ್‌ಪೀಯರನನ್ನು ಕಳೆದು ಕೊಳ್ಳಲಾರರೆಂದು ಪ್ರಖ್ಯಾತವಾದ ಪ್ರತೀತಿಯಿದೆ. ಆದರೆ ಕನ್ನಡಿಗರು ತಮ್ಮ ನಾಡಿನ ಪ್ರಖ್ಯಾತ ಕವಿಗಳನ್ನು ಕಳೆದುಕೊಂಡು ಕನ್ನಡನಾಡನ್ನು ಕಟ್ಟಲಿಚ್ಛಿಸುತ್ತಾರೆಯೆ? ಬಹುಭಾಷಾ ವಿದ್ವಾಂಸರೂ, ಪ್ರಸಿದ್ಧ ಇತಿಹಾಸ ಸಂಶೋಧಕರೂ ಸರಕಾರದಿಂದ ರಾಷ್ಟ್ರ ಕವಿ ಮನ್ನಣೆ ಪಡೆದವರೂ ಆದ ಮಂಜೇಶ್ವರದ ಶ್ರೀ. ಗೋವಿಂದ ಪೈಗಳನ್ನು ಕೇರಳಕ್ಕೆ ತಳ್ಳಿ, ಕನ್ನಡನಾಡೊಂದನ್ನು ಕಟ್ಟುವ ಯೋಜನೆ ಕನ್ನಡಿಗರಿಗೆ ಪ್ರಿಯವಾಗಿದೆಯೆ? ಮಹಾ ಕವಿಯೆನಿಸಿದ, ಯಕ್ಷಗಾನ ಸಾಹಿತ್ಯ ಸೀಮಾಪುರುಷನೆನಿಸಿದ ಪಾರ್ತಿ ಸುಬ್ಬನ ಹುಟ್ಟೂರನ್ನೂ, ಅವನ ಅನುಪಮ ಯಕ್ಷಗಾನ ಕಲಾ ವಿಶೇಷದ ಕಾರ್ಯಕ್ಷೇತ್ರವನ್ನೂ—ಕೇರಳದಲ್ಲಿರಗೊಡಿಸಿ ಕನ್ನಡನಾಡೊಂದನ್ನು ಇಂದು ಕನ್ನಡಿಗರು ರೂಪಿತಗೊಳಿಸುತ್ತಿರುವಿರಾ?

ದಕ್ಷಿಣ ಕನ್ನಡ ಜಿಲ್ಲೆಯೊಡನಿರುವ ಸಾಮೀಪ್ಯ ಸಹವಾಸ ಸಂಬಂಧಗಳ ದೆಸೆಯಿಂದಾಗಿ ಕಾಸರಗೋಡಿನ ಜನತೆ ದಕ್ಷಿಣಕನ್ನಡ ಜಿಲ್ಲೆಯಿಂದ, ತನ್ಮೂಲಕ ಕನ್ನಡನಾಡಿಂದಬೇರಾಗಿರಲು ಸರ್ವಥಾ ಇಚ್ಛೆಪಡುವುದಿಲ್ಲ. ಆಯೋಗದ ವರದಿಯಂತೆ ಉಂಟಾಗಬಹುದಾದ ಆ ಅಗಲುವಿಕೆಯ ಸಂಕಟದ ಅರಿವಿನಿಂದ ಇಂದು ಅಲ್ಲಿನವರು ಈ ರೀತಿಯಾಗಿ ಹೋರಾಟ ಹೂಡುತ್ತಿದ್ದಾರೆ. ಆದರೆ ಜಿಲ್ಲೆಯ ಜನರು ಕಾಸರಗೋಡನ್ನು ಬಿಟ್ಟಾದರೂ ಬೇರೆ ಹೋಗ

(೧೧ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ.
ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.
ಮೈಸೂರು ಗಂಧದ ಎಣ್ಣೆ
ಅಪ್ಪಟವಾದ ಗಂಧದ ಎಣ್ಣೆ.
ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.
ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

ಮದ್ಯಪಾನ ಪ್ರತಿಬಂಧದ ಯಶಸ್ಸು

ಜನತೆಯ ಸಹಕಾರದ ಯಾಚನೆ

ಮದ್ರಾಸಿನ ಶಾಸನಾಂಗದ ಕೆಳಮನೆಯಲ್ಲಿ ಮದ್ಯಪಾನ ಪ್ರತಿಬಂಧದ ಧೋರಣೆಯು ಕಾರ್ಯಾಚರಣೆಯಲ್ಲಿ ವಿಫಲಗೊಳ್ಳುತ್ತಿರುವುದನ್ನು ಅನೇಕ ಸದಸ್ಯರು ಕಟುವಾಗಿ ಇದೇ ದಿನಾಂಕ ೬ರಂದು ಟೀಕಿಸಿದರು. ಮಂತ್ರಿ ಶ್ರೀ ಬಿ. ಪರಮೇಶ್ವರನ್ನರು ತಮ್ಮ ಖಾತೆಯ ಹಣಕಾಸಿನ ಬೇಡಿಕೆಯನ್ನು ಮಂಡಿಸಿದಾಗ ಪಾನ ನಿರೋಧ ಧೋರಣೆಯಿಂದ ಅಸಂತೋಷಗೊಂಡಿದ್ದ ಸದಸ್ಯರು ಹರಿತವಾದ ಮಾತುಗಳಿಂದ ಸರಕಾರದ ನಿಲುಮೆಯನ್ನು ಖಂಡಿಸುವ ವಿಫಲ ಪ್ರಯತ್ನವನ್ನು ಮಾಡಿದರು.

ಪ್ರತಿಪಕ್ಷಗಳ ಆಕ್ಷೇಪ

ಶ್ರೀ ಕೆ. ವಿನಾಯಕಂ ಎಂಬ ಪ್ರತಿಪಕ್ಷದ ಸದಸ್ಯರು ಕುಡುಕರ ಹಾಗು ಅಕ್ರಮವಾಗಿ ಭಟ್ಟಿ ಇಳಿಸಿದ ಸೆರೆಯ ಪ್ರಮಾಣವು ತಗ್ಗುವುದರ ಬದಲು ಹೆಚ್ಚುತ್ತಾ ಹೋಗುತ್ತಿದೆ ಎಂದರು. ಶಾಸನವು ಈ ಕೆಡುಕನ್ನು ನಿವಾರಿಸಲು ಏನೇನೂ ಸಮರ್ಥವಾಗಿಲ್ಲ ಎಂದವರು ಆರೋಪಿಸಿದರು. ಧೋರಣೆಯ ಯಶಸ್ಸು ಯಾರ ವರ್ತನೆಯನ್ನು ಅವಲಂಬಿಸಿದೆಯೋ ಆ ಅಧಿಕಾರಿಗಳೇ ಶಾಸನದ ದುರುಪಯೋಗ ಮಾಡುವರೆಂದೂ ಲಂಚಗುಳಿತನವೇ ಮುಂತಾದ ದುಷ್ಪ್ರವೃತ್ತಿಗಳು ಅವರಲ್ಲಿ ಬಲಿತಿವೆಯೆಂದೂ ಅವರು ಹೇಳಿದರು. ಎಷ್ಟೇ ಘನ ಉದ್ದೇಶದಿಂದ ಶಾಸನವನ್ನು ಮಾಡಿದರೂ ಅದು ಸಂಪೂರ್ಣ ವಿಫಲವಾಗಿದೆ ಎನ್ನುತ್ತಾ ಒಂದು ಸಮಿತಿಯನ್ನು ನೇಮಿಸಿ ಈ ವಿಷಯವನ್ನು ನಿಷ್ಪಕ್ಷಪಾತ ವಿಚಾರಣೆಗೆ ಗುರಿಪಡಿಸಬೇಕೆಂದು ಅವರು ಸೂಚಿಸಿದರು. ಶಾಸನದಿಂದ ಏನಾದರೂ ಪರಿಣಾಮವಾಗಿದ್ದರೆ ಅದು ಅಬಕಾರಿ ಸುಂಕದ ನಷ್ಟ ಮಾತ್ರ ಎಂದವರು ಸ್ಪಷ್ಟ ಮಾತುಗಳಲ್ಲಿ ಟೀಕಿಸಿದರು.

ಕಠಿಣತೆಯ ಬೇಡಿಕೆ

ಕಮ್ಯೂನಿಸ್ಟ್ ಸದಸ್ಯರಾದ ಶ್ರೀ. ಆರ್. ಕೃಷ್ಣನ್ ಪೋಲೀಸು ಖಾತೆಯ ಉನ್ನತಾಧಿಕಾರಿಗಳೇ ಕುಡುಕರಾಗಿದ್ದಾರೆಂದು ಆರೋಪಿಸಿದರು. ಮದ್ಯಪಾನ ಪ್ರತಿಬಂಧ ಶಾಸನವನ್ನು ಬಿಗುವಾಗಿ ಕಾರ್ಯಾಚರಣೆಗಿಳಿಸುವ ಆವಶ್ಯಕತೆಯನ್ನು ಅವರು ಒತ್ತಿ ಹೇಳಿದರು. ಶ್ರೀ. ಎ. ರತ್ನಂ ಎಂಬ ಇನ್ನೊಬ್ಬ ಸದಸ್ಯರು ಪಾನನಿರೋಧ ಧೋರಣೆಯು ಹೊಂದಿರುವ ನೈತಿಕ ಮೂಲ್ಯವು ಸ್ಪೃಹಣೀಯವಾಗಿದ್ದರೂ ಸಹ ಅದನ್ನು ವ್ಯವಹಾರದಲ್ಲಿ ಇಳಿಸುವಾಗ ಕೆಲವು ತೊಂದರೆಗಳಿಗೆ ಎಡೆ ದೊರಕಿದೆ ಎಂದರು. ಸ್ವಲ್ಪ ಪ್ರಮಾಣದಲ್ಲಿ ಮದ್ಯಾರ್ಕವಿರುವ ವಿಷಾಕ್ತ ಔಷಧಗಳನ್ನು ಸೇವಿಸಿ ಕುಡುಕರು ರೋಗಪೀಡಿತರಾಗುತ್ತಿದ್ದಾರೆಂಬ ವಿಷಯದ ಕಡೆಗೆ ಅವರು ಸರಕಾರದ ಗಮನವನ್ನು ಸೆಳೆದರು. ಕಳ್ಳಭಟ್ಟಿಯನ್ನು ಶ್ರೀಮಂತರೇ ಇಳಿಸುತ್ತಾರೆಂದೂ ಅವರು ತಮ್ಮ ಅಕ್ರಮ ವ್ಯಾಪಾರದಿಂದ ಹಣವನ್ನು ಸಂಪಾದಿಸುವಾಗ ಬಡವರು ಮಾತ್ರ ನ್ಯಾಯಾಲಯದಲ್ಲಿ ಶಿಕ್ಷೆಹೊಂದುತ್ತಿರುವರೆಂದೂ ಅವರು ಹೇಳಿದರು.

ಅಧಿಕಾರಿಗಳ ಮೇಲೆ ಆರೋಪ

ಇನ್ನೊಬ್ಬ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ಕೆ. ಟಿ. ರಾಜುರವರು ವಾರ್ನಿಶುಗಳಲ್ಲಿ ಉಪಯೋಗಿಸುವ ಮದ್ಯಾರ್ಕವನ್ನು ಬಹಳ ಅಧಿಕ ಪ್ರಮಾಣದಲ್ಲಿ ಆಯಾತ ಮಾಡಿಕೊಂಡು ಕುಡುಕರು ಅವುಗಳ ದುರುಪಯೋಗ ಪಡೆದು ಹಾಳಾಗುತ್ತಿರುವರೆಂದರು. ಇದೊಂದು ನಿಯಮಪೂರ್ವಕವಾದ ವ್ಯಾಪಾರವಾಗಿ ಪರಿಣಮಿಸಿದೆ ಎನ್ನುತ್ತಾ ಸರಕಾರದವರು ಬಿಗಿಯಾದ ಕ್ರಮವನ್ನು ತೆಗೆದುಕೊಂಡು ಮದ್ಯಾರ್ಕ ಹಾಗೂ ಮದ್ಯಾರ್ಕ ಮಿಶ್ರಿತ ಔಷಧಿಗಳ ಆಯಾತವನ್ನು ಕಟ್ಟುನಿಟ್ಟಾದ ನಿಯಂತ್ರಣಕ್ಕೆ ಗುರಿಪಡಿಸಬೇಕು ಎಂದರು. ಪ್ರಜಾಸಮಾಜವಾದಿಪಕ್ಷದ ಸದಸ್ಯರಾದ ಶ್ರೀ ಒ. ಕೋರನರು ಕೆಲವು ಪೋಲೀಸು ಅಧಿಕಾರಿಗಳೇ ಅಪರಾಧಿಗಳಾಗಿರುವರೆಂದೂ ಹೆಚ್ಚಿನ ಸಂಖ್ಯೆಯಲ್ಲಿ ಇವರು ತಪ್ಪಿತಸ್ಥರಿಗೆ ಸಹಾಯವನ್ನೀಡುತ್ತಿರುವರೆಂದೂ ದೂರಿಕೊಂಡರು. ಶ್ರೀ ಓ. ರಂಗ ಸ್ವಾಮಿ ರೆಡ್ಡಿಯಾರೆಂಬ ಸದಸ್ಯರು ಪಾನನಿರೋಧ ಧೋರಣೆಯ ಯಶಸ್ಸಿಗಾಗಿ ಬಿಗಿಯಾದ ಹತೋಟಿ ಕ್ರಮಗಳನ್ನು ಅನುಸರಿಸಬೇಕೆಂದೂ ಸಾರ್ವಜನಿಕರಿಗೆ ಒಳ್ಳೆಯ ಶಿಕ್ಷಣವನ್ನು ನೀಡಬೇಕೆಂದೂ ಅಪೇಕ್ಷಿಸಿದರು.

ಪ್ರತಿಬಂಧ ರದ್ದಾಗಲಿ!

ಶ್ರೀ ವಿ. ಗೋಪಾಲ ಗೌಂಡರ್ ಎಂಬವರು ಮಾತನಾಡುತ್ತಾ ಪಾನನಿರೋಧ ಧೋರಣೆಯನ್ನು ಉಳಿಸಿಕೊಳ್ಳುವುದರ ಬದಲು ಅದನ್ನು ರದ್ದು ಪಡಿಸಬೇಕೆಂಬ ಕುರಿತಾದ ವಾದದಲ್ಲಿಯೇ ಹೆಚ್ಚಿನ ಬಲವಿದೆ ಎಂದು ಅಭಿಪ್ರಾಯ ಪಟ್ಟರು. ಹಿಂದೆ ಯಾರು ಕುಡುಕರಾಗಿದ್ದರೋ ಅವರೇ ಈಗ ಅಧಿಕಾರಿಗಳಾಗಿ ಬಂದು ಧೋರಣೆಯ ಕಾರ್ಯಾಚರಣೆಗೆ ಸಂಬಂಧಿಸಿದ ಹೊಣೆಯನ್ನು ಹೊತ್ತರೆ, ಎಷ್ಟು ಯಶಸ್ಸು ಬಂದೀತು ಎಂದವರು ಪ್ರಶ್ನಿಸಿದರು. ಕಮ್ಯೂನಿಸ್ಟ್ ಸದಸ್ಯರಲ್ಲಿ ಒಬ್ಬರಾದ ಶ್ರೀ ಕೆ. ಪಿ. ಗೋಪಾಲನ್ನರು ತಮ್ಮ ಭಾಷಣದಲ್ಲಿ ಯಾವುದೇ ಸಾಮಾಜಿಕ ಸುಧಾರಣೆಯನ್ನು ಶಾಸನದ ಬಲಪ್ರಯೋಗದಿಂದಲೇ ಮಾಡುವುದು ಸಾಧ್ಯವಿಲ್ಲ ಎಂದು ಸಾರಿದರು. ಜನತೆಯ ಜೀವನ ಮಟ್ಟವನ್ನು ಮೊದಲಾಗಿ ಎತ್ತರಿಸಬೇಕು. ಆಗ ಮಾತ್ರ ಸುಧಾರಣೆ ಜ್ಯಾರಿಯಲ್ಲಿ ಬರಬಲ್ಲುದು ಎಂದರು. ವಿದೇಶಿ ಮದ್ಯದ ಆಯಾತವನ್ನು ಪ್ರತಿಬಂಧಿಸಬೇಕೆಂದೂ ಅವರು ಸೂಚಿಸಿದರು.

"ಸುಖಸಂತೋಷ ತಂದಿದೆ"

ಸ್ವತಂತ್ರ ಸದಸ್ಯರಾದ ಶ್ರೀ ವಿ. ಬಾಲಕೃಷ್ಣನ್ನರು ಪಾನ ನಿರೋಧ ಶಾಸನವು ಹಳ್ಳಿಗಳಲ್ಲಿ ಅನೇಕ ಜನಗಳಿಗೆ ಸುಖಸಂತೋಷವನ್ನು ತಂದಿದೆ ಎಂದರು. ಆದುದರಿಂದ ಸರಕಾರದವರು ಈ ಶಾಸನವನ್ನು ಹೆಚ್ಚು ಬಿಗಿಯಲ್ಲಿ ಜ್ಯಾರಿಯಲ್ಲಿ ಇಳಿಸಲು ದಾಕ್ಷಿಣ್ಯ ಪಡಬಾರದು ಎಂದು ಸೂಚಿಸಿದರು. ಪಾನನಿರೋಧ ಸಭಾ ಸಮಿತಿಗಳಲ್ಲಿ ಈ ಧೋರಣೆಯಲ್ಲಿ ಗಾಢವಾದ ವಿಶ್ವಾಸವುಳ್ಳ ಜನರಿಗೆ ಪ್ರಥಮ ಪ್ರಾಶಸ್ತ್ಯ ಸಲ್ಲಬೇಕೆಂದು ಅವರು ಒತ್ತಾಯಿಸಿದರು. ಕಾಂಗ್ರೆಸಿನ ಶ್ರೀ ಪಂಚಾಕ್ಷರಂ ಎಂಬ ಮಹನೀಯರು ಪಾನ ನಿರೋಧ ಶಾಸನವನ್ನು ಜ್ಯಾರಿಯಲ್ಲಿ ತರುವಾಗ ಏನಾದರೂ ಲೋಪದೋಷಗಳು ಕಂಡು ಬಂದರೆ ಅದನ್ನು ತಕ್ಕ ತಿದ್ದುಪಡಿಯ ಮೂಲಕ ಸರಿಪಡಿಸಬಹುದೆಂದು ತಿಳಿಸಿದರು. ಜನರು ಮದ್ಯಪಾನ ಪ್ರತಿಬಂಧವನ್ನು ಬಯಸುತ್ತಿಲ್ಲವೆಂಬ ನಿಲುಮೆಯನ್ನು ಅವರು ಖಂಡಿಸಿದರು. ಹಳ್ಳಿಗೆ ಸಂದರ್ಶನವನ್ನಿತ್ತರೆ ಅಲ್ಲಿಯ ಜನರು ಈಗ ಹೇಗೆ ಸಂತೋಷದಿಂದ ಬಾಳುತ್ತಿರುವರೆಂದೂ ಮುಖ್ಯವಾಗಿ ಮಹಿಳಾ ವರ್ಗವು ಪಾನನಿರೋಧ ಧೋರಣೆಗೆ ಎಷ್ಟು ಕೃತಜ್ಞವಾಗಿದೆಯೆಂದೂ ತಿಳಿಯುವುದಾಗಿ ಅವರು ಘೋಷಿಸಿದರು. ಕೆಲವು ವಿಷಯಗಳಲ್ಲಿ ಧೋರಣೆಯು ವಿಫಲಗೊಂಡಿರಬಹುದಾದರೂ ಅದನ್ನು ಕ್ರಮಪಡಿಸುವುದು ಅಸಾಧ್ಯವಲ್ಲ ಎಂದವರು ಹೇಳಿದರು.

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಯಶಸ್ಸು ನಿಶ್ಚಿತ

ಉಡುಪಿಯ ಕಾಂಗ್ರೆಸು ಪ್ರತಿನಿಧಿ ಶ್ರೀ. ಟಿ. ಎ. ಪೈಗಳು ಮದ್ಯಪಾನ ಪ್ರತಿಬಂಧದ ಧೋರಣೆಯು ಯಶಸ್ವಿಯಾಗಿಲ್ಲ ಎನ್ನುವವರ ನಿಲುಮೆಗೆ ತಕ್ಕ ಉತ್ತರವಿತ್ತು ಸರಕಾರದ ಧೋರಣೆಯನ್ನು ಎತ್ತಿ ಹಿಡಿದರು. ಪಾನನಿರೋಧವು ಸಂಪೂರ್ಣವಾಗಿ ಯಶಸ್ಸನ್ನು ಗಳಿಸಿದೆ ಎನ್ನುವಂತಿಲ್ಲ; ಆದರೆ ಆ ಧೋರಣೆಯನ್ನೆ ರದ್ದು ಪಡಿಸಬೇಕೆನ್ನುವುದು ಎಷ್ಟಕ್ಕೂ ಸರಿಯಲ್ಲ ಎಂದವರು ಬೋಧಿಸಿದರು. ಈ ದೇಶದಲ್ಲಿ ಕುಡುಕರ ಸಹಿತವಾಗಿ ಪ್ರತಿಯೊಬ್ಬರೂ ಸುರಾಪಾನವನ್ನು ಜುಗುಪ್ಸೆಯಿಂದ ನೋಡುತ್ತಾರೆ; ಅದೊಂದು ಸಾಮಾಜಿಕ ಕೇಡೆಂದು ಭಾವಿಸುತ್ತಾರೆ. ಆದುದರಿಂದ ಭಾರತದಲ್ಲಿ ಈ ಧೋರಣೆಯು ಯಶಸ್ಸನ್ನು ಪಡೆಯದಿದ್ದರೆ ಜಗತ್ತಿನ ಬೇರೆಲ್ಲೂ ಅದು ಜಯಪ್ರದವಾಗಲಾರದು ಎಂದವರು ಸಾರಿದರು. ರಾಜಕೀಯ ಪಕ್ಷಗಳು ಮದ್ಯಪಾನ ಪ್ರತಿಬಂಧ ಶಾಸನದಲ್ಲಿರಬಹುದಾದ ಹಾಗು ಅದನ್ನು ಕಾರ್ಯಾಚರಣೆಯಲ್ಲಿಳಿಸುವಾಗ ಕಂಡು ಬರಬಹುದಾದ ಲೋಪದೋಷಗಳನ್ನು ತಮ್ಮ ಪಕ್ಷದ ಪ್ರಚಾರದಂಥ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸುವುದು ಸರಿಯಲ್ಲ ಎಂದವರು ಉಪದೇಶಿಸಿದರು. ಸರಕಾರಕ್ಕೆ ಅಬಕಾರಿ ಸುಂಕದ ರೂಪದಲ್ಲಿ ತೆರಿಗೆ ನಷ್ಟವಾಗಿದ್ದರೂ ಅದನ್ನು ಬೇರೆ ರೀತಿಯಿಂದ ತುಂಬಿಸಿಕೊಳ್ಳಲಾಗಿದೆ ಎಂಬುದನ್ನು ಅವರು ನೆನಪಿಗೆ ತಂದುಕೊಟ್ಟರು. ವಿಧಾಯಕವಲ್ಲದ ಟೀಕೆಗಳು ಅನೈತಿಕ ವ್ಯಾಪಾರಕ್ಕೆ ಪ್ರೋತ್ಸಾಹವನ್ನು ಕೊಡುವುದರಿಂದ ಈ ವಾಮ ಮಾರ್ಗವನ್ನು ಬಿಟ್ಟುಕೊಡಬೇಕೆಂದು ವಿನಂತಿಸಿದರು.

ಶಿಕ್ಷೆಯಲ್ಲಿ ಹೆಚ್ಚಳ

ಮಂತ್ರಿಗಳು ತಮ್ಮ ಉತ್ತರದಲ್ಲಿ ಕೇಂದ್ರ ಸರಕಾರವು ಮದ್ಯಾರ್ಕವುಳ್ಳ ಔಷಧಗಳ ಉತ್ಪಾದನೆ, ರವಾನೆ, ಆಯಾತ ನಿರ್ಯಾತ ಮತ್ತು ವ್ಯಾಪಾರಗಳನ್ನು ನಿಯಂತ್ರಿಸುವ ಬಗ್ಗೆ ಬೇಗನೇ ಶಾಸನವನ್ನು ರಚಿಸುವುದೆಂದೂ ಇದರಿಂದ ಮದ್ಯಾರ್ಕದ ದುರುಪಯೋಗ ಪಡೆಯುವ ಹವ್ಯಾಸವು ನಿಯಂತ್ರಿಸಲ್ಪಡುವ ನಿರೀಕ್ಷೆ ಇದೆ ಎಂದೂ ತಿಳಿಸಿದರು. ಮುಂದುವರಿದು ಅವರು ಪಾನನಿರೋಧ ಶಾಸನವನ್ನು ಉಲ್ಲಂಘಿಸಿದವರ ಶಿಕ್ಷಾಕ್ರಮವನ್ನು ಕಠಿಣಗೊಳಿಸಲಾಗುವುದೆಂದು ಹೇಳಿದರು. ತದನುಸಾರವಾಗಿ, ಎರಡನೇ ಸಲ ತಪ್ಪು ಆನಂತರದ ತಪ್ಪಿನ ಶಿಕ್ಷೆಯನ್ನು ಹೆಚ್ಚಿಸಲಾಗುತ್ತದೆ; ಕೆಲವು ಬಗೆಯ ಅಪರಾಧಗಳಿಗೆ ಜಾಮೀನನ್ನು ನಿರಾಕರಿಸಲಾಗುತ್ತದೆ; ಬೇರೆ ಕೆಲವು ಅಪರಾಧಗಳಿಗೆ ಆರು ತಿಂಗಳು ಶಿಕ್ಷೆ ಅಥವಾ ದಂಡ ಅಥವಾ ಎರಡೂ ಹಾಗೂ ಶಿಕ್ಷೆಗಳನ್ನು ವಿಧಿಸಲಾಗುತ್ತದೆ. ಕಳ್ಳ ಭಟ್ಟಿಯನ್ನು ಇಳಿಸಲು ಅತ್ಯವಶ್ಯ ಸಾಧನವಾದ ಸಂಬುಬೆಲ್ಲದ ಮೇಲೆ ನಿಯಂತ್ರಣವನ್ನು ಹೇರಿ ಅದರ ದುರುಪಯೋಗವನ್ನು ತಡೆಯಲಾಗುತ್ತದೆ ಎಂದರು. ಈ ಕ್ರಮಗಳಿಂದ ಪಾನನಿರೋಧ ಧೋರಣೆಯು ಹೆಚ್ಚು ಯಶಸ್ಸನ್ನು ಪಡೆಯು

(ಮುಂದಿನ ಪುಟ ನೋಡಿರಿ)

ಕೇರಳ ಭೂಮಿಗೆ ಬಂದೊದಗಿದ ಪೇಚು

ಕಾಂಗ್ರೆಸು ಮಂತ್ರಿಮಂಡಳಕ್ಕೆ ಬಹುಮತವಿಲ್ಲ

"ಮಾಡಿದ್ದುಣ್ಣೋ ಮಹಾರಾಯ!"— ಎಂಬ ಗಾದೆ ಮಾತನ್ನು ನೆನಪಿಗೆ ತರುವ ಘಟನೆಯು ಈ ವಾರ ತಿರುವಾಂಕೂರು-ಕೊಚ್ಚಿ ರಾಜ್ಯದ ರಾಜಕೀಯ ಕ್ಷೇತ್ರದಲ್ಲಿ ನಡೆಯಿತು. ಕಳೆದ ೧೯೫೫ನೇ ಫೆಬ್ರವರಿಯಲ್ಲಿ ಅಧಿಕಾರಕ್ಕೆ ಬಂದಿದ್ದ ಕಾಂಗ್ರೆಸಿನ ಶ್ರೀ ಪನಂಪಳ್ಳಿ ಗೋವಿಂದ ಮೆನೊನ್ನರ ಮಂತ್ರಿ ಮಂಡಳವು ರಾಜೀ ನಾಮೆಯನ್ನು ಕೊಡಲೇ ಬೇಕಾದ ಪರಿಸ್ಥಿತಿ ಬಂದೊದಗಿತು. ಹಿಂದೆ, ಎಷ್ಟು ಕ್ಷುಲ್ಲಕ ಕಾರಣಗಳಿಗಾಗಿ ಕಾಂಗ್ರೆಸಿನ ಸದಸ್ಯರು ಪ್ರಜಾ ಸಮಾಜವಾದಿ ಮುಖಂಡ ಶ್ರೀ ಪಟ್ಟಂಥಾನು ಪಿಳ್ಳೆಯವರ ಮಂತ್ರಿ ಮಂಡಳಕ್ಕೆ ತಾವು ಕೊಡುತ್ತಿದ್ದ ಬೆಂಬಲವನ್ನು ಹಿಂದೆಗೆದುಕೊಂಡಿದ್ದರೋ ಅಷ್ಟೇ ಕ್ಷುಲ್ಲಕವಾದ ನೆಪವನ್ನು ಮುಂದೊಡ್ಡಿ ಈ ಸಲ ಕಾಂಗ್ರೆಸು ಸಂಸ್ಥೆಗೆ ಸೇರಿದ ಕೆಲವು ಸದಸ್ಯರೇ ಸರಕಾರಕ್ಕೆ ಬೆಂಬಲವೀಯದೆ, ಪಕ್ಷಕ್ಕೆ ರಾಜೀನಾಮೆ ಕೊಟ್ಟುದರಿಂದ ರಾಜೀನಾಮೆಯನ್ನು ಕೊಟ್ಟು, ಗೌರವದಿಂದ ಅಧಿಕಾರವನ್ನು ತ್ಯಜಿಸಿ ಹೊರಬರಬೇಕಾದ ಪ್ರಸಂಗವು ಮೆನೊನ್ನರಿಗೆ ಬಂತು.

ಭಿನ್ನಾಭಿಪ್ರಾಯ

"ದಂಗೆಖೋರ"ರೆಂದು ಶಿಸ್ತುಪಾಲನೆಗೆ ಮಹತ್ವ ಕೊಡುವವರು ಕರೆಯುವ ಆರು ಮಂದಿ ಸದಸ್ಯರು ಸರಕಾರದೊಡನೆ ಈಚೆಗೆ ಕೆಲವು ಸಮಯದಿಂದ ಮತಭೇದ ಹೊಂದಿದ್ದರು. ತಿರು-ಕೊಚ್ಚಿಯ ಕೆಲವು ಪ್ರದೇಶಗಳನ್ನು ತಮಿಳು ನಾಡಿಗೆ ಕೊಡುವ ವಿಷಯದಲ್ಲಿ ಸರಕಾರಕ್ಕೂ ಈ ಸದಸ್ಯರಿಗೂ ಭಿನ್ನಾಭಿಪ್ರಾಯ ಉಂಟಾಯಿತು. ಈ ಅಭಿಪ್ರಾಯ ಭೇದವು ಪರಿಹಾರಗೊಳ್ಳದಿದ್ದುದೇ ಕಾರಣವಾಗಿ, ದಂಗೆಖೋರ ಸದಸ್ಯರುಮಂತ್ರಿಮಂಡಳದ ಮೇಲೆ ಸ್ವಜನಾನುಗ್ರಹ,ಪಕ್ಷಪಾತಇತ್ಯಾದಿ ದುಷ್ಪ್ರವೃತ್ತಿಗಳ ಆಪಾದನೆಗೈದರು; ಮತ್ತು ಮಂತ್ರಿಮಂಡಳವು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಹತ್ತಿದರು. ಶಾಸನ ಸಭೆಯ ಕಾರ್ಯಕಲಾಪಗಳನ್ನು ಇವರು ಬಹಿಷ್ಕರಿಸಿದರು. ಪರಿಣಾಮದಲ್ಲಿ ಮೆನೊನ್ನರ ಮಂತ್ರಿಮಂಡಳವು ನಾಲ್ಕು ಮಂದಿ ಪ್ರತಿಪಕ್ಷದ ಸದಸ್ಯರು ಅನುಪಸ್ಥಿತರಿದ್ದ ಪುಣ್ಯದಿಂದ ದಿನಾಂಕ ೮ರಂದು ೩ ಬಹುಮತಗಳಿಂದಲೂ ಮರುದಿನ ಇಬ್ಬರು ಸ್ವತಂತ್ರ ಸದಸ್ಯರ ಬೆಂಬಲದಿಂದ ಕೇವಲ ಒಂದು ಮತದ ಹೆಚ್ಚುಗಾರಿಕೆಯಿಂದಲೂ ಸೋಲಿನಿಂದ ತಪ್ಪಿ ಉಳಿಯಿತು.

ಶಾಸನಾಂಗದ ಪಕ್ಷಬಲ

ಆದರೆ ಈಗ ಪ್ರತಿಪಕ್ಷಗಳ ಸಾಲಿನಲ್ಲಿ ಕಾಂಗ್ರೆಸಿನಿಂದ ರಾಜೀನಾಮೆಯಿತ್ತು ಹೊರಬಿದ್ದ ಆರು ಸದಸ್ಯರು ಕುಳಿತುಕೊಳ್ಳಲು ನಿರ್ಧರಿಸಿದ್ದರಿಂದ ಸರಕಾರವು ನಿಶ್ಶಂಕೆಯಿಂದ ಕೆಲಸಮಾಡಲು ಸಾಧ್ಯವೇ ಇಲ್ಲವೆಂದು ಖಚಿತವಾಗಿದೆ. ಶಾಸನಾಂಗದ ಕಾಂಗ್ರೆಸು ಪಕ್ಷಕ್ಕೆ ೬೦ ಮಂದಿ ಸದಸ್ಯರಿದ್ದರು; ಇವರಲ್ಲಿ ಆರುಮಂದಿ ಈಗ ಪಕ್ಷವನ್ನು ತ್ಯಜಿಸಿದ್ದಾರೆ. ಪ್ರತಿಪಕ್ಷಗಳಲ್ಲಿ ಕಮ್ಯೂನಿಸ್ಟರು ೨೭; ಪ್ರಜಾಸಮಾಜವಾದಿಗಳು ೧೯; ಸ್ವತಂತ್ರರು ೩, ಇತರ ಪಕ್ಷಗಳವರು ೧೩. ೧೧೮ ಮಂದಿಯುಳ್ಳ ಶಾಸನಾಂಗದ ಇನ್ನೊಬ್ಬ ಸದಸ್ಯನೆಂದರೆ ಪಕ್ಷಭೇದವಿಲ್ಲದ ಅಧ್ಯಕ್ಷ. ಕಾಂಗ್ರೆಸು ಸರಕಾರವು ಶಾಸನಾಂಗದ ಕಾರ್ಯಕಲಾಪಗಳಲ್ಲಿಭಾಗವಹಿಸದೆಅನುಪಸ್ಥಿತರಾದಪ್ರತಿಪಕ್ಷದ ಸದಸ್ಯರ ಸಂಖ್ಯಾಬಲದ ಮೇಲಿಂದಕೆಲವು ದಿನಕೆಲಸಮಾಡಿತು. ಈ ಸಮಯದಲ್ಲಿ ಎಚ್ಚರಿಕೆಯನ್ನು ಪದೇ ಪದೇ ಕೊಟ್ಟರೂ ದಂಗೆ ಖೋರ ಕಾಂಗ್ರೆಸಿಗರು ಸಭೆಗೆ ಬಾರದೆ, ಬಂದು ಸರಕಾರಕ್ಕೆ ಬೆಂಬಲವೀಯದೆ ಹೊರಗುಳಿದರು. ಇವರೆಲ್ಲಿಯಾದರೂ ಸಭೆಗೆ ಬಂದು, ಪ್ರತಿಪಕ್ಷದೊಡನೆ ಸೇರಿ ಮತವಿತ್ತಿದ್ದರೆ, ಮೆನೊನ್ನರು ರಾಜೀನಾಮೆಯನ್ನು ಗೌರವಾರ್ಹವಾದ ರೀತಿಯಲ್ಲಿತ್ತು ಹೊರಬರುವುದಕ್ಕೂ ಎಷ್ಟುಕ್ಕ ಅವಕಾಶವಿರುತ್ತಿರಲಿಲ್ಲ; ಸೋತು, ನಾಚಿಕೊಂಡು ರಾಜೀನಾಮೆ ಒಪ್ಪಿಸಬೇಕಾಗುತಿತ್ತೆಂಬ ಅಂಶವನ್ನು ನೆನೆದರೆ ದಂಗೆ ಖೋರರೂ ಶಿಸ್ತುಭಂಗ ಮಾಡಿದವರೂ ಎಂದೆನ್ನಲಾದ ಆ ಆರು ಮಂದಿ ಕಾಂಗ್ರೆಸಿಗರು ಸ್ವಲ್ಪವಾದರೂ ಕರುಣೆಯಿಂದ ವರ್ತಿಸಿದರೆಂದು ಹೇಳಬೇಕಾಗುತ್ತದೆ.

ಹೊಸ ಸರಕಾರವಾದೀತೇ?

೧೧೮ ಮಂದಿ ಸದಸ್ಯರುಳ್ಳ ಶಾಸನಾಂಗದಲ್ಲಿ ಕೇವಲ ೫೪ ಜನರ ಬೆಂಬಲವನ್ನಷ್ಟೆ ಪಡೆದ ಅಲ್ಪ ಸಂಖ್ಯಾಕ ಪಕ್ಷವಾದ ಕಾಂಗ್ರೆಸಿನ ಧುರೀಣನಾಗಿ ಸರಕಾರವನ್ನು ನಡೆಸಿಕೊಂಡು ಹೋಗಲು ತನಗೀಗ ನೈತಿಕ ಅಧಿಕಾರವಿಲ್ಲವೆಂದು ಶ್ರೀ ಮೆನೊನ್ನರು ಹೇಳಿದ್ದಾರೆ. ರಾಜ ಪ್ರಮುಖರಿಗೆ ತಮ್ಮ ರಾಜೀನಾಮೆಯನ್ನೊಪ್ಪಿಸುವಾಗ ಭದ್ರವಾದ ಹೊಸ ಸರಕಾರವು ರಚಿಸಲ್ಪಡುವ ಎಲ್ಲ ಪ್ರಯತ್ನಗಳನ್ನೂ ನಡೆಸಬೇಕೆಂದು ಅವರು ಸೂಚಿಸಿರುವರೆಂದು ವರದಿಯಾಗಿದೆ. ಮುಂಗಡ ಪತ್ರದ ಪರಿಶೀಲನೆಗೆಂದು ನೆರೆದಿದ್ದ ಶಾಸನಾಂಗದ ಪ್ರಸ್ತುತ ಅಧಿವೇಶನವನ್ನು ಅನಿಯಮಿತ ಅವಧಿಯ ವರೆಗೆ ಇದೇ ಸೋಮವಾರ ಮುಂದೂಡಲಾಗಿದೆ. ಭದ್ರವಾದ ಇನ್ನೊಂದು ಸರಕಾರದ ರಚನೆಯಾಗದೆ ಶಾಸನ ಸಭೆಯ ಅಧಿವೇಶನವನ್ನು ಪುನಃ ಕರೆಯುವಂತಿಲ್ಲ. ಅಂಥ ಸರಕಾರ ಸ್ಥಾಪಿಸಲ್ಪಡುವ ವರೆಗೆ ಶ್ರೀ ಮೆನೊನ್ನರ ಮಂತ್ರಿಮಂಡಳವೇ ಅಧಿಕಾರದಲ್ಲಿರಬೇಕೆಂದು ರಾಜಪ್ರಮುಖರು ಅಪೇಕ್ಷಿಸಿದ್ದಾರೆ. ಹೊಸ ಸರಕಾರ ಸ್ಥಾಪಿಸಲ್ಪಟ್ಟೀತೇ ಎಂಬುದು ತೀರ ಸಂಶಯದ ವಿಷಯ ಪ್ರತಿಪಕ್ಷಗಳಲ್ಲಿ ಸಹ ಯಾವು ದಕ್ಕೂ ಬಹುಮತವಿಲ್ಲ— ಕಾಂಗ್ರೆಸಿನ ಬಳಿಕ ಶಾಸನಾಂಗದಲ್ಲಿ ಪ್ರಬಲ ಸ್ಥಾನಗಳಿಸಿಕೊಂಡಿರುವ ಕಮ್ಯೂನಿಸ್ಟರು ಪ್ರಜಾ ಸಮಾಜವಾದಿ ಧುರೀಣ ಶ್ರೀ ಥಾನು ಪಿಳ್ಳೆಯವರ ನೇತೃತ್ವದಲ್ಲಿ ಮಂತ್ರಿಮಂಡಳ ರಚನೆಯಾದರೆ ತಮ್ಮ ಬೆಂಬಲವಿದೆ ಎಂದಿದ್ದಾರೆ—ಆದರೆ ಪ್ರಜಾ ಸಮಾಜವಾದಿಗಳು ಇದಕ್ಕೆ ತಾತ್ವಿಕ ಕಾರಣಗಳಿಗಾಗಿ ಒಪ್ಪುತ್ತಿಲ್ಲವೆಂದು ಹೇಳಲಾಗುತ್ತದೆ.

ಕಳೆಗುಂದುತ್ತಿರುವ ಕಾಂಗ್ರೆಸು

ಯುರೋಪಿನಲ್ಲಿರುವ ಫ್ರಾನ್ಸಿನಂತೆ ಭಾರತದಲ್ಲಿ ತಿರು-ಕೊಚ್ಚಿ ರಾಜ್ಯವು ತೀರ ಅಸ್ಥಿರತೆಯನ್ನು ತೋರಿಸುತ್ತಿದೆ—೧೯೪೮ರಿಂದ ಅಲ್ಲಿ ೫ ಮಂತ್ರಿಮಂಡಳಗಳು ಕೆಲಸ ಮಾಡಿ, ಉರುಳಿದವೆನ್ನಬಹುದು. ೧೯೫೪ರಿಂದ ೧೯೫೬ನೇ ಇಸವಿಗಾಗುವಾಗಲೇ ಎರಡು ಮಂತ್ರಿಮಂಡಳಗಳ ಪತನವಾಯಿತು. ಕಾಂಗ್ರೆಸು ಪಕ್ಷವು ಆ ರಾಜ್ಯದಲ್ಲಿ ದಿನೇದಿನೇ ದುರ್ಬಲ ಹೊಂದುತ್ತಾ ನಡೆದಿರುವುದು ಈ ರಾಜಕೀಯ ಅಸ್ಥಿರತೆಯ ಮೂಲ ಕಾರಣ. ಕಾಂಗ್ರೆಸಿನ ಸ್ಥಾನವನ್ನು ಆಕ್ರಮಿಸಿಸಿಲ್ಲುವಷ್ಟು ಹೆಚ್ಚಿನ ಸಾಮರ್ಥ್ಯವನ್ನು ಬೇರೆ ಪಕ್ಷಗಳು ಇನ್ನೂ ತೋರಿಸಿಲ್ಲ. ಅವುಗಳ ವರ್ಚಸ್ಸು ಮತ್ತು ಪ್ರಭಾವವು ಹೆಚ್ಚುತ್ತಿದೆ ಎಂಬುದು ಸುಳ್ಳಲ್ಲ ಆ ರಾಜ್ಯದಲ್ಲಿ ಕಳೆದವಾರ ಮುಗಿದ ನಗರ ಸಭಾ ಚುನಾವಣೆಯಲ್ಲಿ ವ್ಯಕ್ತವಾದ ಫಲಿತಾಂಶಗಳೇ ಇದನ್ನು ರುಜುಪಡಿಸುತ್ತವೆ. ೨೭ ನಗರ ಸಭೆಗಳಲ್ಲಿ ಎಂಟರ ಮಟ್ಟಿಗೆ ಮಾತ್ರ ಕಾಂಗ್ರೆಸುಪಕ್ಷವು ಬಹುಮತವನ್ನು ಸಂಪಾದಿಸಿತು. ಆದರೆ ಹೀಗೆಮಾಡುವಾಗ ಹಿಂದೆ ತಮ್ಮ ಬಹುಮತವಿದ್ದ ನಾಲ್ಕು ನಗರ ಸಭೆಗಳಲ್ಲಿ ಕಮ್ಯೂನಿಸ್ಟರ ಕೈ ಮೇಲಾಗುವುದಕ್ಕೆ ಕಾಂಗ್ರೆಸಿಗರು ಬಿಟ್ಟರು. ಇದಲ್ಲದೆ ಬೇರೆ ಮೂರು ನಗರಸಭೆಗಳ ಮೇಲಿದ್ದ ನಿಯಂತ್ರಣವೂ ಕಾಂಗ್ರೆಸಿಗರಿಂದ ಕೈತಪ್ಪಿ ಹೋಗಿದೆ—ಹೊಸತಾಗಿ ಮೂರು ನಗರಸಭೆಗಳಲ್ಲಿ ಕಾಂಗ್ರೆಸಿಗೆ ಬಹುಮತ ದೊರೆತಿದ್ದರೂ ಅದು ಸೋಲ

(ಹಿಂದಿನ ಪುಟದಿಂದ)

ಬಹುದೆಂದು ಪರಿಣಾಮಕಾರಿಯಾಗಿ ಕಾರ್ಯಾಚರಣೆಗಿಳಿದೀತೆಂದು ಅವರು ಆಶಿಸಿದರು.

ಜನತೆಗೆ ಪರಮಸೇವೆ

ಚರ್ಚೆಯಲ್ಲಿ ಭಾಗವಹಿಸಿದ ಹೆಚ್ಚಿನ ಸದಸ್ಯರೂ ಪಾನನಿರೋಧ ಧೋರಣೆಯು ಯೋಗ್ಯವಾದುದೆಂಬ ತತ್ವವನ್ನು ಒಪ್ಪಿಕೊಂಡಿರುವರೆಂಬುದನ್ನು ಮಂತ್ರಿಗಳು ಎತ್ತಿಹೇಳಿ, ಕಾರ್ಯಾಚರಣೆಯಲ್ಲಿ ಈ ಧೋರಣೆಯನ್ನು ಇಳಿಸುವಾಗ ಉಂಟಾಗುವ ತೊಂದರೆಗಳ ಭಯವನ್ನಷ್ಟೆ ಇವರು ಪ್ರಕಟಿಸಿರುವರೆಂದು ಅವರು ತಿಳಿಸಿದರು. ಹೆಚ್ಚಿನ ಬಿಗಿಯನ್ನು ಉಪಯೋಗಿಸಲು ಪೋಲೀಸರಿಗೆ ಈ ಧೋರಣೆಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯೊಪ್ಪಿಸಬೇಕೆಂಬ ಸೂಚನೆ ಹಿಂದೆ ಬಂತು ಇಂದದನ್ನು ಸರಕಾರ ಸ್ವೀಕರಿಸಿದೆ ಎಂದು ಮಂತ್ರಿಗಳು ನುಡಿದರು. ಮದ್ಯಪಾನ ಪ್ರತಿಬಂಧವು ಸಂಪೂರ್ಣ ಯಶಸ್ಸನ್ನು ಸಂಪಾದಿಸಿಲ್ಲವೆಂದು ಒಪ್ಪಬಹುದು; ಆದರೆ, ಇದಕ್ಕಾಗಿ ಧೋರಣೆಯನ್ನೆ ಬಿಟ್ಟುಕೊಡಬೇಕೆಂಬವರ ವಿವಾದವನ್ನು ನಾನು ಅರ್ಥಮಾಡಿಕೊಳ್ಳುವಂತಿಲ್ಲವೆಂದ ಮಂತ್ರಿಗಳು ಹೇಳುತ್ತಾ ಪಾನ ಪ್ರತಿಬಂಧವನ್ನು ಬಿಟ್ಟುಗೊಡುವ ಪ್ರಶ್ನೆಯೇ ಇಲ್ಲವೆಂದರು. ರಾಜ್ಯಾಂಗಘಟನೆಯಲ್ಲಿ ಮದ್ಯಪಾನಪ್ರತಿಬಂಧವುನಿರ್ದೇಶಕತತ್ವಗಳಲ್ಲಿಒಂದಾಗಿನೆವಮಾಡಿಸಲ್ಪಟ್ಟಿರುವುದನ್ನು ಅವರು ನೆನಪಿಗೆ ತಂದುಕೊಟ್ಟರು. ಬಡಜನರ ಆರ್ಥಿಕ ಹಾಗೂ ನೈತಿಕ ಮಟ್ಟವನ್ನು ಸುಧಾರಿಸಲು ಮದ್ಯಪಾನ ಪ್ರತಿಬಂಧವು ನೆರವಾಗುತ್ತದೆಯೇ ಎಂಬುದು ಅದರ ಯಶಸ್ಸನ್ನು ಅಳೆಯುವಮಾನದಂಡವಾಗ ಬೇಕು ಎನ್ನುತ್ತಾ ಈ ದೃಷ್ಟಿಯಿಂದ ಈ ಧೋರಣೆಯಿಂದ ಪರಮಸೇವೆಯು ಜನರಿಗೆ ದೊರಕಿದೆಎಂದುಸರಕಾರದನೀತಿಯನ್ನು ಸಮರ್ಥಿಸಿ ಕೊಂಡರು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ರೂಪಾಯಿ 500 ಬಹುಮಾನ

ಲ್ಯುಕೋಡ್ರ್ಮಾ

(ಬಿಳಿ ಕಲೆಗಳು)

ಲ್ಯುಕೋಡ್ರ್ಮಾ ಮತ್ತು ಕುಷ್ಠ ರೋಗವನ್ನು ಸುಲಭವಾಗಿ ಹೋಗಲಾಡಿಸಲು ದೇಶದ ಹೊರಗೂ ಒಳಗೂ ನಮ್ಮ ಅನುಭವೀ ಔಷಧ ಪ್ರಯೋಗದಿಂದ ಸಾಧ್ಯವಿದೆ. ಸಹಸ್ರಾರು ಮಂದಿ ಗ್ಯಾರಂಟಿಯಾಗಿ ಗುಣ ಹೊಂದಿದ್ದಾರೆ. ರೂಪಾಯಿ 5/. ಬೆಲೆಯ ನಮ್ಮ ಔಷಧಿಯನ್ನು ದೇಹದ ಹೊರಗೆ ಲೇಪಿಸಿ ಕೆಲವೇ ದಿನಗಳೊಳಗೆ ಈ ಮಹಾ ವ್ಯಾಧಿಯಿಂದ ಗುಣಹೊಂದಿರಿ. ವೇದನಾರೋಧಕ ಮತ್ತು ಕ್ಷಯರೋಗ ನಿಕಾರ ಹಾಗೂ ಎಲ್ಲಾ ತರದ ಕುಷ್ಠ ರೋಗಗಳ ನಿವಾರಣೆ ಬಗ್ಗೆ,ಸೇವಿಸುವ ಔಷಧಿ, ಬೆಲೆ ರೂ. 5/-.

Indra Ayurved Bhavan,
(60) P. O. Rajdhanwar (H. Bagh)

ಕರಾಚಿಯ "ಸಿಯಾಟೊ" ಅಧಿವೇಶನ

ಕಾಶ್ಮೀರ ಪ್ರಶ್ನೆಯಲ್ಲಿ ಅನಾವಶ್ಯಕ ಹಸ್ತಕ್ಷೇಪ

ತವನ್ನು ಸ್ವಾಗತಿಸಿ, ಉತ್ತಮ ...ಥ್ಯವನ್ನಿತ್ತು, ಸಮಾಲೋಚನೆಗಳಿಗೆ ...ರ್ಯ ವಾತಾವರಣವನ್ನು ಕಲ್ಪಿಸಿ ...ಡುವ ರಾಷ್ಟ್ರದ ಪ್ರತಿನಿಧಿಗೆ ಅಂಥ ...ಮ್ಮೇಳನದ ಅಧ್ಯಕ್ಷ ಸ್ಥಾನವನ್ನೀಯು ...ದೇ ಮುಂತಾದ ಕೆಲವು ಔಪಚಾರಿಕ ...ನಾನದಿಂದ ಗೌರವಪನ್ನರ್ಪಿಸುವುದು ಮಾನ್ಯ ಸಂಪ್ರದಾಯ. ಆದರೆ ಕಳೆ ವಾರ ಕರಾಚಿಯಲ್ಲಿ ನೆರೆದ "ಸಿಯಾ

...ಮರೆಸುವಷ್ಟು ಹೆಮ್ಮೆಯ ವಿಷಯ ...ಗದು. ಏಕೆಂದರೆ ಎಡಪಕ್ಷನವರು ...ನ್ನು ನಿಯಂತ್ರಣವನ್ನು ಕೇವಲ ಒಂ... ನಗರ ಸಭೆಯಲ್ಲಿ ಗಳಿದು ಕೊಂಡು, ...ಂಗ್ರೆಸಿನ ಕೈಯಿಂದ ನಾಲ್ಕು ನಗರ ...ಗಳಲ್ಲಿ ಬಹುಮತವನ್ನು ಕಸಿದುಕೊಂ...ು

ರಾಷ್ಟ್ರಾಧ್ಯಕ್ಷರ ನಿಯಂತ್ರಣ

ಪರಿಸ್ಥಿತಿ ಹೀಗಿರುವಾಗ ಕಾಂಗ್ರೆಸು ತ... ಜನಪ್ರಿಯತೆಯನ್ನು ಆ ರಾಜ್ಯದಲ್ಲಿ ...ದು ಕೊಳ್ಳಲು ಏನು ಕಾರಣವೆಂದು ಪ...ದ ವರಿಷ್ಠರು ಬಹಳ ತೀವ್ರವಾಗಿ ವಿ...ಚಿಸಬೇಕಾಗಿದೆ. ರಾಜಕೀಯ ಅಸ್ಥಿರತೆ ...ು ಆ ರಾಜ್ಯದ ಬೆಳವಣಿಗೆಗೆ ಮತ್ತು ಅ...ವೃದ್ಧಿಗೆ ದೊಡ್ಡ ಆತಂಕವಾಗಿದೆ. ಭಾರ...ದ ಉಳಿದೆಲ್ಲ ಪ್ರದೇಶಗಳಲ್ಲಿ ಕಾಂಗ್ರೆಸು ...ಷ್ಟು ಜನಪ್ರಿಯತೆಯನ್ನು ಉಳಿಸಿ...ಕೊಂಡಿರುವಾಗ–ತಿರು-ಕೊಚ್ಚಿಯಲ್ಲಿ ಮಾ... ಪ್ರತಿಪಕ್ಷವು ರಾರಾಜಿಸುತ್ತಿರುವುದೆಂ...ದೆ ನಮ್ಮ ಫೆಡರಲ್ ಮಾದರಿಯ ರಾಜ್ಯ...ರ್ವಹಣ ಕ್ರಮಕ್ಕೆ ಸೊಗಸುವ ವಿಷ...ಯ ವೆನಿಸದು. ಇಂಥ ಪ್ರಸಂಗಗಳಿಂದ ...ರತದ ಯಾವುದೇ ಭೂ ಭಾಗವು ...ಎಂದರೆಗೀಡಾಗ ಬಾರದೆಂಬುದಕ್ಕಾಗಿ ...ೕ ಏಕಘಟಕವಾಗಿ ಭಾರತವನ್ನು ...ಪಿಸಬೇಕೆಂದು ಪ್ರತಿಪಾದಿಸಲಾಗು...ದೆ. ಅವರ ಪಕ್ಷಕ್ಕೆ ಈ ವಾದಕ್ಕೆ ...ಷ್ಟು ಪುಷ್ಟಿ ಬರಲಾರದು. ಹಾಗಿದ್ದ...ು ತಿರು-ಕೊಚ್ಚಿಯಂಥ ರಾಜ್ಯದಲ್ಲಿ ...ಮರ್ಥವಾದ ಬೇರೊಂದು ಸರಕಾರವು ...ತಿಸಲ್ಪಡದಿದ್ದರೆ, ಆಗ ಏನು ಮಾಡಬೇ...? ರಾಷ್ಟ್ರಾಧ್ಯಕ್ಷರು ನೇರಾದ ಆಳಿಕೆ...ಯನ್ನು ಹೇರಬೇಕಾಗಿ ಬರುವುದು ಖಂಡಿ... ಹೀಗೆ ಕೇಂದ್ರದ ಸಂಸತ್ತೆ ರಾಜ್ಯದ ...ನಂದಿನ ಆಡಳಿತೆಗೆ ಹೊಣೆಯಾಗುವ ...ನ ಬರುತ್ತದೆ. ಅದನ್ನು ತಪ್ಪಿಸುವಷ್ಟು ...ಚಕ್ಷಣತೆಯುಳ್ಳ ರಾಜಕೀಯ ಪಕ್ಷಗ...ು ಮತ್ತು ಮತದಾರರ ಮುತ್ಸದ್ದಿತನ...ಕ್ಕಾಗಿ ದುಃಖಿಸಬೇಕಾಗುತ್ತದೆ.

ಟೋ" ಎಂಬ ಸಂಕ್ಷಿಪ್ತ ಹೆಸರಿನ ಆಗ್ನೇಯ ಏಷ್ಯ ಸಂರಕ್ಷಣ ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳ ಪರಿಷತ್ತು ತನ್ನ ಉದ್ದೇಶವನ್ನು ಕಡೆಗಣಿಸಿ, ಪಾಕಿಸ್ತಾನವು ಕುಣಿಸಿದಂತೆ ಕುಣಿಯಿತೆಂದು ನಿರೀಕ್ಷಕರು ಹೇಳುವಂತಾಗಿದೆ. ಪಾಕಿಸ್ತಾನದ ವಿದೇಶ ಸಚಿವರನ್ನು ಸಿಯಾಟೊ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಗೈದುದಲ್ಲದೆ, ಅವರು ಪಾಕಿಸ್ತಾನದ ಪರವಾಗಿ ಏನನ್ನು ಬೇಡಿದರೂ ಅವೆಲ್ಲದಕ್ಕೂ ವಾಸ್ತವಾಂಶದ ಪರ್ಯಾಲೋಚನೆ ಮಾಡದೆ "ಅಸ್ತು!" ಎಂದು ಈ ವಿದೇಶ ಸಚಿವರು ಹೇಳಿಬಿಡುವಷ್ಟು ಹೊಣೆಗೆಟ್ಟ ರೀತಿಯಲ್ಲಿ ವರ್ತಿಸಿದರು.

ಪಾಕಿಸ್ತಾನದ ಒತ್ತಾಯ

ಪಾಕಿಸ್ತಾನದ ವಿದೇಶ ಸಚಿವರು ಹೇಳಿದುದೇನು? ರಶ್ಯದ ಪ್ರಧಾನಿ ಮತ್ತು ಸಾಮ್ಯವಾದಿ ಪಕ್ಷದ ಕಾರ್ಯದರ್ಶಿ ಖ್ರುಶ್ಚೆಫರು ತಮ್ಮ ಭಾರತ ಸಂಚಾರ ಕಾಲದಲ್ಲಿ ಕಾಶ್ಮೀರದ ಬಗ್ಗೆ ಆಡಿದ ಮಾತುಗಳು ಭಾರತದ ನಿಲುಮೆಗೆ ಬೆಂಬಲ ಕೊಡುತ್ತವೆ. ಭಾರತಕ್ಕೆ ಈ "ಮಿತ್ರ"ರಿಂದ ಸಿಕ್ಕಿದ ಮಾದರಿಯ ಬೆಂಬಲವು ಪಾಕಿಸ್ತಾನಕ್ಕೆ ಸಹ ಅದರ ಮಿತ್ರ ರಾಷ್ಟ್ರಗಳಿಂದ ಸಿಗಬೇಕು—ಸಿಗುವುದಿಲ್ಲ ಎಂದಾದರೆ ಆ ರಾಷ್ಟ್ರಗಳ ಸ್ನೇಹ ವರ್ತನೆಯ ವಿಷಯದಲ್ಲಿ ಪಾಕಿಸ್ತಾನದ ಜನತೆಗೆ ಸಂಶಯವೇಳುತ್ತದೆ. ಸಂಯುಕ್ತ ರಾಷ್ಟ್ರ ಸಂಘವು ಒಪ್ಪಿರುವ ರೀತಿಯಲ್ಲೇ ಆದರೂ ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಿಸುವುದಕ್ಕೆ ಆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಾದ "ಸಿಯಾಟೊ" ರಾಷ್ಟ್ರಗಳು ಮನಸ್ಸು ಮಾಡದಿದ್ದರೆ ಪಾಕಿಸ್ತಾನದ ಜನತೆಯ ದೃಷ್ಟಿಯಲ್ಲಿ ಆ ರಾಷ್ಟ್ರಗಳ ಮೈತ್ರಿಯು ಪ್ರಶ್ನಾರ್ಹ ಪರಿಸ್ಥಿತಿಗೆ ಬಂದು ಮುಟ್ಟುತ್ತದೆ.

ಕಾರಣ ರಹಿತ ಭಯ

"ಸಿಯಾಟೊ" ರಾಷ್ಟ್ರಗಳು ಪಾಕಿಸ್ತಾನದ ಈ ಶಂಖನಾದಕ್ಕೆ ಕಿವಿಗೊಟ್ಟು ಒಂದು ನಿರ್ಣಯವನ್ನು ಸಮ್ಮೇಳನಾಂತ್ಯದಲ್ಲಿ ಸ್ವೀಕರಿಸಿರುತ್ತವೆ. ಈ ಗೊತ್ತುವಳಿಯು ಕಾಶ್ಮೀರ ಪ್ರಶ್ನೆಯನ್ನು ಪ್ರಸ್ತಾಪಿಸುತ್ತಾ "ಸಂಯುಕ್ತ ರಾಷ್ಟ್ರ ಸಂಘವು ಈ ವಿಷಯದಲ್ಲಿ ಮಾಡಿರುವ ನಿರ್ಣಯವು ಇನ್ನೂ ಜ್ಯಾರಿಯಲ್ಲಿರುವುದನ್ನು ಗಮನಿಸಿ ಕಾಶ್ಮೀರ ಪ್ರಶ್ನೆಯನ್ನು ಒಂದೋ ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಅಥವಾ ನೇರಾದ ಮಾತು ಕತೆಯ ಮೂಲಕ ಪರಿಹರಿಸಬೇಕು" ಎಂದು ಸೂಚಿಸುತ್ತದೆ. ಹೀಗೆ "ಸಿಯಾಟೊ" ಸಮ್ಮೇಳನವು ಒಂದು ತೀರ್ಮಾನವಮಾಡಬಲ್ಲುದೆ? "ಸಿಯಾಟೋ" ರಾಷ್ಟ್ರಗಳ ಘಟನೆಯ ನಾಲ್ಕನೇ ಸೂತ್ರವು ಸಂರಕ್ಷಣ ಒಪ್ಪಂದಕ್ಕೆ ಸೇರಿದ ಯಾವುದೇ ಒಂದು ರಾಷ್ಟ್ರದ ಮೇಲೆ ಆಕ್ರಮಣವಾಗುವುದೆಂಬ ಅಥವಾ ಅದರ ಭದ್ರತೆಯ ಮೇಲೆ ದುಷ್ಪರಿಣಾಮವಾಗುವುದೆಂಬ ಲಕ್ಷಣ ಕಂಡು ಬಂದರೆ ಒಪ್ಪಂದಕ್ಕೆ ಸೇರಿದ ಎಲ್ಲ ರಾಷ್ಟ್ರಗಳೂ ಸಮ್ಮೇಳನದಲ್ಲಿ ಸೇರಿ ಈ "ಸಾಮಾನ್ಯ" ಅಪಾಯದಿಂದ ಉಳಿಯಲು ಪರಿಹಾರ ಮಾರ್ಗ ಯೋಚಿಸಬಹುದು ಎನ್ನುತ್ತದೆ. ಅಮೇರಿಕವು ಈ ಬಗ್ಗೆ ವಿಶೇಷ ಸ್ಪಷ್ಟೀಕರಣವನ್ನು ಕೊಟ್ಟು ಕಮ್ಯುನಿಷ್ಟರ ಚಟುವಟಿಕೆಯಿಂದ ಪ್ರೇರಿತ ಆಕ್ರಮಣಕ್ಕೆ ಮಾತ್ರ ಇದು ಅನ್ವಯವಾಗುತ್ತದೆ ಎಂದು ಹೇಳಿದ್ದಿತು. ಸಿಯಾಟೋದ ಈಗಿನ ನಿರ್ಣಯವು ಇದಕ್ಕೆ ಅನುಗುಣವಾಗಿದೆಯೆ?

ಸ್ಥಿತಿಯಲ್ಲಿ ವ್ಯತ್ಯಾಸ

ಪಾಕಿಸ್ತಾನಕ್ಕೆ ಈಗ ಆಕ್ರಮಣ ಭಯವಿದೆಯೇ? ಭದ್ರತೆಗೆ ಅಪಾಯವಾಗುವ ಭಯವಿದೆಯೆ? ಇದ್ದರೂ ಅಮೇರಿಕವು ಅಪೇಕ್ಷಿಸುವಂತೆ ಅದು ಕಮ್ಯುನಿಷ್ಟರಿಂದ ಪ್ರೇರಿತವಾಗಿದೆಯೆ? ಕಾಶ್ಮೀರವನ್ನು ಎತ್ತಿ ಭಯ ತನಗಿದೆ ಎಂದು ಹೇಳಲು ಆ ಪ್ರದೇಶವು ಪಾಕಿಸ್ತಾನಕ್ಕೆ ಸೇರಿದುದಾಗಿದೆಯೆ? ಕಾಶ್ಮೀರದ ದೆಸೆಯಿಂದ ಪಾಕಿಸ್ತಾನದ ಮೇಲೆ ಆಕ್ರಮಣವಾಗುತ್ತದೆ ಎಂದು ಪಾಕಿಸ್ತಾನವು ಹೇಳುತ್ತದೆಯೆ? ಎಲ್ಲರಿಗೂ ತಿಳಿದಿರುವಂತೆ ಸಂಯುಕ್ತ ರಾಷ್ಟ್ರ ಸಂಘದ ಮಧ್ಯಸ್ಥಗಾರರೇ ಕಾಶ್ಮೀರದ ಮೇಲೆ ಪಾಕಿಸ್ತಾನವು ಆಕ್ರಮಣ ನಡೆಸಿತೆಂದು ಸ್ಪಷ್ಟವಾಗಿ ೧೯೫೨ನೇ ಇಸವಿಗೂ ಹಿಂದೆ ಹೇಳಿದ್ದರು. ಮೇಲಾಗಿ ಅನಂತರದ ಘಟನೆಗಳು ಭಾರತದೊಡನೆ ಕಾಶ್ಮೀರವು ಕ್ರಮಬದ್ಧವಾಗಿ ಸೇರ್ಪಡೆ ಹೊಂದಿರುವುದನ್ನು ಸ್ಪಷ್ಟಪಡಿಸುತ್ತವೆ. ಅಂದಿನ ಕಾಶ್ಮೀರದ ರಾಜರ ಮೊರೆಯನ್ನು ಮನ್ನಿಸುವ ಗಳಿಗೆಯಲ್ಲಿ ಭಾರತ ಸರಕಾರವು ಉದಾರ ಮನೋಭಾವದಿಂದ ಹಾಗು ಪ್ರಜಾಸತ್ತಾತ್ಮಕ ಸಂಪ್ರದಾಯವನ್ನು ಗೌರವಿಸಿ ಯೋಗ್ಯ ಕಾಲದಲ್ಲಿ ಜನಮತಗಣನೆಯನ್ನು ನಡೆಸಿ ಈ ಸೇರ್ಪಡೆಗೆ ಪರಮಾಂಕಿತವನ್ನು ಹಾಕಿಸುವ ಪ್ರಯತ್ನ ನಡೆಸಲಾಗುವುದೆಂದು ಹೇಳಿತು. ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಯಾದರೂ ಅದು ಈ ಮಾತನ್ನು ಪುನರುಚ್ಚರಿಸಿತು. ಇದನ್ನು ಪಾಕಿಸ್ತಾನವು "ಅಂತಾರಾಷ್ಟ್ರೀಯ ಸ್ವರೂಪದ ಒಪ್ಪಿಗೆ" ಎನ್ನುತ್ತದೆ—ಇರಲಿ! ಹಾಗೆ ಒಪ್ಪಿದಾಗ ಇದ್ದ ಸ್ಥಿತಿಗೂ ಈಗಿನ ಸ್ಥಿತಿಗೂ ಏನಾದರೂ ಹೋಲಿಕೆ ಇದೆಯೆ? ಭಾರತವು ಸ್ಪಷ್ಟವಾಗಿ ವ್ಯತ್ಯಾಸವನ್ನು ಗುರುತಿಸಿರುತ್ತದೆ; ಮತ್ತು ಅಂದಿನ ವಿಶಿಷ್ಟ ಪರಿಸ್ಥಿತಿಗಳನ್ನು ಗಮನಿಸಿ ನೀಡಿದ ಭರವಸೆಯು, ಅದೇ ಸ್ವರೂಪದಲ್ಲಿ ಇಂದು ಸಹ ಉಳಿಯಲಾರದು ಎನ್ನುತ್ತದೆ.

ಮೆಚ್ಚಿಕೆಗಳಿಸುವ ಪ್ರಯತ್ನ

ಇದನ್ನು ಸಿಯಾಟೊ ರಾಷ್ಟ್ರಗಳ ವಿದೇಶ ಸಚಿವರು ತುಸುವಾದರೂ ಗಮನಿಸಿದ್ದಾರೆಯೆ? ಇಲ್ಲವೆಂಬುದು ಸ್ಪಷ್ಟ. ಕಾಶ್ಮೀರ ಪ್ರಶ್ನೆಗೂ ಸಿಯಾಟೊ ರಾಷ್ಟ್ರಗಳಿಗೂ ಏನೇನೂ ಪ್ರತ್ಯಕ್ಷ ಸಂಬಂಧವಿಲ್ಲ. ಸಂಯುಕ್ತ ರಾಷ್ಟ್ರ ಸಂಘವು ಕಾಶ್ಮೀರ ವಿಷಯವನ್ನು ಎತ್ತಿಕೊಂಡಿರುವಾಗ, ಆ ವಿಶ್ವ ಸಂಸ್ಥೆಯ "ಮರಿ"ಯಾಗಿ ಕೆಲಸ ಮಾಡುವ ಹುಮ್ಮಸ್ಸನ್ನು ಸಿಯಾಟೊ ತೋರಿಸಿರುವುದು ಯಾರಿಗೂ ಸರಿಕಂಡಿಲ್ಲ. ರಶ್ಯದ ಪ್ರಭೃತಿಗಳ ಹೇಳಿಕೆಯನ್ನು ಮುಂದು ಮಾಡಿದ್ದರೂ ಈ ಹೇಳಿಕೆಯಿಂದಾಗಿ ಭಾರತದ ನಿಲುವು ಬದಲಾಗಿಲ್ಲವೆಂದ ಮೇಲೆ ಪಾಕಿಸ್ತಾನವನ್ನು ಮೆಚ್ಚಿಸುವ ಉದ್ದೇಶದ ಹೊರತು ಬೇರೇನನ್ನೂ ಸಿಯಾಟೊ ರಾಷ್ಟ್ರಗಳು ಗಮನಿಸಿಲ್ಲವೆಂಬುದು ನಿಶ್ಚಯ. ಬ್ರಿಟನಿನ ಲ್ಯೊಯಿಡರು ಸಿಯಾಟೊ ಪರಿಷತ್ತು ಸೇರುವುದಕ್ಕೆ ಮುಂಚೆ ಕಾಶ್ಮೀರ ಪ್ರಶ್ನೆಯು ಚರ್ಚೆಗೆ ಯೋಗ್ಯ ವಿಷಯವಾಗಲಾರದೆಂದು ಹೇಳಿದ್ದರು. ಅಮೇರಿಕದ ಡಲ್ಲೇಸರು ರಶ್ಯದ ಪ್ರಭೃತಿಗಳ ವಾಗ್ಬಾಣಕ್ಕೆ ಪ್ರತಿಯಾಗಿ ಗೋವಾದ ಗೊತ್ತುವಳಿ ಇದೆಯೆ ಹೊರತು ವಸ್ತು ಸ್ಥಿತಿಯ ಸಮಾಲೋಚನೆಗೆ ತಾವೇನೂ ಕೈ ಹಾಕಿಲ್ಲ ಎನ್ನುವಷ್ಟು ಬೇಜವಾಬ್ದಾರಿಯ ಮಾತನ್ನು ಆಡಿದ್ದಾರೆ. ಆಸ್ಟ್ರೇಲಿಯದ ಕೇಸಿಯವರು ಸಹ ಕಾಶ್ಮೀರ ಸಮಸ್ಯೆಗೂ ಸಿಯಾಟೋ ರಾಷ್ಟ್ರಗಳಿಗೂ ನೇರಾದ ಸಂಬಂಧವಿಲ್ಲವೆಂದು ಪರಿಷತ್ತು ಮುಗಿದ ಬಳಿಕ ಹೇಳುತ್ತಾರೆ. ಫ್ರಾನ್ಸಿನ ಪ್ರಧಾನಿ ಪಿನೊ ಕೂಡ ಇದೇ ಧಾಟಿಯಲ್ಲಿ ಮಾತನಾಡುತ್ತಾರೆ. ಹಾಗಾದರೆ ಇವರೆಲ್ಲ ಪರಿಷತ್ತಿನ ದಿನಗಳಲ್ಲಿ ಪಾಕಿಸ್ತಾನದ ಅದ್ಭುತ ಆಯಸ್ಕಾಂತ ಶಕ್ತಿಯ ವಶವರ್ತಿಗಳಾಗಿದ್ದರೆ? ಎಂಬ ಪ್ರಶ್ನೆ ಏಳುತ್ತದೆ.

(೮ನೇ ಪುಟ ನೋಡಿರಿ)

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,
ತೆಂಕಪೇಟೆ, ಉಡುಪಿ, ದ. ಕನ್ನಡ.
ನಾನಾ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸುಗಳೂ
ಇಲ್ಲವೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.
SRI GAJANANA CLOTH STORES,
TENKAPET, **UDIPI**, S. KANARA.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ
ಸಂತಾನ ಸಿಂಧೂರ
ಈ ಭಸ್ಮವು ಬಹಿಷ್ಠೆ ಸಂಬಂಧವೆ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.
ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.
ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.
ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**
638 "ಸಂತಾನ ಸಿಂಧೂರ ಸದನ", (N. Y.)
ಸುಬ್ರಾಯನ ಕೆರೆ ಸೌತ್ ರೋಡ್, ಮೈಸೂರು. (MYSORE) S. I.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೫-೩-'೫೬	೨೮

ಕೋಪೋರೇಶನಿಗೆ ಅಭಿನಂದನೆ

ಕಲ್ಯಾಣ ರಾಜ್ಯದಲ್ಲಿ ಬ್ಯಾಂಕುಗಳ ಪಾತ್ರದ ಮಹತ್ವವನ್ನು ವಿವರಿಸಿ ನಾಗರಿಕರಿಗೆ ತಿಳಿಸಲು ಉನ್ನತಾಧಿಕಾರಿಗಳು ಇಂದು ಸರಕಾರಿ ಮಟ್ಟದಲ್ಲಿ ಪ್ರಯತ್ನಿಸುತ್ತಿರುವ ಮತ್ತು ಹೆಚ್ಚಿನ ತತ್ಪರತೆಯನ್ನು ಈ ವಿಷಯದಲ್ಲಿ ತೋರಿಸುತ್ತಿರುವ ಸಂಗತಿಯನ್ನು ಕಂಡರೆ ಬ್ಯಾಂಕುಗಳ ಸ್ಥಾಪನೆಯನ್ನು ಸ್ವಂತ ಉತ್ಸಾಹದಿಂದ ಮಾಡಿದ ಹತ್ತೈವತ್ತು ವರ್ಷಗಳ ಹಿಂದಿನ ಕಾಲದ ಮಹಾನುಭಾವರು ಅತ್ಯುತ್ತಮವಾದ ಸೇವೆಯನ್ನೆ ದೇಶಕ್ಕೆ ಸಲ್ಲಿಸಿರುವರೆಂದು ಹೇಳಬೇಕಾಗುತ್ತದೆ. ಹೀಗೆ ನಮ್ಮ ಈ ಚಿಕ್ಕ ಊರಾದ ಉಡುಪಿಯಲ್ಲಿ ಮೊದಲನೆಯ ಪಾಲು ಭಂಡವಾಳ ಬ್ಯಾಂಕಾಗಿ "ದಿ ಕೆನರಾ ಬ್ಯಾಂಕಿಂಗ್ ಕೋಪೋರೇಶನ್, ಲಿಮಿಟೆಡ್" ೧೯೦೬ನೇ ಮಾರ್ಚ ೧೨ರಂದು ಅಸ್ತಿತ್ವಕ್ಕೆ ಬಂತು. ಉಡುಪಿ ನಗರದಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಪ್ರತಿ ಮನೆಯ ಹಿರಿಯರೂ ಕೊಂಡಾಡುವ ನಿಸ್ಪೃಹ ಸೇವಾಪರಾಯಣರೂ ಜಾತಿಮತಗಳ ಭೇದವಿಲ್ಲದೆ ಎಲ್ಲಾ ಅಂತಃಕರಣ ಪೂರ್ವಕವಾದ ಪ್ರೀತಿಗೆ ಪಾತ್ರರಾಗಿದ್ದವರೂ ಆದ ದಿವಂಗತ ಖಾನ್ ಬಹಾದುರ್ ಹಾಜಿ ಅಬ್ದುಲ್ಲ ಹಾಜಿ ಕಾಸಿಂ ಬಹಾದುರ್ ಎಂಬ ಉದಾತ್ತ ಗುಣ ಸಂಪನ್ನ ಮಹನೀಯರು ಅಂದು ಮುಂದಿಟ್ಟ ಹೆಜ್ಜೆ ಎಷ್ಟು ಪ್ರಗತಿಪರವಾಗಿದ್ದಿತೆಂಬುದನ್ನು ಭಾರತದಲ್ಲಿ ಸ್ಥಾಪನೆಗೊಂಡ ಬ್ಯಾಂಕುಗಳ ಅನುಕ್ರಮ ಸಂಖ್ಯೆಯಲ್ಲಿ ಕೋಪೋರೇಶನು ೯ನೇ ಸ್ಥಾನವನ್ನು ಪಡೆಯುತ್ತದೆಂಬ ಮಾತು ಮನಗಾಣಿಸುತ್ತದೆ. ಉಡುಪಿಗಿಂತಲೂ ಬಹಳ ಹೆಚ್ಚು ಔದ್ಯಮಿಕ ಚಟುವಟಿಕೆಯಿಂದ ಕೂಡಿದ್ದ ಮತ್ತು ಮಹಾ ನಗರಗಳೆಂದು ಆ ಕಾಲದಲ್ಲಿಯೇ ಹೆಸರುವಾಸಿಯಾಗಿದ್ದ ಬೇರೆ ಅನೇಕ ನಗರಗಳು ಭಾರತದಲ್ಲಿದ್ದರೂ ಬ್ಯಾಂಕುಗಳ ಸ್ಥಾಪನೆ ಅಲ್ಲೆಲ್ಲ ಆಗಿರಲಿಲ್ಲ; ಉಡುಪಿಯ ಜನರಿಗಿಂತ ಹೆಚ್ಚಿನ ಆರ್ಥಿಕ ಅನುಕೂಲತೆಯಿಂದ ಕೂಡಿದ ಮಹಾನುಭಾವರು ಬೇರೆ ಪ್ರಸಿದ್ಧ ಪಟ್ಟಣಗಳಲ್ಲಿದ್ದರೂ ಅವರಲ್ಲಿ ಬ್ಯಾಂಕುಗಳನ್ನು ತೊಡಗಲು ಹಣ ವಿನಿಯೋಗಿಸುವುದಕ್ಕೆ ಹೆಚ್ಚಿನವರು ಸಿದ್ಧರಿರದಿದ್ದ ಕಾಲವದು. ಬ್ಯಾಂಕುಗಳು ದೇಶಕ್ಕೆ ಮಾಡಬಹುದಾದ ಸೇವೆ, ಜನಕ್ಕೆ ಅವುಗಳ ವ್ಯವಹಾರದಿಂದಾಗುವ ಪ್ರಯೋಜನ, ಕೃಷಿ-ಕೈಗಾರಿಕೆಗಳ ಅಭಿವೃದ್ಧಿಗೆ ಈ ವಾಣಿಜ್ಯ ನಿಧಿ ಸಂಸ್ಥೆಗಳಿಂದಾಗುವ ಸಹಾಯಗಳ ಕುರಿತು ಆಗ ಜನರಲ್ಲಿ ಹೆಚ್ಚಿನ ತಿಳುವಳಿಕೆ ಇರಲಿಲ್ಲ. ಜನಪ್ರಿಯತೆಯನ್ನು ಗಳಿಸಿ ಬಲವಾಗಿ ಬೇರೂರಿ ಪ್ರಗತಿ ಪಥದಲ್ಲಿ ಮುನ್ನಡೆಯಬಹುದೆಂದು ದೃಢವಾದ ವಿಶ್ವಾಸವಿಲ್ಲದಿರುವಾಗ ಬ್ಯಾಂಕುಗಳಲ್ಲಿ ಹಣತೊಡಗಿಸುವುದೆಂದರೆ ತುಂಬು ಹೊಳೆಯನ್ನು ಈಜಿ ದಾಟುವ ಸಾಹಸ! ಹಾಗಿದ್ದರೂ "ನಿಧಿ" ಯೋಜದ ರೂಪದಲ್ಲಿ ಕೆಲಸವನ್ನು ಮಾಡುತ್ತಿದ್ದ ಉಡುಪಿಯ ಕೋಪೋರೇಶನ್ ಬ್ಯಾಂಕು ಪ್ರಥಮ ವರ್ಷಾಂತ್ಯದಲ್ಲಿ ಐದು ಸಾವಿರ ರೂಪಾಯಿಗಳ ವ್ಯವಹಾರ ನಡೆಸುವ ಸ್ಥಿತಿಗೆ ಬಂದು ಮುಟ್ಟಿತು— ಇಂದು ಅದರ ವ್ಯವಹಾರವು ಐದುಕೋಟಿ ರೂಪಾಯಿಗಳನ್ನು ಮಿಕ್ಕುತ್ತದೆ. ಐವತ್ತು ವರ್ಷಗಳಲ್ಲಿ ಅದು ಈ ಸ್ತುತ್ಯಾರ್ಹ ಸಂಪನ್ನಾವಸ್ಥೆಯನ್ನು ಸಂಪಾದಿಸಿಕೊಂಡಿದೆ. ಉಡುಪಿಯವರಿಗೆ ಬಹಳ ಅಭಿಮಾನವೆನಿಸುವ ವಿಷಯ ಇದಾಗಿದೆ. ಈ ಸಂಸ್ಥೆಯ ಬೆಳವಣಿಗೆಯು ನಿಧಾನವೂ ದೃಢವೂ ಆದುದಾಗಿದೆಯೇ ಹೊರತು ಆಕಸ್ಮಿಕವಲ್ಲ. ಆಡಳಿತ ಮಂಡಳಿಯಲ್ಲಿದ್ದ ಮುಂದಾಳುಗಳ ಮುನ್ನೋಟ, ಕಾರ್ಯದಕ್ಷತೆ ಮತ್ತು ಬುದ್ಧಿವಂತಿಕೆಗಳೇ ಕೋಪೋರೇಶನ್ ಬ್ಯಾಂಕನ್ನು ದಕ್ಷಿಣ ಕನ್ನಡದ, ಅದೇಕೆ, ಕರ್ನಾಟಕದ, ಸಮರ್ಥ ನಿಧಿ ಸಂಸ್ಥೆಗಳಲ್ಲಿ ಒಂದಾಗಿ ರೂಪಿಸಿರುತ್ತವೆ. ಈ ಸಂಸ್ಥೆಯು ತನ್ನ ಜೀವಮಾನದಲ್ಲಿ ಹಣಕಾಸಿನ ರಂಗದಲ್ಲಿ ಉಂಟಾದ ಹಲವು ಏರುಪೇರುಗಳನ್ನು ಕಾಣಬೇಕಾಯಿತು. ಸರಕಾರದ ಶಾಸನಿಕ ಸೂತ್ರಗಳನ್ನೂ ಕಾರ್ಯನಿರ್ವಹಣ ಕ್ರಮಗಳನ್ನು ಅಳವಡಿಸಿಕೊಳ್ಳುವ ಪ್ರಸಂಗ ಇತರ ಬ್ಯಾಂಕುಗಳಂತೆ ಇದಕ್ಕೂ ಪದೇ ಪದೇ ಬಂದೊದಗಿತು. ಆದಾಗ್ಯೂ ಈ ಆತಂಕಗಳಾಗಲೀ ನಿಯಂತ್ರಣಗಳಾಗಲೀ ಕೋಪೋರೇಶನಿನ ಭವ್ಯ ಭವಿಷ್ಯವನ್ನು ಮಸುಕುಮಾಡಲಿಲ್ಲ— ಆಡಳಿತ ನಿರ್ವಾಹಕರ ಅದಮ್ಯ ಉತ್ಸಾಹವೇ ಇದರ ಕಾರಣ. ಹುಟ್ಟಿನಲ್ಲಿ ಒಂಭತ್ತನೇ ಸ್ಥಾನವನ್ನು ಪಡೆದಿದ್ದರೂ ತನ್ನ ಐವತ್ತು ವರ್ಷಗಳ ಬಾಳ್ವೆಯಲ್ಲಿ ಅದು ಇತರ ಅನೇಕ ಪ್ರತಿಸ್ಪರ್ಧಿಗಳನ್ನು ಪಡೆಯಿತು— ಅವುಗಳ ಕಾರ್ಯನಿರ್ವಾಹಕ ಕ್ರಮದೊಡನೆ ಪೈಪೋಟಿಯನ್ನು ಯಶಸ್ವಿಯಾಗಿ ನಡೆಸಿ, ಬ್ಯಾಂಕು ಇಂದಿಗೂ ತನ್ನ ವರ್ಚಸ್ಸನ್ನು ಮೇಲ್ಮಟ್ಟದಲ್ಲಿ ಉಳಿಸಿಕೊಂಡಿದೆ. ಮೊನ್ನೆ ೧೨ನೇ ದಿನಾಂಕ ಬ್ಯಾಂಕಿನ ಸುವರ್ಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಸ್ವಮಾತನಾಡಿದ ರಿಜರ್ವ್ ಬ್ಯಾಂಕ್ ಆಫ್ ಇಂಡಿಯದ ಗವರ್ನರರಾದ ಹಾಗು ದಕ್ಷಿಣ ಕನ್ನಡ ಜಿಲ್ಲೆಯ ಮೇಧಾವಿ ಸುಪುತ್ರರಲ್ಲೊಬ್ಬರಿದ್ದು ಈಗ ಕೋಪೋರೇಶನ್ನಿನ ಹೊನ್ನ ಹಬ್ಬದ ನೆಪದಿಂದ ಈ ನಗರಕ್ಕೆ ಅನೇಕ ದಶಕಗಳ ತರುವಾಯ ದಯಮಾಡಿಸಿದ ಸರ್ ಬೆನಗಲ್ ರಾಮರಾಯರು ಹೇಳಿದಂತೆ, ಕೋಪೋರೇಶನು ದಕ್ಷಿಣ ಕನ್ನಡದಲ್ಲಿ ಸ್ಥಾಪಿಸಲ್ಪಟ್ಟು ಸುವ್ಯವಸ್ಥಿತವಾಗಿ ನಡೆಸಲ್ಪಡುತ್ತಿರುವ ಮೂರು ಶೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಒಂದಾಗಿದೆ; ಮತ್ತು ಅತಿ ಹಳೆಯದಾಗಿದೆ. ಇಲ್ಲಿ ವೈದ್ಯಕೀಯ ವೃತ್ತಿಯಲ್ಲಿದ್ದವರು ವ್ಯಕ್ತಿಯ ಆರೋಗ್ಯ ರಕ್ಷಣೆಗಾಗಿ ಶ್ರಮಿಸುವ ಮಿತವಾದ ಕ್ಷೇತ್ರದಿಂದ ಹೊರಗೆ ಕಾಲಿಟ್ಟು ಸಾಮಾಜಿಕ ಜಾಡ್ಯದ ಪರಿಹಾರವೆಂಬ ಪವಿತ್ರ ಕಾರ್ಯಕ್ಕೆ ತಮ್ಮ ಜೀವನವನ್ನು ಮುಡುಪಿಟ್ಟಿದ್ದಾರೆ— ಮತ್ತು ತತ್ಪರಿಣಾಮವಾಗಿ ಬ್ಯಾಂಕಿಂಗ್ ಸಂಸ್ಥೆಗಳೂ ಅನೇಕ ಶಿಕ್ಷಣಾಲಯಗಳೂ ಇತರ ವಾಣಿಜ್ಯ ಮಂಡಳಿಗಳೂ ತಲೆ ಎತ್ತುವಂತಾಗಿದೆ. ವೈದ್ಯರೊಬ್ಬರಿಗೆ ರಿಜರ್ವ್ ಬ್ಯಾಂಕಿನ ಗವರ್ನರ ಪದವನ್ನು ಕೊಟ್ಟರೂ ಸಮರ್ಥವಾಗಿ ಈ ಸ್ಥಾನದ ಗೌರವವನ್ನು ನಿರ್ವಹಿಸಿಕೊಂಡು ಅವರು ಹೋಗಬಲ್ಲರೆಂಬ ಭಾವನೆಯನ್ನು ಸರ್ ಬೆನಗಲ್ಲರಲ್ಲಿ ಮೂಡಿಸಲು ನಮ್ಮ ಉಡುಪಿಯ ವಾಣಿಜ್ಯ ಹಾಗು ಬ್ಯಾಂಕಿಂಗ್ ಕ್ಷೇತ್ರದ ಪ್ರಭೃತಿಗಳಾದ ಇಬ್ಬರು ವೈದ್ಯರು ಕಾರಣರಾಗಿದ್ದಾರೆ. ಇವರಲ್ಲಿ ಒಬ್ಬರು ಡಾ. ಟಿ. ಮಾಧವ ಪೈ; ಇನ್ನೊಬ್ಬರು ಕೋಪೋರೇಶನಿನೊಡನೆ ೧೯೨೫ನೇ ವರ್ಷದಿಂದ ನಿಕಟ ಸಂಪರ್ಕವಿರಿಸಿಕೊಂಡು, ಅದರ ಆಡಳಿತ ಮಂಡಳಿಯಲ್ಲಿದ್ದು ಈಗ ಅಧ್ಯಕ್ಷಸ್ಥಾನದಲ್ಲಿರುವ ಡಾ. ಯು. ಸುಂದರ ರಾಮ ಪೈಗಳು. ಉಡುಪಿಯ ಹೊರಗೆ ತನ್ನ ಕಾರ್ಯಕ್ಷೇತ್ರವನ್ನು ಶಾಖೆಗಳನ್ನು ತೆರೆಯುವುದರ ಮೂಲಕ ಕೋಪೋರೇಶನು ವಿಶೇಷ ವಿಸ್ತರಿಸಿದ್ದು ಇವರ ಕಾಲದಿಂದ ಎನ್ನಬಹುದು. ಈಗ ಬ್ಯಾಂಕಿನ ಉಪಶಾಖೆಗಳು ಮುಂಬಯಿ, ಮದ್ರಾಸು, ಆಂಧ್ರ, ಹೈದರಾಬಾದು, ಮೈಸೂರು ಮತ್ತು ತಿರು-ಕೊಚ್ಚಿ ಸಂಸ್ಥಾನಗಳ ಪ್ರಮುಖ ಪಟ್ಟಣಗಳಲ್ಲಿ ಕೆಲಸ ಮಾಡುತ್ತಲಿವೆ. ಇವುಗಳು ಕಾರ್ಯವಿಚಕ್ಷಣತೆಯಲ್ಲಿಯೂ ಗ್ರಾಹಕರಿಗೆ ಕ್ಲಪ್ತ ಸೇವೆಯನ್ನು ಸಲ್ಲಿಸುವುದರಲ್ಲಿಯೂ ಎಷ್ಟಕ್ಕೂ ಹಿಂದುಳಿಯದಂತೆ ನೋಡಿಕೊಂಡ ಶ್ರೇಯಸ್ಸು ೧೯೩೭ನೇ ವರ್ಷದಿಂದ ಜನರಲ್ ಮೆನೇಜರ್ ಹುದ್ದೆಯನ್ನು ನಿರ್ವಹಿಸುತ್ತಿರುವ ಶ್ರೀ. ಪಿ. ಆರ್. ಕಾಮತರಿಗೂ ಅವರ ಸಹಾಯಕರಾದ ಶ್ರೀ. ಕೆ. ಶಂಕರ ನಾರಾಯಣ ಶೆಣೈರಿಗೂ ಸಲ್ಲುತ್ತದೆ. ಇಂದು ಕೋಪೋರೇಶನು ಭಾರತದಲ್ಲಿರುವ ೭೨ ಶೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಪಾಲುದಾರರಿಗೆ ಲಾಭಾಂಶ ವಿತರಣೆಯ ದೃಷ್ಟಿಯಿಂದ ೧೩ನೇ ಸ್ಥಾನವನ್ನೂ ಶಾಖೆಗಳನ್ನು ವಿಸ್ತರಿಸಿ ಜನತೆಗೆ ಹೆಚ್ಚಿನ ಸೇವೆಯನ್ನು ಸಲ್ಲಿಸುವ ದೃಷ್ಟಿಯಿಂದ ೨ನೇ ಸ್ಥಾನವನ್ನೂ ಉಳಿದಲ್ಲ ಬ್ಯಾಂಕಿಂಗ್ ವೈಶಿಷ್ಟ್ಯದ ದೃಷ್ಟಿಯಿಂದ ೩೦ರಿಂದ ಒಳಗಿನ ಸ್ಥಾನವನ್ನೂ ಪಡೆದು ಮೆರೆಯುತ್ತಿರುವುದಕ್ಕೆ ಉಡುಪಿಯವರಾದ ನಾವು ಸಹ ಬ್ಯಾಂಕಿನ ಏಳಿಗೆಗಾಗಿ ದುಡಿದ ವ್ಯಕ್ತಿಗಳೊಡನೆ ತೃಪ್ತಿಯ ನಗೆಯನ್ನು ಹೊರಸೂಸಬಹುದು. ಕೋಪೋರೇಶನಿನ ಕೀರ್ತಿಯನ್ನು ಅದರ ವ್ಯಾವಹಾರಿಕ ಸಾಧನೆಯ ಅಳತೆಗೋಲಿನಿಂದ ಮಾತ್ರ ನೋಡಿದರೆ ಸಾಲದೆಂಬುದೂ ಸ್ಪಷ್ಟ: ಪ್ರಜಾಪ್ರಭುತ್ವದಲ್ಲಿ, ಕಲ್ಯಾಣರಾಜ್ಯದಲ್ಲಿ, ನಾಗರಿಕರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಪೋಷಿಸುವುದಕ್ಕೂ ಕೈಗಾರಿಕೆ ಮತ್ತು ಕೃಷಿಯನ್ನು ಬೆಳೆಸುದಕ್ಕೂ ಎಲ್ಲ ಬ್ಯಾಂಕುಗಳಂತೆ ಕೋಪೋರೇಶನು ಸಹಮಿಡಿದು ತನ್ನ ಪಾಲಿನ ಕರ್ತವ್ಯವನ್ನು ಪೂರೈಸುತ್ತಿರುವುದಲ್ಲದೆ ತನ್ನ ಸಂಚಯನಿಧಿಯ ಮೂರರಲ್ಲಿ ಒಂದಂಶವನ್ನು ಭಾರತದ ಬೇರೆ ಬೇರೆ ಸರಕಾರಿ ಸಾಲ ಪತ್ರಗಳಲ್ಲಿ ನಿಕ್ಷೇಪಿಸಿ ಯೋಜನೆಗಾಗಿ ಭಂಡವಾಳವನ್ನು ಒದಗಿಸಿಕೊಡುವ ಮಟ್ಟಿಗೂ ತನ್ನ ಸಹಕಾರವನ್ನು ನೀಡಿರುತ್ತದೆ. ಭಾರತದ ಎಷ್ಟೋ ಜಿಲ್ಲಾ ಪಟ್ಟಣಗಳಲ್ಲಿ ಇಂದಿಗೂ ಬ್ಯಾಂಕಿಂಗ್ ಸೌಲಭ್ಯ ಸಿಗುತ್ತಿಲ್ಲವೆಂದು ಸರ್ ರಾಮರಾಯರು ವಿಷಾದದಿಂದ ಹೇಳಿದ ಮಾತನ್ನು ನೋಡಿದರೆ ಈ ಖಾಸಗಿ ಸಂಸ್ಥೆಯು ಎಷ್ಟು ಮಹತ್ವದ ಕೆಲಸವನ್ನು ಮಾಡಿ ಕೃತಕೃತ್ಯವಾಗಿದೆ ಎಂಬ ತಿಳಿವಳಿಕೆಯಾಗದಿರದು. ಸರ್ ಬೆನಗಲ್ಲರು ಹಳ್ಳಿಯಲ್ಲಿ ಕೃಷಿಕರ ಅನುಕೂಲತೆಗಾಗಿ ಬ್ಯಾಂಕಿಂಗ್ ಸೌಲಭ್ಯಗಳನ್ನು ವಿಸ್ತರಿಸಬೇಕೆಂದು ನೀಡಿದ ಸಲಹೆಯನ್ನಾದರೂ ಕೋಪೋರೇಶನಿನ ಆಡಳಿತ ಮಂಡಳಿಯಲ್ಲಿ ೧೯೨೫ನೇ ವರ್ಷದಿಂದಲೇ ಇದ್ದು ವಿಶೇಷ ಆಸಕ್ತಿಯಿಂದ ಕೆಲಸಮಾಡುತ್ತಾ ಬಂದಿರುವ ಶ್ರೀ ಬಿ. ವೈಕುಂಠ ಬಾಳಿಗರು ತಾತ್ವಿಕವಾಗಿ ಎತ್ತಿ ಹಿಡಿದಿದ್ದಾರೆ. ಲಾಭದೃಷ್ಟಿಯಿಂದ ಕಾರ್ಯಕ್ಷೇತ್ರವನ್ನು ವಿಸ್ತರಿಸುವುದು ಖಾಸಗಿ ಪಾಲು ಭಂಡವಾಳ ಸಂಸ್ಥೆಗಳ ನೀತಿಯಾಗಿದ್ದರೂ ಇದಕ್ಕೆ ವ್ಯತ್ಯಯ ಬಾರದಂತೆ ಗ್ರಾಮೀಣ ವಲಯದಲ್ಲಿ ಕೋಪೋರೇಶನಿನ ಚಟುವಟಿಕೆ ವಿಶೇಷವಾಗುವ ದಿನಗಳನ್ನೂ ನಿಕಟ ಭವಿಷ್ಯವು ಕಾಣುವಂತಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸಿದರೆ, ಅದು ಅಪ್ರಸ್ತುತವಾಗಲಾರದು. ಈಗಾಗಲೇ ತನ್ನ ಐವತ್ತು ವರ್ಷಗಳ ಅಸ್ತಿತ್ವದಿಂದ ಪ್ರಥಮ ಶ್ರೇಣಿಯ ಬ್ಯಾಂಕೆಂದು ಹೆಸರುವಾಸಿಯಾದ ಕೋಪೋರೇಶನಿಗೆ ಸರ್ ಬೆನಗಲ್ ರಾಮರಾಯರು ತಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಹೇಗೆ ವ್ಯಕ್ತಪಡಿಸಿದರೋ ಅದೇ ರೀತಿ ನಾವು ಸಹ ನಮ್ಮ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸಿ ಉತ್ತರೋತ್ತರ ಶ್ರೇಯಸ್ಸನ್ನು ಕೋರುತ್ತೇವೆ; ವಜ್ರೋತ್ಸವಾಚರಣೆಯ ಸಂದರ್ಭದ ಕೋಪೋರೇಶನಿನ ಕೀರ್ತಿ ಸೌರಭವು ಕರ್ನಾಟಕದ ಹಳ್ಳಿಗಳ ಮೂಲೆಯಲ್ಲೂ ಹರಡುತ್ತಿರಲಿ ಹಾಗೆ ರಾಷ್ಟ್ರಕ್ಕೆ ಸಂಪೂರ್ಣ ಸೇವೆ ಸಲ್ಲಲಿ ಎಂದೂ ಆಶಿಸುತ್ತೇವೆ.

ಮೈಸೂರು ಸ್ಟೇಟಿನಲ್ಲಿ— (ಬೆಂಗಳೂರು, ಮೈಸೂರು ಮತ್ತು ಬಳ್ಳಾರಿ) ಫೆಬ್ರವರಿ ತಿಂಗಳಲ್ಲಿ 1944 ಮಂದಿ ಎಂಪ್ಲೋಯಿಮೆಂಟ್ ಎಕ್ಸ್‌ಚೇಂಜಿನಲ್ಲಿ ಹೆಸರು ದಾಖಲು ಮಾಡಿದ್ದರು. ಈ ಪೈಕಿ 615 ಮಂದಿಯನ್ನು ಖಾಲಿಯಿದ್ದ ಸಂಸ್ಥೆಗಳಲ್ಲಿ ಉದ್ಯೋಗಕೊಡಲು ಶಿಫಾರಸು ಮಾಡಲಾಗಿತ್ತು. 127 ಮಂದಿಗೆ ಉದ್ಯೋಗ ದೊರಕಿತ್ತು. ಫೆಬ್ರವರಿ ತಿಂಗಳಾಂತ್ಯದಲ್ಲಿ ಉದ್ಯೋಗ ಅಪೇಕ್ಷಿತರ ಸಂಖ್ಯೆಯು 11392 ಇತ್ತು. ಈ ಪೈಕಿ 902 ಮಂದಿ ಮಾಜಿ ಸೈನಿಕರು. ಎಂಪ್ಲೋಯಿಮೆಂಟ್ ಎಕ್ಸ್‌ಚೇಂಜ್ ಸ್ಥಾಪನೆಯಾದಂದಿನಿಂದ ಫೆಬ್ರವರಿ ತಿಂಗಳ ತನಕ 1,42,947 ಮಂದಿಯ ಹೆಸರು ರಿಜಿಸ್ಟ್ರಿಯಲ್ಲಿ ದಾಖಲಾಗಿದ್ದು ಆ ಪೈಕಿ 8,551 ಮಂದಿಗೆ ಉದ್ಯೋಗ ದೊರಕಿಸಿಕೊಡಲಾಗಿತ್ತು.

ದುರ್ಮುಖಿ ಸಂವತ್ಸರದ ಪಂಚಾಂಗಗಳ ಸ್ವೀಕಾರ

ಶ್ರೀಕೃಷ್ಣ ಪಂಚಾಂಗ, ಉಡುಪಿ—

ಕಳೆದ 14 ವರ್ಷಗಳಿಂದ ಶ್ರೀ ಪಾರಂಪಳ್ಳಿ ಲಕ್ಷ್ಮೀನಾರಾಯಣ ಅಡಿಗ, ಜೋತಿಶಿರೋಮಣಿ ಮತ್ತು ವಿದ್ವಾನ್ ಇವರಿಂದ ಗುಣಿಸಿ ಪರಿಶೋಧಿಸಲ್ಪಟ್ಟು ಮೆಜಿಸ್ಟಿಕ್ ಪ್ರೆಸ್, ಉಡುಪಿ ಇವರಿಂದ ಮುದ್ರಿಸಿ ಪ್ರಕಟಿಸಲ್ಪಡುತ್ತಿರುವ ಜನಪ್ರಿಯ ಪಂಚಾಂಗ ಬೆಲೆ 0—4—0 ಬಹಳ ಸುಲಭವೆನ್ನಬಹುದು.

ಶಾಸ್ತ್ರ ಸಿದ್ಧ ಶ್ರೀಕೃಷ್ಣ ಪಂಚಾಂಗ ವಿಟ್ಲ

ಶ್ರೀಗಳಾದ ಕರಿಂಕ ಕೃಷ್ಣ ಬನ್ನಿಂತಾಯ ಮತ್ತು ಮರಕೂರು ರಾಮಚಂದ್ರಾಚಾರ್ಯ ಜೋತಿಷ ಶಿರೋಮಣಿ ಇವರಿಂದ ಸಂಪಾದಿಸಲ್ಪಟ್ಟು ವೇ| ಯಮರ್ಪಂಜೆ ವೆಂಕಟರಜೋಯಿಸರಿಂದ ಪರಿಶೋಧಿಸಲ್ಪಟ್ಟು ಪ್ರಕಟವಾಗುತ್ತಿರುವ ಪಂಚಾಂಗ, ಬೆಲೆ 0_6_0.

The Canara Banking Corporation Limited

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್

ಶುಭ ಸಂದೇಶಗಳು

* * *

ಡಾ| ಎಸ್. ರಾಧಾಕೃಷ್ಣನ್,

ಭಾರತದ ಉಪಾಧ್ಯಕ್ಷ

"......ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನು ತನ್ನ 50 ವರ್ಷಗಳ ಸೇವೆಯನ್ನು 1956ನೇ ಮಾರ್ಚ್ ತಿಂಗಳ ದಿನಾಂಕ 11 ರಂದು ಪೂರ್ಣಗೊಳಿಸುವುದೆಂದು ತಿಳಿಯಲು ಆತ್ಮಾನಂದವೆನಿಸುತ್ತದೆ. ನಿಮ್ಮ ಸುವರ್ಣ ಮಹೋತ್ಸವ ಸಮಾರಂಭಕ್ಕೆ ಯಶವನ್ನು ಕೋರುವೆನು."

ಶ್ರೀ ಎಸ್ ವಿ. ಕೃಷ್ಣಮೂರ್ತಿ ರಾವ್

ಡೆಪ್ಯೂಟಿ ಚೆಯರ್‌ಮನ್, ರಾಜ್ಯ ಸಭೆ.

"ನಿಮ್ಮ ಸಂಸ್ಥೆಗೆ ಉಜ್ವಲ ಭವಿಷ್ಯವಿದೆ... ನಿಮ್ಮ ಸಂಸ್ಥೆಗೆ ನನ್ನ ಹಾರ್ದಿಕ ಶುಭಾಶಯಗಳು. ಅದು ಇನ್ನಷ್ಟು ಬಲಶಾಲಿ ಮತ್ತು ಭದ್ರತೆಯುಳ್ಳ ಸಂಸ್ಥೆಯಾಗಿ ಜನಾಂಗದ ಸೇವೆಯಲ್ಲಿ ಮೇಲ್ಪಟ್ಟವನ್ನೇರಲೆಂದು ಆಶಿಸುತ್ತೇನೆ."

ಶ್ರೀ ಕೆ. ಸಿ. ರೆಡ್ಡಿ,

ಭಾರತದ ಉತ್ಪಾದನಾ ಖಾತೆಯ ಮಂತ್ರಿ

"...... "ಕಾರ್ಪೊರೇಶನು" ತನ್ನ 50 ವರ್ಷಗಳ ಅಸ್ತಿತ್ವದಲ್ಲಿ ಮಾಡಿದ ಶ್ಲಾಘ್ಯ ಕೆಲಸಕ್ಕಾಗಿ ನಾನದನ್ನು ಅಭಿನಂದಿಸುತ್ತೇನೆ. ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನು ದೇಶದ ಏಳಿಗೆಗೆ ಆದರ್ಶಪ್ರಾಯ ಸೇವೆಯನ್ನು ಸಲ್ಲಿಸುವದೆಂದು ನಾನು ದೃಢವಾಗಿ ನಂಬುತ್ತೇನೆ. ಸುವರ್ಣ ಮಹೋತ್ಸವಕ್ಕೆ ಶುಭಾಶಯಗಳು."

ಶ್ರೀ ಗುಲ್ಜಾರಿಲಾಲ್ ನಂದಾ,

ಭಾರತದ ನೀರಾವರಿ ಖಾತೆಯ ಮಂತ್ರಿ.

"......ಈ ಸಮಾರಂಭಕ್ಕೆ ನಂದಜಿಯವರ ಆಶೀರ್ವಾದ ಮತ್ತು ಶುಭಾಶಯಗಳು".

ಶ್ರೀ ಡಿ. ಪಿ. ಕರಮರ್‌ಕರ್,

ಭಾರತದ ವಾಣಿಜ್ಯ ಖಾತೆಯ ಮಂತ್ರಿ.

"......ಕಾರ್ಪೊರೇಶನು ತನ್ನ ಶ್ಲಾಘ್ಯ ಸೇವೆಯಿಂದಾಗಿ ಆದರ ಒಂದಲ್ಲೊಂದು ಬಗೆಯ ಸಂಪರ್ಕವನ್ನಿಟ್ಟುಕೊಂಡು ಜನತೆಯ ಪ್ರೀತಿ, ವಿಶ್ವಾಸವನ್ನು ಗಳಿಸಿದೆ. ಕಾರ್ಪೊರೇಶನಿಗೂ ಸಮಾರಂಭಕ್ಕೂ ಜಯವನ್ನು ಕೋರುತ್ತೇನೆ."

ಶ್ರೀ ಎ. ಬಿ. ಶೆಟ್ಟಿ,

ಆರೋಗ್ಯ ಮಂತ್ರಿ, ಮದರಾಸು.

"ಕಳೆದ 50 ವರ್ಷಗಳಲ್ಲಿ ಸಂಸ್ಥೆಯು ದಿನೇ ದಿನೇ ಬಲಗೊಳ್ಳುತ್ತಾ, ಭಾರತದ ಜ್ವಾಯಿಂಟ್‌ಸ್ಟಾಕ್ ಶೆಡ್ಯೂಲ್ಡ ಬ್ಯಾಂಕುಗಳಲ್ಲಿ ಒಂದು ಮೇಲ್ಪಟ್ಟದ ಸ್ಥಾನವನ್ನು ಪಡೆದಿದೆ ......ಈ ಬ್ಯಾಂಕು ಇನ್ನಷ್ಟು ಬೆಳೆಗಿ, ಜನತೆಗೆ ಪ್ರಯೋಜನಕಾರೀ ಸೇವೆಯನ್ನು ಸಲ್ಲಿಸಲೆಂದು ಹಾರೈಸುತ್ತೇನೆ."

ಶ್ರೀ ವಿ. ಕೆ. ಕೊರತ್‌ಕರ್,

ಅರ್ಥಮಂತ್ರಿ, ಹೈದರಾಬಾದು.

ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನು ತನ್ನ ವ್ಯವಹಾರ ಕ್ಷೇತ್ರದಲ್ಲಿ ಕೈಗಾರಿಕೆಗೆ ಹಾಗೂ ವಾಣಿಜ್ಯದ ಉನ್ನತಿಗೆ ದುಡಿದು ವೈಶಿಷ್ಟ್ಯವುಳ್ಳ ದಾಖಲೆಯನ್ನು ಸ್ಥಾಪಿಸಿದೆ. ಇದು 'ಕಾರ್ಪೊರೇಶನಿಗೆ' ಮಾತ್ರವಲ್ಲದೆ ಭಾರತದ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದವರಿಗೆಲ್ಲರಿಗೂ ಒಂದು ಹೆಮ್ಮೆಯ ಸಂಗತಿಯಾಗಿದೆ. ಜನರ ಅವಶ್ಯಕತೆಗಳ ಕಡೆಗೆ ಗಮನಕೊಟ್ಟು ಅವರಿಗೆ ಸೇವೆಯನ್ನು ಸಲ್ಲಿಸಿ "ಕಾರ್ಪೊರೇಶನು" ಏಳಿಗೆ ಹೊಂದುವುದೆಂದು ಆಶಿಸುತ್ತೇನೆ."



ಉಡುಪಿಯಲ್ಲಿರುವ ಬ್ಯಾಂಕಿನ ಪ್ರಧಾನ ಕಾರ್ಯಾಲಯ

ಪ್ರಗತಿಪರ ಅರ್ಥ ಮಂಡಲದಲ್ಲಿ ಬ್ಯಾಂಕುಗಳ ಸೇವೆ

ಶ್ರೀ. ಕು. ಶಿ. ಹರಿದಾಸ ಭಟ್ಟ, ಎಂ. ಎ.,
ಅರ್ಥ ಶಾಸ್ತ್ರ ವಿಭಾಗ, ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ್, ಉಡುಪಿ.

ಭಾರತ ಮತ್ತು ಅದರ ನೆರೆಹೊರೆಯ ಆಗ್ನೇಯ ಏಶಿಯದ ರಾಷ್ಟ್ರಗಳು ಇದೇ ಈಗ ಮೂಲ ಭೂತವಾದ ಪರಿವರ್ತನೆಗಳ ಹೆಬ್ಬಾಗಿಲಲ್ಲಿ ಬಂದು ನಿಂತಿವೆ. ಈ ಪ್ರದೇಶದ ರಾಷ್ಟ್ರಗಳು ಜನಹಿತದ ಪ್ರತಿಜ್ಞೆಯಲ್ಲಿ ಬದ್ಧಕಂಕಣವಾಗಿ ಪಶ್ಚಿಮದ ದೇಶಗಳಲ್ಲಿ ನಡೆದ ಪ್ರಗತಿಯ ಲಾಭವನ್ನು ತಾವೂ ಪಡೆಯಬೇಕೆಂದು ಆಶಿಸಿ ಯುಕ್ತ ಕಾರ್ಯಕ್ರಮಗಳನ್ನು ಕೈಗೊಂಡಿವೆ ನಮ್ಮ ಭಾರತ ದೇಶದ ಮಟ್ಟಿಗೆ ಹೇಳುವುದಾದರೆ ಸಾಮಾಜಿಕ ಹಾಗೂ ಆರ್ಥಿಕ ಮಂಡಲಗಳಲ್ಲಿ ಕ್ರಾಂತಿಯುಂಟುಮಾಡುವ ಈ ಅರ್ಥ ಪ್ರಧಾನ ಬದಲಾವಣೆಗಳು 'ಸಹ ಜೀವನ'ದ ತತ್ವದ ಮೇಲೆ ಅವಲಂಬಿಸಿಕೊಂಡಿರುತ್ತವೆಂದು ನಾವು ದೃಢವಾಗಿ ನಂಬಬಹುದು ಅಂದರೆ ಅರ್ಥ ಮಂಡಲದಲ್ಲಿ ಸರಕಾರದ ಕ್ಷೇತ್ರವು ವಿಸ್ತರಿಸುತ್ತ ಬಂದ ಹಾಗೆ ಖಾಸಗೀ ಕ್ಷೇತ್ರವು ನಿರ್ನಾಮವಾಗುವುದಿಲ್ಲ. ಬದಲು ರಾಷ್ಟ್ರೀಕೃತ ಸರಕಾರಿ ಅರ್ಥ ಮಂಡಲಕ್ಕೂ ಸಾಹಸೋದ್ಯಮಗಳ ಪ್ರತ್ಯೇಕವಾದ ಖಾಸಗೀ ಅರ್ಥ ಮಂಡಲಕ್ಕೂ, ಯೋಗ್ಯವಾದ ಸಾಮರಸ್ಯವನ್ನು ತಂದು ಕೊಟ್ಟು ಒಟ್ಟ ನಮ್ಮ ರಾಷ್ಟ್ರೀಯ ಅರ್ಥ ಜೀವನದಲ್ಲಿ ಸಮತೋಲವನ್ನುಂಟುಮಾಡುವುದು ಅತ್ಯವಶ್ಯವಾಗಿದೆ. ಮುಂಬರುವ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿಯೂ ನಾವು ಈ ತತ್ವದ ಫಲಶ್ರುತಿಯನ್ನು ಕೇಳುತ್ತೇವೆ. 7156 ಕೋಟಿ ರೂಪಾಯಿಗಳ ಒಟ್ಟು ವ್ಯಯದಲ್ಲಿ ಸುಮಾರು ಮೂರನೆಯ ಒಂದಂಶ ಭಾಗವು ಖಾಸಗೀ ಮಂಡಲದಲ್ಲಿಯೇ ಸೃಷ್ಟಿಯಾಗತಕ್ಕದು. ಅರ್ಥಾತ್ ಯೋಜನೆಯಲ್ಲೇ ಆದರೂ ಖಾಸಗೀ ಮಂಡಲದ ವ್ಯಾಪ್ತಿ ಸಣ್ಣದಾಗಿಲ್ಲ. ಅದಕ್ಕೆ ಬೇಕಾದ ಕ್ರೆಡಿಟ ಸಲುವಳಿಯ ಪ್ರಮಾಣ ಅಲ್ಪವಾದ್ದಲ್ಲ; ಈ ಕ್ರೆಡಿಟ ಸಲುವಳಿಯ ಕೆಲಸವನ್ನು ಈ ವರೆಗೂ—ಇನ್ನೂ ಸಮರ್ಪಕವಾಗಿ ನಿರ್ವಹಿಸುವ ವಾಣಿಜ್ಯ ಬ್ಯಾಂಕುಗಳ ಪಾತ್ರವು ಗೌಣವಾದುದಲ್ಲ.

ಖಾಸಗೀ ಮತ್ತು ಸಾರ್ವಜನಿಕ ಅರ್ಥ ಮಂಡಲಗಳಿಗೆ ಕ್ರೆಡಿಟನ್ನು ಸರಬರಾಜು ಮಾಡುವ ಕೆಲಸದಲ್ಲಿ ನಮ್ಮ ಭಾರತೀಯ ಬ್ಯಾಂಕುಗಳು ಈ ತನಕ ಅತಿ ಮಹತ್ವದ ಪಾತ್ರವನ್ನು ವಹಿಸಿವೆ ಎನ್ನಬೇಕು. ಒಬ್ಬ ಸಾಲಿಗನಿಂದ ಇನ್ನೊಬ್ಬನಿಗೆ ಚೆಕ್ ಅಥವಾ ನೋಟು ಮುಖಾಂತರವಾಗಿ ವರ್ಗಾಯಿಸಲ್ಪಡುವ ಬ್ಯಾಂಕ್ ಕ್ರೆಡಿಟನಿಂದ ವಾಣಿಜ್ಯಕ್ಷೇತ್ರವು ಬಹುಮುಖವಾಗಿ ವಿಸ್ತರಿಸಲು ಸಹಾಯವಾಗಿರುವುದನ್ನು ನಾವು ಲಕ್ಷ್ಯಕ್ಕೆ ತಂದುಕೊಳ್ಳಬೇಕು. 'ಆಧುನಿಕ ಕ್ರೆಡಿಟಪದ್ಧತಿಯು ವಾಣಿಜ್ಯಕ್ಕೆಬೇಕಾದ ರೀತಿಯಲ್ಲಿ ಹಿಗ್ಗಲೂ ಕುಗ್ಗಲೂ ಬ್ಯಾಂಕುಗಳು ಸಾಲ ಕೊಡುವ ಧೋರಣೆಯು ಕಾರಣ' ವೆಂದು ಪ್ರಸಿದ್ಧ ಅರ್ಥ ವಿಶಾರದನಾದ ಹಾಟ್ರೀ ಹೇಳುತ್ತಾನೆ. ಬ್ಯಾಂಕುಗಳಿಗೂ ಒಂದು ಬ್ಯಾಂಕಿದೆ, ಅದೇ ದೇಶಕ್ಕೊಂದೇ ಇರುವ ಕೇಂದ್ರ ಬ್ಯಾಂಕು, ಭಾರತದಲ್ಲಿ ರಿಸರ್ವ ಬ್ಯಾಂಕು. ಕೇಂದ್ರ ಬ್ಯಾಂಕು ಕ್ರೆಡಿಟನ್ನು ಮತ್ತಷ್ಟು ಹಿಗ್ಗಿಸುತ್ತದೆ. ತನ್ನ ಬಡ್ಡಿಯ ಧೋರಣೆಯಿಂದಲೂ, ಸೆಕ್ಯುರಿಟಿಗಳನ್ನು ಮಾರುವ ಮತ್ತು ಕೊಳ್ಳುವ ಓಪನ್ ಮಾರ್ಕೆಟ ಧೋರಣೆಯಿಂದಲೂ ಅದು ಬೇಕಾದಾಗ ಖಾಸಗೀ ಬ್ಯಾಂಕುಗಳ ಸಾಲದ ಧೋರಣೆಯ ಮೇಲೆ ಪರಿಣಾಮವನ್ನು ಮಾಡುತ್ತದೆ. ಕೇಂದ್ರ ಬ್ಯಾಂಕಿನ ಧೋರಣೆಗೆ ಅನುವರ್ತಿಯಾಗಿ ನಡೆಯುವುದರಲ್ಲಿಯೇ ಖಾಸಗಿ ಬ್ಯಾಂಕುಗಳ ಹಿತವಿದೆ; ಸಾರ್ವಜನಿಕ ಲಾಭವಿದೆ. ಆದುದರಿಂದ ಕೇಂದ್ರ ಬ್ಯಾಂಕು ಖಾಸಗೀ ಬ್ಯಾಂಕುಗಳನ್ನು ಒಂದು ದೃಷ್ಟಿಯಿಂದ ಸಂಪೂರ್ಣವಾಗಿ ತನ್ನ ಹಿಡಿತದಲ್ಲಿರಿಸಿಕೊಳ್ಳಲು ಇಷ್ಟೇ ಸಾಕು ಎಂದೆನಿಸುತ್ತದೆ. ಅದರಲ್ಲಿಯೂ ಭಾರತದಲ್ಲಿರುವಂತೆ ರಾಷ್ಟ್ರವೇ ಕೇಂದ್ರ ಬ್ಯಾಂಕಿನ ಸೂತ್ರ ಧಾರತ್ವವನ್ನು ವಹಿಸಿದರೆ ರಾಷ್ಟ್ರವು ತನ್ನ ಮನಸ್ಸಿಗೆ ತೋರಿದ ಆರ್ಥಿಕ ವ್ಯವಸ್ಥೆಯ ನಿರ್ಮಾಣದಲ್ಲಿ ಖಾಸಗೀ ಬ್ಯಾಂಕುಗಳ ನೆರವನ್ನು ಸುಲಭದಲ್ಲಿ ಪಡೆಯಲು ಸಾಧ್ಯವುಂಟೆಂಬುದು ನಿರ್ವಿವಾದ.

ಆಧುನಿಕ ಅರ್ಥ ಪ್ರಪಂಚದ ಚಲನವಲನಗಳು ದಿವಂಗತ ಲಾರ್ಡ್ ಕೇನ್ಸ್ ಅವರ ವಿಚಾರಗಳಿಂದ ಪ್ರಭಾವಿತವಾಗಿರುವುದನ್ನು ಎಲ್ಲರೂ ಒಪ್ಪುವರು. ರಾಷ್ಟ್ರವು ಅರ್ಥ ಮಂಡಲದಲ್ಲಿ ಹೆಚ್ಚು ಹೆಚ್ಚಾಗಿ ಹಸ್ತಕ್ಷೇಪಮಾಡದೆ ಬಂಡವಾಳ ಪದ್ಧತಿಯು ಏರಿಳಿತಗಳಿಲ್ಲದೆ ಮುನ್ನಡೆಯಲಾರದೆಂದೂ, ಖಾಸಗಿ ಕ್ರೆಡಿಟ ನಿಯಂತ್ರಣವನ್ನಷ್ಟೇ ಕೇಂದ್ರ ಬ್ಯಾಂಕು ಮಾಡುತ್ತಿದ್ದರೆ ಸಾಲದೆಂದೂ ಸರಕಾರವು ತಾನೇ ಮುಂದಾಳುವಾಗಿ ಇನ್ವೆಸ್ಟ್‌ಮೆಂಟ ಕಾರ್ಯಕ್ರಮ

(೪ನೇ ಪುಟ ನೋಡಿರಿ)

ಬೇಂಕು
ಸ್ಥಾಪಿಸಲ್ಪಟ್ಟ
ವರುಷ
1906

THE CANARA BANKING

ದಿ ಕೆನರಾ ಬೇಂಕಿಂಗ್

ಭಾರತಕ್ಕೆ 50 ವರ್ಷಗಳ ಪ್ರಾಮಾಣಿಕ ಸೇವೆ

ಮೂಲ

ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನಿನ ಇತಿಹಾಸದಲ್ಲಿ 1956ನೆಯ ಮಾರ್ಚಿ 12ನೇ ತಾರೀಕು ಒಂದು ವಿಶಿಷ್ಟ ದಿನವಾಗಿರುತ್ತದೆ. ಈ ಹೊತ್ತಿಗೆ ಸರಿಯಾಗಿ ಐವತ್ತು ವರ್ಷಗಳ ಹಿಂದೆ ಈ ಬ್ಯಾಂಕು ಆರಂಭವಾಯಿತು. ಮದ್ರಾಸು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ಬ್ಯಾಂಕುಗಳ ಪೈಕಿ ಪ್ರಥಮವಾಗಿರುವ ಈ ಸಂಸ್ಥೆ 1906ರಲ್ಲಿ ಜನ್ಮವೆತ್ತಿತು. ರಾಷ್ಟ್ರದಲ್ಲೆಲ್ಲ ಸ್ವದೇಶಿ ಚಳವಳಿ ಹರಡುತ್ತಿದ್ದ ಕಾಲದಲ್ಲಿ ದೂರ ದೃಷ್ಟಿಯುಳ್ಳವರೂ ಕುಶಲರೂ ಆದ ಕೆಲವು ಮಹನೀಯರು ನಮ್ಮ ನಾಡಿನ ವ್ಯಾಪಾರೋದ್ಯಮಗಳಿಗೆ ಅನುಕೂಲವಾಗುವಂಥ ಅಲ್ಲದೆ ಜನತೆಯ ಎಲ್ಲ ವರ್ಗಗಳಲ್ಲಿಯೂ ಮಿತವ್ಯಯವನ್ನು ರೂಢಿಸುವಂಥ ಒಂದು ಸಂಸ್ಥೆಯನ್ನು ಕಟ್ಟಬೇಕೆಂದು ಮುಂದಾದರು. ಅವತ್ತು ಈ ಜಿಲ್ಲೆಯಲ್ಲಿ ಬ್ಯಾಂಕಿಂಗಿನ ಬೀಜಾರೋಪಣವಾಯಿತು. ನಮ್ಮೀ ದೊಡ್ಡ ದೇಶದಲ್ಲಿ ಬ್ಯಾಂಕುಗಳು ಬೆಳೆದ ಬಗೆಯನ್ನು ತಿಳಿಯುವ ಅಭಿರುಚಿಯುಳ್ಳವರಿಗೆ ಕಾರ್ಪೊರೇಶನಿನ ಚರಿತ್ರೆಯನ್ನು ಕೇಳಿದರೆ ಆಶ್ಚರ್ಯವಾಗಬಹುದು. ಅದು ಹುಟ್ಟಿದುದು ಒಂದು 'ನಿಧಿ'ಯ ರೂಪದಲ್ಲಿ. ನಿಧಾನವಾಗಿ ಅದು ತನ್ನ ಶಾಶ್ವತ ಭಂಡವಾಳದ ಪ್ರಮಾಣವನ್ನು ಏರಿಸಿ ಕೊಂಡಿತು. ಇದರ ಪರಿಣಾಮವಾಗಿ 12-3 1906ರಲ್ಲಿ ಪ್ರಥಮ ದಿನದ ಲೆಕ್ಕದ ಅಂತ್ಯದಲ್ಲಿ ಕಂಡು ಬಂದ ರೂ. 38—13—3 ಈಗಿನ 5·45 ಕೋಟಿ ರೂಪಾಯಿಗಳ ಬೃಹತ್ ಪ್ರಮಾಣಕ್ಕೆ ಬೆಳೆದು ನಿಂತಿದೆ.

ಹಾಜೀ ಅಬ್ದುಲ್ಲಾ ಸಾಹೇಬ್

ಬ್ಯಾಂಕಿನ ಕೆಲಸವನ್ನು 1906ರಿಂದ 1929ರ ವರೆಗೆ ನಿರ್ದೇಶಿಸಿಕೊಂಡು ಬಂದ ಖಾನ್ ಬಹಾದೂರ್ ಹಾಜೀ ಅಬ್ದುಲ್ಲಾ ಹಾಜೀ ಕಾಸಿಮ್ ಬಹಾದುರ ಅವರು ತಮ್ಮ ಪ್ರಥಮ ಅಧ್ಯಕ್ಷ—ಸ್ಥಾಪಕರಾಗಿದ್ದರು. ನಮ್ಮ ಮದ್ರಾಸು ರಾಜ್ಯದ ಬ್ಯಾಂಕ್ ವ್ಯವಸ್ಥಾಪಕರಲ್ಲಿ ಅವರು ಮೊದಲಿಗರೆಂಬುದು ಮಾತ್ರವಲ್ಲದೆ ಇದೇ ರಾಜ್ಯದಲ್ಲೇ ಸಾರ್ವಜನಿಕ ಸೇವೆಯಲ್ಲಿ ಅವರು ಅಗ್ರಗಣ್ಯರಾಗಿದ್ದರು. ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲು ಮತ್ತು ದಿಲ್ಲಿ ಶಾಸನ ಸಭೆಗೆ ಹಲವಾರು ವರ್ಷ ಸದಸ್ಯರಾಗಿ ಅವರು ದೇಶಸೇವೆ ಸಲ್ಲಿಸಿದವರು. ಎಲ್ಲಕ್ಕೂ ಹೆಚ್ಚಾಗಿ ಅವರ ಮನೆಯಲ್ಲಿ ದೊರೆಯುತ್ತಿರುವ ರಾಜೋಪಚಾರಗಳೂ, ಅವರ ಹೃದಯದ ವೈಶಾಲ್ಯವೂ ಕೊಡುಗೈಯ ಔದಾರ್ಯವೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನೆ ಮಾತಾಗಿದೆ.

ಶ್ರೀ ಎಚ್. ಕೇಶವ ಪೈ

1927ರಿಂದ ಉಡುಪಿಯ ಪ್ರಮುಖ ವಕೀಲರಾದ ಶ್ರೀ. ಹಾರಾಡಿ ಕೇಶವ ಪೈ, ಬಿ. ಎ., ಬಿ. ಎಲ್. ಅವರು ಬ್ಯಾಂಕಿನ ಡ್ಯೈರೆಕ್ಟರು ಆಗಿದ್ದರು. 1929ರಿಂದ ಅವರು ಬ್ಯಾಂಕಿನ ಅಧ್ಯಕ್ಷರಾಗಿದ್ದು ಸಂಸ್ಥೆಯನ್ನು ಪರಿಣಾಮಕಾರಿಯಾಗಿ ನಡೆಸುತ್ತಿದ್ದಂತೆ 1954ರಲ್ಲಿ ಅಕಸ್ಮಾತ್ತಾಗಿ ದೈವಾಧೀನರಾದರು. ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಬ್ಯಾಂಕು ಅತಿ ಶೀಘ್ರವಾಗಿ ಬಹುಮುಖವಾದ ಪ್ರಗತಿಯನ್ನು ಸಾಧಿಸಿತು. ಸಂಸ್ಥೆಯ ಕಾರ್ಯಭಾರದಲ್ಲಿ ಅವರಿಗಿದ್ದ ಆಸಕ್ತಿಯು ಆಡಳಿತಗಾರರಲ್ಲೆ ಅಪೂರ್ವವೆಂದು ಹೇಳಬೇಕು.

ಬೆಳವಣಿಗೆ

ಆರಂಭದಲ್ಲಿ ಸಂಸ್ಥೆಯ ಬೆಳವಣಿಗೆಯು ನಿಧಾನವಾಗಿ ಸಾಗಿತು. ಜನರಲ್ಲಿ ಬ್ಯಾಂಕ್ ವ್ಯವಹಾರದ ಅಭ್ಯಾಸವೇ ಇಲ್ಲದ ಆ ಕಾಲದಲ್ಲಿ ಗಿರಾಕಿಗಳಿಗೆ ಬ್ಯಾಂಕಿನ ಸೌಕರ್ಯವನ್ನು ಮಾಡಿಸಿ ಕೊಡುವ ಗುರುತರವಾದ ಜವಾಬುದಾರಿಯನ್ನು ಬ್ಯಾಂಕು ಸಮರ್ಪಕವಾಗಿ ನಿರ್ವಹಿಸಿತು. ಬ್ಯಾಂಕು ಕೆಲಸವನ್ನು ಆರಂಭಿಸಿದಾಗ ಅದು ನಿಧಿಯ ರೂಪದಲ್ಲಿತ್ತು ಎಂದು ಮೊದಲೇ ತಿಳಿಸಿದ್ದಾಯಿತು. ಅಂದರೆ ಪ್ರತಿಯೊಬ್ಬನು ತಿಂಗಳೊಂದರ ಒಂದು ರೂಪಾಯಿ ಅಥವಾ ಹೆಚ್ಚು ರೂಪಾಯಿಗಳನ್ನು 45 ತಿಂಗಳುಗಳ ವರೆಗೆ ಕೊಡುತ್ತ ಬಂದರೆ ಅವನಿಗೆ 46ನೇ ತಿಂಗಳಲ್ಲಿ 50 ರೂಪಾಯಿಯ ಅಥವಾ ಅದಕ್ಕಿಂತ ಹೆಚ್ಚು (ದಾಮಾಶಯ ಪ್ರಕಾರ) ಸಿಗುವ ಏರ್ಪಾಟು. ಇಂಥ ಚಂದಾದಾರರೇ ಬ್ಯಾಂಕಿನ ಪ್ರಥಮ ಶೇರುದಾರರು. ಆದರೆ ಚಂಚಲವಾದ ಇಂಥ ಬಂಡವಾಳದ ಪದ್ಧತಿಯು ಹೆಚ್ಚು ಅನುಕೂಲವಲ್ಲವೆಂಬುದು ಅನುಭವಕ್ಕೆ ಬಂದುದರಿಂದ 1917ರಲ್ಲಿ ಸಂಸ್ಥೆಯ ಘಟನೆಯ ತಿದ್ದುಪಡಿಯನ್ನು ಮಾಡಿ ಶಾಶ್ವತವಾದ ಶೇರುಗಳನ್ನು ಹೊರಡಿಸಿ, ಒಂದು ಮುಖ್ಯವಾದ ಬದಲಾವಣೆಯನ್ನು ಬ್ಯಾಂಕು ಕೈಗೊಂಡಿತು. 1937ರ ತನಕ ಬ್ಯಾಂಕಿನ ಅಧಿಕೃತ ಬಂಡವಾಳವು ರೂ. 3,50,000ಗಳಷ್ಟಿದ್ದುದನ್ನು 1938ರಲ್ಲಿ ರೂ. 10,00,000ಕ್ಕೇರಿಸಲಾಯಿತು. 1948ರಲ್ಲಿ ಮತ್ತೊಮ್ಮೆ ಏರಿಸಿ ರೂ. 25,00,000ಕ್ಕೆ ತಂದಿಟ್ಟ ಮೊಬಲಗು ಈಗಿನ ಅಧಿಕೃತ ಬಂಡವಾಳವಾಗಿರುತ್ತದೆ. 1934ರಲ್ಲಿ ತೆತ್ತ ಬಂಡವಾಳ ರೂ. 2,25,000. ಬ್ಯಾಂಕಿನ ಮೇಲೆ ಜನರ ವಿಶ್ವಾಸವು ಹೆಚ್ಚಿದಂತೆ ಡಿಪೋಜಿಟುಗಳ ಪ್ರಮಾಣವು ಬೆಳೆದುದರಿಂದ ಬ್ಯಾಂಕಿನ ಆಡಳಿತ ಮಂಡಳಿಯವರು ಬ್ಯಾಂಕಿಂಗ್ ತತ್ವಗಳ ಅನುಸಾರವಾಗಿ ಬಂಡವಾಳವನ್ನು ವೃದ್ಧಿಸಬೇಕೆಂದು ಯೋಚಿಸಿದರು. 1935ರಲ್ಲಿ 50 ರೂಪಾಯಿಯ 2,500 ಸಾಮಾನ್ಯ ಶೇರುಗಳ 40 ರೂಪಾಯಿ ಪ್ರೀಮಿಯಮಿನಲ್ಲಿ ಹೊರಡಿಸಿದಾಗ ಈ ಎಲ್ಲ ಶೇರುಗಳೂ ಮಾರಿ ಹೋದುವು. 1939ರಲ್ಲಿ 50 ರೂಪಾಯಿಯ '5% ಪ್ರಥಮ ಪ್ರಿಫರೆನ್ಸ್ ಶೇರು'ಗಳನ್ನು 7,000 ಹೊರಡಿಸಿದಾಗ ಅವಕ್ಕೂ ಸಂಪೂರ್ಣವಾಗಿ ಗಿರಾಕಿ ದೊರೆಯಿತು. 1943ರಲ್ಲಿ 50 ರೂಪಾಯಿ ಮೊಬಲಗಿನ 18,000ದಷ್ಟು 4½% ಪ್ರಥಮ ಪ್ರಿಫರೆನ್ಸ್ ಶೇರುಗಳನ್ನು ಹೊರಡಿಸಿದಾಗ ಇದೇ ರೀತಿ ಮಾರಾಟವಾಯಿತು. 1947ರಲ್ಲಿ ಕೊನೆಯ ಬಾರಿಗೆ ನಾವು 50 ರೂಪಾಯಿಯ 8,000 ಸಾಮಾನ್ಯ ಶೇರುಗಳನ್ನು ಹೊರಡಿಸಿದೆವು ಇವೂ ಮಾರಾಟವಾದುವು. ಒಟ್ಟಿನಲ್ಲಿ ನಾವು ಹೊರಡಿಸಿದ ಎಲ್ಲ ಶೇರುಗಳಿಗೂ ಎಲ್ಲ ಕಾಲದಲ್ಲಿಯೂ ಪೇಟೆಯ ಜಗತ್ತಿನಿಂದ ಸರಿಯಾದ ಪ್ರತಿವರ್ತನೆಯು ತೋರಿಬಂದುದು ಆನಂದದಾಯಕವಾದ ವಿಚಾರವೇ ಸರಿ. ಶೇರುದಾರರ ಮತ್ತು ಜನತೆಯ ವಿಶ್ವಾಸವನ್ನು ಬ್ಯಾಂಕು ಗಳಿಸಿದೆ ಎನ್ನಲು ಇದಕ್ಕಿಂತ ಹೆಚ್ಚಿನ ಸಾಕ್ಷಿ ಏನು ಬೇಕಾಗಿದೆ? ಇವತ್ತು ಬ್ಯಾಂಕು ಹೊರಡಿಸಿದ ರೂ. 20,00,000ಯ ಬಂಡವಾಳವೆಲ್ಲ ತೆತ್ತ ಬಂಡವಾಳವೇ ಆಗಿರುತ್ತದೆ.

ಕ್ಷೇಮನಿಧಿ

ವ್ಯಾಪಾರೋದ್ಯಮಗಳು ಒಂದೇ ವರ್ಗದ ಗುತ್ತಿಗೆಯಾಗಿ ಬಹಳ ಕಾಲ ಇರುವುದು ಶಕ್ಯವಿಲ್ಲವೆಂದು ಬಗೆದು ಬ್ಯಾಂಕಿನ ನಿರ್ದೇಶಕರು ಬ್ಯಾಂಕಿನ ಆರಂಭ ವೇಳೆಯಿಂದಲೂ ತಿಳಿದುಕೊಂಡಿದ್ದರ ಪರಿಣಾಮವಾಗಿ ಪ್ರತಿ ವರ್ಷವೂ ಬಂದ ಲಾಭದ ಒಂದಂಶವನ್ನು ಕ್ಷೇಮನಿಧಿಗೆ ಸೇರಿಸುತ್ತ ಬಂದಿರುವರು. ಒಂದು ಬ್ಯಾಂಕಿನ ಅಂತಶ್ಶಕ್ತಿಯನ್ನೂ, ಸಾಮರ್ಥ್ಯವನ್ನೂ, ಭದ್ರತೆಯನ್ನೂ ಅಳೆಯಲು ಕ್ಷೇಮನಿಧಿಯು ಒಂದು ಒರೆಗಲ್ಲು. 1918ರಲ್ಲಿ ಕೇವಲ ರೂ. 6,894ರಷ್ಟಿದ್ದ ನಮ್ಮ ಕ್ಷೇಮನಿಧಿಯು ಈಗ ರೂ. 12,00,000 ಗಳಷ್ಟಕ್ಕೆ ಬೆಳೆದಿದೆ.

ಈಗ ಐದು ದಶಕಗಳ ಹಿಂದಿನಿಂದಲೂ ಬ್ಯಾಂಕಿನ ಸರ್ವಹಿತ ದೃಷ್ಟಿಯನ್ನು ಪಾಲಿಸುತ್ತ ಬಂದಿದೆ. ಜಾತಿ ಅಥವಾ ವರ್ಗ ಭೇದವನ್ನು ಗಮನಕ್ಕೆ ತಾರದೆ ವಿಶಾಲ ದೃಷ್ಟಿಯಿಂದ ಕೆಲಸ ಮಾಡಬೇಕೆಂಬ ಬ್ಯಾಂಕಿನ ಮೂಲ ಪುರುಷರ ಧೋರಣೆಯನ್ನು ಬ್ಯಾಂಕು ಈ ವರೆಗೂ ಅನುಸರಿಸುತ್ತ ಬಂದಿದೆ ಎನ್ನಲು ನಮಗೆ ಸಂತೋಷವೆನಿಸುತ್ತದೆ.

ಬ್ಯಾಂಕಿನ ಬೋರ್ಡ್ ಓಫ್ ಡೈರೆಕ್ಟರ್ಸನ್ನು ಪರಿಶೀಲಿಸಿದರೆ ಬ್ಯಾಂಕಿನ ವಿಶಾಲ ದೃಷ್ಟಿಯ ಪರಿಚಯವಾಗುತ್ತದೆ. ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಾಮಾಣಿಕವಾಗಿ ದುಡಿದ ಜನರಿಂದ ಬೋರ್ಡ್ ಓಫ್ ಡೈರೆಕ್ಟರ್ಸ್ ಅಲಂಕೃತವಾಗಿದೆ. ಅವರ ವ್ಯವಹಾರ ಕುಶಲತೆಯೂ, ದೂರದೃಷ್ಟಿಯೂ, ಜಾಗರೂಕತೆಯೂ, ಬ್ಯಾಂಕಿಂಗ್ ಕ್ಷೇತ್ರದಲ್ಲಿ 'ಕಾರ್ಪೊರೇಶನ್' ಗಳಿಸಿರುವ ಉನ್ನತ ಸ್ಥಾನಕ್ಕೆ ಕಾರಣ. ಆಡಳಿತೆಯ ಸೂತ್ರ ಚಾಲನೆಗೆ ಇಂಥ ಸಾರ್ವಜನಿಕ ಸೇವಾಕಾಂಕ್ಷಿಗಳು ನಿರಂತರವಾಗಿ ಒದಗಿಬಂದುದು ಬ್ಯಾಂಕಿನ ಭಾಗ್ಯವೆನ್ನಬೇಕು. ಅಲ್ಲದೆ ಆರಂಭವಾದಂದಿನಿಂದ ಈ ವರೆಗೂ ನಮ್ಮ ಬ್ಯಾಂಕಿಗೆ ಮೆನೇಜಿಂಗ್ ಡೈರೆಕ್ಟರ

15—3—1956

CORPORATION LIMITED
ಕೊರ್ಪೊರೇಶನ್ ಲಿಮಿಟೆಡ್

ಬ್ಯಾಂಕು ಈಗ ದಾಟುತ್ತಲಿರುವ ವರುಷ
1956

ಆಡಳಿತೆ ಮಂಡಳಿ

ಹೆಸರುಗಳು: (ಎಡದಿಂದ ಬಲಕ್ಕೆ)— ಶ್ರೀ ಬಿ. ಆನಂದ ಮಲ್ಯ; ಡಾ. ಎಮ್. ಬಿ. ಕಿಣಿ; ಶ್ರೀ ಎಮ್. ಗೋಪಾಲಕೃಷ್ಣ ಕಾಮತ್; ಶ್ರೀ ಯು. ಗೋಪಾಲಕೃಷ್ಣ ನಾಯಕ್; ಡಾ. ಯು. ಪಿ. ಮಲ್ಯ; ಡಾ. ಯು. ಸುಂದರರಾಮ ಪೈ (ಅಧ್ಯಕ್ಷ); ಶ್ರೀ ಬಿ. ವೈಕುಂಠ ಬಾಳಿಗ; ಶ್ರೀ ಕೆ. ಪದ್ಮನಾಭ ಪೈ; ಶ್ರೀ ಕಲ್ಯಾಡಿ ರಾಮ ರಾವ್; ಶ್ರೀ ಎಫ್. ಎಕ್ಸ್. ಡಿ. ಪಿಂಟೋ; ಮತ್ತು ಶ್ರೀ ವಿ. ಆರ್. ಕಾಮತ್ (ಜನರಲ್ ಮೆನೇಜರ್)

ರಾಗಲೀ, ಮೆನೇಜಿಂಗ್ ಏಜಂಟರಾಗಲೀ ಇಲ್ಲದಿರುವುದು ನಮ್ಮ ಒಂದು ವೈಶಿಷ್ಟ್ಯವಾಗಿದೆ.

ಡಾ. ಯು. ಎಸ್. ಆರ್. ಪೈ

1935ರಲ್ಲಿ ಬ್ಯಾಂಕಿನ ಅಧ್ಯಕ್ಷರಾಗುವ ಸಂದರ್ಭವು ಡಾ| ಯು. ಸುಂದರರಾಮ ಪೈಗಳ ಅಂಥ ಸಮರ್ಥ ಆಡಳಿತದಾರರಿಗೆ ಒದಗಿ ಬಂದುದು ಬ್ಯಾಂಕಿನ ಮತ್ತೊಂದು ಸೌಭಾಗ್ಯ. ಬ್ಯಾಂಕಿನ ಪ್ರಗತಿಗೂ, ಅದರ ಜನಪ್ರಿಯತೆಗೂ ಯಾರಾದರೂ ಒಬ್ಬ ವ್ಯಕ್ತಿಯನ್ನು ತೋರಿಸಬೇಕೆಂದರೆ ಡಾ| ಸುಂದರ ರಾಮ ಪೈ ಅವರ ಕಡೆಗೆ ಬೆರಳು ತೋರಿಸಬೇಕಾಗುತ್ತದೆ. ದಕ್ಷರೂ ವಿನಯಶೀಲರೂ ಆದ ಡಾ| ಪೈ ಅವರ ಕೆಲಸವು ಯಾವಾಗಲೂ ಎಲ್ಲರಿಗೂ ಪ್ರಿಯವೆನಿಸುವ ವಿಷಯವಲ್ಲವಾದರೂ ಅವರ ಹತ್ತಿರ ಯಾವ ಕಾಲಕ್ಕೂ ಒಳ್ಳೇಯ ಪಾತಿಗೆ ಕೊರತೆ ಬಂದುದಿಲ್ಲ. ಬಹು ವಿಧವಾದ ಸಾರ್ವಜನಿಕ ಚಟುವಟಿಕೆಗಳಲ್ಲಿ ಮಗ್ನರಾಗಿರುವರಾದರೂ ಬ್ಯಾಂಕಿನ ಮಾರ್ಗದರ್ಶನಕ್ಕೆ ಡಾ| ಪೈ ಅವರ ಹತ್ತಿರ ಸಮಯಾಭಾವವೆಂಬುದಿಲ್ಲ.

ಬ್ಯಾಂಕಿನ ಜನರಲ್ ಮೆನೇಜರ ಹುದ್ದೆಯಲ್ಲಿರುವ ಶ್ರೀ. ವಿ. ಆರ್. ಕಾಮತ್, ಬಿ. ಎ., ಎಲ್ ಎಲ್. ಬಿ, ಅವರು ನಮ್ಮ ಈಗಿನ ಮುಖ್ಯಾಧಿಕಾರಿಗಳು. ಬ್ಯಾಂಕಿನಲ್ಲಿ ಬೇರೆ ಬೇರೆ ಕೆಲಸದಲ್ಲಿದ್ದು ಅನುಭವವನ್ನು ಪಡೆದು ಆ ಮೇಲೆ 1937ರಲ್ಲಿ ಅವರು ಜನರಲ್ ಮೆನೇಜರರಾಗಿ ನೇಮಕ ಹೊಂದಿದರು. 'ಮುಗುಳ್ನಗೆಯಿಂದಲೇ ಸೇವೆ ಮಾಡು' ಎಂಬ ಧೋರಣೆಯನ್ನು ಅವರು ಇತರರಿಗೆ ಉಪದೇಶಿಸುವುದು ಮಾತ್ರವಲ್ಲದೆ ಸ್ವತಃ ಪಾಲಿಸುತ್ತಿದ್ದಾರೆ. ಅವರ ಕುಶಲತೆಯೂ, ಸಾಹಸವೂ ಬ್ಯಾಂಕಿನ

ಶ್ರೀ ವಿ. ಆರ್. ಕಾಮತ್

ನಿರ್ಧಾರಗಳನ್ನೂ, ಧೋರಣೆಯನ್ನೂ ಯಶಸ್ವಿಯಾಗಿ ಮುಂದುವರಿಸುತ್ತವೆ. ಡೆಪ್ಯೂಟಿ ಜನರಲ್ ಮೆನೇಜರ, ಇನ್ಸ್‌ಪೆಕ್ಟರ್ಸ್, ಮತ್ತು ಇತರ ಅಧಿಕಾರಿ ವರ್ಗದ ಸಹಾಯದಿಂದ ಬ್ಯಾಂಕಿನ ಒಳ ಆಡಳಿತೆಯನ್ನೂ ಸಾರ್ವಜನಿಕ ಸಂಪರ್ಕವನ್ನೂ ಶ್ರೀಯುತ ಕಾಮತರು ಬಹಳ ದಕ್ಷತೆಯಿಂದ ನಿರ್ವಹಿಸಿಕೊಂಡು ಬಂದಿದ್ದಾರೆ. ದೇಶದಲ್ಲೆಲ್ಲಾ ಹರಡಿದ ಬ್ಯಾಂಕ ನಷ್ಟಗಳು ಕಾರ್ಪೊರೇಶನಿನ ಸಮೀಪಕ್ಕೆ ಸುಳಿಯದಿರಲು ಇವರ ಕಾರ್ಯಶಕ್ತಿಯೊಂದೇ ಕಾರಣವಲ್ಲದೆ ಬೇರೇನೂ ಅಲ್ಲ. ಕಳೆದ ಐವತ್ತು ವರ್ಷಗಳಲ್ಲಿ ನಡೆದ ಎರಡು ಜಾಗತಿಕ ಯುದ್ಧಗಳಿಂದಲೂ, ಹಣದ ಅತಿ ಪ್ರಸರಣದಿಂದಲೂ, ಮಂದಿ ತೇಜಿಗಳಿಂದಲೂ ಆರ್ಥಿಕ ವಿಪತ್ತುಗಳಿಂದ ತೊಳಲುತ್ತಿರುವ ಪ್ರಪಂಚದಲ್ಲಿ ತಲೆ ಎತ್ತಿ ಬಾಳುವ ಶಕ್ತಿಯು ಬ್ಯಾಂಕಿಗೆ ಬಂದುದು ಜನರಲ್ ಮೆನೇಜರ್ ಮತ್ತು ಸಿಬ್ಬಂದಿಯ ಕಾರ್ಯ ತತ್ಪರತೆಯ ದೆಸೆಯಿಂದಲೇ ಎನ್ನಬೇಕಾಗುತ್ತದೆ.

ಬ್ಯಾಂಕಿನ ಕೆಲಸ-ಪ್ರಕೃತ ಸ್ಥಿತಿ

ಸರಿಯಾದ ಭದ್ರತೆಗಳ ಮೇಲೆ ಬ್ಯಾಂಕು ಹಣ ಸಾಲ ಕೊಡುವುದೊಂದೇ ಅಲ್ಲದೆ ಇತರ ಅನೇಕ ಸೇವೆಗಳನ್ನು ನಾಡಿಗೆ ಒದಗಿಸುತ್ತಿದೆ. ಮೈಸೂರು, ಮದರಾಸು, ಮುಂಬಯಿ, ಕೊಡಗು ಆಂಧ್ರ ಮತ್ತು ತಿರುವಾಂಕೂರು – ಕೊಚ್ಚಿ ರಾಜ್ಯಗಳಲ್ಲಿ ಒಟ್ಟು 42 ಶಾಖೆಗಳನ್ನು ಬ್ಯಾಂಕು ನಡೆಸಿಕೊಂಡು ಬರುತ್ತಿದೆ. ಬ್ಯಾಂಕಿನ ಉಡುಪಿಯಲ್ಲಿರುವ ಕೇಂದ್ರ ಕಚೇರಿಗೂ, ಮಂಗಳೂರು, ಮಡಿಕೇರಿ, ಮಲ್ಪೆಗಳಲ್ಲಿಯೂ ಸ್ವಂತ ಕಟ್ಟಡಗಳಿವೆ. ಸಾರ್ವಜನಿಕರ ಅನುಕೂಲತೆಗಾಗಿ ಮಂಗಳೂರು ಮತ್ತು ಮಡಿಕೇರಿಗಳಲ್ಲಿ ಸೇಫ್ ಡಿಪಾಜಿಟು ವಾಲ್ಟುಗಳಿವೆ. ಐದು ವರ್ಷಗಳ ಮೇಲಿನ ಡಿಪಾಜಿಟುಗಳನ್ನು ಬ್ಯಾಂಕು ಸ್ವೀಕರಿಸದಿರುವುದರಿಂದ ಅದು ತನ್ನ ಹಣವನ್ನು ಯಾವಾಗಲೂ ಸಿದ್ಧರೂಪದಲ್ಲಿ (Liquid) ಯೇ ಇಟ್ಟಿರುವುದು ವಾಡಿಕೆಯಾಗಿದೆ. ಹೀಗಿದ್ದುದರಿಂದಲೇ ದೇಶವನ್ನಾವರಿಸಿದ ಬ್ಯಾಂಕ ನಷ್ಟದ ಪ್ರಸಂಗವು ನಮ್ಮ ಬ್ಯಾಂಕನ್ನು ಸೋಕಲು ಸಾಧ್ಯವಾಗದೇ ಇದ್ದುದು. 31—12—1955ರಲ್ಲಿ ನಮ್ಮ ಕೈಯಲ್ಲಿರುವ ಕ್ಯಾಶ್ ನೊಬಲಗು-ಬ್ಯಾಂಕರುಗಳ ಹತ್ತಿರ ಇರುವಂತಾದ್ದೇ ಅಲ್ಲದೆ ಗವರ್ನಮೆಂಟ ಸೆಕ್ಯೂರಿಟಿಗಳಲ್ಲಿ ಇಟ್ಟಿರುವಂಥಾದ್ದು ಡಿಪೋಜಿಟಿನ64%. ಬ್ಯಾಂಕು ಕೊಟ್ಟ ಸಾಲ ಡಿಪಾಜಿಟಿನ52%. ಕೊಂಡು ಕೊಂಡು ಡಿಸ್ಕಾಂಟ ಮಾಡಿದ ಹುಂಡಿಗಳನ್ನು ಸೇರಿಸಿ ಒಟ್ಟು ಸಾಲದ ಪೈಕಿ (advances) 76% ಸಂಪೂರ್ಣ ಭದ್ರತೆಯ ಮೇಲೆ ಕೊಟ್ಟಿರತಕ್ಕುದು. ಸಾಲದ ಸುರಕ್ಷಿತತೆಯ ಮಟ್ಟಿಗೂ, ನಿಧಿಯ ಸಿದ್ಧ ರೂಪದ ಮಟ್ಟಿಗೂ ತಿಳುವಳಿಕೆ ಹುಟ್ಟಲು ಈ ಅಂಕೆ ಸಂಖ್ಯೆಗಳಿಂದ ಬ್ಯಾಂಕಿನ ಸಿಬ್ಬಂದಿಯ ಕುರಿತು ಒಂದು ಮಾತನ್ನು ಹೇಳಲು ನಮಗೆ ಅತ್ಯಂತಾನಂದವೆನಿಸುತ್ತದೆ. ಆರಂಭವಾದಂದಿನಿಂದಲೂ ನಮ್ಮ ಸಿಬ್ಬಂದಿಯವರು ಪ್ರಾಮಾಣಿಕತೆಯಿಂದಲೂ ನಿಷ್ಠೆಯಿಂದಲೂ ಕೆಲಸ ಮಾಡಿ ಬ್ಯಾಂಕು ಕೀರ್ತಿಯಲ್ಲಿಯೂ ಗಾತ್ರದಲ್ಲಿಯೂ ಹೊಂದಿದ ಅಭಿವೃದ್ಧಿಗೆ ತಮ್ಮ ಸೇವೆಯ ಕಾಣಿಕೆಯನ್ನು ಸಲ್ಲಿಸಿದ್ದಾರೆ.

The Canara Banking Corporation Limited

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(೧ನೇ ಪುಟದಿಂದ)

(ಕಾರ್ಖಾನೆ ಯೋಜನೆ ಇತ್ಯಾದಿಗಳನ್ನು) ನಡೆಸುವುದು ಅನಿವಾರ್ಯವೆಂದು ಅವರು ಪ್ರತಿಪಾದಿಸಿದ್ದಾರೆ. ಉದ್ಯೋಗದ ಕುರಿತು ಅವರ ಸಿದ್ಧಾಂತಗಳಲ್ಲಿ ಅವರು ಕೇಂದ್ರ ಬ್ಯಾಂಕಿನ ಬಡ್ಡಿಯ ದರಕ್ಕೆ ಬೇರೊಂದು ಉದ್ದೇಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅದೇನೆಂದರೆ ವ್ಯಾಪಾರದ ಮಂದಿ ಇರುವ ಪ್ರಸಂಗಗಳಲ್ಲಿ ರಾಷ್ಟ್ರದಲ್ಲಿ ಪೂರ್ಣೋದ್ಯೋಗ (Full Employment)ವನ್ನು ನಿರ್ಮಾಣ ಮಾಡಲು ಕೇಂದ್ರ ಬ್ಯಾಂಕಿನ ಬಡ್ಡಿ ದರವನ್ನು ಇಳಿಸುವುದು, ಅಂದರೆ ಒಟ್ಟು ಬ್ಯಾಂಕ್ ಮಂಡಲದಲ್ಲೇ ಬಡ್ಡಿಯ ದರ ಇಳಿತಾಯವಾಗುವುದು. ಭಾರತದಂಥ ಹಿಂದುಳಿದ ರಾಷ್ಟ್ರಗಳಲ್ಲಿ ನಿರುದ್ಯೋಗವೂ, ಅಲ್ಪೋದ್ಯೋಗವೂ, ಛದ್ಮ ನಿರುದ್ಯೋಗವೂ ಸರ್ವ ಕಾಲದಲ್ಲಿಯೂ ಇರುವ ಒಂದು ಖಾಯಂ ರೋಗವಾಗಿರುವುದರಿಂದ ಅದಕ್ಕೆ ಕೇನ್ಸ್ ಮುಂಬರಿದ ರಾಷ್ಟ್ರಗಳಿಗೆ ಮಂದಿಯ ಕಾಲಕ್ಕೆ ಹೇಳಿದಂಥ ಚಿಕಿತ್ಸೆಯನ್ನು ಯಾವಕಾಲಕ್ಕೂ ಅನ್ವಯಿಸಬೇಕಾದದ್ದು ಅಂದರೆ ರಾಷ್ಟ್ರವು ತಾನೇ ಉದ್ಯೋಗದಾತನಾಗಿ ಇನ್ವೆಸ್ಟ್‌ಮೆಂಟಿಗೆ ಪ್ರವೃತ್ತವಾಗಬೇಕಾದದ್ದು ನ್ಯಾಯವೇ ಎಂದು ಒಪ್ಪಬೇಕಾಗುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಸರಕಾರವೇ ಬಂಡವಾಳವನ್ನು ಹೂಡುವ ಇಂಥ ಪ್ರಗತಿಪರ ಸನ್ನಿವೇಶದಲ್ಲಿ ದೇಶದಲ್ಲಿರುವ ಕ್ರೆಡಿಟ್ ಸಂಸ್ಥೆಗಳ ಮೇಲೆ ಹೆಚ್ಚು ಹೆಚ್ಚು ನಿಯಂತ್ರಣವು ಪ್ರಗತಿಯ ಹೆಜ್ಜೆ ಎನಿಸುತ್ತದೆ. ನಮ್ಮ ಭಾರತದ ರಿಸರ್ವ ಬ್ಯಾಂಕು ಇಪ್ಪತ್ತು ವರ್ಷಗಳ ಲಾಗಾಯಿತು ಖಾಸಗೀ ಬ್ಯಾಂಕುಗಳ ಮೇಲೆ ನಿಯಂತ್ರಣವನ್ನು ಬಲಪಡಿಸಿಕೊಂಡು ಬರುತ್ತಿರುವುದು ಸರ್ವವಿದಿತವಲ್ಲವೇ? ಸಾಮಾನ್ಯವಾಗಿ ಕೇಂದ್ರ ಬ್ಯಾಂಕು ಮಾಡಬೇಕಾದ ಕ್ರೆಡಿಟ್ ನಿಯಂತ್ರಣವಲ್ಲದೆ ಶೆಡ್ಯೂಲ್ಡ್ ಮತ್ತು ನಾನ್ ಶೆಡ್ಯೂಲ್ಡ್ ಬ್ಯಾಂಕುಗಳ ತಪಾಸಣೆಯ ಅಧಿಕಾರವನ್ನು ರಿಸರ್ವ ಬ್ಯಾಂಕು ಈಚೆಗೆ ತನ್ನದಾಗಿ ಮಾಡಿಕೊಂಡು ಖಾಸಗೀ ಬ್ಯಾಂಕಿನ ಎಲ್ಲ ಸ್ಥಳಗಳಲ್ಲಿಯೂ ತನ್ನ ಪ್ರಭಾವವನ್ನು ಬೀರಲು ಶಕ್ತವಾಗಿದೆ. ಖಾಸಗೀ ಬ್ಯಾಂಕುಗಳು ಕೂಡ ಸ್ವದೇಶಾಭಿಮಾನದಿಂದ ಪ್ರೇರಿತವಾಗಿ ಸರಕಾರವು ಸಾಲತೆಗೆಯಲು ಮುಂದಾದಾಗಲೆಲ್ಲಾ ಅದಕ್ಕೆ ಸಾಲವನ್ನು ಕೊಟ್ಟು ತಮ್ಮ ಕರ್ತವ್ಯ ನಿಷ್ಠೆಯನ್ನೂ, ರಾಷ್ಟ್ರ ಭಕ್ತಿಯನ್ನೂ ಪ್ರದರ್ಶಿಸಿವೆ. ಈಗ ಶೆಡ್ಯೂಲ್ಡ್ ಬ್ಯಾಂಕುಗಳ ಲೇಣೆಯಲ್ಲಿ ಸರಕಾರಿ ಅಥವಾ ಗಿಲ್ಟ್ ಎಜ್ಡ್ ಸೆಕ್ಯೂರಿಟಿಗಳು 339/74 ಕೋಟಿ ರೂಪಾಯಿಗಳಷ್ಟಿರುವುದನ್ನು ಗಮನಿಸಿದರೆ ಬ್ಯಾಂಕುಗಳ ಸ್ವದೇಶಾಭಿಮಾನದ ಹೊಲವಾದೀತು. ಅಲ್ಲದೆ ಅವುಗಳ ವ್ಯವಹಾರದ ಭದ್ರತೆಯ ಅರಿವೂ ಆದೀತು.

ಸಾರ್ವಜನಿಕ ಕ್ಷೇತ್ರದಲ್ಲಿ ಸರಕಾರವು ಸ್ವತಃ ಬಂಡವಾಳವನ್ನು ಹೂಡಲು ಮುಂದಾಗುವಾಗ ಖಾಸಗೀ ಬ್ಯಾಂಕುಗಳು ಕೊಡುವ ಸಾಲ ಅಥವಾ ಸರಕಾರವೇ ಸೃಷ್ಟಿಸುವ ಹಣ ಇವೆರಡರಿಂದಲೇ ಕೆಲಸ ನಡೆಯಬೇಕು. ಕರ ಭಾರದ ವಿಧಾನ ಇಲ್ಲಿಗೆ ಸಲ್ಲದು. ಸಾಲದಿಂದಲೂ ಕೊರತೆ ಹಣದಿಂದಲೂ ನಡೆಯುವ ಉದ್ಯಮಗಳಿಂದ ಉದ್ಯೋಗವು ದ್ವಿಗುಣಿತವಾಗುತ್ತದೆ. ಇದೇ ಈಗ ಅಂತ್ಯವಾಗುತ್ತಿರುವ 1951—56 ರ ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾರ್ವಜನಿಕ ಅರ್ಥ ಮಂಡಲದ ವಿಸ್ತಾರದಲ್ಲಿ ಖಾಸಗೀ ಬ್ಯಾಂಕುಗಳು ಕೊಟ್ಟ ಸಾಲದ ಸೇವೆ ಕಿರಿದೆಂದು ಯಾರೂ ಹೇಳುವಂತಿಲ್ಲ.

ಇನ್ನೊಂದು ವಿಷಯ. ನಮ್ಮ ಆರ್ಥಿಕ ಪ್ರಗತಿಯು ಸಮಧಾತುವಿನಿಂದ ನಡೆಯಬೇಕೆಂಬ ಆಸೆ ನಮಗಿರುವ ಪಕ್ಷದಲ್ಲಿ ಇನ್ವೆಸ್ಟ್‌ಮೆಂಟಿನ ಜತೆಗೆ ಉಳಿತಾಯಕ್ಕೂ ಒಂದು ಸಮರ್ಪಕವಾದ ಯೋಜನೆ ಇರಬೇಕು. ಜನರ ಜೀವನದ ಮಟ್ಟವನ್ನು ಎತ್ತರಿಸಬೇಕಾದರೆ ದೇಶದಲ್ಲಿ ಉತ್ಪಾದನೆಗೆ ಸಹಾಯವಾಗುವ ಇನ್ವೆಸ್ಟ್‌ಮೆಂಟ ವಿಪುಲವಾಗಿ ನಡೆಯಬೇಕು. ಕೊರತೆ ಹಣಕಾಸೊಂದೇ ನಮ್ಮ ಶಾಶ್ವತ ಚಿಕಿತ್ಸೆಯಾದಲ್ಲಿ ಅಪಾಯವಿದೆ. 'ಬದಲು ವರ್ತಮಾನದಲ್ಲಿ ಸಮತೋಲವೂ, ಭವಿಷ್ಯದಲ್ಲಿ ಪ್ರಗತಿಯೂ ಏಕಕಾಲದಲ್ಲಿ ಸಾಧಿಸಬೇಕಾಗಿದ್ದರೆ ರಾಷ್ಟ್ರೀಯ ಉಳಿತಾಯದ ಪ್ರಮಾಣವನ್ನು ಹೆಚ್ಚಿಸುವ ಏಕೈಕ ಉಪಾಯವನ್ನು ನಾವು ಅವಲಂಬಿಸಬೇಕು, ಎಂದು ಲಂಡನ್ನಿನ ಇಕಾನಮಿಸ್ಟ್ ಬ್ರಿಟಿಷ ಅರ್ಥ ಮಂಡಲದ ರೋಗಕ್ಕೆ ಚಿಕಿತ್ಸೆಯನ್ನು ಸೂಚಿಸಿದೆ. ಇಲ್ಲಿಯೂ ಖಾಸಗೀ ಬ್ಯಾಂಕುಗಳು ಮಾಡುತ್ತಿರುವ ಸೇವೆ ದೊಡ್ಡದು. ಜನರಲ್ಲಿ ಉಳಿತಾಯದ ಅಭ್ಯಾಸವನ್ನು ರೂಢಿಸಿ ಹಣವನ್ನು ಕೂಡಿಸಿ ಹಳ್ಳವಾಗಿ ಮಾಡಿ, ಹಳ್ಳವನ್ನು ಪ್ರಾಗತಿಕವಾದ ವಿವಿಧೋದ್ದೇಶ ಯೋಜನೆಗೆ ಹರಿಯಗೊಡುವ ಪವಿತ್ರ ಕಾರ್ಯವನ್ನು ಅವು ಮಾಡುತ್ತಿವೆ. ಸಮಾಜವಾದೀ ಸ್ವರೂಪದ್ದಾದ ರಾಷ್ಟ್ರವನ್ನೇ ನಾವು ಧ್ಯೇಯವಾಗಿಟ್ಟುಕೊಂಡಿರುವುದರಿಂದ, ಜೀವವಿಮೆಯಾದ ಮೇಲೆ ಇನ್ನು ಬ್ಯಾಂಕುಗಳ ರಾಷ್ಟ್ರೀಕರಣದ ಸರದಿ ಬರುತ್ತದೆಂದು ದಾರಿ ಕಾಯುವವರಿರಬಹುದು. ಆದರೆ ಇಲ್ಲಿ ಜನರೂ ಸರಕಾರವೂ ತುಸು ವಿಶ್ರಮಿಸಿ ಪರ್ಯಾಲೋಚಿಸಬೇಕು. ಒಂದನೆಯಾಗಿ ರಿಸರ್ವ ಬ್ಯಾಂಕು ಇಡೀ ಖಾಸಗೀ ಬ್ಯಾಂಕಿಂಗ ಕ್ಷೇತ್ರವನ್ನು ತನ್ನ ಅಂಕಿತದಲ್ಲಿ, ಆಜ್ಞಾನುಸಾರವಾಗಿ ನಡೆಸುತ್ತಿದೆ. ಎರಡನೆಯದಾಗಿ, ಸರಕಾರೀ ವಲಯಗಳಲ್ಲಿ ಈ ವ್ಯವಹಾರಕ್ಕೆ ಬೇಕಾದ ಸಿಬ್ಬಂಧಿ ಎಷ್ಟಕ್ಕೂ ಸಾಲದು; ಮೂರನೆಯದಾಗಿ ಸಹಜೀವನದ ತತ್ವ ಘೋಷಣೆಯು, ಸರಕಾರದ ಪವಿತ್ರ ವಚನಗಳೂ ಪ್ರಾಮಾಣಿಕವೆಂದು ಸಾಬೀತಾಗಲು ಬ್ಯಾಂಕುಗಳ ಮೇಲೆ ಕೈಮಾಡುವುದು ಸಾಧುವಾಗಲಾರದು. ಈ ಬ್ಯಾಂಕುಗಳನ್ನು ಮುರಿಯುವ ಪ್ರಯತ್ನಕ್ಕಿಂತ ರಿಸರ್ವ ಬ್ಯಾಂಕು ವಹಿಸಿದಂಥ ಬಗ್ಗಿಸುವ ಪ್ರಯತ್ನವು ಹೆಚ್ಚು ಆದರಣೀಯವೂ, ಪ್ರಭಾವಶಾಲಿಯೂ, ಸರ್ವಜನಹಿತಕಾರಿಯೂ ಆಗುವುದೆಂದು ನಮ್ಮ ಅಭಿಮತ.

ಶುಭ ಸಂದೇಶಗಳು

ಡಾ. ಸಿ. ಪಿ. ರಾಮಸ್ವಾಮಿ ಐಯರ್,
ಬನಾರಸ್ ಹಿಂದೂ ವಿಶ್ವ ವಿದ್ಯಾನಿಲಯದ ಉಪಾಧ್ಯಕ್ಷ.

"... .....ಸಮಾರಂಭಕ್ಕೆ ಯಶಸ್ಸನ್ನೂ ಸಂಸ್ಥೆಯ ಉತ್ತರೋತ್ತರ ಅಭಿವೃದ್ಧಿಯನ್ನೂ ಕೋರುತ್ತೇನೆ."

ಶ್ರೀ ಎ. ಎಸ್. ಪಿ. ಐಯರ್,
ನ್ಯಾಯಾಧೀಶ, ಮದ್ರಾಸು ಹೈ ಕೋರ್ಟು.

'.........ಲೋಭದಿಂದ ತುಳುಕುವ ಮತ್ತು ವಿಪರೀತ ಬಡ್ಡಿ ಹೊರಿಸಿ ಸಾಲ ಕೊಡುವ ಜನರು ತುಂಬಿರುವ ಈ ನಾಡಿನಲ್ಲಿ ಉತ್ತಮ ಬ್ಯಾಂಕು ಸುವರ್ಣದಷ್ಟು ಅನರ್ಘ್ಯವಾಗಿದೆ. ನಿಮ್ಮ ಬ್ಯಾಂಕು ತನ್ನ ಪೂರ್ವಾಚಾರ ಪದ್ಧತಿಯಲ್ಲಿ ಮುಂದುವರಿದು ತನ್ನ ತಾಯಿನಾಡಿನ ಸೇವೆಯನ್ನು ಪ್ರಾಮಾಣಿಕತೆಯಿಂದ ಮುಂದುವರಿಸಲಿ.'

ಶಾಖೆಗಳು

* *

(1) ಉಡುಪಿ
(2) ಕುಂದಾಪುರ
(3) ಮಂಗಳೂರು (ರಥಬೀದಿ)
(4) ಮದರಾಸು
(5) ಶಿವಮೊಗ್ಗ
(6) ಮಂಗಳೂರು (ಬಂದರ)
(7) ಮಡಿಕೇರಿ
(8) ವಿರಾಜಪೇಟೆ
(9) ಸಕ್ಲೇಶಪುರ
(10) ತಲಚೇರಿ
(11) ಮೈಸೂರು
(12) ಸಾಗರ
(13) ಶಿರ್ಸಿ
(14) ವೆಲ್ಲೂರು
(15) ಸೇಲಂ (ಶಿವಾ ಪೇಟೆ)
(16) ಮೆಟ್ಟು ಪಾಳಯಂ
(17) ಮುಲ್ಕಿ
(18) ತೀರ್ಥಹಳ್ಳಿ
(19) ಭದ್ರಾವತಿ
(20) ಹಾಸನ
(21) ಕೊಯಮುತ್ತೂರು
(12) ಬೆಂಗಳೂರು ನಗರ
(23) ಕಲ್ಲಿಕೋಟೆ
(24) ಮುಂಬಾಯಿ (ಕೋಟೆ)
(25) ಹುಬ್ಬಳ್ಳಿ
(26) ಧಾರವಾಡ
(27) ಕಣ್ಣಾನೂರು
(28) ಕೊಚ್ಚಿ
(29) ಸೇಲಂ (ಟೌನ್)
(30) ಬ್ಯಾಡಗಿ
(31) ಹಾವೇರಿ
(32) ತ್ರಿಚ್ಚೂರು
(33) ಪ್ರೊನ್ನಂಪೇಟೆ
(34) ಸೋಮವಾರ ಪೇಟೆ
(35) ಚಿತ್ತೂರು
(36) ಬಳ್ಳಾರಿ
(37) ರಾಯದುರ್ಗ
(38) ಕೊಟ್ಟೂರು
(39) ಮುಂಬಾಯಿ (ಮಾಂಡ್ವಿ)
(40) ರಾಣೆ ಬೆನ್ನೂರು
(41) ಪಾಲ್ಘಾಟ್
(42) ಮಧುರೆ

ಸದ್ಯದಲ್ಲಿಯೇ ತೆರೆಯಲಿರುವ ಶಾಖೆಗಳು

(1) ಹೈದರಾಬಾದು
(2) ಸಿಕಂದರಾಬಾದು
(3) ರಾಯಚೂರು
(4) ಆದೋನಿ

ಕಳೆದ ಐದು ದಶಕಗಳಲ್ಲಿ ಬ್ಯಾಂಕು ಸಾಧಿಸಿದ ಪ್ರಗತಿಯನ್ನು ಈ ಯಾದಿ ತೋರಿಸುವುದು:

(ಸಾವಿರಕ್ಕೆ ಸರಿಪಡಿಸಿದೆ)

ವರ್ಷ	ತೆತ್ತ ಬಂಡವಾಳ	ಕ್ಷೇಮನಿಧಿ	ಡಿಪೊಜಿಟ	ಕ್ಯಾಶ	ಇನ್ವೆಸ್ಟ್‌ಮೆಂಟ	ಸಾಲ ಅಥವಾ ಎಡ್ವಾನ್ಸ್	ಚಲಾವಣೆ ಬಂಡವಾಳ	ಏನ್ ಮುನಾಫೆ
	Rs.	Rs.	Rs.	Rs.	Rs.	Rs.	Rs.	Rs.
1906	5,000	—	—	—	—	5,000	5,000	—
1916	26,000	5,000	4,000	1,000	—	35,000	38,000	2,000
1926	1,98,000	76,000	6,44,000	46,000	83,000	8,15,000	9,64,000	25,000
1936	2,89,000	3,52,000	37,98,000	3,34,000	14,87,000	24,13,000	46,32,000	45,000
1946	15,97,000	4,53,000	2,07,48,000	43,67,000	85,60,000	1,38,37,000	3,00,01,000	2,07,000
1955	20,00,000	12,00,000	4,21,73,000	72,68,000	1,96,99,000	2,23,27,000	5,45,09,000	3,35,000

ಹಿಂದೂ ದೇಶದಲ್ಲಿದ್ದ 72 ದೇಶೀಯ ಜೊಯಿಂಟ್ ಸ್ಟಾಕ್ ಶೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಈ ಬ್ಯಾಂಕಿನ ಸ್ಥಾನವನ್ನು ಬಲ್ಲಿರಾ?

	ಸ್ಥಾ
ರಿಜಿಸ್ಟರ ಆದ ತಾರೀಕು	9
ತೆತ್ತ ಬಂದ ಪಾಲು ಭಂಡವಾಳ	30
ಕ್ಷೇಮ ನಿಧಿಗಳು	29
ಠೇವಣಾತಿಗಳು	27
ಹೊರ ಬಾಕಿ ಇರುವ ಸಾಲಗಳು ಮತ್ತು ವಟ್ಟಾಸಿದ ಹುಂಡಿಗಳು	30
ಒಟ್ಟು ಚಲಾವಣೆ ಭಂಡವಾಳ	27
ಶಾಖೆಗಳು	21
ಒರ್ಡಿನರಿ ಪಾಲುಗಳ ಮೇಲೆ ಹಂಚಿದ ಲಾಭಾಂಶ	13

ಅಕ್ಟೋಬರದಲ್ಲಿ ಹೊಸ ರಾಜ್ಯಗಳು

ಢೇಬರರ ಭರವಸೆಯ ಹೇಳಿಕೆ

ಕಾಂಗ್ರೆಸಿನ ಅಧ್ಯಕ್ಷ ಶ್ರೀ. ಢೇಬರರು ಜಲಾಲಿ ಆಯೋಗದ ಸಿಫಾರಸನ್ನು ಪರ್ಯಾಲೋಚಿಸಿ, ಸೂಕ್ತ ಬದಲಾವಣೆಗಳೊಂದಿಗೆ ರಚಿಸಲ್ಪಡುವ ಹೊಸ ರಾಜ್ಯಗಳು ಇದೇ ಅಕ್ಟೋಬರದಲ್ಲಿ ಅಸ್ತಿತ್ವಕ್ಕೆ ಬರುವುದು ನಿಶ್ಚಯ ಎಂದು ಪುನರುಚ್ಚರಿಸಿದ್ದಾರೆ. ಹೊಸ ರಾಜ್ಯಗಳ ಸ್ವರೂಪದ ಬಗ್ಗೆ ಇನ್ನೂ ಬಿಡಿಸಲ್ಪಡದ ಕೆಲವು ವಿಷಯಗಳು ಇದ್ದರೂ ಸಹ ಕೇಂದ್ರ ಸರಕಾರವು ಇಷ್ಟರಲ್ಲಿಯೇ ರಾಜ್ಯಗಳ ಪುನರ್ಘಟನೆಗೆ ಸಂಬಂಧಿಸಿದ ಸಾಮಾನ್ಯ ಕರಡನ್ನು ಆಯಾ ಶಾಸನಾಂಗದ ಅವಗಾಹನೆಗಾಗಿ ಕಳಿಸುವುದೆಂದು ತಿಳಿದು ಬರುತ್ತದೆ.

ಅಕಾಲಿಗಳೊಡನೆ ಸಂಧಾನ

ಪಂಜಾಬಿನ ಅಕಾಲಿಗಳು ಹೂಡಿದ್ದ ತಕರಾರುಗಳು ಈಗ ಸಿಖುಗಡೆಗೆ ಬಂದಂತಾಗಿದ್ದು, ಕೇಂದ್ರ ಸರಕಾರದ ವರಿಷ್ಠರು ಸೂಚಿಸಿದ ಪರಿಹಾರಕ್ಕೆ ಅವರು ಒಪ್ಪಿರುವರೆಂದು ವರದಿಗಳು ಹೇಳುತ್ತವೆ. ಹಿಮಾಚಲ ಪ್ರದೇಶವನ್ನು ನೇರಾಗಿ ಕೇಂದ್ರದ ಆಡಳಿತೆಗೊಳಪಟ್ಟ ಪ್ರದೇಶವಾಗಿ ಪರಿಗಣಿಸಲಾಗುತ್ತದೆ. ಪೆಪ್ಸು ಮತ್ತು ಪಂಜಾಬುಗಳನ್ನು ಒಂದುಗೂಡಿಸಿ ಏಕ ರಾಜ್ಯವಾಗಿ ರೂಪಿಸಲಾಗುತ್ತದೆ; ಆದರೆ ಅಕಾಲಿಗಳ ಬೇಡಿಕೆಯನ್ನು ತಾತ್ವಿಕವಾಗಿ ಮನ್ನಿಸಲು ಆ ರಾಜ್ಯದಲ್ಲಿ ಪ್ರತ್ಯೇಕ ಪ್ರದೇಶಗಳನ್ನು ರಚಿಸಿ ಅವುಗಳ ವಿಶಿಷ್ಟಹಿತಾಸಕ್ತಿಯ ರಕ್ಷಣೆಗೆ ಪ್ರಯತ್ನಿಸಲಾಗುತ್ತದೆ—ಇದು ಪರಿಷ್ಕಾರ ನಿರ್ಣಯದ ಸಾರ.

ಮುಂದಿನ ಚುನಾವಣೆ

ಕೇಂದ್ರದಲ್ಲಿರುವ ಗೃಹಶಾಖೆಯ ಮಂತ್ರಿ ಶ್ರೀ ದಾತಾರರು ಮಹಾ ಚುನಾವಣೆಯನ್ನು ಮುಂದಿನ ವರ್ಷದ ಆದಿಭಾಗದಲ್ಲಿ ನಡೆಸಬೇಕೆನ್ನುವ ಸರಕಾರದ ಕಾರ್ಯಕ್ರಮವು ಬದಲಾಗದೆಂದು ಹೇಳಿದ್ದಾರೆ. ರಾಜ್ಯಗಳ ಪುನರ್ಘಟನೆಯ ಪ್ರಶ್ನೆ ದೇಶದ ಮುಂದಿದ್ದರೂ ಪೂರ್ವ ನಿಶ್ಚಿತ ಕಾರ್ಯಕ್ರಮವನ್ನು ಅನುಸರಿಸಬಹುದೆಂದು ಅವರ ಅಭಿಪ್ರಾಯ.

ಕಾಲ್ನಡೆಗಳ ಜಾತ್ರೆ

ಬಿಹಾರಿನ ಸೋನೇಪುರದಲ್ಲಿ ಕಾಲ್ನಡೆಗಳ ಜಾತ್ರೆ ನಡೆದಾಗಿನ ಒಂದು ದೃಶ್ಯವಿದು—ಭಾರತದಲ್ಲಿ ಜಗತ್ತಿನ ಕಾಲಂಶದಷ್ಟು, ಅಂದರೆ ೧೫೫೦ ಲಕ್ಷ, ಕಾಲ್ನಡೆಗಳಿವೆ ಎಂದು ಅಂದಾಜು. ಕುರಿಗಳ ಸಂಖ್ಯೆಯು ೩೯೦ ಲಕ್ಷ; ಆಡುಗಳದು ೪೭೦ ಲಕ್ಷ. ಎತ್ತು, ಕೋಣಗಳು ಕೃಷಿಗೆ ನೆರವಾಗುತ್ತವೆ; ದನಗಳೂ ಎಮ್ಮೆಗಳೂ ಹಾಲನ್ನು ಕೊಡುತ್ತವೆ. ಆಡು ಸಹ ಹಾಲು ನೀಡುತ್ತವೆ; ಮಾಂಸವನ್ನೂ ಒದಗಿಸುತ್ತವೆ. ಕುರಿಯೊಂದಲೂ ನಮಗೆ ಮಾಂಸ ಸಿಗುವುದಲ್ಲದೆ ಅದು ಉಣ್ಣೆಯನ್ನೂ ಪೂರೈಸುತ್ತದೆ. ಭಾರತದಲ್ಲಿ ಹಾಲಿನ ಉತ್ಪಾದನೆ ಜಗತ್ತಿನಲ್ಲಿಯೇ ಅತ್ಯಲ್ಪ—ಪರಿಣಾಮದಲ್ಲಿ ಜೀವ ಸತ್ವದ ಪೂರೈಕೆಯು ನಮ್ಮ ಮಕ್ಕಳಿಗೆ ಬೇಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಜಾನುವಾರುಗಳ ತಿನಿಸುಗಳ ಕುರಿತಾಗಿ ನಾವು ಜಾಗರೂಕತೆ ವಹಿಸದಿರುವುದೇ ಈ ದುಸ್ಥಿತಿಗೆ ಕಾರಣ. ಪಂಚವಾರ್ಷಿಕ ಯೋಜನೆಯಲ್ಲಿ ಜಾನುವಾರುಗಳ ಸಾಕಣೆಗೆ ವಿಶೇಷ ಗಮನ ಕೊಡಲಾಗಿದೆ. ಅದರ ಫಲವು ನಿಧಾನವಾಗಿ ಈಗ ಕಂಡು ಬರತೊಡಗಿದೆ. ಇದು ತೃಪ್ತಿಕರವಾದ ವಿಷಯ.

ಹೊಸ ತೆರಿಗೆಯ ಸಮರ್ಥನೆ

ಅರ್ಥಸಚಿವ ಶ್ರೀ ದೇಶಮುಖರು ರಾಜ್ಯಸಭೆಯಲ್ಲಿ ಮುಂಗಡ ಪತ್ರದ ಮೇಲೆ ನಡೆದ ಚರ್ಚೆಗೆ ಉತ್ತರವೀಯುತ್ತಾ ಹೊಸತಾಗಿ ಹೇರಿದ ಅಥವಾ ಹೆಚ್ಚಿಸಿದ ಅಬಕಾರಿ ಸುಂಕಗಳಿಂದ ಸಾಮಾನ್ಯ ಜನರ ಜೀವನ ಮಟ್ಟವನ್ನು ಎತ್ತರಿಸುವ ಪ್ರಯತ್ನದ ಮೇಲೆ ಹೆಚ್ಚಿನ ದುಷ್ಪರಿಣಾಮವಾಗಬಹುದೆಂಬ ಭಯ ತನಗಿಲ್ಲ ಎಂದಿದ್ದಾರೆ. ಹೊಸ ತೆರಿಗೆಗಳನ್ನು ಸಾಮಾನ್ಯ ಆಯವ್ಯಯವನ್ನು ಬಾಯಿಗೂಡಿಸುವ ಮಿತ ದೃಷ್ಟಿಯಿಂದ ನೋಡದೆ, ಎರಡನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ವಿಶಾಲ ಹಿನ್ನೆಲೆಯನ್ನಿಟ್ಟುಕೊಂಡು ಸ್ವಾಗತಿಸಬೇಕು ಎಂದಿದ್ದಾರೆ.

ಲೋಕ ಸಭೆಯ ಅಧ್ಯಕ್ಷ

ಲೋಕ ಸಭೆಗೆ ಶ್ರೀ. ಅನಂತಶಯನಂ ಅಯ್ಯಂಗಾರರು ಅಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ. ಅವರಿಗೆ ಯಾರೂ ಪ್ರತಿಸ್ಪರ್ಧಿಗಳಿರಲಿಲ್ಲ.

ಮೌಂಟ್ ಬೇಟನರ ಆಗಮನ

ಭಾರತವು ಸ್ವಾತಂತ್ರ್ಯ ಪಡೆದ ಪ್ರಥಮದಲ್ಲಿ ಗವರ್ನರಜನರಲರಾಗಿದ್ದ ಲಾರ್ಡ್ ಮೌಂಟ್ ಬೇಟನರು ಆಂಗ್ಲ ಸಾಮ್ರಾಜ್ಯದ ನೌಕಾಧಿಪತಿಯ ನೆಲೆಯಿಂದ ಇದೇ ಬುಧವಾರದಿಂದ ಒಂದು ವಾರದ ವರೆಗಿನ ಸಂದರ್ಶನಾರ್ಥವಾಗಿ ಭಾರತಕ್ಕೆ ಪತ್ನೀಸಮೇತ ಆಗಮಿಸಿದ್ದಾರೆ

ಸ್ಪಷ್ಟೀಕರಣ

ಸಿಯಾಟೊ ಪರಿಷತ್ತು ತನ್ನ ಗೊತ್ತುವಳಿಯಲ್ಲಿ ಕಾಶ್ಮೀರ ಪ್ರಶ್ನೆಯನ್ನು ಉಲ್ಲೇಖಿಸಿರುವುದಕ್ಕೆ ಪಾಕಿಸ್ತಾನದ ಒತ್ತಾಯವೇ ಕಾರಣವೆಂದೂ ಅಭ್ಯಾಗತ ರಾಷ್ಟ್ರವನ್ನು ಸೋಯಿಸುವ ಇಚ್ಛೆಯಿಲ್ಲದೆ ಅನಿವಾರ್ಯವಾಗಿ ಉಳಿದ ರಾಷ್ಟ್ರಗಳು ಕಾಶ್ಮೀರ ಪ್ರಶ್ನೆಯನ್ನು ಪ್ರಸ್ತಾಪಿಸುವ ಅಂಶಕ್ಕೆ ಸೈಗುಟ್ಟಿದವೆಂದೂ ಪಾಶ್ಚಾತ್ಯ ವಿದೇಶ ಸಚಿವರು ನೆಹರುಗಳಿಗೆ ಮಂದಟ್ಟುಪಡಿಸಿರುವರೆಂದು ತಿಳಿದು ಬರುತ್ತದೆ. ಇದಕ್ಕೆ ಮಹತ್ವಕೊಡಲಾಗದೆಂದು ಅವರು ಹೇಳಿರುವರೆಂದೂ ಸುದ್ದಿ.

ಉಡುಪಿ

ಶತಮಹೋತ್ಸವ— ಶ್ರೀ ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ಶತಾಬ್ದಿ ಸಮಾರಂಭವು ತಾ. 24 ರಂದು ಬಹು ವಿಜೃಂಭಣೆಯಿಂದ ಜರಗಲಿರುವುದು. ಪರ್ಯಾಯ ಶ್ರೀ ಅದಮಾರು ಸ್ವಾಮಿಗಳ ನೇತೃತ್ವದಲ್ಲಿ ಉತ್ಸವ ಆಚರಣಾ ಸಮಿತಿ ರಚಿಸಲಾಗಿದೆ.

ಸರ್ದಾರ್ ಕಾಂಗ್ರೆಸ್ ಕಮಿಟಿ ಸಭೆಯು— ತಾ. 6ರಂದು ಶ್ರೀ ಬಾಳ್ಕಟ್ಟೆ ಬೀಡು ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಮಾವಲಂಕರರ ಹಾಗೂ ಆಚಾರ್ಯ ನರೇಂದ್ರ ದೇವರ ನಿಧನಕ್ಕಾಗಿ ಸಂತಾಪಸೂಚಿಸಲಾಯಿತು. ಉಡುಪಿಯ ಸಾರ್ವಜನಿಕ ಕೆಲಸಗಾರ ಕಾಂಗ್ರೆಸ್ ಭಕ್ತ ಶ್ರೀ ಪಿ. ಬಾಲಕೃಷ್ಣ ಪ್ರಭುಗಳ ಅಕಾಲ ನಿಧನಕ್ಕಾಗಿ ದುಃಖವನ್ನು ವ್ಯಕ್ತಪಡಿಸಲಾಯಿತು. ಮತದಾರರ ಯಾದಿಯಲ್ಲಿ ಬಿಟ್ಟುಹೋದ ಹೆಸರುಗಳನ್ನು ಸೇರಿಸುವ ಬಗ್ಗೆ ಶೀಘ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದಾಯಿತು.

ಸಂದರ್ಶನ— ಸರ್ ಬೆನಗಲ್ ರಾಮರಾಯರು ಕಸ್ತೂರ್ಬಾ ಮೆಡಿಕಲ್ ಕಾಲೇಜ್, ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜುಗಳನ್ನು ಸಂದರ್ಶಿಸಿ ಅವುಗಳ ಶಿಸ್ತು ವ್ಯವಸ್ಥೆ ಹಾಗೂ ಪ್ರಗತಿಯನ್ನು ಮನಗಂಡು ವಿಶೇಷ ಸಂತೃಪ್ತಿ ಸೂಚಿಸಿರುವರೆಂದು ತಿಳಿದುಬರುತ್ತದೆ. ಮಲ್ಪೆಗೂ ಭೇಟಿಕೊಟ್ಟು ತಾ. 14 ರಂದು ಬಜ್ಪೆಗೆ ತೆರಳಿಅಲ್ಲಿಂದ ವಿಮಾನ ಮೂಲಕ ಬೊಂಬಾಯಿಗೆ ಮರಳಿ ತೆರಳಿದರು.

ಜಿಲ್ಲಾ ಬೋರ್ಡ್ ಸಭೆ— ಯು ಇದೇ ತಾ. 19ನೇ ಮಧ್ಯಾಹ್ನ 2 ಗಂಟೆಗೆ ಜಿಲ್ಲಾಬೋರ್ಡ್ ಸಭಾಸದನದಲ್ಲಿ ಜರಗಲಿದೆ.

ಅದಮಾರು—ಇಲ್ಲಿಯ ಹಿಂದೂ ಹಾ| ಎ. ಶಾಲೆಯ ವಾರ್ಷಿಕೋತ್ಸವವು ಈಚೆಗೆ ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಕೆ ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಇಂದಿರಾ ಎಸ್. ರಾಯರು ಧ್ವಜ ವಂದನೆಗೈದರು ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರ ಕೃಪೆಯಿಂದ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಶಾಲಾ ಮೆನೇಜರ್ ಶ್ರೀ. ಗಿರಿಯ ಶೆಟ್ಟರು ಸ್ವಾಗತ ಭಾಷಣಮಾಡಿದರು. ವರದಿ ವಾಚನವಾದ ಬಳಿಕ ಶ್ರೀ ವೈ. ಲಕ್ಷ್ಮೀನಾರಾಯಣ ಭಟ್ಟರು ಸ್ತುತಿವಾಚನಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣಗಳಾದ ಬಳಿಕ ಶಾಲಾ ಬಾಲಬಾಲಕಿಯರ ಮನರಂಜನೆ ಕಾರ್ಯಕ್ರಮಗಳಾದುವು.

ಕುಂಜಿಪಳ್ಳಿ— ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಾಮೂಲು ಮೇರೆಗೆ ನಡೆಯುವ ಮಹೋತ್ಸವಾದಿ ಕಾರ್ಯಕ್ರಮಗಳು ಇದೇ ತಾ. 13ರಿಂದ 16ರ ವರೆಗೆ ನಡೆಯುವುದೆಂದೂ ಭಕ್ತಾದಿಗಳು ಬಂದು ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ, ಶ್ರೀ ದೊಡ್ಡ ಬೀಡು ಸಂಜೀವ ಹೆಗ್ಡೇರು ತಿಳಿಸುತ್ತಾರೆ.

ಕುಂಬಳೆ— ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಚಾಲಕರಾದ ಶ್ರೀ ಗುರೂಜೀಯವರ 51ನೇ ಜನ್ಮದಿನೋತ್ಸವವು ತಾ. 8 ರಲ್ಲಿ ಶ್ರೀ ಎಮ್. ಕೇಶವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಮಹಾಯಿನಾಡಿ ಶಾಲಾ ಶ್ರೇಣಿಯ ಪರೀಕ್ಷಾಧಿಕಾರಿ ಶ್ರೀ ಪಿ. ಶಿನ್ನಪ್ಪ ಶೆಟ್ಟರು ತಾ. 6 ಮತ್ತು 7ರಲ್ಲಿ ಅನುಕ್ರಮವಾಗಿ ಶಾಲಾಧ್ಯಾಪಕರ ಸಭೆಯಲ್ಲೂ, ಮಕ್ಕಳ ಸಮಾಜ ಸಭೆಯಲ್ಲೂ ಭಾಷಣವಿತ್ತರು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಉಡುಪಿ

ಅನುಕರಣೀಯ ದಾನ— ಉಡುಪಿ ಕೆನರಾ ಬೇಂಕಿಂಗ್ ಕೊರ್ಪರೇಶನಿನವರು ತಮ್ಮ ಅಧೀನವಲ್ಲಿರುವ ನೋರ್ತ್ ಎಲಿಮೆಂಟರೀ ಶಾಲಾ ಕಟ್ಟಡವನ್ನು ಉಡುಪಿ ನಗರ ಸಭೆಗೆ ಬಿಟ್ಟುಕೊಡುವ ಸಮಾರಂಭವು ತಾ. 11ರಲ್ಲಿ ಸಂಜೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್ ಕೆಪ್ಟನ್ ಮಂಗೇಶ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬೇಂಕಿನ ಚೆರ್ಮೆನ್ ಡಾ. ಎಮ್. ಆರ್. ಪೈಗಳು ಸ್ವಾಗತ ಮಾತುಗಳನ್ನಾಡಿ, ತಮ್ಮ ಬೇಂಕಿನ ಸುವರ್ಣ ಮಹೋತ್ಸವದ ನೆನಪಿಗಾಗಿ ಈ ಶಾಲಾ ಕಟ್ಟಡವನ್ನು ನಗರ ಸಭೆಗೆ ದಾನಮಾಡಲು ಡ್ಯಾರೆಕ್ಟರರು ನಿರ್ಧರಿಸಿದ್ದು ಇಂದು ಅದನ್ನು ನಗರ ಸಭೆಗೆ ಬಿಟ್ಟುಕೊಡುವುದಾಗಿ ತಿಳಿಸಿದರು. ನಗರ ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ನಗರ ಸಭೆಯ ಪರಿಯಿಂದ ದಾನ ಸ್ವೀಕರಿಸಿದರು. ಉದಾರಮನಸ್ಸಿನಿಂದ ಅನುಕರಣೀಯ ದಾನ ವಿತ್ತುದಕ್ಕಾಗಿ ಬೇಂಕಿನ ಡ್ಯಾರೆಕ್ಟರರಿಗೆ ನಗರ ಸಭೆಯ ಕಡೆಯಿಂದ ಮಾನಪತ್ರ ನೀಡಲಾಯಿತು. ಸಭಾಧ್ಯಕ್ಷರು ಮಾತನಾಡುತ್ತಾ, ಧನವಂತರು ತಮ್ಮ ಹಣವನ್ನು ಶಿಕ್ಷಣ ಪ್ರಚಾರಕ್ಕಾಗಿ ದಾನಮಾಡುವುದು ಉತ್ತಮವೆಂದರು. ಬಳಿಕ ಬೇಂಕಿನ ಅಧ್ಯಕ್ಷ ಸ್ಥಾಪಕರಾದ ದಿವಂಗತ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬರ ಜೀವನಾದರ್ಶಗಳನ್ನು ವಿವರಿಸಿ ಅವರ ಭಾವಚಿತ್ರವನ್ನು ಅನಾವರಣ ಮಾಡುವಂತೆ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳವರು ಉಡುಪಿಯ ಒನೆರರಿ ಫಸ್ಟ್‌ಕ್ಲಾಸ್ ಬೆಂಚ್ ಮೆಜಿಸ್ಟ್ರೇಟ್ ಶ್ರೀ ಕೆ. ಕೃಷ್ಣಯ್ಯನವರನ್ನು ಕೇಳಿಕೊಂಡರು. ಶ್ರೀ ಕೃಷ್ಣಯ್ಯನವರು ಭಾವಚಿತ್ರವನ್ನು ಅನಾವರಣ ಮಾಡುತ್ತಾ, ದಿವಂಗತರ ಗುಣಗಾನಮಾಡಿ ಅವರ ಆದರ್ಶವು ಎಲ್ಲರಿಗೂ ಮೇಲ್ಪಂಗ್ತಿಯಾಗಿದೆ ಎಂದು ಹೇಳಿದರು. ಡಾ| ಟಿ. ಎಮ್. ಎ. ಪೈ, ಶ್ರೀ ಎ. ಜೆ. ಆಳ್ವೆಯವರು ಕಾಲೋಚಿತ ಮಾತುಗಳನ್ನಾಡಿ ಕೊರ್ಪರೇಶನಿನ ದಾನವನ್ನು ಕೊಂಡಾಡಿದರು. ಆ ವೇಳೆ ಬೇಂಕಿನ ಮತ್ತು ನಗರ ಸಭೆಯ ಕಡೆಯಿಂದ ಅನುಕ್ರಮವಾಗಿ ಶ್ರೀಗಳಾದ ಬಿ. ವಿ. ಬಾಳಿಗ, ಎಮ್. ಎಲ್. ಎ. ಮತ್ತು ಪಿ. ವಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಸರ್ ಬೆನಗಲ್ಲರಿಗೆ ಮಾನಪತ್ರ— ರಿಜರ್ವ್ ಬೇಂಕಿನ ಗವರ್ನರ್ ಬೆನಗಲ್ ರಾಮರಾಯರಿಗೆ ತಾ. 12ರಲ್ಲು ಸಂಜೆ ಧಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಸುವರ್ಣೋತ್ಸವ ಸ್ಮಾರಕ ಎಲಿಮೆಂಟರಿ ಶಾಲೆಯಲ್ಲಿ ನಗರ ಸಭೆಯ ಕಡೆಯಿಂದ ಅಧ್ಯಕ್ಷ ಶ್ರೀ. ಕೆ. ಕೆ. ಪೈಗಳು ಮಾನಪತ್ರವನ್ನಿತ್ತು ಗೌರವಿಸಿದರು. ಉಡುಪಿ ಪ್ರಗತಿಯನ್ನೊಳಗೊಂಡ ಪ್ರಾಮುಖ್ಯ ವಿಷಯಗಳನ್ನು ಮಾನಪತ್ರದಲ್ಲಿ ಸೂಚಿಸಲಾಗಿತ್ತು. ಸರ್ ಬೆನಗಲ್ಲರು ಮಾನಪತ್ರಕ್ಕೆ ಉತ್ತರನೀಯುತ್ತಾ, ಉಡುಪಿಯು ಸರ್ವವಿಧದಲ್ಲಿ ಅಂದರೆ ಬೇಂಕಿಂಗ್, ಶಿಕ್ಷಣ, ಸಹಕಾರಗಳಲ್ಲಿ ಮುಂದರಿದುದು ಸಂತೋಷಕರವೆಂದರು. ಭಾವಿ ಕರ್ನಾಟಕ ಪ್ರಾಂತ ರಚನೆಯಲ್ಲಿ ದ. ಕ. ಜಿಲ್ಲೆಗೆ ಹೆಚ್ಚಿನ ಸೌಕರ್ಯಗಳು ದೊರೆತು ಅದು ಇನ್ನಷ್ಟು ಪ್ರಗತಿಯನ್ನು ಹೊಂದಲು ಸಾಧ್ಯವಿದೆ ಎಂದರು. ನಗರ ಸಭೆಯ ಉಪಾಧ್ಯಕ್ಷ ಶ್ರೀ. ಪಿ. ವಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಕೆನರಾ ಬ್ಯಾಂಕಿಂಗ್ ಕೊರ್ಪರೇಶನಿನ ಸುವರ್ಣಮಹೋತ್ಸವ— ನಗರಸಭೆಯ ಮಾನಪತ್ರವನ್ನು ಸ್ವೀಕರಿಸಿದ ಸರ್ ಬೆನಗಲ್ ರಾಮ ರಾಯರು ಸೀದಾ ಕೊರ್ಪರೇಶನ್ ಬೇಂಕಿಗೆ ಆಗಮಿಸಿ, ಅಲ್ಲಿ ಬೇಂಕಿನ ಸುವರ್ಣಮಹೋತ್ಸವದ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭಕ್ಕೆ ಊರಪರವೂರ ಮಹನೀಯರು ಅತ್ಯಧಿಕ ಸಂಖ್ಯೆಯಲ್ಲಿ ನೆರೆದಿದ್ದರು. ಶ್ರೀ ರಾಮಚಂದ್ರ ಮೂರ್ತಿಗಳಿಂದ ಪ್ರಾರ್ಥನೆಯಾದ ನಂತರ ಬೇಂಕಿನ ಚೆರ್ಮೆನ್ ಡಾ. ಸುಂದರ ರಾಮ ಪೈಗಳು ಸುವರ್ಣಮಹೋತ್ಸವದ ಸಂತೋಷದಾಯಕ ಸ್ವಾಗತ ಭಾಷಣಮಾಡಿದರು. ಜನರಲ್ ಮೆನೇಜರ್ ಶ್ರೀ ವಿ. ಆರ್. ಕಾಮತರು ಬೇಂಕಿನ ಪ್ರಗತಿಪರ ವರದಿಯನ್ನೋದಿದರು. ಡಿಪ್ಯುಟಿ ಮೆನೇಜರ್ ಶ್ರೀ ಕೆ. ಎಸ್. ಶೆಣ್ಯೆಯವರು ಶುಭಕೋರಿ ಬಂದ ಹಲವು ಸಂದೇಶಗಳಲ್ಲಿ ಕೆಲವನ್ನು ಓದಿದರು. ಬಹು ವರ್ಷಗಳಿಂದ ಬೇಂಕಿನ ಕೆಲಸವನ್ನು ತತ್ಪರತೆಯಿಂದ ಮಾಡುತ್ತ ಬಂದ ಶ್ರೀ ವಿಠಲ ಭಂಡಾರಿಗಳಿಗೆ ಬಂಗಾರದ ಪದಕ ಬಹುಮಾನವೀಯಲಾಯಿತು. ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎಂ. ಎಲ್. ಎ., ಜಿ. ಸೋಮಶೇಖರ ರಾವ್ ಮತ್ತು ಬಿ. ಶೀನಪ್ಪ ಹೆಗ್ಡೆಯವರು ಕೋರ್ಪರೇಶನ್ ಬೇಂಕು ಸರ್ವಾಂಗೀಣ ಅಭಿವೃದ್ಧಿ ಪಥದಲ್ಲಿ ನಡೆದು ಬಂದು ಇಂದು ಸುವರ್ಣೋತ್ಸವ ಆಚರಿಸಿದುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ದ. ಕ. ಜಿಲ್ಲೆಯ ಶೆಡ್ಯೂಲ್ಡ್ ಬೇಂಕುಗಳು ಠೇವಣಿದಾರರಿಗೆ ಸರ್ವರ ಮನ್ನಣೆಗೆ ಪಾತ್ರವಾದುದು ಅಭಿನಂದನೀಯವೆಂದರು. ಬೇಂಕುಗಳನ್ನು ರಾಷ್ಟ್ರೀಕರಣ ಮಾಡುವ ಯೋಜನೆಕುರಿತು ಜನತೆಯಲ್ಲೇನು ಕೋಲಾಹಲಗಳಿದ್ದರೂ ಸರಕಾರವು ಕೆಲವೊಂದು ಬೇಂಕುಗಳನ್ನು ಬಿಟ್ಟು ಇತರ ಬೇಂಕುಗಳನ್ನು ರಾಷ್ಟ್ರೀಕರಣ ಮಾಡಲಾರದೆಂದು ಅಭಿಪ್ರಾಯವಿತ್ತರು. ಆದುದರಿಂದ ಬೇಂಕುಗಳು ಜನತೆಗೆ ಹೆಚ್ಚು ಹೆಚ್ಚಾಗಿ ಸವಲತ್ತುಗಳನ್ನು ನೀಡಿ ಸರಕಾರದೊಡನೆ ಸಹಕರಿಸಬೇಕೆಂದರು. ಬೇಂಕುಗಳ ಪಾತ್ರವನ್ನು ಕುರಿತು ಪ್ರಸ್ತಾಪಿಸುತ್ತಾ, ದೇಶದಲ್ಲಿಯ ನಿರಕ್ಷರತೆ, ಬಡತನ ಹೋಗಲಾಡಿಸದಿದ್ದರೆ ಪ್ರಜಾಪ್ರಭುತ್ವದ ಸಾರ್ಥಕತೆ ಬರಲಾರದು. ಜನತೆಯ ಜೀವನಮಟ್ಟ ಆದಷ್ಟು ಬೇಗನೆ ಸುಧಾರಿಸಬೇಕಾಗಿದೆ. ಈ ಭಾಗದಲ್ಲಿ ಬೇಂಕುಗಳು ಸರಕಾರದೊಡನೆ ಸಹಕರಿಸಿ ಸ್ವಾತಂತ್ರ್ಯದ ಸವಿಯನ್ನು ಜನತೆಗೆ ಮುಟ್ಟಿಸಬೇಕಾಗಿದೆ ಎಂದರು. ಡಾ. ಯು. ಪಿ. ಮಲ್ಯರು ಧನ್ಯವಾದಗಳನ್ನಿತ್ತರು. ಆರಂಭದಲ್ಲಿ ಟೀ ಪಾರ್ಟಿನಡೆಯಿತು. ಅನಂತರ ಸರ್ ಬೆನಗಲ್ಲರು ಶ್ರೀ ಕೃಷ್ಣಮಠಕ್ಕೆ ಹೋಗಿ ಅಲ್ಲಿ ದೇವರ ದರ್ಶನ ಮಾಡಿ ಪರ್ಯಾಯ ಅಧಮಾರು ಸ್ವಾಮಿಗಳವರಿಂದ ಫಲಮಂತ್ರಾಕ್ಷತೆ ಸ್ವೀಕರಿಸಿದರು.

ಸಹಕಾರಿಗಳ ಸಭೆ— ತಾ. 13ರಲ್ಲಿ ಬೆಳಿಗ್ಗೆ ಸರ್ ಬೆನಗಲ್ ರಾಮ ರಾಯರು ಸ್ಥಳೀಯ ವಿವಿಧ ಸಹಕಾರಿ ಸಂಘಗಳ ಪ್ರತಿನಿಧಿಗಳನ್ನು ಮಿಲ್ಕ್ ಸಪ್ಲೈ ಸೊಸೈಟಿ ಕಾರ್ಯಾಲಯದಲ್ಲಿ ಭೇಟಿಯಾದರು. ಡಾಕ್ಟರ್ ಎಸ್. ಆರ್. ಪೈ, ಡಾ. ಟಿ. ಎಮ್. ಎ. ಪೈ, ಮೊದಲಾದವರು ಸಂಘಗಳ ಪರವಾಗಿ ಮುಖ್ಯ ಅತಿಥಿಗೆ ಹಾರಗಳನ್ನಿತ್ತರು. ಮುಖ್ಯ ಅತಿಥಿಗಳು ದ. ಕ. ಜಿಲ್ಲೆಯು ಸಹಕಾರಿ ಚಳವಳಿಯಲ್ಲಿ ಬಹು ಮುಂದುವರಿದ ಜಿಲ್ಲೆಯಾಗಿದೆ. ಉಡುಪಿ ಪರಿಸರದಲ್ಲಿ ಇಷ್ಟು ಸಂಘಗಳು ಕೆಲಸಮಾಡುತ್ತಿರುವುದು ಸಂತೋಷಕರವಿದೆ. ಸರಕಾರವು ಸಹಕಾರಿ ಸಂಘಗಳಿಗೆ ನೀಡುವ ಸೌಕರ್ಯಗಳು ಸಾರ್ಥಕವಾಗುವುವು ಎಂಬುದು ತಮಗೆ ಮನವರಿಕೆಯಾಗಿದೆ ಎಂದು ಮುಂತಾಗಿ ನುಡಿದರು.

ಭಾವಚಿತ್ರ ಅನಾವರಣ— ಧಿ ಕೆನರಾ ಬೇಂಕಿಂಗ್ ಕೋರ್ಪರೇಶನಿನ ಮಾಜಿ ಮೆನೇಜರರಾಗಿದ್ದ ದಿವಂಗತ ಶ್ರೀ. ಎಸ್. ಅನಂದ ರಾವ್ ಮತ್ತು ಎಮ್. ಶ್ರೀನಿವಾಸ ಪ್ರಭುಗಳ ಭಾವಚಿತ್ರಗಳನ್ನು ತಾ. 12ರಂದು ಬೆಳಿಗ್ಗೆ ಬೇಂಕಿನಕಾರ್ಯಾಲಯದಲ್ಲಿಶ್ರೀ. ವಿ. ಎಸ್. ಕುಡ್ವರು ಅನಾವರಣ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ. ಕೊಚ್ಚಿಕಾರ್ ಪದ್ಮನಾಭ ಪೈಗಳು ವಹಿಸಿದ್ದರು. ಡಾ| ಎಸ್. ಆರ್. ಪೈಗಳು ಸ್ವಾಗತ ಮಾತುಗಳನ್ನಾಡಿದರು. ಶ್ರೀ. ಬಿ. ವೈಕುಂಠಬಾಳಿಗ, ಎಮ್. ಎಲ್. ಎ. ಅವರು ಧನ್ಯವಾದಗಳನ್ನಿತ್ತರು.

ಶೋಚನೀಯ ನಿಧನ— ಈಚೆಗೆ ಕೆಲವು ದಿವಸಗಳಿಂದ ಅಸ್ವಸ್ಥದಲ್ಲಿದ್ದ ಧರ್ಮ ಸೇವಾ ನಿರತರೂ ನಿರಂತರ ಸಾಹಸಿಗಳೂ ಆದ ಶ್ರೀ ಕುಂಜಿಬೆಟ್ಟು ಶಿವ ಅನಂತ ಭಟ್ಟರು ಇದೇ ತಾ. 8ರಲ್ಲು ತಮ್ಮ 58ನೇ ವಯಸ್ಸಿನಲ್ಲಿ ವಿಧಿ ವಶರಾದರೆನ್ನಲು ವಿಷಾದವೆನಿಸುತ್ತದೆ. ದಿವಂಗತರ ಕುಟುಂಬವರ್ಗಕ್ಕುಂಟಾದ ದುಃಖದಲ್ಲಿ ಸಹಸಂತಾಪವನ್ನು ಸೂಚಿಸುವೆವು.

ನಗರ ಸಭೆಯು— ತಾ. 9ಲ್ಲಿ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಬಿ. ವಾಸುದೇವ ರಾಯರು ನಿಲುವಳಿ ಸೂಚನೆಯೊಂದನ್ನು ಕಲಾಪ ಸಭೆಯನ್ನು 15 ನಿಮಿಷ ಮುಂದರಿಸಬೇಕೆಂದರು. 2—2—70ನೇ ದಿನದ ಮುಂಭಾಗದ ಚಪ್ಪರ ಪ್ರಕರಣವ ಕುರಿತು ಆಫೀಸು ಕಡೆಯಿಂದ ಯಾವುದೇ ನಿಗಾ ತೆಗೆಯಲ್ಪಡಿದ್ದುದು ಸರಿಯಲ್ಲವೆಂದು ಅಭಿಪ್ರಾಯಪಟ್ಟು ಡಾ. ಪಿ. ಜಿ. ಆಚಾರ್ಯರುಅನುಮೋದನೆಯಿತ್ತರು. ಶ್ರೀ. ಟಿ. ಎ. ವಾಸುದೇವನ್, ವಿರೋಧಿಸಿದರು. ನಿಲುವಳಿ ಸೂಚನೆ ತರುವಷ್ಟು ಮಹತ್ವದ ಪ್ರಕರಣವೇನಿದೆ ಎಂದು ಶ್ರೀ. ಪಿ. ವಿ. ಆಚಾರ್ಯರು ಪ್ರಶ್ನಿಸಿದರು. ಕೊನೆಗೆ ಮತ ತೆಗೆಯಲಾಗಿ ನಿಲುವಳಿ ಸೂಚನೆ ಬಹುಮತದಿಂದ ಪಾಸಾಯಿತು. ಕಾಂಗ್ರೆಸ್ ಪಕ್ಷದವರು ಸದಸ್ಯರು ಬೆಂಬಲವಿತ್ತಿದ್ದರು.

(೫ನೇ ಪುಟದಿಂದ)

ರಾಜಕೀಯ ಚದುರಂಗ

ಇದಕ್ಕೆ ಉತ್ತರವಾಗಿ ರಾಜಕೀಯ ಚದುರಂಗದಾಟವನ್ನು ಇವರೆಲ್ಲ ಮಹಾನುಭಾವರು ಆಡುತ್ತಿದ್ದಾರೆಂಬ ಒಂದೇ ವಿಷಯವನ್ನು ಹೇಳಬೇಕಾಗುತ್ತದೆ. ಏಕೆಂದರೆ, ಎಲ್ಲರನ್ನೂ ಮೆಚ್ಚಿಸುವ ಹುಚ್ಚುತನದಲ್ಲಿ ಇವರು ಮೂಲಭೂತ ಅಂಶಗಳನ್ನು ಸುಲಭದಲ್ಲಿ ಯಾವುದೇ ಬೇಸರವಿಲ್ಲದೆ ಮೂಲೆಗೆ ತಳ್ಳಿಬಿಡುತ್ತಾರೆ. ತಾವು ಹಿಂದೇನು ಹೇಳಿದೆವೊ, ಮಾಡಿದೆವೊ ಅದನ್ನು ಸಮರ್ಥಿಸಲು ಏನೇನೋ ನೊಂಡು ನೆಪಗಳನ್ನು ಹುಡುಕಿ ತೆಗೆದು ಮುಂದಿಡುತ್ತಾರೆ. ಉದಾಹರಣೆಗೆ, ಸಂಯುಕ್ತರಾಷ್ಟ್ರಸಂಘವು ಜನ ಮತಗಣನೆ ನಡೆಯ ಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿದ ಬಳಿಕ ಪಾಕಿಸ್ತಾನವು ಅನೇಕ ಸೈನಿಕ ಒಪ್ಪಂದಗಳನ್ನು ಮಾಡಿಕೊಂಡುಸ್ವಂತಪರಿಸ್ಥಿತಿಯನ್ನು ಸಂಪೂರ್ಣ ಬದಲಾಯಿಸಿದ್ದರೂ ಆ ಹಳೆಯ ನಿರ್ಣಯವನ್ನೇ ಈಗ ಎತ್ತಿ ಹಿಡಿಯುವ ಅವಿವೇಕವನ್ನು ಸಂತೋಷದಿಂದ ಮಾಡುತ್ತಾರೆ—ಅದೂ ರಾಷ್ಟ್ರಸಂಘದ ಪರಮಾಧಿಕಾರದ ಹೆಸರಿನಲ್ಲಿ! ಗೋವೆಯು ಪೋರ್ಚುಗಾಲಿನ ಪ್ರಾಂತವೆಂದು ಪೋರ್ಚುಗಾಲಿನ ಘಟನೆಯಲ್ಲಿ ನಮೂದಿಸಿರುವುದನ್ನು ಎತ್ತಿ ಹಿಡಿದು ಅದು ವಾಸ್ತವಾಂಶವಲ್ಲವೆ, ಅದನ್ನು ನಿರಾಕರಿಸಿ ಫಲವೇನು? ಎಂದು ಪ್ರಶ್ನಿಸುತ್ತಾರೆ. ರಾಜಕೀಯದಲ್ಲಿ ನೀತಿ ಮತ್ತು ಪ್ರಾಮಾಣಿಕತೆಗೆ ಏನೇನೂ ಬೆಲೆ ಇಲ್ಲ ಎಂಬ ಸತ್ಯದ ದರ್ಶನವು ಭಾರತಕ್ಕೆ ಇದಷ್ಟು ಬೇರಾರಿಗೂ ಆಗಿಲ್ಲವೆಂಬುದು ಇವೆಲ್ಲ ಸಂಗತಿಗಳಿಂದ ಹೊಳೆಯದಿರದು. ಇಂಥದರಲ್ಲಿ "ಶಾಂತಾಯ ಶಿಷ್ಯೈನಮಃ" ಎನ್ನಬೇಕೇ ಹೊರತು ಭಾರತದ ಸದ್ಧರ್ಮ ಸೂತ್ರಗಳಿಗೆ ವ್ಯಾವಹಾರಿಕ ಬೆಲೆ ಬಂದೀತೆಂದು ನಾವು ಆಶಿಸುವಂತಿಲ್ಲ: ಪರಿಸ್ಥಿತಿ ಅಷ್ಟು ವಿಷಮಿಸಿರುತ್ತದೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷ್ಮಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೆ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದದ್ದು ಹಿಂದಿನೆಯನ್ನು ಹೋಗಿ ಕೆಂದಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಜೋವಿರೂ ಶುಕ್ಲವೂ, ಇಂದ್ರಿಯವೂ, ಪುರುಷತ್ವವೂ ಹಿಂತಮೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖಚೇತರಿಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0

ಮಲಿಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟ್ಲಾಗು ಉಚಿತ.



ಕುಮಾರಿ ಬಿಲ್ಲೆಗಳು (Govt. Regd.)

ಹವತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಪತ್ತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

(ವಿ. ಪಿ. ಪಿ. ಪ್ರತ್ಯೇಕ)

Mrs. **P. DEVEE**, F. Ds. (N. J.)

CALCUTTA—40

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಮಂಗಳೂರು

ಕೆನರಾ ಬೇಂಕಿಂಗ್ ಕೊರ್ಪೊರೇಶನಿನ ಡೈರೆಕ್ಟರರಿಗೆ ಮಾನಪತ್ರ-

ತಾ. 11 ರಂದು ಕೆನರಾ ಹೈಸ್ಕೂಲು ಭುವನೇಂದ್ರ ಸಭಾ ಸದನದಲ್ಲಿ ಜಿಲ್ಲಾ ಕಲೆಕ್ಟರರಾದ ಶ್ರೀ ಎಂ. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಕೆನರಾ ಬೇಂಕಿಗ್ ಕೋರ್ಪೊರೇಶನಿನ ಸುವರ್ಣಮಹೋತ್ಸವ ಸಂಬಂಧ ಆದರ ಅಧ್ಯಕ್ಷ ಮತ್ತು ಡ್ಯಾರೆಕ್ಟರರುಗಳಿಗೆ ಸಿಬಂಧಿಯ ಪರವಾಗಿ ಮಾನಪತ್ರ ಸಮರ್ಪಿಸಲಾಯಿತು.

ಬ್ಯಾಂಕಿನ ಅಧ್ಯಕ್ಷ ಡಾ. ಸುಂದರರಾಮ ಪೈಗಳು ಸ್ವಾಗತಭಾಷಣ ಮಾಡಿದ ನಂತರ ಡಾ. ಎಂ. ಕೇಶವ ಪೈಗಳವರು ದಿವಂಗತ ಡ್ಯಾರೆಕ್ಟರ್ ಕಸ್ತೂರಿ ನಾಗೇಶ ಪೈಗಳವರ ಭಾವಚಿತ್ರವನ್ನು ಅನಾವರಣಮಾಡಿದರು.

ಸಿಬಂದಿಯ ಪರವಾಗಿ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ವಿ. ಆರ್. ಕಾಮತರು ಅಧ್ಯಕ್ಷ ಮತ್ತು ಡ್ಯಾರೆಕ್ಟರರಿಗೆ ಮಾನಪತ್ರವನ್ನು ಬೆಳ್ಳಿಯ ಕರಂಡದಲ್ಲಿ ಸಮರ್ಪಿಸಿದರು.

ಬ್ಯಾಂಕಿನ ಅಧ್ಯಕ್ಷ ಡಾ. ಸುಂದರ ರಾಮ ಪೈಗಳು ಬ್ಯಾಂಕಿನ ವ್ಯವಹಾರವು ಸುಗಮವಾಗಿ ಸಾಗಬೇಕಾದರೆ ಸಿಬಂದಿಯ ಸಹಕಾರವು ಅಗತ್ಯವೆಂದೂ ಈ ಬ್ಯಾಂಕಿನ ಸಿಬ್ಬಂದಿಯು ಯಾವಾಗಲೂ ಉತ್ತಮ ಮತ್ತು ಪ್ರಶಂಸನೀಯ ರೀತಿಯಲ್ಲಿ ಸೇವೆ ಸಲ್ಲಿಸಿದೆ ಎಂದು ಹೇಳಿ ಕೃತಜ್ಞತೆಯನ್ನು ಸೂಚಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೈಗಾರಿಕಾ, ಬ್ಯಾಂಕಿಂಗ್, ಶಿಕ್ಷಣ ಆರೋಗ್ಯ ಮೊದಲಾದ ಎಲ್ಲಾ ವಿಧದಲ್ಲಿಯೂ ಮುನ್ನಡೆಯುತ್ತಲಿದೆ ಅಲ್ಲದೆ ದೇಶದ ಅಭಿವೃದ್ಧಿಗಾಗಿ ತುಂಬಾ ಸಹಾಯ ಮಾಡುತ್ತಲಿದೆ ಎಂದರು.

ಶ್ರೀ. ಎಫ್. ಎಕ್ಸ್. ಡಿ. ಪಿಂಟೋರವರು ಡೈರೆಕ್ಟರರ ಪರವಾಗಿಯೂ, ಶ್ರೀ. ವಿ. ಆರ್. ಕಾಮತರು ಸಿಬಂದಿಯ ಪರವಾಗಿಯೂ ಧನ್ಯವಾದವನ್ನರ್ಪಿಸಿದರು.

ಕೆನರಾ ಚೇಂಬರ್ ಓಫ್ ಕಾಮರ್ಸಿನ ಸತ್ಕಾರ:—

ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನಿನ ಅಧ್ಯಕ್ಷ ಮತ್ತು ಡ್ಯಾರೆಕ್ಟರರುಗಳಿಗೆ ಕೆನರಾ ಚೇಂಬರ್ ಓಫ್ ಕಾಮರ್ಸಿನ ಅಧ್ಯಕ್ಷರಾದ ಶ್ರೀ ಕುಡ್ವ ಶ್ರೀನಿವಾಸ ಶೆಣೈಯವರು ಕೆನರಾ ಹೈಸ್ಕೂಲಿನಲ್ಲಿ ಭೋಜನ ಸತ್ಕಾರವಿತ್ತರು.

ಶ್ರೀ. ವಿ. ಎಸ್. ಕುಡ್ವರು, ಬ್ಯಾಂಕಿನ ಸ್ಥಾಪನೆಗೆ ಮುಖ್ಯ ಕಾರಣ ಕರ್ತರಾದ ದಿ| ಹಾಜೀ ಅಬ್ದುಲ್ಲಾ ಹಾಜೀ ಕಾಸಿಂ ಸಾಹೇಬರ ಕಾರ್ಯದಕ್ಷತೆ ಹಾಗೂ ಸೇವಾಪರ ಮನೋಭಾವದ ಪರಿಣಾಮವಾಗಿ ಈ ಬ್ಯಾಂಕು ತೆರೆಯಲ್ಪಟ್ಟಿತು. ನಂತರ ಹಲವು ಉದಾರ ವ್ಯಕ್ತಿಗಳಿಂದ ಈ ಬ್ಯಾಂಕು ಪ್ರಗತಿ ಹೊಂದುತ್ತಾ ಬಂದು ಈಗ ಉನ್ನತ ಸ್ಥಾನಕ್ಕೇರಿದೆ ಎಂದರು.

ಶ್ರೀ. ನಯಂಪಳ್ಳಿ ರಾಮರಾಯರು ಬ್ಯಾಂಕಿನ ಅಧ್ಯಕ್ಷ ಮತ್ತು ಡ್ಯಾರೆಕ್ಟರರುಗಳನ್ನಭಿನಂದಿಸಿದರು ಡೈರೆಕ್ಟರರ ಪರವಾಗಿ ಶ್ರೀ. ಬಿ. ವೈಕುಂಠ ಬಾಳಿಗರು ಭಾಷಣ ಮಾಡಿದರು.

ಬ್ಯಾಂಕಿನ ಅಧ್ಯಕ್ಷ ಡಾ| ಸುಂದರರಾಮ ಪೈಗಳು ಈ ಬ್ಯಾಂಕಿನ ಪ್ರಗತಿಗೆ ಸಾರ್ವಜನಿಕರ ಸಹಕಾರವೇ ಮೂಲವೆಂದೂ ಸಹಕಾರವನ್ನು ನೀಡಬೇಕೆಂದೂ ಕೇಳಿಕೊಂಡರು. ಶ್ರೀ. ಎಂ. ಜಿ. ಅನಂತ ಪೈಗಳವರು ಚೇಂಬರಿನ ಪರವಾಗಿ ವಂದನಾರ್ಪಣೆ ಮಾಡಿದರು.

ತಾ. 11ನೇ ಬೆಳಿಗ್ಗೆ ರಿಸರ್ವ್ ಬ್ಯಾಂಕಿನ ಗವರ್ನರರಾದ ಸರ್ ಬೆನಗಲ್ ರಾಮರಾಯರು ಮುಂಬಯಿಯಿಂದ ಬಂದೊಡನೆ ಬಜ್ಪೆ ವಿಮಾನ ನಿಲ್ದಾಣದಲ್ಲಿ ಡಾ| ಸುಂದರರಾಮ ಪೈ, ಡಾ| ಯು. ಪಿ. ಮಲ್ಯ, ಶ್ರೀ. ಜೆ. ಸೋಮಶೇಖರರಾವ್, ಮೊಳಹಳ್ಳಿ ಶಿವರಾವ್, ಮೊದಲಾದವರು ಸ್ವಾಗತಿಸಿದರು.

ಅಪರಾಹ್ನ ಸರ್. ಬೆನಗಲ್ ರಾಮರಾಯರು ತಾವು ಕಲಿತ ಕೆನರಾ ಹ್ಯಾಸ್ಕೂಲಿಗೆ ಭೇಟಿಯಿತ್ತರು.

ನಂತರ ಬೆಸೆಂಟ್ ಬಾಲಿಕಾ ಪಾಠ ಶಾಲೆಗೆ ಸಂದರ್ಶನವಿತ್ತರು.

ಶಾಲೆಯ ಎ ಸಿ.ಸಿ. ವಿಭಾಗದವರ ಗೌರವ ರಕ್ಷೆಯನ್ನು- ಚಟುವಟಿಕೆಯನ್ನು ಪರಿಶೀಲಿಸಿದರು. ಹಿಂದಿನ ವಿದ್ಯಾಭ್ಯಾಸಕ್ಕೂ ಈಗಿನ ವಿದ್ಯಾಭ್ಯಾಸಕ್ಕೂ ಇರುವ ವ್ಯತ್ಯಾಸವನ್ನು ವಿವರಿಸಿದರು. ಬಳಿಕ ರಾಮಕೃಷ್ಣ ಮಿಶನಿನ ಆಶ್ರಯದಲ್ಲಿ ನಡೆಸಲ್ಪಡುವ ಬಾಲಕಾಶ್ರಮ ಮತ್ತು ಚಿಕಿತ್ಸಾಲಯಗಳನ್ನೂ ಸಂದರ್ಶಿಸಿದರು.

ದ. ಕ. ಜಿಲ್ಲಾ ಭೂ ಒಡೆಯರ ಮತ್ತು ಕೃಷಿಕರ— ಸಂಘದ ಕಾರ್ಯಕಾರೀ ಸಮಿತಿ ಸಭೆಯು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮದರಾಸು ಕೃಷಿ ಒಕ್ಕಲು ಮಸೂದೆ, 1956ಕ್ಕೆ ಕೆಲವೊಂದು ತಿದ್ದುಪಡಿಯನ್ನು ಸೂಚಿಸುವ ಬಗ್ಗೆ ಹಾಗೂ ಸಿಲೆಕ್ಟ್ ಕಮಿಟಿಯ ಮುಂದೆ ಸಾಕ್ಷಿ ನುಡಿಯುವುದಕ್ಕಾಗಿ ಒಂದು ಶಿಷ್ಟ ಮಂಡಳಿಯನ್ನು ರಚಿಸಬೇಕೆಂದು ನಿರ್ಣಯಿಸುವ ಬಗ್ಗೆ ಶ್ರೀ ಎನ್. ಎಂ. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ತಾ. 10ರಲ್ಲಿ ಜರಗಿತು ಸಿಲೆಕ್ಟ್ ಕಮಿಟಿಯ ಮುಂದಿಡುವುದಕ್ಕಾಗಿ ಈ ಸಭೆಯಲ್ಲಿ ಸರ್ವಾನುಮತದಿಂದ ಸ್ವೀಕರಿಸಲಾದ ಒಂದು ಮನವಿಯು ತಯಾರಾಯಿತು.

ನಾಟ್ಯಕಲೋತ್ಸವ ಸಮಿತಿ-ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಟಕ ಕಲೆಗೆ ಪ್ರೋತ್ಸಾಹವೀಯುವುದಕ್ಕಾಗಿ ಒಂದು ಸಮಿತಿಯ ಆವಶ್ಯಕತೆಯನ್ನು ಮನಗಂಡು ತಾ. 9ರಂದು ಕೆನರಾ ಛಾಪಖಾನೆಯಲ್ಲಿ ಶ್ರೀ. ಕೆ. ಆರ್. ಆಚಾರ್ಯರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ „ದಕ್ಷಿಣ ಕನ್ನಡ ಜಿಲ್ಲಾ ನಾಟ್ಯಕಲೋತ್ಸವ ಸಮಿತಿ" ಎಂಬ ಸಂಸ್ಥೆಯನ್ನು ತಾತ್ಕಾಲಿಕವಾಗಿ ಸ್ಥಾಪಿಸಲಾಯಿತು. ಡಾ. ಯು. ಪಿ. ಮಲ್ಯ, ಡಾ| ಕೆ. ನಾಗಪ್ಪ ಆಳ್ವ, ಶ್ರೀಗಳಾದ ಡಿ. ಪುಟ್ಟಸ್ವಾಮಿ, ಕೆ. ಆರ್. ಆಚಾರ್. ಎ ಶಂಕರ ಆಳ್ವ ಕೆ. ಕೆ. ಶೆಟ್ಟಿ, ಎಚ್. ಕೆ. ಕಿಂಗಳಾಯ ಭೋಜ ರಾವ್ ಬೋಳಾರ್, ಎಂ. ಎಲ್. ಶೆಟ್ಟಿ, ಆನಂದ ಶೆಟ್ಟಿ ಎ. ಮತ್ತು ನರೇಂದ್ರ ಪೆಂಡರ್ಸ ಇವರಿಂದ ಕೂಡಿದ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು.

ಮಾನಪತ್ರ— ತಾ. 11ರಂದು ಸರ್ ಬೆನಗಲ್ ರಾಮರಾಯರಿಗೆ ಮಂಗಳೂರಿನ ನೋನ್ ಶೆಡ್ಯೂಲ್ಡ್ ಬೇಂಕುಗಳ ಕಡೆಯಿಂದ ಶ್ರೀ ಜೆ. ಸೋಮಶೇಖರ ರಾಯರ ವಸತಿಯಲ್ಲಿ ಮಾನಪತ್ರವನ್ನು ಕೊಡಲಾಯಿತು.

ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯು- ತಾ. 18ನೇ ಅಪರಾಹ್ನ 4.30ಕ್ಕೆ ಘಟನೆಯ ಮಂಜೂರಾತಿ, ಉಪಸಮಿತಿಗಳ ರಚನೆ, ಕಾಸರಗೋಡಿನ ಪ್ರಶ್ನೆ ಕರ್ನಾಟಕ ಕೇರಳವನ್ನು ಒಂದುಗೂಡಿಸುವ ವಿಚಾರ ಮೊದಲಾದುವನ್ನು ಪರ್ಯಾಲೋಚಿಸುವುದಕ್ಕಾಗಿ ಜರಗಲಿದೆ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ವಾರ್ಷಿಕೋತ್ಸವ— ಗೋರಿಗುಡ್ಡೆ ಡೆಮೊಕ್ರೆಟಿಕ್ ಯುತ್ ಲಿಗೀನ ವಾರ್ಷಿಕೋತ್ಸವವು ಸೂಜರ್ ಪೇಟೆಯ ಶಾಲೆಯ ಪಕ್ಕದ ಮೈದಾನಿನಲ್ಲಿ ಶ್ರೀ ಎಂ. ರಾಮಪ್ಪನವರ ಅಧ್ಯಕ್ಷತೆಯಲ್ಲಿ ತಾ. 4ರಂದು ಜರಗಿತು ಡಾ. ಎಂ. ಎಸ್. ಶಾಸ್ತ್ರಿಗಳು ಅಧಿವೇಶನದ ಉದ್ಘಾಟನೆ ಗೈದರು.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರು

ಸಾಹಸ ಭೀಮ ವಿಜಯ	0—8—0
ಲಕ್ಷ್ಮಪಗಡೆ	0—6—0
ಭರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ಭಾರತದ ಗುರುಕುಲ

ಮದರಾಸು ಸರಕಾರದಿಂದ ಸಂಭಾವನೆ ಪಡೆದಗ್ರಂಥ.

ಬೆಲೆ: 0 8 0

ಅಂತರಂಗ ಕಾರ್ಯಾಲಯ ಉಡುಪಿ

ಯಾವತ್ತೂ ಲೈಬ್ರೇರಿಗಳಿಗೆ ಉಪಯುಕ್ತವಾದ ಪುಸ್ತಕಗಳು

ಕಾದಂಬರಿಗಳು

ಅರಗಿನ ಮನೆ	ಶರತ್ ಕಾದಂಬರಿ	4	0
ಅನ್ನಪೂರ್ಣ ಮಂದಿರ	ಶ್ರೀ ಮ. ಗ. ಸೆಟ್ಟಿ	2	0
ಅವಳ ಋಣ	ಕೆ. ಮುರಲೀಧರ	1	8
ಪುನರ್ಮಿಲನ	ಶ್ರೀ ರಘುನಾಥ ವಾಡೇದ ಮಿತ್ತಿಕೋಟಿ	2	8
ನಿರ್ದೋಷಿ	ಶ್ರೀ ಆರ್. ಜಿ. ಕುಮಟಾ	2	0
ಪರಾವಲಂಬಿ	ಶ್ರೀ ಜನಾರ್ಧನ ಗುರ್ಕಾರ್	2	8
ಮಾಲತೀ ಮಂದಿರ	ವಿದ್ವಾನ್ ಹೊಸಮನೆ ಗುಡ್ಡಪ್ಪ	2	0
ಶಕುಂತಲಾ	ಪ್ರೊ. ನಾ. ಸಿ. ಫಡಕೆ. ಎಂ. ಎ.	2	12
ದೇವರೆಲ್ಲಿ	ರಮಾಕಾಂತ	4	0
ಪೂಜಾಫಲ	ನೆರಂಗ	1	8
ಸ್ವರ್ಣಭೂಮಿ	ಶ್ರೀ ವಾಮನ ಮಲ್ಯ	1	8
ತರಲಾ	ಶ್ರೀ ಸ್ವಾಮೀ ಸತ್ಯಭಕ್ತರು	1	0
ಬಿರುಗಾಳಿ ಭಾಗ ೧	ನಾ. ಸಿ. ಫಡಕೆ	1	8
ಬಿರುಗಾಳಿ ಭಾಗ ೨	,,	2	0
ಕೊಳವಾಲನಕಾರಸ್ಥಾನ	ಹೊಸಮನೆ ಗುಡ್ಡಪ್ಪ	1	0
ಕಳ್ಳನಿಗೆ ಕಾಣಿಕೆ	ಮಾ. ಬಾ. ಕುಲಕರ್ಣಿ	1	4
ವೈಕುಂಠನ ಮೃತ್ಯು ಪತ್ರ	ಶರತ್	1	0
ಮಿಸ್. ಅಮೇಲಿಯಾ	ರಮೇಶ	1	4
ಮನ್ನೂ ಮದುವೆ	ಎಂ. ಜಿ. ವೆಂಕಟೇಶಯ್ಯ	2	0
ಅಕ್ಕಾಜಿ	ಶರತ್	1	4
ಗುಣ	ಶ್ರೀ ಪಿ. ವೆಂಕೋಬಾಚಾರ್ಯ	1	6
ಪುನರಾಗಮನ	ಧನ್ವಂತ	1	4
ಬಂಧನ ಭಾಂಧವ್ಯ	ಸೇವ ನೆಮಿರಾಜ ಮಲ್ಲ	1	0
ಜ್ಞಾನಪ್ರಭಾ	ಧನ್ವಂತ	1	0
ಇವೆತ್	ಪಿ. ವೆಂಕೋಬಾಚಾರ್ಯ	1	12
ಮಾಧವ ಲೀಲೆ	ಎಂ. ಜಿ. ವೆಂಕಟೇಶಯ್ಯ	1	8
ರಂಗವಿಲಾಸಿನಿ	ಮಲ್ಲಾರಿ	3	0
ನೂರಜಹಾನ	ಕೇಶವ ಶರ್ಮ ಗಲಗಲಿ	1	0
ಪೂರ್ಣಿಮ	ತಿ. ಸಿದ್ದಪ್ಪ	1	4
ಪಾಶಾಣ ಮೂರ್ತಿ	ಉ. ವಾಸುದೇವ ನ್ಯಾಕ	1	0
ಬದುಕಿನ ಸುಳಿಯಲ್ಲಿ	ಸೇ. ನ. ಮಲ್ಲ	2	0
ಅವಳ ಹುಚ್ಚು	ಕಾ. ರಾಮಕೃಷ್ಣ ಶೆಟ್ಟಿ	0	14
ಎರಡು ಸೆಳೆತ	ಶ್ರೀಚಾರು ವಂದ್ಯೋಪಾಧ್ಯಾಯ	1	12
ಎಚ್ಚೆತ್ತ ಹೆಣ್ಣುಗಳು	ಕಂ. ಶಾಮಣ್ಣ	1	12
ಸುದರ್ಶನ	ಆನಂದ ಕಂದ	1	8
ವತ್ಸಲಾ	ಮಡ್ಡಪ್ಪಡಿ ಕಮಲಾಕ್ಷಿ	0	8
ವಾಗ್ದೇವಿ	ಬೋಳಾರ ಬಾಬು ರಾವ್	3	0
ತೀರದ ಆಸೆ	ಕುಮಾರಿ. ಅ. ಲ. ಯಮುನಾ	1	8
ಸಾಮ್ರಾಟ್ ಹರ್ಷವರ್ಧನ	ನಾಗೇಶ	2	0
ಗೋಳಿನಬಾಳು	ಸಿ. ದಯಾನಂದ ನಾಯಕ್	0	8
ಭಕ್ತಮೀರಾ	ಆರ್. ಕಲ್ಯಾಣಮ್ಮ	1	0
ಸೌಭಾಗ್ಯವತಿ	ಎಂ. ವಿ. ಸೀತಾರಾಮಯ್ಯ	1	12
ಕೊಲೆಯ ಕೈ	ಎಚ್ಚಾರ್ಕೆ	0	8
ಹಳ್ಳದಿಂದ ಹಾದಿಗೆ	ಜನಾರ್ದನ ಗುರ್ಕಾರ್	1	8
ಘಂಟಮಾರಾ	ಕು. ತಿ. ಹರಿದಾಸ ಭಟ್ಟ	2	0
ಜಮೀನ್ದಾರ	ಹೊಸಮನೆ ಗುಡ್ಡಪ್ಪ	1	8
ಬಾಳಿನ ಬೆಡಗು	ಯು. ನಾರಾಯಣ ಭಟ್ಟ	1	4
ಶವಗಳ ಸಾಗಾಟ	ಸು. ಕೃಷ್ಣ ಹೆಗ್ಡೆ	0	10
ಕುಲವಿಲ್ಲದ ಹೆಣ್ಣು	ವೆಂಕೋಬಾಚಾರ್ಯ	1	8
ಪ್ರತಿ ಸರಕಾರ	ಮಿರ್ಜಿ ಅಣ್ಣಾ ರಾಯ	1	12
ಷೋಡಶಿ	ಶರಚ್ಚಂದ್ರಚಟ್ಟೋಪಾಧ್ಯಾಯ	2	8
ಮಹಾಪುರುಷ	ಎನ್. ಎಸ್. ನಾರಾಯಣ ಶಾಸ್ತ್ರಿ	2	4
ನರ್ತಕಿ	ಎಂ. ಕೆ. ಅನಂತ ರಾಜು	1	0
ಬಲಿದಾನೀ ಹುಸೇನ್	ಎಸ್. ಕೆ. ಕರೀಂಖಾನ್	1	0
ರಾಜಯೋಗಿ	ಆನಂದ ಕಂದ	2	0
ಅಕ್ಕಸಾಲಿಗನ ಕೊಲೆ	ಉತ್ತರ ಧೃವ	0	4
ಕೊಲೆಗಡಲ ಕಂಠೀರವ	ಯು. ವಿ. ನ್ಯಾಕ್	0	10
ಕವಲುದಾರಿ	ಕೃಷ್ಣಮೂರ್ತಿ ಪುರಾಣಿಕ	1	4
ಚಂದ್ರಿಕೆಯ ಚೆಲುವಿನಲ್ಲಿ	ಚಿ. ಉದಯ ಶಂಕರ್	1	0
ಸಾಹಿತ್ಯ ಮಂದಿರದಲ್ಲಿ	ಪಿ. ವಿಠಲ್ ರಾವ್	0	12
ಪ್ರತಿಜ್ಞೆ	ಎಂ. ಸಿದ್ಧರಾಮೇಶ	0	12
ಅಂಬುಜಾಕ್ಷಿ	ಎಸ್. ವೆಂಕಟರಾಜ	0	14
ವಿಕಸಿತ ಸೌಭಾಗ್ಯ	ಎಚ್. ವಿಠ್ಠಲ ಶೆಣೈ	0	12
ಬದುಕು ಬಂಗಾರ	ಕುಮಾರಸ್ವಾಮಿ	1	4
ಅವಿವಾಹಿತೆ	ಶ್ರೀನಿವಾಸ ಹಾವನೂರ	1	4
ಬೇನೆಯ ಬಾಳ್ವೆ	ರಾ. ಮೋ. ವಿಶ್ವಾಮಿತ್ರ	3	4
ಹೃದಯ ವೀಣೆ	ಮ. ವಿ. ನಾಯಕ್	1	4
ಭ್ರಾಂತಿಯ ಸುಳಿಯಲ್ಲಿ	ಎಮ್. ಎನ್ ಭಟ್	1	12
ಧೂಮ ಕೇತು	ಕಡೆಂಗೋಡ್ಲು ಶಂಕರ ಭಟ್ಟ	2	8
ಹೊಸ ಹೆಜ್ಜೆ	ಭಾರ್ಗವ	0	10
ಸ್ಮಶಾನ ವೈರಾಗ್ಯ	ಚುಳಕಿ ಗೋವಿಂದ ರಾಯರು	1	8
ಪುರಸ್ಕಾರ	ಗಣಪತಿ ಮೊಳೆಯಾರ	1	0
ಬೆಂದ ಜೀವಿ	ಸಂ. ಮೂ. ರುದ್ರಮುನಿ ಸ್ವಾಮಿ	1	12

ಇನ್ನೂ ನೂರಾರು ಬಗೆಯ ಪ್ರಕಟಣೆಗಳು ದೊರೆಯುತ್ತವೆ.
ಕೆಟಲಾಗಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಪುರುಷಾರ್ಥಸುಧಾನಿಧಿ—

ಸಾಯಣಾಚಾರ್ಯ ವಿರಚಿತ. ಪ್ರಕಾಶಕರು: ಮದ್ರಾಸು ಸರಕಾರದ ಪುರಾತನ ಹಸ್ತಲಿಖಿತ ಪ್ರತಿಗಳ ಭಂಡಾರ, ಮದ್ರಾಸು. ಬೆಲೆ: ರೂ. ೧೪—೦—೦.

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಮಾನವನಾದವನು ಸಾಧಿಸಬೇಕೆಂದು ಪ್ರಾಚೀನ ಕಾಲದಿಂದ ಭಾರತೀಯರು ನಂಬಿಕೊಂಡು ಬಂದಿದ್ದಾರೆ. ಆದರೆ, ಕೇವಲ ತತ್ತ್ವೋಪದೇಶದ ಮೂಲಕ ಅದರ ಸಾರವನ್ನು ಗ್ರಹಿಸುವುದು ಸಾಮಾನ್ಯ ಜನರಿಗೆ ಸಾಧ್ಯವಾಗಿಲ್ಲ; ಇಂದಿಗೂ ಜನಸಾಧಾರಣರು ಅಷ್ಟು ಬುದ್ಧಿವಂತರಾಗಿಲ್ಲ. ಕಠಿಣತಮವಾದ ತತ್ತ್ವಗಳನ್ನು ಲಘು ಕತೆಗಳ ರೂಪದಲ್ಲಿ ನಿರೂಪಿಸುವುದೊಂದೇ ಸಾಮಾನ್ಯರಿಗೆ ತಿಳಿಸಿ ಹೇಳುವ ಮಾರ್ಗ ಎಂದು ಎಲ್ಲ ಪ್ರಾಜ್ಞರೂ ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ತತ್ತ್ವೋಪದೇಶವನ್ನು ಕತೆಗಳ ರೂಪದಲ್ಲಿ ಮಾಡುವ ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದಿದೆ. ವ್ಯಾವಹಾರಿಕ ಪ್ರಪಂಚದಲ್ಲಿ ಮುಳುಗಿ ಹೋಗಿರುವ ಸಾಮಾನ್ಯರಿಗೆ ಪುರುಷಾರ್ಥಗಳ ಸಾಧನೆಯ ಕುರಿತು ವಿಸ್ತೃತವಾದ ಮಾಹಿತಿಯನ್ನು ಪೂರೈಸುವ ಪವಿತ್ರ ಗ್ರಂಥಗಳ ಪಠಣ, ಮನನ ಮತ್ತು ಅಧ್ಯಯನಗಳಿಗೆ ಸಾಕಷ್ಟು ಅವಕಾಶ ಸಿಗುತ್ತಿಲ್ಲದ ಪರಿಸ್ಥಿತಿಯೂ ಸಧ್ಯ ಬಂದೊದಗಿದೆ. ಎಲ್ಲ ಶಾಸ್ತ್ರ ಗ್ರಂಥಗಳ ತಿರುಳನ್ನೊಳಗೊಂಡ ಪುಸ್ತಕವೊಂದು ರಚನೆಗೊಂಡರೆ, ಅದನ್ನಷ್ಟೆ ಓದಿ ತಮ್ಮ ವರ್ತನೆಯನ್ನು ತಿದ್ದಿಕೊಳ್ಳಬಹುದೆಂದು ಜನರು ಭಾವಿಸುವಂತಾಗಿದೆ. ಈ ದೃಷ್ಟಿಯಿಂದ ಪೂಜ್ಯ ಶ್ರೀ. ವಿದ್ಯಾರಣ್ಯರ ಸಹೋದರರಾದ ಸಾಯಣಾಚಾರ್ಯರು ವಿಜಯ ನಗರ ಸಾಮ್ರಾಜ್ಯದ ಅಧಿಪತಿಯಾದ ಬುಕ್ಕರಾಯನ ಪ್ರಾರ್ಥನೆಯಂತೆ ಪ್ರಸ್ತುತ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದರು. ಅದು ಪದ್ಯರೂಪದಲ್ಲಿದ್ದರೂ ಅವರ ಭಾಷೆಯು ಸುಲಭ ಗ್ರಾಹ್ಯವಾಗಿದೆ. ಸರ್ವಾದರಣೀಯವಾದ ಹಲವಾರು ಪುರಾಣಗಳಿಂದ ನಾಲ್ಕೂ ಬಗೆಯ ಪುರುಷಾರ್ಥಗಳನ್ನು ವಿವರಿಸುವ ಮನೋಜ್ಞ ಕತೆಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ. ನೂರಕ್ಕೂ ಹೆಚ್ಚು ಸುಂದರ ಕತೆಗಳಿಂದ ಕೂಡಿರುವ ಈ ಗ್ರಂಥಪಠಣದಿಂದ ಪುರುಷಾರ್ಥ ಸಾಧನೆಯ ಮಾರ್ಗದ ಪರಿಚಯ ಬಹಳ ಸ್ಪಷ್ಟವಾಗಿ ಓದುಗರಿಗೆ ಆಗುತ್ತದೆ. ನಾಲ್ಕು ತಾಳೆಯೋಲೆಯ ಪ್ರತಿಗಳನ್ನು ಆಧಾರಕ್ಕೆ ಇಟ್ಟುಕೊಂಡು ಈ ಮುದ್ರಿತ ಪ್ರತಿಯನ್ನು ಸಂಪಾದಕರು ತಯಾರಿಸಿದ್ದಾರೆ. ಚೊಕ್ಕ ಪಾಠವನ್ನು ಕೊಡಲು ಅವರು ನಡೆಸಿದ ಪ್ರಯತ್ನವು ಯಶಸ್ವಿಯಾಗಿದೆ. ಸಂಸ್ಕೃತಭಿಜ್ಞರೆಲ್ಲರೂ ಈ ಪುಸ್ತಕವನ್ನು ಆತ್ಮಾದರದಿಂದ ಸ್ವಾಗತಿಸಬೇಕು; ಮತ್ತು ಐಹಿಕಾಮುಷ್ಮಿಕ ಶ್ರೇಯಸ್ಸಿಗೆ ಸಾಧನವಾದ ಮೂಲತತ್ತ್ವಗಳ ಪೂರ್ಣಜ್ಞಾನವನ್ನು ಹೊಂದಬೇಕು ಎಂಬುದಾಗಿ ಸೂಚಿಸಲು ನಮಗೆ ತುಂಬ ಆನಂದವಾಗುತ್ತದೆ.

ಇರಾನಿನ ಶಹಾರ ಭಾರತ ಸಂದರ್ಶನ

ತಾವು ಪ್ರೇಮಿಸಿ, ರಾಣಿಯಾಗಿ ಸ್ವೀಕರಿಸಿದ ಜರ್ಮನಿಯ ಹುಡುಗಿ ಸೊರಯ್ಯಳೊಡನೆ ಭಾರತಕ್ಕೆ ಸಂದರ್ಶನವಿತ್ತ ಇರಾನಿನ ಶಹಾರಾದ ಮಹಮ್ಮದ ರೇಜಾಶಹ ಪಾಹ್ಲವಿಯವರು ಇದೀಗ ೩೦ ದಿನಗಳ ಭಾರತ ಪ್ರವಾಸವನ್ನು ಮುಗಿಸಿ, ಇರಾನಿಗೆ ಮರಳಿದ್ದಾರೆ. ಭಾರತದ ಪ್ರಗತಿಯನ್ನು ನೋಡುವ ಮತ್ತು ಇರಾನಿನೊಡನೆ ಭಾರತೀಯರಿಗಿರುವ ಪ್ರೀತಿಯನ್ನು ಅನುಭವಿಸುವ ಅವಕಾಶ ತನಗೆ ಈ ಪ್ರವಾಸ ಕಾಲದಲ್ಲಿ ದೊರೆಯಿತೆಂದು ಅವರು ಸ್ವದೇಶ ಬಾಂಧವರಿಗೆ ತಿಳಿಸಿದ್ದಾರೆ. ಹೊಸ ದೆಹಲಿಯಲ್ಲಿ ಶಹಾರು ಬಂದಿಳಿದು ಸ್ವಾಗತ ಪಡೆದಾಗ ತೆಗೆದ ಮೇಲಿನ ಚಿತ್ರದಲ್ಲಿ ಎಡದಿಂದ ಬಲಕ್ಕೆ ಕ್ರಮವಾಗಿ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ, ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್, ರಾಣಿ ಸೊರಯ್ಯಾ, ಇರಾನಿನ ಶಹಾ ಮತ್ತು ಪ್ರಧಾನಿ ನೆಹರೂ ಅವರುಗಳಿರುವುದನ್ನು ಕಾಣಬಹುದು.

ಮನುಕುಲದ ಸುಳಿ—

ಬರೆದವರು: ಶ್ರೀನಿವಾಸ ರಾವ್ ಕೊರಟಿ. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಬೆಲೆ: ರೂ. ೧—೮—೦.

ಸಮಾಜದಲ್ಲಿ ಅಂಗವಿಕಲರಾಗಿ ಬಾಳಬೇಕಾಗಿ ಬರುವವರು ಎಷ್ಟು ದಾರುಣ ಜೀವನಕ್ಕೆ ಎದೆಗೊಡಬೇಕಾಗುತ್ತದೆ ಎಂಬುದನ್ನು ಈ ಕಾದಂಬರಿಯು ವಿವರಿಸುತ್ತದೆ. ಜೊತೆಯಲ್ಲಿ ತನ್ನ ಮಗನ ಶ್ರೇಯಸ್ಸನ್ನೇ ಬಯಸಿ ಮಗನ ಮೇಲೆ ಏನೇನೂ ವಾತ್ಸಲ್ಯವನ್ನು ತೋರಿಸದ ಗಂಡನಿಂದ ದೂರವಿರುವ ಮುಗ್ಧರ ಪ್ರಸಂಗಕ್ಕೂ ಭಯಪಡದಿರುವ ತಾಯಿಯೊಬ್ಬಳ ತಪಸ್ಸನ್ನು ಇದು ಚಿತ್ರಿಸುತ್ತದೆ. ವಿಧವಾ ವಿವಾಹದ ಸಮಸ್ಯೆಯೂ ಇಲ್ಲಿ ಆನುಷಂಗಿಕವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಶೈಲಿ ಮತ್ತು ನಿರೂಪಣೆಗಳು ಚೆಂತಿಲ್ಲವೆಂಬಂತಿವೆ. ವಿಶ್ವನಾಥ ರಾಯರ ಹಾಗು ಅವರ ಮಗಳು ಲೀಲಾವತಿಯ ಅವಸಾನ ಎಲ್ಲಿ, ಹೇಗಾಯಿತು ಎಂಬ ವಿವರ ಪುಸ್ತಕದಲ್ಲಿ ಕಾಣಸಿಗುತ್ತಿಲ್ಲ. ಇದು ಅವಸರದ ಬರವಣಿಗೆಯ ಪರಿಣಾಮವಾಗಿರಬಹುದು. ಆದರೂ, ಓದಿಗೆ ತೊಂದರೆಯಿಲ್ಲ.

ಪಾರ್ಥ ಸಾರಥಿ—

ಬರೆದವರು: ಎ. ವಿ. ಮಯ್ಯ.

ಪ್ರಕಾಶಕರು: ಆರ್. ವಿಟ್ಠಪ್ಪ ಶೆಣೈ ಎಂಡ್ ಸನ್ಸ್, ಪುಸ್ತಕ ವ್ಯಾಪಾರಿಗಳು, ಕಾರ್ಕಳ. ಬೆಲೆ: ರೂ. ೧—೧೨—೦.

ಶ್ರೀ ಕೃಷ್ಣ ಪರಮಾತ್ಮನು ಪಾಂಡವರ ದೌತ್ಯವನ್ನು ವಹಿಸಿ ಕೌರವರೊಡನೆ ಸಂಧಾನಾತುರನಾಗಿ ತೆರಳುವಲ್ಲಿಂದ ಹಿಡಿದು, ಮಹಾ ಭಾರತ ಯುದ್ಧವು ಮುಗಿಯುವ ತನಕದ ಕಥಾ ಭಾಗಗಳಲ್ಲಿ ಅಲ್ಲಿಂದಷ್ಟು ಇಲ್ಲಿಂದಿಷ್ಟು ಆಯ್ದುಕೊಂಡು ಈ ಪೌರಾಣಿಕ ನಾಟಕವನ್ನು ಬರೆಯಲಾಗಿದೆ. ಭಾಷೆ ಮತ್ತು ಶೈಲಿಯು ಉತ್ತಮವಿದ್ದರೂ ಸಾಮಾನ್ಯ ನಾಟಕಕ್ಕೆ ವಸ್ತುವು ಬಹಳ ದೊಡ್ಡದಾಗಿದೆ—ಮತ್ತು ತತ್ಪರಿಣಾಮವಾಗಿ ಆಯ್ದು ತೆಗೆದ ಅಂಶಗಳ ಔಚಿತ್ಯ ಪ್ರಶ್ನಾರ್ಹ ಪರಿಸ್ಥಿತಿಗೆ ಬಂದು ಮುಟ್ಟಿದೆ. ಒಮ್ಮೊಟ್ಟಿನ ಓದಿಗೆ ತುಂಬ ಭಂಗ ಬಂದಿದೆ. ಮೂರು ಅಂಕಗಳಾಗಿ ನಾಟಕವನ್ನು ವಿಂಗಡಿಸಿದ್ದರೂ ಈ ಮಟ್ಟಿಗೆ ಪ್ರಯೋಜನವಾಗಿಲ್ಲ. ಲೇಖಕರು ಮುಂದಿನ ತಮ್ಮ ಕೃತಿಗಳಲ್ಲಿ ಇಂಥ ದೋಷಗಳಿಗೆ ಎಡೆಕೊಡುವುದಿಲ್ಲವೆಂದು ನಂಬಿ ಅವರ ಪ್ರಯತ್ನಕ್ಕೆ ಶುಭಾಶಯಗಳನ್ನು ಅರ್ಪಿಸುತ್ತೇವೆ.

ನಗ್ನ ನೃತ್ಯ—

ಬರೆದವರು: ಎಂ. ದ್ವಾರಕಾನಾಥ್ ರಾವ್, ಪ್ರಕಾಶಕರು: ಶ್ರೀ ವಾಣಿ ಪ್ರಕಾಶನ, ಬೆಂಗಳೂರು ೩. ಬೆಲೆ: ರೂ. ೧—೦—೦.

ಬಹಳ ಮಾರ್ಮಿಕವಾಗಿ ಬರೆಯಲ್ಪಟ್ಟ ಈ ಕಾದಂಬರಿಯು ವರದಕ್ಷಿಣೆಯುತ್ತ ವಿಧವಾ ವಿವಾಹದ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತದೆ. ಪ್ರೇಮವು ಗಾಢವಾಗಿದ್ದರೆ ದಾಂಪತ್ಯ ಜೀವನಕ್ಕೆ ಯಾವುದೂ ಅಡ್ಡಿಯಾಗದೆಂಬ ವಿಷಯವನ್ನಿದು ಬೋಧಿಸುತ್ತದೆ. ಅದೇ ಸಮಯದಲ್ಲಿ ವಿಕೃತಕಾಮಿಗಳಿಂದ ಸಮಾಜಕ್ಕಾಗುವ ಅನ್ಯಾಯದ ಚಿತ್ರವನ್ನೂ ಇದು ಕಣ್ಣಿಗೆ ಕಟ್ಟುವಂತೆ ಮುಂದಿಡುತ್ತದೆ. ಶೈಲಿಯಲ್ಲಿ ಕಠೋರ ಆಕರ್ಷಣೆ ಇದೆ; ಮಾತಿನಲ್ಲಿ ತೀವ್ರ ಸಂವೇದನೆ ಇದೆ; ನಿರೂಪಣೆಯಲ್ಲಿ ಸಹಜ ಕೌಶಲವಿದೆ. ಒಟ್ಟಿನಲ್ಲಿ ಇದೊಂದು ರುದ್ರ—ಸುಂದರ ಕಾದಂಬರಿ ಎನ್ನಬಹುದು.

ವಕ್ರ ದೃಷ್ಟಿ—

ಬರೆದವರು: ಎನ್. ವಿ. ರಾವ್. ಪ್ರಕಾಶಕರು: ಪ್ರಗತಿ ಪಬ್ಲಿಕೇಶನ್, ಬೆಂಗಳೂರು. ಬೆಲೆ: ರೂ. ೧—೦—೦.

ಈ ಹಾಸ್ಯ ಪ್ರಬಂಧಗಳ ಸಂಕಲನವು ವಿನೋದಕ್ಕಿಂತಲೂ ಹೆಚ್ಚು ತತ್ತ್ವಸಾರದಿಂದ ಕೂಡಿದೆ. ಕಣ್ಣ ಮುಂದೆ ನಿತ್ಯವೂ ಕಾಣುವ ಸುಮಾರು ೨೦ ವಿಷಯಗಳನ್ನು ಎತ್ತಿಕೊಂಡು ಈ ಪ್ರಬಂಧಗಳನ್ನು ಬರೆಯಲಾಗಿದೆ—ಬರೆಯುವ ವೇಳೆ ಹಾಸ್ಯದ ಹೊದಿಕೆಯಲ್ಲಿ ವಿಚಾರದ ಗುಳಿಗೆಯನ್ನು ನುಂಗಿಸಲು ಲೇಖಕರು ಪ್ರಯತ್ನಿಸಿ, ಜಯಶೀಲರಾಗಿದ್ದಾರೆ. ನಾವು ಇದನ್ನು ಓದಿ ಲಘುಮನಸ್ಕರು ಹೇಗಾಗುತ್ತೇವೋ, ನಮ್ಮಲ್ಲಿ ಕೆಲವರಾದರೂ ವಿಚಾರಪರರಾಗುವಂತೆ ಸಹ ಈ ಓದು ಮಾಡಬಲ್ಲುದು. ಇದು ಇಲ್ಲಿಯ ಹಾಸ್ಯ ಪ್ರಬಂಧಗಳ ವಿಶೇಷ ವೈಶಿಷ್ಟ್ಯ.

ಅದೃಷ್ಟ ಚಕ್ರ—

ಬರೆದವರು: "ಲಿಬ್ರಾ" ಪ್ರಕಾಶಕರು: ಚಾತಕ ಪ್ರಕಾಶನ. ೪೨, ಜರ್ನಲಿಸ್ಟ್ಸ್ ಕಾಲನಿ, ಶ್ರೀ ಜಯಚಾಮ ರಾಜೇಂದ್ರ ರಸ್ತೆ, ಬೆಂಗಳೂರು ೨. ಬೆಲೆ: ೦—೬—೦.

ಅದೃಷ್ಟ ಫಲದಲ್ಲಿ ನಂಬಿಕೆಯುಳ್ಳವರಿಗೆ ಇಲ್ಲಿ ಕೆಲವು ವಿಷಯಗಳಿವೆ. ವಿವಾಹದ ಕುರಿತು ವಿಶೇಷ ಮಾಹಿತಿ ಕೊಡಲಾಗಿದೆ. ಅದೃಷ್ಟ ಸಂಖ್ಯೆಗಳ ವಿವರಣೆಯೂ ಇಲ್ಲಿವೆ. ಪುಸ್ತಕದ ಆಕಾರ ಮಾತ್ರ ಚೆನ್ನಾಗಿಲ್ಲ.

ಮಕ್ಕಳ ಮಗ್ಗಿ ಪುಸ್ತಕ
ರ ೧ ೨
ನವಯುಗ ಪ್ರೆಸ್, ಉಡುಪಿ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೇ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
U. RAGHAVENDRA KRISHNA BHAT
Jeweller, Tenkpet, UDIPI, S. Kanara.
ಫೋನ್ ನಂಬ್ರ 66

ಸಮಸ್ತ ಕನ್ನಡಿಗರಿಗೆ

ಕಾಸರಗೋಡಿನ ಬಂಧು-ಭಗಿನಿಯರ ಕರುಳಿನ ಕರೆ

(೨ನೇ ಪುಟದಿಂದ)

ಲು ಇಷ್ಟಪಡುತ್ತಾರೆಯೆ? ಕಾಸರಗೋಡ ನ್ನು ಬಿಟ್ಟಿರಲು ನಾವು ಎಂದೆಂದಿಗೂ ಇಷ್ಟಪಡುವುದಿಲ್ಲವೆಂದು ಒಕ್ಕೊರಲಿನ ಘೋಷವನ್ನು ಜಿಲ್ಲೆಯ ಜನತೆ ಹಾಗೂ ಜನತೆಯ ಮುಂದಾಳುಗಳು ಮಾಡಲು ಸಿದ್ಧರಿದ್ದಾರೆಯೆ? ನಿಕಟ ಬಾಂಧವ್ಯವುಳ್ಳ, ಸಾವಿರಾರು ಸಹವಾಸ ಪರಿಚಯವುಳ್ಳ ಕಾಸರಗೋಡಿನ ಕನ್ನಡಿಗರನ್ನು ಕೈಬಿಟ್ಟು, ತಮಗೆ ಇದುವರೆಗೂ ಯಾವೊಂದೂ ಸಾಹಿತ್ಯ ಸಂಬಂಧವಿಲ್ಲದ, ಪರಿಚಯ ಕೂಡಾ ಅಷ್ಟೊಂದು ಇರದ ಯಾವುದೋ ಕನ್ನಡಿಗರೊಡನೆ ಹಾಗೂ ಕನ್ನಡ • ಭೂಭಾಗದೊಡನೆ ಏನೇನೋ ಲಾಭವುಂಟೆಂದು ಜಿಲ್ಲೆಯ ಇತರ ಕನ್ನಡಿಗರಿಂದು ಸೇರಬಯಸುವುದಾದರೆ, ಇಂತಹ ಜನತಾಪ್ರೀತಿಗೆ, ಈ ತೆರನ ನಾಡು ನುಡಿಗಳ ಸೇವೆಗೆ, ಈ ರೀತಿಯ ಕನ್ನಡಿಗತನದ ಅಭಿಮಾನಕ್ಕೆ ಇಂದೇ ಧಿಕ್ಕಾರವಿರಲಿ!

ಕಾಸರಗೋಡಿನ ಕನ್ನಡಿಗರಿಗೆ, ಈ ಸಂದರ್ಭದಲ್ಲಿ, ಪ್ರಾಂತೀಯ ಸಂಕುಚಿತ ಮತಿಗಳಾಗಬೇಡಿರೆಂದೂ ಅಖಿಲ ಭಾರತ ದೇಶವೊಂದೇ ಎಂಬ ವಿಶಾಲ ದೃಷ್ಟಿಯವರಾಗಬೇಕೆಂದೂ ದಯಮಾಡಿ ನೀವು ಯಾರೂ ತತ್ವೋಪದೇಶ ಮಾಡಬೇಡಿರಿ: ಕಾಸರಗೋಡಿನಲ್ಲಿರುವ ಯಾವನೇ ಒಬ್ಬ ಯಃಕಶ್ಚಿತ್ ಕನ್ನಡಿಗನಾದರೂ ತಾನು ಭಾರತೀಯನಲ್ಲವೆಂಬ ಕ್ಷುದ್ರ ವಿಚಾರ ಜೀವಿ ಎಂದೆಂದಿಗೂ ಆಗಿಲ್ಲ. ಭಾರತದ ಬಿಡುಗಡೆಯ ಹೋರಾಟದಲ್ಲಿ ಕಾಸರಗೋಡಿನ ಜನತೆಯ ಪಾಲು ಏನೇನೂ ಕಡಿಮೆಯಲ್ಲ. ಸ್ವಾತಂತ್ರ್ಯಾನಂತರದ ಮಂತ್ರಿ ಪದವಿ, ಪಾರ್ಲಿಮೆಂಟು ಎಸೆಂಬ್ಲಿ ಸದಸ್ಯತ್ವ— ಇಂತಹ ಸ್ಥಾನಮಾನಗಳ ಸ್ಪರ್ಧೆಯ ಸಂದರ್ಭಗಳಲ್ಲಿ ಮಾತ್ರ ನಾವು ಪಾಲು ಕೇಳಿದ್ದು ಕಡಿಮೆಯೇನೋ ಹೌದು. ಎಲ್ಲಾ ಸಂದರ್ಭಗಳಲ್ಲಿಯೂ ನಾವು ಹಿಂಬಾಲಕರಾಗಿಯೇ ಉಳಿದು, ಜಿಲ್ಲೆಯ ಮುಂದಾಳುಗಳೇ ನಮ್ಮ ಮುಂದಾಳುಗಳೆಂದು ಬಗೆದದ್ದು ನಮ್ಮ ಅಪರಾಧವಾಗಿದ್ದರೆ ಆ ಅಪರಾಧವನ್ನು ನಾವು ಧಾರಾಳವಾಗಿ ಮಾಡಿದ್ದೇವೆ. ಆದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ, ಸ್ವಾತಂತ್ರ್ಯಾನಂತರದ ದೇಶಸೇವೆಯ ಅಗ್ನಿಪರೀಕ್ಷೆಯಸಂದರ್ಭಗಳಲ್ಲಿಯೂ ನಮ್ಮ ಸೇವೆ ಕನ್ನಡ ನಾಡಿನಇತರ ಭಾಗದವರಿಗಿಂತಏನೇನೂ ಕಡಿಮೆಯಾಗಿಲ್ಲ. ನಮಗೆ ಇಂದು ಯಾರಿಂದಲೂ ಈ ವಿಶಾಲ ದೃಷ್ಟಿಯ ತತ್ವೋಪದೇಶ ಬೇಕಾಗಿಲ್ಲ.

ದಕ್ಷಿಣ ಕನ್ನಡ ಜಿಲ್ಲೆ ನೆಹರು ಜಿಲ್ಲೆಯೆಂದು ಕೀರ್ತಿಹೊತ್ತದ್ದು ಸರ್ವಥಾ ಸರಿಯೆ: ನೆಹರು ಸರಕಾರಕ್ಕೆ ಪ್ರತಿಯೊಂದೂ ಸಂದರ್ಭದಲ್ಲಿ ಕಾಸರಗೋಡಿನ ಜನತೆ ಸಹ ದೃಢವಾದ ಬೆಂಬಲ ನೀಡಿದೆ. ಅಂತಹ ಸಾರ್ವತ್ರಿಕ ಬೆಂಬಲದ ಬಲದಿಂದಲೇ ಇಂದು ನೆಹರು ಸಮಿಾಪದಲ್ಲಿ ಡಿಲ್ಲಿಯ ವಲಯದಲ್ಲಿ ನಮ್ಮ ಮುಂದಾಳುಗಳು ಬಹಳ ಪ್ರಭಾವಿತರಾಗಿರುವರೆಂದೂ ನಾವು ಚೆನ್ನಾಗಿ ಬಲ್ಲೆವು. ಇಷ್ಟೆಲ್ಲಾ ಇದ್ದರೂ, ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ, ನಮ್ಮ ಜಿಲ್ಲೆಯ ಪ್ರಭಾವಶಾಲೀಮುಂದಾಳುಗಳೆಲ್ಲರಿಗೂ ಇಂದಿನೀ ಪ್ರಾಂತ ವಿಭಜನಾ ಸಂದರ್ಭದಲ್ಲಿ ನೆಹರು ಸರಕಾರಕ್ಕೆ ಬೆಂಬಲವಿತ್ತ ಫಲವಾಗಿ, ಪ್ರಸಾದ ರೂಪವಾಗಿ ದೊರಕಿತ ಒಂದೇ ಒಂದು ಸಮಸ್ಯೆಯೆಂದರೆ ಕಾಸರಗೋಡು ಪ್ರಶ್ನೆ ಮಾತ್ರ. ಈ ಪ್ರಶ್ನೆಯನ್ನು ನ್ಯಾಯವಿದ್ದಂತೆ, ಸತ್ಯವಿದ್ದಂತೆ ಜನತೆಯ ಸಾಮೂಹಿಕ ಅಪೇಕ್ಷೆಯಂತೆ ಜಿಲ್ಲೆಯ ಮಹಾಜನರೂ ಮುಂದಾಳುಗಳೂ ಬಗೆಹರಿಸಲು ಅಸಮರ್ಥರಾದರೆ ಅವರು ಭಾವೀ ಕರ್ನಾಟಕ ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಯಾವ ಪ್ರಯೋಜನವನ್ನು, ಯಾವ ನ್ಯಾಯವನ್ನು ದೊರಕಿಸಲು ಸಮರ್ಥರಾಗಬಹುದೋ, ಡಿಲ್ಲಿಯಲ್ಲಾಗಲಿ ಹಳ್ಳಿಯಲ್ಲಾಗಲಿ ಯಾವ ಗ್ರಾಭಾವವನ್ನು ಬೀರಬಹುದೋ-ಇಂದೇ ಚನ್ನಾಗಿ ಎಲ್ಲರೂ ಯೋಚಿಸಿಕೊಳ್ಳಿರಿ; ಕಾಸರಗೋಡಿಗೆ ನ್ಯಾಯವನ್ನು ದೊರಕಿಸಲಾರದ, ಕಾಸರಗೋಡನ್ನು ಕನ್ನಡನಾಡಿನಲ್ಲಿ ಉಳಿಸಲಾಗದ ನಿರ್ವೀರ್ಯರೆಂದು ಜಿಲ್ಲೆಯವರನ್ನು ಕನ್ನಡನಾಡಿನ ಇತರ ಜನತೆ ಕದೆಗಣಿಸಲಾರರೇ ಎಂದು ಆಳವಾಗಿ ಆಲೋಚಿಸಿರಿ. ದಕ್ಷಿಣ ಕನ್ನಡ ಜಿಲ್ಲೆಯ ಇಂದಿನ ಹಾಗೂ ಮುಂದಿನ ಪ್ರಭಾವೀ ರಾಜಕೀಯ ಶಕ್ತಿಯ ಸತ್ವಪರೀಕ್ಷೆ ಯಾಗಿದೆ ಕಾಸರಗೋಡು ಪ್ರಶ್ನೆಯೆಂಬುದನ್ನು ಎಲ್ಲರೂ ಇಂದು ಅವಶ್ಯ ಗಮನಕ್ಕೆ ತಂದುಕೊಳ್ಳಿರೆಂದು ನಾವು ಸಾರಿ ಹೇಳುತ್ತೇವೆ.

'ಸತ್ಯಮೇವ ಜಯತೇ' ಎಂಬ ನಮ್ಮರಾಷ್ಟ್ರದ ಧ್ರುವವಾಣಿಯನ್ನು ನಂಬಿ ನಡೆದದ್ದು ತಪ್ಪಾದರೆ ಆತಪ್ಪನ್ನು ನಾವು ಬುದ್ಧಿ ಪೂರ್ವಕ ಮಾಡಿದ್ದೇವೆ. ಈಗಲೂ ದಕ್ಷಿಣ ಕನ್ನಡದಲ್ಲಿಯೇ ಇರುವ ಕಾಸರಗೋಡಿನ ದಕ್ಷಿಣದ ಹೊಸ ದುರ್ಗ ಸಬ್ ತಾಲೂಕನ್ನು ಈಗ ಮಲೆಯಾಳೀ ಬಹುಮತವುಂಟೆಂದು-ಆ ಬಹುಮತ ಹೇಗೇ ಆಗಿರಲಿ— ಕೇರಳದಲ್ಲಿಯೇ ಸೇರಿಸುವುದು ಸರಿಯೆಂದು, ಚಂದ್ರಗಿರಿ ಹೊಳೆಯ ಉತ್ತರ ಭಾಗ ಮಾತ್ರ ಕನ್ನಡನಾಡಿನಲ್ಲಿ ಉಳಿದರೆ ಸಾಕೆಂದು ಹೇಳಿದ ಸತ್ಯವೇ ನಮಗೆ ಸೋಲಾಯಿತೆಂದು ನಾವಿಂದು ಚಿಂತಿಸುವಂತಾಗಿದೆ ಆದರ ಬದಲು ಗೋಕರ್ಣದ ತನಕ ಕೇಳಿದ ಕೇರಳೀಯರಿಗೆ ಕಾಸರಗೋಡು ತಾಲೂಕು ಸಂಪೂರ್ಣ ದೊರಕುವಂತಾಗಿರುವಾಗ, 'ಸತ್ಯಮೇವ ಜಯತೇ' ಎಲ್ಲುಂಟು? ನಾವು ಮಾಡಿದ ಇನ್ನೊಂದು ತಪ್ಪನ್ನೂ ನಾವೀ ಸಂದರ್ಭದಲ್ಲಿ ಒಪ್ಪಿಕೊಳ್ಳಬೇಕಾಗಿದೆ. ಸರ್ದಾರ್ ಪಣಿಕ್ಕರರನ್ನು ಅವರ ಹುಟ್ಟುಗುಣ ಏನಿದ್ದರೂ,ಅಂತಾರಾಷ್ಟ್ರೀಯ ವಿಚಾರ ಶಾಲಿಯಾದ ಶ್ರೇಷ್ಠ ಭಾರತೀಯ ನಾಗರಿಕರೆಂದು ನಂಬಿ, ಅವರಂತಹವರು ಕೊಟ್ಟ ಮಾತಿಗೆ ತಪ್ಪಲಾರರೆಂದು ತಿಳಿದದ್ದೂ, ನಮ್ಮನ್ನು ವಂಚಿಸಲಾರರೆಂದು ವಿಶ್ವಾಸವಿಟ್ಟದ್ದೂತಪ್ಪು! ಚಂದ್ರಗಿರಿಹೊಳೆಯಉತ್ತರಭಾಗ ನಿರ್ವಿವಾದವಾಗಿಕರ್ಣಾಟಕದ್ದೆಂದೇ ಹೇಳಿದಪಣಿಕ್ಕರರೇ ಮುಂದೆ ಇಡಿಯ ಕಾಸರಗೋಡು ತಾಲೂಕನ್ನು ಕೇರಳದಲ್ಲಿ ಸೇರಿಸುವ ಶಿಫಾರಸು ಮಾಡುವರೆಂದು ನಾವು ಹೇಗೆ ಅಂದೇ ತಿಳಿದುಕೊಳ್ಳಬೇಕು? ಅಂತೂ ಸತ್ಯವನ್ನು ಹೇಳಿದ್ದಕ್ಕೆ ನಾವು ಸೋತಿದ್ದೇವೆ; ನಂಬಿ ನಡೆದಿದ್ದಕ್ಕೇ ನಾವು ಕೆಟ್ಟಿದ್ದೇವೆ . ಇವೆರಡು ತಪ್ಪುಗಳನ್ನು ನಾವು ಕಾಸರಗೋಡಿನ ಕನ್ನಡಿಗರು ಮಾಡಿದ್ದೇವೆ.

'ಕಾಸರಗೋಡು ಕನ್ನಡನಾಡು, ಎಂಬ ವೀರ ಘೋಷಸ್ಮೆಯೊಡನೆ, ಇಂದು, ಇಲ್ಲಿನ ಇಪ್ಪತ್ತು ಸಾವಿರ ಕನ್ನಡ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತಾದರೂ ಹೋರಾಟಕ್ಕೆ ಹೊರಟಿದ್ದಾರೆ. ತಮ್ಮ ತೊಟ್ಟಿಲ ಕೂಸುಗಳನ್ನು ಸಹ ಕೈಗಳಲ್ಲಿ ಎತ್ತಿಕೊಂಡೇ ಇಲ್ಲಿನ ವೀರ ಕನ್ನಡಿತಿಯರಿಂದು ಸೆರೆಮನೆಗೆ ಸಾಗುತ್ತಿದ್ದಾರೆ ವೃದ್ಧರೂ ಕನ್ನಡದ ಹೋರಾಟದಿಪುಣ್ಯಯಾತ್ರೆಗಾಗಿ ಎದ್ದು ಬಂದಿದ್ದಾರೆ. ಕಾಸರಗೋಡಿನ ಕನ್ನಡ ಯುವಕರು ಸರ್ವತ್ಯಾಗಕ್ಕೂ ಸಿದ್ಧರಾಗಿ, ಪೋಲೀಸ್ ಮರ್ದನಕ್ಕೂ ಬಲಿಯಾಗಿ, ಕಾಸರಗೋಡಿನ ಕನ್ನಡ ನೆಲ್ಲದಲ್ಲಿ ಜನತೆಯ ಇಚ್ಛೆಗೆ ವಿರುದ್ಧವಾದ ಕೇರಳದ ಭೆರಣವನ್ನು ಒಂದೇ ಒಂದು ದಿನವಾದರೂ ನಡೆಯ ಗೊಡಲಾರೆವೆಂದು ಪಣತೊಟ್ಟು ಹೋರಾಡುತ್ತಿದ್ದಾರೆ. ಸಂಪೂರ್ಣ ಅಹಿಂಸಾತ್ಮಕವಾಗಿ, ಶಾಂತಿಯುತವಾಗಿ ಈ ಚಳವಳ ಮುಂದುವರಿಯುತ್ತಿದೆ. ಕಾಸರಗೋಡಿನ ಕನ್ನಡಿಗರ ಆತ್ಮ ಬಲಿದಾನದ ಈ ಮೂಲವೇದನೆ ನಿಜವಾಗಿಯೂ ಅಸಹನೀಯವಾದುದು; ಕಾಸರಗೋಡಿನ ಹೃದಯಕ್ಕೆ ಉಂಟಾದ ಗಾಯದಿಂದಾಗಿ ಈ ವೇದನೆ ಉದ್ಭವಿಸಿದೆ. ಇದುಕನ್ನಡಿಗರಸ್ತದಯ ಹೃದಯಗಳ ನೋವೆಂದು ನಾವು ನಂಬಬಹುದೆ?

ಕೋಲಾರವನ್ನು ಕಾಪಾಡಲು ಕೆ. ಸಿ. ರೆಡ್ಡಿಯವರಿದ್ದಾರೆ, ಬಳ್ಳಾರಿಯನ್ನುಳಿಸಲು ನಿಜಲಿಂಗಪ್ಪ ನವರು ಸೊಂಟಕಟ್ಟಿದ್ದಾರೆ. ಕಾಸರಗೋಡಿನ ರಕ್ಷಣೆಗೆ ಮಲ್ಯರಿಲ್ಲವೆ? ಶಿವರಾಯರಿಲ್ಲವೆ? ಸದಾನಂದ ಹೆಗ್ಡೆಯರಿಲ್ಲವೆ? ಎ. ಬಿ. ಶೆಟ್ಟರಿಲ್ಲವೆ? ಜಿಲ್ಲೆಯಲ್ಲಿ ಮೇಧಾವೀ ಮುಂದಾಳುಗಳೂ ಸಮಸ್ತ ಪಕ್ಷಪಂಗಡಗಳೂ, ಅಖಿಲ ಕನ್ನಡನಾಡಿನ ಮಹಾಜನರೂ ಮಂತ್ರಿವರ್ಯರೂ ಇಲ್ಲವೆ? ಇನ್ನು ಯಾರು ಬೇಕು? ದಿವ ಕರರೋ—ದಾತಾರರೋ—ಕರಮರಕರರೋ—ಅಂಬಲಿಯವರೋ—ಹನುಮಂತಯ್ಯನವರೋ — ಪೂಣಚ್ಚರೋ—ಎಲ್ಲರೂ ಇದ್ದಾರೆ. ನಿಶ್ಚಯವಾಗಿ ನಮಗೆ ಎಲ್ಲರೂ ಬೆಂಬಲವಾಗಿ ನಿಂತಿದ್ದಾರೆಂದೇ ನಾವು ನಂಬಿದ್ದೇವೆ. 'ಇಂಥವರೆಲ್ಲ ಇದ್ದು- ಕನ್ನಡದ ಮಹಾ ಜನತೆಯ ಬಲ ಇಚ್ಛಾ ಶಕ್ತಿಯ ಸ್ಫೂರ್ತಿಯಿದ್ದು— ನಾವು ಕಾಸರಗೋಡಿನ ಕನ್ನಡಿಗರು ನಿರಾಶ್ರಿತರೇ?

"ಕೇಳುವೆವೊ ಮುಳುಗುವೆವೊ ಎಲ್ಲರೂ ಒಮ್ಮೆಗೇ"ಎಲ್ಲ,ಸಮಸ್ತ ಕನ್ನಡಿಗರೂ ಕೋಟಿ ಕೋಟಿ ಕಂಠಗಳಿಂದು ಜಯಘೋಷ ಮಾಡಿರಿ.ಇದು ಕಾಸರಗೋಡಿನ ಜನತೆಯ ಕರುಳಿನ ಕರೆಯಾಗಿದೆ!

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.





'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 dated 12-12-1950 of the Director of public Instructions Madras.

(೧ನೇ ಪುಟದಿಂದ)

ಈ ರಾಜ್ಯದ ಮೇರೆ ಗುರುತಿಸಿದರೆ, ಏನೇನೂ ಅಂದ ಚಂದವಿಲ್ಲದೆ ಧೂಮಕೇತು ವಿನಂಥ ಬಾಲವಿರುವ ಒಂದು ರಾಜ್ಯವಾಗಿ ಸೇರ್ಪಡೆಯು ಬಳಿಕದ ಈ ಪ್ರದೇಶ ತೋರುತ್ತದೆ. ದಕ್ಷಿಣ ಕನ್ನಡ ಮತ್ತು ಮೈಸೂರು, ಕೊಡಗುಗಳ ಸೇರ್ಪಡೆಯಿಂದ ಮಲೆನಾಡಿನ ಅಭಿವೃದ್ಧಿಗೆ ಒಳ್ಳೆಯ ಅವಕಾಶ ದೊರಕುತ್ತದೆ; ಅಲ್ಲಿವೆ ತುಂಗಭದ್ರೆಯ ನೀರಿನಿಂದ ವಿದ್ಯುತ್ತನ್ನು ಉತ್ಪಾದಿಸುವ ತೀರ ನವೀನ ವಿಚಾರಕ್ಕೂ ಪ್ರಚೋದನೆ ದೊರೆತಿದೆ. ಈ ಹಿನ್ನೆಲೆಯಲ್ಲಿ ಕೇರಳದೊಡನೆ ಸೇರ್ಪಡೆ ಹೊಂದಿ ಏನಾದರೂ ಲಾಭಹೊಂದುವ ಅವಕಾಶ ವಿದ್ದರೆ ಅದು ಸೂಚಿತ ತಮಿಳು ನಾಡಿಗೆ ಮಾತ್ರ; ಹೊರತು ಕರ್ನಾಟಕಕ್ಕೆ ಏನೇನೂ ಪ್ರಯೋಜನ ಸಿಗಲಾರದು. ಮೈಸೂರಿಗೆ ಕರ್ನಾಟಕರಾಜ್ಯ ನಿರ್ಮಾಣದ ದೆಸೆಯಿಂದಲೇ ದೀರ್ಘ ಕರಾವಳಿ ಸಿಗುತ್ತದೆ. ಎಂದ ಮೇಲೆ, ಕೇರಳದ ಸೇರ್ಪಡೆಯಿಂದ ಮೈಸೂರಿಗಾಗಲಿ, ಕರ್ನಾಟಕಕ್ಕೆ ಆಗಲಿ ಸಿಗುವ ಲಾಭವೇನೂ ಇಲ್ಲ.

ಸಾಂಸ್ಕೃತಿಕ ದೃಷ್ಟಿಯಿಂದ ವಿಚಾರಿಸಿದರೂ ಇದೇ ಮಾತು ಅನ್ವಯಿಸುತ್ತದೆ. ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಹಾಗು ದಕ್ಷಿಣ ಪ್ರದೇಶಗಳಲ್ಲಿರುವ ಜನರು ಎಷ್ಟು ಭಿನ್ನವಾದ ಸಾಂಸ್ಕೃತಿಕ ಲಕ್ಷಣಗಳನ್ನು ವ್ಯಕ್ತಪಡಿಸುವರೆಂದು ಹೇಳುತ್ತಿದ್ದೇವೋ — ಇಡೀ ಕೇರಳಕ್ಕೂ ಕರ್ನಾಟಕಕ್ಕೂ ಅಷ್ಟೇ ತೀವ್ರ ಸ್ವರೂಪದ ಸಾಂಸ್ಕೃತಿಕ ವ್ಯತ್ಯಾಸವು ಇದೆ. ನಾವೆಲ್ಲ ಭಾರತೀಯರು ಎಂಬ ವಿಶಾಲ ಮನೋಭಾವವನ್ನು ಹೊಂದಿದ ಮಾತ್ರಕ್ಕೆ ಈ ಸ್ಥಳೀಯ ವೈಶಿಷ್ಟ್ಯವನ್ನು ಅಳಿಸಿಬಿಡುವುದು ಸಾಧ್ಯವಿಲ್ಲ. ಕರ್ನಾಟಕದ ಜನರೆಲ್ಲರೂ ಒಂದೇ ಬಗೆಯ ಸಾಂಸ್ಕೃತಿಕ ಲಕ್ಷಣಗಳನ್ನು ನಿತ್ಯಜೀವನದಲ್ಲಿ ವ್ಯಕ್ತಪಡಿಸುತ್ತಿದ್ದಾರೆಯೆ ಎಂದು ಕೆಲವರು ಕೇಳಬಹುದು. ಹೌದು ಎಂಬ ಉತ್ತರವನ್ನು ಅಂಥವರು ಒಪ್ಪದಿದ್ದರೂ ಸಹ, ನಮ್ಮವರೆಲ್ಲರ ಭಾಷೆಯಾದರೂ ಒಂದೇ ಎಂಬ ಮಾತನ್ನು ಒಪ್ಪದೆ ಅವರಿಗೆ ನಿರ್ವಾಹವಿಲ್ಲ. ಕೇರಳದ ವಿಷಯದಲ್ಲಿ ಈ ಮೂಲಭೂತ ಸಂಬಂಧವೂ ಇಲ್ಲ.

ಕಾಸರಗೋಡಿನ ಕುರಿತು ನಡೆದಿರುವ ಕಲಹವನ್ನು ನಿಲ್ಲಿಸುವುದಕ್ಕಾಗಿ ಈ ಸೇರ್ಪಡೆಯ ಸೂಚನೆ ಬಂದಿರುವುದಾದರೆ, ಈ ರೀತಿಯಾಗಿ ವಿವಾದವನ್ನು ಬಗೆಹರಿಸುವುದು ಎಷ್ಟಕ್ಕೂ ಸೂಕ್ತವಲ್ಲವೆನ್ನಬೇಕಾಗುತ್ತದೆ. ವಿವಾದವನ್ನು ಆಯಾ ಪಕ್ಷಗಳ ಯೋಗ್ಯತೆಯನ್ನು ಅಳೆದು ತೀರ್ಮಾನಿಸುವ ವಿಚಕ್ಷಣತೆ ತೋರಿಸುವುದೇ ಯೋಗ್ಯವಲ್ಲವೆ, ಈ ಅಡ್ಡ ದಾರಿ ಚಂದವಲ್ಲ. ಬಳ್ಳಾರಿಯ ಕುರಿತು ಎದ್ದ ವಿವಾದವನ್ನು ತೀರಿಸಲು ಆಂಧ್ರದೊಡನೆ ಸೇರಿಹೋಗಬೇಕಾದೀತು; ಬೆಳಗಾಂವಿ, ಶೋಲಾಪುರಗಳೊಡನೆ ಎದ್ದ ವಿವಾದ ಪರಿಹಾರಕ್ಕೆ ಮಹಾರಾಷ್ಟ್ರದೊಡನೆ ಹೊಂದಿಕೊಳ್ಳಬೇಕಾದೀತು, ಕೊಳ್ಳೆಗಾಲ ಮತ್ತು ನೀಲಗಿರಿಗಳನ್ನು ಮುಂದಿಟ್ಟು ತಮಿಳು ನಾಡಿನೊಡನೆ ವಿಲಯನ ಸಾಧಿಸಬೇಕಾದೀತು. ಇದೆಲ್ಲ ಮುಗಿಯದ ಕೆಲಸ!

ಆದುದರಿಂದ ಸದ್ಯಕ್ಕೆ ಬೇರೆಲ್ಲ ವಿಚಾರಗಳನ್ನು ಒತ್ತಟ್ಟಿಗಿರಿಸಿ, ಕರ್ನಾಟಕದ ಏಕೀಕರಣವನ್ನು ಸಾಧಿಸೋಣ! ಕೇರಳದೊಡನೆ ಕರ್ನಾಟಕದ ಸೇರ್ಪಡೆಗೆ ಈಗಂತೂ ಕಾಲ ಪಕ್ವವಾಗಿಲ್ಲ ಎಂಬ ವಾಸ್ತವಾಂಶವನ್ನು ಕಡೆಗಣಿಸದಿರೋಣ! ಮುಖಂಡರಾದವರು ತಮ್ಮ ಉದ್ದೇಶ ಎಷ್ಟೇ ಘನವಾಗಿದ್ದರೂ ಈ ವ್ಯಾವಹಾರಿಕ ತತ್ವವನ್ನು ಮನಗಂಡು ಜನತೆಯ ಇಚ್ಛೆಗೆ ಶಿರಬಾಗಿ ನಡೆಯಲಿ! — ಎಂದು ಹಾರೈಸುತ್ತೇವೆ.

(ಬರೆದು: ಬಂಧುವು)

ನೋಟೀಸು.

ಪುತ್ತೂರು. ಡಿ. ಮು. ಕೋರ್ಟಿನಲ್ಲಿ

O. S. 580/55.

ನಾರಾಯಣ ಶೆಟ್ಟಿ..............ವಾದಿ.
ಗೋಪಿ ಹೆಂಗ್ಸು ಕೂಡಾ...ಪ್ರತಿವಾದಿರು.

2ನೇ ಪ್ರತಿವಾದಿ:—ನರಿಯಪ್ಪಯಾನೆ ಸಂಜೀವ ಶೆಟ್ಟಿ ಗೋಪಿಹೆಂಗ್ಸಿನ ಮಗ. ಮಂಗಳೂರು ತಪರಿನ ಮಂಜಳಬೈಲು. P.O. ಮಂಗಳೂರು. } ರಿಗೆ

ತಾ. 7—8—33ನೇ ರಜಿಸ್ಟ್ರು ಕರಾರು ಪ್ರಕಾರ 31—3—55ನೇ ವರೆಗಿನ ಮೂರು ವರ್ಷಗಳ ಮುಟ್ಟುವಳಿ ರೂ. 680—8—0 ಕ್ಕೆ ವಾದಿಯು ಮಾಡಿದ ಮೇಲಿನ ದಾವೆಯು ತಾ. 27—3—56ಕ್ಕೆ ಇಟ್ಟಿರುವುದ್ರಿಂದ ನಿಮ್ಮ ಆಕ್ಷೇಪಣೆ ಇದ್ರೆ ಸದ್ರಿ ಆದಿನ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಉದಪರಿಸದಿದ್ರೆ ನಿಮ್ಮನ್ನು ಶಿಪ್ಪಾ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(Sd.) H. Pundarika Bhat.
vakil for plff.

ಪುತ್ತೂರು 6—3—56.

ಗೀತೆಯ ಕೈಗನ್ನಡಿ

ನವಯುಗ ಪ್ರೆಸ್, ಉಡುಪಿ.

ಸಾಮಾಜಿಕ ಹಿತ
ಕೇಂದ್ರ ಮಂಡಳದ ಕಾರ್ಯಕ್ರಮ

ಕೇಂದ್ರ ಸರಕಾರದ ಅರ್ಥ ಸಚಿವ ಶ್ರೀ ಚಿಂತಾಮಣಿ ದೇಶಮುಖರ ಹೆಂಡತಿ ಎಂಬುದಾಗಿ ಶ್ರೀಮತಿ ದುರ್ಗಾಬಾಯಿ

ದೇಶಮುಖರು ಪ್ರಸಿದ್ಧಿಗೆ ಬಂದು ಹೆಚ್ಚು ಸಮಯವಾಗಲಿಲ್ಲ; ಆದರೆ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಎಂಬ ನೆಲೆಯಿಂ ಅವರು ಕಳೆದ ಹಲವಾರು ವರ್ಷಗಳಿಂದ ಭಾರತದಾದ್ಯಂತ ಪ್ರಸಿದ್ಧರಾಗಿದ್ದರು. ಯೋಜನಾ ಆಯೋಗದ ಸದಸ್ಯರಾಗಿದ್ದಾಗ ಅವರು ಶ್ರೀ ದೇಶಮುಖರನ್ನು ಮದುವೆಯಾದರು. ಈಗ ಕೇಂದ್ರ ಸಾಮಾಜಿಕ ಹಿತಮಂಡಲದ ಅಧ್ಯಕ್ಷೆಯಾಗಿ ಕೆಲಸಮಾಡುತ್ತಿದ್ದಾರೆ.

ಕೇಂದ್ರ ಸಾಮಾಜಿಕ ಹಿತ ಮಂಡಳವು ೧೯೫೩ನೇ ಆಗೋಸ್ತು ತಿಂಗಳಿಂದ ಒಳ್ಳೆಯ ಸೇವೆಯನ್ನು ನಡೆಸುತ್ತಾ ಬಂದಿದೆ. ಸಾಮಾಜಿಕ ಹೊಣೆಗಾರಿಕೆಯನ್ನು ತಾಳುಗೊಳ್ಳುವ ಮನೋಭಾವವನ್ನು ಜನರಲ್ಲಿ ಹುಟ್ಟಿಸುವುದಕ್ಕೆ ಪೋಷಕವಾಗುವಂತೆ ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ಸಾಮಾಜಿಕ ಹಿತಕಾರ್ಯಗಳು ನಡೆಯಬೇಕೆಂಬ ತನ್ನ ವಿಶ್ವಾಸವು ಕಳೆದಸುಮಾರು ೩೦ ತಿಂಗಳುಗಳಷ್ಟು ಅಲ್ಪಾವಧಿಯಲ್ಲಿ ಪೂರ್ಣಪ್ರತಿಫಲನಗೊಂಡಿರುವುದನ್ನು ಈ ಮಂಡಳದ ಇತ್ತೀಚೆಯ ವರದಿ ಸ್ಪಷ್ಟಪಡಿಸುತ್ತದೆ.

ಈ ವರದಿಗನುಸಾರವಾಗಿ ಕಳೆದ ಅಕ್ಟೋಬರದ ವರೆಗೆ ಮಂಡಳವು ೨೧೭೫ ಕಲ್ಯಾಣ ಸಂಸ್ಥೆಗಳಿಗೆ ಧನ ಸಹಾಯವನ್ನಿತ್ತಿತು; ಅಲ್ಲದೆ ತನ್ನ ನೇರಾದ ಆಡಳಿತೆಯಲ್ಲಿ ೧೧೭೫ ಕಲ್ಯಾಣ ಕೇಂದ್ರಗಳನ್ನೂ ೨೫೫ ಸಾಮಾಜಿಕ ಹಿತ ವಿಸ್ತರಣಾ ಯೋಜನೆಗಳನ್ನೂ ಕೈಗೊಂಡಿತು. ಅಕ್ಟೋಬರದಿಂದೀಚೆಗೆ ಪುನಃ ೩೨ ವಿಸ್ತಾರಣಾ ಯೋಜನೆಗಳನ್ನು ಅದು ಪ್ರಾರಂಭಿಸಿರುತ್ತದೆ. ಇವುಗಳ ಕೆಲಸವು ಎಲ್ಲ ಮಟ್ಟದ ಜನರನ್ನೂ ಸುಸ್ಥಿತಿಯಲ್ಲಿಡಲು ಬಹಳವಾಗಿ ನೆರವಾಗುತ್ತದೆ; ಅಲ್ಲದೆ ಸಮಾಜದ ಉದಾರ ಸಹಾಯದ ಬಲದಿಂದ ಈ ಕಲ್ಯಾಣ ಕೇಂದ್ರಗಳು ಸ್ವಾವಲಂಬಿಯಾಗಿ ಕೆಲಸ ಮಾಡಬಲ್ಲ ಆತ್ಮ ವಿಶ್ವಾಸವೂ ತಕ್ಕಮಟ್ಟಿಗೆ ಮೂಡಿರುತ್ತದೆ.

ಎಲ್ಲಿ ಅಪಾಯಕರವಾದ ರೋಗಗಳ ಹಾವಳಿ ನಡೆದಿದೆಯೋ, ನಿರಕ್ಷರತೆ ಮತ್ತು ಅಜ್ಞಾನಗಳಿಂದಾಗಿ ಜನರು ತೀರ ಹಿಂದುಳಿದಿರುವರೋ ಅಲ್ಲೆಲ್ಲ ಸಮಾಜಹಿತ ಕಾರ್ಯ ನಡೆಯಬೇಕೆಂದು ಮಂಡಳವು ಬಯಸಿದೆ. ಈಗಾಗಲೇ ಸ್ವೇಚ್ಛೆಯಿಂದ ಕೆಲಸ ನಡೆಸುತ್ತಿರುವ ಕಲ್ಯಾಣ ಕೇಂದ್ರಗಳ ಜೊತೆಯಲ್ಲಿ ಕೇಂದ್ರ ಮಂಡಳವೂ ತನ್ನ ಚಟುವಟಿಕೆಯನ್ನು ವಿಸ್ತರಿಸಲು ನಿರ್ಧರಿಸಿದೆ. ಎರಡನೇ ಯೋಜನೆಯ ಕಾಲಾವಧಿಯಲ್ಲಿ ೯೫೦ ಹೊಸಯೋಜನಾ ಘಟಕಗಳನ್ನು ಕೊಡಲಾಗುತ್ತದೆ. ಇದು ೧೦೦೦೦ ಕೇಂದ್ರಗಳಲ್ಲಿ ಕೆಲಸ ನಡೆಸಿ, ೩೦೦೦೦ ಹಳ್ಳಿಗಳನ್ನು ವ್ಯಾಪಿಸುತ್ತದೆ. ಪ್ರತಿಯೊಂದು ಕೇಂದ್ರದಲ್ಲಿ ಒಬ್ಬ ಗ್ರಾಮಸೇವಿಕೆ, ಒಬ್ಬಳು ತರಬೇತಿಹೊಂದಿದ ದಾಯಿ ಮತ್ತು ಕೆಲವು ಗುಂಪುಗೊಂಡ ರಂತೆ ಸೂಲಗಿತ್ತಿ ಇರುವರು.

ವೇಶ್ಯಾವೃತ್ತಿ ಮತ್ತಿತರ ಅನೈತಿಕ ವ್ಯಾಪಾರಗಳಲ್ಲಿ ಮುಳುಗಿರುವ ಮಹಿಳೆಯರನ್ನು ಆ ಉದ್ಯೋಗಗಳಿಂದ ಪರಾವೃತ್ತರಾಗಿ ಮಾಡಿ ಗೌರವಾರ್ಹವಾದ ಬೇರೆ ಉದ್ಯೋಗಗಳನ್ನು ಕೈಗೊಂಡು ಜೀವನಯಾಪನೆ ಮಾಡುವಂತೆ ಅವರಿಗೆ ಬೋಧಿಸಿ ಅನುಕೂಲತೆ ಕಲ್ಪಿಸಿ ಕೊಡುವುದೂ ಮಂಡಳದ ಉದ್ದೇಶಗಳಲ್ಲೊಂದು. ಹೀಗೆ ಸಾಮಾಜಿಕ ಆರೋಗ್ಯ ರಕ್ಷಣೆಗೆ ಕೆಲಸ ಮಾಡುವ ಕಾರ್ಯಕ್ರಮವು ಈಗ ಒಳ್ಳೆಯ ಚಟುವಟಿಕೆಯನ್ನು ವ್ಯಕ್ತಪಡಿಸಿ ಪ್ರಗತಿಪರವಾಗಿ ಸಾಗಿದೆ. ಈಚೆಗೆ ಜಯಪುರದಲ್ಲಿ ಸೇರಿದ ಸಭೆಯೊಂದರಲ್ಲಿ ಮಂಡಳದ ನಿರ್ಧಾರಕ್ಕೆ ಸಂಪೂರ್ಣ ಬೆಂಬಲ ಸಿಕ್ಕಿರುತ್ತದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ —
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕಭಂಡಾರ, ಉಡುಪಿ.

Edited, Printed & Published By K. H. Shetty, at the Navayuga Press, Udipi S. India

RD. NO. M. 3010

Licensed to Post without Prepayment

ನವಯುಗ

ಸಂಪುಟ ೩೫ — VOL. 35

ಉಡುಪಿ, 22—3—1956

ಸಂಚಿಕೆ ೨೯ — NO. 29

ಜಾತೀಯ ಭೂತ!

ಮಧ್ಯಪ್ರದೇಶದ ಗವರ್ನರರಾದ ಡಾ. ಟ್ಟಾಭಿ ಸೀತಾರಾಮಯ್ಯನವರು ಕೆಲವು ರಗಳ ಹಿಂದೆ ತಮ್ಮದೊಂದು ಭಾಷಣ ಜಾತಿವಾಚಕ ಶಬ್ದಗಳನ್ನು ಹೆಸರಿನ ಸೇರಿಸುವುದನ್ನು ನಮ್ಮ ಸುಶಿಕ್ಷಿತರು ಬಿಡದೆ, ಜಾತಿ ಭೇದದ ನಿರ್ಮೂಲನ ಸುಲಭಸಾಧ್ಯವಾಗುವುದೆಂದು ಹೇಳಿ ು. ಉದಾಹರಣೆಗೆ ರಾಮಭಟ್ಟ ಅಥ ರಾಮ ಶೆಟ್ಟಿ ಅಥವಾ ರಾಮ ಪೂಜಾ ಅಥವಾ ಹೊಲೆಯರ ರಾಮ ಎಂದು ಯುವ ಬದಲು ರಾಮ ಎಂ ದಾಗಿಯಷ್ಟೇ ಬರಿದರೆ ಜಾತೀಯ ಭಾವನೆಗೆ ಪ್ರಾಧಾನ್ಯ ಬಾರದೆ ಹೋಗು ದೆಂದು ಅವರ ಅಭಿಪ್ರಾಯ. ಆದರೆ ಮ ಎಂಬ ಹೆಸರೇ ಆತನು ಹಿಂದು ಬ ಭಾವನೆಗೆ ಎಡೆಕೊಡಲಾರದೆ— ಪ್ರಶ್ನೆಯು ಟೀಕಾಕಾರರಿಂದ ಬಂ ದಿಂಬುದನ್ನು ಅವರು ಗಮನಿಸಿ ಕೆ ಕಾಣುವುದಿಲ್ಲ. ಯಾವುದೇ ಹೆಸ ನ್ನು ಯಾರು ಬೇಕಾದರೂ ಇಟ್ಟುಕೊ ಳ್ಳಹುದೆಂಬ ಮಾತೇ ಬಹುಶಃ ಈ ಮ ಪ್ರಶ್ನೆಗೆ ತಕ್ಕ ಉತ್ತರ.

ನಮ್ಮ ಸಂಸತ್ತಿನ ರಾಜ್ಯ ಸಭೆಯಲ್ಲಿ ದ ವಾರ ಡಾ. ಪಟ್ಟಾಭಿಯವರ ಮಾ ಸ್ವಲ್ಪ ಮಟ್ಟಿಗೆ ಎತ್ತಿ ಹಿಡಿಯುವ ಸೂದೆಯೊಂದು ಚರ್ಚೆಗೆ ಬಂದು, ಕಾರವಾಗಿದೆ. ೧೯೦೮ನೇ ಇಸವಿಯ ಸ್ಟ್ರೇಶನ್ ಆ್ಯಕ್ಟ್ ಎಂಬ ಶಾಸನವು ತ್ತಾವೇಜುಗಳ ರಜಿಸ್ಟ್ರಿಯ ಕಾಲದಲ್ಲಿ ಬಂಧಿಸಿದವರ ಜಾತಿಯು ನಮೂದಿಸ ಲಬೇಕೆಂದು ಹೇಳುತ್ತದೆ; ಈ ನಿರ್ಬಂ ನ್ನು ತೆಗೆದು ಹಾಕಲು ಸ್ವೀಕೃತ ಮ ದೆಯು ಉದ್ದೇಶಿಸಿದೆ. ರಾಜ್ಯ ಸಭೆ ಕಾಂಗ್ರೆಸು ಸದಸ್ಯರಾದ ಶ್ರೀ. ಪಿ. ಲ್ಯಾವಾ ಇದನ್ನು ಖಾಸಗಿಯಾಗಿ ಡಿಸಿದ್ದರು. ಲೋಕ ಸಭೆಯಲ್ಲಿ ಇಂ ಮಸೂದೆಯನ್ನು ಶ್ರೀ ಎನ್. ಸಿ. ವಂತ ಎಂಬ ಸದಸ್ಯರು ಈ ಮೊದಲೇ ಡಿಸಿದ್ದರು, ಮತ್ತದು ಅಲ್ಲಿ ಸ್ವೀಕೃತ ತ್ತು. ಸಾಮಾನ್ಯವಾಗಿ ಖಾಸಗಿ ಮ ದೆಗಳು ಸಂಸತ್ತಿನಲ್ಲಿ ಸಾಗಷ್ಟು ಬೆಂ ವನ್ನು ಸಂಪಾದಿಸಿ, ಮಂತ್ರಿ ಮಂಡ ಹಾಗು ಆಳುವ ಪಕ್ಷದ ಆಕ್ಷೇಪವಿಲ್ಲ ಪುರಸ್ಕಾರವನ್ನೇ ಗಳಿಸಿ ಸ್ವೀಕಾರವಾ ವುದು ಬಹಳ ವಿರಳ. ಸಂಸತ್ತು ಹಿಂ ವ್ ಮುಸ್ಲಿಂ ವಕ್ಫಗಳಿಗೆ ಬಂಧಿಸಿದ ಖಾಸಗಿ ಮಸೂದೆಯೊಂ ನ್ನು ಮಾತ್ರ ಸ್ವೀಕರಿಸಿತ್ತು. ಈಗ ಕರಿಸಿರುವ ಮಸೂದೆಯು ಖಾಸಗಿ ಸ್ಯರ ಪ್ರಯತ್ನಗಳಲ್ಲಿ ಯಶಸ್ವಿ ಸಂ ಪಿಸಿದ ಮಸೂದೆಗಳಲ್ಲಿ ಎರಡನೆಯ ದೆ.

ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಲ್ಲಿ ಹೆಚ್ಚಿನವರ ಮಸೂದೆಗೆ ಬೆಂಬಲವಿತ್ತು ಮಾತನಾಡಿದರೆಂಬುದನ್ನು ಅದು ಸ್ವೀಕಾರಗೊಂಡ ಸಂಗತಿಯೇ ಸ್ಪಷ್ಟಪಡಿಸುತ್ತದೆ. ಜಾತೀಯತೆಯ ಭಾವನೆಯನ್ನು ಅಳಿಸಿ ಹಾಕಲು ಸರಕಾರದ ಮಂತ್ರ್ಯರು ಪ್ರಯತ್ನಶೀಲರಾಗಿದ್ದಾರೆ. ಹಾಗಿರುವಾಗ ಸರಕಾರದ ಪರವಾಗಿಯೇ "ನಿಮ್ಮ ಜಾತಿಯೇನು?" ಎಂಬ ಪ್ರಶ್ನೆ ಬಂದರೆ ಅದು ಹಾಸ್ಯಾಸ್ಪದವೆನಿಸುತ್ತದೆ. ತಮ್ಮ ಜಾತಿಯನ್ನು ತಿಳಿಸಲು ಇಚ್ಛಿಸದ ನಾಗರಿಕರ ಮೇಲೆ ಜಾತಿಯನ್ನು ಪ್ರಕಟವಾಗಿ ಹೇಳಲೇಬೇಕೆಂದು ಕಡ್ಡಾಯವಾಗಿ ವಿಧಿಸುವುದು ಸರಿಯಲ್ಲ. ಆದುದರಿಂದ ದಸ್ತಾವೇಜುಗಳ ರಜಿಸ್ಟ್ರಿಯ ಕಾಲದಲ್ಲಿ ಸಂಬಂಧಿಸಿದವರ ಜಾತಿಯು ನಮೂದಿಸಲ್ಪಡುವ ಸಂಪ್ರದಾಯ ನಿಲ್ಲಬೇಕು ಎಂದು ಮಸೂದೆಯ ಸಮರ್ಥಕರು ಹೇಳಿದರು. ಸರಕಾರದ ಪರವಾಗಿ ಮಾತನಾಡಿದ ಕಾನೂನು ಸಚಿವ ಶ್ರೀ ಎಚ್. ವಿ. ಪಾಟಸ್ಕರರು ಖಾಸಗಿಯಾಗಿ ಸದಸ್ಯರು ಮಂಡಿಸಿದ ಈ ಮಸೂದೆಯನ್ನು ಸ್ವಾಗತಿಸಿ, ತನ್ನ ಜಾತಿಯನ್ನು ನಮೂದಿಸಲು ಅಥವಾ ಹೇಳಲು ಬಯಸದ ನಾಗರಿಕರು ಅನುಭವಿಸಬಹುದಾದ ಕಿರುಕುಳವು ಇದರಿಂದ ತಪ್ಪುವುದೆಂದರು. ಆದರೆ ನಮ್ಮ ಘಟನೆಯು ಹಿಂದುಳಿದ ವರ್ಗಕ್ಕೂ ಗುಡ್ಡಗಾಡು ಪ್ರದೇಶದ ಅನಾಗರಿಕ ಗುಂಪುಗಳಿಗೂ ವಿಶೇಷ ಸೌಲಭ್ಯವನ್ನು ಕೊಡಬೇಕೆಂದು ಹೇಳಿರುವುದರಿಂದ ಎಲ್ಲ ಶಾಸನಗಳನ್ನೂ ಹೀಗೆ ತಿದ್ದುಪಡಿಗೊಳಪಡಿಸುವುದು ಈಗಲೇ ಸಾಧ್ಯವಿಲ್ಲ ಎಂದರು.

೧೯೦೮ನೇ ಶಾಸನದಲ್ಲಿದ್ದ ನಿರ್ಬಂಧದ ಮೂಲೋದ್ದೇಶವನ್ನು ಈಗ ತಂದ ತಿದ್ದುಪಡಿಯು ಭಂಗಪಡಿಸುತ್ತದೆ ಎಂದು ಕೆಲವು ಸದಸ್ಯರು ಎಚ್ಚರಿಕೆ ನಿತ್ತರು. ದಸ್ತಾವೇಜುಗಳಿಗೆ ಸಂಬಂಧಿಸಿದ ವ್ಯಕ್ತಿಗಳ ಸುಲಭ ಹಾಗು ಸರಿಯಾದ ಗುರುತು ಸಿಗುವಂತೆ ಮಾಡುವುದೇ ರಜಿಸ್ಟ್ರಿಯ ಕಾಲದಲ್ಲಿ ಜಾತಿಯನ್ನು ನಮೂದಿಸುವ ಉದ್ದೇಶವೆಂದೂ ಜಾತಿಯನ್ನು ನೆಪಮಾಡಿಕೊಂಡು ವ್ಯಕ್ತಿಯನ್ನು ಹೀನೈಸುವ ಹೇತು ಆ ಶಾಸನದ್ದಲ್ಲವೆಂದೂ ಅವರು ನೆನಪಿಗೆ ತಂದುಕೊಟ್ಟರು. ಡಾ. ಪಿ. ವಿ. ಕಾಣೆ ಎಂಬ ವಿದ್ವಾಂಸ ಸದಸ್ಯರೊಬ್ಬರು ಜಾತಿಯನ್ನು ಸಂಬಂಧಿಸಿದವರು ಹೇಳದಿದ್ದರೂ ತೊಂದರೆಯಿಲ್ಲ ಎಂದಿಷ್ಟೇ ತಿದ್ದುಪಡಿ ಮಾಡಿದರೆ ಸಾಕು; ಜಾತಿಯನ್ನು ನಮೂದಿಸಲಿಕ್ಕೆ ಏನೇನೂ ಎಡೆಯಿಲ್ಲದಂತೆ ಮಾಡುವುದು ಸರಿಯಲ್ಲ. ಏಕೆಂದರೆ, ವ್ಯಕ್ತಿಯನ್ನು ಗುರುತಿಸುವುದು ಇದರಿಂದ ಕಷ್ಟವಾಗಿ ಪರಿಣಮಿಸಿ ದಸ್ತಾವೇಜುಗಳ ದುರುಪಯೋಗಕ್ಕೆ ಅವಕಾಶವಾದೀತು; ಸಂಬಂಧಿಸಿದ ವ್ಯಕ್ತಿಗಳು ತಮ್ಮ ಸ್ವಂತ ಹೊಣೆಯಿಲ್ಲದೆ ನಷ್ಟಕ್ಕೆ ಗುರಿಯಾಗಬೇಕಾದೀತು ಎಂದು ನುಡಿದರು.

ಕೆಲವು ಜಾತಿಗಳಲ್ಲಿ ಆಸ್ತಿಪಾಸ್ತಿಯನ್ನು ಆಯಾ ಜಾತಿಯಿಂದ ಹೊರಗಿನವರಿಗೆ ವರ್ಗಾಯಿಸುವುದು ಕ್ರಮವಿರುದ್ಧವೆನಿಸುತ್ತದೆ. ಪ್ರಾಚೀನ ಪದ್ಧತಿಯನ್ನೇ ಇಂದೂ ಅನುಸರಿಸುತ್ತಿರುವವರಲ್ಲಿ ಇಂಥ ನಿರ್ಬಂಧಗಳು ಉಳಿದಿರುತ್ತವೆ. ಉದಾಹರಣೆಗೆ ಛೋಟಾ ನಾಗಪುರದ ಆದಿವಾಸಿಗಳಲ್ಲಿ ಸೊತ್ತನ್ನು ಒಂದು ಗುಂಪಿನಿಂದ ಇನ್ನೊಂದಕ್ಕೆ ವರ್ಗಾಯಿಸುವ ಸಂಬಂಧದಲ್ಲಿ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆದಕಾರಣ ಈ ಸಾಮಾಜಿಕ ಸಂಪ್ರದಾಯಗಳನ್ನು ಪಾಲಿಸಿಕೊಂಡು ಹೋಗಲು ಪ್ರಸ್ತುತ ತಿದ್ದುಪಡಿಯಿಂದ ಅಡ್ಡಿ ಬರುತ್ತದೆ ಎಂದು ಕೆಲವರು ತಿಳಿಸಿದರು. ಆದರೆ ಜಾತಿ ಎಂಬ ಶಬ್ದದಲ್ಲಿಯೇ ಜುಗುಪ್ಸೆ ಪಟ್ಟವರಂತೆ ಮಾತನಾಡಿದ ಸದಸ್ಯರೊಬ್ಬರು ಡಾ. ಪಟ್ಟಾಭಿಯವರ ಮಾರ್ಗವನ್ನನುಸರಿಸಿ, ಜಾತಿವಾಚಕ ಶಬ್ದಗಳನ್ನು ಹೆಸರಿನ ಮುಂದೆ ಅಥವಾ ಹಿಂದೆ ಉಪಯೋಗಿಸುವ ಕ್ರಮ ನಿಲ್ಲಬೇಕು ಎಂದು ಸಾರಿದರು. ಇನ್ನೊಬ್ಬ ಸದಸ್ಯರು ಪ್ರಸ್ತುತ ತಿದ್ದುಪಡಿಯನ್ನು ಜಾತಿಯನ್ನು ನಮೂದಿಸಬೇಕಾಗುವ ಈಗಿನ ಎಲ್ಲ ಶಾಸನಗಳಿಗೂ ವಿಸ್ತರಿಸಬೇಕು ಎಂದು ಅಪೇಕ್ಷಿಸಿದರು.

ಜಾತೀಯ ಭೂತವು ನಮ್ಮನ್ನು ಸುಧಾರಣೆಯ ಮಾರ್ಗದಲ್ಲಿ ಓಡಿಸುತ್ತಿರುವುದು ಒಂದು ದೃಷ್ಟಿಯಿಂದ ಸರಿಯಾದರೂ ಇನ್ನೊಂದು ದೃಷ್ಟಿಯಿಂದ ವಿಚಾರಿಸಿದರೆ, ಇಂಥ ಕ್ರಮಗಳಿಂದ ನಾವೇನು ಸುಧಾರಣೆ ಹೊಂದಿಯೇವು ಎಂಬ ಸಂಶಯ ಮೂಡುತ್ತದೆ. ಜಾತಿಯನ್ನು ನಮೂದಿಸುವುದು ನಿಂತ ಮಾತ್ರಕ್ಕೆ ಜಾತೀಯತೆಯ ಭಾವನೆಯೇ ಅಳಿದು ಹೋಗುವುದೆಂದು ಭಾವಿಸುವುದು ಸರಿಯಾದೀತೆ? ನಮ್ಮ ರಾಜ್ಯ ಘಟನೆಯೇ ಕೆಲವು ಜಾತಿಗಳು ಹಿಂದುಳಿದಿವೆ ಎನ್ನುತ್ತದೆ; ಮತ್ತು ಈ ಜಾತಿಯ ನಾಗರಿಕರಿಗೆ ಮುಂದೆ ಬರಲು ವಿಶೇಷ ಸೌಲಭ್ಯ ಒದಗಿಸಬೇಕೆನ್ನುತ್ತದೆ. ಎಂದ ಮೇಲೆ ಜಾತಿಯನ್ನು ಹೆಸರಿನ ಮುಂದೆಯಾಗಲೀ ದಸ್ತಾವೇಜುಗಳಲ್ಲಾಗಲೀ ಬರೆಯದೆ ಹೋದ ಮಾತ್ರಕ್ಕೆ ಆತನು ಆ ಜಾತಿಗೆ ಸೇರಿದವನಲ್ಲ ಎಂದಾಗುತ್ತದೆಯೆ? ಸರಕಾರದ ಕಾಗದ ಪತ್ರಗಳಲ್ಲಿ ವ್ಯಕ್ತಿಯ ಜಾತಿಯ ನಮೂದನೆ ಮಾಡುವುದನ್ನೇ ಬಿಟ್ಟುಬಿಟ್ಟರೆ ಹಿಂದುಳಿದ ಜಾತಿಯವನಾರು ಎಂಬುದನ್ನು ಕಂಡು ಹಿಡಿಯುವ ಬಗೆ ಹೇಗೆ? ಕಳೆದ ಜನಮತ ಗಣನೆಯ ಕಾಲದಲ್ಲಿ ಜನರಿಂದ ಜಾತಿಯನ್ನು ಕೇಳಿ ಬರೆದುಕೊಳ್ಳುವ ಪದ್ಧತಿಯನ್ನು ನಿಲ್ಲಿಸಲಾಯಿತು— ಹೀಗೆ ಮಾಡಿದ್ದರಿಂದ ಹಿಂದುಳಿದ ವರ್ಗಗಳವರು ಯಾರು ಅವರು ಎಷ್ಟು ಮಂದಿದ್ದಾರೆ

(೧೦ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಜಯಶ್ರೀಯು ನಿಮ್ಮನ್ನಗಲದಂತೆ ನೋಡಿಕೊಳ್ಳಿರಿ.

ಪ್ರತಿ ವೇತನ ದಿನದಲ್ಲಿ ಕಿಂಚಿತ್ತಾದರೂ ಉಳಿಸಿರಿ. ಹಾಗೆ ಉಳಿಸಿದುದನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಉಳಿತಾಯ ಶಾಖೆಯಲ್ಲಿ ನಿಮಗಾಗಿ ಕಾರ್ಯವೆಸಗಲು ತೊಡಗಿರಿ.

ಗಂಡಾಂತರಗಳನ್ನೂ ಆಕಸ್ಮಿಕ ಸಂದರ್ಭಗಳನ್ನೂ ಎದುರಿಸಲು ಬೇಕಾಗುವ ಕ್ಷೇಮ ನಿಧಿಯನ್ನು ಕೂಡಿಸಲು ಸಾಮಾನ್ಯ ಗಂಡಸು ಅಥವಾ ಹೆಂಗಸಿಗೆ ಕ್ರಮ ಪ್ರಕಾರ ಉಳಿತಾಯ ಮಾಡಿಕೊಂಡು ಬರುವುದೇ ಸುಲಭ ಸಾಧ್ಯವಾದ, ನಿಜವಾದ ಮತ್ತು ಸುರಕ್ಷಿತವಾದ ಸಾಧನ.

ಬೊಂಬಾಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದು ಮತ್ತು ತಿರುಕೊಚ್ಚಿ ರಾಜ್ಯಗಳಲ್ಲಿರುವ ನಮ್ಮ 93 ಶಾಖಾ ಕಚೇರಿಗಳಲ್ಲಿ ಯಾವುದಾದರೊಂದರಲ್ಲಿ ಉಳಿತಾಯ ಲೆಖ್ಖವನ್ನು ತೆರೆಯಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

THE CANARA INDUSTRIAL & BANKING SYNDICATE LTD.

Estd: 1925] [Head Office: UDIPI, S. India.

ಭಾರತದ ಮುಂದಿರುವ ಸಮಾಜವಾದಿ ಆದರ್ಶ

ವ್ಯಕ್ತಿ ಮತ್ತು ವರ್ಗ ಪ್ರಧಾನತ್ವದ ನಿಯಂತ್ರಣ

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಪಾಶ್ಚಾತ್ಯರಲ್ಲಿ ಏಶ್ಯವು ಎಂದಾದರೂ ಸಮಾಜವಾದಿ ಮಾರ್ಗವನ್ನು ತುಳಿದೀತೆ ಎಂಬ ಸಂದೇಹವಿತ್ತು. "ಹಿಸ್ಟರಿ ಆಫ್ ಸೋಶಿಯಾಲಿಸಂ" ಎಂಬ ಪುಸ್ತಕವನ್ನು ಬರೆದ ಮಾರ್ಖಂ ಎಂಬ ಮಹನೀಯರು 'ಜಗತ್ತಿನ ಉಳಿದೆಲ್ಲ ಪ್ರದೇಶಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಪಡೆದಿರುವ ಏಶ್ಯದ ೧೧೧೦೦೦೦೦೦ ನಾಗರಿಕರ ಮಟ್ಟಿಗೆ ಏಕಸತ್ತಾಧಿಕಾರದ ಮೇಲಿನ ಪ್ರೀತಿಯೂ ತತ್ತ್ವಪ್ರಿಯತೆಯೂ ರಕ್ತಗತವಾಗಿ ಹೋಗಿದೆ; ಆದುದರಿಂದ ಈ ಭೂಮಿಯು ಸಮಾಜವಾದಿ ಆದರ್ಶದ ಬೀಜಾರೋಪಣೆಗೆ ಎಷ್ಟಕ್ಕೂ ಹೇಳಿಸಿರದ ಶಿಲಾಮಯ ಪ್ರದೇಶವಾಗಿದೆ. ಪಾಶ್ಚಾತ್ಯ ಸಹೋದರರಷ್ಟು ಪೌರಸ್ತ್ಯ ಪ್ರಜೆಯು ಸುಖಾಕಾಂಕ್ಷಿಯಾಗಿಲ್ಲ; ಬಡತನ ಮತ್ತು ಭೌತಿಕ ಸುಖಸಾಧನಗಳ ವಿಷಯದಲ್ಲಿ ಆತನು ಉದಾಸೀನನಾಗಿದ್ದಾನೆ. ಅವನಿಗೆ ಅದು ಅಭ್ಯಾಸವಾಗಿ ಹೋಗಿದೆ" ಎಂದು ಬರೆದು ಏಶ್ಯದಲ್ಲಿ ಸಮಾಜ ವಾದವು ತಲೆಯೆತ್ತಲಾರದೆಂಬ ಭಾವನೆಯನ್ನು ಅವರು ಪ್ರತಿಪಾದಿಸಿದರು.

ಪ್ರಧಾನಿಗಳ ನಿಶ್ಚಯ

ಪಾಶ್ಚಾತ್ಯರು ಮನಸ್ಸಿನಲ್ಲಿ ಕಟ್ಟಿಕೊಂಡ ಗ್ರಹಿಕೆಗಳಿಗೆ ಆಹ್ವಾನ ರೂಪದಲ್ಲಿ ಏಶ್ಯದ ಪ್ರಬಲ ರಾಷ್ಟ್ರವಾದ ಭಾರತವು ಸ್ವಾತಂತ್ರ್ಯ ಸಂಪಾದಿಸಿದೊಡನೆಯೇ ತನ್ನ ರಾಜ್ಯಾಂಗ ಘಟನೆಯಲ್ಲಿ ಪ್ರಜಾಸತ್ತಾತ್ಮಕ ಕಲ್ಯಾಣ ರಾಷ್ಟ್ರದ ಸೂತ್ರಗಳನ್ನು ಅಳವಡಿಸಿಕೊಂಡಿತು; ಮತ್ತು ಹೀಗೆ ಪಾಶ್ಚಾತ್ಯ ಲೇಖಕರು ಏನು ಪುಸ್ತಕ ಬರೆದರೋ ಆದರ ಮಸಿಯು ಇನ್ನೂ ಹಸಿಯಾಗಿರುವಾಗಲೇ ಈ ಅದ್ಭುತ ಸಂಗತಿ ನಡೆದು ಹೋಯಿತು! ನಮ್ಮ ಪ್ರಧಾನ ಮಂತ್ರಿ ಶ್ರೀ. ಜವಾಹರಲಾಲ ನೆಹರೂಗಳು ಕಲ್ಯಾಣ ರಾಷ್ಟ್ರದ ಧ್ಯೇಯ ಸಾಧನೆಗಾಗಿ ಭಾರತೀಯರು ಸಮಾಜವಾದಿ ಮಾದರಿಯನ್ನು ಅನುಸರಿಸಿ ನಡೆಯಬೇಕೆಂದು ಈಗ ಉಪದೇಶಿಸುತ್ತಿದ್ದಾರೆ. ಅವರ ಮನವೊಲಿಸುವಿಕೆಯ ಪ್ರಯತ್ನಗಳು ಈಗ ಯಶಸ್ವಿ ಪರಿಣಾಮಗಳನ್ನು ಭಾರತೀಯರ ಮನೋಭಾವದ ಮೇಲೆ ಮಾಡಿರುತ್ತವೆ. ಜೀವನ ಮಟ್ಟವನ್ನು ಎತ್ತರಿಸಬೇಕೆಂಬ ಉದ್ದೇಶದಿಂದ ಇಂದು ಜಗತ್ತಿನಾದ್ಯಂತ ನಡೆಯುತ್ತಿರುವ ಆರ್ಥಿಕ, ರಾಜಕೀಯ ಹಾಗು ಸಾಮಾಜಿಕ ಆಂದೋಲನಕ್ಕೆ ಹೀಗೆ ವಿಶಾಲ ಬೆಂಬಲವು ಹೊಸತಾಗಿ ಸಿಕ್ಕಿದಂತಾಗಿದೆ.

ಜನರ ಒಲವು

ವ್ಯಕ್ತಿ ಪ್ರಧಾನ ಭಾವನೆಯು ವಿಸ್ತೃತ ಪ್ರಮಾಣದ ಔದ್ಯಮೀಕರಣ ಮತ್ತು ವೈಜ್ಞಾನಿಕ ಕ್ಷೇತ್ರದ ಕ್ಷಿಪ್ರ ಮುನ್ನಡೆಯ ಈ ದಿನಗಳಲ್ಲಿ ಪ್ರಯೋಜನಕ್ಕೆ ಬರುವುದಿಲ್ಲವೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪಿರುತ್ತಾರೆ. ಸಮಾಜವಾದಿಭಾವನೆ ಬಲಿಯಲು ಇದು ಕಾರಣವಾಗಿದೆ ಆದರೆ ಈ ಸಮಾಜವಾದಿ ತತ್ತ್ವಗಳಾದರೂ ಒಂದೊಂದು ರೂಪವನ್ನು ಪಡೆದು ವ್ಯಕ್ತವಾಗಿವೆ. ಸಮಾಜವಾದಿ ಆದರ್ಶವು ಸ್ಫುಟವಾಗಿ ತಾತ್ತ್ವಿಕ ಕ್ಷೇತ್ರದಲ್ಲಿ ವ್ಯಕ್ತವಾದುದಕ್ಕೆ ಸ್ಥಿರವಾದ ಚರಿತ್ರೆಯಿಲ್ಲವಾದರೂ ಅಲ್ಲಲ್ಲಿ ಚೆದರಿದ ಚರಿತ್ರೆಯು ಸಾಕಷ್ಟು ಹಿಂದಿನ ಕಾಲದ ವರೆಗೆ ವ್ಯಾಪಿಸುತ್ತದೆ. ಆದರೆ ತಾತ್ತ್ವಿಕ ಕ್ಷೇತ್ರದಿಂದ ವ್ಯಾವಹಾರಿಕ ಕ್ಷೇತ್ರಕ್ಕೆ ಸಮಾಜವಾದವು ಪದಾರ್ಪಣ ಮಾಡಿದ ಮಟ್ಟಿಗೆ ವಿಶಾಲ ಪ್ರಮಾಣದಲ್ಲಿ ಚಾರಿತ್ರಿಕ ಅವಲಂಬನೆಗೆ ಅವಕಾಶ ದೊರೆತಿಲ್ಲ. ಈವೊಂದು ವಿಷಯವು ಸಮಾಜವಾದವು ಏಕೆ ಒಳ್ಳೆಯದೆಂಬುದನ್ನು ಜನರಿಗೆ ಮುಂದಟ್ಟುಪಡಿಸುವುದಕ್ಕಾಗಿ ಉದಾಹರಣೆಗಳ ಅಭಾವವಿರುವಂತೆ ಮಾಡಿದೆ. ಆದರೂ ಸಮಾಜದ ರಾಜಕೀಯ ಹಾಗು ಆರ್ಥಿಕ ಕ್ಷೇತ್ರಗಳಲ್ಲಿ ಅನುಸರಿಸಲ್ಪಡಬೇಕೆಂಬ ಸಮಾಜವಾದಿ ತತ್ತ್ವಗಳ ಕಡೆಗೆ ಜನರು ಹೆಚ್ಚು ಹೆಚ್ಚು ಒಲಿಯುತ್ತಿರುವುದು ಸುಳ್ಳಲ್ಲ.

ಶೋಷಿತ ಜನತೆ

ಭಾರತವು ಸ್ವರಾಜ್ಯವನ್ನು ಸಂಪಾದಿಸಿದ ಬಳಿಕ ಸಮಾಜವಾದ ಹೇಗೆ ಭಾರತೀಯರನ್ನು ಆಕರ್ಷಿಸಿತು? ನಮ್ಮ ಸ್ಥಿತಿಯನ್ನು ವಿಶ್ಲೇಷಿಸಿದರೆ ಇದರ ಕಾರಣಗಳು ಗೊತ್ತಾಗುತ್ತವೆ. ಸಾಂಸ್ಕೃತಿಕ ದೃಷ್ಟಿಕೋಣದಿಂದ ಭಾರತೀಯರ ನಡುವೆ ನೂರಾರು ಬಗೆಯ ಭಿನ್ನ ಭಾವವು ಹೊರ ತೋರಿಕೆಗೆ ವ್ಯಕ್ತವಾಗುತ್ತಿದ್ದರೂ ಆಂತರಿಕ ಸಂಬಂಧವು ಎಲ್ಲರನ್ನೂ ಒಂದೇ ಆದರ್ಶಕ್ಕೆ ಬಿಗಿದಿತ್ತು. ವೈವಿಧ್ಯದಲ್ಲಿ ಏಕತ್ವದ ಪ್ರತಿಪಾದಕರು ಭಾರತೀಯರಾಗಿದ್ದರು. ಆದರೆ ಜಾತೀಯತೆ ಮತ್ತು ತಜ್ಜನಿತ ಸಾಮಾಜಿಕ ಅಂತಸ್ತುಗಳಲ್ಲಿ ಆರ್ಥಿಕ ಹಾಗು ರಾಜಕೀಯ ಚಟುವಟಿಕೆಗಳು ವಿಭಜನೆ ಹೊಂದಿದ್ದವು. ಸ್ವಲ್ಪ ಬುದ್ಧಿವಂತರೆನಿಸಿದವರ ಪಂಗಡವು ವೈಜ್ಞಾನಿಕ ಮುನ್ನಡೆಯ ಬಗ್ಗೆ ಈಚೆಗೆ ಹೆಚ್ಚು ಆಸಕ್ತಿಯನ್ನು ತೋರಿಸಿದ್ದರೂ ಸಾಮಾನ್ಯವಾಗಿ ಜಾಣರೆನಿಸಿದವರು ಉಳಿದ ಬಾಂಧವರನ್ನು ಬಡತನಕ್ಕೆ, ಸಾಲಕ್ಕೆ, ದೈನ್ಯಕ್ಕೆ ದೂಡುವುದರಲ್ಲಿಯೇ ತೃಪ್ತಿಯನ್ನು ಕಾಣುತ್ತಿದ್ದರು. ಹೀಗಾಗಿ ಭೂಮಾಲಿಕರ, ಧನಿಕರ, ಹಣ ಸಾಲ ಕೊಡುವವರ ನಿರಂತರ ಶೋಷಣೆ ಮತ್ತು ಕಿರುಕುಳವಿರುವ ಸಾಮಾನ್ಯ ಭಾರತೀಯ ಪ್ರಜೆಯ ನಿತ್ಯ ಜೀವನವು ಅಸಹನೀಯ ಯಾತನೆಯ ನಿದರ್ಶನವೆಂದು ಹೇಳಬಹುದು.

ಕಲ್ಯಾಣ ರಾಷ್ಟ್ರ

ದುರಂತಮಯವಾದ ಈ ಪರಿಸ್ಥಿತಿಯಿಂದ ಬಿಡುಗಡೆ ಹೊಂದಿ ಹೊಸ ಜೀವನದ ಸವಿಯನ್ನು ಅನುಭವಿಸಲು ತೆರೆದ ಸ್ವರ್ಗ ದ್ವಾರವೆಂದರೆ ನಮ್ಮ ರಾಜ್ಯಾಂಗ ಘಟನೆಯ ಸಾರ್ವತ್ರಿಕ ಅನುಮೋದನೆ—ಇದು ಕೆಲವೇ ವ್ಯಕ್ತಿಗಳಲ್ಲಿ ಅಧಿಕಾರವು ಕೇಂದ್ರೀಕೃತ ಹೊಂದುತ್ತಿದ್ದ ಹಿಂದಿನ ವಾತಾವರಣವನ್ನು ಬದಲಾಯಿಸಿ ಪ್ರತಿಯೊಬ್ಬ ವಯಸ್ಕ ವ್ಯಕ್ತಿಗೂ ಮತದಾನದ ಅಧಿಕಾರವನ್ನಿತ್ತು, ಅಧಿಕಾರವು ಎಲ್ಲ ಪ್ರಬುದ್ಧರಲ್ಲಿ ಹಂಚಿ ಬೀಳುವಂತೆ ಮಾಡಿತು. ಆರ್ಥಿ[ಕ] ಕ್ಷೇತ್ರದಲ್ಲಿಯೂ ಸಾಮಾಜಿಕ ಕ್ಷೇ[ತ್ರ]ದಲ್ಲಿಯೂ ಕ್ರಾಂತಿಕಾರಕ ಸುಧಾರ[ಣೆ]ಗಳನ್ನು ನಡೆಸಲು ಇದು ಅವಕಾಶವನ್[ನು] ಮಾಡಿಕೊಟ್ಟಿತು. ರಾಜ್ಯವು ತನ್ನ ಪ್ರ[ಜೆ]ಗಳ ಕಲ್ಯಾಣಕ್ಕಾಗಿ ಅನುಸರಿಸಬೇಕೆಂದ[ು] ನಮ್ಮ ಘಟನೆಯಲ್ಲಿ ನಿರೂಪಿತವಾಗಿರು[ವ] ನಾನಾ ವಿಧಾನಗಳನ್ನು ಕ್ರೋಢೀಕರಿ[ಸಿ] ಒಂದೇ ಮಾತಿನಲ್ಲಿ ಹೇಳುವುದಿದ್ದರೆ ಅದ[ು] ಸಮಾಜವಾದಿ ಮಾದರಿ ಎಂದೆನಿಸುತ್ತದೆ. ರಾಮರಾಜ್ಯ, ಸರ್ವೋದಯ ಸಮಾಜ, ಕಲ್ಯಾಣ ರಾಷ್ಟ್ರ ಎಂದೇನೆಲ್ಲ ಹೇಳಲಾಗುತ್ತದೊ— ... ಆದರ್ಶದ ವ್ಯಾವಹಾರಿಕ ರೂಪವೆ[ನಿಸುವ] ಸಮಾಜವಾದಿ ಮಾದರಿಯ ಸಮಾಜ[ವ]ನ್ನು ರಚಿಸಬೇಕೆಂಬ ಸಂಕಲ್ಪವಾಗಿದೆ.

ಆರ್ಥಿಕ ವಿಷಮತೆ

ಮೊದಲೇ ಹೇಳಿದಂತೆ ಪ್ರಜೆಗಳ ಆ[ರ್]ಥಿಕ ಸಾಮರ್ಥ್ಯದಲ್ಲಿರುವ ಮಿತಿಮೀರಿ[ದ] ಹಾಗೂ ಎದ್ದು ತೋರುವ ವ್ಯತ್ಯಾಸ[ವು] ಭಾರತದ ಪುರೋಗತಿಯ ಮಾರ್ಗದಲ್ಲಿ[ನ] ಪ್ರಥಮ ಆತಂಕವಾಗಿದೆ. ಇದನ್ನು ಕೂ[ಡ]ಲೇ ನಿರ್ಮೂಲಗೊಳಿಸಲು ಆಸ್ತಿ ಮತ್ತು ಸೊತ್ತುಗಳ ಮೇಲಿ ಖಾಸಗಿ ಅಧಿಕಾರ[ವ]ನ್ನೂ ವ್ಯಕ್ತಿಯ ಮರಣಾನಂತರ ಅವ[ನ] ಸಂಬಂಧಿಗಳಿಗೆ ಅವುಗಳ ಮೇಲೆ ಬರು[ವ] ಉತ್ತರಾಧಿಕಾರವನ್ನೂ ಕಿತ್ತೊಗೆಯು[ವ] ಉಗ್ರಕ್ರಮವನ್ನು ಅನುಸರಿಸಿದರೆ ಆದಿ[...]ತು; ಅಥವಾ ತೆರಿಗೆಯ ವಿಧಾನ ಮತ್ತಿ[ತ]ರ ಪ್ರಗತಿಪರ ಕ್ರಮಗಳ ವೇಗವನ್ನು ದ್[...]ಢವಾಗಿಯೂ ನಿಧಾನವಾಗಿಯೂ ಹೆಚ್[ಚಿ]ಸಿ, ಒಂದು ನಿರ್ದಿಷ್ಟ ಕಾಲಾಂತರದ[ಲ್ಲಿ] ವ್ಯತ್ಯಾಸವನ್ನು ಆದಷ್ಟು ಕೆಳಮಟ್ಟ[ಕ್ಕೆ] ತರಬಹುದು. ಸಾಮಾನ್ಯವಾಗಿ ಎ[ರ]ಡನೇ ವಿಧಾನವನ್ನೆ ಭಾರತ[...] ಅನುಸರಿಸಬೇಕೆಂದು ಬಯಸಿದೆ. ಆದ[ರೆ] ತೀರ ವಿಷಮಾವಸ್ಥೆಯನ್ನು ಮುಟ್ಟಿರು[ವ] ರೋಗದ ಸಂಗತಿಯಲ್ಲಿ ಶಸ್ತ್ರ ಚಿಕಿ[ತ್ಸೆ] ಅತ್ಯವಶ್ಯವೆನಿಸುವಂತೆ ಖಾಸಗಿ ಆ[ಸ್ತಿ] ಮತ್ತು ಸೊತ್ತುಗಳ ಉಪಭೋಗ[ದ] ಮೇಲೆ ಸಹ ರಾಜ್ಯವು ಕೆಲವು ನಿಯಂತ್ರ[ಣ]ಗಳನ್ನು ಹೇರುವುದು ಇಂದಿನ ಕಠಿ[ಣ] ಪ್ರಸಂಗದಲ್ಲಿ ಸ್ವಲ್ಪ ಮಟ್ಟಿಗೆ ಅನಿವಾರ್ಯವೆನಿಸಿದೆ.

ಕುಟುಂಬದ ಪಾತ್ರ

ನಮ್ಮ ಸಾಮಾಜಿಕ ರಂಗದ ರಚ[ನೆ]ಯನ್ನು ಪರಿಶೀಲಿಸಿದರೆ ಅದು ಕುಟುಂ[ಬ] ಪ್ರಧಾನವಾದುದೆಂದು ಕಂಡು ಬರುತ್ತದೆ[.] ಔದ್ಯಮೀಕರಣವೂ ಪಾಶ್ಚಾತ್ಯ ಸಂಸ್ಕೃ[ತಿ]ಯ ಪ್ರಭಾವವೂ ಈ ಕುಟುಂಬ ಪ್ರಧಾ[ನ] ತತ್ತ್ವವನ್ನು ಒಡೆದು ನುಚ್ಚು ನೂರಾಗಿ[...]

(೧೧ನೇ ಪುಟ ನೋಡಿರಿ)

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 9/1956.

ಜೆ. ಡಿ. ಪುಡ್ತಾದೆ - ರುಜಾರಿ ಪುಡ್ತಾದೆರ ಮಗ- ಉಡ್ಪಿ ತಾಲೂಕು- ಕೊಡವೂರು ಗ್ರಾಮದ ಮಲ್ಪೆ— ಅರ್ಜಿದಾರ.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಅರ್ಜಿದಾರನ ತಂದೆ, ತಾ 9—9—53 ರಲ್ಲಿ ಸ್ವರ್ಗಸ್ಥರಾದ ರುಜಾರಿಯೋ ಪುಡ್ತಾದೆರಿಗೆ ದಿ. ಅಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರ್ ಉಡ್ಪಿ ಇವರಿಂದ ಬರತಕ್ಕ ಹೆಚ್ಚಿಗೆ ಸೇಲ್ಸ್ ಟೇಕ್ಸ್ ಬಾಬ್ತು ರೂ. 121—12—10 ವಸೂಲು ಪಡೆಯುವರೆ ಆತನು ತಾ. 7—8—1953ರಲ್ಲಿ ರಿ. ನಿ ಬರೆದಿಟ್ಟ ವೀಲು ಪ್ರಕಾರ ತಾನು ಹಕ್ಕುದಾರನೆಂತಲೂ ಆ ಕುರಿತು ತನಗೆ ಸಕ್ಸೆಷನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 9—4—1956ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಹೇಳತಕ್ಕವರು ಸದ್ರಿ ದಿವ್ಸ ಸದ್ರಿ ಕೋರ್ಟು ಮುಂದೆ 10 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು— ಎಂಬ ಸಂಗ್ತಿ ತಿಳಿಸೋಣಾಗಿಯದೆ.

N. V. Kamath.
Advocate for Petitioner.
ಉಡ್ಪಿ ತಾ. 15—3—1956.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪



ರಾಜ್ಯ ಪುನರ್ಘಟನೆಯ ಕುರಿತು ಸರಕಾರದ ನಿಶ್ಚಯ

೧೫ ರಾಜ್ಯಗಳು: ೭ ಕೇಂದ್ರಾಧೀನ ಪ್ರದೇಶಗಳು

ಫಜಲಾಲಿ ಆಯೋಗವು ರಾಜ್ಯಗಳ ಪುನರ್ಘಟನೆಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಿ ಕೊಟ್ಟ ವರದಿಯನ್ನು ಪ್ರಕಟಿಸಿದ ಐದು ತಿಂಗಳ ತರುವಾಯ ಇದೀಗ ಭಾರತ ಸರಕಾರದ ಸಾಮಾನ್ಯ ನಿರ್ಧಾರಗಳೇನೆಂದು ಸ್ಪಷ್ಟವಾಗಿದೆ. ಸಂಸತ್ತಿನ ಮುಂದೆ ಮಾರ್ಚ ೧೬ನೇ ದಿನಾಂಕ ಭಾರತ ಸರಕಾರದ ಪರವಾಗಿ ಮಂಡಿಸಲಾದ ಕರಡು ಮಸೂದೆಯು ಈ ನಿರ್ಧಾರಗಳನ್ನು ಒಳಗೊಂಡಿರುತ್ತದೆ. ಸರಕಾರವು ಕಳೆದ ಐದು ತಿಂಗಳುಗಳ ದೀರ್ಘಾವಧಿಯಲ್ಲಿ ಪ್ರಜಾಸತ್ತಾತ್ಮಕ ನೀತಿಯಂತೆ ವ್ಯಕ್ತವಾದ ಪ್ರತಿಕ್ರಿಯೆಗಳನ್ನೂ ಮಾಡಲಾದ ಮನವಿಗಳನ್ನೂ ನಡೆಸಲಾದ ಸಮಾಲೋಚನೆಗಳನ್ನೂ ಚೆನ್ನಾಗಿ ಮಥಿಸಿ ತನ್ನ ನಿರ್ಣಯವು ಹೆಚ್ಚಿನ ವಿವಾದಾಸ್ಪದ ವಿಷಯಗಳಲ್ಲಿ ನ್ಯಾಯ ಸಮ್ಮತವಿರುವಂತೆ ನೋಡಿದೆ. ವಿವಾದಗಳು ಪರಸ್ಪರ ಸಮ್ಮತಿಯಿಂದಲೂ ಶಾಂತ ರೀತಿಯಿಂದಲೂ ಬಗೆಹರಿಯುವಂತೆ ಹೊಸ ಹೊಸ ಸೂಚನೆಗಳನ್ನು ಮುಂದಿಟ್ಟು ಹಾಗು ಮನವೊಲಿಸುವಿಕೆಯ ತಂತ್ರಗಳನ್ನು ಅನುಸರಿಸಿ ಸರಕಾರದಲ್ಲಿರುವ ಹಿರಿಯರು ಮುತ್ಸದ್ದಿತನವನ್ನು ವ್ಯಕ್ತಪಡಿಸಿದ್ದಾರೆ.

ಹೊಸ ನಕಾಶೆ

ಸರಕಾರದ ಈಗಿನ ತಾತ್ಕಾಲಿಕ ನಿರ್ಧಾರದಂತೆ ಭಾರತವು ೧೫ ರಾಜ್ಯಗಳ ಒಕ್ಕೂಟವಾಗುತ್ತದೆ—ಈ ರಾಜ್ಯಗಳು ಯಾವುವೆಂದರೆ: (೧) ಮೈಸೂರು (೨) ಮದ್ರಾಸು, (೩) ಒರಿಸ್ಸ, (೪) ಪಶ್ಚಿಮ ಬಂಗಾಳ, (೫) ಅಸ್ಸಾಂ, (೬) ಬಿಹಾರ, (೭) ಉತ್ತರ ಪ್ರದೇಶ, (೮) ಪಂಜಾಬ, (೯) ರಾಜಸ್ಥಾನ, (೧೦) ಗುಜರಾಥ. (೧೧) ಮಹಾರಾಷ್ಟ್ರ, (೧೨) ಆಂಧ್ರ-ತೆಲಂಗಾಣ, (೧೩) ಮಧ್ಯ ಪ್ರದೇಶ, (೧೪) ಕೇರಳ ಮತ್ತು (೧೫) ಜಮ್ಮು-ಕಾಶ್ಮೀರ. ಇವಲ್ಲದೆ ಕೇಂದ್ರ ಸರಕಾರದ ನೇರವಾದ ಆಡಳಿತಕ್ಕೆ ಒಳಪಟ್ಟ ಬೇರೆ ಏಳು ಪ್ರದೇಶಗಳೂ ಭಾರತದ ಒಕ್ಕೂಟದಲ್ಲಿ ಇರುತ್ತವೆ. ಈ ಪ್ರದೇಶಗಳು ಯಾವುವೆಂದರೆ (೧) ಮುಂಬಯಿ, (೨) ದಿಲ್ಲಿ, (೩) ಹಿಮಾಚಲ ಪ್ರದೇಶ, (೪) ಮಣಿಪುರ, (೫) ತ್ರಿಪುರ, (೬) ಅಂಡಮಾನ ಮತ್ತು ನಿಕೋಬಾರ, ಮತ್ತು (೭) ಲಕ್ಕದೀವಿ, ಮಿನಿಕೊಯ್ ಮತ್ತು ಅಮಿನಿದೀವಿ ದ್ವೀಪ ಸಮುದಾಯ. ಸಾಮಾನ್ಯವಾಗಿ ಭಾರತದ ಹೊಸ ನಕಾಶೆಯು ಮೇಲಿನಂತೆ ಇರಬೇಕಾಗಿ ಭಾರತದ ಸರಕಾರ ಬಯಸಿದ್ದರೂ ಬಿಹಾರ-ಬಂಗಾಳ ಸಂಯುಕ್ತ ಪ್ರಕಟಣೆ ಮತ್ತು ಪಶ್ಚಿಮ ಬಂಗಾಳ ಹಾಗು ಬಿಹಾರಗಳ ಶಾಸನಾಂಗಗಳ ಮನದೊಲವನ್ನು ಗಮನದಲ್ಲಿಟ್ಟುಕೊಂಡು ಸರಕಾರವು ವಿಧೇಯಕದ ಪೀಠಿಕೆಯಲ್ಲಿ ಕೆಲವು ಮಾತುಗಳನ್ನು ಹೇಳಿದೆ: "ಇವೆರಡು ರಾಜ್ಯಗಳ ವಿಲಯನದ ಸೂಚನೆಯು ತೀವ್ರ ಪರ್ಯಾಲೋಚನೆಯಲ್ಲಿರುವುದರಿಂದ, ಆಯಾ ರಾಜ್ಯದ ಪ್ರದೇಶ ವ್ಯಾಪ್ತಿಯನ್ನು ನಿರ್ಧರಿಸಿರುವುದಿಲ್ಲ. ಈ ರಾಜ್ಯಗಳ ವಿಷಯದಲ್ಲಿ ಮಾಡಲಾಗುವ ನಿರ್ಧಾರದ ಬಗ್ಗೆ ಪ್ರತ್ಯೇಕ ವಿಧೇಯಕವು ತಕ್ಕ ಕಾಲದಲ್ಲಿ ಮಂಡಿಸಲ್ಪಡುತ್ತದೆ."

ವಲಯ ಮಂಡಳಿಗಳು

ವಿಧೇಯಕವು ಪುನರ್ಘಟಿತ ರಾಜ್ಯಗಳನ್ನು ಐದು ವಲಯಗಳಲ್ಲಿ ವಿಂಗಡಿಸುವ ಉದ್ದೇಶವನ್ನು ವ್ಯಕ್ತಪಡಿಸಿದೆ. ಉತ್ತರ ವಲಯದಲ್ಲಿ ಪಂಜಾಬು, ರಾಜಸ್ಥಾನ, ಜಮ್ಮು ಮತ್ತು ಕಾಶ್ಮೀರ, ದಿಲ್ಲಿ ಮತ್ತು ಹಿಮಾಚಲ ಪ್ರದೇಶಗಳಿರುತ್ತವೆ. ಕೇಂದ್ರ ವಲಯದಲ್ಲಿ ಉತ್ತರ ಪ್ರದೇಶವೂ ಮಧ್ಯ ಪ್ರದೇಶವೂ ಸೇರುತ್ತವೆ. ಪೂರ್ವ ವಲಯದಲ್ಲಿ ಬಿಹಾರ, ಪಶ್ಚಿಮ ಬಂಗಾಳ, ಒರಿಸ್ಸ, ಅಸ್ಸಾಂ, ಮಣಿಪುರ ಮತ್ತು ತ್ರಿಪುರಗಳು ಬರುತ್ತವೆ. ಪಶ್ಚಿಮ ವಲಯದಲ್ಲಿ ಮಹಾರಾಷ್ಟ್ರ, ಗುಜರಾಥ ಮತ್ತು ಮುಂಬಯಿಗಳಿರುತ್ತವೆ. ದಕ್ಷಿಣ ವಲಯವು ಮೈಸೂರು, ಆಂಧ್ರ—ತೆಲಂಗಾಣ, ಮದ್ರಾಸು ಮತ್ತು ಕೇರಳಗಳಿಂದ ಕೂಡಿರುತ್ತದೆ. ಪ್ರತಿಯೊಂದು ವಲಯಕ್ಕೆ ಒಂದು ವಲಯ ಮಂಡಳಿಯಿರುತ್ತದೆ. ಇದಕ್ಕೆ ಆಯಾ ವಲಯ ಪ್ರದೇಶದಲ್ಲಿ ಒಂದು ಶಾಶ್ವತ ಕಾರ್ಯಾಲಯವಿರುತ್ತದೆ. ವಲಯ ಮಂಡಳಿವು ಕೇವಲ ಸಲಹೆಯನ್ನಷ್ಟೆ ಕೊಡುತ್ತದೆ ಆಯಾ ವಲಯಕ್ಕೆ ಸಂಬಂಧಿಸಿದ ಎಲ್ಲ ಅಥವಾ ಕೆಲವು ರಾಜ್ಯಗಳಿಗೆ ಮತ್ತು ಕೇಂದ್ರಕ್ಕೆ ಸಾಮಾನ್ಯವಾದ ಆಸಕ್ತಿಯುಳ್ಳ ಎಲ್ಲ ವಿಷಯಗಳ ಬಗ್ಗೆ ಈ ಮಂಡಳಿವು ಪರ್ಯಾಲೋಚಿಸಿ ಸಂಬಂಧಿಸಿದ ಸರಕಾರಗಳಿಗೆ ಸಲಹೆಕೊಡಬಲ್ಲದು. ಪ್ರತಿಯೊಂದೂ ವಲಯ ಮಂಡಳಿಯಲ್ಲಿ ಅಧ್ಯಕ್ಷ ಸ್ಥಾನವನ್ನು ರಾಷ್ಟ್ರಾಧ್ಯಕ್ಷರಿಂದ ನೇಮಿಸಲ್ಪಡುವ ಕೇಂದ್ರ ಸರಕಾರದ ಮಂತ್ರಿಯೊಬ್ಬನು ವಹಿಸುತ್ತಾನೆ. ಆ ವಲಯಕ್ಕೆ ಸೇರಿದ ರಾಜ್ಯಗಳ ಮುಖ್ಯ ಮಂತ್ರಿಗಳೂ ಈ ರಾಜ್ಯಗಳ ಗವರ್ನರರಿಂದ ನೇಮಿಸಲ್ಪಡುವ ಇಬ್ಬಿಬ್ಬರು ಮಂತ್ರಿಗಳೂ ವಲಯ ಮಂಡಳಿಯ ಸದಸ್ಯರಾಗುತ್ತಾರೆ ಕೇಂದ್ರದ ನೇರವಾದ ಆಡಳಿತಕ್ಕೊಳಪಟ್ಟ ಪ್ರದೇಶಗಳ ಸಂಗತಿಯಲ್ಲಿ ರಾಷ್ಟ್ರಾಧ್ಯಕ್ಷರಿಂದ ನೇಮಕಗೊಂಡ ಒಬ್ಬ ಸದಸ್ಯರಿರುತ್ತಾರೆ. ಪೂರ್ವ ಪ್ರದೇಶದ ಮಟ್ಟಿಗೆ ಪ್ರಾಚೀನ ಬುಡಕಟ್ಟಿನ ಜನರ ಯೋಗ ಕ್ಷೇಮಗಳ ಕುರಿತು ಅಸ್ಸಾಂ ಸರಕಾರಕ್ಕೆ ಸಲಹೆಗಾರರಾಗಿರುವ ಮಹಾನುಭಾವರು ವಲಯ ಮಂಡಳದಲ್ಲಿ ಸ್ಥಾನವನ್ನು ಪಡೆಯುತ್ತಾರೆ.

ಬಳ್ಳಾರಿ ಮೈಸೂರಿನಲ್ಲಿ

೨೧ ಸೂತ್ರಗಳಿಂದಲೂ ಆರು ಪರಿಶಿಷ್ಟಗಳಿಂದಲೂ ಕೂಡಿರುವ ಈ ಕರಡು ಮಸೂದೆಯ ಪೀಠಿಕೆಯಲ್ಲಿ ಸರಕಾರದವರು ತಮ್ಮ ೧೬ನೇ ಜನವರಿ, ೧೯೫೬ರ ಪ್ರಕಟಣೆಯಲ್ಲಿ ನಿರ್ಣಯ ಹೇಳದೆ ಬಾಕಿ ಇಟ್ಟಿದ್ದ ವಿಷಯಗಳ ಬಗ್ಗೆ ಕೈಗೊಂಡ ನಿರ್ಣಯಗಳ ವಿವರವಿದೆ. ಇವುಗಳಲ್ಲಿ ಕನ್ನಡಿಗರಿಗೆ ವಿಶೇಷ ಹಿತಾಸಕ್ತಿಯುಳ್ಳ ವಿಷಯವೆಂದರೆ ಬಳ್ಳಾರಿಯ ಭವಿಷ್ಯ. ಭಾರತಸರಕಾರದ ಹಿರಿಯರು ಈ ವಿವಾದಾಸ್ಪದ ವಿಷಯವನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸಿ, ಕನ್ನಡಿಗರ ನಿಲುವೆಯನ್ನು ಸಮರ್ಥಿಸಿ ಬಳ್ಳಾರಿಯನ್ನು ಈಗಿದ್ದಂತೆಯೇ ಮೈಸೂರಿನಲ್ಲಿ ಇಂಗೊಳಿಸುವ ನಿರ್ಧಾರಕ್ಕೆ ಬಂದಿದ್ದಾರೆ. ಈ ಬಗ್ಗೆ ಅವರು ಕೊಟ್ಟ ವಿವರಣೆ ಹೀಗಿದೆ-"ಫಜಲಾಲಿ ಆಯೋಗದವರು ಪೂರ್ವ ನಿರ್ಧಾರಗಳನ್ನು ಪುನರಾಲೋಚಿಸಬೇಕೆಂದು ಶಿಫಾರಸು ಮಾಡುವುದಕ್ಕೆ ತುಂಗಭದ್ರ ಯೋಜನೆಯು ದಕ್ಷ ಹಾಗು ಸುಗಮ ಕಾರ್ಯನಿರ್ವಹಣೆಯಾಗಬೇಕೆನ್ನುವುದೇ ಮುಖ್ಯ ಕಾರಣ. ಈ ಯೋಜನೆಯಲ್ಲಿ ರಾಯಲಸೀಮೆಯ ಜನರಿಗಿರುವ ಮಹತ್ವಪೂರ್ಣ ಪ್ರಾಮುಖ್ಯತೆಯನ್ನು ಭಾರತ ಸರಕಾರವು ಪರಿಗಣಿಸುತ್ತದೆ. ಆದರೆ, ಆಯೋಗವು ಸೂಚಿಸಿದಂತೆ ಬಳ್ಳಾರಿಯ ಕೆಲಪ್ರದೇಶಗಳ ವರ್ಗಾವಣೆಯು ಧ್ಯೇಯ ಸಾಧನೆಗೆ ತೀರ ಆವಶ್ಯವೆಂದು ಭಾರತ ಸರಕಾರ ಭಾವಿಸುವುದಿಲ್ಲ. ಆಂಧ್ರ ಸರಕಾರವು ವಿಶೇಷ ಮಹತ್ವವನ್ನು ಕೊಡುತ್ತಿರುವ ಮೇಲ್ಮಟ್ಟದ ಕಾಲುವೆಯ ಯೋಜನೆಯನ್ನು ಭಾರತ ಸರಕಾರವು ಚೆನ್ನಾಗಿ ಪರಿಶೀಲಿಸಿ ಅದು ಸರಕಾರದ ನಿಯೋಜಿತ ಕಾರ್ಯಕ್ರಮದಂತೆ ಚೆನ್ನಾಗಿಯೇ ನಡೆದಿದೆ ಎಂದು ಸಮಾಧಾನಪಟ್ಟಿದೆ. ಈ ಯೋಜನೆಯು ತೃಪ್ತಿಕರವಾದ ರೀತಿಯಲ್ಲಿಯೂ ಕ್ಷಿಪ್ರವಾಗಿಯೂ ಕಾರ್ಯಾಚರಣೆಗೊಳ್ಳುವಂತೆ ಭಾರತ ಸರಕಾರವು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತದೆ. ಆದುದರಿಂದ ಬಳ್ಳಾರಿಯ ಪ್ರದೇಶಗಳಲ್ಲಿ ಸ್ವಲ್ಪಾಂಶ ವರ್ಗಾವಣೆ ಹೊಂದಬೇಕೆಂದು ಆಯೋಗ ಹೇಳಿದಾಗ ಅದರ ಉದ್ದೇಶವೇನಿತ್ತೊ ಅದು ಇಂಥ ವರ್ಗಾವಣೆಯಿಲ್ಲದೆಯೇ ಮತ್ತು ವಿವರವಾದ ವಿಚಾರಣೆಗಳನ್ನು ನಡೆಸಿ ಒಮ್ಮೆ ನಿರ್ಣಯಿಸಲಾಗಿರುವ ಬಳ್ಳಾರಿಯ ಪ್ರಶ್ನೆಯನ್ನು ಪುನಃ ಎತ್ತದೆಯೇ ಸಾಧಿಸಲ್ಪಡುತ್ತದೆ."

ಗಡಿಸಮಿತಿ ನೇಮಕ

ಕನ್ನಡಿಗರಿಗೆ ಹೆಚ್ಚಿನ ಹಿತಾಸಕ್ತಿಯಿದ್ದ ಬೀದರ ಜಿಲ್ಲೆಯ ನಾಲ್ಕು ತಾಲೂಕುಗಳು ನೂತನ ಕರ್ನಾಟಕದಲ್ಲಿ(ಬೃಹನ್ಮೈಸೂರು) ಸೇರಬೇಕೆಂದು ಸರಕಾರದ ತೀರ್ಮಾನವು ಹೇಳುತ್ತದೆ. ಆದರೆ ಕಾಸರಗೋಡಿನಲ್ಲಿ ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಕರ್ನಾಟಕದಲ್ಲಿ ಉಳಿಸಬೇಕೆನ್ನುವ ದಕ್ಷಿಣ ಕನ್ನಡಿಗರ ಬೇಡಿಕೆಗೆ ಮಾನ್ಯತೆ ಇನ್ನೂ ಸಿಕ್ಕಿಲ್ಲ. ಈ ಬಗ್ಗೆ ಒಂದು ಆಶೆಯಷ್ಟೇ ಉಳಿದಿದೆ: ಅದೆಂದರೆ ಸರಕಾರವು ಅಗತ್ಯವೆನಿಸಿದ ಪ್ರಸಂಗಗಳಲ್ಲಿ ಗಡಿಸಮಿತಿ ನೇಮಿಸಬಹುದು ಎಂಬ ವಿಷಯ. ಈ ವಿಷಯದಲ್ಲಿ ಸರಕಾರದ ನಿರ್ಧಾರವು ಹೀಗೆನ್ನುತ್ತದೆ—"ಪರಸ್ಪರ ಸಮ್ಮತಿಯಿಂದ ಪ್ರದೇಶಗಳನ್ನು ಹೊಂದಿಸಿಕೊಳ್ಳುವುದನ್ನು ಸರಕಾರವು ತನ್ನ ೧೬ನೇ ಜನವರಿ ೧೯೫೬ರ ಪ್ರಕಟಣೆಯಲ್ಲಿ ಪ್ರಸ್ತಾಪಿಸಿರುತ್ತದೆ. ಇದರ ಹೊರತು, ಕೆಲವು ರಾಜ್ಯಗಳ ಗಡಿಗಳಲ್ಲಿ ಆಡಳಿತವನ್ನು ಸುಗಮಗೊಳಿಸುವ ಉದ್ದೇಶದಿಂದ ಕೆಲವು ಸಣ್ಣ ಬದಲಾವಣೆಗಳನ್ನು ಮಾಡುವುದು ಸಂಭ

(ಮುಂದಿನ ಪುಟ ನೋಡಿರಿ)

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಠೆ ಸಂಬಂಧವ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2¼ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628 "ಸಂತಾನ ಸಿಂಧೂರ ಸದನ" (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ಅಕ್ಟೋಬರ ೧ರಂದು ಹೊಸ ರಾಜ್ಯಗಳ ಉದಯ

ಭಾಷಾ ದೃಷ್ಟಿಯಿಂದ ಅಲ್ಪ ಸಂಖ್ಯಾಕರಾದವರಿಗೆ ವಿಶೇಷ ಸೌಲಭ್ಯ

ವಸೀಯು. ಆದುದರಿಂದ ಭಾರತ ಸರಕಾರವು ಅಗತ್ಯ ಬಿದ್ದರೆ ಗಡಿ ಸಮಿತಿಗಳನ್ನು ನೇಮಿಸಿ ಅಂಥ ಬದಲಾವಣೆಗಳ ಪ್ರಶ್ನೆಯನ್ನು ಪರಿಶೀಲಿಸುತ್ತದೆ. ದಕ್ಷಿಣ ಕನ್ನಡಿಗರ ಚಳವಳವು ಇನ್ನು ಮುಂದೆ ಮೇಲಿನ ಸೂಚನೆಗೆ ಅನುಗುಣವಾಗಿ ನಡೆಯಬೇಕಾಗಿದೆ; ಹಾಗೆ ಚಂದ್ರಗಿರಿ ಹೊಳೆಯ ಉತ್ತರ ಭಾಗದ ಕಾಸರಗೋಡನ್ನು ಕರ್ನಾಟಕದಲ್ಲಿ ಉಳಿಸಬೇಕಾಗಿದೆ. ಎಲ್ಲ ಕನ್ನಡಿಗರ ಸಹಾನುಭೂತಿಯನ್ನೂ ಬೆಂಬಲವನ್ನೂ ಈ ವಿಷಯಕ್ಕೆ ದೊರಕಿಸಿಕೊಳ್ಳಬೇಕಾಗಿದೆ. ಹಿಂದಿನ ಬಳ್ಳಾರಿ ಜಿಲ್ಲೆಯಿಂದ ಈಗಾಗಲೇ ಆಂಧ್ರಕ್ಕೆ ವರ್ಗಾಯಿಸಲ್ಪಟ್ಟಿರುವ ಆಲೂರು, ಅದವಾನಿ ಮತ್ತು ರಾಯದುರ್ಗ ತಾಲೂಕುಗಳ ಭವಿಷ್ಯ ನಿರ್ಣಯಕ್ಕಾಗಿ ಭಾರತ ಸರಕಾರವು ಗಡಿಸಮಿತಿಯನ್ನು ನೇಮಿಸಲಾಗುವುದೆಂದು ಹಿಂದೆ ಕೊಟ್ಟಿದ್ದ ಆಶ್ವಾಸನೆಯನ್ನು ಕಾರ್ಯಗತಗೊಳಿಸಲು ಒತ್ತಾಯಿಸುತ್ತಿದ್ದಂತೆಯೇ, ಕಾಸರಗೋಡಿನ ಉತ್ತರ ಭಾಗದ ಬಗ್ಗೆಯೂ ಪ್ರಯತ್ನ ನಡೆಯಬೇಕಾಗಿದೆ.

ನೂತನ ಕರ್ನಾಟಕ.

ಪುನರ್ವಿಮರ್ಶಿತ ನಿರ್ಧಾರದ ಪ್ರಕಾರ ಏಕೀಕೃತ ಕರ್ನಾಟಕ ರಾಜ್ಯವು "ಮೈಸೂರು" ಎಂಬ ಹೆಸರನ್ನು ಪಡೆಯುತ್ತದೆ. ಇದರಲ್ಲಿ ಈಗಿನ ಮೈಸೂರು ರಾಜ್ಯವಲ್ಲದೆ, ಮುಂಬಯಿ ರಾಜ್ಯದಲ್ಲಿ ಈಗ ಇರುವ ಧಾರವಾಡ, ಬಿಜಾಪುರ, ಉತ್ತರ ಕನ್ನಡ ಮತ್ತು ಚಂದಗಡ ತಾಲೂಕನ್ನುಳಿದ ಬೆಳಗಾವಿ ಜಿಲ್ಲೆಗಳೂ ಹೈದರಾಬಾದು ರಾಜ್ಯದ ಬೀದರ, ಭಾಲ್ಕಿ, ಹುಮನಾಬಾದ ಮತ್ತು ಸಾಂತಪುರ (ಔರದ) ತಾಲೂಕುಗಳೂ ಆಲಂಪುರ ಮತ್ತು ಗದ್ವಾಲ ತಾಲೂಕುಗಳನ್ನು ಬಿಟ್ಟು ಉಳಿದ ರಾಯಚೂರು ಜಿಲ್ಲೆಯೂ ಕೊಡಂಗಳ ಮತ್ತು ತಾಂಡೂರು ತಾಲೂಕುಗಳನ್ನು ಬಿಟ್ಟು ಉಳಿದ ಗುಲ್ಬರ್ಗ ಜಿಲ್ಲೆಯೂ, ಕಾಸರಗೋಡು ಮತ್ತು ಅಮಿನ್‌ದೀವಿ ದ್ವೀಪಗಳನ್ನು ಬಿಟ್ಟುಳಿದ ಮದ್ರಾಸು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯೂ ಕೊಯಮುತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲೂಕೂ ಕೊಡಗು ರಾಜ್ಯವೂ ಸೇರುತ್ತವೆ. ಕೊಡಗು ರಾಜ್ಯವು ಪ್ರತ್ಯೇಕ ಜಿಲ್ಲೆಯಾಗಿ ಹೊಸ ಮೈಸೂರು ರಾಜ್ಯದಲ್ಲಿ ಉಳಿಯುತ್ತದೆ. ಕೊಳ್ಳೆಗಾಲ ತಾಲೂಕು ನೆರೆಯ ಮಂಡ್ಯ ಜಿಲ್ಲೆಯೊಡನೆ ಸೇರಿಹೋಗುತ್ತದೆ. ಬೀದರ ಜಿಲ್ಲೆಯಿಂದ ಮೈಸೂರಿಗೆ ಮೇಲಿನಂತೆ ವರ್ಗಾಯಿಸಿದ ನಾಲ್ಕು ತಾಲೂಕುಗಳನ್ನು ನೆರೆಯ ಗುಲ್ಬರ್ಗ ಜಿಲ್ಲೆಯಲ್ಲಿ ಸಮಾವೇಶಗೊಳಿಸಲಾಗುತ್ತದೆ. ಈ ಹಾಗು ಇತರ ಮಾದರಿಯ ಮಾರ್ಪಾಟುಗಳನ್ನು ಸಾಧಿಸಲು ನಮ್ಮ ರಾಜ್ಯಘಟನೆಗೆ ತಿದ್ದುಪಡಿಗಳನ್ನು ಮಾಡಬೇಕೆಂದು ಸರಕಾರವು ನಿರ್ಧರಿಸಿದೆ. ರಾಜ್ಯಗಳ ಪುನರ್ಘಟನೆಯ ಇಡೀ ಪ್ರಶ್ನೆಯನ್ನು ಸದ್ಯದ ನಿರ್ಧಾರದಂತೆ ಕಾರ್ಯಗತಗೊಳಿಸಲು ಒಟ್ಟು ಹದಿನೈದು ತಿದ್ದುಪಡಿಗಳನ್ನು ಘಟನೆಗೆ ಮಾಡಲಾಗುವುದೆಂದು ತಿಳಿದು ಬರುತ್ತದೆ.

ಅಕ್ಟೋಬರಕ್ಕೆ ಹೊಸ ರಾಜ್ಯ

ಪುನರ್ಘಟಿತ ರಾಜ್ಯಗಳನ್ನು ಇದೇ ಬರುವ ಅಕ್ಟೋಬರದ ೧ನೇ ತಾರೀಕಿನಂದು ಅಸ್ತಿತ್ವಕ್ಕೆ ತರಲಾಗುತ್ತದೆ; ಮತ್ತು ಮುಂದಿನ ವರ್ಷದ ಆದಿ ಭಾಗದಲ್ಲಿ ಮಹಾ ಚುನಾವಣೆಗಳನ್ನು ನಡೆಸಲಾಗುತ್ತದೆ. ಹೊಸ ರಾಜ್ಯಗಳ ಉದಯ ಹಾಗು ಮಹಾಚುನಾವಣೆಯ ಬಳಿಕ ಹೊಸ ಶಾಸನಾಂಗವು ಅಧಿಕಾರಕ್ಕೆ ಬರುವ ದಿನಗಳ ಮಧ್ಯೆ ನಡುಗಾಲದ ಸರಕಾರವನ್ನು ಹೊಸ ರಾಜ್ಯಗಳಲ್ಲಿ ರಚಿಸಲಾಗುತ್ತದೆ. ಇದಕ್ಕಾಗಿ ಈಗಿನ ಮಂತ್ರಿಮಂಡಳದಲ್ಲಿ ಕೆಲವು ಬದಲಾವಣೆಗಳೂ ಹೊಸ ಮಂತ್ರಿಮಂಡಳಗಳ ನೇಮಕವೂ ಆಯಾ ರಾಜ್ಯದ ಸ್ಥಿತಿಗತಿಗನುಸಾರವಾಗಿ ನಡೆಯಬೇಕಾಗಬಹುದು. ಹೊಸ ರಾಜ್ಯದ ಶಾಸನಾಂಗದಲ್ಲಿ ಈಗ ಆಯಾ ಪ್ರದೇಶಗಳಲ್ಲಿದ್ದ ಎಲ್ಲ ಸದಸ್ಯರಿಗೂ ಸ್ಥಾನ ಸಿಗುತ್ತದೆ. ಆದರೆ ಹೈಕೋರ್ಟುಗಳ ಸಂಖ್ಯೆಯನ್ನು ಮಾತ್ರ ತಗ್ಗಿಸಲಾಗುತ್ತದೆ. ಪರಿಣಾಮದಲ್ಲಿ ಈಗ ಹೈದರಾಬಾದು, ಮಧ್ಯಭಾರತ, ಪೆಪ್ಸು ಮತ್ತು ಸೌರಾಷ್ಟ್ರಗಳಲ್ಲಿರುವ ಹೈಕೋರ್ಟುಗಳೂ ಅಜ್ಮೀರ, ಕಛ್, ಭೋಪಾಳ ಮತ್ತು ವಿಂಧ್ಯ ಪ್ರದೇಶಗಳಲ್ಲಿರುವ ಜುಡಿಶಿಯಲ್ ಕಮಿಶನರರ ನ್ಯಾಯಸ್ಥಾನಗಳೂ ರದ್ದಾಗುತ್ತವೆ. ಅಷ್ಟಲ್ಲದೆ ಹೊಸ ರಾಜ್ಯಗಳಲ್ಲಿ "ಎ", ಬಿ" ಮತ್ತು "ಸಿ" ವರ್ಗದ ರಾಜ್ಯಗಳೆಂಬ ಪ್ರಭೇದವೂ ಉಳಿಯುವುದಿಲ್ಲ. ರಾಜಪ್ರಮುಖರ ಹುದ್ದೆಯೂ ರದ್ದಾಗುತ್ತದೆ. ಹೊಸ ರಾಜ್ಯಗಳು ಅಸ್ತಿತ್ವಕ್ಕೆ ಬಂದ ಬಳಿಕ ಆದಷ್ಟು ಬೇಗ ಜನತಾಪ್ರಾತಿನಿಧ್ಯ ಶಾಸನದಂತೆ ಪ್ರತಿನಿಧಿಗಳ ಸಂಖ್ಯೆಯನ್ನು ಮಹಾ ಚುನಾವಣೆಯ ಬಗ್ಗೆ ನಿರ್ಧರಿಸಲು ಸಮಿತಿಯ ನೇಮಕವಾಗುತ್ತದೆ:

ಸಾಲ—ಸೊತ್ತುಗಳ ಪಾಲು

ಈ ಸಮಿತಿಯ ಶಿಫಾರಸಿನಂತೆ ಹೆಚ್ಚಿದ ಜನಸಂಖ್ಯೆಗನುಗುಣವಾಗಿ ಹೆಚ್ಚು ಪ್ರಾತಿನಿಧ್ಯವು ಪ್ರತಿಯೊಂದೂ ಪ್ರದೇಶಕ್ಕೆ ಸಿಗುತ್ತದೆ. ಈಗಿನ ಆಂಧ್ರ ರಾಜ್ಯದಲ್ಲಿ ಶಾಸನಾಂಗಕ್ಕೆ ಈಚೆಗಷ್ಟೇ ಚುನಾವಣೆ ನಡೆದಿರುವುದರಿಂದ ಅಲ್ಲಿ ಸಂಸತ್ತಿನ ಸ್ಥಾನಗಳಿಗೆ ಮಾತ್ರ ಮಹಾ ಚುನಾವಣೆ ನಡೆಯುತ್ತದೆ. ತಿರು-ಕೊಚ್ಚಿ ಮತ್ತು ಪೆಪ್ಸುಗಳಲ್ಲಿ ಸಹ ಈಗಿನ ಶಾಸನಾಂಗವು ಇನ್ನು ಕೆಲವು ವರ್ಷಗಳ ವರೆಗೆ ಅಧಿಕಾರದಲ್ಲಿ ಉಳಿಯಲು ಅರ್ಹವಾಗಿದ್ದರೂ ಆ ರಾಜ್ಯಗಳಿಗೆ ಹೊಸತಾಗಿ ಸೇರುವ ಪ್ರದೇಶಗಳ ಜನಪ್ರತಿನಿಧಿಗಳ ಸಂಖ್ಯೆಗೂ ಈಗಾಗಲೇ ಶಾಸನಾಂಗದಲ್ಲಿರುವ ಪ್ರತಿನಿಧಿಗಳ ಸಂಖ್ಯೆಗೂ ಸಮತೂಕವನ್ನು ಸಾಧಿಸುವ ಅವಶ್ಯಕತೆ ಬೀಳುವುದರಿಂದ ಅಲ್ಲಿ ಹೊಸ ಚುನಾವಣೆಗಳನ್ನು ಭಾರತದ ಉಳಿದ ಪ್ರದೇಶಗಳಲ್ಲಿ ಚುನಾವಣೆ ನಡೆದಾಗಲೇ ನಡೆಸಲಾಗುತ್ತದೆ. ಸಾಲಸೊತ್ತುಗಳ ಹಂಚುವಿಕೆಯ ವಿಧಾನವನ್ನು ಸಹ ಮಸೂದೆಯು ವಿವರಿಸಿದೆ. ಇದರ ಪ್ರಕಾರ ಭೂಮಿ, ಕಟ್ಟಡ, ಉಗ್ರಾಣ ಮತ್ತಿತರ ಸೊತ್ತುಗಳು ವಸೂಲಿಯು ಬಾಕಿ ಬಿದ್ದಿರುವ ತೆರಿಗೆ ಇವುಗಳ ಮೇಲಿನ ಅಧಿಕಾರವು ಸಂಬಂಧಿಸಿದ ಪ್ರದೇಶವು ಯಾವ ರಾಜ್ಯಕ್ಕೆ ವರ್ಗಾವಣೆ ಹೊಂದುವದೋ ಆ ರಾಜ್ಯಕ್ಕೆ ಸಲ್ಲುತ್ತದೆ. ಖಜಾನೆ ಮತ್ತು ಬ್ಯಾಂಕುಗಳಲ್ಲಿರುವ ಹಣ, ಹೊರಗಿನಿಂದ ವಸೂಲಾಗಲಿರುವ ಸಾಲದ ಹಣ ಇತ್ಯಾದಿಗಳ ಮೇಲಿನ ಅಧಿಕಾರವು ಹೊಸ ರಾಜ್ಯಕ್ಕೆ ವರ್ಗಾವಣೆಹೊಂದಿದ ಪ್ರದೇಶದ ಜನಸಂಖ್ಯೆಗೂ ಆ ಪ್ರದೇಶವು ಇಷ್ಟರವರೆಗಿದ್ದ ಹಳೆ ರಾಜ್ಯದ ಒಟ್ಟು ಪ್ರದೇಶದ ಜನಸಂಖ್ಯೆಗೂ ಇರುವ ದಾಮಾಶಯದಂತೆ ಹೊಸ ಹಾಗು ಹಳೆಯ ರಾಜ್ಯಗಳ ನಡುವೆ ಹಂಚಬೀಳುತ್ತದೆ. ಜನಸಂಖ್ಯೆಯ ನಿರ್ಣಯದ ಮಟ್ಟಿಗೆ ೧೯೫೧ನೇ ಇಸವಿಯ ಜನಗಣನೆಯನ್ನು ಆಧಾರಕ್ಕೆ ಹಿಡಿಯಲಾಗುತ್ತದೆ.

ಅಲ್ಪಸಂಖ್ಯಾಕರ ಹಿತರಕ್ಷಣೆ

ಮಸೂದೆಯು ಭಾಷೆಯ ದೃಷ್ಟಿಯಿಂದ ರಾಜ್ಯಗಳಲ್ಲಿ ಅಲ್ಪಸಂಖ್ಯಾಕರಾಗಿ ಉಳಿಯುವ ಜನ ವರ್ಗಕ್ಕೆ ವಿಶೇಷ ಸೌಲಭ್ಯಗಳನ್ನು ಕೊಡಬೇಕೆಂದು ಹೇಳುತ್ತದೆ. ಇದಕ್ಕಾಗಿ ಘಟನೆಯ ೩೫೦ನೇ ಸೂತ್ರಕ್ಕೆ ಮಾಡಬೇಕೆಂದಿರುವ ತಿದ್ದುಪಡಿಯು ಹೀಗೆನ್ನುತ್ತದೆ— "ಭಾಷೆಯ ದೃಷ್ಟಿಯಿಂದ ಅಲ್ಪಸಂಖ್ಯಾಕರಾದ ಗುಂಪುಗಳವರ ಮಕ್ಕಳಿಗೆ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನೊದಗಿಸಲು ಸಾಕಷ್ಟು ಸೌಲಭ್ಯವನ್ನು ನೀಡುವುದು ಪ್ರತಿಯೊಂದು ರಾಜ್ಯದ ಮತ್ತು ಆ ರಾಜ್ಯದ ಅಧೀನವಿರುವ ಸ್ಥಳೀಯ ಸಂಸ್ಥೆಯ ಕರ್ತವ್ಯವಾಗಿರುತ್ತದೆ. ಇಂಥ ಸೌಲಭ್ಯಗಳನ್ನು ಸಂಬಂಧಿಸಿದ ಜನರಿಗೆ ದೊರಕಿಸಿಕೊಡಲು ರಾಷ್ಟ್ರಾಧ್ಯಕ್ಷರು ಆಯಾ ರಾಜ್ಯ ಸರಕಾರಕ್ಕೆ ತಕ್ಕ ನಿರ್ದೇಶವನ್ನು ಕೊಡಬಲ್ಲರು." ಈ ಸೌಲಭ್ಯವನ್ನು ನೀಡುವ ರಾಜ್ಯ ರಾಜ್ಯಗಳ ನಡುವೆ ಸಾರಿಗೆ-ಸಂಪರ್ಕದ ವ್ಯವಸ್ಥೆಯನ್ನು ಸುಗಮವಾಗಿಡುವ ಮತ್ತು ಆರ್ಥಿಕ ಹಾಗು ಸಾಮಾಜಿಕ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವ ವಿಷಯದಲ್ಲಿ ವಲಯ ಮಂಡಳವು ಸ... ಯೋಗ್ಯ ಸಲಹೆಗಳನ್ನು ನೀಡಬಲ್ಲುದು. ಭಾಷಾವಾರು ಆಯೋಗವು ಪ್ರತಿಯೊಂದು ರಾಜ್ಯದಲ್ಲಿರುವ ಸರಕಾರಿ ನೌಕರ ಮಂಡಳದಲ್ಲಿ ಅರ್ಧಾಂಶವಾದರೂ ಹೊರ ಪ್ರದೇಶಗಳಿಂದ ಬಂದವರಿರಬೇಕು; ಇದರಿಂದ ರಾಷ್ಟ್ರೀಯ ಐಕ್ಯದ ಭಾವನೆಯನ್ನು ಪೋಷಿಸಿದಂತಾಗುವುದೆಂದು ಪಟ್ಟ ಅಭಿಪ್ರಾಯಕ್ಕೆ ಮಾತ್ರ ಮಸೂದೆಯಲ್ಲಿ ಮನ್ನಣೆ ಸಿಕ್ಕಿರುವುದಿಲ್ಲ. ಕೇಂದ್ರ ಸರಕಾರದವರು ಶಾಸನವನ್ನು ಮಾಡದೆ ಸಂಪ್ರದಾಯವೊಂದನ್ನು ಹಾಕಿಕೊಂಡು ಅದನ್ನು ಅನುಸರಿಸುವ ಮೂಲಕ ಈ ಉದ್ದೇಶವನ್ನು ಈಡೇರಿಸಲು ಹವಣಿಸಿರುವರೆಂದು ತೋರುತ್ತದೆ.

ಬುದ್ಧ ಜಯಂತ್ಯುತ್ಸವ

ಇದೇ ಮೇ ತಿಂಗಳಲ್ಲಿ ಭಾರತವು ಬುದ್ಧದೇವನ ೨೫೦೦ನೇ ಜಯಂತ್ಯುತ್ಸವವನ್ನು ಆಚರಿಸುತ್ತದೆ. ಈ ಸಂದರ್ಭದಲ್ಲಿ ಅಂಚೆ ಇಲಾಖೆಯವರು ಹೊರಡಿಸಲಿರುವ ಎರಡು ವಿಶೇಷ ಚೀಟುಗಳಲ್ಲಿ ಒಂದರ ನಕಾಶೆಯನ್ನು ಚಿತ್ರದಲ್ಲಿ ಕಾಣಬಹುದು. ಚಂದ್ರಿಕೆಯ ಬೆಳುವಿನಲ್ಲಿ ಬೋಧಿ ವೃಕ್ಷ ಕಂಗೊಳಿಸುವುದನ್ನು ಇದು ಚಿತ್ರಿಸುತ್ತದೆ.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಪೋದರೂ ಶುಕ್ಲವೂ, ಇಂದ್ರಿಯವೂ ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖಬೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0.

ಮಲಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED

H. Office: UDIPI (S.India).

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health, Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೨-೩-'೫೬	೨೯

ಪಾಕಿಸ್ತಾನಿ ತಂತ್ರ

ಜಗತ್ತಿನ ಎಲ್ಲ ರಾಷ್ಟ್ರಗಳೊಡನೆ, ಮುಖ್ಯವಾಗಿ ನಮ್ಮ ನೆರೆಯ ರಾಷ್ಟ್ರಗಳೊಡನೆ, ಅತ್ಯಂತ ಆತ್ಮೀಯತೆಯಿಂದಿರುವುದು ಭಾರತದ ಬಯಕೆಯಾಗಿದೆ; ಈ ಬಯಕೆಯು ಬಹಳ ಹೆಚ್ಚು ತೃಪ್ತಿಕರವಾದ ರೀತಿಯಲ್ಲಿ ಕೈಗೂಡಿದೆ. ಆದರೆ ಈ ಯಶಸ್ಸಿನಿಂದ ಭಾರತವು ಮೈಮರೆಯಬಾರದೆಂದೋ ಏನೋ, ಸುಂದರ ಮುಖದ ಮಗುವಿನ ಕಪೋಲಕ್ಕೆ ಕಪ್ಪು ಚುಕ್ಕೆಯನ್ನಿಟ್ಟು ಅಂದಗೆಡಿಸಿ, ದೃಷ್ಟಿ ತಾಕದ ಹಾಗೆ ಮಾಡುವಂತೆ, ಪಾಕಿಸ್ತಾನದ ಪೂರ್ವ ಹಾಗು ಪಶ್ಚಿಮ ವಿಭಾಗಗಳೆಂಬ ರಾಹು-ಕೇತುಗಳು ಭಾರತದ ಸ್ನೇಹಶೀಲತೆಯನ್ನು ಅಸಡ್ಡೆಯಿಂದ ಕಾಣುವ ಹಾಗು ಅದನ್ನು ಧಿಕ್ಕರಿಸಿಯೇ ನಡೆಯುವ ಅನಪೇಕ್ಷಿತ ವರ್ತನೆಯನ್ನಿಟ್ಟುಕೊಂಡು ವ್ಯವಹಾರವನ್ನು ನಡೆಸುತ್ತಿರುತ್ತವೆ. ಪಾಕಿಸ್ತಾನದ ಸರಕಾರವು ಭಾರತದೊಡನೆ ತನಗೆ ಸ್ನೇಹ ಬೇಕಾಗಿಲ್ಲವೆಂದೇನು ಹೇಳುತ್ತಿಲ್ಲ— ಸ್ನೇಹಸಂವರ್ಧನೆಯನ್ನೆ ಉಭಯ ರಾಷ್ಟ್ರಗಳಲ್ಲಿ ತಾನು ಹಾರೈಸುತ್ತಿದ್ದೇನೆಂದು ಪಾಕಿಸ್ತಾನವು ಹೇಳುತ್ತದೆ. ಆದರೆ, ತನ್ನ ಈ ಹೇಳಿಕೆಗೆ ಸರಿಯಾದ ವರ್ತನೆಯನ್ನು ಮಾತ್ರ ಅದು ಇಟ್ಟುಕೊಳ್ಳುತ್ತಿಲ್ಲ. ಉದಾಹರಣೆಗಾಗಿ, ಈಚೆಗೆ ಒಂದರ ಬಳಿಕ ಇನ್ನೊಂದೆಂಬಂತೆ ಭಡ ದ್ವೀಪ ಪ್ರದೇಶದಲ್ಲಿ, ಅಸ್ಸಾಂ ಮತ್ತು ಪೂರ್ವ ಬಂಗಾಳ ಗಡಿಯಲ್ಲಿ, ಪೂರ್ವ ಮತ್ತು ಪಶ್ಚಿಮ ಪಂಜಾಬುಗಳ ಸರಹದ್ದಿನಲ್ಲಿ ನಡೆದಿರುವ ಆಕ್ರಮಣ ಹಾಗು ಕಲಹ ಪ್ರಚೋದನೆಯು ಪಾಕಿಸ್ತಾನ ಪ್ರೇರಿತವೆಂಬುದು ತೀರ ಸ್ಪಷ್ಟವಾಗಿದ್ದರೂ ಸಹ ಭಾರತವೇ ಮೊದಲು ಗಡಿಯನ್ನು ಮೀರಿ ಸಾಗಿತು, ಆಕ್ರಮಣ ನಡೆಸಿತು, ಗುಂಡು ಹಾರಿಸಿತು ಎಂದೆಲ್ಲ ಪಾಕಿಸ್ತಾನವು ಸಾರುತ್ತದೆ. ಸತ್ಯಕ್ಕೆ ತೀರ ವಿಪರ್ಯಾಸವಾಗಿ ಹೇಳಿಕೆಯನ್ನು ಕೊಡುವ ಪಾಕಿಸ್ತಾನದ ರಾಜಕೀಯ ಧುರೀಣರಿಗೆ ಆತ್ಮಸಾಕ್ಷಿ ಎಂಬುದೊಂದಿದೆಯೆ ಎಂಬ ಬಗ್ಗೆ ನಾವು ಶಂಕೆಪಡಬೇಕಾಗುತ್ತದೆ. ಗಡಿಯನ್ನು ಉಲ್ಲಂಘಿಸಿ ಅನೇಕ ವೇಳೆ ವಿಮಾನಗಳನ್ನು ಭಾರತೀಯ ಪ್ರದೇಶದ ಮೇಲೆ ಹಾರಾಡಿಸಿದ ಪಾಕಿಸ್ತಾನ ಸರಕಾರವು ಇದು ಕೇವಲ ಆಕಸ್ಮಿಕವೆಂದು ಹೇಳುವುದಾದರೂ ಸೋಜಿಗದ ವಿಷಯ. ನಿಯೋಜಿತ ಕಾರ್ಯಕ್ರಮವೊಂದನ್ನು ಕಾರ್ಯಗತಗೊಳಿಸುವ ಹಂಚಿಕೆಯನ್ನು ಪಾಕಿಸ್ತಾನವು ಮಾಡಿದೆಯೆಂದೂ ಭಾರತವನ್ನು ತಬ್ಬಿಬ್ಬಾಗಿಸಿ, ಅದರ ನೆಮ್ಮದಿಯನ್ನು ಕೆಡಿಸಿ, ಆದರಧವಳ ಕೀರ್ತಿಯನ್ನು ಸುಳ್ಳು ಅಪವಾದಗಳಿಂದ ಕಲಂಕಿತಗೊಳಿಸಿ, ಹೀನೈಸುವ ದುರುದ್ದೇಶವನ್ನೆ ಈ ಕಾರ್ಯಕ್ರಮವು ಇಟ್ಟುಕೊಂಡಿದೆಯೆಂದು ನಿರೀಕ್ಷಕರು ಅಭಿಪ್ರಾಯಪಟ್ಟರೆ ತಪ್ಪಾಗಲಾರದು. ಭಾರತ ಸರಕಾರದ ಪ್ರಾಮಾಣಿಕ ವರ್ತನೆ, ಕುತಂತ್ರಗಳ ತ್ಯಾಗ, ಸ್ನೇಹಪೂರ್ಣ ಸಂಬಂಧಕ್ಕಾಗಿ ಇರುವ ಆತುರ ಇತ್ಯಾದಿಗಳು ಜಗಜ್ಜನಿತವಿರುವಾಗ, ಪಾಕಿಸ್ತಾನವು ಅದನ್ನು ಈರ್ಷ್ಯೆಯಿಂದ ಕಂಡು, ಮಿತ್ರ ರಾಷ್ಟ್ರಗಳು ಭಾರತದೊಡನೆ ಸಂಬಂಧವನ್ನು ತೊರೆದು, ತನ್ನೊಡನೆ ಸಂಬಂಧವನ್ನು ಗಾಢವಾಗಿಸಬೇಕೆಂಬ ಆಸೆಯಿಂದ ತುಂಬಿರುವಂತೆ ಕಾಣುತ್ತದೆ. ಇದಕ್ಕಾಗಿಯೇ ರಶಿಯದ ನಾಯಕರು ಭಾರತಕ್ಕೆ ಹೃತ್ಪೂರ್ವಕ ಬೆಂಬಲದ ಭರವಸೆ ನೀಡಿದ್ದಾರೆಂದೂ ಪಾಕಿಸ್ತಾನವು ಮಾತ್ರ ಅಸಹಾಯವಾಗಿದೆಯೆಂದೂ ಸಿಯಾಟೊ ಪರಿಷತ್ತಿನಲ್ಲಿ ಮೊನ್ನೆ ಹೇಳಲಾಯಿತು. ಇಂಥ ಹಸಿ ಹಸಿ ಸುಳ್ಳುಗಳನ್ನೂ ನಂಬಿ, ಕುಣಿಯುವ "ಮಿತ್ರರು" ಇರುವಷ್ಟು ಕಾಲ ಪಾಕಿಸ್ತಾನವು ತನ್ನ ಅಸಭ್ಯ ತಂತ್ರಗಳನ್ನು ಆತಂಕವಿಲ್ಲದೆ ಅನುಸರಿಸುತ್ತಾ ಹೋಗಬಹುದು. ಆದರೆ ನ್ಯಾಯ, ಸದ್ವರ್ತನೆ, ಸಭ್ಯ ಆಚರಣೆಗಳ ಕಡೆಗೆ ಸ್ವಲ್ಪವಾದರೂ ಪಾಕಿಸ್ತಾನಿ ಸರಕಾರಕ್ಕೆ ಗೌರವವಿದ್ದರೆ ಅದು ತಪ್ಪು ಹೆಜ್ಜೆಗಳನ್ನೆ ಸದಾಕಾಲ ಮುಂದಿಡಲು ಬಯಸಬಾರದು; ಮತ್ತು ಮಾಡಿದ ತಪ್ಪನ್ನು ಮುಚ್ಚಿಕೊಳ್ಳಲು ವ್ಯರ್ಥಾರೋಪವನ್ನು ಮಾಡಲಾಗದು. ಕಾಶ್ಮೀರ ಸಮಸ್ಯೆಯು ಇತ್ಯರ್ಥ ಹೊಂದದಿರುವುದಕ್ಕೋ ಗಡಿ ತಂಟೆಯು ಅಧಿಕವಾಗಿರುವುದಕ್ಕೋ ಪಾಕಿಸ್ತಾನಕ್ಕೆ ಆಕ್ರಮಣ ಯಾರಿಂದ? ಭಯವು ಹೆಚ್ಚಿರುವುದಕ್ಕೋ — ಅಂತೂ ಎಲ್ಲಕ್ಕೂ ಭಾರತ ಸರಕಾರದ ಚಟುವಟಿಕೆಯೇ ಕಾರಣ ಎಂದಾಡುವ ಪಾಕಿಸ್ತಾನಿ ಧುರೀಣರ ನಾಲಿಗೆಗೆ "ಹುಳ ಬೀಳಲಿ; ಹಾಗೆ ಅದು ಕೊಳೆತು ನಾರಲಿ!" ಎಂದು ಶಪಿಸುವ ಮನಸ್ಸಾಗುತ್ತದೆ. ಆದರೇನು ಮಾಡೋಣ? ಭಾರತೀಯ ಶಾಪವೇ ಆಗುವಷ್ಟು ಕಠೋರವಾಗಬೇಕಾಗಿ ಬಂದಿದೆ ಎಂಬುದರಿಂದ ಪಾಕಿಸ್ತಾನವೇನು ಬುದ್ಧಿ ಕಲಿಯಲಾರದು. ಜೇಹಾದದ ಕೂಗನ್ನು ನಡೆಸದೆ ಅದು ಬಿಡಲಾರದು. ಕಳೆದ ವರ್ಷ ನೆಕೋವಾಲಿನಲ್ಲಿ ನಡೆದ ದುರ್ಘಟನೆಗೆ ತಾನು ಹೊಣೆಯಾಗಿರುವೆನೆಂಬ, ಕಾಶ್ಮೀರದಲ್ಲಿ ಆಕ್ರಮಣ ನಡೆಸಿದ ತಪ್ಪುಗಾರ ರಾಷ್ಟ್ರವು ತಾನೆಂಬ, ಉಭಯ ರಾಷ್ಟ್ರಗಳ ನಡುವೆ ಆಗಿರುವ ಒಪ್ಪಂದಗಳನ್ನು ನ್ಯಾಯ ಸಮ್ಮತ ರೀತಿಯಲ್ಲಿ ಜ್ಯಾರಿಯಲ್ಲಿಳಿಸಲು ತಪ್ಪಿದ ಪಕ್ಷವು ತಾನಾಗಿರುವೆನೆಂಬ ಜ್ಞಾನವು ಆ ದೇಶಕ್ಕೆ-ಅಲ್ಲಿಯ ಸರಕಾರದ ಪರಿಷ್ಕರಿಗೆ— ಎಂದಾದರೂ ಉಂಟಾದೀತೆ ಎಂಬುದು ಸಂಶಯ. ಒಂದೊಮ್ಮೆ ಉಂಟಾದರೂ ಅದು ತಪ್ಪಿಗಾಗಿ ಪ್ರಾಯಶ್ಚಿತ್ತಪಡುವ ರೀತಿಯಲ್ಲಿರಲಾರದೆಂಬುದು ಸ್ಪಷ್ಟ—ತನ್ನ ಹೆಗ್ಗಳಿಕೆ ಕೊಚ್ಚಿಕೊಳ್ಳದೆ, ಇದಿರಾಳಿಯ ಮುಖದ ಮೇಲೆ ಕೆಸರು ಚೆಲ್ಲುವ ತುಂಟತನವನ್ನು ತೋರಿಸದೆ, ತನ್ನ ನಿಲುಮೆಯನ್ನು ಬದಲಾಯಿಸುವ ಅಭ್ಯಾಸ ಪಾಕಿಸ್ತಾನಕ್ಕಿಲ್ಲ-ಇದಕ್ಕೆ ಇತ್ತೀಚೆಯ ನಿದರ್ಶನವಾಗಿ ಭಾರತ ಮತ್ತು ಪಾಕಿಸ್ತಾನಗಳು ನೆರೆಕರೆಯ ಸುಖಕರವಾದ ಸಂಬಂಧವನ್ನು ಹೊಂದುವುದಕ್ಕಾಗಿ ಯುದ್ಧ ತ್ಯಾಗದಘೋಷಣೆಯನ್ನು ಮಾಡಬೇಕೆಂದು ಪಾಕಿಸ್ತಾನದ ಈಗಿನ ಪ್ರಧಾನಿಗಳು ಘೋಷಿಸಿರುವುದನ್ನು ಉಲ್ಲೇಖಿಸಬಹುದು. ಇಂಥ ಘೋಷಣೆಯೊಂದನ್ನು ಮಾಡಬೇಕೆಂದು ನಮ್ಮ ಪ್ರಧಾನಿ ನೆಹರುಗಳು ೧೯೫೦ನೇ ಇಸವಿಯಲ್ಲಿಯೇ ಪಾಕಿಸ್ತಾನದ ಆಗಿನ ಪ್ರಧಾನಿ ಲಿಯಾಕತಾಲಿ ಖಾನರಿಗೆ, ಆ ನಂತರ ಪಾಕಿಸ್ತಾನದ ಪ್ರಧಾನಿ ಪಟ್ಟವೇರಿದ ನಾಜಿಮುದ್ದೀನರಿಗೆ, ಮುಂದೆ ಅಲ್ಲಿ ಪ್ರಧಾನಿಯಾದ ಮಹಮ್ಮದಾಲಿಗಳಿಗೆ ಹೇಳಿದ್ದರು. ಈ ಸತ್ಯದ ಮೇಲೆ ಪ್ರಕಾಶವನ್ನು ಚೆಲ್ಲದೆ ಹಿಂದಿನ ಮಹಮ್ಮದಾಲಿಗಳ ಸ್ಥಾನಕ್ಕೆ ಬಂದಿರುವ ಈಗಿನ ಪ್ರಧಾನಿ ಮಹಮ್ಮದಾಲಿಗಳು ತಮ್ಮದು ಹೊಸ ಸೂಚನೆ ಎಂಬಂತೆ ನಡೆದುಕೊಂಡಿರುವುದು ಪ್ರಶ್ನಾತೀತವಾದ ಪ್ರಾಮಾಣಿಕತೆಯಲ್ಲ.

ಪಾಕಿಸ್ತಾನಕ್ಕೆ ಸ್ನೇಹಹಸ್ತ

ಪಂಚಶೀಲಗಳ ಆಧಾರ

ಪ್ರಧಾನಿ ನೆಹರುಗಳು ಲೋಕ ಸಭೆಯಲ್ಲಿ ವಿದೇಶ ನೀತಿಯನ್ನು ಕುರಿತು ಹೇಳಿಕೆಯೊಂದನ್ನು ಕೊಡುತ್ತಾ ಪಾಕಿಸ್ತಾನ ಮತ್ತು ಭಾರತಗಳೊಳಗೆ ಯುದ್ಧ ತ್ಯಾಗದ ಘೋಷಣೆಯೊಂದು ನಡೆಯಬೇಕೆಂದು ಪಾಕಿಸ್ತಾನದ ಈಗಿನ ಪ್ರಧಾನಿ ಮಹಮ್ಮದಾಲಿಯವರು ಮಾಡಿರುವ ಸೂಚನೆಯು ೧೯೫೦ನೇ ಇಸವಿಯಷ್ಟು ಪೂರ್ವದಲ್ಲಿ ಭಾರತವು ಮುಂದಿಟ್ಟಿದ್ದ ಸೂಚನೆಯಾಗಿತ್ತೆಂಬುದನ್ನು ನೆನಪಿಗೆ ತಂದುಕೊಟ್ಟಿದ್ದಾರೆ. ಅದಾಗ್ಯೂ ಸಂಧಾನಕ್ಕಾಗಿ ವ್ಯಕ್ತವಾದ ಈ ಮನೋಭಾವವು ಪ್ರಾಮಾಣಿಕವಾದುದಾಗಿದ್ದರೆ ಅದು ಸ್ವಾಗತಾರ್ಹವೆನ್ನಬೇಕೆಂದು ಅವರ ಅಭಿಪ್ರಾಯ.

ಪಂಚಶೀಲಗಳ ಆಧಾರ

ಪಾಕಿಸ್ತಾನದೊಡನೆ ಕೇವಲ ಯುದ್ಧ ತ್ಯಾಗದ ಘೋಷಣೆಯೊಂದನ್ನು ಮಾಡಿ ಸುಮ್ಮನಾಗುವುದಕ್ಕಿಂತಲೂ ಈಗ ಜಗತ್ತಿನಲ್ಲೆಲ್ಲ ಅತ್ಯಂತ ಪ್ರಿಯವಾಗಿರುವ ಮತ್ತು ಪಾಕಿಸ್ತಾನವು ಸಹ ಬಾಂಡುಂಗಿನ ಆಫ್ರೋ ಏಶ್ಯ ರಾಷ್ಟ್ರಗಳ ಪರಿಷತ್ತಿನಲ್ಲಿ ಒಪ್ಪಿಕೊಂಡ ಪಂಚಶೀಲಗಳ ತಳಹದಿಯ ಮೇಲೆ ಉಭಯ ರಾಷ್ಟ್ರಗಳ ಸಂಬಂಧವನ್ನು ನೆಲೆಗೊಳಿಸುವ ರಚನಾತ್ಮಕ ಮಹತ್ವದ ಸೂಚನೆಯನ್ನು ಪ್ರಧಾನಿ ನೆಹರುಗಳು ಪಾಕಿಸ್ತಾನಕ್ಕೆ ಕೊಟ್ಟಿದ್ದಾರೆ.

ಭಾರತವು ನಿರಪರಾಧಿ

ಗಡಿತಂಟೆಗಳು ಭಾರತದಿಂದ ಪ್ರಚೋದಿಸಲ್ಪಟ್ಟಿವೆ ಎಂಬ ಪಾಕಿಸ್ತಾನಿ ಆರೋಪವು ಕೇವಲ ಸುಳ್ಳಿನಿಂದ ಕೂಡಿದೆ ಎಂಬುದಾಗಿ ನೆಹರುಗಳು ಸ್ಪಷ್ಟಪಡಿಸಿದ್ದಾರೆ. ಪಾಕಿಸ್ತಾನವು ತಪ್ಪು ಮಾಡಿದೆ ಎಂದು ನೆಕೋವಾಲದಲ್ಲಿ ಕಳೆದ ವರ್ಷ ನಡೆದ ಗಡಿ ದುರ್ಘಟನೆಯ ಬಗ್ಗೆ ಸಂಯುಕ್ತ ರಾಷ್ಟ್ರ ಸಂಘದ ನಿಷ್ಪಕ್ಷಪಾತ ನಿರೀಕ್ಷಕರು ತೀರ್ಮಾನವನ್ನಿತ್ತಿದ್ದರೂ ಆಗಿನ ಪಾಕಿಸ್ತಾನಿ ಪ್ರಧಾನಿಗಳು ತಪ್ಪುಗಾರರಿಗೆ ಶಿಕ್ಷೆ ವಿಧಿಸಿ, ತಕ್ಕ ಪರಿಹಾರವನ್ನು ನೀಡುವ ಮೂಲಕ ಪ್ರಾಯಶ್ಚಿತ್ತ ಮಾಡಿಕೊಳ್ಳಲಾಗುವುದೆಂದು ಹೇಳಿದ್ದರೂ ಪಾಕಿಸ್ತಾನಿ ಸರಕಾರವು ಏನೇನೂ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ನೆಹರುಗಳು ನೆನಪು ಹುಟ್ಟಿಸಿದ್ದಾರೆ.

ಜೀವವಿಮಾ ವ್ಯವಹಾರ

ಜೀವವಿಮಾ ಕಂಪೆನಿಗಳ ವ್ಯವಹಾರವನ್ನು ಕೇಂದ್ರ ಸರಕಾರದ ಅಧೀನಪಡಿಸುವ ಬಗ್ಗೆ ರಾಷ್ಟ್ರಾಧ್ಯಕ್ಷರು ಹೊರಡಿಸಿದ್ದ ಸುಗ್ರೀವಾಜ್ಞೆಯನ್ನು ಶಾಸನರೂಪದಲ್ಲಿ ಪರಿವರ್ತಿಸುವ ವಿಧೇಯಕಕ್ಕೆ ಲೋಕಸಭೆ ಹಾಗು ರಾಜ್ಯಸಭೆಗಳ ಒಪ್ಪಿಗೆ ದೊರಿತಿದೆ. ಇನ್ನುಮುಂದೆ ಜೀವವಿಮಾ ವ್ಯವಹಾರವನ್ನು ಕೇಂದ್ರ ಸರಕಾರದ ಪರವಾಗಿ ನಡೆಸಲು ಒಂದು ಕಾರ್ಪೋರೇಶನನ್ನು ಸ್ಥಾಪಿಸುವ ಬಗ್ಗೆ ಅರ್ಥಸಚಿವರು ಲೋಕಸಭೆಯ ಮುಂದೆ ಮಂಡಿಸಿದ ವಿಧೇಯಕವನ್ನು ಚುನಾಯಿತ ಸಮಿತಿಗೆ ಒಪ್ಪಿಸಲು ಲೋಕಸಭೆಯು ಇದೇ ಮಂಗಳವಾರ ಸಮ್ಮತಿಸಿತು.

ಉಪಾಧ್ಯಕ್ಷರ ಆಯ್ಕೆ

ಪೆಪ್ಸುವಿನ ಅಕಾಲಿ ದಳದ ಸದಸ್ಯರಾದ ಸರದಾರ ಹುಕುಂ ಸಿಂಘರು ಲೋಕಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆಹೊಂದಿದ್ದಾರೆ. ಇವರ ಹೆಸರನ್ನು ಪ್ರಧಾನಿ ನೆಹರು ಸೂಚಿಸಿದರು; ಮತ್ತು ಪಾರ್ಲಿಮೆಂಟರಿ ವ್ಯವಹಾರಗಳ ಸಚಿವರಾದ ಕಾಂಗ್ರೆಸಿನ ಶ್ರೀ ಸತ್ಯನಾರಾಯಣ ಸಿಂಹರು ಅನುಮೋದಿಸಿದರು. ಈ ಚುನಾವಣೆಯಲ್ಲಿ ಪ್ರಮುಖ ಪ್ರತಿಪಕ್ಷಗಳ ಸದಸ್ಯರು ಭಾಗವಹಿಸದೆ, ಸಭಾತ್ಯಾಗವನ್ನು ಮಾಡಿದ್ದರು.

ತಿರು-ಕೊಚ್ಚಿಯ ರಾಜಕೀಯ

ತಿರುವಾಂಕೂರು-ಕೊಚ್ಚಿಯಲ್ಲಿ ಹೊಸ ಮಂತ್ರಿಮಂಡಳವನ್ನು ಪ್ರಜಾ ಸಮಾಜವಾದಿ ಪಕ್ಷದ ಪ್ರಮುಖರಾದ ಹಾಗು ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ಪಟ್ಟಂಥಾನು ಪಿಳ್ಳೆಯವರು ರಚಿಸುವರಾದರೆ ತಮ್ಮ ಪಕ್ಷವು ಬೆಂಬಲಿಸುವುದೆಂದೂ ಕೆಲವು ಕಾಂಗ್ರೆಸಿಗರೂ ಅವನ್ನು ಬೆಂಬಲಿಸುವರೆಂದೂ ಕಮ್ಯುನಿಸ್ಟರ ಧುರೀಣ ಶ್ರೀ ಟಿ. ವಿ. ಥೋಮಸರು ಹೇಳಿದ್ದಾರೆ. ಶ್ರೀ ಪಿಳ್ಳೆಯವರು ರಾಜಪ್ರಮುಖರನ್ನು ಕಂಡು ತನಗೆ ಮಂತ್ರಿಮಂಡಳ ರಚಿಸುವ ಭರವಸೆ ಇದೆ ಎಂದಿದ್ದಾರೆ. ಆದರೆ ಈ ನಡುವೆ ರಾಜಪ್ರಮುಖರು ರಾಜೀನಾಮೆಯನ್ನು ಮೊನ್ನೆಯಷ್ಟೇ ಕೊಟ್ಟಿರುವ ಶ್ರೀ ಗೋವಿಂದ ಮೆನೊನ್ನರನ್ನು ಪುನಃ ಕರೆದು "ಮಂತ್ರಿ ಮಂಡಳವನ್ನು ಹೊಸತಾಗಿ ರಚಿಸಲು ನಿಮಗೆ ಸಾಧ್ಯವೆ" ಎಂದು ಕೇಳಿರುವರೆಂದು ತಿಳಿದು ಬರುತ್ತದೆ.

ರಾಜ್ಯಗಳ ಪುನರ್ಘಟನೆ

ಸಂಸತ್ತಿನ ಮುಂದೆ ಚರ್ಚೆಗಾಗಿ ಬರುವ ಎಪ್ರೀಲಿನ ೩೦ನೇ ದಿನಾಂಕ ರಾಜ್ಯಗಳ ಪುನರ್ಘಟನೆಯ ಮಸೂದೆಯು ಬರುವುದೆಂದು ಮೌಲಾನಾ ಅಜಾದರ ಹೇಳಿಕೆಯಿಂದ ತಿಳಿದು ಬರುತ್ತದೆ. ಮದ್ರಾಸಿನ

(೮ನೇ ಪುಟ ನೋಡಿರಿ)

THE MOOLKY BA

(INCORPORATED I

BALANCE SHEET

CAPITAL & LIABILITIES	Rs. As. Ps.	Rs.
1. Capital:		
AUTHORISED CAPITAL: 8,000 shares of Rs 25/- each	2,00,000 0 0	
ISSUED CAPITAL: 4,000 shares of Rs. 25/- each	1,00,000 0 0	
SUBSCRIBED CAPITAL: 3,194 shares of Rs. 25/- each	79,850 0 0	
CALLED AND PAID UP CAPITAL: at Rs. 15/- per share	47,910 0 0	
Add: Calls in advance	1,200 0 0	
	49,110 0 0	
Forfeited Shares	Nil	49,11
2. Reserve Fund and other Reserves:		11,90
3. Deposits and other Accounts:		
Fixed & Time Deposits	1,12,395 11 3	
Savings Bank Deposits	42,422 10 5	
Current Accounts, Contingency Accounts etc.	22,607 8 2	1,77,42
4. Borrowings from other Banking Companies, Agents, etc:		18,51
5. Bills Payable:...		Ni
6. Bills for collection being Bills Receivable, as per contra:		Ni
7 Other Liabilities:		
For expenses	100 0 0	
Unclaimed Dividends	885 14 9	
Interest accrued on Deposits	3,067 4 9	4,05
8. Acceptances, Endorsements and other obligations, as per contra:		Ni
9. Profit & Loss Account:		
Profit as per last Balance Sheet	4,789 15 8	
Less Appropriations: Reserve Fund, Dividends and other Reserves	4,071 5 6	
	718 10 2	
Add: Profit for the year brought from Profit & Loss A/c	4,448 13 2	
	5,167 7 4	
Less: Appropriated to Statutory Reserve Fund and other Reserves	2,900 0 0	2,26
10. Contingent Liability:		Ni
Total ...		2,63,27

OFFICE OF THE BANK, MULKI.
Date 18—2—1956.

(Sd.) KRISHNA M. SALIAN. (Sd.) P. SANJIVA HEGDE.
„ K. SANJIVA SHETTY. „ M. SHANKERA SHETTY. } DIR

Dr. PROFIT AND LOSS ACCOUNT FOR

EXPENDITURE	Rs.
1. Interest paid on Deposits Borrowings, etc.	6.04
2. Salaries, and Allowances and Provident Fund ... ... (Including salary of Rs. 1,800/- paid to Manager)	3,20
3. Directors and Local Committee Members' fees and allowances	7
4. Rent, Taxes, Insurance, Lighting etc.	34
5. Law Charges	N
6. Postage. Telegrams and Stamps	15
7. Auditor's Fees	10
8. Depreciation on and repairs to the Banking Cos., property	3
9. Stationery, Printing, Advertisement, etc., ...	47
10. Loss from sale of or dealing with non-Banking Assets	N
11. Other expenditure	60
12. Balance of Profit	4,44
Total ...	15,49

OFFICE OF THE BANK, MULKI,
Date 18—2—1956.

(Sd.) KRISHNA M. SALIAN. (Sd.) P. SANJIVA HEGDE.
„ K. SANJIVA SHETTY. „ M. SHANKERA SHETTY. } DIR

AUDIT

I have audited the fore-going Balance Sheet of the Moolky Bank, Limited, Mulki, (South Kanara) as at 31st December 1955 and also the
(a) I have obtained all the informations and explanations I have required and have found them satisfactory; *(b)* the transactions of the I
conformity with Law; *(d)* Such Profit and Loss account show a true balance of Profit for the year; *(e)* Such Balance Sheet exhibits a true and c
(f) in my opinion, the books of Accounts have been kept by the Bank as required by Section 130 of the Indian Companies Act 1913.

Mangalore
19—2—1956.

IMITED, MULKI.

TED LIABILITY)

DECEMBER, 1955.

PROPERTY & ASSETS	Rs. As. Ps.	Rs. As. Ps.
ɔand		29,835 15 5
;es with other Banks:		
India:		
)n Fixed Deposits	45,000 0 0	
)n Current Accounts	245 0 1	
ıtside India	Nil	45,245 0 1
· at call and short notice:		Nil
ments:		
curities of the Central and State Governments of the face value of Rs. 37,500/-, at cost ...	37,348 2 0	
ıares	9,125 0 0	
·bentures and Bonds	Nil	
ther Investments	Nil	
ɔld	Nil	46,473 2 0
ıces:		
ıs, Cash Credits, Over Drafts, etc.		
ı India	1,23,474 0 9	
utside India	Nil	
Discounted and purchased		
ıyable in India	13,150 0 0	
ıyable outside India	Nil 0 0	1,36,624 0 9
lars of Advances:		
:bts considered good in respect of which the Banking Company is fully secured	1,07,453 7 3	
:bts considered good for which the Banking Company holds no other security than the Debtors' personal security	13,150 0 0	
·bts considered good secured by the personal liabilities of one or more parties in addition to the personal security of the Debtors	16,020 9 6	
:bts considered doubtful or bad, not provided for	Nil	
Total ...	1,36,624 0 9	
·bts due by Directors or Officers of the Banking Company or any of them either severally or jointly with other persons	7,549 2 0	
·bts due by Companies or Firms in which the Directors of the Banking Company are interested as Directors, Partners or Managing Agents, or, in the case of Private Companies, as Members	Nil	
aximum total amount of advances, including temporary advances made at any time during the year to Directors or Managers or Officers of the Banking Company or any of them either severally or jointly with any other persons	8,213 0 1	
aximum total amount of advances, including temporary advances granted during the year to the Companies or Firms in which the Directors of the Banking Company are interested as Directors, Partners or Managing Agents, or, in the case of Private Companies, as Members	Nil	
ie from the Banking Companies	Nil	
Receivable being Bills For Collection, as per contra		Nil
ituents' Liabilities For Acceptances, Endorsements and other obligations, as per contra		Nil
ises; less depreciation:		Nil
ture and Fixtures:		
At Cost	1,160 9 1	
Additions in the year	59 14 3	
	1,220 7 4	
Less: Depreciation to date	807 7 4	413 0 0
' Assets:		
Interest accrued or due on Investments:...	2,333 10 0	
Tax provisionally deposited	2,351 8 0	4,685 2 0
Banking Assets Acquired in Satisfaction of claims:		Nil
Total ...		2,63,276 4 3

(Sd.) N. M. ADYANTHAYA,
President.

(Sd.) M. R. H. PUNJA,
Manager.

ıR ENDED 31ST DECEMBER 1955. Cr.

INCOME	Rs. As. Ps.
: and Discount	14,043 2 5
ssion, Exchange and Brokerage	1,375 1 3
... ...	Nil
ofit on sale of Investments, etc.	31 4 0
ofit on revaluation of Investments, etc.	Nil
: from Banking Assets and profit from sale or dealing with such Assets	Nil
eceipts	44 8 0
Total ...	15,493 15 8

(Sd.) N. M. ADYANTHAYA,
President.

(Sd.) M. R. H. PUNJA,
Manager.

ATE.

nt for the year ended upon that date and report that:
to my notice have been within the powers of the Bank; (c) in my opinion, the above Balance Sheet, and Profit and Loss Account are drawn up in
of affairs of the Bank according to the best of my information and the explanations given to me and as shown by the books of the Bank; and

(*Sd.*) M. S. Krishna Rau, *F. C. A.*,
Chartered Accountant.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾಸಭೆಯು— ತಾ. 18ರಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಘಟನೆಗಳಿಗೆ ಕೆಲವೊಂದು ತಿದ್ದುಪಡಿಗಳು ಸೂಚಿಸಲ್ಪಟ್ಟು ಮಂಜೂರು ಮಾಡಲಾದುವು. ಬಳಿಕ ವಿವಿಧ ಉಪಸಮಿತಿಗಳು ರಚಿಸಲ್ಪಟ್ಟು ಸದಸ್ಯರ ಚುನಾವಣೆ ನಡೆಯಿತು.

ವಿಧಾಯಕ ಕಾರ್ಯ ಸಮಿತಿ

ಶ್ರೀಗಳಾದ ಎನ್. ಉಪೇಂದ್ರ ನಾಯಕ್, ವೈ. ಸಂಜೀವ ಶೆಟ್ಟಿ, ಕೆ. ವರದರಾಜ ಪ್ರಭು, ಎಮ್. ಕೃಷ್ಣಯ್ಯ ಸೆಟ್ಟಿ, ಬಿ. ಚಂದಪ್ಪ ಇಂದ್ರ, ಕೆ. ವೇಣುಗೋಪಾಲ ನಾಯಕ್, ಕೆ. ಕೆ. ಪಿ. ರಾಮ ಪೊದುವಾಳ್.

ಹರಿಜನ ಸಮಿತಿ— ಶ್ರೀಗಳಾದ ಎನ್. ಗೋಪಾಲ ಸಾಲೆನ್ಸ, ಬಿ. ಬಿ. ಸೆಟ್ಟಿ, ಬಿ. ಆರ್. ಕರ್ಕೇರ, ಎ. ಜಿ. ತಿರುಮಲೇಶ್ವರ ಭಟ್.

ಕಿಸಾನ ಸಮಿತಿ— ಶ್ರೀಗಳಾದ ಬಿ. ವಿಠಲದಾಸ ಸೆಟ್ಟಿ, ಎಸ್. ಎಸ್. ಹೊಳ್ಳ, ಕೆ. ಎ. ರೈ, ಬಿ. ಆರ್. ಕರ್ಕೇರ, ಬಿ. ಆನಂದ ರೈ, ಬಿ. ಆನಂದ ಮತ್ತು ಶ್ರೀಮತಿ ಕಾದಂಬರಿ ಹೊಳ್ಳ, ಎಸ್. ಧರ್ಮಸಾಮ್ರಾಜ್ಯ.

ಮಜೂರ ಸಮಿತಿ— ಶ್ರೀಗಳಾದ ಭೋಜ ರಾವ್ ಪೋಲೀಸಾರ್, ಎಮ್. ಎಲ್. ಸೆಟ್ಟಿ, ಎ. ಲಕ್ಷ್ಮೀನಾರಾಯಣ ಆಳ್ವ, ಬಿ. ಕಿಟ್ಟಣ್ಣ ರೈ, ಎಸ್. ಧರ್ಮಸಾಮ್ರಾಜ್ಯ.

ಮಹಿಳಾ ವಿಭಾಗ— ಶ್ರೀಮತಿಗಳಾದ ಉಮಾ ವಿ. ಕಾಮತ್, ಪ್ರೇಮಾ ಎ ಪೈ, ಮೇಬಲ್ ಬ್ರಿಟೋ, ಕಾದಂಬರಿ ಹೊಳ್ಳ, ಕಲ್ಯಾಣಿ ಡಿ. ಸೆಟ್ಟಿ, ಮೇರಿ ಬ್ರಿಟೊ.

ಯೂತ್ ಕಾಂಗ್ರೆಸ್— ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಎಲ್. ಸೆಟ್ಟಿ, ಎ. ಲಕ್ಷ್ಮೀನಾರಾಯಣ ಆಳ್ವ, ಬಿ. ಕಿಟ್ಟಣ್ಣ ರೈ, ಎಸ್. ಧರ್ಮಸಾಮ್ರಾಜ್ಯ.

ಕಾಸರಗೋಡು ಪ್ರಶ್ನೆಯ ಕುರಿತು ವಿಚಾರ ವಿನಿಮಯ ನಡೆದು, ಪಂಡಿತ ನೆಹರೂರವರು ಉತ್ತರಕರ್ನಾಟಕ ಜಿಲ್ಲೆಗಳಲ್ಲಿ ಪ್ರವಾಸ ಮಾಡುವಾಗ ಈ ಕೆಳಗಿನವರು ಅವರನ್ನು ಭೇಟಿಯಾಗಿ ಕಾಸರಗೋಡಿನ ನಿಜಸ್ಥಿತಿಯನ್ನು ಭಿನ್ನವಿಸಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು. ಶ್ರೀಗಳಾದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಕೆ. ಮಹಾಬಲ ಭಂಡಾರಿ, ಡಾ. ನಾಗಪ್ಪ ಆಳ್ವ, ಎಮ್. ಉಮೇಶ ರಾವ್, ಕೆ. ಗಣೇಶ್ ರಾವ್, ಡಾ. ಕೆ. ಕೆ. ಹೆಗ್ಡೆ, ಬಿ. ಬಿ. ಸೆಟ್ಟಿ, ಕೆ. ಸೂರ್ಯನಾರಾಯಣ ಅಡಿಗ, ಬಿ. ಆರ್. ಕರ್ಕೇರ, ಎಚ್. ಕೆ. ತಿಂಗಳಾಯ, ಕೆ. ವೇಣುಗೋಪಾಲ ನಾಯಕ್.

ರಾಜ್ಯಪುನರ್ರಚನಾ ಮಸೂದೆಯ ಕುರಿತಾದ ಚರ್ಚೆಯು ಮದ್ರಾಸ್, ಮೈಸೂರು, ಬೊಂಬಾಯಿ ಮತ್ತು ಹೈದರಾಬಾದ್ ಶಾಸನ ಸಭೆಗಳ ಮುಂದೆ ಬರುವಾಗ ಆಯಾ ಶಾಸನ ಸಭೆಗಳ ಕನ್ನಡ ಸದಸ್ಯರು, ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗವು ದ. ಕ. ಜಿಲ್ಲೆಯಲ್ಲೇ ಉಳಿಯುವಂತೆ ಆವಶ್ಯವಾದ ತಿದ್ದುಪಡಿಯನ್ನು ತರಬೇಕೆಂದು ಎಲ್ಲಾ ಕರ್ನಾಟಕ ಶಾಸನ ಸಭಾ ಸದಸ್ಯರಿಗೆ ನಿರ್ದೇಶನವೀಯಬೇಕೆಂದು ನಿಶ್ಚಯಿಸಲಾಯಿತು. ಮಸೂದೆಯು ಪಾರ್ಲಿಮೆಂಟಿನ ಮುಂದೆ ಬರುವಾಗ ಕಾಸರಗೋಡಿನ ಸಂಬಂಧವಾದ ತಿದ್ದುಪಡಿಯನ್ನು ಮಾಡುವ ಕುರಿತು ದಿಲ್ಲಿಗೆ ಹೋಗಿ ಪ್ರಯತ್ನಿಸುವರೆ ಶ್ರೀಗಳಾದ ಡಾ. ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ., ಕೆ. ಆರ್. ಆಚಾರ್, ಬಿ. ವಿ. ಬಾಳಿಗ, ಎಮ್. ಎಲ್. ಎ, ಡಾ. ಕೆ. ನಾಗಪ್ಪ ಆಳ್ವ, ಟಿ. ಎ. ಪೈ, ಎಮ್. ಎಲ್. ಎ, ಎಮ್. ಉಮೇಶ ರಾವ್, ಕೆ. ಸುಂದರರಾಮ ಸೆಟ್ಟಿ, ಕೆ. ಮಹಾಬಲ ಭಂಡಾರಿ ಮತ್ತು ಭೀಮ ಭಟ್ಟರಿರುವ ಸಮಿತಿ ರಚಿಸಲಾಯಿತು. ಇಷ್ಟು ಮಾತ್ರವಲ್ಲದೆ ಮೈಸೂರಿಗೆ ಹೋಗಿ ಅಲ್ಲಿಯ ಮಂತ್ರಿಮಂಡಲದೊಡನೆ ಮಾತು ಕಥೆ ನಡೆಸಲು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಆಗತ್ಯತೋರಿದವರನ್ನು ಕರೆದೊಯ್ಯಬೇಕೆಂದು ನಿಶ್ಚಯವಾಯಿತು. ಕೊನೆಗೆ ರಾಜಿನಾಮೆ ಕೊಟ್ಟಿರುವ ಕಾಂಗ್ರೆಸ್ ಬಂಧುಗಳು ತಮ್ಮ ರಾಜಿನಾಮೆಗಳನ್ನು ಹಿಂದೆಗೆದುಕೊಳ್ಳಬೇಕೆಂದು ವಿನಂತಿಸಲಾಯಿತು.

ಜಿಲ್ಲಾ ಬೋರ್ಡ್ ಸಭೆಯು— ತಾ. 19ರಲ್ಲಿ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಆಚಾರ್ಯ ನರೇಂದ್ರ ದೇವ್ ಮತ್ತು ಶ್ರೀ ಜಿ. ವಿ. ಮಾವಳಂಕರರ ನಿಧನದ ಬಗ್ಗೆ ದುಃಖಸೂಚಕ ನಿರ್ಣಯಗಳಾದುವು. ಬಳಿಕ ಪ್ರಶ್ನೋತ್ತರಗಳಾದುವು. ನಂತರ ಅಧ್ಯಕ್ಷರು ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರು ಅಧ್ಯಕ್ಷತೆ ವಹಿಸುವಂತೆ ಕೇಳಿಕೊಂಡು ಅಗತ್ಯವ ಕೆಲಸದ ನಿಮಿತ್ತ ಹೊರಟುಹೋದರು.

ಜಿಲ್ಲಾ ಬೋರ್ಡು ಅಧ್ಯಕ್ಷರನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ ಮಂಡಳಿಗೆ ಪೂರ್ಣ ಸದಸ್ಯರಾಗಿ ನೇಮಿಸಬೇಕೆಂದು ಈ ಬೊರ್ಡು ಕಳೆದ ಡಿಸೆಂಬರ ತಾ 28ರಲ್ಲಿ ಮಾಡಿಕೊಂಡ ವಿನಂತಿಗೆ, ಸರಕಾರವು ನಕಾರಾತ್ಮಕವಾದ ಉತ್ತರವನ್ನು ಕೊಟ್ಟು, ಜಿಲ್ಲಾ ಬೋರ್ಡು ಅಧ್ಯಕ್ಷರನ್ನು ಸಾರಿಗೆ ಅಧಿಕಾರಿಯ ಮಂಡಳಿಯ ಸಲಹೆಗಾರ ಸದಸ್ಯರಾಗಿಯೇ ಇರಗೊಡಿಸುವ ತನ್ನ ಆಜ್ಞೆಯನ್ನು ದೃಢೀಕರಿಸಿರುವ ಬಗ್ಗೆ ವಿಷಾದವನ್ನೂ ಮತ್ತು ಎಲ್ಲ ಜಿಲ್ಲಾ ಬೋರ್ಡುಗಳ ಅಧ್ಯಕ್ಷರನ್ನೂ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಂಡಳಿಯ ಪೂರ್ಣ ಸದಸ್ಯರಾಗಿ ಪರಿಗಣಿಸಬೇಕೆಂದು ಮತ್ತೊಮ್ಮೆ ಒತ್ತಾಯಿಸುವ ನಿರ್ಣಯವಾಯಿತು. ಅನಂತರ ಬೇರೆ ಬೇರೆ ಸದಸ್ಯರ ಹಲವು ಸೂಚನೆಗಳು ಮಂಜೂರಾದುವು.

ವಿವಾಹ ಸಮಾರಂಭ— ದ. ಕ. ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ವಕೀಲ್ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಪುತ್ರಿ ಕುಮಾರಿ ಶಕುಂತಳ ಇವರ ವಿವಾಹವು ದಿವಂಗತ ಶ್ರೀ ಬಟ್ಟಾರ ಸುಬ್ಬಯ್ಯ ನಾಯಕರ ಪುತ್ರ ಶ್ರೀ ವಿಠಲ ಸೆಟ್ಟರೊಡನೆ ಇದೇ ತಾ. 19ರಲ್ಲು ಸಂಜೆ ಜೋಸೆಫ್ ಬೋಸ್ಕೊ ಹಾಲಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಜಿಲ್ಲೆಯ ಆಧ್ಯ ಮಹನೀಯರನೇಕರು ಈ ಸಮಾರಂಭಕ್ಕೆ ಆಗಮಿಸಿದ್ದರು.

ಕೇನ್ಸರ್ ಚಿಕಿತ್ಸೆಯ ವ್ಯವಸ್ಥೆಯನ್ನು— ಮಂಗಳೂರು ಆಸ್ಪತ್ರೆಯಲ್ಲಿ ಬೇಗನೆ ಮಾಡಲಾಗುವುದೆಂದು ತಿಳಿದುಬರುತ್ತದೆ.

ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು— ಮಂಗಳೂರು ಬಂಟವಾಳಗಳ ನಡುವೆ ನೆರವೇರಿಸಲಾಗುವುದೆಂದೂ ಪುತ್ತೂರಿನವರೆಗೆ ಈ ಹೊಸ ಲೈನನ್ನು ಒಯ್ಯಲಾಗುವುದೆಂದೂ ತಿಳಿದುಬರುತ್ತದೆ.

ಪೋಪರ ದಿನಾಚರಣೆಯು— ಮಂಗಳೂರಲ್ಲಿ ತಾ. 11ರಲ್ಲಿ ಆಚರಿಸಲಾಯಿತು. ಮಿಲಾಗ್ರಿಸ್ ಚರ್ಚಿನಲ್ಲಿ ಕ್ರೈಸ್ತ ಬಂಧುಗಳು ಸಭೆಸೇರಿದ್ದರು. ರೆ. ಫಾ. ಎಸ್. ಎಫ್. ಮಿನೇಜಸ್ ರವರು ಪೋಪರ ಜೀವನದ ಕುರಿತು ಬೋಧಿಯತ್ತರು.

ನಗರ ಶಾಲೆಯ ಶಂಕುಸ್ಥಾಪನೆಯು— ತಾ. 15ರಲ್ಲಿ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಂದ ನೆರವೇರಿಸಲ್ಪಟ್ಟಿತು. ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ ಡಿ. ನೊರೋನ್ಹಾರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸೇವಾ ಸಮಾಜದ ಅಧ್ಯಕ್ಷಿಣಿ ಶ್ರೀಮತಿ ರಾಜಲಕ್ಷ್ಮಿ ರಾಜಾರಾಮರು ಸ್ವಾಗತಭಾಷಣ ಮಾಡಿದರು. ಸಮಾಜದ ಉಪಾಧ್ಯಕ್ಷಿಣಿ ಶ್ರೀಮತಿ ಭಾನುಮತಿ ಎಸ್. ರಾಯರು ಧನ್ಯವಾದಗಳನ್ನಿತ್ತರು.

ದ. ಕ. ಜಿಲ್ಲೆಗೆ ನೂಲಿನ ಗಿರಣಿ- ದ. ಕ. ಜಿಲ್ಲೆಯ ನೇಕಾರರಿಗೆ ಸಾಕಷ್ಟು ನೂಲು ಒದಗುವ ಅಸ್ಪದ ದೊರೆಯುವಂತೆ ಮಾಡಿ, ಇಲ್ಲಿನ ಕೈಮಗ್ಗ ಕೈಗಾರಿಕೆಗೆ ಸಹಾಯಕವಾಗುವಂತೆ ಸಾಧಾರಣ 12,000 ಸ್ಪಿಂಡಲ್ ಪ್ರಮಾಣದ ಒಂದು ಸಹಕಾರೀ ನೂಲುವ ಗಿರಣಿಯನ್ನು ತೆರೆಯುವ ವ್ಯವಸ್ಥೆಯನ್ನು ಕೈಕೊಳ್ಳುವಂತೆ ಸರಕಾರವನ್ನು ಸಹಕಾರಿ ಇಲಾಖೆಯ ಮೂಲಕ ಒತ್ತಾಯಿಸಬೇಕೆಂಬ ಶ್ರೀ ಟಿ. ರಮೇಶ ಪೈಗಳ ಸೂಚನೆಯು ತಾ. 5ರಲ್ಲಿ ಶ್ರೀ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿದ ಜಿಲ್ಲಾ ಕೈಮಗ್ಗ ಸಲಹಾ ಸಮಿತಿ ಸಭೆಯಲ್ಲಿ ಮಾನ್ಯವಾಯಿತು.

ಉಡುಪಿ

ನೃತ್ಯ ಪ್ರದರ್ಶನ— ಸ್ಥಳೀಯ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ದಿನಾಂಕ ೧೫ರಂದು ಉಡುಪಿಯ ಮಹಿಳಾ ಸಮಾಜದ ಆಶ್ರಯದಲ್ಲಿ, ಮಹಿಳಾ ಸಮಾಜಕ್ಕೆ ಕಟ್ಟಲ್ಪಡಲಿರುವ ಹೊಸ ಕಟ್ಟಡದ ಸಹಾಯಾರ್ಥವಾಗಿ, ಶ್ರೀಗಳಾದ ನೃತ್ಯ ಕಲಾವಿದ ರಾಧಾಕೃಷ್ಣನ್, ರಾಜನ್ ಅಯ್ಯರ್ ಮತ್ತು ಮಹಿಳಾ ಸಮಾಜದ ಆಶ್ರಯದಲ್ಲಿ ನೃತ್ಯ ಕಲಿತ ಹಲವಾರು ಬಾಲಕಿಯರಿಂದ, ಪುತನಿ, ಬೆಸ್ತ, ಹಾವಾಡಿಗ, ಗೀತಾ ಗೋವಿಂದ (ಮೊದಲ ಭಾಗ), ಕಥಕಳಿ ಸಂಪ್ರದಾಯದಲ್ಲಿ ಪ್ರಹ್ಲಾದ ಚರಿತ್ರೆ ಇತ್ಯಾದಿ ನೃತ್ಯಗಳು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟುವು. ಅದೇ ದಿನ ಕ್ರೂಸೋ ಸಂಸ್ಥೆಯು ಸಮಾಜ ವಿಕಾಸ ಯೋಜನೆಯ ಕಾರ್ಯಕ್ಕೆಂದು ಕಳುಹಿಸಿದ ಒಂದು 'ನೂರು ಪೌಂಡು (ಸಾಧಾರಣ ೧೫೦೦ ರೂ.) ಗಳ ಚೆಕ್ಕನ್ನು ರೆ! ಫಾ! ರೊಡ್ರಿಗ್ಸ್ ರವರು ಜಿಲ್ಲಾ ಕಲೆಕ್ಟರ ರಾವ ಶ್ರೀ ಎಮ್. ಜಿ. ರಾಜಾರಾಮರಿಗೆ ಅರ್ಪಿಸಿದರು. ಕಲೆಕ್ಟರರು ಕ್ರೂಸೋ ಸಂಸ್ಥೆಯ ಜನರ ಉದಾರ ಹೃದಯವನ್ನು ಕೊಂಡಾಡಿ, ಸ್ಥಳೀಯರೂ ಹಾಗೆಯೇ ಉದಾರಹೃದಯದಿಂದ ದಾನ ನೀಡಬೇಕೆಂದು ಹೇಳಿದರು.

ಮತ್ತೆರಡು ನಾಟಕಗಳು - ಶ್ರೀ ವರದೇಂದ್ರ ಕಲಾಮಂದಿರದಲ್ಲಿ ದಿನಾಂಕ ೧೬ರಂದು ಉಡುಪಿ ನಗರಸಭಾಧಿಪತಿಗಳಾದ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ 'ಚಕ್ರವರ್ತಿ ಚಂದ್ರಗುಪ್ತ' ಎಂಬ ನಾಟಕವೂ ೧೮ರಂದು ಡಾ. ಕೆ. ಎಲ್. ಪತಾಳರ ಅಧ್ಯಕ್ಷತೆಯಲ್ಲಿ 'ಸಮ್ರಾಟ್ ಷಹಜಹಾನ್' ಎಂಬ ನಾಟಕವೂ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ಮೊದಲ ನಾಟಕಕ್ಕಿಂತಲೂ ದ್ವಿತೀಯ ನಾಟಕವು ಹೆಚ್ಚಿನ ಜನಾದರಣೆಗೆ ಪಾತ್ರವಾಯಿತು. ಮಂಗಳೂರಿನ 'ಭಾರತ ಕಲಾನಿಕೇತನ'ದ ಆಶ್ರಯದಲ್ಲಿ, ಸುಪ್ರಸಿದ್ಧ ಕನ್ನಡ ಚಲಚಿತ್ರ ನಟ ಇಂದುಶೇಖರ್ ಮತ್ತು ಗೆಳೆಯರಿಂದ ಈ ಎರಡು ನಾಟಕಗಳೂ ಪ್ರದರ್ಶಿಸಲ್ಪಟ್ಟುವು. ಖರ್ಚು ಕಳೆದು ಉಳಿದ ಹಣವನ್ನು ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಆಸನಗಳ ವ್ಯವಸ್ಥೆಗೆ ಕೊಡಲಾಗುವುದೆಂದು ಕೊನೆಯ ದಿನ ಸಾರಿದರು. ನಾಟಕಕರ್ತ (ಶ್ರೀ ಕೃಷ್ಣಗೋಪಾಲ್ ರವರು ಆವರಿಗೆ ಸಹಾಯವನ್ನಿತ್ತ ಎಲ್ಲರಿಗೂ ಧನ್ಯವಾದವನ್ನರ್ಪಿಸಿದರು.

ಸರ್ ಬೆನಗಲ್ ರವರಿಗೆ ಸತ್ಕಾರ- ದಿನಾಂಕ ೧೬ರಂದು ಸರ್ ಬೆನಗಲ್ ರಾಮರಾಯರಿಗೆ ಸ್ಥಳೀಯ ಸಿಂಡಿಕೇಟ್ ಬ್ಯಾಂಕಿನ ಲ್ಲೊಂದು ಸತ್ಕಾರಕೂಟವು ಜರಗಿತು. ಶ್ರೀ ಟಿ. ಎ. ಪೈ, ಎಮ್. ಎಲ್ ಎ, ಗಳವರು ಸ್ವಾಗತಿಸಿದರು. ಅತಿಥಿಗಳು ಬ್ಯಾಂಕಿನ ಎಲ್ಲಾ ಭಾಗಗಳನ್ನೂ ಪರೀಕ್ಷಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಮಹಿಳೆಯರಿಗೆ ಹೆಚ್ಚಿನ ಕೆಲಸಕೊಟ್ಟುದು ಒಂದು ಹೊಸ ಉಪಕ್ರಮವೆಂದು ಮೆಚ್ಚಿನುಡಿದರು. ಡಾ. ವಾಧವ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಪುತ್ತಿಗೆ ಹಿರೇ ಶ್ರೀಪಾದಂಗಳವರ ಶತಮಾನೋತ್ಸವವನ್ನು— ಇದೇ ತಾ. 24ರಲ್ಲು ಉಡುಪಿಯಲ್ಲೂ ವ್ರತಿತರ ಸ್ಥಳಗಳಲ್ಲೂ ವೈಭವದಿಂದ ಜರಗಿಸಬೇಕೆಂದೂ ಸರ್ವರೂ ಸಹಕಾರ ಬೆಂಬಲವಿತ್ತು ಯಶಸ್ವಿಗೊಳಿಸಬೇಕೆಂದೂ ಅಖಿಲ ಭಾರತ ಮಾಧ್ವ ಮಹಾ ಮಂಡಲದ ಅಧ್ಯಕ್ಷ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಸುದೀರ್ಘ ಪ್ರಕಟಣೆ ಹೊರಡಿಸಿದ್ದಾರೆ.

ಉಡುಪಿ ಶ್ರೀ ಕೃಷ್ಣ ಮಠದಲ್ಲಿ ತಾ. 24 ರಲ್ಲು ಬೆಳಿಗ್ಗೆ 7 ತಾಸಿಗೆ ಉತ್ಸವವು ದೇವತಾ ಪ್ರಾರ್ಥನೆಯಿಂದ ಪ್ರಾರಂಭವಾಗುವುದು. 9 ಗಂಟೆಗೆ ಶ್ರೀಪಾದಂಗಳವರಿಗೆ ರಜತ ತುಲಾಭಾರ. ಮಧ್ಯಾಹ್ನ ಮಹಾಸಂತರ್ಪಣೆ ಸಂಜೆ 4½ ಗಂಟೆಗೆ ಪುರ ಮೆರವಣಿಗೆ, 6½ ತಾಸಿಗೆ ರಥಬೀದಿಯಲ್ಲಿ ಮಹಾ ಸಭೆ—ಮಾನಪತ್ರ ಅರ್ಪಣೆ ಮೊದಲಾದ ಕಾರ್ಯಕ್ರಮಗಳಿವೆ ಎಂದು ಶತಮಾನೋತ್ಸವ ಸಮಿತಿಯವರು ತಿಳಿಸುತ್ತಾರೆ. ಈ ಸಂಬಂಧ ಪರ್ಯಾಯ ಶ್ರೀ ಅದಮಾರು ಮಠದ ಶ್ರೀಪಾದಂಗಳವರ ವಿಶೇಷ ಸಂದೇಶಾಹ್ವಾನವೂ ಹೊರಟಿದೆ.

ಕೋರ್ಟು ಧಾರಣೆ:— ಉಡುಪಿ ಮುನ್ಸಿಫ್ ಕೋರ್ಟಿನವರು ನಿರ್ಧರಿಸಿದ ಚಾಲ್ತಿ ವರುಷದ ಕೋರ್ಟುಧಾರಣೆ ಹೀಗಿದೆ:—

ಕಜೆ- ಅಕ್ಕಿ	ಮುಡಿ ೧ರ	15	0	0
ಕೊಳ್ಳು-	,,	15	8	0
ಮಸ್ತಿ-	,,	16	0	0
I ಕ್ಲಾಸ್ ಬೆಳ್ತಿಗೆ	,,	18	0	0
II ಕ್ಲಾಸ್ ಬೆಳ್ತಿಗೆ	,,	17	0	0
ಉದ್ದು	,,	20	0	0
ತೆಂಗಿನ ಕಾಯಿ ೧೦೦ ರ		12	8	0
ತೆಂಗಿನ ಎಣ್ಣೆ ಮಣ ೧ರ		28	0	0
ಉಂಡಿಗೆ ಸಲಿಗೆ ೧೦೦ಕ್ಕೆ		35	0	0
ಹೊರೆ ೧ರ		1	0	0
ಕೋಳಿ ೧ರ		2	0	0

ಕುಮ್ರಗೋಡು— ಇನೇ ತಾ. 15 ರಲ್ಲಿ ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಯ ನೂತನ ಕಟ್ಟಡದ ಉದ್ಘಾಟನೆಯು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಮುತ್ತಯ್ಯ ಸೆಟ್ಟರು ಧ್ವಜಾರೋಹಣ ಮಾಡಿದರು. ಶ್ರೀ ಕುಂದಾರು ತೇಜಪ್ಪ ಸೆಟ್ಟಿ ಬೆಕ್ಕಕ್ಕೆ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಸಂಜೆ ಜರಗಿದ ಸಭೆಯಲ್ಲಿ ಶ್ರೀ. ಬಿ. ಜಗಜ್ಜೀವನದಾಸ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಬಿ. ಎಸ್. ಸೆಟ್ಟರು ಸಂದೇಶಗಳನ್ನೋದಿದರು ಜಿಲ್ಲಾ ಕಲೆಕ್ಟರ್ ಶ್ರೀ. ಎಮ್ ಜಿ. ರಾಜಾರಾಮರು ನೂತನ ಕಟ್ಟಡವನ್ನು ಉದ್ಘಾಟಿಸಿದರು. ಶ್ರೀ. ಟಿ. ಎ. ಪೈ ಎಮ್. ಎಲ್. ಎ. ಅವರು ಶಿಶು ವಿಹಾರ ಕೇಂದ್ರವನ್ನು ಪ್ರಾರಂಭಿಸಿದರು. ಜಿಲ್ಲಾ ಕಾಂಗ್ರೆಸು ಕಮಿಟಿ ಅಧ್ಯಕ್ಷ ಡಾ. ಯು ಪಿ. ಮಲ್ಯರು ರಾಷ್ಟ್ರನಾಯಕರ ಭಾವಚಿತ್ರಗಳನ್ನು ಅನಾವರಣ ಮಾಡಿದರು. ಶ್ರೀ ಬಸ್ರೂರು ಮುತ್ತಯ್ಯ ಸೆಟ್ಟರು ಶಾಲೆಗೆ ದೊಡ್ಡ ಗಡಿಯಾರ ದಾನವಿತ್ತರು. ಶ್ರೀಗಳಾದ ಬೈಕಾಡಿ ವೆಂಕಟಕೃಷ್ಣ ರಾವ್, ಎ. ಜಿ. ಆಳ್ವ ಮೊದಲಾದವರು ಸಾಂದರ್ಭೋಚಿತ ಮಾತುಗಳನ್ನಾಡಿದರು. ಕುಮ್ರಗೋಡು ನವಯುವಕ ಸಂಘದವರು 'ನಾರುತಿ ವಿಜಯ' ವೆಂಬ ಯಕ್ಷಗಾನ ನಾಟಕವನ್ನು ಪ್ರದರ್ಶಿಸಿದರು.

ಮುಂದಿನ ಹೆಜ್ಜೆ ಯಾವುದು— ಎಂಬ ತಲೆ ಬರಹದಿಂದ ಕಾಸರಗೋಡು ಪ್ರಶ್ನೆಯ ಕುರಿತು ಶ್ರೀ ಎಮ್. ಉಮೇಶರಾಯರ ಪ್ರಕಟಣೆಯೊಂದು ಹೊರಡಿಸಿ ಕಾಸರಗೋಡು ಕರ್ನಾಟಕದಲ್ಲೇ ಉಳಿಯಬೇಕೋ ಕೇರಳಕ್ಕೆ ಸೇರಬೇಕೋ ಎಂಬ ವಿಷಯದಲ್ಲಿ ಜನತೆಯೇ ಮತವಿತ್ತು ನಿರ್ಧರಿಸಲಿ ಎಂದು ಸರಕಾರಕ್ಕೆ ತಿಳಿಸಲಾಗಿದೆ. ಇದಕ್ಕೂ ಸರಕಾರದ ಒಪ್ಪಿಗೆ ದೊರೆಯದಿದ್ದಲ್ಲಿ, ಸಾಮೂಹಿಕ ಸತ್ಯಾಗ್ರಹವನ್ನು ಹೂಡುವ ಯೋಜನೆಯಿದೆ ಎಂದಿರುವರು.

(೫ನೇ ಪುಟದಿಂದ)

ನ ಶಾಸನಾಂಗದ ಕಾಂಗ್ರೆಸು ಪಕ್ಷವು ಇದೇ ೩೫ನೇ ತಾರೀಕಿಗೆ ಈ ವಿಧೇಯಕದ ಬಗ್ಗೆ ಸಮಾಲೋಚನೆ ನಡೆಸುವುದೆಂದೂ ೨೮, ೨೯ ಮತ್ತು ೩೧ನೇ ತಾರೀಕುಗಳಲ್ಲಿ ಶಾಸನಾಂಗದ ಕೆಳ ಮನೆಯೂ ಅನಂತರ ಮೇಲ್ಮನೆಯೂ ವಿಧೇಯಕವನ್ನು ಚರ್ಚಿಸುವುವೆಂದೂ ಪ್ರಕಟಿಸಲಾಗಿದೆ. ದಕ್ಷಿಣ ಕನ್ನಡದ ಸದಸ್ಯರು ಕಾಸರಗೋಡು ಮುಖ್ಯ ತಾಲೂಕಿನ ಕನ್ನಡಿಗರಿಗಾಗಿರುವ ಅನ್ಯಾಯದ ಪರಿಮಾರ್ಜನೆಗಾಗಿ ಗಡಿ ಸಮಿತಿಯನ್ನಾದರೂ ನೇಮಿಸಬೇಕೆಂದು ಒತ್ತಾಯಿಸಲಿ; ಮತ್ತು ಈ ಪ್ರಯತ್ನದಲ್ಲಿ ಕೃತಕೃತ್ಯರಾಗಲಿ!

ರಾಷ್ಟ್ರೀಯ ಯೋಜನೆಯಲ್ಲಿ ಬೇಂಕುಗಳ ಪಾತ್ರ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್‌ನ ತಾ. 12—3—56ರಂದು ಜರಗಿದ 30ನೆಯ ವಾರ್ಷಿಕ ಮಹಾಸಭೆಯಲ್ಲಿ ಡೈರೆಕ್ಟರ್ ಮಂಡಳಿಯ ಅಧ್ಯಕ್ಷ ಡಾ। ಟಿ. ಮಾಧವ ಪೈಗಳು ಮಾಡಿದ ಭಾಷಣದ ಸಾರ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್‌ನ ಆಡಳಿತ ಮಂಡಳಿಯ ಅಧ್ಯಕ್ಷರಾದ
ಡಾ। ಟಿ. ಎಂ. ಎ. ಪೈ,
ಎಂ. ಬಿ., ಬಿ. ಎಸ್.

* * * * *

ಸ್ನೇಹಿತರೇ,

ನಿಮ್ಮ ಬೇಂಕು ಹಿಂದಿನ ವರುಷದಲ್ಲಿ ಸಾಧಿಸಿದ ಪ್ರಗತಿಯನ್ನು ಉಳಿಸಿಕೊಂಡಿರುವುದಲ್ಲದೆ, 1955ರಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಪಡೆದಿರುವುದು. ಕಳೆದ ಮೂರು ವರುಷಗಳ ಮುನ್ನಡೆಯನ್ನು ಈ ಕೆಳಗಿನ ವಿವರಗಳಿಂದ ಕಂಡುಕೊಳ್ಳಬಹುದು.

	31—12—1953	31—12—1954	31—12—1955
ವಸೂಲಾದ ಬಂಡವಾಳ	ರೂ. 25,34,158	ರೂ. 25,52,152	ರೂ. 26,75,568
ಕ್ಷೇಮನಿಧಿ	ರೂ. 12,10,000	ರೂ. 13,50,000	ರೂ. 15,00,000
	ರೂ. 37,44,158	ರೂ. 39,02,152	ರೂ. 41,75,568
ಠೇವಣಾತಿ	ರೂ. 4,71,50,624	ರೂ. 5,42,36,944	ರೂ. 6,67,03,420

ಠೇವಣಾತಿ ಲೆಕ್ಕಗಳು 1,38,006ರಿಂದ ವರುಷಾವಧಿಯಲ್ಲಿ 1,51,467ಕ್ಕೆ ಏರಿದುವು. ಸಾಲ ಪತ್ರೆಯಲ್ಲಿ 64,418 ಲೆಕ್ಕಗಳ ಮೇಲೆ 3,93,77,834 ರೂಪಾಯಿಗಳನ್ನೂ, ವಾಣಿಜ್ಯ—ವ್ಯವಹಾರದ ಮೇಲೆ 1,00,97,180 ರೂಪಾಯಿಗಳನ್ನೂ, ವ್ಯಾಪಾರ, ಕೃಷಿ, ಕೈಗಾರಿಕೆಯ ಬಗ್ಗೆ 2,92,00,654 ರೂಪಾಯಿಗಳನ್ನೂ ಒದಗಿಸಲಾಗಿರುವುದು. ಹಿಂದಿನ ವರುಷ ಬೇಂಕಿನ ಆದಾಯ ರೂಪಾಯಿ 33,10,054ರಷ್ಟಿದ್ದರೆ, 1955ರಲ್ಲಿ ರೂಪಾಯಿ 38,51,487ಕ್ಕೆ ಮುಟ್ಟಿರುವುದು. ಈ ಆದಾಯವನ್ನು ಹೇಗೆ ವಿನಿಯೋಗಿಸಲಾಗಿದೆ ಎಂಬುದನ್ನು ಈ ಕೆಳಗಿನ ವಿವರಗಳಿಂದ ತಿಳಿಯಬಹುದು.

ಆದಾಯ	1953	1954	1955
ಠೇವಣಾತಿಗಳ ಮೇಲೆ ಬಡ್ಡಿ	ರೂ. 8,35,846	ರೂ. 10,20,592	ರೂ. 12,61,226
ಇತರ ಬೇಂಕುಗಳಿಗೆ ಸಂದ ಬಡ್ಡಿ	ರೂ. 23,305	ರೂ. 35,586	ರೂ. 49,815
ಸಂಬಳ, ಬತ್ತೆ	ರೂ. 9,16,006	ರೂ. 10,99,413	ರೂ. 13,49,415
ಸ್ಟೇಶನರಿ ಇತ್ಯಾದಿ	ರೂ. 78,504	ರೂ. 1,16,018	ರೂ. 1,12,280
ಬಾಡಿಗೆ, ತೆರಿಗೆ	ರೂ. 2,13,011	ರೂ. 2,14,990	ರೂ. 1,71,982
ಇತರ ಖರ್ಚುಗಳು	ರೂ. 2,76,410	ರೂ. 3,02,223	ರೂ. 3,10,275
ನಿವ್ವಳ ಮುನಾಫೆ	ರೂ. 4,00 961	ರೂ. 5.21,212	ರೂ. 5,96.491
ಜುಮ್ಲಾ:	ರೂ. 27,44,043	ರೂ. 33,10,054	ರೂ. 38,51,487
ನಿವ್ವಳ ಮುನಾಫೆಯಿಂದ			
ಕ್ಷೇಮನಿಧಿಗೆ	ರೂ. 1,10,000	ರೂ. 1,40,000	ರೂ. 1,50,000
ಡಿವಿಡೆಂಡ್	ರೂ. 1,52,536	ರೂ. 1,53,495	ರೂ. 1.75.701
ಸಿಬಂದಿಗೆ ಬೋನಸ್	ರೂ. 40,000	ರೂ. 50,000	ರೂ. 60,000
ಇನ್‌ಕಮ್ ಟೇಕ್ಸ್ ಕ್ಷೇಮನಿಧಿ	ರೂ. 1,00,000	ರೂ. 1.75,000	ರೂ. 2,00,000
ಮುಂದಿನ ವರ್ಷಕ್ಕೆ	ರೂ. 5,323	ರೂ. 3,041	ರೂ. 18,831

ಪ್ರಥಮ ಯೋಜನೆಯ ಅವಧಿಯಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ತುಂಬಾ ಅಭಿವೃದ್ಧಿಗೊಂಡಿರುವುದು. ಸುಮಾರು 4800 ಕೋಟಿ ರೂಪಾಯಿ ವಿಸ್ತಾರದ ಎರಡನೆ ಪಂಚವಾರ್ಷಿಕ ಯೋಜನೆಯು ಮೂಲಕ ಇನ್ನೂ ಹೆಚ್ಚಿನ ತ್ಯಾಗ ಹಾಗೂ ಕಾರ್ಯಸಾಧನೆಗೆ ತಕ್ಕ ತಳಹದಿಯ ನಿರ್ಮಾಣವಾಗಿರುವುದು.

ಸಮಾಜವು ತನ್ನ ಆವಶ್ಯಕತೆಯನ್ನು ನಿರ್ಣಯಗೊಳಿಸುವುದು ಮಾತ್ರವಲ್ಲ, ಅದನ್ನು ಪೂರೈಸಿಕೊಳ್ಳುವ ಹೊಣೆಗಾರಿಕೆಯನ್ನೂ ವಹಿಸಿಕೊಳ್ಳಬೇಕಾಗುವುದು. ಇಂತಹ ಯೋಜನೆಯಲ್ಲಿ ಪ್ರತಿಯೊಬ್ಬ ನಾಗರಿಕನೂ ಸ್ವಯಂಪ್ರೇರಣೆಯಿಂದ ತನ್ನ ಮೇಲೆ ಹಿಡಿತವನ್ನಿಟ್ಟುಕೊಳ್ಳಬೇಕಾಗುವುದು. ತನ್ನ ಕಾಲಿನ ಮೇಲೆ ತಾನು ನಿಲ್ಲಬೇಕೆಂದು ನಿಶ್ಚಯಿಸಿರುವ ದೇಶದ ಅಭಿವೃದ್ಧಿಗೆ ದೇಶದೊಳಗಿಂದಲೇ ಹಣ ಒದಗಿಬರಬೇಕು. ಇದಕ್ಕೆ ದೊಡ್ಡ ಮಟ್ಟದಲ್ಲಿ ಉಳಿತಾಯ ಮಾಡಬೇಕಾದುದು ಅಗತ್ಯ. ಸಮಾಜವಾದೀ ಸಮಾಜ ರಚನೆಯ ಧ್ಯೇಯದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿರುವಾಗ ಶ್ರೀಮಂತರ ಹೆಚ್ಚಿನ ಆದಾಯದ ಮೇಲೆ ಕಡಿತ ಮಾತ್ರವಲ್ಲದೆ ಆದಾಯದ ಹೆಚ್ಚಿನಂಶ ಅನೇಕಾನೇಕರಿಗೆ ಲಭಿಸುವಂತಾಗಬೇಕಾಗುವುದು. ಆದುದರಿಂದ ಉಳಿತಾಯ ಕ್ಷೇತ್ರವೂ ವಿಸ್ತರಣೆಗೊಳ್ಳುವುದು. ಮಹಾತ್ಯಾಗದಿಂದ ಮಹತ್ಕಾರ್ಯ ಸಾಧ್ಯವಾಗುವುದು. 4800 ಕೋಟಿ ರೂಪಾಯಿಯ ಮಹಾ ಯೋಜನೆಯನ್ನು ನಾವು ಸ್ವಾಗತಿಸುವೆವಾದರೆ, ಇದಕ್ಕೆ ಬೇಕಾದ ಆರ್ಥಿಕ ಶಕ್ತಿಯನ್ನು ಒದಗಿಸುವ ಜವಾಬ್ದಾರಿ ತನಗಿಲ್ಲವೆಂದು ಯಾರೂ ನೆನಸಬಾರದು. ಐದು ವರುಷಗಳಲ್ಲಿ ನಾವು ಮಾಡಬೇಕಾಗಿರುವ ತ್ಯಾಗದ ಮೊತ್ತವೇ ಈ 4800 ಕೋಟಿ ರೂಪಾಯಿಯಾಗಿರುತ್ತದೆ. ಯೋಜನೆಗೆ ಸಾಕಷ್ಟು ಬೆಂಬಲ ಕೊಡದೆ ಅದರ ಪ್ರಯೋಜನವನ್ನು ಪಡೆಯುವ ಅರ್ಹತೆ ನಮಗಿಲ್ಲವೆಂದು ನಾವು ಮನಗಾಣಬೇಕು. ತೆರಿಗೆ, ಸಾಲ ಅಥವಾ ಕೊರತೆಯ ಆರ್ಥಿಕ ವ್ಯವಸ್ಥೆಯಿಂದ ಈ ಹಣ ಬರಬೇಕು. ಕೊರತೆಯ ಆರ್ಥಿಕ ಪದ್ಧತಿಯು ಮಾಯಾ-ಪರಿಹಾರವಾಗಿವಲ್ಲ. ಇದು ಇಂದಿಗಾಗಿ ಮುಂದಿನ ಭವಿಷ್ಯವನ್ನು ಅಡವಿಟ್ಟಂತೆಯೇ ಸರಿ.

ಈ ಸಾಹಸದಲ್ಲಿ ಪ್ರತಿಯೊಬ್ಬನೂ ಭಾಗಿಯಾಗುವಂತೆ ಮಾಡುವುದು ಅಗತ್ಯವೂ ಅನಿವಾರ್ಯವೂ ಆಗಿರುವುದು. ಇದಕ್ಕೆ ಚಿಕ್ಕಪುಟ್ಟ ಉಳಿತಾಯ ಯೋಜನೆಗಳು ಮಹತ್ವಪೂರ್ಣ ಪಾತ್ರವಹಿಸುವುವು. ಇಂತಹ ಉಳಿತಾಯದಿಂದ ಬರುವ ಹಣ ಸಂಗ್ರಹಣೆ ಪ್ರಧಾನವಲ್ಲ; ರಾಷ್ಟ್ರಾಭಿವೃದ್ಧಿಯ ಈ ಅದ್ಭುತ ಕೆಲಸದಲ್ಲಿ ತಾವೂ ಭಾಗಿಗಳೆಂಬ ಭಾವನೆ ಜನರಲ್ಲಿ ಹುಟ್ಟಿ, ಅದರಿಂದುಂಟಾಗುವ ಮಾನಸಿಕ ಪರಿವರ್ತನೆಯು ಅತ್ಯಮೂಲ್ಯವಾದುದು. ಅತಿ ಬಡವನಿಗೂ ದಿನ ದಿನ ಎರಡಾಣೆಯಷ್ಟು ಉಳಿಸಲು ಅನುಕೂಲವಾಗಿರುವ ನಮ್ಮ ಪಿಗ್ಮಿ ಯೋಜನೆ ಹಾಗೂ ಬೇಂಕಿನ ಸವಲತ್ತು ಪಡೆಯುವ ಅರ್ಹತೆ ಇಲ್ಲದ ಗ್ರಾಮಾಂತರ ಕೇಂದ್ರಗಳಲ್ಲಿ ಬೇಂಕಿನ ಶಾಖೆಗಳನ್ನು ತೆರೆದುದರ ಅನುಭವದಿಂದ ಈ ಕೆಲಸ ಕಷ್ಟವಲ್ಲವೆಂದು ನನಗೆ ಖಚಿತವಾಗಿರುವುದು.

ವಿಮಾ ವ್ಯವಸಾಯದ ರಾಷ್ಟ್ರೀಕರಣವು ಇತ್ತೀಚೆಗೆ ಆಯಿತು. ಎಷ್ಟೇ ಭವ್ಯವಾಗಿ ಈ ಕೆಲಸವನ್ನು ಖಾಸಗಿ ಉದ್ದಿಮೆಯವರು ಮಾಡಿರಬಹುದಾದರೂ, ಜನತೆಯ ಅಲ್ಪಾಂಶವನ್ನೂ ವಿಮೆ ಮುಟ್ಟಿರುವುದಿಲ್ಲ. ಮುದಿತನ, ಅಸ್ವಸ್ಥ, ನಿರುದ್ಯೋಗವೇ ಮೊದಲಾದ ವಿಸ್ತೃತ ಕ್ಷೇತ್ರದಲ್ಲಿ ಹಾಗೂ ಹೆಚ್ಚು ಹೆಚ್ಚಿನ ಜನರಿಗೆ ಈ ವಿಮಾ ಪ್ರಯೋಜನ ದೊರೆಯಬೇಕಾದರೆ, ಕಡ್ಡಾಯ ತೋರಿಸಿಯಾದರೂ ಕಾರ್ಯನಿರ್ವಹಿಸಲು ಸರಕಾರಕ್ಕೆನೇ ಸಾಧ್ಯ. ರಾಷ್ಟ್ರೀಯ ಅಥವಾ ಖಾಸಗಿ ಉದ್ಯಮವು ಪ್ರಜಾರಾಜ್ಯದಲ್ಲಿ ಒಂದಕ್ಕೊಂದು ಪೋಷಕವಾಗಿರುವುದು. ಆರ್ಥಿಕ ಸ್ವಾತಂತ್ರ್ಯ ಹಾಗೂ ಇದ್ದ ಆಸರೆಯ ಸಂಪೂರ್ಣ ಉಪಯೋಗವೇ ನಮ್ಮ ಗುರಿ. ಲಾಭದೃಷ್ಟಿಯೊಂದಿಗೆ, ಸೇವಾ ಧ್ಯೇಯವೂ ಇಲ್ಲವಾದರೆ ಇಂದಿನ ಕ್ರಾಂತಿಕಾರಕ ದಿನಗಳಲ್ಲಿ ಖಾಸಗಿ ಉದ್ದಿಮೆಯ ಅವನತಿಯಾಗುವುದು.

ಜನರ ಉಳಿತಾಯವನ್ನು ಸಂಗ್ರಹಿಸಲು ಬೇಂಕುಗಳು ಹೆಚ್ಚು ಹೆಚ್ಚಾಗಿ ಶ್ರಮಿಸಬೇಕಲ್ಲದೆ, ರಾಷ್ಟ್ರೀಯ ಯೋಜನೆಗೆ ಹಿತಕಾರಿಯಾಗುವ ರೀತಿಯಲ್ಲಿ ಅದನ್ನು ವಿನಿಯೋಗಿಸಬೇಕು. ಇದು ಸ್ವಯಂ ಪ್ರೇರಣೆಯಿಂದುಂಟಾಗಬೇಕು. ಬೇಂಕು ಠೇವಣಾತಿ ಬಡ್ಡಿದರದಲ್ಲಿ ಉದ್ದೇಶಪೂರ್ವಕವಾಗಿ ಸ್ಪರ್ಧೆ ಇರಕೂಡದೆಂದು ಸ್ಟೇಟ್ ಬೇಂಕಿನ ಅಧ್ಯಕ್ಷರು ಹೇಳಿದುದು ಸರಿ.

ಬೇಂಕುಗಳು ಹಾಗೂ ನೌಕರರೊಳಗಣ ಸಂಬಂಧವು ಅಭಿವೃದ್ಧಿಗೊಳ್ಳುತ್ತಿದೆಂಬುದು ಸಂತೋಷ. ಬೇಂಕಿನ ಖರ್ಚುವೆಚ್ಚ ಹೆಚ್ಚಾಗಿರುವುದನ್ನು ತೂಗಿಸಲು ಬೇಂಕಿನ ಸಿಬಂದಿಯವರ ಸಮರ್ಥ ಕಾರ್ಯತತ್ಪರತೆಯಿಂದ ಸಾಧ್ಯ. ಜವಾಬ್ದಾರೀ ಧುರೀಣತ್ವ, ಶಿಸ್ತು ಸಂಯಮ ಹಾಗೂ ಕಾರ್ಯಕುಶಲತೆಯನ್ನು ಹೆಚ್ಚಿಸಿಕೊಳ್ಳಲು ತಕ್ಕ ತರಬೇತಿಯನ್ನು ನೌಕರರ ಸಂಘದವರು ವ್ಯವಸ್ಥೆ ಮಾಡಲೆಂಬ ನಿರೀಕ್ಷೆ ಇಟ್ಟುಕೊಂಡರೆ ತಪ್ಪಾದೀತೆ? ನಮ್ಮ ಬೇಂಕಿನಲ್ಲಿ ಜನರಲ್ ಮೇನೆಜರ್ ಶ್ರೀ ಟಿ. ಎ. ಪೈಗಳ ನಿರ್ದೇಶನದಲ್ಲಿ ನಮ್ಮ ಸಿಬಂದಿಯವರು ಸಂಸ್ಥೆಯನ್ನು ಸುಭದ್ರವಾಗಿ ಕಟ್ಟಲು ಚೆನ್ನಾಗಿ ದುಡಿಯುತ್ತಿದ್ದಾರೆಂದು ಹೇಳಬಯಸುತ್ತೇನೆ.

ಜೈ ಹಿಂದ್!

ದಕ್ಷಿಣ ಕನ್ನಡ ಜಿಲ್ಲೆಯ ಸರಕಾರಿ ಖಾಲಿ ಸ್ಥಳಗಳ ಆಕ್ರಮಣದ ವರ್ಗಾವಣೆ: ರೆವಿನ್ಯೂ ಬೋರ್ಡಿನ ಹುಕುಮು— ಶ್ರೀ ಕೆ. ವೆಂಕಟ್ರಮಣ ಗೌಡ, ಎಂ. ಎಲ್. ಎ., ಪುತ್ತೂರು, ಅವರು ದಕ್ಷಿಣ ಕನ್ನಡ ಜಿಲ್ಲೆಯ ರೈತರ ಪರವಾಗಿ ಸರಕಾರಕ್ಕೆ ಮಾಡಿಕೊಂಡ ಮನವಿಯಲ್ಲಿ ಈ ಜಿಲ್ಲೆಯ ವಿಶೇಷ ರೀತಿಯ ಸ್ಥಿತಿಗತಿಗಳಿಗನುಗುಣವಾಗಿ ಭೂಮಿ ವರ್ಗಾವಣೆ ಸಂಬಂಧದ ಸಾಮಾನ್ಯ ನಿಯಮಗಳನ್ನು ಸಡಿಲಿಸಿ, ಶ್ರೀಮಂತರು ಮತ್ತು ಭೂಮಾಲಿಕರು ನಡಸಿದ ಸರಕಾರಿ ಸ್ಥಳಗಳ ಆಕ್ರಮಣವನ್ನು ವರ್ಗಾವಣೆ ಮೂಲಕ ಕಾನೂನು ಬದ್ಧಗೊಳಿಸಬೇಕೆಂದು ಕೇಳಿಕೊಂಡಿದ್ದರು. ಸರಕಾರವು ದ. ಕ. ಜಿಲ್ಲಾ ಕಲೆಕ್ಟರರೊಡನೆ ಮತ್ತು ರೆವಿನ್ಯೂ ಬೋರ್ಡಿನೊಡನೆ ಪರ್ಯಾಲೋಚಿಸಿ, ಈ ವಿಷಯವನ್ನು ಪರಿಶೀಲಿಸಿ ಇದೇ ಮಾರ್ಚ್ ತಾ. 8ರಲ್ಲಿ ಈ ಕೆಳಗಿನ ಹುಕುಮುಗಳನ್ನು ಜ್ಯಾರಿ ಮಾಡಿರುವುದು:— (1) ವರ್ಗಾವಣೆಗೆ ಸಾಮಾನ್ಯ ಪ್ರತಿಬಂಧ ಬಿದ್ದ ತಾ. 2—3—1943ರೊಳಗೆ ಆದ ಸ್ಥಳಾಕ್ರಮಣಗಳ ಸಂಬಂಧದಲ್ಲಿ:— ಪ್ರತಿಯೊಂದೂ 5 ಎಕ್ರೆಗಳಿಗೆ ಮೀರಬಾರದೆಂಬ ಶರ್ತಕ್ಕೊಳಪಟ್ಟು (ಭೂಮಿಯ ಮೌಲ್ಯ ವೃದ್ಧಿ ಇರಲಿ, ಇಲ್ಲದಿರಲಿ) ಆಕ್ರಮಿತ ಭೂಮಿಯನ್ನು ಮಾರ್ಕೆಟ್ ಧಾರಣೆಯ ಬೆಲೆ ಪಡಕೊಂಡು ಆಕ್ರಮಣಗಾರರಿಗೆ - ಸಾಮಾನ್ಯ ನಿಯಮಗಳನ್ವಯ ಇಂತಹ ವರ್ಗಾವಣೆ ಅರ್ಹವಿದ್ದರೂ, ಅನರ್ಹವಿದ್ದರೂ— ವರ್ಗಾವಣೆ ಮಾಡಬಹುದು. (2) ವರ್ಗಾವಣೆಗೆ ಪ್ರತಿಬಂಧವಿದ್ದ ತಾ. 2.3.1943ರ ನಂತರ ಆದರೆ ಆ ಸಾಮಾನ್ಯ ಪ್ರತಿಬಂಧರದ್ದಾದ ತಾ. 11—6—1949ರ ಒಳಗೆ ಆದ ಸ್ಥಳಾಕ್ರಮಣಗಳ ಸಂಬಂಧದಲ್ಲಿ:- ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕಾಗಿ ಈ ಸ್ಥಳಗಳು ಮೂಲತಃ ಗೇಣಿಗೆ ಕೊಡಲ್ಪಟ್ಟಿದ್ದರೆ ಮತ್ತು ಗೇಣಿ ಅನುಭೋಗದ ವಾಯಿದೆ ಮುಗಿದ ಮೇಲೂ ಅನಧಿಕೃತವಾಗಿ ಅದರ ಅನುಭೋಗ ನಡೆದಿದ್ದರೆ ಅಂತಹ ಸಂದರ್ಭಗಳಲ್ಲಿ 5 ಎಕ್ರೆಗಳ ಪರಮಾವಧಿ ಮಿತಿಗೊಳಪಟ್ಟು ಸ್ಥಳವು ಮೌಲ್ಯವೃದ್ಧಿ ಇರಲಿ ಇಲ್ಲದಿರಲಿ ಸಾಮಾನ್ಯ ನಿಯಮಾಮೋರೆಗಳು (ಕ್ರಮಬದ್ಧವಿರಲಿ ಇಲ್ಲದಿರಲಿ) ಮಾರ್ಕೆಟ್ ಮೌಲ್ಯವನ್ನು ಪಡಕೊಂಡು ಆಕ್ರಮಿತ ಸ್ಥಳಗಳನ್ನು ಆಕ್ರಮಿಸಿದವರಿಗೆ ವರ್ಗಾವಣೆ ಮಾಡಬಹುದು.

ಈ ಸ್ಥಳಗಳನ್ನು ಆಕ್ರಮಣಗಾರರು ಸ್ವೇಚ್ಛೆಯಿಂದ ಆಕ್ರಮಿಸಿ ಕೊಂಡಿದ್ದಿರುವ ಸಂದರ್ಭದಲ್ಲಿ ಮೇಲ್ಗಡೆ ನಮೂದಿಸಿದ ನಿಯಮ ಮತ್ತು ಶರ್ತಗಳಿಗನುಸಾರವಾಗಿ 5 ಎಕ್ರೆಯೊಳಗಿನ ಭೂಮಿಯನ್ನು ಐದು ಮಾರ್ಕೆಟು ಮೌಲ್ಯ ಪಡಕೊಂಡು ವರ್ಗಾವಣೆ ಮಾಡಬಹುದು. ಸಂಬಂಧಪಟ್ಟ ಸ್ಥಳದ ಸ್ವರೂಪ ಮತ್ತು ಆಕ್ರಮಣಗಾರರಲ್ಲಿರುವ ಮೌಲ್ಯ ತೆರುವ ಯೋಗ್ಯತೆಯನ್ನು ಗಮನಿಸಿ ಐದರ ಮಾರ್ಕೆಟು ಧಾರಣೆಯನ್ನು ನಿರ್ಧರಿಸಲಾಗುವುದು. (3) ಸಾಮಾನ್ಯ ಪ್ರತಿಬಂಧ ರದ್ದಾದ ತಾ. 11—6—1949ರ ನಂತರ ನಡೆದ ಸ್ಥಳಾಕ್ರಮಣಗಳ ಸಂಬಂಧದಲ್ಲಿ:— ಇಂತಹ ಸಂದರ್ಭಗಳಲ್ಲಿ ಆಕ್ರಮಣಗಾರರು ಶ್ರೀಮಂತರು ಮತ್ತು ಭೂಮಿಯುಳ್ಳವರಾಗಿದ್ದರೆ ಅವರಿಗೆ ಯಾವ ರಿಯಾಯತಿಯನ್ನೂ ತೋರಿಸುವ ಅಗತ್ಯವಿಲ್ಲ. ಆಕ್ರಮಣಗಾರರಿಗೆ ಒಪ್ಪಬಹುದ ಸ್ಥಳವೆಂಬುದಕ್ಕಾಗಿ ಸರಿಯಾದ ಕಾರಣಗಳ ಮೇಲಿಂದ ಈ ಕೆಳಗಡೆ ನಮೂದಿಸಿರುವ ಶರ್ತಗಳಿಗೊಳಪಟ್ಟು ಜಿಲ್ಲಾ ಕಲೆಕ್ಟರರು ವರ್ಗಾವಣೆ ನಡೆಸಬಹುದೆಂದು ನಿರ್ಧರಿಸುವ ಸಂದರ್ಭಗಳನ್ನು ಬಿಟ್ಟರೆ ಇಂತಹ ಆಕ್ರಮಣಗಳನ್ನು ರದ್ದು ಪಡಿಸಬೇಕು. ವರ್ಗಾವಣೆ ಮಾಡುವ ವಿಶೇಷ ಸಂದರ್ಭಗಳಲ್ಲಿ ಪಾಲಿಸಬೇಕಾದ ಶರ್ತಗಳೆಂದರೆ (1) ವರ್ಗಾವಣೆ ಹೊಂದುವ ಭಾಗವು 5 ಎಕ್ರೆಗೆ ಮೀರಬಾರದು. (2) ಇಮ್ಮಡಿ ಮಾರ್ಕೆಟು ಮೌಲ್ಯಗಳನ್ನು ಅಂಥವರಿಂದ ಪಡಕೊಳ್ಳಬೇಕು; (3) ಶ್ರೀಮಂತರು ಮತ್ತು ಭೂಮಿಯುಳ್ಳ ಜನರಿಂದಾದ ಪ್ರಚಲಿತ ಆಕ್ರಮಣಗಳ ಪಟ್ಟಿಗೆ ಮಾತ್ರ ಈ ರಿಯಾಯತಿ ಅನ್ವಯಿಸಬೇಕು. ಈ ಹುಕುಂ ಜಾರಿಯನಂತರ ಮಾಡಲ್ಪಡುವ ಯಾವ ಸ್ಥಳಾಕ್ರಮಣಕ್ಕೂ ಮೇಲ್ಕಾಣಿಸಿರುವ ರಿಯಾಯತಿ ಸಿಗಬಾರದು. (4) ರಿಜರ್ವ್ ಕಾಡುಗಳ ಪಕ್ಕದ ಸ್ಥಳಾಕ್ರಮಣ ಸಂಬಂಧದಲ್ಲಿ:— ರಿಜರ್ವ್ ಕಾಡುಗಳಿಗೆ ತಾಗಿರುವ 50 ಯಾರ್ಡುಗಳಷ್ಟು ಒತ್ತು ಸ್ಥಳವು ಸಂಪೂರ್ಣವಾಗಿ ಆಕ್ರಮಣರಹಿತವಾಗಿರಬೇಕು; ಈ ಗಡಿಯ ಆಕ್ರಮಣವನ್ನು ತೆಗೆದು ಹಾಕತಕ್ಕದ್ದು; ಈ 50 ಗಜದಷ್ಟು ವಿಸ್ತೀರ್ಣದ ಒತ್ತು ಸ್ಥಳದ ಹೊರಗಿನ ಭೂಮಿಗಳನ್ನು ಸಂಬಂಧಪಟ್ಟ ಜಿಲ್ಲಾ ಫೋರೆಸ್ಟ್ ಆಫೀಸರರೊಡನೆ ಆಲೋಚಿಸಿ ಮೇಲ್ಗಡೆ ನಮೂದನೆಗೊಂಡಿರುವ 1 _ 3 ವಾಕ್ಯಗಳ ನಿಯಮಾನುಸಾರ ವ್ಯವಸ್ಥೆ ಮಾಡಬಹುದು.

ಮೇಲ್ಗಡೆ ನಮೂದಿಸಿರುವ ಮೇರೆಗೆ ಕಾರ್ಯಾಚರಣೆ ಕೈಕೊಳ್ಳುವಂತೆ ಕಲೆಕ್ಟರರನ್ನು ವಿಜ್ಞಾಪಿಸಿಕೊಳ್ಳಲಾಗಿದೆ.

(೧ನೇ ಪುಟದಿಂದ)

ಎಂದು ಮುಂತಾದ ಆರ್ಥಿಕ ಮಹತ್ವದ ವಿಷಯಗಳನ್ನು ಅಂಕೆ ಸಂಖ್ಯೆಗಳಬಲದಿಂದ ಸೂಕ್ತವಾಗಿ ಕ್ರೋಢೀಕರಿಸುವುದು ಕಷ್ಟವಾಗಿ ಪರಿಣಮಿಸಿದೆ—ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ಆದುದರಿಂದ ಸುಧಾರಣೆಯು ಅಂತಃ ಕರಣಪೂರ್ವಕವಾಗಿ ನಡೆಯಬೇಕೇ ಹೊರತು, ಶಾಸನದ ಬಲದಿಂದ ನಡೆದರೆ ಅದು ಪರಿಣಾಮಕಾರಿಯಾಗಲಾರದು. ವ್ಯಕ್ತಿಗಳ ಶ್ರೇಯಸ್ಸು ಜಾತಿಯನ್ನು ಕಲವಟ್ಟಿಗೆ ಅವಲಂಬಿಸಿರುವಷ್ಟು ಕಾಲ ಜಾತೀಯತೆಗೆ ಮಹತ್ವ ಬಂದೇ ಬರುತ್ತದೆ. ಆದರೆ ಜಾತಿಭೇದವಿದೆ ಎಂದ ಮಾತ್ರಕ್ಕೆ ಸಮಾಜವು ಅದರ ವಿಷಪೂರಿತ ಅಂಶಗಳನ್ನೆ ವ್ಯವಹಾರದಲ್ಲಿ ಗುರುತಿಸಬೇಕೆಂದಿಲ್ಲ-ಒಳ್ಳೆಯ ಅಂಶಗಳನ್ನು ಮಾತ್ರ ಗ್ರಹಿಸಿ ಅವುಗಳನ್ನು ಹೆಚ್ಚು ಹೆಚ್ಚಾಗಿ ಬೆಳಕಿಗೆ ತಂದು ಪರಸ್ಪರ ದ್ವೇಷಕ್ಕೆ ಎಡೆಯಿಲ್ಲದಂತೆ, ಇಡೀ ಸಮಾಜವೇ ಮುಂದರಿಯುವಂತೆ ಸುಧಾರಕರು ಮಾಡಬೇಕು. ಸಮಾಜವು ಜಾತಿಗಳಲ್ಲಿ ಒಡೆಯಬಾರದು ಎನ್ನುವುದರ ಅರ್ಥವು ಜಾತಿಯು ಕೆಟ್ಟ ಪರಿಣಾಮವನ್ನು ಸಮಾಜದ ಮೇಲೆ ಮಾಡಬಾರದೆಂದು ಮಾತ್ರ ಆಗಿರುತ್ತದೆ. ಹೆಚ್ಚಿನ ಸಹಾನುಭೂತಿ, ಸಹೃದಯತೆ ಸೌಜನ್ಯಗಳನ್ನು ಎಲ್ಲ ವರ್ಗಗಳೂ ತೋರಿಸಿ ಪರಸ್ಪರ ಸಹಕರಿಸಿದುದಿದರೆ ಆಗ ಜಾತೀಯ ಭಾವನೆಯು ತಳದಲ್ಲಿ ನಿಲ್ಲುತ್ತದೆ. ಇದಕ್ಕೆ ಕೆಲವು ಹಲವಾರುಗಳ ಬಿಡುವಿಲ್ಲದ ಪರಿಶ್ರಮವೇ ಬೇಕಾದೀತು.

ಉತ್ತಮ ಕೃಷಿಗಾರ
ಶ್ರೀ ಕಾಪು ಮುದ್ದಣ್ಣ ಶೆಟ್ಟರ ನಿಧನ

ಕಾಪು ಭಾರತ ಇಂಡಸ್ಟ್ರಿಯಲ್ ಎಂಡ್ ಕೇನಿಂಗ್ ಕಂಪೆನಿಯ ಸ್ಥಾಪಕಾಧ್ಯಕ್ಷ ಶ್ರೀ ಕಾಪು ಮುದ್ದಣ್ಣ ಸೆಟ್ಟರು ಇದೇ ತಾ. 14 ರಲ್ಲಿ ತನ್ನ 66ನೇ ವಯಸ್ಸಿನಲ್ಲಿ ಪರಲೋಕವಾಸಿಗಳಾದರೆನ್ನಲು ವಿಷಾದಿಸುತ್ತೇವೆ. ಶ್ರೀ ಸೆಟ್ಟರು ಆದರ್ಶ ಕೃಷಿಗಾರರಿದ್ದು, ಈ ಜಿಲ್ಲೆಯ ಉತ್ತರ ಭಾಗದಲ್ಲಿ 'ಚಿಕ್ಕು' ಹಣ್ಣಿನ ಬೆಳವಣಿಗೆಗೆ ಅವರು ಕಾರಣರಾಗಿದ್ದರು. 1914ರಲ್ಲಿ "ನರ್ಸರಿ ಗಾರ್ಡನ್ಸ್" 1917ರಲ್ಲಿ ದಂಡತೀರ್ಥ ಹಾ। ಎ। ಶಾಲೆಯನ್ನು ಸ್ಥಾಪಿಸಿದ್ದರಲ್ಲದೆ ತಾಲೂಕು ಬೋರ್ಡು ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲು ಸಹಕಾರ ಸಂಘ, ಕಾಂಗ್ರೆಸ್ ಸಂಸ್ಥೆ ಮೊದಲಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ತನ್ನ ಕೈಲಾದ ಸೇವೆಯನ್ನು ಸಲ್ಲಿಸಿದ್ದರು. ಇವರು ಕಾಂಗ್ರೆಸ್ ಮನೋವೃತ್ತಿಯವರಾಗಿದ್ದರು. ಅವರ ಅಗಲುವಿಕೆಯಿಂದುಂಟಾದ ಅವರ ಕುಟುಂಬದ ಸಹಸಂತಾಪವನ್ನು ಸೂಚಿಸಿ ದಿವಂಗತ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 20/1956

ವಾದಿ— ಮಂಜಯ್ಯ ಸೆಟ್ಟಿ

ಪ್ರತಿವಾದಿಗಳು— 1 ವೆಂಕಪ್ಪ ಸೆಟ್ಟಿ, 2 ನರಸಿಂಹ ಸೆಟ್ಟಿ, 3 ರಾಮಯ್ಯ ಸೆಟ್ಟಿ ಬೈಲಮನೆ ಚಂದಮ್ಮ ಸೆಡ್ತಿ ಮಕ್ಕಳು. ಕುಂದಾಪುರ ತಾಲ್ಲೂಕು ಆನಗಳ್ಳಿ ಗ್ರಾಮದಲ್ಲಿರುವವರು

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ-

ನೀವು ವಾದಿಗೆ ತಾ. 9-7-51ರಲ್ಲಿ ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ವಾದಿಗೆ ಬರತಕ್ಕ ಪಣ ಬಡ್ಡಿ ರೂಪಾಯಿ 513_0-0 ಕ್ಕೆ ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆಯು ತಾ. 28—3—1956ಕ್ಕೆ ತನಿಗೆ ಇಟ್ಟಿರುತ್ತದೆ ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪವಿದ್ದರೆ ಆ ದಿನದ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ಜ್ವಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

(By order of the court)

Y. Tejappa Shetty
Advocate for plff.

Coondapoor 18—3—1956

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಂದ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕಥಾ ನಟಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ನಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No 466 N/50 dated 12-12-1950 of the Director of public Instructions Madras.

ಪಾತ್ರೆ ಚಿನ್ನದ ನೆಕ್‌ಲೇಸ್, ತರಹೆವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkpet, UDIPI S. Kanara.

ಫೋನ್ ನಂಬ್ರ 66

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಿಗೆ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ

ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-

(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA-40

ಸ್ಟಾಕಿಸ್ಟರು: ಶಾ ಕಂಪೆನಿ, ಮಂಗಳೂರು—1.

ಭಾರತದ ಮುಂದಿರುವ ಸಮಾಜವಾದಿ ಆದರ್ಶ

(೨ನೇ ಪುಟದಿಂದ)

ಲು ಕಟ್ಟುಬದ್ಧವಾಗಿರುವಂತೆ ಕಂಡು ಬಂದರೂ ಈ ಹೋರಾಟವು ಮುಂದರಿದಿದೆಯೇ ಹೊರತು ಕುಟುಂಬಗಳ ಸಂಪೂರ್ಣ ನಾಶವಿನ್ನೂ ಆಗಿಲ್ಲ. ನಿಶ್ಶಕ್ತರನ್ನೂ ಸಾಮಾಜಿಕ ಪೀಡೆಗೊಳಗಾದವರನ್ನೂ ತನ್ನ ಆಶ್ರಯದಲ್ಲಿಟ್ಟು ರಕ್ಷಿಸುವ ಉತ್ತಮ ಕೆಲಸವನ್ನು ಕುಟುಂಬ ಪದ್ಧತಿಯು ಮಾಡುತ್ತದೆ; ಅಲ್ಲದೆ ತನ್ನ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಎಲ್ಲ ಸದಸ್ಯರ ಗುಣಶೀಲ ನಡತೆಗಳ ಜವಾಬ್ದಾರಿಕೆಯನ್ನು ಅದು ವಹಿಸಿಕೊಳ್ಳುತ್ತದೆ. ಯೋಗ್ಯ ಶಿಕ್ಷಣ ಮತ್ತು ಸಂಸ್ಕಾರಗಳನ್ನೂ ಕುಟುಂಬವು ತನ್ನ ಸದಸ್ಯರಿಗೂ ಅವರ ಮಕ್ಕಳಿಗೂ ನೀಡುತ್ತದೆ. ಇದರಿಂದಾಗಿ ವ್ಯಕ್ತಿಯ ಜೀವನದಲ್ಲಿ ಒಂದು ಬಗೆಯ ಭದ್ರತೆಯೂ ಅದಕ್ಕಿಂತ ಹೆಚ್ಚಾಗಿ ಆತ್ಮೀಯತೆಯಿಂದ ಪೋಷಣೆಗೊಂಡ ನೆಮ್ಮದಿಯ ಭಾವನೆಯೂ ಬೇರೂರಿದೆ. ಖಾಸಗಿ ಆಸ್ತಿ ಮತ್ತು ಸೊತ್ತುಗಳ ಮೇಲಿನ ಅಧಿಕಾರವನ್ನೂ, ಉತ್ತರಾಧಿಕಾರದ ಕ್ರಮಗಳನ್ನೂ ಬದಲಾವಣೆ ಮಾಡುವುದು ಅಥವಾ ಕಿತ್ತುಕೊಳ್ಳುವುದೆಂದರೆ, ಕುಟುಂಬ ಪದ್ಧತಿಯು ತನ್ನ ಕೆಲಸವನ್ನು ಮುಂದರಿಸದಂತೆ ತಡೆಯುವುದೇ ಎಂದರ್ಥ. ಆದುದರಿಂದ ಸಮಾಜವಾದಿ ಆದರ್ಶದ ಬೆನ್ನಿಗೆ ಬಿದ್ದು ನಾವು ಅಪಾಯಕರ ಪರಿಸ್ಥಿತಿಯನ್ನು ಎದುರಿಸುವುದು ಅವೇಕ್ಷಣೀಯವೇ ಎಂಬ ಸಂಶಯಕ್ಕೆ ಸಮಾಧಾನ ಅತ್ಯವಶ್ಯ.

ನಿಯಂತ್ರಣ ಕ್ರಮ

ಖಾಸಗಿ ಆಸ್ತಿಪಾಸ್ತಿಯ ಮೇಲಿನ ಅಧಿಕಾರವನ್ನು ಕಿತ್ತೊಗೆದ ದೇಶಗಳು ಆರ್ಥಿಕ ಸಮಾನತೆಯನ್ನು ರೂಢಿಸುವುದಕ್ಕಾಗಿ ಬಹಳ ಹೆಚ್ಚಿನ ಬೆಲೆಯನ್ನು ತೆರಬೇಕಾಯಿತು. ಔದ್ಯಮೀಕರಣವು ಕುಟುಂಬಗಳು ಅನಿವಾರ್ಯವಾಗಿಒಡೆದು ಬೇರ್ಪಡುವಂತೆ ಹಾಗು ಕೌಟುಂಬಿಕ ನಿಯಮ ಪಾಲನೆಗಳು ಕಷ್ಟಸಾಧ್ಯವಾಗುವಂತೆ ಹಾಗು ಜಾತೀಯ ಬಂಧನದ ಬಿಗಿಯು ತೀರ ಶಿಥಿಲವಾಗುವಂತೆ ಮಾಡಿರುವುದನ್ನು ಕಡೆಗಣಿಸುವುದು ತಪ್ಪಾದರೂ ಆರ್ಥಿಕ ಸಮಾನತೆಗಾಗಿ ಅನುಸರಿಸಿದ ಹೊಸ ದಾರಿಯು ಮಾನಸಿಕ ಕ್ಷೋಭೆಗೂ ಪರಿಣಾಮದಲ್ಲಿ ನೈತಿಕ ಅಧೋಗತಿಗೂ ಜನರನ್ನು ತಂದಿಳಿಸಿತು ಎಂಬುದು ಸುಳ್ಳಲ್ಲ. ಆದುದರಿಂದ ಕುಟುಂಬ ಪದ್ಧತಿಯನ್ನು ಬುಡಸಹಿತ ಕಿತ್ತುಹಾಕುವುದೆಂದರೆ ನೆಮ್ಮದಿಯಿಲ್ಲದ ಬಾಳ್ವೆಯನ್ನು ಜನರ ಮೇಲೆ ಹೇರುವುದೆಂದಾಗುತ್ತದೆ. ಆದುದರಿಂದ ಕುಟುಂಬ ಪದ್ಧತಿಯನ್ನು ತೀರ ನಾಶ ಮಾಡದೆ, ಅದರ ವಿಷಕ್ತಕೊಂಡಿಗಳನ್ನು ಮಾತ್ರ ಸಾಮಾಜಿಕ ಹಿತದ ದೃಷ್ಟಿಯಿಂದ ತೆಗೆಯುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬೆಲೆ ಬರತೊಡಗಿದೆ.

ಸಾಧನೆಯ ಬಗೆ

ಇದನ್ನು ಹೇಗೆ ಸಾಧಿಸಬಹುದು? ಈ ಕಾಲದಲ್ಲಿ ಕೌಟುಂಬಿಕ ರಕ್ಷಣೆಯು ಹೆಸರಿಗಷ್ಟೇ ಇದ್ದಿತು; ಮಧ್ಯಮ ವರ್ಗದ ಬುದ್ಧಿವಂತರು ಈಗ ಸ್ಥಿರವಾದ ನೆಲೆಯಿಲ್ಲದೆ ತಮ್ಮನ್ನೈಯಕ್ತಿಕ ಸಂಸಾರದ ಚಿಂತೆಯನ್ನಷ್ಟೇ ಕಟ್ಟಿಕೊಂಡು ತಿರುಗಾಡುವವರಾಗಿದ್ದಾರೆ; ಪ್ರಾಚೀನ ಶ್ರೀಮಂತ ಮನೆತನಗಳು ಮಾತ್ರ ಕೌಟುಂಬಿಕ ಪದ್ಧತಿಯನ್ನು ಅನುಚಾನವಾಗಿ ಉಳಿಸಿಕೊಂಡು ಬರುತ್ತಿವೆ. ಆದರೆ ಅಲ್ಲಿ ವ್ಯಕ್ತಿಗತ ಚಟುವಟಿಕೆಯು ಉತ್ಪಾದಕ ಕಾರ್ಯ ಕ್ಷೇತ್ರಗಳಲ್ಲಿ ನಡೆಯುತ್ತಿಲ್ಲದ ಕಾರಣ, ತಮ್ಮ ವೈಭವ ಹಾಗು ವಿಲಾಸಮಯ ಜೀವನಕ್ಕಾಗಿ ಆ ಕುಟುಂಬದ ನೆರಳಿನಲ್ಲಿ ಜೀವಿಸುವ ವ್ಯಕ್ತಿಗಳು ಶೋಷಣೆ ಮತ್ತು ಪೀಡನೆಗಳ ಮಾರ್ಗ ಹಿಡಿದು ನಡೆದಿದ್ದಾರೆ. ಹೀಗಾಗಿ ಭೂಮಾಲಿಕ ವರ್ಗವು ಬೇಸಾಯಗಾರರಿಂದ ಮಿತಿಮೀರಿದ ಗೇಣಿಯನ್ನು ಕೇಳುತ್ತದೆ; ಭಂಡವಾಳವಾದಿ ವರ್ಗವು ಅಗ್ಗ ಕೂಲಿಯನ್ನು ಕೊಟ್ಟು ಕೆಲಸಗಾರರನ್ನು ದುಡಿಸುತ್ತದೆ. ಭೂಕಂದಾಯ ಹಾಗು ತೆರಿಗೆಗಳು ಸರಕಾರದ ಮುಖ್ಯ ಆದಾಯ ಸ್ರೋತವಾಗಿರುವುದರಿಂದ ಈ ವರ್ಗದೊಡನೆ ಅಪ್ರೀತಿ ಅಥವಾ ಕಲಹವು ಸರಕಾರದ ಸ್ಥೈರ್ಯಕ್ಕೆ ಒಂದು ಬಗೆಯ ಆಹ್ವಾನವಾಗಿದೆ. ಇದನ್ನು ಕಲ್ಯಾಣ ರಾಷ್ಟ್ರವನ್ನು ಕಟ್ಟಬೇಕೆನ್ನುವ ಸರಕಾರವು ಎದುರಿಸಿ ಯಶಸ್ಸುಗಳಿಸೀತೆ?

ಯಶಸ್ವಿ ಕ್ರಮ

ನೆಹರುಗಳ ಕೈಯಲ್ಲಿ ಭದ್ರವಾಗಿರುವ ಸರಕಾರವು ಯಶಸ್ಸಿನ ಆಸೆಯನ್ನು ಹೆಚ್ಚು ಹೆಚ್ಚಾಗಿ ಹುಟ್ಟಿಸಿರುತ್ತದೆ. ಕುಟುಂಬದ ಮೂಲರಚನೆಯನ್ನು ನಾಶಪಡಿಸದೆ ಅಲ್ಲಿ ಕೇಂದ್ರೀಕೃತವಾಗಿರುವ ಅಧಿಕಾರ, ದರ್ಪ ಹಾಗು ಸಮಾಜ ಘಾತಕ ಪ್ರವೃತ್ತಿಗಳ ನಿಯಂತ್ರಣ ಅಥವಾ ಉದಾತ್ತೀಕರಣವನ್ನಷ್ಟೆ ಮಾಡಿ ಧ್ಯೇಯ ಸಾಧಿಸಬಹುದೆಂಬ ಭರವಸೆ ಈಗ ಮೂಡಿರುತ್ತದೆ. ಉತ್ತರಾಧಿಕಾರ ಪ್ರಾಪ್ತಿಗಾಗಿ ತೆರಿಗೆ ಕೊಡಬೇಕೆಂಬ ನಿರ್ಬಂಧ, ಅಧಿಕ ಆದಾಯದ ಮೇಲೆ ತೆರಿಗೆ, ಭೂಸ್ವಾಮಿತ್ವವನ್ನು ಉಳುವ ರೈತನಿಗೆ ವಹಿಸಿ ಕೊಡುವುದು, ಅಥವಾ ನ್ಯಾಯವಾದ ಗೇಣಿಯನ್ನಾದರೂ ನಿರ್ಣಯಿಸುವುದು ಇತ್ಯಾದಿ ಕ್ರಮಗಳು ಕೆಲವೇ ಮಂದಿ ವಿಶಿಷ್ಟ ಹಿತಾಸಕ್ತಿಯುಳ್ಳ ಗುಂಪುಗಳ ವರ್ಚಸ್ಸು ಮತ್ತು ದೈವಾಡವನ್ನು ತಗ್ಗಿಸಿ, ಆರ್ಥಿಕ ಕ್ಷೇತ್ರದ, ಉತ್ಪಾದನೆಯ ಮುಖ್ಯ ಸಾಧನದ, ಚಟುವಟಿಕೆಯಲ್ಲಿ ಜನಸಾಮಾನ್ಯರ ಪಾತ್ರಕ್ಕೆ ಹೆಚ್ಚು ಮಹತ್ವವೂ ಮೂಲ್ಯವೂ ಬರುವಂತೆ ಮಾಡಿರುತ್ತವೆ; ಅಲ್ಲದೆ ವಿಷಮತೆಯ ನಿವಾರಣೆಯ ದಿಸೆಯಲ್ಲಿಟ್ಟ ಪ್ರಾಮುಖ್ಯ ಹೆಜ್ಜೆಗಳಾಗಿ ಪರಿಣಮಿಸಿರುತ್ತವೆ.

(ಸಶೇಷ)

ಆದರ್ಶ ವಸತಿ ನಿಲಯ



ಪಾಕಿಸ್ತಾನದ ಸರಕಾರವು ಜನಗಳ ಗಂಟೆತನವನ್ನೂ ತಂಟೆಕೋರತನವನ್ನೂ ಪ್ರೋತ್ಸಾಹಿಸಿ ಜನಜೀವನವನ್ನು ಅಶಾಂತಿಯಿಂದ ತುಂಬಿರುವಂತೆ ಮಾಡುವ ತಂತ್ರಗಳನ್ನು ಅನುಸರಿಸುತ್ತಿರುವಾಗ ಇತ್ತ ಭಾರತ ಸರಕಾರವು ಸ್ವಾತಂತ್ರ್ಯೋತ್ತರದಲ್ಲಿ ಜನರನ್ನು ಅಭಿವೃದ್ಧಿ ಮತ್ತು ಪ್ರಗತಿಯ ಪಥದಲ್ಲಿ ಮುನ್ನಡೆಸುತ್ತಲಿದೆ-- ಅನ್ನ, ಬಟ್ಟೆ ಮತ್ತು ವಸತಿಯೆಂಬ ಮೂಲಭೂತ ಆವಶ್ಯಕತೆಗಳನ್ನು ಪೂರೈಸಲು ಅದು ತನ್ನೆಲ್ಲ ಸಾಧನ ಸಂಪತ್ತುಗಳನ್ನೂ ಬುದ್ಧಿವಂತಿಕೆಯನ್ನೂ ಉಪಯೋಗಿಸುತ್ತಲಿದೆ. ಮೊದಲನೇ ಯೋಜನೆಯ ಅವಧಿಯಲ್ಲಿ ಅನ್ನ ಮತ್ತು ಬಟ್ಟೆಯ ಕ್ಷಾಮ ತೊಲಗಿದೆ-- ವಸತಿಯ ಸಮಸ್ಯೆಯೊಂದು ಪರಿಹಾರವಾಗದೆ ಉಳಿದಿದೆ. ಸರಕಾರವು ಸಹಕಾರಿ ತತ್ವದ ಮೇಲಿಂದ ದೀರ್ಘಾವಧಿ ಸಾಲಗಳನ್ನು ಕಡಿಮೆ ವರಮಾನವುಳ್ಳ ನಾಗರಿಕರಿಗೆ ಕೊಡುತ್ತಿದೆಯಲ್ಲದೆ, ಮುಂಬಯಿಯಂಥ ಪ್ರಮುಖ ಪಟ್ಟಣಗಳಲ್ಲಿ ಸ್ವಂತ ಭವನಗಳನ್ನು ಜನರ ವಸತಿಗಾಗಿ ನಿರ್ಮಿಸಿದೆ. ಚಿತ್ರದಲ್ಲಿರುವುದು ಪಂಜಾಬಿನ ಹೊಸ ರಾಜಧಾನಿಯಾದ ಚಂಡೀಘಡದಲ್ಲಿ ಮಂತ್ರಿಗಳಿಗಾಗಿ ಕಟ್ಟಿಸಿದ ಭವ್ಯ ಗೃಹದ ನೋಟ-- ಮಂತ್ರಿಗಳಲ್ಲದವರಿಗೂ ಇಂಥದೇ ಮನೆಗಳು ದೊರೆತರೆ ನಮ್ಮ ಪ್ರಯತ್ನ ಸಾರ್ಥಕವಾಗುತ್ತದೆ.

ದಿ. ಮುಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಏಲಂ ನೋಟೀಸು.

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಮಹಾಶಯರು ನಮ್ಮ ಬೇಂಕಿನಿಂದ ಚಿನ್ನಾಭರಣ ಅಡವಿನಲ್ಲಿ ಸಾಲ ಪಡಕೊಂಡು ದೀರ್ಘಕಾಲದಿಂದ ಅಸಲು ಬಡ್ಡಿಯನ್ನು ಬಾಕಿಮಾಡಿರುವುದರಿಂದ, ರಿಜಿಸ್ಟ್ರಿ ನೋಟೀಸು ಕೊಟ್ಟರೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ, ಸದ್ರಿಯವರ ನಗಗಳನ್ನು ತಾ. 14 4 1956 ನೇ ಶನಿವಾರ ಬೆಳಗ್ಗೆ ಗಂಟೆ 10ಕ್ಕೆ, ಯಾ ತದನಂತರ ಯುಕ್ತಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
27/50	ರಾಬು ಸಾಹೇಬ್, S/o ಅಲಿ ಸಾಹೇಬ್, ಹಳೆಯಂಗಡಿ.	30/-
403/52	H. K. ಶೇಕಪ್ಪ, S/o ಮ್ಯಾಥಿಸ್ ಬ್ಯಾರಿ, ಹಳೆಯಂಗಡಿ	40/-
519/52	ತಿಂಡ ಪೂಜಾರಿ, S/o ಕೋಟಿ ಪೂಜಾರಿ ನಟ್ಟಮನೆ, ಹೆಜಮಾಡಿ.	65/-
495/53	ಕೆ. ಎಂ. ಶಿವಣ್ಣ ಶೆಟ್ಟಿ S/o ಕೆ. ಶ್ಯಾಮ ಶೆಟ್ಟಿ ತೆಂಗಾಳಿಮನೆ, ಪಂಜಿನಡ್ಕ, ಮುಲ್ಕಿ.	60/-
751/53	ಬಾಬು ಮೇಸ್ತ್ರಿ, ಗೇರುಕಟ್ಟೆ ಮುಲ್ಕಿ.	18/-
946/53	ಶೀನ ಶೆಟ್ಟಿ, N/o ಮುತ್ತಯ ಶೆಟ್ಟಿ, ಗುಂಡಾಲು ಮುಲ್ಕಿ.	90/-
1041/55	ಸೇಸಪ್ಪ A. ಸುವರ್ಣ, S/o ಐತೆ ಹೆಂಗ್ಸು, ಕಡಪುರೆ ಸಸಿಹಿತ್ಲು ಹಳೆಯಂಗಡಿ.	270/-
289/53	ಜಾರು ಶೆಟ್ಟಿಗಾರ, S/o ವಾಸು ಶೆಟ್ಟಿಗಾರ, ಸಸಿಹಿತ್ಲು ಹಳೆಯಂಗಡಿ.	64/-
S.L. 2/50	S. M. ಹಮೀದ್, S/o ಅಬ್ದುಲ್ ರಹಿಮಾನ್, ದೊಡ್ಡಮನೆ ಮುಲ್ಕಿ.	14/-

ಮುಲ್ಕಿ 13—3—1956

ಯಂ. ಆರ್. ಯಚ್. ಪೂಂಜ,
ಮೆನೇಜರ್.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೋಸಿಟ್ ವಾಲ್ಟ್

ಮಂಗಳೂರು—3.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಆಭೋಗಃ—ಕಲ್ಪತರುವ್ಯಾಖ್ಯಾ—

ಮೂಲ: ಲಕ್ಷ್ಮೀನರಸಿಂಹ. ಸಂಪಾದಕರು: ಶಾಸ್ತ್ರ ರತ್ನಾಕರ ಪೊಲಗಂ ಶ್ರೀರಾಮ ಶಾಸ್ತ್ರಿ ಮತ್ತು ಪಂಡಿತರಾಜ ಎಸ್. ಸುಬ್ರಹ್ಮಣ್ಯ ಶಾಸ್ತ್ರಿ. ಪ್ರಕಾಶಕರು: ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಬೆಲೆ: ರೂ. ೨೦—೦—೦.

ಪ್ರಸ್ಥಾನತ್ರಯಗಳಲ್ಲಿ ಒಂದಾದ ಬ್ರಹ್ಮಸೂತ್ರಕ್ಕೆ ಶ್ರೀ ಶಂಕರಾಚಾರ್ಯರು ಉಜ್ವಲವಾದ ಟೀಕೆಯನ್ನು ಬರೆದಿರುವುದು ಎಲ್ಲರಿಗೂ ತಿಳಿದಿರಬಹುದಾದ ವಿಚಾರ. ಬಹಳ ಗಂಭೀರವೂ ಗಹನವೂ ಆಗಿರುವ ಈ ಟೀಕೆಯ ಅರ್ಥವನ್ನು ಸರಳ ರೂಪದಲ್ಲಿ ಮಾಡಿಕೊಡುವ ಉದ್ದೇಶದಿಂದ ಶ್ರೀ ವಾಚಸ್ಪತಿ ಮಿಶ್ರ ಎಂಬೊಬ್ಬ ತತ್ತ್ವಶಾಸ್ತ್ರಜ್ಞರು ಭಾಮತಿ ಎಂಬ ವಿವರಣರೂಪವಾದ ಭಾಷ್ಯವನ್ನು ಶಾಂಕರ ಭಾಷ್ಯಕ್ಕೆ ಬರೆದರು. ಈ ಭಾಮತಿ ಎಂಬ ಭಾಷ್ಯವೂ ಅರ್ಥವಿಸಲು ಕಠಿಣ ಎಂದು ಕಂಡು ಬಂದವರಿಗಾಗಿ ಬೇರೆ ವಿವರಣೆ ಆಗತ್ಯವಾಯಿತು—ಅಮಲಾನಂದ ಸರಸ್ವತಿ ಎಂಬವರು ಕಲ್ಪತರು ಎಂಬ ಭಾಷ್ಯವನ್ನು ಭಾಮತಿಗೆ ಬರೆದರು. ಈ ಕಲ್ಪತರುವಿನ ಮೇಲೆಯೂ ಎರಡು ಭಾಷ್ಯ ಗ್ರಂಥಗಳನ್ನು ಹಿಂದಿನಿಂದ ಬರೆಯಲಾಯಿತು. ಇವುಗಳಲ್ಲಿ ಒಂದನ್ನು ಅಪ್ಪಯ್ಯ ದೀಕ್ಷಿತರೆಂಬ ವಿದ್ವಾಂಸರು ಪರಿಮಳ ಎಂಬ ಹೆಸರನ್ನು ಕೊಟ್ಟು ಬರೆದಿದ್ದಾರೆ; ಆಭೋಗ ಎಂಬ ಹೆಸರಿನ ಇನ್ನೊಂದನ್ನು ಲಕ್ಷ್ಮೀನರಸಿಂಹ ಎಂಬ ಮಹನೀಯರು ಬರೆದಿದ್ದಾರೆ. ಇವರಿಬ್ಬರು ಒಂದೇ ಗ್ರಂಥಕ್ಕೆ ಭಾಷ್ಯವನ್ನು ಬರೆದವರಾದರೂ ಅವರು ಅನುಸರಿಸಿದ ರೀತಿಯಲ್ಲಿ ಮತ್ತು ಅವರ ಮನೋಭಾವದಲ್ಲಿ ತುಂಬ ವ್ಯತ್ಯಾಸವಿರುವುದನ್ನು ಕಾಣಬಹುದು. ಅಪ್ಪಯ್ಯ ದೀಕ್ಷಿತರು ಶ್ರೀಮಚ್ಛಂಕರರ ಭಾಷ್ಯವನ್ನು ಬಹಳ ಶ್ರದ್ಧೆಯಿಂದ ಅನುಸರಿಸಲು ನೋಡಿದ್ದಾರೆ; ಈ ಭಾಷ್ಯವನ್ನು ಚೆನ್ನಾಗಿ ಗ್ರಹಿಸಲು ನೆರವಾದ ಪ್ರಯತ್ನವಾದಿವಾಗ ಅವರಿಗೆ ಭಾಮತಿ ಮತ್ತು ಕಲ್ಪತರುಗಳು ಮೂಲ ಶಾಂಕರ ಭಾಷ್ಯದ ಹೇತುವಿಗೆ ವಿರುದ್ಧವಾಗಿ ಅನೇಕ ಕಡೆ ಹೋದುದು ವ್ಯಕ್ತವಾಯಿತು—ಇದನ್ನು ಅವರು ತಮ್ಮ ಪರಿಮಳ ಭಾಷ್ಯದಲ್ಲಿ ಖಂಡಿಸಲು ಹಿಂಜರಿದಿಲ್ಲ. ಆದರೆ ಲಕ್ಷ್ಮೀನರಸಿಂಹರು ಪರಿಮಳದಲ್ಲಿ ಹೇಳಲಾದ ಎಲ್ಲ ಮಾತುಗಳೂ ಸ್ವೀಕಾರ ಯೋಗ್ಯವೆಂದು ಭಾವಿಸದೆ, ತಮ್ಮ ವಿಚಾರಗಳನ್ನು ಸ್ವತಂತ್ರವಾಗಿ ಮಂಡಿಸಿ ಅವುಗಳು ಅಂಗೀಕಾರಾರ್ಹವಾಗಿಲ್ಲವೆ ಎಂದು ಪಂಡಿತರನ್ನು ಪ್ರಶ್ನಿಸುವಷ್ಟು ಯೋಗ್ಯತೆಯನ್ನು ಆಭೋಗದಲ್ಲಿ ವ್ಯಕ್ತಪಡಿಸಿದ್ದಾರೆ. ಕಲ್ಪತರುವನ್ನು ಆದಷ್ಟು ನಿಷ್ಠೆಯಿಂದ ಇವರೆನು ಅನುಸರಿಸಿದ್ದಾರೆ. ಹೀಗೆ ಮಾಡುವಾಗ ಕಲ್ಪತರುವಿನಲ್ಲಿ ಟೀಕಿಸಲ್ಪಡದ ಭಾಮತಿಯ ಅಂಶಗಳ ಮೇಲೆ ಮತ್ತು ಭಾಮತಿಯಲ್ಲಿ ವಿವರಿಸಲ್ಪಡದ ಶಾಂಕರ ಭಾಷ್ಯದ ಅಂಶಗಳ ಮೇಲೆ ವ್ಯಾಖ್ಯಾನವನ್ನು ಮಾಡುವ ಸಾಹಸಕ್ಕೂ ಇಳಿದಿದ್ದಾರೆ. ದೀಕ್ಷಿತರ ಕೃತಿಯೊಡನೆ ಸ್ಪರ್ಧಿಸಲು ಯೋಗ್ಯವಾದ ಈ ಕೃತಿಯನ್ನು ಮದ್ರಾಸು ಸರಕಾರದ ಪ್ರಾಚ್ಯಹಸ್ತಪ್ರತಿಗಳ ಭಂಡಾರದ ಅಧಿಕಾರಿಗಳು ಬಹಳ ಜತನದಿಂದ, ದಕ್ಷ ಸಂಪಾದಕರ ಸಹಾಯ ಪಡೆದು ಪ್ರಕಟಿಸಿರುವುದು ನಿಜಕ್ಕೂ ಸ್ತುತ್ಯಾರ್ಹವಾದ ವಿಷಯ. ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಈ ಮುದ್ರಿತ ಪ್ರತಿಯನ್ನು ಸಿದ್ಧಪಡಿಸಲಾಗಿದೆ. ಕಲ್ಪತರುವಿನ ಪಾಠಗಳನ್ನು ಈ ಮುದ್ರಿತ ಪ್ರತಿಯು ಒಳಗೊಂಡಿಲ್ಲವಾದರೂ ಮುಂಬಯಿಯ ನಿರ್ಣಯ ಸಾಗರ ಪ್ರೆಸ್ಸಿನಿಂದ ಪ್ರಕಟಿತವಾದ ಕಲ್ಪತರುವಿನ ಪುಟ ಸಂಖ್ಯೆಗಳನ್ನು ಆಭೋಗದ ಆಯಾ ಅಂಶಗಳಿಗನುಸಾರವಾಗಿ ಪಕ್ಕದಲ್ಲಿ ಕೊಟ್ಟಿರುವುದರಿಂದ ಅಭ್ಯಾಸಕ್ಕೆ ಸುಲಭವಾಗಿದೆ. ಸಂಪಾದಕರಲ್ಲಿ ಒಬ್ಬರಾದ ಶ್ರೀ ರಾಮಶಾಸ್ತ್ರಿಗಳು ಬಹಳ ವಿದ್ವತ್ಪೂರ್ಣವಾದ ಟಿಪ್ಪಣಿಗಳನ್ನು ಬರೆದು ಭಾಮತಿ ಮತ್ತು ಕಲ್ಪತರುಗಳ ಪಾಠವನ್ನು ಹೇಗೆ ಗ್ರಹಿಸಿದರೆ ದೋಷರಹಿತವಾಗುವುದೆಂದು ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಇನ್ನೊಬ್ಬ ಸಂಪಾದಕರಾದ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು ಬರೆದ ಸುದೀರ್ಘ ಉಪೋದ್ಘಾತವು ಅದ್ವೈತ ವೇದಾಂತದ ದೀರ್ಘ ಚರಿತ್ರೆಯ ಮೇಲೆ ಪರಿಚಯಾತ್ಮಕ ಪ್ರಕಾಶವನ್ನು ಬೀರುತ್ತದೆ; ಮತ್ತು ಉಪಯುಕ್ತವಾದ ಅನೇಕ ಅಂಶಗಳನ್ನು ವಿವರಿಸಿ ಹೇಳುತ್ತದೆ. ಕಾಲಂಶ ಡೆಮ್ಮಿ ಆಕಾರದ ಒಂದು ಸಾವಿರ ಪುಟಗಳನ್ನೂ ಮೀರುವಷ್ಟು ದೊಡ್ಡದಿರುವ ಈ ಪುಸ್ತಕವನ್ನು ಪ್ರಕಟಿಸುವುದೇ ಮಹಾ ಸಾಹಸ—ಈ ಸಾಹಸ ಕಾರ್ಯವು ಸಫಲವಾಗುವಂತೆ ಸರಕಾರದ್ದು ಹೇಗೆ ಧನಸಹಾಯವಿತ್ತು ನೆರವಾಗಿದೆಯೋ ವಿದ್ವಾಂಸರಾದ ಸಂಪಾದಕರು ತಮ್ಮ ಪರಿಶ್ರಮ ಮತ್ತು ಪ್ರತಿಭೆಗಳನ್ನೂ ದಾನವೆರೆದು ಸಹಾಯ ಸಲ್ಲಿಸಿರುವುದು ಅಭಿನಂದನೀಯ.

ಪೋಲೆಂಡಿನ ಸಾಂಸ್ಕೃತಿಕ ನಿಯೋಗ



ಪೋಲೆಂಡಿನ ಸಾಂಸ್ಕೃತಿಕ ನಿಯೋಗವೊಂದು ಈಚೆಗೆ ಭಾರತಕ್ಕೆ ಆಗಮಿಸಿತು. ಚಿತ್ರದಲ್ಲಿ ಕೆಂಪು ಕೋಟೆಯ ಹೊರಭಾಗದಲ್ಲಿ ಈ ನಿಯೋಗದ ಸದಸ್ಯರು ನಿಂತಿರುವುದನ್ನು ಕಾಣಬಹುದು. ಹಿನ್ನೆಲೆಯಲ್ಲಿ ಶೋಭಿಸುತ್ತಿರುವುದೇ ಸುಪ್ರಸಿದ್ಧ ಮೋತಿ ಮಸೀದಿ.

ಯಶೋಧರ ಚರಿತೆ—

ಬರೆದವರು: ಕವಿ ಭೂಷಣ ಕೆ. ಪಿ. ವೆಂಕಪ್ಪ ಶೆಟ್ಟಿ. ಪ್ರಕಾಶಕರು: ಕರ್ನಾಟಕ ಯಕ್ಷಗಾನ ಸಾಹಿತ್ಯ ಮಾಲೆ, ಮೂಡಬಿದ್ರಿ (ದಕ್ಷಿಣ ಕನ್ನಡ) ಬೆಲೆ: ರೂ ೧—೮—೦.

ಕನ್ನಡ ಸಾಹಿತ್ಯ ಸಮ್ಮೇಳನದ ಯಕ್ಷಗಾನ ಗೋಷ್ಠಿಯ (೧೯೫೩) ಅಧ್ಯಕ್ಷರಾಗಿಯೂ ಉಡುಪಿಯ ಅಂತರಂಗ ಕಾರ್ಯಾಲಯದವರು ಪ್ರಕಟಿಸಿದ "ಭಾರತದ ಗುರುಕುಲ" ಎಂಬ ಯಕ್ಷಗಾನ ಪ್ರಸಂಗಕ್ಕಾಗಿ ಮದ್ರಾಸು ಸರಕಾರದವರಿಂದ ಬಹುಮಾನಿತರಾಗಿಯೂ ಜಿಲ್ಲೆಯ ದಕ್ಷಿಣ ಭಾಗದ ಯಕ್ಷಗಾನ ಕ್ಷೇತ್ರದಲ್ಲಿ ಅದಮ್ಯ ಉತ್ಸಾಹದಿಂದ ಮತ್ತು ಚಟುವಟಿಕೆಯಿಂದ ಕೆಲಸ ಮಾಡಿಯೂ ಪ್ರಸಿದ್ಧರಾಗಿರುವ ಶ್ರೀ ವೆಂಕಪ್ಪ ಶೆಟ್ಟರು ಯಕ್ಷಗಾನ ಕಲೆಗೆ ತಮ್ಮ ಹೊಸ ಪ್ರಸಂಗ ಪುಸ್ತಕದ ಮೂಲಕ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಹಳಗನ್ನಡ ಕನ್ನಡ ಕವಿ ಜನ್ನನು ಬರೆದ ಯಶೋಧರ ಚರಿತೆಯು ಎಲ್ಲ ವಿದ್ವಾಂಸರಿಂದಲೂ ಮನ್ನಣೆಯನ್ನು ಪಡೆದ ಗ್ರಂಥ; ಇದೇ ಕತೆಯನ್ನು ವೆಂಕಪ್ಪ ಶೆಟ್ಟರು ಪ್ರಸಂಗ ರೂಪದಲ್ಲಿ ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ. ಜೀವದಯೆಯನ್ನು ಮನುಷ್ಯನಾದವನು ಆಚರಿಸಬೇಕೆಂದು ಬೋಧಿಸುವುದೇ ಈ ಕತೆಯ ಉದ್ದೇಶ. ಜೈನ ಸಂಪ್ರದಾಯದಲ್ಲಿ ಜೀವದಯೆಗಿರುವ ಸ್ಥಾನವು ಬಹಳ ಉನ್ನತವಾದದ್ದು; ಹಿಂದುಗಳ ದೃಷ್ಟಿಯಲ್ಲಿಯೂ ಅಹಿಂಸೆಗೆ ಸರ್ವ ಶ್ರೇಷ್ಠ ಸ್ಥಾನವು ಸಲ್ಲುತ್ತದೆ. ಪ್ರಸ್ತುತ ಪ್ರಸಂಗವು ಈ ಉದಾತ್ತ ತತ್ತ್ವಗಳನ್ನು ಎತ್ತಿ ಹಿಡಿದು ವಿವರಿಸುತ್ತದೆ. ಸೊಗಸಾದ, ಕುತೂಹಲವನ್ನು ಕೆರಳಿಸಿ ಸಾಗುವ ಕತೆಯ ಹಂದರದ ಒಳಗಡೆ ತತ್ತ್ವಾಮೃತ ಕುಂಭವು ಅಡಗಿರುತ್ತದೆ. ನಮ್ಮ ಯಕ್ಷಗಾನ ಪ್ರಸಂಗಗಳೂ ಅವುಗಳನ್ನು ಆಡಿ ತೋರಿಸುವ ಬಯಲಾಟದ ಮೇಳಗಳೂ ವೈದಿಕ ಸಾಹಿತ್ಯದಲ್ಲಿ ಅಡಗಿದ ಧರ್ಮಸಾರವನ್ನು ನಿರಕ್ಷರಕುಕ್ಷಿಗಳಾದ ಹಳ್ಳಿಯ ಜನಸಾಮಾನ್ಯರಿಗೆ ಮುಂದಿಟ್ಟು ಪಡಿಸಲು ಈಗಾಗಲೇ ಸಮರ್ಥವಾಗಿರುತ್ತವೆ. ಜೈನ ಸಾಹಿತ್ಯದ ಕತೆಗಳನ್ನಾಯ್ದು ಜಿನಧರ್ಮದ ತಿರುಳನ್ನು ಜನರಿಗೆ ತಿಳಿಸಿಕೊಡಲು ಪ್ರಸ್ತುತ ಪ್ರಸಂಗದಿಂದ ಬಹಳ ಸಹಾಯವಾಗದಿರದು. ಈ ಪ್ರಸಂಗ ಪುಸ್ತಕದಲ್ಲಿ ಆಯಾ ಪಾತ್ರಧಾರಿಗಳ ಅರ್ಥವನ್ನೂ ಕವಿ ಭೂಷಣರೇ ಸ್ವತಃ ಬರೆದಿರುವುದರಿಂದ ಆಡಿ ತೋರಿಸ ಬಯಸುವವರಿಗೆ ಹೆಚ್ಚಿನ ಸಹಾಯವನ್ನು ಮಾಡಿದಂತಾಗಿದೆ. ಅರ್ಥ ವಿವರಣೆಯ ಸಂದರ್ಭದಲ್ಲಿ ಪ್ರಸಂಗ ಕರ್ತರು ಜೈನ ಧರ್ಮದಲ್ಲಿ ತಮಗಿರುವ ಅಗಾಧ ಪಾಂಡಿತ್ಯವನ್ನು ಪ್ರತಿ ಮಾತಿನಲ್ಲಿ ವ್ಯಕ್ತಪಡಿಸಿದ್ದಾರಲ್ಲದೆ, ಬಹಳ ಸೂಕ್ಷ್ಮವಾಗಿಯೂ ತಿಳಿಯಾಗಿಯೂ ಜೈನತತ್ತ್ವಗಳನ್ನೂ ಸಂಪ್ರದಾಯಗಳನ್ನೂ ನಂಬಿಕೆ ಮತ್ತು ವಿಶ್ವಾಸಗಳನ್ನೂ ನಿರೂಪಿಸಿದ್ದಾರೆ. ಪಂಡಿತರೆನಿಸಿದವರು ಇಲ್ಲಿಯ ಅರ್ಥದಲ್ಲಿರುವ ಗಾಂಭೀರ್ಯವನ್ನು ಮೆಚ್ಚುವರಾದರೆ ಪಾಮರರು ಕತೆಯ ಪರಿಣಾಮಕಾರಿಕೊನೆಯಿಂದ ಪ್ರಭಾವಿಸಲ್ಪಡುವುದು ನಿಶ್ಚಯ. ಯಕ್ಷಗಾನಾಭ್ಯಾಸಿಗಳ ಹಾಗು ಬಯಲಾಟದ ಮೇಳಗಳವರ ಗಮನವು ಅವಶ್ಯವಾಗಿ ಈ ಹೊಸ ಪ್ರಸಂಗದತ್ತ ಹರಿಯಬೇಕೆಂದು ನಾವು ಸೂಚಿಸುತ್ತೇವೆ.

ಚಂದ್ರಿಕೆಯ ಚೆಲುವಿನಲ್ಲಿ—

ಬರೆದವರು: ಚಿ. ಉದಯಶಂಕರ. ಪ್ರಕಾಶಕರು: ಸುಧಾ ಪ್ರಕಾಶನ, ೨೦೧, ಜನತಾ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು ೨. ಬೆಲೆ: ರೂ. ೧—೦—೦.

ಐತಿಹಾಸಿಕ ಪ್ರಸಿದ್ಧಿಯ ಚಕ್ರವರ್ತಿ ಅಶೋಕನಿಗೆ ಕುಣಾಲನೆಂಬ ಮಗನೊಬ್ಬನಿದ್ದನು. ಈತನು ಕಾಂಚನೆಯೆಂಬ ಅನುರೂಪ ಸುಂದರಿಯೊಡನೆ ಪ್ರೇಮಾಸಕ್ತನಾದನು. ಚಕ್ರವರ್ತಿಗೆ ತಿಷ್ಯರಕ್ಷಿತೆ ಎಂಬ ಕಿರಿಯ ಹೆಂಡತಿ ಇದ್ದಳು. ಸಂಬಂಧದಿಂದ ಕುಣಾಲನಿಗೆ ಮಾತೃಸ್ಥಾನದಲ್ಲಿರುವ ಈಕೆಯು ಆತನಿಂದ ಪ್ರೇಮಭಿಕ್ಷೆಯನ್ನು ಯಾಚಿಸಿದಳು. ಇದು ಧರ್ಮ ವಿರುದ್ಧವೆಂದು ಪ್ರತಿಭಟಿಸಿದ ಕುಣಾಲನು ಶೂನ್ಯ ಜಗತ್ತಿನಲ್ಲಿ ವಿಹರಿಸುವ ಭಗ್ನ ಹೃದಯಿಯಾಗಿಯೂ ಕಣ್ಣನ್ನು ತಿಷ್ಯರಕ್ಷಿತೆಯ ಕ್ರೋಧಾಗ್ನಿಗೆ ಆಹುತಿಕೊಟ್ಟ ಧರ್ಮನಿಷ್ಠನಾಗಿಯೂ ಕಂಗೊಳಿಸುತ್ತಾನೆ—ಕತೆಯು ದುರಂತಮಯವಾಗಿದ್ದರೂ ಅದು ನೀತಿಯೊಂದನ್ನು ಎತ್ತಿ ಹಿಡಿಯುತ್ತದೆ. "ಕಾಮ—ಪ್ರೇಮ, ಹಿಂಸೆ—ಅಹಿಂಸೆ, ಧರ್ಮ-ಅಧರ್ಮ, ಆಸಕ್ತಿ—ವೈರಾಗ್ಯ ಇವುಗಳ ತುಮುಲ ಯುದ್ಧದ ಘೋರ—ಸುಂದರ ಚಿತ್ರವಿದು" ಎಂದು ಈ ಪುಸ್ತಕದ ಬಗ್ಗೆ ಮುನ್ನುಡಿಯಲ್ಲಿ ಹೇಳಿದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಸತ್ಯವಾದುದನ್ನೆ ನುಡಿದಿದ್ದಾರೆ. ಇನ್ನೂ ಚಿಕ್ಕ ವಯಸ್ಸಿನ ಉದಯಶಂಕರರು ಬಹಳ ಚೆನ್ನಾದ ರೀತಿಯಲ್ಲಿ, ಓದುಗರ ಕುತೂಹಲವನ್ನು ಎಲ್ಲಿಯೂ ತಣಿಯಗೊಡದೆ, ಕೌಶಲದಿಂದ ಸನ್ನಿವೇಶಗಳನ್ನು ಹೊಣೆಸಿಕೊಂಡು ಹಾಗು ಸಂಭಾಷಣೆಗಳನ್ನು ಬೆಳೆಸಿಕೊಂಡು, ಹಿತಮಿತವಾದ ವರ್ಣನೆಗಳನ್ನು ತಂದಿಕ್ಕಿಕೊಂಡು ಕತೆಯನ್ನು ಹೆಣೆದಿದ್ದಾರೆ. ಅವರ ಮಾತಿನಲ್ಲಿ ಎದೆಯ ಕದವನ್ನು ತೆರೆದು ಅಂತಃಕರಣವನ್ನು ಸ್ಪರ್ಶಿಸುವಷ್ಟು ಶಕ್ತಿಯು ಅಡಗಿದೆ. ಒಳ್ಳೆಯ ಭವಿಷ್ಯ ತನಗಿದೆ ಎಂದು ಈ ಲೇಖಕರು ತಮ್ಮ ಕೃತಿಯಿಂದ ತೋರಿಸಿಕೊಟ್ಟಿದ್ದಾರೆ. ಅವರಿಗೆ ಶ್ರೇಯಸ್ಸಾಗಲಿ!

ಶಕುಂತಲಾ—

ಬರೆದವರು: ಪ. ವೆಂ. ಸೀತಾರಾಮಯ್ಯ. ಪ್ರಕಾಶಕರು: ಶ್ರೀ ವಾಣಿ ಪ್ರಕಾಶನ, ಬೆಂಗಳೂರು ೨. ಬೆಲೆ: ರೂ. ೦ ೯ ೦.

ಶಕುಂತಲೆ ಮತ್ತು ಅವಳ ಮನೆಯವರಿಗೆ ನಾರಾಯಣನೆಂಬ ಹುಡುಗನ ಪರಿಚಯವಾಗಿ ಆತನು ಮನೆಯವರಲ್ಲಿಯೇ ಒಬ್ಬನೆನಿಸುವಷ್ಟು ಸೇರಿಹೋಗುತ್ತಾನೆ. ಶಕುಂತಲೆಯೊಡನೆ ತೀರ ಸಲಿಗೆಯಿಂದ ಆತನಿದ್ದರೂ ಪಾಪದೃಷ್ಟಿಯನ್ನು ಅವಳ ಮೇಲೆ ಹಾಯಿಸಿದಾತನಲ್ಲ; ತಂಗಿಯ ಮೇಲೆ ಅಣ್ಣನಿಗಿರುವ ವಾತ್ಸಲ್ಯವನ್ನೆ ಆತನು ಇಟ್ಟುಕೊಂಡಿರುತ್ತಾನೆ. ಆದರೆ ಇದನ್ನು ಕಂಡು ಸೈರಿಸದ ರಮೇಶನೆಂಬೊಬ್ಬ ಕಿಡಿಗೇಡಿಯು ಸುಳ್ಳು ಪತ್ರವನ್ನು ನಾರಾಯಣನ ಹೆಸರಿನಲ್ಲಿ ಸೃಷ್ಟಿಸಿ ಶಾಲಿನಲ್ಲಿ ಹುಳಿ ಬೆರೆಸಿ, ಶಕುಂತಲೆ—ನಾರಾಯಣರ ಸಂಬಂಧ ಪಾಪಮಯವಾಗಿದೆ ಎಂಬ ಭಾವನೆಯನ್ನು ಶಕುಂತಲೆಯ ಮನೆಯವರಲ್ಲಿಯೂ ಆಕೆಯು ಮದುವೆಯಾಗಲಿದ್ದ ವರನಲ್ಲಿಯೂ ಹುಟ್ಟಿಸುತ್ತಾನೆ. ನಾರಾಯಣನು ಆ ವರನಿಗೆ ಸತ್ಯ ಸಂಗತಿ ತಿಳಿಸಿ ಶಕುಂತಲೆಯ ಮದುವೆ ನೆರವೇರುವಂತೆ ಮಾಡಿದರೂ ಆಕೆಯ ಮನೆಯವರಮುಂದೆ ಹೋಗಲು ಮುಖವಿಲ್ಲದೆ, ನೊಂದುಕೊಳ್ಳುತ್ತಾನೆ. ಇದೇ ಸಮಯದಲ್ಲಿ ಆತನ ತಾಯಿ ತೀರಿದ ಮತ್ತು ಆತನ ಬಳಗದಲ್ಲೊಬ್ಬಳಾಗಿದ್ದ ನಿರ್ಮಲೆ ಎಂಬವಳ ಗಂಡಾಂತರ ಬಂದೊದಗುತ್ತವೆ. ಆತನು ಈ ಊರೇ ಬೇಡವೆಂದು ದುಃಖದಿಂದ ಹೊರಟು ಬಿಡಲು ಇವೆಲ್ಲ ಕಾರಣವಾಗುತ್ತವೆ—ಈ ಕಥೆಯು ಸಾಧಾರಣ ಚೆನ್ನಾಗಿಯೇ ನಿರೂಪಿತವಾಗಿದೆ. ವರನ ಮನಸ್ಸನ್ನು ತಿರುಗಿಸಲು ಶಕ್ತನಾದ ನಾರಾಯಣನು ಶಕುಂತಲೆಯ ಮನೆಯವರನ್ನು ಏಕೆ ತಪ್ಪು ತಿದ್ದಿಕೊಳ್ಳುವಂತೆ ಮಾಡಲು ಶಕ್ತನಾಗಲಿಲ್ಲ ಎಂಬುದು ತರ್ಕಕ್ಕೆ ನಿಲುಕದ ಮಾತು. ಗಂಡು—ಹೆಣ್ಣಿನ ಸಂಬಂಧವು ಕಾಮುಕವಾಗಿರಲೇ ಬೇಕಾದ ಆಗತ್ಯವಿಲ್ಲ—ಅದು ಸಾತ್ವಿಕ ಪ್ರೇಮದಿಂದಲೂ ಕೂಡಿರುವುದು ಸಾಧ್ಯ ಎಂಬ ಉದ್ದೇಶವನ್ನು ಲೇಖಕರು ಇಟ್ಟುಕೊಂಡಿರುವುದು ಈ ಕಾದಂಬರಿಯಲ್ಲಿ ಎದ್ದು ಕಾಣುತ್ತದೆ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

Edited, Printed & Published By K. H. Shetty, at the Navayuga Press, Udipi S. India.

REGD. NO. M. 3616

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ VOL. 35

ಉಡುಪಿ, 29—3—1956

ಸಂಚಿಕೆ ೩೦ NO. 30

ನಮ್ಮ ಸಂಸತ್ತಿನ ಲೋಕ ಸಭೆಯಲ್ಲಿ ಕಳೆದ ವಾರ ಸಂರಕ್ಷಣಾ ಖಾತೆಯ ಬೇಡಿಕೆಯ ಮೇಲೆ ಚರ್ಚೆ ನಡೆದಾಗ, ಸದಸ್ಯರು ಇತ್ತೀಚಿನ ಕೆಲವು ಘಟನೆಗಳ ಕುರಿತು ಹೆಚ್ಚಿನ ಕಳವಳವನ್ನು ವ್ಯಕ್ತಪಡಿಸಿದರು. ಅವರ ಮನೋಭಾವವು ಈ ಘಟನೆಗಳಿಂದಾಗಿ ನಮ್ಮ ನೆರೆಯ ರಾಷ್ಟ್ರದಿಂದ ಭಾರತವು ಆಕ್ರಮಿಸಲ್ಪಡುವ ಸಂಭವ ಮತ್ತು ನಾವದನ್ನು ಪ್ರತಿಭಟಿಸಲು ಸಿದ್ಧರಿಲ್ಲದಿರುವ ಸಂಶಯದಿಂದ ಕೂಡಿರುವಂತೆ ಕಂಡಿತು. ಕೆಲವು ಸಮಯದಿಂದೀಚೆಗೆ ಗಡಿ ಪ್ರದೇಶದಲ್ಲಿ ಉಂಟಾಗುತ್ತಿರುವ ಘರ್ಷಣೆಗಳ ತೀವ್ರತೆಯೂ ಜಾಗತಿಕ ರಂಗದಲ್ಲಿ ಮಹತ್ವದ ಸ್ಥಾನವನ್ನು ಗಳಿಸಿದ ಪರದೇಶವೊಂದು (ಅಮೇರಿಕ) ನಮ್ಮ ನೆರೆಯ ರಾಷ್ಟ್ರವಾದ ಪಾಕಿಸ್ತಾನಕ್ಕೆ ನೀಡುತ್ತಿರುವ ಅಪರಿಮಿತವಾದ ಸೇನಾ ಸಹಾಯವೂ ನಮ್ಮ ಸಂಸತ್ತಿನ ಸದಸ್ಯರಲ್ಲಿ ಭಯವನ್ನು ಹುಟ್ಟಿಸಿದ ಎಂಬುದು ಚರ್ಚೆಯ ಸಮಯ ಸ್ಪಷ್ಟವಾಯಿತು. ಇವೆಲ್ಲ ಚಟುವಟಿಕೆಗಳು ಭಾರತದ ಸಂರಕ್ಷಣೆಯ ಪ್ರಶ್ನೆಯನ್ನು ಗಂಭೀರವಾಗಿ ವಿಚಾರಿಸಿಕೊಳ್ಳಬೇಕಾದ ಆವಶ್ಯಕತೆಯನ್ನು ತಂದಿವೆ ಎಂದು ಪ್ರಧಾನ ಮಂತ್ರಿಗಳು ಸಹ ಒಪ್ಪಿಕೊಂಡರು.

ಇವತ್ತಿನ ದಿವಸ, ಸಂರಕ್ಷಣೋಪಕರಣಗಳ ಅಥವಾ ಯುದ್ಧೋಪಕರಣಗಳ ತಾಂತ್ರಿಕ ಜ್ಞಾನವು ಮುಂದರಿದಷ್ಟು ವೇಗದಲ್ಲಿ ಬೇರಾವುದೇ ಶಾಸ್ತ್ರ ವಿಭಾಗವು ಪ್ರಗತಿಯನ್ನು ಹೊಂದುತ್ತಿಲ್ಲ. ಅಣುಬಾಂಬು, ಜಲಜನಕ ಬಾಂಬು ಇತ್ಯಾದಿಗಳು ಈ ಯುದ್ಧ ತಂತ್ರ ವಿಜ್ಞಾನದ ಆಧುನಿಕ ಸಂಶೋಧನೆಗಳಾಗಿವೆ. ಈ ಸಂಶೋಧನೆಗಳು ಅಂತಿಮ ಘಟ್ಟವನ್ನು ಮುಟ್ಟಿದವೆಂದು ಹೇಳಲು ಸಾಧ್ಯವೇ ಇಲ್ಲ. ಈ ಸಂಶೋಧನೆಯ ಮಾರ್ಗವು ನಡೆದಷ್ಟು ಮುಗಿಯುತೆಂದಿಲ್ಲ. ಅಣು ಶಸ್ತ್ರಗಳ ದೃಷ್ಟಿಯಿಂದ ನೋಡುವುದಾದರೆ ಸದ್ಯಕ್ಕೆ ಎರಡು ಪ್ರಬಲ ಮಹಾರಾಷ್ಟ್ರಗಳ ಹೊರತು ಬೇರಾವುದೇ ದೇಶವು ತನ್ನ ಸಂರಕ್ಷಣೆಯನ್ನು ಅಣು ಶಸ್ತ್ರಗಳ ಧಾಳಿಯನ್ನು ಯಶಸ್ವಿಯಾಗಿ ಎದುರಿಸಿ ಮಾಡಿಕೊಳ್ಳುವಷ್ಟು ಶಕ್ತವಾಗಿಲ್ಲ. ಆದುದರಿಂದ ನಾವು ನಮ್ಮ ದೇಶದ ಸಂರಕ್ಷಣೆಗಾಗಿ ಮಾಡಿಕೊಂಡಿರುವ ಸಿದ್ಧತೆಯು ಪರಿಪೂರ್ಣಾವಸ್ಥೆಯನ್ನು ಮುಟ್ಟಿದೆ ಎಂದು ಭಾವಿಸುವುದೆಂತು? ಅಣುಶಸ್ತ್ರಾಸ್ತ್ರಗಳನ್ನು ತನ್ನಲ್ಲಿ ಇಟ್ಟುಕೊಂಡಿರುವ ಯಾವುದಾದರೊಂದು ರಾಷ್ಟ್ರ

ಗಂಡಾಂತರದ ವಾತಾವರಣ

ಭಾರತದ ಮೇಲೆ ಧಾಳಿ ನಡೆಸಲು ಇಷ್ಟಪಟ್ಟರೆ, ಆಗ ಸೈನಿಕಸಿದ್ಧತೆಯ ದೃಷ್ಟಿಯಿಂದ ಸಮರ್ಪಕ ಪ್ರತಿಭಟನೆಯನ್ನಿತ್ತು ದೇಶವನ್ನು ರಕ್ಷಿಸಿಕೊಳ್ಳಲು ಶಕ್ತಿ ಎಷ್ಟರಲ್ಲಿ ಇದೆ. ಆದರೆ, ನಾವು ಇನ್ನೊಂದು ದೃಷ್ಟಿಯಿಂದ ನೋಡಿದರೆ ಅಣುಬಾಂಬಿನ ಧಾಳಿಯಂಥ ಕಠೋರ ಆಕ್ರಮಣವನ್ನು ಸಹ ಯಶಸ್ವಿಯಾಗಿ ಎದುರಿಸಬಹುದು—ಇದಕ್ಕೆ ಬೇಕಾದದ್ದು ಸೈನಿಕ ಸಿದ್ಧತೆಯಲ್ಲ, ಜನತೆಯ ಮನೋಭಾವದಲ್ಲಿ ಮಾರ್ಪಾಟು. ಈ ಮಾರ್ಪಾಟು ಹೇಗೆ ವ್ಯಕ್ತವಾಗಬೇಕು? ಜನತೆಯು ಸದಾ ಚೈತನ್ಯದಿಂದ ತುಂಬಿದ್ದರೆ, ಆಂತರಿಕ ಶಕ್ತಿಯನ್ನು ಒಗ್ಗಟ್ಟಿನ ಬುದ್ಧಿಯಿಂದ ಪಡೆದಿದ್ದರೆ, ಏನಾದರೂ ಮಣಿಯೆವೆಂಬ ಛಲವೂ ಎಂಥ ಸಂಕಟವನ್ನಾದರೂ ದೇಶಕ್ಕಾಗಿ ಅನುಭವಿಸಿಯೇವೆಂಬ ನಿಷ್ಠೆಯೂ ಜನತೆಯಿಂದ ತೋರಿಸಲ್ಪಟ್ಟರೆ ಅಂಥ ಜನಸಮುದಾಯವನ್ನು ಯಾವುದೇ ಅಣುಬಾಂಬು ಸೋಲಿಸಿಬಿಡಲಾರದು. ಆದುದರಿಂದ ಅಣು ಬಾಂಬಿನ ಪ್ರಯೋಗದಂಥ ಭೀಕರ ಧಾಳಿಯ ಮಾತನ್ನಾಡುವಾಗಲಾಗಲೀ ಅಥವಾ ಸಶಸ್ತ್ರ ಆಕ್ರಮಣದ ಭೀತಿಯನ್ನು ಕುರಿತು ಹೇಳುವಾಗಲಾಗಲೀ ಒಂದು ಮಾತನ್ನು ನಾವು ನೆನಪಿಟ್ಟುಕೊಳ್ಳಬೇಕು. ಅದೇನೆಂದರೆ ದೇಶದ ಶಕ್ತಿಯಿರುವುದು ಸೈನಿಕನಲ್ಲಿಯಲ್ಲ, ಆತನ ಕೈಯಲ್ಲಿನ ಬಂದೂಕಿನಲ್ಲಿಯೂ ಆ ಶಕ್ತಿಯಿಲ್ಲ. ಜನತೆಯ ಮನೋಭಾವ, ಒಗ್ಗಟ್ಟು ಮತ್ತು ಸಂಕಲ್ಪ ಶಕ್ತಿಯ ದಾರ್ಢ್ಯ ಇವೇ ನಿಜವಾಗಿ ದೇಶದ ಸಂರಕ್ಷಣೆಗೆ ನೆರವಾಗುವ ವಿಷಯಗಳಾಗಿರುತ್ತವೆ. ಜನರು ಸದಾ ಜಾಗರೂಕರಾಗಿರದಿದ್ದರೆ, ನಮ್ಮನ್ನು ನೂಕಿ ಕೆಡವಲು ಸಿದ್ಧರಿರುವ ಜನರು ಸುತ್ತಮುತ್ತ ಇರುವಾಗಲೂ ಸತರ್ಕರಿರದಿದ್ದರೆ ನಾವು ಕರ್ತಕ್ಕೆ ಬೀಳುವುದು ನಿಶ್ಚಯ.

ಇಂಥ ಮಾನಸಿಕ ತರಬೇತಿಯನ್ನು ಭಾರತೀಯ ನಾಗರಿಕರು ಪಡೆದಿರುವುದು ಅತ್ಯವಶ್ಯ. ಅನ್ಯಥಾ ಎಷ್ಟು ಟ್ಯಾಂಕುಗಳಿದ್ದರೂ ಎಷ್ಟು ದೊಡ್ಡ ವಿಮಾನ ಪಡೆಯಿದ್ದರೂ ಎಷ್ಟು ಪ್ರಬಲವಾಗ ನೌಕಾಸೇನೆಯಿದ್ದರೂ ಫಲ ದೊರೆಯದು. ಮೊದಲೇ ಹೇಳಿದಂತೆ ನಾವು ಸಾಂಪ್ರದಾಯಿಕವಾಗಿ ವಿಭಾಗಿಸಿದ ಸೇನೆಯ ರಚನೆಯು ಶಾಶ್ವತ ಸ್ವರೂಪವನ್ನು ಹೊಂದಿಲ್ಲ. ಅದು ಪ್ರತಿ ದಿನ ಬದಲಾವಣೆಯನ್ನು ಹೊಂದುತ್ತಾ ನಡೆದಿದೆ. ಒಂದು ಯುದ್ಧದಲ್ಲಿ ಉಪಯುಕ್ತವೂ ಅದ್ಭುತ ಪರಿಣಾಮಗಳನ್ನು ಮಾಡಿ ತೋರಿಸಿದುದೂ ಆಗಿ ಮೆರೆದ ಶಸ್ತ್ರವು ಇನ್ನೊಂದು ಯುದ್ಧದಲ್ಲೂ ಉಪಯೋಗಕ್ಕೆ ಬಂದೀತೆಂಬುದು ಸುಳ್ಳು. ಯುದ್ಧೋಪಕರಣಗಳ ಕುರಿತು ಮಾಹಿತಿಯನ್ನು ಕೊಡುವ ಗ್ರಂಥವೊಂದನ್ನು ಯಾರಾದರೊಬ್ಬರು ಬರೆದರೆ, ಆ ಗ್ರಂಥವು ಪ್ರಕಟವಾಗಿ ಓದುಗರ ಕೈಸೇರಿ ಒಂದು ವರ್ಷವಾಗುವುದರಲ್ಲಿ ಅಲ್ಲಿ ವಿವರಿಸಿದ ತಂತ್ರಗಳು ನಿರರ್ಥಕವೂ ನಿರುಪಯುಕ್ತವೂ ಆಗಿ ಬರುವುದು ಸಂಭವನೀಯ. ಹೀಗಿರುವಾಗ ಹಳೆ ಕಾಲದ ಸಂರಕ್ಷಣ ಕ್ರಮಗಳು ನಮಗೆ ಯಾವ ಪ್ರಯೋಜನವನ್ನೂ ಮಾಡುವಂತಿಲ್ಲ. ಭಾರತವಷ್ಟೇ ಅಲ್ಲ—ರಶಿಯವೂ ಸೇರಿ ಕೆಲವು ತೀರ ಮುಂದರಿದ ಪ್ರಬಲ ಪಾಶ್ಚಾತ್ಯ ರಾಷ್ಟ್ರಗಳನ್ನು ಬಿಟ್ಟರೆ ಬೇರೆ ಯಾವುದೇ ದೇಶವು ಶಸ್ತ್ರವಿಜ್ಞಾನದಿಂದ ಹೆಚ್ಚಿನ ಲಾಭ ಪಡೆದಿಲ್ಲ.

ತತ್ಪರಿಣಾಮವಾಗಿ ನಾವು ನಮ್ಮ ಸಂರಕ್ಷಣ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿಡುವುದಕ್ಕೆ ನೂತನ ಉಪಾಯವನ್ನು ಕಂಡು ಹಿಡಿಯಬೇಕು. ನಮಗೆ ಸೈನ್ಯವೇ ಬೇಡವೆಂದು ಹೇಳುವುದು ಕೇವಲ ತಪ್ಪು. ಆದರೆ ಸೈನ್ಯದೊಡನೆ ನಮಗೆ ಪ್ರಬಲ ಔದ್ಯಮಿಕ ಕ್ಷೇತ್ರವಿರಬೇಕು, ಉತ್ತಮ ಆರ್ಥಿಕ ಸ್ಥಿತಿಯಿರಬೇಕು, ಮತ್ತು ಜನತೆಯ ಮನೋಭಾವವು ಮೊದಲೇ ಹೇಳಿದ ರೀತಿಯಲ್ಲಿ ತರಬೇತಿಯನ್ನು ಹೊಂದಿರಬೇಕು ನಾವಿಂದು ಸಂರಕ್ಷಣೋದ್ದೇಶದಿಂದ ಒಂದು ವಿಮಾನವನ್ನು ಕ್ರಯಕ್ಕೆ ಪರದೇಶಗಳಿಂದ ಪಡೆಯುವುದು ದೊಡ್ಡ ಕಲಸವಲ್ಲ. ಆದರೆ ಅದನ್ನು ಉಪಯೋಗಿಸುವುದು ಹೇಗೆಂದು ಕಲಿಸುವ ಜನರೂ ನಮಗೆ ಬೇಡವೆ? ನಮ್ಮ ಜೀವನಕ್ಕೆ ತಾಂತ್ರಿಕ ವಿಜ್ಞಾನದ ಹಿನ್ನಲೆ ಇಲ್ಲವೆ ಹೋದರೆ ನಾವು ಈ ವಿದ್ಯೆಯನ್ನು ಶಾಶ್ವತವಾಗಿ ರೂಡಿಸಿಕೊಳ್ಳುವುದು ಸಾಧ್ಯವಾಗಲಾರದು, ಅದರಂತೆ ಈ ಯುದ್ಧೋಪಕರಣದ ಭಾಗವೊಂದು ಕಳೆದು ಹೋದರೆ ಅದನ್ನು ಹೊಸತಾಗಿ ತಯಾರಿಸಿಕೊಡಲು ಸಮರ್ಥವೆನಿಸುವಷ್ಟು ದೇಶವು ಔದ್ಯಮಿಕ ಪ್ರಗತಿಯನ್ನು ಪಡೆದಿರಬೇಕಾದದ್ದೂ ಆವಶ್ಯಕ. ಏಕೆಂದರೆ ವಿಷಮ ಪರಿಸ್ಥಿತಿ ತಲೆದೋರಿದಾಗ ನಾವು ಪರದೇಶಗಳಿಂದ ಇಂಥ ಬಿಡಿಭಾಗಗಳನ್ನು ತರಿಸಿಯೇವೆಂಬ ನಂಬಿಕೆ ಇಲ್ಲ. ಅಷ್ಟಲ್ಲದೆ ಇಂಥ ಸಲಕರಣೆಗಳನ್ನು ನಾವು ಪರದೇಶಗಳಿಂದಲೇ ಆಯಾತಮಾಡಿಕೊಳ್ಳುತ್ತಿದ್ದರೆ ಆ ದೇಶದ ಹಂಗು ನಮ್ಮ ಮೇಲೆ ಬೀಳುತ್ತದೆ, ನಮಗೆ ಅಗತ್ಯಬಿದ್ದಾಗ ಆ ಪರದೇಶವು ತಕ್ಕ ಪೂರೈಕೆಯನ್ನು ಮಾಡದೆ ಹೋದರೆ, ಆಗ ನಾವು ಜುಟ್ಟನ್ನು ಪರರ ಕೈಯಲ್ಲಿ ಕೊಟ್ಟು ಒದ್ದಾಡುವ ಮೂರ್ಖರಾಗಿ ಬಳಲಬೇಕಾಗುತ್ತದೆ. ಇದನ್ನು ತಪ್ಪಿಸಲು ದೇಶದಲ್ಲಿಯೇ ಉತ್ಪಾದನೆಯ ಎಲ್ಲ ಹಂತಗಳಲ್ಲಿ ಚಟುವಟಿಕೆ ಭರದಿಂದ ಬೆಳೆಯಬೇಕು. ಇವೆಲ್ಲ ದೃಷ್ಟಿಯಿಂದ ವಿವೇಚಿಸಿದ ಪಕ್ಷದಲ್ಲಿ ಸಂಪೂರ್ಣ ಸ್ವತಂತ್ರವೆನಿಸಿದ ರಾಷ್ಟ್ರಗಳು ಜಗತ್ತಿನಲ್ಲಿ ಹೆಚ್ಚಿಲ್ಲವೆಂದು ಕಂಡುಬರುತ್ತದೆ

(೧ನೇ ಪುಟ ನೋಡಿರಿ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್ ಐ ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ ೨—೦—೦ (ಟಪಾ ಖರ್ಚು ಬೇರೆ).

ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ

ಭಾರತದ ಮುಂದಿರುವ ಸಮಾಜವಾದಿ ಆದರ್ಶ

ಸರಕಾರಿ ಅಧಿಕಾರಿಗಳ ವಿಶೇಷ ಹೊಣೆಗಾರಿಕೆ

ಸಮಾಜವಾದಿ ಆದರ್ಶವು ಭಾರತೀಯರ ಮುಂದೆ ಮಂಡಿಸಲ್ಪಟ್ಟು ಪ್ರಧಾನಿ ನೆಹರುಗಳ ನೇತೃತ್ವದಲ್ಲಿ ಅದನ್ನು ಸಾಧಿಸುವ ಪ್ರಯತ್ನಗಳು ನಡೆಯುತ್ತಿರುವುದನ್ನು ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿದ್ದೇವೆ. ಈ ಆದರ್ಶದ ಸಾಧನೆಯು ಸುಲಭದ ಕೆಲಸವೇನಲ್ಲ. ನಮ್ಮ ದೇಶದಲ್ಲಿ ದೀರ್ಘಕಾಲದಿಂದ ಬೇರುಬಿಟ್ಟಿರುವ ಕೆಲವು ಅನಿಷ್ಟಪ್ರದ ಪದ್ಧತಿಗಳ ಉಚ್ಚಾಟನೆಯನ್ನು ಮಾಡಿದರೆ ಮಾತ್ರ ಯಶಸ್ಸು ಸಿಗಬಹುದಾದ ಘನತರವಾದ ಕಾರ್ಯವಿದು. ಆಸ್ತಿ–ಸೊತ್ತುಗಳ ಯಜಮಾನತ್ವವೇ ಮುಂತಾದ ಪ್ರಾಚೀನ ಸಂಪ್ರದಾಯಗಳ ಮೇಲೆ ಶಾಸನಿಕ ಪ್ರಹಾರವನ್ನು ನಡೆಸುವುದು ಅತ್ಯಂತ ಸಾಹಸದ ಕೆಲಸವೇ ನಿಜ. ಕೈಗಾರಿಕೋದ್ಯಮಗಳ ರಂಗವೂ ಈ ಮಟ್ಟಿಗೆ ಸಾಗುವಳಿ ಕ್ಷೇತ್ರದಷ್ಟೇ ಜಟಿಲತಮವಾದ ಸಮಸ್ಯೆಯನ್ನು ಸುಧಾರಕರ ಮುಂದೊಡ್ಡುತ್ತದೆ. ಇದನ್ನು ಪರಿಹರಿಸಲು ಸಮರ್ಥರಾಗದವರು ಸಮಾಜವಾದಿ ಆದರ್ಶವನ್ನು ಎಂದಿಗೂ ಮುಟ್ಟುವಂತಿಲ್ಲ. ಮೂಲಭೂತ ಉದ್ಯಮಗಳನ್ನು ಖಾಸಗಿ ರಂಗದ ಕೈಯಲ್ಲಿಟ್ಟರೆ ಅದು ಸಮಾಜದ ವಿಶಾಲಹಿತ ಮತ್ತು ಆವಶ್ಯಕತೆಗಳಿಗನುಸಾರವಾಗಿ ಕೆಲಸ ನಡೆಸೀತೆಂಬ ಭರವಸೆಯಿಲ್ಲ. ಅಲ್ಲದೆ ವಿಶಿಷ್ಟ ಹಿತಾಸಕ್ತಿಯುಳ್ಳ, ಹಾಗು ಲಾಭವೇ ಪ್ರಮುಖ ಧ್ಯೇಯವಾಗಿರುವ ಖಾಸಗಿ ಗುಂಪುಗಳು ಸಮಾಜದ ಹಾಗು ದೇಶದ ಅಭ್ಯುದಯದ ಕುರಿತು ಹೆಚ್ಚಿನ ಗಮನ ಕೊಟ್ಟೇ ನಡೆಯುವವೆಂಬ ನಂಬಿಕೆಯಿಲ್ಲ. ಅಗ್ಗ ದರದಲ್ಲಿ ವಸ್ತುಗಳ ಪೂರೈಕೆ, ಎಲ್ಲರಿಗೂ ತಕ್ಕ ವಸ್ತುಗಳ ಸರಬರಾಜು ಇತ್ಯಾದಿ ಅನೇಕ ವಿಷಯಗಳಲ್ಲಿ ಖಾಸಗಿ ರಂಗವು ತನಗೆ ನಷ್ಟ ಮಾಡಿಕೊಳ್ಳಲಿಚ್ಛಿಸದೆ ಹಿಂದುಳಿದಿದೆ. ಹಾಗೆಯೇ ಅಪಾರ ಭಂಡವಾಳ ಬೇಕಾಗುವ ಉದ್ಯಮಗಳಲ್ಲಿ ಕೈ ಹಾಕಿ, ದೇಶದ ಮೂಲ ಸಂಪತ್ತನ್ನು ಹೆಚ್ಚಿಸುವುದರಲ್ಲೂ ಖಾಸಗಿ ರಂಗವು ಉದಾಸೀನತೆ ತೋರಿಸಿದೆ. ಇವೆಲ್ಲ ಲೋಪದೋಷಗಳ ಪರಿಹಾರಾರ್ಥವಾಗಿ ಸರಕಾರವೇ ತನ್ನ ವಿಶ್ವಾಸವುಳ್ಳ ತಜ್ಞರ ನೇತೃತ್ವದಲ್ಲಿ ಔದ್ಯಮಿಕ ಹಾಗು ವಾಣಿಜ್ಯ ಕ್ಷೇತ್ರದ ಪ್ರತ್ಯಕ್ಷ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಪ್ರಸಂಗ ಬಂದಿರುತ್ತದೆ.

ಇದು ಸಮಾಜವಾದಿ ಆದರ್ಶದ ಸಾಧನೆಯ ಹಂಬಲವುಳ್ಳ ಸರಕಾರದ ಮೇಲೆ ಬಂದು ಬಿದ್ದ ಭಾರ. ಸರಕಾರವು ತನ್ನ ನೌಕರರ ಮೇಲೆ ವಿಶ್ವಾಸವನ್ನಿಟ್ಟೇ ಈ ಗುರುತರವಾದ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿದೆ. ಈ ನೌಕರರು ಇಂಥ ಜವಾಬ್ದಾರಿಯನ್ನು ಹೊರಲು ತಕ್ಕವರಾಗಿ ಉಳಿಯಬೇಡವೆ? ಸಮಾಜವಾದಿ ಆದರ್ಶಕ್ಕೆ ಅಂಟಿಕೊಂಡ ಸರಕಾರವು ತನ್ನ ನೌಕರ ವರ್ಗದ ವಿಷಯದಲ್ಲಿ ವಿಶೇಷ ಜಾಗರೂಕತೆಯನ್ನು ತೋರಿಸಬೇಕಾಗಿದೆ. ಇವತ್ತಿನ ದಿವಸ ನಾವು ನೋಡುತ್ತಿರುವ ನೌಕರ ವರ್ಗವು ಸಮಾಜವಾದಿ ಆದರ್ಶ ಸಾಧನೆಗೆ ಎಷ್ಟಕ್ಕೂ ಪೋಷಕವಾಗಿಲ್ಲ. ಜವಾಬ್ದಾರಿ ಸ್ಥಾನದಲ್ಲಿರುವ ನೌಕರರೆಲ್ಲ ಹೆಚ್ಚಾಗಿ ಶ್ರೀಮಂತ ಕುಟುಂಬಗಳಿಂದ ಬಂದವರು—ಅವರು ಭಾರತದಲ್ಲಿ ತಾಂಡವವಾಡುತ್ತಿರುವ ಬಡತನದ ಪರಿಚಯವನ್ನು ಪ್ರತ್ಯಕ್ಷವಾಗಿ ಮಾಡಿಕೊಂಡವರೇ ಅಲ್ಲ; ಅನುಭವಿಸಿ ಅವರಿಗೆ ಗೊತ್ತಿಲ್ಲ. ಬಡತನದಲ್ಲಿ ಹುಟ್ಟಿದವರಾದರೂ ಅಧಿಕಾರ ಸ್ಥಾನಕ್ಕೇರಿದ ಬಳಿಕ ದೊಡ್ಡವರೊಡನೆ ನಂಟುತನ ಬೆಳೆಸಿ, ಬಡವರ ಸಂಪರ್ಕವನ್ನೆ ತೊರೆದು, ಅಂಥ ಸಂಪರ್ಕವನ್ನು ಜುಗುಪ್ಸೆಯಿಂದ ಕಂಡು ದಿನಗಳೆಯುವ ಮಟ್ಟಕ್ಕೆ ಮುಟ್ಟಿರುವುದೇ ಹೆಚ್ಚಿನ ಮಟ್ಟಿಗೆ ಸತ್ಯ. ತಮ್ಮ ಕಾರ್ಯಾಲಯ, ಮನೆ ಮತ್ತು ಕ್ಲಬ್ಬುಗಳ ಹೊರಗಿನ ವಿಶಾಲ ಜಗತ್ತಿನ ತಿಳಿವಳಿಕೆ ಅವರಿಗಿದೆ ಎಂಬುದನ್ನು ನಂಬಲಾಗುವುದಿಲ್ಲ; ಅವರಿಗೆ ಅಂಥದೇನಾದರೂ ತಿಳಿವಳಿಕೆಯಿದ್ದರೆ ಕೆಳ ಅಂತಸ್ತಿನ ನೌಕರರಿಂದ ಬಂದ ವರದಿಗಳು ಮತ್ತು ಅವರಿವರಿಂದ ಕೇಳಿದ ಸುದ್ದಿಗಳಷ್ಟಕ್ಕೆ ಅದು ಮಿತವಿರುವುದು ಅಧಿಕ. ಅವರಿಗೆ ತಮ್ಮ ಸ್ಥಾನ ಭದ್ರತೆ ಮತ್ತು ಮೇಲಿನ ಸ್ಥಾನಕ್ಕೆ ಭಡ್ತಿ ದೊರಕಿಸಿಕೊಳ್ಳುವ ಹಂಬಲ ಎಂಬೀ ವಿಷಯಗಳ ಕಡೆಗಿದ್ದಷ್ಟು ಗಮನವು ಸರಕಾರದ ಉದ್ದೇಶಗಳನ್ನು ನಿತ್ಯ ವ್ಯವಹಾರದಲ್ಲಿ ಇಳಿಸುವ ಕಡೆಗಿದೆ ಎನ್ನುವುದೂ ಸಂಶಯ. ನಿರ್ಣಯ ಹೇಳಬೇಕಾಗಿ ಬಂದಾಗ ತನ್ನ ಬುದ್ಧಿಮತ್ತೆಯ ಮೇಲಿದ್ದಷ್ಟು ವಿಶ್ವಾಸವು ಅವರಿಗೆ ಜನತೆಯ ಅಭಿಪ್ರಾಯದ ಕುರಿತಿರುವುದಿಲ್ಲ ಎನ್ನಬಹುದು.

ಅಭಿವೃದ್ಧಿ ಪ್ರಯತ್ನಗಳೇ ಮುಂತಾದ ಚಟುವಟಿಕೆಗಳಲ್ಲಿ ಜನತೆಯ ಅತ್ಯಧಿಕ ಸಹಕಾರವನ್ನು ದೊರಕಿಸಿಕೊಳ್ಳಬೇಕಾಗುವ ನೌಕರರು ಜನಾಭಿಪ್ರಾಯವನ್ನು ಪುರಸ್ಕರಿಸುವವರೂ ಅಪರ ಅಂತಸ್ತಿಗೆ ಇಳಿದು ಬರುವವರೂ ಆಗಿರಬೇಕಾಗುತ್ತದೆ. ಅದರಂತೆ ವಿವಿಧ ಉದ್ಯಮಗಳನ್ನು ನಡೆಸಿಕೊಂಡು ಹೋಗುವ ಹೊಣೆಯನ್ನು ಹೊರುವ ನೌಕರರು ಆಯಾ ಉದ್ಯಮದಲ್ಲಿ ಪ್ರಾವೀಣ್ಯ ಸಂಪಾದಿಸಿರಬೇಕಾಗುತ್ತದೆ. ಈಗ ಇಂಥ ಜನರ ಪೂರೈಕೆ ಸಮರ್ಪಕವಾಗಿ ಆಗುತ್ತಿಲ್ಲ. ಅಸಮರ್ಪಕವಾದ ಪೂರೈಕೆಯು ಸಾರ್ವಜನಿಕ ರಂಗದಲ್ಲಿದ್ದರೆ ಖಾಸಗಿ ರಂಗದಿಂದ ಜನತೆಗೆ ದೊರಕುತ್ತಿದ್ದ ಪ್ರಯೋಜನವನ್ನು—ಅದು ಎಷ್ಟೆ ಸ್ವಲ್ಪವಿದ್ದರೂ—ತಪ್ಪಿಸಿದ ದೋಷ ಸರಕಾರದ ಮೇಲೆ ಬಂದೆರಗುತ್ತದೆ. ಆದುದರಿಂದ ಈಗ ಸರಕಾರಿ ನೌಕರ ಸ್ಥಾನಗಳನ್ನು ತುಂಬಿಸಿಕೊಳ್ಳುವ ನಮೂನೆಯೇ ಬದಲಾಗುವುದು ಅವಶ್ಯವಿದೆ. ಅರ್ಹತೆಯು ಸಾಮಾನ್ಯ ಭಾರತೀಯನ ನೆಲೆಯಿಂದಲೂ ಸಮೃದ್ಧ ಭಾರತವನ್ನು ಕಟ್ಟುವ ಉನ್ನತ ಧ್ಯೇಯದಿಂದಲೂ ತೀರ್ಮಾನಿಸಲ್ಪಟ್ಟು ಅದಕ್ಕೆ ತಕ್ಕ ಆಯ್ಕೆ ನಡೆಯಬೇಕಾಗಿದೆ. ಸಾಮಾಜಿಕ ಹಿತವನ್ನು ವೃದ್ಧಿಸಲಿಕ್ಕೆಂದು ಮತ್ತು ಉದ್ಯಮವನ್ನು ಚೆನ್ನಾಗಿ ಚರ್ಚಿಸಲೆಂದು ಸರಕಾರವು ತನ್ನ ಕೈಗೆ ಖಾಸಗಿ ರಂಗದಿಂದ ಹಸ್ತಾಂತರಿಸಿದ ಕೈಗಾರಿಕೆಯು ಎಂದೂ ಅವನತಿಯನ್ನು ಹೊಂದಲಾಗದು.

ಇಷ್ಟೆಲ್ಲ ಹೇಳಿದ ಬಳಿಕ ಸಮಾಜವಾದದ ಕುರಿತು ಕೆಲವರಿಗಿರುವ ಭ್ರಮೆಯನ್ನು ಪ್ರಸ್ತಾಪಿಸಬೇಕಾಗುತ್ತದೆ. ಸಮಾಜವಾದಕ್ಕೆ ಇದ್ದುದನ್ನು ಹಂಚಿಕೊಳ್ಳುವುದರಲ್ಲಿರುವಷ್ಟು ಆಸಕ್ತಿಯು ಅಂಥ ಸಂಪತ್ತನ್ನು ವೃದ್ಧಿಸುವುದರಲ್ಲಿಲ್ಲ. ಅದು ಏರುತಗ್ಗುಗಳನ್ನು ಸರಿಪಡಿಸುವ ನೆಪದಲ್ಲಿ, ಅದೃಷ್ಟಹೀನರ ಅದೃಷ್ಟವನ್ನು ಬೆಳಗಿಸುವ ಉದ್ದೇಶದ ಮರೆಯಲ್ಲಿ, ಸಮಾಜದ ಸಾಮಾನ್ಯ ಅಂತಸ್ತನ್ನೇನು ಹೆಚ್ಚಿಸುತ್ತಿಲ್ಲ—ಎಂದು ಟೀಕಾಕಾರರು ಹೇಳುವುದುಂಟು. ಸಮಾಜವಾದವನ್ನು ಮೆಚ್ಚಿಕೊಂಡ ಯಾವ ದೇಶಕ್ಕಾದರೂ ಟೀಕಾಕಾರರ ಮೇಲಿನ ಮಾತು ಒಂದು ಆಹ್ವಾನವೇ ನಿಜ. ಇದಕ್ಕೆ ಯೋಗ್ಯ ಉತ್ತರವನ್ನು ಕೊಡದಿದ್ದರೆ ತಾರ್ಕಿಕ ಬುದ್ಧಿಯು ಯಾರಿಗೂ ಸಮಾಧಾನವಾಗಲಾರದು. ನಮ್ಮ ವಿತರಣೆಯ ಕಾರ್ಯಕ್ರಮವು ಉತ್ಪಾದನೆಯ ಕಾರ್ಯಕ್ರಮಕ್ಕೆ ವ್ಯತಿರಿಕ್ತವಾಗಿ ಅದರ ಮಿತಿಯನ್ನು ಮೀರಿ ನಡೆದರೆ ಅಪಾಯ ಸಂಭವಿಸುವ ಭಯ ತಪ್ಪದು.

ಪ್ರತಿಯೊಬ್ಬನಿಂದಲೂ ಆತನ ಸಾಮರ್ಥ್ಯಾನುಸಾರವಾಗಿ ತೆಗೆದುಕೊಂಡು ಪ್ರತಿಯೊಬ್ಬನಿಗೂ ಆತನ ಆವಶ್ಯಕತಾನುಸಾರ ಕೊಡುವ ಪದ್ಧತಿಯನ್ನು ಮಾರ್ಕ್ಸನು ಎತ್ತಿ ಹಿಡಿದಿದ್ದನು. ಲೆನಿನ್ನನು ಪ್ರತಿಯೊಬ್ಬನಿಂದಲೂ ಆತನ ಸಾಮರ್ಥ್ಯಾನುಸಾರವಾಗಿ ತೆಗೆದುಕೊಂಡು ಪ್ರತಿಯೊಬ್ಬನಿಗೂ ಆತನ ಕೆಲಸಕ್ಕನುಸರಿಸಿ ಕೊಡುವ ಕ್ರಮವನ್ನು ಪ್ರತಿಪಾದಿಸಿದನು. ಭಾರತವು ಉತ್ಪಾದನೆ ಮತ್ತು ಹಂಚಿಕೆಗಳ ವಿಷಯದಲ್ಲಿ ಇದಕ್ಕೂ ಉತ್ತಮವಾದ ಒಂದು ಸೂತ್ರವನ್ನು ಕಂಡು ಹಿಡಿಯಬೇಕಾಗಿದೆ; ಮತ್ತು ಅದನ್ನೇ ಭಾರತದಲ್ಲಿ ಸಮಾಜವಾದಿ ಆದರ್ಶದ ಯಶಸ್ಸು ಅವಲಂಬಿಸಿರುತ್ತದೆ.

ಕೊನೆಯದಾಗಿ, ಯಾವುದೇ ತತ್ತ್ವವಾದರೂ ಉತ್ತಮ ಕೆಲಸಗಾರರಿಲ್ಲದೆ ಜನರ ಮನಸ್ಸಿನ ಕದವನ್ನು ತಟ್ಟಿ ತೆರೆದು ಅಲ್ಲಿ ಪ್ರವೇಶಿಸಿ, ಶಾಶ್ವತವಾಗಿ ನೆಲೆಗೊಳ್ಳಲಾರದು. ನಿಧಾನವಾಗಿ ರೂಪುಗೊಳ್ಳುತ್ತಾ ಸಾಗಿರುವ ಸಮಾಜವಾದಿ ಆದರ್ಶದ ಸ್ಪಷ್ಟ ಕಲ್ಪನೆಯು ಈ ಆದರ್ಶದಲ್ಲಿ ತೀವ್ರ ಆಸಕ್ತಿಯುಳ್ಳವರಿಗೆ ನಿಧಾನವಾಗಿಯಷ್ಟೇ ಆಗುತ್ತಿರುವಾಗ ಸಾಮಾನ್ಯ ಜನತೆಗೆ—ಅದರಲ್ಲೂ ಸಂಪ್ರದಾಯಪ್ರಿಯರೂ ಬಡಜನರೂ ಆದ ಭಾರತೀಯರ ಪಾಲಿಗೆ—ಕ್ರಾಂತಿಕಾರಕ ಹೆಜ್ಜೆಗಳ ಗುರುತು ಹತ್ತಬೇಕಾದರೆ ಅಂಥಿಂಥ ಪ್ರಯತ್ನ ಸಾಲದು. ನಮ್ಮ ಪ್ರಗತಿಯು ನಿಧಾನ ಕ್ರಮದಿಂದ ನಡೆಯುತ್ತಿದೆ ಎಂಬುದೇ ನಮ್ಮ ಕೆಲಸವೂ ನಿಧಾನವಾದುದಾಗಿರಬೇಕೆಂಬುದಕ್ಕೆ ಕಾರಣವಾಗಲಾರದು; ನಿಷ್ಕ್ರಿಯತೆಗೆ ಅದೆಂದೂ ಎಡೆಕೊಡಕೂಡದು. ಸಮಾಜವಾದಿ ಆದರ್ಶವನ್ನು ಚೆನ್ನಾಗಿ ಅರಗಿಸಿಕೊಳ್ಳುವುದೂ ಹಾಗೆ ಅರಗಿಸಿಕೊಂಡುದನ್ನು ಇತರರಿಗೆ ಮನವರಿಕೆ ಮಾಡಿಸಿಕೊಟ್ಟು ಅವರು ಸಹ ಸಹಜವಾಗಿ ಪರಿವರ್ತನಶೀಲವಾದ ಈ ಜಗತ್ತಿನ ಹೆಜ್ಜೆಯ ವೇಗದೊಡನೆ ಹೆಜ್ಜೆಯನ್ನಿಡುವಂತೆ ನೋಡಿಕೊಳ್ಳುವುದೂ ನಮ್ಮೆಲ್ಲರ ಕರ್ತವ್ಯ.

ಉಪಯುಕ್ತ ವಿಷಯಗಳಿಂದ
ಹಾಗೂ ಚಿತ್ರಗಳಿಂದೊಡಗೂಡಿದ
ಹೊಸ ಪುಸ್ತಕ

ರತಿ ಆಸನಗಳು

ಬೆಲೆ ೨—೦—೦
(ವ್ಹಿ. ಪಿ. ಖರ್ಚು ಪ್ರತ್ಯೇಕ)
ಶ್ರೀ ಶಾರದಾ ಪ್ರಕಾಶನ,
ವಿಭೂತಿಗಲ್ಲಿ, ಗದಗ.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.
ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, **UDIPI,** S. KANARA.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಟೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16–18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.
ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**
628 "ಸಂತಾನ ಸಿಂದೂರ ಸದನ" (N. Y.)
ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು (MYSORE) S. I.

ಪಕ್ಷನಿಷ್ಠ ಪ್ರತಿನಿಧಿಗಳು ಮತ್ತು ಪ್ರಜಾಪ್ರಭುತ್ವ

ಈಗಿನ ವ್ಯವಹಾರ ಕ್ರಮದಿಂದ ಮೂಲೋದ್ದೇಶದ ಭಂಗ

ಬ್ರಿಟನು ಮತ್ತು ಅಮೇರಿಕಗಳ ಘಟನೆಗಳನ್ನು ಪ್ರಜಾಸತ್ತಾತ್ಮಕ ಸ್ವರೂಪದವುಗಳೆಂದು ಕರೆಯಲಾಗುತ್ತದೆ; ಮತ್ತವು ಭಾರತವನ್ನೊಳಗೊಂಡು ಬೇರೆ ಕೆಲವು ದೇಶಗಳಿಗೆ ಮಾದರಿಯಾಗಿವೆ ಎನ್ನಲಾಗುತ್ತದೆ. ಮೇಲಿನೆರಡೂ ದೇಶಗಳಲ್ಲಿ ರಾಜಕೀಯ ಪಕ್ಷಗಳಿವೆ. ಬ್ರಿಟನಿನಲ್ಲಿ ಸಂಸತ್ತಿನ ವ್ಯವಹಾರವೇ ಪ್ರಧಾನವಾಗುಳ್ಳ ಪ್ರಜಾಪ್ರಭುತ್ವವಿದ್ದರೆ ಅಮೇರಿಕದಲ್ಲಿರುವುದು ರಾಷ್ಟ್ರಾಧ್ಯಕ್ಷರ ಕೈವಾಡವೇ ಮಹತ್ವ ಪಡೆಯುವ ಪ್ರಜಾಪ್ರಭುತ್ವ. ಇಂಥ ಪ್ರಜಾಸತ್ತೆಯಲ್ಲಿ ರಾಜಕೀಯ ಪಕ್ಷಗಳು ಅತ್ಯವಶ್ಯವಾಗಿಯೂ ಬೇಕಾಗಿವೆಯೆ? ಅವರಲ್ಲೂ ಸಂಸತ್ತಿನ ವ್ಯವಹಾರವೇ ಪ್ರಧಾನವಾಗುಳ್ಳ ಪ್ರಜಾಪ್ರಭುತ್ವದ ಜಾತಿಗೆ ರಾಜಕೀಯ ಪಕ್ಷಗಳಿಲ್ಲದೆ ಹೋದರೆ ಬಾಧಕವಿದೆಯೆ?

ಮೂಲಭೂತವಾಗಿ ಪ್ರಜಾಪ್ರಭುತ್ವವು ಜನರಿಗಾಗಿ ಜನರಿಂದ ನೇರವಾದ, ಅಥವಾ ಚುನಾವಣೆಯ ಮೂಲಕ ಮನ್ನಣೆ ಪಡೆದ ಸದಸ್ಯರ ಬಹುಮತದ ನಿರ್ಧಾರವೇ ಸಿಂಧುವಾಗಿ ಅದನ್ನು ಜ್ಯಾರಿಗೊಳಿಸುವ ಸರಕಾರದ ರಚನೆ ಎಂದಾದರೆ ಬ್ರಿಟನು ಮತ್ತು ಅಮೇರಿಕಗಳ ಘಟನೆಗಳು ಪ್ರಜಾಸತ್ತಾತ್ಮಕವಾಗಿವೆ ಎನ್ನಬಹುದೆ; ಮತ್ತು ಅವುಗಳಲ್ಲಿರುವ ವ್ಯತ್ಯಾಸವನ್ನು ಗಮನಿಸಿಯೂ ಆಯಾ ದೇಶಗಳ ಘಟನೆ ಪ್ರಜಾಸತ್ತಾತ್ಮಕವಿದೆ ಎಂದೊಪ್ಪಬಹುದೆ ಎಂಬ ಪ್ರಶ್ನೆ ಏಳುತ್ತದೆ. ಬ್ರಿಟನಿನಲ್ಲಿ ಘಟನೆಗೆ ನೇರಾದ ಸಂಬಂಧವುಳ್ಳ ಶಾಸನಗಳು ಮತ್ತು ಅಂಥ ಸಂಬಂಧವಿಲ್ಲದ ಶಾಸನಗಳು ಎಂಬ ಭೇದಭಾವವಿರುವುದಿಲ್ಲ: ಅವೆರಡೂ ಬಗೆಯ ಶಾಸನಗಳು ಸಾಮಾನ್ಯ ಶಾಸನಗಳಾಗಿದ್ದು, ಸಂಸತ್ತಿನ ಸರಳ ಬಹುಮತದ ಮೇಲಿನಿಂದ ಮನ್ನಣೆಯನ್ನು ಪಡೆಯುತ್ತವೆ. ಆದರೆ, ಅಮೇರಿಕದಲ್ಲಿ ಘಟನೆ ಮತ್ತದಕ್ಕೆ ಸಂಬಂಧಿಸಿದ ವ್ಯವಹಾರಗಳೇ ಪ್ರತ್ಯೇಕ, ಅಲ್ಲಿಯ ಚುನಾಯಿತ ಪ್ರತಿನಿಧಿ ಸಭೆಯಾದ ಕಾಂಗ್ರೆಸು ಮಾಡುವ ಶಾಸನಗಳ ಸ್ಥಾನಮಾನವೇ ಪ್ರತ್ಯೇಕ ಎಂಬ ವ್ಯತ್ಯಾಸವಿರುತ್ತದೆ. ದ್ವಿತೀಯ ಜಾತಿಗೆ ಸೇರಿದ ಶಾಸನಗಳು ಸರಳ ಬಹುಮತದಿಂದ ಮನ್ನಣೆಯನ್ನು ಹೊಂದುತ್ತವೆ; ಆದರೆ ಪ್ರಥಮ ಜಾತಿಯವಕ್ಕೆ ಇದಕ್ಕಿಂತಲೂ ಹೆಚ್ಚಿನ ಪೂರ್ವ ನಿಶ್ಚಿತ ಬಹುಮತವು ಅಗತ್ಯವೆನಿಸುತ್ತದೆ. ಹೀಗೆ ಅಮೇರಿಕದ ಒಂದು ಅಲ್ಪ ಸಂಖ್ಯಾಕ ವರ್ಗವು ಮನ್ನಣೆಯನ್ನು ಕೊಡದೆ, ನಿಶ್ಚಿತ ಬಹುಮತವು ಘಟನೆಗೆ ಸಂಬಂಧಿಸಿದ ಶಾಸನಕ್ಕೆ ಸಿಗದಂತೆ ಮಾಡಿದ ಪಕ್ಷದಲ್ಲಿ ಸರಳ ಬಹುಮತದ ಮೇಲಿನಿಂದ ಹೆಚ್ಚಿನ ಜನರಿಗೆ ಆ ಶಾಸನವು ಮಾನ್ಯವೆಂದು ಭಾವಿಸಲ್ಪಟ್ಟರೂ ಆ ಶಾಸನ ಮಂಜೂರಾತಿ ಪಡೆಯಲಾರದು. ಇಷ್ಟರ ಮಟ್ಟಿಗೆ ಬಹುಮತದ ಅಭಿಪ್ರಾಯವೇ ಸಿಂಧುವೆಂಬ ಪ್ರಜಾಪ್ರಭುತ್ವದ ಸೂತ್ರವು ಉಲ್ಲಂಘಿಸಲ್ಪಡುತ್ತದೆ. ಭಾರತವು ಅಮೇರಿಕದ ಮಾದರಿಯನ್ನು ಈ ವಿಷಯದಲ್ಲಿ ಅನುಸರಿಸಿರುವುದರಿಂದ ಬ್ರಿಟನಿಗಿಂತ ಈ ದೇಶವು ಕಡಿಮೆ ಪ್ರಜಾಸತ್ತಾತ್ಮಕ ವೈಶಿಷ್ಟ್ಯದಿಂದ ಕೂಡಿರುವಂತೆ ಭಾಸವಾಗುತ್ತದೆ. ನ್ಯೂಜೀಲೇಂಡಿನಲ್ಲಿ ಅಮೇರಿಕದಂತೆ ಬರವಣಿಗೆಯಿಂದ ಸ್ಥಿರರೂಪವನ್ನು ಕೊಟ್ಟಿರುವ ಘಟನೆಯೊಂದು ಅಸ್ತಿತ್ವದಲ್ಲಿದ್ದರೂ ಅದನ್ನು ಬ್ರಿಟನಿನ ಮಾದರಿಯನ್ನನುಸರಿಸಿ ಸರಳ ಬಹುಮತದಿಂದ ತಿದ್ದಬಹುದು; ಭಾರತದಲ್ಲಿ ಸರಳ ಬಹುಮತವಲ್ಲ, ಪೂರ್ವ ನಿಶ್ಚಿತ ಪ್ರಮಾಣದ ಖಚಿತ ಬಹುಮತವು ಬೇಕಾಗುತ್ತದೆ.

ಅಮೇರಿಕ ಮತ್ತು ಬ್ರಿಟನುಗಳ ಘಟನೆಗಳು ಇನ್ನೊಂದು ಸಂಗತಿಯಲ್ಲೂ ವ್ಯತ್ಯಾಸವನ್ನು ತೋರಿಸುತ್ತವೆ; ಬ್ರಿಟನಿನಲ್ಲಿರುವುದು ಸಂಸತ್ತಿನ ವ್ಯವಹಾರವೇ ಪ್ರಧಾನವಾಗುಳ್ಳ ಪ್ರಜಾಪ್ರಭುತ್ವ ಮತ್ತು ಅಮೇರಿಕದಲ್ಲಿರುವುದು ರಾಷ್ಟ್ರಾಧ್ಯಕ್ಷರ ಕೈವಾಡಕ್ಕೆ ಮಹತ್ವ ಸಲ್ಲುವ ಪ್ರಜಾಪ್ರಭುತ್ವ ಎಂಬುದೇ ಈ ವ್ಯತ್ಯಾಸ. ನಾವು ಈ ಸಂಗತಿಯಲ್ಲಿ ಬ್ರಿಟನಿನ ಮಾದರಿಯನ್ನು ಅನುಸರಿಸಿದ್ದೇವೆ. ಬ್ರಿಟನಿನ ಮಾದರಿಯು ಸಾಮಾನ್ಯ ವ್ಯವಹಾರಗಳ ಮಟ್ಟಿಗೆ ದ್ವಿತೀಯ ಶ್ರೇಣಿಯ ಪ್ರಜಾಪ್ರಭುತ್ವವೆನಿಸುತ್ತದೆಯೇ ಹೊರತು ಅಮೇರಿಕದಂತೆ ಪ್ರಥಮ ಶ್ರೇಣಿಯದಲ್ಲ. ಬ್ರಿಟನಿನ ಪದ್ಧತಿಯಂತೆ ಸಂಸತ್ತಿನಲ್ಲಿ ಯಾವುದೇ ಒಂದು ಪ್ರಮುಖ ವಿಷಯದ ಮೇಲಿಂದ ಸರಕಾರವು ಸೋಲಿಸಲ್ಪಟ್ಟರೆ, ಸರಕಾರವು ರಾಜೀನಾಮೆಯನ್ನು ಕೊಡಬೇಕಾಗುತ್ತದೆ; ಅಥವಾ ಸಂಸತ್ತೇ ವಿಸರ್ಜಿಸಲ್ಪಟ್ಟು ಹೊಸತಾಗಿ ಚುನಾವಣೆಗಳನ್ನು ನಡೆಸಬೇಕಾಗುತ್ತದೆ. ಅಮೇರಿಕದಲ್ಲಿ ಹಾಗಲ್ಲ—ರಾಷ್ಟ್ರಾಧ್ಯಕ್ಷರ ಮತ್ತು ಚುನಾಯಿತ ಪ್ರತಿನಿಧಿ ಸಭೆಯಾದ ಕಾಂಗ್ರೆಸಿನ ಅಧಿಕಾರಾವಧಿಯನ್ನು ನಾಲ್ಕು ವರ್ಷಗಳೆಂದು ಮೊದಲೇ ನಿಗದಿ ಮಾಡಲಾಗಿದೆ. ರಾಷ್ಟ್ರಾಧ್ಯಕ್ಷರು ಕಾಂಗ್ರೆಸಿಗೆ ಹೊಣೆಗಾರರಿರುವುದಿಲ್ಲ ಮತ್ತವರು ರಾಜೀನಾಮೆಯನ್ನು ಕಾಂಗ್ರೆಸಿನ ಒತ್ತಾಯದ ಮೇಲಿಂದ ಕೊಡಬೇಕಾಗಿಲ್ಲ. ಕಾಂಗ್ರೆಸನ್ನು ಅವಧಿಗೆ ಮೊದಲೇ ಅದು ತನ್ನ ಸೂಚನೆಯನ್ನು ಮನ್ನಿಸಲಿಲ್ಲವೆಂಬ ಕಾರಣದಿಂದ ವಿಶೇಷಾಜ್ಞೆ ಹೊರಡಿಸಿ ರಾಷ್ಟ್ರಾಧ್ಯಕ್ಷರು ವಿಸರ್ಜಿಸುವುದೂ ಸಾಧ್ಯವಿಲ್ಲ.

ಬ್ರಿಟನಿನ ಪದ್ಧತಿಯು ಸರಕಾರದ ಮೇಲೆ ಹೆಚ್ಚಿನ ಹೊರೆಯನ್ನು ಹೇರುತ್ತದೆ. ಪ್ರತಿಕ್ಷಣವೂ ಸಂಸತ್ತಿನ ಬಹುಮತವು ತನಗೆ ಉಳಿಯುವಂತೆ ಸರಕಾರವು ಮನವೊಲಿಸುವಿಕೆಯ ಅಥವಾ ಅವಿಶ್ವಾಸವನ್ನು ಮುನ್ನೊಡ್ಡುವ ಮಾರ್ಗವನ್ನು ಅವಲಂಬಿಸಬೇಕಾಗುತ್ತದೆ. ಅನ್ಯಥಾ ರಾಜೀನಾಮೆಕೊಟ್ಟು ಹೊರಬೀಳುವ ಅಥವಾ ಸಂಸತ್ತನ್ನೆ ವಿಸರ್ಜಿಸುವ ಪ್ರಮೇಯ ಬರುತ್ತದೆ. ಅವಧಿಗೆ ಮೊದಲೇ ಸಂಸತ್ತನ್ನು ವಿಸರ್ಜಿಸುವುದೆಂದರೆ ಹೊಸ ಚುನಾವಣೆ ನಡೆಸಲು ಹೆಚ್ಚಿನ ವೆಚ್ಚವನ್ನು ಅನಿವಾರ್ಯವಾಗಿ ಮಾಡಲು ಬಾಧ್ಯರಾಗುವ ಸಂದರ್ಭ. ಸೋಲಿಗೆ ನೆಪವಾದ ಒಂದು ಶಾಸನದ ಯೋಗ್ಯತೆ ಮತ್ತು ಹೊಸ ಚುನಾವಣೆಗಳನ್ನು ನಡೆಸಲು ಬೇಕಾದ ಹಣ ಮತ್ತು ಅದರಲ್ಲಿ ವ್ಯಯವಾಗುವ ಶಕ್ತಿಗಳಿಗೇನಾದರೂ ಸಮತೂಕದ ಸಂಬಂಧವಿದೆಯೆ ಎಂಬುದಿಲ್ಲಿ ವಿಚಾರಣೀಯವಾದ ಅಂಶ. ಇಲ್ಲಿ ಮಂತ್ರಿಮಂಡಳವು ತೀರ ಅಭದ್ರ ತಳಹದಿಯಿಂದ ಕೂಡಿರುತ್ತದೆ; ಸೋಲಿನ ಪ್ರಸಂಗದಲ್ಲಿ ರಾಜೀನಾಮೆಯನ್ನು ಕೊಟ್ಟೇ ಮಂತ್ರಿಮಂಡಳವು ಹೊರಬೀಳಬೇಕಾದುದರಿಂದ ಮತ್ತು ಸಂಸತ್ತಿನ ಅಥವಾ ಶಾಸನಾಂಗದ ವಿಸರ್ಜನೆಯಾಗುವುದೂ ಸಂಭವನೀಯವಾದುದರಿಂದ ಒಳ್ಳೆಯ ಮುಖಂಡರನ್ನು ಅವರ ಕೆಟ್ಟಗುಣಗಳಿಗಾದರೂ ಓಲೈಸುವ ಮತ್ತು ಹಾಗೆ ಆ ಕೆಟ್ಟ ಗುಣಗಳು ಆಡಳಿತದಲ್ಲಿ ಪ್ರತಿಫಲನ ಹೊಂದುವ "ಶಿಸ್ತು ಮತ್ತು ಗೌರವದ ವಿಚಾರಗಳು" ಇಲ್ಲಿ ತಲೆ ಹಾಕುತ್ತವೆ; ಮತ್ತಿದು ಪ್ರಜಾಪ್ರಭುತ್ವವನ್ನು ಏಕಸತ್ತೆಯಾಗಿ ಮಾರ್ಪಡಿಸುತ್ತವೆ. ಆದರೆ ಅಮೇರಿಕದ ಮಾದರಿಯನ್ನನುಸರಿಸಿ ರಾಷ್ಟ್ರಾಧ್ಯಕ್ಷರ ಹಾಗು ಚುನಾಯಿತ ಪ್ರತಿನಿಧಿ ಸಭೆಯ ಅಧಿಕಾರಾವಧಿಯನ್ನು ನಿರ್ಧರಿಸಿದ ಪ್ರಸಂಗದಲ್ಲಿ ರಾಜೀನಾಮೆ ಕೊಡುವುದನ್ನು ತಪ್ಪಿಸಲಿಕ್ಕಾಗಿ ನಾವು ಮಾರ್ಗಾವಲಂಬಿಗಳಾಗುವ ಪ್ರಮೇಯ ಬರುವಂತಿಲ್ಲ. ಪ್ರತಿನಿಧಿಗಳಿಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಲೂ ಸರಕಾರದ ಮುಖಂಡರ ದುಷ್ಟ ಹೇತುಗಳಿಗೆ ಒಪ್ಪಿಗೆಯನ್ನು ನಿರಾಕರಿಸಲೂ ಸಂಪೂರ್ಣ ಅವಕಾಶ ಇಲ್ಲಿ ದೊರೆಯುತ್ತದೆ. ಯಾವುದೇ ರಾಜಕೀಯ ಅಸ್ಥಿರತೆ ಅಥವಾ ಕ್ಷೋಭೆಗೆ ಎಡೆಕೊಡದೆ ಈ ಕೆಲಸ ನಡೆಯುವುದೆಂಬುದೇ ಇಲ್ಲಿ ಉಲ್ಲೇಖಿಸಬೇಕಾದ ವೈಶಿಷ್ಟ್ಯ.

ಇಲ್ಲಿ ನಾವೊಂದು ಸಂಗತಿಯನ್ನು ಅವಶ್ಯವಾಗಿ ಗಮನಿಸಬೇಕು; ಅದೆಂದರೆ, ಯಾವುದೇ ಘಟನೆಯು ರಾಜಕೀಯ ಪಕ್ಷಗಳಿಗೆ ಪ್ರತ್ಯಕ್ಷ ಮನ್ನಣೆಯನ್ನು ಕೊಟ್ಟಿಲ್ಲ—ರಾಜಕೀಯ ಪಕ್ಷಗಳಿರಬೇಕೆಂಬ ತತ್ತ್ವವನ್ನು ಯಾವುದೇ ಘಟನೆಯು ಪ್ರಸ್ತಾಪಿಸಿಲ್ಲ. ಸಂಸತ್ತಿನ ವ್ಯವಹಾರವೇ ಪ್ರಧಾನವಾಗುಳ್ಳ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದ ಘಟನೆಗಳೂ ರಾಜಕೀಯ ಪಕ್ಷ ಬೇಕೆಂದು ಹೇಳುತ್ತಿಲ್ಲ. ಈ ಮುಖ್ಯಾಂಶವು ಇಂದು ಹೆಚ್ಚಿನ ಜನರ ದೃಷ್ಟಿಯಿಂದ ದೂರವಾಗಿರುವುದು ನಿಜಕ್ಕೂ ಶೋಚನೀಯ. ನಮ್ಮಲ್ಲಿಯ ಸಾಮಾನ್ಯ ಅಭಿಪ್ರಾಯವು ಪ್ರಜಾಪ್ರಭುತ್ವದ ಯಶಸ್ಸಿಗೆ ರಾಜಕೀಯ ಪಕ್ಷಗಳಿರಲೇಬೇಕೆಂಬ ಸ್ವಕಪೋಲ ಕಲ್ಪಿತ ಸೂತ್ರದ ನೆಲೆಯಲ್ಲಿ ಹರಿಯುತ್ತಿದೆ. ಸಂಸತ್ತಿನ ವ್ಯವಹಾರವೇ ಪ್ರಧಾನವಾಗುಳ್ಳ ಬ್ರಿಟನು, ಭಾರತಗಳಂಥ ದೇಶಗಳಲ್ಲಿ ಸರಕಾರವನ್ನು ನಡೆಸುವ ಪಕ್ಷವೊಂದು, ಅದನ್ನು ರಚನಾತ್ಮಕವಾಗಿ ಟೀಕಿಸಿ, ತಪ್ಪುಗಳನ್ನು ಎತ್ತಿ ತೋರಿಸಿ, ಅವನ್ನು ಸರಿಪಡಿಸಲು ಒತ್ತಾಯಿಸುವ ಪ್ರತಿಪಕ್ಷವೊಂದು—ಹೀಗೆ ಎರಡಾದರೂ ಪಕ್ಷಗಳು ಪ್ರಜಾಪ್ರಭುತ್ವಕ್ಕೆ ಅತ್ಯವಶ್ಯವೆಂದು ಹೇಳುವವರೇ ಇಂದು ಅಧಿಕ.

ಜನರಲ್ಲಿರುವ ರಾಜಕೀಯ ಭಿನ್ನಾಭಿಪ್ರಾಯದ ನೆಲೆಯಿಂದಲೇ ರಾಜಕೀಯ ಪಕ್ಷಗಳು ಹುಟ್ಟಿಕೊಳ್ಳುತ್ತವೆಂದೂ ಒಂದೇ ಮನೋಭಾವದ ಕೆಲವು ಜನರ ಗುಂಪು ಒಂದು ಪಕ್ಷವಾಗಿ ಕೆಲಸವನ್ನು ತೊಡಗಿ, ತನ್ನ ಅಭಿಪ್ರಾಯವನ್ನು ನಿತ್ಯ ವ್ಯವಹಾರದಲ್ಲಿ ಕಾರ್ಯಗತಗೊಳಿಸಲು ಪ್ರಯತ್ನಶೀಲವಾಗುವುದೆಂದೂ ಸಾಮಾನ್ಯವಾಗಿ ಹೇಳಬಹುದು. ರಾಜಕೀಯ ಮಹತ್ವದ ವಿಷಯಗಳ ಸಂಖ್ಯೆಯು ಹೆಚ್ಚಾಗುತ್ತಾ ಹೋದಂತೆ ಜನರಲ್ಲಿ ಭಿನ್ನಾಭಿಪ್ರಾಯವೂ ಅಧಿಕಗೊಳ್ಳುತ್ತಲಿದೆ; ಈ ಭಿನ್ನಾಭಿಪ್ರಾಯವು ತೀವ್ರವಾದಂತೆ ಮತ್ತು ಅವಕ್ಕೆ ನೆಪವಾದ ಕಾರಣಗಳು ಅಧಿಕಗೊಂಡಂತೆ, ಜನರು ಟಿಸಿಲು ಟಿಸಿಲಾಗಿ ಒಡೆದು ಬೇರೆ ಬೇರೆಯಾಗುವ ಪ್ರವೃತ್ತಿ ಬಲಗೊಳ್ಳುತ್ತಾ ನಡೆದಿದೆ. ಪರಿಣಾಮದಲ್ಲಿ ಇಂದು ಎರಡು ಪ್ರಬಲ ಪಕ್ಷಗಳನ್ನು ರಚಿಸುವ ಪ್ರಯತ್ನವನ್ನು ಜನರು ಮಾಡದೆ, ನಾನಾ ಪಕ್ಷಗಳಲ್ಲಿ ಒಡೆದು ಹೋಗುವ ಚಪಲವನ್ನೇ ತೋರಿಸುತ್ತಿದ್ದಾರೆ; ಇದನ್ನು ಅಸ್ವಾಭಾವಿಕವೆಂದು ಹೇಳುವಂತಿಲ್ಲವಾದರೂ ರಾಜಕೀಯ ಪಕ್ಷಗಳ ಬೆಳವಣಿಗೆಯ ದೃಷ್ಟಿಯಿಂದ ಜನರು ತೋರಿಸುವ ಈ ವಿಶೇಷ ಒಲವು ಒಳ್ಳೆಯದೆನಿಸದು. ಅದೂ ಅಲ್ಲದೆ, ಪಕ್ಷವೊ

(೧೦ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ
ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು
ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಇಸ್ಲಾಮಿ ಪ್ರಜಾರಾಜ್ಯದಲ್ಲಿ ಅಲ್ಪಸಂಖ್ಯಾಕರ ಭವಿಷ್ಯ

ಭಯಕ್ಕೇನೂ ಎಡೆಯಿಲ್ಲನೆಂದು ಅಧ್ಯಕ್ಷರ ಆಶ್ವಾಸನ

ಸ್ವಾತಂತ್ರ್ಯ ಸಿಕ್ಕಿದ ಎಂಟೂವರೆ ವರ್ಷಗಳ ಬಳಿಕ, ನೆರೆಯ ರಾಷ್ಟ್ರವಾದ ಪಾಕಿಸ್ತಾನವು "ಇಸ್ಲಾಮಿಕ್ ರಿಪಬ್ಲಿಕ್ ಆಫ್ ಪಾಕಿಸ್ತಾನ್" ಎಂಬ ಅಭಿಧಾನದಿಂದ ಇದೇ ೨೩ನೇ ದಿನಾಂಕ ಘೋಷಿಸಲ್ಪಟ್ಟಿತು. ಬ್ರಿಟಿಷರು ಸ್ವಾತಂತ್ರ್ಯವನ್ನಿತ್ತು ತೆರಳಿದ ಗಳಿಗೆಯಿಂದ ಪಾಕಿಸ್ತಾನಕ್ಕೆ ಪ್ರತ್ಯೇಕ ರಾಷ್ಟ್ರೀಯತ್ವವು ಪ್ರಾಪ್ತವಾಗಿದ್ದರೂ ಅದಕ್ಕೊಂದು ಶಾಶ್ವತ ರೂಪವನ್ನು ಕೊಡುವ ರಾಜ್ಯಾಂಗ ಘಟನೆಯು ತಯಾರಿಗೆ ಇಷ್ಟು ದೀರ್ಘಕಾಲ ಬೇಕಾಯಿತು. ಭಿನ್ನಾಭಿಪ್ರಾಯಗಳಿಂದ ತೀರ ವಿಷಮಗೊಂಡ ವಾತಾವರಣಗಳಲ್ಲಿ ವಜ್ರಮುಷ್ಟಿಯ ಬಿಗಿಯಿಂದಲೇ ಪಾಕಿಸ್ತಾನಿ ಧುರೀಣರು ವರ್ತಿಸಿ, ಕೊನೆಗೊಮ್ಮೆಗೆದ್ದರು. ಇಂದೂ ಸಹ ಘಟನೆಯಿಂದ ಪಾಕಿಸ್ತಾನಿ ಧುರೀಣರಲ್ಲಿ ಪ್ರಮುಖ ವರ್ಗವೊಂದಕ್ಕೆ ಸಮಾಧಾನವಾಗಿಲ್ಲ. ಅಲ್ಪ ಸಂಖ್ಯಾಕ ಮತೀಯರ ಭಾವನೆಯಂತೂ ಬಹಳ ನೊಂದಿದೆ; ಘಟನೆಯು ನಾಗರಿಕರಲ್ಲಿ ಮುಸ್ಲಿಂ ಮತ್ತು ಮುಸ್ಲಿಮೇತರರೆಂಬ ನೆಲೆಯಿಂದ ಮಾಡಲಾದ ಭೇದಭಾವದಿಂದ ಬಹಳ ಬೇಸರಪಟ್ಟ ಜನರು ತಮ್ಮ ಭವಿಷ್ಯದ ಬಗ್ಗೆ ಚಿಂತಾಕುಲರಾಗಿದ್ದಾರೆ. ಅಲ್ಪಸಂಖ್ಯಾಕರಲ್ಲಿ ತಮಗೆ ಭದ್ರತೆಯೇ ಇಲ್ಲವೆಂಬ ಭಾವನೆ ಬಲಿತಿದ್ದು, ಪೂರ್ವ ಬಂಗಾಳದಿಂದ ನಿರಾಶ್ರಿತರಾಗಿ ಭಾರತದಲ್ಲಿ ನೆಲೆನಿಲ್ಲಬಯಸಿ ಓಡಿಬರುವ ಜನಸಂಖ್ಯೆ ಪ್ರತಿದಿನ ವೃದ್ಧಿಯಾಗುತ್ತದೆ.

ಬಾಯಿಮಾತಿನ ಭರವಸೆ

ಅಲ್ಪಸಂಖ್ಯಾಕ ವರ್ಗದಲ್ಲಿರುವ ಅಸಂತುಷ್ಟಿಯನ್ನು ನಿವಾರಿಸಲು ಬಾಯಿಮಾತಿನ ಭರವಸೆಯನ್ನು ಇಸ್ಲಾಮಿ ಪ್ರಜಾರಾಜ್ಯವಾಗಿ ಪಾಕಿಸ್ತಾನವು ಘೋಷಿಸಲ್ಪಟ್ಟೆಂದು ಈ ಪ್ರಜಾರಾಜ್ಯದ ಪ್ರಥಮ ಅಧ್ಯಕ್ಷರಾದ ಮಿರ್ಜಾ ಸಾಹೇಬರು ಕೊಟ್ಟರು. "ಅಲ್ಪಸಂಖ್ಯಾಕರನ್ನು ನ್ಯಾಯವಾಗಿಯೂ ಉದಾರತೆಯಿಂದಲೂ ನಡೆಸಿಕೊಳ್ಳುತ್ತೇವೆ. ಅವರಿಗೆ ಭಯ, ಅಭಾವ ಮತ್ತು ಬಡತನಗಳ ಪೀಡೆಯಿಲ್ಲದಂತೆ ನೋಡಿಕೊಳ್ಳುವುದೇ ನಮ್ಮ ಧ್ಯೇಯ" ಎಂದು ಅಧ್ಯಕ್ಷರು ಸಾರಿ ಹೇಳಿದರು. ಆದರೆ ಈ ಭರವಸೆಯು ಕಾರ್ಯರೂಪದಲ್ಲಿ ಇಳಿಯುವುದಕ್ಕೆ ಘಟನಾತ್ಮಕ ಪ್ರತಿಬಂಧಗಳೇ ಇವೆ-ನಾಗರಿಕರಲ್ಲಿ ಭಿನ್ನಭಾವ ಮಾಡುವ ತತ್ವವನ್ನು ಘಟನೆಯೇ ಎತ್ತಿ ಹಿಡಿದಿದೆ ಎಂದ ಮೇಲೆ, ಘಟನಾತ್ಮಕ ಪ್ರಭುವಾದ ಅಧ್ಯಕ್ಷರು ಸ್ವತಃ ಏನನ್ನೂ ಮಾಡುವಂತಿಲ್ಲವೆಂಬುದು ಸ್ಪಷ್ಟ. ಈ ಭರವಸೆಯು ಹೊರತೋರಿಕೆಗೆ ತುಂಬ ಸಹಾನುಭೂತಿಪರವೂ ಹೃದಯಾಂತಃಕರಣ ಶುದ್ಧಿಗೆ ನಿದರ್ಶನ ಪೂರ್ವಕವೂ ಆಗಿ ಕಂಡು ಬರುತ್ತದೇನೊ ನಿಜ; ಆದರೆ ಅಲ್ಪ ಸಂಖ್ಯಾಕ ವರ್ಗಗಳಿಗೆ ಅದು ನೆಮ್ಮದಿಯನ್ನು ತಂದು ಕೊಟ್ಟಿಲ್ಲವೆಂಬುದಕ್ಕೆ ಪೂರ್ವ ಬಂಗಾಳದ ಅಲ್ಪ ಸಂಖ್ಯಾಕ ವರ್ಗದ ಧುರೀಣರು ಈ ಭರವಸೆಯು ಪೊಳ್ಳಾಗಿದೆ ಎಂದು ದೂರಿರುವುದೇ ನಿದರ್ಶನ.

ಕಾಶ್ಮೀರದ ಪ್ರಸ್ತಾಪ

ಆಕಾಶವಾಣಿಯಲ್ಲಿ ತಮ್ಮ ಭಾಷಣವನ್ನು ಮುಂದರಿಸುತ್ತಾ ಅಧ್ಯಕ್ಷ ಮಿರ್ಜಾರು ಕಾಶ್ಮೀರದಲ್ಲಿರುವ ತಮ್ಮ "ಅದೃಷ್ಟಹೀನ ಸಹೋದರರ" ವಿಷಯದಲ್ಲಿ ಬಹಳ ಸಾಂತ್ವನಪರವಾದ ಮಾತುಗಳನ್ನಾಡಿದರು. ಈ ಕಾಶ್ಮೀರಿಗಳು ಸ್ವಾತಂತ್ರ್ಯದ ಕೈದೀವಟಿಗೆಯನ್ನು ಹಿಡಿದು ನಡೆದವರೆಂದು ಹೊಗಳಿದರು; ಸ್ವನಿರ್ಣಯಾಧಿಕಾರದ ಮೂಲಭೂತ ಹಕ್ಕಿಗಾಗಿ ಅವರು ಹೋರಾಡುತ್ತಿರುವುದನ್ನು ಮೆಚ್ಚಿದರು ಈ ಮೂಲಭೂತಾಧಿಕಾರವನ್ನು ಚಲಾಯಿಸುವುದು ಕಾಶ್ಮೀರಿಗಳಿಗೆ ಸಾಧ್ಯವಾಗುವಂತೆ ಪಾಕಿಸ್ತಾನವು ಪ್ರಯತ್ನಪಡುವುದೆಂದು ಆಶ್ವಾಸನೆಯಿತ್ತರು. ಜಮ್ಮು ಮತ್ತು ಕಾಶ್ಮೀರದಲ್ಲಿರುವ ಸಹೋದರರ ಹೋರಾಟದ ಧ್ಯೇಯ ಪಾಕಿಸ್ತಾನಿಗಳಿಗೆ ಅತ್ಯಂತ ಪವಿತ್ರವಾದುದೆನ್ನುತ್ತಾ ಆ ಜನರಿಗೆ ತಮ್ಮ ಹಾರ್ದಿಕ ಶುಭಾಶಯಗಳನ್ನು ನೀಡಿದರು— 'ನಾವು ಎಂದೆಂದಿಗೂ ನಿಮ್ಮೊಡನೆ ಇದ್ದೇವೆಂದು ತಿಳಿಯಿರಿ; ಸ್ವಾತಂತ್ರ್ಯಕ್ಕಾಗಿ ನೀವು ಮಾಡುವ ಹೋರಾಟದಲ್ಲಿಯಾಗಲೀ ತ್ಯಾಗದಲ್ಲಿಯಾಗಲೀ ನೀವು ಒಂಟಿಯಾಗಿದ್ದೀರಿ ಎಂಬ ಭಾವನೆಯೇ ಬೇಡ" ಎಂದವರು ಆ ಸಹೋದರರನ್ನು ಕುರಿತು ಹೇಳಿದರು. ಪಾಕಿಸ್ತಾನದ ರಾಷ್ಟ್ರೀಯ ಶಾಸನಾಂಗದ ಉದ್ಘಾಟನೆಯನ್ನು ೨೫ನೇ ದಿನಾಂಕ ಮಾಡುವಾಗಲೂ ಅಧ್ಯಕ್ಷರು ಸಂಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಯಂತೆ ಭಾರತ ಮತ್ತು ಪಾಕಿಸ್ತಾನಗಳ ಕಾಶ್ಮೀರ ಸಮಸ್ಯೆಯು ಇತ್ಯರ್ಥವಾಗಬೇಕೆಂದು ಹೇಳುತ್ತಾ ಸಿಯಾಟೊ ಪರಿಷತ್ತು ಇದರ ಆವಶ್ಯಕತೆಯನ್ನು ಎತ್ತಿ ಹೇಳಿರುವುದರ ಕಡೆಗೆ ಪ್ರತಿನಿಧಿಗಳ ಗಮನ ಸೆಳೆದರು.

ಗಡಿ ತಂಟೆಗಳ ದೂರು

ಅಧ್ಯಕ್ಷ ಮಿರ್ಜಾರು ತಮ್ಮ ಭಾಷಣದಲ್ಲಿ ಈಚೆಗೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಗಡಿ ಕಲಹಗಳು ಹೆಚ್ಚಾಗುತ್ತಿರುವುದನ್ನು ಸಹ ಪ್ರಸ್ತಾಪಿಸಿ, ಪ್ರತಿಯೊಂದು ಸಂದರ್ಭದಲ್ಲಿಯೂ ಭಾರತದ ಕಡೆಯಿಂದಲೇ ಕಲಹಕ್ಕೆ ಪ್ರಚೋದನೆ ಬಂದಿತೆಂದೂ ಈ ಪ್ರಚೋದನೆಯು ಬಹಳ ತೀವ್ರವಾಗಿದ್ದಾಗಲೂ ಪಾಕಿಸ್ತಾನಿಗಳು ಸ್ವಸಂರಕ್ಷಣೆಗೆಷ್ಟು ಬೇಕೊ ಅಷ್ಟು ಮಾತ್ರ ಪ್ರತಿಭಟನೆಯನ್ನಿತ್ತು ಸಂಯಮ ತೋರಿಸಿರುವರೆಂದೂ ಹೇಳಿ ಭಾರತವನ್ನು ದೂರಿದರು. "ನಾವು ನಮ್ಮ ರಾಷ್ಟ್ರದ ಭೂಪ್ರದೇಶವನ್ನು ಕಾಯ್ದುಕೊಳ್ಳಲು ಪ್ರತಿಯೊಂದೂ ಬಗೆಯಿಂದ ಪ್ರಯತ್ನಪಡುತ್ತೇವೆ" ಎಂದವರು ಸಾರಿದರು. ಆದರೆ ಪಾಕಿಸ್ತಾನದ ಈ ಹೇಳಿಕೆಯು ಭಾರತದ ದೃಷ್ಟಿಯಲ್ಲಿ ಸಂಪೂರ್ಣವಾಗಿ ಸುಳ್ಳಿನ ಕಂತೆಯಾಗಿದೆ-ನೆಹರುಗಳು ಲೋಕಸಭೆಯ ಮುಂದೆ ಕೊಟ್ಟ ಭಾಷಣದಲ್ಲಿ ಸುಳ್ಳು ಆಪಾದನೆಗಳ ಸಂಗತಿಯಲ್ಲಿ ವ್ಯರ್ಥ ವಾಗ್ವಾದ ಮಾಡಲು ತಾನು ಬಯಸುವುದಿಲ್ಲ ಎಂದಿದ್ದಾರೆ. ತನ್ನೊಡನೆ ಸತ್ಯ ಸಂಗತಿಗಳ ಸಂಪೂರ್ಣ ವಿವರವಿದೆ—ಆದರೆ ಸತ್ಯದ ವಿಪರ್ಯಾಸವನ್ನೆ ಮೆಚ್ಚುವವರ ಬಗ್ಗೆ ತಾನೇನೂ ಹೇಳುವಂತಿಲ್ಲವೆಂದು ನೆಹರುಗಳ ಅಭಿಪ್ರಾಯ.

ನೆಹರುಗಳ ಹೇಳಿಕೆ

ಕಾಶ್ಮೀರದ ವಿಷಯದಲ್ಲಾದರೆ ಸಿಯಾಟೊ ಪರಿಷತ್ತು ಈ ವಿವಾದಾಸ್ಪದ ಸಂಗತಿಯಲ್ಲಿ, ಅದು ಸಹ ಸಂಯುಕ್ತ ರಾಷ್ಟ್ರಸಂಘದ ವಿವೇಚನೆಗೆ ಇರುತ್ತಾ, ಕೈ ಹಾಕಿದುದೇ ತಪ್ಪೆಂದು ಭಾರತವು ಸ್ಪಷ್ಟಪಡಿಸಿರುತ್ತದೆ. ನೆಹರುಗಳು ಈ ಮಾತನ್ನು ಲೋಕ ಸಭೆಯಲ್ಲಿ ಪುನರುಚ್ಚರಿಸಿದ್ದಾರಲ್ಲದೆ, ಎರಡರ ನಡುವಿನ ಈ ವಿವಾದದಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿಯೇ ಮೂರು ಕಾಮನ್‌ವೆಲ್ತ್ ರಾಷ್ಟ್ರವಾದ ಪಾಕಿಸ್ತಾನಕ್ಕೆ ಬೆಂಬಲವಿತ್ತು ಅವರ ಪಕ್ಷವನ್ನು ಎತ್ತಿ ಕಟ್ಟಿದುದಕ್ಕೆ ನಿಷೇಧವನ್ನು ಸಹ ಸೂಚಿಸಿದ್ದಾರೆ. ಗಡಿ ತಂಟೆಗಳನ್ನು ಬೇಗನೆ ಪರಿಹರಿಸಲು ಸಮಾಲೋಚನೆ ನಡೆಸಬೇಕೆಂಬ ಸೂಚನೆಗೆ ಅವರು ಸ್ವಾಗತವಿತ್ತಿದ್ದಾರೆ ಮತ್ತು ಈ ಬಗ್ಗೆ ತಕ್ಕ ಕ್ರಮಗಳನ್ನು ಕ್ಷಿಪ್ರದಲ್ಲಿ ಕೈಗೊಳ್ಳಲಾಗುವುದೆಂದು ಲೋಕ ಸಭೆಯ ಮುಂದೆ ನುಡಿದಿದ್ದಾರೆ. ಪಾಕಿಸ್ತಾನದಲ್ಲಿ ಸೈನಿಕ ಚಟುವಟಿಕೆ ಹೆಚ್ಚುತ್ತಿರುವುದನ್ನು ಮಾತ್ರ ಅವರು ಸುಮ್ಮನೆ ಕಂಡು ಕುಳಿತಿಲ್ಲ. ಭಾರತವು ಸತರ್ಕವಾಗಿರಬೇಕೆಂದು ಅವರು ಒಪ್ಪಿರುವರಲ್ಲದೆ, ಸೈನಿಕ ಒಪ್ಪಂದಗಳಿಂದಾಗುವ ಅನಾಹುತಗಳು—ಮುಖ್ಯವಾಗಿ ಅಭಿವೃದ್ಧಿ ಪ್ರಯತ್ನಗಳ ವೇಗವನ್ನು ಕುಂದಿಸಬೇಕಾಗಿ ಬರುವ ಪ್ರಸಂಗಗಳು— ತೀರ ಅನಪೇಕ್ಷಿತವೆಂದು ಅವರು ವಿಷಾದದಿಂದ ಹೇಳಿದ್ದಾರೆ.

ಅಜ್ಮೀರಿನಲ್ಲಿ ಮುಸ್ಲಿಮರ ಉತ್ಸವ



ಅಜ್ಮೀರದ ದರ್ಗಾ ಸಾಹಿಬದಲ್ಲಿ ಮುಸ್ಲಿಮರ ಉತ್ಸವವು ಬಹಳ ವಿಜೃಂಭಣೆಯಿಂದ ಈಚೆಗೆ ನೆರವೇರಿತು. ಇದರಲ್ಲಿ ಭಾಗವಹಿಸಲು ಭಾರತದ ಮೂಲೆ ಮೂಲೆಗಳಿಂದಷ್ಟೇಯಲ್ಲ, ಪಾಕಿಸ್ತಾನದಿಂದಲೂ ಸಾವಿರಾರು ಮಂದಿ ಮುಸ್ಲಿಂ ಸ್ತ್ರೀ-ಪುರುಷರು ಬಂದಿದ್ದರು. ಚಿತ್ರದಲ್ಲಿ ದರ್ಗಾ ಸಾಹಿಬದಲ್ಲಿರುವ ಸಮಾಧಿ ಮತ್ತು ಉತ್ಸವಕ್ಕೆ ನೆರೆದ ಯಾತ್ರಿಕರ ಗುಂಪಿನ ಒಂದು ಭಾಗವನ್ನು ಕಾಣಬಹುದು. ಭಾರತದಲ್ಲಿರುವ ಮುಸ್ಲಿಮರಿಗೆ ತಮ್ಮ ಧರ್ಮಾಚರಣೆಯ ವಿಷಯದಲ್ಲಿ ಏನೇನೂ ಆತಂಕವೊದಗದಂತೆ ನೆಹರು ಸರಕಾರವು ತನ್ನ ರಾಜಕೀಯ ಧೋರಣೆಯನ್ನು ರೂಪಿಸಿರುವುದು ಇಂಥ ಅನೇಕ ಸಂಗತಿಗಳಿಂದ ಮನವರಿಕೆಯಾಗುತ್ತದೆ. ಆದರೆ ಪಾಕಿಸ್ತಾನದಲ್ಲಿ ಘಟನಾತ್ಮಕ ಪ್ರತಿಬಂಧಗಳಿಂದ ಅಲ್ಪ ಸಂಖ್ಯಾಕರಾದ ಹಿಂದು ಮತ್ತಿತರ ಜಾತಿಗಳವರನ್ನು ಪೀಡಿಸಲಾಗುತ್ತಿರುವುದು ಬಹಳ ಶೋಚನೀಯವಾದ ವಿಷಯ-

Notice of the special resolution for Voluntary winding up of

Veena Printers & Publishers Ltd
Regd Office—Shirva (S. K.)

In the matter of Indian Companies Act 1913
and of the
Veena Printers & Publishers Ltd.

At an extra ordinary general meeting of the company above mentioned held at its registered office on 25th March 1956, it was resolved by a special resolution that the company be wound up voluntarily and that Sri P. Lakshmana Shetty, B. A., be appointed as liquidator for such winding up, his remuneration being Rs. 5%.

P. Rama Shetty,
Signature of the Chairman of the meeting.

ಸ್ಟ್ಯಾಲಿನ್ನರ ನೀತಿಯ ಬಹಿರಂಗ ಖಂಡನೆ

ಈಗಿನ ರಶಿಯದ ನಾಯಕರ ಮನೋಭಾವ

ನಮ್ಮ ಪ್ರಧಾನ ಮಂತ್ರಿ ಶ್ರೀ ನೆಹರು ಅವರು ಫೆಬ್ರವರಿಯ ಉತ್ತರಾರ್ಧದಲ್ಲಿ ಮೊಸ್ಕೋದಲ್ಲಿ ಸೇರಿದ್ದ ರಶಿಯದ ಕಮ್ಯುನಿಸ್ಟ್ ಪಕ್ಷದ ಅಧಿವೇಶನದ ಕಾರ್ಯಕಲಾಪಗಳು ಬಲಾತ್ಕಾರ, ನಿಯಂತ್ರಣ ಮತ್ತು ಒತ್ತಾಯಗಳಿಂದ ಮತಭೇದವನ್ನು ಹತ್ತಿಕ್ಕುವುದಾಗಲೀ ಜನಶಕ್ತಿಯನ್ನು ಕಡೆಗಣಿಸುವುದಾಗಲೀ ಕೊನೆಯವರೆಗೆ ಸಾಧ್ಯ



ಪ್ರಧಾನಿ ಬುಲ್ಗಾನಿನ್

ವಾಗಲಾರದೆಂಬುದನ್ನು ಎತ್ತಿ ತೋರಿಸುತ್ತವೆ ಎಂದಿದ್ದರು. ಈ ಅಧಿವೇಶನ ಮತ್ತು ಆ ನಂತರ ರಶಿಯದಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಕುರಿತು ಬರುತ್ತಿರುವ ವರದಿಗಳು ರಶ್ಯವು ಪ್ರಜಾಸತ್ತೆಯ ಕಡೆಗೆ ಹೆಚ್ಚು ಹೆಚ್ಚು ಒಲವು ತೋರಿಸಿ, ತನ್ನ ಮನೋಭಾವವನ್ನು ಈ ಪರಿವರ್ತನೆಗೆ ಅನುಗುಣವಾಗಿ ಹೊಂದಿಸಿಕೊಳ್ಳುತ್ತದೆ ಎಂಬುದಾಗಿ ಅಭಿಪ್ರಾಯವನ್ನು ಹುಟ್ಟಿಸುತ್ತದೆ. ಈ ರೀತಿಯಲ್ಲಿರುವ ಮಾರ್ಪಾಟನ್ನು ನೆಹರುಗಳೂ ರಶಿಯದಲ್ಲಿ ಭಾರತದ ರಾಯಭಾರಿಯಾಗಿದ್ದ ನಮ್ಮ ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್ನರೂ ಸ್ವಾಗತಿಸಿದ್ದಾರೆ. ಅಮೇರಿಕದ ನೇತೃತ್ವದಲ್ಲಿರುವ ಪಾಶ್ಚಾತ್ಯ ರಾಷ್ಟ್ರಗಳ ಸಂಶಯ ಮಾತ್ರ ಈಗ ನಡೆಯುತ್ತಿರುವಂತೆ ಕಂಡು ಬರುತ್ತಿರುವ ಪರಿವರ್ತನೆಯ ಮಹತ್ವವು ಹೊರತೋರಿಕೆಗೆ ಮಾತ್ರ ಸೀಮಿತವಿದೆಯೆಂದೂ ರಶ್ಯದ ಮೂಲಭೂತ ಉದ್ದೇಶಗಳು ಬದಲಾಗಿಲ್ಲವೆಂದೂ ಹೇಳುತ್ತದೆ.

ಕಮ್ಯುನಿಸ್ಟರ ಪರಿಷತ್ತು

ಇದೇನೇ ಇರಲಿ— ಹೊರ ತೋರಿಕೆಯಾದರೂ ಬದಲಾವಣೆ ಕಂಡು ಬಂದುದೆಂತು? ಕಳೆದ ತಿಂಗಳಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಅಧಿವೇಶನದಲ್ಲಿ ರಶಿಯದ ಧುರೀಣರು ಗತಿಸಿದ ಧುರೀಣ ಸ್ಟ್ಯಾಲಿನ್ನರನ್ನು ಖಂಡಿಸಿ, ಅವರ ಸಿದ್ಧಾಂತಗಳನ್ನೂ ಆಚರಣೆಗಳನ್ನೂ ನಿಷೇಧಿಸಿ, ಮಾತನಾಡಿದರು. ಸ್ಟ್ಯಾಲಿನ್ನರ ಮರಣವಾದ ಮೂರು ವರ್ಷಗಳ ಬಳಿಕ ಈ ಬಗೆಯ ಖಂಡನೆಯನ್ನು ರಶಿಯದ ಈಗಿನ ಧುರೀಣರು ಮಾಡ ಹತ್ತಿದರು. ಇಂಥ ಖಂಡನೆಯು ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಖ್ರುಶ್ಚೆಫ್ ಮತ್ತು ಭಾರತಕ್ಕೆ ಈಗ ...ನೆ ನಾಲ್ಕು ದಿನಗಳ ಸಂದರ್ಶನಕ್ಕೆಂದು ಬಂದಿರುವ ಮೈಕೋಯನ್ನರಿಂದ ಬಂದಿರುವುದು ಒಂದು ವಿಶೇಷ. ಈಗಿನ ಪ್ರಧಾನಿ ಬುಲ್ಗಾನಿನ್ನರೂ ಸ್ಟ್ಯಾಲಿನ್ನರ ಕಾಲದಲ್ಲಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದು ಅವರ ಮರಣಾನಂತರ ಪ್ರಧಾನಿ ಪಟ್ಟವನ್ನೇರಿ ಮುಂದೆ ವಿದ್ಯುಚ್ಛಕ್ತಿ ಇಲಾಖೆಯ ಮಂತ್ರಿ ಸ್ಥಾನಕ್ಕೆ ಇಳಿದ ಮೆಲೆಂಕೊಫರೂ ಈ ಖಂಡನೆಗೆ ಕೈಗುಟ್ಟಿರುವುದು ಸಹ ಕುತೂಹಲವನ್ನು ಕೆರಳಿಸುವ ವಿಷಯ. ರಶಿಯದ ನಾಯಕರು ತಮ್ಮ ಪಕ್ಷದ ಸಭೆಯಲ್ಲಿ ಮಾಡಿದ ಈ ಖಂಡನೆಯು ಈಗ ರಶಿಯದಲ್ಲಿ ಎಲ್ಲೆಲ್ಲೂ ಸಾರ್ವಜನಿಕ ಚರ್ಚೆಯ ವಿಷಯವಾಗಿದೆಯೆಂದು ವರದಿಗಳು ತಿಳಿಸುತ್ತವೆ. ಜನರು ತಮ್ಮ ಸ್ವಚ್ಛ ಬಿಚ್ಚುಮನಸ್ಸಿನಿಂದ ಈ ಪರಿವರ್ತಿತ ಧೋರಣೆಯ ಯೋಗ್ಯತೆಯನ್ನು ಚರ್ಚಿಸುತ್ತಿರುವರೆಂದೂ ಪಕ್ಷದ ಸಭೆಗಳೆಲ್ಲ ಸರ್ವ ಸಮ್ಮತದಿಂದ ಈ ಧೋರಣೆಯನ್ನು ಒಪ್ಪುತ್ತಿವೆಯೆಂದೂ ಹೇಳಲಾಗಿದೆ. ಆದರೆ ಈ "ಒಮ್ಮತ"ವನ್ನು ನಂಬುವುದು ಮಾತ್ರ ಕಷ್ಟ; ಜಾರ್ಜಿಯ ಮತ್ತಿತರೆಡೆ ಈಚೆಗೆ ನಡೆದ ಗಲಭೆಗಳು ರಶಿಯದ ಈಗಿನ ಧುರೀಣರ ನಿಲುವೆಯನ್ನು ಮೆಚ್ಚದ ಕಮ್ಯುನಿಸ್ಟರೂ ಲಕ್ಷಗಟ್ಟಲೆ ಇರುವರೆಂಬುದನ್ನು ತೋರಿಸುತ್ತವೆ. ಇಷ್ಟೇ ಅಲ್ಲದೆ, ಚೀನ, ಜೆಕೊಸ್ಲೊವಾಕಿಯ ಮುಂತಾದ ಬೇರೆ ಕಮ್ಯುನಿಸ್ಟರ ದೇಶಗಳಿಗೂ ಈ ಹೊಸ ಧೋರಣೆ ಪ್ರಿಯವಾಗಿಲ್ಲ.

ತಪ್ಪುಗಳ ಪಟ್ಟಿ

ಸ್ಟ್ಯಾಲಿನ್ನರ ಕಾಲದಲ್ಲಿ ರಶಿಯವು ಅನೇಕ ತಪ್ಪುಗಳನ್ನು ಮಾಡಿತೆಂದು ಖ್ರುಶ್ಚೆಫರು ಈಗ ಪಟ್ಟಿ ಮಾಡಿ ಕೊಟ್ಟಿದ್ದಾರೆಂದೂ ಈ ಪಟ್ಟಿಯಲ್ಲಿದ್ದುದನ್ನು ನಾಲ್ಕು ತಾಸುಗಳ ವರೆಗೆ ಪಕ್ಷದ ಪ್ರತಿನಿಧಿಗಳ ಮುಂದೆ ವಿವರಿಸಿ ವರ್ಣಿಸುವಾಗ ಭಾವನಾ ಪರವಶರಾಗಿ ಕೆಲವು ಸಲ ಗಳಗಳನೆ ಅತ್ತರೆಂದೂ ಹೇಳಲಾಗಿದೆ. ಸ್ಟ್ಯಾಲಿನ್ನರು ತಮ್ಮೊಡನೆ ಭಿನ್ನಾಭಿಪ್ರಾಯ ಹೊಂದಿದ ಸ್ನೇಹಿತರಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಹೇಳುತ್ತಿದ್ದರೆಂದೂ ಇದಕ್ಕೆ ತಪ್ಪಿದರೆ ತಾವೇ ಕೊಲ್ಲಿಸುವ ಬೆದರಿಕೆ ಹಾಕುತ್ತಿದ್ದರೆಂದೂ ಖ್ರುಶ್ಚೆಫರ ಆರೋಪ. ಇಂಥ ದ್ವಂದ್ವಕ್ಕೆ ತಾನು ಸಿಕ್ಕಿದ್ದೆನೆಂದೂ ಅವರು ಹೇಳಿದ್ದಾರೆ— ಇದರಿಂದ ಪಾರಾದ ಬಗೆಯನ್ನು ಅವರು ವಿವರಿಸಿಲ್ಲವಾದರೂ ಈ ತಲೆಬಂಡಕ್ಕೆ ಗುರಿಯಾದವರನ್ನು ಎತ್ತಿ ಹೇಳಿದ್ದಾರೆ. ಸ್ಟ್ಯಾಲಿನ್ನರು ಕರೆಕಳುಹಿದರೆಂದರೆ ಅದು ಮರಣ ಶಾಸನವನ್ನು ಓದಿ ಹೇಳಲಿಕ್ಕೋ ಅಥವಾ ಬೇರೆ ಕೆಲಸಕ್ಕೋ ಎಂದು ಉಳಿದವರು ಸದಾ ಭಯ ಪೀಡಿತರಾಗುತ್ತಿದ್ದರೆಂದೂ ಖ್ರುಶ್ಚೆಫರ ಹೇಳಿಕೆಯಾಗಿದೆ. ಬುಲ್ಗಾನಿನ್ ಮೊಲೊಟೊಫ್, ಅವರ ಪತ್ನಿ, ರಶಿಯದ ಈಗಿನ ಅಧ್ಯಕ್ಷ ವೊರೊಶಿಲೊಫ್ ಇತ್ಯಾದಿ ಎಲ್ಲರೂ ಸ್ಟಾಲಿನ್ನರ ಕ್ರೂರದೃಷ್ಟಿಗೆ ಬಲಿಯಾಗಿದ್ದರು. ಸಂಶಯ ಚಿತ್ತರಾದ ಸ್ಟ್ಯಾಲಿನ್ನರು ಅನೇಕ ಸಾಮೂಹಿಕ ಕೊಲೆಗಳನ್ನು ನಡೆಸಿದರು. ಪಕ್ಷದ ಸಭೆಯಲ್ಲಿ ಭಿನ್ನಾಭಿಪ್ರಾಯ ಹೊಂದಿದವರನ್ನು ನೆಲಸಮಗೈದರು. ತನ್ನ ಹೆಸರನ್ನು ಚಿರಸ್ಥಾಯಿಗೊಳಿಸಲು ಪೇಟೆಪಟ್ಟಣಗಳಿಗೆ ಆ ಹೆಸರನ್ನಿಡಿಸಿದರು; ಇತಿಹಾಸ ಪುಸ್ತಕಗಳನ್ನು ತಿದ್ದಿ ಬರೆಸಿದರು; ತಮ್ಮ ಮನೆಯ ದ್ವಾರ ಮತ್ತು ಉದ್ಯಾನಗಳಲ್ಲಿ ಸಹ ತಮ್ಮ ಶಿಲಾ ಮೂರ್ತಿಗಳನ್ನು ನೆಡಿಸಿ ಅವುಗಳನ್ನು ನೋಡುತ್ತಾ ನೋಡುತ್ತಾ ಮೀಸೆಹುರಿ ಮಾಡಿಕೊಳ್ಳುವಷ್ಟು ಸ್ವಾಭಿಮಾನಿಯಾಗಿದ್ದರು— ಎಂದೆಲ್ಲ ಈಗ ದೂರಲಾಗುತ್ತದೆ.

ಅಭಿಪ್ರಾಯ ಸ್ವಾತಂತ್ರ್ಯ

ಯುದ್ಧ ಕಾಲದಲ್ಲಿ ಅನೇಕ ತಪ್ಪುಗಳನ್ನು ಅವರು ಮಾಡಿರುವರೆಂದೂ ಯಾವ ಕಾಲಕ್ಕೂ ಅವರು ಕೂಲಿಕಾರರ ಮತ್ತು ಬುದ್ಧಿಜೀವಿಗಳ ಕೈವಾರಿಯಾಗಿರಲಿಲ್ಲವೆಂದೂ ನೌಕರಶಾಹಿ ಮತ್ತು ಗುಪ್ತಚಾರ ಸಂಸ್ಥೆಯ ಜನರು ಮಾತ್ರ ಅವರನ್ನು ಗೌರವಿಸುತ್ತಿದ್ದರೆಂದೂ ಈಗ ರಶಿಯದ ಧುರೀಣರು ಹೇಳುತ್ತಿದ್ದಾರೆ. ಗುಪ್ತಚಾರ ಸಂಸ್ಥೆಯ ಪ್ರಧಾನರಾಗಿದ್ದ ಲಾವ್ರೆಂಟಿ ಬೆರಿಯಾರನ್ನು ಮುಗಿಸಿ ಬಿಟ್ಟ ಎರಡು ವರ್ಷಗಳ ತರುವಾಯ ರಶಿಯದ ಧುರೀಣರಿಗೆ ಈ ರೀತಿಯ ಖಂಡನೆ ಮಾಡಲು ಶಕ್ತಿ ಬಂದಿರುವಂತೆ ಕಾಣುತ್ತದೆ. ತಾವು ಭಯ-ಚಕಿತರಾಗಿ ಸದಾಕಾಲ ಇದ್ದೆವೆಂದು ಖ್ರುಶ್ಚೆಫರು ಹೇಳಿದ್ದಲ್ಲದೆ, ಸ್ಟ್ಯಾಲಿನ್ನರ ವಿರುದ್ಧ ಚಕಾರ ಶಬ್ದವನ್ನು ಎತ್ತದಷ್ಟು ನಿರ್ಬಂಧಕ್ಕೊಳಗಾಗಿದ್ದೆವೆಂದೂ ಅವರು ಸ್ಪಷ್ಟಪಡಿಸಿದ್ದಾರೆ. ಈಗಲಾದರೂ ರಶಿಯದ

ಮಿ| ಖ್ರುಶ್ಚೆಫ್

ಸಾಮೂಹಿಕ ನಾಯಕತ್ವದ ಗುಂಪಿಗೆ ಸೇರಿದ ಜನರ ಹೊರತು, ಉಳಿದವರಿಗೆ ಅಭಿಪ್ರಾಯ ಸ್ವಾತಂತ್ರ್ಯವಿದೆಯೆ, ವಿಚಾರ ಸ್ವಾತಂತ್ರ್ಯವಿದೆಯೆ ಎಂಬುದು ತೀರ ಸಂಶಯ. ಸರ್ವಾನುಮತದ ಅನುಮೋದನೆಯೇ ರಶಿಯದ ನಾಯಕರ ನಿಲುವೆಗೆ ದೊರೆಯುವುದಾದರೆ ಗಲಭೆ, ಗೊಂದಲಗಳಿಗೆ ಕಾರಣವಿರುತ್ತಿರಲಿಲ್ಲನೆಂಬುದು ಸ್ಪಷ್ಟ.

ಮೈಕೋಯನ್ನರ ವಾಗ್ಬಾಣ

ಖ್ರುಶ್ಚೆಫರ ಮಾತುಗಳಿಗಿಂತಲೂ ಕಟುವಾದ ಶಬ್ದಗಳಿಂದ ಸ್ಟ್ಯಾಲಿನ್ನರನ್ನು ಮೈಕೋಯನ್ನರು ಟೀಕಿಸಿರುವರೆಂದು ತಿಳಿದುಬರುತ್ತದೆ. ಲೆನಿನ್ನರ ಪ್ರಜಾಸತ್ತಾತ್ಮಕ ಸಾಮ್ಯವಾದವನ್ನು ಕಡೆಗಣಿಸಿ ಸ್ಟ್ಯಾಲಿನ್ನರು ತಮ್ಮ ಧೋರಣೆಯನ್ನು ರೂಪಿಸಿದರೆಂದು ಅವರು ಆರೋಪಿಸಿದ್ದಾರೆ; ಮತ್ತು ರಶಿಯದ ಈಗಿನ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ತೊಂದರೆಗಳಿಗೆ ಸ್ಟ್ಯಾಲಿನ್ನರ ನೀತಿಯೇ ಹೊಣೆ ಎಂದಿದ್ದಾರೆ. ಖ್ರುಶ್ಚೆಫರು ಸ್ಟ್ಯಾಲಿನ್ನರ ತಪ್ಪುಗಳನ್ನು ಬೆರಿಯಾರ ಕೈವಾಡದ ಫಲವೆಂದು ಹೇಳುವಷ್ಟು ಮಟ್ಟಿಗೆ ಸ್ಟ್ಯಾಲಿನ್ನರ ಗೌರವವುಳಿಸಲು ನೋಡಿದ್ದಾರೆ; ಆದರೆ ಮೈಕೋಯನ್ನರು ಸ್ಟ್ಯಾಲಿನ್ನರನ್ನು ನೇರಾಗಿ ಖಂಡಿಸಿ, ಅವರ ತಪ್ಪುಗಳಿಗೆ ಅವರೇ ಹೊಣೆ ಎಂದಿದ್ದಾರೆ. ಸ್ಟ್ಯಾಲಿನ್ನರ ಕಾಲದಲ್ಲಿ ಇಂಥ ಖಂಡನೆಯ ಮಾತು ಕೇಳಿದ್ದಲ್ಲಿ ಗುಂಡಿನ ಮಳೆಯಾಗುತ್ತಿತ್ತೆಂಬುದನ್ನು ನೆನೆದರೆ ರಶಿಯದ ಮಂತ್ರರು ಅಭಿಪ್ರಾಯ ಭೇದವು ಸ್ವಾಭಾವಿಕವೆಂದೂ ಶಾಂತ ಸಮಾಲೋಚನೆಯಿಂದ ಅದರ ಸಾಧಕ ಬಾಧಕ ಅಂಶಗಳನ್ನು ವಿಮರ್ಶಿಸಿ ತಿಳಿದುಕೊಳ್ಳಬಹುದೆಂದೂ ವರಿಷ್ಠ ಮಟ್ಟದಲ್ಲಿ— ಸಾಮಾನ್ಯರ ಮಟ್ಟದಲ್ಲಿಯಲ್ಲ— ಈಗ ಒಪ್ಪಿರುವಂತೆ ತೋರುತ್ತದೆ.

ರಾಷ್ಟ್ರದ ಪ್ರಗತಿಯಲ್ಲಿ........

1906ರಲ್ಲಿ ಸ್ಥಾಪಿತವಾದ **ಕೆನರಾ ಬ್ಯಾಂಕು 50** ವರ್ಷಗಳಿಂದ ರಾಷ್ಟ್ರದ ವ್ಯಾಪಾರ, ಉದ್ಯಮಗಳಿಗೆ ನೆರವು ನೀಡಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಸಹಭಾಗಿಯಾಗಿರುತ್ತದೆ.

ಕಳೆದ **50** ವರ್ಷಗಳಿಂದ ರಾಷ್ಟ್ರದ ಸೇವೆಯಲ್ಲಿ ನಮಗೆ ನೆರವಾದ ಅನೇಕ ಸ್ನೇಹಿತರಿಗೆ ನಮ್ಮ ಅನಂತ ವಂದನೆಗಳು. ರಾಷ್ಟ್ರದ ಪ್ರಗತಿಯಲ್ಲಿ— ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ— ಇನ್ನೂ ಹೆಚ್ಚಿನ ಸೇವೆ ನೀಡುವ ಆಶ್ವಾಸನೆ ನಮ್ಮದು.

CANARA BANK LTD.

ಕೆನರಾ ಬ್ಯಾಂಕ್ ಲಿಮಿಟೆಡ್

1906 — 50 ವರ್ಷಗಳ ಸಮರ್ಥ ಸೇವೆ — 1956

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೯-೩-'೫೬	೪೦

ಪ್ರತಿನಿಧಿಗಳ ಕರ್ತವ್ಯ

ಮದ್ರಾಸಿನ ಶಾಸನಾಂಗದ ಮುಂದೆ ಇಷ್ಟರಲ್ಲಿಯೇ ರಾಜ್ಯಗಳ ಪುನರ್ಘಟನೆಯ ವಿಷಯದಲ್ಲಿ ಭಾರತ ಸರಕಾರವು ಮಂಡಿಸಬೇಕೆಂದಿರುವ ಮಸೂದೆಯು ಕರಡು ಚರ್ಚೆಗೆ ಬರಲಿದೆ. ಆಗ ನಮ್ಮ ಜಿಲ್ಲೆಯ ಪ್ರತಿನಿಧಿಗಳು ಮಾಡಬೇಕಾದುದೇನು? ಕರ್ನಾಟಕ ಏಕೀಕರಣವಾಗಬೇಕೆಂಬ ಹಂಬಲವನ್ನು ಭಾರತ ಸರಕಾರವು ನೆರವೇರಿಸಿಕೊಟ್ಟಿದೆ; ಒಂದಕ್ಕಿಂತ ಹೆಚ್ಚು ಕರ್ನಾಟಕಗಳಾಗಲಿ ಎಂದು ಕೇಳುತ್ತಿದ್ದ ಮೈಸೂರಿನ ಒಂದು ಗುಂಪನ್ನು ಸ್ವಲ್ಪ ಮಟ್ಟಿಗಾದರೂ ಸಮಾಧಾನ ಪಡಿಸಿ, ಮೈಸೂರು ಸಹಿತವಾದ ಒಂದೇ ಕರ್ನಾಟಕ ರಾಜ್ಯವನ್ನು ರಚಿಸುವ ನಿಶ್ಚಯಕ್ಕೆ ಭಾರತ ಸರಕಾರವು ಬಂದಿದೆ. ಇದು ಎಲ್ಲ ಪ್ರತಿನಿಧಿಗಳೂ ಸ್ವಾಗತಿಸಿ, ಮೆಚ್ಚಿಕೆ ಸೂಚಿಸಬೇಕಾದ ವಿಷಯ. ನೂತನ ರಾಜ್ಯಕ್ಕೆ "ಕರ್ನಾಟಕ" ಎಂಬುದಾಗಿ ಫಜಲಾಲಿ ಆಯೋಗವು ಸೂಚಿಸಿದ್ದ ಹೆಸರನ್ನೆ ಇಡುವುದು ಯೋಗ್ಯವಾಗಿದ್ದರೂ ಮೈಸೂರಿನಲ್ಲಿರುವ ಕನ್ನಡಿಗರ ಭಾವನೆಯನ್ನು ತೃಪ್ತಿಪಡಿಸುವುದಕ್ಕಾಗಿ ಭಾರತ ಸರಕಾರವು "ಮೈಸೂರು" ಎಂಬ ಹೆಸರಿನಿಂದಲೇ ಮುಂದಿನ ಕರ್ನಾಟಕ ರಾಜ್ಯವನ್ನು ಕರೆಯಲು ತೀರ್ಮಾನಿಸಿದೆ. ಮೈಸೂರಿನ ಮೇಲಿನ ಪ್ರೀತಿಯಿಂದ ಒಂದಕ್ಕಿಂತ ಹೆಚ್ಚು ಕರ್ನಾಟಕ ರಾಜ್ಯಗಳಾಗಲಿ ಎನ್ನುತ್ತಿದ್ದ ಮೈಸೂರಿನ ಒಂದು ಗುಂಪನ್ನು ಸಾಂತ್ವನಗೊಳಿಸಿ ಒಂದೇ ಕರ್ನಾಟಕ ರಾಜ್ಯವನ್ನು ಸಾಧ್ಯವಾಗಿ ಮಾಡಲು ಮೈಸೂರೇತರರು ಕರ್ನಾಟಕ ಎಂಬ ಹೆಸರಿನ ಮೇಲಿದ್ದ ತಮ್ಮ ಪ್ರೀತಿಯನ್ನು ಬಿಟ್ಟುಗೊಡಬೇಕಾಗಿ ಬಂದಿದೆ. ಈ ತ್ಯಾಗವು ಭಾವನಾತ್ಮಕ ಮಟ್ಟದಲ್ಲಿ ಹೊರತು, ವ್ಯವಹಾರದಲ್ಲಿ ಹೆಚ್ಚು ಬೆಲೆಯುಳ್ಳದ್ದೆಂದು ಹೇಳುವಂತಿಲ್ಲವಾದ ಕಾರಣ, ನಮ್ಮ ಪ್ರತಿನಿಧಿಗಳು ಈ ಕುರಿತು ಟೀಕೆಯನ್ನು ಮಾಡುವ ಅಗತ್ಯವಿಲ್ಲ. ಮೈಸೂರು ಎಂಬ ಹೆಸರಿನಿಂದಲಾದರೂ ಕರ್ನಾಟಕ ಏಕೀಕರಣ ಸಾಧ್ಯವಾಗುತ್ತಿರುವುದೇ ಸಂತೋಷಿಸಬೇಕಾದ ಸಂಗತಿಯಾಗಿದೆ. ಇನ್ನುಳಿದುದು, ಕರ್ನಾಟಕ ಏಕೀಕರಣವು ನೆರವೇರಬೇಕಾಗಿದ್ದ ರೀತಿಯಲ್ಲಿ ನೆರವೇರುತ್ತಿದೆಯೇ ಎಂಬ ವಿಷಯ—ಮೈಸೂರಿನ ಕೆಲವರ ಆಗ್ರಹಕ್ಕಾಗಿ ಕರ್ನಾಟಕ ಎಂಬ ಹೆಸರನ್ನು ತ್ಯಜಿಸಬೇಕಾಗಿ ಬಂದಂತೆ, ಕರ್ನಾಟಕಕ್ಕೆ ನ್ಯಾಯವಾಗಿ ಸೇರಬೇಕಾಗಿದ್ದ ಕೆಲವು ಪ್ರದೇಶಗಳು ಪರಭಾಷೀಯರ ಕುಹಕ ತಂತ್ರಗಳ ಪರಿಣಾಮವಾಗಿ ಕೈಬಿಟ್ಟು ಹೋಗಿರುತ್ತವೆ. ಆಂಧ್ರದ ಪಾಲಿಗೆ ಕನ್ನಡದ ಬಹುದೊಡ್ಡ ಭಾಗವೊಂದು—ಬಳ್ಳಾರಿ ಜಿಲ್ಲೆಯ ಅಂಶ ಹೋಗುವುದನ್ನು ಮಾತ್ರ ಈಗ, ಕೊನೆಯ ಗಳಿಗೆಯಲ್ಲಿ, ಕೇಂದ್ರ ಸರಕಾರವು ತಪ್ಪಿಸಿದೆ. ಇದರಿಂದ ಕನ್ನಡಿಗರೆಲ್ಲರಿಗೂ ಆಗಿರುವ ಆನಂದವನ್ನು ಪ್ರತಿನಿಧಿಗಳು ಪ್ರತಿಧ್ವನಿಸುವುದು ಸಮಂಜಸವಾಗಿದೆ. ಆದರೆ ಆಂಧ್ರದ ಪಾಲಿಗೆ ಹಿಂದಿನ ಬಳ್ಳಾರಿ ಜಿಲ್ಲೆಯಿಂದ ಈಗಾಗಲೇ ವರ್ಗಾಯಿಸಲ್ಪಟ್ಟಿರುವ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳ ಮಟ್ಟಿಗೆ ಗಡಿ ಸಮಿತಿಯನ್ನು ನೇಮಿಸಲಾಗುವುದೆಂಬ ಮೂರು ವರ್ಷಗಳ ಹಿಂದಿನ ಭಾರತ ಸರಕಾರದ ಭರವಸೆಯು ಮಾತು ಇನ್ನೂ ಕಾರ್ಯರೂಪಕ್ಕೆ ಇಳಿದಿಲ್ಲ; ಇದನ್ನು ಕಾರ್ಯಗತಗೊಳಿಸುವ ಬಗ್ಗೆ ಸದಸ್ಯರೆಲ್ಲರೂ ಒತ್ತಾಯವನ್ನು ಮಾಡಬೇಕಾದದ್ದು ಅಗತ್ಯವೆಂದು ನಮಗೆ ತೋರುತ್ತದೆ. ಬಳ್ಳಾರಿಯ ಪ್ರಶ್ನೆಯನ್ನು ಮರಳಿ ಎತ್ತುವಂತಿಲ್ಲವೆಂದು ಖಂಡತುಂಡವಾಗಿ ಹೇಳಿದ್ದ ಮಾತನ್ನು ಈಗ ನಡೆಸಿಕೊಟ್ಟಂತೆಯೇ ಗಡಿ ಸಮಿತಿಯ ಕುರಿತು ಕೊಟ್ಟಿದ್ದ ಆಶ್ವಾಸನವನ್ನೂ ನಡೆಸಿಕೊಡಬೇಕೆಂದು ಭಾರತ ಸರಕಾರವನ್ನು ಬಿನ್ನವಿಸಲು ಈಗ ಕನ್ನಡಿಗರು ಎಷ್ಟು ಮಾತ್ರಕ್ಕೂ ತಪ್ಪಲಾಗದು. ಶಾಸನಾಂಗದ ಪ್ರತಿನಿಧಿಗಳೇ ಕನ್ನಡಿಗರ ಪರವಾಗಿ ನಿರ್ವಹಿಸಬೇಕಾದ ಕರ್ತವ್ಯವಿದು. ಇಷ್ಟಲ್ಲದೆ, ಕನ್ನಡಕ್ಕೆ ನ್ಯಾಯವಾಗಿ ಸಲ್ಲಬೇಕಾಗಿರುವ ಮತ್ತೀಗ ವಿವಾದಾಸ್ಪದವಾದ ಪ್ರದೇಶಗಳಾಗಿ ಪರಿಣಮಿಸಿರುವ ಭಾಗಗಳನ್ನು ಭಾವೀ ಕರ್ನಾಟಕದಲ್ಲಿ ಸೇರಿಸುವುದು ಸಾಧ್ಯವಾಗುವಂತೆ, ಕನಿಷ್ಟ ಪಕ್ಷಕ್ಕೆ ಈ ಉದ್ದೇಶಕ್ಕಾಗಿ ಕೊನೆಯ ಪ್ರಯತ್ನ ನಡೆಸಲು ಅವಕಾಶ ಸಿಗುವಂತೆ, ಗಡಿ ಸಮಿತಿಗಳನ್ನು ಕ್ಷಿಪ್ರದಲ್ಲಿ ನೇಮಿಸಬೇಕೆಂದೂ ಸದಸ್ಯರೆಲ್ಲ ಒತ್ತಾಯಿಸುವುದು ಅವಶ್ಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳ ಮಟ್ಟಿಗೆ ಕಾಸರಗೋಡು ತಾಲೂಕಿನಲ್ಲಿ ಚಂದ್ರಗಿರಿ ಹೊಳೆಯನ್ನೆ ಕೇರಳ-ಕರ್ನಾಟಕಗಳ ಸೀಮಾರೇಖೆಯಾಗಿ ಪರಿಗಣಿಸುವಂತೆ ಭಾರತ ಸರಕಾರವನ್ನು ಒತ್ತಾಯಿಸುವ ವಿಶೇಷವಾದ ಹೊಣೆಯು ಬಿದ್ದಿದೆ. ಗಡಿ ಸಮಿತಿಯೊಂದನ್ನು ನೇಮಿಸಿ ಈ ವಿವಾದವನ್ನು ಪರಿಹರಿಸಲು ಭಾರತ ಸರಕಾರವನ್ನು ಕೇಳಿಕೊಳ್ಳಲು ಸದಸ್ಯರು ತಪ್ಪಲಾಗದು. ನಮ್ಮ ದೃಷ್ಟಿಯಲ್ಲಿ ಗಡಿ ಸಮಿತಿಯ ನೇಮಕ ಅನಿವಾರ್ಯವಾದುದೇನಲ್ಲ—ಕನ್ನಡಿಗರ ಹಲವು ಶಿಷ್ಟಮಂಡಳಗಳೂ ಮನವಿಗಳೂ ಜನಾಭಿಪ್ರಾಯವೂ ಎಲ್ಲವೂ ಚಂದ್ರಗಿರಿ ಹೊಳೆಯ ಉತ್ತರಭಾಗದ ಮೇಲೆ ಕೇರಳೀಯರಿಗೆ ಯಾವುದೇ ಅಧಿಕಾರವಿಲ್ಲವೆಂದು ಈಗಾಗಲೇ ಸ್ಪಷ್ಟಪಡಿಸಿರುತ್ತವೆ; ಪ್ರಜಾಸತ್ತಾತ್ಮಕ ಪದ್ಧತಿಯಂತೆ ವ್ಯಕ್ತವಾಗಿರುವ ಈ ಪ್ರಚಂಡ ಒಮ್ಮತವನ್ನು ಕಡೆಗಣಿಸಿದ ಭಾರತ ಸರಕಾರದ ಪರಿಷ್ಕಾರ ಮನೋಭಾವ ನಮಗೆ ಮೆಚ್ಚುಗೆಯಾಗಿಲ್ಲ. ಅವರ ದೃಷ್ಟಿಯ ಪರಿಮಾರ್ಜನೆಗಾಗಿ ಅವರು ಸೂಚಿಸಿರುವ ಮಾರ್ಗವನ್ನೇ ಅನುಸರಿಸಿ ಕೊನೆಯ ಸಾಹಸವನ್ನು ಮಾಡೋಣ ಎಂಬುದಕ್ಕಾಗಿ ಗಡಿಸಮಿತಿಗಾಗಿ ಒತ್ತಾಯ ನಡೆಯಲಿ ಎನ್ನುತ್ತಿದ್ದೇವೆ. ಈ ಗಡಿಸಮಿತಿಯು ನ್ಯಾಯವನ್ನು ಎತ್ತಿ ಹಿಡಿದೀತೆ, ಅಥವಾ ಫಜಲಾಲಿ ಆಯೋಗವು ಕಾಸರಗೋಡಿನ ವಿಷಯದಲ್ಲಿ ಕಣ್ಣುಮುಚ್ಚಿ ಕೆಲಸ ಮಾಡಿದಂತೆ ಕನ್ನಡಿಗರಿಗೆ ಪುನಃ ಅನ್ಯಾಯವನ್ನೆ ಮಾಡೀತೆ—ಎಂಬುದರ ಕುರಿತು ನಾವೇನೂ ಹೇಳಲಿಚ್ಛಿಸುವುದಿಲ್ಲ. ಆದರೆ ನೆಹರುಗಳೂ ಅಸಂಭವವಲ್ಲವೆಂದಿದ್ದ ಜನಮತಗಣನೆಯ ವಿಧಾನವನ್ನು ಅನುಸರಿಸಿದರೆ ಗಡಿ ಸಮಿತಿಗಳಲ್ಲಿರುವ ಕೆಲವೇ ಬುದ್ಧಿವಂತರು ಮಾಡಬಹುದಾದ ಪ್ರಮಾದಕ್ಕೆ ಎಡೆ ಸಿಗದೆ ಹೋಗುವುದೆಂಬ ಸಂಗತಿಯನ್ನು ಪ್ರತಿನಿಧಿಗಳ ಗಮನಕ್ಕೆ ತರಲು ಇಚ್ಛಿಸುತ್ತೇವೆ. ನಮ್ಮ ಪ್ರತಿನಿಧಿಗಳು ಚಂದ್ರಗಿರಿ ಹೊಳೆಯ ಉತ್ತರ ಭಾಗದಲ್ಲಿರುವ ಕಾಸರಗೋಡು ತಾಲೂಕಿನ ಪ್ರದೇಶವನ್ನು ಕರ್ನಾಟಕದಲ್ಲಿ ಇರಗೊಳಿಸಬೇಕೆಂದು ಮದ್ರಾಸು, ಮೈಸೂರು ಇತ್ಯಾದಿ ಸರಕಾರಗಳ ಶಾಸನಾಂಗ ಕೈಗೊಂಡಿದ್ದ ನಿರ್ಣಯವನ್ನು ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ವಿಶ್ವಾಸವುಳ್ಳ ಭಾರತ ಸರಕಾರ ಉಪೇಕ್ಷೆಯಿಂದ ಕಂಡಿರುವುದನ್ನು ಖಂಡಿಸಬೇಕು; ಕಾಸರಗೋಡು ತಾಲೂಕಿನಲ್ಲಿ ಚಂದ್ರಗಿರಿ ಹೊಳೆಯ ಉತ್ತರದಲ್ಲಿರುವ ಪ್ರದೇಶವನ್ನು ಪ್ರತಿನಿಧಿಸುವ ಮಹನೀಯರೆಲ್ಲರೂ ಕರ್ನಾಟಕದಲ್ಲಿಯೇ ಈ ಭಾಗದ ಸೇರ್ಪಡೆಯಾಗಬೇಕೆಂದು ಹೇಳಿರುವುದನ್ನು ಪುನಃ ನೆನಪಿಗೆ ತಂದುಕೊಡಬೇಕಾದದ್ದು ಸಹ ಪ್ರತಿನಿಧಿಗಳ ಕರ್ತವ್ಯ. ತಮ್ಮ ಮೇಲೆ ನ್ಯಾಯವಾಗಿ ಬಂದಿರುವ ಈ ಹೊಣೆಗಾರಿಕೆಯನ್ನು ನಿರ್ವಹಿಸಲು ಕಾಂಗ್ರೆಸಿನ ಪ್ರಬಲ ಕೋಟೆ, ನೆಹರು ಜಿಲ್ಲೆ ಎಂದು ಮುಂಚಿತವಾಗಿ ಹೆಸರು ಹೊಂದಿರುವ ನಮ್ಮ ಜಿಲ್ಲೆಯ ಕಾಂಗ್ರೆಸು ಪ್ರತಿನಿಧಿಗಳಿಗೆ ಎಷ್ಟರ ಮಟ್ಟಿಗೆ ಸಾಧ್ಯವಾದೀತೊ ಎಂಬ ಬಗ್ಗೆ ಸಂಶಯ ಜನತೆಯಲ್ಲಿದೆ. ಈ ಸಂಶಯಕ್ಕೆ ಆಧಾರವಾಗಿ ಕಾಂಗ್ರೆಸಿಗರು ರಾಜ್ಯಗಳ ಪುನರ್ಘಟನೆಯ ಕರಡು ಮಸೂದೆಯ ಚರ್ಚೆಯ ಕಾಲದಲ್ಲಿ ಅನುಸರಿಸಬೇಕಾದ ವಿಧಾನದ ಕುರಿತು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳು ಹೊರಡಿಸಿದ ಪರಿಪತ್ರದ ಅಂಶಗಳಿವೆ. ಪಕ್ಷನಿಷ್ಠೆ ಮತ್ತು ಏಕಮತ್ಯದ ಅವಶ್ಯಕತೆಯನ್ನು ಅವರು ಒತ್ತಿ ಹೇಳುತ್ತಾ ಟೀಕೆಗಳು ಸಂಯಮದಿಂದ ಕೂಡಿರಬೇಕೆಂದೂ ಅಭಿಪ್ರಾಯ ಪ್ರಕಟಣೆಯು ಗೌರವಯುತ ರೀತಿಯಲ್ಲಿ ನಡೆಯಬೇಕೆಂದೂ ಮಸೂದೆಯ ವಿರುದ್ಧ ಕಾಂಗ್ರೆಸಿಗರು ಮತವೀಯಬಾರದೆಂದೂ ಪಕ್ಷದ ನಾಯಕನ ಅಪ್ಪಣೆಯಿದ್ದರೆ ಮಾತ್ರ ಸಾಮಾನ್ಯ ತಿದ್ದುಪಡಿಯನ್ನು ಸೂಚಿಸಬಹುದೆಂದೂ ಆತ್ಮಸಾಕ್ಷಿ(ಗೆ) ವಿರುದ್ಧವಾಗಿ ಮಸೂದೆಗೆ ಬೆಂಬಲಕೊಡಲು ಬಯಸದವರು ತಾಟಸ್ಥ್ಯವನ್ನು (ವಹಿ)ಸಬೇಕೆಂದೂ ಹೇಳಿದ್ದಾರೆ. ಈ ಪರಿಪತ್ರದ ಉದ್ದೇಶವು ಪಕ್ಷದ ಸಂಘಟನೆಯ ದೃಷ್ಟಿಯಿಂದ ಪವಿತ್ರವಿದ್ದರೂ ಸಹ ರಾಜ್ಯಗಳ ಪುನರ್ಘಟನೆಯು ಜೀವಾಳದ ವಿಷಯವೆಂಬುದನ್ನು ಮನಗಂಡಾದರೂ ಪಕ್ಷದ ನಾಯಕರು ಸಾಮಾನ್ಯ ತಿದ್ದುಪಡಿಗಳಿಗೆ ಅಪ್ಪಣೆಯನ್ನು ಕೊಡುವಲ್ಲಿ ಬಿಗಿಯಾದ ನಿಲುಮೆ ವಹಿಸಬಾರದೆಂದು ಹೇಳಲು ಬಯಸುತ್ತೇವೆ. ಕಾಸರಗೋಡು ತಾಲೂಕಿನ ಭವಿಷ್ಯ ನಿರ್ಧಾರಕ್ಕೆ ಪ್ರತಿನಿಧಿಗಳು ಏನನ್ನಾದರೂ ಪ್ರಯತ್ನಿಸುವುದಕ್ಕೆ ಪಕ್ಷನಾಯಕರು ಔದಾರ್ಯವನ್ನು ತೋರಿಸಿ, ಮಸೂದೆಗೆ ತಿದ್ದುಪಡಿ ಸೂಚಿಸಲು ಅವಕಾಶ ಕೊಡುವುದು ಅತ್ಯವಶ್ಯವಾಗಿದೆ. ಇಂಥ ತಿದ್ದುಪಡಿಯನ್ನು ಮೈಸೂರು, ಕೊಡಗು, ಹೈದರಾಬಾದು ಮತ್ತು ಮುಂಬಯಿಯ ಶಾಸನಾಂಗಗಳ ಕನ್ನಡ ಪ್ರತಿನಿಧಿಗಳೂ ಮಸೂದೆಯ ಚರ್ಚೆಯ ಕಾಲಕ್ಕೆ ಮಂಡಿಸಲಿ! ಸಂಸತ್ತಿನಲ್ಲಿ ಈ ಪ್ರಶ್ನೆ ಚರ್ಚೆಗೆ ಬರುವಾಗ ದಕ್ಷಿಣ ಕನ್ನಡ ಹಾಗು ಇತರ ಕರ್ನಾಟಕದ ಭಾಗಗಳ ಪ್ರತಿನಿಧಿಗಳೂ ದಕ್ಷತೆಯಿಂದ ತಿದ್ದುಪಡಿಯನ್ನು ಮಂಡಿಸಲು ತಪ್ಪದಿರಲಿ! ಎಂದು ಸೂಚಿಸುತ್ತೇವೆ. ಈ ನಡುವೆ ಭಾರತ ಸರಕಾರದ ಮನವೊಲಿಸಲು ಕಾಂಗ್ರೆಸಿಗರೂ ಕಾಸರಗೋಡು ಮುಖ್ಯ ತಾಲೂಕಿನ ಜನರೇ ಮುಂತಾದ ಅನ್ಯಾಯಕ್ಕೊಳಗಾದ ಪ್ರಜೆಗಳೂ ಇತರ ಧುರೀಣರೂ ಶಿಷ್ಟಮಂಡಳಿ ಮತ್ತು ಮನವಿ ಪತ್ರಗಳ ಮೂಲಕ ಒತ್ತಾಯದ ಕ್ರಮಗಳನ್ನು ಮುಂದರಿಸುವುದು ಸಹ ಅಪೇಕ್ಷಣೀಯ ಎನ್ನುತ್ತೇವೆ.

ತಿರು-ಕೊಚ್ಚಿಯಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ

ಆಡಳಿತ ನಿರ್ವಹಣೆಗೆ ಸಲಹೆಗಾರರ ನೇಮಕ

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಇದೇ ೨೩ನೇ ದಿನಾಂಕ ತಿರು-ಕೊಚ್ಚಿಯಲ್ಲಿ ಘಟನಾತ್ಮಕ ಆಡಳಿತವನ್ನು ನಡೆಸುವುದು ಸಾಧ್ಯವಿಲ್ಲವೆಂಬ ವಿಷಯವು ತನಗೆ ಮನವರಿಕೆಯಾಗಿದೆ ಎನ್ನುತ್ತಾ ಆ ರಾಜ್ಯದ ಆಳ್ವಿಕೆಯನ್ನು ತನ್ನ ಕೈಗೆಯೇ ನೇರಾಗಿ ವಹಿಸಿಕೊಂಡಿದ್ದಾರೆ. ತಿರು-ಕೊಚ್ಚಿಯ ರಾಜಪ್ರಮುಖರು ರಾಷ್ಟ್ರಾಧ್ಯಕ್ಷರ ಪರವಾಗಿ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ರಾಜ್ಯದ ಶಾಸನಾಂಗವು ಈಗ ವಿಸರ್ಜನೆ ಹೊಂದಿದೆ.

ಸಲಹೆಗಾರರ ನೇಮಕ

ಇವರಿಗೆ ಸಲಹೆಯನ್ನು ಕೊಡಲು ರಾಷ್ಟ್ರಾಧ್ಯಕ್ಷರು ಶ್ರೀ ಪಿ. ಎಸ್. ರಾವ್ ಎಂಬ ತಜ್ಞರನ್ನು ಸಲಹೆಗಾರರಾಗಿ ನೇಮಿಸಿದ್ದಾರೆ. ಇವರು ತಮ್ಮ ಅಧಿಕಾರವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ಮಾತನಾಡುತ್ತಾ ರಾಜ್ಯದ ಸಮಸ್ಯೆಗಳನ್ನು ಚೊಕ್ಕ ರೀತಿಯಲ್ಲಿ ಪರಿಹರಿಸಿ, ತಾನು ಈ ಅಧಿಕಾರವನ್ನು ಬಿಟ್ಟುಕೊಡುವ ಹೊತ್ತಿಗೆ ಈಗಿನಂತ ವಾತಾವರಣವು ಎಷ್ಟೋ ಪಾಲು ಸುಖಕರವಾಗುವಂತೆ ಮಾಡಲು ಪ್ರಯತ್ನಿಸುವೆನೆಂದಿದ್ದಾರೆ.

ಅಮೇರಿಕ ಮತ್ತು ಗೋವೆ

ಪ್ರಧಾನಿ ನೆಹರುಗಳು ಲೋಕಸಭೆಯಲ್ಲಿ ವಿದೇಶ ಧೋರಣೆಯ ಕುರಿತು ಹೇಳಿಕೆಯನ್ನು ಕೊಡುತ್ತಾ ಗೋವೆಯ ಕುರಿತು ಅಮೇರಿಕವು ತಾನು ಯಾವ ಪಕ್ಷ

...ನ್ನು ವಹಿಸಿಲ್ಲವೆಂದು ಹೇಳುತ್ತಿರುವುದ ...ದ ಭಾರತವು ಪೂರ್ಣ ಸಮಾಧಾನ ...ಂಡಿಲ್ಲ ಎಂದಿದ್ದಾರೆ. ಡಲ್ಲೆಸರೊಡನೆ ...ಖತಃ ಮಾತನಾಡಿದ ಬಳಿಕವೂ ಭಾ...ತ ಸರಕಾರಕ್ಕೆ ತೃಪ್ತಿಯಾಗಿಲ್ಲವೆಂದಿ...ದ್ದಾರೆ. ಅಮೇರಿಕವು ಏನೇ ಸಮಾಧಾನ ...ಡಲಿ, ಪೋರ್ಚುಗಾಲವು ಅಮೇರಿಕ...ದ ತನ್ನ ಬೆಂಬಲಕ್ಕಿದೆ ಎಂಬುದನ್ನು ಸಾ...ರುತ್ತಾ ಹೋಗುವುದೆಂದು ಅವರು ಹೇಳಿ, ...ರತವು ಎಂದಿಗೂ ವಸಾಹತುವಾದದ ...ನೆಯು ಅವಶೇಷವಾಗಿ ಗೋವೆಯು ...ಳಿಯುವುದನ್ನು ಸಹಿಸದೆಂದು ಪುನರು...ಚ್ಚರಿಸಿದ್ದಾರೆ.

ಸಂರಕ್ಷಣೆಯ ಪ್ರಶ್ನೆ

ಲೋಕ ಸಭೆಯು ಕಳೆದ ವಾರ ...ಂರಕ್ಷಣ ಖಾತೆಯ ಬೇಡಿಕೆಯ...ನ್ನು ಚರ್ಚಿಸಿ ಒಪ್ಪಿಗೆ ಕೊಟ್ಟಿತು. ...ಈ ಸಂದರ್ಭದಲ್ಲಿ ಮಾತನಾಡಿದ ಸದಸ್ಯ...ರು ಪಾಕಿಸ್ತಾನದ ಶಸ್ತ್ರ ಹಾಗು ಸೈನ್ಯ ...ಬಲವು ವೃದ್ಧಿಯಾಗುತ್ತಿರುವುದರ ಕಡೆ ...ಸರಕಾರದ ಗಮನ ಸೆಳೆದರು. ಪ್ರಧಾನಿ...ಯವರು ಈ ಕುರಿತು ತಾವು ಸತರ್ಕರಿದ್ದೇ...ವೆಂದು ಸ್ಪಷ್ಟಪಡಿಸಿದರು. ರಕ್ಷಣಾ ಖಾತೆ...ಯ ಸಚಿವರಾದ ಡಾ. ಕಟ್ಜುರವರು ...ಮಾತನಾಡುತ್ತಾ ಭಾರತವು ಸಾಂಪ್ರದಾ...ಯಿಕ ಶಸ್ತ್ರಗಳ ಮಟ್ಟಿಗೆ ಸ್ವಾವಲಂಬಿ...ಯಾಗಿದೆ ಎಂದರು. ನಮ್ಮ ಸೈನ್ಯದಲ್ಲಿ ...ಭಾರತೀಯ ಅಧಿಕಾರಿಗಳ ಸಂಖ್ಯೆಯನ್ನು ...ಹೆಚ್ಚಿಸುವ ಕ್ರಮವು ಹೆಚ್ಚಿನ ವೇಗದಿಂದ ...ಮುಂದುವರೆಯುತ್ತಲ್ಪಡುತ್ತಿದೆ ಎಂದೂ ಅವರು ...ತಿಳಿಸಿದರು.

ಭೂಸುಧಾರಣೆಯ ವೇಗ

ಮದ್ರಾಸಿನ ಶಾಸನಾಂಗದಲ್ಲಿ ಮಾತ...ನಾಡುತ್ತಾ ಮಂತ್ರಿ ಶ್ರೀ ಸುಬ್ರಹ್ಮಣ್ಯಮ...ರು ಭೂಸುಧಾರಣೆಯ ವಿಷಯದಲ್ಲಿ ಯೋ...ಜನಾ ಆಯೋಗವು ಸೂಚಿಸಿದ ...ಕ್ರಮಗಳನ್ನು ಕೈಗೊಳ್ಳುವುದೇ ಸರ...ಕಾರದ ಧ್ಯೇಯವೆಂದೂ ಅದರೆ ಇದ...ಕ್ಕಾಗಿ ಅವಸರದ ಕ್ರಮಗಳು ನಿರುಪ...ಯುಕ್ತವೆಂದೂ ನಿಧಾನವಾಗಿ ಹೆಜ್ಜೆ...ಯನ್ನು ಮುಂದಿಡುವುದೇ ಸರಕಾರದ ...ಇಚ್ಛೆಯೆಂದೂ ತಿಳಿಸಿದರು. ರಾಜ್ಯ ಪುನ...ರ್ಘಟನೆಯ ಬಳಿಕ ಮೈಸೂರಿನಲ್ಲಿ ಸೇರಿ ...ಹೋಗುವ ದಕ್ಷಿಣ ಕನ್ನಡ ಜಿಲ್ಲೆಗೆ ...ನ್ಯಾಯವಾದ ಗೇಣಿ ನಿರ್ಣಯ ಮಸೂದೆ...ಯನ್ನು ಅನ್ವಯಿಸಬೇಕೆಂದು ಆ ಜಿಲ್ಲೆ...ಯ ಸದಸ್ಯರು ಬಯಸುವ ಪಕ್ಷದಲ್ಲಿ ...ಮದ್ರಾಸು ಸರಕಾರವು ಅದನ್ನು ಅಡ್ಡಿ...ಯಿಲ್ಲದೆ ಮನ್ನಿಸುವುದೆಂದೂ ಅವರು ...ಹೇಳಿದರು. ಶ್ರೀ ವೈ. ಮಂಜಯ್ಯ ಶೆಟ್ಟಿ...ಯವರು ಈ ಜಿಲ್ಲೆಗೆ ಸಹ ನ್ಯಾಯವಾದ ...ಗೇಣಿ ನಿರ್ಣಯ ಶಾಸನವು ಅನ್ವಯಿಸ...ಲ್ಪಡಬೇಕೆಂದು ಒತ್ತಾಯಿಸಿದುದಕ್ಕೆ ...ಮಂತ್ರಿಗಳು ಹೀಗೆ ಉತ್ತರವಿತ್ತರು.

ಅರ್ಥ ಸಚಿವ ಚಿಂತಾಮಣಿ ದೇಶಮುಖರು

ಭಾರತ ಸರಕಾರದಲ್ಲಿ ಅರ್ಥ ಸಚಿವ ದೇಶಮುಖರಷ್ಟು ತಮ್ಮ ಖಾತೆಯ ವಿಷಯದಲ್ಲಿ ಅನುಭವಸ್ಥರಾಗಿರುವ ಮಂತ್ರಿಗಳು ಪ್ರಧಾನಿ ಹಾಗು ವಿದೇಶಾಂಗ ಸಚಿವ ಶ್ರೀ ನೆಹರುಗಳನ್ನು ಬಿಟ್ಟರೆ ಬೇರೊಬ್ಬರು ಸಿಗಲಿಕ್ಕಿಲ್ಲ. ಶ್ರೀ. ದೇಶಮುಖರು ಮುಂಗಡ ಪತ್ರದ ಗೋಪ್ಯ ಸ್ಫೋಟಕ್ಕೆ ತಾವು ಕಾರಣರಿರದಿದ್ದರೂ ಸತ್ಸಂಪ್ರದಾಯ ಪಾಲನೆಗೆ ಚ್ಯುತಿಯಾಗ ಕೂಡದೆಂದು ತಮ್ಮ ರಾಜೀನಾಮೆಯೊಪ್ಪಿಸಿದ್ದರು. ಆದರೆ ಪ್ರಧಾನಿಗಳು ಗೋಪ್ಯ ಸ್ಫೋಟಕ್ಕೆ ಮುಂಗಡ ಪತ್ರವನ್ನು ಮುದ್ರಿಸಿದ ಪ್ರೆಸ್ಸಿನ ಕೆಲಸಗಾರರ ಮುಖಂಡನೊಬ್ಬನು ಕಾರಣನೆಂಬುದನ್ನು ಕಂಡುಕೊಂಡು, ಅರ್ಥ ಸಚಿವರ ರಾಜೀನಾಮೆಯನ್ನು ಸ್ವೀಕರಿಸದೆ, ದೇಶಕ್ಕೆ ಮಹದುಪಕಾರವನ್ನು ಮಾಡಿದರು. ದೇಶಮುಖರ ಹೊರತು ಇಂದಿನ ಕಠಿಣಕಾಲದಲ್ಲಿ ರಾಷ್ಟ್ರವನ್ನು ಆರ್ಥಿಕ ಕ್ಷೇತ್ರದಲ್ಲಿ ಯಶಸ್ವಿಯಾಗಿ ಮುನ್ನಡೆಸಬಲ್ಲ ಸಾಮರ್ಥ್ಯವಂತರು ಬೇರೆ ಯಾರಿದ್ದಾರೆ?

ಉಡುಪಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.

ಇದರ 1955ನೇ ವರ್ಷದ ಪ್ರಗತಿಯ ವರದಿಯು ನಮ್ಮ ಹಸ್ತಗತವಾಗಿದೆ. ಇದರ ವಿಮರ್ಶೆಯನ್ನು ಬರುವವಾರ ಕೊಡಲಾಗುವುದು.
ಸಂ. ನ.

ಪ್ರತಿಷೇಧ ಬಹಿಷ್ಕಾರ– ನಮ್ಮ ಇದೇ ತಾ. 21ರಂದು ಸ್ಥಳೀಯ ಬೀಡಿ ಮಜೂರರು ಹೂಡಿದ್ದರು. ಸಂಜೆ ಮೆರವಣಿಗೆಯಾಗಿ ರಥ ಬೀದಿಯಲ್ಲಿ ಶ್ರೀ ದಾಸ ಸೇರಿಗಾರರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ಕೆ. ಮೋನಪ್ಪ ಶೆಟ್ಟರು ಸಂದರ್ಭೋಚಿತ ಭಾಷಣವಿತ್ತರು. ಅನಂತರ ಮಜೂರರ ಕೇಳಿಕೆಗಳ ಕುರಿತು ಗೊತ್ತುವಳಿಗಳಾದುವು.

ಶ್ರೀ ಪಣಿಯಾಡಿ ಅನಂತಕೃಷ್ಣ ಉಪಾಧ್ಯಾಯರ ನಿಧನ— ಪಣಿಯಾಡಿ ಸಹೋದರರಲ್ಲೊಬ್ಬರಾದ ಶ್ರೀ ಅನಂತಕೃಷ್ಣ ಉಪಾಧ್ಯಾಯರು ಇತ್ತೀಚೆಗೆ ಸ್ವಲ್ಪ ಸಮಯದಿಂದ ಅನಾರೋಗ್ಯದಿಂದಿದ್ದು ತಾ. 18_3_56 ರಂದು ತಮ್ಮ ೬೨ನೇ ವರ್ಷದಲ್ಲಿ ದಿವಂಗತರಾದುದು ವಿಷಾದಕರವಿದೆ. ಇವರು ಶ್ರೀಕೃಷ್ಣಾ ಪ್ರೆಸ್, ತುಳುನಾಡ್ ಪ್ರೆಸ್, ಮೆಜೆಸ್ಟಿಕ್ ಪ್ರೆಸ್ಸುಗಳಲ್ಲಿ ಬೇರೆ ಬೇರೆ ಉದ್ಯೋಗದಲ್ಲಿದ್ದು ಮುದ್ರಣ ಉದ್ಯಮದಲ್ಲಿ ವಿಶೇಷ ಅನುಭವವುಳ್ಳವರಾಗಿದ್ದರು. ಹಿಂದಿನಿಂದಲೂ ಕಾಂಗ್ರೆಸ್ ಭಕ್ತರಾಗಿದ್ದು ಸತತ ಖಾದಿಧಾರಿಗಳಾಗಿದ್ದರು.

ಕೇರಳ ಸಮಾಜದ ಸತ್ಕಾರ– ಇಲ್ಲಿ ಪ್ಯಾಕೇಜ್. ಇಂಜಿನಿಯರರಾಗಿದ್ದ ಶ್ರೀ ಕುನ್ಹಿರಾಮ ಮೆನನರಿಗೆ ಪಯ್ಯನೂರಿಗೆ ವರ್ಗವಾದ ಪ್ರಯುಕ್ತ ಸ್ಥಳೀಯ ಕೇರಳ ಸಮಾಜದವರು ಅವರಿಗೊಂದು ವಿದಾಯ ಸತ್ಕಾರಕೂಟವನ್ನೇ ರ್ಪಡಿಸಿದ್ದರು. ಶ್ರೀ ವಿ. ಯು. ಕೆ. ನಂಬೀಶನರು ಅತಿಥಿಗಳನ್ನು ಸ್ವಾಗತಿಸಿದಬಳಿಕ ಶ್ರೀಗಳಾದ ಕೆ. ಎ. ದೇವದಾಸ, ಪದ್ಮನಾಭನ್, ಡಾ. ಟಿ. ಎನ್. ಕೇಳುನಂಬಿಯಾರ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಟಿ. ಎ. ವಾಸುದೇವನವರು ಆಭಾರ ಸೂಚಿಸಿದರು.

ರಾಷ್ಟ್ರೀಯ ರೈತರ ಸಮ್ಮೇಲನ— ಇದೇ ತಾ. 31ರಿಂದ ಎಪ್ರಿಲ್ 5ರ ತನಕ ದಿಲ್ಲಿಯಲ್ಲಿ ಜರಗಲಿರುವ ರಾಷ್ಟ್ರೀಯ ರೈತರ ಎರಡನೇ ಸಮ್ಮೇಳನಕ್ಕೆ ನಮ್ಮ ಜಿಲ್ಲೆಯಿಂದ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಂ. ಎಲ್. ಎ. ಅವರು ಪ್ರತಿನಿಧಿಯಾಗಿಯೂ ಪೆರ್ಣಂಕಿಲ ಪಟೇಲ್ ಶ್ರೀ ವಿ. ಗೋವಿಂದರಾಜ ಹೆಗ್ಡೆಯವರು ಕೇಂದ್ರ ಸರಕಾರದ ಆಹ್ವಾನದಂತೆಯೂ ಸಮ್ಮೇಳನದಲ್ಲಿ ಭಾಗವಹಿಸಲು ತೆರಳಿರುವರಾಗಿ ತಿಳಿದುಬರುತ್ತದೆ. ಶ್ರೀ ಹೆಗ್ಡೆಯವರು ಉಡುಪಿ ತಾಲೂಕಿನ ಮತ್ತು ದ. ಕ. ಜಿಲ್ಲೆಯ ಕೃಷಿ ಪಾರಿತೋಷಕವನ್ನು ಪಡೆದ ಕೃಷಿ ಪಂಡಿತರಾಗಿರುವರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಶಿಷ್ಟ ಮಂಡಲ

ಇದೇ ತಾ. 27_3 56ನೇ ಮಂಗಳವಾರ ಪ್ರಾತಃಕಾಲ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರುಗಳಾದ ಶ್ರೀ. ಎಫ್. ಎಕ್ಸ್. ಡಿ. ಪಿಂಟೊ ಮತ್ತು ಶ್ರೀ. ಕೆ. ಆರ್. ಆಚಾರ್; ಜಿಲ್ಲಾ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ. ಕೆ. ಕೆ. ಶೆಟ್ಟಿ, ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಯಜ್. ಕೆ. ತಿಂಗಳಾಯ, ಮಂಗಳೂರು ನಗರ ಸಭೆಯ ಅಧ್ಯಕ್ಷರಾದ ಶ್ರೀ. ಕೆ. ಯಸ್. ಯನ್. ಅಡಿಗ, ಶ್ರೀ. ಯಸ್. ನರಸಪ್ಪಯ್ಯ, ಎಂ. ಎಲ್. ಸಿ., ತಾಲೂಕ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ, ವೇಣು ಗೋಪಾಲ ನಾಯಕ್ ಉಪ್ಪಿನಂಗಡಿ; ಕಾಸರಗೋಡಿನ ಯಮ್. ಉಮೇಶರಾವ್ ಮತ್ತು ಡಾ| ಕೆ. ನಾಗಪ್ಪ ಆಳ್ವ ಈ ಮಹನೀಯರನ್ನೊಳಗೊಂಡ ಒಂದು ಶಿಷ್ಟ ಮಂಡಲವು ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ, ಮತ್ತು ಮೈಸೂರಿನ ಇತರ ಮಂತ್ರಿಗಳನ್ನು ಹಾಗೂ ಶಾಸನ ಸಭೆಯ ಇತರ ಸದಸ್ಯರುಗಳನ್ನು ಬೇಟಿಯಾಗಿ, ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಬೃಹನ್ ಮೈಸೂರು ಸಂಸ್ಥಾನಕ್ಕೆನೇ ಸೇರಿಸುವಂತೆ ಶಾಸನ ಸಭೆಯ ಮುಂದೆ "ಯಸ್. ಆರ್. ಸಿ. ಬಿಲ್ ಬರುವಾಗ ತಿದ್ದುಪಡಿಯನ್ನು ತರುವಂತೆ ಒತ್ತಾಯಪೂರ್ವಕ ಕೇಳಿಕೊಳ್ಳಲು ಹೊರಟಿರುತ್ತದೆ.

ಚಾರ್ವಾಕ— ಪುತ್ತೂರು ತಾಲೂಕು ಚಾರ್ವಾಕ ಗ್ರಾಮದ ಕಾಪ್ಪಾಡಿ "ಶ್ರೀ ಕಪಿಲೇಶ್ವರ" ದೇವಸ್ಥಾನದಲ್ಲಿ ಹಾಗೂ ಸರಕಾರದಲ್ಲಿ ವರ್ಷಂಪ್ರತಿ ವಾಡಿಕೆಯಂತೆ ಜರಗತಕ್ಕ ಉತ್ಸವಗಳು ಜರಗದೆ ಇಂದಿಗೆ ಸಾಧಾರಣ ಹದಿನೆಂಟು ವರ್ಷಗಳು ಸಂದುವು. ಈಗ ಸದ್ರಿ ಗ್ರಾಮದ ಪಟೇಲ್ ಪರಮೇಶ್ವರ ಗೌಡರ ಹಾಗೂ ಊರಿನ ಅನ್ಯ ಮಹನೀಯರ ಉತ್ಸಾಹದಿಂದ ತಾ. 31_3_56ರಿಂದ ತಾ. 5_4 56ರ ವರೆಗೆ ಉತ್ಸವಗಳು ಜರಗಲಿರುವುವು ಎಂದು ದೇವಸ್ಥಾನದ ಆಡಳಿತೆ ಮೊಕ್ತೇಸರರಾದ ಶ್ರೀ ಕೆ. ನಾರಾಯಣ ಕಲ್ಲೂರಾಯರು ತಿಳಿಸಿರುತ್ತಾರೆ.

UDIPI MUNICIPALITY

Sealed tenders will be recieved by the Commissioner, Udipi Municipality upto 4 P. M. on 9—4—1956 for the petty works for 1956—57. The tender should be accompanied by a receipt for Rs. 300/- on account of earnest money deposit, deposited into the Municipal Treasury, Udipi.

Full particulars as to conditions of contract etc., may be obtained from the Municipal office, Udipi during office hours on working days.

Municipal Office,
Udipi,
Dated 22—3—1956.

V. U. K. Nambissan,
Commissioner,
Udipi Municipality, Udipi.

ವಿಶೇಷ ವಿನಂತಿ

ಅವಧಿಗೆ ಸರಿಯಾಗಿ ತಮ್ಮ ಚಂದಾ ಹಣವನ್ನು ಕ್ರಮ ಪ್ರಕಾರ ಪಾವತಿ ಮಾಡುತ್ತ ನಮ್ಮೊಡನೆ ಸದಾ ಸಹಕರಿಸುತ್ತಿರುವ 'ನವಯುಗ'ದ ಚಂದಾದಾರ ಬಂಧುಗಳಿಗೆ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಚಂದಾಹಣವನ್ನು ಇನ್ನೂ ಬಾಕಿಮಾಡಿಕೊಂಡಿರುವ ಇತರ ಚಂದಾದಾರರು ಈಗಲಾದರೂ ಬಾಕಿಯನ್ನು ಪ್ರೀತಿಯಿಂದ ಸಲ್ಲಿಸಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಇಲ್ಲವಾದರೆ ನಾವು ಬಾಕಿಗಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಸಹೃದಯಾಂತಃಕರಣದಿಂದ ಸ್ವೀಕರಿಸಬೇಕೆಂದೂ, ಆ ಬಗ್ಗೆ ಅನ್ಯಥಾ ಭಾವಿಸಬಾರದೆಂದೂ, ವಿ. ಪಿ. ಪಿ. ಯನ್ನು ಹಿಂದೆ ಬಿಟ್ಟು ನಮ್ಮನ್ನು ನಷ್ಟಕ್ಕೆ ಗುರಿಪಡಿಸಬಾರದೆಂದೂ ವಿನಂತಿಸಿಕೊಳ್ಳುವೆವು.

ಉಡುಪಿ. ಮೆನೇಜರ್

ನವಯುಗ

ಮಂಗಳೂರು

ರೋಟರಿ ಕ್ಲಬ್ಬಿನಲ್ಲಿ— ಮೂಲ್ಕಿ ಸರಕಾರಿ ಹೈಸ್ಕೂಲಿನ ಪ್ರಧಾನಾಧ್ಯಾಪಕ ಶ್ರೀ ಕೆ. ವಿಟ್ಠಲ ಶೆಣೈಯವರು ತಾವು ಇತ್ತೀಚೆಗೆ ಅಮೇರಿಕದಲ್ಲಿ ಕಂಡುಕೊಂಡ ಶಿಕ್ಷಣ ಸಂಸ್ಥೆ ಹಾಗೂ ಅಮೇರಿಕದ ಶಿಕ್ಷಣದ ಕುರಿತು ತಾ. 22ರಲ್ಲಿ ಶ್ರೀ ಪಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಭಾಷಣಮಾಡಿದರು. ಕೊನೆಯಲ್ಲಿ ನಡೆದ ಚರ್ಚೆಯಲ್ಲಿ ಡಾ. ಬಾಳಪ್ಪ ಶೆಟ್ಟಿ, ಕೆ. ವಿ. ಕಾಮತ್, ರಾಜಾರಾಮ ಮಲ್ಯ, ಯು. ಕೇಶವ ರಾವ್, ಎಂ. ಎಸ್. ಕಾಮತ್, ಕೆ. ಸಿ. ಪದ್ಮನಾಭ್ ಮೊದಲಾದವರು ಭಾಗವಹಿಸಿದ್ದರು. ಈಗ ಹೈಸ್ಕೂಲು ಶಿಕ್ಷಣದೊಂದಿಗೆ ಪ್ರಿಯೂನಿವರ್ಸಿಟಿ ಕೋರ್ಸನ್ನು ಸೇರಿಸುವ ಯೋಜನೆಯಿಂದ ಹೈಸ್ಕೂಲು ಹಾಗು ಕಾಲೇಜು ಶಿಕ್ಷಣದ ಮಟ್ಟ ಕೆಳಗಿಳಿಯಬಹುದೆಂದು ಅಧ್ಯಕ್ಷರು ಹೇಳಿದರು.

ದಕ್ಷಿಣ ಪ್ರದೇಶ ಪ್ರತಿಭಟನಾ ಸಭೆಯು - ತಾ. 18ರಲ್ಲಿ ಕೇಂದ್ರ ಮೈದಾನಿನಲ್ಲಿ ಶ್ರೀ ಕೆ.ಸಂಜೀವಶೆಟ್ಟಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನೆರವೇರಿ ಕೇರಳಕ್ಕೆ ಕಾಸರಗೋಡನ್ನು ಕೊಡಿಸುವ, ಕರ್ನಾಟಕ—ಕೇರಳವನ್ನು ಒಂದಾಗಿಸುವ, ಹಾಗೂ ಬೇರೆ ಬಹು ಭಾಷಾ ಪ್ರಾಂತ ನಿರ್ಮಾಣಯೋಜನೆಯನ್ನು ವಿರೋಧಿಸಲಾಯಿತು.

ಅಖಿಲ ಭಾರತ ಜನಸಂಘ— ಇದರ ಕಾರ್ಯದರ್ಶಿ ಪಂ. ದೀನದಯಾಳ ಉಪಾಧ್ಯಾಯರು ತಾ. 22 ರಲ್ಲಿ ಇಲ್ಲಿಗೆ ಬಂದಾಗ ರೈಲ್ವೆ ನಿಲ್ದಾಣದಲ್ಲಿ ಜನಸಂಘದ ಕಾರ್ಯಕರ್ತರಿಂದ ಸ್ವಾಗತಿಸಲ್ಪಟ್ಟರು. ಅಂದೇ ಪತ್ರಿಕಾ ಗೋಷ್ಠಿಯಲ್ಲಿ ಅವರು ಭಾರತದ ಗಡಿಯಲ್ಲಿ ಪಾಕಿಸ್ಥಾನ ಪೋಲೀಸು—ಸೈನಿಕರು ಎಸಗುತ್ತಿರುವ ತೊಂದರೆಯನ್ನು ಪ್ರಸ್ತಾಪಿಸಿ ಮಾತನಾಡಿದರು. ಮರುದಿನ ಸಂಜೆ ಕೇಂದ್ರ ಮೈದಾನಿನಲ್ಲಿ ಡಾ. ದೇವದಾಸ ಶೆಣೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಪಂ ದೀನದಯಾಳರು ಭಾರತ ಸರಕಾರದ ನೀತಿಯನ್ನು ಖಂಡಿಸಿ, ಜನಸಂಘವು ಅಖಂಡ ಭಾರತಕ್ಕಾಗಿ ಸಾಧಿಸುತ್ತಿದೆ ಎಂದರು.

ನೋಟೀಸು

ಕುಂದಾಪುರ ತಾಲೂಕು ಮರವಂತೆ ಗ್ರಾಮದ ರಾಮಚಂದ್ರ ಅವಭೃತನು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನೆಂದ್ರೆ ನನ್ನ ತಂದೆ ಕೃಷ್ಣ ಅವಭೃತರು ಮೃತಪಟ್ಟು ಇಂದಿಗೆ 6 ತಿಂಗಳು ಕಳೆದಿರಬಹುದು. ಅವರು ಮೃತಪಡುವಾಗ ನಮಗೆಲ್ಲಾ ಪಾಲು ಮಾಡಿಕೊಟ್ಟು ಅವರು ಸ್ವಂತಕ್ಕೆಂದು ಇಟ್ಟುಕೊಂಡಿರುವ ಆಸ್ತಿ ಅವರ ಕಾಲದ ನಂತರ 3 ಜನ ಮಕ್ಕಳಿಗೆ ಹಕ್ಕುಬರುವುದು ಸರಿಯಷ್ಟೆ. ನನ್ನ ತಂದೆಗೆ ಅವರು ಸಾಯುವಾಗ 200 ರೂಪಾಯಿ ಅಂದಾಜು ಸಾಲ ಇರುವುದೆಂತ ಅವರು ಸಾಯುವ 3 ದಿವಸದ ಮುಂಚೆ ಹೇಳಿದ್ದಾರೆ, ಮತ್ತು ಅವರು ಮೃತಪಟ್ಟು ಅವರ ಉತ್ತರ ಕ್ರಿಯೆ ಬಗ್ಗೆ ಸಾಧಾರಣ 200 ರೂಪಾಯಿ ಅಂದಾಜು ಬಿದ್ದಿರಬಹುದು. ಸಾಧಾರಣ 400—0—0 ಅಂದಾಜು ತಂದೆಯವರ ಆಸ್ತಿಗೆ ಉಂಟೆ ವಿನಹ 2000 ಸಾವಿರ ರೂಪಾಯಿ ಅವರ ಆಸ್ತಿಗೆ ಇರುವುದಿಲ್ಲ. ತಂದೆಯವರು ಮೃತಪಟ್ಟ ನಂತರ ನನ್ನ ತಾಯಿಗೆ 1ನೇ ಮತ್ತು 2ನೇಯವರ ದುರ್ಬೋಧನೆಗೆ ಒಳಪಟ್ಟು ಸಹಕಾರಿ ಸಂಘದಿಂದ ಸಾಂತರ 3000—0—0 ರೂಪಾಯಿಗಳನ್ನು ಆಸ್ತಿಯ ಜವಾಬ್ದಾರಿಯಿಂದ ತೆಗೆಯುತ್ತಾರಾಗಿ ಪರಸ್ಪರ ವರ್ತಮಾನವಿದ್ದುದರಿಂದ 1ನೇಯವರಾದ ವಿಶ್ವೇಶ್ವರಯ್ಯ 2ನೇ ಯವರಾದ ವಾಸುದೇವಯ್ಯ ಮತ್ತು ತಾಯಿಯವರಿಗೆ ದುರ್ಬೋಧನೆಯಿಂದ ನನ್ನನ್ನು ಬಿಟ್ಟು ಮಾಡುತ್ತಾರೆಂಬಂತೆ ವರ್ತಮಾನವಿರುವುದರಿಂದ ಸದ್ರಿ ಆಸ್ತಿಯನ್ನು ಯಾರೇ ಸಾಲ ತೆಗೆದುಕೊಂಡರೆ ಅದು ಸಿಂಧು ಆಗತಕ್ಕದ್ದಲ್ಲ. ಮತ್ತು ಯಾರಾದರೂ ಇದಕ್ಕೂ ಒಳಪಟ್ಟು ತೆಗೆದುಕೊಂಡರೆ ತೆಗೆದುಕೊಂಡವರೇ ಬಾಧ್ಯಸ್ಥರಾಗಬಹುದೆಂತ ಈ ಮೂಲಕ ತಿಳಿಯಪಡಿಸುತ್ತೇನೆ.

ರಾಮಚಂದ್ರಯ್ಯನ ರುಜು.

ಸಂಗೀತ ಕಚೇರಿ — ಭಾರತ-ಪಾಕಿಸ್ಥಾನಗಳಲ್ಲಿ ಪ್ರಖ್ಯಾತಿ ಪಡೆದ ಹಿಂದೂಸ್ತಾನೀ ಸಂಗೀತ ವಿದ್ವಾಂಸರಾದ ಉಸ್ತಾದ್ ಬಡೇ ಗುಲಾಮಲೀ ಖಾನರ ಸಂಗೀತ ಕಚೇರಿಯೊಂದು ತಾ 24ನೇ ರಾತ್ರಿ ನ್ಯೂ ಚಿತ್ರಾ ಚಿತ್ರಮಂದಿರದಲ್ಲಿ ನೆರವೇರಿತು.

ನೃತ್ಯ ಪ್ರದರ್ಶನ— ಅಳಕೆಯಲ್ಲಿ ಜರಗುತ್ತಿರುವ ವಾಣಿ ವಿಜಯ ವಿದ್ಯಾ ಹೈಸ್ಕೂಲಿನ ಸಹಾಯಾರ್ಥ ವಿವಿಧ ವಿನೋದಾವಳಿ ಕಾರ್ಯಕ್ರಮದಲ್ಲಿ ತಾ 24, 25ರಲ್ಲಿ ಸಿನೆಮಾ ಮತ್ತು ನೃತ್ಯತಾರೆಯರಾದ ಕೇರಳ ಸಹೋದರಿ (ಕುಮಾರಿ ಕಮಲ, ಲೀಲಾ ಮತ್ತು ಲಕ್ಷ್ಮಿ) ನೃತ್ಯ ಪ್ರದರ್ಶನವು ಯಶಸ್ವಿಯಾಗಿ ಜರಗಿತು

ಯುವಕ ಕಾಂಗ್ರೆಸಿನ ಸಭೆ ಯೊಂದು ತಾ 23ರಂದು ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಸದಾನಂದ ಹೆಗ್ಡೆ, ಎಂ. ಪಿ. ಅವರು ಪ್ರಾಂತ ಪುನಾರಚನೆಯ ವರದಿಯ ಗುಣಾವಗುಣಗಳನ್ನು ವಿವರಿಸಿ ಭಾಷಣವಿತ್ತರು. ಕೆಲ ಪ್ರಶ್ನೋತ್ತರಗಳಾದ ಮೇಲೆ ಶ್ರೀ ಕೆ. ಕೆ. ಶೆಟ್ಟರು ಧನ್ಯವಾದಗಳನ್ನಿತ್ತರು.

ಹೆಚ್ಚಿಗೆ ತೆರಿಗೆ ಹೇರ ಬೇಡಿರಿ — ಇದೇ ತಾ. 25ನೇ ಸಂಜೆ ಸೆಂಟ್ರಲ್ ಕೋ-ಓಪರೇಟಿವ್ ಬ್ಯಾಂಕಿನ ಸಭಾ ಮಂದಿರದಲ್ಲಿ ಸ್ಥಳೀಯ ಪುರಜನರ ಸಂಘದವತಿಯಿಂದ ಸಭೆಯೊಂದು ಜರಗಿ ಲಂಡನಿನ ಬೆಲ್ಮಂಟ್ ಆಸ್ಪತ್ರೆಯ ಮನೋಶಾಸ್ತ್ರಜ್ಞ ಡಾ| ಮಂಗಳೂರು ನರಸಿಂಹ ಪೈಗಳು ಮಂಗಳೂರು ನಗರಾರೋಗ್ಯದ ಅವಶ್ಯಕತೆಗಳು ಎಂಬ ಕುರಿತು ನಗರಾಧ್ಯಕ್ಷ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಭಾಷಣ ಮಾಡುತ್ತಾ ಯೋಗ್ಯವಾದ ಪುರನಿರ್ಮಲೀಕರಣ ಮತ್ತು ಆರೋಗ್ಯ ರಕ್ಷಣೆಯ ಸುವ್ಯವಸ್ಥೆಯ ಕಾರ್ಯಕ್ರಮ ಕೈಗೊಳ್ಳದೆ ಯೋಪಲ್ಲಿ ಹೆಚ್ಚಿನ ತೆರಿಗೆ ಹೇರಬಾರದೆಂದು ಪುರನಿವಾಸಿಗಳು ಪೌರ ಸಭೆಯವರಿಗೆ ನಿವೇದಿಸಬೇಕು. ನಗರದ ಆರೋಗ್ಯ ಹಾಗೂ ನೈರ್ಮಲ್ಯ ಕಾರ್ಯದಲ್ಲಿ ಸ್ಥಳೀಯ ಡಾಕ್ಟರರೂ, ಮೆಡಿಕಲ್ ಎಸೋಸಿಯೇಶನವರೂ ಸಹಕಾರವನ್ನೀಯಬೇಕು ಎಂಬಿತ್ಯಾದಿಯಾಗಿ ಹೇಳಿದರು. ಇಂಗ್ಲೆಂಡಿನ ಪೌರ ಸಭೆಗಳು ಈ ವಿಷಯದಲ್ಲಿ ಅನುಸರಿಸುತ್ತಿರುವ ಕಾರ್ಯ ರೀತಿಯನ್ನು ವಿವರಿಸಿದರು. ಮತ್ತು ಪೌರ ಸಭಾಡಳಿತೆಯವರೂ ಸಾರ್ವಜನಿಕ ಸಂಸ್ಥೆಗಳೂ ನಿರ್ವಹಿಸಬಹುದಾದ ಕಾರ್ಯಗಳ ರೂಪರೇಷೆಯನ್ನು ವಿವರಿಸಿದರು. ಅಧ್ಯಕ್ಷರು ಡಾ। ಪೈಗಳ ಯೋಗ್ಯ ಸೂಚನೆಗಳಿಗಾಗಿ ಆಭಾರ ಸೂಚಿಸಿದರಲ್ಲದೆ ಸದ್ಯ ಕೈಗೊಂಡಿರುವ ನಳ್ಳಿ ನೀರಿನ ಯೋಜನಾದಿಗಳನ್ನು ಹೇಳಿದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ. ಎ. ಕೆ. ಸೇವಕರು ಧನ್ಯವಾದಗಳನ್ನರ್ಪಿಸಿದರು.

ಸಭಾರಂಭದಲ್ಲಿ ಭಾಷಣಗಾರರಾದ ಡಾ. ಪೈಗಳ ಪರಿಚಯವನ್ನು ಡಾ. ಎಂ. ಉಮೇಶ ರಾಯರು ಮಾಡಿಕೊಟ್ಟಿದ್ದರು.

ಹೊಗೆ ವಾರ್ಡ್ ಕಾಂಗ್ರೆಸ್ ಸಮಿತಿ— ಇದರ ಆಶ್ರಯದಲ್ಲಿ ತಾ. 18ರಂದು ಡಾ. ಕೆ. ನಾಗಪ್ಪ ಆಳ್ವರು ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ವಾಚನಾಲಯ ಒಂದನ್ನೂ ಯುವಕ ಕ್ಲಬ್ಬನ್ನೂ ಉದ್ಘಾಟಿಸಿದರು.

ಶ್ರೀ ಶೃಂಗೇರಿ ಜಗದ್ಗುರುಗಳು— ದ. ಕ. ಜಿಲ್ಲಾ ವಿಜಯ ಯಾತ್ರೆಯನ್ನು ಕೇಂದ್ರ ಸರಕಾರದ ಮೂಲಕ ದ. ಕ. ಜಿಲ್ಲಾ ಕಲೆಕ್ಟರರಿಗೆ ಬಂದ ತಾ 14ರಿಂದ ತಾ 31ರ ವರೆಗಿನ ಕಾರ್ಯಕ್ರಮದಂತೆ ತಾ 27ರಂದು ಧರ್ಮಸ್ಥಳ, 28ಕ್ಕೆ ಅಶ್ವತ್ಥಪುರ ಮತ್ತು 30--31ರಂದು ಅಲ್ಲಿಯೇ ಮುಕ್ಕಾಂ ಎಂದು ತಿಳಿದುಬರುತ್ತದೆ.

ಸಮ್ಮೇಳನ - ಜಿಲ್ಲಾ ಪ್ರೆಸ್ ಮಜೂರರ ತೃತೀಯ ಸಮ್ಮೇಳನವು ತಾ. 1-4-56 ನೇ ಸಂಜೆ 5-30ಕ್ಕೆ ಕೇಂದ್ರ ಮೈದಾನಿನಲ್ಲಿ ಜರಗುವುದು. ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಜನರಲ್ ಕೌನ್ಸಿಲ್ ಸದಸ್ಯ ಶ್ರೀ ಎ. ಎಸ್. ಪಿ. ಅಯ್ಯಂಗಾರರು ಅಧ್ಯಕ್ಷತೆ ವಹಿಸುವರು. ಶ್ರೀ ಎ. ಎಸ್. ಪೈಗಳು ಸಮ್ಮೇಳನವನ್ನು ಉದ್ಘಾಟಿಸುವರೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕಡೇ ಕ್ಯಾರ್ಲ್ಯ — ಸ್ಥಳೀಯ ಪಂಚಾಯತ ಬೋರ್ಡು ಶಾಲಾ ವರ್ಧಂತಿಯು ತಾ. 25ರಂದು ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿಯೂ, ಮುಂಚಿನ ದಿನ ಸ್ಥಳೀಯ ಯುವಕ ಸಂಘದ ವಾರ್ಷಿಕೋತ್ಸವವು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿಯೂ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಡಾ. ಕೆ. ನಾಗಪ್ಪಾಳ್ವರು ರಾಷ್ಟ್ರಪಿತನ ಭಾವಚಿತ್ರ ಅನಾವರಣವನ್ನು ನೆರವೇರಿಸಿದರು.

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: **ಕುಮಾರಸ್ವಾಮಿ**)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಬೆಲೆ: ಒಂದೂವರೆ ರೂಪಾಯಿ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: **ಕು. ಶಿ. ಹರಿದಾಸ ಭಟ್ಟ**, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ನವಯುಗ ಪ್ರೆಸ್, ಉಡುಪಿ.

ಹಿರೆಬೆಟ್ಟು—ಪಟ್ಲ ಲೋಕಮಾನ್ಯ ತಿಲಕ ಹಾ. ಎ. ಶಾಲಾ ಮಕ್ಕಳ ಬಾಲವಾಣಿ ಹಸ್ತಪತ್ರಿಕೆಯ ಉದ್ಘಾಟನೆಯನ್ನು ಶ್ರೀ. ಎ. ಜೆ. ಅಲ್ಸೆಯರ ಅಧ್ಯಕ್ಷತೆಯಲ್ಲಿ ಶ್ರೀ. ಯಸ್. ಎಲ್. ಭಟ್ಟರು ಉದ್ಘಾಟಿಸಿದರು.

ಉಜಿರೆ—ಸ್ಥಳೀಯ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಿಂದ ತರಬೇತಿಯನ್ನು ಮುಗಿಸಿ ಹೋಗಲಿರುವ ವಿದ್ಯಾರ್ಥಿ ಅಧ್ಯಾಪಕರುಗಳನ್ನು ಬೀಳ್ಕೊಡುವ ಒಂದು ಸತ್ಕಾರ ಕೂಟವು ತಾ. 21ರಲ್ಲು ಮುಖ್ಯೋಪಾಧ್ಯಾಯ ಶ್ರೀ. ಎಂ. ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

ಧರ್ಮಸ್ಥಳ ಕರ್ನಾಟಕ ವಿದ್ಯಾಲಯದ ವರ್ಧಂತಿ ಸಮಾರಂಭವು ತಾ. 24ರಲ್ಲು ಶ್ರೀ ಕೋಟ ರಾಮಕೃಷ್ಣ ಕಾರಂತರ ಅಧ್ಯಕ್ಷತೆಯಲ್ಲಿ ಶೈಕ್ಷಣಿಕ ಪ್ರದರ್ಶನವೇ ಮೊದಲಾದ ಕಾರ್ಯಕ್ರಮಗಳಿಂದ ನೆರವೇರಿಸಲ್ಪತು.

ಕುಂದಾಪುರ — ಕುಂದಾಪುರ ಬೋರ್ಡು ಹೈಸ್ಕೂಲಿನ ಹಳೇವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದ ಅಂಗವಾಗಿ ಎಂದಿನಂತೆ ಜರಗುವ ಕಲೆ—ವೃತ್ತಿ—ಕೈಗಾರಿಕೆ ಪ್ರದರ್ಶನವು ಎಪ್ರಿಲ್ ತಾ. 19, 20, 21, 22ರಂದು ವಿಶೇಷ ವೈಭವದಿಂದ ಜರಗಲಿದೆ. ತಾ. 21ನೇ ರಾತ್ರಿ ಪದವೀಧರ ವಿದ್ಯಾವಂತರಿಂದ 3 ಮೇಳಗಳ ಯಕ್ಷಗಾನ ಬಯಲಾಟವು ಜರಗಲಿದೆ. ಅಂದು ಪ್ರದರ್ಶಿಸುವ ಪ್ರಸಂಗಗಳು "ಬಭ್ರುವಾಹನ ಕಾಳಗ" "ಪ್ರಹ್ಲಾದ ಚರಿತ್ರೆ" "ರತಿಕಲ್ಯಾಣ" ಈ ಮೂರು ಮೇಳಗಳ ಬಯಲಾಟದಲ್ಲಿ, ವೈ ಮಂಜಯ್ಯ ಸೆಟ್ಟಿ B.A.LL.B. ಎಂ. ಎಲ್. ಎ., ಎಂ. ಎಂ. ಹೆಗ್ಡೆ, BA. BL. ಜಿಲ್ಲಾಬೋರ್ಡು ಸದಸ್ಯ ಮೊದಲಾದವರು ಪ್ರಮುಖ ಪಾತ್ರ ವಹಿಸುವರು.

ಗುಂಡಿಬೈಲು — ಸ್ಥಳೀಯ ಬ್ರಹ್ಮಬೈದರ್ಕಳ ಧೂಮಾವತಿ ಯಕ್ಷಗಾನ ಸಂಘದವರು ತಾ. 17ರಂದು ಮೂಡನಿಡಂಬೂರು ಗರಡಿಯಲ್ಲಿ ಕೋಟಿ ಚೆನ್ನಯವೆಂಬ ಯಕ್ಷಗಾನ ಪ್ರಸಂಗವನ್ನು ಯು ಜೆರೊಂ ಡಿ'ಸೋಜರ ಸೇವಾರೂಪವಾಗಿ ಜರಗಿಸಿದರು.

ದಯವಿಟ್ಟು ಇಲ್ಲಿ ಓದಿರಿ!

● ಕೇವಲ ಎರಡು ರೂ. M. O. ಮಾಡಿ ೫೦ ತರದ ವಿವಿಧ ವಿಷಯ ವೈಜ್ಞಾನಿಕ ಸಾಹಿತ್ಯಿಕ ಗ್ರಂಥಗಳನ್ನು ಇಂದೇ ಪಡೆಯಿರಿ. ಸರ್ವರಿಗೂ ಉಪಯುಕ್ತ

● ಕಾಮ ರಹಸ್ಯದ ೩೦೦ ಸತ್ಯ ಚಿತ್ರಸಂಗ್ರಹ.-(ಸಂಕ್ಷಿಪ್ತ ವಿವರ ಸಹಿತ) ೪-೮-೦.

● ಸ್ತ್ರೀ ರಹಸ್ಯದ ೧೦೦ ನೈಜಚಿತ್ರ ಸಂಗ್ರಹ (ವಿಸ್ತೃತ ವಿವರ ಸಹಿತ) ೨—೮—೦.

● ಅಂಗೈಕನ್ನಡಿ: (ಅನೇಕ ದೊಡ್ಡ ಚಿತ್ರಗಳಿವೆ) ಇದರಿಂದ ಬೇಕಾದವರ ಕೈ ನೋಡಬಹುದು. ೪—೦—೦.

ಹಣ ಮುಂಗಡ ಕಳಿಸಿ. (ವಿ. ಪಿ. ಯಿಂದ ಪ್ರತಿಯೊಂದಕ್ಕೂ ೧ರೂ.ಅಂಚೆವೆಚ್ಚ ಹೆಚ್ಚು)

ಸಾಹಿತ್ಯ ಮಂದಿರ, ಗದಗ.

"ಸರಸ್ವತಿ"

(Estd. 1920)

ಕನ್ನಡ ಮಾಸಪತ್ರಿಕೆ

ಕಳೆದ ಮೂವತ್ತೈದು ವರ್ಷಗಳಿಂದ ಮಹಿಳೆಯರ ಹಾಗೂ ಮಕ್ಕಳ ಸೇವೆಯನ್ನು ಸಲ್ಲಿಸಿ ಇಡೀ ಕರ್ನಾಟಕದಲ್ಲಿ ಹೆಸರಾಂತ ಮಾಸ ಪತ್ರಿಕೆ. ಜಾಹೀರಾತು ಕೊಡಲು ಉತ್ತಮ ಪತ್ರಿಕೆ. ಶಾಲಾ ಮಕ್ಕಳಿಗೆ ಅಗತ್ಯವಾದ ಪತ್ರಿಕೆ.

ಸಂಪಾದಕೀ:— ಆರ್. ಕಲ್ಯಾಣಮ್ಮ.

ವಾರ್ಷಿಕ ಚಂದಾ ರೂ. 3 ಮನಿಯಾರ್ಡರ್ ಮಾಡಿರಿ.

ಮ್ಯಾನೇಜರ್,
ಸರಸ್ವತಿ ಕಾರ್ಯಾಲಯ,
ಅವೆನ್ಯೂರೋಡು? ಚಿಕ್ಕಪೇಟೆ, ಬೆಂಗಳೂರು2.
ಫೋನ್ ನಂ. 3303.

ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳು

ಶ್ರೀ ಪುತ್ತಿಗೆ ಮಠದ ಹಿರಿಯ ಸ್ವಾಮಿಗಳ ಶತಾಬ್ದ್ಯುತ್ಸವ

ಉಡುಪಿಯಲ್ಲಿ ಶ್ರೀಮನ್‌ಮಧ್ವಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ಅಷ್ಟಮಠಗಳಲ್ಲಿ ಶ್ರೀ ಪುತ್ತಿಗೆ ಮಠವೂ ಒಂದು. ಶ್ರೀ ಮಧ್ವಾಚಾರ್ಯರಿಂದ ಈ ಮಠದ ಪರಂಪರೆಯಲ್ಲಿ ೨೮ನೇಯವರಾಗಿ ಶ್ರೀ ಪುತ್ತಿಗೆ ಹಿರಿಯ ಸ್ವಾಮಿಗಳಾದ ಶ್ರೀ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರಿದ್ದಾರೆ. ಇವರು, ಸಂಸಾರ ಯಾತ್ರೆಯಲ್ಲಿ ಅಪೂರ್ವ ಪುಣ್ಯಶಾಲಿಗಳಿಗೆ ಮಾತ್ರವೇ ಲಭ್ಯವಾಗುವ ಶತಾಯುಷ್ಯದ ಪೂರ್ಣಜೀವನವನ್ನು ಬಾಳಿರುವುದು ಮಹಾ ವಿಶೇಷ. ಇದೇ ೨೪—೩—೧೯೫೭ ರಂದು ಶ್ರೀ ಪಾದಂಗಳವರು ತಮ್ಮ ನೂರನೇ ವರ್ಷಕ್ಕೆ ಕಾಲಿಟ್ಟರು. ಅವರ ಈ ಹುಟ್ಟುಹಬ್ಬವನ್ನು ಅತ್ಯಂತ ವೈಭವದಿಂದ ಉಡುಪಿಯಲ್ಲಿ ಆಚರಿಸಲಾಯಿತು.

ಶ್ರೀಗಳ ಚರಿತ್ರೆ

ಶ್ರೀ ಪಾದಂಗಳವರ ಜನ್ಮವು ಉಡುಪಿಗೆ ೧೮ ಮೈಲು ದಕ್ಷಿಣದಲ್ಲಿರುವ ಹೆಜಮಾಡಿಯಲ್ಲಾಯಿತು. ಇವರ ಪೂರ್ವಾಶ್ರಮದ ಹೆಸರು ಕೃಷ್ಣ. ಗರ್ಭಾಷ್ಟಮದಲ್ಲಿಯೇ ಉಪನಯನ ಜರಗಿಸಲ್ಪಟ್ಟು ಪ್ರಾಥಮಿಕ ಶಿಕ್ಷಣವನ್ನೂ ಹೊಂದಿದ ಇವರು ಉಡುಪಿಯ ಶ್ರೀ ಕೃಷ್ಣಾಪುರ ಮಠದಲ್ಲಿ ಪರಮ ತಪಸ್ವಿಗಳೂ ಕಾಶಿಯಲ್ಲಿ ಹನ್ನೆರಡು ವರ್ಷ ಕಾಲ ವಾಸವಾಗಿದ್ದು ಸಕಲ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದವರೂ ಎಂದು ಪ್ರಸಿದ್ಧಿ ಪಡೆದ ಶ್ರೀ ಸುವಿದ್ಯಾಧೀಶ ತೀರ್ಥ ಶ್ರೀಪಾದಂಗಳವರ ಶಿಷ್ಯತ್ವವನ್ನು ಪಡೆದರು. ಗುರುಮುಖದಿಂದ ವಿದ್ಯಾಭ್ಯಾಸವನ್ನು ಹೊಂದುತ್ತಿದ್ದಾಗಲೇ, ಶ್ರೀ ಪುತ್ತಿಗೆ ಮಠಕ್ಕೆ ಯೋಗ್ಯ ಪೀಠಾಧಿಕಾರಿಯನ್ನು ನೇಮಿಸುವ ಸಂದರ್ಭವೊಂದು ಬರಲು, ಗುರುಗಳು ಇವರಿಗೆ ಸನ್ಯಾಸ ದೀಕ್ಷೆಯನ್ನಿತ್ತು ಶ್ರೀ ಸುಧೀಂದ್ರ ತೀರ್ಥರೆಂಬ ಅಂಕಿತ ನಾಮದಿಂದ ಅನುಗ್ರಹಿಸಿದರು.

ಸಂಸ್ಕೃತ ಕಾಲೇಜಿನ ಸ್ಥಾಪಕ

ಸುಮಾರು ೭೮ ವರ್ಷಗಳ ಹಿಂದಿನ ಮಾತು: ಆ ವೇಳೆಗೆ ನಾಲ್ಕು ಪರ್ಯಾಯಗಳನ್ನು ಮಾಡಿ ಶ್ರೀ ಶ್ರೀ ಸುಧೀಂದ್ರ ತೀರ್ಥರು ಶ್ರೀಕೃಷ್ಣನನ್ನು ಪೂಜೆಗಳಿಂದ ತೃಪ್ತಿಪಡಿಸಿದ್ದಾರೆ. ಈಗಿನ ಶ್ರೀ ಕೃಷ್ಣಾಪುರ ಮಠದ ಸ್ವಾಮಿಗಳಾದ ಶ್ರೀ ಸುವಿದ್ಯಾರತ್ನ ತೀರ್ಥ ಶ್ರೀಪಾದಂಗಳವರಿಗೂ ಅವರ ಗುರುಗಳಿಗೂ ಮತ್ತೂ ತನ್ನ ಮಠದ ಪೀಠಕ್ಕೆ ಉತ್ತರಾಧಿಕಾರಿಯಾದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀಪಾದಂಗಳವರಿಗೂ ದೀಕ್ಷೆಯನ್ನಿತ್ತು ಗುರುವಾಗಿದ್ದಾರೆ. ದಕ್ಷಿಣ ಭಾರತದಲ್ಲಿ ಖ್ಯಾತವಾಗಿರುವ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠ ಶಾಲೆಯ ಸಂಸ್ಕೃತ ಕಾಲೇಜನ್ನು ಸ್ಥಾಪಿಸಿ ಬೆಳೆಸಿದ್ದಾರೆ. ಅನೇಕ ಶಿಕ್ಷಣ ಸಂಸ್ಥೆಗಳಿಗೆ ನೆರವಾಗಿದ್ದಾರೆ. ಬಹಳ ಉದಾರಿಗಳೂ ಸರಲ ಮನಸ್ಕರೂ ಆಗಿರುವ ಶ್ರೀ ಪಾದಂಗಳವರಿಗೆ ಜನರು ಧರ್ಮಶೀಲರಾಗಿ ಬಾಳಬೇಕೆಂಬುದೇ ಮಹದಾಸೆ. ತಮ್ಮ ನಿತ್ಯಕರ್ಮಾನುಷ್ಠಾನಗಳಿಗೆ ವಯೋದೋಷವು ಸಹ ಆತಂಕವಾಗದಂತೆ ಬಹಳ ತತ್ಪರತೆಯನ್ನು ತೋರಿಸಿ, ಏಳ್ಳಷ್ಟು ಚ್ಯುತಿಯಿಲ್ಲದೆ ಅವರು ಪಾರಮಾರ್ಥಿಕ ಶ್ರೇಯಸ್ಸಾಧನೆಗೆ ಹೇಳಿಸಿದ ಜೀವನವನ್ನು ನಡೆಸುತ್ತಿದ್ದಾರೆ.

ಶತಾಬ್ದ್ಯುತ್ಸವ

ಇಂಥ ಮಹಾನುಭಾವರನ್ನು ಅವರ ನೂರನೇ ಹುಟ್ಟುಹಬ್ಬದಂದು ಊರ ಹಾಗು ಪರವೂರ ಮಹನೀಯರು ಗೌರವಿಸಿ, ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸಿದುದು ಸತ್ಸಂಪ್ರದಾಯ ಪಾಲನೆಯೇ ನಿಜ. ಪರ್ಯಾಯ ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರ ನೇತೃತ್ವದಲ್ಲಿ ಅಷ್ಟ ಮಠಗಳ ಶ್ರೀ ಪಾದಂಗಳವರೂ ಅಖಿಲ ಭಾರತ ಮಾಧ್ವ ಮಹಾ ಮಂಡಲವೂ ಇತರ ಆಪ್ತರೂ ಸೇರಿ ಶತಾಬ್ದ್ಯುತ್ಸವಾಚರಣೆಯನ್ನು ಯಶಸ್ವಿಯಾಗಿ ನೆರವೇರಿಸಿದರು. ಅಂದು ಪ್ರಾತಃಕಾಲ ಶ್ರೀ ಕೃಷ್ಣನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತಲ್ಲದೆ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ರಜತ ತುಲಾ ಭಾರವು ನಡೆಯಿತು. ನಾಲ್ಕು ಸಾವಿರ ತೊಲೆಗೆ ಹತ್ತಿರಹತ್ತಿರವಾಗುವಷ್ಟು ತೂಕದ ಬೆಳ್ಳಿಯನ್ನು ಇದಕ್ಕೆ ಉಪಯೋಗಿಸಲಾಯಿತು. ಮಧ್ಯಾಹ್ನ ಮಹಾಪೂಜೆಯ ಬಳಿಕ ಬ್ರಾಹ್ಮಣರಿಗೂ ಇತರ ಜಾತಿಯವರಿಗೂ ಮಹಾ ಸಂತರ್ಪಣೆಯನ್ನು ನಡೆಸಲಾಯಿತು. ಸುಮಾರು ೧೮ ಸಾವಿರ ಜನರು ಈ ಅನ್ನದಾನದಿಂದ ತೃಪ್ತಿಹೊಂದಿರಬೇಕೆಂದು ಅಂದಾಜು.

ಪುರ ಮೆರವಣಿಗೆ

ಸಾಯಂಕಾಲ ಬಹಳ ವಿಜೃಂಭಣೆಯಿಂದ ಪುರಮೆರವಣಿಗೆಯನ್ನು ಹೊರಡಿಸಲಾಯಿತು ಮಲ್ಲಿಗೆ ಚಪ್ಪರದಿಂದ ಶೃಂಗರಿಸಿದ್ದ ತೆರೆದ ಕಾರಿನಲ್ಲಿ ಶ್ರೀ ಸುಧೀಂದ್ರ ತೀರ್ಥರನ್ನು ಕುಳಿಸಿ ಜಯಘೋಷಗಳೊಡನೆಯೂ ಮಂಗಲ ವಾದ್ಯಗಳೊಡನೆಯೂ ಪುರಮೆರವಣಿಗೆ ರಥಬೀದಿಯಿಂದ ತೆಂಕಪೇಟೆ, ಕೋಳಪೇಟೆ, ಚರ್ಚ್ ರೋಡ್, ಸಂತೆಕಟ್ಟೆ, ಶಿರಿಬೀಡು, ಬಡಗುಪೇಟೆಯ ತಳಿರು ತೋರಣಗಳಿಂದ ಶೃಂಗರಿಸಿದ್ದ ಮಾರ್ಗವಾಗಿ ತೆರಳಿತು. ಸಹಸ್ರಾರು ನಾಗರಿಕರು ಇದರಲ್ಲಿ ಭಾಗವಹಿಸಿದ್ದರಲ್ಲದೆ, ಶ್ರೀ ಪಾದಂಗಳವರಿಗೆ ಭಕ್ತಿ ಪುರಸ್ಸರವಾಗಿ ಹಾರವನ್ನರ್ಪಿಸಿ, ಮತ್ತು ಆರತಿ ಎತ್ತಿ ಪುರಜನರು ವಿಶೇಷ ಉತ್ಸಾಹವನ್ನು ಪ್ರದರ್ಶಿಸಿದರು. ಶ್ರೀ ಲಕ್ಷ್ಮೀವೆಂಕಟರಮಣ ದೇವಾಲಯದ ವತಿಯಿಂದ ಪಾದಪೂಜೆಯೂ ನೆರವೇರಿತು.

ಗೌರವಾರ್ಪಣೆ

ಮುಂದೆ ರಥಬೀದಿಯಲ್ಲಿ ಕಿಕ್ಕಿರಿದು ನೆರೆದ ಜನಸ್ತೋಮದ ಮುಂದೆ ಶ್ರೀ ಪರ್ಯಾಯ ಶ್ರೀಗಳವರ ಅಧ್ಯಕ್ಷತೆಯಲ್ಲಿ ಮಾನಪತ್ರಗಳನ್ನಿತ್ತು ಸತ್ಕರಿಸಲಾಯಿತು. ಅಖಿಲ ಭಾರತ ಮಾಧ್ವ ಮಹಾ ಮಂಡಲ, ಉಡುಪಿ ನಗರಸಭೆ, ಸಂಸ್ಕೃತ ಕಾಲೇಜು, ಕಲಾವೃಂದ, ಮಹಾತ್ಮಾ ಗಾಂಧಿ ಕಾಲೇಜು, ದಿ ಎಕಾಡಮಿ ಆಫ್ ಜನರಲ್ ಎಜುಕೇಶನ್, ಲಕ್ಷ್ಮೀ ವೆಂಕಟರಮಣ ದೇವಾಲಯ ಇತ್ಯಾದಿ ಸಂಸ್ಥೆಗಳು ಈ ಮಾನಪತ್ರವಿತ್ತವು. ಶ್ರೀ ಪಾದಂಗಳವರು ತಮ್ಮ ಸಂತೋಷ ಸೂಚಕ ಸಂದೇಶದಲ್ಲಿ ಶ್ರೀಮನ್ಮಧ್ವಾಚಾರ್ಯರಿಂದ ಸಕಲ ಸಜ್ಜನ ಹಿತಕ್ಕಾಗಿ ಬರೆಯಲಾದ "ಸದಾಚಾರ ಸ್ಮೃತಿ" ಎಂಬ ಗ್ರಂಥವನ್ನು ಜನತೆಯು ತಂತಮ್ಮ ವರ್ಣಾಶ್ರಮೋಚಿತ ಧರ್ಮಕ್ಕನುಸಾರವಾಗಿ ಅಧ್ಯಯನಗೈದು ನಿತ್ಯಜೀವನವನ್ನು ಶ್ರೇಯಃ ಪ್ರಾಪ್ತಿಯ ಮಾರ್ಗದಲ್ಲಿ ಮುನ್ನಡೆಸಬೇಕೆಂದು ಅಪ್ಪಣೆಕೊಡಿಸಿದರು. ಆ ಬಳಿಕ ರಾತ್ರಿಗೆ ತೆಪ್ಪೋತ್ಸವ ಸಹಿತ ಬ್ರಹ್ಮೋತ್ಸವವು ನಡೆದು ರಥವನ್ನು ಎಳೆಯಲಾಯಿತು.

ಚಿತ್ರ ಸ್ಮಾರಕ

ಉತ್ಸವದ ಅಂಗವಾಗಿ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರ ಕನಕಾಭಿಷೇಕವನ್ನು ಶ್ರೀ ಕುತ್ಪಾಡಿ ಸಹೋದರರು ತಮ್ಮ ದಿವಂಗತ ತೀರ್ಥರೂಪರ ಪ್ರೀತ್ಯರ್ಥ ನಡಸಿದರು; ಅಲ್ಲದೆ ತಮ್ಮ ದಿವಂಗತ ಮಾತೃಶ್ರೀಗಳ ಪ್ರೀತ್ಯರ್ಥ ೧೨ ಮಂದಿ ಪಂಡಿತರಿಗೆ ವಿಶೇಷ ಸಂಭಾವನೆಯನ್ನೂ ೧೦೧ ಮಂದಿ ವಿದ್ವಾಂಸರಿಗೆ ಸಾಮಾನ್ಯ ಸಂಭಾವನೆಯನ್ನೂ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ದಿವ್ಯ ಹಸ್ತದಿಂದ ಕೊಡಿಸಿ ಆದರಿಸಿದರು. ಸಂಸ್ಕೃತ ಕಾಲೇಜಿನ ಮತ್ತು ವೇದ ಪಾಠ ಶಾಲೆಯ ವಿದ್ಯಾರ್ಥಿಗಳಿಗೆ ದಕ್ಷಿಣೆ ಸಹಿತ ವಸ್ತ್ರದಾನವನ್ನಿತ್ತರು. ಜಿಲ್ಲಾ ಕಲೆಕ್ಟರರಾದ ಶ್ರೀ ಎಂ. ಜಿ. ರಾಜಾರಾಮರು ಸಂಸ್ಕೃತ ಕಾಲೇಜಿನಲ್ಲಿ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ತೈಲ ಚಿತ್ರದ ಅನಾವರಣಗೈದು ಶ್ರೀಗಳ ಗುಣಗಾನ ಮಾಡಿದರು. ಈ ಸಮಾರಂಭಕ್ಕೆ ನೆರೆದಿದ್ದ ಮಹಾಜನರನ್ನು ಪ್ರಿನ್ಸಿಪಾಲರಾದ ಶ್ರೀ ಕೌಲಗಿ ಶೇಷಾಚಾರ್ಯರು ಸ್ವಾಗತಿಸಿದರು. ಶ್ರೀ ಪೇಜಾವರ ಮಠಾಧೀಶರು ಕವಿರಾಜ ದವಾಖಾನೆಯಲ್ಲಿ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ಛಾಯಾಚಿತ್ರದ ಅನಾವರಣ ಕಾರ್ಯವನ್ನು ನೆರವೇರಿಸಿದರು.

ಮೇಳಗಳ ಜೋಡಾಟ

ಮರುದಿನ ಅಂದರೆ ದಿನಾಂಕ ೨೫ರಂದು ಕಲಾವೃಂದದಲ್ಲಿ ಪರ್ಯಾಯ ಶ್ರೀಗಳ ಅಧ್ಯಕ್ಷತೆಯಲ್ಲಿ ಶ್ರೀ ಪೇಜಾವರ ಶ್ರೀಗಳವರಿಂದ ಶ್ರೀ ಸುಧೀಂದ್ರ ತೀರ್ಥರ ತೈಲಚಿತ್ರ ಅನಾವರಣವಾಯಿತು. ಅಲ್ಲದೆ ರಥಬೀದಿಯಲ್ಲಿ ಉತ್ಸವ ಸಮಿತಿಯವರು ಜಿಲ್ಲೆಯಲ್ಲಿ ವೈದಿಕ ಧರ್ಮಪ್ರಚಾರ ಕಾರ್ಯವನ್ನು ನಡೆಸುವಲ್ಲಿ ದಶಾವತಾರ ಮೇಳಗಳು ಮಹತ್ವದ ಪಾತ್ರ ವಹಿಸುತ್ತಿರುವುದನ್ನು ಮನಗಂಡು ಒಂದು ಪ್ರಚಂಡ ಜೋಡಾಟವನ್ನೇರ್ಪಡಿಸಿದ್ದರು. "ಲವ ಕುಶ ಕಾಳಗ", "ಕೃಷ್ಣಾರ್ಜುನ ಕಾಳಗ" ಮತ್ತು "ಗಿರಿಜಾ ಕಲ್ಯಾಣ" ಗಳೆಂಬ ಯಕ್ಷಗಾನ ಪ್ರಸಂಗಗಳನ್ನು ಜೋಡಾಟದಲ್ಲಿ ಕಿಕ್ಕಿರಿದು ನೆರೆದಿದ್ದ ಜನಸ್ತೋಮದ ಮುಂದೆ ಆಡಲಾಯಿತು. ಇದರಲ್ಲಿ ಅಮೃತೇಶ್ವರಿ ಮೇಳದ ಕಡೆಯಿಂದ ಶ್ರೀಗಳಾದ ಉಡುಪಿ ಬಸವ, ಮಾರ್ವಿ ರಾಮಕೃಷ್ಣ ಹೆಬ್ಬಾರ, ಹಾರಾಡಿ ಕುಷ್ಟ, ವೈಕಾಡಿ ಗೋಪ, ಹಾಸ್ಯಗಾರ ಹಾರಾಡಿ ಮಂಜುನಾಥ ಕೋಟ ವೆಂಕಟ, ಮಹಾಬಲ ಶೆಟ್ಟಿ ಮುಂತಾದ ಬಯಲಾಟದ ಕಲಾವಿದರೂ ಶ್ರೀ ನಾರಾಯಣ ಉಪ್ಪೂರ (ಭಾಗವತ) ಮತ್ತು ಶ್ರೀ ಮಹಾಬಲ ಕಾರಂತ (ಮದ್ದಳೆ) ಈ ಹಿಮ್ಮೇಳದವರೂ ಭಾಗವಹಿಸಿದ್ದರು. ಮಂದಾರ್ತಿ ಮೇಳದ ಕಡೆಯಿಂದ ಶ್ರೀಗಳಾದ ಹಾರಾಡಿ ರಾಮ, ರಾಮಕೃಷ್ಣ ಪ್ರಭು, ಸುರ್ಗಿಕಲ್ಲು ಹಿರಿಯ, ಹಾಸ್ಯಗಾರ ರಾಮ, ಹಾರಾಡಿ ನಾರಾಯಣ ಇತ್ಯಾದಿ ಕಲಾವಿದರೂ ಶ್ರೀ ಶೇಷಗಿರಿ (ಭಾಗವತಿಕೆ) ಮತ್ತು ಶ್ರೀ ಹಿರಿಯಡ್ಕ ಗೋಪಾಲ (ಮದ್ದಳೆ) ಈ ಹಿಮ್ಮೇಳದವರೂ ಭಾಗವಹಿಸಿದ್ದರು. ಶ್ರೀ ಎ. ಜೆ. ಆಳ್ವರವರು ಉತ್ಸವ ಸಮಿತಿಯ ಪರವಾಗಿ ಧನ್ಯವಾದವನ್ನು ಅರ್ಪಿಸಿದರು.

ಕೆಲವು ಉತ್ತಮ ಪುಸ್ತಕಗಳು.

ಬದುಕುಬಂಗಾರ	(ಕುಮಾರಸ್ವಾಮಿ)	1	8
ಯುಗವಾಣಿ	(ಕು. ಶಿ. ಹರಿದಾಸಭಟ್)	0	8
ಘಂಟಿಮಾರಾ	(,,)	2	0
ಏಶಿಯದ ಸಂಪತ್ತು	(,,)	2	0
ಅಂತರಂಗದ ಕತೆಗಳು	(ಸಂಕಲನ)	1	4
ಸ್ವಪ್ನಲೋಕ	(ಕಾರ್ತಿಕೇಯ)	0	8
ನೀತಿವಿನೋದ ಕತೆಗಳು		0	12
ಸೇವಾಪಥ	(ಸೇಟ್ ಗೋವಿಂದಾಸ್)	0	8
ಸರಸ್ವತಿ	(ಡಾ। ಎಂ. ಮಾಧವಾಚಾರ್ಯ)	0	12
ಗೀತೆಯ ಕೈಗನ್ನಡಿ	(ಚಿದಂಬರಯ್ಯ)	0	12
ಭಾರತದ ಕರ್ಣ	(ಎನ್. ಎಸ್. ಕಿಲ್ಲೆ)	0	6
ಪ್ರಾಚೀನ ತುಳುನಾಡು	(,,)	2	0
ಮುರಲಿ	(,,)	0	12
ಮಧುವನ	(ಸಂಕಲನ)	3	0
ಕಾವ್ಯಸಾಮ್ರಾಜ್ಯ	(,,)	1	8
ಶವಗಳ ಸಾಗಾಟ	(ಕೆಳ್ಳ ಶೆಟ್ಟಿ)	0	12
ಕವಿತಾಕಾಮಿನಿ	(ಎಸ್. ವೆಂಕಟರಾಜ)	2	0
ಆಕಾಶಗಂಗೆ		1	10
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4
ಪ್ರೇಮವಿಜಯ	,,)	1	0

ಏಜಂಟರು ಬೇಕು. ಶರ್ತಗಳಿಗೂ ನಮ್ಮಲ್ಲಿ ದೊರೆಯುವ ಇತರ ಕನ್ನಡ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕಭಂಡಾರ, ಉಡುಪಿ.

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ........ಶೈಲಿಯು ಚಲೋದಿದೆ"
—'ಕಂಠೀರವ'.

ಬಿಳಿ ಕಾಗದ - ಸುಂದರ ಮುದ್ರಣ - ಬೆಲೆ: 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಕ್ಷನಿಷ್ಠ ಪ್ರತಿನಿಧಿಗಳು ಮತ್ತು ಪ್ರಜಾಪ್ರಭುತ್ವ

(೩ನೇ ಪುಟದಿಂದ)

ಳಗಾದರೂ ಒಮ್ಮತವಿದೆ ಎಂಬ ವಿಶ್ವಾಸವಿಲ್ಲ. ಶಿಸ್ತು ಮತ್ತು ನಿಷ್ಠೆಯ ನಿರ್ಬಂಧಗಳಿಗೊಳಪಟ್ಟು ಆ ಪಕ್ಷಕ್ಕೆ ಸೇರಿದ ಸದಸ್ಯರು ತಮ್ಮ ಸ್ವಾತಂತ್ರ್ಯವನ್ನು ವ್ಯವಹಾರದಲ್ಲಿ ಇಳಿಸಬೇಕಾಗುತ್ತದೆ. ದೇಶದ ಸಾಮಾನ್ಯ ಧೋರಣೆಯಾದರೂ ಚುನಾಯಿತ ಪ್ರತಿನಿಧಿ ಸಭೆಯ ಬಹಿರಂಗ ಅಧಿವೇಶನದಲ್ಲಿ ನೇರಾಗಿ ಮತ್ತು ನಿರ್ಭಯವಾಗಿ ಚರ್ಚಿಸಲ್ಪಟ್ಟು ತೀರ್ಮಾನ ಹೊಂದುವ ಪ್ರಜಾಪ್ರಭುತ್ವ ಕ್ರಮದಂತೆ ನಡೆಯದೆ ಪಕ್ಷಗಳ ಖಾಸಗಿ ಸಭೆಗಳಲ್ಲಿ ಮುಂದಾಗಿ ಚರ್ಚಿಸಲ್ಪಟ್ಟು, ಅಲ್ಲಿ ಜನಪ್ರತಿನಿಧಿಗಳ ಮೇಲೆ ಹೇರಲಾದ ಶಿಸ್ತು ಮತ್ತು ನಿಷ್ಠೆಯ ನಿರ್ಬಂಧಗಳಿಗೊಳಪಟ್ಟು, ಬಹಿರಂಗ ಸಭೆಯ ಮುಂದೆ ಚರ್ಚೆಯೂ ನಿರ್ಣಯವೂ ಆಗುತ್ತವೆ. ಪಕ್ಷದ ಖಾಸಗಿ ಸಭೆಯಲ್ಲಿ ಮಾತ್ರ ಆ ಪಕ್ಷಕ್ಕೆ ಸೇರಿದ ಸದಸ್ಯರಿಗೆ ಅಭಿಪ್ರಾಯ ಸ್ವಾತಂತ್ರ್ಯವಿರುತ್ತದೆ; ಆದರೆ ಪಕ್ಷದ ಸಭೆಯಿಂದ ಹೊರಗೆ ಅವರು ತಮ್ಮ ಪಕ್ಷದ ಸರಳ ಬಹುಮತದ ಅಭಿಪ್ರಾಯವನ್ನೇ ಪುರಸ್ಕರಿಸುವ ಗೊಂಬೆಗಳಾಗಿ ದುಡಿಯಬೇಕಾಗುತ್ತದೆ. ಪಕ್ಷದಲ್ಲಿರುವ ಅಲ್ಪ ಸಂಖ್ಯಾಕ ಗುಂಪೊಂದು ಬಹುಸಂಖ್ಯಾಕ ಗುಂಪಿನ ದಾಸ್ಯವನ್ನು ಸ್ವೀಕರಿಸಿ, ಆತ್ಮಸಾಕ್ಷಿಗೆ ವಿರುದ್ಧವಾಗಿ ಕೈಎತ್ತಿ ನಿಲ್ಲುವ ತೀರ ವಿಷಾದಕರ ಪರಿಸ್ಥಿತಿ ಹೀಗೆ ಬಂದೊದಗುತ್ತದೆ. ಇದು ಪ್ರಜಾಪ್ರಭುತ್ವವಾಗಲಾರದು; ಪಕ್ಷದ ಸರ್ವಾಧಿಕಾರವೆಂದೇ ಇದನ್ನು ಕರೆಯಬಹುದು. ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ಪದ್ಧತಿಯ ನಾಶವನ್ನೇ ಮಾಡುತ್ತವೆ ಎಂಬ ಅಭಿಪ್ರಾಯ ನಿಷ್ಪಕ್ಷಪಾತವಾದ ಹಾಗು ಪೂರ್ವಾಗ್ರಹ ದೂಷಿತವಲ್ಲದ ಮನೋಭಾವದಿಂದ ನೋಡಿದಾಗ ಉಂಟಾಗುತ್ತದೆ

ಶಾಸನಾಂಗದ ಸದಸ್ಯರ ಹೊಣೆಗಾರಿಕೆಗಳ ಕುರಿತು ಮಾತನಾಡುತ್ತಾ ಬ್ರಿಟನಿನ ಹಿಂದಿನ ಪ್ರಧಾನಿ ಸರ್ ವಿನ್‌ಸ್ಟನ್ ಚರ್ಚಿಲ್ ಹೀಗೆಂದಿದ್ದರು—"ತನ್ನ ದೇಶದ ಭದ್ರತೆ ಮತ್ತು ಗೌರವದ ದೃಷ್ಟಿಯಿಂದ ಯಾವುದು ಆವಶ್ಯಕ ಮತ್ತು ಸರಿ ಎಂದು ತನಗೆ ಸ್ವತಂತ್ರ ರೀತಿಯಲ್ಲಿ ನಿಷ್ಪಕ್ಷಪಾತ ಹಾಗು ಪ್ರಾಮಾಣಿಕ ವಿವೇಚನೆಯ ಬಳಿಕ ತೋರುವುದೋ ಅದನ್ನು ಮಾಡುವುದೇ ಶಾಸನಾಂಗದ ಸದಸ್ಯನ ಪ್ರಥಮ ಕರ್ತವ್ಯ. ಎರಡನೆಯದೆಂದರೆ ಮತದಾರರ ನಿಯೋಗಿಯಾಗಿಯಲ್ಲ, ಪ್ರತಿನಿಧಿಯಾಗಿ ತಾನು ಅವರಿಗಾಗಿ ಮಾಡಬೇಕಾದ ಕೆಲಸ. ಒಬ್ಬ ಶಾಸನಾಂಗದ ಸದಸ್ಯನು ತನ್ನ ಪಕ್ಷಕ್ಕೆ ಅಥವಾ ಅದರ ಕಾರ್ಯಕ್ರಮಕ್ಕೆ ದುಡಿಯುವ ಪ್ರಶ್ನೆಯು ಮೂರನೇ ಸ್ಥಾನವನ್ನಷ್ಟೆ ಪಡೆಯುತ್ತದೆ. ಮೇಲಿನ ಮೂರೂ ಬಗೆಯ ನಿಷ್ಠೆಗಳನ್ನು ಶಾಸನಾಂಗದ ಸದಸ್ಯನು ವ್ಯಕ್ತಪಡಿಸಬೇಕೆಂಬುದು ನಿಜ; ಆದರೆ ಪ್ರಜಾಪ್ರಭುತ್ವದ ಆರೋಗ್ಯಕರವಾದ ವಾತಾವರಣದಲ್ಲಿ ಈ ನಿಷ್ಠೆಯು ವ್ಯಕ್ತವಾಗುವ ಮೇಲಿನ ಕ್ರಮದಲ್ಲಿ ಎಷ್ಟಕ್ಕೂ ಸಂಶಯ ಸಲ್ಲದು; ಅದಕ್ಕೆ ಎಡೆಯೇ ಇಲ್ಲ."

ಇದನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ, ಎಲ್ಲಿಯವರೆಗೆ ರಾಜಕೀಯ ಪಕ್ಷಗಳಿರುತ್ತವೊ ಮತ್ತು ಒಬ್ಬ ಹುರಿಯಾಳುವಿನ ಯಶಸ್ಸು ಅವನು ಯಾವ ರಾಜಕೀಯ ಪಕ್ಷಕ್ಕೆ ಸೇರಿದವನಾಗಿರುವನೆಂಬ ವಿಷಯದ ಮೇಲೆ ಹೊಂದಿಕೊಂಡಿರುತ್ತದೋ ಅಲ್ಲಿಯ ತನಕ ಶಾಸನಾಂಗದ ಸದಸ್ಯನ ಮುಂದೆ ತನ್ನ ಪಕ್ಷಕ್ಕೆ ನಿಷ್ಠೆ ಸಲ್ಲಿಸುವ ಪ್ರಶ್ನೆ ಬಂದಾಗ ಅದಕ್ಕೆ ತೃತೀಯ ಸ್ಥಾನವನ್ನು ಚರ್ಚಿಲ್ಲರು ಹೇಳಿದಂತೆ ಕೊಡುವುದು ಸಾಧ್ಯವೆನಿಸಲಾರದು. ಪ್ರಜಾಪ್ರಭುತ್ವವು ಇದನ್ನು ಮನ್ನಿಸುವುದೇ? ಎಷ್ಟಕ್ಕೂ ಇಲ್ಲ. ಅದು ಪಕ್ಷಕ್ಕೆ ಏನನ್ನೂ ಹೇಳುವುದಿಲ್ಲ—ಎಲ್ಲವನ್ನೂ ಜನತೆಗಾಗಿ ಅದು ವಿಧಿಸುತ್ತದೆ; ಅಥವಾ ಪ್ರಜಾಪ್ರಭುತ್ವವು ಜನರ ಹೆಸರಿನಲ್ಲಿ ಕಾರ್ಯವನ್ನು ನಿರ್ವಹಿಸುತ್ತದೆ. ಎಂದ ಮೇಲೆ, ಎಲ್ಲವೂ ಪಕ್ಷಕ್ಕಾಗಿಯೇ ಹೊರತು, ಪ್ರಜಾಪ್ರಭುತ್ವಕ್ಕಾಗಿಯಲ್ಲ ಎನ್ನುವ ರಾಜಕೀಯ ಪಕ್ಷಗಳಿಂದ ಪ್ರಜಾಪ್ರಭುತ್ವದ ಉದ್ದೇಶ ಸಾಧನೆಯಾಗುವುದು ತೀರ ಸಂಶಯ.

ಆಧುನಿಕ ಸರಕಾರವು ದಿನ ಹೋದಂತೆ ಹೆಚ್ಚು ಹೆಚ್ಚು ದಕ್ಷತೆ ಮತ್ತು ತಜ್ಞ ಅನುಭವದಿಂದ ಕೂಡಿ ಕೆಲಸಮಾಡುವ ವಿಭಾಗವಾಗಿ ಪರಿವರ್ತನೆ ಹೊಂದುತ್ತಲಿದೆ. ಅದನ್ನು ನಿರ್ವಹಿಸಲು ಯೋಗ್ಯತಾವಂತರಾದ ಜನರೇ ಬೇಕಾಗುತ್ತದೆ. ಆದರೆ ರಾಜಕೀಯ ಪಕ್ಷಗಳಿಗೆ ಪರಸ್ಪರ 'ಶೀತ ಯುದ್ಧ'ದಲ್ಲಿ ಆಸಕ್ತಿ ಹೆಚ್ಚು; ಅಧಿಕಾರದಲ್ಲಿರುವ ಪಕ್ಷವನ್ನು ತಳ್ಳಿಹಾಕಿ ಆ ಸ್ಥಾನವನ್ನು ಆಕ್ರಮಿಸುವ ಉತ್ಸಾಹ ಅಧಿಕ. ಪ್ರತಿಯೊಂದು ಪಕ್ಷವೂ ಜನರಿಗೆ ಒಳ್ಳೆಯದನ್ನೇ ಮಾಡುವ ಉದ್ದೇಶ ತನ್ನದೆನ್ನುತ್ತದೆ; ಈ ಒಳ್ಳೆಯುದರ ಕಲ್ಪನೆಯು ಪಕ್ಷದಿಂದ ಪಕ್ಷಕ್ಕೆ ಹೆಚ್ಚು ಭಿನ್ನವಿರುವಂತೆ ಕಾಣುತ್ತಿಲ್ಲ. ಸಾಮಾನ್ಯವಾಗಿ ಎಲ್ಲ ಪಕ್ಷಗಳ ಕಾರ್ಯಕ್ರಮವೂ ಒಂದೇ ಬಗೆಯಾಗಿರುವಂತೆ ತೋರುತ್ತವೆ; ಅವುಗಳಲ್ಲಿ ಉಲ್ಲೇಖಿಸಲು ಯೋಗ್ಯವಾದ ವ್ಯತ್ಯಾಸ ಗೋಚರಿಸುತ್ತಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಪಕ್ಷದೊಳಗಿನ ಮತಭೇದಗಳೇ ಪಕ್ಷಗಳೊಳಗಿನ ಭಿನ್ನಾಭಿಪ್ರಾಯಕ್ಕಿಂತ ತೀವ್ರವಿರುತ್ತವೆ ಇಂಥ ಪರಿಸ್ಥಿತಿಯಲ್ಲಿ ಪ್ರತಿಪಕ್ಷಗಳೇ ಸರಕಾರವನ್ನು ನಡೆಸುತ್ತಿರುವವರನ್ನು ಮಣಿಸಬೇಕಾಗಿ ಬರುವ ಆವಶ್ಯಕತೆ ಉಳಿಯುವುದಿಲ್ಲ; ಸರಕಾರಿ ಪಕ್ಷದವರೇ ತಮ್ಮ ಪಕ್ಷದ ಸಭೆಯಲ್ಲಿ ಪ್ರತಿಪಕ್ಷದವರ ಕೆಲಸವನ್ನು ಮಾಡುತ್ತಾರೆ; ಪಕ್ಷದ ಶಿಸ್ತು ಮತ್ತು ನಿಷ್ಠೆಯ ಪ್ರಶ್ನೆಯನ್ನು ಸ್ವಲ್ಪ ಬದಿಗೊತ್ತಿ ಅಭಿಪ್ರಾಯ ಸ್ವಾತಂತ್ರ್ಯವನ್ನು ಸದಸ್ಯರಿಗೆ ಕೊಟ್ಟದ್ದಾದರೆ ಶಾಸನಾಂಗದ ಸಭೆಯಲ್ಲಿಯೇ ಬಹಿರಂಗವಾಗಿ ಈ ಮತಭೇದ ವ್ಯಕ್ತವಾಗದಿರದು. ಅಭಿಪ್ರಾಯ ಪ್ರಕಟಣೆಗೆ ಇಂಥ ಸ್ವಾತಂತ್ರ್ಯವನ್ನು ಕೊಡುವುದೇ ನಿಜವಾಗಿ ಪ್ರಜಾಪ್ರಭುತ್ವದ ತಿರುಳು.

ಇಂದಿನ ವಿದ್ಯಮಾನಗಳನ್ನು ಸ್ವಲ್ಪ ಗಮನಿಸಿ ನೋಡಿದರೆ, ಪಕ್ಷಕ್ಕೆ ಮಹತ್ವ ಕೊಡುವ ಕ್ರಮವು ನಿಧಾನವಾಗಿ ಬಲಗುಂದುತ್ತಿರುವುದೇ ಕಣ್ಣಿಗೆ ಬೀಳುತ್ತದೆ. ಅಮೇರಿಕದಲ್ಲಿ ಎರಡು ಪ್ರಬಲ ಪಕ್ಷಗಳಿವೆ; ಆದರೆ ಸರಕಾರದ ಕಾರ್ಯ ನಿರ್ವಹಣೆಯ ಮಟ್ಟಿಗೆ ಈ ಪಕ್ಷಗಳೊಳಗಿರುವ ವ್ಯತ್ಯಾಸವು ಹೆಚ್ಚಿನಂಶ ಮಾಯವಾಗಿದೆ ಎನ್ನಬಹುದು. ಉಭಯ ಪಕ್ಷಗಳೂ ಒಪ್ಪಿದ ಧೋರಣೆಯೇ ಅನುಸರಿಸಲ್ಪಡುತ್ತಿರುವಂತೆ ನಿರೀಕ್ಷಕರಿಗೆ ಅಲ್ಲಿ ತೋರುತ್ತದೆ. ಪಕ್ಷ ಪ್ರಧಾನ ರಾಜಕಾರಣದ ಮಹತ್ವವನ್ನು ತಗ್ಗಿಸಿ ಪ್ರಜಾಪ್ರಭುತ್ವದ ಸತ್ಸಂಪ್ರದಾಯಗಳನ್ನು ಎತ್ತಿ ಹಿಡಿಯುವ ಕಡೆಗೆ ಈಗ ಹೆಚ್ಚಿನ ಜನರ ಮನದೊಲವು ಹರಿಯತೊಡಗಿದೆ. ಸರಕಾರದ ಬೇರೆಬೇರೆ ಇಲಾಖೆಗಳಿಗೆ ಸಾಮಾನ್ಯ ರಾಜಕೀಯ ಜಂಜಡದಿಂದ ಬಾಧೆ ಹೊಂದಲಾರದ ಮಂಡಳಗಳನ್ನು ನೇಮಿಸಿ ಅವುಗಳಿಗೆ ಕಾರ್ಯನಿರ್ವಹಣಾಧಿಕಾರವನ್ನು ಹೆಚ್ಚುಹೆಚ್ಚಾಗಿ ಕೊಡುತ್ತಿರುವುದನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು. ಅಣುಶಕ್ತಿ ಮಂಡಳ, ರೈಲ್ವೆ ಮಂಡಳ, ಪಬ್ಲಿಕ್ ಸರ್ವಿಸ್ ಕಮಿಶನ್ ಇತ್ಯಾದಿಗಳು ನಮಗೆ ಬೇಕಾದದ್ದು ರಾಜಕೀಯ ಪಕ್ಷಗಳಲ್ಲ, ಯೋಗ್ಯತೆಯುಳ್ಳ ಜನರು ಎಂಬುವನ್ನು ಸ್ಪಷ್ಟಪಡಿಸುತ್ತವೆ.

ಮೇಲಿನೆಲ್ಲ ಟೀಕೆಗಳನ್ನು ಮನ್ನಿಸುವುದಾದರೆ, ನಾವು ಅನೇಕ ವಿಷಯಗಳಲ್ಲಿ ಸುಧಾರಣೆ ಮಾಡಬೇಕಾಗುತ್ತದೆ. ಮೊದಲಾಗಿ, ಸರಳ ಬಹುಮತದಿಂದ ಮನ್ನಿಸಲ್ಪಡುವ ಶಾಸನ ಮತ್ತು ಖಚಿತ ಬಹುಮತ ಅಗತ್ಯ ಬೀಳುವ ಶಾಸನ ಎಂದು ಮಾಡಿರುವ ವ್ಯತ್ಯಾಸವನ್ನು ಕಿತ್ತು ತೆಗೆಯಬೇಕು. ನಮ್ಮ ಘಟನೆಯು ಹೊರತೋರಿಕೆಗೆ "ಫೆಡರಲ್" ಮಾದರಿಯದಾಗಿ ಕಂಡರೂ ಈಗೀಗ ಏಕ ಘಟಕ ಪದ್ಧತಿಯನ್ನು ಪುರಸ್ಕರಿಸುವ ರೀತಿಯಲ್ಲಿ ವ್ಯವಹಾರಗಳು ಸಾಗಿವೆ—ಉದಾಹರಣೆಗಾಗಿ ಕೇಂದ್ರ ಸರಕಾರವು ತನ್ನ ಉದ್ದೇಶಗಳಿಗಾಗಿ ರಾಜ್ಯ ಸರಕಾರಗಳಿಗೆ ಧನ ಸ
ಯವನ್ನಿತ್ತು ಅವುಗಳಿಂದ ಕೆಲಸ ಮ
ಸಿಕೊಳ್ಳುತ್ತದೆ; ರಾಷ್ಟ್ರಾಧ್ಯಕ್ಷರೇ ಜ
ರಿನ ಸಂದರ್ಭಗಳಲ್ಲಿ ಅಧಿಕಾರ ವ
ಕೊಳ್ಳುತ್ತಾರೆ. ಸ್ಥಳೀಯ ಆ
ಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳ
ತಕ್ಕ ಆಡಳಿತ ಮಂಡಳಗಳನ್ನು ನೇ
ದರೆ, ವಿಕೇಂದ್ರೀಕರಣ ತತ್ವದ ವ
ಹಾರಿಕ ಅಂಶಕ್ಕೆ ಭಂಗವೊದಗ
ಏಕ ಘಟಕ ಸರಕಾರ ಕೆಲಸಮಾಡ
ದು. ಈ ದಿಸೆಯಲ್ಲಿ ನಾವು ಮುಂ
ಹೆಜ್ಜೆಯು ಹೆಚ್ಚಿನವೇಗವನ್ನು ಗಳಿ
ಕು. ಸಂಸತ್ತೇ ಭಾರತದ ಏಕ
ಶಾಸನಾಂಗವಾಗಬೇಕು; ಅದರ ಪ
ರಾಷ್ಟ್ರಾಧ್ಯಕ್ಷರ ಅಧಿಕಾರಾವಧಿ ಇತ
ಸಂಗತಿಗಳು ಅಮೇರಿಕದ ಮಾದರಿ
ರಬೇಕು. ಶಾಸನಾಂಗಕ್ಕೆ ಪ್ರತಿನಿಧಿ
ರಾಜಕೀಯ ಪಕ್ಷದಿಂದ ಬರ
ದು. ರಾಜಕೀಯ ಪಕ್ಷಗಳನ್ನೇ ಬ
ರಿಸಬೇಕು. ಪ್ರತಿನಿಧಿಗಳಿಗೆ ಅರ್ಹತೆ
ನಿರ್ಬಂಧವನ್ನು ಹೇರಬೇಕು—ಉದಾ
ರಣೆಗೆ, ಗ್ರಾಮ ಪಂಚಾಯತಿಗಳ
ಸ್ಯರಿಗೆ ಪ್ರಾಥಮಿಕ ಮಟ್ಟದ ಶಿಕ್ಷಣ
ದರೂ ಅಗತ್ಯ; ಅದಕ್ಕಿಂತ ಮೇ
ಪ್ರತಿನಿಧಿ ಸಭೆಗಳ ಸದಸ್ಯತ್ವಕ್ಕೆ ಹೆ
ಶಿಕ್ಷಣವೂ ಕೆಳಗಿನ ಪ್ರತಿನಿಧಿ ಸಭೆ
ದುಡಿದ ಅನುಭವವೂ ಅಗತ್ಯ—ಎ
ನುಂತಾಗಿ ವಿಧಿಸಬೇಕು. ಬುದ್ಧಿ ಮ
ಅನುಭವದ ಬಲ, ನ್ಯಾಯ ನಿರ್ಣ
ಶಕ್ತಿ, ಕಾರ್ಯ ನಿರ್ವಹಣ ಸಾಮರ್ಥ್ಯ
ಸೇವಾ ಪರಾಯಣತೆ ಇತ್ಯಾದಿಗ
ಮಹತ್ವ ಸಲ್ಲಬೇಕಲ್ಲದೆ, ರಾಜಕೀ
ಪಕ್ಷದ ಸದಸ್ಯತ್ವಕ್ಕಲ್ಲ. ಶಾಸನಾಂ
ಮೇಲ್ಮನೆಯು ಈಗ ಸ್ವಲ್ಪ ಮಟ್ಟಿಗೆ
ಉದ್ದೇಶವನ್ನು ಈಡೇರಿಸುವುದಾದ
ಉದ್ದೇಶವನ್ನು ಸಂಪೂರ್ಣವಾಗಿ ಸ
ಸಲು ಪ್ರಯತ್ನ ನಡೆಯಬೇಕು;
ಕ್ಕಾಗಿ ಯೋಗ್ಯ ಕಟ್ಟುಕಟ್ಟಳೆಯ
ಮಾಡಬೇಕು.

[ಪ್ರಜಾಪ್ರಭುತ್ವದ ಕುರಿತು ಇ
ಹೊಸ ದೆಹಲಿಯಲ್ಲಿ ನಡೆದ ವಿ
ಗೋಷ್ಠಿಯ ಹಿನ್ನೆಲೆಯಲ್ಲಿ ಶ್ರೀ
ಕೋದಂಡರಾಯರೆಂಬ ಮಹನೀಯ
ವ್ಯಕ್ತಪಡಿಸಿದ ಅಭಿಪ್ರಾಯದ ಸಾ

'NAVAYUGA' WEEK
is in the list of periodic
and Newspapers appro
for use in Seconda
Schools as per proceedi
Roc· No 466 N/50 da
12-12-1950 of the Direc
fo public Instructi
Madras·

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:–
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:– (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು
(Govt. Regd.)
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವ
ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗ
ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA–40
ಸ್ಟಾಕಿಸ್ಟರು: ಪಾ ಕಂಪೆನಿ, ಮಂಗಳೂರು—1.

ಕನ್ನಡ ಜಿಲ್ಲೆಗಳ ಅದ್ಭುತ ಸಂಪತ್ತು

ಯಕ್ಷಗಾನ — ಬಯಲಾಟಗಳ ಪ್ರಯೋಜನ

ಜೀವನದಲ್ಲಿ ಕಲೆಗೆ ಅಮೂಲ್ಯವಾದ ಸ್ಥಾನವಿದೆ. ಜೀವನದ ಸಾರ್ಥಕ್ಯ, ಸ್ವಾರಸ್ಯ, ಸ್ಫೂರ್ತಿ ಹಾಗೂ ಪ್ರಗತಿಗಳು ಅದರ ಕಲಾತ್ಮಕತೆಯನ್ನೇ ಅವಲಂಬಿಸಿವೆ. ಕಲಾತ್ಮಕತೆಯಿಲ್ಲದ ಜೀವನವು ರಸವಿಲ್ಲದ ಹಣ್ಣು, ಗಂಧವಿಲ್ಲದ ಕುಸುಮ. ಅಂತಹ ಉದಾತ್ತವಾದ ಕಲೆಯು ತನ್ನ ಪ್ರಭಾವದ ಮೂಲಕ ಮಾನವನನ್ನು ಸಂಸ್ಕರಿಸುವುದು, ಜೀವನದ ವಾಸ್ತವವಾದ ದಾರಿಯನ್ನು ತೋರಿಸುವುದು. ಕ್ಷಣಿಕವಾದ ಸುಖ—ದುಃಖಗಳ ಮೃಗಜಲದ ಬಲೆಯಿಂದ ಬಿಡಿಸಿ, ನಿಜವಾದ ಆನಂದದೆಡೆಗೆ ಸಾಗಿಸುವದು. ನಾದಮಾಧುರ್ಯವು 'ನಾಗ'ವನ್ನೂ ತಲೆದೂಗಿಸಿ ಅದರ ಕ್ರೌರ್ಯವನ್ನು ಮರೆಸಿಬಿಡುವದು. ಕಾಡಿನ ಕ್ರೂರ ಮೃಗಗಳೂ ಕೂಡ ಕೃಷ್ಣನ ಮುರಲಿಯ ನಾದಕ್ಕೆ ಮುಗ್ಧವಾಗಿ ನಿಂತುಬಿಡುತ್ತಿದ್ದವಂತೆ. ಸರಸ್ವತಿಯ ವೀಣೆಯ ಮಧುರ ಮಂಜುಳ ನಾದವು ಲೋಕವನ್ನೇ ಪರವಶಗೊಳಿಸಿದ್ದರೆ ಆಶ್ಚರ್ಯವಿಲ್ಲ. ಕೈಲಾಸದಲ್ಲಿ ಪರಶಿವನು ತಾಂಡವ ನೃತ್ಯ ನಡೆಸಿ ಮೈಮರೆಯುವನಂತೆ. ಇದೇ ಕಲೆಯ ಸತ್ವ. ಇಂತಹ ಕಲೆಗಳಲ್ಲಿ ನಮ್ಮ 'ಯಕ್ಷಗಾನ'ವೂ ಒಂದು. ಪ್ರಾಚೀನ ಕಾಲದಿಂದಲೂ ಈ ಕಲೆ ಕನ್ನಡ ಜನತೆಯ ಜೀವನದಲ್ಲಿ ಹಾಸು ಹೊಕ್ಕಾಗಿ, ಹೆಚ್ಚು ಮೆಚ್ಚಾಗಿ, ರಾಯರಿಂದ ರಂಕರ ವರೆಗೂ ಸರ್ವರಿಂದಲೂ ಆದರಣೀಯವಾಗಿ ತನ್ನ ಸ್ಥಾನವನ್ನು ಕಾಪಾಡಿಕೊಂಡು ಬಂದಿದೆ.

"ಯಕ್ಷಗಾನ"ದ ಹೆಸರೆತ್ತಿದ ಕೂಡಲೆ ಆ ವೇಷ, ಭಾಷೆ, ಆ ನೃತ್ಯ ಕಣ್ಣಮುಂದೆ ಕಟ್ಟುವದು ಸಹಜ. ಆದರೆ ನೃತ್ಯವೊಂದೇ ಇದರ ಜೀವಾಳವೆಂದರೂ ನಡೆಯದು. ನೃತ್ಯದ ದೃಷ್ಟಿಯಿಂದ ಕಥಕ್ಕಳಿ, ಮಣಿಪುರಿ ಮುಂತಾದ ಸಂಪ್ರದಾಯಗಳು ಮತ್ತೂ ಆಕರ್ಷಕವಾಗಿಯೂ, ಸೌಕುಮಾರ್ಯ ಭಾವವ್ಯಂಜಕವಾಗಿಯೂ ಕಾಣಬಹುದು. ಆದರೆ ಯಕ್ಷಗಾನವು ನೃತ್ಯವಲ್ಲದೆ ಇತರ ಮಹತ್ವದ ಅಂಗಗಳನ್ನೂ ಒಳಗೊಂಡ, ಜೀವನಕ್ಕೆ ಒಳ್ಳೆಯ ಸಂಸ್ಕಾರ ಕೊಡುವ ಪೂರ್ಣವಾದ ಒಂದು ಕಲಾವಿಶೇಷವಾಗಿದೆ. ವೇಷ-ಭೂಷ, ನರ್ತನ, ಭಾವವಿನ್ಯಾಸ, ಮುದ್ರಾಭಿನಯ, ವಾದನ, ಗಾಯನ, ವಾಣಿ ಇವುಗಳ ಮೂಲಕ ಹೃದಯಂಗಮ ಪರಿಣಾಮ ಮಾಡಿ, ಒಳಿತು-ಕೆಡಕುಗಳ ನೀತಿ—ಅನೀತಿಗಳ ಅರಿವು ಹುಟ್ಟಿಸಲು ಸಮರ್ಥವಾದ 'ಜಾನಪದ ಕಲೆ'ಗಳಲ್ಲಿ ನಮ್ಮ ಯಕ್ಷಗಾನವೇ ಹೆಚ್ಚಿನದೆಂದು ಹೇಳಿದರೆ ತಪ್ಪಾಗದು.

ಇದು ಜಾನಪದಕ್ಕೆ ಸೇರಿದ್ದಾದರೂ, ಇದು ಕೊಡುವ ಸಂಸ್ಕಾರ, ತೃಪ್ತಿ ಹೆಚ್ಚಿನದು. ಆದುದರಿಂದಲೇ 'ಜಾನಪದ', 'ಗ್ರಾಮ್ಯ', ಈ ಮಟ್ಟವನ್ನು ಮೀರಿ ನಿಂತಿವೆ ಇದರ ಮಹಿಮೆ, ಮಹೋನ್ನತಿಗಳು. ಇಂದು ಭಾರತದ ಬೇರೆಬೇರೆ ಪ್ರಾಂತ್ಯಗಳಲ್ಲಿ ಇಂತಹ ಪ್ರಾಚೀನ ಜಾನಪದ , ಕಲೆಗಳು ಕಂಡುಬರುತ್ತಿವೆಯಾದರೂ, 'ಯಕ್ಷಗಾನ'ದಂತಹ ಮಹತಿ, ವ್ಯಾಪ್ತಿ, ಖ್ಯಾತಿಯನ್ನು ಪಡೆದ ಕಲೆ ಇನ್ನಾವುದೂ ಇಲ್ಲವೆಂದರೆ ಇದು ದುರಭಿಮಾನವೆನ್ನಲಾಗದು. ವಿಶೇಷತಃ ಯಕ್ಷಗಾನವು "ಉತ್ತರ ಕನ್ನಡ ಹಾಗು ದಕ್ಷಿಣ ಕನ್ನಡಗಳ ಸೊತ್ತು—ಸಂಪತ್ತು" ಎಂಬುದನ್ನು ನೆನೆದಾಗ ನಮ್ಮೆದೆ ಅಭಿಮಾನದಿಂದ ಉಬ್ಬುವುದು. ಯಾಕೆಂದರೆ ಪರಂಪರೆಯಿಂದ ಶಾಸ್ತ್ರೀಯವಾದ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡು ಇದು ಬಾಳಿಬಂದುದು ಈ ಪ್ರದೇಶದಲ್ಲಿಯೇ. "ಮೇಳ"ಗಳನ್ನು ಕಟ್ಟಿಕೊಂಡು ದಿಗ್ವಿಜಯಕ್ಕೆ ಹೊರಟಂತೆ ಪರಪ್ರಾಂತಗಳಲ್ಲಿ ತಮ್ಮ ನಟನಾ ವೈಭವ ತೋರಿಸಿ, ಬರೋಡ ಮಹಾರಾಜರಿಂದ 'ಉಡುಗರೆ' ಪಡೆದು ಬಂದ ಖ್ಯಾತಿ ಮನೆಮಾತಾಗಿದೆ. ಆದುದರಿಂದಲೇ ಇಂದು ಭಾರತದ ಯಾವದೇ ಭಾಗಕ್ಕೆ ಹೋದರೂ ಯಕ್ಷಗಾನ ಎಂದೊಡನೆಯೇ ಈ ಕನ್ನಡ ಜಿಲ್ಲೆಗಳ ಹೆಸರು ಕೇಳಬರುತ್ತದೆ. ಕಾರಣ ನಮ್ಮ ಅಸ್ತಿತ್ವಕ್ಕೆ ಗೌರವ ತರುತ್ತಿರುವ ಈ ಸೊತ್ತನ್ನು ಕಾಯ್ದುಕೊಳ್ಳುವದೂ, ಬೆಳೆಸಿಕೊಳ್ಳುವದೂ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ವೇಷ—ಭೂಷ, ನೃತ್ಯ, ಮುದ್ರಾಭಿನಯ, ಹಾಡಿಕೆ ಮತ್ತು ಮಾತು ಇವು ಯಕ್ಷಗಾನದ ಮುಖ್ಯ ಅಂಗಗಳು. ರಂಗಭೂಮಿಯಲ್ಲಿ ಹೊರತಾಗಿ, "ತಾಳಮದ್ದಳೆ"ಗಳಲ್ಲಿ ವೇಷ-ಭೂಷ, ನರ್ತನ, ಅಭಿನಯಗಳ ಅವಶ್ಯಕತೆಯಿಲ್ಲ. ಆದರೆ ರಂಗಭೂಮಿಯಲ್ಲಿ ಮಾತ್ರ ಯಕ್ಷಗಾನದ ನಟರು ಈ ಐದೂ ಅಂಗಗಳ ಕಡೆಗೆ ಸಂಪೂರ್ಣ ಲಕ್ಷ್ಯ ಕೊಡಲೇಬೇಕು. "ಯಕ್ಷಗಾನ"ದ "ಸ್ವಸ್ವರೂಪ" ಉಳಿದರೆ ಮಾತ್ರ ಅದರ ವೈಶಿಷ್ಟ್ಯ ಉಳಿಯುವದು; ಪರಿಶುದ್ಧವಾದ ಕಲೆಯೇ ಅದರ ಪ್ರಯೋಜನ ಕೊಡಬಲ್ಲುದು. ಇಂದಿನ ನಾಟಕ—ಚಿತ್ರಪಟಗಳ ಯುಗದಲ್ಲಿ, ಸೌಂದರ್ಯದ ಹುಚ್ಚಿನಲ್ಲಿ ಯಕ್ಷಗಾನದ ನಟರೂ ತಮ್ಮ ವೇಷ-ಭೂಷಗಳಲ್ಲಿ ಆ ಅನುಕರಣ ಮಾಡುತ್ತಿರುವುದು ಅನೇಕ ಸಲ ಕಂಡು ಬಂದಿದೆ ಆದರೆ ಇದು ಸೂಕ್ತವಲ್ಲ. ಏಕೆಂದರೆ ಈ ಅನುಕರಣೆಯು ಕ್ರಮಕ್ರಮವಾಗಿ ಮುಂದುವರಿದು ಕಲೆಯ ಮೂಲರೂಪವನ್ನು ಬದಲಿಸ ತೊಡಗಿ ಕಾಲಾಂತರದಲ್ಲಿ ಮೂಲ ಯಕ್ಷಗಾನದ ಸ್ವರೂಪ ನಶಿಸಿ ಹೋಗುವ ಸಂಭವವೂ ಇದೆ.

ನರ್ತನವೂ ಸಹ ಯಕ್ಷಗಾನದ ತಾಳ-ಗತ್ತುಗಳನ್ನೇ ಅನುಸರಿಸಬೇಕು. ಹೀಗೆ ಎಲ್ಲ ಅಂಗಗಳ ಪರಿಶುದ್ಧತೆಯನ್ನು ಕಾಯ್ದುಕೊಂಡು ಅವರ ಬೆಳವಣಿಗೆಯ ಕಡೆಗೆ ಲಕ್ಷ್ಯ ಕೊಡಬೇಕಾದುದು ನಮ್ಮೆಲ್ಲರ ಕರ್ತವ್ಯ.

ಪ್ರಯೋಜನದ ಕುರಿತಾಗಿ ಸಂಸ್ಕೃತ ಲಾಕ್ಷಣಿಕ ಮಮ್ಮಟ 'ಯಶಸ್ಸು, ಸಂಪತ್ತು, ವ್ಯವಹಾರಜ್ಞಾನ, ಶಾಸನಾದನ, ಉಪದೇಶ ಇವು ಕಾವ್ಯದ ಈ ಪ್ರಯೋಜನಗಳು ಎಂದು ವಿವರಿಸಿದ್ದಾನೆ. ಇದೇ ಮಾತು ಯಕ್ಷಗಾನಕ್ಕೂ ಅನ್ವಯಿಸುವದು. ಯಕ್ಷಗಾನದಿಂದ ಮುಖ್ಯವಾಗಿ ನೈತಿಕ ಬೋಧೆ, ಆ ಕಾಲದ ಸಂಸ್ಕೃತಿ, ರಾಜಕೀಯ, ಸಾಮಾಜಿಕಗಳ ಬೋಧೆ, ಆಗುತ್ತದೆ ಶ್ರೀ ಕೃಷ್ಣ ಸಂಧಾನದಲ್ಲಿ ಕೃಷ್ಣನ ರಾಜಕೀಯ ನೈಪುಣ್ಯಕ್ಕೆ ತಲೆದೂಗದ ರಾರು? ದುರ್ಯೋಧನನ ರಾಜಕೀಯ ಲಂಪಟತೆ, ಗತ್ತುಗಾರಿಕೆ, ಛಲ ಪಂಕಮುಲ್ಲಕತನಗಳು ಯಾರ ಸಹಾನುಭೂತಿ ಆದರಗಳಿಗೆ ಪಾತ್ರವಾಗವು? ಇದರಂತೆ ನೀತಿ ಬಾಹಿರರ ಬಾಳು ಅಭಿನಯಿಸಲ್ಪಟ್ಟಾಗ ನೈತಿಕ ಉಪದೇಶವು ಸಹಜವೆ ಹೀಗೆ ಶಾಸಿರಾರು ಪ್ರಚಾರಕರು, ಉಪದೇಶಕರು, ಕಷ್ಟಪಟ್ಟರೂ ಸಾಧಿಸಲಾಗದ ಜನಜಾಗ್ರತಿ, ಸಾಂಸ್ಕೃತಿಕ, ನೈತಿಕ ಪ್ರಚಾರ, ಪ್ರಸಾರ ಯಕ್ಷಗಾನವೊಂದರಿಂದಲೇ ಸಾಧಿಸಬಲ್ಲದು. ಆದರಿಂದ ತಕ್ಕ ವೇಷ ಭೂಷ ಸಮಯೋಚಿತ ರಸ, ಭಾವೋಚಿತ ನೃತ್ಯ, ಹಾಡಿಕೆ, ಅಭಿನಯದಿಂದ ಜನತೆಯನ್ನು ಆಕರ್ಷಿಸಿ, ರಸಭಾವ ಸಮುದ್ರದಲ್ಲಿ ಮುಳುಗಿ ಸೇಳಿಸಿ, ಮನೋರಂಜನೆ, ಆ ಮೂಲಕ ನೀತಿಬೋಧೆ ಮೊದಲಾದ ಪ್ರಯೋಜನಗಳನ್ನು ನಮ್ಮ ಯಕ್ಷಗಾನ ಯಶಸ್ವಿಯಾಗಿ ಸಾಧಿಸಬಲ್ಲದು ಆಚಾರ—ವಿಚಾರಗಳೂ, ಆದರ್ಶಗಳೂ, ಶೌರ್ಯ ಸಾಹಸಗಳೂ, ಕರ್ತವ್ಯದ ನೇಮ—ನಿಷ್ಠೆಗಳೂ ಜನಮನವನ್ನು ಸೆಳೆದು ಉನ್ನತಾನುಭವ ಮುಟ್ಟಿಸುವಾಗ ಉಂಟಾದ ದಿವ್ಯ-ನಿತ್ಯ-ನೂತನವಾದ ಕಲೆಯೇ ಯಕ್ಷಗಾನವೆಂದರೆ ಅತ್ಯುಕ್ತಿಯಲ್ಲ.

ಯಕ್ಷಗಾನದ ಸದ್ಯದ ಪರಿಸ್ಥಿತಿಯು ಅದರ ಉದ್ದೇಶವನ್ನು ಎಷ್ಟರ ಮಟ್ಟಿಗೆ ಈಡೇರಿಸುತ್ತಿದೆ ಎಂಬುದನ್ನು ಯೋಚಿಸಿದಾಗ ಮಾತ್ರ ಮನಸ್ಸಿಗೆ ಅಷ್ಟು ಸಮಾಧಾನವೆನಿಸುವದಿಲ್ಲ. "ನಮ್ಮದೇ ಆದ ಪ್ರಾಚೀನವಾದ ಉತ್ತಮ ಉತ್ತುಂಗ ಕಲೆ" ಇದು ಎನ್ನುವ ಅಭಿಮಾನವುಳ್ಳ ನಟರಲ್ಲಾಗಲೀ, ಪ್ರೇಕ್ಷಕರಲ್ಲಾಗಲೀ, ಎಷ್ಟು ಜನರು ಸಿಗಬಹುದು? ಇಷ್ಟೇ ಅಲ್ಲ, ಯಕ್ಷಗಾನದ ನಟರಲ್ಲಿ ಅಭ್ಯಸಿಸಿ, ಪರಿಶ್ರಮಿಸಿ, ಯೋಗ್ಯತೆಗಳಿಸಿಕೊಂಡು ಪಾತ್ರವಹಿಸುವ ಗೋಜಿಗೆ ಹೋಗುವವರು ಬೆರಳಿನಲ್ಲಿ ಎಣಿಸುವಷ್ಟು ಜನರೂ ಇದ್ದಾರೆಯೋ? ಯಕ್ಷಗಾನ ನಟರ ಕುರಿತಾಗಿ ಸಮಾಜದಲ್ಲಿ ಗೌರವ ಇಳಿಮುಖವಾಗಿ ನಟರನ್ನು ಕೀಳ ಕೆಳಮಟ್ಟದಲ್ಲಿ ಕಾಣುವ ಪ್ರವೃತ್ತಿ ಸಹ ಅನೇಕ ಎಡೆಗಳಲ್ಲಿ ಕಂಡು ಬರುವದು ಅಸಹಜವಲ್ಲ.

ನಮ್ಮ ಈಗಿನ ಚಟುವಟಿಕೆ ಅಪೂರ್ಣ ಸಿದ್ಧಾಂತಿವೆ. ಯಕ್ಷಗಾನದ ಬಗೆಗೆ ಜನರಲ್ಲಿ ಶ್ರದ್ಧೆ ಮತ್ತು ಆತ್ಮೀಯತಾಭಾವನೆ ಬೆಳೆದು ಬರಬೇಕು. ಇದರ ಬಗೆಗೆ ತುಂಬ ಚಟುವಟಿಕೆ ನಡೆಯಬೇಕು. ಅದಕ್ಕೆ ಸಾಂಘಿಕವಾಗಿಯೂ, ವೈಯಕ್ತಿಕವಾಗಿಯೂ ಪ್ರಾಮಾಣಿಕ ದುಡಿಮೆ ಬೇಕು. ಉಚ್ಚ ಸಾಂಸ್ಕೃತಿಕ ಸಾಧನ ಇದು ಎಂಬ ದೃಷ್ಟಿ ಬಲಿಯಬೇಕು. ಆರಿತ, ನುರಿತ ಕಲಾವಿದರ ಮೂಲಕ ಯಕ್ಷಗಾನದ ಅಂಗಾಂಗಗಳ ಶಾಸ್ತ್ರೀಯವಾದ ಜ್ಞಾನದ ಪ್ರಸಾರಕ್ಕೆ ನಾಟಕಂಬ ಎಡೆ ಸಿಗುವಂತಾಗಬೇಕು. ಭಿನ್ನ ಭಿನ್ನ ಭಾಗಗಳ ಕಲಾವಿದರೆಲ್ಲ ಆಗಾಗ ಒಂದೆಡೆ ಸೇರಿ ವಿಚಾರ—ವಿನಿಮಯಕ್ಕೆ ಅವಕಾಶ ದೊರೆಯಬೇಕು. ಈ ಕಲೆಯಲ್ಲಿ ತರಬೇತಿ ಕೊಡಲು ಅಲ್ಲಲ್ಲಿ ಅನುಕೂಲವುಂಟಾಗಬೇಕು. ಇಂತಹ ಶಿಕ್ಷಣ ಕೇಂದ್ರಗಳನ್ನು ಪರಿಮಿತ ಪ್ರಮಾಣದಲ್ಲಿಯಾದರೂ ನಡೆಸಲಿಕ್ಕೂ, ಕಲಾವಿದರನ್ನು ಪ್ರೋತ್ಸಾಹಿಸಲಿಕ್ಕೂ ಒಂದು ನಿಧಿಯನ್ನು ಏರ್ಪಡಿಸಬೇಕು. ಮುಖ್ಯವಾಗಿ ಅದರ ಶುದ್ಧತೆಗೆ ಭಂಗ ಬಾರದಂತೆಯೂ, ನಾಟಕ—ಚಿತ್ರಪಟಗಳ ಅನುಕರಣೆಯಿಂದಾಗಿ ಸುಧಾರಣೆ, ಬದಲಾವಣೆಗಳ ಹೆಸರಿನಲ್ಲಿ ಮೂಲ ರೂಪದಲ್ಲಿ ಮಾರ್ಪಾಟು ಉಂಟಾಗದಂತೆಯೂ ನೋಡಿಕೊಳ್ಳಬೇಕು

ಈ ವಿಷಯದಲ್ಲಿ, ಶ್ರೀ. ಶಿವರಾಮ ಕಾರಂತರು ತೆಗೆದ ಕಳಕಳಿಯ ಉದ್ಗಾರವನ್ನು ಇಲ್ಲಿ ಎತ್ತಿ ಹೇಳಿದರೆ, ಅಪ್ರಸ್ತುತವಾಗಲಾರದು "ಯಕ್ಷಗಾನದಲ್ಲಿ ಪ್ರಾಚೀನ ಕಾಲದಿಂದ ಬಂದ ಪರಂಪರೆಯೇ ಶ್ಲಾಘ್ಯವಾದುದು, ಅದು ಸಂಸ್ಕೃತಿಯ ದ್ಯೋತಕವಾಗಿದೆ. ವೇಷ-ಭೂಷ ಮುಂತಾಗಿ ಯಾವದೇ ಅಂಗಗಳಲ್ಲಿ, ಯಾವದೇ ರೀತಿಯಲ್ಲಿ ಆಧುನಿಕತೆಯ ಸಮಾವೇಶ ಉಚಿತ ಕೂಡದು."

ಈಗ ಭಾರತವು ಸ್ವತಂತ್ರ ಗಣರಾಜ್ಯವಾಗಿದೆ. ಅದರಲ್ಲಿ ಭಾಷಾವಾರು ಪ್ರಾಂತರಚನೆಯ ಯೋಜನೆಯಂತೆ ನಮ್ಮ ಕರ್ನಾಟಕವೂ ಸ್ವತಂತ್ರ ಪ್ರಾಂತವಾಗುವ ದಿನ ದೂರವಿಲ್ಲ. ಕರ್ನಾಟಕ ಪ್ರಾಂತವು ಸಾಂಪತ್ತಿಕ, ಔದ್ಯೋಗಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬೇಕಾದಂತೆ ಕನ್ನಡದ ಜೀವಾಳವಾದ ಯಕ್ಷಗಾನದಂಥ ಕಲೆಯ ಪ್ರಗತಿ, ಅಸ್ತಿತ್ವಗಳ ಕಡೆಗೂ ಲಕ್ಷ್ಯವೀಯಲೇಬೇಕು. ಇಷ್ಟೇ ಅಲ್ಲ, ಈಗಾಗಲೇ ಭಾರತ ಸರಕಾರವು ರಾಷ್ಟ್ರದಲ್ಲಿಯ ಎಲ್ಲ ಜಾನಪದ ಕಲೆಗಳನ್ನೂ ಉಳಿಸಿ ಬೆಳೆಸಬೇಕೆಂಬ ಆಪ್ತರ ಬಗೆಗೆ ಗಣನೀಯ ಪ್ರಮಾಣದಲ್ಲಿ ಹಣ ವೆಚ್ಚಮಾಡುತ್ತಿದೆ. ಇಂತಹ ಉದ್ದೇಶವುಳ್ಳ ಸಂಘ ಸಂಸ್ಥೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುತ್ತದೆ. ಪ್ರದರ್ಶನಗಳನ್ನೂ, ಅಂತಃಪ್ರಾಂತೀಯ ಕಲಾ ಸಮ್ಮೇಳನಗಳನ್ನೂ ನಡೆಸುತ್ತಿದೆ. ಸ್ಪರ್ಧೆಗಳನ್ನು ಏರ್ಪಡಿಸುತ್ತಿದೆ. ಇವೆಲ್ಲವುಗಳ ಉದ್ದೇಶ ಸ್ಪಷ್ಟವಾಗಿದೆ ಪ್ರಾಚೀನ ಕಲಾಪರಂಪರೆಯನ್ನು ಅಬಾಧಿತವಾಗಿ ಉಳಿಸಿ, ಬೆಳೆಸಿ ಒಟ್ಟಿನಲ್ಲಿ ಭಾರತದ ಸಾಂಸ್ಕೃತಿಕ ಸಾಧನೆಯನ್ನು ಕಾಯುವದೇ ಆಗಿದೆ. ಸರಕಾರದ ಈ ಉದಾರ ಧೋರಣೆಯಿಂದ ಯಕ್ಷಗಾನವೂ ಅಭ್ಯುದಯ ಹೊಂದಲಿ

[ಇದೇ ತಾ ೧೬-೩-೧೯೫೬ರಂದು ಕುಮಟೆಯಲ್ಲಿ ಜರಗಿದ ಯಕ್ಷಗಾನ ಪರಿಷತ್ತಿನಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀ ಗಣಪತಿ ಭಟ್ಟ, ಹಾಸಣಗಿ—ಇವರಿತ್ತ ಭಾಷಣದಿಂದ]

ಹೊಸ ನಾಟಕಗಳು

೧) ಬೇಡರ ಕಣ್ಣಪ್ಪ ೧—೧೨—೦
೨) ಧರ್ಮ ಪತ್ನಿ ೧—೮—೦
೩) ರೇಣುಕಾ ಅಥವಾ ಎಲ್ಲಮ್ಮ ೧—೮—೦

ಮೂರೂ ಪುಸ್ತಕಗಳನ್ನು ತರಿಸಿದರೆ ಅಂಚೆ ವೆಚ್ಚ ಉಚಿತ. ಹಣ M.O. ಮಾಡಿ ಕಳಿಸಿರಿ.

ಶ್ರೀ ಶಾರದಾ ಪ್ರಕಾಶನ,
ವಿಭೂತಿ ಗಲ್ಲಿ, ಗದಗ.

ಶಾಸ್ತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು. ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಮೊದಲಾದ ಯಾವತ್ತು ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkpet, UDIPI, S. Kanara.

ಫೋನ್ ನಂಬ್ರ 66

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ,ಇಂದ್ರಿಯವೂ,ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0

ಮಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟಲಾಗು ಇನಾಂ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಿಯ ಠೇವಣಾತಿ		
24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

(೧ನೇ ಪುಟದಿಂದ)

ಎಲ್ಲರಿಗೂ ತಿಳಿದಿರುವಂತೆ ಸೈನಿಕ ಚಟುವಟಿಕೆಗಳ ದೃಷ್ಟಿಯಿಂದ ಇಂದು ತನ್ನ ಕಾಲಿನ ಮೇಲೆಯೇ ನಿಂತಿರುವ ರಾಷ್ಟ್ರ ವಿದ್ದರೆ ಅದು ರಶಿಯ ಮತ್ತು ಅಮೇರಿಕ ಮಾತ್ರ. ಸಂರಕ್ಷಣೆಗಾಗಿ ಸಿದ್ಧತೆಯನ್ನು ಮೇಲೆ ವಿವರಿಸಿದ ರೀತಿಯಲ್ಲಿ— ಅಂದರೆ ಸ್ವತಂತ್ರ ತಳಹದಿಯ ಮೇಲೆ— ಮಾಡಿಕೊಳ್ಳಲು ಪ್ರಯತ್ನಿಸುವ ಕೆಲವೇ ರಾಷ್ಟ್ರಗಳಲ್ಲಿ ಇವೇ ಪ್ರಥಮ ಶ್ರೇಣಿಗೆ ಸೇರುತ್ತವೆ. ಸುದೈವದಿಂದ ಭಾರತವು ಏಶ್ಯ ಖಂಡದಲ್ಲಿ ಸಂರಕ್ಷಣೆಯ ತಂತ್ರ ವಿಜ್ಞಾನ ಪ್ರಗತಿಯ ಮಟ್ಟಿಗೆ ಉತ್ತಮ ಸ್ಥಾನವನ್ನು ಗಳಿಸಿದೆ—ಜಪಾನೊಂದನ್ನು ಬಿಟ್ಟರೆ ಭಾರತವೇ ಏಶ್ಯದಲ್ಲಿ ಹೆಚ್ಚಿನ ಔದ್ಯಮೀಕರಣವನ್ನು ಸಾಧಿಸಿದ ರಾಷ್ಟ್ರ. ಏಶಿಯದಲ್ಲಿರುವ ರಶಿಯದ ಭೂಭಾಗವು ಹೆಚ್ಚಿನ ಔದ್ಯಮೀಕರಣವನ್ನು ಸಾಧಿಸಿರುವುದು ಸುಳ್ಳಲ್ಲ— ಆದರೆ ಅದರ ಸಂಬಂಧ ಜೋಡಣೆ ಯುರೋಪಿನೊಡನೆ ಆಗುತ್ತದೆ. ಏಶಿಯದಲ್ಲಿರುವ ಇನ್ನೊಂದು ಪ್ರಬಲ ಸಾಮ್ಯವಾದಿ ರಾಷ್ಟ್ರವಾದ ಚೀನವೂ ಭಾರತದ ಮಟ್ಟಕ್ಕೆ ಔದ್ಯಮಿಕ ಕ್ಷೇತ್ರದಲ್ಲಿ ಬಂದಿಲ್ಲ. ಕಾರಣ ಹಿಂದುಳಿದ ಏಶ್ಯದ ರಾಷ್ಟ್ರಗಳಲ್ಲಿ ಮುಂದರಿದವರು ಭಾರತೀಯರೆಂದು ಹೇಳಿಕೊಳ್ಳಬಹುದು. ಅಣು ಶಕ್ತಿಯ ಉಪಯೋಗದ ವಿಷಯವನ್ನು ಮಾನದಂಡವಾಗಿಟ್ಟುಕೊಂಡರೂ ಭಾರತವು ಪ್ರಥಮ ಶ್ರೇಣಿಯ ಆರು ರಾಷ್ಟ್ರಗಳಲ್ಲಿ ಒಂದೆಂಬ ಸ್ಥಾನವನ್ನು ಪಡೆಯುತ್ತದೆ. ಜಗತ್ತಿನ ಎಷ್ಟೋ ರಾಷ್ಟ್ರಗಳಿಗೆ ಅಣುಶಕ್ತಿಯ ಪರಿಚಯ ಸಹ ಇನ್ನು ಆಗಿಲ್ಲದಿರುವಾಗ ಭಾರತವು ಅಣುಶಕ್ತಿಯ ಉಪಯೋಗದಲ್ಲಿ ಇಷ್ಟು ಉಲ್ಲೇಖನೀಯವಾದ ಪ್ರಗತಿಪಡೆದಿರುವುದು ಅಭಿಮಾನದ ವಿಷಯ. ಆದರೆ ನಾವು ಅಣುಶಕ್ತಿಯನ್ನು ವಿಧ್ವಂಸಕ ಕಾರ್ಯಗಳಿಗೆ ಉಪಯೋಗಿಸುವುದಕ್ಕೆ ವಿರುದ್ಧವಿದ್ದೇವೆ ಎಂಬುದನ್ನಿಲ್ಲಿ ಮರೆಯಲಾಗದು.

ನಾವು ರಚನಾತ್ಮಕ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದೇವೆ ಎಂಬುದಕ್ಕೆ ಅಣುಶಕ್ತಿಯ ಉಪಯೋಗದ ಕುರಿತು ನಾವು ತೋರಿಸುತ್ತಿರುವ ಸಂಯಮಶೀಲವಿವೇಕದ ಉದಾಹರಣೆಯೊಂದೇ ಸಾಕು. ಶಸ್ತ್ರಧಾರಿಗಳಾಗಿ ಜನರು ಬೀದಿಯಲ್ಲೆಲ್ಲ ತಿರುಗಲು ಕಲಿಯುವುದೇ ಸಂರಕ್ಷಣೋಪಾಯವೆನಿಸಲಾರದು ನಾವು ಪಂಚವಾರ್ಷಿಕ ಯೋಜನೆಗಳನ್ನು ಈ ದೃಷ್ಟಿಯಿಂದ ವಿವೇಚಿಸಬೇಕು. ಅದು ಅಭಿವೃದ್ಧಿ ಪ್ರಯತ್ನಗಳಿಗಾಗಿ ಕೋಟ್ಯಾಂತರ ಹಣವನ್ನು ವ್ಯಯಿಸುತ್ತದೆನ್ನುತ್ತಾ ಸಂರಕ್ಷಣೋಪಾಯಗಳನ್ನು ಅಲಕ್ಷಿಸಿದೆ ಎನ್ನುವುದು ಎಷ್ಟು ಕ್ಕೂ ಸರಿಯಲ್ಲ. ಅದು ನಮ್ಮ ಶಕ್ತಿಯನ್ನು ತಾತ್ಕಾಲಿಕವಾಗಿಯಲ್ಲ, ಶಾಶ್ವತವಾಗಿ ಮತ್ತು ಆಂಶಿಕವಾಗಿಯಲ್ಲ, ಸಂಪೂರ್ಣ ರೂಪದಲ್ಲಿ ಅಭಿವೃದ್ಧಿಗೊಳಿಸಲು ನೆರವಾಗುತ್ತದೆ. ನಾವು ತೀರ ಉನ್ನತ ಆದರ್ಶವನ್ನು ಇಟ್ಟುಕೊಳ್ಳುವುದಾದರೆ ನಮಗೆ ಶತ್ರುಗಳೇ ಇಲ್ಲವೆಂಬ ವಿಶ್ವಾಸವನ್ನು ಹೊಂದಿ ನಡೆಯಬಹುದು; ಎಲ್ಲರಲ್ಲೂ ಸ್ನೇಹಶೀಲರಾಗಿರುವುದು ಆಕ್ರಮಣ ಹಾಗು ಧಾಳಿಯ ಭಯವನ್ನು ಸಂಪೂರ್ಣವಾಗಿ ದೂರಪಡಿಸುವ ಮತ್ತು ಅತಿ ಭದ್ರ ತಳಹದಿಯ ಮೇಲೆ ನಿಂತಿರುವ ಸಂರಕ್ಷಣೋಪಾಯ ಆದುದರಿಂದ ನಾವು ಸ್ನೇಹ ಸಂವರ್ಧನೆಗಾಗಿ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು. ನಡೆಯುಲ್ಲಾಗಲೀ ನುಡಿಯಲ್ಲಾಗಲೀ ಸೌಜನ್ಯವಿಲ್ಲದೆ ಹೋಗಬಾರದು, ಆದರೆ ನಮ್ಮ ಸೌಜನ್ಯ ಮತ್ತು ಸೌಶೀಲ್ಯಗಳಿಗೆ ಸದಾಕಾಲ ಸ್ವಾಗತ ದೊರಕುವುದೆಂಬ ಭರವಸೆಯು ಈ ಜಗತ್ತಿನಲ್ಲಿಲ್ಲ. ಮಿತ್ರ ಮತ್ತು ಶತ್ರುರಾಷ್ಟ್ರಗಳ ಕಲ್ಪನೆಯು ತೀರ ಕ್ಷುಲ್ಲಕ ನೆವಗಳಿಂದ ಅತ್ಯಂತ ಕ್ಷಿಪ್ರದಲ್ಲಿ ಬದಲಾಗುತ್ತಿರುವುದನ್ನು ನಿತ್ಯವೂ ನೋಡುತ್ತಿರುವ ನಮಗೆ ಗಂಡಾಂತರದ ವಾತಾವರಣವು ಒಂದಲ್ಲ ಒಂದು ದಿನ ಉಂಟಾದರೂ ಉಂಟಾದೀತೆಂಬ ಮುನ್ನೋಟವು ಇರಬೇಕಾಗುತ್ತದೆ. ಯಾವುದೇ ಜಗಳವು ಯುದ್ಧ ಮುಖದಿಂದಲೇ ಇತ್ಯರ್ಥ ಹೊಂದಬೇಕಾದಷ್ಟು ಜಟಿಲತೆಯಿಂದ ಕೂಡಿದೆ ಎಂದು ಭಾವಿಸುವುದಾಗಲೀ ಸಮರ ಮಾರ್ಗಾನುಸರಣೆಯು ಅನಿವಾರ್ಯವೆಂದು ಹೇಳುವುದಾಗಲೀ ಉಚಿತವಲ್ಲ, ನಿಜ. ಆದರೆ ಸ್ವಸಂರಕ್ಷಣೋಪಾಯವನ್ನು ಕೇವಲ ಆದರ್ಶವಾದದ ತಳಹದಿಯ ಮೇಲೆ ನಿಲ್ಲಿಸುವುದು ಕಷ್ಟವೆಂಬುದನ್ನು ಒಪ್ಪದಿರಲಾಗುವುದಿಲ್ಲವೆಂಬುದೂ ಸ್ಪಷ್ಟ.

ನಮಗೆ ಔದ್ಯಮೀಕರಣವನ್ನು ಸಾಧಿಸಬೇಕಾಗಿದೆ; ತಾಂತ್ರಿಕ ಕ್ಷೇತ್ರದ ಚಟುವಟಿಕೆಯನ್ನು ವಿಸ್ತಾರಗೊಳಿಸಬೇಕಾಗಿದೆ. ಅದಕ್ಕಾಗಿ ನಾವು ನಮ್ಮೆಲ್ಲ ಶಕ್ತಿಗಳನ್ನು ವಿನಿಯೋಗಿಸಲು ಆತುರದಿಂದಿದ್ದೇವೆ ಏಕೆಂದರೆ ಈ ಬಗೆಯಾಗಿಯೇ ಆಂತರಿಕ ಬಲವನ್ನು ಸಂವರ್ಧಿಸಿಕೊಂಡರೆ ಇನ್ನು ಹತ್ತು ಹದಿನೈದು ವರ್ಷಗಳ ಬಳಿಕವಾದರೂ ನಾವು ಸ್ವಂತ ಕಾಲಿನ ಮೇಲೆ ಚೆನ್ನಾಗಿ ನಿಲ್ಲಲು ಸಮರ್ಥರಾಗಬಹುದು; ಹೊರತು ಬೇರೆ ಮಾರ್ಗ ತೆರೆದಿಲ್ಲ. ಪರದೇಶಗಳ ಸಹಾಯವನ್ನು ನಂಬಿ ಕುಳಿತಿರುವುದು ನಮ್ಮ ಅಭಿಮಾನಕ್ಕಾಗಲೀ ಜರೂರು ಸಂದರ್ಭಗಳಲ್ಲಿನ ನಮ್ಮ ಆವಶ್ಯಕತೆಯ ದೃಷ್ಟಿಯಿಂದಾಗಲೀ ಉಚಿತವಾದುದಲ್ಲ ಶಾಶ್ವತವಾಗಿ ಸಂರಕ್ಷಣೆಯ ಪ್ರಶ್ನೆಯನ್ನು ಬಿಡಿಸುವ ನಮ್ಮ ಬಯಕೆಗೂ ಇದು ಹೇಳಿಸಿದುದಲ್ಲ. ಆದರೆ ನಮ್ಮ ಯೋಜನೆಗಳು ಕಾರ್ಯಗತಗೊಂಡು ನಾವು ನಿಜವಾದ ಅರ್ಥದಲ್ಲಿ ಶಕ್ತಿಸಂಪನ್ನರಾಗುವ ವರೆಗೆ ನಮ್ಮನ್ನು ವಿಷಮ ವಾತಾವರಣವು ಕವಿಯಲಾರದೆಂದು ಹೇಳುವುದೆಂತು? ಆದುದರಿಂದ ನಾವು ಸ್ವಸಂರಕ್ಷಣೆಗಾಗಿ ಸಾಕಷ್ಟು ಸಿದ್ಧತೆಯನ್ನು ಈಗಲೂ ಮಾಡಿಕೊಂಡಿರಬೇಕಾಗುತ್ತದೆ; ಸದಾಕಾಲ ಇಂಥ ಸಿದ್ಧತೆಯನ್ನು ನಾವು ತೋರಿಸಬೇಕಾಗುತ್ತದೆ. ಹತ್ತಿರದಲ್ಲಿ ಯುದ್ಧ ಸಂಭವಿಸುತ್ತದೆಂದಲ್ಲ—ಆದರೆ ಗಂಡಾಂತರದ ವಾತಾವರಣವು, ವಿಷಮ ಪರಿಸ್ಥಿತಿಯು, ನೆರೆಯ ರಾಷ್ಟ್ರದ ಚಟುವಟಿಕೆಯ ಹಿನ್ನೆಲೆಯಲ್ಲಿ, ನಮ್ಮನ್ನು ಕಾಡಬಹುದೆಂಬ ಸಂಭವ ಕಂಡುಬರುತ್ತಿರುವುದನ್ನು ಉಪೇಕ್ಷಿಸುವಂತಿಲ್ಲ. ನಮ್ಮ ಮೇಲೆ ನಮ್ಮ ಸಂಪತ್ತಿನ ಸ್ರೋತವನ್ನು ಯುದ್ಧ ಚಟುವಟಿಕೆಗಳಿಗೆ ಪ್ರತ್ಯಕ್ಷವಾಗಿ ಉಪಯೋಗಿಸುವಂತೆ, ಅಭಿವೃದ್ಧಿ ಪ್ರಯತ್ನಗಳ ವೇಗವನ್ನು ಅನಿವಾರ್ಯವಾಗಿ ತಡೆಹಿಡಿಯುವಂತೆ ಪಾಕಿಸ್ಥಾನದ ವರ್ತನೆ ಒತ್ತಾಯಿಸಿದೆ. ನಾವು ಇವತ್ತಿಗಾಗಿ ನಾಳೆಯ ಹಂಬಲವನ್ನು ತೊರೆಯಲಾರದ ಮತ್ತು ನಾಳೆಗಾಗಿ ಇವತ್ತಿನ ಪರಿಸ್ಥಿತಿಯನ್ನು ಕಡೆಗಣಿಸಲಾಗದ ದ್ವಂದ್ವದಲ್ಲಿ ಬಿದ್ದಿದ್ದೇವೆ. ಸೈನಿಕ ಸಿದ್ಧತೆಯು ಸ್ವಸಂರಕ್ಷಣೆಯ ನೆಪದಿಂದಲಾದರೂ ಹೆಚ್ಚಿನ ಮಹತ್ವ ಪಡೆಯುವುದನ್ನು ಕಂಡು ಭಾರತವು ವಿಷಾದಿಸುತ್ತದೆ. ಸೈನಿಕ ಒಪ್ಪಂದಗಳ ಮತ್ತು ಸೇನಾ ಸಹಾಯದ ವಿಷಯವನ್ನು ಅದು ಕಟ್ಟವಾಗಿ ವಿರೋಧಿಸಲು ಇದೇ ಮುಖ್ಯ ಕಾರಣ. ಇದನ್ನು ಪ್ರಬಲ ರಾಷ್ಟ್ರಗಳು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿಲ್ಲ; ಅವುಗಳ ಶಕ್ತಿಯ ನೆರಳಲ್ಲಿ ದಿನಗಳೆಯ ಬಯಸುವ ಚಿಕ್ಕ ರಾಷ್ಟ್ರಗಳೂ ತಮ್ಮ ವರ್ತನೆಯಿಂದಾಗುವ ದುಷ್ಪರಿಣಾಮಗಳನ್ನು ಗಮನಿಸುತ್ತಿಲ್ಲ. ಇದು ತೀರ ಶೋಚನೀಯವಾದ ವಿಷಯ — ಮತ್ತು ಭಾರತವನ್ನು ಅಗ್ನಿ ಪರೀಕ್ಷೆಗೆ ಗುರಿಪಡಿಸುವ ವಿಷಯವೂ ಹೌದು.

The Family Welfare Bureau

The Bureau has been shifted to the "New Hospital for Women", next to Roxy Cinema, New Queen's Road, Bombay—4. (1st floor- entrance from the east side.)

The Bureau will in future, besides helping childless couples as heretofore, also give advice on marriage and sex problems.

For birth control service, visit Kutumb Sudhar Kendra, Bombay Central Station Compound, Nagpada.

A. P. Pillay,
Director.



(ಡಾ। ಹೊಸಕೆರೆ ಚಿದಂಬರಯ್ಯ)

ಪೊಕೆಟ್ ಎಡಿಶನ್

ಸುಮಾರು 450 ಪುಟಗಳು.

ಕ್ರಯ: 0—12—0.

ಪ್ರಕಾಶಕರು:
ನವಯುಗ ಪ್ರೆಸ್, ಉಡುಪಿ.

NOTICE

In the Court of the Rent Controller & Revenue Divisional Officer, Coondapoor Division.

H. R. C. O. P. No. 9/1956

Between:—

Sri Vittala Devaru of Sri Shirur Mutt Udipi represented by Trustee and Matadhipathi His Holiness Srimad Laxmindrathirtha Swamier ... ... Petitioner.

and

Kalsank Anantha Narayana Pai & Co. by 1) Managing partner U. Keshava Kamath 2) Partner U. Yeshwanth Kamath ... ... Respondents.

To

Udyavar Keshava Kamath, son of Udyavar Sheshagiri Kamath, residing at Kunjibet of Udipi Town, Managing partner of Kalsank Anantha Narayana Pai & Co. ... First Respondent.

Please take notice that the above petition filed against you stands posted to 31—3—1956 for your appearance at 11 A. M. at Udipi Camp. If you fail to appear before this Court at Udipi Camp on 31—3—1956 at 11 A. M. either in person or by a pleader, you will be declared exparte and the petition decided in your absence.

(By order of the Court)

K. Varadaraya Pai,
Advocate for Petitioner.

Udipi, Dated 23—3—1956.

Edited, Printed & Published By K. H. Shetty, at the Navayuga Press, Udipi S. India

REGD. NO. M. 3610

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ — VOL. 35

ಉಡುಪಿ, 5—4—1956

ಸಂಚಿಕೆ ೩೧ — NO. 31

ಸರಳ ಪರಿಹಾರ ಮಾರ್ಗ

ಕೆಲವು ಸಮಯದಿಂದೀಚೆಗೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಪ್ರಮುಖ ವಾಗ್ವಾದದ ವಿಷಯವಾಗಿ ಪರಿಣಮಿಸಿದ್ದ ಕಾಶ್ಮೀರ ಸಮಸ್ಯೆಯು ಈ ವಾರ ಉಭಯ ದೇಶಗಳ ಪ್ರಧಾನಿಗಳ ಖಂಡತುಂಡ ಹೇಳಿಕೆಗಳ ದೆಸೆಯಿಂದ ಎಲ್ಲರ ಕಣ್ಣಮುಂದೆ ಸ್ಪಷ್ಟರೂಪದಲ್ಲಿ ಚಿತ್ರಿತವಾಗಿ ನಿಲ್ಲುವಂತಾಗಿದೆ.

ಯಾವ ನಿರ್ಧಾರಕ್ಕೂ ಬರಲಾಗದೆ ಪಾಕಿಸ್ತಾನ ಮತ್ತು ಭಾರತಗಳು ನೇರಾದ ಮಾತುಕತೆಯನ್ನು ನಡುವೆ ಬಿಟ್ಟುಕೊಟ್ಟು ನಿಂತಂತಿದ್ದ ಗಳಿಗೆಯಲ್ಲಿ ಪಾಕಿಸ್ತಾನವು ಸರ್ವಪಕ್ಷೀಯ ಪರಿಷತ್ತು, ಸಿಯಾಟೊ ಸಮ್ಮೇಳನ ಮತ್ತೀಗ ರಾಷ್ಟ್ರೀಯ ಶಾಸನಾಂಗದಲ್ಲಿ ಪ್ರಶ್ನೋತ್ತರಗಳ ಸಂದರ್ಭವನ್ನು ಉಪಯೋಗಿಸಿ ಭಾರತದ ಮೇಲೆ ವಚನಭಂಗ ಹಾಗು ದುರುದ್ದೇಶದ ಆರೋಪಗಳನ್ನು ಮಾಡತೊಡಗಿತ್ತು.

ಇದನ್ನು ಕಂಡು ಕೇಳಿ ಭಾರತವು ಎಷ್ಟು ಸಮಯದವರೆಗೆ ಮೌನವಾಗಿ ಕುಳಿತಿರಬಹುದು? ಅದುದರಿಂದಲೇ ಕೆಲವು ತಿಂಗಳುಗಳ ಮೊದಲೊಮ್ಮೆ ಗೃಹ ಮಂತ್ರಿ ಪಂತರು ಕಾಶ್ಮೀರ ಸಂಬಂಧದಲ್ಲಿ ಕೊಟ್ಟಿದ್ದ ಹೇಳಿಕೆಯ ಬಳಿಕ ಇದೀಗ ಮೊದಲ ಬಾರಿಗೆ ಪ್ರಧಾನಿ ನೆಹರುಗಳು ಲೋಕಸಭೆಯಲ್ಲಿ ಸುದೀರ್ಘ ಹೇಳಿಕೆಯೊಂದನ್ನಿತ್ತು ಕಾಶ್ಮೀರ ಸಮಸ್ಯೆಯ ಬಗ್ಗೆ ಭಾರತದ ನಿಲುಮೆಯನ್ನು ವಿವರಿಸಿದ್ದಾರೆ.

ರಾಜಕೀಯ ನಿರೀಕ್ಷಕರ ಅಭಿಪ್ರಾಯದಂತೆ ನೆಹರು ಹೇಳಿಕೆಯು ಸಂಶಯಗ್ರಸ್ತರಾದವರ ಕಣ್ಣನ್ನು ಕುಕ್ಕಿ ತೆರೆಯಿಸುವಂತಿದೆ, ಸತ್ಯಸಂಗತಿಗಳ ಮೇಲೆ ಸ್ಪಷ್ಟ ಪ್ರಕಾಶವನ್ನು ಬೀರುವಂತಿದೆ, ಭಾರತದ ವಿರುದ್ಧ ಮಾಡಲಾದ ಆಪಾದನೆಗಳಲ್ಲಿ ಯಾವುದಕ್ಕೂ ಆಧಾರವಿಲ್ಲವೆಂಬುದನ್ನು ಎತ್ತಿ ತೋರಿಸುವಂತಿದೆ.

ತಮ್ಮ ಹೇಳಿಕೆಗೆ ಪೀಠಿಕೆಯಾಗಿ ಕೆಲವು ಮಾತುಗಳನ್ನಾಡಿದ ನೆಹರುಗಳು ಪಾಕಿಸ್ತಾನದ ಸರಕಾರವಷ್ಟೆಯಲ್ಲ ಅಲ್ಲಿಯ ಹಾಗು ವಿದೇಶಗಳ ಬೇರೆ ಕೆಲವು ಪತ್ರಿಕೆಗಳೂ ನಿರೀಕ್ಷಕರೂ ಕಾಶ್ಮೀರ ಸಮಸ್ಯೆಯ ಇತಿವೃತ್ತವನ್ನು ಚೆನ್ನಾಗಿ ತಿಳಿದುಕೊಳ್ಳದೆ ವ್ಯರ್ಥ ಟೀಕೆಮಾಡುತ್ತಿರುವುದರಿಂದ ತಾನು ನಿಜವಾದ ವಿಷಯಗಳನ್ನು ಪುನರುಚ್ಚರಿಸುತ್ತಿದ್ದೇನೆಂದು ಹೇಳಿದರು.

ಭಾರತದ ಟೀಕೆಯಲ್ಲಿ ಮುಳುಗಿದ ಎಲ್ಲರೂ ಈ ಕಾರಣಕ್ಕಾಗಿ ನೆಹರು ಹೇಳಿಕೆಯನ್ನು ಕೂಲಂಕಷವಾಗಿ ಅಭ್ಯಸಿಸಬೇಕು. ಉಳಿದ ನಾಗರಿಕರಾದರೂ ಭಾರತ ಸರಕಾರವು ತಪ್ಪು ಕೆಲಸವನ್ನೇನೂ ಮಾಡಿಲ್ಲ; ವಚನ ಭಂಗದಂಥ ಹೀನವೃತ್ತಿಗಿಳಿದಿಲ್ಲ; ಅಂತಾರಾಷ್ಟ್ರೀಯ ಜವಾಬ್ದಾರಿಯನ್ನು ಗೌರವಪೂರ್ವಕ ನಿರ್ವಹಿಸಲು ಹಿಂಜರಿಯುತ್ತಿಲ್ಲ ಎಂಬುದನ್ನು ಮನಗಾಣಲಿಕ್ಕಾಗಿ ಈ ಹೇಳಿಕೆಯ ತಿರುಳನ್ನರಿಯಬೇಕು.

ನಮ್ಮ ಪ್ರಧಾನಿಗಳ ಹೇಳಿಕೆಗೆ ಉತ್ತರವಿತ್ತ ಪಾಕಿಸ್ತಾನದ ಪ್ರಧಾನ ಮಂತ್ರಿಗಳು ಸಮಸ್ಯೆಯ ಮೂಲ ಯಾವುದೆನ್ನುತ್ತಾ ಕಾಶ್ಮೀರವು ಭೌಗೋಲಿಕವಾಗಿಯೂ ಜಾತೀಯ ದೃಷ್ಟಿಯಿಂದಲೂ ಪಾಕಿಸ್ತಾನದ ಅಂಗವೆಂದಿದ್ದಾರೆ. ಭಾರತದ ವಿಭಜನೆಯ ಕಾಲಕ್ಕೆ ಆಗಿನ ವೈಸರಾಯಿಗಳು ಆಶ್ರಿತ ಸಂಸ್ಥಾನಗಳಿಗೆ "ಜಾತೀಯ" ತಳಹದಿಯನ್ನಾಧರಿಸಿ ಪಾಕಿಸ್ತಾನ ಅಥವಾ ಭಾರತಗಳೊಡನೆ ಸೇರ್ಪಡಲು "ಸಲಹೆ' ಕೊಟ್ಟಿದ್ದಾರೆಂದು ನೆನಪು ಮಾಡಿದ್ದಾರೆ.

ನಾಲ್ಕರಲ್ಲಿ ಮೂರಂಶದಷ್ಟು ಮುಸ್ಲಿಮರಿರುವ ಜಮ್ಮೂ ಮತ್ತು ಕಾಶ್ಮೀರವು ಈ ಕಾರಣಕ್ಕಾಗಿ ಪಾಕಿಸ್ತಾನದ ಅವಿಭಾಜ್ಯ ಅಂಗವಾಗತಕ್ಕದೆಂದು ಅವರ ಅಭಿಪ್ರಾಯ ಆದರೆ ಈ ನಿಲುಮೆಯನ್ನು ಸಮರ್ಥಿಸುವುದು ಎಷ್ಟಕ್ಕೂ ಸಾಧ್ಯವಿಲ್ಲ. ವೈಸರಾಯಿಗಳು ಕೊಟ್ಟದು ಆಜ್ಞೆಯಲ್ಲ—ಸಲಹೆ, ಅದನ್ನು ಆಶ್ರಿತ ಸಂಸ್ಥಾನದ ಒಡೆಯರಾಗಲೀ ಜನತೆಯಾಗಲೀ ಮನ್ನಿಸಬೇಕೆಂದಿಲ್ಲ. ಭೌಗೋಲಿಕ ಸಂಬಂಧದ ಕುರಿತು ಹೇಳುವುದಾದರೆ, ಕಾಶ್ಮೀರವು ಭಾರತದೊಡನೆ ಸಹ ಪಾಕಿಸ್ತಾನದಷ್ಟೆ ಚೆನ್ನಾಗಿ ಹೊಂದಿಕೊಳ್ಳುವಂಥ ಪ್ರದೇಶ.

ಕಾಶ್ಮೀರದ "ಹಿಂದು" ರಾಜರು ಭಾರತದೊಡನೆ ಕಾಶ್ಮೀರವನ್ನು ವಿಲಯನಗೊಳಿಸಲು ಆತುರರಿರುವುದನ್ನು ಕಂಡ ಮುಸ್ಲಿಂ ಜನತೆಯು ಅವರ ವಿರುದ್ಧ ದಂಗೆ ಎದ್ದಿತು ಪ್ರಜೆಗಳಿಗೆ ಬೇಡವೆನಿಸಿದ ಈ ರಾಜರು ಜಮ್ಮುವಿಗೋಡಿದರ; ಮತ್ತು ಆಗ ಭಾರತವು ಅವರ ಸಹಾಯಕ್ಕೆ ಸೈನ್ಯ ಕಳಿಸಿತು. ಇದಕ್ಕೆ ಅನುಕೂಲವಾಗುವಂತೆ ಭಾರತದೊಡನೆ ವಿಲಯನದ ಕರಾರನ್ನು ರಾಜರು ಮಾಡಿಕೊಂಡರು. ಈ ಕರಾರಿಗೆ ಚಿಕ್ಕಾಸಿನ ಬೆಲೆಯೂ ಇಲ್ಲನೆಂದು ಪಾಕಿಸ್ತಾನಿ ಪ್ರಧಾನಿಗಳು ಘೋಷಿಸಿದ್ದಾರೆ

ಮಾಡಿಕೊಂಡ ಒಡಂಬಡಿಕೆಗೆ ಚಿಕ್ಕಾಸಿನ ಬೆಲೆ ಸಹ ಇಲ್ಲವೆಂದಾದರೆ, ಜಗತ್ತಿನಲ್ಲಿ ವಿಶ್ವಾಸವನ್ನಾಧರಿಸಿದ ಯಾವುದೇ ವ್ಯವಹಾರವನ್ನು ನಡೆಸುವುದು ಕಷ್ಟ. ಪಾಕಿಸ್ತಾನದ ಮಟ್ಟಿಗೆ ಮಾಡಿಕೊಂಡ ಒಡಂಬಡಿಕೆ ಅನುಲ್ಲಂಘ್ಯವಾಗದಿರಬಹುದು! ಭಾರತವೂ ಹಾಗೆ ಒಡಂಬಡಿಕೆಯೊಂದನ್ನು ಪಂಗಣಿಸಬೇಕೆನ್ನುವುದು ನೀತಿಗೆ ವಿರೋಧವಾದ ವಿಷಯ.

ಜನರು ದಂಗೆ ಎದ್ದಾಗ—ಆದಂಗೆಗೆ ಪರಕೀಯರಾದ ಪಾಕಿಸ್ತಾನಿಗಳ ನೇರಾದ ಸಹಾಯವಿದೆ ಎಂದು ಖಚಿತವಿದ್ದಾಗ—ಶಾಂತಿಯನ್ನು ನೆಲೆಗೊಳಿಸಲು ಭಾರತದ ಸಹಾಯಯಾಚನೆ ಮತ್ತು ಇಂಥ ಶಾಂತಿಗೆ ಸುಭದ್ರ ಹಾಗೂ ಶಾಶ್ವತ ತಳಪಾಯ ಹಾಕಲು ಭಾರತದೊಡನೆ ಸೇರ್ಪಡೆಯ ಒಡಂಬಡಿಕೆ ನಡೆದಿದೆ. ಕಾಶ್ಮೀರದ ಮಹಾರಾಜರು ತಮ್ಮ ವಿವೇಕಕ್ಕೆ ಒಪ್ಪಿದ ನಿರ್ಣಯ ಮಾಡಿ ಕೊಂಡರು. ಅದರ ಯೋಗ್ಯತೆಯನ್ನು ಪಾಕಿಸ್ತಾನವು ಪ್ರಶ್ನಿಸಲಾರದು. ಏಕೆಂದರೆ ಅದಕ್ಕೆ ಆ ಅಧಿಕಾರವಿಲ್ಲ.

ಈ ಸಂದರ್ಭದಲ್ಲಿ ಮೊನ್ನೆ ನೆಹರುಗಳು ಖಚಿತಪಡಿಸಿದ ಇನ್ನೊಂದು ಮಹತ್ವದ ಅಂಶವನ್ನೂ ಮನಗಾಣಬೇಕು—ಪಾಕಿಸ್ತಾನದೊಡನೆ ವಿಧ್ಯುಕ್ತವಾಗಿ ವಿಲಯನವನ್ನು ಹೊಂದಿರದ ಯಾವುದೇ ಭಾರತೀಯ ಆಶ್ರಿತ ಸಂಸ್ಥಾನದ ಶಾಂತಿ ಸುವ್ಯವಸ್ಥೆಯು ಭಾರತ ಸರಕಾರದ ಮೇಲಿನ ಹೊಣೆಯಾಗಿವೆ ಎಂದು ವಿಭಜನೆಯ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿತ್ತು. ಪಾಕಿಸ್ತಾನದ ಪ್ರಧಾನಿಗಳು ಇದೊಂದು ವಿಚಿತ್ರ ಸೂತ್ರವೆಂದಿದ್ದಾರೆ-ಆದರೆ ವಿಭಜನೆಯ ಒಡಂಬಡಿಕೆಗೆ ಸೈಗುಟ್ಟಿದ್ದ ಅವರ ಪೂರ್ವಜರಿಗೆ ಆಲೋಚನೆ ಇಸವಿಯಲ್ಲಿ ಹಾಗೇನೂ ತೋರಿರಲಿಲ್ಲ—ಅವರೀ ಸೂತ್ರವನ್ನು ಇದ್ದುದಿದ್ದಂತೆ ಒಪ್ಪಿದ್ದರು.

ಆದುದರಿಂದ ಕಾಶ್ಮೀರದ ಸಹಾಯಕ್ಕೆ, ಪಾಕಿಸ್ತಾನದಿಂದ ಅಕ್ರಮವಾಗಿ ಆಕ್ರಮಣ ನಡೆಸಿದ ಪುಂಡರನ್ನು ಓಡಿಸಲಿಕ್ಕೆ

(೧೨ನೇ ಪುಟ ನೋಡಿರಿ)

31 ವರುಷಗಳ ನಿರಂತರ ಸೇವೆ

ಒಟ್ಟು ಚಲಾವಣಾ ಸಂಪತ್ತು

ದಶಂಬರ 31, 1926 ರೂ. 17,355/-
ದಶಂಬರ 31, 1936 ರೂ. 35,45,544/-
ದಶಂಬರ 31, 1946 ರೂ. 4,26,07,093/-
ದಶಂಬರ 31,1955 ರೂ. 8,70,31,700/-
ಮಾರ್ಚ 1,1956 ರೂ. 9/-ಕೋಟಿಗೂ ಮಿಕ್ಕಿ

ಸಿಂಡಿಕೇಟಿನಲ್ಲಿ ಜನತೆ ವ್ಯಕ್ತಪಡಿಸುತ್ತಿರುವ ಅತುಲ ದೃಢವಿಶ್ವಾಸವೇ ಇಷ್ಟೊಂದು ಅಲ್ಪ ಸಮಯದಲ್ಲಿ ಬೇಂಕಿನ ಶೀಘ್ರ ಬೆಳವಣಿಗೆಗೆ ಕಾರಣವಾಯಿತು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ

ಹಿಂದುಳಿದ ವರ್ಗಗಳ ಹಿತ

ಪಂಚವಾರ್ಷಿಕ ಯೋಜನೆಯ ಕಾರ್ಯವಿಧಾನ

ಭಾರತದಂತಹ ಪೂರ್ಣಾಭಿವೃದ್ಧಿಯಾಗದ ದೇಶಗಳಲ್ಲಿ ಬಹು ಸಂಖ್ಯಾತರು ಬಡತನದ ಜೀವನವನ್ನು ನಡೆಸುತ್ತಿರುವುದರಿಂದ ಯಾವ ವಿಶಿಷ್ಟ ವರ್ಗಕ್ಕೆ ಸಾಧಾರಣ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಿಗಿಂತ ಹೆಚ್ಚಿನ ರಕ್ಷಣೆ ಮತ್ತು ಸಹಾಯವನ್ನು ನೀಡಬೇಕೆಂದು ಖಚಿತವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಆದರೂ ವಿಶೇಷ ಸಹಾಯವನ್ನು ನೀಡಬೇಕಾದ ಹಲವು ವರ್ಗಗಳಿರುವುದನ್ನು ಅಲ್ಲಗಳೆಯುವಂತಿಲ್ಲ; ಅವಾವುವೆಂದರೆ: ಪರಿಶಿಷ್ಟ ವರ್ಗಗಳು— ಅವರ ಸಂಖ್ಯೆ ೫೨೧ ಲಕ್ಷ; ಪರಿಶಿಷ್ಟ ಬುಡಕಟ್ಟು— ಅವರ ಸಂಖ್ಯೆ ೧೯೧ ಲಕ್ಷ; ಮತ್ತು ಇತರ ಹಿಂದುಳಿದ ವರ್ಗಗಳು— ಅವರ ಸಂಖ್ಯೆ ೪೨ ಲಕ್ಷ.

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದ್ದ ಕಾರ್ಯಕ್ರಮಗಳ ಪ್ರಕಾರ ಮೇಲ್ಕಂಡ ವರ್ಗಗಳ ಹಿತರಕ್ಷಣೆಗಾಗಿ ೩೯ ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿತ್ತು. ಅವುಗಳಲ್ಲಿ ೨೦ ಕೋಟಿ ರೂಪಾಯಿಗಳನ್ನು ರಾಜ್ಯಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಒದಗಿಸಲಾಯಿತು. ಉಳಿದ ಹಣದಲ್ಲಿ ೧೫ ಕೋಟಿ ರೂಪಾಯಿಗಳಷ್ಟು ಪರಿಶಿಷ್ಟ ಬುಡಕಟ್ಟಿನ ಹಿತರಕ್ಷಣೆಗಾಗಿ ಕೇಂದ್ರದ ಸಹಾಯ ಧನವನ್ನಾಗಿ ಕೊಡಲಾಯಿತು. ೪ ಕೋಟಿ ರೂಪಾಯಿಗಳನ್ನು ಅಸ್ಪೃಶ್ಯತಾ ನಿವಾರಣೆ ಮತ್ತು ಪರಿಶಿಷ್ಟ ವರ್ಗದ ಹಿತರಕ್ಷಣಾ ಯೋಜನೆಗಳಿಗೂ ಅಪರಾಧಿ ಮನೋವೃತ್ತಿಯ ಮತ್ತಿತರ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿಯೂ ವೆಚ್ಚ ಮಾಡಲಾಯಿತು.

ಶಿಕ್ಷಣ ಸೌಲಭ್ಯಗಳು

ಹಿಂದುಳಿದ ವರ್ಗಗಳಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸುವುದಕ್ಕಾಗಿ ರಾಜ್ಯ ಸರಕಾರಗಳು ೧೧ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿವುವು. ಅದೇ ಸಮಯದಲ್ಲಿ ಭಾರತ ಸರಕಾರದ ಶಿಕ್ಷಣ ಶಾಖೆಯವರು ಮೆಟ್ರಿಕ್ಯುಲೇಶನ್ನಿನ ಬಳಿಕದ ವಿದ್ಯಾಭ್ಯಾಸಕ್ಕಾಗಿ ೩೪೦ ಲಕ್ಷ ರೂಪಾಯಿಗಳ ವ್ಯಾಸಂಗ ವೇತನಗಳನ್ನು ಹಂಚಿದರು. ಭಾರತ ಸರಕಾರದವರು ಪ್ರತಿ ವರ್ಷವೂ ಒಟ್ಟು ಒಂದು ಕೋಟಿ ರೂಪಾಯಿಗಳ ೨೬,೦೦೦ ವ್ಯಾಸಂಗ ವೇತನಗಳನ್ನು ಈಗ ಕೊಡುತ್ತಿದ್ದಾರೆ. ಪರಿಶಿಷ್ಟಬುಡಕಟ್ಟಿನಜನರ ಹಿತ ರಕ್ಷಣೆಗಾಗಿ ವಿಶೇಷಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಂಡಿವೆ. ಆಶ್ರಮ ಶಾಲೆಗಳಲ್ಲಿ ಮತ್ತು ಕಸುಬಿನ ತರಬೇತಿ ಕೇಂದ್ರಗಳಲ್ಲಿ ಅವರಿಗೆ ಉಚಿತ ವಸತಿ ವ್ಯವಸ್ಥೆಯನ್ನು ಮಾಡಿ ಕೊಡಲಾಗುತ್ತಿದೆ.

ಮುಂಬೈ, ಬಿಹಾರ್, ಒರಿಸ್ಸಾ ಮತ್ತು ಮಧ್ಯ ಪ್ರದೇಶಗಳಲ್ಲಿ ಸುಮಾರು ಒಂದು ಸಾವಿರ ಆಶ್ರಮ ಶಾಲೆಗಳನ್ನೂ ಸೇವಾಶ್ರಮಗಳನ್ನೂ ತೆರೆಯಲಾಗಿದೆ; ಮುಂಬೈ, ಬಿಹಾರ್, ಮಧ್ಯ ಪ್ರದೇಶ, ರಾಜಸ್ಥಾನ ಮುಂತಾದ ರಾಜ್ಯಗಳಲ್ಲಿ ೬೫೦ ಸಂಸ್ಕಾರ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈಶಾನ್ಯ ಭಾರತದಲ್ಲಿ ತರಬೇತಿ ಕೇಂದ್ರಗಳನ್ನು ತೆರೆದು ಗುಡ್ಡಗಾಡಿನ ಜನರ ಹಿತರಕ್ಷಣೆಗೆ ಹಿಂದಿ ಮತ್ತು ತತ್ಸಂಬಂಧ ವಿಷಯಗಳಲ್ಲಿ ತರಬೇತಿಯನ್ನು ಕೊಡಲಾಗುತ್ತಿದೆ. ತರಬೇತಿ ಪಡೆಯುತ್ತಿರುವವರು ತಮ್ಮ ತರಬೇತಿಯನ್ನು ಮುಗಿಸಿದ ನಂತರ ಗುಡ್ಡಗಾಡಿನ ಪ್ರದೇಶದಲ್ಲಿರುವ ಬಾಲಕ ಬಾಲಕಿಯರಿಗೆ ಶಿಕ್ಷಣವೀಯುವರು. ಸರಳರೀತಿಯ ಮೂಲ ಶಿಕ್ಷಣಕ್ಕೆ ವಿಶೇಷ ಗಮನವಿತ್ತು ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಅವುಗಳನ್ನು ಮಾರ್ಪಡಿಸಿಕೊಂಡು ಬೋಧಿಸಲಾಗುತ್ತಿದೆ.

ಆರ್ಥಿಕ ಪುನರುತ್ಥಾನ

ಅದೇ ರೀತಿ, ಪ್ರಥಮ ಯೋಜನೆಯಲ್ಲಿ ಆರ್ಥಿಕ ಪುನರುತ್ಥಾನಕ್ಕಾಗಿ ೩೬೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಈ ಹಣವನ್ನು ವೃತ್ತಿ ಶಿಕ್ಷಣ, ಗ್ರಾಮ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆಗೆ ಸಾಲ ಹಾಗೂ ಸಹಾಯ ಧನವನ್ನು ನೀಡುವುದಕ್ಕಾಗಿ ಕೊಡಲಾಯಿತು. ಗುಡ್ಡಗಾಡಿನ ಜನರಲ್ಲಿ ಸಹಕಾರಿ ಸಂಸ್ಥೆಗಳನ್ನು ಮತ್ತು ಸರ್ಕಾರದ ಮೇಲ್ವಿಚಾರಣೆಯಲ್ಲಿ ಅಂಗಡಿಗಳನ್ನು ತೆರೆಯಲು ಉತ್ತೇಜನವೀಯುವುದಕ್ಕಾಗಿಯೂ ಈಶಾನ್ಯ ಭಾರತದಲ್ಲಿ ಒಂದು ಯೋಜನೆಯನ್ನು ತಯಾರಿಸಲಾಗಿದೆ.

ಗುಡ್ಡಗಾಡಿನ ಜನಾಂಗ ಮತ್ತು ಪರಿಶಿಷ್ಟ ವರ್ಗದವರಿರುವ ಕ್ಷೇತ್ರಗಳಲ್ಲಿ ಸಂಪರ್ಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದರ ಕಡೆಗೆ ಗಮನವೀಯಲಾಗಿದೆ. ರಸ್ತೆಗಳ ಅಭಿವೃದ್ಧಿ ಕಾರ್ಯಗಳ ಜೊತೆಗೆ ೬೫೦ ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರಗಳು ರಸ್ತೆ ಸಂಚಾರಕ್ಕಾಗಿ ಮಾರ್ಗಗಳನ್ನು ರಚಿಸಲು ವೆಚ್ಚಮಾಡಿವೆ. ಅಸ್ಸಾಮಿಗೆ ೨೬೦ ಲಕ್ಷ ರೂಪಾಯಿಗಳ ವಿಶೇಷ ಸಹಾಯ ಧನವನ್ನು ಕೊಡಲಾಗಿದೆ. ಆ ರಾಜ್ಯದಲ್ಲಿ ಸಂಪರ್ಕ ವ್ಯವಸ್ಥೆಯನ್ನು ಉತ್ತಮ ಪಡಿಸುವುದಕ್ಕಾಗಿ ಈ ಹಣವನ್ನು ವಿನಿಯೋಗಿಸಲಾಗುವುದು. ಒಟ್ಟಿನಲ್ಲಿ ೨೩೪೬ ಮೈಲುಗಳಷ್ಟು ಉದ್ದ ರಸ್ತೆಯನ್ನು ಆಂಧ್ರ, ಅಸ್ಸಾಂ, ಬಿಹಾರ, ಒರಿಸ್ಸಾ, ಮಧ್ಯಭಾರತ ಮತ್ತು ವಿಂಧ್ಯ ಪ್ರದೇಶಗಳಲ್ಲಿ ರಚಿಸಲಾಗಿದೆ. ಈಶಾನ್ಯ ಭಾರತದಲ್ಲಿ ರಸ್ತೆ ನಿರ್ಮಾಣ ಕಾರ್ಯಕ್ಕೆ ಗುಡ್ಡಗಾಡಿನ ಜನರಿಂದ ದೊರೆತ ಉತ್ತೇಜನೆಯು ಗಮನಾರ್ಹವಾಗಿದ್ದು ಕಾರ್ಯಕ್ರಮವು ತುಂಬ ಯಶಸ್ವಿಯಾಯಿತು. ಜನರ ಸಹಾಯದಿಂದ ಸುಮಾರು ಅರ್ಧಕ್ಕೂ ಕಡಿಮೆ ವೆಚ್ಚದಲ್ಲಿ ಸುಮಾರು ೨೦೦ ಮೈಲಿಗಳಷ್ಟು ದೂರ ರಸ್ತೆಯನ್ನು ನಿರ್ಮಿಸಲಾಗಿದೆ.

ಆರೋಗ್ಯಾಭಿವೃದ್ಧಿ

ಪರಿಶಿಷ್ಟ ವರ್ಗಗಳಿಗೆ ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಸೌಕರ್ಯಗಳಿಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಗುಡ್ಡಗಾಡಿನ ಜನರಿಗೆ ಪರಿಶುದ್ಧವಾದ ಕುಡಿಯುವ ನೀರಿನ ಪೂರೈಕೆಯು ಈ ಕಾರ್ಯಕ್ರಮಗಳಲ್ಲೊಂದು. ಪ್ರಥಮ ಯೋಜನೆಯ ಅವಧಿಯಲ್ಲಿ ಹತ್ತು ಸಾವಿರಕ್ಕಿಂತಲೂ ಹೆಚ್ಚು ಬಾವಿಗಳನ್ನು ತೋಡಲಾಯಿತು. ಗುಡ್ಡಗಾಡಿನ ಮತ್ತು ಇತರ ಕ್ಷೇತ್ರಗಳಲ್ಲಿ ೧೩೩ ಆಸ್ಪತ್ರೆ ಮತ್ತು ಔಷಧಾಲಯಗಳನ್ನು ತೆರೆಯುವುದರ ಜೊತೆಗೆ, ಉಚಿತ ರೀತಿಯಲ್ಲಿ ಔಷಧಿಗಳ ಹಂಚಿಕೆ ಇತ್ಯಾದಿಗಳನ್ನು ಕೈಗೊಳ್ಳಲಾಯಿತು.

ಪರಿಶಿಷ್ಟ ವರ್ಗದವರಿಗೆ, ಉತ್ತಮ ಮನೆಕಟ್ಟುವ ಭೂಮಿಗಳನ್ನು ಉಚಿತವಾಗಿ ಹಂಚುವುದಕ್ಕೆ ಸಾಲಗಳನ್ನು ನೀಡುವ ಕಟ್ಟಡ ನಿರ್ಮಾಣದ ವಸ್ತುಗಳ ಪೂರೈಕೆಯಲ್ಲಿ ಸಹಾಯ ಸಲ್ಲಿಸುವ ಇತ್ಯಾದಿ ಕೆಲಸಗಳಿಗೆ ಸುಮಾರು ೩ ಕೋಟಿ ರೂಪಾಯಿಗಳನ್ನು ಹಂಚಲಾಯಿತು.

ಪರಿಶಿಷ್ಟ ಬುಡಕಟ್ಟಿನ ಕ್ಷೇತ್ರ

ದ್ವಿತೀಯ ಯೋಜನೆಯ ಅವಧಿಯಲ್ಲಿ ೯೦ ಕೋಟಿ ರೂಪಾಯಿಗಳನ್ನು ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ತೆಗೆದಿಡಲಾಗಿದೆ. ಅವುಗಳಲ್ಲಿ ಸುಮಾರು ಪಾಲರಲ್ಲಿ ಎರಡಂಶದಷ್ಟನ್ನು ಪರಿಶಿಷ್ಟ ಬುಡಕಟ್ಟು ಮತ್ತು ಪರಿಶಿಷ್ಟ ಜನಾಂಗವಿರುವ ಕ್ಷೇತ್ರಗಳ ಅಭಿವೃದ್ಧಿಗಾಗಿ ಉಪಯೋಗಿಸಲಾಗುವುದು. ಗುಡ್ಡಗಾಡಿನ ಜನರ ಬೇಸಾಯ ಕ್ಷೇತ್ರಗಳಲ್ಲಿ ನೆಲೆನಿಲ್ಲುವಂತೆ ಮಾಡುವ ಕಾರ್ಯಕ್ರಮಗಳಿಗೆ ಯೋಜನೆಯಲ್ಲಿ ಪ್ರಾಧಾನ್ಯವೀಯಲಾಗಿದೆ.

ವಿಶೇಷ ಗಮನವೀಯುವ ಇತರ ಕಾರ್ಯಕ್ರಮಗಳೆಂದರೆ:—

(೧) ಮಲೇರಿಯಾ, ಕ್ಷಯ, ತೊನ್ನು ಮುಂತಾದ ರೋಗಗಳ ನಿರ್ಮೂಲನ, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಸೌಕರ್ಯಗಳನ್ನು ಕಲ್ಪಿಸುವುದು ಪರಿಶುದ್ಧವಾದ ನೀರಿನ ಪೂರೈಕೆ ಇವುಗಳಿಗೆ ಸಂಬಂಧಪಟ್ಟ ಯೋಜನೆಗಳು. (೨) ದುರ್ಗಮ ಕ್ಷೇತ್ರಗಳಲ್ಲಿ ರಸ್ತೆಗಳು, ಸೇತುವೆ ಇತ್ಯಾದಿಗಳ ನಿರ್ಮಾಣದ ಸಹಿತ ಸಂಪರ್ಕವ್ಯವಸ್ಥೆಯ ಅಭಿವೃದ್ಧಿ (೩) ಅವರ ಆರ್ಥಿಕ ಪರಿಸ್ಥಿತಿಯನ್ನು ತೀವ್ರವಾಗಿ ಸುಧಾರಿಸುವ ಇತರ ಯೋಜನೆಗಳು.

ಅರಣ್ಯ ಉತ್ಪನ್ನಗಳ ಸಂಬಂಧದ ಸಹಕಾರ ಸಂಘಗಳನ್ನು ಸ್ಥಾಪಿಸುವುದನ್ನೂ ಗುಡಿ ಕೈಗಾರಿಕೆಗಾಗಿ ತರಬೇತಿ ಹಾಗೂ ಉತ್ಪಾದನಾ ಕೇಂದ್ರಗಳನ್ನೂ ತೆರೆಯುವುದನ್ನೂ ಉತ್ತೇಜಿಸಲಾಗುವದು. ಅನೇಕ ಮಟ್ಟಿಗೆ ಬುಡಕಟ್ಟಿನ ಜನರಿಂದಲೇ ಆಯ್ಕೆಯಾದವರಿಗೆ ಹಿತಚಿಂತನಕಾರ್ಯಗಳ ಬಗ್ಗೆ ತರಬೇತಿ ಕೊಡಲಾಗುವುದು. ಅಭಿವೃದ್ಧಿಯ ಈ ಘಟ್ಟದಲ್ಲಿ ಸಾಕಷ್ಟು ತರಬೇತಿಯಾದ ಕೂಲಗಿತ್ತಿ ಮತ್ತು ದಾದಿಯರನ್ನು ಪಡೆದಿರುವುದು. ಆವಶ್ಯಕ. ಇಂಫಾಲಿನಲ್ಲಿ ಯಾಂತ್ರಿಕ ವಿದ್ಯಾ ಮಂದಿರವೊಂದನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಈ ವಿದ್ಯಾಮಂದಿರದಲ್ಲಿ ಸಿವಿಲ್ ಹಾಗೂ ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗಗಳಲ್ಲಿ ಬುಡಕಟ್ಟಿನ ವಿದ್ಯಾರ್ಥಿಗಳು ತರಬೇತಿ ಪಡೆಯುವರು. ಜೊತೆಗೆ, ವೃತ್ತಿಯ ಅಥವಾ ತಾಂತ್ರಿಕ ವಿಷ

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಪೆನಿ, ಮಂಗಳೂರು.
2. ವಿ. ಎ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ, ಮದ್ರಾಸ್—3.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.
ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.
ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.
ನಮ್ಮ ಬಡ್ಡಿ ದರಗಳು.
ಸಿರಖು ಠೇವಣಾತಿ.
24 ತಿಂಗಳಿಗೆ 4%
12 ,, 3¾%
6 ,, 3½%
3 ,, 3%
ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%
THE MOOLKY BANK LTD., MULKI.

ಮುಂಬಯಿ ನಗರವು ಕರ್ನಾಟಕದ ಅಂಶ!

ಸಂಶೋಧಕ ಸಾಲೆತೋರರಿಂದ ಗತ ಇತಿಹಾಸದ ಮೇಲೆ ಬೆಳಕು

ಮುಂಬಯಿ ರಾಜ್ಯದ ವಿಧಾನ ಸಭೆಯಲ್ಲಿ ಇದೇ ೨೭ನೇ ಮಾರ್ಚಿಯಂದು ರಾಜ್ಯಗಳ ಪುನಾರಚನೆಯ ಮಸೂದೆಯನ್ನು ಮಂಡಿಸುತ್ತಾ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಮುಂಬಯಿ ನಗರವು ತಮ್ಮದು, ತಮ್ಮದೆಂದು ಗುಜರಾತಿಗಳೂ ಮರಾಠಿಗರೂ ಆಗ್ರಹ ಪ್ರದರ್ಶಿಸುತ್ತಿರುವುದನ್ನು ಕಂಡು "ಈ ನಗರದ ಮೂಲ ಭಾಷೆ ಪೋರ್ಚುಗೀಜ ಮತ್ತು ಕನ್ನಡ. ಪಶ್ಚಿಮ ಘಟ್ಟಗಳಲ್ಲಿ ಸುಲಭವಾದ ದಾರಿಗಳಾದ ಬಳಿಕ ಮರಾಠರು ಈ ನಗರಕ್ಕೆ ಬರತೊಡಗಿದರು. ಇದಕ್ಕೆ ಮೊದಲು ಗುಜರಾತಿಗರು ಬಂದು ನೆಲಸತೊಡಗಿದ್ದರು" ಎಂದು ಗತಕಾಲದ ಇತಿಹಾಸದ ಮೇಲೆ ಬೆಳಕು ಚೆಲ್ಲಿದರು. ಮುರಾರ್ಜಿಯವರ ಈ ಮಾತು ಕನ್ನಡಿಗರ ರೋಮಾಂಚಕ ಚರಿತ್ರೆಯ ಅಧ್ಯಾಯವೊಂದರ ನೆನಪನ್ನು ತಂದು ಕೊಡುತ್ತದೆ. ಕರ್ನಾಟಕದ, ಅದೇಕೆ, ಭಾರತದ ಪ್ರಸಿದ್ಧ ಇತಿಹಾಸಿಕ ಸಂಶೋಧಕರಾದ ಡಾ. ಬಿ. ಎ. ಸಾಲೆತೋರರು ಬಹು ದಿನಗಳ ಹಿಂದೆಯೇ ಮುಂಬಯಿ ನಗರದಲ್ಲಿ ಕನ್ನಡಿಗರಿಗಿದ್ದ ಪ್ರಭಾವ ಮತ್ತು ಒಡೆತನದ ವಿವರವನ್ನು ತಮ್ಮ ಬರವಣಿಗೆಯೊಂದರಲ್ಲಿ ಬಣ್ಣಿಸಿದ್ದರು.

ಹೆಸರಿನ ಮೂಲವೇನು?

ಡಾ. ಸಾಲೆತೋರರು ಹೇಳುವಂತೆ, ಮುಂಬಯಿ ಅಥವಾ ಇಂಗ್ಲಿಷಿನಲ್ಲಿ ಪ್ರಚಲಿತವಿರುವ ಬಾಂಬೆ ಎಂಬ ಹೆಸರಿನ ಉತ್ಪತ್ತಿಯ ನಿಷ್ಕರ್ಷೆ ಕಳೆದ ಹಲವು ಶತಮಾನಗಳಿಂದಲೂ ಸಮರ್ಪಕ ರೀತಿಯಲ್ಲಿ ನಡೆಯದೆ, ಊಹಾಪೋಹೆಯ ವಿಷಯವಾಗಿ ಉಳಿದಿದೆ. ನಾಲ್ವಾರು ಬಗೆಯಾಗಿ ಈ ಹೆಸರಿನ ಮೂಲವನ್ನು ವಿವರಿಸಲಾಗುತ್ತಿದ್ದರೂ ಕನ್ನಡಿಗರ ಆಳ್ವಿಕೆಗೆ ಈ ಹೆಸರಿನ ನಿಕಟ ಸಂಬಂಧವಿದೆ ಎಂಬ ವ್ಯಾಖ್ಯಾನವೊಂದೇ ಚೆನ್ನಾಗಿ ಒಪ್ಪುವ ನಿಷ್ಪನ್ನವಾಗಿದೆ. ಅಲ್ಲದೆ, ಬೇರೆಲ್ಲ ವಿಮರ್ಶೆಗಳೂ ಎಳೆದು ತಂದಂತೆ ತೋರುತ್ತವೆ.

ಬಾಂಬೆ ಎಂಬ ಶಬ್ದವನ್ನು ಪೋರ್ತುಗೀಜ ಭಾಷೆಗೆ ಗಂಟು ಹಾಕಿ ೧೫೩೮ರಲ್ಲಿ ಡಿ. ಕಾಸ್ಟ್ರೋ ಅವರು ಒಂದು ನಿಷ್ಪತ್ತಿಯನ್ನು ಸೂಚಿಸಿದರು. ಅವರೆನ್ನುವಂತಾದರೆ ಬೊಂಬೇ ಎಂಬುದು ಬೊವಾ-ವಿಡಾ ಎಂಬ ಶಬ್ದದಿಂದ ಹೊರಟಿತು. ಬೊವಾ-ವಿಡಾ ಎಂದರೆ ಒಳ್ಳೆಯ ಉಪನಾಗರ ಎಂದರ್ಥ. ಅದು ಇಂಗ್ಲೀಷಿನಲ್ಲಿ ಅದೇ ಅರ್ಥದ ಬೂನ್-ಬೇ ಎಂದಾಗಿ ಬಾಂಬೇ ಆಯಿತೆಂದು ಅವರ ವಾದವಾಗಿತ್ತು. ಈ ಊಹೆಯನ್ನು ಕೇವಲ ಉಪಕಲ್ಪಿತವೆಂದು ಕೂಡಿಸಿದ ಕಲ್ಪನೆಯೆಂದು ನಿರಾಕರಿಸಲಾಗಿದೆ.

ಸಾಮಾನ್ಯವಾಗಿ ಪ್ರಚಲಿತವಿರುವ ಇನ್ನೊಂದು ವದಂತಿಯೆಂದರೆ, ಮುಂಬಯಿ-ಶಬ್ದ ಮುಂಬಯಿಯಲ್ಲಿರುವ ಪ್ರಾಚೀನ ಮುಂಬಾದೇವಿಯ ಗುಡಿಗೆ ಸಂಬಂಧಿಸಿದುದೆಂದು. ಈ ಊಹೆಗೆ ಸಾಮಾನ್ಯವಾಗಿ ವಿದ್ವಾಂಸರ ಬೆಂಬಲ ದೊರೆತಿದೆ. ಆದರೂ ಇದಕ್ಕೆ ಮುಖ್ಯವಾಗಿ ಕರ್ನಾಟಕರ್ನಿಕೆಯೇ ಮೂಲ, ಹೊರತು ಮುಂಬಾದೇವಿಯ ದೇವಾಲಯ ಎಂದಿನದು ಮತ್ತು ದ್ವೀಪದ ಆ ಹೆಸರು ಎಂದಿನಿಂದ ಪ್ರಚಾರಕ್ಕೆ ಬಂತು, ಎಂಬ ಮಾತುಗಳು ಕತ್ತಲೆಯಲ್ಲೇ ಉಳಿದಿವೆ.

ಬಾಂಬೇ ಶಬ್ದ ಬೂನ್-ಬೇಯಿಂದ ನಿಷ್ಪನ್ನವಾಯಿತೆಂದು ಪೋರ್ಚುಗೀಜರು ಹೇಳುತ್ತಿರುವದರಲ್ಲಿ ಸ್ವಾರಸ್ಯ ಒಡೆದು ಕಾಣುವದೆಂದು ೧೫೬೮ರಲ್ಲಿಯೇ ಕೊರಿಯಾ ಎಂಬ ಲೇಖಕ ಬರೆದಿದ್ದ. ಮುಸಲ್ಮಾನ ಇತಿಹಾಸಕಾರರ ಲೇಖನಗಳಂತೂ ಬೂನ್-ಬೇ ಕಲ್ಪನೆಯನ್ನು ಅಲ್ಲಗಳೆಯಲು ಬೇಕಾದಷ್ಟು ಸಾಧನಗಳನ್ನು ಒದಗಿಸುತ್ತವೆ. ೧೫ನೇ ಶತಮಾನದಲ್ಲಿ ಮಾಹಿಮ್ ಎಂಬ—ಈಗ ಮುಂಬಯಿ ದ್ವೀಪದ ಭಾಗವೇ ಆಗಿರುವ—ದ್ವೀಪವೇ ಹೆಚ್ಚು ಪ್ರಧಾನವಾಗಿತ್ತೆಂದು ಅವರ ಬರವಣಿಗೆಗಳಿಂದ ಸಿದ್ಧವಾಗುತ್ತದೆ. ಅವರಲ್ಲಿ ಕೆಲವರು ಮುಂಬಾ-ದೇವಿ ಅಥವಾ ಮುಂಬಾಯಿ ಅಥವಾ ಪೋರ್ತುಗೀಜರೆನ್ನುವಂತೆ ಬಾಂಬ್-ಜೆಯಿಮ್, ಬೂನ್‌ಬೇ ಎಂಬ ಯಾವ ಹೆಸರಿನಿಂದಲೂ ಮುಂಬಾಯಿ ದ್ವೀಪವನ್ನು ಕರೆಯದೆ ಬರಿ ಮಾಹಿಮದ "ಸಮೀಪವರ್ತಿ ದ್ವೀಪ"ವೆಂದಷ್ಟೇ ಉಲ್ಲೇಖಿಸಿದ್ದಾರೆ. ಆದರೆ ಮಿರಾತ್-ಈ-ಅಹಮ್ಮದೀ ಗ್ರಂಥದ ಲೇಖಕನಾದ ಅಲಿ ಮಹಮ್ಮದ ಖಾನನು ಗುಜರಾತಿನ ಸುಲ್ತಾನನೂ ತುರ್ಕಸ್ತಾನದ ವಜೀರನೂ ಒಂದಾಗಿ ಪೋರ್ತುಗೀಜರ ಹಡಗು ಪಡೆಯನ್ನು ಪರಾಜಿಸಿದ ಕಥೆಯನ್ನು ಬಣ್ಣಿಸಿ, ಮುಂದೆ ಗುಜರಾತಿನ ಸುಲ್ತಾನನು ೧೫೦೭ರಲ್ಲಿ "ವಸಯಿ ಮತ್ತು ಮುಂಬಣಿಗಳ ಮೇಲೆ ತನ್ನ ಅಧಿಕಾರವನ್ನು ಕೂಡಿಸಿ ಅಹಮ್ಮದಾಬಾದಿಗೆ ಹಿಂದಿರುಗಿದನು" ಎಂದು ಬರೆದಿದ್ದಾನೆ.

ಮುಂಬಣಿಯಿಂದ ಮುಂಬಯಿ

"ಮುಂಬಣಿ"ಯೆಂಬೀ ಹೆಸರೇ ಮುಂಬಯಿ ಶಬ್ದದ ಸಮಸ್ಯೆಗೆ ಉತ್ತರವನ್ನೊದಗಿಸುತ್ತದೆ. ಮುಂಬಣಿ ಮತ್ತು ಮಾಹಿಮ್ ಎಂದು ಕರೆಯಿಸಿಕೊಳ್ಳುವ ಅದರ ಈಶಾನ್ಯ ಭಾಗ ಇವು ಸೇರಿ ಈಗಿನ ಮುಂಬಯಿ ದ್ವೀಪವಾಗಿರಬೇಕು. ಮತ್ತು ಕಾಲಾಂತರದಲ್ಲಿ ದಕ್ಷಿಣ ಭಾಗವಾದ, ಒಂದು ಕಾಲದಲ್ಲಿ ಕೇವಲ ಹೆಸರಿಲ್ಲದ ಸಮೀಪವರ್ತಿ ದ್ವೀಪ ಎನಿಸಿದ್ದ, ಮುಂಬಣಿಯೇ ಪ್ರಾಮುಖ್ಯಕ್ಕೆ ಏರಿತಾಗಿ ಅದರ ಹೆಸರೇ ಇಡೀ ದ್ವೀಪಕ್ಕೆ ಬಿತ್ತೆಂದು ಊಹಿಸಬಹುದು. ೧೫೩೮ರಿಂದ ೧೫೯೦ರ ವರೆಗಿನ ಪೋರ್ತುಗೀಜ ಇತಿಹಾಸಕಾರರು ಮುಂಬಾಯಾ, ಮುಂಬಯಿನ್, ಬಾಂಬಯಿಮ್ ಮತ್ತು ಬಾಂಬೆನ್ ಎಂಬ ಹೆಸರುಗಳಿಂದ ಈ ದ್ವೀಪವನ್ನು ಕರೆಯುತ್ತಿದ್ದರು. ಇವೆಲ್ಲ ಮುಂಬಣಿಯ ರೂಪಾಂತರಗಳಾಗಿವೆಯೆಂದು ತಿಳಿಯಲು ಅಡ್ಡಿಯಿಲ್ಲ.

ಮುಂಬಣಿ, ಆದರೆ ಅದಕ್ಕಿಂತ ಹಿಂದೆ? ಪೋರ್ತುಗೀಜರಾಗಲಿ ಮುಸ್ಲಿಮರಾಗಲಿ ಅದರಿಂದ ಹಿಂದೆ ನಮಗೆ ದಾರಿ ತೋರುವದಿಲ್ಲ. ಆದರೆ ನೇಪಾಳದಲ್ಲಿ ಹರಪ್ರಸಾದ ಶಾಸ್ತ್ರಿಗಳು ಸಂಶೋಧಿಸಿ ಪ್ರಕಟಿಸಿದ ಡಾಕಾರ್ಣವ ಎಂಬ ೧೧ನೇ ಶತಕದ ಮಹಾಯಾನ ಬೌದ್ಧ ತಾಂತ್ರಿಕ ಗ್ರಂಥ ಈ ಪ್ರಶ್ನೆಯ ಮೇಲೆ ತಕ್ಕಷ್ಟು ಬೆಳಕು ಚೆಲ್ಲುತ್ತದೆ. ಅದರಲ್ಲಿ ಅಂತರ್ಜಗತ್ತಿನ ೬೦, ಬಾಹ್ಯ ಜಗತ್ತಿನ ೬೦ ದೇವತೆಗಳನ್ನು ಉಲ್ಲೇಖಿಸಿ ಅಂತರ್ಜಗತ್ತಿನ ದೇವತೆಗಳಲ್ಲಿ ಮುಂಬಯಿ ದ್ವೀಪದಲ್ಲಿರುವ ಮುಂಬಣಿ ದೇವಿ ಯೊಬ್ಬಳೆಂದು ಹೇಳಲಾಗಿದೆ. ಆದುದರಿಂದ ಈ ದೇವಾಲಯ ಮೂಲತಃ ಮಹಾಯಾನ ಬೌದ್ಧರದಾಗಿತ್ತೆಂದು ಸಿದ್ಧ; ಅದು ೧೧ನೇ ಶತಮಾನದಲ್ಲಿಯೇ ಅಸ್ತಿತ್ವದಲ್ಲಿತ್ತೆಂಬುದೂ ನಿಸ್ಸಂದೇಹ.

ಶಿಲಹಾರರ ನಾಡು

ಶಿಲಾಶಾಸನಗಳ ಆಧಾರದಿಂದ ೧೧ನೇ ಶತಮಾನದಲ್ಲಿ ಈಗಿನ ಮುಂಬಯಿ ಮತ್ತು ಅದರ ಹತ್ತಿರದ ನಾಡುಗಳನ್ನು ಆಳುತ್ತಿದ್ದವರು ಶಿಲಹಾರ ವಂಶದ ಅರಸರೆಂದು ಗೊತ್ತುಹಚ್ಚಲಾಗಿದೆ. ಈ ಶಿಲಹಾರರು ಮೂರು ಕವಲಾಗಿ ಒಡೆದಿದ್ದು ದಕ್ಷಿಣ ಕೊಂಕಣದ ಶಿಲಹಾರರು, ಉತ್ತರ ಕೊಂಕಣದವರು ಮತ್ತು ಕರಾಡ ಕೊಲ್ಹಾಪುರದವರೆಂದು ಹಬ್ಬಿದ್ದರು. ಮುಂಬಯಿ ಮತ್ತು ಅದಕ್ಕೆ ಹೊಂದಿದ ನಾಡುಗಳನ್ನು ಆಳಿದವರು ಉತ್ತರ ಕೊಂಕಣದ ಶಿಲಹಾರರು.

ಶಿಲಹಾರ ವಂಶ ಶುದ್ಧ ಕನ್ನಡಿಗರದು. ಉತ್ತರ ಕೊಂಕಣದ ಶಿಲಹಾರರ ಇತಿಹಾಸ ೭ನೇ ಶತಮಾನದ ವರೆಗೂ ಜ್ಞಾತವಾಗಿದೆ. ಅವರು ಸಾಧಾರಣವಾಗಿ ಠಾಣಾ ಪಟ್ಟಣದಿಂದ ಆಳುತ್ತಿದ್ದರು. ಆದರೆ ಒಮ್ಮೊಮ್ಮೆ ಆಗ ಪುರಿ ಎಂದು ಪ್ರಸಿದ್ಧವಾಗಿದ್ದ ಈಗಿನ ಎಲಿಫೆಂಟಾ (ಮುಂಬಯಿಯ ಸಮೀಪದ)ವೂ ಅವರ ರಾಜಧಾನಿಯಾಗಿದ್ದುದು ಉಂಟು. ಅನೇಕ ವರ್ಷಗಳ ಹಿಂದೆ ಉಪಲಬ್ಧವಾಗಿ ಈಗ ಕಳೆದು ಹೋಗಿರುವ ತಾಮ್ರಶಾಸನವೊಂದು ಟಗರಾದಲ್ಲಿರುವ ಒಂದು ರೇವು ಎಂದು ಮುಂಬಣಿಯನ್ನು ಉಲ್ಲೇಖಿಸಿತ್ತೆಂದು ಹೇಳಲಾಗಿತ್ತು. ಅದಂತಿರಲಿ.

ಉತ್ತರ ಕೊಂಕಣದ ಶಿಲಹಾರರಲ್ಲಿ ಮುಮ್ಮಣಿ, ಮುಂಬಣಿ, ಮಾಮ್ವಣಿ, ಮುಮ್ಮರಿ ಮತ್ತು ಮುಂವಣಿ ಎಂಬ ವಿವಿಧ ಹೆಸರುಗಳಿಂದ ಪ್ರಸಿದ್ಧರಾದ ಇಬ್ಬರು ಅರಸರಿದ್ದರು. ಅವರಲ್ಲಿ ಮೊದಲನೆ ಮುಮ್ಮಣಿಯನ್ನು ಪಶ್ಚಿಮ ಚಾಳುಕ್ಯ ಚಕ್ರವರ್ತಿ ಎರಡನೆ ಪುಲಿಕೇಶಿಯು ಯುದ್ಧದಲ್ಲಿ ಕೊಂದನು. ಎರಡನೇ ಮುಮ್ಮಣಿಗೆ ಅದೇ ಚಾಳುಕ್ಯ ವಂಶದ ಎರಡನೇ ಸೋಮೇಶ್ವರನಿಂದ ಪರಾಭವವೊದಗಿತು.

(೧೦ನೇ ಪುಟ ನೋಡಿರಿ)

ನೋಟೀಸು

ಪೆರ್ಡೂರು ಮುಜರಾಯಿ ಖಾತೆಯ ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ಬತ್ತ ಮುಡಿ ೯೦—೦ (ತೊಂಭತ್ತು) ಖರೀದಿಗೆ ಕೊಡುವುದಿದೆ. ಆ ಬಾಬ್ತು ಇದೇ ತಾರೀಕು —4—1956ನೇ ಆದಿತ್ಯವಾರ ಅಪರಾಹ್ನ ಘಂಟೆ 4ಕ್ಕೆ ಭಂಡಾರದ ಶರ್ತಕ್ಕೆ ಒಳಪಟ್ಟು ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆಸಕ್ತಿ ಉಳ್ಳವರು ಬಂದು ಏಲಂನಲ್ಲಿ ಭಾಗವಹಿಸಬಹುದು.

Sri ANANTHAPADMANABHA TEMPLE, PERDUR

K. B. Shetty.
Executive Officer.

ಪೆರ್ಡೂರು. ತಾ. 30—3—56.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

'ಸರಸ್ವತಿ'

(Estd. 1920)

ಕನ್ನಡ ಮಾಸಪತ್ರಿಕೆ

ಕಳೆದ ಮೂವತ್ತೈದು ವರ್ಷಗಳಿಂದ ಮಹಿಳೆಯರ ಹಾಗೂ ಮಕ್ಕಳ ಸೇವೆಯನ್ನು ಸಲ್ಲಿಸಿ ಇಡೀ ಕರ್ನಾಟಕದಲ್ಲಿ ಹೆಸರಾಂತ ಮಾಸಪತ್ರಿಕೆ. ಜಾಹೀರಾತು ಕೊಡಲು ಉತ್ತಮ ಪತ್ರಿಕೆ. ಶಾಲಾ ಮಕ್ಕಳಿಗೆ ಅಗತ್ಯವಾದ ಪತ್ರಿಕೆ.

ಸಂಪಾದಕಿ:— ಆರ್. ಕಲ್ಯಾಣಮ್ಮ.

ವಾರ್ಷಿಕ ಚಂದಾ ರೂ. 3 ಮನಿಯಾರ್ಡರ್ ಮಾಡಿರಿ.

ಮ್ಯಾನೇಜರ್,
ಸರಸ್ವತಿ ಕಾರ್ಯಾಲಯ,
ಅರಳೇಪೇಟೆ, ಬೆಂಗಳೂರು೨.
ಫೋನ್ ನಂ. 3309.

ಗಡಿ ಸಮಿತಿ ನೇಮಕದ ಕುರಿತು ಸಚಿವರ ವಿವರಣೆ

ವಾದಗ್ರಸ್ತ ಕನ್ನಡ ಪ್ರದೇಶಗಳ ಬಗ್ಗೆ ಪ್ರತಿನಿಧಿಗಳ ಒತ್ತಾಯ

ಮದ್ರಾಸು ರಾಜ್ಯದ ಶಾಸನಾಂಗದ ಉಭಯ ಸದನಗಳಲ್ಲಿಯೂ ರಾಜ್ಯಗಳ ಪುನಾರಚನೆಯ ಸಂಬಂಧದಲ್ಲಿ ಕೇಂದ್ರ ಸರಕಾರವು ತಯಾರಿಸಿದ ಕರಡು ವಿಧೇಯಕದ ಮೇಲೆ ಕಳೆದ ವಾರ ಚರ್ಚೆ ನಡೆಯಿತು; ಮತ್ತು ಸರಕಾರದ ಪರವಾಗಿ ಮಂಡಿಸಲಾದ ಕೆಲವು ಸಾಮಾನ್ಯ ತಿದ್ದುಪಡಿಗಳೊಡನೆ ಮಸೂದೆಗೆ ಸಮ್ಮತಿಯನ್ನು ನೀಡಲಾಯಿತು. ಕಾಂಗ್ರೆಸು ಸದಸ್ಯರು ಭಿನ್ನಾಭಿಪ್ರಾಯವಿರುವ ಸಂಗತಿಗಳ ಬಗ್ಗೆ ತಮ್ಮ ಅಭಿಮತವೇನೆಂಬುದನ್ನು ಚರ್ಚೆಯ ಕಾಲದಲ್ಲಿ ಭಾಷಣಗಳ ಮೂಲಕ ವ್ಯಕ್ತಪಡಿಸಿದರೂ ಅಧಿಕೃತ ತಿದ್ದುಪಡಿಗಳನ್ನು ಮಂಡಿಸುವಷ್ಟು ಸಾಹಸವನ್ನು ವಹಿಸಲಿಲ್ಲ. ಪಕ್ಷದ ಪ್ರಧಾನ ಕಾರ್ಯದರ್ಶಿಯ ಆದೇಶಾನುಸಾರವಾಗಿ ಅವರು ಶಿಸ್ತಿನ ಪಾಲನೆಗೆ ಮಹತ್ವವನ್ನಿತ್ತರು.

ಸಚಿವರ ಭಾಷಣ

ಶಾಸನಾಂಗದ ಕೆಳಮನೆಯಲ್ಲಿ ಇದೇ ೨೬ನೇ ಮಾರ್ಚಿಯಂದು ಮಸೂದೆಯನ್ನು ಮಂಡಿಸುತ್ತಾ ಮಂತ್ರಿ ಶ್ರೀ ಸುಬ್ರಹ್ಮಣ್ಯರು ಜನತೆಯು ಶಾಂತಚಿತ್ತದಿಂದ ಈ ಸಮಸ್ಯೆಯನ್ನು ಸಮಾಲೋಚಿಸಬೇಕೆಂದೂ ತಾವು ಭಾರತೀಯರೆಂಬ ವಿಶಾಲ ದೃಷ್ಟಿಯನ್ನಿಟ್ಟುಕೊಳ್ಳಬೇಕೆಂದೂ ಹೇಳಿದರು. ಕೆಲವು ವಿಶಿಷ್ಟ ಪ್ರದೇಶಗಳ ವಿಷಯದಲ್ಲಿ ವಾಗ್ವಾದವಿರುವುದನ್ನೂ ಭಿನ್ನಾಭಿಪ್ರಾಯ ಪ್ರಬಲಿಸಿರುವುದನ್ನೂ ಅವರು ಪ್ರಸ್ತಾಪಿಸಿ ಪರಸ್ಪರ ವಿರುದ್ಧವಾದ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸುತ್ತಿರುವ ಎರಡು ವರ್ಗಗಳ ನಡುವಿನ ಈ ಘರ್ಷಣೆಯನ್ನು ನಡುವೆ ಒಂದು ತಡೆಯದಿದ್ದರೆ ಇದಕ್ಕೆ ಕೊನೆಯಿರಲಾರದೆಂದು ಹೇಳಿ, ಇಂಥ ಮಧ್ಯಪ್ರವೇಶವನ್ನು ಭಾರತ ಸರಕಾರದ ಅಧಿನಾಯಕರು ನಡೆಸಿರುವರೆಂದರು. ತಾವು ಆರಿಸಿ ಕಳಿಸಿದ ಪ್ರತಿನಿಧಿಗಳೂ ಮಂತ್ರಿಗಳೂ ತಮಗೆ ಆಸಕ್ತಿಯಿರುವ ಪ್ರದೇಶಗಳನ್ನು ಉಳಿಸಿಕೊಳ್ಳಲಿಲ್ಲವೆಂದು ಆರೋಪಿಸುತ್ತಾ ಈ ಕಾರಣಕ್ಕಾಗಿ ರಾಜೀನಾಮೆ ಕೊಡಬೇಕೆಂದು ಹೇಳುವುದು ಕುಹಕ ತಂತ್ರವೆಂದು ಅವರು ಸಾರಿದರು. ಭಾರತ ಸರಕಾರದ ಮುಂದೆ ಮಂತ್ರಿಗಳೂ ಪ್ರತಿನಿಧಿಗಳೂ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಮಂಡಿಸಿರುವರೆಂದು ಅವರು ಘೋಷಿಸಿದರು. ನಮ್ಮ ನಾಯಕರಿಗೆ ಈ ಭಿನ್ನಾಭಿಪ್ರಾಯಗಳು ಮನವರಿಕೆಯಾಗಿವೆ; ಮತ್ತು ಎಲ್ಲ ವಿಷಯಗಳನ್ನೂ ಚೆನ್ನಾಗಿ ಪರಿಶೀಲಿಸಿದ ಬಳಿಕ ಅವರು ತಮ್ಮ ತೀರ್ಮಾನವನ್ನು ಹೇಳಿದ್ದಾರೆ. ಪರಸ್ಪರ ವಿರುದ್ಧ ಅಭಿಪ್ರಾಯವಿರುವ ಎರಡೂ ಪಕ್ಷಗಳನ್ನು ತೃಪ್ತಿಪಡಿಸುವುದು ಯಾರಿಗೂ ಅಸಾಧ್ಯವಾದ ಕೆಲಸ ಎನ್ನುತ್ತಾ ಮಂತ್ರಿಗಳು ವಾಗ್ವಾದದ ಕೇಂದ್ರವಾಗಿರುವ ಪ್ರದೇಶಗಳು ಭಾರತದ ಘಟಕವೇ ಆಗಿ ಉಳಿಯುತ್ತವೆಂದೂ ನಾವೀಗ ನಡೆಸುವುದು ರಾಜ್ಯಗಳ ಸೀಮಾರೇಖೆಯ ಬದಲಾವಣೆಯನ್ನಷ್ಟೇ ಹೊರತು ಸರ್ವತಂತ್ರಸ್ವತಂತ್ರವಾದ ರಾಜ್ಯ ಘಟಕಗಳನ್ನಲ್ಲವೆಂದೂ ಕೇಂದ್ರ ಸರಕಾರದ ಅಧಿಕಾರ ಮುಂದಾದರೂ ಕುಂದುವುದಿಲ್ಲವೆಂದೂ ತಿಳಿಸಿದರು.

ಗಡಿ ಸಮಿತಿ ನೇಮಕ

ಮಸೂದೆಯಲ್ಲಿ ಅಡಕವಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾ ಮಂತ್ರಿಗಳು ಕೆಲವು ರಾಜ್ಯಗಳ ವಿಷಯದಲ್ಲಿ ಸರಳ ಹಾಗು ಸಾಮಾನ್ಯ ಗಡಿ ಬದಲವಣೆಗಳಿಗಾಗಿ ಸಮಿತಿಗಳನ್ನು ನೇಮಿಸುವ ವಿಚಾರವು ಆಡಳಿತದ ಅನುಕೂಲತೆಗಾಗಿ ಮುಂದಿಟ್ಟುದಾಗಿದೆ ಎಂದರು "ಆಡಳಿತದ ಅನುಕೂಲತೆ" ಎಂದರೇನೆಂಬುವನ್ನು ವಿವರಿಸಲು ಅವರು ಕೆಲವು ಉದಾಹರಣೆಯನ್ನಿತ್ತರು. "ಮಲಬಾರಿನಲ್ಲಿ ಕೆಲವು ಅರಣ್ಯ ಪ್ರದೇಶಗಳಿವೆ. ಇವು ಕೊಯಮುತ್ತೂರು ಜಿಲ್ಲೆಯ ಕಾಡುಗಳಿಗೆ ಹೊಂದಿಕೊಂಡಿವೆ ಹೀಗೆ ಈ ಕಾಡು ಪ್ರದೇಶವು ಏಕ ಘಟಕವಾಗಿ ರೂಪುಗೊಂಡಿದೆ. ಈ ಕಾಡುಗಳಿಗೆ ಹೋಗುವ ದಾರಿಯು ಕೊಯಮುತ್ತೂರು ಜಿಲ್ಲೆಯಲ್ಲಿದೆ. ಸದ್ಯಕ್ಕೆ ಈ ಕಾಡು ಪ್ರದೇಶದ ಆಡಳಿತವನ್ನು ಕೊಯಮುತ್ತೂರು ಜಿಲ್ಲಾ ಕೇಂದ್ರದಿಂದ ನಿರ್ವಹಿಸಲಾಗುತ್ತದೆ. ಈ ಹಾಗು ಇಂಥ ಇತರ ವಿಷಯಗಳಲ್ಲಿ ಗಡಿ ಸಮಿತಿಯನ್ನು ನೇಮಿಸಿ ಇಡಿ ಅರಣ್ಯ ಪ್ರದೇಶವು ಒಂದೇ ರಾಜ್ಯದ ಮೇಲ್ವಿಚಾರಣೆಗೊಳಪಡುವಂತೆ ಗಡಿ ಹೊಂದಿಕೆ ಮಾಡಿಕೊಳ್ಳಬೇಕೆಂದು ಮದ್ರಾಸು ಸರಕಾರವು ಕೇಂದ್ರವನ್ನು ಕೇಳಿಕೊಂಡಿರುತ್ತದೆ. ಇಂಥ ವಿಷಯಗಳಲ್ಲದೆ ವಾಗ್ವಾದವಿರುವ ಬೇರೆ ಪ್ರದೇಶಗಳ ಮಟ್ಟಿಗೆ ಈಗ ಕೈಗೊಳ್ಳಲಾಗಿರುವ ತೀರ್ಮಾನವೇ ಸಿಂಧುವಾಗುತ್ತದೆ. ಗಡಿಸಮಿತಿಯ ನೇಮಕದ ಸೂತ್ರವು ಇವಕ್ಕೆಲ್ಲ ಅನ್ವಯಿಸುವುದಿಲ್ಲ." ಆದುದರಿಂದ ಕಾಸರಗೋಡು, ದೇವಿಕುಲಂ, ಇತ್ಯಾದಿ ಪ್ರದೇಶಗಳ ಬಗ್ಗೆ ಗಡಿ ಸಮಿತಿಯ ನೇಮಕವಾಗಬಹುದೆಂಬ ಆಶೆಯನ್ನಾರೂ ಕಟ್ಟಿಕೊಳ್ಳಬಾರದು" ಎಂದು ಮಂತ್ರಿ ಸುಬ್ರಹ್ಮಣ್ಯಮರು ಸ್ಪಷ್ಟಪಡಿಸಿದರು.

ವಲಯ ಮಂಡಳಗಳ ಕಾರ್ಯ

ಮಂತ್ರಿಗಳು "ಸದ್ಯಕ್ಕೆ ದಕ್ಷಿಣ ಪ್ರದೇಶದ ರಚನೆಯ ವಿಚಾರವನ್ನು ಮದ್ರಾಸು ಸರಕಾರ ಬಿಟ್ಟುಕೊಟ್ಟಿರುತ್ತದೆ" ಎಂದು ಸಾರುತ್ತಾ ವಲಯ ಮಂಡಳಗಳು ದಕ್ಷಿಣ ಪ್ರದೇಶದ ಕಲ್ಪನೆಯ ನೆರಳೆಂಬ ವಾದವನ್ನು ಅಲ್ಲಗಳೆದು ಮಾತನಾಡಿದರು. ವಲಯ ಮಂಡಳಗಳಿಗೆ ಕಾರ್ಯನಿರ್ವಾಹಕ ಅಧಿಕಾರವಿಲ್ಲ; ಅದು ಶಾಸನಾಂಗದಂತೆ ಅಥವಾ ಸರಕಾರದಂತೆ ಕೆಲಸ ನಡೆಸಲಾರದು; ಅಲ್ಲಿ ಚರ್ಚೆಗಳು ನಡೆದು ಸರ್ವಾನುಮತದಿಂದ ಒಪ್ಪಿಕೊಂಡ ತೀರ್ಮಾನಗಳು ಮಾತ್ರ ಮಹತ್ವ ಪಡೆಯುತ್ತವೆ; ಕೇವಲ ಸಲಹೆಯನ್ನಷ್ಟೇ ವಲಯ ಮಂಡಳ ಕೊಡಬಲ್ಲುದು. ಏಕರೂಪದಹಿತಾಸಕ್ತಿಯುಳ್ಳ ಪ್ರದೇಶಗಳ ಸಾಮಾನ್ಯ ಸಮಸ್ಯೆಗಳ ಚರ್ಚೆಗಾಗಿ ಈ ವಲಯ ಮಂಡಳಗಳನ್ನು ಸಂಘಟಿಸಲಾಗಿದೆ. ಸದ್ಯಕ್ಕೆ ಇದು ಉಪಯುಕ್ತವೆಂದು ಧುರೀಣರು ಭಾವಿಸಿದ್ದಾರೆ. ಇವುಗಳ ಉಪಯುಕ್ತತೆಯ ಯಥಾರ್ಥ ಮೌಲ್ಯ ಮಾಪನವನ್ನು ಹಿಂದಿನಿಂದ ಬೇಕಾದರೆ ಮಾಡಿಕೊಳ್ಳಬಹುದು. ವಲಯ ಮಂಡಳಗಳು ಇನ್ನೂ ಚೆನ್ನಾಗಿ ಕೆಲಸ ಮಾಡುವಂತೆ ಹೆಚ್ಚಿನ ಅಧಿಕಾರವನ್ನು ಅವುಗಳಿಗೆ ಕೊಡಬೇಕಾದೀತೆ ಎಂಬುದನ್ನು ಕೆಲವು ಸಮಯದ ಬಳಿಕ ವಿಚಾರಿಸಬಹುದು. ಸದ್ಯಕ್ಕೆ ಸಮಾನ ಆರ್ಥಿಕ ಹಿತಾಸಕ್ತಿಯುಳ್ಳ ಪ್ರದೇಶಗಳನ್ನು ಪರಸ್ಪರ ಬಂಧಿಸುವ ಸಂಸ್ಥೆಯಾಗಿ ವಲಯ ಮಂಡಳ ಕೆಲಸ ಮಾಡುತ್ತದೆ. ಕೇಂದ್ರ ಸರಕಾರಕ್ಕೆ ಮಾತ್ರ ಸಂಬಂಧಿಸಿದ ವಿಷಯಗಳ ಮಟ್ಟಿಗೆ ಸಹ ಈ ವಲಯ ಮಂಡಳವು ಸಿಫಾರಸು ಮಾಡಬಲ್ಲುದು ಎಂದು ವಿದಿತಗೊಳಿಸಿದರು.

ಕಾಸರಗೋಡು ತಾಲೂಕು

ಚರ್ಚೆಯ ಕಾಲದಲ್ಲಿ ಕಾಸರಗೋಡಿನ ಕಾಂಗ್ರೆಸು ಸದಸ್ಯರಾದ ಜನಾಬ್ ಎಂ. ಎಸ್. ಮೊಗ್ರಾಲರು ಈ ಮಸೂದೆಯ ಮಟ್ಟಿಗೆ ಶಾಸನಾಂಗವು ಹಿಂದೊಮ್ಮೆ ಚರ್ಚೆಯ ಕಾಲದಲ್ಲಿ ಮಾಡಿದ್ದ ಸಿಫಾರಸುಗಳ ಕಕ್ಷೆಗೆ ಅತಿರಿಕ್ತವಾಗಿ ಏನನ್ನೂ ಮಾಡುವಂತಿಲ್ಲ ಎನ್ನುತ್ತಾ ಚಂದ್ರಗಿರಿಹೊಳೆಯ ಉತ್ತರಕ್ಕಿರುವ ಕಾಸರಗೋಡು ತಾಲೂಕಿನ ಭಾಗವನ್ನು ಸೂಚಿತ ಮೈಸೂರು ರಾಜ್ಯದಲ್ಲಿ ಸೇರಿಸಬೇಕೆಂದು ಹೇಳಿದರು. ಜನತೆಯ ಅಭಿಪ್ರಾಯವನ್ನು ಕಡೆಗಣಿಸುವುದು ಸರಿಯಲ್ಲ ಎಂದವರು ವಿನಂತಿಸಿಕೊಂಡರು. ಮಂಗಳೂರಿನ ಕಾಂಗ್ರೆಸು ಸದಸ್ಯರಾದ ಶ್ರೀ ಬಿ. ವೈಕುಂಠ ಬಾಳಿಗರು ಕೇಂದ್ರ ಸರಕಾರವು ಇನ್ನಾದರೂ ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಕಾಸರಗೋಡು ತಾಲೂಕಿನ ವಿಷಯದಲ್ಲಿ ದಕ್ಷಿಣ ಕನ್ನಡದ ಜನರು ಮಾಡಿಕೊಂಡ ಮನವಿಗಳನ್ನು ಪರಿಗಣಿಸಿ, ನ್ಯಾಯ ದಾನ ಮಾಡಬೇಕೆಂದು ಒತ್ತಾಯಿಸಿದರು. ರಾಜ್ಯಗಳ ಪುನಾರಚನೆಯು ಕೇವಲ ವ್ಯವಸ್ಥೆಯಾಗಿದೆಯೆಂದೂ ಆದುದರಿಂದ ತಾಯ್ನೆಲದೊಡನೆ ಸೇರಿಹೋಗುವ ಪ್ರದೇಶಗಳೆಂಬ ಕೀಳು ಭಾವನೆಗೆ ಯಾವ ಘಟಕವೂ ಗುರಿಯಾಗಬೇಕಾದ ಪ್ರಮೇಯವಿಲ್ಲವೆಂದೂ ಎಲ್ಲ ಪ್ರದೇಶಗಳೂ ಸಮಾನಸ್ಥಾನ ಗೌರವನನ್ನು ಹೊಂದಿವೆಯೆಂದೂ ಅವರು ಹೇಳಿದರು. ಮೈಸೂರಿನೊಡನೆ ಸೇರಿಕೊಳ್ಳಲು ಹಾರೈಸುವ

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ
O. S. 29/1950.
R. E. P. 441/1955.

ವಾದಿಯು— ಜೆ. ಶಂಕರ ಹೆಬ್ಬಾರ ಕೋಡಾ.

ಪ್ರತಿವಾದಿಯು . ರಾಮಚಂದ್ರ ಸೆಟ್ಟಿ ನಾಗಪ್ಪ ಸೆಟ್ರ ಮಗ ಕುಂದಾಪುರ ತಾಲೂಕು ಕೆಗ್ರಾಲು ಗ್ರಾಮ.

ಇವರಿಗೆ

ವಾದಿಯು ಮೇಲ್ಕಂಡ ಡಿಕ್ರಿಪ್ರಕಾರ ಬರತಕ್ಕ ಹಣಗಳನ್ನು ವಸೂಲುಮಾಡುವರೇ ಪ್ರತಿವಾದಿಯ ಪಕ್ಕಿನ ಮೂಲಗೇಣಿ ಆಸ್ತಿಗಳನ್ನು ಯೇಲಂವ್ಮಿಗೆ ಅಪೇಕ್ಷಿಸಿ ಯೇಲಂ ಯಿಸ್ತಿಹಾರುದಾಖ್ಲೆ ಮಾಡಿರುವುದರಿಂದ ಅ ಕುರಿತು ಯೇಲಂಯಿಸ್ತಿಹಾರಿನ ಶರ್ತ ನಿರ್ಣಯಿಸುವರೇ ತಾರೀಕು 16–4 1956ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಸ್ಕಿಗೆ ಇಟ್ಟಿರುತ್ತದೆ. ಅ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಮೇಲ್ಕಂಡ ಕೋರ್ಟಲ್ಲಿ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಉಜ್ರು ಶಿವಾಯಿ ಏಕಪಕ್ಷವಾಗಿ ತೀರ್ಮಾನಿಸಲಾದೀತು. ಎಂಬನಂಗ್ತ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenoi.
Pleader for Petitioner.
Coondapoor 28–3—56

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಆನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.



ನೀಲಗಿರಿ ಹಾಗು ಕಾಸರಗೋಡಿನ ಜನಮತ

ಮದರಾಸಿನ ಶಾಸನಾಂಗದ ಕಾರ್ಯಕಲಾಪ

ಪ್ರದೇಶಗಳು" ಎಂಬುದಾಗಿ ಕರ್ನಾಟಕದ ಮೈಸೂರೇತರ ಭಾಗಗಳ ಕುರಿತು ಮೈಸೂರಿನ ಧುರೀಣರು ಆಡುತ್ತಿರುವ ಮಾತನ್ನು ಉದ್ದೇಶಿಸಿ ಹೇಳಿದ ಮಾತೆಂದು ಅರ್ಥಮಾಡಿಕೊಳ್ಳಬಹುದು.

ಮಾತುಕತೆಗಾಗಿ ಸಲಹೆ

ಉಡುಪಿಯ ಶ್ರೀ. ಟಿ. ಅನಂತ ಪೈಗಳು (ಕಾಂಗ್ರೆಸಿನ ಸದಸ್ಯ) ಚರ್ಚೆಯಲ್ಲಿ ಭಾಗವಹಿಸುತ್ತಾ ಹೆಚ್ಚಿನ ಜನರನ್ನು ಮಸೂದೆಯಲ್ಲಿ ಹೇಳಲಾದ ಗಡಿ ಹೊಂದಿಕೆಯ ವಿಷಯವು ಚಿಂತೆಗೀಡು ಮಾಡಿದೆ ಎಂದರು. ಕೇಂದ್ರ ಸರಕಾರವು ಗಡಿ ಪ್ರದೇಶದಲ್ಲಿರುವ ಜನರ ಮನೋಭಾವನೆಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳುವುದು ಅವಶ್ಯವೆನ್ನುತ್ತಾ ಶ್ರೀ. ಪೈಗಳು, ವಾದಗ್ರಸ್ತ ಪ್ರದೇಶಗಳಿಗೆ ಸಂಬಂಧಿಸಿದ ಶಾಸನಾಂಗದ ಹಾಗು ಸಂಸತ್ತಿನ ಪ್ರತಿನಿಧಿಗಳು ಒಟ್ಟಿಗೆ ಸೇರಿ, ಪರ್ಯಾಲೋಚನೆ ನಡೆಸಿ, ತೃಪ್ತಿಕರ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಸಲಹೆ ಮಾಡಿದರು. ಸಂಸತ್ತಿನ ಮುಂದೆ ಮಸೂದೆಯು ಚರ್ಚೆಗೆ ಬರುವ ವರೆಗಿನ ಅವಧಿಯನ್ನು ಗಡಿ ಪ್ರದೇಶದ ಜನತೆಯ ನಿಜಾಭಿಪ್ರಾಯವನ್ನು ತಿಳಿದುಕೊಂಡು ಗಡಿಪ್ರದೇಶದ ಭವಿಷ್ಯವನ್ನು ತದನುಗುಣವಾಗಿ ತೀರ್ಮಾನಿಸುವುದಕ್ಕೆ ಅವಶ್ಯವಾದ ವಾತಾವರಣವೇರ್ಪಡಿಸಲು ಉಪಯೋಗಿಸಿಕೊಳ್ಳಬೇಕೆಂದು ಅವರು ಹೇಳಿದರು. ಅನ್ಯಥಾ ಈ ಪ್ರದೇಶಗಳು ರಾಜಕೀಯರಂಗದ ಶರೀರದಲ್ಲಿ ಬೊಕ್ಕೆಯಾಗಿಯೇ ಉಳಿಯುವ ಭಯವಿದೆ ಎಂದವರು ಎಚ್ಚರಿಸಿದರು. ಪ್ರಜಾಸಮಾಜವಾದಿ ಸದಸ್ಯ ಶ್ರೀ ಎಸ್. ಎಸ್. ಕೊಳ್ಳೆಬೈಲರು ಕರ್ನಾಟಕ ಏಕೀಕರಣವಾಗುತ್ತಿರುವುದನ್ನು ಸ್ವಾಗತಿಸಿ ಮಾತನಾಡಿದರು. ಇನ್ನೊಬ್ಬ ಪ್ರಜಾಸಮಾಜವಾದಿ ಸದಸ್ಯ ಶ್ರೀ ಎಂ. ನಾರಾಯಣ ಕುರುಪರು ಕಾಸರಗೋಡು ತಾಲೂಕು ಕೇರಳದ ಅವಿಭಾಜ್ಯ ಅಂಗವೆಂದೂ ಅದರ ಉತ್ತರ ಭಾಗವನ್ನು ಕರ್ನಾಟಕಕ್ಕೆ ಸೇರಿಸಬೇಕೆನ್ನುವ ವಿಚಾರ ತೀರ ಅಸಂಗತವಾದುದೆಂದೂ ಪ್ರತಿಪಾದಿಸಿದರು.

"ವಿಜಯ ನಗರ"

ವಿಧೇಯಕದ ಒಂದೊಂದೇ ಸೂತ್ರವನ್ನೆತ್ತಿ ಚರ್ಚಿಸುವ ಸಮಯದಲ್ಲಿ ಶ್ರೀ ಕೊಳ್ಳೆಬೈಲರು ಒಂದು ತಿದ್ದುಪಡಿಯನ್ನು ಮಂಡಿಸಿ ನೂತನ ಮೈಸೂರು ರಾಜ್ಯವನ್ನು "ವಿಜಯ ನಗರ ರಾಜ್ಯ" ವೆಂದು ಹೆಸರಿಸಬೇಕಾಗಿ ಸೂಚಿಸಿದರು; ಅಲ್ಲದೆ ಕೊಯಮುತ್ತೂರು ಜಿಲ್ಲೆಯ ತಳವಾಡಿ ಫಿರ್ಕವನ್ನೂ ಇಡೀ ನೀಲಗಿರಿ ಜಿಲ್ಲೆಯನ್ನೂ ಅನಂತಪುರ ಜಿಲ್ಲೆಯ ಮಡಕಸಿರ ತಾಲೂಕನ್ನೂ ಹಿಂದಿನ ಬಳ್ಳಾರಿ ಜಿಲ್ಲೆಯಿಂದ ಆಂಧ್ರಕ್ಕೆ ಕೊಡಲಾಗಿರುವ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳನ್ನೂ ನೂತನ ಕರ್ನಾಟಕ ರಾಜ್ಯದಲ್ಲಿ ಸೇರಿಸಬೇಕೆಂದು ಸಹ ಸಲಹೆಯಿತ್ತರು. ತಿರುವಾಂಕೂರು—ಕೊಚ್ಚಿ ಮತ್ತು ಹೈದರಾಬಾದು ಸಂಸ್ಥಾನಗಳು ಹೊಸ ರಚನೆಯಲ್ಲಿ ನಿರ್ನಾಮಗೊಂಡು ನೂತನ ನಾಮದಿಂದ ಅಸ್ತಿತ್ವಕ್ಕೆ ಬರುವಾಗ ರಾಜ್ಯಶಾಹಿಯ ಅವಶೇಷನಾದ ಮೈಸೂರು ಎಂಬ ಹೆಸರನ್ನು ಉಳಿಸುವುದರಲ್ಲಿ ಅರ್ಥವಿಲ್ಲವೆಂದವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು. ಕೊಯಮುತ್ತೂರು ಜಿಲ್ಲೆಯ ತಳವಾಡಿ ಫಿರ್ಕದ ಜನರಲ್ಲಿ ಅಧಿಕಾಂಶ ಕನ್ನಡಿಗರಿದ್ದಾರೆಂದೂ ಅವರು ಹೇಳಿದರು. ಶ್ರೀ ಎಸ್. ಸಿ. ವಿರೂಪಾಕ್ಷಯ್ಯನೆಂಬ ಕೊಳ್ಳೇಗಾಲದ ಕಾಂಗ್ರೆಸ್ ಸದಸ್ಯರು ಕೊಳ್ಳೇಗಾಲ ತಾಲೂಕನ್ನು ಮೈಸೂರು ರಾಜ್ಯದಲ್ಲಿ ಸೇರಿಸುವ ಮಸೂದೆಯ ಅಂಶವನ್ನು ಸ್ವಾಗತಿಸುತ್ತಾ ಅದನ್ನು ಮಂಡ್ಯ ಜಿಲ್ಲೆಯಲ್ಲಿ ಸೇರಿಸಲಾಗದೆಂದೂ ಮೈಸೂರು ಜಿಲ್ಲೆಯಲ್ಲಿ ಅದರ ಸೇರ್ಪಡೆಯಾಗಬೇಕೆಂದೂ ಹೇಳುವ ತಿದ್ದುಪಡಿ ಮಂಡಿಸಿದರು. ಮಂಡ್ಯದೊಡನಲ್ಲ, ಮೈಸೂರಿನೊಡನೆ ಈ ತಾಲೂಕಿನ ಜನರಿಗೆ ಹೆಚ್ಚಿನ ಸಂಪರ್ಕವಿದೆ ಎಂದವರು ಕಾರಣ ಕೊಟ್ಟರು.

ನೀಲಗಿರಿಯ ಜನಮತ

ನೀಲಗಿರಿ ಜಿಲ್ಲೆಯ ಸ್ವತಂತ್ರ ಸದಸ್ಯರಾದ ಶ್ರೀ ಅರಿಗೌಡರು ಒಂದು ತಿದ್ದುಪಡಿಯನ್ನು ಮಂಡಿಸಿ ಗುಡಲೂರು ತಾಲೂಕಿನ ಒಂದಂಶವನ್ನು ಬಿಟ್ಟುಳಿದ ನೀಲಗಿರಿ ಜಿಲ್ಲೆಯನ್ನು ಸೂಚಿತ ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದು ಹೇಳಿದರು. ಈ ಜಿಲ್ಲೆಯು ಹಿಂದೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿತ್ತೆಂದೂ ಟಿಪ್ಪು ಸುಲ್ತಾನನ ಕಾಲದಲ್ಲಿ ಸಹ ಈ ಜಿಲ್ಲೆಯ ಜನರು ತೆರಿಗೆಯನ್ನು ಮೈಸೂರಿಗೆ ಕೊಡುತ್ತಿದ್ದರೆಂದೂ ಅವರು ನೆನಪಿಗೆ ತಂದುಕೊಟ್ಟರು. ಆಡಳಿತ ದೃಷ್ಟಿಯಿಂದ ಇದನ್ನು ಮೈಸೂರಿಗೆ ಸೇರಿಸುವುದೇ ಬಹಳ ಹಿತಕರವೆಂದವರು ಅಭಿಪ್ರಾಯಪಟ್ಟರು. ಹೀಗೆ ಮಾಡದೆ ಮದ್ರಾಸು ರಾಜ್ಯದಲ್ಲಿಯೇ ಈ ಪ್ರದೇಶವನ್ನು ಉಳಿಸಿದರೆ, ಇಲ್ಲಿಯ ಜನರು ರಾಜಕೀಯ ದೌರ್ಬಲ್ಯಕ್ಕೆ ಗುರಿಯಾಗಬೇಕಾಗಿ ಬರುವುದೆಂದೂ ಅವರ ಸ್ವರಕ್ಕೆ ಶಾಸನಾಂಗದಲ್ಲಾಗಲೀ ಸರಕಾರದಲ್ಲಾಗಲೀ ಬೆಲೆ ಬಾರದೆ ಹೋಗುವುದೆಂದೂ ಅವರು ಭಯವನ್ನು ವ್ಯಕ್ತಪಡಿಸಿದರು. ತಿದ್ದುಪಡಿಗಳ ಬಗ್ಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಕಮ್ಯುನಿಸ್ಟರ (ಹಾಗು ಪ್ರತಿಪಕ್ಷದ) ಧುರೀಣ ಶ್ರೀ. ಪಿ. ರಾಮಮೂರ್ತಿಯವರು ಮೈಸೂರು ರಾಜ್ಯದ ಹೆಸರನ್ನು ಬದಲಾಯಿಸುವ ವಿಷಯವು ಈ ಶಾಸನಾಂಗದ ಕೆಲಸವಲ್ಲ ಬರಲಾಗದೆಂದೂ ಅದು ನೂತನ ಮೈಸೂರು ರಾಜ್ಯದ ಜನತೆಗೆ ಸೇರಿದ ವಿಷಯವೆಂದೂ ಹೇಳಿದರು. ಶ್ರೀ. ಕೆ. ವಿನಾಯಕಂ ಎಂಬ ಇನ್ನೊಬ್ಬ ಸದಸ್ಯರು ನೂತನ ಮೈಸೂರು ರಾಜ್ಯವನ್ನು ವಿಜಯ ನಗರದ ಹೆಸರಿನಿಂದ ಕರೆಯುವುದು ಸರಿಯಲ್ಲವೆಂದೂ ವಿಜಯ ನಗರದ ಸಂಸ್ಕೃತಿಯು ತೆಲುಗರದೆಂದೂ ಹೇಳಿದರು.

ಮಂತ್ರಿಗಳ ಉತ್ತರ

ಸಚಿವ ಶ್ರೀ. ಸುಬ್ರಹ್ಮಣ್ಯಮರು ಉತ್ತರ ಕೊಡುತ್ತಾ ಕೊಳ್ಳೇಗಾಲ ತಾಲೂಕನ್ನು ಮೈಸೂರು ಜಿಲ್ಲೆಯಲ್ಲಿ ಸೇರಿಸುವ ವಿಷಯವನ್ನು ರಾಜ್ಯಗಳ ಪುನಾರಚನೆಯ ಬಳಿಕ ಹೊಸ ಮೈಸೂರು ರಾಜ್ಯದ ಸರಕಾರಕ್ಕೆ ನಿವೇದಿಸಿಕೊಳ್ಳುವುದೇ ಸೂಕ್ತವೆಂದು ಸಲಹೆ ನೀಡಿದರು. ತಳವಾಡಿ ಫಿರ್ಕದ ಕುರಿತು ಹೇಳುತ್ತಾ ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ವಿಚಾರಿಸುವಾಗ ತಾಲೂಕನ್ನು ಕನಿಷ್ಠ ಘಟಕವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೆಂದೂ ಫಿರ್ಕಾ ಅಥವಾ ಗ್ರಾಮದ ಪರಿಗಣನೆ ಮಾಡಿಲ್ಲವೆಂದೂ ಹೇಳಿದರು. ಮಡಕಸಿರ, ಆಲೂರು, ಆದವಾನಿ ಮತ್ತು ರಾಯದುರ್ಗ ತಾಲೂಕುಗಳ ಭವಿಷ್ಯದ ವಿಷಯದಲ್ಲಿ ಈ ಶಾಸನಾಂಗವು ಏನನ್ನಾದರೂ ಹೇಳ ಹೋಗುವುದು ಪ್ರಶಸ್ತವಲ್ಲವೆಂದು ಅವರು ತಿಳಿಸಿದರು. ನೀಲಗಿರಿ ಜಿಲ್ಲೆಯ ಬಗ್ಗೆ ಮಾತನಾಡುತ್ತಾ ೧೯೫೧ನೇ ವರ್ಷದ ಜನಗಣನೆಯ ಅಂಕಸಂಖ್ಯೆಗಳಿಗನುಸಾರ ನೀಲಗಿರಿ ಜಿಲ್ಲೆಯಲ್ಲಿ ೧೯೫೦೦೦ ತಮಿಳರು, ೩೬೦೦೦ ತೆಲುಗರು, ೩೩೦೦೦ ಮಲೆಯಾಳಿಗಳು ಮತ್ತು ೩೬೦೦೦ ಕನ್ನಡಿಗರಿದ್ದಾರೆಂದು ಉಲ್ಲೇಖಿಸಿ, ಹೀಗೆ ಕನ್ನಡಿಗರು ಅಲ್ಪಸಂಖ್ಯಾಕರಿದ್ದೂ ಶ್ರೀ ಗೌಡರು ತಮ್ಮ ವಾದ ಮುಂದಿಟ್ಟುದಕ್ಕೆ ಆಶ್ಚರ್ಯಪಟ್ಟರು. ಶ್ರೀ ಗೌಡರು ಮಂತ್ರಿಗಳು ಕೊಟ್ಟ ಜನಗಣನೆಯ ವಿವರದ ಪ್ರಾಮಾಣಿಕತೆಯನ್ನಾಗ ಪ್ರಶ್ನಿಸಿ, ನೀಲಗಿರಿ ಜಿಲ್ಲೆಯಲ್ಲಿ ಬಡಗರ ಸಂಖ್ಯೆಯೇ ೬೯ ಸಾವಿರ ಇದೆ ಎಂದರು. ಗುಡ್ಡಬೆಟ್ಟಗಳಲ್ಲಿ ವಾಸಿಸುವ ಪ್ರಾಚೀನ ಬುಡಕಟ್ಟಿನ ೨೦೦೦೦ ಜನರನ್ನು ಸಹ ಲೆಕ್ಕಕ್ಕೆ ಹಿಡಿಯಕೊಳ್ಳದೆ, ಸರಕಾರವು ಇತರರ ವರ್ಗಕ್ಕೆ ಅವರ ಸಂಖ್ಯೆಯನ್ನು ಸೇರಿಸಿದೆ ಎಂದು ದೂರಿದರು. ನೀಲಗಿರಿ ಜಿಲ್ಲೆಯು ಮೈಸೂರಿಗೆ ಸೇರಬೇಕೆಂದು ಎಲ್ಲ ಪಂಚಾಯತುಗಳೂ ಕಾಂಗ್ರೆಸು ಸಮಿತಿಗಳೂ ಮಾಡಿರುವ ನಿರ್ಣಯದ ಕಡೆಗೆ ಅವರು ಸರಕಾರದ ಗಮನ ಸೆಳೆದರು. ಆದರೆ ಸಭೆಯಲ್ಲಿ ಯಾರೊಬ್ಬರ ತಿದ್ದುಪಡಿಯೂ ಸ್ವೀಕಾರವಾಗಲಿಲ್ಲ— ಸರಕಾರದ ಪರವಾಗಿ ಮಂಡಿಸಿದ ಕೆಲವು ತಿದ್ದುಪಡಿಗಳಷ್ಟೇ ಮನ್ನಣೆ ಪಡೆದವು: ಈ ತಿದ್ದುಪಡಿಗಳು ಕಾಸರಗೋಡು ಮುಂತಾದ ಜ್ವಲಂತ ಪ್ರಶ್ನೆಗಳಿಗೇನೂ ಸಂಬಂಧಿಸಿಲ್ಲ.

ಕಂಡು ಕಲ್ಲಿದ್ದಲಿನ ಭಂಡಾರ



ದಕ್ಷಿಣ ಅರ್ಕಾಟು ಜಿಲ್ಲೆಯ ನೈವೇಲಿಯಲ್ಲಿ ಕಂದು ಕಲ್ಲಿದ್ದಲಿನ ಅಪಾರ ಭಂಡಾರವಿರುವುದನ್ನು ಕಂಡುಕೊಂಡ ಸರಕಾರದವರು ಅಲ್ಲೀಗ ಗಣಿಗಳನ್ನು ಅಗೆಸಿ ಈ ಭಂಡಾರವನ್ನು ಸದುಪಯೋಗಪಡಿಸುವ ನಿರ್ಧಾರಕ್ಕೆ ಬಂದಿದ್ದಾರೆ. ಪ್ರಬಲ ಶಕ್ತಿಸಂಪನ್ನ ಪಂಪುಗಳನ್ನು ಉಪಯೋಗಿಸಿ ಅಲ್ಲಿ ಕೆಲಸ ನಡೆಯುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು. ಕಲ್ಲಿದ್ದಲಿನ ಈ ಕೆಳ ಜಾತಿಯ ಉಪಯುಕ್ತತೆಯ ಬಗ್ಗೆ ಜರ್ಮನಿಯ ತಜ್ಞರ ಅಭಿಪ್ರಾಯವನ್ನು ಕೇಳಲಾಗುತ್ತದೆ. ಸಾಮಾನ್ಯ ಅಭಿಪ್ರಾಯದಂತೆ ಕಲ್ಲಿದ್ದಲಿನ ಭಂಡಾರವಿಲ್ಲವೆ ವಿದ್ಯುತ್ತನ್ನೆ ಶಕ್ತಿಯ ಸ್ರೋತವೆಂದು ಆಶ್ರಯಿಸಬೇಕಾಗಿ ಬಂದಿರುವ ತಮಿಳು ನಾಡಿಗೆ ನೈವೇಲಿಯ ಈ ಗಣಿಯು ನಿಸರ್ಗದ ವರ ದಾನವಾಗಿರುತ್ತದೆ. ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಅಭಿವೃದ್ಧಿಗೊಳ್ಳುವ ಕೆಲಸಗಳಲ್ಲಿ ಈ ಗಣಿಯು ಉಲ್ಲೇಖನೀಯ.

NAVAYUGA

Popular Kannada Weekly

Founder:—

Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೫-೪-'೫೬	೩೦

"ಆನೆಯ ನಡಿಗೆ"

ಮದ್ರಾಸಿನ ಶಾಸನಾಂಗದಲ್ಲಿ ಮಾತನಾಡುತ್ತಾ, ಮಂತ್ರಿ ಶ್ರೀ. ಸುಬ್ರಹ್ಮಣ್ಯಮರು ಭೂಸುಧಾರಣೆಯ ಕುರಿತು ಸದಸ್ಯರಿಂದ ಬಂದ ಟೀಕೆಗಳನ್ನು ಹೀಗೆ ಉತ್ತರಿಸಿದರೆಂದು ತಿಳಿದು ಬರುತ್ತದೆ: "ಸರಕಾರವು ಈ ವಿಷಯಕ್ಕೆ ತುಂಬ ಮಹತ್ವ ಕೊಡುತ್ತದೆ. ನಾವು ಒಂದು ವೇಳೆ ಮಹತ್ವ ಕೊಡದಿದ್ದರೂ ಯೋಜನಾ ಆಯೋಗ, ಅಲ್ಲದೆ, ಕಾಂಗ್ರೆಸು ಪಕ್ಷ ವಿದೆ—ಇವು ಭೂಸುಧಾರಣೆಯ ಕುರಿತು ಈಗಾಗಲೇ ನಮಗೆ ಆದೇಶವಿತ್ತಿವೆ. ಆದುದರಿಂದ ಯೋಜನಾ ಆಯೋಗ ಮತ್ತು ಕಾಂಗ್ರೆಸು ಪಕ್ಷ ಇವುಗಳ ಪರವಾಗಿ ಘೋಷಿಸಲಾಗಿರುವ ಧೋರಣೆಯನ್ನು ಹಿನ್ನೆಲೆಗೆ ಸರಿಸುವ ಪ್ರಶ್ನೆಯೇ ಇಲ್ಲ. ಆದರೆ ಕೃಷಿಯ ಉತ್ಪಾದನೆಯು ಕಡಿಮೆಯಾಗ ಕೂಡದು; ಕೃಷಿ ಕ್ಷೇತ್ರದಲ್ಲಿ ಗೊಂದಲದ ಭಾವನೆಗೂ ಎಡೆಸಿಗಬಾರದು—ಇದಕ್ಕಾಗಿಯೇ ಭೂಸುಧಾರಣೆಯ ಬೇರೆ ಬೇರೆ ಕ್ರಮಗಳನ್ನು ತೆಗೆದುಕೊಳ್ಳುವಾಗ ಸರಕಾರವು ತುಸು ನಿಧಾನವಾಗಿ ಹೆಜ್ಜೆಯಿಡುತ್ತಿದೆ ನಾವೀಗ ಒಂದು ಕಾರ್ಯಕ್ರಮವನ್ನು ಸಿದ್ಧಪಡಿಸಿದ್ದೇವೆ; ಮತ್ತಿದನ್ನು ಕಾರ್ಯಾಚರಣೆಗಿಳಿಸುವುದರಲ್ಲಿ ಆಸಕ್ತರಾಗಿದ್ದೇವೆ. ಭೂಸುಧಾರಣೆಯ ವಿಷಯದಲ್ಲಿ ನಾವು ತಣ್ಣಗಾಗಿದ್ದೇವೆ ಎಂದು ಸದಸ್ಯರಾರೂ ತಿಳಿದುಕೊಳ್ಳಬೇಕಾಗಿಲ್ಲ—ನಾವು ಭೂಸುಧಾರಣೆಯನ್ನು ಯಶಸ್ವಿಗೊಳಿಸಲು ಇಚ್ಛಿಸುತ್ತಿದ್ದೇವೆ. ಅವಸರದಿಂದ ಭೂಸುಧಾರಣೆಯನ್ನು ತಂದು ಇಡೀ ಕೆಲಸವನ್ನೆ ಕೆಡಿಸಿದರೆಂದು ಯಾರೊಬ್ಬರೂ ದೂರಲು ಅವಕಾಶವಿಲ್ಲದಂತೆ ಸರಕಾರ ತನ್ನ ನಿರ್ಧಾರವನ್ನು ಜ್ಯಾರಿಗೆ ತರುತ್ತದೆ." ಮಂತ್ರಿಗಳು ಈಗ ಪರಿಶೀಲಕ ಸಮಿತಿಯ ಮುಂದಿರುವ ನ್ಯಾಯವಾದ ಗೇಣಿ ನಿರ್ಣಯ ಮಸೂದೆಯ ಸಂಬಂಧದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳು ತಮ್ಮ ದೃಷ್ಟಿಕೋಣವನ್ನು ಸಮಿತಿಗೆ ನಿವೇದಿಸಬಹುದೆಂದು ಹೇಳುತ್ತಾ "ಈ ಮಸೂದೆಯನ್ನು ದಕ್ಷಿಣ ಕನ್ನಡಕ್ಕೆ ಅನ್ವಯಿಸಬೇಕೆಂಬುದೇ ಸದಸ್ಯರ ನಿರ್ಧಾರವಾದರೆ ಸರಕಾರವು ಅದನ್ನು ಒಪ್ಪಿಕೊಳ್ಳುತ್ತದೆ" ಎಂದರು. ರಾಜ್ಯಗಳ ಪುನಾರಚನೆಯ ಬಳಿಕ ನೂತನ ಮೈಸೂರು ರಾಜ್ಯದ ಶಾಸನಾಂಗಕ್ಕೆ ದಕ್ಷಿಣ ಕನ್ನಡ ಜಿಲ್ಲೆಗಾಗಿ ಭೂಸುಧಾರಣೆಯ ಕ್ರಮಗಳನ್ನು ಕೂಡಲೇ ಪರ್ಯಾಲೋಚನೆಗೆ ತೆಗೆದುಕೊಳ್ಳಲು ಸಾಧ್ಯವಾಗಲಾರದಾದ ಕಾರಣ ಈ ಜಿಲ್ಲೆಯ ಒಕ್ಕಲುಗಳಿಗೆ ಈಗಾಗಲೇ ಕೊಡಲಾದ ರಕ್ಷಣೆಯ ಶಾಸನಗಳ ಅವಧಿಯನ್ನು ಹೆಚ್ಚಿಸಬೇಕೆಂದ ಶ್ರೀಗಳಾದ ಟಿ. ಎ. ಪೈ ಮತ್ತು ವೈ. ಮಂಜಯ್ಯ ಶೆಟ್ಟರ ಅಭಿಪ್ರಾಯಕ್ಕೆ ಸರಕಾರವು ಒಪ್ಪುತ್ತದೆ ಎಂದೂ ಮಂತ್ರಿ ಶ್ರೀ ಸುಬ್ರಹ್ಮಣ್ಯರು ಹೇಳಿದರು. ಸಚಿವರು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ವಿಶೇಷ ಔದಾರ್ಯವನ್ನು ತೋರಿಸುತ್ತಿರುವುದು ಸ್ತುತ್ಯ—ಇದಕ್ಕಾಗಿ ನಾವು ಅಭಿನಂದಿಸುತ್ತೇವೆ; ಮತ್ತು ನಮ್ಮ ಪ್ರತಿನಿಧಿಗಳೆಲ್ಲರೂ ನ್ಯಾಯವಾದ ಗೇಣಿ ನಿರ್ಣಯ, ಶಾಸನವು ಈ ಜಿಲ್ಲೆಗೆ ಸಹ ಅನ್ವಯವಾಗುವಂತೆ ಒತ್ತಾಯಿಸಬೇಕೆಂದೂ ಕೇಳಿಕೊಳ್ಳುತ್ತೇವೆ. ಪರಿಶೀಲಕ ಸಮಿತಿಯ ಮುಂದೆ ಒಕ್ಕಲು ಮತ್ತು ಧನಿಗಳಲ್ಲಿ ಉತ್ಪನ್ನವನ್ನು ಹಂಚುವ ಬಗ್ಗೆ ಮಸೂದೆಯಲ್ಲಿ ಕೇಳಲಾದ ೬೦ : ೪೦ ಪ್ರಮಾಣದ ಸೂತ್ರಕ್ಕೆ ಬದಲು ೫೦ : ೫೦ ಅಥವಾ ೪೦ : ೬೦ ಪ್ರಮಾಣದ ಸೂತ್ರವನ್ನು ಅನುಸರಿಸಬೇಕೆಂದು ಧನಿಗಳ ಕಡೆಯಿಂದ ಒತ್ತಾಯಿಸುವ ಮನವಿಗಳ ರಾಶಿ ಬಿದ್ದಿದೆ ಎಂದು ತಿಳಿದು ಬರುತ್ತದೆ. ಇದು ಭೂಸುಧಾರಣೆಯ ಸಂಬಂಧದಲ್ಲಿ ಎತ್ತಿ ಹಿಡಿಯಲಾಗುತ್ತಿರುವ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಒಕ್ಕಲುಗಳಿಗೆ ತೀರ ಘಾತಕವಾದ ವಿಷಯವಾಗಿದೆ. ಪರಿಶೀಲಕ ಸಮಿತಿಯಲ್ಲಿರುವ ನಮ್ಮ ಜಿಲ್ಲೆಯ ಪ್ರತಿನಿಧಿಗಳೂ ಜಿಲ್ಲೆಯ ಇತರ ಪ್ರತಿನಿಧಿಗಳೂ ಪರಿಶೀಲಕ ಸಮಿತಿಯು ಸರಕಾರವು ಗೊತ್ತುಪಡಿಸಿದ, ಉತ್ಪನ್ನವನ್ನು ಹಂಚಿಕೊಳ್ಳುವ, ಪ್ರಮಾಣವನ್ನು ಬದಲಾಯಿಸುವಾಗ ಒಕ್ಕಲಿಗೆ ಅನ್ಯಾಯವಾಗದಂತೆ, ಅವನ ಆಪ್ತೋತ್ತರಗಳ ಮೇಲೆ ಕಣ್ಣೀರು ಬೀಳದಂತೆ, ನೋಡಿಕೊಳ್ಳಲು ತಪ್ಪಬಾರದು. ಸರಕಾರದ ಪರವಾಗಿ ಯೋಜನಾ ಆಯೋಗ ಮತ್ತು ಕಾಂಗ್ರೆಸು ಪಕ್ಷದ ಆದೇಶಗಳಿಗೆ ಮನ್ನಣೆ ಕೊಡುವ "ಭರವಸೆ" ಬಂದಿದೆ—ಯೋಜನಾ ಆಯೋಗವು ಎರಡನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಭೂಸುಧಾರಣೆಯ ವಿಷಯವನ್ನು ಪ್ರಸ್ತಾಪಿಸುತ್ತಾ, ಮೊದಲನೇ ಯೋಜನೆಯ ಅವಧಿಯಲ್ಲಿ ಏನೇನೂ ತೃಪ್ತಿಕರವಾದ ಕೆಲಸವನ್ನು ಭೂಸುಧಾರಣೆಯ ಮಟ್ಟಿಗೆ ಮಾಡದಿರುವ ರಾಜ್ಯಗಳನ್ನು ದೂರಿದೆ. ಇಂಥ ದೂರಿಗೆ ಪಾತ್ರವಾಗುವ ರಾಜ್ಯಗಳಲ್ಲಿ ಮದ್ರಾಸು ಸೇರುತ್ತದೆ. ಮದ್ಯಪಾನ ಪ್ರತಿಬಂಧದಂಥ ವಿಷಯಗಳಲ್ಲಿ ದೇಶಕ್ಕೆ ಮಾರ್ಗದರ್ಶನ ಮಾಡಿರುವ ಈ ರಾಜ್ಯವು ಭೂಸುಧಾರಣೆಯ ಮಟ್ಟಿಗೆ ಬಹಳ ಹಿಂದುಳಿರುವುದು ತುಂಬ ವಿಷಾದಕರವಾದ ವಿಷಯ. ಭೂಸುಧಾರಣೆಯ ಮಟ್ಟಿಗೆ ಅಕ್ಷಮ್ಯವೆನಿಸುವಷ್ಟು ನಿಧಾನ ಗತಿಯಿಂದ ಈ ರಾಜ್ಯ ಸಾಗಿದೆ. ಸುದೀರ್ಘ ಪರ್ಯಾಲೋಚನೆ ನಡೆಸುವ ನೆಪದಲ್ಲಿ ಕಳೆದ ಮಹಾ ಚುನಾವಣೆಯ ಬಳಿಕ ಅಧಿಕಾರವಹಿಸಿದ ನಾಲ್ಕು ವರ್ಷಗಳ ಅವಧಿಯು ಸಂದುಹೋಗಿದೆ—ಅದಕ್ಕೆ ಮುಂಚೆ ಸಹ ಕಾಂಗ್ರೆಸು ಪಕ್ಷವೇ ಮದ್ರಾಸಿನಲ್ಲಿ ಅಧಿಕಾರದಲ್ಲಿತ್ತೆಂಬುದನ್ನು ನೆನೆದರೆ ೧೯೪೬ನೇ ಇಸವಿಯಲ್ಲಿ ಪ್ರಕಾಶಮರ ನೇತೃತ್ವದಲ್ಲಿ ಕಾಂಗ್ರೆಸು ಅಧಿಕಾರವಹಿಸಿದಂದಿನಿಂದ ಇಷ್ಟರವರೆಗಿನ ಹತ್ತು ವರ್ಷಗಳಲ್ಲಿ "ಧನಿಗಳು ಹೇರಿದ ಗೇಣಿಯನ್ನು ಕೊಡುತ್ತಾ ಬಂದುದಕ್ಕೆ ರಸೀದಿಯನ್ನು ಪಡೆದ ಸಾಗುವಳಿದಾರ ಒಕ್ಕಲನ್ನು ಎಬ್ಬಿಸುವಂತಿಲ್ಲ" ಎಂಬ ತುಣುಕು ಸುಧಾರಣೆಯೊಂದನ್ನು ಬಿಟ್ಟರೆ ಬೇರೇನು ಕಾರ್ಯಕ್ರಮವೂ ಕೃಷಿ ಕ್ಷೇತ್ರದಲ್ಲಿ ದುಡಿಯುವವರ ಹಕ್ಕು ಬಾಧ್ಯತೆಗಳನ್ನು ಮನ್ನಿಸುವ ಮಟ್ಟಿಗೆ ನಡೆದಿಲ್ಲ. ಕಾಂಗ್ರೆಸು ಪಕ್ಷದ ಘೋಷಿತ ಧೋರಣೆಗಾಗಲೀ ಯೋಜನಾ ಆಯೋಗವು ನೀಡಿರುವ ಮಾರ್ಗದರ್ಶನಕ್ಕಾಗಲೀ ಮದ್ರಾಸು ಸರಕಾರದ "ಆನೆಯ ನಡಿಗೆ" ಯಂಥ ವರ್ತನೆಯು ಹೇಳಿಸಿದುದಲ್ಲ. ಮಕ್ಕಳ ಕತೆಯಲ್ಲಿ ಬರುವ ಮೊಲ ನಿದ್ರಿಸುತ್ತಿದ್ದಾಗ ಆಮೆ ಮುಂದರಿದು ಗೆದ್ದಿತು—ಭೂಸುಧಾರಣೆಯ ಮಟ್ಟಿಗೆ ಯಾವುದೇ ಮೊಲವೂ ನಿದ್ರಿಸಲಾರದು: ನಿದ್ರಿಸುತ್ತಿಲ್ಲ. ಸಾಗುವಳಿದಾರರ ಒಕ್ಕಲುಗಳು ಸಮಾಜವಾದಿ ಸಮಾಜ ರಚನೆ ಮಾಡುವೆನೆಂಬ ಕಾಂಗ್ರೆಸಿನ ಧೋರಣೆಯಲ್ಲಿ ಈಗ ಎಷ್ಟು ಹೆಚ್ಚು ವಿಶ್ವಾಸವಿಟ್ಟಿರುವುದೆಂದರೆ ಓಡುವ ಮೊಲವು ನಿದ್ರಿಸುವ ಚಪಲಕ್ಕೆ ಬಲಿ ಬೀಳುವುದು ಕಲ್ಪನಾತೀತವಾದ ವಿಷಯ. ಸ್ವಲ್ಪ ಮಟ್ಟಿನ ಆಲಸ್ಯವನ್ನು ತೋರಿಸಿದರೂ ಚಬುಕಿನಿಂದ ಹೊಡೆದೇಳಿಸುವಂತೆ ಪ್ರಜಾಪ್ರಭುತ್ವದ ಮಹತ್ವದ ಅಂಗವೆನಿಸಿದ ಚುನಾವಣೆಯ ಕಾರ್ಯಕ್ರಮವಿದೆ. ವಾತಾವರಣವು ಭೂಸುಧಾರಣೆಯ ವೇಗ ತೀವ್ರ ಹೆಚ್ಚಿಕೊಳ್ಳಬೇಕಾದುದನ್ನು ಒತ್ತಾಯಿಸುತ್ತಿರುವಾಗಲೂ ಮದ್ರಾಸು ಸರಕಾರವು ಸಮಿತಿಯ ಮೇಲೆ ಸಮಿತಿಗಳು ಮಾಡುತ್ತಾ ಬಂದಿರುವ ವರದಿಗಳನ್ನು ಒತ್ತಟ್ಟಿಗಿಟ್ಟು ಅವಸರ ಬೇಡವೆಂಬ ನೆಪದಲ್ಲಿ ಆಕ್ಷೇಪಣೀಯವಾದ ಮೆಲುಗತಿಯನ್ನು ತೋರಿಸುತ್ತಿರುವುದು ಯೋಗ್ಯವಲ್ಲ. ಹೈದರಾಬಾದು, ಮುಂಬಯಿಯಂಥ ಬೇರೆ ರಾಜ್ಯಗಳಿಗೆ ಸಾಧ್ಯವಾದುದು ಮದ್ರಾಸಿಗೇಕೆ ಸಾಧ್ಯವಾಗುತ್ತಿಲ್ಲವೆಂಬುದು ತಿಳಿಯದು. ಆದುದರಿಂದ ನ್ಯಾಯವಾದ ಗೇಣಿ ನಿರ್ಣಯ ಶಾಸನವಾದರೂ ಕೂಡಲೇ ಜ್ಯಾರಿಗೆ ಬರಬೇಕು; ಬರದಿದ್ದರೆ, ಈ ಸರಕಾರವು ಆಡಳಿತದಲ್ಲಿದ್ದು ಸಾಗುವಳಿದಾರರಿಗಾಗಿ ಏನೂ ಕೆಲಸ ಮಾಡಿದಂತಾಗಲಿಲ್ಲ. ಗೇಣಿ ನಿರ್ಣಯ ಕ್ರಮವಾದರೂ ಯೋಜನಾ ಆಯೋಗವು ಎರಡನೇ ಯೋಜನೆಯ ಕರಡಿನಲ್ಲಿ ವಿವರಿಸಿದ ವಿಷಯಗಳಿಗನುಸಾರವಾಗಿರಬೇಕೆಂದು ನಾವಿಲ್ಲಿ ಹೇಳಬಿಚ್ಛಿಸುತ್ತೇವೆ ಇದರ ಪ್ರಕಾರ ಒಕ್ಕಲಿಗೆ ಉತ್ಪನ್ನದ ಐದರಲ್ಲಿ ನಾಲ್ಕಂಶ ಹಾಗು ಧನಿಗೆ ಐದರಲ್ಲಿ ಒಂದಂಶ ಸಲ್ಲುತ್ತದೆ. ದೇಶದ ಧುರೀಣರ ಮನೋಭಾವವು ಮೇಲಿನಂತಿರುವಾಗ ಮದ್ರಾಸು ಶಾಸನಾಂಗದ ಪರಿಶೀಲಕ ಸಮಿತಿಯು ಈ ತತ್ವವನ್ನೆ ಮೂಲೆಗುಂಪು ಮಾಡುವ ರೀತಿಯಲ್ಲಿ ವರ್ತಿಸಿದರೆ ಜನರಿಗೆ ಅದು ಸಹನೆಯಾಗದು. ಮಾಡುವ ಮಾರ್ಪಾಟುಗಳು ಒಕ್ಕಲುಗಳ ಪಕ್ಷಪಾತಿಯಾಗಿದ್ದು ಅವರ ಕ್ಷೇಮಾಭ್ಯುದಯವನ್ನೆ ಎತ್ತಿ ಹಿಡಿಯಬೇಕು—ಇದು ನಮ್ಮ ಖಚಿತ ಅಭಿಪ್ರಾಯ.

ತಿದ್ದುಪಡಿ

ಕಳೆದಸಂಚಿಕೆಯ 4 ನೆ ಪುಟದಲ್ಲಿ ಪ್ರಕಟವಾದ Notice of the special resolution for voluntary winding up of Veena Printers & Publishers Ltd. ನ ಕೊನೆಗೆ his remuneration being Rs. 5% ಎಂದು ತಪ್ಪಾಗಿ ಬಿದ್ದುದನ್ನು Rs. 50/- ಎಂದು ತಿದ್ದಿ ಓದಬೇಕಾಗಿದೆ. [ಸಂ. ನ.]

ಸಿಂಡಿಕೇಟಿನ ೩೦ನೇ ವರ್ಷ

ಜಿಲ್ಲೆಯ ಮೂರು ಶೆಡ್ಯೂಲ್ಡ್ ಬ್ಯಾಂಕುಗಳ ಸಾಲಿನಲ್ಲಿ ವ್ಯವಹಾರ ಪ್ರಮಾಣದ ಮೇಲಿನಿಂದ ದ್ವಿತೀಯ ಸ್ಥಾನವನ್ನು ಪಡೆಯುವ ಉಡುಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್-ಇದರ ೧೯೫೫ನೇ ವರ್ಷಕ್ಕೆ ಅನ್ವಯಿಸುವ ೩೦ನೇ ಆಯ—ವ್ಯಯ ಪತ್ರದ ವಿಮರ್ಶೆಯನ್ನು ಮಾಡಲು ನಮಗೆ ಬಹಳ ಸಂತೋಷ ವೆನಿಸುತ್ತದೆ.

ಈ ವಿಮರ್ಶೆಯು ಬಹಳ ಸಮಾಧಾನಕರವಾದ ಸಂಗತಿಗಳನ್ನು ಮನವರಿಕೆಮಾಡಿಕೊಡುತ್ತದೆ. ಬ್ಯಾಂಕಿನಲ್ಲಿ ಠೇವಣಾತಿಗಳ ಮೊತ್ತವು ಪ್ರತಿ ವರ್ಷ ಏರುತ್ತಾ ಹೋಗುತ್ತಿದ್ದು ೧೯೫೫ನೇ ವರ್ಷಾಂತ್ಯದಲ್ಲಿ ಅದು ೬,೬೭,೦೩,೪೮೭ ರೂಪಾಯಿಗಳಾಗಿದೆ. ತೆತ್ತು ಬಂದ ಪಾಲುಭಂಡವಾಳವು ೨,೬೭,೫೫೬೮ ರೂಪಾಯಿಗಳಾಗಿದ್ದರೆ; ಕ್ಷೇಮ ನಿಧಿಯು ೧೫ ಲಕ್ಷ ರೂಪಾಯಿಗಳಷ್ಟಿದೆ. ಠೇವಣಾತಿಯ ಲೆಕ್ಕಗಳನ್ನು ತೊಡಗಿದವರ ಸಂಖ್ಯೆಯು ಗಣನೀಯವಾಗಿ ಹೆಚ್ಚಿರುವುದನ್ನು ಕಂಡರೆ ಜನರಲ್ಲಿ ಬ್ಯಾಂಕಿಂಗ್ ಪ್ರವೃತ್ತಿಯನ್ನು ಪೋಷಿಸಲು ಈ ಸಂಸ್ಥೆಯು ಮಾಡಿರುವ ಪ್ರಯತ್ನದ ಸಾರ್ಥಕತೆಯು ತಿಳಿವಳಿಕೆಯಾಗದಿರದು. ದೊಡ್ಡ ಲೆಕ್ಕಗಳನ್ನಿಟ್ಟು ಕೊಂಡವರನ್ನು ನಡೆಸಿಕೊಂಡಷ್ಟೆ, ಚೆನ್ನಾದ ರೀತಿಯಲ್ಲಿ ಸಣ್ಣ ಲೆಕ್ಕಗಳನ್ನು ತೆರೆದವರ ವ್ಯವಹಾರವನ್ನೂ ನಡೆಸಿಕೊಂಡು ಪ್ರೀತಿ ಪ್ರದರ್ಶಿಸಿದ ದೆಸೆಯಿಂದಲೇ ಬ್ಯಾಂಕಿಗೆ ಈ ರೀತಿ ಜನಾದರಣೆಗಳನ್ನು ಗಳಿಸಲು ಸಾಧ್ಯವಾಗಿದೆ ಎನ್ನಬಹುದು. ಬ್ಯಾಂಕು ಕೇವಲ ಸಾಲರೂಪದಲ್ಲಿ ೩,೯೩,೬೬,೮೩೪ ರೂಪಾಯಿ; ವಾಣಿಜ್ಯ ವ್ಯವಹಾರಗಳಿಗೆ ಸಾಲವಾಗಿ ೧,೦೦,೯೬,೧೪೦ ರೂಪಾಯಿ ಮತ್ತು ಕೃಷಿ ವ್ಯಾಪಾರಗಳಿಗೆ ಸಾಲ ರೂಪದಲ್ಲಿ ೫೮,೫೮,೬೨೫ ರೂಪಾಯಿಗಳನ್ನು ೧೯೫೫ನೇ ವರ್ಷದಲ್ಲಿ ಒದಗಿಸಿರುತ್ತದೆ. ಸಾಲ ರೂಪದಲ್ಲಿಯೆ ಆಗಲಿ ಹಣದ ನಿರಂತರ ಪೂರೈಕೆಯೇ ಉದ್ಯಮ ಮತ್ತು ಕೃಷಿಗಳ ವಿಸ್ತರಣೆಗೂ ವಾಣಿಜ್ಯ ಚಟುವಟಿಕೆಗಳಿಗೂ ಬೆಂಗೋಲು—ಎಂದ ಮೇಲೆ ಶುಕ್ಲ ಪಕ್ಷದ ಚಂದ್ರನಂತೆ ದಿನ ದಿನಕ್ಕೂ ಪ್ರವರ್ಧಮಾನಕ್ಕೆ ಬರುತ್ತಾ ಹೆಚ್ಚಿನ ಸೇವೆಯನ್ನು ಈ ಬ್ಯಾಂಕು ಸಲ್ಲಿಸುತ್ತಿರುವುದು ಶ್ಲಾಘನೀಯ ವಿಷಯ. ಬ್ಯಾಂಕಿಗೆ ವರದಿ ವರ್ಷದಲ್ಲಿ ೩೮,೫೫,೮೬೭ ರೂಪಾಯಿಗಳ ಒಟ್ಟು ಆದಾಯವೂ ೫,೮೬,೮೯೧ ರೂಪಾಯಿಗಳ ನಿಕ್ಕಿ ಆದಾಯವೂ ಬಂದಿದೆ. ನಿಕ್ಕಿ ಆದಾಯದ ಆಧಾರದ ಮೇಲೆ ಹಂಚಲಾದ ಲಾಭಾಂಶವು ಉತ್ತಮ ಮಟ್ಟದಲ್ಲಿದೆ. ನೌಕರರಿಗೂ ಲಾಭಾಂಶ ಹಂಚಲು ಬ್ಯಾಂಕಿನ ನಿರ್ಧಾರವಾಗಿದೆ. ಹೀಗೆ ಬ್ಯಾಂಕಿನ ಏಳಿಗೆಗೆ ಶ್ರಮಿಸುತ್ತಿರುವ ಜನರಲ್ ಮೆನೇಜರ್ ಶ್ರೀ. ಟಿ. ಎ. ಪೈ ಹಾಗು ಮೆನೇಜಿಂಗ್ ಡೈರೆಕ್ಟರ್ ಡಾ. ಟಿ. ಎಂ. ಎ. ಪೈಗಳ ಕರ್ತವ್ಯ ದಕ್ಷತೆಯನ್ನು ಕೊಂಡಾಡಿ ಹೃತ್ಪೂರ್ವಕ ಧನ್ಯವಾದವನ್ನು ಸಾರ್ವಜನಿಕರ ಪರವಾಗಿ ಅರ್ಪಿಸಲು ನಾವು ಆನಂದಿಸುತ್ತೇವೆ.

ಕಾಶ್ಮೀರ ಸಮಸ್ಯೆಯ ಇತ್ಯರ್ಥ

ಜನಮತಗಣನೆಯ ಕುರಿತು ಭಾರತದ ನಿಲುವು

ಹೊಸ ದಿಲ್ಲಿಯಲ್ಲಿ ಪತ್ರಿಕೋದ್ಯೋಗಿಗಳ ಮುಂದೆ ಮಾತನಾಡುತ್ತಾ ಕಾಶ್ಮೀರದ ಕುರಿತು ಭಾರತ ಸರಕಾರದ ನಿಲುವು ಏನೆಂದು ನೆಹರು ವಿವರಿಸಿ ಹೇಳಿದ್ದಾರೆ. ಪಾಕಿಸ್ತಾನದ ಪತ್ರಿಕೋದ್ಯೋಗಿಯೊಬ್ಬರು "ನೀವು ಕಾಶ್ಮೀರದಲ್ಲಿ ಜನಮತಗಣನೆ ನಡೆಸಲು ಇಚ್ಛಿಸುತ್ತಿಲ್ಲವೆಂದು ಊಹಿಸಲಾಗಿದೆ. ಇದು ಸರಿಯೆ?" ಎಂದು ನೆಹರುರವರನ್ನು ಪ್ರಶ್ನಿಸಿದರು. ಅದಕ್ಕೆ ಉತ್ತರ ನೀಡುತ್ತಾ ಪ್ರಧಾನಿಗಳು "ಹೆಚ್ಚು ಕಡಿಮೆ ಹಾಗೆಯೇ ಭಾವಿಸಬಹುದು." ಎಂದು ಉತ್ತರಕೊಡುತ್ತಾ ತಮ್ಮ ವಿವರಣೆಯನ್ನು ಹೀಗೆ ನೀಡಿದರು—"ನಾವು ಜನಮತಗಣನೆಯ ವಿಷಯವನ್ನು ಪಾಕಿಸ್ತಾನದೊಡನೆ ಚರ್ಚಿಸಿ ತೀರ್ಮಾನಿಸಲು ಕಳೆದ ಏಳೆಂಟು ವರ್ಷಗಳಿಂದ ಬಿಡದೆ ಪ್ರಯತ್ನ ನಡೆಸಿದ್ದೇವೆ; ಆದರೆ ಜನಮತಗಣನೆಗೆ ಪೂರ್ವಭಾವಿಯಾಗಿ ನೆರವೇರಬೇಕಿದ್ದ ಯಾವುದೇ ಕೆಲಸ ಇಷ್ಟರವರೆಗೆ ಆಗಿಲ್ಲ. ಈ ನಡುವೆ ಸೈನ್ಯ ಹಾಯುವೇ ಮುಂತಾದ ಬೇರೆ ಮಹತ್ವದ ಸಂಗತಿಗಳು ನಡೆದಿವೆ. ಇವು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತವೆ. ಇಂಥ ಪರಿಸ್ಥಿತಿಯಲ್ಲಿ ನಾನು ಚರ್ಚೆಯನ್ನು ಮುಂದರಿಸಲು ಹಿಂಜರಿಯುತ್ತಿದ್ದೇನೆಂದು ತಿಳಿದುಕೊಳ್ಳಬೇಕಿಲ್ಲ. ಆದರೂ ವ್ಯಾವಹಾರಿಕ ಕ್ಷೇತ್ರದಲ್ಲಿ ಜಾಣನಾಗಿ ವರ್ತಿಸುವುದಿದ್ದರೆ ಇಂಥ ಚರ್ಚೆ ಕುರುಡು ಗೋಷ್ಠಿಯಾಗುತ್ತದೆ. ಆದುದರಿಂದ ಈಗಿನ ಪರಿಸ್ಥಿತಿಗಳ ಮೇಲಿಂದ ಒಂದು ಒಪ್ಪಂದಕ್ಕೆ ಬರಲು ನಾವು ಪ್ರಯತ್ನಪಡಬೇಕೆಂದು ನನ್ನ ಅಭಿಪ್ರಾಯ. ಸದ್ಯಕ್ಕೆ ಕಾಶ್ಮೀರದ ಭಾರತೀಯ ಭಾಗದಲ್ಲಿ ಘಟನೆಯನ್ನು ಪೂರ್ಣಗೊಳಿಸುವ ಕೆಲಸ ನಡೆದಿದೆ; ಮತ್ತು ನಿಕಟ ಭವಿಷ್ಯದಲ್ಲಿ ಅಲ್ಲಿ ಹೊಸ ಘಟನೆಯನುಸಾರವಾಗಿ ಚುನಾವಣೆಗಳು ನಡೆಯುವೆ. ಈ ವಾಸ್ತವಾಂಶಗಳನ್ನು ಮರೆಯಲಾಗದು."

ಆರೋಪಗಳ ನಿರಾಕರಣೆ

ಪ್ರಧಾನ ಮಂತ್ರಿಗಳು ಪ್ರಧಾನಿ ಮಹಮ್ಮದಾಲಿ ಮತ್ತಿತರ ಪಾಕಿಸ್ತಾನಿ ಮುಖಂಡರು ಹೇಳುವ ಮಾತೆಲ್ಲವೂ ಸುಳ್ಳಿನ ಕಂತೆ ಎಂದು ಪುನಃ ಸಾರಿದರು. "ಇದನ್ನು ನಾನು ಸಂಪೂರ್ಣ ಹೊಣೆ ಅರಿತು ಹೇಳುತ್ತಿದ್ದೇನೆ" ಎಂದು ನೆಹರು ಕೊಟ್ಟರು. ಕಾಶ್ಮೀರ ಸಮಸ್ಯೆಯ ಮೂಲವನ್ನು ಇನ್ನೊಮ್ಮೆ ವಿವರಿಸಿ ನೆಹರುಗಳು "ನಾವು ಒಂದರ ಹಿಂದೊಂದರಂತೆ ಕೆಲವು ವರ್ಷಗಳನ್ನು ಕಾಶ್ಮೀರ ಸಮಸ್ಯೆಯ ಸಮಾಧಾನಕರ ಪರಿಹಾರದ ನಿರೀಕ್ಷೆಯಲ್ಲಿ ಕಳೆದೆವು. ಪಾಕಿಸ್ತಾನದೊಡನೆ ಸ್ನೇಹ ಸಂಬಂಧವಿರಿಸಿಕೊಳ್ಳುವ ಉತ್ಕಟೇಚ್ಛೆಯಿಂದ ಹಾಗೆ ಮಾಡಿದೆವು. ಆದರೆ ಈ ಅನಿಶ್ಚಿತ ಪರಿಸ್ಥಿತಿಯು ಕೊನೆಯ ವರೆಗೆ ಮುಂದರಿಯುವಂತಿರಲಿಲ್ಲ. ಕಾಶ್ಮೀರದ ಜನರ ಜೀವನ ಸಮೃದ್ಧಿಯಾಗುವಂತೆ ವ್ಯವಸ್ಥೆ ಅಗತ್ಯವಾಯಿತು" ಎಂದು ತಿಳಿಸಿದರು. ಇದಕ್ಕಾಗಿಯೇ ಘಟನಾ ಸಮಿತಿಯು ರಚನೆಯಾಯಿತೆಂದು ಈ ಘಟನಾ ಸಮಿತಿಯು ಭಾರತದೊಡನೆ ಕಾಶ್ಮೀರದ ಸೇರ್ಪಡೆಯನ್ನು ಅನುಮೋದಿಸಿತೆಂದೂ ಹೇಳಿದರು. ಈ ವ್ಯಾವಹಾರಿಕ ಹಾಗು ಘಟನಾತ್ಮಕ ಸಂಗತಿಗಳನ್ನು ರಶಿಯದ ಪ್ರಧಾನಿಗಳೂ ಕ್ರುಶ್ಚೇವರೂ ಅನುಮೋದಿಸಿದುದರಿಂದ ನಮಗೆ ಹರ್ಷವಾಗಿದೆ ಎಂದರು. ಇದು ಸರಿಯಾದ ನಿಲುವು ಎನ್ನುತ್ತಾ ಕಾಶ್ಮೀರವು ಕಾನೂನು, ಘಟನೆ ಮತ್ತು ವಾಸ್ತವಾಂಶಗಳೆಂಬ ಮೂರೂ ದೃಷ್ಟಿಯಿಂದ ಭಾರತದ ಅವಿಭಾಜ್ಯ ಅಂಗ ಎಂದರು. ಕಾನೂನಿಗನುಸಾರವಾಗಿ ಪಾಕಿಸ್ತಾನವು ಆಕ್ರಮಣಗೈದ ರಾಷ್ಟ್ರ ಎಂಬುದನ್ನು ಅವರು ಈ ಸಂದರ್ಭದಲ್ಲಿ ಪುನಃ ನೆನಪಿಸಿದರು. ಪಾಕಿಸ್ತಾನದ ಸೈನ್ಯವು ಪಾಕಿಸ್ತಾನಿ ಆಕ್ರಮಿತ ಕಾಶ್ಮೀರದಿಂದ ಹೊರ ಹೋದಷ್ಟಕ್ಕೆ ಜನಮತಗಣನೆಯನ್ನು ಕೂಡಲೇ ನಡೆಸುವುದು ಸಾಧ್ಯವಾಗಲಿಕ್ಕಿಲ್ಲವೆಂದೂ ರಾಜಕೀಯ ಸಂಗತಿಗಳೊಡನೆ ಪಾಕಿಸ್ತಾನದ ಸೈನ್ಯಶಕ್ತಿ ಹೆಚ್ಚಿಕೊಂಡು ಕಾಶ್ಮೀರದ ಮೇಲೆ ಸಂಭಾವಿತ ಆಕ್ರಮಣವು ಪ್ರಬಲವಾಗುವ ವಿಷಯ ಈಗ ಪ್ರಾಮುಖ್ಯತೆ ಪಡೆದಿದೆಯೆಂದೂ ಇದು ತೀವ್ರ ವ್ಯತ್ಯಾಸಗಳನ್ನು ಮಾಡುತ್ತಿದೆಯೆಂದೂ ನೆಹರು ಸ್ಪಷ್ಟಪಡಿಸಿದರು.

ಪಾಕಿಸ್ತಾನಕ್ಕೆ ಎಚ್ಚರಿಕೆ

ಪಾಕಿಸ್ತಾನದ ವರಿಷ್ಠರು ಭಾರತಕ್ಕೆ ಕೊನೆಯ ಎಚ್ಚರಿಕೆಯನ್ನಿತ್ತು ಕಾಶ್ಮೀರ ಪ್ರಶ್ನೆಯನ್ನು ಪುನಃ ಭದ್ರತಾಮಂಡಳಿಕ್ಕೊಯ್ಯುವರೆಂದು ಕರಾಚಿಯ ವಿದಿತ ವರ್ಗಗಳು ಹೇಳುತ್ತವೆ ಅಲ್ಲದೆ, ಮುಂದಿನ ವಾರ ನಡೆಯಲಿರುವ ಬಗ್ದಾದ್ ಸೈನಿಕ ಒಪ್ಪಂದ ರಾಷ್ಟ್ರಗಳ ಸಭೆಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಪಾಕಿಸ್ತಾನ ಎತ್ತುವುದೆಂದೂ ಹೇಳಲಾಗಿದೆ. ಅಮೇರಿಕದ ಸೈನ್ಯ ಸಹಾಯ ಹಾಗು ಇತರ ಸೈನಿಕ ಒಪ್ಪಂದಗಳ ಬೆಂಬಲದಿಂದ ಸೊಕ್ಕಿದ ಪಾಕಿಸ್ತಾನವು ಭಾರತದ ಮೇಲೆ ನಂಜುಕಾರುತ್ತಿದೆ; ಅಲ್ಲಿಯ ಪತ್ರಿಕೆಗಳು ವಿಷಪೂರಿತ ಅಪಪ್ರಚಾರವನ್ನೇ ಭಾರತದ ವಿಷಯದಲ್ಲಿ ನಡೆಸುತ್ತಿವೆ; ಅಜ್ಞ ಜನರಿದಕ್ಕೆ ಬಲಿಯಾಗುತ್ತಿದ್ದಾರೆ. ಪಾಕಿಸ್ತಾನಿ ಆಕ್ರಮಿತ ಕಾಶ್ಮೀರದ ಗಿಲ್ಗಿತ್ ಪ್ರದೇಶದಲ್ಲಿ ಸುಸಜ್ಜಿತ ಸೈನ್ಯ ಕೇಂದ್ರವನ್ನು ನೆಲೆಗೊಳಿಸಲಾಗುತ್ತಿದೆಯೆಂದೂ ಪಾಕಿಸ್ತಾನಿ ಸೇನೆಗಳು ಸಾಮಾನ್ಯವಾಗಿ ಭಾರತದ ಗಡಿಗೆ ಹತ್ತಿರದಲ್ಲಿಯೆ ತಳವೂರುತ್ತಿವೆಯೆಂದೂ ಕಂದಕಗಳನ್ನು ಅಗೆದು ಆಕಸ್ಮಿಕ ಆಕ್ರಮಣಕ್ಕೆ ಸಜ್ಜುಗೊಂಡು ಅವು ನಿಂತಿವೆಯೆಂದೂ ಹೇಳಲಾಗುತ್ತದೆ. ಇದನ್ನೆಲ್ಲ ಕೇಳಿದ ಗೃಹಮಂತ್ರಿ ಪಂಡಿತ ಪಂತರು "ಭಾರತದ ಮೇಲೆ ಯಾರಾದರೂ ದುಷ್ಟ ಹೇತುವಿನಿಂದ ಕಣ್ಣು ಹಾಕಿದರೆ ಅಂಥ ಕಣ್ಣನ್ನು ಕಳೆದುಕೊಳ್ಳಬೇಕಾದೀತು" ಎಂದು ಎಚ್ಚರವಿತ್ತಿದ್ದಾರೆ. ರಕ್ಷಣಾ ಮಂತ್ರಿ ಡಾ. ಕಟಜೂರವರು ಕಾಶ್ಮೀರವು ಭಾರತದೊಡನೆ ಸೇರ್ಪಡೆ ಹೊಂದಿದೆ ಎಂಬ ಅಂಶವನ್ನು ಪುನರುಚ್ಚರಿಸುತ್ತಾ "ಯಾರೇ ಆಗಲಿ, ಕಾಶ್ಮೀರದ ಯಾವುದೇ ಭೂಭಾಗವನ್ನು ಆಕ್ರಮಿಸಿದರೆ ಅದನ್ನು ನಾವು ಭಾರತದ ಮೇಲಾದ ಆಕ್ರಮಣವೆಂದೇ ಭಾವಿಸಿ ನಮ್ಮೆಲ್ಲ ಶಕ್ತಿಯನ್ನು ಪಯೋಗಿಸಿ ಪ್ರತಿಭಟಿಸಿ ತೀರುತ್ತೇವೆ" ಎಂದಿದ್ದಾರೆ. ಭಾರತೀಯರು ಹೆದರಬೇಕಾಗಿಲ್ಲವೆಂದೂ ಸರಕಾರವು ಜಾಗರೂಕವಿದೆ ಎಂದೂ ಅವರ ಅಭಯ.



ಡಾ|| ಕಟಜು

ಮಾನ್ಯ ಮಂತ್ರಿ ದಾತಾರರ ಆಗಮನ

ಕೇಂದ್ರದ ಗೃಹಶಾಖೆಯ ಮಂತ್ರಿಗಳಾದ ಶ್ರೀ ಬಿ. ಎನ್. ದಾತಾರರು ತಾ. 1ರಲ್ಲಿ ಬೆಳಿಗ್ಗೆ ಬೊಂಬಾಯಿಯಿಂದ ವಿಮಾನದಲ್ಲಿ ಬಂದೊಡನೆ ಬಜ್ಪೆ ವಿಮಾನ ನಿಲ್ದಾಣದಲ್ಲಿ ಅವರನ್ನು ಕೊಡಗಿನ ಚೀಫ್ ಕಮಿಶನರ್ ಶ್ರೀ ಟಿ. ಜಿ. ಎನ್. ಅಯ್ಯರ್, ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ವೆಸ್ಟರ್ನ್ ರೇಂಜಿನ ಪೋಲೀಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಎ. ನಾರಾಯಣ ಪೈ, ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟ್ ಶ್ರೀ ಎನ್. ಕೃಷ್ಣಸ್ವಾಮಿ, ಡಾ. ಟಿ. ಎಮ್. ಎ. ಪೈ, ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಡಾ. ಯು. ಪಿ. ಮಲ್ಯ, ಶ್ರೀ ಕೆ. ಆರ್. ಆಚಾರ್, ಜೇಮ್ಸ್ ಪಿಂಟೋ, ಶ್ರೀ ಕೆ. ಕೆ. ಶೆಟ್ಟಿ, ಟಿ. ರಮೇಶ ಪೈ, ಮೊದಲಾದವರು ಸ್ವಾಗತಿಸಿದರು.

ನಗರಸಭೆಯ ಮಾನಪತ್ರ— ಬಜ್ಪೆ ವಿಮಾನ ನಿಲ್ದಾಣದಿಂದ ಮಂತ್ರಿ ಬಿ. ಎನ್. ದಾತಾರರು ನೆಟ್ಟಗೆ ಉಡುಪಿಗೆ ಆಗಮಿಸಿ ಶ್ರೀ ಕೃಷ್ಣ ದರ್ಶನ ಮತ್ತು ಮುತ್ತಿಗೆ ಸಾಗಿದ ಹಿರಿಯ ಸ್ವಾಮಿಗಳವರ ಆಶೀರ್ವಾದ ಪಡೆದರು. ನಂತರ ಪರ್ಯಾಯ ಅಧಮಾರು ಮಠದ ಹಾಗೂ ಪೇಜಾವರ ಮಠದ ಸ್ವಾಮಿಯವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಮಧ್ಯಾಹ್ನ ಅಧಮಾರು ಮಠದಲ್ಲಿ ವಿಶ್ರಮಿಸಿ ಬಳಿಕ ಮಣಿಪಾಲಕ್ಕೆ ಹೋಗಿ ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನಂತರ ಉಡುಪಿಗೆ ಮರಳಿಬಂದು ಮುನಿಸಿಪಲ್ ಮಹಾತ್ಮಾಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ನಗರಸಭೆಯ ಮಾನಪತ್ರ ಸ್ವೀಕರಿಸಿದರು. ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳು ಮಾನ್ಯಮಂತ್ರಿಗಳಿಗೆ ಸ್ವಾಗತಬಯಸಿ ಮಾನಪತ್ರವನ್ನು ಓದಿ ಒಪ್ಪಿಸಿದರು.

ಮಂತ್ರಿಗಳು ಉತ್ತರವೀಯುತ್ತಾ, ಪ್ರಥಮ ಉಡುಪಿಯ ಧಾರ್ಮಿಕ ಹಾಗೂ ಶೈಕ್ಷಣಿಕ ಮಹಾತ್ಮೆಯನ್ನು ಪ್ರಸ್ತಾಪಿಸಿದರು. ಪರವೂರುಗಳಿಂದ ಬರುವ ಯಾತ್ರಿಕರ ಸೌಕರ್ಯಗಳಿಗಾಗಿ ನಗರಸಭೆಯು ಮಾಡಿದ ಕಾರ್ಯಗಳನ್ನು ತಿಳಿಸಿದರು. ಕರ್ನಾಟಕ ರಾಜ್ಯನಿರ್ಮಾಣವು ಇನ್ನು ಆರೇಳು ತಿಂಗಳಲ್ಲಿ ಆಗಲಿದ್ದು ಆ ಕಾಲದಲ್ಲಿ ಕರ್ನಾಟಕದ ಜನತೆಯು ಒಂದುಗೂಡಿ ರಾಷ್ಟ್ರಕಲ್ಯಾಣ ಕಾರ್ಯದಲ್ಲಿ ಮಹತ್ತರವಾದ ಜವಾಬ್ದಾರಿಯನ್ನು ಹೊರಬೇಕಾಗುವುದು. ಬಡಜನರ ಉದ್ಧಾರ, ಕೊಳೆಗಾರಿನ ಸುಧಾರಣೆ ಮೊದಲಾದ ಜನಹಿತಕಾರ್ಯಗಳನ್ನು ಸಾಧಿಸುವಲ್ಲಿ ಸರ್ವರೂ ವೈಶಾಲ್ಯೆಗಳನ್ನು ಬದಿಗೊತ್ತಿ ರಾಷ್ಟ್ರಸೇವಾಸಕ್ತರಾಗಬೇಕೆಂದರು. ನಗರಸಭೆಯ ಉಪಾಧ್ಯಕ್ಷ ವಕೀಲ್ ಶ್ರೀ ಪಿ. ವಿ. ಆಚಾರ್ಯರು ಧನ್ಯವಾದಗಳಿತ್ತರು.

ತೈಲ ಚಿತ್ರ ಅನಾವರಣ— ನಂತರ ಮಾನ್ಯ ಮಂತ್ರಿಗಳು ಸಂಸ್ಕೃತ ಕಾಲೇಜಿಗೆ ಬಂದು ವೃಂದಾವನಸ್ಥ ಅದಮಾರು ಮಠದ ಶ್ರೀ ವಿಬುಧಪ್ರಿಯ ತೀರ್ಥ ಸ್ವಾಮಿಗಳವರ ತೈಲ ಚಿತ್ರವನ್ನು ಅನಾವರಣಮಾಡಿದರು. ಎಸ್. ಎಮ್. ಎಸ್. ಪಿ. ಸಭೆಯ ಕಡೆಯಿಂದ ಮಾನ್ಯಮಂತ್ರಿಗಳಿಗೆ ಶ್ರೀ ಕಿದಿಯೂರು ಲಕ್ಷ್ಮೀನಾರಾಯಣ ರಾಯರು ಮಾನಪತ್ರ ಅರ್ಪಿಸಿದರು. ಡಾ. ಪಿ. ಜಿ. ಆಚಾರ್ಯರು ವೃಂದಾವನಸ್ಥ ಶ್ರೀ ವಿಬುಧ ಪ್ರಿಯ ತೀರ್ಥರ ಪರಿಚಯ ಮಾಡಿದರು. ಮಂತ್ರಿಗಳು ಮಾತನಾಡುತ್ತಾ, ಸಂಸ್ಕೃತಿ ಮತ್ತು ಸಂಸ್ಕೃತದ ಬೆಳವಣಿಗೆಯು ಸ್ವಾತಂತ್ರ್ಯ ಲಭಿಸಿದ ನಂತರ ಹೇಗೆ ಮುಂದೊತ್ತಿದೆ ಎಂಬುದನ್ನು ವಿವರಿಸಿದರು. ಸರ್ವ ಧರ್ಮಪೀಠಸ್ಥರು ರಾಷ್ಟ್ರಕಲ್ಯಾಣ ದೃಷ್ಟಿಯಿಂದ ಭೇದಭಾವನೆಗಳನ್ನು ಬಿಟ್ಟು ಒಕ್ಕಟ್ಟಿನಿಂದ ಧರ್ಮಪ್ರಚಾರ ಕಾರ್ಯವನ್ನೆಸಗಬೇಕೆಂದು ವಿನಂತಿಸಿದರು.

ಪೇಜಾವರ ಮಠದ ಸ್ವಾಮಿಗಳವರು ಸಂದರ್ಭೋಚಿತ ಮಾತುಗಳನ್ನಾಡಿದ ಬಳಿಕ ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಬಳಿಕ ಮಂತ್ರಿಗಳು ಮಂಗಳೂರಿಗಾಗಿ ಮಡಿಕೇರಿಗೆ ತೆರಳಿ ಅಲ್ಲಿಯ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ತಾ. 3ನೇ ಬೆಳಿಗ್ಗೆ ಮಂಗಳೂರಿಗೆ ಹಿಂತಿರುಗಿ ಜಿಲ್ಲಾ ಕಲೆಕ್ಟರರ ಬಂಗ್ಲೆಯಲ್ಲಿ ಜಿಲ್ಲೆಯ ನಾನಾ ಅಭಿವೃದ್ಧಿ ಯೋಜನಾಧಿಕಾರಿಗಳೊಡನೆ ಅಭಿವೃದ್ಧಿ ಕಾರ್ಯಗಳ ಕುರಿತು ವಿಚಾರವಿನಿಮಯಮಾಡಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಡಾ. ಯು. ಪಿ. ಮಲ್ಯರಿಂದ ಸ್ವಾಗತಿಸಲ್ಪಟ್ಟು ಭಾಷಣವಿತ್ತು, ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಭೋಜನ ತೀರಿಸಿ ಅಪರಾಹ್ನ ಬಜ್ಪೆಗೆ ತೆರಳಿ ವಿಮಾನವೇರಿ ಮುಂಬಾಯಿಗೆ ತೆರಳಿದರು.

ಧರ್ಮಸ್ಥಳ— ಶ್ರೀ ಶೃಂಗೇರಿ ಜಗದ್ಗುರುಗಳಾದ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರು ಕಳೆದ ತಾ. 20ರಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರಕ್ಕೆ ಆಗಮಿಸಿದಾಗ ಶ್ರೀ ರತ್ನವರ್ಮ ಹೆಗ್ಗಡೆಯವರು ರಾಜ ವೈಭವದ ಬಿರುದಾವಳಿಗಳಿಂದ ಸ್ವಾಗತವನ್ನಿತ್ತರು.

ಶ್ರೀ ಧರ್ಮಸ್ಥಳ (ದ. ಕ.) ಕ್ಷೇತ್ರದ ಮಹಾ ಜಾತ್ರೆಯು ತಾ. 12—4—56 ರಿಂದ ತಾ. 20—4—56ರವರೆಗೆ ಜರಗಲಿರುವುದು. 19—4—56ಕ್ಕೆ ಮಹಾರಥೋತ್ಸವ ಜರಗುವುದು.

ಬೊಂಬಾಯಿ— ಬಂಟರ ಯಾನೆ ನಾಡವರ ಸಂಘದ ಸ್ನೇಹಕೂಟ ಸಮಾರಂಭವು ಇದೇ ತಾ 8ರಲ್ಲೂ ವಾರ್ಷಿಕ ಮಹಾಸಭೆಯು ಇದೇ ತಾ 15ರಲ್ಲು ಅಪರಾಹ್ನ 5 ಗಂಟೆಗೆ ಬಾಬುಲ್‌ಗೇಟ್ ಮ್ಯಾಸ್ಕೂಲಿನ ಹಾಲಿನಲ್ಲಿ (ಮೂರನೇ ಮಾಳಿಗೆ, ಗನ್‌ಬೋ ಸ್ಟ್ರೀಟ್, ಫೋರ್ಟ್, ಬೊಂಬಾಯಿ) ಜರಗಲಿರುವುವೆಂದೂ ಸ್ವಜಾತಿ ಬಂಧುಗಳು ಚಿತ್ತೈಸಬೇಕೆಂದೂ ಗೌರವ ಕಾರ್ಯದರ್ಶಿ ಶ್ರೀ ಮೂಲ್ಕಿ ಗಂಗಯ ಶೆಟ್ಟರು ವಿನಂತಿಸುತ್ತಾರೆ.

ದಯಮಾಡಿ ಚಂದಾಹಣವನ್ನು ಕಳುಹಿಸಿಕೊಡಿರಿ.

ಮಂಗಳೂರು

ನಗರಸಭೆಯು— ಕಳೆದ ತಾ. 28ರಲ್ಲಿ ಶ್ರೀ ಪಂಡಿತ ಗಜಾನನ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವೆಬ್‌ಸ್ಟರ್ ಮಾರ್ಕೆಟಿನ ಹರಾಜು ಕುರಿತು ತುಂಬಾ ಚರ್ಚೆಯಾಗಿ ಕೊನೆಗೆ ಅದನ್ನೂ ಬಸ್‌ಸ್ಟೇಂಡಿನ ವಸತಿ ಕೋಣೆಗಳನ್ನೂ ಪೌರಸಭೆಯೇ ನಡೆಸುವುದೆಂದಾಯಿತು. ಬುನಾದಿ ಶಿಕ್ಷಣಾಧಿಕಾರಿಗಳ ಸೂಚನೆಯಂತೆ ನಾಲ್ಕು ಶಾಲೆಗಳನ್ನು ಬುನಾದಿ ಶಾಲೆಗಳಾಗಿ ಮಾರ್ಪಡಿಸಿ ಒಂದೊಂದು ಶಾಲೆಯಿಂದ ಒಬ್ಬೊಬ್ಬ ಉಪಾಧ್ಯಾಯರನ್ನು ಮರುತರಬೇತಿಗೆ ಕಳುಹಿಸುವುದೆಂದು ಗೊತ್ತುವಳಿಯಾಯಿತು. ನಗರ ಸಭೆಯ ಪ್ರತಿನಿಧಿಗಳಾಗಿ ಶ್ರೀಗಳಾದ ರಾಮರಾಯ ಕಿಣಿ ಮತ್ತು ಎಸ್. ಗೋಪಾಲ ಸಾಲೆನ್ನರು ಜಿಲ್ಲಾ ಪುಸ್ತಕ ಭಂಡಾರ ಅಧಿಕಾರಕ್ಕೆ ಚುನಾಯಿಸಲ್ಪಟ್ಟರು.

ನಿಧನ— ಸ್ಥಳೀಯ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದಲ್ಲಿ ಆಶ್ರಮವಾಸಿ ಬಾಲ ಬಾಲಕಿಯರ ಆರೈಕೆ ನೋಡಿಕೊಳ್ಳುತ್ತಿದ್ದ ಶ್ರೀಮತಿ ಸೀತಮ್ಮನವರು ಕಳೆದ ತಾ. 27ರಲ್ಲಿ ಹೃದ್ರೋಗದಿಂದ ವಿಧಿವಶರಾದರೆನ್ನಲು ವಿಷಾದವಾಗುತ್ತದೆ.

ವಾರ್ಷಿಕ ಮಹಾಸಭೆ— ಬೆಸೆಂಟ್ ಬಾಲಿಕಾ ಪಾಠಶಾಲೆಯ ಹಳೆ ವಿದ್ಯಾರ್ಥಿಗಳ ಸಂಘವಾದ ವಸಂತ ಪ್ರೇಮಿ ಮಂಡಲದ ವಾರ್ಷಿಕ ಮಹಾ ಸಭೆಯು ಕಳೆದ ತಾ. 29ರಲ್ಲು ಜರಗಿದಾಗ ಈ ಮಂಡಳಿಯ ಒಂದು ಸಾಂಸ್ಕೃತಿಕ ಶಾಖೆಯನ್ನು ಶ್ರೀ ರಾಮಕೃಷ್ಣ ಮಠದ ಸ್ವಾಮಿ ಆದಿದೇವಾನಂದರು ಉದ್ಘಾಟಿಸಿದರು. ಡಾ. ಎಮ್. ಕೇಶವ ಪೈ, ಡಾ. ಪಿ. ಜಿ. ಗೊಲ್ಲರಕೇರಿ ಮೊದಲಾದವರು ಮಾತನಾಡುತ್ತಾ ಧಾರ್ಮಿಕ ಗ್ರಂಥಗಳ ಅಭ್ಯಾಸದ ಆಗತ್ಯತೆಯನ್ನು ಸೂಚಿಸಿದರು. ಕಾರ್ಯದರ್ಶಿ ಕುಮಾರಿ ಪಿ. ಶೀಲಾ ಶೆಟ್ಟರು ವರದಿಯನ್ನೋದಿದರು. ಹೊಸ ವರ್ಷಕ್ಕೆ ಈಗಿನ ಕಾರ್ಯಕಾರೀ ಸಮಿತಿ ಸದಸ್ಯರನ್ನೆ ಆರಿಸಲಾಯಿತು.

ಡಾ| ನರಸಿಂಹ ಪೈಗಳ ಹಿತೋಪದೇಶ- ಲಂಡನಿನ ಬೆಲ್ಮೆಂಟಿನಲ್ಲಿರುವ ಮುಚ್ಚರ ಆಸ್ಪತ್ರೆಯಲ್ಲಿ ಚಿಕಿತ್ಸಕರಾಗಿರುವ ಮಂಗಳೂರಿನವರಾದ ಡಾ. ನರಸಿಂಹ ಪೈಗಳು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮಂಗಳೂರು ಕ್ಲಿನಿಕ್ ವಿಭಾಗದ ವಿದ್ಯಾರ್ಥಿ ಸಂಘದ ವಾರ್ಷಿಕ ದಿನಾಚರಣೆ ಸಮಾರಂಭದ ಅಧ್ಯಕ್ಷ ಮಾತನಾಡುತ್ತಾ, ವೈದ್ಯವೃತ್ತಿಯು ಪವಿತ್ರವಾದದ್ದು. ವೈದ್ಯಕೀಯ ವೃತ್ತಿಯಲ್ಲಿರುವವರು, ತಮ್ಮ ಜೀವನ ಪರ್ಯಂತ ವಿದ್ಯಾರ್ಥಿಗಳಾಗಿಯೇ ಇರಬೇಕಾಗುವುದು. ವೈದ್ಯನಾದವನು ತನ್ನಲ್ಲಿಗೆ ಚಿಕಿತ್ಸೆಗಾಗಿ ಬರುವ ರೋಗಿಯನ್ನು ಅರ್ಥಮಾಡಿಕೊಂಡು ಆತನ ಮನೋವೇದನೆಯನ್ನು ತಿಳಿದುಕೊಳ್ಳುವ ಶಕ್ತಿಯನ್ನು ಬೆಳೆಸಿಕೊಂಡರೆ ಮಾತ್ರ ತನ್ನ ವೃತ್ತಿಯಲ್ಲಿ ಯಶಸ್ವಿಯಾಗಬಲ್ಲನು. ಈ ಶಕ್ತಿಯನ್ನು ವೈದ್ಯನು ತನ್ನ ವಿದ್ಯಾರ್ಥಿ ದಿಸೆಯಲ್ಲಿಯೇ ಬೆಳೆಸಿಕೊಳ್ಳಬೇಕು. ಇದಕ್ಕೆ ಸಂಯಮನ ಮತ್ತು ಶಿಸ್ತು ಅತೀ ಆಗತ್ಯವೆಂದು ಹೇಳಿದರು. ಸಭಾರಂಭದಲ್ಲಿ ಸಂಘದ ಅಧ್ಯಕ್ಷ ಡಾ. ಶೆಲ್ವಿನ್, ಅವರು ಸ್ವಾಗತ ಮಾತುಗಳನ್ನಾಡಿದರು. ಕಾರ್ಯದರ್ಶಿ ಡಾ. ಕೆ. ಬಿ. ಸಹಾಯ್ ರವರು ವರದಿಯನ್ನೋದಿದರು. ಕಾಲೇಜ್ ಪ್ರಿನ್ಸಿಪಾಲ್ ಡಾ. ಎಮ್. ವಿ. ರಮಣಮೂರ್ತಿಯವರು ಧನ್ಯವಾದಗಳನ್ನಿತ್ತರು. ಬಳಿಕ ಮನರಂಜನ ಕಾರ್ಯಕ್ರಮಗಳಾಗಿ ಸಭಾಂತ್ಯವಾಯಿತು.

ವಿವಾಹ—ಸತ್ಕಾರ:— ಮಂಗಳೂರಿನ ಪ್ರಸಿದ್ಧ ಕಾಗದ ವ್ಯಾಪಾರಿಗಳಾದ ಶ್ರೀನಿವಾಸ ಬ್ರದರ್ಸ್‌ನವರ ಶ್ರೀ ಯು. ಆರ್. ಪೈಗಳ ಪುತ್ರ ಶ್ರೀ ಮೋಹನದಾಸ ಪೈ ಮತ್ತು ಚಿಕ್ಕಮಂಗಳೂರಿನ ಶ್ರೀ ಎಮ್. ಎಮ್. ಕಾಮತರ ಪುತ್ರಿ ಶ್ರೀಮತಿ ಸುಲೋಚನಾ, ಇವರ ವಿವಾಹವು ಕಳೆದ ತಾ 28ರಲ್ಲು ಚಿಕ್ಕಮಂಗಳೂರಲ್ಲಿ ಜರಗಿತು. ಈ ಸಮಾರಂಭದ ಸಲುವಾಗಿ ಶ್ರೀ ಯು. ಆರ್. ಪೈಗಳ ಮನೆಯಲ್ಲಿ ತಾ 1ರಲ್ಲು ಉಪಾಹಾರ ಸತ್ಕಾರಕೂಟವೊಂದು ವೈಭವದಿಂದ ನೆರವೇರಿತು.

ಯಂತ್ರ ಸಜ್ಜಿತ ಮೀನುಗಾರಿಕೆ ಪ್ರದರ್ಶನ— ಮಂಗಳೂರಿನ ಮೀನುಗಾರಿಕೆ ಇಲಾಖೆಯು, ಕೋಲ್ಡ್ ಸ್ಟೋರೇಜ್ ಮತ್ತು ಐಸ್‌ಪ್ಲಾಂಟ್ ನವರ ಆಶ್ರಯದಲ್ಲಿ, ಈಗ ಮಂಗಳೂರಿನ ಕರಾವಳಿಯ ಸಮುದ್ರದಲ್ಲಿ ನಡೆಸಲಾಗುವ ಯಂತ್ರ ಸಜ್ಜಿತ ಮೀನುಗಾರಿಕೆಯ ವಿವಿಧ ಕಾರ್ಯಕಲಾಪಗಳು ತಾ 2ರಲ್ಲಿ ಪ್ರದರ್ಶಿಸಲ್ಪಟ್ಟವು. ಕೋಲ್ಡ್ ಸ್ಟೋರೇಜ್ ಅಧಿಕಾರಿಗಳಾದ ಶ್ರೀ ಎಮ್. ಜಯರಾಜರು ಸ್ವಾಗತಿಸಿ, ಕೋಲ್ಡ್ ಸ್ಟೋರೇಜಿನಲ್ಲಿ ಸಿಗಡಿ ಮೀನನ್ನು ಸಿಪ್ಪೆ ಇತ್ಯಾದಿ ತೆಗೆದು, ಶೀತೀಕರಣ ವಿಧಾನದಿಂದ ಸುರಕ್ಷಿತವಾಗಿರಿಸುವ ವಿಧಾನವನ್ನು ವಿವರಿಸಿದರು. ಕೊನೆಗೆ ಯಂತ್ರಸಜ್ಜಿತ ದೋಣಿಗಳ ಮೂಲಕ ಮೀನು ಹಿಡಿಯುವ ವಿಧಾನವನ್ನು ಈಕ್ಷಿಸಲಾಯಿತು.

ಜಿಲ್ಲಾ ಪ್ರೆಸ್ ಕೆಲಸಗಾರರ ಸಮ್ಮೇಳನವು- ತಾ. 1ರಲ್ಲು ಕೇಂದ್ರ ಮೈದಾನಿನಲ್ಲಿ ಅ. ಭಾ. ಪ್ರೆಸ್ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎ. ಎಸ್. ಕೆ. ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಸಂಘದ ಅಧ್ಯಕ್ಷ ಶ್ರೀ ಪಿ. ಎಮ್. ಎನ್. ಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎ ಶಾಂತಾರಾಮ ಪೈಗಳು ಸಮ್ಮೇಳನವನ್ನು ಉದ್ಘಾಟಿಸಿದರು. ಸಭಾಧ್ಯಕ್ಷರು ಭಾಷಣಮಾಡುತ್ತಾ, ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಮಸ್ಯೆಗಳನ್ನು ವಿವರಿಸಿದರು.

ಪ್ರೆಸ್ ಮಜೂರರ ಸಮಸ್ಯೆಗಳ ಪರಿಶೀಲನೆಗಾಗಿ ಸರಕಾರವು ಒಂದು ಆಯೋಗವನ್ನು ನೇಮಿಸಬೇಕು. ಕಾಸರಗೋಡು ತಾಲೂಕಿನ ಕನ್ನಡ ಭಾಗಗಳನ್ನು ನಿಯೋಜಿತ ಕರ್ನಾಟಕಕ್ಕೆ ಸೇರಿಸಬೇಕು ಎಂಬಿತ್ಯಾದಿ ನಿರ್ಣಯಗಳಾಗಿ, ಶ್ರೀ. ರಾಮಚಂದ್ರ ರಾಯರು ಧನ್ಯವಾದಾರ್ಪಣೆಯೊಂದಿಗೆ ಬಹಿರಂಗ ಅಧಿವೇಶನವು ಕೊನೆಗೊಂಡಿತು.

ಮಂಗಳೂರಿನ ಶಿಷ್ಟಮಂಡಲವು- ಕಳೆದ ತಾ. 27ರಲ್ಲು ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಮ್. ಪೂಣಚ್ಚರನ್ನೂ ತಾ. 28ರಲ್ಲು ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರನ್ನು ತಾ 30ರಲ್ಲು ಮೈಸೂರಿಗೆ ಹೋಗಿ ಅಲ್ಲಿಯ ಪ್ರಾದೇಶಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಸ್. ಚೆನ್ನಯ್ಯನವರನ್ನೂ ಭೇಟಿಯಾಗಿ ಕಾಸರಗೋಡಿನ ಭವಿಷ್ಯದ ಕುರಿತು ವಿಚಾರ ವಿನಿಮಯ ಮಾಡಿದರು. ಉತ್ತರ ಕಾಸರಗೋಡು ದ. ಕ. ಜಿಲ್ಲೆಯಲ್ಲಿ ಉಳಿಯುವ ಹಾಗೆ ಪ್ರಯತ್ನಿಸಲಾಗುವುದೆಂಬ ಆಶ್ವಾಸನೆ ದೊರೆತಿರುವುದಾಗಿ ತಿಳಿದುಬರುತ್ತದೆ.

ಅಲ್ಲದೆ ದ ಕ. ಜಿಲ್ಲೆಗೆ ಜೋಗ್ ವಿದ್ಯುತ್ತನ್ನು ಮುಂದಿನ ಜೂನ್ ತಿಂಗಳ ಅಂತ್ಯದೊಳಗೆ ಒದಗಿಸಲು ಸಾಧ್ಯವಿರುವುದಾಗಿ, ಈ ಶಿಷ್ಟ ಮಂಡಳಿಗೆ ವಿದ್ಯುತ್ ಮಂತ್ರಿ ಶ್ರೀ. ಎಚ್. ಎಮ್. ಚೆನ್ನಬಸಪ್ಪನವರು ತಿಳಿಸಿರುವರಾಗಿ ಹೇಳಲಾಗಿದೆ.

ಮೂಲ್ಕಿ— ಇಲ್ಲಿಯ ಸರಕಾರೀ ಹಾಸ್ಕೂಲಿನ ಶಾಲಾ ಮಕ್ಕಳ ಹಿರಿಯರ ಕೂಟವು ಕಳೆದ ತಾ 26ರಲ್ಲು ಡಾ| ರಾಮಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ವಿಠಲ ಶೆಣೈಯವರು ಶಾಲೆಯ ಅಭಿವೃದ್ಧಿಪರ ಚಟುವಟಿಕೆಗಳನ್ನು ವಿವರಿಸಿ ಮಾತನಾಡಿದರು. ಶ್ರೀಗಳಾದ ಶ್ಯಾಮರಾಯ ಶೆಟ್ಟಿ, ಎಸ್. ಪಿ. ದೇವರಾವ್, ಬಿ. ಭೋಜರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡುತ್ತಾ ಇಂತಹ ಕೂಟಗಳ ಅವಶ್ಯಕತೆಯನ್ನು ವ್ಯಕ್ತಪಡಿಸಿದರು.

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯು ಕಳೆದ ತಾ. 26ರಲ್ಲಿ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶಿರ್ವ ನ್ಯಾರ್ಮ ತೋಡಿಗೊಂದು ಕಾಲುಸಂಕ, ಶಿರ್ವ—ಬಡಗು ಪಂಜಿಮಾರು ತೋಡಿಗೊಂದು ಕಾಲುಸಂಕ, ಶಿರ್ವ ಸೋರ್ಮ ತೋಡಿಗೊಂದು ಕಾಲುಸಂಕ ನಿರ್ಮಿಸುವ ಬಗ್ಗೆ ಹಣ ಮಂಜೂರುಮಾಡಲಾಯಿತು.

ಬೆಳ್ಳಾರೆ— ಜಿಲ್ಲಾ ಲೋಕಲ್ ಲೈಬ್ರರಿ ಅಥಾರಿಟಿಯ ಆಶ್ರಯದಲ್ಲಿ ಈ ಕೇಂದ್ರದಲ್ಲೊಂದು ಪುಸ್ತಕವಿತರಣಾ ಕೇಂದ್ರವು ಕಳೆದ ತಾ. 26ರಲ್ಲಿ ಪಟೇಲ್ ಶ್ರೀ ಬಿ ನಾರಾಯಣ ಶೇಖರ ಅಧ್ಯಕ್ಷತೆಯಲ್ಲಿ ಬೋರ್ಡ್ ಹಾ. ಎ. ಶಾಲೆಯಲ್ಲಿ ಉದ್ಘಾಟಿಸಲ್ಪಟ್ಟಿತು.

ಎರ್ಮಾಳು— ಸ್ಥಳೀಯ ಬೋರ್ಡ್ ಹಾ. ಎ. ಶಾಲೆಯ ನೂತನ ಕಟ್ಟಡದ ಶಂಕುಸ್ಥಾಪನೆಯು ಕಳೆದ ತಾ 26ರಲ್ಲಿ ಡಾ. ನಾಗಪ್ಪ ಆಳ್ವರಿಂದ ನೆರವೇರಿಸಲ್ಪಟ್ಟಿತು.

ಹಾರ್ದಳ್ಳಿ ಮಂಡಳ್ಳಿ- ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 25ರಲ್ಲಿ ಜಿಲ್ಲಾ ಬೋರ್ಡ್ ಮೆಂಬರ್ ಶ್ರೀ. ಎಮ್. ಎಮ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಎಡ್ವಕೇಟ್ ವಿ. ಶ್ರೀನಿವಾಸ ಶೆಟ್ಟಿ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಸೀತಾರಾಮ ರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ, ಮಕ್ಕಳ ಮನರಂಜನ ಕಾರ್ಯಕ್ರಮಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಬೈಲೂರು- ಈ ಕೇಂದ್ರದ ಉಪಾಧ್ಯಾಯರ ಸಂಘದ ದಿನಾಚರಣೆಯು ಕಳೆದ ತಾ. 24ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ವಾರ್ಷಿಕ ವರದಿ ವಾಚನವಾದ ಬಳಿಕ ವಿವಿಧ ಮನರಂಜನ ಕಾರ್ಯಕ್ರಮಗಳಾದುವು. ಕಾರ್ಕಳ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಯು. ಕೃಷ್ಣರಾಯರು ಆಧುನಿಕ ಕಾವ್ಯಗಳನ್ನು ಹಾಡಿದರು. ಕೊನೆಗೆ ಸಭಾಧ್ಯಕ್ಷರು ಜಿಲ್ಲಾ ವಿದ್ಯಾಧಿಕಾರಿಗಳಿಗೆ ಮಾನಪತ್ರ ಅರ್ಪಿಸಿದರು.

ಕಾಸರಗೋಡು ಚಳವಳದ ಅಂಗವಾಗಿ ಡಿ ಮು. ಕೋರ್ಟು, ಸಬ್ ಮೆಜಿಸ್ಟ್ರೇಟ್ ಕೋರ್ಟುಗಳಲ್ಲಿ ಸ್ವಯಂಸೇವಕರು ಸತ್ಯಾಗ್ರಹ ಹೂಡಿದರು. ಅತ್ತತ್ತ ಬೈಲಲ್ಲಿ ತಂತಿ ಕರಿನೆ, ಟೆಲಿಫೋನ್ ಸರಿಗೆಗಳು ತುಂಡಾದ ಕುರಿತು ತನಿಖೆನಡೆಯುತ್ತಿದೆ.

ಅಶ್ವತ್ಥಪುರ— ಶ್ರೀ ಪಿ. ಕೆ. ಮಧ್ವರಾಯ ಬಟ್ಟರು ಕಟ್ಟಿಸಿದ ನೂತನ ಮಂದಿರದಲ್ಲಿ ಶ್ರೀ ಆದ್ಯ ಶಂಕರಾಚಾರ್ಯರ ಅಮೃತಶಿಲಾ ಮೂರ್ತಿ ಪ್ರತಿಷ್ಠಾ ಸಮಾರಂಭವು ತಾ. 29ರಲ್ಲಿ ಶ್ರೀ ಶೃಂಗೇರಿ ಶ್ರೀ ಜಗದ್ಗುರು ಶ್ರೀ ಮದಭಿನವ ವಿದ್ಯಾತೀರ್ಥ ಸ್ವಾಮಿಗಳವರ ಹಸ್ತದಿಂದ ಜರಗಿತು. ಶ್ರೀ ಶ್ರೀಗಳವರು ಶ್ರೀ ಶಂಕರಾಚಾರ್ಯರ ಕುರಿತು ಉಪನ್ಯಾಸಿಸುತ್ತಾ, ಭಕ್ತಿಯೇ ಧರ್ಮ ರಕ್ಷಣೆ ಮಾಡುವುದೆಂದು ಸಂದೇಶವಿತ್ತರು.

ಪ್ರಕಟಣೆ

ಸಂ.1956ನೇ ಇಸ್ವಿ ಮಾರ್ಚ ತಾರೀಖು 8ರಲ್ಲಿ ಉಡುಪಿ ತಾಲೂಕು ನಂಬ್ರ 31ನೇ ಹಿಲಿಯಾಣ ಗ್ರಾಮದ ಗುಂಡಿಮನೆ ಅಕ್ಕಣ ಶೆಡ್ತಿರ ಮಗಳು ಪದ್ದಕ್ಕ ಸೆಡ್ತಿಯು ಈ ಮೂಲಕ ತಿಳಿಯಪಡಿಸುವದೇನೆಂದ್ರೆ ಇತ್ತೀಚೆಗೆ ನನ್ನ ಮಗ ವಿಟ್ಟಲ ಸೆಟ್ಟಿ ಎಂಬವನು ನಾನು ವಾದಿಯಾಗಿ ಕುಂ. ಡಿ. ಮು. ಕೋರ್ಟಿನಲ್ಲಿ ನಡೆಯುತ್ತಿರುವ ವ್ಯಾಜ್ಯದ ಬಗ್ಗೆ ಆಗತ್ಯ ಉಂಟು ಎಂತ ಹೇಳಿ ನಂಬಿಸಿ ನನ್ನ ಎಡಗೈ ಹೆಬ್ಬೆಟ್ಟಿನ ಗುರ್ತನ್ನು ಒಂದು ಕಾಲಿಕಾಗದದಲ್ಲಿ ತೆಗೆದುಕೊಂಡು ಹೋಗಿರುತ್ತಾನೆ. ಅದನ್ನು ನನ್ನ ವಕೀಲರಿಗೆ ಕೊಡದೆ ಈಗ ಪರಸ್ಪರ ಕೇಳುವಾಗ ನನ್ನ ವಿರೋಧಿಗಳ ವಳಸಂಚಿಗೆ ಸೇರಿ ನನ್ನ ಹೆಸರಿನಿಂದ ಬಿನಾಮಿ ನೋಟನ್ನು ಮಾಡಿಸಿರುತ್ತಾನಾಗಿ ತಿಳಿಯುತ್ತೇನೆ. ಸದ್ರಿ ನನ್ನ ಮಗನು ನನ್ನಿಂದ ಹೆಬ್ಬೆಟ್ಟು ಗುರ್ತ ತೆಗೆದುಕೊಂಡು ಹೋದವನು ಇನ್ನೂ ನನ್ನ ಮನೆಗೆ ಬಾರದೆಯೂ, ನನಗೆ ಸಿಕ್ಕದೆಯೂ ಇರುತ್ತಾನೆ. ನಾನು ಈ ಮೊದಲು ಇತ್ತೀಚೆಗೆ ಶ್ರೀ ಬೇಳೂರು ಗ್ರಾಮದ ಉಗ್ರಾಣಬೆಟ್ಟು ಮಂಜುನಾಥ ನಾಯ್ಕರಿಗೆ ರೂಪಾಯಿ 500/-ಕ್ಕೆ ಮಾತ್ರ ತಾ. 19 8—1953ರಲ್ಲು ಒಂದು ಡಿಮಾಂಡು ನೋಟು ಬರಕೊಟ್ಟದ್ದು ವಿನಹ, ಬೇರೆ ನೋಟುಗಳ ಮೂಲಕವಾಗಲಿ, ಕೈ ಕಾಗದಗಳ ಮೂಲಕವಾಗಲಿ ಸಾಲಮಾಡಿರುವದಿಲ್ಲ ರಿಜಿಸ್ತ್ರಿ ಸಿಕಿ ನಡದ ಸಾಲಪತ್ರ ಇರುತ್ತದೆ. ಇತ್ತಲಾಗೆ ನನ್ನ ಮಗ ತೆಗದುಕೊಂಡು ಹೋದ ಮೇಲ್ಕಂಡ ಹೆಬ್ಬೆಟ್ಟು ಗುರ್ತಿನಿಂದ ಬೇರೆಯಾರ ಹೆಸರಿಗಾದರೂ ನೋಟು ವಗೈರೆ ಯಾವದಾದರೂ ರಿಕಾರ್ಡು ಮಾಡಿಕೊಂಡರೆ ನಾನು ಅದಕ್ಕೆ ಬದ್ಧಳಲ್ಲ. ಅದು ಸಿಂಧು ಆಗತಕ್ಕದಲ್ಲ ಈ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತೇನೆ.

ಈ ಎಡ ಹೆಬ್ಬೆಟ್ಟಿನ ಗುರ್ತು ಸದ್ರಿ ಪದ್ದಕ್ಕ ಸೆಡ್ತಿ ರುಜು ಆಗಿರುತ್ತದೆ.

ತಾ. 31—3—56.

* 17 Jewels, Glucidor Balance, Antimagnetic, Nivarox hairspring.

	5120	5311	7926
Chromium Front Steel Back	Rs. 130/-	Rs. 130/-	-
Full Stainless Steel Case	Rs. 155/-	Rs. 155/-	Rs. 158/-
20 Microns Rolled Gold Steel Back	Rs. 160/-	Rs. 160/-	Rs. 160/-

M. VAMAN NAYAK & SONS,
POST BOX NO. 8. MANGALORE-2.

INSIST ON Bentex STRAPS & BRACELETS

ಹರಿಭಕ್ತಿಸಾರ

‘ಮುಕ್ತಿಗೆ ಭಕ್ತಿಯೇ ಕಾರಣ’ ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ನುಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

ನವಯುಗ ಪ್ರೆಸ್ ಉಡುಪಿ

ನ್ಯಾಯವಾದ ಗೇಣಿನಿರ್ಣಯ್ಕ ಶಾಸನಕ್ಕಾಗಿ ಒತ್ತಾಯ

ಮದ್ರಾಸಿನ ಶಾಸನಾಂಗದಲ್ಲಿ ಶ್ರೀ **ಯಡ್ತರೆ ಮಂಜಯ್ಯ ಶೆಟ್ಟರು** ದಿನಾಂಕ ೨೭-೩-೫೬ ರಂದು ಮಾಡಿದ ಭಾಷಣದ ಸಾರವನ್ನು ಓದುಗರ ಅವಗಾಹನೆಗಾಗಿ ಕೆಳಗೆ ಕೊಟ್ಟಿದ್ದೇವೆ:

"ಸ್ವಾಮಿ, ಭೂಸುಧಾರಣೆಯನ್ನು ತರುವಲ್ಲಿ ನಿಧಾನವಾಗಿದೆ ಎಂದು ಆರೋಪಿಸಲ್ಪಡುವ ಕೆಲವು ರಾಜ್ಯಗಳಲ್ಲಿ ಮದ್ರಾಸು ಒಂದಾಗಿದೆ. ಬೇರೆ ರಾಜ್ಯಗಳಲ್ಲಿ ಕೈಗೊಳ್ಳಲಾದ ಭೂಸುಧಾರಣೆಯ ಕ್ರಮಗಳೊಡನೆ ಹೋಲಿಸಿ ನೋಡಿದರೆ, ಮದ್ರಾಸು ರಾಜ್ಯದ ಮಟ್ಟಿಗೆ ಅಭಿಮಾನಾಸ್ಪದವಾದ ಯಾವುದೇ ಭೂಸುಧಾರಣೆಯ ಶಾಸನವನ್ನು ತಂದಿಲ್ಲವೆಂದು ಸ್ಪಷ್ಟವಾಗುತ್ತದೆ. ನ್ಯಾಯವಾದ ಗೇಣಿ ನಿರ್ಣಯ ಮಸೂದೆಯೇನೊ ಪರಿಶೀಲಕ ಸಮಿತಿಯ ಮುಂದಿರುವುದು, ನಿಜ. ಈ ಸಮಿತಿಯವರು ರಾಜ್ಯದಲ್ಲೆಲ್ಲ ಸುತ್ತಾಡಿ ಸಾರ್ವಜನಿಕಾಭಿಪ್ರಾಯವನ್ನೂ ಸಾಕ್ಷಿಗಳನ್ನೂ ಸಂಗ್ರಹಿಸುವ ಎತ್ತುಗಡೆಯಲ್ಲಿರುವರೆಂದೊಂದು ಸುದ್ದಿಯಿದೆ. ಇವೆಲ್ಲ ಕಾಲವಂಚನೆಯ ತಂತ್ರಗಳೆಂದು ನಾನು ಹೇಳಬಿಚ್ಛಿಸುತ್ತೇನೆ. ಭೂಸುಧಾರಣೆಯ ವಿಷಯದಲ್ಲಿ ಬಹಳ ಆಳವಾಗಿ ವಿಚಾರ ಮಾಡಿ ಸರಕಾರಕ್ಕೆ ಒಂದಕ್ಕಿಂತ ಹೆಚ್ಚು ಸಮಿತಿಗಳು ತಮ್ಮ ವರದಿಯೊಪ್ಪಿಸಿರುತ್ತವೆ; ಹೀಗಿರುವಾಗ ಪರಿಶೀಲಕ ಸಮಿತಿಯು ಮುಂದಿಡಲಿರುವ ಹೆಚ್ಚಿನ ಬುದ್ಧಿವಂತಿಕೆಯದೆಂದು ನನಗೆ ತೋರುತ್ತಿಲ್ಲ. ಸರಕಾರವು ನ್ಯಾಯವಾದ ಗೇಣಿ ನಿರ್ಣಯ ಮಸೂದೆಯನ್ನು ಶೀಘ್ರವಾಗಿ ಪಾಸುಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

"ಈ ಮಸೂದೆಯು ಈಗಿರುವ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಗೆ ಸಹ ಅನ್ವಯವಾಗುತ್ತದೆ. ಈ ಜಿಲ್ಲೆಯ ಭೂಮಾಲಿಕರು ಮುಖ್ಯಮಂತ್ರಿಗಳನ್ನು ಒಂದು ನಿಯೋಗದ ರೂಪದಲ್ಲಿ ಕಂಡು ರಾಜ್ಯಗಳ ಪುನಾರಚನೆಯು ನೆಪವನ್ನು ಮುಂದೊಡ್ಡಿ ಮಸೂದೆಯ ಕಕ್ಷೆಯಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಬೇಕೆಂದು ಕೇಳಿಕೊಳ್ಳಲಿರುವರಾಗಿ ನನಗೆ ತಿಳಿದುಬಂದಿದೆ. ಇದು ಬಹಳ ಅನ್ಯಾಯಕಾರಿಯೂ ಹಾನಿಕಾರಕವೂ ಆದ ಕೆಲಸವೆಂದೂ ಸರಕಾರದ ಶುಭನಾಮವನ್ನು ಕಲಂಕಿತಗೊಳಿಸುವುದೇ ಇದರ ಉದ್ದೇಶವೆಂದೂ ನಾನು ಹೇಳಬೇಕಾಗುತ್ತದೆ. ನಮ್ಮ ಜಾಣರಾದ ಮುಖ್ಯಮಂತ್ರಿಗಳು ಭೂಮಾಲಿಕರ ಈ ಬೋನಿಗೂ ತಂತ್ರಗಳಿಗೂ ಬಲಿಬೀಳದೆ ಸಾಗುವಳಿದಾರರ ಹಿತಾಸಕ್ತಿಗಳನ್ನು ರಕ್ಷಿಸುವರೆಂದು ನನಗೆ ಭರವಸೆಯಿದೆ.

"ಹಳ್ಳಿಗಳಲ್ಲಿ ವಾಸಿಸುವ ಜನರ ಸ್ಥಿತಿಯನ್ನು ಸುಧಾರಿಸಿ ಉತ್ತಮಗೊಳಿಸುವುದಕ್ಕಾಗಿ ಸಮಾಜ ವಿಕಾಸ ಯೋಜನೆ, ಸ್ಥಳೀಯ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಆದರೆ ಹೊಗೇರರು ಮತ್ತು ಮಲೆನಾಡಿನ ಜನರೇ ಮುಂತಾದ ಆರ್ಥಿಕ ಸಂಪತ್ತಿನ ದೃಷ್ಟಿಯಿಂದ ಹಿಂದುಳಿದ ನಾಗರಿಕರಿಗೆ ತಮ್ಮ ಬಡತನದ ದೆಸೆಯಿಂದ ಈ ಯೋಜನೆಗಳ ಸದುಪಯೋಗ ಪಡೆಯುವುದಾಗಿಲ್ಲ; ಈ ಯೋಜನೆಗಳ ವೆಚ್ಚದಲ್ಲಿ ಅರ್ಧಾಂಶವನ್ನು ಒದಗಿಸುವ ಶರ್ತ ಪೂರೈಸುವುದು ಅವರ ಶಕ್ತಿಗೆ ಮೀರಿದ ವಿಷಯ. ಇತ್ತೀಚೆಯ ಸಭೆಯೊಂದರಲ್ಲಿ ವಿಶೇಷ ರಿಯಾಯತಿಗಳನ್ನೂ ಸೌಲಭ್ಯಗಳನ್ನೂ ಇಂಥ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಮಟ್ಟಿಗೆ ಕೊಡಬೇಕೆಂದು ತೀರ್ಮಾನವಾಗಿದೆ. ಇದನ್ನು ನಮ್ಮ ಸರಕಾರವೂ ಒಪ್ಪುವುದೆಂದು ಆಶಿಸುತ್ತೇನೆ.

ದಕ್ಷಿಣ ಕನ್ನಡದ ಅಭಿವೃದ್ಧಿ ಕಾರ್ಯಕ್ರಮ

ಉಡುಪಿಯ ಎಂ. ಎಲ್. ಎ. ಗಳಾದ **ಶ್ರೀ ಟಿ. ಎ. ಪೈಯವರು** ಮದ್ರಾಸಿನ ಶಾಸನಾಂಗದಲ್ಲಿ ೨೬ ಮತ್ತು ೨೭ನೇ ಮಾರ್ಚ ೧೯೫೬ರಂದು ಮಾಡಿದ ಭಾಷಣಗಳ ಕೆಲವು ಭಾಗಗಳನ್ನು ಕೆಳಗೆ ಓದುಗರ ಅವಗಾಹನೆಗೆಂದು ಎತ್ತಿ ಕೊಟ್ಟಿದ್ದೇವೆ.

"ಸರಕಾರವು ಪಡುಕರಾವಳಿಯ ಮೀನುಗಾರಿಕೆಗೆ ಹೆಚ್ಚಿನ ಗಮನವಿತ್ತಿಲ್ಲ. ಮೀನುಗಾರಿಕೆಯನ್ನು ದೊಡ್ಡ ಕೈಗಾರಿಕೆಯಾಗಿ ಬೆಳೆಸಲು ಸಾಧ್ಯವಿದೆ. ಕಲ್ಲಿಕೋಟೆಯಲ್ಲೀಗ ಸ್ಥಾಪಿಸಿರುವ ಸಣ್ಣ ಮೀನುಗಾರಿಕೆಯ ಕಾರ್ಖಾನೆಯ ಬದಲಿಗೆ ಇಡಿ ಕರಾವಳಿಗೆ ಉಪಯುಕ್ತವಾಗುವಂತೆ ವಿಸ್ತೃತ ಕಾರ್ಯಕ್ರಮಗಳುಳ್ಳ ದೊಡ್ಡ ಕಾರ್ಖಾನೆಯನ್ನು ತೆರೆಯುವುದಿತ್ತೆಂದು ನನಗೆ ತೋರುತ್ತದೆ. ಮೀನನ್ನು ಗೊಬ್ಬರವಾಗಿ ಉಪಯೋಗಿಸುವುದಕ್ಕಿಂತ ಆಹಾರವಾಗಿ ಪರಿವರ್ತಿಸುವ ಕಾರ್ಖಾನೆಯೊಂದಿದ್ದರೆ ಅದರ ಉತ್ಪಾದನೆಯನ್ನು ವಿದೇಶಗಳಿಗೆ ಸಹ ರಫ್ತು ಮಾಡಲು ಸಾಧ್ಯ. ನಾವು ಈ ಕುರಿತು ಇನ್ನೂ ಯೋಚಿಸಿಲ್ಲ.

"ದ್ವಿತೀಯ ಯೋಜನೆಯಲ್ಲಿ ಗ್ರಾಮ ಪಂಚಾಯತುಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಆದರೆ ಸಾಕಷ್ಟು ಹಣಕಾಸಿನ ಅನುಕೂಲತೆಯಿಲ್ಲದ ದೆಸೆಯಿಂದ ಈ ಪಂಚಾಯತುಗಳು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ತೀರ ವಿರಳವೆನಿಸಿದೆ. ಸರಕಾರದವರು ಪಂಚಾಯತುಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ನೋಡಬೇಕು. ಹೆಚ್ಚಾಗಿ ಗ್ರಾಮ ಪಂಚಾಯತುಗಳ ಅಧ್ಯಕ್ಷರಿಗೆ ಆಡಳಿತದಲ್ಲಿ ವಿಶೇಷ ಅನುಭವವಿರುವುದಿಲ್ಲ. ಆದುದರಿಂದ ಸಾರ್ವಜನಿಕರ ಹಣವು ಹಾಳಾಗದಂತೆ ಸರಕಾರದವರು ಡಿಸ್ಟ್ರಿಕ್ಟ ಪಂಚಾಯತ ಆಫೀಸರಿಂದ ಪರಿಣಾಮಕಾರಿ ಮೇಲ್ವಿಚಾರಣೆಯನ್ನು ನಡೆಸಬೇಕು. ಅವರ ಸಿಬಂಧಿಯನ್ನು ಹೆಚ್ಚಿಸಬೇಕು; ಅವರ ಆಧೀನವಿರುವ ಪಂಚಾಯತುಗಳ ಸಂಖ್ಯೆ ಐವತ್ತನ್ನು ಮೀರಬಾರದು. ಅವರ ಸಂಬಳವೂ ಆಕರ್ಷಕವಾಗಿದ್ದರೆ ಕೆಲಸದಲ್ಲಿ ಆಸಕ್ತಿ ಹೆಚ್ಚದಿರದು.

"ಸಾಮಾನ್ಯ ನೀರಾವರಿ ಕಾರ್ಯಕ್ರಮಗಳಿಗಾಗಿ ತುಂಬ ಹಣವನ್ನು ತೆಗೆದಿಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಈ ವಿಷಯದಲ್ಲಿ ಸರಕಾರ ಕಡೆಗಣಿಸಿದೆ ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಆದರೂ ನಮ್ಮ ಪ್ರಯತ್ನವು ಈ ದಿಸೆಯಲ್ಲಿ ಸಾಕಷ್ಟು ಫಲಕಾರಿಯಾಗಿಲ್ಲ. ಸಂಕದ ಗುಂಡಿ, ಕಟ್ಟಿನ ಹೊಳೆ, ಬಿಜೂರು ಮುಂತಾದ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯಾಚರಣೆಗಾಗಿ ಈ ವರ್ಷ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ. ಪ್ರಸ್ತುತ ವರ್ಷದಲ್ಲಿ ರಾಜ್ಯದ ೩೦೦ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಕಾರ್ಯಕ್ರಮವಿಟ್ಟುಕೊಂಡಿರುವುದು ಸ್ತುತ್ಯ. ಆದರೆ ದಕ್ಷಿಣಕನ್ನಡದ ಅಂದಾಜುಗಳಲ್ಲಿ ಕೇವಲ ೨೦ ಗ್ರಾಮಗಳಿಗಷ್ಟೆ ವಿದ್ಯುಚ್ಛಕ್ತಿ ಪೂರೈಕೆ ನಡೆದಿರುವುದು ಶೋಚನೀಯ. ಆದುದರಿಂದ ಸರಕಾರದವರು ಬಸ್ರೂರು, ಕೋಟೇಶ್ವರ, ಗಂಗೊಳ್ಳಿ, ಬೈಂದೂರು, ಬಂಟ್ವಾಳ, ಮೂಲ್ಕಿ, ಪುತ್ತೂರು ಮತ್ತು ಕಾಸರಗೋಡುಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಬೇಕು. ಈ ವಿಷಯದಲ್ಲಿ ಸರಕಾರದ ಆಜ್ಞೆ ಕ್ಷಿಪ್ರದಲ್ಲಿಹೊರಡುವುದೆಂದು ಭಾವಿಸುತ್ತೇನೆ."

"ನಾವು ಪ್ರಾರಂಭಿಸುವ ಕಾರ್ಖಾನೆಗಳಲ್ಲಿಯ ಉತ್ಪಾದನೆಗೆ ಜನರಿಂದ ಬೇಡಿಕೆಇರಬೇಕೆಂಬುದು ನಿಜ. ಆಹಾರ, ವಸ್ತ್ರ ಇತ್ಯಾದಿ ನಿತ್ಯೋಪಯೋಗದ ಸರಕುಗಳ ಬೇಡಿಕೆಯು ಪ್ರತಿದಿನ ಹೆಚ್ಚುತ್ತಿರುತ್ತದೆ. ಆದರೆ ಇಂದು ಒಂದು ಹಳ್ಳಿಯ ಸಾಮಾನ್ಯ ಅಂಗಡಿಯನ್ನು ನೋಡಿದರೂ ಅಲ್ಲಿ ಹೊರಗಿನಿಂದ ತರಿಸಿದ ನಿತ್ಯೋಪಯೋಗದ ಸರಕುಗಳೇ ಮಾರಾಟಕ್ಕೆ ಇಟ್ಟಿರುವುದು ಗೋಚರವಾಗುತ್ತದೆ. ಸ್ಥಳೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ನಾವು ಕಲಿಯಬೇಕು; ಬೇರೆ ಕಡೆಯಿಂದ ಬರುವ ಸಾಮಾನುಗಳ ಪ್ರಮಾಣವು ಒಟ್ಟು ಬೇಡಿಕೆಯ ೫% ಸಹ ಇರಲಾಗದು. ನಮ್ಮಲ್ಲಿ ಚಿಕ್ಕ ಕೈಗಾರಿಕೆಗಳನ್ನು ಬೆಳೆಸಿ ಪೋಷಿಸುವ ರೀತಿ ಇದೊಂದೇ.

"ದಕ್ಷಿಣ ಕನ್ನಡದಲ್ಲಿ ಹಂಚಿನ ಕೈಗಾರಿಕೆಯು ಮುಖ್ಯವಾದುದಾಗಿದೆ. ಆಸ್ಟ್ರೇಲಿಯ, ಆಫ್ರಿಕಗಳ ಸ್ಪರ್ಧೆಯಿಂದ ಚೇತರಿಸಿಕೊಳ್ಳಲು ಈ ಕೈಗಾರಿಕೆಗೆ ಸಂಶೋಧನೆಯ ನೆರವು ಬೇಕಾಗಿದೆ. ಇದಕ್ಕಾಗಿ ಸಂಶೋಧನಾಲಯವೊಂದನ್ನು ಜಿಲ್ಲೆಯಲ್ಲಿ ತೆರೆಯಬೇಕು. ಗಂಧದ ಮರಗಳು ಸರಕಾರದ ವಶದಲ್ಲಿವೆ. ಅವುಗಳನ್ನು ಆಧರಿಸಿದ ಕುಶಲಕಲೆಗಳು ವ್ಯಕ್ತಿಗತವಾಗಿವೆ. ಈ ಕಲಾವಿದರು ಮಾಡಿದ ಸಾಮಾನುಗಳು ಮಾರಾಟವಾಗದಿದ್ದರೆ ಅವರು ಉಪವಾಸವಿರಬೇಕಾಗುತ್ತದೆ. ಸಹಕಾರಿ ಸಂಘದ ಕಕ್ಷೆಯೊಳಗೆ ಇಂಥ ಕಲಾವಿದರನ್ನು ತಂದು ಅವರ ಜೀವನ ನಿರ್ವಹಣೆಗೂ ಸರಕುಗಳ ಮಾರಾಟಕ್ಕೂ ಉಚಿತ ಏರ್ಪಾಡು ಮಾಡಬೇಕು. ಮೂಡಬಿದ್ರೆಯಲ್ಲಿ ಸರಕಾರವು ತಾನು ಕೊಟ್ಟ ಸಾಲಕ್ಕಾಗಿ ವಶಪಡಿಸಿಕೊಂಡಿರುವ ರಟ್ಟಿನ ಕಾರ್ಖಾನೆಯನ್ನು ಪುನಃ ತೆರೆದು ಉತ್ಪಾದನೆಯನ್ನದು ತೊಡಗುವಂತೆ ಮಾಡಬೇಕು. ಮಾಜಿ ಪಟ್ಟೇದಾರರು ಓಲೆಬೆಲ್ಲ ತಯಾರಿಕೆಯೊಂದನ್ನು ಈಗ ಮಾಡುತ್ತಿದ್ದಾರೆ-ಇವರಿಗೆ ಇತರ ಉದ್ಯೋಗಗಳಲ್ಲಿಯೂ ತರಬೇತಿ ಸಿಗಬೇಕು. ಹೆಂಗಸರಿಗೆ ಹಪ್ಪಳ ಮಾಡುವ ಕೆಲಸಕ್ಕೆ ಮಾತ್ರ ಸರಕಾರದಿಂದ ಉತ್ತೇಜನ ಈಗ ಬರುತ್ತದೆ. ಅವರ ಕೆಲಸದ ವ್ಯಾಪ್ತಿಯೂ ಹೆಚ್ಚಬೇಕು. ಇತರ ಕುಶಲ ಕೈಗಾರಿಕೆಗಳಲ್ಲಿ ತರಬೇತಿದೊರೆತರೆ ತುಂಬ ಪ್ರಯೋಜನವಾಗದಿರದು.

"ಮೈಸೂರು ಸರಕಾರದವರು ಜಿಲ್ಲೆಗೆ ಇದೇ ಜೂನಿನ ಹೊತ್ತಿಗೆ ಜೋಗಿನ ವಿದ್ಯುಚ್ಛಕ್ತಿಯನ್ನು ಪೂರೈಸಲು ಸಿದ್ಧರಿರುವಂತಿವೆ. ಅಷ್ಟರೊಳಗೆ ಮಂಗಳೂರು ವಿದ್ಯುಚ್ಛಕ್ತಿ ಕಂಪೆನಿಯನ್ನು ರಾಷ್ಟ್ರೀಕರಿಸಿ ತಂತಿಗಳ ವಿಸ್ತರಣೆ ಮಾಡದಿದ್ದರೆ ಜಿಲ್ಲೆಯ ದಕ್ಷಿಣ ಭಾಗಕ್ಕೆ ಕಷ್ಟ ತಪ್ಪದು. ಹಳ್ಳಿಗಳಿಗೆ ವಿದ್ಯುತ್ತನ್ನು ಪೂರೈಸುವಾಗ ಇಲಾಖೆಯ ಜನರು ವಿದ್ಯುತ್ತನ್ನು ಹೇಗೆ ಉಪಯೋಗಿಸಬಹುದೆಂಬ ಬಗ್ಗೆ ತಕ್ಕ ಪ್ರಚಾರವನ್ನು ಮಾಡಬೇಕು. ಇಲ್ಲದಿದ್ದರೆ ಜನರಿಗೆ ಅದರ ಉಪಯೋಗವೆ ಮನಿವರಿಗೆ ಳು ತಿಳಿದುಬರುವುದು ಸಂಶಯ.

"ಕೈಗಾರಿಕೆಗಳ ವಿಕೇಂದ್ರೀಕರಣವು ಬಾಯುಪಚಾರದ ವಿಷಯವಾಗಕೂಡದು. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ನೆಲೆಗೊಳಿಸಲು ಸಾಕಷ್ಟು ಸಂಪರ್ಕ ವ್ಯವಸ್ಥೆ ಇಲ್ಲವೆನ್ನಲಾಗುತ್ತದೆ. ಇತ್ತೀಚೆಗೆ ಮದ್ರಾಸು ಸರಕಾರದವರು ಮಲ್ಪೆಯಲ್ಲಿ ಮತ್ಸ್ಯ ವಿಜ್ಞಾನ ಕೇಂದ್ರವನ್ನು ತೆರೆಯಲು ಭಾರತ ಸರಕಾರಕ್ಕೆ ಸೂಚಿಸಿದಾಗ ಅಲ್ಲಿ ಹೊಸ ಬಂದರದ ವ್ಯವಸ್ಥೆ ಇಲ್ಲವೆಂಬ ಉತ್ತರ ಬಂತು. ಈ ಬಂದರವನ್ನು ಜನರು ನಿರ್ಮಿಸಬೇಕೆ? ಹಾಗೆ ಸರಕಾರವು ಅಭಿಪ್ರಾಯ ಪಡುವುದಾದರೆ ಅದು ದೊಡ್ಡ ತಪ್ಪು. ಪ್ರತಿಯೊಂದೂ ಕಡೆಯ ನೈಸರ್ಗಿಕ ಸಂಪತ್ತನ್ನು ರಾಷ್ಟ್ರ ಹಿತಕ್ಕಾಗಿ ವಿಸ್ತೃತ ಪ್ರಮಾಣದಲ್ಲಿ ಉಪಯೋಗಿಸಲು ತಕ್ಕ ಕಾರ್ಯ ಕ್ರಮಗಳನ್ನು ಯೋಜಿಸುವುದು ಸರಕಾರದ ಕರ್ತವ್ಯ.

"ಉಡುಪಿಯ ಮೂಲ ಶಿಕ್ಷಣ ತರಬೇತಿ ಶಾಲೆಯ ಕಟ್ಟಡಕ್ಕಾಗಿ ಒಂದು ಲಕ್ಷ ರೂಪಾಯಿಯನ್ನು ಕಳೆದ ವರ್ಷ ಮಂಜೂರು ಮಾಡಲಾಗಿದ್ದರೂ ಆ ಕಟ್ಟಡದ ನಕ್ಷೆ ಇನ್ನೂ ತಯಾರಾಗಿಲ್ಲವೆಂಬುದರಿಂದ ಈ ಹಣ ಉಪಯೋಗವಾಗದೆ ಹೋಗುವ ಹಾಗಿದೆ. ಕಟ್ಟಡದ ನಕ್ಷೆ ತಯಾರಿಸಲು ಸರಕಾರಕ್ಕೆ ಇಷ್ಟು ದೀರ್ಘ ಸಮಯ ಏಕೆ ತಗಲುತ್ತದೊ ತಿಳಿಯದು. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಸರಕಾರವು ಈಗಾಗಲೇ ಕೊಟ್ಟಿರುವ ೬೫ ಸಾವಿರ ರೂಪಾಯಿಗಳಲ್ಲದೆ ಇನ್ನೊಂದು ಲಕ್ಷವೊ ಅರ್ಧ ಲಕ್ಷವೊ ಹೆಚ್ಚು ಸಹಾಯ ಸಲ್ಲಿಸಬೇಕು. ವರ್ಷಕ್ಕೆ ೧೨೦೦ ರೂಪಾಯಿಗಿಂತ ಕಡಿಮೆ ವರಮಾನವುಳ್ಳ ಕೆಲವು ವರ್ಗದ ಜನರ ಮಕ್ಕಳಿಗೆ ಸಂಬಳ ವಿನಾಯತಿಯನ್ನು ಸರಕಾರ ಕೊಟ್ಟಿದ್ದರೂ ಸಂಸ್ಕೃತ ಶಾಲೆಗಳಿಗೆ ಇದು ಅನ್ವಯವಾಗುವುದಿಲ್ಲವೆನ್ನಲಾಗಿದೆ. ಕಾರ್ಕಳದ ಸಂಸ್ಕೃತ ಶಾಲೆಯ ಮಕ್ಕಳ ವಿಷಯದಲ್ಲಿ ಇಂಥ ನಿರಾಕರಣೆ ಬಂದಿದೆ. ಇದು ಮೂಲೋದ್ದೇಶಕ್ಕೆ ವಿರುದ್ಧವಿದೆ. ಸರಕಾರ ಈ ಪ್ರಶ್ನೆಯನ್ನು ಪುನರಾಲೋಚಿಸಬೇಕು.

"ಜಿಲ್ಲೆಯ ಸಂಕಗಳ ಕೆಲಸವನ್ನು ಕ್ಷಿಪ್ರಗೊಳಿಸಲೆಂದು ನೇಮಿಸಿದ್ದ ಸಂಕ ವಿಭಾಗವನ್ನು ಮುಚ್ಚಿ ಇಂಜಿನಿಯರಿಂಗ್ ವಿಭಾಗಕ್ಕೆ ಈ ಕೆಲಸವನ್ನು ವಹಿಸಿಕೊಡಲಾಗುವುದೆಂದು ತಿಳಿದುಬರುತ್ತದೆ. ಇದು ಸರಿಯಲ್ಲ—ಕೆಲಸವನ್ನು ವಿಳಂಬವಿಲ್ಲದೆ ಚೆನ್ನಾಗಿ ಮುಂದರಿಸಲು ಈಗಿನಂತೆಯೇ ಸಂಕ ವಿಭಾಗ ಕೆಲಸ ನಡೆಸಬೇಕು. ಕರಾವಳಿ ರಾಷ್ಟ್ರೀಯ ಹೆದ್ದಾರಿಗೆ ಹಣವು ಮಂಜೂರಾಗಿದ್ದರೂ ಅದು ಎರಡನೇ ಯೋಜನೆಯ ಅವಧಿಯಲ್ಲೂ ಪೂರ್ಣವಾಗುವಂತೆ ಕಾಣುವುದಿಲ್ಲ. ಇದನ್ನು ಬೇಗನೆ ಮುಗಿಸುವಂತೆ ತಕ್ಕ ಕ್ರಮ ಅಗತ್ಯ.

"ಉಡುಪಿ ನಗರಸಭೆಯು ಸರಕಾರದ ಒತ್ತಾಯದಂತೆ ಖಾಲಿ ಸ್ಥಳಗಳ ಮೇಲೆ ತೆರಿಗೆ ಹೊರಿಸುವಾಗ, ಸರಕಾರದ ಜಾಗಕ್ಕೂ ತೆರಿಗೆ ಹೊರಿಸುವ ಸಂದರ್ಭ ಬಂತು. ಈ ತೆರಿಗೆಯು ೩೫೦೦೦ ರೂಪಾಯಿ ಹಣವನ್ನು ಲೆಕ್ಕಕ್ಕೆ ತೆಗೆದುಕೊಂಡು ಅದು ನಿತ್ಯ ವ್ಯವಹಾರವನ್ನು ನಡೆಸಿತು. ಎರಡು ವರ್ಷಗಳ ಬಳಿಕ ಸರಕಾರ ಈ ತೆರಿಗೆಯಿಂದ ತನ್ನನ್ನು ವಿನಾಯತಿಪಡಿಸಿಕೊಂಡಿತು. ಆದರೆ ನಗರ ಸಭೆಗೆ ಅಲ್ಲಿಯತನಕ ಅದು ಕೊಡಬೇಕಿದ್ದ ಹಣ ಇನ್ನೂ ಬಂದಿಲ್ಲ. ನಗರ ಸಭೆಯ ಆರ್ಥಿಕ ಸ್ಥಿತಿ ಇದರಿಂದ ತುಂಬ ಕೆಟ್ಟಿದೆ. ಸರಕಾರವು ಬಾಕಿ ಬಿದ್ದಿರುವ ತೆರಿಗೆ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ."

ಗೀತೆಯ ಕೈಗನ್ನಡಿ

ನವಯುಗ ಪ್ರೆಸ್, ಉಡುಪಿ.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 6/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA-40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಮುಂಬಯಿ ನಗರವು ಕರ್ನಾಟಕದ ಅಂಶ!

(೪ನೇ ಪುಟದಿಂದ)

ಉತ್ತರ ಕೊಂಕಣದ ನಾಡೆಲ್ಲ ಹಿಂದೆ ಬೌದ್ಧ ಧರ್ಮಕ್ಕೆ ಆಶ್ರಯವಾಗಿತ್ತೆಂದೂ ಆ ಭಾಗದ ಶಿಲಹಾರ ರಾಜರು ನಿಷ್ಠರಾದ ಬೌದ್ಧರಾಗಿದ್ದರೆಂದೂ ಹಲವು ವಿಧದಿಂದ ಸಿದ್ಧವಾಗಿದೆ. ಆದ್ದರಿಂದ ಅವರಿಬ್ಬರೂ ಬೌದ್ಧ ಸ್ಥಳದೇವತೆಯಾದ ಮುಂಬಣಿಯ ಹೆಸರನ್ನೇ ಇಟ್ಟುಕೊಂಡಿದ್ದರೆಂದು ಭಾವಿಸುವುದು ತಪ್ಪಾಗಲಾರದು.

ಶಬ್ದಾರ್ಥ ವೈಭವ

ಮುಮ್ಮಣಿ, ಮುಮ್ಮುಣಿ, ಮೂಂವಣಿ, ಮುನ್‌ಬಣಿ, ಮುಮ್ಮುರಿಯೆಂಬೀ ಶಬ್ದಗಳೆಲ್ಲ ಅಚ್ಚ ಕನ್ನಡದವು. ಮುಂ ಅಥವಾ ಮುನ್ ಎಂಬ ಶಬ್ದಗಳು ಮುಂದೆ ಅಥವಾ ಮೊದಲು ಎಂಬರ್ಥದವು. ಮಣಿ ಎಂಬ ಶಬ್ದ ರತ್ನಾರ್ಥಕವಾದುದು. ಮುಮ್ಮಣಿಯೇ ಮುಂಬಣಿ ದೇವಿಯೆಂದು ಮಾರ್ಪಟ್ಟಿರಬೇಕು. ಬೌದ್ಧಧರ್ಮದ ಪ್ರಾಮುಖ್ಯ ದೇವತೆಗೆ ದೇವತಾ ಶಿರೋಮಣಿಯೆಂಬರ್ಥದಲ್ಲಿ ಈ ಹೆಸರಿಟ್ಟಿರುವುದು ಸ್ವಾಭಾವಿಕ ಮತ್ತು ಉಚಿತವೇ ಇದೆ. ಅಥವಾ ಮುಂಬಣಿ ಶಬ್ದವನ್ನು ಮುನ್– ಬಸಿ ಯೆಂದು ವಿಂಗಡಿಸಬಹುದು. "ಬಸಿ" ಎಂದರೆ "ವಸ್ತು"ವೆಂದರ್ಥ. ಇನ್ನು ಮುಮ್ಮುರಿ ಎಂದರೆ ಸುಡುವ ಉಸುಬೆಂದು ಅರ್ಥವಾಗುತ್ತದೆ. ಶತ್ರುಗಳಿಗೆ ಮುಮ್ಮುರಿಯಂತೆ ಎಂಬುದು ಕನ್ನಡ ಅರಸರು ಹೆಮ್ಮೆಯಿಂದ ಇಟ್ಟುಕೊಳ್ಳುವ ಅಭಿಧಾನ.

ಇದಿಷ್ಟು ಆ ಅರಸರ ಹೆಸರುಗಳ ಕನ್ನಡ ಮೂಲವನ್ನು ಕುರಿತು ಆದರೆ ಇಂಥ ಹೆಸರನ್ನು ಕನ್ನಡಿಗರು ಇಟ್ಟುಕೊಳ್ಳುತ್ತಿದ್ದರೆಂಬುದನ್ನು ಸುಲಭವಾಗಿ ತೋರಿಸಬಹುದು. ಮುಮ್ಮಾಯಿ ಅಥವಾ ಮೊಮ್ಮಾಯಿ ಎಂಬ ಹೆಸರು ಕೋಲಾರ ಜಿಲ್ಲೆ (ಮೈಸೂರು) ಯ ೧೫೫೪ ರ ಶಾಸನವೊಂದರಲ್ಲಿ ಬರುತ್ತದೆ. ಮುಮ್ಮಣಿ ಮತ್ತು ಮುಮ್ಮಾಯಿ ಎಂಬವು ಒಂದು ಇನ್ನೊಂದರ ಅಪಭ್ರಂಶ.

ಕನ್ನಡದಲ್ಲಿ ಆಜ್ಞೆ

ಇನ್ನು ಮುಂಬಯಿಯ ಸಮೀಪದ ನಾಡು ಕನ್ನಡಿಗರದಾಗಿತ್ತೇ? ಪ್ರಾಚೀನ ಕರ್ನಾಟಕದ ಉತ್ತರ ಮೇರೆ ಮುಂಬಯಿಯಿಂದಲೂ ಆಚೆಗೆ ಚಾಚಿತ್ತೆಂದು ನಾವು ಲಕ್ಷಿಸಬೇಕಾಗಿದೆ. ಅಷ್ಟೇ ಏಕೆ? ೧೭ನೇ ಶತಮಾನದ ವರೆಗೂ ಮುಂಬಯಿಯ ಸುತ್ತಲ್ಲೆಲ್ಲ ಕನ್ನಡವೇ ದೇಶಭಾಷೆಯಾಗಿತ್ತೆಂಬುದನ್ನು ಈಸ್ಟ ಇಂಡಿಯಾ ಕಂಪೆನಿಯ ಸೂರತ ಕಾರಖಾನೆಯ ಲಿಖಿತಗಳಿಂದ ಸ್ಥಾಪಿಸಬಹುದು. ಏಕೆಂದರೆ ೧೬೭೦ ರಲ್ಲಿ ಮುಂಬಯಿ ದ್ವೀಪದ ಆಡಳಿತೆಯನ್ನು ವಹಿಸಿಕೊಂಡ ಕಂಪೆನಿಯ ಸುರತ ಕೌನ್ಸಿಲಿನಲ್ಲಿ ಸರಕಾರದ ನಾಗರಿಕ ಮತ್ತು ಇತರ ಕಾಯಿದೆಗಳನ್ನು ಆದಷ್ಟು ಬೇಗನೆ ಪೋರ್ತುಗೀಜ ಮತ್ತು "ಕೆನರಿನ್" ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸಬೇಕೆಂದು ನಿರ್ಣಯವಾಗಿತ್ತೆಂದು ಓದುತ್ತೇವೆ. ಆದರೆ ಪಾಶ್ಚಿಮಾತ್ಯ ಇತಿಹಾಸಕಾರರು "ಕೆನರಿನ್" ಎಂದರೆ ಸುತ್ತಣ ನಾಡಿನ ಕೊಂಕಣಿಯೆಂದು ತಪ್ಪು ಅರ್ಥ ಮಾಡಿದ್ದಾರೆ. "ಕೆನರಿನ್" ಎಂದರೆ ಕನ್ನಡನಲ್ಲದೆ ಬೇರಲ್ಲವೆಂದು ಧೈರ್ಯವಾಗಿ ಹೇಳಬಹುದು. ೧೬ನೆಯ ಶತಮಾನದಿಂದಲೂ ಯುರೋಪಿಯನರೆಲ್ಲ ಕನ್ನಡವನ್ನು ಕೆನರಾ ಎಂದೇ ಸಂಬೋಧಿಸಿದ್ದಾರೆ.

ಫ್ರೇಯರರು ಹೊನ್ನಾವರವನ್ನು ಕುರಿತು ಬರೆಯುತ್ತಾ, ಅದನ್ನು ಪೋರ್ತುಗಾಲರು ಕಟ್ಟಿದರು ಮತ್ತು ಕೆನರೀನರು ಅವರಿಂದ ಡಚ್ಚರ ಸಹಾಯದಿಂದ ಕಿತ್ತುಕೊಂಡರು" ಎಂದು ಬರೆದುದರಿಂದ ಮೊದಲಿಗರಾದ ಇಂಗ್ರೇಜರು ಕನರೀನರೆಂದು ಕನ್ನಡಿಗರನ್ನೇ ಹೊರತು ಇತರರನ್ನು ಸಂಬೋಧಿಸಲಿಲ್ಲೆಂದು ಸ್ಪಷ್ಟವಾಗುತ್ತದೆ. ಮುಂಬಯಿ ದ್ವೀಪದ ಕಾಯಿದೆಯನ್ನು ಕೆನರೀನ್ ಭಾಷೆಯಲ್ಲಿ ಅನುವಾದಿಸಿ ಪ್ರಕಟಿಸಬೇಕೆಂದು ಹೇಳಿರುವಾಗ ಆ ದ್ವೀಪ ಮತ್ತು ಅದರ ಸುತ್ತು ಮುತ್ತ ಕನ್ನಡವೇ ಪ್ರಚಲಿತವಾಗಿತ್ತೆಂದು ಬೇರೆ ಹೇಳಬೇಕಿಲ್ಲ.

ಪ್ರಸಿದ್ಧ ಉತ್ತರ ಕೊಂಕಣ ಶಿಲಹಾರರ ರಾಜಧಾನಿಗೆ ಸಮೀಪವಾಗಿದ್ದ ಮತ್ತು ಅವರ ಆರಾಧ್ಯ ದೇವತೆಯ ಆವಾಸವಾಗಿದ್ದ ಈ ದ್ವೀಪ ಮೊದಲು ಏಕೆ ಪ್ರಸಿದ್ಧಿಗೆ ಬರಲಿಲ್ಲ? ಅದಕ್ಕೆ ಕೆಲವು ಕಾರಣಗಳಿವೆ. ಚಾಳುಕ್ಯ-ಶಿಲಹಾರರ ಯುದ್ಧ, ಮತ್ತು ಮುಂಬಣಿ ಸ್ವೀಪ ಮನುಷ್ಯ ನಿವಾಸಕ್ಕೆ ಅಯೋಗ್ಯವೆನಿಸುವಷ್ಟು ರೋಗಕಾರಕವಾಗಿದ್ದುದು ಮೊದಲಾದ ಹಲವು ಕಾರಣಗಳನ್ನು ಹೇಳಬಹುದು. ಅಷ್ಟೇಕೆ ೧೭೭೦ರ ವರೆಗೆ "ಎರಡು ಮಳೆಗಾಲಗಳನ್ನು ಸಜೀವವಾಗಿ ಕಳೆಯಲು ಸಾಧ್ಯವಿಲ್ಲ" ಈ ದ್ವೀಪದಲ್ಲಿ. ಎಂದು ಪ್ರಸಿದ್ಧಿಯಿತ್ತು. ಇಂಗ್ಲೀಷರೂ ಮೊದಲು ಇದನ್ನು ದೊಡ್ಡ ವ್ಯಾಪಾರ ಕೇಂದ್ರವಾಗಿ ಮಾಡುವುದು ಅಸಾಧ್ಯವೆಂದೇ ಭಾವಿಸಿದ್ದರು.

ಕನ್ನಡಿಗರ ಗತ ವೈಭವ

ಮುಂಬಯಿ ರಾಜ್ಯದ ಮುಖ್ಯ ಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು ಮೊನ್ನೆನೊನ್ನೆ ವಿಧಾನ ಪರಿಷತ್ತಿನಲ್ಲಿ ರಾ. ಪು. ವಿಧೇಯಕದ ಮೇಲೆ ಮಾತನಾಡುವಾಗ ಮುಂಬಯಿ ನಗರದಲ್ಲಿ ಪೋರ್ತುಗೀಜ ಮತ್ತು ಕನ್ನಡ ಮೂಲಭಾಷೆಗಳಿದ್ದವೆಂದು ಹೇಳಿದ್ದರಿಂದ, ಕನ್ನಡಿಗರ ಕುತೂಹಲ ಕೆರಳಿರಲಿಕ್ಕೆ ಸಾಕು. ಮುಂಬಯಿ ಕನ್ನಡಿಗರದಿತ್ತೆಂಬುದಕ್ಕೆ ಡಾ. ಬಿ. ಎ ಸಾಲೆತ್ತೂರರು ಸಂಶೋಧನ ನಡೆಸಿ ಹಿಂದಕ್ಕೆ ಬರೆದ ಲೇಖನವೊಂದನ್ನು ಬೇರೆಡೆ ಕೊಟ್ಟಿರುತ್ತೇವೆ. ಆದರೆ ಅದರಲ್ಲಿ ಕೇವಲ ಮುಂಬಯಿ ನಗರದ ಪ್ರಸ್ತಾಪ ಮಾತ್ರ ಇರುವದು ಕರ್ನಾಟಕದ ಗತವೈಭವದ ಪುಟಗಳನ್ನು ತಿರುವಿ ಹಾಕಿದರೆ, ಮುಂಬಯಿ ನಗರವನ್ನೊಳಗೊಂಡ ಕರ್ನಾಟಕ ರಾಜ್ಯವು ಗೋದಾವರಿಯವರೆಗೂ ಹಬ್ಬಿತ್ತೆಂಬುದು ಗೊತ್ತಾಗದಿರದು. ಕರ್ನಾಟಕ ದೇಶವು ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿತ್ತೆಂದು ನೃಪತುಂಗನು ಒಂಬತ್ತನೆಯ ಶತಮಾನದಲ್ಲಿ ಬರೆದ ಕವಿರಾಜ ಮಾರ್ಗದಲ್ಲಿ ಉಲ್ಲೇಖಿಸಿದ್ದಾನೆ. ಆಗ ಮಹಾರಾಷ್ಟ್ರವು ಗೋದಾವರಿ ಮತ್ತು ನರ್ಮದೆಯ ನಡುವಿನ ಪ್ರದೇಶವಾಗಿತ್ತೆಂದು ಯಶೋಧರನು ವಾತ್ಸಾಯನದ ಮೇಲೆ ಬರೆದ ಟೀಕೆ ಟಿಪ್ಪಣಿಯಲ್ಲಿ ಬರೆದಿರುವನು. ಆದುದರಿಂದ ಕನ್ನಡವು ಕೇವಲ ಮುಂಬಯಿ ನಗರಕ್ಕೆ ಮಾತ್ರ ಪರಿಮಿತವಾಗಿರದೆ ಗೋದಾವರಿ ವರೆಗಿನ ಪ್ರದೇಶದ ಭಾಷೆಯಾಗಿದ್ದಿತು. ಪೋರ್ತುಗೀಜರೇ ಹಿಂದಿನಿಂದ ಮುಂಬಯಿಗೆ ಬಂದವರು. ಮುಂದೆ ಮುಸಲ್ಮಾನರ ದಾಳಿಗಳಲ್ಲಿ ಮತ್ತು ಮರಾಠಾ ಸಾಮ್ರಾಜ್ಯದ ಕಾಲದಲ್ಲಿ ಮಹಾರಾಷ್ಟ್ರವು ವಿಸ್ತಾರ ಹೊಂದುತ್ತ ಬೆಳಗಾವಿಯ ವರೆಗೆ ಬಂದು ಮುಟ್ಟಿದೆ. ಮುಂಬಯಿ, ಠಾಣಾ, ಪುಣೆ, ರತ್ನಾಗಿರಿ, ಕುಲಾಬಾ, ಸಾತಾರಾ, ಕೊಲ್ಹಾಪೂರ ಪ್ರದೇಶಗಳು ಮೊದಲು ಕನ್ನಡದವಾಗಿದ್ದವೆಂಬುದಕ್ಕೆ ಅನೇಕ ಆಧಾರಗಳಿರುತ್ತವೆ. ಪಂಢರಪುರದ ವಿಠ್ಠಲನೂ ಪುರಂದರ ದಾಸರ ಪುರಂದರ ಗಡವೂ ಕನ್ನಡವಾಗಿದ್ದವು ಮೇಲೆ ಹೇಳಿದ ಪ್ರದೇಶದಲ್ಲಿಯ ಅರ್ಧಕ್ಕಿಂತ ಹೆಚ್ಚು ಗ್ರಾಮಗಳ ಹೆಸರುಗಳು ಕನ್ನಡವಿರುತ್ತವೆಂದು ಮಹಾರಾಷ್ಟ್ರದ ಪ್ರಸಿದ್ಧ ಇತಿಹಾಸಕಾರರಾದ ಶ್ರೀ ರಾಜವಾಡೆಯವರು ಒಪ್ಪಿಕೊಂಡಿರುತ್ತಾರೆ. ಕೊಂಕಣಕ್ಕೆ ಹೋಗುವ ಮೊಡ್ಡ ಮಾರ್ಗವು ದೊಡ್ಡಕಬ್ಬದ ಅಪಭ್ರಂಶವಾಗಿದೆ. ಸಿಂಕ್ಲೇರರಿಗೆ ಕುಲಾಬಾ ಜಿಲ್ಹೆಯ ಚೌಲ ಎಂಬ ಗ್ರಾಮದಲ್ಲಿ ಕನ್ನಡ ಶಿಲಾ ಲೇಖವೊಂದು ಸಿಕ್ಕಿದೆ. ಗೋವೆಯಲ್ಲಿ ಇತ್ತೀಚಿನವರೆಗೂ ಕನ್ನಡದಲ್ಲಿ ಲೆಕ್ಕ ಪತ್ರಗಳಿರುತ್ತಿದ್ದವು. ಈ ಸಂಗತಿಗಳು ಕರ್ನಾಟಕದ ವಿಸ್ತಾರವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಈ ಪ್ರದೇಶಗಳನ್ನು ಕರ್ನಾಟಕಕ್ಕೆ ಈಗ ಕೇಳುವದು ನಮ್ಮ ಉದ್ದೇಶವಾಗಿರದೆ, ಕರ್ನಾಟಕದ ಗತವೈಭವದ ಸ್ಮರಣೆ ಮಾಡಿಕೊಡುವದಾಗಿದೆಂದು ಸ್ಪಷ್ಟಪಡಿಸಬಯಸುತ್ತೇವೆ.

[ಸಂಯುಕ್ತ ಕರ್ನಾಟಕದಿಂದ ಉದ್ಧೃತ]

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,
ತೆಂಕಪೇಟೆ, ಉಡುಪಿ ದ. ಕನ್ನಡ.
ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.
SRI GAJANANA CLOTH STORES,
TENKAPET, UDIPI, S. KANARA.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಮೊದಲಾದ ಯಾವತ್ತೂ ಚಿನ್ನಾಭರಣಗಳು ಯಾವಾಗಲೂ ಸಿದ್ಧವಿವೆ
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
U. RAGHAVENDRA KRISHNA BHAT
Jeweller, Tenkpet, UDIPI, S. Kanara.
ಫೋನ್ ನಂಬ್ರ 66

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ
ಸಂ ತಾ ನ ಸಿಂ ಧೂ ರ
ಈ ಭಸ್ಮವು ಬಹಿಷ್ಟೆ ಸಂಬಂಧವೆ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.
ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.
ಶೋಭನ(Nuptial)ವಾಗಿ 16–18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.
ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628 "ಸಂತಾನ ಸಿಂದೂರ ಸದನ", (N. Y.)
ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!
ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.
ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ನರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ಸಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖಬೊರೆಯುವವು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು
ಪೌಂಡು ಒಂದಕ್ಕೆ ರೂ. 5—0—0.
ಮುಲೆಯೂಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).
ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ಹಿಂದುಳಿದ ವರ್ಗಗಳ ಹಿತ

(ನೇ ಪುಟದಿಂದ)

ಯಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವುದಕ್ಕೆ ಅನುಕೂಲಿಸುವಂತೆ ಬುಡಕಟ್ಟಿನ ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನಗಳನ್ನು ಕೊಡಲಾಗುವುದು.

ಅಸ್ಪೃಶ್ಯತೆಯ ಉಚ್ಚಾಟನೆ

ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ನಿಹನೀರಿನ ಬಾವಿಗಳನ್ನೂ ಸಮ್ಮಿಶ್ರವಾಸದ ಮನೆಗಳನ್ನೂ, ಸಾರ್ವಜನಿಕ ಸಾಮುದಾಯಿಕ ಕೇಂದ್ರಗಳನ್ನೂ ಒದಗಿಸುವುದರ ಮೂಲಕ ಹಾಗೂ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಪ್ರಚಾರ ಕಾರ್ಯವನ್ನು ಕೈಗೊಳ್ಳುವುದರ ಮೂಲಕ ಪರಿಶಿಷ್ಟ ವರ್ಗದ ಜನರ ಆರ್ಥಿಕ ಉದ್ಧಾರದ ಬಗ್ಗೆ ವಿಶೇಷ ಗಮನವನ್ನೀಯಲಾಗುವುದು ಭೂಮಿಯ ಹಂಚಿಕೆ ಲಾಭದಾಯಕವಾದ ಕಸಬುಗಳಲ್ಲಿ ತರಬೇತಿ ಕೊಡುವುದು, ವ್ಯಾಸಂಗ ವೇತನಗಳು ಹಾಗೂ ಪ್ರೋತ್ಸಾಹ ದ್ರವ್ಯಗಳನ್ನಿತ್ತು ಶಿಕ್ಷಣ ಸೌಲಭ್ಯಗಳನ್ನು ಕೊಡುವುದು ಈ ಮೂಲಕ ಪರಿಶಿಷ್ಟ ವರ್ಗದವರಿಗೆ ನೆರವನ್ನೀಯಲಾಗುವುದು.

ಈಗ ಅಸ್ಪೃಶ್ಯರು ತುಂಬ ಸುಧಾರಿಸಿದ್ದು, ಅವರ ಸಾಮಾಜಿಕ ಅನರ್ಹತೆಗಳು ಕಣ್ಮರೆಯಾಗುತ್ತಿವೆ. ಕೆಲಸದ ಬಗ್ಗೆ ಹೆಚ್ಚು ಸದವಕಾಶಗಳನ್ನು ಒದಗಿಸುವ ಅಗತ್ಯವಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪರಿಶೀಲಿಸಬೇಕಾದ ಹಿರಿಯ ಅಂಶಗಳಲ್ಲಿ ಇದೂ ಒಂದಾಗಿದೆ. ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ಸಾರ್ವಜನಿಕ ಅಭಿಪ್ರಾಯ ಹಾಗೂ ಶಿಕ್ಷಣದ ಬೆಳವಣಿಗೆ ಮುಖ್ಯವಾದ ಪಾತ್ರವನ್ನು ವಹಿಸಿವೆ. ಅಸ್ಪೃಶ್ಯತಾ ನಿವಾರಣೆ ಸಂಬಂಧದ ಕಾರ್ಯಕ್ರಮದಲ್ಲಿ ಈ ವಿಷಯದ ಬಗ್ಗೆ ಹೆಚ್ಚು ಪ್ರಾಧಾನ್ಯವನ್ನು ಕೊಡಲಾಗುವುದು

ಹಿಂದೆ ಅಪರಾಧೀ ಬುಡಕಟ್ಟಿನ ಜನರೆಂದು ಕರೆಯಲಾಗುತ್ತಿದ್ದ ಬುಡಕಟ್ಟಿನ ಜನರನ್ನು ಪುನರ್ವ್ಯವಸ್ಥೆಗೊಳಿಸುವುದರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುವುದು. ಇವರಿಗೆ ಉಪಯುಕ್ತವಾದ ಉದ್ಯೋಗಗಳನ್ನು ದೊರಕಿಸಿ ಕೊಡುವುದರ ಮೂಲಕ ಇವರನ್ನು ಶಿಸ್ತಿನ ಪ್ರಜೆಗಳನ್ನಾಗಿ ಮಾಡಬೇಕಾಗುವುದು. ಈ ಮೂಲಕ ಬುಡಕಟ್ಟಿನ ಪುನರ್ವ್ಯವಸ್ಥೆಗೊಳಿಸಲಾಗುವುದು.

ವಿಸ್ತೃತ ಕಾರ್ಯಕ್ರಮ

ದ್ವಿತೀಯ ಯೋಜನೆಯಲ್ಲಿ ಗಮನ ಸೆಳೆಯುವ ಹಿರಿಯ ಸಮಸ್ಯೆಗಳ ಪೈಕಿ ಪರಿಶಿಷ್ಟ ವರ್ಗದವರು ಹಾಗೂ ಹಿಂದುಳಿದ ಜಾತಿಯವರು ವಾಸಿಸುವ ಮನೆಗಳ ಸ್ಥಿತಿಗತಿಗಳನ್ನು ಸುಧಾರಿಸುವ ಸಂಬಂಧದ ಸಮಸ್ಯೆಯೂ ಒಂದಾಗಿದೆ. ಈ ಉದ್ದೇಶಕ್ಕಾಗಿ, ವಿಶೇಷ ಕಾರ್ಯಕ್ರಮವೊಂದನ್ನು ಜಾರಿಗೆ ತರಲು ಸರಕಾರ ಉದ್ದೇಶಿಸಿದೆ. ರಾಜ್ಯಗಳ ಸಂಬಂಧದ ಯೋಜನೆಗಳು, ಮುಂದಿನ ಐದು ವರ್ಷಗಳಲ್ಲಿ ಈ ವರ್ಗದ ಜನರಿಗಾಗಿ ೬೮ ಸಾವಿರ ಮನೆಗಳನ್ನು ನಿರ್ಮಿಸುವ ಧ್ಯೇಯವನ್ನು ಹೊಂದಿವೆ.

ರಾಜ್ಯ ಸರಕಾರಗಳು ತಮ್ಮ ತಮ್ಮ ಯೋಜನೆಗಳಲ್ಲಿ ಹೊಂದಿರುವ ಧ್ಯೇಯಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಬಹುದು. ಶಿಕ್ಷಣ ಕ್ಷೇತ್ರದಲ್ಲಿ ೭೫೦೦ ಶಾಲೆಗಳನ್ನೂ ವಿದ್ಯಾರ್ಥಿ ನಿಲಯಗಳನ್ನೂ ತೆರೆಯಲು ಅವು ಉದ್ದೇಶಿಸಿವೆ. ಪುಸ್ತಕಗಳು, ಬಟ್ಟೆಗಳು ಇವನ್ನು ಕೊಳ್ಳುವುದಕ್ಕಾಗಿ ಧನಸಹಾಯವನ್ನು ನೀಡುವುದರ ಜೊತೆಗೆ ೨೪ ಲಕ್ಷ ವ್ಯಾಸಂಗವೇತನಗಳನ್ನೂ ಪ್ರೋತ್ಸಾಹ ವೇತನಗಳನ್ನೂ ಅವು ಕೊಡಲಿವೆ. ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸುವ ಹಿಂದುಳಿದ ಜಾತಿಯ ವಿದ್ಯಾರ್ಥಿಗಳಿಗೆ ವಸತಿ ಹಾಗೂ ಭೋಜನ ಸಂಬಂಧದ ವೆಚ್ಚವನ್ನು ಕೂಡ ಕೊಡಲಾಗುವುದು ೯೦೦೦ ಮೈಲುಗಳ ಸಂಚಾರ ಮಾರ್ಗಗಳನ್ನೂ ಗುಡ್ಡಗಳಲ್ಲಿ ಕಾಲುಹಾದಿಗಳನ್ನೂ ನಿರ್ಮಿಸುವ ಕಾರ್ಯಕ್ರಮವನ್ನು ಹೊಂದಲಾಗಿದೆ. ೧೪೦೦೦ ಕುಟುಂಬಗಳನ್ನು ಜಮೀನುಗಳಲ್ಲಿ ನೆಲಸುವಂತೆ ಮಾಡಲಾಗುವುದು.

ವ್ಯಾಪಾರ ಹಾಗೂ ಗೃಹ ಕೈಗಾರಿಕೆಗಳಲ್ಲಿ ಕೊಡುವುದಕ್ಕಾಗಿ ೧೨೦೦ ಮಂದಿಗೆ ಸಾಲಗಳನ್ನು ಮತ್ತು ಸಹಾಯ ದ್ರವ್ಯವನ್ನೂ ಕೊಡಲಾಗುವುದು. ಹೊಲಿಗೆ ಕೆಲಸ, ಕಮ್ಮಾರ ವೃತ್ತಿ, ಚರ್ಮವನ್ನು ಹದಮಾಡುವಿಕೆ, ನೇಯ್ಗೆ, ಬುಟ್ಟಿ ಹೆಣೆಯುವಿಕೆ, ಜೇನು ಸಾಕುವಿಕೆ, ಕೋಳಿ ಸಾಕಣೆ ಮುಂತಾದ ವೃತ್ತಿಗಳಲ್ಲಿ ಸುಮಾರು ೧೬೦೦೦ ಮಂದಿಗೆ ತರಬೇತಿ ಕೊಡಲಾಗುವುದು ವಿವಿಧೋದ್ದೇಶ ಸಹಕಾರ ಸಂಘಗಳು, ಅರಣ್ಯ ಉತ್ಪನ್ನಗಳ ಸಂಬಂಧದ ಸಹಕಾರ ಸಂಘಗಳು, ವ್ಯವಸಾಯ ಸಾಲ ಸೌಲಭ್ಯಗಳನ್ನೊದಗಿಸುವ ಸಂಬಂಧದ ಸಂಘಗಳು ಮುಂತಾದುವನ್ನು ಸ್ಥಾಪಿಸುವ ಬಗ್ಗೆ ಉತ್ತೇಜನವನ್ನೀಯಲಾಗುವುದು. ೧೪೫ ಆಸ್ಪತ್ರೆಗಳನ್ನೂ ಚಿಕಿತ್ಸಾಲಯಗಳನ್ನೂ ತೆರೆಯಲು ಮತ್ತು ೩೩೦೦೦ ನಿಹನೀರಿನ ಬಾವಿಗಳನ್ನು ನಿರ್ಮಿಸಲು ಸಹ ರಾಜ್ಯ ಸರಕಾರಗಳು ಪ್ರಯತ್ನಶೀಲವಾಗುತ್ತವೆ.

ಕಾರ್ಯ ನಿರ್ವಾಹಕ ಶಿಬಂದಿ

ಪರಿಶಿಷ್ಟ ಪ್ರದೇಶಗಳಲ್ಲಿ ದ್ವಿತೀಯ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವಾಗ ಉದ್ಭವಿಸುವ ಸಮಸ್ಯೆಗಳ ಪೈಕಿ ವಿವಿಧ ಮಟ್ಟಗಳಲ್ಲಿ ನುರಿತ ಶಿಬಂದಿಯವರನ್ನು ಪಡೆಯುವ ಸಂಬಂಧದ ಸಮಸ್ಯೆಯು ಒಂದಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಭಾರತೀಯ ಗಡಿ ಆಡಳಿತ ಸೇವಾ (ಐ. ಎಫ್. ಎ ಎಸ್.) ಎಂಬ ಹೊಸದೊಂದು ವಿಭಾಗವನ್ನು ರೂಪಿಸಬೇಕೆಂಬ ಸೂಚನೆಗೆ ಭಾರತ ಸರ್ಕಾರದವರು ಅಂಗೀಕಾರವಿತ್ತಿದ್ದಾರೆ. ಈ ಹೊಸ ವಿಭಾಗಕ್ಕೆ ಭಾರತೀಯ ಆಡಳಿತ ಸೇವೆ (ಐ. ಎ. ಎಸ್.) ಭಾರತೀಯ ವಿದೇಶಾಂಗ ಸೇವೆ (ಐ. ಎಫ್. ಎಸ್.) ಸಂರಕ್ಷಣಾ ಸೇವೆ, ಹಾಗೂ ಇತರ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸೇವೆಗಳಿಂದಲೂ ವಿಶ್ವವಿದ್ಯಾನಿಲಯಗಳಿಂದಲೂ ಪ್ರತಿಭಾವಂತರಾದವರನ್ನು ಆಕರ್ಷಿಸಲಾಗುವುದು. ಜನರನ್ನು ಭಾರತದ ಈಶಾನ್ಯ ಗಡಿ ಪ್ರದೇಶ, ಮಣಿಪುರ ಹಾಗೂ ತ್ರಿಪುರಗಳಲ್ಲಿ ಪ್ರಥಮ ಮತ್ತು ದ್ವಿತೀಯ ದರ್ಜೆಗಳ ಹುದ್ದೆಗಳಿಗೆ ನೇಮಿಸಲಾಗುವುದು. ೨೮ ಪ್ರಥಮ ದರ್ಜೆಯ ಹುದ್ದೆಗಳೂ ೨೦ ದ್ವಿತೀಯ ದರ್ಜೆ ಹುದ್ದೆಗಳೂ ಈ ಹೊಸ ವಿಭಾಗದಲ್ಲಿವೆ.

ಈ ಪ್ರದೇಶದಲ್ಲಿ 'ಸಬಾರ್ಡಿನೇಟ್' ಸೇವೆಗಳ ಬಗ್ಗೆ ವಿಶೇಷ ದರ್ಜೆಯೊಂದನ್ನು ರೂಪಿಸಲು ಸರಕಾರ ಉದ್ದೇಶಿಸಿದೆ. ಬುಡಕಟ್ಟಿನ ಪ್ರದೇಶಗಳಲ್ಲಿ ಬುಡಕಟ್ಟಿನ ಜನರ ಮಧ್ಯೆ ವಾಸಿಸಿ ಜನಜೀವನದಲ್ಲಿ ಬೆರೆತು, ಸೇವೆ ಸಲ್ಲಿಸುವಂತಹ ಕಾರ್ಯಕರ್ತರು ಈ ಸೇವಾ ವಿಭಾಗಕ್ಕೆ ಬೇಕಾಗಿದ್ದಾರೆ. ಆದಷ್ಟು ಮಂದಿ ಬುಡಕಟ್ಟಿನ ಅಧಿಕಾರಿಗಳನ್ನು ಪಡೆಯುವ ವಿಷಯದಲ್ಲಿ ಹಾಗೂ ಅವರಿಗೆ ಬುಡಕಟ್ಟಿನ ಪ್ರದೇಶಗಳಲ್ಲಿ ಕೆಲಸಮಾಡುವಂತೆ ತರಬೇತಿಕೊಡುವ ವಿಷಯದಲ್ಲಿ ವಿಶೇಷ ಗಮನಹರಿಸಬೇಕಾಗುವುದು, ಪ್ರಥಮದರ್ಜೆಯ ಅಧಿಕಾರಿಗಳಲ್ಲಿ ಮೂರನೆಯ ಒಂದರಷ್ಟು, ದ್ವಿತೀಯ ದರ್ಜೆಯ ಅಧಿಕಾರಿಗಳಲ್ಲಿ ನೂರಕ್ಕೆ ಎಪ್ಪತ್ತರಷ್ಟು, ತೃತೀಯ ಹಾಗೂ ಚತುರ್ಥ ದರ್ಜೆಯ ಅಧಿಕಾರಿಗಳಲ್ಲಿ ಸರಿ ಅರೆವಾಸಿಯಷ್ಟು ಬುಡಕಟ್ಟಿನ ಅಧಿಕಾರಿಗಳನ್ನು ಪಡೆಯಲು ಪ್ರಯತ್ನಿಸಲಾಗುವುದು.

ಯೋಜನೆಯಲ್ಲಿ ಅಡಕವಾಗಿರುವ ಹಂಚಿಕೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಗಳಿಸಿರುವ ಪ್ರಗತಿಯ ಬೆಲೆ ಕಟ್ಟುವ ಬಗ್ಗೆ ಸಹ ಕೇಂದ್ರ ಸರ್ಕಾರದವರು ವಿಶೇಷ ಗಮನಕೊಡಲು ಉದ್ದೇಶಿಸಿದ್ದಾರೆ.

ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುಶಲವ	0	6
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ಸಂಧ್ಯಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	6
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮೀನ್ದಾರ	1	8
33	ಬಾಳಿನ ಬೆಡಗು	1	0
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ವಿವರವಾದ ಕೆಟಲಾಗಿಗೆ ರಿ.

ನವಭಾರತ ಬುಕ್ ಡಿಪೊ, ಉಡುಪಿ.



ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

(೧ನೇ ಪುಟದಿಂದ)

ಭಾರತವು ನಿರ್ಧರಿಸಿ ಸೈನ್ಯ ಕಳಿಸಿದುದು ಅನಧಿಕಾರದ ವಿಷಯವಲ್ಲವೇ ಅಲ್ಲ. ಪಾಕಿಸ್ತಾನ ಮಾಡಿದುದೇ ತಪ್ಪು. ಇದಕ್ಕೆ ಸಂಯುಕ್ತ ರಾಷ್ಟ್ರಸಂಘದ ಸಮಿತಿಯವರು ಪಾಕಿಸ್ತಾನವನ್ನು ಆಕ್ರಮಣಕಾರಿ ರಾಷ್ಟ್ರವೆಂದು ಹೆಸರಿಸಿದ ಸಂಗತಿಯ ಆಧಾರವೊಂದೇ ಸಾಕು. ಪಾಕಿಸ್ತಾನಿ ಪ್ರಧಾನಿಗಳು ತಮ್ಮ ರಾಷ್ಟ್ರದ ಮೇಲೆ ಬಂದಿರುವ ಈ ಕಳಂಕದ ಸುದ್ದಿಯನ್ನ ಎತ್ತದಿರುವುದು ನಿಜಕ್ಕೂ ಆಶ್ಚರ್ಯ! ಅದಕ್ಕಾಗಿ ಪಶ್ಚಾತ್ತಾಪಪಡುವ ಬುದ್ಧಿಯನ್ನಂತೂ ಅವರು ಪಡೆದು ಬಂದಿಲ್ಲವೆನ್ನೋಣ.

ಘಟನಾತ್ಮಕವಾಗಿಯೂ ಶಾಸನಬದ್ಧವಾಗಿಯೂ ಭಾರತದೊಡನೆ ಕಾಶ್ಮೀರ ಸೇರಿಹೋಗಿದೆ ಎಂಬ ನೆಹರು ನಿಲುಮೆಯು ಅಸಮರ್ಥನೀಯವೆಂದೂ ಭಾರತವು ಬಲಾತ್ಕಾರವಾಗಿ ಕಾಶ್ಮೀರ ಪ್ರದೇಶವನ್ನು ತನ್ನ ವಶದಲ್ಲಿಟ್ಟುಕೊಂಡಿದೆಯೆಂದೂ ಇದು ಅನೈತಿಕವಷ್ಟೇಯಲ್ಲ, ಅಕ್ರಮವೂ ಆಗಿದೆಯೆಂದೂ ಪಾಕಿಸ್ತಾನಿ ಧುರೀಣರ ಆರೋಪ. ಕಾಶ್ಮೀರದ ರಾಜರು ಮಾಡಿಕೊಂಡ ಒಪ್ಪಂದವೇ ಅಸಿಂಧುವೆನ್ನುವ ಈ ಮೂರ್ಖ ಶಾಸನಕರ್ತರ ಮನೋಭಾವಕ್ಕೆ ಒಪ್ಪುವ ಮಾತಿದು; ಹೊರತು ರಾಜಕೀಯ ಪಟುಗಳೆಂದೂ ಪಾಕಿಸ್ತಾನದ ಅಭಿಪ್ರಾಯಕ್ಕೆ ಸೈಗುಟ್ಟರು.

"ನಾವು ಕಾಶ್ಮೀರದಲ್ಲಿ ನಿಷ್ಪಕ್ಷಪಾತವೂ ನ್ಯಾಯಪರವೂ ಆದ ಜನಮತಗಣನೆಗೆ ಬದ್ಧನಾಗಿದ್ದೇವೆ; ಮತ್ತಿದಕ್ಕಾಗಿ ನಾವು ಹೋರಾಡುತ್ತೇವೆ" ಎಂದು ಪ್ರಾಮಾಣಿಕತೆಯ ನಟನೆಯೊಡನೆ ಹೇಳುವ ಪಾಕಿಸ್ತಾನವು ಸಂಯುಕ್ತ ರಾಷ್ಟ್ರಸಂಘದಲ್ಲಿ ೧೯೪೮ನೇ ಆಗೋಸ್ತು ೧೩ನೇ ದಿನಾಂಕ ಕೈಗೊಳ್ಳಲಾದ ಗೊತ್ತುವಳಿಯ ಕಡೆಗೆ ಗಮನವನ್ನು ಸೆಳೆದು ಪಾಕಿಸ್ತಾನದ ಸೇನೆಯು ಮೊದಲು ಕಾಶ್ಮೀರದಿಂದ ಕಾಲ್ತೆಗೆಯಬೇಕೆನ್ನುವ ನೆಹರು ಹೇಳಿಕೆಯು ಗೊತ್ತುವಳಿಯ ಸದಾಶಯಕ್ಕೆ ತೀರ ವಿರುದ್ಧವಿದೆ ಎನ್ನುತ್ತದೆ.

ಪಾಕಿಸ್ತಾನದ ಅಭಿಪ್ರಾಯದಂತೆ ಉಭಯ ದೇಶಗಳ ಸೇನೆಗಳೂ ಏಕಕಾಲಕ್ಕೆ ಕಾಶ್ಮೀರದಿಂದ ಕಾಲ್ತೆಗೆಯ ಬೇಕೆಂಬುದೇ ಸಂಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಯು ಹೇಳುವ ವಿಷಯ. ಆದರೆ ಇದಕ್ಕೂ ಸತ್ಯಸ್ಥಿತಿಗೂ ತಾಳಮೇಳವಿಲ್ಲವೆಂಬುದನ್ನು ಗಮನಿಸಲು ಯಾರೊಬ್ಬರೂ ತಪ್ಪಲಾಗದು. ಪಾಕಿಸ್ತಾನವು ಎತ್ತಿ ಹೇಳುವ ಆ ಗೊತ್ತುವಳಿಯ ಕೆಳಗಿನಂಶವೇ ಈ ಸಂಗತಿಯನ್ನು ವಿಶದೀಕರಿಸುತ್ತದೆ.

"ಸಂಯುಕ್ತರಾಷ್ಟ್ರ ಸಂಘದ ಸಮಿತಿಯು ಪಾಕಿಸ್ತಾನಿ ದಳಗಳನ್ನು ಕಾಶ್ಮೀರದಿಂದ ಹಿಂದೆಗೆದುಕೊಳ್ಳಲಾಗುತ್ತಿದೆ ಎಂದು ಭಾರತ ಸರಕಾರಕ್ಕೆ ತಿಳಿಸಿದ ಬಳಿಕ, ಭಾರತೀಯ ಸೇನೆಯ ಹೆಚ್ಚಿನಂಶವನ್ನು ಸಮಿತಿಯೊಡನೆ ಮಾಡಿಕೊಳ್ಳುವ ಒಡಂಬಡಿಕೆಗನುಸಾರವಾಗಿ ಹಿಂದೆಗೆದುಕೊಳ್ಳಲು ಪ್ರಾರಂಭಿಸಬೇಕೆಂದು ಭಾರತ ಸರಕಾರವು ಒಪ್ಪುತ್ತದೆ." ಈ ವಾಕ್ಯದಲ್ಲಿ ಪಾಕಿಸ್ತಾನದ "ಎಲ್ಲ" ಸೇನೆಯು "ಮೊದಲು" ಕಾಶ್ಮೀರದಿಂದ ಹಿಂದೆಗೆದುಕೊಳ್ಳಲ್ಪಡಬೇಕೆಂಬ ಅತ್ಯಂತ ಮಹತ್ವದ ವಿಷಯವಿದೆ—ನೆಹರು ಈಗ ಪುನರುಚ್ಚರಿಸಿರುವುದೂ ಈ ಮಾತನ್ನೆ ಅಲ್ಲವೆ?

"ಏಕಕಾಲದಲ್ಲಿ" ಸೇನೆಗಳು ಹಿಂದೆಗೆದುಕೊಳ್ಳಲ್ಪಡಬೇಕೆಂದು ಪಾಕಿಸ್ತಾನವು ಹಿಂದಿನಿಂದ ಸಮಿತಿಯನ್ನು ಒತ್ತಾಯಿಸಿತು. ಆಗ ಸಮಿತಿ ಹೇಳಿದುದೇನು? ಪಾಕಿಸ್ತಾನಿ ಸೇನೆಯ ಸ್ಥಾನಮಾನಕ್ಕೂ ಭಾರತೀಯ ಸೇನೆಯದಕ್ಕೂ ಅಂತರವಿದೆ ಎಂದು ಸಮಿತಿಯವರು ಮನಗಂಡಿದ್ದರು. ಏಕೆಂದರೆ ಪಾಕಿಸ್ತಾನವು ಆಕ್ರಮಣಗೈದ ರಾಷ್ಟ್ರ. ಆದುದರಿಂದಲೇ ಪಾಕಿಸ್ತಾನದ ಎಲ್ಲ ಸೇನೆಯೂ ಮೊದಲು ವಾಪಸಾಗಬೇಕು; ಭಾರತೀಯ ಸೇನೆಯ "ಹೆಚ್ಚಿನಂಶ" ಹಿಂದಿನಿಂದ ವಾಪಸಾದರೆ ಸಾಕು.

ಅಂದರೆ ಪಾಕಿಸ್ತಾನಕ್ಕೆ ಕಾಶ್ಮೀರದಲ್ಲಿ ಸೇನೆಯನ್ನಿರಿಸುವ ಅಧಿಕಾರವೇ ಇಲ್ಲ; ಭಾರತಕ್ಕೆ ಕೆಲವು ದಳಗಳನ್ನಾದರೂ ಇಡುವ ಅಧಿಕಾರವಿದೆ ಎಂದರ್ಥ. ಭಾರತ ಸರಕಾರವೂ ಸಮಿತಿಯವರೂ ಮಾತನಾಡಿಕೊಂಡು ಈ ದಳದ ಪ್ರಮಾಣವನ್ನು ನಿರ್ಧರಿಸುತ್ತಾರೆ. ಈ ವಿಷಯದಲ್ಲಿ ನಡುವೆ ಬಾಯಿ ಹಾಕಲಿಕ್ಕೆ ಸಹ ಪಾಕಿಸ್ತಾನ ಅಧಿಕಾರ ಹೊಂದಿಲ್ಲ. ಇದೆಲ್ಲ ಸಂಗತಿಯನ್ನು ಸಂಯುಕ್ತ ರಾಷ್ಟ್ರ ಸಂಘದ ಪರವಾಗಿ ಎಂದೋ ಸ್ಪಷ್ಟಪಡಿಸಲಾಗಿದೆ.

ಪ್ರಾಯಶಃ ಈಗಿನ ಪಾಕಿಸ್ತಾನಿ ಪ್ರಧಾನರಿಗೆ ಹಿಂದಿನೆಲ್ಲ ದಸ್ತಾವೇಜುಗಳನ್ನು ಚೆನ್ನಾಗಿ ಅಭ್ಯಸಿಸಲಿಕ್ಕೆ ಸಾಕಷ್ಟು ಪುರಸೊತ್ತು ಸಿಕ್ಕಿಲ್ಲವೆಂದು ಕಾಣುತ್ತದೆ; ಅವರು ದಯಮಾಡಿ ತಾವು ಆಧಾರಕ್ಕೆಂದು ಹಿಡಿದಿರುವ ಸಂಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಯ ಪ್ರತಿಯನ್ನೂ ಆ ಬಳಿಕ ಪಾಕಿಸ್ತಾನದ ಆಗಿನ ವರಿಷ್ಠರು ಎತ್ತಿದ್ದ ಆಕ್ಷೇಪಗಳಿಗೆ ಸಮಿತಿಯವರು ಕೊಟ್ಟ ಮೇಲಿನ ಪ್ರಕಾರದ ವಿವರಣೆಯನ್ನೂ ತರಿಸಿಕೊಂಡು ಲಕ್ಷ್ಯಪೂರ್ವಕವಾಗಿ ಓದಲಿ! ಆಗಲಾದರೂ ನ್ಯಾಯ, ಸತ್ಯಗಳು ಯಾರ ಪಕ್ಷಕ್ಕಿವೆ ಎಂಬುದು ತಿಳಿದುಬಂದೀತು.

ನೆಹರುಗಳು ಹೇಳಿರುವ ಮಾತು ತೀರ ಸರಳವಾದ ಪರಿಹಾರವನ್ನು ಸೂಚಿಸುತ್ತದೆ—ಪಾಕಿಸ್ತಾನದ ಸೇನೆ ಮೊದಲು ಕಾಲ್ತೆಗೆಯಲಿ ಎಂಬುದೇ ಅದು. ಪಾಕಿಸ್ತಾನ ಈ ಕೆಲಸವನ್ನು ಮಾಡಿದ ಬಳಿಕವಷ್ಟೇ ಭಾರತವು ಹೆಜ್ಜೆಯನ್ನು ಮುಂದಿಡುವ ಪ್ರಮೇಯ ಬರುತ್ತದೆ. ಆಗ ಭಾರತವು ಏನು ಮಾಡುತ್ತದೆ ಎಂಬುದನ್ನು ಸಹ ನೆಹರು ಸೂಚಿಸಿದ್ದಾರೆ. ಕಾಶ್ಮೀರದಲ್ಲಿ ಇಟ್ಟುಕೊಳ್ಳುವ ಭಾರತೀಯ ದಳವೆಷ್ಟಿರಬೇಕೆಂಬ ವಿಷಯ ಆಗ ಚರ್ಚೆಯಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಇಂಥ ಚರ್ಚೆಯ ಕಾಲದಲ್ಲಿ ಪಾಕಿಸ್ತಾನದ ಸಶಸ್ತ್ರ ಆಕ್ರಮಣವು—ಈಗ ಅದಕ್ಕೆ ಸಿಗುತ್ತಿರುವ ಭಾರಿದೊಡ್ಡ ಪ್ರಮಾಣದ ಸೈನಿಕ ಸಹಾಯದ ನೆಲೆಯಿಂದ—ಎಷ್ಟು ಬಲಶಾಲಿಯಾಗಬಹುದೆಂಬ ಅಂದಾಜನ್ನು ಮುಂದಾಗಿ ಮಾಡಿಕೊಂಡು, ಅದನ್ನು ತಡೆಯಲು ಸಮರ್ಥವಾದಷ್ಟು ಸೈನ್ಯ ಪ್ರಮಾಣವನ್ನು ಭಾರತವು ಕಾಶ್ಮೀರದಲ್ಲಿಡುವುದು ಅಗತ್ಯವಾಗುತ್ತದೆ. ತಾನು ಸೈನಿಕ ಒಪ್ಪಂದಗಳನ್ನು ಮಾಡಿಕೊಂಡಿರುವ ಸಂಗತಿಯೊಡನೆ ಕಾಶ್ಮೀರ ಪ್ರಶ್ನೆಯನ್ನು ತಳಕುಹಾಕುವುದು ಸರಿಯಲ್ಲವೆನ್ನುವ ಪಾಕಿಸ್ತಾನದ ನಿಲುಮೆಯು ಅದು ನಡೆಸಬಹುದಾದ ಆಕ್ರಮಣವು ಹಿಂದಿಗಿಂತಲೂ ಹೆಚ್ಚು ಸಶಕ್ತವಾಗಿರಬಹುದೆಂಬ ಸಾಧಾರವಾದ ಊಹೆಯ ಮೇಲಿನಿಂದಲೇ ತ್ಯಾಜ್ಯವಾಗುತ್ತದೆ.

ಜಾಗತಿಕ ಶಾಂತಿಗೆ ಭಯಕಾರಕವಾಗಿದೆ ಎಂಬುದಾಗಿ ಪಾಕಿಸ್ತಾನವು ತನ್ನ ಮಿತ್ರರಾಷ್ಟ್ರಗಳನ್ನುದ್ದೇಶಿಸಿ ಹೇಳುವ ಕಾಶ್ಮೀರ ಸಮಸ್ಯೆಯು ನ್ಯಾಯವಿರುದ್ಧವಲ್ಲದಂತೆ ಪರಿಹಾರಹೊಂದಲು ಆ ಮಿತ್ರರಾಷ್ಟ್ರಗಳು ಮಾಡಬೇಕಾದ ಕೆಲಸವೊಂದಿದೆ. ಪಾಕಿಸ್ತಾನಕ್ಕೆ "ನೆಹರುಗಳು ಎತ್ತಿ ಹೇಳಿರುವ ಸತ್ಯಸಂಗತಿಯಂತೆ ನಡೆಯಿರಿ" ಎಂಬ ಬುದ್ಧಿವಾದವನ್ನಿತ್ತು ಪಾಕಿಸ್ತಾನವನ್ನು ಈ ಮಿತ್ರರಾಷ್ಟ್ರಗಳು ಸರಿಯಾದ ದಾರಿಗೆ ತಂದು ನಿಲ್ಲಿಸಿ ಆ ದಾರಿಯಲ್ಲಿ ಮುನ್ನಡೆಸುವುದೇ ಆ ಕೆಲಸ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧನಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ —
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಕಾಸರಗೋಡಿನ ಮಹಾಜನರಲ್ಲಿ ವಿನಂತಿ

ಕಾಸರಗೋಡು ತಾಲೂಕಿನ ಚಂದ್ರಗಿರಿ ನದಿಯ ಉತ್ತರದ ಪ್ರದೇಶವನ್ನು ಕರ್ಣಾಟಕ ಪ್ರಾಂತದಲ್ಲೆ ಉಳಿಸುವುದಕ್ಕಾಗಿ ದ.ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರೂ, ಪ್ರಾಂತ ಹಾಗೂ ಕೇಂದ್ರದ ಶಾಸನ ಸಭೆಗಳ ಜಿಲ್ಲೆಯ ಕಾಂಗ್ರೆಸ್ ಪ್ರತಿನಿಧಿಗಳವರೂ ತಮ್ಮ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿದ್ದಾರೆ. ಶ್ರೀಗಳಾದ ಬಿ. ಶಿವರಾವ್, ಕೆ. ಎಸ್. ಹೆಗ್ಡೆ, ಮತ್ತು ಯು. ಶ್ರೀನಿವಾಸ ಮಲ್ಯರು ದಿಲ್ಲಿಯಲ್ಲಿ ಇದೇ ಪ್ರಯತ್ನದಲ್ಲಿದ್ದಾರೆ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರೂ ದಿಲ್ಲಿಯ ಕಾಂಗ್ರೆಸ್ ಪ್ರತಿನಿಧಿಗಳೂ ಯಾವ ರೀತಿಯಲ್ಲಿ ಪ್ರಯತ್ನ ನಡೆಸುತ್ತಿದ್ದಾರೆಂಬುದನ್ನೆಲ್ಲಾ ಪತ್ರಿಕೆಗಳಲ್ಲಿ ಪ್ರಕಟಿಸುತ್ತಾ ಹೋಗುವುದು ಯುಕ್ತವೂ ಅಲ್ಲ, ವಿವೇಕವೂ ಅಲ್ಲ. ಕೆಲವು ಮಟ್ಟಿಗೆ ಅದು ಅಚಾತುರ್ಯವಾಗಬಹುದು. ಕಾಸರಗೋಡಿನ ಬಂಧುಗಳಿಗೆ ನಾವು ತಿಳಿಸಲು ಅಪೇಕ್ಷಿಸುವುದೇನೆಂದರೆ ಕಾಸರಗೋಡಿನ ಉತ್ತರ ಭಾಗವನ್ನು ಕರ್ಣಾಟಕದಲ್ಲೇ ಉಳಿಸಲು ಮಾನವಸಾಧ್ಯವಾದ ಪ್ರಯತ್ನಗಳೆಲ್ಲಾ ಕ್ರಮವಾಗಿ ನಡೆಯುತ್ತಿವೆ. ಮತ್ತು ಅದರಲ್ಲಿ ಕಟ್ಟಕಡೆಗೆ ಜಯ ಹೊಂದಬಹುದೆಂಬ ಆಸೆ ಕಟ್ಟಿಕೊಳ್ಳಲು ಸಾಕಷ್ಟು ಕಾರಣಗಳಿವೆ.

ಎಸ್. ಆರ್. ಸಿ. ಮಸೂದೆಯು ಮದ್ರಾಸು, ಮೈಸೂರು, ಬೊಂಬಾಯಿ ಮತ್ತು ಹೈದರಾಬಾದಿನ ಶಾಸನ ಸಭೆಗಳ ಮುಂದೆ ಬರುವಾಗ ಅದರಲ್ಲಿ ಕಾಸರಗೋಡಿನ ಕುರಿತಾದ ತಿದ್ದುಪಡಿಯು ಅಗತ್ಯವೆಂದು ಆಯಾ ಶಾಸನ ಸಭೆಗಳ ಕರ್ನಾಟಕ ಸದಸ್ಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವಂತೆ ವ್ಯವಸ್ಥೆ ಮಾಡಲಾಗಿದೆ. ಪ್ರಧಾನ ಮಂತ್ರಿಗಳು ಬರುವ ತಿಂಗಳ ತಾ. ೯ರಿಂದ 11ರ ವರೆಗೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರವಾಸ ಮಾಡುವಾಗ ಅವರನ್ನು ಪ್ರತ್ಯೇಕವಾಗಿ ಕಂಡು ಕಾಸರಗೋಡಿನ ನಿರ್ಣಯದ ಕುರಿತು ಜಿಲ್ಲೆಗಾಗಿರುವ ಅನ್ಯಾಯವನ್ನು ಅವರ ಗಮನಕ್ಕೆ ತರಲಾಗುವುದು.

ಪ್ರಾಂತೀಯ ಶಾಸನ ಸಭೆಗಳವರು ತಮ್ಮ ಅಭಿಪ್ರಾಯವನ್ನು ಕೊಟ್ಟ ಮೇರೆಗೆ ಎಸ್. ಆರ್. ಸಿ. ಮಸೂದೆಯು ಎಪ್ರಿಲ್ ತಿಂಗಳ ಕೊನೆಯಲ್ಲಿ ಪಾರ್ಲಿಮೆಂಟಿನ ಮುಂದೆ ಬರಲಿರುವುದು. ಆಗ ಜಿಲ್ಲೆಯಿಂದ ಕಾಂಗ್ರೆಸ್ ಪ್ರತಿನಿಧಿಗಳು ದಿಲ್ಲಿಗೆ ಹೋಗಿ ಪ್ರಯತ್ನ ಮಾಡಲಿರುವರು. ಎಸ್. ಆರ್. ಸಿ. ಮಸೂದೆಯು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದಲ್ಲಿ ಚರ್ಚೆಗೆ ಬರುವಾಗಲೇ ಕಾಸರಗೋಡಿಗೆ ಸಂಬಂಧವಾದ ತಿದ್ದುಪಡಿಯನ್ನು ಮಾಡುವಂತೆ ಸಂಘಟಿತವಾದ ಪ್ರಯತ್ನವನ್ನು ಮಾಡಲಾಗುವುದು. ಆದುದರಿಂದ ಕಾಸರಗೋಡಿನ ಮಹಾಜನರು ತಾಳ್ಮೆ ವಹಿಸಿ ಪಾರ್ಲಿಮೆಂಟಿನ ಕೊನೆಯ ನಿರ್ಣಯದ ವರೆಗೆ ಯಾವ ರೀತಿಯ ಪ್ರತ್ಯಕ್ಷ ಆಂದೋಲನವನ್ನಾದರೂ ಹೂಡದೆ ಶಾಂತ ಮತ್ತು ಕ್ರಮಬದ್ಧ ಚಳವಳವನ್ನೇ ಮುನ್ನಡೆಸಬೇಕೆಂದು ಕೇಳಿಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ಏನಾನರೊಂದು ಪ್ರತ್ಯಕ್ಷ ಚಳವಳ ಹೂಡುವುದರಿಂದ ಕಾಸರಗೋಡಿನ ಪ್ರಯತ್ನವನ್ನು ಶಾಂತ ರೀತಿಯಲ್ಲಿ ಇತ್ಯರ್ಥ ಪಡಿಸಲು ಸಹಾಯಕವಾಗುವುದರ ಬದಲಿಗೆ ಹಾನಿಯೊದ್ದಗಿಸುವಂತಾಗುವುದೆಂದು ನಮ್ಮ ಖಚಿತ ಅಭಿಪ್ರಾಯ. ಆದುದರಿಂದ ಕಾಸರಗೋಡಿನ ನಮ್ಮ ಬಂಧುಗಳು, ಮುಖ್ಯವಾಗಿ ಕಾಂಗ್ರೆಸಿಗರು, ನಮ್ಮೀ ವಿನಂತಿಯನ್ನು ಮನ್ನಿಸಿ, ಉದ್ವೇಗವಶರಾಗದೆ, ಈ ಸಂದರ್ಭದಲ್ಲಿ ಪ್ರತ್ಯಕ್ಷ ಆಂದೋಲನದ ಯಾವ ಪ್ರಯತ್ನಕ್ಕೂ ಬೆಂಬಲವನ್ನೀಯದೆ ಶಾಂತರಾಗಿರಬೇಕೆಂದು ಬೇಡಿಕೊಳ್ಳುತ್ತೇವೆ.

(ಸಹಿ) ಕೆ. ಕೆ. ಶೆಟ್ಟಿ.
(,,) ಭೋಜರಾವ್ ಬೋಳಾರ್.
ಪ್ರಧಾನ ಕಾರ್ಯದರ್ಶಿಗಳು,
ಜಿಲ್ಲಾ ಕಾಂಗ್ರೆಸ್ ಕಮಿಟಿ.

ಮಂಗಳೂರು, ತಾ. 27-3-56.

Edited, Printed & Published By K. H. Shetty, at the Navayuga Press, Udipi S. India

Rn. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 12—4—1956

ಸಂಚಿಕೆ ೩೨
NO. 32

ಬಂಡುಗಾರ ನಾಗ ಜನಾಂಗ

ನಮ್ಮ ದೈನಿಕಗಳು ಅಸ್ಸಾಂ ರಾಜ್ಯದ ಜಧಾನಿಯಾದ ಶಿಲ್ಲಾಂಗಿನಿಂದ ಇದೇ ಂಕ ಕಳಿಸಿದ ಬಿತ್ತರಗೊಂಡ ಒಂದು ದ್ದಿಯನ್ನು ಪ್ರಕಟಿಸಿ, ದೌರ್ಜನ್ಯಕಾರಿ ವಳಿಗಳಲ್ಲಿ ನಿರತರಾದ ನಾಗರು ಏಳು ಂದಿ ನಿಷ್ಪ ನಾಗರನ್ನು ಸೆರೆ ಹಿಡಿದು, ರಲ್ಲಿ ನಾಲ್ವರ ರುಂಡ ಬೇಟೆಯಾಡಿದ ಯನ್ನು ಜನರ ಗಮನಕ್ಕೆ ತಂದಿವೆ ಮನುಷ್ಯರ ರುಂಡ ಬೇಟೆಯಾಡುವು ನಾಗರ ಪಾಲಿಗೆ ಪ್ರಾಚೀನ ಕಾಲ ದಲೂ ನಡೆದು ಬಂದ ಸಂಪ್ರದಾಯ: ರೆ ನಾಗರಿಕತೆಯು ಉಚ್ಚ ಸ್ಥಾನವ ದಿರುವ ಈ ಕಾಲದಲ್ಲಿ ನಾಗರು ತ ಹಿಂದಿನ ಪರಂಪರೆಯನ್ನು ಬಿಟ್ಟು ಟ್ಟು ಹೊಸ ವಾತಾವರಣಕ್ಕೆ ಸರಿ ಾದ ಶಾಂತ ಮಾರ್ಗಾವಲಂಬನ ಕೈ ಂಡಿರಬಹುದೆಂಬ ಭಾವನೆ ನಮ್ಮದು. ಇದು ಆಧಾರವಿಲ್ಲದ ವಿಚಾರವೇನಲ್ಲ. ನಿಕ ನಾಗರಿಕತೆಯ ಪರಿಚಯವನ್ನು ಪ್ರಾಚೀನ ಬುಡಕಟ್ಟಿನ ಜನರಿಗೆ ಸಹ ಾಡಿಸಿ ಕೊಡಲು ಕಳೆದ ಕೆಲವು ದಶಕ ಂದ ತೀವ್ರಪ್ರಯತ್ನ ನಡೆದಿದ್ದು ಅದರ ತಾಂಶಗಳು ಈ ಕಾರ್ಯಕ್ಕೆ ಇಂಬುಕೊ ೆ. ಮುಖ್ಯವಾಗಿ ಕ್ರೈಸ್ತ ಮಿಶನರಿಗಳು ಗರನ್ನು ಆಧುನಿಕ ಕ್ರಮದ ಶಿಕ್ಷಣ ಆಚಾರಕ್ಕೂ ತರಬೇತಿಗೊಳಿಸಿ ರೆ

ಈಗ ನಾಗ ಪ್ರದೇಶದಲ್ಲಿ ಹುಟ್ಟಿರುವ ಳಿಗೆ ಮೂಲಕಾರಣನೆನಿಸಿದ ೋ ಎಂಬ ವ್ಯಕ್ತಿಯು ಪ್ರಥಾವಕ್ಕೆ ಆತ ಕ್ರೈಸ್ತ ಮಿಶನರಿಗಳಿಂದ ಸಂಪಾದಿಸಿ ಜ್ಞಾನವೇ ಹೇತು ವಿದ್ಯಾಬುದ್ಧಿ ಸಂ ನಾದ ಈ ನಾಗ ನಾಯಕನು ತನ್ನ ಾಂಗದವರಿಗಾಗಿ ಸ್ವತಂತ್ರ ನಾಗಸ್ಥಾ ನೇಕೆಂದು ಹಠ ಹಿಡಿಯುತ್ತಿದ್ದಾನೆ. ಭಾರತವು ಸ್ವಾತಂತ್ರ್ಯವನ್ನು ಪಡೆ ದಿನಿಂದ ಈ ನಾಯಕನ ಬೇಡಿಕೆಯು ಾದ ಆಂದೋಲನದ ರೂಪವನ್ನು ದಿದೆ. ಕಳೆದ ಎಳೆಂಟು ವರ್ಷಗಳಲ್ಲಿ ನಾಯಕನು ನಾಗ ರಾಷ್ಟ್ರೀಯ ಮಂ ವೆಂಬ ಸಂಸ್ಥೆಯ ಹೆಸರಿನಲ್ಲಿ ಕರ ಅನಾಹುತಗಳನ್ನು ನಾಗಬೆಟ್ಟ ೇಶಗಳಲ್ಲಿ ನಡೆಸಲು ಪ್ರೇರಣೆಕೊಟ್ಟ ನೆ.

ಇಂಥ ದುಷ್ಟ ಪ್ರೇರಣೆಯ ಫಲವಾಗಿ ತಾರಾನುಕೂಲತೆಗಳು ತೀರ ವಿರಳ ಗಿರುವ ನಾಗ ಪ್ರದೇಶದಲ್ಲಿ, ತಂತಿಗಳ ಕಡಿಯುವ, ಸೇತುವೆಗಳನ್ನು ಉರು ಬಿಡುವ, ರಸ್ತೆಗಳನ್ನು ಪ್ರಯಾಣಕ್ಕೆ ಕಷ್ಟರವಾಗಿ ಮಾಡುವ, ಹಳ್ಳಿಗೆಹಳ್ಳಿಯನ್ನೆ ಅಗ್ನಿಗಾಹುತಿ ನೀಡುವ, ಭಾರತಸರಕಾರಕ್ಕೆ ನಿಷ್ಠರಾದ ನಾಗರನ್ನು ಕೊಂದುಹಾಕುವ, ಸರಕಾರಿ ಅಧಿಕಾರಿಗಳ ಮೇಲೇರಿ ಹೋಗುವ ಅತ್ಯಾಚಾರಗಳು ಬಹಳವಾಗಿ ನಡೆದಿವೆ

ಫಿಜೋ ಗುಂಪಿಗೆ ಸೇರಿದ ಈ ದೌರ್ಜನ್ಯಕಾರಿ ನಾಗರ ಸಂಖ್ಯೆಯು ಸುಮಾರು ೧೫೦೦ ಇರಬಹುದು ಕೆಲವು ನಾಗ ಗುಂಪುಗಳ ಸಹಾನುಭೂತಿಯನ್ನೂ ಇವರು ಪಡೆದಿರುವರೆಂದು ನಂಬಲಾಗಿದೆ ಈ ಭಯಕಾರಕರ ಬಳಿ ಸುಮಾರು ೫೦೦ ಬಂದೂಕುಗಳಿವೆ ಎಂದು ತಿಳಿದು ಬಂದಿದೆ. ಇವುಗಳನ್ನು ಉಪಯೋಗಿಸಲು ಯಥೇಷ್ಟ ಮದ್ದಿನ ಸಂಗ್ರಹವೂ ಇವರಲ್ಲಿದೆ.

ಕಳೆದ ವ.ಹಾಯವ್ಧ ಕಾ° ದಲ್ಲಿ ಜ ಪಾ ನಿ ಆಕ್ರಮಣವನ್ನೆದುರಿಸಲು ನಡೆಸಿದ ಕಾರ್ಯಾಚರಣೆ ಮುಕ್ತಾಯಗೊಂಡು ಸೈನ್ಯಗಳು ವಾಪಸಾಗುವಾಗ ತಮ್ಮೊಡನೆ ಇದ್ದ ಬಂದೂಕು ಮತ್ತು ಮದ್ದಿನ ಸಂಗ್ರಹವನ್ನು ಹೊತ್ತು ತರಲಾಗದೆ ಈ ನಾಗ ಪ್ರದೇಶದಲ್ಲಿ ಬಿಟ್ಟುಬಂದಿದ್ದವು ನಾಗ ಭಯಕಾರಕರು ಈಗ ಈ ಹಳೆಯ ಸರಕುಗಳನ್ನು ಉಪಯೋಗಿಸಿ ಭಾರತ ಸರಕಾರಕ್ಕೆ ಸ್ವತಂತ್ರ, ನಾಗಸ್ಥಾನದ ಹೆಸರಿನಲ್ಲಿ ಪ್ರತಿಭಟನೆ ಕೊಡುತ್ತಿದ್ದಾರೆ

ನಾಗ ಪ್ರದೇಶವು ನಮ್ಮ ರಾಜ್ಯಘಟನೆಯಂತೆ ಸಾಕಷ್ಟು ಸ್ವಾಯತ್ತಾಧಿಕಾರವನ್ನು ಹೊಂದಿವೆ. ಗುಡ್ಡಗಾಡು ಪ್ರದೇಶಗಳ ಹಾಗು ಪ್ರಾಚೀನ ಬುಡಕಟ್ಟಿನ ಜನರಿಗೆ ನಿತ್ಯ ವ್ಯವಹಾರದಲ್ಲಿಯಾಗಲೀ ಸಾಮಾಜಿಕ ಹಾಗು ಸಾಂಸ್ಕೃತಿಕ ರಂಗದಲ್ಲಾಗಲೀ ತೊಂದರೆಯಾಗದಂತೆ ರಕ್ಷಣೆಗಳನ್ನು ಘಟನಾತ್ಮಕವಾಗಿ ಕೊಡಲಾಗಿದೆ ನಾಗ ಪ್ರದೇಶಗಳಲ್ಲಿ ಜಿಲ್ಲಾ ಮಂಡಳಿಗಳ ರಚನೆಯು ಅಲ್ಲಿಯ.ಜನರ ಸರ್ವತೋಮುಖ ಏಳಿಗೆಗೂ ಸಂಸ್ಕೃತಿಯ ವೈಶಿಷ್ಟ್ಯವನ್ನು ಕಾಪಾಡುವುದಕ್ಕೂ ಯೋಗ್ಯ ಸಾಧನವೆಂಬುದಾಗಿ ಘಟನೆಯನ್ನು ರಚಿಸಿದ ಭಾರತದ ಧುರೀಣರು ನಂಬಿದ್ದಾರೆ.

ಇದನ್ನು ನಾಗ ರಾಷ್ಟ್ರೀಯ ಮಂಡಳದ ನಾಯಕರು ಮಾತ್ರ ಮನಗಂಡಿಲ್ಲ; ಭಾರತ ಸರಕಾರದ ಉದಾರ ವರ್ತನೆಯಿಂದ ಅವರು ತೃಪ್ತರಾಗಿಲ್ಲ ಆದಾಗ್ಯೂ ಭಾರತಸರಕಾರದ ಅಧಿಕಾರಿಗಳುನಾಗರಲ್ಲಿ ಹೆಚ್ಚಿನವರ ಪ್ರೀತಿಯನ್ನುಮನಪೂರಿಸುವಿಕೆಯ ವಿಧಾನದಿಂದ ಸಂಪಾದಿಸಿಕೊಂಡು ಮೊದಲನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಾಂಗಗೊಳಿಸಿದರು ಪರಿಣಾಮದಲ್ಲಿ ಶಾಲೆಗಳೂ ಆಸ್ಪತ್ರೆಗಳೂ ಮಾರ್ಗಗಳೂ ಇತರ ಉಪಯುಕ್ತ ಸಂಸ್ಥೆಗಳೂ ಅಸ್ತಿತ್ವಕ್ಕೆ ಬರುವಂತಾಯಿತ.

ಎರಡನೇ ಯೋಜನೆಯಲ್ಲಿ ಸುಮಾರು ಒಂಭತ್ತು ಕೋಟಿ ರೂಪಾಯಿಗಳಷ್ಟು ವೆಚ್ಚವಾಗುವ ವಿಸ್ತೃತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಒತ್ತಾಯ ಅಥವಾ ಬಲಾತ್ಕಾರವನ್ನೇನೂ ಹೇರದೆ ಶಾಂತ ಮಾರ್ಗಾನುಸರಣೆಯಿಂದಲೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ ಮನವೊಲಿಸುವ ಉಪಾಯದಿಂದಲೂ ಪ್ರಜಾಪ್ರಭುತ್ವದ ಈ ಕ್ರಿಯಾತ್ಮಕ ಕ್ಷೇತ್ರದಲ್ಲಿ ನಾಗರಸಂಪೂರ್ಣಸಹಕಾರದೊರೆಕುವಂತೆ ಸರಕಾರದ ಪರವಾಗಿ ಪ್ರಯತ್ನ ನಡೆದಿದೆ

ನಾಗ ರಾಷ್ಟ್ರೀಯ ಮಂಡಳ ಮಾತ್ರ ಇದನ್ನು ವಿರೋಧಿಸುತ್ತಲಿದೆ. ಈ ವಿರೋಧವು ಶಾಂತ ಚಳವಳದ ರೂಪದಲ್ಲಿದ್ದರೆ ಅದು ದೊಡ್ಡದಲ್ಲ ಸಶಸ್ತ್ರ ಆಕ್ರಮಣ, ಲೂಟಿ, ದರೋಡೆ, ಕೊಲೆ ಸುಲಿಗೆಗಳ ರೂಪವನ್ನು ಇದು ತಳೆದಾಗ ಮಾತ್ರ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವ ವಿಶೇಷ ಹೊಣೆಗಾರಿಕೆಗೆ ಸರಕಾರವು ಹೆಗಲು ಕೊಡಬೇಕಾಗುತ್ತದೆ

ಸಾಮಾನ್ಯ ಪೋಲೀಸು ಪಡೆಯಲ್ಲದೆ ಆಸ್ಸಾಮಿನ ಸೇನೆಯ ತುಕಡಿಗಳನ್ನು ಸಹ ಜ್ಯೇಷ್ಠ ಸೈನ್ಯಾಧಿಕಾರಿಯೊಬ್ಬರ ನೇತೃತ್ವದಲ್ಲಿ ನಾಗ ಪ್ರದೇಶಕ್ಕೆ ಈಗ ಕಳಿಸಿರುವುದು ಇಂಥ ದೌರ್ಜನ್ಯವನ್ನು ಹತ್ತಿಕ್ಕಲೆಂದೇ ಆಗಿದೆ ಆದರೆ ನಾಗ ಭಯಕಾರಕರು ಸೇನೆಯ ರೂಪದಲ್ಲಿ ಇದಿರಾಗುತ್ತಿಲ್ಲ. ದಟ್ಟವಾದ ಕಾಡು ಗುಡ್ಡಗಳಿಂದ ಆವೃತವಾದ ಈ ಪ್ರದೇಶದಲ್ಲಿ ಅವರು ಸಣ್ಣ ಗುಂಪುಗಳಲ್ಲಿ ಒಡೆದುಕೊಂಡು ಕಣ್ಣು ಮುಚ್ಚಾಲೆ ಆಟವಾಡುತ್ತಿದ್ದಾರೆ

ಹೀಗಾಗಿ ನಮ್ಮ ಸೈನ್ಯಕ್ಕೆ ಪುಂಡ ನಾಗರನ್ನು ಒಮ್ಮೆಲೇ ಸೆರೆ ಹಿಡಿಯುದಾಗಲೀ ಸೋಲಿಸುವುದಾಗಲೀ ಅವರ ಮೇಲೆ ದಾಳಿ ನಡೆಸುವುದಾಗಲೀ ಸಾಧ್ಯವಾಗಿಲ್ಲ ಕೆಲವು ಪುಂಡರನ್ನು ಕೊಲ್ಲಲಾಗಿದೆ, ಪುಂಡರ ಕೆಲವು ಕೇಂದ್ರಗಳ ಮೇಲೆ ದಾಳಿ ನಡೆಸಿ ಬಂದೂಕು ಮತ್ತು ಮದ್ದಿನ ಸಂಗ್ರಹವನ್ನು ವಶಪಡಿಸಲಾಗಿದೆ; ಆದರೆ ನಾಗರ ಪುಂಡುತನವನ್ನು ಹೇಳ ಹೆಸರಿಲ್ಲದಂತೆ ಮಾಡುವುದು ಸ್ವಲ್ಪ ಕಷ್ಟವೆನಿಸಿದೆ

ಅಸ್ಸಾಮಿನ ಮುಖ್ಯ ಮಂತ್ರಿಗಳೊಡನೆ ಫಿಜೊ ಮಾತುಕತೆ ನಡೆಸಿ, ತಾನು ಶಾಂತಮಾರ್ಗವನ್ನೆ ಚಳವಳಕ್ಕಾಗಿ ಅನುಸರಿಸುವೆನೆಂದು ವಚನವಿತ್ತಿದ್ದರು. ಆದರೆ ಈ ಭಾಷೆಗೆ ತಪ್ಪಿ ಕೆಲಸವನ್ನೀಗ ನಾಗ ಭಯಕಾರಕರು ನಡೆಸುತ್ತಿದ್ದಾರೆ. ಮಾತಿಗೆ ತಪ್ಪುವವರ ಕೂಡೆ ಸಂಧಾನಯಾಚನೆಯ ಪ್ರಶ್ನೆ ಹೇಗೆ ಬಂದೀತು? ಆದುದರಿಂದಲೇ ಸರಕಾರವು ಸೈನ್ಯಶಕ್ತಿಯನ್ನು ಆಧರಿಸಿದೆ.

ಸೈನ್ಯ ಪ್ರವೇಶವು ಸರಕಾರಕ್ಕೆ ನಿಷ್ಠರಾದ ನಾಗರಲ್ಲಿ ಭಯವನ್ನು ಹುಟ್ಟಿಸಿದೆ ಎನ್ನಲಾಗುತ್ತದೆ ಆದರೆ ಇದಕ್ಕೆ ಕಾರಣವಿಲ್ಲ—ಸೈನ್ಯವು ದಂಗೆಖೋರರ ವಿರುದ್ಧ

(೧ನೇ ಪುಟ ನೋಡಿರಿ)

ವಿಶೇಷ ವಿನಂತಿ

ಅವಧಿಗೆ ಸರಿಯಾಗಿ ತಮ್ಮ ಚಂದಾ ಹಣವನ್ನು ಕ್ರಮ ಪ್ರಕಾರ ಪಾವತಿ ಮಾಡುತ್ತ ನಮ್ಮೊಡನೆ ಸದಾ ಸಹಕರಿಸುತ್ತಿರುವ 'ನವಯುಗ'ದ ಚಂದಾದಾರ ಬಂಧುಗಳಿಗೆ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಚಂದಾಹಣವನ್ನು ಇನ್ನೂ ಬಾಕಿಮಾಡಿಕೊಂಡಿರುವ ಇತರ ಚಂದಾದಾರರು ಈಗಲಾದರೂ ಬಾಕಿಯನ್ನು ಪ್ರೀತಿಯಿಂದ ಸಲ್ಲಾಯಿಸಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ ಇಲ್ಲವಾದರೆ ನಾವು ಬಾಕಿಗಾಗಿ ಕಳುಹಿಸುವ ವಿ. ಪಿ ಪಿ ಯನ್ನಾದರೂ ಸದಯಾಂತಃಕರಣದಿಂದ ಸ್ವೀಕರಿಸಬೇಕೆಂದೂ, ಆ ಬಗ್ಗೆ ಅನ್ಯಥಾ ಭಾವಿಸಬಾರದೆಂದೂ, ವಿ ಪಿ. ಪಿ ಯನ್ನು ಹಿಂದೆ ಬಿಟ್ಟು ನಮ್ಮನ್ನು ನಷ್ಟಕ್ಕೆ ಗುರಿಪಡಿಸಬಾರದೆಂದೂ ವಿನಂತಿಸಿಕೊಳ್ಳುವೆವು.

ಉಡುಪಿ.

ಮನೇಜರ್
ನವಯುಗ

ಶೀಕ ಚಂದಾ
ರೂ—೧೨—೦

NAVAYUGA WEEKLY, UDIPI.

ಬಿಡಿ ಸಂಚಿಕೆ
ಎರಡಾಣೆ

ಶಾರೀರಿಕ ದುಡಿಮೆ ಹಾಗು ಭಾರತೀಯ ಮನೋಭಾವನೆ

ಬಹಳ ಹಿಂದಿನಿಂದಲೂ ಮನುಷ್ಯನು ಜೀವನದಲ್ಲಿ ಹೆಚ್ಚಿನ ಸಂತೋಷವನ್ನು ಪಡೆಯಲು ಹಾರೈಸುತ್ತಿದ್ದನು. ಯಾವುದೇ ನೋವು, ಬೇನೆಗಳಿಲ್ಲದೆ ಅಥವಾ ಕಷ್ಟವಿಲ್ಲದೆ ಇಂದ್ರಿಯ ಸುಖವನ್ನು ಪಡೆಯಲು ಆತನು ಹಂಬಲಿಸುತ್ತಿದ್ದನು. ಯಾವುದೇ ನೋವಿಲ್ಲದೆ ಕೇವಲ ಸುಖವನ್ನು ಅನುಭವಿಸಬಹುದಾದ ಸ್ಥಳವೆಂಬ ಕಲ್ಪನೆಯನ್ನು ಮನುಷ್ಯನು "ಸ್ವರ್ಗ"ದ ಬಗ್ಗೆ ಇಟ್ಟುಕೊಂಡಿದ್ದನು.

ಸಾಮಾನ್ಯವಾಗಿ ಪ್ರತಿಯೊಂದು ಮತವೂ ತನ್ನ ಅನುಯಾಯಿ ಭಕ್ತರಿಗಾಗಿ ಇಂಥ ಸ್ವರ್ಗದ ಕಲ್ಪನೆಯನ್ನು ಪ್ರತಿಪಾದಿಸಿರುತ್ತದೆ. ತಿನ್ನಲು, ಕುಡಿಯಲು, ಮೋಜು ಮಾಡಲು ಎಲ್ಲ ಸುಖ ಸಾಧನಗಳೂ ವಿಪುಲವಾಗಿರುವ, ವಯೋದೋಷವಾಗಲೀ ಜರಾಮರಣಗಳಾಗಲೀ ಬಾಧಿಸದ ಸ್ವರ್ಗ ಲೋಕದ ದ್ವಾರವನ್ನು ಮುಟ್ಟಲು ಪ್ರಯತ್ನಿಸಿರೆಂಬುದು ಈ ಮತಗಳ ಬೋಧನೆ.

ಹಿಂದು ಮತವು ಸ್ವರ್ಗದಲ್ಲಿ ನಂದನವನ, ಕಾಮಧೇನು, ಕಲ್ಪತರು, ಅಪ್ಸರಾಸ್ತ್ರೀ ಸುಖದ ಕಲ್ಪನೆಯನ್ನು ಪೋಷಿಸಿತು—ನಾವು ಬಯಸುವುದಕ್ಕೂ ಅಂಥ ಬಯಕೆ ಪೂರೈಸಲ್ಪಡುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲವೆಂಬಂಥ ಸ್ವರ್ಗವದು. ಕ್ರೈಸ್ತ ಮತಾನುಸಾರ "ಗಾರ್ಡನ್ ಆಫ್ ಈಡನ್" ಪರಿಶ್ರಮವಿಲ್ಲದೆ ಸುಖಿಸುವ ಕೇಂದ್ರಸ್ಥಾನ; ಇಲ್ಲಿ ಮನುಷ್ಯರೆಲ್ಲರಿಗೂ ಸಂತೋಷವೇ ಸಂತೋಷ.

ಕಣ್ಣೀರಿಲ್ಲದೆ, ಬೆವರಿಳಿಸದೆ, ಪರಿಶ್ರಮ ಅಥವಾ ಪ್ರಯತ್ನಗಳಿಲ್ಲದೆ ಸಕಲಸುಖಸಾಧನಗಳೂ ಸಂತೋಷ ಸಂಭ್ರಮಗಳೂ ಅನುಭವಿಸಲು ಸಿಗುವ ಆ ಸ್ವರ್ಗವಾಗಿ ಭೂಮಿಯನ್ನು ಪರಿವರ್ತಿಸಲು ಆಗುತ್ತಿಲ್ಲವೇಕೆ ಎಂಬ ಜಿಜ್ಞಾಸೆ ಮನುಷ್ಯನಲ್ಲಿ ಹುಟ್ಟಲಿಕ್ಕೂ ಸ್ವರ್ಗ ವೈಭವದ ಬಣ್ಣನೆಯೇ ಕಾರಣ.

"ಜೇನು ಸುರಿವ, ಹಾಲು ಹರಿವ ದಿವಂ ಭೂಮಿಗಿಳಿಯಿತು" ಎಂದಾಗಲು ಪ್ರತಾಪಶಾಲಿಗಳೆಲ್ಲ ಹಿಂದಿನಿಂದಲೂ ಪ್ರಯತ್ನಪಟ್ಟರು. ತಾನು ಬಿತ್ತುವ ಕಷ್ಟವನ್ನನುಭವಿಸದೆ ಕೊಯ್ಯುವ ಸುಖಕ್ಕಷ್ಟೆ ಭಾಗಿಯಾಗುವ ಉಪಾಯವನ್ನು ಮನುಷ್ಯನು ತನ್ನ ಬುದ್ಧಿವಂತಿಕೆಯನ್ನುಪಯೋಗಿಸಿ ಕಂಡುಕೊಳ್ಳಲು ಬಹಳವಾಗಿ ಹವಣಿಸಿದನು.

ಪುಸ್ತಕಗಳಲ್ಲಿ ಮತ್ತು ಉಪದೇಶಗಳಲ್ಲಿ ವರ್ಣಿಸಲ್ಪಡುವ ಸ್ವರ್ಗದ ವೈಭವವನ್ನು ಮನಸ್ಸಿನಿಂದ ದೂರಮಾಡಿದರೆ, ಆಗ ವಾಸ್ತವ ಜಗತ್ತಿನ ಚಿತ್ರವು ಏನನ್ನು ತೋರಿಸುತ್ತದೆ? ಮನುಷ್ಯನಿಗೆ ಪ್ರತಿಕ್ಷಣ ರಣಾಹ್ವಾನವನ್ನಿತ್ತ ಕ್ರೂರ ಜಗತ್ತು ಇದೆಂಬ ಸಂಗತಿ ನಮಗೆ ಆಗ ಗೋಚರವಾಗುತ್ತದೆ.

ಪ್ರಾಚೀನ ಪೂರ್ವಜರ ಜೀವನವು ತೀರ ಅಭದ್ರವಾಗಿತ್ತೆಂದೂ ಭಯಪೀಡಿತವಿತ್ತೆಂದೂ ಅಭಾವಕ್ಕೆ ಗುರಿಯಾಗಿತ್ತೆಂದೂ ಇತಿಹಾಸದ ಅವಲೋಕನೆಯಿಂದ ಮನವರಿಕೆಯಾಗುತ್ತದೆ. ತಾನು ಬದುಕಲೂ ಬದುಕಿ ಉಳಿಯಲೂ ಮನುಷ್ಯನು ಭೀಕರ ಹೋರಾಟವನ್ನು ಕೊಡುತ್ತಾ ಬರಬೇಕಾಯಿತು. ಅಪಾರ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಯಿತು. ತನ್ನ ನಿತ್ಯದ ಅವಶ್ಯಕತೆಗಳ ಪೂರೈಕೆಗಾಗಿ ಆತನು ಬಿಡುವಿಲ್ಲದೆ ಪ್ರಯತ್ನ ಹಾಗು ಸಾಹಸಗಳಲ್ಲಿ ನಿರತನಾಗಬೇಕಾಯಿತು.

ಹೊಸ ಸಮಾಜ ರಚನೆಗಾಗಿ ಮಾಡಬೇಕಾದ ಸುಧಾರಣೆ

ಹೀಗೆ ನಿಜವಾಗಿ ಹೋರಾಟ, ಸಾಹಸ ಹಾಗು ಪ್ರಯತ್ನ ಪೂರ್ವಕವಾದ ಪರಿಶ್ರಮಗಳಲ್ಲಿ ನಿರತನಾಗಿದ್ದಾಗ ಮನುಷ್ಯನಿಗೆ ಮತಬೋಧಕರ ಸ್ವರ್ಗ ಸುಖದ ಕಲ್ಪನೆಯು ಮಕ್ಕಳನ್ನು ಉಯ್ಯಾಲೆಯಲ್ಲಿಟ್ಟು ತೂಗಿದಂತೆ ನವಸುಖವನ್ನಿತ್ತಿತು. ಆಕಾಶವತ್ತ ನೋಡಿ ಅಲ್ಲಿಯೊಂದು ಸ್ವರ್ಗವಿದೆಯೆಂಬ ಭಾವನೆಯಿಂದ ಆತನು ಕೆಲವು ಗಳಿಗೆಗಳನ್ನಾದರೂ ಮೈಮರೆತು ಕಳೆಯುವಂತೆ, ಹಾಗೆ ತನ್ನ ಕಷ್ಟ ಕಾರ್ಪಣ್ಯಗಳನ್ನು ಮರೆಯುವಂತೆ, ಮತ ಬೋಧಕರು ನೆರವಾದರು.

ಸಾಮಾನ್ಯ ಜನರ ಪಾಲಿಗೆ ಈ ಭಾವನಾತ್ಮಕ ತೃಪ್ತಿಯೇ ಪೂರ್ಣ ಸುಖವನ್ನಿತ್ತಿತು. ಆದರೆ ಭೌತಿಕ ಆಸಕ್ತಿಯು ತೀವ್ರವಿದ್ದ ಕೆಲವು ಆಢ್ಯರ ಪಾಲಿಗೆ ಮನಸ್ಸಿನಲ್ಲಿ ಮಂಡಿಗೆಯುಣ್ಣುವ ಈ ಶುಷ್ಕಕಾರ್ಯವು ಸಮಾಧಾನವನ್ನು ತಂದುಕೊಡಲಿಲ್ಲ. ಅವರು ದೇವೇಂದ್ರನ ಸ್ವರ್ಗಕ್ಕೆ ಪ್ರತಿಯಾಗಿ ತ್ರಿಶಂಕು ಸ್ವರ್ಗವನ್ನು ವಿಶ್ವಾಮಿತ್ರ ಋಷಿಯು ಸೃಷ್ಟಿಸಿದಂತೆ ಈ ಭೂಲೋಕದಲ್ಲಿಯೇ ಸ್ವರ್ಗ ವೈಭವವನ್ನು ನೆಲೆಗೊಳಿಸುವ ವಿಶ್ವಕರ್ಮರಾಗಿ ಮೆರೆಯಲು ನಿರ್ಧರಿಸಿದರು. ಪ್ರತಾಪಿಗಳೂ ಶೂರರೂ ಸಾಹಸಿಗಳೂ ಆದಂಥ ಈ ಭೌತಿಕ ಸುಖ ಪಿಪಾಸುಗಳು ಉಳಿದ ಮನುಷ್ಯರು ತಮ್ಮ ಸಹೋದರರೆಂಬುದನ್ನು ಕಡೆಗಣಿಸಿ, ಅವರನ್ನು ಒತ್ತಾಯದ, ಬಲಾತ್ಕಾರದ ದಾಸ್ಯಕ್ಕೆ ತಳ್ಳಿದರು.

ಈ ಗುಲಾಮಗಿರಿಯಲ್ಲಿ ಬಿದ್ದ ಸಾವಿರಾರು ಮಂದಿ ಒಬ್ಬಿಬ್ಬರು ಒಡೆಯರ ಸುಖಕ್ಕಾಗಿ ಬೆವರಿಳಿಸಬೇಕಾಯಿತು; ಕಷ್ಟಗಳಿಗೆ ಎದೆಯೊಡ್ಡಬೇಕಾಯಿತು; ಸೋಲು ಸಣ್ಣವಾಗಬೇಕಾಯಿತು. ದಾರುಣವಾದ, ಯಾತನಾಮಯವಾದ ಜೀವನವು ಅವರೆಲ್ಲರನ್ನು ಕಂಗೆಡಿಸಿತು. ಒಡೆಯರ ನಿಷ್ಕರುಣೆಯೂ ಕ್ರೌರ್ಯವೂ ಅವರನ್ನು ನಿರಾಶರಾಗಿ ಮಾಡಿತು. ಪುರಾತನ ನಾಗರಿಕತೆಯ ಕೇಂದ್ರ ಎನಿಸಿಕೊಂಡ ಎಲ್ಲ ರಾಜಮಹಾರಾಜರ ರಾಜಧಾನಿಗಳೂ ಮನುಷ್ಯ ಪ್ರಾಣಿಯ ಮೇಲೆ ನಡೆಸಿದ ಅತ್ಯಾಚಾರದ ಕಠೋರತೆಯಿಂದ ಕಲಂಕಿತವಾಗಿವೆ; ನಾಗರಿಕತೆಯ ಇತಿಹಾಸವೇ ಇದರಿಂದ ದೂಷಿತವಾಗಿದೆ. ರೋಮನರ ಕಾಲದಿಂದ ಮೊಗಲರ ಕಾಲದ ವರೆಗೆ ಇಂಥ ಹೇಯ ಕೆಲಸ ನಿರಾತಂಕವಾಗಿ ನಡೆದಿದೆ.

ತೀವ್ರ ಅಸಂತುಷ್ಟರೂ ನಿಸ್ಸಹಾಯರೂ ಆಗಿ ಪರಿಣಮಿಸಿದ ದಾಸ ಜನವರ್ಗವು ಒಡೆಯರ ಅಮಾನುಷ ವರ್ತನೆಯಿಂದ ರೋಸಿಹೋಗಿ, ದಂಗೆಖೋರರಾಗಿ ಬಂಡೆದ್ದ ಸಮಯದಲ್ಲಿ ಈ ಮಹಾ ಸಾಮ್ರಾಜ್ಯಗಳು ತಮ್ಮ ಸಕಲ ಸುಖವೈಭವಗಳೊಡನೆ ಭಗ್ನಾವಶೇಷವಾದವೆಂಬುದನ್ನು ನೆನೆದರೆ ಮನುಷ್ಯನ ಶೋಷಣೆ ನಡೆದ ರೀತಿ ವ್ಯಕ್ತವಾಗುತ್ತದೆ. ಮಧ್ಯಯುಗದಲ್ಲಿ ಗೆದ್ದುಕೊಂಡ ಭೂ ಪ್ರದೇಶಗಳ ಜನರನ್ನು ಬಿಟ್ಟಿ ಆಳುಗಳಾಗಿ ದುಡಿಸುವ ಸಂಪ್ರದಾಯ ಹುಟ್ಟಿಕೊಂಡಿತು. ಆಧುನಿಕ ಕಾಲದಲ್ಲಿ ಹಣವುಳ್ಳ ವರ್ಗವೊಂದು ಅತ್ಯಲ್ಪ ಕೂಲಿಯನ್ನಿತ್ತು ದುಡಿಯುವ ವರ್ಗದ ಶೋಷಣೆಯನ್ನು ನಡೆಸಿ, ತನ್ನ ಸುಖವನ್ನು ಹೆಚ್ಚಿಸಿಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ.

ಬಂಡವಾಳಶಾಹಿಯ ಈ ದಯಾರಹಿತ ನಡವಳಿಕೆಯಿಂದ ನೊಂದುಕೊಂಡ ಜನವರ್ಗವು ತನ್ನ ಪ್ರಭುತ್ವವನ್ನು ಸ್ಥಾಪಿಸುವ ಬಗ್ಗೆ ಪ್ರಯತ್ನಶೀಲವಾಗಿರುವುದೇ ಇಂದಿನ ನಮ್ಮ ನಿತ್ಯಾನುಭವ. ಸಮಾಜವಾದದ ಕಲ್ಪನೆಗೆ ದುಡಿಯುವ ವರ್ಗದ ಅಸಂತುಷ್ಟಿಯಿಂದ ಜನಿತ ಆಂದೋಲನವೇ ಬೆಂಗೋಲು.

ನಾಗರಿಕತೆಯ ಇಷ್ಟು ದೀರ್ಘಕಾಲದ ಇತಿಹಾಸದಲ್ಲಿ ಮನುಷ್ಯನ ಪರಿಶ್ರಮವಿಲ್ಲದೆ ಸ್ವರ್ಗ ಸುಖದ ಅನುಭವ ಮಾಡಿಕೊಳ್ಳುವುದು ಅಸಾಧ್ಯವೆಂದು ಮನವರಿಕೆಯಾಗಿದೆ. ತಾನು ಸ್ವತಃ ದೈಹಿಕ ಶ್ರಮವನ್ನು ಮಾಡುವುದು ಕಷ್ಟವೆಂಬ ಭಾವನೆಯೂ ಈ ಅವಧಿಯಲ್ಲಿ ಉಂಟಾಗಿದೆ.

ಇನ್ನೊಬ್ಬರ ಮೇಲೆ ವರ್ಚಸ್ಸು ಬೀರಬಲ್ಲ ಸಾಮರ್ಥ್ಯವಿದ್ದವರು ತಿನ್ನಲಿಕ್ಕಾಗಿಯೇ ತಾವು ಬದುಕಿದ್ದೇವೆ ಎಂಬಂತೆ ವರ್ತಿಸಿ ಸ್ವರ್ಗಾಧಿಪತಿಗಳಂತೆ ಮೆರೆದಿದ್ದಾರೆ; ಒತ್ತಾಯ ಮತ್ತು ಬಲಾತ್ಕಾರಗಳಿಗೊಳಪಟ್ಟು ದುಡಿಯಬೇಕಾಗಿ ಬಂದ ಜನವರ್ಗವು ಬದುಕಲಿಕ್ಕೋಸ್ಕರ ತಿನ್ನುವಷ್ಟು ಅನುಕೂಲತೆಯನ್ನು ಸಹ ಹೊಂದಿರದೆ ಪೀಡನೆಗೊಳಗಾಗಿದೆ. ಆಹಾರ ವಸತಿ, ವಸ್ತ್ರ ಮತ್ತು ರಕ್ಷಣೆ ಎಂಬೀ ಮೂಲಭೂತ ಅವಶ್ಯಕತೆಗಳ ಮಟ್ಟಿಗೆ ಸಹ ಅವರು ಒಡೆಯರ ಕರುಣೆಯನ್ನು ಕಾಯಬೇಕಾಗಿ ಬಂದಿದೆ.

ಒಡೆಯರ ವೈಭವ ವರ್ಣನೆಯಲ್ಲಿಯೇ ಆಸಕ್ತರಾದ ಕೆಲವು ಬುದ್ಧಿಜೀವಿ ಇತಿಹಾಸಕಾರರು ನಾಗರಿಕತೆಯ ಅಂತಸ್ತಿನಲ್ಲಿ ಒಂದಿಷ್ಟೂ ಕಷ್ಟಪಡದ, ಕೇವಲ ಸೋಮಾರಿಗಳಾದ, ಬುದ್ಧಿವಂತಿಕೆ ಮತ್ತು ಕುಹಕ ತಂತ್ರಗಳನ್ನೆ ಆಧರಿಸಿ ಜೀವನ ನಡೆಸುವ ವ್ಯಕ್ತಿಗಳಿಗೆ ಉನ್ನತ ಸ್ಥಾನವನ್ನು ಕೊಟ್ಟರು. ಕ್ಷಣವೂ ಬಿಡುವಿಲ್ಲದೆ ಕೆಲಸ ಮಾಡುವ, ದೇಹವನ್ನು ಸವೆಯಿಸಿ ಬೆವರಿಳಿಸುವ, ಕಠಿಣ ಪರಿಶ್ರಮಿಗಳನ್ನು ನೀಚಸ್ಥಾನಕ್ಕೆ ತಳ್ಳಿದರು.

ಕೆಲಸ ಮಾಡುವುದು ಘನಸ್ತಿಕೆಯಲ್ಲ, ಭೂಷಣವಲ್ಲ. ಕೀಳ್ತನವೆಂಬ ಭಾವನೆಗೆ ಈ ನಾಗರಿಕತೆಯ ಇತಿಹಾಸಕಾರರು ಪುರಸ್ಕಾರವಿತ್ತರು 'ಸೇವೆ" ಮಾಡಿಸಿಕೊಳ್ಳುವುದೇ, ಸೋಮಾರಿಯಾಗಿ ಕುಳಿತಿರುವುದೇ ದೊಡ್ಡಸ್ತಿಕೆ ಎಂಬ ವಿಶ್ವಾಸವನ್ನು ನಾಗರಿಕತೆಯ ಈ ಆರಾಧಕರು ಸಾಮಾಜಿಕರಲ್ಲಿ ಪ್ರಚುರಪಡಿಸಿದರು.

ಭಾರತದಲ್ಲಿ ಸಮಾಜದ ರಚನೆಯನ್ನು ವರ್ಣಾಶ್ರಮ ಧರ್ಮಾನುಸಾರವಾಗಿ ರೂಪಿಸುವ ಗಂಭೀರವಾದ ಸಾಹಸ ನಡೆಯಿತು. ಮೂಲದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರೆಂಬ ಎರಡೇ ವರ್ಣಗಳವರಿದ್ದರು. ಮುಂದೆ ವೈಶ್ಯ ಮತ್ತು ಶೂದ್ರರೆಂಬುದಾಗಿಯೂ ಸಾಮಾಜಿಕರ ವಿಭಜನೆ ನಡೆಯಿತು. ಅಲ್ಲದೆ ಪಂಚಮರೆಂದು ಸಹ ಒಂದು ಜನವರ್ಗವನ್ನು ಹೆಸರಿಸಲಾಯಿತು.

ಧರ್ಮ ಗ್ರಂಥಗಳಿಗನುಸಾರವಾಗಿ ವರ್ಣಾಶ್ರಮಗಳಿಗೆ ಆಯಾಯ ವ್ಯಕ್ತಿಯ ಸ್ವಭಾವ ಮತ್ತು ಕರ್ಮಗಳೇ ಆಧಾರ. ಆದರೆ ನಿತ್ಯ ಜೀವನದಲ್ಲಿ ಈ ಉದಾತ್ತ ಮೂಲದ ಮಹತ್ವವು ತೀರ ಕಳೆಗುಂದಿತು. ಸ್ವಭಾವವನ್ನು ವ್ಯಕ್ತಿಯ ಜನ್ಮಕ್ಕೂ ಕರ್ಮವನ್ನು ಆತನು ಕೈಗೊಂಡ ಉದ್ಯೋಗಕ್ಕೂ ತಳಕು ಹಾಕಲಾಯಿತು.

ಬ್ರಾಹ್ಮಣನಿಗೆ ಹುಟ್ಟಿದವನ್ನು ಬ್ರಾಹ್ಮಣ ವರ್ಗದ ಸ್ವಭಾವಗುಣಗಳೆಲ್ಲವನ್ನೂ ಪಡೆದಿರುವನೆಂಬ ಅಂಧ ವಿಶ್ವಾಸ ನೆಲೆಯೂರಿತು; ಶೂದ್ರ ಪುತ್ರನು ಸೇವಕನ ವೃತ್ತಿಯನ್ನವಲಂಬಿಸಿಯವನೆಂಬುದಕ್ಕಾಗಿ ಆತನನ್ನು ಹೀನನೆಂದು ಭಾವಿಸಲಾಯಿತು ಬ್ರಾಹ್ಮಣ ಪುತ್ರನ ಸ್ವಭಾವ ವಿಶ್ಲೇಷಣೆಗಾಗಲೀ ಶೂದ್ರ ಪುತ್ರನು ಕರ್ಮನಿರ್ವಹಿಸುವ ರೀತಿಯ ನೈತಿಕ ಮೂಲ್ಯ ಮಾಪನಕ್ಕಾಗಲೀ ಬೆಲೆಬಾರದೆ ಹೋಯಿತು.

(೧೧ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ
ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು
ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಗೋವೆಯ ಕುರಿತು ಸಾಲಜಾರರ ನಿಲುಮೆ

ಅರ್ಥಶೂನ್ಯ ಅಸಂಬದ್ಧ ಕುತರ್ಕಗಳ ಆಶ್ರಯ

ಹೊಸದೆಹಲಿಗೆ ಮೊನ್ನೆ ೬ನೇ ದಿನಾಂಕದಂದು ೧೦ ದಿನಗಳ ಭಾರತ ಸಂಚಾರಾರ್ಥ ಬಂದಿಳಿದ ಮಿ. ವಾಲ್ಟರ್ ಪಿ. ರ್ಯೂಥರ್ ಎಂಬ ಅಮೇರಿಕದ ಕೂಲಿಕಾರ ಮುಖಂಡರು ಗೋವೆಯಲ್ಲಿ ವಸಾಹತುಶಾಹಿತ್ವವು ಅಳಿದು ಅದು ಭಾರತದಲ್ಲಿ ಸೇರಿ ಹೋಗುವುದರಲ್ಲಿ ಸಂಶಯವಿಲ್ಲವೆಂದು ತಮ್ಮ ವಿಶ್ವಾಸವನ್ನು ಪ್ರದರ್ಶಿಸಿದರು.

ಇದೇ ಸಮಯಕ್ಕೆ ಸರಿಯಾಗಿ ಭಾರತ ಸರಕಾರವು ಗೋವೆಯಲ್ಲಿ ಪೋರ್ಚುಗೀಜರ ಪ್ರಭುತ್ವಕ್ಕೆ ನೆರವಾಗುವ ಉದ್ದೇಶದಿಂದ ಸರಕು ಇತ್ಯಾದಿಗಳನ್ನು ತೆಗೆದುಕೊಂಡು ಹೋಗಬಹುದಾದ ವಿದೇಶಿ ವಿಮಾನಗಳ ಚಲಾವಣೆಯ ಮೇಲೆ ನಿಯಂತ್ರಣ ಹೇರಲು, ಗಗನ ಸಂಚಾರದ ಹೊಸ ವಿಧಿ ನಿಯಮಗಳನ್ನು ರಚಿಸಿದೆ. ಜಲ ಸಂಚಾರದ ವಿಷಯದಲ್ಲಿ ಕೆಲವು ದಿನಗಳ ಮೊದಲೇ ಭಾರತದ ಪ್ರದೇಶವೆಂಬ ವ್ಯಾಖ್ಯೆಯನ್ನು ಕರಾವಳಿ ತೀರದ ಸಮುದ್ರಕ್ಕೆ ಅನ್ವಯಿಸಿ ಮುಂಜಾಗ್ರತೆ ವಹಿಸಲಾಗಿದೆ.

ಗೋವೆ ಮತ್ತಿತರ ಭಾರತದಲ್ಲಿನ ಪೋರ್ಚುಗೀಜರ ವಸಾಹತುಗಳು ಈಗ ಅಂತಾರಾಷ್ಟ್ರೀಯ ನ್ಯಾಯಾಲಯದ ಮುಂದೆ ವಿವಾದದ ರೂಪದಲ್ಲಿ ಚರ್ಚೆಗೆ ಬಂದಿವೆ. ಪೋರ್ಚುಗಾಲವು ನಗರ ಹವೇಲಿ ಮತ್ತು ದಾದ್ರಗಳೆಂಬ ಪೋರ್ಚುಗೀಜರ ಕೈಯಲ್ಲಿದ್ದು ಈಗ ತಮಗೆ ತಾವೇ ಸ್ವಾತಂತ್ರ್ಯವನ್ನು ಸಾರಿಕೊಂಡಿರುವ ಪ್ರದೇಶಗಳಿಗೆ ಸೈನ್ಯವನ್ನು ಸಾಗಿಸಲು ಭಾರತವು ಅನುಮತಿ ನಿರಾಕರಿಸುವುದು ತಪ್ಪೆಂದು ದೂರಿಟ್ಟಿದೆ.

ಅಂತಾರಾಷ್ಟ್ರೀಯ ನ್ಯಾಯಾಲಯವು ಇದೇ ಜೂನಿನ ೧೫ನೇ ದಿನಾಂಕದೊಳಗೆ ಪೋರ್ಚುಗಾಲಿನ ಸರಕಾರವು ತನ್ನ ವಾದವನ್ನು ಸಂಬಂಧಿಸಿದ ಎಲ್ಲ ಕಾಗದ ಪತ್ರಗಳ ಆಧಾರ ಸಹಿತ ಮುಂದಿಡಬೇಕೆಂದು ವಿಧಿಸಿದೆ. ಪೋರ್ಚುಗಾಲಿನ ವಾದವೇನೆಂಬುದನ್ನು ಆ ಬಳಿಕ ಸವಿವರವಾಗಿ ಭಾರತಕ್ಕೆ ತಿಳಿಸಲಾಗುತ್ತದೆ; ಮತ್ತು ಭಾರತವು ಈ ವಾದಕ್ಕೆ ಪ್ರತಿವಾದವಿದ್ದರೆ ಈ ಸಂಬಂಧದ ಮನವಿಯನ್ನು ದಶಂಬರದೊಳಗೆ ಮಂಡಿಸಬೇಕಾಗಿದೆ.

ಪೋರ್ಚುಗಾಲಿನ ಸರಕಾರವು ಅಂತಾರಾಷ್ಟ್ರೀಯ ನ್ಯಾಯಾಲಯಕ್ಕೆ ಕೊಟ್ಟ ದೂರಿನಲ್ಲಿ ದಾಮನಿನಿಂದ ನಗರ ಹವೇಲಿ ಮತ್ತು ದಾದ್ರಗಳಿಗೆ ತನಗೆ ಜನಬಲವನ್ನು ಸಾಗಿಸಲು ೧೭೭೯ನೇ ಇಸವಿಯಲ್ಲಿ ನಡೆದ ಪ್ಯೂನಂ ಒಪ್ಪಂದವು ಅಧಿಕಾರವೀಯುತ್ತದೆ ಎಂದು ಹೇಳಿದೆ. ಜನರನ್ನೂ ಸರಕನ್ನೂ ಸೈನ್ಯವನ್ನೂ ಭಾರತದಲ್ಲಿರುವ ತನ್ನೀ ವಸಾಹತುಗಳಿಗೆ ಸಾಗಿಸಲು ಒಪ್ಪಂದವು ಬದ್ಧವಾಗಿದೆ ಎಂದು ಪೋರ್ಚುಗಾಲದ ಅಭಿಪ್ರಾಯ.

ಈ ಒಪ್ಪಂದದ ಪ್ರತಿಯನ್ನು ಅಭ್ಯಸಿಸಿದ ಪಕ್ಷದಲ್ಲಿ ಪೋರ್ಚುಗಾಲದ ನಿಲುಮೆಯು ತರ್ಕಬದ್ಧವಾಗಿಲ್ಲವೆಂದೂ ಅದು ತನಗಿದೆ ಎನ್ನುವ ಅಧಿಕಾರವನ್ನು ಒಪ್ಪಂದವು ಕೊಡುತ್ತಿಲ್ಲವೆಂದೂ ಬದಲಿಗೆ ಅಂಥ ಅಧಿಕಾರದ ನಿರಾಕರಣೆಯನ್ನೇ ಸ್ಪಷ್ಟವಾಗಿ ಮಾಡುತ್ತಿದೆಯೆಂದೂ ವ್ಯಕ್ತವಾಗುತ್ತದೆ.

ಭಾರತದಲ್ಲಿನ ಪೋರ್ಚುಗೀಜ ವಸಾಹತುಗಳ ಗವರ್ನರರಿಗೂ ಮರಾಠ ಮುಖಂಡನಾದ ಮಾಧವರಾವ್ ಪ್ರಧಾನನಿಗೂ ನಡುವಣ ವಾಣಿಜ್ಯ, ನೌಕಾಯಾನ ಮತ್ತು ಸ್ನೇಹ ಒಪ್ಪಂದವಾಗಿ ವರ್ಣಿಸಲ್ಪಟ್ಟಿರುವ ಪ್ಯೂನಂ ಒಡಂಬಡಿಕೆಯು ಮರಾಠ ಮುಖಂಡನನ್ನು ಗುಂಡಿನ ಬಲಾತ್ಕಾರಕ್ಕೆ ಕಟ್ಟುಹಾಕಿ ಮಾಡಿಕೊಂಡುದಾಗಿದೆ.

ಇದರ ಏಳನೇ ಸೂತ್ರವು "ಮಾಧವರಾವ್ ಪ್ರಧಾನನ ಪ್ರದೇಶದಲ್ಲಿ ಪೋರ್ಚುಗೀಜ ವ್ಯಾಪಾರಿಗಳಿಗೆ ನಿಗದಿಗೊಳಿಸಿದ ಸುಂಕವನ್ನು ಕೊಟ್ಟು ತರಕಾರಿ ಮತ್ತಿತರ ಉತ್ಪಾದನೆಗಳನ್ನು ಸಾಗಿಸುವ ಅಧಿಕಾರವೀಯಲಾಗಿದೆ" ಎನ್ನುತ್ತದೆ. ಪೋರ್ಚುಗಾಲಿನ ಸೈನ್ಯ ಮತ್ತು ಶಾಂತಿ ಮತ್ತು ಸುವ್ಯವಸ್ಥೆಯ ಪಾಲಕರನ್ನು ಸಾಗಿಸಲು ಪೋರ್ಚುಗೀಜರಿಗೆ ಅಧಿಕಾರ ಕೊಟ್ಟದ್ದಿಲ್ಲ.

ಚೆನ್ನಾಗಿ ಪರೀಕ್ಷಿಸಿದರೆ ಒಪ್ಪಂದದ ೧೭ನೇ ಸೂತ್ರವು ಸೈನ್ಯದ ಪ್ರಶ್ನೆಯನ್ನು ಎತ್ತಲೇ ಬಾರದೆಂಬ ಅಭಿಪ್ರಾಯವನ್ನು ಹುಟ್ಟಿಸುತ್ತದೆ. ಪೋರ್ಚುಗಾಲವು ಗುಜರಾಥ, ಸೌತ್, ಕಂಟೀವಾಡ, ಸೂರಾಲ್ ಮತ್ತಿತರ ಮಾಧವ ರಾವ ಪ್ರಧಾನರ ಪ್ರದೇಶದಲ್ಲಿ ಇನ್ನು ಮುಂದೆ ದುರ್ಗಗಳನ್ನು ಕಟ್ಟತಕ್ಕದ್ದಿಲ್ಲ; ಪೋರ್ಚುಗಾಲವು ತನ್ನ ಸ್ವಂತ ಪ್ರದೇಶಗಳಿಗೆ ಈಗ ತನ್ನ ಕೈಯಲ್ಲಿರುವ ಬಂದರಗಳ ಮೂಲಕ ಮಾತ್ರ ಪ್ರವೇಶಿಸಬಲ್ಲುದು ಎಂದು ಈ ಸೂತ್ರ ವಿಧಿಸುತ್ತದೆ.

ಆದುದರಿಂದ ಪ್ಯೂನಂ ಒಪ್ಪಂದವನ್ನು ಆಧರಿಸಿದ ಪೋರ್ಚುಗಾಲಿನ ದೂರು ಆ ದೇಶದ ಹಕ್ಕನ್ನು ಎತ್ತಿ ಹಿಡಿಯಲಾರದು. ಅಂತಾರಾಷ್ಟ್ರೀಯ ನ್ಯಾಯಾಲಯವು ಹಿಂದೊಮ್ಮೆ ಕೊಟ್ಟದ್ದ ತೀರ್ಮಾನದ ದೃಷ್ಟಿಯಿಂದ ಅವಲೋಕಿಸುವುದಾದರೆ ಉದ್ದೇಶಪೂರ್ವಕವಾಗಿ ತನ್ನ ಸಾರ್ವಭೌಮಾಧಿಕಾರವನ್ನು ಒಂದು ಸರಕಾರವು ಇನ್ನೊಂದು ಸರಕಾರದ ಹಿತಾಸಕ್ತಿಗಳನ್ನು ಉಳಿಸಿಕೊಳ್ಳಲಿಕ್ಕೆ ಕಡಿಮೆ ಮಾಡಿದೆ ಎಂದು ಉಲ್ಲೇಖಿಸದಿದ್ದರೆ ಅಂಥ ಒಪ್ಪಂದದನ್ವಯ ಆ ಎರಡನೇ ರಾಷ್ಟ್ರದ ಅಧಿಕಾರ ಮಾನ್ಯವಾಗಲಾರದು.

ಅದೂ ಅಲ್ಲದೆ ಇನ್ನೊಂದು ರಾಷ್ಟ್ರದ ಉದ್ದೇಶಕ್ಕೆ ಅವಕಾಶಕೊಡುವ ಪ್ರಾಚೀನ ಒಪ್ಪಂದಗಳಿಗೆ ರೋಮನರ ಕಾಲದ ಸಂಪ್ರದಾಯವೇ ತಳಹದಿಯಾಗಿದ್ದು ಆಧುನಿಕ ಯುಗದ ಘಟನಾತ್ಮಕ ಸರಕಾರಗಳ ಸಂಬಂಧಕ್ಕೂ ಆ ಹಳೆಯ ಸಂಪ್ರದಾಯಕ್ಕೂ ಏನೂ ಹೊಂದಿಕೆಯಿಲ್ಲ. ಹೀಗಾಗಿ ಪೋರ್ಚುಗಾಲಿಗೆ ಹಳೆಯ ಒಪ್ಪಂದದ ಬಲವಾಗಲೀ ಆ ಒಪ್ಪಂದದಲ್ಲಿಲ್ಲದ ರೀತಿ ಸೈನ್ಯವನ್ನು ಸಾಗಿಸುವ ಅಧಿಕಾರವಾಗಲೀ ಎಂದೂ ಸಿಗಲಾರದು.

ತಾನು ನ್ಯಾಯಾಲಯಕ್ಕೆ ದೂರಿಕೊಂಡ ಬಳಿಕ ಪೋರ್ಚುಗಾಲಿಗೆ ಈ ಅಂಶ ಮನವರಿಕೆಯಾಗಿರಬಹುದು. ಏಕೆಂದರೆ ಈ ಸಲದ "ಫ್ರೋರ್ರೈನ್ ಎಫೇರ್ಸ್" ಎಂಬ ಪತ್ರಿಕೆಯಲ್ಲಿ ಗೋವೆಯ ಕುರಿತು ಪೋರ್ಚುಗಾಲದ ನಿಲುಮೆಯನ್ನು ವಿವರಿಸಿದ ಡಾ. ಸಾಲಜಾರರು ಹೊಸ ಬಣ್ಣವನ್ನು ಈ ಪ್ರಶ್ನೆಗೆ ಕೊಡಲು ಪ್ರಯತ್ನಿಸಿದ್ದಾರೆ. ಹಾಗೆ ಪಾಶ್ಚಾತ್ಯ ರಾಷ್ಟ್ರಗಳೂ ಭಾರತದ ನೆರೆಹೊರೆಯ ದೇಶಗಳೂ ಪೋರ್ಚುಗಾಲದ ನಿಲುಮೆಯನ್ನೇ ಎತ್ತಿಹಿಡಿಯುವುದು ನ್ಯಾಯವೆಂಬ ಭ್ರಮೆಯನ್ನು ಹುಟ್ಟಿಸಲು ಸಮರ್ಥರಾಗಿದ್ದಾರೆ.

ಡಾ. ಸಾಲಜಾರರ ಹೊಸ ನೀತಿಗನುಸಾರವಾಗಿ, ಯಾವುದೇ ಪರಿಸ್ಥಿತಿಯಲ್ಲಾಗಲೀ ಭಾರತದ ಭೌಗೋಳಿಕ ಒಗ್ಗಟ್ಟು ಎಂಬ ವಿಷಯವೇ ಇರುವುದಿಲ್ಲ. ಆ ಇಡಿ ಭೂಖಂಡವು ಒಂದೇ ಭೌಗೋಳಿಕ ಪ್ರದೇಶವಾಗಿದೆ ಎಂಬ ಕಾರಣಕ್ಕಾಗಿ ಗೋವೆಯನ್ನು ಭಾರತವು ಕೇಳುವುದು ಈ ಹಿನ್ನೆಲೆಯಿಂದ ನೋಡಿದರೆ ಸಂಪೂರ್ಣ ತಪ್ಪೆಂದು ಸಾಲಜಾರರ ಅಂಬೋಣ.

ಪೋರ್ಚುಗಾಲದ ಮೂಲಭೂಮಿಯ ಅಂಗವೇ ಗೋವೆ ಎನ್ನುತ್ತಾ ಸಾಲಜಾರರು ಭಾರತ ಸರಕಾರದೊಡನೆ ಮಾತುಕತೆಗೆ ಸಮ್ಮತಿಸುವುದೆಂದರೆ ಅದರ ನಿಲುಮೆಗೆ ಪರೋಕ್ಷವಾಗಿ ಸಮ್ಮತಿಯಿತ್ತಂತೆಯೇ ಎಂದಿದ್ದಾರೆ. ಭಾರತ ಎಂದೇನು ಪ್ರದೇಶವನ್ನು ಈಗ ಕರೆಯಲಾಗುತ್ತದೋ ಅದರ ಮೇಲೆ ಅಧಿಕಾರ ಪಡೆದ ಭಾರತ ಸರಕಾರದೊಡನೆ ಗೋವೆಯ ಸಂಬಂಧದಲ್ಲಿ ಮಾತುಕತೆ ನಡೆಸಿದರೆ ಸಿಂಹಳ, ಪಾಕಿಸ್ತಾನಗಳ ಸ್ವತಂತ್ರ ಅಸ್ತಿತ್ವವನ್ನು ಕಡೆಗಣಿಸಿದಂತಾಗುವುದೆಂದು ಅವರ ಅಭಿಪ್ರಾಯ.

ಭಾರತದ ಭೌಗೋಳಿಕ ಪ್ರದೇಶದ ಒಮ್ಮಟ್ಟು ಮತ್ತು ಒಗ್ಗಟ್ಟಿನ ಸ್ವರೂಪವನ್ನು ಮನ್ನಿಸುವ ಪಕ್ಷದಲ್ಲಿ ಪಾಕಿಸ್ತಾನ ಸಿಂಹಳ ಮತ್ತು ಬರ್ಮಗಳು ಸಹ ಗೋವೆಯಂತೆ ಭಾರತ ಸರಕಾರದ ಅಧೀನಕ್ಕೆ ಬರಬೇಕಾಗುತ್ತವೆ. ಗೋವೆಯಲ್ಲಿ ಪೋರ್ಚುಗಾಲದ ಅಧಿಕಾರವಿರುವುದು ಭಾರತದ ದೃಷ್ಟಿಯಲ್ಲಿ ಅನ್ಯಾಯವೆಂದಾದರೆ, ಭಾರತ ಸರಕಾರದ ಬಣ್ಣದ ಕಣ್ಣಿಗೆ ಸಿಂಹಳ, ಪಾಕಿಸ್ತಾನ ಮತ್ತು ಬರ್ಮಗಳ ಸ್ವತಂತ್ರ ಅಸ್ತಿತ್ವವೂ ಅನ್ಯಾಯವಾಗಿ ತೋರಬಹುದು ಎಂದಿದ್ದಾರೆ ಸಾಲಜಾರ.

ಹೀಗೆ ಭಾರತದ ನೆರೆಯ ರಾಷ್ಟ್ರಗಳ ಅಭಿಮಾನವನ್ನು ಕೆಣಕಿ ಭಾರತವನ್ನವು ಸಂಶಯ ಗ್ರಸ್ತ ದೃಷ್ಟಿಯಿಂದ ನೋಡುವಂತೆ ಪ್ರಯತ್ನಿಸಿದ ಸಾಲಜಾರರು ಪಾಶ್ಚಾತ್ಯ ರಾಷ್ಟ್ರಗಳಿಗೆ ಎಚ್ಚರಿಕೆ ಕೊಡಲೂ ಹೋಗಿದ್ದಾರೆ. ಅವರೆನ್ನುವಂತೆ ಭಾರತ ಸರಕಾರದ ಬೇಡಿಕೆಯ ಹಿಂದೆ ಏಶ್ಯ ಮತ್ತು ಆಫ್ರಿಕಗಳೊಡನೆ ಯುರೋಪಿನ ಸಂಬಂಧದ ದೊಡ್ಡ ಪ್ರಶ್ನೆಯಿದೆ. ಏಶ್ಯದಲ್ಲೀಗ ಯುರೋಪ್ಯ ಪ್ರಭಾವವನ್ನು ಉಚ್ಚಾಟನೆಗೊಳಿಸುವ ರಾಷ್ಟ್ರೀಯ ಭಾವನೆ ಬಲಿತಿರುವುದರ ಕಡೆಗೆ ಅವರು ಪಾಶ್ಚಾತ್ಯ ರಾಷ್ಟ್ರಗಳ ಗಮನ ಸೆಳೆದಿದ್ದಾರೆ.

ಏಶ್ಯದ ರಾಷ್ಟ್ರಗಳ ಈ ಜಾಗೃತಿಯು ವಸಾಹತುವಾದ ಮತ್ತು ಅದರ ಪ್ರತಿನಿಧಿಯಾಗಿ ಕಾಣುವ ಬಿಳಿ ಮನುಷ್ಯನ ವಿರುದ್ಧ ಆಂದೋಲನಕ್ಕೆ ಎಡೆಮಾಡಿ ಕೊಟ್ಟಿದೆ ಎಂದು ನೆನಪಿಗೆ ತಂದುಕೊಡುತ್ತಾ ಸಾಲಜಾರರು ಏಶ್ಯದಲ್ಲಿರುವ ಯುರೋಪ್ಯ ಪ್ರದೇಶಗಳು ಒಂದೊಂದೇ ಆಗಿ ದಿವಾಳಿ ತೆಗೆದು ನಿಂತಿರುವ ಈ ಗಳಿಗೆಯಲ್ಲಿ ಆಫ್ರಿಕದಲ್ಲಿ ಸಹ ಯುರೋಪ್ಯರ ವಿರುದ್ಧ ವಿಧ್ವಂಸಕ ಚಳವಳ ನಡೆಯುತ್ತಿರುವುದನ್ನು ಅಲಕ್ಷಿಸಲಾಗದೆನ್ನುತ್ತಾರೆ. ಬಾಂಡುಂಗಿನ ಸಮ್ಮೇಳನದ ತರುವಾಯ ಭಾರತವೇ ಈ ಆಂದೋಲನದ ಮುಂದಾಳುತ್ವವನ್ನು ಬಹಿರಂಗವಾಗಿ ವಹಿಸಿಕೊಂಡಿದೆ ಎಂದವರು ಆರೋಪಿಸಿದ್ದಾರೆ.

ಡಾ. ಸಾಲಜಾರರ ಅಭಿಪ್ರಾಯದಂತೆ ಆಫ್ರಿಕವು ಅನಂತಕಾಲದವರೆಗೆ ನಾಗರಿಕ ಜನರಿಂದು ಹೇಳಿಕೊಳ್ಳಲ್ಪಡುವ ವಸಾ

(೧೨ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED
H. Office: UDIPI (S.India).

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:–
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.
ಡಿಪ್ಪೊ:– (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕನ್ನಡ ಪ್ರದೇಶಗಳ ಒಕ್ಕೂಟಕ್ಕೆ ಸ್ವಾಗತ

ಮೈಸೂರಿನ ಸಮ್ಮಿಶ್ರ ಸ್ವರೂಪವನ್ನು ರಕ್ಷಿಸಲು ಪ್ರಜಾಪ್ರತಿನಿಧಿಗಳ ಸಂಕಲ್ಪ

ಬರುವ ಅಕ್ಟೋಬರದಿಂದ ಕನ್ನಡ ಪ್ರದೇಶಗಳಲ್ಲಿ ಹೆಚ್ಚಿನವು ಒಂದೇ ರಾಜ್ಯವಾಗಿ ಪರಿಗಣಿಸಲ್ಪಟ್ಟು ಸುಲಭ ಆಡಳಿತ ಘಟಕದ ರೂಪದಲ್ಲಿ ಅಸ್ತಿತ್ವಕ್ಕೆ ಬರಲಿವೆ. ಈ ರಾಜ್ಯದ ಕೇಂದ್ರ ಸ್ಥಾನವಾಗಿ ಈಗಿನ ಮೈಸೂರು ರಾಜ್ಯವಿರುತ್ತದೆ. ಮೈಸೂರೇತರ ಕನ್ನಡ ಪ್ರದೇಶಗಳು ಸರಿಸಮಾನತೆಯ ತತ್ವದ ಮೇಲೆ ಹೊಸ ರಾಜ್ಯದಲ್ಲಿ ಸಮಾವೇಶಗೊಳ್ಳುತ್ತವೆ ಎಂದು ಆತ್ಮತೃಪ್ತಿಗಾಗಿ ಹೇಳಿಕೊಂಡರೂ ಸಹ ಈಗಿನ "ಮಾದರಿ" ಮೈಸೂರೇ ನಾಳೆಯ ಬೃಹನ್ಮೈಸೂರಿನ ಮಾತೃ ಸ್ಥಾನದಲ್ಲಿ ಉಳಿಯುವುದು ವ್ಯವಹಾರದ ಮಟ್ಟಿಗೆ ಖಂಡಿತ. ಆದುದರಿಂದ ಮೈಸೂರಿನ ಜನಪ್ರತಿನಿಧಿಗಳು ಕರ್ನಾಟಕ ಏಕೀಕರಣದ ಶುಭೋದಯವನ್ನು ಯಾವ ದೃಷ್ಟಿಯಿಂದ ನೋಡುವರೆಂದು ತಿಳಿದಿರುವುದು ಹಿತಕರ. ಕಳೆದ ವಾರ ಮೈಸೂರಿನ ಶಾಸನಾಂಗದಲ್ಲಿ ರಾಜ್ಯಗಳ ಪುನಾರಚನೆಯ ಮಸೂದೆಯ ಮೇಲೆ ಚರ್ಚೆ ನಡೆದಾಗ ಈ ಕುರಿತು ವಿಶೇಷವಾದ ಪ್ರಕಾಶ ಬಿದ್ದಿರುತ್ತದೆ.

ಮುಖ್ಯ ಮಂತ್ರಿಗಳಿಗೆ ತೃಪ್ತಿ

ಸಂಪ್ರದಾಯದಂತೆ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮಸೂದೆಯನ್ನು ಚರ್ಚೆಗೆ ತೆಗೆದು ಕೊಳ್ಳಬೇಕೆಂದು ಮಂಡಿಸುತ್ತಾ ಮಾಡಿದ ಭಾಷಣದಲ್ಲಿ ಕಳೆದ ದಶಂಬರ ತಿಂಗಳ ಹೊತ್ತಿಗೆ ಚರ್ಚಿಸಿ ಮೈಸೂರಿನ ಶಾಸನಾಂಗವು ಮೈಸೂರು ರಾಜ್ಯವು ವಿಸ್ತಾರದಲ್ಲಿ ಈಗಿನ ಇಮ್ಮಡಿಯಷ್ಟು ಬೆಳೆಯಬಹುದು; ವಿವಾದದಲ್ಲಿರುವ ಬಳ್ಳಾರಿ ಮುಂತಾದ ಪ್ರದೇಶಗಳು ಮೈಸೂರಿನಲ್ಲಿ ಉಳಿಯಬೇಕು; ಹೊಸ ರಾಜ್ಯಕ್ಕೆ ಮೈಸೂರು ಎಂಬ ಹೆಸರೇ ಮುಂದರಿಯಬೇಕು ಎಂದು ಕೈಗೊಂಡಿದ್ದ ನಿರ್ಣಯವು ಭಾರತ ಸರಕಾರದ ಅನುಮೋದನೆಯನ್ನು ಪಡೆದಿದೆ ಎಂದರು; ಮತ್ತಿದಕ್ಕಾಗಿ ಸಂತೋಷ ಸೂಚಿಸಿದರು. ಬಳ್ಳಾರಿಯ ಭವಿಷ್ಯವನ್ನು ಮೈಸೂರು ನೈತಿಕ ದೃಷ್ಟಿಯಿಂದ ಪರಿಶೀಲಿಸಿತೆಂದೂ ಬಳ್ಳಾರಿಯನ್ನು ಮೈಸೂರಿನಲ್ಲಿ ಉಳಿಯಗೊಡಿಸುವ ಭಾರತ ಸರಕಾರದ ನಿರ್ಧಾರವು ಈ ದೃಷ್ಟಿಕೋಣದ ವಿಜಯವೆಂದೂ ಅವರು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು.

ವಲಯ ಮಂಡಳಗಳು

ಶ್ರೀ ಹನುಮಂತಯ್ಯನವರು ರಾಜ್ಯಗಳ ಪುನಾರಚನೆಯೇ ಧ್ಯೇಯವಲ್ಲವೆಂದೂ ಅದು ಧ್ಯೇಯ ಸಾಧನೆಯ ಮಾರ್ಗ ಮಾತ್ರವೆಂದೂ ನೆನಪಿಗೆ ತಂದುಕೊಟ್ಟರು. ಇದನ್ನು ಅರ್ಥ ಮಾಡಿಕೊಂಡರೆ ಹಟಮಾರಿತನವನ್ನು ಬಿಟ್ಟುಗೊಟ್ಟು ಸ್ನೇಹ, ಶಾಂತಿಯಿಂದ ನಡೆಸಲು ಸಾಧ್ಯವಾಗುವುದೆಂದರು. ವಲಯ ಮಂಡಳಗಳ ರಚನೆಯನ್ನು ಪ್ರಸ್ತಾಪಿಸುತ್ತಾ ಅವುಗಳ ಆಡಳಿತಕ್ಕೆ ಜನಜೀವನದೊಡನೆ ನಿಕಟ ಸಂಬಂಧವಿರುವ ರೈಲ್ವೆ, ಟಪ್ಪಾಲು ಮತ್ತು ಟೆಲಿಫೋನು ಇತ್ಯಾದಿ ಖಾತೆಗಳನ್ನು ಬಿಡುವುದು ಹಿತಕರವೆಂದೂ ದಕ್ಷತೆ ಮತ್ತು ವೇಗವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಸಲಹೆ ಮಾಡಿದರು. ಆದರೆ ಈ ವಲಯ ಮಂಡಳಗಳಿಗೆ ಗಡಿ ವಿವಾದಗಳನ್ನು ತೀರ್ಮಾನಿಸುವ ವಿಷಯವನ್ನು ಒಪ್ಪಿಸಬಾರದೆಂದೂ ಅನ್ಯಥಾ ಪರಸ್ಪರ ಕಿತ್ತಾಡುವ ರಾಜ್ಯಗಳ ಸಂಬಂಧವು "ಪ್ರಥಮ ಚುಂಬನಂ ದಂತ ಭಗ್ನಂ" ಎಂಬ ನಾಣ್ಣುಡಿಯಂತಾದೀತೆಂದೂ ಎಚ್ಚರಿಸಿದರು.

ಸೀಮಾ ಸಮಿತಿ ನೇಮಕ

ಗಡಿ ವಿವಾದಗಳನ್ನು ಪ್ರಸ್ತಾಪಿಸುತ್ತಾ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಸೀಮಾ ಸಮಿತಿಗಳ ನೇಮಕವೇ ಗಡಿ ನಿರ್ಧಾರದ ಸೂಕ್ತ ಮಾರ್ಗವೆಂದೂ ಮಸೂದೆಯು ಇದಕ್ಕೆ ಅವಕಾಶ ವಿತ್ತಿದೆಯೆಂದೂ ತಿಳಿಸಿದರು. 'ನಮ್ಮ ಸಂಸ್ಥಾನಕ್ಕೆ ಸಂಬಂಧಪಟ್ಟಂತೆ ಅನೇಕ ಗಡಿ ಪ್ರಶ್ನೆಗಳಿವೆ: ರಾಯದುರ್ಗದಲ್ಲಿ ಕೆಲವು ಹಳ್ಳಿಗಳು ಮೈಸೂರು ದೇಶವನ್ನು ಸೇರಲು ಇಚ್ಛಿಸಿವೆ. ಮಡಕಸಿರ ತಾಲೂಕು, ಹೊಸೂರು ತಾಲೂಕು, ನೀಲಗಿರಿ, ಚಂದ್ರಗಿರಿ ನದಿಯ ಉತ್ತರ ಭಾಗದಲ್ಲಿರುವ ಕಾಸರಗೋಡು ತಾಲೂಕು—ಇಲ್ಲಿಯ ನಿವಾಸಿಗಳು ನಮ್ಮ ದೇಶ (ಮೈಸೂರು)ವನ್ನು ಸೇರಲು ಅಪೇಕ್ಷೆ ಪಡುತ್ತಿದ್ದಾರೆ. ಇಲ್ಲಿ ಸಂಯಮದಿಂದ ನಮ್ಮ ಕೆಲಸವನ್ನು ಸಾಧಿಸಬೇಕು. ನಾವೇ ಭೂಮಿದಾಹದಿಂದ ಎಲ್ಲವನ್ನೂ ಕೇಳಿದಲ್ಲಿ ನಾಳೆ ನಾವೇ ತಪ್ಪಿಗೊಳಗಾಗಬೇಕಾಗುತ್ತದೆ. ಉದಾಹರಣೆಗಾಗಿ ನಾವು ಕಾಸರಗೋಡೆಲ್ಲಾ ಬೇಕೆಂದು ಕೇಳಿದರೆ ಇತರರು (ಆಂಧ್ರರು) ಕೋಲಾರವನ್ನು ಕೇಳಬಹುದು. ಈ ರೀತಿ ಪ್ರವಾಹದ ಬಾಗಿಲನ್ನು ತೆರೆಯುವುದು ಬೇಡ. ನಮ್ಮದು ನ್ಯಾಯವಾದ ಬೇಡಿಕೆಗಳೆಂದು ಕೇಂದ್ರ ಸರಕಾರಕ್ಕೂ ಸಂಸತ್ತಿಗೂ ಭಾಸವಾಗಬೇಕು—ಈ ವಿಶಾಲ ದೃಷ್ಟಿಯಿಂದಲೂ ಜವಾಬ್ದಾರಿಯಿಂದಲೂ ಯಾವುದನ್ನು ಕೇಳ ಬೇಕಾಗಿದೆಯೋ ಅದನ್ನು ನಾವು ಕೇಳೋಣ" ಎಂದು ಮುಖ್ಯ ಮಂತ್ರಿಗಳು ನಿಲುವೆಯನ್ನು ವಿವರಿಸಿದರು.

ಎಲ್ಲರಿಗೂ ಸ್ವಾಗತ

ಮೈಸೂರಿನಲ್ಲಿರುವ ಸರಕಾರಿ ನೌಕರರ ವೇತನ ಪ್ರಮಾಣವು ಮದ್ರಾಸು, ಮುಂಬಯಿ ಸರಕಾರಗಳದಕ್ಕಿಂತ ಮತ್ತು ಕೇಂದ್ರದಕ್ಕಿಂತ ತುಂಬ ಕಡಿಮೆ ಇದೆ ಎನ್ನುತ್ತಾ ನಾಳೆಯ ಬೃಹನ್ಮೈಸೂರಿನಲ್ಲಿ ಹೊರಗಿನಿಂದ ಬರುವ ಸರಕಾರಿ ನೌಕರರಿಗೆ ಅವರ ಈಗಿನ ಮಟ್ಟದ ಸಂಬಳವನ್ನೇ ಕೊಡುವುದು ಸಾಧ್ಯವಾಗಲಾರದು ಎಂಬ ಸೂಚನೆಯನ್ನಿತ್ತರು. ಮುಖ್ಯ ಮಂತ್ರಿಗಳು ಶಾಸನಾಂಗದ ಉಭಯ ಸದನಗಳಲ್ಲಿಯೂ ದಕ್ಷಿಣ ಪ್ರದೇಶದ ಕಲ್ಪನೆಯನ್ನು ಬಹುವಾಗಿ ಮೆಚ್ಚಿಕೊಂಡು ಮಾತನಾಡಿದರು. ಅಲ್ಲದೆ ದ್ವಿಭಾಷಾ ರಾಜ್ಯಗಳ ರಚನೆಯನ್ನು ಮೈಸೂರಿನ ಜನಪ್ರತಿನಿಧಿಗಳು ಬಯಸುವರೆಂದು ಹೇಳುವ ವಿಶೇಷ ಗೊತ್ತುವಳಿಯನ್ನು ಚರ್ಚೆಯ ನಡುವೆ ತಂದು ತುರುಕಿದರು. "ಧಾರವಾಡದ ಕನ್ನಡಿಗರು, ಹೈದರಾಬಾದು ಕನ್ನಡಿಗರು, ಕೊಡಗು ಕನ್ನಡಿಗರು ಮತ್ತು ದಕ್ಷಿಣ ಕನ್ನಡದ ಜನರು ಯಾವ ರೀತಿ ಭಾರತೀಯರೋ ಅದೇ ರೀತಿ ಕೇರಳ, ತಮಿಳುನಾಡು ಮತ್ತು ಆಂಧ್ರರೂ ಭಾರತೀಯರೇ ಆಗಿದ್ದಾರೆ. ಕನ್ನಡಿಗರೇ ಬಹುಸಂಖ್ಯಾಕರಾಗಿರುವ ಅಕ್ಕಪಕ್ಕದ ಪ್ರದೇಶಗಳನ್ನು ಮೈಸೂರು ರಾಜ್ಯದಲ್ಲಿ ಸೇರಿಸಿಕೊಳ್ಳಲು ಹೇಗೆ ಒಪ್ಪಿಗೆಯನ್ನು ಜನಪ್ರತಿನಿಧಿಗಳು ಕೊಟ್ಟರೋ ಅದೇ ರೀತಿ ಕೇರಳ, ತಮಿಳುನಾಡು, ಆಂಧ್ರ ಈ ಪ್ರಾಂತಗಳವರು "ಮೈಸೂರಿಗೆ ಸೇರಿಕೊಳ್ಳಬೇಕೆಂದು' ಅಭಿಪ್ರಾಯ ಬಹುಮತವಾಗಿ ಬಂದ ಪಕ್ಷದಲ್ಲಿ ಅದನ್ನು ಬೇಡವೆಂದು ಹೇಳುವುದು ದೇಶಬಾಂಧವರಿಗೆ ಸರಿಯಲ್ಲ ಎಂದವರು ನಿಸ್ಸಂಕೋಚವಾಗಿ ಸಾರಿದರು.

ದಕ್ಷಿಣ ಪ್ರದೇಶ

ಯಾವುದೇ ವಿಚಾರವಾದರೂ ಕಾರ್ಯರೂಪದಲ್ಲಿ ಪರಿಣತಗೊಳ್ಳುವುದಕ್ಕೆ ಸ್ವಲ್ಪ ಸಮಯ ಬೇಕೆಂಬುದನ್ನು ಒಪ್ಪಿಕೊಳ್ಳುತ್ತಾ ಶ್ರೀ ಹನುಮಂತಯ್ಯನವರು ಇವತ್ತೇ ಅಥವಾ ಕೂಡಲೇ ದಕ್ಷಿಣ ಪ್ರದೇಶ ಅಥವಾ ಅದರ ಚಿಕ್ಕರೂಪವಾದ ದ್ವಿಭಾಷಾ ರಾಜ್ಯದ ರಚನೆಯು ಮೈಸೂರಿನ ಮಟ್ಟಿಗಾಗಬೇಕೆಂದು ಹಠಪಡುವುದು ಬೇಡ ಎಂದರು. ಹಾಗೆ ಹಠಪಡುವುದು ವ್ಯಾವಹಾರಿಕ ದೃಷ್ಟಿಯಲ್ಲಿ ಬುದ್ಧಿವಂತಿಕೆಯಾಗಲಾರದೆಂದರು. ಮದ್ರಾಸಿನ ಜನರಿಗೆ ಅದೀಗ ಬೇಡವಾಗಿದೆ. ಕೇರಳೀಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಲಾಗದಂಥ ರಾಜಕೀಯ ದುರಂತದಲ್ಲಿದ್ದಾರೆ. ತೆಲುಗರು ತೆಲಂಗಾಣಸಹಿತವಾದ ಆಂಧ್ರಪ್ರದೇಶದ ರಚನೆಯಿಂದ ತೃಪ್ತರಾಗಿರುವಂತೆ ತೋರುತ್ತದೆ. ಇವು ಮೂರೂ ರಾಜ್ಯಗಳು ನಿಸ್ಸಂಕೋಚವಾದ ಸ್ವಾಗತವನ್ನು ದಕ್ಷಿಣ ಪ್ರದೇಶ ಅಥವಾ ದ್ವಿಭಾಷಾ ರಾಜ್ಯಗಳ ಕಲ್ಪನೆಗೆ ಬಹಿರಂಗವಾಗಿ ಇಷ್ಟರವರೆಗೆ ಕೊಟ್ಟಿದ್ದಿಲ್ಲ. ಆದರೆ ಮುಂದೆಂದಾದರೂ ಇವೆಲ್ಲ ರಾಜ್ಯಗಳು ಅಥವಾ ಯಾವುದಾದರೊಂದು ರಾಜ್ಯವು ಮೈಸೂರಿನೊಂದಿಗೆ ಸೇರಲು ಇಚ್ಛಿಸಿದರೆ ಆ ಪ್ರಶ್ನೆಯನ್ನು ವಿಚಾರಿಸಲು ಮೈಸೂರಿನ ಜನರು ತೆರೆದ ಮನಸ್ಸಿನಿಂದ ಸಿದ್ಧವಿದ್ದಾರೆಂದು ತೋರಿಸದಿರುವುದು ಬೇಡ ಎಂದರು. ಅಂಥದೊಂದು ಕಾಲವು ಭವಿಷ್ಯದಲ್ಲಿ ಬಂದೀತೆಂದೂ ಅಷ್ಟು ಹೊತ್ತಿಗೆ ದಕ್ಷಿಣದ ಜನರೆಲ್ಲ ಸಾಮಾನ್ಯ ಭಾಷೆಯೊಂದನ್ನು ಬೆಳೆಸಿಕೊಂಡಿರುವುದು ಮತ್ತು ಜನರೇ ದಕ್ಷಿಣ ಪ್ರದೇಶಕ್ಕಾಗಿ ಒತ್ತಾಯಿಸುವಂಥ ಮನೋಭಾವವನ್ನು ಹೊಂದಿರುವುದು ಸಾಧ್ಯವೆಂದೂ ಮುಖ್ಯ ಮಂತ್ರಿಗಳು ತಮ್ಮ ಆಸೆಯನ್ನು ವ್ಯಕ್ತಪಡಿಸಿದರು.

ಸದಸ್ಯರ ಅಭಿಪ್ರಾಯ

ಚರ್ಚೆಯಲ್ಲಿ ಭಾಗ ವಹಿಸಿದ ಸದಸ್ಯರಿಂದ ಮೈಸೂರು ವಿಸ್ತಾರ ಹೊಂದುವುದಕ್ಕೆ ಹೆಚ್ಚಿನ ಬೆಂಬಲವು ಪ್ರಕಟವಾಯಿತು. ಭದ್ರಾವತಿಯ ಶ್ರೀ. ಬಿ. ಮಾಧವಾಚಾರ್ಯರು ಬಳ್ಳಾರಿಯು ಮೈಸೂರಿನಲ್ಲಿ ಉಳಿದುದು ಸಂತೋಷವೆಂದು ಹೇಳಿ ಕರ್ನಾಟಕಕ್ಕೆ ಇನ್ನೂ ಕೆಲವು ಭಾಗಗಳು ಬರಬೇಕಾಗಿವೆ ಎಂದರು ಇನ್ನು ಅನೇಕ ವರ್ಷಗಳ ವರೆಗೆ ದ್ವಿಭಾಷಾ ಅಥವಾ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸ್ಥಿರಖ ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MUL

ದ್ವಿಭಾಷಾರಾಜ್ಯದ ತತ್ವಕ್ಕೆ ಮೈಸೂರಿನ ಒಪ್ಪಿಗೆ

"ದೇಶ ಬಾಂಧವರೊಳಗೆ ಭೇದ ಭಾವ ಮಾಡುವುದು ಬೇಡ"

ಬಹು ಭಾಷಾ ರಾಜ್ಯಗಳರಚನೆ ವ್ಯವಹಾರ ಯೋಗ್ಯವಲ್ಲ ಎಂಬ ತಮ್ಮ ವಿಶ್ವಾಸವನ್ನವರು ಪ್ರಕಟಿಸಿದರು. ಶ್ರೀ. ಇಜಾರಿ ಸಿರಸಪ್ಪನವರು ಸಹ ಬಳ್ಳಾರಿಯು ನ್ಯಾಯವಾದ ಸ್ಥಾನಮಾನವನ್ನು ಕಳೆದುಕೊಳ್ಳದೆ ಮೈಸೂರಿನಲ್ಲಿ ಉಳಿದುದಕ್ಕೆ ಸಂತೋಷಿಸಿದರು; ಮತ್ತಿದಕ್ಕಾಗಿ ದುಡಿದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು. ಶ್ರೀ. ಗೋಪಾಲ ಗೌಡರು ಯಾವ ದುರಂತವೂ ರಕ್ತಪಾತವೂ ಇಲ್ಲದೆ ಕರ್ನಾಟಕ ಏಕೀಕರಣವಾಗುತ್ತಿರುವುದು ಆದರ್ಶಪ್ರಾಯವಾದ ವಿಷಯವೆಂದು ವರ್ಣಿಸಿದ್ದಲ್ಲದೆ ನೂತನ ರಾಜ್ಯಕ್ಕೆ ಇನ್ನು ಕೆಲವು ಪ್ರದೇಶಗಳು ಸೇರಬೇಕಾಗಿವೆಯೆಂದೂ ಅವಾಗದೆ ಕರ್ನಾಟಕವು ಅಪೂರ್ಣವಾಗಿಯೇ ಉಳಿಯುವುದೆಂದೂ ಹೇಳಿದರು. ಶ್ರೀ ವಾಸನ್ನರು ಕೆಲವು ಗಡಿ ಪ್ರದೇಶಗಳು ಕರ್ನಾಟಕ್ಕೆ ಬರಬೇಕಾಗಿವೆಯೆಂದೂ ಹಾಗೆಯೇ ಕೋಲಾರವನ್ನು ಆಂಧ್ರಕ್ಕೆ ಕೊಡಬೇಕೆಂದೂ ಅಭಿಪ್ರಾಯಪಟ್ಟರು.

ಸಮ್ಮಿಶ್ರ ಸ್ವರೂಪ

ಶ್ರೀ. ವೈ. ಧರ್ಮಪ್ಪನವರು ಸೀಮಾ ಸಮಿತಿಗಳನ್ನು ಕೂಡಲೇ ರಚಿಸದಿದ್ದರೆ ಈ ಸಂಬಂಧದ ವಿವಾದಗಳು ತೀವ್ರವಾಗಿ ಪ್ರಬಲಿಸಿಯಾವೆಂದು ಭಯಪಟ್ಟರು. ಹೈಕೋರ್ಟಿನ ನ್ಯಾಯಾಧೀಶರ ಸಂಬಳವು ಮೈಸೂರು ಮತ್ತು ಬೇರೆ ಕೆಲವು ರಾಜ್ಯಗಳ ಮಟ್ಟಿಗೆ ಉಳಿದ ರಾಜ್ಯಗಳದಕ್ಕಿಂತ ಕಡಿಮೆಯಿರಬೇಕೆಂದು ಮಸೂದೆಯಲ್ಲಿ ನಿಗದಿಗೊಳಿಸಿರುವುದು ಅಪಮಾನ ಜನಕವಾಗಿದೆ ಎಂದರು. ರಾಜ್ಯಗಳ ಪುನಾರಚನೆಯ ಬಳಿಕ ಕೂಡಲೇ ಜಿಲ್ಲೆಗಳ ಪುನಾರಚನೆ ಮಾಡಬೇಕೆಂದೂ ಅವರು ಸೂಚಿಸಿದರು ಡಾ. ಅಯ್ಯಂಗಾರರು ಮೈಸೂರು ವಿಶಾಲಗೊಂಡಾಗಲೂ ಅದರ ಈಗಿನ "ಸಮ್ಮಿಶ್ರ, ಸ್ವರೂಪ" ಉಳಿಯುವುದು ಅವಶ್ಯವೆಂದು ಹೇಳಿ ಹೊಸ ಪ್ರಾಂತ್ಯದ ರಚನೆಯಾಗುತ್ತಿದೆ ಎನ್ನುವುದಕ್ಕಿಂತಲೂ ಮೈಸೂರೇ ದೊಡ್ಡದಾಗುತ್ತಿದೆ ಎಂದನ್ನುವುದು ಸೂಕ್ತವೆಂದರು. ಗಡಿ ಪ್ರದೇಶಗಳನ್ನು ಈಗಿದ್ದಂತೆಯೆ ಬಿಡುವುದು ಉತ್ತಮವೆಂದೂ ಸೀಮಾ ಸಮಿತಿಯ ನೇಮಕವು ತೀವ್ರ ತಿಕ್ಕಾಟಗಳಿಗೆ ಎಡೆಕೊಟ್ಟೀತೆಂದೂ ಅವರು ತಿಳಿಸಿದರು.

ರಾಜಪ್ರಮುಖರ ಆಡಳಿತ

ಮುಂದರಿದು ಅವರು ಕೇಂದ್ರ ಸರಕಾರದೊಡನೆ ಆಗಿರುವ ಒಪ್ಪಂದದಂತೆ ಈಗಿನ ಮೈಸೂರು ರಾಜ ಪ್ರಮುಖರನ್ನು ಅವರು ಜೀವಂತರಿರುವ ವರೆಗೆ ರಾಜಪ್ರಮುಖರಾಗಿರಲು ಬಿಡುವುದೇ ಸೂಕ್ತವೆಂದರು. ಶ್ರೀ ವೀರಣ್ಣ ಗೌಡರು ನೂತನ ರಾಜ್ಯಗಳು ಅಸ್ತಿತ್ವದಲ್ಲಿ ಬರುವ ಇಸೀ ಅಕ್ಟೋಬರ ಹಾಗು ಸಾರ್ವತ್ರಿಕ ಚುನಾವಣೆಯು ಬರುವ ವರ್ಷಾದಿಯಲ್ಲಿ ನಡೆದು ಹೊಸ ಸರಕಾರವು ರಚಿಸಲ್ಪಡುವ ನಡುವಿನ ಅವಧಿಯಲ್ಲಿ ತಾತ್ಕಾಲಿಕ ಶಾಸನಸಭೆ ಮತ್ತು ಮಂತ್ರಿಮಂಡಳವಿರುವುದು ಅನಗತ್ಯವೆಂದೂ ರಾಜಪ್ರಮುಖರಿಗೆ ಅಥವಾ ಗವರ್ನರರಿಗೆ ಸಲಹೆಗಾರರನ್ನು ನೇಮಿಸಿ ಹಾಗೆ ಆಡಳಿತ ನಡೆಸುವುದು ವಿಹಿತವೆಂದೂ ಹೇಳಿದರು. ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರು ಕೊಳ್ಳೇಗಾಲವನ್ನು ಮೈಸೂರು ಜಿಲ್ಲೆಗೆ ಸೇರಿಸಬೇಕೆಂದರು, ಶ್ರೀ ಚೆನ್ನಿಗ ರಾಮಯ್ಯನವರು ಮಸೂದೆಯಲ್ಲಿ ಹೇಳಿದ ಪ್ರಕಾರ ಹೊಸ ರಾಜ್ಯಗಳ ರಚನೆ ಮೊದಲಾಗಲಿ; ಹೀಗೆ ಸ್ವಲ್ಪ ಸಮಯದ ವರೆಗೆ ಕೆಲಸ ನಡೆಯಲಿ; ಅನುಭವ ಹೆಚ್ಚಲಿ. ಆ ಮೇಲೆ ಬೇಕಿದ್ದರೆ ದಕ್ಷಿಣ ಪ್ರದೇಶದ ಕುರಿತು ವಿಚಾರಿಸೋಣ— ಅಲ್ಲಿಯ ವರೆಗೆ ತೆರೆದ ಮನಸ್ಸನ್ನು ಇಟ್ಟುಕೊಂಡಿದ್ದರೆ ಸಾಕು ಎಂದರು. ಶ್ರೀ ಲಿಂಗಾ ರೆಡ್ಡಿಯವರು ವಿಜಯನಗರದ ನೆನಪಾಗುವ ಆಂಧ್ರ–ಕರ್ನಾಟಕ ರಾಜ್ಯವಾಗಲಿ; ಹಾಗೆಯೇ ಕೇರಳ–ತಮಿಳು ನಾಡುಗಳು ಒಂದಾಗಲಿ ಎಂದರು.

ಹೆಸರಿನ ಮೇಲೆ ಮೋಹ

ವಿಶಾಲ ಮೈಸೂರು ರಾಜ್ಯಕ್ಕೆ ಎರಡು ಪ್ರಾದೇಶಿಕ ಮಂಡಳಗಳಿರಬೇಕೆಂದು ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು ಅಭಿಪ್ರಾಯಪಟ್ಟರು. ಅವರು ಮುಂದೆ ತೆಲಂಗಾಣವನ್ನು ಸೇರಿಸುವಾಗ ಆಂಧ್ರಕ್ಕೆ ಸಲ್ಲಿಸಿದ ಗೌರವವನ್ನು ಮೈಸೂರಿಗೆ ಕನ್ನಡದ ಇತರ ಪ್ರದೇಶಗಳನ್ನು ಸೇರಿಸುವಾಗ ಈ ಮೊದಲೇ ವ್ಯವಸ್ಥಿತ ಸರಕಾರದೊಡನೆ ಅಸ್ತಿತ್ವದಲ್ಲಿರುವ ಮೈಸೂರಿಗೆ ಸಲ್ಲಿಸದಿರುವುದು ಮೈಸೂರಿನ ಪಾಲಿಗೆ ಅಪಮಾನವೆಂದರು. ಇಂಥ ಪರಿಸ್ಥಿತಿಯಲ್ಲಿ ಮೈಸೂರು ಎಂಬ ಹೆಸರನ್ನೆ ಕಿತ್ತು ಹಾಕಬೇಕು; ಏಕೆಂದರೆ ಅದು ಗುಲಾಮಗಿರಿಯ ಸಂಕೇತ ಎನ್ನುವ ಕೆಲವು ಜನರ ಮನೋವೃತ್ತಿ ಖಂಡನೀಯವೆಂದರು ಶಾಸ್ತ್ರಿ. "ಮೈಸೂರನ್ನು ಗುಲಾಮಗಿರಿಯ ಸಂಕೇತವೆಂದು ಯಾರು ಕರೆಯುತ್ತಾರೊ ಅವರು ೧೯೪೭ನೇ ಆಗೋಸ್ತು ೧೫ನೇ ತಾರೀಕಿನ ವರೆಗೆ ಮೈಸೂರಿನ ಪ್ರಜೆಗಳಿಗಿಂತ ಹೆಚ್ಚು ಗುಲಾಮರಾಗಿದ್ದರು" ಎಂದು ಶಾಸ್ತ್ರಿಗಳು ಗುಡುಗಿದರು. ಮುಖ್ಯ ಮಂತ್ರಿ ಹನುಮಂತಯ್ಯನವರು ಮೈಸೂರೆಂಬ ಹೆಸರನ್ನು ಉಳಿಸಿಕೊಳ್ಳುವುದಕ್ಕೆ ಈ ರಾಜ್ಯದಲ್ಲಿ ಇದುವರೆಗಿದ್ದ ಸಮ್ಮಿಶ್ರ ಸ್ವರೂಪದ ಸಂಸ್ಕೃತಿಯೇ ಕಾರಣ ಎಂದು ವಿವರಣೆಯಿತ್ತರು. ಯಾವ ದೇಶದಲ್ಲಿ ಭಾಷೆಯ ಆಧಾರದ ಮೇಲೆ ಯಾವ ಭೇದವೇ ಆಗಲಿ, ಯಾವಾಗಲೂ ಯಾರಲ್ಲೂ ಉಂಟಾಗಲಿಲ್ಲವೊ ಅಂಥ ಒಳ್ಳೆಯ ಪರಿಸ್ಥಿತಿಯನ್ನು ಮುಂದುವರಿಸಿಕೊಂಡು ಬರಲು ಮೈಸೂರೆಂಬ ಹೆಸರು ಸಹಕಾರಿ ಎಂದರು. ಕರ್ನಾಟಕ ಎಂಬ ಹೆಸರನ್ನು ನೂತನ ರಾಜ್ಯಕ್ಕೆ ಇಟ್ಟರೆ ತಾವು ಹೊರಗಿನವರೇನೋ ಎನ್ನುವ ಭಾವನೆ ಹೊಸ ರಾಜ್ಯದಲ್ಲಿರುವ ಕನ್ನಡೇತರ ಭಾಷೆಯಾಡುವ ಪ್ರಜೆಗಳಿಗೆ ಬರುತ್ತದೆ. ಇದು ಶ್ರೇಯಸ್ಕರವಲ್ಲವೆಂದೂ ಅವರು ಹೇಳಿದರು.

ಮುಖ್ಯ ಮಂತ್ರಿಗಳ ತಿದ್ದುಪಡಿ

ಮಸೂದೆಗೆ ಸದಸ್ಯರ ಅನೇಕ ತಿದ್ದುಪಡಿಗಳನ್ನು ಮಂಡಿಸಿದರು. ಮುಖ್ಯ ಮಂತ್ರಿಗಳೂ ಕೆಲವು ತಿದ್ದುಪಡಿ ಸೂಚಿಸಿದರು. ಇವುಗಳಲ್ಲಿ ಒಂದು ನೂತನರಾಜ್ಯದ ಸ್ಥಾಪನೆಯಾದ ಬಳಿಕ ನೌಕರವರ್ಗದಸಂಬಳ ಪ್ರಮಾಣವನ್ನು ರಾಜ್ಯದ ಆರ್ಥಿಕ ಸ್ಥಿತಿಯನ್ನವಲೋಕಿಸಿ ಹೊಸತಾಗಿ ನಿರ್ಧರಿಸಲು ಅವಕಾಶವಿರಬೇಕೆ ಹೊರತು ಹಿಂದೆ ಸಿಗುತ್ತಿದ್ದ ಮಟ್ಟವನ್ನೆ ಮುಂದರಿಸಬೇಕೆಂದು ಒತ್ತಾಯಿಸಲಾಗದೆನ್ನುತ್ತದೆ. ಹಾಗೆ ಒತ್ತಾಯಿಸುವುದಾದರೆ ಹೆಚ್ಚಿನ ವೆಚ್ಚವನ್ನು ಕೇಂದ್ರವು ಹೊರಬೇಕೆಂದೂ ತಿದ್ದುಪಡಿ ಹೇಳುತ್ತದೆ. ಈಗ ಇಂಥ ತಿದ್ದುಪಡಿಯನ್ನು ಮಾಡದಿದ್ದರೆ ನಾವು ಮಸೂದೆಯಲ್ಲಿ ಹೇಳಿದ ಅಂಶಕ್ಕೆ ಒಪ್ಪಿದಂತಾಗುತ್ತದೆ. ಇದು ನೌಕರರ ಮೇಲೆ ಸಹಾನುಭೂತಿ ತೋರಿಸುವ ಸಂಗತಿಯಲ್ಲ; ರಾಜ್ಯದ ಆರ್ಥಿಕ ಅನುಕೂಲತೆಯನ್ನು ಅವಲಂಬಿಸಿದ ವಿಷಯ ಎಂಬುದಾಗಿ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ವಿತ್ತರು. ಅವರು ಇನ್ನೊಂದು ತಿದ್ದುಪಡಿಯ ಮೂಲಕ ನೂತನ ಮೈಸೂರು ರಾಜ್ಯದ ಶಾಸನಾಂಗದಲ್ಲಿ ಕೊಡಗಿನಂಥ ಸಣ್ಣ ಪ್ರದೇಶಕ್ಕೆ ೨೪ ರಸದಸ್ಯ ಸ್ಥಾನವಿರುವುದು ಸಲ್ಲದೆಂದೂ ಅದರ ಜನಸಂಖ್ಯೆಯ ಆಧಾರದ ಮೇಲೆ ಮೂರು ಸ್ಥಾನಗಳನ್ನು ಮಾತ್ರ ಕೊಡುವುದ, ನ್ಯಾಯವೆಂದೂ ಪ್ರತಿಪಾದಿಸಿದರು. ಕೇಂದ್ರ ಸರಕಾರ ಇದನ್ನು ಗಮನಿಸುವುದಾಗಿಯೂ ಕೊಡಗು ಸಹ ಇದನ್ನು ಮೆಚ್ಚಿಕೊಳ್ಳುವುದಾಗಿಯೂ ಅವರು ಹಾರೈಸಿದರು. ಮೇಲಿನೆರಡೂ ತಿದ್ದುಪಡಿಗಳನ್ನು ಶಾಸನಾಂಗ ಅಂಗೀಕರಿಸಿತು.

ಕಾಸರಗೋಡು ತಾಲೂಕು

ಶ್ರೀ ಯು. ಎಂ. ಮಾದಪ್ಪನವರು ನೂತನ ಮೈಸೂರು ರಾಜ್ಯದಲ್ಲಿ ಕಾಸರಗೋಡು ತಾಲೂಕು ಇರುವಂತೆಯೂ ಗೋಪಿಚೆಟ್ಟಿ ಪಾಳ್ಯಂ ತಾಲೂಕಿನ ತಾಳವಾಡಿ ಫಿರ್ಕಾ ಸೇರುವಂತೆಯೂ ತಿದ್ದುಪಡಿ ತಂದರು. ಮತ್ತೊಂದು ತಿದ್ದುಪಡಿಯ ಮೂಲಕ ಕೊಳ್ಳೆಗಾಲವನ್ನು ಮಂಡ್ಯ ಜಿಲ್ಲೆಯ ಬದಲಿಗೆ ಮೈಸೂರು ಜಿಲ್ಲೆಯೊಡನೆ ಸೇರಿಸಬೇಕೆಂದೂ ಅವರು ಸೂಚಿಸಿದರು. ಶ್ರೀ ಹೆಚ್ಚಮಾಸ್ತಿ ಗೌಡರು ಈ ತಿದ್ದುಪಡಿಗಳನ್ನು ವಿರೋಧಿಸಿ ಭಾಷೆಯ ಆಧಾರದ ಮೇಲೆ ರಾಜ್ಯಗಳ ಪುನಾರಚನೆ ಮಾಡಲಾಗದೆಂದು ಶಾಸನಾಂಗದಲ್ಲಿ ಹೆಚ್ಚಿನವರು ಅಭಿಪ್ರಾಯಪಟ್ಟಿರುವುದನ್ನು ಅಲಕ್ಷಿಸಲಾಗದೆಂದರು. ಒಂದು ಹಳ್ಳಿ, ಫಿರ್ಕ, ಬೀದಿಗಳನ್ನು ಸೇರಿಸಬೇಕೆನ್ನುತ್ತಾ ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡಲು ಹೇಳುವುದು ಅನರ್ಥಕಾರಿ ಎಂದವರು ಸಾರಿದರು. ಕೊಳ್ಳೇಗಾಲಕ್ಕೆ ರೇಶ್ಮೆ ವ್ಯವಸಾಯದ ನೆಪದಲ್ಲಿ ಬೆಂಗಳೂರಿನೊಡನೆ ಸಂಬಂಧವು ವಿಶೇಷವಾಗಿರುವುದರಿಂದ ಅದನ್ನು ಮಂಡ್ಯಜಿಲ್ಲೆಯಲ್ಲಿ ಸೇರಿಸುವುದೇ ಸೂಕ್ತವೆಂದರು. ಶ್ರೀ ವೀರಣ್ಣ ಗೌಡರು ಇವರ ಅಭಿಪ್ರಾಯಗಳನ್ನು ಬೆಂಬಲಿಸಿ ಕೊಳ್ಳೇಗಾಲಕ್ಕೆ ಇಲ್ಲಿ ಇಳಿಯಿರಿ ಎಂದು ಮಂಡ್ಯ ಜಿಲ್ಲೆಯ ಮದ್ದೂರು ರೈಲ್ವೆ ಸ್ಟೇಶನಿನಲ್ಲಿ ಬೋರ್ಡು ತೂಗಿಸಿರುವುದನ್ನು ನೆನಪಿಗೆ ತಂದು ಕೊಟ್ಟರು. ಮುಖ್ಯ ಮಂತ್ರಿಗಳು ಮಾತನಾಡುತ್ತಾ ಹೆಚ್ಚಿನ ಪ್ರದೇಶಗಳ ಕೇಳಿಕೆ ಮತ್ತು ಆ ಸಂಬಂಧದ ಪ್ರತಿ ಕೇಳಿಕೆಗಳು ಕಹಿ ವಾತಾವರಣಕ್ಕೆ ಎಡೆ ಕೊಡುತ್ತವೆ ಎನ್ನುತ್ತಾ ಕಾಸರಗೋಡಾಗಲೀ ಬೇರೆ ಯಾವುದೇ ಗಡಿ ಪ್ರದೇಶವಾಗಲೀ ಸೀಮಾ ಸಮಿತಿಯ ಮುಂದೆ ಹೋಗಲಿ ಎಂದರು. ಕೊಳ್ಳೆಗಾಲವು ಮಂಡ್ಯದೊಡನೆ ಸೇರುವುದೇ ಸೂಕ್ತವೆಂದು ಹೇಳಿದರು.

ತೆಲುಗರ ಬೇಡಿಕೆ

ಶ್ರೀ. ಮಾದಪ್ಪನವರು ತಮ್ಮ ತಿದ್ದುಪಡಿಯನ್ನು ಹಿಂದೆಗೆದುಕೊಂಡರು ಪ್ರತಿಪಕ್ಷದ ನಾಯಕ ಶ್ರೀ. ಇಮಾಮರು ಒಂದು ತಿದ್ದುಪಡಿಯ ಮೂಲಕ ಹೊಸೂರು ಮತ್ತು ಮಡಕಶಿರ ತಾಲೂಕುಗಳನ್ನು ನೂತನ ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದರು. ಮುಖ್ಯ ಮಂತ್ರಿಗಳು ಇವೆಲ್ಲ ಸಂಗತಿಗಳನ್ನು ಸೀಮಾ ಸಮಿತಿಗೆ ಒಪ್ಪಿಸಬೇಕೆಂದುದರಿಂದ ಇಮಾಮರು ತಮ್ಮ ತಿದ್ದುಪಡಿಯನ್ನು ವಾಪಸು ಪಡೆದರು. ಶ್ರೀ. ಬಿ. ವಿ. ನಾರಾಯಣ ರೆಡ್ಡಿಯವರು ಚಿತ್ರದುರ್ಗ, ಬೆಂಗಳೂರು, ತುಮಕೂರು ಜಿಲ್ಲೆಗಳ ಕೆಲವು ಪ್ರದೇಶ, ಇಡಿಯಾಗಿ ಕೋಲಾರ ಜಿಲ್ಲೆ ಮತ್ತು ಬಳ್ಳಾರಿ ನಗರ ಹಾಗು ಬಳ್ಳಾರಿ ತಾಲೂಕಿನ ನೋಕ ಮತ್ತು ರೂಪನಗುಡಿ ಫಿರ್ಕಾಗಳನ್ನು ಆಂಧ್ರದಲ್ಲಿ ಸೇರಿಸಬೇಕೆಂದರು. ಕೋಲಾರವು ತೆಲುಗು ಪ್ರದೇಶವಾಗಿದ್ದರೂ ಅಲ್ಲಿ ತೆಲುಗು ಶಿಕ್ಷಣಕ್ಕೇನೂ ಸೌಕರ್ಯವನ್ನು ಒದಗಿಸಲಾಗಿಲ್ಲವೆಂದವರು ಆಕ್ಷೇಪಿಸಿದರು. ಈ ತಿದ್ದುಪಡಿಯನ್ನು ವಿರೋಧಿಸಿದ ಸದಸ್ಯರು

(೮ನೇ ಪುಟ ನೋಡಿರಿ).

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೨-೪-'೫೬	೩೨

ಸಾರ್ವಜನಿಕ ಆಡಳಿತ

ನಮ್ಮ ಪ್ರಧಾನ ಮಂತ್ರಿಗಳು ಭಾರತದಲ್ಲಿ ಪ್ರಜಾಪ್ರಭುತ್ವದ ಸತ್ಸಂಪ್ರದಾಯಗಳನ್ನು ಪ್ರತಿಯೊಂದು ಕ್ಷೇತ್ರದಲ್ಲಿ ನೆಲೆಗೊಳಿಸಲು ಬಹಳವಾಗಿ ಪರಿಶ್ರಮಪಡುತ್ತಿದ್ದಾರೆ. ಸಾರ್ವಜನಿಕ ಸೇವಾಕ್ಷೇತ್ರದಲ್ಲಿ ದುಡಿಯುವ ನೌಕರರ ಮನೋಭಾವನೆಯನ್ನು ಮಾರ್ಪಡಿಸಲು ಅವರು ಮಾಡುತ್ತಿರುವ ಹೆಣಗಾಟವೂ ಇದರಲ್ಲಿ ಬರುತ್ತದೆ. ಸಾರ್ವಜನಿಕ ಆಡಳಿತೆಯ ಭಾರತೀಯ ಮಂಡಳದ ಅಧ್ಯಕ್ಷ ಸ್ಥಾನದಿಂದ ಅವರು ಸರಕಾರಿ ಆಡಳಿತಾಧಿಕಾರಿಗಳಿಗೆ ಮೊನ್ನೆ ೬ನೇ ದಿನಾಂಕ ಎಂದೆಂದಿಗೂ ಮರೆಯಲಾಗದ ಬೋಧನೆಯನ್ನಿತ್ತಿದ್ದಾರೆ ಅವರು ಜಾತೀಯತೆಯ ಭಾವನೆಯನ್ನು ನೌಕರರೆಲ್ಲರೂ ತಿರಸ್ಕರಿಸಬೇಕೆನ್ನುತ್ತಾರೆ. ಸ್ವಜಾತಿ ಬಾಂಧವ್ಯವು ಸುಗಮ ಆಡಳಿತವನ್ನು ನಡೆಸಗೊಡದ ಮೋಹಕ್ಕೆ ಅವಕಾಶ ಕೊಡುತ್ತದೆ. ದಾಕ್ಷಿಣ್ಯಪರತೆಯನ್ನೂ ಪಕ್ಷಪಾತವನ್ನೂ ಅದು ಪೋಷಿಸುತ್ತದೆ. ಇದಕ್ಕೆ ಆಸ್ಪದವಿರಕೂಡದೆಂಬ ನೆಹರುಗಳ ಮಾತನ್ನು ದಕ್ಷ ಆಡಳಿತೆಯನ್ನು ಹಾರೈಸುವ ಯಾರೇ ಆಗಲಿ, ಅನುಮೋದಿಸದಿರಲಾರರು. ಪ್ರಧಾನಿಗಳು ಒತ್ತಿ ಹೇಳಿದ ಇನ್ನೊಂದು ಅಂಶವೆಂದರೆ ಸಾರ್ವಜನಿಕರೊಡನೆ ಸರಕಾರಿ ನೌಕರರಿಗಿರಬೇಕಾದ ಮಧುರವಾದ ಸಂಬಂಧ. ಪ್ರಜಾಪ್ರಭುತ್ವದ ಬೆಳವಣಿಗೆಗೆ ಈ ಮಧುರ ಸಂಬಂಧವು ಅನಿವಾರ್ಯವಾದ ಆವಶ್ಯಕತೆಯಾಗಿದೆ ಎಂದವರು ಹೇಳಿದುದು ಸಂಪೂರ್ಣ ಸತ್ಯ. ಸಾರ್ವಜನಿಕರಿಗಿಂತ ತಾವು ಮೇಲಿನ ಅಂತಸ್ತಿನವರು ಅಥವಾ "ಜಾತಿ" ಯವರು ಎಂಬ ಭಾವನೆಯು ಸರಕಾರಿ ನೌಕರರಲ್ಲಿ ಉಂಟಾದರೆ ಅಲ್ಲಿ ಪ್ರಜೆಗಳ ಕಷ್ಟ ನಿವಾರಣೆಗೆ ಯೋಗ್ಯ ಸಂದರ್ಭವೇ ಬಂದೊದಗಲಾರದು. ಸಾಮಾನ್ಯ ಪ್ರಜೆಯೊಡನೆ ಮಾತನಾಡುವುದು ಸಹ ತನ್ನ ಗೌರವಕ್ಕೆ ಮತ್ತು ಘನಸ್ತಿಕೆಗೆ ಕುಂದೆನ್ನುವ ಸರಕಾರಿ ನೌಕರನು ಪ್ರಜಾಪ್ರಭುತ್ವಕ್ಕೆ ಹೇಳಿಸಿದವನಲ್ಲ. ಅಷ್ಟೇ ಏಕೆ, ಸಾಮಾನ್ಯ ಮಾನವೀಯತೆಯ ದೃಷ್ಟಿಯಿಂದಲೂ ಆತನು ಕೀಳಾಗಿದ್ದಾನೆ; ಆತನ ವರ್ತನೆಯು ಖಂಡನೀಯವೆನಿಸುತ್ತದೆ. ಕೆಲವು ವಿಶೇಷ ಹೊಣೆಗಾರಿಕೆಗಳುಳ್ಳ ಸ್ಥಾನದಲ್ಲಿ ಸರಕಾರವು ಅಧಿಕಾರಿಯೊಬ್ಬನನ್ನು ಇರಿಸಿದೆ ಎಂದ ಮಾತ್ರಕ್ಕೆ ಆತನು ಅವಿನಯಕ್ಕೂ ದರ್ಪಕ್ಕೂ ಸಂಕೋಚಪಡಬಾರದೆಂದು ಅರ್ಥವಾಗಲಾರದು. "ನನ್ನನ್ನು ನೋಡಲು ಬಂದ ಯಾವನೇ ಸಾಮಾನ್ಯ ಮನುಷ್ಯನಿಗೂ 'ಇಲ್ಲ'ವೆಂದು ನಾನು ಹೇಳಿಲ್ಲ. ನನ್ನ ಮನೆಯ ಹೊರಗಡೆ ಸಾಮಾನ್ಯ ಮನುಷ್ಯನೊಬ್ಬನು ನನ್ನನ್ನು ನೋಡಲೆಂದು ಕಾದು ನಿಂತಿದ್ದರೆ ನಾನು ಕೂಡಲೇ ನನ್ನ ಕಾರನ್ನು ನಿಲ್ಲಿಸಿ ಆತನನ್ನು ಕಂಡು ಮಾತನಾಡಲು ಸಮಯವನ್ನು ಗೊತ್ತುಪಡಿಸಿಕೊಳ್ಳುತ್ತೇನೆ ಸಾಮಾನ್ಯ ಜನರೊಡನೆ ವ್ಯವಹರಿಸುವಾಗ ಸರಕಾರಿ ಆಡಳಿತಾಧಿಕಾರಿಗಳು ಈ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಅನುಸರಿಸಬೇಕೆಂದು ನನ್ನ ಅಭಿಪ್ರಾಯ. ನೀವೆಲ್ಲರೂ ಜನ ಸಾಮಾನ್ಯರನ್ನು ಕಾಣಬೇಕು; ಕಂಡು ವಿನಯದಿಂದ ಅವರನ್ನು ಮಾತನಾಡಿಸಬೇಕು. ನಿಮ್ಮನ್ನು ನೋಡ ಬಂದವರಿಗೆ ಆತನು ಹೇಳುವ ಕೆಲಸವನ್ನು ಮಾಡಿ ಕೊಡುವುದು ಸಾಧ್ಯವಿಲ್ಲವೆಂದೂ ಆ ಬಗ್ಗೆ ನಿರುಪಾಯರು ನೀವಾಗಿದ್ದೀರೆಂದೂ ಹೇಳುವುದೇ ತಪ್ಪಲ್ಲ; ಆದರೆ ನೀವು ಆ ವ್ಯಕ್ತಿಯನ್ನು ಕಾಣಬೇಕು; ಆತನೊಡನೆ ಆತ್ಮೀಯತೆಯಿಂದಲೂ ಸಂತೋಷದಿಂದಲೂ ವರ್ತಿಸಬೇಕು. ಸಾಮಾನ್ಯ ಜನರನ್ನು ಕಂಡು ಮಾತನಾಡಿಸುವುದರಿಂದ ಸಮಯ ಹಾಳಾಗುತ್ತದೆಂದು ಭಾವಿಸಬಾರದು. ಕೆಲವರು ನಿಮ್ಮ ಸಮಯ ಹಾಳುಮಾಡಲು ಮತ್ತು ತೊಂದರೆ ಕೊಡಲು ಬರುವವರಿರಬಹುದು. ಆದರೆ ಯಾರೇ ಆಗಲಿ, ತಿರಸ್ಕಾರಪೂರ್ವಕವಾಗಿಯೂ ಪ್ರೀತಿರಹಿತವಾಗಿಯೂ ತನ್ನನ್ನು ನಡೆಸಿಕೊಳ್ಳಲಾಯಿತೆಂದು ದೂರಿಡದಂತೆ ನಿಮ್ಮ ನಡವಳಿಕೆಯಿರಲಿ!" —ಪ್ರಧಾನಿಗಳ ಈ ಪ್ರತಿಯೊಂದೂ ಮಾತನ್ನು ನಾವು ಅಕ್ಷರಶಃ ಅನುಮೋದಿಸುತ್ತೇವೆ; ಮತ್ತು ನಮ್ಮ ಸಾರ್ವಜನಿಕ ಆಡಳಿತಾಧಿಕಾರಿಗಳೆಲ್ಲರೂ ಸ್ಥಾನ ಭೇದವಿಲ್ಲದೆ ಈ ಮಾತುಗಳ ಸದಾಶಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಕೆಲಸ ನಡೆಸುವರೆಂದೂ ನಡವಳಿಕೆಯನ್ನು ಹೊಸತಾಗಿ ರೂಪಿಸಿಕೊಳ್ಳುವರೆಂದೂ ಆಶಿಸುತ್ತೇವೆ. ಸಾಮಾನ್ಯವಾಗಿ ಸರಕಾರಿ ಅಧಿಕಾರಿಗಳಿಗೆ ನಾಗರಿಕರನ್ನು ವ್ಯಾಪಾರಿಯೊಬ್ಬನ ಆತ್ಮೀಯತೆಯಿಂದ ನಡೆಸಿಕೊಳ್ಳುವ ಬುದ್ಧಿಯಿರುವುದಿಲ್ಲ–ತಮಗೆ ನಾಗರಿಕರ "ಹಂಗು" ಇಲ್ಲವೆಂಬಂತೆ, ತಮ್ಮ ಹಂಗು ಮತ್ತು ಅನುಗ್ರಹಗಳಿಗೆಯೇ ನಾಗರಿಕರು ಬದ್ಧರಿರುವರೆನ್ನುವಂತೆ ಸರಕಾರಿ ನೌಕರರ ವರ್ತನೆಯಿರುತ್ತದೆ. ಶಾಸನಾಂಗದಲ್ಲಿ ಪ್ರಜಾಪ್ರಭುತ್ವವು ರೂಢವಾಗಿದ್ದು, ಅಲ್ಲಿ ಜನ ಪ್ರತಿನಿಧಿಗಳು ಮತದಾರರ ಪ್ರೀತಿ ಸಂಪಾದನೆಗೆ ಹೆಚ್ಚಿನ ಬೆಲೆಯನ್ನು ಕೊಡುತ್ತಿದ್ದಾರೆ; ಆದರೆ ಆಡಳಿತ ವರ್ಗವು ಮಾತ್ರ ಇನ್ನೂ ಈ ಬದಲಾವಣೆಯನ್ನು ಗಂಭೀರವಾಗಿ ಅವಲೋಕಿಸಿಲ್ಲ. ತಾವು ಸಾಮಾನ್ಯ ಪ್ರಜೆಗಳ ಬಗ್ಗೆ ಉಪೇಕ್ಷೆಪಟ್ಟರೆ ಹಾನಿಯಿಲ್ಲವೆಂಬ ಅವರ ಈ ಭಾವನೆಯು ಪ್ರಜಾಪ್ರಭುತ್ವಕ್ಕೆಂತೋ ಕಲ್ಯಾಣ ರಾಷ್ಟ್ರದ ರಚನೆಗೆ ಸಹ ಆತಂಕವಾಗಿದೆ. ಕಲ್ಯಾಣ ರಾಷ್ಟ್ರವು ಜನರೊಡನೆ ವಿಚಾರ ವಿನಿಮಯ, ಉಚ್ಚ ಸ್ಥಾನದಲ್ಲಿರುವ ಅಧಿಕಾರಿಗಳಿಗೂ ಕೆಳ ಅಂತಸ್ತಿನ ನೌಕರರಿಗೂ ನಡುವೆ ವಿಚಾರ ವಿನಿಮಯ ಇತ್ಯಾದಿಗಳನ್ನು ಆಧರಿಸಿರುತ್ತದೆ. ಜನತಾ ಸಹಕಾರವನ್ನು ದೊರಕಿಸಲು ಮತ್ತು ಆಡಳಿತದ ಕುಂದುಕೊರತೆಗಳನ್ನು ಪರಿಸಡಿಸಿ ಅಲ್ಲಲ್ಲಿಯ ಆವಶ್ಯಕತೆಗಳನ್ನು ತ್ವರ್ಯದಲ್ಲಿ ಪೂರೈಸಲು ಇಂಥ ನಿರ್ಭೀತ ವಿಚಾರ ವಿನಿಮಯ ಅತ್ಯಗತ್ಯವಾಗಿದೆ. ಸಮಾನತೆಯ ಭಾವನೆಯು ರೂಢಿಯಲ್ಲಿ ಬರುವಂತೆ ಸರಕಾರದ ಅಧಿಕಾರಿಗಳೆಲ್ಲ ನೋಡಿಕೊಂಡರೆ ಮಾತ್ರ ಇದಕ್ಕೆ ತಕ್ಕ ವಾತಾವರಣವೇರ್ಪಡಬಲ್ಲುದು. ಸಲಹೆಯನ್ನು ಯಾರಿಂದಲೂ ಕೇಳಬಹುದು—ಆದರಿಂದ ಯಾರ ಮರ್ಯಾದೆಯೂ ತಗ್ಗದು. ಒಳ್ಳೆಯ ಮಾತು ಯಾರಿಂದ ಬಂದರೂ ಅದು ಸ್ವೀಕೃತವಾಗಬೇಕು. ಇವೆಲ್ಲ ವಿಷಯಗಳಲ್ಲಿ ನಮ್ಮಲ್ಲಿದ್ದ ಸಾಮ್ರಾಜ್ಯ ಶಾಹಿ ಆಡಳಿತ ಯಂತ್ರವು ರೂಢಿಸಿಕೊಳ್ಳಬೇಕಾದ ಬದಲಾವಣೆ ಬಹಳವಿದೆ —ಸ್ವಾತಂತ್ರ್ಯೋತ್ತರದಲ್ಲಿ ಇಂಥ ಬದಲಾವಣೆ ಸ್ವಲ್ಪ ಮಟ್ಟಿಗೆ ನಡೆದಿದ್ದರೂ ಅದರ ವೇಗ ಬಹಳ ನಿಧಾನವಾಗಿದೆ. ಜನರ ಅನುಭವವು ಹಿಂದಿಗಿಂತ ಹೆಚ್ಚು ಮಧುರವಾಗಿಲ್ಲ. ಸಾಮಾನ್ಯರ ಪಾಲಿಗೆ ಊರಿನ ಶ್ಯಾನುಭಾಗ, ಪಟೇಲ, ಉಗ್ರಾಣಿಗಳೂ ತಾಲೂಕಿನ ತಹಸೀಲ್ದಾರ ಮತ್ತವರ ಸಿಬ್ಬಂದಿಯೂ ತೋರಿಸುವ ವರ್ತನೆಯೇ ಆಡಳಿತವು ಎಷ್ಟು ಮಟ್ಟಿಗೆ ಸುಧಾರಿಸಿದೆ ಎಂದು ನಿರ್ಧರಿಸುವ ಮಾನದಂಡ. ಇಲ್ಲಿ ಸರಕಾರದ ಆಡಳಿತ ವಿಭಾಗವು ತೃಪ್ತಿಕರ ಫಲಿತಾಂಶವನ್ನು ವ್ಯಕ್ತಪಡಿಸದಿದ್ದರೆ ನಮ್ಮ ಸ್ವಾತಂತ್ರ್ಯ ಅರ್ಥರಹಿತವೆನಿಸುತ್ತದೆ; ಪ್ರಜಾಪ್ರಭುತ್ವ ಮತ್ತು ಕಲ್ಯಾಣ ರಾಷ್ಟ್ರದ ಕಲ್ಪನೆಗಳೂ ಮಹತ್ವ ಕಳೆದು ಕೊಳ್ಳುತ್ತವೆ. ಆದುದರಿಂದ ಇದಕ್ಕೆ ಅವಕಾಶ ಕೊಡದಿರುವಷ್ಟು ಜಾಗೃತಿ ಹೊಂದುವುದೇ ಆಡಳಿತ ವಿಭಾಗದ ಆದ್ಯ ಕರ್ತವ್ಯವೆಂದು ಸೂಚಿಸುತ್ತೇವೆ

ಬೆಂಗಳೂರಿನ ಆಕಾಶವಾಣಿ ನಿಲಯ



ಸಂಸತ್ತಿನ ಪ್ರಶ್ನೋತ್ತರ ವೇಳೆಯಲ್ಲಿ ಬೆಂಗಳೂರು ಆಕಾಶವಾಣಿಯ ಕಾರ್ಯಕ್ರಮಗಳು ಏನೂ ಚೆನ್ನಾಗಿ ಕೇಳಿಸುವುದಿಲ್ಲವೆಂಬ ಸಾರ್ವಜನಿಕರ ದೂರನ್ನು ಕುರಿತು ಮಂತ್ರಿ ... ಕೇಸ್ಕರರು ಮಾತನಾಡುತ್ತಾ ತಮ್ಮ ತಿಳಿವಳಿಕೆಯಂತೆ ಬೆಂಗಳೂರು ನಿಲಯದ ಕೆಲ... ಸಂಪೂರ್ಣ ತೃಪ್ತಿಕರವಾಗಿದೆ ಎಂದರು. ಅತ್ಯಾಧುನಿಕ ಸಲಕರಣೆಗಳಿಂದ ಸುಸಜ್ಜಿತವಾದ ನೂತನ ನಿಲಯವು ಕನ್ನಡಿಗರ ಅವಶ್ಯಕತೆಯನ್ನು ಪೂರೈಸುವ ಉದ್ದೇಶವಿಟ್ಟುಕೊಂಡಿ... ಚಿತ್ರದಲ್ಲಿ ಆಧುನಿಕ ಆಕಾಶವಾಣಿ ನಿಲಯದ ಮೂರು ಬೇರೆ ಬೇರೆ ಪ್ರಮುಖ ಭಾ... ಗಳನ್ನು ನೋಡಬಹುದು.

ಜಾಗತಿಕ ಆರೋಗ್ಯ ದಿನಾಚರ... ಮೈಸೂರು ಆರೋಗ್ಯ ಮಂತ್ರಿ ... ಚೆನ್ನಯ್ಯ ನವರ ಸಂದೇಶ

ಇ... 7ರಲ್ಲಿ ಆಚರಿಸಲಾದ ಜಾಗತಿಕ ಆರೋ... ದಿನಾಚರಣೆ ದಿವಸ ಮೈಸೂರಿನ ಸ್ಥಾ... ಹಾಗೂ ಆರೋಗ್ಯಮಂತ್ರಿ ಮಾನ್ಯ ಶ್ರೀ ... ಚೆನ್ನಯ್ಯ ನವರು ಕಳುಹಿಸಿದ ಸಂದೇಶ... ರಾಜ್ಯದಲ್ಲಿಯ ಪ್ರತಿಯೊಬ್ಬರೂ ಸಾಂಕ್ರಾಮಿಕ ರೋಗಗಳನ್ನು ಪಸರಿಸುವ ಅಣುಗಳ... ಧ್ವಂಸಮಾಡಿ ವಿಜಯಿಗಳಾಗಬೇಕೆಂದು ... ಸಿರುವರು.

ಮೈಸೂರು ರಾಜ್ಯದಲ್ಲಿಯ ಮಲೆನಾ... ಪ್ರದೇಶಗಳಲ್ಲಿ ಮಲೇರಿಯೂ ಹಾವಳಿಯ ರ... ವನ್ನು ಹೀರಿದೆ. ಪ್ಲೇಗು ಕೂಡಾ ಕೆಲವು... ಹಾವಳಿಯನ್ನು ಮಾಡಿದೆ. ಕೊಲೆರಾ, ವಿಷ ಜ್ವರ, ಅಮಶಂಕೆ ಇತ್ಯಾದಿ ರೋಗಗಳು ... ಮಿಗಳ ಮೂಲಕ ವ್ಯಾಪಿಸುತ್ತವೆ. ಈ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟದಿದ್ದರೆ ... ರಣಸಂಖ್ಯೆಯು ಜಾಸ್ತಿಯಾಗುವುದಲ್ಲದೆ, ... ತ್ತು ನಾಶಹೊಂದಿ ದೇಶಕ್ಕೆ ಅಪಾರ ನ... ಸಂಭವಿಸುವುದು. ಆದುದರಿಂದ ಚಹಾ... ಚೀನಾ ಮೊದಲಾದ ದೇಶಗಳ ಮಾದರಿಯ... ಸರಕಾರದ ಸಹಾಯವನ್ನು ಪಡೆದು ರಾಜ... ಜನತೆ ಗ್ರಾಮಗ್ರಾಮಗಳಲ್ಲಿ ಪೇಟೆ ಪಟ್ಟಣ... ಗಳಲ್ಲಿ ಈ ಮಹಾ ಸಾಂಕ್ರಾಮಿಕ ರೋಗ... ನ್ನು ತಡೆಕಟ್ಟುವಕಾರ್ಯದಲ್ಲಿ ಮುಂದಾಗ... ಕೆಂದು ನಿರೀಕ್ಷಿಸಲಾಗಿದೆ.

ಪ್ರಕಟಣೆ

ತಾ. 15—4—1956ನೇ ಆದಿತ್ಯವಾರ ಸಂಜೆ ಘಂಟೆ 4.30ಕ್ಕೆ ಕಿದಿಯೂರು ಎ... ಡೆಡ್ ಹಾ. ಎಲಿಮೆಂಟರೀ ಶಾಲಾವಠಾರದಲ್ಲಿ ರೆತಕ್ಕ ಸಭೆಯು ಸ್ಥಳೀಯ ವಿಷ್ಣುಮೂ... ದೇವಸ್ಥಾನದಲ್ಲಿ ಶ್ರೀ ಎ. ಜನಾರ್ಧನ ಅ... ಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದ... ಮಹನೀಯರೆಲ್ಲರೂ ಈ ತಿದ್ದುಪಡಿಯನ್ನು ಗಮನಿಸಬೇಕಾಗಿ ವಿನಂತಿ.

ಕೆ. ಶಂಕರ ರಾವ್
ಸೆಕ್ರೆಟರಿ, ಸ್ಕೂಲ್ ರಿಫೋರ್ಮ್ಕಮಿ...
ಕಿದಿಯೂರು 10—4—56.

ಸಿಲೋನಿನ ಹೊಸ ಚುನಾವಣೆ

ಕೊತೇಲವಾಲ ಸಚಿವ ಸಂಪುಟದ ಸೋಲು

ನೆರೆಯ ರಾಷ್ಟ್ರವಾದ ಸಿಂಹಳದಲ್ಲಿ ಕಳೆದ ವಾರ ನಡೆದ ಚುನಾವಣೆಯ ಫಲಿತಾಂಶಗಳು ಆ ದೇಶದ ಇತಿಹಾಸದಲ್ಲಿ ನೂತನಾಧ್ಯಾಯ ಪ್ರಾರಂಭವಾಗುವ ಸಕಲ ಲಕ್ಷಣಗಳನ್ನು ತೋರಿಸಿರುತ್ತವೆ. ಕೊತೇಲವಾಲರ ಮಂತ್ರಿಮಂಡಳದ ಹೆಚ್ಚಿನ ಸದಸ್ಯರು ಚುನಾವಣೆಯಲ್ಲಿ ಸೋಲಿಸಲ್ಪಟ್ಟಿದ್ದಾರೆ. ಸ್ವತಃ ಕೊತೇಲವಾಲರು ಸೋಲಿನಿಂದ ತಪ್ಪಿದ್ದರೂ ಸಹ ಅವರ ಪಕ್ಷವು ಅತ್ಯಲ್ಪ ಸ್ಥಾನಗಳನ್ನು ಪಡೆದಿದೆ. ಪೂರ್ವ ಬಂಗಾಳದಲ್ಲಿ ಹಿಂದೆ ಮುಸ್ಲಿಂ ಲೀಗು ಅನುಭವಿಸಿದ್ದ ಮಾದರಿಯ ಸೋಲು ಈಗ ಸಿಂಹಳದ ಸಂಯುಕ್ತ ರಾಷ್ಟ್ರೀಯ ಪಕ್ಷದ ಪಾಲಿಗೆ ಬಂದಿದೆ.

ನೆಹರುಗಳೊಡನೆ ಸಹಕಾರ

ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆದ ಸಂಯುಕ್ತ ಜನ ಮುಖವೆಂಬ ಶ್ರೀ ಭಂಡಾರ ನಾಯಕೆಯವರ ನೇತೃತ್ವದಲ್ಲಿರುವ ಪಕ್ಷವು ಸಿಂಹಳಕ್ಕೆ ಹೊಸ ಸರಕಾರವನ್ನಷ್ಟೇ ಅಲ್ಲ, ಹೊಸ ಧೋರಣೆಗಳನ್ನೂ ರೂಪಿಸುವ ಹೊಣೆ ಹೊರಲು ಸಿದ್ಧರಾಗಿ ನಿಂತಿದೆ. ನೆಹರುಗಳೊಡನೆ ತಾನು ಹೆಚ್ಚಿನ ಪ್ರೀತಿ ಮತ್ತು ಸಹಕಾರ ಪೂರ್ವಕ ವರ್ತಿಸುವೆನೆಂದು ಭಂಡಾರ ನಾಯಕೆ ಹೇಳಿದ್ದಾರೆ. ಸಿಂಹಳದಲ್ಲಿರುವ ಭಾರತೀಯರ ಸಮಸ್ಯೆಯನ್ನು ತೃಪ್ತಿಕರವಾದ ರೀತಿಯಲ್ಲಿ ಪರಿಹರಿಸುವ ಆಶೆ ಅವರಿಗಿದೆ. ವಿದೇಶೀಯರ ಕೈಯಲ್ಲಿರುವ ತೋಟಗಳು, ಬ್ಯಾಂಕು ಮತ್ತು ವಿಮಾ ಕಂಪೆನಿಗಳು 'ಯಾರಿಗೂ ಅನ್ಯಾಯವಾಗದಂತೆ' ರಾಷ್ಟ್ರೀಕರಿಸಲ್ಪಡುವ ಸಂಭವವನ್ನು ಅವರು ಪ್ರಸ್ತಾಪಿಸಿದ್ದಾರೆ. ಅದಲ್ಲದೆ ಸಿಂಹಳವನ್ನು ಗಣರಾಜ್ಯವಾಗಿ ರೂಪಿಸಲು ಅವರು ಕಂಕಣತೊಟ್ಟಿದ್ದಾರೆ. ಕಾಮನ್‌ವೆಲ್ತ್ ಸಂಬಂಧವನ್ನು ಕಡಿದುಕೊಳ್ಳಬೇಕೆನ್ನುವ ವಿಷಯವೂ ಅವರ ವಿಚಾರದಲ್ಲಿದೆ.

ಯುದ್ಧ ಠಾಣ್ಯಗಳಿಲ್ಲ

ಇನ್ನೊಂದು ಉಲ್ಲೇಖನೀಯವಾದ ಹೊಸ ಧೋರಣೆಯು ವಿದೇಶಗಳಿಗೆ ಯುದ್ಧ ಠಾಣ್ಯಗಳನ್ನು ಸಿಂಹಳದಲ್ಲಿ ನೆಲೆಗೊಳಿಸುವುದಕ್ಕೆ ವಿರೋಧವಾಗಿದೆ. ಅದುದರಿಂದ ಬ್ರಿಟನಿಗೆ ಸಿಂಹಳದಲ್ಲಿ ಈಗಿರುವ ಒಂದು ನೌಕಾ ಠಾಣ್ಯವೂ ಇನ್ನೊಂದು ವಾಯು ಸೇನೆಯ ಠಾಣ್ಯವೂ ಇನ್ನು ಮುಂದೆ ಸಿಗದೆ ಹೋಗುವ ಭಯವಿದೆ. ಯಾವುದೇ ಶಕ್ತಿ ಕೂಟಕ್ಕೆ ಸೇರಿಕೊಳ್ಳದಿರುವುದೇ ಭಂಡಾರ ನಾಯಕೆ ಸರಕಾರದ ನಿಲುವು. ಎಲ್ಲ ರಾಷ್ಟ್ರಗಳೊಡನೆಯೂ ಸ್ನೇಹದಿಂದಿರುವ ಆತ್ರುಕ್ಯನು ಕಾತರನಾಗಿ ಸಿಂಹಳವು ರಷ್ಯ ಚೀನ ಮತ್ತು ರಶಿಯಗಳೊಡನೆ ರಾಜಕೀಯ ಸಂಬಂಧ ಬೆಳೆಸಲಿದೆ. ಏಶ್ಯದ ರಾಷ್ಟ್ರಗಳೊಡನೆ ಸಂರಕ್ಷಣೆ, ವ್ಯಾಪಾರ, ಸಾಂಸ್ಕೃತಿಕ ಸಂಬಂಧಗಳ ವಿಷಯದಲ್ಲಿ ವಿಶೇಷ ಸಹಕಾರವನ್ನು ಸಿಂಹಳ ತೋರಿಸುತ್ತದೆ.

ಪಾಶ್ಚಾತ್ಯರಿಗೆ ಆಶ್ಚರ್ಯ

ಮೇಲಿನ ರೀತಿಯಲ್ಲಿರುವ ಹೊಸ ಸರಕಾರದ ನಿಲುವೆಯು ಪಾಶ್ಚಾತ್ಯ ರಾಷ್ಟ್ರಗಳನ್ನು ಕಂಗೆಡಿಸಿದೆ. ಅಮೇರಿಕದ ಪತ್ರಿಕೆಗಳಲ್ಲಿ ವ್ಯಕ್ತವಾದ ಅಭಿಪ್ರಾಯವು ಈ ದಿಗಿಲನ್ನು ಸ್ಪಷ್ಟಪಡಿಸುತ್ತದೆ. ಯುದ್ಧ ಠಾಣ್ಯಗಳನ್ನು ನೆಲೆಗೊಳಿಸುವುದು, ಸಂರಕ್ಷಣೆಯ ನೆಪದಲ್ಲಿ ಯುದ್ಧ ಸಿದ್ಧತೆಯನ್ನು ಪ್ರೋತ್ಸಾಹಿಸುವುದು, ಡಾಲರು ಸಹಾಯ ಸಲ್ಲಿಸುವ ವೇಷದಲ್ಲಿ ಸಹಾಯ ಪಡೆಯುವ ರಾಷ್ಟ್ರದ ಸ್ವಾತಂತ್ರ್ಯವನ್ನು ದಾಸ್ಯಕ್ಕೆ ಸಮಾನವಾಗಿ ಮಾಡುವುದು—ಇದನ್ನೆ ಮೆಚ್ಚಿಕೊಂಡಂತಿದ್ದವರಿಗೆ ಆಘಾತವಾಗಿರುವುದು ಸಹಜ. ಆದರೆ ಏಶ್ಯದಲ್ಲಿ ಹುಟ್ಟಿರುವ ನವಜಾಗೃತಿಯೂ ಶಕ್ತಿಕೂಟಗಳಲ್ಲಿ ಸೇರಿಕೊಳ್ಳದಿರುವಂಥ ಬುದ್ಧಿವಂತಿಕೆಯೂ ಹೆಚ್ಚು ವ್ಯಾಪಕವಾಗುವುದು ಖಂಡಿತ. ಕೊತೇಲವಾಲರ ಸೋಲು ಈ ಮಟ್ಟಿಗೆ ದಿಕ್ಸೂಚಕವಾಗಿದೆ ಎನ್ನಬಹುದು.

ಮುಂಬಯಿಯ ಶಾಸನಾಂಗ

ಮುಂಬಯಿಯ ಶಾಸನಾಂಗದಲ್ಲಿ ರಾಜ್ಯಗಳ ಪುನಾರಚನೆಯ ಮಸೂದೆಯು ಚರ್ಚಿಸಲ್ಪಟ್ಟು ಮಂಡಿಸಲಾದ ೬೫ ತಿದ್ದುಪಡಿಗಳಲ್ಲಿ ಕೇವಲ ಎರಡನ್ನು ಸ್ವೀಕರಿಸಲಾಯಿತು. ಇವುಗಳಲ್ಲಿ ಒಂದು, ಕೇಂದ್ರಾಧೀನ ಮುಂಬಯಿ, ಮಹಾರಾಷ್ಟ್ರ ಮತ್ತು ಗುಜರಾಥಗಳಿಗೆ ಒಂದೇ ಹೈಕೋರ್ಟಿನ ಬದಲು ಪ್ರತ್ಯಪ್ರತ್ಯೇಕ ಹೈಕೋರ್ಟುಗಳಿರಬೇಕೆನ್ನುತ್ತದೆ; ಇನ್ನೊಂದು, ಕೇಂದ್ರಾಧೀನ ಮುಂಬಯಿ ಪ್ರದೇಶದ ವ್ಯಾಪ್ತಿಯಲ್ಲಿ ಒಂಬೆರಡು ಹಳ್ಳಿಗಳ ಮಟ್ಟಿಗೆ ಬದಲಾವಣೆಯನ್ನು ಸೂಚಿಸುತ್ತದೆ. ಕೆಳಮನೆಯಲ್ಲಿ ಚರ್ಚೆನಡೆದಾಗ ಮಸೂದೆಯನ್ನು ೩೫ ಕಾಂಗ್ರೆಸು ಸದಸ್ಯರು ವಿರೋಧಿಸಿದರು. ಪಕ್ಷದ ಆದೇಶವನ್ನು ಮೀರಿ ನಡೆದ ಇವರು ರತ್ನಾಗಿರಿ ಮತ್ತು ಕೊಲಬಾ ಜಿಲ್ಲೆಗೆ ಸೇರಿದ್ದಾರೆ. ಮಹಾರಾಷ್ಟ್ರ ಪ್ರದೇಶದಿಂದ ಆರಿಸಲ್ಪಟ್ಟ ೭೦ ಕಾಂಗ್ರೆಸು ಸದಸ್ಯರು ತಟಸ್ಥರಾಗಿ ಉಳಿದರು. ಇವರಲ್ಲಿ ನಾಲ್ಕು ಮಂತ್ರಿಗಳೂ ಇಬ್ಬರು ಉಪಮಂತ್ರಿಗಳೂ ಸೇರಿದ್ದಾರೆ. ಮಹಾರಾಷ್ಟ್ರ ಸದಸ್ಯರಲ್ಲಿ ಉಪಮಂತ್ರಿ ವಾಂಪ್ರೇಕರರೊಬ್ಬರೆ ಮಸೂದೆಯ ಪರವಾಗಿ ಮತವಿತ್ತರು. ಮೇಲ್ಮನೆಯಲ್ಲಿ ಮತದಾನ ನಡೆದಾಗ ೧೭ ಮಂದಿ ಮಹಾರಾಷ್ಟ್ರ ಕಾಂಗ್ರೆಸಿಗರು ಮತದಾನ ಮಾಡಲಿಲ್ಲ.

ಕನ್ನಡಿಗರ ಒತ್ತಾಯ

ಚರ್ಚೆಯಲ್ಲಿ ೧೫೫ ಮಂದಿ ಭಾಗವಹಿಸಿದ್ದರು. ಮಹಾರಾಷ್ಟ್ರೀಯರು ಮುಂಬಯಿ ನಗರವನ್ನೂ ಬೆಳಗಾಂವಿ ಹಾಗು ಕಾರವಾರ ಜಿಲ್ಲೆಗಳ ಕೆಲ ಪ್ರದೇಶಗಳನ್ನೂ ಮಹಾರಾಷ್ಟ್ರದಲ್ಲಿ ಸೇರಿಸದಿದ್ದುದಕ್ಕೆ ವಿರೋಧ ಸೂಚಿಸಿದರು. ಅಭಿಪ್ರಾಯ ಪ್ರಕಟಿಸಲು ಸದಸ್ಯರಿಗಿತ್ತ ಸ್ವಾತಂತ್ರ್ಯವನ್ನು ಮಹಾರಾಷ್ಟ್ರದ ಕಾಂಗ್ರೆಸು ಸದಸ್ಯರು ಸಂಪೂರ್ಣ ಉಪಯೋಗಿಸಿಕೊಂಡರು. ಕರ್ನಾಟಕದ ಸದಸ್ಯರು ಮುಂಬಯಿ ನಗರವನ್ನು ಕೇಂದ್ರಾಧೀನ ಪ್ರದೇಶವಾಗಿಡುವುದೇ ಸೂಕ್ತವೆಂದರಲ್ಲದೆ ಶೋಲಾಪುರ ಮತ್ತಿತರ ಕೆಲವು ಗಡಿ ಪ್ರದೇಶಗಳನ್ನು ಕರ್ನಾಟಕದಲ್ಲಿ ಸೇರಿಸದಿದ್ದುದನ್ನು ಆಕ್ಷೇಪಿಸಿದರು. ಕಾರವಾರ ಮತ್ತು ಬೆಳಗಾವಿ ಜಿಲ್ಲೆಗಳ ಕೆಲ ಪ್ರದೇಶವನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂದು "ಬಂಡುಗಾರ" ಕಾಂಗ್ರೆಸಿಗರೊಬ್ಬರು ಮಂಡಿಸಿದ ತಿದ್ದುಪಡಿ ತಿರಸ್ಕೃತವಾಯಿತು. ಗಡಿ ಪ್ರದೇಶಗಳ ಭವಿಷ್ಯವನ್ನು ಸೀಮಾ ಸಮಿತಿಗೊಪ್ಪಿಸಬೇಕೆ ಹೊರತು ವಲಯ ಮಂಡಲಕ್ಕೆ ಈ ವಿಷಯವನ್ನು ಬಿಡಲಾಗದೆಂದೂ ಗ್ರಾಮವನ್ನೆ ಗಡಿ ಭವಿಷ್ಯದ ಮಟ್ಟಿಗೆ ಘಟಕವಾಗಿ ಹಿಡಿಯಬೇಕೆಂದೂ ಸದಸ್ಯರು ಅಭಿಪ್ರಾಯಪಟ್ಟರು.

ಉಡುಪಿ.

ಶಂಕುಸ್ಥಾಪನೆ— ಎಮ್. ಜಿ. ಎಮ್. ಕಾಲೇಜಿನ ಹಾಸ್ಟೇಲು ಕಟ್ಟಡದ ಶಂಕುಸ್ಥಾಪನೆಯನ್ನು ಇದೇ ತಾ. 18ರಲ್ಲಿ ಸಂಜೆ 5 ಗಂಟೆಗೆ ಮದ್ರಾಸಿನ ವಿದ್ಯಾಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ, ಅವರು ನೆರವೇರಿಸಲಿರುವರು. ಸರ್ವರಿಗೂ ಸ್ವಾಗತವಿದೆಯೆಂದು ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ತಿಳಿಸುತ್ತಾರೆ.

ಮುನಿಸಿಪಲ್ ಶಾಲೆಗಳ ವರ್ಧಂತಿಯುತ್ಸವವು— ತಾ. 8ರಲ್ಲಿ ಸಂಜೆ ಮಂಗಳೂರು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾ ನಂತರ ಉಡುಪಿ ನಗರಸಭಾಪತಿ ಶ್ರೀ ಕೆ. ಕೆ. ಪೈಗಳು ಸ್ವಾಗತ ಭಾಷಣಮಾಡಿದರು. ವರ್ಧಂತ್ಯುತ್ಸವ ಕಮಿಟಿಯ ಕಾರ್ಯದರ್ಶಿನಿ ಶ್ರೀಮತಿ ದೇವಕಿಯವರು ಐದು ಮುನಿಸಿಪಲ್ ಶಾಲೆಗಳ ಸಂಕ್ಷೇಪ ವರದಿಯನ್ನೋದಿದರು. ಸಭಾಧ್ಯಕ್ಷರು ಪಾರಿತೋಷಕ ವಿತರಣೆ ಮಾಡಿ ವರ್ಷಕ್ಕೊಮ್ಮೆ ಇಂತಹ ಸಮಾರಂಭಗಳನ್ನು ನೆರವೇರಿಸುವ ಬದಲು ವರ್ಷಕ್ಕೆ ಎರಡು ನೂರು ಬಾರಿಯಾದರೂ ಮಕ್ಕಳ ಹೆತ್ತವರಕೂಟವನ್ನು ಜರಗಿಸಿ ಮಕ್ಕಳ ಚಟುವಟಿಕೆಗಳನ್ನು ಪ್ರದರ್ಶಿಸುವುದು ಉತ್ತಮವೆಂದರು. ಡಾ. ಪಿ ಜಿ. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಐದೂ ಶಾಲೆಯ ಬಾಲ ಬಾಲಕಿಯರಿಂದ ಕನ್ನಡ ನಾಟಕ ಮೊದಲಾದ ಮನೆರಂಜನ ಕಾರ್ಯಕ್ರಮಗಳಾದುವು.

ದ. ಕ. ಜಿಲ್ಲಾ ನೇಕಾರರ ಬಹಿರಂಗ ಅಧಿವೇಶನವು— ತಾ. 2ರಲ್ಲಿ ಅಜ್ಜರಕಾಡು ಮೈದಾನಿನಲ್ಲಿ ಶ್ರೀ ಎಸ್. ಕೆ. ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿಂಪ್ಸನ್ ಸೋನ್ಸರು ಸ್ವಾಗತಭಾಷಣ ಮಾಡಿದರು. ಶ್ರೀ ಬಿ. ವಿ. ಕಕ್ಕಿಲ್ಲಾಯರು ಅಧಿವೇಶನವನ್ನು ಉದ್ಘಾಟನೆಮಾಡಿದರು. ಶ್ರೀಗಳಾದ ಶಾಂತಾರಾಮ ಪೈ ಮೊದಲಾದವರ ಭಾಷಣಗಳಾದ ಬಳಿಕ ಶ್ರೀ ಕೆ. ದಾಸ ಸೇರಿಗಾರರು ನಿರ್ಣಯಗಳನ್ನು ಸಭೆಯ ಮುಂದಿಟ್ಟರು. ಸಮಾನ ಕೆಲಸಕ್ಕೆ ಸಮಾನ ಮಜೂರಿ ಇದೀ ಜಿಲ್ಲೆಯಲ್ಲಿಯ ನೇಕಾರರಿಗೆ ಸಿಗಬೇಕೆನ್ನುವ, ಸಹಕಾರಿ ನೂಲಿನ ಗಿರಣಿ ಬೇಗನೇ ಸ್ಥಾಪನೆಯಾಗಬೇಕೆನ್ನುವ, ಕಾಮ್ರೇಡ್ ಜಾಂಗೆ ಮೊದಲಾದವರನ್ನು ಬೇಗನೇ ಬಿಡಬೇಕೆನ್ನುವ, ಕನ್ನಡ ಭಾಷೆಯಾಡುವ ಕಾಸರಗೋಡು ತಾಲೂಕಿನ ಭಾಗಗಳು ಕರ್ನಾಟಕದಲ್ಲೇ ಸೇರ್ಪಡೆಯಾಗಬೇಕೆನ್ನುವ, ಉಡುಪಿಯಲ್ಲಿ ಕ್ಷಯರೋಗ ಆಸ್ಪತ್ರೆ ಸ್ಥಾಪಿಸಬೇಕೆನ್ನುವ, ರೈತ ಹಿತಮಸೂದೆ ಬೇಗನೆ ಕಾರ್ಯರೂಪಕ್ಕೆ ಬರಬೇಕೆನ್ನುವ ಇತ್ಯಾದಿ ನಿರ್ಣಯಗಳು ಪಾಸಾದುವು. ರಾತ್ರಿ ನಾಟಕಾಭಿನಯವಿತ್ತು.

ಪಂಚಾಯತಿಗೆ ಚುನಾವಣೆ— ಹೊಸದಾಗಿ ಪ್ರಾರಂಭವಾದ ಪುತ್ತೂರು ಗ್ರಾಮಪಂಚಾಯತಿಗೆ ನಡೆದ ಚುನಾವಣೆಯಲ್ಲಿ ಶ್ರೀ ಎನ್. ರಾಮಚಂದ್ರ ಭಟ್ಟರು ಅಧ್ಯಕ್ಷರಾಗಿಯೂ ಶ್ರೀ ಪಿ. ನಾರಾಯಣ ಶೆಟ್ಟರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಕೆ. ನಾರಾಯಣ ಶೆಟ್ಟಿ, ವ್ಯಾಸರಾಮ ಆಚಾರ್ಯ, ಗೋಪಾಲ ಕೃಷ್ಣ ನಾಯಕ, ಕೃಷ್ಣರಾಯ ನಾಯಕ, ಕರಿಯ ಪೂಜಾರಿ ಮತ್ತು ಕುಮಕ (ಹರಿಜನ) ಇವರು ಸದಸ್ಯರಾಗಿಯೂ ಆರಿಸಿಬಂದರು.

ಜಿಲ್ಲೆಯ ಹೆದ್ದಾರಿ ವಾರ

ಈ ತಿಂಗಳ ಕೊನೆಯಲ್ಲಿ ದ. ಕ. ಜಿಲ್ಲೆಯಲ್ಲಿ ಹೆದ್ದಾರಿ ಸಪ್ತಾಹ(ಹ್ಯಾವೇಸ್ ವೀಕ್)ವನ್ನು ಆಚರಿಸುವ ಯೋಜನೆಯನ್ನು ಕೈಕೊಳ್ಳಲಾಗಿದ್ದು ದ. ಕ. ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ ರಾಜಾರಾಮರು ಅಧ್ಯಕ್ಷ ಶ್ರೀ ಟಿ. ಎ. ಪೈ ಎಂ. ಎಲ್. ಎ. ಮತ್ತು ಶ್ರೀ ಎಂ. ಎಸ್. ಶಾಸ್ತ್ರಿ (ಡಿವಿಜನಲ್ ಇಂಜಿನೀಯರ್ ಹ್ಯಾವೇಸ್) ಯವರು ಜತೆ ಕಾರ್ಯದರ್ಶಿಗಳಾಗಿರುವ ಮತ್ತು ಜಿಲ್ಲೆಯ ಹಲವು ಪ್ರಮುಖರನ್ನೊಳಗೊಂಡ ಪ್ರಾತಿನಿಧಿಕ ಸಪ್ತಾಹಾಚರಣೆ ಸಮಿತಿಯೊಂದನ್ನು ರಚಿಸಲಾಗಿದೆ.

ಜಿಲ್ಲೆಯ ರಸ್ತೆ, ಸೇತುವೆ ಮೊದಲಾದ ಸಾರಿಗೆ ವ್ಯವಸ್ಥೆಗಳಲ್ಲಿ ನಡೆದ ಪ್ರಗತಿ ಮತ್ತು ಪ್ರತ್ಯೇಕವಾಗಿ ಈ ಜಿಲ್ಲೆಯ ಸಾರಿಗೆ ಸಾರ್ವಜನಿಕ ವ್ಯವಸ್ಥೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಾದ ಅಭಿವೃದ್ಧಿ ಹಾಗೂ ಇನ್ನುಮುಂದೆ ಕೈಕೊಳ್ಳಬೇಕಾದ ಕೆಲಸಗಳ ವಿಚಾರವಾಗಿ ಜನತೆಯ ಗಮನವನ್ನೆಳೆಯುವುದೇ ಇದರ ಉದ್ದೇಶವಾಗಿದೆ.

ಇದೇ ಸಂದರ್ಭದಲ್ಲಿ ಇದಕ್ಕೆ ಸಂಬಂಧಿಸಿದ ಪ್ರದರ್ಶನವೊಂದನ್ನು ಒಂದುವಾರ ಮಂಗಳೂರಲ್ಲಿ ವ್ಯವಸ್ಥೆಗೊಳಿಸಲಾಗುವುದು. ಮಾತ್ರವಲ್ಲದೆ, ಹ್ಯಾವೇಸ್ ಇಲಾಖೆಗೆ ಸಂಬಂಧಿಸಿದ ಭೂಪಟ, ಚಿತ್ರಗಳು ಇತ್ಯಾದಿಗಳನ್ನೊಳಗೊಂಡ ಸಣ್ಣದೊಂದು ಪ್ರದರ್ಶನವನ್ನು ತಾಲೂಕು ಕೇಂದ್ರಗಳಲ್ಲಿಯೂ ನಡೆಸಲಾಗುವುದು. ಈ ಕೇಂದ್ರದಲ್ಲಿಯೂ ಸಪ್ತಾಹವನ್ನಾಚರಿಸಲಾಗುವುದು ಎಂದು ಜತೆಕಾರ್ಯದರ್ಶಿಗಳು ತಿಳಿಸುತ್ತಾರೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

(೫ನೇ ಪುಟದಿಂದ)

ತಿದ್ದುಪಡಿಯಲ್ಲಿ ಹೇಳಲಾದ ಪ್ರದೇಶಗಳ ಜನರು ಆಂಧ್ರಕ್ಕೆ ಸೇರಲು ಇಷ್ಟಪಡುವುದಿಲ್ಲವೆಂದೂ ಅಲ್ಲದೆ ಭಾಷೆಯೊಂದೇ ರಾಜ್ಯಗಳ ಪುನಾರಚನೆಗೆ ಆಧಾರವಾಗಲಾರದೆಂದೂ ಹೇಳಿದರು. ತಿದ್ದುಪಡಿಯು ಬಹುಮತದಿಂದ ತಿರಸ್ಕೃತವಾಯಿತು. ಶಾಸನಾಂಗದ ಮೇಲ್ಮನೆಯು ರದ್ದಾಗಬೇಕೆಂದು ಶ್ರೀ ಶ್ರೀನಿವಾಸಯ್ಯಂಗಾರರು ತಿದ್ದುಪಡಿಯೊಂದನ್ನು ಮಂಡಿಸುತ್ತಾ ಕೆಳಮನೆಗೆ ಎಲ್ಲ ಅಧಿಕಾರವಿದೆಯೆಂದೂ ಅಂಥ ಸಂಪೂರ್ಣಾಧಿಕಾರವಿಲ್ಲದ ಮೇಲ್ಮನೆಯು ಅನಾವಶ್ಯಕ ವೆಚ್ಚವು ಮತ್ತು ವಿಳಂಬಕ್ಕೆ ಕಾರಣವೆಂದೂ ಹೇಳಿದರು. ಮುಖ್ಯಮಂತ್ರಿಗಳು ಈಗ ಈ ಕುರಿತೊಂದು ನಿರ್ಣಯ ಗೈದರೆ ಅವಸರ ಮಾಡಿದಂತಾದೀತು; ಹೊಸ ಸಭೆಗಿದನ್ನು ಬಿಟ್ಟುಬಿಡೋಣ ಎಂದುದರಿಂದ ಸಭೆ ಇದಕ್ಕೊಪ್ಪಿತು.

ದ್ವಿಭಾಷಾರಾಜ್ಯ

ರಾಜ್ಯಗಳ ಪುನಾರಚನೆಯ ಮಸೂದೆಯನ್ನು ಚರ್ಚಿಸುತ್ತಿದ್ದಂತೆಯೇ ಮೈಸೂರಿನ ಶಾಸನಾಂಗವು ಒಂದು ವಿಶೇಷ ಗೊತ್ತುವಳಿಯನ್ನು ಸ್ವೀಕರಿಸಿ ದ್ವಿಭಾಷಾ ರಾಜ್ಯಗಳನ್ನು ರಚಿಸುವ ತತ್ವಕ್ಕೆ ಒಪ್ಪಿಗೆ ಕೊಟ್ಟಿತು. ಮುಖ್ಯ ಮಂತ್ರಿಗಳು ಈ ಗೊತ್ತುವಳಿಯನ್ನು ಮಂಡಿಸುತ್ತಾ ಫಜಲಾಲಿ ಆಯೋಗದ ವರದಿಯ ಚರ್ಚೆಯನ್ನು ಶಾಸನಾಂಗದಲ್ಲಿ ಹಿಂದೆ ನಡೆಸಿದಾಗ ಐದಾರು ಮಂದಿಯ ಬಹುಮತದಿಂದ ಅದು ಸ್ವೀಕೃತವಾಯಿತು. ನೂತನ ರಾಜ್ಯ ಸ್ಥಾಪನೆಯ ಕೆಲಸವು ಸರ್ವಾನುಮತದಿಂದಾಗಲಿ ಎಂಬ ಉದ್ದೇಶದಿಂದ ಬಹು ಭಾಷಾ ರಾಜ್ಯಗಳ ರಚನೆಯ ತತ್ವಕ್ಕೆ ಸಭೆಯ ಒಪ್ಪಿಗೆಯನ್ನು ಅಪೇಕ್ಷಿಸುತ್ತಿದ್ದೇನೆ ಎಂದರು. ಮೈಸೂರು ದೊಡ್ಡದಾಗುವುದನ್ನು ಹಿಂದೆ ವಿರೋಧಿಸಿದವರೇ ಈಗ ದೇಶ ಬಾಂಧವರ ನಡುವೆ ಭೇದಭಾವ ಬೇಡವೆನ್ನುತ್ತಾರೆ; ಅವರ ಮನಸ್ಸಿಗೆ ಈ ನಿರ್ಣಯ ಸಂತೋಷವನ್ನು ತರುತ್ತದೆ; ಮತ್ತು ರಾಜ್ಯಗಳ ಪುನಾರಚನೆಯ ಕುರಿತು ಬರಬಹುದಾದ ತಿದ್ದುಪಡಿಗಳ ಪ್ರಮಾಣವನ್ನಿದು ಕಡಿಮೆ ಮಾಡುತ್ತದೆ ಎಂದರು. ತಮ್ಮ ಈ ತಿದ್ದುಪಡಿಯು ಅಮೃತಸರ ಅಧಿವೇಶನದಲ್ಲಿ ಕಾಂಗ್ರೆಸು ಅನುಮೋದಿಸಿದ ಗೊತ್ತುವಳಿಯನ್ನೆ ಪುನರುಚ್ಚರಿಸುತ್ತಿದೆಯೆಂದೂ ಮುಖ್ಯ ಮಂತ್ರಿಗಳು ಹೇಳಿದರು.

ಜನಾಭಿಪ್ರಾಯದ ಪ್ರತಿಬಿಂಬ

ಶಾಸನಾಂಗದ ಮೇಲ್ಮನೆಯಲ್ಲಿ ಈ ತಿದ್ದುಪಡಿ ಮಂಡಿಸಿದ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಈ ರೀತಿ ನಿರ್ಣಯ ಮಾಡಬೇಕೆಂದು ಆದೇಶವಿರಲಿಲ್ಲವಾದರೂ ಜನಾಭಿಪ್ರಾಯವನ್ನು ಪ್ರತಿಬಿಂಬಿಸಿ ಮೈಸೂರು ಉಳಿದ ರಾಜ್ಯಗಳಿಗೆ ಮಾರ್ಗದರ್ಶನ ಮಾಡಿದೆ ಎಂದರು.

ಕೂಡಲೇ ದ್ವಿಭಾಷಾ ರಾಜ್ಯ ರಚನೆಯಾಗಬೇಕೆನ್ನುವ ತಿದ್ದುಪಡಿಯನ್ನು ಅವರು ವಿರೋಧಿಸಿ ಬೇರೆ ಪ್ರಾಂತ್ಯಗಳು ಸಿದ್ಧವಿಲ್ಲದಿರುವಾಗ ಈ ತಿದ್ದುಪಡಿಯಂತೆ ನಡೆದುಕೊಳ್ಳುವುದು ಸಾಧ್ಯವಾಗದ ವಿಚಾರ ಎಂದು ಸ್ಪಷ್ಟೀಕರಣವಿತ್ತರು ಎಂದೇ ಆಗಲಿ, ಧ್ಯೇಯ ಸಾಧನೆಯಾಗುವಂತೆ ಮನಸ್ಸನ್ನು ತೆರೆದಿಡಿ ಎನ್ನುವ ಮೂಲಗೊತ್ತುವಳಿಯನ್ನು ಸ್ವೀಕರಿಸುವುದೇ ಒಳಿತು ಎಂದರು. ಉಭಯ ಸದನಗಳೂ ದ್ವಿಭಾಷಾ ರಾಜ್ಯವನ್ನು ಎತ್ತಿ ಹಿಡಿಯುವ ವಿಶೇಷ ಗೊತ್ತುವಳಿಗೆ ಅನುಮೋದನೆಯಿತ್ತವು. ಈ ಗೊತ್ತುವಳಿಯಲ್ಲಿ ಪ್ರತಿಯೊಂದು ಭಾಷಾ ಪ್ರದೇಶಕ್ಕೆ ಪ್ರತ್ಯೇಕ ಮಂಡಳವು ಇರಬೇಕೆಂದು ಹೇಳಲಾಗಿದೆ. ಕರ್ನಾಟಕದ ಎಲ್ಲ ಜನರು ವಿಚಾರಿಸಬೇಕಾದ ಪ್ರಶ್ನೆಯಿದೆಂಬ ಆಕ್ಷೇಪವನ್ನು ಅಮೃತಸರದ ಕಾಂಗ್ರೆಸಿನ ಗೊತ್ತುವಳಿಯನ್ನು ನೆನಪಿಗೆ ತಂದು ಕೊಡುವ ಮೂಲಕ ಬದಿಗೆ ಸರಿಸಲಾಗಿದೆ. ಈ ಆಕ್ಷೇಪವು ಕನ್ನಡಿಗರೆಲ್ಲರೂ ಒಟ್ಟುಗೂಡಿ ಕಲೆತು ಕೆಲಸ ಮಾಡಲು ತೊಡಗಿದ ಬಳಿಕ ಮಾಯವಾದೀತು ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ ನೂತನ ರಾಜ್ಯವು ಅತ್ಯಂತ ಸೌಹಾರ್ದಪೂರ್ಣವೂ ಮಧುರವೂ ಆದ ವಾತಾವರಣದಲ್ಲಿ ತಲೆ ಎತ್ತುವುದೆಂಬ ವಿಶ್ವಾಸ ಅವರದು.

ಕಾಸರಗೋಡು — ಕಾಸರಗೋಡು ಚಳವಳದ ಅಂಗವಾಗಿ ಕೋರ್ಟು ಸತ್ಯಾಗ್ರಹ ಇತ್ಯಾದಿ ಚಳವಳಿಯಲ್ಲಿ ಭಾಗವಹಿಸಿದವರಲ್ಲಿ 69 ಮಂದಿ ಕೈದುಮಾಡಲ್ಪಟ್ಟಿರುವರು. 6 ಮಂದಿಗೆ 2 ತಿಂಗಳು ಸಜೆ 22 ಮಂದಿಗೆ 1 ತಿಂಗಳು ಸಜೆ ಒಬ್ಬರಿಗೆ 15 ದಿನಗಳ ಸಜೆ ಮತ್ತು 22 ಮಂದಿಗೆ ಕೋರ್ಟು ಮುಗಿಯುವ ತನಕ ಸಜೆ ವಿಧಿಸಲಾಗಿದೆ.

ಬಡಗಬೆಟ್ಟು — ಬಡಗ ಬೆಟ್ಟು ಬೋರ್ಡು ಎಲಿಮೆಂಟರಿ ಶಾಲೆಯ ಮತ್ತು ಹಳೆ ವಿದ್ಯಾರ್ಥಿಗಳ ಸಂಘದ ವರ್ಧಂತಿ ಉತ್ಸವವು ತಾ. 2ರಲ್ಲಿ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ. ಪಿಂಟೊ ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಸದಾಶಿವ ಹೆಗ್ಡೆಯು ಧ್ವಜಾರೋಹಣ ಮಾಡಿದರು.

ಬೈದೆಬೆಟ್ಟು — ಸ್ಥಳೀಯ ಶ್ರೀರಾಮ ಎಲಿಮೆಂಟರಿ ಶಾಲೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಶ್ರೀ ಬಿ. ಅನಂತ ಕಾಮತರ ನೇತೃತ್ವದಲ್ಲಿ ಜರಗಿತು. ಶ್ರೀಗಳಾದ ಕೆ. ಹಿರಿಯಣ್ಣ ಸೆಟ್ಟಿ, ಬಿ. ಗೋವಿಂದ ಸೆಟ್ಟಿ, ಕೆ. ನಾಗಯ್ಯ ಸೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಟೀಚರ್ ಮೆನೇಜರ್ ಶ್ರೀ ನಾರಾಯಣ ಸೆಟ್ಟರು ಧನ್ಯವಾದಗಳನ್ನಿತ್ತರು.

ಕಳತ್ತೂರು — ಪಡು ಕಳತ್ತೂರು ಹಾ. ಎ. ಶಾಲೆಯ ವರ್ಧಂತ್ಯುತ್ಸವವು ತಾ. 1ರಲ್ಲಿ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಸುಂದರ ರಾಯರು ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು.

ಪುತ್ತೂರು — ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 4ರಲ್ಲಿ ನವಭಾರತ ಸಂಪಾದಕ ಶ್ರೀ ವಿ. ಎಸ್. ಕುಡ್ವರು ತಮ್ಮ ವಿದೇಶ ಪ್ರವಾಸಾನುಭವದ ಕುರಿತು ಭಾಷಣವಿತ್ತರು. ಇಂಗ್ಲಾಂಡ್, ಅಮೇರಿಕಾ, ಜಪಾನ್ ಮೊದಲಾದ ಸ್ಥಳಗಳಲ್ಲಿ ಜನಜೀವನ ಮಟ್ಟವು ಉತ್ತಮವಾಗಿದ್ದು, ಸಕಲ ಅಧುನಿಕ ಸೌಕರ್ಯಗಳಿಂದ ಕೂಡಿದೆ ಎಂದರು. ಆರಂಭದಲ್ಲಿ ಶ್ರೀ ಕೆ. ಶಿವರಾಮ ಕಾರಂತರು ಶ್ರೀ ಕುಡ್ವರ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷ ಶ್ರೀ ಎ. ಪಿ. ಸುಬ್ಬಯ್ಯ ನವರು ಧನ್ಯವಾದಗಳನ್ನಿತ್ತರು.

ಕಡಬ — ಇಲ್ಲಿಯ ಯುವಕ ಸಂಘದ ರ ನೇತೃತ್ವದಲ್ಲಿ ಊರವರೂ ಅಧ್ಯಾಪಕ ವಿದ್ಯಾರ್ಥಿಗಳೂ ಪ್ರವಾಸ ಕೈಕೊಂಡು ಕು ರಧಾರಾ ನದಿಯ ದಡದಲ್ಲಿ ತಾ. 7ರ ರಾತ್ರಿ ಯಕ್ಷಗಾನ, ಶಕ್ತಿ ಪ್ರದರ್ಶನ, ವಿದ್ಯಾಟಾದಿ ಈ ಕಾರ್ಯಕ್ರಮಗಳನ್ನು ಜರಗಿಸಿ ಹಿಂತಿರುಗಿದರು

ಮೂಡಬಿದ್ರೆ — ಇಲ್ಲಿಯ 'ಸಮಾಜ ಮಂದಿರ'ದ ಉದ್ಘಾಟನೆಯನ್ನು ಇದೇ ತಾ 15ರಲ್ಲು ಬೆಳಿಗ್ಗೆ 8–15ಕ್ಕೆ ರಾಷ್ಟ್ರಕವಿ ಶ್ರೀ ಮಂಜೇಶ್ವರ ಗೋವಿಂದ ಪೈಗಳು ನೆರವೇರಿಸಲಿರುವರು. ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಹಿರೇಬೆಟ್ಟು — ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವ ತಾ 9ರಲ್ಲು ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈ ಎಮ್. ಎಲ್. ಎ. ಅವರು ಪಂಡಿತ ನೆಹರು ರವರ ಭಾವಚಿತ್ರವನ್ನು ಅನಾವರಣ ಮಾಡಿದರು. ಉಡುಪಿ ಸರ್ಕಲ್ ಕಾಂಗ್ರೆಸ್ ಅಧ್ಯಕ್ಷ ಬಾಳ್ಕಟ್ಟಬೀಡು ಶ್ರೀ ಕೃಷ್ಣಯ್ಯ ಹೆಗ್ಡೆಯವರು ಶಾಲಾ ವಠಾರದಲ್ಲಿ ಕಟ್ಟಿಸಲಾದ ಕ್ರೀಡಾಂಗವನ್ನು ಉದ್ಘಾಟಿಸಿದರು. ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಸಿ. ಶಿವರಾಮ ಸೆಟ್ಟರು ವರದಿ ವಾಚನ ಮಾಡಿದರು.

ಕಾರ್ಕಳ — ಸ್ಥಳೀಯ ಎಸ್. ವಿ. ಟಿ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ತಾ. 8ರಲ್ಲಿ ಶ್ರೀಮತಿ ಕೆ. ಪಿ. ಸಾಂತೇರಿ ಜನಾರ್ಧನ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯಿನಿ ಕುಮಾರಿ ಬಿ ಡಿಸೋಜರು ವರದಿ ವಾಚನ ಮಾಡಿದರು. ಆರಂಭದಲ್ಲಿ ಅಧ್ಯಕ್ಷೆಯರು ಶಾಲಾ ಭವನವನ್ನು ವಿದ್ಯುದ್ದೀಪಗಳಿಂದ ಬೆಳಗಿಸಿದರು. ಕೊನೆಯಲ್ಲಿ ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿಗಳಾದುವು.

ಬನ್ನಾಡಿ — ಶ್ರೀ ವರದ ಪಂಡಿತ ಪ್ರಾ ಪ್ರಾಥಮಿಕ ಶಾಲಾಬಳಿ ಜಾನುವಾರು ಪ್ರದರ್ಶನವೊಂದನ್ನು ಇದೇ ತಾ. 19ನೇ ಗುರುವಾರ ಮದ್ರಾಸಿನ ವಿದ್ಯಾಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ, ಅವರು ಉದ್ಘಾಟಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ ಅವರು ವಹಿಸುವರು.

ಸಾರ್ವಜನಿಕರು ತಮ್ಮ ಜಾನುವಾರುಗಳನ್ನು ಮುಂದಾಗಿ ಕಳುಹಿಸಿ ಪ್ರೋತ್ಸಾಹಿಸಬೇಕಾಗಿ ಪ್ರದರ್ಶನ ಸಮಿತಿಯ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಪ್ರಚಾರ ಸಮಿತಿ — ಕಾಸರಗೋಡಿನ ಸಮಸ್ಯೆ ಇಂದು ಕಾಸರಗೋಡಿನದ್ದು ಮಾತ್ರವೇ ಎಂದಾಗಿ ಉಳಿದಿಲ್ಲ; ಸಮಗ್ರ ಕರ್ನಾಟಕದ ಪ್ರಶ್ನೆಯಾಗಿದೆ ಅಲ್ಲಿನ ಚಳವಳದ ಹಿನ್ನೆಲೆಯನ್ನೂ ವಿವರಗಳನ್ನೂ ಕರ್ನಾಟಕದ ಜನತೆಯ ಅವಗಾಹನೆಗೆ ತರುವ ಉದ್ದೇಶದಿಂದ ಬೆಂಗಳೂರಲ್ಲಿ 'ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಪ್ರಚಾರ ಸಮಿತಿ'ಯ ಸ್ಥಾಪನೆಯಾಗಿದೆ. ಪತ್ರಿಕೆಗಳಲ್ಲಿ ಈ ಕುರಿತಾದ ಪ್ರಚಾರ ನಡೆಸುವುದರ ಜತೆಯಲ್ಲಿ ಚಳವಳಿಕ್ಕಾಗಿ ಜನತೆಯ ನೆರವನ್ನು ಪಡೆಯುವುದು ಈ ಸಮಿತಿಯ ಕೆಲಸ ಕನ್ನಡದ ನಾಡನ್ನು ಕರ್ನಾಟಕದಲ್ಲೇ ಉಳಿಸುವ ಪವಿತ್ರ ಉದ್ದೇಶದಿಂದ ಬರುವ ಯಾವ ರೀತಿಯ ಸಹಾಯವನ್ನಾದರೂ ಸಮಿತಿಯು ಸ್ವಾಗತಿಸುತ್ತದೆ ಪತ್ರವ್ಯವಹಾರವನ್ನು 'ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಪ್ರಚಾರ ಸಮಿತಿ, ''ಚಂದ್ರಗಿರಿ'' ಪಿ. ಟಿ. ಸಿ. ರಸ್ತೆ, ಬೆಂಗಳೂರು 2. ಈ ವಿಳಾಸಕ್ಕೆ ಮಾಡಬಹುದು.

The Vijaya Bank Ltd. Udipi.
ದಿ ವಿಜಯ ಬೇಂಕ್ ಲಿಮಿಟೆಡ್, ಉಡುಪಿ.
ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆಕೊಂಡು, ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದರಿ ಸಾಲವನ್ನು ಬರತೂಡಿಕೊಳ್ಳುವರೆ, ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ. 21 – 4 – 56ನೇ ಶನಿವಾರ ಮಧ್ಯಾಹ್ನ ಘಂಟೆ 3ಕ್ಕೆ ಸರಿಯಾಗಿ ಅಥವಾ ಬ್ಯಾಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಲೋನು ನಂಬ್ರ.	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ. ತಾ. 31-5-56ರ ವರೆಗೆ ರೂ.	ಆ.	ಪೈ.
144/55	ಯನ್. ವಾದಿರಾಜ ಹೆಗ್ಡೆ. ನಾರಾಯಣ ಅಡ್ಯಂತಾಯರ ಮಗ. ಜನರಲ್ ಮರ್ಚಂಟ್ ಹಿರಿಯಡ್ಕ.	246	11	0
152/53	ವಿ. ಭಾಸ್ಕರ ಹೆಗ್ಡೆ. ಇರ್ವಾಡಿ ನಾರಾಯಣ ಶೆಟ್ರ ಅಳಿಯ ಇರ್ವಾಡಿ ಮನೆ. ಹಾವಂಜೆ ಗ್ರಾಮ ಪೋಸ್ಟು ಕೊಳಲಗಿರಿ	273	14	0
155/55	ಬಿ. ವಿಟ್ಠಲ ಶೆಟ್ಟಿ, ಅಣ್ಣಯ್ಯ ಶೆಟ್ರ ಮಗ, ಕೊರಂಗ್ರಪಾಡಿ ಗ್ರಾಮ, ಪೋಸ್ಟು ಕೊರಂಗ್ರಪಾಡಿ.	39	3	0
175/55	ರಾಜಗೋಪಾಲ ಹೆಗ್ಡೆ. C/o ಯಚ್. ಸದಾಶಿವ ಹೆಗ್ಡೆ, ಪಾರ್ಕ್ ರೋಡು, ಅಜ್ಜರಕಾಡು, ಉಡುಪಿ.	99	4	0
189/55	ಗುಡ್ಡ ಶೆಟ್ಟಿ, ಅಣ್ಣಪ್ಪ ಶೆಟ್ರ ಅಳಿಯ ಹೇರೂರು ಗ್ರಾಮದ ಹೊಸಮನೆ, ಪೋಸ್ಟು ಇನ್ನಂಜೆ.	66	5	0
323/55	ಟಿ. ಕೆ. ಶಂಕರ ಶೆಟ್ಟಿ "ಮಮತ ಮೆಡಿಕಲ್ ಹೋಲ್" ಪೋಸ್ಟು ಹೆಬ್ರಿ.	139	12	0
351/55	ಕೆ. ಸಚ್ಚಿದಾನಂದ ಶೆಟ್ಟಿ, ಯಚ್. ಹಿರಿಯಣ್ಣ ಶೆಟ್ರ ಮಗ, ,,ಪಟೇಲರ ಮನೆ" ಕುತ್ಪಾಡಿ ಗ್ರಾಮ, ಪೋಸ್ಟು ಉದ್ಯಾವರ.	80	14	0
385/55	ಬಿ ಶೀನ ಶೆಟ್ಟಿ, ಮೋನು ಶೆಟ್ರ ಮಗ, ಕೋರ್ಟುರೋಡು, ಉಡುಪಿ.	186	4	0
599/55	ಟಿ. ಕೆ. ಎಸ್. ಶೆಟ್ಟಿ. ಮಮತ ಕ್ಲಿನಿಕ್ ಪೋಸ್ಟು ಹೆಬ್ರಿ.	191	0	0
38/56	ಕೆ. ಪುಟ್ಟಯ C/o ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.	25	8	0

Udipi
10–4–56.

B. S. S. Hegde.
Agent

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ:— ಇದೇ ತಾ 3ರಲ್ಲು ಕೇಂದ್ರ ಮಂತ್ರಿ ಮಾನ್ಯ ಬಿ. ಎಸ್. ದಾತಾರರು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ, ಕಾಸರಗೋಡಿನ ಸಮಸ್ಯೆಯನ್ನು ಬಗೆಹರಿಸುವುದು ಕನ್ನಡ ಮತ್ತು ಕೇರಳದ ಪ್ರತಿನಿಧಿಗಳು ಒಂದುಕಡೆ ಸೇರಿ ಒಂದು ಪರಿಹಾರವನ್ನು ಕಂಡುಹಿಡಿಯುವುದೇ ಈಗ ಉಳಿದಿರುವ ದಾರಿ ಎಂದರು. ಕಾಸರಗೋಡು ಕನ್ನಡಿಗರ ನ್ಯಾಯವಾದ ಕೇಳಿಕೆ ಕೇಂದ್ರ ಸರಕಾರದ ಗಮನದಲ್ಲಿದೆ. ಶ್ರೀ ಬಿ. ಶಿವರಾಯರು ಪದೇ ಪದೇ ಕಾಸರಗೋಡಿನ ವಿಚಾರ ಕೇಂದ್ರದ ವರಿಷ್ಠರ ಗಮನಕ್ಕೆ ತರುತ್ತಲೇ ಇದ್ದಾರೆ ಕೇಂದ್ರ ಸರಕಾರದ ಧೋರಣೆಗೆ ಅವಿರೋಧವಾಗುವ ಯಾವುದೇ ರೀತಿಯ ಸಾಧ್ಯವಾದಷ್ಟು ಮಟ್ಟಿನ ಸಹಾಯವನ್ನು ತಾನು ಮಾಡುವ ಭರವಸೆ ಕೊಡಬಲ್ಲೆ ಎಂದರು. ಕಾಂಗ್ರೆಸಿಗರು ಕಾಂಗ್ರೆಸ್‌ಪಕ್ಷದ ಸದಸ್ಯತನವನ್ನು ಇನ್ನಷ್ಟು ಹೆಚ್ಚಿಸಿ, ಕಾಂಗ್ರೆಸ್ ಪಕ್ಷದ ಬಲವನ್ನು ಹೆಚ್ಚಿಸಬೇಕು ಎಂದುಹಿತವಚನಗಳನ್ನಿತ್ತರು. ಸಭಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ। ಯು. ಪಿ. ಮಲ್ಯರು ಕಾಸರಗೋಡು ಸಮಸ್ಯೆ ಮತ್ತು ಮುಂದೆ ಒಂದಾಗಲಿರುವ ಕರ್ನಾಟಕ ಪ್ರಾಂತದಲ್ಲಿ ಎಲ್ಲಾ ಪ್ರದೇಶಗಳಿಗೂ ಗೌರವಯುತ ಸಮಾನತೆ ಉಂಟಾಗುವಂತಾಗಬೇಕೆಂಬ ವಿಚಾರಗಳನ್ನು ಕೇಂದ್ರ ಮಂತ್ರಿಗಳ ಗಮನಕ್ಕೆ ತಂದರು.

ಎನ್ ಜಿ. ಒ. ದಿನಾಚರಣೆ— ಮಂಗಳೂರು ಕೇಂದ್ರದ ನಾನ್ ಗಜೆಟೆಡ್ ಆಫೀಸರು ತಾ 2 ಮತ್ತು 3ರಲ್ಲು ಕರಿಬನ್ನೆಗಳನ್ನು ಧರಿಸಿ ಆಫೀಸಿಗೆ ಬಂದಿದ್ದರು. ತಾ. 3ರಲ್ಲಿ ಸಂಜೆ ತಾಲೂಕು ಆಫೀಸುವಠಾರದಲ್ಲಿ ಸಂಘದ ವಿಶೇಷ ಸಭೆಯು ಶ್ರೀ ಎಚ್. ಎನ್. ಶ್ರೀಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ. ಐ. ಬಿ. ಕಾಂದರರು ಸಭೆಯ ಉದ್ದೇಶವನ್ನು ವಿವರಿಸಿದರು

ಭಾಷಣ— ಮಂಗಳೂರು ಪತ್ರಿಕೋದ್ಯೋಗಿ ಸಂಘದ ಆಶ್ರಯದಲ್ಲಿ ತಾ. 1ರಲ್ಲಿ ಶ್ರೀ ಮುರಕ್ಕಿಣಿ ಶಂಕರ ನಾರಾಯಣ ಭಟ್ಟರು 'ನಿಸರ್ಗಜೀವನ'ದ ಕುರಿತು ಭಾಷಣವಿತ್ತರು. ಶ್ರೀ ಇದಿನಬ್ಬರು ಸಭಾಧ್ಯಕ್ಷತೆ ವಹಿಸಿದ್ದರು.

ಶೃಂಗೇರಿ ಜಗದ್ಗುರುಗಳ ಸರ್ಕೀಟ್ ಕಾರ್ಯಕ್ರಮ— ತಾ. 13ರ ಸಂಜೆ ಉಳ್ಳಾಳ ಅದ್ವೈತಾಶ್ರಮಕ್ಕೆ ಆಗಮನ. ತಾ. 14ರಿಂದ 16ರ ತನಕ ಅಲ್ಲಿ ಮೊಕ್ಕಾಂ. ತಾ. 15ರಂದು ಶ್ರೀ ಶಂಕರಾಚಾರ್ಯರ ಶಿಲಾವಿಗ್ರಹ ಪ್ರತಿಷ್ಠೆ, ತಾ. 16 ಸಂಜೆ ಮಂಗಳೂರು ಕದ್ರಿಯಲ್ಲಿರುವ ಗೋಪಾಲ ಶೇಷಜಾಶ್ರಮದಿಂದ ಶ್ರೀ ಸುಬ್ರಹ್ಮಣ್ಯ ಸಭಾಸದನಕ್ಕೆ ಅಡ್ಡ ಪಲ್ಲಕಿಉತ್ಸವ. ತಾ. 17ರಿಂದ 22ರ ತನಕ ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಮೊಕ್ಕಾಂ. ತಾ. 23 ಪಣಂಬೂರು, ತಾ. 24 ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ.

ಡಿಲ್ಲಿಗೆ ಕಾಸರಗೋಡಿನ ಶಿಷ್ಟಮಂಡಲ:— ಪ್ರಾಂತ ಪುನರ್ರಚನಾ ಮಸೂದೆಯು ಏಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ಜೊಯಿಂಟ್ ಸಿಲೆಕ್ಟ್ ಕಮಿಟಿಯ ಮುಂದೆ ಚರ್ಚಿಸಲ್ಪಡುವ ವೇಳೆಗೆ ಆ ಸಮಿತಿಯ ಸದಸ್ಯರನ್ನು ಕೇಂದ್ರ ಸರಕಾರದ ಅಧಿಕಾರ ವರ್ಗವನ್ನೂ ರಾಜಕೀಯ ಧುರೀಣರನ್ನೂ ಕಂಡು ಕಾಸರಗೋಡಿನ ಕನ್ನಡಿಗರಿಗಾದ ಅನ್ಯಾಯದ ಕುರಿತು ಒಡಂಬಡಿಸುವ ಕೊನೆಯ ಯತ್ನಕ್ಕಾಗಿ ಶ್ರೀ ಕೆ ಆರ್. ಕಾರಂತರ ನಾಯಕತ್ವದಲ್ಲಿ ಶ್ರೀಗಳಾದ ಎಮ್. ಉಮೇಶ ರಾವ್, ಕೆ. ಮಹಾಬಲ ಭಂಡಾರಿ, ಬಿ. ಎಸ್. ಕಕ್ಕಿಲ್ಲಾಯ, ಕೆಪ್ಟನ್ ಕೆ. ಎ. ಸೆಟ್ಟಿ, ಡಾ| ಪಿ. ಎಸ್. ಶಾಸ್ತ್ರಿ, ಎಮ್. ಎಸ್. ಕಡಂಬಳಿತ್ತಾಯ ಮೊದಲಾದವರು ಇರುವ ಶಿಷ್ಟಮಂಡಲವು ಡಿಲ್ಲಿಗೆ ಹೋಗಲಿದೆ ಎಂದು ತಿಳಿದು ಬರುತ್ತದೆ.

ಐಕ್ಯ ಕೇರಳ ಮಹಾ ಸಮ್ಮೇಳನವು- ತಾ 6ರಲ್ಲು ಕಾಸರಗೋಡಿನ ರೈಲ್ವೆ ಸಿಲ್ದಾಣದ ಸಮೀಪದಲ್ಲಿ ಶ್ರೀ ಕೆ. ಪಿ. ಕೇಶವ ಮೆನೊನರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕನ್ನು ಸಿಯೋಜಿತ ಕೇರಳ ಪ್ರಾಂತಕ್ಕೆ ಸೇರಿಸಿಕೊಂಡುದುದನ್ನು ಸ್ವಾಗತಿಸುವ ಮತ್ತು ಕರ್ನಾಟಕ ಪರವಾಗಿ ನಡೆಸುತ್ತಿರುವ ಚಳವಳದ ಬಗ್ಗೆ ವಿಷಾದ ವ್ಯಕ್ತಪಡಿಸುವ ಹಾಗೂ ಪುನರ್ರಚಿತವಾಗುವ ಕೇರಳ ಪ್ರಾಂತದಲ್ಲಿ ಸೇರುವ ಕಾಸರಗೋಡು ತಾಲೂಕನ್ನು ಒಂದು ಜಿಲ್ಲೆಯನ್ನಾಗಿ ಮಾಡಿ, ಕಾಸರಗೋಡು ಪಟ್ಟಣವನ್ನೇ ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ವಿನಂತಿಸುವ ನಿರ್ಣಯಗಳಾದುವು.

ಶ್ರೀ. ಎಂ. ಲಕ್ಷ್ಮಣ ಪೈಗಳ ನಿಧನ— ತಾ. 8ರಂದು ಬಂದರದ ಪ್ರಸಿದ್ಧ ಸಾಹುಕಾರ್ ಶ್ರೀ ಎಂ. ಲಕ್ಷ್ಮಣ ಪೈಗಳು ಹೃದಯ ಸ್ತಂಭನದಿಂದ 65ನೇ ಪ್ರಾಯದಲ್ಲಿ ಮೃತರಾದುದು ವಿಷಾದಕರವಿದೆ.

ಅಳಿಯ ಸಂತಾನ ಕಾನೂನಿನ ಕುರಿತು ವಿಚಾರ ವಿನಿಮಯ— ಮತ್ತು ಮಾಹಿತಿ ಪಡೆಯುವ ಸಲುವಾಗಿ ಕೇಂದ್ರದ ನ್ಯಾಯ ಖಾತೆಯ ಮಂತ್ರಿ ಶ್ರೀ ಎಚ್. ವಿ. ಪಾಟಸ್ಕರು ಇದೇ ತಾ 15ನೇ ಆದಿತ್ಯವಾರ ಬೆಳಗ್ಗೆ 10 ಗಂಟೆಗೆ ಕಲ್ಲಿಕೋಟೆಯಿಂದ ಇಲ್ಲಿಗೆ ಬರಲಿರುವರೆಂದೂ ಮರದಿನ ಹಿಂತಿರುಗಿ ಹೋಗಲಿರುವರೆಂದೂ ತಿಳಿದುಬರುತ್ತದೆ.

ಮೂಲ್ಕಿ ಗ್ರಾಮನಾಯಕರ ಪರಿಷತ್ತು— ತಾ. 6ರಲ್ಲಿ ಪೂರ್ವಾಹ್ನ ಮೂಲ್ಕಿ ಮಾನಂಪಾಡಿ ಶಾಲಾ ವಠಾರದಲ್ಲಿ ಶ್ರೀ ನಯಂಪಳ್ಳಿ ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ರಾಮಣ್ಣ ಸೆಟ್ಟರು ಪರಿಚಯ ಭಾಷಣಮಾಡಿದರು. ಡಾ. ಎಮ್. ರಾಮಪ್ಪ ಕಾಮತರು ಸ್ವಾಗತಮಾತುಗಳನ್ನಾಡಿದರು. ಪ್ರೊಜೆಕ್ಟ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಎಚ್. ನರಸಿಂಹನವರು ಪರಿಷತ್ತಿನ ಉದ್ದೇಶವನ್ನು ವಿವರಿಸಿದರು. ಮದ್ರಾಸಿನ ಎಡಿಶನಲ್ ಡೆವಲಪ್‌ಮೆಂಟ್ ಕಮಿಶನರ್ ಶ್ರೀ ಎನ್. ಇ. ಎಸ್. ರಾಘವಾಚಾರಿಯವರು ಪರಿಷತ್ತನ್ನು ಉದ್ಘಾಟಿಸುತ್ತಾ, ಇಂದು ಪುಣ್ಯಕ್ಷೇತ್ರಗಳು ಇರುವಂತೆ ಸಮಾಜವಿಕಾಸ ಯೋಜನಾ ಕ್ಷೇತ್ರವು ದೇಶಪ್ರೇಮಿಗಳ ಯಾತ್ರಾಸ್ಥಳವಾಗಿದೆ ಎಂದರು. ಗ್ರಾಮಾಭಿವೃದ್ಧಿ ಕಾರ್ಯವು ಯಶಸ್ವಿ ಹಾಗೂ ಪರಿಣಾಮಕಾರಿಯಾಗಲು ಮಹಿಳೆಯರೂ ಶ್ರದ್ಧೆವಹಿಸಿ ದುಡಿಯಬೇಕೆಂದರು. ಬಳಿಕ 17ಮಂದಿ ಗ್ರಾಮನಾಯಕರಿಗೆ ಪ್ರಶಸ್ತಿ ಪತ್ರವನ್ನು ವಿತರಣೆಮಾಡಲಾಯಿತು ಶ್ರೀ ಬಾಗಲೋಡಿ ಕೃಷ್ಣರಾಯರು ಪ್ರಶಸ್ತಿಪತ್ರ ಪಡೆದವರ ಪರವಾಗಿ ಕೃತಜ್ಞತೆ ಸೂಚಿಸಿದರು. ತಾ 6ರಂದು ಬೆಳಗ್ಗೆ ದ. ಕ. ಸ. ವಿ. ಯೋಜನಾಧಿಕಾರಿ ಶ್ರೀ ಎಚ್. ನರಸಿಂಹ, ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಅಧಿವೇಶನ ನಡೆಯಿತು. ಮಧ್ಯಾಹ್ನ ಚಹಾಕೂಟ ನಡೆಯಿತು. ತಾ 7ರಂದು ಬೆಳಿಗ್ಗೆ ಮಂಗಳೂರು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಬಹಿರಂಗ ಅಧಿವೇಶನ ನಡೆದು ಹಿಂದಿನ ದಿನದ ಚರ್ಚಾಗೋಷ್ಠಿಯಲ್ಲಾದ ನಿರ್ಣಯಗಳನ್ನು ಪರಿಶೀಲಿಸಲಾಯಿತು. ವ್ಯವಸಾಯ, ಗ್ರಾಮಸ್ಥರ ಬದುಕಿನ ನಿರ್ವಾಹಣೆ ಆಡಳಿತದ ಕುರಿತು ಕೆಲವು ಕೊರತೆಗಳು, ಮಹಿಳಾಭಿವೃದ್ಧಿ, ವಿದ್ಯಾ ಸುಧಾರಣೆ ಇತ್ಯಾದಿ ವಿಚಾರಗಳನ್ನು ವಿಮರ್ಶಿಸಿ ನಿರ್ಣಯಗಳನ್ನು ಮಾಡಲಾಯಿತು. ಸಂಜೆ ಮುಕ್ತಾಯ ಸಮಾರಂಭ ಜರಗಿತು. ಮೂಡಬಿದ್ರೆಯ ಅಸಿಸ್ಟೆಂಟ್ ಪ್ರೊಜೆಕ್ಟ್ ಆಫೀಸರ್ ಶ್ರೀ ಎಮ್. ಸಿ. ಮಾಬೆನರು ವರದಿಯನ್ನೋದಿದರು. ಶ್ರೀ ವಿ. ಎಸ್. ಕುಡ್ವರು ಮುಕ್ತಾಯ ಭಾಷಣಮಾಡಿದರು. ಶ್ರೀ ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ, ಅವರು ಪಂಚವಾರ್ಷಿಕ ಯೋಜನೆಯಲ್ಲಿ 'ಸಹಕಾರ ಸಂಘಗಳ ಪಾತ್ರ' ಎಂಬ ವಿಷಯವಾಗಿಯೂ ಶ್ರೀ. ಕೆ. ವಿಠಲ ಶೆಣೈಯವರು 'ಬುನಾದಿ ಶಿಕ್ಷಣದ' ವಿಚಾರವಾಗಿಯೂ ಭಾಷಣವಿತ್ತರು. ಪರಿಷತ್ತಿನಲ್ಲಿ ಭಾಗವಹಿಸಲು ಬಂದಿದ್ದ ಗ್ರಾಮ ಮುಖಂಡರುಗಳ ಪರವಾಗಿ ಬಂಟ್ವಾಳದ ಶ್ರೀ ವಿಯ್. ಲಕ್ಷ್ಮೀ ನಾರಾಯಣ ಅಳ್ವ ಮೊದಲಾದವರು ಗ್ರಾಮನಾಯಕರ ಪರವಾಗಿ ಸ್ವಾಗತ ಸಮಿತಿಯವರಿಗೆ ಕೃತಜ್ಞತೆ ಸಲ್ಲಿಸಿದರು.

ಸಭಾಧ್ಯಕ್ಷತೆ ವಹಿಸಿದ ಜಿಲ್ಲಾ ಕಲೆಕ್ಟರ್ ಶ್ರೀ ಎಮ್ ಜಿ. ರಾಜಾರಾಮರು ಸಮಯೋಚಿತ ಮಾತುಗಳನ್ನಾಡುತ್ತಾ ಗ್ರಾಮ ನಾಯಕರು ಇಲ್ಲಿ ಪಡೆದ ಅನುಭವನ್ನು ತಂತಮ್ಮ ಗ್ರಾಮಗಳಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸಿದರು.

ತಾನ ಸೇನರ ಸ್ಮಾರಕೋತ್ಸವ



ಮಧ್ಯ ಭಾರತ ಸರಕಾರದವರು ಆಕಾಶವಾಣಿಯವರ ಸಹಕಾರದೊಂದಿಗೆ ವ್ಯವಸ್ಥೆ ಮಾಡಿದ್ದ ತಾನಸೇನ ಸ್ಮಾರಕೋತ್ಸವ ಸಮಾರಂಭವು ಗ್ವಾಲಿಯರದಲ್ಲಿ ಎರಡು ದಿನಗಳ ಕಾಲ ಅತಿ ವೈಭವದಿಂದ ನಡೆಯಿತು. ರಾಷ್ಟ್ರದ ಖ್ಯಾತಿವೆತ್ತ ಸಂಗೀತಗಾರರು ಹಾಗೂ ಸಂಗೀತ ಶಾಸ್ತ್ರಜ್ಞರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಹಿಂದೂ ಹಾಗೂ ಇಸ್ಲಾಂ ಸಂಸ್ಕೃತಿಗಳ ಸಾರವು ತಾನಸೇನನ ಕಲೆ ಹಾಗೂ ವ್ಯಕ್ತಿತ್ವದಲ್ಲಿ ರೂಪುಗೊಂಡಿದೆ. ಅಕ್ಬರ್ ಚಕ್ರವರ್ತಿಯ ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ ಒಬ್ಬನಾದ ತಾನಸೇನನು ಸ್ವಾಮಿ ಹರಿದಾಸ ಹಾಗೂ ಮಹಮ್ಮದ್ ಗೌಸ್‌ರವರಲ್ಲಿ ಶಿಷ್ಯವೃತ್ತಿ ಕೈಗೊಂಡಿದ್ದನು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಕೇಂದ್ರ ವಾರ್ತಾ ಹಾಗೂ ಪ್ರಸಾರ ಖಾತಾ ಮಂತ್ರಿಗಳಾದ ಡಾ॥ ಬಿ. ವಿ. ಕೇಸ್ಕರರು ತಾನಸೇನನನ್ನು ಹಿಂದೂಸ್ಥಾನೀ ಸಂಗೀತದ ದಿಗಂತದಲ್ಲಿ ಸರ್ವದಾ ಪ್ರಕಾಶಿಸುತ್ತಿರುವ ತಾರೆಯೆಂದು ಬಣ್ಣಿಸಿದರು. ಇವನ ಜೀವನ ಹಾಗೂ ಕೃತಿಗಳ ಬಗ್ಗೆ ಸಂಶೋಧನೆಯನ್ನು ನಡೆಸುವ ಆಗತ್ಯತೆಯನ್ನು ಒತ್ತಿ ಹೇಳಿದರು.

ತಾನಸೇನನ ಅಭಿಮಾನಿಗಗಳು ಹಾಗೂ ಸಂಗೀತ ಪ್ರೇಮಿಗಳು ಗ್ವಾಲಿಯರದಲ್ಲಿರುವ ತಾನಸೇನನ ಸಮಾಧಿಗೆ ಗೌರವಾರ್ಪಣೆ ಸಲ್ಲಿಸಲು ಬರುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂ ತಾ ನ ಸಿಂ ಧೂ ರ

ಈ ಭಸ್ಮವು ಬಹಿಸ್ಥೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ ತಾಯಂದಿರಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628 "ಸಂತಾನ ಸಿಂದೂರ ಸದನ" (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ಮಕ್ಕಳ ಮಗ್ಗಿ ಪುಸ್ತಕ

0—1—0

ನವಯುಗ ಪ್ರೆಸ್, ಉಡುಪಿ.

ಮದ್ಯಪಾನ ಪ್ರತಿಬಂಧ

ಲೋಕ ಸಭೆಯ ಅನುಮೋದನೆ

ಮಹಾತ್ಮಾ ಗಾಂಧೀಜಿಯ ಹಿರಿತನದಲ್ಲಿ ಭಾರತವು ಸತ್ಯಾಗ್ರಹ ಆಂದೋಲನದ ದೀಕ್ಷೆ ವಹಿಸಿದ ದಿನವು ಎಪ್ರೀಲಿನ ೬ನೇ ತಾರೀಕಾಗಿದೆ; ಇಂಥ ಚಳವಳಿಯಲ್ಲಿ ರುದ್ರ ಬಲಿದಾನವನ್ನು ಅಮೃತಸರದ ಜಾಲಿಯನವಾಲಾಬಾಗದಲ್ಲಿ ಕೊಟ್ಟದು ಎಪ್ರೀಲಿನ ೧೩ನೇ ದಿನವಾಗಿದೆ. ಹೀಗಾಗಿ ಈ ವಾರವು ರಾಷ್ಟ್ರೀಕರಲ್ಲಿ ವೈನವಿರೇಳಿಸುವಂತದಿದೆ. ನವಜಾಗೃತಿಯನ್ನು ಹುಟ್ಟಿಸುವಂತಿದೆ.

ಆದುದರಿಂದಲೇ ಮುಂಬಯಿ ರಾಜ್ಯವು ಪಾನನಿರೋಧ ಧೋರಣೆಯನ್ನು ಜನರಲ್ಲಿ ಗಂಭೀರವಾಗಿ ಪ್ರಚುರಪಡಿಸಲು ಈ ವಿಶಿಷ್ಟ ಅವಧಿಯನ್ನು ಕಳೆದ ಕೆಲವು ವರ್ಷಗಳಿಂದ ಉಪಯೋಗಿಸಿಕೊಳ್ಳುತ್ತ ಬಂದಿದೆ. ಗಾಂಧೀಜಿಯವರು ರೂಪಿಸಿದ ಸತ್ಯಾಗ್ರಹ ಕಾರ್ಯಕ್ರಮದಲ್ಲಿ ಸಂಪೂರ್ಣ ಪಾನನಿರೋಧದ ಅಂಶವೂ ಅಡಕವಾಗಿತ್ತೆಂಬುದನ್ನು ಇಲ್ಲಿ ನೆನೆಯಬಹುದು.

ಪಾನನಿರೋಧ ಧೋರಣೆಯನ್ನು ನಮ್ಮ ರಾಜ್ಯಾಂಗ ಘಟನೆಯೂ ಅನುಮೋದಿಸಿದೆ. ತದನುಸಾರವಾಗಿ ಕೆಲವು ರಾಜ್ಯಗಳಲ್ಲಿ ಸಂಪೂರ್ಣವಾಗಿಯೂ ಬೇರೆ ಕೆಲವು ರಾಜ್ಯಗಳಲ್ಲಿ ಪ್ರಾಯೋಗಿಕ ರೂಪದಲ್ಲಿಯೂ ಪಾನನಿರೋಧ ಶಾಸನವನ್ನು ಆಯಾ ರಾಜ್ಯಸರಕಾರ ತಂದಿದೆ. ಆದರೆ ಭಾರತದಲ್ಲಿ ಸರ್ವತ್ರ ಪಾನನಿರೋಧವು ಜ್ಯಾರಿಗೆ ಬರಬೇಕೆನ್ನುವ ಉದ್ದೇಶ ಇಷ್ಟರ ವರೆಗೆ ಈಡೇರಿಲ್ಲ.

ಯೋಜನಾ ಆಯೋಗವು ಶ್ರೀಮನ್ನಾರಾಯಣರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಸಮಿತಿಯು ೧೯೫೮ನೇ ಎಪ್ರೀಲಿನ ೧ನೇ ದಿನಾಂಕ ಭಾರತದಲ್ಲಿ ಸಂಪೂರ್ಣ ಪಾನನಿರೋಧವು ಜ್ಯಾರಿಗೆ ಬರಬೇಕೆಂದು ಸಲಹೆ ಮಾಡಿತು. ಆದರೆ ಪಶ್ಚಿಮಬಂಗಾಳದಂಥ ರಾಜ್ಯಗಳು ತಮ್ಮ ಆದಾಯಕ್ಕೆ ಅಬಕಾರಿ ಸುಂಕವೇ ಮುಖ್ಯ ಮೂಲವೆನ್ನುತ್ತ ಹೀಗೆ ಸಂಪೂರ್ಣಪಾನನಿರೋಧವನ್ನು ಜ್ಯಾರಿಗೆ ತರಲಿಕ್ಕೆ, ಮತ್ತು ಅದಕ್ಕಾಗಿ ದಿನವೊಂದನ್ನು ನಿಶ್ಚಯಪಡಿಸುವುದಕ್ಕೆ ವಿರೋಧ ನಿಂತವು.

ಮೊನ್ನೆ ಮಾರ್ಚಿಯ ೩೧ನೇ ದಿನಾಂಕ ಲೋಕಸಭೆಯಲ್ಲಿ ಕಾಂಗ್ರೆಸಿನ ಸದಸ್ಯರೊಬ್ಬರು ಭಾರತದಲ್ಲೆಲ್ಲ ಸಂಪೂರ್ಣ ಪಾನನಿರೋಧವನ್ನು ಜ್ಯಾರಿಗೆ ತರಲು ದಿನವನ್ನು ಗೊತ್ತುಪಡಿಸಬೇಕೆಂಬ ಆಶಯದ ಠರಾವನ್ನು ತಂದರು. ಸಭೆಯಲ್ಲಿ ಪಾನನಿರೋಧದ ಕುರಿತು ಎಲ್ಲ ವರ್ಗಗಳಿಂದಲೂ ಸಹಾನುಭೂತಿಪರ ಮಾತುಗಳು ಕೇಳಬಂದರೂ ಸರಕಾರದ ಪರವಾಗಿ ಮಾತನಾಡಿದ ಮಂತ್ರಿಗಳು ಖಚಿತವಾಗಿ ದಿನ ನಿರ್ಧರಿಸುವ ವಿಚಾರಕ್ಕೆ ಒಪ್ಪಲಿಲ್ಲ.

ಮಂತ್ರಿ ನಂದಾರು ಮದ್ಯಪಾನ ಪ್ರತಿಬಂಧಕ್ಕೆ ವಿರೋಧವನ್ನೇನೂ ವ್ಯಕ್ತಮಾಡಲಿಲ್ಲ. ಆಯಾ ರಾಜ್ಯ ಸರಕಾರಗಳೇ ತಮ್ಮ ಶಕ್ತಿ ಮತ್ತು ಯೋಗ್ಯತೆಗಳನ್ನು ಅಳೆದು ನೋಡಿ ಒಂದು ದಿನವನ್ನು ಗೊತ್ತುಪಡಿಸುವುದು ಹಿತವೆಂದು ಮಾತ್ರ ಹೇಳಿದರು. ಆದುದರಿಂದ ಎರಡನೇ ಯೋಜನೆಯ ಅವಿಭಾಜ್ಯ ಅಂಗವಾಗಿ ಮದ್ಯಪಾನಪ್ರತಿಬಂಧದ ಕಾರ್ಯಕ್ರಮವನ್ನು ಪರಿಗಣಿಸಬೇಕೆಂದೂ ಆದಷ್ಟು ಬೇಗನೇ ದೇಶದಲ್ಲೆಲ್ಲ ಪಾನನಿರೋಧವನ್ನು ಪರಿಣಾಮಕಾರಿಯಾಗಿ ಜ್ಯಾರಿಗೆ ತರಲು ಯೋಜನಾ ಆಯೋಗ ಕೆಲಸ ಮಾಡಬೇಕೆಂದೂ ಹೇಳುವ ತಿದ್ದಿದ ಗೊತ್ತುವಳಿ ಸ್ವೀಕಾರವಾಯಿತು.

ಪ್ರಜಾಸಮಾಜವಾದಿ ಪಕ್ಷದ ಧುರೀಣ ಆಚಾರ್ಯ ಕೃಪಲಾನಿಯವರು ಮದ್ಯಪಾನ ಪ್ರತಿಬಂಧ ಕಾರ್ಯಕ್ರಮವನ್ನು ಪುರಸ್ಕರಿಸಿ ಸಭೆಯಲ್ಲಿ ದೀರ್ಘ ಭಾಷಣ ಮಾಡಿದರು. ಕೇವಲ ನೈತಿಕ ದೃಷ್ಟಿಯಿಂದಲ್ಲ—ಕುಡಿಯುವುದು "ಪಾಪ" ವೆಂಬ ತಾತ್ವಿಕ ದೃಷ್ಟಿಯಿಂದಲೂ ಅಲ್ಲ—ಸಾಮಾಜಿಕ ಹಾಗು ಆರ್ಥಿಕ ಸುಧಾರಣೆಯ ಮನೋಭಾವದಿಂದ ಪಾನನಿರೋಧ ಧೋರಣೆಯನ್ನು ನೋಡಬೇಕೆಂದು ಅವರು ಹೇಳಿದರು. ಶಾಸನದ ಬಲ ಮತ್ತು ಪೋಲೀಸರ ಜಾಗರೂಕತೆಗಳೇ ಜನರಲ್ಲಿ ಸುಧಾರಣೆಯನ್ನು ಉಂಟುಮಾಡಲಾರವೆಂದೂ ತೀವ್ರ ಪ್ರಚಾರವು ಅತ್ಯಗತ್ಯವಾಗಿ ನಡೆಯಬೇಕಾಗಿದೆಯೆಂದೂ ಅವರು ಪ್ರತಿಪಾದಿಸಿದರು.

ಗಾಂಧೀಜಿಯವರೊಬ್ಬರಿಂದಾದ ಸುಧಾರಣೆಯ ಕೆಲಸವು ಸರಕಾರದ ಶಾಸನ ಮತ್ತು ಪೋಲೀಸರ ಕಾರ್ಯಕಲಾಪಗಳಿಂದಾಗಿಲ್ಲವೆನ್ನುತ್ತ ಆಚಾರ್ಯ ಕೃಪಲಾನಿಯವರು ಪ್ರಚಾರಕ್ಕೆ ಹೆಚ್ಚು ಹಣವನ್ನು ವಿನಿಯೋಗಿಸಬೇಕೆಂದು ಸಹ ಒತ್ತಾಯಿಸಿದರು. ನಮ್ಮ ಸರಕಾರಗಳ ಪರವಾಗಿ ನೀಡಲಾಗುವ ಸತ್ಕಾರಕೂಟಗಳಲ್ಲಿ ಮಾದಕಪೇಯಗಳನ್ನು ಬಡಿಸದಿದ್ದರೂ ಸಹ ನಮ್ಮವರು ವಿದೇಶಿ ಸರಕಾರಗಳವರು ಏರ್ಪಡಿಸಿದ ಕೂಟಗಳಲ್ಲಿ ಮದ್ಯ ಸೇವಿಸಲು ಸಂಕೋಚಪಡದಿರುವುದು ವಿರೋಧಾಭಾಸಕರ ವರ್ತನೆ ಎಂಬುದಾಗಿ ಅವರು ಆಕ್ಷೇಪಿಸಿದರು.

ಯೋಜನಾ ಖಾತೆಯ ಸಚಿವರಾದ ಶ್ರೀ ನಂದಾರು ಕುಡಿತವು ಬಡ ಜನರ ಮೇಲೆ ಮಾಡುವ ಆರ್ಥಿಕ ದುಷ್ಪರಿಣಾಮಗಳನ್ನು ಕಡೆಗಣಿಸಬಾರದೆಂದರು. ಶ್ರೀಮಂತರು ಕುಡಿತಕ್ಕಾಗಿ ಹಣವನ್ನು ವೆಚ್ಚಮಾಡಬಲ್ಲರೆಂಬುದು ನಿಜವಾದರೂ ಬಡವರ ಮನೋಭಾವದ ಮೇಲೆ ಇದರಿಂದಾಗುವ ಅಪಾಯಕರ ಪರಿಣಾಮಗಳನ್ನು ತಗ್ಗಿಸಲಿಕ್ಕಾದರೂ ಧನಿಕರು ತಮ್ಮ ಚಟವನ್ನು ಬಿಟ್ಟುಕೊಡಬೇಕು ಎಂದು ಹೇಳಿದರು.

ಅಭಿವೃದ್ಧಿ ಪ್ರಯತ್ನಗಳಿಗೆ ಹಣವನ್ನು ಸಂಪಾದಿಸಲು ಅಬಕಾರಿ ಸುಂಕವು ಮುಖ್ಯವಾದ ಮಾರ್ಗವೆಂಬ ಕಾರಣವನ್ನಿತ್ತು ಈ ಆದಾಯ ಮೂಲವು ತಪ್ಪಿ ಹೋಗುವುದೆಂಬುದಕ್ಕಾಗಿ ಪಾನನಿರೋಧ ಧೋರಣೆಯನ್ನು ವಿರೋಧಿಸುವುದು ಯೋಗ್ಯವಲ್ಲವೆಂದವರು ಅಭಿಪ್ರಾಯಪಟ್ಟರು. ಮದ್ಯಪಾನ ಪ್ರತಿಬಂಧ ಕಾರ್ಯಕ್ರಮವೇ ಒಂದು ಅಭಿವೃದ್ಧಿ ಪ್ರಯತ್ನ. ಈ ಮಟ್ಟಿಗೆ ನಿಂತುಹೋದ ಆದಾಯವನ್ನು ಈ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಮಾಡಿದ ವೆಚ್ಚವೆಂದು ಭಾವಿಸೋಣ ಎಂದವರು ಸಾರಿದರು.

ಬಡಜನರ ನಿಜವಾದ ಕಲ್ಯಾಣವನ್ನು ನಾವು ಮದ್ಯಪಾನ ಪ್ರತಿಬಂಧ ಕ್ರಮದಿಂದ ಮಾಡದೆ, ಅವರಿಗೆ ಶಿಕ್ಷಣ, ಆರೋಗ್ಯಾದಿಗಳ ಸಂಗತಿಯಲ್ಲಿ ಸೌಲಭ್ಯಗಳನ್ನೊದಗಿಸಿಕೊಡಲು ಸಾಹಸಪಡುವ ಅಭಿಮಾನ ಹೊಂದಿದರೆ ಅದು ನಾಚಿಕೆಗೇಡಿನ ವರ್ತನೆಯಾಗುವುದೆಂದು ನಂದಾರು ಅಭಿಪ್ರಾಯಪಟ್ಟರು. ಮಹಾತ್ಮಾ ಗಾಂಧೀಯವರು ಹೇಳಿದರೆಂಬುದಕ್ಕಾಗಿಯಲ್ಲ—ಕಲ್ಯಾಣದ ಮಾರ್ಗವೆಂಬುದಕ್ಕಾಗಿ ನಾವು ಮದ್ಯಪಾನ ಪ್ರತಿಬಂಧವನ್ನು ಮೆಚ್ಚಬೇಕೆಂದು ಅವರು ಸಾರಿದರು.

ಮಾರ್ಚಿ ತಿಂಗಳ ಕೊನೆಯಲ್ಲಿ ಮದ್ರಾಸಿನ ಶಾಸನಾಂಗದಲ್ಲಿ ಸಹ ಪಾನನಿರೋಧ ಧೋರಣೆಯ ಕುರಿತು ಸ್ವಲ್ಪಮಟ್ಟಿನ ಚರ್ಚೆ ನಡೆದಿದ್ದಿತು. ಈ ಚರ್ಚೆಯಲ್ಲಿ ಭಾಗವಹಿಸಿದ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಮರು ಅಕ್ರಮವಾಗಿ ಭಟ್ಟಿ ಇಳಿಸಿ ಮದ್ಯವನ್ನು ಕುಡಿಯುವವರು ಇದ್ದಾರೆಂದು ಒಪ್ಪಿದರು. ಆದರೆ, ಇವರೆಲ್ಲ ಹಳೆಯ ಕುಡುಕರೆಂದೂ ಹೊಸ ಪೀಳಿಗೆಯು ಕುಡಿತದ ಚಟದಿಂದ ಮುಕ್ತವಿದೆಯೆಂದೂ ತಮ್ಮ ವಿಶ್ವಾಸವನ್ನು ಅವರು ಪ್ರದರ್ಶಿಸಿದರು.

ನಾಳೆಯ ನಾಗರಿಕರಿಗಾದರೂ ಕುಡಿತದ ಚಟವಿಲ್ಲದಂತೆ ಮಾಡಲು ನಾವು ಸಮರ್ಥರಾದರೆ ಅದೇ ಮಹಾ ಸಾಧನೆ ಎಂದು ಸುಬ್ರಹ್ಮಣ್ಯಮರ ಅಭಿಪ್ರಾಯ. ಅವರ ಹೇಳಿಕೆಯಂತೆ ಈಗಾಗಲೇ ಮದ್ಯಪಾನ ಪ್ರತಿಬಂಧವು—ಅಕ್ರಮ ಭಟ್ಟಿ ನಡೆಯುತ್ತಿದ್ದರೂ ಸಹ—ಯಶಸ್ವಿಯಾಗಿದೆ ಇದರಲ್ಲಿ ಸಂದೇಹವೇ ಇಲ್ಲ.

ತಮ್ಮ ನಿಲುಮೆಯನ್ನು ಸಮರ್ಥಿಸಲು ಅವರು ಹರಿಜನ ಹಾಗು ಕೂಲಿಕಾರ ಕುಟುಂಬಗಳ ಈಗಿನ ಪರಿಸ್ಥಿತಿಯನ್ನು ಪ್ರಸ್ತಾಪಿಸಿದರು. ಕೆಳ ಭವಾನಿ ಯೋಜನೆಯ ಟಪ್ಪಾಲು ಕಟ್ಟೆಯಲ್ಲಿ ವಿಚಾರಿಸಿದರೆ ಈಗ ಪ್ರತಿವರ್ಷ ೨೦ ಲಕ್ಷ ರೂಪಾಯಿಗಳನ್ನು ಕೂಲಿಕಾರರು ತಮ್ಮ ಸಂಬಂಧಿಕರಿಗೆ ಕಳಿಸುತ್ತಿರುವ ವಿಷಯ ಗೊತ್ತಾಗುತ್ತದೆ. ಈ ವಲಯದಲ್ಲಿ ಮದ್ಯದಂಗಡಿಯೊಂದಿರುತ್ತಿದ್ದರೆ ಇಷ್ಟು ಹಣವು ಕುಡಿತಕ್ಕೆ ಹೋಗುವುದು ಅಸಂಭವವಲ್ಲ—ಎಂದು ಹೇಳಿ ಮಂತ್ರಿಗಳು ತಮ್ಮ ನಿಲುಮೆಯನ್ನು ಬಲವಾಗಿ ಸಮರ್ಥಿಸಿಕೊಂಡರು.

ಮದ್ಯಪಾನ ಪ್ರತಿಬಂಧವು ಭಾರತದ ವಾತಾವರಣಕ್ಕೆ ತೀರ ಯೋಗ್ಯವಾದ ಸುಧಾರಣೆಯಾಗಿದೆ. ನಮ್ಮ ಸಾಂಸ್ಕೃತಿಕ ಪರಂಪರೆಯು ವ್ಯಭಿಚಾರ ಮತ್ತು ದ್ಯೂತಾಸಕ್ತಿಗಳಷ್ಟೇ ಕುಡಿತವೂ ಹೇಯವಾದುದೆಂಬ ನಿಲುಮೆಗೆ ಅಂಟಿಕೊಂಡಿದೆ. ಇಲ್ಲಿಯ ಹವಾಗುಣವು ಸಹ ಮಾದಕ ಪೇಯಗಳ ಸೇವನೆಗೆ ವಿರೋಧವಾಗಿದೆ. ಬಡತನವೂ ಈ ದುಂದುಗಾರಿಕೆಯನ್ನು ಸಹಿಸದು. ಆದುದರಿಂದ ಸರಕಾರವು ತನ್ನ ಮೇಲೆ ಹೊತ್ತಿರುವ ಭಾರವೆಂದು ಪಾನನಿರೋಧ ಧೋರಣೆಯನ್ನು ನಾಗರಿಕರು ವಹಿಸದೆ, ಸರಕಾರದೊಡನೆ ಸಂಪೂರ್ಣ ಸಹಕರಿಸಿ ಈ ಧೋರಣೆಯು ತಮ್ಮದೇ ಸಂಕಲ್ಪವೆಂಬ ರೀತಿಯಲ್ಲಿ ನಡೆಸಿಕೊಳ್ಳುವುದು ಆವಶ್ಯವಾಗಿದೆ.

ಸರಕಾರವನ್ನು ಟೀಕಿಸುವ ಪ್ರತಿ ಪಕ್ಷಗಳು ಸಹ ಪಾನನಿರೋಧ ಧೋರಣೆಯು ಬಿಗಿಯಾಗಿ ಜ್ಯಾರಿಗೆ ಬರುತ್ತಿಲ್ಲವೆಂದು ಮಾತ್ರ ಆಕ್ಷೇಪಿಸುತ್ತವೆ; ಹೊರತು ಮದ್ಯಪಾನವು ಒಳ್ಳೆಯದೆಂದು ಹೇಳುವುದಿಲ್ಲ. ಮನುಷ್ಯನ ದೇಹ ಮತ್ತು ಮನಸ್ಸುಗಳ ಮೇಲೆ ಮದ್ಯಪಾನವು ಶಾಶ್ವತ ದುಷ್ಪರಿಣಾಮಗಳನ್ನು ಮಾಡುವುದು ಖಂಡಿತವೆಂದು ಎಲ್ಲ ಪ್ರಾಜ್ಞರೂ ಒಪ್ಪಿರುವಾಗ ಅಕ್ರಮ ಭಟ್ಟಿ ತಯಾರಿಕೆಯಂಥವುಗಳ ಪತ್ತೆಯಲ್ಲಿ ಜನರೆಲ್ಲ ಸರಕಾರದೊಡನೆ ಸಹಕರಿಸುವುದು ಅತ್ಯಂತ ಅಪೇಕ್ಷಣೀಯ.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, **UDIPI.** S. KANARA.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ನರಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0

ಮಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ಶಾರೀರಿಕ ದುಡಿಮೆ ಹಾಗು ಭಾರತೀಯ ಮನೋಭಾವನೆ

(೩ನೇ ಪುಟದಿಂದ)

ವ್ಯಕ್ತಿಯ ಗುಣ, ಸ್ವಭಾವ, ಕರ್ಮಗಳನ್ನು ಸಮನ್ವಯ ದೃಷ್ಟಿಯಿಂದ ನೋಡುವ ಋಷಿಪುಂಗವರ ದೃಷ್ಟಿಯು ಮಧ್ಯ ಯುಗದಲ್ಲಿಯೂ ಈ ಅರ್ವಾಚೀನ ಕಾಲದಲ್ಲಿಯೂ ತೀರ ಮಲಿನಗೊಂಡು, ಜಾತೀಯ ಭೇದ ಭಾವನೆಗೆ ಇಂಬು ಕೊಟ್ಟಿದೆ. ಗುಣ ಸ್ವಭಾವಗಳನ್ನು ತೀರ ಕಡೆಗಣಿಸಿ, ಜನ್ಮ ಮತ್ತು ವೃತ್ತಿಗಳನ್ನೆ ಆಧರಿಸಿ ಭಾರತದಲ್ಲಿ ನಾಲ್ಕು ಮೂಲ ವರ್ಣಗಳ ಸ್ಥಾನದಲ್ಲಿ ನಾಲ್ಕು ಸಾವಿರ ಜಾತಿಗಳು ಹುಟ್ಟಿಕೊಳ್ಳುವುದಕ್ಕೆ ಈ ಸಂಕುಚಿತ ದೃಷ್ಟಿಯು ಕಾರಣವಾಗಿದೆ.

ನಡು ನಡುವೆ ಪಾಪವೂ ಬೆರೆತಿರಬಹುದಾದ ಬಾಯುಪಚಾರದ ಆಶೀರ್ವಾದಗಳನ್ನಿತ್ತ ಮಾತ್ರಕ್ಕೆ ದಾನ, ದಕ್ಷಿಣೆ ಮತ್ತು ವಿಶೇಷ ಮನ್ನಣೆಗೆ ಪಾತ್ರನೆನಿಸುವ ಬ್ರಾಹ್ಮಣನೊಂದೆಡೆ, ವಸತಿಯ ಆರೋಗ್ಯ ರಕ್ಷಣೆಗಾಗಿ ತೀರ ಅವಶ್ಯಕವಾದ ಸ್ವಚ್ಛತೆಯ ಕ್ರಿಯೆಯಲ್ಲಿ ನಿರತನಾದ ತೋಟಿ ಅಥವಾ ಭಂಗಿಯೊಬ್ಬ ಇನ್ನೊಂದೆಡೆ ನಿಂತು ಭಾರತದ ನಾಲ್ಕು ಸಾವಿರ ಜಾತಿಗಳ ಸಂಕೋಲೆಗೊಂದು ರೂಪವಿತ್ತಿದ್ದಾರೆ. ಮನುಷ್ಯನ ಬಾಳ್ವೆಯನ್ನು ಸಹ್ಯವಾಗಿಯೂ ಸಂತೋಷಜನಕವಾಗಿಯೂ ಮಾಡುವ ದೈಹಿಕ ಪರಿಶ್ರಮಕ್ಕೆ ಭಾರತವು ಕೊಟ್ಟಷ್ಟು ಹೀನ ಸ್ಥಾನವನ್ನು ಜಗತ್ತಿನ ಬೇರೆ ಯಾವುದೇ ರಾಷ್ಟ್ರವು ಕೊಟ್ಟಿಲ್ಲ. ದುಡಿಯುವ ಜನರನ್ನು ಭಾರತದಷ್ಟು ಅಗೌರವದಿಂದ ಬೇರೆಯಾವುದೇ ರಾಷ್ಟ್ರವೂ ಜಗತ್ತಿನಲ್ಲಿ ಈಗ ನಡೆಸಿಕೊಳ್ಳುತ್ತಿಲ್ಲ.

ತಮ್ಮ ಪ್ರಾಚೀನ ಸಾಂಸ್ಕೃತಿಕ ಪರಂಪರೆಗಾಗಿ ಹೆಚ್ಚಿನ ಅಭಿಮಾನ ಪಟ್ಟುಕೊಳ್ಳುವ ಭಾರತೀಯರು ನಿತ್ಯವ್ಯವಹಾರದಲ್ಲಿ ಈ ಸಂಸ್ಕೃತಿಯು ಪ್ರತಿಫಲನಗೊಂಡಿರುವ ಮೇಲಿನ ರೀತಿಗಾಗಿ ನಾಚಿಕೆಪಟ್ಟುಕೊಳ್ಳಬೇಡವೆ? ಮತ ಮತ್ತು ಧರ್ಮದ ಅಂಧ ಆರಾಧಕರು ಭಾರತೀಯ ಸಾಮಾಜಿಕ ಜೀವನವನ್ನು ಕಲುಷಿತಗೊಳಿಸಿರುವ ರೀತಿಗಾಗಿ ಕಣ್ಣೀರು ಹಾಕಬೇಡವೆ? ಹಿಂದುತ್ವದ ಸಾಗರೋಪಮ ಸ್ವರೂಪಕ್ಕೆ ತೀರ ಸಂಕುಚಿತವಾದ ನಡವಳಿಕೆ ಎಂದಾದರೂ ಒಪ್ಪಬಲ್ಲುದೆ? ಹೊಸ ಸಮಾಜರಚನೆಯ ಕುರಿತು ಆಸಕ್ತರಾದ ಸುಧಾರಕರೂ ನಾಗರಿಕತೆಯ ನಿಜವಾದ ಪೂಜಾರಿಗಳೂ ಆಗಿ ಭಾರತೀಯರೆಲ್ಲ ಈ ವಿಷಯದ ಕುರಿತು ವಿಶೇಷವಾಗಿ ಆಲೋಚಿಸಬೇಕಾಗಿದೆ.

ದೈಹಿಕ ಶ್ರಮದ ಬೆಲೆಯನ್ನು ತಗ್ಗಿಸಿ, ಅದಕ್ಕೆ ಕೊಡಬೇಕಾದ ಮನ್ನಣೆಯನ್ನು ವಿಲಾಸಮಯ ಜೀವನಕ್ಕೆ ಕೊಟ್ಟು ಶ್ರಮಜೀವಿತನಿಗೆ ಎಷ್ಟು ಮಾತ್ರಕ್ಕೂ ಉಪಕಾರವನ್ನು ಮಾಡಲಿಲ್ಲ. ಇತರರ ಶ್ರಮದಿಂದ ಶ್ರೀಮಂತರಾದವರು ಸಾಮಾಜಿಕ ಕ್ಷೇತ್ರದ ನಿಜವಾದ ಆವಶ್ಯಕತೆಗಳಿಗಾಗಿಯಲ್ಲ, ತಮ್ಮ ವಿಲಾಸಕ್ಕಾಗಿ ಉತ್ಪಾದನೆಯ ಗತಿವಿಧಿಯನ್ನು ಬದಲಾಯಿಸಿ ಕೊಂಡರು.

ಅನ್ನಕ್ಷಾಮವುಳ್ಳ ದೇಶದಲ್ಲಿ ಕಾಲಿಟ್ಟಾಗಲೂ ಭವ್ಯ ಮಂದಿರಗಳ ರಚನೆಗಾಗಿ ಜನರನ್ನು ಇವರು ದುಡಿಸಿದರು. ನಿತ್ಯೋಪಯೋಗದ ವಸ್ತುಗಳ ಕೊರತೆಯಿದ್ದಾಗಲೂ ಅವರು ರತ್ನಖಚಿತ ಸಿಂಹಾಸನಗಳನ್ನು ತಯಾರಿಸಿ ಕೊಡಿರೆಂದು ಕುಶಲ ಕಾರ್ಮಿಕರಿಗೆ ಅಪ್ಪಣೆ ವಿಧಿಸಿದರು. ಸಮಾಜದ ಅಗತ್ಯಗಳನ್ನು ಒದಗಿಸಿ ಕೊಡುವುದಕ್ಕಾಗಿ ಉದ್ಯೋಗಗಳು ನೆಲೆಗೊಳ್ಳದೆ, ಬೆಳೆಯದೆ, ಹಣ ಹಾಕಿದ ಶ್ರೀಮಂತನಿಗೆ "ಲಾಭ" ಸಂಪಾದಿಸಿ ಕೊಡಲು ಕಾರ್ಖಾನೆಗಳು ಪ್ರಾರಂಭಗೊಂಡುದು ಈಗಿನ ಕತೆ.

ಉತ್ಪಾದನೆ ಮತ್ತು ವಿತರಣೆಯಲ್ಲಿ ಉಂಟಾದ ಈ ವೈಷಮ್ಯ ಹಾಗು ವೈಪರೀತ್ಯಗಳು ಸಮಾಜದ ಮೇಲೆ ನಿರುದ್ಯೋಗ, ಅಭಾವ ಹಾಗು ನಿಯಂತ್ರಣಗಳ ರೂಪದಲ್ಲಿ ಗಂಭೀರವಾದ, ತಾತ್ಕಾಲಿಕ ಹಾಗು ಶಾಶ್ವತವೆಂಬ ಎರಡೂ ಸ್ವರೂಪದ ಪರಿಣಾಮಗಳನ್ನು ಮಾಡಿರುತ್ತವೆ. ವ್ಯಕ್ತಿಯ ಸಂಪಾದನೆಯು ಆತನೊಬ್ಬನ ಹೊಟ್ಟೆ—ಬಟ್ಟೆಗೆಯೇ ಸಾಲದೆಂದಿರುವಾಗ, ಆತನನ್ನು ಅವಲಂಬಿಸಿದ ಅಶಕ್ತರೂ ರೋಗಿಗಳೂ ಆದ ಕುಟುಂಬದ ಸದಸ್ಯರ ಗತಿಯೇನು?

ಈಗಿನ ಸಮಾಜರಚನೆಯು ಇವರಿಗೇನೂ "ಸೇವೆ" ಯನ್ನು ದೊರಕಿಸಿಕೊಡುತ್ತಿಲ್ಲ. ನಿರುದ್ಯೋಗಿಗಳಾದ ಸಶಕ್ತರು ಭಿಕ್ಷೆ ಬೇಡುತ್ತಾ ತಿರುಗುತ್ತಾರೆ—ಭಿಕ್ಷಾಟನೆಯನ್ನು ಪ್ರತಿಬಂಧಿಸಲು ತೋರಿಸುವಷ್ಟು ಉತ್ಸಾಹವನ್ನು ನಮ್ಮ ಈಗಿನ ಮುಖಂಡರು ಭಿಕ್ಷುಕರನ್ನು ಒಳ್ಳೆಯ ಉದ್ಯೋಗ ನಿರತರಾಗಿ ಮಾಡುವ ಯೋಜನೆಗಳ ಬಗ್ಗೆ ವಹಿಸುತ್ತಿಲ್ಲವೆಂಬುದು ವಿಷಾದಕರ.

ಮಹರ್ಷಿ ಟಾಲಸ್ಟಾಯರಿಗನುಸಾರವಾಗಿ, ಮನುಷ್ಯನಾದವನ ಪ್ರಥಮ ಕರ್ತವ್ಯವೆಂದರೆ ತನ್ನ ರೊಟ್ಟಿಯನ್ನು ಸ್ವತಃ ಕಷ್ಟಪಟ್ಟು ಸಂಪಾದಿಸುವುದಾಗಿದೆ. "ಗಾರ್ಡನ್ ಆಫ್ ಈಡನ್" ನೀಡುತ್ತಿದ್ದ ಸುಖದಲ್ಲಿ ಮೈಮರೆತವರನ್ನು "ನಿಮ್ಮ ಪರಿಶ್ರಮದಿಂದ ಸುರಿದ ಬೆವರಿನಲ್ಲಿ ನಿಮ್ಮ ರೊಟ್ಟಿಯನ್ನು ಕಂಡುಕೊಂಡು ತಿನ್ನಿರಿ" ಎಂಬುದಾಗಿ ವಿಧಿಸಿ ದೇವರು ಹೊರಕಳಿಸಿದನೆಂಬ ಬೈಬಲಿನ ವಾಕ್ಯವು ಆ ಸುಖ ಜೀವಿಗಳ ಮೇಲೆ ಶಾಪವಾಗಿ ಬಂದೆರಗಿದುದಲ್ಲ—ಮನುಷ್ಯನು ಜೀವನವನ್ನು ನಡೆಸಬೇಕಾದ ವಿಧಿಯ ಬಗ್ಗೆ ಆದೇಶ ರೂಪದಲ್ಲಿ ಹೇಳಿದ ಮಾತದು.

ಮನುಷ್ಯನ ಹೊಟ್ಟೆ, ಬಟ್ಟೆ ಮತ್ತು ವಸತಿಯ ಮೂಲಭೂತ ಆವಶ್ಯಕತೆಗಳನ್ನು ದೈಹಿಕ ಪರಿಶ್ರಮವು ಒದಗಿಸಿ ಕೊಡುತ್ತದೆ. ಆದುದರಿಂದ ದೈಹಿಕ ಪರಿಶ್ರಮ ನಿರತನಾಗುವುದೇ ಧರ್ಮ— ಅದನ್ನು ಕಡೆಗಣಿಸುವುದೇ ಪಾಪ! ಮನುಷ್ಯನು ತನ್ನ ಬುದ್ಧಿವಂತಿಕೆಯ ಬಲದಿಂದ ನೂರಾರು ಶಾಸನಗಳನ್ನೂ ಕ್ರಮನಿಯಮಗಳನ್ನೂ ರಚಿಸಬಹುದು; ವರ್ಚಸ್ಸು ಮತ್ತು ಸಾಮರ್ಥ್ಯವನ್ನು ಉಪಯೋಗಿಸಿ ಅವನ್ನು ಉಳಿದವರ ಮೇಲೆ ಹೇರಲೂ ನೋಡಬಹುದು. ಆದರೆ ಮನುಷ್ಯನ ಅಸ್ತಿತ್ವಕ್ಕೆ ಅಡಿಗಲ್ಲಿನಂತಿರುವ ದೈಹಿಕ ಶ್ರಮವನ್ನು ಕಡೆಗಣಿಸಿದರೆ, ಅದೆಲ್ಲವೂ ಪೊಳ್ಳಾಗುತ್ತದೆ.

ತನ್ನ ಆವಶ್ಯಕತೆಗಾಗಿ—ಇತರರಿಗೆ ಮಾರಾಟ ಮಾಡಿ ಲಾಭ ಸಂಪಾದಿಸಲಿಕ್ಕಲ್ಲ—ಸರಕು ಸಾಧನಗಳನ್ನು ದೊರಕಿಸಿಕೊಳ್ಳಲು ತಾನಾಗಿ ಕಷ್ಟಪಟ್ಟು ದುಡಿಯಬೇಕು. ಈ ದೈಹಿಕ ಪರಿಶ್ರಮವು ಆತನ ಶಕ್ತಿಸಾಮರ್ಥ್ಯಗಳ ಪೂರ್ಣ ಉಪಯೋಗದ ಧ್ಯೇಯವನ್ನಿಟ್ಟುಕೊಂಡಿದ್ದರೆ ಅದು ಆದರ್ಶಪ್ರಾಯ. ಬಲಶಾಲಿಯಾದವನು ತನ್ನ ಶಕ್ತಿ ಸರ್ವಸ್ವವನ್ನು ಉಪಯೋಗಿಸಿ ಮಾಡುವ ಕೆಲಸದ ಒಂದಂಶದಷ್ಟನ್ನೆ ಅಷ್ಟು ಬಲವಿಲ್ಲದ ಆತನ ಸಹೋದರನು ಮಾಡಿಯಾನು. ಇದಕ್ಕಾಗಿ ದ್ವೇಷಾಸೂಯೆ ಸಲ್ಲದು; ಸೋಮಾರಿತನವೂ ಸಲ್ಲದು.

ಪ್ರತಿಯೊಬ್ಬನೂ ತನ್ನ ಸಂಪೂರ್ಣ ಶಕ್ತಿಸಾಮರ್ಥ್ಯಗಳನ್ನುಪಯೋಗಿಸಿ ದುಡಿಯಬೇಕು—ಇದೇ ಧರ್ಮದ ಆದೇಶ. ಆಗ ತೀರ ಅಶಕ್ತರಾದವರ ಹೊಟ್ಟೆಗೂ ಅಸಾಮಾನ್ಯ ಬಲಶಾಲಿಯ ಹೆಚ್ಚಿನ ಉತ್ಪಾದನೆಯ ದೆಸೆಯಿಂದ ಹಿಟ್ಟು ದೊರಕುವಂತಾಗುತ್ತದೆ. ಸಮಾಜದ ಜೀವನ ರಥವು ಸುಸೂತ್ರವಾಗಿ ಸಾಗುತ್ತದೆ. ಪ್ರತಿಯೊಬ್ಬನಿಗೂ ಆತನ ಆವಶ್ಯಕತೆಯಷ್ಟು — ಪ್ರತಿಯೊಬ್ಬನಿಂದಲೂ ಆತನ ಶಕ್ತಿಸಾಮರ್ಥ್ಯಗಳಿದ್ದಷ್ಟು ಎಂಬುದೇ ಇಲ್ಲಿ ಅಡಕವಾದ ಸೂತ್ರ.

ಮಹಾತ್ಮಾ ಗಾಂಧೀಯವರು ತಮ್ಮ ಜೀವನದಲ್ಲಿ ಇದೇ ತತ್ವವನ್ನು ಎತ್ತಿ ಹಿಡಿದರು. ಸಶಕ್ತನಾದವನು ಕೆಲಸ ಮಾಡುವುದಿಲ್ಲವಾದರೆ ಆತನು ಉಣ್ಣಲು ಅಧಿಕಾರ ಹೊಂದಿಲ್ಲನೆಂಬುದೇ ಗಾಂಧೀಜಿಯ ಅಭಿಪ್ರಾಯ. ಇದಕ್ಕಾಗಿಯೇ ಅವರು ಭಿಕ್ಷೆಯನ್ನು ತಾರತಮ್ಯ ಭಾವನೆಯಿಲ್ಲದೆ ಕೊಡುವುದಕ್ಕೆ ವಿರೋಧವಾಗಿದ್ದರು.

ಸೋಮಾರಿತನವನ್ನೂ ಆಲಸ್ಯವನ್ನೂ ಬೆಳೆಸಲು ನೆರವಾಗುವ ಪಾಪಕೃತ್ಯವೆಂದು ಅವರು ಸಶಕ್ತ ಭಿಕ್ಷುಕರಿಗಾಗಿ ಕರುಣೆ ತೋರಿಸುವವರ ವರ್ತನೆಯನ್ನು ಆಕ್ಷೇಪಿಸುತ್ತಿದ್ದರು. ಸಶಕ್ತ ಭಿಕ್ಷುಕರನ್ನು ಯೋಗ್ಯ ಕೇಂದ್ರಗಳಲ್ಲಿ ಸಂಘಟಿಸಿ ಅವರಿಗೆ ಮಾಡಲು ಒಳ್ಳೆಯ ಕೆಲಸವನ್ನಿತ್ತು ಹಾಗೆ ತಮ್ಮ ಜೀವನ ನಿರ್ವಹಣೆಯನ್ನು ಸುಖಕರವಾಗಿ ಮಾಡಲು ಸಾಧ್ಯವಾಗುವಂತೆ ಪ್ರಯತ್ನಿಸಬೇಕೆಂಬುದೇ ಗಾಂಧೀಜಿಯ ಹಂಬಲವಿದ್ದಿತು.

ಗಾಂಧೀಜಿಯ ದೃಷ್ಟಿಯಲ್ಲಿ ಕೃಷಿಕ್ಷೇತ್ರದಲ್ಲಿ ದುಡಿಯುವವರು ನಿಜಕ್ಕೂ ದೊಡ್ಡವರು—ಏಕೆಂದರೆ ಇವರ ಪರಿಶ್ರಮದಿಂದಲೇ ಮನುಷ್ಯನ ಹೊಟ್ಟೆಗೆ ಹಿಟ್ಟು ಸಿಗುತ್ತದೆ. "ಅಧಿಕ ಆಹಾರ ಬೆಳೆಸಿರಿ" ಚಳವಳಿ ಕಾಲದಲ್ಲಿಯಷ್ಟೇ ಅಲ್ಲ—ಪ್ರತಿನಿತ್ಯವೂ ಪ್ರತಿಯೊಬ್ಬನೂ ತನ್ನಿಂದ ಕೂಡಿದ ರೀತಿಯಲ್ಲಿ ಕೃಷಿಯ ಉತ್ಪಾದನೆ ಹೆಚ್ಚಿಸಲು ನೋಡಬೇಕೆಂದು ಅವರ ಹೇಳಿಕೆಯ ಸಾರ.

ಕೃಷಿಯೊಂದೇ ಎಲ್ಲ ಸಶಕ್ತರನ್ನು ಕೆಲಸಕ್ಕೆ ತೊಡಗಿಸಲಾರದ ಪರಿಸ್ಥಿತಿಯಲ್ಲಿ ಬಟ್ಟೆ ತಯಾರಿಕೆಯ ಉದ್ಯೋಗದಲ್ಲಿ ಪ್ರತಿ ಹಳ್ಳಿಯ ಕೆಲವು ಪ್ರಜೆಗಳು ನಿರತರಾಗಬಹುದು; ಮತ್ತೆ ಕೆಲವರು ಮನೆಕಟ್ಟುವಿಕೆಯಲ್ಲಿಯೂ ಜನರ ನಿತ್ಯೋಪಯೋಗದ ವಸ್ತುಗಳ ತಯಾರಿಕೆ ಮತ್ತು ವಿತರಣೆಯಲ್ಲಿಯೂ ನಿರತರಾಗಬಹುದು. ಅಂತೂ ಪ್ರತಿಯೊಬ್ಬರೂ ದೈಹಿಕ ಶ್ರಮವೇ ಪ್ರಧಾನವಾಗಿರುವ ಕೆಲಸದಲ್ಲಿ ನಿರತರಾಗುವುದು ಅವಶ್ಯವೆಂದು ಗಾಂಧೀಜಿ ಹೇಳುತ್ತಿದ್ದರು. ಲಾಭಕ್ಕಾಗಿ ಮತ್ತು ಹಂಗಿಗಾಗಿ ಕೆಲಸಮಾಡುವ ಕ್ರಮವೇ ನಿಲ್ಲಬೇಕೆಂದು ಅವರ ಉಪದೇಶ.

ಬೌದ್ಧಿಕ ಪರಿಶ್ರಮಕ್ಕೆ ಗಾಂಧೀಜಿ ಮನ್ನಣೆಯನ್ನು ಕೊಡುತ್ತಿರಲಿಲ್ಲ. ಬೌದ್ಧಿಕ ಪರಿಶ್ರಮಕ್ಕೆ ಒಳ್ಳೆಯ ಮನಸ್ಸು ನಿಲ್ಲಬೇಕಾಗಿರುವ ದೇಹವನ್ನು ಒಳ್ಳೆಯದಾಗಿಡಲು ಸಾಧ್ಯವಾಗುತ್ತಿಲ್ಲ. ಕಷ್ಟವೇನೆಂಬುದನ್ನು ನಿತ್ಯವೂ ಅನುಭವಿಸದಿದ್ದರೆ ಲಾಭಬಡುಕತನ, ವಿಲಾಸ ಪ್ರಿಯತೆಗಳು ಪ್ರಬಲಿಸುತ್ತವೆ. ಆಗ ಎಲ್ಲ ಕೆಲಸವೂ ಅಸ್ತಿತ್ವದಲ್ಲಿ ಉಳಿಯಲು ನಡೆಯುವ ಹೋರಾಟವಾಗುತ್ತವೆ. ಹೋರಾಟವು ಪಾಶವಿಕ ಭಾವನೆಯಿಂದ ಪೋಷಣೆಗೊಳ್ಳುತ್ತದೆ. ಸಾತ್ವಿಕಪ್ರೀತಿಯು ಶಾಶ್ವತವಾಗಿ ನೆಲೆಗೊಳ್ಳಬೇಕಾದರೆ ಸಾಮಾಜಿಕರೆಲ್ಲರೂ ಮಾನವೀಯತೆಯ ಉದಾರವರ್ತನೆಗಳನ್ನು ಆಶ್ರಯಿಸಬೇಕು ಎಂದೆನ್ನುತ್ತಿದ್ದರು ಗಾಂಧೀಜಿ.

ನಾವಿಂದು ದೈಹಿಕ ಶ್ರಮವೇ ಸರ್ವಶ್ರೇಷ್ಠವಾದುದೆಂದು ಒಪ್ಪಿಕೊಳ್ಳಲೇಬೇಕಾಗಿರದಿದ್ದರೂ ಸಹ —ದೈಹಿಕ ಶ್ರಮಕ್ಕೆ ಈಗಿಗಿಂತ ಹೆಚ್ಚು ಮಹತ್ವವನ್ನೂ ಸ್ಥಾನಮಾನವನ್ನೂ ಕೊಡದಿರಲು ತಪ್ಪಬಾರದು. ಏಕೆಂದರೆ ನಾಗರಿಕತೆಯ ಪೋಷಣೆಗೆ ದೈಹಿಕ ಶ್ರಮ ಅನಿವಾರ್ಯ. ಮೋಕ್ಷ ಸಾಧಕನಿಗೂ ಬ್ರಹ್ಮಾನಂದದಾಯಕವಾದ ಅಷ್ಟಾಂಗ ಯೋಗಕ್ಕೂ ದೈಹಿಕಶ್ರಮದಿಂದ ಪ್ರಾರಂಭವಾಗುವ ಕಾರ್ಯಕ್ರಮವೇ ಆಧಾರ. ಮೈಮುರಿದು ದುಡಿದಾತನಿಗೆ ಮಾತ್ರ ಸುಖ ನಿದ್ರೆ ಬಂದೀತು. ಇದನ್ನು ಮರೆಯದಿರೋಣ!



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.



ಡಾ| ಸಯ್ಯದ ಮಹಮುದ

ಭಾರತ ಸರಕಾರದ ವಿದೇಶ ಖಾತೆಯಲ್ಲಿ ಮಂತ್ರಿಗಳಾಗಿರುವ ಡಾ. ಸಯ್ಯದ ಮಹಮ್ಮದರು ಇದೇ ೫ನೇ ದಿನಾಂಕ ಮಧ್ಯಪೂರ್ವದ ಕೆಲವು ಅರಬ ರಾಷ್ಟ್ರಗಳ ನಾಲ್ಕು ವಾರಗಳ ಸಂದರ್ಶನ ಕಾರ್ಯಕ್ರಮವನ್ನಿಟ್ಟುಕೊಂಡು ಮುಂಬಯಿಯಿಂದ ಬೀರೂತಿಗೆ ಹೊರಟರು. ಸಿರಿಯ,ಲೆಬನಾನ್, ಈಜಿಪ್ಟ ಮತ್ತು ಸುಡಾನುಗಳಿಗೆ ಈ ಮುಸ್ಲಿಂ ಮಂತ್ರಿಗಳು ಭೇಟಿಯಿತ್ತು ಆ ರಾಷ್ಟ್ರಗಳೊಡನೆ ಭಾರತಕ್ಕಿರುವ ಪ್ರಾಚೀನ ಬಾಂಧವ್ಯದ ಬೆಸುಗೆಯನ್ನು ಇನ್ನಷ್ಟು ಬಿಗಿಯಾಗಿಸುವರು. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಪರಸ್ಪರ ಹಿತಾಸಕ್ತಿಯುಳ್ಳ ವಿಷಯಗಳ ಬಗ್ಗೆ ಸಮಾಲೋಚನೆ ನಡೆಸುವ ಅವರು ಭಾರತದ ಪ್ರತಿಷ್ಠೆಯನ್ನು ಹೆಚ್ಚಿಸುವುದರಲ್ಲಿ ಅನುಮಾನವಿಲ್ಲ.

(೧ನೇ ಪುಟದಿಂದ)

ಕಾರ್ಯಾಚರಣೆ ಮಾಡುವುದೇ ಹೊರತು, ನಿಷ್ಠಾವಂತ ನಾಗರಿಗೆ ಏನೂ ತೊಂದರೆ ಕೊಡುವುದಿಲ್ಲ. ಬದಲಿಗೆ ಅವರನ್ನು ಬಂಡುಗಾರರಾದ ನಾಗರ ಹಿಂಸೆಯಿಂದ ಸೈನ್ಯವು ರಕ್ಷಿಸುತ್ತದೆ. ಅಭಿವೃದ್ಧಿ ಕಾರ್ಯಕ್ರಮಗಳು ನಿರಾತಂಕವಾಗಿ ನೆರವೇರಲು ಅನುಕೂಲವಾದ ಶಾಂತ ವಾತಾವರಣವನ್ನು ಕಲ್ಪಿಸುವುದೇ ಸೈನ್ಯ ಪ್ರವೇಶದ ಉದ್ದೇಶ.

ಗುಡ್ಡಗಾಡಿನ ಪ್ರದೇಶಗಳ ಅಭಿವೃದ್ಧಿ ಮತ್ತು ಹಿಂದುಳಿದವರ ಪ್ರಗತಿಯನ್ನು ಅಪೇಕ್ಷಿಸಿ ಈ ಉದ್ದೇಶ ಸಾಧನೆಗಾಗಿ ದುಡಿಯುವ ಧುರೀಣರೇ ವಿರಳ. ಹೀಗಿರುತ್ತಾ ಭಾರತ ಸರಕಾರವು ಯೋಜನಾ ಆಯೋಗದ ಆದೇಶ ಹಾಗು ನಮ್ಮ ರಾಜ್ಯಾಂಗ ಘಟನೆಯ ಸೂತ್ರಗಳನ್ವಯ ಜೊಕ್ಕ ಕಾರ್ಯಕ್ರಮವನ್ನು ನಾಗ ಪ್ರದೇಶಕ್ಕಾಗಿ ಹಾಕಿ ಕೊಂಡಿದೆ. ಇದರಲ್ಲಿ ಸಹಕರಿಸದೆ ಹೋದರೆ ನಾಗರು ತಮ್ಮ ಹಾದಿಯಲ್ಲಿ ಮುಳ್ಳನ್ನು ತಾವೇ ಹಾಕಿಕೊಂಡಂತಾಗುತ್ತದೆ.

ಸ್ವತಂತ್ರ ನಾಗ ಸ್ಥಾನದ ಬೇಡಿಕೆ ಎಂದಿಗೂ ಯೋಗ್ಯವಲ್ಲ. ಭಾರತದ ಉಳಿದ ನಾಗರಿಕರಿಗಿಂತಲೂ ಹೆಚ್ಚಿನ ಸ್ವಾತಂತ್ರ್ಯ ನಾಗರ ಪಾಲಿಗೆ ಸಿಗುವಂತೆ ನಮ್ಮ ಧುರೀಣರು ಈಗಾಗಲೇ ನೋಡಿದ್ದಾರೆ. ಆದರೆ ಭಾರತದ ಭದ್ರತೆಗೆ ಅಪಾಯವಾಗುವ ಸ್ವತಂತ್ರ ನಾಗ ಸ್ಥಾನದ ರಚನೆಯನ್ನು ಮಾತ್ರ ಅವರು ಪುರಸ್ಕರಿಸುವಂತಿಲ್ಲ. ಈ ಮಟ್ಟಿಗೆ ಬಂಡುಗಾರರಿಗೆ ಸರಕಾರ ಬಗ್ಗದು.

(೩ನೇ ಪುಟದಿಂದ)

ಹಕ್ಕುವಾದಿ! ಐರೋಪ್ಯರ ಕೈಯಲ್ಲಿ ಉಳಿಯಬೇಕು. ಭಾರತವು ಆಫ್ರಿಕದಲ್ಲಿ ಕಿಡಿ ಹಚ್ಚಲು ನೋಡುತ್ತಿರುವುದು ಸ್ವಾರ್ಥಕ್ಕಾಗಿ—ತನ್ನ ಜನಸಂಖ್ಯೆಯ ಒಂದು ಪಾಲನ್ನು ಪೂರ್ವ ಆಫ್ರಿಕದ ಪ್ರಾಂತದಿಂದ ಆ ಭೂಖಂಡದಲ್ಲಿ ಹೇರಿಸುವುದೇ ಭಾರತದ ಉದ್ದೇಶ ಎಂದು ಸಾಲಜಾರರು ತಿಳಿದುಕೊಂಡಿದ್ದಾರೆ.

ಹೀಗೆ ಭಾರತವನ್ನು ಜರೆಯುವಷ್ಟು ಜರೆದು ಗೋವೆಯನ್ನು ಪುನಃ ತಮ್ಮ ಲೇಖನದಲ್ಲಿ ಪ್ರಸ್ತಾಪಿಸುತ್ತಾ ಡಾ. ಸಾಲಜಾರರು ಭಾರತೀಯ ಪ್ರದೇಶಗಳ ಭೌಗೋಲಿಕ ಒಮ್ಮಟ್ಟಿನ ಸ್ವರೂಪವೆಂಬ ತಪ್ಪು ತಿಳುವಳಿಕೆಯಿಂದಲೂ ಹಿಂದಿನ ಸಾರ್ವಭೌಮಾಧಿಕಾರಗಳನ್ನು ಉಲ್ಲಂಘಿಸಿ ಸ್ವಾತಂತ್ರ್ಯ ಭಾವನೆಯನ್ನು ಬೆಳೆಸಬಹುದೆಂಬ ಅನ್ಯಾಯದ ಮನೋಭಾವನೆಯಿಂದಲೂ ಗೋವೆಯ ತಂಟೆಯನ್ನು ಕೃತಕ ರೀತಿಯಿಂದ ಸೃಷ್ಟಿಸಲಾಯಿತು ಎಂದು ಸಾರಿದ್ದಾರೆ.

ಇಂಥ ಸ್ಥಿತಿಯಲ್ಲಿ ಗೋವೆಯ ತಂಟೆಯ ಪರಿಹಾರಕ್ಕೆ ಇರುವ ಮಾರ್ಗವೇನು? ಭಾರತವು ಗೋವೆಯನ್ನು ಬಲಾತ್ಕಾರವಾಗಿ ಕಸಿದುಕೊಳ್ಳಬಲ್ಲುದು— ಭಾರತಕ್ಕೆ ಆ ಸಾಮರ್ಥ್ಯವಿದೆಯೆಂದು ಸಾಲಜಾರರು ಒಪ್ಪುತ್ತಾರೆ. ಅಥವಾ ಭಾರತವು ಗೋವೆಯೆಂಬ ಪ್ರದೇಶವೇ ಇರಲಿಲ್ಲ; ಅದು ಉಲ್ಕಾಪಾತದ ಪರಿಣಾಮವಾಗಿ ಉಧ್ವಸ್ತವಾಯಿತು ಎಂದು ಭಾವಿಸಬೇಕು—ಗೋವೆಯ ಹಂಬಲವನ್ನೇ ಹೀಗೆ ಬಿಟ್ಟುಗೊಡಬೇಕು. ಹೀಗಾದರೆ ಗೋವೆಯೊಡನೆ ಎಲ್ಲ ಪ್ರಾದೇಶಿಕ ಸಂಬಂಧವೂ ನಿಲ್ಲುತ್ತದೆ — ಸಾಲಜಾರರು ಸಾಮಾನ್ಯ ಹಿತಾಸಕ್ತಿ ಹಾಗು ಬಾಂಧವ್ಯವುಳ್ಳ ಈ ಭಾರತ ಮತ್ತು ಗೋವೆಗಳ ಸಂಬಂಧ ಹೀಗೆ ಮುರಿಯಬಾರದು ಎನ್ನುತ್ತಾರೆ.

ಆದುದರಿಂದ ಅವರು ತಮ್ಮ ದೃಷ್ಟಿಯಲ್ಲಿ ನ್ಯಾಯವಾದ ಪರಿಹಾರ ಮಾರ್ಗವೆಂದರೇನೆಂಬುದನ್ನು ಹೀಗೆ ವಿವರಿಸಿದ್ದಾರೆ—ಭಾರತ ಮತ್ತು ಪೋರ್ಚುಗಾಲುಗಳು ಪ್ರಾದೇಶಿಕ ಸಾಮೀಪ್ಯದ ದೃಷ್ಟಿಯಿಂದ ಏಳುವ ಎಲ್ಲ ಸಮಸ್ಯೆಗಳನ್ನೂ ಬದುಕು, ಬಾಳಗೊಡು ಎಂಬ ಮನೋಭಾವದಿಂದ ಘರ್ಷಣೆಗಳಾವುದಕ್ಕೂ ಎಡೆಕೊಡದೆ ಸಮಾಧಾನಕರವೂ ಶಾಂತಿಯುತವೂ ಆದ ರೀತಿಯಲ್ಲಿ ತೀರ್ಮಾನಿಸಬೇಕು. ಇಲ್ಲಿ ಪ್ರಾದೇಶಿಕ ಸಾಮೀಪ್ಯವು ಸಾರ್ವಭೌಮಾಧಿಕಾರದ ವರ್ಗಾವಣೆಗೆ ನೆಪವಾಗಕೂಡದು.

"ಫೋರೈನ್ ಎಫೇರ್ಸ್" ಪತ್ರಿಕೆಯ ಇದೇ ಸಂಚಿಕೆಯಲ್ಲಿ ಭಾರತದ ನಿಲುಮೆಯನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಬಹಳ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ; ಮತ್ತು ಡಾ. ಸಾಲಜಾರರ ತರ್ಕಗಳನ್ನೆಲ್ಲ ಖಂಡ ತುಂಡವಾಗಿ ಟೀಕಿಸಿದ್ದಾರೆ. ಗೋವೆಯು ವಸಾಹತುಶಾಹಿಯ ಜ್ವಲಂತ ಪ್ರತೀಕವೆಂದವರು ಸಾರುತ್ತಾ ಫ್ರಾನ್ಸಿನ ಮಾರ್ಸೇಲಿಯಂತೆ, ಬ್ರಿಟನಿನ ಡೋವರಿನಂತೆ, ಗೋವೆಯು ಭಾರತದ ಅವಿಭಾಜ್ಯ ಅಂಗವೆಂದು ಸಾರಿದ್ದಾರೆ. ಗೋವೆಯಲ್ಲಿ ಜನರೊಪ್ಪದ ಪರಕೀಯರ ಸರ್ವಾಧಿಕಾರ ನಡೆಯುತ್ತಿದೆ ಎಂದವರು ಭಾರತದ ಪರವಾಗಿ ಹೇಳಿದ್ದಾರೆ.

ಜಗಜೀವನ ರಾಮ—೪೮

ಮೊನ್ನೆ ೬ನೇ ತಾರೀಕಿನಂದು ಭಾರತ ಸರಕಾರದ ಸಂಪರ್ಕ ಖಾತೆಯ ಸಚಿವರಾದ ಮಾನ್ಯ ಶ್ರೀ ಜಗಜೀವನ ರಾಮರ ೪೮ನೇ ಹುಟ್ಟು ಹಬ್ಬವನ್ನು ಹೊಸದೆಹಲಿಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಗೃಹ ಮಂತ್ರಿ ಪಂಡಿತ ಪಂತರ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿಸಲ್ಪಟ್ಟು ೪೮ ಸಾವಿರ ರೂಪಾಯಿಗಳ ನಿಧಿಯನ್ನು ಮಂತ್ರಿಗಳಿಗೆ ಅರ್ಪಿಸಲಾಯಿತು. ಮಂತ್ರಿಗಳು ಈ ಹಣವನ್ನು ಹಿಂದುಳಿದ ವರ್ಗದ ಜನರ ಕ್ಷೇಮಾಭ್ಯುದಯಕ್ಕೆ ವ್ಯಯಿಸಲಾಗುವುದೆಂದರು. ಸಭೆಯಲ್ಲಿ ಮಾತನಾಡಿದ ಲೋಕ ಸಭಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ, ಹಿಂದೂ ಮಹಾಸಭೆಯ ಧುರೀಣ ಶ್ರೀ ಚಟರ್ಜಿ, ಪ್ರಜಾಸಮಾಜವಾದಿ ಮುಖಂಡ ಶ್ರೀ ಅಶೋಕ ಮೆಹತ ಮುಂತಾದವರು ಕೇಂದ್ರ ಸರಕಾರದ ಈ ಹಿರಿಯ ಹರಿಜನ ಮಂತ್ರಿಯ ವಿಚಕ್ಷಣತೆ ಮತ್ತು ಯೋಗ್ಯತೆಯನ್ನು ಪ್ರಶಂಸಿಸಿದರು. ಭಾರತೀಯ ತರುಣರ ಹಾಗು ಹಿಂದುಳಿದ ಜನವರ್ಗದ ದಕ್ಷ ಪ್ರತಿನಿಧಿ ಎಂದವರು ಮಂತ್ರಿ ಜಗಜೀವನ ರಾಮರನ್ನು ಹೊಗಳಿದರು.

ಫ್ರಾನ್ಸ್ ರಿಪಬ್ಲಿಕ್‌ನ ವಿದೇಶಾಂಗ ವಿಷಯಗಳ ಮಂತ್ರಿಗಳಾದ ಮಿ| ಕ್ರಿಶ್ಚಿಯನ್ ಪಿನೊರವರು ಇತ್ತೀಚೆಗೆ ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರನ್ನು ಭೇಟಿ ಮಾಡಲು ಹೋದಾಗ ರಾಷ್ಟ್ರಾಧ್ಯಕ್ಷರು ಮಾನ್ಯ ಅತಿಥಿಗಳನ್ನು ಸ್ವಾಗತಿಸುತ್ತಿರುವುದು.

ಫ್ರೆಂಚ್ ವಿದೇಶಾಂಗ ಮಂತ್ರಿಗಳು ವಿಶೇಷವಾದ ಮಿಲಿಟರಿ ಒಪ್ಪಂದಗಳ ವಿರುದ್ಧ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಅಪೂರ್ಣ ಅಭಿವೃದ್ಧಿಯಾಗಿರುವ ರಾಷ್ಟ್ರಗಳನ್ನು ಬಲಪಡಿಸಲು ಆರ್ಥಿಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿರುವರು. ಭಾರತದಲ್ಲಿ ಮಿ| ಪಿನೋರವರು ಮೂರು ದಿನಗಳ ಕಾಲವಿದ್ದು ಆಗ್ರಾದಲ್ಲಿ ತಾಜ್ ಮತ್ತು ಕೆಂಪು ಕೋಟೆಗಳಿಗೆ ಭೇಟಿಕೊಟ್ಟರು. ಅವರು ರಾಷ್ಟ್ರಾಧ್ಯಕ್ಷರು, ಪ್ರಧಾನ ಮಂತ್ರಿ, ಮತ್ತು ಇತರ ಭಾರತದ ಪ್ರಮುಖ ನಾಯಕರೊಡನೆ ಮಾತುಕತೆಯನ್ನೂ ನಡೆಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 11/1956.

ಕಮಲಮ್ಮ —ವಾದಿಳು.

ಮತ್ತು

ಶ್ರೀನಿವಾಸ ಕೂಡಾ —ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ 1-2ನೇ ಪ್ರತಿವಾದಿರು:—

1. ಶ್ರೀನಿವಾಸ, ಕೃಷ್ಣಯ್ಯನವರ ಮಗ.
2. ಸುಬ್ರಾಯ, 1ನೇ ಪ್ರತಿವಾದಿಯ ಮಗ,

ಉಡುಪಿ ತಾಲೂಕು ಪಡುತೋನ್ಸೆ ಗ್ರಾಮದ ಪಡುಕುದ್ರುವಲ್ಲಿದ್ದು ಈಗ ಶಿವಮೊಗ್ಗಾ ಡಿಸ್ಟ್ರಿಕ್ಟ್ ಚಿತ್ರದುರ್ಗದಲ್ಲಿರುವವರು. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ವಾದಿಳು ನಿಮ್ಮ ಮೇಲೆ ಕೂಡಾ ಷ್ಟೇಟು ನಿವೃತ್ತಿಗೋಸ್ಕರ ದಾಕ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 19—4—1956ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದಲ್ಲಿ ನಿಮಗೆ ಉಜಾಪರಡೆಕೊಟ್ಟು ನ್ಯಾಯವರಿಸುವುದಿದ್ದಲ್ಲಿ ಸದ್ರಿ ತಾ. 19—4—1956ನೇ ದಿವ್ಸ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜ್ರಾಗಿ ಜ್ವಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ಫೈಸಲು ಮಾಡಲ್ಪಡುವುದು.

P. V. Acharya.
Vakil for Plaintiff.

ಉಡುಪಿ ತಾ. 3—4—56.

ಗೀತೆಯ ಕೈಗನ್ನಡಿ

0—12—0

ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty, at the Navayuga Press, Udipi S. India

REGD. NO. M. ....

Licensed to Post without Prepayment

ನವಯುಗ

ಸಂಪುಟ ೩೫ VOL. 35

ಉಡುಪಿ, 19—4—1956

ಸಂಚಿಕೆ ೩೩ NO. 33

ಹೊರನಾಡ ಬಾಂಧವರ ಸಭೆ

ಇಷ್ಟರಲ್ಲಿಯೆ ಬಿಹಾರ ರಾಜ್ಯದ ಜಮಶೆಡ್‌ಪುರದಲ್ಲಿ ಹೊರನಾಡ ಕನ್ನಡಿಗರ ಸಮ್ಮೇಳನದ ಹನ್ನೊಂದನೆಯ ಅಧಿವೇಶನವು ಜರುಗಲಿದ್ದು ಈ ಸಮ್ಮೇಳನವು ಎರಡು ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿದೆ ಎಂಬುದು ಮಹತ್ವದ ಮಾತಾಗಿದೆ.

ಇಲ್ಲಿಯವರೆಗೂ—ಅಂದರೆ ಹೊರನಾಡ ಕನ್ನಡಿಗರ ಸಮ್ಮೇಳನದ ಪ್ರಥಮ ಅಧಿವೇಶನವು ೧೯೪೨ನೆಯ ಇಸವಿಯಲ್ಲಿ ಪುಣೆಯಲ್ಲಿ ಜರಗಿದಂದಿನಿಂದ ಇಲ್ಲಿಯವರೆಗೆ—ಈ ಅಧಿವೇಶನಗಳು ಹೆಚ್ಚಾಗಿ ಮಧ್ಯಭಾರತ, ಪಶ್ಚಿಮ ಭಾರತ ಮತ್ತು ಉತ್ತರ ಭಾರತದ ವಿವಿಧ ಸ್ಥಳಗಳಲ್ಲಿ ಜರಗಿವೆ. ಆದರೆ ಈ ವರ್ಷ ಪೂರ್ವ ಭಾರತದ ಕ್ಷೇತ್ರವಾದ ಆಸಾಮ-ಬಂಗಾಲ-ಓಡಿಸಾ-ಬಿಹಾರಗಳ ಪ್ರದೇಶದಲ್ಲಿ, ಕೇಂದ್ರಸ್ಥಾನದ ಜಮಶೆಡ್‌ಪುರದಲ್ಲಿ, ಹೊರನಾಡ ಕನ್ನಡಿಗರ ಸಮ್ಮೇಳನದ ಹನ್ನೊಂದನೆಯ ಅಧಿವೇಶನವು ಸೇರುತ್ತಿದೆ.

ಭಾರತದ ವಿವಿಧ ಪ್ರಾಂತಗಳಲ್ಲಿ ಕನ್ನಡಿಗರು ಕಾರಣಾಂತರದಿಂದ ಹೋಗಿ ನೆಲಸುತ್ತಿರುವುದು ಐತಿಹಾಸಿಕ ಕಾಲದಿಂದ ಪ್ರಚಲಿತವಾಗಿದೆ; ಪರಿಪಾಠವೆನಿಸಿದೆ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಈ ಬಗೆಯ ವಲಸೆಯು ದೊಡ್ಡ ಪ್ರಮಾಣದಲ್ಲಿ ನಡೆದಿರುವದು ಕಾಲಕ್ಕನುಗುಣವಾದ ಸ್ಥಿತ್ಯಂತರವೆಂದು ಹೇಳಬಹುದು.

ವಿದೇಶಗಳಲ್ಲಿ ಹಿಂದಿನ ಕಾಲದಲ್ಲಿ ಕನ್ನಡಿಗರು ಹೋಗಿ ನೆಲಸಿದ್ದರಾದರೂ ಇಂದು ಆ ಸಂಖ್ಯೆಯು ತೀರ ಚಿಕ್ಕದಾಗಿದೆ ಮತ್ತು ಅದು ಕೂಡ ತಾತ್ಕಾಲಿಕ ಮತ್ತು ಅಲ್ಪ ಸಮಯದ್ದಾಗಿದೆ ಆದರೆ ಕನ್ನಡಿಗರು ಹೊರನಾಡುಗಳಲ್ಲಿ ಹೋಗಿ ನೆಲಸಿರುವದರ ಒಂದು ವೈಶಿಷ್ಟ್ಯ ಮತ್ತು ಸ್ವಾಭಾವಿಕ ಸಂಗತಿಯೆಂದರೆ ಅವರು ತಮ್ಮ ಸುತ್ತಿನ ಪ್ರದೇಶಗಳಲ್ಲಿಯೇ ಸ್ಥೂಲವಾಗಿ ಕಂಡುಬರುತ್ತಿರುವರು.

ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರ ಮತ್ತು ದಕ್ಷಿಣದಲ್ಲಿ ತಮಿಳುನಾಡು ಹಾಗೂ ಕೇರಳಗಳಲ್ಲಿ ಕನ್ನಡಿಗರು ಸಹಜವಾಗಿಯೆ ಹೋಗಿ ನೆಲಸುತ್ತಾರೆ. ಇದರಲ್ಲಿಯೂ ವಿಶೇಷವಾಗಿ ಶೈಕ್ಷಣಿಕ ಸೌಕರ್ಯಗಳು ಕನ್ನಡನಾಡಿನ ಸೀಮಾ ಪ್ರದೇಶಗಳಲ್ಲಿ ಉಳಿದ ಭಾಗಗಳಿಗಿಂತ ಮತ್ತು ಮಿಕ್ಕ ಪ್ರಾಂತಗಳಿಗಿಂತ ತಡವಾಗಿ ದೊರೆತ ಕಾರಣ ಈ ಭಾಗಗಳ ಕನ್ನಡಿಗರು ಬಹುಸಂಖ್ಯರಾಗಿ ಮುಂಬಯಿ, ಮದರಾಸು, ಹೈದರಾಬಾದುಗಳಲ್ಲಿ ವಿದ್ಯಾರ್ಜನೆಗೆಹೋಗುವ ಅವಶ್ಯಕತೆಯಿದ್ದಿತು ಮುಂದೆ ಕಲಿತ ಜನರಿಗೆ ಔದ್ಯೋಗಿಕವಾಗಿ ಅಲ್ಪ ವಿಕಸಿತ ಪ್ರದೇಶವೆಂದು ಅಲ್ಲಿ ಉಚಿತವಾದ ಕೆಲಸಗಳು ಸಿಗದಂತಾಗಿ, ದಕ್ಷ ಜನರಿಗೆ ಚಿಕ್ಕ ಕ್ಷೇತ್ರವೆಂಬ ಕಾರಣದಿಂದ ತಕ್ಕ ಅವಕಾಶಗಳು ದೊರೆಯದಂತಾಗಿ, ಬಹುದಿನದ ವಾಸದಿಂದ ಅಲ್ಲಿಯ ಜನರ ಭಾಷೆಯನ್ನೆ ಕಲಿತ, ಅಲ್ಲಿಯವರೊಡನೆ ಸಾಮಾಜಿಕ ಸಂಬಂಧಗಳನ್ನು ಬೆಳಸಿಕೊಳ್ಳಬೇಕಾಗಿ ಬಂದು - ಹೀಗೆ ಅನೇಕ ಕಾರಣಗಳಿಂದ ಕನ್ನಡಿಗರು ಒಮ್ಮೆ ತಮ್ಮ ತಾಯಿ ನೆಲವನ್ನು ಬಿಟ್ಟು ಹೋದವರು ಅಲ್ಲಿಗೆ ತಿರುಗಿ ಬರದಂತಾಗಿ ಹೊರನಾಡುಗಳಲ್ಲಿಯೆ ನೆಲಸಿದುದುಂಟು

ಅಂತೆಯೆ ಸುತ್ತಿನ ಈ ನಾಲ್ಕು ಪ್ರಾಂತಗಳ ಪ್ರತಿಯೊಂದು ನಗರದಲ್ಲಿ ಕನ್ನಡಿಗರು ಬಹುದಿನಗಳಿಂದ ಕಂಡು ಬರುತ್ತಿರುವರು ಆದರೆ ದಕ್ಷಿಣ ಮತ್ತು ಪೂರ್ವದ ಪ್ರದೇಶಗಳಲ್ಲಿ—ದ್ರಾವಿಡ ಭಾಷಾಕ್ಷೇತ್ರವಾಗಿದ್ದ ಮೂಲಕವೊ ಏನೊ—ಕನ್ನಡಿಗರು ಹೆಚ್ಚಾಗಿ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ತಮ್ಮ ವೈಶಿಷ್ಟ್ಯವನ್ನು ಕಾಯ್ದುಕೊಂಡು ಸಾಂಸ್ಕೃತಿಕ ವಿಕಾಸ ಮತ್ತು ಪರಸ್ಪರ ರೀತಿ-ನೀತಿಗಳ ಸಮನ್ವಯವನ್ನು ಮಾಡಿಕೊಳ್ಳುವಂತಾಗಿಲ್ಲ ಎಂಬ ವಿಷಯವನ್ನು ಗಮನಿಸಬೇಕಾದರೂ ಸಾಂಸ್ಕೃತಿಕ ಏಕತೆಯ ದೃಷ್ಟಿಯಿಂದ ಇದೊಂದು ಸಹಾಯಕರವಾದ ಘೋಷಣೆಯೆಂದೇ ಹೇಳಬಹುದು.

ದಕ್ಷಿಣ ಮಂಡಲದಲ್ಲಿ ಒಂದು ಭಾಗವಾದ ಕನ್ನಡನಾಡು, ತನ್ನ ತಾಳ್ಮೆ ಮತ್ತು ಗರಿಮೆಗಳ ಸಲುವಾಗಿ ಹೆಸರಾಗಿದ್ದರೂ, ಹೊರಗೆ ಹೋಗಿ ನೆಲಸಿದ ಕನ್ನಡಿಗರು ಸಾಂಸ್ಕೃತಿಕ ಸಾಮರಸ್ಯದ ದೃಷ್ಟಿಯಿಂದ ಅನ್ಯರೊಡನೆ ವಿಲೀನ ಹೊಂದಿ ಹೋಗಿದ್ದುದು ಕೆಲವೊಂದು ಸಲ ಅಭಿಮಾನದ ಅಭಾವ ಮತ್ತು ವೈಶಿಷ್ಟ್ಯಗಳ ದುರ್ಲಕ್ಷ್ಯ ಎಂದು ತೋರುತ್ತಿದೆ, ಉತ್ತರದ ಸೀಮೆಯಲ್ಲಿ ಮಹಾರಾಷ್ಟ್ರ ಪ್ರದೇಶದ ಸ್ಥಳಗಳಲ್ಲಿ ಹೋಗಿ ನೆಲಸಿದ ಕನ್ನಡಿಗರು ತಮ್ಮ ಭಿನ್ನ ಸಂಸ್ಕೃತಿಯ ಕಾರಣವಾಗಿ ಮತ್ತು ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವನ್ನು ಕಾಪಾಡಿ ಕೊಳ್ಳುವುದಕ್ಕಾಗಿ ಸಾಂಘಿಕ ಪ್ರಯತ್ನವನ್ನು ಹೆಚ್ಚಾಗಿ ಮಾಡಿರುವುದೇನೊ ಸರಿ, ಆದರೂ ಕೆಲವು ಸಾರೆ ಅವರು ಅನುಕರಣದ ಪ್ರಭಾವದಲ್ಲಿ ಇಲ್ಲವೆ ಅಲ್ಪ ಪ್ರಮಾಣದ ರೂಪದಲ್ಲಿ ಮುಂದುವರಿದುದರಿಂದ ಅಲ್ಲಿಯೂ ಹೊರನಾಡ ಕನ್ನಡಿಗರು ಸಾಕಷ್ಟು ವರ್ಚಸ್ಸನ್ನು ಬೀರಿಲ್ಲ, ಸಾಂಸ್ಕೃತಿಕ ಸಂಪ್ರದಾಯಗಳನ್ನು ಹಾಕಿ ತೋರಿಸಿಲ್ಲ

ಪರಂತು ಈ ಎಲ್ಲ ಸೀಮೆಗಳಲ್ಲಿ ಕನ್ನಡಿಗರು ಹೆಚ್ಚಾಗಿ ಕಂಡು ಬರುವದು ಮತ್ತು ಅಲ್ಲಿ ಸಂಘಟಿತ ಪ್ರಯತ್ನದಿಂದ ತಮ್ಮ ಉತ್ಕರ್ಷಕ್ಕಾಗಿ ಹೆಣಗುತ್ತಿರುವುದು ಗೋಚರಿಸುತ್ತಿದೆ ಅಂತೆಯೆ ಇಲ್ಲಿಯವರೆಗೆ ನಡೆದ ಹೊರನಾಡ ಕನ್ನಡಿಗರ ಸಮ್ಮೇಳನದಲ್ಲಿ ಆರಂಭದ ಅಧಿವೇಶನವನ್ನು ಸೇರಿ—ನಾಲ್ಕೈದು ಸಾರೆ ಈ ಪ್ರದೇಶದಲ್ಲಿ ಸಮ್ಮೇಳನಗಳನ್ನು ಜರುಗಿಸುವದು ಸುಲಭವಾಯಿತು.

ಇತ್ತೀಚೆಗೆ ಉತ್ತರ ಭಾರತದಲ್ಲಿ—ಸ್ವಾತಂತ್ರ್ಯ ನಂತರದ ವಾತಾವರಣದಲ್ಲಿ ಹೆಚ್ಚು ಜನ ಕನ್ನಡಿಗರು ಕಾಣುತ್ತಿದ್ದಾರೆ. ಮತ್ತು ಅವರ ಸಾಂಸ್ಕೃತಿಕವಾಗಿ ತಾಯಿನಾಡಿನಿಂದ ಅತಿ ದೂರ ಇರುವುದರಿಂದ ಸ್ವಾಭಾವಿಕವಾಗಿಯೆ ತಮ್ಮ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು—ಹಬ್ಬ—ಹರಿದಿನಗಳನ್ನು ಆಚರಿಸುತ್ತ ನಡೆದಿದ್ದಾರೆ. ಅದರ ಫಲವೆಂದೇ ಇತ್ತೀಚೆಗೆ ಜರುಗಿದ ಎಲ್ಲ ಹೊರನಾಡ ಕನ್ನಡಿಗರ ಸಮ್ಮೇಳನಗಳು ಅಮಿತವಾದ ಉತ್ಸಾಹದಿಂದ ಉತ್ತರ ಭಾರತದ ಕೇಂದ್ರಗಳಲ್ಲಿಯೇ ನಡೆದಿವೆ.

ಆದರೆ ಈ ವರ್ಷ ಪೂರ್ವ ಭಾರತದಲ್ಲಿ ಎರಡನೆಯ ಸಮ್ಮೇಳನವು ಜರುಗಲಿದೆ, ಮೊದಲನೆಯದು ಪುಣ್ಯ ಕಾಶಿಯಲ್ಲಿ ಜರಗಿತು-೧೯೪೮ನೆಯ ಇಸವಿಯಲ್ಲಿ! ಕಾಶಿಯಲ್ಲಿ ಕನ್ನಡಿಗರು ಮೊದಲಿನಿಂದ ಧರ್ಮದ ಮತ್ತು ಜ್ಞಾನದ ಒಂದು ವಿಶ್ವಕೇಂದ್ರವೆಂಬ ಸಂಬಂಧದಿಂದ ವಾಸಿಸಿರುತ್ತಾರೆ ಅಂತೆಯೇ ಕಾಶಿಯಲ್ಲಿ ಸಮ್ಮೇಳನವು ಜರುಗಿ ಅದರ ಅಧಿವೇಶನದಲ್ಲಿ ಹೊರನಾಡ ಕನ್ನಡಿಗರ ಸಂಸ್ಥೆಗೊಂದು ಸಂವಿಧಾನವು ದೊರೆತು—ಈ ಕಾರ್ಯವು ಮತ್ತೆ ಕುದುರಿಸಿತು; ಚೇತರಿಸಿಕೊಂಡು ಮುಂದುವರಿಯಿತು.

(೧೨ನೇ ಪುಟ ನೋಡಿರಿ)

31 ವರುಷಗಳ
ನಿರಂತರ ಸೇವೆ

ಒಟ್ಟು ಚಲಾವಣಾ ಸಂಪತ್ತು

ದಶಂಬರ 31, 1926 ರೂ 17,355/-
ದಶಂಬರ 31, 1936 ರೂ. 35,45,544/-
ದಶಂಬರ 31, 1946 ರೂ 4,26,07,093/-
ದಶಂಬರ 31,1955 ರೂ. 8,70,31,700/-
ಮಾರ್ಚಿ 1,1956 ರೂ. 9/-ಕೋಟಿಗೂ ಮಿಕ್ಕಿ

ಸಿಂಡಿಕೇಟಿನಲ್ಲಿ ಜನತೆ ವ್ಯಕ್ತಪಡಿಸುತ್ತಿರುವ ಅತುಲ ದೃಢವಿಶ್ವಾಸವೇ ಇಷ್ಟೊಂದು ಅಲ್ಪ ಸಮಯದಲ್ಲಿ ಬೇಂಕಿನ ಶೀಘ್ರ ಬೆಳವಣಿಗೆಗೆ ಕಾರಣವಾಯಿತು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ ಉಡುಪಿ, ದ ಭಾರತ

ವಾರ್ಷಿಕ ಚಂದಾ: ರೂ.೫—೧೨—೦

NAVAYUGA WEEKLY, UDIPI.

ಬಿಡಿ ಸಂಚಿಕೆ ಎರಡಾಣೆ

ಮದ್ರಾಸು ರಾಜ್ಯದಲ್ಲಿ ಗ್ರಾಮಾಭಿವೃದ್ಧಿ ಕಾರ್ಯಕ್ರಮ

ಹಳ್ಳಿಗಳ ಪುನರುಜ್ಜೀವನದಲ್ಲಿ ಕೈಗೂಡಿಸಿದ ಯಶಸ್ಸು

ಭಾರತದಲ್ಲಿ ಸ್ವಾತಂತ್ರ್ಯಾನಂತರ ನಡೆದ ಅಭಿವೃದ್ಧಿ ಕಾರ್ಯಕ್ರಮಗಳಲ್ಲೆಲ್ಲ ಸಮಾಜವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹೊಂದಿದ ಬೆಳವಣಿಗೆಯೇ ಉಲ್ಲೇಖನೀಯವಾದುದೆನ್ನಲಾಗುತ್ತದೆ. ಸಂದರ್ಶಕರನ್ನು ಈ ಅಭಿವೃದ್ಧಿ ಪ್ರದೇಶಗಳಲ್ಲೆಲ್ಲ ಸುತ್ತಾಡಿಸಿಕೊಂಡು ಬರುವುದರಲ್ಲಿಯೂ ಅವರಿಗೆ ಅಲ್ಲಿ ನಡೆಯುತ್ತಿರುವ ಕೆಲಸಗಳನ್ನು ವಿವರಿಸುವುದರಲ್ಲಿಯೂ ಹಳ್ಳಿಗಳ ಪುನರುಜ್ಜೀವನದ ಬಗ್ಗೆ ಕೈಗೊಳ್ಳಲಾದ ಹೊಸ ವಿಧಾನಗಳನ್ನು ವರ್ಣಿಸುವುದರಲ್ಲಿಯೂ ಸರಕಾರವು ಹೆಚ್ಚಿನ ಅಭಿಮಾನವನ್ನು ಪಡೆದಿರುತ್ತದೆ.

ಈ ಅಭಿವೃದ್ಧಿ ಕಾರ್ಯಕ್ರಮಗಳ ವೈಶಿಷ್ಟ್ಯವು ಇಟ್ಟುಕೊಂಡ ಗುರಿ ಮತ್ತು ಸಾಧಿಸಿದ ಫಲಿತಾಂಶಗಳಿಗಿಂತಲೂ— ಎಂದರೆ ತೋರಿಕೆಯ ಸಾಧನೆ ಅಥವಾ ಹಣಕಾಸಿನ ಮೊತ್ತಕ್ಕಿಂತಲೂ-ಸಾಮಾಜಿಕ ಹಾಗು ಮನೋವೈಜ್ಞಾನಿಕ ಪರಿವರ್ತನೆಯನ್ನು ಮಾಡುವುದರಲ್ಲಿದೆ ಎನ್ನಬಹುದು. ಎಲ್ಲ ಪ್ರಯತ್ನಗಳ ಒಟ್ಟು ಉದ್ದೇಶವು ಹಳ್ಳಿಗಳಲ್ಲಿ ಹೊಸ ಪ್ರಕಾಶವನ್ನು ಚೆಲ್ಲುವುದಾಗಿದೆ; ಅಲ್ಲಿಯ ಜನರಲ್ಲಿ ಸಾಮೂಹಿಕ ಸಹಕಾರದ ಭಾವನೆಯನ್ನು ಪೋಷಿಸುವುದಾಗಿದೆ; ಸ್ವಾವಲಂಬನೆಯ ತಳಹದಿಯ ಮೇಲೆ ಉತ್ತಮ ಗ್ರಾಮೀಣ ಸಮಾಜವನ್ನು ನೆಲೆಗೊಳಿಸುವುದಾಗಿದೆ.

ಇದಕ್ಕಾಗಿ ರೂಪಿಸಲಾದ ಕಾರ್ಯಕ್ರಮವು ಗ್ರಾಮೀಣ ಜೀವನದ ಹಲವು ರಂಗಗಳನ್ನು— ಅಂದರೆ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ವ್ಯವಸಾಯಿಕ ಇತ್ಯಾದಿ— ವ್ಯಾಪಿಸುತ್ತದೆ. ಮುಖ್ಯ ಉದ್ದೇಶದ ಸಾಮಾನ್ಯ ಚೌಕಟ್ಟಿಗೆ ಒಳಪಟ್ಟಿದ್ದಂತೆಯೇ ಈ ಕಾರ್ಯಕ್ರಮವು ಸ್ಥಳೀಯ ಪರಿಸ್ಥಿತಿ ಮತ್ತು ಆವಶ್ಯಕತೆಗಳಿಗನುಸಾರವಾಗಿ ಪ್ರಾಶಸ್ತ್ಯಾನುಕ್ರಮವನ್ನು ನಿರ್ಣಯಿಸುವ ಮಟ್ಟಿಗೆ ಬದಲಾವಣೆಗೆ ಎಡೆಯನ್ನು ಕೊಟ್ಟಿರುತ್ತದೆ.

ಮದ್ರಾಸು ರಾಜ್ಯದಲ್ಲಿ ನಾಲ್ಕು ಸಮಾಜ ವಿಕಾಸ ಯೋಜನೆಯ ವಲಯಗಳಿವೆ. ಇವು ಮಧುರೆ, ಕೊಯಮುತ್ತೂರು, ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿವೆ. ಇವೆಲ್ಲ ವಲಯಗಳು ನೀರಾವರಿಯ ಉತ್ತಮ ಸೌಕರ್ಯಗಳಿರುವ ಮತ್ತು ಹಳ್ಳಿಗಳ ಅಭಿವೃದ್ಧಿಯ ಮಟ್ಟಿಗೆ ಕ್ಷಿಪ್ರ ಹಾಗು ಪರಿಣಾಮಕಾರಿಯಾದ ಫಲಿತಾಂಶಗಳನ್ನು ತೋರ್ಪಡಿಸುವ ಸೌಕರ್ಯಗಳುಳ್ಳ ಪ್ರದೇಶಗಳಲ್ಲಿವೆ.

ಮಧುರೆಯಲ್ಲಿ ನೀರಾವರಿಯ ಅನುಕೂಲತೆಯಿರುವ ಪೆರಿಯಾರ ಪ್ರದೇಶ, ಕೊಯಮುತ್ತೂರಿನಲ್ಲಿ ಕೆಳಭವಾನಿ ಅಣೆಕಟ್ಟಿನ ಪ್ರದೇಶ, ಮಲಬಾರಿನಲ್ಲಿ ಮಾಲಂಪುಜ ಅಣೆಕಟ್ಟಿನ ಪ್ರದೇಶ ದಕ್ಷಿಣ ಕನ್ನಡದ ಮಂಗಳೂರು— ಉಡುಪಿ—ಕಾರ್ಕಳ ತಾಲೂಕುಗಳ ಪ್ರದೇಶಗಳೇ ಚಟುವಟಿಕೆಯ ಕೇಂದ್ರ ಸ್ಥಾನವಿಲ್ಲಿ ಸಮಾಜ ವಿಕಾಸ ಯೋಜನೆಯು ಅನ್ವಯವಾಗದ ಕಡೆಗಳಲ್ಲಿ ರಾಷ್ಟ್ರೀಯ ವಿಸ್ತರಣೆ ಮತ್ತು ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳು ಅನ್ವಯಗೊಂಡಿರುತ್ತವೆ.

ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿರುವ ಪ್ರದೇಶಗಳನ್ನು ಬಿಟ್ಟರೆ ಬೇರೆ ಬಗೆಯ ಪುನರುಜ್ಜೀವನದ ಪ್ರಯತ್ನಗಳು— ಸರಕಾರದ ಅಂಕೆ ಸಂಖ್ಯೆಗಳಿಗನುಸಾರವಾಗಿ— ಕೊಯಮುತ್ತೂರು ಜಿಲ್ಲೆಯ ೩೩೨ ಹಳ್ಳಿಗಳ ೧೦ ಲಕ್ಷ ಜನರಿಗೆ, ಮಲಬಾರಿನ ೨೦೭ ಹಳ್ಳಿಗಳ ೧೨ ಲಕ್ಷ ಜನರಿಗೆ, ದಕ್ಷಿಣ ಕನ್ನಡದ ೪೫೩ ಹಳ್ಳಿಗಳ ೯ ಲಕ್ಷ ಜನರಿಗೆ ಪ್ರಯೋಜನವನ್ನು ತಂದಿರುತ್ತವೆ. ಪ್ರತಿಯೊಂದೂ ವಲಯಕ್ಕೆ ೬೫ರಿಂದ ೭೦ ಲಕ್ಷ ರೂಪಾಯಿಯ ಲೆಕ್ಕದಲ್ಲಿ ಒಟ್ಟಿಗೆ ೨೭೫ ಲಕ್ಷ ರೂಪಾಯಿ ಹಣವನ್ನು ಒದಗಿಸಲಾಗಿದೆ. ೨೮ ಲಕ್ಷ ರೂಪಾಯಿಗಳನ್ನು ನಗದಿಯಾಗಿಯೂ ೪೫ ಲಕ್ಷ ರೂಪಾಯಿಗಳಷ್ಟು ಶ್ರಮದಾನದಿಂದಲೂ ಅಂತೂ ಒಟ್ಟಾರೆ ೭೫ ಲಕ್ಷ ರೂಪಾಯಿಗಳಷ್ಟು ಹಣವನ್ನು ಜನರೇ ಈ ಪ್ರದೇಶಗಳ ಅಭಿವೃದ್ಧಿಗೆ ನೀಡಿದ್ದಾರೆ.

ಇಷ್ಟರವರೆಗೆ ಕ್ಷೀಣ ನೆಲವಾಗಿದ್ದ ಪ್ರದೇಶಕ್ಕೆ ಸಾಕಷ್ಟು ವಿಸ್ತೃತ ಪ್ರಮಾಣದಲ್ಲಿ ನೀರಾವರಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಂತೆಯೆ ಕೆಳ ಭವಾನಿ ಯೋಜನೆಯು ಬೇರೆ ಕೆಲವು ಸಮಸ್ಯೆಗಳನ್ನೂ ತಂದೊಡ್ಡಿತು. ಜಲಾಶಯ ಹಾಗು ಕಾಲುವೆಗಳ ದೆಸೆಯಿಂದ ನೆಲದಲ್ಲಿ ನೀರೊಸರ ಹೆಚ್ಚಿದ ಹಳ್ಳಿಗಳಲ್ಲಿ ಜನರಿಗೆ ಯೋಗ್ಯ ಮನೆಗಳನ್ನು ಕಟ್ಟಿಸಿಕೊಡುವುದೇ ಇವುಗಳಲ್ಲೆಲ್ಲ ಮುಖ್ಯ. ಹಳ್ಳಿಗಳ ಮಧ್ಯದಲ್ಲಿಯೇ ದೊಡ್ಡ ತೋಡುಗಳಾಗಿ ಹರಿಯತೊಡಗಿದ ಈ ಒಸರು ನೀರಿನಿಂದ ತಗ್ಗು ನೆಲದಲ್ಲಿದ್ದ ಹರಿಜನರಿಗೂ ಇತರ ಕೆಳವರ್ಗದ ಜನರಿಗೂ ಸಹಾಯ ಅತ್ಯವಶ್ಯವಾಯಿತು.

ಹೀಗೆ ಇವರನ್ನೆಲ್ಲ ಹೊಸ ಮನೆಗಳಲ್ಲಿ ನೆಲೆಗೊಳಿಸುವುದು ತುರ್ತಿನ ಹಾಗು ಅನಿವಾರ್ಯವಾದ ಕೆಲಸವಾಗಿ ಪರಿಣಮಿಸಿದೆ. ಅನೇಕ ಹಳ್ಳಿಗಳಲ್ಲೀಗ ಈ ಕಾರ್ಯವು ಭರದಿಂದ ಮುನ್ನಡೆಯುತ್ತಿದೆ. ಅವರಂಗತ್ತೂರಿನಲ್ಲಿ ನಾವು ಹರಿಜನರಿಗಾಗಿ ಮನೆ ಕಟ್ಟುವ ಉತ್ತಮ ಮಾದರಿಯನ್ನು ನೋಡಿದೆವು. ಊರಿಗೆ ಹತ್ತಿರದಲ್ಲಿಯೇ ಸರಕಾರದಿಂದ ಪಡೆದ ಎತ್ತರ ಸ್ಥಳದಲ್ಲಿ ಗಟ್ಟಿಮುಟ್ಟಾದ ಮನೆಗಳನ್ನು ಹರಿಜನರಿಗಾಗಿ ಇಲ್ಲಿ ಕಟ್ಟಲಾಗುತ್ತಿದೆ. ಉತ್ತಮ ಕೇರಿಯು ಇಲ್ಲಿ ಏಳುತ್ತಲಿದ್ದು ಸ್ವೇಚ್ಛೆಯ ಸಹಕಾರವು ಹರಿಜನರಿಂದ ಈ ಕೆಲಸದಲ್ಲಿ ಸಿಗುತ್ತಲಿದೆ.

ಸುಪ್ರಸಿದ್ಧ ಜಾನುವಾರು ಕೇಂದ್ರವಾದ ಪಳಯಕೊಟ್ಟೈಗೆ ಹತ್ತಿರದ ಮೇಳಪಾಳಯಂದಲ್ಲಿ ತುಸು ಭಿನ್ನವಾದ ಗೃಹ ನಿರ್ಮಾಣ ಕಾರ್ಯ ನಡೆದಿದೆ. ಒಸರು ನೀರಿನಿಂದ ದುರವಸ್ಥೆಗೀಡಾದ ಕುಶಲ ಕಲಾವಿದರ ಹಾಗು ಗ್ರಾಮೀಣ ಕೆಲಸಗಾರರ ಕುಟುಂಬಗಳಿಗಾಗಿ ೬೨ ಮನೆಗಳನ್ನು ಕಟ್ಟಿಸಲು ಪಳಯಕೊಟ್ಟೈಯ ಪಟ್ಟಾದಾರರು ೧೨ ಎಕ್ರೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ. ಕಟ್ಟಲಾದ ಮನೆಗಳೆಲ್ಲ ತುಂಬ ವಿಶಾಲವಾಗಿವೆ ಮತ್ತು ನೀರಿನ ಪೂರೈಕೆಯಿಂದಲೂ ಚರಂಡಿ ವ್ಯವಸ್ಥೆಯಿಂದಲೂ ಕೂಡಿವೆ. ಈ ಕೇರಿಯ ಮಕ್ಕಳಿಗಾಗಿ ಒಂದು ಶಾಲೆಯನ್ನು ಸಹ ಇಲ್ಲಿ ಕಟ್ಟಲಾಗುತ್ತದೆ.

ಈ ಸಂದರ್ಭದಲ್ಲಿ ನಾನು ಪೆರುಂದುರೈಗೆ ಹತ್ತಿರದ ಸ್ವಾಮಿ ಗೌಂಡನ ಪಾಳಯಂದಲ್ಲಿ ಉಚ್ಚ ವರ್ಣದ ಹಿಂದುಗಳು ಸನಾತನ ಯುಗದ ಅಂಥ ಸಂಪ್ರದಾಯಗಳನ್ನೂ ಹೇವರಿಕೆಯನ್ನೂ ಬಿಟ್ಟುಕೊಟ್ಟು ತಮ್ಮ ಕೇರಿಗೆ ತೀರ ಸಮೀಪದಲ್ಲಿಯೇ ಹರಿಜನರಿಗಾಗಿ ಒಂದು ಕೇರಿಯನ್ನು ರಚಿಸಲು ಬಹಳವಾಗಿ ನೆರವಾಗುತ್ತಿರುವುದನ್ನು ಕಂಡೆನೆಂದು ಹೇಳದಿರುವಂತಿಲ್ಲ. ಈ ಹತ್ತು-ಹನ್ನೆರಡೂ ಮನೆಗಳು ಸೊಗಸಾಗಿವೆ; ಕುಡಿಯುವ ನೀರಿನ ಬಾವಿ ಕೊಳಚೆ ನೀರು ಹೋಗಲು ಚರಂಡಿ ಇತ್ಯಾದಿಗಳಿಂದ ಸಜ್ಜುಗೊಂಡಿವೆ. ಈ ಕೆಲಸಕ್ಕಾಗಿ ಹರಿಜನರು ತುಂಬ ಹೊಗಳುತ್ತಾರೆ, ಮತ್ತು ಕೃತಜ್ಞತೆಯನ್ನು ವ್ಯ ಪಡಿಸುತ್ತಿದ್ದಾರೆ.

ಕೊಯಮುತ್ತೂರು ಜಿಲ್ಲೆಯ ಜಿ ಚಟುವಟಿಕೆಗಳು ಸಾಮಾನ್ಯ ಆರೋ ಮತ್ತು ನೈರ್ಮಲ್ಯ ರಕ್ಷಣೆಗೂ ನೀ ವರಿ ಸೌಕರ್ಯಗಳ ಅಭಿವೃದ್ಧಿಗ ಉತ್ತಮ ಕೃಷಿ, ಜಾನುವಾರುಗಳ ತ ಸುಧಾರಣೆ ಇತ್ಯಾದಿಗಳಿಗೂ ಸಂಬಂ ಸಿವೆ ಅತ್ಯುತ್ತಮ ಕಂಗಾಯಂ ಬೀಜ ತಳಿಗೆ ಹೆಸರಾದ ಅನೇಕ ಹಳ್ಳಿ ಪ್ರದೇ ಗಳಲ್ಲಿ ಜಾನುವಾರುಗಳಿಗಾಗಿ ಆರೋ ರಕ್ಷಣೆಯ ವ್ಯವಸ್ಥೆಯೂ ಕೇಂದ್ರ ಹಳ್ಳಿ ವ್ಯವಸ್ಥೆಯ ಮೂಲಕ ಉತ್ತಮ ತ ಸುಧಾರಣೆ ಮತ್ತು ಕೃತಕ ಗರ್ಭಾಧಾರಣೆಯ ಸೌಲಭ್ಯವೂ ನಡೆಯುತ್ತಲಿದೆ.

ಶಾಲೆಯ ಮಕ್ಕಳಿಗಾಗಿ ಮನೆ ರಂಜನೆಯ ಕೇಂದ್ರಗಳು, ಸುಧಾ ಬೀಜ ಮತ್ತು ರಾಸಾಯನಿಕ ಫಲವ ಕ ಗೊಬ್ಬರಗಳ ಪ್ರಚಾರ, ಕ್ರಿಮಿಕೀ ಗಳಿಂದ ಫಸಲಿನ ರಕ್ಷಣೆ ಮಾಡುವ ಕ್ರ ಮಗಳ ವಿವರಣೆ— ಇತ್ಯಾದಿ ಇಲ್ಲಿಯ ಬೇರೆ ಚಟುವಟಿಕೆಗಳಾಗಿವೆ. ಇಷ್ಟರವರೆಗಿನ ಕೆಲಸವು ಒಳ್ಳೆಯ ಫಲಿತಾಂಶಗಳನ್ನು ಕೊಟ್ಟಿದೆಯೆಂದೂ ನಿಧಾನವಾಗಿಯಾದರೂ ಬೇರೆ ಹಳ್ಳಿಗಳಿಗೆ ಈ ಚಟುವಟಿಕೆಗಳನ್ನು ವಿಸ್ತರಿಸಬೇಕೆಂದು ಬೇಡಿಕೆ ಬರುತ್ತಿದೆಯೆಂದೂ ನಮಗೆ ಹೇಳಲಾಯಿತು.

ಸನಾತನ ಸಂಪ್ರದಾಯದ ನಂಬೂದ್ರಿ ಬ್ರಾಹ್ಮಣನೊಬ್ಬನು ಹರಿಜನೋದ್ಧಾರಕ್ಕೆ ಸಂಬಂಧಪಟ್ಟ ಸಾಮಾಜಿಕ ಸೇವೆಯಲ್ಲಿ ಹೆಚ್ಚಿನ ಆಸಕ್ತಿಯಿಂದ ಭಾಗವಹಿಸುತ್ತಿರುವ ಇನ್ನೊಂದು ಉದಾಹರಣೆಯು ನಮಗೆ ಮಲಬಾರಿನ ಪೆರುಂಗೊಟ್ಟುಕುರಿಸಿಯಲ್ಲಿ ನೋಡಸಿಕ್ಕಿತು. ಇಲ್ಲಿ ಕೆಲವೇ ಸಮಯಕ್ಕೆ ಹಿಂದೆ ಅಸ್ಪೃಶ್ಯತೆಯನ್ನು ಅದರ ತೀರ ಕೆಟ್ಟ ರೂಪದಲ್ಲಿ ನೋಡಬಹುದಾಗಿದ್ದಿತು. ಈ ಕೆಡುಕು ಎಷ್ಟು ಪ್ರಬಲಿಸಿತ್ತೆಂದರೆ ಹರಿಜನರಲ್ಲಿ ಕೆಲವರನ್ನು ನೋಡುವುದು ಸಹ ನಿಷಿದ್ಧವೆಂದು ಭಾವಿಸುತ್ತಿದ್ದವರಿದ್ದರು. ಅವರೆ ಈ ಪ್ರದೇಶದಲ್ಲಿ ನಾರಾಯಣನ್ ನಂಬೂದ್ರಿ ಪಾದರೆಂಬ ಆ ಮಹನೀಯರಿಂದ ಹರಿಜನೋದ್ಧಾರಕ್ಕಾಗಿ ಸಂದ ಸೇವೆಯು ಕ್ಷುಲ್ಲಕವಾದುದಲ್ಲ.

ಆಯಾಯ ಸ್ಥಳದ ಆವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಲಬಾರಿನಲ್ಲಿ ಕೆಲಸ ನಡೆಸಲಾಗಿದೆ. ಉದಾಹರಣೆಗೆ,

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0

ಸಣ್ಣ ಬಾಟ್ಲಿಗೆ ರೂ. 2—0 –0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ಪಾಕೆಟ್ ಡಾಕ್ಟರ್

ಪರಮಾಣು ಯುಗದ ಭಯಕಾರಕ ವಾತಾವರಣ

ರಾಜಕೀಯ ಮೂರ್ಖರ ಕಾರ್ಯದಿಂದಾಗುವ ಅನಾಹುತ

ಇದೇ ಎಪ್ರೀಲಿನ ಮೊದಲನೇ ವಾರದಲ್ಲಿ ರಶ್ಯವು ಕಳೆದ ಎಂಟು ತಿಂಗಳಲ್ಲಿ ಇದೀಗ ಆರನೇ ಸಲ ಜಲಜನಕ ಬಾಂಬಿನ ಸ್ಫೋಟನ ನಡೆಸಿದ ವಾರ್ತೆಯು ಪ್ರಕಟವಾಯಿತು. ಅಷ್ಟು ಹೊತ್ತಿಗಾಗಲೇ ಅಮೇರಿಕವು ಇದೇ ಎಪ್ರೀಲಿನ ೨ನೇ ದಿನಾಂಕದ ಬಳಿಕ ಬಹಳ ಬೇಗನೆ ಒಂದು ಸುಮುಹೂರ್ತವನ್ನು ನೋಡಿ ಶಾಂತ ಸಾಗರದ ಮಾರ್ಶಲ್ ದ್ವೀಪ ಸಮುದಾಯದಲ್ಲಿ ಜಲಜನಕ ಬಾಂಬು ಸ್ಫೋಟನ ಪ್ರಯೋಗ ನಡೆಸುವ ವಿಷಯ ಬಹಿರಂಗಗೊಂಡಿತ್ತು. ಆಸ್ಟ್ರೇಲಿಯದ ಕರಾವಳಿಗೆ ಹತ್ತಿರದ ಮೊಂಟಿಬೆಲ್ಲೋ ದ್ವೀಪಗಳಲ್ಲಿ ಬ್ರಿಟನು ಇದೇ ಮಾದರಿಯ ಸ್ಫೋಟನ ಪ್ರಯೋಗ ನಡೆಸುವುದೆಂದೂ ಈಗ ತಿಳಿದು ಬಂದಿದೆ.

ರಶಿಯವು ಬಾಯುಪಚಾರಕ್ಕಾದರೂ "ಅಣವಿಕ ಶಸ್ತ್ರಗಳ ಸ್ಫೋಟನ ಪ್ರಯೋಗವನ್ನು ಬಹಿಷ್ಕರಿಸಬೇಕು" ಎಂಬ ಭಾರತದ ನಿಲುವನ್ನೀಗ ಪುನರುಚ್ಚರಿಸುತ್ತಿದೆ; ಆದರೆ ರಾಜಗೋಪಾಲಾಚಾರಿಯವರು ಹೇಳುವಂತೆ ಏಕಪಕ್ಷೀಯವಾಗಿ ಅಣವಿಕ ಶಸ್ತ್ರಗಳ ಉತ್ಪಾದನೆ ಮತ್ತು ಸ್ಫೋಟನ ಪ್ರಯೋಗಗಳನ್ನು ನಿಲ್ಲಿಸುವುದು ಸಾಧ್ಯವಿಲ್ಲ ಎಂದಿದೆ. ರಶಿಯವನ್ನೊಳಗೊಂಡು ಎಲ್ಲ ಪ್ರಬಲ ಪಾಶ್ಚಾತ್ಯ ರಾಷ್ಟ್ರಗಳೂ ನಿಶ್ಶಸ್ತ್ರೀಕರಣದ ಕುರಿತು ದೀರ್ಘ ಸಮಾಲೋಚನೆಗಳನ್ನೇನೊ ನಡೆಸುತ್ತಿವೆ: ಆದರೆ ಅನಾಹುತಗಳ ದೀರ್ಘ ಪರಂಪರೆಗೆ ಜನ್ಮಕೊಡುವ ಅಣವಿಕ ಶಸ್ತ್ರಗಳ ವಿಷಯದಲ್ಲಿ ಯಾವುದೇ ಸಂತೋಷಜನಕ ನಿರ್ಣಯವನ್ನು ಈ ಸಮಾಲೋಚನೆಗಳು ಇಷ್ಟರವರೆಗೆ ತಂದಿಲ್ಲ.

ಅಣವಿಕ ಶಸ್ತ್ರಗಳ ಉತ್ಪಾದನೆ ಮತ್ತು ಸ್ಫೋಟನ ಪ್ರಯೋಗಗಳನ್ನು ನಡೆಸುವುದು ತೀರ ಅನಿವಾರ್ಯವಾಗಿದೆ ಎಂದು ಅಮೇರಿಕದ ಅಭಿಪ್ರಾಯ. "ನಮ್ಮ ಜನರ ಮಟ್ಟಿಗಷ್ಟೇ ಅಲ್ಲ, ಸ್ವತಂತ್ರ ಜಗತ್ತಿನ ಎಲ್ಲ ಜನರ ವಿಷಯದಲ್ಲಿ ಸಹ ಅಮೇರಿಕಕ್ಕೆ ಒಂದು ಹೊಣೆಗಾರಿಕೆಯಿದೆ—ಆಕ್ರಮಣದ ಸಂಭವವನ್ನು ಕಡಿಮೆ ಮಾಡಿ ಶಾಂತಿಯನ್ನು ರಕ್ಷಿಸಲು ತನ್ನ ಶಕ್ತಿ ಸಾಮರ್ಥ್ಯಗಳನ್ನು ಅತಿ ಹೆಚ್ಚಿನ ಮಟ್ಟದಲ್ಲಿಡುವುದೇ ಆ ಜವಾಬ್ದಾರಿ" ಎಂದು ಮೊನ್ನೆ ಅಮೇರಿಕದ ಸರಕಾರವು ಸಂಯುಕ್ತ ರಾಷ್ಟ್ರಸಂಘದ ವಿಶ್ವಸ್ತ ಸಮಿತಿಯ ಮುಂದೆ ಹೆಗ್ಗಳಿಕೆಯನ್ನು ಕೊಚ್ಚಿಕೊಂಡಿತು.

ವಿಶ್ವಸ್ತ ಸಮಿತಿಯು ಮಾರ್ಶಲ್ ದ್ವೀಪಗಳ ಜನರು ತಮ್ಮ ವಸತಿಯ ಈ ಪ್ರದೇಶದಲ್ಲಿ ಜಲಜನಕ ಬಾಂಬಿನ ಸ್ಫೋಟನ ಪ್ರಯೋಗ ನಡೆಸುವುದನ್ನು ಬಹಿಷ್ಕರಿಸಬೇಕು; ಅಥವಾ ಅದರಿಂದಾಗಬಹುದಾದ ಅಪಾಯಗಳ ವಿರುದ್ಧ ಯೋಗ್ಯ ರಕ್ಷಣೆಯನ್ನಾದರೂ ಒದಗಿಸಿಕೊಡಬೇಕು ಎಂದು ಮಾಡಿಕೊಂಡಿದ್ದ ಮನವಿಯನ್ನು ವಿಚಾರಿಸುತ್ತಿದ್ದಾಗ ಅಮೇರಿಕ ಹೇಳಿದ ಮಾತಿದು. ಪ್ರಯೋಗದ ಬಹಿಷ್ಕಾರವು ಎಷ್ಟಕ್ಕೂ ಸಾಧ್ಯವಿಲ್ಲವೆಂದು ಅಮೇರಿಕ ಹೇಳಿತು. ಆದಾಗ್ಯೂ ಎಲ್ಲ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಂಡು, ಜನರಿಗೆ ಅಪಾಯವಾಗದಂತೆ ನೋಡಿಕೊಳ್ಳುವ ಭರವಸೆಯನ್ನಿತ್ತಿತು.

ಭಾರತದ ಶ್ರೀ ಕೃಷ್ಣ ಮೆನೊನ್ನರೂ ಜೈಪಾಲರೂ ಯಾವುದೇ ಉದ್ದೇಶಕ್ಕೆ ಬೇಕಾಗಿರಲಿ, ಅಣವಿಕ ಶಸ್ತ್ರಗಳ ಸ್ಫೋಟನೆ ನಡೆಸುವುದನ್ನು ತಮ್ಮ ಸರಕಾರವು ವಿರೋಧಿಸುವುದೆಂದು ಹೇಳಿದರು. ವಿಶ್ವಸ್ತ ಪ್ರದೇಶದಲ್ಲಿ ಅಮೇರಿಕವು ಹಾವಳಿ ನಡೆಸಲು ಅಧಿಕಾರ ಹೊಂದಿದೆಯೇ ಎಂಬ ಕಾನೂನಿನ ಪ್ರಶ್ನೆಯ ಇತ್ಯರ್ಥದ ಮೇಲೆಯಲ್ಲ, ಮನುಷ್ಯ ಪ್ರಾಣಿಗಳ ಮೇಲೂ ಇತರ ಜೀವಜಂತುಗಳ ಮೇಲೂ ಈ ಸ್ಫೋಟನಗಳಿಂದಾಗುವ ಅನಾಹುತದ ಭೀಕರ ಸ್ವರೂಪದ ಮೇಲಿಂದ ಈ ವಿಷಯದ ಕುರಿತು ನಿರ್ಣಯ ತೆಗೆದುಕೊಳ್ಳಬೇಕಾಗಿದೆ ಎಂದು ಭಾರತದ ಪ್ರತಿನಿಧಿಗಳು ಹೇಳಿದರು.

ನಮ್ಮ ಪ್ರತಿನಿಧಿಗಳ ಮಾತಿಗೇನೂ ಬೆಲೆ ಬರಲಿಲ್ಲ— ಆದರೆ ರಾಜಕೀಯ ಜಂಜಡದಿಂದ ಹೊರಗುಳಿದ, ಅಣವಿಕ ಭೌತಶಾಸ್ತ್ರದಲ್ಲಿ ಸಂದೇಹಾತೀತವಾಗಿ ಪರಿಣತಿಯನ್ನು ಪಡೆದ, ಜಗತ್ತಿನಲ್ಲಿಯೇ ಮಾನ್ಯರಾದ ಒಂಭತ್ತು ಮಂದಿ ಶ್ರೇಷ್ಠ ವಿಜ್ಞಾನಿಗಳು ೧೯೫೫ನೇ ಜೂಲೈಯಲ್ಲಿ ಕೊಟ್ಟ ಸಂಯುಕ್ತ ಹೇಳಿಕೆಯು ಭಾರತವು ವ್ಯಕ್ತಪಡಿಸಿದ ಭಯವು ಸ್ವಕಪೋಲಕಲ್ಪಿತವಾದುದಲ್ಲವೆಂದೂ ಮಾನವತೆಯ ಹಿತಸಾಧಕರೂ ಲೋಕತಾರಕರೂ ಎನಿಸಿದ ಎಲ್ಲರೂ ಗಂಭೀರವಾಗಿ ಪರ್ಯಾಲೋಚಿಸಬೇಕಾದ ವಿಷಯವಿದೆಂದೂ ಸ್ಪಷ್ಟಪಡಿಸುತ್ತದೆ.

ಆಲ್ಬರ್ಟ್ ಐನ್‌ಸ್ಟೀನ್, ಎಚ್. ಜೆ. ಮುಲ್ಲರ್, ಜೋಲಿಯಟ್ ಕ್ಯೂರಿ, ಹೈಡೆಕಿ ಯುಕಾವ ಮತ್ತಿತರ ಅಂತಾರಾಷ್ಟ್ರೀಯ ಖ್ಯಾತಿಯ ಈ ವಿಜ್ಞಾನಿಗಳು ತಮ್ಮ ಹೇಳಿಕೆಯಲ್ಲಿ ಹೀಗೆಂದಿದ್ದರು-

"ಸಾಮಾನ್ಯ ಜನರು ಜಲಜನಕ ಬಾಂಬುಗಳ ಪ್ರಯೋಗದಿಂದ ಎಲ್ಲ ಬಾಂಬುಗಳಂತೆ—ಪಟ್ಟಣಗಳ ನಾಶವಾಗುವುದೆಂಬ ಮಿತವಾದ ತಿಳುವಳಿಕೆಯನ್ನಷ್ಟೆ ಹೊಂದಿದ್ದಾರೆ: ಪಟ್ಟಣಗಳು ಹೇಗೂ ನಾಶವಾಗುತ್ತವೆ; ಇದು ಸುಳ್ಳಲ್ಲ. ಆದರೆ ಅಣವಿಕ ಶಸ್ತ್ರಗಳ ಸ್ಫೋಟನೆಯು ಇದಕ್ಕಿಂತಲೂ ಹೆಚ್ಚು ದೂರಗಾಮಿಯಾದ, ಗಂಭೀರವಾದ ಅನಾಹುತಗಳನ್ನು ಮಾಡಿಬಿಡುತ್ತವೆ. ಮಾನವ ಜನಾಂಗದ ನಾಶವನ್ನೆ ಅದು ಮಾಡುವುದು ನಿಶ್ಚಯ."

ಅಣವಿಕ ಶಸ್ತ್ರಗಳ ಸ್ಫೋಟನೆಯಿಂದ ಕೂಡಲೇ ಮೃತಿಹೊಂದುವವರ ಸಂಖ್ಯೆಯು ಹೆಚ್ಚಿರಲಾರದ—ಯುದ್ಧ ಕಾಲದಲ್ಲಿಯಷ್ಟೇ ಪಟ್ಟಣಗಳ ನಾಶ ನಡೆದೀತು. ಆದರೆ, ಯುದ್ಧಕಾಲ ಅಥವಾ ಶಾಂತಿಕಾಲವೆಂಬ ತಾರತಮ್ಯ ಭಾವನೆಗೆ ಎಡೆಯಿಲ್ಲದೆ ಅಣವಿಕ ಶಸ್ತ್ರಗಳ ಸ್ಫೋಟನೆ ಯಾವಾಗಲೂ ಮಾಡುವ ಅನಾಹುತವು ಮಾನವತೆಯ ಹಿತದೃಷ್ಟಿಯಿಂದ ಅಕ್ಷಮ್ಯವಾಗಿದೆ. ಮನುಷ್ಯ ಸಹಿತನಾಗಿ ಎಲ್ಲ ಜೀವಿಗಳನ್ನೂ ಅನಂತಕಾಲದವರೆಗೆ ಈ ಸ್ಫೋಟನ ಕಾಲದಲ್ಲಿ ಉಂಟಾಗುವ ವಿಕಿರಣ ಶೀಲತೆಯು ಚಿತ್ರಹಿಂಸೆಗೆ ಗುರಿಮಾಡುತ್ತದೆ.

ಸ್ವಿಜರ ಲೇಂಡಿನ ಒಂದು ಪತ್ರಿಕೆಯ ವರದಿಯನ್ನು ನಂಬುವುದಾದರೆ, ಅಮೇರಿಕದ ವಿಜ್ಞಾನಿಗಳು ಈಗ ಜಲಜನಕ ಬಾಂಬಿನ ಸ್ಫೋಟನವನ್ನು ಕೆಲಮಟ್ಟಿಗೆ ನಿಯಂತ್ರಣಕ್ಕೆ ಗುರಿಪಡಿಸುವ ಉಪಾಯಗಳನ್ನು ಕಂಡು ಹಿಡಿದಿದ್ದಾರೆ. ಕ್ಷಣಮಾತ್ರದಲ್ಲಿಯೇ ಸ್ಫೋಟನವು ಉತ್ಪಾದಿಸುವ ೧೦ ಕೋಟಿ ಡಿಗ್ರಿಯಷ್ಟು ಉಷ್ಣತೆಯನ್ನು ನಿಯಂತ್ರಿಸುವ ಯೋಜನೆಯ ಹೊಳಹನ್ನು ಅವರು ಕಂಡ ಹಿಡಿದಿದ್ದಾರೆ. ಆದರೆ ಈ ಉಪಾಯವು ಇನ್ನೂ ಪ್ರಾಯೋಗಿಕಾವಸ್ಥೆಯಲ್ಲಿದೆ—ಇನ್ನೊಂದು ದರ್ಶಕವಾದರೂ ಅವರ ಯಶಸ್ಸಿನ ಬಗ್ಗೆ ದೃಢವಾದ ಅಭಿಪ್ರಾಯವನ್ನು ಹೊಂದಲು ಬೇಕಾಗಬಹುದು.

ಹೀಗಿರುತ್ತಾ ನಾವು ಈಗಲೂ ಇನ್ನು ಮುಂದೆಯೂ ಅಣವಿಕ ಶಸ್ತ್ರಗಳ ಪ್ರಯೋಗಗಳನ್ನು ನಡೆಸುತ್ತಾ ಹೋದರೆ, ಈ ಪರಿಸ್ಥಿತಿಯನ್ನು ಮುಂದುವರಿಯಗೊಟ್ಟರೆ, ನಾವು ಎಲ್ಲಿಗೆ ಮುಟ್ಟಬಹುದು? ಜಗತ್ತು ಈಗಾಗಲೇ ಇರುವತ್ತಕ್ಕಿಂತಲೂ ಹೆಚ್ಚು ಅಣವಿಕ ಶಸ್ತ್ರಗಳ ಸ್ಫೋಟನೆಯ ಅಪಾಯಗಳಿಗೆ ಬಲಿಯಾಗಿದೆ! ಈ ಬಲಿಯ ದಾರುಣವಾದ ಕತೆಯನ್ನು ಪ್ರಸಿದ್ಧ ವೈಜ್ಞಾನಿಕ ಪತ್ರಿಕೆಗಳೇ ಮನ ಕರಗುವಂತೆ ಬಣ್ಣಿಸುತ್ತಲಿವೆ. ಆದಾಗ್ಯೂ ರಾಜಕೀಯ ರಂಗದ ಸುಭಟರ ಕಲ್ಲೆದೆ ಕರಗುತ್ತಿಲ್ಲ

ಯುದ್ಧಾಸಕ್ತ ಅಥವಾ ಶಸ್ತ್ರ ಸ್ಪರ್ಧೆಯಲ್ಲಿ ನಿರತವಾದ ರಾಷ್ಟ್ರಗಳಿಗಷ್ಟೇ ಈ ಅಪಾಯ ಮಿತವಾಗಿಲ್ಲವೆಂಬುದನ್ನು ಮತ್ತು ಭಾರತದಂಥ ಪ್ರಾಚೀನ ಸಂಪ್ರದಾಯವು ಊರ್ಜಿತಾವಸ್ಥೆಯಲ್ಲಿರುವ ತಟಸ್ಥ ರಾಷ್ಟ್ರಕ್ಕೆ ಅಪಾಯ ಹೆಚ್ಚೆಂಬುದನ್ನು ಈ ವೈಜ್ಞಾನಿಕ ಸಮೀಕ್ಷೆಗಳು ಈಗಾಗಲೇ ರುಜುಪಡಿಸಿರುತ್ತವೆ. ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ಜಿನೇವದಲ್ಲಿ ಇತ್ತೀಚೆಗೆ ಜರಗಿದ ಜಗತ್ತಿನ ಅಣು ವಿಜ್ಞಾನಿಗಳ ಸಭೆಯು ಈ ಅಪಾಯಗಳ ನಿಯಂತ್ರಣ ಮಾಡುವ ಭಾವನೆಯು ಅಷ್ಟು ಬಲಯುತವಾದುದಲ್ಲ, ಫಲದಾಯಕವಲ್ಲ ಎಂಬುದನ್ನು ತೋರಿಸಿ ಕೊಟ್ಟಿರುತ್ತದೆ.

ಜಿನೇವದ ಸಮ್ಮೇಳನವು ಶಾಂತಿ ಕಾಲದ ಬಳಕೆಯಲ್ಲಿ ಸಹ ಅಣವಿಕ ಶಕ್ತಿಯ ವಿಕಿರಣ ಶೀಲತೆಯು ಅಪಾಯಕಾರಿ ಪರಿಣಾಮಗಳನ್ನು ಮಾಡಬಹುದೆಂಬ ಎಚ್ಚರಿಕೆಗೆ ಅವಕಾಶ ಕೊಟ್ಟಿದೆ; ಎಂದ ಮೇಲೆ ಬಾಂಬುಗಳನ್ನು ತಯಾರಿಸಿ ಲೋಕಶಾಂತಿಯನ್ನು ನೆಲೆಗೊಳಿಸುವೆವೆನ್ನುವ ರಾಜಕೀಯ ಧುರೀಣರನ್ನು ಮೂರ್ಖರ ಸಾಲಿಗೆ ಅಥವಾ ದೈತ್ಯರ ಸಾಲಿಗೆ ಸೇರಿಸದೆ ಇರುವುದೆಂತು? ಇತ್ತೀಚೆಗೆ ವೈದ್ಯ ಶಾಸ್ತ್ರದಲ್ಲಿ ಜನಪ್ರಿಯವಾದ ಕ್ಷ-ಕಿರಣಗಳ ಪ್ರಯೋಗ ಸಹ ಅಣವಿಕ ವಿಕಿರಣಶೀಲತೆಯ ದುಷ್ಪರಿಣಾಮಗಳನ್ನು ಮಾಡುವುದೆಂದು ತಿಳಿದುಬಂದಿರುವುದೆಂದ ಬಳಿಕ, ಜಲಜನಕ ಬಾಂಬುಗಳ ಮಾತೆತ್ತುವುದೇ ಸಾಹಸ!

ಕ್ಷ-ಕಿರಣಗಳನ್ನು ಚಿಕ್ಕ ಮಗುವಿನ ಗಂಟಲಿಗೆ ಹಾಯಿಸಿದರೆ, ಆ ಮಗುವು ಬೆಳೆದ ಬಳಿಕ ಗಂಟಲುವ್ರಣ ರೋಗಕ್ಕೆ (ಥ್ಯಾರೈಡ್ ಕ್ಯಾನ್ಸರ್) ಗುರಿಯಾಗಬಹುದು. ಅಲ್ಪಾವಧಿಯಲ್ಲಿ ಪ್ರಜೋತ್ಪಾದನೆಯು ನಡೆಯುವ ಕೆಲವು ಜೀವಿಗಳ ವಿಷಯದಲ್ಲಿ ನಡೆಸಿದ ಪ್ರಯೋಗಗಳಿಂದ ಜನನೇಂದ್ರಿಯಗಳ ಕಾರ್ಯಪಟುತ್ವದ ಮೇಲೆ ಸಹ ಅಪಾಯಕಾರಿ ಪರಿಣಾಮಗಳಾಗುವುವೆಂದು ಸಿದ್ಧವಾಗಿದೆ. ಬ್ರಿಟನಿನ ಭೌತವಿಜ್ಞಾನಿ ಮಾಥರರು ಕ್ಷ-ಕಿರಣ ಪರೀಕ್ಷೆಗೊಳಗಾಗುವ ಎಲ್ಲ ರೋಗಿಗಳ ಜನನೇಂದ್ರಿಯಗಳನ್ನು ಅಪಾಯದಿಂದ ರಕ್ಷಿಸಲು ಕಡ್ಡಾಯದ ಕ್ರಮಗಳನ್ನು ಪ್ರತಿಯೊಂದೂ ಚಿಕಿತ್ಸಾಲಯದಲ್ಲಿ ಕೈಗೊಳ್ಳಬೇಕೆಂದು

(೧೦ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಮುಂಬಯಿ ನಗರದ ಮೇಲೆ ಮರಾಠರ ಒಡೆತನ

ನ್ಯಾಯವಾದುದೆಂದು ಹೈದರಾಬಾದಿನ ಪ್ರತಿನಿಧಿಗಳ ವಿಶ್ವಾಸ

ಹೈದರಾಬಾದಿನ ಶಾಸನಾಂಗವು ರಾಜ್ಯಗಳ ಪುನಾರಚನೆಗೆ ಸಂಬಂಧಿಸಿದ ವಿಧೇಯಕಕ್ಕೆ ಪ್ರತಿಪಕ್ಷದವರು ತಂದೊಂದು ತಿದ್ದುಪಡಿಯನ್ನು ೬೯ ವಿರುದ್ಧ ೭೦ ಮತಗಳಿಂದ ಮಂಜೂರುಮಾಡಿರುತ್ತದೆ. ಮುಂಬಯಿ ನಗರವನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂಬುದು ಈ ತಿದ್ದುಪಡಿಯ ಆಶಯ. ಮರಾಠಾವಾಡದ ೩೭ ಕಾಂಗ್ರೆಸು ಸದಸ್ಯರು ಮತದಾನದಲ್ಲಿ ಭಾಗವಹಿಸಲಿಲ್ಲ. ಹೀಗೆ ತಟಸ್ಥ ಉಳಿದವರಲ್ಲಿ ಗೃಹಮಂತ್ರಿ ಶ್ರೀ ಡಿ. ಜಿ. ಬಿಂದು, ಅರ್ಥಸಚಿವ ಶ್ರೀ ವಿನಾಯಕರಾವ, ಶಿಕ್ಷಣ ಮಂತ್ರಿ ಶ್ರೀ ಗೋಪಾಳರಾವ ಎಕ್ಬೋಟೆ ಇವರೂ ಸೇರಿದ್ದರು. ಮರಾಠಾವಾಡದ ಎಲ್ಲ ಕಾಂಗ್ರೆಸಿಗರಿಗೂ ಪಕ್ಷದ ನಾಯಕ ಹಾಗು ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಮತದಾನದ ಸ್ವಾತಂತ್ರ್ಯವನ್ನಿತ್ತಿದ್ದರು. ಆದರೆ ತೆಲೆಂಗಾಣ ಮತ್ತು ಕರ್ನಾಟಕ ಭಾಗಗಳ ಕಾಂಗ್ರೆಸಿಗರಿಗೆ ತಿದ್ದುಪಡಿಯ ವಿರುದ್ಧ ಮತವೀಯಬೇಕೆಂಬ ನಿರ್ಬಂಧವನ್ನು ಪಕ್ಷದ ನಾಯಕರು ಹಾಕಿದ್ದರು.

ಆಂಧ್ರ ಪ್ರದೇಶ

ಶಾಸನಾಂಗವು ಇನ್ನೊಂದು ತಿದ್ದುಪಡಿಯನ್ನು ಧ್ವನಿಮತದಿಂದ ಸ್ವೀಕರಿಸಿ, ಆಂಧ್ರ—ತೆಲೆಂಗಾಣ ಎಂದು ವಿಧೇಯಕದಲ್ಲಿ ನಮೂದಿಸಲಾಗಿರುವ ಹೆಸರಿನ ಬದಲು ಹೊಸ ರಾಜ್ಯಕ್ಕೆ ಆಂಧ್ರ ಪ್ರದೇಶ ಎಂಬುದಾಗಿ ನಾಮಕರಣ ಮಾಡಬೇಕೆಂದು ಶಿಫಾರಸು ಮಾಡಿತು. ಇದೇ ಬಗೆಯ ಬದಲಾವಣೆಯನ್ನು ಆಂಧ್ರದ ಶಾಸನಾಂಗ ಸಹ ಸೂಚಿಸಿರುತ್ತದೆ. ಹೈದರಾಬಾದಿನ ಶಾಸನಾಂಗವು ಆರು ಸಲ ನೇರವಾದ ಮತದಾನ ಕ್ರಮವನ್ನು ಅನುಸರಿಸಿತು. ಆಂಧ್ರ—ತೆಲೆಂಗಾಣ ರಾಜ್ಯವನ್ನು "ಹೊಸ" ರಾಜ್ಯವಾಗಿ ಪರಿಗಣಿಸಬೇಕೇ ಹೊರತು ಈಗಿನ ಆಂಧ್ರ ರಾಜ್ಯವೇ ವಿಸ್ತಾರಗೊಂಡಂತಲ್ಲ ಎನ್ನುವ ಪ್ರತಿಪಕ್ಷದ ತಿದ್ದುಪಡಿಯು ೬೮ ಅನುಕೂಲ ಹಾಗು ೯೭ ಪ್ರತಿಕೂಲ ಮತಗಳಿಂದ ಬಿದ್ದು ಹೋಯಿತು. ಆಂಧ್ರದಲ್ಲಿಯೂ ತೆಲೆಂಗಾಣದಲ್ಲಿ ಶಾಸನಾಂಗಗಳಿಗೆ ೧೯೫೭ರಲ್ಲಿ ಚುನಾವಣೆ ನಡೆಯುವ ಹೊತ್ತಿಗೆ ಹೊಸ ಚುನಾವಣೆ ನಡೆಯಬೇಕೆಂಬ ಪ್ರತಿಪಕ್ಷದ ಸೂಚನೆ ಸಹ ತಿರಸ್ಕೃತವಾಯಿತು.

ಕನ್ನಡಿಗರ ಪ್ರಯತ್ನ

ಹೊಸ ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಬೇಕೆಂದು ಶ್ರೀ ಮಕದೂಮ ಮೊಹಿಯುದ್ದೀನರು ಒಂದು ತಿದ್ದುಪಡಿಯನ್ನು ಮಂಡಿಸಿದರು. ಆದರೆ ಇದು ೬೯ ಅನುಕೂಲ ಹಾಗು ೯೧ ವಿರುದ್ಧ ಮತಗಳಿಂದ ಸೋಲಿಸಲ್ಪಟ್ಟಿತು. ಸಾರ್ವಜನಿಕ ಕಾಮಗಾರಿ ಖಾತೆಯ ಸಚಿವ ಡಾ. ಮೇಲ್ಕೋಟೆ ಮತ್ತು ಪ್ರದೇಶ ಕಾಂಗ್ರೆಸಿನ ಹಿಂದಿನ ಅಧ್ಯಕ್ಷ ಶ್ರೀ ಮಲ್ಲಪ್ಪ ಕೊಲ್ಲೂರರ ಸಹಿತ ಆರು ಮಂದಿ ಕರ್ನಾಟಕದ ಕಾಂಗ್ರೆಸಿಗರು ಮತದಾನದಲ್ಲಿ ಭಾಗ ವಹಿಸದೆ ತಟಸ್ಥರಾಗಿ ಉಳಿದರು. ಮುಖ್ಯ ಮಂತ್ರಿಗಳು ಆಂಧ್ರ—ತೆಲೆಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೈಕೋರ್ಟುಗಳನ್ನು ಏರ್ಪಡಿಸಬೇಕೆಂದು ತಂದ ತಿದ್ದುಪಡಿಯನ್ನು ಸಭೆಯು ಅನುಮೋದಿಸಿತು. ಮುಖ್ಯಮಂತ್ರಿಗಳ ಮೂಲ ತಿದ್ದುಪಡಿಯು ಕೆಲವು ಬದಲಾವಣೆಗಳೊಡನೆ ಅಂಗೀಕೃತವಾಯಿತು. ಈ ಬದಲಾವಣೆಗಳು ಹೊಸ ರಾಜ್ಯಗಳಿಗೆ ಸೇರಿಸಬೇಕಾದ ಕೆಲವು ಪ್ರದೇಶಗಳಲ್ಲಿ ವ್ಯತ್ಯಾಸವಾಗಬೇಕೆಂದು—ಇತರ ಸಂಗತಿಗಳೊಂದಿಗೆ—ಹೇಳುತ್ತವೆ. ತದನುಸಾರವಾಗಿ ಬೀದರ ಜಿಲ್ಲೆಯ ನೀರ್ನ ವಿಭಾಗವನ್ನು ಕರ್ನಾಟಕದಲ್ಲಿಯೂ ಬಯಕಾಳವನ್ನು ಆಂಧ್ರ—ತೆಲೆಂಗಾಣದಲ್ಲಿಯೂ ಸೇರಿಸಲಾಗುತ್ತದೆ. ಬೇರೆ ಕೆಲವು ಪ್ರಾದೇಶಿಕ ಬದಲಾವಣೆಗಳನ್ನು ಸಹ ಮಾಡಬೇಕಾಗುತ್ತದೆ. ಮಹಾರಾಷ್ಟ್ರಕ್ಕೆ ಪ್ರತ್ಯೇಕ ಹೈಕೋರ್ಟಿರಬೇಕೆಂಬ ತತ್ವವನ್ನು ಶಾಸನಾಂಗ ಮನ್ನಿಸಿರುತ್ತದೆ.

ಸೀಮಾ ಸಮಿತಿಯ ಕಾರ್ಯ

ಈಗ ಮೈಸೂರಿನಲ್ಲಿರುವ ಕೋಲಾರ ಜಿಲ್ಲೆಯನ್ನು ಆಂಧ್ರ—ತೆಲೆಂಗಾಣದಲ್ಲಿ ಸೇರಿಸಬೇಕೆಂಬ ತಿದ್ದುಪಡಿಯನ್ನು ಮುಖ್ಯಮಂತ್ರಿಗಳು ವಿರೋಧಿಸಿ ಗೆದ್ದರು. ಇಂಥ ಪ್ರಶ್ನೆಗಳನ್ನು ಸೀಮಾ ಸಮಿತಿಗೆ ಇತ್ಯರ್ಥಕ್ಕಾಗಿ ಒಪ್ಪಿಸಿಕೊಡಬಹುದು ಎಂದವರು ಹೇಳಿದರು. ಕಾಂಗ್ರೆಸಿನ ಶ್ರೀ ಜಿ. ಅಣ್ಣಾರಾಯರು "ಕರ್ನಾಟಕದಲ್ಲಿ ಸೇರಿಸಲಿರುವ ಬೀದರ ಜಿಲ್ಲೆಯ ನಾಲ್ಕು ತಾಲೂಕುಗಳನ್ನು ಒಟ್ಟಿಗೆ ಒಂದು ಜಿಲ್ಲೆಯಾಗಿ ಪರಿಗಣಿಸಬೇಕು" ಎಂದು ತಂದ ಸೂಚನೆಯನ್ನು ಮುಖ್ಯ ಮಂತ್ರಿಗಳು ಸ್ವೀಕರಿಸಲು ಒಪ್ಪಿದರು. ತಾವು ಸ್ವತಃ ಮಂಡಿಸಿದ ಪ್ರಾದೇಶಿಕ ಬದಲಾವಣೆಗಳನ್ನು ಸರ್ವಾನುಮತದ ಒಪ್ಪಿಗೆಯಿಂದ ಸೂಚಿಸಲಾಗಿದೆ ಎಂದು ಹೇಳುತ್ತಾ ಮುಖ್ಯಮಂತ್ರಿಗಳು ಭಿನ್ನಾಭಿಪ್ರಾಯವಿರುವಲ್ಲೆಲ್ಲ ಸೀಮಾ ಸಮಿತಿಗೆ ವಿಷಯವನ್ನು ಒಪ್ಪಿಸಿಕೊಡುವುದೇ ಸೂಕ್ತವೆಂದು ಅಭಿಪ್ರಾಯಪಟ್ಟರು. ಮೈಸೂರಿನ ಹೆಸರನ್ನು ಕರ್ನಾಟಕ ಎಂದು ಬದಲಾಯಿಸುವುದರಿಂದ ಹೊಸ ತೊಡಕುಗಳೇಳಬಹುದೆಂದು ಅವರು ತಿಳಿಸಿದರು.

ಮುಂಬಯಿ ನಗರ

ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣರಾಯರು ಮುಂಬಯಿ ನಗರದ ಮೇಲೆ ಮರಾಠರ ಒಡೆತನದ ವಿಷಯವನ್ನು ಬಹಳ ಸಹಾನುಭೂತಿಯಿಂದ ಪ್ರಸ್ತಾಪಿಸಿದರು. ಶಾಸನಾಂಗದ ಎಲ್ಲ ಸದಸ್ಯರೂ ತಾವು ಸೇರಿರುವ ಭಾಷಾ ಘಟಕವೇನಿದ್ದರೂ ಅದನ್ನು ಲೆಕ್ಕಿಸದೆ ಮುಂಬಯಿ ನಗರವನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂದು ಅಭಿಪ್ರಾಯಪಡುತ್ತಿರುವುದು ತನ್ನ ಗಮನಕ್ಕೆ ಬಂದಿದೆ ಎಂದವರು ಹೇಳಿದರು. ಇದಕ್ಕೆ ತನ್ನ ಬೆಂಬಲವಿದೆ ಎಂದೂ ತಿಳಿಸಿದರು. ಆದರೆ ಅನಿರ್ಬಂಧಿತವಾದ ಅಭಿಪ್ರಾಯ ಪ್ರಕಟಣೆಯ ಸ್ವಾತಂತ್ರ್ಯವನ್ನು ವಿಧೇಯಕದ ಸಂಗತಿಯಲ್ಲಿ ಉಪಯೋಗಿಸುವಾಗ ತುಸು ಜಾಗರೂಕತೆ ವಹಿಸಬೇಕಾಗಿದೆ ಎಂದರು. ಪ್ರಧಾನಿ ನೆಹರುಗಳು "ಮುಂಬಯಿ ನಗರದ ಕುರಿತು ತೆಗೆದುಕೊಂಡಿರುವ ನಿಲುವೇಯು ಬದಲಾಯಿಸಲಾಗದುದೇನೂ ಅಲ್ಲ" ಎಂದಾಡಿರುವ ಮಾತನ್ನು ಮುಖ್ಯ ಮಂತ್ರಿಗಳು ನೆನಪಿಗೆ ತಂದುಕೊಟ್ಟರು. ಈ ಹಿನ್ನೆಲೆಯಿಂದ ನೋಡಿದರೆ ಹೈದರಾಬಾದಿನ ಶಾಸನಾಂಗವು ತಾನೇ ಏನಾದರೊಂದು ನಿರ್ಣಯವನ್ನು ಮುಂಬಯಿ ನಗರದ ಕುರಿತು ತೆಗೆದುಕೊಳ್ಳುವುದು ಪ್ರಶಸ್ತವಾಗಲಾರದೆಂದು ಅವರು ವ್ಯಕ್ತಪಡಿಸಿದರು. ಮುಂಬಯಿ ಮತ್ತು ಮಧ್ಯ ಪ್ರದೇಶದ ಶಾಸನಾಂಗಗಳು ಮುಂಬಯಿ ನಗರವನ್ನು ಮಹಾರಾಷ್ಟ್ರದಲ್ಲಿ ಸೇರಿಸುವ ನಿರ್ಣಯವನ್ನು ಅನುಮೋದಿಸಿಲ್ಲವೆಂಬುದನ್ನು ಇಲ್ಲಿ ಒತ್ತಿ ಹೇಳಿದರು.

ಆ ದೇಶದಿಂದ ಆತಂಕ

ನ್ಯಾಯವಾದ ಒಂದು ವಿಷಯವನ್ನು ಎತ್ತಿ ಹಿಡಿಯಲು ಆತಂಕವೇನೆಂಬ ಪ್ರಶ್ನೆಯನ್ನು ಉತ್ತರಿಸುತ್ತಾ ಮುಖ್ಯ ಮಂತ್ರಿಗಳು ತಾವು ಅಭಿಪ್ರಾಯ ಪ್ರಕಟಣೆಯ ಸ್ವಾತಂತ್ರ್ಯವನ್ನು ವಹಿಸಿದರೆ ಕಾಂಗ್ರೆಸಿನ ವರಿಷ್ಠ ಮಂಡಳದ ಆದೇಶವನ್ನು ಧಿಕ್ಕರಿಸುವ ಮೂಲಕ ಅದರ ಮನಸ್ಸನ್ನು ನೋಯಿಸಿದಂತಾಗಬಹುದೆಂದರು. ಒಂದು ತಿದ್ದುಪಡಿಯನ್ನು ಸ್ವೀಕರಿಸಿದ ಮಾತ್ರಕ್ಕೆ ಮುಂಬಯಿ ನಗರದ ಸ್ಥಾನದಲ್ಲಿ ವ್ಯತ್ಯಾಸಮಾಡಲಾರೆವೆಂದು ನನ್ನ ವಿಶ್ವಾಸ—ಆದುದರಿಂದ ನಾವೀ ತಿದ್ದುಪಡಿಯನ್ನು ಅಂಗೀಕರಿಸಿ ಏನೂ ಪ್ರಯೋಜನವಾಗದು ಎಂದವರು ತಮ್ಮ ನಿಲುವೆಯನ್ನು ತಿಳಿಸಿದರು. ಆದರೆ ಶಾಸನಾಂಗದ ಬಹುಮಂದಿ ಸದಸ್ಯರು (ಮೊದಲೇ ಹೇಳಿದಂತೆ) ಮುಖ್ಯಮಂತ್ರಿಗಳ ಈ ಧೋರಣೆಯನ್ನು ಒಪ್ಪದೆ ಮುಂಬಯಿ ನಗರದ ಮೇಲೆ ಮಹಾರಾಷ್ಟ್ರಕ್ಕಿರುವ ಅಧಿಕಾರವನ್ನು ಪ್ರಕಟವಾಗಿ ಎತ್ತಿ ಹಿಡಿದರು.

ಅಲ್ಪಸಂಖ್ಯಾಕರ ಹಿತ

ಭಾಷೆಯ ದೃಷ್ಟಿಯಿಂದ ಅಲ್ಪಸಂಖ್ಯಾಕರಾಗಿ ಉಳಿಯುವ ಗುಂಪುಗಳಿಗೆ ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ಯೋಗ್ಯ ರಕ್ಷಣೆಯನ್ನಿತ್ತು ಅವರ ಹಿತಾಸಕ್ತಿಗಳನ್ನು ಪೋಷಿಸುವ ಕೆಲಸವನ್ನು ಹೊಸ ರಾಜ್ಯಗಳ ಗವರ್ನರರಿಗೆ ಒಪ್ಪಿಸಲಾಗುತ್ತದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ವಲಯ ಮಂಡಳಗಳನ್ನು ದ್ವಿಭಾಷಾ ರಾಜ್ಯ ಮತ್ತು ಬಹು ಭಾಷಾ ರಾಜ್ಯಗಳ ರಚನೆಯ ನೆರಳೆಂದು ಕರೆಯುವ ಹವ್ಯಾಸವನ್ನು ಅವರು ಖಂಡಿಸಿ ಮಾತನಾಡಿದರು. ವಲಯ ಮಂಡಳಗಳು ಬಹಳ ಉಪಯುಕ್ತವೆನಿಸುವವೆಂದು ಅವರು ಹೇಳಿದರಲ್ಲದೆ ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ಮಂಡಳಗಳಿಗೆ ಕಾರ್ಯನಿರ್ವಾಹಕಾಧಿಕಾರವನ್ನು ಸಹ ಕೆಲವು ಮಟ್ಟಿಗೆ ಕೊಡಬೇಕೆಂದು ಮಾಡಿದ ಸೂಚನೆಯನ್ನು ಬೆಂಬಲಿಸಿದರು. ಆಂಧ್ರದಲ್ಲಿ ಮುಂದಿನ ವರ್ಷ (೧೯೫೭) ಶಾಸನಾಂಗಕ್ಕೆ ಹೊಸ ಚುನಾವಣೆಗಳನ್ನು ನಡೆಸಿದರೆ ಅಲ್ಲಿಯ ಸದಸ್ಯರ ಘಟನಾತ್ಮಕ ಅಧಿಕಾರವನ್ನು ಕಸಿದು ಕೊಂಡಂತಾಗುವುದೆಂದು ಹೇಳುತ್ತಾ ಅವರು ಮತ್ತೊಂದು ಚುನಾವಣೆಯ ಕಾಲದ ವರೆಗೆ (೧೯೬೨) ಈಗಿನ ಆಂಧ್ರದ ಶಾಸನ ಸಭಾ ಸದಸ್ಯರ ಅಧಿಕಾರಾವಧಿಯನ್ನು ಬೆಳೆಸುವುದೇ ತಮ್ಮ ಸಲಹೆ ಎಂದರು.

ನ್ಯಾಯ ಸ್ಥಾನದ ಕೇಂದ್ರ

ಆಂಧ್ರ ಪ್ರದೇಶ ಎಂಬ ಹೊಸ ಹೆಸರಿನ ಕುರಿತು ಈಗಲೂ ತೆಲೆಂಗಾಣ ಮತ್ತು ಆಂಧ್ರದ ನಾಯಕರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ—ಸರ್ವಾನುಮತದ ಒಪ್ಪಿಗೆಯ ಹೊರತು ಏನು ಬದಲಾವಣೆ ಮಾಡಲೂ ಕೇಂದ್ರ ಸರಕಾರ ಸಿದ್ಧವಿಲ್ಲ ಆದುದರಿಂದ ಕೇವಲ ತಿದ್ದುಪಡಿ ಸ್ವೀಕರಿಸಿದ ಮಾತ್ರಕ್ಕೆ ಕೆಲಸವಾದಂತಾಗಲಿಲ್ಲ ಎಂದೂ ಅವರು ತಿಳಿಸಿದರು. ಆಂಧ್ರ—ತೆಲೆಂಗಾಣ ರಾಜ್ಯದ ಹೈಕೋರ್ಟಿನ ಮುಖ್ಯ ಸ್ಥಾನವು ಹೈದರಾಬಾದಿನಲ್ಲಿರಬೇಕೆಂದೂ ದೂರದ ಐದಾರು ಜಿಲ್ಲೆಗಳ ಪ್ರಯೋಜನಾರ್ಥವಾಗಿ ವಿಶಾಖಪಟ್ಟಣದಂಥ ಒಂದು ನಗರದಲ್ಲಿ ಹೈಕೋರ್ಟಿನ ನ್ಯಾಯಾ

(೯ನೇ ಪುಟ ನೋಡಿರಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಕಾಶ್ಮೀರ ಸಮಸ್ಯೆಯ ಮೇಲೆ ಹೆಚ್ಚಿನ ಪ್ರಕಾಶ

ಘರ್ಷಣೆಯ ನಿವಾರಣೆಗಾಗಿ ವಿಭಜನೆಯ ಸೂಚನೆ

ಕಾಶ್ಮೀರ ಸಮಸ್ಯೆಯ ಇತ್ಯರ್ಥ ಮಾಡುವುದಕ್ಕಾಗಿ ಸಂಯುಕ್ತ ರಾಷ್ಟ್ರಸಂಘದ ಭದ್ರತಾಮಂಡಳಿಯಿಂದ ಮಧ್ಯಸ್ಥರಾಗಿ ನೇಮಕಗೊಂಡಿದ್ದ ಸರ್ ಓವೆನ್ ಡಿಕ್ಸನ್ ಎಂಬ ಮಹನೀಯರು ತಮ್ಮ ವರದಿಯಲ್ಲಿ ಕಾಶ್ಮೀರದಲ್ಲಿ ಜನಮತ ಗಣನೆ ನಡೆಸಿ ಅದರ ಭವಿಷ್ಯವನ್ನು ನಿರ್ಧರಿಸಲು ಹೋದರೆ, ಪಾಕಿಸ್ತಾನ ಮತ್ತು ಭಾರತಗಳೆರಡೂ ನಿರಾಶ್ರಿತರ ಅಗಾಧ ಸಮಸ್ಯೆಯನ್ನು ಪುನಃ ಎದುರಿಸಬೇಕಾಗಿ ಬರಬಹುದು ಎಂದಿದ್ದರು. ಆದುದರಿಂದ ಕಾಶ್ಮೀರವನ್ನು ವಿಭಜಿಸಲು ಒಪ್ಪುವುದೇ ಸೂಕ್ತವೆಂದವರು ಹೇಳಿದ್ದರು. ವಿಭಜನೆಯ ರೇಖೆಯನ್ನು ಎಲ್ಲಿ ಎಳೆಯಬೇಕೆಂಬುದು ಒಂದು ಸಮಸ್ಯೆಯಾಗಿದ್ದು ಅದಕ್ಕೆ ಎರಡೂ ಪಕ್ಷಗಳ ನ್ಯಾಯಪೂರ್ಣ ಹಾಗು ಉದಾರ ವರ್ತನೆ ಆವಶ್ಯಕವೆಂದೂ ಅವರು ಅಭಿಪ್ರಾಯಪಟ್ಟಿದ್ದರು.

ವಿಭಜನೆಯ ಸೂಚನೆ

ಈಗ ಪ್ರಧಾನಿ ನೆಹರುರವರು ತಾವೇ ಸಂಗತಿಯನ್ನು ಪಾಕಿಸ್ತಾನದ ಧುರೀಣರ ಮುಂದೆ ಮಂಡಿಸಿದ್ದೆ ಎಂಬ ವಿಷಯವನ್ನು ಬಹಿರಂಗಗೊಳಿಸಿದ್ದಾರೆ. ಹೊಸ ದೆಹಲಿಯ ಸಾರ್ವಜನಿಕ ಸಭೆಯಲ್ಲಿ ಇದೇ ೧೩ನೇ ದಿನಾಂಕ ಮಾತನಾಡುತ್ತಾ ನೆಹರುರವರು "ಅಮೇರಿಕವು ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನು ಕೊಟ್ಟು ಕಾಶ್ಮೀರದ ಸಮಸ್ಯೆಯ ಸ್ವರೂಪವನ್ನು ಆಮೂಲಾಗ್ರವಾಗಿ ಬದಲಾಯಿಸಿದುದರಿಂದ ಮತ್ತು ಜನಮತಗಣನೆಯ ಆಧಾರವನ್ನೆ ಹಾಳುಗೆಡವಿದುದರಿಂದ ಈಗಿನ ಯುದ್ಧವಿರಾಮ ರೇಖೆಯನ್ನೇ ತುಸು ಬದಲಾವಣೆಯೊಡನೆ ಆಧಾರವಾಗಿ ಹಿಡಿದು ಕಾಶ್ಮೀರವನ್ನು ವಿಭಜಿಸುವ ಸೂಚನೆಯನ್ನು ಪಾಕಿಸ್ತಾನಿ ಧುರೀಣರಿಗೆ ಮಾಡಿದ್ದೆ" ಎಂದರು. ಕಳೆದ ವರ್ಷ ಪಾಕಿಸ್ತಾನದ ಆಗಿನ ಪ್ರಧಾನಿಗಳು ಕಾಶ್ಮೀರದ ಕುರಿತು ಸಂಧಾನ ನಡೆಸಲು ಬಂದಿದ್ದಾಗ ನೆಹರುರವರು ಈ ಸೂಚನೆಯನ್ನು ಮಾಡಿದ್ದರೆಂದೂ ನೈಸರ್ಗಿಕ ಗಡಿಗಳೇ ಸಿಗುವಂತೆ ಈಗಿನ ಯುದ್ಧವಿರಾಮ ರೇಖೆಯ ತುಸು ಆಚೀಚೆ ವಿಭಜನೆಯ ಗೆರೆಯನ್ನೆಳೆಯಲು ಭಾರತ ಸಿದ್ಧವಿತ್ತೆಂದೂ ಆದರೆ ಪಾಕಿಸ್ತಾನಿ ಧುರೀಣರು ಮುಸ್ಲಿಂ ಲೀಗಿನ ಸಹಜ ಸ್ವಭಾವಕ್ಕನುಸಾರವಾಗಿ ತಮಗೆ ಹೆಚ್ಚಿಗೆ ಸಿಗಬಹುದಾದ ಪ್ರದೇಶಗಳ ಮೇಲೆ ಆಶೆಬುರುಕ ತನದ ಕಣ್ಣು ಹಾಕಿದನ್ನು ತಮ್ಮ ವಶದಲ್ಲಿರುವ ಕಾಶ್ಮೀರ ಪ್ರದೇಶದ ಕೆಲವಂಶಗಳನ್ನು ಭಾರತಕ್ಕೆ ಒಪ್ಪಿಸಿಕೊಡಲು ಸಿದ್ಧರಿರಲಿಲ್ಲವೆಂದೂ ತಿಳಿದು ಬರುತ್ತದೆ.

ಕ್ಷೋಭೆ ತಪ್ಪಿಸುವುದೇ ಉದ್ದೇಶ

ಪ್ರಧಾನಿಗಳು ತಾವು ಶಕ್ತಿಹೀನರಾಗಿ ಅಥವಾ ತಪ್ಪಿಗೆ ಪ್ರಾಯಶ್ಚಿತ್ತದ ರೂಪದಲ್ಲಿ ಕಾಶ್ಮೀರವನ್ನು ವಿಭಜಿಸಲು ಒಪ್ಪುತ್ತಿದ್ದೇವೆ ಎಂಬ ಭಯಕ್ಕೆ ಎಡೆಕೊಡಲಿಲ್ಲ. "ಭಾರತವು ಕಾಶ್ಮೀರದ ವಿಷಯದಲ್ಲಿ ಸರಿಯಾದ ಧೋರಣೆಯನ್ನೆ ವಹಿಸಿಕೊಂಡು ಬಂದಿರುವುದರಲ್ಲಿ ನನಗಾವ ಸಂಶಯವೂ ಇಲ್ಲ. ಈ ಧೋರಣೆಯು ಸೌಮ್ಯವೂ ಸಂಯಮಪೂರ್ಣವೂ ಆದ ನಡವಳಿಕೆ ಮತ್ತು ಕಾಶ್ಮೀರದ, ಪಾಕಿಸ್ತಾನದ ಹಾಗು ಭಾರತದ ಜನರಿಗೆ ನ್ಯಾಯದಾನ ಮಾಡುವ ಉದ್ದೇಶಗಳಿಂದ ಕೂಡಿದೆ" ಎಂದು ನೆಹರು ಸಾರಿದರು. ಕಾಶ್ಮೀರದಲ್ಲಿ ಎಷ್ಟೆ ಸಣ್ಣ ಪ್ರಮಾಣದಲ್ಲಿಯೇ ಆಗಲಿ, ಕ್ಷೋಭೆಯನ್ನುಂಟುಮಾಡುವ ಯಾವುದೇ ಹೆಜ್ಜೆಯನ್ನು ಭಾರತ ಸ್ವೀಕರಿಸಲಾರದು ಎಂದವರು ಘೋಷಿಸಿದರು. "ನೀವು ಕಾಶ್ಮೀರದಲ್ಲಿ ಅತ್ಯಾಚಾರವನ್ನೂ ಅತಿರೇಕ ವರ್ತನೆಗಳನ್ನೂ ಬಹಳಷ್ಟು ನಡೆಸಿದ್ದೀರಿ. ನಿಮ್ಮ ವಶದಲ್ಲೀಗ ಇರುವ ಕಾಶ್ಮೀರದಲ್ಲಿ ಕುಳಿತಿರಲು ನಿಮಗೆ ಯಾವುದೇ ಅಧಿಕಾರವಿಲ್ಲ. ಆದರೆ ಕ್ಷೋಭೆ ಮತ್ತು ಘರ್ಷಣೆಗಳಾಗಬಾರದೆಂಬುದೇ ನನ್ನ ಇಚ್ಛೆಯಾದುದರಿಂದ ನಿಮ್ಮ ವಶದಲ್ಲಿರುವ ಕಾಶ್ಮೀರದ ಪ್ರಶ್ನೆಯನ್ನು ಈಗಿನ ಯುದ್ಧ ವಿರಾಮ ರೇಖೆಯ ಸಾಮಾನ್ಯ ಆಧಾರದ ಮೇಲೆ ತೀರ್ಮಾನಿಸಬಹುದೆಂದು ಸಿದ್ಧನಿದ್ದೇನೆ. ಅದನ್ನು ಯುದ್ಧಮೂಲಕ ಗೆದ್ದುಕೊಳ್ಳುವ ಇಚ್ಛೆ ನನಗಿಲ್ಲ."- ಹೀಗೆ ತಾನು ಪಾಕಿಸ್ತಾನಿ ಧುರೀಣರಿಗೆ ಸ್ಪಷ್ಟವಾಗಿ ಹೇಳಿದ್ದೇನೆಂದು ನೆಹರು ಪ್ರಕಟಪಡಿಸಿದರು.

ಪರಿವರ್ತಿತ ವಾತಾವರಣ

ಕಳೆದ ಒಂಭತ್ತು ವರ್ಷಗಳಲ್ಲಿ ಕಾಶ್ಮೀರ ಸಮಸ್ಯೆಯು ಬಹಳ ರೀತಿಯಲ್ಲಿ ಪರಿವರ್ತನೆ ಹೊಂದಿದೆ ಎನ್ನುತ್ತಾ ನೆಹರುರವರು "ಈಗ ಸಾಧಿಸಲಾಗಿರುವ ಪ್ರಗತಿಗೆ ಬಾಧಕವಾದುದೇನಾದರೂ ನಡೆದರೆ ಕಾಶ್ಮೀರದಲ್ಲಿ ಕ್ಷೋಭೆ ಏಳುವುದು ಖಂಡಿತ; ಇದರಿಂದ ೧೯೪೭ರಲ್ಲಿ ನಡೆದಂತೆ ನಿರಾಶ್ರಿತರ ಸಮಸ್ಯೆ ಹೊಸದಾಗಿ ಏಳದಿರದು. ಕಾಶ್ಮೀರ ಪ್ರಶ್ನೆಯ ಇತ್ಯರ್ಥದಿಂದ ಭಾರತ-ಪಾಕಿಸ್ತಾನಗಳಲ್ಲಿ ಸ್ನೇಹ ಸಂವರ್ಧನೆಯಾಗುವ ಬದಲು ಈ ಹೊಸ ಸಮಸ್ಯೆಯು ಸಂಬಂಧವನ್ನು ಇನ್ನಷ್ಟು ಭೀಕರವಾಗಿ ಮಾಡಬಹುದು" ಎಂದು ನೆಹರು ತಮ್ಮ ನಿಲುಮೆಯ ಮೇಲೆ ಬೆಳಕು ಚೆಲ್ಲಿದರು. ಕಾಶ್ಮೀರ ಸಮಸ್ಯೆಯ ಮೇಲೆ ಪರಿಣಾಮ ಮಾಡಿದ ಬೆಳವಣಿಗೆಗಳಲ್ಲೆಲ್ಲ ಮುಖ್ಯವಾದುದೆಂದರೆ ಅಮೇರಿಕವು ಪಾಕಿಸ್ತಾನಕ್ಕೆ ಕೊಡಹತ್ತಿದ ಸೈನಿಕ ಸಹಾಯವೆಂದೂ ಪಾಕಿಸ್ತಾನವು ಇತರ ಬಣಗಳೊಂದಿಗೆ ಕೂಡಿ ಮಾಡಿಕೊಂಡ ಸೈನಿಕ ಒಪ್ಪಂದವೆಂದೂ ನೆಹರು ಪುನರುಚ್ಚರಿಸಿದರು. "ಪಾಕಿಸ್ತಾನದ ಸೇನೆಗಳು ತಾವು ಈಗ ಆಕ್ರಮಿಸಿರುವ ಕಾಶ್ಮೀರದ ಭೂಭಾಗದಿಂದ ಹಿಂತೆಗೆಳಿ (ಇದೇ ಜನಮತ ಗಣನೆಗೆ ಪೂರ್ವಭಾವಿಯಾಗಿ ನೆರವೇರಬೇಕಾದ ಕಾರ್ಯ) ಗಡಿಯಿಂದ ೨೦-೩೦ ಮೈಲು ಅಂತರದಲ್ಲಿ ತಳವೂರಿದರು ಸಹ ಪಾಕಿಸ್ತಾನವು ಈಗ ಹೆಚ್ಚಿಸಿಕೊಂಡಿರುವ ಸೈನ್ಯ ಶಕ್ತಿಯಿಂದ ಅದು ಪುನಃ ಆಕ್ರಮಣ ನಡೆಸಬಲ್ಲುದು. ಆದುದರಿಂದಲೇ ನಾವು ಜನಮತ ಗಣನೆಯ ದಾರಿಯನ್ನು ಬಿಟ್ಟು ವ್ಯಾವಹಾರಿಕ ಸತ್ಯದ ತಳಹದಿಯ ಮೇಲಿಂದ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸುವುದು ಆವಶ್ಯಕವೆನಿಸಿದೆ" ಎಂದರು ನೆಹರು.

ಮೂಲಭೂತ ವಿಷಯಗಳು

ಲೋಕಸಭೆಯ ಮುಂದೆ ತಾನು ಈ ಸಂಬಂಧದಲ್ಲಿ ಮಾಡಿದ ಭಾಷಣವು ಪಾಕಿಸ್ತಾನದಲ್ಲಿ ಆಲ್ಲೋಲ ಕಲ್ಲೋಲವನ್ನುಂಟುಮಾಡಿತೆಂದು ಹೇಳುತ್ತಾ ನೆಹರುರವರು ತನ್ನ ವಿರುದ್ಧ ಅಲ್ಲಿ ನಡೆದ ಕೋಪ ಪ್ರದರ್ಶನ, ತಾನು ಸುಳ್ಳಾಡುತ್ತಿದ್ದೇನೆಂಬ ಆರೋಪ, ಕೊಟ್ಟಮಾತಿಗೆ ತಪ್ಪುತ್ತಿದ್ದೇನೆಂಬ ಅಪಪ್ರಚಾರಗಳನ್ನು ಪ್ರಸ್ತಾಪಿಸಿದರು. ಇದೇ ಮಾದರಿಯ ಟೀಕೆಯನ್ನು ಅಮೇರಿಕ ಮತ್ತು ಬ್ರಿಟನಿನ ಕೆಲವು ಪತ್ರಿಕೆಗಳೂ ಮಾಡುತ್ತಿರುವುದಕ್ಕೆ ಅವರು ವಿಷಾದಿಸಿದರು. "ಇವರಲ್ಲಿ ಯಾರೊಬ್ಬರೂ ಕಾಶ್ಮೀರ ಸಮಸ್ಯೆಯ ಮೂಲ ಸಂಗತಿಗಳನ್ನು ಸರಿಯಾಗಿ ತಿಳಿದುಕೊಂಡಂತಿಲ್ಲ. ನಾನು ಹೇಳಿದ ವಿಷಯದಲ್ಲಿ ಯಾವುದು ಸುಳ್ಳೆಂದು ಇವರು ಸಿದ್ಧಪಡಿಸಬಲ್ಲರು? ಬೊಬ್ಬೆ ಹೊಡೆಯುವುದರಿಂದಾಗಲೀ ಗುಲ್ಲೆಬ್ಬಿಸುವುದರಿಂದಾಗಲೀ ಸತ್ಯಸಂಗತಿಯನ್ನು ಮರೆಯಲ್ಲಿಡುವುದು ಸಾಧ್ಯವಿಲ್ಲ" ಎಂದರು ನೆಹರು. ಆದರೆ ಪಾಕಿಸ್ತಾನದಲ್ಲಿ ಸತ್ಯವನ್ನು ಮರೆಯಲ್ಲಿಡುವ ಹಾಗು ಸತ್ಯವನ್ನು ಪ್ರಕಟಗೊಳಿಸಿದೊಡನೆಯೇ ಗಲಾಟೆಯನ್ನು ಪ್ರಾರಂಭಿಸಿ ಜೇಹಾದಿನ (ಧರ್ಮ ಯುದ್ಧ) ಕೂಗು ಹಾಕುವ ಹವ್ಯಾಸವೇ ಧುರೀಣರಲ್ಲಿಯೂ ಪತ್ರಿಕೆಗಳಲ್ಲಿಯೂ ಕಾಣಿಸುತ್ತಿರುವುದಕ್ಕೆ ನೆಹರು ವ್ಯಸನಿಸಿದರು. ತಾನು ಮಾತುಕತೆಗೆ ಸದಾ ಸಿದ್ಧನಿದ್ದೇನೆಂದೂ ಆದರೆ ಹೊಸ ಬೆಳವಣಿಗೆಗಳನ್ನು ಗಮನಿಸದೆ ಒಂಭತ್ತು ವರ್ಷಗಳ ಹಿಂದಿನ ಸಂಗತಿಯನ್ನೆ ಆದರಿಸಿ ಕುಳಿತಿರಬೇಕೆಂಬ ತತ್ವವನ್ನು ಮಾತ್ರ ತಾನು ಮಾನ್ಯಮಾಡುವಂತಿಲ್ಲವೆಂದೂ ಕಾರಣ, ಈ ಮೂಲಭೂತ ಅಂಶವನ್ನು ಕಡೆಗಣಿಸಿ ಸಂಧಾನದ ಮಾತುಕತೆ ನಡೆಸುವುದು ನಿಷ್ಪ್ರಯೋಜಕವೆಂದೂ ನೆಹರು ವಿದಿತಪಡಿಸಿದರು.

ಪಾಕಿಸ್ತಾನದ ಪ್ರತಿಕ್ರಿಯೆ

ನೆಹರುರವರು ಕಾಶ್ಮೀರದ ಕುರಿತು ಕೊಟ್ಟ ಈ ಹೇಳಿಕೆಯ ಕುರಿತು ಪ್ರಥಮವಾಗಿ ಪಾಕಿಸ್ತಾನಿ ಸರಕಾರದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹೋದ ಪಾಕಿಸ್ತಾನಿ ವಿದೇಶ ಮಂತ್ರಿ ಹಮೀದುಲ್ ಹಕ್ ಚೌಧರಿಯವರು ತಮ್ಮ ಸಂಪ್ರದಾಯಾನುಸಾರವಾಗಿ "ನೆಹರುರವರು ಕಾಶ್ಮೀರ ವಿಭಜನೆಯ ಸೂಚನೆಯನ್ನು ಮುಂದಿಟ್ಟಿದ್ದೇ ಇಲ್ಲ" ವೆಂದು ನಿಸ್ಸಂಕೋಚವಾಗಿ ಸುಳ್ಳಾಡಿದರು. "ಕಾಶ್ಮೀರದಲ್ಲಿ ಒಂದು ಆಸ್ತಿಯನ್ನು ಪಾಲುಮಾಡಿಕೊಳ್ಳುವ ಪ್ರಶ್ನೆಯಿಲ್ಲ; ಅಲ್ಲಿಯ ಜನರಿಗೆ ತಮ್ಮ ಭವಿಷ್ಯವನ್ನು ನಿರ್ಣಯಿಸಗೊಡುವ ಮಹತ್ವದ ವಿಷಯವನ್ನು ಈ ಸಮಸ್ಯೆ ಒಳಗೊಂಡಿದೆ" ಎಂದರು. ಅಮೇರಿಕ ಮತ್ತಿತರ ದೇಶಗಳ ಸೈನಿಕ ಸಹಾಯ

(೮ನೇ ಪುಟ ನೋಡಿರಿ)

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ. ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ಸಗಟು ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, **UDIDI,** S. KANARA.

ನವಯುಗದ ಚಂದಾದಾರರಲ್ಲಿ ವಿಶೇಷ ವಿನಂತಿ

ಅವಧಿಗೆ ಸರಿಯಾಗಿ ತಮ್ಮ ಚಂದಾ ಹಣವನ್ನು ಕ್ರಮ ಪ್ರಕಾರ ಪಾವತಿ ಮಾಡುತ್ತ ನಮ್ಮೊಡನೆ ಸದಾ ಸಹಕರಿಸುತ್ತಿರುವ 'ನವಯುಗ'ದ ಚಂದಾದಾರ ಬಂಧುಗಳಿಗೆ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಚಂದಾಹಣವನ್ನು ಇನ್ನೂ ಬಾಕಿಮಾಡಿಕೊಂಡಿರುವ ಇತರ ಚಂದಾದಾರರು ಈಗಲಾದರೂ ಬಾಕಿಯನ್ನು ಪ್ರೀತಿಯಿಂದ ಸಲ್ಲಾಯಿಸಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಇಲ್ಲವಾದರೆ ನಾವು ಬಾಕಿಗಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಸದಯಾಂತಃಕರಣದಿಂದ ಸ್ವೀಕರಿಸಬೇಕೆಂದೂ, ಆ ಬಗ್ಗೆ ಅನ್ಯಥಾ ಭಾವಿಸಬಾರದೆಂದೂ, ವಿ. ಪಿ. ಪಿ. ಯನ್ನು ಹಿಂದೆ ಬಿಟ್ಟು ನಮ್ಮನ್ನು ನಷ್ಟಕ್ಕೆ ಗುರಿಪಡಿಸಬಾರದೆಂದೂ ವಿನಂತಿಸಿಕೊಳ್ಳುವೆವು.

ವ್ಯವಹಾರಜ್ಞರಾದ ನಮ್ಮ ಮುಂಬಯಿಯ ಚಂದಾದಾರರು ನಮ್ಮ ವಿನಂತಿಯನ್ನು ವಿಶೇಷತಃ ಗಮನಿಸಿ ಹಿಂದಿನಂತೆ ಮುಂದೆಯೂ ನಮ್ಮೊಡನೆ ಸಹಕರಿಸುತ್ತಿರಬೇಕೆಂದು ಕೇಳಿಕೊಳ್ಳುವೆವು. ಒಂದುವೇಳೆ ಪತ್ರಿಕೆ ಬೇಡವೆಂದಿರುವವರು ತಮ್ಮ ಬಾಕಿಯನ್ನು ಕಳುಹಿಸಿ ಹಾಗೆಯೇ ತಿಳಿಸಬಹುದು.

ಮೆನೇಜರ್

ನವಯುಗ

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೯-೪-'೫೬	೩೩

ಕ್ಷೀರ ಸಪ್ತಾಹ

ಮದ್ರಾಸು ರಾಜ್ಯದಲ್ಲಿ ಇದೇ ೧೩ನೇ ದಿನಾಂಕದಿಂದ ಕ್ಷೀರ ಸಪ್ತಾಹವನ್ನು ಆಚರಿಸಲಾಗುತ್ತಿದೆ; ಜನರಲ್ಲಿ ಹಾಲು ಸೇವಿಸುವ ಅಭ್ಯಾಸವನ್ನು ಪೋಷಿಸುವುದೇ ಈ ಸಪ್ತಾಹದ ಮುಖ್ಯೋದ್ದೇಶವೆಂದು ಒಂದೇ ಮಾತಿನಲ್ಲಿ ಹೇಳಬಹುದು. ನಮ್ಮ ನಿತ್ಯ ಆಹಾರದಲ್ಲಿ ಪೋಷಕಾಂಶಗಳಿಗೆ ಕೊಡಬೇಕಾದ ಮಹತ್ವವನ್ನು ಹೆಚ್ಚಿನ ಜನರು ಈ ದೇಶದಲ್ಲಿ ತಿಳಿದಿಲ್ಲದಿರುವುದು ತುಂಬ ವಿಷಾದಕರ. ಭಾರತದ ವೈದ್ಯಕೀಯ ಸಂಶೋಧನ ಮಂಡಳದ ಪೋಷಕಾಹಾರ ಸಲಹಾಸಮಿತಿಯು ದೇಶದಲ್ಲಿ ಆಹಾರಾಭಾವವನ್ನು ಹೋಗಲಾಡಿಸಲು ಯಶಸ್ವಿ ಕ್ರಮಗಳನ್ನು ಕೈಗೊಳ್ಳುತ್ತಿದ್ದಂತೆಯೇ ಆಹಾರದಲ್ಲಿ ಪೋಷಕಾಂಶಗಳು ಅತ್ಯಧಿಕ ಪ್ರಮಾಣದಲ್ಲಿರುವಂತೆ ಸಹ ನೋಡಿಕೊಳ್ಳುವುದು ಅವಶ್ಯವೆಂದು ಅಭಿಪ್ರಾಯ ಪಟ್ಟಿದೆ. ಈ ಅಭಿಪ್ರಾಯವು ಬಹಳ ಸಮಂಜಸವಾದುದಾಗಿದ್ದು ಆಹಾರ ಸಮಸ್ಯೆಯ ಪರಿಹಾರದಲ್ಲಿ ಆಸಕ್ತಿಯುಳ್ಳ ಎಲ್ಲರೂ ಇದನ್ನು ಅನುಮೋದಿಸದಿರರೆಂದು ಹೇಳಬಹುದು. ಒಳ್ಳೆಯ ಆಹಾರ ಸೇವನೆಯಲ್ಲಿ ಹಾಲಿನ ಉಪಯೋಗವು ಬಂದೇ ಬರುತ್ತದೆ. ಏಕೆಂದರೆ ಹಾಲಿನಲ್ಲಿರುವಷ್ಟು ಹೆಚ್ಚು ಪ್ರಮಾಣದಲ್ಲಿ ಸಕಲ ಜೀವಸತ್ವಗಳೂ ಒಂದೇ ಆಹಾರ ವಸ್ತುವಿನಲ್ಲಿ ಬೆರೆತ ನಿದರ್ಶನವು ಬೇರೆ ಸಿಕ್ಕಲಾರದು. ಅಷ್ಟಲ್ಲದೆ, ಆಬಾಲವೃದ್ಧರಲ್ಲಿ ಎಲ್ಲರ ಜೀರ್ಣಶಕ್ತಿಗೂ ಸರಿ ಹೋಗುವಷ್ಟು ಲಘುವಾದ ಆಹಾರವೂ ಹಾಲನ್ನು ಬಿಟ್ಟರೆ ಇನ್ನೊಂದು ಬಳಕೆಯಲ್ಲಿಲ್ಲ. ಆದುದರಿಂದಲೇ ದುಗ್ಧರಸವನ್ನು ಅಮೃತ ತುಲ್ಯವೆಂದು ವಾಡಿಕೆಯಲ್ಲಿ ಹೇಳಲಾಗುತ್ತದೆ. ಭಾರತೀಯ ಸಂಪ್ರದಾಯವು ಬಹಳ ಪ್ರಾಚೀನ ಕಾಲದಿಂದಲೂ ಈ ಭಾವನೆಯನ್ನು ಎತ್ತಿ ಹಿಡಿದಿರುವುದಲ್ಲದೆ ಗೋಧನವನ್ನು ಅತ್ಯುಚ್ಚ ಗೌರವದಿಂದ ನೋಡಿದ ವೈಶಿಷ್ಟ್ಯವೂ ಅದಕ್ಕೆ ಸಲ್ಲುತ್ತದೆ. ಈಗ ತಾನೆ ಕಾಲಿರಿಸಿರುವ ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ದೇಹದ ಪೋಷಣೆಗೂ ರಕ್ಷಣೆಗೂ ಸಹಾಯಕವಾಗುವ ಆಹಾರ ವಸ್ತುಗಳ ಉತ್ಪಾದನೆಯನ್ನು ಈಗಿನದರ ಒಂದೂ ಕಾಲು ಪ್ರಮಾಣದಷ್ಟು ಹೆಚ್ಚಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ— ಸ್ವಾಭಾವಿಕವಾಗಿಯೇ ಹಾಲಿನ ಉತ್ಪಾದನೆ ಮತ್ತು ಪೂರೈಕೆಯಲ್ಲೂ ಈ ಹೆಚ್ಚಳವನ್ನು ಸಾಧಿಸಬೇಕೆಂದು ಸರಕಾರವು ಬಯಸಿದೆ. ಇದಕ್ಕೆ ಅನುಕೂಲವಾಗುವಂಥ ಜಾನುವಾರು ಹಿತಚಿಂತನೆಯ ಧೋರಣೆಯನ್ನೂ ಸರಕಾರವು ವಹಿಸಿಕೊಂಡಿದೆ. ದೇಶದಲ್ಲಿರುವ ಜಾನುವಾರುಗಳನ್ನು ಒಳ್ಳೆಯ ಪುಷ್ಟ ಹಾಗು ಉಪಯುಕ್ತ ಕಾಲ್ನಡೆಗಳಾಗಿ ರೂಪಿಸಲು ಸರಕಾರವು ಶಕ್ಯವಿದ್ದೆಲ್ಲ ರೀತಿಯಿಂದ ಪ್ರಯತ್ನಿಸುತ್ತಿದೆ. ಬಡು ದನಗಳೂ ಕ್ಷೀಣ ಕಾಯದವುಗಳೂ ಕೊಡುವ ಹಾಲು ಅತ್ಯಲ್ಪವಾಗಿರುವುದರಿಂದ ಅವುಗಳನ್ನು ಸಾಕುವುದೇ ಒಂದು ಭಾರವಾಗಿ ಪರಿಣಮಿಸುತ್ತದೆ: ಪುಷ್ಕಳವಾಗಿ, ಸಮೃದ್ಧವಾಗಿ ಹಾಲು ಕೊಡುವ ದನಗಳಿದ್ದರೆ ಹಾಲಿನ ಉಪಯೋಗವಂತೂ ಹೆಚ್ಚುತ್ತದೆ; ಜೊತೆಗೆ ದನಗಳನ್ನು ಸಾಕುವವರಿಗೆ ಸಹ ಧೈರ್ಯ ಬರುತ್ತದೆ. ದನಗಳ ತಳಿಯನ್ನು ಸುಧಾರಿಸುವ ಉದ್ದೇಶದಿಂದ ಈಗ ಅಲ್ಲಲ್ಲಿ ಉತ್ತಮ ಬೀಜದ ಹೋರಿಗಳ ಕೇಂದ್ರಗಳನ್ನು ತೆರೆಯಲಾಗಿದೆ. ಮಾತ್ರವಲ್ಲ ಒಳ್ಳೆಯ ಬೀಜದ ಹೋರಿಗಳ ಸಂಖ್ಯಾ ಪ್ರಮಾಣವು ಹೆಚ್ಚಿಲ್ಲದಿರುವುದರಿಂದ ಕೃತಕ ಗರ್ಭಾಧಾರಣೆಯ ಕ್ರಮವನ್ನು ದನಗಳಿಗೆ ಅನ್ವಯಿಸುವುದಕ್ಕೆ ವಿಶೇಷ ಪ್ರೋತ್ಸಾಹವನ್ನು ಸರಕಾರ ಕೊಡಹತ್ತಿದೆ. ರೈತರೂ ದನಕರುಗಳಿರುವ ಇತರರೂ ಈ ಕೇಂದ್ರಗಳು ಒದಗಿಸುವ ಸೌಲಭ್ಯವನ್ನು ಧಾರಾಳವಾಗಿ ಉಪಯೋಗಿಸಿಕೊಂಡರೆ ಅಧಿಕ ಕ್ಷೀರದ ಉತ್ಪಾದನೆಯಲ್ಲಿ ದೃಢವಾದ ಮತ್ತು ಪ್ರಗತಿಪರವಾದ ಹೆಜ್ಜೆಯನ್ನು ಮುಂದಿಟ್ಟಂತಾಗುತ್ತದೆ. ಹಸುರು ಮತ್ತು ಒಣಹುಲ್ಲು ಹಾಗು ಸೊಪ್ಪುಸದೆಗಳನ್ನೂ, ಹಿಂಡಿ ಹತ್ತಿಕಾಳು ಇತ್ಯಾದಿಗಳನ್ನೂ ಕರೆಯುವ ಆಕಳಿಗೆ ತಿನ್ನಿಸಿದರೆ ನಿಸ್ಸಂಶಯವಾಗಿಯೂ ಆಕಳನ ಹಾಲು ಕೊಡುವ ಶಕ್ತಿಯು ವೃದ್ಧಿಸುತ್ತದೆ. ಈ ಹಾಲನ್ನೆಲ್ಲ ಸಹಕಾರಿ ತತ್ವದ ಮೇಲೆ ಸಂಘಟಿಸಿದ ಜನೋಪಯೋಗಿ ಸಂಸ್ಥೆಗಳಿಂದ ನಾಗರಿಕರಿಗೆ ಸುಲಭದಲ್ಲಿ ಮುಟ್ಟಿಸಬಹುದು. ಮದ್ರಾಸು ರಾಜ್ಯದಲ್ಲಿ ಈಗಾಗಲೇ ಸುಮಾರು ೫೮೦ ಕೇಂದ್ರಗಳು ಈ ಕೆಲಸವನ್ನು ಮಾಡುತ್ತಲಿವೆಯಾಗಿ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಮದ್ರಾಸಿನಲ್ಲಿ ಕ್ಷೀರ ಸಪ್ತಾಹದ ಉದ್ಘಾಟನೆಯ ಸಮಯ ಮಾಡಿದ ಭಾಷಣದಿಂದ ತಿಳಿಯಬರುತ್ತದೆ. ಎರಡನೇ ಯೋಜನೆಯಲ್ಲಿ ರಾಜ್ಯದಲ್ಲಿ ಹಾಲು ಪೂರೈಕೆಮಾಡುವ ೧೫೦ ಸಂಘಗಳನ್ನು ಹೊಸತಾಗಿ ಪ್ರಾರಂಭಿಸಲು ಸರಕಾರ ಉದ್ದೇಶಿಸಿದೆ ಎಂದವರು ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ಹಾಲನ್ನು ಕೆಡದಂತೆ ಘನೀಕರಿಸಿ ಡಬ್ಬಿಯಲ್ಲಿ ಸಂಗ್ರಹಿಸಿಡುವ ಹಾಗು "ಪಾಶ್ಚರೈಸೇಶನ್" ಎಂದು ಸಾಮಾನ್ಯವಾಗಿ ಹೇಳಲಾಗುವ ರಕ್ಷಣಾಕ್ರಮವನ್ನು ಹಾಲಿಗೊದಗಿಸಿಕೊಡುವ ಯಾಂತ್ರಿಕ ಕೇಂದ್ರಗಳನ್ನು ನೆಲೆಗೊಳಿಸುವುದಕ್ಕೆ ಸಹ ಸರಕಾರ ಸಂಕಲ್ಪಿಸಿದೆ. ಕೃತಕ ಗರ್ಭಾದಾನದ ೨೦ ಕೇಂದ್ರಗಳನ್ನೂ ಉತ್ತಮ ತಳಿ ಸಂವರ್ಧನೆಯ ೧೨ ಸಹಕಾರಿ ಸಂಘಗಳನ್ನೂ ಹೊಸತಾಗಿ ಪ್ರಾರಂಭಿಸುವ ವಿಚಾರವೂ ಸರಕಾರಕ್ಕಿದೆ. ಜಾನುವಾರುಗಳ ರೋಗ ನಿಯಂತ್ರಣ ಹಾಗು ನಿವಾರಣೆಗಾಗಿ ೯೫ ಹೊಸ ಆಸ್ಪತ್ರೆಗಳನ್ನು ಸಂಘಟಿಸಲಾಗುವುದೆಂದೂ ಅಲ್ಲದೆ ಈ ಚಿಕಿತ್ಸೆಯಲ್ಲಿ ತರಬೇತಿ ಕೊಡುವ ಶಿಕ್ಷಣಸಂಸ್ಥೆಯನ್ನು ವಿಸ್ತೃತಗೊಳಿಸಿ ಈಗಿನ ೮೦ ಸ್ಥಾನದ ಬದಲು ೧೨೦ ಸ್ಥಾನವನ್ನು ಕಲ್ಪಿಸಿಕೊಟ್ಟು ಹೆಚ್ಚು ಜನರಿಗೆ ತಜ್ಞ ಅನುಭವ ಸಿಗಲು ಸರಕಾರ ನೋಡುವುದೆಂದೂ ಮಂತ್ರಿಗಳ ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಇವೆಲ್ಲವುಗಳ ಪ್ರಯೋಜನವನ್ನು ಜನರೆಲ್ಲ ಸಂಪೂರ್ಣವಾಗಿ ಪಡೆಯಬೇಕು; ಹಾಲಿಗೆ ಇತರ ವಸ್ತುಗಳನ್ನು ಬೆರೆಸಿ ಕೆಡಿಸುವ ಪ್ರವೃತ್ತಿಯನ್ನು ನಿಯಂತ್ರಿಸಲಿಕ್ಕೆ ಸಹ ಸರಕಾರ ವಿಶೇಷ ದಕ್ಷತೆ ವಹಿಸಬೇಕು— ಈ ಜಾಗ್ರತೆಯನ್ನು ಕ್ಷೀರ ಸಪ್ತಾಹ ನಮ್ಮಲ್ಲಿ ಹುಟ್ಟಿಸಲಿ ಎಂದಾಶಿಸುತ್ತೇವೆ.

ಕಾಂಗ್ರೆಸಿನ ಧ್ಯೇಯದ ಸ್ಪಷ್ಟ ಉಲ್ಲೇಖ

"ಸಮಾಜವಾದಿ ಸಹಕಾರಿ ಮಂಡಳ"ದ ಆದರ್ಶ

ಅಖಿಲ ಭಾರತ ಕಾಂಗ್ರೆಸಿನ ಸಭೆಯು ಈ ವಾರದ ಆದಿಯಲ್ಲಿ ಹೊಸ ದೆಹಲಿಯಲ್ಲಿ ನಡೆದಾಗ ಕಾಂಗ್ರೆಸಿನ ಧ್ಯೇಯ ನಿರೂಪಣೆಯನ್ನು ಬಹಳ ಸ್ಪಷ್ಟವಾಗಿ ಮಾಡುವ ಕುರಿತು ಒಂದು ತಿದ್ದುಪಡಿಯನ್ನು ಕಾಂಗ್ರೆಸಿನ ಘಟನೆಗೆ ಸೂಚಿಸಲಾಯಿತು. ಈ ತಿದ್ದುಪಡಿಯು "ಸಮಾಜವಾದಿ" ಎಂಬ ಹೊಸ ಶಬ್ದದ ಮೂಲಕ ಕಾಂಗ್ರೆಸು ಆವಡಿ ಅಧಿವೇಶನದಲ್ಲಿ ಪ್ರಕಟಗೊಳಿಸಿದ ತನ್ನ ಧೋರಣೆಯನ್ನು ಹೊಸ ಆವರಣಕ್ಕೆ ಒಪ್ಪುವಂತೆ ಮಾಡುತ್ತದೆ.

ಕಾಂಗ್ರೆಸಿನ ಧ್ಯೇಯ

ತಿದ್ದುಪಡಿ ಸ್ವೀಕಾರಗೊಂಡರೆ—ಅದು ಖಂಡಿತದ ಮಾತು— ಕಾಂಗ್ರೆಸಿನ ಧ್ಯೇಯ ನಿರೂಪಣೆಯನ್ನು ಹೀಗೆ ಮಾಡಬಹುದು: "ಭಾರತದ ಜನತೆಯ ಕಲ್ಯಾಣ ಮತ್ತು ಶಾಂತವಾದ ಹಾಗು ನ್ಯಾಯಸಮ್ಮತವಾದ ರೀತಿಯಲ್ಲಿ ಸಮಾನ ಅವಕಾಶ, ಹಾಗು ರಾಜಕೀಯ ಆರ್ಥಿಕ ಹಾಗು ಸಾಮಾಜಿಕ ಹಕ್ಕು ಬಾಧ್ಯತೆಗಳ ಮತ್ತು ಜಾಗತಿಕ ಶಾಂತಿ ಮತ್ತು ಬಂಧುಭಾವನೆಯ ಮೇಲೆ ನೆಲೆಗೊಂಡ ಸಮಾಜವಾದಿ ಸಹಕಾರಿ ಮಂಡಳದ ಸ್ಥಾಪನೆಯನ್ನು ಭಾರತದಲ್ಲಿ ಮಾಡುವುದೇ ಕಾಂಗ್ರೆಸಿನ ಧ್ಯೇಯ."

ಕಾಂಗ್ರೆಸಾಧ್ಯಕ್ಷರ ವ್ಯಸನ

ಕಾಂಗ್ರೆಸು ವರಿಷ್ಠರ ಈ ಸಭೆಯಲ್ಲಿ ರಾಜ್ಯಗಳ ಪುನಾರಚನೆಯ ಪ್ರಶ್ನೆಯೂ ಚರ್ಚಿಸಲ್ಪಟ್ಟಿತೆಂದು ತಿಳಿದು ಬರುತ್ತದೆ. ಕಾಂಗ್ರೆಸಿಗರು ದೇಶದ ಐಕ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾರತೀಯರು ತಾವೆಂಬ ಭಾವನೆಯಿಂದ ನಡೆಯದಿದ್ದುದಕ್ಕೆ ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ವಿಷಾದವನ್ನು ಈ ಸಭೆಯಲ್ಲಿ ವ್ಯಕ್ತಪಡಿಸಿದರೆಂದು ವರದಿಗಳು ಹೇಳುತ್ತವೆ.

ವಿಲಯನದ ಸೂಚನೆ

ಪಶ್ಚಿಮ ಬಂಗಾಲ ಮತ್ತು ಬಿಹಾರುಗಳ ಸೇರ್ಪಡೆಯ ವಿಷಯವು ಈಗ ಹೊಸ ಮುಖವನ್ನು ಪಡೆದಿದೆಯೆಂದು ವರ್ತಾರರೊಬ್ಬರು ಹೇಳಿದ್ದಾರೆ. ಪಶ್ಚಿಮ ಬಂಗಾಲದಲ್ಲಿ ಸೇರ್ಪಡೆಯ ಸೂಚನೆಗೆ ತುಂಬ ವಿರೋಧವಿದೆ. ಆದುದರಿಂದಲೇ ಸಾಮಾನ್ಯ ವಿಷಯಗಳ ಮಟ್ಟಿಗೆ ಪ್ರತ್ಯೇಕ ಅಸ್ತಿತ್ವವಿರುವ, ಆದರೆ ಉಭಯ ರಾಜ್ಯಗಳ ಒಟ್ಟು ಹಿತದೃಷ್ಟಿಯುಳ್ಳ ಸಂಗತಿಗಳ ಮಟ್ಟಿಗೆ ಸಂಯುಕ್ತ ಸ್ವರೂಪವನ್ನು ಹೊಂದುವ—ಸರಕಾರದ ರಚನೆಯನ್ನು ಇವೆರಡು ರಾಜ್ಯಗಳಿಗೆ ಮಾಡುವ ಸೂಚನೆಯು ಡಾ. ರಾಯ್ಯವರಿಂದ ಬಂದಿದೆ. ಬಿಹಾರದ ಮುಖ್ಯ ಮಂತ್ರಿಗಳು ಇದರ ಪರ್ಯಾಲೋಚನೆಗೆ ಸಮಯವನ್ನು ಅಪೇಕ್ಷಿಸಿದ್ದಾರೆ.

ಸಿಂಹಳದ ನಿಲುವು

ಸಿಂಹಳದಲ್ಲಿ ಶ್ರೀ ಭಂಡಾರನಾಯಕೆಯವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಹೊಸ ಮಂತ್ರಿ ಮಂಡಳವು ಸರಕಾರಿ ಭವನಗಳಲ್ಲಿಯೂ ಸಮಾರಂಭಗಳಲ್ಲಿಯೂ ಮಾದಕ ಪೇಯಗಳ ಉಪಯೋಗವನ್ನು ನಿರ್ಬಂಧಿಸಿದೆ. ಇಂಗ್ಲೆಂಡ ರಾಣಿಯವರು ಸಿಂಹಳದ ಪ್ರಜೆಗಳಿಗೆ ಯಾವುದೇ ಬಿರುದುಗಳನ್ನು ಕೊಡಲಾಗದೆಂದು ಸವಿನಯ ವಿನಂತಿಯನ್ನು ಅದು ಮಾಡಿಕೊಂಡಿದೆ. ಸೈನಿಕ ಠಾಣ್ಯಗಳನ್ನು ರದ್ದುಪಡಿಸಲು ಹಾಗು ಕಮ್ಯೂನಿಸ್ಟರೊಡನೆ ಸ್ನೇಹ ಸಂಬಂಧವನ್ನು ಬೆಳಸಲು ಅದು ತೀರ್ಮಾನಿಸಿದೆ.

ಪರಿಹಾರದ ನಿರಾಕರಣೆ

ನೆಕೋಚಾಲಿನಲ್ಲಿ ಕಳೆದ ವರ್ಷ ಗಡಿಯನ್ನು ಮೀರಿ ಬಂದು ಪಾಕಿಸ್ತಾನಿ ಸೈನಿಕರು ೧೨ ಮಂದಿಯನ್ನು ಕೊಂದ ಅಪರಾಧವು ಸಂಯುಕ್ತ ರಾಷ್ಟ್ರಸಂಘದ ನಿರೀಕ್ಷಕರಿಂದ ದೃಢೀಕರಿಸಲ್ಪಟ್ಟಿದ್ದಾಗ್ಯೂ ಮತ್ತು ಆಗಿನ ಪಾಕಿಸ್ತಾನಿ ಪ್ರಧಾನಿಗಳು ಭಾರತಕ್ಕೆ ಯೋಗ್ಯ ಪರಿಹಾರವನ್ನು ಈ ಸಂಬಂಧದಲ್ಲಿ ಕೊಟ್ಟು ತಪ್ಪುಮಾಡಿದ ಪಾಕಿಸ್ತಾನಿಗಳನ್ನು ಶಿಕ್ಷಿಸುವ ವಚನವಿತ್ತಿದ್ದಾಗ್ಯೂ ಇಷ್ಟರವರೆಗೆ ಏನೂ ಪ್ರಗತಿಯಾಗಿರಲಿಲ್ಲ. ಈಗ ಬಂದಿರುವ ಸುದ್ದಿಯಂತೆ ಪಾಕಿಸ್ತಾನಿ ಸರಕಾರವು ಪರಿಹಾರ ಕೊಡಲು ನಿರಾಕರಿಸಿದೆ.

ಕನ್ನಡಿಗರ ಸಮ್ಮೇಳನ

ಜಮ್‌ಶೆಡ್‌ಪುರದಲ್ಲಿ ಇದೇ ೧೪ನೇ ದಿನಾಂಕದಿಂದ ಹೊರನಾಡ ಕನ್ನಡಿಗರ ೧೯ನೇ ಸಮ್ಮೇಳನವು ಸೇರಿದೆ. ಪ್ರಸಿದ್ಧ ಇತಿಹಾಸಕಾರರಾದ ಡಾ. ಬಿ. ಎ ಸಾಲೆತೋರೆಯವರು ಈ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ, ಕನ್ನಡಿಗರ ಉದ್ಯಮಶೀಲತೆ, ಬುದ್ಧಿವಂತಿಕೆಗಳಿಗೆ ಪ್ರಾಚೀನ ಪರಂಪರೆಯಿದೆ ಮತ್ತು ಭವ್ಯ ಭವಿಷತ್ತಿದೆ ಎಂದಿದ್ದಾರೆ. ಬಿಹಾರಿನ ರಾಜ್ಯಪಾಲರಾದ ದಿವಾಕರ ರಂಗರಾಯರು ತಮ್ಮ ಸಂದೇಶದಲ್ಲಿ ಕನ್ನಡಿಗರೆಲ್ಲರೂ ತಾವು ಭಾರತೀಯರೆಂಬ ಭಾವನೆಯನ್ನು ಎಂದಿಗೂ ಬಿಟ್ಟುಕೊಡಬಾರದೆಂದು ಉಪದೇಶಿಸಿದ್ದಾರೆ.

ಕಾಸರಗೋಡು— ತಾ. 15ರಂದು ಡಾ. ಟಿ. ಮಾಧವ ಪೈಗಳು ಇಲ್ಲಿಗೆ ಬಂದಿದ್ದಾಗ ಅಧಿಕಾರಿಗಳನೇಕರಿಂದ ಹಾರ್ದಿಕ ಸ್ವಾಗತ ಪಡೆದರು. ಸರಕಾರಿ ಹುಡುಗರ ಶಾಲೆ, ಕೇಂದ್ರ ತೆಂಗು ಸಂಶೋಧನಾ ಕೇಂದ್ರಗಳನ್ನು ಸಂದರ್ಶಿಸಿ ಸಂತೃಪ್ತಿಪಟ್ಟರು. ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ರಾಮನಾಮ ಬ್ಯಾಂಕನ್ನು ಉದ್ಘಾಟಿಸಿದರು. ಸಂಜೆ ಮಾಯಿಪಾಡಿ ಬೇಸಿಕ್ ಟ್ರೈನಿಂಗ್ ಶಾಲೆಗೆ ಭೇಟಿಯಿತ್ತು ಗೌರವಿಸಲ್ಪಟ್ಟರು. ಅಲ್ಲದೆ ಪ್ರಚಲಿತ ವಿಚಾರಗಳ ಕುರಿತು ವಿಚಾರ ಪ್ರಚೋದಕ ಭಾಷಣಗೈದರು.

ವೈಜ್ಞಾನಿಕ ಶಿಕ್ಷಣಕ್ಕೆ ಪ್ರೋತ್ಸಾಹ

ಕೆನರಾ ಬೇಂಕಿನ ಯೋಜನೆ

ರಾಷ್ಟ್ರಾಭಿವೃದ್ಧಿ ಕಾರ್ಯವು ಔದ್ಯಮಿಕ ಹಾಗು ವೈಜ್ಞಾನಿಕ ರಂಗದ ಚಟುವಟಿಕೆಯನ್ನು ವಿಶೇಷವಾಗಿ ಅವಲಂಬಿಸಿದೆ ಎನ್ನುವುದು ಎಲ್ಲರೂ ಒಪ್ಪಿರುವ ವಿಷಯ. ದೇಶದ ಏಳಿಗೆಯನ್ನು ಸಂಪೂರ್ಣವಾಗಿ ಸಾಧಿಸುವ ಉತ್ಕಟೇಚ್ಛೆಯುಳ್ಳ ಯಾರೇ ಆಗಲಿ ತಾಂತ್ರಿಕ ಹಾಗು ವೈಜ್ಞಾನಿಕ ಕ್ಷೇತ್ರದಲ್ಲಿ ನೈಪುಣ್ಯ ಸಂಪಾದಿಸಬೇಕೆನ್ನುವ ವಿಚಾರವನ್ನು ಅಲ್ಲಗಳೆಯುವಂತಿಲ್ಲ. ನಮ್ಮಲ್ಲಿ ಒಳ್ಳೆಯ ಬುದ್ಧಿವಂತರಿದ್ದಾರೆ; ಯೋಗ್ಯತಾವಂತರಿದ್ದಾರೆ— ಆದರೆ ಅವರಲ್ಲಿ ಹೆಚ್ಚಿನವರು ಉತ್ತಮಾವಕಾಶ ಹಾಗು ಅನುಕೂಲತೆಗಳ ಅಭಾವವೇ ಕಾರಣವಾಗಿ ಬೆಳಕಿಗೆ ಬರಲಾಗದೆ ಉಳಿದಿದ್ದಾರೆ ಎಂಬುದು ತೀರ ವಿಷಾದಕರ. ವೈಜ್ಞಾನಿಕ ಹಾಗು ಔದ್ಯಮಿಕ ಕ್ಷೇತ್ರದಲ್ಲಿ ವಿಶೇಷ ಮುನ್ನಡೆಯನ್ನು ಸಾಧಿಸಲು ಸಾಮಾನ್ಯ ಶಿಕ್ಷಣಪಡೆದ ಜನರು ಸಾಲದು; ತಜ್ಞರ ಆವಶ್ಯಕತೆಯೇ ಇಲ್ಲಿ ಹೆಚ್ಚು. ಉಚ್ಚಮಟ್ಟದ ಶಿಕ್ಷಣವಿಲ್ಲದೆ, ತಜ್ಞರೆನಿಸುವಷ್ಟು ನೈಪುಣ್ಯವನ್ನು ತಾಂತ್ರಿಕ ಹಾಗು ಸಂಶೋಧನಾತ್ಮಕ ಕ್ಷೇತ್ರದಲ್ಲಿ ಸಂಪಾದಿಸಲಾಗುವುದಿಲ್ಲ. ಒಳ್ಳೆಯ ಶೈಕ್ಷಣಿಕ ಅರ್ಹತೆ ಇದ್ದವರಿಗಾದರೂ ಹಣಾಭಾವವು ಆತಂಕವಾಗಿ ಪರಿಣಮಿಸಿ ಶ್ರೇಷ್ಠವಾದ ಉಚ್ಚ ಶಿಕ್ಷಣವು ಸಿಗದೆ ಹೋಗುವ ಪರಿಸ್ಥಿತಿ ಬಂದ ನಿದರ್ಶನಗಳು ನಮ್ಮ ಕಣ್ಣ ಮುಂದೆಯೇ ಅನೇಕ ಆಗಿ ಹೋಗಿರುತ್ತವೆ. ಈ ವಿಷಮ ಪರಿಸ್ಥಿತಿಯನ್ನು ಸುಧಾರಿಸಲು ಎಲ್ಲಿಂದಾದರೂ ನಾವು ಪ್ರಯತ್ನವೊಂದನ್ನು ತೊಡಗದಿದ್ದರೆ ರಾಷ್ಟ್ರಾಭ್ಯುದಯವನ್ನು ಕ್ಷಿಪ್ರ[illegible]ಲ್ಲಿ ಸಾಧಿಸುವ ಅಭೀಷ್ಟವು ನೆರವೇರಲಾರದು. ಸರಕಾರದ ಕಡೆಯಿಂದ ಶಿಕ್ಷಣ ಸೌಕರ್ಯಗಳನ್ನು ವಿಸ್ತರಿಸುವ ಕೆಲಸ ಸ್ವಲ್ಪ ಮಟ್ಟಿಗೆ ನಡೆಯುತ್ತಿದೆಯೇನೋ ನಿಜ— ಆದರೆ ಖಾಸಗಿ ರಂಗದ ಚಟುವಟಿಕೆಯೂ ಇದರೊಡನೆ ಸೇರಿಕೊಳ್ಳುವುದು ಅಪೇಕ್ಷಣೀಯ. ಇಂಥ ಸಮಯೋಚಿತವಾದ ಮತ್ತು ಅತ್ಯಾವಶ್ಯಕವಾದ ಸಹಾಯ ಮತ್ತು ಸಹಕಾರವನ್ನು ಈಗ, ಜಿಲ್ಲೆಯಲ್ಲಿ ಸ್ಥಾಪಿತವಾದ ಶೆಡ್ಯೂಲ್ಡ್ ಬ್ಯಾಂಕುಗಳಲ್ಲೆಲ್ಲ ದೊಡ್ಡದೆನಿಸಿರುವ ಮತ್ತು ಈ ವರ್ಷದಲ್ಲಿ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಿರುವ, ಕೆನರಾ ಬ್ಯಾಂಕಿನ ನಾಯಕ ಮಂಡಲದವರು ನೀಡಲು ಮುಂದೆ ಬಂದಿದ್ದಾರೆ. ಅವರು ತಮ್ಮ ಬ್ಯಾಂಕಿನ ಸ್ಥಾಪಕರಾದ ದಿವಂಗತ ಶ್ರೀ ಎ. ಸುಬ್ಬರಾಯ ಪೈಗಳಿಗೆ ಹೊಳೆದಿದ್ದ ಸ್ಪೃಹಣೀಯ ಯೋಜನೆಯೊಂದನ್ನು ಬ್ಯಾಂಕಿನ ಸುವರ್ಣೋತ್ಸವದ ಸ್ಮಾರಕಾರ್ಥವಾಗಿ ಜ್ಯಾರಿಗೆ ತರಲು ತೀರ್ಮಾನಿಸಿದ್ದಾರೆ. ಇದರನ್ವಯ **"ಕೆನರಾ ಬ್ಯಾಂಕ್ ಗೋಲ್ಡನ್ ಜ್ಯುಬಿಲಿ ಎಜುಕೇಶನ್ ಫಂಡ್"** ಎಂಬ ಸಂಸ್ಥೆಯನ್ನು "ಸೊಸೈಟೀಸ್ ರಿಜಿಸ್ಟ್ರೇಶನ್ ಆ್ಯಕ್ಟ್" ಪ್ರಕಾರ ಸಂಘಟಿಸಲಾಗುತ್ತದೆ. ಈ ಸಂಸ್ಥೆಯು ಯೋಗ್ಯತಾವಂತ ವಿದ್ಯಾರ್ಥಿಗಳಿಗೆ ತಾಂತ್ರಿಕ, ವೈಜ್ಞಾನಿಕ (ಹಾಗು ಸಾಮಾನ್ಯ ವಿಷಯದಲ್ಲಿ ಸಹ) ಉಚ್ಚ ಶಿಕ್ಷಣವನ್ನು ಹೊಂದುವುದಕ್ಕೋಸ್ಕರ ಕನಿಷ್ಟದ ಬಡ್ಡಿಯ ಮೇಲೆ (ಅದು ೪%) ಹಣವನ್ನು ಸಾಲವಾಗಿ ಕೊಡುತ್ತದೆ. ಶಿಕ್ಷಣವು ಮುಗಿದ ಪ್ರಥಮ ವರ್ಷದಿಂದ ಈ ಸಾಲವನ್ನು ನಿಗದಿಗೊಳಿಸಿದ ಸುಲಭ ಕಂತುಗಳಲ್ಲಿ ಅಂಥ ವಿದ್ಯಾರ್ಥಿಗಳು ಮರುಪಾವತಿಮಾಡಬೇಕೆಂಬ ಶರ್ತವು ಈ ಸಾಲಕ್ಕಿದೆ. ಬ್ಯಾಂಕಿನ ಆಡಳಿತಗಾರರು "ದಿ ಸುಬ್ಬರಾವ್ ಮೆಮೋರಿಯಲ್ ಫಂಡ್" ಎಂಬ ಹೆಸರಿನಲ್ಲಿ ಈಗಾಗಲೇ ಅಸ್ತಿತ್ವದಲ್ಲಿದ್ದು ಹಲವು ವರ್ಷಗಳಿಂದ ಉಪರೋಕ್ತ ಮಾದರಿಯಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಸಲ್ಲಿಸುತ್ತಿರುವ ಸಂಸ್ಥೆಯ ಅನುಭವದ ಬಲವನ್ನು ಹೊಂದಿದ್ದಾರೆ. ಈ ಹಳೆಯ ಸಂಸ್ಥೆಯು ೧೫೦೦೦ ರೂಪಾಯಿಗಳ ನಿಧಿಯಿಂದ ಕೆಲಸವನ್ನು ಪ್ರಾರಂಭಿಸಿತೆಂದೂ ಈಗ ನಿಧಿಯ ಪ್ರಮಾಣವು ೧೪೫೦೦೦ ರೂಪಾಯಿಗೇರಿದೆಯೆಂದೂ ತಿಳಿದುಬರುತ್ತದೆ. ಸಾಲ ಪಡೆದ ವಿದ್ಯಾರ್ಥಿಗಳಲ್ಲಿ ಎಲ್ಲೋ ಕೆಲವರು ಮಾತ್ರ ಹಣವನ್ನು ಮರುಪಾವತಿ ಮಾಡಲು ತಪ್ಪಿದ್ದರು— ಇದನ್ನಾದರೂ ಮರುಪಾವತಿ ಪಡೆಯಲು ಯೋಗ್ಯ ವ್ಯವಸ್ಥೆಯ ಅಭಾವದ ಪರಿಣಾಮವೆಂದೇ ಹೇಳಬಹುದು. ಅದಾಗ್ಯೂ ನಿಧಿಯು ಬಡ್ಡಿರೂಪದ ಆದಾಯ ಮತ್ತಿತರ ರೀತಿಯಿಂದ ಇಷ್ಟು ಹೆಚ್ಚು ಬೆಳೆದಿದೆ ಎಂದ ಮೇಲೆ ಸಾಲಗಳನ್ನು ಯೋಗ್ಯ ತಕ್ಷಗಳ ಮೇಲೆಯೇ ನೀಡುವ ಜಾಗರೂಕತೆಯೂ ಅದನ್ನು ಮರಳಿ ಪಡೆಯಲುತಕ್ಕ ಅನೇಕ ಶಾಖೆಗಳದ್ದೂ ಆಡಳಿತೆಯ ಅನುಕೂಲತೆಯೂ ಇರುವ ಕೆನರಾ ಬ್ಯಾಂಕಿಗೆ ಈ ಯೋಜನೆಯನ್ನು ಕಾರ್ಯಗತಗೊಳಿಸುವುದು ಕಠಿಣವಾಗಲಾರದು. ಬ್ಯಾಂಕಿನ ಸದ್ಯದ ನಿರ್ಧಾರದಂತೆ ಇದೇ ಶಾಲಾ ವರ್ಷದಿಂದ (೧೯೫೬) ಒಂದೊಂದು ಸಾವಿರ ರೂಪಾಯಿಗಳ ಎರಡು ವಾರ್ಷಿಕ ವಿದ್ಯಾರ್ಥಿ ವೇತನಗಳನ್ನು ಕೊಡಲಾಗುತ್ತದೆ. ಇವುಗಳಲ್ಲಿ ಒಂದು ಬ್ಯಾಂಕಿನ ಸಂಸ್ಥಾಪಕರಾದ ದಿವಂಗತ ಶ್ರೀ ಎ. ಸುಬ್ಬರಾಯ ಪೈಗಳ ಹೆಸರಿನಲ್ಲಿಯೂ ಇನ್ನೊಂದು, ಮೂವತ್ತಾರು ವರ್ಷಗಳ ಕಾಲ ಬ್ಯಾಂಕಿನ ಸಂಬಂಧವನ್ನು ಮೊದಲು ಡೈರೆಕ್ಟರರಾಗಿ ಮತ್ತು ಮುಂದೆ ಅಧ್ಯಕ್ಷರಾಗಿ ಪಡೆದು ಕೀರ್ತಿಶೇಷರಾದ ಶ್ರೀ ಎ. ಶ್ರೀನಿವಾಸ ಪೈಗಳ ಹೆಸರಿನಲ್ಲಿಯೂ ಏರ್ಪಟ್ಟಿದೆ. ಇದಲ್ಲದೆ ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಸಹ ಕೆಲವು ಬಹುಮಾನಗಳನ್ನು ಬ್ಯಾಂಕಿನ ಪರವಾಗಿ ಏರ್ಪಡಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ಬ್ಯಾಂಕು ೫೦೦೦೦ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಸದ್ಯಕ್ಕೆ ವ್ಯಯಿಸಲಿದೆ. ಈ ನಿಮಿತ್ತ ಏರ್ಪಡಿಸಲಾಗಿರುವ ಸಂಸ್ಥೆಗೆ ವಂತಿಗೆಯನ್ನು ೧೦೦ ರೂಪಾಯಿಗಳ ಕನಿಷ್ಠ ಮಿತಿಗೊಳಪಟ್ಟು ಸಾರ್ವಜನಿಕರು ಸಹ ಸಲ್ಲಿಸಬಹುದು ಹತ್ತು ಸಾವಿರ ರೂಪಾಯಿಗಳ ಏಕ ಗಂಟಿನ ವಂತಿಗೆ ಕೊಡುವ ಉಪಕಾರಿಗಳು ಕೆಲವು ವಿಶೇಷ ಅರ್ಹತೆಗಳನ್ನು ಪಡೆಯುತ್ತಾರೆ. ಆದುದರಿಂದ ವಿದ್ಯಾಭಿಮಾನಿಗಳೂ ರಾಷ್ಟ್ರಾಭಿವೃದ್ಧಿಯಲ್ಲಿ ಆಸಕ್ತರೂ ಆದೆಲ್ಲ ಜನರು ಈ ಸಂಸ್ಥೆಯೊಡನೆ ಸಹಕರಿಸುವರೆಂದು ಆಶಿಸಿದರೆ ಅದು ತಪ್ಪಾಗಲಾರದು. ಕೆನರಾ ಬ್ಯಾಂಕಿನ ಈ ಯೋಜನೆಯು ಹಿಂದುಳಿದ ದೇಶದ ಪುರೋಗತಿಗೆ ನೆರವಾಗುವ ಒಂದು ಅನುಕರಣೀಯ ಉಪಾಯವೆಂದು ನಾವು ಭಾವಿಸಿದ್ದೇವೆ.

ತಾ. 18—4—56ರಿಂದ ತಾ. 21—4—56ರ ವರೆಗೆ ದ. ಕ. ಜಿಲ್ಲಾ ಸಂಚಾರ ಕೈಗೊಂಡಿರುವ ಮದ್ರಾಸಿನ ಶಾಸನ, ವಿದ್ಯಾ ಮತ್ತು ಆರ್ಥಿಕ ಮಂತ್ರಿ **ಶ್ರೀ ಸಿ. ಸುಬ್ರಹ್ಮಣ್ಯಂ, ಬಿ. ಎ., ಬಿ. ಎಲ್., ಎಂ. ಎಲ್. ಎ. ಅವರು.**
[ಸಂಚಾರ ಕಾರ್ಯಕ್ರಮ ಇನ್ನೊಂದು ಪುಟದಲ್ಲಿ ಕೊಟ್ಟಿದೆ.]

ಉಡುಪಿ

ಅಧಿಕ ಕ್ಷೀರ ಸಪ್ತಾಹವನ್ನು— ತಾ. 13ರಲ್ಲಿ ಸ್ಥಳೀಯ ಕೋಪರೇಟಿವ್ ಮಿಲ್ಕ್ ಸಪ್ಲೈ ಸೊಸೈಟಿಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳು ಉದ್ಘಾಟಿಸಿದರು. ಡಾ. ಟಿ. ಎಮ್. ಎ. ಪೈಗಳು ಸಮಾರಂಭದ ಅಧ್ಯಕ್ಷತೆವಹಿಸಿದ್ದರು ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್, ಎಮ್. ಶ್ರೀನಿವಾಸ ರಾವ್, ಕೆ. ಲಿಂಗಪ್ಪಯ್ಯ, ರಾಮ ರಾವ್ ಮೊದಲಾದವರು ಸಾಂದರ್ಭಿಕ ಮಾತುಗಳನ್ನಾಡಿದರು. ಬಳಿಕ ಹಾಲು ಸೇವನಾ ಕಾರ್ಯಕ್ರಮವಾಯಿತು. ಶ್ರೀ ಎಮ್. ವಾಮನಭಟ್ಟರು ಧನ್ಯವಾದಗಳನ್ನಿತ್ತರು.

ನಗರಸಭೆಯು— ತಾ. 14ರಲ್ಲಿ ಸಂಜೆ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸೊಳ್ಳೆಗಳನ್ನು ಧ್ವಂಸಮಾಡತಕ್ಕ ಔಷಧಿಯನ್ನು ಕೊಂಡುಕೊಳ್ಳಲು ಹಣ ಮಂಜೂರುಮಾಡಬೇಕೆನ್ನುವ ಆಫೀಸು ನೋಟಿನ ಕುರಿತು ತುಂಬಾ ಚರ್ಚೆ ನಡೆದು ಕೊನೆಗೆ ಹೆಲ್ತ್ ಆಫೀಸರು ತಕ್ಕ ಭರವಸೆ ಕೊಟ್ಟನಂತರ ಹಣ ಮಂಜೂರಾಯಿತು. ಫೀಲ್ಡ್ ಅಸಿಸ್ಟಂಟ್ ಹುದ್ದೆಯನ್ನು ಮಾತ್ರ ಒಂದು ವರ್ಷಕ್ಕೆ ಸೇಂಕ್ಷನ್ ಮಾಡಲಾಯಿತು. ಮೇಸ್ತ್ರಿ ಮತ್ತು ಮಜದೂರು ಇವರುಗಳನ್ನು ಜೂನ್, ಜುಲೈ, ಆಗೋಸ್ತು ತಿಂಗಳುಗಳಲ್ಲಿ ವಜಾ ಮಾಡಿ ಉಳಿದ ಒಂಭತ್ತು ತಿಂಗಳುಗಳಿಗೆ ಮಾತ್ರ ಸೇಂಕ್ಷನ್ ಮಾಡಲಾಯಿತು. ಮುನಿಸಿಪಲ್ ಶಾಲೆಗಳಲ್ಲಿ ಬೇಸಿಕ್ ಶಿಕ್ಷಣಕ್ಕೆ ಬೇಕಾಗುವ ಸಲಕರಣೆಗಳನ್ನು ಕೊಂಡುಕೊಳ್ಳುವರೆ ಕೌನ್ಸಿಲಿನ ಅನುಮತಿ ದೊರೆಯಿತು.

ಶಾಲಾ ಕಟ್ಟಡದ ಉದ್ಘಾಟನೆ— ಬುಡ್ನಾರು ಎಲಿಮೆಂಟರಿ ಶಾಲೆಗೆ ಸ್ಥಳೀಯ ಅಭಿವೃದ್ಧಿ ಯೋಜನೆಯಂತೆ ಕಟ್ಟಿಸಿದ ಭವನದ ಉದ್ಘಾಟನೆಯನ್ನು ತಾ. 16ರಂದು ಜಿಲ್ಲಾ ಕಲೆಕ್ಟರರಾದ ಶ್ರೀ ಎಮ್. ಜಿ. ರಾಜಾರಾಮರು ನೆರವೇರಿಸಿದರು. ಸಭಾಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈ, ಎಂ. ಎಲ್. ಎ; ಇವರು ವಹಿಸಿದ್ದರು. ಕಲೆಕ್ಟರರು ಈ ಸಂದರ್ಭದಲ್ಲಿ ಮಾತನಾಡುತ್ತಾ ಜಿಲ್ಲೆಯಲ್ಲಿ ವೆಚ್ಚವಾದ ಏಳು ಲಕ್ಷಕ್ಕೆ ಸ್ವಲ್ಪ ಹೆಚ್ಚಿನ ಹಣದಲ್ಲಿ ನಾಲ್ಕು ಲಕ್ಷಕ್ಕಿಂತ ಹೆಚ್ಚು ಹಣದ ಪ್ರಯೋಜನವನ್ನು ಉಡುಪಿ ಮತ್ತು ಆಸುಪಾಸಿನ ಜನರು ಪಡೆದು ತಮ್ಮ ಉತ್ಸಾಹ ಮತ್ತು ಕ್ರಿಯಾಶಕ್ತಿಯನ್ನು ಪ್ರದರ್ಶಿಸಿದರೆಂದೂ ಎರಡನೇ ಯೋಜನೆಯ ಕಾಲಾವಧಿಯಲ್ಲಿ ಪ್ರತಿಯೊಂದೂ ಗ್ರಾಮಗಳವರು ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮುಂದೆ ಬರಬೇಕೆಂದೂ ಹೇಳಿದರು. ಈ ಸಂದರ್ಭದಲ್ಲಿ ಉಡುಪಿ ಉತ್ತರಶ್ರೇಣಿಯ ಶಾಲಾ ಪರೀಕ್ಷಾಧಿಕಾರಿಗಳಾದ ಶ್ರೀ ಬಿ. ಪಿಂಟೋ ರವರು ಮಹಾತ್ಮಾ ಗಾಂಧಿಯವರ ಭಾವಚಿತ್ರ ಅನಾವರಣ ಗೈದು ಮೂಲಶಿಕ್ಷಣದ ಮಹತ್ವವನ್ನು ವಿವರಿಸಿದರು. ಮುಖ್ಯೋಪಾಧ್ಯಾಯ ಶ್ರೀ ಬಿ. ಶಂಕರ ಶೆಟ್ಟರು ಧನ್ಯವಾದವನ್ನಿತ್ತ ಬಳಿಕ ಮನೋರಂಜನೆಯೊಡನೆ ಕಾರ್ಯಕ್ರಮ ಕೊನೆಗೊಂಡಿತು.

ವಿವಾಹ ಸಮಾರಂಭಗಳು— ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಎಸ್. ಎನ್ ಮತಾಯಸರ ಪುತ್ರಿ ಶ್ರೀಮತಿ ಸುಕುಮಾರಿಯು ಮಂಗಳೂರಿನ ಆರ್. ಡಿ. ಪುರ್ತಾದೋರ ಪುತ್ರ ಶ್ರೀಯುತ ಚಾರ್ಲ್ಸ್‌ರನ್ನು ತಾ. 16ರಲ್ಲು ಜೆಪ್ಪು ಯು. ಬಿ ಎಮ್. ಶಾಂತಿ ದೇವಾಲಯದಲ್ಲಿ ವಿವಾಹವಾದರು ಈ ಸಂಬಂಧ ವಧುವಿನ ಉಡುಪಿ ನಂದನವನ ನಿವಾಸದಲ್ಲಿ ತಾ.18ರಲ್ಲು ಉಪಾಹಾರ ಸತ್ಕಾರವಿತ್ತು.

ಕುಂದಾಪುರದ ಶ್ರೀ ಕೆ. ನಾರಾಯಣನವರ ಅಳಿಯ ಶ್ರೀ ರತ್ನಾಕರನವರು ಕಾಸರಗೋಡಿನ ಶ್ರೀ ಕೆ. ಶ್ರೀನಿವಾಸನವರ ಪುತ್ರಿ ಶ್ರೀಮತಿ ಸೀತಾರವರನ್ನು ತಾ. 14ರಲ್ಲು ಕಾಸರಗೋಡಿನ ನಳ್ಳಿಪಾಡಿ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಲಗ್ನವಾದರು. ತತ್ಸಂಬಂಧ ತಾ. 17ರಲ್ಲು ವರನ ಉಡುಪಿ 'ಹಾಮ್ ಗ್ರೇವ್' ಸದನದಲ್ಲಿ ಉಪಾಹಾರ ಸತ್ಕಾರ ಜರಗಿತು.

ಟಿ. ಎ. ಪೈಗಳಿಗೆ ಸನ್ಮಾನಪತ್ರ— ಕೊಡುವ ಸಮಾರಂಭವು ಸ್ಥಳೀಯ ಫ್ರೆಂಡ್ಸ್ ಯೂನಿಯನ್ ವತಿಯಿಂದ ತಾ. 12ರಲ್ಲು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪೈಗಳು ತಮ್ಮ ಭಾಷಣದಲ್ಲಿ ಶಾಸನ ಸಭಾ ಸದಸ್ಯರ ಕರ್ತವ್ಯವೇನೆಂಬುದನ್ನು ವಿವರಿಸಿ ಉಡುಪಿಯ ಜನರು ತಮಗೆ ಯಾವಾಗಲೂ ಸಹಾಯಕರಾಗಿ ನಿಂತುದುದಕ್ಕಾಗಿ ಉಡುಪಿ ಜನರನ್ನು ಅಭಿನಂದಿಸಿದರು. ಸಭಾಧ್ಯಕ್ಷರು ಶ್ರೀ ಪೈಗಳ ಕರ್ತವ್ಯಶೀಲತನವನ್ನು ಪ್ರಶಂಸಿಸಿ ಪ್ರಜಾಪ್ರಭುತ್ವ ಪದ್ಧತಿಗಳನ್ನು ವಿವರಿಸಿದರು.

ಕದಿಯೂರು— ಜ್ಯೂರ್ ರಿಫೋರ್ಮ್ ಕಮಿಟಿಯ ವತಿಯಿಂದ ಸಭೆಯೊಂದು ತಾ. 15ರಂದು ಶ್ರೀ ವಿಷ್ಣುಮೂರ್ತಿ ದೇವಾಲಯದಲ್ಲಿ ಶ್ರೀ ಕೆರೋಡಿ ನರಸಿಂಹ ರಾಯರ ಅಧ್ಯಕ್ಷತೆಯಲ್ಲಿ ಸೇರಿ ವಿಚಾರವಿನಿಮಯವಾಗಿ, ಯುಕ್ತ ಕಾರ್ಯಕ್ರಮ ಕೈಕೊಳ್ಳುವ ಬಗ್ಗೆ ಸಮಿತಿಯೊಂದು ರಚಿಸಲ್ಪಟ್ಟಿದೆಯಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹಿರಿಯಡಕ— ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದಲ್ಲಿ ಕಾಲಂಪ್ರತಿ ಜರಗುವ ಮಹಾರಥೋತ್ಸವ ಕಾರ್ಯಕ್ರಮಗಳು ಇದೇ ತಾ. 25ರಿಂದ ತಾ. 30ರ ತನಕ ಜರಗುವವೆಂದೂ ಸರ್ವರೂ ಬರಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ ಎ. ಜಗಂಜೀವ ಅಳ್ವರು ಅಪೇಕ್ಷಿಸುತ್ತಾರೆ.

(೫ನೇ ಪುಟದಿಂದ)

ಮತ್ತು ಸೈನಿಕ ಒಪ್ಪಂದಗಳ ಕುರಿತು ನೆಹರು ಮಾಡಿರುವ ಟೀಕೆ ನ್ಯಾಯವಾದುದಲ್ಲ—ಭಾರತವು ಸಹ ಹೊರದೇಶಗಳಿಂದ ಆರ್ಥಿಕಸಹಾಯಸ್ವೀಕರಿಸುತ್ತಿದೆ; ಇದರಿಂದ ತನ್ನದೇಶದೊಳಗಿನ ಸಂಪತ್ತನ್ನು ಸೈನ್ಯಬಲವೃದ್ಧಿಗೆ ಉಪಯೋಗಿಸಲು ಅದಕ್ಕೆ ಸಾಧ್ಯವಾಗುತ್ತದೆ. ಅದೀಗ ಈ ಕಾರ್ಯದಲ್ಲಿಯೇ ನಿರತನಾಗಿದೆ ಎಂದು ಪಾಕಿಸ್ತಾನಿ ವಿದೇಶ ಮಂತ್ರಿಗಳು ಹೇಳಿದರು. ಪಾಕಿಸ್ತಾನವು ಈಗ ತಾನೆ ಇರಾನಿನ ರಾಜಧಾನಿ ಟೆಹರಾನಿನಲ್ಲಿ ತೊಡಗಿರುವ ಬಗ್ದಾದ್ ಒಪ್ಪಂದ ರಾಷ್ಟ್ರಗಳ ಸಭೆಯಲ್ಲಿ ಕಾಶ್ಮೀರ ಪ್ರಶ್ನೆಯನ್ನೆತ್ತುವುದೆಂದೂ ಅವರು ಹೇಳಿದರು.

ಮಹಮ್ಮದಾಲಿಗಳ ಅಭಿಪ್ರಾಯ

ಆದರೆ ತನ್ನ ವಿದೇಶ ಮಂತ್ರಿಗಳ ಹೇಳಿಕೆಯಲ್ಲಿ ಅಸತ್ಯಾಂಶಗಳಿಷ್ಟು ಇವೆ ಎಂಬುದನ್ನು ಪಾಕಿಸ್ತಾನಿ ಪ್ರಧಾನಿಗಳು ತಮ್ಮ ಹೇಳಿಕೆಗಳ ಮೂಲಕ ಸಾರ್ವಜನಿಕರಿಗೆ ಮುಂದಟ್ಟು ಪಡಿಸಿದರೆನ್ನಬಹುದು. ೧೯೫೦ರಲ್ಲಿ ಪಾಕಿಸ್ತಾನಿ ಪ್ರಧಾನಿ ಲಿಯಾಕತಾಲಿ ಖಾನರಿಗೂ ೧೯೫೫ರಲ್ಲಿ ಮಹಮ್ಮದಾಲಿಗಳಿಗೂ ನೆಹರುಗಳು ಕಾಶ್ಮೀರ ವಿಭಜನೆಯ ಸೂಚನೆಯನ್ನು ತಿಳಿಸಿದ್ದರೆಂದೂ ಆದರೆ ಪಾಕಿಸ್ತಾನವು ಇದನ್ನೆಂದೂ ಒಪ್ಪಿದ್ದಿಲ್ಲವೆಂದೂ ಅವರು ತಿಳಿಸಿದ್ದಾರೆ. ಕಾಶ್ಮೀರ ವಿಭಜನೆಯ ಸೂಚನೆಯನ್ನು ಪುನಃ ಮುಂದಿಟ್ಟು ನೆಹರುಗಳು ಜನಮತ ಗಣನೆಯ ಕುರಿತು ತಾವು ಅಂತಾರಾಷ್ಟ್ರೀಯ ಸ್ವರೂಪದಲ್ಲಿ ಒಪ್ಪಿದ್ದ ವಿಷಯದ ಹೊರಗೆ ಜಾರುತ್ತಿದ್ದಾರೆಂದು ಪಾಕಿಸ್ತಾನಿ ಪ್ರಧಾನಿ ಪುನಃ ಆರೋಪಿಸಿದ್ದಾರೆ. "ಭಾರತ ಮತ್ತು ಪಾಕಿಸ್ತಾನಗಳಲ್ಲದೆ— ಕಾಶ್ಮೀರದ ಜನರೆಂಬ ಮೂರನೇ ಪಕ್ಷವೊಂದು ಈ ಸಮಸ್ಯೆಗಿದೆ. ತಮ್ಮ ರಾಜ್ಯವು ಎಲ್ಲಿ ಸೇರಬೇಕೆಂದು ನಿರ್ಧರಿಸುವುದು ಕಾಶ್ಮೀರದ ಜನರ ಕೆಲಸ. ಇದಕ್ಕೆ ಒತ್ತಾಯ ಮತ್ತು ಭಯ ಪ್ರದರ್ಶನ ರಹಿತವಾದ ಸ್ವತಂತ್ರ ವಾತಾವರಣದಲ್ಲಿ ಜನಮತ ಗಣನೆಯೇ ಸಹಾಯಕರ" ಎಂದು ಅವರು ವಾದಿಸಿದ್ದಾರೆ. ಆದರೆ ಟೆಹರಾನಿನಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಎತ್ತುವ ಹುಮ್ಮಸ್ಸು ಅವರಿಗೆ ಉಳಿದಿಲ್ಲ. ಸಿಯಾಟೊ ಪರಿಷತ್ತಿನಲ್ಲಿ ಕಾಶ್ಮೀರದ ಕುರಿತು ಸ್ವೀಕರಿಸಿದ ಗೊತ್ತುವಳಿಗೆ ಭಾರತದಿಂದ ತೀವ್ರ ನಿಷೇಧ ಬಂದುದರಿಂದಲೂ ಇತರ ರೀತಿಯಲ್ಲಿ ಭಾರತದೊಡನೆ ಮೈತ್ರಿಯಿಂದಿರುವ ರಾಷ್ಟ್ರಗಳಿಗೆ ಕಾಶ್ಮೀರ ಸಮಸ್ಯೆಯಲ್ಲಿ ಅನಾವಶ್ಯಕವಾಗಿ ಕೈ ಹಾಕಿ ಈ ಸ್ನೇಹವನ್ನು ಪಾಕಿಸ್ತಾನದ ಒತ್ತಾಯಕ್ಕೆ ಕಟ್ಟುಬಿದ್ದು ಕಳೆದುಕೊಳ್ಳುವ ಇಚ್ಛೆ ಅಷ್ಟಾಗಿ ಇಲ್ಲದಿರುವುದರಿಂದಲೂ ಪಾಕಿಸ್ತಾನಿ ಧುರೀಣರ ಇಚ್ಛೆಗೆ ಟೆಹರಾನಿನ ಸಭೆ ಸೈಗುಟ್ಟಲ್ಲ.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗದ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.
ನವಯುಗ, ಉಡುಪಿ.

ಮದ್ರಾಸು ಸಿನೇಟ್ ಚುನಾವಣೆ

ಶ್ರೀಮತಿ ಲಿಯೋಸಿಸಾ ಎಮ್. ಫೆರ್ನಾಂಡೀಸರ ಆಯ್ಕೆ

ಮಂಗಳೂರು ಮತ್ತು ಉಡುಪಿ ನಗರ ಸಭೆಗಳ ಪರವಾಗಿ ಇರುವ ಮದ್ರಾಸು ಸಿನೇಟಿನ ಒಂದು ಸ್ಥಾನಕ್ಕೆ ಶ್ರೀಮತಿಯವರು ಸ್ಪರ್ಧಿಸಿ ಬಹುಮತದಿಂದ ಇದೇ ತಾ 17ರಂದು ಜಯ ಗಳಿಸಿರುವರು. ಶ್ರೀಮತಿಯವರು ನಿವೃತ್ತ ಹೆಡ್ಮಾಸ್ತರ್ ಶ್ರೀ ರೋಬ್ ಫೆರ್ನಾಂಡೀಸ್‌ರವರ ಧರ್ಮಪತ್ನಿಯಿರುವರು.

ಶ್ರೀಮತಿ ಫೆರ್ನಾಂಡೀಸರು 1928ರಿಂದ 1948ರ ತನಕ ಫಸ್ಟ್ ಕ್ಲಾಸ್ ಬೆಂಚಿನ ಗೌರವ ಮೆಜಿಸ್ಟ್ರೇಟ್ ಆಗಿದ್ದರು. ಸಾಧಾರಣ 15 ವರ್ಷಗಳವರೆಗೆ ಬೆಂಚ್ ಮೆಜಿಸ್ಟ್ರೇಟ್ಸರ ಉಪಾಧ್ಯಕ್ಷೆಯಿದ್ದರು. ನಗರ ಸಭೆಗೆ ಅವಿರೋಧವಾಗಿ ಕಾಂಗ್ರೆಸ್ ಟಿಕೇಟಿನಿಂದ ಆರಿಸಲ್ಪಟ್ಟ ಇವರು ಈಗ ಟೌನ್ ಪ್ಲಾನಿಂಗ್ ಕಮಿಟಿ, ಎಡ್ಯುಕೇಶನ್ ಮತ್ತು ಜಿಮ್ಖಾನಾ ಕಮಿಟಿಗಳ ಸದಸ್ಯೆಯಾಗಿರುವರು. ಅಲ್ಲದೆ ಉಡುಪಿಯ ವಿಮೆನ್ಸ್ ಕೊಟೇಜ್ ಇಂಡಸ್ಟ್ರೀಸ್ ಮತ್ತು ಗವರ್ನಮೆಂಟ್ ಆಸ್ಪತ್ರೆ ಎಡ್ವೈಸರಿ ಕಮಿಟಿ, ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯ ಎಡ್ವೈಸರಿ ಕಮಿಟಿ, ಬಿಡುಗಡೆಯಾದ ಕೈದಿಗಳ ಸಹಾಯಕ ಕಮಿಟಿ, ಹೆಲ್ತ್ ಎಂಡ್ ವೆಲ್‌ಫೇರ್ ಸೆಂಟರ್ ಮೆಂಬರರಿರುವರು. ಉಡುಪಿ ಸಬ್ ಜೈಲಿನ ಅಧಿಕಾರೇತರ ಸಂದರ್ಶಕರೂ ಆಗಿರುವರು.

ಇವರಿಗೆ 38 ಮತಗಳೂ ಪ್ರತಿಸ್ಪರ್ಧಿ ಶ್ರೀ ಎನ್. ಸೀತಾರಾಮ ಕಾಮತರಿಗೆ 17 ಮತಗಳೂ ದೊರೆತು ಇವರು ಪ್ರಚಂಡ ವಿಜಯ ಗಳಿಸಿರುವರು.

ಜಿಲ್ಲಾ ನಾಟಕೋತ್ಸವ— ದ. ಕ. ಜಿಲ್ಲಾ ಸಂಗೀತ ನಾಟಕ ಏಕೆಡಮಿಯ ಆರಂಭೋತ್ಸವವನ್ನು ತಾ. 30ರಲ್ಲಿ ರಾತ್ರಿ 9½ ಗಂಟೆಗೆ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ, ಅವರು ನಗರಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ, ಡೋನ್ ಬೋಸ್ಕೊ ಹಾಲಿನಲ್ಲಿ ಜರಗಿಸಲಿರುವರು.

ಭಾಷಣ— ತಾ. 15ರಲ್ಲು ಮಂಗಳೂರು ಪತ್ರಿಕೋದ್ಯಮಿಗಳ ಸಂಘದ ಸಭೆಯಲ್ಲಿ, ಪತ್ರಿಕೋದ್ಯಮಿ ಶ್ರೀ ಆರ್. ಕೆ ಪ್ರಭುಗಳು ಪತ್ರಿಕೋದ್ಯಮದಲ್ಲಿಯ ತನ್ನ ಅನುಭವಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ ಕೆ. ಆರ್. ಆಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು.

ಯೂತ್ ಕಾಂಗ್ರೆಸಿನ ಸಪ್ತಾಹಿಕ ಧ್ವಜವಂದನೆಯು ತಾ. 15ರಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೆ. ಸೆಟ್ಟರ ಕಾಲೋಚಿತ ಭಾಷಣಾನಂತರ ಶ್ರೀ ಎಮ್. ಎಲ್. ಸೆಟ್ಟರು ಧನ್ಯವಾದಗಳನ್ನಿತ್ತರು.

ಶಾಲಾ ವರ್ಧಂತಿ— ತಾ. 15ರಲ್ಲಿ ಕಾಪಿಕಾಡು ಮುನಿಸಿಪಲ್ ಹಾ. ಎ. ಶಾಲೆಯ ವರ್ಧಂತ್ಯುತ್ಸವವು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಪಾ. ಎಚ್. ದೇವದಾಸ ಅಧ್ಯಾಪಕರು ಸ್ವಾಗತವಾತುಗಳನ್ನಾಡಿದರು. ಶ್ರೀಮತಿ ಸರೋಜಿನಿ ಅಡಿಗರು ಬಹುಮಾನ ವಿತರಣೆಮಾಡಿದರು.

ಫರಂಗಿಪೇಟೆ— ಈ ಕೇಂದ್ರದ ಅಧ್ಯಾಪಕರ ಸಂಘದ ವಾರ್ಷಿಕೋತ್ಸವವು ತಾ 11ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸುಮುಹೂರ್ತದಲ್ಲಿಯೇ ಬೇಗನೆ ನಿವೃತ್ತರಾಗಲಿರುವ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರಿಗೆ ಸಂಘದ ಕಡೆಯಿಂದ ಮಾನಪತ್ರ ಅರ್ಪಿಸಲಾಯಿತು. ಡಾ. ಕೆ. ನಾಗಪ್ಪ ಆಳ್ವರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಸ್. ನರಸಿಂಹಯ್ಯ, ಎನ್. ಕೃಷ್ಣ ಭಟ್, ವೈ. ಗೋಪಾಲ್, ಮ॥ ರಾ॥ ನಾರಾಯಣ ಮೊದಲಾದವರು ಶ್ರೀ ಭಟ್ಟರಿಗೆ ಶುಭವನ್ನು ಕೋರಿ ಮಾತನಾಡಿದರು.

ಬೆಳಿಲು—ಇಲ್ಲಿಯ ಶ್ರೀ ಸರಸ್ವತಿ ಬುನಾದಿ ಎಯಿಡೆಡ್ ಎಲಿಮೆಂಟರಿ ಶಾಲಾ ದಿನವು ತಾ. 2ರಲ್ಲಿ ಶ್ರೀ ಎಚ್. ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮರುದಿವಸ ಹೆತ್ತವರ ದಿನಾಚರಣೆಯು ಶ್ರೀ ವಾಸುದೇವ ನಾಯ್ಕರ ಅಧ್ಯಕ್ಷತೆಯಲ್ಲಿಯೂ ಸಾಂಗವಾಗಿ ಜರಗಿತು.

ನಿಂಜೂರು—ಶ್ರೀ ವಿವೇಕಾನಂದ ಸೇವಾ ಸಂಘದ ವಿಶೇಷ ಸಭೆಯು ತಾ. 7ರಲ್ಲಿ ಡಾ! ಎ. ಎಲ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ರಾತ್ರಿ ಯಕ್ಷಗಾನ ಕೂಟವು ಯಶಸ್ವಿಯಾಗಿ ನಡೆಯಿತು.

ಎರ್ಮಾಳ- ತಾ, 11ರಲ್ಲು ಜರಗಿದ ತೆಂಕ ಪಂಚಾಯತ ಬೋರ್ಡು ಅಧ್ಯಕ್ಷರ ಚುನಾವಣೆಯಲ್ಲಿ ಶ್ರೀ ವೈ. ಲಕ್ಷ್ಮಣ ನವರು ಅವಿರೋಧವಾಗಿ ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟಿರುವರು.

ಬಪ್ಪನಾಡು- ಸ್ಥಳೀಯ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಇದೇ ತಾ. 23ನೇ ಸೋಮವಾರ "ಶ್ರೀ ದೇವಿಗೆ" ಬ್ರಹ್ಮಕಲಶಾಭಿಷೇಕ ನಡೆಯಲಿರುವುದೆಂದು ಅದರ ಮೊಕ್ತೇಸರ ಶ್ರೀ ಎಮ್. ರಾಮಣ್ಣ ಸೆಟ್ಟರು ತಿಳಿಸುತ್ತಾರೆ.

ಪಕ್ಕಳ— ಸ್ಥಳೀಯ ಬಿ. ಯಂ. ಹಾ| ಎ| ಶಾಲೆಯ ವರ್ಧಂತ್ಯುತ್ಸವವು ತಾ. 15ರಲ್ಲು ಶ್ರೀ ಟಿ. ಎ. ಪೈ ಎಮ್.ಎಲ್.ಎ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪಕ್ಕಳ ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ಎಚ್. ಸದಾಶಿವ ಹೆಗ್ಡೆಯವರು ಧ್ವಜಾರೋಹಣ ಮಾಡಿದರು. ಶ್ರೀ ಬಾಳಬೆಟ್ಟುಬೀಡು ಕೃಷ್ಣಯ್ಯ ಹೆಗ್ಗಡೆಯು ಮಕ್ಕಳ ಕ್ರೀಡಾರಂಗವನ್ನು ಉದ್ಘಾಟಿಸಿದರು. ಆರಂಭದಲ್ಲಿ ಮುಖ್ಯೋಪಾಧ್ಯಾಯ ಶ್ರೀ ರಾಜೀವ ಕೋಟ್ಯಾನರು ಸ್ವಾಗತಿಸಿ ವರದಿಯನ್ನೋದಿದರು. ಶ್ರೀ ಎಚ್. ವಿಠಲ ಸೆಟ್ಟರು ಸ್ವಸ್ತಿವಾಚನ ಮಾಡಿದರು. ಶ್ರೀ ಬಿ. ಪಿಂಟೋರವರು ಬಹುಮಾನವಿತರಣೆ ಮಾಡಿದರು. ಹಳೆ ವಿದ್ಯಾರ್ಥಿ ಸಂಘದ ಸಭೆಯೂ ಜರಗಿ ಶ್ರೀ ಪಿ. ಮಂಜುನಾಥ ಶ್ಯಾನುಭಾಗರನ್ನು ಗೌರವಿಸಲಾಯಿತು. ಅಧ್ಯಕ್ಷ ಭಾಷಣ, ಮಕ್ಕಳ ವಿವಿಧ ಮನರಂಜನ ಕಾರ್ಯಕ್ರಮ ಆಗಿ ಸಭಾಂತ್ಯವಾಯಿತು.

ಕೆಳಾರ್ಕಳ ಬೆಟ್ಟು—ಸ್ಥಳೀಯ ಕೋಟಾಧ್ಯಾಯ ಶಾಲಾ ಹೊಸ ಕಟ್ಟಡದ ಉದ್ಘಾಟನೆಯು ತಾ. 14ರಲ್ಲು ಸಂಜೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳಿಂದ ನೆರವೇರಿಸಲ್ಪಟ್ಟಿತು. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಾತ್ರಿ ವೆಂಕಟೇಶ ಯಕ್ಷಗಾನ ಮಂಡಳಿಯವರಿಂದ ಯಕ್ಷಗಾನ ತಾಳಮದ್ದಳೆ ಜರಗಿತು.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 4?6-N /50 ತಾ. 12-12 50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ 'ತಾಯ್ತಂದೆ'ಗಳಾಗಿದ್ದಾರೆ.

ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628 "ಸಂತಾನ ಸಿಂಧೂರ ಸದನ" (N. Y.)
ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು. (MYSORE) S. I.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3¼%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಅಳಿಯ ಸಂತಾನ ಪದ್ಧತಿ ಮತ್ತು ಹಿಂದು ವಾರೀಸು ಹಕ್ಕು ಮಸೂದೆ

ಮಂತ್ರಿ ಪಾಟಸ್ಕರರಿಗೆ ಮನವಿಗಳು.

ಕೇಂದ್ರ ಸರಕಾರದ ಕಾನೂನು ಇಲಾಖೆಯ ಮಂತ್ರಿ ಶ್ರೀ ಎಚ್. ವಿ. ಪಾಟಸ್ಕರರು ಅಳಿಯ ಸಂತಾನ ಪದ್ಧತಿ ಹಾಗೂ ಹಿಂದೂ ವಾರೀಸು ಹಕ್ಕು ಮಸೂದೆಯು ಈ ಪದ್ಧತಿಯನ್ನನುಸರಿಸುವವರ ಹಿತ ಸಂಬಂಧಗಳ ಮೇಲೆ ಯಾವ ಪರಿಣಾಮ ಮಾಡುವುದೆಂಬುದನ್ನು ಸ್ವತಃ ಅಧ್ಯಯನಮಾಡುವುದಕ್ಕಾಗಿ ತಾ. 14 ರಂದು ಬೆಳಿಗ್ಗೆ ಏರ್ನಾಕುಳಂನಿಂದ ರೈಲಿನ ಮೂಲಕ ಮಂಗಳೂರಿಗೆ ಆಗಮಿಸಿದರು. ಮಂತ್ರಿಗಳು ಪ್ರಮುಖರಿಂದ ಸ್ವಾಗತಿಸಲ್ಪಟ್ಟು ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಬಂದು, ಅಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣವಿತ್ತರು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ। ಯು. ಪಿ. ಮಲ್ಯರು ಮಂತ್ರಿಗಳನ್ನು ಸ್ವಾಗತಿಸುತ್ತಾ, ಇಡಿಯ ಕಾಸರಗೋಡು ತಾಲೂಕನ್ನು ನಿಯೋಜಿತ ಕೇರಳ ರಾಜ್ಯಕ್ಕೆ ಸೇರಿಸುವ ನಿರ್ಣಯದಿಂದ ಕಾಸರಗೋಡು ತಾಲೂಕಿನ ವಿಶೇಷವಾಗಿ ಚಂದ್ರಗಿರಿ ನದಿಯ ಉತ್ತರಕ್ಕಿರುವ ಕಾಸರಗೋಡಿನ ಜನತೆಯಲ್ಲಿ ಉಂಟಾಗಿರುವ ತೀವ್ರ ವೇದನೆಯನ್ನು ಅವರ ಮುಂದಿಟ್ಟು, ಚಂದ್ರಗಿರಿ ನದಿಯ ಉತ್ತರ ಭಾಗವನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವುದಕ್ಕಾಗಿ ಜನರು ಮಾಡುತ್ತಿರುವ ಶಾಂತಿಯುತ ಹೋರಾಟವನ್ನು ಅವರ ಗಮನಕ್ಕೆ ತಂದುಕೊಟ್ಟರು.

ಮಂತ್ರಿಗಳು ಮಾತನಾಡುತ್ತಾ, ಸ್ವಾತಂತ್ರ್ಯದ ಆರಂಭದಲ್ಲಿ ರಾಷ್ಟ್ರವು ಎದುರಿಸಬೇಕಾಗಿ ಬಂದ ಸಂಕಷ್ಟಗಳನ್ನು ಪ್ರಸ್ತಾಪಿಸಿ, ರಾಷ್ಟ್ರವನ್ನು ಆಂತರಿಕವಾಗಿ ಹಾಗೂ ಅಂತರ್ರಾಷ್ಟ್ರೀಯವಾಗಿ ಕಾಂಗ್ರೆಸ್ ಪಕ್ಷವು ಮಾತ್ರವೇ ಉನ್ನತ ಮಟ್ಟದಲ್ಲಿಡಬಲ್ಲುದೆಂದರು. ರಾಷ್ಟ್ರದ ಐಕ್ಯತೆ ಹಾಗೂ ಹಿತಕ್ಕೆ ಬಾಧಕವಾಗುವಂತಹ ಕ್ಷುಲ್ಲಕ ವಿಚಾರಗಳಿಗಾಗಿ ಕಚ್ಚಾಡದೆ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಬೇಕೆಂದರು. ಕಾಂಗ್ರೆಸ್ ಕಾರ್ಯಕರ್ತರನ್ನು ಕೇಳಿಕೊಂಡು, ಕಾಸರಗೋಡಿನ ಭವಿಷ್ಯದ ಬಗ್ಗೆ ಅಲ್ಲಿಯ ಜನರಲ್ಲಿರುವ ವೇದನೆಯನ್ನು ಸರಕಾರವು ಮನಗಂಡಿದೆ ಎಂದರು. ಸಣ್ಣಪುಟ್ಟ ಸಮಸ್ಯೆಗಳಿಗಾಗಿ ಚಳವಳಿಗಳಿಗೆ ತೊಡಗದೆ ಪರಸ್ಪರ ವಿಚಾರ ವಿನಿಮಯದಿಂದ ಬಗೆಹರಿಸಿಕೊಳ್ಳಬೇಕೆಂದು ವಿನಂತಿಸಿದರು. ಶ್ರೀ ಕೆ.ಕೆ.ಶೆಟ್ಟರು ವಂದನೆಗಳನ್ನರ್ಪಿಸಿದರು. ಬಳಿಕ ಅಳಿಯ ಸಂತಾನ ಹಿಂದು ಕೋಡ್ ಲೀಗಿನ ಪರವಾಗಿ ಮಂತ್ರಿಗಳಿಗೆ ಮನವಿಯೊಂದು ಅರ್ಪಿಸಲ್ಪಟ್ಟಿತು. ಮನವಿಯ ಕುರಿತು ನಡೆದ ಚರ್ಚೆಯಲ್ಲಿ ಡಾ ಕೆ. ನಾಗಪ್ಪ ಆಳ್ವ, ಡಾ ಕೆ. ಕೆ. ಹೆಗ್ಡೆ, ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ, ಶ್ರೀಗಳಾದ ಬಿ. ಎಸ್. ಭಾಸ್ಕರ ರೈ ಎ. ಶಂಕರ ಆಳ್ವ, ಬಿ. ಆರ್. ಕರ್ಕೇರ ಮೊದಲಾದವರು ಭಾಗವಹಿಸಿದ್ದರು. ಮನವಿಯಲ್ಲಿ ಹೇಳಲಾದ ಪ್ರಮುಖ ವಿಷಯಗಳು: "ಸರ್ವಾನ್ವಯ ಸಾಮಾಜಿಕ ಪದ್ಧತಿಯನ್ನು ವ್ಯವಸ್ಥಾಪನೆ ಮಾಡುವ ಪ್ರಾರಂಭಿಕ ಹೆಜ್ಜೆಯಾಗಿ, ಎಲ್ಲಾ ಹಿಂದೂ ಮತಸ್ಥರಿಗೂ ಒಂದೇ ರೀತಿಯ ಕಾನೂನು ಅನ್ವಯಿಸುವಂತಾಗಬೇಕೆಂದು ಸರಕಾರವು ಕೈಗೊಂಡ ನಿರ್ಣಯವನ್ನು ಅಳಿಯ ಸಂತಾನಿಗರು ಸ್ವಾಗತಿಸುತ್ತಾರೆ.

ಮದ್ರಾಸು ಅಳಿಯ ಸಂತಾನ ಕಾನೂನು 1949 ಇದರ ಮೇರೆಗೆ ಕವರುಗಳಿಗೆ ಅಥವಾ ಕುಟುಂಬದ ಒಬ್ಬ ಸದಸ್ಯನಿಗೆ ದೊರಕುವ ಹಿಸೆಯು ಒಟ್ಟು ಆಸ್ತಿಯ ಅರ್ಧಾಂಶ ತಲೆ ಸರ್ತಿ ಮತ್ತೆ ಅರ್ಧಾಂಶ ಕವರು ಸರ್ತಿ ದೊರೆತಿದ್ದು ಇದರಿಂದ ತೀರಾ ಅನ್ಯಾಯವಾಗಿದೆ. ಅಲ್ಲದೆ 50 ವರ್ಷ ಪ್ರಾಯದ ಒಳಗಿನ ಹೆಂಗಸಿಲ್ಲದ ಒಂದು ಕವರಿಗೆ ಬರಿಯ ಜೀವನಾಂಶ ಮಾತ್ರ ದೊರಕುತ್ತಿದ್ದು, ಈ ಮಸೂದೆಯನ್ನು ಹಿಂದೂ ವಾರೀಸು ಹಕ್ಕು ಮಸೂದೆಯಲ್ಲಿ ಸೇರಿಸಲಿಕ್ಕೆ ಸಾಧ್ಯವಿಲ್ಲವಾಗಿದೆ.

ಪ್ರಕೃತದ ಮದ್ರಾಸು ಅಳಿಯಸಂತಾನ ಕಾನೂನನ್ನು ನಿಯೋಜಿತ ಹಿಂದೂ ವಾರೀಸು ಹಕ್ಕು ಮಸೂದೆಯಲ್ಲಿ ಹಾಗೆಯೇ ಸೇರಿಸಿಬಿಡುವುದರಿಂದ, ಅಳಿಯ ಸಂತಾನಿಗರು ಎರಡು ತರದ ಕಾನೂನುಗಳಿಗೆ ತಲೆಬಾಗಬೇಕಾದ ವಿಲಕ್ಷಣ ಪರಿಸ್ಥಿತಿಯೊದಗುವುದರಿಂದ, ಅಳಿಯ ಸಂತಾನ ಸಮಷ್ಟಿ ಕುಟುಂಬದ ಕವರು ಅಥವಾ ವ್ಯಕ್ತಿಯು ಹಿಂದೂ ವಾರೀಸು ಹಕ್ಕು ಮಸೂದೆಯು ಜ್ಯಾರಿಗೆ ಬಂದಂದಿನಿಂದ ತಲೆ ಸರ್ತಿ ಪಾಲನ್ನು ಪಡೆಯಲು ಬಾಧ್ಯವಾಗಿರಬೇಕು.

ಮಂತ್ರಿಗಳು ಮನವಿಗೆ ಉತ್ತರವೀಯುತ್ತಾ, ಒಂದು ಸರ್ವಾನ್ವಯ ಪದ್ಧತಿಯನ್ನಪೇಕ್ಷಿಸುವ ಅಳಿಯ ಸಂತಾನಿಗರ ಪ್ರಗತಿಪರ ಭಾವನೆ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ಮಂತ್ರಿಗಳು ನಂತರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನಕ್ಕೆ ತೆರಳಿ ಅಲ್ಲಿ ಸೇರಿದ ಅಳಿಯ ಸಂತಾನಿಗರ ಸಭೆಯಲ್ಲಿ ಭಾಗವಹಿಸಿದರು. ಶ್ರೀ ಜಿ. ಸೋಮಶೇಖರ ರಾಯರು ಸಭಾಧ್ಯಕ್ಷತೆವಹಿಸಿದ್ದರು ಶ್ರೀ ಬಿ.ಬಿ. ಶೆಟ್ಟರು ಸ್ವಾಗತ ಭಾಷಣ ಮಾಡಿದರು ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ, ಅಳಿಯ ಸಂತಾನ ಪದ್ಧತಿಯ ಮುಖ್ಯಾಂಶಗಳನ್ನು ವಿವರಿಸಿ, ಅಳಿಯ ಸಂತಾನಿಗರ ಹಿತದೃಷ್ಟಿಯಿಂದ ಹಿಂದೂ ವಾರೀಸು ಹಕ್ಕು ಮಸೂದೆಯ 7ನೆ ಕಲಮಿನಲ್ಲಿ ತಿದ್ದುಪಡಿ ಮಾಡಬೇಕಾದುದು ಅಗತ್ಯವೆಂದು ಅಭಿಪ್ರಾಯಪಟ್ಟು, ಒಂದು ಅಳಿಯ ಸಂತಾನಿಗನು ತನ್ನ ಸಮಷ್ಟಿ ಕುಟುಂಬದ ಆಸ್ತಿಯಿಂದ ಪಡೆದ ಪಾಲು ಆತನ ನಿಧನಾನಂತರ ಆತನ ಕುಟುಂಬಕ್ಕೆ ಸೇರುವ ಬದಲು, ಆ ಆಸ್ತಿಯು ಆತನ ಮಕ್ಕಳಿಗೆ ಸೇರುವಂತಾಗಬೇಕೆಂದರು. ದ. ಕ. ಜಿಲ್ಲೆಯ ಜೈನ ಮತಸ್ಥರ ಪರವಾಗಿ ಶ್ರೀ ಎಸ್. ಡಿ. ಸಾಮ್ರಾಜ್ಯರು ಮಾನ್ಯ ಮಂತ್ರಿಗಳಿಗೆ ಒಂದು ಮನವಿಯನ್ನರ್ಪಿಸಿ, ಜಿಲ್ಲೆಯ ಜನಾಂಗಕ್ಕೆ ಸರ್ವಾನ್ವಯವಾದ ಹಿಂದೂ ವಾರೀಸು ಹಕ್ಕು ಮಸೂದೆಯು ಅನ್ವಯಿಸುವಂತಾಗಬೇಕೆಂದು ಕೇಳಿಕೊಂಡರು. ಪುತ್ತೂರು ತಾಲೂಕಿನ ಅಳಿಯ ಸಂತಾನಿಗರ ಪರವಾಗಿ ಶ್ರೀ ಎಮ್. ಸೀತಾರಾಮ ರೈಗಳು ಮನವಿಯನ್ನಿತ್ತರು. ಮದ್ರಾಸು ಅಳಿಯ ಸಂತಾನ ಕಾನೂನಿನಲ್ಲಿ ಅಳಿಯ ಸಂತಾನ ಕುಟುಂಬದ ಪುರುಷ ಸದಸ್ಯನ ಹಕ್ಕಿನ ಅಪಹಾರವಾಗಿದೆಯಾದ್ದರಿಂದ ಈ ಮಸೂದೆಯನ್ನು ಬರ್ಖಾಸ್ತು ಗೊಳಿಸಿ, ಹಿಂದೂ ವಾರೀಸು ಹಕ್ಕು ಮಸೂದೆಯೇ ಸರ್ವಾನ್ವಯವಾಗುವಂತೆ ಮಾಡಬೇಕೆಂದು ಮನವಿಯಲ್ಲಿ ಹೇಳಲಾಗಿತ್ತು. ಮಂತ್ರಿ ಶ್ರೀ ಎಚ್. ವಿ. ಪಾಟಸ್ಕರರು ಹಿಂದೂ ವಾರೀಸು ಹಕ್ಕು ಮಸೂದೆಯು ಲೋಕಸಭೆಯ ಮುಂದೆ ಬರುವಾಗ, ದ. ಕ. ಜಿಲ್ಲೆಯ ಅಳಿಯ ಸಂತಾನಿಗರ ಸೂಚನೆಗಳನ್ನು ಗಮನಿಸಿ ಅವಶ್ಯಕ ಬದಲಾವಣೆ ಮಾಡುವುದಾಗಿಯೂ ಆಶ್ವಾಸನೆಯಿತ್ತರು.

ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಕರ್ನಾಟಕದಲ್ಲೇ ಇರಗೊಡಿಸುವಂತೆ ಪ್ರಯತ್ನಿಸಬೇಕಾಗಿ ಶ್ರೀಗಳಾದ ಕೆ. ಸುಂದರರಾವ ಶೆಟ್ಟಿ, ಬಿ. ಜಗನ್ನಾಥ ರೈ, ಎಮ್. ಕೆ. ದೇವರಾಜ್, ಡಾ ಬಿ. ಆರ್. ಹೆಗ್ಡೆ, ಡಾ. ಎ. ಆರ್. ಆಳ್ವ, ಎಚ್. ಮುತಾಬಲ ರೈ, ಮೊದಲಾದವರು ಮಂತ್ರಿಗಳನ್ನು ವಿನಂತಿಸಿದರು.

ಬಳಿಕ ಮಂತ್ರಿಗಳು ಗೋಮಟೇಶ್ವರ ವಿಗ್ರಹವನ್ನು ನೋಡುವುದಕ್ಕಾಗಿ ಕಾರ್ಕಳಕ್ಕೆ ತೆರಳಿ, ಅಲ್ಲಿ ಹಿಂದೂ ವಾರೀಸು ಹಕ್ಕು ಮಸೂದೆಗೆ ಸಂಬಂಧಿಸಿ, ಅಲ್ಲಿಯ ಜೈನರು ಒಪ್ಪಿಸಿದ ಮನವಿಯನ್ನು ಸ್ವೀಕರಿಸಿ ಮಂಗಳೂರಿಗೆ ಹಿಂತೆರಳಿ ಸಂಜೆಯ ರೈಲಿನಲ್ಲಿ ಕೋಝಿಕೋಡಿಗೆ ತೆರಳಿದರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 74/56

ಶಿವಯ್ಯ ಬಳೆಗಾರ. — ವಾದಿ

ದುರ್ಗಿ ಯಾನೆ ಚಂದಮ್ಮ ಸೆಡ್ತಿ — ಪ್ರತಿವಾದಿ

ಕುಂದಾಪುರ ತಾಲೂಕು ಅಸೋಡು ಗ್ರಾಮದಲ್ಲಿರುವ ಕತ್ತಿಕಟ್ಟೆ ಕೆಳಮನೆ ಶೀನಸೆಡ್ತಿ ಮಗಳು ದುರ್ಗಿ ಯಾನೆ ಚಂದಮ್ಮ ಸೆಡ್ತಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ.

ಪ್ರತಿವಾದಿಯು ವಾದಿಗೆ ತಾ. 19.1.1949 ರಲ್ಲಿ ರೂ. 500—0 0ಕ್ಕೆ ರಿ. ನಿಶಿ ಬರಕೊಟ್ಟ ಈಡು ದಸ್ತಾವೇಜಿನ ಬಾಬ್ತು ಅಸ್ಲು ಬಡ್ಡಿ ಋಣಗಳನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲುಮಾಡಿದ ಮೇಲಿನ ದಾವೆಯು ತಾ. 27-4-1956 ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwataiah.
Advocate for Plff.
Date 13—4—56. Coondapoor,

ದ. ಕ. ಜಿಲ್ಲೆಯಲ್ಲಿ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ರವರ ತಾ. 18ರಿಂದ 21ರ ವರೆಗಿನ ಕಾರ್ಯಕ್ರಮ—

ಮದ್ರಾಸಿನ ಅರ್ಥಿಕ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ಇದೇ ತಾ. 18ರಲ್ಲಿ ಕೊಯಮುತ್ತೂರಿನಿಂದ ಮಂಗಳೂರಿಗೆ ಬೆಳಿಗ್ಗೆ 10 ಗಂಟೆಗೆ ಆಗಮಿಸಿ 10-45ಕ್ಕೆ ಕಳ್ಳಿಗೆಗೆ ಹೋಗಿ ಅಲ್ಲಿಯ ನೀರು ಸರಬರಾಯಿ ಯೋಜನೆಯನ್ನು ಪರಿಶೀಲಿಸುವರು. 11.44ರಿಂದ 12-30ರ ವರೆಗೆ ಶ್ರೀ ರಾಮಕೃಷ್ಣ ಮಿಶನ್ ಮತ್ತು ಹಾಸ್ಟೆಲು 12-30ಕ್ಕೆ ವಿಜಯ ಬ್ಯಾಂಕ್ ಕಟ್ಟಡದಲ್ಲಿರುವ ಲೋಕಲ್ ಆಡಿಟ್ ಆಫೀಸು ಸಂದರ್ಶಿಸಿ ಮಧ್ಯಾಹ್ನ ತುಸು ವಿಶ್ರಮಿಸುವರು. ಅಪರಾಹ್ನ 1-30 ಕ್ಕೆ ಮಂಗಳೂರಿನಿಂದ ಹೊರಟು 4-30ಕ್ಕೆ ಮಣಿಪಾಲಕ್ಕೆ ಆಗಮನ. ಸಂಜೆ 5ರಿಂದ 6ರ ವರೆಗೆ ಎಮ್. ಜಿ. ಎಮ್. ಕಾಲೇಜಿನ ವಿದ್ಯಾರ್ಥಿ ಭವನದ ಶಂಕುಸ್ಥಾಪನೆ. 6ರಿಂದ 6.30 ಉಡುಪಿ ನಗರಸಭೆಯ ಮಾನಪತ್ರ ಸ್ವೀಕಾರ. ರಾತ್ರಿ ಭೋಜನ ತೀರಿಸಿ ಉಡುಪಿ ತಾಲೂಕು ಹಿಂದೀ ಪ್ರಚಾರ ಸಭೆಯಲ್ಲಿ ಸರ್ಟಿಫಿಕೇಟ್ ವಿತರಣೆ.

ತಾ. 19—4—56 ಗುರುವಾರ ಬೆಳಗ್ಗೆ ಬ್ರಹ್ಮಾವರಕ್ಕೆ ಹೋಗಿ 8—30ರಿಂದ ಅಲ್ಲಿಯ ಹಾಸ್ಪಿಟಲ್ ಕಟ್ಟಡವನ್ನು ಉದ್ಘಾಟಿಸಿ ಮುಂದೆ ಪ್ರವಾಸ ಬೆಳೆಸಿ ಬನ್ನಾಡಿಯ ಜಾನುವಾರು ಪ್ರದರ್ಶನವನ್ನು ತೆರೆಯುವರು. ಮಧ್ಯಾಹ್ನ ಊಟವನ್ನು ಬಾರ್ಕೂರು ಶಾಲೆಯಲ್ಲಿ ಮುಗಿಸಿ ಅಪರಾಹ್ನ 2 ಗಂಟೆಗೆ ಉಡುಪಿಗೆ ಆಗಮಿಸಿ 3ರಿಂದ 3-45ರ ವರೆಗೆ ಬಿ. ಇ. ಎಮ್. ಶಾಲೆಯ ಶತಮಾನೋತ್ಸವದ ಸಭಾಧ್ಯಕ್ಷತೆ ವಹಿಸುವರು. ಸಂಜೆ 5ಕ್ಕೆ ಉಡುಪಿಯಿಂದ ಹೊರಟು ಮುಕ್ಕನೊಗರಿಗೆ ಹೋಗಿ ಅಲ್ಲಿಯ ಸೇತುವೆಯನ್ನು ತೆರೆಯುವರು. ಬಳಿಕ ಬಂಟ್ವಾಳಕ್ಕೆ ಬಂದು ರಾತ್ರಿ ಊಟತೀರಿಸಿ ಮಂಗಳೂರಿಗೆ ಬಂದು ತಂಗುವರು.

ತಾ 20—4—56 ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಹೊಸ ಕಟ್ಟಡದ ಶಂಕುಸ್ಥಾಪನೆ ಮಾಡುವರು. 9ಗಂಟೆಗೆ ಜಿಲ್ಲಾ ಬೋರ್ಡಿಗೆ ಸಂದರ್ಶನವಿತ್ತು 9-30ರಿಂದ 11ರ ತನಕ ವೆನ್‌ಲೋಕ್ ಮತ್ತು ಲೇಡಿ ಗೋಶನ್ ಆಸ್ಪತ್ರೆ ಸಂದರ್ಶಿಸಿ ವೆನ್‌ಲೋಕಿನಲ್ಲಿ ಹೊಸ ಕಟ್ಟಡ ಉದ್ಘಾಟಿಸಿ, ಕಸ್ತುರ್ಬಾ ಮೆಡಿಕಲ್ ಕಾಲೇಜಿನ ಕ್ಲಿನಿಕಲ್ ವಿಭಾಗಕ್ಕೆ ಭೇಟಿ, 11.50ರಿಂದ 1 ಗಂಟೆ ತನಕ ಮನವಿ ಇತ್ಯಾದಿಗಳನ್ನು ಸ್ವೀಕರಿಸುವರು. ಅಪರಾಹ್ನ 3.30ರಿಂದ 4ರ ವರೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಭಾಷಣ ಮಾಡುವರು. ನಂತರ 4ಗಂಟೆಯಿಂದ 5.45ರವರೆಗೆ ಗವರ್ನಮೆಂಟ್ ಕಾಲೇಜ್ ವಠಾರದಲ್ಲಿ ಸ್ಪ್ಯಾವೇಸ್ ಸಪ್ತಾಹವನ್ನು ಉದ್ಘಾಟಿಸುವರು. ಬಳಿಕ 6ಗಂಟೆಯಿಂದ 6.30 ರವರೆಗೆ ನರ್ಸರಿಗಳ ಬ್ಲಾಕು ಇತ್ಯಾದಿಗಳನ್ನು ತೆರೆಯುವ ಸಮಾರಂಭದಲ್ಲಿ ಭಾಗವಹಿಸುವರು. ರಾತ್ರಿ ಮಂಗಳೂರು ಸಹಕಾರಿಗಳ ಭೋಜನಕೂಟದಲ್ಲಿ ಸಹಭಾಗಿಗಳಾಗಿ ಮರುದಿವಸ ತಾ. 2-4-56 ಶನಿವಾರ ದಿನ ಬೆಳಿಗ್ಗೆ ಬಜ್ಪೆಗೆ ಹೋಗಿ ಅಲ್ಲಿಯ ಚಟುವಟಿಕೆಗಳನ್ನು ಅವಲೋಕಿಸಿ ವಿಮಾನ ಹತ್ತಿ ಕೊಚ್ಚಿಗೆ ಪ್ರಯಾಣ ಬೆಳೆಸುವರು.

(೪ನೇ ಪುಟದಿಂದ)

ಧಿಕಾರಿಗಳ ಗುಂಪೊಂದನ್ನು ನೆಲೆಗೊಳಿಸಬೇಕೆಂದೂ ಅವರು ತಿದ್ದುಪಡಿ ತಂದು ಅದಕ್ಕೆ ಶಾಸನಾಂಗದ ಒಪ್ಪಿಗೆ ಪಡೆದರು. ಆಂಧ್ರದ ಧುರೀಣರಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯವಿದೆ ಎಂಬುದನ್ನಿಲ್ಲಿ ನೆನೆಯಬಹುದು. ಈಗ ಹೈದರಾಬಾದಿನಲ್ಲಿ ಒಂದು ಹೈಕೋರ್ಟಿದ್ದು ಅಲ್ಲಿ ಉರ್ದು ಭಾಷೆಯಲ್ಲಿ ವ್ಯವಹರಣೆ ನಡೆಸುವ ಸಂಪ್ರದಾಯ ಪ್ರಾಮುಖ್ಯತೆ ಪಡೆದಿದೆ. ಆಂಧ್ರ ರಾಜ್ಯದ ಹೈಕೋರ್ಟು ಗುಂಟೂರಿನಲ್ಲಿದೆ.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್
ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫ್ಯಾನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!
ನಿಮ್ಮ ಮೇಲ್ಮೆಗಾಗಿ ಲಕ್ಷ್ಯಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ನಾಳೆ ಕೆಲಸಗಳು ಕಾಣುವ ಹಾಗಿದ್ದರೂ, ಕಣ್ಣುಗಳು, ಗುಳಿಬಿದ್ದಿದ್ದು ಹಿಂದಿನದನ್ನು ಹೋಗಿ ಕೆರಳಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು
ಪೌಂಡು ಒಂದಕ್ಕೆ ರೂ. 5—0—0.
ಮಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).
ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ಪರಮಾಣು ಯುಗದ ಭಯಂಕಾರಕ ವಾತಾವರಣ

(೩ನೇ ಪುಟದಿಂದ)

ಪ್ರತಿಪಾದಿಸಿದ್ದಾರೆ. ಸರಕಾರಗಳು ಶಾಸನದ ಮೂಲಕ ಈ ಒತ್ತಾಯವನ್ನು ಹೇರಬೇಕಾಗಿ ಬರುವ ದಿನವೇನೂ ದೂರದಲ್ಲಿಲ್ಲ.

ಅಣವಿಕ ವಿಕಿರಣ ಶೀಲತೆಯ ದುಷ್ಪರಿಣಾಮವು ಈಗ ವಾದಗ್ರಸ್ತ ವಿಷಯವಾಗಿ ಉಳಿದಿಲ್ಲ. ಬ್ರಿಟನಿನಲ್ಲಿ ಕಂಡುಹಿಡಿದ ಪ್ರಕಾರ ಆ ದೇಶದಲ್ಲಿ ಈಗಾಗಲೇ ಕನಿಷ್ಠ ನೂರು ತಾಯಂದಿರಾದರೂ ಗರ್ಭಪಾತದ ರೂಪದಲ್ಲಿ ಮತ್ತು ಬೇರೆ ಹತ್ತಿಪ್ಪತ್ತು ತಾಯಂದಿರಾದರೂ ಅಂಗವಿಕಲ ಮಕ್ಕಳನ್ನು ಹೆರಬೇಕಾಗಿ ಬಂದ ದುರ್ವಿಧಿಯಲ್ಲಿ ತಮ್ಮ ಪಾಲಿನ ನರಬಲಿಯನ್ನು ಕೊಟ್ಟಿದ್ದಾರೆ. ಭಾರತದ ವಿಶಿಷ್ಟ ಪರಿಸ್ಥಿತಿಯನ್ನವಲೋಕಿಸಿ ಊಹಿಸುವುದಾದರೆ ಇದರ ಹತ್ತು ಪಟ್ಟಾದರೂ ತಾಯಂದಿರು ತಮ್ಮ ಬಲಿಯನ್ನು ಇಷ್ಟರಲ್ಲಿ ಒಪ್ಪಿಸಿರಬೇಕು. ಮುಂದಿನ ವರ್ಷದಲ್ಲಿ ಈ ಪ್ರಮಾಣದ ಹತ್ತು ಹದಿನೈದು ಪಟ್ಟು ಬಲಿಯನ್ನು ಕೊಡಬೇಕಾದೀತು.

ಇದು ಕೇವಲ ಭಯಪ್ರದರ್ಶನಕ್ಕಾಗಿ ಹೇಳುವ ಮಾತಲ್ಲ— ಅಣವಿಕ ವಿಕಿರಣ ಶೀಲತೆಯು ಈಗ ತೀವ್ರತರವಾಗಿರುವುದರಿಂದಲೇ ಹೀಗಾಗುತ್ತಿದೆ. ಸಾಮಾನ್ಯವಾಗಿ ಹೇಳುವುದಾದರೆ ಮನುಷ್ಯನೂ ಸೃಷ್ಟಿಯ ಇತರ ಪ್ರಾಣಿಗಳೂ ವಿಕಿರಣ ಶೀಲತೆಯಿಂದ ಮುಕ್ತರಾಗುವುದು ಸಾಧ್ಯವೇ ಇಲ್ಲ. ಅಣು ಬಾಂಬುಗಳ ರಚನೆ ಮತ್ತು ಸ್ಫೋಟನಕ್ಕೆ ಹಿಂದೆ ಸಹ ವಿಕಿರಣ ಶೀಲತೆ ಇದ್ದೇ ಇದ್ದಿತು. ವಾತಾವರಣದ ಹೊರವಲಯದಿಂದ ಬರುವ ವಿಶ್ವಕಿರಣಗಳೂ, ನಮ್ಮ ನೆತ್ತರಿನಲ್ಲಿರುವ ಪೊಟಾಸಿಯಮೂ ಭೂಮಿಯಲ್ಲಿರುವ ಯುರೇನಿಯಂ ಮತ್ತು ರೇಡಿಯಂ ಖನಿಜಗಳೂ ಜಗದದ ಪ್ರಾಣಿಗಳ ಮೇಲೆ ವಿಕಿರಣ ಶೀಲತೆಯ ಪ್ರಭಾವವನ್ನು ಮಾಡುತ್ತಾ ಬಂದಿರುತ್ತವೆ.

ಆದರೆ ಇದು ಅಪಾಯಕಾರಿ ಮಟ್ಟವನ್ನು ಮುಟ್ಟಿರಲಿಲ್ಲ. ಒಂದು ವಿಶಿಷ್ಟ ಪ್ರಮಾಣದ ವರೆಗೆ ಈ ವಿಕಿರಣ ಶೀಲತೆಯ ಕೆಡುಕು ಭಯಪ್ರದವೆನಿಸಲಾರದು. ಈ ಪ್ರಮಾಣ ಎಷ್ಟೆಂಬುದು ಇನ್ನೂ ಖಚಿತವಾಗಿ ನಿರ್ಧಾರಗೊಂಡಿಲ್ಲ-ಅಣುಶಕ್ತಿಯ ಶಾಂತಿಕಾಲದ ಬಳಕೆಯಾದರೂ ಇಂಥ ನಿರ್ಧಾರವನ್ನೆ ಹೊಂದಿಕೊಂಡಿದೆ ಎನ್ನಬಹುದು. ಹೀಗಿರುತ್ತಾ ಒಂದು ಸಂಗತಿ ಮಾತ್ರ ಸತ್ಯ—ಅದೇನೆಂದರೆ ಅಣವಿಕ ಶಸ್ತ್ರಗಳ ಸ್ಫೋಟನೆಯು ಈ ಮಿತಿಗಿಂತ ಎಷ್ಟೋ ಪಾಲು ಹೆಚ್ಚು ಅನಿಷ್ಟವನ್ನುಂಟು ಮಾಡುತ್ತದೆ. ಜೀವಿಗಳು ಸಹಜವಾಗಿ ಸಹಿಸಿ ಬಾಳಬಹುದಾದ ಪ್ರಮಾಣಕ್ಕಿಂತ ಅನೇಕ ಪಾಲು ಹೆಚ್ಚಿನ ತೀವ್ರತೆಯನ್ನು ಅಣವಿಕ ಶಸ್ತ್ರಗಳ ಸ್ಫೋಟನೆಯಿಂದಾದ ವಿಕಿರಣಶೀಲತೆ ಹೊಂದಿರುವುದೇ ಇದರ ಕಾರಣ.

ವಿಕಿರಣಶೀಲತೆಯು ಮೂರು ಮುಖ್ಯ ರೀತಿಯಲ್ಲಿ ಕೆಡುಕನ್ನು ತರುತ್ತದೆ—ಅದು ಚರ್ಮವನ್ನು ಸುಡಬಹುದು; ಇದು ಸಾಮಾನ್ಯ ಅಪಾಯ. ಇದಕ್ಕಿಂತ ತೀವ್ರತರವಾದುದೆಂದರೆ ಆಹಾರ ಮತ್ತು ವಾಯು ಸೇವನೆಯ ಮೂಲಕ ಶ್ವಾಸಕೋಶ ಮತ್ತು ಜಠರ ಪ್ರದೇಶವನ್ನು ಸೇರಿ ವಿಕಿರಣಶೀಲತೆಯು ರಕ್ತಕ್ಷಯವನ್ನೂ ನಾನಾ ಬಗೆಯ ವ್ರಣರೋಗಗಳನ್ನೂ ಉಂಟು ಮಾಡಬಹುದು. ಇನ್ನೂ ತೀಕ್ಷ್ಣವಾದ ವಿಕಿರಣಶೀಲತೆಯು ಜನನೇಂದ್ರಿಯಗಳ ಮೇಲೆಯೂ ಇತರ ನರಮಂಡಳಗಳ ಮೇಲೆಯೂ ದುಷ್ಪರಿಣಾಮವನ್ನು ಮಾಡಿ ಜನರನ್ನು ಮಂಕರಾಗಿ, ಮತಿಹೀನರಾಗಿ, ಭ್ರಾಂತರಾಗಿ ಕುಂಟರೂ ಕುರುಡರೂ ಕಿವುಡರೂ ಆಗಿ, ಕ್ಷೀಣರೂ ರೋಗಿಗಳೂ ಆಗಿ ಬದಲಾಯಿಸಬಹುದು; ಮತ್ತು ತೀರ ಅಪಾಯಕರ ಪ್ರಮೇಯಗಳಲ್ಲಿ ನಪುಂಸಕರೂ ವಂಧ್ಯರೂ ಆಗಿ ಪರಿವರ್ತಿಸಿ, ಕುಲಕ್ಷಯದಂಥ ದಾರುಣ ಪರಿಸ್ಥಿತಿಯನ್ನು ತರಬಹುದು.

ಯುರೇನಿಯಂ, ರೇಡಿಯಂ, ಥೋರಿಯಂ ಇತ್ಯಾದಿ ಖನಿಜಗಳನ್ನು ಅಗೆಯುವ ಗನಿಗಳಲ್ಲಿಯೂ ಶುದ್ಧೀಕರಿಸುವ ಕಾರ್ಖಾನೆಗಳಲ್ಲಿಯೂ ದುಡಿಯುವ ಜನರು ಮತ್ತು ಅಣುಶಕ್ತಿ ಕೇಂದ್ರಗಳಲ್ಲಿಯೂ ಶಾಂತಿಕಾಲದ ಬಳಕೆಗಾಗಿ ಅಲ್ಲಿ ಉತ್ಪಾದಿಸಲ್ಪಟ್ಟ ರಾಸಾಯನಿಕ ಪದಾರ್ಥಗಳನ್ನು ಉಪಯೋಗಿಸುವ ಕೃಷಿ, ವೈದ್ಯಕೀಯ ವಿಜ್ಞಾನ ಮತ್ತು ಔದ್ಯಮಿಕ ಕ್ಷೇತ್ರದಲ್ಲಿಯೂ ಕೆಲಸಮಾಡುವವರು ಸಾಮಾನ್ಯವಾಗಿ ಅಣವಿಕ ವಿಕಿರಣಶೀಲತೆಗೆ ಸಹಜವಾಗಿಯೇ ಬಲಿಯಾಗಿದ್ದಾರೆ. ಆದರೆ ಅಣುಶಸ್ತ್ರಗಳ ಸ್ಫೋಟನೆಯಿಂದ ಇವರನ್ನು ಬಿಟ್ಟು ಬೇರೆ ಉದ್ಯೋಗ ಮತ್ತು ವೃತ್ತಿಗಳಲ್ಲಿರುವ ಜನರು ಸಹ ತಮ್ಮ ಭವಿಷ್ಯದ ಬಗ್ಗೆ ಚಿಂತೆಪಡುವಂತಾಗಿದೆ. ನಿಕಟಭವಿಷ್ಯದಲ್ಲಿ ಈ ಅಪಾಯವು ಹೆಚ್ಚು ಗಂಭೀರದೆನಿಸದಿದ್ದರೂ ಕೆಲವು ತಲೆಮಾರುಗಳ ಬಳಿಕಾಗಬಹುದಾದ ಅನಾಹುತವು ಕಲ್ಪನಾತೀತವೇ ನಿಜ.

ವ್ಯಕ್ತಿಯ ಕಾಮಜೀವನದ ಮೇಲೆ ಅಣವಿಕ ವಿಕಿರಣಶೀಲತೆಯಿಂದಾಗುವಷ್ಟು ಗಂಭೀರ ಸ್ವರೂಪದ ಅನಾಹುತವು ಹಿಂದೆಂದೂ ಆದುದಿಲ್ಲವೆನ್ನಬಹುದು. ವಿಕಿರಣ ಶೀಲತೆಯಿಂದಾಗಿ ಹುಟ್ಟಿದ ಮಕ್ಕಳಲ್ಲಿ ೯೦% ಒಂದು ತಿಂಗಳ ಮೊದಲೇ ಸಾಯಬಹುದು; ಹೊಟ್ಟೆಯಲ್ಲಿರುವಾಗಲೇ ಸಾಯುವ ಮಕ್ಕಳ ಸಂಖ್ಯೆಯೂ ಇಷ್ಟಿರಬಹುದು. ಬದುಕಿ ಉಳಿದ ಮಕ್ಕಳಾದರೂ ಮಾನಸಿಕ ವಿಕೃತಿಯನ್ನನುಭವಿಸಬೇಕಾದೀತು. ಇಂಥ ಮಕ್ಕಳು ವಯಸ್ಕರಾಗಿ ಪ್ರಜೋತ್ಪಾದನೆಯನ್ನು ತೊಡಗಿದರೆ ಅವರಿಗೆಹುಟ್ಟಿದ ಮಕ್ಕಳು ವಂಶಪಾರಂಪರ್ಯವಾಗಿ ಅಂಗವೈಕಲ್ಯ, ಮಾನಸಿಕ ಅಸ್ವಾಸ್ಥ್ಯಗಳೊಂದಿಗೆ ನಿರ್ವೀರ್ಯತೆಯನ್ನೂ ಮುಂದರಿಸಿಕೊಂಡು ಹೋಗಬಹುದು.

ಇಂಗ್ಲೆಂಡಿನಲ್ಲೀಗ ಪ್ರತಿಯೊಬ್ಬ ವ್ಯಕ್ತಿಯ ದೇಹದ ಮೇಲೆ ಅಣವಿಕ ವಿಕಿರಣಶೀಲತೆಯಿಂದಾಗಿರುವ ಪ್ರಭಾವವನ್ನು ಬರೆದಿಟ್ಟ ಕಾರ್ಡುಗಳನ್ನು ಆಯಾ ವ್ಯಕ್ತಿಗೆ ಕೊಡಹತ್ತಿದ್ದಾರೆ. ಅಲ್ಲದೆ ಅಣವಿಕ ಉದ್ಯಮಗಳಲ್ಲಿ ನಿರತರಾದ ಗಂಡಸರ ಸಂತಾನ ಬೀಜಗಳ ಪರೀಕ್ಷೆ ನಡಸುವ ಸೂಚನೆ ಮಾಡಲಾಗಿದೆ. ಹೆಂಗಸರಲ್ಲಿ ಮುಟ್ಟು ತಪ್ಪುವ, ಗರ್ಭಧಾರಣೆಯ ಅವಧಿ ವ್ಯತ್ಯಾಸವಾಗುವ, ಬಂಜೆತನದ ಭಯವು ವ್ಯಕ್ತವಾದ ಪ್ರಸಂಗಗಳೆಲ್ಲ ವಿಕಿರಣ ಶೀಲತೆಯಫಲವಿರಬಹುದೇ ಎಂಬ ಅನುಮಾನ ಬಲವಾಗತೊಡಗಿದೆ. ಅಮೇರಿಕ ಮತ್ತು ಬ್ರಿಟನುಗಳಲ್ಲಿ ವಿಕಿರಣಶೀಲತೆಗೆ ಹೆಚ್ಚಾಗಿ ಬಲಿಬಿದ್ದವರು ಕಾಮಸುಖದ ಲಾಲಸೆಯ ಮಟ್ಟಿಗೆ ಸಂಯಮದಿಂದ ವರ್ತಿಸಲೇಬೇಕೆಂದು ಒತ್ತಾಯಿಸಿದ ನಿದರ್ಶನಗಳೂ ಅನೇಕ.

ಪರಿಸ್ಥಿತಿಯು ಹೀಗೆಯೇ ಮುಂದರಿದರೆ, ಇನ್ನು ಕೆಲವೇ ವರ್ಷಗಳಲ್ಲಿ ವಿವಾಹ ಯೋಗ್ಯವರ–ವಧುಗಳು ಅಣವಿಕ ವಿಕಿರಣ ಶೀಲತೆಯಿಂದ ಮುಕ್ತರಾಗಿದ್ದಾರೆಂಬ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕೆಂಬ ಶಾಸನವೇ ಬರಬಹುದು. ಗಂಡ ಹೆಂಡಿರಲ್ಲಿ ಯಾರಾದರೊಬ್ಬರಿಗೆ ವಿಕಿರಣ ಶೀಲತೆಯ ಅಪಾಯ ತಗಲಿದ್ದರೆ ಸಾಕು, ಹುಟ್ಟುವ ಮಕ್ಕಳು ವೈಕಲ್ಯ ಯುಕ್ತರಾರಾಗುವುದು ಖಂಡಿತ. ಹಿಂದೆ ತೀರ ಹತ್ತಿರದ ಸಂಬಂಧಿಕರಲ್ಲಿ ವಿವಾಹವಾದಾಗ ಇಂಥ ದುಷ್ಪರಿಣಾಮಗಳನ್ನು ಕಾಣಬಹುದಾಗಿದ್ದರೆ ಇನ್ನು ಮುಂದೆ ಇದು ಸರ್ವತ್ರ ಗೋಚರವಾಗುವುದು ಸಂಭವನೀಯ

ವಿವಾಹ ಸಂಬಂಧದ ಶಾಸನಗಳನ್ನು ಜನರು ಧಿಕ್ಕರಿಸುವಷ್ಟು ಸಾಹಸ ತೋರಿಸಿದರೆ, ಈಗ ಸಂತಾನಾಪೇಕ್ಷೆ ಇಲ್ಲದವರು ಸ್ವೇಚ್ಛೆಯಿಂದ ಮಕ್ಕಳಾಗುವುದನ್ನು ತಪ್ಪಿಸಲು ಅವಲಂಬಿಸುವ ಶಸ್ತ್ರಕ್ರಿಯೆಯ ಪದ್ಧತಿಗೆ ಸರಕಾರವು ಒತ್ತಾಯ ಮತ್ತು ಕಡ್ಡಾಯದಿಂದ ಎಲ್ಲ ಜನರನ್ನು ಗುರಿಪಡಿಸಬಹುದು. ಹೀಗೆ ಮನುಷ್ಯನ ಭಾವಿ ಪೀಳಿಗೆಯ ಮೇಲಾಗುವ ಅಪಾಯವನ್ನು ರಕ್ಷಿಸಲು ಸರಕಾರ ಕಟಿಬದ್ಧವಾಗಬಹುದು. ಆದರೆ ಇದು ಕೊನೆಗೆ ಜನವರ್ಗದ ನಾಶವನ್ನಲ್ಲದೆ ಬೇರೇನನ್ನು ತಂದೀತು?

ಇವತ್ತು ಬದುಕುವ ಮಟ್ಟಿಗಾದರೂ ಜನರು ಸುಖಿಗಳಾಗುವುದು ಹೇಗೆ? ಅವರು ತಿನ್ನುವ ಆಹಾರ, ಸೇವಿಸುವ ಗಾಳಿ ಇವನ್ನು ನಿಯಂತ್ರಣದಲ್ಲಿ ಇಡುವುದು ಸಾಧ್ಯವೇ? ವಿಕಿರಣ ಶೀಲತೆಯು ಯಾವ ವಸ್ತುವಿನ ಮೇಲೆ ಪರಿಣಾಮ ಮಾಡಿದೆ ಎಂದು ಇಷ್ಟು ವಿಸ್ತೃತ ಪ್ರಮಾಣದಲ್ಲಿ ತಿಳಿದು ನಿರ್ಧರಿಸುವುದು ಈಗಂತೂ ಸಾಧ್ಯವಾಗಿಲ್ಲ— ಇನ್ನು ಮುಂದೆ ಸಹ ಅದು ಸಾಧ್ಯವಾಗಲಾರದು. ಅಲ್ಲದೆ ಗಾಳಿ, ಬೆಳಕುಗಳ ಮೇಲೆ ಮನುಷ್ಯನ ಯಾವುದೇ ನಿಯಂತ್ರಣ ಕ್ರಮವೂ ಯಶಸ್ವಿಯಾಗಲಾರದು. ದೂಷಿತ ಗಾಳಿ ಬೆಳಕುಗಳಿಂದ ಪ್ರಭಾವಿತವಾದ ಹಾಗು ಪೋಷಿತವಾದ ಸಸ್ಯ ಹಾಗು ಪ್ರಾಣಿಜನ್ಯ ಆಹಾರ ವಸ್ತುಗಳ ಮೇಲೆ ಸಹ ಎಷ್ಟೆಂದು ನಿಯಂತ್ರಣ ಹೇರಬಹುದು?

ಮಾನವಜೀವಶಾಸ್ತ್ರಜ್ಞರನ್ನು ಭಯಪಡಿಸುವ ಈ ಅಪಾಯಕಾರಿ ದೃಶ್ಯಕ್ಕಿಂತಲೂ ಸೃಷ್ಟಿಯ ಚರಿತ್ರೆಯಲ್ಲಿ ಆಸಕ್ತರಾದ ಪ್ರಾಣಿವಿಜ್ಞಾನಿಗಳ ಕಣ್ಣಮುಂದೆ ಚಿತ್ರಿಸಲ್ಪಟ್ಟಿರುವ ಭವಿಷ್ಯದ ದೃಶ್ಯವು ಸಾವಿರಾರುಪಾಲು ಹೆಚ್ಚು ಭಯಾವಹವಾಗಿದೆ. ವಿನಾಶದ ಹೊರತು ಬೇರಾವ ಸಂಭವವೂ ಅವರಿಗೆ ಗೋಚರಿಸುತ್ತಿಲ್ಲ. ಇಷ್ಟಾದರೂ ರಾವಣಾಸುರನ ವಂಶದರೋ ಎಂಬಂತೆ ಕೆಲವು ರಾಜಕೀಯ ನಾಯಕರು ಅಣವಿಕ ಶಸ್ತ್ರಗಳ ಸ್ಫೋಟನೆಯನ್ನು ಮಾನವತೆಯ ಶಾಂತಿ ಮತ್ತು ಕಲ್ಯಾಣದ ಹೆಸರಿನಲ್ಲಿ ಎತ್ತಿಹಿಡಿಯುವುದೂ ಪುರಸ್ಕರಿಸುವುದೂ ಗರ್ಹಣೀಯವಲ್ಲವೆ? ಜಗತ್ತಿನ ನೈತಿಕ ಶಕ್ತಿಗೆ, ವಿವೇಕಕ್ಕೆ ಈ ಮೂರ್ಖರನ್ನು ಮಣಿಸುವುದು ಸಾಧ್ಯವಾಗದಿದ್ದರೆ, ಜಗತ್ತು ಉಳಿಯದು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 61/50 R. E. P. 589/55.

ಗೋಪಿ ಬಂಗ್ಸ ಕೂಡಾ —ಅರ್ಜಿದಾರರು,

ದೇಯಕ್ಕ- ಪಕೀರಪ್ಪ ರೈ ಹೆಂಡ್ತಿ- ವ ಲಕ್ಷ್ಮಿ ಮಗಳು, ಕೊಡಿಯಾಲ ಗ್ರಾಮದ ಮರಕ್ಕೆ— 4 ನೇ ಎದ್ರಿ,

(4ನೇ ಪ್ರತಿವಾದಿ)

ಎದ್ರಿರ ಸ್ಥಿರ ಆಸ್ತಿಯನ್ನು ಜಪ್ತಿ ಪಡಿಸಿಯೇಲಂಮಿಗೆ ಅಪೇಕ್ಷಿಸಿರುವದರಿಂದ ಸ್ಥಿರ ಆಸ್ತಿ ಜಪ್ತಿಗೆ ಎದ್ರಿರ ಪ್ರೋಹಿಬಿಟರಿ ಜಪ್ತಿ ಹುಕುಂ ನೋಟೀಸಿನ ವ್ಯಾದೆ ತಾ. 28—4—1956ಕ್ಕೆ ಇಟ್ಟಿರುತ್ತದೆ. ಆ ವ್ಯಾದೆಗೆ ಎದ್ರಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಈ ಕೋರ್ಟಿನಮುಂದೆ ಆದಿನ 11 ಘಂಟೆಗೆ ಹಾಜರಾಗಿ ಬರಹಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಶಿಪಾಯಿ ಎಂತ ಮಾಡಿ ಈ ವ್ಯವಹಾರವನ್ನು ಮುಂದಿನ ತನಿಖೆಯಿಂದ ಮುಂದರಿಸಲಾದೀತು, ಎಂತ ಈ ಕೋರ್ಟಿನ R. E. A. 249/56 ನೇ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(Sd) B. Ramachandra Rao. MA, BL

Pleader for Pititioners.

ತಾ. 11—4—1956 ಪುತ್ತೂರು S K.



ಮದ್ರಾಸು ರಾಜ್ಯದಲ್ಲಿ ಗ್ರಾಮಾಭಿವೃದ್ಧಿ ಕಾರ್ಯಕ್ರಮ

(೨ನೇ ಪುಟದಿಂದ)

ಸಂಪರ್ಕ ವ್ಯವಸ್ಥೆಯನ್ನು ಹೆಚ್ಚಿಸುವುದು, ನೀರಿನ ಪೂರೈಕೆಯನ್ನು ಉತ್ತಮಪಡಿಸುವುದು, ಸಾರ್ವಜನಿಕ ಉಪಯೋಗದ ಕೆರೆಗಳನ್ನು ದುರಸ್ತಿಪಡಿಸುವುದು, ಚರ್ಮಗಾರಿಕೆ, ಎಣ್ಣೆಯ ಗಾಣ ಇತ್ಯಾದಿ ಹಳ್ಳಿಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು, ಜಾನಪದ ಕಲೆ, ಯೋಗ, ವ್ಯಾಯಾಮ ಇತ್ಯಾದಿಗಳನ್ನು ಜನಪ್ರಿಯಗೊಳಿಸುವುದು— ಇವೆಲ್ಲವನ್ನು ನಾವು ಪಾಲ್ಘಾಟು ಪ್ರದೇಶದಲ್ಲಿ ಕಂಡೆವು

ದಕ್ಷಿಣ ಕನ್ನಡ ಜಿಲ್ಲೆಯು ಗುಡ್ಡಗಾಡುಗಳಿಂದ ತುಂಬಿದ ಪ್ರದೇಶ. ಮೇಯಿಂದ ಸಪ್ಟೆಂಬರದ ವರೆಗೆ ಇಲ್ಲಿ ಮಳೆ ಅತ್ಯಧಿಕ, ಹರಿಯುವ ಹೊಳೆಗಳೂ ತೋಡುಗಳೂ ಈ ಜಿಲ್ಲೆಯನ್ನು ತುಂಡು ತುಂಡಾಗಿ ಮಾಡಿವೆ; ಮಳೆಗಾಲದಲ್ಲಿ ಇವೆಲ್ಲ ನದೀ ನದಗಳು ತುಂಬಿ ಹರಿದು ಅನೇಕ ವಾರಗಳ ವರೆಗೆ ದಾಟಿ ಹೋಗುವುದೇ ದುಸ್ತರವಾಗಿ ಮಾಡುತ್ತವೆ. ಈ ತೋಡು ಮತ್ತು ಹೊಳೆಗಳು ಹರಿಯುವ ಪ್ರದೇಶದ ನೈಸರ್ಗಿಕ ವೈಶಿಷ್ಟ್ಯವೂ ಸಂಪರ್ಕ ವ್ಯವಸ್ಥೆಯನ್ನು ಒಂದು ಸಮಸ್ಯೆಯಾಗಿ ಮಾಡಿದೆ. ಆದುದರಿಂದ ಈ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹೆಚ್ಚಿನ ಪಾಲನ್ನು ಸಂಪರ್ಕಾಭಿವೃದ್ಧಿಗಾಗಿ ಮೀಸಲಿಡಲಾಗಿದೆ.

ಪ್ರಯೋಜನೆಯ ಅಧಿಕಾರಿಗಳ ಹಾಗು ಜನರ ಸಹಕಾರದಿಂದ ಸ್ಫೂರ್ತಿದಾಯಕವಾದ ಕೆಲಸವು ಇಲ್ಲೆಲ್ಲ ನಡೆದಿದೆ. ಹೊಸ ಮಾರ್ಗಗಳ ರಚನೆ, ಸಂಕ ಸೇತುವೆಗಳ ನಿರ್ಮಾಣಗಳಾಗಿವೆ. ಅನೇಕ ಮೈಲುದ್ದದ ರಸ್ತೆಗಳನ್ನು ಸ್ವತಃ ಹಳ್ಳಿಗರೇ ಗುಡ್ಡದ ಕಡಿದಾದ ಇಳಿಜಾರುಗಳಲ್ಲಿಯೂ ದಟ್ಟ ಅರಣ್ಯಗಳ ನಡುವೆಯೂ ನಿರ್ಮಿಸಿದ್ದಾರೆ. ಇವು ಸಾಕಷ್ಟು ಒಳ್ಳೆಯದಾಗಿವೆ ಮತ್ತು ಜೀಪುಗಳೂ ಓಡಾಡುವಂತಿವೆ. ಈ ವರೆಗೆ ಹೀಗೆ ಹಳ್ಳಿಗರಿಂದ ೩೩೫ ಮೈಲು ಉದ್ದದ ರಸ್ತೆಗಳಾಗಿವೆ.

ಮಳೆಗಾಲದಲ್ಲಿ ಜಿಲ್ಲೆಯ ಉಳಿದ ಪ್ರದೇಶಗಳ ಸಂಬಂಧವನ್ನೇ ತೊರೆದು ಏಕಾಂತವಾಸವನ್ನು ಇಷ್ಟರವರೆಗೆ ಅನುಭವಿಸುತ್ತಿದ್ದ ಪ್ರದೇಶಗಳೊಡನೆ ಸಂಪರ್ಕವನ್ನು ಸ್ಥಾಪಿಸಲು ಈ ಕೆಲಸದಿಂದ ತುಂಬ ಸಹಾಯವಾಗಿದೆ; ಅನುಕೂಲತೆಯೊದಗಿದೆ. ಸಾಗಣೆಯನ್ನು ಸುಗಮಗೊಳಿಸಿ, ಉತ್ಪಾದನೆಗಳನ್ನು ಮಾರುಕಟ್ಟೆಗೆ ಕಳಿಸಲೂ ನಿತ್ಯೋಪಯೋಗದ ಸರಕುಗಳನ್ನು ಖರೀದಿಸಿಕೊಳ್ಳಲೂ ಈ ರಸ್ತೆಗಳಿಂದಾಗುತ್ತಿರುವ ಪ್ರಯೋಜನವು ಜನರ ಜೀವನವನ್ನೂ ಆರ್ಥಿಕ ಚಟುವಟಿಕೆಯನ್ನೂ ಸುಖಾವಹವಾಗಿ ಮಾಡಿದೆ ಎನ್ನಬಹುದು. ಇಂಥ ಕೆಲಸದ ಉಲ್ಲೇಖನೀಯ ಮಾದರಿಯು ಪೊಳಲಿ, ಗುರುಪುರ, ಹೆಮ್ಮುಂಡೆ ಮತ್ತಿತರ ಪ್ರದೇಶಗಳಲ್ಲಿ ನೋಡ ಸಿಗುತ್ತದೆ.

ಇಂಥ ಕಾರ್ಯಕ್ರಮಗಳನ್ನು ನಿರ್ವಹಿಸುವುದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ನಾಲ್ಕೈದು ತಿಂಗಳುಗಳಷ್ಟು ಸಮಯ ಪ್ರತಿ ವರ್ಷ ತೊಂದರೆಗೊಳಗಾಗ ಬೇಕಾಗುತ್ತದೆಂದು ನಮಗೆ ಹೇಳಲಾಯಿತು. ಮಳೆಗಾಲದಲ್ಲಿ ರಭಸದಿಂದ ನೀರು ಹರಿಯುವುದರಿಂದ ಕೆಲಸಗಳನ್ನು ನಿಲ್ಲಿಸುವುದು ಇಲ್ಲಿ ಅನಿವಾರ್ಯವಾಗುತ್ತದೆ. ಈ ವರ್ಷವಂತೂ ಇಲ್ಲಿಯ ತಾಂತ್ರಿಕ ಸಿಬ್ಬಂಧಿಯನ್ನು ದಕ್ಷಿಣದಲ್ಲಿ ಬಿರುಗಾಳಿ ಪೀಡಿತ ಪ್ರದೇಶದಲ್ಲಿ ಪರಿಹಾರ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ತಾತ್ಕಾಲಿಕವಾಗಿ ಸಾಗ ಹಾಕಲಾಯಿತೆಂದೂ ನಮಗೆ ತಿಳಿಯಿತು ಹೀಗೆ ಆರು ವಾರಗಳ ಕಾಲ ಹೆಚ್ಚು ನಷ್ಟಗೊಂಡಿತು. ಸಂಕಗಳ ರಚನೆಗೆ ಆವಶ್ಯಕವಾದ ಉಕ್ಕು ಮತ್ತು ಸಿಮೆಂಟುಗಳ ಅಭಾವವು ಇನ್ನೂ ಹೆಚ್ಚಿನ ತೊಂದರೆಯಾಯಿತು. ಇಷ್ಟಾದರೂ ಈ ಜಿಲ್ಲೆಯಲ್ಲಿ ಒಳ್ಳೆಯ ಕೆಲಸ ನಡೆದಿರುವುದು ಅಭಿನಂದನೀಯ.

ವಿವಿಧೋದ್ದೇಶದ ಸಭಾಸದನಗಳು ಈಗ ಹಳ್ಳಿಗಳಲ್ಲೆಲ್ಲ ತಲೆ ಎತ್ತುತ್ತಿವೆ. ಜನರ ಉತ್ಸಾಹದ ಪ್ರತೀಕವಾಗಿ ಇವು ಕಂಗೊಳಿಸುತ್ತವೆ. ಮದ್ರಾಸು ರಾಜ್ಯದ ಹಳ್ಳಿಯೊಂದರಲ್ಲಿ ಸಭಾಸದನದ ಉದ್ಘಾಟನೋತ್ಸವದ ಅಂಗವಾಗಿ ಗ್ರಾಮನಾಯಕನು ರಾಷ್ಟ್ರಧ್ವಜವನ್ನೇರಿಸುತ್ತಿರುದನ್ನು ಚಿತ್ರದಲ್ಲಿ ಕಾಣಬಹುದು.

ನಾವೀ ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳು, ಮಾತೃತ್ವ ಹಾಗು ಶಿಶುಸಂಗೋಪನಾಲಯಗಳು, ಸಾರ್ವಜನಿಕ ಸಭಾಸದನಗಳು ಮತ್ತು ಮನೋರಂಜನೆಯ ಸ್ಥಾನಗಳನ್ನು ರಚಿಸುವ ಚಟುವಟಿಕೆಯನ್ನು ನೋಡಿದೆವು. ಇಲ್ಲಿಯ ವಿವಿಧೋದ್ದೇಶದ ಸಾರ್ವಜನಿಕ ಸಭಾಸದನಗಳಲ್ಲಿ ಕೆಲವು ನಿಜಕ್ಕೂ ಬಹಳ ಚೆಂದವಿವೆಯಲ್ಲದೆ ಸುಸಜ್ಜಿತವಾಗಿರುತ್ತವೆ. ಮೂಡಬಿದರೆಯ ಸಮಾಜ ಮಂದಿರ ಬಹಳ ಪ್ರೇಕ್ಷಣೀಯವಾಗಿದೆ. ಆಯಾ ಪ್ರದೇಶದ ಆವಶ್ಯಕತೆ ಮತ್ತು ಸಾಧನ ಸಂಪತ್ತಿನ ದೃಷ್ಟಿಯಿಂದ ಈ ಸಭಾಸದನಗಳಲ್ಲಿ ಕೆಲವು ತೀರ ದೊಡ್ಡದೆಂದೂ ವಿಪರೀತ ಖರ್ಚಿನವೆಂದೂ ನಮ್ಮಲ್ಲಿ ಕೆಲವರಿಗೆ ಸಂದೇಹವಾಯಿತು. ಆದರೆ ಇವೆಲ್ಲವೂ ಬಹಳ ಜನಪ್ರಿಯವಾಗಿವೆಯೆಂದೂ ಇದಕ್ಕೂ ಹೆಚ್ಚಿನದಕ್ಕೆ ಜನರ ಬೇಡಿಕೆ ಇದೆಯೆಂದೂ ಏನಿದ್ದರೂ ಸಮಾಜ ವಿಕಾಸ ಯೋಜನೆಯ ಚೌಕಟ್ಟಿನಲ್ಲಿ ನಡೆಸಲಾದ ಕೆಲಸವಿದೆಂದೂ ನಮಗೆ ಸಮಾಧಾನ ಹೇಳಲಾಯಿತು.

ನಾವು ಉಡುಪಿಯಲ್ಲಿ ಕಂಡ ಒಂದು ಕೆಲಸವನ್ನು ಈ ಸಂಚಾರಾವಧಿಯಲ್ಲಿ ಬೇರೆಲ್ಲೂ ನೋಡಲಿಲ್ಲ. ಕೆಲಸ ಮಾಡುತ್ತಿರುವ ತಾಯಂದಿರ ಮಕ್ಕಳಿಗಾಗಿ ನಡೆದಿರುವ ವ್ಯವಸ್ಥೆಯೇ ಈ ಕಾರ್ಯ. ಈ ಕಟ್ಟಡದ ಹತ್ತಿರದಲ್ಲಿಯೇ ೧೫ ಹಾಸಿಗೆಗಳುಳ್ಳ ಹೆಂಗೆಯ ಕೇಂದ್ರವೊಂದಿದೆ. ಇಲ್ಲಿ ಹೊರರೋಗಿಗಳ ವಿಭಾಗವೂ ಪ್ರತ್ಯೇಕವಾಗಿ ಕೆಲಸನಡೆಸುತ್ತಲಿದೆ. ನಾವು ನೋಡಿದ ಅತ್ಯುತ್ತಮ ಕೇಂದ್ರಗಳಲ್ಲಿ ಇದೊಂದಾಗಿದೆ. ಸ್ಥಳೀಯರು ೯೦೦೦ ರೂಪಾಯಿಗಳ ವಂತಿಗೆಯನ್ನು ಇದಕ್ಕೆ ಕೊಟ್ಟರೆಂದೂ ಕೇವಲ ೧೮೦೦೦ ರೂಪಾಯಿಗಳ ವೆಚ್ಚವು ಈ ಕೇಂದ್ರದ ನಿರ್ಮಾಣಕ್ಕೆ ತಗಲಿತೆಂದೂ ನಮಗೆ ತಿಳಿಸಲಾಯಿತು.

ಸರಕಾರದ ಸಾರ್ವಜನಿಕ ಕಾಮಗಾರಿ ಖಾತೆಯವರು ಆರು ಹಾಸಿಗೆಗಳುಳ್ಳ ಒಂದು ಕೇಂದ್ರವನ್ನು ಜಿಲ್ಲೆಯ ಬೇರೊಂದು ಸ್ಥಳದಲ್ಲಿ ರಚಿಸಿದಾಗ, ಅದಕ್ಕೆ ಈ ಕೇಂದ್ರಕ್ಕೆ ತಗಲಿದುದರ ನಾಲ್ಕು ಪಾಲು ವೆಚ್ಚ ಬಂದಿತೆಂದೂ ನಮಗೆ ತಿಳಿಸಲಾಯಿತು. ಆ ವೇಳೆ ಆರೋಗ್ಯಮಂತ್ರಿಗಳ ಹಾಗು ಜಿಲ್ಲಾಧಿಕಾರಿಗಳ ಕೂಡೆ ಈ ವಿಷಯದಲ್ಲಿ ಚರ್ಚೆ ನಡೆಸಿ ಈ ಲೇಖಕನು ವೆಚ್ಚದಲ್ಲಿಯ ಅಂತರವನ್ನು ಅವರ ಗಮನಕ್ಕೆ ತಂದನು. ಅವರು ವಿಚಾರಣೆ ನಡೆಸುತ್ತಿರುವರೆಂದೀಗ ತಿಳಿದು ಬರುತ್ತದೆ.

ಇಲ್ಲಿಯ ಕೆಲಸದಲ್ಲೆಲ್ಲ ಮಾರ್ಗದರ್ಶಕ ಚೈತನ್ಯವನ್ನು ತೋರಿಸುತ್ತಿರುವ ವ್ಯಕ್ತಿಯು ಸ್ಥಳೀಯ ಎಂ. ಎಲ್. ಎ. ಗಳಾದ ಶ್ರೀ ಟಿ. ಅನಂತ ಪೈಗಳ ಪತ್ನಿ (ಶ್ರೀಮತಿ ಪ್ರೇಮಾ ಅನಂತ ಪೈ) ಯಾಗಿದ್ದಾರೆ ಈ ಮಹಿಳೆಯಲ್ಲಿ ಉದ್ದೇಶ ಸಾಧನೆಯ ಕುರಿತು ವಿಶೇಷ ಉತ್ಸಾಹ, ಶಕ್ತಿ ಮತ್ತು ಪ್ರಾಮಾಣಿಕತೆಯು ತುಂಬಿದೆ. ಇಂಥ ಅನೇಕ ಕಾರ್ಯಕರ್ತರನ್ನು ನಾವು ಅಧಿಕಾರಿ ಹಾಗು ಅಧಿಕಾರೇತರ ವರ್ಗಗಳಲ್ಲಿ ಸಂಚಾರದವೇಳೆ ಕಂಡಿದ್ದೇವೆ. ನಾವೀ ಜಿಲ್ಲೆಗಳಲ್ಲೆಲ್ಲ ಏನನ್ನು ನೋಡಿದೆವೊ ಅವೆಲ್ಲವೂ ಅನೇಕ ತೊಂದರೆಗಳನ್ನೂ ಕಷ್ಟಗಳನ್ನೂ ಸಹಿಸಿ ನಡೆಸಿದ ಅಭಿವೃದ್ಧಿ ಪ್ರಯತ್ನಗಳಿಗೆ ಸಾಕ್ಷಿ ಹೇಳುತ್ತವೆ.

ಎ. ಕೆ. ವೆಂಕಟೇಶನ್.

[ಇತ್ತೀಚೆಗೆ ಈ ಲೇಖಕರಿಗೆ ಬೇರೆ ಪತ್ರಿಕೋದ್ಯಮಿಗಳೊಂದಿಗೆ ಸಮಾಜವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣಾ ಸೇವೆ ಮತ್ತಿತರ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿರುವ ಕೊಯಮುತ್ತೂರು, ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ ಸಂಚರಿಸುವ ಸಂದರ್ಭದೊರಕಿತು. ಮದ್ರಾಸು ಸರಕಾರದಿಂದ ವ್ಯವಸ್ಥಿತವಾದ ಈ ಪ್ರವಾಸವು ಹಳ್ಳಿಗಳಲ್ಲಿ ಏನು ನಡೆದಿದೆ ಎಂಬುದನ್ನು ಸ್ವತಃ ತಿಳಿದುಕೊಳ್ಳುವ ಅವಕಾಶವಿತ್ತಿತು. "ಹಿಂದು" ಪತ್ರಿಕೆಯಿಂದ ನಾವೀ ಲೇಖನವನ್ನು ಎತ್ತಿಕೊಟ್ಟಿದ್ದೇವೆ.]

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 14/1956.

ಶ್ರೀಮತ್ ಈಶ್ವರಾನಂದ ಭಾರತಿ ಸ್ವಾಮಿಯಾರ್ —ವಾದಿ.

ಮತ್ತು

ಕೆ. ಆಜಿಲ ರೈ, ಕಲ್ಲಕಳಿಯ ಮಂದನ ರೈ ಆಳಿಯ ವ ಮಮ್ಮಕ್ಕೆ ಹೆಂಗ್ಸಿನ ಮಗ, ಕಾಸರಗೋಡು ತಾಲೂಕು ಪಡ್ರೆ ಗ್ರಾಮದ ಕಲ್ಲಕಳಿಯದಲ್ಲಿರುವಾತ—ಪ್ರತಿವಾದಿ.

ಪ್ರೋಮಿಸರಿ ನೋಟು ಪ್ರಕಾರ ಪ್ರತಿವಾದಿಯಿಂದ ವಾದಿಗೆ ಬರತಕ್ಕ ಹಣ ವಸೂಲಿ ಕುರಿತು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಯ ಹಾಜರಾತಿಯ ಬಗ್ಗೆ ತಾ. 25-4-1956ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ. ಪ್ರತಿವಾದಿಗೆ ಆಕ್ಷೇಪವಿದ್ದಲ್ಲಿ ಆ ದಿನ ದಾಖಲು ಮಾಡದಿದ್ದ್ರೆ ಎಕ್ಸ್‌ಪಾರ್ಟೇ ಡಿಕ್ರಿಯಾಗುವ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

K. Ganesh Rao,
ವಾದಿಕಡೆ ವಕೀಲ್.

ಕಾಸರಗೋಡು, 14-4-56.

ಗೀತೆಯ ಕೈಗನ್ನಡಿ

0-12-0

ನವಯುಗ ಪ್ರೆಸ್, ಉಡುಪಿ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

(೧ನೇ ಪುಟದಿಂದ)

ಈಗ ಜರಗುತ್ತಿರುವ ಈ ಪೂರ್ವ ಪ್ರದೇಶದ ಎರಡನೆಯ ಸಮ್ಮೇಳನವು-ಇನ್ನೊಂದ.ದೃಷ್ಟಿಯಿಂದಲೂ ಮಹತ್ತರ ವಾಗಿದೆ-ಅದು ಈ ಕಾರಣಕ್ಕಾಗಿ.

ಜಮಶೆಡ್ ಪುರವು ಶ್ರೀ ಜಮಶೆಡ್‌ಜೀ ಟಾಟಾ ಅವರ ದೂರದೃಷ್ಟಿ, ರಾಷ್ಟ್ರ ಭಕ್ತಿ ಮತ್ತು ಕಾರ್ಯಕ್ಷಮತೆಯ ಫಲ ವಾಗಿ ಇಂದು ಒಂದು ಉನ್ನತವಾದ ಔದ್ಯೋಗಿಕ ಕೇಂದ್ರವಾಗಿದೆ. ಇಡಿಯ ಪೂರ್ವಖಂಡದಲ್ಲಿಯ "ಅನುಪಮವೆನಿಸು ವಂತಹ ನಗರವು ಅದಾಗಿದೆ. ಔದ್ಯೋಗಿಕ ಉತ್ಪಾದನೆ, ನಾಗರಿಕ ಸೌಕರ್ಯ ಮತ್ತು ಆಧುನಿಕ ವಾತಾವರಣಗಳಿಗಾಗಿ ಈ ಪಟ್ಟಣವು ಇಡಿಯ ಬಿಹಾರದಲ್ಲಿ -ಅದೇಕೆ ಭಾರತದಲ್ಲಿಯೆ- ಮಾದರಿಯ ದಾಗಿದೆ.

ಈ ನಗರದಲ್ಲಿ ಅನೇಕ ಜನ ಕನ್ನಡಿಗರು ಕೆಲವು ವರ್ಷಗಳಿಂದ ಬಂದು ನೆಲಸಿದ್ದಾರೆ. ದೊಡ್ಡ ದೊಡ್ಡ ಹುದ್ದೆಗಳಲ್ಲಿ ಅದಕ್ಕೆ ತಕ್ಕ ತಾಂತ್ರಿಕ ತಜ್ಞತೆ ಮತ್ತು ಕಾರ್ಯ ಕೌಶಲ್ಯಗಳನ್ನು ಪಡೆದಿರುವರೆಂದೇ, ಅವರು ಕೆಲಸ ಮಾಡುತ್ತಲಿದ್ದಾರೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮತ್ತು ಪ್ರಥಮ ಪಂಚವಾರ್ಷಿಕ ಯೋಜನೆಯ ಫಲವಾಗಿ ಚಿತ್ತರಂಜನ, ಸಿಂಧ್ರಿ, ಧನಭಾದ, ದಾಮೋದರ ನದಿ ಯೋಜನಾ ಕೇಂದ್ರ, ಖರಗಪುರ ಮೊದಲಾದ ಔದ್ಯೋಗಿಕ ಮತ್ತು ನವೀನ ತಾಂತ್ರಿಕ ಕೇಂದ್ರಗಳಲ್ಲಿ ಅಸಂಖ್ಯ ಕನ್ನಡಿಗರು ಹೋಗಿ ನೆಲಸಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಅವರೆಲ್ಲರೂ ಅಲ್ಲಿ ವಾಸಿಸಿರುವುದು ಕೇವಲ ತಮ್ಮ ಶೈಕ್ಷಣಿಕ ದಕ್ಷತೆ ಮತ್ತು ಕರ್ತವ್ಯ ಪರತೆಯ ಆಧಾರದಿಂದ ಆಧುನಿಕ ಭಾರತದಲ್ಲಿ ಸಂಭವಿಸಿದ ಸ್ಥಿತ್ಯಂತರಕ್ಕೆ ಅನುಗುಣವಾಗಿ ಈ ಕನ್ನಡಿಗರು ತಮ್ಮ ಪ್ರಗತಿಶೀಲ ಸ್ಥಾನವನ್ನು ಕಾಯ್ದುಕೊಂಡು ಉಚ್ಚವರ್ಗದ ಔದ್ಯೋಗಿಕ ಸ್ಥಳಗಳಲ್ಲಿ ಕೂಡ ತಮ್ಮ ಪ್ರಭಾವವನ್ನು ವ್ಯಾಪಿಸಿ, ತಮ್ಮ ವರ್ಚಸ್ಸನ್ನು ಬೀರುತ್ತಿದ್ದಾರೆ.

ಆದುದರಿಂದ ಅವರಲ್ಲಿ ಸಂಘಟನೆಯ ಆವಶ್ಯಕತೆ, ಸಹಕಾರದ ಉಪಯೋಗ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರಯೋಜನಗಳು ತಲೆದೋರಿದುದು ಅತ್ಯಂತ ಆಗತ್ಯವಾದ ಮತ್ತು ಪ್ರಶಂಸನೀಯವಾದ ವಿಷಯವಾಗಿದೆ. ಭಾರತದಲ್ಲಿ ಸಾಂಸ್ಕೃತಿಕ ಸಂಪ್ರದಾಯಗಳು ಉಚ್ಚವಾದವೂ. ಅನುಪಮವಾದುವೂ ಆಗಿವೆ. ರಾಜಕೀಯ ಸ್ವಾತಂತ್ರ್ಯ ಮತ್ತು ಔದ್ಯಮಿಕ ಹಾಗೂ ಆರ್ಥಿಕ ಉತ್ಕರ್ಷ ಇದೀಗ ಭಾರತದಲ್ಲಿ ಜರುಗುತ್ತಿರುವುದು ಕಂಡುಬರುತ್ತಿದೆ.

ಹಿಂದಿನ ದೃಷ್ಟಿಗೆ ಮತ್ತು ನಮ್ಮ ಉನ್ನತ ಆಧ್ಯಾತ್ಮಿಕ ಪರಂಪರೆಗೆ ಅನುರೂಪವಾಗಿ ಇಂದು ನಮ್ಮ ಆರ್ಥಿಕ ವಿಕಾಸವೂ ಜರುಗಬೇಕಾಗಿದೆ. ಕೇವಲ ಗತವೈಭವವನ್ನು ನೆನಸಿಕೊಳ್ಳುತ್ತ, ಕಲೆಯು ಸ್ವಸ್ಥತೆ ತಿರುಗಾಡಬಯಸಿದರೆ ಹೊಟ್ಟೆ-ಬಟ್ಟೆಯ ಪಾಡೇನು ಎಂಬಪ್ರಶ್ನೆಯು ಎದುರಾಗುತ್ತದೆ. ಹಾಗೆಯೆ ಪಾಶ್ಚಾತ್ಯ ರಾಷ್ಟ್ರಗಳಂತೆ ಕೇವಲ ಭೌತಿಕ ವಿಷಯಗಳಲ್ಲಿಯೆ ನಾವು ಕೃತಕೃತ್ಯರಾದರೆ ಅದರಂತಹ ಆತ್ಮವಂಚನೆಯ ಕಾರ್ಯವೂ ಬೇರೊಂದಾಗಲಿಕ್ಕಿಲ್ಲ.

ಅಂತೆಯೆ ಪ್ರಪಂಚದಲ್ಲಿ ತಾಂತ್ರಿಕ ಮತ್ತು ಯಾಂತ್ರಿಕ ಯುಗದ ಪರಿಣಾಮವಾಗಿ ಇತರ ರಾಷ್ಟ್ರಗಳು ಆರ್ಥಿಕ ಅಭ್ಯುದಯವನ್ನು ಮಾಡಿಕೊಂಡಂತೆ ನಾವೂ ಹೆಣಗಿ, ಹಿಂದಿನ ನಮ್ಮ ಆದರ್ಶಗಳನ್ನು ಆ ನವೀನ ಸನ್ನಿವೇಶಕ್ಕೆ ಸರಿಯಾಗಿ ಮಾರ್ಪಡಿಸಿಕೊಳ್ಳುವುದು ಇಂದು ಅಗತ್ಯವಾಗಿದೆ.

ಈ ವರ್ಷದ ಸಮ್ಮೇಳನದ ಸಂದರ್ಭದಲ್ಲಿ ಕನ್ನಡ ನಾಡಿನ ಪರಿಸ್ಥಿತಿಯನ್ನು ಯೋಚಿಸಲಾಗಿ ಇಂದು ನಮ್ಮ ನಾಡು ಇನ್ನೂರೈವತ್ತು ವರ್ಷಗಳ ನಂತರ ಮತ್ತೆ ಆಡಳಿತದ ದೃಷ್ಟಿಯಿಂದ ಒಂದಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಒಳನಾಡಿನಲ್ಲಿ ಸಾಹಿತ್ಯ ಧಾರ್ಮಿಕ ಸಂಪ್ರದಾಯ, ಚರಿತ್ರೆ, ಶಿಲ್ಪ, ಲಲಿತಕಲೆ, ಇವೇ ಮೊದಲಾದ ಉಜ್ವಲವಾದ ಸಂಸ್ಕೃತಿಯ ಅಭಿಮಾನವಿದ್ದರೂ ಅದಕ್ಕೆ ತಕ್ಕಂತೆ ನಮ್ಮ ನಾಡಿನ ಅಭಿವೃದ್ಧಿಯಾಗಿಲ್ಲ ಎಂಬುದೊಂದು ಯೋಚಿಸಬೇಕಾದ ವಿಷಯವಾಗಿದೆ.

ಈ ಪ್ರಸಂಗದಲ್ಲಿ ಮುಂಬಯಿಯಲ್ಲಿ ಜರುಗಿದ ಎರಡನೆಯ ಸಮ್ಮೇಳನದ ಕಾಲಕ್ಕೆ ಕರ್ಣಾಟಕ ಕುಲ ಪುರೋಹಿತರಾದ ಶ್ರೀ ಆಲೂರು ವೆಂಕಟರಾಯರು ಕೊಟ್ಟ ಎಚ್ಚರಿಕೆಯು ಇಂದು ಕನ್ನಡಿಗರ ಸ್ಮರಣೆಗೆ ತರುವಂತಹದಾಗಿದೆ. ಉಚ್ಚ ಶಿಕ್ಷಣವನ್ನು ಪಡೆದ, ತಾಂತ್ರಿಕ ತಜ್ಞತೆಯನ್ನು ಗಳಿಸಿದ, ಕಾರ್ಯಕ್ಷಮತೆಯಲ್ಲಿ ನಾಮಾಂಕಿತರಾದ, ಉಚ್ಚ ಆಕಾಂಕ್ಷೆಗಳಿಂದ ಪ್ರೇರಿತರಾದ, ಸೇವಾದೀಕ್ಷೆಯನ್ನು ಪಡೆದ ಎಲ್ಲ ಜನರು ಕನ್ನಡ ನಾಡನ್ನು ಬಿಟ್ಟು ಹೊರಗೆ ಹೊರಟರೆ ನಮ್ಮ ನಾಡಿಗೇ ಅತ್ಯಂತ ಅಪಾಯವಾಗಬಹುದು.

ಅವರು ಹೋಗಬಾರದು, ತಮ್ಮ ಕರ್ತೃತ್ವಕ್ಕೆ ಉಚಿತ ಕ್ಷೇತ್ರವನ್ನು ಹುಡುಕದಿರಬೇಕು ಎಂಬುವೂ ಅತ್ಮ ವಿನಾಶದ ದಾರಿ. ಆದರೆ ಹೊರಗೆ ಹೋಗಿ ತಮ್ಮ ಆದರ್ಶವನ್ನು ಸಾಧಿಸಿಕೊಳ್ಳಬಯಸುವ ಜನರು ತಾಯಿನಾಡಿನ ಸಂಬಂಧವನ್ನು ಕಳೆದುಕೊಳ್ಳಬಾರದು ಮತ್ತು ಅವರನ್ನು ತಾಯಿನಾಡು ಎಂದೂ ಮರೆಯುವುದಿಲ್ಲವಾದ ಕಾರಣ ಅವರಾದರೂ ತಾಯಿನಾಡಿನ ಉತ್ಕರ್ಷಕ್ಕಾಗಿ ಸದೈವ ಹೋರಾಡಬೇಕು ಎಂದು ಶ್ರೀ ವೆಂಕಟರಾಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ; ಹೀಗೆ ಸ್ಪಷ್ಟವಾಗಿ ಮಾರ್ಗದರ್ಶನ ಮಾಡಿದ್ದಾರೆ.

ಅಂತೆಯೆ ಇಂದಿನ ಜಮಶೆಡ್‌ಪುರ ಸಮ್ಮೇಳನವು ಅತ್ಯಂತ ಮಹತ್ವವನ್ನು ಪಡೆದಿದೆ ಎಂದು ಹೇಳುವರು. ಅಲ್ಲಿಯ ಕನ್ನಡಿಗರು ವಿದ್ಯಾವಂತರಾಗಿದ್ದಾರೆ; ಧನವಂತರಾಗಿದ್ದಾರೆ; ತಜ್ಞರಾಗಿದ್ದಾರೆ; ಕಾರ್ಯ ಧುರೀಣರಾಗಿದ್ದಾರೆ. ಅವರಿಗೆ ಕನ್ನಡನಾಡಿನ ಸಂಪರ್ಕ ವಿರಲವಾಗಿರಬಹುದು; ಕನ್ನಡದ ಪ್ರಭಾವ ಅಲ್ಪವಾಗಿ ಉಳಿದಿರಬಹುದು. ಆದರೆ ಕನ್ನಡದ ಅಭಿಮಾನವು ಅವರಲ್ಲಿ ಜಾಜ್ವಲ್ಯವಾಗಿದೆ; ಕನ್ನಡದ ಮೇಲಿನ ಅವರ ಪ್ರೀತಿ ಅಪ್ರತಿಮವಾಗಿರುವುದು. ಅವರು ಇಂತಹ ಉತ್ಸವಗಳ ಮೂಲಕ ತಮ್ಮ ನಾಡಿನ ಅಭಿಮಾನ-ಆದರಗಳನ್ನು ಹೆಚ್ಚಿಸಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ಕನ್ನಡನಾಡಿನ ಈ ಸುಪುತ್ರರಿಗೆ ತಮ್ಮ ಕಾರ್ಯಕೌಶಲದ ಪ್ರಯೋಜನವನ್ನು ಪಡೆಯಲಿಕ್ಕೆ ಅವಕಾಶವನ್ನು ನಿರ್ಮಿಸಿಕೊಟ್ಟ ಜಮಶೆಡ್‌ಪುರವು ಕನ್ನಡನಾಡಿನ ಆರ್ಥಿಕ ಮತ್ತು ಔದ್ಯಮಿಕ ವಿಕಾಸದ ದೃಷ್ಟಿಯಿಂದ ಈ ಕನ್ನಡಿಗರಲ್ಲಿ ಅಪರಿಮಿತವಾದ ಉತ್ಸಾಹ, ಅನುಭವ ಮತ್ತು ಸೌಕರ್ಯಗಳನ್ನು ತುಂಬಲಿಕ್ಕೆ ಸಾಕು. ಅಂತೆಯೆ ಕನ್ನಡನಾಡು ಈ ತನ್ನ ಮಕ್ಕಳನ್ನು ಹೆಚ್ಚಿನ ವಾತ್ಸಲ್ಯ ಮತ್ತು ಸಬಾಷ್ಕಿವದಿಂದ ನೋಡುತ್ತಿರುವಲ್ಲಿ ಆಶ್ಚರ್ಯವಿಲ್ಲ ಜಮಶೆಡ್‌ಪುರ ನಗರ ಮತ್ತು ಅದರ ಸುತ್ತಗಿನ ಕನ್ನಡಿಗರು ಈ ಕಾರಣಕ್ಕಾಗಿ ಇಂದಿನ ಸಮ್ಮೇಳನವನ್ನು ಜರುಗಿಸುತ್ತಿರುವದು ತುಂಬಾ ಅಭಿನಂದನೀಯ ಕಾರ್ಯ, ಸ್ತುತ್ಯವಾದ ಉಪಕ್ರಮ ಎಂದು ಹೇಳಬಹುದು.

—ಎಚ್. ಎಸ್. ಪಾಟೀಲ್,
ಎಂ.ಎ.,ಬಿ.ಕಾಂ., ದೆಹಲಿ.

ನಮಗೆ ಎರಡನೇ ನೌಕಾಂಗಣ



ಭಾರತದಲ್ಲಿ ಹಡಗು ಸಾಗಿಗೆಯನ್ನು ಅಭಿವೃದ್ಧಿಗೊಳಿಸಲು ಹಾಗು ಹಡಗು ಕಟ್ಟುವುದನ್ನು ಪ್ರೋತ್ಸಾಹಿಸಲು ಉದ್ದೇಶಿಸಿ ದ್ವಿತೀಯ ಯೋಜನಾವಧಿಯಲ್ಲಿ ಇನ್ನೊಂದು ನೌಕಾಂಗಣವನ್ನು ತೆರೆಯಲಾಗುವುದೆಂದು ಮಂತ್ರಿಗಳ ಹೇಳಿಕೆಯಿಂದ ತಿಳಿದು ಬರುತ್ತದೆ. ಚಿತ್ರದಲ್ಲಿ ಭಾರತದ ಮೊದಲನೇ ನೌಕಾಂಗಣವಿರುವ ವಿಶಾಖ ಪಟ್ಟಣದಲ್ಲಿ ಕಟ್ಟಲಾದ ನೌಕೆಯೊಂದನ್ನು ನೋಡಬಹುದು. ಎರಡನೇ ಯೋಜನೆಯಲ್ಲಿ ಈ ನೌಕಾಂಗಣವು ೯೦೦೦೦ ಟನ್ನುಗಳಷ್ಟು ಭಾರದ ಹಡಗುಗಳನ್ನು ಕಟ್ಟುತ್ತದೆ.

ಕುಮಾರಿ ಬಿಲ್ಲೆಗಳು
(Govt. Regd.)
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA-40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ | ಸಂಚಿಕೆ ೩೪
VOL. 35 | ಉಡುಪಿ, 26—4—1956 | NO. 34

ಆಹಾರ ದವಸಗಳ ದರ

ಈಗ ಕೆಲವು ದಿನಗಳಿಂದ ನಮ್ಮ ಊರಿನಲ್ಲಿ ಅಕ್ಕಿ ಮತ್ತಿತರ ದವಸ ಧಾನ್ಯಗಳ ದರವು ದಿನದಿಂದ ದಿನಕ್ಕೆ ಹೆಚ್ಚುತ್ತಾ ಬಂದಿದೆ. ಬೆಲೆಗೆ ಸಂಬಂಧಿಸಿದ ಈ ಹೆಚ್ಚಳವು ಇಲ್ಲಿಗೆ ತಟಸ್ಥವಾಗದೆ ಇನ್ನಷ್ಟು ಅಧಿಕಗೊಳ್ಳುವ ಸಕಲ ಲಕ್ಷಣಗಳೂ ಪೇಟೆಯಲ್ಲಿ ಕಾಣಿಸಿಕೊಂಡಿವೆ. ಈಗಾಗಲೇ ಅಕ್ಕಿಯ ಮುಡಿಯೊಂದಕ್ಕೆ ೨೧ ರೂಪಾಯಿಯ ಹತ್ತಿರಕ್ಕೆ ದರ ಏರಿದೆ; ಅಂದರೆ, ಸೇರಿಗೆ ಎಂಟಾಣೆಯಂತೆ ಅಕ್ಕಿಯನ್ನೀಗ ಜನರು ಕೊಂಡುಕೊಳ್ಳಬೇಕಾಗಿದೆ.

ಆಹಾರ ವಸ್ತುಗಳಲ್ಲೆಲ್ಲ ಮುಖ್ಯವಾದ ಅಕ್ಕಿಯು ಇಷ್ಟು ತುಟ್ಟಿಯಾದರೆ ಬಡ ಜನರು ಸುಲಭ ಜೀವನವನ್ನು ನಿರ್ವಹಿಸುವುದು ಎಷ್ಟುಕ್ಕೂ ಸಾಧ್ಯವಿಲ್ಲ. ಮಧ್ಯಮ ವರ್ಗದ ಜನರಿಗಾದರೂ ತೊಂದರೆಯು ತಪ್ಪದು. ನಿಯಂತ್ರಣಗಳು ಹೇರಲ್ಪಟ್ಟಿದ್ದ ಆ ಹಿಂದಿನ ಕಾಲದಲ್ಲಿ ಸೇರಿಗೆ ಎಂಟಾಣೆ ಎನ್ನುವುದು ಕಳ್ಳಸಂತೆಯ ಅಕ್ಕಿಯು ಮಾರಾಟವಾಗುತ್ತಿದ್ದ ದರ. ಸರಕಾರದಿಂದ ತೆರೆಯಲ್ಪಟ್ಟ ಮಿತ ಬೆಲೆಯ ಅಂಗಡಿಗಳಲ್ಲಿ ಅಕ್ಕಿಯನ್ನು ಸೇರಿಗೆ ಐದಾಣೆಗೆ ಹತ್ತಿರದಲ್ಲಿ ವಿತರಿಸುತ್ತಿದ್ದರು. ಹಾಗಿರುತ್ತಾ ಈಗ ಬಹಿರಂಗ ಪೇಟೆಯಲ್ಲಿ ಸೇರಿಗೆ ಎಂಟಾಣೆಯಷ್ಟು ಬೆಲೆ ಕೊಡಬೇಕಾಗಿ ಬಂದಿರುವುದು ನಮ್ಮ ದುರ್ದೈವ.

ನಿಯಂತ್ರಣಗಳಿದ್ದಾಗಿನ ಸ್ಥಿತಿಯಾದರೂ ಎಂಥದು? ಅಂದು ಆಹಾರ ವಸ್ತುಗಳ ಉತ್ಪಾದನೆಯೇ ಬಹಳ ತಗ್ಗಿಕೊಂಡಿದ್ದಿತು; ಅದಲ್ಲದೆ ಜೀವನದ ವೆಚ್ಚವು ನಾಲ್ಕು ಪಟ್ಟಾದರೂ ಏರಿದ್ದಿತು. ಆದರೆ ಈಗ ಪರಿಸ್ಥಿತಿಯು ತುಂಬ ಸುಧಾರಿಸಿದೆ—ಆಹಾರ ವಸ್ತುಗಳ ಉತ್ಪಾದನೆಯು ಬಹಳವಾಗಿ ಹೆಚ್ಚಿಕೊಂಡಿದೆ; ಜೀವನದ ವೆಚ್ಚವಾದರೂ ಇಳಿಮುಖವಾಗುತ್ತಾ ಬಂದಿದೆ. ಕಳೆದ ಒಂದೂವರೆ, ಎರಡು ವರ್ಷಗಳಿಂದ ಈ ಬದಲಾವಣೆಯು ಜನರ ಅನುಭವಕ್ಕೆ ಬರತೊಡಗಿತು; ಎಲ್ಲರ ಮನಸ್ಸಿಗೂ ತುಸು ಸಮಾಧಾನವಾಗ ಹತ್ತಿತು. ನಮ್ಮ ಪ್ರಥಮ ಪಂಚ ವಾರ್ಷಿಕ ಯೋಜನೆಯು ಸಫಲವಾಯಿತೆಂದು ಜನರು ಭಾವಿಸತೊಡಗಿದರು. ಆದರೆ ಎರಡನೇ ಯೋಜನೆಯು ಹೊಸ್ತಿಲನ್ನು ದಾಟುತಿದ್ದಂತೆ, ಈ ನೆಮ್ಮದಿಯ ಭಾವನೆ ಹಾರಿ ಹೋಗಿದೆ.

ಸರಕಾರದವರೇ ಆಗಲಿ, ಕಳೆದ ಎಪ್ರೀಲಿನ ಪೇಟೆ ಧಾರಣೆಗಳೊಡನೆ ಮತ್ತು ಜೀವನ ಮಟ್ಟದ ವೆಚ್ಚವನ್ನು ಸೂಚಿಸುವ ತಖ್ತೆಗಳೊಡನೆ ಈಗಿನವನ್ನು ಹೋಲಿಸಿದರೆ ಅಂದಿಗೂ ಇಂದಿಗೂ ಕನಿಷ್ಠ ೨೦% ಹೆಚ್ಚಳವಾದರೂ ಕಂಡು ಬಾರದಿರದು. ಹೀಗೆ ಬೆಲೆಗಳು ಏರಿಕೊಳ್ಳುತ್ತಿರುವುದು ನಮ್ಮ ಊರಿನಲ್ಲಿ ಮಾತ್ರವೇ ಅನುಭವಕ್ಕೆ ಬರುವ ವಿಷಯವಾಗಿ ಉಳಿದಿಲ್ಲ. ಮದ್ರಾಸು ಮತ್ತು ಮುಂಬಯಿ ರಾಜ್ಯಗಳಲ್ಲಿ ಈಗ ಇದು ಗೊಂದಲದ ಭಾವನೆಗೆ ಎಡೆ ಮಾಡಿಕೊಟ್ಟಿದೆ. ಭಾರತದ ಉಳಿದ ರಾಜ್ಯಗಳೂ ಪರಿಸ್ಥಿತಿಯನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಸಮೀಕ್ಷಿಸುತ್ತಿವೆ. ಕೇಂದ್ರ ಸರಕಾರದ ಮೋರೆ ನೋಡುವಂತೆ ರಾಜ್ಯ ಸರಕಾರಗಳನ್ನು ಇಂದಿನ ಪರಿಸ್ಥಿತಿಯು ಒತ್ತಾಯಿಸಿದೆ.

ಮೊದಲನೇ ಯೋಜನೆಯನ್ನು ಕೊರತೆ ಧನವಿನಿಯೋಗ ಪದ್ಧತಿಯನ್ನನುಸರಿಸಿ "ಕಟ್ಟುರೀತಿಯಲ್ಲಿ" ಕಾರ್ಯಗತಗೊಳಿಸಿದುದರಿಂದ ಬೆಲೆಗಳು ಅನಿರೀಕ್ಷಿತವಾಗಿ ಏರಿಕೊಂಡವೇ ಎಂದು ಮುಂಬಯಿ ಶಾಸನಾಂಗದಲ್ಲಿ ಪ್ರಶ್ನಿಸಲಾಯಿತು. ಮಂತ್ರಿಗಳು "ಇದೂ ಒಂದು ಅಭಿಪ್ರಾಯ ಮಾತ್ರ" ಎಂದು ಉತ್ತರವಿತ್ತರು. ಸರಕಾರದವರು ಈ ವಿಶೇಷ ಏರಿಕೆಯನ್ನ ಗಮನಿಸಿರುವರೆಂದೂ ಕೇಂದ್ರ ಸರಕಾರಕ್ಕೆ ವಿಷಯವನ್ನು ತಿಳಿಸಲಾಗಿದೆಯೆಂದೂ ಮಿತ ಬೆಲೆಯ ಅಂಗಡಿಗಳನ್ನು ತೆರೆಯಲು ಕಾಲವಿನ್ನೂ ಪಕ್ವವಾಗಿಲ್ಲವೆಂದೂ ಜನರು ಹೆದರುವ ಆವಶ್ಯಕತೆ ಇಲ್ಲವೆಂದೂ ಮಂತ್ರಿಗಳು ಧೈರ್ಯಕೊಟ್ಟರು.

ಮುಂಬಯಿಯ ಸಚಿವರ ಅಭಿಪ್ರಾಯದಂತೆ ಬೆಲೆಗಳು ಅನಿರೀಕ್ಷಿತವಾಗಿಯೂ ಅಸಾಮಾನ್ಯವಾಗಿಯೂ ಹೆಚ್ಚಿಕೊಂಡಿರುವುದೇನೊ ನಿಜ. ಆದರೆ ಜನರ ಕೈಗೆ ಎಟುಕದಮಟ್ಟಕ್ಕೆ ಬೆಲೆಗಳು ಏರಿವೆ, ಹಾಗೆ ಗಂಡಾಂತರದ ಕಾಲವೀಗ ಬಂದಿದೆ ಎನ್ನುವುದು ಸರಿಯಲ್ಲ. ಬೆಲೆಗಳು ಈಗಿನ ಮಟ್ಟದಲ್ಲಿ ಸ್ಥಿರಗೊಳ್ಳಬಹುದೆಂದು ಇವರ ಅಂದಾಜು. ಕಳೆದ ಐದು ವರ್ಷಗಳಲ್ಲಿ ಆಹಾರ ದವಸಗಳ ಬೆಲೆಯಲ್ಲಿ ಆದ ಏರಿಳಿತಗಳನ್ನು ಗಮನಕ್ಕೆ ತೆಗೆದುಕೊಂಡರೆ ಈಗಾಗಿರುವ ಹೆಚ್ಚಳವು ಅಸ್ವಾಭಾವಿಕವಾದುದಲ್ಲವೆಂದು ಮಂತ್ರಿಗಳ ಮತ.

ಜನರು ತೀರ ಕಳವಳಗೊಳ್ಳುವ ಆವಶ್ಯಕತೆ ಇಲ್ಲವೆಂಬ ಸಮಾಧಾನದ ಮಾತನ್ನೂ ಸರಕಾರವು ಪರಿಸ್ಥಿತಿಯು ಕೈಮೀರುವುದಕ್ಕೆ ಮೊದಲೇ ತಕ್ಕ ಕ್ರಮಗಳನ್ನು ಕೈಗೊಳ್ಳುವುದೆಂಬ ಭರವಸೆಯನ್ನೂ ನಾವು ಸ್ವಾಗತಿಸುತ್ತೇವೆ. ಆದರೆ ಇಷ್ಟರಿಂದಲೇ ಬೆಲೆಗಳ ಏರಿಕೆಯಿಂದ ಈಗಾಗಲೇ ನೊಂದಿರುವ ಜನರ ಕಷ್ಟ ಪರಿಹಾರವಾಗದು. ಬೆಲೆಗಳ ಏರಿಕೆಯ ಕಾರಣಗಳನ್ನು ತಿಳಿದು, ಕ್ಷಿಪ್ರದಲ್ಲಿ ಬೆಲೆಗಳು ಸಾಮಾನ್ಯ ಮಟ್ಟಕ್ಕೆ ಇಳಿಯುವಂತೆ ನೋಡುವುದು ಅಪೇಕ್ಷಣೀಯ.

ಮದ್ರಾಸು ಸರಕಾರದವರು ಕಂದಾಯ ಮಂಡಳದಿಂದ ತಖ್ತೀನ ವರದಿಯೊಂದನ್ನು ಈ ವಿಷಯದಲ್ಲಿ ಕೇಳಿರುವರೆಂದು ತಿಳಿದುಬರುತ್ತದೆ. ಇದು ಶ್ಲಾಘನೀಯವಾದ ಕ್ರಮ. ಸರಕಾರದ ದೃಷ್ಟಿಯಲ್ಲಿ, ಕಳೆದ ಎರಡು ಮೂರು ವಾರಗಳಲ್ಲಿ ವ್ಯಕ್ತವಾದ ಬೆಲೆಗಳ ಏರುವಿಕೆಗೆ ಯಾವುದೇ ನ್ಯಾಯವಾದ ಕಾರಣಗಳಿಲ್ಲ. ಹೊಸ ಅಕ್ಕಿಯು ಪೇಟೆಗೆ ಬಂದಿರುವಾಗ ಬೆಲೆ ಹೆಚ್ಚಿಕೊಳ್ಳುವುದು ಬಹಳ ಆಶ್ಚರ್ಯಕರವಾದ ವಿಷಯ.

ರಾಜ್ಯದ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡರರು ಮದ್ರಾಸಿನಲ್ಲಿ ದವಸಧಾನ್ಯಗಳ ಮತ್ತಿತರ ಸಾಗುವಳಿ ಉತ್ಪನ್ನಗಳ ಫಸಲು ಚೆನ್ನಾಗಿ ಬಂದಿದೆಯೆಂದೂ ಅದು ಕಳೆದ ವರ್ಷಕ್ಕಿಂತಲೂ ತುಂಬ ಹೆಚ್ಚಿದೆಯೆಂದೂ ಹೇಳಿದ್ದಾರೆ. ಹೀಗಾಗಿಯೂ ಬೆಲೆಗಳು ಏರುತ್ತಿರುವುದಕ್ಕೆ ವ್ಯಾಪಾರಿಗಳ ಸಂಗ್ರಹ ಬುದ್ಧಿಯು ಕಾರಣವೆಂದು ಅವರ ಅಭಿಪ್ರಾಯ. ಕೃತಕ ಕೊರತೆಯನ್ನು ಸಂಗ್ರಹದ ಮೂಲಕ ಸೃಷ್ಟಿಸಿ, ಬೆಲೆಗಳನ್ನು ಈಗಲೂ ಮುಂದೆಯೂ ಏರಿಕೆಯ ಮಟ್ಟದಲ್ಲಿಡಲು ಕುಹಕ ವ್ಯಾಪಾರಿ ವರ್ಗವು ಮುಂದಾದುದರಿಂದಲೇ ಈಗಿನ ಪರಿಸ್ಥಿತಿ ಬಂದೊದಗಿದೆ ಎಂದು ನಾಡರರು ಹೇಳಿದ್ದಾರೆ.

ವ್ಯಾಪಾರಿಗಳೇ ಇಂದಿನ ಪರಿಸ್ಥಿತಿಗೆ ತುಂಬ ಹೊಣೆಗಾರರೆಂಬ ಮಾತನ್ನು ನಾವು ಸಂಪೂರ್ಣವಾಗಿ ಅನುಮೋದಿಸುತ್ತೇವೆ. ನಿಜವಾಗಿ ಆಹಾರ ವಸ್ತುಗಳನ್ನು ಉತ್ಪಾದಿಸಿದ ಬೇಸಾಯಗಾರರು ತಮ್ಮ ಸರಕಿಗೆ ಹೆಚ್ಚಿಗೆ ಪ್ರತಿಫಲವನ್ನೇನು ಪಡೆದಿಲ್ಲ—ಅವರು ಪೇಟೆಯಲ್ಲಿ ಮಾರಾಟಕ್ಕೆ ತಮ್ಮ ಸರಕನ್ನು ತಂದಾಗ ಬೆಲೆ ನ್ಯಾಯವಾದ ಮಟ್ಟದಲ್ಲಿದ್ದಿತು. ಆದರೆ ಕೊಂಡುಕೊಳ್ಳುವುದೆಲ್ಲವೂ ಮುಗಿದು ದವಸಧಾನ್ಯಗಳು ವ್ಯಾಪಾರಿಯಲ್ಲಿ ಸಂಗ್ರಹಗೊಂಡ ಕೆಲವೇ ದಿನಗಳಲ್ಲಿ ಬೆಲೆ ಏರಹತ್ತಿತು. ಲಾಭಬಡುಕತನದ ಹವ್ಯಾಸವೇ ಇಂಥ ವಿಷಮತೆಯ ಮೂಲಕಾರಣ.

ಸರಕಾರದವರು, ಲಾಭಬಡುಕತನ ಮತ್ತು ಸಂಗ್ರಹ ಪ್ರವೃತ್ತಿಯಿಂದಾಗಿರುವ ದೋಷಗಳ ನಿವಾರಣೆಗೆ ಹೇಗೆ ಪ್ರಯತ್ನಪಡಬೇಕೆಂದು ಕಂದಾಯ ಮಂಡಳ ಸೂಚನೆ ಮಾಡುವುದೆಂಬ ನಂಬಿಕೆ ನಮ್ಮದು. ಬೆಲೆಗಳು ಏರುವುದಕ್ಕೆ ಆಹಾರ ವಸ್ತುಗಳು ಹೊರದೇಶಗಳಿಗೆ ವಿಶೇಷವಾಗಿ ನಿರ್ಯಾತವಾಗುತ್ತಿರುವುದು ಸಹ ಒಂದು ಕಾರಣವಾಗಿರಬಹುದು. ಇದನ್ನು ಸಮೀಕ್ಷಿಸಿ, ಕೇಂದ್ರ ಸರಕಾರವನ್ನು ತಕ್ಕ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲೂ ರಾಜ್ಯಸರಕಾರಗಳು ತಪ್ಪಬಾರದು.-

(೧೨ನೇ ಪುಟ ನೋಡಿರಿ)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ
ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ
IV ಮತ್ತು V ನೇ ಫಾರ್ಮುಗಳಿಗೆ ಕನ್ನಡ ಉಪಪಠ್ಯ
ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್
ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಬೆಲೆ: ಒಂದೂಕಾಲು ರೂಪಾಯಿ-

ನವಯುಗ ಪ್ರೆಸ್, ಉಡುಪಿ.

ವಾರ್ಷಿಕ ಚಂದಾ:
ರೂ೫—೧೨—೦

NAVAYUGA WEEKLY, UDIPI.

ಬಿಡಿ ಸಂಚಿಕೆ
ಎರಡಾಣೆ

ಅಣು ಶಕ್ತಿಯ ಶಾಂತಿ ಕಾಲದ ಪ್ರಯೋಜನ

ಭಾರತ ಸರಕಾರದ ಆಶ್ರಯದಲ್ಲಿ ವಿಜ್ಞಾನಿಗಳ ಸಾಹಸ

ಇದೇ ೧೯ನೇ ದಿನಾಂಕ ಅಮೇರಿಕದ ರಾಜಧಾನಿಯಾದ ವಾಷಿಂಗ್‌ಟನ್ ನಗರದಿಂದ ಪ್ರಕಟವಾದ ಹೇಳಿಕೆಯು "ಅಂತಾರಾಷ್ಟ್ರೀಯ ಅಣುಶಕ್ತಿ ಮಂಡಳಿ"ದ ರಚನೆಯ ನಿಬಂಧನೆಗಳ ಕುರಿತು ೧೨ ರಾಷ್ಟ್ರಗಳ ಸಮಿತಿಯು ಒಟ್ಟಾರೆ ಒಮ್ಮತದ ಅನುಮೋದನೆಯಿತ್ತಿದೆಯೆಂದೂ ನ್ಯೂಯೋರ್ಕ್ ನಗರದಲ್ಲಿ ಬರುವ ಸಪ್ಟಂಬರದಲ್ಲಿ ಸೇರಲಿರುವ ಅಂತಾರಾಷ್ಟ್ರೀಯ ಪರಿಷತ್ತಿಗೆ ಈ ನಿಬಂಧನೆಗಳನ್ನು ಪರಿಶೀಲನೆಗಾಗಿ ಇನ್ನು ಮುಂದೆ ಒಪ್ಪಿಸಲಾಗುವುದೆಂದೂ ತಿಳಿಸುತ್ತದೆ. ಈ ನಿಬಂಧನೆಗಳು ಆಸಕ್ತಿಯುಳ್ಳವರ ಅವಗಾಹನೆಗಾಗಿ ಇನ್ನು ಕೆಲವು ದಿನಗಳಲ್ಲಿ ಪ್ರಕಟವಾಗಬಹುದು. ಇವನ್ನು ತಯಾರಿಸಿದ ಸಮಿತಿಯಲ್ಲಿ ಭಾರತ, ಅಮೇರಿಕ, ರಶಿಯ, ಬ್ರಿಟನ್, ಫ್ರಾನ್ಸ್, ಕೆನಡ, ಆಸ್ಟ್ರೇಲಿಯ, ಬೆಲ್ಜಿಯಂ, ಬ್ರೇಜಿಲ್, ಜೆಕೋಸ್ಲೊವಾಕಿಯ, ಪೋರ್ಚುಗಲ್ ಮತ್ತು ದಕ್ಷಿಣ ಅಫ್ರಿಕದ ಪ್ರತಿನಿಧಿಗಳಿದ್ದಾರೆ. ಶಾಂತಿ ಕಾಲದ ಬಳಕೆಗಾಗಿ—ಮುಖ್ಯವಾಗಿ ವಿದ್ಯುಚ್ಛಕ್ತಿಯ ಉತ್ಪಾದನೆ, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರಗಳಿಗೆ ಸಂಬಂಧಪಟ್ಟು—ಅಣುಶಕ್ತಿಯನ್ನು ಉಪಯೋಗಿಸುವುದೇ ಮಂಡಳದ ಘೋಷಿತ ಉದ್ದೇಶ.

ಅಣುಶಕ್ತಿಯನ್ನು ಶಾಂತಿಕಾಲದ ಬಳಕೆಗಾಗಿ ಉಪಯೋಗಿಸುವ ವಿಷಯದಲ್ಲಿ ಭಾರತವು ಈಗಾಗಲೇ ಸಾಕಷ್ಟು ಪ್ರಗತಿಪರ ಕ್ರಮಗಳನ್ನು ಯಶಸ್ವಿಯಾಗಿ ಕೈಗೊಂಡಿದೆ. ಕಳೆದ ಜುಲಾಯಿ ತಿಂಗಳಲ್ಲಿ ಜಿನೇವದಲ್ಲಿ ಅಂತಾರಾಷ್ಟ್ರೀಯ ವಿಜ್ಞಾನಿಗಳ ಪರಿಷತ್ತು ಈ ವಿಷಯವನ್ನು ಪರ್ಯಾಲೋಚಿಸಿದಾಗ ಭಾರತದ ಅಣುಶಕ್ತಿ ತಜ್ಞರಾದ ಶ್ರೀ ಭಾಭಾರವರೇ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ಸಾಂಗಗೊಳಿಸಿರುವುದಕ್ಕೆ ಭಾರತ ಸರಕಾರದ ಧೋರಣೆಯ ಉದಾತ್ತತೆಯಂತೆಯೇ ಈ ವಿಜ್ಞಾನಿಗಳ ಘನತೆಯೂ ಕಾರಣ. ನಮ್ಮ ಪ್ರಧಾನ ಮಂತ್ರಿಗಳು ಲೋಕಸಭೆಯಲ್ಲಿ ಇತ್ತೀಚೆಗೆ ಹೇಳಿದಂತೆ, ಅಣುಶಕ್ತಿಯನ್ನು ಶಾಂತಿಕಾಲದ ಪ್ರಯೋಜನಗಳಿಗೆ ಬಳಸುವುದರಲ್ಲಿ ಭಾರತವು ಜಗತ್ತಿನಲ್ಲಿಯೇ ಆರರೊಳಗಿನ ಸ್ಥಾನವನ್ನು ಪಡೆಯುತ್ತದೆ. ಹೊರದೇಶಗಳ ಸಹಾಯ ಪಡೆದುಕೊಳ್ಳದೆ ಸ್ಫೋಟಕ ವಸ್ತುಗಳ ಪೂರೈಕೆಯನ್ನು ಉಚಿತ ಪ್ರಮಾಣದಲ್ಲಿ ದೇಶದೊಳಗಿನಿಂದಲೇ ಮಾಡಿಕೊಳ್ಳಬಲ್ಲ ಶಕ್ತಿಯು ಅಫ್ರಿಕ ಮತ್ತು ಏಶ್ಯದ ರಾಷ್ಟ್ರಗಳಲ್ಲಿ ಭಾರತಕ್ಕೆ ಮಾತ್ರ ಇದೆ ಎಂದು ತಿಳಿದುಬಂದಿದೆ. ಆದುದರಿಂದ ನಾವು ಹಿಂದುಳಿದ ಉಳಿದ ರಾಷ್ಟ್ರಗಳಿಗಿಂತ ಹೆಚ್ಚು ಭಾಗ್ಯಶಾಲಿಗಳೆಂದು ಭಾವಿಸಬಹುದು. ನಮ್ಮ ವಿಶಾಲ ದೇಶವು ವಿಪುಲ ನೈಸರ್ಗಿಕ ಸಂಪತ್ತಿನ ಖನಿಯಾಗಿ ನಮಗಿಷ್ಟು ಅನುಕೂಲತೆಯನ್ನು ಕಲ್ಪಿಸಿ ಕೊಟ್ಟಿರುವುದಕ್ಕೆ ನಾವು ಕೃತಜ್ಞರಾಗಿರುವುದು ಅವಶ್ಯ.

ನಮ್ಮ ದೇಶದಲ್ಲಿ ನಡೆದಿರುವ ಪ್ರಗತಿಯ ಚಿತ್ರವನ್ನು ಈ ತಿಂಗಳ ಎರಡನೇ ವಾರ ಹೊಸದಿಲ್ಲಿಯಿಂದ ಪ್ರಕಟವಾದ ಭಾರತ ಸರಕಾರದ ಅಣುಶಕ್ತಿ ವಿಭಾಗದ ವರದಿಯು ಸ್ಪಷ್ಟವಾಗಿ ಕಣ್ಣ ಮುಂದಿಡುತ್ತದೆ. ಅದರ ಪ್ರಕಾರ, ಈ ವರ್ಷದ ಮಧ್ಯದೊಳಗೆ "ಸ್ವಿಮ್ಮಿಂಗ್ ಪೂಲ್ ರಿಯಾಕ್ಟರ್" ಎಂಬ ಅಣುಶಕ್ತಿ ಜನಕ ಯಂತ್ರವನ್ನು ನೆಲೆಗೊಳಿಸುವ ಕೆಲಸ ಮುಗಿದು ಅದು ಉತ್ಪಾದನೆಯನ್ನು ಪ್ರಾರಂಭಿಸಲಿದೆ. ಉಳಿದ ಅಣುಶಕ್ತಿ ಜನಕ ಯಂತ್ರಗಳಿಗಿಂತ ಈ ವಿಶಿಷ್ಟ ಜಾತಿಯ ಯಂತ್ರಕ್ಕೆ ತಗಲುವ ವೆಚ್ಚ ಬಹಳ ಕಡಿಮೆ ಅಲ್ಲದೆ ಇದನ್ನು ಉಪಯೋಗಿಸುವುದರಿಂದ ಉಳಿದ ಯಂತ್ರಗಳಿಗಿಂತ ಹೆಚ್ಚು ಭದ್ರತೆ ಸಿಗುತ್ತದೆ; ಅಪಾಯ ವಿರಳವಾಗುತ್ತದೆ. ಜೀವಶಾಸ್ತ್ರ, ವೈದ್ಯ ಶಾಸ್ತ್ರ ಮತ್ತು ಔದ್ಯಮಿಕ ಕ್ಷೇತ್ರಗಳ ಸಂಶೋಧನೆಗೆ ಬೇಕಾದ 'ಐಸೋಟೋಪ್' ಎಂಬ ದ್ರವ್ಯವನ್ನು ಈ ಯಂತ್ರ ಉತ್ಪಾದಿಸುತ್ತದೆ. ಇನ್ನು ಮುಂದೆ ಕಟ್ಟಲಾಗುವ ಅಣುಶಕ್ತಿ ಜನಕ ಯಂತ್ರಗಳಲ್ಲಿ ದುಡಿಯಲು ಯೋಗ್ಯ ಇಂಜಿನಿಯರುಗಳನ್ನು ಈ ಯಂತ್ರದ ಪ್ರಯೋಜನ ಪಡೆಯುವ ನೆಲದಲ್ಲಿ ಉತ್ತಮ ತರಬೇತಿಗೆ ಒಳಪಡಿಸಲಾಗುತ್ತದೆ. ಈ ಯಂತ್ರವನ್ನು ರಚಿಸಿದವರು ಭಾರತೀಯರೇ ಆಗಿದ್ದಾರೆ; ಅದು ಸಾಮಾನ್ಯ ನೀರನ್ನು ತಣಿಸುವ ವಸ್ತುವಾಗಿ ಉಪಯೋಗಿಸಿಕೊಳ್ಳುತ್ತದೆ. ಇಂಧನ ಸಂಕುಗಳನ್ನು ಬ್ರಿಟನಿನಿಂದ ತರಿಸಲಾಗುತ್ತದೆ. ಯಂತ್ರಕ್ಕೆ ಸಂಬಂಧಿಸಿದಂತೆ ಇಲ್ಲಿ ಇಂಜಿನಿಯರಿಂಗ್, ಗ್ರಾಫೈಟ್ ಮತ್ತು ಖನಿಜವಿಭಾಗಗಳೂ ಕೆಲಸ ನಡೆಸುತ್ತವೆ.

ಇನ್ನೊಂದು ಅಣುಶಕ್ತಿ ಜನಕ ಯಂತ್ರವನ್ನು ಸ್ಥಾಪಿಸಲು ಯೋಜನೆಯನ್ನು ಮುಂದೊತ್ತುತ್ತಿದ್ದಾರೆ; ಅದು ಕೆನಡ ದೇಶದ ಯಂತ್ರವನ್ನೊಳಗೊಳ್ಳುತ್ತದೆ. ಕೊಲೊಂಬೋ ಯೋಜನೆಯಂತೆ ನಮಗೆ ದಾನವಾಗಿ ಕೊಟ್ಟ ಯಂತ್ರವಿದು. ಯಂತ್ರಕ್ಕೂ ಅದನ್ನು ನೆಲೆಗೊಳಿಸುವುದಕ್ಕೂ ತಗಲುವ ಒಟ್ಟು ವೆಚ್ಚ ೭ ಕೋಟಿ ರೂಪಾಯಿ. ಇದರಲ್ಲಿ ಯಂತ್ರಸ್ಥಾಪನೆಗೆ ಮಾತ್ರವೇ ಆಗುವ ಸುಮಾರು ೩½ ಕೋಟಿ ರೂಪಾಯಿಯನ್ನು ಭಾರತ ಸರಕಾರ ವಹಿಸಿಕೊಂಡಿದೆ. ಮೊನ್ನೆ ಫೆಬ್ರುವರಿಯಲ್ಲಿ ಯಂತ್ರ ಸ್ಥಾಪನೆಗಾಗಿ ಅಡಿಗಲ್ಲಿನ ಕೆಲಸ ಪ್ರಾರಂಭವಾಯಿತು. ಮುಂಬಯಿಗೆ ೧೩ ಮೈಲು ದೂರದಲ್ಲಿರುವ ಟ್ರಾಂಬೆಯಲ್ಲಿ ಈ ಕೇಂದ್ರಕ್ಕಾಗಿ ೧೧೦೦ ಎಕ್ರೆ ಜಾಗವನ್ನು ವಿನಿಯೋಗಿಸಲಾಗಿದೆ. ಯಂತ್ರವು ೧೯೫೮ನೇ ವರ್ಷದ ಹೊತ್ತಿಗೆ ಉತ್ಪಾದನೆಯನ್ನು ಪ್ರಾರಂಭಿಸಬಹುದೆಂದು ಈಗಿನ ಅಂದಾಜು. ಈ ಯಂತ್ರವು ಬಹಳ ವಿಶೇಷ ಶಕ್ತಿಯುಳ್ಳದ್ದಾಗುತ್ತದೆ. ಇದರಿಂದ ಉಚ್ಚ ಮಟ್ಟದಲ್ಲಿ ಶ್ರೇಷ್ಠ ಸಂಶೋಧನೆಗಳನ್ನು ಕೈಗೊಳ್ಳಲಿಕ್ಕೂ ಥೋರಿಯಂ ಖನಿಜವನ್ನು ಸ್ಫೋಟಕ ಯುರೇನಿಯಂ ಖನಿಜವಾಗಿ ಪರಿವರ್ತಿಸುವ ಬಗ್ಗೆ ಪ್ರಯೋಗಗಳನ್ನು ನಡೆಸಲಿಕ್ಕೂ ಅವಕಾಶವು ಸಿಗುತ್ತದೆ. ಹೀಗೆ ಭಾರತಕ್ಕೆ ಅಣುಶಕ್ತಿಯ ಕ್ಷೇತ್ರದಲ್ಲಿ ಉಲ್ಲೇಖನೀಯವಾದ ಸ್ಥಾನವನ್ನು ಈ ಯಂತ್ರವು ಸಂಪಾದಿಸಿ ಕೊಡುತ್ತದೆ. ಹಲವಾರು ಭಾರತೀಯ ಇಂಜನಿಯರರೂ ವಿಜ್ಞಾನಿಗಳೂ ಕೆನಡದಿಂದ ಬಂದಿರುವ ತಜ್ಞರ ಸಂಪರ್ಕ ಮತ್ತು ಸಹಕಾರಗಳನ್ನು ಪಡೆದು ಈ ಯಂತ್ರದ ಸ್ಥಾಪನೆ, ಅದರ ನಡೆಸುವಿಕೆ ಮತ್ತು ಅದನ್ನು ಯೋಗ್ಯ ಸ್ಥಿತಿಯಲ್ಲಿಡುವಿಕೆ ಇತ್ಯಾದಿ ವಿಷಯಗಳಲ್ಲಿ ವಿಶೇಷ ಅನುಭವವನ್ನು ಪಡೆಯುತ್ತಿದ್ದಾರೆ. ನ್ಯೂಟ್ರೋನ್ ಕಣಗಳ ನಿರಂತರ ಜಾಲವನ್ನು ಸೃಷ್ಟಿಸುವ ಉದ್ದೇಶದಿಂದ ಈ ಯಂತ್ರದಲ್ಲಿ ಅಮೇರಿಕದಿಂದ ತರಿಸುವ ಭಾರಜಲವನ್ನು ತಣಿಸುವ ವಸ್ತುವಾಗಿ ಉಪಯೋಗಿಸಲಾಗುತ್ತದೆ.

ಟ್ರಾಂಬೆಯಲ್ಲಿ ನೆಲೆಗೊಳ್ಳುವ ಅಣುಶಕ್ತಿ ಕೇಂದ್ರವು ಭೌತ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಯಂತ್ರ ವಿಜ್ಞಾನ ಶಾಸ್ತ್ರಗಳೆಂಬ ಮೂರು ಮುಖ್ಯ ವಿಭಾಗಗಳನ್ನು ಪಡೆಯುತ್ತದೆ. ವೈದ್ಯಕೀಯ ವಿಜ್ಞಾನ ಮತ್ತು ಆರೋಗ್ಯ ಶಾಸ್ತ್ರ ವಿಭಾಗವನ್ನು ಸಹ ಈ ಕೇಂದ್ರದಲ್ಲಿ ನೆಲೆಗೊಳಿಸಲಾಗುತ್ತದೆ. ಈಗಾಗಲೇ ಇಲ್ಲಿ ಕೆಲಸ ಮಾಡುತ್ತಿರುವ ವಿಜ್ಞಾನಿಗಳ ಸಂಖ್ಯೆ ಇನ್ನೂರರಷ್ಟಿದೆ. ೧೯೫೮ನೇ ಇಸವಿಯ ಹೊತ್ತಿಗೆ ಈ ಸಂಖ್ಯೆಯು ಎಂಟ್ನೂರಾಗಬಹುದು. ಟ್ರಾಂಬೇಯಲ್ಲಿ ತಕ್ಕ ಕಟ್ಟಡಗಳ ರಚನೆಯಾಗುವ ವರೆಗೆ ತಾತ್ಕಾಲಿಕವಾಗಿ ಅಣುಶಕ್ತಿ ಕೇಂದ್ರದ ವಿವಿಧ ವಿಭಾಗಗಳನ್ನು ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಓಲ್ಡ್ ಯಾಟ್ ಕ್ಲಬ್ ಮತ್ತು ಕೊಲಬಾಗಳಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರವು ಖನಿಜ ವಿಭಾಗವನ್ನು ಸಹ ಪಡೆದಿದೆ. ೧೯೫೫ರಲ್ಲಿ ತೆರೆಯಲಾದ ಈ ವಿಭಾಗವು ಸಲಕರಣೆಗಳ ರಚನೆಯಲ್ಲಿಯೂ ಯುರೇನಿಯಂ ಮತ್ತು ಥೋರಿಯಂ ಖನಿಜಗಳು, ಮಿಶ್ರಣ

(೧೦ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,

ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೇರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

Head Office: Tenkapet, **Udipi**, S. K. *Phone:* 66

ಪ್ರಾಥಮಿಕ ಅಧ್ಯಾಪಕರ ವೇತನದಲ್ಲಿ ಹೆಚ್ಚಳ

ಭಾರತ ಸರಕಾರದ ಸಚಿವರು ನಿರೂಪಿಸಿದ ನಿರ್ಧಾರ

ಲೋಕ ಸಭೆಯಲ್ಲಿ ಶಿಕ್ಷಣ ಖಾತೆಯ ಬೇಡಿಕೆಯ ಮೇಲೆ ನಡೆದ ಚರ್ಚೆಯನ್ನು ಉತ್ತರಿಸುತ್ತಾ ಉಪ ಸಚಿವ ಶ್ರೀ ಶ್ರೀಮಾಳಿಯವರು ಯೋಜನಾ ಆಯೋಗವು ಶಿಕ್ಷಣ ಖಾತೆಯ ಒಂದು ಸಾವಿರ ಕೋಟಿ ರೂಪಾಯಿಗಳ ಮೂಲ ಬೇಡಿಕೆಯನ್ನು ಗಣನೀಯವಾಗಿ ತಗ್ಗಿಸಿರುವುದರಿಂದ ಶೈಕ್ಷಣಿಕ ಪ್ರಗತಿಯು ನಿಧಾನವಾಗುವುದು ಅನಿವಾರ್ಯವಾಗಿದೆ ಎಂದರು. ಹೀಗೆ ಕಷ್ಟಗಳಿದ್ದರೂ ಸಹ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಎನ್ನುತ್ತಾ ೧೯೫೦ರಲ್ಲಿ ೧೮೦೦೦೦ಳ ಪ್ರಾಥಮಿಕ ಶಾಲೆಗಳಲ್ಲಿ ೧೯೦೬೮೫೨೪ ಮಕ್ಕಳು ಕಲಿಯುತ್ತಿದ್ದರೆ, ೧೯೫೫ರಲ್ಲಿ ೨೯೧೮೬೦೦೦ ಮಕ್ಕಳು ೨೫೨೩೫೫ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಹೊಂದುತ್ತಿದ್ದಾರೆಂಬ ಸತ್ಯಾಂಶವನ್ನು ನಿವೇದಿಸಿದರು. ಶಾಲಾಪ್ರಾಯದ ಮಕ್ಕಳಲ್ಲಿ ಶಾಲೆಗೆ ಹೋಗುವವರ ಪ್ರಮಾಣವು ೩೬% ದ ಬದಲು ೪೭% ಆಗಿರುವುದಕ್ಕೆ ಅವರು ಸಂತೋಷಿಸಿದರು. ಮೂಲ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರವು ವೆಚ್ಚದಲ್ಲಿ ೩೦% ಸಹಾಯ ನೀಡಲು ಮುಂಬಂದಿದೆ ಎಂದೂ ಅವರು ತಿಳಿಸಿದರು.

ಶೈಕ್ಷಣಿಕ ಸಮೀಕ್ಷೆ

ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಪ್ರಗತಿಯನ್ನು ಸಾಧಿಸುವುದಕ್ಕೆ ನೆರವಾಗುವ ಉದ್ದೇಶದಿಂದ ಅಖಿಲ ಭಾರತ ಸ್ವರೂಪದಲ್ಲಿ ಶೈಕ್ಷಣಿಕ ಸಮೀಕ್ಷೆಯೊಂದನ್ನು ನಡೆಸಲು ಸರಕಾರ ತೀರ್ಮಾನಿಸಿದೆ ಎಂದು ಮಂತ್ರಿಗಳು ವ್ಯಕ್ತಪಡಿಸಿದರು. ಹೊಸ ಶಾಲೆಗಳನ್ನು ಎಲ್ಲಿ ತೆರೆಯುವ ಅಗತ್ಯವಿದೆ ಮತ್ತು ಹೆಚ್ಚಿನ ವೆಚ್ಚದಿಂದ ನಡೆಯುತ್ತಿರುವ ಶಾಲೆಗಳ ಪರಿಸ್ಥಿತಿಯನ್ನು ಸುಧಾರಿಸುವ ಬಗೆ ಹೇಗೆ ಎಂಬ ಮುಖ್ಯ ವಿಷಯಕ್ಕೆ ಈ ಸಮೀಕ್ಷೆ ಸಂಬಂಧಿಸುತ್ತದೆ. ಅಧ್ಯಾಪಕರ ವೇತನಪ್ರಮಾಣವನ್ನು ಒಳ್ಳೆಯ ಮಟ್ಟದಲ್ಲಿಡದಿದ್ದರೆ ಯೋಗ್ಯತೆಯುಳ್ಳ ಜನರನ್ನು ಶಿಕ್ಷಣರಂಗಕ್ಕೆ ಆಕರ್ಷಿಸುವುದು ಸಾಧ್ಯವಿಲ್ಲವೆಂಬುದನ್ನು ಸರಕಾರವು ಮನಗಂಡಿದೆ ಎನ್ನುತ್ತಾ ಸದ್ಯಕ್ಕೆ ಪ್ರಾಥಮಿಕ ಅಧ್ಯಾಪಕರ ವೇತನ ಪ್ರಮಾಣವನ್ನು ಹೆಚ್ಚಿಸಲು ಸರಕಾರವೀಗ ನಿರ್ಧರಿಸಿದೆ ಎಂದರು. ತರಬೇತಿ ಹೊಂದಿರದ ಪ್ರಾಥಮಿಕ ಅಧ್ಯಾಪಕರಿಗೆ ತಿಂಗಳಿಗೆ ೪೦ ರೂಪಾಯಿ ಮತ್ತು ತರಬೇತಿ ಹೊಂದಿದ ಮೆಟ್ರಿಕ್ಯುಲೇಟಾದ ಪ್ರಾಥಮಿಕ ಅಧ್ಯಾಪಕರಿಗೆ ತಿಂಗಳಿಗೆ ೫೦ ರೂಪಾಯಿ ಕನಿಷ್ಠ ಮೂಲ ಸಂಬಳವಿರಬೇಕು ಎಂಬ ಸೂಚನೆಗೆ ಹಲವು ರಾಜ್ಯ ಸರಕಾರಗಳಿಂದ ಆಶಾದಾಯಕ ಉತ್ತರ ಬಂದಿದೆ ಎಂದರು. ಈ ಕನಿಷ್ಠ ಮಿತಿಯು ತುಟ್ಟಿ ಭತ್ತೆಯನ್ನು ಒಳಗೊಂಡಿಲ್ಲ. ರಾಜ್ಯ ಸರಕಾರಗಳು ಸಂಬಳ ಹೆಚ್ಚಿಸಲು ವ್ಯಯಿಸಬೇಕಾಗಿ ಬರುವ ಹಣದಲ್ಲಿ ಅರ್ಧಾಂಶವನ್ನು ಕೇಂದ್ರ ಸರಕಾರವು ಕೊಡುತ್ತದೆ. ಮಾಧ್ಯಮಿಕ ಅಧ್ಯಾಪಕರ ವೇತನವನ್ನು ಸಹ ಎತ್ತರಿಸುವ ಆಲೋಚನೆ ಸರಕಾರಕ್ಕಿದೆ—ಆದರೆ ಅದು ಬೇಗನೆ ಕೈಗೂಡುವುದು ಸಂಶಯ.

ವಿಷಮತೆಯ ನಿವಾರಣೆ

ಅರ್ಥ ಸಚಿವ ಶ್ರೀ ದೇಶಮುಖರು ದೇಶದಲ್ಲಿ ಭೂಸುಧಾರಣೆಯ ವೇಗವನ್ನು ಅಧಿಕಗೊಳಿಸಲಾಗುವುದೆಂದು ಘೋಷಿಸಿದ್ದಾರೆ; ಜನರ ಆದಾಯದಲ್ಲಿ ವಿಶೇಷ ಅಂತರವಿರದಂತೆ ಸರಕಾರವು ನೋಡಿಕೊಳ್ಳಲು ಆತುರವಿದೆಯೆಂದೂ ಅವರು ಸಾರಿದ್ದಾರೆ. ಮುಂಗಡ ಪತ್ರದಲ್ಲಿ ಆದಾಯದಲ್ಲಿರುವ ಅಂತರವನ್ನು ಸಮಾಜವಾದಿ ಆದರ್ಶದ ಸಾಧನೆಯಾಗುವಂತೆ ಪ್ರಗತಿಪರವಾಗಿ ತಗ್ಗಿಸುವ ಅನೇಕ ತೆರಿಗೆ ಸೂಚನೆಗಳಿರುವುದನ್ನು ಅವರು ಪ್ರಸ್ತಾಪಿಸಿದ್ದಾರೆ. ತೆರಿಗೆ ವಿಚಾರಣಾ ಮಂಡಳವು ಮಾಡಿದ ಸೂಚನೆಗಳಿಗೆ ಮಾತ್ರ ನಮ್ಮ ತೆರಿಗೆಯ ಧೋರಣೆ ಸೀಮಿತವಾಗಿಲ್ಲ; ಹೊಸ ಹೊಸ ಸೂಚನೆಗಳನ್ನು ನಾವು ವಿಚಾರಿಸುತ್ತಿದ್ದೇವೆ. ಈ ಸೂಚನೆಗಳು ಆಡಳಿತದ ಮೇಲೆ ಮಾಡುವ ಪರಿಣಾಮಗಳನ್ನೂ ಅವಲೋಕಿಸುತ್ತಿದ್ದೇವೆ. ಒಟ್ಟು ಸಂಪತ್ತಿನ ಮೇಲೆ ಮತ್ತು ಮಾಡುವ ಖರ್ಚಿನಮೇಲೆ ತೆರಿಗೆಯನ್ನು ಹಾಕುವ ಸೂಚನೆಗಳೂ ಪರ್ಯಾಲೋಚನೆಯಲ್ಲಿವೆ—ಆದರೆ ಈ ವಿಷಯದಲ್ಲಿ ಆಡಳಿತದ ತೊಂದರೆಗಳೇಳದಂತೆ ಹೇಗೆ ಮುಂದುವರಿಯಬೇಕೆಂಬುದು ಇನ್ನೂ ನಿರ್ಧಾರವಾಗಿಲ್ಲ. ಆದುದರಿಂದ ಈಗಲೇ ಹೆಚ್ಚಿನ ಪ್ರಕಾಶವನ್ನು ಈ ಮಟ್ಟಿಗೆ ಬೀರುವುದು ಸಾಧ್ಯವಿಲ್ಲ ಎಂದರು.

ಭೂಹಿಡುವಳಿಯ ಮಿತಿ

ಎಲ್ಲ ಸೊತ್ತುಗಳ ಸಂಗ್ರಹದ ಮೇಲೆ ಒಂದು ಮಿತಿಯನ್ನು ಹಾಕುವ ಸೂಚನೆಯು ಪರಿಶೋಧನವನ್ನು ಕೊಡಬೇಕಾಗಿ ಬರುವ ಜಟಿಲ ಸಮಸ್ಯೆಯನ್ನು ತಂದೊಡ್ಡುವುದರಿಂದ ಸದ್ಯಕ್ಕೆ ಭೂಹಿಡುವಳಿಗಳ ಮಟ್ಟಿಗೆ ಮಾತ್ರ ಮಿತಿಯೊಂದನ್ನು ಹೇರಲು ಸರಕಾರವು ನಿರ್ಧರಿಸಿದೆ ಎಂದು ಶ್ರೀ ದೇಶಮುಖರು ತಿಳಿಸಿದ್ದರು. ಆದಾಯವನ್ನು ಒಂದು ಮಿತಿಗೊಳಪಡಿಸುವುದು ಭೂಹಿಡುವಳಿಯ ಮೇಲೆ ಮಿತಿ ಹೇರುವ ಕ್ರಮದ ಉದ್ದೇಶವೆಂದು ಹೇಳಲಿಕ್ಕಾಗದು. ಉತ್ಪಾದನೆಯ ಸ್ರೋತವು ಕೆಲವೇ ವ್ಯಕ್ತಿಗಳ ಕೈಯಲ್ಲಿ ಉಳಿಯಲಾಗದೆಂಬ ತತ್ವದ ಮೇಲೆ ಭೂಹಿಡುವಳಿಗಳ ಬಗ್ಗೆ ಮಿತಿಯನ್ನು ಹೇರಲಾಗುತ್ತದೆ ಎಂಬ ಅವರು ಸ್ಪಷ್ಟೀಕರಣವನ್ನಿತ್ತರು. ಜನಸಾಂದ್ರತೆಯು ಅತ್ಯಧಿಕವಾಗಿರುವ ಭಾರತದಲ್ಲಿ ಭೂಮಿಯು ವಿರಳವಾಗಿ ದೊರಕುವ ವಸ್ತುವಾಗಿ ಪರಿಣಮಿಸಿದೆ. ಆದುದರಿಂದ ಭೂಸ್ವಾಮಿತ್ವವನ್ನು ಭೂಮಿಯ ಸಾಗುವಳಿ ಕ್ರಮವನ್ನು, ಒಕ್ಕಲುತನವನ್ನು ಮತ್ತು ಭೂಮಿಯನ್ನು ಉಪಯೋಗಿಸುವ ರೀತಿಯನ್ನು ನಿಯಂತ್ರಣದಲ್ಲಿಡುವುದು ಅವಶ್ಯಕವೆನಿಸಿದೆ-ಅಮೇರಿಕದಂಥ ರಾಷ್ಟ್ರದಲ್ಲಿ ಸಹ ನೀರಾವರಿ ಭೂಮಿಯು ಕುಟುಂಬಕ್ಕೆ ೧೬೦ ಎಕ್ರೆಗಳೆಂಬ ಪರಮ ಮಿತಿಗೆ ಒಳಗಾಗಿದೆ ಎಂದು ಮುಂತಾಗಿ ಶ್ರೀ ದೇಶಮುಖರು ಸರಕಾರದ ನಿಲುವೆಯನ್ನು ವಿವರಿಸಿದರು.

ರಾಜ್ಯಗಳ ಹೊಸ ಸ್ವರೂಪ

ಗೃಹಮಂತ್ರಿ ಪಂಡಿತ ಪಂತರು ರಾಜ್ಯಗಳ ಪುನಾರಚನೆಗೆ ಸಂಬಂಧಿಸಿದ ವಿಧೇಯಕವನ್ನು ಪರಿಶೀಲಕ ಸಮಿತಿಗೊಪ್ಪಿಸುವ ಸೂಚನೆಯನ್ನು ತಂದುದಕ್ಕೆ ಲೋಕ ಸಭೆಯು ಸಮ್ಮತಿಯನ್ನು ನೀಡಿದೆ. ಈ ಸಂದರ್ಭದಲ್ಲಿ ಮಾತನಾಡುತ್ತಾ ಪಂಡಿತ ಪಂತರು ಬಳ್ಳಾರಿಯ ವಿಷಯದಲ್ಲಿ ಆಂಧ್ರರಿಗೆ ಸಮಾಧಾನದ ಮಾತುಗಳನ್ನು ಹೇಳಿದರು. ತುಂಗಭದ್ರ ಅಣೆಕಟ್ಟಿನ ಕೆಲಸವನ್ನು ಚೊಕ್ಕ ರೀತಿಯಲ್ಲಿ ಮುಗಿಸಿ ರಾಯಲಸೀಮೆಗೆ ನೀರಿನ ಪೂರೈಕೆಯನ್ನು ಸರಿಯಾಗಿ ಮಾಡಲು ಮೈಸೂರು ಸರಕಾರವು ಒಪ್ಪಿದೆಯೆಂದೂ ಕೇಂದ್ರ ಸರಕಾರವೇ ಇದರ ಹೊಣೆಯನ್ನು ಆಂಧ್ರರ ತೃಪ್ತಿಗಾಗಿ ಹೊತ್ತಿದೆಯೆಂದೂ ಅವರು ತಿಳಿಸಿದ್ದಾರೆ. ಆಂಧ್ರ ಪ್ರದೇಶ ಎಂಬ ಹೊಸ ಹೆಸರಿನ ಬಗ್ಗೆ ವಿಶೇಷ ಒಮ್ಮತ ವ್ಯಕ್ತವಾಗಿದೆ ಎಂದೂ ಅವರಾಡಿದ್ದಾರೆ. ಮುಂಬಯಿ ನಗರ, ಮಹಾರಾಷ್ಟ್ರ ಮತ್ತು ಗುಜರಾಥಗಳಿಗೆ ಪ್ರತ್ಯೇಕ ಹೈಕೋರ್ಟುಗಳಿರಬೇಕೆಂಬ ಸೂಚನೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ ಎಂದಿದ್ದಾರೆ. ರಾಜ್ಯ ಸರಕಾರಗಳ ಶಾಸನಾಂಗಗಳ ಅಭಿಪ್ರಾಯದ ಹಿನ್ನೆಲೆಯಲ್ಲಿ ವಿಧೇಯಕವನ್ನು ಪರಿಶೀಲಿಸಬೇಕೆಂದು ಗೃಹಮಂತ್ರಿಯವರು ಸಮಿತಿಯನ್ನು ವಿನಂತಿಸಿಕೊಂಡಿದ್ದಾರೆ.

ಆಸೆ – ನಿರಾಸೆ

ಕಾಸರಗೋಡು ತಾಲೂಕಿನಂಥ ಗಡಿ ತಂಟೆಗಳಿರುವ ಪ್ರದೇಶಗಳ ಭವಿಷ್ಯದ ವಿಷಯದಲ್ಲಿ ಪರಿಶೀಲಕ ಸಮಿತಿಯ ಮುಂದೆ ಯೋಗ್ಯ ನಿವೇದನೆಗಳನ್ನು ಮಾಡಿ ಕನ್ನಡಿಗರ ಕೇಳಿಕೆಯು ಮನ್ನಿಸಲ್ಪಡುವಂತೆ ನೋಡಿಕೊಳ್ಳುವ ಭರವಸೆಯನ್ನು ಪ್ರತಿನಿಧಿಗಳು ಕೊಟ್ಟಿದ್ದುಂಟು: ಅವರ ಪ್ರಯತ್ನದ ಫಲವೇನಾಗುವುದೋ ಎಂದು ಜನರು ಆತುರದಿಂದಿದ್ದಾರೆಂದು ಹೇಳಬಹುದು. ಮದ್ರಾಸು ಮತ್ತಿತರ ಶಾಸನಾಂಗಗಳ ಕಾರ್ಯಕಲಾಪಗಳು ಈ ಮಟ್ಟಿಗೆ ಯಾವ ಪ್ರೋತ್ಸಾಹದಾಯಕ ಅಂಶವನ್ನೂ ವ್ಯಕ್ತಪಡಿಸಿಲ್ಲ. ಎಂದ ಮೇಲೆ ನಾವು ಹೆಚ್ಚಿನ ಆಶೆಯನ್ನು ಹೊಂದಿರುವುದಕ್ಕೆ ಆಧಾರವಿದೆಯೇ ಎಂಬುದು ಸಂದೇಹಾಸ್ಪದವಾದ ವಿಷಯ. ಪರಿಶೀಲಕ ಸಮಿತಿಯು ಮುಂದೆ ಗಡಿ ತಂಟೆಗಳನ್ನು ಪರಿಹರಿಸಲು ನಿರ್ಧಾರ ಕೈಗೊಳ್ಳುವ ವಿಷಯದ ಜೊತೆಗೆ ಮುಂಬಯಿ ನಗರದ ಭವಿಷ್ಯದ ಕುರಿತು ಮಹಾರಾಷ್ಟ್ರೀಯರು ಪಡುತ್ತಿರುವ ಆಗ್ರಹವೆಂಬ ಜಟಿಲ ಸಮಸ್ಯೆಯೂ ಇದೆ. ಆದುದರಿಂದ ಕಾಸರಗೋಡು ಪ್ರಶ್ನೆಯು ಹಿನ್ನೆಲೆಗೆ ನಿಲ್ಲುವ ಭಯ ಬಹಳ ಹೆಚ್ಚು.

ಮರಾಠರ ಹಠ

ಮಹಾರಾಷ್ಟ್ರದ ಕಾಂಗ್ರೆಸು ಪ್ರತಿನಿಧಿಗಳು ಸುದೀರ್ಘವಾದ ಮನವಿ ಪತ್ರವೊಂದನ್ನು ಪ್ರಧಾನಿಗಳಿಗೆ ಕಳುಹಿಸಿ ಮುಂಬಯಿ ನಗರವು ಮಹಾರಾಷ್ಟ್ರ ರಾಜ್ಯದಲ್ಲಿ ಸೇರಿಸಲ್ಪಡಲೇ ಬೇಕೆಂದು ಪುನರುಚ್ಚರಿಸಿದ್ದಾರೆ; ಅಲ್ಲದೆ, ಕಾರವಾರ ಮತ್ತು ಬೆಳಗಾಂವಿ ಜಿಲ್ಲೆಗಳ ಬಗ್ಗೆ ಗಡಿ ಸಮಿತಿಯನ್ನು ನೇಮಿಸಿಯೋ ಬೇರಾವುದೇ ರೀತಿಯನ್ನನುಸರಿಸಿಯೋ ಅಂತೂ ಆ ಜಿಲ್ಲೆಗಳ ಕೆಲವು ಪ್ರದೇಶಗಳನ್ನು ಮಹಾರಾಷ್ಟ್ರದಲ್ಲಿ ಸೇರಗೊಳಿಸಬೇಕೆಂದು ಒತ್ತಾಯಿಸಿದ್ದಾರೆ. ಮುಂಬಯಿ ಸರಕಾರದಲ್ಲಿ ಮಂತ್ರಿಗಳಾಗಿರುವ ಶ್ರೀ ಪಾಟೀಲರು ಬೆಳಗಾಂವಿ ಮತ್ತು ಕಾರವಾರಗಳು ಅಚ್ಚಗನ್ನಡ ಪ್ರದೇಶಗಳೆಂದು ಸಮರ್ಥ ರೀತಿಯಲ್ಲಿ ಪ್ರತಿಪಾದಿಸಿರುವುದನ್ನು ಮಹಾರಾಷ್ಟ್ರೀಯರು ಅರ್ಥಮಾಡಿಕೊಳ್ಳಲಾರದವರಂತೆ ತೋರಿದ್ದಾರೆ. ಕೇಂದ್ರದ

(೧೦ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956
THE CANARA BANKING CORPORATION LIMITED
H. Office: UDIPI (S.India).

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,
ತೆಂಕಪೇಟೆ, ಉಡುಪಿ ದ. ಕನ್ನಡ.
ಯಾವುದೇ ತರದ ಹೇಂಡ್‌ಲೂಮ್ಸ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.
SRI GAJANANA CLOTH STORES,
TENKAPET, UDIPI. S. KANARA.

ಪಾಕಿಸ್ತಾನದಲ್ಲಿ ಧರ್ಮಯುದ್ಧದ ಬೊಬ್ಬಾಟ

ಕಾಶ್ಮೀರದ ಹೆಸರೆತ್ತಿ ಜನರನ್ನು ಉದ್ರೇಕಿಸುವ ದಾರ್ಷ್ಟ್ಯ

ಇರಾನಿನ ರಾಜಧಾನಿಯಾದ ಟೆಹರಾನಿನಲ್ಲಿ ಮೊನ್ನೆ ೧೯ನೇ ದಿನಾಂಕ ಮುಕ್ತಾಯವಾದ ಬಗ್ದಾದ್ ಸೈನಿಕ ಒಪ್ಪಂದ ರಾಷ್ಟ್ರಗಳ ಪರಿಷತ್ತು ಹೊರಡಿಸಿದ ಪ್ರಕಟಣೆಯಲ್ಲಿ ಕೊನೆಗಾದರೂ ಕಾಶ್ಮೀರದ ಪ್ರಸ್ತಾಪವನ್ನು ಮಾಡಿ, ಪಾಕಿಸ್ತಾನವನ್ನು ತುಸುಮಟ್ಟಿಗೆ ಸಮಾಧಾನಗೊಳಿಸುವ ಪ್ರಯತ್ನ ನಡೆದೇ ನಡೆಯಿತು. "ಮಧ್ಯಪೂರ್ವ ವಿಶ್ವದಲ್ಲಿ ಘರ್ಷಣೆ ಘಟಿಸುತ್ತಿರುವುದನ್ನು ಪರಸ್ಪರ ತಿಳಿವಳಿಕೆಯ ತಳಹದಿಯ ಮೇಲೆ ಬಿಚ್ಚುಮನಸ್ಸಿನಿಂದ ಚರ್ಚಿಸಲಾಯಿತು. ಮುಖ್ಯವಾಗಿ ಪಾಕಿಸ್ತಾನ ಮತ್ತು ಕಾಶ್ಮೀರ ತಂಟೆಗಳ ಶೀಘ್ರ ಪರಿಹಾರವನ್ನು ಪರಿಷತ್ತು ಒತ್ತಿ ಹೇಳಿತು" ಎಂಬುದಾಗಿ ಈ ಸಂಬಂಧದಲ್ಲಿ ಹೊರಟ ಪ್ರಕಟಣೆಯು ಹೇಳುತ್ತದೆ.

ಮಹಮ್ಮದಾಲಿಗಳಿಗೆ ತೃಪ್ತಿ

ಬಹಿರಂಗವಾಗಿ ಕಾಶ್ಮೀರವನ್ನು ಪ್ರಸ್ತಾಪಿಸಿರುವುದು ಮೇಲಿನ ಕೆಲವೇ ಶಬ್ದಗಳಿಗೆ ಸೀಮಿತವಾಗಿದ್ದರೂ ಸಹ ಪಾಕಿಸ್ತಾನದ ಆಕಾಶವಾಣಿಯು ಬಗ್ದಾದಿನ ಸೈನಿಕ ಒಪ್ಪಂದಕ್ಕೆ ಸೇರಿರುವ ರಾಷ್ಟ್ರಗಳಲ್ಲಿ ತುರ್ಕಿ, ಇರಾನ್ ಮತ್ತು ಇರಾಕುಗಳು ಪಾಕಿಸ್ತಾನವು ಕಾಶ್ಮೀರ ಸಮಸ್ಯೆಯ ವಿಷಯದಲ್ಲಿ ವಹಿಸಿರುವ ನಿಲುವೆಯನ್ನು ಪರಿಷತ್ತಿನ ಗುಪ್ತಸಭೆಯೊಂದರಲ್ಲಿ ಅನುಮೋದಿಸಿವೆ ಎಂದು ವರದಿ ಮಾಡಿದೆ. ಅಮೇರಿಕದ ಉಪವಿದೇಶಾಂಗ ಸಚಿವರಾದ ಲಾಯ್ ಹೆಂಡರ್ಸನರು ಸಹ ಪಾಕಿಸ್ತಾನವನ್ನು ಬೆಂಬಲಿಸಿರುವರೆಂದು ಅದು ಘೋಷಿಸಿದೆ. ಪಾಕಿಸ್ತಾನಿ ಪ್ರಧಾನಿ ಮಹಮ್ಮದಾಲಿಗಳು ಅಂತಾರಾಷ್ಟ್ರೀಯ ಪರಿಸ್ಥಿತಿಯ ವಿವೇಚನೆಯನ್ನು ಮಾಡುತ್ತಾ ಈ ಪ್ರದೇಶದ ಭದ್ರತೆ ಮತ್ತು ಶಾಂತಿಗಳನ್ನು ಕಾಪಾಡಿಕೊಳ್ಳುವ ಉತ್ಕಟೇಚ್ಛೆಯನ್ನು ಪ್ರದರ್ಶಿಸಿ ಪರಿಷತ್ತು ಕಾಶ್ಮೀರ ಸಮಸ್ಯೆಯು ಶೀಘ್ರದಲ್ಲಿ ಇತ್ಯರ್ಥ ಹೊಂದುವ ಆವಶ್ಯಕತೆಯನ್ನು ಪ್ರತಿಪಾದಿಸಿರುವುದಕ್ಕೆ ಸಂತೋಷವನ್ನು ಸೂಚಿಸಿದ್ದಾರೆ. ಪರಿಷತ್ತು ಕಾಶ್ಮೀರ ಪ್ರಶ್ನೆಯನ್ನು ಒಂದೆರಡೇ ಮಾತುಗಳಲ್ಲಿ "ಪ್ರಸ್ತಾಪಿಸಿ" ಅಲ್ಲಿಗೆಯೇ ಅದನ್ನು ಬಿಟ್ಟು ಬಿಟ್ಟಿದೆಯೆಂದೂ ಪ್ರಶ್ನೆಯ ಯೋಗ್ಯತೆ ಮತ್ತು ಗುಣಾವಗುಣಗಳ ವಿವೇಚನೆಯನ್ನು ಮಾಡಿ ಪಾಕಿಸ್ತಾನದ ಪಕ್ಷವನ್ನು ವಹಿಸಲು ಹೋಗಿಲ್ಲವೆಂದೂ ಭಾವಿಸುವುದು ಸರಿಯಾಗಲಾರದೆಂದು ಪಾಕಿಸ್ತಾನಿ ಪ್ರಧಾನಿಗಳ ಅಭಿಪ್ರಾಯ.

ಬ್ರಿಟನಿನ ಅರೆ ಮನಸ್ಸು

ಪರಿಷತ್ತಿನ ಸಭೆಗಳಲ್ಲಿ ಬ್ರಿಟನು ಕಾಶ್ಮೀರ ಪ್ರಶ್ನೆಯನ್ನು ಪ್ರಸ್ತಾಪಿಸುವುದಕ್ಕೆ ಬಹಳ ವಿರೋಧವನ್ನು ವ್ಯಕ್ತಪಡಿಸಿತೆಂದು ತಿಳಿದು ಬರುತ್ತದೆ. ಈ ವಿರೋಧದ ದೆಸೆಯಿಂದಲೇ ಕಾಶ್ಮೀರ ಪ್ರಶ್ನೆಯ ಸುದ್ದಿಯನ್ನು ಎತ್ತದೆಯೇ ಪರಿಷತ್ತು ಮುಕ್ತಾಯಗೊಳ್ಳುವ— ಕನಿಷ್ಠ ಪಕ್ಷಕ್ಕೆ ಪರಿಷತ್ತಿನ ಕೊನೆಯಲ್ಲಿ ಪ್ರಕಟವಾಗುವ ಹೇಳಿಕೆಯಲ್ಲಾದರೂ ಕಾಶ್ಮೀರದ ಉಲ್ಲೇಖವಿಲ್ಲದಿರುವ— ಸಂಭವವು ಬಹಳ ಹೆಚ್ಚೆಂದು ವರದಿಯಾಯಿತು. ಆದರೆ ಪಾಕಿಸ್ತಾನವು ತನ್ನ ಮುಖಭಂಗವಾಗುವುದೆಂದೂ ಕಾಶ್ಮೀರದ ಉಲ್ಲೇಖವನ್ನು ಪರಿಷತ್ತು ಮಾಡುವುದು ತೀರ ಆವಶ್ಯಕವೆಂದೂ ಹಠ ಹಿಡಿದು ಕುಳಿತುದರಿಂದ ಮೊದಲೇ ನಿಗದಿಯಾಗಿದ್ದ ಹೊತ್ತಿಗಿಂತಲೂ ತಡವಾಗಿ ಪ್ರಕಟಣೆಯನ್ನು ಕೊಟ್ಟು, ಅದರಲ್ಲಿ ಪಾಕಿಸ್ತಾನಕ್ಕೆ ಸ್ವಲ್ಪಮಟ್ಟಿಗಾದರೂ ಸಮಾಧಾನವಾಗುವ ವಾಕ್ಯವೊಂದನ್ನು ಸೇರಿಸಲಾಯಿತು. ಈ ಪ್ರಕಟಣೆಯಲ್ಲಿ ಕಾಶ್ಮೀರವನ್ನು ಪ್ರಸ್ತಾಪಿಸಿದ ಕುರಿತು ವಿವರಣೆಯನ್ನು ಕೊಟ್ಟ ಬ್ರಿಟನಿನ ವಕ್ತಾರರೊಬ್ಬರು 'ಪರಿಷತ್ತು ಪರ್ಯಾಲೋಚಿಸಬಹುದಾದ ವಿಷಯಗಳ ಮಿತಿಯನ್ನು ಅಲಕ್ಷಿಸಲಾಗಿಲ್ಲ" ಎಂಬ ಬ್ರಿಟನಿನ ಪ್ರತಿನಿಧಿಯ ಮಾತುಗಳ ಕಡೆಗೆ ಭಾರತೀಯರ ಗಮನವನ್ನು ಸೆಳೆದು ಕಾಶ್ಮೀರದ ಪ್ರಸ್ತಾಪವಾದುದಕ್ಕೆ ಏನೇನೂ ಮಹತ್ವವಿಲ್ಲ ಎಂದು ಹೇಳ ಹೋಗಿದ್ದಾರೆ.

ಅಮೇರಿಕದ ಬೆಂಬಲ

ಭಾರತವು ಸಿಯಾಟೊ ಪರಿಷತ್ತಿನಲ್ಲಿ ಕಾಶ್ಮೀರದ ಉಲ್ಲೇಖವಾಗಿರುವುದಕ್ಕೆ ತನ್ನ ನಿಷೇಧವನ್ನು ಈಗಾಗಲೇ ವ್ಯಕ್ತಪಡಿಸಿದೆ; ಮತ್ತೀಗ ಬಗ್ದಾದಿನ ಸೈನಿಕ ಕೂಟವು ಕಾಶ್ಮೀರವನ್ನು ಪುನಃ ಪ್ರಸ್ತಾಪಿಸಿರುವುದಕ್ಕೆ ಪ್ರತಿಭಟನೆ ಮಾಡುವುದು ಖಂಡಿತ. ಸಿಯಾಟೊ ಪರಿಷತ್ತಿನ ಕಕ್ಷೆಯ ಹೊರಗಿನ ವಿಷಯವು ಕಾಶ್ಮೀರವಾಗಿದೆ ಎಂದು ಹೊಸದೆಹಲಿಯಲ್ಲಿ ಹೇಳಿದ್ದ ಬ್ರಿಟನಿನ ವಿದೇಶ ಮಂತ್ರಿಗಳು ಕರಾಚಿಯಲ್ಲಿ ಪಾಕಿಸ್ತಾನದ ತಾಳಕ್ಕೆ ಸರಿಯಾಗಿ ಕುಣಿದು ತಮ್ಮ ಪ್ರತಿಷ್ಠೆಗೆ ಕುಂದು ತಂದುಕೊಂಡರು. ಟೆಹರಾನಿನ ಈ ಸಲದ ಪರಿಷತ್ತಿನಲ್ಲಿ ಅಂಥ ಅನಪೇಕ್ಷಣೀಯ ಪ್ರಸಂಗ ಬಾರದಂತೆ ಜಾಗರೂಕತೆ ವಹಿಸಲು ಬ್ರಿಟನಿನ ಪ್ರತಿನಿಧಿಗಳು ಬಹಳ ಪ್ರಯತ್ನಶೀಲರಾದರೆಂದು ತಿಳಿದುಬರುತ್ತದೆ. ಆದರೆ ಈ ಸಭೆಯಲ್ಲಿ ಅಮೇರಿಕವು ನಿರೀಕ್ಷಕನ ಸ್ಥಾನವನ್ನು ಬಿಟ್ಟುಗೊಟ್ಟು ಬಗ್ದಾದ್ ಒಪ್ಪಂದದಲ್ಲಿ ಸದಸ್ಯ ರಾಷ್ಟ್ರವಾಗಿ ಸೇರುವಷ್ಟು ಹುಮ್ಮಸ್ಸು ತೋರಿಸಿದುದರಿಂದ ಅಮೇರಿಕದ ಕೈಗೊಂಬೆಯಾದ ಪಾಕಿಸ್ತಾನವನ್ನು ಮನನೋಯಿಸಲಾರದೆ ಬ್ರಿಟನು ಕೊನೆಗೆ ಬೀಸಿದ ಬಲೆಗೆ ಬಿತ್ತೆಂದು ಭಾವಿಸಬಹುದು. ಅಮೇರಿಕದಲ್ಲಿ ಹಿಂದೆ (ಟ್ರೂಮನರ ಕಾಲದಲ್ಲಿ) ವಿದೇಶ ಮಂತ್ರಿಯಾಗಿದ್ದ ಆಚೆಸನರು ಸೈನಿಕ ಒಪ್ಪಂದಗಳಿಂದಾಗುವ ಅನಾಹುತಗಳನ್ನು ಖಂಡಿಸಿ ಭಾರತದ ನಿಲುವೆಯನ್ನು ಎತ್ತಿ ಹಿಡಿದು ಎಲ್ಲ ಅಮೇರಿಕನ್ನರೂ ಡಲ್ಲೆಸರ ಕೈಗೊಂಬೆಗಳಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದ ಹೊತ್ತಿಗೆ ಸರಿಯಾಗಿ, ಡಲ್ಲೆಸರು ತಮ್ಮ ದೇಶಕ್ಕೆ ಬಗ್ದಾದ್ ಒಪ್ಪಂದದ ಸದಸ್ಯತ್ವವನ್ನು ಕೊಡಿಸಿರುವುದು ಗಮನಿಸಬೇಕಾದ ವಿಷಯ.

ಜೇಹಾದಿನ ಝೇಂಕಾರ

ಈಗ ಪಾಕಿಸ್ತಾನವನ್ನು ಹಿಡಿದು ನಿಲ್ಲಿಸುವವರಿಲ್ಲವೆಂದು ಹೇಳಬಹುದು. ಅಲ್ಲಿ "ಪ್ರಭಾವಿ" ಪಕ್ಷವಾಗಿರುವ ಮುಸ್ಲಿಂ ಲೀಗು ಕಾಶ್ಮೀರದ ಪ್ರಶ್ನೆಯನ್ನೆತ್ತಿಯೂ ಗಡಿ ಉಲ್ಲಂಘನೆಯಾದ ಘಟನೆಗಳನ್ನು ಉಲ್ಲೇಖಿಸಿಯೂ ಜೇಹಾದಿನ (ಧರ್ಮ ಯುದ್ಧದ) ಬೊಬ್ಬೆಯನ್ನು ಹಾಕತೊಡಗಿದೆ: ಬಹಿರಂಗವಾಗಿರುವ ಲೀಗಿನ ಪ್ರಕಟಣೆಯೊಂದರಲ್ಲಿ ಪಾಕಿಸ್ತಾನದ ಗಡಿ ರಕ್ಷಣೆಗೆ ಎಲ್ಲ ಪ್ರಜೆಗಳೂ ಧರ್ಮ ಯುದ್ಧದಲ್ಲಿ ನಿರತರಾಗುವುದು ಅತ್ಯಗತ್ಯವೆಂದು ಪ್ರತಿಪಾದಿಸಲಾಗಿದೆ. ಗಡಿ ಉಲ್ಲಂಘನೆಯನ್ನು ಪ್ರತಿಸಲವೂ ಮಾಡಿದ ಅಪರಾಧವು ಪಾಕಿಸ್ತಾನದ ಮೇಲಿದೆ ಎಂಬ ಸತ್ಯಾಂಶವನ್ನು ಮುಸ್ಲಿಂ ಲೀಗು ಸ್ವಲ್ಪವೂ ಗಮನಿಸಿರುವುದಿಲ್ಲ. ಅದರ ಹುಟ್ಟು ಗುಣದ ಗುಟ್ಟು ಗೊತ್ತಿದ್ದವರಿಗೆ ಈ ಮಾತಿರಲಿ, ಜುನಾಗಡ, ಹೈದರಾಬಾದುಗಳನ್ನು ಭಾರತವು ಆಕ್ರಮಿಸಿ, ಗೆದ್ದುಕೊಂಡಿದೆ ಎಂಬ ಮತ್ತು ಅವು ಪಾಕಿಸ್ತಾನದ ನ್ಯಾಯವಾದ ಪ್ರದೇಶಗಳೆಂಬ ಪ್ರತಿಪಾದನೆಯೂ ಆಶ್ಚರ್ಯವನ್ನು ತರಲಾರದು. ಆದರೆ ಅಜ್ಞ ಜನರನ್ನು ಉದ್ರೇಕಿಸಿ, 'ಧರ್ಮ ಯುದ್ಧ' ನಿರತರಾಗಿ ಮಾಡಲು ಮುಸ್ಲಿಂ ಲೀಗು ತನ್ನ ಘೋಷಣೆಯಲ್ಲಿ ಈ ಅಪ್ಪಟ ಸುಳ್ಳನ್ನು ಹೇಳಿರುತ್ತದೆ. ಆಕ್ರಮಣೇಚ್ಛೆಯುಳ್ಳ ಭಾರತವು ಕಾಶ್ಮೀರವನ್ನು ಪೂರ್ತಿಯಾಗಿ ನುಂಗಲು ಹವಣಿಸಿದೆ, ಇದಕ್ಕಾಗಿಯೇ ಅಲ್ಲಿ ಜನ ಮತಗಣನೆ ನಡೆಸಲು ಒಪ್ಪುವುದಿಲ್ಲ. ಒಂದೊಂದೇ ಪ್ರದೇಶವನ್ನು ಸ್ವಾಹಾ ಮಾಡುತ್ತಾ ಬಂದ ಭಾರತವೀಗ ಪೋರ್ಚುಗೀಜರ ಹಕ್ಕಿನ ಭೂಮಿಯಾದ ಗೋವೆ ಮತ್ತಿತರ ಪ್ರದೇಶಗಳನ್ನು ಕಸಿದುಕೊಳ್ಳಲು ನೋಡುತ್ತಿದೆ— ಎಂದು ಮುಂತಾಗಿ ಮುಸ್ಲಿಂ ಲೀಗಿನ ಬೊಬ್ಬಾಟ.

ಜಾಗರೂಕ ಭಾರತ

ಗಡಿ ಪ್ರದೇಶದಲ್ಲಿ ಸಂಚರಿಸಿದ ಭಾರತದ ರಕ್ಷಣಾ ಸಚಿವ ತ್ಯಾಗಿಯವರೂ ಕಾಶ್ಮೀರದಲ್ಲಿ ಪ್ರವಾಸಗೈದ ಕಟಜೂರವರೂ ಪಾಕಿಸ್ತಾನವು ಸೈನಿಕ ಶಕ್ತಿಯ ಬಲ ಪ್ರದರ್ಶನ ಮಾಡಿದರೆ ಭಾರತವೂ ತನಗೆ ಬಂದೂಕು ಹಾರಿಸಲು ಬರುವುದೆಂಬ ಸಂಗತಿಯನ್ನು ತೋರಿಸಿಕೊಡಲು ತಪ್ಪದು ಎಂದಿದ್ದಾರೆ. ಕಾಶ್ಮೀರದಲ್ಲಿ ಪಾಕಿಸ್ತಾನಕ್ಕೆ ಯಾವುದೇ ಅಧಿಕಾರವಿಲ್ಲವೆಂದವರು ಪುನರುಚ್ಚರಿಸಿದ್ದಾರೆ. ಗೃಹಮಂತ್ರಿ ಪಂಡಿತ ಪಂತರು ರಾಜ್ಯಗಳ ಪುನಾರಚನೆಯ ಮಸೂದೆಯನ್ನು ಮಂಡಿಸುವ ಹೊತ್ತಿಗೆ "ಸಮೀಪದಲ್ಲೇ ಕೇಳಿಬರುತ್ತಿರುವ" ಜೇಹಾದಿನ ಕೂಗಿನತ್ತ ಭಾರತೀಯರ ಗಮನವನ್ನು ಸೆಳೆದು ನಾವೆಲ್ಲರೂ ಆಂತರಿಕ ಸಂಘಟನೆಯಿಂದ ಕೂಡಿರಲು ತಪ್ಪಬಾರದೆಂದು ವಿನಂತಿಸಿದ್ದಾರೆ; ಮತ್ತು ಪಾಕಿಸ್ತಾನಕ್ಕೆ ದುಃಖಕರವೆಂಬ ಎಚ್ಚರಿಕೆಯನ್ನು ನೀಡಿದ್ದಾರೆ. ಪ್ರಧಾನಿ, ನೆಹರೂಗಳು ಕಳೆದವಾರ ಮಾಡಿದ ತಮ್ಮ ಭಾಷಣಗಳಲ್ಲಿ ಕಾಶ್ಮೀರ ಪ್ರಶ್ನೆಯು ಸಮಾಧಾನಕರವಾಗಿ ಇತ್ಯರ್ಥವಾಗದಿರುವುದಕ್ಕೆ ಪಾಕಿಸ್ತಾನದ ಧುರೀಣರ ಮನೋಭಾವವೇ ಕಾರಣವೆಂದು ಸಾರಿ ಹೇಳಿ ಉಭಯ ದೇಶಗಳಲ್ಲಿ ಸೌಹಾರ್ದತೆ ಅವಶ್ಯವೆಂದೂ ಭಾರತವೆಂದೂ ಪಾಕಿಸ್ತಾನದ ಕೇಡು ಬಯಸುತ್ತಿಲ್ಲವೆಂದೂ ಪುನರುಚ್ಚರಿಸಿದ್ದಾರೆ. ಪಾಕಿಸ್ತಾನಿಗಳಿಗೆ ಹೀಗೆ ಭರವಸೆ ಕೊಡುತ್ತಿದ್ದಂತೆಯೇ ನೆಹರುಗಳು ಸ್ವದೇಶ ಬಾಂಧವರನ್ನು ಭಾವನಾತ್ಮಕ ಮಟ್ಟದಲ್ಲಿ ಐಕ್ಯಸೂತ್ರಕ್ಕೊಳಪಡಲು ಬಿನ್ನವಿಸಿದ್ದಾರೆ. ಹೊರಗಿನಿಂದ ವಿಪತ್ತು ಬರುವ ಭಯ ನನಗಿಲ್ಲ: ಆಂತರಿಕ ದೌರ್ಬಲ್ಯ ಮತ್ತು ವಿಫಲತೆಗಳದ್ದೆ ನನಗೆ ಹೆದರಿಕೆ ಎಂದಿದ್ದಾರೆ ನೆಹರು.

ನವಯುಗದ ಚಂದಾದಾರರಲ್ಲಿ ವಿಶೇಷ ವಿನಂತಿ

ಅವಧಿಗೆ ಸರಿಯಾಗಿ ತಮ್ಮ ಚಂದಾ ಹಣವನ್ನು ಕ್ರಮ ಪ್ರಕಾರ ಪಾವತಿ ಮಾಡುತ್ತ ನಮ್ಮೊಡನೆ ಸದಾ ಸಹಕರಿಸುತ್ತಿರುವ 'ನವಯುಗ'ದ ಚಂದಾದಾರ ಬಂಧುಗಳಿಗೆ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಚಂದಾ ಹಣವನ್ನು ಇನ್ನೂ ಬಾಕಿಮಾಡಿಕೊಂಡಿರುವ ಇತರ ಚಂದಾದಾರರು ಈಗಲಾದರೂ ಬಾಕಿಯನ್ನು ಪ್ರೀತಿಯಿಂದ ಸಲ್ಲಾಯಿಸಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಇಲ್ಲವಾದರೆ ನಾವು ಬಾಕಿಗಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಸದಯಾಂತಃಕರಣದಿಂದ ಸ್ವೀಕರಿಸಬೇಕೆಂದೂ, ಆ ಬಗ್ಗೆ ಅನ್ಯಥಾ ಭಾವಿಸಬಾರದೆಂದೂ, ವಿ. ಪಿ. ಪಿ. ಯನ್ನು ಹಿಂದೆ ಬಿಟ್ಟು ನಮ್ಮನ್ನು ನಷ್ಟಕ್ಕೆ ಗುರಿಪಡಿಸಬಾರದೆಂದೂ ವಿನಂತಿಸಿಕೊಳ್ಳುವೆವು.

ವ್ಯವಹಾರಜ್ಞರಾದ ನಮ್ಮ ಮುಂಬಯಿಯ ಚಂದಾದಾರರು ನಮ್ಮ ವಿನಂತಿಯನ್ನು ವಿಶೇಷತಃ ಗಮನಿಸಿ ಹಿಂದಿನಂತೆ ಮುಂದೆಯೂ ನಮ್ಮೊಡನೆ ಸಹಕರಿಸುತ್ತಿರಬೇಕೆಂದು ಕೇಳಿಕೊಳ್ಳುವೆವು. ಒಂದುವೇಳೆ ಪತ್ರಿಕೆ ಬೇಡವೆಂದಿರುವವರು ತಮ್ಮ ಬಾಕಿಯನ್ನು ಕಳುಹಿಸಿ ಹಾಗೆಯೇ ತಿಳಿಸಬಹುದು.

ಮೆನೇಜರ್

ನವಯುಗ

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N./50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮುದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೫	ಉಡುಪಿ ೨೬-೪-'೫೬	ಸಂಚಿಕೆ ೩೪

ಜಿಲ್ಲೆಯಲ್ಲಿ ಹೆದ್ದಾರಿ

ಮಾನ್ಯ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಮರು ಮೊನ್ನೆ ೨೧ನೇ ದಿನಾಂಕ ಮಂಗಳೂರಿನಲ್ಲಿ ಉದ್ಘಾಟಿಸಿದ ಮತ್ತು ಅಂದಿನಿಂದಿಂದಿನ ವರೆಗಿನ ಕೆಲವು ದಿನಗಳಲ್ಲಿ ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ಇತರ ಅಧ್ಯರಿಂದ ಉದ್ಘಾಟಿಸಲ್ಪಟ್ಟ "ಹೆದ್ದಾರಿ ಸಪ್ತಾಹ"ವು ಶ್ರೀ ಶ್ರೋತ್ರಿಯವರು ಹೇಳಿದಂತೆ ಇಲಾಖೆಯ ಹೆಗ್ಗಳಿಕೆಯನ್ನು ಪ್ರದರ್ಶಿಸುವ ಸಂದರ್ಭವಾಗಿರದೆ, ಜನತೆಯ ತಿಳುವಳಿಕೆಯನ್ನು ಹೆಚ್ಚಿಸುವ ಉಪಕ್ರಮವಾಗಿದೆ ಎನ್ನಬಹುದು. ನಮ್ಮ ಜಿಲ್ಲೆಯನ್ನು ಸಂದರ್ಶಿಸಿದ ಯಾರಿಗೇ ಆಗಲಿ, ಇಲ್ಲಿರುವ ಅಸಂಖ್ಯಾತ ತೋಡು ಮತ್ತು ಹೊಳೆಗಳೂ ಏರಿಳಿಯಬೇಕಾಗಿ ಬರುವ ಗುಡ್ಡ ಬೆಟ್ಟಗಳೂ ಸುಖ ಪ್ರಯಾಣಕ್ಕೂ ಸುಲಭ ಸಾರಿಗೆಗೂ ಮುಖ್ಯ ಆತಂಕಗಳಾಗಿವೆ ಎಂಬ ವಿಷಯವು ಹೊಳೆಯದಿರದು. ವ್ಯಾಪಾರಾಭಿವೃದ್ಧಿಗೆ ಮತ್ತು ಜನರಲ್ಲಿ ಸಂಪರ್ಕವು ಹೆಚ್ಚಿಕೊಂಡು ಆತ್ಮೀಯತೆಯು ಬಲಿಯುವುದಕ್ಕೆ ಹೆಚ್ಚು ಹೆಚ್ಚು ರಸ್ತೆಗಳೇರ್ಪಡಬೇಕಾಗಿದೆ; ಮತ್ತು ಈ ರಸ್ತೆಗಳಲ್ಲಿ ಪ್ರಯಾಣಿಸುವುದೂ ಸರಕುಗಳನ್ನು ಸಾಗಿಸುವುದೂ ಸುಖಕರವೆನಿಸಬೇಕಾಗಿದೆ. ನಮ್ಮ ಜಿಲ್ಲೆಯ ವಿಶಿಷ್ಟ ಪರಿಸ್ಥಿತಿಯ ದೆಸೆಯಿಂದಾಗಿ ಇಲ್ಲಿ ರಸ್ತೆಗಳ ಅಭಿವೃದ್ಧಿಯ ಯಾವ ಕಾರ್ಯಕ್ರಮವನ್ನು ಹಾಕಿಕೊಂಡರೂ ಸೇತುವೆ, ಸಂಕ ಮತ್ತು ಮೋರಿಗಳ ರಚನೆಯು ಅನಿವಾರ್ಯವೆನಿಸುತ್ತದೆ. ವರ್ಷದಲ್ಲಿ ಐದಾರು ತಿಂಗಳ ಕಾಲದವರೆಗೆ ಮಳೆ ಬರುತ್ತಿರುವುದರಿಂದ ಈ ಸಮಯದಲ್ಲಿ ಕೆಲಸವನ್ನು ನಿಲ್ಲಿಸುವ ಮತ್ತು ಮಾಡಿದ ಕೆಲಸಗಳನ್ನು ಮಳೆಯ ಬಾಧೆಯಿಂದ ರಕ್ಷಿಸುವ ವಿಶೇಷ ಜವಾಬ್ದಾರಿಯೂ ಇಲಾಖೆಯ ಮೇಲೆ ಬೀಳುತ್ತದೆ. ಹೀಗಾಗಿ ಮೈಸೂರಿನಂಥ ಪ್ರದೇಶದಷ್ಟು ಸುಲಭವಲ್ಲಿಯೂ ಕಡಿಮೆ ವೆಚ್ಚದಲ್ಲಿಯೂ ಶೀಘ್ರದಲ್ಲಿಯೂ ನಮ್ಮ ಜಿಲ್ಲೆಯಲ್ಲಿ ಹೆದ್ದಾರಿಗಳನ್ನು ವಿಸ್ತರಿಸುವುದೂ ರಕ್ಷಿಸುವುದೂ ಸಾಧ್ಯವಾಗದಾಗಿದೆ. ಪರಿಸ್ಥಿತಿಯು ಹೀಗೆ ತ್ರಾಸದಾಯಕವೂ ಪ್ರತಿಕೂಲವೂ ಆಗಿದೆ ಎಂಬುದಕ್ಕಾಗಿ ನಾವು ಕೈಕಟ್ಟಿ ನಿಷ್ಕ್ರಿಯರಾಗಿ ಕುಳಿತಿರುವಂತಿದೆಯೇ? ಎಂದಿಗೂ ಇಲ್ಲ—ಆಧುನಿಕ ಸಂಸ್ಕೃತಿಯು ಜಿಲ್ಲೆಯ ಪ್ರತಿಯೊಂದೂ ಮೂಲೆಯೊಡನೆ ವ್ಯಾಪಾರ ಸಂಬಂಧವನ್ನು ಅವಶ್ಯವಾಗಿ ಮಾಡಿದೆ; ಹೊಸತಾಗಿ ಸ್ಥಾಪನೆಗೊಳ್ಳುವ ಕರ್ನಾಟಕ ರಾಜ್ಯವು ಮೈಸೂರಿನೊಡನೆ ಈ ಜಿಲ್ಲೆಯ ಸಂಬಂಧವನ್ನು ಈಗಿಗಿಂತ ಹಲವು ಪಟ್ಟು ಹೆಚ್ಚು ನಿಕಟವಾಗಿಯೂ [illegible] ಪಲಿದೆ. ಜನರ ಆವಶ್ಯಕತೆಗಳು ದಿನೇ ದಿನೇ ಏರುತ್ತಿರುವ ಜೀವನ ಮಟ್ಟದಿಂದಾಗಿ ಅಧಿಕಗೊಳ್ಳುತ್ತಲಿವೆ. ರೈಲಿನ ಬಡಾವಣೆಯು ಇನ್ನೂ ಹಲವು ದಶಕಗಳನ್ನು ತೆಗೆದುಕೊಳ್ಳಬಹುದೆಂಬ ಸಂಶಯವಿರುವುದರಿಂದ ಮತ್ತು ಜಲ ಮತ್ತು ವಾಯು ಮಾರ್ಗಗಳು ಈ ಜಿಲ್ಲೆಯ ವ್ಯಾಪಾರಾಭಿವೃದ್ಧಿಗೆ ನೆರವಾಗಬಹುದಾದ ಪ್ರಮಾಣವು ತೀರ ಮಿತಿಯುಳ್ಳದ್ದಾಗಿರುವುದರಿಂದ ನಾವು ಒಳನಾಡಿನ ವ್ಯಾಪಾರಾಭಿವೃದ್ಧಿಯ ಜೀವನಾಡಿಯಂತಿರುವ ಎತ್ತಿನ ಗಾಡಿ ಮೋಟಾರು ಲಾರಿ ಮತ್ತು ಟ್ರಕ್ಕುಗಳ ಓಡಾಟಕ್ಕೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡಲೇ ಬೇಕಾಗುತ್ತದೆ. ಎತ್ತಿನ ಗಾಡಿಗಳ ದಿನವು ಮುಗಿಯಿತೆಂದು ನಿರಾಶೆಯಿಂದ ಹೇಳಿಕೊಳ್ಳುವವರಿದ್ದಾರೆ. ಸುಮಾರು ನೂರು ವರುಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಹೇರೆತ್ತಿನ ಗಾಡಿಗಳು ಬಹಳವಾಗಿ ಪ್ರಚಾರಕ್ಕೆ ಬಂದವು; ಆದರೆ ಕಳೆದ ಎರಡು ದಶಕಗಳಲ್ಲಿ ಮೋಟಾರು ಲಾರಿಗಳು ಸರಕುಗಳನ್ನು ಸಾಗಿಸುವ ವೇಗ, ಪ್ರಮಾಣ ಮತ್ತು ವೆಚ್ಚಗಳೆಂಬ ಮೂರೂ ವಿಷಯಗಳಲ್ಲಿ ಎತ್ತಿನಗಾಡಿಗಳನ್ನು ಹಿಂದೆಹಾಕಿ ಪ್ರಾಬಲ್ಯವನ್ನು ಪಡೆದಿವೆ. ಆದಾಗ್ಯೂ ಹಳ್ಳಿಗಳ ಮಟ್ಟಿಗೆ ಎತ್ತಿನ ಗಾಡಿಯೊಂದೇ ಈಗಲೂ ಇನ್ನು ಮುಂದಿನ ಕೆಲವು ದಶಕಗಳಿಗೂ ಸಂಪರ್ಕ ಸಾಧನವಾಗಿ ಉಳಿದು ತೀರುವುದೆಂಬ ಮಾತು ಸತ್ಯ. ಆದುದರಿಂದ ನಾವು ಜಿಲ್ಲೆಯಲ್ಲಿ ಹೆದ್ದಾರಿಗಳು ವಹಿಸುವ ಪಾತ್ರವನ್ನು ವಿಮರ್ಶಿಸುವಾಗ ಹಳ್ಳಿಗಳೊಡನೆ ಸಂಪರ್ಕವನ್ನೇರ್ಪಡಿಸುವ ಎತ್ತಿನ ಗಾಡಿಗಳು ಹೋಗಬಹುದಾದ ಮಾರ್ಗಗಳನ್ನು ಕಡೆಗಣಿಸಲಾಗದು. ಯೋಜನಾ ಆಯೋಗವು ಹಳ್ಳಿಗಳನ್ನು ಈ ವಿಷಯದಲ್ಲಿ ಅಲಕ್ಷಿಸಲಾಗದೆಂದು ಹೇಳಿರುತ್ತದೆ: ಮತ್ತು ಕನಿಷ್ಠ ಐನೂರಾದರೂ ಜನಸಂಖ್ಯೆಯಿರುವ ಹಳ್ಳಿಗಳನ್ನು ರಸ್ತೆಯ ಮೂಲಕ ಜೋಡಿಸಬೇಕೆಂದು ನಿರ್ಧರಿಸಿದೆ. ಇದಕ್ಕಾಗಿ ಐದು ಸಾವಿರ ಮೈಲುಗಳಿಗೂ ಹೆಚ್ಚು ಉದ್ದದ ಹೊಸ ರಸ್ತೆಗಳನ್ನು ನಿರ್ಮಿಸಬೇಕಾಗಿ ಬರುತ್ತದೆ: ಆದರೆ ಎರಡನೇ ಯೋಜನೆಯಲ್ಲಿ ೨೪೦೦ ಮೈಲುಗಳಷ್ಟು ಮಾತ್ರ ಈ ರಸ್ತೆಗಳನ್ನು ರಚಿಸಿ, ಉಳಿದುದನ್ನು ಮುಂದಿನ ಯೋಜನೆಯ ಕಾಲಾವಧಿಯಲ್ಲಿ ಕಾರ್ಯಗತಗೊಳಿಸಲಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸಹ ಇಂಥ ಚಟುವಟಿಕೆಯು ತೀವ್ರತೆಯನ್ನು ಪಡೆಯುತ್ತಿರುವುದರಲ್ಲಿ ಸಂಶಯವಿಲ್ಲ-ಜಿಲ್ಲಾ ಬೋರ್ಡಿನ ಅಧೀನದಲ್ಲಿ ೭೫೦ ಮೈಲು ಹಾಗು ಸರಕಾರದ ಅಧಿಕಾರದಲ್ಲಿ ೭೮೦ ಮೈಲು ಉದ್ದದ ರಸ್ತೆಗಳು ಈ ಜಿಲ್ಲೆಯಲ್ಲಿವೆ. ಇಷ್ಟಲ್ಲದೆ ಈಚೆಗೆ ಸಮಾಜ ವಿಕಾಸ ಯೋಜನೆ, ಸ್ಥಳೀಯ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಗಳ ಕಾರ್ಯಕ್ರಮಗಳಿಂದಾಗಿ ಸುಮಾರು ೩೫೦ ಮೈಲು ಉದ್ದದ ಹಳ್ಳಿ ರಸ್ತೆಗಳನ್ನು ನಿರ್ಮಿಸಲಾಗಿದೆ. ಈ ಹಳ್ಳಿ ರಸ್ತೆಗಳನ್ನು ರಚಿಸಿ ಹಾಕುವುದನ್ನು ಜನರ ಸಹಕಾರದಿಂದ ಸಾಧಿಸಿದ ಮಹಾಕಾರ್ಯವೆಂದು ಹೇಗೆ ಭಾವಿಸಬಹುದೋ ಅದರಂತೆ ಅವನ್ನು ಸದಾಕಾಲ ಯೋಗ್ಯ ಸ್ಥಿತಿಯಲ್ಲಿಡುವುದು ಅಷ್ಟೇ ದೊಡ್ಡ ಸಮಸ್ಯೆಯಾಗಿದೆ. ಉತ್ಸಾಹದ [illegible] ಯಾವಾಗಲೂ ಸಾರಿಗೆಗೆ ಅನುಕೂಲವಿರುವಂತೆ ದುರಸ್ತಿಪಡಿಸಿ ಚೊಕ್ಕ ರೀತಿಯಲ್ಲಿಡುವುದು ಸ್ಥಳೀಯರ ಜವಾಬ್ದಾರಿ: ಇದನ್ನು ನಿರ್ವಹಿಸುವುದು ಜನರಿಗೆ ಸಾಧ್ಯವಿಲ್ಲವಾದರೆ ರಸ್ತೆಗಳನ್ನು ರಚಿಸಲು ಪಟ್ಟ ಪ್ರಯತ್ನವೆಲ್ಲ ನಿರರ್ಥಕ. ಹಳ್ಳಿ ರಸ್ತೆಗಳು ಧೂಳಿನಿಂದ ಕೂಡಿರುತ್ತವೆ; ಮಳೆಗಾಲದಲ್ಲಿ ಕೆಸರಿನ ದಾರಿಗಳಾಗುತ್ತವೆ. ಗಾಡಿಯ ಚಕ್ರ ಹೂತು ಹೋಗಿ ಎತ್ತುಗಳು ಎಳೆಯಲಾರದಷ್ಟು ಕೆಟ್ಟು ಹೋಗುತ್ತವೆ. ಇದನ್ನು ತಪ್ಪಿಸಲು ಮತ್ತು ಮಣ್ಣಿನ ಸವೆತವಾಗದಂತೆ ನೋಡಿಕೊಳ್ಳಲು ಮಾರ್ಗಗಳ ರಚನೆಯಲ್ಲಿ ಹೆಚ್ಚು ವೆಚ್ಚ ಬಾರದ ಸುಧಾರಿತ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ರಾಮನಾಥಪುರಂ ಮತ್ತಿತರ ಕೆಲವು ಪ್ರದೇಶಗಳಲ್ಲಿ ಜಂಟು ಮಣ್ಣು ಮತ್ತು ಜ್ಯೋಗಿಯ ಸಮತೂಕದ ಮಿಶ್ರಣದಿಂದ ರಸ್ತೆಯ ಮೇಲ್ಭಾಗವನ್ನು ಹೊದಿಸಿ, ಮಾರ್ಗ ಕೆಡದಂತೆ ನೋಡಿಕೊಳ್ಳುವ ಪ್ರಯೋಗ ಯಶಸ್ಸನ್ನು ಪಡೆದಿದೆಯಾಗಿ ತಿಳಿದುಬರುತ್ತದೆ. ಈ ತಂತ್ರವನ್ನು ನಮ್ಮ ಜಿಲ್ಲೆಯಲ್ಲೂ ಅಳವಡಿಸಿಕೊಳ್ಳುವುದು ಅಪೇಕ್ಷಣೀಯ. ಭಾರವಾದ ಮೋಟಾರು ಲಾರಿಗಳು ಓಡುವ ಮಾರ್ಗಗಳನ್ನು ಜಲ್ಲಿಕಲ್ಲುಗಳಿಂದ ಮಾತ್ರ ರಕ್ಷಿಸುವುದು ಸಹ ಕಷ್ಟವೆಂದು ಕಂಡುಬಂದು ಈಗ ಡಾಮರು ಮತ್ತು ಜಲ್ಲಿಕಲ್ಲುಗಳ ಮಿಶ್ರಣದಿಂದ ಮೇಲ್ಭಾಗವನ್ನು ಹೊದಿಸುವ ನೂತನ ಪ್ರಯೋಗವನ್ನು ಜಿಲ್ಲೆಯ ಸರಕಾರಿ ರಸ್ತೆಗಳಲ್ಲಿ ೨೩೦ ಮೈಲುಗಳಷ್ಟು ದೂರ ಮಾಡಲಾಗಿದೆ. ಇದರಿಂದ ದೊರೆತ ಯಶಸ್ಸು ಶೀಘ್ರ ಪ್ರಯಾಣ ಮತ್ತು ಸರಕಿನ ಕ್ಷಿಪ್ರ ಸಾಗಾಟದಲ್ಲಿಯೂ ಇನ್ನಿತರ ಸುಖಾನುಭವಗಳಲ್ಲಿಯೂ ಪ್ರತಿಫಲಿತವಾಗಿದೆ. ಕಾಂಕ್ರೀಟು ರಸ್ತೆಗಳನ್ನು ರಚಿಸುವ ಹುಮ್ಮಸ್ಸು ನಮಗೆ ಉಳಿದಿಲ್ಲ — ಮೈಲಿಗೆ ಇನ್ನೂರು ರೂಪಾಯಿಗಳಷ್ಟು ದುರಸ್ತಿ ವೆಚ್ಚವನ್ನೆ ಸಹ ಹೊರಲಾಗದ ಹೊರೆಯೆಂದು ನಮ್ಮ ಜನರು ಭಾವಿಸುವಾಗ ಉಡುಪಿಯ ರಥಬೀದಿಯಲ್ಲಿ ರಚಿಸಲಾದ ಕಾಂಕ್ರೀಟ್ ರಸ್ತೆಯ ಫರ್ಲಾಂಗಿಗೆ ಹತ್ತು ಸಾವಿರ ರೂಪಾಯಿಗಳಷ್ಟು ವಿಪರೀತ ವೆಚ್ಚವನ್ನು ಆಗತ್ಯವಾಗಿ ಮಾಡಿರುವುದನ್ನು ಕಂಡು ಜನರು ಕಾಂಕ್ರೀಟಿನ ಆಲೋಚನೆಯನ್ನೆ ಬಿಟ್ಟುಬಿಡುವುದು ಖಂಡಿತ. ನಮಗೆ ಸಿಮೆಂಟು—ಕಾಂಕ್ರೀಟುಗಳು ರಸ್ತೆಯ ರಚನೆಗಲ್ಲ ಸೇತುವೆ ಮತ್ತು ಸಂಕಗಳ ನಿರ್ಮಾಣಕ್ಕೆ ಬಹಳ ಬೇಕಾಗಿವೆ. ಸಾರಿಗೆಯ ಅನುಕೂಲತೆಗಳನ್ನು ವೃದ್ಧಿಸಲು ನೆರವಾಗುತ್ತಿರುವ ಸರಕಾರವು ಜಿಲ್ಲೆಯಲ್ಲಿ ೧೯೪೭ನೇ ಇಸವಿಯಿಂದೀಚೆಗೆ ೨೧ ಸೇತುವೆಗಳನ್ನು ರಚಿಸಿದೆ; ೧೦ ಸೇತುವೆಗಳ ಕೆಲಸ ಈಗ ನಡೆದಿದೆ. ೨೪ ಸೇತುವೆಗಳ ರಚನೆಯು ಪರ್ಯಾಲೋಚನೆಯಲ್ಲಿದೆ. ರಾಜ್ಯ ಸರಕಾರದಂತೆ ಕೇಂದ್ರ ಸರಕಾರವೂ ಈ ವಿಷಯದಲ್ಲಿ ಜಿಲ್ಲೆಯ ಜನರಿಗೆ ಬಹಳ ಸಹಾಯ ಸಲ್ಲಿಸಿದೆ. ಕರಾವಳಿಯ ಹೊಳೆಗಳಿಗೆಲ್ಲ ಸೇತುವೆ ರಚಿಸಲ್ಪಡುವುದು ಕೇಂದ್ರದ ಔದಾರ್ಯದಿಂದಾಗಿ ಎನ್ನಬಹುದು—ಗಂಗೊಳ್ಳಿ, ಉಳ್ಳಾಲಗಳಂಥ ಅಗಾಧ ವೆಚ್ಚದ ಸೇತುವೆ ನಿರ್ಮಾಣ ಸಹ ಶೀಘ್ರದಲ್ಲಿಯೇ ಕೈಗೊಳ್ಳಲ್ಪಡಲಿರು[illegible] ಬೈಂದೂರು ವರೆಗಿನ ದಾರಿಯಲ್ಲಿರುವ ಇತರ ಹೊಳೆಗಳಿಗೆ ಸೇತುವೆ ರಚಿಸುವ ಕೆಲಸವು ಪ್ರಗತಿ ಪಥದಲ್ಲಿರುವುದನ್ನು ಕಂಡು ನಾವು ಜಿಲ್ಲೆಯಲ್ಲಿ ಹೆದ್ದಾರಿಗಳು ಸಾಧಿಸಿರುವ ಪ್ರಗತಿಯ ಬಗ್ಗೆ ಅಭಿಮಾನಪಟ್ಟುಕೊಳ್ಳಬಹುದು. ಕೇಂದ್ರ ಸರಕಾರದವರು ಈ ಜಿಲ್ಲೆಯಲ್ಲಿ ಪಡುಕರಾವಳಿಯ ರಸ್ತೆಯ ಒಂದಂಶವನ್ನೂ ನೆಲೆಗೊಳಿಸಿದ್ದಾರೆ—ಇದು ಬಹಳ ಗಟ್ಟಿಮುಟ್ಟಾದ ಮಾರ್ಗ. ಜಿಲ್ಲೆಯೊಳಗಿನ ಸಾರಿಗೆ ಸಂಪರ್ಕವು ಇವೆಲ್ಲ ಕಾರ್ಯಕ್ರಮಗಳಿಂದ ಈಗಾಗಲೇ ತುಂಬ ಸುಧಾರಿಸಿದೆ; ಇನ್ನು ಮುಂದೆ ಮತ್ತಷ್ಟು ಅಭಿವೃದ್ಧಿ ಹೊಂದಲಿದೆ. ಇದು ಸಂತೋಷದಾಯಕವಾದ ವಿಷಯ. ಆದರೆ ಮೈಸೂರಿನೊಡನೆ ನಿಕಟ ಸಂಪರ್ಕವನ್ನು ಸಾಧಿಸುವ ದೃಷ್ಟಿಯಿಂದ ಘಾಟಿ ರಸ್ತೆಗಳನ್ನು ಕ್ಷಿಪ್ರದಲ್ಲಿ ದುರಸ್ತಿಪಡಿಸುವ ಆವಶ್ಯಕತೆ ಬಹಳಷ್ಟಿದೆ. ಉದಾ: ಆಗುಂಬೆ ಘಾಟಿಯ ರಸ್ತೆಯನ್ನು ಲಾರಿಗಳ ಓಡಾಟಕ್ಕೆ ಸುಗಮಗೊಳಿಸಿದರೆ ಮಲ್ಪೆಯ ಮೀನು ವ್ಯವಸಾಯಕ್ಕೂ ಮಲೆನಾಡಿನ ಮೋಪಿನ ವ್ಯಾಪಾರಕ್ಕೂ ಉತ್ತೇಜನವನ್ನಿತ್ತಂತಾಗುತ್ತದೆ. ಹೀಗೆಯೇ ಪ್ರತಿಯೊಂದೂ ಘಾಟಿ ರಸ್ತೆಯು ಮೈಸೂರಿನೊಡನೆ ಅತ್ಯಧಿಕ ಸಂಪರ್ಕವನ್ನು ಸ್ಥಾಪಿಸುವಂತೆ ಅಭಿವೃದ್ಧಿ ಹೊಂದಬೇಕು; ನಿಕಟ ಭವಿಷ್ಯದಲ್ಲಿ ಉತ್ತರ ಕನ್ನಡದ ನೈಸರ್ಗಿಕ ಸಂಪತ್ತಿನ ಪ್ರಯೋಜನ ಈ ಜಿಲ್ಲೆಗಾಗುವಂತೆ ಆ ಪ್ರದೇಶದೊಡನೆ ಸಹ ಸಂಪರ್ಕ ಬಲಿಯಬೇಕು. ಜಿಲ್ಲೆಯಲ್ಲಿ ಹೆದ್ದಾರಿ ಸಪ್ತಾಹವನ್ನು ಆಚರಿಸುವ ಮೂಲಕ ಜಾಗೃತಿ ಹೊಂದಿದ ಜನರೂ ಸರಕಾರದವರೂ ಈ ವಿಷಯಗಳನ್ನು ಪರ್ಯಾಲೋಚಿಸುವರೆಂದು ಆಶಿಸುತ್ತೇವೆ; ಮತ್ತು ಯೋಗ್ಯ ಸಂಶೋಧನೆಗಳನ್ನು ಕೈಗೊಂಡು ಮಾರ್ಗಗಳ ರಚನೆಯಲ್ಲಿಯೂ ಅವುಗಳನ್ನು ಸುಸ್ಥಿತಿಯಲ್ಲಿಡುವುದರಲ್ಲಿಯೂ ಬರುವ ವೆಚ್ಚವನ್ನು ಕಡಿಮೆಗೊಳಿಸುವ ಉಪಾಯಗಳನ್ನು ಕಂಡುಕೊಳ್ಳಲಾಗುವುದೆಂದೂ ಭಾವಿಸುತ್ತೇವೆ.

ಹಿಂದೀ ಪ್ರಮಾಣಪತ್ರ ವಿತರಣೆ— ಮಂತ್ರಿ ಸುಬ್ರಹ್ಮಣ್ಯಮರು 18 ನೇ ರಾತ್ರಿ ಶ್ರೀ ನರೇಂದ್ರ ಕಲಾ ಮಂದಿರದಲ್ಲಿ ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ಪ್ರಮಾಣಪತ್ರ ವಿತರಣೆಯನ್ನು ನೆರವೇರಿಸುತ್ತಾ ಹಿಂದೀ ಭಾಷೆಯ ಅಭ್ಯಾಸವು ಆವಶ್ಯವಿದೆ ಎಂದರು. ಈ ಕಾರ್ಯವನ್ನು ಉಡುಪಿಯಲ್ಲಿ ಸಮಿತಿಯವರು ಮಾಡುತ್ತಿರುವುದು ಸಂತೋಷಕರವೆಂದರು. ಆರಂಭದಲ್ಲಿ ಸಮಿತಿಯ ಅಧ್ಯಕ್ಷ ಶ್ರೀ. ಟಿ. ಎ. ಪೈ ಯವರು ಸ್ವಾಗತಭಾಷಣ ಮಾಡಿದರು. ಶ್ರೀ ಉ. ಲ. ಕಿಣಿಯವರು ಸಂದೇಶ ವಾಚನ ಮಾಡಿದರು. ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯ್ಕರು ವರದಿಯನ್ನೋದಿದರು. ಪ್ರಮಾಣಪತ್ರ ಸ್ವೀಕರಿಸಿದವರಲ್ಲಿ ಉಡುಪಿ ಕೆನರಾ ಬೇಂಕಿಂಗ್ ಕೊರ್ಪರೇಶನಿನ ಜನರಲ್ ಮೆನೇಜರ್ ಶ್ರೀ ವಿ. ಆರ್. ಕಾಮತರೂ ಒಬ್ಬರಾಗಿದ್ದರು. ಶ್ರೀ ಎ. ಜೆ. ಆಳ್ವೆಯವರು ಧನ್ಯವಾದವನ್ನಿತ್ತರು. ಉತ್ಸವದ ಅಂಗವಾಗಿ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳು "ಕರ್ಣಾರ್ಜುನ ಕಾಳಗ" ವೆಂಬ ಯಕ್ಷಗಾನ ಬಯಲಾಟವನ್ನು ಕಲಾಪೂರ್ಣವಾಗಿ ಆಡಿತೋರಿಸಿದರು.

ಹೊಸ ಹಿಂದೀ ವರ್ಗ— ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ನೇತೃತ್ವದಲ್ಲಿ ನಡೆಯುತ್ತಿರುವ ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ ಮೇ 1ರಿಂದ ವಿಶಾರದ ಪೂರ್ವಾರ್ಧ ಹಿಂದೀ ವರ್ಗವು ತೆರೆಯಲ್ಪಡುವುದು. ವರ್ಗಕ್ಕೆ ಸೇರಲಪೇಕ್ಷಿಸುವವರು ಚಿತ್ತರಂಜನ ಭವನದಲ್ಲಿರುವ 'ಸಮಿತಿ'ಯ ಆಫೀಸಿನಲ್ಲಿ ತಮ್ಮ ಹೆಸರನ್ನು ದಾಖಲುಮಾಡಿಸಿಕೊಳಬಹುದು

THE VIJAYA
BALANCE SHEET

CAPITAL & LIABILITIES		Rs. As. Ps.	Rs.
1. Capital:			
AUTHORISED CAPITAL:			
24,000 shares of Rs 50/- each		12,00,000 0 0	
32,000 shares of Rs. 25/- each		8,00,000 0 0	20,00,000
ISSUED & SUBSCRIBED CAPITAL:			
24,000 shares of Rs. 50/- each		12,00,000 0 0	
12,000 shares of Rs. 25/- each		3,00,000 0 0	15,00,000
AMOUNT CALLED UP:			
On 24,000 shares of Rs. 50/- each at Rs. 25/- per share		6,00,000 0 0	
On 12,000 shares of Rs. 25/- each at Rs. 25/- per share		3,00,000 0 0	
		9,00,000 0 0	
Less allotment money due		13,920 0 0	
		8,86,080 0 0	
Add: Calls in advance		24,975 0 0	9,11,055
2. Reserve Fund and other Reserves:			2,35,292
3. Deposits and other Accounts:			
Fixed Deposits		49,38,216 10 0	
Savings Bank Deposits		7,39,032 11 5	
Current Accounts, Contingency Accounts, etc.		6,89,814 11 5	63,67,064
4. Borrowings from other Banking Companies, Agents, etc:			
(i) In India...		Nil	
(ii) Outside India		Nil	Nil
5. Bills Payable:...			2,731
6. Bills for Collection being Bills Receivable as per contra:			
(i) Payable in India		1,14,262 15 6	
(ii) Payable outside India		Nil	1,14,262
7 Other Liabilities:			1,70,468
8. Acceptances, Endorsements and other obligations, per contra:			Nil
9. Profit & Loss:			
Profit as per last Balance Sheet...		56,978 10 7	
Less Appropriations—			
To *Statutory Reserve*	Rs. 17,500 0 0		
„ Dividend at 3½% free of Income Tax	Rs. 30,867 3 0		
„ Provision for income-tax	Rs. 8,500 0 0	56,867 3 0	
Balance brought forward		111 7 7	
Add: Profit for the year brought from the Profit & Loss Account		55,007 6 10	
		55,118 14 5	
Less Placed to:—			
Statutory Reserve Fund under Section 17 of the Banking Companies Act		18,000 0 0	37,118
10. Contingent Liabilities:		Nil	
Total ...			78,37,99

Office of The Vijaya Bank, Ltd., Mangalore. Date 4—3—1956.	(Sd.) B. M. HEGDE „ K. P. B. SHETTY „ M. SUNDER RAMA SHETTY	(Sd.) K. B. SHETTY „ K. C. ALVA „ K. T. ALVA	(Sd.) M. G. GANESHNARAYANA RAI „ K. M. HEGDE „ N. M. ADYANTHAYA	DIRECTORS

PROFIT AND LOSS ACCOUNT FOR

EXPENDITURE	Rs.
1. Interest paid on Deposits Borrowings, etc.	1,86,608
2. Salaries and Allowances and Provident Fund (Secretary's salary and allowances Rs. 2,940 – 0—0)	99,302
3. Directors and Local Committee Members' fees and allowances	1,889
4. Rent, Taxes, Insurance, Lighting etc.	39,396
5. Law Charges	120
6. Postage, Telegrams and Stamps	2,691
7. Auditor's Fees and Travelling expenses	1,150
8. Depreciation on and repairs to Banking Company's Property	6,485
9. Stationery, Printing, Advertisement etc., ...	9,538
10. Loss from the sale of or dealing with non-banking assets	Nil
11. Other expenditure	9,199
12. Balance of Profit	55,007
Total ...	4,11,390

Office of The Vijaya Bank, Ltd., Mangalore, Date, 4—3—1956	(Sd.) B. M. HEGDE „ K. P. B. SHETTY „ M. SUNDER RAMA SHETTY	(Sd.) K. B. SHETTY „ K. C. ALVA „ K. T. ALVA	(Sd.) M. G. GANESHNARAYANA RAI „ K. M. HEGDE „ N. M. ADYANTHAYA	DIRECTORS.

AUDITOR'S REPORT TO THE S

I have audited at the Head Office and branches, the Balance Sheet of the Vijaya Bank, Limited as at 31st December 1955 and also the Profi the Head Office and the Branch Offices on the dates of my visits. I report that:— (1) I have obtained all the information and explanations I have and correct view of the state of the Bank's affairs according to the best of my information and the explanations given to me and as shown by the books atoin and explanations required have been found to be satisfactory; (6)The transactions of the Bank, which have come to my notice, have been with

K, LIMITED.

t DECEMBER, 1955.

PROPERTY & ASSETS	Rs. As. Ps.	Rs. As. Ps.
h:		
n hand and with Reserve Bank and State Bank		14,77,240 15 3
nces with other Banks:		
In India:—On Current A/c	3,27,200 1 11	
On Fixed Deposits	3,12,700 0 0	
(of which receipt for Rs. 1,00,000/- lodged with Bankers for O. D. Facility)		
Outside India	Nil	6,39,900 1 11
ey at Call and Short Notice:		Nil
stment at Cost:		
Securities of the Central and State Governments and other Trustee Securities of the face value of Rs. 14,99,200/-, of which securities of the face value of Rs 3,10,000/- lodged with Bankers for loan and clearing facilities	14,91,500 9 0	
Shares (iii) Debentures or Bonds (iv) Other Investments (v) Gold	Nil	14,91,500 9 0
ances:		36,86,834 6 11
(other than bad and doubtful debts for which provision has been made to the satisfaction of the Auditor)		
oans, Cash Credits, Overdrafts etc.		
In India	34,37,398 4 5	
Outside India	Nil	
ills Discounted and Purchased		
(excluding Treasury Bills of Central & State Governments)		
Payable in India	2,30,517 6 6	
Payable outside India	18,918 12 0	
culars:		
Debts considered good in respect of which the Banking Company is fully secured	30,30,677 6 0	
Debts considered good for which the Banking Company holds no other security than the Debtors'personal security	5,64,856 6 11	
Debts considered good secured by the personal liabilities of one or more parties in addition to the personal security of the Debtors	91,300 10 0	
Debts considered doubtful or bad not provided for	Nil	
Debts due by Directors or Officers of the Banking Company or any of them either severally or jointly with any other persons	3,015 14 0	
Debts due by Companies or Firms in which the Directors of the Banking Company are interested as Directors, Partners or Managing Agents or, in the case of Private Companies, as Members	1,19,749 4 0	
Maximum total amount of advances including temporary advances made at any time during the year to Directors or Managers or Officers of the Banking Company or any of them either severally or jointly with any other persons	3,700 0 0	
Maximum total amount of advances including temporary advances granted during the year to the Companies or Firms in which the Directors of the Banking Company are interested as Directors, Partners, Managing Agents or in the case of Private Companies as Members	1,33,290 15 0	
Due from Banking Companies	8,515 10 7	
s Receivable being Bills For Collection as per contra:		
Payable in India	1,14,262 15 6	
Payable outside India...	Nil	1,14,262 15 6
stituents' Liabilities for Acceptances, Endorsements and other obligations per contra:		Nil
mises at cost	28,225 0 1	
Add additions	1,28,648 10 8	
	1,56,873 10 9	
Less depreciation	7,468 12 3	1,49,404 14 6
niture & Fixtures at cost	69,752 1 8	
Less sale	498 8 0	
	69,253 9 8	
Add additions during the year	4,978 13 5	
	74,232 7 1	
Less depreciation	24,074 1 6	50,158 5 7
er Assets:		
terest receivable on loans and Investments	36,257 10 1	
ock of Printing and Stationery, Books and Stamps	18,081 10 4	
lvance payment of Income-tax	18,212 4 0	
come-tax deducted at source	9,632 12 0	
ndry advances receivable	3,638 9 9	
lephone, Electric & Rent deposit and Rent Receivable	3,141 5 6	88,964 3 8
n-Banking Assets acquired in satisfaction of claims:		
nd and Building at Cost and / or estimated realisable value		1,39,727 0 5
Total ...		78,37,993 8 9

(Sd.) P. J. Shetty, *Superintendent.* (Sd.) B. Mahabala Shetty, *Secretary.* (Sd.) K. Sunder Rama Shetty, *Chairman.*

AR ENDED 31ST DECEMBER 1955.

INCOME	Rs. As. Ps.
rovision made during the year for bad and doubtful debts and other usual or necessary provisions)	
erest and Discount	3,77,878 6 0
mmission, Exchange and Brokerage	14,320 7 10
nts	1,589 12 2
Profits on sale of Investments, gold and silver, land, premises and other assets (not credited to reserves or any particular Fund or Account.)	89 12 0
Profit on revaluation of Investments, gold and silver, land, premises and other assets	Nil
ome from Non-banking assets, and profit from sale or dealing with such assets	Nil
er receipts	17,511 10 9
Total ...	4,11,390 0 9

(Sd.) P. J. Shetty, *Superintendent.* (Sd.) B. Mahabala Shetty, *Secretary.* (Sd.) K. Sunder Rama Shetty, *Chairman.*

S OF THE VIJAYA BANK, LTD.,

t for the year ended that day in which are incorporated the authenticated returns from the Branches and I have verified cash and securities both at my opinion, the Balance Sheet and Profit and Loss Account are drawn up in conformity with the Law; (3) Such Balance Sheet exhibits a true In my opinion, the books of Accounts have been kept by the Bank as required by Section 130 of the Indian Companies Act. 1913; (5) The informe Bank; (7) The returns received from the Branch Offices of the Bank have been found adequate for the audit, and (8) The Profit and Loss

ಮುಂಬಯಿ ನಗರದ ಕುರಿತು ಮರಾಠರ ಹಠ
ನಿರ್ಣಯದ ಪುನರಾಲೋಚನೆಯಾಗಬೇಕೆಂಬ ಬೇಡಿಕೆ

ಲೋಕಸಭೆಯಲ್ಲಿ ರಾಜ್ಯಗಳ ಪುನಾರಚನೆಯ ಕುರಿತು ಮಾತನಾಡಿದ ಮಹಾರಾಷ್ಟ್ರೀಯ ಸದಸ್ಯರು ಪಕ್ಷ ಭೇದವಿಲ್ಲದೆ ಮುಂಬಯಿ ನಗರದ ಮೇಲೆ ತಮ್ಮ ಹಕ್ಕಿನ ಸ್ಥಾಪನೆ ಮಾಡಿದ್ದಾರೆ. ಶ್ರೀ ಗಾಡ್ಗೀಳರು ಮಾತನಾಡುತ್ತಾ ಪ್ರಧಾನ ಮಂತ್ರಿಗಳು ಈಗಲಾದರೂ ಮುಂಬಯಿಯು ನ್ಯಾಯವಾಗಿ ಮಹಾರಾಷ್ಟ್ರದ ಭಾಗವೆಂದು ಘೋಷಿಸಿದರೆ, ಮರಾಠರಿಗೆಷ್ಟೊ ಸಂತೋಷವಾಗುವುದು ಎಂದಿದ್ದಾರೆ. ಶ್ರೀ ಮೋರೆಯವರು ಸರ್ವ ದೃಷ್ಟಿಯಿಂದಲೂ ಮುಂಬಯಿಯು ಮಹಾರಾಷ್ಟ್ರದ ಅಂಗವಾಗಿರುವುದನ್ನು ಒಪ್ಪಿಕೊಂಡ ಬಳಿಕ, ಆ ನಗರವನ್ನು ಕೇಂದ್ರಾಡಳಿತೆಯಲ್ಲಿಡುವುದು ಯೋಗ್ಯವಲ್ಲವೆಂದು ಹೇಳಿದ್ದಾರೆ. ಶ್ರೀ ಫಿರೋಜ ಗಾಂಧಿಯವರು ಇದೇ ಮಾತನ್ನು ಎತ್ತಿ ಹಿಡಿದಿದ್ದಾರೆ. ಆದರೆ ಶ್ರೀ ಸ. ಕಾ. ಪಾಟೀಲರು ಮಾತ್ರ ದೇಶವನ್ನು ಭಾಷೆಯ ತಳಹದಿಯ ಮೇಲೆ ವಿಭಜಿಸಬೇಕೆನ್ನುವ ಮರಾಠರ ಬೇಡಿಕೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ದೇಶಮುಖರ ನಿಲುವು

ಮುಂಬಯಿ ನಗರದ ಕುರಿತೆದ್ದಿರುವ ಈ ವಿವಾದವನ್ನು ಮುಂದಿಟ್ಟು ಕೇಂದ್ರದ ಅರ್ಥ ಸಚಿವ ಶ್ರೀ ಸಿ. ಡಿ. ದೇಶಮುಖರು ರಾಜೀನಾಮೆಯೊಪ್ಪಿಸುವರೆಂಬ ವದಂತಿಯು ಈಗ ಪುನಃ ದಟ್ಟವಾಗಿ ಹರಡಿದೆ. ಸಂಸತ್ತಿನ ಕಾಂಗ್ರೆಸು ಪಕ್ಷದ ಸಭೆಯಲ್ಲಿ ಶ್ರೀ ದೇಶಮುಖರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆಂದು ಕೇಳಲಾಗುತ್ತದೆ. ತಮಗೆ ಮತದಾರರ ಅಭಿಪ್ರಾಯವೇ ಪ್ರಾಮುಖ್ಯವಾದುದೆಂದೂ ಅವರ ಆದೇಶವೇ ಪಕ್ಷದ ಶಿಸ್ತಿಗಿಂತಲೂ ಹೆಚ್ಚಿನದೆಂದೂ ಶ್ರೀ ದೇಶಮುಖರು ಖಂಡತುಂಡವಾಗಿ ಹೇಳಿರುವರೆಂದು ಸುದ್ದಿ. ಪ್ರಧಾನ ಮಂತ್ರಿಗಳು ಮುಂಬಯಿ ನಗರದ ಕುರಿತು ಮಾಡಿರುವ ನಿರ್ಧಾರವು ಬದಲಾಯಿಸಲ್ಪಡಲಾಗದುದೇನೂ ಅಲ್ಲವೆಂಬ ತಮ್ಮ ನಿಲುವೆಯನ್ನು ಪುನರುಚ್ಚರಿಸಿದರೆಂದೂ ಆದರೆ ಇದರಿಂದ ಮಹಾರಾಷ್ಟ್ರೀಯ ಸದಸ್ಯರಾರಿಗೂ ಸಮಾಧಾನವಾಗಿಲ್ಲವೆಂದೂ ವ್ಯಕ್ತವಾಗಿದೆ. ಕೇಂದ್ರ ಸರಕಾರದವರು ಸದ್ಯಕ್ಕೆ ಮುಂಬಯಿಯನ್ನು ಕೇಂದ್ರಾಡಳಿತದಲ್ಲೇ ಇಡುವ ನಿರ್ಧಾರವನ್ನು ಸ್ವಲ್ಪವೂ ಸಡಿಲಿಸಿಲ್ಲ; ಈ ನಿರ್ಧಾರ ಸಡಿಲಾಗಬಹುದಾದ ಸಂಭವವನ್ನು ನಿವಾರಿಸಲೆಂದೇ ಅವರು ಪರಿಶೀಲಕ ಸಮಿತಿಯಲ್ಲಿ ಮಹಾರಾಷ್ಟ್ರದ ಯಾವ ಸದಸ್ಯನಿಗೂ ಸ್ಥಾನ ಕೊಟ್ಟಿಲ್ಲ.

ಆಹಾರ ವಸ್ತುಗಳ ಬೆಲೆ

ದೇಶದಲ್ಲಿ ಆಹಾರ ವಸ್ತುಗಳ ಬೆಲೆಯು ಏರುತ್ತಿರುವುದನ್ನು ಪ್ರಸ್ತಾಪಿಸಿ ಕೃಷಿ ಮಂತ್ರಿ ಡಾ. ಪಂಜಾಬರಾವ ದೇಶಮುಖರು ಹೇಳಿಕೆಯೊಂದನ್ನಿತ್ತು ಬೆಲೆಗಳನ್ನು ತಗ್ಗಿಸಲು ತ್ವರಿತಕ್ರಮವನ್ನು ಭಾರತ ಸರಕಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಕೇಂದ್ರದೊಡನೆ ಅಕ್ಕಿ ಮತ್ತು ಗೋಧಿಗಳ ವಿಪುಲ ಸಂಗ್ರಹವಿದೆಯೆಂದೂ ಇದನ್ನು ಪೇಟೆಗೆ ಕಳಿಸುವ ಮೂಲಕ ವ್ಯಾಪಾರಿಗಳು ಬೆಲೆಯೇರಿಸಲು ಅನುಸರಿಸಿರುವ ಕುಹಕ ತಂತ್ರವನ್ನು ವಿಫಲಗೊಳಿಸಲಾಗುವುದೆಂದೂ ಅವರು ಹೇಳಿದ್ದಾರೆ.

ಪಾಕಿಸ್ತಾನಕ್ಕೆ ಬಿನ್ನಹ

ಸಂಸತ್ತಿನ ೨೮ ಮಂದಿ ಮುಸ್ಲಿಂ ಸದಸ್ಯರು ಒಂದು ಸಂಯುಕ್ತ ಪ್ರಕಟಣೆಯನ್ನು ಹೊರಡಿಸಿ ಪಾಕಿಸ್ತಾನದಲ್ಲಿ ಹಿಂದು ಮತೀಯರಿಗೂ ಮತ್ತಿತರ ಅಲ್ಪಸಂಖ್ಯಾಕ ವರ್ಗಕ್ಕೂ ತೃಪ್ತಿಕರವಾದ ಮಟ್ಟದಲ್ಲಿ ಸುಖಕರವಾದ ಜೀವನವನ್ನು ನಡೆಸಲಾಗುವಂಥ ಪರಿಸ್ಥಿತಿಯನ್ನು ಏರ್ಪಡಿಸಬೇಕೆಂದು ಆ ದೇಶದ ಸರಕಾರವನ್ನು ವಿನಂತಿಸಿಕೊಂಡಿದ್ದಾರೆ. ಪೂರ್ವ ಬಂಗಾಲದಿಂದ ಭಯಭೀತರಾಗಿ ಭಾರತಕ್ಕೆ (ಪಶ್ಚಿಮ ಬಂಗಾಲಕ್ಕೆ) ಓಡಿ ಬರುತ್ತಿರುವ ಲಕ್ಷಾಂತರ ಅಲ್ಪಸಂಖ್ಯಾಕ ಪ್ರಜೆಗಳ ಸಂಕಷ್ಟವನ್ನು ಕಂಡು ನೊಂದು ಹೊರಡಿಸಿದ ಹೇಳಿಕೆಯಿದು.

ಸೌಹಾರ್ದ ಸಂದರ್ಶನ

ಹತ್ತು ದಿನಗಳ ಸಂಚಾರಾರ್ಥವಾಗಿ ರಶ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಅಲ್ಲಿಯ ಸಾಮ್ಯವಾದಿ ಪಕ್ಷದ ಕಾರ್ಯದರ್ಶಿ ಖ್ರುಶ್ಚೆಫ್ ಇಂಗ್ಲೆಂಡಿಗೆ ಕಳೆದ ಬುಧವಾರ ಆಗಮಿಸಿದರು. ಅವರು ಪ್ರಧಾನಿ ಈಡನರೊಡನೆಯೂ ಮಾಜಿ ಪ್ರಧಾನಿ ಚರ್ಚಿಲರೊಡನೆಯೂ ವಿಶೇಷ ಸಮಾಲೋಚನೆ ನಡೆಸಿದ್ದಾರೆ. ಆಂಗ್ಲ ರಾಣಿಯನ್ನು ವಿಂಡ್ಸರ್ ಅರಮನೆಯಲ್ಲಿ ಭೇಟಿ ಮಾಡಿ ಗೌರವವನ್ನು ಅರ್ಪಿಸಿದ್ದಾರೆ. ಲಂಡನ್, ಬರ್ಮಿಂಗ್ಹಾಮ್ ಮತ್ತಿತರ ಔದ್ಯಮಿಕ ಕ್ಷೇತ್ರಗಳನ್ನು ಸಂಚರಿಸಿ, ಜನರೊಡನೆ ಬೆರೆಯಲು ನೋಡಿದ್ದಾರೆ. ಬ್ರಿಟನಿನ ಜನರ ಗಾಂಭೀರ್ಯವನ್ನು ಕೆಡಿಸಿಕೊಳ್ಳದ, ಉದ್ವೇಗವನ್ನು ಪ್ರದರ್ಶಿಸದ ಸಂಯಮಪೂರ್ಣ ನಡವಳಿಕೆಯನ್ನು ಭಾರತೀಯರ ಉತ್ಸಾಹ ಮತ್ತು ಉದ್ರೇಕಗಳೊಡನೆ ಹೋಲಿಸಿದರೆ, ರಶ್ಯದ ಪ್ರಭೃತಿಗಳಿಗೆ ನಿರಾಸೆಯಾದೀತು.

ಸ್ನೇಹದ ಹಾರೈಕೆ

ಇಂಗ್ಲೆಂಡಿನೊಡನೆ ವ್ಯಾಪಾರ ಸಂಬಂಧವನ್ನು ಬೆಳೆಸಲು ರಶ್ಯ ಹಾರೈಸಿದೆ. ಲೋಕಶಾಂತಿಯ ಸಾಮಾನ್ಯ ವಿಷಯದ ಮೇಲೆ ಸಹ ಚರ್ಚೆ ನಡೆದಿದೆ. ನಾವು ಕಮ್ಯುನಿಸ್ಟರು; ನೀವು ಭಂಡವಾಳವಾದಿಗಳು—ನಮ್ಮ ತತ್ವ ನಿಮಗೆ, ನಿಮ್ಮದು ನಮಗೆ ಒಪ್ಪಿಗೆಯಾಗದು, ನಿಜ. ಆದರೆ ನಮ್ಮೆರಡೂ ರಾಷ್ಟ್ರಗಳು ಪರಸ್ಪರ ಶಾಂತಿ ಸೌಹಾರ್ದಗಳಿಂದ ಅಸ್ತಿತ್ವದಲ್ಲಿರುವುದು ಅಶಕ್ಯವಲ್ಲ; ಅದು ಅಪೇಕ್ಷಣೀಯ ಎಂಬುದಾಗಿ ಖ್ರುಶ್ಚೆಫ್ ಇಂಗ್ಲೆಂಡಿನ ರಾಜರಾಣಿಗಳಿಗೂ ಜನರಿಗೂ ಹೇಳಿದ್ದಾರೆ. ರಶ್ಯವು ಯಾವುದೇ ಪಾಶ್ಚಾತ್ಯ ರಾಷ್ಟ್ರಕ್ಕಿಂತ ಕಡಿಮೆ ಪ್ರಗತಿ ಹೊಂದಿಲ್ಲವೆಂದೂ ಅದು ಅಶಕ್ತರಾಷ್ಟ್ರವಲ್ಲವೆಂದೂ ಅವರು ನೆನಪಿಗೆ ತಂದಿದ್ದಾರೆ. ಹಿಂದಿನ ತಪ್ಪುಗಳೇನಿದ್ದರೂ ಅದನ್ನು ಮರೆತು, ಸ್ನೇಹಿತರಾಗೋಣ ಎಂಬವರ ಅಭಿಪ್ರಾಯ.

ಉಡುಪಿ

ಮೈಸೂರು ಮಂತ್ರಿಗಳ ಆಗಮನ–

ಮೈಸೂರಿನ ವಿದ್ಯಾಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಇದೇ ತಾ. 24 ನೇ ಸಂಜೆ ಕುಂದಾಪುರದಿಂದ ಮಣಿಪಾಲಕ್ಕೆ ಆಗಮಿಸಿದರು. ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಪರಿಶೀಲಿಸಿ ಸಂತೋಷ ಮತ್ತು ತೃಪ್ತಿಯನ್ನು ವ್ಯಕ್ತಗೊಳಿಸಿದರು. ಅವರ ಜೊತೆಯಲ್ಲಿ ಶ್ರೀ ಬಿ. ಮಾಧವಾಚಾರ್ಯ ಎಂ. ಎಲ್. ಎ. ಛಪ್ರಾಪತಿ, ಶ್ರೀ ಕರಿ ಗೌಡ, ಎಂ. ಎಲ್. ಎ. ಹಾಸನ, ಮೊದಲಾದವರು ಇದ್ದರು. ಡಾ. ಟಿ. ಮಾಧವ ಪೈಗಳು ಅತಿಥಿಗಳನ್ನು ಸ್ವಾಗತಿಸಿ, ಕಾಲೇಜಿನ ಇತಿಹಾಸವನ್ನು ವಿವರಿಸಿದರು. ಮಂತ್ರಿಗಳು ದಕ್ಷಿಣ ಕನ್ನಡಿಗರ ಸಾಹಸೋದ್ಯಮಗಳನ್ನು ಕೊಂಡಾಡಿ, ಕಾಲೇಜಿನ ಸ್ಥಾಪನೆ ಮತ್ತು ವ್ಯವಸ್ಥೆ ಶ್ಲಾಘ್ಯನೆಂದರು. ಶ್ರೀ ಟಿ. ಎ. ಪೈ, ಎಂ. ಎಲ್. ಎ.ಯವರು ಧನ್ಯವಾದವನ್ನೀಯುತ್ತಾ ಅಖಿಲ ಭಾರತ ದೃಷ್ಟಿಯಿಂದ ಸ್ಥಾಪಿಸಲ್ಪಟ್ಟ ಈ ಕಾಲೇಜು ರಾಜ್ಯ ಪುನರ್ವಿಂಗಡನೆಯ ನಂತರವೂ ಭಾರತೀಯರ ಸೇವೆಗಾಗಿ ತೆರೆದಾಗಿದೆಯೆಂದರು.

ರಾತ್ರಿ ಮುಕುಂದ ನಿವಾಸದಲ್ಲಿ ಅತಿಥಿಗಳಿಗೆ ಭೋಜನ ಸತ್ಕಾರವೀಯಲಾಯಿತು.

ವಿದ್ಯಾಮಂತ್ರಿ ಶ್ರೀ ಸುಬ್ರಹ್ಮಣ್ಯಂ ರವರು— ಮದ್ರಾಸು ಸರಕಾರದ ವಿದ್ಯಾಮಂತ್ರಿ ಶ್ರೀ ಸುಬ್ರಹ್ಮಣ್ಯಂರವರು ತಾ 18 ರಂದು ಸಂಜೆ ಉಡುಪಿಗೆ ಆಗಮಿಸಿ ಎಮ್. ಜಿ. ಎಮ್. ಕಾಲೇಜಿನ ವಿದ್ಯಾರ್ಥಿ ಭವನದ ಶಂಕುಸ್ಥಾಪನೆ ಮಾಡಿದರು. ಶ್ರೀ ಸೋದೆ ವಾದಿರಾಜ ಮಠದ ಸ್ವಾಮಿಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಾ॥ ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಕಟ್ಟಡ ಸಮಿತಿಯ ಪರವಾಗಿ ಮಾತನಾಡುತ್ತಾ, ವಿದ್ಯಾರ್ಥಿ ಭವನದ ವೆಚ್ಚವನ್ನು ಶ್ರೀ ಸೋದೆ ಸ್ವಾಮಿಗಳವರು ವಹಿಸಲಿರುವರು ಎಂದು ಹೇಳಿದರು. ಸರಕಾರದ ಗ್ರಾಂಟು ಮತ್ತು ಸ್ವಾಮಿಗಳ ಧನಸಹಾಯದಿಂದ ಸಾಧಾರಣ ರೂಪಾಯಿ 1,24,000 ಖರ್ಚಿನಿಂದ ಈ ವಿದ್ಯಾರ್ಥಿನಿಲಯವು ಕಟ್ಟಲಾಗುವುದೆಂದೂ ಅದಕ್ಕೆ ಶ್ರೀ ವಾದಿರಾಜ ವಿದ್ಯಾರ್ಥಿ ನಿಲಯವೆಂದು ಹೆಸರಿಡಲಾಗುವುದೆಂದೂ ಹೇಳಿದರು. ವಿದ್ಯಾರ್ಥಿ ಭವನದಿಂದ ಹುಟ್ಟಿಬರುವ ಉತ್ಪತ್ತಿಯನ್ನು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವುದಕ್ಕಾಗಿ ಉಪಯೋಗಿಸಬೇಕೆಂದು ಶ್ರೀ ಸ್ವಾಮಿಗಳವರ ಅಪೇಕ್ಷೆಯಿದೆಯಾಗಿ ಶ್ರೀ ಟಿ. ಎ. ಪೈಗಳು ತಿಳಿಸಿದರು. ಮಂತ್ರಿಗಳು ತಮ್ಮ ಉದ್ಘಾಟನಾಭಾಷಣದಲ್ಲಿ ಶ್ರೀ ಸ್ವಾಮಿಗಳವರು ವಿದ್ಯಾರ್ಥಿ ನಿಲಯಕ್ಕೆ ಧನ ಸಹಾಯ ನೀಡಲು ಮುಂದೆ ಬಂದುದು ಅಭಿನಂದನೀಯವೆಂದೂ ಈ ಮಾದರಿ ಇತರರಿಗೆ ಮಾರ್ಗದರ್ಶನ ಮಾಡಲೆಂದೂ ಹೇಳಿದರು. ಕ್ರೈಸ್ತ ಮಿಶನರಿಗಳು ವಿದ್ಯಾಕ್ಷೇತ್ರದಲ್ಲಿ ಮಾಡುವ ಸೇವೆಯು ಅಭಿನಂದನೀಯವಿದ್ದು ಅಂತೆಯೇ ಹಿಂದೂ ಧರ್ಮ ಪೀಠಗಳು ವಿದ್ಯಾಸೇವೆ ಸಲ್ಲಿಸಬೇಕೆಂದೂ ಅಪೇಕ್ಷಿಸಿದರು. ಶ್ರೀ ಶ್ರೀ ಗಳವರು ವಿದ್ಯಾ ನಿಲಯಕ್ಕೆ ಶುಭ ಕೋರಿ ಆಶೀರ್ವದಿಸಿದರು. ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನಿತ್ತರು.

ನಗರಸಭೆಯ ಮಾನಪತ್ರ— ಮಂತ್ರಿಗಳು ಮಹಾತ್ಮಾಗಾಂಧಿ ಮುನಿಸಿಪಲ್ ಶಾಲೆಗೆ ಆಗಮಿಸಿ ಉಡುಪಿ ನಗರಸಭೆಯ ಕಡೆಯಿಂದ ಸಭಾಪತಿ ಶ್ರೀ ಕೆ. ಕೆ. ಪೈಗಳು ಅರ್ಪಿಸಿದ ಮಾನಪತ್ರವನ್ನು ಸ್ವೀಕರಿಸಿದರು. ಮಂತ್ರಿಗಳು ಉತ್ತರವೀಯುತ್ತಾ, ಮದ್ರಾಸು ರಾಜ್ಯದ ಯಾವ ಜಿಲ್ಲೆಯಾದರೂ ಮದ್ರಾಸು ಸರಕಾರದಿಂದ ತಾರತಮ್ಯ ದೃಷ್ಟಿಯಿಂದ ನೋಡಲಾಗುವುದಿಲ್ಲವೆಂದರು. ದ. ಕ. ಜಿಲ್ಲೆಯು ಸದ್ಯವೇ ಮೈಸೂರು ರಾಜ್ಯಕ್ಕೆ ಸೇರುವುದು ಇದ್ದಾಗ್ಯೂ ಕೊನೆಯ ದಿನದ ತನಕ ಪೋಷಿಸಲಾಗುವುದು ಎಂದು ಹೇಳಿದರು. ಪ್ರಾಂತರಚನೆಯಿಂದ ದ. ಕ. ಜಿಲ್ಲೆಯು ಮೈಸೂರಿಗೆ ಸೇರಿದರೂ ಜನರ ಸಹಕಾರ, ಪ್ರೀತಿವಿಶ್ವಾಸಗಳು ನೆರೆ ಪ್ರಾಂತಗಳ ಜನರೊಡನೆ ಇರಬೇಕಾಗಿದೆ. ಮಾನಪತ್ರದಲ್ಲಿ ಧನಸಹಾಯ, ಸಾಲ ಇತ್ಯಾದಿ ಸೂಚಿಸಲಾದುದು ಸಹಜವಿದ್ದರೂ ಅದನ್ನು ಪೂರೈಸುವುದು ಪಂಚವಾರ್ಷಿಕ ಯೋಜನೆಗೆ ಒಳಪಟ್ಟಿರುವುದು ಅಂತೂ ಸಾಧ್ಯವಿದ್ದುದನ್ನು ಮಾಡಲಾಗುವುದೆಂದರು. ನಗರಸಭೆಯ ಉಪಾಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಯು. ಬಿ. ಎಮ್. ಸಿ. ಶಾಲಾ ಶತಮಾನೋತ್ಸವದ— ಅಧ್ಯಕ್ಷತೆಯನ್ನು ಮಾನ್ಯಮಂತ್ರಿ ಶ್ರೀ ಸುಬ್ರಹ್ಮಣ್ಯಂ ರವರು ತಾ. 19ರಲ್ಲಿ ವಹಿಸಿ ಕ್ರೈಸ್ತ ಮಿಶನರಿಗಳು ನೂರು ವರ್ಷಗಳ ಹಿಂದೆ ಕೆಲವೇ ಶಾಲೆಗಳಿದ್ದ ಸಮಯದಲ್ಲಿ ಹಿಂದೂ ದೇಶದಲ್ಲಿ ಶಿಕ್ಷಣ ಮಂದಿರಗಳನ್ನು ತೆರೆದು ವಿದ್ಯಾಪ್ರಚಾರಮಾಡಿ ಚಿರಸ್ಮರಣೀಯರಾಗಿದ್ದಾರೆಂದು ಹೇಳಿದರು. ಸರಕಾರವು ಕೂಡಾ ವಿದ್ಯಾಪ್ರಸಾರ ಮಾಡುತ್ತಿರುವ ಮಿಶನರಿ ಸಂಸ್ಥೆಗಳಿಗೆ ಶಕ್ಯವಿದ್ದಷ್ಟು ಸಹಾಯ ನೀಡುವುದೆಂದರು. ಬಳಿಕ ಕ್ರೀಡಾ ರಂಗದ ಉದ್ಘಾಟನೆಯನ್ನು ನೆರವೇರಿಸಿದರು.

ಮಂತ್ರಿಗಳು ಒಳಕಾಡಿನಲ್ಲಿ ನೂತನವಾಗಿ ತೆರೆಯಲಾದ ಶ್ರೀ ಎಲಿಯಾಸ್ ಅಂದ್ರಾದೆಯವರ ಭಾರತ ಫುಡ್ ಇಂಡಸ್ಟ್ರೀಸ್, ಮಹಿಳಾ ಕೇಂದ್ರ ಮಹಿಳಾ ತರಬೇತಿ ಶಾಲೆಗಳನ್ನು ಸಂದರ್ಶಿಸಿದರು.

ರಶ್ಯದ ಪ್ರಥಮ ಉಪಪ್ರಧಾನಿ ಶ್ರೀ ಎ. ಐ. ಮೈಕೊಯನ್ನರು (ಚಿತ್ರದಲ್ಲಿ ಎಡಗಡೆಯಿಂದ ಎರಡನೆಯವರು) ಪಾಕಿಸ್ತಾನದ ಗಣ ರಾಜ್ಯ ದಿನೋತ್ಸವಕ್ಕೆಂದು ಕರಾಚಿಗೆ ಈಚೆಗೆ ಆಗಮಿಸಿದ ಸಂದರ್ಭವನ್ನು ಭಾರತ ಸಂದರ್ಶನಕ್ಕೂ ಉಪಯೋಗಿಸಿಕೊಂಡರು. ಯೋಜನಾ ಆಯೋಗದ ಹಾಗೂ ಕೇಂದ್ರ ಮಂತ್ರಿ ಮಂಡಳದ ಸದಸ್ಯರೊಡನೆ ಇವರು ಸುದೀರ್ಘ ಪರ್ಯಾಲೋಚನೆ ನಡೆಸಿ ಉಭಯದೇಶಗಳ ನಡುವೆ ವ್ಯಾಪಾರ ಮತ್ತು ತಾಂತ್ರಿಕ ಸಹಕಾರ ಹೆಚ್ಚುವ ಬಗೆಯನ್ನು ನಿರ್ಧರಿಸಿದರು. ಸ್ವದೇಶಕ್ಕೆ ಮರಳಿದ ಬಳಿಕ ಇವರು ಇದೇ ೧೭ನೇ ದಿನಾಂಕ ಮಹತ್ವದ ಘೋಷಣೆಯೊಂದನ್ನು ಹೊರಡಿಸಿ "ಕೊಮಿನ್ ಫಾರ್ಮ್" ಎಂಬ ಸಂಘಟನೆಯನ್ನು ವಿಸರ್ಜಿಸಿರುವುದಾಗಿ ಹೇಳಿದ್ದಾರೆ; ಇದರಿಂದ ಪರರಾಷ್ಟ್ರಗಳ ವ್ಯವಹಾರದಲ್ಲಿ ರಶ್ಯದ ಕಮ್ಯುನಿಸ್ಟ್ ಪಕ್ಷವು ನೇರವಾಗಿ ಕೈಹಾಕುವುದು ನಿಲ್ಲುತ್ತದೆ; ಮತ್ತು ಇಷ್ಟು ಮಟ್ಟಿಗೆ ಪಂಚಶೀಲಗಳನ್ನು ಗೌರವಿಸಿದಂತಾಗುತ್ತದೆ.

ಮಂಗಳೂರಲ್ಲಿ ಮಂತ್ರಿ ಸುಬ್ರಹ್ಮಣ್ಯಂರವರು

ಸಿಂಡಿಕೇಟ್ ಬೇಂಕಿನ ಶಾಖಾ ಕಟ್ಟಡದ ಶಂಕುಸ್ಥಾಪನೆ—

ಮಂತ್ರಿ ಶ್ರೀ ಸುಬ್ರಹ್ಮಣ್ಯಂರವರು ತಾ. ೨೦ನೇ ಬೆಳಿಗ್ಗೆ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಇದರ ಮಂಗಳೂರು ಶಾಖೆಯ ಕಟ್ಟಡದ ಶಂಕುಸ್ಥಾಪನೆ ಮಾಡುತ್ತಾ, 'ಒಂದು ಉತ್ತಮ ಬೇಂಕು ಒಬ್ಬ ಆರ್ಥಿಕ ಮಂತ್ರಿ ಇದ್ದಂತೆ ಸಾರ್ವಜನಿಕರ ಹಣದ ವಿಶ್ವಸ್ತ ಸಂಸ್ಥೆಯಾಗಿರುವ ಬೇಂಕು ಆ ಹಣವನ್ನು ಯೋಗ್ಯರೀತಿಯಲ್ಲಿ ಉಪಯೋಗಿಸಿ, ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಿಗೆ ಸಹಕಾರಿಯಾಗಬೇಕು' ಎಂದರು. ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಾ| ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡುತ್ತಾ, ತಮ್ಮ ಬೇಂಕು ಈ ತನಕ ಸಲ್ಲಿಸಿದ ಸೇವೆಯನ್ನು ವಿವರಿಸಿದರು. ಮಂತ್ರಿಗಳು 'ಜೀವವಿಮಾ ಸಂಸ್ಥೆಗಳನ್ನು ರಾಷ್ಟ್ರೀಕರಿಸಿದ ಧೋರಣೆಯನ್ನು ಸಮರ್ಥಿಸಿ ಬೇಂಕುಗಳ ರಾಷ್ಟ್ರೀಕರಣದ ಹೆದರಿಕೆಯೇನೂ ಇಲ್ಲ'ವೆಂದರು. ಶ್ರೀ ಟಿ.ಎ. ಪೈ, ಎಮ್. ಎಲ್. ಎ.ಗಳು ಧನ್ಯವಾದಗಳನ್ನಿತ್ತರು.

ಜಿಲ್ಲಾ ಬೋರ್ಡು ಆಫೀಸಿಗೆ ಭೇಟಿ

ನಂತರ ಮಂತ್ರಿಗಳು ಜಿಲ್ಲಾ ಬೋರ್ಡು ಆಫೀಸಿಗೆ ತೆರಳಿ ಅಲ್ಲಿ ಜಿಲ್ಲಾ ಬೋರ್ಡಿನ ಮನವಿಯನ್ನು ಸ್ವೀಕರಿಸಿದರು. ಬೋರ್ಡಿನ ಅಧ್ಯಕ್ಷ ಡಾ|| ಕೆ. ಕೆ. ಹೆಗ್ಡೆಯವರು ಸ್ವಾಗತಿಸಿ ಜಿಲ್ಲಾ ಬೋರ್ಡು ಈ ಮೊದಲು ಸರಕಾರದೊಡನೆ ಕೇಳಿದ ಬೇಡಿಕೆಗಳನ್ನು ಸಫಲಗೊಳಿಸಬೇಕೆಂದರು. ಮಂತ್ರಿಗಳು ಜಿಲ್ಲಾ ಬೋರ್ಡು ಹಾಗೂ ಇತರ ಸ್ಥಳೀಯ ಸಂಸ್ಥೆಗಳಿಗೆ ತಮ್ಮ ಸಾಮಾನ್ಯ ಹೊಣೆಗಾರಿಕೆಯನ್ನು ನಿರ್ವಹಿಸುವುದು ಅಸಾಧ್ಯವಾಗದಂತೆ ಸರಕಾರವು ನೋಡಿಕೊಳ್ಳುವುದೆಂದರು.

ಹೆರಿಗೆ ವಿಭಾಗದ ಉದ್ಘಾಟನೆ—

ಮಂಗಳೂರಿನ ಲೇಡಿಗೋಶನ್ ಆಸ್ಪತ್ರೆಗೆ ಮಂತ್ರಿಗಳು ಬಂದು ಅಲ್ಲಿಯ ಹೊಸ ಹೆರಿಗೆ ವಿಭಾಗದ ನೂತನ ಕಟ್ಟಡದ ಉದ್ಘಾಟನೆಯನ್ನು ಮಾಡಿದರು. ಎರಡು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ ವೆಚ್ಚ ತಗಲಿದ 46 ಮಂಚಗಳ ಸೌಕರ್ಯವುಳ್ಳ ಈ ನೂತನ ಕಟ್ಟಡದ ಉದ್ಘಾಟನೆಯಿಂದಾಗಿ ಒಟ್ಟು 166 ಮಂಚಗಳ ಸೌಕರ್ಯ ದೊರಕಿದಂತಾಯಿತು.

ಸೌಹಾರ್ದ ವಾರದ ಆರಂಭ-

ಬಳಿಕ ಮಂತ್ರಿಗಳು ವೆನ್‌ಲೋಕ್ ಆಸ್ಪತ್ರೆಗೆ ಬಂದು ಸೌಹಾರ್ದ ವಾರದ ಆರಂಭೋತ್ಸವವನ್ನು ನೆರವೇರಿಸುತ್ತಾ, ರೋಗದಿಂದ ಪೀಡಿತನಾಗಿ ಸಹಜವಾಗಿಯೇ ಕೆಲಮಟ್ಟಿಗೆ ಮಾನಸಿಕ ಸ್ವಾಸ್ಥ್ಯವನ್ನು ಕಳಕೊಳ್ಳುವ ರೋಗಿಯನ್ನು ಆದರಿಸಿ, ಆತನಲ್ಲಿ ಒಂದುರೀತಿಯ ಆತ್ಮವಿಶ್ವಾಸ ಹುಟ್ಟಿಸಿ, ಆತನ ರೋಗ ನಿವಾರಣೆ ಮಾಡಬೇಕಾದುದು ಆಸ್ಪತ್ರೆ ಅಧಿಕಾರಿಗಳ ಕರ್ತವ್ಯವೆಂದರು.

ಹೆದ್ದಾರಿ ಸಪ್ತಾಹದ ಉದ್ಘಾಟನೆ-

ದೇಶದಲ್ಲಿಯೇ ಪ್ರಥಮವೆನಿಸಿದ ದ. ಕ. ಜಿಲ್ಲಾ ಹೆದ್ದಾರಿ ಸಪ್ತಾಹದ ಉದ್ಘಾಟನೆಯನ್ನು ತಾ. 20ರಂದು ಮಂತ್ರಿ ಸುಬ್ರಹ್ಮಣ್ಯಂರವರು ನೆರವೇರಿಸುತ್ತಾ, ಸಾರಿಗೆ ಸೌಲಭ್ಯ ವೃದ್ಧಿಯಲ್ಲಿ ಹಿಂದುಳಿದಿರುವ ದ. ಕ. ಜಿಲ್ಲೆಯಲ್ಲಿ ಸ್ವಾತಂತ್ರ್ಯಾನಂತರ ಸಾರಿಗೆ ಸೌಕರ್ಯಾಭಿವೃದ್ಧಿಗಾಗಿ ಕೈಕೊಂಡ ಕಾರ್ಯಕ್ರಮವನ್ನು ವಿವರಿಸಿ ನಾವಿನ್ನು ಏನು ಮಾಡಬೇಕಾಗಿದೆ ಎಂಬ ಬಗ್ಗೆ ಸಾರ್ವತ್ರಿಕ ತಿಳುವಳಿಕೆ ಹುಟ್ಟಿಸಲು ಉದ್ದೇಶಿಸಿರಬೇಕೆಂದರು. ಕಂಟ್ರಾಕ್ಟುದಾರರು ರಾಷ್ಟ್ರದ ಹಿತದೃಷ್ಟಿಯಿಂದ ಕಾರ್ಯವನ್ನು ಸಮರ್ಪಕವಾಗಿ ಮಾಡಬೇಕೆಂದರು.

ಸಪ್ತಾಹ ಆಚರಣಾ ಸಮಿತಿ ಅಧ್ಯಕ್ಷ ಶ್ರೀ ಎಮ್. ಜಿ. ರಾಜಾರಾಮರು ಸ್ವಾಗತ ಭಾಷಣ ಮಾಡಿದರು. ಮದ್ರಾಸು ಪ್ರೈವೇಸ್ ಇಲಾಖೆಯ ಚೀಫ್ ಎಂಜಿನಿಯರ್ ಶ್ರೀ ಕೆ. ಕೆ. ನಂಬಿಯಾರರು ಸಪ್ತಾಹ ಆಚರಣೆಯ ಉದ್ದೇಶಗಳನ್ನು ವಿವರಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕೊಡಗಿನ ಚೀಫ್ ಕಮಿಶನರ್ ಶ್ರೀ ಟಿ. ಜಿ. ಎನ್. ಅಯ್ಯರರು ಹಿಂದಿನ ಕಾಲದಿಂದ ಸಪ್ತಾಹ ನಡೆಸಿ ಆಚರಿಸುತ್ತಿರುವುದು ಸ್ತುತ್ಯವೆಂದರು. ಜೊತೆ ಕಾರ್ಯದರ್ಶಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಗಳು ಆರಂಭದಲ್ಲಿ ಜಿಲ್ಲೆಯ ಸಾರಿಗೆಯ ಕುರಿತು ವಿಚಾರಪರ ಭಾಷಣ ಮಾಡಿ ಸ್ವಾಗತಿಸಿದರು. ಅಂತ್ಯದಲ್ಲಿ ಧನ್ಯವಾದಗಳನ್ನಿತ್ತರು.

ನಂತರ ಮಂತ್ರಿಗಳು ವೆನ್‌ಲೋಕ್ ಆಸ್ಪತ್ರೆಯ ದಾದಿಯರ ವಸತಿ ಗೃಹದ ಪ್ರವೇಶೋತ್ಸವವನ್ನು ನೆರವೇರಿಸುತ್ತಾ, ಮದ್ರಾಸು ರಾಜ್ಯದ ಸೂಚಿತ ವಿದ್ಯಾ ಸುಧಾರಣೆಯಲ್ಲಿ ಮಹಿಳೆಯರಿಗೆ ದಾದಿಯರ ಶಿಕ್ಷಣವನ್ನು ಕಡ್ಡಾಯಗೊಳಿಸುವ ಆಲೋಚನೆ ಇದೆ ಎಂದೂ ಮೈಸೂರು ರಾಜ್ಯವು ತನ್ನ ಎರಡನೇ ಕಾಲೇಜಾದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸುಧಾರಣೆ ಅಭಿವೃದ್ಧಿಯನ್ನು ಗಮನಿಸುವರೆಂದೂ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ-

ಕಾಂಗ್ರೆಸ್ ಕಾರ್ಯಕರ್ತರ ಸಭೆಗೆ ಆಗಮಿಸಿದಾಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ. ಮಲ್ಯರು ಸ್ವಾಗತಿಸಿದರು. ಮಂಗಳೂರು ವಿದ್ಯುಚ್ಛಕ್ತಿ ಕಂಪೆನಿಯ ರಾಷ್ಟ್ರೀಕರಣ ಮತ್ತು ಒಕ್ಕಲು ಮಸೂದೆಯು ಈ ಜಿಲ್ಲೆಗೂ ಅನ್ವಯಿಸುವಂತಾಗಬೇಕೆಂದು ಆಶಿಸಿದರು. ಮಂತ್ರಿಗಳು ಉತ್ತರಿಸುತ್ತಾ, ಭಾಷಾಂಧತೆಯಿಂದಾಗಿ ಇತ್ತೀಚೆಗೆ ಎಷ್ಟೋ ಪ್ರಮಾದಗಳು ನಮ್ಮ ರಾಷ್ಟ್ರದಲ್ಲಿ ನಡೆದವೆಂದೂ ಇನ್ನಾದರೂ ನಾವದನ್ನು ಸರಿಪಡಿಸಲು ಯತ್ನಿಸಬೇಕೆಂದೂ ದ. ಕ. ಜಿಲ್ಲೆಯು ಮೈಸೂರನ್ನು ಸೇರುವುದೆಂಬ ಕಾರಣಕ್ಕಾಗಿ ಈಗ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನೂ ಹಿಂದೆಹಾಕುವುದಿಲ್ಲವೆಂದೂ ಹೇಳಿದರು.

ಸಂಗೀತ ನಾಟಕ ಎಕೆಡೆಮಿ-ಯನ್ನು ತಾ. 20ರಲ್ಲಿ ಮಂತ್ರಿ ಶ್ರೀ ಸುಬ್ರಹ್ಮಣ್ಯಂರವರು ಡಾನ್ ಬೋಸ್ಕೊ ಹಾಲಿನಲ್ಲಿ ಉದ್ಘಾಟಿಸಿದರು. ಮಂಗಳೂರು ನಗರಸಭಾಪತಿ ಶ್ರೀ ಕೆ. ಎಸ್. ಎನ್. ಅಡಿಗರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಟಪಾಡಿ— ಎಸ್. ವಿ. ಎಸ್. ಹಾ. ಎಲಿಮೆಂಟರಿ ಮತ್ತು ಚೊಕ್ಕಾಡಿ ಎಸ್. ಎಮ್. ಎಸ್ ಎಲಿಮೆಂಟರಿ ಶಾಲೆಗಳ ಸಂಯುಕ್ತ ವರ್ಧಂತಿಯು ತಾ. 17ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆಯನ್ವಯ ಕಟ್ಟಲಾದ ನಾಟಕ ವೇದಿಕೆಯ ಉದ್ಘಾಟನೆಯೂ ನಡೆಯಿತು. ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತಭಾಷಣ ಮಾಡಿದರು. ಶಾಲೆಗಳ ವರದಿ ವಾಚನಾನಂತರ ಶ್ರೀ ಬಿ. ಕೃಷ್ಣಾನಂದ ಹೆಗ್ಡೆಯವರು ಪ್ರಸ್ತಾವನೆ ಮಾಡಿದರು. ಪಾರಿತೋಷಕ ವಿತರಣೆ, ಅಧ್ಯಕ್ಷ ಭಾಷಣ, ಮಕ್ಕಳ ವಿವಿಧ ವಿನೋದಾವಳಿ, ತಾಳಮದ್ದಳೆ ಇತ್ಯಾದಿ ಕಾರ್ಯಕ್ರಮಗಳಾದುವು.

ಕಾಸರಗೋಡು- ಇತ್ತೀಚೆಗೆ ಕಾಸರಗೋಡಿನಲ್ಲಿ ನಡೆದ ಮುಂಡಾಟಕೆಗೂ, ಕರ್ನಾಟಕ ಪ್ರಾಂತೀಕರಣ ಸಮಿತಿಗೂ ಯಾವುದೇ ಸಂಬಂಧವಿಲ್ಲವೆಂದೂ ಸಮಿತಿಯ ಕಾರ್ಯಕಲಾಪಗಳನ್ನು ಜನತೆಯ ಹಾಗೂ ಸರಕಾರದ ಮುಂದಿಟ್ಟೇ ಮುಂದೊತ್ತಲಾಗುವುದೆಂದೂ ವಿನಾಶಕಾರಿ ಕಾರ್ಯಗಳು ಸಮಿತಿಯ ಕಡೆಯಿಂದ ನಡೆಯಲಾರವೆಂದೂ ಅಧ್ಯಕ್ಷ ಶ್ರೀ ಎಮ್. ಉಮೇಶ ರಾಯರು ಪ್ರಕಟಿಸಿದ್ದಾರೆ.

ಕುದಿಗ್ರಾಮ- ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಶ್ರೀ. ಟಿ. ಎ. ಪೈ, ಎಮ್. ಎಲ್. ಎ; ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಹಯವದನ ಕಾರಂತರಾಯರು ಸ್ವಾಗತಮಾತುಗಳನ್ನಾಡಿದರು. ಮುಖ್ಯಾಧ್ಯಾಪಕ ಶ್ರೀ ಕೆ. ರಾಮಚಂದ್ರ ನಾಯ್ಕರು ವರದಿಯನ್ನೋದಿದರು ಶ್ರೀ ವೈ. ಪಾಂಡುರಂಗ ಶಾಸ್ತ್ರಿಗಳು ಪ್ರಸ್ತಾವನೆ ಮಾಡಿದರು. ಶಾಲಾ ಮೆನೇಜರ್ ರಂಗಪ್ಪ ನಾಯ್ಕರು ಸರ್ವರನ್ನೂ ವಂದಿಸಿದರು.

ಪುಚ್ಚ ಮೊಗರು ಸೇತುವೆ ಉದ್ಘಾಟನೆ— ಮದ್ರಾಸಿನ ಆರ್ಥಿಕ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ರವರು ತಾ. ೯ರಲ್ಲಿ ಪುಚ್ಚಮೊಗರಿನ ಸೇತುವೆಯನ್ನು ಉದ್ಘಾಟಿಸುತ್ತಾ, ಮೈಸೂರು ರಾಜ್ಯಕ್ಕೆ ಸಧ್ಯವೇ ಸೇರಲಿರುವ ದ. ಕ. ಜಿಲ್ಲೆಗೆ ಈ ಸೇತುವೆಯನ್ನು ಉಡುಗೊರೆಯಾಗಿ ಕೊಡುತ್ತಿದ್ದೇನೆ. ಈ ಜಿಲ್ಲೆಯವರು ಯಾವ ರಾಜ್ಯಕ್ಕೆ ಸೇರಿದರೂ ತಮ್ಮ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಕಷ್ಟವಾಗದೆಂದರು. ಮದ್ರಾಸ್ ಪ್ರೈವೇಸ್ ಇಲಾಖೆಯ ಚೀಫ್ ಎಂಜಿನಿಯರರಾದ ಶ್ರೀ ಕೆ. ಕೆ. ನಂಬಿಯಾರರು ಮೂಡಬಿದ್ರೆ ಮತ್ತು ಬಂಟವಾಳ ರಸ್ತೆಯ ನಡುವೆ ಕಟ್ಟಲಾದ ಈ ಪುಚ್ಚ ಮೊಗರು ಸೇತುವೆಯು ವಿಶೇಷ ತಾಂತ್ರಿಕ ಕೌಶಲದಿಂದ ನಿರ್ಮಾಣಗೊಂಡಿದ್ದು ಮದ್ರಾಸು ರಾಜ್ಯದಲ್ಲಿಯೇ ಅಪೂರ್ವ ಮಾದರಿಯ ಸೇತುವೆಯಾಗಿದೆ ಎಂದರು. ಶ್ರೀ ಎಮ್. ಎನ್. ಕಾಮತರು ಧನ್ಯವಾದಗಳನ್ನಿತ್ತರು.

ಫರಂಗಿ ಪೇಟೆ- ಶ್ರೀ ರಾಮ ಹಾ| ಎ| ಶಾಲೆಯ ವರ್ಧಂತಿಯು ತಾ. 19ರಲ್ಲಿ ಶ್ರೀ. ಕೆ. ಎಲ್. ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ವಾಡಿಕೆಯಂತೆ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು, ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 22ರಲ್ಲಿ ಶ್ರೀ. ಪಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮುಲ್ಕಿ — ಫಿಶರೀಸ್ ಹೈಸ್ಕೂಲಿನ ವರ್ಧಂತಿಯು ತಾ. 17ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿತು. ಶ್ರೀಮತಿ ಸಾರಾ ಎನ್. ಅಮೀನರು ವರದಿ ಓದಿದರು ಶ್ರೀಮತಿ ಪ್ರೇಮಾ ಎ. ಪೈಯವರು ಪಾರಿತೋಷ ಹಂಚಿದರು.

ಮುಲ್ಲಾರು— ಸ್ಥಳೀಯ ಅಭಿವೃದ್ಧಿ ಯೋಜನೆಯಂತೆ ಕಟ್ಟಲಾಗುವ ಮುಲ್ಲಾರು ಸಂಕದ ಶಂಕು ಸ್ಥಾಪನೆಯು ತಾ. 16ರಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಎಂ. ಎಸ್. ಶ್ರೋತ್ರಿಯವರು ನೆರವೇರಿಸಿದರು.

ಕುಂದಾಪುರ- ಸ್ಥಳೀಯ ಬೋರ್ಡು ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ 22ರಲ್ಲು ಮೈಸೂರು ಸರಕಾರದ ಕಾನೂನು, ಮಜೂರ ಮತ್ತು ವಿದ್ಯಾಮಂತ್ರಿಗಳಾದ ಶ್ರೀ ಎ. ಜಿ ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕರುಣಾಕರ ರಾಯರು ಸ್ವಸ್ತಿವಾಚನ ಮಾಡಿದರು. ಉತ್ಸವದ ಅಂಗವಾಗಿ ತಾ. 19ರಲ್ಲು ಬೆಳಿಗ್ಗೆ ಡಿ| ಮುನ್ಸಿಫ್ ಶ್ರೀ ಎಚ್. ಕಾಲಿಯಾನರು ಧ್ವಜಾರೋಹಣ ಮಾಡಿದರು. ಸಬ್‌ಕಲೆಕ್ಟರ್ ಶ್ರೀ ಕೆ. ಎಮ್. ಚಲ್ಲಯ್ಯನವರು ಕಲೆ, ವೃತ್ತಿ, ಕೈಗಾರಿಕೆ ಪ್ರದರ್ಶನವನ್ನು ಉದ್ಘಾಟಿಸಿದರು. ತಾ 20 ಮತ್ತು 21ರಲ್ಲು ನಾಟಕ ಮತ್ತು ಮೂರು ಮೇಳಗಳ ಬಯಲಾಟ ಕ್ರಮವಾಗಿ ಜರಗಿತು.

ತಾ. 22ರಲ್ಲಿ ಸ್ಯೆಂಟ್ ಮೇರೀಸ್ ಶಾಲೆಯಲ್ಲಿ ಕುಂದಾಪುರ ಹೆದ್ದಾರಿ ಸಪ್ತಾಹದ ಆಚರಣೆಯು ವಕೀಲ್ ಕೆ. ವೆಂಕಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಮೈಸೂರಿನ ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಉದ್ಘಾಟಿಸಿದರು. ಶ್ರೀ ವೈ ಮಂಜಯ್ಯ ಶೆಟ್ಟಿ, ಎಂ. ಎಲ್. ಎ. ಇವರಿಂದ ಸ್ವಾಗತ ಭಾಷಣವಾದ ಮೇಲೆ ಶ್ರೀ ಎಂ. ಎಸ್. ಶ್ರೋತ್ರಿ, ಶ್ರೀ ಎನ್. ಎಸ್ ಪರಮೇಶ್ವರಯ್ಯ, ಮೈಸೂರಿನ ಎಂ. ಎಲ್. ಎ. ಗಳಾದ ಬಿ. ಮಾಧವಾಚಾರ್ಯ ಮೊದಲಾದವರು ಭಾಷಣ ಮಾಡಿದರು.

ಬ್ರಹ್ಮಾವರ— ತಾ. 19ರಂದು ಮಂತ್ರಿ ಸುಬ್ರಹ್ಮಣ್ಯಂರವರು ಎಸ್. ಎಮ್ ಎಸ್. ಹೈಸ್ಕೂಲಿನ ಹೊಸ ಕಟ್ಟಡವನ್ನು ಉದ್ಘಾಟಿಸುತ್ತಾ, ದ. ಕ. ಜಿಲ್ಲೆಯು ಮದ್ರಾಸು ರಾಜ್ಯದಲ್ಲಿಯೇ ವಿದ್ಯಾ ಕ್ಷೇತ್ರದಲ್ಲಿ ಅತ್ಯಂತ ಮುಂದುವರಿದ ಜಿಲ್ಲೆಯಾಗಿದೆ ಎಂದರು. ಶ್ರೀ. ಟಿ. ಎ. ಪೈ, ಎಮ್. ಎಲ್. ಎ. ಅವರು ಕ್ರೀಡಾರಂಗವನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ. ಅವರು ವಹಿಸಿದ್ದರು.

ಆರಂಭದಲ್ಲಿ ರೆ. ಫಾ. ಕೆ. ಕೆ. ಕುರಿಯಾಕೋಸರು ಸ್ವಾಗತಮಾತುಗಳನ್ನಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ರಾಮಕೃಷ್ಣ ಹಂದೆಯವರು ವರದಿವಾಚನ ಮಾಡಿದರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No 80/1956.

B. ಅಪ್ಪು ಪೂಜಾರಿ —ವಾದಿ.

ಮತ್ತು

H ಶ್ರೀಧರ ಬಲ್ಲಾಳ,
H. ಗೋಪಾಲಕೃಷ್ಣ ಬಲ್ಲಾಳರ ಅಳಿಯ. ಕಾರ್ಕಳ ತಾಲೂಕು ಹೆಬ್ರಿ ಕಸಬಾ— } ಪ್ರತಿವಾದಿ.

ಪ್ರತಿವಾದಿಯು ರೂಪಾಯಿ 2030-0-0ಕ್ಕೆ ತಾ. 3-3-50ರಲ್ಲಿ H ಸಿದ್ದು ಪೂಜಾರಿಗೆ ಬರಕೊಟ್ಟ ದಿವಾಂದು ನೋಟ್ ಪ್ರಕಾರ ಬರತಕ್ಕ ಬ್ಯಾವೆಜು ವಸೂಲಿ ಹಕ್ಕನ್ನು ವಾದಿಯು ಟ್ರಾನ್ಸ್‌ಫರ್ ಪಡೆದು ದಾಖಲು ಮಾಡಿದ ಮೇಲಿನ ವ್ಯಾಜ್ಯವು ನಿಮ್ಮ ನೋಟೀಸಿಗೆ ತಾ. 1-6-56ಕ್ಕೆ ಇಟ್ಟಿದೆ. ಆ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ನೀವು ಸ್ವತಹಾ ವಕೀಲರ ಮೂಲಕ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಬೇಕು; ಹಾಜರಾಗುವರೇ ತಪ್ಪಿದ್ರೆ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆ.

Gratian C. Rego,
Vakil for Plaintiff.

ಉಡುಪಿ, 23.4.56.

(೧೨ನೇ ಪುಟದಿಂದ)

ಶ್ರೀ ಕುಲಕರ್ಣಿಯವರು ತಮ್ಮ ಕಾಣಿಕೆಯನ್ನು ಸಹ ಕೊಟ್ಟು ಅಲಂಕಾರವನ್ನು ಹೆಚ್ಚಿಸಿದಾರೆ. ಈ ಪುಸ್ತಕಕ್ಕೆ ಕನ್ನಡಿಗರ ಪ್ರೋತ್ಸಾಹ ಸಿಕ್ಕಿ, ಲೇಖಕರಿಂದ ಇನ್ನೂ ಹಲವು ವಿಷಯಗಳ ಮೇಲೆ ಇಷ್ಟೇ ಬೋಧಪ್ರದವಾದ ಲಲಿತ ಶೈಲಿಯ ಗ್ರಂಥಗಳು ಬರೆಯಲ್ಪಟ್ಟು ಪ್ರಕಾಶನ ಹೊಂದಲೆಂದು ಹಾರೈಸುತ್ತೇವೆ.

ಆ ರಾತ್ರಿ—

ಬರೆದವರು: "ಭಾರತಿ". ಪ್ರಕಾಶಕರು: ಶ್ರೀ ವಾಣಿ ಪ್ರಕಾಶನ, ಚಿಕ್ಕಪೇಟೆ, ಬೆಂಗಳೂರು ೨. ಬೆಲೆ: ರೂ ೧—೦—೦.

ಇದೊಂದು ಸಾಮಾಜಿಕ ಕಾದಂಬರಿ ಶೈಲಿಯು ಹಾಸ್ಯಮಯವಾಗಿದೆ; ಮಾರ್ಮಿಕತೆಯು ಬಹಳ ಆಕರ್ಷಕವಾಗಿದೆ. ಆದರೆ ಭಾಷೆಯು ಹಲವೆಡೆಗಳಲ್ಲಿ ಕನ್ನಡ ಕಲಿತು ಬರೆದ ಮೊದಲಿಗರ ಹಾಗೆ ವ್ಯಾಕರಣ ದೋಷಗಳಿಂದ ತುಂಬಿದೆ. ಕಥಾವಸ್ತುವು "ಈ ಅಡ್ವೋಕೇಟಗೆ ಈ ಗತಿ ಬರಬೇಕೇ" (ಪುಟ ೩೭) ಎಂದು ಓದುಗರು ಸಹ ಪಾತ್ರದೊಂದಿಗೆಯೇ ಬೇಸರಪಡುವಂತೆ ಪ್ರಾರಂಭದಲ್ಲಿ ಕಂಡರೂ ಕೊನೆಕೊನೆಗೆ ರಸವತ್ತಾಗಿ ಸಾಗುತ್ತದೆ. "ಪಾಂಪತ್ಯ ಜೀವನಕ್ಕಲ್ಲ, ಕೇವಲ ಅಭಿನಯದ ಮಟ್ಟಿಗೆ ಪತಿಯಾಗಿರಿ" ಎಂದು ಕಥಾನಾಯಕಿ ಕುಮುದಿನಿಯು ನಾಯಕ ರವೀಂದ್ರನನ್ನು ಕೇಳುವುದೂ ಆತನು ಅದಕ್ಕೆ ಒಪ್ಪುವುದೂ ಸಿನೆಮಾದ ಕತೆಯ ಮಟ್ಟದ ವಸ್ತು ಎಂಬ ದೋಷಕ್ಕೆ ಎಡೆ ಸಿಗದಂತೆ ಮೊದಲಿಂದಲೂ ಕತೆಯನ್ನು ಸುಧಾರಿಸಿಕೊಂಡು ಹೋಗಬಹುದಿತ್ತೆಂದು ನಮಗೆ ತೋರುತ್ತದೆ.

ಗೃಹ ಪಂಚಮಿ—

ಬರೆದವರು: ಬಿ. ಎ. ಸನದಿ. ಪ್ರಕಾಶಕರು: ಸ್ನೇಹ ಪ್ರಕಾಶನ, ಶಮನೇವಾಡಿ. ಬೆಲೆ: ರೂ. ೦—೫—೦.

ಮಕ್ಕಳ ಮನಸ್ಸಿಗೆ ಸೊಗಯಿಸುವ, ಅವರ ಕಲ್ಪನೆಯ ಕುದುರೆಯನ್ನು ಓಡಗೊಡುವಂತೆ ಮಾಡುವ, ಅವರ ಭಾವನೆಗಳನ್ನು ಕೆಣಕಿ ಪ್ರವೃತ್ತಿಗಳನ್ನು ಉದ್ದೀಪನಗೊಳಿಸುವ ಶಿಶುಗೀತಗಳ ಸಂಗ್ರಹವಿದು. ಕರ್ಣಾನಂದದಾಯಿಯಾದ ನಾದ ಮಾಧುರ್ಯ, ಶಿಶುಲೋಕದೊಡನೆ ಸಮರಸಹೊಂದುವ ಭಾವ, ಮಕ್ಕಳ ಹೃದಯವನ್ನು ಸೂರೆಗೊಳ್ಳುವ ವಸ್ತುವಿನ್ಯಾಸ ಇಲ್ಲಿಯ ವೈಶಿಷ್ಟ್ಯ.

ಕನಸಿನ ಕನ್ನಡಿ—

ಬರೆದವರು: ವೆಂ. ಮು. ಜೋಶಿ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಭಗತಸಿಂಗ ಬೀದಿ, ಧಾರವಾಡ. ಬೆಲೆ: ರೂ. ೧—೪—೦.

ಒಟ್ಟು ಹದಿನಾಲ್ಕು ಚಿಕ್ಕ ಕತೆಗಳಿರುವ ಈ ಸಂಗ್ರಹದಲ್ಲಿ ಯುದ್ಧಕಾಲದ ಹಿನ್ನೆಲೆಯನ್ನು ತೆಗೆದುಕೊಂಡು ಬರೆದ ಕತೆಗಳಂತೆಯೇ ಉಳಿದವು ಸಹ ಮಾರ್ಮಿಕವಾಗಿವೆ. ಮಾನಸಿಕ ತುಮುಲವನ್ನು ಚಿತ್ರಿಸಿ ಕೃತಘ್ನತೆಯನ್ನು ಪ್ರಚೋದಿಸುವ ಹಾಗು ನೀತಿಮಾರ್ಗವನ್ನು ಎತ್ತಿ ತೋರಿಸುವ ಸಹಾನುಭೂತಿಪರ ಲೇಖಕನಾಗಿ ಶ್ರೀ ಜೋಶಿಯವರು ಇಲ್ಲಿ ತೋರಿಬರುತ್ತಾರೆ. ಅವರ ವಸ್ತುಗಳಲ್ಲಿ ವಿನೂತನತೆಯೂ ಶೈಲಿಯಲ್ಲಿ ಕಲಾತ್ಮಕತೆಯೂ ಒಡಮೂಡಿವೆ.

ಬದುಕುವ ದಾರಿ —

ಬರೆದವರು: ಕು. ಶಿ. ಹರಿದಾಸ ಭಟ್ಟ. ಪ್ರಕಾಶಕರು: ಮಹಾತ್ಮಾಗಾಂಧಿ ಸ್ಮಾರಕ ಕಾಲೇಜು, ಉಡುಪಿ. ಬೆಲೆ: ರೂ ೦-೮-೦.

ಆಫ್ರಿಕದ ಕಗ್ಗಾಡಿನಲ್ಲಿ ನೀಗ್ರೋಗಳಿಗೆ ವೈದ್ಯಕೀಯ ಸಹಾಯವನ್ನೂ ತಿಳಿವಿನ ಬೆಳಕನ್ನೂ ನೀಡಿ ಜೀವನಾರಾಧನೆಯಲ್ಲಿ ನಿರತರಾಗಿರುವ ಡಾ. ಆಲ್ಬರ್ಟ ಶ್ವಯಿಟ್ಸರರ ಬೋಧನೆಯನ್ನು ಶ್ರೀ ಭಟ್ಟರು ತಮ್ಮ ಪ್ರಭಾವಿಯಾದ ಪ್ರೌಢ ಶೈಲಿಯಲ್ಲಿ ಇಲ್ಲಿ ನಿರೂಪಿಸಿದ್ದಾರೆ. ವ್ಯಕ್ತಿತ್ವವನ್ನು ತಿದ್ದಿ ವಿಶ್ವ ಬಾಂಧವ್ಯಕ್ಕೆ ನಾಗರಿಕರೆಲ್ಲರನ್ನು ತರಬೇತಿಗೊಳಿಸುವ ನೀತಿ ಮತ್ತು ಧರ್ಮದ ತಳಹದಿ ಏನೆಂಬ ಕುರಿತು ನಮಗಿಲ್ಲಿ ಸಮಾಧಾನಕರವಾದ ವಿವರಣೆಯು ದೊರಕುತ್ತದೆ. ವಿಷಯ ಗಾಂಭೀರ್ಯ, ನಿರೂಪಣೆಯ ಸೊಗಸು ಮತ್ತು ಅಚ್ಚುಕಟ್ಟಾದ ಮುದ್ರಣಗಳ ಸಮ್ಮಿಲನವು ಈ ಪುಸ್ತಕದ ಕುರಿತು ಎತ್ತಿ ಹೇಳಬೇಕಾದ ವಿಷಯ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 81/1956.

ಕಲಬಾನ್ ಶೇಷಗಿರಿ ನ್ಯಾಕ. .. ವಾದಿ
ಲಕ್ಷ್ಮಿ ಅಮ್ಮ ಕೂಡಾ. — ಪ್ರತಿವಾದಿರು

6ನೇ ವಾದಿ ಕುಪ್ಪ. ನೇರ್ಲ ಕಟ್ಟೆಮನೆ ಚಂದು ಹೆಂಗ್ಸಿನ ಮಗ. ಕುಂದಾಪುರ ತಾಲ್ಲೂ ಕಟ್ಟೆಬೇಲ್ತೂರು ಗ್ರಾಮದಲ್ಲಿರುವವ.

ಸಧ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನಂದ್ರೆ ನೀವು ಕೂಡಾ ಪ್ರತಿವಾದಿರಿಂದ ವಾದಿಗೆ ಬರತಕ್ಕ ನಂದನ ಸಂವತ್ಸರದ ಲಾಗ್ಯಾತು ಜಯ ಸಂವತ್ಸರದ ವರೆಗೆ ಬರತಕ್ಕ ಮೂಲಗೇಣಿನ ಬಟ್ಟ ಕೂಡಾ ರೂಪಾಯಿ 176-11-0ಕ್ಕೆ ವಾದಿಯು ಮಾಡಿದ ಮೇಲಿನ ದಾವೆಯು ತಾ. 2-5-56ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದರೆ ಆ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ ನಿಮ್ಮನ್ನು ಏಕ್ಸಪಾರ್ಟಿ ಮಾಡಲಾದೀತೆಂತ ಈ ಮೂಲಕ ತಿಳಿಸಿಯದೆ.

(By order of the court)

Y. Tejappa Shetty.
Advocate for plff.

Coondapoor 18—4—1956.

ಮುಂಬಯಿ

ಬೊಂಬಾಯಿ ಬಂಟರ ಯಾನೆ ನಾಡವರ ಸಂಘ— ಈ ಸಂಘದ ಮಹಾಸಭೆಯು ತಾ. 15ರಲ್ಲಿ ಸಂಘದ ಅಧ್ಯಕ್ಷ ಶ್ರೀ ಪಾಂಗಾಳ ಮಹಾಬಲ ಶೆಟ್ರ ಅಧ್ಯಕ್ಷತೆಯಲ್ಲಿ ಬಜಾರ್‌ಗೇಟ್ ಹ್ಯಾಂಡ್ಲಿನ ಹಾಲಿನಲ್ಲಿ ಜರಗಿತು. ಗೌ. ಕಾರ್ಯದರ್ಶಿ ಮೂಲ್ಕಿ ಗಂಗಯ್ಯ ಶೆಟ್ಟರು ಗತವರ್ಷದ ವರದಿಯನ್ನೋದಿದರು. ಹೊಸವರ್ಷಕ್ಕೆ ಶ್ರೀಗಳಾದ ಪಾಂಗಾಳ ಮಹಾಬಲ ಶೆಟ್ಟಿ (ಅಧ್ಯಕ್ಷ), ಅತ್ತೂರು ಭೋಜ ಶೆಟ್ಟಿ (ಉಪಾಧ್ಯಕ್ಷ), ಮೂಲ್ಕಿ ಗಂಗಯ್ಯ ಶೆಟ್ಟಿ (ಗೌ. ಕಾರ್ಯದರ್ಶಿ), ಕೊಜಕುಳ್ಳಿ ಗೋಪಾಲ ಶೆಟ್ಟಿ (ಗೌ. ಉಪಕಾರ್ಯದರ್ಶಿ), ಎರ್ಮಾಳು ರಘು ಶೆಟ್ಟಿ, (ಗೌ. ಕೋಶಾಧಿಕಾರಿ), ಕೆ ಆರ್. ಪಿ. ಶೆಟ್ಟಿ, (ಗೌ ಉಪಕೋಶಾಧಿಕಾರಿ), ಮತ್ತು 27 ಮಂದಿ ಆಡಳಿತೆ ಮಂಡಳಿಗೆ ಆರಿಸಲ್ಪಟ್ಟರು. ಸ್ಕೂಲ್ ಕಮಿಟಿಗೆ ಶ್ರೀಗಳಾದ ಸೂಡ ಸಂಜೀವ ಶೆಟ್ಟಿ (ಚೇರ್‌ಮೆನ್), ಮುತ್ತಯ್ಯ ಕೆ. ಶೆಟ್ಟಿ (ಗೌ. ಕಾರ್ಯದರ್ಶಿ), ಸುಂದರ ಬಿ ಶೆಟ್ಟಿ (ಗೌ. ಕೋಶಾಧಿಕಾರಿ), ಮಹಾಬಲ ಎಸ್. ಶೆಟ್ಟಿ (ಗೌ. ವಾಚನಾಲಯಾಧಿಕಾರಿ) ಮತ್ತು ಇತರ ಎಂಟು ಮಂದಿ ಸದಸ್ಯರು ಆರಿಸಲ್ಪಟ್ಟರು.

ಸಂಘದ ಸ್ನೇಹಕೂಟ ಸಮಾರಂಭವು— ತಾ. 8ರಲ್ಲಿ ಜರಗಿತು. ಶ್ರೀ ಪಾಂಗಾಳ ಮಹಾಬಲ ಶೆಟ್ಟರು ಸ್ವಾಗತಭಾಷಣ ಮಾಡಿದರು. ಸಂಘಕ್ಕೆ ಹೆಚ್ಚಿಗೆ ಸಾಮಾನ್ಯ ಸದಸ್ಯರನ್ನು ಮಾಡಿಕೊಟ್ಟ ಶ್ರೀಗಳಾದ ಮೂಲ್ಕಿ ಗಂಗಯ್ಯ ಶೆಟ್ಟಿ, ಮದ್ಯ ಚಂದಯ್ಯ ಶೆಟ್ಟಿ ಮತ್ತು ತೊಡಾರು ಸೋಮಯ್ಯ ಶೆಟ್ರಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಂಗಾರದ ಪಾರಿತೋಷಗಳನ್ನು ಕೊಡಲಾಯಿತು. ಶ್ರೀ ಉಳ್ತೂರು ಎಸ್. ಮಹಾಬಲ ಶೆಟ್ಟರು ಕೊಟ್ಟ ರೂಪಾಯಿ ಐವತ್ತರ ಬಹುಮಾನವು ಎಸ್. ಸಿ. ಸಿ. ಪರೀಕ್ಷೆಯಲ್ಲಿ ಕ್ಷೇತ್ರಗಣಿತದಲ್ಲಿ ಸೇಕಡಾ 94 ಮಾರ್ಕು ಪಡೆದು ಈಗ ಕಾಲೇಜಿನಲ್ಲಿ ಕಲಿಯುತ್ತಿರುವ ಶ್ರೀಧರ ಎನ್. ಶೆಟ್ಟಿಗೆ ಕೊಡಲಾಯಿತು. ಶ್ರೀ ಮುತ್ತಯ್ಯ ಕೆ. ಶೆಟ್ಟಿ ಮತ್ತು ಪಾರ್ಟಿಯವರ ಮನರಂಜನ ಕಾರ್ಯಕ್ರಮಗಳಾದುವು.

ಆಲ್ ಇಂಡಿಯಾ ರೇಡಿಯೊ ಮುಂಬಯಿ ಕೇಂದ್ರದಿಂದ ತಾ. 26ರಲ್ಲಿ ಸಂಜೆ 'ತಾರಕಾಸುರ ವಧೆ' ಯಕ್ಷಗಾನ ಕಾರ್ಯಕ್ರಮವು ಜರಗಲಿರುವುದು.

ಅಂಬರನಾಥ— ಇಲ್ಲಿಯ ದಕ್ಷಿಣ ಕನ್ನಡಜಿಲ್ಲಾ ಸಂಘದ ಏಳನೆ ವಾರ್ಷಿಕೋತ್ಸವವು ತಾ. 14ರಲ್ಲಿ ವಿನ್ಕೊ ಸ್ಪೋರ್ಟ್ಸ್ ಕ್ಲಬ್ಬಿನಲ್ಲಿ ಶ್ರೀ ಶ್ರೀನಾಥ ರಾವ್ ನರಸಿಂಗ ರಾವ್ ಮಾಂಡ್ರೇಕರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬಯಿ ಸರಕಾರದ ಉಪಮಂತ್ರಿ ಶ್ರೀ ಕೆ. ಎನ್. ಪಾಟೀಲರು ಬಂದಿದ್ದರು. ಸಂಘದ ಅಧ್ಯಕ್ಷ ಶ್ರೀ ಟಿ ಎಲ್. ಮಿತ್ರನ್ನಾಯರು ಸ್ವಾಗತಭಾಷಣ ಮಾಡಿದರು. ಕೋಶಾಧಿಕಾರಿ ಶ್ರೀ ಎಮ್. ಎಮ್. ಶೆಟ್ಟರು ಮುಖ್ಯ ಅತಿಥಿಗಳ ಪರಿಚಯಮಾಡಿಕೊಟ್ಟರು. ಶ್ರೀ ಎಸ್. ಕೆ. ಫಳಿಮೋರ್ಕರರು ಸಂಘದ ವರದಿಯನ್ನೋದಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದ ಬಳಿಕ ಶ್ರೀ ದಾಟ ಸತ್ರ ವ್ಯಾಯಾಮ ಪ್ರದರ್ಶನವಾಯಿತು.

(೩ನೇ ಪುಟದಿಂದ

ಮಾಜಿ ಮಂತ್ರಿ ಶ್ರೀ ಗಾಡ್ಗೀಳರೂ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಜೋಶಿಯವರೂ ಮುಂಬಯಿ ನಗರವು ಮಹಾರಾಷ್ಟ್ರದಲ್ಲಿ ಸೇರುವಂತಿಲ್ಲದಿದ್ದರೆ, ರಾಜ್ಯಗಳ ಪುನಾರಚನೆಯ ವಿಧೇಯಕದ ವಿರುದ್ಧ ಮತಕೊಟ್ಟು ಪಕ್ಷದ ಶಿಸ್ತನ್ನು ಉಲ್ಲಂಘಿಸುವ ನಿರ್ಧಾರ ಮಾಡಿದ್ದಾರೆ. ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರು ಮುಂಬರುವ ಚುನಾವಣೆಗೆ ಕಾಂಗ್ರೆಸು ಹುರಿಯಾಳುಗಳನ್ನೆ ನಿಲ್ಲಿಸಲಾಗದ ಪರಿಸ್ಥಿತಿ ಬಂದೀತೆಂಬ ಭಯವನ್ನು ವ್ಯಕ್ತಪಡಿಸಿದ್ದಾರೆ. ಭಾರತ ಸರಕಾರವಿದರಿಂದ ಪ್ರಭಾವಿತವಾದೀತೆ ಎಂದೀಗ ಎಲ್ಲರ ಕುತೂಹಲ.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ನ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

98 ವರ್ಷ ಖ್ಯಾತಿ ಗಳಿಸಿದ ಪಂಡಿತ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ

ಈ ಭಸ್ಮವು ಬಹಿಷ್ಟೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಮಾಸಿಕದ ಅಕ್ರಮಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

ಮದನ ವಿಲಾಸ:— ಈ ಗುಳಿಗೆಗಳು ಉಷ್ಣ ಶಮನ ಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ನಿವಾರಿಸಿ, ಧಾತುವು ನೀರಾಗಿ ಹೋಗುವುದನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಶೋಭನ(Nuptial)ವಾಗಿ 16-18 ವರ್ಷ ಮಕ್ಕಳಿಲ್ಲದವರೂ ತಾಯ್ತಂದೆಗಳಾಗಿದ್ದಾರೆ. ಪೂರ್ಣ ವಿವರಗಳ ಕ್ಯಾಟಲಾಗಿಗೆ 2½ ಆಣೆ ಸ್ಟಾಂಪು ಕಳಿಸಿರಿ.

ತಯಾರಕರು: **ಎ. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,**

628 "ಸಂತಾನ ಸಿಂಧೂರ ಸದನ", (N. Y.)

ಸುಬ್ರಾಯನ ಕೆರೆ ಸೌತ್ ಕ್ರಾಸ್, ಮೈಸೂರು (MYSORE) S. I.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್,** ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಜನರ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಣು ಶಕ್ತಿಯ ಶಾಂತಿ ಕಾಲದ ಪ್ರಯೋಜನ

(೨ನೇ ಪುಟದಿಂದ)

ಗಳು, ಹುಡಿಗಳು ಇತ್ಯಾದಿಗಳ ಉತ್ಪಾದನೆಯಲ್ಲಿಯೂ ತುಂಬ ಕೆಲಸವನ್ನು ನಡೆಸಿದೆ. ಯುರೇನಿಯಂ, ಜಿರ್ಕೋನಿಯಂ ಇತ್ಯಾದಿಗಳ ಉಷ್ಣತಾಮಾನ ಮತ್ತು ಇತರ ಅಭ್ಯಾಸವನ್ನು ಈ ವರ್ಷ ಈ ವಿಭಾಗವು ನಡೆಸುತ್ತದೆ.

ಕಳೆದ ವರ್ಷದಲ್ಲಿ ಭೌಗೋಲಿಕ ಹಾಗು ಭೂಗರ್ಭ ಸ್ವರೂಪದ ಸಂಶೋಧನೆಗಳನ್ನು ಭಾರತದ ಬೇರೆ ಬೇರೆ ಭಾಗಗಳಲ್ಲಿ ಅಣುಶಕ್ತಿಯ ಉತ್ಪಾದನೆಗೆ ಸಂಬಂಧಿಸಿದ ದ್ರವ್ಯಗಳಿಗಾಗಿ ನಡೆಸಲಾಯಿತು. ಬಿಹಾರಿನಲ್ಲಿರುವ ಅಭ್ರಕ ಖನಿಜ ಪ್ರದೇಶದಲ್ಲಿ ಕೊಲಂಬೈಟ್, ಟಾಂಟಲೈಟ್, ಬೇರಿಲ್ ಮತ್ತು ಯುರೇನಿಯಂ ಧಾತುಗಳಿರುವ ಖನಿಜಗಳನ್ನು ನಮ್ಮ ವಿಜ್ಞಾನಿಗಳು ಕಂಡುಕೊಂಡರು. ರಾಜಸ್ಥಾನದ ಉದಯಪುರ ಪ್ರದೇಶದಲ್ಲಿ ಬೇರೆ ಎರಡು ಖನಿಜ ಕ್ಷೇತ್ರಗಳು ನೋಡಸಿಕ್ಕಿವೆ. ತಿರು-ಕೊಚ್ಚಿಯಲ್ಲಿ ಸಂಶೋಧನೆಯ ಕೆಲಸ ಮುಗಿಯುತ್ತಾ ಬಂದಿದ್ದು ಮೊನಜೈಟ್ ಮತ್ತು ಇಲ್ಮೆನೈಟ್ ಖನಿಜಗಳ ನಿಕ್ಷೇಪದ ಪ್ರಮಾಣವನ್ನು ಕೊನೆಯದಾಗಿ ನಿಶ್ಚಯಿಸಲಾಗುತ್ತದೆ. ನೆಲ್ಲೂರು ಜಿಲ್ಲೆಯಲ್ಲಿರುವ ಶಂಕರ ಅಭ್ರಕ ಗಣಿ ಪ್ರದೇಶದಲ್ಲಿ ಅಣುಶಕ್ತಿಗೆ ಸಂಬಂಧಿಸಿದ ಖನಿಜಗಳಿವೆಯೇ ಎಂದೀಗ ಪರಿಶೀಲನೆ ನಡೆದಿದೆ. ಮದ್ರಾಸಿನ ಕರಾವಳಿಯಲ್ಲಿ ಮೊನಜೈಟ್ ಖನಿಜದ ವಿಶೇಷ ನಿಕ್ಷೇಪವಿರುವುದು ಬೆಳಕಿಗೆ ಬಂದಿದೆ. ರಾಜಸ್ಥಾನದ ಅರಾವಳಿ ಬೆಟ್ಟಗಳ ಮೇಲಿಂದ ವಿಮಾನ ಮೂಲಕ ಹಾರಾಡಿ ಅಣುಶಕ್ತಿ ಸಂಪನ್ನ ಖನಿಜಗಳ ಸಂಗ್ರಹಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಲೆಹಾಕುವುದರಲ್ಲಿ ಸಹ ನಮ್ಮ ಸಂಶೋಧಕರು ಈಚೆಗೆ ನಿರತರಾದರು. ಬಿಹಾರಿನ ಸಿಂಘಭೂಮ ಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ನೆಲವನ್ನು ಕೊರೆದು ಖನಿಜಗಳನ್ನು ಪತ್ತೆಮಾಡುವ ಕೆಲಸ ಸಾಗಿದೆ. ದರೀಬ ತಾಮ್ರದ ಗಣಿಯಲ್ಲಿ ಕೆಳ ಜಾತಿಯ ಯುರೇನಿಯಂ ಧಾತು ಸಿಕ್ಕಿದೆ. ನೀಲಗಿರಿ ಬೆಟ್ಟ ಮತ್ತು ಹಿಮಾಲಯದ ತಪ್ಪಲಲ್ಲಿರುವ ಕುಲು, ಗಡ್ವಾಲ್ ಮತ್ತು ಕುಮಾವ್ ಪ್ರದೇಶದಲ್ಲಿಯೂ ಹುಡುಕಾಟ ನಡೆದಿದೆ.

"ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್" ಎಂಬ ತಿರು-ಕೊಚ್ಚಿ ಮತ್ತು ಭಾರತ ಸರಕಾರಗಳ ಸಂಯುಕ್ತ ಒಡೆತನದ ಸಂಸ್ಥೆಯು ವಿರಳ ಧಾತುಗಳ ಉತ್ಪಾದನೆಯನ್ನು ಧಾರಾಳವಾಗಿ ಮುಂದರಿಸುತ್ತಲಿದೆ. ಅಲ್ವೇಯಿಯಲ್ಲಿರುವ ಈ ಸಂಸ್ಥೆಯು ೧೯೫೨ರಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಿತು. ಅದರ ಸಾಮರ್ಥ್ಯವನ್ನೀಗ ವರ್ಷಕ್ಕೆ ೧೫೦೦ ಟನ್ ಮೊನಜೈಟ್‌ನಿಂದ ೩೦೦೦ ಟನ್ನಿಗೇರಿಸಲು ನಿರ್ಧರಿಸಲಾಗಿದೆ. ಇದರಿಂದ ಅಣುಶಕ್ತಿ ಜನಕ ಯಂತ್ರಗಳಲ್ಲಿ ಉಪಯೋಗಕ್ಕೆ ಬೇಕಾಗುವ ಎಲ್ಲ ಯುರೇನಿಯಂ ಧಾತುವನ್ನೂ ಪಡೆಯಬಹುದು. ಇದು ಮೊನಜೈಟ್‌ನಿಂದ ಟ್ರಿಸೋಡಿಯಂ ಫೋಸ್ಫೇಟನ್ನು ಸಹ ತಯಾರಿಸುತ್ತಿದೆ. ಇದರಲ್ಲಿ ಶೇಷ ಭಾಗವಾಗಿ ಉಳಿಯುವ ಥೋರಿಯಂ ಪದಾರ್ಥಗಳನ್ನು ಟ್ರಾಂಬೆಗೆ ವಿಶೇಷ ವಿಭಜನೆಗಾಗಿ ಕಳಿಸಲಾಗುತ್ತದೆ. ಟ್ರಾಂಬೆಯ ಈ ವಿಭಾಗವು ೧೯೫೫ನೇ ಆಗೋಸ್ತಿನಲ್ಲಿ ಕೆಲಸವನ್ನು ತೊಡಗಿತು. ಅಂದಿನಿಂದೀಚೆಗೆ ಥೋರಿಯಂ ನೈಟ್ರೇಟ್ ಎಂಬ ಖನಿಜದ ಪೂರೈಕೆಯನ್ನು ಸಮುಚಿತ ಪ್ರಮಾಣದಲ್ಲಿ ಮಾಡಲಿಕ್ಕಾಗಿಯೂ ಯುರೇನಿಯಂ ಉತ್ಪಾದನೆಯನ್ನು ಅವಶ್ಯಕತಾನುಸಾರ ಹೆಚ್ಚಿಸುವುದಕ್ಕಾಗಿಯೂ ಈ ವಿಭಾಗದ ಸಾಮರ್ಥ್ಯವನ್ನು ಐದು ಪಟ್ಟು ಅಧಿಕಗೊಳಿಸಲಾಗಿದೆ. ಇಲ್ಲಿ ಉತ್ಪಾದಿಸಲಾಗುವ ಥೋರಿಯಂ ಮತ್ತು ಯುರೇನಿಯಂ ಧಾತುಗಳ ಇಂಧನ ಮೌಲ್ಯವು ವರ್ಷಕ್ಕೆ ೧೦೦ ಕೋಟಿ ಟನ್ನು ಕಲ್ಲಿದ್ದಲಿನಷ್ಟಾಗುತ್ತದೆ— ಅಂದರೆ ಭಾರತದಲ್ಲಿ ಈಗ ಪ್ರತಿ ವರ್ಷ ಉತ್ಪಾದಿಸುವ ಕಲ್ಲಿದ್ದಲಿನ ಶಕ್ತಿಯ ಮೂವತ್ತು ಪಾಲು!

ಭಾರ ಜಲವು ಅಣುಶಕ್ತಿಯ ಉತ್ಪಾದನೆಯಲ್ಲಿ ಅತ್ಯಾವಶ್ಯಕವಾದ ವಸ್ತು. ಇದನ್ನೀಗ ಭಾರತದಲ್ಲಿ ತಯಾರಿಸುತ್ತಿಲ್ಲ. ಹೊರದೇಶಗಳ ಅವಲಂಬನೆಯನ್ನು ಈ ವಿಷಯದಲ್ಲಿ ತಪ್ಪಿಸದಿದ್ದರೆ ನಮ್ಮ ಕಾರ್ಯಕ್ರಮವನ್ನು ನಿರಾತಂಕವಾಗಿ ಸಾಗಿಸುವುದು ಕಷ್ಟ. ಆದುದರಿಂದ ಪಂಜಾಬಿನ ನಂಗಲಿನಲ್ಲಿ ಹೊಸತಾಗಿ ಸ್ಥಾಪಿಸಲ್ಪಡುವ ಫಲವರ್ಧಕ ಗೊಬ್ಬರಗಳ ಕಾರ್ಖಾನೆಯನ್ನು ಭಾರಜಲದ ಉತ್ಪಾದನೆಯ ನಿಕಟ ಸಂಪರ್ಕಕ್ಕೆ ತರಬೇಕೆಂದು ನಿರ್ಧರಿಸಲಾಗಿದೆ. ಸಿಂಧ್ರಿಯಲ್ಲಿ ಈಗಾಗಲೇ ನೆಲೆಗೊಂಡಿರುವ ಫಲವರ್ಧಕ ಗೊಬ್ಬರವನ್ನು ಉತ್ಪಾದಿಸುವ ಕಾರ್ಖಾನೆಗೆ ಹೊಂದಿಕೊಂಡು ಭಾರಜಲದ ಉತ್ಪಾದನೆ ಮಾಡುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತದೆ. ಅಷ್ಟಲ್ಲದೆ ಘಟ್ಸೀಲದ ತಾಮ್ರದ ಗಣಿಯಲ್ಲಿ ದಿನಕ್ಕೆ ೨೦೦ ಟನ್ನಿನಷ್ಟು ತಾಮ್ರದ ತುಣುಕನ್ನು ಯುರೇನಿಯಂ ಧಾತುವಿನ ಬಳಕೆಗೆ ಉಪಯೋಗಿಸುವ ವಿಚಾರವೂ ಇದೆ. ಇಲ್ಮೆನೈಟ್ ಮತ್ತು ರ್ಯುಟೈಲ್ ಮರಳಿನಿಂದ ಟೈಟೇನಿಯಂ ಖನಿಜವನ್ನು ತಯಾರಿಸುವ ಆಲೋಚನೆ ಸಹ ಸರಕಾರಕ್ಕಿದೆ. ಇವೆಲ್ಲ ಕಾರ್ಯಕ್ರಮಗಳ ಮೂಲಕ ಭಾರತವು ಅಣುಶಕ್ತಿಯನ್ನು ಉತ್ಪಾದಿಸಿ ಶಾಂತಿ ಕಾಲದ ಬಳಕೆಗೆ ಅದನ್ನು ಧಾರಾಳವಾಗಿ ಉಪಯೋಗಿಸುವ ನಿರ್ಧಾರವನ್ನು ಹೊಂದಿದೆ. ಇದರಿಂದ ಭಾರತದ ನಾಗರಿಕರ ಜೀವನವನ್ನು ಸುಖಮಯವಾಗಿ ಮಾಡಬಹುದೆಂದು ಸರಕಾರದ ವಿಶ್ವಾಸ.

ಬಿ. ಸಿ. ಜಿ. ದಾಕಿನ ಲಾಭ

ಬ್ರಿಟನಿನ ತಜ್ಞರ ಅಭಿಪ್ರಾಯ

ಲೋಕ ಸಭೆಯು ಈ ತಿಂಗಳ ಪ್ರಥಮ ವಾರದಲ್ಲಿ ಕೇಂದ್ರ ಆರೋಗ್ಯ ಖಾತೆಯ ಬೇಡಿಕೆಯ ಮೇಲೆ ಚರ್ಚೆಯನ್ನು ನಡೆಸಿದಾಗ ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ಪುರುಷೋತ್ತಮ ದಾಸ ಟಂಡನ್ನರೂ ಪ್ರಜಾಸಮಾಜವಾದಿ ಧುರೀಣ ಶ್ರೀ ಮುಂದಿ ವಿಷ್ಣು ಕಾಮತರೂ ಶ್ರೀ ಸಿ. ರಾಜಗೋಪಾಲಾಚಾರಿಯವರು ತೊಡಗಿದ ಬಿಸಿಜಿ ದಾಕಿನ ವಿರುದ್ಧ ಚಳವಳಿಕ್ಕೆ ಪುಷ್ಟಿಯನ್ನಿತ್ತಿದ್ದರು. ರೋಗ ಬಾರದಂತೆ ಮುಂಜಾಗರೂಕತೆಯ ಕ್ರಮಗಳನ್ನು ಕೈಗೊಳ್ಳುವುದೇ ಚಿಕಿತ್ಸೆಯ ವಿಧಾನಕ್ಕಿಂತ ಉತ್ತಮವಾದುದೆನ್ನುತ್ತಾ ಇವರು ಜನರಿಗೆ ವಾಸಿಸಲು ಶುಚಿಯಾದ ಮನೆಗಳನ್ನೂ ಉಸಿರಾಡಿಸಲು ನಿರ್ಮಲವಾದ ಗಾಳಿಯನ್ನೂ ದೊರಕಿಸಿ ಕೊಡಬೇಕೆಂದು ಒತ್ತಾಯಿಸಿದರು.

ವೈದ್ಯಕೀಯ ವಿಜ್ಞಾನವು ಬಿಸಿಜಿ ದಾಕಿನ ರೋಗ ನಿವಾರಕ ಗುಣದ ವಿಷಯದಲ್ಲಿ ಸರ್ವಾನುಮತದ ಅಭಿಪ್ರಾಯವನ್ನು ಹೊಂದಿಲ್ಲವೆನ್ನುತ್ತಾ ಬಿ ಸಿ ಜಿ ದಾಕಿನ ಆಂದೋಲನವನ್ನು "ಸಾಮೂಹಿಕ ಕೊಲೆ ಮತ್ತು ಸಾಮೂಹಿಕ ಕ್ರಿಮಿಯುದ್ಧ"ಎಂದಿವರು ಕರೆದಿದ್ದರು. ಆದರೆ ಈಗತಾನೆ ಭಾರತೀಯ ಓದುಗರ ಪಾಲಿಗೆ ಲಭ್ಯವಾಗಿರುವ ೧೯೫೬ನೇ ಫೆಬ್ರವರಿಯ ೪ನೇ ದಿನಾಂಕದ "ಬ್ರಿಟಿಷ್ ಮೆಡಿಕಲ್ ಜರ್ನಲ್" ಎಂಬ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟವಾದ ಕ್ಷಯರೋಗದ ವಿರುದ್ಧ ದಾಕಿನ ಉಪಯುಕ್ತತೆಯನ್ನು ಪ್ರಸ್ತಾಪಿಸುವ ಪ್ರಥಮ ವರದಿಯು ಮಕ್ಕಳಿಗೆ ಅವರ ೧೫ನೇ ವರ್ಷಪ್ರಾಯದ ಸುಮಾರಿಗೆ ಕ್ಷಯರೋಗದ ವಿರುದ್ಧ ದಾಕು ಹಾಕಿಸಿದರೆ, ಪ್ರಾಯ ಪ್ರಬುದ್ಧಾವಸ್ಥೆಯಲ್ಲಿ ಆ ರೋಗದ ಪೀಡೆಗೊಳಗಾಗುವ ಸಂಭವ ವಿರಳವಾಗುವುದೆಂದು ಹೇಳುತ್ತದೆ.

ಬ್ರಿಟನಿನ ವೈದ್ಯಕೀಯ ಸಂಶೋಧನಾ ಮಂಡಳದವರು ೧೯೫೦ನೇ ವರ್ಷದಿಂದ ಈ ಬಗ್ಗೆ ಮಾಹಿತಿಗಳನ್ನು ಕಲೆ ಹಾಕ ತೊಡಗಿದರು. ಆಧುನಿಕ ಚಿಕಿತ್ಸಾ ಕ್ರಮದ ಫಲಿತಾಂಶವಾಗಿ ಕ್ಷಯರೋಗದಿಂದ ಸಾಯುವವರ ಸಂಖ್ಯೆಯು ಕಡಿಮೆಯಾಗುತ್ತಿದ್ದರೂ ಸಹ ಪ್ರತಿ ವರ್ಷ ಈ ರೋಗಕ್ಕೆ ಬಲಿಯಾಗುತ್ತಿದ್ದ ಜನರ ಸಂಖ್ಯೆ ಭಯಾವಹ ಪ್ರಮಾಣದಲ್ಲಿದ್ದಿತು. ಆದುದರಿಂದ ಬ್ರಿಟನಿನಲ್ಲಿ ದಾಕುಗಳು ಕ್ಷಯರೋಗದ ಪ್ರತಿಬಂಧದಲ್ಲಿ ವಹಿಸುವ ಪಾತ್ರವನ್ನು ವೈಜ್ಞಾನಿಕ ಮಟ್ಟದಲ್ಲಿ ಕಂಡುಹಿಡಿಯುವ ಕಾರ್ಯವನ್ನು ಪ್ರಾರಂಭಿಸಬೇಕೆಂದು ನಿರ್ಧಾರಮಾಡಲಾಯಿತು. ಈ ಉದ್ದೇಶಕ್ಕಾಗಿ ಫ್ರಾನ್ಸಿನಲ್ಲಿ ಸಂಶೋಧನೆಗೊಂಡ "ಬಿ ಸಿ ಜಿ" ಮತ್ತು ಬ್ರಿಟನಿನಲ್ಲಿ ಅಭಿವೃದ್ಧಿಗೊಂಡ "ವೋಲ್ ಬೆಸಿಲಸ್" ಎಂಬೆರಡು ದಾಕಿನ ಕ್ರಮಗಳನ್ನು ಪರಿಶೀಲಿಸಲಾಯಿತು.

ಮೂರು ವಿಶೇಷ ವೈದ್ಯಕೀಯ ತಂಡಗಳು ಕ್ಷ-ಕಿರಣದ ಉಪಕರಣಗಳನ್ನೊಳಗೊಂಡು ಲಂಡನ್, ಮೆಂಚೆಸ್ಟರ್ ಮತ್ತು ಬರ್ಮಿಂಗ್ಹ್ಯಾಮ್ ಎಂಬ ತೀವ್ರ ಜನಸಾಂದ್ರತೆಯುಳ್ಳ ಔದ್ಯಮಿಕ ನಗರಗಳಹಾಗೂ ಅವುಗಳಿಗೆಹತ್ತಿರದಶಾಲೆಗಳಸಂದರ್ಶನಗೈದವು ಸ್ವೇಚ್ಛೆಯಿಂದ ಸಂಶೋಧನೆಗೆ ಗುರಿಯಾಗಲು ಮುಂಬಂದ ೧೪ರಿಂದ ೧೫ ೧/೨ ವರ್ಷಪ್ರಾಯದ ಶಾಲಾ ಮಕ್ಕಳ ಎದೆಯ ಕ್ಷ-ಕಿರಣ ಪರೀಕ್ಷೆಯನ್ನೂ "ಟ್ಯುಬೆರ್‌ಕ್ಯುಲಿನ್ ಸ್ಕಿನ್ ಟೆಸ್ಟ್" ಎಂದು ಹೆಸರಾದ ಕ್ಷಯರೋಗ ನಿರೋಧ ಶಕ್ತಿಯು ಇದೆಯೋ ಇಲ್ಲವೇ ಎಂದು ಕಂಡುಹಿಡಿಯುವ ಪೂರ್ವ ಭಾವಿ ಪರೀಕ್ಷೆಯನ್ನೂ ನಡೆಸಲಾಯಿತು; ಮತ್ತು ಯೋಗ್ಯ ಮಕ್ಕಳಿಗೆ "ಬಿ ಸಿ ಜಿ" ಅಥವಾ "ವೋಲ್ ಬೆಸಿಲಸ್" ದಾಕನ್ನು ಚುಚ್ಚಲಾಯಿತು.

ಕ್ಷಯ ರೋಗಕ್ಕೆ ಬಲಿಬಿದ್ದವರನ್ನೂ ಕ್ಷಯರೋಗಿಗಳ ಸಂಪರ್ಕವನ್ನೂ ಇತ್ತೀಚೆಗೆ ಪಡೆದವರನ್ನೂ ಈ ಪ್ರಯೋಗದಿಂದ ಹೊರಗಿರಿಸಲಾಯಿತು. ೧೯೫೦ರಲ್ಲಿ ಪ್ರಾರಂಭವಾದ ಈ ಕೆಲಸವು ೧೯೫೨ನೇ ವರ್ಷಾಂತ್ಯದ ವರೆಗೆ ಮುಂಬರಿದು ಸುಮಾರು ೫೬,೦೦೦ ಶಾಲಾ ಮಕ್ಕಳ ಪರೀಕ್ಷೆ ನಡೆಯಿತು. ಕ್ಷಯರೋಗ ನಿರೋಧಕ ಶಕ್ತಿ ಇಲ್ಲದ ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಯಿತು. —(೧) ಯಾವುದೇ ದಾಕು ಚುಚ್ಚಲ್ಪಡದ ಮಕ್ಕಳು; (೨) "ಬಿಸಿಜಿ" ದಾಕು ಚುಚ್ಚಲಾದ ಮಕ್ಕಳು ಮತ್ತು (೩) "ವೋಲ್ ಬೆಸಿಲಸ್" ದಾಕು ಚುಚ್ಚಲ್ಪಟ್ಟ ಮಕ್ಕಳು. ಇವರೆಲ್ಲರನ್ನೂ ನಿಯತ ಕ್ರಮದಂತೆ ಕ್ಷ-ಕಿರಣ ಪರೀಕ್ಷೆಗಳಿಗೂ ಟಪ್ಪಾಲು ಮೂಲಕ ಯೋಗ ಕ್ಷೇಮ ವಿಚಾರಿಸಿ ತಿಳಿದುಕೊಳ್ಳುವ ಪರಿಸ್ಥಿತಿಗೂ ಆರೋಗ್ಯಸಂದರ್ಶಕರನ್ನು ಮನೆಗೆ ಕಳಿಸಿ ಅವರಿಂದ ಮಾಹಿತಿ ಸಂಗ್ರಹಿಸುವ ವಿಧಾನಕ್ಕೂ ಸ್ವತಃ ವೈದ್ಯಕೀಯ ಗುಂಪುಗಳ ಸಂದರ್ಶನಕ್ಕೂ ಗುರಿಪಡಿಸಿ ಕ್ಷಯರೋಗದ ಬೆಳವಣಿಗೆಗೆ ಸಂಬಂಧಿಸಿದ ಸಕಲ ವಾರ್ತೆಗಳನ್ನೂ ಮಾಹಿತಿಯನ್ನೂ ಸಂಗ್ರಹಿಸುವ ಎಚ್ಚರಿಕೆಯನ್ನು ವಹಿಸಲಾಯಿತು.

ಕಳೆದ ಜೂನಿನ ಹೊತ್ತಿಗೆ ಈ ಪ್ರಯೋಗಕ್ಕೆ ಮುಂಬಂದ ಮಕ್ಕಳಲ್ಲಿ ಹಲವು ಮಂದಿ ಸುಮಾರು ನಾಲ್ಕು ವರ್ಷಗಳ ನಿರೀಕ್ಷಣಾವಧಿಗೆ ಗುರಿಯಾಗಿದ್ದರು; ಎರಡೂವರೆವರ್ಷಕ್ಕಿಂತ ಕಡಿಮೆ ಅವಧಿಯ ವಿಚಾರಣೆಗೆ ಗುರಿಪಡದವರು ಯಾರೂ ಇರಲಿಲ್ಲ. ಇಷ್ಟು ದೀರ್ಘಕಾಲದ ಸಮೀಕ್ಷೆಯ ಬಳಿಕ ಈ ಕೆಳಗಿನಂತೆ ಫಲಿತಾಂಶವನ್ನು ನಿರ್ಣಯಿಸಲಾಯಿತು— (೧) ದಾಕನ್ನು ಚುಚ್ಚದ ಮಕ್ಕಳಲ್ಲಿ ಒಂದು ಲಕ್ಷಕ್ಕೆ ೧೯೪ರಂತೆ ಮರಣ ಘಟಿಸುತ್ತದೆ. "ವೋಲ್ ಬೆಸಿಲಸ್" ದಾಕು ಚುಚ್ಚಿದ ಮಕ್ಕಳ ಸಂಗತಿಯಲ್ಲಿ ಪ್ರತಿಯೊಂದು ಲಕ್ಷಕ್ಕೆ ೪೪ರಂತೆ ಮರಣ ಸಂಭವಿಸುತ್ತದೆ. "ಬಿಸಿಜಿ" ದಾಕು ಚುಚ್ಚಿದ ಮಕ್ಕಳಲ್ಲಿ ಮರಣ ಸಂಖ್ಯೆ ಪ್ರತಿಲಕ್ಷಕ್ಕೆ ೩೭ ಮಾತ್ರ ಆಗುತ್ತಿದೆ. ಇದರಿಂದ ಬಿಸಿಜಿ ದಾಕು ಸಣ್ಣ ಮಕ್ಕಳಿಗೆ ಅಲ್ಪಾವಧಿಯ ಮಟ್ಟಿಗಾದರೂ ಕ್ಷಯರೋಗದ ವಿರುದ್ಧ ರಕ್ಷಣೆ ಕೊಡುವುದರಲ್ಲಿ ಅತ್ಯುಪಯುಕ್ತವೆಂದು ಸಿದ್ಧವಾಯಿತು.

ಬಿಸಿಜಿ ದಾಕನ್ನು ಚುಚ್ಚಿದ ಬಳಿಕ ಮಕ್ಕಳಿಗೆ ಉಂಟಾದ ತೊಂದರೆ ಏನೇನೂ ಮಹತ್ವದ್ದಾಗಿರಲಿಲ್ಲ; ದಾಕಿನ ಗಾಯ ಮಾಜುವುದಕ್ಕೆ ಸ್ವಲ್ಪ ತಡವಾದ ಮತ್ತು ಗ್ರಂಥಿಗಳು ತುಸು ಊದಿಕೊಂಡ ಕೆಲವೇ ನಿದರ್ಶನಗಳಿಗಷ್ಟೇ ಮಿತವಾಗಿದ್ದಿತು. ಈ ವರದಿಯ ಕುರಿತು ಸಂಪಾದಕೀಯವನ್ನು ಬರೆಯುತ್ತಾ ಬ್ರಿಟನಿನ ಆ ಪತ್ರಿಕೆಯು ಹೀಗೆಂದಿದೆ— "ಔದ್ಯಮೀಕೃತ ದೇಶದಲ್ಲಿ ಬೆಳೆದ ಮಕ್ಕಳಿಗೆ ಬಿಸಿಜಿ ದಾಕಿನಿಂದಾಗುವ ಲಾಭವನ್ನು ಈ ಸಂಶೋಧನೆಯು ಸಂಶಯಾತೀತವಾಗಿ ಸಿದ್ಧಪಡಿಸುತ್ತದೆ. ದಾಕಿಗೆ ಒಳಪಡಿಸಿದ ಹಾಗು ದಾಕಿಗೆ ಹೊರತಾದ ಮಕ್ಕಳಲ್ಲಿ ಕ್ಷಯರೋಗಕ್ಕೆ ಬಲಿಯಾದವರ ನಡುವಣ ಅಂತರವು ಎಷ್ಟು ವಿಶೇಷವಾಗಿದೆಯೆಂದರೆ ಬ್ರಿಟನಿನಲ್ಲಿ ಬಿಸಿಜಿ ದಾಕನ್ನು ನಿತ್ಯಕ್ರಮವಾಗಿ ಚುಚ್ಚುವ ಪದ್ಧತಿಯನ್ನು ಇನ್ನೂ ಜಾರಿ ಮಾಡಿಸುವ ವಿಳಂಬವು ಅಸಮರ್ಥನೀಯವೆಂದು ಬಿಸಿಜಿಭಕ್ತರು ಹೇಳಬಹುದು"

ದಾಕಿನಿಂದ ದೊರಕಲಾದ ರಕ್ಷಣೆಯು ನಿಜ ಅವಧಿ ಎಷ್ಟು ಮತ್ತು ದಾಕನ್ನು ಚುಚ್ಚಿದ ಮೊದಲ ಕೆಲವು ವರ್ಷಗಳಲ್ಲಿ ಕ್ಷಯರೋಗದಿಂದ ರಕ್ಷಿಸಲ್ಪಟ್ಟ ಜನರು ತಮ್ಮ ಜೀವಮಾನದ ಕೊನೆಯ ಅವಧಿಯಲ್ಲಿ ಸಹ ರಕ್ಷಿತರಾಗಿರುತ್ತಾರೋ ಏನೆಂಬುದನ್ನು ಕಂಡು ಹಿಡಿಯಲು ಸಂಶೋಧನೆಯನ್ನು ಮುಂದರಿಸಲಾಗುವುದೆಂದೂ ಪತ್ರಿಕೆಯಿಂದ ತಿಳಿದು ಬರುತ್ತದೆ.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖಗೊರೆಯುವವು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0.

ಮಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ಗೀತೆಯ ಕೈಗನ್ನಡಿ

0-12-0

ನವಯುಗ ಪ್ರೆಸ್, ಉಡುಪಿ.

ಆಂಗ್ಲ ರಾಣಿಯ ಹುಟ್ಟುಹಬ್ಬ

ಬ್ರಿಟನಿನ (ಹಾಗು ಆಂಗ್ಲ ಸಾಮ್ರಾಜ್ಯದ) ರಾಣಿಯಾದ ಎರಡನೇ ಎಲಿಜಬೆಥರ ೩೦ನೇ ಹುಟ್ಟು ಹಬ್ಬವನ್ನು ಮೊನ್ನೆ ೨೧ನೇ ದಿನಾಂಕ ಸಂಭ್ರಮದಿಂದ ಆಚರಿಸಲಾಯಿತು. ರಾಣಿಯ ಈ ಉತ್ಸವ ಕಾಲವು ಇಂಗ್ಲೆಂಡಿನ ಜನರ ಮಟ್ಟಿಗೆ ರಕ್ತದ ಪ್ರಭೃತಿಗಳನ್ನು ಆತ್ಮೀಯತೆಯಿಂದ ಸ್ವಾಗತಿಸುವ ಸಂಭ್ರಮದೊಡನೆ ಸೇರಿ ಹೋಯಿತೆನ್ನಬಹುದು. ಜೊತೆಗೆ ಸಿಂಹಳದಲ್ಲಿ ಈಚೆಗೆ ನಡೆದ ಚುನಾವಣೆ ಮತ್ತು ಹೊಸತಾಗಿ ಅಧಿಕಾರಕ್ಕೆ ಬಂದ ಭಂಡಾರ ನಾಯಕೆ ಸರಕಾರದಘೋಷಣೆಯಿಂದಾಗಿ ಆಂಗ್ಲ ಸಾಮ್ರಾಜ್ಯದ ವಿಸ್ತಾರ ಇನ್ನಷ್ಟು ಕುಗ್ಗುವ ಲಕ್ಷಣ ತೋರಿಕೊಂಡ ಸಂದಿಗ್ಧ ಸಮಯವೂ ಆಯಿತು. ಕಾರಣ ಸುಖ, ದುಃಖಗಳನ್ನು ಸಮನ್ವಯ ದೃಷ್ಟಿಯಿಂದ ಪ್ರತಿಯೊಬ್ಬ ವ್ಯಕ್ತಿಯೂ ನೋಡ ಬೇಕೆಂಬುದೇ ರಾಣಿಗೆ ಆಕೆಯ ಈ ಸಲದ ಜನ್ಮದಿನೋತ್ಸವದ ಸಂದೇಶ ಎಂದು ಭಾವಿಸಿದರೆ ತಪ್ಪಾಗದು.

(೧ನೇ ಪುಟದಿಂದ)

ವಿದೇಶಗಳಲ್ಲಿಯೂ-ಸ್ವದೇಶದಲ್ಲಿ ಸಹ ಮಳೆಗಾಲದಂಥ ದುರ್ದಿನಗಳಲ್ಲಿಯೂ—ಹೆಚ್ಚಿನ ಬೆಲೆಯು ಬಗಬಹುದೆಂಬ ಆಶೆಬುರುಕತನದಂತೆ, ಆಹಾರ ವಸ್ತುಗಳ ಉತ್ಪಾದನೆಯು ಈ ಸಲ ಬಹಳ ಕಡಿಮೆ ಮಟ್ಟಕ್ಕೆ ಇಳಿದಿದೆ ಎಂಬ ತಪ್ಪು ತಿಳಿವಳಿಕೆಯೂ ವ್ಯಾಪಾರಿಗಳನ್ನು ತಮ್ಮ ಕೈಚಳಕ ತೋರಿಸುವಂತೆ ಪ್ರೇರೇಪಿಸಿರಬಹುದು. ದಕ್ಷಿಣ ಭಾರತದಲ್ಲಿ ಬಿರು ಗಾಳಿಯ ಹಾವಳಿ, ಉತ್ತರ ಭಾರತದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯ ಕ್ಷೋಭೆಗಳಿಂದಾಗಿ ಆಹಾರ ವಸ್ತುಗಳ ಉತ್ಪಾದನೆಯು ತೀರ ತಗ್ಗಿಕೊಂಡಿರಬೇಕೆಂಬ ಭಾವನೆಯು ಕೆಲವು ವರ್ಗಗಳಲ್ಲಿ ಬಲಿತಿಂಬೇಕು.

ಆದುದರಿಂದ ದೇಶದ ಒಟ್ಟು ಉತ್ಪಾದನೆಯು ಈ ನೈಸರ್ಗಿಕ ಪ್ರಕೋಪಗಳ ದುಷ್ಪರಿಣಾಮಗಳನ್ನು ಇದಿರಿಸಿಯೂ ಹೆಚ್ಚಿಕೊಂಡಿದೆ ಎಂಬ ಬಗ್ಗೆ ಖಚಿತವಾದ ಮಾಹಿತಿಯನ್ನು ಪ್ರಚುರ ಪಡಿಸುವುದು ಸಹ ಮಾನಸಿಕ ಸಮಾಧಾನದ ದೃಷ್ಟಿಯಿಂದ ಅವಶ್ಯಕವಾದ ವಿಷಯ. ಏನೇ ಆಗಲಿ, ಮುಖ್ಯಾಹಾರವಾದ ಅಕ್ಕಿಯ ಬೆಲೆಯು ನಮ್ಮಲ್ಲಿ ಮುಡಿಗೆ ೧೪ ರೂಪಾಯಿಯ ಮಟ್ಟಕ್ಕಾದರೂ ಇಳಿಯದಿರಬಾರದು.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಜೀವಸಂಬೋಧನಂ—

ಸಂಪಾದಕರು: ಎಚ್. ಶೇಷ ಅಯ್ಯಂಗಾರ್. ಪ್ರಕಾಶಕರು: ಸರಕಾರದ ಪುರಾತನ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಬೆಲೆ: ರೂ. ೫—೧೨—೦

ಮೋಕ್ಷಾರ್ಥಿಯಾದ ಜೀವನು ಕರ್ಮ ನಿರ್ಮೂಲನದ ಮಾರ್ಗಾನುಸರಣೆಮಾಡಿ ಅಭೀಷ್ಟ ಸಿದ್ಧಿಯನ್ನು ಹೊಂದುವ ವಿಧಾನವನ್ನು ಹನ್ನೆರಡು ಅನುಪ್ರೇಕ್ಷೆಗಳ ಮುಖಾಂತರ ಚಂಪೂ ಕಾವ್ಯ ಶೈಲಿಯಲ್ಲಿ ನಿರೂಪಿಸಿರುವ ಈ ಗ್ರಂಥವನ್ನು ಬರೆದಿರುವಾತನ ಹೆಸರು ಬಂಧುವರ್ಮ. ಈತನ ಕಾಲವು ಇಂದಿಗೆ ಎಂಟ್ನೂರು ವರ್ಷಗಳಷ್ಟು ಹಿಂದೆ ಇರಬಹುದೆಂದು ಅಂದಾಜು. ತನ್ನೀಕಾವ್ಯದ ಮೂಲಕ ಆತನು ಜೈನ ಧರ್ಮೀಯರಿಗೆ ಜೀವನವನ್ನು ಸಾರ್ಥಕಗೊಳಿಸುವ ಬಗೆಯನ್ನು ಮುಂದಿಟ್ಟು ಪಡಿಸಿರುವುದರಿಂದ ಆ ಮತದವರಿಗಿದು ಪೂಜ್ಯಗ್ರಂಥ. ತನ್ನ ಬೋಧನೆಯನ್ನು ಆತನು ಕತೆಗಳ ಸಹಾಯದಿಂದ ಕುತೂಹಲಜನಕವಾಗಿ ಮಾಡಿದ್ದಾನೆ; ಸುಲಭ ಶೈಲಿಯನ್ನು ಪ್ರಯೋಗಿಸುವ ಮೂಲಕ ವಿಷಯ ಪ್ರೌಢಿಮೆಯ ಎತ್ತರ ಗ್ರಹಣಕ್ಕೆ ತಡೆಯಾಗದಂತೆ ನೋಡಿದ್ದಾನೆ. ರೂಢಿಯ ನಾಣ್ಣುಡಿಗಳನ್ನೂ ಅನೇಕ ಹೊಸಶಬ್ದ ಪ್ರಯೋಗಗಳನ್ನೂ ಸುಲಲಿತಾಲಂಕಾರಗಳನ್ನೂ ಬಳಸಿಕೊಂಡು ಈತನು ಕಾವ್ಯ ರಚಿಸಿರುವುದರಿಂದ ಪಾಮರರಂತೆ ಪಂಡಿತರೂ ತಲೆ ತೂಗುವಂತಾಗಿದೆ. ಇಲ್ಲಿ ಪ್ರಸ್ತಾಪಿಸಿರುವ ವಿಷಯಗಳು ಜೈನ ಮತದವರನ್ನು ಮುಖ್ಯವಾಗಿ ಉದ್ದೇಶಿಸಿದ್ದರೂ ಸಹ ಸರ್ವಧರ್ಮೀಯರು ಅವನ್ನು ಮನಗಂಡು ಜೀವನವನ್ನು ಪಾವನಗೊಳಿಸಬಹುದು: ಜೀವನಾನಂದದ ಮೂಲಭೂತ ತತ್ತ್ವಗಳೇ ಇಲ್ಲಿ ಪ್ರತಿಪಾದ್ಯವಾಗಿವೆ ಎಂಬುದಿವರ ಕಾರಣ. ಆದುದರಿಂದ ಜಾತಿಮತ ಭೇದವಿಲ್ಲದೆ ಎಲ್ಲ ಲೌಕಿಕರೂ ಈ ಗ್ರಂಥ ಪಠಣಗೈಯ್ಯಬಹುದು. ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯುಳ್ಳವರಂತೂ ಇದನ್ನು ಪ್ರಮಾಣಗ್ರಂಥವಾಗಿ ಭಾವಿಸಬಹುದು; ಏಕೆಂದರೆ ಇಲ್ಲಿ ಹಳಗನ್ನಡದ ಹಲವು ವಿಶಿಷ್ಟ ಪ್ರಯೋಗಗಳನ್ನು ಕಾಣುತ್ತೇವೆ. ಈಗಾಗಲೇ ಆಗಿಹೋಗಿರುವ ಕೆಲವು ಪ್ರಸಿದ್ಧ ಲಾಕ್ಷಣಿಕರು ಪಂಪ, ರನ್ನರಷ್ಟೆ ಗೌರವದಿಂದ ಬಂಧುವರ್ಮನನ್ನು ಕಾಣುತ್ತಿದ್ದರೆಂಬುದಕ್ಕೆ ಆತನ ಈ ಕಾವ್ಯದಿಂದ ಪದ್ಯಗಳನ್ನೂ ಪ್ರಯೋಗಗಳನ್ನೂ ನಿದರ್ಶನಾರ್ಥವಾಗಿ ಎತ್ತಿಕೊಟ್ಟಿರುವುದೇ ಸಾಕ್ಷಿ. ಶ್ರೇಷ್ಠವಾದೀ ಕಾವ್ಯದ ಪ್ರಸ್ತುತ (ಮುದ್ರಿತ) ಪ್ರತಿಯನ್ನು ಸಂಪಾದಕರು ನಮ್ಮ ಜಿಲ್ಲೆಯ ಮೂಡಬಿದರೆಯಲ್ಲಿರುವ ಪ್ರತಿಯೊಂದನ್ನು ಸೇರಿಸಿ ಒಟ್ಟು ಎಂಟು ಮಾತೃಕೆಗಳ ಸಹಾಯದಿಂದ ಸಿದ್ಧಪಡಿಸಿದ್ದಾರೆ. ಅವರು ಪ್ರತಿಪುಟದಲ್ಲೂ ಕೊಟ್ಟಿರುವ ವಿಸ್ತಾರವಾದ ಟಿಪ್ಪಣಿಯನ್ನು ಕಂಡರೆ ಸಾಕು, ಎಷ್ಟು ಶ್ರಮವಹಿಸಿ, ಆಸಕ್ತಿ ವಹಿಸಿ ಈ ಕೆಲಸವನ್ನು ನೆರವೇರಿಸಿರುವರೆಂದು ವೇದ್ಯವಾಗುತ್ತದೆ. ಪುಸ್ತಕದ ಕುರಿತು ವಿಶೇಷ ಪ್ರಕಾಶವನ್ನು ಚೆಲ್ಲುವ ಮುನ್ನುಡಿ, ಕಠಿಣ ಶಬ್ದಾರ್ಥಗಳಿಗೂ ಗಾದೆ ಮಾತುಗಳಿಗೂ ಮತ್ತಿತರ ಉಪಯುಕ್ತ ವಿಷಯಗಳಿಗೂ ಸಂಬಂಧಿಸಿಕೊಟ್ಟಿರುವ ಪರಿಶಿಷ್ಟಗಳಿಂದ ಕೂಡಿದ ಈ ಗ್ರಂಥದ ಉಪಯುಕ್ತತೆಯನ್ನು ಎಷ್ಟು ಬಣ್ಣಿಸಿದರೂ ಸಾಲದು. ನಾವು ಸರಕಾರದ ಮತ್ತು ಸಂಪಾದಕರ ಪ್ರಯತ್ನಕ್ಕೆ ಶ್ಲಾಘನೆ ಸಲ್ಲಿಸುತ್ತಿದ್ದಂತೆಯೇ ಪಂಡಿತ ವರ್ಗದ ಗಮನವು ಈ ಗ್ರಂಥರತ್ನದ ಕಡೆಗೆ ವಿಶೇಷವಾಗಿ ಹರಿಯಲೆಂದೂ ಕೋರುತ್ತೇವೆ.

ವಾಣಿಜ್ಯ ಶಾಸ್ತ್ರ ಪರಿಚಯ—

ಬರೆದವರು: ವಿ. ಡಿ. ಕುಲಕರ್ಣಿ. ಪ್ರಕಾಶಕರು: ಶೈಲಜಾ ಪಬ್ಲಿಕೇಷನ್ಸ್, ೧೩೫, ಸಾಯನ ಮುಂಬಯಿ ೨೨ ಬೆಲೆ: ರೂ. ೨-೦-೦

ಕನ್ನಡದಲ್ಲಿ ಆಧುನಿಕ ವಿಜ್ಞಾನ, ವಾಣಿಜ್ಯ ಮತ್ತಿತರ ಶಾಸ್ತ್ರಗಳ ಕುರಿತು ಬರೆಯಲಾದ

(೪ನೇ ಕಲಂ ನೋಡಿರಿ)

“ಅಮೇರಿಕದ ಮಹಿಳೆ”

ಭಾರತೀಯ ಮಹಿಳೆಯರಲ್ಲಿ ಅನೇಕರು ಈಗ ಅಮೇರಿಕದಲ್ಲಿ ನೆಲಸಿದ್ದಾರೆ; ಮತ್ತು ತಮ್ಮದೇ ಆದೊಂದು ಸಂಘವನ್ನು “ಚೇತನ” ಎಂಬ ಹೆಸರಿನಿಂದ ರೂಪಿಸಿ ಕೊಂಡಿದ್ದಾರೆ. ಅಮೇರಿಕದಲ್ಲಿರುವ ಭಾರತದ ರಾಯಭಾರಿಯ ಪತ್ನಿ ಶ್ರೀಮತಿ ಸೌದಾಮಿನಿ ಮೆಹತಾರವರು ಇದರ ಪ್ರವರ್ತಕರು. ಚೇತನವು ಅಮೇರಿಕದಲ್ಲಿ ಭಾರತೀಯ ಮಹಿಳೆಯರ ಚಟುವಟಿಕೆಗಳ ಕೇಂದ್ರ ಸ್ಥಾನವಾಗಿ ಪರಿಣಮಿಸಿದೆ. ಇದರ ಅಧ್ಯಕ್ಷೆಯಾದ ಶ್ರೀಮತಿ ಮೆಹತರು ಮಹಿಳೆಯರ ಸಿನೇಮಾಲಯಗಳಲ್ಲಿ, ಇಗರ್ಜಿಗಳ ಸಭೆಗಳಲ್ಲಿ, ಶಾಲೆ ಮತ್ತು ಕಾಲೇಜುಗಳಲ್ಲಿ ಆಧುನಿಕ ಭಾರತದ ಮತ್ತು ಭಾರತೀಯ ಮಹಿಳೆಯರ ಸುಂದರ ಪರಿಚಯವನ್ನು ಮಾಡಿಕೊಡುವ ಭಾಷಣಗಳಿಂದ ಸೌಹಾರ್ದ ಭಾವನೆಯನ್ನು ಪೋಷಿಸುತ್ತಿದ್ದಾರೆ ಹಾಗೆಯೇ ಭಾರತೀಯರಿಗೆ ಅಮೇರಿಕದ ಪರಿಚಯ ಅಧಿಕವಾಗುವಂತೆ ಸಹ ಸಹಕಾರ ಸಲ್ಲಿಸುತ್ತಿದ್ದಾರೆ. ಅಮೇರಿಕದ ಮಹಿಳೆಯರ ಕೌಟುಂಬಿಕ ಜೀವನದ ಕುರಿತು ಅವರು ಆಕಾಶವಾಣಿ ಭಾಷಣವನ್ನು ಭಾರತೀಯ ಶ್ರೋತೃಗಳಿಗಾಗಿ ಮೊನ್ನೆ ದಿನಾಂಕ ೨೧ರಂದು ಮಾಡಿದಾಗ ತೆಗೆದ ಚಿತ್ರ.

ರಕ್ಷಣಾ ಸಚಿವರ—ಆಶ್ವಾಸನ

ಅಮೇರಿಕವು ಪಾಕಿಸ್ತಾನಕ್ಕೆ ಕೊಡುತ್ತಿರುವ ಸೈನಿಕ ಸಹಾಯವು ಭಾರತದ ಪಂಚವಾರ್ಷಿಕ ಯೋಜನೆಯ ಪುನರ್ವಿಮರ್ಶೆಯ ಅಗತ್ಯವನ್ನು ಇಷ್ಟರ ವರೆಗೆ ತಂದಿಲ್ಲವೆಂದು ಕೇಂದ್ರದ ರಕ್ಷಣಾ ಖಾತೆಯ ಉಪಸಚಿವರಾದ ಸರ್ದಾರ ಸುರ್ಜಿತ ಸಿಂಘ ಮಜೀಥಿಯರು ಮೊನ್ನೆ ೨೧ನೇ ದಿನಾಂಕ ಲೋಕ ಸಭೆಯ ಮುಂದೆ ಪ್ರಶ್ನೋತ್ತರ ವೇಳೆಯಲ್ಲಿ ತಿಳಿಸಿದರು. ರಕ್ಷಣಾ ಖಾತೆಗೆ ವಿಶೇಷ ಹಣವೇನಾದರೂ ಅಗತ್ಯ ಬಿದ್ದರೆ ಅದನ್ನು ಕೇಳಲು ತಾವು ಹಿಂದೆ ಮುಂದೆ ನೋಡ ವುದಿಲ್ಲವೆಂದು ಅವರು ಈ ಸಂದರ್ಭದಲ್ಲಿ ಸಾರಿದರು. ಪಾಕಿಸ್ತಾನಕ್ಕೆ ಸಹಾಯವು ಅಮೇರಿಕದಿಂದ ಬರುತ್ತಿರುವ ಕಾರಣ ಭಾರತ ಸರಕಾರವು ಆಧುನಿಕ ಶಸ್ತ್ರೋಪಕರಣಗಳ ತಯಾರಿಕೆಯ ಸಂಬಂಧದಲ್ಲಿ ರಷ್ಯದಿಂದ ತಾಂತ್ರಿಕ ಸಹಾಯವನ್ನು ಪಡೆಯುವುದೇ ಎಂಬ ಪ್ರಶ್ನೆಗೆ “ಸದ್ಯಕ್ಕೆ ಆ ಪ್ರಶ್ನೆ ಏಳುವುದಿಲ್ಲ—ಏಕೆಂದರೆ ನಾವು ನಮ್ಮ ತಾಂತ್ರಿಕ ಜ್ಞಾನವನ್ನು ಸಾಧ್ಯವಿದ್ದೆಲ್ಲ ರೀತಿಯಿಂದ ಹೆಚ್ಚಿಸಿಕೊಳ್ಳುತ್ತಿದ್ದೇವೆ. ತಾಂತ್ರಿಕ ಕ್ಷೇತ್ರದ ಅಭಿವೃದ್ಧಿಯು ಔದ್ಯಮಿಕರಂಗದ ಅಭಿವೃದ್ಧಿಯೊಡನೆ ಕೂಡಿಕೊಂಡೇ ಹೋಗುತ್ತದೆ” ಎಂದು ಉತ್ತರಿಸಿದರು.

(೩ನೇ ಕಲಂನಿಂದ)

ಗ್ರಂಥಗಳು ಬಹಳ ವಿರಳ. ಆದರೆ ಈಚೆಗೆ ದೇಶಭಾಷೆಗಳಲ್ಲಿ ಶಿಕ್ಷಣವನ್ನು ಕೊಡುವ ಪದ್ಧತಿಗೆ ಹೆಚ್ಚಿನ ಪ್ರೋತ್ಸಾಹ ಸಿಗಹತ್ತಿರುವುದರಿಂದ ಇಂಗ್ಲಿಷಿನಲ್ಲಿರುವ ಈಸಾಹಿತ್ಯದ ಪರಿಚಯಹಾಗು ಆ ಭಾಷೆಯಲ್ಲಿ ಪಾಠ ಹೇಳಿ ಅನುಭವವಿರುವ ಕನ್ನಡಿಗರು ಒಬ್ಬೊಬ್ಬರೇ ಕನ್ನಡ ಸಾಹಿತ್ಯ ಸರಸ್ವತಿಯ ಭಂಡಾರದಲ್ಲಿದ್ದ ಕೊರತೆಯನ್ನು ನೀಗಿಸಲು ಮುಂಬರುತ್ತಿದ್ದಾರೆ; ಇದು ಸ್ತುತ್ಯ ಉಪಕ್ರಮ. ಶ್ರೀ ಕುಲಕರ್ಣಿಯವರು ಪೋದ್ದಾರ ಕಾಮರ್ಸ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಗಳಿಸಿದ ಅನುಭವವನ್ನೂ [illegible] ಹಾಗು ವಾಣಿಜ್ಯ ಕ್ಷೇತ್ರದ ಹಲವರಿಗೆ ಸಲಹೆಗಾರರಾಗಿ ಸಂಪಾದಿಸಿದ ತಿಳಿವಳಿಕೆಯನ್ನು ತಮ್ಮ ಪುಸ್ತಕದ ರಚನೆಯಲ್ಲಿ ಧಾರಾಳವಾಗಿ ಬಳಸಿಕೊಂಡು, ಕನ್ನಡದ ಸಾಮಾನ್ಯ ಜ್ಞಾನ ವಿದ್ದವರಿಗೆ ಸಹ ಸುಲಭದಲ್ಲಿ ಅರ್ಥವಾಗುವಂತೆ ವಾಣಿಜ್ಯ ಶಾಸ್ತ್ರದ ಪರಿಚಯವನ್ನು ಹನ್ನೆರಡು ಅಧ್ಯಾಯಗಳಲ್ಲಿ ಅಳವಡಿಸಿದ್ದಾರೆ. ವಿಮೆ ಮತ್ತು ಬ್ಯಾಂಕಿನ ವ್ಯವಹಾರ, ಆಯಾತ ನಿರ್ಯಾತ ವ್ಯಾಪಾರ, ಸಾರಿಗೆ ಸಂಪರ್ಕ ಮತ್ತು ಜಾಹೀರಾತಿನ ಕಲೆ ಇತ್ಯಾದಿ ಪ್ರಾಮುಖ್ಯ ವಿಷಯಗಳ ಮೇಲೆ ಅವಶ್ಯವಿರುವ ಶಾಸನ ಸಂಬಂಧಿಯಾದ ಹಾಗು ವ್ಯವಹಾರಕ್ಕೆ ಪೋಷಕವಾದ ಜ್ಞಾನವನ್ನು ಅವರು ನೀಡಿದ್ದಾರೆ. “ವಾಣಿಜ್ಯ ಶಾಸನದ ಮೂಲತತ್ತ್ವಗಳು” ಮತ್ತು “ವ್ಯಾಪಾರದಲ್ಲಿ ಲಾಭವೆಸಗುಟ್ಟು” ಎಂಬಿತ್ಯಾದಿ ಪುಸ್ತಕಗಳನ್ನು ಈಗಾಗಲೇ ಪ್ರಕಟಗೊಳಿಸಿ ನಮ್ಮ ಜಿಲ್ಲೆಯ ಜನರು ಕನ್ನಡನಾಡಿಗೆ ಯಾವ ವಿಷಯದ ವಿಶೇಷ ಪರಿಚಯವಾಗುವಂತೆ ಮಾಡಿರು ವರೋ ಆ ಕ್ಷೇತ್ರಕ್ಕೆ ಮುಂಬಯಿಯಲ್ಲಿರುವ

(೧೦ನೇ ಪುಟ ನೋಡಿರಿ)

Edited, Printed & Published By K. H. Shetty, at the Navayuga Press, Udipi S. India